ಶ್ರೀ

ಕರ್ಣಾಟಕ ಭಕ್ತವಿಜಯ

ಶ್ರೀ ಬೇಲೂರು ಕೇಶವದಾಸರು

ಶ್ರೀ

ಕರ್ಣಾಟಕ ಭಕ್ತವಿಜಯ

ಶ್ರೀ ಬೇಲೂರು ಕೇಶವದಾಸರು

ಸುಬೋಧ ಪ್ರಕಟನಾಲಯ, ಬೆಂಗಳೂರು-೧೮

ಪ್ರಥಮ ಮುದ್ರಣ : ೧೯೩೭
ದ್ವಿತೀಯ ಮುದ್ರಣ : ೧೯೩೮
ತೃತೀಯ ಮುದ್ರಣ : ೧೯೬೩

ಪ್ರಕಾಶಕರು :
ಸುಬೋಧ ಪ್ರಕಟನಾಲಯ
ಬೆಂಗಳೂರು-೧೮

ಬೆಲೆ : ರೂ. ೧೨-೦೦

ಮುದ್ರಕರು ;
ಸುಬೋಧ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು ೧೮.



ಶ್ರೀ ಬೇಲೂರು ಕೇಶವದಾಸರು

ಗ್ರಂಥಕರ್ತರ ಮುನ್ನುಡಿ

ಶ್ರೀ ಕರ್ಣಾಟಕ ಭಕ್ತವಿಜಯು ಎಂಬ ಗ್ರಂಥವನ್ನು ಬರೆಯಬೇಕೆಂಬ ಹಂಬಲಿಕೆ ನನಗಾಗಿ ಇಂದಿಗೆ ಸುಮಾರು ಹನ್ನೆರಡು ವರ್ಷಗಳಾದುವು. ಹಂಬಲಿಕೆಗೆ ತಕ್ಕ ಹವಣಿಕೆಯೊದಗಿರಲಿಲ್ಲ. ಈ ಗ್ರಂಥರಚನೆಗೆ, ಬಹುಶಃ ಭರತಖಂಡದ ಎಲ್ಲ ದೇಶಗಳ ಎಲ್ಲ ಭಾಷೆಗಳಲ್ಲೂ ಭಕ್ತವಿಜಯವೆಂಬ ಹೆಸರಿನಿಂದ ರಚಿತವಾಗಿರುವ ಪುಸ್ತಕವನ್ನು ಓದಿದ್ದೇ ಕಾರಣವಾಯಿತು. ಸ್ವಯಂ ಭದ್ರಪೀಠದಮೇಲೆ ನಿಂತು, ಅದುವರೆಗೆ ಹನ್ನೆರಡು ವರ್ಷಗಳಷ್ಟು ಕಾಲ ಕೀರ್ತನಸೇವೆ ಮಾಡಿದ್ದರೂ ಗ್ರಂಥದ ಪರಿಚಯು ನನಗಾಗಿರಲಿಲ್ಲ. ಭಕ್ತವಿಜಯುವೆಂದಕೂಡಲೇ ಅದು ನಿಖಿಲ ಭಾರತೀಯ ಸಾಧುಸಂತರ ದಿವ್ಯಚರಿತ್ರೆಗಳ ವಿವರಣೆಯ ವಹಿಯೆಂಬ ಭಾವನೆ ನನಗಾಯಿತು. ಪುರಾಣಗಳಲ್ಲಿ ಕರ್ಣಾಟಕವು ಭಕ್ತಿಗೆ ತವರೂರೆಂಬ ಉಲ್ಲೇಖವಿರುವಾಗ ಆ ಮಹಾಗ್ರಂಥದಲ್ಲಿ ಕರ್ಣಾಟಕ ಸಾಧುಸಂತರ ಚರಿತ್ರೆಗೆ ಯೋಗ್ಯಸ್ಥಾನವೇ ದೊರೆತಿರಬಹುದೆಂಬ ಪೂಜ್ಯಕಲ್ಪನೆಯು ನನಗೆ ಬರದೇ ಹೋಗಲಿಲ್ಲ. ಆದ್ದರಿಂದ ಆ ಪುಸ್ತಕವನ್ನು ಬಲು ಆದರ ಬುದ್ಧಿಯಿಂದ ಪಠಿಸಿದೆನು.

ಕರ್ಣಾಟಕದ ದುರ್ದೈವಕ್ಕೆ ತಕ್ಕಂತೆ ಮೊದಲಿನಿಂದ ಕಡೆಯತನಕ ನೋಡಿದರೂ ಒಬ್ಬ ಕರ್ಣಾಟಕ ಸಂತನ ಹೆಸರೂ ಯೋಗ್ಯರೀತಿಯಿಂದ ಆ ಪುಸ್ತಕದಲ್ಲಿರಲಿಲ್ಲ. ಆ ಪುಸ್ತಕದಲ್ಲಿ ವಿಶೇಷತಃ ಪಂಢರಪುರದ ಸುತ್ತಮುತ್ತಲಿದ್ದ ಮಹಾರಾಷ್ಟ್ರಭಕ್ತರ ಮತ್ತು ಉತ್ತರ ಹಿಂದೂಸ್ಥಾನದ ಎಲ್ಲೋ ಕೆಲವು ಸಾಧುಗಳ ಚರಿತ್ರೆಯಲ್ಲಿ ಬೆಳಗಾಗಿತ್ತು. ಐತಿಹಾಸಿಕ ದೃಷ್ಟಿಯಿಂದ ಓದುವವರಿಗೆ ಕಾಲದೇಶ ವ್ಯಕ್ತಿವಿಚಾರಗಳು ವಿಪರೀತ ವಿಚಾರಗಳಾಗಿ ಕಂಡುಬಂದಾವೆಂಬುದರಲ್ಲಿ ನನಗೆ ಸಂಶಯು ತೋರಲಿಲ್ಲ.

ಪಂಢರಪುರದ ವಿಠಲನ ಭಕ್ತರ ದಿವ್ಯಚರಿತ್ರೆಯು ಗ್ರಂಥಕರ್ತನ ಪರಮಧ್ಯೇಯವಾಗಿತ್ತೆಂದು ಯೋಚಿಸಿದರೂ, ಅದೇ ಪಂಢರಪುರದಲ್ಲಿ ಬಹುಕಾಲವಿದ್ದು ಅಪಾರ ಮಹಿಮೆಗಳನ್ನು ತೋರಿಸಿದ, ತಮ್ಮ ಸಕಲ ಕೃತಿಗಳನ್ನೂ ಆ ಪಾಂಡುರಂಗನಿಗೇ ಒಪ್ಪಿಸಿ ಹಾಡಿದ, ಪುರಂದರದಾಸರೊಬ್ಬರ ಚರಿತ್ರೆಯಾದರೂ ಆ ಭಕ್ತವಿಜಯುದಲ್ಲಿ ಸಮಗ್ರವಾಗಿ ಬರಬಹುದಾಗಿತ್ತು. ಪಂಢರಪುರದ *ಬಾಡವಿಗಳು ಕರ್ಣಾಟಕದ ಯಾತ್ರಿಕರು ಬಂದಾಗಲೆಲ್ಲ

---

* ಒಡೆಯು ಎಂಬ ಕನ್ನಡ ಶಬ್ದವು ಒಡೆಯು, ವಡೆಯು, ಬಡೆಯು, ಬಡಯು, ಬಡವ, ಬಾಡವ, ಬಾಡವೆ ಎಂಬ ರೂಪಾಂತರವಾಗಿ ಬಂದಿದೆ. ಈಗಿನ ಬಾಡವೆ ಶಬ್ದವು ಕ್ರಮೇಣ ಭಡವೆಯೆಂದು ರೂಪತಾಳಿದರೂ ಕೇಳುವವರಿಲ್ಲ. ಬಡವೆಯು ಮರಾಠೀ ಶಬ್ದವಲ್ಲ. ಹೊಸದಾಗಿ ಅವರ ಶಬ್ದ ಕೋಶದಲ್ಲಿ ಸೇರಿಲ್ಲ.

ದೇವಾಲಯ ಪ್ರವೇಶ ಮಾಡುವಾಗ ಎಡಭಾಗದಲ್ಲಿರುವ ಒಂದು ಸ್ತಂಭವನ್ನು ತೋರಿಸುತ್ತಾರೆ. ಅದೋ! ಪುರಂದರದಾಸರನ್ನು ಕಟ್ಟಿಸಿದ ಸ್ತಂಭವೆಂದು ದಕ್ಷಿಣೆಯನ್ನು ಬೇಡುತ್ತಾರೆ. ಮರಾಟಿಗರನ್ನು ಕಂಡರೆ ಅದು ಗರುಡಗಂಭವೆಂದು ಹೇಳುತ್ತಾರೆ.

ಗರುಡಗಂಭವು ಯಾವಾಗಲೂ ಯಾವ ದೇವಾಲಯದಲ್ಲೂ ದೇವರ ಮೂರ್ತಿಗೆ ಎದುರಾಗಿರುವುದು ಪದ್ಧತಿ. ದಾಸರ ಸ್ತಂಭವು ಇತರ ಸ್ತಂಭಗಳಂತೆ ಮಂಟಪದ ಭಾರ ಹೊತ್ತಿರುವ ಸ್ತಂಭಗಳಲ್ಲೊಂದಾಗಿದೆ. ಅದು ಧ್ವಜಸ್ಥಾನದಲ್ಲಿಲ್ಲ. ಕನ್ನಡಿಗರು ಕೃಷ್ಣ ದೇವರಾಯನ ಕಾಲದಿಂದ ಆ ಸ್ತಂಭವನ್ನು ದಾಸರಸ್ತಂಭವೆಂದು ಗುರ್ತಿಸಿಕೊಂಡು ಬಂದಿದ್ದಾರೆ. ಕನ್ನಡ ಯಾತ್ರಿಕರು ಪಂಢರಪುರಿಗೆ ಹೋದಾಗ ಅಲ್ಲಿನ ಬಾಡವೆಗಳು ಅದೇ ಸ್ತಂಭವನ್ನು ದಾಸರಸ್ತಂಭವೆಂದು ತೋರಿಸುತ್ತಾರೆ. ಪುರಂದರದಾಸರ ಆ ಸಂಬಂಧವಾದ ಪಾಂಡುರಂಗನ ಪ್ರಾರ್ಥನಾಪದವನ್ನು ಇಂದಿಗೂ ಕರ್ಣಾಟಕದಲ್ಲಿ ಹಾಡುತ್ತಾರೆ. ಸ್ತಂಭಕ್ಕೆ ದಾಸರ ಹೆಸರನ್ನು ಬಿಟ್ಟು ಬೇರೆ ಹೆಸರಿಡಲು ಅವಕಾಶವಿಲ್ಲ. ಈ ಹೊತ್ತಿನ ದಿನದಲ್ಲೂ ಅದು ದಾಸರ ಸ್ತಂಭವೆನಿಸಿರುವಾಗ, ಭಕ್ತವಿಜಯಕಾರನು ಗ್ರಂಥಾರಂಭ ಮಾಡಿದಾಗ ಪುರಂದರದಾಸರ ಹೆಸರು ಆತನಿಗೆ ತಿಳಿದಿರಲಿಲ್ಲವೆನ್ನುವುದಕ್ಕೆ ಕಾರಣವಿರುವುದಿಲ್ಲ. ತಿಳಿಯದೆ ಬರೆಯದಿದ್ದರೆ ತಪ್ಪಲ್ಲ. ತಿಳಿದೂ ಬರೆಯದಿದ್ದರೆ ಕಾರಣವೇನಿರಬಹುದೆಂದು ವಿಚಾರಿಸಬೇಕಾಗುತ್ತದೆ.

ಈ ಕಾಲದಂತೆ ಆ ಕಾಲದಲ್ಲೂ ಮಹಾರಾಷ್ಟ್ರರಿಗೆ ಕನ್ನಡಿಗರೆಂದರೆ, ಉದಾಶೀನವೋ ಉಪೇಕ್ಷೆಯೋ ಏನಾದರೊಂದು ಇರಬೇಕೆಂತಲೇ ಹೇಳಬೇಕಾಗುತ್ತದೆ. ಮಹಾರಾಷ್ಟ್ರರಿಗೇ ಏಕೆ–ಅವರಿಗಿಂತ ಅಧಿಕವಾಗಿ ವಿಜಯನಗರದ ಕರ್ಣಾಟಕ ಸಾರ್ವಭೌಮರ ಆಶ್ರಯದಿಂದ ಬೆಳೆದ ನಮ್ಮ ನೆರೆನಾಡಿನ ತೆಲುಗರಿಗೂ ಕನ್ನಡಿಗರೆಂದರೆ ಮರಾಟಿಗರ ಉದಾಸೀನ ಉಪೇಕ್ಷೆಗಳಿಗಿಂತ ಹೆಚ್ಚಿನ ತಿರಸ್ಕಾರಭಾವವೇ ಇದೆ. ಅನುಭವದ ಮಾತನ್ನು ಬರೆಯಬೇಕಾದರೆ ಕಷ್ಟವಾಗಿದೆ.

ಪಂಢರಪುರವೆಂದಕೂಡಲೇ ಅದು ಕನ್ನಡ ಹೆಸರಿನ ಊರೆಂದು ಯಾರಿಗೂ ಗೊತ್ತಾಗದಿರುವುದಿಲ್ಲ. 'ಪಂಡರಿಗೆ' ಹಳೆಗನ್ನಡದ ಹೆಸರು ಈಗ ಪಂಢರಾಪುರವಾಗಿದೆ. ಕ್ರಿ. ಶ. ಹದಿಮೂರನೇ ಶತಮಾನದಲ್ಲಿ ಪಂಢರಪುರವು ಕರ್ಣಾಟಕರಾಜರ ಆಳ್ವಿಕೆಯಲ್ಲಿತ್ತು. ಯಾದವವಂಶದ ಸೋಮೇಶ್ವರರಾಜನು ೧೨೭೦ರಲ್ಲಿ ಪಂಡರಿಗೆಯ ಸುತ್ತಣರಾಜ್ಯವನ್ನು ಗೆದ್ದನು. ಈಗ ಪಂಢರಪುರಿಗೆ ಐದುಮೈಲು ದೂರದಲ್ಲಿದ್ದು ಪುಲಂಜವೆಂದು ಕರೆಯಿಸಿಕೊಳ್ಳುವ ಹಿರಿಯಾಗರಂಜಗ್ರಾಮದ ಉತ್ಪತ್ತಿಯ ಬಹುಭಾಗವನ್ನು ಪಂಡರಿಗೆಯ ದೇವರಿಗೆ ಕೊಟ್ಟನು. ಈ ಮಾತನ್ನು ಪಾಂಡುರಂಗ ದೇವಾಲಯದಲ್ಲಿರುವ ಶಾಸನವು ತಿಳಿಸುತ್ತದೆ. ಪುಲಂಜದಲ್ಲಿ ಸಿಂಗಣ್ಣನ ಕನ್ನಡ ಶಾಸನಗಳಿವೆ. ಪಾಂಡುರಂಗ ಎಂಬುವುದು ಪಂಡರಿಗೆ ಶಬ್ದವನ್ನು ಸಂಸ್ಕೃತಮಾಡಿದ ರೂಪವಾಗಿದೆ. ದೇವಗಿರಿಯ ರಾಜರ ಕಾಲದಲ್ಲಿ

ಪಂಢರಪುರದ ದೇವಾಲಯವು ಈಗಿರುವಂತೆ ಇರಲಿಲ್ಲ. ಅವರು ವಿಶಾಲವಾದ ದೇವಾಲಯ ವನ್ನು ಕಟ್ಟಿಸಿದ್ದರು. ಅದು ಮುಸಲ್ಮಾನರಿಂದ ನಾಶವಾಯಿತು. ಈ ನಾಶಕ್ಕೆ ೧೩೫೫-೫೧ರ ವರೆಗೆ ಆಳಿದ ಮಹಮುದ್ ಬಿನ್ ತೊಗಲಖನು ಕಾರಣ. ಈ ಮಾತು ಇತಿಹಾಸ ಘಟಿತವೆಂಬು ದರಲ್ಲಿ ಸಂಶಯವಿಲ್ಲ. ಈ ಕಾಲದಲ್ಲಿ ವಿಠಲ ವಿಗ್ರಹವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುತ್ತಾ ಹಿಂದುಗಳು ಕಾಪಾಡಿಕೊಂಡರು. ಮತ್ತೆ ಬಿಜಾಪುರದ ನವಾಬರ ಧಾಳಿಯಲ್ಲಿ ವಿಜಯ ನಗರದ ರಾಮರಾಜನು ವಿಠಲವಿಗ್ರಹವನ್ನು ತನ್ನ ರಾಜಧಾನಿಯಲ್ಲಿಟ್ಟು ರಕ್ಷಿಸಿದನು. ೧೬೯೫ರಿಂದ ೧೭೦೦ರವರೆಗೆ ಔರಂಗಜೇಬನು ಆ ಪ್ರಾಂತದಲ್ಲಿದ್ದು ವಿಠಲಮೂರ್ತಿಯನ್ನು ನಾಶಗೊಳಿಸಬೇಕೆಂದು ಯತ್ನಿಸಿದನು. ಪ್ರಾಹ್ಲಾದ ಬುವಾ ಎಂಬ ಹರಿದಾಸನು ಆ ಕಾಲದಲ್ಲಿ ವಿಠಲಮೂರ್ತಿಯನ್ನು ತನ್ನ ರಕ್ಷಣೆಯಲ್ಲಿಟ್ಟುಕೊಂಡು ವನವಾಸಿಯಾಗಿದ್ದನು. ವಿಜಯನಗರದ ನಾಶಕಾಲದಲ್ಲಿ ಭಾನುದಾಸನೆಂಬ ಭಕ್ತನು ವಿಠಲಮೂರ್ತಿಯನ್ನು ಪಂಢರ ಪುರಿಗೆ ತೆಗೆದುಕೊಂಡು ಹೋದನು. ಹದಿನಾರು ಕಂಭಗಳ ಮಂಟಪ ಮತ್ತು ಬಹಿರಾಂಗ ಣದ ಕೆಲವು ಭಾಗವಿನಾ ಈಗಿನ ದೇವಾಲಯದ ವಿಸ್ತಾರವು ಮಹಾರಾಷ್ಟ್ರ ರಾಜರಿಂದಾ ಯಿತು. ಹೀಗೆ ಬಲು ಗಂಡಾಂತರಗಳಿಂದ ಕಳೆದುಳಿದ ದೇವಾಲಯಗಳಲ್ಲಿ ಪಾಂಡುರಂಗ ದೇವಾಲಯವೂ ಒಂದಾಯಿತು. ಮತ್ತೆ ೧೮೭೩ರಲ್ಲಿ ಇಬ್ಬರು ಮುಸಲ್ಮಾನರು ಸಾಧುವೇಷ ಧಾರಿಗಳಾಗಿ ದೇವಾಲಯವನ್ನು ಪ್ರವೇಶಿಸಿ ವಿಗ್ರಹವನ್ನು ಮೂಲೋತ್ಪಾಟನಮಾಡಲು ಯತ್ನಿಸಿದರು. ಅವರ ಕೃತ್ರಿಮವನ್ನರಿತ ಅರ್ಚಕರು ಅವರನ್ನು ಹೊರಕ್ಕೆ ತಳ್ಳಿ ತತ್ಕಾಲದ ಆಪತ್ತಿನಿಂದ ಪಾರುಮಾಡಿದರು. ಇವೆಲ್ಲವೂ ಸೋಲಾಪುರ ಡಿಸ್ಟ್ರಿಕ್ಟ್ ಗೆಜಿಟಿಯರಿನಲ್ಲಿರುವುದ ರಿಂದ ವಾಚಕರು ಸಂದೇಹಿಸುವ ಕಾರಣವಿಲ್ಲ. ಪಂಢರಪುರವು ೧೭ನೆಯ ಶತಮಾನದವರೆಗೂ ಕರ್ಣಾಟಕಕ್ಕೆ ಸೇರಿತ್ತೆಂಬುದರಲ್ಲಿ ಸಂಶಯವಿಲ್ಲ.

ಇದಕ್ಕೂ ಹೆಚ್ಚಿನ ಇನ್ನೊಂದು ಬಗೆಯ ಪ್ರಮಾಣಬೇಕೆಂದರೆ-ಕರ್ಣಾಟಕ ಹರಿದಾಸರೆಲ್ಲರೂ ಅದ್ಯಾಪಿ ತಮ್ಮ ಕೃತಿಗಳನ್ನು ಆ ವಿಠಲನಿಗೇ ಅರ್ಪಿಸುತ್ತಿರುವುದು (Dedication) ನಿದರ್ಶನವಾಗುತ್ತದೆ. ಆ ಉದಾಹರಣೆಗಳೆಂದರೆ **ಪುರಂದರವಿಠಲ ವಿಜಯವಿಠಲ, ಗೋಪಾಲವಿಠಲ, ಜಗನ್ನಾಥವಿಠಲ** ಇತ್ಯಾದಿ. ಈ ರೀತಿ ಮಹಾರಾಷ್ಟ್ರ ಸಂತರಾಗಲಿ, ಉತ್ತರ ಹಿಂದೂಸ್ಥಾನದ ಸಂತರಾಗಲಿ ಅರ್ಪಣೆಮಾಡಿಲ್ಲ. ಅವರ ಕವಿತೆಗಳ ಕಡೆಯಲ್ಲಿ 'ತುಕಾಮ್ಹಣೇ, ಕಹಿತ ಕಬೀರ' ಇತ್ಯಾದಿಯಾಗಿ ಇರುತ್ತವೆ. ಈ ಅಂಕಿತಗಳನ್ನು ಪರಸ್ಪರ ತುಲನೆಮಾಡಿದರೆ ಕರ್ಣಾಟಕದ ದಾಸರು ಸ್ವಕರ್ತೃತ್ವವನ್ನು ಮರೆತು ಸರ್ವಸಮರ್ಪಣೆ ಭಕ್ತಿಮಾಡಿದರೆಂತಲೂ, ಇತರರು ತಮ್ಮ ಕರ್ತೃತ್ವವನ್ನು ಕಾಯ್ದಿಟ್ಟುಕೊಂಡು ಮಾತಾಡಿದರೆಂತಲೂ ಭಾಸವಾಗುತ್ತದೆ. ಈ ತುಲನೆಯಿಂದ ಕನ್ನಡ ದಾಸರುಗಳು ಶ್ರೇಷ್ಠರೆಂದು ಹೇಳುವುದು ಗ್ರಂಥದ ಉದ್ದೇಶವಲ್ಲ. ಸತ್ಪುರುಷರು ಯಾವ ದೇಶದವರಾಗಲಿ, ಯಾವ ಪಂಗಡದವರಾಗಲಿ, ಯಾವ ಮತಭಾವನೆಯಿಂದ ಯಾವುದೇ ಭಾಷೆಯಲ್ಲಿ ಮಾತಾಡಿರಲಿ, ಅವರೆಲ್ಲರಿಗೂ ಕರ್ಣಾಟಕದಲ್ಲಿ ಮನ್ನಣೆಗೆ

ಕೊರತೆಯಿಲ್ಲ. ಕನ್ನಡಿಗರಾದರೂ ಇದೇ ತರದ ಸಹಾನುಭೂತಿಯನ್ನು ಇತರರಿಂದ ಅಪೇಕ್ಷಿಸುವರು.

ದೇಶವಿಸ್ತಾರ ಪ್ರಜಾಸಂಖ್ಯೆಗಳ ಮಾನದಿಂದ ನೋಡಿದರೆ ಇತರ ಭಾಷಾಪ್ರಾಂತ್ಯ ಗಳಿಗಿಂತ ಕರ್ಣಾಟಕದಲ್ಲಿ ದಶಾಂಶ ಅಧಿಕ ಸತ್ಪುರುಷರ ಅವತಾರವಾಗಿದೆ. ಆದರೇನು ? ಕನ್ನಡಿಗರಿಗಿನ್ನೂ ಕಣ್ದೆರೆಯುವ ಕಾಲ ಬರಲಿಲ್ಲ. ಅನ್ಯರು ಕನ್ನಡಿಗರನ್ನು ಜರಿಯುವ ಕಾಲವೂ ದೂರವಾಗಲಿಲ್ಲ.

ಕರ್ಣಾಟಕದಲ್ಲಿ ಮಹಾರಾಷ್ಟ್ರದಂತೆ ಎಲ್ಲ ಜಾತಿಗಳಲ್ಲೂ ಸತ್ಪುರುಷರ ಅವತಾರ ವಾಗಿದೆ. **ಶಿವಶರಣರು, ಹರಿಶರಣರು** ಎಂಬ ದೊಡ್ಡ ವಿಭಾಗಮಾಡಿ ದೊಡ್ಡದೊಡ್ಡ ವಹಿಗಳನ್ನು ವಾಚಕರ ಮುಂದೆ ಬರೆದಿಡಲು ಅವಕಾಶವಿದೆ. ಮಹಾರಾಷ್ಟ್ರರು ತಮ್ಮಲ್ಲವತರಿಸಿದ **ರಾಮದಾಸ, ತುಕಾರಾಮ, ನಾಮದೇವ, ಮೋರೋಪಂತ, ವಾಮನ ಪಂಡಿತ** ಮೊದಲಾದವರ ದಿವ್ಯಗ್ರಂಥಗಳನ್ನು ಶೇಖರಿಸಿದರು. ಚಿತ್ರವಿಚಿತ್ರವಾಗಿ ತಮ್ಮ ಜನರಲ್ಲಿ ಪ್ರಚಾರಮಾಡಿದರು. ನಮ್ಮ ಕರ್ಣಾಟಕದಲ್ಲಿ ಅಂಥಾ ವ್ಯವಸ್ಥಿತ ಪ್ರಯತ್ನ ನಡೆದಿಲ್ಲ. ದುರ್ದೈವಕ್ಕೆ ತಕ್ಕಂತೆ ಕನ್ನಡ ಮಹಾತ್ಮರ ಗ್ರಂಥಗಳೂ ಉಪಲಬ್ಧವಿಲ್ಲ. ಎಲ್ಲವೂ ಸಿಗದಿದ್ದರೆ ಬೇಡ; ಇದ್ದಷ್ಟನ್ನು ಶೇಖರಿಸಲೂ ತಕ್ಕ ಪ್ರಯತ್ನವಾಗಿಲ್ಲ. ಪ್ರಯತ್ನ ಮಾಡುವವರಿಗೆ ಸಮಾಜದಲ್ಲಿ ಉತ್ತೇಜನವಿಲ್ಲ. ಸತ್ಪುರುಷರ ಹೆಸರೆತ್ತಿದರೆ, ಅದರಲ್ಲಿ ಸಹ ಜಾತಿಮತಗಳ ಸಂಕುಚಿತ ಭಾವನೆಗಳು ಈಗೀಗ ಜನರ ತಲೆಯಲ್ಲಿ ಬರುತ್ತಲಿವೆ. ಕರ್ಣಾಟಕ ದಾಸಸಾಹಿತ್ಯವೊಂದನ್ನೇ ವಿಚಾರಿಸಿದರೆ, ಪುರಂದರದಾಸರು ನಾಲ್ಕುಲಕ್ಷದ ಎಪ್ಪತ್ತೈದು ಸಾವಿರ, ವಿಜಯದಾಸರು ಇಪ್ಪತ್ತೈದುಸಾವಿರ, ದೇವರನಾಮುಗಳನ್ನು ಮಾಡಿದರೆಂಬ ಮಾತು ಅವರವರ ದೇವರನಾಮುಗಳಲ್ಲಿ ಸ್ಪಷ್ಟವಾಗಿ ತಿಳಿದು ಬರುತ್ತದೆ. ಮಿಕ್ಕ ದಾಸರ ಪದಗಳೆಷ್ಟೋ ! ಈ ಹೊತ್ತಿನ ದಿವಸದಲ್ಲಿ ಈ ಮಾತನ್ನು ಅತಿಶಯೋಕ್ತಿಯೆಂದು ತಿಳಿದು-ತಿಳಿಯುವುದು ಮಾತ್ರವಲ್ಲ, ಹಾಗೆ ಗಳುಹುವ ವಾಚಾಳರೂ ತಲೆಯೆತ್ತುತ್ತಿದ್ದಾರೆ. ಮೊನ್ನೆ ತಾನೇ ನನ್ನ ಲಿಂಗಸೂಗೂರು ಮೊಕ್ಕಾಮಿನಲ್ಲಿ ದೊರೆತ ವಿಜಯದಾಸರ ಸುಳಾದಿಯಲ್ಲಿ, ಪುರಂದರದಾಸರು ತಮ್ಮ ಭೂಪ್ರದಕ್ಷಿಣೆಯಲ್ಲಿ ೧,೨೫,೦೦೦ ಸಂಖ್ಯೆಯ ತೀರ್ಥಕ್ಷೇತ್ರ ಮಹಿಮಾವರ್ಣನೆಯ ಕನ್ನಡ ನಾಮುಗಳನ್ನು ಮಾಡಿದರೆಂದೂ, ೪೦,೦೦೦ ಕಲ್ಯಾಣಶತ ಚರಿತೆಗಳನ್ನು ರಚಿಸಿದರೆಂದೂ, ೩೭,೦೦೦ ವೃತ್ತನಾಮುಗಳನ್ನು ಹಾಡಿದರೆಂದೂ ಉಲ್ಲೇಖವಿದೆ. ನಾಮುಗಳು ಮೂರು ನುಡಿಯವುಗಳಾಗಿರಲಿ, ಮೂರು ಮಾತಿನ ಉಗಾಭೋಗ ವಾಗಿರಲಿ, ವಿಜಯದಾಸರು ಕೊಟ್ಟ ಸಂಖ್ಯೆಯನ್ನು ಸುಳ್ಳು ಎಂದು ಹೇಳಲು ಕಾರಣ ವಿರುವುದಿಲ್ಲ.

ಇವತ್ತಿನ ಕಾಲದಲ್ಲೂ 'ಘಂಟಾಶತಕ' ಮಾಡುವೆನೆಂದು ಪ್ರತಿಜ್ಞಾಪೂರ್ವಕ ಒಂದು ಘಂಟೆಯೊಳಗೆ ನೂರುನೂರು ಶ್ಲೋಕಗಳನ್ನು ರಚಿಸಿ ಪಾಂಡಿತ್ಯ ಪ್ರದರ್ಶನ

ಮಾಡುವವರನ್ನು ನಾವು ನೋಡುತ್ತಿದ್ದೇವೆ. ಕಾರವಾರದ ಮಾಮಲೇದಾರ್ ಶ್ರೀ ಮುಡೆ ಕಟ್ಟೆಯವರು ಕವನಮಾಡಿದ ಪೈಕಿ ಏಕಾಂಶವಾದರೂ ಅನೇಕ ಸಹಸ್ರ ಭಾಮಿನೀ ಷಟ್ಪದಿಗಳು ಮುದ್ರಣವಾಗಿರುವುದನ್ನು ನಾವು ಓದುತ್ತಿದ್ದೇವೆ. ಅಂದಮೇಲೆ ದಾಸಸಾಹಿತ್ಯದ ಸಂಖ್ಯೆಯನ್ನು ನೋಡಿ ನಾವು ಗಾಬರಿಪಡುವ ಕಾರಣವಿರುವುದಿಲ್ಲ.

ಪುರಂದರದಾಸರ ಸಾಹಿತ್ಯವೆಂದರೆ ಬರೀ ಸ್ತೋತ್ರಪದಗಳಲ್ಲ. ಅವರು ಉಪನಿಷತ್ತುಗಳನ್ನೆಲ್ಲಾ ಕನ್ನಡಿಸಿದರು. ಸಾವಿರಗಟ್ಟಲೆ ನೀತಿಪದಗಳನ್ನು ಹಾಡಿದರು. ಭಗವದ್ಗೀತೆಯನ್ನು ವಿವಿಧ ರಗಳೆಗಳಲ್ಲೂ ಪ್ರಶ್ನೋತ್ತರಗಳಲ್ಲೂ ಕುಟ್ಟುವವರ ಬೀಸುವವರ ಹಾಡಿನಲ್ಲೂ ಜೋಗುಳದಲ್ಲೂ ಬರೆದರು. ದೊಡ್ಡ ದೊಡ್ಡ ಮನುಸ್ಮೃತಿ ಪರಾಶರ ಸ್ಮೃತಿಗಳನ್ನೂ ಕನ್ನಡಿಸಿರಬಹುದೆಂಬುದಕ್ಕೆ ಉದಾಹರಣೆಯಾಗಿ ಅಲ್ಲಲ್ಲಿ ಒಂದೊಂದು ಉಗಾಭೋಗಗಳು ಕಿವಿಗೆ ಬೀಳುತ್ತಲಿವೆ.

ಈಗೀಗ ಜನಪದ ಸಾಹಿತ್ಯೋದ್ಧರಣ ಮಾಡಬೇಕೆಂಬ ಉದಾರ ಭಾವನೆಯು ಧಾರವಾಡದ ಜನರಲ್ಲುಂಟಾಗಿದೆ. ಅಂತಹ ಸಾಹಿತ್ಯ ಶೋಧಕರು ಹಳ್ಳಿಗಳಲ್ಲೇ ತಿರುಗಬೇಕು. ಕುಟ್ಟಿ ಬೀಸುವವರ ಮುಂದೂ, ಜೋಗುಳಗಳನ್ನು ಹಾಡುವವರ ಮುಂದೂ, ಪಂದ್ಯಕಟ್ಟಿ ಲಾವಣಿಗಳನ್ನು ಹೇಳುವವರ ಮುಂದೂ, ಅಂಥಿಂಥವರೆಂದೂ ದುರ್ಲಕ್ಷ್ಯ ಮಾಡದೆ, ಕುಳಿತು ಕೇಳಬೇಕು. ಅಬದ್ಧವಾಗಿರಲಿ, ಸುಬದ್ಧವಾಗಿರಲಿ ಸಂಗ್ರಹಿಸಬೇಕು. ರಾಯಚೂರು ಕಲ್ಬುರುಗಿ ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಸಿಗುವಷ್ಟು ಕನ್ನಡ ದಾಸ ಸಾಹಿತ್ಯವು ಇನ್ನೆಲ್ಲೂ ದೊರೆಯುವುದಿಲ್ಲ. ಆ ಸಾಹಿತ್ಯವೆಲ್ಲಾ ಛಿನ್ನಭಿನ್ನವಾಗಿಹೋಗಿದೆ. ತಪ್ಪು ತಪ್ಪಾಗಿ ಹಳೆಯ ಜನರ ಬಾಯಿಂದ ಬರುತ್ತಿದೆ. ರಾಯಚೂರು ಜಿಲ್ಲೆಯು ಹರಿದಾಸರ ಆಗರ. ಯಾರಲ್ಲಿ ಏನಿರುವುದೋ ಯಾರು ಯಾರು ದಾಸರ ಏನೇನು ಚರಿತ್ರೆಗಳನ್ನು ಹೇಳುವರೋ ಕಂಡುಹಿಡಿಯುವುದಕ್ಕಾಗುವುದಿಲ್ಲ. ನಾನು ಕಲ್ಲೂರಿಗೆ ಹೋದಾಗ ಒಬ್ಬ ಕುಲಕರಣಿಯ ಬಳಿ ಐವತ್ತು ವರ್ಷಗಳ ಹಿಂದೆ ಸುಪ್ರಸಿದ್ಧರಾಗಿದ್ದ ಮೊವಲಕಲ್ಲು (Gadwal State) ಶೇಷದಾಸರ ಸುಳಾದಿಯ ವಹಿಯೊಂದು ದೊರೆಯಿತು. ಅವರ ಸುಳಾದಿಯೆಂದರೆ ಪ್ರತಿಯೊಂದೂ ಅನುಭವದ ಮಾತು. ಪಾಂಡಿತ್ಯ ಪ್ರದರ್ಶನದ ಗಾತ್ರ ಶಬ್ದಗಳನ್ನು ಹುಡುಕಿದರೂ ಸಿಗುವಂತಿಲ್ಲ. ಅನುಭವಿಗಳಿಗೆ ಆ ಸುಳಾದಿಗಳು ಆನಂದದಾಯಕವೆಂಬುದರಲ್ಲಿ ಸಂಶಯವಿಲ್ಲ.

ಈಗಲೂ ಸಿಕ್ಕಿದುದನ್ನು ಬರೆದಿಡುವ ಮುತ್ಸದ್ದಿಗಳು ಬೇಕು. ಅವರು ನಿಶ್ಚಿಂತರಾಗಿರಬೇಕು. ಅವರು ಬರೆದುದನ್ನು ಶುದ್ಧಗೊಳಿಸುವವರ ತಂಡ ಮತ್ತೊಂದು ಬೇಕು. ಅನಂತರ ಅವುಗಳನ್ನು ಮುದ್ರಣಮಾಡಿಸುವ ಶ್ರೀಮಂತರ ಸಹಾಯಬೇಕು. ಇಷ್ಟೆಲ್ಲಾ ನಮ್ಮ ಕರ್ಣಾಟಕದಲ್ಲಿ ಸಾಧ್ಯವೇ ಎಂಬ ಯೋಚನೆಯು ಈಗ ನನ್ನನ್ನು ಹಣ್ಣು ಮಾಡುತ್ತಲಿದೆ.

ಎಷ್ಟೇ ಶ್ರಮಪಟ್ಟು ದಾಸಸಾಹಿತ್ಯ ಸಂಗ್ರಹಮಾಡಿದರೂ ಉಳಿದಿರುವುದಕ್ಕಿಂತ ಅಳಿದಿರುವ ಅಂಶವು ಸಹಸ್ರಾಧಿಕವಾಗಿರುವುದರಿಂದ ಸರಿಯಾದ ಗ್ರಂಥಸಂಗ್ರಹವೇನೂ ಆಗುವುದಿಲ್ಲ. ಮಹಾರಾಷ್ಟ್ರಸಂತರ ಗ್ರಂಥಗಳಂತಾಗಲೀ, ತಮಿಳುನಾಡಿನ ಶೈವವೈಷ್ಣವ ಪ್ರಬಂಧಗಳಂತಾಗಲೀ, ಕಡೆಗೆ ಕರ್ಣಾಟಕದ ಶಿವಶರಣರ ವಚನಶಾಸ್ತ್ರದಂತಾಗಲೀ, ದಾಸ ಸಾಹಿತ್ಯದ ವಹಿಯೊಂದು ಸಿದ್ಧವಾದೀತೆಂಬ ಭರವಸೆ ನನಗಿರುವುದಿಲ್ಲ. ಏನೂ ಇರದಿರುವು ದಕ್ಕೆ ಬದಲಾಗಿ ಇದ್ದಷ್ಟರ ಸಂಗ್ರಹವಾಯಿತೆಂಬ ತೃಪ್ತಿಮಾತ್ರವಾಗಬೇಕು.

'ಕರ್ಣಾಟಕ ಸಾಹಿತ್ಯ ಪರಿಷತ್ತಿನವರೂ ವಿಶ್ವವಿದ್ಯಾಲಯದವರೂ ಕನ್ನಡ ಗ್ರಂಥಗಳ ಶೋಧನಡೆಸುತ್ತಿಲ್ಲವೇ ? ದೊರೆತ ಗ್ರಂಥಗಳನ್ನು ಶುದ್ಧಿಗೊಳಿಸಿ ಮುದ್ರಣ ಮಾಡಿಸುತ್ತಿಲ್ಲವೇ ?' ಎಂದು ಯಾರಾದರೂ ಕೇಳಬಹುದು. ಪರಿಷತ್ತಿನವರು ಅಥವಾ ವಿಶ್ವವಿದ್ಯಾಲಯದವರ ಕಾರ್ಯಕ್ಕೂ ಈ ಕಾರ್ಯಕ್ಕೂ ವ್ಯತ್ಯಾಸವಿದೆ. ಈ ಎರಡು ಸಂಸ್ಥೆಯವರೂ ಹುಡುಕುವುದು ಪಂಡಿತಸಾಹಿತ್ಯ. ಅದು ಮೊತ್ತವಾದ ಗ್ರಂಥವಾಗಿ ತಾನಾಗಿ ದೊರೆಯಬೇಕು. ಒಂದೇ ಪ್ರತಿ ದೊರೆತರೂ ಅವರ ಕಾರ್ಯಾರಂಭವಾಗುವುದಿಲ್ಲ. ಅನೇಕ ಪ್ರಾಂತ್ಯಗಳ ಪ್ರತಿಗಳು ಬರಬೇಕು. ಅವುಗಳ ಶೋಧನೆಗಾರಂಭವಾಗಬೇಕು. ಹಸ್ತ ಪ್ರತಿಯ ಲೇಖಕರ ದೋಷಗಳೂ ಕವಿಗಳ ವ್ಯಾಕರಣ ದೋಷಗಳೂ ಒಂದೊಂದಾಗಿ ಹೊರ ಬೀಳಬೇಕು. ಗ್ರಂಥದ ಕಾಲ ಕರ್ತೃ ಕರ್ಮಭೋಕ್ತೃಗಳ ಸರ್ವಂನ್ಯೂನಂ ಸರ್ವಂ ಸಂಪೂರ್ಣಗಳಾಗಬೇಕು. ಮಾರಾಟಕ್ಕೂ ಗಿರಾಕಿಗಳು ಸಿಗಬೇಕು. ಅನಂತರ ದ್ರವ್ಯಾನು ಕೂಲವಾಗಬೇಕು. ಮುದ್ರಣವಾಗಬೇಕು.

ಪ್ರಕೃತ ದಾಸ ಸಾಹಿತ್ಯವಾದರೋ ಮೇಲ್ಕಂಡ ಎರಡೂ ಸಂಸ್ಥೆಗಳ ದೃಷ್ಟಿಗೆ ಬೀಳುವಂತಹುದಲ್ಲ. ಮೊತ್ತವಾದ ಗ್ರಂಥವಲ್ಲ. ಇದರ ಶೋಧನೆಯೇ ಪ್ರತ್ಯೇಕವಾಗ ಬೇಕು. ಸ್ವತಂತ್ರವಾಗಬೇಕು. ದಾಸ ಸಾಹಿತ್ಯದಲ್ಲಿ ಅಭಿರುಚಿಯುಳ್ಳವರು ಈ ಕಾರ್ಯ ವನ್ನು ಕೈಕೊಳ್ಳಬೇಕು.

ಕರ್ಣಾಟಕ ಭಕ್ತವಿಜಯ ಕಾರ್ಯವು ದಾಸಸಾಹಿತ್ಯ ಸಂಗ್ರಹ ಕಾರ್ಯವಾಗಿಲ್ಲ. ದಾಸರ ಚರಿತ್ರೆ ಬರೆಯುವ ಕಾರ್ಯಮಾತ್ರವಾಗಿದೆ. ಈ ಭಕ್ತವಿಜಯದ ವಿಜಯವಾದರೆ ದಾಸಸಾಹಿತ್ಯ ಸಂಗ್ರಹದ ಗಣಪತಿ ಪೂಜೆಯಾದರೂ ಆಗಬಹುದು.

ಈ ಕಾರ್ಯವನ್ನು ಎಷ್ಟು ಅಲ್ಪಪ್ರಮಾಣದಿಂದಲಾದರೂ ಪ್ರಾರಂಭಿಸೋಣ ವೆಂದು ಈ ಬಗ್ಗೆ ಮೂರು ವರ್ಷಗಳ ಕೆಳಗೆ **'ಶ್ರೀ ರಾಘವೇಂದ್ರ ವಿಜಯ'**ವೆಂಬ ಹೆಸರಿನಿಂದ ಒಂದು ಗ್ರಂಥವನ್ನು ಬರೆದೆನು. ಅದು **'ಶ್ರೀ ಕರ್ಣಾಟಕ ಭಕ್ತವಿಜಯ'**ದ ಮೊದಲ ಗ್ರಂಥವಾಗಿ ಬೆಂಗಳೂರಿನ **ಸುಬೋಧ ಪ್ರಕಟನಾಲಯ**ದಿಂದ ಪ್ರಕಾಶಿತ ವಾಯಿತು. ಕಾರ್ಯಾಂತರಗಳಿಂದ ನಿಂತಿದ್ದ ಆ ಪ್ರಯತ್ನವನ್ನು, ಪುನಃ ಮುಂದು ವರಿಸಲು ಭಗವದನುಗ್ರಹದಿಂದ ಈಗ ಸಾಧ್ಯವಾಯಿತು. ಇದೇ ಆ ಪ್ರಯತ್ನದ ಪ್ರಥಮ

ಫಲ. ಕನ್ನಡಿಗ ಮಹಾಜನರು ಈ ಗ್ರಂಥಕ್ಕೆ ಕೊಡುವ ಪ್ರೋತ್ಸಾಹದಿಂದ, ಈ ಕಾರ್ಯ ವನ್ನು ಇನ್ನೂ ಮುಂದುವರಿಸಿ, ಸುಮಾರು ಇದರಷ್ಟೇ ದೊಡ್ಡದಾಗುವ ಮುಂದಿನೆರಡು ಸಹಿಗಳನ್ನು ಬರೆದು ಸಮರ್ಪಿಸಬೇಕೆಂಬ ನನ್ನ ಉದ್ದೇಶವು ಸಫಲವಾಗಬೇಕಾಗಿದೆ.

ಕರ್ಣಾಟಕ ಸತ್ಪುರುಷರು ಮತ್ತು ವರ್ಣಾಶ್ರಮ

ಭರತಖಂಡ ಸಾಮಾನ್ಯದಲ್ಲಿ ಇದುವರೆಗಾದ ಭಗವದವತಾರಗಳಾಗಲಿ, ಸಾಧು ಸಂತರ ಜನ್ಮಗಳಾಗಲಿ ಸರ್ವಪ್ರಕಾರದಿಂದ ವರ್ಣಾಶ್ರಮ ಧರ್ಮಗಳನ್ನು ಉದ್ಧರಿಸುವುದ ಕ್ಕಾದುವು. ಸಮಾಜದ ರೀತಿ ನೀತಿಗಳನ್ನು ತಿದ್ದುವುದಕ್ಕಾದುವು. ಅಲ್ಲದೆ ಧರ್ಮ ವಿರುದ್ಧಾಚರಣೆ ಮಾಡಿ ಸಮಾಜವನ್ನು ಹಾಳುಮಾಡುವುದಕ್ಕೆಂದಿಗೂ ಆಗಲಿಲ್ಲ.

ಹೀಗಿದ್ದರೂ ಸತ್ಪುರುಷರ ಮಹಿಮೆಗಳನ್ನು ವರ್ಣಿಸುವುದಕ್ಕೆ ಹೊರಟ ಮಹಾ ರಾಷ್ಟ್ರ ಭಕ್ತವಿಜಯಕಾರರು ಮನವುಬ್ಬಿ ಮೈಮರೆದು ಧರ್ಮವಿರುದ್ಧಾಚರಣೆಗಳನ್ನು ಆ ಸಂತರ ಪದರಿಗೆ ಕಟ್ಟಿ, ಅವರ ಹೆಸರನ್ನು ಕಲುಷಗೊಳಿಸಿದ್ದಾರೆ. ಭಕ್ತವಿಜಯದ ಮಾತಿರಲಿ, ಸಂಸ್ಕೃತ ಭಾಷೆಯಲ್ಲಿ ಬರೆದಿರುವ ಕೆಲವು ವಿಜಯ ಗ್ರಂಥಗಳಲ್ಲಿ ಸಹ ಧರ್ಮ ವಿರುದ್ಧ ಮಾತುಗಳಿವೆ. ದೊಡ್ಡವರನ್ನು ಮತ್ತಷ್ಟು ದೊಡ್ಡವರನ್ನಾಗಿ ಮಾಡಿತೋರಿಸಲು ಪ್ರಯತ್ನಿಸಿದ್ದಾರೆ. ಬ್ರಾಹ್ಮಣರನ್ನೂ ಬ್ರಾಹ್ಮಣ್ಯವನ್ನೂ ಹೊಗಳುತ್ತಲೇ ಬ್ರಾಹ್ಮಣರ ಯಜ್ಞೋಪವೀತಗಳು ಚಂಡಾಲರ ಮನೆಯಲ್ಲಿ ಬಿದ್ದಿದ್ದವೆಂದು ವರ್ಣಿಸಿದ್ದಾರೆ. ಸತ್ಪುರು ಷರ ಶಕ್ತಿಯನ್ನು ವರ್ಣಿಸುವುದಕ್ಕೆ ಹೊರಟು, ಅವರು ಕೋಣವನ್ನು ಕಡಿದು ತಿಂದರೆಂದು ಬರೆದಿದ್ದಾರೆ. ಅನಂತರ ಕೋಣವನ್ನು ಬದುಕಿಸಿಬಿಟ್ಟಿದ್ದಾರೆ. ಅಣಿಮಾದಿ ಸಿದ್ಧಿಗಳನ್ನು ಪಡೆದ ಸತ್ಪುರುಷರ ಚರ್ಯೆಗಳು ಸಾಮಾನ್ಯರಿಗೆ ಅತಿಮಾನುಷವಾಗಿ ತೋರುವುದು ನಿಜ. ಅಂತಹ ಮಹಿಮೆಗಳನ್ನು ತೋರಿಸುವುದೇ ಸತ್ಪುರುಷರ ಧ್ಯೇಯವಲ್ಲ. ಧರ್ಮವಿರುದ್ಧ ಕಾರ್ಯಗಳನ್ನವರೆಂದಿಗೂ ಮಾಡುವುದಿಲ್ಲ. ಸತ್ಪುರುಷರೆಂಬುವವರಲ್ಲಿ ಅತಿಮಾನುಷ ವೃತ್ತಿಗಳು ಕಂಡುಬಂದಲ್ಲದೆ ಜನರು ಅವರಲ್ಲಿ ಭಕ್ತಿಮಾಡುವುದಿಲ್ಲ. ಜನರ ವಿಶ್ವಾಸ ಬರ ಲೆಂದು ಅವರು ಅಲ್ಲದ ಕರ್ಮಗಳನ್ನೆಸಗುವುದಿಲ್ಲ.

ಭರತಖಂಡದ ಆಚಾರ್ಯಪುರುಷರಲ್ಲಿ ರಾಮಾನುಜಾಚಾರ್ಯರಿಗೆ ಅತ್ಯಂತ ಸಮಾಜ ಸುಧಾರಕರೆಂಬ ಹೆಸರಿದೆ. ಚಂಡಾಲರಿಗೂ ಮಂತ್ರೋಪದೇಶಮಾಡಿದರೆಂಬ ಕೀರ್ತಿಯಿದೆ. ಅಂಥವರಿಗೆ ದ್ರಾವಿಡ ಪ್ರಬಂಧೋಪದೇಶಮಾಡಿದ ಕಾಂಚೀಪೂರ್ಣರೆಂಬ ವೈಶ್ಯ ಗುರುಗಳು ಭೋಜನ ಪ್ರತಿಭೋಜನಗಳಲ್ಲಿ ವರ್ಣಸಾಂಕರ್ಯವಾಗಬಾರದೆಂಬ ನಿಯಮವನ್ನು ಪಾಲಿಸಿ ತೋರಿಸಿದ್ದಾರೆ. ಭೋಜನ ಪ್ರತಿಭೋಜನಗಳಿಂದಾಗಲಿ ವಿವಾಹ ಬಂಧನಗಳಿಂದಾಗಲಿ ಸಮಾಜವು ಏಕಮುಖವಾದೀತೆಂಬ ಅನುಭವವು ಯಾವ ದೇಶದಲ್ಲೂ ಇದುವರೆಗೆ ಕಂಡುಬಂದಿಲ್ಲ. ಮೇಲಿದ್ದವರನ್ನು ಕೆಳಗೆ ತಳ್ಳಿಬಿಡುವುದು ಬಲು ಸುಲಭ. ಕೆಳಗಿದ್ದವರನ್ನು ಮೇಲಕ್ಕೆತ್ತುವುದು ಅದರಂತೆ ಸುಲಭವಲ್ಲ. ವರ್ಣಾಶ್ರಮಗಳು ಮಾನವ

ಜೀವಿತದ ವಿವಿಧ ತರಗತಿಗಳು. ವ್ಯಕ್ತಿಗತ ಗುಣಕರ್ಮಗಳನ್ನನುಸರಿಸಿ ಬಂದವುಗಳು. ಸ್ವಭಾವವು ಯಾವಾಗಲೂ ಬದಲಾಗುವುದಿಲ್ಲ. ಸ್ವಭಾವವು ಅಭಿವ್ಯಕ್ತಿಗೆ ಬಂದಾಗ ವರ್ಣ ಗೌರವವು ಅಧಿಕವಾಗುವುದು. ಅಂಥವರು ಸತ್ಪುರುಷರೆನಿಸುವರು. ಸತ್ಪುರುಷರು ಇಂಥದೇ ವರ್ಣದವರಾಗಿರಬೇಕೆಂಬ ನಿಯಮವಿಲ್ಲ. ನಿಜವಾದ ಯೋಗ್ಯತೆಯು ಗೊತ್ತಾಗುವುದೇ ತಡ; ಅವರಿಗೆ ಎಲ್ಲೆಲ್ಲೂ ಪೂಜ್ಯತೆಗೆ ಕೊರತೆಯಾಗುವುದಿಲ್ಲ.

"ವರ್ಣನಾಂ ಬ್ರಾಹ್ಮಣೋ ಗುರುಃ" ಎಂದು ಹೇಳಿಸಿಕೊಳ್ಳುವ ಬ್ರಾಹ್ಮಣರು ಪೂಜಿಸುವ ರಾಮಕೃಷ್ಣರು ಬ್ರಾಹ್ಮಣೇತರ ದೇವರುಗಳೇ! ಶೌನಕಾದಿ ಮಹಾ ಮುನಿಗಳಿಗೆ ಪುರಾಣೋಪದೇಶಕರ್ತನು ಬೆಸ್ತಜಾತಿಯ ಸೂತಾಚಾರ್ಯನೇ! ಇದೀಗ ನಮ್ಮ ವರ್ಣಾಶ್ರಮಗಳಲ್ಲಿರುವ ಸ್ವಾರಸ್ಯ; ಸೌಲಭ್ಯ ಮತ್ತು ಔದಾರ್ಯ.

ಈ ಕಾಲದಲ್ಲಿ ವರ್ಣಾಶ್ರಮಗಳ ತತ್ವವನ್ನರಿಯದೆ ಜರಿಯುವವರು ಬಹಳ. ವರ್ಣಾಶ್ರಮಗಳಿಂದ ದೇಶ ಹಾಳಾಯಿತೆಂಬ ಬಾಯಿಬಡುಕರೂ ಬಹಳ. ಅಂಥವರ ಮಾತನ್ನು ಕೇಳುವ ಮೂಢರೂ ಬಹಳ.

ಅತಿಮಾನುಷ ಮಹಿಮೆಗಳು

ಮನುಷ್ಯನ ಕಲ್ಪನೆಗೆ ಮೀರಿದ ಕಾರ್ಯಗಳು ಅತಿಮಾನುಷ ಮಹಿಮೆಗಳೆನಿಸುವುವು. ಇಂತಹ ಕಾರ್ಯಮಾಡಿ ತೋರಿಸಿದವರನ್ನು ಜನರು ಅವತಾರಪುರುಷರೆಂದು ಕರೆಯುವರು. ಇದು ಎಲ್ಲಾ ದೇಶ, ಎಲ್ಲಾ ಕಾಲ, ಎಲ್ಲಾ ಜನಾಂಗಗಳ ಸಹಜ ಧರ್ಮವಾಗಿದೆ. ಪ್ರಪಂಚದಲ್ಲಿ ಇದುವರೆಗೆ ಅವತರಿಸಿರುವ ಎಲ್ಲಾ ಜನಾಂಗಗಳ ಸತ್ಪುರುಷರ ಚರಿತ್ರೆಗಳನ್ನು ಕೇಳಿದರೂ ಅವುಗಳ ತುಂಬ ಅತಿಮಾನುಷ ಮಹಿಮೆಗಳಿವೆ. ಆ ಮಹಿಮೆಗಳನ್ನು ವಿಸ್ತಾರವಾದ ಕಾಲದಲ್ಲಿ ಕರ್ಣಾಕರ್ಣಿಕೆಯಾಗಿ ಕೇಳಿದ ಜನರು ತಮಗೆ ಮೆಚ್ಚಿದ ಸತ್ಪುರುಷರಲ್ಲಿ ಎಲ್ಲವನ್ನೂ ಆರೋಪಿಸಿಕೊಂಡಿದ್ದಾರೆ. ಪ್ರಕೃತಕಾಲದಲ್ಲಿ ದೇಶಪರ್ಯಟನ ಮುದ್ರಣ ಸೌಕರ್ಯಗಳು ಹೆಚ್ಚಿವೆ. ಎಲ್ಲ ಧರ್ಮದವರೂ ತಮ್ಮ ಧರ್ಮಗಳನ್ನೂ ಸತ್ಪುರುಷರ ಮಹಿಮಾತಿಶಯವನ್ನೂ ಮುದ್ರಿಸಿ ಪ್ರಚುರಿಸುತ್ತಿದ್ದಾರೆ. ಒಂದು ದೇಶದವರ ಚರಿತ್ರೆಯನ್ನು ಮತ್ತೊಂದು ದೇಶದವರು ತಿಳಿಯುವ ಅನುಕೂಲವು ಈ ಕಾಲದಂತೆ ಹಿಂದಿನ ಕಾಲದಲ್ಲಿರಲಿಲ್ಲ. ಆದ್ದರಿಂದ ಹೆಚ್ಚು ಸಂಗತಿಗಳನ್ನು ತಿಳಿಸದಿದ್ದರೂ ತಿಳಿಸುವಷ್ಟು ಸಂಗತಿಗಳು ಸಪ್ರಮಾಣವಾಗಿರಬೇಕು. ಒಂದೇ ತರಹ ಮಹಿಮೆಯು ಅನೇಕರಲ್ಲಿದ್ದರೆ ಅಥವಾ ಸತ್ಪುರುಷರು ಅಂತಹ ಮಹಿಮೆಯನ್ನು ತೋರಿಸಿದ್ದರೆ, ಅವುಗಳನ್ನು ಸಪ್ರಮಾಣವಾಗಿ ಬರೆಯಬೇಕು. ಈ ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ, ಆಕ್ಷೇಪಗಳಿಗೆಡೆಯಿರದಂತೆ ಐತಿಹಾಸಿಕ ದೃಷ್ಟಿಯಿಂದ ಕರ್ಣಾಟಕ ಭಕ್ತವಿಜಯವನ್ನು ಬರೆಯಲಾಗಿದೆ. ಸಂಶಯಗ್ರಸ್ತ ವಿಷಯಗಳನ್ನು ವಾಚಕರ ವಿಮರ್ಶೆಗೆ ಬಿಡಲಾಗಿದೆ. ಪುಸ್ತಕದ ಆಕಾರವನ್ನು ದೊಡ್ಡದು ಮಾಡುವ ವರ್ಣನೆಗಳಿಗೆ ಎಡೆಗೊಟ್ಟಿಲ್ಲ.

ಮತಛಲ (Fanaticism)

ಮತಮದಾಂಧತೆಯೆಂಬರ್ಥದಲ್ಲಿ ಮತಛಲವೆಂಬ ಶಬ್ದವನ್ನು ಇಲ್ಲಿ ಉಪಯೋಗಿಸಿದೆ. ಮತದೀಕ್ಷೆಯು ಯಾವ ಮತೀಯರಿಗೂ ತಪ್ಪಲ್ಲ. ಮತ ಮದಾಂಧತೆಯಿಂದ ಪರಮತದ್ವೇಷದೂಷಣೆಗಳಲ್ಲಿ ಆಸಕ್ತರಾದರೆ ಅಂಥವರಿಂದ ಸಮಾಜಕ್ಕೆ ಅಪಾಯವುಂಟಾಗುತ್ತದೆ. ಪ್ರಪಂಚದ ಇತರ ಭೂಭಾಗಗಳೊಡನೆ ಭರತಖಂಡವನ್ನು ಹೋಲಿಸಿದರೆ ಇತರ ದೇಶಗಳಲ್ಲಿ ನಡೆದಷ್ಟು ಮತ ಪ್ರಳಯಗಳು ಭರತಖಂಡದಲ್ಲಿ ನಡೆಯಲಿಲ್ಲವೆಂದೇ ಹೇಳಬೇಕು. ಭರತಖಂಡದ ಮತಗಳಲ್ಲಿ 'ಯುಕ್ತಿಯುಕ್ತ ವಚೋಗ್ರಾಹ್ಯಂ ಬಾಲಾದಪಿ ಶುಕಾದಪಿ' ಎಂಬುದು ಬಹಳ ಮಟ್ಟಿಗೆ ಆಚರಣೆಯಲ್ಲಿದೆ. ಪರಕೀಯರ ಸಹವಾಸ ಪ್ರೇರಣೆಗಳಿಂದ ಈಗೀಗ ನಮ್ಮ ದೇಶದಲ್ಲೂ ಮತದ್ವೇಷಗಳು ಕಂಡು ಬರುತ್ತಿವೆ. ಅವು ರೂಢಮೂಲವಾಗದಂತೆ ಸಮಾಜವು ಜಾಗ್ರತವಾಗಬೇಕು.

ಮತನಿಮಿತ್ತವಾಗಿ ಭರತಖಂಡದಲ್ಲಿ ಎಷ್ಟೋ ಜಿಜ್ಞಾಸಗಳಾಗುತ್ತವೆ. ಅವು ಉದ್ವೇಗಜನಕಗಳಾಗಿಲ್ಲ. ಹಿಂದಿನ ಕಾಲದಲ್ಲಿ ಮತಸಂಬಂಧ ವಾಕ್ಯಾರ್ಥಗಳಲ್ಲಿ ಆಗುತ್ತಿದ್ದ ದೊಡ್ಡ ಪ್ರತಿಜ್ಞೆಗಳೆಂದರೆ–ಗೆದ್ದವರ ಧರ್ಮವನ್ನು ಸೋತವರು ಅವಲಂಬಿಸುವುದು ; ಗೆದ್ದವರನ್ನು ಸೋತವರು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರೆಸುವುದು. ಇಷ್ಟರ ವಿನಾ ದೇಶಾಂತರಗಳಂತೆ ಹೆಚ್ಚು ಪ್ರಮಾಣದ ಕೊಲೆಪಾತಕಗಳಾಗಿಲ್ಲ.

ಪುರಂದರದಾಸ ಪ್ರಭೃತಿಗಳು ವೈಷ್ಣವ ಮತಸ್ಥರು. ಅವರು ತಮಗಿರುವ ಮತದೀಕ್ಷೆಯನ್ನು ಪ್ರತಿಜ್ಞೆಮಾಡಿದಂತೆ ಹೇಳಿದ್ದಾರೆ. ಆದರೆ ಆ ಪದಗಳು ಪರಮತದೂಷಣೆಗಳಾಗಿ, ಪುರಂದರದಾಸರಪದಗಳೆಂದು ಮತದೂಷಣೆಯ ಹಾಡುಗಳು ಅಲ್ಲಲ್ಲಿ ಕರ್ಣತಾಡಿತವಾಗುತ್ತಿವೆ. ಆದರೆ ಆ ಪದಗಳ ಭಾಷಾಶೈಲಿಯನ್ನು ನೋಡಿದರೆ, ದಾಸರ ಪದಗಳಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಭಕ್ತಿಮಾರ್ಗವನ್ನು ಪ್ರಚಾರಗೊಳಿಸುವುದು ಭಾಗವತ ಧರ್ಮ. ಅದು ಹರಿದಾಸರ ಮತ. ಅಂತಹ ಹರಿದಾಸರು ದ್ವೇಷದೂಷಿತರಾಗುವುದಿಲ್ಲ. ಹರಿದಾಸರ ಮತಸಹಾನುಭೂತಿಯು ಅವರವರ ಚರಿತ್ರ ವಿಸ್ತಾರದಲ್ಲಿ ಚೆನ್ನಾಗಿ ಗೊತ್ತಾಗುತ್ತದೆ. ಆದ್ದರಿಂದ ಆ ವಿಷಯದ ಉಲ್ಲೇಖಕ್ಕೆ ಪ್ರಸ್ತಾವನೆಯ ಅಧ್ಯಾಯವು ಸ್ಥಳವಲ್ಲ.

ದೊಡ್ಡವರು ಎಲ್ಲರಿಗೂ ದೊಡ್ಡವರು ಅಂಥವರನ್ನು ನಮ್ಮವರು ನಿಮ್ಮವರೆಂದಾಡುವುದು 'ಇದು ನನ್ನ ದೇವರ ಪೆಟ್ಟಿಗೆ–ಅದು ನಿನ್ನ ದೇವರ ಪೆಟ್ಟಿಗೆ' ಎಂದು ಪ್ರತ್ಯೇಕ ಸಂಪುಟಗಳಲ್ಲಿ ಸಾಲಿಗ್ರಾಮಗಳನ್ನು ಕಟ್ಟಿಟ್ಟುಕೊಂಡಂತೆ! ಮಕ್ಕಳಾಟಕೆಯ ಭಾವನೆಯನ್ನು ಬಿಟ್ಟು ಕರ್ಣಾಟಕದಲ್ಲಿ ಎಂಥೆಂಥಾ ಸತ್ಪುರುಷರು ಜನ್ಮತಾಳಿದರು ; ಅವರು ತಮ್ಮ ಅನುಭವಗಳನ್ನು ಜನರಿಗೆ ಯಾವರೀತಿ ತಿಳಿಸಿದರು ; ಅವರಿಂದ ಸಮಾಜೋದ್ಧಾರ ಹೇಗಾಯಿತು ; ಇಷ್ಟುಕಾಲವಾದರೂ ಅವರ ಹೆಸರು ಅಚ್ಚಳಿಯದಿರಲು ಕಾರಣವೇನು ; ಈ ಮೊದಲಾದ ವಿಷಯಗಳನ್ನು ವಾಚಕರು ಮನಸ್ಸಿನಮೇಲೆ ತೆಗೆದುಕೊಳ್ಳಬೇಕು. ಆ ಮಹನೀಯರ ಆದರ್ಶವನ್ನು ಮುಂದಿಟ್ಟುಕೊಂಡು ತಾವೂ ಶಕ್ತ್ಯನುಸಾರ ಲೋಕಕ್ಕೆ ಆದರ್ಶಪ್ರಾಯರಾಗಬೇಕು. ಹಾಗಾದರೆ ಭಕ್ತವಿಜಯದ ಸೇವೆಯು ಸಫಲವಾಗುವುದು.

ಕಡೆಗೊಂದು ಮಾತು

ಭಕ್ತವಿಜಯವು ಲೇಖಕನ ಸ್ವತಂತ್ರ ಗ್ರಂಥವಲ್ಲ. ಹೈತುಕರಿಗೆ ಈ ತರಹೆ ಪುಸ್ತಕಗಳು ರುಚಿಸುವುದಿಲ್ಲ. ಈಗ ಬೇಕಾಗಿರುವುದು ಆವೇಶಹುಟ್ಟಿಸುವ ಪುಸ್ತಕ. ಹಿಂದಿನದನ್ನು ಅಲ್ಲಗಳೆಯುವ ಪುಸ್ತಕ. ನೀತಿಯ ಹೆಸರಿನಿಂದ ಸಮಾಜದ ಅನೀತಿಯನ್ನು ಭೂತಗನ್ನಡಿಯಲ್ಲಿಟ್ಟು ಓದುವರ ಹೃದಯಗ್ರಂಥಿಯನ್ನು ವಿದಾರಿಸುವ ಪುಸ್ತಕ. ಭಾಷೆಯಲ್ಲಿ ಕಾದಂಬರಿಯ ಶೈಲಿಯಿಲ್ಲ. ಹೊಸಶಬ್ದಗಳ ಹುಟ್ಟಿಲ್ಲ. ಇಂಥಾ ಪುಸ್ತಕವನ್ನು ಓದ ಬೇಕೆಂಬುವವರಿಗೆ ಮಾತ್ರ ಈ ಪುಸ್ತಕ.

ವಿವಿಧ ರೀತಿಯ ಗದ್ಯಪದ್ಯ ಗ್ರಂಥಗಳು ಉದಯಿಸುತ್ತಿರುವ ಈ ಕಾಲದಲ್ಲಿ ಹಳೇ ತರದ ಪುಸ್ತಕವೊಂದಿದ್ದರೆ ತಪ್ಪೇನು? ಭಾರವೇನು?

ಅಂಗೀರಸ ಸಂ॥
ಶ್ರಾವಣ ಬಹುಳ ದ್ವಿತೀಯ

ಬೇಲೂರು ಕೇಶವದಾಸ

ದ್ವಿತೀಯ ಮುದ್ರಣಕ್ಕೆ ಪ್ರಸ್ತಾವನೆ

ಕರ್ಣಾಟಕ ಭಕ್ತವಿಜಯ ಪ್ರಥಮಭಾಗದ ಮುದ್ರಣವಾಗಿ ನಾಲ್ಕೈದುವರ್ಷಗಳಾದುವು. ಆರ್ಥಿಕ ಮುಗ್ಗಟ್ಟಿನ ಈ ಅಂತರದಲ್ಲೂ ಇನ್ನೂರು ಪುಟಗಳ ಕನ್ಯಕಾಪುರಾಣವೂ ಸುಮಾರು ನಾನೂರೈವತ್ತು ಪುಟಗಳ ಭಕ್ತವಿಜಯದ ದ್ವಿತೀಯಭಾಗವೂ ಮುದ್ರಣವಾಗಿ ಜನಾನುರಾಗ ಪಡೆದುದಕ್ಕೆ ಸಂತೋಷಿಸಬೇಕಾಗಿದೆ. ಪ್ರಥಮಭಾಗವು ವಿಶೇಷವಾಗಿ ಉತ್ತರ ಕರ್ಣಾಟಕದಲ್ಲೂ ನಿಜಾಂ ಕರ್ಣಾಟಕದಲ್ಲೂ ಖರ್ಚಾಗಿ ನಮ್ಮ ಮೈಸೂರಿನವರಿಗೆ ಪುಸ್ತಕಗಳನ್ನೊದಗಿಸಲು ಸಾಧ್ಯವಾಗದ ಕಾರಣ ಕ್ಷಮೆಬೇಡಿ ಈ ದ್ವಿತೀಯ ಮುದ್ರಣಕ್ಕೆ ಕೈಹಾಕಬೇಕಾಯಿತು.

ಈ ದ್ವಿತೀಯ ಮುದ್ರಣದಲ್ಲಿ ಅನೇಕ ಗ್ರಂಥಕರ್ತರಂತೆ ವಿಶೇಷ ಬದಲಾವಣೆಗಳೇನನ್ನೂ ಮಾಡಿಲ್ಲ. ಈ ಸಾವಿರಪ್ರತಿಗಳನ್ನು ನಮ್ಮ ಕನ್ನಡಬಾಂಧವರು ಸ್ವೀಕರಿಸಿ ಸಹಾಯಮಾಡಿದರೆ, **"ಯುಕ್ತಮಲ್ಲಿಕೆ"** ಎಂಬ ವೇದಾಂತ ಗ್ರಂಥವನ್ನೂ ಬೇಗ ಮುದ್ರಿಸಲು ಪ್ರಯತ್ನಮಾಡುವೆನು. ಭಕ್ತವಿಜಯ ಪ್ರಥಮ ಭಾಗಕ್ಕೆ ಉತ್ತಮ ಬಹುಮಾನವನ್ನು ಕರುಣಿಸಿದ ಮದರಾಸಿನ ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿಯವರನ್ನೂ ಧಾರವಾಡದ ವಿದ್ಯಾವರ್ಧಕ ಸಂಘದವರನ್ನೂ ವಂದಿಸುವೆನು.

ಈಶ್ವರ ಸಂ॥
ಆಷಾಢ ಶುದ್ಧ ಏಕಾದಶೀ

ಬೇಲೂರು ಕೇಶವದಾಸ

ಪ್ರ ಕಾ ಶ ಕ ರ ಮಾ ತು

ಕರ್ಣಾಟಕ ಭಕ್ತವಿಜಯದ ಪ್ರಥಮ ದ್ವಿತೀಯ ಭಾಗಗಳೆರಡೂ ಮುಗಿದು ಬಹಳ ವರ್ಷಗಳಾದುವು. ಈ ಮಧ್ಯೆ ೧೯೪೪ ನೇ ಇಸವಿಯಲ್ಲಿ ಗ್ರಂಥ ಕರ್ತರಾದ ಶ್ರೀ ಬೇಲೂರು ಕೇಶವದಾಸರು ದಿವಂಗತರಾದುದರಿಂದಲೂ, ಈ ಗ್ರಂಥಗಳ ಪುನರ್ಮುದ್ರಣಕ್ಕೆ ಶ್ರೀ ದಾಸರ ಮಕ್ಕಳಾದ ಶ್ರೀಮಾನ್ ಕೆ. ಮೋಹನದಾಸ್ ಅವರ ಅನುಮತಿ ಪಡೆಯಬೇಕಾದ ಆವಶ್ಯಕತೆ ಇದ್ದುದರಿಂದಲೂ ಈವರೆಗೆ ಈ ಸಂಬಂಧದಲ್ಲಿ ನಮಗಿದ್ದ ಗ್ರಂಥ ಪ್ರಕಟನೋದ್ದೇಶವು ಕಾರ್ಯಕಾರಿಯಾಗಲು ಸಾಧ್ಯವಿಲ್ಲದೆ ವಿಳಂಬವಾಯಿತು. ಆದರೆ ಈಚೆಗೆ, ಶ್ರೀ ದಾಸರ ತಮ್ಮಂದಿರಾದ ಶ್ರೀಮಾನ್ ಬೇಲೂರು ರಂಗ ದಾಸರೂ, ಮಕ್ಕಳಾದ ಶ್ರೀಮಾನ್ ಕೆ. ಮೋಹನದಾಸರೂ ಭಕ್ತವಿಜಯದ ಎರಡು ಭಾಗಗಳನ್ನೂ ಪುನರ್ಮುದ್ರಣಮಾಡಿಸಿ, ಕನ್ನಡನಾಡಿನ ಮಹಾ ಜನರಿಗೆ ಒದಗಿಸಲು ನಮಗೆ ಅನುಮತಿಯನ್ನಿತ್ತುದರಿಂದ ಈಗ ಈ ಪ್ರಕಟನ ಕಾರ್ಯಕ್ಕೆ ಪ್ರಯತ್ನಿಸಲಾಗಿದೆ. ಕನ್ನಡಿಗರಿಗೆ ಈ ಗ್ರಂಥಗಳು ಮತ್ತೊಮ್ಮೆ ದೊರೆಯಲು ಈ ಬಗೆಯಲ್ಲಿ ಅವಕಾಶವಿತ್ತುದಕ್ಕಾಗಿ ಅವರಿಗೆ ಕೃತಜ್ಞರಾಗಿದ್ದೇವೆ.

ಕನ್ನಡ ಗ್ರಂಥ ಭಂಡಾರದಲ್ಲಿ ಅಪೂರ್ವ ಸ್ಥಾನಮಾನಗಳನ್ನು ಗಳಿಸಿರುವ ಈ ಕರ್ಣಾಟಕ ಭಕ್ತವಿಜಯ ಗ್ರಂಥವನ್ನು ಕರ್ಣಾಟಕದ ಆಸ್ತಿಕ ಮಹಾ ಜನರು ಆದರ ಪೂರ್ವಕ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಬೆಂಗಳೂರು-೧೮
ತಾ॥ ೩—೧೦—೧೯೬೩

ಸುಬೋಧ ಎಂ. ರಾಮರಾವ್

ಪರಿವಿಡಿ



ಮನ್ಮನೋಭೀಷ್ಟದಾತಾರಂ ಸರ್ವಾಭೀಷ್ಟ ಫಲಪ್ರದಂ।
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ಶ್ರೀ ಪಾಂಡುರಂಗ ವಿಠಲಾಯನಮಃ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ॥

ಬ್ರಹ್ಮಾಂತಾಗುರವಃ ಸಾಕ್ಷಾದಿಷ್ಟಂದೈವಂ ಶ್ರಿಯಃಪತಿಃ
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತುಮೇ ಜನ್ಮಜನ್ಮನಿ ॥

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇನಮಃ ॥

ಮನ್ಮನೋಭೀಷ್ಟದಾತಾರಂ ಸರ್ವಾಭೀಷ್ಟ ಫಲಪ್ರದಂ
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ಶ್ರೀ ಕರ್ಣಾಟಕ ಭಕ್ತವಿಜಯ

ಭಾಗ ೧

ಶ್ರೀರಾಮ ಸಹಾಯಂ

ಶ್ರೀ ಕರ್ಣಾಟಕ ಭಕ್ತವಿಜಯ

ಭಾಗವತ ಧರ್ಮ ಅಥವಾ ದಾಸಕೂಟ

ಭಾಗವತ ಧರ್ಮವು ಯಾವ ಕಾಲದಿಂದ ಜನರ ಆಚರಣೆಯಲ್ಲಿ ಬಂದಿತೆಂಬುದನ್ನಾಗಲಿ, ಯಾರು ಯಾವಾಗ ಭಾಗವತ ಧರ್ಮವನ್ನು ಸ್ಥಾಪಿಸಿದರೆಂಬುದನ್ನಾಗಲೀ ಆಂಗ್ಲಪದ್ಧತಿಯ ಬಿ.ಸಿ., ಎ.ಡಿ., (B.C., A.D.) ವರ್ಣಗಳಲ್ಲಿಟ್ಟು ತೋರಿಸಲು ಸಾಧ್ಯವಿಲ್ಲ. ಎಂದಿನಿಂದ ಭಗವಂತನೊಬ್ಬನಿದ್ದಾನೆಂಬ ಅನುಭವ ಜನರಿಗಾಯಿತೋ, ಎಂದಿನಿಂದ ಜನರು ಭಗವಂತನು ದೊಡ್ಡವನು, ಅವನ ಅನುಗ್ರಹದಿಂದ ತಮ್ಮ ಉದ್ಧಾರವಾಗಬೇಕೆಂದು ತಿಳಿಯಲಾರಂಭಿಸಿದರೋ, ಎಂದಿನಿಂದ ಅವರು ಆ ಭಗವಂತನ ಭಜನೆ ಮಾಡಿದರೋ, ಅಂದಿನಿಂದ ಭಾಗವತ ಧರ್ಮದ ಉದಯವಾಯಿತೆಂದು ಭಾವಿಸಬೇಕು. ಭಗವಂತನ ಅಸ್ತಿತ್ವದ ಅನುಭವ ಬಂದ ಎಷ್ಟೋ ಕಾಲದ ಮೇಲೆ ನಾವೂ ಭಗವಂತನೂ ಬೇರೆ ಬೇರೆ ಎಂಬುದರ ಅನುಭವವಾಗಲಿ, ಭಗವದಂಶೀಯರು ನಾವೆಂಬ ಭಾವನೆಯಾಗಲಿ, ನಾವೇ ಭಗವಂತರೆಂಬ ಧೈರ್ಯವಾಗಲಿ ಸಮಾಜದಲ್ಲಿ ಉದಯವಾಗಿರಬೇಕು. ಈ ತ್ರಿವಿಧ, ದ್ವೈತ ವಿಶಿಷ್ಟಾದ್ವೈತ ಅದ್ವೈತ ಮತಗಳ ಅನುಭವ ಬರುವುದಕ್ಕೆ ಎಷ್ಟೋ ಹಿಂದಿನ ಕಾಲದಿಂದ ಸಹಜವಾಗಿ ಸ್ವಾಭಾವಿಕವಾಗಿ ಭಾಗವತ ಧರ್ಮವಿರುವುದರಿಂದ, ಮೂರೂ ಮತಭಾವನೆಗಳ ಆವರಣದಲ್ಲಿ ಸಿಲುಕದೆ ಭಾಗವತಧರ್ಮವು ಅನಾದಿ ಕಾಲದಿಂದ ಸ್ವತಂತ್ರವಾಗಿ ಜನರ ಆಚರಣೆಯಲ್ಲಿತ್ತೆಂಬುದಕ್ಕೆ ಅಭ್ಯಂತರವಿರುವುದಿಲ್ಲ. ಮೇಲ್ಕಂಡ ಮೂರೂ ಮತಗಳಿಗೆ ಭಾಗವತಧರ್ಮವು ಸಮಾನವಾಗಿರುವುದರಿಂದ ಯಾರೂ ಅದನ್ನು ಮೀರಿ ನಡೆಯಲು ಸಾಧ್ಯವಾಗಿಲ್ಲ.

ಅನಂತವಾದ ಕಾಲದಲ್ಲಿ ಅನಂತನ ಮಹಿಮೆಯನ್ನು ಅನಂತ ಜನರು ಕೊಂಡಾಡಿರಬೇಕು. ಆ ಜನರು ಕೊಂಡಾಡಿದ ಮಾತುಗಳು ಆಯಾ ಕಾಲದ ಜನರಿಗೆ ಆಯಾ ಭಾಷೆಗಳ ಪದಪದ್ಯಗಳಾಗಿರಬೇಕು. ಹಿಂದಿನ ಪೀಳಿಗೆಯವರು ಮುಂದಿನವರಿಗೆ ಮಾರ್ಗದರ್ಶಿಗಳಾಗಿರಬೇಕು. ಹಿಂದಿನವರು ಹಾಡಿದುದನ್ನು ಮುಂದಿನವರು ಹಾಡಿರಬೇಕು. ಭಾಗವತಧರ್ಮವು ಬೆಳೆದುಬಂದಿರಬೇಕು. ಇದಕ್ಕಿಂತ ಹೆಚ್ಚಿನ ಪ್ರಮಾಣಗಳೇನಿರುವುದಕ್ಕೂ ಏನನ್ನು ಉದಹರಿಸುವುದಕ್ಕೂ ಸಾಧ್ಯವಿಲ್ಲ. ಉದಹರಿಸಲು ಪ್ರಯತ್ನ ಮಾಡಿದರೆ, ಅದು ಸಾಹಸ ಮಾತ್ರವಾಗುವುದಲ್ಲದೆ ಫಲಕಾರಿಯಾಗುವುದಿಲ್ಲ.

ಧರ್ಮವೆಂಬುದು ಕೇವಲ ಪ್ರಕೃತಿಯ ಅಂತರ್ಭೂತ ಮಾನವಗುಣವು. ನಿಜವಾದ ಧರ್ಮಕ್ಕೆ ಪ್ರಬೋಧಕರು ಬೇಕಾಗಿಲ್ಲ. ಪ್ರಬೋಧಕರಿಂದ ಬರುವ ಧರ್ಮವು ನೆಲೆಯಾಗಿ ನಿಲ್ಲುವುದಿಲ್ಲ. ಕಟ್ಟುಬಣ್ಣವು ಹುಟ್ಟುಬಣ್ಣವಾಗುವುದಿಲ್ಲ. ಹೆಸರಿನಿಂದ ಕರೆಸಿಕೊಂಡ ಮಾತ್ರಕ್ಕೇ ಈಗ ಲೋಕದಲ್ಲಿ ಪ್ರಚಲಿತವಾಗಿರುವ ಅನೇಕ ಧರ್ಮಗಳು ದಿನದಿನಕ್ಕೆ ಬೆಳೆಯದಿರುವುದಕ್ಕೂ, ಸಹಜಧರ್ಮವು ತನ್ನಷ್ಟಕ್ಕೆ ತಾನೇ ಬೆಳೆಯುತ್ತಿರುವುದಕ್ಕೂ ನಿದರ್ಶನಗಳನ್ನು ತೋರಿಸಬೇಕಾಗಿಲ್ಲ. ಧರ್ಮವು ಪ್ರಬೋಧಕನಾಗಿರದೆ ಪ್ರಬೋಧಕವಾಗಿರಬೇಕು. ಅಂತಹ ತ್ರಿಕಾಲಾಬಾಧಿತ ಧರ್ಮವೆಂದರೆ ಭಾಗವತಧರ್ಮವು. ಆದ್ದರಿಂದ ಭಾಗವತಧರ್ಮವು ಅಳಿಯುವುದಿಲ್ಲ.

ಇಂತಹ ಭಾಗವತಧರ್ಮದಲ್ಲಿ ಪ್ರಸಿದ್ಧರೂ ಲೋಕಪರಿಚಿತರೂ ಆದ ಯಾರೊಬ್ಬರ ಹೆಸರನ್ನು ಕೇಳಬೇಕೆಂದರೆ, ಆಗ ಆ ಪರಮಾತ್ಮನ ಅನಂತ ಕಲ್ಯಾಣ ಗುಣಗಳನ್ನು ಅನವರತವೂ ಗಾನಮಾಡುವ ಭಕ್ತಿಸೂತ್ರಕಾರರಾದ ನಾರದ ಮಹಾಮುನಿಗಳ ಹೆಸರನ್ನು ಹೇಳಬೇಕಾಗುವುದು. ವಾಲ್ಮೀಕಿ ಮಹಾಮುನಿಗಳಿಂದ ಪ್ರಣೀತವಾದ, ವೇದಕ್ಕೆ ಸಮಾನವೂ ಆದಿಕಾವ್ಯವೂ ಎನಿಸಿದ ಶ್ರೀಮದ್ರಾಮಾಯಣವನ್ನು, ಶ್ರೀ ರಾಮಚಂದ್ರನ ಯಜ್ಞಶಾಲೆಯಲ್ಲಿ ತಂತ್ರೀವಾದ್ಯದೊಂದಿಗೆ ಹಾಡಿ, ವಸಿಷ್ಠಾದಿ ಮಹಾಮುನಿಗಳನ್ನೂ, ರಘುಕುಲೋದ್ಭವ ರಾಜಾಧಿರಾಜನನ್ನೂ ತಲೆದೂಗಿಸಿದ ಲವಕುಶರನ್ನು ತೋರಿಸಬೇಕು.

ಭಾಗವತಧರ್ಮವು ವ್ಯವಸ್ಥಿತವಾದ ಸಮಾಜಶಿಕ್ಷಣ ರೂಪವನ್ನು ತಾಳಿ, ಕೇವಲ ಪದ್ಯಾತ್ಮಕವಾಗಿರುವುದರ ಜೊತೆಗೆ ಅರ್ಥನಿರೂಪಣೆಗಾಗಿ ಗದ್ಯರೂಪವನ್ನೂ ತಾಳಿ ಯಾವಾಗ ಬೆಳೆಯಿತೆಂದು ಮತ್ತೆ ವಿಚಾರಿಸಿದರೆ—ಪದ್ಮಪುರಾಣದಲ್ಲಿ ಭಾಗವತ ಮಹಿಮೆಯನ್ನು ವರ್ಣಿಸುವಾಗ ಉಲ್ಲೇಖಿತವಾಗಿರುವ ಪ್ರಮಾಣ ಶ್ಲೋಕವನ್ನು ತೋರಿಸಬೇಕಾಗುವುದು.

ಪ್ರಹ್ಲಾದಸ್ತಾಲಧಾರೀ ತರಲಗತಿತಯಾ ಚೋದ್ಧವಃ ಕಾಂಸ್ಯಧಾರೀ ।
ವೀಣಾಧಾರೀ ಸುರರ್ಷಿಃ ಸ್ವರಕುಶಲತಯಾ ರಾಗಕರ್ತಾರ್ಜುನೋಽಭೂತ್ ॥
ಇಂದ್ರೋಽವಾದೀನ್ಮೃದಂಗಂ ಜಯಜಯಸುಕರಾಃ ಕೀರ್ತನೇ ತೇ ಕುಮಾರಾಃ ।
ತತ್ರಾಗ್ರೇ ಭಾವವಕ್ತಾ ಸರಸರಚನತಯಾ ವ್ಯಾಸಪುತ್ರಶ್ಶುಕೋಽಭೂತ್ ॥

ತಾನೆ ವ್ಯಾಸಮಹರ್ಷಿಗಳ ಪುತ್ರರಾದ ಶುಕಾಚಾರ್ಯರು ಸನಕಾದಿಗಳಿಂದ ಪರಿಷ್ಕೃತವಾದೊಂದು ಸಭೆಯಲ್ಲಿ ನವರಸಭರಿತವಾಗಿರುವಂತೆ ಕೀರ್ತನಮಾಡಿದರು. ಇವರಿಗೆ ಸಹಾಯಾರ್ಥವಾಗಿ ಪ್ರಹ್ಲಾದನು ತಾಳವನ್ನೂ, ಉದ್ಧವನು ಕಾಂಸ್ಯವನ್ನೂ, ನಾರದರು ವೀಣೆಯನ್ನೂ, ಇಂದ್ರನು ಮೃದಂಗವನ್ನೂ ಬಾರಿಸಿದರು. ಅರ್ಜುನನು ರಾಗಾಲಾಪನೆ ಸ್ವರಕಲ್ಪನೆಗಳನ್ನು ಮಾಡಿದನು. ಸನಕಾದಿ ಕುಮಾರರು ಕೀರ್ತನದ ಸ್ವಾರಸ್ಯದಿಂದ ಪರವಶರಾಗಿ ಕರತಾಡನಪೂರ್ವಕ ಜಯಘೋಷಮಾಡಿದರು.

ಈ ಮಾತಿಗೆ ಕಾಲವ್ಯಾಪ್ತಿಯೆಂದು ಹಿಂದೂಪಂಚಾಂಗ ರೀತ್ಯಾ ನೋಡಿದರೆ ಐದು

ಸಾವಿರ ವರ್ಷಗಳ ಮೇಲಾಗುವುದು. ಪಾಶ್ಚಾತ್ಯರ ಕಲ್ಪನೆಯಂತೆ ಮೂರುಸಾವಿರಕ್ಕೆ ಕಡಿಮೆಯಾಗುವುದಿಲ್ಲ. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು—

ಸತತಂ ಕೀರ್ತಯಂತೋಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥ ix ೧೪

ಸತತಂ = ವೀಣಾದಿ ವಾದ್ಯಗಳಿಂದ ಸಹಿತವಾಗಿ ನನ್ನನ್ನು ಕೀರ್ತನಮಾಡುತ್ತಾರೆ. ಇತ್ಯಾದಿಯಾಗಿ ಉಲ್ಲೇಖಮಾಡಿದ್ದಾನೆ.

ಭಗವದ್ಗೀತೆಯಂಥಾ ಗ್ರಂಥದಲ್ಲಿ ಕೀರ್ತನದ ಉಲ್ಲೇಖವಿರುವುದನ್ನು ನೋಡಿದರೆ, ಶ್ರೀಕೃಷ್ಣನ ಕಾಲದಲ್ಲಿ ಕೀರ್ತನವು ತನ್ನ ಉನ್ನತಿಯ ಪರಮಾವಧಿಯನ್ನೈದಿದ್ದಿತೆಂದು ಗೊತ್ತಾಗುತ್ತದೆ.

ಭಾಗವತಧರ್ಮವು ಅರ್ಥಾತ್ ಕೀರ್ತನರೂಪವಾದ ಧರ್ಮೋಪದೇಶವು ಒಂದು ರೀತಿಯಾದ ಶಿಕ್ಷಣ ಸಂಸ್ಥೆಯಾಗಿ ರಾಜಪ್ರಜೆಗಳೆಲ್ಲರ ಆದರಕ್ಕೆ ಪಾತ್ರವಾಗಿ ಜನಾಂಗದ ದೊಡ್ಡದೊಂದು ಶಿಕ್ಷಣ ಕಾರ್ಯವಾಗಿ ಪರಿಣಮಿಸಿತು. ಜನಾದರಣೆ ಹೆಚ್ಚಿದಹಾಗೆ ವ್ಯಕ್ತಿತ್ವ ವಕ್ತೃತ್ವವುಳ್ಳವರು ಉಪದೇಶಕರಾಗುತ್ತ ಬಂದರು. ಉಪದೇಶಕರ ವರ್ಚಸ್ಸು ಹೆಚ್ಚಿದುದನ್ನು ನೋಡಿ ರಾಜ್ಯಾಧಿಪತಿಗಳೂ ಅವರ ಸಹಾಯದಿಂದ ತಮ್ಮ ರಾಜ್ಯನಿರ್ವಹಣ ಕಾರ್ಯವನ್ನು ಸಾಧಿಸುವುದಕ್ಕೆ ಹಿಂದೆಗೆಯಲಿಲ್ಲ.

ಅರ್ಥಶಾಸ್ತ್ರವಿಶಾರದನಾದ ಚಾಣಕ್ಯನು ತನ್ನ ಅರಸನಾದ ಚಂದ್ರಗುಪ್ತನ ರಾಜ್ಯವನ್ನು ವಿಸ್ತರಿಸಲು ಸಹಾಯಕರಾದ ಒಂದು ಕೀರ್ತನಕಾರರ ತಂಡವನ್ನು ಬೆಂಬಲವಾಗಿಟ್ಟುಕೊಂಡಿದ್ದನಂತೆ! ಆ ಕೀರ್ತನಕಾರರು ಪರರಾಯರ ರಾಷ್ಟ್ರಗಳಲ್ಲಿ ಸಂಚರಿಸಿ ತಮ್ಮ ಶೀಲ ಮತ್ತು ಪಾಂಡಿತ್ಯಗಳಿಂದ ಜನಾದರಣೆಯನ್ನು ಪಡೆದು, ಆಯಾ ರಾಜರ ಆಸ್ಥಾನಗಳಲ್ಲಿ ಸನ್ಮಾನಿತರಾಗಿ ಅವರ ಬಲಾಬಲಗಳನ್ನು ತಮ್ಮರಸನಿಗೆ ತಿಳಿಸುತ್ತಿದ್ದರಂತೆ! ಹೀಗೆ ಕೇವಲ ಧರ್ಮೋಪದೇಶಕರಾಗಿದ್ದ ಭಾಗವತ ಧರ್ಮಾವಲಂಬಿಗಳು ರಾಜಕಾರ್ಯದಲ್ಲೂ ಭಾಗ ತೆಗೆದುಕೊಳ್ಳುವ ಆವಶ್ಯಕತೆಯು ಕಾಲಗತಿಯಿಂದುಂಟಾಯಿತು. ರಾಜಾಶ್ರಯ ರಾಜಸನ್ಮಾನಗಳಿಂದ ಪ್ರಸನ್ನರಾದ ಕೀರ್ತನಕಾರರು ಕ್ರಮೇಣ ರಾಜದೂತರಾಗುತ್ತ ಬಂದರು. ತಮ್ಮ ರಾಜರ ದಿಗ್ವಿಜಯಗಳನ್ನು ವರ್ಣಿಸುವ ವಂದಿಮಾಗಧರ ತರಗತಿಗೆ ಬಂದಿಳಿದರು. ಈ ಪರಿವರ್ತನದಿಂದ ಶುದ್ಧವಾದ ಭಾಗವತ ಧರ್ಮವು ತನ್ನ ನಿಜಸ್ವರೂಪವನ್ನು ಕಳೆದುಕೊಂಡು ಕಲುಷಿತವಾಯಿತು.

ಅಂದಮೇಲೆ ಕಳೆದ ಕ್ರಿ.ಶ ೧೯೩೬ರಲ್ಲಿ ಬಳ್ಳಾರಿಯಲ್ಲಿ ನಡೆದ ಕೀರ್ತನ ಸಮ್ಮೇಳನದಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ಶ್ರೀ ರಾಜ ಕವಿರತ್ನ ಎಚ್. ಲಿಂಗರಾಜ ಅರಸರು ತಮ್ಮ ಅಧ್ಯಕ್ಷ ಭಾಷಣದಿಂದ ಕೀರ್ತನದ ಪುರಾತನತ್ವವನ್ನು ವರ್ಣಿಸುತ್ತ, ಕೀರ್ತನಕಾರರು ಪೂರ್ವಕಾಲದ ಕ್ಷತ್ರಿಯ ರಾಜರ ವಂದಿಮಾಗಧರಾಗಿ ರಾಜರ ಗುಣಕಥನ ಮಾಡುತ್ತಿದ್ದರೆಂಬ ಪ್ರಾಜ್ಯತೆಯನ್ನು ಕೊಟ್ಟಿದ್ದರಲ್ಲಿ ಆಶ್ಚರ್ಯವೇನು! ಅವರು ಮಾಡಿದ ಇತಿಹಾಸ ಶೋಧನದಲ್ಲಿ ತಪ್ಪೇನು?

ಹೀಗೆ ಕಾಲದ ಕಳಿತದಲ್ಲಿ ಸಿಕ್ಕಿದ ಭಾಗವತ ಧರ್ಮವು ಅವಲಂಬಿಸಿದವರ ವ್ಯಕ್ತಿತ್ವದಿಂದ ವಿವಿಧ ಪರಿಣಾಮವನ್ನು ಹೊಂದಿತು. ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಕರ್ಣಾಟಕದಲ್ಲಿ ಅತ್ಯಂತ ಪ್ರಬಲರಾದ **ಅಚಲಾನಂದದಾಸ**ರಿಂದ ಪುನಃ ಅದು ತನ್ನ ಸಹಜ ಸ್ವರೂಪವನ್ನು ತಾಳಿತು.

ತಮಿಳುನಾಡಿನಲ್ಲಿ ಭಾಗವತಧರ್ಮವು, ಶೈವ-ವೈಷ್ಣವಗಳೆಂಬ ಎರಡು ಶಾಖೆಗಳಾದುವು. ಆಳ್ವಾರರಿಂದ ವೈಷ್ಣವ ಶಾಖೆಯೂ, ಪುರಾತನ ಶಿವಶರಣರಿಂದ ಶೈವ ಶಾಖೆಯೂ ಅಭಿವೃದ್ಧಿಗೆ ಬಂದುವು. ಯದ್ಯಪಿ ಉಭಯ ಶಾಖೆಗಳವರೂ ಕೀರ್ತನ ರೂಪವಾಗಿ ಉಪದೇಶಮಾಡಿದ್ದರೂ ಪ್ರಾಕೃತ ಭಾಷೆಯಲ್ಲಿ ಗ್ರಂಥರಚನೆ ಮಾಡಿದ ನಿಮಿತ್ತ ಕೀರ್ತನದಷ್ಟೇ ಪರಿಣಾಮಕಾರಿಯಾಗಿ ಸಮಾಜ ಶಿಕ್ಷಣವಾಯಿತು.

ಉತ್ತರ ಭಾರತದಲ್ಲಿ ಮುಸಲ್ಮಾನರ ಉಪಟಳ ಹೆಚ್ಚಿ ರಾಜ್ಯಗಳು ನಾಶವಾಗಿ, ವಿದ್ಯಾಪೀಠಗಳು ಹಾಳಾಗಿ, ಗ್ರಂಥ ಭಂಡಾರಗಳು ಭಸ್ಮವಾಗಿ, ಅಗಣಿತ ಜನರ ಕೊಲೆಯಾಗಿ ಸರ್ವನಾಶವಾಯಿತು. ಅದರಿಂದ ಅಲ್ಲಿನ ಭಾಗವತಧರ್ಮದ ಯಾವ ಇತಿಹಾಸವೂ ಬೆಳಕಿಗೆ ಬರದಂತಾಯಿತು. ಅಲ್ಲಿನವರು ದೃಢಕಾಯರೂ ಸ್ಥಿರಮನಸ್ಕರೂ ಆಗಿದ್ದ ಕಾರಣ ಹಿಂದೂ ಧರ್ಮಕ್ಕಾಗಿ ಹೋರಾಡಿ ಈಗಿರುವ ಸ್ಥಿತಿಯಲ್ಲಾದರೂ ಉಳಿಸಿಕೊಂಡರು. ಅದೇ ಪ್ರಸಂಗವು [illegible] ಜನ್ಮಮನಸ್ಸಿನ ದಾಕ್ಷಿಣಾತ್ಯರಿಗೆ ಬಂದೊದಗಿದ್ದರೆ, ಹಿಂದೂ ಧರ್ಮದ ಹೆಸರು ಕೂಡ ಇರುತ್ತಿರಲಿಲ್ಲ. ಮತ್ತೆ **ಜಯಧ್ವಜರ** (ವ್ಯಾಸರಾಯ ಮಠದ ಪೂರ್ವ ಸ್ವಾಮಿಗಳು) ಶಿಷ್ಯಪೀಳಿಗೆಯಲ್ಲಿ ಬಂದ **ಶ್ರೀಕೃಷ್ಣ ಚೈತನ್ಯ**ರಿಂದ ಬಂಗಾಳದಲ್ಲೂ **ತುಲಸೀದಾಸ** ಮೊದಲಾದವರಿಂದ ಇತರ ಪ್ರಾಂತಗಳಲ್ಲೂ ಭಾಗವತ ಧರ್ಮದ ಪುನಸ್ಥಾಪನೆಯಾಯಿತು.

ಮಹಾರಾಷ್ಟ್ರದಲ್ಲಿ ಹದಿಮೂರನೇ ಶತಮಾನದಿಂದ ಭಾಗವತಧರ್ಮದ ಕುರುಹನ್ನು ಕಂಡುಹಿಡಿಯಲು ಅವಕಾಶವಿದೆ. ಕಾಲ ದೇಶ ವ್ಯಕ್ತಿ ವಿಚಾರಗಳು ಅದೃಶ್ಯವಾಗಿರುವುದರಿಂದ ಯಾವ ದೇಶೀಯರಿಗೂ ವ್ಯವಸ್ಥಿತ ರೀತಿಯಿಂದ ಒಂದು ಚರಿತ್ರೆಯನ್ನು ಬರೆದಿಡಲು ಅವಕಾಶ ತಪ್ಪಿದೆ. ಇತರ ರಾಷ್ಟ್ರಗಳಿಗಿಂತ ಮಹಾರಾಷ್ಟ್ರದಲ್ಲಿ ಕೀರ್ತನದ ವರ್ಚಸ್ಸು ಬೆಳೆದು, ರಾಜಾಶ್ರಯ ದೊರೆತ ಕಾರಣ ಕೆಲಕೆಲವು ಪೀಳಿಗೆಗಳು ಬೆಳೆದುಬಂದು ಈಗಲೂ ಭಾಗವತಧರ್ಮದ ಪ್ರಚಾರ ತಕ್ಕಮಟ್ಟಿಗೆ ನಡೆಯುತ್ತಿದೆ.

ಕರ್ಣಾಟಕದಲ್ಲಾದರೋ ಮೇಲೆ ತಿಳಿಸಿರುವಂತೆ ಒಂಭತ್ತನೇ ಶತಮಾನದಷ್ಟು ಹಿಂದಿನಕಾಲದಲ್ಲಿ ಅಚಲಾನಂದದಾಸರಿದ್ದ ಆಧಾರ ದೊರೆತಿದೆ. ಈ ಆಧಾರದಿಂದ ಮಹಾರಾಷ್ಟ್ರರು ಕರ್ಣಾಟಕಕ್ಕೆ ಕೀರ್ತನ ಮಾರ್ಗದರ್ಶಿಗಳೆಂಬ ಅನೇಕರ ಕಲ್ಪನೆಯು ಸುಳ್ಳಾಗುತ್ತದೆ. ಭರತಭೂಮಿಯಲ್ಲಿ ಇತಿಹಾಸ ಲೇಖನ ಸಾಧನಗಳು ಮೊದಲಿನಿಂದಲೂ ಕಡಿಮೆಯಾಗಿರುವುದರಿಂದ ಯಾವ ಪ್ರಾಂತ್ಯಗಳಲ್ಲೂ ಸರಿಯಾದ ಇತಿಹಾಸ ದೊರೆಯುವುದಿಲ್ಲ. ಮತ್ತೆ ಒಂಭತ್ತನೇ ಶತಮಾನದಿಂದ ಹದಿನೈದನೇ ಶತಮಾನದ ತನಕ ಕರ್ಣಾಟಕದ ಕೀರ್ತನಕಾರರ ಇತಿಹಾಸ ಸಿಕ್ಕಿಲ್ಲ. ಇದು ನಮ್ಮ ಸ್ಥಿತಿ.

ಶ್ರೀ ಅಚಲಾನಂದದಾಸರು

ಶ್ರೀ ಅಚಲಾನಂದದಾಸರು —ಜಾತ್ಯಾ ಭಾಗವತ ಧರ್ಮಾವಲಂಬಿಗಳಾದ ಕರ್ಣಾಟಕ ಬ್ರಾಹ್ಮಣರು. ಇವರಿದ್ದ ಮೊದಲಿನ ಸ್ಥಳ ಬೆಂಗಳೂರು ಜಿಲ್ಲೆಯ ಹೈಗಣಪುರ. ಇವರ ವಂಶೀಕರು ಈಗ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿದ್ದಾರೆ. ದಾಸರು ಆದಿಯಿಂದ ನೃಸಿಂಹೋಪಾಸಕರು. ಇವರ ಜನ್ಮನಾಮ ನೃಸಿಂಹದಾಸರೆಂದು. ಇವರ ಪೂರ್ವಿಕರೂ ಹರಿದಾಸರಾಗಿದ್ದರಂತೆ. ಇವರ ಹೆಸರು ಹೆಚ್ಚು ಪ್ರಸಿದ್ಧಿಗೆ ಬಂದಕಾರಣ ವಂಶೀಕರು ಇವರನ್ನು ತಮ್ಮ ಮೂಲ ಪುರುಷರೆಂದು ಭಾವಿಸುತ್ತಾರೆ. ಇವರು ಮಹಾ ಮಹಿಮರೂ ವಿರಕ್ತರೂ ಆಗಿದ್ದರೆಂಬುದಕ್ಕೆ ಇವರ ಚರಿತ್ರೆಯೇ ಸಾಕ್ಷಿಯಾಗಿದೆ.

ಅಚಲಾನಂದರು ಒಂಭತ್ತನೇ ಶತಮಾನದಲ್ಲಿದ್ದರೆಂಬ ಮಾತಿನಲ್ಲಿ ಕೆಲವರಿಗೆ ಸಂಶಯವಾಗುತ್ತಿದೆ. ಅಚಲಾನಂದವಿಠಲ ಮುದ್ರಿಕೆಯ ಕೆಲವು ದೇವರ ನಾಮಗಳೂ ಉಗಾಭೋಗಗಳೂ ಹದಿನಾರನೇ ಶತಮಾನದ ಕನ್ನಡ ಭಾಷೆಯಂತಿದೆ. ಭಾಷಾಶಾಸ್ತ್ರಜ್ಞರು ಇವರನ್ನು ಹದಿನೈದನೇ ಶತಮಾನಕ್ಕಾದರೂ ಸೇರಿಸಬೇಕೆನ್ನುತ್ತಾರೆ. ಅಚಲಾನಂದವಿಠಲ ಮುದ್ರಿಕೆಯಿಂದ ಆವರ ವಂಶೀಕರು ಈಚೆಗೆ ಮಾಡಿರಬಹುದಾದ ಕವನಗಳು ದೊರೆತಿದ್ದು ಈ ಸಂಶಯಕ್ಕೆ ದಾರಿಯಾಗಿದೆ. ಒಂಭತ್ತನೇ ಶತಮಾನದವರನ್ನು ಹದಿನೈದನೆಯ ಶತಮಾನಕ್ಕೆ ಕೈಹಿಡಿದು ತರಬೇಕೆಂದರೆ ಅವರ ಇತರ ಚರಿತ್ರಾಧಾರಗಳು ಬಾಧಕವಾಗಿವೆ. ಆ ವಂಶೀಕರು ತಿಳಿಸುವ ಪ್ರಮಾಣಗಳು ಅದ್ವಿತೀಯವಾಗಿವೆ. ಅವರ್‍ಯಾವೂ ಇರದಿದ್ದರೆ ದಾಸರನ್ನು ಯಾವ ಶತಮಾನಕ್ಕಾದರೂ ಕರೆತರಬಹುದಿತ್ತು.

ಅಚಲಾನಂದರು ಹೈಗಣಪುರವಾಸಿಗಳಾದರೂ ಅವರು ಒಂದೇ ಸ್ಥಳದಲ್ಲಿ ನಿಂತಂತೆ ಕಂಡುಬರುವುದಿಲ್ಲ. ನಿರಂತರ ಶಿಷ್ಯಪರಿವಾರ ಸಮೇತರಾಗಿ ದೇಶಸಂಚಾರ ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. ಭರತಖಂಡವನ್ನು ಪಾದಚಾರಿಗಳಾಗಿ ಸಂಚರಿಸಿ ಎಲ್ಲೆಲ್ಲೂ ಭಾಗವತಧರ್ಮವನ್ನು ಉಪದೇಶ ಮಾಡಿದರೆಂದು ಗೊತ್ತಾಗುತ್ತದೆ. ದಾಸರ ಮಹಿಮೆಯನ್ನು ವರ್ಣಿಸುವ ಸ್ತೋತ್ರಸರಣಿಯಲ್ಲಿ **"ಭೂತ್ಯೈಯರ್ಾನಸುಧಾನುಗೋಚರಪದಃ ಶ್ರೀನಾರಸಿಂಹೋಗುರುಃ"** ಎಂಬ ಹೊಗಳಿಕೆಯಿದೆ. ಅಂದರೆ ದಾಸರು ತಮ್ಮ ಉಪಾಸ್ಯ ಮೂರ್ತಿಯಾದ ನೃಸಿಂಹದೇವರನ್ನು ಗರುಡಮಾರುತಿಗಳಿಂದಲಂಕೃತವಾದ ಪಲ್ಲಕ್ಕಿಯಲ್ಲಿಟ್ಟುಕೊಂಡು, ತಾವು ಪಾದಚಾರಿಗಳಾಗಿ ಕೈಯಲ್ಲಿ ತಂಬೂರಿಯನ್ನು ಮಿಡಿಯುತ್ತಾ, ಭಜನೆ ಮಾಡುತ್ತಾ ನಡೆಯುತ್ತಿದ್ದರಂತೆ! ಆ ಪಲ್ಲಕ್ಕಿಯನ್ನು ಮಾನ್ಯಗಣಗಳು ಹೊತ್ತುಕೊಂಡು ಜನರ ಕಣ್ಣಿಗೆ ಕಾಣಿಸದೆ ಬರುತ್ತಿದ್ದುವಂತೆ! ಅಂತರಾಳದಲ್ಲಿ ಪಲ್ಲಕ್ಕಿಯು ಸಾಗಿ ಬರುತ್ತಿದೆಯೆಂದು ಜನರು ದಾಸರಲ್ಲಿ ಬಹಳ ಭಕ್ತಿ ಮಾಡುತ್ತಿದ್ದರಂತೆ! ದಾಸರು ಹೀಗೆ ತೀರ್ಥಯಾತ್ರೆ ಮಾಡುತ್ತಾ ಪಂಢರಪುರಕ್ಕೆ ಬಂದು ಅಲ್ಲಿ ಕೆಲವುಕಾಲ ವಿಠಲನನ್ನು ಸೇವಿಸಿ

ದರಂತೆ! ಅನಂತರ ಒಂದು ದಿನ ಮಧ್ಯಾಹ್ನ ಚಂದ್ರಭಾಗೆಯಲ್ಲಿ (ಭೀಮರಥೀನದಿ) ಅರ್ಘ್ಯಪ್ರದಾನ ಮಾಡುತ್ತಿರುವಾಗ ತೃತೀಯಾಂಜಲಿಯಲ್ಲಿ ಶ್ರೀ ವಿಠಲನು ಪ್ರಸನ್ನನಾಗಿ ಅರ್ಘ್ಯೋದಕವನ್ನು ಕೆಳಗೆ ಬಿಡಬೇಡವೆಂದು ಹೇಳಿದನಂತೆ! ದಾಸರು ಕಣ್ಣು ಬಿಟ್ಟು ನೋಡಲು ಶ್ರೀ ಪಾಂಡುರಂಗನ ದರ್ಶನವಾಯಿತಂತೆ! ಆ ದಿನ ತಮಗೆ ಅಚಲಾನಂದ ಭಾಗ್ಯವು ಶ್ರೀ ವಿಠಲಾನುಗ್ರಹದಿಂದ ಲಭಿಸಿತೆಂದು ತಮ್ಮ ಕೃತಿಗಳನ್ನು **ಅಚಲಾನಂದ ವಿಠಲ** ಮುದ್ರಿಕೆಯಿಂದ ಸ್ವಾಮಿಗೆ ಸಮರ್ಪಿಸುತ್ತ ಬಂದರಂತೆ! ಅರ್ಘ್ಯಕಾಲದಲ್ಲಿ ದರ್ಶನ ವಿತ್ತ ವಿಠಲಮೂರ್ತಿಯನ್ನು ತಮ್ಮ ಆರಾಧನೆಯಲ್ಲಿಟ್ಟುಕೊಂಡರಂತೆ! ಅಂದಿನಿಂದಲೇ ನೈಷ್ಠಿಕ ವರ್ಚಸ್ಸಿನಿಂದ ಮುದ್ರೆಗೋಪೀಚಂದನಗಳನ್ನು ಹಚ್ಚಿಕೊಳ್ಳುತ್ತಾ ಬಂದರಂತೆ! ವಿಠಲನ ದರ್ಶನವಾದ ದಿನದಿಂದ ನರಸಿಂಹದಾಸರೆಂಬ ಹೆಸರಿಗೆ ಬದಲಾಗಿ ಅಚಲಾನಂದ ದಾಸರೆಂಬ ಹೆಸರು ಹೆಚ್ಚು ರೂಢಿಗೆ ಬಂದಿತಂತೆ.

ದಾಸರಿಗೆ ವಿಠಲನು ಪ್ರಸನ್ನನಾದ ದಿನವನ್ನು ಕೆಳಗಿನ ಶ್ಲೋಕದಲ್ಲಿ ಸೂಚಿಸುತ್ತಾರೆ.

ಶ್ಲೋಕ ಕಾಶೀತಿ ಸಂಖ್ಯಾಶಕ ಕಾಲಕೇಬ್ದೇ
ವಿಳಂಬಿವರ್ಷೇ ಕಲಿ ಚೈತ್ರ ಶುಕ್ಲೇ ।
ಪಕ್ಷೇ ದಶಮ್ಯಾಂ ದಿನಮಧ್ಯಕಾಲೇ
ಪ್ರತ್ಯಕ್ಷಕೋಭೂದ್ಗುರು ವಿಠ್ಠಲಾಖ್ಯಃ ॥

ತಾ॥ ಅಂಕಾನಾಂ ವಾಮತೋಗತಿಃ ಎಂಬ ನ್ಯಾಯದಿಂದ "ಕ" ವರ್ಗೀಯ ವ್ಯಂಜನದ ಮೊದಲಕ್ಷರವಾದ್ದರಿಂದ ೧. ಅಶೀತಿಯೆಂದರೆ ೮೦. ೮೦ರ ಮುಂದೆ ೧ನ್ನಿಟ್ಟರೆ ೮೦೧. ಅಂದರೆ ೮೦೧ ನೇ ಶಾಲೀವಾಹನ ಶಕ ವಿಳಂಬಿ ಸಂವತ್ಸರದ ಚೈತ್ರ ಶುದ್ಧ ದಶಮಿ ಮಧ್ಯಾಹ್ನ ವಿಠಲನು ದಾಸರಿಗೆ ಪ್ರತ್ಯಕ್ಷನಾದನು.

ಅಚಲಾನಂದರು ಉತ್ತರಪ್ರಾಂತ್ಯದ ಗಂಗಾದಿ ತೀರ್ಥಯಾತ್ರೆಗಳನ್ನು ಮುಗಿಸಿ ನೇಪಾಳಕ್ಕೆ ಪ್ರಯಾಣ ಬೆಳೆಸಿದರು. ಆ ಕಾಲದಲ್ಲಿ ನೇಪಾಳದ ರಾಜಪುತ್ರನು ಸರ್ಪದಷ್ಟ ನಾಗಿ ಮೃತನಾಗಿದ್ದನು. ರಾಜಪ್ರಜೆಗಳು ವ್ಯಸನಾಕ್ರಾಂತರಾಗಿ ದೇಹವನ್ನು ಸಂಸ್ಕಾರಕ್ಕೆ ತೆಗೆದುಕೊಂಡು ಹೋಗುವ ಸಿದ್ಧತೆಯಲ್ಲಿದ್ದರು. ದಾಸರು ತಮ್ಮ ಪದ್ಧತಿಯಂತೆ ನರಸಿಂಹ ವಿಠಲಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ಅಗ್ರಸ್ಥರಾಗಿ ಬರುವ ವಿಪ್ರಗಣ ಗಳಿಂದ ಮೆರೆಸಿಕೊಂಡು ಭಜನೆಮಾಡುತ್ತಾ ರಾಜಬೀದಿಯಲ್ಲಿ ಬಂದರು. ಅಂತರಾಳದಲ್ಲಿ ಪಲ್ಲಕ್ಕಿಯು ಸಾಗಿಬರುತ್ತಿರುವುದನ್ನು ಕಂಡ ಜನರು ದಾಸರನ್ನು ಮಹಾಮಹಿಮರೆಂದರಿತು ಇವರಿಂದ ರಾಜಕುಮಾರನನ್ನು ಬದುಕಿಸಿಕೊಳ್ಳಬೇಕೆಂದು ರಾಜನಿಗೆ ವಿಜ್ಞಾಪಿಸಿದರು. ರಾಜನು ದಾಸರಿಗೆ ಶರಣಾಗತನಾಗಿ ಪುತ್ರಭಿಕ್ಷೆ ಕೊಡಬೇಕೆಂದು ಬೇಡಿಕೊಂಡನು. ದಾಸರು ಗರುಡಮಂತ್ರ ಪುರಶ್ಚರಣೆಯಿಂದ ಸರ್ಪವನ್ನಾಕರ್ಷಿಸಿ, ರಾಜಪುತ್ರನ ದೇಹದಲ್ಲಿ ವ್ಯಾಪಿಸಿದ್ದ ವಿಷವನ್ನು ಅದರಿಂದ ಶಮನಮಾಡಿಸಿ ರಾಜಕುಮಾರನನ್ನು ಬದುಕಿಸಿದರು. ರಾಜನು ಆನಂದಭರಿತನಾಗಿ ಅನೇಕ ರತ್ನಾಭರಣ ವಾಹನಾದಿಗಳನ್ನು ದಾಸರಿಗೆ ಸಮರ್ಪಿಸಿದನು. ದಾಸರು ಒಂದನ್ನೂ ತೆಗೆದುಕೊಳ್ಳದೆ ದಿವ್ಯವಾದ ಕ್ಷೇತ್ರ ಸಾಲಿಗ್ರಾಮಗಳನ್ನು

ರಾಜನಿಂದ ಸ್ವೀಕರಿಸಿ ಹಿಂದಿರುಗಿದರು. ಆ ಪೈಕಿ ಆರು ಕ್ಷೇತ್ರಗಳನ್ನು ಭರತಖಂಡದ ಪ್ರತ್ಯೇಕ ಆರು ಸ್ಥಳಗಳಲ್ಲಿ ತಮ್ಮ ಶಾಖಾಪೀಠಗಳನ್ನು ಸ್ಥಾಪಿಸಿ, ಅಲ್ಲಲ್ಲಿ ಭಾಗವತಧರ್ಮ ಪ್ರಚಾರಕ್ಕೆ ಶಿಷ್ಯರನ್ನು ನೇಮಿಸಿದರು. ಆ ಪೀಠಗಳು ಎಲ್ಲೆಲ್ಲಿ ಸ್ಥಾಪಿತವಾದುವೆಂಬ ವಿವರಣೆ ದೊರೆಯುವುದಿಲ್ಲ.

ದಾಸರು ತಾವು ಸಂಕಲ್ಪಿಸಿದ್ದಂತೆ ತೀರ್ಥಾಟನೆಮಾಡಿ, ಮರಳಿ ಕರ್ನಾಟಕಕ್ಕೆ ಬಿಜಯಂಗೈದರು. ಆ ಕಾಲದಲ್ಲಿ ಕರ್ನಾಟಕದಲ್ಲಿ ರಾಜ್ಯವಾಳುತ್ತಿದ್ದ ರಟ್ಟರು (ರಾಷ್ಟ್ರಕೂಟಾಧಿಪತಿಗಳು) ದಾಸರ ಶಿಷ್ಯರಾದರು. ದಾಸರ ಜೊತೆಯಲ್ಲಿ ಸಂಚರಿಸುತ್ತಿದ್ದ ತೊಂಭತ್ತಾರು ಕುಟುಂಬಿಕರಿಗೆ ಹನ್ನೆರಡು ಗ್ರಾಮಗಳಲ್ಲಿ ವೃತ್ತಿ ವಿಭಾಗಮಾಡಿ ಧಾರೆಯೆರೆದು ಅವರಿಗೆ ಜೀವನವನ್ನು ಕಲ್ಪಿಸಿದರು. ಅಚಲಾನಂದದಾಸರಿಗೆ ಪ್ರತ್ಯೇಕ ಹನ್ನೆರಡು ಗ್ರಾಮಗಳ ಜಹಗೀರಿಯನ್ನು ಕೊಟ್ಟು ಅವರ ದೇವತಾರಾಧನೆ, ಧರ್ಮಪ್ರಚಾರ ಕಾರ್ಯಗಳಿಗೆ ಸಹಾಯಮಾಡಿದರು. ಆ ಪ್ರದೇಶವೇ ಈಗ ತುರುವೇಕೆರೆಯಿರುವ ತುಮಕೂರು ಜಿಲ್ಲೆಯ ಭಾಗ. ರಾಷ್ಟ್ರಕೂಟರು ಕಟ್ಟಿಸಿ ತೊಂಭತ್ತಾರು ಕುಟುಂಬಗಳಿಗೆ ದಾನಮಾಡಿದ ಅಗ್ರಹಾರಕ್ಕೆ ಅಚಲಾನಂದರು ನರಸಿಂಹಪುರವೆಂಬ ನಾಮಕರಣ ಮಾಡಿದರು.

ಅಚಲಾನಂದರ ಸಂತತಿಯಲ್ಲಿ ಕ್ರಮವಾಗಿ ಮುದ್ದುವಿಠಲ, ಗೋಪಿನಾಥ, ಹರಿದಾಸ, ತಿಮ್ಮಣ್ಣದಾಸ, ಪಾಂಡುರಂಗದಾಸರೆಂಬ ಪ್ರಖ್ಯಾತ ಹರಿದಾಸರಾದರು.

ಯದ್ಯಪಿ ಈ ವಂಶೀಕರು ಅದ್ವೈತಮತಕ್ಕೊಪ್ಪಿದ ಸ್ಮಾರ್ತಬ್ರಾಹ್ಮಣರಾಗಿದ್ದರೂ ಇಂದಿಗೂ ಮಾಧ್ವವೈಷ್ಣವ ಬ್ರಾಹ್ಮಣರಂತೆ, ಗೋಪೀಚಂದನ ಮುದ್ರೆಗಳನ್ನು ಧರಿಸುತ್ತಾರೆ. ಕಾರಣವೇನೆಂದು ಕೇಳಿದರೆ, ಅಚಲಾನಂದರ ಸಂಪ್ರದಾಯವೆಂದು ಉತ್ತರ ಕೊಡುತ್ತಾರೆ. ಇವರ ಮುದ್ರಾ ವಿಷಯದಲ್ಲಿ ಗುರುಪೀಠದವರಿಂದ ಯಾವ ಆಕ್ಷೇಪವೂ ಇಲ್ಲ. ಈ ವಂಶೀಕರಲ್ಲಿ ಮತ್ತೊಂದು ವೈಚಿತ್ರ್ಯವೆಂದರೆ ಇವರ ಮನೆಗಳಲ್ಲಿ ಪ್ರತ್ಯೇಕ ಗೃಹದೇವತಾರಾಧನೆಯಿಲ್ಲ. ಪರ್ಯಾಯಕ್ಕನುಸಾರವಾಗಿ ಒಂದೊಂದು ಮನೆಯವರು, ತಮ್ಮ ಸರದಿ ಬಂದಾಗ ಕೇವಲ ನಿಯಮಬದ್ಧರಾಗಿ ಪ್ರತ್ಯೇಕದೇವಾಲಯದಲ್ಲಿ ವಿಠಲನೃಸಿಂಹಾದಿ ದಾಸರ ಕಾಲದ ವಿಗ್ರಹಗಳನ್ನೂ ಆರು ಕ್ಷೇತ್ರಸಾಲಿಗ್ರಾಮಗಳನ್ನೂ ಪೂಜಿಸುತ್ತಾರೆ. ಇವರ ದೇವತಾರ್ಚನೆಯು ಮಠಾಧಿಪತಿಗಳ ಪೂಜೆಯಂತೆ ಅಷ್ಟೈಶ್ವರ್ಯಯುಕ್ತವಾಗಿರುತ್ತದೆ. ಪ್ರತಿ ನಿತ್ಯವೂ ಪೂಜಾಕಾಲದಲ್ಲಿ **‘ಶ್ರೀಮದಚಲಾನಂದದೇಶಿಕಾರ್ಯ ಹೃತ್ಸರಸಿಜದಿವ್ಯಕರ್ಣಿಕಾಪೀಠೋಪರಿ ಸುಖೋಪವಿಷ್ಟ .... ವಿಠಲ ನೃಸಿಂಹ ಪ್ರೇರಣಯಾ”** ಎಂಬುದಾಗ್ಯ ಸಂಕಲ್ಪಮಾಡುತ್ತಾರೆ.

ಅನಂತರ ಹಾಗಲವಾಡಿಯ ಪಾಳ್ಯಗಾರರು ಪ್ರಬಲಿಸಿ ತುರುವೇಕೆರೆಯ ಪ್ರಾಂತ್ಯಕ್ಕೆ ರಾಜರಾದರು. ಅಣ್ಣಯ್ಯನಾಯಕನೆಂಬುವನು, ಪಾಂಡುರಂಗದಾಸರು ವಾಸವಾಗಿದ್ದ ಸ್ಥಳದಲ್ಲಿ ಗಂಗಾಧರೇಶ್ವರ ದೇವಾಲಯವನ್ನು ಕಟ್ಟಿಸಿದನು. ದಾಸರ ಪೂಜೆಗಾಗಿ ಚಿಕ್ಕದೊಂದು ವಿಠಲದೇವಾಲಯವನ್ನು ಆತನೇ ಕಟ್ಟಿಸಿದನು. ಆ ಚಿಕ್ಕ ದೇವಾಲಯವು ಈಗಲೂ ದಾಸರ ಗುಡಿಯಾಗಿದೆ.

ರಾಷ್ಟ್ರಕೂಟರ ಕಾಲದಿಂದ ದಾಸರ ವಂಶೀಕರು ಹನ್ನೆರಡು ಗ್ರಾಮಗಳ ಜಹಗೀರಿಯನ್ನನುಭವಿಸುತ್ತಿದ್ದುದು ಮಿಕ್ಕ ಹನ್ನೆರಡು ಗ್ರಾಮಗಳ ವೃತ್ತಿವಂತರಿಗೆ ಸಹನೆಯಾಗಲಿಲ್ಲ. ಅಣ್ಣಯ್ಯನಾಯಕನು ಪಾಂಡುರಂಗದಾಸರಲ್ಲಿ ವಿಶ್ವಾಸವಿಟ್ಟಿದ್ದುದು ಅವರಿಗೆ ಮತ್ತಷ್ಟು ದುಃಖಕ್ಕೆ ಕಾರಣವಾಯಿತು. ಹೇಗಾದರೂ ದಾಸರಮೇಲೆ ನಾಯಕನಿಗೆ ಕೋಪ ಬರುವಂತೆ ಮಾಡಬೇಕೆಂದು ವೃತ್ತಿವಂತರು ಹಂಚಿಕೆ ಮಾಡಿದರು. ಪಾಂಡುರಂಗದಾಸರು ಪರಾನ್ನನೇಮಿಗಳಾಗಿದ್ದರು. ಈ ನೇಮದ ಮಹತ್ವವು ನಾಯಕರಾಜನಿಗೆ ತಿಳಿಯುವ ಕಾರಣವಿರಲಿಲ್ಲ. ಹೀಗಿರಲು ಗಂಗಾಧರೇಶ್ವರ ದೇವಾಲಯದಲ್ಲಿ ರಾಜನು ಒಂದು ಸಮಾರಾಧನೆ ಮಾಡಿದನು. ವೃತ್ತಿವಂತರು ಆ ಸಮಾರಾಧನೆಗೆ ದಾಸರನ್ನೂ ಬರಮಾಡಬೇಕೆಂದು ನಾಯಕನಿಗೆ ಪ್ರೇರಿಸಿದರು. ನಾಯಕನೇ ಸ್ವಯಂ ದಾಸರನ್ನು ಕರೆದನು. ದಾಸರು ತಾವು ದೇವತಾರ್ಚನೆ ಮಾಡಿ ನಿವೇದನಮಾಡಿದ ಪ್ರಸಾದವನ್ನಲ್ಲದೆ ಬೇರೆ ಅನ್ನವನ್ನುಣ್ಣುತ್ತಿರಲಿಲ್ಲ. ತಮ್ಮ ನಿಯಮದ ಸೂಕ್ಷ್ಮ ಸಂಗತಿಯನ್ನು ರಾಜನಿಗೆ ತಿಳಿಸಿದರು. ರಾಜನು ನಿಯಮ ಮಹತ್ವವನ್ನರಿಯದೆ ವೃತ್ತಿವಂತರ ದುರ್ಬೋಧನೆಗೊಳಗಾಗಿ ದಾಸರಮೇಲೆ ಸಿಟ್ಟಿಗೆದ್ದನು. ದಾಸರು ಹೆದರದೆ ತಮ್ಮ ನಿಯಮವನ್ನೇ ಪಾಲಿಸಿದರು. ದಿನದಿನಕ್ಕೆ ದಾಸರ ಮೇಲೆ ನಾಯಕನ ದ್ವೇಷವು ಬಲವಾಯಿತು. ಹನ್ನೆರಡು ಗ್ರಾಮಗಳ ಜಹಗೀರನ್ನು ಕಿತ್ತುಕೊಂಡನು. ಶತ್ರುಮಧ್ಯದಲ್ಲಿರಬಾರದೆಂದು ಪಾಂಡುರಂಗದಾಸರು ನಿತಲಪೇವದ ಹಳ್ಳಿಗೆ ಹೋಗಿ, ಅಲ್ಲಿ ನೃಸಿಂಹ ದೇವಾಲಯವೊಂದನ್ನು ಕಟ್ಟಿಸಿ ವಾಸಮಾಡಿದರು.

ಕೆಲವು ಕಾಲದಮೇಲೆ ಬಾಗಲವಾಡಿಯ ಪಾಳ್ಯಗಾರರನ್ನು ಜಯಿಸಿ ಮೈಸೂರು ಅರಸರು ತುರುವೇಕೆರೆಯನ್ನು ಸ್ವಾಧೀನಮಾಡಿಕೊಂಡರು. ನಾಯಕನು ಅಪಹರಿಸಿದ್ದ ಗ್ರಾಮಭೂಮಿಗಳು ಮತ್ತೆ ಪಾಂಡುರಂಗದಾಸರಿಗೆ ಮೈಸೂರು ಅರಸರಿಂದ ದೊರೆತುವು. ಟಿಪ್ಪುಸುಲ್ತಾನನು ದಾಸರ ಗ್ರಾಮಭೂಮಿಗಳನ್ನು ಅಪಹಾರ ಮಾಡಿದನು. ಸುಲ್ತಾನನ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯಪ್ರಾಪ್ತಿಯಾಯಿತು. ಪೂರ್ಣಯ್ಯನವರಂಥ ಧರ್ಮಾಭಿಮಾನಿಗಳು ಪ್ರಧಾನರಾದರು. ಪೂರ್ಣಯ್ಯನವರು ಅದೇ ಗ್ರಾಮಭೂಮಿಗಳನ್ನು ದಾಸರ ವಂಶೀಕರಿಗೆ ಮಹಾರಾಜರಿಂದ ದಾನಮಾಡಿಸಿದರು. ಅವೆಲ್ಲಾ ಈಚಿನವರ ಅಜಾಗರೂಕತೆಯಿಂದ ಕೈತಪ್ಪಿ, ಕೆಲವು ಎಕರೆಗಳಷ್ಟು ಭೂಮಿಯು ಈಗ ದೇವರ ಪೂಜೆಮಾಡುವ ಪರ್ಯಾಯಸ್ಥರ ಅನುಭವದಲ್ಲಿದೆ.

ದಾಸವಂಶೀಕರಲ್ಲಿ ನಾಗರಕ್ಷರದ ಅನೇಕ ವಹಿಗಳಿವೆ. ಅನೇಕ ಅಪೂರ್ವ ಗ್ರಂಥಗಳಿರಬಹುದೆಂದು ವಂಶೀಕರು ಹೇಳುತ್ತಾರೆ. ವಂಶೀಕರಲ್ಲಿ ಗ್ರಂಥಶೋಧನೆ ಮಾಡುವವರಾಗಲಿ, ಆ ಗ್ರಂಥಗಳನ್ನು ರಕ್ಷಿಸಬೇಕೆಂಬುವವರಾಗಲಿ ಈ ಕಾಲದಲ್ಲಿಲ್ಲ. ಆ ಗ್ರಂಥಗಳನ್ನು ಪೇರಿಸಿಟ್ಟಿರುವುದನ್ನು ನೋಡಿದರೆ ವಿಷಾದವಾಗುವಂತಿದೆ. ಲಿಪಿಜ್ಞರು ತುರುವೇಕೆರೆಯಲ್ಲಿ ಕುಳಿತು ಶೋಧ ನಡೆಸಿದರೆ ಉಪಕಾರವಾಗುತ್ತದೆ.

ಏನೇ ಆಗಲಿ. ಚಾರಿತ್ರಿಕ ದೃಷ್ಟಿಯಿಂದ ನೋಡುವವರಿಗೆ ಒಂಭತ್ತನೇ ಶತಮಾನದಷ್ಟು ಹಿಂದಿನ ಕಾಲದಲ್ಲೂ ಅಚಲಾನಂದರೆಂಬಂಥ ಒಬ್ಬ ದಾಸರಿದ್ದ ಸಂಗತಿಯು

ಸಂತೋಷವನ್ನುಂಟುಮಾಡುತ್ತದೆ. ಅಚಲಾನಂದರ ಕರಾರ್ಚಿತ ಪ್ರತಿಮೆಗಳೂ, ಆರು ಕ್ಷೇತ್ರ ಸಾಲಿಗ್ರಾಮಗಳೂ ಅದ್ಯಾಪಿ ಪೂಜೆಯಲ್ಲಿರುವುದು ಭಾವಿಕ ಜನರಿಗೆ ಭಕ್ತಿಯನ್ನುಂಟುಮಾಡುತ್ತದೆ.

ಅಚಲಾನಂದರ ಆರು ಪೀಠಗಳಲ್ಲಿ ಯಾವುದೋ ಪೀಠಕ್ಕೆ ಸೇರಿದ ಅಚ್ಯುತದಾಸರೆಂಬುವರ ಹೆಸರು ಆನೇಗೊಂದಿಯ (ವಿಜಯನಗರದ ಕೃಷ್ಣದೇವರಾಯ) ಅರಸರ ಕಾಲದಲ್ಲಿ ಮತ್ತೆ ಪ್ರಶಂಸೆಗೆ ಬರುತ್ತದೆ. ಶ್ರೀ ವೈಕುಂಠದಾಸರ ಚರಿತ್ರೆಯಲ್ಲಿ ಅವರ ಚರಿತ್ರೆ ಬರುವುದರಿಂದ ಅದರ ವಿಸ್ತಾರವನ್ನಿಲ್ಲಿ ಮಾಡುವುದಿಲ್ಲ.

ಶ್ರೀ ನರಹರಿತೀರ್ಥರು

ಶ್ರೀ ಅಚಲಾನಂದದಾಸರ ತರುವಾಯ ಹದಿಮೂರನೆಯ ಶತಮಾನದವರೆಗೆ ಯಾವ ಪ್ರಸಿದ್ಧರಾದ ದಾಸರ ಹೆಸರೂ ದೊರೆಯುವುದಿಲ್ಲ. ೧೮ನೇ ಶತಮಾನದಲ್ಲಿದ್ದ ಶ್ರೀ ವಿಜಯದಾಸರು ಒಂದು ಸುಳಾದಿಯಲ್ಲಿ ಶ್ರೀ ಪುರಂದರದಾಸರಿಗಿಂತ ಪೂರ್ವಕಾಲದಲ್ಲಿ ಎಷ್ಟೋಮಂದಿ ಹರಿದಾಸರು ಭಗವಂತನ ಗುಣಗಾಯನಮಾಡಿ ಧನ್ಯರಾದರೆಂದು ಹೇಳಿದ್ದಾರೆ. ಅವರಲ್ಲಿ ಕೆಲವರ ಹೆಸರನ್ನು ಕೊಡುತ್ತಾ ಅಚಲಾನಂದರ ಹೆಸರನ್ನೂ ಅನೇಕ ಆದ್ಯ ವಂಶಸ್ಥರ ಹೆಸರನ್ನೂ ಕಥನಮಾಡಿದ್ದಾರೆ. ಅವರಿದ್ದ ಕಾಲ ಗೊತ್ತಾಗುವುದಿಲ್ಲ.

ಆದ್ಯ ದಾಸರುಗಳೆಂದರೆ ಪೂರ್ವದಲ್ಲಿ ಅವರು ಕೇವಲ ಶೈವರಾಗಿದ್ದರು. ಅವರಿಗೆ ಆರಾಧ್ಯ ಬ್ರಾಹ್ಮಣರೆಂಬ ವಾಡಿಕೆಯಿತ್ತು. ಲಿಂಗವನ್ನೂ ಯಜ್ಞೋಪವೀತವನ್ನೂ ಅವರು ಧರಿಸುತ್ತಿದ್ದರು. ಆ ಆರಾಧ್ಯರು ಕಾಲಕ್ರಮದಲ್ಲಿ ಭಾಗವತಧರ್ಮವನ್ನು ಅವಲಂಬಿಸಿ ಅನೇಕರು ಹರಿದಾಸರಾದರು. ಮಧ್ವಾಚಾರ್ಯರ ಕಾಲದಲ್ಲಿ ಆ ವಂಶೀಕರಲ್ಲನೇಕರು ಚಕ್ರಾಂಕನ ಮಾಡಿಸಿಕೊಂಡು ವೈಷ್ಣವರಾಗಿ ಮಹಾ ಶಾಸ್ತ್ರಪಂಡಿತರಾದರು. ಆರಾಧ್ಯ ಎಂಬ ಮಾತು ಕ್ರಮೇಣ ಆದ್ಯ ಎಂಬ ಉಚ್ಚಾರಣೆಯನ್ನು ಪಡೆಯಿತು.

ಆರಾಧ್ಯರ ಪೈಕಿ, ಒಮ್ಮೆ ಅರುವತ್ತು ಜನರು ಯಾತ್ರಿಕರಾಗಿ ಪ್ರಯಾಣ ಮಾಡುತ್ತಾ ಪಂಢರಪುರಕ್ಕೆ ಬಂದರಂತೆ! ಪಂಢರಪುರವು ವಿಷ್ಣುಕ್ಷೇತ್ರವಾಗಿರುವುದರಿಂದ ಅವರು ಕ್ಷೇತ್ರವನ್ನು ಪ್ರವೇಶಿಸಲಿಲ್ಲವಂತೆ! ಭೀಮಾರಥಿಯಲ್ಲಿ ಸ್ನಾನಮಾಡುತ್ತಿದ್ದಾಗ ಕಣ್ಣು ಮುಚ್ಚಿ ಬಿಡುವುದರೊಳಗಾಗಿ ಅವರೆಲ್ಲರನ್ನೂ ಪಾಂಡುರಂಗನು ತನ್ನ ಗರ್ಭಾಂಕಣದಲ್ಲಿ ನಿಲ್ಲಿಸಿದ್ದನಂತೆ! ವಿಷ್ಣುನಾಮವನ್ನು ಸಹ ಉಚ್ಚರಿಸದಿದ್ದ ಅವರಿಗೆ ಪಾಂಡುರಂಗನ ದರ್ಶನವಾದ ಕೂಡಲೆ ಮನಸ್ಸು ಪರಿವರ್ತನವಾಯಿತಂತೆ! ಅವರೆಲ್ಲರೂ ವಿಷ್ಣುದ್ವೇಷವನ್ನು ಬಿಟ್ಟು ಹರಿದಾಸರಾದರಂತೆ! ಆ ಪೈಕಿ ಒಬ್ಬ ದಾಸರು, 'ಜಯವಾಯಿತೆ ಮಾನಸಾಂಗ! ಜಯ ಪಾಂಡುರಂಗ!' ಎಂಬ ದೇವರ ನಾಮದಲ್ಲಿ—

ಮಂಗನ ಕಿತ್ತಂತಾಯಿತು ಜನ್ಮವು ।
ಲಿಂಗವ ಕಳಕೊಂಡು ಗಂಗೆಯ ತೀರದಿ ।
ಮುಂಗಾಣದಲೆ ಮೌನದೊಳಿರುತಿರೆ ।
ಹಂಗಿಸಿ ಭವ ನಿನ್ನಂಗವ ತೋರಿ ॥ ೧ ॥

ಉದ್ಭವಿಸಿ ಬಂದೂರ್ವಿಯೊಳಗೆ ನಾ ।
ಸಿದ್ಧಾಂತದ ಬಗೆ ಪದ್ಧತಿ ತಿಳಿಯದೆ ॥
ಅದ್ವೈತ ದ್ವಿಜಾರಾಧ್ಯನಾಗಿರೆ ।
ಉದ್ಧರಿಸಿದೆ ಮಧ್ವಮತದವನೆನಿಸಿ ॥ ೨ ॥

ಶ್ರೀನಿಧಿ ನಿನ್ನಯ ಪಾದವ ನಂಬಿದೆ ।
ಮಾನಾಪಮಾನವು ನಿನಗೊಪ್ಪಿತು ಜಗ ॥
ತ್ರಾಣ ಪ್ರಾಣಪತಿ ವಿಠಲರೇಯ ।
ವೇಣು ಭಕುತಿಜ್ಞಾನವೀಯೆನಗಿಂದು ॥ ೩ ॥

ಎಂಬುದಾಗಿ ಹಾಡಿರುತ್ತಾರೆ.

ಹದಿಮೂರನೇ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪಾಜಕ ಕ್ಷೇತ್ರದಲ್ಲಿ ಅವತರಿಸಿ, ಭಾಗವತ ಸಂಪ್ರದಾಯಸ್ಥರಾಗಿದ್ದು ಅದ್ವೈತ ವಿಶಿಷ್ಟಾದ್ವೈತ ಮತಗಳಿಂದ ಪ್ರತ್ಯೇಕವಾದ ದ್ವೈತವೇದಾಂತ ಮತವನ್ನು ಸ್ಥಾಪಿಸಿ ಭಾಷ್ಯಕಾರರೆನಿಸಿದ **ಶ್ರೀಮನ್ಮಧ್ವಾಚಾರ್ಯ**ರವರು ಭರತಖಂಡದಲ್ಲೆಲ್ಲಾ ತಮ್ಮ ಮತವನ್ನು ಪ್ರಚುರಗೊಳಿಸಿ ಪ್ರಖ್ಯಾತರಾದರು. ಆಚಾರ್ಯರ ಸಹಸ್ರಾರು ಶಿಷ್ಯರ ಮಧ್ಯದಲ್ಲಿ ಪದ್ಮನಾಭ ನರಹರಿ ಮಾಧವ ಅಕ್ಷೋಭ್ಯತೀರ್ಥರೆಂಬ ಯತೀಶ್ವರರು ಕ್ರಮವಾಗಿ ಆಚಾರ್ಯರ ಮಹಾಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಮತರಾಜ್ಯವನ್ನು ಪರಿಪಾಲಿಸಿದರು.

ಮಧ್ವಾಚಾರ್ಯರಿಂದ ಮೂರನೆಯವರೆನಿಸಿದ ನರಹರಿತೀರ್ಥರು ಗೀರ್ವಾಣ ಭಾಷಾ ಪಾಂಡಿತ್ಯಬಲದಿಂದ ಧರ್ಮಪ್ರಚಾರ ಮಾಡುವುದರ ಜೊತೆಗೆ ಭಾಗವತಧರ್ಮದ ಕೀರ್ತನ ಪದ್ಧತಿಯನ್ನೂ ಪುರಸ್ಕರಿಸಿ ಅನೇಕ ಕನ್ನಡ ದೇವರನಾಮಗಳನ್ನು ರಚಿಸಿ, ಉಪದೇಶಕೊಡುತ್ತಾ ಬಂದರು. ಇವರ ಈ ಬಗೆಯ ಉಪದೇಶವು ಫಲಕಾರಿಯಾಗಿ ಸಮಾಜದ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತು. ನರಹರಿತೀರ್ಥರು ಕೇವಲ ದೊಡ್ಡ ಸನ್ಯಾಸಿಗಳಂತಿರದೆ, ವ್ಯವಹಾರವನ್ನೂ ಬಲ್ಲ ರಾಜರ್ಷಿಗಳಾಗಿದ್ದರು.

ನರಹರಿತೀರ್ಥರ ಪೂರ್ವಾಶ್ರಮದ ಹೆಸರು ಸ್ವಾಮಿ ಶಾಸ್ತ್ರಿಗಳೆಂದು. ಇವರು ಒರಿಸ್ಸಾದೇಶದ ಗಜಪತಿ ಅರಸರಲ್ಲಿ ದಫ್ತರದಾರರಾಗಿದ್ದು ರಾಜಪ್ರಜೆಗಳೆಲ್ಲರಿಂದಲೂ ಸನ್ಮಾನ್ಯರಾಗಿದ್ದರು. ಶಾಸ್ತ್ರಿಗಳು ಸರ್ವಶಾಸ್ತ್ರ ವಿಶಾರದರಾಗಿದ್ದುದರಿಂದಲೇ ಇವರಿಗಂಥಾ ಗೌರವವುಂಟಾಗಿತ್ತು. ಇವರ ಕಾಲದಲ್ಲಿ ಮಧ್ವಾಚಾರ್ಯರು ಬದರೀಯಾತ್ರೆಮಾಡಿ ಒರಿಸ್ಸಾ ರಾಜಧಾನಿಯಲ್ಲಿ ಬಂದಿಳಿದರು. ಆ ಕಾಲದ ಜನರಿಗೆ ಮಧ್ವಾಚಾರ್ಯರ ಉಪದೇಶವು ನೂತನವಾಗಿ ಕಂಡುಬಂದ ಕಾರಣ ನರಹರಿತೀರ್ಥರೇ (ಸ್ವಾಮಿ ಶಾಸ್ತ್ರಿಗಳೇ) ಆಚಾರ್ಯರೊಡನೆ ವಾದಹೂಡಿದರು. ಕೆಲವು ದಿನಗಳ ವಾಕ್ಯಾರ್ಥದಲ್ಲಿ ಶಾಸ್ತ್ರಿಗಳು ಆಚಾರ್ಯರ ಪಾಂಡಿತ್ಯಕ್ಕೂ ಉಪದೇಶಕ್ಕೂ ಮನಸೋತು ಅವರ ಶಿಷ್ಯರಾದರು. ಶಿಷ್ಯರಾದದ್ದು ಮಾತ್ರವಲ್ಲದೆ, ಸನ್ಯಾಸಗ್ರಹಣವನ್ನೂ ಮಾಡಿದರು. ಸ್ವಾಮಿ ಶಾಸ್ತ್ರಿಗಳಂಥವರು ಆಚಾರ್ಯರ ಶಿಷ್ಯರಾದ್ದನ್ನು ನೋಡಿ, ಆ ರಾಜ್ಯದ ಪಂಡಿತರನೇಕರು ನಿರ್ವಿವಾದವಾಗಿ ದ್ವೈತಮತವನ್ನವಲಂಬಿಸಿದರು. ಸನ್ಯಾಸಗ್ರಹಣಾನಂತರ ನರಹರಿತೀರ್ಥರು ಆಚಾರ್ಯರನ್ನು ಹಿಂಬಾಲಿಸಲು ಯತ್ನಿಸಿದರು. ಆಚಾರ್ಯರಿಗೆ ಆ ಸಮಯದಲ್ಲಿ ಅವರು ಬರುವುದು ಸಮ್ಮತವಾಗಲಿಲ್ಲ. ಗಜಪತಿರಾಜರ ಭಂಡಾರದಲ್ಲಿದ್ದ ಮೂಲ ಸೀತಾರಾಮ ವಿಗ್ರಹಗಳನ್ನು ತಮ್ಮ ಬಳಿಗೆ ತರಿಸಿ ಪೂಜಿಸಬೇಕೆಂಬ ಅಭಿಲಾಷೆಯು ಆಚಾರ್ಯರಿಗಿತ್ತು.

ಅದಕ್ಕೆ ತಕ್ಕ ಸಮಯ ಸನ್ನಿವೇಶಗಳು ಒದಗಿಬಂದಾವೆಂದು ನರಹರಿತೀರ್ಥರನ್ನು ಅಲ್ಲೇ ಬಿಟ್ಟು ತಾವು ಪ್ರಯಾಣಮಾಡಿದರು.

ಅತ್ತ ಆಗಿದ್ದ ಗಜಪತಿರಾಜನು ಗರ್ಭಿಣಿಯಾಗಿದ್ದ ಪತ್ನಿಯನ್ನು ಬಿಟ್ಟು, ಚಿಕ್ಕ ವಯಸ್ಸಿನಲ್ಲಿ ಮೃತನಾದನು. ಸಿಂಹಾಸನ ಪದವಿಗೆ ರಾಜ ದಾಯಾದರಲ್ಲಿ ವಿವಾದವುಂಟಾಯಿತು. ರಾಜಬಂಧುಗಳಲ್ಲಿ ಯಾರು ರಾಜರಾಗುವುದೂ ಮಿಕ್ಕವರ್‍ಯಾರಿಗೂ ಸಮ್ಮತವಾಗಲಿಲ್ಲ. ಕಡೆಗೆ ಪಟ್ಟದಾನೆಯ ಕೈಯಲ್ಲಿ ಪುಷ್ಪಮಾಲಿಕೆಯನ್ನು ಕೊಟ್ಟು, ಅದು ಯಾರ ಕೊರಳಿಗೆ ಮಾಲೆ ಹಾಕುವುದೋ ಅವರೇ ರಾಜರಾಗಬೇಕೆಂಬ ತೀರ್ಮಾನವಾಯಿತು. ರಾಜಕುಮಾರರಲ್ಲಿ ಪ್ರತಿಯೊಬ್ಬನೂ ತನ್ನ ಕೊರಳಿಗೇ ಆನೆಯು ಮಾಲೆ ಹಾಕಲೆಂದು ಹಂಬಲಿಸುತ್ತಿದ್ದನು. ಆನೆಯು ಎಲ್ಲರನ್ನೂ ಬಿಟ್ಟು ದೂರದಲ್ಲೊಂದು ಕಡೆ ನಿಂತು ವಿನೋದ ನೋಡುತ್ತಿದ್ದ ನರಹರಿತೀರ್ಥರ ಕೊರಳಿಗೆ ಮಾಲೆ ಹಾಕಿತು. ಪ್ರೇಮಾಶ್ರಮದಿಂದ ರಾಜ್ಯಕ್ಕೆ ಹಿತೈಷಿಗಳಾಗಿ ಪರಮಪೂಜ್ಯರಾಗಿದ್ದ ನರಹರಿತೀರ್ಥರು ರಾಜ್ಯಭಾರ ಮಾಡುವುದು ಸರ್ವಸಮ್ಮತವಾಯಿತು.

ರಾಣಿಯ ಗರ್ಭದಲ್ಲಿ ದೈವಾನುಗ್ರಹದಿಂದ ಪುತ್ರಸಂತಾನವಾಗಿ ಎಲ್ಲರಿಗೂ ಸಂತೋಷವಾಯಿತು. ನರಹರಿತೀರ್ಥರು ಗಜಪತಿ ರಾಜ್ಯಭಾರವನ್ನು ಕ್ರಿ.ಶ. ೧೨೬೪ರಲ್ಲಿ ವಹಿಸಿದರೆಂದು ಮು॥ ಜಿ. ವೆಂಕೋಬರಾಯರು ಇಂಡಿಯನ್ ಅಂಟಿಕ್ವೆರಿಯೆಂಬ ಗ್ರಂಥದಲ್ಲಿ ಬರೆದಿರುವರು. (Indian Antiquary Vol. xliii (1914) Page 264.)

ನರಹರಿತೀರ್ಥರು ರಾಜಕುಮಾರನು ಪ್ರಾಪ್ತವಯಸ್ಕನಾಗುವವರೆಗೆ ನಿಷ್ಠೆಯಿಂದ ರಾಜ್ಯವಾಳಿದರು. ಮಧ್ವಾಚಾರ್ಯರ ಆಜ್ಞೆಯಾಗಿದ್ದಂತೆ ಮೂಲ ರಾಮಸೀತಾ ವಿಗ್ರಹಗಳನ್ನು ರಾಜನಿಂದ ಪಾರಿತೋಷಿಕವಾಗಿ ಸಂಪಾದಿಸಿದರು. ಮತ್ತೆ ಆ ರಾಜ್ಯದಲ್ಲಿರದೆ ಉಡುಪಿಗೆ ಬಂದು ತಾವು ತಂದಿದ್ದ ದೇವತಾಮೂರ್ತಿಗಳನ್ನು ಆಚಾರ್ಯರಿಗೊಪ್ಪಿಸಿದರು. ಆಚಾರ್ಯರು ಆ ವಿಗ್ರಹಗಳನ್ನು ೮೦ ದಿವಸ ಆರಾಧನೆಮಾಡಿ ತಮ್ಮ ಸಂಸ್ಥಾನವನ್ನು **ಪದ್ಮನಾಭತೀರ್ಥ**ರಿಗೊಪ್ಪಿಸಿ, ಬದರಿಕಾಶ್ರಮಕ್ಕೆ ಪ್ರಯಾಣಮಾಡಿದರು. ಪದ್ಮನಾಭತೀರ್ಥರು ೧೩೨೪ನೇ ನವಂಬರ್ ಹದಿನಾರಕ್ಕೆ ಸಲ್ಲುವ ರಕ್ತಾಕ್ಷಿ ಸಂ॥ ಕಾರ್ತೀಕ ಬಹುಳ ಚತುರ್ದಶಿವರೆಗೆ ಸಂಸ್ಥಾನ ಪಾಲನೆಮಾಡಿದರು. ಅನಂತರ ನರಹರಿತೀರ್ಥರಿಗೆ ಪಟ್ಟವಾಯಿತು.

ಹಿಂದೆಯೇ ತಿಳಿಸಿರುವಂತೆ ಧರ್ಮಪ್ರಚಾರಕ್ಕೆ ಭಾಗವತಧರ್ಮದ ಕೀರ್ತನ ಪದ್ಧತಿಗಿವರು ಪುರಸ್ಕಾರವಿತ್ತು ಅನೇಕ ಕನ್ನಡ ದೇವರನಾಮಗಳನ್ನು ಮಾಡಿದರು. ಪ್ರಾಕೃತ ಭಾಷೆಯಲ್ಲಿ ಧರ್ಮೋಪದೇಶಮಾಡುವ ಪ್ರಚಾರಕ ವರ್ಗವನ್ನು ವ್ಯವಸ್ಥಿತ ರೀತಿಯಿಂದ ಸಜ್ಜುಗೊಳಿಸಬೇಕೆಂಬ ಸಂಕಲ್ಪವಿವರಿಗಿತ್ತು. ಇವರ ಸಂಕಲ್ಪವು ಇವರ ಕಾಲದಲ್ಲೇ ಫಲಕಾರಿಯಾಗಲಿಲ್ಲ. ಇವರ ಅನಂತರ ಪೀಠಕ್ಕೆ ಬಂದವರು ಗ್ರಂಥರಚನೆ ವಾದಿನಿಗ್ರಹಗಳ ಕಡೆಗೆ ಹೆಚ್ಚು ಗಮನ ಕೊಡಬೇಕಾಯಿತು. ಹೇಗಾದರೂ ಈ ಮಹ

ರ್ೀಯರ ಉದ್ದೇಶದ ಕಡೆಗೆ ಗೌರವ ಕೊಟ್ಟು, ಪುರಂದರದಾಸರಿಂದ ಪುನರುದ್ಧಾರವಾದ ಭಾಗವತಧರ್ಮಕ್ಕೆ ಈ ಪುಣ್ಯಪುರುಷರೇ! ಕಾರಣರೆಂದು ಇವರಿಗೆ ಹರಿದಾಸ ಪೀಳಿಗೆಯಲ್ಲಿ ಅಗ್ರಸ್ಥಾನವನ್ನು ಕೊಟ್ಟಿರುತ್ತಾರೆ.

ನರಹರಿತೀರ್ಥರು ಅನೇಕ ಕನ್ನಡ ದೇವರನಾಮಗಳನ್ನು ರಚಿಸಿದರೆಂಬ ಪ್ರತೀತಿಯಿದ್ದರೂ ನಮ್ಮ ದೃಷ್ಟಿಗೆ ಗೋಚರವಾಗಿರುವುದು "ಎಂತು ಮರುಳಾದೆ" ಮೊದಲಾದ ಕೆಲವು ನಾಮಗಳು ಮಾತ್ರ. ಈ ನಾಮಗಳೂ ಹಾಡುವವರ ದೋಷದಿಂದ ಎಷ್ಟೆಷ್ಟು ಬದಲಾವಣೆಯಾಗಿರಬಹುದೋ ? ಪದಗಳ ಧೋರಣೆಯನ್ನು ನೋಡಿದರೆ ಬಲು ನೂತನ ಕಾಲಿತೆಯಂತೆ ಕಾಣುತ್ತವೆ. ವಾಚಕರ ಪರಿಚಯಕ್ಕೆ ಎರಡು ಪದಗಳನ್ನು ಮಾತ್ರ ಕೊಡುವೆನು. ಹದಿಮೂರನೇ ಶತಮಾನದ ಕನ್ನಡ ಪದಗಳು ಹದಿನಾರನೇ ಶತಮಾನದ ಭಾಷೆಯಂತೆ ಕಾಣುವುವು. ಭಾಷಾಶಾಸ್ತ್ರಜ್ಞರು ಪದಗಳನ್ನು ನೋಡಿ ಏನೆನ್ನುವರೋ ?

ಆನಂದಭೈರವಿ

ಎಂತು ಮರುಳಾದೆ | ನಾ | ನೆಂತು ಮರುಳಾದೆ ಪ.
ಎಂತು ಮರುಳಾದೆ | ಭವದೊಳು ಬಳಲಿದ | ಸಂತತಪೊರೆ ರಘು | ಕುಲತಿಲಕ ಅ.
ಮಾತಿನಲ್ಲಿ ಹರಿದಾಸತನ | ನೀತಿಯಲ್ಲಿ ಪ್ರಭುದಾಸತನ ||
ಪ್ರೀತಿ ಧನಾದಿ ವಿಷಯದಲ್ಲಿ | ನಿ| ರ್ಭೀತಿ ದೈವ ಗುರುದ್ರೋಹದಲಿ || ೧
ಏಕಾಂತದಲ್ಲಿ ಧನದಗೋಷ್ಠಿ | ಲೋಕಾಂತದಿ ವೈರಾಗ್ಯದ ಗೋಷ್ಠಿ ||
ಶ್ರೀಕಾಂತನ ಸೇವೆಗೆ ಅನುಮಾನ | ಭೂಕಾಂತನ ಸೇವೆಗೆ ಸುಮ್ಮಾನ || ೨
ಧರ್ಮಕ್ಕೆ ಒಂದುಕಾಸು ಸಾವಿರಹೊನ್ನು | ಅ| ಧರ್ಮಕ್ಕೆ ಕೋಟಿ ಹೊನ್ನು ಒಂದೇ ಕಾಸು
ಧರ್ಮಮಾಡಲು ಜೇಸರಿಕೆ | ಅ|ಧರ್ಮಮಾಡಲು ಎಚ್ಚರಿಕೆ || ೩
ಡೊಂಬನಂತೆ ಬಯಲಿಗೆ ಹಾರಿ | ಡಂಭತನಕೆ ಕರ್ಮವಮಾಡಿ ||
ಅಂಬುಜನಾಭಗೆ ದೂರಾಗಿ | ಕುಂಭೀಪಾಕಕೆ ಗುರಿಯಾದೆ || ೪
ಸತಿಯರ ಬೈದರೆ ನಾ ಬೈಯ್ವೆ | ಶ್ರೀಪತಿಯ ಬೈದರೆ ಕೇಳುತ ನಗುವೆ |
ಮತಿಗೆಟ್ಟು ವಿಷಯ ಲಂಪಟನಾಗಿ |............... ೫
ಯಾರಿಗಾಗಿ ಧಾವತಿ ಪಡುವೆ | ಇ | ನ್ಯಾರಿಗೆ ಒಡವೆಯ ಬಚ್ಚಿಡುವೆ |
ನಾರಿ ಪುತ್ರ ಮಿತ್ರಾದಿಗಳು | ಯಾರೂ ಬಾರರೊ ಸಂಗಡದೀ | ೬
ಭಜಿಸು ಬ್ರಹ್ಮಾದಿ ವಂದಿತ ಹರಿಯ | ತ್ಯಜಿಸು ಕಾಮಾದಿ ದುರ್ವಿಷಯ |
ಸುಜನವಂದಿತನಾದ ನರಹರಿಯ | ಭಜಿಸು ಶ್ರೀಶ ಶ್ರೀ ರಘುಪತಿಯ || ೭

ಶ್ರೀರಾಗ

ಹರಿಯೇ | ಇದು | ಸರಿಯೇ ಪ.
ಚರಣ ಸೇವಕನಲ್ಲಿ | ಕರುಣ ಬಾರದ್ಯಾಕೆ ಅ.

ಪತಿತನೆಂದು ಶ್ರೀಪತಿ ರಕ್ಷಿಸದಿರೆ |
ವಿತತವಾಹುದೆ ನಿನ್ನ ಪತಿತಪಾವನ ಕೀರ್ತಿ ೧

ಶಕ್ತ ನೀನಾಗಿದ್ದು ಭಕ್ತನುಪೇಕ್ಷಿಸೆ |
ಭಕ್ತವತ್ಸಲನಾಮ ವ್ಯರ್ಥವಾಗದೆ ೨

ದಿಗಿಲಿಲ್ಲದೆ ಒದ್ದ ಭೃಗುವ ಪಾಲಿಸಿದೆ |
ನಗಧರ ಎನ್ನ ಬಿಡುವ ಬಗೆ ಏಸಿದು ೩

ಹೇಯ ಅಜಾಮಿಳನ ಕಾಯಲಿಲ್ಲವೆ |
ಕಾಯುವಿ. ನಾ ಪರಕೀಯನೆ ನಿನಗೆ ೪

ಉಂಟು ಹಿರಣ್ಯಕನ ಕಂಟಕ ಬಿಡಿಸಿದ್ದು |
ನಂಟನೆ ನಿನಗೆ ಭಂಟ ನಾನಲ್ಲವೆ ? ೫

ಕೆಟ್ಟ ಅಹಲ್ಯೆಯ ಧಿಟ್ಟ ಪಾಲಿಸಿದೆ |
ಕೊಟ್ಟಳು ಅವಳೇನ ಬಿಟ್ಟದ್ದು ನಾನೇನ | ೬

ಧೊರೆ ನಿನ್ನ ಮನಸಿಗೆ ಸರಿಬಂದಂತೆ ಮಾಡು |
ಮೊರೆ ಹೊಕ್ಕೆನು ನಾ ನರಹರಿ ಪೂರ್ಣನೆ | ೭

ಶ್ರೀ ಶ್ರೀಪಾದರಾಯರು

ಶ್ರೀ ಶ್ರೀಪಾದರಾಜರೆಂದರೆ ಹೆಸರಿಗೆ ತಕ್ಕಂತೆ ವಿಭವಮೂರ್ತಿಗಳು. ಪ್ರಾತಃ ಕಾಲದಲ್ಲಿ ಶಯ್ಯೆಯಿಂದೇಳುವಾಗ ಶ್ರೀಪಾದರಾಜರ ಸ್ಮರಣೆಮಾತ್ರದಿಂದ ಸಕಾಲದಲ್ಲಿ ಮೃಷ್ಟಾನ್ನ ದೊರೆಯುವುದೆಂಬ ಭಾವನೆಯು ಇನ್ನೂ ಭಾವಿಕಜನರಲ್ಲಿ ತಪ್ಪದೆ ನೆಲೆಗೊಂಡಿದೆ. ಹರಿದಾಸ ಪೀಳಿಗೆಯನ್ನು ಕಥನಮಾಡುವುದಕ್ಕೆ ಹೊರಟರೆ **ನಮಃ ಶ್ರೀಪಾದರಾಜಾಯ** ಎಂಬ ಪುಣ್ಯನಾಮವನ್ನು ಪ್ರಥಮತಃ ಸ್ಮರಿಸಬೇಕಾಗುತ್ತದೆ. ಕೃತಿಯಿಂದಲೂ ಆಕೃತಿಯಿಂದಲೂ ಶ್ರೀಪಾದರಾಜರು ಶ್ರೀಪಾದರಾಜರೇ ಎಂಬ ಸೂಕ್ತಿಗಳ ಹೊಗಳಿಕೆಯು ನಾಲ್ಕು ಶತಮಾನಗಳಷ್ಟು ಕಾಲವಾದರೂ ತಪ್ಪಿಲ್ಲ. ಇವರ ಪಾಂಡಿತ್ಯದ ಪರಮಾವಧಿಯನ್ನು ತಿಳಿಯಬೇಕಾದರೆ ಇವರು ರಚಿಸಿದ **ವಾಗ್ವಜ್ರ**ವೆಂಬ ವಾದ ಗ್ರಂಥವನ್ನು ಓದಬೇಕು.

ಈ ಮಹನೀಯರ ತಂದೆಯ ಹೆಸರು ಶೇಷಗಿರಿ ಆಚಾರ್ಯ. ತಾಯಿಯ ಹೆಸರು ಗಿರಿಯಮ್ಮ. ಮೈಸೂರು ಸೀಮೆಯ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರ ಸಮೀಪದಲ್ಲಿ ಶೇಷಗಿರಿ ದಂಪತಿಗಳು ಒಂದು ತೋಟವನ್ನು ಮಾಡಿಕೊಂಡು ತೆಂಗು ಬಾಳೆ ಮೊದಲಾದ ವೃಕ್ಷಗಳನ್ನೂ ಇತರ ಚಿಕ್ಕ ಪೈರುಗಳನ್ನೂ ಬೆಳೆಸಿಕೊಂಡು, ವ್ಯವಸಾಯಕ್ಕೆ ಬೇಕಾದಷ್ಟು ಗೋರಕ್ಷಣೆ ಮಾಡುತ್ತಾ, ಬಡತನ ಜೀವನದಿಂದ ತೃಪ್ತರಾಗಿದ್ದರು. ಶೇಷಗಿರಿಯಾಚಾರ್ಯನು ಆ ಕಾಲಕ್ಕೆ ತಕ್ಕಂತೆ ಶಾಸ್ತ್ರ ವ್ಯಾಸಂಗ ಮಾಡಿದ ಪಂಡಿತನಾಗಿರಲಿಲ್ಲ. ಇಂಥ ಬಡ ದಂಪತಿಗಳ ಉದರದಲ್ಲಿ ಜನಿಸಿ, **ಲಕ್ಷ್ಮೀನಾರಾಯಣ** ಎಂದು ಕರೆಸಿಕೊಳ್ಳುತ್ತಿದ್ದ ಬಾಲಕನು, ಸಂಸ್ಕಾರ ಸನ್ನಿವೇಶಗಳ ಬಲದಿಂದ ಲೋಕವಿಖ್ಯಾತ ಶ್ರೀಪಾದರಾಜನಾದನು.

ಈ ಬಾಲಕನು ತಂದೆಯ ಬಳಿಯಲ್ಲಿ ಅಷ್ಟಿಷ್ಟು ಅಕ್ಷರಾಭ್ಯಾಸ ಮಾಡುತ್ತಾ ಮನೆಯ ಕೆಲಸಕ್ಕೆ ನೆರವಾಗಿ, ದನಗಳನ್ನು ಗುಡ್ಡದ ಬಳಿಯಲ್ಲಿ ಮೇಯಿಸಿಕೊಂಡು, ಸಂಜೆಗೆ ಸರಿಯಾಗಿ ತೋಟವನ್ನು ಸೇರುತ್ತಿದ್ದನು. ಇವರ ಬಾಲ್ಯ ಸ್ನೇಹಿತರೆಂದರೆ ಸುತ್ತಮುತ್ತಣ ತೋಟಗಳ ಒಡೆಯರಾದ ಒಕ್ಕಲಿಗರ ಮಕ್ಕಳು. ಅವರವರು ತಮ್ಮ ತಮ್ಮ ದನಗಳನ್ನು ಕಾಡಿಗೆ ಅಟ್ಟಿಕೊಂಡು ಬಂದಾಗ ಬಾಲಕರ ಪರಸ್ಪರ ಸಮ್ಮೇಳನ. ಆಡುವ ಆಟಗಳೆಂದರೆ ಆಗಾಗ ಆ ಸುತ್ತುವಳಯದಲ್ಲಾಗುತ್ತಿದ್ದ ದಶಾವತಾರದ ಆಟಗಳನ್ನು ನೋಡಿದ್ದರ ಅನುಕರಣದ ಆಟಗಳು. ಬ್ರಾಹ್ಮಣಬಾಲಕನಾಗಿ ನೋಡುವುದಕ್ಕೆ ತೇಜೋವಂತನಾಗಿದ್ದುದರಿಂದ ಆ ದನಗಾವ ಹುಡುಗರ ಗುಂಪಿಗೆ ಲಕ್ಷ್ಮೀನಾರಾಯಣನೇ ಒಡೆಯ.

ಹೀಗಿರಲು ಒಂದಾನೊಂದು ದಿನ ಸುಮಾರು ಸಂಧ್ಯಾಕಾಲದಲ್ಲಿ ಶ್ರೀರಂಗಪಟ್ಟಣದಿಂದ ದೇಶ ಸಂಚಾರ ಮಾಡಿಕೊಂಡು ಬರುತ್ತಿದ್ದ **ಸ್ವರ್ಣವರ್ಣತೀರ್ಥಸ್ವಾಮಿಗಳ** ಮೇನೆಯು ಆ ಗುಡ್ಡಗಾಡಿನ ಕಾಲುದಾರಿಯಲ್ಲಿ ಸಾಗಿಬರುತ್ತಿತ್ತು. ಮೇನೆಯು ವೇಗ

ವಾಗಿ ಸಾಗುತ್ತಿದ್ದುದರಿಂದ ಮಠದ ಸೇವಕರು ಹಿಂಬಾಲಿಸಿ ಬರಲು ಸಾಧ್ಯವಾಗಲಿಲ್ಲ. ಮೇನೆಯಲ್ಲಿ ಸ್ವಾಮಿಗಳು ದೇವರ ಪೆಟ್ಟಿಗೆಯನ್ನೂ ಮಂತ್ರಾಕ್ಷತೆಯ ತಟ್ಟೆಯನ್ನೂ ಇಟ್ಟು ಕೊಂಡಿದ್ದರು. ಅಸ್ತಮಾನವಾಗುತ್ತಿದ್ದರೂ ಇನ್ನೂ ಅಬ್ಬೂರು ಸಿಗಲಿಲ್ಲವೆಂದು ಅತ್ತಿತ್ತ ನೋಡುತ್ತಿದ್ದರು. ದನಗಳ ಹಿಂಡನ್ನೂ ದನಕಾಯುವ ಬಾಲಕರ ಗುಂಪನ್ನೂ ಕಂಡು ಮೇನೆಯನ್ನು ನಿಲ್ಲಿಸಿ, ಚಿಟಿಕೆ ಸಂಜ್ಞೆಯಿಂದ ಬಾಲಕರನ್ನು ಕರೆದರು. ಗೋಪಾಲಕರು ತಮ್ಮನ್ನು ಕರೆದವರು ಯಾರೋ, ಏನು ಮಾಡುವರೋ, ಎಂಬ ಭೀತಿಯಿಂದ ಓಡಲಾರಂಭಿಸಿದರು. ಲಕ್ಷ್ಮೀನಾರಾಯಣನು ಹೆದರದೆ ಮೇನೆಯ ಬಳಿಗೆ ಬಂದನು. ಒಳಗೆ ಕೂತಿರುವವರು ಸ್ವಾಮಿಗಳೆಂದರಿತು, ಅಭ್ಯಾಸಬಲದಿಂದ ನಮಸ್ಕರಿಸಿದನು. ತನ್ನನ್ನು ಕರೆದ ಕಾರಣವೇನೆಂದು ಕೇಳಿದನು.

ಸ್ವಾಮಿಗಳು:—ಎಲಪ್ಪಾ, ನಿನ್ನ ಹೆಸರೇನೋ ?

ಲಕ್ಷ್ಮೀನಾರಾಯಣ:—ನನ್ನ ಹೆಸರು ಲಕ್ಷ್ಮೀನಾರಾಯಣ.

ಸ್ವಾಮಿ:—ಇಲ್ಲಿಗೆ ಅಬ್ಬೂರು ಎಷ್ಟು ದೂರವಿದೆ ?

ಲಕ್ಷ್ಮೀ:—ಇಷ್ಟೇನೇ ! ಇಗೋ ನನ್ನನ್ನು ನೋಡಿ, ದನಗಳನ್ನು ನೋಡಿ, ಸೂರ್ಯನನ್ನು ನೋಡಿ; ಎಷ್ಟು ದೂರವ್ರೋ ಗೊತ್ತಾಗುತ್ತದೆ.

ಬಾಲಕನ ಮಾತಿನಿಂದ ಸ್ವಾಮಿಗಳಿಗೆ ಪರಮಾಶ್ಚರ್ಯವಾಯಿತು.

ಸ್ವಾಮಿ:—ಬಾ, ಇಲ್ಲಿ ಬಾ ! ನಿಮ್ಮ ಮನೆಯೆಲ್ಲಿದೆ ಹೇಳು.

ಲಕ್ಷ್ಮೀ:—ಆ ತೋಟವೇ ನಮ್ಮ ಮನೆ.

ಸ್ವಾಮಿ:—ಇದ್ಯಾವುದೋ ಈ ಗುಡ್ಡ ?

ಲಕ್ಷ್ಮೀ:—ಇದೇ ಆ ಪುರೋಷೋತ್ತಮ ಸ್ವಾಮಿಗಳಿರುವ ಗುಡ್ಡ.

ಸ್ವಾಮಿ:—ನೀನು ಅಲ್ಲಿಗೆ ಬರುವೆಯಾ ?

ಲಕ್ಷ್ಮೀ:—ಆ ಹುಲೀ ಗುಡ್ಡಕ್ಯಾಕೆ ಬಂದೇನು ?

ಸ್ವಾಮಿ:—ಹುಲಿಗುಡ್ಡದಲ್ಲಿ ಸ್ವಾಮಿಗಳು ಹೇಗಿದ್ದಾರೋ ?

ಲಕ್ಷ್ಮೀ:—ಅವರು ಸ್ವಾಮಿಗಳು. ಅದಕ್ಕೇ ಇದ್ದಾರೆ.

ಸ್ವಾಮಿ:—ಸ್ವಾಮಿಗಳಾದರೆ ತಾನೆ ಇರೋದು ಹೇಗೋ ?

ಲಕ್ಷ್ಮೀ:—ಅಯ್ಯೋ ಅವರಿಗೆ ದೇವರು ಪ್ರತ್ಯಕ್ಷವಂತೆ ! ದೇವರು.

ಸ್ವಾಮಿ:—ಅವರಿಗೆ ದೇವರು ಪ್ರತ್ಯಕ್ಷವೆಂದು ನಿನಗೆ ಯಾರು ಹೇಳಿದರು ?

ಲಕ್ಷ್ಮೀ:—ನಮ್ಮಪ್ಪ.

ಸ್ವಾಮಿ:—ನೀನು ಸ್ವಾಮಿಗಳನ್ನು ನೋಡಿದ್ದೀಯಾ ?

ಲಕ್ಷ್ಮೀ:—ನೋಡದೆ ಏನು ? ಅಬ್ಬೂರಿಗೆ ಬರ್‍ತಾರೆ. ನಮ್ಮ ದೊಡ್ಡಪ್ಪನ ಮನೇಲಿ ಕೂತ್ಕೋತಾರೆ. ಹೊಳೇಲಿ ಸ್ನಾನ ಮಾಡ್ತಾರೆ. ಪೂಜೆ ಮಾಡ್ತಾರೆ. ತೀರ್ಥ ಕೊಡ್ತಾರೆ. ನನಗೆ ಕೆಂಡದಂತಾ ಜ್ವರ ಬಂದಿತ್ತು. ನಮ್ಮಪ್ಪ ಅವರ ಕೈಲಿ ತೀರ್ಥ ಕೊಡಿಸಿದ. ನನಗೆ ವಾಸಿಯಾಯ್ತು.

ಬಾಲಕನ ಮಾತು ಸ್ವಾಮಿಗಳಿಗೊಳ್ಳೇ ಸಹಿಕಟ್ಟಾಯಿತು. ಅವರಾದರೂ ಪುರುಷೋತ್ತಮರ ಗುಹೆಗೆ ಹೋಗಬೇಕೆಂತ ಪ್ರಯಾಣವಾಗಿದ್ದರು. ಅಬ್ಬೂರು ಅಲ್ಲಿಗೆ ಸಮೀಪದಲ್ಲಿತ್ತು. ಬಾಲಕನನ್ನು ಬಿಡಲು ಸ್ವಾಮಿಗಳ ಮನಸ್ಸು ಬರಲಿಲ್ಲ.

ಸ್ವಾಮಿ:—ಲಕ್ಷ್ಮೀನಾರಾಯಣ! ನೀನೂ ಬಾ! ಮೇನೆಯಲ್ಲಿ ಕೂಡಿಸಿಕೊಳ್ಳುತ್ತೇನೆ. ಅಬ್ಬೂರಿಗೆ ಹೋಗೋಣ.

ಲಕ್ಷ್ಮೀ:—ಮೇನೇಲಿ ಕೂತ್ಕೊಳ್ಳೋಕೆ ನಾನೇನು ಸ್ವಾಮಿಗಳೇನು? ಹೊತ್ತಾಗೋಯ್ತು. ಮನೆಗೆ ಹೋಗಬೇಕು. ನಮ್ಮಪ್ಪ ಸಿಟ್ಟುಮಾಡ್ತಾನೆ. ದನಗಳ ಹತ್ತಿರ ಯಾರೂ ಇಲ್ಲ.

ಸ್ವಾಮಿ:—ಚಿಂತೆಯಿಲ್ಲ. ನಿಮ್ಮಪ್ಪನಿಗೆ ಬೇಕಾದರೆ ನಾನು ಹೇಳುತ್ತೇನೆ. ಬಾ, ಮೇನೆಯೊಳಗೆ.

ಲಕ್ಷ್ಮೀ:—ನಾನು ಬೇರೇ ಅದರಲ್ಲಿ ಕೂತ್ಕೊಳ್ಳೋದಿಲ್ಲ.

ಸ್ವಾಮಿ:—ನೀನೂ ಬೇಕಾದರೆ ಸ್ವಾಮಿಗಳಾಗು, ಬಾ, ಹೋಗೋಣ!

ಲಕ್ಷ್ಮೀ:—ಹೀಗೇ ಮಾಡಿ ಸ್ವಾಮಿಗಳು ನಮ್ಮಣ್ಣನನ್ನೂ ಸ್ವಾಮಿ ಮಾಡಿದರು. ಸ್ವಾಮಿಯಾದರೆ ಮದ್ವೇ ಮಾಡೋದಿಲ್ಲವಂತೆ!

ಸ್ವಾಮಿ:—ನಿಮ್ಮಣ್ಣ ಸ್ವಾಮಿಯಾದನೇನು?

ಲಕ್ಷ್ಮೀ:—ಅಣ್ಣಾಂದ್ರೆ ದೊಡ್ಡಮ್ಮನ ಮಗ. ಈಗ ಆ ಸ್ವಾಮಿಗಳ ಹತ್ರ ಮಂತ್ರ ಕಲ್ಕೊಳ್ಳೀತಾನೆ.

ಸ್ವಾಮಿ:—ಹಾಗಾದರೆ ನೀನು ಸ್ವಾಮಿಯಾಗೋದಿಲ್ಲ!

ಲಕ್ಷ್ಮೀ:—ನನಗೆ ಗೊತ್ತಿಲ್ಲ. ಸ್ವಾಮಿಯಾದ್ರೆ ದನದ ಗತಿಯೇನು? ತೋಟಾ ಕಾಯೋರ್ಯಾರು? ನಮ್ಮನೇಲಿ ಆಳೇಕಾಳೇ? ನಾವು ಬಡವರು. ನನ್ನ ಮುಂಜೀ ಮಾಡೋದಕ್ಕೇ ನಮ್ಮಪ್ಪನಿಗೆ ಕಷ್ಟವಾಗಿದೆ. ನಮ್ಮಮ್ಮ ನಿತ್ಯಾ ನಮ್ಮಪ್ನ ಸಂಗಾತ ಮುಂಜೀ ಮಾಡೀಂತ ಜಗಳಾಡ್ತಾಳೆ. ನಮ್ಮಪ್ಪ ದುಡ್ಡಿಲ್ಲಾಂತಾನೆ!

ಸ್ವಾಮಿಗಳು ನಗುತ್ತಾ ಮೇನೆಯು ಮುಂದೆ ಸಾಗಲು ಅಪ್ಪಣೆಯಿತ್ತರು. ಬಾಲಕನನ್ನು—'ಅಪ್ಪಾ ನೀನು ಮನೆಗೆ ಹೋಗು' ಎಂದು ಅವನ ತಲೆಯಮೇಲೆ ಕೈಸವರಿಸಿ, ಅಕ್ಷತೆಯ ಕಾಳನ್ನು ಹಾಕಿದರು. ಬಾಲಕನು ನಗುತ್ತಾ, ಕಾವೇರಿ, ಕಪಿಲೆ ಎಂದು ತನ್ನ ದನಗಳನ್ನು ಕೂಗುತ್ತಾ ಅವುಗಳ ಪ್ರತಿಧ್ವನಿಯನ್ನು ಕೇಳಿ ಆನಂದಿಸುತ್ತಾ ತೋಟದಕಡೆಗೆ ತಿರುಗಿದನು. ಬೋಯಿಗಳು ಹುಂಕಾರಮಾಡುತ್ತಾ ಮೇನೆಯನ್ನು ಹರಿಸಿ ಮುಂದುವರಿದರು. **ಪುರುಷೋತ್ತಮತೀರ್ಥ**ರ ಮಠದಲ್ಲಿ **ಸುವರ್ಣವರ್ಣತೀರ್ಥ**ರ ಬಿಡಾರವಾಯಿತು. ಸತ್ಪುರುಷರೀರ್ವರ ಸಮಾಗಮವು ಗಂಗಾ ಯಮುನಾ ಸಂಗಮದಂತಾಯಿತು. ಪರಸ್ಪರ ಆಲಿಂಗನ ಸಂಭಾಷಣಾದಿಗಳು ವಸಿಷ್ಠವಾಮದೇವರ ಸಮಾಗಮವಾದಂತಾಯಿತು. ಹರಿಹರರು ಕಲೆತಂತಾಯಿತು. ವ್ಯಾಸ ಪರಶುರಾಮರು ಕೂಡಿದಂತಾಯಿತು. ಸುವರ್ಣವರ್ಣತೀರ್ಥರು, **ಬ್ರಹ್ಮಣ್ಯತೀರ್ಥ** ನಾಮದಿಂದ ಶೋಭಿಸುತ್ತಿದ್ದ

ಬಾಲಯತಿಗಳನ್ನು ನೋಡಿ ಪರಮಾನಂದದಿಂದ ನಮಗೂ ಇಂಥಾವನೊಬ್ಬ ಶಿಷ್ಯನಾಗಬೇಕೆಂದರು. ಹರಿಕೃಪೆಯಿಂದ ಇಲ್ಲೇ ದೊರೆತಾನೆಂದು ಪುರುಷೋತ್ತಮರು ಉತ್ತರವಿತ್ತರು.

ಆಹಾ ಯತಿಗಳು! ಯಾರಿಗೆ ಯಾರು ಕಡಿಮೆಯೆನ್ನುವಂತೆ ಇವರೀರ್ವರೂ ಮಹಾ ಭಕ್ತರು. ಮಹಾ ಪಂಡಿತರು, ಮಠಾಧಿಪತಿಗಳು. ಪರಮಾತ್ಮನನ್ನು ಪ್ರತ್ಯಕ್ಷೀಕರಿಸಿಕೊಂಡ ಬ್ರಹ್ಮವೇತ್ತರು. ಬ್ರಹ್ಮಭೂತರು. ಇಂಥಿಂಥವರ ಮೇಳನವಾದಮೇಲೆ ಹೇಳುವುದೇನು? ಆನಂದದಲ್ಲಿ ಪರಮಾನಂದ!

ಇತ್ತ ಲಕ್ಷ್ಮೀನಾರಾಯಣನು ತೋಟಕ್ಕೆ ಬಂದು, ದನಗಳನ್ನು ಕೊಟ್ಟಿಗೆಯಲ್ಲಿ ಕೂಡಿ, ಅವುಗಳ ಮೈಮೇಲೆ ಕೈಯಾಡಿಸಿ, ತನ್ನ ಗುಡಿಸಲ ಬಳಿಗೆ ಬಂದನು. ಗಿರಿಯಮ್ಮನು ಮಗನಿನ್ನೂ ಬರಲಿಲ್ಲವೆಂದು ಚಿಂತಿಸುತ್ತಿದ್ದವಳು ಅತ್ತಕಡೆ ನೋಡಿ—"ಲಕ್ಷ್ಮೀನಾರಾಯಣ! ಅದೇಕಪ್ಪಾ ಇಷ್ಟು ಹೊತ್ತು ಮಾಡಿದೆ? ಬೇಗ ಮನೆಗೆ ಬರಬಾರದಾಗಿತ್ತೇ? ಹೊಟ್ಟೆ ಹಸಿದಿಲ್ಲವೇ ನಿನಗೆ?" ಎಂದು ಕೇಳಿದಳು.

ಲಕ್ಷ್ಮೀ:—ಅಮ್ಮಾ ಆಗಲೇ ಬರುತ್ತಿದ್ದೆ. ಅಲ್ಲೊಬ್ಬ ಸ್ವಾಮಿಗಳು ಸಿಕ್ಕಿದರು, ಮಾತನಾಡಿಸಿದರು. ಅದಕ್ಕೇ ಹೊತ್ತಾಯಿತು.

ಗಿರಿ:—ಅದ್ಯಾವ ಸ್ವಾಮಿಗಳಪ್ಪಾ! ಅಣ್ಣನ ಸ್ವಾಮಿಗಳೇ?

ಲಕ್ಷ್ಮೀ:—ಅಲ್ಲವಮ್ಮಾ ನಿನಗೆ ಗೊತ್ತಿಲ್ಲ! ಇವರು ಅವರಿಗಿಂತ ಇನ್ನೂ ಜೋರಾಗಿದ್ದಾರೆ. ಮೇನೆಯಲ್ಲಿ ಕೂತುಕೊಂಡು ಹೋಗುತ್ತಿದ್ದರು. ನನ್ನ ಕೂಗಿದರು. ಅಬ್ಬಾರು ಎಷ್ಟು ದೂರ ದಿಯೆಂತಾ ಕೇಳಿದರು. ನಾನು ಅವರಿಗೆ ಸರಿಯಾಗಿ ಹೇಳಿಬಿಟ್ಟೆ! ಅಲ್ಲಾ ಅಮ್ಮಾ, ಇಷ್ಟು ತಿಳಿಯೋದಿಲ್ವೇ ದೊಡ್ಡವರಾಗಿ ಸ್ವಾಮಿಗಳಿಗೆ? ಅದೇ ಅಬ್ಬಾರೊಂತ?

ಗಿರಿ:—ಗಾಬರಿಯಿಂದ-ಏನಂದೆಯೋ ಸ್ವಾಮಿಗಳನ್ನು? ಅವರು ಸಿಟ್ಟಾದರೆ ಗತಿಯೇನೋ? ನೀನಿನ್ನೂ ಹುಡುಗ, ಅಂಥಾವರ ಸಂಗಾತ ಹೆಚ್ಚು ಮಾತಾಡಬಾರದಪ್ಪ!

ಲಕ್ಷ್ಮೀ:—ನಾನೇನೂ ಅವರನ್ನ ಬೈದಿಲ್ಲವಮ್ಮಾ! ನಾನು ಹೇಳಿದ್ದೇನೊಂತೀಯೋ—'ನನ್ನ ನೋಡಿ, ದನಾ ನೋಡಿ, ಸೂರ್ಯನ್ನ ನೋಡಿ' ಅಂತಾ.

ಗಿರಿ:—ಎಲ ಎಲ ಕಂದಾ! ಎಂಥಾ ಮಾತಾಡಿದೆಯೋ?

ಲಕ್ಷ್ಮೀ:—ಆಡದೆ ಏನಮ್ಮಾ?

ಗಿರಿ:—ಸ್ವಾಮಿಗಳು ಸಿಟ್ಟುಮಾಡಲಿಲ್ಲವೇನೋ?

ಲಕ್ಷ್ಮೀ:—ಸಿಟ್ಟು ಗಿಟ್ಟೂ, ಬಿಟ್ಟು ನನ್ನೂ ಮೇನೇಲಿ ಕೂತ್ಕೋಂತಾ ಕರದ್ರು. ಸ್ವಾಮಿಗಳ ಮೇನೇಲಿ ಕೂತ್ಕೋಬಾರ್ದೂಂತ ಬಿಟ್ಬಿಟ್ಟೆ!

ಗಿರಿ:—ಮತ್ತೇನಂದ್ರು ಸ್ವಾಮಿಗಳು?

ಲಕ್ಷ್ಮೀ:—ನೀನೂ ಬೇಕಾದ್ರೆ ಸ್ವಾಮಿಯಾಗ್ಬಿಡಂದ್ರು. ನಮ್ಮಣ್ಣ ಸ್ವಾಮಿಯಾದ್ದೆ ಸಾಕೊಂತ ಹೇಳ್ದೆ.

ಗಿರಿ:—ಸಾಕು ಸಾಕು. ಇಲ್ಲೊಬ್ಬ ಸ್ವಾಮಿಗಳು ಸೇರಿಕೊಂಡು ಕಂಡೋರ

ಮಕ್ಕಳನ್ನೆಲ್ಲ ಸ್ವಾಮಿ ಮಾಡ್ತಾ ಇದ್ದಾರೆ. ಇವರೂ ಒಬ್ಬರು ಬಂದ್ರೇನೋ ? ಮತ್ಯಾರ ಮಕ್ಳಮೇಲೆ ಕಣ್ಣು ಹಾಕಿದರೋ ಕಾಣೆ! ಏನಾದರೂ ಆಗ್ಲಿ, ಮಗೂ, ನೀನು ದನಾ ಕಾಯ್ಕಿದ್ರೂ ಚಿಂತಿಲ್ಲ. ಇನ್ಮೇಲೆ ಗುಡ್ಡಕ್ಕೆ ಹೋಗಬೇಡಪ್ಪ.

ಲಕ್ಷ್ಮಿ:—ಹೋದ್ರೇನಾಗತ್ತಮ್ಮ ?

ಗಿರಿ:—ಹೋದ್ರೆ ನೋಡು, ಅಕ್ಕನಿಗೂ ಒಬ್ನೇ ಮಗ ! ನನಗೂ ಒಬ್ನೇ ಮಗ ! ಅವನು ಗವೀಕಡೆಗೆ ಹೋಗಿ ಹೋಗಿ ಸನ್ಯಾಸ್ಯಾದ ! ನೀನೂ ಹಾಗೆ ಮಾಡಿದ್ರೆ ನಿನಗೂ ಏನಾದ್ರೂ ಮಾಡಿ ಬಿಡ್ತಾರವರು ! ನಮ್ಮ ಮನೆಯೇ ಹಾಳಾಗುತ್ತೆ. ಇನ್ನೇನು ಹೇಳಲಪ್ಪಾ ! (ಎಂದು ಕಣ್ಣೊರಸಿಕೊಂಡಳು.)

ಲಕ್ಷ್ಮಿ:—ಅಮ್ಮಾ ಸುಮ್ಸುಮ್ನೆ ಅಳಬ್ಯಾಡಮ್ಮಾ ! ನೀನತ್ರೆ ನಾನೂ ಅತ್ತೇನಿ ನೋಡು. (ಎಂದು ಗಟ್ಟಿಯಾಗಿ ಅತ್ತನು)

ಶೇಷಗಿರಿಯಪ್ಪನು ತೋಟದೊಳಗೆ ಕೆಲಸ ಮಾಡುತ್ತಿದ್ದವನು ಕತ್ತಲೆಯಾದ ಕಾರಣ ಹಿಂದಿರುಗಿ ಮನೆಗೆ ಬಂದನು. ತಾಯಿ ಮಕ್ಕಳು ಅಳುತ್ತಿದ್ದುದನ್ನು ನೋಡಿದನು. 'ಸರಿ, ಸರಿ, ನೀನೊಬ್ಬಳೇ ಅಳಬಾರದೆಂದು ಮಗುವಿಗೂ ಮುಂಡೆಯ ಮಾತು ಹಚ್ಚಿ ಕೊಟ್ಟು ಅಳಿಸುತ್ತೀಯಾ ? ಚೆನ್ನಾಯಿತು. ನನಗೇನಾದರೂ ಗತಿಯಿದ್ದರೆ, ಕಡೆಗೆ ಸಾಲವಾದರೂ ಸಿಕ್ಕುತ್ತಿದ್ದರೆ ನಿನ್ನ ಕೈಯಲ್ಲಿ ಇಷ್ಟು ಮಾತು ಕೇಳುತ್ತಿರಲಿಲ್ಲ. ಏನು ಮಾಡಲಿ ಹೇಳು ? ಹಾಳು ದಾರಿದ್ರ್ಯಕ್ಕೆ ! ಹೋಗಿ ಸ್ವಾಮಿಗಳನ್ನಾದರೂ ಕೇಳಲಿ ?'

ಗಿರಿ:—ಇಗೋ ಸ್ವಾಮಿಗಳ ಹತ್ತಿರ ಹೋಗಬೇಡಿ. ನಾನೇನೂ ಮುಂಡೆಯ ಮಾತೆತ್ತಿಲ್ಲ, ಅದಕ್ಕಾಗಿ ಅತ್ತೂ ಇಲ್ಲ. ನಾವತ್ತ ಕಾರಣವೇ ಬೇರೆ. ಮಗುವಿನ ಮಾತಿಗೂ ಬುದ್ಧಿಗೂ ಅಳು ಬಂತು ! ನಮ್ಮಂಥಾ ಪಾಪಿಷ್ಟರ ಹೊಟ್ಟೆಯಲ್ಲಿ ಹುಟ್ಟಿದ ನಲ್ಲಾ ಅಂತ ಅಳು ಬಂತು !

ಶೇಷ:—ಮಗೂ ಅದೇನೋ ನಿನ್ನ ತಲೆಯಮೇಲೆ ಕೆಂಪು ಕೆಂಪಗೆ !

ಲಕ್ಷ್ಮಿ:—ಅದೇ ಕಣಪ್ಪ ! ಸ್ವಾಮಿಗಳು ಹಾಕಿದ ಮಂತ್ರಾಕ್ಷತೆ !

ಶೇಷ:—ಆದ್ಯಾವ ಸ್ವಾಮಿಗಳು ಇಲ್ಲಿ ಬಂದಿದ್ದರೋ ! ಗವಿಯ ಸ್ವಾಮಿಗಳೇನೋ ?

ಲಕ್ಷ್ಮಿ:—ಅಲ್ಲ ಕಣಪ್ಪಾ ! ಇವರೇ ಬೇರೆ ! ಅವರಿಗಿಂತ ಥಳಥಳ ಹೊಳೀತಾರೆ! ಮೇನೇಲಿ ಕೂತು ಅಬ್ಬೂರಿಗೆ ಹೋದರು. ನನ್ನ ದಾರಿ ಕೇಳಿದ್ರು. ನಾನು ಸರಿಯಾಗಿ ಹೇಳ್ದೆ ! ಅವರು ನನ್ನಲಿ ತಡವರಿಸಿ ಮಂತ್ರಾಕ್ಷತೇ ಹಾಕಿದ್ರು.

ಶೇಷ:—ಸ್ವಾಮಿಗಳು ನಿನ್ನನ್ನು ಮುಟ್ಟಿದ್ರೇ ?

ಲಕ್ಷ್ಮಿ:—ಮುಟ್ಟೀ ಏನು ? ನನ್ನೂ ಮೇನೇಲಿ ಕೂರಿಸ್ಕೊಂತಾ ಕರೆದ್ರು. ಮುಟ್ಟಿದ್ರೋಕೆ ನಾನೇನು ಬ್ರಾಹ್ಮಣನಲ್ಲೇನು ?

ಶೇಷಗಿರಿಯಪ್ಪನಿಗೆ ಸ್ವರ್ಣವರ್ಣತೀರ್ಥರು ಶ್ರೀರಂಗಪಟ್ಟಣಕ್ಕೆ ಬಂದಿದ್ದ ಸಂಗತಿಯೂ, ಅವರು ಮಾರ್ಗತ್ಯೇನ ಅಬ್ಬೂರಿಗೆ ಬರುವರೆಂಬ ಸಮಾಚಾರವೂ ಗೊತ್ತಿತ್ತು.

ಆದ್ದರಿಂದ ಈಗ ಅವರೇ ದಯಮಾಡಿಸಿರಬೇಕೆಂಬ ಊಹೆಯಾಯಿತು. ಏನಾದರಾಗಲಿ, ದೊಡ್ಡವರು ಬಾಲಕನ ತಲೆಯಮೇಲೆ ಕೈಯಿಟ್ಟದ್ದರಿಂದ ಪರಮಾನುಗ್ರಹವಾಯಿತೆಂದು ಕೊಂಡನು. ಅನಂತರ ಬಾಲಕನಿಂದ ನಡೆದ ಸಂಗತಿಯನ್ನು ತಿಳಿದುಕೊಂಡನು.

ಮಾರನೆಯ ದಿನ ಬೆಳಗಾಗುತ್ತಲೆ, ಯತಿವರ್ಯಸ್ವಾಮಿಗಳು ಶೇಷಗಿರಿಯಪ್ಪನನ್ನು ಅವನ ಹೆಂಡತಿಯನ್ನು ಮಗನ ಸಹಿತ ಕರೆತರುವಂತೆ ದೂತರನ್ನು ಕಳುಹಿಸಿದರು. ಈ ಸಂಗತಿಯನ್ನು ಕೇಳಿ ಗಿರಿಯಮ್ಮನ ಎದೆಯೊಡೆಯಿತು. ಗುರ್ವಾಜ್ಞೆಗೆ ಪ್ರತಿ ಹೇಳುವ ಧೈರ್ಯವಿಲ್ಲದೆ ಮಗನನ್ನು ಕರೆದುಕೊಂಡು ದಂಪತಿಗಳು ಮಠಕ್ಕೆ ಬಂದರು. ಸ್ವರ್ಣವರ್ಣತೀರ್ಥರು ಲಕ್ಷ್ಮೀನಾರಾಯಣನನ್ನು ಕಾಣುತ್ತಲೇ,–'ಇಗೋ ಇವನೇ ನಮ್ಮ ಮಾರ್ಗದರ್ಶಿ'ಯೆಂದರು. ಬಾಲಕನನ್ನು ಹತ್ತಿರ ಕರೆದು ಕುಳ್ಳಿರಿಸಿಕೊಂಡರು. ಗಿರಿಯಮ್ಮನು ಸರ್ವನಾಶವಾಯಿತೆಂದೇ ಕಲ್ಲುಮನಸ್ಸು ಮಾಡಿ ಕಲ್ಲಿನಂತೆ ನಿಂತುಬಿಟ್ಟಳು.

ಸ್ವರ್ಣವರ್ಣತೀರ್ಥರು ಶೇಷಗಿರಿಯಪ್ಪನನ್ನು ಸಂಬೋಧಿಸಿ–'ಬಾಲಕನನ್ನೇನು ಗೋಪಾಲನನ್ನೇ ಮಾಡುವೆಯೋ–ವಿದ್ಯಾಬುದ್ಧಿಗೆ ವ್ಯವಸ್ಥೆ ಮಾಡುವೆಯೋ ?' ಎಂದು ಕೇಳಿದರು. ಅವನೇನುತ್ತರ ಕೊಟ್ಟಾನು ? 'ಮಹಾಸ್ವಾಮಿ – ಅದೇ ಯೋಚನೆಯಲ್ಲೇ ನಿರುಪಾಯನಾಗಿರುವೆನು" ಎಂದನು.

ಶೇಷ:—ಗರ್ಭಾಷ್ಟಮದಲ್ಲಿ ಉಪನಯನ ಮಾಡಬೇಕೆಂದರೆ ನನಗೆ ಗತಿಯಿಲ್ಲವಾಗಿದೆ. ವಿದ್ಯೆಯ ಮಾತಾಡುವುದಕ್ಕೆ ನನಗೇನಧಿಕಾರ ?

ಸ್ವಾಮಿ:—ಚಿಂತಿಸಬೇಡ, ಮಗನ ಉಪನಯನವೂ ಆಗುತ್ತದೆ. ವಿದ್ಯಾಭ್ಯಾಸವೂ ಆಗುತ್ತದೆ.

ಶೇಷ:—ಅಷ್ಟಾದರೆ ನನಗೇನು ಯೋಚನೆ ಸ್ವಾಮಿ !

ಸ್ವಾಮಿ:—ಬಾಲಕನನ್ನು ನಮ್ಮ ಮಠದಲ್ಲಿ ಬಿಡು. ನಿಮ್ಮ ದಂಪತಿಗಳಿಗೆ ಪುತ್ರ ಮೋಹವಿದ್ದರೆ ನೀವು ನಮ್ಮ ಮಠದಲ್ಲಿರಿ. ನಿಮಗೆ ದಾರಿದ್ರ್ಯವೆಲ್ಲಿಯದು, ಮಠವೇ ನಿಮ್ಮ ದಾದಮೇಲೆ ?

ಶೇಷ:—ಶ್ರೀಪಾದಾನುಗ್ರಹವಾದಮೇಲೆ ಪ್ರತಿಯಾಡಲು ಶಕ್ತನಲ್ಲ, ಸ್ವಾಮಿ ! ಎಲ್ಲವೂ ಗುರುವಾಜ್ಞಾ ! ಎಲ್ಲವೂ ಗುರುಚಿತ್ತ.

ಸ್ವಾಮಿ:—ಎಲ್ಲವೂ ಶ್ರೀಹರಿಚಿತ್ತವೆನ್ನು !

ಶೇಷ:—ಎಲ್ಲವೂ ಶ್ರೀಹರಿಚಿತ್ತ, ಮಹಾಸ್ವಾಮಿ !

ಲಕ್ಷ್ಮೀನಾರಾಯಣನಿಗೆ ಪುರುಷೋತ್ತಮತೀರ್ಥರ ಗುಹೆಯಲ್ಲಿ ಉಪನಯನವಾಯಿತು. ಶೇಷಗಿರಿ ದಂಪತಿಗಳು ತೋಟವನ್ನು ಗುತ್ತಿಗೆಗೆ ಕೊಟ್ಟು ಮಠವನ್ನು ಸೇರಿದರು. ಕಾಲಕ್ರಮದಲ್ಲಿ ಲಕ್ಷ್ಮೀನಾರಾಯಣನು ವಯಸ್ಕನಾದಂತೆ ಮಹಾ ಪಂಡಿತನಾದನು. ಸ್ವರ್ಣವರ್ಣತೀರ್ಥರು ವೃದ್ಧಾಪ್ಯಕಾಲದಲ್ಲಿ ಶ್ರೀರಂಗಕ್ಷೇತ್ರದಲ್ಲಿ ವಾಸ ಮಾಡಿದರು. ತಮ್ಮ ಸ್ಥಾನದಲ್ಲಿ ಲಕ್ಷ್ಮೀನಾರಾಯಣನಿಗೆ ಆಶ್ರಮ ಕೊಡಬೇಕೆಂದರೆ ತಂದೆ ತಾಯಿಗಳು ಬಾಧಕರಾಗಲಿಲ್ಲ. ಲಕ್ಷ್ಮೀನಾರಾಯಣನ ಒಲವೂ ಯಾವಾಗಲೂ ಸನ್ಯಾಸ

ದಲ್ಲಿತ್ತು. ಯಾವ ರೀತಿಯಿಂದಾದರೂ ತಮ್ಮ ವಂಶಕ್ಕೆ ಕೀರ್ತಿ ಬರಲೆಂದು ಶೇಷಗಿರಿಯಪ್ಪನು ಸಮ್ಮತಿಸಿದನು.

ಕೇವಲ ನಿಸ್ಸತ್ವರಾಗುವುದಕ್ಕೆ ಮೊದಲೇ ಸನ್ಯಾಸಿಗಳ ಪೂಜಾ ಆಸ್ಹಿಕ ಪದ್ಧತಿಗಳನ್ನು ಶಿಷ್ಯರಿಗೆ ಕಲಿಸಬೇಕೆಂದು ಸ್ವರ್ಣವರ್ಣತೀರ್ಥರು ಲಕ್ಷ್ಮೀನಾರಾಯಣನಿಗೆ ಆಶ್ರಮ ಕೊಟ್ಟರು. ಅಂದು ದನಗಾವರ ಜೊತೆಯಲ್ಲಿದ್ದ ಲಕ್ಷ್ಮೀನಾರಾಯಣನು ಇಂದು ಸ್ವರ್ಣವರ್ಣತೀರ್ಥರ ಕೃಪೆಯಿಂದ ಲಕ್ಷ್ಮೀನಾರಾಯಣಯೋಗಿಯೆನಿಸಿದನು.

ಪೀಠಾರೋಹಣ ಮಾಡಿದುದೇ ತಡ, ಲಕ್ಷ್ಮೀನಾರಾಯಣಯೋಗಿಗಳ ಪ್ರತಿಭೆಯು ಶತಾಧಿಕವೆನಿಸಿತು. ರಾಘವೇಂದ್ರಮಠದ ಪೂರ್ವಪೀಳಿಗೆಯ ಶ್ರೀ ವಿಬುಧೇಂದ್ರರೊಡನೆ ಸಂಚರಿಸುವ ಸುಯೋಗ ದೊರೆತದ್ದರಿಂದ ಲಕ್ಷ್ಮೀನಾರಾಯಣರ ಖ್ಯಾತಿಯು ದೇಶ ದೇಶಗಳಲ್ಲಿ ವ್ಯಾಪಿಸಿತು.

ವಿಬುಧೇಂದ್ರರ್‍ಯಾರೆಂಬುದರ ಸಂಕ್ಷೇಪ ವಿವರವನ್ನಿಲ್ಲಿ ತಿಳಿಸಬೇಕಾಗುವುದು. ಮಧ್ವಮತಸ್ಥರು ಹಂಸನಾಮಕ ಪರಮಾತ್ಮನಿಂದ ತಮ್ಮ ಪೀಳಿಗೆಯನ್ನು ಎಣಿಸಿಕೊಂಡು ಬಂದಿರುತ್ತಾರೆ. ಆ ಪೀಳಿಗೆಯಲ್ಲಿ ಅಚ್ಯುತಪ್ರೇಕ್ಷರಿಗೆ ಶ್ರೀಮಧ್ವಾಚಾರ್ಯರು ಶಿಷ್ಯರಾಗಿ ದೊಡ್ಡ ಭಾಷ್ಯಕಾರರೆನಿಸಿ ಪ್ರಖ್ಯಾತರಾದರು. ಅವರ ನಂತರ ಅವರ ಮುಖ್ಯಮುಖ್ಯ ಶಿಷ್ಯರಾದ ಪದ್ಮನಾಭ, ನರಹರಿ, ಮಾಧವ, ಅಕ್ಷೋಭ್ಯ ತೀರ್ಥರುಗಳು ಕ್ರಮವಾಗಿ ಪೀಠಾರೋಹಣ ಮಾಡಿದರು. ಅಕ್ಷೋಭ್ಯರಿಗೆ ಶ್ರೀ ಜಯತೀರ್ಥರು ಶಿಷ್ಯರಾಗಿ ಟೀಕಾಚಾರ್ಯರೆನಿಸಿದರು. ಟೀಕಾಚಾರ್ಯರಿಗೆ ವಿದ್ಯಾಧಿರಾಜರು ಶಿಷ್ಯರಾದರು. ಈ ವಿದ್ಯಾಧಿರಾಜರ ಕಾಲದಲ್ಲಿ ಒಂದಾಗಿದ್ದ ಮಠವು ಇಬ್ಭಾಗವಾಯಿತು. ಮೊದಲು ಪಟ್ಟಕ್ಕೆ ಬಂದವರು ರಾಜೇಂದ್ರರು. ವಿದ್ಯಾಧಿರಾಜರ ಬೃಂದಾವನ ಪ್ರವೇಶಕಾಲದಲ್ಲಿ ಸನ್ಯಾಸ ಸ್ವೀಕಾರ ಮಾಡಿದವರು ಕವೀಂದ್ರರು. ಇಬ್ಬರೂ ಒಂದಾಗಿರಲು ಅವಕಾಶವಾಗದೆ ತಮ್ಮ ತಮ್ಮ ಪೀಳಿಗೆಯನ್ನು ಬೆಳೆಸಿದರು. ಪ್ರಥಮ ಮೂಲಶಾಖೆಯು ವ್ಯಾಸರಾಯ ಮಠವೆನ್ನಿಸಿತು. ದ್ವಿತೀಯ ಕವೀಂದ್ರಶಾಖೆಯು ಉತ್ತರಾದಿ ಮಠವಾಯಿತು. ಮತ್ತೆ ಉತ್ತರಾದಿ ಮಠದಲ್ಲಿ ಎರಡು ತಲೆ ಕಳೆಯಲು ವಿಬುಧೇಂದ್ರ ವಿದ್ಯಾನಿಧಿಗಳೆಂಬುವರಿಂದ ಮಠ ವಿಭಾಗವಾಯಿತು. ಒಂದು ಶಾಖೆಯು ಕಾಲಕ್ರಮದಲ್ಲಿ ಶ್ರೀ ರಾಘವೇಂದ್ರ ಮಠವೆನ್ನಿಸಿತು. ಮತ್ತೊಂದು ಶಾಖೆಯು ಮೊದಲ ಹೆಸರಿನಿಂದಲೇ ಕರೆಸಿಕೊಂಡಿತು. ಹೀಗೆ ಎರಡನೇ ಆವರ್ತಿ ಕವಲೊಡೆದಾಗ ಮೊದಲು ಪಟ್ಟಕ್ಕೆ ಬಂದವರು ವಿಬುಧೇಂದ್ರರು. ಮಹಾ ಪ್ರಖ್ಯಾತ ಪಂಡಿತರು.

ವಿಬುಧೇಂದ್ರರೂ ಶ್ರೀಪಾದರಾಯರೂ (ಲಕ್ಷ್ಮೀನಾರಾಯಣಯೋಗಿಗಳು) ಕಲೆತು ಸಂಚಾರಮಾಡುತ್ತಾ ಕೊಪ್ಪರವೆಂಬ ನೃಸಿಂಹಕ್ಷೇತ್ರದಲ್ಲಿ ಕೃಷ್ಣಾತೀರದಲ್ಲಿ ಚಾತುರ್ಮಾಸ್ಯ ಸಂಕಲ್ಪಕ್ಕಾಗಿ ನಿಂತರು. ಕೊಪ್ಪರ ಎಂಬುವುದು ರಾಯಚೂರು ಜಿಲ್ಲಾ ದೇವಗಿರಿ ತಾಲ್ಲೂಕಿನಲ್ಲಿದೆ. ಇದೇ ಕಾಲದಲ್ಲಿ ಉತ್ತರಾದಿ ಮಠದ ರಘುನಾಥತೀರ್ಥರೂ ಕೊಪ್ಪರಕ್ಕೆ ಬಂದರು. ರಘುನಾಥತೀರ್ಥರು ವಿಬುಧೇಂದ್ರರಿಗೆ ಪಟ್ಟವಾದನಂತರ ಆಶ್ರಮ

ಸ್ವೀಕಾರಮಾಡಿದ ವಿದ್ಯಾನಿಧಿಗಳ ಶಿಷ್ಯರು. ವಿಬುಧೇಂದ್ರರು ಆಶ್ರಮಜ್ಯೇಷ್ಠರೂ ತಪೋನಿಷ್ಠರೂ ವಯೋವೃದ್ಧರೂ ಆಗಿದ್ದುದರಿಂದ ಪರಸ್ಪರ ಗುರುಮರ್ಯಾದೆಗಳು ನಿಯಮಾನುಸಾರ ನಡೆದುವು. ಒಮ್ಮೆ ಲಕ್ಷ್ಮೀನಾರಾಯಣರ ಪಾಂಡಿತ್ಯ ಪರೀಕ್ಷೆ ಮಾಡಬೇಕೆಂದು ರಘುನಾಥತೀರ್ಥರು ನ್ಯಾಯಸುಧೆಯಲ್ಲಿ ಕಠಿಣವಾದೊಂದು ವಾಕ್ಯವನ್ನು ವಿಮರ್ಶೆಗೆ ತಂದರು. ಅಷ್ಟೇ ಸಾಕೆಂದು ಲಕ್ಷ್ಮೀನಾರಾಯಣರು ಆದೊಂದು ವಾಕ್ಯದ ನೆವದಲ್ಲಿ ಇಡೀ ಸುಧಾ ಗ್ರಂಥವನ್ನೇ ವಿಚಿತ್ರ ರೀತಿಯಿಂದ ಅನುವಾದಮಾಡಿ ತೋರಿಸಿದರು. ರಘುನಾಥತೀರ್ಥರು ಲಕ್ಷ್ಮೀನಾರಾಯಣರ ಪಾಂಡಿತ್ಯಕ್ಕೆ ಬೆರಗಾದರು. ಭಿಕ್ಷಾಸ್ವೀಕಾರ ಕಾಲದಲ್ಲಿ ಎಷ್ಟು ತಡೆಯಬೇಕೆಂದರೂ ಸಾಧ್ಯವಾಗದೆ, ಮತ್ತೆ ರಘುನಾಥತೀರ್ಥರು ಲಕ್ಷ್ಮೀನಾರಾಯಣರ ಪಾಂಡಿತ್ಯವನ್ನು ಪ್ರಶಂಶಿಸಿದರು. ಲಕ್ಷ್ಮೀನಾರಾಯಣರು–'ಪಾಂಡಿತ್ಯದಿಂದ ಏನು ? ತಾವೆಷ್ಟಾದರೂ ಮಹಾಸಂಸ್ಥಾನಾಧಿಪತಿಗಳು. ಶ್ರೀಪಾದಂಗಳವರು. ನಾನೊಬ್ಬ ಬಾಲಸನ್ಯಾಸಿ. ನನ್ನಂಥವರ ಗುಣಕಥನ ಮಾಡಬಾರದು' ಎಂದರು. ರಘುನಾಥತೀರ್ಥರು ಆ ಮಾತಿನ ಮರ್ಮವರಿತು–'ನಾವು ಬರೀ ಶ್ರೀಪಾದಂಗಳು, ತಾವಾದರೋ ಶ್ರೀಪಾದರಾಜರು. ನಮ್ಮಂಥ ಶ್ರೀಪಾದಂಗಳನೇಕರಿಗೂ ರಾಜರು. ಈ ಮಾತು, ನಾವು ಮನಃಪೂರ್ವಕ ಆಡಿದೆವೆಂಬುದಕ್ಕೆ ರಾಮಚಂದ್ರದೇವರೇ ಸಾಕ್ಷಿ. ಶ್ರೀಮದಾಚಾರ್ಯರಂತೆಯೂ, ಶ್ರೀ ಟೀಕಾಕೃತ್ಪಾದರಂತೆಯೂ ನೀವು ಲೋಕವಿಖ್ಯಾತರಾಗುವಿರಿ. ನಿಮ್ಮ ಪಾಂಡಿತ್ಯದಿಂದಲೂ ಅಪಾರ ಮಹಿಮೆಯಿಂದಲೂ ರಾಜಾಧಿರಾಜರಿಂದ ಪೂಜಿತರಾಗುವಿರಿ. ಇದನ್ನು ಕಾಲವೇ ನೋಡುವುದೆಂದರು. ವಿಬುಧೇಂದ್ರರು ರಘುನಾಥರ ಮಾತು ಸತ್ಯ, ಸತ್ಯವೆಂದರು. ಅಂದಿನಿಂದಲೇ ಲಕ್ಷ್ಮೀನಾರಾಯಣಯೋಗಿಗಳು, **ಶ್ರೀಪಾದರಾಜರೆಂಬ ಹೆಸರಿನಿಂದ ಪ್ರಖ್ಯಾತರಾದರು.**

ಶ್ರೀಪಾದರಾಜರು ಸಂಚಾರವನ್ನು ಮುಗಿಸಿ ಶ್ರೀರಂಗಕ್ಕೆ ಬಂದ ಸ್ವಲ್ಪ ದಿವಸಗಳಲ್ಲೇ ಸ್ವರ್ಣವರ್ಣತೀರ್ಥರು ಬೃಂದಾವನಸ್ಥರಾದರು. ಪದ್ಮನಾಭತೀರ್ಥರ ಮಠದ ಸರ್ವಾಧಿಪತ್ಯವೂ ಶ್ರೀಪಾದರಾಜರದಾಯಿತು. ಪದ್ಮನಾಭತೀರ್ಥರೆಂದರೆ ಶ್ರೀ ಮಧ್ವಾಚಾರ್ಯರ ಪ್ರಥಮ ಶಿಷ್ಯರೆಂಬ ಮಾತನ್ನು ಹಿಂದೆ ತಿಳಿಸಿದೆ. ಮಧ್ವಾಚಾರ್ಯರ ನಾಲ್ವರು ಪಟ್ಟ ಶಿಷ್ಯರ ಪೈಕಿ ನರಹರಿತೀರ್ಥರ ವಿನಾ ಮಿಕ್ಕವರು ತಮ್ಮದೇ ಪ್ರತ್ಯೇಕ ಮಠಗಳನ್ನು ಸ್ಥಾಪಿಸಿದರು. ಪದ್ಮನಾಭತೀರ್ಥರ ಪೀಠಿಗೆಯು ಈಗಿನ **ಮುಳುಬಾಗಿಲ ಮಠ.** ಈ ಪರಂಪರೆಯವರು ತಮ್ಮ ಪಾಂಡಿತ್ಯಪ್ರಭಾವದಿಂದ ಮೂಲಮಠಕ್ಕೆ ಯಾವ ರೀತಿಯಿಂದಲೂ ಕಡಿಮೆಯಾಗದಂತೆ ವಿದ್ಯಾಸಂತತಿಯನ್ನು ಬೆಳೆಸಿದರು. ಅನೇಕ ಶಿಷ್ಯರನ್ನು ಸಂಪಾದಿಸಿದರು. ವಿಜಯನಗರದ ಮತ್ತು ಚಂದ್ರಗಿರಿಯ ರಾಜರ ಕಾಲದಲ್ಲಿ ಪ್ರಖ್ಯಾತರಾಗಿ ಅನೇಕ ಜಹಗೀರುಗಳನ್ನು ಪಡೆದರು. ಈ ಪೀಠಿಗೆಯವರು ಸೇಲಂ ಕೊಯಮುತ್ತೂರು ಮೊದಲಾದ ದಕ್ಷಿಣ ದೇಶದಲ್ಲಿ ಆರ್ಜಿಸಿದ ಗ್ರಾಮಭೂಮಿಗಳು ಉಳಿದುಬಂದಿದ್ದರೆ ಇವತ್ತೂ ಲಕ್ಷಾಂತರ ರೂಪಾಯಿಗಳ ಜಹಗೀರು ಸಂಸ್ಥಾನವಾಗಿರುತ್ತಿತ್ತು. ಈ ಚಿಕ್ಕ ಮಠದಲ್ಲೂ ಕವಲೊಡೆಯಿತು. ವಿವಾದ ಹುಟ್ಟಿತು. ಜಹಗೀರುಗಳನ್ನು ರಕ್ಷಿಸುವುದರಲ್ಲಿ ಅಷ್ಟಷ್ಟ

ಯಾಯಿತು. ರಾಜ್ಯವ್ಯತ್ಯಾಸಗಳಿಂದ ಅನೇಕ ಗ್ರಾಮಭೂಮಿಗಳು ಕೈಬಿಟ್ಟುಹೋದುವು. ಈಗ ಮೂವತ್ತುಸಾವಿರ ರೂಪಾಯಿಗಳಷ್ಟು ಉತ್ಪತ್ತಿಯು ಶ್ರೀಮಠದ ಅನುಭವದಲ್ಲಿದೆ.

ಶ್ರೀಪಾದರಾಜರ ಕಾಲದಲ್ಲಾದ ಸುಧಾರಣೆಗಳು

ಶ್ರೀಪಾದರಾಜರು ಮಠದ ಸರ್ವಾಧಿಪತ್ಯವನ್ನು ವಹಿಸಿದಕೂಡಲೆ, ಭಾಗವತಧರ್ಮ (ಕೀರ್ತನ) ಪ್ರಚಾರದಿಂದ ಸಮಾಜೋದ್ಧಾರವಾದೀತಲ್ಲದೆ, ಪಾಂಡಿತ್ಯ ಪ್ರದರ್ಶನದಿಂದ ಪಾಮರರ ಉದ್ಧಾರವಾಗಲಾರದೆಂಬುದನ್ನು ಅನುಭವದಿಂದ ತಿಳಿದರು. ಆ ಕಾಲದ ಪಂಡಿತರಿಗೆ ಗೀರ್ವಾಣ ಭಾಷೆಯಲ್ಲದೆ ಬೇರೊಂದು ಭಾಷೆಯ ಹೆಸರೇ ಅಸಹನೀಯವಾಗಿತ್ತು. ಸ್ನಾನಾನಂತರ ಪ್ರಾಕೃತ ಭಾಷೆಯಲ್ಲಿ ಮಾತನಾಡುವುದೂ ಶಿಷ್ಟಾಚಾರಕ್ಕೆ ವಿರೋಧವೆಂಬಷ್ಟು ಕಪಿಮುಷ್ಟಿಯ ಜನರಾಗಿದ್ದರು. ಸ್ತ್ರೀಯರೂ ಬಾಲಕರೂ ಇಲ್ಲದಿದ್ದರೆ, ಅವರು ಪ್ರಾಕೃತ ಭಾಷೆಯನ್ನೇ ಮರೆಯುತ್ತಿದ್ದರೇನೋ ? ಕನ್ನಡ ಭಾಷೆಯೊಂದರ ಗತಿ ಹೀಗಾಗಿತ್ತೆಂದಲ್ಲ. ಆಂಧ್ರಭಾಷೆಯದೂ ಇದೇ ಹಾಡಾಗಿತ್ತು. ಅದರಲ್ಲಿ ಕನ್ನಡದ ದೌರ್ಭಾಗ್ಯ ಬಹಳ. ಮುದ್ರಣಾದಿಗಳೂ, ಪ್ರಯಾಣ ಸೌಕರ್ಯಗಳೂ ಇಲ್ಲದ ಆ ಕಾಲದ ಜನರಿಗೆ ನಮ್ಮ ಪುರಾಣಗಳೇನನ್ನುವುವು–ನಮ್ಮ ಶಾಸ್ತ್ರದ ಸಾರಾಂಶವೇನು – ನಮ್ಮ ದಿನಚರ್ಯದ ನಡಾವಳಿ ಹೇಗಿರಬೇಕು–ಎಂಬ ಸಾಮಾನ್ಯ ವಿಷಯಗಳನ್ನು ತಿಳಿಯಬೇಕಾದರೂ ಪಂಡಿತರ ಬಾಗಿಲನ್ನು ಕಾಯಬೇಕಾಗಿತ್ತು. ವಾಕ್ಯಾರ್ಥಮಾಡಿ ವಾದಿನಿಗ್ರಹ ಮಾಡಬೇಕೆಂಬ ಚಟ ಹಿಡಿದ ಪಂಡಿತರಿಗೆ ಪಾಮರರಮೇಲೆ ದಯೆ ಬರುತ್ತಿರಲಿಲ್ಲ. ಪಂಡಿತರ ಪದ್ಧತಿಯನ್ನನುಸರಿಸಿ ನಡೆಯುವುದು ಪಾಮರರಿಗೆ ಧರ್ಮವಾಗಿತ್ತು. ಪಂಡಿತರ ಆಚರಣೆಗಳು ಸಾಮಾನ್ಯರ ಬುದ್ಧಿಗೆ ಸಂಶಯಾಸ್ಪದವಾಗಿ ತೋರಿದರೆ ಪ್ರಶ್ನೆಮಾಡುವ ಧೈರ್ಯ ಅವರಿಗಿರಲಿಲ್ಲ. ಈ ಕಾರಣದಿಂದ ಜನತೆಯಲ್ಲಿ ಅಂಧಶ್ರದ್ಧೆಯು ತಾನೇತಾನಾಗಿತ್ತು.

ಆದೇ ತಮಿಳುನಾಡಿನ ಜನರಿಗೆ ಈ ದುರ್ಗತಿಯಿರಲಿಲ್ಲ. ಅಲ್ಲಿನ ಮತಬೋಧಕರೂ ಪ್ರಜೆಗಳೂ ತಮಿಳನ್ನು ಗೀರ್ವಾಣಭಾಷೆಗೆ ಸಮವಾಗಿ ಗೌರವದಿಂದ ನೋಡುತ್ತಿದ್ದರು. ಆದ್ದರಿಂದ ಶ್ರೀವೈಷ್ಣವ ಪ್ರಬಂಧಗಳಿಗೆ **ದ್ರಾವಿಡವೇದ** ವೆಂಬ ಪೂಜ್ಯ ನಾಮಕರಣವಾಯಿತು. ತಮಿಳುನಾಡಿನ ಶೈವಸಿದ್ಧಾಂತಕಾರರೂ ದೇಶಭಾಷೆಗೆ ಅದೇ ಗೌರವವನ್ನು ಕೊಟ್ಟರು. ತಮಿಳು ಭಾಷೆಯಲ್ಲಿರುವಷ್ಟು ಧರ್ಮಗ್ರಂಥಗಳು ಭರತಖಂಡದ ಮತ್ತಾವ ಭಾಷೆಯಲ್ಲೂ ಇರದಿರುವುದಕ್ಕೆ ಆ ದೇಶೀಯರ ಭಾಷಾಭಿಮಾನವೇ ಕಾರಣ. ಇವನ್ನೆಲ್ಲಾ ತಮಿಳು ಸಂಸ್ಕೃತಿಯ ಕೇಂದ್ರಸ್ಥಾನವಾದ ಶ್ರೀರಂಗದಂಥಾ ಮಹಾಕ್ಷೇತ್ರದಲ್ಲಿದ್ದು, ಆ ದೇಶದಲ್ಲಿ ವಿಶೇಷವಾಗಿ ಸಂಚರಿಸಿ ಅನುಭವಕ್ಕೆ ತಂದುಕೊಂಡಕಾರಣ ಶ್ರೀಪಾದರಾಜರಿಗೆ ಕನ್ನಡ ಸಂಸ್ಕೃತಿಯನ್ನೂ ಬೆಳೆಸಿ, ಕನ್ನಡದಲ್ಲೇ ಧರ್ಮಗ್ರಂಥಗಳನ್ನು ಪರಿವರ್ತನಮಾಡಿ ಜ್ಞಾನೋಪದೇಶ ಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಅದಕ್ಕಾಗಿ ಭಾಗವತರ ತಂಡವೊಂದನ್ನೇರ್ಪಡಿಸಿದರು. ಪೂಜಾಕಾಲದಲ್ಲಿ ವೈದಿಕಪಂಡಿತರಿಂದ ವೇದಪಾರಾಯಣ ಮಾಡಿಸುವಂತೆ, ಭಾಗವತರ ಮುಖದಿಂದ ಕನ್ನಡ ದೇವರ ನಾಮಗಳನ್ನು

ಹಾಡಿಸಿದರು. ಅದುವರೆಗೆ ಯಾವ ಮಠದಲ್ಲೂ ಪ್ರಾಕೃತ ಪದಗಳನ್ನು ಪೂಜಾಕಾಲದಲ್ಲಿ ಹಾಡಿಸುವ ಸಂಪ್ರದಾಯವಿರಲಿಲ್ಲ. ಕನ್ನಡ ಮಾತನ್ನಾಡಿದರೇ ಮೈಲಿಗೆಯೆಂದು ತಿಳಿಯು ವವರ ಕಾಲದಲ್ಲಿ ಕನ್ನಡದ ಹಾಡೆಲ್ಲಿ ಬರಬೇಕು ? ಗಾನ ಮಾಡಬೇಕಾದರೂ ಸಂಸ್ಕೃತ ಸಾಹಿತ್ಯವಿರುವ ಹಾಡುಗಳೇ ಆ ಕಾಲದಲ್ಲಿರಬೇಕಾಗಿತ್ತಲ್ಲದೆ ಪ್ರಾಕೃತದ ಮಾತೆತ್ತುವ ಧೈರ್ಯ ಯಾರಿಗೂ ಇರಲಿಲ್ಲ. ಕನ್ನಡ ಕವಿಗಳಿಗೆ ಸಂಸ್ಕೃತ ಕವಿಗಳಂತೆ ರಾಜಸಭೆಗಳಲ್ಲಿ ಮರ್ಯಾದೆಯಿರಲಿಲ್ಲ. ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಸ್ವಯಂ ಮಹಾಪಂಡಿತರೂ ಸಂಸ್ಥಾನಾಧಿಪತಿಗಳೂ ಆದ ಶ್ರೀಪಾದರಾಜರಂಥವರು ಕನ್ನಡ ದೇವರ ನಾಮಗಳನ್ನು ಮಾಡಿ ಪೂಜಾಕಾಲದಲ್ಲಿ ಭಾಗವತರ ಮುಖದಿಂದ ಹಾಡಿಸಿದ ಸಾಹಸವು ಸಾಮಾನ್ಯವಾದು ದಲ್ಲ. ಆ ಕಾಲದ ಜನರು ಸ್ವಾಮಿಗಳನ್ನು ಏನಾಗಿ ಭಾವಿಸಿರಬಹುದು ? ಎಷ್ಟು ಸಿರೋಧ ಗಳಾಗಿರಬಹುದು ? ಈ ಸಂಗತಿಗಳ ಮಹತ್ವವನ್ನು ಆ ಕಾಲದ ಭಾವನೆಗಳ ಪ್ರಮಾಣ ದಿಂದ ಯೋಚಿಸಬೇಕಲ್ಲದೆ ಈ ಕಾಲಮಾನದಿಂದ ಯೋಚಿಸಿದರೆ ಅರ್ಥವಾಗುವುದಿಲ್ಲ.

ಶ್ರೀಪಾದರಾಜರು ಪೂಜಾಕಾಲದಲ್ಲಿ ಹಾಡಿಸುತ್ತಿದ್ದ ಹಾಡುಗಳೆಂದರೆ, ಅವರೇ ರಚಿಸಿದ **ಭ್ರಮರಗೀತಾ, ವೇಣುಗೀತಾ, ಗೋಪಿಗೀತೆಗಳು.** ಭಾಗವತದ ಈ ಗೀತೆಗಳೆಂದರೆ, ಪರಮ ನಾಸ್ತಿಕನನ್ನೂ ಪ್ರೇಮರಸದಲ್ಲಿ ಮುಳುಗಿಸಿ, ಅವನ ಅಸ್ಥಿ ಪಂಜರವನ್ನು ಅಲ್ಲೋಲಕಲ್ಲೋಲಗೊಳಿಸುವಂಥವುಗಳು. ಆ ಬಾಲಗೋಪಾಲರಿಗೂ ಅರ್ಥ ವಾಗುವ ತಿಳಿಗನ್ನಡ ಮಾತುಗಳ ಸುಂದರ ಸಾಹಿತ್ಯದಿಂದ ಸುಸ್ವರ ಸುನಾದಗಳಿಂದ–ಲಯ ಬದ್ಧವಾಗಿ ಉಚ್ಚಕಂಠಗಳಿಂದ ರಸಪುಷ್ಟಿಯಾಗಿ ತಾನಾಗಿ ಹಾಡಿಬರುತ್ತಿರುವ ದಿವ್ಯ ಹಾಡು ಗಳು. ಇಂತಹ ಹಾಡುಗಳನ್ನು ಕೇಳಿ ಮನಮರುಗದವರಾರು ? ಭಕ್ತಿರಸದಲ್ಲಿ ಕರಗದವ ರಾರು ? ಒಮ್ಮೊಮ್ಮೆ ಶ್ರೀಪಾದರಾಯರೇ ರಾತ್ರಿ ಮಂಗಳಾರತಿಯ ಕಾಲದಲ್ಲಿ ದೇವರೆದು ರಿಗೆ ಭಾಗವತಸೇವೆಗೆ ನಿಲ್ಲುತ್ತಿದ್ದರು. ಇವರನ್ನನುಸರಿಸಿ ಭಾಗವತರು ನರ್ತನಮಾಡು ತ್ತಿದ್ದರು. ಈ ದಿವ್ಯನೋಟ ನೋಡಲು ಸಾವಿರಾರುಜನ ಸೇರುತ್ತಿದ್ದರು. ಆ ಕಾಲದಲ್ಲಿ ಸ್ವಾಮಿಗಳ ಮುಖದಿಂದ ಹೊಸಹೊಸ ನಾಮಗಳು ಸರಣಿಸರಣಿಯಾಗಿ ಬರುತ್ತಿದ್ದುವು.

ಈ ರೀತಿ ಶ್ರೀಪಾದರಾಯರ ಕಾಲದಲ್ಲಿ ವಿಚಿತ್ರ ಸುಧಾರಣೆಯಾಯಿತು. ಕನ್ನಡ ಸಾಹಿತ್ಯಕ್ಕೆ ಸನ್ಮಾನ ದೊರೆಯಿತು. ಸ್ತ್ರೀಯರು ಬಾಲಕರಾದಿಯಾಗಿ ರಾಜರ ದೇವರ ನಾಮಗಳನ್ನು ಕಲಿತು ಭಕ್ತಿಕವಂತೆ ನಿಯಮವಾಗಿ ಪಠಿಸಿದರು. ಈ ಪದ್ಧತಿಯು ಸಂಪ್ರ ದಾಯಸ್ಥರ ಮನೆಗಳಲ್ಲಿ ಈಹೊತ್ತಿಗೂ ನಡೆದುಬರುತ್ತಿದೆ.

ಚಂದ್ರಗಿರಿಯ ಸಿಂಹಾಸನಾರೋಹಣ ಮಾಡಿದ್ದು

ಈ ಕಾಲದಲ್ಲಿ (ಕ್ರಿ.ಶ. ೧೪೭೧) ಸಾಳುವ ನರಸಿಂಹರಾಜನು ಚಂದ್ರಗಿರಿಯ ಅರಸನಾಗಿದ್ದನು. ಈತನೇ ಯೂಸುಫ್ ಆದಿಲ್ ಷಾಹಿಯನ್ನು ಗೆದ್ದು ವಿಜಯನಗರದ ಕೀರ್ತಿಯನ್ನು ಕಾಪಾಡಿದವನು. ಈತನು ನಾಮಮಾತ್ರಕ್ಕೆ ವಿಜಯನಗರದ ವಿರೂಪಾಕ್ಷ ಭೂಪತಿಗೆ ಅಂಕಿತನಾಗಿದ್ದನು. ಯಾವ ಬಗೆಯಿಂದಲೂ ವಿರೂಪಾಕ್ಷನಿಗೆ ತಗ್ಗಿ ನಡೆಯು

ತ್ತಿರಲಿಲ್ಲ. ವಿಜಯನಗರದಲ್ಲಿ ನಡೆದಂತೆ ಸಕಲ ರಾಜವೈಭವಗಳನ್ನೂ ಚಂದ್ರಗಿರಿಯಲ್ಲಿ ನಡೆಸಿಕೊಳ್ಳುತ್ತಿದ್ದನು. ಶತ್ರುರಾಜರ ಸಂಗಡ ಯುದ್ಧಪ್ರಸಕ್ತಿ ಬಂದರೆ ವಿರೂಪಾಕ್ಷನಿಗೆ ತಿಳಿಸುತ್ತಿರಲಿಲ್ಲ. ಗೆದ್ದು ತಂದ ದ್ರವ್ಯವನ್ನು ಕೊಡುತ್ತಿರಲಿಲ್ಲ. ರಾಜ್ಯವನ್ನು ವಿಜಯನಗರಕ್ಕೆ ಸೇರಿಸುತ್ತಿರಲಿಲ್ಲ. ಇಷ್ಟು ವೈಮನಸ್ಸಿಗೂ ವಿರೂಪಾಕ್ಷನು ತಿರುಪತಿಯ ಅರ್ಚಕರ ಅಧೀನನಾಗಿದ್ದುದು ಕಾರಣ. ತಿರುಪತಿಯ ಅರ್ಚಕರು ದೇವರ ವಾಹನಗಳಮೇಲೆ ಕುಳಿತು ಮೆರೆದರೂ ಸಹಿಸಿದುದು ಕಾರಣ. ಅರ್ಚಕರ ಮಾತಿಗೆ ಮರುಳಾಗಿ ವಿಜಯನಗರದ ರಾಜ್ಯ ಸ್ಥಾಪನೆಯಾದ ದಿನದಿಂದ ನಡೆದುಬಂದ ವಿರೂಪಾಕ್ಷ ಮೊಹರನ್ನು ಅಳಿಸಿ ಅದರಲ್ಲಿ ರಾಮನಾಮ ಬರೆಸಿದುದು ಕಾರಣ.

ವಿರೂಪಾಕ್ಷನು ಅರ್ಚಕರ ಪಕ್ಷವನ್ನು ಎಷ್ಟು ವಹಿಸಿದ್ದನೋ, ನರಸಿಂಹನು ಅಷ್ಟೇ ಅವರನ್ನು ದ್ವೇಷಿಸುತ್ತಿದ್ದನು. ಅವರ ಅಕೃತ್ಯಗಳನ್ನು ಸೈರಿಸದೆ ಅವರ ಕುಲವನ್ನೇ ನಾಶಪಡಿಸಿದನು. ಈ ಕಾರಣ ಉಭಯರ ವೈರಕ್ಕೆ ಮೇರೆಯಿಲ್ಲದಂತಾಗಿತ್ತು.

ಸಳುವ ನರಸಿಂಹರಾಜನಿಗೆ ದುಷ್ಟರನ್ನು ದಂಡಿಸಿದೆನೆಂಬ ತೃಪ್ತಿ ಮನಸ್ಸಿನಲ್ಲಿದ್ದರೂ, ಬ್ರಹ್ಮಹತ್ಯಕಾರನಾದೆನೆಂಬ ವ್ಯಥೆಯು ಅವನನ್ನು ಬಾಧಿಸುತ್ತಿತ್ತು. ಏನಾದರೊಂದು ಬಗೆಯ ಶಾಂತಿಮಾಡಿ ಪಾಪವಿಮುಕ್ತನಾಗಬೇಕೆಂದು ಶ್ರೀಪಾದರಾಜರ ಮೊರೆಬಿದ್ದನು. ಶ್ರೀಪಾದರಾಜರು ಚಂದ್ರಗಿರಿಯಲ್ಲಿ ಬಂದು ನೆಲೆಸಿ, ಅನೇಕ ಶಾಂತಿಕರ್ಮಗಳನ್ನು ರಾಜನಿಂದ ಮಾಡಿಸಿ, ಆತನ ಬ್ರಹ್ಮಹತ್ಯೆಯ ಕಳಂಕವನ್ನು ಪರಿಹರಿಸಿದರು.

ಸ್ವಾಮಿಗಳ ಪಾಂಡಿತ್ಯ, ಅವರ ಶಮದಮಾದಿ ಗುಣಗಳು, ಅವರ ಉಪದೇಶ ಕ್ರಮಗಳಿಗೆಲ್ಲಾ ಮನಸೋತ ಮಹಾರಾಜನು ಅವರನ್ನು ತನ್ನ ಸಿಂಹಾಸನದ ಮೇಲೆ ಕೂಡಿಸಿ, ಕನಕಾಭಿಷೇಕಮಾಡಿದನು. ಸಿಂಹಾಸನಾರೋಹಣ ಮಾಡಿದಾಗ ಶ್ರೀಪಾದರಾಜರು ಮುತ್ತಿನ ಕವಚ ತೊಟ್ಟಿದ್ದರೆಂತಲೂ, ತಲೆಯಮೇಲೆ ರತ್ನದ ಕಿರೀಟವನ್ನು ಧರಿಸಿದ್ದರೆಂತಲೂ, ಇವರ ಶಿಷ್ಯರಾದ ವ್ಯಾಸರಾಯರು ಒಂದು ದೇವರ ನಾಮದಲ್ಲಿ ಹೇಳಿರುತ್ತಾರೆ. ಶ್ರೀಪಾದರಾಜಾಷ್ಟಕವೆಂಬ ಒಂದು ಸ್ತೋತ್ರದಲ್ಲಿ ಮೇಲ್ಕಂಡ ವಿಷಯವು ಉದಾಹೃತವಾಗಿದೆ.

ಶ್ರೀಮದ್ವೀರನೃಸಿಂಹರಾಜ ನೃಪತೇರ್ಭೂದೇವಹತ್ಯಾವ್ಯಥಾಂ ।
ದೂರೀಕೃತ್ಯ ತದರ್ಪಿತೋಜ್ವಲ ಮಹಾ ಸಿಂಹಾಸನೇ ಸಂಸ್ಥಿತಂ ॥
ಶ್ರೀಮತ್ಪೂರ್ವಕವಾಟ ನಾಮಕಪುರೇ ಸರ್ವೇಷ್ಟಸಿದ್ಧಿಪ್ರದಃ ।
ಶ್ರೀ ಶ್ರೀಪಾದಯತೀಂದ್ರ ಶೇಖರ ಮಣಿರ್ಭೂಯಾತ್ಸನಃ ಶ್ರೇಯಸೇ ॥

ತೀರ್ಥಯಾತ್ರೆ

ಭರತಖಂಡ ಸಾಮಾನ್ಯದಲ್ಲಿ ದೇಶಾಟನ ಪಂಡಿತ ಭಾಷಣಗಳಿಂದ ಲೋಕಾನುಭವ ಮಾಡಿಕೊಳ್ಳುವುದನ್ನು ತೀರ್ಥಯಾತ್ರೆಯೆಂಬ ಗೌರವನಾಮದಿಂದ ಕರೆಯುತ್ತಾರೆ. ಭಾರತೀಯನ ಪ್ರಪಂಚ ಪಾರಮಾರ್ಥಗಳಿಗೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಪ್ರಪಂಚ

ವ್ಯಾಪಾರವನ್ನು ಪರಮಾರ್ಥ ದೃಷ್ಟಿಯಿಂದ ಭಾರತೀಯನು ನಡೆಸುವನು. ಉಂಡುಟ್ಟು ಮಿಂದು ಮಲಗುವುದು ಪರಮಾತ್ಮನ ಪ್ರೀತಿಗೆಂದು ತಿಳಿಯುವನು. ಇಂತಹ ಪ್ರಪಂಚ ಪರಮಾರ್ಥಗಳ ನಿಕಟ ಸಂಬಂಧವು ಹಿಂದೂ ಧರ್ಮದಲ್ಲಿದೆ ಪ್ರಪಂಚದ ಇತರ ಯಾವ ಧರ್ಮಗಳಲ್ಲೂ ಇದ್ದಂತೆ ಕಾಣುವುದಿಲ್ಲ.

ಶ್ರೀ ಶ್ರೀಪಾದರಾಜರು ಉತ್ತರ ಯಾತ್ರೆಯನ್ನು ಮಾಡಿಕೊಂಡು ಮುಳುಬಾಗಲಿಗೆ ಹಿಂದಿರುಗಬೇಕೆಂದು ನಿಶ್ಚಯಮಾಡಿದರು. ಸಾಳುವದಕ್ಕೆ ನರಸಿಂಹ ಭೂಪಾಲನ ಸಹಾಯವೂ ಇವರ ಕಾಶೀಯಾತ್ರೆಗೆ ಬೆಂಬಲವಾಯಿತು. ನೂರಾರು ಮಂದಿ ಶಿಷ್ಯ ಜನರು ಪರಿವಾರ ಸಹಿತ ಸ್ವಾಮಿಗಳನ್ನು ಹಿಂಬಾಲಿಸಿದರು. ಸ್ವಾಮಿಗಳು ಹೋದ ಸ್ಥಳಗಳಲ್ಲೆಲ್ಲಾ ವಿದ್ವತ್ಸಭೆಗಳನ್ನು ಮಾಡಿ ಭಾಗವತ ಧರ್ಮವನ್ನು ಪದೇಶಿಸಿದರು. ಕಾಶಿಯಂಥಾ ಕೊಬ್ಬಿದ ಪಂಡಿತರಿರುವ ಸಭೆಯಲ್ಲಿ ಸಹ ಶುಷ್ಕ ವಾಕ್ಯಾರ್ಥಗಳಿಗೆ ಮಹತ್ವ ಕೊಡದೆ ಭಾಗವತ ಧರ್ಮವನ್ನೇ ಉದ್ಘೋಷಿಸಲು ಅಲ್ಲಿನ ಪಂಡಿತರಿಗಿದು ಸಹನೆಯಾಗಲಿಲ್ಲ. ಸ್ವಾಮಿಗಳ ಪಾಂಡಿತ್ಯವು ಸಾಮಾನ್ಯವಾದುದರಿಂದ ಭಾಗವತ ಧರ್ಮದ ಸೋಗು ತೆಗೆದರೆಂದಾಡಿಕೊಂಡರು. ಈ ಹೊತ್ತಿಗೂ—

ಪಾಂಡಿತ್ಯ ಹೀನಾ ಕವಯೋ ಭವಂತಿ । ಕವಿತ್ವ ಹೀನಾಶ್ಚ ಪುರಾಣ ಭಟ್ಟಾಃ ॥
ಪುರಾಣ ಹೀನಾ ಕೃಷಿಮಾಶ್ರಯಂತೀ । ಭಗ್ನಾಃ ಕೃಷೌ ಭಾಗವತಾ ಭವಂತಿ ॥

ಎಂದರೆ, ಪಾಂಡಿತ್ಯವಿಲ್ಲದವರು ಕವಿಗಳಾಗುತ್ತಾರೆ; ಕವಿತ್ವ ಬಾರದವರು ಪುರಾಣ ಭಟ್ಟರಾಗುತ್ತಾರೆ; ಪುರಾಣವೂ ಬರದವರು ಕೃಷಿ ಕರ್ಮವನ್ನವಲಂಬಿಸುತ್ತಾರೆ. ಕೃಷಿಯಲ್ಲೂ ಭಗ್ನಮನೋರಥರು ಭಾಗವತ ಧರ್ಮಾವಲಂಬಿಗಳಾಗುತ್ತಾರೆ; ಎಂಬುದಾಗಿ ಅಸಂಸ್ಕೃತನಾದ ಹರಿದಾಸನನ್ನು ನೋಡಿ ಜನರಾಡಿಕೊಳ್ಳುತ್ತಾರೆ.

ಪೀಠಾಧಿಪತಿಗಳಾದ ಯತಿಗಳು ವಿದ್ವತ್ಸಭೆಯಲ್ಲಿ ಭಾಗವತಧರ್ಮದ ಮಾತನ್ನಾಡುವುದು ಆ ಕಾಲದ ಪಂಡಿತರಿಗೆ ಸಾಮಾನ್ಯವಾಗಿ ಕಾಣಿಸಿದುದಾದರೂ ಆಶ್ಚರ್ಯವಿಲ್ಲ. ಶ್ರೀ ಶಂಕರಾಚಾರ್ಯರು ಭಕ್ತಿಮಾರ್ಗವನ್ನು ಪದೇಶಿಸಿದಾಗಲೂ ಕಾಶಿಯಲ್ಲಿ ಇದೇ ಗತಿಯಾಯಿತು. ಪಂಡಿತರು ವ್ಯಾಕರಣ ವಾಕ್ಯಾರ್ಥಕ್ಕೆ ಆಚಾರ್ಯರನ್ನು ಕರೆದರು. ಆಚಾರ್ಯರು ಶುಷ್ಕ ವಾಕ್ಯಾರ್ಥದಲ್ಲಿ ಜನ್ಮವನ್ನು ವ್ಯರ್ಥಗೊಳಿಸುತ್ತಿರುವ ಪಂಡಿತರನ್ನು ನೋಡಿ—

“ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಂ ಕರಣೇ ।
ಭಜಗೋವಿಂದಂ ಭಜಗೋವಿಂದಂ ಗೋವಿಂದಂ ಭಜ ಮೂಢಮತೇ ॥”

ಎಂಬುದಾಗಿ ಉಪದೇಶ ಮಾಡಿದರು.

ಪಂಡಿತರ ಗುಸುಗುಸು ಸ್ವಾಮಿಗಳಿಗೆ ತಿಳಿಯದೆ ಹೋಗಲಿಲ್ಲ. ಅಪವಾದಕ್ಕೊಳಗಾಗಬಾರದೆಂದು ವಿದ್ವತ್ಸಭೆ ಮಾಡಿ ಮತ್ತೆ ಆ ಪಂಡಿತರನ್ನು ಕರೆಸಿದರು. ಸ್ವಾಮಿಗಳು ದಾಕ್ಷಿಣಾತ್ಯರೂ ಕರ್ಣಾಟಕ ದೇಶೀಯರೂ ಆಗಿದ್ದುದರಿಂದ ಆ ಪಂಡಿತರಿಗೆ ಅವರನ್ನು

ಕಂಡರೆ ಗಣನೆಯಿರಲಿಲ್ಲ. ನಿಮಿಷದಲ್ಲಿ ನಿಗ್ರಹಮಾಡುವೆನೆಂದು, ಯತಿಗಳಿಂದು ವಂದನೆ ಸಹ ಮಾಡದೆ, ಸಭೆಯಲ್ಲಿ ಕುಳಿತರು. ವಾದಕ್ಕೆ ವಿಷಯ ತೆಗೆಯುವುದೊಂದು ಬಾಕಿ ಯಾಯಿತು.

ಸ್ವಾಮಿಗಳು,–'ನಿಮ್ಮೊಡನೆ ವಾಕ್ಯಾರ್ಥಮಾಡುವುದರಲ್ಲಿ ಅಡ್ಡಿಯಿಲ್ಲ. ನಾವು ಧರ್ಮಸ್ಥಾಪನೆಗೆ ಹೊರಟ ಪೀಠಾಧಿಪರಾದ್ದರಿಂದ ವೇದಾಂತವಲ್ಲದೆ ಅನ್ಯ ಶಾಸ್ತ್ರಗಳಿಗೆ ನಮ್ಮಲ್ಲಿ ಎಡೆಯಿಲ್ಲ. ಜಯಾಪಜಯಗಳನ್ನು ನಿರ್ಣಯಿಸಲು ಮಧ್ಯಸ್ಥರಾಗಬೇಕು. ಪ್ರತಿಜ್ಞೆಯಾಗಬೇಕು. ಉಭಯ ಪಕ್ಷಕ್ಕೂ ಸೇರದ ನಿಮ್ಮ ಮಹಾರಾಜನೇ ಮಧ್ಯಸ್ಥನಾದರೆ ನಮಗೆ ಸಮ್ಮತ. ಇದಕ್ಕೆ ನೀವೇನೆನ್ನುವಿರಿ' ಎಂದು ಪ್ರಶ್ನೆಮಾಡಿದರು. ತರ್ಕ ವ್ಯಾಕರಣ ಗಳಿಗೆ ಯೋಗ್ಯಸ್ಥಾನ ದೊರೆಯದಿದ್ದರೆ, ವೇದಾಂತವು ನೀರಸವಾಗುವುದರಿಂದ ಉಭಯ ಶಾಸ್ತ್ರಗಳಿಗೂ ತಕ್ಕ ಅವಕಾಶವಿರಬೇಕೆಂದು ಪಂಡಿತರು ನುಡಿದರು. ಉಪಯುಕ್ತ ವಿಷಯ ಗಳಿಗೆ ಬಾಧಕವಿಲ್ಲವೆಂದು ಸ್ವಾಮಿಗಳು ಹೇಳಿದರು. ಸ್ವಾಮಿಗಳ ವಕ್ತೃತ್ವ ವ್ಯಕ್ತಿತ್ವಗಳಿಂದ ಪ್ರಸನ್ನನಾಗಿದ್ದ ಕಾಶೀರಾಜನು ಸಂತೋಷದಿಂದ ಅಧ್ಯಕ್ಷಪದವಿಯನ್ನಲಂಕರಿಸಿದನು. ಗೆದ್ದವರ ಆಶ್ರಮವನ್ನು ಸೋತವರು ಸ್ವೀಕರಿಸಬೇಕೆಂದು ಪ್ರತಿಜ್ಞೆಯಾಯಿತು. ರಾಜ ಸಾನ್ನಿಧ್ಯಗೌರವದಿಂದ ಅನವಶ್ಯಕ ವಿವಾದಗಳಿಗೆಡೆಯಾಗದಂತೆ ವಾದವು ಭರದಿಂದ ಸಾಗಿತು. ಸ್ವಾಮಿಗಳು ಜಯಶೀಲರಾದರು. ಸೋತ ಪಂಡಿತರು ಸನ್ಯಾಸ ಸ್ವೀಕಾರ ಮಾಡಬೇಕಾಯಿತು.

ಮತ್ಸರಿಗಳಾದ ಪಂಡಿತರು ಸ್ವಾಮಿಗಳ ವಾಗ್ಬಂಧ ಮಾಡಬೇಕೆಂದು ಚಾಟು ತಂತ್ರಗಳನ್ನೆಸಗಿದರು. ಹಯಗ್ರೀವ ಮಂತ್ರ ಪುರಶ್ಚರಣೆಮಾಡಿ, ಸ್ವಾಮಿಗಳು ವಿಪತ್ತಿನಿಂದ ಪಾರಾದರು.

ಹೀಗೆ ಅನೇಕ ವಿದ್ಯಾಕೇಂದ್ರಗಳಲ್ಲಿ ಪ್ರಾಶಸ್ತ್ಯ ಪಡೆದು ಶ್ರೀ ಶ್ರೀಪಾದರಾಜರು ಮುಳುಬಾಗಲಿಗೆ ಹಿಂದಿರುಗಿ ಬಂದರು.

ಸ್ವಾಮಿಗಳು ತೋರಿಸಿದ ಅತಿಮಾನುಷ ಮಹಿಮೆಗಳು

ಮುಳುಬಾಗಿಲ ಬಡಶಿಷ್ಯರು, ಗುರುಗಳು ಕಾಶಿ ಮೊದಲಾದ ಸಕಲ ತೀರ್ಥ ಯಾತ್ರೆ ಮಾಡಿ ಬಂದುದನ್ನು ನೋಡಿ, ಅವರ ದಿಗ್ವಿಜಯ ಚರಿತ್ರೆಯನ್ನು ಕೇಳಿ ಹರ್ಷಿತರಾ ದರು. '–ಮಹಾಸ್ವಾಮಿ, ತಾವು ಸರ್ವಜ್ಞರು, ಪುಣ್ಯಾತ್ಮರು. ತಮಗೆ ಎಲ್ಲಾ ಯಾತ್ರೆ ಗಳಾದುವು. ತಮ್ಮ ದರ್ಶನವೇ ನಮಗೆ ಗಂಗಾಸ್ನಾನ. ಆದರೂ ಜನ್ಮದಲ್ಲಿ ಒಮ್ಮೆ ಯಾದರೂ ನಮಗೆ ಪ್ರತ್ಯಕ್ಷ ಗಂಗಾದರ್ಶನ ಮಾಡುವ ಭಾಗ್ಯವಿಲ್ಲ. ತಲಕಾವೇರಿ ಸ್ನಾನ ಸಹ ಮಾಡಲಶಕ್ತರಾದ ನಮಗೆ ಗಂಗಾದರ್ಶನ ಹೇಗೆ ಲಭಿಸೀತು? ಸಂಸ್ಥಾನದ ಜೊತೆಯ ಲ್ಲಿದ್ದರೆ ನಮಗೂ ಯಾತ್ರೆಯಾಗುತ್ತಿತ್ತು. ನಾವಷ್ಟು ಭಾಗ್ಯವಂತರಾಗಲಿಲ್ಲ. ತಾವೇ ನಮಗೆ ಯಾತ್ರೆ ಮಾಡಿಸಬೇಕು. ತಮ್ಮಿಂದ ನಮಗೆ ಇಹಪರ ಸಾಧನೆಗಳಾಗಬೇಕು,' ಎಂದು ದೀನರಾಗಿ ಪ್ರಾರ್ಥಿಸಿದರು. ಇಷ್ಟು ಜನರನ್ನು ಕಾಶಿಗೆ ಕಳುಹಿಸಿ ಗಂಗಾಸ್ನಾನ

ಮಾಡಿಸುವ ಬಗೆ ಹೇಗೆ ? ಕೇಳುವವರು-ಕೇಳಿದರು. ಕಾರ್ಯಸಾಧನೆ ಹೇಗಾದೀತು ? ದೀನದಯಾಳುಗಳಾದ ಸ್ವಾಮಿಗಳು ಶಿಷ್ಯರಲ್ಲಿ ಕನಿಕರಪಟ್ಟು,-'ಒಳ್ಳೇದು ! ನಿಮಗಂತೂ ಕಾಶೀಯಾತ್ರೆಮಾಡಲು ಶಕ್ತಿಸಾಲದು ; ಯೋಗ್ಯತೆಯಿಲ್ಲ ; ಭಕ್ತಾನುಕಂಪಿಯಾದ ಭಾಗೀರಥಿಯು ನೀವಿದ್ದಬಳಿಗೇ ಬರಬೇಕೆನ್ನುವಿರಲ್ಲವೆ ? ಕೂತಲ್ಲಿಯಲ್ಲೇ ಕಾಶೀಯಾತ್ರೆಯಾಗಬೇಕೆನ್ನುವಿರಲ್ಲವೆ ? ಆಗಲಿ ! ದೇವಿಯು ಕೃಪೆಮಾಡುವಳು. ನಾಳೆ ಪ್ರಾತಃಕಾಲ ನರಸಿಂಹತೀರ್ಥಕ್ಕೆ ಎಲ್ಲರೂ ಗಂಗಾಪೂಜೆಗೆ ಬನ್ನಿರಿ. ನಿಮ್ಮ ಸ್ವಾರ್ಥವು ಸಿದ್ಧಿಸುವುದು' ಎಂದು ಆಜ್ಞೆಗೈದರು. ಆ ಬಡಜನರ ಆನಂದಕ್ಕೆ ಪಾರವಿಲ್ಲವಂತಾಯಿತು. ಆಗಿನಿಂದಲೇ ನರಸಿಂಹತೀರ್ಥದ ಬಳಿ ಜನರು ಸೇರಲಾರಂಭಿಸಿದರು. ದೇವಿಗೆ ಮಡಿಲು ತುಂಬುವುದಕ್ಕೆ ಮಂಗಳದ್ರವ್ಯಗಳನ್ನೂ ಫಲಪುಷ್ಪಗಳನ್ನೂ ಕಟ್ಟಿಕೊಂಡು ಭಜನೆಮಾಡುತ್ತಾ ರಾತ್ರಿಯೆಲ್ಲಾ ಜಾಗರಮಾಡಿದರು. ಗಂಗೆಯ ನೀರು ಬೆಳ್ಳಗಿರುವುದಂತೆ ! ಸರೋವರದ ನೀರು ಕಪ್ಪಗಿದೆ. ನಾಳೆ ನಮ್ಮ ಸರೋವರದ ನೀರು ಗಂಗೆಯ ನೀರಿನಂತೆ ಬೆಳ್ಳಗಾದರೆ-ಸರೋವರದ ತುಂಬಾ ತುಂಬಿ ಹರಿದರೆ, ಗಂಗೆ ಬಂದದ್ದಕ್ಕೆ ಗುರುತೆಂದುಕೊಂಡರು. ಸ್ವಾಮಿಗಳ ಒಂದೊಂದು ಮಹಿಮೆಯನ್ನೂ ಕೊಂಡಾಡುತ್ತಾ ಕುಳಿತರು. ಕೆಲವರು ಗಂಗಾವತರಣವನ್ನು ಪಾರಾಯಣ ಮಾಡಿದರು. ಕಾವ್ಯಾಲಾಪನಪರರ ಗಂಗಾಲಹರಿಗಳಿಗೂ ಅಷ್ಟಕಗಳಿಗೂ ಕಡಿಮೆಯಾಗಲಿಲ್ಲ.

ಅತ್ತ ಮಠದಲ್ಲಿ ಸ್ವಾಮಿಗಳು ವಿಶೇಷ ಪೂಜಾದಿಗಳನ್ನು ನಡೆಸಿ ಜಾನ್ಹವಿಯನ್ನು ಪ್ರಾರ್ಥಿಸಿದರು. ಗಂಗಾಜನಕನೇ ಸ್ಮರಿಸಿದಾಗ ಪ್ರತ್ಯಕ್ಷನಾಗಿ ಅನುಗ್ರಹಿಸುತ್ತಿರುವಾಗ ದೇವಿಯು ಪ್ರಸನ್ನಳಾಗುವುದರಲ್ಲಿ ಆಶ್ಚರ್ಯವೇನು ? ನೃಸಿಂಹತೀರ್ಥದಲ್ಲಿ ಪ್ರವಾಹರೂಪಳಾಗಿ ಭಕ್ತಜನರನ್ನು ಉದ್ಧರಿಸುವೆನೆಂದು ಅಭಯ ಕೊಡುವುದರಲ್ಲಿ ಆಶ್ಚರ್ಯವೇನು ?

ಲೋಕದಲ್ಲಿ ಕೇವಲ ಅಭ್ಯಾಸಬಲದಿಂದ ಯೋಗಸಿದ್ಧಿಯನ್ನು ಪಡೆದವರೇ ಇಂಥ ಅಪಾರಮಹಿಮೆಗಳನ್ನು ತೋರಿಸುವರು ; ಅಂದಮೇಲೆ ಭಕ್ತಿಯೋಗಿಗಳಿಗೆ ಸಾಧ್ಯವಾಗದ ಕಾರ್ಯವ್ಯಾವುದು ? ಸಾಮಾನ್ಯ ಯೋಗಿಗಳು ಏನಾದರೊಂದು ಮಹಿಮೆಯನ್ನು ತೋರಿಸಬೇಕೆಂದರೆ ಅವರ ತಪಶ್ಶಕ್ತಿಯನ್ನು ವ್ಯಯಮಾಡಬೇಕಾಗುವುದು. ಭಕ್ತಿಯೋಗಿಗಳಿಗಾದರೋ ಮಹಿಮೆಗಳನ್ನು ತೋರಿಸಿದ ಹಾಗೆಲ್ಲಾ ಅವರ ಶಕ್ತಿಯು ಹೆಚ್ಚುತ್ತ ಬರುವುದು. ಜ್ಞಾನಯೋಗ ರಾಜಯೋಗಗಳಿಗಿಂತ ಅಧಿಕವಾಗಿರುವುದರಿಂದ ಭಕ್ತಿಯೋಗವನ್ನು ಶ್ರೀಕೃಷ್ಣನು ಗೀತೆಯಲ್ಲಿ-

> ನಾಹಂ ವೇದೈರ್ನತಪಸಾ ನದಾನೇನ ನಚೇಜ್ಯಯಾ ।
> ಶಕ್ಯ ಏವಂ ವಿಧೋದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥ xi ೫೩
> ಭಕ್ತ್ಯಾತ್ವನನ್ಯಯಾಶಕ್ಯೋಽಹಮೇವಂ ವಿಧೋಽರ್ಜುನ ।
> ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥ ,, ೫೪
> ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಸ್ಸಂಗವರ್ಜಿತಃ ।
> ನಿರ್ವೈರಸ್ಸರ್ವಭೂತೇಷು ಯಸ್ಸಮಾಮೇತಿ ಪಾಂಡವ ॥ ,, ೫೫

ಎಂಬ ವಾಕ್ಯಗಳಿಂದ ಉದ್ಘೋಷಿಸಿರುವನು.

ಆ ರಾತ್ರಿ ಕಳೆದು ಬೆಳಗಾಯಿತು. ಸ್ವಾಮಿಗಳು ಪ್ರಾತಃಸ್ನಾನಾಹ್ನಿಕಗಳನ್ನು ಮುಗಿಸಿ ನೃಸಿಂಹತೀರ್ಥಕ್ಕೆ ಬಿಜಯಮಾಡಿದರು. ಬಂದವರು ನೃಸಿಂಹತೀರ್ಥದ ಈಶಾನ್ಯ ಭಾಗದಲ್ಲಿ ಕುಳಿತು ಗಂಗೆಯನ್ನು ಸ್ತೋತ್ರಮಾಡಿದರು. ಇದ್ದಕ್ಕಿದ್ದ ಹಾಗೆ ಮೋಡಮುಸುಕಿದಂತಾಯಿತು. ಕತ್ತಲೆ ಕವಿಯಿತು. ಸರ್ವರೂ ಕಾಣುವಂತೆ ಶ್ವೇತವರ್ಣವಿಶಿಷ್ಟವಾದ ಸ್ವಚ್ಛೋದಕವು ಈಶಾನ್ಯಮೂಲೆಯಿಂದ ಬುಳುಬುಳನೆ ಧಾರೆಯಾಗಿ ಹರಿದುಬರಲಾರಂಭಿಸಿತು. ಸರೋವರವು ತುಂಬಿ ತುಳುಕಿತು. ಶ್ರೀಪಾದರಾಯರು ಕೂತ ಬಳಿಯಿಂದ ಪದ ಚಲನೆ ಮಾಡದೆ ಸ್ತೋತ್ರಮಾಡುತ್ತಿದ್ದರು. ಕೂತಹಾಗೆ ಅವರಿಗೆ ಗಂಗಾಸ್ನಾನವಾಯಿತು. ದೇವಿಗೆ ಅರ್ಘ್ಯವಿತ್ತು ವಾಯನಗಳನ್ನರ್ಪಿಸಿದರು. ಈ ವೈಭವವನ್ನು ನೋಡಿ ಜನರು ಜಯಘೋಷ ಮಾಡಿದರು. ಸ್ವಾಮಿಗಳ ಆಜ್ಞೆಯನ್ನು ಪಡೆದು ಎಲ್ಲರೂ 'ಹರಿಃ ಓಂ' ಎಂದು ಗಂಗಾಸ್ನಾನ ಮಾಡಿ ಕೃತಾರ್ಥರಾದರು. ಸ್ವಾಮಿಗಳು ಮೂರು ದಿವಸ ಆ ತಪೋವನದಲ್ಲಿದ್ದು ಮಹೋತ್ಸವ ನಡೆಸಿದರು. ಈ ಹೊತ್ತಿಗೂ ಭಾವಿಕರು ನೃಸಿಂಹತೀರ್ಥದ ಈಶಾನ್ಯಭಾಗದಲ್ಲಿ ಸ್ನಾನಮಾಡಿ, ಗಂಗಾಸ್ನಾನವಾಡಿದೆವೆಂದು ತೃಪ್ತಿಪಡುತ್ತಾರೆ.

ಶ್ರೀಪಾದರಾಜಾಷ್ಟಕದಲ್ಲಿ ಇದರಂತೆ, ಸ್ವಾಮಿಗಳ ಇನ್ನೂ ಅನೇಕ ಅತಿಮಾನುಷ ಮಹಿಮೆಗಳ ವರ್ಣನೆಯಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ವಾಚಕರ ಅವಗಾಹನೆಗಾಗಿ ಈ ಕೆಳಗೆ ಕೊಡುತ್ತೇನೆ.

೧. ಶಂಖೋದಕ ಪ್ರೋಕ್ಷಣೆಯಿಂದ ಬ್ರಹ್ಮಹತ್ಯಾ ಪಾತಕಿಯಾದ ಬ್ರಾಹ್ಮಣನೊಬ್ಬನ ಬ್ರಹ್ಮಹತ್ಯವನ್ನು ಪರಿಹರಿಸಿದರು.

೨. ವ್ಯಾಸರಾಯರು ಬಾಲಕರಾಗಿದ್ದಾಗ ಪುರುಷೋತ್ತಮತೀರ್ಥರ ಗುಹೆಯಲ್ಲಿ ಮಲಗಿರಲು ದೊಡ್ಡದೊಂದು ಅಜಗರವು ಅವರನ್ನು ನುಂಗುತ್ತಿತ್ತು. ಶ್ರೀಪಾದರಾಯರು ಸರ್ಪಭಾಷೆಯಿಂದ ಅಜಗರದೊಡನೆ ಮಾತನ್ನಾಡಿ ಅವರ ಆಪನ್ನಿವಾರಣೆ ಮಾಡಿದರು.

೩. ಭೀಮರಥೀತೀರದಲ್ಲಿ ಭೂಸ್ಥಾಪಿತವಾಗಿದ್ದ ಸ್ವರ್ಣಪೇಟಿಕೆಯೊಂದನ್ನು ಸ್ವಪ್ನಸೂಚನೆಯಿಂದ ತೆಗೆಸಿ ಆ ಪೇಟಿಕೆಯಲ್ಲಿ ದೊರೆತ ರಂಗವಿಠಲದೇವರನ್ನು ತಮ್ಮ ಪೂಜೆಯಲ್ಲಿಟ್ಟುಕೊಂಡರು.

೪. ಶ್ರೀಪಾದರಾಯರು ಎಲ್ಲಿದ್ದರೂ ಅರುವತ್ತುನಾಲ್ಕು ಬಗೆಯ ಪದಾರ್ಥಗಳನ್ನು ಮಾಡಿಸಿ ನೈವೇದ್ಯಮಾಡಿ ಭಿಕ್ಷಾಸ್ವೀಕಾರಮಾಡುತ್ತಿದ್ದರು. ಪರೀಕ್ಷಾರ್ಥವಾಗಿ ಒಬ್ಬ ರಾಜನು ಒಮ್ಮೆ ಶ್ರೀಪಾದರಾಜರನ್ನು ಒಂದು ಅರಣ್ಯದಲ್ಲಿರುವಂತೆ ಮಾಡಿ ಪಸಾರಿ ಸಿಗದಂತೆ ಮಾಡಿದನು. ಮಧ್ಯಾಹ್ನಕಾಲಕ್ಕೆ ಸರಿಯಾಗಿ ಭಗವತ್ಪ್ರೇರಣೆಯಿಂದ ಯಾರೋ ಅವರಿಗೆ ಬೇಕಾದ ಸಾಮಗ್ರಿಗಳನ್ನು ತಂದುಕೊಟ್ಟರು. ಕಾಲಾತೀತವಾಗದಂತೆ ಶ್ರೀಪಾದರಾಜರ ಪೂಜೆ ಭಿಕ್ಷೆಗಳು ಎಂದಿನಂತೆ ಕ್ರಮವಾಗಿ ನಡೆದುವು. ರಾಜನು ಈ ಸಂಗತಿಯನ್ನು ತಿಳಿದು ಪಶ್ಚಾತ್ತಾಪಪಟ್ಟು ಶರಣಾಗತನಾದನು.

ಇತ್ಯಾದಿ – ಇತ್ಯಾದಿ

ಈ ತರದ ಮಹಿಮೆಗಳಿಷ್ಟೇ ಇರಲಿ ; ಭಗವದ್ಭಕ್ತರ ದೃಷ್ಟಿಯಲ್ಲಿ ಅತಿಶಯಗಳಲ್ಲ. ಅಘಟಿತಘಟನಾಪಟುವಾದ ಪರಮಾತ್ಮನನ್ನು ಒಲಿಸಿಕೊಂಡವರಿಗೆ ಮಹಿಮೆಗಳನ್ನು ತೋರಿಸುವುದು ದೊಡ್ಡ ಕೆಲಸವಲ್ಲ.

ಸಾರಾಂಶ ವಿಚಾರ ಮಾಡುವುದಕ್ಕೆ ಹೋದರೆ ಸತ್ಪುರುಷರು ಎಷ್ಟೋ! ದೊಡ್ಡ ವಹಿಸಿದವರೂ ಆ ದೊಡ್ಡವರು ದಡ್ಡರಿಗೆ ಮಾಡಿದ ಉಪಕಾರವೇನು ? ದೊಡ್ಡವರು ಹುಟ್ಟುತ್ತಲೇ ದೊಡ್ಡವರಾದರೆ ? ಸಾಮಾನ್ಯರಂತಿದ್ದು ದೊಡ್ಡಸ್ತಿಕೆಗೇರಿದರೆ ? ಅವರ ಜೀವನಚರಿತ್ರೆಯಲ್ಲಿ ಅನುಸರಣೀಯವಾದ ಧರ್ಮಗಳಾವುವು ? ಅನುಸರಣೆಯಿಂದ ದಡ್ಡರೂ ದೊಡ್ಡವರಾಗಬಹುದೆ ? ಇಷ್ಟೇ ತಿಳಿಯಬೇಕಾದ ಸಂಗತಿಗಳು.

ಈ ಮಾನದಿಂದ ನೋಡಿದರೆ ಶ್ರೀ ಶ್ರೀಪಾದರಾಯರ ಜೀವನಚರಿತ್ರೆಯಲ್ಲಿ ಅರಿಸಿಕೊಳ್ಳಬೇಕಾದ ಸಂಗತಿಗಳು ಅನೇಕವಿರುವುವು. ಅವರ ಉಪಕಾರವು ಚಿರಸ್ಮರಣೀಯವಾಗಿರುವುದು. ವಾಙ್ಮಯದೃಷ್ಟಿಯಿಂದ ನೋಡಿದರೆ ಕನ್ನಡಕ್ಕೆ ಅವರು ಮರ್ಯಾದೆಯನ್ನು ತಂದುಕೊಟ್ಟರು. ಅವರಿಂದ ದಾಸಸಾಹಿತ್ಯ ಪ್ರಾರಂಭವಾಯಿತು. ಅವರಿಂದ ಹೊಸಗನ್ನಡ ಶೈಲಿ ಹುಟ್ಟಿತು. ಅವರನ್ನು ನೋಡಿ ಬ್ರಾಹ್ಮಣರು ಹೆಚ್ಚಾಗಿ ಕನ್ನಡ ಕವಿತೆಗಾರಂಭಿಸಿದರು. ಕನ್ನಡ ಭಾರತ, ತೊರವೆ ರಾಮಾಯಣ ಮೊದಲಾದ ಉದ್ದಾಮಗ್ರಂಥಗಳು ಅವರ ನಂತರವೇ ರಚಿತವಾದುವು. ಬಿಲವಾಗಿದ್ದ ಭಾಗವತಧರ್ಮವು ಅವರಿಂದಲೇ ಪುನರುದ್ಧಾರವಾಯಿತು. ಅವರು ಭಾಗವತ ದಶಮಸ್ಕಂಧವನ್ನು ಹಾಡುಗಳಾಗಿ ರಚಿಸಿದರು. ಅವರ ನಾಮಗಳು ಸೇಲಂ, ಕೊಯಿಮತ್ತೂರು ಜಿಲ್ಲೆಗಳಲ್ಲೂ ಮೈಸೂರಿನ ಕೋಲಾರ ಮೊದಲಾದ ಸ್ಥಳಗಳಲ್ಲೂ ಪ್ರಚಾರದಲ್ಲಿವೆ. ಪದಸಂಗ್ರಹ ಮಾಡಬೇಕೆಂದರೆ ಇಡಿಯಾಗಿ ಸಿಗುವುದು ದುರ್ಲಭ. ಬಿಡಿಯಾಗಿ ದೊರೆತವುಗಳನ್ನು ಶೇಖರಿಸುತ್ತ ಹೋದರೆ ಇಡಿಯಾಗುವುದರಲ್ಲಿ ಸಂಶಯವಿಲ್ಲ. ಮತ್ತೊಂದು ದುರ್ದೈವದ ಮಾತೆಂದರೆ–ಯಾವ ಶ್ರೀ ಶ್ರೀಪಾದರಾಯರು ಹರಿದಾಸ ಪೀಳಿಗೆಗೆ ಪುನರುದ್ಧಾರ ಕರ್ತರೆನಿಸಿದರೋ, ಯಾವ ಮಠದೀಯರ ಪೀಠಸ್ಥರು ಅವರಿದ್ದ ಮುಳುಬಾಗಿಲಿನಲ್ಲಿ ಅವರು ಕಟ್ಟಿಸಿದ ಅದೇ ಹಳೇ ಮಠದಲ್ಲಿ ವಾಸಮಾಡುತ್ತ, ಹೆಚ್ಚು ದೇಶಪರ್ಯಟನಕ್ಕೆ ಹೋಗದೆ, ಇದ್ದಲ್ಲಿ–ಇದ್ದಷ್ಟರಲ್ಲಿ ತೃಪ್ತರಾಗಿರುವರೋ–ಅಂಥಾ ಮಠದಲ್ಲಿ ವಿಚಾರಿಸಿದರೆ ಅವರ ಒಂದೂ ದೇವರ ನಾಮವಿಲ್ಲ. ಅವರು ಆಚರಣೆಗೆ ತಂದ ಭಾಗವತ ಸೇವೆಯಿಲ್ಲ.–

ನೃಸಿಂಹತೀರ್ಥದ ಬಳಿ ಶ್ರೀಪಾದರಾಜರ ಬೃಂದಾವನವೊಂದಿರದಿದ್ದರೆ, ಆರಾಧನೆಯ ಕಾಲದಲ್ಲಿ ಸಮಾರಾಧನೆಯೊಂದಿರದಿದ್ದರೆ, ಹಿರಿಯರು ರಾಜರಿಗೆ ರಥೋತ್ಸವ ಪದ್ಧತಿಯನ್ನಿಡದಿದ್ದರೆ, ಶ್ರೀಪಾದರಾಜರ ಹೆಸರೇ ಮರೆತುಹೋಗಿಬಿಡುತ್ತಿತ್ತೇನೋ !

ಇಷ್ಟಕ್ಕೂ ಕಾರಣ ಮತ್ತೆ ಬೇರೆಯಿಲ್ಲ. ಮತ್ತದು ದೂರವೂ ಇಲ್ಲ. ಬ್ರಾಹ್ಮಣ ಸಾಮಾನ್ಯರಲ್ಲಿ ಸಂಸ್ಕೃತಕ್ಕಿರುವ ಆದರವು ಇಂದಿಗೂ ಪ್ರಾಕೃತಕ್ಕಿಲ್ಲ. ಧರ್ಮಗ್ರಂಥಗಳು ಸಂಸ್ಕೃತದಲ್ಲಿರುವುದೇ ಇದಕ್ಕೆ ಕಾರಣ. ಯಾರಾದರೂ ನಾಲ್ಕಕ್ಷರ ಸಂಸ್ಕೃತವನ್ನೋದಿದರೆ, ಆ ಸಂಸ್ಕೃತವು ಎಷ್ಟೋ [illegible] ಕಟಕುಟ ವರ್ಣನೆಯ ಮೇಲು

ವಿಷಯವಾಗಿದ್ದರೂ, ಅದು ಅವರ ಧ್ಯಾನ ಮಂತ್ರಗಳಾಗಿಬಿಡುತ್ತವೆ. ಸಂಸ್ಕೃತವು ದೇವ ಭಾಷೆಯೆಂದು ಕರೆಸಿಕೊಂಡಿರುವುದರಿಂದ ಸಂಸ್ಕೃತ ಕಲಿತವನು ದೇವತೆಯಾಗಿಬಿಡುತ್ತಾನೆ. ದೇವತೆಯಾಗಿ ಅಪ್ರಾಕೃತನೆನ್ನಿಸಿದವನು ಪ್ರಾಕೃತ ಭಾಷೆಯನ್ನು ಮನ್ನಿಸುವುದಿಲ್ಲ. ಮನ್ನಿಸುವ ಸಹಾನುಭೂತಿಯಿಲ್ಲದವನು ವಾಙ್ಮಯವನ್ನು ಕಾದಿಡುವುದೆಲ್ಲಿ ಬಂತು? ಬ್ರಾಹ್ಮಣರಲ್ಲೂ ಮಧ್ವಮತಸ್ಥರಲ್ಲಿ ಬಲು ವಿಶೇಷ. ಸಂಸ್ಕೃತ ಗ್ರಂಥಗಳಿದ್ದರೂ ಅವನ್ನು ಅವನು ಮತ್ತೊಬ್ಬರಿಗೆ ತೋರಿಸುವುದಿಲ್ಲ. ಇನ್ನು ಹೇಳಿಕೊಡುವುದೆಲ್ಲಿ ಬಂತು! ಅವೆಲ್ಲಾ ಗೋಪ್ಯ ವಿಚಾರಗಳೆನ್ನುತ್ತಲೇ ತಾನೂ ತಿಳಿಯದೆ ಮತ್ತೊಬ್ಬರಿಗೂ ತಿಳಿಯಗೊಡದೆ ಗೋಪ್ಯವಾದುದನ್ನು ಗೋಪ್ಯವನ್ನಾಗಿಯೇ ಮಾಡಿಬಿಡುತ್ತಾನೆ. ಈ ಕಾರಣ ಎಷ್ಟೋ ಮಂದಿ ಸಂಪ್ರದಾಯಸ್ಥರ ಮನೆಗಳಲ್ಲಿದ್ದ ಎಷ್ಟೋ ಗ್ರಂಥಗಳು ಮಣ್ಣುಪಾಲಾಗಿ ಹೋದುವು; ಇನ್ನೂ ಆಗುತ್ತಿರುವುವು. ಮುಳುಬಾಗಲ ಪ್ರಾಂತದಲ್ಲಿದ್ದ ದಾಸಸಾಹಿತ್ಯದ ಸೊತ್ತಾದ ಗ್ರಂಥಗಳೆಲ್ಲಾ ಹೀಗೆ ಮಾಯವಾಗಿಹೋದುವು. ಈ ದುಃಖವನ್ನು ಯಾರ ಮುಂದೆ ಹೇಳಿಕೊಳ್ಳಬೇಕು?

ಆದರೂ ಶ್ರೀ ಶ್ರೀಪಾದರಾಜರ ಕವಿತೆಯ ಕೆಲವು ಮಾದರಿಗಳನ್ನು ವಾಚಕರು ಪರಿಸಿರಿ.

ಶ್ರೀ ಮಧ್ವನಾಮ

ಜಯ ಜಯ ಜಗತ್ರಾಣ। ಜಗದೊಳಗೆ ಸುತ್ರಾಣ॥
ನಿಖಿಳಗುಣ ಸದ್ಧಾಮ। ಮಧ್ವನಾಮ ಪ.

ಆವ ಕಚ್ಛಪರೂಪದಿಂದ ಲಂಡೋದಕವ।
ಓವಿ ಧರಿಸಿದ ಶೇಷ ಮೂರುತಿಯನು॥
ಆವವನ ಬಲವಿಡಿದು ಹರಿಯ ಸುರರೈದುವರು।
ಆ ವಾಯು ನಮ್ಮ ಕುಲಗುರುರಾಯನು ೧

ಆವವನು ದೇಹದೊಳಗಿರಲು ಹರಿ ನೆಲೆಸಿಹನು।
ಆವವನು ತೊಲಗೆ ಹರಿ ತಾ ತೊಲಗುವ॥
ಆವವನು ದೇಹದೊಳ ಹೊರಗೆ ನಿಯಾಮಕನು।
ಆ ವಾಯು ನಮ್ಮ ಕುಲಗುರುರಾಯನು ೨

ಕರಣಾಭಿಮಾನಿಗಳು ಸುರರು ದೇಹವಬಿಡಲು।
ಕುರುಡ ಕಿವುಡ ಮೂಕನೆಂದೆನಿಸುವ॥
ಪರಮ ಮುಖ್ಯಪ್ರಾಣ ತೊಲಗಲಾ ದೇಹವನು।
ಅರಿತು ಪೆಣನೆಂದು ಪೇಳ್ವರು ಬುಧಜನ ೩

ಸುರರೊಳಗೆ ನರರೊಳಗೆ ಸರ್ವಭೂತಗಳೊಳಗೆ ।
ಪರತರನೆನಿಸಿ ನೇಮಿಸಿ ನೆಲೆಸಿಹ ॥
ಹರಿಯನಲ್ಲದೆ ಬಗೆಯ ಅನ್ಯರನು ಲೋಕದೊಳು ।
ಗುರುಕುಲತಿಲಕ ಮುಖ್ಯಪವಮಾನನು ೪

ಶ್ರೀ ಮಾರುತಿಯ ಅವತಾರ

ತ್ರೇತೆಯಲಿ ರಘುಪತಿಯ ಸೇವೆಮಾಡುವೆನೆಂದು ।
ವಾತಸುತ ಹನುಮಂತನೆಂದೆನಿಸಿದ ॥
ಪ್ರೀತಭಾವದಿ ತರಣಿಬಿಂಬಕ್ಕೆ ಲಂಘಿಸಿದ ।
ಈತಗೆಣೆಯಾರು ಮೂರ್ಲೋಕದೊಳಗೆ ೫

ತರಣಿಗಭಿಮುಖನಾಗಿ ಶಬ್ದಶಾಸ್ತ್ರವ ಪಠಿಸಿ ।
ಉರವಣಿಸಿ ಹಿಂದುಮುಂದಾಗಿ ನಡೆದ ॥
ಪರಮ ಪವಮಾನಸುತ ಉದಯಾಸ್ತ ಶೈಲಗಳ ।
ಭರದಿ ಚರಿಸಿದ ಗೀತಗುಪಮೆಯುಂಟೆ ೬

ಅಖಿಳ ವೇದಗಳ ಸಾರವ ಧರಿಸಿ ಮುನ್ನ ಇವ ।
ನಿಖಿಳ ವ್ಯಾಕರಣ ನಿವಹವ ಪಠಿಸಿದ ॥
ಮುಖದಲ್ಲಿ ಕಿಂಚಿದಪಶಬ್ದ ಇವಗಿಲ್ಲವೆಂದು ।
ಮುಖ್ಯಪ್ರಾಣನನು ರಾಮನನುಕರಿಸಿದ ೭

ತರಣಿ ಸುತನನು ಕಾಯ್ದು ಶರಧಿಯನು ನೆರೆದಾಂಟಿ ।
ಧರಣಿ ಸುತೆಯಳ ಕಂಡು ದನುಜರೊಡನೆ ॥
ಭರದಿ ರಣವನೆಮಾಡಿ ಗೆಲಿದು ದಿವ್ಯಾಸ್ತ್ರಗಳ ।
ಉರುಹಿ ಲಂಕೆಯ ಬಂದ ಹನುಮಂತನು ೮

ಹರಿಗೆ ಚೂಡಾಮಣಿಯನಿತ್ತು ಹರಿಗಳ ಕೂಡಿ ।
ಶರಧಿಯನು ಕಟ್ಟಿ ಬಲು ರಕ್ಕಸರನು ॥
ವರೆಸಿ ರಣದಲ್ಲಿ ದಶಶಿರನ ಹುಡಿಗುಟ್ಟಿ ತಾ ।
ಮೆರೆದ ಹನುಮಂತ ಬಲವಂತ ಧೀರ ೯

ಉರಗ ಬಂಧಕೆ ಶಿಲುಕಿ ಕಪಿವರರು ಮೈಮರೆಯೆ ।
ತರಣಿಕುಲತಿಲಕ ನಾಜ್ಞೆಯತಾಳಿದ ॥
ಗಿರಿಯೊಡೆದು ಸಂಜೀವನವ ಕಿತ್ತು ತಂದಂಥ ।
ಹರಿವರಗೆ ಸರಿಯುಂಟೆ ಹನುಮಂತಗೆ ೧೦

ವಿಜಯ ರಘುಪತಿ ಮೆಚ್ಚಿ ಧರಣಿಸುತೆಯಳಿಗೀಯೆ |
ಭಜಿಸಿ ಮೌಕ್ತಿಕದ ಹಾರವನೆ ಪಡೆದ ||
ಅಜಪದವಿಯನು ರಾಮ ಕೊಡುವೆನೆನೆ ಹನುಮಂತ |
ನಿಜ ಭಕುತಿಯನೆ ಬೇಡಿ ವರವ ಪಡೆದ ೧೧

ಭೀಮಸೇನಾವತಾರ

ಆ ಮಾರುತನೆ ಭೀಮನೆನಿಸಿ ದ್ವಾಪರದಲ್ಲಿ |
ಸೋಮಕುಲದಲಿ ಜನಿಸಿ ಪಾರ್ಥರೊಡನೆ ||
ಭೀಮ ವಿಕ್ರಮ ರಕ್ಕಸರನ್ನು ಮುರಿದಟ್ಟಿದ |
ಆ ಮಹಿಮ ನಮ್ಮ ಕುಲಗುರುರಾಯರು ೧೨

ಕರದಿಂದ ಶಿಶುಭಾವನಾದ ಭೀಮನ ಬಿಡಲು |
ಗಿರಿಯೊಡೆದು ಶತಶೃಂಗವೆಂದೆನಿಸಿತು ||
ಹರಿಗಳ ಹರಿಗಳಿಂದ ಕರಿಗಳ ಕರಿಗಳಿಂದ |
ತರಿದ ವೀರನಿಗೆ ಸುರನರರು ಸರಿಯೆ ೧೩

ಕುರುಪ ಗರಳವನಿಕ್ಕೆ ನೆರೆವುಂಡು ತೇಗಿ ಹಸಿ |
ಉರಗಗಳಮೇಲೆ ಬಿಡಲವನೊರೆಸಿದ ||
ಅರಗಿನ ಮನೆಯಲ್ಲಿ ಉರಿಯನಿಕ್ಕಲು ವೀರ |
ಧರಿಸಿ ಜಾಹ್ನವಿಗೊಯ್ದು ತನ್ನವರನು ೧೪

ಅಲ್ಲಿ ಇರ್ದ ಹಿಡಿಂಬ ಬಕನೆಂಬ ರಕ್ಕಸರ |
ನಿಲ್ಲದೊರೆಸಿದ ಲೋಕಕಂಟಕರನು ||
ಬಲ್ಲಿದಸುರರ ಗೆಲಿದು ದ್ರೌಪದಿಯ ಕರಪಿಡಿದು |
ಎಲ್ಲ ಸುಜನರಿಗೆ ಹರ್ಷವ ತೋರಿದ ೧೫

ರಾಜಕುಲವಜ್ರನೆಂದೆನಿಪ ಮಗಧನ ಮುರಿದು |
ರಾಜಸೂಯಯಾಗವನು ಮಾಡಿಸಿದನು ||
ಆಜಿಯಲಿ ಕೌರವರ ಬಲವ ಸವರಿದೆನೆಂದು |
ಮೂಜಗವರಿಯೆ ಕಂಕಣಕಟ್ಟಿದ ೧೬

ಮಾನನಿಧಿ ದ್ರೌಪದಿಯ ಮನದಿಂಗಿತವನರಿತು |
ದಾನವರ ಸವರಬೇಕೆಂದು ಬೇಗ ||
ಕಾನನವ ಪೊಕ್ಕು ಕಿಮ್ಮೀರಾದಿಗಳ ತರಿದು |
ಮಾನಿನಿಗೆ ಸೌಗಂಧಿಕವನೆ ತಂದ ೧೭

ದುರುಳ ಕೀಚಕನು ತಾ ದುರುಪದಿಯ ಕೆಲುಪಿಕೆಗೆ |
ಮರುಳಾಗಿ ಕರೆಕರೆಯ ಮಾಡುತಿರಲು ||
ಗರಡಿಯಾ ಮನೆಯಲ್ಲಿ ವಧಿಸಿ ಅವನನ್ವಯವ |
ಕುರುಪನಟ್ಟಿದ ಮಲ್ಲಕುಲವ ಸದೆದ ೧೮

ಗುರುಸುತನು ಸಂಗರದಿ ನಾರಾಯಣಾಸ್ತ್ರವನು |
ಉರವಣಿಸಿ ಬಿಡಲು ಶಸ್ತ್ರವ ಬಿಸುಟಿರಲು ||
ಹರಿಕೃ ಸೇನೆಯು ಪಡೆದಿರ್ದ ಭೀಮ ಹುಂಕಾರದಲಿ |
ಹರಿಯ ದಿವ್ಯಾಸ್ತ್ರವನೆ ಸೆರೆ ಅಟ್ಟಿದ ೧೯

ವೈರಿ ದುಶ್ಶಾಸನನ ರಣದೊಳುರುಳಾಗೆಡೆಹಿ |
ವೀರನರಹರಿಯ ಲೀಲೆಯ ತೋರಿದ ||
ಕೌರವರ ಬಲ ಸವರಿ ವೈರಿಗಳ ನೆಗ್ಗೊತ್ತಿ |
ಓರಂತೆ ಕೌರವರ ತರಿದು ಮೆರೆದ ೨೦

ಇಂತ ವಿಕ್ರಮನು ಗದೆಗೊಂಡು ರಣದಲಿ ನಿಂದು ಭೂ |
ಮಂಡಲದೊಳುದ್ಭವಿಸಿದಖಿಳ ಖಳರ ||
ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು |
ಕಂಡು ನಿಲುವವರಾರು ತ್ರಿಭುವನದೊಳಗೆ ೨೧

ಮಧ್ವಾವತಾರ

ದಾನವರು ಕಲಿಯುಗದೊಳುದ್ಭವಿಸೆ ಬುಧರೆಲ್ಲ |
ಹೀನನ ಮತವನನುಸರಿಸುತಿರಲು ||
ಜ್ಞಾನಿ ತಾ ಪವಮಾನಿ ಭೂತಳದೊಳುದ್ಭವಿಸಿ |
ಮಾನನಿಧಿ ಮಧ್ವಾಖ್ಯನೆಂದೆನಿಸಿದ ೨೨

ತರ್ಣಕತನದೊಳ್ಳಿದಿ ಬದರಿಯಲಿ ಮಧ್ವಮುನಿ |
ನಿರ್ಭಯದಿ ಸಕಲಶಾಸ್ತ್ರವ ಪಠಿಸಿದ ||
ಉರ್ವಿಯೊಳು ಸೂಯ್ಗುಳಿರೆ ತತ್ವಮಾರ್ಗವನೆಲ್ಲ |
ಸರ್ವಜನರಿಗೆ ತೋರ್ದನು ಮೋದದಿ ೨೩

ಸರ್ವೇಶ ಹರಿ, ವಿಶ್ವ ಎಲ್ಲ ತಾ ಪುಸಿಯೆಂಬ |
ದುರ್ವಾದಿಗಳ ಮತವ ನಿರಾಕರಿಸಿ ||
ಸರ್ವೇಶ ಹರಿ ವಿಶ್ವ ಸತ್ಯವೆಂದರುಹಿದ |
ಸರ್ವ ಗೀರ್ವಾಣಾದಿ ಸಂತತಿಯಲಿ ೨೪

ಬದರಿಕಾಶ್ರಮಕೆ ಪುನರಪಿಯೈದಿ ವ್ಯಾಸಮುನಿ |
ಪದಕೆರಗಿ ನಿಖಿಳ ವೇದಾರ್ಥಗಳನು ||
ಪದುಮನಾಭನ ಮುಖದಿ ತಿಳಿದು ಬ್ರಹ್ಮತ್ವ |
ವೈದಿದ ಮಧ್ವಮುನಿರಾಯಗಭಿವಂದಿಪೆ ೨೫

ಜಯಜಯತು ದುರ್ವಾದಿ ಮತ ತಿಮಿರಮಾರ್ತಾಂಡ |
ಜಯಜಯತು ವಾದಿಗಜ ಪಂಚಾನನ ||
ಜಯಜಯತು ಚಾರ್ವಾಕ ಗರ್ವಪರ್ವತಕುಲಿಶ |
ಜಯಜಯ ಜಗನ್ನಾಥ ಮಧ್ವನಾಥ ೨೬

ತುಂಗಕುಲ ಗುರುವರನ ಹೃತ್ಕಮಲದಲಿ ನಿಲಿಸಿ |
ಭಂಗವಿಲ್ಲದ ಸುಖವ ಸುಜನರಿಗೆ ಎಲ್ಲಾ ||
ಹಿಂಗದಲೆ ಕೊಡುವ ನಮ್ಮ ಮಧ್ವಾಂತರಾತ್ಮಕನ |
ರಂಗ ವಿಠಲನೆಂದು ನೆರೆ ಸಾರಿರೋ ೨೭

ಫಲಸ್ತುತಿ

ಶ್ರೀ ಜಗನ್ನಾಥದಾಸರು ಈ ಮಧ್ವನಾಮಕ್ಕೆ ಫಲಸ್ತುತಿಯನ್ನು ಬರೆದಿರುತ್ತಾರೆ. ನಿತ್ಯ ಪಾರಾಯಣ ಮಾಡುವವರು ಫಲಸ್ತುತಿ ಸಹಿತವಾಗಿ ಹೇಳಿಕೊಳ್ಳುವುದರಿಂದ ಅದನ್ನೂ ಇದರಡಿ ಬರೆಯಲಾಗಿದೆ.

ಸೋಮ ಸೂರ್ಯೋಪರಾಗದಲಿ ಗೋಸಹಸ್ರಗಳ |
ಭೂಮಿದೇವರಿಗೆ ಸುರನದಿಯ ತಟದಿ ||
ಶ್ರೀ ಮುಕುಂದಾರ್ಪಣವೆನುತ ಕೊಟ್ಟ ಫಲವಕ್ಕು |
ಈ ಮಧ್ವನಾಮ ಬರೆದೋದಿದರ್ಗೆ ೧

ಪುತ್ರರಿಲ್ಲದವರು ಸತ್ಪುತ್ರರೈದುವರು |
ಸರ್ವತ್ರದಲಿ ದಿಗ್ವಿಜಯವಹುದು ಸಕಲ ||
ಶತ್ರುಗಳು ಕೆಡುವರಪಮೃತ್ಯು ಓಡೋಡುವುದು |
ಸ್ತೋತ್ರನಾಮಕನ ಸಂಸ್ತುತಿ ಮಾತ್ರದಿ ೨

ಶ್ರೀಪಾದರಾಯ ಪೇಳಿದ ಮಧ್ವನಾಮವಿದು |
ಸಂತಾಪ ಕಳೆದಖಿಳ ಸೌಖ್ಯವನೀವುದು ||
ಶ್ರೀಪತಿ ಜಗನ್ನಾಥ ವಿಠ್ಠಲನ ತೋರಿ ಭವ |
ಕೂಪಾರದಿಂದ ಕಡೆಗೈದಿಸುವುದು ೩

ನಿತ್ಯಭಜನ ಸಂಪ್ರದಾಯವುಳ್ಳವರು ಈ ಕೆಳಗೆ ಕಂಡ ಪದವನ್ನು ಮಂಗಳಕ್ಕೆ ಪೂರ್ವಭಾವಿಯಾಗಿ ಹಾಡುವರು. ಕೆಲವರು ಉತ್ತರ ಭಜನೆಯ ನಮಸ್ಕಾರ ಸಮಯದಲ್ಲಿ ನಿಂತುಕೊಂಡು ಹಾಡುವುದೂ ರೂಢಿಯಿದೆ.

ಪದವು ಎಷ್ಟು ಭಕ್ತಿಜನಕವಾಗಿದೆ ! ಎಂಥ ಲಲಿತ ಮಾತುಗಳಿವೆ ! ಎಷ್ಟು ಚಿಕ್ಕ ನುಡಿಗಳಾಗಿವೆ ! ಎಲ್ಲರೂ ತಾವು ತಾವು ದೇವರಿಗೆ ಮೊರೆಯಿಡಲು ಅನುಕೂಲವಾಗುವ ಶೈಲಿಯಲ್ಲಿದೆ. ಈ ದೃಷ್ಟಿಯಿಂದ ಪಠಿಸುವ ಪದವು.

ಮಧ್ಯಮಾವತಿ — ಝಾಪತಾಳ

ದುರಿತಗಜ ಪಂಚಾನನ-ನರ
ಹರಿಯೆ ದೇವದೇವ ಕಾಯೊ ಗೋವಿಂದಾ ಪ.

  ಮುನ್ನ ಮಾಡಿದ ಕರ್ಮ ಬೆನ್ನ ಬಿಡದಿದ್ದರೆ
  ನಿನ್ನ ಮೊರೆಯ ಹೊಗಲ್ಯಾಕೊ ಗೋವಿಂದಾ ೧

ಹೆತ್ತ ಮಕ್ಕಳು ಹುಚ್ಚರಾದರೆ ತಾಯ್ತಂದೆ
ಎತ್ತದೆ ನೆಲಕೆ ಬಿಸುಡುವರೆ ಗೋವಿಂದಾ ೨

  ಒಂದು ಮೃಗಕೆ ಜಲ ಹುಲಿ ಬಂದು ಕಚ್ಚಿದರೆ (ಕಾದಿರೆ)
  ಬಂಧನ ಬಿಡಿಸೆನ್ನ ತಂದೆ ಗೋವಿಂದಾ ೩

ಹೆಸರುಳ್ಳ ನದಿಗಳ ಒಳಕೊಂಬ ಸಮುದ್ರನು
ಬಿಸುಡುವನೇ ಕಾಲಹೊಳೆಯ ಗೋವಿಂದಾ ೪

  ಆಪತ್ತು ತಾಪತ್ರಯ ಬಿಡದಿದ್ದರೆ
  ಶ್ರೀಪತಿ ನಿನ್ನನ್ನು ಬ್ಯಾಕೊ ಗೋವಿಂದಾ ೫

ಅಡವಿಯ ವೃಕ್ಷಕ್ಕೆ ಎರೆವರ್ಯಾರು ನೀರ
ತಡೆಯದೆ ಸಲಹೊ ಎನ್ನೊಡೆಯ ಗೋವಿಂದಾ ೬

  ಆಡುವ ಬೊಂಬೆ ಮೂಜಗವಲ್ಲವು, ನೀನೆ
  ಆಡಿಪೆ ನಾಟಕಧಾರಿ ಗೋವಿಂದಾ ೭

ಅರಸುಮುಟ್ಟಲು ದಾಸಿ ರಂಭೆಯಾದಳು ದೇವ
ಪರಸುಮುಟ್ಟಲು ಲೋಹ ಸ್ವರ್ಣ ಗೋವಿಂದಾ ೮

  ಮಾನಾಭಿಮಾನದೊಡೆಯ ರಂಗವಿಠ್ಠಲ
  ಜ್ಞಾನಿಗಳರಸ ನೀಕಾಯೊ ಗೋವಿಂದಾ- ೯

ಶ್ರೀ ಶ್ರೀಪಾದರಾಯರು ಪ್ರಸಾದದಿಂದ ಎಷ್ಟೋ ದಾಸರುಗಳ ಸೃಷ್ಟಿ ಮಾಡಿದ್ದಾರೆ. ಶ್ರೀ ಪುರಂದರದಾಸರ ಕಡೆಯವನಾಗ ಮಧ್ವಪತಿದಾಸರು ಒಂದು

ಉಗಾಭೋಗದಲ್ಲಿ ಈ ಮಾತನ್ನಾಡಿರುವುದನ್ನು ತಿಳಿಸಿದರೆ ಹೆಚ್ಚಿನ ಪ್ರಮಾಣಗಳು ಬೇಕಾಗುವುದಿಲ್ಲ. ಮಧ್ವಪತಿದಾಸರ ವಿಷಯ ಪುರಂದರದಾಸರ ಚರಿತ್ರೆಯಲ್ಲಿ ಒಂದೆರಡು ಸಂದರ್ಭಗಳಲ್ಲಿ ಬರುವುದು.

ಉಗಾಭೋಗ

ವರ ಧ್ರುವನವತಾರ ಶ್ರೀಪಾದರಾಯರು। ಶಿರಿ ರಂಗವಿಠಲನ ಉಪಾಸಕರು। ತರಳ ಪ್ರಹ್ಲಾದನೆನಿಸಿದ ಶೇಷಾವೇಶ। ಗುರುವ್ಯಾಸರಾಯರೆ ಕೃಷ್ಣೋಪಾಸಕರು। ಸುರ ಮುನಿಯವತಾರವೆನಿಸಿದ ಪುರಂದರದಾಸರು ವಿಠಲನ ಉಪಾಸಕರು। ಧರೆಯೊಳು ಇವರ ನರರೆಂದವರನು ನರಕಕ್ಕೈದಿಸುವನು ಗುರುಮಧ್ವಪತಿವಿಠಲ॥

ಶ್ರೀಪಾದರಾಯರು ಬರೆದ ಭ್ರಮರಗೀತಾ

ಸೂಚನೆ:—ಈ ಪದವನ್ನು ರಾಗ ತಾಳ ಗಳನುಸರಿಸಿ ಹಾಡುವಾಗ ಹ್ರಸ್ವಾಕ್ಷರಗಳನ್ನು ದೀರ್ಘವಾಗೆಳೆದು ಹಾಡಬೇಕಾಗುವುದು.

ರಾಗ ಮುಖಾರಿ—ಅಟ್ಟತಾಳ.

ಭೃಂಗ ನಿನ್ನಟ್ಟಿದನೇ ಪ.

ಭೃಂಗ ನಿನ್ನಟ್ಟಿದನೇ ಶ್ರೀ।ರಂಗ ಮಧುರೆಲಿನಿಂದು। ಅಂಗಜಲುಬ್ಧಕ ಪೂರ್ಗೋ। ಲಂಗಳ ತಡೆಯನಿಕ್ಕಿ। ಅಂಗನೇರೆಂಬೋ ಹುಲ್ಲೆಯ। ಗಂಗಳನೆ ಗುರಿಯೆಚ್ಚು। ಹಿಂಗಿಸುತ್ತೈದನೇ ಅಸುವಾ। ಏ ಕಿತವಾ ಅ.

ನಿನ್ನ ನೋಡಿ ನಮ್ಮ ಅಚ್ಯು। ತನ್ನ ಕಂಡಂತಾಯಿತಯ್ಯೋ। ಚೆನ್ನಿಗರರಸ ಕುಶಲೋನ್ನತಿಯಲಿಹನೇನೋ। ಚಿಣ್ಣತನ ಮೊದಲಾಗ। ಮನ್ನ ಕಿತವಬಲ್ಲೆವೊ। ಗನ್ನಗಾರಚಿತ್ತ ಚೋರನ್ನ॥ ಶ್ರೀಹರಿಯ॥ ಮನ್ನಣೆಗೆ ಮೆಚ್ಚಿ ತನ್ನುವನೊಪ್ಪಿಸಿದ ಮುಗುದ। ಹೆಣ್ಣುಗಳ ವಿರಹಾಬ್ಧಿ। ಯನ್ನೆ ದಾಟಿಸುವೆನೆಂದು। ತನ್ನ ನೇಹವೆಂಬ ನದಿ। ಯನ್ನೇರಿಸಿ ಪೋಗದಿನ್ನ। ಡುನ್ನಿರೊಳು ತೋರದೋದನೇ। ಏ ಕಿತವಾ॥ ೧

ತಮ್ಮ ನಂದಗೋಪ ಯಶೋದೆಮ್ಮನ ಕಂಡು ಬಹೆಂದು। ರಮ್ಮೆಯ ರಮಣ ನಿನ್ನ। ನೆಮ್ಮಿದ್ದೆ ಕಳುಹಿದ ನೈಸೆ॥ ಹಮ್ಮುಗೆಟ್ಟು ರಮ್ಯಾಣೇರಿಂದುಮ್ಮಳಿಸುವೆವು ವೃಥಾ। ನಮ್ಮ ಹಂಬಲಿನ್ನೇನವಗೆ। ಶ್ರೀಹರಿಗೆ॥ ಹಮ್ಮಲಟ್ಟದಲಂಕರಿಸು। ಗಮ್ಮನೇರ ಕುಬಜದ ಕುಂ। ಕುಮ್ಮ ಕಸ್ತೂರಿಯ ಕರ। ರಮ್ಯವಿ ನಿಲಿಸಿದಂಗೆ। ಕಮ್ಮಗೋಲನ ಬಾಣಂಗ। ಕಮ್ಮಳಿ ತೋಯಿಸುತಿದೆ। ಸುಮ್ಮನೆ ಬಾಯೋಯೇ ಸುಲಭೀ। ಏ ಕಿತವಾ। ೨

ಮಧು ಕುಂಜವನದಲ್ಲಿ ಮಧುಸ್ರಾವ ಕೊಳಲೂದ। ಅಧರ ಸುಸ್ವರ ಕೇಳಿ ಮದಿರಾಕ್ಷೀಯರೆಲ್ಲರು ಧಾ। ಮಾದ ಧ್ಯಾನಯುಕ್ತ ಸ್ತ್ರೀಗ। ಮುದಗೊಳಿಸಿದಿನ್ನೆದಿ। ಮದನನ್ನಿದನೆ ಕಾಣುತ್ತಾ॥ ಶ್ರೀಹರಿಯಾ। ಮುದದೇರಿ ಸಲಿಸಾಗಿ। ಮೇದಿನಿ ನಿಶ್ಶಬ್ದಲಾಗ। ನ್ಯದು

ಹಾಸ್ಯಮೊಳಿಸ್ಮಿತ್ತಿ | ಅಧರಾಮೃತ ಭೋಜನ | ಕೊಡಗುವ ಸತತ ನ | ನ್ನಪ್ಪಾನಮ್ಮ ನಗಲಿ ಕ | ಲ್ಲಿಹೆಮಾಡನೆಂತೋ ಕೃಪಾಳು | ಏ ಕಿತವಾ ॥ ೩

ವಜ್ರಾಂಕುಶ ಧ್ವಜಾಂಕಿತ | ಪೆಜ್ಜೆಯನ್ನಿ ಕಿವಿದ ಆ | ಬ್ಜಜಾಕ್ಷರೊಡನೆ ರತಿ | ಕಜ್ಜದುಸವನದಲ್ಲಿ | ದಿರ್ಜರೋತ್ತಂಸರೊಡನೆ | ಪಜ್ಜನಕ್ರೀಡ್ಯಾಡುವ ನಾ | ಯುಜ್ಯ ಸುಖವಿತ್ತಲಿಪ್ಪುದೋ | ಶ್ರೀಹರಿಯು ॥ ಅಬ್ಜಭವಮುನಿಜನ | ಪೂಜ್ಯನಗಲಿದಮೇಲಿ | ನಿರ್ಜೀವಿಗಳಾಗಿ ಕಣ್ಣ | ಕಜ್ಜಲ ಕಲಕಿಕೊಂಡು | ಲಜ್ಜೆಗೆಟ್ಟ ತನುಲತೆ | ಜರ್ಝರಿತದಿ ಜೀವಿಸೆ | ಪಜ್ಜರೆಯಿಲ್ಲವೇನಮ್ಮಾ | ಏ ಕಿತವಾ ೪

ಕತ್ತಲೆಸಿರಾಯಬಟ್ಟು | ಮುತ್ತಿನ ಜೊಲ್ಲದುರುಬಿ | ಕಸ್ತೂರಿ ತಿಲಕವು ಜಾಲಿತ್ತ ಕುಂಡಲವೆಳಗು | ವೃತ್ತವಾದಾನನದಿ ಮಂ | ದಸ್ಮಿತ ತಿಂಗಳಂದಿಮ್ಮ | ಕೃತ್ತಾಗ ಪರಿಹರಿಸುವ | ಶ್ರೀಹರಿಯು ॥ ಮುತ್ತಿ ವಕ್ಷದ ಶ್ರೀವತ್ಸ | ಕೌಸ್ತುಭ ವೈಜಯಂತಿಮಾಲೆ | ಶ್ರೀ ತುಳಸಿ ಘಮಘಮಿಸಿ | ಸುತ್ತಲಿಹರ್ಗಳಮೇಲೆ | ರತ್ನಾನ ಕಂಕಣ ಭುಜ | ಕೀರ್ತಿಯಿಂ ಮೊತ್ತುವ | ಪುರುಷೋತ್ತಮನ ಬಣ್ಣಿಪರುಂಟೆ | ಏ ಕಿತವಾ ೫

ಉತ್ಪಲಶಾಮಲವೋದ | ವತ್ತಭಾವನ್ನ ವದಿಡಿ | ಅತ್ಯಾಮ್ಯಾಲಾಪ್ರೊನ್ನಾಂಬರ | ಸುತ್ತಿದಾಮಾನೂಪುರ ಘುಣತ್ಕಾರದಿ ಮಿಂಚಿ ಎಮ್ಮ | ಚಿತ್ತ ಕಿಪಿಗೆ ಪೀಯೂಷಸೂಕ್ತ ಮೋಘನಂತೆ ಒಪ್ಪುವ | ಶ್ರೀಹರಿಯು ॥ ಪೆತ್ತತಾಯಿ ಆಪ್ತಬಂಧು | ಗೋತ್ರಗತಿ ನೀನೆ ನಮ್ಮ | ಚಿತ್ತನೆಂದು ನಂಬಿ ತನ್ನ | ಹತ್ತಿಲಿ ಸಾರಿದವರ | ಒತ್ತಿ ತಾ ರಥವನೇರಿ | ಸತ್ವರ ಬರುವನೆಂದು | ಮತ್ತಕ್ರೂರನೊಡನೈದಿದ | ಏ ಕಿತವಾ ೬

ಲಕ್ಷ್ಮೀರಮಣನವ | ಸೂಕ್ಷ್ಮವಗೊಲ್ಲನು ನಾವು | ಕುಕ್ಷಿಯೊಳು ಬೊಮ್ಮಾಂಡವನಿ | ಪುತ್ತಕನಾಳ್ಕಿಪ್ಪೊ | ಮೋಕ್ಷಿಗಳರಸ ನವ | ಗೋಕ್ಷೀರಾದಿ ತೃಪ್ತರಾವು | ಲಕ್ಷಿಸುವನೆಂತೋ ನಮ್ಮನು | ಶ್ರೀಹರಿಯು ॥ ರಕ್ಷಿಸಲು ದಿವಿಜನ | ಶಿಕ್ಷಣೆಗೆ ಪಾಲ್ಗೊಣ್ಣಿಯು | ಭಕ್ಷಿಸಿ ನಿಂತ ನಮ್ಮ | ಅಕ್ಷಿಗೆ ಹಬ್ಬ ನೂಣಿಸಿ | ಈಕ್ಷೋಣೀ ಭಾರವ ರಾಕಾ | ದೀಕ್ಷೆಗೆ ನವರ ನಾಮ್ಮ | ಪಕ್ಷ್ಮಮಾಣ ರೇವೇ ಮೂರ್ಖನು | ಏ ಕಿತವಾ ೭

ಹಿಂದೆ ಮಾಡಿದ ಸತ್ಕರ್ಮ | ದಿಂದ ಮಥುರಾನಗರ | ದಿಂದೀವರಾಕ್ಷಿಯು ರಾನಂದ | ಸಿಂಧುವಿಗುದಿತ ಪೂರ್ಣ | ಚಂದ್ರನಂತೊಪ್ಪುವ ಶಿರಿ | ಮುಂದರಥನನ್ನಿಯು | ಪ್ರೊಂದುವ ಭಾಗ್ಯಕ್ಕೆ ನೆಯುಂಟೆ | ಶ್ರೀ ಹರಿಯು ॥ ತಂದೆನ್ನೊಳು ರಾಸಕ್ರೀಡೆಯಿಂದ ಬಂದಪರಾಧವ | ಸೋಂದಣೆಣಿಸದೆ ಸಲಿ | ಹೆಂದು ಬಿನ್ನೈಸಿ ಸಾಷ್ಟಾಂಗ | ದಿಂದ ವಂದಿಸೆವು ಭಕ್ತ | ಬಂಧುವಿಗೆ ಎಮ್ಮ ಕೃಪೆಯು | ಸುಂದಿರಾಮೊಳೆಂದೆಂದಿಗೆಂದು | ಏ ಕಿತವಾ ೮

ತಿಂಗಳೊಂದಾಗಿ ಅಂತ | ರಂಗದರಸ ನಾಡಿದ | ಮಂಗಳ ಚರಿತ್ರೆಯನ್ನು | ಸಂಗೀತದಿಂ ಪೊಗಳುತ್ತ | ಕಂಗಳಪ್ರೇಗಳಿವುತ್ತ | ಇಂಗಿತಜ್ಞ ದೇವನಂಗ | ಸಂಗದಾನಂದವ ನೆನೆದು | ಶ್ರೀಹರಿಯು ॥ ಮಂಗಳವೇದವಿಸ್ತಾರಿ | ಶೃಂಗಾರ ಕೂದಲು ನಮ್ಮ | ಪೊಂಗ

ಜ್ಞಾನ ಶೀಲ್ಧ ನರ | ಸಿಂಗ ವಟು ಭಾರ್ಗವನೆ | ಅಂಗದ ಪಾರ್ಥ ಶಂಭು ಶು | ರಂಗಪ ರಂಗ ವಿಠಲ | ತುಂಗಮಹಿಮ ನಮೋ ಎಂಬೆನೋ | ಏ ಕಿತವಾ ೯

ಶ್ರೀ ವಿಜಯದಾಸರು ಶ್ರೀಪಾದರಾಯರ ಸ್ತೋತ್ರವನ್ನು ಸುಳಾದಿಯಾಗಿ ಬರೆದಿರುವರು.

ಶ್ರೀಪಾದರಾಯರಮೇಲಿನ ಸುಳಾದಿ

ಧ್ರುವತಾಳ

ಶ್ರೀಪಾದರಾಯಗುರುವೆ ದೃಢ ಭಕುತಿಯಿಂದ | ಶ್ರೀಪಾದಪದುಮವ ನೆರೆನಂಬಿ ದವನ ಭಾಗ್ಯ | ಅಪಾರವಲ್ಲವೆ ಲೇಶ ಕೊರತೆಯಿಲ್ಲ | ಗೋಪಾದ ಜಲದೊಳು ರತುನ ದೊರಕಿದಂತೆ | ಪ್ರಾಪುತವಾಗುವುದು ಬಹಿರಂತರ ಸೌಖ್ಯ | ಲೋಪವಾಗದು ಒಂದು ಇಷ್ಟಾರ್ಥ ಪ್ರತಿದಿವಸ | ಆಪಾದಮೌಳಿ ಪರ್ಯಂತ ನೋಡುತ ಮಹಾ | ಪಾಪರಹಿತರಾಗಿ ಸಂಚರಿಸುವರಿಗೆ | ಶ್ರೀಪಾದರಾಯ ನಾರಾಯಣಯೋಗಿಯ | ಶ್ರೀಪಾದಸ್ಮರಿಸಿದ ಜನರ ಸಂಗದಲ್ಲಿದ್ದ | ಆ ಪುಣ್ಯಪುರುಷರಿಗೆ ಕೈವಲ್ಯ ತಪ್ಪದು | ದ್ವಿಪಾದ ಪಶುವೃಕಣೋ ಈ ಮುನಿಯ ನಂಬದವ | ಆಪತ್ಕಾಲ ಮಿತ್ರ ವಿಜಯವಿಠಲನ | ವ್ಯಾಪಾರವನು ಮನದಿ ನೆನೆ ನೆನೆದು ನಲಿದಾಡು ೧

ಮಟ್ಟತಾಳ

ಭಕುತಿ ಬೇಕಾದವರು ಇವರ ಪಾದದಲ್ಲಿ | ಸಕಲ ಕಾಲಕೆ ಇದು ಸಾಧ್ಯ ನಮಗೆಂದು | ಯುಕುತರಾಗಬೇಕು ರಾಗಂಗಳ ತೊರೆದು | ಮುಕುತಿಮಾರ್ಗಕೆ ಇನ್ನು ಯಾತಕೆ ಅನುಮಾನ | ಕಕುಲಾತಿಯಿಂದ ಕಂಡಲ್ಲೀ ತಿರುಗಿ | ಹಕ್ಕಲ ಮನದಿಂದ ಕೆಟ್ಟು ಪೋಗದಿರಿ | ಲಕುಮಿರಮಣ ನಮ್ಮ ವಿಜಯ ವಿಠಲರೇಯನ ಭಕುತರೊಳಗೆ ಮಹಾ ಮಹಿಮನೆನಿಸಿಕೊಂಬ ೨

ತ್ರಿಪುಟತಾಳ

ನಂಬಿರೋ ಶ್ರೀಪಾದರಾಯರ ಚರಣವ | ಹಂಬಲಿಸದಿರಿ ಅನ್ಯಮಾರ್ಗ | ತುಂಬಿ ತುಳುಕುವದು ಇಹಪರದ ಭಾಗ್ಯ | ಉಂಬೋದು ಉಡುವದು ಅಡಿಗಡಿಗೆ | ಡಿಂಬದೊಳಗೆ ಹರಿಧ್ಯಾನಂಗತನಾಗಿ | ಕಾಂಬುವ ಲೇಶ ಬಿಡದೆ ಪಾಪಂಗಳ | ಗಂಭೀರ ಸಂಸಾರವಾದರು ಅವಗೆ | ಇಂಬುಗೊಡುವದು ವೈದಿಕವೆನಿಸಿ | ಅಂಬುಜಸಖ ತೇಜ ವಿಜಯವಿಠಲನ | ಹಂಬಲಿಸಿ ಭಜಿಸುವನು ದಿನ ಪ್ರತಿದಿನದಿ ೩

ಅಟ್ಟತಾಳ

ಇವರ ಪ್ರಸಾದನಾದರೆ ವ್ಯಾಸಮುನಿರಾಯ | ಕವಿರಾಯ ಪುರಂದರದಾಸರು ಮಿಗಿಲಾ | ದವರ ಕರುಣವಿನ್ನು ಸಿದ್ಧಿಸುವುದು ಕೇಳಿ | ಸದ್ಭಕುತಿ ಪುಟ್ಟುವುದು ಸ್ವಚ್ಛವಾಗಿ | ತವಕದಿಂದಲಿ ಚರಣಸೇವೆ ಬರುವುದು | ವಿವಿಜರು ಒಲಿದು ಸತ್ಕರ್ಮ ಮಾಡಿಸುವರು | ಕವಿನುತ ನಮ್ಮ ವಿಜಯವಿಠಲರೇಯ | ದಿನರಾತ್ರಿಗಳಲಿ ಅವರ ಕಾಪಾಡುವ ೪

ಆದಿತಾಳ

ನರಕ ನರಕದಲ್ಲಿ ಹೊರಳುವ ಮನುಜನೆ । ಧರೆಯೊಳಿವರ ಚರಿತೆ ಅದುಭುತ ಒಂದೊಂದು । ನಿರುತದಲ್ಲಿ ನೋಡು ತುಂಬಿ ಸೂಸುತಲಿದೆ । ಅರುಣೋದಯದಲೆದ್ದು ಶ್ರೀಪಾದರಾಯರ । ಸ್ಮರಿಸಿದ ಮಾನವನಿಗೆ ಸರ್ವಸಂಪದವು । ಪರಗತಿಯಾಗುವುದು ಪರಿಹಾಸವಲ್ಲ ಕೇಳು । ಸುರಭೂಸುರಪ್ರಿಯ ವಿಜಯವಿಠ್ಠಲನು । ಕರುಣದಿಂದಲಿ ಮಹಾ ಉನ್ನತ ಪದವೀವ ೫

ಜತೆ ॥ ಧ್ರುವಮತಿಯಿಂದಿವರ ಭಜಿಸಿದ ಮನುಜಗೆ ।
ಭವರೋಗ ಪರಿಹರ ವಿಜಯವಿಠಲನೊಲಿವ ॥

ಶ್ರೀ ಶ್ರೀಪಾದರಾಯರು ಕ್ರಿ.ಶ. ೧೪೮೭ರವರೆಗೆ ಎಂದರೆ ಶಾಲೀವಾಹನ ಶಕೆ ೧೪೦೯ರವರೆಗೆ ಧರ್ಮಪೀಠದಲ್ಲಿದ್ದು ಜ್ಯೇಷ್ಠ ಶುದ್ಧ ೧೪ನೆಯ ದಿವಸ ಬೃಂದಾವನಸ್ಥರಾದಂತೆ ಗೊತ್ತಾಗುತ್ತದೆ. ಇವರ ಬೃಂದಾವನವು ಮುಳಬಾಗಲಿಗೆ ಒಂದೂವರೆ ಮೈಲು ದೂರದಲ್ಲಿ ನೃಸಿಂಹತೀರ್ಥದ ಬಳಿಯಲ್ಲಿದೆ. ಆ ಕಾಲದಿಂದಲೂ ಪ್ರತಿವರ್ಷ ಶ್ರೀಪಾದರಾಯರ ರಥೋತ್ಸವವನ್ನು ಮಠ ಪರಂಪರೆಯವರು ನಡೆಸಿಕೊಂಡು ಬರುತ್ತಿದ್ದಾರೆ. ಭಾಗವತ ಧರ್ಮೋದ್ಧಾರಕ್ಕೆ ಮುಖ್ಯ ಕಾರಣಕರ್ತರಿವರಾದ್ದರಿಂದ ಕರ್ಣಾಟಕದ ಸಂಪ್ರದಾಯಸ್ಥ ಕೀರ್ತನಕಾರರು ಭಜನೆ ಮಾಡಲಿ-ಕೀರ್ತನ ಮಾಡಲಿ—

"ನಮಃ ಶ್ರೀಪಾದರಾಜಾಯ । ನಮಸ್ತೇ ವ್ಯಾಸಯೋಗಿನೇ ॥
ನಮಃ ಪುರಂದರಾರ್ಯಾಯ । ವಿಜಯರಾಜಾಯ ತೇ ನಮಃ ॥

ಎಂಬುದಾಗಿ ಮೊದಲು ಶ್ರೀಪಾದರಾಯರನ್ನು ವಂದಿಸುತ್ತಾರೆ.

ಇಂತಹ ಶ್ರೀ ಶ್ರೀಪಾದರಾಯರು ಕರ್ಣಾಟಕಕ್ಕೆ ಮಾಡಿದ ಸೇವೆಯು ಚಿರಸ್ಮರಣೀಯವಲ್ಲವೆ ?

ಶ್ರೀ ವ್ಯಾಸರಾಯರು

೧

ಶ್ರೀ ವ್ಯಾಸತೀರ್ಥರೆಂಬುದು ಶ್ರೀ ವ್ಯಾಸರಾಯರ ಸರಿಯಾದ ಆಶ್ರಮ ನಾಮ. **ಶ್ರೀಮನ್ಮಧ್ವಾಚಾರ್ಯರ ಮಠದ** ಮೂಲ ಪೀಠಿಗೆಯಲ್ಲಿ ಸಂಸ್ಥಾನಾಧಿಪತ್ಯಕ್ಕೆ ಬಂದು, '**ಚಂದ್ರಿಕಾ**' ಎಂಬ ಪ್ರಬಲತರ ವಾದಗ್ರಂಥವನ್ನು ರಚಿಸಿದುದರಿಂದ **ಚಂದ್ರಿಕಾಚಾರ್ಯರೆಂದೂ**, ವಿಜಯನಗರದ ಸಿಂಹಾಸನವನ್ನೇರಿದ್ದರ ನೆನಪಿಗಾಗಿ ರಾಯರೆಂಬ ಸಹಿತರಾದ **ವ್ಯಾಸರಾಯರೆಂದೂ** ಈ ಮಹನೀಯರ ಹೆಸರು ಪ್ರಸಿದ್ಧಿಗೆ ಬಂದಿದೆ.

೧. ವಿಜಯನಗರದ ಕರ್ಣಾಟಕ ರಾಜ್ಯಸ್ಥಾಪನೆಗೆ ಮುಖ್ಯಕಾರಣರು **ವಿದ್ಯಾರಣ್ಯರು.**

ವಿಜಯನಗರದ ಉನ್ನತಿಯ ಪರಮಾವಧಿಗೆ ಮುಖ್ಯಕಾರಣರು **ವ್ಯಾಸರಾಯರು.**

೨. ವಿದ್ಯಾರಣ್ಯರ ಹೆಸರಿಲ್ಲದೆ ಕರ್ಣಾಟಕದ ಇತಿಹಾಸವೇ ಮೊದಲಾಗುವುದಿಲ್ಲ. ವ್ಯಾಸರಾಯರ ಹೆಸರಿಲ್ಲದೆ ಕರ್ಣಾಟಕದ ಅಭ್ಯುದಯ ವಿಚಾರವೂ ತಿಳಿಯುವುದಿಲ್ಲ.

೩. ಅದ್ವೈತಮತ ಸ್ಥಾಪಕರಾದ **ಶಂಕರಾಚಾರ್ಯರ** ಮಹಾಪೀಠದಲ್ಲಿ ಕುಳಿತು, ಮಹಾಗ್ರಂಥಗಳನ್ನು ರಚಿಸಿ, ಶಂಕರಮತದ ಪುನರುದ್ಧಾರ ಮಾಡಿದವರು ವಿದ್ಯಾರಣ್ಯರು.

ದ್ವೈತಮತಸ್ಥಾಪಕರಾದ **ಮಧ್ವಾಚಾರ್ಯರ** ಮಹಾಪೀಠದಲ್ಲಿ ಕುಳಿತು, ಮಹಾಗ್ರಂಥಗಳನ್ನು ರಚಿಸಿ, ಮಧ್ವಮತದ ಪುನರುದ್ಧಾರ ಮಾಡಿದವರು ವ್ಯಾಸರಾಯರು.

೪. ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂಬ ಬಿರುದಿನಿಂದ ಹೊಗಳಿಸಿಕೊಂಡವರು ವಿದ್ಯಾರಣ್ಯರು.

ಕರ್ಣಾಟಕದ ಸಿಂಹಾಸನಾಧೀಶ್ವರನಾಗಿ ಪ್ರತಿಷ್ಠಿತರಾದ ಯತಿವರರು ವ್ಯಾಸರಾಯರು.

೫. ಕನಕವೃಷ್ಟಿಯನ್ನು ಕರೆದು ದಾರಿದ್ರ್ಯವನ್ನು ಹೊಡೆದಟ್ಟಿದವರು ವಿದ್ಯಾರಣ್ಯರು.

ಕುಹುಯೋಗದಿಂದ ವಿಪತ್ತಿನಿಂದ ಕೃಷ್ಣದೇವರಾಯನನ್ನು ಪಾರುಮಾಡಿ ಸಲಹಿದವರು ವ್ಯಾಸರಾಯರು.

೬. ವೇದವಿದ್ಯಾಪ್ರಚಾರಕ್ಕಾಗಿ ವಿದ್ವಜ್ಜನರುಗಳನ್ನು ಹುಡುಕಿ ಹುಡುಕಿ, ಅಗ್ರ

ಹಾರಗಳನ್ನು ತಪ್ಪಿಸಿ, ಮಾನ್ಯಗಳನ್ನು ಕೊಡಿಸಿ ಧರ್ಮರಕ್ಷಣೆ ಮಾಡಿದವರು ವಿದ್ಯಾರಣ್ಯರು.

ಸ್ವಯಂ ಸಿಂಹಾಸನಾರೂಢರಾದಾಗಲೇ ಸಜ್ಜನರಿಗೆ ಸ್ವಹಸ್ತದಿಂದ ದಾನ ಭೂಮಿಗಳ ಧಾರೆಯೆರೆದು ಧರ್ಮರಕ್ಷಣೆ ಮಾಡಿದವರು ವ್ಯಾಸರಾಯರು.

೭. ಸ್ವಯಂ ಕರ್ನಾಟಕರಾಗಿ ಕನ್ನಡದ ಅಭಿಮಾನಿಗಳೆನಿಸಿದವರು ವಿದ್ಯಾರಣ್ಯರು.

ಸ್ವಯಂ ಕರ್ನಾಟಕರೂ ಆಗಿ ಸಾವಿರಾರು ಕನ್ನಡ ದೇವರನಾಮ ಸುಳಾದಿಗಳನ್ನು ರಚಿಸಿ ಕನ್ನಡಮಾತೆಯ ಸೇವೆ ಮಾಡಿದವರು ವ್ಯಾಸರಾಯರು.

ಈ ಇಬ್ಬರು ವಿಭೂತಿಪುರುಷರು ಸ್ವಲ್ಪ ಕಡಿಮೆ ಎರಡು ಶತಮಾನಗಳ ವ್ಯತ್ಯಾಸ ಕಾಲದಲ್ಲುದಯಿಸಿ, ಇಬ್ಬರೂ ಒಂದೊಂದು ಮಠದ ಪೀಠಾಧಿಪರಾಗಿ, ಮಹಾ ಗ್ರಂಥಕರ್ತೃಗಳೆನಿಸಿ, ರಾಜಕಾರಣ ಪಟುಗಳಾಗಿ, ಒಂದೇ ಸಾಮ್ರಾಜ್ಯದ ಉತ್ಪತ್ತಿ ಅಭ್ಯುದಯಗಳಿಗೆ ಕಾರಣರಾಗಿ, ಅದೇ ತುಂಗಭದ್ರೆಯ ತೀರದಲ್ಲಿದ್ದು ಸುವರ್ಣಾಕ್ಷರಗಳಿಂದ ಬರೆಯಿಡಲು ಯೋಗ್ಯವಾದ ಮಹಾತ್ಕಾರ್ಯಗಳನ್ನೆಸಗಿ, ಕರ್ನಾಟಕಕ್ಕೆ ಮಾಡಿದ ಮಹದುಪಕಾರಗಳನ್ನು ಇತಿಹಾಸಜ್ಞರು ಬರೆದಿರುವಷ್ಟು ಮಾತುಗಳಿಂದಲೇ ನೋಡಿದರೂ, ಎಂತಹ ಕನ್ನಡಿಗನಿಗಾದರೂ ಅತ್ಯಂತ ಅಭಿಮಾನವೆನಿಸದಿರುವುದಿಲ್ಲ. ಒಂದು ವೇಳೆ ಈ ಇಬ್ಬರು ಮಹಾಪುರುಷರೂ ಒಂದೇ ಸಮಯದಲ್ಲವತರಿಸಿದ್ದರೆ, ಇದೇ ಭಾರತಭೂಮಿಯನ್ನೇ ಎಂತಹ ಮಹೋನ್ನತ ಸ್ಥಿತಿಗೆ ತರುತ್ತಿದ್ದರೋ ಹೇಳುವುದಕ್ಕೆ ಬರುವಂತಿಲ್ಲ.

೨

ಶ್ರೀವ್ಯಾಸರಾಯರ ಜನ್ಮಚರಿತ್ರೆಯನ್ನು ಒಬ್ಬೊಬ್ಬರೊಂದೊಂದುರೀತಿ ಬರೆದು ಸಂಶಯಗಳಿಗೆ ಆಸ್ಪದವಾಗುವಂತೆ ಮಾಡಿದ್ದಾರೆ. ಸಮಕಾಲಿಕರಲ್ಲದವರು ಬರೆದ ಗ್ರಂಥಗಳಲ್ಲಿ ಪರಸ್ಪರ ವ್ಯತ್ಯಾಸ ಬರುವುದರಲ್ಲಿ ಸಂಶಯವಿಲ್ಲ. ಆದರೆ ಸುದೈವದಿಂದ ವ್ಯಾಸರಾಯರ ಸಮಕಾಲಿಕನೇ ಆಗಿದ್ದು ಅವರ ಅಪ್ಪಣೆಯಿಂದ ಅವರೆದುರಿಗೇ ಬರೆದೋದಿ ಮಹಾರಾಜ ಸಭೆಯಲ್ಲಿ ಸನ್ಮಾನಿತನಾದ **ಸೋಮನಾಥ ಕವಿಯ ವ್ಯಾಸಯೋಗಿಚರಿತೆಯ** (ಕ್ರಿ. ಶ. ೧೫೩೫) ಆಧಾರ ದೊರೆತದ್ದು **ಭಕ್ತವಿಜಯ** ರಚನೆಗೆ ಅನುಕೂಲವಾಯಿತು. ಮೈಸೂರು ಸಿವಿಲ್ ಸರ್ವಿಸ್ಸಿನ ದಿವಂಗತ ಮ। **ಬಿ. ವೆಂಕೋಬರಾವ್** ಬಿ. ಎ. ಅವರು **ಡಾ॥ ಕೃಷ್ಣಸ್ವಾಮಿ ಅಯ್ಯಂಗಾರ್ಯರು, ಸ್ಯುಯೆಲ್ ಸಾಹೇಬ್, ನೂನಿಚ್, ರಾವ್ ಸಾಹೇಬ್ ದಿನೇಶಚಂದ್ರರಂಥ** ಇನ್ನೂ ಅನೇಕ ಇತಿಹಾಸಲೇಖಕರು, ಶೋಧಿಸಿ ಬರೆದ ಪುಸ್ತಕಗಳನ್ನಿಟ್ಟುಕೊಂಡು, **ವ್ಯಾಸವಿಜಯ, ಅಚ್ಯುತರಾಯಾಭ್ಯುದಯ, ಕೃಷ್ಣರಾಯಾಭ್ಯುದಯ, ವ್ಯಾಸಯೋಗಿಚರಿತೆ** ಮೊದಲಾದ ಗ್ರಂಥಗಳ ಸಹಾಯವನ್ನೂ ತೆಗೆದುಕೊಂಡು, ಕಾಲವೇಕ ಶೋಧನೆಮಾಡಿ, ಪರಿಷ್ಕರಿಸಿ ವ್ಯಾಸರಾಯರ ಚರಿತ್ರೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವುದು, ವ್ಯಾಸರಾಯಮಠಕ್ಕೂ, ಕರ್ನಾಟಕಕ್ಕೂ

ಮಹದುಪಕಾರವಾಯಿತು. ನಮ್ಮ ಭಕ್ತವಿಜಯ ರಚನೆಯಲ್ಲಿ ಕಾಲನಿರ್ಣಯಕ್ಕೆ ಕಡ್ಡಿ ಹಿಡಿದು ಕೊಡುವುದನ್ನು ತಪ್ಪಿಸಿ ಬಹಳ ಸಹಾಯಮಾಡಿತು.

ಕಾಲದೇಶ ನಿರ್ಣಯಗಳಲ್ಲಿ ದಿವಂಗತ ವೆಂಕೋಬರಾಯರು ಪಟ್ಟಿರುವ ಶ್ರಮವು ಅಸಾಧಾರಣವಾದುದು. ಇವರಷ್ಟೇ ಶ್ರಮಪಟ್ಟು, ಮನಸ್ಸಿಟ್ಟು, ಪೈಬಗ್ಗಿ ಇತಿಹಾಸ ಶೋಧಕರು ಕೆಲಸ ಮಾಡಿದರೆ ಅವರ ಮಾತಿಗೆ ಪ್ರತಿಮಾತೇ ಇಲ್ಲದಂತಾಗುವುದು. ಋಷಿ ವಾಕ್ಯವೆಂಬಷ್ಟು ಗೌರವವೂ ಅವರ ಮಾತಿಗೆ ಬರುವುದು.

ವ್ಯಾಸಯೋಗಿ ಚರಿತೆಯನ್ನು ಗದ್ಯ ಪದ್ಯಾತ್ಮಕ ಚಂಪೂ ಗ್ರಂಥವಾಗಿ ಸಂಸ್ಕೃತ ದಲ್ಲಿ ಬರೆದ ಸೋಮನಾಥ ಕವಿಯು ತುಂಡೀರ ಮಂಡಲಕ್ಕೆ (Chengalpet Dist.) ಸೇರಿದವನು. ಅವನ ಜನ್ಮಭೂಮಿ ಕಂಚಿಯ ಹತ್ತಿರವಿರುವ ಗೋವಿಂದತೀರ್ಥಪುರವೆಂಬ ಅಗ್ರಹಾರ. ಜಾತ್ಯಾ ಸ್ಮಾರ್ತ ಬ್ರಾಹ್ಮಣ. ಭಾರತ ಚಂಪೂ ಪ್ರಬಂಧಕರ್ತನಾದ **ಅನಂತ ಭಟ್ಟ**ನ ಸೋದರಳಿಯ. ಅನೇಕ ರಾಜಾಧಿರಾಜರ ಆಸ್ಥಾನಗಳಲ್ಲಿ ಸನ್ಮಾನಿತನಾದವ. ಈತನ ಪಾಂಡಿತ್ಯ ಪ್ರಭಾವವನ್ನು ಕೇಳಿ ವ್ಯಾಸರಾಯರೇ ಈತನನ್ನು ವಿಜಯನಗರಕ್ಕೆ ಬರ ಮಾಡಿಕೊಂಡರು. **ಮಾಧ್ವಯತಿಗಳು ಸ್ಮಾರ್ತಪಂಡಿತನಾದ ತನ್ನನ್ನು ಸನ್ಮಾನಿ ಸುವರೇ ಎಂಬ ಸಂಶಯವಿವನಿಗಿದ್ದಂತೆ ತೋರುತ್ತದೆ.** ವ್ಯಾಸರಾಯರ ಶಿಷ್ಯ ರಾದ **ನಾರಾಯಣಯತಿ**ಗಳನ್ನು ಮುಂದುಮಾಡಿಕೊಂಡು ಸೋಮನಾಥನು ಸ್ವಾಮಿ ಗಳ ಸನ್ನಿಧಿಗೆ ಬಂದನು. ಸೋಮನಾಥನು ಬರೀ ಕವಿ ಅಥವಾ ಶಾಸ್ತ್ರಪಂಡಿತನಾಗಿದ್ದುದು ಮಾತ್ರವಲ್ಲ ; ಅವಧಾನದಲ್ಲಿ ನಿಸ್ಸೀಮನೆನಿಸಿದ ಶತಾವಧಾನಿಯೂಗಿದ್ದನು. ಇವನ ಅವಧಾನ ಪಾಂಡಿತ್ಯಕ್ಕೆ ಮೆಚ್ಚಿ ವ್ಯಾಸರಾಯರು ತಮ್ಮ ಸನ್ನಿಧಿಯಲ್ಲೀ ಕೆಲವುಕಾಲ ಈತನನ್ನು ನಿಲ್ಲಿಸಿ ಕೊಂಡರು. ಮಹಾಸಭೆಯಲ್ಲಿ ಪಂಡಿತರು ಎಷ್ಟೇ ಸ್ವಾರಸ್ಯವಾದ ವಾಕ್ಯಾರ್ಥಮಾಡುತ್ತಿ ರಲಿ, ಸೋಮನಾಥನು ಆ ಮಾತಿನಲ್ಲಿ ಬಾಯಿಹಾಕಿದನೆಂದರೆ, ಅವನ ಅಮೃತವಾಣಿಯು ವ್ಯಾಸರಾಯರನ್ನು ತಲೆದೂಗಿಸಿಬಿಡುತ್ತಿತ್ತು. ಈ ಸಂಗತಿಯನ್ನು ಸೋಮನಾಥನು—

ಆಕರ್ಣ್ಯ ಪರ್ಷದಾಗ್ರೇಸರ ತೇನ ಭಗವತಾ ಶ್ಲಾಘಾಶಿರಃ ಕಂಪನೈಃ
ಅನಿತರಸುಲಭೈರುಪಲಾಲಿತ ಸ್ವಕವಿಃ ಪ್ರತ್ಯಹಂ ಪ್ರದರ್ಶಿತೇಷು
ಬಹುವಿಧ ಕಲಾನಿಧಾನ ಪಾಂಡಿತ್ಯೇಷು ಪ್ರತಿಪಾದಿತೈಃ ಪಾರಿತೋಷಕ
ವಿಶೇಷೈರ್ಬಹುಮಾನ್ಯ ಮಾನಸ್ತತ್ರೈವ ವ್ಯಾಸರಾಜೆ ಕತಿಚಿದವಾತ್ಸೀತ್ ॥

ಎಂಬ ವಾಕ್ಯಗಳಿಂದ ವರ್ಣಿಸಿದ್ದಾನೆ.

ಆ ಕಾಲದಲ್ಲೂ ಸೋಮನಾಥ ಕವಿಯನ್ನು ನೋಡಿ ಮತ್ಸರಿಸದವರಿರಲಿಲ್ಲ. ಅವನಿಗಾದ ಸನ್ಮಾನವನ್ನು ನೋಡಿ ದುಃಖಿಸದವರೂ ಕರುಬದವರೂ ಇರಲಿಲ್ಲ. ಮತ್ತು ವ್ಯಾಸರಾಯರು ಮೆಚ್ಚಿ ಒಮ್ಮೆ ತಲೆದೂಗುವುದು ಎಷ್ಟು ಬೆಲೆಬಾಳುವುದೆಂಬುದನ್ನು ಆಕಾರದಿಂದಲೇ ಅರಿದುಬಂದ ಪಂಡಿತರು ತಾನೆಂಬ ಮತ್ಸರಗ್ರಸ್ತರಿಗೆ ಹೇಳುವನೋ ಎಂಬಂತೆ—

ಘೋರೀ ಘೋರೀ ಮತ್ಸರ ಕುಂತ್ರಿ ಕಾನ್ವ್ರಮಂತಯೋ ದುರ್ವ್ಯದುಹೀಗದ್ಧಿ ಕಾ ।
ನಾ ಕಾ ಕಾ ದವತಾರ ಭಾಗಿಸ ಇವಾದಂಯಯೂನ್ವ ಮಾಥ್ಗೌಕ್ಷ್ಕಿ ॥
ತ್ವಾ ಘಾ ಕಂಪನ ಮೇಕಮೇವ ಶಿರಸಃ ಶ್ರೀ ವ್ಯಾಸಯೋಗೀಶಿತಃ ।
ನೀರೂಪಾಂ ಶತಮರ್ಕಿ ಕ್ಷಿತಿತಲೇ ವಿದ್ಯಾರಣ್ಯವಿದ್ಯಾವತಾಂ ।

ಎಂಬ ಶ್ಲೋಕದಿಂದ ಉಲ್ಲೇಖಿಸಿದ್ದಾನೆ.

ಮತಕ್ಕೂ ಪಾಂಡಿತ್ಯಕ್ಕೂ ಯಾವಾಗಲೂ ಸಂಬಂಧವಿರುವುದಿಲ್ಲ. ಉದಾತ್ತ ಮನಸ್ಕರು ಪಂಡಿತರು ಯಾವ ಮತದವರೆಂಬ ಗೊಡವೆಗೆ ಹೋಗುವುದಿಲ್ಲ. ಮತಭೇದ ವುದು ಬ್ರಾಹ್ಮಣ ಸಾಮಾನ್ಯದಲ್ಲಿ ಕೇವಲ ಸಮುದಾಯದ ಪಂಕ್ತಿಭೋಜನಕ್ಕೆ ಸಹಾಯ ಮಾಡುವುದಲ್ಲದೆ ವಿದ್ವತ್ಸಭೆಗೆ ಬರುವುದಿಲ್ಲ.

ಒಮ್ಮೆ ವಿದ್ಯಾರಣ್ಯರು ಗಜಾರೂಢರಾಗಿ ಪರಿವಾರ ಸಹಿತ ಕಾಶೀಯಾತ್ರೆ ಮಾಡಿ ಬರುತ್ತಿದ್ದರು. (ಕ್ರಿ.ಶ. ೧೩೫೬) ಮಾರ್ಗದಲ್ಲಿ ಜಯತೀರ್ಥರಿಗೂ ವಿದ್ಯಾರಣ್ಯರಿಗೂ ಭೇಟಿಯಾಯಿತು. ಒಬ್ಬರು ಮಾಧ್ವ ಗ್ರಂಥಗಳ ಟೀಕಾಚಾರ್ಯರಾದರೆ ಮತ್ತೊಬ್ಬರು ಶಾಂಕರ ಗ್ರಂಥಗಳ ಟೀಕಾಚಾರ್ಯರು. ಇಬ್ಬರೂ ಮಠಾಧಿಪತಿಗಳು. ವಿದ್ಯಾರಣ್ಯರು ವೇದಗಳಿಗೆ ಭಾಷ್ಯ ಮಾಡಿರುವರೆಂಬ ಖ್ಯಾತಿಯು ಜಯತೀರ್ಥರಿಗೆ ತಿಳಿದಿತ್ತು. ಪರಸ್ಪರ ಸಂಭಾಷಣೆಯಲ್ಲಿ ಜಯತೀರ್ಥರು :—

“ತಾವಾದರೋ ವೇದ ಭಾಷ್ಯಕರ್ತರು. ನಮ್ಮ ಆಚಾರ್ಯರು ರಚಿಸಿರುವ ಪ್ರಮಾಣ ಲಕ್ಷಣ ಗ್ರಂಥವಿದು. ಈ ಮಹಾಗ್ರಂಥಕ್ಕೆ ತಮ್ಮಂಥ ಭಾಷ್ಯಕಾರರೇ ಅರ್ಥಮಾಡಲು ಶಕ್ತರು. ಇದೇನೋ ನಾನು ಬರೆದ ವ್ಯಾಖ್ಯಾನ. ಉಭಯ ಗ್ರಂಥಗಳನ್ನೂ ತಾವು ನೋಡಬೇಕು” ಎಂದು ವಿದ್ಯಾರಣ್ಯರ ಕೈಯಲ್ಲಿ ಕೊಟ್ಟರು.

ವಿದ್ಯಾರಣ್ಯರು ಜಯತೀರ್ಥರ ವ್ಯಾಖ್ಯಾನವನ್ನು ನೋಡಿ ಆಶ್ಚರ್ಯಚಕಿತರಾದರು. ಅವರ ಅಸಾಧಾರಣ ಪಾಂಡಿತ್ಯಕ್ಕೆ ತಲೆದೂಗಿದರು. **“ಜಯತೀರ್ಥರೇ! ನನ್ನ ಕಾಶೀಯಾತ್ರೆಯು ಪೂರ್ಣವಾಯಿತು. ಈ ಆನೆಯ ಮೇಲೆ ಕುಳಿತು ನಾನು ಸಕಲ ದೇಶಗಳ ದಿಗ್ವಿಜಯ ಮಾಡಿದೆನು. ನಿಮ್ಮನ್ನು ಇದೇ ಆನೆಯ ಮೇಲೆ ಕೂಡಿಸಿ ಉತ್ಸವ ಮಾಡುವೆನು. ಇದಕ್ಕೆ ನೀವು ಸಮ್ಮತಿಸಬೇಕು”** ಎಂದು ನುಡಿದು **ಜಯತೀರ್ಥ**ರನ್ನು ಆನೆಯಮೇಲೆ ಕೂಡಿಸಿ ಮಹೋತ್ಸವ ಮಾಡಿಸಿದರು.

ಇದೆಂದರೆ ವಿದ್ಯಾವಂತರ ನಿಜವಾದ ವಿದ್ಯಾಭಿಮಾನ. ಪರಸ್ಪರ ಮತಗಳಾದರೋ ದಹನ ತುಹಿನಗಳಂತೆ–ಛಾಯಾತಪಗಳಂತೆ–ದಿವಾರಾತ್ರಿಗಳಂತೆ: ಜಗತ್ತು ಮಿಥ್ಯವೆಂದರೆ ಸತ್ಯವೆನ್ನುವ–ಜೀವೇಶ್ವರೈಕ್ಯವೆಂದರೆ ಜೀವೇಶ್ವರ ಭೇದವೆನ್ನುವವುಗಳು. ಆದರೂ ಅಲ್ಲಿ ಸತ್ ಪಾಂಡಿತ್ಯಕ್ಕೆ ಪುರಸ್ಕಾರ ತಪ್ಪಲಿಲ್ಲ. ಆದ್ದರಿಂದಲೇ ಸೋಮನಾಥನಂಥ ಮಹಾಕವಿಗೆ ವ್ಯಾಸರಾಯರು ಯಾರಿಗೂ ಮಾಡದ ಅಸಾಧಾರಣ ಸನ್ಮಾನ ಮಾಡಿದರು. ಕೃಷ್ಣದೇವರಾಯನೂ ಮಹಾಕವಿಗೆ ಗ್ರಾಮಭೂಮಿಗಳ ದಾನಮಾಡಿದನು. ಮತಸ್ಥಾಪಕರು,

ಇಂಥಾ ಉದಾರ ಚರಿತ್ರರಿದ್ದುದರಿಂದ ಆ ಕಾಲದಲ್ಲಿ ವೈದಿಕ ವಿದ್ಯೆಯು ತನ್ನ ಪ್ರಾಶಸ್ತ್ಯದ ಪರಮಾವಧಿಗೇರಿತ್ತು. ಮಠಾಧಿಪತಿಗಳಾದರೂ ಒಬ್ಬರನ್ನೊಬ್ಬರು ನೋಡಬಾರದೆಂದಾಗಲೀ, ಒಬ್ಬರ ಮಠದ ಮುಂದೆ ಮತ್ತೊಬ್ಬರು ಸಂಚರಿಸಬಾರದೆಂದಾಗಲೀ ಅನಾಗರಿಕ ಭಾವನೆಯುಳ್ಳವರಾಗಿರಲಿಲ್ಲ. ಆ ಕಾಲದ ಪಾಂಡಿತ್ಯ ಪ್ರಭಾವ, ಆ ಕಾಲದವರ ಗ್ರಂಥ ರಚನಾಶಕ್ತಿ, ಯಾವುದೊಂದೂ ಇಲ್ಲದ ಈ ಕಾಲದ ಅದೇ ಮಠಾಧಿಪತಿಗಳು ಪರಸ್ಪರ ಕಲೆತು ಮಾತನಾಡಲೊಲ್ಲರು. ವಿಮರ್ಶೆಯಂತು ಕಲೆತು ಮಾತನಾಡುವುದಿರಲಿ, ಸ್ವಮತ ರಕ್ಷಣೆಗೆಂದೇ ಏರ್ಪಟ್ಟ ಇಬ್ಬರು ಮಠಪತಿಗಳು ಒಂದು ಕಡೆ ಕುಳಿತು ಮತ ರಕ್ಷಣೆಯ ಪ್ರಸ್ತಾಪ ಮಾಡುವಂತಿಲ್ಲ !

ಪ್ರಕೃತ ಸೋಮನಾಥ ಮಹಾಕವಿಯು ವ್ಯಾಸರಾಯರ ಸಮಕಾಲಿಕನಾಗಿದ್ದು ಅವರ ಆಜ್ಞೆಯಿಂದಲೇ ವ್ಯಾಸಯೋಗಿ ಚರಿತೆಯನ್ನು ಬರೆದು ಮಹಾರಾಜ ಸಭೆಯಲ್ಲಿ ಬಹುಮಾನಿತನಾಗಿದ್ದರೂ, ವ್ಯಾಸರಾಯರ ಪಟ್ಟಶಿಷ್ಯರಾದ ***ಶ್ರೀನಿವಾಸತೀರ್ಥರು** ಬರೆದಿರುವ **ವ್ಯಾಸವಿಜಯ**ದಲ್ಲಿ ಹೇಳಿರುವ ಸಂಗತಿಗಳನ್ನು ಬಿಟ್ಟುಬಿಡಲು ಯಾವ ಕಾರಣವೂ ಇರುವುದಿಲ್ಲ. ಸೋಮನಾಥ ಕವಿಯ ಮಾತಿನಂತೆ ಶ್ರೀನಿವಾಸತೀರ್ಥರು ವ್ಯಾಸರಾಯರ (ಪೂರ್ವಾಶ್ರಮದ) ಸೋದರಳಿಯಂದಿರು. ಅಂದರೆ ಅವರ ಅಕ್ಕ ಭೀಮಕ್ಕನೆಂಬ ಸಾಧ್ವಿಯ ಗರ್ಭಸಂಭೂತರು. ಮೇಲಾಗಿ ವ್ಯಾಸರಾಯರಿಂದಲೇ ಪಟ್ಟಾಭಿಷಿಕ್ತರಾಗಿ ವಿದ್ಯಾಪೀಠವನ್ನಲಂಕರಿಸಿದ ಯತಿವರ್ಯರು. ಶ್ರೀನಿವಾಸತೀರ್ಥರು ಬರೆದ ವ್ಯಾಸವಿಜಯವು ಕಾವ್ಯದೃಷ್ಟಿಯಿಂದ ಬರೆದ ಗ್ರಂಥವಲ್ಲ. ಚರಿತ್ರಾಂಶಗಳು ಹೆಚ್ಚು ದೊರೆಯದಿದ್ದರೂ ಬರೆದಷ್ಟು ವಿಷಯಗಳಲ್ಲಿ ಕಲ್ಪನೆಗಳಿಲ್ಲ. ಸೋಮನಾಥ ಕವಿಯಾದರೋ ಕೇವಲ ಕಾವ್ಯದೃಷ್ಟಿಯಿಂದ ವ್ಯಾಸಯೋಗಿ ಚರಿತೆಯನ್ನು ಬರೆದಿರುವನು. ತನ್ನದೇ ಪ್ರತ್ಯೇಕ ಸಂವಿಧಾನ (plot) ಮಾಡಿಕೊಂಡು ವರ್ಣನೆಗಳನ್ನು ಬೆಳೆಸಿರುವನು. ಪದ್ಯಗಳಿಗಿಂತ ಗದ್ಯಗಳು ಬಹಳವಾಗಿವೆ. ಕಾವ್ಯ ರಸಾಸ್ವಾದನ ಪರರಿಗೆ ಪುಸ್ತಕವನ್ನು ಓದಿ ಮುಗಿಸುವ ವರೆಗೂ ತೃಪ್ತಿಯಾಗುವಂತಿಲ್ಲ. ಐತಿಹಾಸಿಕ ವಿಷಯಗಳೂ ಹೇರಳವಾಗಿವೆ. ಆದ್ದರಿಂದ ಎರಡೂ ಗ್ರಂಥಗಳಲ್ಲಿರುವ ಸಂಗತಿಗಳನ್ನು ಬರೆದು ಸ್ವತಂತ್ರಾಭಿಪ್ರಾಯವನ್ನು ವಾಚಕರ ಪಾಲಿಗೆ ಬಿಟ್ಟು ಮುಂದಿನ ಪ್ರಕರಣದಲ್ಲಿ ವ್ಯಾಸರಾಯರ ಜನ್ಮವೃತ್ತಾಂತವನ್ನು ತಿಳಿಸುವೆನು.

---

*ಶ್ರೀ ವ್ಯಾಸರಾಯರ ಮಠದ ಮಹಾಪೀಠವನ್ನಲಂಕರಿಸಿರುವ ಶ್ರೀ ವಿದ್ಯಾವಾರಿಧಿತೀರ್ಥ ಶ್ರೀಪಾದಂಗಳವರ ದರ್ಶನ ಮಾಡಿದಾಗ ಶ್ರೀನಿವಾಸತೀರ್ಥರಿಂದ ರಚಿತವಾದ ವ್ಯಾಸವಿಜಯದ ಪ್ರಸ್ತಾಪ ಬಂದಿತು. ಶ್ರೀಗಳವರು ಆ ಚಿಕ್ಕ ಗ್ರಂಥದಲ್ಲಿರುವ ವಿಷಯಗಳನ್ನು ನೋಡಿದರೆ ಶ್ರೀನಿವಾಸತೀರ್ಥರು ಬರೆದ ಗ್ರಂಥವಲ್ಲೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ವಿಮರ್ಶೆಗೊಳಗಾಗಿರುವ ವಿಚಾರವಾದ್ದರಿಂದ ಆ ಸಂಗತಿಯನ್ನೂ ಇಲ್ಲಿ ತಿಳಿಸಲಾಗಿದೆ.

೩

ಶ್ರೀ ವ್ಯಾಸರಾಯರ ಜನ್ಮವೃತ್ತಾಂತ

(ವ್ಯಾಸವಿಜಯ ಮತ್ತು ದಾಸರಪದಗಳ ಪ್ರಮಾಣವನ್ನನುಸರಿಸಿ)

ಮೈಸೂರು ಜಿಲ್ಲೆಯಲ್ಲಿ ಕಾವೇರೀ ತೀರದಲ್ಲಿ ಬನ್ನೂರೆಂಬ (ಪುಣ್ಯಕ್ಷೇತ್ರ) ಗ್ರಾಮವಿರುವುದು. ಆ ಗ್ರಾಮವು ಆಗಿದ್ದ ಸ್ಥಿತಿಗೂ ಈಗಿರುವ ಸ್ಥಿತಿಗೂ ವ್ಯತ್ಯಾಸವಾಗಿರುವಂತೆ ಕಂಡುಬರುವುದಾದರೂ, ಅದೇ ಸ್ಥಳದಲ್ಲಿ ಅದೇ ಹೆಸರಿನಿಂದ ಮಾತ್ರ ಕರೆಯಲ್ಪಡುತ್ತಿರುವುದು. ಆಗಿದ್ದಂತೆ ಈಗ ಅಲ್ಲಿ ಬ್ರಾಹ್ಮಣ ವಸತಿಗಳಿಲ್ಲ. ಇರುವವರಲ್ಲಿ ವೈದಿಕ ವಿದ್ಯಾಗಂಧವಿಲ್ಲ. ಆ ಕಾಲದ ಪ್ರಸಿದ್ಧ ಸ್ಥಳಗಳೆಲ್ಲವೂ ವಿಶೇಷತಃ ನದೀ ತೀರಗಳಲ್ಲೇ ಇದ್ದುವು. ಕಾಲುವೆಗಳಿಂದ ನೀರನ್ನು ಹರಿಸಿ, ಭೂವ್ಯವಸಾಯವನ್ನು ಹೆಚ್ಚಿಸಿರುವುದರಿಂದ ಈ ಕಾಲದ ತೀರಸ್ಥಳಗಳು ಅನಾರೋಗ್ಯ ಸ್ಥಳಗಳಾದುವು. ನೂರಮೂವತ್ತೆರಡು ವರ್ಷಗಳ ಹಿಂದೆ ಮೈಸೂರು ರಾಜಧಾನಿಯಾಗಿದ್ದ ಲಕ್ಷಗೃಹಗಳ ಶ್ರೀರಂಗಪಟ್ಟಣವು ನೀರಾವರಿಯಿಂದ ಈಗ ಹಾಳು ಪಟ್ಟಣವಾಯಿತು. ಐದು ಶತಮಾನಗಳ ಹಿಂದಿನ ಪರಿಸ್ಥಿತಿಯನ್ನು ಈ ಕಾಲದ ಪರಿಸ್ಥಿತಿಯೊಡನೆ ಹೋಲಿಸಿ ಮಾತನಾಡುವುದಾಗಲಿ ಯೋಚಿಸಿ ಬರೆಯುವುದಾಗಲೀ ಸಾಧ್ಯವಲ್ಲ. ಈಗಿನ ಜನರ ಭಾವನೆಗಳೇ ಬಲು ಬದಲಾಗಿವೆ.

ಅಂತು ಬನ್ನೂರಿನಲ್ಲಿ ಕಾಶ್ಯಪಗೋತ್ರೋತ್ಪನ್ನನಾದ ರಾಮಾಚಾರ್ಯನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಕಾಲವಶದಿಂದ ಮೃತನಾದನು. ಅವನ ಹೆಂಡತಿಯು ಪತಿವಿಯೋಗವನ್ನು ಸಹಿಸಲಾರದೆ ಸಹಗಮನ ಮಾಡುವೆನೆಂದು ನಿಶ್ಚೈಸಿದಳು. ಅದೇ ಸಮಯದಲ್ಲಿ ಸನಕಾದಿಗಳ ಪರಂಪರೆಯಿಂದ ಬಂದ ಶ್ರೀಮಧ್ವಾಚಾರ್ಯರ ಮೂಲಪೀಠಸ್ಥರಾದ ಶ್ರೀ ಬ್ರಹ್ಮಣ್ಯತೀರ್ಥಸ್ವಾಮಿಗಳೆಂಬುವರು ಬನ್ನೂರಿಗೆ ಬಂದಿದ್ದರು. ರಾಮಾಚಾರ್ಯನು ಮೃತನಾದ ಸಂಗತಿಯಾಗಲೀ ಅವನ ಹೆಂಡತಿಯು ಸಹಗಮನೋದ್ಯೋಗವಾಗಲೀ ಸ್ವಾಮಿಗಳಿಗೆ ತಿಳಿದಿರಲಿಲ್ಲ. ಸಹಗಮನ ಮಾಡುವುದಕ್ಕೆ ಪೂರ್ವದಲ್ಲಿ ಯಾರಾದರೂ ದೊಡ್ಡವರ ಆಜ್ಞೆಯನ್ನು ಪಡೆಯಬೇಕಾದ್ದು ಪದ್ಧತಿಯಾಗಿತ್ತು. ರಾಮಾಚಾರ್ಯನ ಹೆಂಡತಿಯು ಸ್ವಾಮಿಗಳಿಗಿಂತ ದೊಡ್ಡವರು ಮತ್ಯಾರೂ ಇಲ್ಲವೆಂದು ಅವರಿಗೇ ಬಂದು ನಮಸ್ಕಾರ ಮಾಡಿದಳು. ಬ್ರಹ್ಮಣ್ಯತೀರ್ಥರು ಸುಮಂಗಲಿಯರು ನಮಸ್ಕಾರ ಮಾಡಿದಾಗ ಆಶೀರ್ವಾದ ಮಾಡುವ ಕ್ರಮವನ್ನನುಸರಿಸಿ "ದೀರ್ಘಸುಮಂಗಲೀಭವ" ಎಂದು ಹರಸಿದರು.

ಸುಮಂಗಲಿ :—ಏನು ಸ್ವಾಮಿ! ಸಹಗಮನಕ್ಕೆ ಅಪ್ಪಣೆ ಕೇಳುವಾಗ "ದೀರ್ಘಸುಮಂಗಲೀಭವ" ಎಂದು ಹರಸುವಿರಾ! ಗಂಡ ಸತ್ತ ಮೇಲೆ ನನಗೆ ಸುಮಂಗಲಿತನವೆಲ್ಲಿ ಬಂತು? (ಎಂದು ಗಟ್ಟಿಯಾಗಿ ರೋದನಮಾಡಿದಳು)

ಬ್ರಹ್ಮಣ್ಯತೀರ್ಥರು :—ಹೀಗೆಯೇ ಅಮ್ಮಾ? ನೀನು [illegible] ಸಹಗಮನಕ್ಕೆ ಅಪ್ಪಣೆ ಕೇಳಬಂದಿರುವೆಯಾ! ನನ್ನ ಬಾಯಿಂದ ದೀರ್ಘಸುಮಂಗಲೀಭವ

ಎಂಬ ಮಾತು ಬಂತಲ್ಲವೆ ? ನನ್ನ ನಾಲಿಗೆಯಲ್ಲಿ ನಿಂತು ನುಡಿಸಿದವನು **ವಿಠಲನು.** ನಾನು ಸನ್ಯಾಸಿ, ನನ್ನಲ್ಲಿ ಸನ್ಯಾಸಧರ್ಮವಿದ್ದರೆ, ನನ್ನ ಬಾಯಿಂದ ಬಂದ ಮಾತು ಸತ್ಯವಾಗಬೇಕು. ಹಾಗಿಲ್ಲದಿದ್ದರೆ ನನಗೆ ಸ್ತ್ರೀಹತ್ಯ-ವಿಠಲನಿಗೆ ಯತಿಹತ್ಯ ! ಎರಡೂ ಸಂಭವಿಸಬೇಕಾದೀತು ! ಒಳ್ಳೇದು ನಿನ್ನ ಗಂಡನು ಮೃತನಾಗಿರುವ ಸ್ಥಳವ್ಯಾವುದು ತೋರಿಸು. ಎಂದು ಜಗ್ಗನೆದ್ದು, ಕಮಂಡಲುಪಾಣಿಗಳಾಗಿ ಧನ್ವಂತರೀ ಮಂತ್ರವನ್ನು ಜಪಿಸುತ್ತಾ ನಡೆದರು.

ಮಠದ ಸೇವಕರೂ ಊರಜನರೂ ಗುಂಪುಗುಂಪಾಗಿ ಸ್ವಾಮಿಗಳನ್ನು ಹಿಂಬಾಲಿಸಿದರು. ಸುಮಂಗಲಿಯು ತನ್ನ ಮಾಂಗಲ್ಯ ಸ್ಥಿರವಾಯಿತೆಂದೇ ನಿರ್ಧರಿಸಿದಳು. ಬ್ರಹ್ಮಣ್ಯತೀರ್ಥರೆಂದವರೇನು ? -ಅವರ ಮಾತು ಸುಳ್ಳಾಗುವುದೆಂದರೇನು- ಅವರ ಮಾತೇ ಸುಳ್ಳಾದರೆ ಜಗತ್ತಿನಲ್ಲಿ ದೇವರೇ ಇಲ್ಲವಾಗಬೇಕು-ಎಂದುಕೊಳ್ಳುತ್ತಾ ಮೃತಪತಿಯ ಶರೀರದ ಬಳಿಗೆ ಬಂದಳು. ಮಠದ ಜನರು - 'ಮಹಾಸ್ವಾಮಿ, ಶವದಬಳಿಗೆ ಸ್ವಾಮಿಗಳು ಹೋಗಬಾರದು; ಶವವನ್ನು ಕಣ್ಣಿನಿಂದ ನೋಡಬಾರದು' ಎಂದು ನಿವಾರಿಸಿದರು. ಸ್ವಾಮಿಗಳು ಯಾರ ಮಾತನ್ನೂ ಲಕ್ಷಿಸದೆ ಮೃತಶರೀರದ ಮೇಲೆ ಕಮಂಡಲೋದಕವನ್ನು ಪ್ರೋಕ್ಷಿಸಿ ಕ್ಷಣಕಾಲ ಮಂತ್ರೋಚ್ಚಾರಣೆ ಮಾಡುತ್ತಾ ನಿಂತುಕೊಂಡರು. ಮತ್ತೆ ವಿಠಲಾ ! ಎನ್ನುವಷ್ಟರಲ್ಲಿ ಮೃತನು ನಿದ್ರೆಯಿಂದೆಚ್ಚರಗೊಂಡವನಂತೆ ಎದ್ದು ಕುಳಿತನು. ಭಯಂಕರಸ್ವರೂಪರಾಗಿ ಕಾಣಿಸುತ್ತಿದ್ದ ಸ್ವಾಮಿಗಳ ಮುಖದಲ್ಲಿ ಮಂದಹಾಸವಂಕುರಿಸಿತು. ಆನಂದಬಾಷ್ಪಗಳು ನೇತ್ರಗಳಿಂದುದುರಿದುವು. ಮಂಕುಮನುಷ್ಯನಂತೆ ಕುಳಿತಿದ್ದ ರಾಮಾಚಾರ್ಯನು ಸ್ವಾಮಿಗಳನ್ನು ನೋಡಿ ಎದ್ದು ನಮಸ್ಕರಿಸಿದನು. ಜನರು ಜಯಜಯವೆಂದು, ಇದ್ದಸ್ಥಳಗಳಲ್ಲೇ ಸ್ವಾಮಿಗಳಿಗೆ ದೀರ್ಘದಂಡ ನಮಸ್ಕಾರಮಾಡಿದರು. ಸುಮಂಗಲಿಯೂ ಸ್ವಾಮಿಗಳಿಗೆ ಪ್ರಣಾಮಮಾಡಿ, ಪತಿಗೆ ಶೈತ್ಯೋಪಚಾರ ಮಾಡತೊಡಗಿದಳು.

ಸ್ವಾಮಿಗಳು :—ಏನೋ ರಾಮಾಚಾರ್ಯ ! ಬದುಕಿ ಬಂದೆಯಾ ?

ರಾಮಾಚಾರ್ಯ :—ಬಂದೆ ಮಹಾಸ್ವಾಮಿ, ಚರಣಾನುಗ್ರಹದಿಂದ !

ರಾಮಾಚಾರ್ಯನು ಸ್ವಾಮಿಗಳಿಗೆ ಅಪರಿಚಿತನಲ್ಲ. ಅವನೂ ಮಠದ ಒಬ್ಬ ಶಿಷ್ಯನೇ ಆಗಿದ್ದನು ಅನಂತರ ದಂಪತಿಗಳು ತಮ್ಮ ಮನೆಯಲ್ಲೇ ಸ್ವಾಮಿಗಳು ಭಿಕ್ಷಾಸ್ವೀಕಾರ ಮಾಡಬೇಕೆಂದು ಪ್ರಾರ್ಥಿಸಿ-ನಮಸ್ಕರಿಸಿದರು. ಸ್ವಾಮಿಗಳು **ಸುಪುತ್ರಪ್ರಾಪ್ತಿರಸ್ತು** ಎಂದು ಹರಸಿದರು. ಅದುವರೆಗೆ ಆ ದಂಪತಿಗಳಿಗೆ ಸಂತಾನವಿರಲಿಲ್ಲ. ಇಬ್ಬರೂ ವೃದ್ಧರಾಗಿದ್ದರು. ರಾಮಾಚಾರ್ಯನು-'ಇಷ್ಟು ದಿವಸ ಕಳೆದಮೇಲೆ ಈ ವೃದ್ಧಾಪ್ಯದಲ್ಲಿ ಪುತ್ರಪ್ರಾಪ್ತಿಯೆಲ್ಲಿಯದು ಮಹಾಸ್ವಾಮಿ'-ಎಂದನು. 'ಧನ್ವಂತ್ರಿಯ ಅನುಗ್ರಹದಿಂದ ಮೃತನಾಗಿದ್ದ ನೀನೇ ಬದುಕಬಹುದು-ನಿನಗೆ ಮುಂದೆ ಮಕ್ಕಳೇಕೆ ಆಗಬಾರದು ! ಅವರ ಮಾತ್ರ—

" ಪೂರ್ವಸ್ಯಾಂ ಪೂರ್ವಯಾ ದೇಹಿಮಹ್ಯಂ ದ್ವಿತೀಯೇನ ಸುಖಂವಸೇ '

ಮೊದಲನೆಯವನನ್ನು ಮೊದಲು ನಮಗೆ ಕೊಡು: ಎರಡನೆಯವನಿಂದ ಸುಖದಿಂದಿರು" ಎಂದು ನುಡಿದರು.

ಜನರು ಆನಂದಭರಿತರಾಗಿ ಮತ್ತೆ ಜಯಘೋಷ ಮಾಡಿದರು. ಅಂದಿನ ಭಿಕ್ಷೆ ರಾಮಾಚಾರ್ಯನ ಮನೆಯಲ್ಲೇ ಅತ್ಯುಲ್ಲಾಸದಿಂದ ನಡೆಯಿತು.

ಕಾಲಕ್ರಮದಲ್ಲಿ ರಾಮಾಚಾರ್ಯನು ಗೃಹಸ್ಥನಾದನು. ಅವನ ಹೆಂಡತಿಯು ಗರ್ಭಿಣಿಯಾದಳು. ಪ್ರಸವಕಾಲದಲ್ಲಿ ಭೂಸ್ಪರ್ಶವಾಗದಂತೆ ಶಿಶುವನ್ನು ಧರಿಸಲು ಬ್ರಹ್ಮಣ್ಯತೀರ್ಥರು ಬಂಗಾರದ ಹರಿವಾಣವನ್ನು ಕಳುಹಿಸಿದರು. ವ್ಯಾಸರಾಯರು.

ರಾಮಾಚಾರ್ಯಸುಧೀಮಣೇರ್ದಯಿತಯಾ ... ಪ್ರಸೂಯಿತೋ !
ಬ್ರಹ್ಮಣ್ಯಯತೀಶತಃ ಕರುಣಯಾ ... ।
ವೈಶಾಖಾದಿಮಪಕ್ಷಕೇ ದಿನಮಣೇರ್ವಾರೇ ದಿನೇ ಸಪ್ತಮೇ ।
ಪ್ರಹ್ಲಾದೋಽವತತಾರ ಭೂಮಿವಲಯೇ ನಾಗಾಧಿಪಸ್ಯಾಂಶಭೃತ್ ॥

(ಎಂಬುದಾಗಿ **ವಿದ್ಯಾರತ್ನಾಕರಸ್ವಾಮಿಗಳು** ಹೇಳಿರುವಂತೆ) ಪ್ರಭವ ಸಂವತ್ಸರ ವೈಶಾಖ ಶುದ್ಧ ಸಪ್ತಮೀ ಭಾನುವಾರ ಅವತರಿಸಿದರು.

ಇತಿಹಾಸ ಸಂಶೋಧಕರಾದ **ಮಾ॥ ಸ್ವಾಮಿಕಣ್ಣು ಪಿಳ್ಳೆಯವರು** ವ್ಯಾಸರಾಯರು ಕ್ರಿ.ಶ. ೧೪೪೭ ನೇ ಏಪ್ರಿಲ್ ಇಪ್ಪತ್ತೆರಡನೇ ತಾರೀಖಿನ ದಿನ ಅವತರಿಸಿದರೆಂದು ನಿರ್ಧರಿಸಿರುವರು. ಅದೇ ಸಂವತ್ಸರ ವೈಶಾಖವು ಅಧಿಕಮಾಸವಾಗಿದ್ದುದರಿಂದ ಅಧಿಕ ವೈಶಾಖ ಶುದ್ಧ ಸಪ್ತಮಿ ಭಾನುವಾರವೆಂದು ತಿಳಿದು ಬರುತ್ತದೆ. ಹಾಗಲ್ಲದೆ ವೈಶಾಖ ಸಪ್ತಮಿಯೆಂದು ನಿಜಮಾಸದಲ್ಲಿ ಅವತಾರವನ್ನು ನಿರ್ಣಯಿಸಲು ಹೊರಟರೆ ಭಾನುವಾರಕ್ಕೆ ಇನ್ನೂ ಇತರ ವ್ಯತ್ಯಾಸಗಳಿಗೆ ದಾರಿಯಾಗುತ್ತದೆ. ಆದ್ದರಿಂದ ವಿದ್ಯಾರತ್ನಾಕರರ ವೈಶಾಖವನ್ನು ಅಧಿಕ ವೈಶಾಖವೆಂದೇ ಅರ್ಥಮಾಡಿಕೊಳ್ಳಬೇಕು.

ಮಹಾನುಭಾವರಾದ ಶ್ರೀ ವಿಜಯದಾಸರು ಗುರುಸಂಪ್ರದಾಯವನ್ನು ಸ್ತೋತ್ರ ಮಾಡುವ ಒಂದು ಉದಯರಾಗದಲ್ಲಿ ವ್ಯಾಸರಾಯರ ಸಂಕ್ಷಿಪ್ತ ಚರಿತ್ರೆಯನ್ನು ನಿತ್ಯಪಠನೆ ಮಾಡುವವರಿಗೆ ಅನುಕೂಲವಾಗುವಂತೆ ಬಹಳ ಸುಲಭವಾಗಿ ಬರೆದಿರುವರು. ಕಾಲ ದೇಶಗಳ ವಿವರಣೆಗಳು ಇದರಲ್ಲಿಲ್ಲದಿದ್ದರೂ, ಸಂಕ್ಷೇಪವಾಗಿ ಬಂದಿವೆ. ದಾಸರ ವಾಕ್ಯದಲ್ಲಿ ಪ್ರಾಮಾಣ್ಯ ಬುದ್ಧಿಯುಳ್ಳ ಭಕ್ತ ಜನಗಳಿಗೆ ಈ ಪದ್ಯ ನಿತ್ಯಪಠನೆಗೆ ಉಪಯುಕ್ತವಾದ್ದರಿಂದ ಅದನ್ನು ಈ ಕೆಳಗೆ ಉದ್ಧರಿಸಲಾಗಿದೆ.

ಭೂಪಾಳಿ

ವ್ಯಾಸರಾಯರ ಭಜಿಸಿರೋ— ಪ.

ವ್ಯಾಸರಾಯರ ಭಜಿಸಿ । [illegible] ಸಿದ್ಧಿಸುವುದು [illegible] ಯಲ್ಲಿ ॥ ಅ.

ಪಿತನಿಂದ ನೊಂದು ರತಿ | ಪತಿ ಪಿತನ ತುತಿಸಿ ಸುಹ | ಪ್ರತಿಬಂಧಕಗಳು ಅಪ್ರತಿಯಾಗಿ ಬರುತಿರಲು | ಅತಿವೇಗದಿಂದ ಪಾರಂಗತನಾಗಿ | ಹಿರಿದಾದ ಮತಿವಂತನಾಗಿ ಸತತ|| ಕ್ಷಿತಿಯ ಭಾರವ ವಹಿಸಿ | ಕ್ರತುಭುಜ ಮುನಿಶ್ರೇಷ್ಠನ | ಸ್ತುತಿಸಿಕೊಳ್ಳುತಲಿದ್ದು | ಮಿತಕಾಲ ಹಿಂಗಳೆದು | ಸುತಗೆ ರಾಜ್ಯವನಿತ್ತು | ಕೃತಾರ್ಥನಾಗಿ ಎಷ್ಟೆಷ್ಟು ಪುರುಷಾರ್ಥದಲ್ಲಿ || ೧

ಅಲ್ಲಿ ಘೃಣಿನೇತ್ರ ಶಿರಿ | ವಲ್ಲಭನ ಶ್ರೀಪಾದ | ಪಲ್ಲವಾರುಣ ಚಿತ್ತದಲ್ಲಿ ಪ್ರತಿದಿವಸ ನಿಲ್ಲಿಸಿ ನಿಗಮಾರ್ಥದಲ್ಲಿ ಪೂಜಿಸುತಿರ್ದ ಬಲ್ಲಾನುಭಕುತಿಯಲ್ಲಿ || ಖುಲ್ಲನಲಿ ಪುಟ್ಟಿದ ಪ್ರಹ್ಲಾದದೇವನು | ಬಲ್ಲಿದನಾಗಿ ಸಂಸಾರವನ್ನುತ್ತರಿಸಿ | ಎಲ್ಲ ಕಾಲದಲಿರುತ್ತಿರಲು ನಾರದ ಮುನಿ | ಮೆಲ್ಲಮೆಲ್ಲನೆ ನಡೆ ತಂದನಲ್ಲಿ. ೨

ಬಂದ ನಾರದಗೆ ಪ್ರಹ್ಲಾದದೇವನು ಎರಗಿ | ನಿಂದು ಕರಗಳ ಮುಗಿದು ತ್ರಾಹಿ ತ್ರಾಹೀಯೆಂದು | ಒಂದೊಂದು ವಾಕ್ಯಂಗಳಿಂದ ಕೊಂಡಾಡಿ ಬೆಸಗೊಂಡ ನಿಮ್ಮಯದರುಶನ ಚಂದವಾಯಿತು ಎನಗೆ | ಎತ್ತಲಿಂದಲಿ ಇತ್ತ ಬಂದಾ ವಿಚಾರವನು ಪೇಳೆಂದು ಬಿನ್ನೈಸೆ || ಬೃಂದಾರಕಮುನಿ ನುಡಿದ ಕೃಷ್ಣನ ಮಹಿಮೆ ನಂದ ಹಾಹಾ ಎನುತಲಿ- ೩

ದಿಕ್ಕುಗಳನೇ ಮರೆದು ಧಿಗಿಧಿಗಿ ಚಿಗಿದಾಡೆ | ಉಕ್ಕಿದುವು ಕಣ್ಣಿಂದ ಅಶ್ರುಧಾರೆಗಳು ತಾ | ರಕ್ಕಿಯಂದದಿ ಪೊಳೆವುತ್ತಿರಲು ಆಗ ದೇ | ವಕ್ಕಿನಂದನನ ನಾಮ || ನಕ್ಕು ಕಿಲಿಕಿಲಿ ರಹಸ್ಯಗಳನುಚ್ಚರಿಸುತ | ತಕ್ಕೈಸಿ ತಿಳುಹಿದನು ಮುಂದಿನಾಗಮನವನು | ಇಕ್ಕೆಲರು ಸಹಜ ಜನಿಸುವ ವೃತ್ತಾಂತ | ಅಕ್ಕಟಕ್ಕಟ ಏನೆಂಬೆ- ೪

ವೃಕೋದರನಿಂದ ದೇಹವನು ಬಿಡುವಾಗ ಬಾ | ಹ್ಲಿಕರಾಯನಾಗಿ ಪುಟ್ಟಿದ್ದ ಪ್ರಹ್ಲಾದನು | ಉಕುತಿಯಲಿ ಪೊಗಳಿದವರನ್ನು ಬೇಡಿದನು ವೈದಿಕ ಮಾರ್ಗವನ್ನೆ ಧರಿಸಿ || ಮುಕುತಿಯನು ಸಾಧಿಸಲು ಕಲಿಯುಗದೊಳಗೆ ನಿಮ್ಮ ಪೂಜಕನಾಗಿ ಬಾಳುವೆನೆಂದು ತಲೆವಾಗೆ | ಭಕುತಿಗೆ ಮೆಚ್ಚಿ ಸಟೆಯೆಂದ ಮಾತಿಗೆ ಇಂದು ಪ್ರಕಟವಾಯಿತು ಧರೆಯೊಳು || ೫

ಬನ್ನೂರು ಗ್ರಾಮದಲಿ ಜನಿಸಿದನು ಭೂಸ್ಪರ್ಶ | ಮುನ್ನವಿಲ್ಲದೆ ಬೆಳೆದು ಶುದ್ಧ ಮುನಿ ಸುಬ್ರಾಹ್ಮಣರನ್ನು ಪಾಲಿಸುವ ಪರಮಾನಂದ ಗುರು ಬ್ರಹ್ಮಣ್ಯತೀರ್ಥರ ದಿವ್ಯಕರಗಳಿಂದ || ಚೆನ್ನಾಗಿ ಉಪನೀತನಾಗಿ ಪೋಷಿಸಿಕೊಂಡು | ಸನ್ಯಾಸ ಪಟ್ಟವನು ಧರಿಸಿ ಧರ್ಮದಲಿ ಸ | ತ್ಪುಣ್ಯ ಶ್ರೀಪಾದರಾಯರಲಿ ಓದಿ | ಧನ್ಯ ಕೀರ್ತಿಯಲಿ ಮೆರೆದ- ೬

ಯಂತ್ರೋದ್ಧಾರಕನ ಪ್ರತಿಷ್ಠಿಸಿ ವಿಜಯೀಂದ್ರ|ಸಂತತ ಕನಕ ವಾದಿರಾಜ ಪುರಂದರ|ಇಂತು ಶಿಷ್ಯರನ ಪಡೆದು ಉಪದೇಶಿಸಿ ಮಂತ್ರಸಿದ್ಧಿಯ ತೋರಿಸಿ || ಭ್ರಾಂತಿಗೊಳಿಸುವ ಮಹಾ ಅನ್ಯಾಯಮತವೆಂಬ| ಕಾಂತಾರ ಪಾವಕನೆನಿಸಿ ವ್ಯಾಸಾಬ್ಧಿಯನೆ ಬಿಗಿದು | ಶಾಂತ ನಿಸ್ಸೀಮನೆಂದೆನಿಸಿದ ಶಿರೋರನ್ನ ಚಿಂತಿತ ಫಲದಾಯಕ. ೭

ರಾಯಗದ್ದುಗೆಯೇರಿ ಅವರಿಗೆ ಬಂದ ಮಹಾ ಕುಹಯೋಗವನೆ ನೂಕಿ ರಾಜ್ಯದೊಳಗಿದ್ದ | ಮಾಯಿಗಳ ಮರ್ದಿಸಿ ಮುದದಿಂದ ಸುವರ್ಣಾಭಿಷೇಕದಿ ಒಪ್ಪುತಾ || **ನ್ಯಾಯಾಮೃತ ತರ್ಕತಾಂಡವ ಚಂದ್ರಿಕೆಯ**ನ್ನು | ಈ ಯುಗದೊಳಗೊರೆದು

ಮುಕ್ತಿಗೆ ಪಥವಾದಿ। ಶ್ರೀಯರಸನೊಲಿಸಿ ನಾನಾ ವಿಧದಿ ಪೂಜಿಸಿ। ಸ್ವಾಮಿದಾಸರು ಕುಂಭ ಕ್ಷೇತ್ರದಲ್ಲಿ । ೮

ಮಧ್ವಮತವೆಂಬ ದುಗ್ಧಾಬ್ಧಿ ಪೂರ್ಣೇಂದು । ಹೃತ್ಪದ್ಮದೊಳಗೆ ಶ್ರೀಕೃಷ್ಣನ ಪದಾಂಬುಜವ । ಚಿತ್ತಾಕ್ಷದಲಿ ನಿಲಿಸಿ ಕಾವ್ಯದಲಿ ಕೊಂಡಾಡಿ ಸದಯದಿ ನಿತ್ಯದಲಿಗೆ । ಸದ್ಭಕ್ತಿಯನು ಪೇಳಿ ತವಕದಿಂದಲಿ ರಾತ್ರಿ । ಸಿದ್ಧ ಸ್ಥಲದಲೋಕ ಸೇರಿ ಮುಕ್ತಿ ಪಡೆದ ಮಧ್ವವಲ್ಲಭ ನಮ್ಮ ವಿಜಯ ವಿಠಲನ ಪಾದಪದ್ಮದಲ್ಲಿ ಭಕ್ತಿಯಲಿ । ೯

ಈ ಪದವನ್ನು ಸಾಮಾನ್ಯವಾಗಿ ಭಾಗವತ ಧರ್ಮದಲ್ಲಿ ಆಸಕ್ತರಾದ ಹರಿದಾಸರುಗಳಲ್ಲಿ ಭಕ್ತಿಯುಳ್ಳ ಹಿಂದಿನ ಜನರು ನಮ್ಮ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಪ್ರಾತಃಕಾಲದಲ್ಲಿ ಹೇಳಿಕೊಳ್ಳುತ್ತಾರೆ. ಈ ಪದದಂತೆಯೇ ಶ್ರೀಪಾದರಾಜ, ಪುರಂದರದಾಸ ವಿಜಯದಾಸರುಗಳ ಮಹಾಭಾಗವತರಾದ ಉದಯರಾಗಗಳನ್ನು ಹಾಡುತ್ತಾರೆ. ಪ್ರಾತಃಕಾಲದಲ್ಲಿ ಪರಮ ಭಾಗವತರ ನಾಮಸ್ಮರಣೆ ಚರಿತ್ರೆಕಥನಗಳು ಪಾಪಪರಿಹಾರ ಪುಣ್ಯಪ್ರಾಪಕಗಳೆಂಬ ಭಕ್ತಿಭಾವವು ಜನತೆಯಲ್ಲಿರುವುದರಿಂದ ಇಂತಹ ದೇವರ ನಾಮಗಳು ಇನ್ನೂ ಅಲ್ಲಲ್ಲಿ ಕಿವಿಗೆ ಬೀಳುತ್ತಿವೆ. ಹಳೆಯ ಜನರು ಅಳಿದರೆಂದರೆ, ಪುರಾತನ ದೇವರ ನಾಮಗಳೂ ಅಳಿದಿರುವ ಸಂಭವವಿರುವುದರಿಂದ ಭಕ್ತವಿಜಯದಲ್ಲಿ ಒಂದೊಂದು ದೇವರ ನಾಮಗಳನ್ನು ಗುರುತಿಗಾಗಿ ಬರೆಯಲಾಗಿದೆ.

ಈ ಪದವು ಬಹುಕಾಲದಿಂದ ಹೇಳಿದವರ ಮತ್ತು ಬರೆದಿಟ್ಟುಕೊಂಡವರ ವಾಚನ ಲೇಖನ ದೋಷಗಳಿಂದ ಕೂಡಿದೆ. ಅರ್ಥ ಕೆಡದಂತೆ ಲಲಿತವಾಗಿಯೂ ಇದೆ. ಈ ಪದದಲ್ಲಿ ಅವತಾರತ್ರಯಗಳ ವರ್ಣನೆಯಿದೆ. ವ್ಯಾಸರಾಯರು ಶೇಷಾಂಶದಿಂದ ಕೂಡಿದ ಪ್ರಹ್ಲಾದನೆಂಬ ಮಾತನ್ನು ವಿದ್ಯಾರತ್ನಾಕರತೀರ್ಥರು ಅವತಾರ ಸೂಚನೆಯ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸುತ್ತಾರೆ. ಪುರಂದರದಾಸರು ಮೊದಲಾಗಿ ಎಲ್ಲಾ ದಾಸರೂ ವ್ಯಾಸರಾಯರು ಪ್ರಹ್ಲಾದಾವತಾರರೆಂದು ಸಾರಿರುತ್ತಾರೆ. ಈ ಪದದ ಮೊದಲ ಕೆಲವು ನುಡಿಗಳಲ್ಲಿ ಪ್ರಹ್ಲಾದಾವತಾರವೂ, ಐದನೇ ನುಡಿಯಲ್ಲಿ ಬಾಹ್ಲೀಕಾವತಾರವೂ ಕಡೆಯ ನುಡಿಗಳಲ್ಲಿ ವ್ಯಾಸಾವತಾರವೂ ಸಂಕ್ಷೇಪವಾಗಿ ವರ್ಣಿಸಲ್ಪಟ್ಟಿವೆ.

ಹೇಗಂಗೆ ಕಲಿಯುಗವೇನೋ ಅಸತ್ಯದ ಯುಗ; ಜನರು ಕಲ್ಮಷಚಿತ್ತರು; ದುರಾಚಾರರು: ಪಾಪಪ್ರವೃತ್ತಿಶಾಲಿಗಳು: ಅಲ್ಪಾಯುಷರು; ಅಲ್ಪ ಬುದ್ಧಿಗಳು; ನಿರಂತರ ದುಃಖ ದಾರಿದ್ರ್ಯದಿ ಪೀಡಿತರು. ಹೀಗಿದ್ದರೂ ಇದೇ ಕಲಿಯುಗದಲ್ಲಿ ಬಹುಮಂದಿ ದೇವತೆಗಳು ಅವತಾರವೆತ್ತಿ ಸಜ್ಜನರಿಗೆ ಮಾರ್ಗದರ್ಶಿಗಳಾಗಿದ್ದಾರೆ. ಅಧರ್ಮವನ್ನು ಬಿಟ್ಟು ಧರ್ಮಸ್ಥಾಪನೆ ಮಾಡಿದ್ದಾರೆ. ಭಗವದಾಜ್ಞೆಯಿಂದ ದೇವತೆಗಳು ಸತ್ಪುರುಷರ ಸ್ವರೂಪದಿಂದ ಬರುತ್ತಿದ್ದಾರೆ. ಪ್ರಹ್ಲಾದನು ವ್ಯಾಸರಾಯರಾಗಿ, ಅವರ ತರುವಾಯ ವಿಜಯದಾಸರಿಂದ ಸ್ತುತರಾದ ಪುರಂದರದಾಸರ ಸ್ತೋತ್ರದಲ್ಲಿನ ಮಾತುಗಳು ಪ್ರಮಾಣವಾಗಿವೆ. ಆ ವಿವರವೇನೆಂದರೆ—

ದ್ವಾಪರಾಂತ್ಯದಲ್ಲಿ ಶ್ರೀಮನ್ನಾರಾಯಣನು ತನ್ನ ಶ್ರೀಕೃಷ್ಣಾವತಾರದ ವೈಭವ

ವನ್ನು ಪೂರ್ತಿಗೊಳಿಸಿ, ಪರಂಧಾಮಕ್ಕೆ ತೆರಳಬೇಕೆಂದಿರುವಾಗ ಭಗವದ್ದರ್ಶನ ನಿಮಿತ್ತವಾಗಿ ನಾರದ ಮಹಾಮುನಿಗಳು ದ್ವಾರಕಿಗೆ ಬಿಜಯಂಗೈದರು. ಬಂದ ಮುನಿಗಳನ್ನು ಸತ್ಕರಿಸಿ ಶ್ರೀಕೃಷ್ಣನು ಕುಶಲಪ್ರಶ್ನೆ ಮಾಡುತ್ತಿರಲು–ನಾರದರು, "ದೇವಾ, ನೀನು ಪರಂಧಾಮಕ್ಕೆ ತೆರಳುವಾಗಲೇ ಘೋರ ಕಲಿಯುಗವು ಪ್ರಾರಂಭವಾಗಿದೆ. ಈಗಾಗಲೇ ಮಹಾಪಾತಕಿಗಳು ಧರ್ಮ ಧ್ವಂಸಮಾಡುತ್ತಿದ್ದಾರೆ. ಭೂಲೋಕದಲ್ಲಿ ನರರೂಪದಿಂದ ನೀನಿರುವಾಗಲೇ ಕಲಿವ್ಯಾಪಾರವು ಇಷ್ಟು ನಿರ್ಭಯವಾಗಿ ನಡೆಯುತ್ತಿದೆ. ನೀನೂ ತೆರಳಿದಮೇಲೆ, ಮುಂದೆ ಭೂಲೋಕದ ಗತಿಯೇನು ? ಕೃತ ತ್ರೇತಾ ದ್ವಾಪರಯುಗಗಳಂತೆ ನಮ್ಮಂಥ ಋಷಿಮುನಿಗಳಿಗೆ ಭೂಲೋಕದಲ್ಲಿ ನಿಜರೂಪದಿಂದ ಸಂಚರಿಸಲು ನಿನ್ನ ಆಜ್ಞೆಯಿಲ್ಲ. ಈ ಕಲಿಯುಗದಲ್ಲಿ ನಾವಿದ್ದು ಮಾಡುವ ಕೆಲಸವೇನು ? ಕಲಿಯುಗದ ಪಾಮರರ ಉದ್ಧಾರಕ್ಕೆ ಮಾರ್ಗವೇನು ? ಸರ್ವಜ್ಞನಾದ ನೀನೇ ತಿಳಿಸಬೇಕೆಂದು" ವಿನಯವಾಗಿ ಪರಮಾತ್ಮನನ್ನು ಪ್ರಾರ್ಥಿಸಿದರು.

ದಯಾಸಮುದ್ರನಾದ ಶ್ರೀಹರಿಯು–"ನಾರದರೆ ಚಿಂತಿಸಬೇಡಿ. ನಿಜರೂಪದಿಂದ ನಿಮ್ಮಂಥವರು ಕಲಿಯುಗದಲ್ಲಿ ಸಂಚರಿಸಲು ಅವಕಾಶವಿಲ್ಲ; ನಿಜ. ಆದರೆ ಅವತಾರಮಾಡಿ ಧರ್ಮಸ್ಥಾಪನೆಮಾಡಲು ಯಾವ ಅಡ್ಡಿಯೂ ಇರುವುದಿಲ್ಲ. ಕಲಿಯುಗವೆಂದ ಮಾತ್ರಕ್ಕೇ ಪಾಪಯುಗವೆಂದು ದುಃಖಿಸುವ ಕಾರಣವಿಲ್ಲ. ಕಾಲಚಕ್ರವು ತಿರುಗುತ್ತಿರಬೇಕು. ನಿಮ್ಮಂಥವರ ಅವತಾರ ಮಾತ್ರದಿಂದ ಕಲಿಯುಗವು ಧರ್ಮಯುಗವಾಗುವುದು. ನೀವೂ ಭಾಗವತಾಗ್ರೇಸರನಾದ ಪ್ರಹ್ಲಾದನೂ ಇತರ ದೇವತೆಗಳೂ ಭೂಮಿಯಲ್ಲವತರಿಸಿ ಧರ್ಮಸ್ಥಾಪನೆ ಮಾಡಿರಿ. ನಿಮಗೆ ನಾನೇ ಬೆಂಬಲನಾಗಿರುವೆನು. ನನ್ನ ಅನುಗ್ರಹವನ್ನು ಸಂಪಾದಿಸುವುದಕ್ಕೆ ಕಲಿಯುಗದಷ್ಟು ಸುಲಭವಾದ ಯುಗವು ಮತ್ತೊಂದಿಲ್ಲ" ಎಂದು ಮೊದಲಾಗಿ ಸಮಾಧಾನಮಾಡಿ, ಸಂತೋಷಗೊಳಿಸಿ ಸುರಮುನಿಯನ್ನು ಬೀಳ್ಕೊಟ್ಟನು. ಆ ಸಂತೋಷಭರದಲ್ಲೇ ನಾರದರು—ಪ್ರಹ್ಲಾದನ ಬಳಿಗೆ ಬಂದರು. ತಾವೀರ್ವರೂ ಭೂಲೋಕದಲ್ಲವತರಿಸಲು ಭಗವದಾಜ್ಞೆಯಾಗಿರುವ ಸಂಗತಿಯನ್ನು ತಿಳಿಸಿದರು. ಪ್ರಹ್ಲಾದನೂ ಭಗವದಾಜ್ಞೆಯನ್ನು ಶಿರಸಾವಹಿಸಿ ಕಾಲಾಂತರದಲ್ಲಿ ಕರ್ಣಾಟಕದೇಶದಲ್ಲಿ ವ್ಯಾಸಮುನಿಯಾಗಿ ಅವತರಿಸಿದನು.

ಕರ್ಣಾಟಕ ದೇಶದಲ್ಲಿ ಮಾತ್ರ ಅವತಾರಮಾಡಿದ ಯತಿಶ್ರೇಷ್ಠರನ್ನೂ ಹರಿದಾಸರನ್ನೂ ದೇವಾಂಶರೆಂದು ತಿಳಿವ ವಾಡಿಕೆಯಿದೆಯೆಂದು ಹೈತುಕರು (Rationalists) ಯೋಚಿಸುವ ಕಾರಣವಿಲ್ಲ. ಮಹಾರಾಷ್ಟ್ರ ದೇಶದಲ್ಲಾಗಲೀ, ಉತ್ತರ ಹಿಂದೂಸ್ಥಾನದಲ್ಲಾಗಲೀ, ದ್ರವಿಡದೇಶದಲ್ಲಾಗಲೀ ಆಯಾ ಕಾಲದಲ್ಲವತರಿಸಿ, ಧರ್ಮೋದ್ಧಾರಮಾಡಿದ ವಿಭೂತಿ ಪುರುಷರುಗಳನ್ನೂ ಆಯಾ ದೇಶೀಯರು ಭಗವದಾಜ್ಞೆಯಿಂದವತರಿಸಿದ ದೇವತೆಗಳೆಂದೇ ಭಾವಿಸುತ್ತಿದ್ದಾರೆ. ಉತ್ತರದೇಶದಲ್ಲವತರಿಸಿದ **ಕಬೀರ, ಕಮಾಲ, ರೋಹಿದಾಸ ತುಲಸೀದಾಸ, ನಾನಕ, ಜಯದೇವ**ರಂಥ ಸತ್ಪುರುಷರನ್ನು ಮನುಷ್ಯಸಾಮಾನ್ಯರೆಂದು ಯಾರೂ ಪರಿಗಣಿಸುವುದಿಲ್ಲ. ಅಲ್ಲಿನವರು ಆ ಮಹಾ ವಿಭೂತಿಗಳನ್ನು

ದೇವಾಂಶರೆಂದೇ ಕರೆಯುತ್ತಾರೆ. ಮಹಾರಾಷ್ಟ್ರದ **ಸಮರ್ಥ ರಾಮದಾಸರು, ತುಕಾರಾಂ, ನಾಮದೇವ** ಮೊದಲಾದವರಾದರೂ ಸಾಮಾನ್ಯ ಮರ್ತ್ಯರಲ್ಲ. ಅಂತೆಯೇ ದ್ರಾವಿಡದೇಶದ **ಆಳ್ವಾರರು** ನರಜನ್ಮದಲ್ಲಿ ಬಂದ ಹೂವುಗಳಲ್ಲ. ಈ ಎಲ್ಲ ರಾಷ್ಟ್ರಗಳಲ್ಲಿಯೂ ಈ ಸತ್ಪುರುಷರ ಅವತಾರವಾಗದಿದ್ದರೆ, ಈ ಹೊತ್ತಿನ ಕಾಲದಲ್ಲಿಯೂ ಹಿಂದೂ ಧರ್ಮವು ಇಷ್ಟುಮಟ್ಟಿಗಾದರೂ ಜೀವಂತವಾಗಿರುತ್ತಿರಲಿಲ್ಲ. ಭರತಭೂಮಿಯೆಲ್ಲಾ ಪಾಪಭೂಮಿಯಾಗಿ ಮ್ಲೇಂಛ ಹಿಂಸಾವಿಹಾರಿಗಳ ಮಯವಾಗಿಬಿಡುತ್ತಿತ್ತು.

ಭರತಖಂಡದಲ್ಲಿ ಇದೊಂದು ವೈಚಿತ್ರ್ಯ! ಯಾವ ಪ್ರಾಂತ್ಯದಲ್ಲಾಗಲೀ ಒಂದು ರೀತಿಯ ಶಾಂತಿ ನೆಲೆಸಿದ್ದಾಗ ಸತ್ಪುರುಷರ ಅವತಾರವಾಗುವುದಿಲ್ಲ. ಒಂದು ವೇಳೆ ಅವತರಿಸಿದ್ದರೆ, ಅವರ ಹೆಸರು ಗೊತ್ತಿಗೆ ಬಂದಿರುವುದಿಲ್ಲ. ಒಂದು ಕಡೆ ರಾಜ್ಯಗಳೇ ತಲೆಕೆಳಗಾಗುವ ರಾಜಕೀಯ ಪರಿಪ್ಲವ! ಒಂದು ಕಡೆ ಕ್ಷಾಮಡಾಮರ ರೋಗಾದ್ಯುಪದ್ರವಗಳು! ಒಂದು ಕಡೆ ದೈವದ್ರೋಹಿ ಧರ್ಮದ್ರೋಹಿ ಜನರಿಂದ ದೀನರಿಗೆ ಪ್ರಾಪ್ತವಾಗುತ್ತಿರುವ ಗಂಡಾಂತರಗಳು! ಇಂತಹ ಸಮಯಗಳನ್ನರಿಸಿಕೊಂಡೇ ಸತ್ಪುರುಷರು ಭೂಮಿಯಲ್ಲಿ ಅವತರಿಸುತ್ತಾರೆ. **ಬುದ್ಧ ಶಂಕರ ರಾಮಾನುಜ ಮಧ್ವ**ರಂಥಾ ಬಲು ದೊಡ್ಡವರ ಮಾತು ಹಾಗಿರಲಿ! ಒಬ್ಬ **ಕಬೀರ**ನವತರಿಸಿದ ಸಮಯವೆಂಥಾದ್ದೋ ನೋಡೋಣ! ಮುಸಲ್ಮಾನರು ಹಿಂದೂಮತ ದ್ವೇಷದಿಂದ ಮನೆ ಮನೆಗಳನ್ನು ನುಗ್ಗಿ ಧರ್ಮಾಂತರ ಮಾಡುತ್ತಿದ್ದರು. ಗುಡಿಗಳನ್ನು ಗುಂಡಾಂತರವಾಗಿ ಕೊಳ್ಳೆ ಹೊಡೆಯುತ್ತಿದ್ದರು. ಜನರ ಮಾನ ಪ್ರಾಣರಕ್ಷಣೆ ಸಹ ದುರ್ಲಭವಾಗಿತ್ತು. ಹಿಂದೂ ರಾಜರು ನಿರ್ವೀರ್ಯರೂ ನಿಸ್ತೇಜರೂ ಆಗಿದ್ದರು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕಬೀರನು ಬಯಲಿಗೆ ಬಂದನು. ಹಿಂದೂ ಜನರಲ್ಲಿ ಸಂಘ ಶಕ್ತಿಯನ್ನುಂಟುಮಾಡಿದನು. ಭಾಗವತ ಧರ್ಮವನ್ನು ಬೀದಿಬೀದಿಗಳಲ್ಲಿ ನಿಂತು ಉಪದೇಶಿಸಿದನು. ಮುಸಲ್ಮಾನರ ಹಿಂದೂಮತ ದ್ವೇಷವನ್ನು ತಗ್ಗಿಸಿದನು. ರಾಷ್ಟ್ರದಲ್ಲಿ ಶಾಂತಿಸ್ಥಾಪನೆ ಮಾಡಿದನು.

ಮಹಾರಾಷ್ಟ್ರದಲ್ಲಿ — ಔರಂಗಜೇಬನ ಹಾವಳಿಯೊಂದುಕಡೆ, ಬಿಜಾಪುರದ ಬಾದಷಹರ ಬಲುಮೆಯೊಂದುಕಡೆ, ಹೀಗೆ ಎರಡೂ ಕೂಡಿ ಧರ್ಮ ನಿರ್ಮೂಲವಾಗುವ ಕಾಲ ಬಂದಾಗ, ರಾಮದಾಸರಂಥಾ ಸಮರ್ಥರ ಅವತಾರವಾಯಿತು. ಶಿವಾಜಿಯಂಥಾ ರಾಜ್ಯಸ್ಥಾಪಕನುದಿಸಿದನು. ನಾಮದೇವ ತುಕಾರಾಮರಂಥಾ ಸತ್ಪುರುಷರು ಉದಯಿಸಿ ಭಾಗವತ ಧರ್ಮವನ್ನು ಪ್ರಚುರಿಸಿದರು. ಧರ್ಮರಕ್ಷಣೆಯಾಯಿತು, ಶಾಂತಿ ನೆಲೆಗೊಂಡಿತು.

ಅಂತೆಯೇ ಕರ್ನಾಟಕದಲ್ಲಿ-ದುರುಳರ ದುರ್ವರ್ತನ ಹೆಚ್ಚಿದಾಗ, ಸ್ತ್ರೀಯರ ಮಾನಭಂಗವಾಗುತ್ತಿದ್ದಾಗ, ಗುಡಿಗಳು ಗೋರಿಗಳಾಗುತ್ತಿದ್ದಾಗ, ವಿದ್ಯಾರಣ್ಯರ ಅವತಾರವಾಯಿತು. ಹುಕ್ಕ ಬುಕ್ಕರಂಥಾ ಸಾಮ್ರಾಜ್ಯ ಸ್ಥಾಪಕರುದಿಸಿದರು. ಧರ್ಮೋದ್ಧಾರವಾಯಿತು. ಮುಂದೆ ನೂರೈವತ್ತು ವರ್ಷಗಳಷ್ಟು ಕಾಲ ಕರ್ನಾಟಕದಲ್ಲಿ ಶಾಂತಿ ನೆಲಸಿತು.

ಮತ್ತೆ ವಿದ್ಯಾರಣ್ಯರ **"ಪಂಚಾಶದುತ್ತರ ಶತೇ ವಂಶಪೂರ್ತಿರ್ಭವಿಷ್ಯತಿ"** ಎಂಬ ಕಾಲಜ್ಞಾನ ವಚನದಂತೆ, ವಿರೂಪಾಕ್ಷ ಭೂಪತಿಯೊಡನೆ ಪ್ರಥಮ ರಾಜವಂಶ

ಪೂರ್ತಿಯಾಯಿತು. ವೀರ ನರಸಿಂಹಭೂಪಾಲನು, ಹೆಚ್ಚಿನ ರಾಜ್ಯಕ್ರಾಂತಿಗೆ ಅವಕಾಶ ಕೊಡದೆ ತಾನೇ ವಿಜಯನಗರದ ಸಾಮ್ರಾಜನಾದನು. ವ್ಯಾಸರಾಯರು ಸಾಮ್ರಾಜ್ಯ ರಕ್ಷಕರಾಗಿ ನಿಂತರು. ವೀರ ನರಸಿಂಹನಿಂದ ಅಚ್ಯುತರಾಯನ ಕಾಲದವರೆಗೆ ವಿಜಯ ನಗರವು ಮಹೋನ್ನತ ದೆಶೆಯಲ್ಲಿ ಬಾಳಿತು. ಧರ್ಮದ್ವೇಷಿಗಳಾದ ಮುಸಲ್ಮಾನರು ಅಡಗಿ ಕುಳಿತಿದ್ದರು. ಪುರಂದರದಾಸ ಕನಕದಾಸರಂಥ ಮಹನೀಯರು ಭಾಗವತ ಧರ್ಮೋಪದೇಶ ಮಾಡಿದರು. ಮತ್ತೆ ಎಪ್ಪತ್ತೈದು ವರ್ಷಕಾಲ ಕರ್ಣಾಟಕದಲ್ಲಿ ಶಾಂತಿಯು ನೆಲೆ ಗೊಂಡಿತ್ತು.

ಲೋಕದಲ್ಲಿ ಭಗವದವತಾರವಾಗಲಿ, ಭಗವದ್ಭಕ್ತರ ಅವತಾರವಾಗಲಿ ಎರಡು ಬಲವತ್ತರ ಕಾರಣಗಳಿದ್ದಾಗ ಆಗುವುವು. ಮೊದಲನೆಯದು ಬಲಕಾರ್ಯ, ಎರಡನೆ ಯದು ಜ್ಞಾನಕಾರ್ಯ. ಪ್ರಬಲರಿಂದ ದುರ್ಬಲರಿಗೆ ಬಾಧೆಯಾಗಿ, ಪ್ರಪಂಚದಲ್ಲಿ ದೇಹ ಧಾರಣೆಯೇ ದುಸ್ತರವೆನಿಸಿದಾಗ ಆದ ಭಗವದವತಾರಗಳು ಬಲಕಾರ್ಯದ ಅವತಾರ ಗಳೆನಿಸಿಕೊಂಡವು. ಉದಾಹರಣೆ : ನರಸಿಂಹ, ಪರಶುರಾಮ, ರಾಮ, ಕೃಷ್ಣ ಇತ್ಯಾದಿ. ಪ್ರಪಂಚದ ಜನರು ಧರ್ಮಾಧರ್ಮಗಳನ್ನೂ ತಮ್ಮ ಭವಿತವ್ಯತೆಯನ್ನೂ ತಿಳಿಯದೆ ಅಜ್ಞಾನದಲ್ಲಿ ಮುಳುಗಿ ಪರಿತಪಿಸಿದಾಗ ಆದ ಭಗವದವತಾರಗಳು ಜ್ಞಾನಕಾರ್ಯದ ಅವ ತಾರಗಳೆನಿಸಿಕೊಂಡವು. ಉದಾಹರಣೆ : ಕಪಿಲ, ದತ್ತಾತ್ರೇಯ, ವೇದವ್ಯಾಸ ಇತ್ಯಾದಿ. ಪರಮಾತ್ಮನ ಶ್ರೀ ಕೃಷ್ಣಾವತಾರವಾದರೋ ಈ ಎರಡು ಕಾರ್ಯದಲ್ಲೂ ಪ್ರವೃತ್ತ ವಾಯಿತು. ಭಗವದ್ಭಕ್ತರ ಅವತಾರಗಳೂ ಸಮಯ ಪರಿಸ್ಥಿತಿಗನುಸರಿಸಿ ಭಗವದವತಾರ ಗಳಂತೆಯೇ ಆದುವು.

ವಿದ್ಯಾರಣ್ಯ, ರಾಮದಾಸ, ನರಹರಿತೀರ್ಥ, ವ್ಯಾಸರಾಯರ ಅವತಾರಗಳು, ಜ್ಞಾನಕಾರ್ಯ ಬಲಕಾರ್ಯಗಳೆರಡರಲ್ಲೂ ಪ್ರವೃತ್ತವಾದುವು. ವಿದ್ಯಾರಣ್ಯರು ಗ್ರಂಥ ರಚನೆ ಮಾಡಿಕೊಂಡು ಕೇವಲ ತಪಸ್ವಿಗಳಾಗಿದ್ದವರು. ಸಮಯ ಪರಿಸ್ಥಿತಿಯನ್ನು (Country's call) ನೋಡಿ, **'ಏಳು ಸಾಯಣ, ಕಟ್ಟು ಗ್ರಂಥವ, ಏಳು ಪಂಪಾ ಕ್ಷೇತ್ರಕೇ'** ಎಂಬುದಾಗಿ ಹೇಳಿಕೊಂಡೇ ಸಾಮ್ರಾಜ್ಯ ಸ್ಥಾಪನೆಗೆ ಬಲಕಾರ್ಯದಲ್ಲಿ ಪ್ರವೇಶಮಾಡಿದರು. ನರಹರಿತೀರ್ಥರು ಸನ್ಯಾಸಿಗಳಾದಮೇಲೆ, ಗಜಪತಿರಾಜ್ಯ (Orissa) ವನ್ನು ಹನ್ನೆರಡುವರ್ಷ ಪರಿಪಾಲನೆ ಮಾಡಿದರು. ಸಮರ್ಥ ರಾಮದಾಸರು ಶಿವಾಜಿಗೆ ಬೆಂಬಲರಾಗಿ ರಣಕ್ಷೇತ್ರದಲ್ಲೂ ಓಡಾಡಿದರು. ವ್ಯಾಸರಾಯರಾದರೋ, ನರಸಿಂಹ, ತಮ್ಮರಾಯ, ಕೃಷ್ಣದೇವರಾಯರ ಸಂಗಡ ದಂಡಯಾತ್ರೆಯಲ್ಲಿ ಹೊರಟು ಬಲಕಾರ್ಯ ದಲ್ಲೂ ಸಹಾಯಕರಾದರು. ಧರ್ಮಪ್ರಚಾರ ಮಾಡುವ ಜ್ಞಾನಕಾರ್ಯವು ಸನ್ಯಾಸಿಗಳಾದ ಈ ನಾಲ್ವರಿಗೂ ಸಹಜಧರ್ಮವೇ ಆಗಿತ್ತು.

ಇಂತು ಬಹು ಬಲವತ್ತರವಾದ ಕಾರ್ಯಭಾಗವನ್ನು ಮುಂದಿಟ್ಟುಕೊಂಡು ಜನ್ಮ ತಾಳಿದರೋ ಎಂಬಂತೆ, ಕ್ರಿ.ಶ. ೨೨-೪-೧೪೪೭ಕ್ಕೆ ಸಲ್ಲುವ ಪ್ರಭವ ಸಂ| ಅಧಿಕ ವೈಶಾಖ ಶುಕ ಸಪ್ತಮಿಾ ಭಾನುವಾರ ಭೂಸ್ಪರ್ಶವಿಲ್ಲದಂತೆ ವ್ಯಾಸರಾಯರು ಅವತಾರ ಮಾಡಿದರು.

ಬ್ರಹ್ಮಣ್ಯತೀರ್ಥರು ಕಳುಹಿಸಿದ್ದ ಭಂಗಾರದ ಹರಿವಾಣದಲ್ಲೇ ಶಿಶುವನ್ನು ತೆಗೆದುಕೊಂಡು ಹೋಗಿ ಅವರಿಗೆ ಸಮರ್ಪಿಸಿದರು. ಅನಂತರ ಆ ಶಿಶುವಿನ ಲಾಲನೆ ಪೋಷಣೆಗಳು ಅಬ್ಬೂರಿನಲ್ಲಿ ಶ್ರೀ ಪುರುಷೋತ್ತಮತೀರ್ಥರ ಗುಹೆಯಲ್ಲಿ ನಡೆದುವು.

ವ್ಯಾಸವಿಜಯದ **ಪಂಚಮಾಬ್ದೇಥ ಬಾಲಸ್ಯ ಚೌಲೋಪನಯನಾದಿಕಂ। ಬ್ರಾಹ್ಮಣ್ಯೈಃ ಕಾರಯಾಮಾಸ ಸಪ್ತಮಾಬ್ದೇ ತತಸ್ಸ್ವಯಂ॥ ಬ್ರಹ್ಮಣ್ಯತೀರ್ಥಸ್ತಂ ಕೃತ್ವಾ ಯತಿಂ ಮಂತ್ರಮುಪಾದಿಶತ್॥ ಶ್ರೀ ವ್ಯಾಸತೀರ್ಥನಾಮಾನಂ ಚಕ್ರೇ ವಿಸ್ತೃತ ಶಾಸ್ತ್ರತಃ॥"** ಎಂಬ ಪ್ರಮಾಣದಂತೆಯೂ ವಿದ್ಯಾರತ್ನಾಕರರ ವ್ಯಾಸ ಸ್ತೋತ್ರದ- **"ಅಬ್ದೇ ಪಂಚಮತಾಯುತೇ ವಟುರಭೂತ್ತು ರ್ಯಾಶ್ರಮಂ ಶ್ರೀಮುಖೇ ಜಗ್ರಾಹಾಥ ಯತೀಶಿತುರ್ವಚನತೋ ಬ್ರಹ್ಮಣ್ಯನಾಮ್ನೋ ಗುರೋಃ॥ ವಿದ್ಯಾಪ್ರಾಪ್ತಿಕೃತೇ ಯತೀಶಮುಗಮಚ್ಛ್ರೀಪಾದರಾಜಾಭಿದಂ। ಅಬ್ದದ್ವಾದಶತತ್ರ ವ್ಯಾಸಮಕರೋತ್ ಶುಣ್ಣನ್ಮಹೇಕ್ಷಾಗಮಂ॥** ಎಂಬ ಪ್ರಮಾಣದಂತೆಯೂ ಬಾಲಕನಿಗೆ ಐದನೇ ವರ್ಷದಲ್ಲಿ ಉಪನಯನವೂ ಏಳನೇ ವರ್ಷದಲ್ಲಿ ಸನ್ಯಾಸವೂ ಆಯಿತು. ಸನ್ಯಾಸಾನಂತರ ಶ್ರೀಪಾದರಾಯರಲ್ಲಿ ಹನ್ನೆರಡು ವರ್ಷ ವ್ಯಾಸರಾಯರ ವಿದ್ಯಾಭ್ಯಾಸವಾಯಿತು.

ಶ್ರೀ ವ್ಯಾಸರಾಯರ ಜನ್ಮವೃತ್ತಾಂತ

(ಸೋಮನಾಥ ಕವಿಯ ವ್ಯಾಸಯೋಗಿ ಚರಿತೆಯಂತೆ)

ಸೋಮನಾಥ ಕವಿಯು ತನ್ನದೇ ಪ್ರತ್ಯೇಕ ಸಂವಿಧಾನದಿಂದ ವ್ಯಾಸಯೋಗಿ ಚರಿತೆಯನ್ನು ಬರೆದಿರುವನೆಂದು ಹಿಂದೆಯೇ ತಿಳಿಸಿದೆ. ಅವನ ಮಾತಿನಂತೆ ಬನ್ನೂರಲ್ಲಿ ಕಾಶ್ಯಪ ವಂಶೋದ್ಭವನಾದ ಬಲ್ಲಣ ಸುಮತಿಯೆಂಬ ಬ್ರಾಹ್ಮಣನಿದ್ದನು. (ಬಲು ಬಲ್ಲವನಾಗಿದ್ದುದರಿಂದ ಬಲ್ಲಣ್ಣನೆಂಬ ಅಡ್ಡ ಹೆಸರುಂಟಾಗಿ ಅವನ ನಿಜನಾಮವಾದ ಸುಮತಿ ಶಬ್ದದೊಡನೆ ಸೇರಿ ಬಲ್ಲಣ ಸುಮತಿಯೆಂದಾಗಿರಬಹುದು.) ಇವನ ಹೆಂಡತಿಯ ಹೆಸರು ಲಕ್ಷ್ಮೀದೇವಿ. ಹೆಸರಿಗೆ ತಕ್ಕಂತೆ ಸೌಂದರ್ಯ ಸೌಶೀಲ್ಯಾದಿ ಗುಣ ಸಂಪನ್ನಳು. ಈ ದಂಪತಿಗಳಿಗೆ ಸಂತಾನವಾಗುವುದು ಸಾವಕಾಶವಾಯಿತು. ಸ್ತ್ರೀಸ್ವಭಾವಕ್ಕೆ ತಕ್ಕಂತೆ ಪತಿಗಿಂತ ಸತಿಗೆ ಸಂತಾನದ ಚಿಂತೆ ಬಲವಾಯಿತು. ಬಲ್ಲಣನಿಗೂ ಸತಿಯ ಚಿಂತೆಯಲ್ಲಿ ಸಮಭಾಗಿಯಾಗದಿರಲು ಸಾಧ್ಯವಾಗಲಿಲ್ಲ. ಅಕ್ಕಮಾಂಬೆಯೆಂಬ ಮತ್ತೊಬ್ಬಳನ್ನು ಲಕ್ಷ್ಮೀದೇವಿಯು ಅನುಮತಿಯಿಂದ ವಿವಾಹ ಮಾಡಿಕೊಂಡನು. ದ್ವಿತೀಯ ವಿವಾಹದಿಂದಲೂ ಸಂತತಿಯಾಗಲಿಲ್ಲ. ಸಂತತಿಗಾಗಿ ಯಾವ ದೇವತಾರಾಧನೆ ಮಾಡೋಣ! ಏನು ದಾನ ಧರ್ಮ ಮಾಡೋಣ! ಯಾವ ಸತ್ಪುರುಷರ ಮರೆಬೀಳೋಣ! ಎಂಬ ಚಿಂತೆಯು ಮೂವರನ್ನೂ ಬಾಧಿಸಿತು. ಬಲ್ಲಣನು ಜ್ಞಾನಾರ್ಜನೆಗಾಗಿ ವೇದವ್ಯಾಸ ಮೂರ್ತ್ಯುಪಾಸಕನಾಗಿದ್ದನು. ವ್ಯಾಸರ ವಿನಾ ಅನ್ಯ ಮೂರ್ತ್ಯುಪಾಸನೆಯು ಆತನಿಗೆ

ಹಿತವೆನ್ನಿಸಲಿಲ್ಲ. ಹಿರಿಯಳಾದ ಲಕ್ಷ್ಮೀದೇವಿಯು ಪತಿಯಿಂದುಪದಿಷ್ಟಳಾಗಿ ವ್ಯಾಸೋಪಾಸನಾರತಳಾಗಿದ್ದಳು.

ಒಂದು ರಾತ್ರಿ ಲಕ್ಷ್ಮೀದೇವಿಯ ಸ್ವಪ್ನದಲ್ಲಿ ಪರಮಕಾರುಣಿಕರೂ, ಭಕ್ತಜನ ಪಾರಿಜಾತರೂ ಆದ ಪಾರಾಶರಿಗಳು ಪ್ರತ್ಯಕ್ಷರಾದರು. 'ನಿಮ್ಮ ತಪಶ್ಚರ್ಯದಿಂದ ಸಂತುಷ್ಟನಾದೆನು; ಈ ದಿವ್ಯಪ್ರಸಾದವನ್ನು ಸ್ವೀಕರಿಸು" ಎನ್ನುತ್ತಾ ಅದೃಷ್ಟಪೂರ್ವವಾದ ಮುಕ್ತಾಮಣಿಗಳಿಂದ ಪೂರ್ಣವಾದ ಕಾಂತಿಮಯವಾದ ಸುವರ್ಣ ಪಾತ್ರೆಯೊಂದನ್ನು ದೇವಿಯ ಕೈಯ್ಯಲ್ಲಿಟ್ಟು ಅದೃಶ್ಯರಾದರು. ಅನಂತರ ಬ್ರಹ್ಮಣ್ಯತೀರ್ಥರ ಸಂದರ್ಶನವಾಯಿತು. ದಂಪತಿಗಳಾದ ನಿಮ್ಮ ಅಭಿಲಾಷೆಯು ವೃದ್ಧಿಯನ್ನೈದುವುದೆಂಬ ವರವಿತ್ತು ಅವರೂ ಅದೃಶ್ಯರಾದರು. ಲಕ್ಷ್ಮೀದೇವಿಯು ತನ್ನ ಕೈಯಲ್ಲಿದ್ದ ಸುವರ್ಣಪಾತ್ರೆಯನ್ನು ನೋಡುತ್ತಾ ಅತ್ಯಾಶ್ಚರ್ಯಾನಂದಭರಿತಳಾದಳು. ಮೊದಲು ದರ್ಶನವಿತ್ತ ಅಪೂರ್ವ ತೇಜೋನಿಧಿಗಳಾದ ವ್ಯಾಸರ ದಿವ್ಯರೂಪವನ್ನು ಚಿಂತಿಸಿದಳು. ತಮ್ಮ ಗುರುಗಳಾದ ಬ್ರಹ್ಮಣ್ಯತೀರ್ಥರು ಇದೇ ಸಮಯದಲ್ಲಿ ಅಭಯ ವಚನಗಳಿಂದ ತನ್ನನ್ನು ಸಂತವಿಸಿದರೆಂದು ಹಿಗ್ಗಿದಳು. ಹೀಗಿರುವಷ್ಟರಲ್ಲಿ ದೇವಿಗೆ ಎಚ್ಚರವಾಯಿತು. ಆಗಲೇ ಬಲ್ಲಣನು– ಹರೇ ಮುಕುಂದ ಮುರಮರ್ದನ ಎಂಬುದಾಗಿ ಭಗವನ್ನಾಮ ಸ್ಮರಣೆಮಾಡುತ್ತಾ ನಿದ್ರೆಯಿಂದೆದ್ದು ತನ್ನ ಶಯ್ಯೆಯಲ್ಲಿ ಕುಳಿತನು. ಪತಿಯು ಸುಪ್ರಭಾತನಾಗಿರುವುದನ್ನು ಕಂಡು ಲಕ್ಷ್ಮೀದೇವಿಯು ಆತನ ಪಾದಗಳಿಗೆ ಪದ್ಧತಿಯಂತೆ ನಮಸ್ಕರಿಸಿ ಸ್ವಪ್ನವೃತ್ತಾಂತವನ್ನು ತಿಳಿಸಿದಳು.

ಬಲ್ಲಣನು ಹೆಂಡತಿಯ ಮುಖದಿಂದ ಬರುತ್ತಿದ್ದ ಒಂದೊಂದು ಮಾತನ್ನೂ ಕೇಳಿ ರೋಮಾಂಚಿತನಾದನು. ಆನಂದಭರದಲ್ಲಿ ತನ್ನನ್ನು ತಾನೇ ಮರೆತನು. ಇದು ನಮ್ಮ ಶುಭೋದಯದ ಪ್ರಥಮಾವತಾರವು. ನಮ್ಮ ಜನ್ಮ ಚರಿತ್ರೆಯ ದ್ವಿತೀಯಪರಾರ್ಧವಿದು! ಸ್ವಪ್ನದಲ್ಲಾದರೂ ಸತ್ಪುರುಷರ ದರ್ಶನವು ಪುರುಷಾರ್ಥಸೋಪಾನವೆನಿಸಿರುವುದು. ಮಹಾತ್ಮರ ಮಾತೆಂದಿಗೂ ವ್ಯರ್ಥವಾಗುವುದಲ್ಲ. ಪರಮಾತ್ಮನು ಅನುಗ್ರಹಿಸುವ ಶುಭ ಸೌಭಾಗ್ಯ ಭಾಗ್ಯಗಳನ್ನು ಈ ಜೀವಿತದಲ್ಲೇ ಅನುಭವಿಸೋಣ! ಎಂದು ಪ್ರೇಮಾಶ್ರು ಪೂರಿತನಯನನಾಗಿ ಮಾತನಾಡುತ್ತಾ ಸ್ನಾನಾದಿ ಶೌಚಕರ್ಮಗಳಂಗೆಯು, ಲಾಜಾದಿ ಹೋಮದ್ರವ್ಯಗಳಿಂದ ಅಗ್ನಿದೇವತಾರಾಧನೆಮಾಡಿ. ಬ್ರಾಹ್ಮಣ ಸುವಾಸಿನಿಯರ ಸಮಾರಾಧನೆಮಾಡಿದನು.

ಇದೇ ಸಮಯದಲ್ಲಿ ಭಾಸ್ಕರಾಂಶ ಸಂಭೂತರೂ ದಿವ್ಯ ತೇಜೋನಿಧಿಗಳೂ ಆದ ಬ್ರಹ್ಮಣ್ಯತೀರ್ಥಸ್ವಾಮಿಗಳು ಕಾವೇರೀಸ್ನಾನಾರ್ಥವಾಗಿ ಬನ್ನೂರಿಗೆ ದಿಗ್ವಿಜಯಮಾಡಿದರು. ಬಲ್ಲಣನು ಲಕ್ಷ್ಮೀದೇವಿಯ ಸ್ವಪ್ನದಲ್ಲಿ ದರ್ಶನವಿತ್ತುದಕ್ಕೆ ಸರಿಯಾಗಿ ಸ್ವಾಮಿಗಳೇ ಯದೃಚ್ಛೆಯಿಂದ ಬಂದುದನ್ನು ನೋಡಿ, ತನ್ನ ಭಾಗ್ಯದಕ್ಷ್ಮಿಯೇ ಬಂದಳೆಂದು ಸಂಭ್ರಮದಿಂದ ಸ್ವಾಮಿಗಳನ್ನು ತನ್ನ ಮನೆಗೆ ಕರೆತಂದು ಆತಿಥ್ಯಮಾಡಿಸಿದನು. ಬಲ್ಲಣನ ಸೇವೆಯಿಂದ ಸ್ವಾಮಿಗಳು ಸಂತುಷ್ಟರಾಗಿ ಅವನೊಡನೆ ಕುಶಲ ಪ್ರಶ್ನೆ ಮಾಡುತ್ತಿರಲು—

ಶ್ರೀ ಕಾಶ್ಯಪಾನ್ವಯ ಮಣಿರ್ಮಮತಾತಪಾದಃ
ಶ್ರೀರಾಮ ದೇವ ಇತಿ ದೀಪ್ತ ಯಶಃ ಪ್ರಭಾವಃ
ಕಸ್ಯಾಪಿಮಸ್ಕರಿಪತೇಃ ಕರುಣಾವಿಲಾಸಾತ್
ಪ್ರಾಸೋಽಷ್ಟಷಟ್ಪಟುಧಿಯಃ ಪ್ರಥಿತಾನ್ ಕುಮಾರಾನ್ ||

ಎಂಬ ವಾಕ್ಯಗಳಿಂದ ತನಗಿನ್ನೂ ಸಂತಾನವಾಗದಿರುವ ನಿಮಿತ್ತ ಅಕ್ಕಮಾಂಬೆಯನ್ನು ಲಗ್ನಮಾಡಿಕೊಂಡವರೆಗಿನ ವೃತ್ತಾಂತವನ್ನು ವಿಶದವಾಗಿ ವಿವರಿಸಿದನು.

ಈ ಶ್ಲೋಕದಿಂದ ಬಲ್ಲಣನ ತಂದೆಯ ಹೆಸರು ರಾಮದೇವನೆಂದು ಸ್ಪಷ್ಟವಾಗುತ್ತದೆ. ವ್ಯಾಸವಿಜಯದಲ್ಲಿ ಬಲ್ಲಣನ ಹೆಸರೇ ಬಂದಿಲ್ಲ. ರಾಮಾಚಾರ್ಯನೇ ವ್ಯಾಸರಾಯರ ತಂದೆಯೆಂದು ಬರೆದಿದ್ದಾರೆ. ಸೋಮನಾಥನ ವಚನದಂತೆ ರಾಮದೇವನಿಗೆ ಆರು ಮಂದಿ ಮಕ್ಕಳು. ಅವರಲ್ಲಿ ಬಲ್ಲಣನು ಎಲ್ಲರಿಗಿಂತ ಕಿರಿಯನು.

ಬಲ್ಲಣನು ಇಬ್ಬರು ಹೆಂಡತಿಯರನ್ನು ಲಗ್ನಮಾಡಿಕೊಂಡರೂ ತನಗೆ ಸಂತಾನವಾಗಲಿಲ್ಲವೆಂದು ತನ್ನ ದುಃಖವನ್ನು ಸ್ವಾಮಿಗಳಲ್ಲಿ ಹೇಳಿಕೊಂಡನು. ತನ್ನ ಹೆಂಡತಿಗಾದ ಸ್ವಪ್ನವೃತ್ತಾಂತವನ್ನು ರಹಸ್ಯವಾಗಿ ವಿಜ್ಞಾಪಿಸಿದನು.

ಸ್ವಾಮಿಗಳು ಮಾರನೆಯ ದಿನ ಬಲ್ಲಣನಿಂದ ಸಂತಾನಾರ್ಥವಾಗಿ ನಡೆಸಬೇಕಾದ ಹೋಮಗಳನ್ನು ನಡೆಸಿ, ಹೋಮಶೇಷವನ್ನು ಮೂರು ಪ್ರಕಾರ ಭಾಗಿಸಿ ಅಭಿಮಂತ್ರಿಸಿ, ನಿನಗೆ ತ್ರೇತಾಗ್ನಿಗಳಂತೆ ಮೂವರು ಮಕ್ಕಳಾಗುವರೆಂದು ಪ್ರಸಾದವಿತ್ತರು. ಬಲ್ಲಣನು ಕೃತಜ್ಞತೆಯಿಂದ ಮಹಾಪ್ರಸಾದವನ್ನು ಸ್ವೀಕರಿಸಿದನು. ಸ್ವಾಮಿಗಳು ಮತ್ತೆ ಬಲ್ಲಣನನ್ನು ಅಂತರಂಗದಲ್ಲಿ ಕರೆದು—"ಬಲ್ಲಣಾ, ಕಡೆಯ ಮಗನನ್ನು ನಮಗೆ ಕೊಡುವೆಯೋ?" ಎಂದರು. ಬಲ್ಲಣನು 'ಮಹದಾಜ್ಞಾ' ಎಂದು ನಮಸ್ಕರಿಸಿದನು.

ವ್ಯಾಸರಾಯರಂಥಾ ಮಹಾಪುರುಷರ ಅವತಾರಕ್ಕೆ ಮಹಾಪ್ರಸಾದವೀಯಲು ಸಾಕ್ಷಾದ್ವೇದವ್ಯಾಸರಿಂದಲೇ ಪ್ರೇರಿತರಾಗಿ ಬಂದಿದ್ದರೋ ಎಂಬಂತೆ ಬನ್ನೂರಿಗೆ ದಿಗ್ವಿಜಯ ಮಾಡಿದ್ದ ಬ್ರಹ್ಮಣ್ಯತೀರ್ಥ ಶ್ರೀಪಾದಂಗಳವರು ಅನಂತರ ಚನ್ನಪಟ್ಟಣಕ್ಕೆ ಪ್ರಯಾಣ ಮಾಡಿದರು.

ಬಲ್ಲಣನಿಗೆ ಒಬ್ಬ ಮಗನೂ ಮಗಳೂ ಆದನಂತರ ಭಾವೀ ವ್ಯಾಸರಾಯರ ಅವತಾರವಾಯಿತು. ಕಡೆಯ ಮಗನು ಎಂದಿದ್ದರೂ ಯತಿಯಾಗುವನೆಂದು ತಿಳಿದು, ಅವನಿಗೆ ಬಲ್ಲಣನು **ಯತಿ**ರಾಜನೆಂದು ನಾಮಕರಣ ಮಾಡಿದನು. ಯಾರ ಉದರದಲ್ಲಿ ಯಾರ ಅವತಾರವಾಯಿತೆಂಬುದು ಗ್ರಂಥದಲ್ಲಿಲ್ಲ. ಅಕ್ಕಮಾಂಬೆಯುದರದಲ್ಲಿ ಮೊದಲ ಮಗನೂ ಮಗಳೂ, ಲಕ್ಷ್ಮೀದೇವಿಯುದರದಲ್ಲಿ ಯತಿರಾಜನೂ ಜನ್ಮತಾಳಿರಬಹುದು.

ಭಾವೀ ವ್ಯಾಸರಾಯರೆನಿಸಿದ ಯತಿರಾಜನು ತಂದೆತಾಯಿಗಳಿಂದಲೇ ಪೋಷಿತನಾದನು. ಎರಡನೇ ವರ್ಷದಲ್ಲಿ ಚೌಲ, ಐದನೇ ವರ್ಷದಲ್ಲಿ ಅಕ್ಷರಾಭ್ಯಾಸ, ಏಳನೇ ವರ್ಷದಲ್ಲಿ ಉಪನಯನಗಳಾದುವು. ಉಪನಯನಾನಂತರ ನಾಲ್ಕು ವರ್ಷ ಗುರುಕುಲ

ವಾಸವಾಯಿತು. ಅನಂತರ ಯತಿರಾಜನು ತಂದೆಯ ಮನೆಯಲ್ಲಿದ್ದು ವ್ಯಾಕರಣ ಮತ್ತು ಸಾಹಿತ್ಯ ಶಾಸ್ತ್ರಗಳ ವ್ಯಾಸಂಗಮಾಡಿದನು.

ರೂಪದಲ್ಲಿ ಮನ್ಮಥನಂತೆ, ಕ್ಷಮಾಗುಣದಲ್ಲಿ ಧರಿತ್ರಿಯಂತೆ, ವಿದ್ಯದಲ್ಲಿ ಬೃಹಸ್ಪತಿಯಂತೆ, ವಿನಯಾದಿ ಸದ್ಗುಣಗಳಿಂದ ಶೋಭಿಸುವ ಮಗನನ್ನು ನೋಡಿ ಆನಂದಪಡದಿರುವ ತಂದೆತಾಯಿಗಳ್ಯಾರು? ತನ್ನುದರದಲ್ಲಿ ಜನಿಸಿದ ಏಕಮಾತ್ರ ಪುತ್ರನಾದ ಯತಿರಾಜನ ಪ್ರೌಢಿಮೆಯನ್ನು ನೋಡಿ, ಲಕ್ಷ್ಮೀದೇವಿಯು—ಯಾವಾಗ ಬ್ರಹ್ಮಣ್ಯತೀರ್ಥರು ಮಗನನ್ನು ಕರೆಸಿಕೊಂಡುಬಿಡುವರೋ, ಯಾವಾಗ ಅವನಿಗೆ ಸನ್ಯಾಸ ಕೊಟ್ಟು ಪೀಠದಲ್ಲಿ ಕೂಡಿಸಿಬಿಡುವರೋ ಎಂದು ಸದಾ ಚಿಂತಿಸುತ್ತಿದ್ದಳು. ಯತಿರಾಜನಿಗೆ ಹದಿನಾರು ವರ್ಷ ತುಂಬಿತು. ವೇದ ವ್ಯಾಕರಣ ಸಾಹಿತ್ಯ ಶಾಸ್ತ್ರಗಳಲ್ಲೂ ವೇದಾಂತದಲ್ಲೂ ಪಂಡಿತನಾದನು. ಇದೆಲ್ಲವನ್ನೂ ವಿಚಾರಿಸುತ್ತಾ ಕಾಲ ನಿರೀಕ್ಷಣೆಮಾಡಿಕೊಂಡಿದ್ದ ಬ್ರಹ್ಮಣ್ಯತೀರ್ಥರು ಯತಿರಾಜನನ್ನು ತಮ್ಮ ಬಳಿಗೆ ಕಳುಹಿಸುವಂತೆ ಶ್ರೀಮುಖ ಬರೆದು ದೂತನನ್ನು ಕಳುಹಿಸಿದರು. ಮಠದಿಂದ ಬಂದ ದೂತನನ್ನು ಕಂಡು ಲಕ್ಷ್ಮೀದೇವಿಯು ಕಂಗೆಟ್ಟಳು. ಬ್ರಾಹ್ಮಣನಿಗೆ ತಾನು ಸ್ವಾಮಿಗಳಿಗೆ ಕೊಟ್ಟ ವಚನದ ನೆನಪಾಯಿತು. [illegible] ತೋರಿಸುವುದರ ವಿನಾ ದಂಪತಿಗಳ ಮನಸ್ಸಿಗೆ ಅನ್ಯಯೋಚನೆ ಬರಲಿಲ್ಲ. ಮಗನನ್ನು ಏಕಾಂಗಿಯಾಗಿ ಕಳುಹಿಸಲಾರದೆ ದಂಪತಿಗಳು ತಾವೂ ಅಬ್ಬೂರಿಗೆ ಬಂದರು. ಯತಿರಾಜನನ್ನು ಸ್ವಾಮಿಗಳ ಪಾದದಲ್ಲಿ ಸಮರ್ಪಿಸಿದರು. ದಂಪತಿಗಳ ಸತ್ಯನಿಷ್ಠೆಯನ್ನು ನೋಡಿ—**"ಅಯಿಭದ್ರ ಪುರಾಬಭೂವು ತ್ರೈಶಂಕವಾದಯೋ ಮಹಾಪುರುಷಾಃ ಸತ್ಯಸಂಧಾಃ"**

ಅಪಿತೇಷು ಮಹಾನುಭಾವ ಭಾಕ್ಷು ಸ್ವಯಶಃ ಪೂರವಲಕ್ಷ ಸರ್ವದಿಕ್ಷು ।
ಸ್ವಯಮೇವ ವಿತೀರ್ಣಸಂವಿದಬ್ಧಿಂ ಕಮುಪಿತ್ವಾವಿಮಿವ
ನಾವಲೋಕಯಾಮಃ ॥

"ಭದ್ರ! ಬಲ್ಲಣ, ಪೂರ್ವದಲ್ಲಿ ಹರಿಶ್ಚಂದ್ರನೇ ಮೊದಲಾದ ಸತ್ಯವಂತರಾಗಿ ಹೋದರು. ಆದರೆ ಅವರೆಲ್ಲರಿಗಿಂತ ನೀನು ಅಧಿಕನೆನಿಸಿದೆ. ನೀನಾಗಿ ಸಂತೋಷದಿಂದ ಜ್ಞಾನಸಾಗರನಾದ ಯತಿರಾಜನನ್ನು ನಮ್ಮ ಬಳಿಗೆ ತಂದೊಪ್ಪಿಸಿದೆ. ನಮ್ಮ ಸಂಸ್ಥಾನಕ್ಕೆ ಮಹೋಪಕಾರ ಮಾಡಿದೆ" ಎಂದು ಅಭಿನಂದಿಸಿದರು. ಯತಿರಾಜನು ಯತಿರಾಜನಾಗುವನೆಂದೇ ಹರಸಿದರು.

ಬ್ರಹ್ಮಣ್ಯತೀರ್ಥರು ಯತಿರಾಜನ ಪಾಂಡಿತ್ಯಕ್ಕೂ ವಿನಯಾದಿ ಸದ್ಗುಣಗಳಿಗೂ ಮುಗ್ಧರಾಗಿಹೋದರು. ತಾವೇ ಅವನಿಗೆ ನ್ಯಾಯ ವೇದಾಂತಶಾಸ್ತ್ರ ಪ್ರವಚನ ಮಾಡಿದರು. ಏಕಸಂಧಾಗ್ರಾಹಿಯಾದ ಯತಿರಾಜನಿಗೆ ಹೆಚ್ಚು ಕಾಲ ಪಾಠ ಹೇಳುವ ಆವಶ್ಯಕತೆ ಕಂಡುಬರಲಿಲ್ಲ. ಸಮಯ ನೋಡಿ ಸನ್ಯಾಸಕೊಡುವುದೊಂದುಳಿಯಿತು. ತಾನಾಗಿ ಕೇಳಲೆಂದು ತಮ್ಮ ಮನೋಗತವನ್ನು ಸ್ವಾಮಿಗಳು ತಿಳಿಸಲಿಲ್ಲ. ಯತಿರಾಜನಾದರೋ ಗುರುಗಳ ಮನೋಗತವನ್ನು ಗ್ರಹಿಸಿ ಗಾಬರಿಯಾದನು. ತನ್ನಲ್ಲಿ ತಾನೇ—ನಾನೆಂದ

ರೇನು, ನನ್ನ ವಯಸ್ಸೇನು, ನನ್ನ ಯೋಗ್ಯತೆಯೇನು, ಸನ್ಯಾಸಧರ್ಮವನ್ನು ಪಾಲಿಸುವ ಶಕ್ತಿ ನನಗಿದೆಯೇ, ಶ್ರೀಮದಾಚಾರ್ಯರ ಪೀಠದಲ್ಲಿದ್ದು ಮತಸಾಮ್ರಾಜ್ಯವನ್ನು ನಿರ್ವಹಿಸ ಬಲ್ಲೆನೇ ಎಂದು ಮೊದಲಾಗಿ ಚಿಂತಿಸಿದನು. ಇದ್ದ ಬಳಿಯಲ್ಲಿರಲು ಮನಸ್ಸಿಲ್ಲದೆ, ಎಲ್ಲಿಗೆ ಹೋಗುವೆನೆಂಬುದನ್ನು ತಿಳಿಯದೆ, ಒಂದು ಮಧ್ಯಾಹ್ನದ ಬಿಸಿಲಿನಲ್ಲಿ ಮಠದಿಂದ ಹೊರ ಟನು. ಎಷ್ಟು ಹೊತ್ತು ಎತ್ತಕಡೆಗೆ ನಡೆದನೆಂಬ ಅರಿವು ಅವನಿಗಾಗಲಿಲ್ಲ. ನಡೆದು ನಡೆದು, ಯೋಚಿಸಿ ಯೋಚಿಸಿ, ಬಳಲಿ ಬೆಂಡಾಗಿ, ವನಮಧ್ಯದಲ್ಲಿ ಒಂದಾಲದ ಗಿಡದ ನೆಳಲಿನಲ್ಲಿ ಕುಳಿತನು. ಕುಳಿತವನು ಹಾಗೆಯೇ ಮಲಗಿದನು. ಮಲಗಿದವನಿಗೆ ಆಯಾಸ ಬಹಳವಾಗಿದ್ದುದರಿಂದ ಮೈಮರೆದಷ್ಟು ನಿದ್ರೆಬಂದಿತು. ಸ್ವಲ್ಪ ಹೊತ್ತಿನಮೇಲೆ–ಇನ್ನೇನು ಸುಷುಪ್ತಿಯಿಂದ ಜಾಗ್ರದವಸ್ಥೆಗೆ ಬರಬೇಕು ! ಆ ಮಧ್ಯಕಾಲದಲ್ಲಿ ಯತಿರಾಜನ ಮನೋ ಭೂಮಿಕೆಯಲ್ಲಿ ಗರುಡಾರೂಢನಾದ ಲಕ್ಷ್ಮೀನಾರಾಯಣನ ಸಂದರ್ಶನವಾಯಿತು. ಮಹಾಮುನಿಗಳು ಸ್ತೋತ್ರಮಾಡುತ್ತಿರುವಂತೆ ಕಾಣಿಸಿತು. ಎಡಬಲದಲ್ಲಿ ದಿವ್ಯ ಗಾನ ವಾದಂತೆ ಕೇಳಿಸಿತು.

ಶ್ರೀ ನಾರಾಯಣನು–'ಯತಿರಾಜ ; ನೀನು ಪರಮಭಾಗವತನು. ನನ್ನ ಪರಮ ಪ್ರಿಯ ಪ್ರಹ್ಲಾದನು. ನಿನ್ನಿಂದ ಮಹತ್ತರವಾದ ದೇವತಾಕಾರ್ಯ ಸಾಧನೆಯಾಗು ವುದು. ನಿನ್ನ ಭವಿತವ್ಯತೆಯನ್ನು ಕುರಿತು ಚಿಂತಿಸಬೇಡ' ಎಂದು ಹೇಳಿದಂತಾಯಿತು. ನಿದ್ರೆಯಿಂದ ಮೈಬೆವರಿ, ಭಗವದ್ದರ್ಶನದಿಂದ ಕಣ್ಣುಗಳು ಆನಂದಬಾಷ್ಪಗಳಿಂದ ತುಂಬಿ ತುಳುಕಿ ಜಾಗ್ರತನಾಗಿ ಕುಳಿತನು. ತಾನೇಕೆ ಇಲ್ಲಿಗೆ ಬಂದೆ ! ಈ ಮರದಡಿಯಲ್ಲೇಕೆ ಮಲಗಿದೆ ! ಇದೇನು ಸ್ವಪ್ನವೋ ಜಾಗ್ರತಿಯೋ ? ಎಂದು ಯೋಚಿಸತೊಡಗಿದನು. ಮನ ಸ್ಸಿನಿಂದ ಮೂಡಿದ ಪ್ರಶ್ನೆಗೆ ಬುದ್ಧಿಯಿಂದ ಉತ್ತರಬರಲಿಲ್ಲ. ಬುದ್ಧಿಯು ಆನಂದಕೋಶದಲ್ಲಿ ಲೀನವಾಗಿತ್ತು. ಮತ್ತೆ ಸಂಪೂರ್ಣ ಜಾಗೃತನಾಗಿ ತನ್ನ ಸ್ವಪ್ನವನ್ನು ಸ್ಮರಿಸಿ, ಎಲ್ಲವೂ ಭಗವದಧೀನವೆಂದುಕೊಂಡನು. ಲಜ್ಜಿತನಂತೆ ಮಠಕ್ಕೆ ಬಂದನು. ಬಂದವನು ಜಪಶಾಲೆ ಯಲ್ಲಿದ್ದ ಗುರುಗಳ ಮುಂದೆ ಕುಳಿತನು. ಇಷ್ಟುಕಾಲ ಎಲ್ಲಿದ್ದೆಯೆಂದು ಗುರುಗಳು ಕೇಳ ಲಿಲ್ಲ. ಎಲ್ಲಿಗೆ ಹೋಗಿದ್ದೆನೆಂದು ಶಿಷ್ಯನು ಹೇಳಲಿಲ್ಲ.

ಸ್ವಾಮಿಗಳು ಜಪವನ್ನು ಮುಗಿಸಿ, ಕಣ್ತೆರೆದು, ಯತಿರಾಜನನ್ನು ಮುಗುಳು ನಗೆಯಿಂದ ನೋಡಿ ನಗುತ್ತಾ ಪೂಜಾಶಾಲೆಗೆ ತೆರಳಿದರು. ಆ ದಿನವೆಲ್ಲಾ ಯತಿರಾಜನು ದೇವೋನ್ಮಾದದಲ್ಲಿದ್ದನು. ಅವನು ಉಂಡನೋ ಉಟ್ಟನೋ ಯಾರೂ ವಿಚಾರಿಸಲಿಲ್ಲ. ಸ್ವಾಮಿಗಳು, ಅವನನ್ನು ಯಾರೂ ಮಾತನಾಡಿಸಬೇಡಿರೆಂದು ಹೇಳಿದ್ದರು.

ದೇವೋನ್ಮಾದವೆಂದರೆ ಅದೊಂದು ವಿಧದ ಸಮಾಧಿಸ್ಥಿತಿ. ಭಕ್ತಿಯೋಗಿಗಳಿಗೆ ಆಗಾಗ ಆಗುವ ಪಾರವಶ್ಯ ! ಅಂತಹ ಪಾರವಶ್ಯವನ್ನು ಭಕ್ತಿಯೋಗಿಗಳಾದ ಹರಿದಾಸರಲ್ಲಿ ಕಾಣಬಹುದು. ಪುರಂದರದಾಸರಾದಿಯಾಗಿ ಆದ ಹರಿದಾಸರೆಲ್ಲರೂ ಇಂತಹ ಭಕ್ತಿ ಯೋಗಿಗಳು. ಭಕ್ತಿಪಂಥವನ್ನು ಬಂಗಾಳದಲ್ಲಿ ಪ್ರಚಾರಮಾಡಿದ **ಶ್ರೀಕೃಷ್ಣಚೈತನ್ಯರು** ಅತ್ಯಂತ ಪ್ರಸಿದ್ಧರು. ಈಚಿನ ಕಾಲದಲ್ಲಿ **ಶ್ರೀ ರಾಮಕೃಷ್ಣ ಪರಮಹಂಸರು** ಬಹು ದೊಡ್ಡ ಭಕ್ತಿಯೋಗಿಗಳು.

ಮಾರನೆಯ ದಿನ ಯತಿರಾಜನ ಸಮಾಧಿಯಿಳಿಯಿತು. ಬ್ರಹ್ಮಣ್ಯತೀರ್ಥರು ಅಂದಿನಿಂದ ಯತಿರಾಜನಿಗೆ ಆಶ್ರಮಧರ್ಮಗಳ ಉಪದೇಶಕ್ಕಾರಂಭಿಸಿದರು. ಸನ್ಯಾಸಧರ್ಮವನ್ನು ವಿವರಿಸುವಾಗ ಯತಿರಾಜನು ಮತ್ತೆ ಪರವಶನಾಗಿ ಹೋದನು. “ಮಹಾಸ್ವಾಮಿ, ನನಗೆ ಆಶ್ರಮಕೊಡಿರೆಂದೂ ನನ್ನ ಸ್ವರೂಪೋದ್ಧಾರಮಾಡಿರಿ ಎಂದೂ” ಸ್ವಾಮಿಗಳನ್ನು ಪ್ರಾರ್ಥಿಸಿದನು.

ಬ್ರಹ್ಮಣ್ಯತೀರ್ಥರು ಶಿಷ್ಯನ ಪರಿಪಕ್ವದೆಶೆಯನ್ನು ತಿಳಿದು ಅವನಿಂದ ನಡೆಸಬೇಕಾದ ಆತ್ಮಶ್ರಾದ್ಧಾದಿ ಕರ್ಮಗಳನ್ನು ಮಾಡಿಸಿ, ಯತಿರಾಜನಿಗೆ ತುರೀಯಾಶ್ರಮವನ್ನನುಗ್ರಹಿಸಿದರು. ವ್ಯಾಸತೀರ್ಥರೆಂಬ ನಾಮಕರಣ ಮಾಡಿದರು.

ಬ್ರಹ್ಮಣ್ಯತೀರ್ಥರು ಶಿಷ್ಯರಿಗೆ ವ್ಯಾಸತೀರ್ಥರೆಂದು ನಾಮಕರಣ ಮಾಡಲು ಅವರು ವ್ಯಾಸಾನುಗ್ರಹದಿಂದ ಜನಿಸಿದುದು ಮೊದಲನೆಯ ಕಾರಣ. ಬಲ್ಲಣಸುಮತಿಯು ವೇದವ್ಯಾಸ ಮಂತ್ರೋಪಾಸಕನಾಗಿದ್ದುದು ಎರಡನೆಯ ಕಾರಣ. ಶಿಷ್ಯನಿಗೆ ಆಶ್ರಮನಾಮವೇನಿಡಬೇಕೆಂಬ ಯೋಚನೆಯಾದಾಗ ಸ್ವಾಮಿಗಳಿಗೆ ವೇದವ್ಯಾಸಪ್ರೇರಣೆಯಾದುದು ಬಲವತ್ತರವಾದ ಮೂರನೆಯ ಕಾರಣ !

೪

ವ್ಯಾಸತೀರ್ಥರ ದೇಶಸಂಚಾರ. ಕಂಚಿಯಲ್ಲಿ ವಿಷಪ್ರಯೋಗ ಶ್ರೀ ಶ್ರೀಪಾದರಾಯರಲ್ಲಿ ಮತ್ತೆ ಗುರುಕುಲವಾಸ

ಶ್ರೀ ವ್ಯಾಸತೀರ್ಥರಿಗೆ ಬ್ರಹ್ಮಣ್ಯತೀರ್ಥರು ತುರಿಯಾಶ್ರಮವಿತ್ತು, ವಿದ್ಯಾಸಿಂಹಾಸನದಲ್ಲಿ ಪಟ್ಟಾಭಿಷೇಕಮಾಡಿ, ಮಹಾಮಂತ್ರಗಳನ್ನು ಉಪದೇಶಿಸಿದರು. ವ್ಯಾಸರಾಯರು ಪುರುಷೋತ್ತಮತೀರ್ಥರ ಗುಹೆಯಲ್ಲಿ ತಪಸ್ಸ್ಗೈಮಾಡಿ ಅಪರೋಕ್ಷಿಗಳಾದರು. ಬ್ರಹ್ಮಣ್ಯತೀರ್ಥರು ಕ್ರಿ.ಶ. ೧೪೬೭ ರ ಸುಮಾರಿನಲ್ಲಿ ವೈಶಾಖಕೃಷ್ಣ ಏಕಾದಶಿಯ ದಿನ ಬೃಂದಾವನಸ್ಥರಾದರು.

ವೈಶಾಖ ಕೃಷ್ಣಪಕ್ಷೇಸಾವೇಕಾದಶ್ಯಾಂ ಗುರೂತ್ತಮಃ ।
ನಭೋಮಧ್ಯಗತೇರ್ಯಸ್ಮಿನ್ ಸ್ವರೂಪೇ ಲೀಯತಪ್ರಭುಃ ॥

ಈ ಶ್ಲೋಕದಿಂದ ಬ್ರಹ್ಮಣ್ಯತೀರ್ಥರು ಸಾಯರ್ಾಂತರೆಂದು ಸ್ಪಷ್ಟವಾಗುತ್ತದೆ.

ಶ್ರೀ ವ್ಯಾಸರಾಯರು ಗುರುಗಳ ಮಹಾಸಮಾರಾಧನೆ ಮಾಡಿ, ತೀರ್ಥಾಟನೆಯ ವ್ಯಾಜದಿಂದ ದೇಶಸಂಚಾರ ಹೊರಟರು.

ನಮ್ಮ ಸನಾತನ ಧರ್ಮಸಂಪ್ರದಾಯವಾದರೋ - ಉಪನಯನವಾದಕೂಡಲೇ ದ್ವಿಜನು ಕನಿಷ್ಠಪಕ್ಷ ಸ್ವಶಾಖಾಧ್ಯಯನ ಮಾಡಬೇಕು. ಶಾಸ್ತ್ರಾಭ್ಯಾಸಂಗ ಮಾಡಬೇಕು. ತೀರ್ಥಯಾತ್ರೆಯ ನೆಪದಿಂದ ದೇಶಪರ್ಯಟನ ಮಾಡಬೇಕು. ಅದರಿಂದ ಲೋಕಾನುಭವ ಪಡೆಯಬೇಕು, ಅನಂತರ ಗೃಹಸ್ಥಾಶ್ರಮ ಸ್ವೀಕಾರಮಾಡಬೇಕು. ಇಂಥ

ಕುಟುಂಬಭರಣ ದೀಕ್ಷಿತನಾದವನಿಗೇ ಇಷ್ಟು ನಿಯಮವಿರುವಾಗ, ಮಠಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾದ ಯತಿಗಳು ಸುಮ್ಮನೆ ಒಂದು ಸ್ಥಳದಲ್ಲಿ ಕೂಡುವುದೆಲ್ಲಿ ಬಂತು! ಅವರು ಸುಮ್ಮನೆ ಕುಳಿತರೆ ಧರ್ಮಪ್ರಚಾರವಾಗುವ ಬಗೆಯೆಂತು ?

ಶ್ರೀ ವ್ಯಾಸತೀರ್ಥರ ದಿಗ್ವಿಜಯವು ಅತ್ಯಂತ ವೈಭವದ ತೀರ್ಥಯಾತ್ರೆಯಾಯಿತು. ಪ್ರಥಮಾಶ್ರಮದಿಂದಲೇ ನೇರವಾಗಿ ತುರಿಯಾಶ್ರಮ ಸ್ವೀಕಾರಮಾಡಿದ ಕಾರಣವೊಂದು, ಮಠಾಧಿಪತ್ಯ ದೊರೆತ ಸೌಭಾಗ್ಯವೊಂದು, ಸ್ವಯಂ ಪಂಡಿತೋತ್ತಮರಾಗಿರುವ ಗೌರವವೊಂದು, ಹೀಗೆ ಮೂರೂ ಕಲೆತು, ಸ್ವಾಮಿಗಳ ಕೀರ್ತಿಯು ದಿಗಂತವನ್ನು ಮುಟ್ಟಿತು. ಆ ಕಾಲದಲ್ಲಿ ಒಂದೊಂದು ಕ್ಷೇತ್ರವೂ, ಒಂದೊಂದು ವಿದ್ಯಾಪೀಠವಾಗಿತ್ತು. ಆ ವಿದ್ಯಾಪೀಠಗಳನ್ನು ವ್ಯಾಸರಾಯರು ಸಂದರ್ಶಿಸಿದರು. ಅಜೇಯರಾದ ಪಂಡಿತರನ್ನು ಸಮ್ಮತಗೊಳಿಸಿ ಭಕ್ತಿಪಂಥವನ್ನು ಉಪದೇಶಮಾಡಿದರು. ಮಿಥಿಲಾದೇಶದಲ್ಲಿರುವಾಗ ಮಹಾಪ್ರಖ್ಯಾತನಾದ ಪಕ್ಷಧರಮಿಶ್ರನೆಂಬ ತರ್ಕಪಂಡಿತನು ವ್ಯಾಸರಾಯರೊಡನೆ ವಾದಭೂಮಿಗಿಳಿದನು. ಮಿಶ್ರನು ಆ ಕಾಲದ ತಾರ್ಕಿಕರಲ್ಲಿ ಉತ್ತಮ ಸಿಂಹಾಸನದಲ್ಲೇ ಅಜೇಯಪಂಡಿತನಾಗಿದ್ದನು. **ಗಂಗೇಶ ಉಪಾಧ್ಯಾಯನ ಚಿಂತಾಮಣಿ** ಎಂಬ ನವೀನ ತರ್ಕಪದ್ಧತಿಯು ಮಿಶ್ರನ ದಿಗ್ವಿಜಯಕ್ಕೆ ಕಾರಣವಾಗಿತ್ತು. ಮಿಶ್ರನು ಉಪಾಧ್ಯಾಯನ **ಚಿಂತಾಮಣಿ**ಯನ್ನು ಬಹುಮಂದಿ ಶಿಷ್ಯರಿಗೆ ಪಾಠ ಹೇಳುತ್ತಿದ್ದನು. ದಕ್ಷಿಣದೇಶದಲ್ಲಿ ಉಪಾಧ್ಯಾಯನ ಗ್ರಂಥದ ಪ್ರಚಾರವಿನ್ನೂ ಆಗಿರಲಿಲ್ಲ. ಆದ್ದರಿಂದ ದಕ್ಷಿಣದೇಶದ ಪಂಡಿತ ಸಿಂಹರೆ ಮಿಶ್ರನಿಗೆ ಗಣನೆಯಿರಲಿಲ್ಲ. ವ್ಯಾಸರಾಯರಾದರೋ **ರಾಜೇಂದ್ರ, ಜಯಧ್ವಜ, ಪುರುಷೋತ್ತಮ, ಬ್ರಹ್ಮಣ್ಯತೀರ್ಥ**ರುಗಳ ಪರಂಪರೆಯಲ್ಲಿ ಬಂದ ಕಾರಣದಿಂದಲೂ, ರಾಜೇಂದ್ರಾದಿಯಾಗಿ ಎಲ್ಲರೂ ಉತ್ತರದೇಶ ಸಂಚಾರದಲ್ಲಿದ್ದು ಉಪಾಧ್ಯಾಯನ ಗ್ರಂಥ ಸಂಗ್ರಹಮಾಡಿ, ವ್ಯಾಸರಾಯರಿಗೂ ಪಾಠಮಾಡಿಸಿದ್ದ ಕಾರಣದಿಂದಲೂ, ಮಿಶ್ರನ ವಾದ ಪದ್ಧತಿಗೆ ಅವರು ಬೆರಗಾಗಲಿಲ್ಲ. ತರ್ಕವಾಕ್ಯಾರ್ಥದಲ್ಲಿ ಮಿಶ್ರನಿಗೆ ಪ್ರತಿವಾದಿಗಳಿಲ್ಲವೆಂಬ ಮಾತು ಸುಳ್ಳಾಯಿತು. ವೇದಾಂತದಲ್ಲಿ ವ್ಯಾಸರಾಯರೊಡನೆ ಮಾತನಾಡುವ ಧೈರ್ಯವೇ ಮಿಶ್ರನಿಗೆ ಬರಲಿಲ್ಲ. ಮಿಶ್ರನೂ ಸ್ವಾಮಿಗಳ ಪಾಂಡಿತ್ಯಕ್ಕೆ ಮೆಚ್ಚಿ ಭಾಗವತಧರ್ಮವನ್ನವಲಂಬಿಸಿದನು. ಪರಮವಿರಕ್ತನಾಗಿ ತೀರ್ಥಯಾತ್ರೆಗೆ ಹೊರಟನು. ಇದರಿಂದ ವ್ಯಾಸರಾಯರ ಖ್ಯಾತಿಯು ಕಾಶಿ, ನವದ್ವೀಪ ಮೊದಲಾದ ವಿದ್ಯಾಪೀಠಗಳಲ್ಲಿ ಮಹಾಪ್ರಶಂಸೆಗೆ ಬಂದಿತು.

ಪಕ್ಷಧರಮಿಶ್ರನು ದಕ್ಷಿಣದೇಶ ಸಂಚಾರದಲ್ಲಿದ್ದಾಗ ಶ್ರೀಪಾದರಾಯರ ಖ್ಯಾತಿಯನ್ನು ಕೇಳಿ ಮುಳುಬಾಗಿಲಿಗೆ ಬಂದನು. ಶ್ರೀಪಾದರಾಯರ ಶಿಷ್ಯರಾದ ವ್ಯಾಸರಾಯರ ಪಾಂಡಿತ್ಯವೇ ಅತ್ಯಾಶ್ಚರ್ಯವಾಗಿರುವಾಗ ಅವರ ಗುರುಗಳ ಪಾಂಡಿತ್ಯವೆಂಥಾದ್ದೋ ನೋಡಬೇಕೆಂದೇ ಮಿಶ್ರನು ಮುಳುಬಾಗಿಲಿಗೆ ಬಂದನಲ್ಲದೆ ಅನ್ಯಕಾರಣವಿರಲಿಲ್ಲ. ಆ ಕಾಲದಲ್ಲಿ ಮಿಶ್ರನು ಶ್ರೀಪಾದರಾಯರ ಮುಂದೆ ವ್ಯಾಸರಾಯರ ಪ್ರಶಂಸೆಯನ್ನು ಈರೀತಿ ಮಾಡಿರುತ್ತಾನೆ.

ಯದಧೀತಂ ತದಧೀತಂ ಯದನಧೀತಂ ತದಪ್ಯಧೀತಂ ।
ಪಕ್ಷಧರವಿಪಕ್ಷಃ ನಾವೇಕ್ಷಿವಾಸಾ ನವೀನ ವ್ಯಾಸೇನ ॥

ತಾ॥ ನಾನು ಅಧ್ಯಯನ ಮಾಡಿದ್ದನ್ನೆಲ್ಲಾ ಅವರು ಅಧ್ಯಯನ ಮಾಡಿದ್ದಾರೆ. ನಾನು ಅಧ್ಯಯನ ಮಾಡದಿರುವುದನ್ನೂ ಅವರು ಅಧ್ಯಯನ ಮಾಡಿದ್ದಾರೆ. ಪಕ್ಷಧರನಿಗೆ ಪ್ರತಿವಾದಿಯನ್ನು ನವೀನ ವ್ಯಾಸರಹಿತ ಮತ್ತೊಬ್ಬನನ್ನು ಭೂತಳದಲ್ಲೇ ನೋಡಲಿಲ್ಲ.

ಹೀಗೆ ವ್ಯಾಸರಾಯರು ನವದ್ವೀಪ ಕಾಶಿ ಮೊದಲಾದ ವಿದ್ಯಾಪೀಠಗಳನ್ನು ಸಂದರ್ಶಿಸಿ, ಅಲ್ಲೂ ಅಜೇಯರಾದ ಪಂಡಿತರು ವಾದಕ್ಕೆ ಬರಲು ಜಯಿಸಿ ಭಕ್ತಿ ಪಂಥವನ್ನು ಉಪದೇಶಿಸಿದರು. ವ್ಯಾಸರಾಯರ ಉಪದೇಶವೇನೂ ಆ ದೇಶೀಯರಿಗೆ ಹೊಸದಾಗಿರಲಿಲ್ಲ. ಏಕೆಂದರೆ ಬಂಗಾಳಾ ದೇಶದಲ್ಲಿ ಪ್ರಚಾರವಾಗಿರುವ ಚೈತನ್ಯಮತವು ವ್ಯಾಸರಾಯರ ಪೂರ್ವ ಪೀಳಿಗೆಯಲ್ಲಿ ಬಂದ ಯತಿಗಳಿಂದಲೇ ಉಪದೇಶವಾಗಿತ್ತು. ಶ್ರೀ ಮಧ್ವಾಚಾರ್ಯರು ಬಂಗಾಳದ ಅರಸನಾಗಿದ್ದ ಧನೂಜ್ ರಾಯ್ ಎಂಬಾತನಿಗೇ ತಮ್ಮ ಧರ್ಮವನ್ನುಪದೇಶಿಸಿ ಆ ರಾಷ್ಟ್ರದಲ್ಲಿ ತಮ್ಮ ಪಂಥದ ಬೀಜಾರೋಪನ ಮಾಡಿದ್ದರು. ರಾಜೇಂದ್ರರೂ ಜಯಧ್ವಜರೂ ಅದೇ ಧರ್ಮವನ್ನು ಬಂಗಾಳಾದಲ್ಲಿ ವಿಶೇಷವಾಗಿ ಪ್ರಚಾರಮಾಡಿ, ಲಕ್ಷಾವಧಿ ಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ರಾಯ್ ಸಾಹೇಬ್ ದಿನೇಶಚಂದ್ರಸೇನರು ವೈಷ್ಣವಮತವು ಮಧ್ವಾಚಾರ್ಯರಿಂದ ಬಂಗಾಳಕ್ಕೆ ಉಪದೇಶವಾಯಿತೆಂಬ ಮಾತನ್ನು ಸ್ಪಷ್ಟವಾಗಿ ಹೇಳುವುದಿಲ್ಲ. ರಾಜೇಂದ್ರರೂ ಜಯಧ್ವಜರೂ ಉಪದೇಶಿಸಿದರೆಂದು ಅಭಿಪ್ರಾಯಪಡುತ್ತಾರೆ. **ಚೈತನ್ಯ ಮತ್ತು ಅವರ ಮಿತ್ರರು** ಎಂಬ ಇಂಗ್ಲಿಷ್ ಗ್ರಂಥದ ೨೯೭ ನೇ ಪುಟದಲ್ಲಿ ಅವರು ಈ ಕೆಳಕಂಡ ಮಾತುಗಳನ್ನು ಬರೆದಿರುತ್ತಾರೆ.

"It was to the Madhwa sect that Bengal owes her great Vieshnava faith, the culminating point of which was reached in the life of Chitanya. We find in the *Bhakti Ratnakara* that Vishnupuri a desciple of Jayadharma (Jayadhwaja) the tenth leader of this sect, popularised the Bhagavatha amongst the Bengalis about the middle of 13th century by his celebrated sanskrit work called the *Bhakti Ratnavali*. This seems to be the first impetus to Vieshnavism that came from Madhwa order in Bengal."

ಜಯಧ್ವಜರು ತಮ್ಮ ಜಯಧ್ವಜವನ್ನು ಬಂಗಾಳಾದಲ್ಲೇ ಏಕೆ, ಭರತಖಂಡದಲ್ಲಿ ಆಸೇತು ಹಿಮಾಚಲವಾಗಿ ಮೆರೆಸಿದರು. ಚೈತನ್ಯರಿಂದ ಮಧ್ವಾಚಾರ್ಯರ ಭಕ್ತಿ ಪಂಥದ ಮಹತ್ವವು ಬಂಗಾಳಿಗಳಿಗಾಯಿತು. ಚೈತನ್ಯಮತಸ್ಥರು ತಮ್ಮ ಗುರುಪೀಳಿಗೆ

ಯನ್ನು ವ್ಯಾಸರಾಯ ಮಠದ ಪೀಠಿಗೆಯಲ್ಲಿ ಪರಿಗಣಿಸುತ್ತಾರೆ. ವ್ಯಾಸರಾಯ ಮಠವನ್ನೇ ಮೂಲವೆಂದು ಭಾವಿಸುತ್ತಾರೆ.

ಶ್ರೀಮದಾಚಾರ್ಯರಿಂದ ಬಂದ ಮಠಪೀಠಿಗೆಯಲ್ಲಿ ವಿದ್ಯಾಧಿರಾಜರ ಕಾಲದ ವರೆಗೆ ಈಗಿನಂತೆ ವ್ಯಾಸರಾಯಮಠ, ರಾಘವೇಂದ್ರಸ್ವಾಮಿಗಳಮಠ, ಉತ್ತರಾದಿ ಮಠಗಳೆಂಬ ವಿಭಾಗಗಳಿರಲಿಲ್ಲ. ಅರುವತ್ತುನಾಲ್ಕು ವರ್ಷಕಾಲ ಈ ಮಹನೀಯರು ಸಂಸ್ಥಾನ ಪಾಲನೆ ಮಾಡಿದರಾದ್ದರಿಂದ ಯಾವಜ್ಜೀವವೂ ದೇಶಸಂಚಾರಮಾಡಿ ಧರ್ಮಪ್ರಚಾರ ಮಾಡುವುದಕ್ಕೆ ಕ್ರಮವಾಗಿ ತಮ್ಮ ಸ್ಥಾನದಲ್ಲಿ ರಾಜೇಂದ್ರರಿಗೆ ಪಟ್ಟಾಭಿಷೇಕ ಮಾಡಿದರು. ತಾವು ಮಾತ್ರ ಕೃಷ್ಣಾತೀರದ ಯರಗೋಳವೆಂಬ ಗ್ರಾಮದಲ್ಲಿ ವಾಸಮಾಡಿದರು. ರಾಜೇಂದ್ರರು ದಕ್ಷಿಣದೇಶ ಸಂಚಾರದಲ್ಲಿರಲು ವಿದ್ಯಾಧಿರಾಜರಿಗೆ ದೇಹಾಲಸ್ಯವಾಯಿತು. ಆ ಕಾಲದಲ್ಲಿ ಸರ್ವಜ್ಞಕರಾರ್ಚಿತ **ಮೂಲರಾಮ ದಿಗ್ವಿಜಯರಾಮ** ಮೊದಲಾದ ಮೂರ್ತಿಗಳ ಪೂಜಾನಿಮಿತ್ತ ಮತ್ತೊಬ್ಬರಿಗೆ ಸನ್ಯಾಸ ಕೊಡಬೇಕಾಯಿತು. ಆಗ ಸನ್ಯಾಸ ಪಡೆದವರೇ **ಕವೀಂದ್ರ**ರೆಂಬುದಾಗಿ ಕರೆಸಿಕೊಂಡ **ವಾಸುದೇವಶಾಸ್ತ್ರಿಗಳು.** ಕೆಲವು ಕಾಲಾನಂತರ ರಾಜೇಂದ್ರರು ಯರಗೋಳಕ್ಕೆ ಬಂದರು. ಕವೀಂದ್ರರು ಆಶ್ರಮ ಜ್ಯೇಷ್ಠರಿಗೆ ಸಂಸ್ಥಾನವನ್ನೊಪ್ಪಿಸಲು ಸಮ್ಮತಿಸಲಿಲ್ಲ. ಆಶ್ರಮಜ್ಯೇಷ್ಠರೂ ವಿನಯರೂ ತಾವಾಗಿದ್ದುದರಿಂದ ರಾಜೇಂದ್ರರು ಕನಿಷ್ಠರಲ್ಲಿ ಕೃಪೆಮಾಡಿ ಮಠದ ವಿಗ್ರಹಗಳನ್ನಾಗಲೀ, ಐಶ್ವರ್ಯವನ್ನಾಗಲಿ, ಆಚಾರ್ಯರ ಕಾಲದಿಂದ ಬಂದ ಶಿಷ್ಯವರ್ಗವನ್ನಾಗಲೀ ಅಪೇಕ್ಷಿಸದೆ, ಕವೀಂದ್ರರು ಶಿಷ್ಯಾರ್ಜನೆಮಾಡಿಕೊಂಡು ಸುಖವಾಗಿರಲೆಂದು ಪುನಃ ದಕ್ಷಿಣಪ್ರಾಂತಕ್ಕೇ ಪ್ರಯಾಣ ಮಾಡಿದರು. ರಾಜೇಂದ್ರರು ಮಹಾಪಂಡಿತರಾಗಿದ್ದುದರಿಂದ ಅವರ ದಿಗ್ವಿಜಯವು ಬಂಗಾಳದಿಂದ ರಾಮೇಶ್ವರದವರೆಗೆ ಯಶಸ್ವಿಯಾಗಿ ನಡೆಯಿತು. ದಕ್ಷಿಣಪ್ರಾಂತ್ಯದಲ್ಲಿ ವಿಶೇಷವಾಗಿದ್ದುದರಿಂದ ರಾಜೇಂದ್ರರ ಮಠಕ್ಕೆ ದಕ್ಷಿಣಾದಿಮಠವೆಂತಲೂ ಉತ್ತರ ಕರ್ಣಾಟಕದಲ್ಲಿದ್ದುದರಿಂದ ಕವೀಂದ್ರರ ಮಠಕ್ಕೆ ಉತ್ತರಾದಿ ಮಠವೆಂತಲೂ ಕ್ರಮೇಣ ಹೆಸರಾಯಿತು. ಜ್ಯೇಷ್ಠಗುರುಸಂತತಿಯಲ್ಲಿ ವ್ಯಾಸರಾಯರು ಅತ್ಯಂತ ಪ್ರಬಲರಾಗಿ ಧರ್ಮಸಂಸ್ಥಾಪನೆ ಮಾಡಿದಕಾರಣ ದಕ್ಷಿಣಾದಿಮಠಕ್ಕೆ **ವ್ಯಾಸರಾಯಮಠ**ವೆಂಬ ಹೆಸರು ಹೆಚ್ಚು ರೂಢಿಗೆ ಬಂದಿತು. ಅಂತಹ ಅವಕಾಶವ್ಯಾವುದೂ ಆಗದ ಕಾರಣ **ಉತ್ತರಾದಿಮಠಕ್ಕೆ** ಅದೇ ಹೆಸರು ಸ್ಥಿರವಾಯಿತು.

ಶ್ರೀಮದಾಚಾರ್ಯರ ಕಾಲದಿಂದ ಬಂದ ಶಿಷ್ಯರುಗಳನ್ನು ಉತ್ತರಾದಿ ಮಠಕ್ಕೆ ಬಿಟ್ಟುಕೊಟ್ಟ ಕಾರಣದಿಂದಲೂ, ಆ ಶಿಷ್ಯರು ಕಾಲಕ್ರಮದಲ್ಲಿ ಅನಂತಶಯನ, ತಂಜಾವೂರು, ಮೈಸೂರು, ಸವಣೂರು ಸಂಸ್ಥಾನಗಳಲ್ಲಿ ದಿವಾನಗಿರಿ ಮೊದಲಾದ ರಾಜ್ಯಾಧಿಕಾರಕ್ಕೆ ಬಂದ ಕಾರಣದಿಂದಲೂ, ಉತ್ತರಾದಿಮಠದ ಪ್ರಾಬಲ್ಯ ಹೆಚ್ಚಿ, ಅವರು ಇತರ ಮಠಗಳನ್ನು ತಮ್ಮ ಶಾಖಾಮಠಗಳೆಂದು ಕರೆಯುವ ಕಾರಣವಾಯಿತು.

ವ್ಯಾಸರಾಯರ ಧರ್ಮಪ್ರಚಾರಕಾರ್ಯವು ಉತ್ತರ ಹಿಂದೂಸ್ಥಾನದಲ್ಲೆಲ್ಲಾ ಜಯಪ್ರದವಾಗಿ ನಡೆಯಿತು. ಅಶ್ವಪತಿ ಜನರು ಶಿಷ್ಯರಾದರು. ೬ ಜನರಲ್ಲಿದ್ದ

ವಾಮಾಚಾರವು ಅದೃಶ್ಯವಾಯಿತು. ಉತ್ತರದಿಂದ ದಕ್ಷಿಣಕ್ಕೆ ಬರುತ್ತಾ ವ್ಯಾಸರಾಯರು ಕಾಂಚೀಪುರಕ್ಕೆ ಬಂದರು. ಉತ್ತರದಲ್ಲಿ ಕಾಶಿ ಹೇಗೋ ದಕ್ಷಿಣದಲ್ಲಿ ಕಂಚಿಯು ಹಾಗೆ ದೊಡ್ಡ ವಿದ್ಯಾಪೀಠವಾಗಿತ್ತು. ಕಂಚಿ ಮಾತ್ರವಲ್ಲ, ಅದರ ಸುತ್ತಮುತ್ತಣ ತುಂಡೀರ ಮಂಡಲವೇ ಸರಸ್ವತಿಗೆ ಆವಾಸಸ್ಥಾನವಾಗಿತ್ತು. ಒಂದೊಂದು ಅಗ್ರಹಾರದಲ್ಲೂ ಮಹಾ ಮಹಾ ಪಂಡಿತರಿದ್ದು, ದೊಡ್ಡ ದೊಡ್ಡ ಪಾಠಶಾಲೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಕ್ಷೇತ್ರಪದ್ಧತಿಯಂತೆ ಮಠಾಧಿಪತಿಗಳಾದ್ದರಿಂದ ವ್ಯಾಸರಾಯರಿಗೆ ವರದರಾಜಸ್ವಾಮಿಯ ದೇವಾಲಯದ ಸಕಲ ಮರ್ಯಾದೆಗಳನ್ನೂ ತೆಗೆದುಕೊಂಡು ವಿದ್ವಜ್ಜನರು ಸ್ವಾಗತ ಮಾಡ ಬೇಕಾಗಿತ್ತು. ಹಾಗೆ ಮಾಡದೆ, ಅವರು ವಿದ್ವತ್ಪ್ರದರ್ಶನ ಮಾಡಿ, ಮರ್ಯಾದೆ ಮಾಡಿಸಿ ಕೊಳ್ಳಬಹುದೆಂದು ಛಲಮಾಡಿದರು. ಜ್ಞಾನಾಕ್ಷರಾದ ಸ್ವಾಮಿಗಳು ತಮ್ಮ ಮಠದಲ್ಲೇ ವಿದ್ವತ್ಸಭೆಯನ್ನು ಏರ್ಪಡಿಸಿ, ಯಾರು ಬೇಕಾದರೂ ಮಠದ ಶಿಷ್ಯರೊಡನಾಗಲೀ, ಪಂಡಿತ ರೊಡನಾಗಲೀ, ತಮ್ಮೊಡನಾಗಲೀ ಬಂದು ವಾಕ್ಯಾರ್ಥ ಮಾಡಬಹುದು; ವಿದ್ವತ್ಪ್ರದರ್ಶನ ಮಾಡಿ ಬಹುಮಾನ ಪಡೆಯಬಹುದು; ಷಟ್ಛಾಸ್ತ್ರವೇತ್ತರಿಗೂ ಮಠವು ಮುಕ್ತದ್ವಾರ ವಾಗಿರುವುದೆಂದು ಪ್ರಸಿದ್ಧಿಪಡಿಸಿದರು. ಪಂಡಿತರು ಬಂದು ಬಂದು ವಾಕ್ಯಾರ್ಥಮಾಡಿ, ತಮ್ಮ ಪರಾಜಯವನ್ನು ತಾವೇ ಒಪ್ಪಿಕೊಂಡು ಹೋಗುವಂತಾಯಿತು. ಆ ಕಾಲದಲ್ಲೇ ಕಂಚಿಯ ಪಂಡಿತರು–ನಿಮ್ಮ ಮಠದ ಸಾರಸರ್ವಸ್ವವನ್ನೂ ಒಂದೇ ಮಾತಿನಿಂದ ಹೇಳ ಬೇಕೆಂದು ಕೇಳಿದಾಗ ಶ್ರೀ ವ್ಯಾಸರಾಯರು—

ಶ್ರೀ || ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ತ್ವತೋ
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚ ಭಾವಂಗತಾಃ ||

ಮುಕ್ತಿರ್ನೈಜ ಸುಖಾನುಭೂತಿ ರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋ ಹರಿಃ ||

ಎಂಬುದಾಗಿ ಆಶುಕವಿತೆಯಿಂದ ಈ ಶ್ಲೋಕವನ್ನು ಹೇಳಿದರು. ಹೇಳಿದಂತೆ ಒಂದೊಂದು ವಿಷಯವನ್ನೂ ಸಮರ್ಥನೆ ಮಾಡಿದರು. ವ್ಯಾಸರಾಯರು ಯಾವಾಗಲೂ ಮೊದಲು ತಾವೇ ಬಂದವರೊಡನೆ ವಾದಿಸುತ್ತಿರಲಿಲ್ಲ. ತಾವು ಮಧ್ಯಸ್ಥರಾಗಿ ಕುಳಿತು, ಮಠದ ವಿದ್ವಾಂಸರಿಂದ ಬಂದವರೊಡನೆ ವಾಕ್ಯಾರ್ಥ ಮಾಡಿಸುತ್ತಿದ್ದರು. ಎದುರಾಳಿಯು ಆಸ್ಥಾನದ ಪಂಡಿತರಿಂದ ಜಯಿಸಲು ಅಸಾಧ್ಯನೆಂದು ತೀರಿದರೆ ತಾವೇ ಮಾತನಾಡು ತ್ತಿದ್ದರು. ವಾಕ್ಯಾರ್ಥದಲ್ಲಿ ಸೋತವನಿಗೂ ತಕ್ಕಂತೆ ಬಹುಮಾನ ಮಾಡುತ್ತಿದ್ದರು. ಅವರಲ್ಲಿ ಯಾರಿಗೂ ಅತೃಪ್ತಿ ಉಂಟಾಗುತ್ತಿರಲಿಲ್ಲ. ಸೋತವನಾದರೂ ಸ್ವಾಮಿಗಳು ಪ್ರತಿಭಾಶಾಲಿ ಗಳು, ತಪಸ್ವಿಗಳು, ಉದಾರಿಗಳು, ಪೀಠಪ್ರಭಾವ, ಭಗವತ್ಸಾಕ್ಷಾತ್ ಎಂಬ ಯಾವುದಾದ ರೊಂದು ಮಾತನಾಡಿಕೊಂಡು ತೃಪ್ತನಾಗಿ ಹೋಗುತ್ತಿದ್ದನು. ಸ್ವಾಮಿಗಳ ವಾಕ್ಸರಣಿಗೇ ಜನರು ಮರುಳಾಗುತ್ತಿದ್ದರು. ತೇಜಸ್ಸನ್ನು ನೋಡಿ ಮುಗ್ಧರಾಗುತ್ತಿದ್ದರು. ಔದಾರ್ಯ ವನ್ನು ನೋಡಿ ದಾಸಾನುದಾಸರಾಗುತ್ತಿದ್ದರು.

ಪ್ರಾರಂಭದಲ್ಲೇನೋ ಕಾಂಚೀಪುರ ನಿವಾಸಿಗಳು ವಿರೋಧಿಗಳಾದರು. ಅನುಭವಕ್ಕೆ ಬಂದಮೇಲೆ ತಾವೇ ಪಶ್ಚಾತ್ತಾಪಪಟ್ಟರು. ಪರಿಹಾರಕ್ಕಾಗಿ ಸ್ವಾಮಿಗಳನ್ನು ದಿವ್ಯ ಪಾಲಕಿಯಲ್ಲಿ ಕೂಡಿಸಿ, ಪಾಲಕಿಯನ್ನು ತಾವೇ ಹೊತ್ತು, ದೇವಸ್ಥಾನದ ಸಕಲ ಬಿರುದಾವಳಿಗಳಿಂದ ಸಹಿತರಾಗಿ, ವಾದ್ಯವೈಭವದಿಂದ, ವೇದಘೋಷದಿಂದ, ಸ್ವರ್ಣಕುಂಭಗಳನ್ನು ಶಿರಸ್ಸಿನಲ್ಲಿ ಧರಿಸಿ, ವರದರಾಜ ದೇವಾಲಯಕ್ಕೆ ಕರೆದುಕೊಂಡುಹೋದರು. ದೇವರ ಸನ್ನಿಧಿಯಲ್ಲಿ ನಡೆಸಬೇಕಾದ ಗುರುಮರ್ಯಾದೆಗಳನ್ನು ಮಾಡಿದರು. ಹಿಂದೆ ನಡೆದ ಅಚಾತುರ್ಯಕ್ಕೆ ಕ್ಷಮೆ ಬೇಡಿದರು.

ವಿಷ್ಣುಕಂಚಿಯಲ್ಲಾದಂತೆ ಶಿವಕಂಚಿಯಲ್ಲೂ ಗುರುಮರ್ಯಾದೆಯಾಯಿತು. ವ್ಯಾಸರಾಯರು ಏಕಾಮ್ರನಾಥನನ್ನು ನೋಡಿ—

> ಸಾಮ್ರಾಜ್ಯಂ ಮದನಾರಿನಾ ಮಧಿತುಲಾಕೋಟಿಸ್ಫುಟಂ ಕಲ್ಪಯನ್ ।
> ಕುರ್ವನ್ಮೂರ್ಧ್ನಿ ಕುಮುದ್ವತೀ ಪರಿಷದಾಮಾನಂದಧೇರಂಕುರಂ ॥
> ಪಾಠೀನಾದಿ ಧನುರ್ಧರಸ್ಯ ಮಧುರಾಮಾಜ್ಞಾಂ ಸಮಾರಾಧಯನ್ ।
> ಭೂಮೌ ಕೋಽಪಿ ರಸಾಲಮೂಲರಸಿಕಃ ಪುಷ್ಣಾತಿ ಮೋದಂ ದೃಶೋಃ ॥

ಎಂಬುದಾಗಿ ಸ್ತೋತ್ರ ಮಾಡಿದರು.

ಹೀಗಿದ್ದರೂ ಯಾವನೋ ಒಬ್ಬ ದ್ವೇಷಿಯು ವ್ಯಾಸರಾಯರ ಪ್ರಾಬಲ್ಯವನ್ನು ನೋಡಿ ಸಹಿಸಲಾರದೆ ವಿಷಪ್ರಯೋಗ ಮಾಡಿಸಿದನು. ಪಾಚಕನು ದ್ರವ್ಯದಾಸೆಗೆ ಚಿಕ್ಕ ನೈವೇದ್ಯದ ಅಡಿಗೆಯಲ್ಲಿ ವಿಷವನ್ನು ಬೆರಸಿದನು. ಬೆರಸುವಾಗ ಬೆದರಿ, ಸ್ವಾಮಿಗಳು ಭಿಕ್ಷಾಸ್ವೀಕಾರಕ್ಕೆ ಕುಳಿತಾಗ ಬಡಿಸಲು ಕೈಬಾರದೆ, ಹಿಂದುಮುಂದು ನೋಡುತ್ತಾ ಕೈ ನಡುಗಿಸುತ್ತಾ ನಿಂತನು.

ಸ್ವಾಮಿಗಳು:—ಹೀಗೇಕೆ ನಿಂತಿರುವೆ ? ಬಡಿಸು.

ಪಾಚಕ:—ಇಲ್ಲ ಮಹಾಸ್ವಾಮಿ, ತಪ್ಪಾಯಿತು.

ಸ್ವಾ:—ಬಡಿಸು ಬಡಿಸು ತಪ್ಪೇನಿಲ್ಲ.

ಪಾ:—ಆ ಪದಾರ್ಥಗಳನ್ನು ತಾವು ಭೋಜನ ಮಾಡಬಾರದು.

ಸ್ವಾ:—ಅದೇಕೆ ?

ಪಾ:—ದುಡ್ಡಿನಾಸೆಗೆ ಮಣ್ಣು ತಿಂದೆ ! ತಪ್ಪಾಯಿತು. ಭೋಜನಮಾಡಬಾರದು.

ಸ್ವಾ:—ಅದರಲ್ಲೇನಿದೆಯೋ ?

ಪಾ:—ವಿಷ !

ಸ್ವಾ:—ವಿಷವನ್ನು ದೇವರ ನೈವೇದ್ಯಕ್ಕಿಟ್ಟಿದ್ದೆಯಾ ?

ಪಾ:—ತಪ್ಪಾಯಿತು ಮಹಾಸ್ವಾಮಿ, ಕ್ಷಮಿಸಬೇಕು.

ಸ್ವಾ:—ಈ ಅಡಿಗೆಯನ್ನು ದೇವರ ನೈವೇದ್ಯಕ್ಕಿಟ್ಟಿದ್ದೆಯೋ ಇಲ್ಲವೋ !

ಪಾ:—ಇಟ್ಟಿದ್ದೆ ಮಹಾಸ್ವಾಮಿ.

ಸ್ವಾ:—ಇಡುವಾಗ ಅನ್ನವೆಂದಿಟ್ಟೆಯಾ, ವಿಷವೆಂದಿಟ್ಟೆಯಾ ?

ಪಾ:—ಅನ್ನವೆಂದು !

ಸ್ವಾ:—ಹಾಗಿದ್ದರೆ ದೇವರ ನೈವೇದ್ಯವನ್ನು ನಮಗೂ ಬಡಿಸು.

ಪಾ:—ಕೊಡದು ಮಹಾಸ್ವಾಮಿ, ಅದರಲ್ಲಿ ವಿಷವಿದೆ.

ಸ್ವಾ:—ವಿಷವಿರಲಿ, ಅಮೃತವಿರಲಿ ! ಅದು ದೇವರಪ್ರಸಾದ. ದೇವರಪ್ರಸಾದ ವಲ್ಲದೆ ನಾವು ಅನ್ಯಪದಾರ್ಥಗಳನ್ನು ಭುಜಿಸುವದಿಲ್ಲ. ಅದನ್ನೇ ಬಡಿಸು.

ಪಾಚಕನು ಎಷ್ಟು ಬೇಡಿಕೊಂಡರೂ ಸ್ವಾಮಿಗಳು ಕೇಳಲಿಲ್ಲ. ಬಲವಂತ ಮಾಡಿ ವಿಷಮಿಶ್ರಾನ್ನವನ್ನು ಬಡಿಸಿಕೊಂಡು ಭೋಜನಮಾಡಿದರು. ಭಿಕ್ಷಾನಂತರ ಸ್ವಲ್ಪವೂ ವಿಶ್ರಮಿಸಲಿಲ್ಲ. ವಿಷಮಿಶ್ರಾನ್ನವನ್ನು ನಿವೇದನಮಾಡಿದ ಅಪರಾಧಕ್ಕಾಗಿ ಭಗ ವಂತನನ್ನು ಕ್ಷಮೆ ಬೇಡುತ್ತ ಕುಳಿತರು. ರಾತ್ರೆ ನಿದ್ರಾರಹಿತರಾಗಿ ಭಗವತ್ಪೂಜನೆ ಮಾಡುತ್ತಾ ವಿಷವನ್ನು ಜೀರ್ಣಮಾಡಿಕೊಂಡರು.

ಈ ವಿಷಯವನ್ನು ಸೋಮನಾಥಕವಿಯು :—

ತಸ್ಮೈ ಮಹಾಯೋಗಿನೇ ಜಾತುಚಿತ್ತೇಜೋವಿಶೇಷಮಸಹಿಷ್ಣುನಾ ಕೇನಾಪಿ ಬ್ರಹ್ಮಬಂಧುನಾ ಧಾರ್ತರಾಷ್ಟ್ರೇಣೇವ ದುರಾತ್ಮನಾ ಭೀಮಸೇನಾಯ ಗರಲಂ ಕವಲಗೋಪಿತಂ ಪ್ರಾಯುಂಜ್ತ. ಎಂಬ ಮಾತುಗಳಿಂದ ತಿಳಿಸಿರುವನು.

ಮಾಡುವುದೇನು ? ಪಾಪಾತ್ಮರು ತಮ್ಮ ಅಜ್ಞಾನವನ್ನು ಖಂಡಿಸಿ ಸನ್ಮಾರ್ಗ ತೋರಿಸಿದರೂ ಗುಣಬದ್ಧರಾಗುವುದಿಲ್ಲ. ಅನಾದಿಕಾಲದಿಂದ ಬಂದ ಸ್ವಭಾವವು ಯಾರಿಗೂ ಬದಲಾಗುವುದಿಲ್ಲ. ದುಷ್ಟ ದುರ್ಯೋಧನನು ಭೀಮಸೇನನ ಪರಾಕ್ರಮವನ್ನು ನೋಡಿ ಸಹಿಸಲಾರದೆ ವಿಷಪ್ರಯೋಗ ಮಾಡಿಸಿದನು. ಪಾಪಿ ಹಿರಣ್ಯಕಶಿಪುವು ದೇವರಧ್ಯಾನ ಮಾಡಿದ್ದನ್ನೇ ಅಪರಾಧವೆಂದೆಣಿಸಿ, ಸ್ವಹಸ್ತದಿಂದ ತನ್ನ ಮಗ ಪ್ರಹ್ಲಾದನಿಗೆ ವಿಷಪಾನ ಮಾಡಿಸಿದನು. ಪ್ರಬಲ ಮತಾಚಾರ್ಯರುಗಳಲ್ಲಿ ಪ್ರಾಯಶಃ ವಿಷಪ್ರಯೋಗವಾಗದವರೇ ಇಲ್ಲವೆನ್ನಬೇಕು. ಹೆಚ್ಚಿನ ತಪಶ್ಶಕ್ತಿಯುಳ್ಳವರು ವಿಷವನ್ನು ಜೀರ್ಣಿಸಿಕೊಂಡು ಬದುಕು ವರು ; ಇಲ್ಲದವರು ಪಾಪಿಗಳ ದೋಷಕ್ಕೊಳಗಾಗಿ ಬಲಿಯಾಗುವರು.

ವ್ಯಾಸರಾಯರಿಗೆ ವಿಷಪ್ರಯೋಗವಾದುದನ್ನು ಕೇಳಿದ ಕಾಂಚೀಪುರ ನಿವಾಸಿಗಳು ಬಲು ವಿಷಾದಪಟ್ಟರು. ಹಾಗೂ, ತಪಃಪ್ರಭಾವದಿಂದ ಅವರು ಆ ವಿಷವನ್ನು ಜೀರ್ಣ ಮಾಡಿಕೊಂಡುದನ್ನು ತಿಳಿದು ಆಸಂದಾಶ್ಚರ್ಯಮಗ್ನರಾದರು. ಈ ತೆರದ ದುಷ್ಕೃತ್ಯದಿಂದ ತಮ್ಮ ವಿಪ್ರನ್ನಗರಿಗೇ ಅಪಮಾನವಾಯಿತೆಂದು ವಿಶೇಷ ಲಜ್ಜಿತರಾದರು. ವಿಷಪ್ರಯೋಗ ಮಾಡಿದ-ಮಾಡಿಸಿದ ಉರ್ವರನ್ನು ರಾಜದಂಡನೆಗೆ ಗುರಿಪಡಿಸಬೇಕೆಂದು ಸ್ವಾಮಿಗಳ ಬಳಿಗೆ ಬಂದರು. ಯಾವಾಗಲೂ ಪ್ರಸನ್ನಮುಖಿ, ಯಾವಾಗಲೂ ಶಾಂತಸ್ವಭಾವದ ವ್ಯಾಸ ರಾಯರು ಜನರ ಗುಂಪನ್ನು ನೋಡಿ ನಗುತ್ತಾ, ಬಂದ ಕಾರಣವೇನೆಂದು ಕೇಳಿದರು. ಅವರು ಖಿನ್ನರಾಗಿ-'ನೀಚನ ಅಕೃತ್ಯದಿಂದ ನಾವೆಲ್ಲರೂ ತಲೆತಗ್ಗಿಸುವಂತಾಯಿತು. ಮಹಾ

ಸ್ವಾಮಿಗಳೇ, ಈ ಪಾಚಕನನ್ನೂ ಆ ಪ್ರೇರಕನನ್ನೂ ತಮ್ಮಾಜ್ಞೆಯಾದರೆ ಈಗಲೇ ರಾಜ ದಂಡನೆಗೆ ಗುರಿಮಾಡುವೆವು' ಎಂದು ವಿನಯದಿಂದ ಪ್ರಾರ್ಥಿಸಿದರು. ಸ್ವಾಮಿಗಳು ಅಂಥಾ ಸಾಹಸಕ್ಕೆ ಮಾತ್ರ ಹೋಗಬಾರದು. ಈರ್ವರನ್ನೂ ನಾವು ಕ್ಷಮಿಸಿದಂತೆ ನೀವೂ ಕ್ಷಮಿಸಿದ ರಾಯಿತು. ಪ್ರಾಣಾಪಹಾರಿಯಾದ ವಿಷವೂ ಭಗವದರ್ಪಿತವಾಗಿ ಅಮೃತವಾಯಿತಲ್ಲ !

"ವಿಷಮಪ್ಯಮೃತಂ ಕ್ವಚಿದ್ಭವೇತ್"

'ಅವರಿಂದ ಯಾರೂ ವಿಷವನ್ನು ಹಾಕಲಿಲ್ಲ; ಹಾಕಿಸಲಿಲ್ಲ. ಇಷ್ಟುಮಾತ್ರಕ್ಕೇ ನೀವು ಖಿನ್ನರಾಗಬಾರದು' ಎಂದು ಸಮಾಧಾನಮಾಡಿ ಕಳುಹಿಸಿದರು.

ಸ್ವಾಮಿಗಳ ಕ್ಷಮಾಗುಣಕ್ಕೆ ಆ ವಿಪ್ರಜ್ಞರು ತಲೆದೂಗಿದರು. ಇದರಿಂದ ಸ್ವಾಮಿಗಳ ಕೀರ್ತಿಯು ದೇಶದಲ್ಲಿ ಪರಿಪರಿಯಾಗಿ ವ್ಯಾಪಿಸಿತು. ವಿಷಪ್ರಯೋಗದಿಂದ ಜ್ಯೋತಿಷ್ಮತೀತೈಲ ಪಾನಮಾಡಿದಂತೆ ಸ್ವಾಮಿಗಳ ತೇಜಸ್ಸು ಹೆಚ್ಚಿತು. ಕಾಂಚೀಪುರದಿಂದ ಮುಳುಬಾಗಲಿಗೇ ಹೋಗಬೇಕೆಂದು ಸಂಕಲ್ಪಿಸಿದರು.

ಯಾತೇಷು ಭೂರಿಷು ದಿನೇಷು ಯತಿಪ್ರವೀರ।
ಸ್ತೇಜಃ ಪ್ರಣಮ್ಯ ವರದಂ ದ್ವಿಪ ಶೈಲ ಚಿಹ್ನಂ ॥
ದೇಶಾತ್ಪ್ರದರ್ಶಿತ ವಿಚಿತ್ರ ವಚಃ ಪ್ರಭಾವಃ।
ತಸ್ಮಾತ್ಸಮುಲ್ವನಗರೀಶನಕೈರಯಾಸೀತ್ ॥

ದಕ್ಷಿಣದೇಶದ ಸಂಚಾರದಲ್ಲಿ ಬ್ರಾಹ್ಮಣರು ಮಾತ್ರವಲ್ಲದೆ, ಬ್ರಾಹ್ಮಣೇತರರ ಸಾವಿರಾರು ಕುಟುಂಬಗಳವರು ವ್ಯಾಸರಾಯರ ಶಿಷ್ಯರಾದರು. ಆ ಜನರು ಈಗಲೂ ಮಧುರೆ ತಿನ್ನವೆಲ್ಲಿ ಜಿಲ್ಲೆಗಳಲ್ಲಿ ಹೇರಳವಾಗಿದ್ದಾರೆ.

ಮುಳುಬಾಗಲಿಗೆ ವ್ಯಾಸರಾಯರು ಬರುವರೆಂಬ ಸುದ್ದಿ ತಿಳಿದಕೂಡಲೇ ಶ್ರೀಪಾದ ರಾಯರು ಅತ್ಯಂತ ಹರ್ಷಿತರಾದರು. ಆ ಕಾಲದಲ್ಲಿ ಮುಳುಬಾಗಲು ದೊಡ್ಡ ವಿದ್ಯಾ ಕೇಂದ್ರವಾಗಿತ್ತೆಂದು ಮತ್ತೆ ಹೇಳಬೇಕಾಗಿಲ್ಲ. ಸೋಮನಾಥಕವಿಯು ಶ್ರೀಪಾದರಾಯರು ಹೇಗಿದ್ದರೆಂಬುದನ್ನು

"ತತ್ರ ಸತತ ವಿಹಿತಾಧಿವಾಸಂ, ಸನಕಮಿವ ಮಹರ್ಷಿಭಿರ್ಬ್ರಹ್ಮವಾದಿ ಭಿರಂತೇವಾಸಿಭಿರುಪಾಸ್ಯಮಾನಂ, ಪ್ರತಿ ವಿಬುಧ ವಿಟಪಿ ಪಾಟನ ಕ್ರೀಡನ ಕಠೋರ ಕುಠಾರ ಧಾರಾಯಮಾಣವಾಗ್ಗುಂಭಂ, ಹರಿದಂತರ ವಿಸರ್ಪಿಯಶಃ ಕಾಶವನ ಪ್ರವರ್ತಿತ ಶಾಶ್ವತ ಶರತ್ಸಮಯಾವತಾರಂ, ನಿಕ್ಷೇಪಭಾಜನಮಿವ ಮಧ್ವಮುನಿರಹಸ್ಯಸ್ಯ॥"

ಎಂಬ ವಾಕ್ಯಗಳಿಂದ ಕೊಂಡಾಡಿರುತ್ತಾನೆ.

ವ್ಯಾಸರಾಯರು ದಕ್ಷಿಣೋತ್ತರ ದೇಶಗಳಲ್ಲೆಲ್ಲಾ ದಿಗ್ವಿಜಯಮಾಡಿ ಲಕ್ಷಾವಧಿ ಶಿಷ್ಯರನ್ನು ಸಂಪಾದನೆ ಮಾಡಿದ ಪ್ರಖ್ಯಾತಿಯನ್ನು ಪಕ್ಷಧರ ಮಿಶ್ರನಂಥಾ ಮಹಾಪಂಡಿತರ ಮುಖದಿಂದ ಕೇಳಿ ಆನಂದಪಡುತ್ತಿದ್ದ ಶ್ರೀಪಾದರಾಯರು ಶ್ರೀ ವ್ಯಾಸರಾಯರನ್ನು

ಮಹೋತ್ಸವದಿಂದ ತಮ್ಮ ಮಠಕ್ಕೆ ಬರಮಾಡಿಕೊಂಡರು. ವ್ಯಾಸರಾಯರಿಗಾದರೋ ಶ್ರೀಪಾದರಾಯರು ವಯೋವೃದ್ಧರು, ಆಶ್ರಮಜ್ಯೇಷ್ಠರು, ವಿದ್ಯಾಗುರುಗಳು. ಗುರುಗಳನ್ನು ಮಠದ ಮಹಾದ್ವಾರದ ಬಳಿ ಕಂಡಕೂಡಲೇ ಹೆಜ್ಜೆ ನಮಸ್ಕಾರ ಮಾಡುತ್ತಾ ಸಮೀಪಕ್ಕೆ ಬಂದು ಭಕ್ತ್ಯತಿಶಯದಿಂದ ಪ್ರವಾಹರೂಪವಾಗಿ ಬರುತ್ತಿದ್ದ ಬಾಷ್ಪಗಳನ್ನು ನಿರೋಧಿಸಲಾರದೆ, ಎರಡು ಪಾದಗಳನ್ನೂ ಗಟ್ಟಿಯಾಗಿ ಹಿಡಿದು, ಆ ಬಾಷ್ಪೋದಕದಿಂದಲೇ ಗುರುಪಾದಪ್ರಕ್ಷಾಲನ ಮಾಡಿದರು. ಶ್ರೀಪಾದರಾಜರು, ಶಿಷ್ಯನನ್ನು ನೋಡಿದ ಆನಂದದಿಂದ ಪರವಶರಾಗಿ, ಪುಳುಕಿತರಾಗಿ, ವ್ಯಾಸರಾಯರನ್ನು ತೋಳ್ಗಳಿಂದ ಮೇಲಕ್ಕೆತ್ತಿ ಆಲಿಂಗನ ಮಾಡಿಕೊಂಡು,–'ಅಪ್ಪಾ ವ್ಯಾಸರಾಜಾ, ಜಗಜ್ಜಯ ಮಾಡಿ ಬಂದೆಯಾ ? ಶ್ರೀಮದಚಾರ್ಯರು ನಿನ್ನಲ್ಲಿ ಪರಮಾನುಗ್ರಹ ಮಾಡಿರುವರು. ನಿನ್ನಿಂದ ನಮಗೆ ಕೀರ್ತಿ ; ನಿಮ್ಮ ಮಠಕ್ಕೆ ಕೀರ್ತಿ ; ಶ್ರೀಮದಾಚಾರ್ಯರಿಗೆ ಕೀರ್ತಿ : ಶ್ರೀಹರಿಗೂ ಕೀರ್ತಿ ; ಬಾರೆ'ಂದು ಅರ್ಘ್ಯಾದಿಗಳಿಂದುಪಚರಿಸಿದರು. ಗುರು ಸಾನ್ನಿಧ್ಯವಾಸವು ವ್ಯಾಸರಾಯರಿಗೆ ಸರ್ವಾಧಿಕವೆನಿಸಿತು. ಮತ್ತೆ ವ್ಯಾಸರಾಯರಿಗೆ ಪಾಠಕ್ಕಾರಂಭವಾಯಿತು. ವಿದ್ಯಕ್ಕೆ ಪಾರವೆಲ್ಲಿ ? ನವವ್ಯಾಕರಣ ಪಂಡಿತನಾದ ಮಾರುತಿಯೇ ಇನ್ನೂ ವಿದ್ಯಾಭ್ಯಾಸ ಮಾಡುತ್ತಿರುವನಂತೆ ! ಸನಕಾದಿಗಳ ಮುಂದೆ ನಾರದರೂ ಪುಸ್ತಕಪಾಣಿಗಳಂತೆ! ಸರ್ವಜ್ಞರೆನಿಸಿದ ಮಧ್ವಾಚಾರ್ಯರೂ ವೇದವ್ಯಾಸರಲ್ಲಿ ಇನ್ನೂ ಶಿಷ್ಯರಾಗಿರುವರಂತೆ! ಶ್ರೀಪಾದರಾಯರೇನು ಹೇಳಿದರೋ ವ್ಯಾಸರಾಯರೇನು ಕೇಳಿದರೋ ! ಇವರೇನು ಬೋಧಿಸಿದರೋ ಅವರೇನು ಕಲಿತರೋ–ಅವರೀರ್ವರಿಗೇ ಗೊತ್ತು. ಅಂತೂ ಮುಂದೆ ಅನೇಕ ವರ್ಷಗಳು ವ್ಯಾಸರಾಯರ ಗುರುಕುಲವಾಸವಾಯಿತು.

ಶ್ರೀಪಾದರಾಯರೊಂದುದಿನ ವ್ಯಾಸರಾಯರ ಪ್ರೌಢಿಮೆಯನ್ನು ನೋಡಿ, ಮನಸ್ಸಿನಲ್ಲಿ ಅಡಗಿಸಿಟ್ಟುಕೊಳ್ಳಲಾರದೆ :—

"ಅಯೇ, ಜಗತಿವಿಜಯತೇ ಕೇವಲಂ ಶಾರದಾಯಾಮೇವ ಹೃದ್ಯಾ ನಿಖಿಲವಿದ್ಯಾ, ಭಾರ್ಗವ ಏವ ಪ್ರತಿಭಟ ಪ್ರತಿಭಯಾ ಪ್ರತಿಭಾ, ಧಿಷಣ ಏವಾ ಪ್ರಹತಮೇದುರಮುದಾವದಾವದತಾ, ವಿರಕ್ತನ ಏವ ವಿಸ್ಮಾಪಿತತೇಜಃ ಪ್ರಪಂಚ ಸ್ಸುಧಾಕರ ಏವ ಸಕಲ ಜನ ಮನಃ ಪ್ರೀಣನಂ ನೈಪುಣ್ಯಂ, ವಿಭಾವಸಾವೇವ ವಿಶ್ವಾಸಿತಲೋಕಬುದ್ಧಿ ಶುದ್ಧಿರ್ಮೇದಿನೀಧರಾಧಿಪಶೃಂಗ ಏವ ವಿಶೇಷ ಧೌರಂಧರ್ಯಂ, ಮಂದಾರ ಮಹೀರುಹ ಏವಾನನ್ಯಸಾಮಾನ್ಯಾವದಾನ್ಯತಾ ಭಗವತಿ ವಾಸುದೇವ ಏವ ವಿಚಿತ್ರಾಣಿ ಚರಿತ್ರಾಣಿ

ಅಭೂತ ಪೂರ್ವಾಭ್ಯುದಯೇ ತ್ರಿಲೋಕೀ
ಪಟೀಕುಟೀಭೋ ಭವದುಚ್ಚಕೀರ್ತೇಃ ॥
ಸಮಸ್ತಮೇತತ್ತು ಸಮೇಧಮಾನಾಂ
ತ್ವಯ್ಯೇಕ ವಾಸ್ತವ್ಯತಯಾಸ ವಿಂಧೇ ॥

"ಲೋಕದಲ್ಲಿ ಒಂದೊಂದು ಸರ್ವೋತ್ಕೃಷ್ಟ ಗುಣಗಳು ಒಬ್ಬೊಬ್ಬರಲ್ಲಿರಬಹುದು;

ಎಲ್ಲಾ ಗುಣಗಳೂ ಉಚ್ಚಮಟ್ಟದಲ್ಲಿ ಒಬ್ಬೊಬ್ಬರಲ್ಲಿ ಅತ್ಯಂತ ವಿರಳ; ಸಕಲ ವಿದ್ಯೆಗಳನ್ನೂ ಶಾರದೆಯಲ್ಲಿ ನೋಡಬಹುದು; ಶತ್ರುಗಳನ್ನು ದಮನಿಸುವ ಪರಾಕ್ರಮವನ್ನು ಭಾರ್ಗವನಲ್ಲಿ ನೋಡಬಹುದು; ಬುದ್ಧಿಶಾಲಿತೆಯನ್ನು ಬೃಹಸ್ಪತಿಯಲ್ಲಿ ಕಾಣಬಹುದು; ಪ್ರಕಾಶವನ್ನು ಸೂರ್ಯನಲ್ಲಿ ನೋಡಬಹುದು; ಆಹ್ಲಾದ ತತ್ವವನ್ನು ಚಂದ್ರನಲ್ಲಿ ಕಾಣಬಹುದು; ಪಾವಿತ್ರ್ಯವನ್ನು ಅಗ್ನಿದೇವನಲ್ಲಿ ನೋಡಬಹುದು; ಧೈರ್ಯವನ್ನು ಪರ್ವತರಾಜನಲ್ಲಿ ನೋಡಬಹುದು; ಔದಾರ್ಯವನ್ನು ಕಲ್ಪವೃಕ್ಷದಲ್ಲಿ ಕಾಣಬಹುದು; ವಿಚಿತ್ರಚರ್ಯೆಗಳನ್ನು ವಾಸುದೇವನಲ್ಲಿ ಅವಲೋಕಿಸಬಹುದು; ನಿನ್ನಲ್ಲಾದರೋ ಸರ್ವ ಗುಣಗಳೂ ಸಂಪೂರ್ಣವಾಗಿರುವುವು" ಎಂದು ತಮ್ಮ ಆನಂದಾತಿಶಯವನ್ನು ಪ್ರಕಟ ಗೊಳಿಸಿದರು.

೫

ರಾಜಕೀಯ ವೃತ್ತಾಂತ, ಮತ್ತು ವ್ಯಾಸರಾಯರ ರಾಜಸಭಾ ಪ್ರವೇಶ

ಈ ಕಾಲದಲ್ಲಿ ವಿರೂಪಾಕ್ಷ ಭೂಪತಿಯು ವಿಜಯನಗರದ ಅರಸನಾಗಿದ್ದನು. ಇವನು ವೈಷ್ಣವ ಮತಾವಲಂಬಿಯಾಗಿದ್ದನು. ರಾಜನಂತೆ ಪ್ರಜೆಗಳೂ ಶ್ರೀ ವೈಷ್ಣವ ಮತದಲ್ಲಿ ಭಕ್ತಿಯುಕ್ತರಾಗಿದ್ದರು. ರಾಜ್ಯಸ್ಥಾಪನೆಯಾದ ಕಾಲದಿಂದ ನಡೆದುಬಂದಿದ್ದ ವಿರೂಪಾಕ್ಷ ರಾಜಮುದ್ರೆಯನ್ನಳಿಸಿ, ಆ ಸ್ಥಳದಲ್ಲಿ ರಾಮಮುದ್ರೆಯನ್ನು ರಾಜಮುದ್ರೆಯಾಗಿ ಮಾಡಿಬಿಟ್ಟನು. ತಂದೆತಾಯಿಗಳು ನಾಮಕರಣಮಾಡಿದ ವಿರೂಪಾಕ್ಷ ಶಬ್ದದ ವಿನಾ ಇವನಲ್ಲಿ ಯಾವ ವಿಧವಾದ ಶೈವಲಕ್ಷಣಗಳೂ ಇರಲಿಲ್ಲ. ಈ ಅಭಿಪ್ರಾಯವನ್ನು ಪ್ರಪನ್ನಾಮೃತದಲ್ಲಿ—

ಶ್ರೀವೈಷ್ಣವೇ ವಿರೂಪಾಕ್ಷೇ ಪ್ರಶಾಸತಿ ಮಹೀಮಿಮಾಂ
ಆಸನ್ ಶ್ರೀವೈಷ್ಣವಾಸ್ಸರ್ವೇ ಯಥಾರಾಜಾ ತಥಾಪ್ರಜಾಃ ॥
ವಿರೂಪಾಕ್ಷಾಭಿಧಾಂ ಮುದ್ರಾಂ ವಿರೂಪಾಕ್ಷೋ ವಿಹಾಯ ಚ
ರಾಜಾಂಗುಲೀಯೇ ಶ್ರೀರಾಮಮುದ್ರಾಂ ಪೃಥುತರಾಂ ವ್ಯಧಾತ್ ॥

ಎಂಬ ಶ್ಲೋಕದಿಂದ ಸಂಗ್ರಹಿಸಿದ್ದಾರೆ.

ಇಷ್ಟುಮಾತ್ರವಲ್ಲದೆ ವಿರೂಪಾಕ್ಷನು ತಿರುಪತಿಯ ಅರ್ಚಕರ ವಶವರ್ತಿಯಾಗಿದ್ದನು. ರಾಜಕಾರ್ಯವನ್ನು ಅರ್ಚಕರ ಮಾತಿನಂತೆ ನಡೆಸುತ್ತಿದ್ದನು. ಈ ಕಾರಣಗಳಿಂದ ಇವನ ಸಾಮಂತರಾಜರೂ ರಾಜ್ಯಾಧಿಕಾರಿಗಳೂ ಇವನಿಗೆ ವಿರೋಧಿಗಳಾಗಿದ್ದರು. ಚಂದ್ರಗಿರಿಯ ರಾಜನಾದ ಸಾಳುವ ನರಸಿಂಹಭೂಪಾಲನು ತಿರುಪತಿಯ ಸಮೀಪವಾಸಿಯಾಗಿದ್ದುದರಿಂದ ಅಲ್ಲಿನ ಅರ್ಚಕರ ಅಕೃತ್ಯಗಳನ್ನು ಕಂಡು ಅವರನ್ನು ದ್ವೇಷಿಸುತ್ತಿದ್ದನು. ಅರ್ಚಕರುಗಳಾದರೋ-ದೇವರ ಆಭರಣಗಳನ್ನು ತಾವೇ ಧರಿಸುವುದು, ದೇವರ ವಾಹನಗಳ ಮೇಲೆ ತಾವೇ ಕುಳಿತು ಮೆರೆಯುವುದು, ದೇವರ ಹುಂಡಿಯ ದ್ರವ್ಯವನ್ನು

ತಾನೇ ಉಪಯೋಗಿಸಿಕೊಳ್ಳುವುದು, ದೇವಾಲಯವೇ ತಮ್ಮದೆನ್ನುವುದು, ಇಂಥ ಅಕೃತ್ಯಗಳನ್ನು ಮಾಡುತ್ತಿದ್ದರು. ತಿರುಪತಿಯ ಅರ್ಚಕರ ಮಾತನ್ನು ನಂಬಿದಂತೆ ವಿರೂಪಾಕ್ಷನು ತನ್ನ ಸಾಮಂತರಾಜನಾದ ಸಳುವ ನರಸಿಂಹರಾಜನ ಮಾತನ್ನು ನಂಬುತ್ತಿರಲಿಲ್ಲ. ಆದುದರಿಂದ ಉಭಯರ ವೈರವೂ ದಿನದಿನಕ್ಕೆ ಹೆಚ್ಚುತ್ತಿತ್ತು. ನರಸಿಂಹನು ಯಾವ ರಾಜಕಾರ್ಯವನ್ನೂ ಸ್ವತಂತ್ರವಾಗಿಯೇ ನಡೆಸುತ್ತ ಬಂದನು. ಕಪ್ಪಕೊಡುವುದನ್ನು ನಿಲ್ಲಿಸಿದನು. ಸಾಮ್ರಾಜ್ಯಕ್ಕೂ ಪರರಾಯರಿಗೂ ಯುದ್ಧಪ್ರಸಕ್ತಿ ಬಂದರೆ, ವಿರೂಪಾಕ್ಷನನ್ನು ಸಡ್ಡೆಮಾಡದೆ ತಾನೇ ಜೈಸಿ ರಾಜ್ಯಗಳನ್ನು ಸೇರಿಸಿಕೊಳ್ಳುತ್ತಿದ್ದನು. ಕ್ರಮೇಣ ವಿರೂಪಾಕ್ಷನನ್ನು ಮೂಲೆಗೆ ಕೂರಿಸಿ, ತಾನೇ ವಿಜಯನಗರದ ಚಕ್ರವರ್ತಿಯಾದನು.

ಅವನ ಕೃತ್ಯಗಳು ಇತರ ಸಾಮಂತರಿಗೆ ಸಮ್ಮತವಾಗಿದ್ದುದರಿಂದ ಯಾರೂ ಅವನ ವಿರೋಧಿಗಳಾಗಿರಲಿಲ್ಲ. ೧೪೮೬ಕ್ಕೆ ಸರಿಯಾಗಿ ವಿಜಯನಗರ ರಾಜ್ಯಸ್ಥಾಪನೆಯಾಗಿ ೧೫೦ ವರ್ಷಗಳಾದುವು. ವಿದ್ಯಾರಣ್ಯರ ಕಾಲಜ್ಞಾನದಂತೆ, ವಿಜಯನಗರದ ಪ್ರಥಮ ರಾಜವಂಶವು ವಿರೂಪಾಕ್ಷನಿಂದ ಪೂರ್ತಿಯಾಯಿತು. ಸಳುವ ನರಸಿಂಹರಾಜನ ವಂಶಕ್ಕೆ ಸಾಮ್ರಾಜ್ಯಪ್ರಾಪ್ತಿಯಾಯಿತು.

ಸಳುವ ನರಸಿಂಹನು ವಿಜಯನಗರದ ಚಕ್ರವರ್ತಿಯಾದರೂ, ಚಂದ್ರಗಿರಿಯನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಮೊದಲಿನಿಂದಲೂ ವಿಜಯನಗರದ ಅರಮನೆಯಲ್ಲಿ ನಡೆಯುತ್ತಿದ್ದ ಪದ್ಧತಿಗಳನ್ನು ತನ್ನ ಅರಮನೆಯಲ್ಲೂ ನಡೆಸುತ್ತಿದ್ದನು. ಸ್ವಯಂ ವಿದ್ಯಾವಂತನಾಗಿದ್ದುದರಿಂದ, ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ತಿರುಪತಿಯ ಶ್ರೀನಿವಾಸದೇವರ ಭಕ್ತನಾಗಿದ್ದುದರಿಂದ, ತಿರುಪತಿಗೆ ಸಮೀಪಸ್ಥಳವಾದ ಚಂದ್ರಗಿರಿಯನ್ನು ಬಿಟ್ಟು ದೂರ ಹೋಗುತ್ತಿರಲಿಲ್ಲ. ಅವನು ಕಟ್ಟಿಸಿದ ಅರಮನೆಯು ಈಗಲೂ ಇದೆ. ಬ್ರಿಟಿಷ್ ಸರ್ಕಾರದವರು ಕಟ್ಟಡವನ್ನು ರಕ್ಷಣೆ ಮಾಡಿದ್ದಾರೆ. ಸಳುವನು ತಾನು ಚಕ್ರವರ್ತಿಯೆನಿಸುವುದಕ್ಕೆ ಮೊದಲೇ, ಹಿಂದೆ ಶ್ರೀಪಾದರಾಯರ ಚರಿತ್ರೆಯಲ್ಲಿ ಬರೆದಿರುವಂತೆ, ತಿರುಪತಿಯ ಅರ್ಚಕರ ಕುಲವನ್ನು ನಾಶಗೊಳಿಸಿದನು. ಇವನ ಬ್ರಹ್ಮಹತ್ಯಾದೋಷವನ್ನು ಶ್ರೀ ಶ್ರೀಪಾದರಾಯರು ಪರಿಹರಿಸಿದರು. ಶ್ರೀಪಾದರಾಯರ ಪ್ರಭಾವಕ್ಕೆ ಮೆಚ್ಚಿ ಸಳುವನು ಅವರನ್ನು ತನ್ನ ಸಿಂಹಾಸನದಲ್ಲಿ ಕೂಡಿಸಿ, ಕನಕಾಭಿಷೇಕ ಮಾಡಿದನು. ಅನಂತರ ಶ್ರೀಪಾದರಾಯರು ಮುಳಬಾಗಲಿಗೆ ಪ್ರಯಾಣಮಾಡಿದರು. ಸಳುವನಿಗೆ ತನ್ನ ಸಾಮ್ರಾಜ್ಯಗೌರವಕ್ಕೆ ತಕ್ಕಂತೆ, ತಕ್ಕವರಾದೊಬ್ಬ ರಾಜಗುರುಗಳನ್ನು ರಾಜಧಾನಿಯಲ್ಲಿಟ್ಟುಕೊಳ್ಳಬೇಕೆಂಬ ಅಭಿಲಾಷೆಯಾಯಿತು. ಚಂದ್ರಗಿರಿಯು ದೊಡ್ಡ ವಿದ್ಯಾಕೇಂದ್ರವಾಗಿದ್ದುದರಿಂದ ವಿದ್ವತ್ಪರೀಕ್ಷೆ ಕೊಡಲು ಬರುವವರಿಗಿಂತ, ಆಸ್ಥಾನ ಪಂಡಿತರನ್ನೇ ಜಯಿಸಬೇಕೆಂದು ಬರುವ ಔತ್ತರೇಯರನ್ನು ನಿರ್ಜಯಿಸುವ ಯೋಗ್ಯತೆಯು, ತಾನಪೇಕ್ಷಿಸುವ ಗುರುಗಳಲ್ಲಿರಬೇಕಾಗಿತ್ತು. ಆ ಕಾಲದಲ್ಲಿ ಶ್ರೀಪಾದರಾಯರ ವಿನಾ ಮತ್ತೊಬ್ಬರು ಅವರಷ್ಟು ಗುಣಪೂರ್ಣರಾಗಿರಲಿಲ್ಲ. ಆದುದರಿಂದ ಶ್ರೀಪಾದರಾಯರನ್ನೇ ತನ್ನ ಆಸ್ಥಾನಕ್ಕೆ ಬರಬೇಕೆಂದು ವಿಜ್ಞಾಪನ ಪತ್ರವನ್ನು ಬರೆದು ಕಳುಹಿಸಿದನು. ಶ್ರೀಪಾದರಾಯರು ತಮಗೆ

ವೃದ್ಧಾಪ್ಯವಾಗಿದ್ದುದರಿಂದ ತಮ್ಮ ಪ್ರತಿನಿಧಿಯಾಗಿ ವ್ಯಾಸರಾಯರನ್ನು ಕಳುಹಿಸುವೆ ವೆಂದು ಪ್ರತ್ಯುತ್ತರ ಬರೆದರು. ವ್ಯಾಸರಾಯರು ನಳುವನಿಗೆ ಅನೃಷ್ಟಪೂರ್ವರಾದರೂ ಶ್ರುತಪೂರ್ವವೃತ್ತರಾಗಿದ್ದರು. ಅಂಥವರು ಚಂದ್ರಗಿರಿಗೆ ಬರುವುದು ನರಸಿಂಹಭೂಪಾಲನಿಗೆ ಅತ್ಯಂತ ಸಮ್ಮತವಾಯಿತು. ಶ್ರೀಪಾದರಾಯರು ನೃಸಿಂಹಭೂಪಾಲನು ತಮಗೆ ಬರೆದ ಪತ್ರವನ್ನೂ ತಾವು ಅವನಿಗೆ ಬರೆದ ಪ್ರತ್ಯುತ್ತರವನ್ನೂ ವ್ಯಾಸರಾಯರಿಗೆ ತಿಳಿಸಿದರು.

ವ್ಯಾಸರಾಯರಿಗಾದರೋ–ಗುರುಸಾನ್ನಿಧ್ಯವನ್ನು ಬಿಟ್ಟು ರಾಜಸನ್ನಿಧಿಯಲ್ಲಿರುವುದು ಇಷ್ಟವಾಗಲಿಲ್ಲ. ಶ್ರೀಪಾದರಾಯರಿಲ್ಲದ ಯಾವ ಸ್ಥಳವೂ ವ್ಯಾಸರಾಯರ ಮನಸ್ಸಿಗೆ – ಸ್ವರ್ಗಲೋಕವನ್ನು ಬಿಟ್ಟು ಮರ್ತ್ಯಲೋಕಕ್ಕೆ ಹೋದಂತೆ – ಸುರನದಿಯನ್ನು ಬಿಟ್ಟು ಕ್ಷುದ್ರಕೂಪಸ್ನಾನ ಮಾಡಿದಂತೆ–ಅಮೃತವನ್ನು ಬಿಟ್ಟು ಅಂಬಲಿಯನ್ನು ಬಯಸಿದಂತೆ–ನಂದನವನದಲ್ಲಿದ್ದವರು ಪಿತೃವನಕ್ಕೆಹೋದಂತೆ–ಕಲ್ಪವೃಕ್ಷವನ್ನು ಬಿಟ್ಟು ಗೊಬ್ಬಳಿಯ ಗಿಡವನ್ನಾಶ್ರಯಿಸಿದಂತೆ–ನಾರಾಯಣನನ್ನು ಬಿಟ್ಟು ಕ್ಷುದ್ರದೇವತೆಯನ್ನಾಶ್ರಯಿಸಿದಂತೆ ತೋರಿತು. ವ್ಯಾಸರಾಯರ ಇಂಗಿತವನ್ನರಿತು ಶ್ರೀಪಾದರಾಯರು–'ರಾಜರೆಂದರೆ ಧರ್ಮರಕ್ಷಣದೀಕ್ಷಿತರು, ದತ್ತಾತ್ರೇಯ ವಸಿಷ್ಠಾದಿ ಮಹರ್ಷಿಗಳು ಸ್ವಯಂಸರ್ವಸಂಗ ಪರಿತ್ಯಾಗ ಮಾಡಿದ ವಿರಕ್ತರಾದಾಗ್ಯೂ ರಾಜಸಭೆಗಳನ್ನಲಂಕರಿಸಿ ಲೋಕಸೇವೆ ಮಾಡಿದರು. ಯತಿಗಳು ರಾಜನಗರಿಗಳಲ್ಲಿರುವುದರಿಂದ ಪ್ರತ್ಯವಾಯವಿಲ್ಲ. ನೃಸಿಂಹಭೂಪಾಲನ ಆಸ್ಥಾನದಲ್ಲಿದ್ದು ಮಾಡಬೇಕಾದ ಧರ್ಮಪ್ರಚಾರಕಾರ್ಯವು ಬಹಳವಾಗಿರುವುದು' ಎಂಬುದಾಗಿ ಹಿತೋಕ್ತಿಗಳನ್ನಾಡಿದರು. ವ್ಯಾಸರಾಯರಿಗೆ ಗುರ್ವಾಜ್ಞೆಯನ್ನು ಮೀರುವುದು ಸಾಧ್ಯವಾಗಲಿಲ್ಲ. ಸುಮುಹೂರ್ತದಲ್ಲಿ ಮುಳುಬಾಗಲನ್ನು ಬಿಟ್ಟು ಚಂದ್ರಗಿರಿಗೆ ಪ್ರಯಾಣ ಮಾಡಿದರು.

ಮಾರ್ಗದಲ್ಲಿ, ಉಡುಗಣಗಳಿಂದ ಕೂಡಿದ ಉಡುಪತಿಯಂತೆ ಶಿಷ್ಯ ಪರಿವಾರ ಸಹಿತರಾಗಿ ಬರುತ್ತಿದ್ದ ವ್ಯಾಸರಾಯರನ್ನು, ನೃಸಿಂಹ ಭೂಪತಿಯ ಸಾಮಂತರು ಸನ್ಮಾನಿಸಿದರು. ಸ್ವಾಮಿಗಳ ಪ್ರಯಾಣವು ಗ್ರಾಮೈಕರಾತ್ರಿಯೆಂಬಂತೆ ವೇಗವಾಗಿ ಬೆಳೆಯಿತು. ವನ ಗಿರಿ ನಗರಿಗಳ ಸೌಭಾಗ್ಯ ನೋಡುತ್ತಾ ವಿರಾಡ್ರೂಪೀ ಭಗವಂತನ ಮಾನಸ ಪೂಜೆಗಾರಂಭಿಸಿದರು.—'ದೇವ ! ಬ್ರಹ್ಮಾಂಡವೇ ನಿನಗೆ ಮಂಟಪ, ಮೇರುಗಿರಿ ನಿನ್ನ ಸಿಂಹಾಸನ, ಭಾಗೀರಥಿಯು ಮಜ್ಜನ, ವನ್ಯ ಪುಷ್ಪಗಳೇ ನಿನಗೆ ಮಾಲಿಕೆ, ಸೂರ್ಯಚಂದ್ರರು ದೀಪ, ಸಕಲ ಜೀವರಾಶಿಗಳು ಮಾಡುವ ಭೋಜನವೇ ನಿನಗೆ ನೈವೇದ್ಯ, ನೋಡಿದುವೇ ನಿನ್ನ ಮೂರ್ತಿ'ಯೆಂದು ಮೊದಲಾಗಿ ಭಾವಿಸುತ್ತ ವೇಂಕಟಪರ್ವತದ ಕಡೆಗೆ ಕೈಮುಗಿದರು. ದಟ್ಟಡವಿಯಲ್ಲಿ ಮಾರ್ಗ ಸಾಗುತ್ತಿದ್ದುದರಿಂದ, ಒಂದು ಮಧ್ಯಾಹ್ನ ಒಂದು ಜಲಾಶ್ರಯದ ಬಳಿ, ಮಧ್ಯಾಹ್ನಕೃತ್ಯಕ್ಕಾಗಿ ವಸತಿ ಮಾಡಿದರು. ತಟಾಕದಲ್ಲಿ ಸ್ನಾನಮಾಡಿ ಜಪಮಾಡುತ್ತಾ ಕುಳಿತಿರುವಾಗ, ಸಮೀಪದಲ್ಲೇ ಯಾರೋ ರೋದನ ಮಾಡುತ್ತಿರುವುದು ಕೇಳಿಸಿತು. ಆಲೈಸಿ ನೋಡಿದರೆ, ಪುತ್ರಶೋಕದಿಂದ ಪ್ರಲಪಿಸುತ್ತಿರುವಂತೆ ಭಾಸವಾಯಿತು. ಈ ನಿರ್ಮಾನುಷ ಪ್ರದೇಶದಲ್ಲಿ ಮನುಷ್ಯರೋದನಕ್ಕೆ ಕಾರಣವೇನಿರಬಹುದೋ

ತಿಳಿಯೋಣವೆಂದು, ಸ್ವಾಮಿಗಳೇ ಮುಂದುವರಿದು ಬಂದರು. ಆ ಸ್ಥಳಕ್ಕೆ ಸುಮಾರು ಒಂದು ಗಾವುದ ದೂರದ ಅಗ್ರಹಾರದ ಬ್ರಾಹ್ಮಣದಂಪತಿಗಳು ಪುತ್ರಶೋಕದಿಂದ ಮೃತ ಕಳೇಬರವನ್ನು ಮುಂದಿಟ್ಟುಕೊಂಡು ಅಳುತ್ತಿದ್ದರು. ಸ್ವಾಮಿಗಳು ಬ್ರಾಹ್ಮಣನನ್ನು ಕರೆದು ಸಗತಿಯೇನೆಂದು ವಿಚಾರಿಸಿದರು. ಆತನು ಮಹಾಸ್ವಾಮಿ–'ಈ ನನ್ನ ಮಗನು ಸರ್ಪ ದಷ್ಟನಾಗಿ ಮೃತನಾದ! ನಿನ್ನೆ ಮಧ್ಯಾಹ್ನ ಹೊರಟವನು ಬರಲೇ ಇಲ್ಲ. ಇಷ್ಟುದೂರ ಯಾಕೆ ಬಂದನೋ ದೇವರೇ ಬಲ್ಲ. ಜೊತೆಗಾರರು ಹೇಳಿದ್ದರಿಂದ ನನಗೆ ತಿಳಿಯಿತು. ಹನ್ನೆರಡುವರ್ಷ ಸಾಕಿ, ಹಾಳು ಹಾವಿನ ಬಾಯಿಗೆ ಕೊಟ್ಟೆವು. ಒಬ್ಬನೇ ಮಗ' ಎಂದು ದುಃಖಿಸಿದನು. ಸ್ವಾಮಿಗಳು ದಂಪತಿಗಳನ್ನು ದುಃಖಿಸಬೇಡಿರೆಂದು ಸಮಾಧಾನಮಾಡಿ ದರು. ಕಮಂಡಲವನ್ನು ತರಿಸಿ ಮಂತ್ರಪೂತವಾದ ಉದಕವನ್ನು ಶವದಮೇಲೆ ಪ್ರೋಕ್ಷಿಸಿ ದರು. ನಿದ್ರೆಯಿಂದೆಚ್ಚರಿಯುವಂತೆ ಬಾಲಕನು ಎದ್ದು ಕುಳಿತನು. ದಂಪತಿಗಳ ಆನಂದವು ಅಪಾರವಾಯಿತು.

ಆಶ್ವಾಸ್ಯತೌ ವಾಗ್ಭಿರಯಂ ರುದಂತೌ । ವ್ಯಾಸೋಯತಿರ್ವಿಸ್ಮಯ ನೀಯ ಕರ್ಮಾ ॥
ಅಭ್ಯುಕ್ಷ್ಯಕಾಮಂಡುಲುಕೀಭಿರದ್ಭಿರಾಜೀವಯತ್ತಂ ಪುನರೇವ ಬಾಲಂ ॥

ಅನಂತರ ಸ್ವಾಮಿಗಳ ಸ್ನಾನ ಪೂಜೆಗಳಾದುವು. ದಂಪತಿಗಳು ಪುತ್ರಸಹಿತರಾಗಿ ತೀರ್ಥಪ್ರಸಾದ ಗ್ರಹಣಮಾಡಿದರು. ಬ್ರಾಹ್ಮಣನು ಸ್ವಾಮಿಗಳನ್ನು ತನ್ನ ಅಗ್ರಹಾರಕ್ಕೆ ಬರಬೇಕೆಂದು ಪ್ರಾರ್ಥಿಸಿದನು. ಕೃಪೆಮಾಡಿ ಬಂದ ಸ್ವಾಮಿಗಳವರಿಂದ ನಡೆದ ಸಂಗತಿ ಯನ್ನು ಅಗ್ರಹಾರದ ಜನರಿಗೆ ತಿಳಿಸಿದನು. ಅವರು ವಿಶೇಷ ಪ್ರಾರ್ಥನೆ ಮಾಡಿ, ಸ್ವಾಮಿ ಗಳನ್ನು ನಾಲ್ಕಾರು ದಿನ ನಿಲ್ಲಿಸಿಕೊಂಡು ಸತ್ಕಾರಮಾಡಿ, ಅವರಿಂದ ಉಪದೇಶಹೊಂದಿ ಶಿಷ್ಯರಾದರು.

ಸ್ವಾಮಿಗಳ ಈ ಅತಿಮಾನುಷ ಮಹಿಮೆಯು ಅವರಿಗಿಂತ ಮುಂಚಿತವಾಗಿ ವಾರ್ತಾ ರೂಪವಾಗಿ ಚಂದ್ರಗಿರಿಯನ್ನು ತಲುಪಿತು. ನರಸಿಂಹ ಭೂಪಾಲನು ಆಶ್ಚರ್ಯಚಕಿತ ನಾದನು. ರಾಜಾಜ್ಞೆಯಿಂದ ಇಂದ್ರಲೋಕದಂತೆ ಚಂದ್ರಗಿರಿಯು ಶೃಂಗಾರವಾಯಿತು. ಸಮೀಪಕ್ಕೆ ಬರುವಾಗಲೇ ನಗರಸೌಂದರ್ಯವು ಸ್ವಾಮಿಗಳ ಚಿತ್ತಾಕರ್ಷಣೆ ಮಾಡಿತು. ಸಂಧ್ಯಾಕಾಲದಲ್ಲಿ ನಗರೋದ್ಯಾನದಲ್ಲಿ ಧ್ವಜಪತಾಕೆಗಳಿಂದಲೂ ಗಜತುರಗಗಳಿಂದಲೂ ಶೋಭಾಯಮಾನವಾದ ದಿವ್ಯಗೃಹದಲ್ಲಿ ಸ್ವಾಮಿಗಳ ಬಿಡಾರವಾಯಿತು. ಭುವನ ಬಂಧು ವೆಂಬ ಮಂತ್ರೀಶ್ವರನು ಗುರ್ವಾಗಮನ ಸುವಾರ್ತೆಯನ್ನು ಮಹಾರಾಜನಿಗೆ ತಿಳಿಸಿದನು. ಪ್ರಾತಃಕಾಲ ಮಹೋತ್ಸವದಿಂದ ನಗರಪ್ರವೇಶ ಮಾಡಿಸಿ, ರಾಜಗೃಹಕ್ಕೆ ಕರೆತರುವಂತೆ ರಾಜಾಜ್ಞೆಯಾಯಿತು. ರಾಜಕೀಯ ಶಿಷ್ಟಾಚಾರದಂತೆ ಮಂತ್ರೀಶ್ವರನು ವ್ಯಾಸರಾಯರ ಬಳಿಗೆ ಬಂದು ಶತಶಃ ಪ್ರಣಾಮಮಾಡಿ, ಮಹಾರಾಜನು ಮಹಾಸ್ವಾಮಿಗಳ ದರ್ಶನಾಭಿ ಲಾಷಿಯಾಗಿರುವನೆಂದು ವಿಜ್ಞಾಪಿಸಿದನು.

ಶತಶಃ ಪ್ರಣಿಪತ್ಯದೂರತಃ ಸಮುಪಜ್ಞ ಸ್ವಚಿವ ಸ್ತಪ್ರೋನಿಧಿಂ ||
ಅವದದ್ಭಗವನ್ನೃಪೋಭವತ್ಸ್ವರಮಾನುಗ್ರಹ ಮಿಚ್ಛತೀತಿಸಃ ||

ವೈದಿಕ ಶಿಷ್ಟಾಚಾರದಂತೆ ಸ್ವಾಮಿಗಳೂ ಸದುತ್ತರವನ್ನು ಕಳುಹಿಸಿದರು.

ಮರುದಿವಸದ ಮಹೋತ್ಸವ ವರ್ಣನೆಯನ್ನು ಸೋಮನಾಥಕವಿಯ ವಾಕ್ಯಗಳಿಂದ ನೋಡಿದರೆ, ಕರ್ಣಾಟಕ ಸಾಮ್ರಾಟರು ಧರ್ಮಪೀಠಗಳನ್ನು ಯಾವ ರೀತಿಯಿಂದ ನೋಡುತ್ತಿದ್ದರೆಂಬುದು ಗೊತ್ತಾಗುತ್ತದೆ.

ಇಂದಿಗಾದರೂ ವಿಜಯನಗರದ ಕರ್ಣಾಟಕರಾಜರ ಸಂಪ್ರದಾಯವು ಮೈಸೂರಿನ ಅರಸರಲ್ಲಿ ಒಂದಂಶದಿಂದಿದೆಯೆಂದರೆ, ಯಾವ ಕನ್ನಡಿಗನಿಗೆ ಅಭಿಮಾನವೆನಿಸುವುದಿಲ್ಲ.

ಗದ್ಯದ ಹೆಚ್ಚು ಭಾಗಗಳನ್ನು ಬಿಟ್ಟು, ವ್ಯಾಸರಾಯರನ್ನು ಮಹಾರಾಜನು ದರ್ಶನಮಾಡಿದ ಮಾತಿನ ಒಂದೇ ಭಾಗವನ್ನೋದಿದರೂ, ಅದು ಬಲು ಹೃದಯಂಗಮವಾಗಿದೆ.

ಗ|| ಭಗವಂತಂ ತಂ ವ್ಯಾಸಯತಿ ಸಾರ್ವಭೌಮಂ ದೂರಾದವಲೋಕರ್ಯ ನರಪತಿಃ ಕಂದಲಿತ ಇವ ವಿಸ್ಮಯೇನ, ಪ್ರಫುಲ್ಲ ಇವ ಪ್ರಮೋದೇನ, ಫಲಿತ ಇವ ಪುಣ್ಯೇನ, ಸಮೃದ್ಧ ಇವ ಭದ್ರೇಣ, ಸಕಲೈರಪಿರಾಜಲೋಕೈಸ್ಸಹ ಸರಭಸಮಾಸನಾದುತ್ಥಿತಃ ತ್ವರಯಂತೀಮಿವ ಪ್ರತ್ಯಾಗಮನಂ, ಮಹತಾ ಮರ್ಮರರವೇಣ ಕಠೋರ ಶರದಿಂದು ಕೌಮುದೀಮಿವ ಸೂಕ್ಷ್ಮತರಾಂಪಟೀಂ ಕಟಿತಲೇ ದೃಢಮಾಬಧ್ನ್ಯ ಉಪಸೃತ್ಯಧರಾತಲಪರಾಗತಿಲಕಿತ ಲಲಾಟವಕ್ಷೋಭಾಗಃ ಭೂರಿಶಃ ಪ್ರಣನಾಮ ||

ಪ್ರಾತಃಕಾಲ, ಸ್ವಾಮಿಗಳು ಸ್ನಾನ ಜಪ ಪೂಜಾದಿ ಕಾರ್ಯಗಳನ್ನು ನೆರವೇರಿಸಿ ದಂಡಕಮಂಡಲುಪಾಣಿಗಳಾಗಿ, ಸಭಾಂಗಣದಲ್ಲಿ ಬಂದು ಕುಳಿತರು. ಮಂತ್ರಿಗಳೂ ಮಂಡಲೇಶ್ವರರೂ ಪ್ರಣಾಮಮಾಡಿ, ಭಗವನ್ ನಗರ ಶೃಂಗಾರವಾಗಿದೆ; ಮಂಗಳವಾದ್ಯಗಳಾಗುತ್ತಿವೆ; ಮಹಾರಾಜನು ಬಂಧುಜನ ಸಹಿತನಾಗಿ ಮಂಗಳಸ್ನಾನಮಾಡಿ ಗುರ್ವಾಗಮನವನ್ನು ನಿರೀಕ್ಷಿಸುತ್ತಿದ್ದಾನೆ; ಪರಮಾನುಗ್ರಹಮಾಡಬೇಕು, ದಯಮಾಡಬೇಕು-ಎಂದು ಪರಾಕು ಹೇಳುತ್ತಾ, ಉದ್ಯಾನದ ಬಹಿರಂಗಣದಲ್ಲಿ ದಿವ್ಯಲತಾಮಂಟಪದಲ್ಲಿ ದಿವ್ಯಾಲಂಕಾರಶೋಭಿತವಾಗಿರುವ ಗಜದಮೇಲೆ, ಸ್ವಾಮಿಗಳನ್ನು ಕರೆತಂದು ಕೂಡಿಸಿ, ಸುಮಂಗಲಿಯರು ನೀರಾಜನ ಮಾಡುತ್ತಿರಲು ಮೊಹರಿ ಮೃದಂಗಾದಿ ವಾದ್ಯಗಳು ಮೊಳಗುತ್ತಿರಲು ಭಟರು ಪರಾಕುಗಳನ್ನು ಹೇಳುತ್ತಿರಲು **ಶ್ರೀ ವ್ಯಾಸತೀರ್ಥ ಶ್ರೀಪಾದಂಗಳವರನ್ನು** ಉತ್ಸವದಿಂದ ನಗರವೀಧಿಗಳಲ್ಲಿ ಕರೆತಂದರು.

ದೂರದಿಂದಲೇ ಸ್ವಾಮಿಗಳನ್ನು ನೋಡಿದ ಮಹಾರಾಜನು ಆಸನದಿಂದ ಜಗ್ಗನೆದ್ದು, ವಿಸ್ಮಯದಿಂದ ಕಂದಲಿತನಾದಂತೆ, ಆನಂದದಿಂದ ಪ್ರಫುಲ್ಲಿತನಾದಂತೆ ಬಂಧುವರ್ಗದಿಂದ ಸಹಿತನಾಗಿ ಸೊಂಟವನ್ನು ಕಟ್ಟಿಕೊಂಡು ಸಾಷ್ಟಾಂಗ ಪ್ರಣಾಮಮಾಡಿದನು.

ವ್ಯಾಸಭಗವಾನರು ಮಹಾರಾಜನ ಕುಲಶಪ್ರಶ್ನೆಮಾಡಿ ಆಶೀರ್ವಚನಗಳಿಂದ ಶ್ರೀಗಂಧ ಪ್ರಸಾದವನ್ನು ಅನುಗ್ರಹಿಸಿದರು. ಮಹಾಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸಿ ತಾನೇ ಹಸ್ತಲಾಘವಕೊಟ್ಟು, ದಿವ್ಯವಾದ ಪೀಠಾಸನದಲ್ಲಿ ಸ್ವಾಮಿಗಳನ್ನು ಕೂಡಿಸಿ, ನರಸಿಂಹ ಭೂಪಾಲನು ಅರ್ಘ್ಯಾದಿಗಳಿಂದ ಗುರುಪಾದಪೂಜೆ ಮಾಡಿದನು. ಅನರ್ಘ್ಯವಾದ ಕಾಣಿಕೆ ಗಳನ್ನೊಪ್ಪಿಸಿದನು. ಮುಖ್ಯವೇನು, ನರಸಿಂಹಭೂಪಾಲನ ಅರಮನೆಯೇ ವ್ಯಾಸ ರಾಯರ ಗುರುಮನೆಯಾಯಿತು. ಹಗಲು ಪೂಜಾದಿಗಳನ್ನೂ ಪಾಠಪ್ರವಚನಗಳನ್ನೂ ನೋಡಿ, ಮಹಾರಾಜನು ಆನಂದಭರಿತನಾದನು. ರಾತ್ರಿ ಪೂಜಾನಂತರ ಶ್ರೀಪಾದ ರಾಯರ ಪದ್ಧತಿಯಂತೆ ಸ್ವಾಮಿಗಳು ಸ್ವಯಂ ಭಜನೆಮಾಡುತ್ತಿದ್ದರು. ಪ್ರಾಕೃತ (ಕನ್ನಡ) ಪದಗಳನ್ನು ಹಾಡಿ ಶಾಸ್ತ್ರಾರ್ಥಗಳನ್ನು ಉಪದೇಶಮಾಡುತ್ತಿದ್ದರು. ಯಾರ ಯಾವ ಅಡ್ಡಿಯೂ ಇಲ್ಲದೆ ಸಾವಿರಾರು ಜನರು ಗುರೂಪದೇಶ ಹೊಂದುತ್ತಿದ್ದರು. ಸ್ವಯಂ ಸ್ಫೂರ್ತಿ ಯಿಂದ ಹಾಡಿದ ದೇವರನಾಮಗಳನ್ನು ಶೀಘ್ರಲೇಖಕರು ಒಡನೆ ಬರೆದುಕೊಳ್ಳುತ್ತಿದ್ದರು. ವ್ಯಾಸರಾಯರ ರಾತ್ರಿಭಜನೆಯು ಒಂದು ಪರಿಯ ಕೀರ್ತನವೇ ಆಗಿರುತ್ತಿತ್ತು.

ಮಹಾರಾಜನು ಸಮಯ ದೊರೆತಾಗಲೆಲ್ಲಾ ಸ್ವಾಮಿಗಳ ಬಳಿಗೆ ಬಂದು ಅವರ ಉಪದೇಶದಿಂದ ಧನ್ಯನಾಗುತ್ತಿದ್ದನು. ಗುರುಸಾನ್ನಿಧ್ಯದಿಂದ ಪುನೀತನಾದೆನೆಂದು ಪ್ರಣಾಮ ಮಾಡುತ್ತಿದ್ದನು. ಪಂಡಿತರು, ಪಾಮರರು, ರಾಜ್ಯಾಧಿಕಾರಿಗಳು, ರಾಣಿವಾಸದವರು, ರಾಜದೂತರು ಮೊದಲ್ಗೊಂಡು ಸಕಲರೂ ಒಂದು ದಿನವಾದರೂ ಗುರುದರ್ಶನ ಮಾಡ ದಿರುತ್ತಿರಲಿಲ್ಲ. ಅವರ **ಸದುಪದೇಶದ** ಒಂದು ವಾಕ್ಯವನ್ನಾದರೂ ಕೇಳದಿರುತ್ತಿರಲಿಲ್ಲ.

೬

ತಿರುಪತಿಯ ಪೂಜೆ, ವಾದಿನಿಗ್ರಹ, ಶ್ರೀರಂಗ ಉಡುಪೀ ಯಾತ್ರೆಗಳು.

ಸಳುವ ನರಸಿಂಹಭೂಪಾಲನು ತಿರುಪತಿಯ ಅರ್ಚಕರ ಕುಲವನ್ನು ನಾಶ ಮಾಡಿದ ನಂತರ ಶ್ರೀಕ್ಷೇತ್ರದ ಪೂಜಾಕಾರ್ಯಕ್ಕೆ ಯಾರನ್ನೂ ನಿಯಮಿಸಿರಲಿಲ್ಲ. ಪೂಜೆ ನಿಲ್ಲದಂತೆ ಹೇಗೋ ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿದ್ದನು. ಕೋಟ್ಯಾವಧಿ ಬೆಲೆಬಾಳುವ ಆಭರಣಗಳ, ನಿತ್ಯಗಟ್ಟಲೆ ಬರುವ ಲಕ್ಷಾವಧಿ ಕಾಣಿಕೆಗಳ ಜವಾಬುದಾರಿಯನ್ನು ತಕ್ಕವ ರಿಗೆ ವಹಿಸಬೇಕಾಗಿತ್ತು. ಸುದೈವದಿಂದ ವ್ಯಾಸರಾಯರು ಚಂದ್ರಗಿರಿಗೆ ಬಂದು ರಾಜಗುರು ಗಳಾಗಿ ನಿಂತದ್ದರಿಂದ ರಾಜನ ಮನಸ್ಸಿನಲ್ಲಿ ಒಂದು ಪ್ರಕಾರದ ಶಾಂತಿಯುಂಟಾಯಿತು. ಸಾಮ್ರಾಜ್ಯದ ಧಾರ್ಮಿಕ ಸಂಸ್ಥೆಗಳ ಮತ್ತು ವಿದ್ವತ್ಸಭೆಗಳ ಸಂಪೂರ್ಣ ಸ್ವಾತಂತ್ರ್ಯವನ್ನು ವ್ಯಾಸರಾಯರಿಗೇ ವಹಿಸಿಬಿಟ್ಟನು. ತಿರುಪತಿಯ ಜವಾಬುದಾರಿಯು ತನ್ನ ಮೇಲಿದ್ದುದ ರಿಂದ ಹೇಗೆ ವ್ಯವಸ್ಥೆ ಮಾಡಬೇಕೆಂದು ಸ್ವಾಮಿಗಳ ಸಲಹೆ ಕೇಳಿದನು. ಸ್ವಾಮಿಗಳು

–'ಮಹಾರಾಜಾ, ಅರ್ಚಕರ ಸಂತತಿಯವರಿಗಲ್ಲದೆ ಬೇರೊಬ್ಬರಿಗೆ ಅಲ್ಲಿನ ಅಧಿಕಾರವನ್ನು ಕೊಡಬಾರದು' ಎಂದು ಹೇಳಿದರು. ಸಳುವನು—'ಅರ್ಚಕರ ಸಂತತಿಯೇ ಇಲ್ಲವೆಂದನು. ಸ್ವಾಮಿಗಳು ನಗುತ್ತಾ–'ಅರ್ಚಕರ ಸಂತತಿಯಲ್ಲೀ ಪ್ರತ್ಯೋತ್ಪನ್ನವಾಗಿದೆ. ಬಾಲಕನು ಬೆಳೆಯುತ್ತಿದ್ದಾನೆ. ಅವನು ಅರ್ಹನಾದೊಡನೆಯೇ ಅವನಿಗೆ ಅಧಿಕಾರ ಕೊಡಬೇಕಾಗುತ್ತದೆ" ಎಂದರು. ಅರ್ಚಕ ಸಂತತಿಯಲ್ಲಿ ಗರ್ಭಿಣಿಸ್ತ್ರೀಯೊಬ್ಬಳಿದ್ದು, ಅವಳ ಉದರದಲ್ಲಿ ಸಂತಾನವಾದ ಸಂಗತಿ ರಾಜನಿಗೆ ತಿಳಿದಿರಲಿಲ್ಲ. 'ಒಳ್ಳೇದು ! ಅದುವರೆಗೆ ಹೇಗೆ ಮಾಡಬೇಕೆಂದು' ಸಳುವನು ಮತ್ತೆ ಕೇಳಿದನು. ಅದುವರೆಗೆ ಶ್ರೀನಿವಾಸನ ಸೇವೆಯನ್ನು ನಾವೇ ಮಾಡುವೆವೆಂದು ಸ್ವಾಮಿಗಳು ನುಡಿದರು. ಮಹಾರಾಜನಿಗೆ ಪರಮಾಶ್ಚರ್ಯವಾಯಿತು. ಅನೇಕ ಕಾರ್ಯಗಳ ಜೊತೆಯಲ್ಲಿ ತಿರುಪತಿಯ ಪೂಜೆಯೂ ಸ್ವಾಮಿಗಳಿಂದ ಸಾಧ್ಯವಾದೀತೆ ಎಂಬ ಸಂಶಯ ಸಳುವನಿಗಿನ್ನೂ ಬಿಡಲಿಲ್ಲ. ಸ್ವಾಮಿಗಳೇ ಮತ್ತೆ–'ಮಹಾರಾಜ ! ಇತರ ಕ್ಷೇತ್ರಗಳ ಮಾತೇ ಬೇರೆ, ತಿರುಪತಿಯ ಮಾತೇ ಬೇರೆ. ವೇಂಕಟಪತಿಯ ಪೂಜೆಯನ್ನು ಬ್ರಹ್ಮದೇವರು ಬಯಸುವರು ; ಸನಕಾದಿಗಳು ಅಪೇಕ್ಷಿಸುವರು. ನಮ್ಮ ಪೂರ್ವಪುಣ್ಯದಿಂದ ತಾನಾಗಿ ಬಂದೊದಗಿರುವ ಭಾಗ್ಯವನ್ನು ನಾವು ಬಿಡುವೆವೇ ? ಶೇಷಪರ್ವತವು ದೇವತಾಪರ್ವತವು. ದೇವತೆಗಳು ಈ ಪರ್ವತದಲ್ಲಿ ವೃಕ್ಷಗಳಾಗಿ ವಾಸಮಾಡುವರು. ಸ್ವಾಮಿ ಪುಷ್ಕರಣಿಯೇ ದೇವಗಂಗೆಯು. ನಮ್ಮಲ್ಲಿ ಮಂತ್ರವೇತ್ತರಿಗೆ ಕಡಮೆಯಿಲ್ಲ. ಆಗಮಜ್ಞರಿಗೆ ಕೊರತೆಯಿಲ್ಲ. ನಮ್ಮ ಶಿಷ್ಯರು ಎಲ್ಲ ಕಾರ್ಯಗಳನ್ನೂ ನಿರ್ವಹಿಸುವರು. ಆದಷ್ಟು ಅವಕಾಶವನ್ನು ಕಲ್ಪಿಸಿಕೊಂಡು ನಾವೂ ಪೂಜಿಸುವೆ'ವೆಂದರು. ಅಂದಿನಿಂದಲೇ ವೇಂಕಟಗಿರಿಯ ಆಧಿಪತ್ಯವು ವ್ಯಾಸರಾಯರದಾಯಿತು. ವ್ಯಾಸರಾಯರು ಒಬ್ಬರಿಗೆ ಮತ್ತೊಬ್ಬರು ಜವಾಬ್ದಾರರಿರುವಂತೆ, ಯಾವ ಲೋಪಗಳಿಗೂ ಅವಕಾಶವಾಗದಂತೆ ಅಧಿಕಾರವರ್ಗವನ್ನು ನೇಮಿಸಿದರು. ವೈಖಾನಸಾಗಮ ಪದ್ಧತಿಯನ್ನು ತಪ್ಪಿಸಿ, ತಂತ್ರಸಾರೋಕ್ತ ಮಾರ್ಗದಿಂದ ಆರಾಧನೆಗಳನ್ನೇರ್ಪಡಿಸಿದರು. ಬೇಕಾದ ಭಾಗ್ಯವಿದ್ದರೂ ವ್ಯಾಸರಾಯರು ವಾಹನಾರೂಢರಾಗಿ ಪರ್ವತಾರೋಹಣ ಮಾಡುತ್ತಿರಲಿಲ್ಲ. ಪಾದದಿಂದ ಪರ್ವತವನ್ನು ಸ್ಪರ್ಶಮಾಡುತ್ತಿರಲಿಲ್ಲ. ಮೊಣಕಾಲಿನಿಂದ ಅಂಬೆಗಾಲಿಟ್ಟುಕೊಂಡು ವೇಂಕಟಪತಿಯ ಸನ್ನಿಧಿಗೆ ಹೋಗುತ್ತಿದ್ದರು. ಶುಕ್ರವಾರದ ಪುಳಕಾಭಿಷೇಕ ಸೇವೆಯನ್ನು ಸ್ವಹಸ್ತದಿಂದ ಮಾಡುತ್ತಿದ್ದರು. ಪ್ರತಿ ಗುರುವಾರ ಚಂದ್ರಗಿರಿಯಿಂದ ಹೊರಟು ಭಾನುವಾರ ತಿರುಗಿ ಬರುತ್ತಿದ್ದರು. ಸ್ವಾಮಿಗಳು ಪ್ರವಾಸದಲ್ಲಿದ್ದಾಗ ಮಾತ್ರ ನಿಯಮಿತರಾದ ಅಧಿಕಾರಿಗಳು ಶುಕ್ರವಾರದ ಪೂಜೆಯನ್ನೂ ಮಾಡುತ್ತಿದ್ದರು. ಮಹಾನುಭಾವರಾದ ವ್ಯಾಸರಾಯರ ಭಕ್ತಿಯನ್ನೇನೆಂದು ಹೇಳೋಣ ! ಹೀಗೆ ಹನ್ನೆರಡುವರ್ಷಕಾಲ (೧೪೮೬-೯೮) ಸಂಸ್ಥಾನಪೂಜೆ, ಪಾಠಪ್ರವಚನ, ವಿದ್ವತ್ಸಭಾ, ಗ್ರಂಥರಚನ, ವಾದಿನಿಗ್ರಹ ಕಾರ್ಯಗಳನ್ನೆಲ್ಲಾ ಈ ಪುಣ್ಯಪುರುಷರು ನಿರ್ವಹಿಸಿದರು.

ಶ್ರೀನಿವಾಸೇಜ್ಯಯಾಪ್ರಾಪ್ತಂ ವೈಭವಂ ವೀಕ್ಷ್ಯ ತನ್ಮಹತ್ ।
ಓಮಿತ್ಯುಕ್ತ್ವಾ ಸ್ವಭಕ್ತಿಭಕ್ತ್ಯಾ ತಂತ್ರಸಾರೋಕ್ತ ಮಾರ್ಗತಃ ॥

ಅಪೂಜಯಚ್ಛ್ರೀನಿವಾಸಂ ವ್ಯಾಸರಾಜೋದ್ವಿಷಟ್ಸಮಾಃ ।
ವಿಭವೈರ್ಬಹುಭಿಶ್ಚೈವ ತದಾಭಕ್ತಿ ಪುರಸ್ಸರಂ ॥

ಅರ್ಚಕಸಂತತಿಯ ಬಾಲಕನು ಉಪನೀತನಾದ ಕೂಡಲೆ ಅವನಿಗೆ ಆಗಮ ಶಾಸ್ತ್ರ ವ್ಯಾಸಂಗದ ವ್ಯವಸ್ಥೆಯನ್ನು ದೂರದರ್ಶಿಗಳಾದ ವ್ಯಾಸರಾಯರೇ ಮಾಡಿಸಿದರು. ಅವನ ಅರ್ಹತೆಯನ್ನು ಪರೀಕ್ಷಿಸಿ ವೇಂಕಟಪತಿಯ ಪೂಜಾ ಕಾರ್ಯವನ್ನು ಅವನಿಗೇ ಅನು ಗ್ರಹಿಸಿದರು.

ವ್ಯಾಸರಾಯರು ತಿರುಪತಿಯ ವೇಂಕಟಪತಿಯ ಪೂಜಾಧಿಕಾರವನ್ನು ತಾವೇ ಇಟ್ಟುಕೊಂಡು ತಮ್ಮ ಕಡೆಯವರಿಂದ ನಿರ್ವಹಿಸುತ್ತ ಬಂದಿದ್ದರೆ, ಭರತಖಂಡದಲ್ಲೇ ಒಂದು ಅತ್ಯಂತ ದೊಡ್ಡ ಧಾರ್ಮಿಕ ಸಂಸ್ಥೆಯು ಅವರ ಸ್ವಾಧೀನದಲ್ಲಿರುತ್ತಿತ್ತು. ಶಾಶ್ವತವಾದ ಧರ್ಮವಿದ್ಯಾಪೀಠವನ್ನು ಸ್ಥಾಪಿಸಿ ಆಚಂದ್ರಾರ್ಕವಾಗಿ ನಡೆಸಿಕೊಂಡು ಬರಬಹುದಾಗಿತ್ತು. ಅಂತಹ ಅಪೇಕ್ಷೆಯೇ ಅವರಿಗಿರಲಿಲ್ಲ. ತನ್ನ ಯೋಗ್ಯತೆಯಿಂದ ತಾನು ಪ್ರಶಸ್ತಿಯನ್ನು ಪಡೆಯಬೇಕೆಂಬುದು ಅವರ ಮತವಾಗಿತ್ತು.

ವ್ಯಾಸರಾಯರು ಹನ್ನೆರಡುವರ್ಷ ವೇಂಕಟಪತಿಯ ಪೂಜಾಮಾಡಿದ ಜ್ಞಾಪಕಾ ರ್ಥವಾಗಿ ಅವರ ಮಠಪತಿಗಳು ಯಾವಾಗ ತಿರುಪತಿಗೆ ಬಂದರೂ ಅಲ್ಲಿನ ಮಹಂತರು ಅರ್ಧ ಬೆಟ್ಟಕ್ಕೆ ದೇವಸ್ಥಾನದ ಸಕಲ ಬಿರುದಾವಳಿಗಳಿಂದ ಪೂರ್ಣಕುಂಭ ಸಹಿತರಾಗಿ ಇದಿ ರ್ಗೊಂಡು ಬೀಗ ಮುದ್ರೆಯನ್ನೊಪ್ಪಿಸುವ ಮರ್ಯಾದೆಯು ಆಚರಣೆಗೆ ಬಂದಿತು. ಈ ಕಾಲ ದಲ್ಲಿ ಆ ಮಠಸ್ಥರು ಆಗಾಗ ತಿರುಪತಿಗೆ ಹೋಗಿ ನಡೆಸಿಕೊಳ್ಳದ ಪ್ರಯುಕ್ತ ಆ ಮರ್ಯಾ ದೆಯೂ ಮರೆತುಹೋದಂತೆ ಕಾಣುತ್ತದೆ.

ನೃಸಿಂಹ ಭೂಪಾಲನು ದಿಗ್ಜಯ ಯಾತ್ರೆಗೇ ಹೋಗಲಿ, ತನ್ನ ದೇಶದ ಪ್ರಜೆ ಗಳ ಕ್ಷೇಮಾಭ್ಯುದಯಗಳನ್ನು ವಿಚಾರಿಸುವುದಕ್ಕೇ ಸಂಚಾರಮಾಡಲಿ, ವ್ಯಾಸರಾಯರನ್ನು ಮುಂದುಮಾಡಿಕೊಂಡೇ ಪ್ರಯಾಣಮಾಡುತ್ತಿದ್ದನು. ಒಮ್ಮೆ ಶ್ರೀರಂಗಕ್ಷೇತ್ರದವರಿಗೂ ಜಂಬುಕೇಶ್ವರದವರಿಗೂ ಇದ್ದ ಎಲ್ಲೆಯ ವಿವಾದವನ್ನು ತೀರ್ಮಾನಿಸಲು ಮಹಾರಾಜನೇ ಬರಬೇಕಾಯಿತು. ಶ್ರೀರಂಗವು ವಿಷ್ಣುಕ್ಷೇತ್ರ – ಜಂಬುಕೇಶ್ವರವು ಶಿವಕ್ಷೇತ್ರ. ಉತ್ಸವ ಕಾಲಗಳಲ್ಲಿ ಆಯಾ ಆಗಮರೀತ್ಯಾ ಧ್ವಜಾರೋಹಣಮಾಡಿ, ದಿಗ್ಬಂಧನ ಮಾಡಿದಮೇಲೆ ಧ್ವಜವನ್ನಿಳಿಸುವವರೆಗೂ ಆ ಎಲ್ಲೆಗಳಲ್ಲಿ ಆ ದೇವರ ವಿನಾ ಇತರ ದೇವತಾ ಉತ್ಸವಗಳಿಗೆ ಅವಕಾಶವಿರುವುದಿಲ್ಲ. ಶ್ರೀ ಕ್ಷೇತ್ರದ ಆದಿದೇವನು ಶಿವನಾದ್ದರಿಂದ ತಮ್ಮ ಬಾಧ್ಯತೆಗೆ ವೈಷ್ಣವರು ಪ್ರತಿಬಂಧಕ ಮಾಡಬಾರದೆಂದು ಶೈವರು ವಾದಿಸಿದರು. ಈ ವಿವಾದವು ಯಾವಾಗಲೂ ನಡೆಯುತ್ತಿದ್ದು ಹರಿಹರರ ಉತ್ಸವಗಳಿಗೆ ಪ್ರತಿಬಂಧಕವಾಗುತ್ತಿತ್ತು. ವ್ಯಾಸರಾಯರೂ ರಾಜನೂ ಎಷ್ಟು ಹೇಳಿದರೂ ಉಭಯಪಕ್ಷದವರೂ ಸಮ್ಮತಿಸಲಿಲ್ಲ. ಅಧಿಕಾರವಾಣಿಯೊಂದರ ವಿನಾ ಅನ್ಯೋಪಾಯವಿಲ್ಲದಂತಾಯಿತು. ಆ ಸಮಯದಲ್ಲಿ ವ್ಯಾಸರಾಯರು–“ರಂಗನಾಥನ ಸನ್ನಿಧಿಯಿಂದಾಗಲೀ ಜಂಬುಕೇಶ್ವರ ಸನ್ನಿಧಿಯಿಂದಾಗಲೀ ಸಮರ್ಥರಾದವರು ಉಸುರುಕಟ್ಟಿ ಎಲ್ಲಿಯವರೆಗೆ ಓಡುವರೋ ಅದು ಅವರ ಎಲ್ಲೆ. ಈ

ನಿಬಂಧನೆಗೆ ವಿರೋಧಿಸ ರಾಜಶಾಸನವಾಗುವುದು : ಸೋತವರು ರಾಜದಂಡನೆಗೂ ಗುರಿಯಾಗುವರು–ಇದಕ್ಕೆ ಉಭಯರೂ ಒಪ್ಪಬೇಕು” ಎಂದು ಹಂಚಿಕೆ ಮಾಡಿದರು. ದೈವಯೋಗದಿಂದ ಸ್ವಾಮಿಗಳ ಹಂಚಿಕೆಯು ಇಬ್ಬರಿಗೂ ಒಪ್ಪಿತವಾಯಿತು. ಓಡುವುದಕ್ಕೆ ಶಪಥಮಾಡಿ ನಿಲ್ಲುವರ್‍ಯಾರು ? ಹೆಚ್ಚು ಸ್ಥಳವನ್ನು ಸಂಪಾದಿಸಲು ಹೆಚ್ಚು ಸಾಮರ್ಥ್ಯವಿದ್ದವರೇ ಮುಂದೆ ಬರಬೇಕಾಯಿತು. ಎರಡು ಪಕ್ಷಗಳಿಂದಲೂ ಒಬ್ಬರಾದರೂ ಮುಂದುವರಿದು ಬರಲಿಲ್ಲ. ಸ್ವಾಮಿಗಳು ಉಭಯರನ್ನೂ ನೋಡಿ, ನಿಮಗೆ ನಮ್ಮಲ್ಲಿ ವಿಶ್ವಾಸವಿದೆಯೋ ಎಂದು ಕೇಳಿದರು. ಉಭಯರೂ ವಿಶ್ವಾಸವಿದೆಯೆಂದರು. ನಾವೇ ಓಡಿ ಮಾಡುವ ತೀರ್ಮಾನಕ್ಕೆ ಒಳಪಡುವಿರಾ ಎಂದು ಕೇಳಿದರು. ಉಭಯರೂ ಆಗಬಹುದೆಂದರು. ಸ್ವಾಮಿಗಳ ವಾಕ್ಚಾತುರ್ಯ ನಿಷ್ಪಕ್ಷಪಾತ ಸ್ವಭಾವ ಮತ್ತು ತೇಜಸ್ಸಿನ ಪ್ರಭಾವದಿಂದ ಉಭಯಪಕ್ಷದವರಲ್ಲಿದ್ದ ಉದ್ವೇಗವು ಮಾಯವಾಯಿತು. ವಿವಾದವು ವಿನೋದವಾಗಿ ಪರಿಣಮಿಸಿತು. ಓಡುವ ಸ್ಥಳವು ರಂಗಧ್ವಜದಿಂದಲೇ ಅಥವಾ ನಂದೀಧ್ವಜದಿಂದಲೇ ಎಂಬುದು ಮತ್ತೆ ನಿರ್ಣಯವಾಗಬೇಕಾಯಿತು. ಶೈವರು ರಂಗಧ್ವಜದಿಂದಲೇ ಓಡಬಹುದೆಂದರು. ವೈಷ್ಣವರು—ನಾವು ಸ್ವಾಮಿಗಳು ಮಾಡುವ ತೀರ್ಮಾನಕ್ಕೆ ಒಪ್ಪಿದ್ದೇವಾದ್ದರಿಂದ ಎಲ್ಲಿಂದ ಬೇಕಾದರೂ ಓಡಬಹುದೆಂದರು. ಧಾವನಮಾಡುವ ಮಾರ್ಗದ ಇಕ್ಕೆಲಗಳಲ್ಲೂ - ಉಭಯಪಕ್ಷದವರೂ ಸಾಲಾಗಿ ನಿಂತರು. ಮಹಾರಾಜನು ರಂಗಧ್ವಜದ ಬಳಿಯಲ್ಲಿ ತಾನೂ ಬಂದು ನಿಂತನು. ಎಲ್ಲರೂ ಕಾಣುವಂತೆ ಸ್ವಾಮಿಗಳು ಶ್ವಾಸನಿರೋಧಮಾಡಿ ಧಾವಿಸಿದರು. ಸ್ವಾಮಿಗಳು ಶ್ವಾಸಬಿಟ್ಟ ಸ್ಥಳದವರೆಗಿನ ಪ್ರದೇಶವು ರಂಗಕ್ಷೇತ್ರದ ಎಲ್ಲೆಯಾಯಿತು. ರಂಗಧ್ವಜದಿಂದ ಸುಮಾರು ಒಂದು ಮೈಲಿಯಷ್ಟು ದೂರ ಧಾವನಮಾಡಿದ ಸ್ವಾಮಿಗಳ ಯೋಗಬಲವನ್ನು ಜನರು ಪ್ರಶಂಸೆಮಾಡಿದರು. ಈ ಮಹತ್ಕಾರ್ಯದ ಜ್ಞಾಪಕಾರ್ಥವಾಗಿ ಸ್ವಾಮಿಗಳು ರಂಗಧ್ವಜದ ಬಳಿ ಮಾರುತಿಯ ಪ್ರತಿಷ್ಠೆ ಮಾಡಿದರು. ಈಗಲೂ ಆ ಮಾರುತಿಯ ಸನ್ನಿಧಾನವು ಬಹುಜಾಗ್ರತ ಸ್ಥಳವೆನಿಸಿ ಅನೇಕರು ಇಷ್ಟಾರ್ಥಪಡೆದ ಪವಿತ್ರಸ್ಥಾನವಾಗಿದೆ.

ರಂಗನಾಥನ ದರ್ಶನಕ್ಕೆ ಸ್ವಾಮಿಗಳು ಬಂದಾಗ ಶ್ರೀಹರಿಯ ಪ್ರತ್ಯಕ್ಷದರ್ಶನವಾಯಿತಂತೆ ! ಆ ಕಾಲದಲ್ಲಿ ಆನಂದಪರವಶರಾಗಿ

ಆರಭಿ—ಝಂಪೆ

ಸೇರಿದೆನೊ ಸೇರಿದೆನೊ ಜಗದೀಶನ । ಜನ್ಮಸಂಕಟದ ಭಯವು ಇನ್ನು ಎನಗಿಲ್ಲಾ ।
ಎನಗಿಲ್ಲಾ ॥ ಪ.

ನೇತ್ರಗಳು ಕೃಷ್ಣನ ಮೂರ್ತಿಯನು ನೋಡುತಿವೆ । ಶ್ರೋತ್ರಗಳು ಹರಿಕಥೆಯ
ಕೇಳುತಲಿವೆ ॥ ರಾತ್ರಿ ಹಗಲು ಎನ್ನ ಮನಸು ಶ್ರೀರಂಗನಲಿ । ಪಾತ್ರನಾಡುತಿದೆನ್ನ ಗಾತ್ರ
ಕೃಷ್ಣನ ಮುಂದೆ ೧

ಹಸ್ತಗಳು ಮಂಟಪದ ಮಾರ್ಜನೆಯ ಮಾಡುತಿವೆ । ಮಸ್ತಕವು ಶ್ರೀಹರಿಯ

ಚರಣಕೆರಗುತಿದೆ ॥ ವಿಸ್ತಾರವಾಗಿ ಪದ ಪ್ರದಕ್ಷಿಣೆಯ ಮಾಡುತಿದೆ । ಕಸ್ತೂರಿಗಂಧವಾ ಘ್ರಾಣಿಸುತಿದೆ ನಾಸಿಕವು ೨

ಹರಿನಾಮ ಕೀರ್ತನೆಯ ಮಾಡುತಿದೆ ಎನ್ನ ಜಿಹ್ವೆ । ಹರಿನಾಮ ಜನ್ಯಪಾವನತೆಯಿಂದ ॥ ಹರಿಪ್ರೀತಿಯಾಗಿದೆ ನೋಡಿದರೆ ಎನ್ನದೇಹ । ಸಿರಿಕೃಷ್ಣ ನೆಲೆಸಯ್ಯ ಎನ್ನ ಮನ ಮಂದಿರದಿ ॥ ೩

ಸ್ವಾಮಿಗಳು ಪರವಶರಾಗಿ ನುಡಿದ ಈ ದೇವರ ನಾಮವನ್ನು ಸಮಾಸವರ್ತಿಗಳು ಯಥಾರೀತಿ ಲೇಖನಮಾಡಿಕೊಂಡರು. ಅಂದಿನಿಂದ ಭಜನಪದ್ಧತಿಯವರು ಈ ನಾಮವನ್ನು ಮಂಗಳಾವಸರದಲ್ಲಿ ಹಾಡುತ್ತ ಬಂದರು.

ಶ್ರೀ ವ್ಯಾಸರಾಯ ಸ್ವಾಮಿಗಳು ಶ್ರೀರಂಗದಲ್ಲಿದ್ದಾಗ **ಚಂದ್ರಿಕಾ** ಎಂಬ ಪ್ರಬಲ ಗ್ರಂಥವನ್ನು ಶ್ರೀ ಕ್ಷೇತ್ರದ ಶೇಷಶಾಯಿ (ರಂಗನಾಥ) ಗಂಕಿತವಮಾಡಿ ಪ್ರಾರಂಭಿಸಿದರು. ಈ ಮಾತಿಗೆ ಈ ಕೆಳಕಂಡ ಪ್ರಥಮಶ್ಲೋಕವು ಪ್ರಮಾಣವಾಗಿದೆ. ವ್ಯಾಸರಾಯರು ಶ್ರೀ ಕೃಷ್ಣೋಪಾಸಕರಾದ್ದರಿಂದ ಎರಡನೇ ಶ್ಲೋಕವು ಶ್ರೀಕೃಷ್ಣಪ್ರಾರ್ಥನೆಯಾಗಿದೆ.

ಚಂದ್ರಿಕಾ ಮಂಗಳಾಚರಣೆ

ಅಸ್ಪೃಷ್ಟದೋಷ ಗಂಧಾಯ ಕಲ್ಯಾಣಗುಣ ಸಿಂಧವೇ ।
ನಮೋನಮೋ ಭಕ್ತ ಮುಕ್ತಿದಾಯಿನೇ ಶೇಷ ಶಾಯಿನೇ ॥

ಶಮಯನ್ ಭವಸಂತಾಪಂ ರಮಯನ್ ಸಾಧುಚಾರಿತಾನ್ ।
ಕೃಷ್ಣಮೇಘ ಕೃಪಾವೃಷ್ಟಿ ವೃಷ್ಟ್ಯೈಪುಷ್ಣಾತುಮಾಮಪಿ ॥

ಕಾಲಕ್ರಮದಲ್ಲಿ ವ್ಯಾಸರಾಯರು ಶ್ರೀರಂಗದ ಒಳಪ್ರಾಕಾರದಲ್ಲಿ ದಿವ್ಯ ಮಠವನ್ನು ಕಟ್ಟಿಸಿದರು.

ಹೀಗೆ ನರಸಿಂಹ ಭೂಪಾಲನ ಕ್ಷೇತ್ರಯಾತ್ರೆಯೂ ವ್ಯಾಸರಾಯರ ತೀರ್ಥಯಾತ್ರೆಯೂ ಜೋಡಿಯಾಗಿ ನಡೆದವು. ಪಶ್ಚಿಮ ಸಮುದ್ರತೀರದಲ್ಲಿ ಹಿಂದೂಧರ್ಮಕ್ಕೆ ಬಹುಬಾಧೆ ಕೊಡುತ್ತಿದ್ದ ತುರುಷ್ಕರನ್ನು ಭೂಪಾಲನು ಜೈಸಿದನು. ಅನಂತಶಯನ ಮೊದಲಾದ ಪುಣ್ಯಕ್ಷೇತ್ರಗಳನ್ನು ಅವಲೋಕಿಸಿ, ವ್ಯಾಸರಾಯರಿಂದ ಸಹಿತನಾಗಿ ಉಡುಪಿಗೆ ಬಂದನು. ಆ ಕಾಲದಲ್ಲಿ ಅಷ್ಟಮಠಾಧಿಪತಿಗಳು ಮಹಾರಾಜರನ್ನು ವ್ಯಾಸರಾಯರನ್ನು ಬಹುಮಾಗಿ ಸತ್ಕರಿಸಿದರು. ವಿಧರ್ಮಿರಾಜರ ಬಾಧೆಯಿಂದ ಪೀಡಿತರಾಗಿದ್ದ ತಮ್ಮನ್ನು ವಿಪತ್ತಿಗೊಳಗಾಗದಂತೆ, ರಕ್ಷಿಸಿದಿರೆಂದು ಕೃತಜ್ಞತಾಪ್ರದರ್ಶನ ಮಾಡಿದರು.

ವ್ಯಾಸರಾಯರು ಶ್ರೀಕೃಷ್ಣಮಠಕ್ಕೂ ಇತರ ಮಠಗಳಿಗೂ ನೃಸಿಂಹಭೂಪಾಲನಿಂದ ಬಹು ದ್ರವ್ಯಸಹಾಯ ಮಾಡಿಸಿದರು. ಅಷ್ಟಮಠಗಳವರು ರಾಜನಿಗೆ ರಾಜಯೋಗ್ಯವಾದ ಮರ್ಯಾದೆ ಮಾಡಿದರು. ವ್ಯಾಸರಾಯರಿಗೆ ವೇದವ್ಯಾಸರ ಪ್ರತಿನಿಧಿಗಳಾಗಿ ಬಂದಿರೆಂದು ಮಧ್ಯತಾಳಾಮಠದಲ್ಲಿದ್ದ **ವ್ಯಾಸಮುಷ್ಟಿಕೆ**ಯನ್ನು ಕಾಣಿಕೆಯನ್ನಾಗಿ ಕೊಟ್ಟರು.

ವ್ಯಾಸಮುಷ್ಟಿಕೆಯೆಂದರೆ ವೇದವ್ಯಾಸರು ಶ್ರೀಮದಾಚಾರ್ಯರಿಗೆ ಕೊಟ್ಟ ಎಂಟು **ಸೈಕತ ಮುಷ್ಟಿಕೆ**ಗಳ ಪೈಕಿ ಒಂದು. ಆ ಮುಷ್ಟಿಕೆಯು ಕೇವಲ ವೇದವ್ಯಾಸರ ಪ್ರತಿನಿಧಿಯಾಗಿ ಅವರ ಸನ್ನಿಧಾನ ಯುಕ್ತವಾದುದು. ಅದು ಸಾಲಿಗ್ರಾಮವೂ ಅಲ್ಲ; ಪ್ರತಿಮೆಯೂ ಅಲ್ಲ. ಅಷ್ಟಮಠಗಳವರು ವ್ಯಾಸ ಪೂಜಾಕಾಲದಲ್ಲಿ ಈ ಮುಷ್ಟಿಕೆಯನ್ನು ಪೂಜಿಸುತ್ತಿದ್ದರು. ವ್ಯಾಸರಾಯರಿಗೆ ಅದನ್ನು ಕೊಟ್ಟನಂತರ ಸರ್ವಜ್ಞಕರಾರ್ಚಿತ ವ್ಯಾಸ ಪೂಜೆಯೇ ಉಡುಪಿಯವರಿಗಿಲ್ಲವಾಯಿತು.

ಈ ಸೈಕತ ಮುಷ್ಟಿಕೆಯ ವಿಷಯದಲ್ಲಿ ಒಂದು ಹುಚ್ಚುಕಥೆ ಮಾಧ್ವಜನರಲ್ಲಿ ಇನ್ನೂ ಪ್ರಚಾರದಲ್ಲಿದೆ. ವ್ಯಾಸರಾಯರೆಂದರೇನು ! ಅವರ ಪಾಂಡಿತ್ಯವೆಂಥಾದ್ದು ! ಅವರ ಅಪರೋಕ್ಷಜ್ಞಾನವೆಂಥಾದ್ದು ! ಅವರಿಗೆ ರಾಜಾಧಿರಾಜರು ಮಾಡುತ್ತಿದ್ದ ಸನ್ಮಾನವೆಂಥಾದ್ದು ! ಎಂಬ ಯಾವ ವಿಚಾರವನ್ನೂ ಯೋಚಿಸದ ಕುಹಕಿಗಳು ಈ ಹುಚ್ಚುಕಥೆಯನ್ನು ನಂಬುತ್ತಾರೆ. ಅದರ ವಿವರವೇನೆಂದರೆ ವ್ಯಾಸರಾಯರು ಮಧ್ವತಾಳಾಮಠದಲ್ಲಿ ಪೂಜೆ ಮಾಡಿದಾಗ, ವ್ಯಾಸಮುಷ್ಟಿಕೆಯನ್ನೂ ಪೂಜಿಸಿ, ಅದನ್ನು ತಮ್ಮ ಪೆಟ್ಟಿಗೆಯಲ್ಲಿಟ್ಟುಕೊಂಡುಬಿಟ್ಟರಂತೆ! ಅಷ್ಟಮಠಗಳಿಗೆ ಸಮಾನವಾದ ವ್ಯಾಸಪೂಜೆಯು ತಮಗೆ ತಪ್ಪಿತೆಂದು ಅವರೆಲ್ಲಾ ಪರಿತಪಿಸಿದರಂತೆ! ವ್ಯಾಸಮುಷ್ಟಿಕೆಯನ್ನು ಪುನಃ ಸಂಪಾದಿಸಲು **ವಾದಿರಾಜರು** ವ್ಯಾಸರಾಯರ ಶಿಷ್ಯತ್ವ ವಹಿಸಿದರಂತೆ! ಒಂದು ದಿನ ವ್ಯಾಸರಾಯರ ಪೂಜಾಪೆಟ್ಟಿಗೆಯನ್ನು ತೆಗೆದು ಪೂಜಿಸುವ ಅವಕಾಶ ವಾದಿರಾಜರಿಗೆ ದೊರೆಯಿತಂತೆ. ಆಗ ರಾಜರು ಸೈತಕಮುಷ್ಟಿಕೆಯನ್ನು ತಮ್ಮ ಪೆಟ್ಟಿಗೆಗೇ ಸೇರಿಸಿ ಪ್ರಯಾಣಮಾಡಿದರಂತೆ ! ಜನರು **ವಾದಿರಾಜೋಗತಃ** ಎಂದು ವ್ಯಾಸರಾಜರಿಗೆ ತಿಳಿಸಿದರಂತೆ! ವ್ಯಾಸರಾಯರು **ತರ್ಹಿವ್ಯಾಸೋಽಪಿಗತಃ** ಎಂದುಬಿಟ್ಟರಂತೆ ! ಇಂತಹ ಬಿಡುನುಡಿಗಳಿಂದ ಕಥೆಯನ್ನು ಕಟ್ಟಿದ ಪುಣ್ಯಾತ್ಮರ್ಯಾರೋ ?

ಒಂದುವೇಳೆ ಒಳ್ಳೊಳ್ಳೆ ಪೂಜಾರ್ಹ ಮೂರ್ತಿಗಳನ್ನು ಸಂಪಾದಿಸಬೇಕೆಂಬ ಕುತ್ಸಿತಭಾವನೆಯು ವ್ಯಾಸರಾಯರಿಗಿದ್ದಿದ್ದರೆ ಅವರಿಗಿದ್ದ ಪ್ರಾಬಲ್ಯದಲ್ಲಿ ರಂಗನಗರದ ಇಕ್ಷ್ವಾಕು ಕುಲಧನವೆನಿಸಿದ್ದ ಶ್ರೀ ರಂಗನಾಥಮೂರ್ತಿಯನ್ನೇ ತಂದಿಟ್ಟುಕೊಳ್ಳಬಹುದಾಗಿತ್ತು. ಐಶ್ವರ್ಯವನ್ನು ತಮ್ಮ ಮಠದಲ್ಲಿ ತುಂಬಿಟ್ಟುಕೊಳ್ಳಬೇಕೆಂಬ ಆಸೆಯಿದ್ದರೆ ತಿರುಪತಿಯ ದೇವಸ್ಥಾನದ ರತ್ನಾಭರಣಗಳನ್ನೇ ಸಂಗ್ರಹಿಸಿಟ್ಟುಕೊಳ್ಳಬಹುದಾಗಿತ್ತು.

ಇಂತಹ ಹುಚ್ಚುಕಥೆಗಳನ್ನು, ಮಾಧ್ವರಲ್ಲಿ ಮಾತ್ರವಲ್ಲ–ಸ್ಮಾರ್ತರಲ್ಲೂ ಕಲ್ಪಿಸಿ ಆಡಿಕೊಳ್ಳುವ ನಿರುದ್ಯೋಗಿಗಳಿದ್ದಾರೆ. ಶೃಂಗೇರಿ, ಕೂಡಲಿ ಮೊದಲಾದ ಮಠಗಳಲ್ಲಿರುವ ಶಾರದಾ, ಚಂದ್ರಮೌಳೀಶ್ವರ, ರತ್ನಗರ್ಭಗಣಪತಿ ಮೂರ್ತಿಗಳ ಹೆಸರಿನಲ್ಲಿ ತಮ್ಮ ಜಿಹ್ವಾ ಚಾಪಲ್ಯವನ್ನು ತೀರಿಸಿಕೊಳ್ಳುತ್ತಾರೆ.

ಉಡುಪಿಯ ಅಷ್ಟಮಠಗಳವರಿಗೆ ಸರ್ವಜ್ಞಕರಾರ್ಚಿತ ವ್ಯಾಸಪೂಜೆಯ ಅವಕಾಶ ತಪ್ಪಿದ್ದು ನಿಜ. ಈ ಇಂಗಿತವನ್ನು ವ್ಯಾಸರಾಯರಾದರೂ ಅರಿತುಕೊಂಡರು. ಈ ಮಠ ಆ ಮಠಗಳೆಂಬ ಭೇದ ಕಲ್ಪನೆ ಅವರಿಗಿರಲಿಲ್ಲ. ವಾದಿರಾಜರು ತಮ್ಮಲ್ಲಿ ವ್ಯಾಸಂಗಮಾಡಿ

ಹಿಂದಿರುಗಿ ಪ್ರಯಾಣಮಾಡುವಾಗ ಉಡುಪಿಯ ಅಷ್ಟಮಠಗಳಿಗೆ ವ್ಯಾಸಮುಷ್ಟಿಕೆಯೊಂದಿರ ಬೇಕೆಂದು ವ್ಯಾಸರಾಯರೇ ಅವರಿಗೆ ಪಾರಿತೋಷಕವಾಗಿ ಕೊಟ್ಟು ಕಳುಹಿಸಿದರು. ಅದ ರಿಂದ ಉಡುಪಿಯ ಮಠಾಧಿಪರಿಗೆ ಪರಮಾನಂದವಾಯಿತು. ಮೇಲು ಸೀಮೆಯ ಮಠ ತ್ರಯಗಳಿಗೆ ಸನ್ಮಾನ ಮಾಡುವಾಗ ಅಗ್ರಮರ್ಯಾದೆಯನ್ನು ವ್ಯಾಸರಾಯಮಠಕ್ಕೇ ಮಾಡುವ ಸಂಪ್ರದಾಯವನ್ನು ಆಚರಣೆ ತಂದರು. ಆ ಸಂಪ್ರದಾಯವು ಈಗಲೂ ನಡೆದುಬರುತ್ತಿದೆ.

ಉಡುಪಿಯಲ್ಲಿದ್ದಾಗ ವ್ಯಾಸರಾಯರು ಮಾಡಿದ ಎಷ್ಟೋ ದೇವರನಾಮಗಳಿವೆ. ಅಲ್ಲಿನ ಭಾಗವತರು ಇಂದಿಗೂ ಆ ನಾಮಗಳನ್ನು ಮರೆತಿಲ್ಲ.

ವ್ಯಾಸರಾಯರು ಶ್ರೀಪಾದರಾಜರ **ವಾಗ್ವಜ್ರ**ವೆಂಬ ಗ್ರಂಥವನ್ನು ಅವರಿಂದಲೇ ವ್ಯಾಸಂಗಮಾಡಿದ ನಂತರ, ಪ್ರಬಲತರವಾದ **ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕಾ** ಎಂಬ ಗ್ರಂಥರತ್ನಗಳನ್ನು ರಚಿಸಿದರು. ಶ್ರೀಪಾದರಾಯರು ಈ ವ್ಯಾಸತ್ರಯ ವನ್ನು ನೋಡಿ ಪರಮಾನಂದಪಟ್ಟು, ನಿಮ್ಮ ಗ್ರಂಥಗಳೇ ಲೋಕದಲ್ಲಿ ಪ್ರಚಾರವಾಗಲಿ; ಇನ್ನು ವಾಗ್ವಜ್ರದ ಆವಶ್ಯಕತೆಯು ಕಂಡುಬರುವುದಿಲ್ಲವೆಂದು ಸಂತೋಷದಿಂದ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಮತ ವಿವಾದಗಳ ಈ ಹೊತ್ತಿನ ದಿನವಲ್ಲೂ ವ್ಯಾಸತ್ರಯ (ನ್ಯಾಯಾಮೃತ-ತರ್ಕತಾಂಡವ, ಚಂದ್ರಿಕಾ) ಪಠನ ಮಾಡದವನು ಪಂಡಿತನೆನಿಸುವುದಿಲ್ಲ. ಆನಂದ ತೀರ್ಥರು, (ಮಧ್ವಾಚಾರ್ಯರು) ಜಯತೀರ್ಥರು (ಟೀಕಾಚಾರ್ಯರು) ವ್ಯಾಸತೀರ್ಥರು (ವ್ಯಾಸರಾಯರು) ಈ ಮುನಿತ್ರಯರ ಸ್ಮರಣೆಯಿಲ್ಲದವನು ಮಾಧ್ವನೆನಿಸುವುದಿಲ್ಲ. ಮಹಾನುಭಾವರಾದ ಶ್ರೀ ಪುರಂದರದಾಸರು :—

"ಈಸು ಮುನಿಗಳಿದ್ದೇನು ಮಾಡಿದರು, ವ್ಯಾಸಮುನಿ ಮಧ್ವಮತವ ನುದ್ಧರಿಸಿದ" ಎಂಬ ಮಾತುಗಳನ್ನು ವ್ಯಾಸರಾಯರ ಸುಳಾದಿಯಲ್ಲಾಡಿದ್ದಾರೆ.

ಮಧ್ವಮತಸ್ಥರಲ್ಲಿ ಉದಾರಮನಸ್ಕರಾದ ಪೂರ್ವಾಚಾರ್ಯರುಗಳು ಮಾಡಿರುವ ನಿಬಂಧನೆಯನ್ನು ನೋಡಿದರೆ ಪರಮಾನಂದವಾಗುತ್ತದೆ. ಯಾವನಿಗಾಗಲಿ, ಏನೇ ಬರಲಿ ಬರದಿರಲಿ, ಕನಿಷ್ಠಪಕ್ಷ ಮುನಿತ್ರಯರ ನಾಮಸ್ಮರಣೆಯನ್ನಾದರೂ ಮಾಡಬೇಕೆಂದು ಭೋಜನಕ್ಕೆ ಸಂಕಲ್ಪಮಾಡಿ ಕೂಡುವಾಗ:-

ಬ್ರಹ್ಮಾಂತಾ ಗುರವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತುಮೇ ಜನ್ಮಜನ್ಮನಿ ॥

ತಾ॥ ಸ್ವಗುರುವಿನಿಂದ ಬ್ರಹ್ಮದೇವರವರೆಗಿರುವ ಸಕಲ ದೇವತೆಗಳೂ ನಮ್ಮ ಗುರುಗಳು, ನಮ್ಮ ಇಷ್ಟದೈವವೆಂದರೆ ಲಕ್ಷ್ಮೀಪತಿಯಾದ ನಾರಾಯಣನು; ಆಚಾರ್ಯ ರೆಂದರೆ ಶ್ರೀಮನ್ಮಧ್ವಾಚಾರ್ಯರು; ಈ ಮೂರೂ ಜನ್ಮಜನ್ಮಕ್ಕೂ ಇರಲಿ.

(ಈ ಶ್ಲೋಕದಿಂದ ಶ್ರೀಮದಾಚಾರ್ಯರ ಸ್ಮರಣೆಯಾಗುತ್ತದೆ)

ಚಿತ್ರೈಃ ಪದೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿಶ್ರೀ ಜಯತೀರ್ಥವಾಕ್ ॥

(ಈ ಶ್ಲೋಕದಿಂದ ಟೀಕಾಚಾರ್ಯರ ಸ್ಮರಣೆಯಾಗುತ್ತದೆ)

ಅರ್ಥಿಕಲ್ಪಿತ ಕಲ್ಪೋಽಯಂ ಪ್ರತ್ಯರ್ಥಿ ಗಜಕೇಸರೀ ।
ವ್ಯಾಸತೀರ್ಥ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

(ಈ ಶ್ಲೋಕದಿಂದ ವ್ಯಾಸರಾಯರ ಸ್ಮರಣೆಯಾಗುತ್ತದೆ)

ವ್ಯಾಸರಾಯರು ಕೇವಲ ಮಧ್ವಮತೋದ್ಧಾರಕರಷ್ಟೇ ಅಲ್ಲ. ಸಂಸ್ಕೃತದಲ್ಲಿ ಗ್ರಂಥಕರ್ತರಾಗಿ ಪ್ರಖ್ಯಾತಿಪಡೆದವರೆಂಬುದೊಂದೇ ಅಲ್ಲ. ಮಧ್ವ ಶಂಕರ ರಾಮಾನುಜ ಮೊದಲಾದ ಎಲ್ಲ ಮತಗಳಿಗೂ ಸಮಾನವಾದ ಭಕ್ತಿಪಂಥವನ್ನು (ಭಾಗವತ ಧರ್ಮವನ್ನು) ಭರತಖಂಡಕ್ಕೆಲ್ಲಾ ಉಪದೇಶಮಾಡಿದವರು. ಮತ ಪಕ್ಷಪಾತವಿಲ್ಲದೆ ಸಕಲ ವಿದ್ವಜ್ಜನರಿಗೂ ಕಲ್ಪವೃಕ್ಷದಂತಿದ್ದವರು. ನರಸಿಂಹರಾಜನ ಕಾಲದಿಂದ ಅಚ್ಯುತರಾಯನ ಕಾಲದವರೆಗೆ ೫೦ ವರ್ಷಗಳಷ್ಟು ಕಾಲ ಕರ್ಣಾಟಕ ಸಾಮ್ರಾಜ್ಯರಕ್ಷಕರಾಗಿ ಸಾಮ್ರಾಜ್ಯದೇವತಾಸ್ವರೂಪರೆಂದು ಹೊಗಳಿಸಿಕೊಂಡವರು. ಶತ್ರುಗಳನ್ನೂ ಮಿತ್ರರಂತೆ ಭಾವಿಸಿದವರು. ಕನ್ನಡ ವಾಙ್ಮಯಕ್ಕೆ ಪೂಜ್ಯತೆಯನ್ನುಂಟುಮಾಡಿದವರು. ಕನ್ನಡದಲ್ಲೇ ಭಗವಂತನನ್ನು ಹಾಡಿ ಪಾಡಿ ಕುಣಿದಾಡಿದವರು. ಇಂತಹ ಕರ್ಣಾಟಕಾಚಾರ್ಯರನ್ನು ಮರೆಯುವುದೆಂತು!

೭

ಸಳುವ ನರಸಿಂಹ ಭೂಪಾಲನ ನಂತರ ೧೪೯೩ ರಲ್ಲಿ ಅವನ ಮಗ ತಮ್ಮರಾಯನು ಪಟ್ಟಕ್ಕೆ ಬಂದನು. ವ್ಯಾಸರಾಯರು ತಿರುಪತಿಯ ಪೂಜಾನಿಮಿತ್ತವಾಗಿಯೂ ಅನನುಭವಿಯಾದ ರಾಜಕುಮಾರನ ನಿಮಿತ್ತವಾಗಿಯೂ, ರಕ್ಷಕರಾಗಿ (Guardian Saint) ಚಂದ್ರಗಿರಿಯಲ್ಲಿರಬೇಕಾಯಿತು. ವೈದಿಕರಾಜ್ಯ ಪರಿಪಾಲನೆಯ ಜೊತೆಗೆ ಲೌಕಿಕರಾಜ್ಯ ನಿರ್ವಹಣಕಾರ್ಯವೂ ಅವರ ಪಾಲಿಗೆ ಬಂದಿತು. ರಾಜಮನೆತನದವರು ಚಂದ್ರಗಿರಿಯನ್ನು ಬಿಟ್ಟು ವಿಜಯನಗರದಲ್ಲಿ ವಾಸಮಾಡಿದರು. ನೂತನ ರಾಜವಂಶ ಪ್ರತಿಷ್ಠೆಯಾದ ಎಂಟುವರ್ಷಗಳೊಳಗೇ ಸಳುವನು ದಿವಂಗತನಾದುದರಿಂದ ರಾಜ್ಯವನ್ನು ತಹಬಂದಿಯಲ್ಲಿಟ್ಟುಕೊಳ್ಳಲು ಖಡ್ಗಬಲಕ್ಕಿಂತ ಬುದ್ಧಿಬಲವು ಹೆಚ್ಚಾಗಿ ಬೇಕಾಗಿತ್ತು. ಆದ್ದರಿಂದಲೇ ಲೋಕಸಂಗ್ರಹಾಪೇಕ್ಷೆಯಿಂದ ತಮ್ಮರಾಯನು ವಿಜಯನಗರದಲ್ಲಿ ವಾಸ ಮಾಡಿದನು. ವಿರೂಪಾಕ್ಷನಿಂದ ಪರ್ಯವಸಿತವಾದ ಪೂರ್ವರಾಜ ಸಂತತಿಯ ಪಕ್ಷಪಾತಿಗಳು ನೂತನ ರಾಜಸಂತತಿಯ ದ್ವೇಷಿಗಳಾಗಿದ್ದರು. ಸಳುವನ ಆಪ್ತಮಿತ್ರನಾಗಿದ್ದ ನರಸನಾಯಕನೆಂಬುವನು ತಮ್ಮರಾಯನ ಹೆಸರಿನಲ್ಲಿ ರಾಜ್ಯಸೂತ್ರವನ್ನು ವಹಿಸಿ ಆಡಳಿತ ಮಾಡಲಾರಂಭಿಸಿದನು. ನರಸನಾಯಕನು ಎಷ್ಟೇ ಸಮರ್ಥನಾಗಿದ್ದರೂ ಮುತ್ಸದ್ದಿತನ (Statesmanship) ವೃದ್ಧ ಬುದ್ಧಿ ಮಂತ್ರದ ಸಲಹೆ ಸಹಾಯಗಳು ಅವನಿಗೆ ಅತ್ಯವಶ್ಯವಾಗಿದ್ದುವು. ಆದ್ದರಿಂದ ವ್ಯಾಸರಾಯರನ್ನು ವಿಜಯನಗರದಲ್ಲಿ ಬಂದಿರಬೇಕೆಂದು ಕೇಳಿ

ಕೊಂಡನು. ೧೫೩೦ ರಲ್ಲಿ ವ್ಯಾಸರಾಯರು ತಿರುಪತಿಯ ದೇವಸ್ಥಾನದ ಪೂಜಾಕಾರ್ಯವನ್ನು ಅರ್ಚಕ ವಂಶದ ತರುಣನಿಗೊಪ್ಪಿಸಿ, ಮತ್ತೆ ಪಾಪಕಾರ್ಯಗಳಿಗೆ ಅವಕಾಶವಾಗದಂತೆ ವ್ಯವಸ್ಥೆಮಾಡಿ, ವಿಜಯನಗರಕ್ಕೆ ಬಂದರು.

ಸ್ವಾಮಿಗಳು ಚಂದ್ರಗಿರಿಗೆ ಬಂದಾಗ ಸಳುವನು ಮಾಡಿದ್ದರ ಶತಾಧಿಕ ಸ್ವಾಗತ ಮಾಡಿ, ನರಸನಾಯಕನು ಅವರನ್ನು ಮಹೋತ್ಸವದಿಂದ ಕರೆತಂದು ಭವ್ಯವಾದೊಂದು ಮಂದಿರದಲ್ಲಿ ಇಳಿಸಿದನು. ಸ್ವಾಮಿಗಳನ್ನು ಮುದ್ರಾಸನದಮೇಲೆ ಕೂಡಿಸಿ ಮಹಾಪೂಜೆ ಮಾಡಿದನು.

ತತ್ರನೃರಾಜತ ಸಮಸ್ತತಮೋಽಪನಿಹಂತಾ
ಮುದ್ರಾಸನೇ ಸನಿವರ್ಸ ಮುನಿಸಾರ್ವಭೌಮಃ ॥
ಮಾರ್ತಾಂಡಬಿಂಬ ಇವ ಮಾರ್ಗವಶೇನ ಮಂದಂ ।
ಮಂದಾಕಿನೀ ಪುಲಿನಮಧ್ಯಭುವಂ ಪ್ರವಿಷ್ಟಃ ॥
ಅರ್ಚಯಂತಮಿಮಮರ್ಘ್ಯಪೂರ್ವಯಾ
ಭಾಗಧೇಯ ಪರಿಣಾಮ ಮಾತ್ಮನಃ ॥
ಪಾರ್ಥಿವಸ್ಸಪದಿಪರ್ಯಪೂಜಯತ್
ಪಾಂಡುಸೂನುರಿವ ಬಾದರಾಯಣಂ ॥

ಮುದ್ರಾಸನವೆಂದರೆ ವಿಜಯನಗರದ ಅರಸರು ರಾಜಕಾರ್ಯಗಳನ್ನು ನಿರ್ಣಯಿಸಿ ಆಜ್ಞಾಪತ್ರಗಳನ್ನು ಬರೆಯಿಸುವ – ಸಿಂಹಾಸನಕ್ಕೆ ಎರಡನೆಯ ತರಗತಿಯ ಆಸನ. ಅಲ್ಲಿ ಕುಳಿತು ಮೊಹರು ಮಾಡಿಸಿದ ಪತ್ರಗಳು ಡೆಲ್ಲಿ ಬಿಜಾಪುರ ಮೊದಲಾದ ಪರರಾಷ್ಟ್ರಗಳಿಗೂ, ಸ್ವದೇಶದ ಅಧಿಕಾರಿಗಳಿಗೂ, ಹೋಗುತ್ತಿದ್ದುವು. ಮುಂದೆ ರಾಜಕಾರ್ಯಗಳನ್ನು ವ್ಯಾಸರಾಯರೇ ನಿರ್ವಹಿಸುವರೆಂದು ತೋರಿಸುವುದಕ್ಕೆ ನರಸನಾಯಕನು ಈ ಅಸಾಧಾರಣ ಮರ್ಯಾದೆಯನ್ನು ಸ್ವಾಮಿಗಳಿಗೆ ಮಾಡಿದನು. ಮುದ್ರಾಸನದಲ್ಲಿ ಕುಳಿತ ವ್ಯಾಸರಾಯರನ್ನು ನರಸನಾಯಕನು, ಯುಧಿಷ್ಠಿರನು ಬಾದರಾಯಣರನ್ನು ಪೂಜಿಸಿದಂತೆ ಪೂಜಿಸಿ ಗೌರವಿಸಿದನು. ಅನಂತರ ಸಕಲ ರಾಜಕಾರ್ಯಗಳೂ ವ್ಯಾಸರಾಯರ ತಿಳಿವಳಿಕೆಗೆ ಬರದೆ ನಡೆಯುತ್ತಿರಲಿಲ್ಲ. ನರಸನಾಯಕನಾದರೂ ಸ್ವಾಮಿಗಳಿಗೆ ತಿಳಿಸದೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ.

"ಏನಮೇವ ಭಕ್ತ್ಯಾ ಸಂಭಾವಯಂತಂ ರಹಸ್ಯೇಸಂ ಧರ್ಮಪದೋಪದೇಶೇನ ಪ್ರತ್ಯಹಮನುಗೃಹ್ಣನ್"

ಇದರಿಂದ ಜನರಲ್ಲಿ ತೃಪ್ತಿಯುಂಟಾಯಿತು. ಶತ್ರುಗಳನ್ನೂ ಆಸ್ಥಾನಕ್ಕೆ ಕರೆದು ಅವರ ಸಲಹೆಯನ್ನೂ ಕೇಳುತ್ತಿದ್ದುದರಿಂದ, ತಮ್ಮ ರಾಯರಿಗೆ ಶತ್ರುಗಳೇ ಇಲ್ಲದಂತಾಯಿತು. ರಾಜ್ಯದಲ್ಲಿ ಶಾಂತಿ ನೆಲೆಸಿತು. ಇದೇ ಕಾಲದಲ್ಲಿ ವ್ಯಾಸರಾಯರು ಚಕ್ರತೀರ್ಥದೆದುರಿಗೆ ಯಂತ್ರೋದ್ಧಾರಕ **ಮಾರುತಿಯ** ಪ್ರತಿಷ್ಠೆ ಮಾಡಿದರು. ಮಾರುತಿಯ

ವಿಗ್ರಹಕ್ಕೆ ಯಂತ್ರಬಂಧನ ಮಾಡಿದ ಕಥೆಯನ್ನು ಪರಂಪರೆಯಾಗಿ ಹಿರಿಯರು ಈ ರೀತಿ ಹೇಳುವರು.

ವ್ಯಾಸರಾಯರು ಪ್ರತ್ಯಹವೂ ಚಕ್ರತೀರ್ಥದಲ್ಲಿ ಪ್ರಾತಃಸ್ನಾನ ಮಾಡಿ ಈಗ ಯಂತ್ರೋದ್ಧಾರಕನಿರುವ ಸ್ಥಳದಲ್ಲಿ ಜಪಕ್ಕೆ ಕೂಡುತ್ತಿದ್ದರು. ಜಪಕ್ಕೆ ಕುಳಿತು ಕಣ್ಣು ಮುಚ್ಚಿದಾಗಲೆಲ್ಲ ಅವರಿಗೆ ಮಾರುತಿರಾಯನ ದರ್ಶನವಾಗುತ್ತಿತ್ತು. ಆದರೆ. ಅದೇ ಸ್ಥಳದಲ್ಲಿ ಜಪಕ್ಕೆ ಕುಳಿತರೆ ಯಾವ ರೂಪದರ್ಶನವೂ ಆಗುತ್ತಿರಲಿಲ್ಲ. ಇದರ ಕಾರಣವನ್ನು ತಿಳಿಯಲಾರದೆ ಒಂದು ರಾತ್ರಿ ಭಜನೆಯಾದಮೇಲೆ—

ಆರಭಿ—ಝಂಪೆ

ನೀನೆ ವರಗುರು ಮುಖ್ಯಪ್ರಾಣಾ । ನಿರಂತರವು ನಂಬಿದೆನು ನಿಖಿಲ ಗುಣಪೂರ್ಣ ಪ.

ಜ್ಞಾನ ಕೋಮಲೆ ಭಾರತೀಶ । ನಿಖಿಲ
ಪ್ರಾಣಿಗಳ ಹೃದಯದಲಿ ವಾಸಾ ಸುರೇಶ ಅ.ಪ.

ವಾತಸುತನಾಗಿ ರಘು । ನಾಥ ಪ್ರಿಯದೂತ ಬಲು । ಯೂಥಲಂಕೆಯ
ಪೊಕ್ಕು । ಖ್ಯಾತಿಯನೆ ಪಡೆದೇ ॥
ಸೀತೆಗುಂಗುರವಿತ್ತು । ವೀತಿಹೋತ್ರಗೆ ಪುರವ । ಪ್ರೀತ್ಯೆನಿಸಿದಾತ ದಿತಿ ।
ಜಾತರಿಗೆ ಭೀತಿಕರ ॥ ೧

ಬಂಡ ಕೀಚಕ ನಿಕರ । ಮುಂಡೆಯನು ಒಡೆದು ಉ । ದ್ದಂಡ ಮಗಧಾಧಿಪನ
ದಂಡವನು ಸೀಳಿ ॥
ಭಂಡ ಕೌರವರ ಶಿರ । ಚಂಡಾಡಿ ಪ್ರಬಲ ರಣ । ಮಂಡಲದಿ ಚಂಡ ರಿಪು
ದಂಡುಗಳ ಖಂಡಿಸಿದೆ ॥ ೨

ಸಂಗದಲಿ ಮಧ್ವಮತ । ದಂಗವನು ಏರ್ಪಡಿಸಿ । ಕಂಗೆಟ್ಟ ಕುಮತ
ದುಸ್ಸಂಗಗಳನಳಿದು ॥
ಗಂಗೆಪಿತ ಕೃಷ್ಣಪದ । ಭೃಂಗ ಮಹಾಜಗದೊಳಗೆ । ತುಂಗಭವಭಂಗ
ದಯಾಪಾಂಗ ಯತಿಪುಂಗವರ ೩

ಎಂಬುದಾಗಿ ಅಂಜನಾಸುತನನ್ನು ಸ್ತೋತ್ರಮಾಡಿ ಶಯನಮಾಡಿದರು.

ಆ ರಾತ್ರಿ ಸ್ವಪ್ನದಲ್ಲಿ ಮಾರುತಿಯು ಆಚಾರ್ಯರೂಪದಿಂದ (ಮಧ್ವ) ದರ್ಶನವಿತ್ತು, ಸ್ತೋತ್ರ ಮಾತ್ರ ಸಾಲದು. ನನ್ನ ಮೂರ್ತಿ ಪ್ರತಿಷ್ಠೆ ಮಾಡೆಂದು ಹೇಳಿದಂತಾಯಿತು. ಮಾರನೆಯ ದಿನ ವ್ಯಾಸರಾಯರು ಪದ್ಧತಿಯಂತೆ ಚಕ್ರತೀರ್ಥದಲ್ಲಿ ಮಿಂದು ತಮ್ಮ ಆಹ್ನಿಕ ಸ್ಥಳಕ್ಕೆ ಬಂದರು. ರಾತ್ರಿಯಾದ ಸ್ವಪ್ನದ ನೆನಪೇ ಮನಸ್ಸಿನಲ್ಲಿದ್ದುದರಿಂದ ಮೂರ್ತಿಪ್ರತಿಷ್ಠೆಗೆ ಆಕಾರ ಹೇಗಿರಬೇಕೆಂದು ಯೋಚಿಸುತ್ತಾ, ಬಂಡೆಯಮೇಲೆ ಅಂಗಾರದಿಂದ ಮಾರುತಿಯ ಆಕಾರವನ್ನು ಬರೆದರು. ದ್ವಾದಶನಾಮಗಳನ್ನು ಚಿತ್ರಿಸಿದರು. ಫಾಲದಲ್ಲಿ ತಿಲಕವನ್ನಿಟ್ಟಕೂಡಲೇ ಆ ಆಕಾರವು ಸಾಕಾರವಾಗಿ ಲಂಘಿಸಿ ಅದೃಶ್ಯವಾಯಿತು. ಇದೇನು ಚಿತ್ರವೆಂದು ಮತ್ತೆ ಬರೆದರು. ಬರೆದಷ್ಟು ಸಲವೂ ಆಕಾರವು

ಸಾಕಾರವಾಗಿ ಲಂಘಿಸಿ ಅದೃಶ್ಯನೇ ಆಗುತ್ತಿತ್ತು. ಮತ್ತೊಮ್ಮೆ ಆಕಾರ ಬರೆದು ಯಂತ್ರದಿಂದ ದಿಗ್ಬಂಧನ ಮಾಡಿ, ಅನಂತರ ದ್ವಾದಶನಾಮ ತಿಲಕಗಳನ್ನಿಟ್ಟರು. ಮೂರ್ತಿಯು ಚಲಿಸಲಿಲ್ಲ. ಸ್ವಾಮಿಗಳಿಗೆ ಪರಮಾನಂದವಾಯಿತು. ಅಂದೇ ಪ್ರತಿಷ್ಠೆ, ಅಂದೇ ಪೂಜೆ, ಅಂದೇ ಭೋಜನಗಳೆಲ್ಲಾ ನಡೆದುವು. ಕಾಲಕ್ರಮದಲ್ಲಿ ಮೂರ್ತಿಯು, ತಾನೇ ಸ್ಫುಟವಾಗಿ ಆಕಾರವನ್ನು ತಾಳಿತು. ತಮ್ಮರಾಯನು ಗುಡಿಗೋಪುರಗಳನ್ನು ಕಟ್ಟಿಸಿದನು. ಯಂತ್ರೋದ್ಧಾರಕನ ಸ್ಥಾನವು ಮಹಾಜಾಗ್ರತಸ್ಥಳವೆನಿಸಿತು. ಪಾರಾಯಣ ಪ್ರವಚನ ಮಾಡುವವರೆಲ್ಲಾ ಅದೇ ಸ್ಥಳವನ್ನು ಹುಡುಕುತ್ತಾ ಬಂದರು. ಮಂತ್ರೋಪಾಸಕರು ಅಲ್ಲೇ ಪುರಶ್ಚರಣೆ ಮಾಡಿ ಸಿದ್ಧಿಯನ್ನು ಪಡೆದರು. ಅಂದಿನಿಂದ ಇಂದಿನವರೆಗೆ ಅಲ್ಲಿ ಎಷ್ಟೋ ಸತ್ಕಾರ್ಯಗಳು ನಡೆದಿವೆ–ನಡೆಯುತ್ತಲಿವೆ. ಹರಕೆ ಸೂತ್ರಗಳಾಗುತ್ತಲಿವೆ. ಕಾಮಾರ್ಥಿಗಳು ಅಲ್ಲಿ ಒಂದು ಸಪ್ತಾಹ ಸೇವೆ ಮಾಡುವುದರಲ್ಲಿ ತಮ್ಮ ಇಷ್ಟಾರ್ಥವನ್ನು ಪಡೆಯುತ್ತಿದ್ದಾರೆ. ವ್ಯಾಸರಾಯರ ತಪಶ್ಶಕ್ತಿಯು ಇಂದಿಗೂ ಅನುಭವಕ್ಕೆ ಬರುತ್ತಲಿದೆ.

ಅದೇ ಸಂವತ್ಸರದಲ್ಲಿ ವ್ಯಾಸರಾಯರು ಒಟ್ಟು ೭೩೨ ಹನುಮಂತನ ವಿಗ್ರಹಗಳನ್ನು ಪ್ರತಿಷ್ಠಿಸಿದರೆಂದು ಗೊತ್ತಾಗುತ್ತದೆ. ಇಷ್ಟು ದೇವಾಲಯಗಳಲ್ಲಿ ಅರ್ಧದಷ್ಟು ಕರ್ಣಾಟಕದಲ್ಲೇ ಇರುತ್ತವೆ. ವಿದ್ಯಾರತ್ನಾಕರರು :—

ಮೂರ್ತೀಸ್ಸಪ್ತ ಶತಂ ಪ್ಲವಂಗನುಪತೇರ್ದ್ವಾತ್ರಿಂಶದಪ್ಯಂಜಸಾ ।
ಸೂನೋರ್ನಿರ್ಮಮ ಈಶತೋಷಣಕೃತೇ ರೌದ್ರ್ಯಾಖ್ಯವರ್ಷೇಽರಕೆ ॥
ಶಾಲೀವಾಹನಸಾಹ್ನಿ ಯುಗ್ಮಯುಗಳಂ ಚತ್ವಾರಿ ಚೈಕಂ ಲಿಖನ್ ।
ಯಾಂ ಸಂಖ್ಯಾಂ ಮನಸಾದಧಾತಿ ತದಿಯಂ ಸಂಖ್ಯಾಯುತಾಃ ಪೂರ್ತಯಃ ॥

ಮೇಲ್ಕಂಡ ಶ್ಲೋಕದಲ್ಲಿ ಶಾಲೀವಾಹನ ಶಕ ೧೪೪೨ನೇ ರೌದ್ರಿ ಸಂವತ್ಸರದಲ್ಲಿ ಎಂದರೆ ಕ್ರಿ.ಶ. ೧೫೨೦ರಲ್ಲಿ ೭೩೨ ಪ್ರಾಣದೇವರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರೆಂದು ಹೇಳಿರುತ್ತಾರೆ.

ವ್ಯಾಸರಾಯರ ಪ್ರಖ್ಯಾತಿಯು ಬಿಜಾಪುರದ ಆದಿಲ್‌ಷಹನ ಬಳಿಯಲ್ಲಿ ರಾಯಭಾರಿಗಳಿಂದ ವಿಶೇಷ ಪ್ರಶಂಸೆಗೆ ಬಂದಿತು. ಆದಿಲ್‌ಷಹನು ವಿಜಯನಗರದ ರಾಯರಿಗೆ ಪ್ರತಿಮರ್ಯಾದೆಗಳನ್ನು ಕಳುಹಿಸುವಾಗ, ವ್ಯಾಸರಾಯರಿಗೆ ಪ್ರತ್ಯೇಕವಾಗಿ ಒಂಟೆಯ ಮೇಲೆ ಬಿರುದಾವಳಿಗಳನ್ನೂ, ಹಸುರು ಛತ್ರಿಯನ್ನೂ, ಒಂಟೆಯಮೇಲೆ ಹಸುರು ನಿಶಾನಿಯನ್ನೂ ಹಿಡಿಸಿಕೊಂಡು ಸಂಚಾರ ಮಾಡಬೇಕೆಂಬ ಮರ್ಯಾದೆಯನ್ನೂ ಮಾದನಾ ಪೂರ್ವಕವಾಗಿ ಸಮರ್ಪಿಸಿದನು. (ಕೃಷ್ಣದೇವರಾಯನ ಕಾಲದಲ್ಲಿ ಬಾಬರ್ ಚಕ್ರವರ್ತಿಯಿಂದಲೂ ವ್ಯಾಸರಾಯರಿಗೆ ಇದೇ ವಿಧವಾದ ಮರ್ಯಾದೆಗಳು ದೊರೆತವು.) ಪೋರ್ಚುಗೀಸ್ ರಾಯಭಾರಿಗಳು ವ್ಯಾಸರಾಯರ ದರ್ಬಾರಿಗೆ ಬಂದು ಕಾಣಿಕೆಗಳನ್ನೊಪ್ಪಿಸಿದರು.

ತಮ್ಮರಾಯನು ರಾಜ್ಯಾನುಭವಮಾಡಿಕೊಂಡು, ವಯಸ್ಸಾದಮೇಲೆ ಅವನಿಗೂ ನರಸನಾಯಕನಿಗೂ ಎಲ್ಲ ಕಾರ್ಯಗಳಲ್ಲೂ ಏಕವಾಕ್ಯತೆಯಿರುವಂತೆ ವ್ಯಾಸರಾಯರು ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು.

ಹೀಗೆ ಲೌಕಿಕ ವ್ಯವಹಾರದಲ್ಲೂ ವ್ಯಾಸರಾಯರ ಮುತ್ಸದ್ದಿತನ (States-
manship) ದಿಂದ ಸುಂದರವಾಗಿ ನಡೆಯುತ್ತಿತ್ತು. ಸ್ವಲ್ಪ ದಿವಸವಾಗಿದ್ದರೂ,
ವಿಜಯನಗರ ಸಾಮ್ರಾಜ್ಯದ ಗೌರವ ಉಳಿಯುತ್ತಿರಲಿಲ್ಲ. ಸಿಂಹಾಸನದ ಕಾಲಕ್ಕೆ ವಂಶ
ಪ್ರತಿಷ್ಠೆಯೊಡನೆ, ಸಾಮ್ರಾಜ್ಯ [illegible] ಬೆಳೆಯುತ್ತಿತ್ತು. ಲೌಕಿಕ ವ್ಯವಹಾರದ
ಲ್ಲಾದರೋ ವ್ಯಾಸರಾಯರ ಶೌರ್ಯವನ್ನೂ, ಪಾಂಡಿತ್ಯವನ್ನೂ, ಪ್ರಾಬಲ್ಯವನ್ನೂ,
ಮುಖ್ಯ ಸಿಂಹಾಸನಾಧಿಕಾರವನ್ನು ನೋಡಿ [illegible] ಬೆಂಬಲಿಸಿದ್ದರು. ಅವರು ಹೇಗಾ
ದರೂ ಮಾಡಿ ವ್ಯಾಸರಾಯರನ್ನು [illegible] ಹೊಂಚುಹಾಕುತ್ತಿದ್ದರು.
ಅಜಾತಶತ್ರುಗಳಾದ ವ್ಯಾಸರಾಯರಲ್ಲಿ ಮಾತ್ರ ಯಾವ ದೋಷವೂ ಸಿಗುತ್ತಿರ
ಲಿಲ್ಲ. ರಾಜ್ಯಾಧಿಪತ್ಯ [illegible] ಅವರು ಗರ್ವಿತರಾಗಲಿಲ್ಲ. ಹಿಂದಿನ
ದುರಾಶೆಯಂತೂ ಅವರಿಗಿರಲಿಲ್ಲ. ವಿಜಯನಗರದ ವಿದ್ಯಾಪೀಠಾಧಿಪತಿಗಳಾಗಿದ್ದರೂ
ಎಲ್ಲ ಮತಸ್ಥರನ್ನೂ ಸಮಾನವಾಗಿ ನೋಡಿ, ಅವರ ಯೋಗ್ಯತೆಗನುಸಾರವಾಗಿ ಮರ್ಯಾದೆ
ಮಾಡುತ್ತಿದ್ದರು. ವಿಷ್ಣು ದೇವಾಲಯಗಳಲ್ಲಿ ನಡೆಸಿದಂತೆ, ಶಿವ ದೇವಾಲಯಗಳಲ್ಲೂ
ಪೂಜಾದಿಗಳನ್ನು ನಡೆಸುತ್ತಿದ್ದರು. ತಮ್ಮ ಬಾಳಿಗೆ ಒಂದು ಮಂಟಪ ಸಾಕೆಂದು ಚಕ್ರ
ತೀರ್ಥದ ಬಳಿಯಲ್ಲಿ ವಾಸಮಾಡುತ್ತಿದ್ದರು. [illegible] ಬಂದರೆ 'ನಮ್ಮ ಮತಪ್ರಕ್ರಿಯೆ
ಯಿದು, ನಮ್ಮ ನಂಬಿಕೆಯಿದು, ಶಾಸ್ತ್ರಪ್ರಮಾಣಗಳಿಂದಲೇ ನಮ್ಮ ಮತವನ್ನು ಸಮರ್ಥನ
ಮಾಡುವೆವು. ಯಾರು ಬೇಕಾದರೂ ವಾದಮಾಡಬಹುದು' ಎಂದು ಹೇಳುತ್ತಿದ್ದರು.
ಪಾಂಡಿತ್ಯದಲ್ಲಿ ಅವರಿಗೆ ಪ್ರತಿಭಟಿಸುವ ಶಕ್ತಿ ಯಾರಿಗೂ ಇರಲಿಲ್ಲ. ಅವರನ್ನು ಅಂತ
ರಂಗದಲ್ಲೇ ದ್ವೇಷಮಾಡುವುದನ್ನು ಮಾತ್ರ ಬಿಡಲಿಲ್ಲ. ದುರ್ಜನರ ಸ್ವಭಾವಕ್ಕೆ ಮಾಡುವು
ದೇನು ?

ಆ ಕಾಲದ ರಾಜರಿಗೆ ಯುದ್ಧಮಾಡಿ ಗೆಲಿಯುವುದು ಹೇಗೆ ಬಿರುದಾಗಿತ್ತೋ—
ಅನೇಕ ಬ್ರಾಹ್ಮಣ ಪಂಡಿತರಿಗೆ ವಾದವನ್ನು ಕೆಣಕಿ ವಾಕ್ಯಾರ್ಥಮಾಡಿ ಗೆಲಿಯುವುದೂ
ಹಾಗೇ ಬಿರುದಾಗಿತ್ತು. ಪ್ರಶಸ್ತಿಪತ್ರಗಳು, ಬಿರುದಾವಳಿಗಳು, ಮೇನೆ ಪಲ್ಲಕ್ಕಿಗಳು,
ಪುಸ್ತಕಗಳನ್ನು ಹೊರುವ ಶಿಷ್ಯರುಗಳು, ಇವೆಲ್ಲದರಿಂದ ಸಹಿತರಾಗಿ ಊರೂರು ತಿರು
ಗುವ ಪಂಡಿತರನೇಕರಿದ್ದರು. ತಾವು ಕಲಿತ ವಿದ್ಯೆಯನ್ನು ತಮ್ಮ ಆತ್ಮೋದ್ಧಾರಕ್ಕೆ ವಿನಿ
ಯೋಗಿಸುವುದಾಗಲಿ, ಪಾಮರರಿಗೆ ಜ್ಞಾನೋಪದೇಶ ಮಾಡುವುದಾಗಲೀ ಆ ಪಂಡಿತರ
ಲ್ಲಿರುತ್ತಿರಲಿಲ್ಲ. [illegible] ಇಂಥಾ ದುಷ್ಟ ಪಂಡಿತರೊಡನೆ ವಾದ
ಮಾಡುವುದರಲ್ಲಿ [illegible]. ರಾಜಧಾನಿಗಳಿಗೆ ಪಂಡಿತ ಮಂಡಲಿ
ಬಂದರೆ [illegible]. ರಾಜರು ಬಂದ ವಾದಿಗಳೊಡನೆ
ವಾದಮಾಡಿ [illegible] ಸಾಕವಿದ್ದರೆ ಅವರ ಸಂಸ್ಥಾ
ನಕ್ಕೆ ಗೌರವ ಬರುತ್ತಿತ್ತು. [illegible] ಪ್ರಖ್ಯಾತ
ವಿದ್ಯಾಕೇಂದ್ರವಾಗಿದ್ದುದರಿಂದ [illegible] ವಿದ್ಯಾನಗರವೆಂದು
ವಿಜಯನಗರ ರಾಜಧಾನಿಗೆ ಹೆಸರಿತ್ತು. ವ್ಯಾಸರಾಯರು ಹಿಂದೆಯೇ ಒಂದು ಸಲ
ಧರ್ಮಪೀಠದ ಪ್ರತಿಷ್ಠೆಗಾಗಿ [illegible], ಹೇಗಾದರೂ ಮಾಡಿ

ಅವರನ್ನು ಮತ್ತೊಮ್ಮೆ ವಿಚಾರಿಸಿಕೊಳ್ಳಬೇಕೆಂದು ದಕ್ಷಿಣೋತ್ತರ ದೇಶಗಳಿಂದೆಲ್ಲಾ ಪ್ರಬಲ ಪಂಡಿತರು ವಿದ್ಯಾನಗರಿಗೆ ಬಂದಿಳಿದರು. ತಮ್ಮ ಪ್ರಶಸ್ತಿ ಪತ್ರಗಳನ್ನೂ, ತಮ್ಮ ಪ್ರತಿಜ್ಞೆಯನ್ನೂ ಬಿರುದಾವಳಿಗಳ ಸಹಿತ, ನಗರದ ಮಹಾದ್ವಾರಗಳಿಗೆ ಕಟ್ಟಿಸಿದರು. ವ್ಯಾಸರಾಯರನ್ನು ಸಂಧಿಸುವುದಕ್ಕೆ ಬಸವಭಟ್ಟನೆಂಬ ಕಳಿಂಗದೇಶೀಯ ಪಂಡಿತನನ್ನು ಮುಂದುಮಾಡಿದರು. ರಾಜರನ್ನೂ ಮಂತ್ರಿಗಳನ್ನೂ ತಮ್ಮ ಆಡಂಬರ ಸಹಿತವಾಗಿ ಭೇಟಿಮಾಡಿ, ರಾಜಸಭೆಯಲ್ಲಿ ಬಂದು ಕುಳಿತರು.

ಆಡಂಬರೇಣ ಮಹತಾಭುವಿ ದೃಶ್ಯಮಾನಾಃ ।
ಸರ್ವೇಪಿತೇ ಯುಗಪದೇವ ಧರಾಧಿಪಸ್ಯ ॥
ಆಮರ್ದಿತಾಂ ಸಚಿವ ಪೌರ ಪುರೋಹಿತಾದ್ಯೈಃ ।
ರಾಸ್ಥಾನ ಭೂಮಿ ಮಧಿರುಹ್ಯತತೋ ನಿಷೇದುಃ ॥
ವೈದೇಶಿಕಾನಾಂ ಸುಧಿಯಾಂ ಕ್ಷಿತೀಂದ್ರಃ ।
ತಾದೃಗ್ವಿಧಾಮಾರಭಟೀಂ ಸಮೀಕ್ಷ್ಯ ॥
ತಂ ವ್ಯಾಸಯೋಗೀಶಿತುರಾನುಭಾವಂ ।
ಜಾನನ್ನಪಿತ್ರಸ್ತ ಇವಾವತಸ್ಥೆ ॥

ಬಂದವರ ಆಡಂಬರ ನೋಡಿ, ವ್ಯಾಸರಾಯರ ಮಹಿಮೆಯನ್ನು ತಿಳಿದವನಾಗಿದ್ದರೂ ಮಹಾರಾಜನು ಭಯಗ್ರಸ್ತನಾದನು. ವ್ಯಾಸರಾಯರು ಸ್ವಲ್ಪವಾದರೂ ಭಯಪಡದೆ ಪ್ರೌಢತನದಿಂದ ಬಂದ ಆ ಪಂಡಿತರು ಕಟ್ಟಿಸಿದ್ದ ಬಿರುದಾವಳಿಗಳನ್ನೆಲ್ಲಾ ಕಿತ್ತುಹಾಕುವಂತೆ ಆಜ್ಞೆಮಾಡಿದರು. ರಾಜ ಪ್ರಧಾನರೆಲ್ಲರಿಂದ ಸಹಿತರಾಗಿ ಸಭಾಪ್ರವೇಶ ಮಾಡಿದರು. ಮಹಾರಾಜನು ಮುಂದೆ ಬಂದು ಸ್ವಾಮಿಗಳನ್ನು ಉಚಿತವಾದ ಆಸನದಲ್ಲಿ ಕೂಡಿಸಿದನು.

ಸ್ವಾಮಿಗಳು ಉನ್ನತಾಸನದಲ್ಲಿ ಕುಳಿತದ್ದನ್ನೂ, ರಾಜನು ಅವರನ್ನು ಕರೆತಂದು ಕೂಡಿಸಿದ್ದನ್ನೂ ವಾದಿಗಳು ಸಹಿಸದೆ ಆಕ್ಷೇಪಿಸಿದರು. ಸಂಸ್ಥಾನಕ್ಕೂ ಸ್ವಾಮಿಗಳಿಗೂ ಅಪಮಾನಕರವಾಗಿ ಬರೆದುಕಟ್ಟಿದ್ದ ಪ್ರತಿಜ್ಞಾ ಪತ್ರಿಕೆಗಳನ್ನು ಖಂಡಿಸಿ ತೆಗೆದುಹಾಕಿಸಿದ್ದು ಅಯುಕ್ತವೆಂದು, ಇಮ್ಮಡಿಯಾದ ರೋಷಾವೇಶದಿಂದ ಜ್ವಲಿಸುವಂತೆ ಉದ್ಗಾರಗಳನ್ನು ತೆಗೆದರು. ಬಸವಭಟ್ಟನು, ವ್ಯಾಸತ್ರಯಗಳನ್ನು ಖಂಡಿಸುತ್ತಲೇ ವಾಚಾರಂಭಣ ಮಾಡಿದನು. ಪರಸ್ಪರ ವಾಕ್ಯಾರ್ಥವು ಒಂದಲ್ಲ, ಎರಡಲ್ಲ, ಮೂವತ್ತು ದಿನಗಳ ಕಾಲ ನಡೆಯಿತು. ಕೋಟಿ ಪ್ರತಿಕೋಟಿಗಳ ಸುರಿಮಳೆಯಾಯಿತು. ಅವರವರ ಅನುವಾದಗಳನ್ನು ಶೀಘ್ರ ಲೇಖಕರು ಆಗಾಗಲೇ ಬರೆದು ರಾಜಮುದ್ರೆಯೊತ್ತಿ ಭಂಡಾರದಲ್ಲಿಡಿಸಿದರು. ಲೋಕವ್ಯವಹಾರ, ಶ್ರುತಿಪ್ರಮಾಣ, ಸ್ಮೃತಿಪ್ರಮಾಣಗಳ ಆಧಾರಗಳು. ಕೇವಲ ಯುಕ್ತಿವಾದ, ಈ ಯಾವುದಕ್ಕೂ ಸಮಂಜಸವಾಗದ ವಾದಿಗಳ ವಾದವನ್ನು ಸ್ವಾಮಿಗಳು ಖಂಡಿಸಿ ಜಯಶೀಲರಾದರು. ಬಾಯ್ದೊಣಗಿ, ನ್ಯೂನಿಸಿ, ವಿಸ್ಮಿತರಾಗಿ, ಲಜ್ಜಿತರಾಗಿ, ವಾದಿಗಳು ತಮ್ಮ ಅಜ್ಞಾನವನ್ನು ತಾವೇ ನಿಂದಿಸಿಕೊಂಡು, ನಿಸ್ತೇಜರಾದರು. ಬಸವಭಟ್ಟನು ಪರಾ

ಜಿತನಾದನೆಂದು ಸ್ವಾಮಿಗಳು ಅವನನ್ನು ಅವಮಾನಿಸಲಿಲ್ಲ. ಅವಮಾನಕರಗಳಾದ ಮಾತುಗಳನ್ನು ಬರೆದು ರಾಜದ್ವಾರದಲ್ಲಿ ಕಟ್ಟಿಸಿದ್ದನೆಂದು ಅವನಲ್ಲಿ ದ್ವೇಷವನೆಣಿಸಲಿಲ್ಲ. ಒಂದು ತಿಂಗಳಷ್ಟು ಕಾಲ ತಮ್ಮೊಡನೆ ವಾದನಡೆಸಿದ ಭಟ್ಟನ ಪಾಂಡಿತ್ಯವನ್ನು ರಾಜಸಭೆಯಲ್ಲಿ ಪ್ರಶಂಸೆ ಮಾಡಿದರು. ದೂರ ದೇಶಗಳಿಂದ ಇಷ್ಟು ಜನ ಮಹಾಪಂಡಿತರು ರಾಜಸಭೆಗೆ ಬಂದು ಒಂದು ತಿಂಗಳಷ್ಟು ದೀರ್ಘಕಾಲ ಜಿಜ್ಞಾಸೆ ಮಾಡಿದುದರಿಂದ ತತ್ತ್ವ ನಿರ್ಣಯವಾಯಿತೆಂದು ಅರುಹಿದರು. ದುರ್ಬಲಪಕ್ಷವನ್ನು ಅವಲಂಬಿಸಿದುದರಿಂದ ಪಂಡಿತರಿಗೆ ಜಯ ಸಿಗಲಿಲ್ಲವೆಂದೂ-ವಾದಿಗಳ ಪಾಂಡಿತ್ಯಕ್ಕೇನೂ ಕೊರತೆಯಿಲ್ಲವೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬಂದ ಪಂಡಿತೋತ್ತಮರಿಗೆಲ್ಲ ವಿಶೇಷ ಸನ್ಮಾನಮಾಡಿದರು. ವ್ಯಾಸಭಗವಾನನು ಸಭೆಗೆ ಬಂದ ಒಬ್ಬೊಬ್ಬ ವಿದ್ವನ್ಮಣಿಯನ್ನೂ ಧನಾಧಿನಾಥನನ್ನಾಗಿ ಮಾಡಲು, ಸರ್ವಜ್ಞನಾದ ಭವಾನೀಪತಿಯು ತನ್ನ ಸಖನಾದ ಕುಬೇರನ್ಯಾರೆಂಬುದನ್ನೇ ತಿಳಿಯದೆಹೋದನೆಂಬ ಸ್ವಾರಸ್ಯವಾದ ಮಾತನ್ನು ಕವಿ ಸೋಮನಾಥನು ಕೆಳಕಂಡ ಶ್ಲೋಕದಿಂದ ವರ್ಣಿಸಿರುವನು.

> ತಸ್ಮಿನ್ವ್ಯತಾವಿತರಣೇನ ಧನಾಧಿನಾಥಾಂ
> ಸ್ತನ್ವತ್ಯಧಿಕ್ಷಿತಿತಲಂ ಸಕಲಾನ್ ಬುಧೇಂದ್ರಾನ್॥
> ಸರ್ವಜ್ಞತಾಮಪಿವಹನ್ನಿವ ದೇವದೇವಃ
> ಕೋಽಪಾಕಭೇತಿ ಕುಲಶೈಲ ಸುತಾಸಹಾಯಃ॥

ಬಸವಭಟ್ಟನೇ ಮೊದಲಾದ ಎಲ್ಲ ಪಂಡಿತರೂ ಗುರುಸ್ವಾಮಿಯರಾದ ವ್ಯಾಸಯತೀಶ್ವರರಿಂದ ತಮಗಾದ ಸನ್ಮಾನಕ್ಕೆ ಸಂತುಷ್ಟರಾಗಿ ಸ್ವಸ್ಥಾನಾಭಿಮುಖರಾದರು. ಭಟ್ಟನು ತನ್ನ ಜೀವಿತ ಸರ್ವಸ್ವವೆಂದು ಬಹುಕಾಲದಿಂದ ಪೂಜಿಸುತ್ತಿದ್ದ ಸ್ಫಟಿಕಲಿಂಗವನ್ನು ವ್ಯಾಸರಾಯರಿಗೆ ಕಾಣಿಕೆಯೊಪ್ಪಿಸಿ-ನಮಸ್ಕಾರಮಾಡಿದನು. ಆ ಲಿಂಗವು ಈಗಲೂ ವ್ಯಾಸರಾಯರ ಮಠದಲ್ಲಿದೆ. ಶಿವರಾತ್ರಿಯ ದಿವಸ ಆ ಲಿಂಗಕ್ಕೆ ಸ್ವಾಮಿಗಳು ವಿಶೇಷ ಪೂಜಾದಿಗಳನ್ನು ನಡೆಸುತ್ತಾರೆ.

ವ್ಯಾಸರಾಯರು ಅಂದಿನ ದಿಗ್ವಿಜಯವನ್ನು ತಮ್ಮಲ್ಲಿ ತಾವೇ ಧ್ಯಾನಿಸಿ ಆನಂದಬಾಷ್ಪಗಳಿಂದ ಪುಳಕಿತರಾದರು. ಶ್ರೀಹರಿಗುರುಗಳು ತಮ್ಮಲ್ಲಿ ನಿಂತು, ವಿದ್ಯಾಪೀಠದ ಗೌರವವನ್ನು ಕಾಪಾಡಿದರೆಂದು ಸಂತಸಗೊಂಡು ತಲೆದೂಗಿದರು. ದಿಗ್ವಿಜಯದ ಸಕಲ ಯಶಸ್ಸನ್ನೂ ಶ್ರೀಕೃಷ್ಣಾರ್ಪಣವೆಂದು ಸಮರ್ಪಿಸಿದರು.

ಸ್ವಾಮಿಗಳವರ ವಿಜಯದಿಂದ ಪರಮಸಂತುಷ್ಟನಾದ ಮಹಾರಾಜನು, ಸ್ವಾಮಿಗಳನ್ನು ರತ್ನಖಚಿತವಾದ ಪಲ್ಲಕ್ಕಿಯಲ್ಲಿ ಕೂಡಿಸಿ, ನಗರವೀಧಿಗಳಲ್ಲಿ ವಿಜಯೋತ್ಸವ ನಡೆಸಿದನು. ಸಕಲ ವಿದ್ವಜ್ಜನರೂ ಉತ್ಸವದಲ್ಲಿ ಭಾಗಿಗಳಾದರು. ರಾಜಗೃಹದಿಂದ ಶ್ರೀಮಠವನ್ನು ಸೇರುವವರೆಗೆ, ಪೌರಜನರು, ಹೆಜ್ಜೆಹೆಜ್ಜೆಗೆ ಶ್ರೀಗಳವರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಇಂತು ಮಹಾವೈಭವದಿಂದ ವ್ಯಾಸರಾಯರು ಮಠಪ್ರವೇಶ ಮಾಡಿದರು. ಅಂದಿನ ಪೂಜೆ ಭಜನೆಗಳು ಅವರ್ಣನೀಯವಾಗಿದ್ದುವು. "ಬಂದ ಕೀರುತಿಯೆಲ್ಲ

ಶ್ರೀಕೃಷ್ಣ ನಿನ್ನದಯ್ಯ । ಮಂದಮಾನವಗಿದು ಅಳವಡುವದೇನಯ್ಯ । ನಂದ ತೀರ್ಥರಮತ ಪೊಂದಿದ್ದ ಕಾರಣ । ನಂದವಾಯಿತುಮನಕೆ ಸಂದೇಹವಡಗಿತು । ಇಂದುಧರಾದಿದೇವ ವಂದಿತ ಶ್ರೀಕೃಷ್ಣ ॥ ಎಂಬುದಾಗಿ ಹಾಡಿದರು.

ವ್ಯಾಸರಾಯರು 'ಕೃಷ್ಣ' ಮುದ್ರಿಕೆಯಿಂದ ದೇವರನಾಮುಗಳನ್ನು ಮಾಡುತ್ತಿದ್ದರು. ಒಂದು ರಾತ್ರಿ ಸ್ವಪ್ನದಲ್ಲಿ–'ನೀನಂತು ಸನ್ಯಾಸಿ, ನಿನಗೆ ಹೆಂಡಿರಿಲ್ಲ–ನನಗಿಲ್ಲವೆ ? ಶ್ರೀಕೃಷ್ಣನೆಂದು ಅಂಕಿತಮಾಡು' ಎಂದು ಪರಮಾತ್ಮನು ಹೇಳಿದನಂತೆ ! ಅನಂತರ ಅವರು ಶ್ರೀಕೃಷ್ಣನೆಂದು ಪದಗಳಿಗೆ ಅಂಕಿತಮಾಡುತ್ತ ಬಂದರಂತೆ ! ಲೀಲಾಮಾನುಷ ವಿಗ್ರಹನಾದ ಶ್ರೀಹರಿಯ ಲೀಲೆಯನ್ನು ಭಕ್ತಜನರು ಬಲ್ಲರು ; ಭಕ್ತಿಹೀನರಿಗೆ ಭಗವದನುಭವ ಬರುವುದು ಹೇಗೆ ?

ವ್ಯಾಸರಾಯರ ಮಠದಲ್ಲಿ ಸರ್ವಜ್ಞ ಕರಾರ್ಚಿತ ಪ್ರತಿಮೆಗಳಿದ್ದರೂ ರುಕ್ಮಿಣೀ ಸತ್ಯಭಾಮಾ ಸಮೇತ ಗೋಪಾಲಕೃಷ್ಣನು ಪಟ್ಟದ ದೇವರಾಗಿದ್ದಾನೆ. ಗೋಪಾಲಕೃಷ್ಣ ಮೂರ್ತಿಯು ವ್ಯಾಸರಾಯರಿಗೆ ದೊರೆತ ಚರಿತ್ರೆಯಾದರೂ ಬಲು ಸ್ವಾರಸ್ಯವಾಗಿದೆ :—

ಒಮ್ಮೆ ಬ್ರಹ್ಮಣ್ಯತೀರ್ಥರೂ ಶ್ರೀಪಾದರಾಯರೂ ವ್ಯಾಸರಾಯರನ್ನು ಕರೆದುಕೊಂಡು ಪಂಢರಪುರದ ಯಾತ್ರೆಗೆ ಬಂದರಂತೆ ! ಆ ಕಾಲದಲ್ಲಿ ಸ್ವಪ್ನಸೂಚನೆಯಾಗಲು ಭೀಮರಥೀತೀರದಲ್ಲಿ ಭೂಸ್ಥಾಪಿತವಾಗಿದ್ದ ಸ್ವರ್ಣಪೇಟಿಕೆಯೊಂದನ್ನು ಅಗೆಸಿ ತೆಗೆಸಿದರಂತೆ ! ಪೇಟಿಕೆಯಲ್ಲಿ ಎರಡು ಸಂಪುಟಗಳಿದ್ದವಂತೆ ! ಅವುಗಳಲ್ಲೊಂದರಲ್ಲಿ ದೊರೆತ ಪ್ರತಿಮೆಯನ್ನು **'ರಂಗವಿಠಲ'**ನೆಂದು ಕರೆದು ತಮ್ಮ ಮಠದಲ್ಲಿಟ್ಟುಕೊಂಡರಂತೆ ! ಅದುವರೆಗೆ **ಗೋಪೀನಾಥ** ಮುದ್ರಿಕೆಯಿಂದ ಕನ್ನಡ ದೇವರನಾಮುಗಳನ್ನು ಮಾಡುತ್ತಿದ್ದ ಶ್ರೀಪಾದರಾಯರು–ಮುಂದೆ ರಂಗವಿಠಲ ಮುದ್ರಿಕೆಯಿಂದ ಪದ ರಚನೆಮಾಡಲು ಆರಂಭಿಸಿದರಂತೆ ! ಮುಳುಬಾಗಲಿಗೆ ಬಂದನಂತರ ಒಂದು ದಿನ ಮಠದ ಪೂಜೆಯು ವ್ಯಾಸರಾಯರ ಪಾಲಿಗೆ ಬಂದಿತಂತೆ ! ಶ್ರೀಪಾದರಾಯರು ಮಾಡುತ್ತಿದ್ದ ದೇವತಾರ್ಚನೆಯು ಆ ದಿನ ತಮಗೆ ದೊರೆತ ಕಾರಣ ವ್ಯಾಸರಾಯರು ಬಲು ಹರ್ಷಿತರಾದರಂತೆ ! ಶ್ರೀಪಾದರಾಯರಿಗೆ ಈವರೆಗೆ ತೆರೆಯಲು ಸಾಧ್ಯವಾಗದಿದ್ದ ಆ ಮತ್ತೊಂದು ಸಂಪುಟವನ್ನು ವ್ಯಾಸರಾಯರು ಪ್ರಯತ್ನವಿಲ್ಲದೆ ತೆರೆದರಂತೆ ! ಸಂಪುಟದಲ್ಲಿ ರುಕ್ಮಿಣೀ ಸತ್ಯಭಾಮಾ ಸಮೇತ ಶ್ರೀ ಗೋಪಾಲಕೃಷ್ಣ ಮೂರ್ತಿಯ ಸಂದರ್ಶನವಾಯಿತಂತೆ ! ಭಗವದ್ದರ್ಶನದಿಂದ ಪರವಶರಾದ ವ್ಯಾಸರಾಯರ ಮುಂದೆ ನವನೀತಧರ ಗೋಪಾಲನು ದಿವ್ಯ ನರ್ತನಮಾಡಿದನಂತೆ ! ವ್ಯಾಸರಾಯರೂ ಗಾನಮಾಡುತ್ತ ನರ್ತನ ಮಾಡಿದರಂತೆ ! ರಹಸ್ಯವರಿಯದ ಮಠದ ಸೇವಕರು ಶ್ರೀಪಾದರಾಯರ ಬಳಿಗೆ ಹೋಗಿ—'ಸ್ವಾಮಿ, ವ್ಯಾಸರಾಯರು ಪೂಜೆಮಾಡುವುದನ್ನು ಬಿಟ್ಟು ಹಾಡು ಹೇಳುತ್ತಾ ನರ್ತನಮಾಡುತ್ತಿದ್ದಾರೆ'ಂದು ಹೇಳಿದರಂತೆ ! ಶ್ರೀಪಾದರಾಯರು ಅದೇನೆಂದು ವಿಚಾರಿಸಲು ಪೂಜಾಶಾಲೆಗೆ ಬರಲಾಗಿ ಅವರಿಗೂ ಸ್ವಾಮಿ ಗೋಪಾಲಕೃಷ್ಣನ ದರ್ಶನವಾಯಿತಂತೆ ! ಒಬ್ಬರ ಜೊತೆಗೆ ಮತ್ತೊಬ್ಬರೂ ಕಲೆತು ಭಾವಸಮಾಧಿಯಲ್ಲಿ ಲೀನರಾದರಂತೆ ! ಇಬ್ಬರಿಗೂ ಸಂಧ್ಯಾಕಾಲದವರೆಗೆ ಎಚ್ಚರವಾಗಲಿಲ್ಲವಂತೆ ! ಅನಂತರ ಶ್ರೀಪಾದ

ರಾಯರು, ಗೋಪಾಲಕೃಷ್ಣ ಸಂಪುಟವನ್ನು ವ್ಯಾಸರಾಯರಿಗೇ ಕೊಟ್ಟುಬಿಟ್ಟರಂತೆ! ಆ ಕಾರಣದಿಂದ ಗೋಪಾಲಕೃಷ್ಣನು ವ್ಯಾಸರಾಯಮಠದ ಪಟ್ಟದ ದೇವರಾದನಂತೆ!

ವ್ಯಾಸರಾಯರ ಶಿಷ್ಯರಾದ **ಶ್ರೀಕೃಷ್ಣಚೈತನ್ಯರು** ಕಲ್ಲುಕಂಭ ರಾಲ್ಲುಕಲ್ಲು ಗಳನ್ನು ಸಹ 'ಹರಿಬೋಲೋ' ಎಂದು ಕುಣಿಸಿದಮೇಲೆ ಇನ್ನು ಅವರ ಗುರುಗಳ ಮಹಿಮೆ ಯೆಷ್ಟಿರಬೇಕು? ಭಕ್ತರಿಗೆ ಸಾಧ್ಯವಾಗದ ವಿಷಯಗಳಿಲ್ಲ! ಅವರೊಡನೆ ಭಗವಂತನು ಆಡದ ಆಟಗಳಿಲ್ಲ!

ಶ್ರೀಪಾದರಾಯಮಠದ ರಂಗವಿಠಲನನ್ನೂ ವ್ಯಾಸರಾಯಮಠದ ಗೋಪಾಲ ಕೃಷ್ಣನನ್ನೂ, ಪೂರ್ವದಲ್ಲಿ ಜಾಂಬುವತೀದೇವಿಯು ಪೂಜಿಸುತ್ತಿದ್ದಳೆಂದು ವ್ಯಾಸ ವಿಜಯ ಕಾರರು ಹೇಳುತ್ತಾರೆ. ಜಾಂಬುವತಿಯಿಂದ ಅರ್ಜುನನಿಗೂ, ಅನಂತರ ಅವನ ವಂಶಸ್ಥ ರಿಗೂ ದೊರೆತು ಪಾಂಡವ ವಂಶದ ಕ್ಷೇಮಕಾಂತನಿಂದ ಭೂಸ್ಥಾಪಿತವಾದಂತೆ ಗೊತ್ತಾಗು ತ್ತದೆ. ವಿಸ್ತಾರವಾದ ಕಾಲ ದೇಶಗಳಲ್ಲಿ ಏನೇನು ನಡೆದುವೋ, ಯಾವ ತರದ ಭಾವನೆ ಗಳಿದ್ದುವೋ, ನಮ್ಮ ಕಲ್ಪನೆಗಳು ಹೇಗೆ ಏಕೆ ಬದಲಾದುವೋ, ಇಪ್ಪತ್ತೇ ಶತಮಾನಗಳ ಕ್ರಿಸ್ತಾಬ್ದವನ್ನು ಗಣಿಸುವವರಿಗೆ ತಿಳಿವ ಬಗೆ ಹೇಗೆ?

ವಿಜಯನಗರದ ಉನ್ನತಿಯ ಕಾಲದಲ್ಲಿ ಮಧ್ವಮತಸ್ಥ ಮಠಗಳ ಪ್ರಾಬಲ್ಯವೇ ಹೆಚ್ಚಾಗಿದ್ದಂತೆ ಕಂಡುಬರುತ್ತದೆ! ವಿದ್ಯಾರಣ್ಯರ ಅನಂತರ ಅದ್ವೈತ ಪೀಠಸ್ಥರ ಇತಿಹಾಸ ವೇನೂ ದೊರೆತಂತೆ ಕಾಣುವುದಿಲ್ಲ. ಶಿಷ್ಯಬಾಹುಳ್ಯವಿದ್ದುದರಿಂದ ಪೀಠಸ್ಥರು ತಟಸ್ಥರಾ ಗಿದ್ದರೆ ಇದ್ದಿರಬಹುದು. ಮಧ್ವಮತಸ್ಥರಲ್ಲೂ ಜ್ಯೇಷ್ಠಪೀಠಿಗೆಯ ರಾಜೇಂದ್ರರ ಮೂಲ ಶಾಖೆಯವರಂತೆ, ಕವೀಂದ್ರರ ಶಾಖೆಯವರು ಪ್ರಸಂಗೆಗೆ ಬರಲಿಲ್ಲ. ರಾಜೇಂದ್ರ ಜಯ ಧ್ವಜ ಪುರುಷೋತ್ತಮ ಬ್ರಹ್ಮಣ್ಯತೀರ್ಥರೊಬ್ಬರೂ ದೇಶಪರ್ಯಟನಮಾಡಿ, ಮತ ಪ್ರಚಾರಮಾಡಿದರು. ಜಯಧ್ವಜರು ಬಂಗಾಳದಿಂದ ಕನ್ಯಾಕುಮಾರಿಯ ತನಕ ತಮ್ಮ ಕೀರ್ತಿಧ್ವಜವನ್ನು ಮೆರೆಸಿದರು. ಮಠದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದರು. ವ್ಯಾಸ ರಾಯರು ವಿಜಯನಗರ ಸಾಮ್ರಾಜ್ಯರಕ್ಷಕರಾಗಿ ನಿಂತಮೇಲಂತೂ ವಿದ್ಯಾ ಸಿಂಹಾಸನಾಧಿ ಪತ್ಯವು ಬೇಡಬೇಡವೆಂದರೂ ಮಹಾರಾಜ ಸದೃಶವಾಯಿತು. ಯತಿಗಳ ದರ್ಶನ ಭಾಷಣಗಳಲ್ಲಿ ಸಹ ರಾಜಪದ್ಧತಿಗಳು ರೂಢಿಗೆ ಬಂದುವು. ವ್ಯಾಸರಾಯರ ದಿಗ್ವಿಜಯ ಚರಿತ್ರೆಗಳನ್ನು ಕೇಳಿ, ಉತ್ತರಾದಿಮಠದ ರಘುನಾಥತೀರ್ಥರೆಂಬುವರು ವಿಜಯನಗರಕ್ಕೆ ಬಂದರು. ಆಶ್ರಮ ಜ್ಯೇಷ್ಠರೆಂಬ ಗೌರವದಿಂದ ವ್ಯಾಸರಾಯರು ಅವರನ್ನು ಬಹಳವಾಗಿ ಪುರಸ್ಕರಿಸಿ ಗೌರವಮಾಡಿದರು. ರಘುನಾಥತೀರ್ಥರ ಶಿಷ್ಯರಾದ ರಘುವರ್ಯತೀರ್ಥರು ವಿಜಯನಗರದಲ್ಲೇ ವಾಸವಾಗಿದ್ದು ಕಡೆಗೆ ನವಬೃಂದಾವನದಲ್ಲಿ ಬೃಂದಾವನಸ್ಥರಾದರು. ಒಂದೇ ಮಠದ ಎರಡು ಶಾಖೆಗಳಲ್ಲಿ ದೊಡ್ಡವರಾರು ಚಿಕ್ಕವರಾರು ಎಂಬ ಕಲ್ಪನೆಗಳು ಆ ಯತಿಗಳಿಗಿರಲಿಲ್ಲ. ದೊಡ್ಡವರೆಂದರೆ ಚಿಕ್ಕವರು ಮರ್ಯಾದೆಮಾಡುತ್ತಿದ್ದರು. ವಿವಾದ ಮಾಡಬಹುದಾದ ಕಾಲದಲ್ಲೇ ರಾಜೇಂದ್ರರು ಅದರ ಗೊಡವೆಗೆ ಹೋಗಲಿಲ್ಲ. ಒಂದು ಮನೆ ಎರಡಾಗಿ, ಒಬ್ಬರ ಬದಲಾಗಿ ಇಬ್ಬರು ಧರ್ಮಪ್ರಚಾರ ಮಾಡಿದಂತಾಯಿತು ಎಂದು

ಕೊಂಡರು. ವ್ಯಾಸರಾಯರು ವಿಜಯನಗರದಲ್ಲಿದ್ದ ಕಡೆಕಡೆಯ ಭಾಗದಲ್ಲಿ **ಸುರೇಂದ್ರ**ರೆಂಬ (ಈಗಿನ ರಾಘವೇಂದ್ರಮಠದ ಪೂರ್ವಿಕರು) ಯತಿಗಳು ವ್ಯಾಸರಾಯರ ಸಹಾಯವನ್ನು ಬಯಸಿ ಬಂದರು. ಇವರು ಕವೀಂದ್ರರಾಗುತ್ತಲೇ ಆ ಶಾಖೆಯಲ್ಲಿ ಬಂದ ಆರನೆಯ ಯತಿಗಳು. ಇವರ ಗುರುಗಳು ರಾಮಚಂದ್ರತೀರ್ಥರು; ಇವರು ಬಹು ವಾದಿನಿಗ್ರಹ ಪಂಡಿತರು. ರಾಮಚಂದ್ರತೀರ್ಥರಿಗೆ ದೇಹಾಲಸ್ಯವಾದಾಗ ವಿಬುಧೇಂದ್ರರಿಗೆ ಪಟ್ಟವಾಯಿತು. ಮುಂದೆ ಕೆಲವು ದಿನಗಳಲ್ಲೇ ರಾಮಚಂದ್ರತೀರ್ಥರಿಗೆ ಗುಣವಾಯಿತು. ಗುರು ಶಿಷ್ಯರು ಒಂದೇ ಕಡೆಯಲ್ಲಿದ್ದು ಮಾಡುವುದೇನೆಂದು ರಾಮಚಂದ್ರತೀರ್ಥರು, ವಿಬುಧೇಂದ್ರರನ್ನು ಸಂಚಾರಕ್ಕೆ ಕಳುಹಿಸಿದರು. ರಾಮಚಂದ್ರತೀರ್ಥರಿಗೆ ಮತ್ತೆ ದೇಹಾಲಸ್ಯವಾಗಲು ಸರಿಯಾದ ಪಂಡಿತರು ದೊರೆಯದೆ ವಿಬುಧೇಂದ್ರರೂ ಸಮಯಕ್ಕೆ ಬಾರದಿದ್ದ ಕಾರಣ ಮಠದ ಸೇವೆಯಲ್ಲಿದ್ದ ತೌಲವನೊಬ್ಬನಿಗೆ ಸನ್ಯಾಸಕೊಟ್ಟು ತಾವು ಬೃಂದಾವನಸ್ಥರಾದರು. ವಿಬುಧೇಂದ್ರರು ಯರಗೋಳಕ್ಕೆ ಬರಲು ಹಿಂದೆ ರಾಜೇಂದ್ರರಿಗಾದ ಗತಿಯೇ ಇವರಿಗೂ ಆಯಿತು. ಎರಡನೇ ಸಲ ಪಟ್ಟಕ್ಕೆ ಬಂದ ವಿದ್ಯಾನಿಧಿಗಳು ಹಿರಿಯರಿಗೆ ಮಠವನ್ನೊಪ್ಪಿಸಲಿಲ್ಲ. ವಿಬುಧೇಂದ್ರರಿಗೆ ಜಿತಾಮಿತ್ರರೂ (ಜಿತಾಘೀಮರೂ) ಜಿತಾಮಿತ್ರರಿಗೆ, ರಘುನಂದರೂ ಶಿಷ್ಯರಾಗಿ ಜ್ಯೇಷ್ಠ ಪೀಳಿಗೆಯನ್ನು ಮುಂದುವರಿಸಿದರು. ರಘುನಂದರು ಶಕ್ತರಾಗಿದ್ದುದರಿಂದ ಮೂಲರಾಮದೇವರನ್ನು ಸಂಪಾದಿಸಿದರು. ರಘುನಂದರ ನಂತರವೇ ಸುರೇಂದ್ರರು ಪಟ್ಟಕ್ಕೆ ಬಂದರು. ರಾಜೇಂದ್ರರಂತೆ ಈ ಜ್ಯೇಷ್ಠಪೀಳಿಗೆಯವರೂ ಕನಿಷ್ಠರೊಡನೆ ವಿವಾದಕ್ಕೆ ಹೋಗದೆ, ಸರ್ವಸ್ವವನ್ನೂ ಒಪ್ಪಿಸಿ ಬಂದ ಕಾರಣ, ರಾಮದೇವರನ್ನು ಬಾಳೆ ಎಲೆಯಮೇಲಿಟ್ಟು ಪೂಜಿಸುವಷ್ಟು ದಾರಿದ್ರ್ಯ ದೆಶೆಗೆ ಬಂದಿದ್ದರು. ಮಠದಲ್ಲಿ ನೋಡಿದರೆ ಐಶ್ವರ್ಯವಿಲ್ಲ, ಆದರಿಸಲು ಶಿಷ್ಯರಿಲ್ಲ. ವ್ಯಾಸರಾಯರಂಥ ಏಕಪುರುಷರೇ ಬಂದು ಮಠಕ್ಕೆ ಪ್ರಾಶಸ್ತ್ಯವನ್ನುಂಟುಮಾಡಬೇಕಾಗಿತ್ತು. ವ್ಯಾಸರಾಯರು ಸುರೇಂದ್ರರಿಗಿದ್ದ ಕಷ್ಟಗಳನ್ನೆಲ್ಲಾ ಅರಿತುಕೊಂಡರು. ವ್ಯಾಸರಾಯರಲ್ಲಿ ***ವಿಜಯೀಂದ್ರ**ರೆಂಬ ಪ್ರಬಲ ಪಂಡಿತರು ಶಿಷ್ಯರಾಗಿದ್ದರು. ಅವರನ್ನು ತಮಗೆ ಕೊಟ್ಟರೆ ತಮ್ಮ ಮಠದ ಉದ್ಧಾರವಾದೀತೆಂದು ಸುರೇಂದ್ರರ ಬಯಕೆಯಾಗಿತ್ತು. ವ್ಯಾಸರಾಯರೆದುರಿಗೆ ಕಾರ್ಯಾರ್ಥಿಯಾಗಿ ಬಂದಿರುವೆನೆಂದು ಹೇಳಿದರಲ್ಲದೆ ಇಂಥಾ ಕಾರ್ಯನಿಮಿತ್ತ ಬಂದೆನೆಂಬ ಮಾತನ್ನು ಕಡೆಯತನಕ ತಿಳಿಸಲಿಲ್ಲ. ಒಂದು ದ್ವಾದಶಿಯ ಪ್ರಾತಃಕಾಲ ಪಾರಣೆಗೆ ಯತಿವರ್ಯರಿಬ್ಬರೂ ಕುಳಿತರು. ಆಪೋಶನ ತೆಗೆದುಕೊಳ್ಳಬೇಕು! ಸುರೇಂದ್ರರು ಕೈಯನ್ನು ಹಾಗೇ ನಿಲ್ಲಿಸಿದರು! ವ್ಯಾಸರಾಯರು ಆಪೋಶನ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿದರು. ಸುರೇಂದ್ರರು 'ನಾವು ಕೇಳಿದ್ದನ್ನು ಕೊಟ್ಟರೆ ಆಪೋಶನ ತೆಗೆದುಕೊಳ್ಳುವೆವು. ಇಲ್ಲದಿದ್ದರೆ ಹೀಗೆಯೇ ಪ್ರಯಾಣಮಾಡುವೆವು' ಎಂದರು.

ವ್ಯಾಸರಾಯರು:—ಅಂಥಾದ್ದೇನು ? ತಮಗೇನುಬೇಕು ? ನಮ್ಮ ಮಠದ

---

*ವಿಷ್ಣುತೀರ್ಥರೆಂಬುವುದು ವಿಜಯೀಂದ್ರರ ಮೊದಲ ಹೆಸರು. ಸುರೇಂದ್ರರ ಪೀಠಕ್ಕೆ ಬಂದ ನಂತರ ವಿಜಯೀಂದ್ರರೆಂಬ ಹೆಸರಾಯಿತು.

ಸರ್ವಸ್ವವೂ ತಮ್ಮದೇ! ದ್ವಾದಶೀಪಾರಣೆಗೆ ಕಾಲಾತೀತವಾಗುತ್ತಿದೆ. ಆಪೋಶನ ತೆಗೆದು ಕೊಳ್ಳಬೇಕು.

ಸುರೀಂದ್ರರು:—ನಿಮ್ಮ ಹಣಕಾಸು ನಮಗೆ ಬೇಡ. ಆನೆ ಕುದುರೆಗಳು ಬೇಡ. ಮೇನೆ ಪಲ್ಲಕ್ಕಿಗಳು ಬೇಡ. ನಾವು ಕೇಳುವ ಭಿಕ್ಷವೇ ಬೇರೆ!

ವ್ಯಾಸರಾಯರು:—ಇದೋ! ವಿಜಯೀಂದ್ರರೊಬ್ಬರನ್ನು ಬಿಟ್ಟು, ಸರ್ವಸ್ವವೂ ತಮ್ಮದು–ತಾವು ನಿಶ್ಚಿಂತರಾಗಿ ಆಪೋಶನ ತೆಗೆದುಕೊಂಡು ಭಿಕ್ಷಾಸ್ವೀಕಾರ ಮಾಡಬೇಕು.

ಸುರೀಂದ್ರರು:—ನಾವು ಬಂದದ್ದೇ ವಿಜಯೀಂದ್ರರಿಗಾಗಿ! ತಾವು ದೊಡ್ಡ ಮನಸ್ಸುಮಾಡಿದರೆ ಮಾಡಬಹುದು. ಇಲ್ಲವಾದರೆ ನನಗಪ್ಪಣೆ ಕೊಡಬಹುದು.

ವ್ಯಾಸರಾಯರಿಗೆ ಧರ್ಮಸಂಕಟಕ್ಕಿಟ್ಟಿತು. ವಿಜಯೀಂದ್ರರನ್ನು ತಮ್ಮ ಪೀಠದ ಮೇಲೆ ಕೂಡಿಸಬೇಕೆಂಬ ಉದ್ದೇಶಕ್ಕೆ ಭಂಗಬಂದಂತಾಯಿತು. ವ್ಯಾಸರಾಯರು ವಿಜಯೀಂದ್ರರನ್ನು ಕೊಡುವುದೆಂದರೆ, ವಸಿಷ್ಠರು ಕಾಮಧೇನುವನ್ನು ಕೊಡುವಂತೆ! ನಂದನು ಕೃಷ್ಣನನ್ನು ಕೊಡುವಂತೆ! ಮಾಡುವುದೇನು ನಿರುಪಾಯರಾದರು.

ವ್ಯಾಸರಾಯರು:—ಸುರೀಂದ್ರರೇ! ವಿಶ್ವಾಮಿತ್ರ ಮಹಾಮುನಿಯಂತೆ ಬಂದಿರುವಿರಿ. ಗೋಪಾಲಕೃಷ್ಣನ ಚಿತ್ತಕ್ಕೇ ಹೀಗೆ ಬಂದಿರುವಾಗ ಯತ್ನವಿಲ್ಲ. ಆಗಲಿ! ವಿಜಯೀಂದ್ರರನ್ನು ಕೊಟ್ಟೆವು. ತಾವು ಆಪೋಶನ ತೆಗೆದುಕೊಳ್ಳಬೇಕು. ಸಂತೋಷದಿಂದ ಭಿಕ್ಷಾಸ್ವೀಕಾರಮಾಡಬೇಕು.

ಸುರೀಂದ್ರರು:—ಪರಮಾನಂದ! ಪರಮಾನಂದ! ಇಂದು ವ್ಯಾಸಭಗವಾನರು ಸುರೀಂದ್ರಭಿಕ್ಷುವಿಗೆ ಕೊಟ್ಟ ಭಿಕ್ಷೆಯಿದಲ್ಲ. ಮೂಲರಾಮದೇವರಿಗೆ ಕೊಟ್ಟ ಭಿಕ್ಷೆ!

ವ್ಯಾಸರಾಯರು:—ಹಾಗೇಕೆ? ಗೋಪಾಲಕೃಷ್ಣದೇವರು ಸುರೀಂದ್ರಮುನಿಗಳಿಗೆ ಕೊಟ್ಟ ಭಿಕ್ಷವಿದೆನ್ನಬೇಕು.

ಸುರೀಂದ್ರರ ಸಂತೋಷಕ್ಕೆ ಪಾರವಿಲ್ಲದಂತಾಯಿತು. ಮಾತುಮಾತಿಗೆ ಆನಂದ ಬಾಷ್ಪಗಳನ್ನುದುರಿಸುತ್ತಾ–'ವ್ಯಾಸರಾಯರೆ, ಇಂದು ತಾವು ನಮ್ಮ ಮಠವನ್ನುದ್ಧರಿಸಿದಿರಿ; ಈ ಹೊತ್ತಿಗೆ ನಮ್ಮ ಮೂಲರಾಮನ ವನವಾಸ ಪೂರ್ತಿಯಾಯಿತು. ಇಂದು ತಾವು ಕೊಟ್ಟ ಭಿಕ್ಷೆ ನಮ್ಮ ರಾಮನಿಗೆ ಭಾರದ್ವಾಜಾಶ್ರಮದ ರಾಜೌತಣ, ನಿಮಗೆ ಅನಂತ ಪ್ರಣಾಮಗಳೆಂದರು.

ವಿಜಯೀಂದ್ರರಿಗೆ ವ್ಯಾಸರಾಯರ ಹಿತೋಪದೇಶ

"ಭಗವದನುಗ್ರಹದಿಂದ ನೀವು ಚತುಷ್ಷಷ್ಟಿ ಕಲಾಕೋವಿದರಾದಿರಿ. ನಿಮ್ಮ ನಿಷ್ಠೆ, ನಿಮ್ಮ ಸತತೋದ್ಯೋಗಗಳಿಂದ ನಿಮಗೆ ವಿದ್ಯೆ ಸಾನುಕೂಲವಾಯಿತು. ಭಾರತಭೂಮಿಯಲ್ಲಿ ಈ ಕಾಲದಲ್ಲಿ ಕೋಟಿಗೊಬ್ಬರೂ ಚತುಷ್ಷಷ್ಟಿ ಕಲಾಕೋವಿದರಿಲ್ಲದಂತಾಗಿದೆ. ಒಂದು ಜನ್ಮದಲ್ಲಿ ಒಂದು ವಿದ್ಯೆಯಲ್ಲಿ ಪಾರಂಗತನಾಗುವುದೇ ಮಾನವನಿಗೆ ದುರ್ಲಭವಾಗಿದೆ.

ಇದು ಕಲಿಗಾಲ; ಜನರು ಅಲ್ಪಾಯುಷರು; ಅಲ್ಪಬಲರು; ಅಲ್ಪಬುದ್ಧಿಯವರು; ಅಹಂ ಮಾನಿಗಳು. ಕಿಂಚಿತ್ ವಿದ್ಯಾಪ್ರಾಪ್ತಿಯಾದರೂ ವಿದ್ಯವನ್ನು ದುರ್ವಾದದಲ್ಲಿ ವಿನಿಯೋಗಿಸುವರೇ ಬಹಳ. ಅನಧಿಕಾರಿಗಳಿಗೆ ವಿದ್ಯೆಗಳನ್ನು ಉಪದೇಶಿಸಬಾರದು. ವಾದಿನಿಗ್ರಹದಲ್ಲೂ ಈ ವಿದ್ಯಗಳನ್ನು ಪ್ರಯೋಗಿಸಬಾರದು. ಆಕರ್ಷಣ ಉಚ್ಚಾಟನ ವಿದ್ಯೆಗಳನ್ನು ಅತ್ಯಂತ ಪ್ರಬಲ ಕಾರಣವಿದ್ದ ವಿನಾ ಪ್ರಯೋಗಿಸಿ ತೋರಿಸಬಾರದು. ದಕ್ಷಿಣ ದೇಶದಲ್ಲಿ ತಾಂತ್ರಿಕ ಮತಗಳ ಪ್ರಾಬಲ್ಯ ಬಹಳವಾಗಿದೆ. ಅವರು ಭಾಗವತಧರ್ಮವನ್ನು ಬಲು ದ್ವೇಷಿಸುತ್ತಾರೆ. ನಿಮ್ಮ ಕಾರ್ಯಕ್ಷೇತ್ರವು ಆ ಕಾರಣದಿಂದ ದಕ್ಷಿಣದೇಶವಾಗಿರ ಬೇಕು. ಕುಂಭಕೋಣೆಯಲ್ಲಿ ನೀವು ವಾಸಮಾಡಬೇಕು. ತಾಂತ್ರಿಕರ ಚಾಟುವಿದ್ಯೆ ಗಳಿಂದಲೂ ವಿಷಪ್ರಯೋಗಗಳಿಂದಲೂ ನೀವು ಯಾವಾಗಲೂ ಜಾಗರೂಕರಾಗಿರಬೇಕು. ಕೋಪವನ್ನು ಶಾಂತಿಯಿಂದಲೂ, ದ್ವೇಷವನ್ನು ಪ್ರೀತಿಯಿಂದಲೂ, ಅಜ್ಞಾನವನ್ನು ಜ್ಞಾನ ದಿಂದಲೂ, ಅನೀತಿಯನ್ನು ನೀತಿಯಿಂದಲೂ, ಭೋಗವನ್ನು ತ್ಯಾಗದಿಂದಲೂ ಜಯಿಸು ವುದೇ ನಮ್ಮ ಮತದ ಸಾರಸರ್ವಸ್ವ. ವಿದ್ಯಾಪೀಠದಲ್ಲಿ ಪಟ್ಟಾಭಿಷೇಕವಾಗುವ ಕಾಲಕ್ಕೆ ಮೂಲರಾಮನೇ ನಿಮ್ಮ ಸೇವೆಯನ್ನು ಬಯಸಿ ಬಂದನು. ಸುರೇಂದ್ರರ ಪೀಠವಾದರೂ ವಿದ್ಯಾಪೀಠವೇ! ಆ ಪೀಠದಲ್ಲಿದ್ದು ಸಾಧಿಸಬೇಕಾದ ಕಾರ್ಯವಿಶೇಷಗಳಿರುವ ಕಾರಣ ಗೋಪಾಲಕೃಷ್ಣನು ಸುರೇಂದ್ರರನ್ನಿಲ್ಲಿಗೆ ಕರೆತಂದನು. **ನಾವಾದರೂ ಒಮ್ಮೆ ನಿಮ್ಮ ಪೀಠದಲ್ಲಿ ಬಂದೇವು!"** ಎಂಬುದಾಗಿ ವ್ಯಾಸರಾಯರು ವಿಜಯೀಂದ್ರರಿಗೆ ಹಿತೋಪ ದೇಶ ಮಾಡಿದರು.

ವಿಜಯೀಂದ್ರರು ವ್ಯಾಸರಾಯರನ್ನು ಅಗಲಬೇಕಾಯಿತಲ್ಲಾ ಎಂದು ಕಂಬನಿಗರೆ ಯುತ್ತಾ, ತಲೆತಗ್ಗಿಸಿ ನಿಂತವರು, ಮಾತುಮಾತಿಗೆ ಮಹದಾಜ್ಞಾ, ಮಹದಾಜ್ಞಾ ಎಂದು ಮಾತ್ರ ನುಡಿಯುತ್ತಾ–ಉಭಯ ಗುರುಗಳಿಗೂ ಪ್ರಣಾಮಮಾಡಿದರು. ಸುರೇಂದ್ರರು ವಿಜಯೀಂದ್ರರನ್ನು ಕರೆದುಕೊಂಡು ಸುಮುಹೂರ್ತದಲ್ಲಿ ಪ್ರಯಾಣಮಾಡಿದರು.

ಇದರಿಂದ ನೋಡಬೇಕು ವ್ಯಾಸರಾಯರ ಔದಾರ್ಯವನ್ನು! ತಮ್ಮ ಪೀಠದಲ್ಲಿ ತಮ್ಮನಂತರ ತಮಗೆ ಸಮಾನರನ್ನು ಕೂಡಿಸಬೇಕೆಂದು ವಿಜಯೀಂದ್ರರನ್ನು ವಿದ್ಯಾವಂತ ರನ್ನಾಗಿ ಮಾಡಿಟ್ಟುಕೊಂಡಿದ್ದಾಗ, ತಮ್ಮ ಸರ್ವಸ್ವವೂ ವಿಜಯೀಂದ್ರರೆಂದು ಭಾವಿಸಿದ್ದಾಗ ಸುರೇಂದ್ರರು ಬಂದು ಅವರನ್ನೇ ಯಾಚನೆ ಮಾಡಿದರೆ ಅವರ ಮನಸ್ಸನ್ನು ನೋಯಿಸ ಬಾರದೆಂದು ಕೊಟ್ಟುಕಳುಹಿಸಿದರು. ಉತ್ತರಾದಿ ಮಠದವರು ಆರಾಧನೆಗಳ ಕಾಲದಲ್ಲಿ ತಮ್ಮ ಮಠೀಯರಲ್ಲದವರಿಗೆ ಅಲಂಕಾರ ಮೊದಲಾದ ಬಹುಮಾನ ಮಾಡಕೂಡದೆಂದು ನಿಬಂಧನೆ ಮಾಡಿಕೊಂಡರೂ, ವ್ಯಾಸರಾಯರು ಮಠ ವ್ಯತ್ಯಾಸಗಳನ್ನು ತೋರಿಸದೆ ತಮ್ಮ ಮಠದ ಶಿಷ್ಯರಿಗೂ ಹಾಗೆಯೇ ಮರ್ಯಾದೆಮಾಡುವ ಪದ್ಧತಿಯನ್ನು ಆಚರಣೆಗೆ ತಂದರು. ವ್ಯಾಸರಾಯರನ್ನೂ ಅವರ ಮತವನ್ನೂ ವಾಚಾಮಗೋಚರ ನಿಂದಿಸಿದ ಪಂಡಿತರನ್ನು ಸಹ ವಾದದಲ್ಲಿ ಒಡಂಬಡಿಸುವುದಿಷ್ಟೋ ಅಷ್ಟುಮಾತ್ರ ಕೆಲಸಮಾಡಿ, ಯಾವ ರೀತಿಯಲ್ಲೂ ಅವರನ್ನು ಅವಮಾನಿಸದೆ ಸನ್ಮಾನಮಾಡುತ್ತಲೇ ಬಂದರು. ಇಂತಹ ಮಹೋನ್ನತ ಗುಣ

ಗಳು ವ್ಯಾಸರಾಯರನ್ನು ಬಿಟ್ಟರೆ ಸಾಮ್ರಾಜ್ಯ ನಿರ್ವಹಣಕಾರ್ಯವು ಅವರಿಂದ ಆಗುತ್ತಿರಲಿಲ್ಲ.

ಹೀಗಿರಲು ಸಾಳುವವಂಶದ ತಮ್ಮರಾಯರಿಬ್ಬರ ಕಾಲದಲ್ಲೂ ರಾಜ್ಯಾನುಭವಿಯಾಗಿದ್ದು, ಸಾಮರ್ಥ್ಯದಿಂದ ಆಡಳಿತ ನಡೆಸಿದ ನರಸನಾಯಕನು ದಿವಂಗತನಾದನು. ಈ ಮಧ್ಯಕಾಲದಲ್ಲೇ ತಮ್ಮರಾಯನೂ ಸಂತತಿಯಿಲ್ಲದೆ ಮೃತನಾದಂತೆ ಕಾಣುತ್ತದೆ. ಅನಂತರ ಪಟ್ಟಕ್ಕೆ ಬಂದವನು ವೀರನರಸಿಂಹಭೂಪತಿಯು; ನರಸನಾಯಕನ ಮಗನು. ಇವನಾದರೂ ಬಹುಕಾಲ ಜೀವಿಸಲಿಲ್ಲ. ೧೫೦೯ರ ಹೊತ್ತಿಗೆ ಕೃಷ್ಣದೇವರಾಯನು ಸಿಂಹಾಸನಾರೋಹಣ ಮಾಡಿದನು. ಈ ಕಾಲಗಳಲ್ಲೆಲ್ಲಾ ವ್ಯಾಸರಾಯರು ರಾಜಕಾರ್ಯದ ಕಡೆಗೆ ಹೆಚ್ಚು ಗಮನಕೊಡಬೇಕಾಯಿತು.

ಕೃಷ್ಣದೇವರಾಯನ ಕಾಲವೆಂದರೆ ವಿಜಯನಗರದ ಮಹೋನ್ನತಿಯ ಕಾಲ; ಕರ್ಣಾಟಕಾಂಧ್ರ ಸಾಹಿತ್ಯಗಳ ಅಭ್ಯುದಯಕಾಲ; ಚಿತ್ರಕಲೆಗಳ ವಿಚಿತ್ರ ಸ್ಫೂರ್ತಿಯ ಕಾಲ; ದಕ್ಷಿಣಭಾರತದ ದಿವ್ಯಕ್ಷೇತ್ರಗಳಿಗೆ ದಿವ್ಯಾಭರಣಗಳು ದೊರೆತ ಕಾಲ; ದ್ವೀಪಾಂತರವಾಸಿಗಳಿಗೆ ಕರ್ಣಾಟಕದ ಕೀರ್ತಿಶ್ರವಣವಾದ ಕಾಲ; ಕಾವೇರಿಯಿಂದ ನರ್ಮದೆಯ ವರೆಗೆ ಕರ್ಣಾಟಕದ ಹಿರಿಮೆ ಸ್ಥಾಪಿತವಾದ ಕಾಲ; ರೋಗರುಜಿನಗಳಿಲ್ಲದೆ, ಕ್ಷಾಮಡಾಮರಗಳಿಲ್ಲದೆ, ದೇಶದಲ್ಲಿ ಶಾಂತಿ ಸೌಭಾಗ್ಯಗಳು ನೆಲೆಸಿದ್ದ ಕಾಲ; ನಿಖಿಲ ಮಂಡಲೇಶ್ವರರೂ ವ್ಯಾಸರಾಯರಿಗೆ ರತ್ನಾಭಿಷೇಕ ಮಾಡಿದ ಕಾಲ; ಆಸೇತು ಹಿಮಾಚಲವಾಗಿ ಭಾಗವತ ಧರ್ಮವು ತಾಂಡವವಾಡಿದ ಕಾಲ; ಸುಕಾಲ.

೮

ವ್ಯಾಸರಾಯರು ಪ್ರಾತಃಸ್ನಾನ-ಜಪಗಳಾದೊಡನೆ ನೂರಾರುಮಂದಿ ಶಿಷ್ಯರಿಗೆ ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕೆಗಳೆಂಬ ತಾವು ರಚಿಸಿದ ಗ್ರಂಥಗಳನ್ನು ಪಾಠ ಮಾಡಿಸುತ್ತಿದ್ದರು. ಮಧ್ಯಾಹ್ನ ಸ್ನಾನ - ಪೂಜಾ - ಭಿಕ್ಷಾಸ್ವೀಕಾರ ಇವುಗಳಾಗುತ್ತಲೇ ವಿದ್ವತ್ಸಭೆಯಲ್ಲಿ ಕುಳಿತು ದೂರದವರಾಗಿ ಬಂದ ವಿದೇಶದ ಪಂಡಿತರ ವಿದ್ಯಾವಿಮರ್ಶೆ ಮಾಡುತ್ತಿದ್ದರು. ಸಂಧ್ಯಾಕಾಲದಲ್ಲಿ ಕೃಷ್ಣದೇವರಾಯನೊಡನೆ ರಾಜ್ಯಕಾರ್ಯಭಾರಗಳ ವಿಮರ್ಶೆ ಮಾಡುತ್ತಿದ್ದರು. ರಾತ್ರಿ ಪೂಜಾನಂತರ ಭಜನಗೋಷ್ಠಿಯೊಡನೆ ಕುಳಿತು ಸಾವಿರಾರು ಜನರಿಗೆ ಭಕ್ತಿಮಾರ್ಗವನ್ನು ಉಪದೇಶಿಸುತ್ತಿದ್ದರು. ಬಲವತ್ತರ ಕಾರಣವಿದ್ದ ವಿನಾ ಶಾಸ್ತ್ರಸಂಬಂಧ ವಾದಕ್ಕೆ ಹೋಗುತ್ತಿರಲಿಲ್ಲ. [illegible] ಪಂಡಿತರನ್ನು ಕಂಡಾಗ - ನೀವು ನಿಮ್ಮ ಶಿಷ್ಯರನ್ನು [illegible] ಉಪದೇಶಿಸಬೇಕು. ವೃಥಾ ವಾಕ್ಯಾರ್ಥದಿಂದ ಏನು ಪ್ರಯೋಗವಾದಬಾರದು: ಎಂದು [illegible] ಎಚ್ಚರಿಸುತ್ತಿದ್ದರು. ಅದೇ ಅರ್ಥದ ವಿವರಣೆಗಳನ್ನು [illegible] ಶಿಷ್ಯರಿಂದ ಮಾಡಿಸುತ್ತಿದ್ದರು.

ವಲ್ಲಭಾಚಾರ್ಯರು

ಬಂಗಾಳಾದಲ್ಲಿ ಚೈತನ್ಯರಂತೆ ಗುಜರಾತಿನಲ್ಲಿ ವಲ್ಲಭಾಚಾರ್ಯರೊಬ್ಬರು ದೊಡ್ಡ ಮತಪ್ರವರ್ತಕರು. ವಲ್ಲಭಮತವು ಭಾಗವತಧರ್ಮದ ಒಂದು ಅಂಗವೆಂದೇ ಹೇಳಬೇಕು. ಕೃಷ್ಣಭಕ್ತಿಯು ವಲ್ಲಭಮತದ ಸಾರಸರ್ವಸ್ವ. ವಲ್ಲಭಾಚಾರ್ಯರು ಕೃಷ್ಣದೇವರಾಯನ ಆಸ್ಥಾನಕ್ಕೆ ಬರಲು, ಶ್ರೀ ವ್ಯಾಸರಾಯರೇ ಅವರನ್ನು ಎದ್ದಿರ್ದಿ ಬರಮಾಡಿ, ವಲ್ಲಭಮತದ ಪ್ರಕ್ರಿಯೆಗಳನ್ನು ಅವರ ಮುಖದಿಂದ ಅನುವಾದಮಾಡಿಸಿ, ಸನ್ಮಾನಮಾಡಿ ಕಳುಹಿಸಿದರು. ವ್ಯಾಸರಾಯರಲ್ಲಿದ್ದ ಅಸಾಧಾರಣ ಸಹಾನುಭೂತಿಯೆಂದರೆ, ಯಾವ ಮತಸ್ಥರೇ ಬರಲಿ, ಅವರ ಮತದ ಪ್ರಕ್ರಿಯೆಯನ್ನು ಅವರ ಮುಖದಿಂದ ಕೇಳುವುದು. ಅವರು ತಮ್ಮ ಮತವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆ ಅವರಿಗೆ ವಿಶೇಷ ಸನ್ಮಾನ ಮಾಡುವುದು. ಹಾಗಿರದಿದ್ದರೆ, ನಿಮ್ಮ ಮತದ ಸ್ಪಷ್ಟಮಾರ್ಗವಿದು ಎಂದು ತಿಳಿಸಿಕೊಡುವುದು; ಎಲ್ಲವನ್ನೂ ಬಿಟ್ಟು ಮತಖಂಡನೆಗೆ ಹಟತೊಟ್ಟು ಬಂದರೆಂದರೆ ಅವರೊಡನೆ ವಾದಿಸಿ ನಿರುತ್ತರಗೊಳಿಸದೆ ಬಿಡುತ್ತಿರಲಿಲ್ಲ. ಇದೇ ಕಾಲದಲ್ಲಿ *ಶ್ರೀ ಪುರಂದರದಾಸರೂ ಶ್ರೀ ಕನಕದಾಸರೂ ವ್ಯಾಸರಾಯರೊಡನೆ ಬಂದು ಸೇರಿದರು. ಮೂವರ ಸಂಗಮವು ಗಂಗಾ ಯಮುನಾ ಸರಸ್ವತೀ ಸಂಗಮಗಳಂತೆ ಶೋಭಾಯಮಾನವಾಯಿತು.

ವಿದ್ಯಾಧರ

ವಿದ್ಯಾಧರನು ಆ ಕಾಲದ ಮತ್ತೊಬ್ಬ ಪಂಡಿತಾಗ್ರೇಸರನು, ಹಿಂದೆ ವ್ಯಾಸರಾಯರೊಡನೆ ವಾದಮಾಡಿದ ಬಸವಭಟ್ಟನಿಗೆ ಸಮಾನನು. ಸ್ವಯಂ ವಿಜಯನಗರಕ್ಕೆ ಬಂದು ಸ್ವಾಮಿಗಳೊಡನೆ ವಾಕ್ಯಾರ್ಥಮಾಡುವ ಧೈರ್ಯ ಇವನಿಗಾಗಲಿಲ್ಲ. ವಿಜಯನಗರಕ್ಕೆ ಆಶ್ರಿತನಾದ ಕಳಿಂಗದೇಶಾಧಿಪತಿ ಪ್ರತಾಪರುದ್ರನ ಪ್ರಸನ್ನತೆಯನ್ನಿವನು ಸಂಪಾದಿಸಿದನು. ಯಾವ ರೀತಿಯಿಂದಾದರೂ ವ್ಯಾಸರಾಯರನ್ನು ಜಯಿಸಿ ತಾನು ಖ್ಯಾತಿವಂತನಾಗಬೇಕೆಂಬುದೇ ಇವನ ಆಶಯ. ವ್ಯಾಸತ್ರಯಗಳ ಖಂಡನೆಯೆಂಬ ಹೆಸರಿನಿಂದ ದೊಡ್ಡದೊಂದು ಗ್ರಂಥವನ್ನು ಬರೆದನು. ತತ್ಪ್ರಖಂಡನೆಗಿಂತ ವ್ಯಕ್ತಿಖಂಡನೆಯೇ ಇವನ ಗ್ರಂಥದಲ್ಲಿ ಹೆಚ್ಚಾಗಿ ಕಾಣುವಂತಾಯಿತು. ಇನ್ನೇನು ನಿಂದಿಸುವುದಕ್ಕೆ ಜಾಗವಿದ್ದರೂ, ರಾಜಾಶ್ರಯದಲ್ಲಿ ಯತಿಗಳಿರುವುದು ಧರ್ಮಸಮ್ಮತವಲ್ಲ; ಯತಿಗಳು ಮುದ್ರಾಧಾರಣವಿಲ್ಲದೆ ಕುರಿತು ರಾಜ್ಯಾಧಿಕಾರ ಮಾಡಬಾರದು; ಯುದ್ಧಗಳಿಗೆ ಪ್ರೇರಕರಾಗಬಾರದು; ಯಾನಾರೂಢ ಯತಿಯನ್ನು ಯಾರೂ ಕಣ್ಣಿನಿಂದ ನೋಡಬಾರದು; ಹಾಗೆ ನೋಡಿದವರು ಸಚೇಲಸ್ನಾನ ಮಾಡಬೇಕು; ರಾಜಾಶ್ರಯಬಲವೇ ವ್ಯಾಸರಾಯರ ದಿಗ್ವಿಜಯಕ್ಕೆ ಬಲ; ಇವರ ಗ್ರಂಥಗಳು ಶಾಸ್ತ್ರಸಮ್ಮತಗಳಲ್ಲ. ಇಂತಹ ಬಿಡಿ ಮಾತಿನಿಂದಲೇ ಗ್ರಂಥ ಪೂರ್ತಿಯಾಯಿತು. ಈ ಗ್ರಂಥವನ್ನು ವ್ಯಾಸರಾಯರ ಪರಾಮರ್ಶೆಗೆಂದು, ಕಳಿಂಗರಾಜನ ಮೂಲಕ ಕೃಷ್ಣದೇವರಾಯನಿಗೆ

---

*ಈ ಸಂಬಂಧದ ಇತಿಹಾಸವು ಶ್ರೀ ಪುರಂದರದಾಸರುಗಳ ಇತಿಹಾಸದಲ್ಲಿ ವಿಸ್ತಾರವಾಗಿ ಬರುವುದರಿಂದ ಆ ವಿವರವನ್ನಿಲ್ಲಿ ತರುವುದಿಲ್ಲ.

ಕಳುಹಿಸಿದನು. ಕೃಷ್ಣದೇವರಾಯನು ವಿದ್ಯಾಧರನ ಗ್ರಂಥವನ್ನು ಪಂಡಿತರಿಂದ ಓದಿಸಿ ಕೇಳಿ ಬಸವಭಟ್ಟನ ಕೋಟೆಗಳಿಗಿಂತ ಪ್ರಬಲ ಕೋಟೆಗಳಿರುವುವೆಂದರಿತು, ಈ ಗ್ರಂಥವನ್ನು ವ್ಯಾಸರಾಯರಿಗೆ ತೋರಿಸಬೇಕೆಂದು ತಾನೇ ಮಠಕ್ಕೆ ಬಂದನು.

ದ್ವಾರಿಕೃಷ್ಣನೃಪತಿಸ್ಸಮೇತ್ಯಸಃ ಸ್ವಾಮಿನಃ ಸಹಪುರೋಹಿತಾದಿಭಿಃ ॥
ದರ್ಶನಾವಸರ ವಿನಾಕ್ಷತೇಧುನಾ ಪಾಕಶಾಸನ ಇವಾಬ್ಜಜನ್ಮನಃ ॥

ಸೋಮನಾಥ ಕವಿಯ ಈ ಶ್ಲೋಕವನ್ನು ನೋಡಿದರೆ ಕೃಷ್ಣದೇವರಾಯನೆಂಥಾ ಸಾರ್ವಭೌಮನು ಎಂತಹ ಗುರುಭಕ್ತಿಯುಳ್ಳವನಾಗಿದ್ದನೆಂಬುದು ಗೊತ್ತಾಗುತ್ತದೆ. ಮಠ ದ್ವಾರದಲ್ಲಿ ದರ್ಶನಾಭಿಲಾಷಿಯಾಗಿ ಸ್ವಾಮಿಗಳ ಸಮಯವೇನೆಂದು ಕೇಳುವ ದಾಸ್ಯ ಭಾವವೇ ಸಾರ್ವಭೌಮನಲ್ಲಿರುವುದಾದರೆ, ಒಳಗಿರುವ ಯತಿಸಾರ್ವಭೌಮರ ವ್ಯಕ್ತಿಗೌರವ ವೆಷ್ಟುಮಟ್ಟಿನದಿರಬೇಕು! ಸಾಮ್ರಾಜ್ಯದೇವತೆಯೆಂದು ಒಬ್ಬೊಬ್ಬ ರಾಜನೂ ವ್ಯಾಸ ರಾಯರನ್ನು ಪೂಜಿಸಬೇಕಾದರೆ ಅವರಿಗೆ ಕರ್ಣಾಟಕ ಸಾಮ್ರಾಜ್ಯದಲ್ಲೆಷ್ಟು ಪ್ರೇಮಾಭಿ ಮಾನಗಳಿರಬೇಕು!

ವ್ಯಾಸರಾಯರು ಕೃಷ್ಣದೇವರಾಯನನ್ನು ಪರಮಗೌರವದಿಂದ ಸಮ್ಮುಖಕ್ಕೆ ಬರ ಮಾಡಿಕೊಂಡರು. ಬಂದ ಕಾರಣವೇನೆಂದು ಸ್ವಾಮಿಗಳು ಕೇಳಲು, ರಾಯನು ವಿದ್ಯಾ ಧರನ ಗ್ರಂಥವನ್ನೇ ಸ್ವಾಮಿಗಳ ಮುಂದಿಟ್ಟನು. ವಿದ್ಯಾಧರನು ಇಷ್ಟು ದಿನಗಳೊಳಗಾಗಿ ಉತ್ತರ ಬರಬೇಕೆಂದು ಅಪೇಕ್ಷಿಸಿರುವ ಸಂಗತಿಯನ್ನೂ ತಿಳಿಸಿದನು. ಸ್ವಾಮಿಗಳು, ಅಷ್ಟೇಕೆ ತಡ? ಈಗಲೇ ಉತ್ತರ ಬರೆಯಬಹುದೆಂದು, ವಿದ್ಯಾಧರನ ಒಂದೊಂದು ಕೋಟೆಯನ್ನೂ ಓದಿಸಿ ಕೇಳಿ, ತಕ್ಕ ಸಮಾಧಾನಗಳನ್ನು ಬರೆಸುತ್ತ ಬಂದರು. ಪಂಡಿತನ ಅವಧಿಗಿಂತ ಎಷ್ಟೋ ಮುಂಚಿತವಾಗಿ ಖಂಡನಕ್ಕೆ ಮಂಡನವಾಯಿತು. ಕೃಷ್ಣದೇವರಾಯನು ಕಳಿಂಗ ರಾಜನಿಗೆ ಮಂಡನಗ್ರಂಥವನ್ನು ನಿನ್ನ ವಿದ್ವತ್ಸಭೆಯಲ್ಲಿ ಓದಿಸಬೇಕೆಂದು ಪತ್ರ ಬರೆದನು. ಆ ರಾಜನು ಸ್ವಾಮಿಗಳಿಂದ ಬಂದ ಮಂಡನಗ್ರಂಥವನ್ನು ಪೂಜ್ಯಭಾವನೆಯಿಂದ ತನ್ನ ಆಸ್ಥಾನದಲ್ಲಿ ಓದಿಸಿ, ವಿದ್ಯಾಧರನನ್ನು ಇದರ ಮೇಲೆ ನಿಮ್ಮ ಖಂಡನೆಯೇನಾದರಿದ್ದರೆ ಬರೆಯಬಹುದೆಂದು ಹೇಳಿದನು. ಪಂಡಿತನಿಂದ ಉತ್ತರ ಬರಲಿಲ್ಲ. ಅನಂತರ ರಾಜನು ಸಮ್ಮುಖದ ಪಂಡಿತರ ಅನುಮತಿಯಿಂದ ಪ್ರತ್ಯಕ್ಷ ಸ್ವಾಮಿಗಳೇ ಬಂದಿದ್ದರೆ ಹೇಗೋ ಹಾಗೆ ಸ್ವಾಮಿಗಳ ಗ್ರಂಥಕ್ಕೇ ಮರ್ಯಾದೆಮಾಡಿ, ಪಲ್ಲಕ್ಕಿಯಲ್ಲಿಟ್ಟು ವಿಜಯೋತ್ಸವಮಾಡಿ, ಕೃಷ್ಣದೇವರಾಯನಿಗೆ ಈ ವಿಷಯವನ್ನು ತಿಳಿಸಿದನು. ವಿದ್ಯಾಧರನು ಲಜ್ಜಿತನಾಗಿ ಆ ರಾತ್ರಿಯೇ ಕಳಿಂಗ ರಾಜಧಾನಿಯಿಂದ ಎಲ್ಲಿಗೋ ಹೊರಟುಹೋದನು.

ಕೃಷ್ಣದೇವರಾಯನಿಗೆ ಕಳಿಂಗರಾಜನ ಪತ್ರವನ್ನು ನೋಡಿ ಪರಮಾನಂದ ವಾಯಿತು. ಇಷ್ಟುಕಾಲದಿಂದ ನಮ್ಮ ಸಾಮ್ರಾಜ್ಯಕ್ಕೆ ಮಂಗಳಕರರಾಗಿರುವ ಗುರುಗಳಿಗೆ ಏನು ಮರ್ಯಾದೆ ಮಾಡಬೇಕೆಂಬ ಯೋಚನೆ ಬಲವಾಯಿತು. ರಾಜಭಂಡಾರದಿಂದಾ ಗಲೀ, ಪಿತ್ರಾರ್ಜಿತವೆಂದು ಮೀಸಲಾಗಿರಿಸಿದ್ದ ಹಣದಲ್ಲಾಗಲೀ, ಬೇಕಾದಷ್ಟನ್ನು ಬೇಕೆಂದು ತೋರಿದಂತೆ ಬಳಸುವ ಅಧಿಕಾರ ಸ್ವಾಮಿಗಳಿಗಿದ್ದರೂ, ಅವರು ಒಂದು ದಿನ

ವಾದರೂ ಏನನ್ನೂ ಬಳಸಲಿಲ್ಲ. ಮಠದ ಸೇವಾಕಾರ್ಯದಲ್ಲಿ ಸಹ ತಮಗೆ ಅತ್ಯಾವಶ್ಯಕವಾಗಿ ಬೇಕಾದ ಮಿತ್ರ ಪರಿವಾರದ ವಿನಾ ಹೆಚ್ಚು ಜನರನ್ನು ಸ್ವಾಮಿಗಳು ಸೇರಿಸಿಕೊಳ್ಳುತ್ತಿರಲಿಲ್ಲ. ರಾಜರೇ ಮಠದ ಗೌರವಕ್ಕೆ ತಕ್ಕ ಸಿಬ್ಬಂದಿಗಳನ್ನು ಸೇರಿಸಿ ಕಳುಹಿಸುತ್ತಿದ್ದರು. ದೇವರ ಹೆಸರಿಗೆ ಧಾರೆಯೆರೆದ ಗ್ರಾಮಭೂಮಿಗಳ ವ್ಯವಸ್ಥೆಯನ್ನು ಅಧಿಕಾರಿಗಳು ನಡೆಸಿ ಸಿಗದಿಯಾದ ಹಣವನ್ನು ಮಠಕ್ಕೆ ತಂದುಕೊಡುತ್ತಿದ್ದರು. ಇಂತಹ ನಿಸ್ಪೃಹರಾದ ಸ್ವಾಮಿಗಳಿಗೆ ಏನು ಸನ್ಮಾನ ಮಾಡಿದರೆ ತಾನೇ ರಾಜನ ಮನಸ್ಸು ದಣಿದೀತು! ರಾಜ್ಯಾನುಭವಿಗಳಾದ ಸಾಮಂತರನ್ನೂ ಅಮಾತ್ಯಪ್ರಮುಖರನ್ನೂ ರಾಜನು ವಿಚಾರಿಸಿದನು. ಮತ್ಸರಿಗಳಾದ ಕೆಲವುಂದಿ ಪಂಡಿತರ ವಿನಾ ಸ್ವಾಮಿಗಳನ್ನು ದ್ವೇಷಿಸುವವರಾರು? ಪ್ರಮುಖರೆಲ್ಲಾ ನವರತ್ನಾಭಿಷೇಕ ಮಾಡಬಹುದೆಂದು ಸಲಹೆಯಿತ್ತರು. ರಾಜನ ಮನಸ್ಸಿನಲ್ಲೂ ಅದೇ ಅಭಿಪ್ರಾಯವಿದ್ದಿತು. ಅಂದಿನಿಂದಲೇ ರಾಜಾಸ್ಥಾನದ ಶೃಂಗಾರ, ನಗರಶೃಂಗಾರಗಳಿಗಾರಂಭವಾಯಿತು. ರಾಜಾಜ್ಞೆಯಿಂದ ಅಮಾತ್ಯಪ್ರಮುಖರು ಸ್ವಾಮಿಗಳ ಸನ್ನಿಧಿಗೆ ಬಂದರು.

ಸ್ವಾಮಿನ್ ಭವಂತಂಸ್ವಯಮಸ್ಯರತ್ನೈ ರಾಕಾಂಕ್ಷ್ಯತೇ ಭೂರಮಣೋಭಿಷೇಕ್ತುಂ ॥
ಕೂಟಾಗ್ರಭಾಗಂ ಕುಲಭೂಧರಸ್ಯಪ್ರಸೂನಜಾತೈರಿವ ಪಾರಿಜಾತಃ ॥

"ಮಹಾಸ್ವಾಮಿಾ – ಮಹಾರಾಜನು ತಮಗೆ ರತ್ನಾಭಿಷೇಕ ಮಾಡಬೇಕೆಂದು ಸಿದ್ಧತೆ ಮಾಡಿಕೊಂಡು ತಮ್ಮನ್ನು ಉತ್ಸವದಿಂದ ಕರೆತರಲು ನಮ್ಮನ್ನು ಕಳುಹಿಸಿರುವನು. ತಾವು ಪರಮಾನುಗ್ರಹಮಾಡಿ ಬರಬೇಕೆಂದು ವಿಜ್ಞಾಪಿಸಿದನು. ಸ್ವಾಮಿಗಳು ಇದೇನೆಂದು ವಿಸ್ಮಿತರಾದರು. ಮತ್ತೆ ಮತ್ತೆ ಪುರೋಹಿತ ಪ್ರಧಾನರುಗಳು ರಾಜನ ಭಕ್ತಿವಿಶೇಷವನ್ನು ಪ್ರಶಂಸೆಮಾಡಿ ದಯಮಾಡಬೇಕೆಂದರು. ಸ್ವಲ್ಪಹೊತ್ತು ಹಾಗೆಯೇ ಯೋಚಿಸಿ ಗೋವಿಂದ ಭಿಕ್ಷು ಮೊದಲಾದ ಪ್ರಮುಖ ಶಿಷ್ಯರೊಡಗೂಡಿ ಹೊರಟರು. ರತ್ನಮುತ್ತುಗಳಿಂದಲೂ ಪುಷ್ಪಮಾಲಿಕೆಗಳಿಂದಲೂ, ಅಲಂಕೃತವಾದ ಆಂದೋಳಿಕೆಯಲ್ಲಿ ಕುಳಿತು ದಾರಿಯುದ್ದಕ್ಕೂ ಶತಶಃ ನಮಸ್ಕಾರ ಮಾಡುತ್ತಿರುವ ಭಕ್ತವೃಂದವನ್ನು ಕಟಾಕ್ಷದಿಂದ ಸಂತೋಷಪಡಿಸುತ್ತಾ ನಾರಾಯಣನಾಮಸ್ಮರಣೆ ಮಾಡುತ್ತಾ ರಾಜಗೃಹದ ಮಹಾದ್ವಾರಕ್ಕೆ ಬಂದರು. ಮಹಾರಾಜನು ಎದುರ್ಗೊಂಡು ಹಸ್ತಲಾಘವ ಕೊಡುತ್ತಾ ಸುವರ್ಣಪೀಠದಲ್ಲಿ ಸ್ವಾಮಿಗಳನ್ನು ಕೂಡಿಸಿದನು. ಪಂಡಿತ ಪುರೋಹಿತ ಪ್ರಮುಖರು ವೇದಮಂತ್ರಗಳನ್ನು ಪಠಿಸಿದರು. ಮಂಗಳವಾದ್ಯಗಳಾದುವು.

"ಸಕಿಲಿಕೃಷ್ಣಮಹೀಪಾಲಃ ಸ್ವಯಮೇವ, ಕರಕಮಲೇನಾದಾಯ ಕನಕಕುಂಭಮಿಮಂ ಭಗವಂತಂ ವ್ಯಾಸತಾಪಸಮಾಪರಾನ್ಮಣಿಭಿರಭಿಷೇಕ್ತು ಮಾರಭತ" ಎಂಬಂತೆ,

ಮಹಾರಾಜನು ನವರತ್ನಗಳಿಂದ ಪೂರ್ಣವಾದ ಕನಕ ಕುಂಭವನ್ನು ಸ್ವಹಸ್ತದಿಂದ ತಂದು ಭಕ್ತಿಯಿಂದ ಸ್ವಾಮಿಗಳಿಗೆ ಅಭಿಷೇಕಮಾಡಿದನು. ವ್ಯಾಸಭಗವಾನರ ದಿವ್ಯತೇಜಸ್ಸನ್ನು ನೋಡಿ ಲಜ್ಜೆಯಿಂದ ಕೆಳಗುರುಳಿದುವೋ ಎಂಬಂತೆ ಭೂತಲವನ್ನಲಂಕರಿಸಿದ್ದ

ರತ್ನರಾಶಿಗಳನ್ನು ವ್ಯಾಸರಾಯರು ಬ್ರಾಹ್ಮಣೋತ್ತಮರಿಗೂ ನಾಡಿನ ಪ್ರಧಾನರಿಗೂ ಬಡವರಾದ ಅಧಿಕಾರಿಗಳಿಗೂ ದಾನವನ್ನಾಗಿತ್ತರು. ರಾಜನಭಿಷೇಕವನ್ನಲಂಕರಿಸಿದ್ದ ತುರುಷ್ಕ ರಾಯಭಾರಿಗಳಿಗೂ ವ್ಯಾಸರಾಯರಿಂದ ಬಹುಮಾನವಾಗದೇ ಹೋಗಲಿಲ್ಲ. ಅಭಿಷೇಕ ಮಾಡಿದ ನವರತ್ನಗಳೆಲ್ಲ ನಡೆ ನುಡಿಯಿಲ್ಲದೆ ದಾನವನ್ನಾಗಿತ್ತ ವ್ಯಾಸರಾಯರ ಔದಾರ್ಯವನ್ನು ನೋಡಿ ಮಹಾರಾಜನು ತನ್ನ ಸಕಲ ರಾಜ್ಯಕೋಶಗಳು, ಮನೆ, ಮೊದಲಾದವುಗಳು, ಎಲ್ಲವೂ ವ್ಯಾಸರಾಯರದೇ ಪ್ರಮಾಣಮಾಡಿದ ಸಂದರ್ಭವನ್ನು ಕವಿ ಸೋಮನಾಥನು ಕೆಳಕಂಡ ಶ್ಲೋಕದಲ್ಲಿ ಕ್ರೋಢೀಕರಿಸಿದ್ದಾನೆ.

ಯಾವಂತೋವಿಷಯಾಸ್ತ್ವತಾಭುಜಬಲಂ ಯಾವತ್ಸಪತ್ನಾಜಿತಾ ।
ಯಾವಂತಶ್ಚ ಮದಾಸ್ತ್ವತಾಕರಸರೋಜಾತಾತ್ರಯಾ ಯಾವತೀ ॥
ಯಾವತ್ಯೋಧನಸಂಪದೋಗುಣಗಣೋ
ಯಾವಾಂಶ್ಚ ಯಾವದ್ಯಶ ।
ಸ್ವಾತ್ಮವತ್ಕೃತರ್ಪಿಯೋಷಪೂಜನಮಸೌ ಶ್ರೀ ವ್ಯಾಸಭಿಕ್ಷೋರ್ನೃಪಃ ॥

ಕೃಷ್ಣದೇವರಾಯನು ವ್ಯಾಸರಾಯರಿಗೆ ಮಾಡಿದ ರತ್ನಾಭಿಷೇಕವು ಯುಧಿಷ್ಠಿರನು ಶ್ರೀಕೃಷ್ಣ ಪರಮಾತ್ಮನಿಗೆ ಮಾಡಿದ ಅಗ್ರಪೂಜೆಗೆ ಸಮಾನವಾಯಿತು. ಇದಕ್ಕಿಂತ ಹಿರಿದಾದ ಭಕ್ತಿಯಿನ್ನಾವುದು ? ಇದಕ್ಕಿಂತ ಅಧಿಕವಾದ ಕೃತಜ್ಞತೆಯಿನ್ನಾವುದು ?

ಶ್ರೀ ವ್ಯಾಸರಾಯರು ಕೃಷ್ಣದೇವರಾಯನ ಕುಹುಯೋಗವನ್ನು ಪರಿಹರಿಸಿದರು.

ಲೋಕಸೇವಾ ಪರಾಯಣರಾದ ಸಜ್ಜನರು ಬಹುಕಾಲ ಸುಖದಿಂದ ಜೀವಿಸಿದ ಇತಿಹಾಸವು ಪ್ರಪಂಚದಲ್ಲೇ ವಿರಳವೆಂದು ಕಂಡುಬರುತ್ತದೆ. **"ಪಾಪೀ ಚಿರಾಯುಃ ಸುಕೃತೀ ಗತಾಯುಃ"** ಎಂಬ ಮಾತು ಸಕಲ ಪ್ರಪಂಚಕ್ಕೂ ಅನ್ವಯಿಸುವಂತೆ ಬರೆದ ಮಾತಾಗಿ ಕಾಣುತ್ತದೆ.

ಸತ್ಪುರುಷರೆನಿಸಿದ ಪಾಂಡವರು ಎಲ್ಲಾ ತರದ ಪ್ರಾಪಂಚಿಕ ಕ್ಲೇಶಗಳಿಗೊಳಗಾಗಿ ಭಿಕ್ಷೆ ಬೇಡಿದರು. ಮಹಾಪತಿವ್ರತೆಯೆನಿಸಿದ ಸೀತಾದೇವಿಯಂತಹವರ ಜೀವನವು ವನವಾಸದ ಕಣ್ಣೀರಿನಲ್ಲಿ ಪರ್ಯವಸಾನವಾಯಿತು. ಧರ್ಮಾತ್ಮನಾದ ಶ್ರೀರಾಮನಿಗೆ ಸ್ನೇಹಿತರು-ಸೇವಕರು-ನಾಶವಾದರು. ಶ್ರೀಕೃಷ್ಣನಂದನನ ಜನ್ಮ ಸೆರೆಮನೆಯಲ್ಲಾಯಿತು.

ವಿಜಯನಗರ ಸಾಮ್ರಾಜ್ಯದಭ್ಯುದಯ-ವನ್ನು ಸಾಧಿಸುತ್ತಿದ್ದ ಹಿಂದೆ ಅಲ್ಪ ಕಾಲಾವಧಿಯಲ್ಲೇ ಮೂವರು ರಾಜರಾದರು. ಕೃಷ್ಣದೇವರಾಯನಿಗೂ [illegible] ನಿಗೆ ಕುಹುಯೋಗವೆಂಬ ಆಪತ್ತು ಒದಗಿತು. ಕುಹುಯೋಗವೆಂದರೆ ರಾಜರು ಸೂರ್ಯ [illegible] ಅಂಗಾರಕ ಗ್ರಹಗಳ [illegible] ಯಲ್ಲಿ [illegible]

ಯಾವ ಅಮಾವಾಸ್ಯೆಯಲ್ಲಿ ಮಕರರಾಶಿಯಲ್ಲಿ ಸಂಧಿಸುವುದು. ಈ ತೆರದ ಗ್ರಹಸಂಧಿಯು ಎಷ್ಟೋ ಕಾಲಕ್ಕೊಮ್ಮೆ ಸಂಘಟಿಸುವುದು. ರಾಜನಾಶ, ರಾಜ್ಯನಾಶಗಳಂಥಾ ಪ್ರಬಲ ಪ್ರಳಯವು ಈ ಸಂಧಿಗೆ ಫಲವು. ಯಾವ ರಾಶಿ ಯಾವ ನಕ್ಷತ್ರಗಳಲ್ಲಿ ಈ ವಿಧವ ಸಂಧಿ ಸೇರುವುದೋ ಆ ರಾಶಿ ಆ ನಕ್ಷತ್ರಗಳಲ್ಲಿ ಜನಿಸಿದವನಿಗೆ ಅಧಿಕ ಗಂಡಾಂತರವೆನಿಸುವುದರಲ್ಲಿ ಸಂಶಯವಿಲ್ಲ. ಜ್ಯೋತಿಶ್ಶಾಸ್ತ್ರದಲ್ಲಿ ಇದಕ್ಕೆ ತಕ್ಕ ಶಾಂತಿಗಳೂ ವಿಹಿತವಾಗಿರುವುವು. ಆ ಶಾಂತಿಗಳು ರಾಜಾಧಿರಾಜರಿಂದ ಮಾತ್ರ ನಡೆಯಿಸಲ್ಪಡಲು ಸಾಧ್ಯವಲ್ಲದೆ, ಸಾಮಾನ್ಯರ ಬಯಕೆಗೆ ನಿಲುಕುವಂಥವಲ್ಲ.

ರಾಹುಶ್ಚಾರ್ಕಾರ್ಕಿಭೂಪುತ್ರಾಃ ಯದಾಚಂಡಾಲತಾಂಗತಾಃ ॥
ಯಸ್ಯಸ್ವಾದಶಗಾಸ್ಸದ್ಯಃ ಸರಾಜಾನಶ್ಯತಿಧ್ರುವಂ ॥

ಎಂಬುದಾಗಿ ಜ್ಯೋತಿಶ್ಶಾಸ್ತ್ರ ಸಂಗ್ರಹಕಾರರು ಕುಹುಯೋಗದ ಫಲವನ್ನು ಉದಹರಿಸಿರುವರು.

ವ್ಯಾಸರಾಯರು ಕುಹುಯೋಗದಿಂದ ಮಹಾರಾಜನಿಗಿರುವ ಗಂಡಾಂತರವನ್ನು ಅರಿತು ಬಲು ಚಿಂತಿಸಿದರು. ವಿಪನ್ನಿವಾರಕವಾದ ಶಾಂತಿ ಕರ್ಮಗಳನ್ನು ನಡೆಸುತ್ತ ಬಂದರು. ಅದು ರಾಜ್ಯತ್ಯಾಗ, ಸರ್ವಸ್ವದಾನ, ಸನ್ಯಾಸಸ್ವೀಕಾರಗಳಂಥಾ ಮಹಾ ತ್ಯಾಗಗಳಿಂದ ಪ್ರಾಣರಕ್ಷಣೆಯಾಗುವ ವಿಪತ್ತೆಂದರಿತ ಶಾಸ್ತ್ರವೇತ್ತನಾದ ಮಹಾರಾಜನು ಕುಹುಯೋಗ ಸಂಧಿಕಾಲದಲ್ಲಿ (೮-೧-೧೫೨೧ ವಿಕ್ರಮ ಸಂ| ಪುಷ್ಯ ಬಹುಳ ೩೦) ತನ್ನ ರಾಜ್ಯವನ್ನೇ ವ್ಯಾಸರಾಯರಿಗೆ ದಾನಮಾಡಿ ಅವರನ್ನು ಸಿಂಹಾಸನದಲ್ಲಿ ಕೂಡಿಸಿದನು. ಸಿಂಹಾಸನಾರೂಢರಾದ ವ್ಯಾಸರಾಯರು – ಗ್ರಾಮಭೂಮಿಗಳ ದಾನವೆಂದು ಮೊದಲೇ ಬರೆಸಿ ಸಿದ್ಧಪಡಿಸಿದ ಸನ್ನದುಗಳನ್ನು ತರಿಸಿ ಅವುಗಳಮೇಲೆ ಶ್ರೀಕೃಷ್ಣಮುದ್ರೆಯನ್ನೊತ್ತಿ ಮಹಾರಾಜನ ಹೆಸರಿನಮೇಲೆ ದಾನಮಾಡಿದರು. ಧನಧಾನ್ಯ ನವರತ್ನಗಳ ದಾನಗಳಂತು ಅಪರಿಮಿತವಾಗಿ ನಡೆದುವು. ಗೋದಾನದಿಂದ ಗಜದಾನಗಳತನಕ ಇತರ ಅನೇಕ ದಾನಗಳಾದವು. ವ್ಯಾಸರಾಯರು ಸಿಂಹಾಸನದಮೇಲೆ ಕುಳಿತು ದಾನಮಾಡುತ್ತಿರುವಂತೆಯೂ ಬಲಪಾರ್ಶ್ವದಲ್ಲಿ ಕೃಷ್ಣದೇವರಾಯನು ಕೈಜೋಡಿಸಿಕೊಂಡು ನಿಂತಿರುವಂತೆಯೂ, ಕುಹುಯೋಗವು ಬರುತ್ತಿರುವುದನ್ನು ಬೆಟ್ಟಿಟ್ಟು ಒರ್ವನು ತೋರಿಸುತ್ತಿರುವಂತೆಯೂ ಆ ಕಾಲದಲ್ಲಿ ಬರೆಸಿಟ್ಟ ಚಿತ್ರದ ಆಧಾರದಮೇಲೆ ಈಚಿನವರು ಮುದ್ರಿಸಿರುವ ಚಿತ್ರವನ್ನು ನೋಡಿದರೆ ಬಲು ಅರ್ಥವತ್ತಾಗಿರುವಂತೆ ಕಾಣುತ್ತದೆ. ಹೆಂಗಸರಲ್ಲಿ ವಿಷಯವನ್ನು ರೂಪಕವಾಗಿ ಮಾಡಿ ಹೇಳುವ ಕಥೆಯನ್ನು ಕೇಳಿದರೆ ಭಕ್ತಿವಂತರ ಭಕ್ತಿಯು ಉದ್ರೇಕಗೊಳ್ಳುತ್ತದೆ. ಆ ಹೇಳಿಕೆಯು ಹೀಗಿರುವುದು.

ಶ್ರೀ ಕೃಷ್ಣದೇವರಾಯನು ತನ್ನ ವಿಪತ್ಪರಿಹಾರಾರ್ಥವಾಗಿ ವ್ಯಾಸರಾಯರಿಗೆ ಸಾಮ್ರಾಜ್ಯವನ್ನೇ ದಾನಮಾಡಿದನು. ವ್ಯಾಸರಾಯರು ಸಿಂಹಾಸನದ ಮೇಲೆ ಕುಳಿತು ರಾಜನ ಶ್ರೇಯಸ್ಸಿಗಾಗಿ ಬಹುವಿಧ ದಾನಗಳನ್ನು ಮಾಡಿದರು. ಮಹಾರಾಜನು ಕೈಜೋಡಿಸಿಕೊಂಡು ಸಿಂಹಾಸನದ ಬಲಪಾರ್ಶ್ವದಲ್ಲಿ ನಿಂತಿದ್ದನು. ಕುಹುಯೋಗವು ಜಾಜ್ವಲ್ಯ

ಮಾನವಾದ ಜ್ವಾಲಾಕಾರವಾಗಿ ಬಂದಿತು. ಜನರು ಹಾಹಾಕಾರ ಮಾಡಿದರು. ರಾಜನು ತತ್ತರಿಸಿಹೋದನು. ಜ್ವಾಲೆಯು ಸಿಂಹಾಸನದ ಸಮೀಪಕ್ಕೆ ಬರಲು ವ್ಯಾಸರಾಯರು ತಮ್ಮ ಕಾಷಾಯಶಾಟಿಯನ್ನು ತೆಗೆದೊಗೆದರು. ಥಕ್ಕರಿಯಿಂದ ಶಾಟಿಯು ದಗ್ಧವಾಗಿ ಜ್ವಾಲೆ ಶಾಂತವಾಯಿತು. ಸಂತೋಷದಿಂದ ಸ್ವಾಮಿಗಳು ಸಿಂಹಾಸನದಿಂದಿಳಿದರು.

ಇತಿಹಾಸ ಸಂಶೋಧಕರಾದ ಸ್ವಾಮಿ ಕಣ್ಣುಪಿಳ್ಳೆಯವರು ಕೃಷ್ಣದೇವರಾಯನ ಕಾಲದಲ್ಲಿ ಕುಹುಯೋಗ ಸಂಧಿಯಾದುದನ್ನು ಜ್ಯೋತಿಶ್ಶಾಸ್ತ್ರ ರೀತ್ಯಾ ಪಂಡಿತರ ಸಹಾಯದಿಂದ ಚೆನ್ನಾಗಿ ಚರ್ಚಿಸಿರುವರು. ದಿವಂಗತ ವೆಂಕೋಬರಾಯರೂ ಮೈಸೂರು ಆಸ್ಥಾನದ ಜ್ಯೋತಿಷ್ಯ ಮಹಾ ವಿದ್ವಾಂಸರೊಡನೆ ಆ ಕಾಲದ ಪಂಚಾಂಗಗಳನ್ನಿಟ್ಟುಕೊಂಡು, ವಿದ್ಯಾರತ್ನಾಕರ ಸ್ವಾಮಿಗಳು ಕೊಟ್ಟಿರುವ ಕುಹುಯೋಗದ ತಿಥಿಯು ಸರಿಯಾದುದೆಂದೇ ನಿರ್ಣಯಿಸಿರುವರು.

ಕುಹುಯೋಗದ ಅವಧಿಯು ಮುಗಿದೊಡನೆಯೇ ವ್ಯಾಸರಾಯರು ಸಿಂಹಾಸನದಿಂದಿಳಿದರು. ಕೃಷ್ಣದೇವರಾಯನನ್ನು ಕರೆದು "ಮಹಾರಾಜಾ ಶ್ರೀಹರಿಕೃಪೆಯಿಂದ ನಿನ್ನ ವಿಪತ್ಪರಿಹಾರವಾಯಿತು. ಯತಿಗೆ ರಾಜ್ಯಾಧಿಕಾರವಿಲ್ಲ. ಈ ರಾಜ್ಯವು ನಿನ್ನದು. ನೀನೀಗಲೇ ಸಿಂಹಾಸನಾರೂಢನಾಗಬೇಕು. ಸಕಲ ರಾಜಮರ್ಯಾದೆಗಳಾಗಬೇಕು" ಎಂದರು.

ಕೃಷ್ಣದೇವರಾಯ :—ಮಹಾಸ್ವಾಮೀ, ನಾನು ದತ್ತಾಪಹಾರ ಮಾಡಬಯಸುವುದಿಲ್ಲ. ತಮ್ಮ ಸೇವೆಗಿಂತ ರಾಜ್ಯಪದವಿಯು ನನಗೆ ದೊಡ್ಡದಲ್ಲ. ತಾವು ನನ್ನ ಸ್ವರೂಪೋದ್ಧಾರಕರು. ತಾವೇ ನಮ್ಮ ಕುಲದೈವವೆಂದು ನಂಬಿದ್ದೇನೆ. ತಮ್ಮ ಸೇವಕನಾಗಿ ತಾವು ಹೇಳಿದ ಕೆಲಸವನ್ನು ಮಾತ್ರ ಮಾಡಿಕೊಂಡಿರುವೆನು.

ವ್ಯಾಸರಾಯರು :—ಮಹಾರಾಜಾ, ಹಿಂದೆ ಪರಶುರಾಮರು ದುಷ್ಟ ಕ್ಷತ್ರಿಯರ ಹನನದಿಂದ ತಾವು ಗಳಿಸಿದ ಸಕಲ ರಾಜ್ಯವನ್ನೂ ಕಶ್ಯಪರಿಗೆ ದಾನಮಾಡಿದರು. ಕಶ್ಯಪರು ಬ್ರಾಹ್ಮಣರಿಗೆ ರಾಜ್ಯಾಧಿಕಾರವಿಲ್ಲವಾದುದರಿಂದ ಧರ್ಮಭಾಗವನ್ನು ಮಾತ್ರ ತಮ್ಮ ಕೈಯಲ್ಲಿಟ್ಟುಕೊಂಡು ಸಕಲ ರಾಜ್ಯವನ್ನೂ ತಮಗೆ ವಿಧೇಯರಾಗಿದ್ದ ಕ್ಷತ್ರಿಯರಿಗೇ ಒಪ್ಪಿಸಿದರು. ಅದರಂತೆ ನಾವೂ ರಾಜ್ಯಾಧಿಪತ್ಯವನ್ನು ನಿನಗೆ ಕೊಡುವೆವು, ಇದರಿಂದ ಪ್ರತ್ಯವಾಯವಿಲ್ಲ. ನಮ್ಮ ಮಾತಿಗೆ ನೀನು ಮರುಮಾತನಾಡಬೇಡ.

ಮಹಾರಾಜನು ಪ್ರತ್ಯುತ್ತರ ಹೇಳಲು ಶಕ್ತನಾಗಲಿಲ್ಲ. ಗುರುಚಿತ್ತವೆಂದು ಮಾತ್ರ ನುಡಿದನು. ಒಡನೆಯೇ ವ್ಯಾಸರಾಯರು ಮಹಾರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಸಕಲ ರಾಜಮರ್ಯಾದೆಗಳಾದುವು. ಮಂಗಳ ವಾದ್ಯಗಳು ಭೋರ್ಗರೆದುವು.

ಶ್ರೀ ವಿದ್ಯಾರತ್ನಾಕರ ಸ್ವಾಮಿಗಳು, ವ್ಯಾಸರಾಯರು ಸಿಂಹಾಸನಾರೋಹಣ ಮಾಡಿದ ವಿಷಯವನ್ನು ಈ ಕೆಳಗಿನ ಶ್ಲೋಕದಲ್ಲಿ ಕ್ರೋಡೀಕರಿಸಿರುವರು.

ತತ್ಸಿಂಹಾಸನ ಮಾರುಹನ್ನೃಚತುರ ಭೂದಾನಾದಿ ಸಂಸಾಧಯಂ ।
ಸ್ತದ್ರಾಜ್ಯಂ ಪುನರರ್ಪಯಕ್ಷಿತಿಭೃತೇಕೃಷ್ಣಭಿಧಾನಾಯಸಃ ॥
ತತ್ಸಂವತ್ಸರಗಾಂತ್ಯಮಾಸಿ ಧವಳೇ ಪಕ್ಷೇ ಹರೇರ್ವಾಸರೇ ।
ಷ್ವಂತೇ ವ್ಯಾಸಸಮುದ್ರನಾಮಕಮದಾದ್ಗ್ರಾಮಂ ಸಚಾಸ್ಮೈ ನೃಪಃ ॥

ಅದೇ ವಿಕ್ರಮಸಂವತ್ಸರ ಫಾಲ್ಗುಣಮಾಸ ಶುಕ್ಲೈಕಾದಶಿಯ ದಿನ ಕೃಷ್ಣದೇವ ರಾಯನು ಶ್ರೀಮಠದ ಗೋಪಾಲಕೃಷ್ಣಸ್ವಾಮಿಗೆ ಈಗ ವ್ಯಾಸಸಮುದ್ರವೆಂಬ ಹೆಸರಾಗಿರುವ ಮದನಪಲ್ಲೀ ತಾಲ್ಲೂಕಿಗೆ ಸೇರಿದ ಭೂಭಾಗಗಳನ್ನು ದಾನಮಾಡಿದನು.

ಹೀಗೆ ಕೃಷ್ಣದೇವರಾಯನು ಕುಹುಯೋಗದಿಂದ ಮುಕ್ತನಾದನು. ಮಹಾತ್ಮರುಗಳ ತಪಶ್ಶಕ್ತಿಯಿಂದ ಪರಿಹಾರವಾಗದ ವಿಪತ್ತುಗಳಾವುವು. ತಪಸ್ವಿಗಳು ಪ್ರಸಂಗ ವಶಾತ್ ತಮ್ಮ ತಪಶ್ಶಕ್ತಿಯನ್ನಾದರೂ ಧಾರೆಯೆರೆದು ಲೋಕರಕ್ಷಣೆ ಮಾಡುವರು. ವಿಶ್ವಾಮಿತ್ರರು ತಮ್ಮ ತಪಶ್ಶಕ್ತಿಯಿಂದ ಪ್ರತಿಸ್ವರ್ಗವನ್ನೇ ನಿರ್ಮಿಸಿದರು. ಬ್ರಹ್ಮರ್ಷಿಗಳಾದ ವಸಿಷ್ಠರು ತಮ್ಮ ತಪಶ್ಶಕ್ತಿಯಿಂದ ಅಜೇಯವಾದ ಗಾಧಿರಾಜನ ಅಗಾಧ ಸೈನ್ಯವನ್ನು ಜಯಿಸಿದರು. ಅನೇಕ ಹರಿದಾಸರು ತಮ್ಮ ತಪಶ್ಶಕ್ತಿಯಿಂದ ಸತ್ತವರನ್ನು ಬದುಕಿಸಿದರು. ವ್ಯಾಸತತ್ವಜ್ಞರು ಕೃಷ್ಣಾ ತುಂಗಾನದಿಗಳ ಇಕ್ಕೆಲದಲ್ಲಿ ತುರುಷ್ಕರ ಸೈನ್ಯವು ಮುತ್ತಿ ಗದ್ವಾಲರಾಜನನ್ನು ಪೀಡಿಸಿದಾಗ ಚೈತ್ರಮಾಸದಂಥಾ ನಡುಬೇಸಿಗೆಯಲ್ಲಿ ಉಭಯ ನದಿಗಳಲ್ಲೂ ಮಹಾ ಪ್ರವಾಹ ಬಂದು ಆ ಶತ್ರುಸೈನ್ಯವು ಕೊಚ್ಚಿಹೋಗುವಂತೆ ಮಾಡಿ, ಆ ರಾಜನ ಆತಂಕವನ್ನು ಪರಿಹಾರಮಾಡಿದರು.* ಭರತಭೂಮಿಯಲ್ಲಿ ಇಂತಹ ಮಹಿಮೆಗಳು ಒಂದಲ್ಲ, ಎರಡಲ್ಲ, ಅನಂತವಾಗಿವೆ. ಈ ಕಾಲದ ಜನರಿಗೆ ತಮ್ಮ ಈ ಗತ ವೈಭವವನ್ನು ಸ್ಮರಿಸಿ ಸಂತೋಷಪಡುವುದಕ್ಕೂ ಬರದೆ ಪರಿಹಾಸ್ಯ ಮಾಡುವಷ್ಟು ಅಜ್ಞಾನವು ಕವಿದುಹೋಗಿದೆ. ಕಾಲಕ್ರಮದಲ್ಲಿ–'ನೀನು ನಿಮ್ಮಪ್ಪನ ಮಗನೆಂದರೆ, ನಾನು ನೋಡಿಲ್ಲ, ನನಗೆ ಜ್ಞಾಪಕವಿಲ್ಲ. ನೀನು ಹೇಳುವುದು ಸುಳ್ಳು' ಎನ್ನುವ ಕಾಲ ಬರುವುದರಲ್ಲಿ ಸಂಶಯವಿಲ್ಲ–ಬಂದರೆ ಆಶ್ಚರ್ಯವಲ್ಲ.

ಕೃಷ್ಣದೇವರಾಯನು ತನ್ನ ಕುಹುಯೋಗ ಗಂಡಾಂತರದಿಂದ ಮುಕ್ತನಾದ ತರುವಾಯ ತಿರುಪತಿಗೆ ಹೋಗಿ ಪತ್ನಿಯರ ಸಹಿತ ತನ್ನ ಪ್ರತಿಮೆಗಳನ್ನು ಮಾಡಿಸಿ, ದೇವಾಲಯದಲ್ಲಿ ನಿರಂತರ ಭಕ್ತವಿಗ್ರಹವಾಗಿರುವಂತೆ ಪ್ರತಿಷ್ಠಿಸಿ ಸ್ವಾಮಿಗೆ ಅಪರಿಮಿತವಾದ ಸೇವೆಗಳನ್ನು ಸಲ್ಲಿಸಿದನು. ಆ ಕಾಲದಲ್ಲೂ ವ್ಯಾಸರಾಯರಿಗೆ ದಾನಮಾಡಿದ ಶಾಸನಗಳಿವೆ. ವಿಜಯನಗರದ ರಾಜರೊಬ್ಬರೇ ವ್ಯಾಸರಾಯಮಠಕ್ಕೆ ಕೊಟ್ಟ ಜಹಗೀರುಗಳನ್ನು ಇದುವರೆಗೆ ದೊರೆತಿರುವಷ್ಟು ಶಾಸನಗಳ ಆಧಾರದಿಂದಲೇ ಒಟ್ಟುಗೂಡಿಸಿದರೆ, ಅದೇ ಒಂದು ಪ್ರತ್ಯೇಕ ರಾಷ್ಟ್ರವಾಗಬಹುದು. ಕರ್ಣಾಟಕದಲ್ಲಿ ಮಾತ್ರವಲ್ಲ. ತಮಿಳುನಾಡಿನಲ್ಲೂ ಅನೇಕ ಗ್ರಾಮಭೂಮಿಗಳಿವೆ. ಕಡೆಗೆ ವ್ಯಾಸಸಮುದ್ರವೊಂದಾದರೂ ಈಗ ಮಠದ ಅನು

---

* ಈ ಮಹೋಪಕಾರದ ಕೃತಜ್ಞತೆಗಾಗಿಯೇ ಗದ್ವಾಲ ಸಂಸ್ಥಾನಿಕರು ಇಂದಿಗೂ ವ್ಯಾಸತತ್ವಜ್ಞರ ಬೃಂದಾವನಕ್ಕೆ ಜಹಗೀರು ನಡೆಸುತ್ತಾ ಮಹಾಭಕ್ತರಾಗಿರುವರು.

ಭವದಲ್ಲಿದ್ದರೆ ವ್ಯಾಸರಾಯರುಮತವು ಸಂಪೂರ್ಣರಿತನಾಗಿರುತ್ತಿತ್ತು. ಅಧಿಕಾರಗಾರರ ಅನ್ಯಾಪೇಕ್ಷೆಯಿಂದು, ಪೀಠಕ್ಕೆ ಬಂದವರಿಗೆ ವ್ಯವಹಾರ ವಿಚಾರದಲ್ಲಿ ಉದಾಸೀನತೆಯಿಂದು. ಎಷ್ಟೋ ಸಂದರ್ಭದಲ್ಲಿ ಮಾಘಾನ ಕರದ ಹಣವು ಮಠದ ಆದಾಯದಲ್ಲಿರದೆ ಸರ್ಕಾರದ ಪಾಲಾಗಿ, ಈಗ ಬಂದು ಒಪ್ಪಿಸಬೇಕಾದ್ದು ಬಾಕಿ ಉಳಿದಿದ್ದು, ಅದು ಸರ್ಕಾರದ ಅಧಿಕೃತ ಕಣ್ತಪ್ಪಿಹೋಗಿದೆಯೆಂದರೆ ಎಂಥಾ ಆಶ್ಚರ್ಯಕರವಾದ ವಿಷಯ! ಮತ್ತೊಬ್ಬರಿಂದ ವ್ಯಾಸ ರಾಮಯ್ಯಂಥವರಿಗೆ ಬೇಕಾದಷ್ಟು ಹಣವು ಸ್ವಾಮಿ ಭಕ್ತಿಯಿಂದ ಒಳಗೊಂಡವಾಗಿ ಬಂದ ಕಾಲವದು; ಬೇಕೆಂದು ಬಿಟ್ಟ ಬೇಡಿದವರ ಗೆಯಾಬ್ಬರ ಭೂರಿ ನಿಶ್ಚಯದಂಥಾ ಕಾಲವದು.

ವ್ಯಾಸರಾಯರು ಮಹಾತ್ಮರು. ಪ್ರಾಂತ ಸಂಚಾರ ಬೇಡವು, ತಮ್ಮನ್ನು ಆಶ್ರಯಿಸಿದ ಶಿಷ್ಯವೃಂದಗಳ ಶುಶ್ರೂಷೆಯ ಫಲಗಳನ್ನು ತಪ್ಪಿಸಬೇಕೆಂದು ವ್ಯಾಸಸಮುದ್ರವೆಂಬ ದೊಡ್ಡ ಕೆರೆಯನ್ನು ಕಟ್ಟಿಸಿದರು. ಆ ಕೆರೆಯು ಸುಮಾರಾಗಿದೆ. ಯೋಜನಕಣಿದೆ ಕೆರೆಗಳಲಿ ಬಹು ದೊಡ್ಡದು. ವ್ಯಾಸರಾಯರು ಕಟ್ಟಿಸಿದ ವ್ಯಾಸಸಮುದ್ರವನ್ನು ಸೋಮನಾಥಕವಿಯು ಬಹು ವರ್ಣನಾತ್ಮಕವಾಗಿ ವರ್ಣಿಸಿದ್ದಾನೆ. ಇಂಗ್ಲೀಷ ಸರ್ಕಾರ ಸೆಟ್ಲ್‌ಮೆಂಟ್ ಕಾಲದಲ್ಲಿ ಶಿಥಿಲವಾಗಿದ್ದ ಆ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಲಾರದೆ ಸರ್ಕಾರದ ಅಧಿಕಾರಕ್ಕೆ ಒಪ್ಪಿಸಿಬಿಟ್ಟರು.

ವ್ಯಾಸಸಮುದ್ರಕ್ಕೆ ಒಳ್ಳೆ ಕಲ್ಲಿನಿಂದ ಕಟ್ಟಿದ ಒಂದು ದೊಡ್ಡ ತೂಬಿದೆ. ಅದನ್ನು ಮಾಡಿಸುವಾಗ—ಅಲ್ಲಿ ಅಡ್ಡವಾಗಿದ್ದ ಒಂದು ದೊಡ್ಡ ಬಂಡೆಯನ್ನು ತೆಗೆಸುವ ಬಗೆ ಹೇಗೆಂದು ವ್ಯಾಸರಾಯರು ಯೋಚಿಸುತ್ತಿದ್ದರು. ಅದೇ ಕಾಲದಲ್ಲಿ **ಕನಕದಾಸನು** ತನಗೆ ತಕ್ಕ ಗುರುಗಳನ್ನು ಹುಡುಕುತ್ತ ವ್ಯಾಸರಾಯರ ಬಳಿಗೆ ಬಂದನು. ಉಭಯರ ಪ್ರಥಮ ಸಂದರ್ಶನದ ಕಾಲದಲ್ಲಿ ನಡೆಯಿತೆಂಬ ವಿಚಿತ್ರವಾದ ಕಥೆಯೊಂದನ್ನು ಬಹುಕಾಲದಿಂದ ಜನರು ಹೇಳಿಕೊಂಡು ಬಂದಿರುವರು. ಭಕ್ತಿವಂತರು ಆ ಕಥೆಯನ್ನು ನಂಬುವರು. ಸ್ವಾರಸ್ಯವೇನು ? ಜನಶ್ರುತಿಯ ಕಟ್ಟುಕಥೆಗಳೆಂದು ಬೇಸರ ಪಡುವರು. ನಮ್ಮ ಉತ್ತರದೇಶಪ್ರವಾಸದಲ್ಲಿ ಬರೆದಿರುವಂತೆ ಕಂಡು ಕೇಳಿದ ಸಂಗತಿಗಳನ್ನು ಬಿನ್ನಹ ಮಾಡುವುದು ನಮ್ಮ ಕರ್ತವ್ಯವಾದುದರಿಂದ—ಕೇಳಿದ ದಂತಕಥೆಯನ್ನು ವಾಚಕರ ಮುಂದಿಡುವೆವು. ಭಕ್ತರ ಚರಿತ್ರೆಗಳೆಲ್ಲ ಅತಿಮಾನುಷಗಳೇ ಆಗಿವೆ. ಆ ಕಥೆಯ ವಿವರವೇನೆಂದರೆ:—

ವ್ಯಾಸರಾಯರು ಕೆರೆಯ ಏರಿಯ ಮೇಲೆ ನಿಂತುಕೊಂಡು—ತೂಬಿನ ಮಾರ್ಗಕ್ಕೆ ಅಡ್ಡವಾಗಿದ್ದ ಬಂಡೆಯನ್ನು ತೆಗೆಯುವ ಬಗೆಯೆಂತು ಎಂದು ಯೋಚಿಸುತ್ತಿದ್ದರಂತೆ! ಆಗ ಕನಕನು 'ಸ್ವಾಮಿ ನಾನೊಬ್ಬ ಬಡವಿದ್ದೇನೆ ಶಿಷ್ಯ' ಎಂದನಂತೆ. 'ನೀನ್ಯಾರು ಶಿಷ್ಯನೋ, ಎಲ್ಲಿಂದ ಬಂದೆಯೋ' ಎಂದು ವ್ಯಾಸರಾಯರು ಕೇಳಿದರಂತೆ! ಕನಕನು 'ನಾನು ಕುರುಬರ ಕನಕ ಕಾಗಿನೆಲೆಯಿಂದ ಬಂದೆ' ಎಂದನಂತೆ! ವ್ಯಾಸರಾಯರು 'ನಿನಗೇನಾಗಬೇಕೋ?' ಎಂದು ಕೇಳಿದರಂತೆ! ಕನಕನು 'ಮಂತ್ರೋಪದೇಶವಾಗಬೇಕು' ಎಂದನಂತೆ! 'ಕುರುಬನಿಗೇನು ಮಂತ್ರವೋ, ಕೋಣನಮಂತ್ರ' ಎಂದು ವ್ಯಾಸರಾಯರೆಂದರಂತೆ!

ಕನಕನು 'ಅಷ್ಟೇ ಸಾಕು ಸ್ವಾಮಿ ಉಪದೇಶ' ಎಂದನಂತೆ! ಕನಕನು ಒಡನೆಯೇ ಅಲ್ಲಿಂದ ಹೋಗಿ ಒಂದೆಡೆ ಕುಳಿತು 'ಕೋಣ ಕೋಣ' ಎಂದು ಜಪಿಸಿದನಂತೆ! ಯಮದೇವರ ಕೋಣ ಅವನೆದುರಿಗೆ ಬಂದು ನಿಂತಿತಂತೆ! ಕನಕನು-ಮರುದಿನ ಆ ಕೋಣವನ್ನೇ ವ್ಯಾಸ ರಾಯರೆದುರಿಗೆ ತಂದು ನಿಲ್ಲಿಸಿದನಂತೆ! 'ಇದರಿಂದ ಏನು ಕೆಲಸ ಮಾಡಿಸಲಿ?' ಎಂದು ಕೇಳಿದನಂತೆ! ಆಶ್ಚರ್ಯಚಕಿತರಾದ ವ್ಯಾಸರಾಯರು 'ಆ ಬಂಡೆಯನ್ನು ಎತ್ತಿಹಾಕಿಸು' ಎಂದನಂತೆ! ಕನಕನ ಆಜ್ಞೆಯಿಂದ ಕೋಣವು ತನ್ನ ಕೊಂಬುಗಳಿಂದ ಬಂಡೆಯನ್ನು ಭಾಗ ಭಾಗವಾಗಿ ತೆಗೆದೊಗೆಯಿತಂತೆ! ಕಲ್ಲಿನಲ್ಲಿ ಕೊಂಬಿನ ಗುರುತಾಗುವಂತೆ ಆ ಬಂಡೆಗಳ ಭಾಗಗಳಲ್ಲಿ ಕೋಣದ ಕೊಂಬುಗಳ ಗುರುತಾಯಿತಂತೆ! ಅಂತು ಆ ತೂಬಿನ ಬಳಿ ಈಗಲೂ ಬಿದ್ದಿರುವ ಬಂಡೆಗಳಲ್ಲಿ ಕೋಣದ ಕೊಂಬಿನ ಗುರುತೆಂದು ತೋರಿಸುವ ಪರಿಪಾಠ ವಿದೆ. ಕನಕದಾಸರನ್ನು ಯಮಾಂಶರೆಂದು ಹೇಳುತ್ತಾರೆ.

ಭಕ್ತವಿಜಯವು ವೈಚಾರಿಕರ (Rationalists) ದೃಷ್ಟಿಯಿಂದಲೇ ಬರೆದ ಪುಸ್ತಕವಲ್ಲ. ಅತಿಮಾನುಷ ಮಹಿಮೆಗಳಿಲ್ಲದ ಭಕ್ತರ ಚರಿತ್ರೆಯಿಲ್ಲ. ಅತಿಮಾನುಷ ಮಹಿಮೆಗಳು ಧರ್ಮವಿರೋಧಿಗಳಾಗಿದ್ದರೆ, ಬಹು ಜನರು ಸಂಶಯಗ್ರಸ್ತರಾಗುವರು. ಭಾವನೆಗಳನ್ನು ಭಾಷೆಯಲ್ಲಿಡುವಾಗ ರೂಪಕವಾಗಿಡುವುದು ಭಾರತೀಯ ಭಾಷಾಪದ್ಧತಿ. ಬುದ್ಧಿಪೂರ್ವಕಾರ್ಯಗಳು ಒಡನೆಯೇ ಕೈಗೂಡಿದರೆ ಅತಿಮಾನುಷವೆಂದೆಣಿಸಿ ಭಾಷೆಯಲ್ಲಿ ಮತ್ತಷ್ಟು ಪುಷ್ಟೀಕರಿಸಿ ಬರೆಯುವುದೊಂದು ಪದ್ಧತಿ. ಈ ಪದ್ಧತಿಗಳೇನೆಂಬುದನ್ನು ವಾಚಕರು ಯೋಚಿಸಿ ಪರಿಶೀಲಿಸಿದರೆ, [illegible] ಮನಸ್ಸಿನಲ್ಲಿಟ್ಟುಕೊಳ್ಳಬಹುದಾದ ವಿಷಯಗಳಿಗೆ ಕೊರತೆ ಬರುವುದಿಲ್ಲ.

ಅತಿಮಾನುಷ ಮಹಿಮೆಗಳ ವಿಷಯದಲ್ಲಿ ಮತ್ತೊಂದು ಮಾತು

ದಿನಂಪ್ರತಿ ಅತಿಮಾನುಷ ಚರ್ಯೆಗಳು ನಡೆಯುತ್ತಿರುವ ತಿರುಪತಿ ಮಂತ್ರಾಲಯ ಗಳಂಥಾ ಕ್ಷೇತ್ರಗಳಿವೆ. ಅಲ್ಲಿಗೆ ಹೋಗುವ ಯಾತ್ರಿಕರನ್ನು ಕೇಳಿದರೆ, ನನ್ನ ಹರಕೆ ಇಂಥಾದ್ದಿತ್ತು, ಸಲ್ಲಿಸುವುದು ತಡವಾಯಿತು; ಅಥವಾ ಮರೆತುಹೋಯಿತು. ನನಗೆ ತೊಂದರೆಯಾಯಿತು. ಮತ್ತೆ ಸ್ವಪ್ನ ಸೂಚನೆಯಾಯಿತು. ಆ ಹರಕೆಯನ್ನು ಸಲ್ಲಿಸಲು ಹೋಗುತ್ತೇನೆಂದು ಹೇಳುತ್ತಾರೆ. ಸಾವಿರಾರು ಮೈಲಿಗಳಷ್ಟು ದೂರದಿಂದ ಸಾವಿರಾರು ರೂಪಾಯಿಗಳ ಖರ್ಚುಮಾಡಿಕೊಂಡು, ಯಾತ್ರಿಕನಾಗಿ ಬರುವವರ ಮಾತನ್ನು ನಂಬ ದಿರಲು ಬೇರೆ ಏನೂ ಕಾರಣವಿರುವುದಿಲ್ಲ. ಲೇಖಕನು ಸ್ವತಃ ಇಂಥಾ ಸಾವಿ ರಾರು ಸಂದರ್ಭಗಳನ್ನು ತಿರುಪತಿಯಲ್ಲಿ ನೋಡಿರುವನು. ಲೇಖಕನು ತಿರುಪತಿಗೆ ಹೋದಾಗ ಕಂಡಂತೆ ಒಬ್ಬ ಗೃಹಸ್ಥನು [illegible] ತಿರುಪತಿಗೆ ಬಂದನು. ಆತನಿಗೆ ಬಿಡಾರವನ್ನು ನನ್ನ [illegible] ವಿ. ಕೆ. ನಾರಾಯಣರಾವ್, ಬಿ.ಎ., ಬಿ.ಎಲ್. ([illegible] ಅಸಿಸ್ಟೆಂಟ್ ಕಮಿಷನರು.)

ಮಾಡಿಕೊಟ್ಟರು. ಗೃಹಸ್ಥನು ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು, ಹೆಡ್ ಅಕೌಂಟೆಂಟ್ ಆಗಿದ್ದನು. ಬಹು ವರ್ಷಗಳಿಂದ ಮನೆಯಲ್ಲಿದ್ದ ಮುಡುಪನ್ನು ಒಪ್ಪಿಸುವುದರ ವಿನಾ ಆತನಿಗೆ ಬೇರೆ ಉದ್ದೇಶವಿರಲಿಲ್ಲ. ಸೇವೆಯನ್ನು ಮುಗಿಸಿ ಬೆಟ್ಟದಿಂದಿಳಿಯಲು ಕೂಲಿಕಾರರನ್ನು ಕರೆತಂದು ಪ್ರಯಾಣ ಸನ್ನದ್ಧನಾದನು. ಆತನ ಮಗನು, ತಕ್ಷಣ ಬಾಗಿಲು ತಗಲಿದ ನೆಪವಾಗಿ ಜ್ವರಪೀಡಿತನಾದನು. ಪ್ರಯಾಣ ನಿಂತಿತು. ಎರಡು ಮೂರು ದಿವಸ ಅಲ್ಲಿನ ಆಸ್ಪತ್ರೆಯಲ್ಲಿ ಔಷಧ ತಂದುಕೊಟ್ಟರೂ ಜ್ವರವೇರುತ್ತಲೇ ಬಂತು. ಕಳವಳದ ಮಾತಿಗಾರಂಭವಾಗಿ ರೋಗಿಯು ನಿಶ್ಚೇಷ್ಟಿತನಾದನು. ಯಜಮಾನನು–'ದೇವ, ನಿನ್ನ ಸೇವೆಗೆ ಬಂದರೆ ಮಗನಿಗೀಪರಿ ವಿಪತ್ತು ಬರಬೇಕೆ' ಎಂದುಕೊಂಡು ವ್ಯಸನಾಕ್ರಾಂತನಾದನು. ರೋಗಿಯು 'ನನ್ನ ಹನ್ನೆರಡು ರೂಪಾಯಿ ಕೊಟ್ಟುಹೋಗೆ'ಂದೊದರಿದನು. ಯಜಮಾನನು 'ಅದ್ಯಾವ ಹನ್ನೆರಡು ರೂಪಾಯಿ'ಯೆಂದನು. 'ನಿನ್ನ ಮಗನು ಟ್ರೈನಿಂಗ್ ಕಾಲೇಜಿನ ಸ್ಕಾಲರ್‌ಷಿಪ್ ಸಿಕ್ಕಿದರೆ ಒಂದು ತಿಂಗಳ ಹಣವನ್ನು ಮುಡುಪು ಹಾಕುವೆನೆಂದು ಬೇಡಿಕೊಂಡದ್ದು' ಎಂದು ರೋಗಿಯು ಹೇಳಿದನು. ಯಜಮಾನನಿಗೆ ಈ ಸಂಗತಿ ತಿಳಿದಿರಲಿಲ್ಲ. ತಂದೆ ಆಕ್ಷೇಪಿಸುವನೆಂಬ ಭಯದಿಂದ ಮಗನು ತಿಳಿಸಿರಲಿಲ್ಲ. ಯಜಮಾನನು 'ಅವಶ್ಯ ಕೊಡುತ್ತೇನೆ. ಮಗನಿಗೆ ವಾಸಿಯಾಗಲಿ' ಎಂದು ಹರಕೆಮಾಡಿದನು. ಸಾಯಂಕಾಲವೇ ಜ್ವರವಿಳಿಯಿತು. ಮರುದಿನ ಹನ್ನೆರಡು ರೂಪಾಯಿ ಮುಡುಪು ಮಾಡಿ ತಂದೆಮಕ್ಕಳು ಬೆಟ್ಟದಿಂದಿಳಿದರು. ಇದಕ್ಕೇನೆನ್ನಬೇಕು! ತಿರುಪತಿಯಲ್ಲಿ ಇಂಥಾ ಸಂದರ್ಭಗಳೆಷ್ಟೋ ದಿನಂಪ್ರತಿ ನಡೆಯುತ್ತವೆ.

ಶ್ರೀ ವ್ಯಾಸರಾಯರು, ವ್ಯಾಸಸಮುದ್ರವನ್ನು ಕಟ್ಟಿಸಿದನಂತರ ವಿಜಯನಗರಕ್ಕೇ ಬಂದು ವಾಸಮಾಡಿದರು. ಆ ಸಮಯದಲ್ಲಿ ಉಡುಪಿಯಿಂದ ವಾದಿರಾಜರು ವಿದ್ಯಾ ವ್ಯಾಸಂಗಕ್ಕೆಂದು ವ್ಯಾಸರಾಯರ ಬಳಿಗೆ ಬಂದರು. ವಾದಿರಾಜರು ವಿಜಯೀಂದ್ರರಿಗೆ ಸರಿಸಮಾನರಾಗಿದ್ದರು. ವಾದಿರಾಜರಲ್ಲಿದ್ದ ಒಂದು ವಿಶೇಷ ಗುಣವೆಂದರೆ ಕನ್ನಡ ಪ್ರೇಮ. ವಾದಿರಾಜರು ಕನ್ನಡದಲ್ಲಿ ಬಹು ಗ್ರಂಥಗಳನ್ನು ಬರೆದಿದ್ದಾರೆ. ವಾದಿರಾಜರ ಚರಿತ್ರೆಯು ಪ್ರತ್ಯೇಕ ಬರುವುದರಿಂದ ಅದರ ವಿಸ್ತಾರವನ್ನಿಲ್ಲಿ ಮಾಡುವುದಿಲ್ಲ. ವಾದಿರಾಜರೂ ವ್ಯಾಸರಾಯರೂ ಕನಕದಾಸರೂ ಪುರಂದರದಾಸರೂ ಕಲೆತರೆಂದರೆ ಅಂದು ಏನಾದರೊಂದು ಚಮತ್ಕಾರವಾಗುತ್ತಿತ್ತು. ಹೇಳುವುದೇನು! ನಾಲ್ವರೂ ಬ್ರಹ್ಮಜ್ಞಾನಿಗಳು! ನಾಲ್ವರೂ ಭಗವಂತನೊಡನೆ ಪರಿಪರಿಯಾಗಿ ಲೀಲಾವಿನೋದ ಮಾಡಿದವರು. ಒಂದುದಿನ ವ್ಯಾಸರಾಯರು ಪುರಂದರದಾಸರನ್ನೂ ವಾದಿರಾಜರನ್ನೂ ಕರೆದುಕೊಂಡು ತುಂಗಭದ್ರೆಯನ್ನು ದಾಟಿ ನದಿಯ ಆಚೆಯ ದಡದಲ್ಲಿ ಒಂದು ನಿರ್ಜನ ಪ್ರದೇಶದಲ್ಲಿ ಮಾತನಾಡುತ್ತಾ ಕುಳಿತರು. ಅವರ ಮಾತೆಂದರೆ, ಪರಸ್ಪರರ ಭಗವದನುಭವಗಳಲ್ಲದೆ ಬಿಡಿ ಮಾತುಗಳಲ್ಲ, ಮೂವರೂ ಮಾತನಾಡಿಕೊಳ್ಳುತ್ತಾ, ಇದ್ದಕ್ಕಿದ್ದಹಾಗೇ ನಗುವುದು: ಇದ್ದಕ್ಕಿದ್ದಹಾಗೇ ಅಳುವುದು; ಮತ್ತೆ ಮಾತಿಗಾರಂಭಿಸುವುದು: ಹೀಗೆ ಮಾಡುತ್ತಿದ್ದರು. ಅದೇ ಸ್ಥಳದಲ್ಲಿ ಒಬ್ಬ ಮುದುಕ ಕುರುಬನು ತನ್ನ ಕುರಿಗಳ ಮಂದೆಯನ್ನು ಮೇಯಿಸುತ್ತಾ

ಇವರ ಚರ್ಯೆಗೆ ಬೆರಗಾಗಿ ಅವರನ್ನೇ ನೋಡುತ್ತಾ ಕುಳಿತಿದ್ದನು. ಪುರಂದರದಾಸರು ಈ ಸಮಯದಲ್ಲಿ ಕನಕನಿದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು ವ್ಯಾಸರಾಯರಿಗೆ ಹೇಳಿದರು. ವ್ಯಾಸರಾಯರು, ಹೌದು ಹೌದು, ನಮ್ಮೆಲ್ಲರಿಗಿಂತ ಕನಕನು ಬಲು ಚಮತ್ಕಾರಿ. ಅವನಲ್ಲಿ ದೈವಾನುಗ್ರಹ ಬಹಳವೆಂದರು. ವಾದಿರಾಜರು ಅವನನ್ನೂ ಕರೆಸಿವರಾಯಿತೆಂದರು. ಕರೆಯುವರ್ಯಾರೆಂದು ವ್ಯಾಸರಾಯರು ಕೇಳಿದರು. ಯಾರ್ಯಾಕೆ, ಆ ಮುದಕನಿದ್ದಾನೆಂದು ದಾಸರು ಹೇಳಿದರು. ವ್ಯಾಸರಾಯರು–'ಎಲೋ ಮುದುಕಾ, ಇಲ್ಲಿ ಬಾ' ಎಂದು ಅವನನ್ನು ಕರೆದರು. ಅವನಿಗೆ ವ್ಯಾಸರಾಯರು ರಾಜಗುರುಗಳೆಂಬುವುದು ಗೊತ್ತಿತ್ತು. ಅದರಿಂದ ಬರುವುದಕ್ಕೆ ಹಿಂದೆಗೆದನು. ವ್ಯಾಸರಾಯರು ಹೆದರಬೇಡ, ಇಲ್ಲಿ ಬಾರೆಂದು ಮತ್ತೆ ಕರೆದರು.

ಮುದುಕ :—ಯಾಕೆ ಮಾಸ್ವಾಮಿ! ಇನ್ನುಮೇಲೆ ಕುರಿ ಮೆಯ್ಸಾಕಿಲ್ಲ. ಇವತ್ಗೆ ನನ್ನ ಬುಡಿ!

ಸ್ವಾಮಿಗಳು :—ಇಲ್ಲವೋ ನಿತ್ಯ ನೀನು ಕುರೀ ಇಲ್ಲೇ ಮೆಯ್ಸು! ನಾವೊಂದು ಕೆಲ್ಸಾ ಹೇಳ್ತೀವೆ, ಮಾಡ್ತೀಯೇನೋ?

ಮುದುಕ :—ಕುರೀ ಕಾಯೋರು?

ಸ್ವಾಮಿಗಳು :—ನಾವು ಮೂವರೂ ನೋಡ್ಕೊಳ್ತೀವೆ. ನಾವು ಹೇಳಿದ್ದು ಮಾಡು.

ಮುದುಕ :—ದೊಡ್ಡೋಳ ಗುರ್ಗೋಳು ಕುರೀ ಕಾಯ್ತಾರಾ ಬುದ್ಧೀ?

ಸ್ವಾಮಿಗಳು :—ಕಾಯ್ತೀವೆ ಕಣೋ, ನಮ್ಮ ಕೆಲಸ ಸ್ವಲ್ಪ ಮಾಡಿಕೊಡು.

ಮುದುಕ :—ಚಂಜೆಯಾಯ್ತು ಸ್ವಾಮಿ ನಾನು ಮುದುಕ!

ಸ್ವಾಮಿಗಳು :—ಚಿಂತೆಯಿಲ್ಲ, ನೀನು ಕೇಳಿದ್ದು ಕೊಡ್ತೀವೆ. ನಾವು ಹೇಳಿದ ಕೆಲಸ ಮಾಡು.

ಮುದುಕ :—ಕೇಳಿದ್ದು ಕೊಡ್ತೀರಾ ನೀವು ಸ್ವಾಮ್ಗೋಳು!

ಸ್ವಾಮಿಗಳ :—ಕೊಡ್ತೇವೋ, ಹೊತ್ತಾಗ್ತದೆ. ಬೇಗಬೇಗ ಮಾಡ್ಬೇಕು. ಕನಕನ್ನ ಬಲ್ಲೇನೋ ನೀನು?

ಮುದುಕ :—ಬಲ್ಲೆ ಮಾಸ್ವಾಮಿ. ಅವ ನಮ್ಮೋನು! ನಿಮ್ತಾವ ಬರ್ತಾನೆ.

ಸ್ವಾಮಿಗಳು :—ಹೋಗಿ, ಗುರ್ಗೋಳು ಇಲ್ಲಿ ಕುಂತವರೆ, ನಿನ್ನ ಕರೀತಾರೇಂತ ಹೇಳಿ, ಅವನ್ನ ಕರ್ಕೊಂಡು ಬರ್ಬೇಕ್ನೋಡು!

ಮುದುಕ :—ಆಗಲಿ ಸ್ವಾಮಿ, ನಿಮ್ಮಾದವೇ ಗತಿ!

ಮುದುಕನು ದೋಣಿಯಲ್ಲಿ ನದಿಯನ್ನು ದಾಟಿ ಕನಕನ ಬಳಿಗೆ ಬಂದನು. ಆಚೆಯ ದಡದಲ್ಲಿ ಸ್ವಾಮಿಗಳು ನಿನ್ನ ಕರೆಯುತ್ತಾರೆಂದು ತಿಳಿಸಿದನು. ಮೂರು ಜನರೂ ಅಲ್ಲೇನು ಮಾಡುತ್ತಿದ್ದರೆಂದು ಕನಕನು ಕೇಳಿದನು. 'ಅದೇನೋಪ್ಪಾ! ಮುನ್ನರೂ

ಇದ್ದಿಷ್ಟ ಹಾಗೇ ಅತ್ತಾರೆ, ನಗ್ತಾರೆ!' ಎಂದು ಮುದುಕನಾಡಿದನು. 'ಸರಿಸರಿ, ನಿನಗೇನು ಕೊಡುತ್ತೇನೆಂದು ಸ್ವಾಮಿಗಳು ಹೇಳಿದರು' ಎಂದು ಕನಕನು ಕೇಳಿದನು. 'ಕೊಡೋದೇ? ಕೇಳಿದ್ದುಕೊಡ್ತೀನಂತೆ' ಸ್ವಾಮಿಗಳು ಹೇಳಿದರೆಂದು ಮುದುಕನಾಡಿದನು. 'ನೀನೇನು ಕೇಳ್ತೀ' ಎಂದು ಕನಕನು ಪುನಃ ಪ್ರಶ್ನೆಮಾಡಿದನು. 'ಕೇಳೋದೇನಪ್ಪ, ಬಟ್ಟೆಬರೆ, ಗುಡಿಸಲು, ಅವದ್ಯೆಟ್ರಿ ಹೈ – ಮಟ್ರಿ ಹೈ, ದೊಡ್ಡಸುಸ್ರು ಕೊಟ್ಟಿದ್ದಿಲ್ಲೇ' ಎಂದು ಮುದುಕನು ನುಡಿದನು. ಆಗ ಕನಕನು 'ಹಾಗಲ್ಲವೋ ಅವರನ್ನ ಸುಮ್ನೇ ಬಿಡಬೇಡ. ಬಲವಾಗಿ ಕೇಳು' ಎಂದು ಹೇಳಿದನು. ಮುದುಕನು 'ಅಲ್ಲಾಣಪ್ಪ, ಈಗ ನೀನು ಅವರನ್ನೇ ಕಾಣೋಕೋದಿಲ್ಲ ಗಿದ್ದೇಕಟ್ಕೊಂಡೂ ಮುಂದೇ ಮೆಟ್ಟಿಗೆಬಿಟ್ಟು, ನಿನಗೇನ್ಬೇಕಾಗಿದೆ? ಅದ ಹೇಳಪ್ಪ' ಎಂದು ಮುದುಕನು ಮತ್ತೆ ಪ್ರಶ್ನೆಮಾಡಿದನು.

ಕನಕ :—ನನ್ಮಾತು ನೀ ಕೇಳ್ತೀಯೋ ಇಲ್ಲವೋ ?

ಮುದುಕ :—ಕೇಳ್ತೀನಪ್ಪಾ ! ನೀನು ಬಿಡಬೇಡ !

ಕನಕ :—ಹಾಗಾದರೆ ಒಂದು ಕೆಲಸಮಾಡು. ದೊಡ್ಡ ಸ್ವಾಮಿಗಳು ನಿನಗೇನು ಬೇಕೆಂದು ಕೇಳ್ತಾರೆ. ಸ್ವಾಮಿ, ನಿಮ್ಮ ಮೂವರೂ ಅತ್ತು ನಕ್ಕು ಇದ್ರಲ್ಲಾ, ಅದ್ಯಾಗೊಂದೀಟು, ಇದ್ಯಾಗೊಂದೀಟು ಕೊಡಿ ಅಂತಾ ಕೇಳ್ಬೇಕು.

ಮುದುಕ :—ಹಾಂಗಂದ್ರೇನಪ್ಪಾ ಕನಕಪ್ಪಾ, ನಂಗೆ ತಿಳಿಯಾಕಿಲ್ಲ !

ಕನಕ :—ಹಾಗೆ ಕೇಳು. ನಿನಗೆ ಮುಂದಿನ ಜನ್ಮಕ್ಕೆ ಒಳ್ಳೇದಾಗ್ತದೆ.

ಮುದುಕ:—ಏನಪ್ಪಾ ಮುಂದಿನ್ಜನ್ಮಕ್ಕೆ ನಾನೂ ನಿನ್ಹಾಂಗೇ ಹಾಡ್ತಾ ಇರ್ತೀನೇನಪ್ಪಾ ?

ಕನಕ :—ಆಗ್ತೀ ಕಾಣೋ, ಹೇಳ್ದಾಂಗೆ ಕೇಳೋ !

ಮುದುಕ :—ಆಗ್ಲಪ್ಪ !

ಕನಕನೂ ಮುದುಕನೂ ನದಿಯನ್ನು ದಾಟಿ ಸ್ವಾಮಿಗಳ ಬಳಿಗೆ ಬಂದರು. ಕನಕನು ಮೂವರನ್ನೂ ನೋಡುತ್ತಲೇ ನಗುತ್ತಲೇ ನಮಸ್ಕಾರಮಾಡಿದನು. ಕನಕನ ನಗುವಿಗೆ ಮೂವರ ನಗೆಗಳಿಂದ ಪ್ರತ್ಯುತ್ತರವಾಯಿತು.

ಸ್ವಾಮಿಗಳು, ಪಾಪ! ನಮಗಾಗಿ ಶ್ರಮಪಟ್ಟ ಈ ಮುದುಕನಿಗೆ ಅಪ್ಪಣೆ ಕೊಟ್ಟು ಕಳುಹಿಸೋಣವೆಂದು 'ಏನಪ್ಪಾ, ನಿನಗೇನು ಬೇಕೋ ಕೇಳು !' ಎಂದರು.

ಮುದುಕ :—(ಧೈರ್ಯ ಬಂದು, ಕನಕನ ಮಾತನ್ನು ಜ್ಞಾಪಿಸಿಕೊಂಡು) ಸ್ವಾಮಿ, ನೀವು ಮೂವರೂ ನಕ್ಕು ಅತ್ತು ಇದ್ರಲ್ಲಾ! 'ಅದ್ಯಾಗೊಂದೀಸು, ಇದ್ಯಾಗೊಂದೀಸು' ಕೊಡಿ ಬುದ್ಧಿ.

ಸ್ವಾಮಿಗಳು :—ಇದು ನಿನ್ನ ಮಾತಲ್ಲ !

ಪುರಂದರ :—ಇದ್ದಾನಲ್ಲಾ ಕನಕ !

ಸ್ವಾಮಿಗಳು :—ಹೌದು, ಹೌದು.

ವಾದಿರಾಜರು :—ನೋಡಿದಿರೋ, ಕನಕ ಬರುತ್ತಿದ್ದಹಾಗೇ ಸ್ವಾರಸ್ಯ ಹುಟ್ಟಿದ್ದು ?

ಸ್ವಾಮಿಗಳು :—ಮುದುಕಾ, ನಿನಗೀಮಾತು ಯಾರು ಹೇಳಿಕೊಟ್ಟರೋ ?

ಮುದುಕ :—(ಕನಕನನ್ನು ನೋಡುತ್ತಾ) ಸ್ವಾಮಿ ಇವನೇ !

ಸ್ವಾಮಿಗಳು :—ಅದರಿಂದ ನಿನಗೇನಾಗುತ್ತದೋ ?

ಮುದುಕ :—ಸ್ವಾಮಿ, ಏನಾದ್ರಾಗ್ಲಿ, ಕನಕಪ್ಪಾ ದೇವರ ಮನಸ್ಯಾ. ಅವ ನ್ಮಾತು ಸುಳ್ಳಾಗಾಕಿಲ್ಲ. ಅಷ್ಟೇ ಕೊಡೀ ಸ್ವಾಮಿ.

ಸ್ವಾಮಿಗಳು :—ಹಾಗೇ ಆಗಲಿಪ್ಪಾ, ನಾವು ಮೂವರೂ ಅದನ್ನೇ ನಿನಗೆ ಕೊಟ್ಟಿವು.

ಮುದುಕ :—ಸಾಕು ಸ್ವಾಮಿ, ನಾನು ಹೋಗಿಬರ್ತೀನಿ.

ಮುದುಕನು ಮಂಡೆಯನ್ನು ತಿರುಗಿಸಿಕೊಂಡು ರೊಪ್ಪದ ಕಡೆಗೆ ನಡೆದನು. ಆ ನಿಮಿಷದಿಂದಲೇ ಅವನ ಪ್ರಕೃತಿಯು ಬದಲಾಯಿಸಿತು. ದೇವರ್ನಾಮಾದಿಯಾಗಿ ಮನೆಯ ಕೆಲಸಗಳನ್ನು ಮರೆತು ತಿರುಗಿದನು. ಮೊದಮೊದಲು ಅವನನ್ನು ಹುಚ್ಚನೆಂದು ಭಾವಿಸಿದ್ದ ಹಳ್ಳಿಗಳ ಜನರು, ಬರಬರುತ್ತಾ ಭಾಗವತಪುರುಷನೆಂದು ತಿಳಿದು ಗೌರವಿಸುತ್ತ ಬಂದರು. ಈ ಪುಣ್ಯಾತ್ಮನೇ ಮುಂದಿನ ಜನ್ಮದಲ್ಲಿ ಪ್ರಸಿದ್ಧ ಜಗನ್ನಾಥದಾಸರಾದರು.

ಜಗನ್ನಾಥದಾಸರು ತಮ್ಮ ಜನ್ಮಗಳ ವಿವರವನ್ನು ಹೇಳುತ್ತಾ, ಹಿಂದೆ ಕುರುಬನಾಗಿದ್ದು, ಶ್ರೀ ವ್ಯಾಸರಾಯರ ಕರುಣಾನುಗ್ರಹದಿಂದ ಈ ಜನ್ಮದಲ್ಲಿ ಬಂದೆನೆಂದು ಒಂದು ದೇವರನಾಮದಲ್ಲಿ ಹೇಳಿಕೊಂಡಿದ್ದಾರೆ.

ವ್ಯಾಸರಾಯರು ಲಕ್ಷಪ್ರಾಣಪ್ರತಿಷ್ಠೆ ಮಾಡಿದರೆಂಬ ಪ್ರತೀತಿ ಬಹುಕಾಲದಿಂದಲೂ ಇದೆ. ಕ್ರಿ. ೧೫೨೦ರಲ್ಲಿ ೭೩೨ ಪ್ರಾಣಪ್ರತಿಷ್ಠೆ ಮಾಡಿದ ಮಾತಿಗೆ ವಿದ್ಯಾರತ್ನಾಕರರ ಪ್ರಮಾಣವಚನವಿರುವಂತೆ ಲಕ್ಷಪ್ರಾಣಪ್ರತಿಷ್ಠೆಗೆ ಪ್ರಮಾಣವಿರುವುದಿಲ್ಲ. ವ್ಯಾಸರಾಯರು ಸಂಚರಿಸಿದ ಸ್ಥಳಗಳಲ್ಲಿ, ಭಕ್ತವಿಗ್ರಹವಿರಬೇಕೆಂದು ಅನೇಕ ಸಹಸ್ರ ಮಾರುತಿಯ ಪ್ರತಿಷ್ಠೆ ಮಾಡಿದರೆಂಬ ಮಾತಿಗೆ ಸಂಶಯವಿಲ್ಲ. ಪ್ರಾಯಶಃ ಯಾವ ಪುರಾತನ ಸ್ಥಳವಾದರೂ ವ್ಯಾಸಪ್ರತಿಷ್ಠಾ ಪ್ರಾಣದೇವರಿಂದ ರಹಿತವಾಗಿಲ್ಲ. ಪ್ರಬಲ ವಿಷ್ಣು ಕ್ಷೇತ್ರಗಳಲ್ಲಿ ಅವರು ಮಾರುತಿಯನ್ನು ಪ್ರತಿಷ್ಠಿಸದೆ ಬಿಡಲಿಲ್ಲ.

ವ್ಯಾಸರಾಯರು ಮಾಡಿದ ಸಾವಿರಾರು ದೇವರ ನಾಮಗಳಲ್ಲಿ ಈಗ ನೂರಾರು ದೇವರ ನಾಮಗಳೂ ಉಪಲಬ್ಧವಿಲ್ಲ. ವಿವಿಧ ಭಾವಗಳಲ್ಲಿ ವಿವಿಧ ರಾಗ ತಾಳಗಳಲ್ಲಿ ರಚಿಸಿರುವ ಪದಗಳನ್ನು ನೋಡಿದರೆ, ಆ ಮಹನೀಯರ ಸಂಗೀತಜ್ಞಾನವೆಷ್ಟುಮಟ್ಟಿನದು ಎಂಬುದು ಗೊತ್ತಾಗುತ್ತದೆ. ಪ್ರತಿಪದಗಳಲ್ಲೂ ಒಡೆದು ಮೂಡುವ ಭಕ್ತಿ ಭಾವವನ್ನು ನೋಡಿದರೆ ಅವು ಜನ ಮೆಚ್ಚಿಕೆಗಾಗಿ ಕಟ್ಟಿದ ಪದಗಳಲ್ಲ—ನುಡಿದ ಮಾತುಗಳಲ್ಲ ಎಂಬುದು

ವ್ಯಕ್ತವಾಗುತ್ತದೆ. ಮಾತನಾಡಿದಂತೆಯೇ ಹಾಡುವ ಪದ್ಧತಿಯು ಹರಿದಾಸರದಾದುದರಿಂದ ವ್ಯಾಕರಣದ ಕಡೆಗೆ ಅವರು ಯಾವಾಗಲೂ ಹೆಚ್ಚು ಗಮನ ಕೊಡುವುದಿಲ್ಲ. ಎಲ್ಲರೂ ತಿಳಿದ ಅಥವಾ ಹಾಡುವ ಪದವಾದರೂ ರಸಪುಷ್ಟಿಗಾಗಿ ಅದನ್ನೇ ಈ ಕೆಳಗೆ ಮಾದರಿಗಾಗಿ ಕೊಟ್ಟಿದೆ.

ರಾಗ—ಮೋಹನ—ಛಾಪುತಾಳ

ಅಂತರಂಗದಲ್ಲಿ । ಹರಿಯ ಕಾಣದವ । ಹುಟ್ಟು ಕುರುಡ–ನೋ ॥
ಸಂತತ ಶ್ರೀಕೃಷ್ಣ ಚರಿತೆ ಕೇಳದವ । ಜಡಮತಿ ಕಿವುಡ–ನೋ । ಎಂದೆಂದಿಗು ॥ ಪ.

ಕುರುವೀರಸಖನಾದ । ಕೃಷ್ಣನ ಮುಂದೆ । ಕುಣಿಯದವನೆ ಕುಂಟನೋ !
ನರಹರಿ ಚರಣೋದಕ । ಧರಿಸದ ಶಿರ । ನಾಯುಂಡ ಹೆಂಚು ಕ–ಣೋ ॥
ಹರುಷದಿಂದಲಿ ನರಹರಿಯ ಪೂಜೆಯ ಮಾಡದವನೆ ಕೈಮುರುಕ–ನೋ ।
ಸುರವರ್ಯ ಕೃಷ್ಣ ಪ್ರಸಾದವಲ್ಲದ ಊಟ । ಸೂಕರ ಭೋಜನವೋ । ಎಂದೆಂದಿಗು ೧

ಅಮರೇಶ ಕೃಷ್ಣ ಗರ್ಪಿತವಲ್ಲದ ಕರ್ಮ । ಅಸತಿಯ ವ್ರತನೇಮವೋ ।
ರಮೆಯರಸಗೆ ಪ್ರೀತಿಯಿಲ್ಲದ ವಿತರಣೆ । ರಂಡೆ ಕೊರಳ ಸೂತ್ರವೋ ॥
ಕಮಲನಾಭನ ಪಾಡಿಪೊಗಳದ ಸಂಗೀತ । ಗಾರ್ದಭ ರೋದನವೋ ।
ಮಮತೆಯಿಂದಲಿ ಕೇಶವಗೆ ನಮಸ್ಕಾರ । ಮಾಡದವನೆ ಮೃಗವೋ ।
ಎಂದೆಂದಿಗು ೨

ಸುರಧೇನುವಿರಲಾಗಿ * ಶ್ವಾನನ ಹಾಲನು । ಕರೆದು ಕುಡಿಯಬೇಡವೋ ।
ಕರಿತುರಗವು ಇರಲಾಗಿ ಕೆಡಹುವಂಥ । ಕತ್ತೆಯೇರಲಿ ಬೇಡವೋ ॥
ಜರೆ ಹುಟ್ಟು ಮರಣವ ತೊಡೆವ ಸುಧೆಯ ಬಿಟ್ಟು । ಸುರೆಯಸೇವಿಸಬೇಡವೋ ।
ಪರಮ ಪದವನೀವ ಸಿರಿಕೃಷ್ಣನಿರಲಾಗಿ । ನರರ ಸೇವಿಸಬೇಡವೋ । ಎಂದೆಂದಿಗು ॥ ೩

ವ್ಯಾಸರಾಯರ ಕಾಲದಲ್ಲಿ ವೃತ್ತನಾಮಗಳನ್ನು ಬರೆಯುವ ರೂಢಿ ಹೆಚ್ಚಾದಂತೆ ಕಾಣುತ್ತದೆ. ಶ್ರೀಪಾದರಾಯರು ವೃತ್ತನಾಮಗಳ ಪದ್ಧತಿಯನ್ನಾರಂಭಿಸಿದರು. ಗುರುಗಳ ಮಾರ್ಗವನ್ನೇ ಶಿಷ್ಯರೂ ಹಿಡಿದರು. ವೃತ್ತನಾಮವೆಂದರೆ ಒಂದು ಪದದ ಪಲ್ಲವಿಯನ್ನು ಬರೆಯುವುದು; ಅನಂತರ ಒಂದು ವೃತ್ತವನ್ನು ಬರೆಯುವುದು; ಅನಂತರ ಚರಣವನ್ನು (ನುಡಿಯನ್ನು) ಹಾಡುವುದು. ಇದಕ್ಕೆ ವೃತ್ತನಾಮವೆಂಬ ಹೆಸರು ದಾಸ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. ಸ್ತ್ರೀಯರು ನಿತ್ಯವೂ ಪಠನಮಾಡಲು ಅನುಕೂಲಿಸುವಂತೆ ವ್ಯಾಸರಾಯರು ಭಗವದ್ಗೀತೆಯನ್ನು ಈ ವೃತ್ತನಾಮವಾಗಿ ಬರೆದಿದ್ದಾರೆ. ಲೇಖಕರ ದೋಷದಿಂದ ಅಲ್ಲಲ್ಲಿ ತಪ್ಪುಗಳಿವೆ. ದೊಡ್ಡವರ ಕವಿತೆಯಾದ್ದರಿಂದ ತಿದ್ದುವುದು ಸಾಹಸವಾಗುತ್ತದೆ. ಮಾತುಗಳ ವ್ಯತ್ಯಾಸವಿರಬಹುದಾಗಿದ್ದರೂ ಅರ್ಥ ಕೆಡದಂತಿರುವುದರಿಂದ ನಮಗೆ ದೊರೆತಂತೆ ಬರೆಯುತ್ತೇವೆ.

---

* ಸೂಕರ ಮೊಲೆಹಾಲ (ಪಾಠಾಂತರ)

'ಪಾಲಿಸು ಪಂಢರಿಪುರಿರಾಯಾ' ಎಂಬಂತೆ—ಝಾಪುತಾಳ

ಕೇಳಯ್ಯ ಎನ್ನ ಮಾತ ಪಾರ್ಥನೇ | ಗೀತಾದರ್ಥನೇ ಪ.

ಶ್ಲೋ :— ಕುರುಕ್ಷೇತ್ರದೀ | ಎನ್ನವರು ಪಾಂಡವಾರೂ |
ಪೇಳೋ ಸಂಜಯ | ಏನು ಮಾಡುವರು ಕೂಡೀ ||
ಕೇಳೈ ಅರಸನೇ | ನೋಡು ಪಾಂಡವರ ಸೇನಾ |
ಮಾತಾಡಿದ ನಿನ್ನ ಸುತಗೆ | ದ್ರೋಣ ನಿಂತು || ೧

ಪದ :—ಕೇಳಿ ತಾ ಪಾರ್ಥನು ಕುರುದಂಡ | ರಣದಲಿ ಚಂಡ | ಗಾಂಡೀವ ಕರದಂಡ |
ಅಚ್ಯುತ ಪಿಡಿ ರಥ ನಡೆಮುಂದಾ | ಬಹುಸ್ವರದಿಂದ | ನೋಡುವೆ ನೇತ್ರದಿಂದಾ ||
ಗುರುಹಿರಿಯರ ಕೂಡ ಯಾಕೆಂದಾ | ಯುದ್ಧ ಸಾಕೆಂದ | ಭಿಕ್ಷವೆ ಸುಖವೆಂದಾ |
ಕುಂತಿಸುತ ಈ ಮಾತು ಉಚಿತಲ್ಲ | ನಿನಗಿದು ಸಲ್ಲ | ಪಿಡಿ ಗಾಂಡೀವ ಬಿಲ್ಲ || ೧

ಶ್ಲೋ :— ಬಾಲ್ಯ ಯೌವನ ಮುಪ್ಪುತನ ದೇಹದಲ್ಲೀ |
ಇಂಥಾ ದೇಹಕೆ ಮೋಹ ಮತ್ಯಾತಕಿಲ್ಲೀ |
ಕಾಯ್ದು ಕೊಲ್ಲುವ ನಾನು ಇರುತಿರಲು ಇಲ್ಲೀ !
ಬಿಲ್ಲು ಪಿಡಿದು ಕೀರ್ತಿಪಡೆ ಲೋಕದಲ್ಲೀ || ೨

ಪದ :—ಶಸ್ತ್ರದಂಜಿಕೆಯಿಲ್ಲ ಜೀವಕ್ಕೆ | ಈ ದೇಹಕ್ಕೆ | ಪಾವಕನ ದಾಹಕ್ಕೆ |
ಉದಕಗಳಿಂದ ವೇದನೆಯಾಕೆ | ಈ ಜೀವಕ್ಕೆ | ಮಾರುತದ ಶೋಷಕ್ಕೆ |
ನಿತ್ಯ ಅಭೇದ್ಯ ತಾ ಜೀವನ | ಸನಾತನ | ವಸ್ತ್ರದ್ಹಾಂಗೆ ಈ ತನುವು |
ಆದಾವು ಪೋದಾವು ನಿನಗಯ್ಯಾ | ಅದ ನಾ ಬಲ್ಲೆನಯ್ಯಾ || ೨

ಶ್ಲೋ :— ಜ್ಞಾನ ದೊಡ್ಡದು ಕರ್ಮಬಂಧವ ಬಿಟ್ಟು |
ಕರ್ಮ ಬಿಟ್ಟರೇ ಪ್ರತ್ಯವಾಯವೆಷ್ಟು |
ಫಲ ಬಿಟ್ಟು ನೀ ಮಾಡು ಕರ್ಮಗಳ |
ಸಮದೇಹಕೆ ಫಲ ಕರ್ಮ ಕಾರಣಲ್ಲ | ೩

ಪದ :—ಕರ್ಮದಲ್ಲೀ ನಿನಗಧಿಕಾರ | ಫಲ ತಾ ದೂರ | ಧನಂಜಯಗೋಸ್ಕರ |
ಜ್ಞಾನ ದೊಡ್ಡದು ಕರ್ಮ ದೂರಯ್ಯಾ | ಇತ್ತ ಬಾರಯ್ಯ | ಯೋಗಬುದ್ಧಿ ಮಾಡಯ್ಯಾ |
ಜಿತಬುದ್ಧಿ ಯಾವದ್ದೈ ಕೇಶವ | ಜಗತ್ಪ್ರಾಶವ | ನೋಡವೆ ಪರಮೇಶ |
ಗೋವಿಂದನಲ್ಲಿ ಮನವಿಟ್ಟವ | ಕಾಮಬಿಟ್ಟವ | ಜಿತವೇಹ ತಾನಾವ || ೩

ಶ್ಲೋ :— ಜ್ಞಾನ ದೊಡ್ಡದು ಕರ್ಮದಲ್ಯಾಕೆ ಎನ್ನ |
ಬುದ್ಧೀ ಮೋಹಿಸೀ ಕೃಷ್ಣ ಕೇಳಯ್ಯ ಬಿನ್ನ |
ಕರ್ಮವಿಲ್ಲದೆ ಮೋಕ್ಷಫಲವುಂಟೆ ಇನ್ನಾ |
ಕರ್ಮ ಮೋಕ್ಷದ ಬುದ್ಧಿಗೇ ಬೀಜವಲ್ಲೀ || ೪

ಪದ:—ಯುದ್ಧ ಕರ್ಮವ ಮಾಡೊ ಪಾಂಡವ । ರಣತಾಂಡವ । ವೈರಿ ಸಂಹರಿಸುಬಾರಾ ।
ಜನರೆಲ್ಲ ಮಾಳ್ಪರೊ ನಿನನೋಡಿ । ಮತ್ತೀನನೋಡಿ । ನೋಡಿದವ ಹೀ ಜೀವಿ ।
ಎನಗ್ಯಾಕೆ ಪೇಳಯ್ಯ ಜನಕರ್ಮ । ಕ್ಷತ್ರಿಯಧರ್ಮ । ಸತ್ಯವಾಗನ್ಯಮ ಧರ್ಮ ।
ಅರ್ಪಿಸು ಎನ್ನಲ್ಲಿ ಸರ್ವವು । ಬಿಟ್ಟು ಗರ್ವವು । ತೀರಿ ಎನ್ನೊಳು ಸರ್ವವು । ೪

ಶ್ಲೋ:— ಯೋಗ ಸನ್ಯಾಸವಿದು ಮುಕ್ತಿಗೆ ಗ್ರಹ್ಯವು ।
ಭೋಗ ವರ್ಜಿತ ಕೇಳು ಸನ್ಯಾಸಿಯೆನ್ನ ।
ಹ್ಯಾಗೆ ಪದ್ಮಕೆ ಪಾಣಿಯ ಲೇಪವಿಲ್ಲ
ಹಾಗೆ ಭಕ್ತಿಗೆ ಸಂಸ್ಕೃತಿಯು ಇಲ್ಲ ॥ ೫ [?]

ಪದ:—ಆಜನಲ್ಲಿ ದ್ವಿಜನಲ್ಲಿ ಗಜದಲ್ಲಿ । ಸಮನಾನಲ್ಲಿ । ಭಜಿಸುವ ಮನದಲ್ಲಿ ।
ಮನಸು ಯಾವ ಜೀವಕೆ ಬಂದು । ಇಷ್ಟ ಜಾತಿಯು । ಮತ್ತೆ ವೈರಿವಾರಿಯೂ ॥
ಲೋಷ್ಟಕಾಂಚನ ನೋಡು ಸಮಮಾಡಿ । ಆಸನಹೂಡಿ । ನಾಸಿಕತುದಿನೋಡಿ ।
ಧ್ಯಾನಮಾಡು ಹರಿ ಅರ್ಜುನ । ಆಸನದಲ್ಲಿ । ಯೋಗ ಪ್ರತಿಷ್ಠಿತನನೆ । ೫ [?]

ಶ್ಲೋ:— ಯಾವ ಭಕ್ತಿಯು ಎನ್ನ ಪಾದಾಬ್ಜದಲ್ಲೀ ।
ಘೋರ ಸಂಸಾರದಾನವ ಅವರಿಗಿಲ್ಲ ।
ಶರೀರವೇ ಕ್ಷೇತ್ರವೆಂತೆಂದು ತಿಳಿಯೋ ।
ಮರೆಯದೇ ಕ್ಷೇತ್ರಜ್ಞನೆಂದೆನ್ನ ತಿಳಿಯೊ । ೬

ಪದ:—ಶರೀರದೊಳಗಿದ್ದು ಪಾಪಿಲ್ಲ । ದುಃಖಲೇಶಿಲ್ಲ । ಆಕಾಶವು ಎಲ್ಲಾ ।
ಯಾತರಿಂದ್ಹುಟ್ಟಿತು ಈ ಗುಣ । ಮೂರು ಸದ್ಗುಣ । ಕೇಳಯ್ಯ ಫಲ್ಗುಣ ।
ಸುಖದುಃಖಸಮಮಾಡಿನೋಡು ನೀ । ಈಡ್ಯಾಡು ನೀ । ಬ್ರಹ್ಮಾನಸೋಡೋ ನೀ ।
ಚಂದ್ರಸೂರ್ಯರ ತೇಜ ನನದಯ್ಯ । ಗುಡಾಕೇಶಯ್ಯ ।
ಅನ್ನಪಚನವೆನದಯ್ಯಾ । ೬

ಶ್ಲೋ:— ನಾನೆ ಉತ್ತಮ ಮನಸು ಎನ್ನಲ್ಲಿ ಮಾಡೋ ।
ಜ್ಞಾನ ಅಜ್ಞಾನ ಪೇಳುವೆ ತಿಳಿದುನೋಡೋ ।
ಜ್ಞಾನ ದುರ್ಲಭ ಅವರ ಭಕ್ತಿಗಳಂತೆ ।
ನಾನು ಕೊಡುವೆನು ಫಲವ ಮನಸು ಬಂದಂತೆ ೭ [?]

ಪದ:—ಸ್ಮರಣೆಮಾಡುತಲೇಳ ಬಿಡುವರೋ । ಎನ್ನ ಪಡೆವರೋ । ಬಲುಭಕ್ತಿ
ಮಾಡುವರೋ ।
ಅನಂತಚೇತನ ಸುಳಿವನು । ಹರಿಸುಲಭನು । ಮತ್ತೆ ಜನನವಿಲ್ಲವಗೆ ।
ಎನ್ನ ಭಕ್ತರಿಗಿಲ್ಲ ನಾಶವು । ಸ್ವರ್ಗದಾಶವು । ಬಿಟ್ಟು ಚರಣಭಕುತಿಯನು ೭ [?]

ಶ್ಲೋ:— ಕೃಷ್ಣ ತೋರಿಸು ನಿನ್ನ ವಿಭೂತಿ ರೂಪ ।
ಇಷ್ಟು ಪ್ರಾರ್ಥಿಸಿದಾಗಲೋ ಎನಗೆ ಕ್ರೀಡ ॥

ರಾಮನಾನಯ್ಯ ರಾಜರ ಗುಂಪಿನಲ್ಲೀ ।
ಸೋಮನಾನಯ್ಯ ತಾರಕ ಮಂಡಲದಲ್ಲಿ ॥ ೮

ಪದ:—ಅಕ್ಷರದೊಳಗೆ ಅಕಾರನು । ಗುಹ್ಯಕಾರನು । ಪಕ್ಷಿಗಳಲ್ಲಿ ನಾನು ।
ಗರುಡನು ಸಕಲ ಜಾತಿಗಳಲ್ಲಿ । ಬ್ರಾಹ್ಮಣನಲ್ಲಿ । ಎನ್ನ ರೂಪ ತಿಳಿಯಲ್ಲೀ ।
ತೋರಿಸೊ ಶ್ರೀ ಕೃಷ್ಣ ನಿನ್ನ ರೂಪ । ನಾನಾ ರೂಪ । ಅರ್ಜುನನೋಡೊರೂಪ।
ಕಂಡನು ತನ್ನನು ಸಹಿತಾದಿ । ಮಹೇಶರು । ಬ್ರಹ್ಮಾಂಡಗಳಲ್ಲಿ ೮

ಶ್ಲೋ :— ಕ್ಷರ ಅಕ್ಷರ ಎರಡಕ್ಕು ಉತ್ತಮನು ।
ಘೋರ ನರಕಕೆ ಲೋಭಕಾಮನು ನಾನು
ಸಾರದಾನವು ಸಜ್ಜನರ ಹಸ್ತದಲ್ಲೀ ।
ಭೂರಿದಕ್ಷಿಣೆ ನೀಡೊ ಸತ್ಪಾತ್ರದಲ್ಲಿ ೯

ಪದ:—ಸರ್ವದಾನದಕಿಂತ ಎನಭಕ್ತಿ । ಕೇಳಿದೊ ಘನಶಕ್ತಿ । ಮಾಡಯ್ಯ ವಿರಕ್ತಿ ।
ಕೃಷ್ಣ ಕರುಣಾಯಿತ್ತು ನಿನ್ನಿಂದ । ಹೋಯಿತೆ ಎನ್ನಿಂದ । ಬಹು ಸುವಾಕ್ಯದಿಂದ ।
ಕೃಷ್ಣ ಭೀಮಾನುಜರ ಸಂವಾದ । ಮಹಮುಖಪ್ರದ । ಧೃತರಾಷ್ಟ್ರ ಕೇಳಿದ ।
ಬಲ್ಲಿನು ವ್ಯಾಸನ ದಯದಿಂದ । ಮನಸಿನಿಂದ । ಕೃಷ್ಣನಲ್ಲೇ ಜಯವೆಂದ ೯

ವ್ಯಾಸರಾಯರ ಚರಿತ್ರೆಯ ಅವಶಿಷ್ಟಾಂಶಗಳು

ವ್ಯಾಸರಾಯರು ಕ್ರಿ. ೧೫೨೬ ರಲ್ಲಿ ತಮ್ಮ ಸಂಚಾರದಿಂದ ವಿಜಯನಗರಕ್ಕೆ ಬಂದನಂತರ ರಾಜಕಾರ್ಯಗಳಲ್ಲಿ ಹೆಚ್ಚು ಗಮನ ಕೊಡುತ್ತಿರಲಿಲ್ಲ. ರಾಜ್ಯಾನುಭವಿಯಾದ ಕೃಷ್ಣದೇವರಾಯನು ಲೌಕಿಕ ವಿಷಯಗಳಿಂದ ಆ ಮಹಾಮಹಿಮರನ್ನು ದಣಿಸಬಾರದೆಂದು ಜಾಗರೂಕನಾಗಿದ್ದನು. ಅನಧ್ಯಯನ ದಿವಸಗಳಲ್ಲಿ ಮಾತ್ರ ರಾಜಕೀಯ ಸಂಕ್ಷಿಪ್ತ ವರದಿಯನ್ನು ರಾಯನು ಸ್ವಾಮಿಗಳಿಗೆ ತಿಳಿಸದಿರುತ್ತಿರಲಿಲ್ಲ. ದಿನವೂ ಗುರು ದರ್ಶನಕ್ಕೆ ಬರದಿರುತ್ತಿರಲಿಲ್ಲ.

ಇಷ್ಟಕ್ಕೆ ಮುಂಚೆ ಕೃಷ್ಣದೇವರಾಯನು ತನ್ನ ಮಗ ತಿರುಮಲದೇವನಿಗೆ ಯೌವರಾಜ್ಯಾಭಿಷೇಕ ಮಾಡಿದ್ದನು. ಯುವರಾಜನು ಬಾಲಕನಾದರೂ ಅವನೇ ರಾಜ್ಯಾಡಳಿತ ಮಾಡಿದಂತೆ ಶಾಸನಗಳನ್ನು ಬರೆಸುತ್ತಿದ್ದನು. ದುರ್ದೈವದಿಂದ ತಿರುಮಲನು ಮೃತನಾದನು. ಕೃಷ್ಣದೇವರಾಯನು ಎದೆಗುಂದಿ ರಾಜಕಾರ್ಯಗಳಲ್ಲಿ ವಿರಕ್ತನಾದನು. ಇದೇ ಸಮಯದಲ್ಲಿ ರಾಯನ ಅಳಿಯ ರಾಮರಾಯನು ತಲೆಯೆತ್ತಿದನು. ದೊಡ್ಡದೊಡ್ಡ ರಾಜಕಾರ್ಯಗಳಲ್ಲಿ ಸ್ವಯಂ ಪ್ರವೇಶಿಸಿದನು. ಅಳಿಯನ ನಡತೆಯು ಕೃಷ್ಣದೇವರಾಯನಿಗೆ ಬೇಸರವನ್ನುಂಟುಮಾಡಿತ್ತು. ಅಳಿಯನಾಗಿದ್ದುದರಿಂದ ದಾಕ್ಷಿಣ್ಯಕ್ಕೊಳಪಟ್ಟು ತಟಸ್ಥನಾಗಿರಬೇಕಾಗಿತ್ತು. ರಾಮರಾಜನಾದರೋ ಮಹಿಸೂರ ನರಪತಿ ವಿಜಯದಲ್ಲಿ ಹೇಳಿರುವಂತೆ—

ಜಾಮಾತಾಭೂನ್ಮಹೀಪಾಲಃ ರಾಮರಾಜ ಇತಿಸ್ಮೃತಃ ।
ಸಕಾಮವಶಮಾಪನ್ನಃ ನಿತ್ಯಂ ದ್ಯೂತೇ ಚ ನಿಷ್ಠಿತಃ ।
ಬ್ರಾಹ್ಮಣಾನಾಂ ಗುರೂಣಾಂಚ ನಿತ್ಯಮಪ್ರಿಯ ಮಾತನೋತ್ ।

ಸ್ತ್ರೀಲಂಪಟನಾಗಿದ್ದನು. ಯಾವಾಗಲೂ ದ್ಯೂತಾಸಕ್ತನಾಗಿದ್ದನು. ಬ್ರಾಹ್ಮಣರಿಗೂ ಗುರುಗಳಿಗೂ ಅಪ್ರಿಯ ಕಾರ್ಯಗಳನ್ನು ಮಾಡುತ್ತಿದ್ದನು. ಪರಿಸ್ಥಿತಿಯನ್ನರಿತ ಕೃಷ್ಣ ದೇವರಾಯನು ತನ್ನ ತಮ್ಮ ಅಚ್ಯುತರಾಯನಿಗೆ ರಾಜ್ಯಾಡಳಿತವನ್ನೊಪ್ಪಿಸಿದ್ದನು. (ಕ್ರಿ. ೧೫೨೬) ಕೃಷ್ಣದೇವರಾಯನು ಅಚ್ಯುತರಾಯನಿಗೆ ತಾನೇ ಪಟ್ಟಕಟ್ಟಿದನೆಂಬುದಕ್ಕೆ ಸೋಮನಾಥ ಕವಿಯ—

ತತ್ರಾಂತರೇ ಸಖಲು ಕೃಷ್ಣನೃಪೋನುಜಸ್ಯ ।
ನಾಮ್ನಾಚ್ಯುತಸ್ಯನಲ ಭೋಜ ಪರಾಕ್ರಮಸ್ಯ ।
ಹಸ್ತೇ ಮಹೀಭರಣಶಾಸನ ಲಕ್ಷಣಸ್ಯ ।
ಮಸ್ತೇಮಣಿಸ್ತಬಕಿತಂ ಮಕುಟಂನ್ಯಧತ್ತ ॥

ಎಂಬ ಶ್ಲೋಕವು ಪ್ರಮಾಣವಾಗಿರುವುದು. ಅನಂತರ ಕೃಷ್ಣದೇವರಾಯನು ವಾನ ಪ್ರಸ್ಥಾಶ್ರಮ ಸ್ವೀಕಾರಮಾಡಿದವನಂತೆ ಯಾತ್ರಾರ್ಥಿಯಾದನು. ಗೋಕರ್ಣ ಮೊದಲಾದ ಪುಣ್ಯಸ್ಥಳಗಳನ್ನು ಸೇವಿಸಿದರೂ ಮನಸ್ಸಿನಲ್ಲಿ ಶಾಂತಿ ಹುಟ್ಟದಿರಲು ಪುನಃ ವಿಜಯನಗರಕ್ಕೇ ಬಂದನು. ವ್ಯಾಸರಾಯರನ್ನು ಅಗಲಿರಲಾರದೆ ಮದನಪಲ್ಲಿಯಿಂದ ಅವರನ್ನು ಬರಮಾಡಿ ಕೊಂಡನು. ಈ ನಿಮಿತ್ತದಿಂದಲೇ ೧೫೨೭ರಲ್ಲಿ ವ್ಯಾಸರಾಯರು ಮತ್ತೆ ವಿಜಯನಗರಕ್ಕೆ ಬಂದಂತೆ ಕಾಣುತ್ತದೆ. ಅಚ್ಯುತರಾಯನು ೧೫೨೬ರಲ್ಲಿ ರಾಜ್ಯಾಭಿಷಿಕ್ತನಾದರೂ ೧೫೩೦ ರಿಂದಲೇ ಅವನ ಸ್ವತಂತ್ರಾಧಿಕಾರಕ್ಕೆ ಪ್ರಾರಂಭವಾದಂತೆ ಗೊತ್ತಾಗುತ್ತದೆ. ಇದೇ ಕಾಲದಲ್ಲಿ ಪುತ್ರಶೋಕ ಸಂತಪ್ತನಾದ ಕೃಷ್ಣದೇವರಾಯನೂ ಮೃತನಾದಂತೆ ಕಾಣುತ್ತದೆ.

ಕೃಷ್ಣದೇವರಾಯನ ಮರಣದಿಂದ, ಎಷ್ಟೇ ವಿರಕ್ತರಾಗಿದ್ದರೂ ವ್ಯಾಸರಾಯರ ಮನಸ್ಸು ಕಲಕಿಹೋಯಿತು. ಸಾಮ್ರಾಜ್ಯದೇವತೆಯೇ ಅಸ್ತಮಿಸಿದ ಮೇಲೆ, ನಿರ್ಜೀವ ಸಾಮ್ರಾಜ್ಯವಿನ್ನೆಷ್ಟುಕಾಲ ಬಾಳೀತೆಂದು ವ್ಯಸನಪಟ್ಟರು. ಅಂದಿನಿಂದ ವ್ಯಾಸರಾಯರ ಪ್ರಕೃತಿಯೂ ಬದಲಾಗಿಹೋಯಿತು. ಅಚ್ಯುತರಾಯನೂ ಕೃಷ್ಣದೇವರಾಯನಂತೆಯೇ ಸ್ವಾಮಿಗಳಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟಿದ್ದನು. ಲೌಕಿಕವನ್ನು ಎಷ್ಟುದೂರ ತಳ್ಳಬೇಕೆಂದರೂ ಅಳಿಯ ರಾಮರಾಜನ ಅಧರ್ಮ ವರ್ತನೆಗಳು ಸ್ವಾಮಿಗಳ ಕಿವಿಗೆ ಕೇಳುತ್ತಬಂದುವು. ಪ್ರಪಂಚವನ್ನು ಸರಿಪಡಿಸುವುದೆಂದರೆ ಬೆಟ್ಟಕ್ಕೆ ಛತ್ರಿ ಹಿಡಿದಂತಾಗುದೆಂದು ವಿಷಾದಪಟ್ಟರು. ಸನ್ಯಾಸಿಯಾದರೂ ಲೌಕಿಕ ಮಾಡಬೇಕಾಗಿ ಬಂದ ಭಗವದಿಚ್ಛೆಗೆ ಪರಿತಪಿಸಿದರು. ರಾಜ ಮರ್ಯಾದೆಯಿಂದ ಜನರು ತಮ್ಮನ್ನು ಕಾಣುವುದಾದರೂ ಅವರಿಗೆ ಬೇಸರವನ್ನುಂಟು ಮಾಡಿತು. ನಾನೊಬ್ಬ ಸನ್ಯಾಸಿ; ನನಗೇಕೆ ಇಲ್ಲದ ಮರ್ಯಾದೆ ಮಾಡುವರೆಂದು ಆಕ್ಷೇಪಿಸುತ್ತ ಬಂದರು. ಗೃಹಸ್ಥಾಶ್ರಮಿಗಳಾದರೂ ಪುರಂದರದಾಸರ ವೈರಾಗ್ಯ ತಮಗೆ ಬರಲಿಲ್ಲವೆಂದು ಮಿಡುಕಿದರು. ತಮ್ಮಲ್ಲಿ ತಾವೇ ಪರವಶರಾಗಿ ಪದವಿಯ ಗೌರವವನ್ನೂ

ಮರೆತು–ಕಡೆಗಣಿಸಿ ಪುರಂದರದಾಸರನ್ನು ಕೊಂಡಾಡತೊಡಗಿದರು. ವಿಜಯನಗರವನ್ನು ಬಿಟ್ಟು ದೇಶಸಂಚಾರ ಮಾಡಲು ದೇಹವು ಬಲಹೀನವಾಗಿತ್ತು. ಮನಸ್ಸಿನಲ್ಲೂ ಉತ್ಸಾಹ ಕುಂದಿತ್ತು. ಪುರಂದರದಾಸರು ಯಾವಾಗಲೂ ತಮ್ಮ ಬಳಿ ಇರಬೇಕೆಂದು ಬಯಸುತ್ತಿದ್ದರು. ದಾಸರ ಕಡೆಯ ಮಗ ಮಧ್ವಪತಿಯುಂತೂ ಸ್ವಾಮಿಗಳನ್ನೆಡೆಬಿಡುತ್ತಿರಲಿಲ್ಲ. ವೃದ್ಧಗುರುಗಳ ದರ್ಶನಕ್ಕೆಂದು ಕನಕದಾಸರೂ ವಿಜಯನಗರಕ್ಕೆ ಬಂದುಬಿಟ್ಟರು. ಉಭಯ ದಾಸರೊಡನೆ, ಭಜನಾನಂದಪರವಶರಾಗಿ—

ಕಲ್ಯಾಣಿ—ಅಟ್ಟತಾಳ

ಹರಿದಾಸರ ಸಂಗಕೆ ಸರಿಯುಂಟೆ | ಗುರು
ಕರುಣಕೆ ಇನ್ನು ಪಡಿಯುಂಟೆ ದೇವ ಪ.

ದಾವಾನಲನ ತಪ್ಪಿಸಿ ಕಾಡಾನೆಯ | ದೇವಗಂಗೆಗೆ ತಂದು ಹೊಗಿಸಿದಂತೆ |
ಆವರಿಸಿರುವ ಷಡ್ವರ್ಗ ತಪ್ಪಿಸಿ | ಶ್ರೀ | ವರನ ಕರುಣಾರಸದಿ ತೋಯಿಸುವ || ೧

ಕಂದಿ ಬೇಸಿಗೆಯಲ್ಲಿ ನೊಂದ ಚಕೋರಕ್ಕೆ | ಇಂದುಬಿಂಬದಿ ತಂದು ಹೊಗಿಸಿದಂತೆ |
ಕುಂದದೆ ಮಮತೆಯ ನೊಂದಿಸಿ ಎನ್ನ | ಗೋವಿಂದನ ಪಾದ ಸನ್ನಿಧಿಯ ಸೇರಿಸುವ || ೨

ಬಲೆಯ ಹಾರಿದ ಎಳೆ ಹುಲ್ಲೆಮರಿಗಳಿಗೆ | ಬಲುಮೆಯಿಂದ ತಾಯತೋರಿಸಿದಂತೆ |
ಹೊಲೆ ಇಂದ್ರಿಯಗಳ ಸೆರೆಯಬಿಡಿಸಿ ಎನ್ನ | ನಳಿನನಾಭನ ಸನ್ನಿಧಿಗೆ ಸೇರಿಸುವ || ೩

ಕುರುಡಗೆ ನಯನಾಂಜನದಿಂದ ಕಣ್ಣಿತ್ತು | ಪರಿಪರಿ ನವನಿಧಿಗಳನಿತ್ತಂತೆ |
ಪರಮ ಮೂಢನಾದೆನಗೆ ಜ್ಞಾನವನಿತ್ತು | ನರಹರಿಪಾದ ಸಂದರುಶನವೀವ || ೪

ತಡೆವಿಹಾರಿ ಹರಿಯುವ ತೊರೆಯಲ್ಲಿ ಪೋಪನ | ಪಿಡಿದೆತ್ತಿ ದಡಕೆ ಸೇರಿಸಿದಂತೆ |
ಕಡೆಗೆಟ್ಟು ಸಂಸೃತಿಯೊಳಗೆ ಸಿಕ್ಕಿದನ್ನ | ಬಿಡದೆ ಶ್ರೀಕೃಷ್ಣನಂಘ್ರಿಗಳ ಸೇರಿಸುವ || ೫

ಎಂಬುದಾಗಿ ಹಾಡಿದರು.

ದೇಹಶಕ್ತಿ ಕುಂದಿದಂತೆಲ್ಲಾ ವಿದ್ವತ್ಸಭೆ ಮೊದಲಾದ ಸಂಸ್ಥೆಗಳ ನಿರ್ವಾಹವನ್ನು ಯೋಗ್ಯ ಪಂಡಿತರಿಗೆ ವಹಿಸಿ, ಅವರ ಮೇಲ್ವಿಚಾರಣೆಗೆ ಗೋವಿಂದ ಒಡೆಯರನ್ನು ನೇಮಿಸಿದರು. ಪುರಂದರದಾಸರೊಡನೆ ಸರ್ವದಾ ಭಗವಧ್ಯಾನಪರರಾಗಿ ಭಕ್ತಿಸಮುದ್ರದಲ್ಲಿ ಪರಮಾನಂದ ಸೌಖ್ಯವನ್ನನುಭವಿಸುತ್ತಾ ಕಾಲಯಾಪನೆ ಮಾಡುತ್ತಿದ್ದರು. ಚಂದ್ರಿಕಾ ಗ್ರಂಥವು ಪೂರ್ಣವಾಗದಿರುವುದನ್ನು ನೋಡಿ, ಗೋವಿಂದ ಒಡೆಯರು, ಗ್ರಂಥವು ಅರ್ಧಾಂತವಾಗಿದೆಯೆಂದು ವಿಜ್ಞಾಪಿಸಿದರು. ವ್ಯಾಸರಾಯರು, ನಮ್ಮ ಗ್ರಂಥರಚನೆಯ ಕಾಲ, ವಾದಮಾಡುವ ಕಾಲಗಳೆಲ್ಲಾ ಕಳೆದುಹೋದುವು. ನಮ್ಮಿಂದ ಹತ್ತನೆಯವರು ಚಂದ್ರಿಕಾ ಗ್ರಂಥವನ್ನು ಪೂರ್ಣಮಾಡುವರು. ನಮಗೆ ಬೇಕಾಗಿರುವುದೀಗ ಭಾಗವತ. ನಮ್ಮೊಡನೆ ಇರಬೇಕಾದವರು ಭಾಗವತರು. ನಮಗೆ ಬೇಕಾದ್ದು ನಾಮಕೀರ್ತನೆ–ನಮ್ಮ ಪೂಜೆಯೆಂದರೆ,—

ಝಂಪೆ ತಾಳ—ರಾಗ: ಕಾಂಬೋದಿ

ಎನ್ನ ಬಿಂಬ ಮೂರುತಿಯ ಪೂಜಿಸುವೆ ನಾನು |
ಮನಮುಟ್ಟಿ ಅನುದಿನದಿ ಮರೆಯದೇ ಜನನಿ ॥ ಪ.

ಗಾತ್ರವೇ ಮಂದಿರ | ಹೃದಯವೇ ಮಂಟಪ | ನೇತ್ರವೇ ಮಹದೀಪ | ಹಸ್ತ ಚಾಮರವು |
ಯಾತ್ರೆ ಪ್ರದಕ್ಷಿಣೆ | ಕಾಯದ ನಮಸ್ಕಾರ | ಶಾಸ್ತ್ರ ವಚನಗಳೆಲ್ಲ ಮಂತ್ರಗಳು ॥ ೧

ಎನ್ನ ಸ್ವರೂಪವೆಂಬುದೆ ರತ್ನಗನ್ನಡಿ | ಎನ್ನ ಮನೋವೃತ್ತಿಯೆಂಬುದೆ ಛತ್ರಿಕೆ |
ಇನ್ನು ಸವಿದ ಹರಿನಾಮಾಮೃತವೆ ತೀರ್ಥ | ಎನ್ನ ಮನಸೆಂಬುದೆ ಸಿಂಹಾಸನ ॥ ೨

ಅನ್ಯ ದೇವತೆ ಬೇಕೆ | ಅನ್ಯ ಪ್ರತಿಮೆ ಬೇಕೆ | ಅನ್ಯವಾದ ಮಂತ್ರತಂತ್ರ ಬೇಕೆ |
ಎನ್ನಲ್ಲಿ ಭರಿತ ಸಾಧನೆಗಳು ಇರುತಿರಲು | ಚೆನ್ನಾಗಿ ಶ್ರೀಕೃಷ್ಣಸ್ವಾಮಿಯ ಪೂಜಿಸುವೆ ॥ ೩

ಇಂತಹುದು ಎಂದು ನುಡಿದರು.

ಉ॥ ಕಂಸಾರಿಯೆಂದು ಸಂಸಾರದಾಟುವೆ | ಶ್ರೀವತ್ಸನೆಂದು ಪಾತಕರ ಅಟ್ಟುವೆ |
ಕಂಜನಾಭ ಎಂದು ಅಂಜಿಸುವೆ ಜವನ | ಹರಿಯ ಪೆಸರಿಂದ ಬದುಕುವ ದಾಸ ನಾನು |
ಸಿರಿಕೃಷ್ಣದಾಸರ ದಾಸ ನಾನು ॥

ಎಂಬುದಾಗಿ ಹೇಳುತ್ತಿದ್ದರು. ಹೀಗಿರಲು ಸ್ವಾಮಿಗಳಿಗೆ ತಮ್ಮ ಪೀಠದಲ್ಲಿ ಯಾರಿಗೆ ಅಭಿಷೇಕ ಮಾಡಬೇಕು ಎಂಬ ಯೋಚನೆ ಹುಟ್ಟಿತು. ಗೋವಿಂದ ಒಡೆಯರು ಸಂಸ್ಥಾನಾಧಿಪತ್ಯ ತಮಗೆ ಬೇಡವೆಂದರು. ಶ್ರೀನಿವಾಸತೀರ್ಥರನ್ನು ಕರೆದು ನೀವೇನೆನ್ನುವಿರೆಂದು ವ್ಯಾಸರಾಯರು ಕೇಳಿದರು. ಅವರು ಶ್ರೀಪಾದ ಸನ್ನಿಧಿಯಲ್ಲಿ ಹೇಳಿ ಕೇಳುವ ಶಕ್ತಿ ನನ್ನದಲ್ಲವೆಂದರು. ವ್ಯಾಸರಾಯರು ಅಚ್ಯುತರಾಯನನ್ನು ಕರೆಸಿ, ವಿದ್ಯಾಸಿಂಹಾಸನದಲ್ಲಿ ಶ್ರೀನಿವಾಸತೀರ್ಥರಿಗೆ ಪಟ್ಟಾಭಿಷೇಕವಾಗಬೇಕು ಎಂಬ ತಮ್ಮ ಅಭಿಪ್ರಾಯವನ್ನು ಅರುಹಿದರು. ರಾಯನು ಮಹದಾಜ್ಞೆಯೆಂದು ರಾಜಪರಂಪರೆಯಲ್ಲಿ ಹಿಂದಿನವರು ನಡೆಸಿದ ಮಹೋತ್ಸವಗಳಿಗಿಂತ ಅಧಿಕವಾದ ಸಿದ್ಧತೆ ಮಾಡಿದನು. ವೈದಿಕ ಮರ್ಯಾದೆಯಂತೆ ನಡೆಯಬೇಕಾದ ಅಭಿಷೇಕ ಉತ್ಸವಾದಿಗಳೆಲ್ಲ ನಡೆದುವು. ರಾಜಸಭೆಯಲ್ಲಿ ಉಭಯ ಸ್ವಾಮಿಗಳನ್ನೂ ದಿವ್ಯಾಸನಗಳಲ್ಲಿ ಕುಳ್ಳಿರಿಸಿ, ಸಾಮ್ರಾಟನೇ ಮೊದಲಾಗಿ ಸಕಲ ಸಾಮಂತ ನರಪತಿಗಳೂ–ರಾಜ್ಯಾಧಿಕಾರಿಗಳೂ–ಎಲ್ಲರೂ ಕಾಣಿಕೆಗಳನ್ನು ಒಪ್ಪಿಸಿದರು. ವ್ಯಾಸರಾಯರು ನಮ್ಮ ಸಂಸ್ಥಾನದ ಕಾರ್ಯ ಇಂದಿಗೆ ಮುಗಿಯಿತೆಂದರು. ಸಂಸ್ಥಾನದ ರಕ್ಷಣೆ ಇನ್ನು ಮುಂದೆ ಮಹಾರಾಜನಿಗೆ ಸೇರಿತೆಂದರು. ಅಚ್ಯುತರಾಯನು ತಲೆವಾಗಿ ಮಹದಾಜ್ಞೆಯೆಂದನು.

ಶಾಲಿವಾಹನ ಶಕ ೧೩೬೯ನೇ ಪ್ರಭವ ಸಂವತ್ಸರ ವೈಶಾಖ ಶುದ್ಧ ೭ರಿಂದ [ಎಂದರೆ ಕ್ರಿಸ್ತಾಬ್ದ (೨೭-೪-೧೪೪೭) ೧೪೬೦ನೇ ಫಾಲ್ಗುಣ ಬಹುಳ ೪ರ ವರೆಗೆ ಎಂದರೆ ಕ್ರಿಸ್ತಾಬ್ದ (೮-೩-೧೫೩೯) ಸುಮಾರು ತೊಂಭತ್ತೆರಡು ವರ್ಷಗಳಷ್ಟು] ದೀರ್ಘ ಕಾಲದಲ್ಲಿ ಎಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಸಂಸ್ಥಾನಾಧಿಪತ್ಯ ಮಾಡಿ, ಮಹಾ ಗ್ರಂಥ

ಗಳನ್ನು ರಚಿಸಿ, ವಾದಿನಿಗ್ರಹ ಮಾಡಿ, ಅರುವತ್ತು ವರ್ಷಗಳಷ್ಟು ಕಾಲ, ವಿಜಯನಗರ ದಂಥಾ ಮಹಾ ಸಾಮ್ರಾಜ್ಯ ರಕ್ಷಕರಾಗಿ, ಸಾಧಿಸಿದ ವ್ಯಾಸರಾಯರ ಕಾರ್ಯಗಳೆಂದರೆ, ಸಾಮಾನ್ಯವಾದುವುಗಳಲ್ಲ. ಸಾಮ್ರಾಜ್ಯ ಸಂಸ್ಥಾಪಕರೆನಿಸಿದ ವಿದ್ಯಾರಣ್ಯರೂ ವ್ಯಾಸ ರಾಯರಷ್ಟುಕಾಲ ಸಾಮ್ರಾಜ್ಯಪಾಲಕರಾಗಿರಲಿಲ್ಲ. ಸಹಜೋಕ್ತಿಯನ್ನು ಅತಿಶಯೋಕ್ತಿ ಯೆಂದು ಯಾರೂ ಭಾವಿಸದಿದ್ದರೆ, ಪ್ರಪಂಚದ ಇತಿಹಾಸದಲ್ಲೇ ವ್ಯಾಸರಾಯರಷ್ಟು ಕಾಲ ವೈದಿಕ ಲೌಕಿಕ ಎರಡೂ ಸಾಮ್ರಾಜ್ಯ ಆಡಳಿತವನ್ನು ನಿರ್ವಹಿಸಿದವರು ಹುಟ್ಟಲಿಲ್ಲ ವೆಂದು ಹೇಳಬೇಕು. ಸಾಮ್ರಾಟರುಗಳ ಕಿರೀಟಮಣಿಗಳು ತಮ್ಮ ಪಾದಪೀಠದಲ್ಲಿ ಶೋಭಿಸುತ್ತಿದ್ದರೂ ಆ ಮಹಾನುಭಾವರು ಒಂದು ಸಮಯದಲ್ಲಾದರೂ ಗರ್ವಪಡಲಿಲ್ಲ. ಒಬ್ಬರನ್ನು ಅಲ್ಲಗಳೆಯಲಿಲ್ಲ. ಗುರುತ್ವದ ಅಭಿಮಾನ ತೋರಿಸಲಿಲ್ಲ. "ದಾಸರ ದಾಸನು ನಾನು-ದೋಷಿಗಳಗ್ರೇಸರ ನಾನು" ಎಂದು ನೈಚ್ಯಾನುಸಂಧಾನವಾಡಿ ಮಾತನ್ನಾಡು ತಿದ್ದರು.

ವ್ಯಾಸರಾಯರ ಜೀವಿತದ ದಿಗ್ವಿಜಯವೆಲ್ಲವೂ, ನಿಜವಾಗಿ ವಿಚಾರ ಮಾಡಿ ನೋಡಿದರೆ, ಅವರ ಅಸದೃಶ ಪಾಂಡಿತ್ಯದಲ್ಲಿರಲಿಲ್ಲ ; ಗ್ರಂಥರಚನೆಯಲ್ಲಿರಲಿಲ್ಲ ; ವಿದ್ವತ್ಸಭೆ ಗಳನ್ನು ನೆರೆಯಿಸಿ ದ್ರವ್ಯದಾನ ಮಾಡಿದ್ದರಲ್ಲಿರಲಿಲ್ಲ ; ಸಾಮ್ರಾಜ್ಯಾಧಿಪತ್ಯದಲ್ಲಿರಲಿಲ್ಲ ; ಮತ್ತು ಜಗದ್ಗುರುತ್ವದಲ್ಲೂ ಇರಲಿಲ್ಲ. ಅವರ ದಿಗ್ವಿಜಯಕ್ಕೆ ಕಾರಣವಾಗಿದ್ದುವುಗಳೆಂದರೆ ಅವರಲ್ಲಿದ್ದ ಶಾಂತಿ, ಅವರಲ್ಲಿದ್ದ ಕ್ಷಮಾಗುಣ, ಅವರಲ್ಲಿದ್ದ ನೈಚ್ಯಾನುಸಂಧಾನ, ಅವರಲ್ಲಿದ್ದ ವಾಙ್ಮಯಪ್ರೇಮ, ಅವರಲ್ಲಿದ್ದ ದಯಾ ದಾಕ್ಷಿಣ್ಯಾದಿ ಸದ್ಗುಣಗಳು. ಒಮ್ಮೊಮ್ಮೆ ನಿರಕ್ಷರ ಕುಕ್ಷಿಗಳು-'ಸ್ವಾಮಿಾ ನಾನು ವಿದ್ಯಾವಂತನಲ್ಲ, ಸಂಪ್ರದಾಯವೇತ್ತ್ರನಲ್ಲ, ಪಾಮರನಮೇಲೆ ದೈವಾನುಗ್ರಹವಾಗುವಂತೆ ಗುರ್ವನುಗ್ರಹವಾಗಬೇಕು' ಎಂದು ಪ್ರಾರ್ಥಿಸಿದರೆ, 'ಕೇಳಿ, ವಿದ್ಯೆ ಬರದ ದಡ್ಡರು ಕೆಲವರು, ವಿದ್ಯೆ ಕಲಿತ ದಡ್ಡರು ಕೆಲವರು ಲೋಕದಲ್ಲಿದ್ದಾರೆ. ಈ ಈರ್ವರಲ್ಲಿ ವಿದ್ಯೆ ಬಂದ ದಡ್ಡನಿಗಿಂತ, ವಿದ್ಯೆ ಬರದ ದಡ್ಡನುತ್ತಮನು. ಎಲ್ಲಾ ವಿದ್ಯಾ ಭ್ಯಾಸ, ಎಲ್ಲಾ ಸಂಪ್ರದಾಯ ಪಾಲನೆಗಳು ದೇವರೊಬ್ಬನಿದ್ದಾನೆಂಬ ನಂಬಿಕೆ ಹುಟ್ಟುವು ದಕ್ಕಾಗಿ, ದೇವರು ದೊಡ್ಡವನೆಂಬ ಜ್ಞಾನ ಬರುವುದಕ್ಕಾಗಿ, ದೇವರ ಅನುಗ್ರಹಕ್ಕೆ ಪಾತ್ರ ನಾಗಬೇಕೆಂಬ ಭಕ್ತಿಯುಂಕುರಿಸುವುದಕ್ಕಾಗಿ. ಈ ಮೂರು ಸಾಧನೆಗಳೇ ನಿಮಗಿರುವಾಗ ನೀವು ವಿದ್ಯಾವಂತರೇ ಆದಿರಷ್ಟೆ !' ಎಂದು ಸಮಾಧಾನ ಹೇಳುತ್ತಿದ್ದರು.

ವ್ಯಾಸರಾಯರು ಪಾಪಿಗಳನ್ನಾದರೂ ತಿರಸ್ಕರಿಸಿ ಮಾತನಾಡುತ್ತಿರಲಿಲ್ಲ. ಪಾಪಿ ಗಳು ಮುಂದಾದರೂ ಪುಣ್ಯಪುರುಷರಾಗಲೆಂದು ಅವರಿಗೆ ಭರವಸೆ ತಪ್ಪದಂತೆ—

ಉಗಾಭೋಗ :—ಜಾರತ್ವವನು ಮಾಡಿದ ಪಾಪಗಳಿಗೆಲ್ಲ
ಗೋಪೀಜನ ಜಾರನೆಂದರೆ ಸಾಲದೆ ?
ಚೋರತ್ವವನು ಮಾಡಿದ ಪಾಪಗಳಿಗೆಲ್ಲ
ನವನೀತ ಚೋರನೆಂದರೆ ಸಾಲದೆ ?
ಕ್ರೂರತ್ವವನು ಮಾಡಿದ ಪಾಪಗಳಿಗೆಲ್ಲ

ಮಾವನ್ನ ಕೊಂದವನೆಂದರೆ ಸಾಲದೆ ?
ಪ್ರತಿ ದಿವಸ ಮಾಡಿದ ಪಾಪಂಗಳಿಗೆ ಎಲ್ಲಾ
ಪತಿತಪಾವನನೆಂದು ಕರೆದರೆ ಸಾಲದೆ ?
ಇಂತಪ್ಪ ಮಹಿಮೆಗಳೊಳೊಂದನ್ನಾದರೂ ಒಮ್ಮೆ
ಸಂತಸದಿ ನೆನೆಯೆ ಸಲಹುವ ನಮ್ಮ ಶ್ರೀಕೃಷ್ಣ

ಎಂದು ಧೈರ್ಯ ಹುಟ್ಟಿಸಿ, ಪಶ್ಚಾತ್ತಾಪಪಡಿಸಿ, ಭಕ್ತಿಮಂತರನ್ನಾಗಿ ಮಾಡಿ ಕಳುಹಿಸುತ್ತಿದ್ದರು.

ಕಡೆಯ ದಿವಸಗಳಲ್ಲಂತು, ಯಾವಾಗ ಭಾವಸಮಾಧಿಯಲ್ಲಿರುವರು, ಯಾವಾಗ ಸಮಸ್ಥಿತಿಯಲ್ಲಿರುವರು ಎಂಬುದು ಪುರಂದರದಾಸರೊಬ್ಬರ ವಿನಾ, ಮತ್ತೊಬ್ಬರಿಗೆ ತಿಳಿಯುತ್ತಿರಲಿಲ್ಲ. ಅಚ್ಯುತಭೂಪಾಲನು ತ್ರಿಸಂಧ್ಯೆಗಳಲ್ಲೂ ಚಕ್ರತೀರ್ಥಕ್ಕೆ ಬಂದು ಸ್ವಾಮಿಗಳ ದರ್ಶನ ಮಾಡುತ್ತಿದ್ದನು. ಅವರ ಮುಖದಿಂದ ಹೊರಡುವ ಒಂದೊಂದು ಅಮೃತತುಲ್ಯವಾದ ವಾಣಿಯನ್ನೂ ಕೇಳಿ ಪುಳಕಿತನಾಗುತ್ತಿದ್ದನು.

* ವ್ಯಾಸರಾಯರೂ, ಪುರಂದರದಾಸರೂ, ಕನಕದಾಸರೂ ಮಾತನಾಡುತ್ತಾ ಕುಳಿತಿರುವಾಗ, ತಟಕ್ಕನೆ ವ್ಯಾಸರಾಯರು—'ಏನೋ ಕನಕಾ! **ನಾವು ಮತ್ತೆ ಬರಬೇಕೇ?**' ಎಂದರು. ಪುರಂದರದಾಸರು ಅದೇನು ಮಾತೆಂದು ಚಕಿತರಾದರು. ಕನಕನು 'ಹೌದು ಬುದ್ಧೀ, **ಇದೂ ಕೂಡಿ ಮೂರು ಬಾರಿ**' ಎಂದನು. ವ್ಯಾಸರಾಯರು 'ದಾಸರೋ?' ಎಂದರು. ಕನಕನು 'ಬಲುದೂರ ಬಲುದೂರ' ಎಂದನು. ಹಾಗೆಂದರೇನೆಂದು ದಾಸರು ಕೇಳಿದರು. '**ಆರು ಬಾರಿ**' ಎಂದು ಕನಕನಾಡಿದನು. 'ನೀನು?' ಎಂದು ಪುರಂದರದಾಸರು ಕೇಳಿದರು. 'ನಾನೇಕೆ ಬರಬೇಕೆಂದು' ಕನಕನಾಡಿದನು. **ಒಮ್ಮೆ** ಬಾರೆಂದು ವ್ಯಾಸರಾಯರು ಕರೆದರು. 'ಕುರುಬನಿಗ್ಯಾಕೆ ಬುದ್ಧೀ ಈ ಕಷ್ಟ'ವೆಂದು ಕನಕನಾಡಿದನು. ಸ್ವಾಮಿಗಳು 'ಕುರುಬನೋ **ಹೊಲೆಯನೋ** ಆ ಮಾತೇಕೆಂದರು. ಗುರುವಾಕ್ಯ **ಹೊಲೆಯನಾಗಿಯೋ** ಬರುತ್ತೇನೆಂದನು.

ವ್ಯಾಸರಾಯರು—'ಕನಕ ನಮ್ಮ ಗಂಟು ಕಟ್ಟಿದೆವು. ನೀನೂ ಸವರಣೆ ಮಾಡಿಕೋ! ಆಮೇಲೆ ದಾಸರೂ ಬರುತ್ತಾರೆ'ಂದರು. 'ಆಮೇಲೋ' ಎಂದು ಕನಕನು

---

* ಈ ಮಾತಿನ ಮರ್ಮವಿಷ್ಟೇ! ದಾಸರಿಗೆ ಆರು, ವ್ಯಾಸರಿಗೆ ಮೂರು ಈ ನಾಯಿಗಿದೇ ಜನ್ಮ ಸಾಕೆಂದು ಕನಕನಾಡಿದನು. ವ್ಯಾಸರಾಯರು ರಾಘವೇಂದ್ರರಾಗಿಯೂ ಸತ್ಯಸಂಧರಾಗಿಯೂ ಮತ್ತೆ ಅವತರಿಸಿದರು. ದಾಸರ ಅವತಾರವಿನ್ನೂ ಬಲುದೂರ ಕಾಲವಲ್ಲಾಗಬೇಕಂತೆ! ಇನ್ನೊಮ್ಮೆ ಬಾರೆಂಬ ಮಾತಿನಲ್ಲಿ ನೀನೂ ಇನ್ನೊಂದು ಸಲ ಜನ್ಮ ತಾಳೆಂದು ವ್ಯಾಸರಾಯರು ಹೇಳಿದರು. ಕುರುಬನೋ ಹೊಲೆಯನೋ ಎಂಬ ಮಾತಿನಿಂದ ಹೊಲೆಯನಾಗಿ ಬರುವೆನೆಂದು ಕನಕನಾಡಿದ್ದರಿಂದ, ಅವನು ರಾಘವೇಂದ್ರರ ಕಾಲದಲ್ಲಿ ಹೊಲೆಯನಾಗಿ ಹುಟ್ಟಿದನು. ಈ ವಿಷಯ ವಿಸ್ತಾರವು ರಾಘವೇಂದ್ರ ವಿಜಯದಲ್ಲಿರುವುದರಿಂದ ಇಲ್ಲಿ ವಿವರಿಸುವುದಿಲ್ಲ. ಭಕ್ತರ ಸಂಕೇತಗಳಲ್ಲಿ ಭಕ್ತಸಂತತಿಗೆ ಭಕ್ತಿ ಹುಟ್ಟುವುದು. ಭಕ್ತರು ಲೋಕಸೇವೆಗಾಗಿ ಸ್ವೇಚ್ಛೆಯಿಂದಲೇ ಜನ್ಮ ತಾಳುವರು.

ಫಕ್ಕನೆ ನಕ್ಕನು. ವ್ಯಾಸರಾಯರು, ಆಮೇಲೇನು ? ಸುಡುಗಾಡೆಂದರು. ಅಬ್ಬಬ್ಬಾ ! ನೋಡಬಾರದೆಂದು ಕನಕನಾಡಿದನು. ಮರುದಿನ ತಿರುಪತೀಯಾತ್ರೆ ಮಾಡುವೆನೆಂದು ತಿಳಿಸಿದನು. ಪ್ರಯಾಣ ಮಾಡುತ್ತಿರುವ ಕನಕನನ್ನು ಕರೆದು, ಪುರಂದರದಾಸರು ನಿನ್ನ ಗಂಟಿನಲ್ಲೇನಿದೆಯೆಂದು ಕೇಳಿದರು. ಕನಕನು ಕೇಳಗಿಳಿಸುವುದಿಲ್ಲ; ಮಂತ್ರಾಕ್ಷತೆಯಿದೆ; ಪಾದುಕೆಗಳಿವೆ ಎಂದನು. ಹಾಗಾದರೆ ತಂಬೂರಿಯನ್ನು ತಿಮ್ಮಪ್ಪನ ಬಳಿಗೊಯ್ಯೆಂದರು. ತಂಬೂರಿ ಮಧ್ವಪತಿಗಿರಲೆಂದು ಕನಕನು ನುಡಿದನು. ಮಧ್ವಪತಿಗೆ ಸ್ವಾಮಿಗಳ ತಂಬೂರಿಯಿದೆ; ನನ್ನ ತಂಬೂರಿ ನಿನ್ನ ಬಳಿಯಲ್ಲಿರಲಿ; ಕೇಳಿದಾಗ ಕೊಡೆಂದು ಹೇಳಿದರು.

[ಈ ಮಾತಿನ ಗೂಢಾಭಿಪ್ರಾಯ ಗೊತ್ತಾಗುವಂತಿಲ್ಲ.]

ಶಾಲಿವಾನ ಶಕ ೧೪೬೧ನೆಯ ವಿಳಂಬಿ ಸಂವತ್ಸರದ ಮಾಘಮಾಸವು ಸನ್ನಿಹಿತವಾಯಿತು. ವ್ಯಾಸರಾಯರು ಮಧ್ವನವಮಿಯ ಉತ್ಸವವನ್ನು ಬಹು ವಿಭವದಿಂದ ನಡೆಸಿದರು. ವ್ಯಾಸಪೂರ್ಣಿಮೆಯಿಂದ ಪೂಜೆ ಭಜನೆಗಳು ಅತಿಶಯವಾಗಿ ನಡೆದುವು. ಫಾಲ್ಗುಣ ಬಹುಳ ತೃತೀಯಾ ದಿವಸವೂ ವ್ಯಾಸರಾಯರೇ ಗೋಪಾಲಕೃಷ್ಣ ಮೊದಲಾದ ಸಂಸ್ಥಾನ ಮೂರ್ತಿಗಳನ್ನು ಪೂಜಿಸಿದರು. ತಮ್ಮ ಬೃಂದಾವನವು ಆನೆಗೊಂದಿಗೆ ಎದುರಾಗಿರುವ ತುಂಗಭದ್ರೆಯ ದ್ವೀಪದಲ್ಲಿ (ಈಗ ಆ ಸ್ಥಳದ ಹೆಸರು ನವಬೃಂದಾವನ) ಶ್ರೀಮನ್ಮಧ್ವಾಚಾರ್ಯರ ಪಟ್ಟ ಶಿಷ್ಯರಾದ ಪದ್ಮನಾಭತೀರ್ಥ ಮಾಧವತೀರ್ಥರುಗಳ ಸನ್ನಿಧಿಯಲ್ಲಾಗಬೇಕೆಂದು ಆಜ್ಞೆಗೈದರು. [ಮಾಘ ಶುದ್ಧ ಪೌರ್ಣಿಮೆಯಿಂದಲೂ ವ್ಯಾಸರಾಯರು ತುಂಗಭದ್ರೆಯ ಈ ನಡುಗಡ್ಡೆಯಲ್ಲೇ ವಾಸಮಾಡಿದರೆಂದು ಕೇಳಿಕೆಯಿದೆ.] ಅಚ್ಯುತ ಭೂಪಾಲನೂ ಕಡೆಗಾಲವೆಂದು ಸ್ವಾಮಿಗಳ ಸಮೀಪದಲ್ಲೇ ವಾಸಮಾಡುತ್ತಿದ್ದನು. ವ್ಯಾಸರಾಯರು ಫಾಲ್ಗುಣ ಬಹುಳ ಚತುರ್ಥಿಯ ದಿನವೂ ಪೂಜೆ ಮಾಡಿ—

ರಾಗ ಮುಖಾರಿ—ತಾಳ ಝಂಪೆ

ಪುಟ್ಟಿನಾ ಭುವಿಯೊಳಗೆ ಬಹುದಿನ ಕಳೆಯಿತೋ !
ಪುಟ್ಟದಂತೆ ಮಾಡೊ ಸೃಷ್ಟೀಶ ಶಿರಿಕೃಷ್ಣ ಪ.

ಪಟ್ಟಾಭಿರಾಮನೆ ! ಪರಮಪುರುಷೋತ್ತಮನೆ !
ಗಟ್ಯಾಗಿ ನಿನ್ನ ಪಾದಗಳ ನಂಬಿದೆ ದೇವ ‖ ಅ.ಪ.

ಎಂಬುದಾಗಿ ಹಾಡುತ್ತಾ, ಪದ್ಮಾಸನಾಸೀನರಾಗಿ, 'ನಾರಾಯಣ, ನಾರಾಯಣ, ನಾರಾಯಣ' ಎಂದು ಗಟ್ಟಿಯಾಗಿ ಹರಿಸ್ಮರಣೆ ಮಾಡಿದರು. ಅಲುಗಾಡದೆ ಕುಳಿತಿದ್ದ ಸ್ವಾಮಿಗಳನ್ನು ಏನು ಮಾಡುತ್ತಿರುವರೋ ಎಂದು ನೋಡುತ್ತಾ, ಎಲ್ಲರೂ ತಟಸ್ಥರಾಗಿ ಕುಳಿತಲ್ಲೇ ಕುಳಿತಿದ್ದರು. ಪುರಂದರದಾಸರ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಬರುತ್ತಿತ್ತು. ಇತರ ಜನರು ತಮ್ಮ ತಮ್ಮ ಆಸ್ತಿಕದಲ್ಲಿದ್ದರು.

ಆಗ ಪುರಂದರದಾಸರು ಎದ್ದು ನಿಂತು :—

ಚಿತ್ತೈಸಿದ ವ್ಯಾಸರಾಯ | ಚಿತ್ತಜನಯ್ಯನ ಸಭೆಗೆ ಪ.
ಮುಕ್ತ ಮುತ್ತೈದೆಯರೆಲ್ಲ | ರತ್ನದಾರತಿಯೆತ್ತೆ ಅ.

ಏರಿ ರತ್ನದ ತೇರ ಸೂರ್ಯಮಂಡಲಗೈದಿ | ಸಾರಿ ಸತ್ಯಲೋಕಕೆ ಸಂಭ್ರಮದಿ |
ಭೋರೆಂಬ ವಾದ್ಯಕಹಳೆ ಸುರಿವಾ ಹೂವಿ | ನಾರತಿಯೆತ್ತಿದರ್ಮುರ್ಕ್ರಿ ಕನ್ನೆಯರು | ೧
ಪಾಡೆ ಗಂಧರ್ವರ್ಕೊಂಡಾಡೆ ನಾಗಧನ್ವಂತ | ಕೂಡಲು ಅಪ್ಸರ ಕನ್ನೇರು ಮೇಳದಿ |
ನೋಡುತಲು ಸುರರು ಕೈಗೊಡಲು ಹರಿದಾಸರು | ಮಾಡುತ ಶಿಷ್ಯಮಂಗಳ ಗುಣಕಥನವ ॥ ೨

ವಿಳಂಬಿ ವತ್ಸರ ವಿಜಯನಗರದಲ್ಲಿ | ಫಾಲ್ಗುಣ ಕೃಷ್ಣ ಚತುರ್ಥಿ ಸ್ಥಿರವಾರದಿ |
ಬೆಳಗೊಪ್ಪ ಧ್ಯಾನದಲಿ ಕುಳಿತ ಪದ್ಮಾಸನದಿ | ನಳಿನಾಕ್ಷ ನಾರಾಯಣನೆಂದು ಕೈಮುಗಿದು ॥ ೩
ಧರೆಯೊಳು ಪರಿಪರಿ ಇಂತಿಷ್ಟು ಸಾಧನ | ಪರಿಪೂರ್ಣವಾಯಿತು ಇವರಿಗೆಂದು |
ಇರಬಾರದು ಇನ್ನಿವರೆಂದು ನಗದಿಂದ | ಕರೆಯಬಂದರು ಕಮಲಾಕ್ಷನ ದೂತರು | ೪
ಭಕುತಿಯುಕುತರಾಗಿ ಮುಕುತಿಮಾರ್ಗ ಹಿಡಿದು | ಅಖಿಳ ಬಗೆಯಿಂದ ಧ್ಯಾನಿಸುತ |
ಸಕಲಾಗಮಗೇಯ ಸದ್ಗುಣಪರಿಪೂರ್ಣ | ಅಕಳಂಕ ಪುರಂದರವಿಠಲನ ಬಳಿಗೆ ॥ ೫

ಇಂತು ಕರ್ಣಾಟಕಾಚಾರ್ಯರ-ರಾಜಾಧಿರಾಜ ಗುರುಸಾರ್ವಭೌಮರ
ವೇದವ್ಯಾಸ ಸುನಾಮಾಭಿದ **ಅಭಿನವ ವ್ಯಾಸರೆಂದು** ಹೆಸರ್ಗೊಂಡ
ಶ್ರೀ ವ್ಯಾಸತೀರ್ಥ ಶ್ರೀಪಾದಂಗಳವರ ಮಹಾಮಹಿಮೆಯು
ಲೇಖಕನ ಬಾಲಭಾಷೆಯಿಂದ ಮುಗಿದುದು.

ಶ್ರೀ ವಾದಿರಾಜರು

ಕರ್ಣಾಟಕ ಭಾಷೆಯಲ್ಲಿ ಭಾಗವತ ಧರ್ಮವನ್ನು ಪ್ರಚಾರಮಾಡಿದ ಯತೀಶ್ವರರಲ್ಲಿ **ಶ್ರೀ ವಾದಿರಾಜರು** ನಾಲ್ಕನೆಯವರು. ಉಡುಪಿಯ ಅಷ್ಟಮಠಗಳಲ್ಲೊಂದಾದ **ಸ್ವಾದೀಮಠ**ದ ಪೀಠಾರೋಹಣಮಾಡಿ ೧೨೦ ವರ್ಷಗಳಕಾಲ ಪಾರ್ಥಿವ ದೇಹದಿಂದಿದ್ದ ಪುಣ್ಯಪುರುಷರಿವರು.

ಈ ಹೊತ್ತಿಗೂ, ಉಡುಪಿಯಲ್ಲಿ ಶ್ರೀಮನ್ಮಧ್ವಾಚಾರ್ಯರ ಅನಂತರ ವಾದಿರಾಜರ ಹೆಸರು ಬಹಳ ಸನ್ಮಾನ್ಯವಾಗಿದೆ. ವಾದಿರಾಜರು ಹಾಕಿಕೊಟ್ಟ ಪೂಜಾಪರ್ಯಾಯ ಪದ್ಧತಿಗಳು ಅದೇ ತೂಕ, ಅದೇ ಅಳತೆಯಿಂದ ಇಂದಿಗೂ ನಡೆದುಬರುತ್ತಿವೆ. ಒಬ್ಬೊಬ್ಬ ಮಠಾಧಿಪತಿಗಳಿಗೆ ಒಂದೊಂದು ಪರ್ಯಾಯವೆಂದರೆ, ಮೂರರಿಂದ ನಾಲ್ಕು ಲಕ್ಷ ರೂಪಾಯಿಗಳ ಖರ್ಚಾಗುತ್ತದೆ. ಕಾಲೋಚಿತವಾದ ಸುಧಾರಣೆಮಾಡಿ, ಖರ್ಚನ್ನು ಕಡಿಮೆಮಾಡುವ ಧೈರ್ಯ ಯಾರಿಗೂ ಇಲ್ಲ. ಭರತಖಂಡದ ಯಾವ ಕ್ಷೇತ್ರದಲ್ಲೂ ಉಡುಪಿಯಂತೆ ಪೂಜಾಪದ್ಧತಿಯಿಲ್ಲ; ಅನ್ನದಾನವಿಲ್ಲ. ಈ ಕಾಲದ ಭಾವನೆಯಂತೆ ಅಲ್ಲಿನ ಧರ್ಮಗಳು, ಆಕ್ಷೇಪಣೀಯವಾಗಿ ಕಂಡುಬಂದರೂ ಆ ಸ್ಥಳವನ್ನು ಪ್ರತ್ಯಕ್ಷ ನೋಡಿದರೆ, ಯಾವ ಭಾವನೆಗಳೂ ಬದಲಾಗದಿರುವುದಿಲ್ಲ. ಅವರಿಗೆ ಪೂಜ್ಯಭಾವನೆಯುಂಟಾಗದಿರುವುದಿಲ್ಲ.

ಹೆಸರಿಗೆ ತಕ್ಕಂತೆ ವಾದಿರಾಜರು ಬಲು ವಾದಿನಿಗ್ರಹಮಾಡಿದ ಪಂಡಿತರು. ದೊಡ್ಡ ಗ್ರಂಥಕರ್ತರು. ಪಂಡಿತರ ದೃಷ್ಟಿಯಿಂದ ದೊಡ್ಡ ದೊಡ್ಡವಾದ ಗ್ರಂಥಗಳನ್ನು ರಚಿಸಿದವರು ಮಾತ್ರವಲ್ಲ. **ರುಕ್ಮಿಣೀಶ ವಿಜಯ, ತೀರ್ಥಪ್ರಬಂಧ**ಗಳಂಥಾ ಸರಸ ಕಾವ್ಯಗಳನ್ನೂ ಬರೆದವರು. ಕನ್ನಡದಲ್ಲಿ ಸಾವಿರಾರು ದೇವರನಾಮಗಳನ್ನು ಮಾಡಿ, ಹಾಡಿದವರು. ಇವರ ಸ್ವತಂತ್ರ ಗ್ರಂಥಗಳಲ್ಲಿ **ಯುಕ್ತಿಮಲ್ಲಿಕೆ**ಯು ವಿದ್ಯಾರಣ್ಯರ ಉದ್ಧಾಮ ವೇದಾಂತ **ಪಂಚದಶಿಗೆ** ಸಮವಾಗಿದೆ. ಯುಕ್ತಿಬಲದಿಂದ, ಸಿದ್ಧಾಂತ ಸ್ಥಾಪನೆ ಮಾಡುವುದರಲ್ಲಿ ಇವರಿಗೆ ಸದೃಶರು ಮತ್ತೊಬ್ಬರಿಲ್ಲ. ರೂಢಿಯಲ್ಲಿ ಅದ್ವೈತ ವೇದಾಂತಕ್ಕೆ ವೇದಾಂತವೆಂಬ ಹೆಸರಿರುವಂತೆ, ದ್ವೈತ ವೇದಾಂತಕ್ಕೆ ಸಿದ್ಧಾಂತವೆಂಬ ಹೆಸರಿದೆ. **"ಅಂತೇ ಸಿದ್ಧಸ್ತು ಸಿದ್ಧಾಂತಃ"** ಎಂಬಂತೆ ವಿವಿಧ ಯುಕ್ತಿಬಲಗಳಿಂದಲೂ, ಶ್ರುತ್ಯಾಧಾರಗಳಿಂದಲೂ, ಪುನಃ ಪೂರ್ವಪಕ್ಷಗಳಿಗಾಕರವಾಗದೆ, ಯಾವುದು ಉತ್ತರ ಪಕ್ಷವಾಗಿ ನಿಲ್ಲುವುದೋ ಅದು **ಸಿದ್ಧಾಂತ**ವೆನ್ನಿಸುತ್ತದೆ. ವಿಷಯಕ್ಕೆ ತಕ್ಕ ಭಾಷೆ. ಭಾಷೆಗೆ ತಕ್ಕ ಭಾವನೆ ಇವೆಲ್ಲವನ್ನೂ ನೋಡಬೇಕೆಂದರೆ ವಾದಿರಾಜರ ಗ್ರಂಥಗಳಲ್ಲಿ !

ವಾದಿರಾಜರ ಸಂಸ್ಕೃತ ಗ್ರಂಥಗಳಲ್ಲಿ ಉಪಲಬ್ಧವಾಗಿರುವುವೆಂದರೆ :

೧. ಗುರು ರಾಜೀಯ ಸುಧಾ ಟಿಪ್ಪಣಿ
೨. ತತ್ವಪ್ರಕಾಶಿಕಾ ಟಿಪ್ಪಣಿ
೩. ತಾತ್ಪರ್ಯನಿರ್ಣಯ ಟೀಕಾ
೪. ತಂತ್ರಸಾರ ಟೀಕಾ
೫. ಗುರ್ವರ್ಥದೀಪಿಕಾ
೬. ಪ್ರಮೇಯ ಸಂಗ್ರಹ
೭. ಯುಕ್ತಿಮಲ್ಲಿಕಾ
೮. ಸರಸಭಾರತೀ ವಿಲಾಸ
೯. ಭಗವದ್ಗೀತಾ ಟಿಪ್ಪಣಿ
೧೦. ತೀರ್ಥ ಪ್ರಬಂಧ
೧೧. ಮಹಾಭಾರತ ಟಿಪ್ಪಣಿ
೧೨. ರುಕ್ಮಿಣೀಶ ವಿಜಯ
೧೩. ಪಾಷಂಡ ಮತಖಂಡನ
೧೪. ಏಕಾದಶೀ ನಿರ್ಣಯ
೧೫. ಸಂಕಲ್ಪ ಪದ್ಧತಿ
೧೬. ಕೃಷ್ಣಾಷ್ಟಕ ಮೊದಲಾದ ಐವತ್ತು ಬಿಡಿ ಸ್ತೋತ್ರಗಳು

ಕನ್ನಡ ಗ್ರಂಥಗಳು

೧. ಕನ್ನಡ ತಾತ್ಪರ್ಯ ನಿರ್ಣಯ
೨. ವೈಕುಂಠ ವರ್ಣನೆ
೩. ಗುಂಡಕ್ರಿಯಾ
೪. ಲಕ್ಷ್ಮೀ ಶೋಭಾನೆ ಹಾಡು
೫. ಸ್ವಪ್ನ ಗದ್ಯ
೬. ಭ್ರಮರಗೀತಾ
೭. ಸಾವಿರಾರು ದೇವರ ನಾಮಗಳು
೮. ಅನೇಕ ಸುಳಾದಿಗಳು

ಇತ್ಯಾದಿ-ಇತ್ಯಾದಿ-ಇತ್ಯಾದಿ.

ಜನ್ಮ ವೃತ್ತಾಂತ

ಭರತಖಂಡದ ಯಾವ ಮಹಾತ್ಮರ ಚರಿತ್ರೆಯನ್ನು ನೋಡಿದರೂ. ಅವರ ಚರ್ಯದಲ್ಲಿ, ಮೊದಲಿನಿಂದ ಕಡೆಯತನಕ ಅಸಾಧಾರಣ ಸಂಗತಿಗಳೇ ಕಂಡುಬರುತ್ತವೆ. ಸಾಧಾರಣ ಸಂಗತಿಗಳನ್ನು ಅಸಾಧಾರಣವಾಗಿಯೂ, ಅಸಾಧಾರಣ ಸಂಗತಿಗಳನ್ನು ಸಾಧಾರಣವಾಗಿಯೂ ರಚಿಸುವ ಭಾಷಾ ಪದ್ಧತಿಯನ್ನು ಬದಿಗಿಟ್ಟು ನೋಡಿದರೂ, ವಾದಿರಾಜರ ಚರಿತ್ರೆಯಲ್ಲಿ ಅಸಾಧಾರಣ ಸಂಗತಿಗಳು ಹೇರಳವಾಗಿ ಕಂಡುಬರುತ್ತವೆ. ಇದ್ದ ಸಂಗತಿಯನ್ನು ಇದ್ದಂತೆ ಬರೆದಿಡುವುದರ ವಿನಾ ಅನ್ಯೋಪಾಯವಿಲ್ಲ. ನಮ್ಮ ಹಿರಿಯರು-ತಮ್ಮ ಹಿರಿಯರು ಬರೆದಿಟ್ಟ ಕಡತದ ಆಧಾರದಿಂದ ಬರೆದಿಟ್ಟದ್ದರಲ್ಲಿ, ಕಳೆದುಳಿದ ಕಡತದ ಆಧಾರ, ದಾಸರ ಪದ ಸುಳಾದಿಗಳ ಪ್ರಮಾಣ, ಸಂಸ್ಕೃತದ ಕೆಲವು ಸ್ತೋತ್ರಗಳ ಸಹಾಯಗಳಿಂದ ಕ್ರೋಡೀಕರಿಸುವುದು ಈ ವಾದಿರಾಜರ ಚರಿತ್ರೆಯು. ಸಂಪೂರ್ಣ ವಿಷಯಗಳನ್ನು ಬರೆಯುವುದರಲ್ಲಿ ಲೋಪವಿದ್ದರೆ ಇರಬಹುದು. ಆದರೆ ಬರೆದಿರುವುದರಲ್ಲಿ ಲೇಖಕನ ರಚನೆಯೇನಿಲ್ಲ.

ಸ್ವಾದೀಮಠ

ಶ್ರೀಮನ್ಮಧ್ವಾಚಾರ್ಯರ ತಮ್ಮಂದಿರಾದ ವಿಷ್ಣುತೀರ್ಥರು ಉಡುಪಿಯ ಅಷ್ಟ ಮಠಗಳ ಪೈಕಿ ಸ್ವಾದೀಮಠದ ಪೀಳಿಗೆಗೆ ಮೂಲಪುರುಷರಾದರು. ಆ ಪೀಳಿಗೆಯು ವಾದಿರಾಜರ ಕಾಲಕ್ಕೆ ಹದಿನಾರು ತಲೆಗಳು ಕಳೆದು ಹದಿನೇಳನೇ **ವಾಗೀಶ**ರಿಂದ ಅಧಿಷ್ಠಿತವಾಗಿತ್ತು. ವಾಗೀಶರು ತಮ್ಮ ಪೀಠಕ್ಕೆ ತಕ್ಕ ಶಿಷ್ಯನೊಬ್ಬನನ್ನು ಆರಿಸುವ ಉದ್ಯೋಗದಲ್ಲಿದ್ದರು. ಈಗಿನಂತೆ ಕೇವಲ ಅವಸಾನಕಾಲ ಒದಗಿದಾಗ ರಕ್ತಸಂಬಂಧಿಯೊಬ್ಬನನ್ನು ಪೀಠದಲ್ಲಿ ಕೂಡಿಸುವ ವಾಡಿಕೆಯು ಆಗ ಇರಲಿಲ್ಲ. ಪೀಠದ ಮಹತ್ವವನ್ನೂ ಹೊಣೆಗಾರಿಕೆಯನ್ನೂ ಆಗಿನವರು ದೊಡ್ಡದಾಗಿ ಎಣಿಸುತ್ತಿದ್ದರು. ಸದ್ವಂಶ, ಸದ್ವಿದ್ಯೆ, ಸದ್ವರ್ತನಗಳು ಆ ಕಾಲದ ಮಠಾಧಿಪತ್ಯಕ್ಕೆ ಬೇಕಾದ ಗುಣಗಳಾಗಿದ್ದುವು. ಪೀಠಾಧಿಪತಿಗಳು ಅದಕ್ಕಾಗಿ ವಟುಗಳನ್ನು ತಮ್ಮ ಬಳಿಯಲ್ಲಿಟ್ಟುಕೊಂಡು, ತಾವೇ ವಿದ್ಯಾಭ್ಯಾಸಮಾಡಿಸಿ, ಯೋಗ್ಯತೆಯನ್ನರಿತು ಆಶ್ರಮ ಕೊಡುತ್ತಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಕುಂಭಾಸಿಯ ಬಳಿ ಹೂವಿನಕೆರೆಯೆಂಬ ಚಿಕ್ಕದೊಂದು ಗ್ರಾಮ. ಅಲ್ಲಿ ದೇವರ ರಾಮಭಟ್ಟನೆಂಬ ಬಡಬ್ರಾಹ್ಮಣನೊಬ್ಬನಿದ್ದನು. ಆತನ ಹೆಂಡತಿಯ ಹೆಸರು ಗೌರೀದೇವಿ. ಭಟ್ಟನು ವಿದ್ಯಾವಂತನಾಗಿದ್ದಷ್ಟೇ ದರಿದ್ರನಾಗಿದ್ದನು. ಹೂವಿನಕೆರೆ ಗ್ರಾಮದಲ್ಲಿ ಭಟ್ಟನ ಮನೆಯೆಂದರೆ ಒಂದು ಹುಲ್ಲು ಗುಡಿಸಲು. ಗುಡಿಸಲ ಸುತ್ತಲೂ ಗದ್ದೆ. ಗದ್ದೆಯ ಮೇಲ್ಗಡೆಯಲ್ಲಿ ಸ್ವಲ್ಪ ಗಿಡಗಾಡು. ಇಷ್ಟೇ ಅವನ ಸರ್ವಸ್ವವಾಗಿತ್ತು. ಗೌರೀದೇವಿಯು ತನಗೆ ಮೊದಲು ಪುತ್ರಸಂತಾನವಾದರೆ ದೇವರಿಗೆ ಲಕ್ಷಾಭರಣ ಸೇವೆ ಮಾಡುವೆನೆಂದು ಹರಿಕೆಮಾಡಿದ್ದಳು. ಲಕ್ಷಾಭರಣವೆಂದರೇನೋ ಆಕೆಗೆ ಗೊತ್ತಿದ್ದರೆ ಹಾಗೆ ಬೇಡಿಕೊಳ್ಳುತ್ತಿರಲಿಲ್ಲ. ಪುಷ್ಪಗಳಿಂದಲೇ ಲಕ್ಷಾಭರಣಗಳನ್ನು ರಚಿಸಿ ಸ್ವಾಮಿಗೆ ಸಮರ್ಪಿಸುವುದಕ್ಕಾದರೂ ನೂರಾರು ರೂಪಾಯಿಗಳಾಗಬೇಕಾಗಿತ್ತು. ಆ ಬಡ ಮುತ್ತೈದೆಗೆ ನೂರು ರೂಪಾಯಿಗಳನ್ನು ಒಟ್ಟಿಗೆ ನೋಡಿದ ಪರಿಚಯ ಸಹ ಇರಲಿಲ್ಲ. ಹೀಗಿರಲು ಗೌರೀದೇವಿಯು ಒಮ್ಮೆ ವಾಗೀಶರ ಬಳಿಗೆ ಬಂದು ನಮಸ್ಕಾರ ಮಾಡಿದಾಗ ಅವರು—'ಅಮ್ಮಾ ನಿನಗೆ ಪ್ರಥಮತಃ ಪುತ್ರಸಂತಾನವಾಗುವುದು. **ಅವನು ಮಾತ್ರ ನಮ್ಮವನಾಗುವನು** ಎಂದು ಆಶೀರ್ವಾದ ಮಾಡಿದರು. ಈ ಮಾತು ಕೇಳಿ ಗೌರಮ್ಮನಿಗೆ ಭಗ್ಗ್ರಮೆಯಾಯಿತು. ನನ್ನ ಸಂಕಲ್ಪ ಸ್ವಾಮಿಗಳಿಗೆ ಹೇಗೆ ತಿಳಿಯಿತೆಂಬ ಸಂದೇಹವುಂಟಾಯಿತು. ತಿಳಿದರೆ ತಾನೆ, ಮೊದಲ ಮಗನನ್ನು ಕೇಳಲು ಅವರಿಗೇನಧಿಕಾರವೆಂದೆನಿಸಿತು. ಕೇಳಿದರೇನು? ಅವನನ್ನು ಕೊಡಬಾರದೆಂಬ ಲೋಭ ಬುದ್ಧಿಯಾಯಿತು. ಮನಸ್ಸು ನಿಲ್ಲದೆ ನಡೆದ ಸಂಗತಿಯನ್ನು ಗಂಡನಿಗೆ ತಿಳಿಸಿದಳು. ಭಟ್ಟನು ಸಂತಾನವಾದ ಮೇಲಲ್ಲವೇ ನಮ್ಮವ-ನಿಮ್ಮವನೆಂಬ ಮಾತು! ಅಲ್ಲಿಯತನಕ ನಿನಗೇತರ ಚಪಲವೆಂದನು.

ಸಹಜವಾಗಿ ಆಗ ಗೌರೀದೇವಿಯು ಗರ್ಭವತಿಯಾಗಿದ್ದಾಳೆಂಬುದಕ್ಕೆ ಪ್ರಾರಂಭದೆಶೆಯ ಕೆಲಕೆಲವು ಲಕ್ಷಣಗಳು ಕಂಡುಬಂದಿದ್ದುವು.

ಗೌರಮ್ಮ :—(ಗಂಡನನ್ನು ಕುರಿತು) ಈಸಲ ಗಂಡುಮಗುವೇ ಆದರೆ!

ಭಟ್ಟ :—ಅಯ್ಯೋ ನಿನ್ನ ಹುಚ್ಚೇ !

ಗೌರಮ್ಮ :—ಆದರೇನುಮಾಡುವಿರಿ ?

ಭಟ್ಟ :—ಆದರೆ ಅವನು ದೇವರ ಮಗ.

ಗೌರಮ್ಮ :—ಅಂದರೆ ಅವನನ್ನು ಸ್ವಾಮಿಗಳಿಗೆ ಕೊಟ್ಟುಬಿಡುವಿರೋ ?

ಭಟ್ಟ :—ನಾನು ಹಾಗೆ ಹೇಳಲಿಲ್ಲವಲ್ಲಾ !

ಗೌರಮ್ಮ :—ದೇವರ ಮಗನೆಂಬ ಮಾತಿನ ಅರ್ಥವೇನು ?

ಭಟ್ಟ ;—ನೀನು ಮಹಾ ವಿದ್ವಾಂಸಳಾದೆ ?

ಗೌರಮ್ಮ :—ವಿದ್ವಾಂಸಳಾಗಿದ್ದರೆ ನಾನೂ ನಿಮ್ಮಂತೆ ಗಂಡಸಾಗಿರುತ್ತಿದ್ದೆ !

ಭಟ್ಟನ ಯೋಚನೆ ಬಲವಾಯಿತು. ಹೆಂಡತಿಯು ತಿಳಿಸಿದ ಸ್ವಾಮಿಗಳ ಮಾತಿನ ಭಾವವು ಅವನನ್ನು ಪ್ರೋಕ್ಷ್ಯಮಾಡಿತು. ಹೀಗಿರಲು ಒಂದು ದಿನ ದಂಪತಿಗಳನ್ನು ಸ್ವಾಮಿಗಳು ತೀರ್ಥಪ್ರಸಾದಕ್ಕೆ ಬರಬೇಕೆಂದು ಹೇಳಿಕಳುಹಿಸಿದರು. ಆಗ ಗೌರಮ್ಮನು ಆರು ತಿಂಗಳ ಗರ್ಭಿಣಿಯಾಗಿ ತೇಜೋವಂತಳಾಗಿ ಕಾಣಿಸುತ್ತಿದ್ದಳು.

ಸ್ವಾಮಿಗಳು ಭಟ್ಟನನ್ನು ಕರೆದು—'ಏನು ! ಬಲು ಚಿಂತಿಸುತ್ತಿರುವಂತಿದೆ' ಎಂದರು. ಭಟ್ಟನು 'ಆ ! ಏನೂ ಇಲ್ಲ'ವೆಂದು ನುಡಿದನು.

ವಾಗೀಶರು :—ಭಟ್ಟ ! ಕಣ್ಣು ಹೋಗುವಷ್ಟು ಕಾಡಿಗೆಯೇಕೆ ? ನಿನ್ನ ಮನೆಯಲ್ಲಿ ಹುಟ್ಟಿದರೆ ಅವನು ನಿನ್ನ ಮಗ ! ಇಲ್ಲದಿದ್ದರೆ ?

ಭಟ್ಟ :—ಮನೆಯಲ್ಲಿ ಹುಟ್ಟದೆ ಯಾರಾದರೂ ಕಾಡಿನಲ್ಲಿ ಹುಟ್ಟುವರೆ ?

ವಾಗೀಶರು :—ಅಂಥಾ ಪ್ರಸಂಗ ಬಂದರೆ ?

ಭಟ್ಟ :—ಅವನು ಶ್ರೀಪಾದಕ್ಕೆ ಸೇರಿದವ.

ವಾಗೀಶರು :—ಈ ಮಾತು ನೆನಪಿರಲಿ.

ತೀರ್ಥಪ್ರಸಾದವಾಯಿತು. ಫಲ ಮಂತ್ರಾಕ್ಷತೆಯಾಯಿತು. ದಂಪತಿಗಳು ತಮ್ಮ ಕುಟೀರಕ್ಕೆ ತೆರಳಿದರು. ಅಂದಿನಿಂದಲೇ ಭಟ್ಟನು ಗೌರಮ್ಮನನ್ನು ಮನೆಯ ಬಾಗಿಲಿಂದಾಚೆ ಹೋಗದಂತೆ ಕಟ್ಟುಮಾಡಿದನು. ಗೌರಮ್ಮನಿಗೂ ಅದು ಇಷ್ಟವಾಗಿದ್ದುದರಿಂದ ಹೊಸ್ತಿಲು ದಾಟುತ್ತಿರಲಿಲ್ಲ. ಬಿತ್ತಲು ಬಚ್ಚಲು ಸಹ ಮನೆಯ ಆವರಣದಲ್ಲೇ ಇದ್ದುದರಿಂದ ಯಾವ ನಿಮಿತ್ತದಿಂದಲೂ ಆ ಸಾಧ್ವಿಗೆ ಮನೆಯನ್ನು ಬಿಟ್ಟು ಹೊರಗೆಹೋಗಲು ಕಾರಣವಿರಲಿಲ್ಲ.

ನವಮಾಸ ತುಂಬುವ ಕಾಲಕ್ಕೆ ಸರಿಯಾಗಿ ಒಂದು ಸಾಧನೆಯು ಪ್ರಾಪ್ತಿಯೊದಗಿತು. ಭಟ್ಟನು ಸಕಾಲದಲ್ಲಿ ಪಾರಣೆಗೆ ಕುಳಿತನು. ಗೌರಮ್ಮನು ತುಳಸೀಪೂಜೆಯಲ್ಲಿದ್ದುದರಿಂದ ಪತಿಯ ಸಂಜ್ಞೆಗೆ ಬರಲಿಲ್ಲ. ಗರ್ಭಿಣಿಯಾಗಿದ್ದುದರಿಂದ; ಉಪವಾಸದ

ನಿಯಮವವಳಿಗಿರಲಿಲ್ಲ. ಪಾರಣೆಯು ತಡವಾದರೆ ವ್ರತಭಂಗವಾದೀತೆಂಬ ಭಯವೂ ಇರಲಿಲ್ಲ. ಆಗಲೇ ಸ್ವಲ್ಪ ದೇಹಾಯಾಸ ಕಂಡುಬರುತ್ತಿತ್ತು. ಅಷ್ಟುಹೊತ್ತಿಗೆ ಸರಿಯಾಗಿ ತೊಂಡುದನಗಳ ಹಿಂಡೊಂದು ಮನೆಯ ಹಿಂದಿನ ಭಟ್ಟನ ಗದ್ದೆಗೆ ನುಗ್ಗಿತು. ತಿಂದು ತುಳಿದು ಗದ್ದೆಯನ್ನು ಕೆಡಿಸುವುವೆಂದು ಗೌರಮ್ಮನು ದನಗಳನ್ನೋಡಿಸಲು ಹೊರಟಳು. ಚಲ್ಲಾಪಿಲ್ಲಿಯಾದ ದನಗಳನ್ನು ದೂರಗೊಳಿಸುವುದರಲ್ಲಿ ಗೌರಮ್ಮನು ಗದ್ದೆಗಳನ್ನು ದಾಟಿ ಗಿಡಗಾಡಿಗೆ ಬಂದಳು. ನಡೆದ ಆಯಾಸ, ಮೇಲಾಗಿ ಪ್ರಸವವೇದನೆ, ಪ್ರಥಮಗರ್ಭವಾಗಿದ್ದುದರಿಂದ ಅನನುಭವ. ಇವುಗಳಿಂದ ಮೈಬೆವರಿ, ಕಣ್ಗತ್ತಲೆಯಿಟ್ಟು, ಒಂದು ಮರದಡಿಯಲ್ಲಿ ಕುಳಿತಳು. **ವಿಶ್ರಮಿಸಿಕೊಂಡು ಮನೆಗೆ ಬರಬೇಕೆನ್ನುವಷ್ಟರಲ್ಲಿ ಪ್ರಸವವಾಯಿತು.** ಗುಡಿಸಿಲಲ್ಲಿದ್ದವರು ಗೌರಮ್ಮನನ್ನು ಕಾಣದೆ ಹುಡುಕುತ್ತಾ ಮರದ ಬಳಿಗೆ ಬಂದರು. ಸ್ವಲ್ಪದರಲ್ಲಿ ಕೈನೀರಾರಿತೆಂದು ಶಿಶುಸಹಿತಳಾದ ಬಾಣಂತಿಯನ್ನು ಕರೆತಂದು ಉಪಚರಿಸಿದರು. ದಂಪತಿಗಳಿಗೆ ಪುತ್ರಸಂತಾನವಾಯಿತೆಂಬ ಸಂತೋಷಕ್ಕಿಂತ, ಕಾಡಿನಲ್ಲಿ ಜನನವಾಯಿತಲ್ಲಾ ಎಂಬ ವ್ಯಾಕುಲವೇ ಅಧಿಕವಾಯಿತು.

ಭಟ್ಟನು ಭಗವದಿಚ್ಛೆಯೆಂದು ತಟಸ್ಥನಾದನು. ವಾಗೀಶರಿಗೆ ಈ ಸಂಗತಿ ತಿಳಿದು ಸಂತೋಷವಾಯಿತು. ಆರೋಗ್ಯಸ್ನಾನಾನಂತರ ಶಿಶುವನ್ನು ಹರಿವಾಣದಲ್ಲಿಟ್ಟು ತರುವಂತೆ ಹೇಳಿಕಳುಹಿಸಿದರು. ಶಿಶುವನ್ನು ನೋಡಿ, ಕಮಂಡಲೋದಕವನ್ನು ಪ್ರೋಕ್ಷಿಸಿದರು. **ದ್ವಾತ್ರಿಂಶಲ್ಲಕ್ಷಣೋಪೇತನಾದ** ಈ ಶಿಶುವು ಮನುಷ್ಯಮಾತ್ರನಲ್ಲವೆಂದರುಹಿದರು. ಶಿಶುವಿನ ತಂದೆಯನ್ನು ಕುರಿತು—'ಭಟ್ಟ! ನೋಡಿದೆಯೋ ಭಗವದಿಚ್ಛೆ ಹೇಗಿದೆ? ಸಾಧನೆಯ ದ್ವಾದಶೀ ದಿನ, **ಸುಸ್ನಾತಳಾದ ಅದಿತಿಯ ಗರ್ಭದಲ್ಲಿ ವಾಮನನುದಿಸಿದಂತೆ ಗೌರೀದೇವಿಯುದರದಲ್ಲಿ ಭೂವರನುದಿಸಿದನು!** ಇವನು ನಿನ್ನ ಮಗನಲ್ಲವಷ್ಟೆ! ದೇವರ ಮಗನಷ್ಟೆ!' ಎಂದರು. ಶಿಶುವು ಕಿಲಕಿಲ ನಕ್ಕು ಸ್ವಾಮಿಗಳಿಗೆ ಎರಡು ಕೈಗಳನ್ನೂ ಜೋಡಿಸಿ ವಂದನೆಮಾಡಿತು. ನೋಡಿದವರೆಲ್ಲರೂ ಆಶ್ಚರ್ಯಭರಿತರಾದರು. ಸ್ವಾಮಿಗಳು ಆನಂದಪುಳಕಿತರಾದರು. ಶಿಶುವಿಗೆ **ಭೂವರ**ನೆಂದು ನಾಮಕರಣ ಮಾಡುವಂತೆ ಆಜ್ಞೈಸಿದರು. ದಂಪತಿಗಳಿಗೆ ವಾಯನ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದರು. **ಭೂವರಾಹಮೂರ್ತಿ**ಗೆ ಅಭಿಷೇಕವಾದ ಕ್ಷೀರವೇ ಶಿಶುವಿಗೆ ಆಹಾರವಾಯಿತು.

ವಾದಿರಾಜರ ಅವತಾರಕಾಲವು ಶಾಲೀವಾಹನ ಶಕ ೧೪೦೨ಕ್ಕೆ ಸಲ್ಲುವ ಶಾರ್ವರಿ ಸಂವತ್ಸರವೆಂದು ಮಠದ ದಫ್ತರದಿಂದ ಗೊತ್ತಾಗುತ್ತದೆ. ಅಂದರೆ ಕ್ರಿಸ್ತಾಬ್ದ ೧೪೮೦ ಆಗುತ್ತದೆ.

ರಾಜರು ಅವತಾರಮಾಡಿದ ಸ್ಥಳಕ್ಕೆ ಗೌರೀಗದ್ದೆಯೆಂಬ ಹೆಸರಿದೆ. ಜನನಸ್ಥಳವೆಂದು ತೋರಿಸಲು ಶಿಲಾಮಂಟಪವೊಂದು ನಿರ್ಮಾಣವಾಗಿದೆ. ಭಟ್ಟನ ಮನೆಯು ಈಗ ಸ್ವಾದೀಮಠಕ್ಕೆ ಸೇರಿದೆ. ವಾದಿರಾಜರ ಆರಾಧನೆಯ ಕಾಲದಲ್ಲಿ ಗೌರೀಗದ್ದೆಯಲ್ಲಿ ಬೆಳೆದ ಅಕ್ಕಿಯು ನಿವೇದನವಾಗುತ್ತಿದೆ.

ಬಾಲಕನಿಗೆ ಶಾಸ್ತ್ರಮಾನದಂತೆ ಕಾಲಕಾಲದಲ್ಲಿ ಚೌಲೋಪನಯನಗಳಾದುವು. ಭೂವರನು ಸಾಮವೇದದಲ್ಲೂ ಕಾವ್ಯದಲ್ಲೂ ಪಾರಂಗತನಾದನು. ವಿದ್ಯಾಪ್ರಾಪ್ತಿಗಾಗಿಯೂ ವಾಕ್ಪಟುತ್ವಕ್ಕಾಗಿಯೂ ವಾಗೀಶರಿಂದ **ಹಯಗ್ರೀವ** ಮಂತ್ರೋಪದೇಶ ಪಡೆದು, ಕಠಿಣ ತಪಶ್ಚರ್ಯದಿಂದ ಸಿದ್ಧಿಯನ್ನು ಪಡೆದನು.

ವಾಗೀಶರೇ ಸ್ವಯಂ ಭೂವರನಿಗೆ ನ್ಯಾಯ ವೇದಾಂತ ಶಾಸ್ತ್ರಗಳನ್ನು ಪಾಠ ಮಾಡಿಸಿದರು. ಭೂವರನ ಸಹಪಾಠಿಗಳು ನೂರಾರು ಜನರಿದ್ದು ಶ್ರೀಮಠದ ಪ್ರಸಾದ ಭಾಗಿಗಳಾಗಿದ್ದರು. ವಾಗೀಶರಾದರೋ ವಿದ್ಯಾಭ್ಯಾಸ ಮಾಡುವವರಿಗೆ ಉತ್ತೇಜನ ಕೊಡಬೇಕೆಂದು ಆಗಾಗ ಶಿಷ್ಯರಿಗೆ ಮೃಷ್ಟಾನ್ನ ಭೋಜನ ಮಾಡಿಸುವುದು, ವಸ್ತ್ರಬಹುಮಾನ ಕೊಡುವುದು, ಯೋಗ್ಯತೆಯರಿತು ದ್ರವ್ಯ ಸಂಭಾವನೆ ಕೊಡುವುದು ಇತ್ಯಾದಿಯಾಗಿ ತಮ್ಮ ಔದಾರ್ಯವನ್ನು ತೋರಿಸುತ್ತಿದ್ದರು.

ವಾಗೀಶರು ಒಮ್ಮೆ ಎಲ್ಲ ಶಿಷ್ಯರನ್ನೂ ಸೇರಿಸಿ, ವಿವಿಧ ಫಲಗಳನ್ನೂ ವಸ್ತ್ರಗಳನ್ನೂ ಸಾಲಾಗಿಡಿಸಿ, ಬೇಕಾದವರು ಬೇಕಾದುದನ್ನು ತೆಗೆದುಕೊಳ್ಳಬಹುದೆಂದು ಹೇಳಿದರು. ಭೂವರನ ಸಹಪಾಠಿಗಳು ಸಂತೋಷದಿಂದ ತಮಗೆ ಬೇಕಾದುದನ್ನು ಆರಿಸಿಕೊಂಡು, ಮತ್ತೂ ಬೇಕಾದ್ದನ್ನು ಬೇಡಿ ಪಡೆದುಕೊಂಡರು. ಭೂವರನು ಮಾತ್ರ ಯಾವುದನ್ನೂ ನೋಡಲಿಲ್ಲ; ಏನನ್ನೂ ಬೇಡಲಿಲ್ಲ. ಸಹಪಾಠಿಗಳು ಅರಸಿಕನೆಂದರೂ ಡಾಂಭಿಕನೆಂದರೂ ಸಹನೆಯಿಂದಿದ್ದನು. ಸ್ವಾಮಿಗಳೇ ಭೂವರನನ್ನು ಕರೆದು–ಏಕೆ ಸುಮ್ಮನಿರುವೆ? ಬೇಕಾದುದನ್ನು ಕೇಳೆಂದು ಹೇಳಿದರು. ಆಗ ಭೂವರನು ಮಹಾಸ್ವಾಮಿ—

ಉಗಾಭೋಗ

ಗುರುಭಕುತಿಬೇಕು | ಹಿರಿಯರ ಕರುಣಬೇಕು | ಹರಿಕಥೆಗಳ ನಿತ್ಯ ಕೇಳುತಿರಬೇಕು | ವಿರಕುತಿಬೇಕು | ವಿಷ್ಣುವಿನಾರಾಧನೆಬೇಕು | ವರ ಮಂತ್ರ ಜಪಬೇಕು | ತಪಬೇಕು ಪರಗತಿಗೆ | ಶ್ರೀ ಹಯವದನನ ಪರಮಾನುಗ್ರಹಬೇಕು | ಇಹದ ನಿಗ್ರಹಬೇಕು || ಎಂದು ನುಡಿದನು.

ಇದು ವಾದಿರಾಜರು ಪೂರ್ವಾಶ್ರಮದಲ್ಲೇ ಮಾಡಿದ ಪ್ರಥಮ ಉಗಾಭೋಗ. ಹಯಗ್ರೀವೋಪಾಸಕರಾಗಿದ್ದುದರಿಂದ **'ಹಯವದನ'**ನಾಂಕಿತ ಮಾಡಿದರು.

ವಾಗೀಶರು ಭೂವರನ ಮಾತನ್ನು ಕೇಳಿ ಬೆರಗಾದರು. 'ಏನು ಭೂವರ, ಕವಿಯಾಗಿಬಿಟ್ಟೆ' ಎಂದರು. ಭೂವರನು–'ಚರಣಾನುಗ್ರಹವಿದ್ದರೆ ಗ್ರಂಥಕರ್ತನೂ ಆಗುವೆ'ನೆಂದನು. ಸ್ವಾಮಿಗಳು ನಮಗೆ ಬೇಕಾದುದೂ ಅಷ್ಟೇ ಎಂದರು. ಅಂದಿನ ದಿನವು ಮಠದಲ್ಲಿ ಪರಮಾನಂದದ ದಿನವಾಯಿತು. ಅಂತೆಯೇ ಸಂಗಡಿಗರ ದ್ವೇಷಬೀಜವೂ ಅಂಕುರಿಸಿತು. ತಾಯಿತಂದೆಗಳು ಮಗನ ಅಭ್ಯುದಯವನ್ನು ನೋಡಿ, [illegible] ಸಂತೋಷಭಾಗಿಗಳಾದರು. ದಿನಗಳು ಕಳೆದಂತೆ ಭೂವರನು ಮಠದಲ್ಲೇ ವಾಸಮಾಡುತ್ತ ಬಂದನು. ವಾಗೀಶರು ಮಗನಿಗೆ ಸನ್ಯಾಸ ಕೊಡುವರೆಂದರಿತು ಭಟ್ಟನು ತನ್ನ ಗತಿಯೇನೆಂದು ಅವರಿಗೆ

ಹೊರಟಿಬಿಟ್ಟನು. ಭೂವರನ ನಂತರ ಅವರಿಗೆ ಒಬ್ಬ ಮಗಳಾಗಿದ್ದು ಅವಳ ವಿವಾಹವೂ ನಡೆದಿತ್ತು. ಸ್ವಾಮಿಗಳು ನಿಮಗೆ ಮತ್ತೊಬ್ಬ ಮಗನಾಗುವವರೆಗೆ ಭೂವರನಿಗೆ ಸನ್ಯಾಸ ಕೊಡುವುದಿಲ್ಲವೆಂದು ಭಟ್ಟನಿಗೆ ಅಭಯವಿತ್ತರು. ದೈವಯೋಗದಿಂದ ಭಟ್ಟನಿಗೆ ಮತ್ತೆ ಪುತ್ರೋತ್ಸವವಾಯಿತು. ಭೂವರನಿಗೆ ಸುಮುಹೂರ್ತದಲ್ಲಿ ಸನ್ಯಾಸಾಶ್ರಮಪ್ರದಾನವೂ ಆಯಿತು. ಗುರುಗಳು ಶಿಷ್ಯನಿಗೆ **ವಾದಿರಾಜತೀರ್ಥ**ರೆಂದು ಆಶ್ರಮನಾಮವಿತ್ತರು.

ಈ ಸಮಕಾಲದಲ್ಲಿ ವಿಜಯನಗರದಲ್ಲಿ ವ್ಯಾಸರಾಯರು ಮಹಾಪ್ರಬಲರಾಗಿದ್ದರು. ಅವರ ಬಳಿ ಕೆಲವುಕಾಲವಿದ್ದು ಪ್ರೌಢ ವಿದ್ಯಾಭ್ಯಾಸ ಮಾಡಬೇಕೆಂಬ ಅಭಿಲಾಷೆ ವಾದಿರಾಜರಿಗಾಯಿತು. ವಾಗೀಶರು ಬೃಂದಾವನಸ್ಥರಾದ ನಂತರ ವಾದಿರಾಜರು ಸಂಸ್ಥಾನ ಸಹಿತರಾಗಿ ವಿಜಯನಗರಕ್ಕೆ ಬಂದರು. ವಿಷ್ಣುತೀರ್ಥ (ವಿಜಯೀಂದ್ರತೀರ್ಥ)ರ ಜೊತೆಯಲ್ಲಿ ವಾದಿರಾಜರಿಗೆ ಪಾಠಕ್ಕೆ ಪ್ರಾರಂಭವಾಯಿತು. ವ್ಯಾಸರಾಯರು ಸನ್ಯಾಸಿಗಳವೇ ಪ್ರತ್ಯೇಕ ತರಗತಿಮಾಡಿ ಪ್ರವಚನ ಮಾಡಿಸುತ್ತಿದ್ದರು. ಕೂಡಲೀ ಅಕ್ಷೋಭ್ಯತೀರ್ಥರ ಮಠದ ನಾರಾಯಣ ಯತಿಗಳು, ಗೋವಿಂದ ಭಿಕ್ಷುಗಳು ಮೊದಲಾಗಿ ಇಪ್ಪತ್ತುನಾಲ್ಕು ಜನ ಸನ್ಯಾಸಿಗಳು ಈ ತರಗತಿಗೆ ಸೇರಿದರು. ಈ ತರಗತಿಯ ಪಠ್ಯಪುಸ್ತಕಗಳೆಂದರೆ ನ್ಯಾಯಸುಧಾ, ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕಾ ಎಂಬ ಪರಮ ಪ್ರೌಢ ಗ್ರಂಥಗಳು. ಈ ಗ್ರಂಥಗಳ ವ್ಯಾಸಂಗ ಮಾಡುವಾಗ ಅನ್ಯ ದರ್ಶನಗಳು ತುಲನಾತ್ಮಕ ದೃಷ್ಟಿಯಿಂದ ವಿಮರ್ಶೆಗೆ ಬರುತ್ತಿದ್ದುವು.

ವ್ಯಾಸರಾಯರ ಉಪದೇಶಕ್ರಮ, ವಾದಿಗಳೊಡನೆ ವಾದಿಸುವ ಕ್ರಮಗಳನ್ನು ವಾದಿರಾಜರು ಚೆನ್ನಾಗಿ ಗ್ರಹಿಸಿದುದು ಮಾತ್ರವಲ್ಲದೆ ವಿದ್ವತ್ಸಭೆಗಳಲ್ಲಿ ಯಾವ ಶಾಸ್ತ್ರದಲ್ಲಿ ನೋಡಿದರೂ ತಾವೇತಾವಾಗಿ ಪ್ರಖ್ಯಾತಿಯನ್ನು ಪಡೆದರು. ವಾದಿರಾಜರ ಪ್ರೌಢಿಮೆಯನ್ನು ನೋಡಿ ವಿಜಯನಗರದ ಕೃಷ್ಣದೇವರಾಯನು ಅವರನ್ನು **ಪ್ರಸಂಗಾಭರಣ ತೀರ್ಥ**ರೆಂಬ ಗೌರವನಾಮದಿಂದ ಕರೆದನು. ವಿಜಯೀಂದ್ರರಂತೆ ವಾದಿರಾಜರೂ ಚತುಷ್ಷಷ್ಟಿ ಕಲಾ ನಿಪುಣರಾದರು. ಈ ಉಭಯರಲ್ಲಿದ್ದ ವ್ಯತ್ಯಾಸವೆಂದರೆ, ವಿಜಯೀಂದ್ರರು ತಮ್ಮ ಪ್ರೌಢಿಮೆಯನ್ನು ತೋರಿಸುತ್ತಿರಲಿಲ್ಲ; ವಾದಿರಾಜರು ಪ್ರಸಂಗ ಬಂದಾಗ ಬಿಡುತ್ತಿರಲಿಲ್ಲ. ಜನರು ವಿಜಯೀಂದ್ರರನ್ನು ಮಿತಭಾಷಿಗಳೆಂದರಿತು ಅವರ ಬಳಿ ಭಯದಿಂದಿರುತ್ತಿದ್ದರು. ವಾದಿರಾಜರೊಡನಾದರೋ ಪದವಿ ಪಾಂಡಿತ್ಯಗಳೊಂದನ್ನೂ ಎಣಿಸದೆ ಸರಸದಿಂದಿರುತ್ತಿದ್ದರು. ಮಾತುಮಾತಿಗೆ ಕನ್ನಡದಲ್ಲಾಗಲೀ, ಸಂಸ್ಕೃತದಲ್ಲಾಗಲೀ ಕವನ ಮಾಡುವುದು, ಸಮಸ್ಯೆ ಹೇಳುವುದು, ವಾದಿರಾಜರ ಸ್ವಭಾವದಲ್ಲಿ ಹುಟ್ಟಿಬಂದಿತ್ತು. ವಾಗೀಶರ ಬಳಿಯಲ್ಲಿದ್ದಾಗ ಮಾತ್ರ ವಾದಿರಾಜರು ತಮ್ಮ ಚಾತುರ್ಯವನ್ನು ಏನು ಕಾರಣದಿಂದಲೋ ಹೊರಪಡಿಸಲಿಲ್ಲ. ಬಾಲ್ಯ ಪ್ರಭೃತಿ ಭಯದಿಂದ ನಡೆದುಕೊಳ್ಳುತ್ತಿದ್ದುದರಿಂದಲೂ, ಸರಿಯಾದ ಸಂಗಡಿಗರಿಲ್ಲದಿದ್ದುದರಿಂದಲೂ ಹಾಗಿದ್ದರೆಂದು ಕಾಣುತ್ತದೆ.

ವಾಲಿದು ಭಂಡಾರವೆಂಬ ಸ್ಥಳದಲ್ಲಿ ಬಹಳ ಗುಪ್ತ ಧನವಿದೆಯೆಂದರಿತು ವಾದಿರಾಜರು ಆ ಸ್ಥಳವನ್ನು ಶೋಧನೆ ಮಾಡಿಸಿದರು. ಆ ಬಳಿಯಲ್ಲಿ ಎರಡು ಸುಂದರ ವಿಗ್ರಹ

ಗಳು ದೊರಕಿದುವು. ಅನಂತರ ಅಪರಿಮಿತ ದ್ರವ್ಯರಾಶಿಯೂ ಕೈಗತವಾಯಿತು. ಆ ದ್ರವ್ಯರಾಶಿಯನ್ನು ವಿಜಯನಗರದ ರಾಯರಿಗೊಪ್ಪಿಸಿ, ದೊರೆತ ವಿಗ್ರಹಗಳನ್ನು ಮಾತ್ರ ವಾದಿರಾಜರು ವಾಲಿ ಸುಗ್ರೀವ ಕರಾರ್ಚಿತಗಳೆಂದು ತಮ್ಮ ಮಠದಲ್ಲಿಟ್ಟುಕೊಂಡರು. ಅವು ಈಗಲೂ **ರಾಮವಿಠಲ** ಮೂರ್ತಿಗಳೆಂದು ಕರೆಸಿಕೊಂಡು ಮಠಸ್ಥರ ಆರಾಧನೆಯಲ್ಲಿವೆ.

ವಾದಿರಾಜರ ಮಹದುಪಕಾರವನ್ನು ಸ್ಮರಣೆಯಲ್ಲಿಟ್ಟುಕೊಂಡು, ಕಾಲಾಂತರದಲ್ಲಿ ಅಚ್ಯುತರಾಯನು ಉಡುಪೀಯಾತ್ರೆಯ ವ್ಯಾಜದಿಂದ ಅವರ ದರ್ಶನಕ್ಕೆ ಬಂದನು. ಮಧ್ವ ಸರೋವರಕ್ಕೆ ಸೋಪಾನರಚನೆ, ಅಲ್ಲಿನ ದೇವಾಲಯಗಳ ವಿಸ್ತಾರ, ಇವೆಲ್ಲಾ ಆ ಮಹಾರಾಯನಿಂದಾಯಿತು. ಆ ಕಾಲದಲ್ಲೇ ಶ್ರೀ ವ್ಯಾಸರಾಯರೂ ಉಡುಪಿಗೆ ಬಂದಿದ್ದಂತೆ ಗೊತ್ತಾಗುತ್ತದೆ. ಅಚ್ಯುತರಾಯನು ಆಗ ಕೊಟ್ಟ ಅನರ್ಘ್ಯ ಆಭರಣಗಳು ಈಗಲೂ ಶ್ರೀಕೃಷ್ಣ ಮಠದಲ್ಲಿವೆ (ಕ್ರಿ. ೧೫೩೨-೩೩.)

ವಾದಿರಾಜರು ವ್ಯಾಸರಾಯರಲ್ಲಿ ಬಾಕಿಯಾಗಿದ್ದ ವಿದ್ಯಾಭ್ಯಾಸವನ್ನು ಪೂರೈಸಿ, ಅವರಿಂದ ವ್ಯಾಸಮುಷ್ಟಿಕೆಯನ್ನು ಪಾರಿತೋಷಕವಾಗಿ ಪಡೆದು, ಉಡುಪಿಗೆ ಪ್ರಯಾಣಮಾಡಿದರು. ಇದರ ವಿಸ್ತಾರವನ್ನು ವ್ಯಾಸರಾಯರ ಚರಿತ್ರೆಯಲ್ಲಿ ಮಾಡಿರುವುದರಿಂದ ಇಲ್ಲಿ ಮತ್ತದರ ಪುನರುಕ್ತಿ ಮಾಡುವುದಿಲ್ಲ. ವಾದಿರಾಜರು ಉಡುಪಿಗೆ ಬಂದ ನಂತರ ಆ ಕ್ಷೇತ್ರದಲ್ಲಿ ವಿಚಿತ್ರ ಸುಧಾರಣೆಗಳಾದುವು.

೨

ವಾದಿರಾಜರ ಕಾಲದಲ್ಲಾದ ಸುಧಾರಣೆಗಳು

ಉಡುಪಿಯ ಶ್ರೀಕೃಷ್ಣ

ಶ್ರೀಮನ್ಮಧ್ವಾಚಾರ್ಯರು ಒಂದಾನೊಂದು ಸಮಯದಲ್ಲಿ ಉಡುಪಿಯ ಸಮೀಪದ ಪಶ್ಚಿಮ ಸಮುದ್ರತೀರದಲ್ಲಿ ತಪಸ್ಸು ಮಾಡುತ್ತಿದ್ದರು. ಆ ಕಾಲದಲ್ಲಿ ದ್ವಾರಾವತಿಯ ಕಡೆಯಿಂದ ಒಂದು ವ್ಯಾಪಾರದ ಹಡಗು ಸಮುದ್ರದಲ್ಲಿ ಬರುತ್ತಿತ್ತು. ವ್ಯಾಪಾರಿಯು ಹಡಗಿನ ಯಜಮಾನನಾಗಿದ್ದನು. ಹಡಗಿನ ತೂಕಕ್ಕೆ ಭಾರ ಬೇಕಾಗಿರುವುದರಿಂದ ದ್ವಾರಾವತಿಯ ನಡುಗಡ್ಡೆಯೊಂದರ ಮೃತ್ತಿಕೆಗಳನ್ನು ಕೆಳಭಾಗದಲ್ಲಿ ತುಂಬಿದ್ದನು. ಆ ಮೃತ್ತಿಕೆಯು ಗೋಪೀಚಂದನವಾಗಿತ್ತು. ಉಡುಪಿಯ ಬಂದರಿನ ಬಳಿಗೆ ಬರುವ ಸಮಯದಲ್ಲಿ ಗಾಳಿಯ ಹೊಡೆತದಿಂದ ಹಡಗು ಮುಳುಗುವ ಸ್ಥಿತಿಗೊಳಗಾಯಿತು. ಹಡಗಿನ ಯಜಮಾನನೂ ಪ್ರಯಾಣಿಕರೂ ಪ್ರಾಣಭೀತಿಯಿಂದ ಸಹಾಯಕ್ಕಾಗಿ ಕೂಗಿಕೊಳ್ಳುತ್ತಿದ್ದರು. ದೂರದಲ್ಲಿ ಅಪಾಯಕ್ಕೊಳಗಾಗಿದ್ದ ಹಡಗಿನ ದುಸ್ಥಿತಿಯನ್ನು ಶ್ರೀಮದಾಚಾರ್ಯರು ಕಂಡು, ಕನಿಕರದಿಂದ ತಮ್ಮ ಮೇಗಿನ ವಸ್ತ್ರವನ್ನು ಅಲುಗಿಸಿ, ಹಡಗು ನಿರಪಾಯವಾಗಿ ದಡಕ್ಕೆ ಬರುವಂತೆ ಮಾಡಿದರು. ಹಡಗಿನ ಯಜಮಾನನ ಕಣ್ಣಿ

ಗಾದರೋ, ಆಚಾರ್ಯರು ಭೀಮರೂಪದಿಂದ ಸಾಧಾರಣ ದೋಣಿಯನ್ನು ರಜ್ಜುವಿನಿಂದ ಸೆಳೆಯುವಂತೆ ಜಹಜನ್ನು ಸೆಳೆದು ದಡಕ್ಕೆ ನಿಲ್ಲಿಸಿದಂತೆ ಕಾಣಿಸಿತು. ಯಜಮಾನನು ದಡಕ್ಕೆ ಬಂದೊಡನೆಯೇ ಆಚಾರ್ಯರ ಪಾದಗಳಿಗೆ ಅಡ್ಡಬಿದ್ದು ಶರಣಾಗತನಾದನು. ತಮ್ಮ ಪರಮಾನುಗ್ರಹದಿಂದ ಬಹುಜನರ ಪ್ರಾಣರಕ್ಷಣೆಯಾಯಿತೆಂದು ಅಡಿಗಡಿಗೆ ನಮಸ್ಕರಿಸಿದನು. ಹಡಗಿನಲ್ಲಿದ್ದ ಜನರೆಲ್ಲರೂ ಸಂತಸದಿಂದ ಆಚಾರ್ಯರಿಗೆ ನಮಸ್ಕರಿಸಿ ಕೊಂಡಾಡುತ್ತಿದ್ದರು. ಯಜಮಾನನು–'ಮಹಾಸ್ವಾಮಿ, ತಾವು ನಮ್ಮ ಸ್ವರೂಪೋದ್ಧಾರಕರಾದಿರಿ! ತಮ್ಮಿಂದ ಸರ್ವರ ಪ್ರಾಣದಾನವಾಯಿತು. ಹಡಗಿನಲ್ಲಿರುವ ಸರ್ವಸ್ವವೂ ತಮ್ಮದೇ! ಸ್ವೀಕರಿಸಬೇಕು' ಎಂದು ಪ್ರಾರ್ಥಿಸಿದನು.

ಆಚಾರ್ಯರು, 'ಅಯ್ಯಾ ವರ್ತಕನೆ! ನಿನ್ನ ಐಶ್ವರ್ಯದಿಂದ ನಮಗೇನು ಪ್ರಯೋಜನ? ಅದೋ ಆ ಮೂರು ಗೋಪೀಚಂದನದ ಗಡ್ಡೆಗಳನ್ನು ಕೊಡುವೆಯಾದರೆ ಅದರಿಂದ ನಾವು ತೃಪ್ತರಾಗುವೆವು' ಎಂದರು. ಯಜಮಾನನಿಗೆ ಆಚಾರ್ಯರ ಮಾತಿನಿಂದ ಹಿಡಿಸಲಾರದಷ್ಟು ನಗು ಬಂತು, ಆಶ್ಚರ್ಯವೂ ಉಂಟಾಯಿತು.

ಯಜಮಾನ :—ಅದರಿಂದೇನು ಮಹಾಸ್ವಾಮಿ, ಆ ಮಣ್ಣುಗಡ್ಡೆಯಿಂದ!

ಆಚಾರ್ಯರು :—ಆ ಮಣ್ಣೇ ನಾವು ಹಚ್ಚಿಕೊಳ್ಳುವ ಗೋಪೀಚಂದನ! ಅಷ್ಟು ಮಾತ್ರ ಸಾಕು.

ಯಜಮಾನ :—ಹಾಗಾದರೆ, ಅದರ ಜೊತೆಗೆ ಸ್ವಲ್ಪ ದಕ್ಷಿಣೆಯಾದರೂ ಇರಲಿ ಮಹಾಸ್ವಾಮಿ.

ಆಚಾರ್ಯರು :—ನಿನ್ನ ಸಂತೋಷ!

ಆ ಮೂರು ಮೃತ್ಖಂಡಗಳಲ್ಲಿ ಶ್ರೀಕೃಷ್ಣ, ಬಲರಾಮ, ದುರ್ಗಾದೇವಿಯರ ಮೂರ್ತಿಗಳಿರುವುದೆಂಬ ವಿಚಾರ ಆಚಾರ್ಯರಿಗೆ ಗೋಚರವಾಗಿತ್ತು. ಆದುದರಿಂದಲೇ ಅವುಗಳನ್ನು ಮಾತ್ರ ಅಪೇಕ್ಷಿಸಿ ಪಡೆದರು. ಅವುಗಳನ್ನು ಉಡುಪಿಗೆ ತೆಗೆದುಕೊಂಡು ಬರುವಾಗ ಅವುಗಳಲ್ಲಿ ಒಂದು ಸ್ವಲ್ಪ ದೂರದಲ್ಲೇ ಆಚಾರ್ಯರ ಕೈಯಿಂದುರುಳಿತು. ಅದೇ ಬಲರಾಮ ವಿಗ್ರಹ. ಅದನ್ನೇ ಒಡಭಾಂಡೇಶ್ವರನೆಂದು ಸಮುದ್ರತೀರದಲ್ಲಿ ಪ್ರತಿಷ್ಠೆ ಮಾಡಿದರು. ಉಡುಪಿಯಲ್ಲಿ ಶ್ರೀಕೃಷ್ಣ ವಿಗ್ರಹವನ್ನೂ, ರಾಜತ ಕ್ಷೇತ್ರದ ಬಳಿಯಿರುವ ಸಣ್ಣ ಗುಡ್ಡದಮೇಲೆ ದುರ್ಗಾದೇವಿಯನ್ನೂ ಅನಂತರ ಪ್ರತಿಷ್ಠಿಸಿದರು. ಒಡಭಾಂಡೇಶ್ವರ ದುರ್ಗಾದೇವಿಯರ ಪೂಜೆಯನ್ನು ಗೃಹಸ್ಥಾಶ್ರಮಿಗಳು ಕೈಕೊಂಡರು. ಉಡುಪಿಯ ಶ್ರೀಕೃಷ್ಣಪೂಜೆಗೆ ಮಾತ್ರ ಆಚಾರ್ಯರು ಎಂಟುಮಂದಿ ಯತಿಗಳನ್ನು ನೇಮಿಸಿದರು. ಆಚಾರ್ಯರು ಸಮುದ್ರತೀರದಿಂದ ಉಡುಪಿಗೆ ಬರುವಾಗ, ಮಾಡಿದ ಸ್ತೋತ್ರವೇ ಪರಮ ಪಾವನವಾದ ದ್ವಾದಶಸ್ತೋತ್ರವೆಂದೆನಿಸಿತು.

ಮಹಾನುಭಾವರಾದ ಶ್ರೀ ವಿಜಯದಾಸರು ಉಡುಪೀ ಸುಳಾದಿಯಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಕೆಳಕಂಡಂತೆ ವರ್ಣಿಸಿರುತ್ತಾರೆ. ಪಠನೆ ಮಾಡುವವರಿಗೆ ಅನುಕೂಲವಾಗಿರಲೆಂದು ಪೂರ್ತಿಯಾದ ಸುಳಾದಿಯನ್ನೂ ಇಲ್ಲಿ ಉದಹರಿಸಿದೆ.

ಉಡುಪಿ ಸುಳಾದಿ—ಧೃವತಾಳ

ಅಣುಮೂರುತಿ ಪರಮಾಣುಮೂರುತಿಯೆನಿಪ | ಘನಮೂರುತಿ ಮಹಾ ಘನವಾದ ಮೂರುತಿ | ತೃಣಕಾಷ್ಟಗಳೊಳು ಪರಿಪೂರ್ಣಮೂರುತಿ | ಗುಣತ್ರಯವರ್ಜಿತ ಕನಾದ ಗುಣವಂತ ಮೂರುತಿ | ಮನುಜೋತ್ತಮರನಿತಿದು ವಜಜಘನಾದ್ಯರ | ಮನಕೆ ಪೊಳೆವ ವರ್ಣ ಚಿಸುವುಯಮೂರುತಿ | ಜನನಿ ಗೋಪಿಯ ಮುಂದೆ ಮೊಸರು ಕಡೆವಾಗ | ಕುಣಿದಾಡಿದ ಮೂರುತಿ ಅಪ್ರಮೇಯ ಮೂರುತಿ | ಪ್ರಾಣಮೂರುತಿ ಮಧ್ವಮುನಿಗೊಲಿದ ಶ್ರೀಕೃಷ್ಣ | ಘನಮೂರುತಿ ವಿಜಯವಿಠಲನಿರುತಿಪ್ಪ ॥ ೧

ಮಟ್ಟತಾಳ

ದ್ವಾರಾವತಿ ಎತ್ತ ? ಪಡುವಲದಿಕ್ಕಿನ | ವಾರಿಧಿ ಎತ್ತ ? ಗೋಪಿಚಂದನವೆತ್ತ | ವಾರಾಟದ ಹಡಗು ಪೋಗಿ ಬರುವುದೆತ್ತ ? ಭಾರತಿ ಪತಿಯಾದ ಮಧ್ವಮುನಿಯೆತ್ತ ? ಯಾರು ಬಲ್ಲರು ನಿನ್ನ ಮಹಾವಿಚಿತ್ರವು ! ಸಾರಲಾಪೆನೆ ನಿತ್ಯ ಉಡುಪಿಯ ಶ್ರೀಕೃಷ್ಣ | ಜಾರಚೋರನಮ್ಮ ವಿಜಯವಿಠಲರೇಯ ॥ ೨

ತ್ರಿಪುಟತಾಳ

ಅಂದು ದೇವಕಿದೇವಿ ದ್ವಾರಕಪುರದಲ್ಲಿ | ಒಂದು ದಿವಸ ನಿನ್ನ ಪಾದಯುಗಳಿಗೆ | ಕಂದ ನೀನಾಗಿ ಗೋಕುಲದಲ್ಲಿ ಗೋಪಿಯಮುಂದೆ ಬಾಲಕನಾಗಿ ತೋರಿದಾಟ | ಒಂದಾದರು ನೋಡಿ ದಣಿಯಲಿಲ್ಲವೊ ಮನಸು | ಎಂದೆನೆ ಜನನಿಯ ಮಾತು ಕೇಳಿ | ನಂದನನಾಗಿ ತೋರಿಪೆನೆಂದು ನೆನೆದು ಗೋ | ವಿಂದನು ಗೋಪಸ್ತ್ರೀಯಲ್ಲಿ ನಲಿವನು | ಒಂದೊಂದಾಟವ ತೋರುತ ಬರಲದರೊಳು | ಚಂದವಾಗಿದೆ ಕಂಡು ಈ ರೂಪವ | ಸಿಂಧುರವೇಣಿ ಮಗನ ಮೊಗವ ನೋಡಿ | ತಂದೆ ಈ ರೂಪದಿಂದ ಭೂಮಿಯೊಳಗೆ | ಕುಂದದರ್ಚನೆಗೊಂಡು ಕೀರುತಿ ಮೆರೆವುದೆಂದು | ಮುಂದಹಾಸದಿಂದ ಪೇಳಲು ಕೈಗೊಂಡು | ಒಂದು ಕೈಯಲಿ ಕಡಗೋಲು ಪಿಡಿದು ಮ | ತ್ತೊಂದು ಕೈಯಲಿ ನೇಣುಧರಿಸಿ ಬಾಲ | ನಂದದಿ ಇರೆ ಇತ್ತ ಭೈಷ್ಮಿ ವಿಶ್ವಕರ್ಮ | ನಿಂದಲಿ ಅವರಂತೆ ರಚಿಸಿದಳೆ | ನಂದದಿಂದಲಿ ತನ್ನ ಮೂರುತಿಯನೆ ಇಟ್ಟು | ಸುಂದರ ವಿಗ್ರಹದೊಡನಾಡುತ | ಇಂದಿರೆಯಿತ್ತ ಕಲಿಯುಗ ಬರೆ ಗೋಪಿ | ಚಂದನದೊಳು ನೀನು ಅಡಗಿರಲು | ಸಿಂಧುವಿನೊಳಗೊಬ್ಬ ಹಡಗು ವ್ಯಾಪಾರಕ್ಕೆ ತಂದಿರೆ ತವಕದಿಂದಲಿ ಅಲ್ಲಿಂದಾ | ನಂದತೀರ್ಥರಿಗೊಲಿದ ಉಡುಪಿಯ ಶ್ರೀಕೃಷ್ಣ | ಕಂದರ್ಪಪಿತ ನಮ್ಮ ವಿಜಯವಿಠಲರೇಯ ॥ ೩

ಅಟ್ಟತಾಳ

ಈ ಉಡುಪಿನಯಾತ್ರೆ ವೈಕುಂಠದ ಯಾತ್ರೆ | ಆವಾವ ಮನುಜನು ಸೇವಿಸಲು ದುರಿ | ತಾಪನದಾವನ ಪಾವನ ಮಾಡುವ | ಯಾವತ್ತು ಜನರುವ ನೋವು ಕಳೆದು ತನ್ನ | ಸೇವೆಯೊಳಿಟ್ಟು ಆನಂದ ಕೊಡುವನು | ದೇವಕಿನಂದನ ಕೃಷ್ಣಮೂರುತಿ ಕರು | ಣಾವಾರಿಧಿ ನಮ್ಮ ವಿಜಯವಿಠಲರೇಯ | ದೇವೋತ್ತಮ ಮಧ್ವಮುನಿ ಮನಸ್ಥನೆ ॥ ೪

ಆದಿತಾಳ

ಇದೆ ಜನ್ಮಸಾರ್ಥಕ | ಇದೆ ಸರ್ವ ಕಾರ್ಯಸಿದ್ಧಿ | ಇದೆ ಕುಲಕೋಟಿ ಉದ್ಧಾರ| ಇದಕಿಂದಧಿಕವಿಲ್ಲ ಇದಕೆ ಸಮಾನವಿಲ್ಲ | ಇದೆ ಇದೆ ಇದೆ ಸಿದ್ಧ ಯದುಕುಲೇಶನ ದಿವ್ಯ | ಪದಗಳ ಒಮ್ಮೆ ನೋಡೆ ಪರಮಗೆ ಸೋಪಾನ ಮುದದಿಂದ ಸ್ಥಿರವಹುದು | ಸದಮಲಾನಂದ ಮುನಿಗೊಲಿದ ಮುದ್ದು ಕೃಷ್ಣ ಸು | ಹೃದಯರ ಮನದಾಸ ವಿಜಯ ವಿಠಲರೇಯ | ಉದಧಿ ತೀರದಲಿಪ್ಪ ಇದೆ ದ್ವಾರಕಿಯೆಂದು || ೫

ಜತೆ

ಮಧ್ವ ಸರೋವರ ಸ್ನಾನ ಕೃಷ್ಣನ ಧ್ಯಾನ
ಸಿದ್ಧನಾಗಿ ಮಾಡೊ ವಿಜಯವಿಠಲ ಒಲಿವ

ಶ್ರೀಕೃಷ್ಣಪೂಜೆಗೆ ನಿಯಮಿತರಾದ ಎಂಟುಮಂದಿ ಯತಿಗಳದೂ ಪ್ರತ್ಯೇಕ ಎಂಟು ಸಂಸ್ಥಾನಗಳಾದುವು. ಆ ಕಾಲದಿಂದ ಅಷ್ಟಮಠದ ಯತಿಗಳೂ ಎರಡೆರಡು ತಿಂಗಳು ಶ್ರೀಕೃಷ್ಣ ಪೂಜೆಯನ್ನು ಸರದಿಯಾಗಿ ನಡೆಸುತ್ತ ಬಂದರು. ಅಷ್ಟಮಠಾಧಿಪತಿಗಳಿಗೆ ಉಡುಪಿಯನ್ನು ಬಿಟ್ಟು ಪರದೇಶಕ್ಕೆ ಬರಲು ಶ್ರೀಮದಾಚಾರ್ಯರ ಆಜ್ಞೆಯಿರಲಿಲ್ಲ. ಶ್ರೀಕೃಷ್ಣ ಪೂಜಾನಿಮಿತ್ತ ಆಗುವ ಖರ್ಚುವೆಚ್ಚಗಳನ್ನು ಪದ್ಮನಾಭತೀರ್ಥ ಪೀಳಿಗೆಯವರು ನಡೆಸುವ ನಿಬಂಧನೆಯಾಗಿತ್ತು. ಆ ನಿಬಂಧನೆಯು, ಮೂಲಮಠವು ಮೂರು ಭಾಗವಾಗಿ ಹೋದ್ದರಿಂದ ಕಾಲಕ್ರಮದಲ್ಲಿ ತಪ್ಪಿಹೋಯಿತು. ಅಷ್ಟಮಠಾಧಿಪತಿಗಳೂ ದೇಶಸಂಚಾರ ಮಾಡಿ ಧನಾರ್ಜನೆ ಮಾಡಬೇಕಾಯಿತು. ಈ ಕಾರಣಗಳಿಂದ ಉಡುಪಿಯ ಪೂಜಾ ಪದ್ಧತಿಯಲ್ಲಿ ತಕ್ಕ ಸುಧಾರಣೆಯು ಅವಶ್ಯವಾಗಿತ್ತು. ಧೈರ್ಯದಿಂದ ವ್ಯವಸ್ಥೆ ಮಾಡುವವರು ಬರಬೇಕಾಗಿತ್ತು.

ವಾದಿರಾಜರು ಮಿಕ್ಕ ಯತಿಗಳ ಅನುಮತಿಯಿಂದ ಎರಡು ತಿಂಗಳ ಪೂಜಾ ಪದ್ಧತಿಯನ್ನು ಎರಡು ವರ್ಷಗಳಿಗೇರಿಸಿದರು. ಎರಡು ವರ್ಷದ ಪರ್ಯಾಯಾನಂತರ ಮತ್ತೆ ಸರದಿ ಬರುವವರೆಗೆ ಹದಿನಾಲ್ಕು ವರ್ಷ ಆಯಾ ಮಠಪತಿಗಳು ಸಂಚಾರ ಹೊರಟು ಶಿಷ್ಯಾರ್ಜನೆ ಮಾಡಬಹುದೆಂದು ವಿಧಾಯಕ ಮಾಡಿದರು. ಒಂದೊಂದು ಮಠಕ್ಕೂ ಆ ಕಾಲದ ರಾಜರ ಸಹಾಯದಿಂದ ಭೂಸ್ಥಿತಿಗಳನ್ನೇರ್ಪಡಿಸಿದರು. ಶ್ರೀಪಾದರಾಜರ ಮತ್ತು ಶ್ರೀ ವ್ಯಾಸರಾಯರ ಮಠಗಳಲ್ಲಿರುವಂತೆ ಪೂಜಾಕಾಲದಲ್ಲಿ **ಭಾಗವತರ ಭಜನ ಪದ್ಧತಿ**ಯನ್ನು ಪ್ರತಿ ಮಠಗಳಲ್ಲೂ ಆಚರಣೆಗೆ ತಂದರು. ರಾತ್ರಿ ಪೂಜಾ ನಂತರ ಭಾಗವತರೊಡನೆ **ಯತಿಗಳೂ** ಕಲೆತು ಭಜನೆ ಮಾಡುವುದನ್ನು ಈ ಹೊತ್ತಿಗೂ ಉಡುಪಿಯ ಮಠಗಳಲ್ಲಿ ನೋಡಬಹುದು. ಅವರು ವಾದಿರಾಜರ ಪದಗಳನ್ನಲ್ಲದೆ ಅನ್ಯರ ಪದಗಳನ್ನು ಪ್ರಾಯಶಃ ಹಾಡುವುದಿಲ್ಲ. ಉಡುಪಿಯ ಮಠಗಳಲ್ಲಿ ಅತಿ ಮುಖ್ಯವಾಗಿ ಹಾಡುವ ಹಾಡೆಂದರೆ—

ಅಟ್ಟತಾಳ

ಲಕ್ಷ್ಮಿನಾರಾಯಣ ಜಯ | ಲಕ್ಷ್ಮಿನಾರಾಯಣ ಪ.

ಸರ್ವಲೋಕ ರಕ್ಷ ಶಾಶ್ವತ | ಸರ್ವಮಹಿತನಾದ ದಾನವ |
ಗರ್ವಹರಣ ಗದಾದಿಧಾರಣ | ಸರ್ವತಾರಿ ಪವಿತ್ರದ || ೧

ನಂಬಿಕೊಂಡಿಹೆ ನಿನ್ನ ದಿವ್ಯ ಪ | ದಾಂಬುಜಗಳನು ಸರ್ವಕಾಲದಿ |
ಅಂಬುಜಾಲಯ ಸಹಿತ ಮನದೊಳ | ಗಂಬುಗೊಳು ಕಮಲಾಕ್ಷ || ೨

ಆರುಸಂಖ್ಯೆಯ ಕಳ್ಳರೆನ್ನನು | ಗಾರುಮಾಡುವರಾದರಿಂದಲೆ |
ಧೀರ ನಿನ್ನ ಸಹಾಯದಿಂದಕೆ | ದೂರುವೆನು ರಘುವೀರನೆ || ೩

ದುರ್ಮತಿಗಳಾದಸುರ ಹರಣಕೆ | ಧರ್ಮಗರ್ಭನು ಬಂದು ಸ್ತುತಿಸಲು |
ಧರ್ಮ ಸಂಸ್ಥಾಪಿಸುತ ಬಹು ರೂಪ | ಕರ್ಮ ತೋರುವ ಕರುಣಿಯೆ || ೪

ಸಪ್ತಋಷಿಗಳ ಕೂಡಿಕೊಂಡತಿ | ಭಕ್ತಿಯಿಂದಲಿ ನಿನ್ನ ಭಜಿಸಿದ |
ಸತ್ಯವ್ರತನಿಗೆ ಸಕಲ ಶ್ರುತಿಗಳ | ತತ್ವತಿಳಿಸಿದ ಮತ್ಸ್ಯನೆ || ೫

ಅಮರ ದೈತ್ಯರು ಅಂಬುನಿಧಿಯೊಳು | ಭ್ರಮಣಗೊಳಿಸಲು ಮುಳುಗಿಕೊಂಡಿಹ |
ಅಮಿತಗುರು ಮಂದರವ ಧರಿಸುತ | ಅಮೃತರಸ ತಂದಿತ್ತನೆ || ೬

ಧಾತ್ರಿಯನು ಕದ್ದೊಯ್ದ ಹಾಟಕ | ನೇತ್ರನ ತೆಗೆದು ಬಿಸುಟು | ವಿ |
ಧಾತೃನಾಸಾಕುಹರಜನಿತ ಪ | ವಿತ್ರ ಯಜ್ಞವರಾಹನೆ || ೭

ಹುಡುಗ ಪೇಳಿದ ಮಾತಿನಿಂದ | ಘುಡಿಘುಡಿಸಿ ಕಂಭದೊಳು ಬಂದ |
ಸಿಡಿಲಿನಂತಿಹ ನಖದಿ ದೈತ್ಯನ | ಒಡಲ ಬಗೆದ ಕೋಪದಿಂದ || ೮

ಮಾಣಿಯಂದದಿ ಪೋಗಿ ಭೂಮಿಯ | ದಾನ ಕೊಂಡಾ ನಿಪುನದಿ |
ದಾನಪಾತ್ರತ ಧರೆಯ ಕಶ್ಯಪ | ಸೂನುಗಳಿಗೊಲಿದಿತ್ತನೆ || ೯

ದುಷ್ಟ ಭೂಭುಜ ಭಾರದಿಂದಲಿ | ಕಷ್ಟಬಡುತಿಹ ಧರೆಯ ಕರುಣಾ |
ದೃಷ್ಟಿಯಿಂದಲಿ ನೋಡಿ ಕೊಡಲಿಯ | ಪೆಟ್ಟಿನಿಂದಲಿ ನೃಪರ ಕಡಿದ || ೧೦

ನೀರಜಾಸನನಾದದಿಂದ ಮು | ದಾ ರಸಾಸ್ವಾದನ ಪರ ಕಪಿ |
ವೀರನಿಗೆ ಸ್ವಾರಾಜ್ಯ ನೀಡಿದ | ಮಾರುತಿಗೆ ದಯಮಾಡಿದ || ೧೧

ಬಾಲಲೀಲೆಯ ತೋರಿ ಗೋಪಿಕ | ಬಾಲೆಯರ ಕೂಡಾಡಿದ |
ಖೂಳ ಕಂಸನ ಕೆಡಹಿ ದಾನವ | ಮೂಲ ಕಿತ್ತು ಬಿಸಾಡಿದ || ೧೨

ದಾನವರ ಮೋಹಿಸುವೆನೆಂದನು | ವಸನವಿಲ್ಲದೆ ನಗ್ನನಾಗಿ |
ಹೀನ ಬುದ್ಧಿಯ ತಿಳಿಸಿ ತ್ರಿಪುರರ | ನಾಶಗೈಸಿದ ಬೌದ್ಧನೆ || ೧೩

ಮಿಂಚನೊಪ್ಪಿದ ಮೇಘವಂದದ | ಪಂಚವರ್ಣದ ತುರಗನೇರಿ |
ಸಂಚರಿಸಿ ಮ್ಲೇಂಛರನ ಗೆಲಿದ ಕ | ಲಿಂಥ ಜೀವರ ಪೊರವನೆ || ೧೪

ಮಂಗಳಾಯತ ನಿನ್ನ ಕರುಣಾ | ಪಾಂಗ ಸುಧೆಯನು ಕರೆದ ಶಿರದಲಿ |
ತುಂಗ ವಿಷಯ ತರಂಗ ತಪ್ತಿಸು | ಲಿಂಗಭಂಗದ ಸಿಂಗನೆ || ೧೫

ಮಂದಿರದಿ ನೀ ಬಂದು ರಕ್ಷಿಸೆ | ಬಂದು ಸಕಲಾಪದಗೊಂದಿಸೆ |
ಇಂದಿರೇಶನೆ ಎಂದೆಗೂ ಈ | ಅಂದದಿಂದಲಿ ನಿಂದು ಸಲಹೋ || ೧೬

ಕೇಶವಾದಿ ಚತುರ ವಿಂಶತಿ | ಮಾಸಗಳಧಿಷ್ಠಾನ ನಿನಗೆ |
ಪರೇಶ ಕಡೆಯಲಿ ಬರುವ ಕಾರ್ತಿಕ | ವಾಸಿ ದಾಮೋದರ ಹರೇ || ೧೭

ಛಳಿಯೊಳೇಳುತ ಮುಳುಗಿ ಜಲದೊಳು | ಬಳಲಿ ಕರ್ಮದ ಮಾಡಲಾರೆ |
ನಳಿನಜಾರ್ಚಿತ ನಿನ್ನ ಪಾದದ | ನೆಳಲ ನಂಬಿ ಸುಮ್ಮನಿರುವೆ || ೧೮

ಅಖಿಳ ದೋಷನಿವಾರಣಾಭೃತ | ಸಕಲ ಸದ್ಗುಣಧಾರಣ |
ಮಕರ ಕುಂಡಲಧಾರಿ ವೇಂಕಟ | ಶಿಖರಸ್ಥಿತ ಸುಖಕಾರಣ || ೧೯

ಪಕ್ಷಿವಾಹನನಂತೆ ನಿನಗೆ | ಸರ್ಪ ನಿನ್ನ ಶಯನನಂತೆ |
ಮುಕ್ಕಣ್ಣಾ ಮೊಮ್ಮಗನಂತೆ | ಮುದ್ದು ಮುಖದ ಚೆಲುವನಂತೆ || ೨೦

ಕಡಲ ಮಗಳ ಗಂಡನಂತೆ | ಕರಡಿ ಮಗಳು ಮಡದಿಯಂತೆ |
ಬಡಗಿನಿಂದ ಬಂದೆಯಂತೆ | ಮಧ್ವಮುನಿಗೆ ಒಲಿದೆಯಂತೆ || ೨೧

ದೇವರ ದೇವನೆ ಬಾರೋ | ದೇವಕೀನಂದನ ಬಾರೋ |
ದೇವೇಂದ್ರರನ್ನ ಸಲಹಿದ | ಜೀವ ಬಾ ನರಹರಿಯೆ || ೨೨

ಕೊಲ್ಲು ಬೇಗ ಖಳರ ಶ್ರೀ | ನಲ್ಲ ಮಧ್ವ ವಲ್ಲಭ |
ಕೊಲ್ಲದಿದ್ದರೊಲ್ಲರಿವರು | ಕಲಿಯುಗದ ಕಳ್ಳರು || ೨೩

ಎಲ್ಲ ಕೂಡಿ ನಿನ್ನ ಪೂಜೆಗೆ | ಕಲ್ಲುಹಾಕುತ್ತಲಿಹರು |
ಚಲ್ಲುವ ಹಯವದನ ಅವರ | ಕೊಲ್ಲು ಕೊಲ್ಲು ನಮ್ಮ ಗೆಲಿಸು || ೨೪

ಭಜನ ಪದ್ಧತಿಯವರು ಈ ಪದವನ್ನು ತಾಳ ಬಾರಿಸುತ್ತಾ, ಒಟ್ಟಾಗಿ ನರ್ತನ ಸೇವೆಯ ಕಾಲದಲ್ಲಿ ಹಾಡುವರು. ಸಮಯ ಸನ್ನಿವೇಶಗಳ ಬಲದಿಂದ ಈ ಪದವು ಬಲು ಭಕ್ತಿಯನ್ನುಂಟುಮಾಡುವುದು.

ಸೊನಗಾರ (ಸ್ವರ್ಣಕಾರ) ಜಾತಿಯವರು

ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಹಸ್ರಾವಧಿ ಸೊನಗಾರರು ವಿವಿಧ ಕಲಾ ಕುಶಲರಾಗಿ ಆಯಾ ವೃತ್ತಿಗಳಿಂದ ಜೀವನ ಮಾಡುತ್ತಿದ್ದರು. ಆಹಾರ ವಿಹಾರಗಳಲ್ಲಿ ಅವರು ಎಷ್ಟೇ ಪರಿಶುದ್ಧರಾಗಿದ್ದರೂ ಸಮಾಜದಲ್ಲಿ ಅವರಿಗೆ ಯೋಗ್ಯ ಸ್ಥಾನವಿರಲಿಲ್ಲ. ಆ ಜನರು ಧರ್ಮಜ್ಞಾನ ಶೂನ್ಯರಾಗಿ ಪರಿತಪಿಸುತ್ತಿದ್ದರು. ಹೀಗಿರಲು, ಸ್ವರ್ಣಕಾರನೊಬ್ಬನು ಗಣಪತಿಯ ಪ್ರತಿಮೆಯನ್ನು ಮಾಡಬೇಕೆಂದು ಪಂಚಲೋಹಗಳನ್ನು ಕಾಯಿಸಿ ಎರಕ ಹೊಯ್ದನು. ಅಚ್ಚಿನಿಂದ ತೆಗೆದುನೋಡಲು ವಿಗ್ರಹವು ಹಯಗ್ರೀವನಾಗಿತ್ತು.

ಮೂರು ದಿನವಾದರೂ ಕಾಯಿಸಿದರೂ ಮೂರ್ತಿಯು ಶಿಲಾರೂಪವಾಗಿತ್ತು. ಸ್ವರ್ಣಕಾರನು ವಿಗ್ರಹವನ್ನು ಚಮ್ಮಟಿಗೆಯಿಂದ ಬಡಿದು ಮತ್ತೆ ಕರಗಿಸಬೇಕೆಂದು ಯತ್ನಿಸಲು - 'ಮೂರ್ತಿಯನ್ನು ಕರಗಿಸಬೇಡ. ವಾದಿರಾಜರಿಗೆ ಕೊಡು' ಎಂದು ಸ್ವಪ್ನವಾಯಿತು. ವಾದಿರಾಜರಿಗೂ ಅವರ ಉಪಾಸ್ಯಮೂರ್ತಿಯು ಪ್ರತ್ಯಕ್ಷವಾಯಿತು. ಮರುದಿನ ಸ್ವರ್ಣಕಾರನು ಮಹೋತ್ಸವದಿಂದ ಹಯಗ್ರೀವ ಮೂರ್ತಿಯನ್ನು ವಾದಿರಾಜರಿಗೆ ತಂದೊಪ್ಪಿಸಿದನು. ವಾದಿರಾಜರು ಮೂರ್ತಿಯನ್ನು ಕ್ರಮಾನುಸಾರ ಪೂಜಿಸಿ ತಮ್ಮ ಮಠದಲ್ಲಿಟ್ಟುಕೊಂಡರು. ಸ್ವರ್ಣಕಾರರೆಲ್ಲಾ ನಮ್ಮ ಜಾತಿಗೆ ತಾವೇ ಗುರುಗಳಾಗಬೇಕೆಂದು ಬೇಡಿಕೊಂಡರು. ವಾದಿರಾಜರು ಆ ದಿನ ಅವರಲ್ಲಿ ಕನಿಕರತಾಳಿ, ಅವರಿಗೆ ಚಕ್ರಾಂಕನಮಾಡಿ ಭಾಗವತ ಧರ್ಮದಲ್ಲಿ ದೀಕ್ಷೆಕೊಟ್ಟರು. ಅವರ ವಿವಿಧ ಪಂಗಡಗಳವರೂ ಆಚರಿಸುವ ಕರ್ಮದಲ್ಲಿ ತಕ್ಕ ವ್ಯವಸ್ಥೆಮಾಡಿದರು.

ಆ ಜನರು ಈಗಲೂ ಸ್ವಾದೀಮಠದ ಶಿಷ್ಯರಾಗಿದ್ದಾರೆ. ಮೂರು ವರ್ಷಕ್ಕೊಮ್ಮೆ ಚಕ್ರಾಂಕನ ಮಾಡಿಸಿಕೊಳ್ಳುತ್ತಾರೆ. ಹಯಗ್ರೀವದೇವರನ್ನು ತಮ್ಮ ಕುಲದೈವವೆನ್ನುತ್ತಾರೆ. ಪರಿಶುದ್ಧವಾದ ಆಚರಣೆಯುಳ್ಳವರಾಗಿದ್ದಾರೆ.

ಕೋಟೇಶ್ವರದವರು

ಕೋಟ ಮತ್ತು ಕೋಟೇಶ್ವರ ಗ್ರಾಮಸ್ಥ ಬ್ರಾಹ್ಮಣರಲ್ಲಿ, ಒಬ್ಬರು ಹೆಚ್ಚು - ಒಬ್ಬರು ಕಡಿಮೆಯೆಂಬ ಜಾತಿವಿವಾದವು ಆ ಜನರ ಏಳಿಗೆಗೆ ಬಾಧಕವಾಗಿತ್ತು. ಒಬ್ಬರಲ್ಲೊಬ್ಬರು ಸವ್ಯವಹಾರ ಮಾಡುತ್ತಿರಲಿಲ್ಲ. ಕೋಟದವರ ಮುಂದೆ ಕೋಟೇಶ್ವರದವರು ತಲೆಯೆತ್ತುವಂತಿರಲಿಲ್ಲ.

ಕೋಟೇಶ್ವರದವರು ವಾದಿರಾಜರಿಗೆ ಶರಣಾಗತರಾಗಲು, ಅವರು ಆ ಜನರನ್ನು ತಿರಸ್ಕರಿಸದೆ ಚಕ್ರಾಂಕನಮಾಡಿ, ಸಮಾಜದಲ್ಲಿ ಸೇರಿಸಿದರು. ಅದ್ಯಾಪಿ, ಆ ವಂಶೀಕರು ಸ್ವಾದೀಮಠದ ಶಿಷ್ಯರಾಗಿದ್ದಾರೆ.

ಅಸ್ಪೃಶ್ಯರು

ವಾದಿರಾಜರು ಮೇಲ್ತರಗತಿಯ ಜನರಲ್ಲಿ ಕೆಲವು ಸುಧಾರಣೆಮಾಡಿ ಅವರಿಗೆ ಭಾಗವತ ಧರ್ಮೋಪದೇಶಮಾಡಿದ್ದು ಮಾತ್ರವಲ್ಲ. ಅಸ್ಪೃಶ್ಯರಲ್ಲಿ ಸಹಾ ಅವರು ದಯಾಳುಗಳಾಗಿದ್ದರು. ಅವರಿರುವ ಸ್ಥಿತಿಯಲ್ಲೇ ದೇವರೊಬ್ಬರಿದ್ದಾನೆಂದು ನಂಬಿ, ಅವನ ಭಜನೆ ಮಾಡಿ, ಆ ಜನರು ಕೃತಾರ್ಥರಾಗಲೆಂದು, ತುಳು ಭಾಷೆಯಲ್ಲಿ, ಅನೇಕ ದೇವರ ನಾಮಗಳನ್ನು ಮಾಡಿಕೊಟ್ಟರು. ಆ ಹಾಡುಗಳು ಈಗಲೂ ನಿಮ್ನ ಜಾತಿಯ ಆ ಜನರ ಬಾಯಲ್ಲಿ ಪರಂಪರೆಯಾಗಿ ಪಾಠವಾಗುತ್ತಲಿವೆ.

ಈಗಿನ ಕಾಲಮಾನದಿಂದ ಇದೊಂದು ಸುಧಾರಣೆಯಾಗದಿದ್ದರೂ, ಆ ಕಾಲಮಾನದಿಂದ ನೋಡಿದರೆ ಇದು ಮಹತ್ವದ ಸುಧಾರಣೆಯೆನಿಸದಿರುವುದಿಲ್ಲ.

೩

ವಾದಿರಾಜರು ತಮ್ಮ ಸರದಿಗೆ ಬಂದ ಪ್ರಥಮ ಪರ್ಯಾಯವನ್ನು ಪೂರೈಸಿ, ದೇಶಸಂಚಾರ ಹೊರಟರು. ಇವರು ಸಂಚರಿಸಿದ ಕ್ಷೇತ್ರಗಳ ವರ್ಣನೆಯನ್ನು ತೀರ್ಥ ಪ್ರಬಂಧವೆಂಬ ಗ್ರಂಥದಲ್ಲಿ ಕ್ರೋಡೀಕರಿಸಿರುವರು. ಆ ಗ್ರಂಥದಲ್ಲಿರುವ ವರ್ಣನೆಗಳೆಂದರೆ ಪ್ರಥಮ ಸಂಚಾರದ ವರ್ಣನೆಗಳು ಮಾತ್ರ. ಮತ್ತೆ ಮತ್ತೆ ಸಂಚರಿಸಿದ ಸ್ಥಳಗಳ ವರ್ಣನೆಯು ಆ ಗ್ರಂಥದಲ್ಲಿ ಬಂದಿಲ್ಲ. ಆ ತೀರ್ಥಪ್ರಬಂಧದಲ್ಲಿರುವ ಪುಣ್ಯಸ್ಥಳಗಳನ್ನು ಬಿಟ್ಟು, ಅನ್ಯ ಸ್ಥಳಗಳನ್ನು ಅವರು ಸಂದರ್ಶಿಸಲಿಲ್ಲವೆಂದು ಹೇಳಲು ಏನೂ ಕಾರಣವಿರುವುದಿಲ್ಲ.

ಪುಣ್ಯಪಟ್ಟಣ (ಪೂನಾ)

ವಾದಿರಾಜರು ಪುಣ್ಯಪಟ್ಟಣದಲ್ಲಿ ಒಮ್ಮೆ ಚಾತುರ್ಮಾಸ್ಯ ಸಂಕಲ್ಪಕ್ಕೆ ಕುಳಿತು **ರುಕ್ಮಿಣೀಶ ವಿಜಯ** ಎಂಬ ಮಹಾಕಾವ್ಯವನ್ನು ರಚಿಸಿದರು. ಮಾಧ್ವರಲ್ಲಿ ಕಾವ್ಯ ಗ್ರಂಥಗಳನ್ನು ಬರೆಯುವುದು ಕಡಿಮೆ. ತತ್ವಶಾಸ್ತ್ರದಲ್ಲಿದ್ದ ಒಲವು ಅವರಿಗೆ ಕಾವ್ಯದಲ್ಲಿಲ್ಲ. ಕಾವ್ಯಗ್ರಂಥಗಳು ಭಾಷಾಜ್ಞಾನ ಸಾಧಕಗಳಲ್ಲದೆ, ವಿದ್ವತ್ಸಭೆಗಳಲ್ಲಿ ಪ್ರಸ್ತಾಪಕ್ಕೆ ಬರುವುವಲ್ಲ. ಮತನಿಬಂಧನೆಗೊಳಪಟ್ಟು, ಮಾತುಮಾತಿಗೆ ಸಿದ್ಧಾಂತಕ್ಕೆ ವಿರೋಧವಾಗುವುದೆಂದು ಭಯಪಟ್ಟು ರಚಿಸುವ ಕಾವ್ಯದಲ್ಲಿ ರಸಪುಷ್ಟಿಬರುವುದಿಲ್ಲ. ಮತಸಿದ್ಧಾಂತಕ್ಕೆ ವಿರೋಧ ವಾಗದೆ ಸಾಹಿತ್ಯಶಾಸ್ತ್ರದ ರಸಪುಷ್ಟಿಯನ್ನು ತಂದು ಕಾವ್ಯರಚನೆಯನ್ನು ಮಾಡಲು ಮಹಾ ಪ್ರತಿಭಾಶಾಲಿಗಳಾಗಬೇಕು. ಏನು ಮಾಡಿದರೂ ಕಾವ್ಯವು ಪ್ರಮಾಣ ಗ್ರಂಥವೆನಿಸುವುದಿಲ್ಲ. ಆದ್ದರಿಂದ ಮಾಧ್ವರಿಗೆ ಯಾವಾಗಲೂ ಕಾವ್ಯದಲ್ಲಿ ಉದಾಸೀನ: ಕಾವ್ಯರಸಾಸ್ವಾದನಪರರಲ್ಲವೆಂಬ ಅಪವಾದ. ಇಂಥಾ ಅಪವಾದವನ್ನು ಹೋಗಲಾಡಿಸಬೇಕೆಂದೋ ಎಂಬಂತೆ, ವಾದಿರಾಜರು ರುಕ್ಮಿಣೀಶ ವಿಜಯವನ್ನು ಬರೆದರು. ಆ ಗ್ರಂಥದಲ್ಲಿ ಸಿದ್ಧಾಂತಕ್ಕೆ ಲೇಶಮಾತ್ರವೂ ವಿರೋಧವುಂಟಾಗದಂತೆ ರಸಪುಷ್ಟಿಯನ್ನು ತುಂಬಿಸಿದರು.

ಪುಣೆಯ ವಿದ್ವತ್ಸಭೆಯಲ್ಲಿ ಶ್ರೇಷ್ಠಕಾವ್ಯವ್ಯಾವುದೆಂದು ತೀರ್ಮಾನವಾಗುವ ಸಮಯಕ್ಕೆ ಸರಿಯಾಗಿ, ರುಕ್ಮಿಣೀಶ ವಿಜಯವು ಪಂಡಿತರ ಕರಗತವಾಯಿತು. ಅದುವರೆಗೆ ಪಂಡಿತರ ಒಲವಾದರೋ ಮಾಘಮಹಾಕಾವ್ಯದ ಕಡೆಗಿದ್ದಿತು. ರುಕ್ಮಿಣೀಶ ವಿಜಯವನ್ನು ವಾದಿರಾಜರ ಮಠದ ಪಂಡಿತರು ತೋರುತ್ತಲೇ ಅಲ್ಲಿದ್ದ ಪಂಡಿತರು ಮಾಘಕ್ಕಿಂತ-ರುಕ್ಮಿಣೀಶ ವಿಜಯವೇ ಶ್ರೇಷ್ಠಕಾವ್ಯವೆಂದು ತೀರ್ಮಾನಿಸಿದರು. ಮಹಾಕಾವ್ಯವನ್ನು ಆನೆಯಮೇಲಿಟ್ಟು ಮೆರವಣಿಗೆ ಮಾಡಿ ಗ್ರಂಥಕರ್ತರಿಗೆ ಉತ್ತಮ ಬಹುಮಾನವನ್ನು ಕಳುಹಿಸಿದರು. ಅನಂತರ ಗ್ರಂಥಕರ್ತರು ಚಾತುರ್ಮಾಸ್ಯ ಸಂಕಲ್ಪದಲ್ಲಿರುವ ವಾದಿರಾಜರೆಂದು ಪಂಡಿತರಿಗೆ ಗೊತ್ತಾಯಿತು. ಪಂಡಿತರೆಲ್ಲರೂ ವಾದಿರಾಜರನ್ನು ಅಭಿನಂದಿಸಿದರು.

ಸಂಸ್ಕೃತದಂತೆ ಕನ್ನಡದಲ್ಲೂ ಮಾಧ್ವರ ಕಾವ್ಯಗಳು ವಿರಳ. ನಾರಣಪ್ಪನ **ಕನ್ನಡ ಭಾರತ**ವೊಂದಿರದಿದ್ದರೆ, ನಿಜವಾಗಿ ಮಾಧ್ವರಿಗೆ ಕಾವ್ಯಪ್ರಪಂಚದಲ್ಲಿ ಸ್ಥಾನ ವಿರುತ್ತಿರಲಿಲ್ಲ.

ವಾದಿರಾಜರು ಪ್ರಸಂಗದಿಂದ ಸಂಘಪುರಕ್ಕೆ ಬರುವ ಮಾರ್ಗದಲ್ಲಿ ತುರುಷ್ಕ ಸೈನಿಕರು ಮಠವನ್ನು ಕೊಳ್ಳೆಹೊಡೆಯಲು ಮುತ್ತಿಗೆ ಹಾಕಿದರು. ಆ ಪ್ರಾಂತವು ಬಹಮನೀ ನವಾಬರ ಆಳ್ವಿಕೆಗೆ ಸೇರಿತ್ತಾದ್ದರಿಂದ, ಹಿಂದೂರಾಜರಿಗೆ ಸಂಬಂಧವಿರಲಿಲ್ಲ. ಸುಲ್ತಾನರ ಸೈನ್ಯವೆಂದರೆ ವ್ಯವಸ್ಥಿತವಾದ ಸೈನ್ಯವಾಗಿರಲಿಲ್ಲ (Irregular Army). ಸೈನಿಕರಿಗೆ ಪ್ರತ್ಯೇಕ ವಸತಿಗಳಿರಲಿಲ್ಲ, ತಮ್ಮ ವಸತಿಯನ್ನು ಬಿಟ್ಟುಹೋಗಲು ಅವರಿಗೆ ಅಧಿಕಾರಿಗಳ ನಿರ್ಬಂಧವಿರಲಿಲ್ಲ. ತಿಂಗಳಿಗೆ ಸರಿಯಾಗಿ ಸಂಬಳಕೊಡುವ ನಿಬಂಧನೆಯೂ ಇರಲಿಲ್ಲ. ಮುಸಲ್ಮಾನನೆನಿಸಿದ ಪ್ರತಿಯೊಬ್ಬನೂ ಸೈನಿಕನೋ ಅಥವಾ ಅಧಿಕಾರಿಯೋ ಆಗಿರುತ್ತಿದ್ದನು. ಸೈನಿಕನೆನಿಸಿದವನು ಹಳ್ಳಿಗಳಮೇಲೂ, ಪ್ರಯಾಣಿಕರಮೇಲೂ ತನ್ನ ಬಲಿಮೆಯನ್ನು ತೋರಿಸಿ ಜೀವಿಸುತ್ತಿದ್ದನು. ಮುಸಲ್ಮಾನರೇ ಅಧಿಕಾರಿಗಳಾಗಿದ್ದುದರಿಂದ ಮುಸಲ್ಮಾನರ ಮೇಲೆ ಇತರರು ತರುವ ಫಿರ್ಯಾದನ್ನು ಕೇಳುತ್ತಿರಲಿಲ್ಲ. ಕಾಫರರ ಮೇಲೆ ಧಾಳಿಮಾಡುವುದೇ ಅವರ ರಾಜ್ಯವಿಸ್ತಾರ ಕ್ರಮವಾಗಿದ್ದುದರಿಂದ, ಕಾಫರರು ಹಿಂದುಗಳಾಗಿದ್ದುದೊಂದೇ ಅಪರಾಧವಾಗಿತ್ತು. ಆದ್ದರಿಂದ ಆಕಾಲದಲ್ಲಿ ಹಳ್ಳಿಹಳ್ಳಿಗೂ ಕೋಟೆಗಳೂ ಬುರುಜುಗಳೂ ಕಟ್ಟಲ್ಪಡುತ್ತಿದ್ದವು. ಹಿಂದೂಗಳು ಊರಿಂದೂರಿಗೆ ಸಂಚರಿಸಬೇಕಾದರೆ, ಗುಂಪುಗುಂಪಾಗಿ ಆಯುಧಪಾಣಿಗಳಾಗಿ ಹೊರಡಬೇಕಾಗಿತ್ತು. ಇಂತಹ ಕಷ್ಟಪರಿಸ್ಥಿತಿಯಲ್ಲೇ ವಾದಿರಾಜರು ದೇಶಪರ್ಯಟನ ಮಾಡುತ್ತಿದ್ದರು. ಮಠದ ಜೊತೆಯಲ್ಲಿ ನೂರಾರು ಜನರಿದ್ದರೂ, ಆಯುಧಪಾಣಿಗಳಾದ ಪಠಾಣರನ್ನು ಕಂಡಕೂಡಲೇ ಪ್ರಾಣಭೀತಿಯಿಂದ ಓಡಿಹೋದರು. ಮಠದ ಖಜಾನೆ, ದೇವರ ಪೆಟ್ಟಿಗೆಗಳನ್ನು ದೋಚಿದರೇ, ಅನೇಕ ಸಹಸ್ರ ದ್ರವ್ಯವು ಸ್ವಾಮಿಗಳ ಕೈಬಿಟ್ಟು ಹೋಗುವಂತಿತ್ತು. ಹಣದ ಮಾತಿರಲಿ, ಪ್ರಾಣಕ್ಕೇ ಗಂಡಾತರ ಬಂದೊದಗಿತ್ತು.

ಆ ಕಾಲದಲ್ಲಿ, ಏಕಾಂಗಿಗಳಾದರೂ ವಾದಿರಾಜರು ಎದೆಗುಂದಲಿಲ್ಲ. ದಂಡಪಾಣಿಗಳಾಗಿ ಬರುವವರನ್ನು ಬಸ್ಸಿರಿಂದೇ ಹಸನ್ಮುಖಿಗಳಾಗಿ ಕರೆದರು. ಸ್ವಾಮಿಗಳ ಧೈರ್ಯಕ್ಕೆ ಕಳ್ಳರು ಬೆರಗಾಗಿ ನಿಂತರು. ದೈವೀ ವಿಚಿತ್ರ ಹೀಗಾಯಿತು. ಶ್ವೇತಾಶ್ವಗಳಮೇಲೆ ಕುಳಿತ ನೂರಾರುಮಂದಿ ಖಡ್ಗಪಾಣಿಗಳಾದ ರಾವುತರು ಕಳ್ಳರನ್ನಾವರಿಸಿದರು. ಅಶ್ವಗಳ ಪದಹತಿಯಿಂದುಂಟಾದ ಧೂಳಿನಿಂದ ಮುಗಿಲು ಮುಚ್ಚಾಯಿತು. ಕಳ್ಳರು ಕಂಗೆಟ್ಟುಹೋದರು. ರಾವುತರು ವಿಜಯನಗರದ ಸೈನಿಕರೆಂದು ಭೀತಿಗೊಂಡರು. ಅನ್ಯೋಪಾಯ ತೋರದೆ ಸ್ವಾಮಿಗಳಿಗೇ ಶರಣಾಗತರಾಗಿ – 'ನಾವು ನಿಮ್ಮ ತಂಟೆಗೆ ಬಂದವರಲ್ಲ; ಮುಂದೆ ಬರುವವರಲ್ಲ; ರಾವುತರ ಖಡ್ಗದಿಂದ ನಮ್ಮನ್ನು ಕಾಪಾಡಬೇಕು; ಪ್ರಾಣದಾನ ಮಾಡಬೇಕು" ಎಂದು ಬೇಡಿಕೊಂಡರು.

ವಾದಿರಾಜರು ಭಗವದ್ವ್ಯಾಪಾರವನ್ನು ನೆನೆನೆನೆದು ಭಕ್ತಿಪುಳಕಿತರಾದರು. ಶರಣಾಗತರಾದ ಕಳ್ಳರಲ್ಲಿ ಕೃಪೆಮಾಡಿದರು. ಪ್ರಾಣಭೀತಿಯಿಂದ ಓಡಿಹೋಗಿರುವ ನಮ್ಮ ಸೇವಕರು ಬರುವವರೆಗೆ ನೀವೇ ನಮ್ಮ ಸೇವಕರಾಗಿರಬೇಕೆಂದು ಬಯಸಿದರು. ಅವರಿಂದಲೇ ಮಠದ ಖಜಾನೆ ಮೇನೆ ಪಲ್ಲಕ್ಕಿಗಳನ್ನು ಹೊರಿಸಿಕೊಂಡು ಸಂಘಪುರಕ್ಕೆ ಬಂದರು.

ಇಂತಹ ಮಹಿಮೆಯು ವಾದಿರಾಜರಂತೆ **ಯಾದವಾರ್ಯ**ರೆಂಬುವವರಲ್ಲೂ ತೋರಿಬಂದ ಕಥೆಯು ಈ ರೀತಿಯಿರುವುದು.

ಯಾದವಾರ್ಯರು ಬೆಳ್ಳಿ ಭಂಗಾರ ವ್ಯಾಪಾರಮಾಡುವ ಚಿನಿವಾರರು. ಇವರು ಮನೆಯನ್ನು ಬಿಟ್ಟು ಹೊರಡುವಾಗ ದೇವರಿಗೆ ಕೈಮುಗಿದು:-

ಅಗ್ರತಃ ಪೃಷ್ಠತಶ್ಚೈವ ಪಾರ್ಶ್ವತಶ್ಚ ಮಹಾಬಲೌ ||
ಆಕರ್ಣ ಪೂರ್ಣಧನ್ವಾನೌ ರಕ್ಷೇತಾಂ ರಾಮಲಕ್ಷ್ಮಣೌ ||

ಎಂದು ಪ್ರಾರ್ಥನೆ ಮಾಡುತ್ತಿದ್ದರು.

ಐಶ್ವರ್ಯಕ್ಕೆ ತಕ್ಕ ಆಟ್ಟಹಾಸ ಯಾದವಾರ್ಯರಲ್ಲಿರಲಿಲ್ಲ. ರತ್ನ ಮುತ್ತುಗಳ ಕಂಟಲೆಯನ್ನು ಹೆಗಲಿಗೆ ಹಾಕಿಕೊಂಡು, ಪಾದಚಾರಿಗಳಾಗಿ ವ್ಯಾಪಾರಕ್ಕೆ ಊರೂರು ತಿರುಗುತ್ತಿದ್ದರು. ಆರ್ಯರು ಪರಮ ರಾಮ ಭಕ್ತರಾಗಿದ್ದರು. ಇವರು ಪ್ರಯಾಣ ಮಾಡಲು ಹೊತ್ತುಗೊತ್ತು ಸಹ ನೋಡುತ್ತಿದ್ದಿಲ್ಲ. ಒಂದೊಂದು ವೇಳೆ ಮಧ್ಯರಾತ್ರಿ ಯಾದರೂ ಮನೆಗೆ ಬರುತ್ತಿರಲಿಲ್ಲ. ಇಂಥವರನ್ನು ಸುಲಿಯಬೇಕೆಂದು ರೋಹಿಲೆಯವರು ಬಲುದಿನಗಳಿಂದ ಹೊಂಚುಹಾಕುತ್ತಿದ್ದರು. ಯಾವಾಗ ನೋಡಿದರೂ ಆ ಕಳ್ಳರಕಣ್ಣಿಗೆ ಈರ್ವರು ಕುದುರೆ ಸವಾರರು ಈ ಆರ್ಯರಿಗೆ ಬೆಂಗಾವಲಾಗಿದ್ದಂತೆ ಕಾಣುತ್ತಿತ್ತು. ಆರ್ಯರ ಮನೆಯಲ್ಲಿ ಕುದುರೆಗಳಿರಲಿಲ್ಲ-ಸವಾರರೂ ಇರಲಿಲ್ಲ. ಕಳ್ಳರಿಗೆ ಇದು ಆಶ್ಚರ್ಯ ವನ್ನುಂಟುಮಾಡಿತು. ಒಂದುದಿನ ಅವರು ಮಾರುವೇಷದಿಂದ ಬಂದು ಆರ್ಯರನ್ನು ಕುರಿತು :-

ರೋಹಿಲರು :- ಸ್ವಾಮಿ ನಿಮ್ಮ ಬೆಂಗಾವಲಾಗಿರುವ ಸವಾರರ್ಯಾರು?

ಯಾದವಾರ್ಯ :- ನಮ್ಮಲ್ಲಿ ಸವಾರರ್ಯಾರೂ ಇಲ್ಲ.

ರೋಹಿಲರು :- "ಇಲ್ಲಸ್ವಾಮಿ, ತಾವು ನಮ್ಮನ್ನು ಕ್ಷಮಿಸಿರಿ. ತಮ್ಮನ್ನು ಸುಲಿಗೆ ಮಾಡಬೇಕೆಂದು ನಾವು ಬಲುದಿನಗಳಿಂದ ಹೊಂಚುಹಾಕುತ್ತಿದ್ದೇವೆ. ನಮ್ಮ ಕಣ್ಣಿಗೆ ದಿವ್ಯ ತೇಜೋರಾಶಿಗಳಾದ ಇಬ್ಬರು ಸವಾರರು ತಮಗೆ ಬೆಂಗಾವಲಾಗಿರುವಂತೆ ಕಾಣುತ್ತದೆ! ಮನೆಯ ಬಾಗಿಲಿಗೆ ತಾವು ಬಂದೊಡನೆ ಅವರು ಅದೃಶ್ಯರಾಗುತ್ತಾರೆ! ಇದರ ರಹಸ್ಯವೇನು?" ಎಂದು ಪ್ರಶ್ನೆಮಾಡಿದರು.

ಕಳ್ಳರ ಮಾತಿನಿಂದ ಆರ್ಯರು ವಿಸ್ಮಿತರಾದರು. ತಾವು ಧ್ಯಾನಮಾಡುವ ಶ್ಲೋಕದ ಮಹಿಮೆಯನ್ನು ತಿಳಿದುಕೊಂಡರು. ಅವರಿಗೆ ದರ್ಶನವಿತ್ತ ರಾಮ ಲಕ್ಷ್ಮಣರು ತಮಗೆ ದರ್ಶನಕೊಡಲಿಲ್ಲವೆಂದು ದುಃಖಿತರಾದರು. "ಅಪ್ಪಾ ರೋಹಿಲರಾ, ನನಗಾಗಿ ನೀವು ಬಲು ಕಷ್ಟಪಟ್ಟಿರಿ. ನೀವೇ ಪುಣ್ಯವಂತರು. ನಿಮಗೆ ರಾಮದರ್ಶನವಾಯಿತು. ನನ್ನ ಕಂಟಲೆ ಯನ್ನು ನಾನೇ ನಿಮಗೆ ಕೊಡುತ್ತೇನೆ. ನೀವು ತೆಗೆದುಕೊಂಡು ಹೋಗಿರಿ" ಎಂದರು.

ಕಳ್ಳರಾದರೂ ರಾಮಮಹಿಮೆಯನ್ನರಿತು, ಆರ್ಯರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತೆರಳಿದರು. ತಮ್ಮ ಜನ್ಮದಲ್ಲೇ, ಮುಂದೆ ಕಳ್ಳತನ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ರಾಮಭಕ್ತ   ರಾದರು.

ಯೋಗಾಚಾರ್ಯರು ಪದ್ಮ ಪರ್ವತವನ್ನು ದಾನಮಾಡಿ, ಕೃಷ್ಣಾತೀರದಲ್ಲಿ ತಪಸ್ಸಿಗೆ ಕುಳಿತರು. ಶ್ರೀರಾಮ ಸಾಕ್ಷಾತ್ಕಾರವಾಯಿತೆಂದರು. ಅನಂತರ ಬಹಳ ಬೇಗ ಕಾಲವಾಗಿ ವಿಷ್ಣುಸ್ಮರಣೆಯಿಂದಲೇ ಮುಕ್ತರಾದರು.

ಭಾರತ ಪುಣ್ಯಭೂಮಿಯಲ್ಲಿ
ಇಂತಹ ಮಹಾ ಮಹಿಮರೆಷ್ಟು ಜನರಾದರೋ ?

ವಾದಿರಾಜರು ಹಯಗ್ರೀವೋಪಾಸಕರಾದಾಗಿಂದ ಪ್ರತಿನಿತ್ಯವೂ ಒಂದು ಹರಿವಾಣದ ತುಂಬ ಕಡಲೆಯ ಹೂರಣವನ್ನಿಟ್ಟು, ಅದನ್ನು ತಲೆಯಮೇಲಿಟ್ಟುಕೊಂಡು ಏಕಾಂತ ಸ್ಥಳದಲ್ಲಿ ಕುಳಿತು ಧ್ಯಾನಮಾಡುತ್ತಿದ್ದರು. ಪರಮಾತ್ಮನು ದಿವ್ಯ ಶ್ವೇತಾಶ್ವ ರೂಪದಿಂದ ದರ್ಶನವಿತ್ತು, ತನ್ನೆರಡು ಮುಂಗಾಲುಗಳನ್ನೂ ವಾದಿರಾಜರ ಹೆಗಲಮೇಲಿಟ್ಟು, ಆ ಹರಿವಾಣದ ಹೂರಣವನ್ನು ಸ್ವೀಕರಿಸುತ್ತಿದ್ದನು. ಸ್ವಾಮಿಗಳು ಹರಿವಾಣದಲ್ಲಿ ಮಿಕ್ಕ ಶೇಷವನ್ನು ಹಯಗ್ರೀವ ಪ್ರಸಾದವೆಂದು, ಇತರರಿಗೆ ಕೊಡುವರು. ತಾವೇ ಭೋಜನ ಮಾಡುತ್ತಿದ್ದರು. ವಾದಿರಾಜರ ಹಯಗ್ರೀವ ಮಂತ್ರ ಪುರಸ್ಕರಣೆ ಪಡೆದ ಅನೇಕ ಸಮಯಗಳಲ್ಲಿ, ದಿವ್ಯಾಶ್ವರೂಪದಿಂದ ಪರಮಾತ್ಮನು ಸಂಚರಿಸುತ್ತಿರುವುದೂ, ಕಡಲೆಯ ಹೊಲಗಳಲ್ಲಿ ಮೇದು ಬಂದಂತೆಯೂ ಜನರಿಗೆ ದರ್ಶನವಾಗುತ್ತಿತ್ತು.

ಒಂದುದಿನ, ಮಧ್ಯರಾತ್ರಿಯ ಹೊತ್ತು ಜಮೀನುದಾರನೊಬ್ಬನ ಹೊಲವನ್ನು ದಿವ್ಯಾಶ್ವವು ಮೇಯುತ್ತಿರಲು, ಯಜಮಾನನು ಕಂಡು ಅದನ್ನು ಹಿಡಿಯಬೇಕೆಂದು ಓಡಿಸಿಕೊಂಡು ಬಂದನು. ದಿವ್ಯಾಶ್ವವು ಮಠದ ಬಾಗಿಲವರೆಗೆ ಬಂದು ಅದೃಶ್ಯವಾಯಿತು. ಜಮೀನ್ದಾರನು, ಆ ಕುದುರೆಯು ಮಠಕ್ಕೆ ಸೇರಿದ್ದೆಂದು ಸ್ವಾಮಿಗಳನ್ನೇ ಕಂಡು–'ಮಹಾಸ್ವಾಮಿ, ತಮ್ಮ ಕುದುರೆಯು ನಮ್ಮ ಹೊಲವನ್ನು ಹಾಳುಮಾಡಿದೆ; ಅದರ ನಷ್ಟವನ್ನು ಕೊಡಿಸಬೇಕು' ಎಂದು ಕೇಳಿದನು. ಸ್ವಾಮಿಗಳು ನಗುತ್ತಾ – 'ಪುಣ್ಯಾತ್ಮ, ನಮ್ಮಲ್ಲಿ ಯಾವ ಕುದುರೆಯೂ ಇಲ್ಲ; ಬೇಕಾದರೆ ನೀನೇ ಪರೀಕ್ಷಿಸಬಹುದೆಂದರು. ಜಮೀನ್ದಾರನು ಮಠದಲ್ಲಿ ಕುದುರೆಯಿಲ್ಲವೆಂಬುದನ್ನು ಪರೀಕ್ಷೆಮಾಡಿ ನಿರ್ಧರಿಸಿಕೊಂಡನು. ಆದರೆ ಅಂಥಾ ದಿವ್ಯಾಶ್ವವನ್ನು ಮತ್ತೊಮ್ಮೆ ಕಣ್ಣಿಂದ ನೋಡಬೇಕೆಂಬ ಕುತೂಹಲ ಅವನಿಗಾಯಿತು. ಮರುದಿನ ಹೊಲದ ಬಳಿಯಲ್ಲಿ ತಾನೇ ಕಾಯುವುದಕ್ಕೆ ಕುಳಿತನು. ದಿವ್ಯಾಶ್ವವು ಎಲ್ಲಿಂದಲೋ ಬಂದು ಮೇಯುವುದಕ್ಕಾರಂಭಿಸಿತು. ಯಜಮಾನನು ಅದನ್ನು ಹಿಡಿಯಬೇಕೆಂದು ಓಡಿಸಿಕೊಂಡು ಬಂದನು. ದಿವ್ಯಾಶ್ವವು ಮಠದವರೆಗೂ ಬಂದಿತು. ಆ ಕಾಲದಲ್ಲಿ ಸ್ವಾಮಿಗಳ ದೇವತಾರ್ಚನೆ ನಡೆದಿತ್ತು. ವಿಶೇಷವಾಗಿ ದೇವರನಾಮಗಳೂ ಭಾಗವತರ ಭಜನೆಯೂ ಆಗುತ್ತಿತ್ತು. ನೂರಾರುಮಂದಿ ಭಕ್ತಜನರು ಪೂಜೆಯನ್ನು ನೋಡುತ್ತಾ ಕುಳಿತಿದ್ದರು. ಜಮೀನ್ದಾರನ ಕಣ್ಣಿಗೆ ಮಠದ ಬಾಗಿಲವರೆಗೆ ಬಂದ ಕುದುರೆಯು, ಸ್ವಾಮಿಗಳ ಪೂಜೆಯಲ್ಲಿದ್ದ ಹಯಗ್ರೀವ ಮೂರ್ತಿಯಲ್ಲಿ ಐಕ್ಯವಾದಂತೆ ಕಾಣಿಸಿತು. ಈ

ಅತಿಮಾನುಷ ರಹಸ್ಯವನ್ನು ಕೇಳಿ ತಿಳಿಯಬೇಕೆಂದು ಪೂಜೆ ಭೋಜನಗಳಾಗುವವರೆಗೆ ಜಮೀನ್ದಾರನು ಮಠದ ಬಾಗಿಲಿನಲ್ಲಿ ಕಾದುಕುಳಿತನು. ಸಮಯಸಾಧಿಸಿ ಮತ್ತೆ ಸ್ವಾಮಿಗಳನ್ನು ಮೊದಲಿನಂತೆ ಪ್ರಶ್ನೆಮಾಡಿದನು. ದಿವ್ಯಾಶ್ವವು ಮೂರ್ತಿಯಲ್ಲಿ ಐಕ್ಯವಾದಂತೆ ತನ್ನ ಕಣ್ಣಿಗೆ ಕಾಣಿಸಿದ್ದರ ಮರ್ಮವೇನೆಂದು ಕೇಳಿದನು.

ವಾದಿರಾಜರು :– 'ಅಯ್ಯಾ ಜಮೀನ್ದಾರಾ, ನೀನು ಸುಕೃತಶಾಲಿಯಾದ್ದರಿಂದ ನಿನಗೆ ಹಯಮುಖನ ದರ್ಶನವಾಯಿತು. ಅವನ ಕೃಪೆಯಿಂದ ನಿನ್ನ ಹೊಲದಲ್ಲಿ ಸಹಸ್ರಮಡಿಯಾಗಿ ಫಲವಾಗುವುದು; ನಾಳೆ ಬೇಕಾದರೆ ಪರೀಕ್ಷೆಮಾಡು,' ಎಂದು ಅನುಗ್ರಹಿಸಿ ಕಳುಹಿಸಿದರು.

ಮಾರನೆಯ ಪ್ರಾತಃಕಾಲ, ಜಮೀನ್ದಾರನು ಕುತೂಹಲದಿಂದ ಹೊಲಕ್ಕೆ ಹೋದನು. ಎಲ್ಲೆಲ್ಲಿ ಕುದುರೆಯು ಮೇಯ್ದಿತ್ತೋ ಆ ಸ್ಥಳಗಳಲ್ಲಿ ಕಡಲೆಯ ಗಿಡಗಳು ಫಲ್ಲೈಸುತ್ತಿದ್ದವು. ಒಂದೊಂದು ಗಿಡದಲ್ಲೂ ಬಂಗಾರದ ಕಡಲೆಯ ಕಾಳುಗಳು ಕಂಗೊಳಿಸಿದವು. ಜಮೀನ್ದಾರನು ತನಗೆ ಬಂಗಾರ ದೊರೆಯಿತೆಂಬ ಸಂತೋಷಕ್ಕಿಂತ, ತಾನು ಬೆಳೆದ ಚಣಕವು ಭಗವದರ್ಪಿತವಾಯಿತೆಂದು ಭಕ್ತಿಯಿಂದ ಆ ಹೊಲವನ್ನೇ ವಾದಿರಾಜರಿಗೆ ದಾನಮಾಡಿದನು. ಮತ್ತೆ ಎಷ್ಟು ವೇಳೆ ನೋಡಿದರೂ ಅವನಿಗೆ ಅಶ್ವದ ದರ್ಶನವಾಗಲಿಲ್ಲ. ಅವನು ಪರಮ ವಿರಕ್ತನಾಗಿ ವಾದಿರಾಜರನ್ನು ಇನ್ನೊಮ್ಮೆ ದಿವ್ಯಾಶ್ವದ ದರ್ಶನಮಾಡಿಸಬೇಕೆಂದು ಪ್ರಾರ್ಥಿಸಿದನು. ವಾದಿರಾಜರು ನಿನಗೆ ಈ ಜನ್ಮಕ್ಕೆ ಇಷ್ಟೇ ಸಾಧನವೆಂದೂ, ಜನ್ಮಾಂತರದಲ್ಲಿ ಮಹಾಭಕ್ತನಾಗಿ ಹಯಗ್ರೀವೋಪಾಸಿಯಾಗುವೆಯೆಂದೂ ಹರಸಿದರು.

ಜಮೀನ್ದಾರನು ಕೊಟ್ಟ ಹೊಲದ ಉತ್ಪತ್ತಿಯು ಮೊನ್ನೆ ಮೊನ್ನಿನವರೆಗೆ ಶ್ರೀ ಮಠಕ್ಕೆ ಬರುತ್ತಿದ್ದು, ಈಚೆಗೆ ಕೆಲವು ವರ್ಷಗಳಿಂದ ವ್ಯವಸ್ಥಾಪಕರಿಂದ ವಿಚಾರವಿಲ್ಲದೆ ನಿಂತುಹೋಗಿದೆಯಂತೆ !

ಉತ್ತರ ದೇಶಸಂಚಾರದಲ್ಲಿ ದಿಲ್ಲೀಶ್ವರನಾದ ಬಾಬರ್ ಚಕ್ರವರ್ತಿಯು ವಾದಿರಾಜರಿಗೆ ಬಹಳ ಸನ್ಮಾನ ಮಾಡಿದಂತೆಯೂ, ಮಠದ ಖಜಾನೆಯನ್ನು ಒಂಟೆಗಳಮೇಲೆ ನಿರ್ಭಯವಾಗಿ ಸಾಗಿಸುವ ಸಿಬ್ಬಂದಿಯನ್ನು ಉಡುಪಿಯವರೆಗೂ ಕಳುಹಿಸಿದಂತೆಯೂ ತಿಳಿದುಬರುತ್ತದೆ.

ವ್ಯಾಸಭಗವಾನರ ದರ್ಶನ

ಪ್ರಯಾಗಕ್ಷೇತ್ರದಲ್ಲಿ ರಾಜರು ಬ್ರಹ್ಮದೇವರ ಸಂಧ್ಯಾಮಠದಲ್ಲಿ ಕೆಲವು ಕಾಲ ತಪಶ್ಚರ್ಯದಲ್ಲಿದ್ದರು. ರಾಜರು ಮಾಡಿದ ವ್ಯಾಸೋಪಾಸನೆಯ ಫಲವಾಗಿ ಸಾಕ್ಷಾದ್ವೇದವ್ಯಾಸರೇ ಪ್ರತ್ಯಕ್ಷರಾದರು. ಭಗವದ್ದರ್ಶನ ಪರವಶರಾದ ರಾಜರು – ಈ ಕೆಳಗೆ ಕೊಡುವ ಪದವನ್ನು ಹಾಡಿದರು.

ಮುಖಾರಿ—ಅಟ್ಟತಾಳ

ಮಧ್ವಾಂತರ್ಗತ ವೇದವ್ಯಾಸಾ | ಕಾಯೋ | ಶುದ್ಧ ಮೂರುತಿಯೆ ಸರ್ವೇಶಾ ಪ
ಶ್ರದ್ಧೆಯಿಂದಲಿ ನಿಮ್ಮ ಭಜಿಸುವ ಸುಜನರಿಗೆ |
ಬುದ್ಧ್ಯಾದಿಗಳನಿತ್ತು ಉದ್ಧರಿಸೋ ದೇವದೇವ ಅ
ದ್ವಾಪರದೊಳಗೊಬ್ಬ ಮುನಿಪ | ತನ್ನ | ಕೋಪದಿಂದಲಿ ಕೊಟ್ಟ ಶಾಪ |
ಸ್ಥಾಪಿಸಲ್ ವಿಜ್ಞಾನ ಲೋಪ | ಹಾಗೆ | ಆ ಪರಮೇಷ್ಠಿ ಭವನಾತಪ ||
ಶ್ರೀಪತೇ ಕಾಯೆಂದು ಮೊರೆಯಿಡೆ | ಪರಾಶರಪಿತನಾದ ಯಮುನೆಯ |
ದ್ವೀಪದಲಿ ಅಂಬಿಗರ ಹೆಣ್ಣಿನ | ರೂಪಕೊಳಿದವಳಲ್ಲಿ ಜನಿಸಿದೆ | ೧
ವೇದವಾದಗಳೆಲ್ಲ ಕೆಡಲು | ತತ್ವ | ವಾದಿ ಜನರು ಬಾಧೆಪಡಲು |
ಮೇದಿನಿ ಸುರರ್ಮೊರೆಯಿಡಲು | ಸರ್ವ | ವೇದಗಳನು ವಿಭಾಗಿಸಲು ||
ಮೋದದಿಂದ ತದರ್ಥ ಬೋಧಕ | ವಾದ ಸೂತ್ರ ಪುರಾಣ ರಚಿಸಿ ವಿ |
ವಾದಗಳ ನಿರ್ವಾದಗೈಸಿದ | ಸಾಧುವಂದಿತ ಬಾದರಾಯಣ – ೨
ಸುಮತಿಗಳಿಗೆ ಬೋಧಿಸಿದೆ | ದುಷ್ಟ | ಕುಮತಿಗಳನು ಛೇದಿಸಿದೆ |
ಕ್ರಿಮಿಯಿಂದ ರಾಜ್ಯವಾಳಿಸಿದೆ | ಜಗತ್ಸ್ವಾಮಿ ಚರ್ಯವ ನೀ ತೋರಿಸಿದೆ ||
ವಿಮಲರೂಪನೆ, ಕಮಲನಾಭನೆ | ರಮೆಯ ವಲ್ಲಭ ರಮ್ಯ ಚರಿತನೆ |
ಮಮತೆಯಲಿ ಕೊಡು ಕಾಮಿತಾರ್ಥವ | ನಮಿಸುವೆನು ಹಯವದನ ಮೂರುತಿ || ೩

ಇದರಂತೆ ವಾದಿರಾಜರು ಮಾಡಿದ ಸಂಸ್ಕೃತದ ವ್ಯಾಸಸ್ತೋತ್ರವೂ ಬಹು ಭಕ್ತಿಜನಕವಾಗಿದೆ.

ಬಾದರಾಯಣರು :– 'ವತ್ಸ ವಾದಿರಾಜ, ಬಹು ದೇಹದಂಡನೆ ಮಾಡಿ ತಪಸ್ಸನ್ನು ಮಾಡುತ್ತಿರುವೆ ! ನೀನಿದ್ದ ಬಳಿಗೇ ಬಂದು, ನಿನ್ನನ್ನು ಬದರಿಕಾಶ್ರಮಕ್ಕೆ ಕರೆದೊಯ್ಯಬೇಕೆಂಬ ಬಯಕೆ ನನಗಾಯಿತು. ಬದರಿಕಾಶ್ರಮಕ್ಕೆ ಬರಲು ತಕ್ಕ ದೇಹಸಂಪತ್ತುಳ್ಳವರಾಗಲೀ, ಮನಶ್ಶಕ್ತಿಯುಳ್ಳವರಾಗಲೀ, ಕಲಿಯುಗದಲ್ಲಿ ಅತಿ ವಿರಳ. ಬರುವೆಯಾದರೆ ನನ್ನೊಡನೆ ಕರೆದೊಯ್ವೆನೆಂದು'ಸುರಿದರು.

ವಾದಿರಾಜರು ಆನಂದ ನಿರ್ಭರರಾದರು. ಮಾತನಾಡಲು ಕಂಠರೋಧವಾಯಿತು. ಸಮಸ್ಥಿತಿಗೆ ಬರುವುದಕ್ಕೆ ಮುಹೂರ್ತಕಾಲ ಬೇಕಾಯಿತು. ವ್ಯಾಸಭಗವಾನರು ಭಾವಸಮಾಧಿಸ್ಥರಾದ ವಾದಿರಾಜರನ್ನು ವಾತ್ಸಲ್ಯಪೂರ್ಣ ಕೃಪಾದೃಷ್ಟಿಯಿಂದ ನೋಡಿದರು. ರಾಜರು :– 'ದೇವ ದೇವ, ನಾನು ಯಾತ್ರೆ ಹೊರಟ ಉದ್ದೇಶವೇ ಬದರಿಗೆ ಬರಬೇಕೆಂದು; ಶ್ರೀಮದಾಚಾರ್ಯರ ದರ್ಶನಮಾಡಬೇಕೆಂದು: ತಮ್ಮಿಂದ ಸಮುಪದೇಶ ಪಡೆಯಬೇಕೆಂದು. ಇಂದಿಗೆ ನನ್ನ ಜನ್ಮ ಪಾವನವಾಯಿತು. ಮಾಡಿದ ಜಪತಪಸ್ಸುಗಳು ಸಫಲವಾದುವು. ತಮ್ಮೊಡನೆ ಪ್ರಯಾಣಮಾಡಲು ಈಗಲೇ ಸಿದ್ಧನಾಗಿರುವೆನು' ಎಂದು ಪ್ರಣಾಮಮಾಡಿದರು. ವಾದಿರಾಜರು ಮಠದ ಶಿಷ್ಯರನ್ನೆಬ್ಬಿಸಿ, ನಾನು ಬರುವವರೆಗೆ ನೀವಿಲ್ಲೇ ಇರಬೇಕೆಂದು ಆಜ್ಞೆಗೈದರು. ದಂಡಕಾಷ್ಠ ಕಮಂಡಲುಪಾಣಿಗಳಾಗಿ ವ್ಯಾಸರನ್ನು ಹಿಂಬಾಲಿಸಿದರು.

ರಾತ್ರಿಕಾಲದಲ್ಲಿ ನಿದ್ರಿತರಾಗಿದ್ದ ಶಿಷ್ಯರಿಗೆ ಗುರುಗಳ ಸಮಾಚಾರವೊಂದೂ ತಿಳಿಯ ಲಿಲ್ಲ. ವ್ಯಾಸಾಗಮನವು ಆ ಪಾಮರರಿಗೆ ತಿಳಿವ ಬಗೆ ಹೇಗೆ ?

ವಾದಿರಾಜರು ಬದರಿಕಾಶ್ರಮಕ್ಕೆ ಹೋಗಿದ್ದ ಸಂಗತಿಯನ್ನು ಸಮರ್ಥಿಸುವ ಇತರ ಪ್ರಮಾಣಗಳ ಜೊತೆಗೆ ಬಾದರಾಯಣದಾಸರು ಮಾಡಿರುವ "ಸೋದಾಪುರದಲ್ಲಿ ಮನೆ ಮಾಡಿದ ಮುನಿಯಾರೇ ಪೇಳಮ್ಮಯ್ಯ" ಎಂಬ ಕೀರ್ತನವು ಮುಖ್ಯವಾದ ಪ್ರಮಾಣ ವಾಗಿದೆ.

ಕೇವಲ ಅನುಗ್ರಹ ಬಲವೇ ವಾದಿರಾಜರಿಗೆ ವೇದವ್ಯಾಸರನ್ನು ಹಿಂಬಾಲಿಸಲು ಬೆಂಬಲವಾಯಿತು. ದೇವತೆಗಳಿಗೂ ಬ್ರಹ್ಮರ್ಷಿಗಳಿಗೂ ಆವಾಸವಾದ ದಿವ್ಯಾಶ್ರಮವನ್ನು ಉಭಯರೂ ಪ್ರಭಾತಕಾಲಕ್ಕೆ ತಲುಪಿದರು. ಅಲ್ಲಿನ ವಾತಾವರಣ, ಆ ದಿವ್ಯತೇಜಸ್ಸು ಆ ಮಹಾಮುನಿಗಳ ಸನ್ನಿಧಾನ ಇವುಗಳಿಂದ ವಾದಿರಾಜರು ಪರಮಾನಂದಭರಿತರಾದರು. ಶ್ರೀಮದಾಚಾರ್ಯರನ್ನು ಕಂಡು ಸಾಷ್ಟಾಂಗವೆರಗಿದರು. ಉಡುಪಿಯ ಶ್ರೀಕೃಷ್ಣಪೂಜಾ ದಿಗಳು ನಿರ್ವಿಘ್ನವಾಗಿ ನಡೆಯುತ್ತಿರುವ ಸದ್ವಾರ್ತೆಯನ್ನು ಅವರಿಗೆ ತಿಳಿಸಿದರು. ಮಧ್ವಾ ಚಾರ್ಯರು ಅಲ್ಲಿದ್ದ ಎಲ್ಲ ಮುನಿಗಳಿಗೂ ವಾದಿರಾಜರ ಪರಿಚಯ ಮಾಡಿಸಿದರು.

ಸಿದ್ಧಾಂತವಾದಿಗಳು (ಮಧ್ವಮತಸ್ಥರು) ಭಗವದುಪಾಸನೆಯನ್ನಲ್ಲದೆ ನಿರ್ಗುಣೋ ಪಾಸನೆಯನ್ನು ಮನ್ನಿಸುವುದಿಲ್ಲ. ಉಪಾಸನೆಯೆಂದ ಕೂಡಲೇ ಉಪಾಸ್ಯವಸ್ತುವೊಂದಿರ ಬೇಕಾಗುವುದು. ಅದಕ್ಕೆ ನಾಮರೂಪಾದಿ ನಿರ್ದೇಶಗಳಿರಬೇಕಾಗುವುದು. ಯಾವ ನಿರ್ದೇ ಶವೂ ಇರದ ವಸ್ತುವನ್ನು ಇದಿರಿಟ್ಟು ಭಾವಿಸುವುದಾಗಲೀ ಅಂತಹ ವಸ್ತುವನ್ನು ವಿಷಯೀಕರಿಸುವುದಾಗಲೀ ಬಲು ಕಠಿನ. ಶ್ರೀ ಕೃಷ್ಣನು ಗೀತೆಯಲ್ಲಿ—

ಕ್ಲೇಶೋಽಧಿಕತರಸ್ತೇಷಾಂ ಅವ್ಯಕ್ತಾಸಕ್ತ ಚೇತಸಾಂ ।

ಎಂಬ ವಾಕ್ಯದಿಂದ ಈ ವಿಷಯವನ್ನು ಸ್ಪಷ್ಟೀಕರಿಸಿರುವನು. ಅವ್ಯಕ್ತೋಪಾಸನೆ ಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅದು ಶೂನ್ಯೋಪಾಸನೆಯಾಗಿ ಬಿಡುವುದು. ನಾಸ್ತಿಕ ಮಾರ್ಗವಾಗಿ ಬಿಡುವುದು. ಆಕಾಶವನ್ನು ಗುದ್ದುವಂತೆ ನಿಷ್ಫಲವಾಗಿ ಬಿಡುವುದು. ಆದ್ದರಿಂದ ತತ್ವವೇತ್ತರು ಸುಪಥವಾದ ಸಗುಣೋಪಾಸನೆಯೇ ಶ್ರೇಯಸ್ಕರವೆನ್ನುವರು. ಸಗುಣೋಪಾಸನೆಯಲ್ಲಿ ಮಾರ್ಗತಪ್ಪಿದರೆ ಬಾಧಕವಾಗುವುದಿಲ್ಲ; ಸಾಧಿಸಿದರೆ ಮಹಾಫಲ ದಾಯಕವಾಗುವುದು. ಸಗುಣೋಪಾಸನೆಯಲ್ಲಿ ಪ್ರತೀಕಾಲಂಬನರು ಕೆಲವರು; ನಿಷ್ಪ್ರತೀ ಕಾಲಂಬನರು ಕೆಲವರು. ನಿಷ್ಪ್ರತೀಕಾಲಂಬನರಾದರೂ ಲೋಕಶಿಕ್ಷೆಗೆಂದು ಪ್ರತೀಕಾಲಂಬನ ರಾಗಿ ವರ್ತಿಸುವರು. ಆದ್ದರಿಂದ ಭಾರತೀಯರಲ್ಲಿ ಬಲುಕಾಲದಿಂದ ವಿಗ್ರಹಾರಾಧನೆಯು ಬಲವತ್ತರವಾದ ಉಪಾಸನಾಕ್ರಮವಾಗಿರುವುದು. ಅದ್ವೈತ ಮತಸ್ಥರಿಗಾದರೂ ಸಗುಣೋ ಪಾಸನೆಯ ವಿಗ್ರಹಾರಾಧನೆಯನ್ನು ಬಿಡಲು ಸಾಧ್ಯವಾಗಿಲ್ಲ.

ಮಧ್ವಮತಸ್ಥರಲ್ಲಿ ಬ್ರಹ್ಮಪದಾರ್ಥ ಜೀವರ ತಂಡವನ್ನು ಪ್ರತ್ಯೇಕ ವಿಭಾಗಿಸಿರು ವರು. ಆ ಜೀವರ ಗುಂಪಿಗೆ ಋಜುಪದಸ್ಥರೆಂದು ಕರೆಯುವರು. ಒಬ್ಬೊಬ್ಬ ಋಜುವೂ

ಎನ್ನುವ ತಪಸ್ಸಾಧನೆಯಾಗಿ ಮುಕ್ತನಾಗುವನು. ಆ ಕ್ರಮದಿಂದ ವಾದಿರಾಜರು ಸದ್ಯ ತೊಂಭತ್ತೆಂಟನೆಯ ಬ್ರಹ್ಮಕಲ್ಪಸಾಧನೆಯಲ್ಲಿರುವರಂತೆ! ಈಗಿರುವ ವಾಯುವು ಬ್ರಹ್ಮಪದವಿಗೇರಿದ ಕೂಡಲೇ ವಾದಿರಾಜರು ವಾಯುಪದಕ್ಕೆ ಬರುವರಂತೆ! ವಾಯುಪದಾರ್ಹ ಋಜುವಿನ ಹೆಸರು ಲಾತವ್ಯನಂತೆ! ತ್ರಿವಿಕ್ರಮೋಪಾಸನೆಯು ಋಜುಗಳಿಗೆ ವಿಹಿತವಾದ ಉಪಾಸನೆಯಂತೆ! ತ್ರಿವಿಕ್ರಮನು ಲೋಕವನ್ನು ಎರಡು ಪಾದದಲ್ಲಿ ಅಳೆದ ಆಕಾರದ ರೂಪ ಚಿಂತನೆಯು ಸಾಮಾನ್ಯರಿಗೆ ಸಾಧ್ಯವಲ್ಲವಂತೆ! ಅದರಿಂದ ಭಗವದುಪಾಸನೆಯಲ್ಲೂ ಅಧಿಕಾರಿಯೋಗ್ಯತೆಯನ್ನನುಸರಿಸಿ, ವಿವಿಧ ತರಗತಿಗಳಿರುವುವು. ಮನುಷ್ಯವರ್ಗದಲ್ಲಿ ಶ್ರೇಷ್ಠರಾದವರು **ಸತ್, ಚಿತ್, ಆನಂದ, ಆತ್ಮ** ಗಳೆಂಬ ಭಗವದ್ಗುಣಗಳನ್ನು ಉಪಾಸಿಸುವರು. ದೇವತೆಗಳಾದರೋ ತಮ್ಮ ತಮ್ಮ ಯೋಗ್ಯತೆಯನ್ನನುಸರಿಸಿ ಬಹುಗುಣಗಳಿಂದ ಭಗವದುಪಾಸನೆ ಮಾಡುವರು. ಬ್ರಹ್ಮದೇವನು ಸಕಲ ಗುಣಗಳಿಂದಲೂ, ಭಗವಂತನನ್ನು ಉಪಾಸನೆಮಾಡುವನು.

ಸಚ್ಚಿದಾನಂದ ಆತ್ಮೇತಿ ಮಾನುಷೈಸ್ತು ಸುರೇಶ್ವರೈಃ ॥
ಯಥಾಕ್ರಮಂ ಬಹುಗುಣೈಃಬ್ರಹ್ಮಣಾಪ್ಯಖಿಲೈರ್ಗುಣೈಃ ॥

ಎಂಬ ಶ್ಲೋಕದಿಂದ ಶ್ರೀಮದಾಚಾರ್ಯರವರು ಮೇಲ್ಕಂಡ ಉಪಾಸನಾಕ್ರಮವನ್ನು ಸ್ಪಷ್ಟೀಕರಿಸಿರುವರು.

ವಾದಿರಾಜರು ಋಜುಪದಸ್ಥದೇವತೆಗಳೆಂಬುದಕ್ಕೆ ಸ್ವಪ್ನ ಬೃಂದಾವನಾಖ್ಯಾನ–

ಯೋಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ॥
ಸಯಾತಿ ಚಾಲಯಂ ಪುಣ್ಯಂ ಯದ್ಗತ್ವಾ ನನಿವರ್ತತೇ ॥ ೧

ಎಂಬ ಶ್ಲೋಕವು ಪ್ರಮಾಣವಾಗಿರುತ್ತದೆ.

ವಿಜಯದಾಸರಾದಿಯಾಗಿ ಎಲ್ಲ ಹರಿದಾಸರೂ ವಾದಿರಾಜರನ್ನು ವಾಯುಪದಾರ್ಹ ಋಜುಗಳೆಂದು ಅನೇಕ ದೇವರನಾಮ ಸುಳಾದಿಗಳಲ್ಲಿ ಹಾಡಿರುವರು.

ಮಧ್ವಮತಸ್ಥರಲ್ಲೇ ಒಂದು ಪಂಗಡದವರು ವಾದಿರಾಜರನ್ನು ಋಜುಗಳೆಂದು ನಂಬುವುದಿಲ್ಲ. ಇಂತಹ ವಾದಗ್ರಸ್ತ ವಿಷಯಗಳು ಪ್ರಪಂಚದ ಸರ್ವಮತಗಳಲ್ಲೂ ಸಾಧಾರಣವಾಗಿರುವುವು. ಇಂತಹ ಸಾಮಾನ್ಯ ವಿಷಯಗಳೇ ಒಂದೊಂದು ಮತದಲ್ಲೂ ವಿರೋಧಗಳಿಗೆ ಕಾರಣವಾಗಿರುವುವು.

ಪ್ರಕೃತ ಕಥೆಯನ್ನನುಸರಿಸುವುದಾದರೆ –

ವಾದಿರಾಜರು ಮಧ್ವಾಚಾರ್ಯರ ಬಳಿಯಿರುವ ತ್ರಿವಿಕ್ರಮ ಮೂರ್ತಿಯನ್ನು ಸಂಪಾದಿಸಲು ಬದರಿಕಾಶ್ರಮಕ್ಕೆ ಬಂದರೆಂದು ತಿಳಿಯಬೇಕು. ಬ್ರಹ್ಮರ್ಷಿಗಳನ್ನೂ, ವೇದವ್ಯಾಸರನ್ನೂ ಸೇವಿಸಿ, ಅವರಿಂದ ಸಮುಚಿತ ಪೊಂದುವುದಕ್ಕೆ ಬಂದರೆಂದು ಭಾವಿಸಬೇಕು. ಈ ಮಾತಿಗೆ ಪ್ರಮಾಣವಾಗಿ ವ್ಯಾಸರಿಂದ ಪ್ರೇರಿತರಾಗಿ ವಾದಿರಾಜರು ಮಹಾಭಾರತಕ್ಕೆ ಲಕ್ಷಾಲಂಕಾರವೆಂಬ ವ್ಯಾಖ್ಯಾನವನ್ನು ಬರೆದಿರುತ್ತಾರೆ.

ಭಾರತೀಯ ಆಚಾರ್ಯ ಚರಿತ್ರೆಗಳಲ್ಲಿ ಶಂಕರಾಚಾರ್ಯರಿಗೆ ವೇದವ್ಯಾಸರ ದರ್ಶನವಾದ ಆಖ್ಯಾಯಿಕೆಯಿದೆ. ವ್ಯಾಸರು ವೃದ್ಧಬ್ರಾಹ್ಮಣರೂಪದಿಂದ ಪರೀಕ್ಷಾರ್ಥವಾಗಿ ಶಂಕರರೊಡನೆ ವಾದಮಾಡಿದ ಕಥೆಯಿದೆ. ವ್ಯಾಸಕೃತ ಬ್ರಹ್ಮಸೂತ್ರದ –

"ತದಂತರ ಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ ಪ್ರಶ್ನನಿರೂಪಣಾಭ್ಯಾಂ ||

ಎಂಬುದರ ಮೇಲೆ ಎಂಟುದಿವಸದ ವಾದ ವಿವಾದ [illegible]ವನ್ನು ತಾಳಿದೆ |

ಅನಂತರ ಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ಹೋಗಿ ಅವರ ಸಮ್ಮತಿಯಿಂದಲೇ ಭಾಷ್ಯರಚನೆ ಮಾಡಿದಂತೆಯೂ, ನರನಾರಾಯಣಾದಿ ಮಹಾಮುನಿಗಳೊಡನೆ ವಾಸಮಾಡಿದಂತೆಯೂ, ವ್ಯಾಸರಿಂದ ಅನುಗೃಹೀತನಾದ ಅವರ ಸಾನ್ನಿಧ್ಯವಿಶೇಷದಿಂದ ಪವಿತ್ರವಾದ ಸೈಕತಮುಷ್ಟಿಕೆಗಳನ್ನು ತಂದಂತೆಯೂ ಉದಾಹೃತವಾಗಿದೆ.

ಮತ್ತೆ ಶತಮಾನಗಳ ನಂತರ ವಾದಿರಾಜರು ಬದರಿಕಾಶ್ರಮಕ್ಕೆ ಹೋಗಿ ತ್ರಿವಿಕ್ರಮಮೂರ್ತಿಯನ್ನು ಸಂಪಾದಿಸಿ ಸೋದೆಯಲ್ಲಿ ಪ್ರತಿಷ್ಠಿಸಿದ ಚರಿತ್ರೆಯು ಇಂದಿಗೂ ಕಣ್ಣಿಗೆ ಕಾಣುವಂತೆ ಮೂರ್ತಿಮತ್ತಾಗಿದೆ.

ವಾದಿರಾಜರು ಶ್ರೀಮನ್ಮಧ್ವಾಚಾರ್ಯರಲ್ಲಿ ತ್ರಿವಿಕ್ರಮೋಪಾಸನೆ ಮಾಡಬೇಕೆಂದಿರುವ ತಮ್ಮ ಅಭಿಲಾಷೆಯನ್ನು ವಿಜ್ಞಾಪಿಸಿದರು. ಆಚಾರ್ಯರು, ತಥಾಸ್ತು, ಪ್ರತಿಷ್ಠಾಕಾಲಕ್ಕೆ ಸರಿಯಾಗಿ ಕಳುಹಿಸಿಕೊಡುವೆವೆಂದು ವಚನವಿತ್ತರು.

ಹೀಗೆ ನರನಾರಾಯಣರ, ವೇದವ್ಯಾಸರ ಮತ್ತು ಶ್ರೀಮದಾಚಾರ್ಯರುಗಳ ಸನ್ನಿಧಿಯಲ್ಲಿದ್ದು, ಅವರ ಅನುಜ್ಞೆಯನ್ನು ಪಡೆದು, ವಾದಿರಾಜರು ಮರಳಿ ಪ್ರಯಾಗ ಕ್ಷೇತ್ರಕ್ಕೈತಂದರು. ಶಿಷ್ಯರುಗಳಿಗೆ ಸಮಾಧಾನವಾಯಿತು. ಅನಂತರ ರಾಜರು ಕಾಶೀ ಕ್ಷೇತ್ರದಲ್ಲಿ ಕೆಲವು ಕಾಲ ವಾಸಮಾಡಿದರು. ದ್ವಾರಾವತಿಯಲ್ಲಿ ಆರು ತಿಂಗಳು ನಿರಶನ ವ್ರತದಿಂದ ತಪಸ್ಸುಮಾಡಿದರು. ಕೃಷ್ಣತೀರ್ಥರೆಂಬ ಆ ದೇಶೀಯ ಯತಿಗಳಿಗೆ ಮಧ್ವಾಷ್ಟಕ ಪಠನೆ ಮಾತ್ರದಿಂದ, ಅವರಿಗಿದ್ದ ಚಾತುರ್ಥಿಕಜ್ವರಬಾಧೆಯನ್ನು ಪರಿಹರಿಸಿ, ಅವರ ಮುಖದಿಂದ ಆ ಪ್ರಾಂತ್ಯದಲ್ಲಿ ಭಾಗವತಧರ್ಮ ಪ್ರಚಾರ ಮಾಡಿಸಿದರು. ದ್ವಾರಾವತಿಯ ಒಂದು ಗುಹೆಯಲ್ಲಿ ದೊರೆತ ಅಪೂರ್ವ ಹಯಗ್ರೀವ ಸಾಲಿಗ್ರಾಮವೊಂದನ್ನು, ಸಾಂಸಾರಿಕ ಕ್ಲೇಶಗಳಿಂದ ಬಳಲಿದ ಶ್ರೀಮಂತನೊಬ್ಬನಿಗೆ ಅನುಗ್ರಹಿಸಿ, ಆತನ ಸಂಕಟಗಳನ್ನು ಪರಿಹರಿಸಿದರು. ಆ ಶ್ರೀಮಂತನು ಹಯಗ್ರೀವೋಪಾಸನೆಯಿಂದ ಮಹಾಸಿದ್ಧಿಯನ್ನು ಪಡೆದನು. ಅಯೋಧ್ಯೆಯಿಂದ ಗರುಡ ಮಾರುತೀ ವಿಗ್ರಹಗಳನ್ನು ಉಡುಪಿಯ ಶ್ರೀ ಕೃಷ್ಣದೇವಾಲಯದಲ್ಲಿ ಪ್ರತಿಷ್ಠಿಸಬೇಕೆಂದು ತೆಗೆದುಕೊಂಡು ಬಂದರು. ವಾದಿರಾಜರ ಗುಜರಾತುದೇಶ ಸಂಚಾರದಲ್ಲಿ ಬಲುಮಂದಿ ಶಿಷ್ಯರಾದರು.

ವಾದಿರಾಜರ ಬಳಿ ನಾರಾಯಣಾಚಾರ್ಯನೆಂಬ ಶಿಷ್ಯನೊಬ್ಬನಿದ್ದನು. ರಾಜರಿಂದಲೇ ಅವನಿಗೆ ಸಕಲ ಶಾಸ್ತ್ರಾಭ್ಯಾಸವಾಯಿತು. ಅವನಲ್ಲಿ ಗುರುಭಕ್ತಿಯೊಂದಿರಲಿಲ್ಲ. ಪಾಂಡಿತ್ಯಮದದಿಂದ ಕಂಡಕಂಡವರೊಡನೆ ವಾದಮಾಡಿ ಅವರ ತೇಜೋಭಂಗಮಾಡು

ತ್ತಿದ್ದನು. ಅನೇಕ ಸಮಯಗಳಲ್ಲಿ ಸ್ವಗುರು ನಿಂದೆ ಮಾಡುವುದಕ್ಕೂ ಅವನು ಹಿಂದೆಗೆಯುತ್ತಿರಲಿಲ್ಲ. ಅವನು ವಿದ್ವಜ್ಜನರಿಗೆ ಒಬ್ಬ ದೊಡ್ಡ ಕಂಟಕ ಸ್ವರೂಪನಾಗಿದ್ದನು. ಒಂದು ದಿನ ವ್ಯಾಸರಾಯರೊಡನೆ ಭಿಕ್ಷಾಸ್ವೀಕಾರ ಮಾಡಬೇಕಾಗಿ ಬಂದ ಅವಸರದಲ್ಲಿ, ವಾದಿರಾಜರು ತಮ್ಮ ಆಹ್ನಿಕವನ್ನು ಸ್ವಲ್ಪ ಸಂಕ್ಷೇಪ ಮಾಡಬೇಕಾಯಿತು. ನಾರಾಯಣಾಚಾರ್ಯನು ಇಷ್ಟನ್ನೇ ಬಲು ದೊಡ್ಡದು ಮಾಡಿ, ಮನಬಂದಂತೆ ರಾಜರನ್ನು ನಿಂದಿಸಿದನು. ಬಹುಕಾಲದಿಂದ ಕ್ಷಮಿಸುತ್ತಿದ್ದ ರಾಜರಿಗೆ ಆ ಸಮಯದಲ್ಲಿ ಸಹನೆಯಾಗಲಿಲ್ಲ – ಎಲವೋ ನಾರಾಯಣಾಚಾರ್ಯ ! ನೀನು ವಿದ್ಯಾಮದದಿಂದ ಬಲು ಗರ್ವಿತನಾಗಿರುವೆ ! ಯಾವಾಗಲೂ ಪಂಡಿತರ ತೇಜೋವಧೆ ಮಾಡುತ್ತಿರುವೆ. ನಮ್ಮನ್ನೂ ನಮ್ಮ ಗುರುಗಳನ್ನೂ ನಿಂದಿಸಲು ನೀನು ಹಿಂದೆಗೆಯಲಿಲ್ಲವಾದ್ದರಿಂದ – "**ನಿನಗೆ ಬ್ರಹ್ಮರಾಕ್ಷಸ ಜನ್ಮ ಬರಲಿ**" ಎಂದು ಕ್ರೂರವಾದ ಶಾಪವನ್ನಿತ್ತರು. ಗುರುಶಾಪದಿಂದವನು ಕೂಡಲೇ ಬ್ರಹ್ಮರಾಕ್ಷಸನಾದನು. ಹಂಪಿಯ ಮಾರ್ಗದ ಒಂದು ಅರಣ್ಯ ಪ್ರದೇಶವನ್ನು ಆಶ್ರಯಿಸಿದನು. ವಿದ್ಯಾನಗರಿಗೆ ಬರುವವರನ್ನು ಬಾಧಿಸತೊಡಗಿದನು. ಮಾರ್ಗಸ್ಥ ಜನರ ಕಣ್ಣಿಗೆ ಸೌಮ್ಯರೂಪದಿಂದ ಕಾಣಿಸುತ್ತಾ–

" ಆ ಕಾ ಮಾ ವೈ ಕೋನ ಸ್ನಾತಃ ? "

ಎಂದು ಪ್ರಶ್ನೆ ಮಾಡುತ್ತಾ, ಉತ್ತರ ಕೊಡಲಾರದವರನ್ನು ಪೀಡಿಸುತ್ತಾ ಬಂದನು. ಕಾಲಕ್ರಮದಲ್ಲಿ ಆ ದಾರಿಯಲ್ಲಿ ಜನರ ಸಂಚಾರವೇ ಗಣನೀಯವಾಗಿ ಕಡಿಮೆಯಾಯಿತು.

ಹೀಗಿರಲು, ವಾದಿರಾಜರು ಕೆಲವು ವರ್ಷಗಳ ನಂತರ ಅದೇ ಮಾರ್ಗದಲ್ಲಿ ಸಂಚರಿಸುತ್ತ ಬಂದರು. ಇದಿರಿದ್ದ ಗ್ರಾಮಸ್ಥರು, ಆ ಮಾರ್ಗದಲ್ಲಿ ಸ್ವಾಮಿಗಳು ಪ್ರಯಾಣ ಮಾಡಬಾರದೆಂದು ವಿಜ್ಞಾಪಿಸಿದರು. ಸ್ವಾಮಿಗಳು ಕಾರಣವೇನೆಂದು ವಿಚಾರಿಸಿ, ತಾವು ಅದೇ ಮಾರ್ಗವನ್ನನುಸರಿಸಿಯೇ ಪ್ರಯಾಣ ಮಾಡಲು ನಿರ್ಧರಿಸಿದರು. ಬ್ರಹ್ಮರಾಕ್ಷಸನು, ಎಂದಿನಂತೆ, ಸೌಮ್ಯರೂಪದಿಂದ ವಾದಿರಾಜರ ಮೇನೆಯ ಮುಂದೆ ಬಂದು ನಿಂತನು. "**ಆಕಾಮಾವೈಕೋನಸ್ನಾತಃ?**" ಎಂಬ ತನ್ನ ಪ್ರಶ್ನೆ ಮಾಡಿದನು. ಬ್ರಹ್ಮರಾಕ್ಷಸನ ದುರ್ಗತಿಯನ್ನು ರಾಜರು ಕನಿಕರದಿಂದ ನೋಡಿದರು.

" ರಂಢಾಪುತ್ರ ! ತ್ವಂ ನ ಸ್ನಾತಃ "

ಎಂದು ಉತ್ತರವಿತ್ತರು.

ಈ ಮಾತಿನ ತಾತ್ಪರ್ಯವೇನೆಂದರೆ :–

ಪ್ರಶ್ನೆ :- ಆ = ಆಷಾಢ
ಕಾ = ಕಾರ್ತಿಕ
ಮಾ = ಮಾಘ
ವೈ = ವೈಶಾಖ
} ಈ ತಿಂಗಳುಗಳಲ್ಲಿ, ಮಾಸಾತೀರ್ಥಗಳಲ್ಲಿ
ಕೋನ ಸ್ನಾತಃ = ಯಾರು ಸ್ನಾನಮಾಡುವುದಿಲ್ಲ?

ಕರ್ಮಠರು ಯಾವಾಗಲೂ ಮಹಾತೀರ್ಥಗಳಲ್ಲಿ ಸ್ನಾನಮಾಡಬೇಕಾದ್ದು ಶಾಸ್ತ್ರದ ನಿಯಮ. ಸರ್ವದಾ ಸಾಧಿಸಲು ಅವಕಾಶವಿಲ್ಲದವರು ಮೇಲ್ಕಂಡ ನಾಲ್ಕು ತಿಂಗಳುಗಳಲ್ಲಾದರೂ ತೀರ್ಥ ಸ್ನಾನಮಾಡಬೇಕು. ಈ ನಾಲ್ಕು ತಿಂಗಳ ಪೌರ್ಣಮಿಗಳೂ ವ್ಯಾಸಪೌರ್ಣಿಮೆಗಳೆನಿಸುವುವು. ಆಷಾಢದಿಂದ ಕಾರ್ತೀಕದವರೆಗಿನ ನಾಲ್ಕು ತಿಂಗಳಲ್ಲಿ ವೇದವ್ಯಾಸರು ವೇದವಿಭಾಗ ಮಾಡಿದರೆಂತಲೂ, ಕಾರ್ತೀಕದಿಂದ ಮಾಘದವರೆಗಿನ ಮಿತಿಯಲ್ಲಿ ಬ್ರಹ್ಮಸೂತ್ರಗಳ ರಚನೆಯಾಯಿತೆಂತಲೂ, ಮಾಘದಿಂದ ವೈಶಾಖದವರೆಗಿನ ಕಾಲವು ಪುರಾಣ ನಿರ್ಮಾಣ ಕಾಲವೆಂತಲೂ, ವೈಶಾಖದಿಂದ ಆಷಾಢದ ವರೆಗಿನ ಕಾಲವು ಮಹರ್ಷಿಗಳಿಗುಪದೇಶವಾದ ಕಾಲವೆಂತಲೂ, ಆ ತಿಥಿಗಳಲ್ಲಿ ತಜ್ಞರು ಮಹತ್ವವನ್ನು ಭಾವಿಸಿ ವ್ಯಾಸಪೂಜೆ ಮಾಡುವರು. ಆದ್ದರಿಂದ ಕನಿಷ್ಠಪಕ್ಷ ಮೇಲ್ಕಂಡ ನಾಲ್ಕು ವ್ಯಾಸ ಪೌರ್ಣಮಿಗಳಲ್ಲಾದರೂ ಮಾನವನು, ತೀರ್ಥೋದಕದಲ್ಲಿ ಸ್ನಾನಮಾಡಿ ವೇದವ್ಯಾಸರ ಸ್ಮರಣೆ ಮಾಡಬೇಕು. ಹಾಗೆ ಮಾಡದವನು ಕೃತಘ್ನನೂ ನರಕಭಾಜನನೂ ಆಗುವನು. ಇದೇ ಬ್ರಹ್ಮರಾಕ್ಷಸ ಪ್ರಶ್ನೆಯ ಮರ್ಮ.

ಉತ್ತರ :– **"ರಂಢಾ ಪುತ್ರ ! ತ್ವಂ ನ ಸ್ನಾತಃ ।**

ವಾದಿರಾಜರು ಬ್ರಹ್ಮರಾಕ್ಷಸನನ್ನು ಕುರಿತು, ವೇದಧರ್ಮಕ್ಕೊಳಪಟ್ಟವರೆಲ್ಲರೂ ತೀರ್ಥೋದಕದಲ್ಲಿ ಸ್ನಾನಮಾಡುವರು, ಜಲಸ್ಪರ್ಶನಕ್ಕೂ ಯೋಗ್ಯನಲ್ಲದ ಬ್ರಹ್ಮರಾಕ್ಷಸ ನಾದ – " ರಂಡೇಮಗನೇ, ನೀನೇ ಸ್ನಾನಮಾಡುವುದಿಲ್ಲ. " ಎಂದರು.

ಅನಂತರ ಬ್ರಹ್ಮರಾಕ್ಷಸನು ವಾದಿರಾಜರನ್ನೇ ವಾಕ್ಯಾರ್ಥಕ್ಕೆ ಬನ್ನಿರೆಂದು ಅಡ್ಡ ಗಟ್ಟಿದನು. ರಾಜರು ಮೇನೆಯನ್ನಿಳಿಸಿ–'ಏನು ಪ್ರತಿಜ್ಞೆಮಾಡಿ ವಾಕ್ಯಾರ್ಥಮಾಡುವೆ' ಯೆಂದರು. ರಕ್ಕಸನು – 'ವಾಕ್ಯಾರ್ಥದಲ್ಲಿ ನಾನು ಸೋತರೆ ನಿಮ್ಮ ಮೇನೆ ಪಲ್ಲಕಿ ಗಳನ್ನು ಹೊರುವೆನು, ನೀವು ಸೋತರೆ ನಿಮ್ಮನ್ನೇ ಭಕ್ಷಿಸುವೆ' ಎಂದನು. ಇಂಥಾ ಪರಿಸ್ಥಿತಿ ಯಲ್ಲಿ ಉಭಯರಿಗೂ ವಾಕ್ಯಾರ್ಥವಾಯಿತು. ಬ್ರಹ್ಮರಾಕ್ಷಸನು ಸೋತು ಶಿಷ್ಯನಾದನು. ಮೇನೆ ಪಲ್ಲಕ್ಕಿಗಳನ್ನು ಹೊರಲು ಒಪ್ಪಿಕೊಂಡನು. ಮಠದ ಜನರಿಗೂ, ಮೇನೆ ಹೊರುವ ಬೋಯಿಗಳಿಗೂ, ವಾದಿಸಿ ಸೋತವನು ಬೊಮ್ಮರಕ್ಕಸನೆಂದು ಗೊತ್ತಾಯಿತು. ಅಂಥವ ನೊಡನೆ ವ್ಯವಹರಿಸುವ ಪ್ರಸಂಗ ಬಂತೆಂದು ಭೀತರಾದರು. ರಾಜರು ಆ ಜನರಿಗೆ ಅಭಯ ನಿತ್ತು. ಮೇನೆ ಪಲ್ಲಕ್ಕಿಗಳ ಮುಂಭಾಗವನ್ನು ಆ ರಕ್ಕಸನು ಹೊರುವನೆಂದೂ ಹಿಂಭಾಗ ವನ್ನು ಬೋಯಿಗಳು ಹೊರಬೇಕೆಂದೂ ವಿಧಿಸಿದರು. ಅಂದಿನಿಂದ ಅದೇ ಪದ್ಧತಿಯಾ ಯಿತು.

ಜನ್ಮಾಂತರದಲ್ಲಿ ಬ್ರಹ್ಮರಾಕ್ಷಸನು ವಾದಿರಾಜರಿಗೆ ಸಾಲಗಾರನಾಗಿದ್ದನಂತೆ ! ಈ ಜನ್ಮದಲ್ಲಿ ಶಿಷ್ಯನಾದರೂ ತನ್ನ ದುರ್ವರ್ತನದಿಂದ ಬ್ರಹ್ಮರಾಕ್ಷಸನಾದನಂತೆ! ರಕ್ಕಸಾ ವಸ್ಥೆಯಲ್ಲಿದ್ದು ಜನರಿಂದ ಕಪ್ಪಕಾಣಿಕೆಗಳನ್ನು ಕೊಡಿಸಿ, ತಾನು ಋಣಮುಕ್ತನಾಗುವ ನಂತೆ ! ಈ ವಿಷಯವನ್ನು—

ಜನ್ಮಾಂತರದ ಋಣದಿ । ಕರ್ಮಭೂಮಿಯೊಳು । ಬೊಮ್ಮ ರಕ್ಕಸನಾಗಿ ಜನಿಸಿ ಆಮ್ಮಮ್ಮ ಈ ಮುನಿಗೆ ಹಣವನರಿಂದ ಕೊಡಿಸಿ । ತಮ್ಮ ಋಣ ತೀರಿತೆಂದೊಪ್ಪುವರು ॥ ಎಂಬುದಾಗಿ ವಾದಿರಾಜರೆ ವೈಕುಂಠ ವರ್ಣನೆಯೆಂಬ ತಮ್ಮ ಕನ್ನಡ ಗ್ರಂಥದಲ್ಲಿ ಹೇಳಿರುವರು.

ವಾದಿರಾಜರ ಮಹಿಮೆಯು ಅಗಾಧವಾದುದು. ಅವರ ಚರಿತ್ರೆಯನ್ನು ಬರೆಯುವಕ್ರಮದಲ್ಲಿ ಹೆಚ್ಚುಕಡಿಮೆಯಾಗಿ ವಾಚಕರಿಗೆ ಸಂದೇಹಗಳು ಬರಬಹುದು. ಅಷ್ಟು ಮಾತ್ರವಲ್ಲದೆ, ಈ ಚರಿತ್ರೆಯಲ್ಲಿ ಕಲ್ಪನೆಗಳಿಲ್ಲ. ಬರೆದವನು ಭಕ್ತನಾಗಿದ್ದರೆ, ಓದುವವರಿಗೆ ಭಕ್ತಿಹುಟ್ಟುವುದು. ಬರೆದವನು ವಿಷಯಗಳನ್ನು ನಿಸ್ಸಂಶಯವಾಗಿ ಅರ್ಥಮಾಡಿಕೊಂಡಿದ್ದರೆ, ಓದುವವರ ಸಂಶಯಗಳು ಪರಿಹಾರವಾಗುತ್ತವೆ.

ಸುಜ್ಞರಾದ ವಾಚಕರು ಬರೆದವನ ಲೋಪವನ್ನು ಮಾತ್ರ, ಎಂದಿಗೂ ಕಥಾನಾಯಕರಲ್ಲಿ ಆರೋಪಿಸಬಾರದು.

ಒಂದುದಿನ ಸ್ವಾಮಿಗಳು ಜಪಕ್ಕೆ ಕುಳಿತಿದ್ದಾಗ, ಇಲಿಯೊಂದನ್ನೋಡಿಸಿಕೊಂಡು ಒಂದು ಸರ್ಪವು ಬಂದಿತು. ಇಲಿಯು ಪ್ರಾಣಭಯದಿಂದ ಸ್ವಾಮಿಗಳು ಕುಳಿತಿದ್ದ ಮಣೆಯ ಕೆಳಗೆ ಸೇರಿ ಮತ್ತೆಲ್ಲಿ ಹೋಗುವುದಕ್ಕೂ ದಾರಿಸಿಗದೆ ಪರಿತಪಿಸುತ್ತಿತ್ತು. ಸರ್ಪವಾದರೋ ಮನುಷ್ಯರ ಭೀತಿಯಿಂದ ಇಲಿಯು ಸಿಗುವ ಸಂಧಿಯನ್ನು ಸಾಧಿಸುತ್ತಿತ್ತು. ತಾನೂ ಮಣೆಯಕೆಳಗೆ ನುಸಿಯುವ ಧೈರ್ಯ ಸರ್ಪಕ್ಕಾಗಲಿಲ್ಲ.

ಇದನ್ನರಿತ ರಾಜರು ನಿರ್ಭಯವಾಗಿ ಸರ್ಪವನ್ನು ಕೈಯಿಂದ ಹಿಡಿದು, ಅದರ ಫಣವನ್ನು ತಡವರಿಸಿ,– ನಿರಪರಾಧಿಯಾದ ಇಲಿಯ ತಂಟೆಗೆ ಹೋಗಬೇಡ. ಈ ಜನ್ಮದಲ್ಲೇ ನಿನಗೆ ಕ್ಷುದ್ಬಾಧೆಯಾಗಬೇಡವೆಂದು ವರವಿತ್ತರು. ಸರ್ಪವು ಸ್ವಾಮಿಗಳ ಮೇಲೆ ಹರಿದಾಡಿ ಫಣವನ್ನಾಡಿಸಿ, ಎಲ್ಲಿಗೋ ಹೊರಟುಹೋಯಿತು. ಇಲಿಗಾದರೋ, ನಿನ್ನ ಜೀವಿತಕಾಲದಲ್ಲಿ ಇನ್ನು ನಿನಗೆ ಸರ್ಪಜಾತಿಯ ಭಯವೇ ಉಂಟಾಗದಿರಲಿ ಎಂದು ಹರಸಿದರು.

ಈ ಸಂಗತಿಯನ್ನು **ಶ್ರೀ ಜಗನ್ನಾಥದಾಸರು**

ಎಲರುಣಿಭಯಕಂ । ಜಿಲಿ ನಿಮ್ಮಾಸನ । ಕೆಳಗಿರೆ ಕಂಡದ । ಸುಳುಹಿದ ಕರುಣೀ ವಾದಿರಾಜ ॥

ಎಂಬುದಾಗಿ ಸ್ತೋತ್ರಮಾಡಿರುವರು. ಕಡೆಯಭಾಗದಲ್ಲಿ ಈ ಪದವನ್ನು ಪೂರ್ತಿಯಾಗಿ ವಾಚಕರು ಓದಬಹುದು.

ಕುಮಾರ ಪರ್ವತದಲ್ಲಿ ಒಂದು ಕೈಯಲ್ಲಿ ವ್ಯಾಘ್ರದ ಕಿವಿಯನ್ನೂ ಮತ್ತೊಂದು ಕೈಯಲ್ಲಿ ಗೋಶೃಂಗವನ್ನೂ ಹಿಡಿದುಕೊಂಡು ಪರಸ್ಪರ ಆಟವಾಡಿಸಿದ ವಾದಿರಾಜರ ತಪಶ್ಶಕ್ತಿಯನ್ನೂ ಭೂತದಯೆಯನ್ನೂ ವರ್ಣಿಸುವುದೆಂತು ?

ಧರ್ಮಸ್ಥಳ

ಧರ್ಮಸ್ಥಳ (ದ.ಕ.ಜಿಲ್ಲೆ, ಪುತ್ತೂರು ತಾಲ್ಲೂಕು) ಎಂಬುವುದು ಆ ಕಾಲದಲ್ಲಿ ಒಂದು ಭೂತಕ್ಷೇತ್ರವಾಗಿತ್ತು. ಆ ಸುತ್ತುವಲಯದ ಜನರು ಭೂತೋಪಾಸಕರಾಗಿದ್ದರು. ಶಾಸ್ತ್ರತಃ ಭೂತೋಪಾಸನೆಯು ಗರ್ಹ್ಯವಾದರೂ, ಅಲ್ಲಿನ ಜನರಲ್ಲಿ, ಆರ್ಯಸಂಸ್ಕೃತಿಯು ವ್ಯಾಪಿಸಿರಲಿಲ್ಲ. ದಕ್ಷಿಣೋತ್ತರ ಕನ್ನಡಜಿಲ್ಲೆಗಳಲ್ಲೂ, ಮಲೆಯಾಳದಲ್ಲೂ, ಸಮುದ್ರ ತೀರಕ್ಕೆ ಸಂಬಂಧಿಸಿದ ಘಟ್ಟಪ್ರದೇಶಗಳಲ್ಲೂ, ಇಂದಿಗೂ ಭೂತೋಪಾಸನೆಯು ತಪ್ಪಿಲ್ಲ. ಶೃಂಗೇರಿಯಂಥಾ ವೈದಿಕ ಸಂಸ್ಕೃತಿಯ ಕೇಂದ್ರದಲ್ಲಿ ಸಹ ಶ್ರೀ ಮಠದ ಖರ್ಚಿನಿಂದ ಭೂತನಾಥನ (ಅಣ್ಣಪ್ಪ ಭೂತನ) ಪೂಜೆಯು ನಡೆಯುತ್ತಿರುವುದು. ವೈದಿಕ ಸಂಸ್ಕೃತಿಯ ಸರ್ವಸಹಾನುಭೂತಿಯೇ ಅನಾರ್ಯ ಸಂಸ್ಕೃತಿಗಳ ಕುರುಹುಗಳುಳಿದಿರಲು ಮುಖ್ಯ ಕಾರಣ !

ವಾದಿರಾಜರು ಒಮ್ಮೆ ಎತ್ತಲಿಂದಲೋ ಸಂಚರಿಸಿಕೊಂಡು ಈ ಧರ್ಮಸ್ಥಳದ ಮಾರ್ಗದಲ್ಲಿ ಬರುತ್ತಿದ್ದರು. ಅಲ್ಲಿನ ಮುಖಂಡರು ಆ ದಿನ ತಮ್ಮ ಸ್ಥಳದಲ್ಲಿ ಸ್ವಾಮಿಗಳ ಪೂಜೆಯಾಗಬೇಕೆಂದು ಪ್ರಾರ್ಥಿಸಿದರು. ಭೂತಕ್ಷೇತ್ರವು ತಮ್ಮ ಪೂಜೆಗೆ ಪವಿತ್ರಸ್ಥಾನವಲ್ಲವೆಂದು ಸ್ವಾಮಿಗಳು ಸಮ್ಮತಿಸಲಿಲ್ಲ. ಸ್ಥಳೀಯರು ಯಾವ ರೀತಿಯಿಂದಾದರೂ ತಮ್ಮ ಕ್ಷೇತ್ರವನ್ನು ಪಾವನಗೊಳಿಸಿ, ತೀರ್ಥಪ್ರಸಾದಗಳನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡರು.

ಆಗ ವಾದಿರಾಜರು, ಕದರಿಯ ದೇವಾಲಯದಲ್ಲಿದ್ದ ಮಂಜುನಾಥದೇವರನ್ನು ತರಿಸಿ, ಯಂತ್ರಸ್ಥಾಪನೆಮಾಡಿ ಪ್ರತಿಷ್ಠಿಸಿ, ಮಹಾಪೂಜಾದಿಗಳನ್ನು ನಡೆಸಿದರು. ಅಂದಿನಿಂದ ಆ ಭೂತಕ್ಷೇತ್ರವು ಮಂಜುನಾಥದೇವರ ಪರಮಪಾವನ ಕ್ಷೇತ್ರವೆನ್ನಿಸಿತು. ರಾಜರ ಆಜ್ಞೆಯಂತೆ ಆ ಕ್ಷೇತ್ರಕ್ಕೆ ಯಾರೇ ಬರಲಿ, ಜಾತಿಯನ್ನು ವಿಚಾರಿಸದೆ, ರೀತಿಯನ್ನು ಮೀರದೆ, ಅನ್ನದಾನಮಾಡುವ ವ್ಯವಸ್ಥೆಯಾಯಿತು. ಆ ಪದ್ಧತಿಯು ಈಗಲೂ ನಡೆದು ಬರುತ್ತಿದೆ.

ಧರ್ಮಸ್ಥಳದ ಮಹಂತರು ಪರಂಪರೆಯಿಂದ ಜೈನಮತಸ್ಥರಾಗಿದ್ದಾರೆ. ಇತರ ಕ್ಷೇತ್ರಗಳಂತೆ ಯಾವ ಶೋಷಣೆಗೂ ಆಸ್ಪದಕೊಡದೆ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ದೇವಾಲಯದ ಉತ್ಪತ್ತಿಯು ಕೇವಲ ಭಕ್ತಜನರಿಂದಲೇ ಎರಡು ಲಕ್ಷಕ್ಕೆ ಮೀರಿಬರುತ್ತದೆ. ಸರ್ಕಾರದವರಿಂದ ಪರಿಹಾರವಾಗದ ವ್ಯವಹಾರಗಳು ಶ್ರೀ ಕ್ಷೇತ್ರದ ಮಹಂತರಿಂದ ನಿರ್ಣಯವಾಗುತ್ತವೆ. ಮಹಂತರ ಆಜ್ಞೆಯನ್ನು ಜನರು ದೇವರ ಅಪ್ಪಣೆಯಂತೆ ಗೌರವಿಸುತ್ತಾರೆ. ವಾದಿರಾಜರ ಯಂತ್ರಸ್ಥಾಪನೆಯೂ ಅವರ ತಪಶ್ಶಕ್ತಿಯೂ, ಇಂದಿಗೂ ಅನುಭವಕ್ಕೆ ಬರುತ್ತಲಿವೆ. ಧರ್ಮಕ್ಷೇತ್ರದಂಥಾ ಶಿವಸ್ಥಳದಲ್ಲಿ ಜೈನಮತಸ್ಥ ಮಹಂತರಿದ್ದು, ಅವರಿಗೆ ಅಗ್ರಮರ್ಯಾದೆ ನಡೆಯುವುದು, ಪರಸ್ಪರ ಮತಗಳ ಸಹಾನುಭೂತಿಯನ್ನು ತೋರಿಸುತ್ತಿದೆ.

ದಂಡ ತೀರ್ಥ ನಿರ್ಮಾಣ

ಕುಮಾರಧಾರಾ ನೇತ್ರಾವತೀ ನದಿಗಳ ಸಂಗಮಸ್ಥಳದಲ್ಲಿ ಕಟೀತಿಲಾಲಯವೆಂಬ ಪುಣ್ಯಕ್ಷೇತ್ರವಿರುವುದು. ದಕ್ಷಿಣ ಕನ್ನಡ ಜಿಲ್ಲೆಯು ಪ್ರಾಂತವೇ ಸ್ವಾಭಾವಿಕವಾಗಿ ಸುಂದರವಾದುದು. ನದೀಸಂಗಮ ಸ್ಥಾನಗಳೆಂದರೆ ಪ್ರಕೃತಿ ದೇವಿಯ ತಾಂಡವ ಸ್ಥಾನಗಳು. ವೃಕ್ಷಗಳಲ್ಲಿ ಪಕ್ಷಿಗಳ ಕಲಕಲರವಗಳು, ನೀಲಾಕಾಶ, ಕಾಳಿಂದೀ ನದಿಯಂತೆ ನೀಲಿಯವೂ ನಿರ್ಮಲವೂ ಆದ ಪಾತ್ರೋದಕ ಪೂರಿತಗಳಾದ ಉಭಯ ನದಿಗಳ ಮರ್ಮರರವ. ನಿಸರ್ಗಪ್ರಭಾವದಿಂದ ನಿಮ್ನೋನ್ನತ ಪ್ರದೇಶಗಳಲ್ಲಿ ಸಾವಿರಾರು ಲಿಂಗಾಕೃತಿಗಳು, ಎಂತಹ ಕಠಿನ ಚಿತ್ತನ ಹೃದಯವನ್ನೂ ಮಾರ್ದವಗೊಳಿಸುವ ಸುಂದರ ಸ್ಥಾನ. ಸೃಷ್ಟಿಕರ್ತನ ಅಗಾಧ ಮಹಿಮೆಯನ್ನು ಪ್ರತ್ಯಕ್ಷ ಅನುಭವಮಾಡಿಕೊಡುವ ಸ್ಥಾನ.

ಇಂತಹ ದಿವ್ಯ ಕ್ಷೇತ್ರಕ್ಕೆ ಒಂದಾನೊಂದು ಪರ್ವಕಾಲವಿಶೇಷದಲ್ಲಿ ವಾದಿರಾಜರು ಬಿಜಯಂಗೈದರು. ಸ್ವಾಭಾವಿಕವಾಗಿ ಬರುವ ಜನರ ಜೊತೆಗೆ, ರಾಜರ ಸಮಾಗಮವಾಗುವುದೆಂಬ ಆಶಯದಿಂದ ಸಾವಿರಾರು ಜನರು ಬಂದು ಸೇರಿದರು. ಬಂದವರಿಗೆ ಸಂಗಮಸ್ನಾನ ತರ್ಪಣಾದಿಗಳನ್ನು ಸಾಧಿಸಿದಂತೆ–ಆ ಸುತ್ತು ವಳಯದ ಸಾವಿರಾರು ಲಿಂಗಗಳಿಗೆ ಏಕಾದಶವಾರ ರುದ್ರಾಭಿಷೇಕ ಮಾಡಬೇಕೆಂಬ ಅಭಿಲಾಷೆಯೂ ಉಂಟಾಯಿತು. ಎತ್ತರದಲ್ಲಿ ಮಾತ್ರವಲ್ಲ; ದೂರದಲ್ಲೂ ಇರುವ ಲಿಂಗಗಳಿಗೆ ಸಾಕಾಗುವಷ್ಟು ಅಗ್ರೋದಕವನ್ನು ಸಾಗಿಸುವುದು ಕಷ್ಟಸಾಧ್ಯವಾಗಿ ತೋರಿತು. ರುದ್ರಾಭಿಷೇಕಮಾಡಿ, ಸ್ವಾಮಿಗಳ ಪೂಜಾಕಾಲಕ್ಕೆ ಸರಿಯಾಗಿ ಬಂದಿರಬೇಕೆಂಬ ಬಯಕೆಯು ಭಕ್ತಜನರಿಗೆ ಬಹಳವಾಯಿತು. ಇದನ್ನರಿತು ದಯಾಳುಗಳಾದ ವಾದಿರಾಜರು, ದಂಡದಿಂದ ರೇಖೆಯನ್ನು ಬರೆದು, ದಿವ್ಯತೀರ್ಥವನ್ನೇ ನಿರ್ಮಾಣಮಾಡಿದರು. ಭಕ್ತಜನರಿಂದ ಅಭಿಷೇಕಪೂಜಾದಿಗಳು ಸಾಂಗವಾಗಿ ನೆರವೇರಿದುವು.

ಆ ದಿವ್ಯ ತೀರ್ಥವು ಇಂದಿಗೂ **ದಂಡತೀರ್ಥ** ಎಂಬ ಹೆಸರಿನಿಂದ ವಾದಿರಾಜರ ಕೀರ್ತಿಸಲಿಲವೇ ಪ್ರವಹಿಸುತ್ತಿರುವಂತೆ ಕಂಗೊಳಿಸುತ್ತಲಿದೆ. ಆ ಪ್ರದೇಶವು ಪುಂಡೀಬೈಲೆಂದು ಕರೆಸಿಕೊಂಡು ವಾದಿರಾಜರ ಮಠಕ್ಕೆ ಸೇರಿದೆ.

ವಾದಿರಾಜರ ಕಾಲದಲ್ಲಿ ಜೈನಮತಸ್ಥರು ಮಹೋನ್ನತದೆಶೆಯಲ್ಲಿದ್ದರು. **ಕಾರ್ಕಳ**ವೆಂಬುದು ಗೋಮಟೇಶ್ವರ ವಿಗ್ರಹವಿರುವ ಅವರ ಪವಿತ್ರಸ್ಥಾನ. ಮೂಡುಬಿದರೆಯಲ್ಲಿ ಸಹಸ್ರಶಿಲಾಸ್ತಂಭಗಳಿಂದ ರಚಿತವಾಗಿರುವ ದಿವ್ಯಮಂದಿರವು ಜೈನಯತಿಗಳ ವಶದಲ್ಲಿದೆ. ಅಲ್ಲಿನ ಸರಸ್ವತೀ ಭಂಡಾರದಲ್ಲಿ ಪ್ರಕಾಶಕ್ಕೆ ಬಾರದಿರುವ ಅಪೂರ್ವಗ್ರಂಥಗಳು ಹೇರಳವಾಗಿವೆ. ನವರತ್ನಮಯಗಳಾದ ಅನೇಕ ವಿಗ್ರಹಗಳು ಜೈನರ ಸರ್ವಸೌಭಾಗ್ಯಗಳಾಗಿವೆ. ಆ ಕಾಲದಲ್ಲಿದ್ದ ಜೈನಮಹಾರಾಜನು ವಾದಿರಾಜರ ಪಾಂಡಿತ್ಯಕ್ಕೆ ಬೆರಗಾಗಿದ್ದನು. ತಪಶ್ಶಕ್ತಿಯನ್ನು ನೋಡಿ ದಾಸಾನುದಾಸನಾಗಿದ್ದನು. ಆ ಮಹನೀಯರ ಪ್ರಭಾವದಿಂದ ತನ್ನ ರಾಜ್ಯಕ್ಕೇ ಕೀರ್ತಿಯುಂಟಾಯಿತೆಂದು ಅವರಿಗೆ ಬಹಳ ಸನ್ಮಾನ ಮಾಡಿದನು. ತನ್ನ

ನಿರಂತರ ಜ್ಞಾನಪ್ರಕಾಶಾರ್ಥವಾಗಿ ಪಟ್ಟಿಯು ವಿಠಲಮೂರ್ತಿಯೊಂದನ್ನು ಕಾಣಿಕೆಯಾಗಿ ಸಮರ್ಪಿಸಿದನು. ಆ ಮೂರ್ತಿಯು ಈಗಲೂ ಸ್ವಾದಿಮಠದಲ್ಲಿದೆ.

ಉಡುಪಿಗೆ ರಾಜರ ಪುನರಾಗಮನ

ವಾದಿರಾಜರು ಕರ್ಣಾಟಕ ಪ್ರಾಂತ್ಯಕ್ಕೆ ತಿರುಗಿ ಬಂದಾಗಿನಿಂದ, ಋಣಪೀಡಿತನಾದ ದರಿದ್ರಬ್ರಾಹ್ಮಣನೋರ್ವನು, ಪತ್ನೀಪುತ್ರರನ್ನೂ, ಸ್ವಗ್ರಾಮವನ್ನೂ ತೊರೆದು ಸ್ವಾಮಿಗಳನ್ನೇ ಹಿಂಬಾಲಿಸಿ ಬರುತ್ತಿದ್ದನು. ಆ ಕಾಲದಲ್ಲಿ ಋಣವಂತರನ್ನು ಹಣವಂತರು ಬಲು ಪೀಡಿಸುತ್ತಿದ್ದರು. ಸಕಾಲದಲ್ಲಿ ಸಾಲದ ಹಣವನ್ನು ಹಿಂದಿರುಗಿ ಕೊಡದಿದ್ದರೆ ಹಣವಂತನು ಋಣವಂತನನ್ನು – ಬಿಸಿಲಿನಲ್ಲಿ – ಅವನ ತಲೆಯಮೇಲೆ ಕಲ್ಲುಹೊರಿಸಿ ಕೂಡಿಸುತ್ತಿದ್ದನು. ಸಾಲಕೊಟ್ಟವನು ಹೀಗೆ ಮನಬಂದಂತೆ ಸಾಲಪಡೆದವನನ್ನು ದಂಡಿಸಿದರೂ ನೆರೆಯಜನರು ಅವನನ್ನು ಬಿಡಿಸುತ್ತಿರಲಿಲ್ಲ. ಹಿಂದೂಧರ್ಮವು ಒಂದುಕಡೆ ಜನರಿಗೆ ಸಾಧುತನವನ್ನು ಕಲಿಸುವುದರ ಜೊತೆಗೆ ಮತ್ತೊಂದು ಕಡೆ ಷಂಢತನವನ್ನೂ ಕಲಿಸುವುದೆಂದರೆ ತಪ್ಪಾಗುವುದಿಲ್ಲ. ಶ್ರೀ ಮಧ್ವಾಚಾರ್ಯರಂಥಾ ಮಹಾಪುರುಷರ ತಂದೆ ಮಧ್ಯಗೇಹ ಭಟ್ಟನು ಋಣಗ್ರಸ್ತನಾಗಿದ್ದು ಹಣವಂತನಿಂದ ಬಹಳವಾಗಿ ಬಾಧೆಗೊಳಗಾಗಿದ್ದನು. ಒಂದು ದಿನ ಆ ಹಣಗಾರನು ಮಧ್ಯಗೇಹ ಭಟ್ಟನನ್ನು ಬಿಸಿಲಿನಲ್ಲಿ–ತಲೆಯಮೇಲೆ ಕಲ್ಲು ಹೊರಿಸಿ ನಿಲ್ಲಿಸಿ, ಊಟಕ್ಕೂ ಬಿಡದೆ ನಿರ್ಬಂಧಿಸಿದ್ದನು. ನಾಲ್ಕೈದು ವಯಸ್ಸಿನ ಬಾಲಕರಾಗಿದ್ದ ಆಚಾರ್ಯರು, ತಂದೆಯನ್ನು ಊಟಕ್ಕೆ ಬಾರೆಂದು ಕರೆಯುವುದಕ್ಕೆ ಬಂದರು. ಭಟ್ಟನು – 'ಕಂದಾ, ನಾನು ಹೇಗೆ ಬರಲಿ? ಸಾಲಗಾರನು ನನ್ನನ್ನು ಬಿಡಲೊಲ್ಲ'ನೆಂದು ದೈನ್ಯದಿಂದ ನುಡಿದನು. ಆಚಾರ್ಯರು ತಮ್ಮ ಆ ಬಾಲ್ಯ ವಯಸ್ಸಿನಲ್ಲೇ ವಿಚಿತ್ರವಾದ ಅತಿಮಾನುಷ ಮಹಿಮೆಯನ್ನು ತೋರಿಸಿ, ತಂದೆಯನ್ನು ಋಣಮುಕ್ತನನ್ನಾಗಿ ಮಾಡಿದರು. ತಮ್ಮ ಒಂದು ಬೊಗಸೆಯತುಂಬ ಹುಣಸೆಯ ಬೀಜಗಳನ್ನು ತಂದು, ಆ ಸಾಲಕೊಟ್ಟವನ ಮಡಲಿಗೆ ಸುರಿದು, ನಿನ್ನ ಹಣ ತೀರಿತೆಂದು ನುಡಿದರು. ಆ ಬೀಜಗಳು ಆ ಹಣವಂತನ ಪಾಲಿಗೆ ಭಂಗಾರದ ಬೀಜಗಳಾಗಿ ಪರಿಣಮಿಸಿದುವು. ಅವನು ಸಂತೋಷದಿಂದ ಒಂದಕ್ಕೆ ಹತ್ತಾಗಿ ತನ್ನ ಹಣಬಂತೆಂದು ಭಟ್ಟನನ್ನು ಬಂಧನದಿಂದ ಬಿಡುಗಡೆಮಾಡಿದನು. ಭಾರತೀಯ ಹಿಂದುವು ಎಲ್ಲ ಸೂತಕಕ್ಕಿಂತ ಋಣಸೂತಕವು ಕೆಟ್ಟದೆಂದು ತಿಳಿಯುವನು.

ಪ್ರಸ್ತುತ, ಆ ದರಿದ್ರ ಬ್ರಾಹ್ಮಣನಾದರೋ – ಸಾಲಕೊಟ್ಟವನ ಬಾಧೆಯನ್ನು ತಾಳಲಾರದೆ, ಎಲ್ಲಾದರೂ ಸಂಪಾದಿಸಿ ತರುವೆನೆಂದು ವಾದಿರಾಜರನ್ನು ಹಿಂಬಾಲಿಸಿದ್ದನು. ರಾಜರು ಉಡುಪಿಗೆ ಬಂದಕೂಡಲೇ, ಆ ನಿರ್ಭಾಗ್ಯ ಬ್ರಾಹ್ಮಣನನ್ನು ಕರೆದು, ನಿನ್ನ ಸಮಾಚಾರವೇನೆಂದು ಕೇಳಿದರು. ಬ್ರಾಹ್ಮಣನು ತನ್ನ ದುಃಖವನ್ನು ವಿಸ್ತಾರವಾಗಿ ಹೇಳಿ ಕಣ್ಣೀರು ಸುರಿಸಿದನು. ದಯಾಸಾಗರರಾದ ವಾದಿರಾಜರು ಆ ದುಃಖಕಥೆಯನ್ನು ಕೇಳಿ ಕನಿಕರಗೊಂಡು, ಶ್ರೀ ಸೂಕ್ತ ಮಂತ್ರವನ್ನು ಪಠಿಸಿ ಸುವರ್ಣ ವೃಷ್ಟಿಯಾಗುವಂತೆ ಮಾಡಿ

ದರು. ವೃಷ್ಟಿಯು ಬ್ರಾಹ್ಮಣನ ಕುಳಿತ ಸ್ಥಳದ ಮೇಲಷ್ಟೆ ಸುತ್ತುವರಿಯುವಂತಾಯಿತು. ಬ್ರಾಹ್ಮಣನು ಗುರ್ವಾಜ್ಞೆಯಂತೆ ಆರಿಸಿಕೊಳ್ಳಲು ಅವನ ಪಾಲಿಗೆ ಜೀವಿಕೆಗೆ ತಕ್ಕಷ್ಟು ಮಾತ್ರ ಅವನ ಕರಗತವಾಯಿತು. ಮತ್ತವನು ಕನಕವೃಷ್ಟಿಯಾದರೂ ಹೆಚ್ಚು ದೊರೆಯಲಿಲ್ಲವೆಂದು ಮಿಡುಕಿದನು. ರಾಜರು ನಿನ್ನ ಪಾಲಿಗೆ ತಕ್ಕಷ್ಟೇ ದೊರೆಯಿತೆಂದರು. ಜನರು ಆಶ್ಚರ್ಯಭರಿತರಾದರು. ಒಟ್ಟಿನಲ್ಲಿ ಬಡಬ್ರಾಹ್ಮಣನು ಋಣಮುಕ್ತನಾದನು.

ಅನಂತರ ವಾದಿರಾಜರು, ಅಯೋಧ್ಯೆಯಿಂದ ತಂದಿದ್ದ ಗರುಡ, ಹನುಮಂತ ವಿಗ್ರಹಗಳನ್ನು, ಶ್ರೀ ಕೃಷ್ಣ ಮಠದ ನೈರುತ್ಯ ವಾಯುವ್ಯ ಭಾಗಗಳಲ್ಲಿ ಪ್ರತಿಷ್ಠಿಸಿದರು. ಪ್ರತಿಷ್ಠೆಯಾದ ದಿನದಿಂದಲೂ, ಹನುಮಂತನಿಗೆ ನಡೆಯುವ ಸೇವೆಗೂ ದಿನಂಪ್ರತಿ ಬರುವ ಹರಕೆಗಳಿಗೂ ಮಿತಿಯಿಲ್ಲದಂತಾಗಿದೆ. ಇದಲ್ಲದೆ ಶ್ರೀ ಕೃಷ್ಣ ಮಠದ ಉತ್ತರದ್ವಾರದಲ್ಲಿ ಆಚಾರ್ಯರ ಜನ್ಮಸ್ಥಳದಲ್ಲಿ ಮಧ್ವಪ್ರತೀಕಗಳನ್ನು ಪ್ರತಿಷ್ಠಿಸಿದರು. ವಾದಿರಾಜರ ಚರಿತ್ರೆಯಲ್ಲಿ ಮೊದಲಿನಿಂದ ಕಡೆಯವರೆಗೆ ಅತಿಮಾನುಷ ಮಹಿಮೆಗಳು ತುಂಬಿರುವುವು. ವಿದ್ಯೆ, ವಿದ್ಯೆಗೆ ತಕ್ಕ ಬುದ್ಧಿ, ತಪಸ್ಸಿನಿಂದ ಸಿದ್ಧಿ, ಮೂರೂ ಕೂಡಿಕೊಂಡರೆ ಪ್ರಸಿದ್ಧಿ, ಈ ಎಲ್ಲ ಗುಣಗಳೂ ವಾದಿರಾಜರಲ್ಲಿ ಪರಿಪೂರ್ಣವಾಗಿದ್ದುವು. ಇಂಥವರನ್ನು ಕಂಡರೆ ದೀನರೂ, ರೋಗಪೀಡಿತರೂ ಬಂದು ಆಶ್ರಯಿಸುವುದು ಬಹಳ. ಇಂಥವರು ಜನರ ದುಃಖವನ್ನು ನೋಡಿ ಮರುಗುವುದೂ ಬಹಳ. ಶರಣಾಗತರಾದವರ ಇಷ್ಟಾರ್ಥಗಳನ್ನು ಪೂರೈಸುವುದೂ ಬಹಳ. ಒಬ್ಬರಿಬ್ಬರಲ್ಲಿ ದಯೆಯನ್ನು ತೋರಿಸಿದರೆಂದರೆ, ಅದು ಲೋಕದಲ್ಲೆಲ್ಲಾ ಹರಡಿ, ಪರಿಪರಿಯ ಜನರು ತಾವಾಗಿ ಬಂದುಬಿಡುವರು. ಅಂಥವರ ಉದ್ಧಾರಾರ್ಥವಾಗಿ ಸತ್ಪುರುಷರು ತಮ್ಮ ತಪಸ್ಸನ್ನೆಲ್ಲಾ ಉಪಯೋಗಿಸಿಬಿಡುವರು. ಹೀಗಿರಲು ಕುಷ್ಠರೋಗಪೀಡಿತನೊಬ್ಬನು, ಸುಬ್ರಹ್ಮಣ್ಯಾದಿ ಕ್ಷೇತ್ರಗಳಲ್ಲೆಲ್ಲಾ ಸೇವೆಮಾಡಿ ಸಾಕಾಗಿ, ವಾದಿರಾಜರಬಳಿಗೆ ಬಂದನು. ರೋಗಪೀಡಿತನಿಗೆ ಸ್ವಾಮಿಗಳ ದರ್ಶನವಾಗುವ ಬಗೆ ಹೇಗೆ? ಅವನು ವಾದಿರಾಜರು ಮೃತ್ತಿಕಾಶೌಚ ಮಾಡಿಕೊಳ್ಳುವ ಸಮಯವನ್ನು ಸಾಧಿಸಿ, ಅಲ್ಲೇ ಅವರಿಗೆ ವಂದನೆಯನ್ನು ಮಾಡಿದನು. ರಾಜರು ಅವನ ದುರವಸ್ಥೆಯನ್ನು ನೋಡಿ ಸೈರಿಸದೆ. ಕೈಯಲ್ಲಿದ್ದ ಮೃತ್ತಿಕೆಯನ್ನು ಕೊಟ್ಟು, 'ಇದನ್ನು ಲೇಪಿಸಿಕೋ! ನಿನ್ನ ವ್ಯಾಧಿ ಪರಿಹಾರವಾಗುವುದೆಂ'ದರು. ರೋಗಿಯು ಅದರಂತೆ, ಆ ಮೃತ್ತಿಕೆಯನ್ನು ಲೇಪಿಸಿಕೊಂಡು ಸ್ನಾನಮಾಡಲು, ಅವನ ಕುಷ್ಠರೋಗವು ಪರಿಹಾರವಾಯಿತು.

ವಾದಿರಾಜರ ತಾಯಿ ಗೌರೀದೇವಿಯು, ಪ್ರಥಮತಃ ತನಗೆ ಪುತ್ರಸಂತಾನವಾದರೆ, ಲಕ್ಷ್ಮಾಭರಣ ಸೇವೆ ಮಾಡುವೆನೆಂದು ದೇವರಿಗೆ ಹರಕೆ ಮಾಡಿಕೊಂಡಿದ್ದಳೆಂಬ ಸಂಗತಿಯನ್ನು ಹಿಂದೆಯೇ ತಿಳಿಸಿದೆಯಷ್ಟೆ! ಆಕೆಯು ತನ್ನ ಹರಕೆಯನ್ನು ಸಲ್ಲಿಸಬೇಕೆಂದು ಜ್ಞಾಪಿಸಲು, ವಾದಿರಾಜರ ಬಳಿಗೆ ಬಂದಳು. ತಾಯಿಯನ್ನು ಕಂಡಕೂಡಲೇ ರಾಜರು ಆಕೆಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಏನೂ ತಿಳಿಯದ ನಿಷ್ಕಪಟ ಸ್ವಭಾವದ ಗೌರಮ್ಮನು,—'ಸ್ವಾಮಿಗಳಾದವರು ನಮಸ್ಕಾರ ಮಾಡಬಹುದೆ?' ಎಂದು ಪ್ರಶ್ನೆ ಮಾಡಿದಳು. ರಾಜರು—'ಅಮ್ಮಾ ನಾನು ಸನ್ಯಾಸಿಯಾದರೇನು? ಯತಿಯಾದರೇನು?

ನನ್ನನ್ನು ಹೆತ್ತ ತಾಯಿ ನೀನು. ಗಾಯತ್ರಿಗಿಂತ ದೊಡ್ಡ ಮಂತ್ರವಿಲ್ಲ-ತಾಯಿಗಿಂತ ದೊಡ್ಡ ದೇವರಿಲ್ಲ. ನೀನು ಎಂದೆಂದಾಗಲೂ ಪೂಜ್ಯಳು' ಎಂದರು. ಗೌರೀದೇವಿಯು -'ಹಾಗಾದರೆ ನಿನಗಾಗಿ ನಾನೊಂದು ಹರಕೆ ಮಾಡಿಕೊಂಡಿದ್ದೆನಲ್ಲಾ! ಬಡವಳು ನಾನು ಹೇಗೆ ಸಲ್ಲಿಸಲಿ?' ಎಂದು ಕೇಳಿದಳು. ರಾಜರು-'ತಾಯಿ, ನೀನು ಕೇಳುವುದಕ್ಕೆ ಮುಂಚಿತವಾಗಿಯೇ ನಾನು ವೇದವ್ಯಾಸರ ಅಕ್ಷರವಿರುವ ಮಹಾಭಾರತಕ್ಕೆ ಲಕ್ಷಾಲಂಕಾರವೆಂಬ ಟೀಕೆಯನ್ನು ಬರೆದು ಆ ಸೇವೆಯನ್ನು ಸಲ್ಲಿಸಿರುವೆನು' ಎಂದರು. ಮತ್ತೆ ಗೌರಮ್ಮನು-'ಅಪ್ಪಾ ನೀನಂತೂ ಗಂಡಸು. ಶಾಸ್ತ್ರಾಭ್ಯಾಸಮಾಡಿದೆ. ಸ್ವಾಮಿಯಾದೆ. ದೇವರನ್ನೇ ಒಲಿಸಿಕೊಂಡೆ; ನನ್ನಂಥಾ ಅಜ್ಞಾನಿ ಹೆಂಗಸಿಗೆ ಸದ್ಗತಿಯಾಗುವ ಬಗೆ ಹೇಗಪ್ಪಾ' ಎಂದಳು. ರಾಜರು ಬಾಷ್ಪಪೂರಿತನಯನರಾಗಿ-'ಅಮ್ಮಾ, ನಾನು ಯಾತ್ರೆ ಮಾಡಿದ ಸಕಲ ತೀರ್ಥಕ್ಷೇತ್ರಗಳಲ್ಲೂ ನಿನಗೆ ನನ್ನ ಪುಣ್ಯವನ್ನು ಧಾರೆಯೆರೆದಿರುವೆನು. ನಿತ್ಯ ಪೂಜೆಯಲ್ಲಿ ಪುಣ್ಯಭಾಗವನ್ನು ಕೊಡುತ್ತಿರುವೆನು. ನಿನಗಿಲ್ಲದೆ ಮುಕ್ತಿ ಇನ್ಯಾರಿಗಾಗ ಬೇಕಮ್ಮಾ! ನೀನು ಪತಿಸೇವೆಮಾಡಿಕೊಂಡು, ಪರಮಾತ್ಮನ ನಾಮಸ್ಮರಣೆಮಾಡುತ್ತಿರುವುದಕ್ಕಿಂತ ಹೆಚ್ಚಿನ ಪುಣ್ಯವಿನ್ನಾವುದಿರುವುದಮ್ಮಾ?' ಎಂದರು. ಆ ಸರಳ ಸ್ವಭಾವದ ಮುದುಕಿಯು ಅಷ್ಟಕ್ಕೇ ಸಂತುಷ್ಟಳಾಗಿ, ತನ್ನ ಪತಿಗೆ ನಡೆದ ಸಂಗತಿಯನ್ನು ತಿಳಿಸಿದಳು. ಭಟ್ಟನಿಗಾದ ಸಂತೋಷವನ್ನೇನೆಂದು ಬಣ್ಣಿಸೋಣ! ಭಟ್ಟ ದಂಪತಿಗಳ ಭಾಗ್ಯವನ್ನೂ ಸದ್ಗುಣಗಳನ್ನೂ ಯಾವ ಭಾಷೆಯಲ್ಲಿ ಬರೆಯೋಣ!

ಭಟ್ಟನು ಮಠದ ಸಕಲ ಸೌಭಾಗ್ಯವನ್ನೂ ಅನುಭವಿಸಬಹುದಾಗಿದ್ದರೂ, ಮಠದಿಂದ ಏನನ್ನೂ ಬಯಸುತ್ತಿರಲಿಲ್ಲ. ಸ್ವಾಮಿಗಳೇ ಕರೆಸಿದಲ್ಲದೆ ಮಠಕ್ಕೆ ಬರುತ್ತಿರಲಿಲ್ಲ. ಲೋಕಾಪವಾದಕ್ಕಂಜಿ ಬಲು ಸಾಮಾನ್ಯ ಮನುಷ್ಯನಂತೆ ಇರುತ್ತಿದ್ದನು.

ಹೀಗಿರಲು ವಾದಿರಾಜರ ತಂಗಿಯ ಗಂಡನು ವಿಷಬಾಧೆಯಿಂದ ಮೃತನಾದನು. ರಾಜರು ಮಾತಾಪಿತೃಗಳಿಗೂ ತಂಗಿಗೂ ವ್ಯಸನ ಬರಬಾರದೆಂದು, ಆ ಮೃತನನ್ನು ಬದುಕಿಸಿ, ತಂಗಿಯ ಮಾಂಗಲ್ಯಭಾಗ್ಯವನ್ನು ಶಾಶ್ವತಗೊಳಿಸಿದರು.

ವಾದಿರಾಜರು ಉಪದೇಶಿಸುತ್ತಿದ್ದಾಗ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಸಂಸ್ಕೃತ ವಚನಗಳನ್ನಾಗಿ ಬರೆದಂತೆ, ಶ್ರೀಮದಾಚಾರ್ಯರ ಮೂಲಗ್ರಂಥಗಳನ್ನೂ ಕನ್ನಡ ಪದಗಳನ್ನಾಗಿ ಬರೆದರಂತೆ! ಆದರೆ ಅವುಗಳು ಈಗ ದೊರೆಯುವುದಿಲ್ಲ. ವೈಕುಂಠ ವರ್ಣನೆ ಎಂಬ ಜಗತ್ಸೃಷ್ಟಿ [illegible] ಮಾತ್ರ ಉಳಿದಿದೆ. ಅದರಲ್ಲಿ ಶ್ರೀಮದ್ಭಾಗವತ, ಪಾಂಚರಾತ್ರಾಗಮ, ಮತ್ತು ಶ್ರುತಿಗಳ ಪ್ರಮಾಣಗಳನ್ನನುಸರಿಸಿ, ಅವುಗಳನ್ನು ಕನ್ನಡನುಡಿಗಳನ್ನಾಗಿ ಮಾಡಿರುತ್ತಾರೆ. ಅವುಗಳಲ್ಲಿ ಅನೇಕ ನುಡಿಗಳು ಬಲು ಪ್ರಾಸಬದ್ಧವಾಗಿವೆ. ಮಾದರಿಗಾಗಿ ಕೆಳಗೆ ಕೆಲವು ನುಡಿಗಳನ್ನು ಬರೆಯಲಾಗಿದೆ.

ಮೊದಲನೆಯ ಪದ್ಯ

ಭಾ॥ ಷ॥ ತತ್ವಸಾರದ ಸೊಬಗ ಧರೆಯೊಳು
ಚಿತ್ರರಿಸಬೇಕೆನುತ ಮುನಿಕುಲ
[illegible] ಶ್ರೀ [illegible]
[illegible]
ಮುಕ್ತಿ ಸೃಷ್ಟಿ ಸ್ಥಿತಿ ಲಯಂಗಳ
[illegible] ಕಥೆಯನು ಕೇಳ [illegible] ೧

ಪದ—ಜಂಪೆತಾಳ

ಇದು [illegible] | [illegible] ||
ಇದು ಸರ್ವಸಾಧನ | [illegible] | [illegible] ಕೇಳ್ವ [illegible] || ೧
[illegible] | [illegible] ಸಂಧಿ ||
ಶ್ರೀಲೋಲನ ಚರಿತೆ ತತ್ವರಹಸ್ಯವು | [illegible] ಕೇಳ್ವರಿಗಲಂ[illegible] || ೨
ಕನ್ನಡಿಯೋಲಿಪ್ಪಂಥ ಪೂರ್ಣಪ್ರಜ್ಞರಮತ | ಮುನ್ನತ ತತ್ವಸಾರವನು |
[illegible] ವಾದಿರಾಜ ಮುನಿಯು | ಚಿನ್ನ [illegible] ೩

ಶಿವಸ್ತೋತ್ರ

ಪದ—ತ್ರಿಪುಟ ತಾಳ

[illegible] | ದಕ್ಷನ ಶಿಕ್ಷಿಸಿ ಕೀರ್ತಿ ಪಡೆದವಗೆ |
[illegible] ಕೈಲಾಸದ | ಮುಕ್ಕಣ್ಣಗಾನು ಕೈಮುಗಿವೆನು ॥ ೧

[illegible] ನೀನು | ದುಷ್ಕರ್ಮರತ ನಿನ್ನ ಕೃಪೆಯಿಂದ ನೀಗುವೆನು ॥ [illegible] ನಗುವೆನು | ಭಕ್ತಿಪಥ ಹಿತವೆಂದು ಬಾಗುವೆನು | ೨ | ನಿತ್ಯ [illegible] ಮುಕ್ತಿಗೆ ಪೋಗುವೆನು ॥

ವಿಷ್ಣುಸ್ತೋತ್ರ

ಪದ—ರೂಪಕತಾಳ

[illegible] |
[illegible] | [illegible] ಮುಕುಂದನ್ನ | ೧
[illegible] ||
[illegible]
[illegible] ||
[illegible] | [illegible] ೨

ಇಷ್ಟನ್ನ ದುರಿತಘರಟ್ಟನ್ನ ಜಗಕತಿ । ಧಿಟ್ಟನ್ನ ಸತತ ಸಂತುಷ್ಟನ್ನ ॥
ಶಿಷ್ಟನ್ನ ಶುಭಗುಣ ಪುಷ್ಟನ್ನ । ತುತಿಪೆನುತ್ಕೃಷ್ಟನ್ನ ಶ್ರುತಿಗಿಂಬುಗೊಟ್ಟನ್ನ ೬
ರಂಗನ್ನ ಕರುಣಾಂತರಂಗನ್ನ ಖಳಕುಲ । ಭಂಗನ್ನ ನಿಜಜನ ಸಂಗನ್ನ ॥
ಅಂಗನಾ ಜನಕೆ ಅನಂಗನ್ನ ನಿತ್ಯ ಪ । ಭಾಂಗನ್ನ ನುತಿಪೆನುತ್ತುಂಗನ್ನ ॥ ೭

ವಾದಿರಾಜರು ಸನ್ಯಾಸ ಸ್ವೀಕಾರ ಮಾಡುವುದಕ್ಕೆ ಮುಂಚೆ ಭಟ್ಟದಂಪತಿಗಳಿಗೆ (ವಾದಿರಾಜರ ಮಾತಾಪಿತೃಗಳಿಗೆ) ಮತ್ತೊಬ್ಬ ಮಗನಾಗಿದ್ದನೆಂದು ತಿಳಿಸಿದೆಯಷ್ಟೆ! ಅವನು ಬಾಲ್ಯದಿಂದಲೂ ತಂದೆಯಬಳಿ ವಿದ್ಯಾಭ್ಯಾಸ ಮಾಡುತ್ತಿದ್ದು, ರಾಜರು ಉಡುಪಿಗೆ ಬರುತ್ತಲೇ, ಅವರಲ್ಲೇ ವ್ಯಾಸಂಗಕ್ಕಾರಂಭಿಸಿದನು. ಕಾಲಯೋಗದಿಂದ ಮೊದಲು ಮಾತೆಯೂ ಅನಂತರ ಪಿತನೂ ಮೃತರಾಗಲು, ಅವರ ಉತ್ತರಕ್ರಿಯೆಗಳನ್ನು ಮುಗಿಸಿ, ತನ್ನ ಗದ್ದೆ ಗುಡಿಸಲುಗಳನ್ನೆಲ್ಲ ಮಠಕ್ಕೊಪ್ಪಿಸಿ, ತನಗೂ ಸನ್ಯಾಸ ಕೊಡಬೇಕೆಂದು ವಾದಿರಾಜರನ್ನು ಪ್ರಾರ್ಥಿಸಿದನು. ರಾಜರು ಕೆಲವು ಕಾಲಾನಂತರ ಆತನಿಗೆ ಭಂಡಾರಗಿರಿಯ ಮಠಕ್ಕೆ ಸನ್ಯಾಸ ಕೊಟ್ಟು **ಸುರೋತ್ತಮತೀರ್ಥ**ರೆಂಬ ನಾಮಕರಣ ಮಾಡಿದರು.

ವಾದಿರಾಜರು ಪೂಜಿಸುತ್ತಿದ್ದ ಹಯಗ್ರೀವಮೂರ್ತಿಯ ಕುತ್ತಿಗೆಯಲ್ಲಿ ಸ್ವಲ್ಪ ಪ್ರದೇಶವು ಹಸುರು ಬಣ್ಣವಾಗಿ ಕಾಣುತ್ತದೆ. ಅದಕ್ಕೆ ಕಾರಣವನ್ನು ಕೆಳಕಂಡ ರೀತಿಯಲ್ಲಿ ಹೇಳುತ್ತಾರೆ.

ರಾಜರು ನಿತ್ಯವೂ ಹೂರಣದ ಹರಿವಾಣವನ್ನು ತಲೆಯಮೇಲಿಟ್ಟುಕೊಂಡು ಏಕಾಂತ ಸ್ಥಳದಲ್ಲಿ ಕೂಡುತ್ತಿದ್ದರೆಂದೂ, ಹಯಗ್ರೀವಸ್ವಾಮಿಯು ದಿವ್ಯಾಶ್ವರೂಪದಿಂದ ದರ್ಶನವಿತ್ತು ಹೂರಣವನ್ನು ಸ್ವೀಕರಿಸುತ್ತಿದ್ದನೆಂದೂ, ಹಿಂದೆಯೇ ತಿಳಿಸಿದೆಯಷ್ಟೆ! ವಾದಿರಾಜರ ಯಶಸ್ಸನ್ನೂ ವಿದ್ಯಾಪಾಂಡಿತ್ಯವನ್ನೂ ಸೈರಿಸದ ಮತದ್ವೇಷಿಗಳು, 'ಹಯಗ್ರೀವನು ಅಶ್ವರೂಪದಿಂದ ಪ್ರತ್ಯಕ್ಷನಾಗುವುದೆಂದರೇನು? ಹೂರಣವನ್ನು ಸ್ವೀಕರಿಸುವುದೆಂದರೇನು? ಇದೆಲ್ಲಾ ಕೇವಲ ಮೂಢಜನರನ್ನು ಮರುಳುಗೊಳಿಸಲು ಮಾಡಿದ ಮೋಸಗಾರಿಕೆ' ಎಂದು ನಿಂದಿಸುತ್ತಿದ್ದರು. ಅಷ್ಟರಿಂದಲೇ ತೃಪ್ತರಾಗದೆ ಹೂರಣದಲ್ಲಿ ವಿಷಮಿಶ್ರ ಮಾಡುವಂತೆ ಪಾಚಕರಿಗೆ ಪ್ರೇರಿಸಿದರು. ಪಾಪಿ ಪಾಚಕರು, ಹಣದಾಸೆಗೆ ಹೂರಣದಲ್ಲಿ ವಿಷವನ್ನು ಬೆರಸಿ ನೈವೇದ್ಯಕ್ಕಿಟ್ಟರು. ರಾಜರು ಎಂದಿನಂತೆ ಹರಿವಾಣವನ್ನು ತಲೆಯಮೇಲಿಟ್ಟುಕೊಂಡು ಏಕಾಂತದಲ್ಲಿ ಕುಳಿತರು. ಹಯವದನನು ಆ ಹೂರಣವನ್ನೆಲ್ಲ ಭಕ್ಷಿಸಿ, ರಾಜರಿಗೆ ಶೇಷವೂ ಪ್ರಸಾದವಿಲ್ಲದಂತೆ ಮಾಡಿದನು. ರಾಜರು 'ದೇವ, ನನಗೇಕೆ ಇಂದು ಶೇಷವನ್ನುಳಿಸಲಿಲ್ಲ' ಎಂದು ಸ್ವಾಮಿಯನ್ನು ಕೇಳಿದರು. ಶ್ವೇತವರ್ಣದಿಂದ ಶೋಭಿಸುತ್ತಿದ್ದ ಹಯವದನನು ಹಸುರುಬಣ್ಣವಾಗಿ ಕಾಣಿಸಿದನು. ಮತ್ತೆ ರಾಜರು—'ದೇವ ನಿನ್ನ ವರ್ಣವೇಕೆ ಬದಲಾಗಿದೆ? ನನಗೆ ಪ್ರಸಾದವನ್ನೇಕೆ ಉಳಿಸಲಿಲ್ಲ?' ಎಂಬುದಾಗಿ ಪ್ರಶ್ನೆ ಮಾಡಿದರು.

ಆಗ ಹಯವದನನು—'ವತ್ಸ, ಈ ಹೊತ್ತಿನ ಹೂರಣದಲ್ಲಿ ವಿಷಮಿಶ್ರವಾಗಿದೆ. ಅದರ ಶೇಷವನ್ನು ನಿನಗೆ ಕೊಟ್ಟರೆ ಅಪಾಯವಾದೀತೆಂದು ಎಲ್ಲವನ್ನೂ ನಾನೇ ಭುಂಜಿ

ದೆನು. ನನ್ನ ಹಸುರು ಬಣ್ಣ ಹೋಗಿ ಎಂದಿನಂತೆ ಶ್ರೀಕೃಷ್ಣವರ್ಣ ಬರಲು ನಾಲ್ವತ್ತೆಂಟು ದಿವಸ ಬೇಕು. ಅದುವರೆಗೆ ನೀನು ನನಗೆ ಗುಳ್ಳದ ಶಾಕವನ್ನು ನಿವೇದನ ಮಾಡು. ಪಾಪನಾಶಿನೀ-ಚಕ್ರಸ್ಮತೀ ನದಿಗಳ ದಕ್ಷಿಣ ಭಾಗದಲ್ಲಿ ಮಟ್ಟು ಎಂಬ ಗ್ರಾಮವಿದೆ. ಅಲ್ಲಿನ ಬ್ರಾಹ್ಮಣರು ಕರ್ಮಭ್ರಷ್ಟರಾಗಿದ್ದಾರೆ. ಅವರನ್ನು ಶುದ್ಧಗೊಳಿಸಿ, ಅವರಿಂದಲೇ ವೃಂತಾಕವನ್ನು ಬೆಳೆಸಿ ತರಿಸಿ ನನಗೆ ಸಮರ್ಪಿಸು. ವಿಷಪ್ರಯೋಗ ಮಾಡಿದವರೆಲ್ಲರೂ ನಾಳೆ ಮಧ್ಯಾಹ್ನದೊಳಗೆ ಸ್ವಸ್ಥರಾಗುವರು. ಬಿರುದಿಗಾಗಿ ಕಂಠದಲ್ಲಿ ಮಾತ್ರ ವಿಷಚಿಹ್ನೆಯನ್ನು ಧರಿಸುವೆನು' ಎಂಬುದಾಗಿ ಉತ್ತರವಿತ್ತನು.

ವಾದಿರಾಜರು ಹಯಮುಖನ ಆಜ್ಞೆಯಂತೆ ಮಟ್ಟುಗ್ರಾಮದ ಬ್ರಾಹ್ಮಣರನ್ನು ಶುದ್ಧಿಮಾಡಿ, ಅವರಿಗೆ ಗುಳ್ಳವನ್ನು ಬೆಳೆಯುವಂತೆ ಅಪ್ಪಣೆಕೊಟ್ಟು, ಭೂಮಿಯನ್ನೂ ಹಂಚಿದರು. ಅವರು ಬೆಳೆದ ಗುಳ್ಳವನ್ನೇ ಹಯಮುಖನಿಗೆ ಸಮರ್ಪಿಸಿದರು. ಉಪಾಸ್ಯ ಮೂರ್ತಿಯ ಕಂಠಪ್ರದೇಶದಲ್ಲಿ ಮಾತ್ರ ಹಸುರುಬಣ್ಣ ನಿಂತಿರುವುದು ಈಗಲೂ ಗೊತ್ತಾಗುತ್ತಿದೆ.

ಮಟ್ಟುಗ್ರಾಮವಲ್ಲದೆ ಮತ್ತೆಲ್ಲೂ ಈ ಜಾತಿಯ ಗುಳ್ಳವು ಬೆಳೆಯುವುದಿಲ್ಲ. ಮಧ್ವಮತಸ್ಥರು ಬದನೇಕಾಯಿಯನ್ನು ನಿಷಿದ್ಧವೆಂದು ತಿರಸ್ಕರಿಸಿದ್ದರೂ, ಮಟ್ಟುಗ್ರಾಮದಲ್ಲಿ ಬೆಳೆದ ಗುಳ್ಳವನ್ನು ಮಾತ್ರ ವಾದಿರಾಜರಿಂದ ಪರಿಗೃಹೀತವೆಂದು ಸ್ವೀಕರಿಸುತ್ತಾರೆ. ಮೇಲ್ಕಂಡ ಕಥೆಯು ಮಟ್ಟುಗ್ರಾಮಸ್ಥರಿಂದಲೇ ಸಂಗ್ರಹೀತವಾಗಿದೆ. ಕನ್ನಡ ಜಿಲ್ಲೆಯಲ್ಲಿ ಗುಳ್ಳದ ಕಥೆಯೇನೆಂದು ಕೇಳಿದರೆ, ಪ್ರಾಚೀನರು ಇದೇ ಕಥೆಯನ್ನೇ ಹೇಳುತ್ತಾರೆ. ಸಂಸ್ಕೃತ ಭಾಷೆಯಲ್ಲಿರುವ ವಾದಿರಾಜರ ಮಹಿಮೆಯಲ್ಲೂ ಮೇಲ್ಕಂಡ ಚರಿತ್ರೆಯು ಶ್ಲೋಕರೂಪವಾಗಿ ಲಿಖಿತವಾಗಿದೆ.

೪

ವಾದಿರಾಜರ ದ್ವಿತೀಯ ಸಂಚಾರ

ವಾದಿರಾಜರು ಉಡುಪಿಯಲ್ಲಿ ಬಹುಕಾಲ ವಾಸಮಾಡಿದಂತಾಯಿತು. ಇದೇ ಸಮಯದಲ್ಲಿ ಅನೇಕ ಗ್ರಂಥರಚನೆಯೂ ಆಯಿತು. ಮತ್ತೆ ದೇಶಸಂಚಾರ ನಿಮಿತ್ತ ಬಹು ದೊಡ್ಡ ಪರಿವಾರಸಹಿತರಾಗಿ ಹೊರಟರು. ಕೃಷ್ಣ ಮಠವನ್ನು ಬಿಟ್ಟು ಮಹಾ ದ್ವಾರಕ್ಕೆ ಬರುವಷ್ಟರಲ್ಲಿ ಸ್ವಾಮಿಗಳಿಗೆದುರಾಗಿ ಒಬ್ಬ ವಿಧವೆಯು ಬಂದಳು. ಶಕುನ ಶಾಸ್ತ್ರ ರೀತ್ಯಾ, ಒಂಟಿ ಬ್ರಾಹ್ಮಣನೂ, ವಿಧವೆಯೂ, ನಾಮಧಾರಿಯೂ, ತೈಲಕಾರನೂ ಎದುರಿಗೆ ಬರುವುದು ಬಹಳ ಅಮಂಗಳ ಸೂಚಕವೆಂದು ಬ್ರಾಹ್ಮರು ಹೇಳುವರು. ಸಮೀಪಸ್ಥರು—'ಮಹಾಸ್ವಾಮಿ, ಅಶುಭ ಶಕುನ ಆದಂತಾಯ್ತು. ಮತ್ತೊಂದು ಶುಭ ಮುಹೂರ್ತ ನೋಡಿಕೊಂಡು ಪ್ರಯಾಣ ಬೆಳೆಸಬೇಕು' ಎಂದು ವಿಜ್ಞಾಪಿಸಿದರು. ರಾಜರು ನಗುತ್ತಾ—'ನಾವು ಹೊರಟದ್ದೇ ಸುಮುಹೂರ್ತ. ಎಲ್ಲಿಂದಲಾದರೂ ಸರ್ವಕಾಲಗಳಲ್ಲಿ ಶುಭವೇ—

ಹತೇ ಕಂಸೇ ಗತೇ ಕೃಷ್ಣೇ ಗತೇ ಚಾನಕ ದುಂದುಭೌ ।
ಮಠಧರ್ಮ ವಿನಾಶಾಯ ಕುತ್ರತಿಷ್ಠತಿ ದೇವಕಿ ॥

ಎಂಬುದಾಗಿ ಹೇಳಿ ಹೊರಟೇಬಿಟ್ಟರು. ಈ ಶ್ಲೋಕದ ಅಭಿಪ್ರಾಯವೇನೆಂದರೆ—

ಕಂಸನು ಹತನಾಗಲು, ಕೃಷ್ಣನು ಪರಂಧಾಮಕ್ಕೆ ತೆರಳಲು, ವಸುದೇವನೂ ಹೊರಟುಹೋಗಲು, ಮಠಧರ್ಮವನ್ನು ನಾಶಗೊಳಿಸಲು ದೇವಕಿಯುಳಿದಿರುವಳು ?

ದೇವಕಿ ಶಬ್ದಕ್ಕೆ ವಿಧವೆಯೆಂದೂ ಒಂದರ್ಥ. ನಮ್ಮ ಮಠಧರ್ಮವನ್ನು ನಾಶಗೊಳಿಸಲು ಅವಳಿಲ್ಲಿ ಬಂದಳೆಂದು ಶಬ್ದ ಸ್ವಾರಸ್ಯವಿಟ್ಟು ಮೇಲ್ಕಂಡ ಶ್ಲೋಕವನ್ನು ಸ್ಫೂರ್ತಿಯಿಂದ ಹೇಳಿದರು.

ಹೀಗೆ ಸಂಚಾರ ಮಾಡುತ್ತಾ, ಭದ್ರಾನದೀ ತೀರದಲ್ಲಿ ಶ್ರೀಮದಾಚಾರ್ಯರು (ಮಧ್ವಾಚಾರ್ಯರು) *ನದಿಯ ಸುಳಿಗೆ ಅಸ್ತ್ರಹಾಗಿಟ್ಟು, ಜನರಿಗೂ ದನಕರುಗಳಿಗೂ ಸಂಚಾರ ಸೌಲಭ್ಯ ಮಾಡಿಕೊಟ್ಟ ಶಿಲೆಯಮೇಲೆ ತಮ್ಮ ಪೂಜೆಯನ್ನು ನಡೆಸಿ, ಕಳಸೇಶ್ವರನ ದರ್ಶನಮಾಡಿ, ಗೋಣೀಬೀಡು ಮಾರ್ಗವಾಗಿ ಬೇಲೂರಿಗೆ ಬಂದರು.

ಬೇಲೂರು

ಬೇಲೂರು ವಿಷ್ಣುವರ್ಧನರಾಯನ ರಾಜಧಾನಿಯಾಗಿದ್ದು ಮಹಾಕ್ಷೇತ್ರವೆನ್ನಿಸಿ, ಅನೇಕ ಸತ್ಪುರುಷರಿಗೂ ಮಹಾಕವೀಶ್ವರರಿಗೂ ಜನ್ಮಕೊಟ್ಟ ಪರಮ ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಅಂದಿನಿಂದ ಇಂದಿನವರೆಗೂ ದೇಶಾಂತರಗಳಿಂದ ಮಾತ್ರವಲ್ಲ,–ದ್ವೀಪಾಂತರ–ಖಂಡಾಂತರಗಳಿಂದಲೂ ಯಾತ್ರಿಕರನ್ನು ಆಕರ್ಷಿಸುವ ಪಾವನ ಸ್ಥಳವಾಗಿದೆ. ಸ್ಥಳ ಪುರಾಣವು, ಬೇಲೂರು ಭಸ್ಮಾಸುರನ ಸಂಹಾರಸ್ಥಾನವೆಂದು ತಿಳಿಸುತ್ತದೆ. ಭಾವಿಕ ಜನರು, ಬೇಲೂರಿನ ವಿಷ್ಣು ಸಮುದ್ರವನ್ನು ಗಂಗೆಗೆ ಸಮನಾಗಿ ಭಾವಿಸುತ್ತಾರೆ. ಪಾಶ್ಚಾತ್ಯ ಯಾತ್ರಿಕರು ಬೇಲೂರು ದೇವಾಲಯದ ನೋಟವೆಂದರೆ, ಒಂದು ಜನ್ಮದ ವಿದ್ಯಾಭ್ಯಾಸ (Life Study) ಎನ್ನುತ್ತಾರೆ. ಕ್ಷೇತ್ರಾಧಿಪತಿ ಚೆನ್ನಕೇಶವನು ಅರ್ಧಸ್ತ್ರೀ–ಅರ್ಧಪುರುಷ ರೂಪದ ಸುಂದರಮೂರ್ತಿಯಾಗಿದ್ದಾನೆ. ಅಲ್ಲಿನ ಒಂದೊಂದು ಮಹೋತ್ಸವಗಳಿಗೆ, ಹೊಯ್ಸಳರಾಜರು, ಒಂದೊಂದು ತಾಲ್ಲೂಕಿನ ಉತ್ಪತ್ತಿಯನ್ನೇ ವಿನಿಯೋಗಿಸುತ್ತಿದ್ದರೆಂದು ಇತಿಹಾಸವು ತಿಳಿಸುತ್ತದೆ. ಮಲ್ಲಿಕ್ ಕಾಫರನು, ದಂಡೆತ್ತಿ ಬಂದಾಗ

---

*ಈ ಸ್ಥಳವು ಮೂಡಗೆರೆ ತಾಲ್ಲೂಕು ಕಳಸದ ಬಳಿಯಲ್ಲಿದೆ. ಆಗಿದ್ದ ಜೈನರಾಜನು ಅದೇ ನದಿಯ ಸುಳಿಯನ್ನು ತಪ್ಪಿಸಿ ಮಾರ್ಗ ಮಾಡಬೇಕೆಂದು ಬಹು ಕಷ್ಟಪಡುತ್ತಿದ್ದಾಗ, ಮಧ್ವಾಚಾರ್ಯರು ಆ ಸ್ಥಳಕ್ಕೆ ಬಂದರಂತೆ! ಅನೇಕರಿಂದ ಎತ್ತಲು ಸಾಧ್ಯವಾಗದ ಶಿಲೆಯನ್ನು ಆಚಾರ್ಯರು ಒಬ್ಬರ ಸಹಾಯವೂ ಇಲ್ಲದೆ ಎತ್ತಿ ಸುಳಿಯಲ್ಲಿಟ್ಟರಂತೆ! ಅನಂತರ ಸುಳಿಯು ತಪ್ಪಿ ಜನರಿಗಾಗುತ್ತಿದ್ದ ಅಪಾಯವು ಪರಿಹಾರವಾಯಿತಂತೆ! ಈ ಸಂಗತಿಯನ್ನು ಆ ಸ್ಥಳದಲ್ಲಿ ಅದೇ ಜೈನರಾಜನು ಶಾಸನದಲ್ಲಿ ಬರೆಸಿಟ್ಟಿರುತ್ತಾನೆ. ಮಧ್ವಾಚಾರ್ಯರ ವಿಗ್ರಹವೂ ಆ ಸ್ಥಳದಲ್ಲಿ ಆತನಿಂದ ನಿರ್ಮಿತವಾಗಿ ಇಡಲ್ಪಟ್ಟಿದೆ.

ಬೇಲೂರು ದೇವಾಲಯವೊಂದರಿಂದಲೇ ತೊಂಭತ್ತಾರು ಸಾವಿರ ಹೊನ್ನ ಭಂಗಾರವನ್ನು ಸುಲಿಗೆ ಮಾಡಿದನೆಂದು ಅಬ್ದುಲ್ ರಜಾಕನ ಚರಿತ್ರಾದಿಂದ ತಿಳಿದುಬರುತ್ತದೆ.

ಇಂಥಾ ಪುಣ್ಯಸ್ಥಳವನ್ನು ವಾದಿರಾಜರು ಪ್ರವೇಶಿಸುವ ಕಾಲಕ್ಕೆ ಸರಿಯಾಗಿ ಕೇಶವಸ್ವಾಮಿಯ ಗರುಡೋತ್ಸವವು ಎದುರಾಗಿ ಬರುತ್ತಿತ್ತು. ಸ್ಥಳಾಧಿಕಾರಿಗಳು ಪೂರ್ಣಕುಂಭ ಮೊದಲಾದ ಮರ್ಯಾದೆಗಳಿಂದ ಸ್ವಾಮಿಗಳನ್ನು ಗ್ರಾಮಪ್ರವೇಶ ಮಾಡಿಸುತ್ತಿದ್ದರು. ರಾಜರು ಉತ್ಸವವನ್ನು ಕಂಡಕೂಡಲೇ ಕರತಾಳ ಹಾಕುತ್ತಾ—

ಆನಂದಭೈರವಿ—ಆದಿತಾಳ

ಬೇಗ ಬಾರೋ ಬೇಗ ಬಾರೋ । ವೇಲಾಪುರದ ಚೆನ್ನ ।
ಬೇಗ ಬಾರೋ ಬೇಗ ಬಾರೋ ನೀಲ ಮೇಘವರ್ಣ ಪ.

ಇಂದಿರೇರಮಣ ಗೋವಿಂದ ಬೇಗ ಬಾರೋ ।
ನಂದನಕಂದ ಮುಕುಂದ ಬೇಗ ಬಾರೋ ॥ ೧

ಧೀರಾ ಉದಾರ ಗಂಭೀರ ಬೇಗ ಬಾರೋ ।
ಹಾರಾಲಂಕಾರ ರಘುವೀರ ಬೇಗ ಬಾರೋ ॥ ೨

ಶುದ್ಧಾ ಅನಿರುದ್ಧಾ ಸುರದ್ಧಾ ಬೇಗ ಬಾರೋ ।
ಹದ್ದಾನೇರಿದ ಪ್ರಸಿದ್ಧಾ ಬೇಗ ಬಾರೋ ॥ ೩

ರಂಗ ಉತ್ತುಂಗಾ ನರಸಿಂಗಾ ಬೇಗ ಬಾರೋ ।
ಕಂಗಳಿಗೆಸೆವ ಮೋಹನಾಂಗ ಬೇಗ ಬಾರೋ ॥ ೪

ಅಯ್ಯಾ ವಿಜಯ್ಯಾ ಸಹಯ್ಯಾ ಬೇಗ ಬಾರೋ ।
ಜೀಯಾ ಫಣಿಶಯ್ಯಾ ಹಯವದನ ಬೇಗ ಬಾರೋ ॥ ೫

ಎಂಬುದಾಗಿ ಸ್ತೋತ್ರ ಮಾಡಿದರು.

ಈ ಪದವನ್ನು ಹಾಡಿದಾಗ ಉತ್ಸವದ ಜೊತೆಯಲ್ಲಿದ್ದ **ವೈಕುಂಠದಾಸರು** ಓಡಿಬಂದು ವಾದಿರಾಜರಿಗೆರಗಿ ನರ್ತನ ಮಾಡಿದರಂತೆ!

ಆ ಕಾಲದಲ್ಲಿ ವೈಕುಂಠದಾಸರು ಬೇಲೂರಿನ ಪರಮ ಪ್ರಸಿದ್ಧ ಹರಿದಾಸರಾಗಿದ್ದರು. ಕೇಶವಸ್ವಾಮಿಯು ಆ ದಾಸರೊಡನೆ ವಿಚಿತ್ರಲೀಲಾ ವಿನೋದದಿಂದಿರುತ್ತಿದ್ದನು. ವಾದಿರಾಜರಿಗೂ ವೈಕುಂಠದಾಸರಿಗೂ ಪರಸ್ಪರ ಸಂದರ್ಶನವಾಗಿ ಹಾಲಿನಲ್ಲಿ ಸಕ್ಕರೆ ಬೆರೆತಂತಾಯಿತು. ಪರಸ್ಪರರು ಕಲೆತಾಗ ನಡೆದ ಮಹಿಮಾ ವಿಶೇಷಗಳು ವೈಕುಂಠದಾಸರ ದಿವ್ಯ ಚರಿತ್ರೆಯಲ್ಲಿ ವಿಸ್ತಾರವಾಗುವುದರಿಂದ ಆ ಸಂಗತಿಗಳನ್ನಿಲ್ಲಿ ಬರೆಯುವುದಿಲ್ಲ. ಅಂತು, ವಾದಿರಾಜರು ಬೇಲೂರಿನಲ್ಲಿ ಕೆಲವು ತಿಂಗಳಕಾಲ ವಾಸಮಾಡಿದಂತೆ ಕಾಣುತ್ತದೆ. ಕೇಶವಸ್ವಾಮಿಯ ಮೇಲೆ ರಾಜರು ಮಾಡಿದ ದೇವರನಾಮಗಳು ಸೂಕ್ತಿರತ್ನ ಜೇಷ್ಠಾಗಿವೆ. ಒಂದೊಂದು ನಾಮದಲ್ಲೂ ಕೇಶವನು ತೋರಿಸಿದ ವಿಚಿತ್ರ ಮಹಿಮೆಗಳ ವರ್ಣನೆಯಿದೆ.

ಇವುಗಳೆಲ್ಲಾ ಅತಿಮಾನುಷಗಳಾದ್ದರಿಂದಲೂ, ಗ್ರಂಥವಿಸ್ತಾರ ಭಯದಿಂದಲೂ ಬರೆಯಲು ಸಾಧ್ಯವಿಲ್ಲ. ಅದರೆ ಪಂಢರಪುರದಲ್ಲಾದಂತೆ ಬೇಲೂರಿನಲ್ಲೂ ಹಯಮುಖನು ಯಾವನೋ ಒಬ್ಬನ ವಿಸ್ತಾರವಾದ ಕಡಲೆಯ ಹೊಲವನ್ನು ಮೇದು ಸಾಲು ಸಾಲಾಗಿ ದಿವ್ಯಾಶ್ವಗಳ ರೂಪದಿಂದ ಕಂಗೊಳಿಸಿ, ಕೇಶವ ದೇವಾಲಯದಲ್ಲಿ ಅದೃಶ್ಯನಾದ ಮಹಿಮೆಯನ್ನು ಈಗಲೂ ಆ ಹೊಲವು ಸ್ವಾದೀಮಠಕ್ಕೆ ಸೇರಿರುವ ಆಧಾರದಿಂದ ತಿಳಿಯಬೇಕಾಗಿದೆ.

ಸತ್ಪುರುಷರೊಡನೆ ಸತ್ಪುರುಷರು ಕಲೆತರೆ ಶ್ರೀಗಂಧದಲ್ಲಿ ಪಚ್ಚಕರ್ಪೂರ ಸೇರಿದಂತಾಗುತ್ತದೆ. ಪರಸ್ಪರ ಭಗವದನುಭವಗಳನ್ನು ಕುರಿತು ಅವರು ಮಾತಾಡುತ್ತಾರೆ. ಭಾವಸಮಾಧಿಯಲ್ಲಿ ಓಲಾಡುತ್ತಾರೆ. ದಿವಸಗಳು ನಿಮಿಷಗಳಂತೆ ಕಳೆದುಹೋಗುತ್ತವೆ. ಭಗವದುಪಾಸನೆಯಲ್ಲಿ ಕುಳಿತರೆಂದರೆ ಅವರ ಮಂತ್ರಸಿದ್ಧಿಯ ಪ್ರಭಾವ, ಮನಸ್ಸಿನ ಪರಿಪಕ್ವದಶೆ, ಇವುಗಳಿಂದ ರೂಪಚಿಂತನೆ ಮಾಡಿದಾಗ ಸಮುದ್ರದ ಮೇಲೆ ಮಳೆಗರೆದರೆ ತರಂಗಗಳು ಉಬ್ಬಿ ಉಬ್ಬಿ ಬರುವಂತೆ, ಒಂದೊಂದು ರೂಪವೂ ಅನಂತರೂಪಗಳಾಗಿ ಕಂಗೊಳಿಸುತ್ತವೆ. ಅಂತಹ ಭಕ್ತರ ಸಹವಾಸ, ಪ್ರಭಾವದಿಂದ ಪಾಮರರಿಗೂ ಆ ರೂಪ ದರ್ಶನವಾಗಿಬಿಡುತ್ತದೆ. ಅವರೂ ಮಹಾಜ್ಞಾನಿಗಳಾಗಿಬಿಡುತ್ತಾರೆ. ಅದ್ದರಿಂದಲೇ ನಮ್ಮ ಶಾಸ್ತ್ರದಲ್ಲಿ ಎಲ್ಲಿ ನೋಡಿದರೂ ಸತ್ಸಂಗವಾಗಬೇಕೆಂಬ ಮಾತನ್ನು ಬಲು ಪ್ರಾಶಸ್ತ್ಯ ಕೊಟ್ಟು ಬರೆದಿರುತ್ತಾರೆ.

ವಾದಿರಾಜರು ಹಯಗ್ರೀವೋಪಾಸಕರೆಂದು ಹಿಂದೆಯೇ ತಿಳಿಸಿದೆಯಷ್ಟೆ! ಅವರು ಮಂತ್ರ ಪುರಶ್ಚರಣೆಗೆ ಕುಳಿತರೆಂದರೆ ಪಂಢರಪುರದಲ್ಲಿ ಆದುದಕ್ಕಿಂತ ಹೆಚ್ಚಾಗಿ ದಿವ್ಯಾಶ್ವರೂಪದಿಂದ ಹಯಮುಖನ ಸಂಚಾರವಾಗುವುದಕ್ಕೆ ಮೊದಲಾಗುತ್ತಿತ್ತು. ಮಂತ್ರ ಪುರಶ್ಚರಣೆಯನ್ನು ನಿಲ್ಲಿಸುವುದರ ವಿನಾ ಅನ್ಯನಿರೋಧಮಾರ್ಗವಿರುತ್ತಿರಲಿಲ್ಲ. ಮಂತ್ರಸಿದ್ಧಿಯುಳ್ಳವರು ಅಗ್ನಿಸೂಕ್ತಪಠನೆಮಾಡಿದರೆ ಅಗ್ನಿಗೋಳದಂತೆ ಕಾಣಿಸುವರು. ಪರ್ಜನ್ಯಮಂತ್ರ ಜಪ ಮಾಡಿದರೆ ವೃಷ್ಟಿಯಾಗಿ ಬಿಡುವುದು. ಇವೆಲ್ಲಾ ನಮ್ಮ ವೇದಮಂತ್ರಗಳಲ್ಲಿರುವ ವಿಚಿತ್ರ ಶಕ್ತಿ, ಅದು ಈ ಕಾಲದಲ್ಲಿ ಅರ್ಥವಾಗುವುದಿಲ್ಲ. ಅರ್ಥಮಾಡಿಕೊಳ್ಳದವರು, ಅಪಹಾಸ್ಯ ಮಾಡುವುದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ದಿನ ಸ್ವಾಮಿಗಳು ಜಪಕ್ಕೆ ಕುಳಿತಿದ್ದಾಗ ರೈತನೊಬ್ಬನು ಬಂದು–'ಸ್ವಾಮಿ ತಾವು ಬಂದಾಗಿನಿಂದ ನಮ್ಮ ಹೊಲಕ್ಕೆ ಉಳಿಗಾಲವಿಲ್ಲ. ನಿಮ್ಮ ಕುದುರೆಗಳು ಬಂದು ಮೇಯುವುದರಿಂದ ಹೊಲವೆಲ್ಲಾ ಹಾಳಾಗುತ್ತಲಿದೆ. ಹಿಡಿಯಬೇಕೆಂದರೆ ಸಿಗುವುದಿಲ್ಲ. ಗುಡಿಯತನಕ ಬರುತ್ತವೆ. ಆ ಮೇಲೆ ಕಾಣುವುದಿಲ್ಲ. ಯಾರನ್ನು ಕೇಳಿದರೂ–ಮಠದಲ್ಲಿ ಕುದುರೆಯೇ ಇಲ್ಲ, ಅವನ್ನೇಕೆ ದೂರುತ್ತೀ–ಎಂದು ನನ್ನನ್ನೇ ಹೆದರಿಸುತ್ತಾರೆ. ಇದೇನು ಸ್ವಾಮಿ ನಿಮ್ಮ ಮಾಯಾ?' ಎಂದು ಕೂಗಿ ದೂರಿಯಿಟ್ಟನು. ಮಠದ ಚಾಕರರು–'ಏ ಗದ್ದಲ ಮಾಡಬೇಡ ಹೋಗು ಹೋಗೆಂ'ದು ಅವನನ್ನು ನಿವಾರಿಸಿದರು. ರೈತನು ಗುರುಗಳನ್ನೇ ಕಂಡು ಕೇಳುವ ತನಕ ನಾನೇಕೆ ಹೋದೇನೆಂದು ಹಟಹಿಡಿದು ಬಾಗಿಲಲ್ಲಿ ಕುಳಿತನು. ಸ್ವಾಮಿಗಳು ಹೊರಗೆ ಬರುತ್ತಲೇ–ತನ್ನ ಹೊಲವು ಹಾಳಾದ ಸಂಗತಿಯನ್ನು

ಹೇಳಿದನು. ಹೊಲಿದ ವಸ್ತ್ರವನ್ನು ಕಟ್ಟಿಕೊಂಡು, ಇಲ್ಲವಾದರೆ ಕುದುರೆಯನ್ನಾದರೂ ತೋರಿಸಿರೆಂದು ಭಿನ್ನವಿಸಿದನು. ಸ್ವಾಮಿಗಳು ನಗುತ್ತಾ–'ನಿನಗೆ ಹೊಲಿದಿಲ್ಲದ ವಸ್ತ್ರವನ್ನು ಕಟ್ಟಿಕೊಳ್ಳಬೇಕೆ? ಅಥವಾ ಕುದುರೆಯನ್ನು ತೋರಿಸಬೇಕೆ? ಎರಡರಲ್ಲೊಂದನ್ನು ಕೇಳು' ಎಂದರು. ವೈಕುಂಠದಾಸರು ಕುದುರೆಯನ್ನು ತೋರಿಸಿದರೆ ಅವನಿಗೆ ಸಾಕೆಂದು ಹಾರೈಸುತ್ತಿದ್ದರು. ರೈತನು–'ಹೌದು ಹೌದು, ನಮ್ಮ ಗುರುಗಳು ಹೇಳಿದಂತೆ ಆ ಮಾಯದ ಕುದುರೆಯನ್ನು ತೋರಿಸಬೇಕು' ಎಂದನು.–'ಕುದುರೆಯನ್ನು ನೋಡಿದ ಕಣ್ಣು ನಿನಗೆ ಮತ್ತೆ ಉಪಯೋಗಕ್ಕೆ ಬರುವುದಿಲ್ಲ'ವೆಂದರು. ಹಾಗಿದ್ದರೆ ಒಂದು ಕಣ್ಣು ಹೋದರೆ ಹೋಗಲಿ; ಕುದುರೆಯನ್ನು ತೋರಿಸಬೇಕೆಂದೇ' ರೈತನು ಕೇಳಿದನು. ಸ್ವಾಮಿಗಳು ಒಂದು ಕಣ್ಣಿನಮೇಲೆ ಬಟ್ಟೆಯನ್ನಿಟ್ಟುಕೊಂಡು, ಇನ್ನೊಂದು ಕಣ್ಣಿನಿಂದ ದಿವ್ಯಾಶ್ವವನ್ನು ನೋಡೆಂದು, ಅಶ್ವರೂಪೀ ಹಯಮುಖನನ್ನು ತೋರಿಸಿದರು. ರೈತನು–'ಹಾ ಹಾ!' ಎಂದು ದಿವ್ಯಾಶ್ವವನ್ನು ನೋಡುತ್ತಾ–'ಜನ್ಮದಲ್ಲಿ ನೋಡಲಿಲ್ಲ ಇಂಥಾ ಕುದುರೆ!' ಎಂದು ಆನಂದಭರಿತನಾಗಿ ಪ್ರಣಾಮಮಾಡಿದನು. ಅವನಿಗೆ ಅಂದಿನಿಂದ ಆ ಕಣ್ಣು ಮಂಜಾಗಿ ಹೋಯಿತು. ಪರಮಾತ್ಮನೇ ತನ್ನ ಹೊಲದಲ್ಲಿ ಕಾಲಿಟ್ಟು, ತಾನು ಬೆಳೆದ ಬೆಳೆಯನ್ನು ಸ್ವೀಕಾರಮಾಡಿದನೆಂದು ಆ ರೈತನು ಸಂತೋಷಭರಿತನಾದನು. ಆ ಹೊಲವನ್ನೇ ಹಯಗ್ರೀವನ ಸೇವೆಗೆಂದು ಶ್ರೀ ಮಠಕ್ಕೆ ಧಾರೆಯೆರೆದನು.

ಆ ರೈತನು ಕೆಲವು ಕಾಲದಿಂದ ವೈಕುಂಠದಾಸರ ಶಿಷ್ಯನಾಗಿದ್ದು ಅವರಿಂದ ಉಪದೇಶ ಪಡೆದು, ನಿತ್ಯವೂ ಹರಿಭಜನೆ ಮಾಡುತ್ತಿದ್ದನು. ಕನಕದಾಸರು ಬೇಲೂರಿಗೆ ಬಂದಾಗ ಅವರ ಸೇವೆ ಮಾಡುತ್ತಿದ್ದನು. ವೈಕುಂಠದಾಸರನ್ನು ಕಂಡಾಗಲೆಲ್ಲ–'ಸ್ವಾಮೀ, ನನಗೆ ದೇವರನ್ನು ತೋರಿಸಿ'ರೆಂದು ಕೇಳುತ್ತಿದ್ದನು. ದಾಸರು,–'ನಾವು ತೋರಿಸುವುದೇನು? ದೇವರೇ ನೀನಿದ್ದ ಬಳಿಗೆ ಬರುತ್ತಾರೆ'ಂದು ಹೇಳುತ್ತಿದ್ದರು. ಆ ಕಾಲ ಎಂದಿಗೆ ಬರುವುದೆಂದು, ಆ ನಿಷ್ಕಪಟಿ ರೈತನು ಹಂಬಲಿಸುತ್ತಿದ್ದನು. ವಾದಿರಾಜರು ಬಂದಾಗ ಅವನ ಇಷ್ಟ ಪೂರ್ತಿಯಾಯಿತು. ಅಶ್ವದರ್ಶನವಾಯಿತು. ಅಶ್ವದರ್ಶನವಾದಂದಿನಿಂದ ರೈತನು ಮಹಾಜ್ಞಾನಿಯಾದನು. 'ಚಿನ್ನ' ಎಂಬ ಅಂಕಿತದಿಂದ ಅವನು ಕೆಲವು ಪದಗಳನ್ನು ಮಾಡಿದಂತೆ ಕೇಳಿಕೆಯಿದೆಯಾದರೂ ಅವನ ಪದಗಳು ಉಪಲಬ್ಧವಿಲ್ಲ. ಅವನ ಅಂಕಿತದಿಂದ, ಅವನ ಹೆಸರೂ ಚಿನ್ನನಾಗಿರಬಹುದೆಂಬ ಊಹೆ ಬರುತ್ತದೆ. ಅವನು ಕೇಶವ ದೇವಾಲಯದಲ್ಲೇ ಯಾವುದೋ ಕೈಂಕರ್ಯ ಮಾಡಿಕೊಂಡಿದ್ದಂತೆಯೂ ಗೊತ್ತಾಗುತ್ತದೆ.

ವೇಲಾಪುರಿಯನ್ನು ಬಿಟ್ಟು, ರಾಜರು ಪ್ರಯಾಣಮಾಡುವಾಗ ಕೇಶವಸ್ವಾಮಿಯ ಮೇಲೆ ಒಂದು ಮಂಗಳವನ್ನು ಹಾಡಿರುತ್ತಾರೆ. ಆ ಮಂಗಳದಲ್ಲಿ ಸ್ವಾಮಿಯ ದಶಾವತಾರದ ವರ್ಣನೆಯಿದ್ದು, ಅದು ಮಂಗಳಗಳಿಗೆಲ್ಲಾ ಮಂಗಳದಂತಿದೆ. ಘನಮಂಗಳಾರತಿಯ ಕಾಲದಲ್ಲಿ ದೇವಸ್ಥಾನದ ಸಂಗೀತಗಾರರು, ಅದೇ ಮಂಗಳವನ್ನೇ ಹಾಡುವ ವಾಡಿಕೆಯಿದ್ದು, ಆ ಪದ್ಧತಿಯು ಯಾವಾಗಲೂ ನಡೆಯುತ್ತಿದೆ. ಇದರಲ್ಲಿ ಮಾತ್ರ

ಜಾರಿಸುವ ಸಂಪ್ರದಾಯವು ಈಗ ಉಳಿದಿದೆ. ಓಲಗದವರಾದರೂ ಶ್ರೀಗಳ ಶಿಷ್ಯರಾದರೂ ಈ ಮಂಗಳವನ್ನೇ ಮಂಗಳಾರತಿಯ ಕಾಲದಲ್ಲಿ ಜಾರಿಸುತ್ತಾರೆ.

ರಾಗ: ಸುರಟಿ—ಅಟ್ಟತಾಳ

ಆನಂದಮಯಗೆ ಚಿನ್ಮಯಗೆ | ಶ್ರೀ (ಆದಿ-ಪಾಠಾಂತರ)
ನಾರಾಯಣಗಾರತಿಯೆತ್ತಿರೇ || ಪ.

ವೇದವ ತಂದು ಬೆಟ್ಟವ ಪೊತ್ತು ಧರಣಿಯ |
ಸಾಧಿಸಿ ಕಂಭದೊಳೊಡೆದವನಗೆ ||
ಭೂದಾನವ ಬೇಡಿ ನೃಪರ ಸಂಹರಿಸಿದ |
ಆದಿಮೂರುತಿಗಾರತಿಯೆತ್ತಿರೇ || ೧

ಇಂದುವದನೆ ಸಹಿತಾರಣ್ಯದೊಳು ನಿಂದು |
ನಂದಗೋಕುಲದೊಳು ಬೆಳೆದವನಗೆ ||
ಮಂದಗಮನೆಯರ ಮುಂದೆ ನಿರ್ವಾಣದಿ |
ನಿಂದ ಮೂರುತಿಗಾರತಿಯೆತ್ತಿರೆ || ೨

ತುರಗವನೇರಿ ದೈತ್ಯರ ಶೀಳಿ ಭಕ್ತರ |
ಪೊರೆದ ಮಂಗಳ ಹಯವದನನಿಗೆ ||
ವರವೇಲಾಪುರ ಚೆನ್ನಿಗರಾಯನ |
ಚರಣಕಮಲಕಾರತಿಯೆತ್ತಿರೆ || ೩

ವಾದಿರಾಜರು ಹೀಗೆ ಸಂಚರಿಸುತ್ತಾ, ಭಾಗವತ ಧರ್ಮವನ್ನು ಪ್ರಚಾರ ಮಾಡುತ್ತಾ, ಕೊಲ್ಹಾಪುರ ಪಂಢರಾಪುರ ಕ್ಷೇತ್ರಗಳನ್ನು ಮತ್ತೆ ಯಾತ್ರೆ ಮಾಡಿ ತಿರುಪತಿಗೆ ಬಂದರು. ವೆಂಕಟಪತಿಯ ದರ್ಶನ ಮಾಡಿದಾಗಲೆಲ್ಲ ಒಂದೊಂದು ದೇವರನಾಮ ಮಾಡಿ ಹಾಡಿರುವುದರಲ್ಲಿ, ಶ್ರೀ ರಾಮನವಮಿಯ ದಿನ ಹಾಡಿದ ಒಂದೇ ನಾಮವನ್ನು ವಾಚಕರ ಪಠನೆಗೆ ಬರಲೆಂದು ಇಲ್ಲಿ ಕೊಡಬಯಸಿದ್ದೇನೆ. ನಾವಿದು ಕಾವ್ಯದೃಷ್ಟಿಯಿಂದಲೂ ಅರ್ಥದೃಷ್ಟಿಯಿಂದಲೂ ಹಾಗೂ ಗಾಯನ ದೃಷ್ಟಿಯಿಂದಲೂ, ಎಷ್ಟು ಮಹತ್ವಪೂರ್ಣವಾಗಿರುವುದು, ಸ್ವತ ಏವ ವ್ಯಕ್ತವಾಗುವುದರಲ್ಲಿ ಸಂಶಯವಿಲ್ಲ.

ರಾಗ: ಮಧ್ಯಮಾವತಿ—ತ್ರಿಪುಟ ತಾಳ

ಸೇವಕನೆಲೊ ನಾನು | ನಿನ್ನಯ ಪಾದ |
ಸೇವೆ ನೀಡೆಲೊ ನೀನು || ಪ.

ಸೇವಕನೆಲೊ ನಾನು | ಸೇವೆ ನೀಡೆಲೊ ನೀನು |
[illegible] ಶ್ರೀ [illegible] | ಪಾವನಾತ್ಮಕ ರಕ್ಷಿಸೆನ್ನನು |

ಗೋವ | ರ್ಧನ ಗಿರಿ ಪೇವ | ಗೋವುಗಳ ಕಾವ |
ಮಹಾನುಭಾವ | ವರಗಳ ನೀವ ದೇವಾ |
ಶ್ರೀವಲ್ಲಭ ದಾಸಿ ನಾಗಾಡೆನ್ನನು | ಈ ವೇಳೆಗೆ ಬಂದಿರ ರಮಣ || ಪ.

ರಾಮ ದಶರಥನಂದನ | ರಘುಕುಲ ಅಬ್ಧಿ ಸೋಮ ಸುಂದರ ವದನಾ |
ನಾಮನ ಪರಿಪೂರ್ಣ | ಕಾಮ, ಕೌಸಲ್ಯಾ ರಾಮ |
ಸ್ವಾಮಿ ಶ್ರೀ ರಂಗಧಾಮ [illegible] | ರಾಮ ಶ್ರೀ[illegible] |
ಧೀಮಾ | ಮುನಿಜನಸ್ತೋಮಾ | ರಮ್ಯ ಗುಣಧಾಮ |
ರಣರಂಗ ಪ್ರೇಮ | ಕೋಮಲ ಶ್ಯಾಮ ನೇಮ |
ಸಾಮಜ ವರದ ನಿಸ್ಸೀಮ | ಕಾಮಿತ ಫಲ ಕರುಣಿಸಿ ಕಾಯೊ || ೧

ಶಂಕರಸುರ ಸೇವಿತ | ಶೇಷ ಗರುಡಾ |
ಲಂಕಾರ ಮಣಿ ಶೋಭಿತ |
ಪಂಕಜನಯನ ಮೀ | ನಾಂಕ ಜನಕ ಪಾದ ||
ಪಂಕಜಾಸನ ವಿನುತ ತಿರುಪತಿ | ವೆಂಕಟ ಬಿರುದಾಂಕ ಜಯ ಜಯ ||
ಶಂಖ ಚಕ್ರ ಗದೆ ಪಾಣಿ | ಚರಿತಾಟಂಕ | ಗೊಲಿದ ತ್ರಿಶಂಕ ಲಂಕಾ |
ಲಂಕಾಧಿಪ ಪಾಲಿತ ರಘುಪತಿ | ಕಿಂಕರನಿಗೆ ಕಿಂಕರನಾಗಿಸೊ ೨

ಮಂದರೋದ್ಧಾರ ಮಾಧವ | ಮಧುಸೂದನ–ಆ
ನಂದ ಮಂಗಳ ವಿಗ್ರಹ ||
ಬಂದು ಮಾಧವ ಗೋ | ವಿಂದ ಗೋಕುಲಾನಂದ ||
ಮಂದಿತಾಮರವೃಂದ [illegible] | ತಂದ ತುರುಗವನೇರಿ ಬಂದ |
ಬೃಂದಾ | ವನದೊಳಗಿಂದ | ಯಶೋದೆಯ ಕಂದ | ಹರಿ ಗೋ
ವಿಂದ | ಶೇಷಗಿರಿಯಲ್ಲಿ ನಿಂದ |
ಮಂದಾಕಿನಿ ಪಡೆದೆಲೊ ಧ್ರುವಗೊಲಿ |
ದಂದದಿ ಎನಗೊಲಿ **ಹಯವದನ** ||

ವಾದಿರಾಜರು [illegible] ಸಮರ್ಪಿಸಿದ ಸಾಲಿಗ್ರಾಮ ಸರವು ಅದ್ಯಾಪಿ ಶ್ರೀನಿವಾಸಮೂರ್ತಿಯ [illegible] ಅಲಂಕಾರವಾಗಿ ಶೋಭಿಸುತ್ತಲಿದೆ. ತಿರುಪತಿಯಿಂದ ರಾಮೇಶ್ವರದವರೆಗೂ ಎಲ್ಲ ಕ್ಷೇತ್ರಗಳನ್ನು [illegible] ಮೂರ್ತಿಗಳನ್ನು ದಿವ್ಯ ನಾಮಗಳಿಂದ [illegible]. ಅನೇಕ ಸ್ಥಳಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ,* [illegible] ತಮ್ಮ [illegible] ಸ್ಥಳಗಳಲ್ಲಿ [illegible] ಬಂದರು.

* [illegible] ಸೋತಿಗಳೆಂದು ಕರೆಯುತ್ತಾರೆ.

ಮಧ್ವಾಚಾರ್ಯರ ಕಾಲದಿಂದಲೂ ಅನಂತಶಯನದ (ತಿರುವಾಂಕೂರಾಧಿಪತಿಗಳು) ರಾಜರು, ಆಚಾರ್ಯರ ಶಿಷ್ಯರಾಗಿದ್ದು, ಆನಂದ ಸಂಪ್ರದಾಯದಂತೆ, ತಮ್ಮ ಅರಮನೆಯಲ್ಲಿ ಮಾಧ್ವ ಸಂಪ್ರದಾಯವನ್ನೇ ಪಾಲಿಸುತ್ತಿದ್ದರು. ಆ ಸಂಪ್ರದಾಯವು ಮಧ್ವಾಚಾರ್ಯರ ಕಾಲದಿಂದೀಚೆಗೆ ಯಾವ ಪೀಠಸ್ಥರೂ ಆ ಕಡೆಗೆ ಹೋಗಿ ಬರದೆ, ಅವರ ಪದ್ಧತಿಗಳಲ್ಲಿ ಬಹಳ ವ್ಯತ್ಯಾಸಗಳಾಗಿದ್ದುವು. ವಾದಿರಾಜರು ಅವುಗಳನ್ನೆಲ್ಲ ಪುನರ್ವ್ಯವಸ್ಥೆಗೊಳಿಸಿ,* ಅನಂತಪದ್ಮನಾಭನ ಪೂಜಾಕಾರ್ಯದಲ್ಲೂ ತಕ್ಕ ಸುಧಾರಣೆಗಳನ್ನು ಮಾಡಿದರು.

†ಕೊಚ್ಚಿ ದೇಶಾಧಿಪತಿಯು ವಾದಿರಾಜರ ಶಿಷ್ಯನಾಗಿ ಅವರಿಂದ ಚಕ್ರಾಂಕಿತ ಮಾಡಿಸಿಕೊಂಡು, ಬಹಳವಾಗಿ ಗುರುಸೇವಾ ಮಾಡಿದನು. ಉಡುಪಿಯ ಅಷ್ಟಮಠಗಳ ಪೈಕಿ, ವಾದಿರಾಜರ ಮಠಕ್ಕಿದ್ದಂತೆ ಇತರ ಮಠಗಳಿಗೆ ಶಿಷ್ಯಸಂಪತ್ತಿಲ್ಲ. ವಾದಿರಾಜರಂಥಾ ಸಮರ್ಥರು ಅವತರಿಸದಿದ್ದರೆ, ಉಡುಪಿಯ ಮಠಗಳು ಈಗಿನ ಸ್ಥಿತಿಯಲ್ಲಿರುತ್ತಿರಲಿಲ್ಲ.

ವಾದಿರಾಜರಷ್ಟು ದೀರ್ಘಕಾಲ ಪೀಠಾಧಿಪತ್ಯ ಮಾಡಿದವರು ಪ್ರಾಯಶಃ ಭರತಖಂಡದ ಯಾವ ಧರ್ಮಪೀಠದಲ್ಲೂ ಇಲ್ಲವೆನ್ನಬೇಕು. ರಾಮಾನುಜಾಚಾರ್ಯರು ವಾದಿರಾಜರಷ್ಟೇ ಕಾಲ ಜೀವಿಸಿದವರಾದರೂ ಅವರ ಪೀಠಾಧಿಪತ್ಯದ ಕಾಲ ಇವರಷ್ಟು ವಿಸ್ತಾರವಾಗಿರಲಿಲ್ಲ. ರಾಮಾನುಜಾಚಾರ್ಯರು ಎಷ್ಟೋಕಾಲ ಗೃಹಸ್ಥಾಶ್ರಮಿಗಳಾಗಿದ್ದು ಅನಂತರ ಸನ್ಯಾಸ ಸ್ವೀಕಾರಮಾಡಿದರು. ಸನ್ಯಾಸಾನಂತರವೂ ಅದ್ವೈತಮತದಿಂದ ಪ್ರತ್ಯೇಕವಾದ ವಿಶಿಷ್ಟಾದ್ವೈತ ಮತಸ್ಥಾಪನೆಗೆ ಹೊರಟಕಾರಣ, ಅವರ ವರ್ಚಸ್ಸು ಸಮಾಜದಮೇಲೆ ಕೂಡಲು ಹೆಚ್ಚುಕಾಲ ಬೇಕಾಯಿತು. ಚೋಳರಾಜನ ರಾಜಕೀಯ ವಿಪತ್ತುಗಳಿಂದ ಪಾರಾಗಲು ಆಚಾರ್ಯರು ಬಹಳ ಸಾಹಸ ಮಾಡಬೇಕಾಯಿತು. ಆಚಾರ್ಯರ ಮತ್ತು ಅವರ ತತ್ವದ ಮಹತ್ವವು ತಿಳಿದುಬಂದ ಎಷ್ಟೋಕಾಲದಮೇಲೆ ಜನರು ಅವರ ಶಿಷ್ಯರಾಗುತ್ತಾ ಬಂದರು. ವಾದಿರಾಜರಿಗಾದರೋ ಬಾಲ್ಯದಲ್ಲೇ ಪೀಠಾಧಿಪತ್ಯ ದೊರೆಯಿತು. ಮುನ್ನೂರು ವರ್ಷಗಳಷ್ಟು ಕಾಲ ಸ್ಥಾಯಿಯಾದ ಮಠಾಧಿಪತ್ಯ ಬಂದದ್ದರಿಂದ ಪೀಠಾರೋಹಣ ಮಾಡಿದ ದಿನದಿಂದಲೇ ಅವರ ಆಧಿಪತ್ಯಕ್ಕಾರಂಭವಾಯಿತು. ಉಡುಪಿಯಲ್ಲಿ ಮಹಾವೈಭವದ ಪರ್ಯಾಯಪದ್ಧತಿಯನ್ನು ಆಚರಣೆಗೆ ತಂದುದರಿಂದ ರಾಜರ ಖ್ಯಾತಿಯು ದಿಗಂತ ವಿಶ್ರಾಂತವಾಯಿತು. [illegible] ತಮ್ಮ ಪಾಲಿಗೆ ಬಂದ ಪರ್ಯಾಯವನ್ನು [illegible] ತಮ್ಮ [illegible] ಕಾಲದಲ್ಲೇ [illegible] ಪರ್ಯಾಯವನ್ನು [illegible] ಸ್ವಾಮಿಗಳ ಕೈಯಿಂದ ಮಾಡಿಸಿದರು.

---

* ಅನಂತಪದ್ಮನಾಭನ [illegible] ತಂತ್ರವೇತ್ತ [illegible] ತ್ತದೆ. ಅಲ್ಲಿನ [illegible]

† ಕೊಚ್ಚಿಯ ಅರಸರು [illegible] ಸ್ವಾದೀಪಂಕಕ್ಕೆ [illegible]

ವಾದಿರಾಜರು ನಡೆಸಿದ ಪರ್ಯಾಯಗಳೆಂದರೆ ೧೫೪೮-೪೯, ೧೫೬೪-೬೫, ೧೫೮೦-೮೧, ೧೫೯೬-೯೭ ಎಂದು ಮಠದ ದಾಖಲೆಗಳಿಂದ ಗೊತ್ತಾಗುತ್ತದೆ. ಈ ಪೈಕಿ ಎರಡನೇ ಪರ್ಯಾಯದ ಸಮಯದಲ್ಲಿ (೧೫೬೪-೬೫) ಶ್ರೀ ಕೃಷ್ಣದೇವಾಲಯಕ್ಕೆ ತಾಮ್ರದ ಛಾವಣಿಯಿರುವ ಭಾಗವನ್ನು ಭಂಗಾರದ ತಗಡುಗಳಿಂದ ಶೃಂಗರಿಸಬೇಕೆಂದು ವಾದಿರಾಜರು ಪ್ರಯತ್ನಿಸಿದರಂತೆ! ಅದೇ ಕಾಲದಲ್ಲಿ (೧೫೬೫) ವಿಜಯನಗರದ ಹಿಂದೂ ಸಾಮ್ರಾಜ್ಯ ನಾಶವಾದ್ದರಿಂದ, ಮುಂದೆ ಅದರಲ್ಲಿ ಪ್ರವರ್ತಿಸಲಾರದೆಂದು ತಟಸ್ಥರಾದರಂತೆ!

ವಾದಿರಾಜರು ತಮ್ಮ ಸರದಿಗೆ ಬರುವ ಒಂದೊಂದು ಪರ್ಯಾಯಕ್ಕೂ ಮೊದಲಲ್ಲಿ ಒಂದು, ಎರಡು ವರ್ಷಗಳ ಕಾಲ ಉಡುಪಿಯಲ್ಲಿದ್ದು, ಮತ್ತೆ ಹದಿನಾಲ್ಕು ವರ್ಷಗಳಲ್ಲಿ ಅವಕಾಶ ದೊರೆತಂತೆ ದೇಶಸಂಚಾರವನ್ನು ಮಾಡಿ, ಭಾಗವತಧರ್ಮ ಪ್ರಚಾರಮಾಡಿದಂತೆ ಗೊತ್ತಾಗುತ್ತದೆ. ಪ್ರತ್ಯೇಕ ಸಂಚಾರಗಳ ಸಾಂಗೋಪಾಂಗ ವಿವರವನ್ನು ಬರೆಯಲು ಸಾಧ್ಯವಿಲ್ಲ. ಸಂಸ್ಥಾನ ಮರ್ಯಾದೆಗೆ ತಕ್ಕಂತೆ ಪರಿವಾರವನ್ನು ಕಟ್ಟಿಕೊಂಡು ಸಂಚರಿಸಬೇಕು. ಬೇಕಾದ ಧರ್ಮಗ್ರಂಥಗಳ ಭಂಡಾರವನ್ನು ಊರಿಂದೂರಿಗೆ ಸಾಗಿಸಬೇಕು. ನೂರಾರು ಶಿಷ್ಯರಿಗೆ ಪ್ರವಚನ ಮಾಡಿಸಬೇಕು. ವಾದಿಗಳು ಬಂದರೆ ವಾದಿಸಬೇಕು. ಸಂಸ್ಥಾನ ಭರಣಕ್ಕೆ ಬೇಕಾಗುವಷ್ಟು ಧನಬೇಕು. ಊರೂರಲ್ಲಿ ಜನರಿಗೆ ಧರ್ಮೋಪದೇಶ ಮಾಡಬೇಕು. ಧರ್ಮದ್ರೋಹಿ ರಾಜರ ಭಯವನ್ನು ನಿವಾರಿಸಿಕೊಳ್ಳಬೇಕು. ಮೇಲಾಗಿ ಕಠಿಣತಮವಾದ ಆಶ್ರಮಧರ್ಮವನ್ನು ಪಾಲಿಸಬೇಕು. ಇಷ್ಟೆಲ್ಲಾ ಶ್ರಮವನ್ನು ಶಾಂತಿಯಿಂದ ಸಹಿಸಿ ಯಶಸ್ವಿಗಳಾಗಬೇಕಾದರೆ, ಆ ಕಾಲದ ಮಠಾಧಿಪತಿಗಳಿಗೆ, ಎಷ್ಟು ಧರ್ಮಾಭಿಮಾನ, ಎಷ್ಟು ಸಹನಶೀಲತೆ, ಎಷ್ಟು ಜವಾಬ್ದಾರಿಗಳಿದ್ದವೆಂದು ಯಾರಾದರೂ ಊಹಿಸದಿರಲಾರರು!

ಮುನ್ನೂರೈವತ್ತು ವರ್ಷಗಳು ಕಳೆದು, ಎಷ್ಟೋ ರಾಜ್ಯಗಳು ತಲೆಕೆಳಗಾಗಿ, ಆಯಾ ಕಾಲದ ರಾಜರ ಹೆಸರು ಸಹ ಮರೆತುಹೋಗಿ, ವಾದಿರಾಜರಂಥಾ ಅನೇಕ ಸತ್ಪುರುಷರ ಹೆಸರು ಇವತ್ತಿಗೂ ಅಚ್ಚಳಿಯದಂತೆ ಶಾಶ್ವತವಾಗಿರಬೇಕಾದರೆ, ಆ ಮಹನೀಯರ ತ್ಯಾಗ ಆ ಮಹನೀಯರ ಧರ್ಮಾಭಿಮಾನ, ಆ ಮಹನೀಯರ ತಪಶ್ಚರ್ಯ, ಆ ಮಹನೀಯರಲ್ಲಿದ್ದ ಭಗವದನುಗ್ರಹಗಳು ಕಾರಣಗಳಲ್ಲದೆ ಮತ್ತೆ ಬೇರೆ ಯಾವುದೂ ಕಾರಣವಿರುವುದಿಲ್ಲ. ಭಾಗವತ ಧರ್ಮಗಳು [illegible] ದಿಂದಲೂ ತಮ್ಮ ಧರ್ಮವನ್ನು ಪ್ರಚಾರಮಾಡಲಿಲ್ಲ. ರಾಜಾಧಿರಾಜರು ದಾಸಾನುದಾಸರಂತಿದ್ದರೂ. ಅವರಿಗೆ ತಾವು ಸಹಾಯಕರಾಗಿದ್ದರಲ್ಲದೆ, ಅವರ ಸಹಾಯವನ್ನು ತಾವು ಪಡೆಯಲಿಲ್ಲ. ಆ ರಾಜರು ಕೊಟ್ಟ ಜಹಗೀರುಗಳಾಗಲೀ, ಬಿರುದಾವಳಿಗಳಾಗಲೀ ಅವರೇ ಬಲವಂತಮಾಡಿ ಕೊಟ್ಟವುಗಳಾಗಿವೆ, ಇವರ ಪ್ರಯತ್ನದಿಂದ ಬಂದವುಗಳಲ್ಲ.

ಈ ಪ್ರಕಾರ ಮಹಾನುಭಾವರಾದ ವಾದಿರಾಜರ ದಿಗ್ವಿಜಯವು ಯಶಸ್ವಿಯಾಗಿ ಬೆಳೆಯಿತು.

೫

ಸ್ವಾದೀ ಸಂಸ್ಥಾನ

ಈಗ ಉತ್ತರ ಕನ್ನಡ ಜಿಲ್ಲಾ ಶಿರಸೀ ತಾಲ್ಲೂಕಿಗೆ ಸೇರಿರುವ ಸ್ವಾದೀ ಗ್ರಾಮವು ಆಗ ಒಂದು ಸಂಸ್ಥಾನವಾಗಿತ್ತು. ಸಂಸ್ಥಾಪಿಕರು ವಿಜಯನಗರಕ್ಕೆ ಆಶ್ರಿತರಾಗಿದ್ದರು. ವಿಜಯನಗರವು ನಾಶವಾದಮೇಲೆ ಚಿಕ್ಕ ಚಿಕ್ಕ ಪಾಳಯಗಾರರು ಸ್ವತಂತ್ರ ರಾಜರಾಗಿ ಬಿಟ್ಟರು. ಸ್ವಾದಿಗೆ ವಾದಿರಾಜರು ಬಂದಾಗ ಅರಸಪ್ಪನಾಯಕನು ದೊರೆಯಾಗಿದ್ದನು. ನಾಯಕನು ಒಬ್ಬ ಕ್ಷುದ್ರ ಗುರುವಿನ ಇಂದ್ರಜಾಲಕ್ಕೊಳಗಾಗಿ ಬ್ರಾಹ್ಮಣರನ್ನು ದ್ವೇಷಿಸುತ್ತಿದ್ದನು. ಅವನ ಕಾಲದಲ್ಲಿ ಬ್ರಾಹ್ಮಣರು ಊರಲ್ಲಿ ವಾಸಮಾಡಲು ಅಪ್ಪಣೆಯಿರಲಿಲ್ಲ. ಇತರ ಜನರು ಬಳಸುವ ಭಾವಿಯಲ್ಲಿ ನೀರು ತೆಗೆದುಕೊಳ್ಳಲು ಸ್ವಾತಂತ್ರ್ಯವಿರಲಿಲ್ಲ. ಬ್ರಾಹ್ಮಣರು ಒಂದು ಪರಿಯ ಅಸ್ಪೃಶ್ಯರಂತಿದ್ದರು. ಅರಸಪ್ಪನಾಯಕನು ಬಲವಂತವಾಗಿ ಬ್ರಾಹ್ಮಣರಿಗೆ ಶೈವದೀಕ್ಷೆಯನ್ನು ಕೊಡಿಸುತ್ತಿದ್ದನು. ಶೈವರಾಗದವರನ್ನು ಆನೆಯ ಕಾಲಿಂದ ತುಳಿಸುತ್ತಿದ್ದನು. ಶೂಲಕ್ಕೆ ಏರಿಸಿಬಿಡುತ್ತಿದ್ದನು. ಈ ಕಾರಣದಿಂದ ನಾಯಕನಿಗೆ ಬಲುಮಂದಿ ಪ್ರತಿಭಟಿಗಳಾದರು. ಮತಛಲವೊಂದರ ವಿನಾ ರಾಜಕಾರ್ಯ ನಿರ್ವಾಹಕ ಶಕ್ತಿ ಅವನಲ್ಲಿರಲಿಲ್ಲ. ಜನಾನುರಾಗಿಯಾಗಿರದ ನಾಯಕನ ಬಲಾಬಲಗಳನ್ನರಿತ ಪರರಾಯರು, ಅವನ ರಾಜಧಾನಿಯನ್ನು ಮುತ್ತಿದರು. ಯುದ್ಧ ಮಾಡಲು ಧೈರ್ಯವಿಲ್ಲದೆ, ಶರಣಾಗತನಾಗಲು ಮನಸ್ಸು ಬರದೆ, ನಾಯಕನು ಗುಪ್ತಮಾರ್ಗದಿಂದ ಕುಟುಂಬ ಸಮೇತನಾಗಿ ಅರಮನೆಯಿಂದ ಪಲಾಯನ ಮಾಡಿದನು.

ಅದೇ ಸಮಯದಲ್ಲಿ ವಾದಿರಾಜರು ಸ್ವಾದಿಗೆ ಬರಬೇಕೆಂದು, ಪರಿವಾರ ಸಮೇತರಾಗಿ ಊರಿಗೆ ಸಮೀಪದ ತಪೋವನದಲ್ಲಿಳಿದಿದ್ದರು. ಆಗ ತಾನೇ ಸ್ವಾದಿಯನ್ನು ಶತ್ರುಗಳು ಮುತ್ತಿರುವ ಸಂಗತಿ ಅವರಿಗೆ ತಿಳಿದು ಮುಂದೆ ಎತ್ತಕಡೆಗೆ ಪ್ರಯಾಣ ಮಾಡಬೇಕೆಂಬ ಯೋಚನೆಯಲ್ಲಿದ್ದರು. ಅರಸಪ್ಪನಾಯಕನು, ಹೆಂಡತಿ ಮಕ್ಕಳನ್ನು ಕರೆದು ಕೊಂಡು ತಪೋವನದ ಹಾದಿಯಲ್ಲೇ ಬಂದನು. ಪ್ರಾಣಾಪತ್ತಿಗೊಳಗಾದವರು, ಯಾರಾದರೂ ಸಾಧುಗಳನ್ನಾಗಲೀ ಯತಿಗಳನ್ನಾಗಲೀ ಕಂಡರೆ—ಅವರಿಗೆ ತತ್ಕಾಲದಲ್ಲಿ ಹುಟ್ಟುವ ಪೂಜ್ಯಭಾವನೆಯಂತೆ, [illegible] ವಾದಿರಾಜರನ್ನು ಕಾಣುತ್ತಲೇ ಪೂಜ್ಯಭಾವನೆ ಉಂಟಾಯಿತು. ಪತ್ನೀಪುತ್ರರನ್ನು ಅವರ ಪಾದದಲ್ಲಿ ಕೆಡವಿ, ತಾನೂ ಶರಣಾಗತನಾಗಿ, 'ಶರಣ್ಯರಾಗಿ, ಇಲ್ಲವೆ ಮರಣಕ್ಕೆ ಅಪ್ಪಣೆ ಕೊಡಿ' ಎಂದು ಕಂಬನಿಗರೆದನು.

ವಾದಿರಾಜರು :—ಯಾರಪ್ಪಾ ನೀನು ?

ನಾಯಕ :—ನಾನು ದುರ್ದೈವಿ ಅರಸಪ್ಪನಾಯಕ.

ವಾದಿರಾಜರು :—ನೀನೇ ಅಲ್ಲವ! ಬ್ರಾಹ್ಮಣರನ್ನು ಕೊಲ್ಲಿಸುತ್ತಿದ್ದವನು ? ಅಸ್ಪೃಶ್ಯರಂತೆ ನಡೆಸುತ್ತಿದ್ದವನು ?—

ನಾಯಕ:—ಅದಕ್ಕೆ ನಾನು ಕಾರಣನಲ್ಲ, ನನ್ನ ಕರ್ಮ ಗುರುವೇ! ಅಷ್ಟು ಮಾತ್ರಕ್ಕೆ ತಾವು ನನ್ನನ್ನು ಕೈಬಿಡಬಾರದು. ತಮ್ಮ ಮಹಿಮೆಯನ್ನು ನಾನು ಕೇಳಿದ್ದೇನೆ. ಈಗ ತಾವೇ ನನ್ನನ್ನು ರಕ್ಷಿಸಬೇಕು.

ವಾದಿರಾಜರು:—ಇಹಪರಗಳೆರಡನ್ನೂ ಕಳೆದುಕೊಂಡು ಹೀಗೇಕೆ ಪಲಾಯನ ಮಾಡುವೆ?

ನಾಯಕ:—ನನ್ನಲ್ಲಿ ತಕ್ಕ ಸೈನ್ಯವಿಲ್ಲ. ನನ್ನವರೇ ಮಿತ್ರಘಾತ ಮಾಡುವಂತೆ ಕಾಣುತ್ತದೆ.

ವಾದಿರಾಜರು:—ಒಳ್ಳೇದು! ಹೆದರಬೇಡ. ನಿನ್ನ ದಂಡನ್ನು ತೆಗೆದುಕೊಂಡು ಯುದ್ಧಮಾಡು. ಬಂದ ಮಾರ್ಗದಿಂದಲೇ ಶತ್ರುಗಳರಿಯದಂತೆ ಅರಮನೆಗೆ ಹೋಗು. ನಿನಗೆ ಜಯವಾಗುತ್ತದೆ. ದೇವರಿದ್ದಾನೆ.

ನಾಯಕ:—ಸ್ವಾಮಿ! ನನಗೆ ಧೈರ್ಯ ಸಾಲದು. ಪ್ರಾಣ ಮಾನ ಉಳಿದರೆ ಸಾಕು.

ವಾದಿರಾಜರು:—ಛೇಡಿ! ಹೀಗೇಕೆ ನುಡಿಯುವೆ? ನಾರಾಯಣ ಭೂತನಿದ್ದಾನೆ.

ಈ ಅಕ್ಷತೆಯನ್ನು ಸೆರಗಿನಲ್ಲಿ ಕಟ್ಟಿಕೋ! ಜಯವಾಗುವುದು ನಡೆ.

ನಾಯಕನಿಗೆ ಗುರುಗಳ ಅನುಗ್ರಹದಿಂದ ಧೈರ್ಯವಂಕುರಿಸಿತು. ಖಡ್ಗವನ್ನು ಝಳಪಿಸುತ್ತಾ, ಬಂದ ದಾರಿಯಿಂದಲೇ ಅರಮನೆಯನ್ನು ಸೇರಿದನು. ಒಳಸಂಚು ನಡೆಸಿದರೆಂದು ಸಂಶಯ ತೋರಿದವರನ್ನು ಕಾರಾಗೃಹದಲ್ಲಿ ಬಂಧಿಸಿ ಭದ್ರವಾದ ಕಾವಲಿಟ್ಟನು. ಖಡ್ಗಪಾಣಿಗಳಾದ ಸೈನಿಕರನ್ನು ಹುರಿಗೊಳಿಸಿ ಶತ್ರುಗಳ ಮೇಲೆ ನುಗ್ಗಿದನು. ಶತ್ರುಸೈನಿಕರಾದರೋ—ನಾಯಕನು ಅರಮನೆಯನ್ನು ಬಿಟ್ಟು ಪಲಾಯನಮಾಡಿದನೆಂಬ ಸಂಗತಿ ತಿಳಿದು, ಎಂದಿದ್ದರೂ ಸ್ವಾದಿಯು ತಮಗೆ ಸ್ವಾಧೀನವಾಯಿತೆಂದು ಅಜಾಗರೂಕರಾಗಿದ್ದರು. ಅದುವರೆಗೆ ಒಬ್ಬ ಭಟನಾದರೂ ಅವರನ್ನು ಎದುರಿಸಿರಲಿಲ್ಲ. ಏಕಾಏಕಿ ಮೇಲೆ ಬಿದ್ದ ಭಟರನ್ನು ನೋಡಿ ಶತ್ರುಗಳು ನಿಃಸಹಾಯರಾಗಿ, ಎದುರಿಸಲು ಸನ್ನಾಹಮಾಡಲನುವಿಲ್ಲದೆ, [illegible] ಖಡ್ಗದೇಟಿಗೆ [illegible] ಓಡಿಹೋದರು. [illegible] ಸ್ವಾದಿಯು [illegible] ನಾಯಕನ ಸೈನ್ಯದಲ್ಲಿ ಒಬ್ಬನಾದರೂ ಮಡಿಯಲಿಲ್ಲ.

[illegible]

ಐಂದ್ರಜಾಲಿಕನು ಗೆದ್ದರೆ ವಾದಿರಾಜರು ಅವನ ಶಿಷ್ಯರಾಗಬೇಕೆಂತಲೂ, ವಾದಿರಾಜರು ಗೆದ್ದರೆ ಐಂದ್ರಜಾಲಿಕನು ತನ್ನ ಸರ್ವಸ್ವವನ್ನೂ ವಾದಿರಾಜರಿಗೊಪ್ಪಿಸಬೇಕೆಂತಲೂ ಪ್ರತಿಜ್ಞೆಯಾಯಿತು. ವಾದಿರಾಜರ ಮುಂದೆ ಆ ಕಪಟಿಯ ಇಂದ್ರಜಾಲವೊಂದೂ ನಡೆಯಲಿಲ್ಲ. ವಾದದಲ್ಲೂ ರಾಜರಿಗೆ ಉತ್ತರ ಕೊಡಲು ಅವನಿಂದ ಸಾಧ್ಯವಾಗಲಿಲ್ಲ. ಅವನೇ ತನ್ನ ಪರಾಜಯವನ್ನೊಪ್ಪಿ ನಿರುತ್ತರನಾದನು. ಅವನ ಮಠದ ಸರ್ವಸ್ವವೂ ವಾದಿರಾಜರದಾಯಿತು. ಜಯಶೀಲರಾದ ದಿನವೇ ಬಸವನ ಘಂಟೆ, ಬಸವನಮೇಲೆ ನಗಾರಿ, ಮುತ್ತಿನ ಕುಲಾವಿ ಮುತ್ತಿನ ಗದ್ದುಗೆಗಳನ್ನು ಉಪಯೋಗಿಸಿಕೊಂಡು ರಾಜರು ದಿಗ್ವಿಜಯ ಯಾತ್ರೆಯನ್ನು ಮಾಡಿದರು. *ಅರಸಪ್ಪನಾಯಕನು ಸ್ವಯಂ ಮಹೋತ್ಸವವನ್ನು ನೆರವೇರಿಸಿದನು.

ಈಗಲೂ ವಾದಿರಾಜರ ಮಠದಲ್ಲಿ ಬಸವನಮೇಲೆ ನಗಾರಿಯಿಟ್ಟು ಬಾರಿಸುವ ಮರ್ಯಾದೆಯಿದೆ. ಪೂಜಾಕಾಲದಲ್ಲಿ ಆ ಐಂದ್ರಜಾಲಿಕನು ಉಪಯೋಗಿಸುತ್ತಿದ್ದ ಘಂಟೆಯನ್ನೇ ಉಪಯೋಗಿಸುತ್ತಾರೆ. ಕೂಡುತ್ತಿದ್ದ ಗದ್ದುಗೆಯೂ ಧರಿಸುತ್ತಿದ್ದ ಕುಲಾವಿಯೂ ಮುತ್ತಿನವಾದ್ದರಿಂದ ಕಾಲಕ್ರಮದಲ್ಲಿ ಕರಗಿಹೋಗಿವೆ.

ಅರಸಪ್ಪನಾಯಕನು ವಾದಿರಾಜರಿಗೆ ಅಚ್ಚಿನ್ನಭಕ್ತನಾಗಿಹೋದನು. ತನ್ನನ್ನು ಬಲುಕಾಲದಿಂದ ವಂಚನೆಗೊಳಿಸಿದ್ದ ಐಂದ್ರಜಾಲಿಕ ಗುರುವಿನ ಉಪದೇಶದಲ್ಲಿ ಅವನಿಗೆ ಅತ್ಯಂತ ಅಸಹ್ಯ ಹುಟ್ಟಿಹೋಯಿತು. ಅವಮಾನಿತನಾದ ಆ ಗುರುವು ದೇಶಭ್ರಷ್ಟನಾಗಿ ಹೋದನು. ನಾಯಕನು ತಾನು ಮುಂದೆ ಯಾವ ಮತ ಮಾರ್ಗವನ್ನು ಅನುಸರಿಸಬೇಕೆಂದು ವಾದಿರಾಜರನ್ನೇ ಪ್ರಶ್ನೆಮಾಡಿದನು. ವಾದಿರಾಜರು :—'ರಾಜನೇ! ನಿನ್ನ ಧರ್ಮವನ್ನು ಬಿಟ್ಟು ನಮ್ಮ ಧರ್ಮಕ್ಕೆ ಬಾರೆಂದು ಉಪದೇಶಿಸುವವರು ನಾವಲ್ಲ. ನಮ್ಮ ಧರ್ಮದಲ್ಲಿ ವಿಶ್ವಾಸಹುಟ್ಟಿ ಶಿಷ್ಯರಾಗುವೆವೆಂದು ಬರುವವರಿಗೆ ಮಾತ್ರ ನಾವು ಉಪದೇಶ ಕೊಡುವೆವು. ನೀನು ನಿನ್ನ ಧರ್ಮದಲ್ಲಿದ್ದು ಅನ್ಯ ಧರ್ಮವನ್ನು ದ್ವೇಷಿಸದಿದ್ದರೆ ಅದೇ ಪರಮಧರ್ಮವೆನಿಸುವುದು. ಯಾವನಾಗಲಿ ಜಗತ್ತಿಗೆ ಈಶ್ವರನಿದ್ದಾನೆಂದು ನಂಬಬೇಕು. ಅವನಲ್ಲಿ ನಂಬಿಕೆಯಿಡಬೇಕು. ತನ್ನಿಂದ ತನಗಾಗಲೀ ಪರರಿಗಾಗಲೀ ಬಾಧೆಯಾಗದಂತೆ ನೀತಿವಂತನಾಗಿ ವರ್ತಿಸಬೇಕು. ತನಗೆ ತಾನೇ ಗುರುವಾಗಬಲ್ಲವನಿಗೆ ಉಪದೇಶಕರ ಆವಶ್ಯಕತೆಯಿರುವುದಿಲ್ಲ. ಮುಂದೆ ನೀನು ಶ್ರೇಯೋವಂತನಾಗಿ ಬಾಳು' ಎಂದು ಹರಸಿದರು.

ಆನಂತರ ಅರಸಪ್ಪನಾಯಕನ ವರ್ತನವೇ ಬಲು ಬದಲಾಯಿತು. ತನ್ನ ಮತಸ್ಥರು ಹೇಗೋ ಹಾಗೆಯೇ ಬ್ರಾಹ್ಮಣರಲ್ಲೂ ವಿಶ್ವಾಸ ಮಾಡುತ್ತಾಬಂದನು. ತನ್ನ ಆಸ್ಥಾನದಲ್ಲಿ ಬ್ರಾಹ್ಮಣ ಪಂಡಿತರಿಗೆ ಆಶ್ರಯ ಕೊಟ್ಟನು. ವಾದಿರಾಜರ ಪ್ರಭಾವದಿಂದ ಸ್ವಾದಿಯು ಸಹ ವಿದ್ವನ್ನಗರಿಯಾಯಿತು. ಕವಿಗಳಿಗೆ ಆಶ್ರಯ ದೊರೆಯಿತು.

*ವಾದಿರಾಜರ ದಿಗ್ವಿಜಯದಿಂದ ಸಂತುಷ್ಟನಾದ ಅರಸಪ್ಪನಾಯಕನು ಬಿಟ್ಟಿಗೆ ಹದಿನೈದು ಜನರ ಸಾಲವನ್ನು ತೀರಿಸಿದನಂತೆ! ತನ್ನ ಐಂದ್ರಜಾಲಿಕ ಗುರುವನ್ನು ರಾಣಿಯು ರಾಜಸಭಾಂಗಣದಿಂದ ಅಪಮಾನ ಮಾಡಿಸಿದನಂತೆ!

ಕೆಲವು ಕಾಲದನಂತರದಲ್ಲಿ ಅರಸಪ್ಪನಾಯಕನ ಅಳಿಯನು ಜ್ವರಪೀಡಿತನಾಗಿದ್ದು ಮೃತನಾದನು. ಪತಿಯನ್ನಗಲಿದ ರಾಜಕುಮಾರಿಯು ತಾನೂ ಸಹಗಮನ ಮಾಡಿ ಪ್ರಾಣತ್ಯಾಗ ಮಾಡಬೇಕೆಂದು ಉದ್ಯುಕ್ತಳಾದಳು. ತಂದೆತಾಯಿಗಳ ಸಮಾಧಾನ ವಚನಗಳಾಗಲೀ, ಬಂಧುಬಳಗದವರ ಹಿತೋಕ್ತಿಗಳಾಗಲೀ, ರಾಜಕುಮಾರಿಯ ಮನಸ್ಸಿಗೆ ಸಮಾಧಾನವನ್ನುಂಟುಮಾಡಲಿಲ್ಲ. ನಾಯಕನು ಈ ವಿಪರೀತ ಪರಿಸ್ಥಿತಿಯನ್ನು ನೋಡಿ ಎದೆಯೊಡೆದು ವಾದಿರಾಜರಿಗೆ ಶರಣಾಗತನಾದನು. ವಾದಿರಾಜರಿಗೆ ಶಿಷ್ಯ ಮೋಹವು ತೀರ ಬಾರದಂತಾಯಿತು.

ಆಗಲೇ ವಾದಿರಾಜರು ನೂರೆಂಟು ನುಡಿಗಳ ಲಕ್ಷ್ಮೀ ಶೋಭಾನೆಯನ್ನು ಹಾಡಿ, ಪರಮಾತ್ಮನನ್ನು ಪ್ರಾರ್ಥಿಸಿ, ರಾಜನ ಅಳಿಯನನ್ನು ಬದುಕಿಸಿದರು.

ಲಕ್ಷ್ಮೀ ಶೋಭಾನೆಯ ಕೆಲವು ನುಡಿಗಳ ತುದಿಯಲ್ಲಿ 'ರಕ್ಷಿಸಲಿ ನಮ್ಮ ವಧೂವರರ' ಎಂಬ ಪ್ರಾರ್ಥನೆಯಿದೆ. ಶೋಭಾನೆಯು ನೂರೆಂಟು ನುಡಿಗಳ ಪದವಾದರೂ ಫಲಸ್ತುತಿಯೂ ಸೇರಿ ನೂರಹನ್ನೆರಡು ನುಡಿಗಳಿಂದ ಕೂಡಿದೆ. ಮಾದರಿಗೆ ಕೆಲವು ನುಡಿಗಳನ್ನು ಈ ಕೆಳಗೆ ಉದಹರಿಸಿದೆ.

ಲಕ್ಷ್ಮೀ ಶೋಭಾನೆ

ಶೋಭನವೆನ್ನಿರೆ ಸುರರೊಳು ಸುಭಗನಿಗೆ ।
ಶೋಭನವೆನ್ನಿ ಸುರಪ್ರಿಯಗೆ ॥
ಶೋಭನವೆನ್ನಿ ತ್ರಿವಿಕ್ರಮರಾಯಗೆ ।
ಶೋಭನವೆನ್ನಿ ಸುಗುಣನಿಗೆ । ಶೋಭಾನೆ ॥ ೧

ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ ।
ಪಕ್ಷಿವಾಹನ್ನಗೆರಗುವೆ ।
ಪಕ್ಷಿವಾಹನ್ನಗೆರಗುವೆನನುದಿನ ।
ರಕ್ಷಿಸಲಿ ನಮ್ಮ ವಧೂವರರ ॥ ೨

ಪಾಲಸಾಗರವ ಲೀಲೆಯಲಿ ಮಥಿಸಲು ।
ಬಾಲೆ ಮಹಲಕುಮಿ ಉದಿಸಿದಳು ।
ಬಾಲೆ ಮಹಲಕುಮಿ ಉದಿಸಿದಳಾದೇವಿ ।
ಪಾಲಿಸಲಿ ನಮ್ಮ ವಧೂವರರ ॥ ೩

ಒಂದು ಕರದಿಂದ ಅಭಯವನೀವಳು
ಮತ್ತೊಂದು ಕರದಿಂದ ವರಗಳ ।
ಕುಂದಿಲ್ಲದಾನಂದ ಸಂದೋಹವುಣಿಸುವ ।
ಇಂದಿರೆ ನಮ್ಮ ಸಲಹಲಿ ॥ ೪

ಪ್ರೋಳಿವ ಕಾಂಚಿಯುದಾಮು । ಉಲಿವ ಕಿಂಕಿಣಿಗಳು ।
ನಲಿವ ಕಾಲಿಂದಿಗೆ ಘಲುಕೆನಲು ।
ನಳನಳಿಸುವ ಮುದ್ದು ಮೊಗದ ಚೆಲುವೆ ಲಕ್ಷ್ಮಿ ।
ಸಲಹಲಿ ನಮ್ಮ ವಧೂವರರ ॥ ೬

ಚಿನ್ನದ ಎದೆಗಟ್ಟು ಚನ್ನದಾಭರಣಗಳು ।
ಚೆನ್ನೆ ಮಹಾಲಕುಮಿ ಧರಿಸಿದಳು ।
ಚೆನ್ನೆ ಮಹಾಲಕುಮಿ ಧರಿಸಿದಳಾ ಜಗ ।
ನ್ಮಾನ್ಯೆ ವಧೂವರರ ಸಲಹಲಿ ॥ ೭

ಮುತ್ತಿನಕ್ಷತೆಯಿಟ್ಟು ರತ್ನದ ಮುಕುಟವ ।
ನೆತ್ತಿಯಮೇಲೆ ಧರಿಸಿದಳು ।
ನೆತ್ತಿಯಮೇಲೆ ಧರಿಸಿದಳಾದೇವಿ ।
ಭಕ್ತಿಯು ಜನರ ಸಲಹಲಿ ॥ ೧೧

ಈ ಶೋಭಾನೆಯಲ್ಲಿರುವ ಕಥೆಯೆಂದರೆ ಸಮುದ್ರಮಥನ, ಲಕ್ಷ್ಮೀದೇವಿಯ ಅವತಾರ ಮತ್ತು ಸ್ವಯಂವರ. ತನಗನುರೂಪನಾದ ವರನನ್ನು ಹುಡುಕುತ್ತಾ ಬರುವಾಗ ಪಜ್ತಿಯಲ್ಲಿ ಸಾಲಾಗಿ ಕುಳಿತಿರುವ ಮುನಿಗಳನ್ನೂ ದೇವತೆಗಳನ್ನೂ ನೋಡಿ, ಕೆಳಗೆ ಕಂಡ ಅರ್ಥವತ್ತಾದ ಮಾತಾಡಿದಂತೆ ನುಡಿಗಳಿವೆ :

ಪದ :—ಕೆಲವರು ತಲೆಯೂರಿ ತಪಗೈದು ಪುಣ್ಯವ ।
ಘಳಿಸಿದ್ದರೇನೂ ಫಲವಿಲ್ಲ ।
ಜ್ವಲಿಸುವ ಕೋಪದಿ ಶಾಪವ ಕೊಡುವರು ।
ಲಲನೆಯರಿವರ ನೊಲಿಸುವರೇ ? ೧೭

ಎಲ್ಲ ಶಾಸ್ತ್ರವನೋದಿ ದುರ್ಲಭ ಜ್ಞಾನವ ।
ಕಲ್ಲಿಸಿಕೊಡುವ ಗುರುಗಳು ।
ಬಲ್ಲಿದರ ಧನಕೆ ಮರುಳಾಗಿಪ್ಪರು ಗಡ ।
ಸಲ್ಲದ ಪೌರೋಹಿತ್ಯಕ್ಕೊಳಗಾದರು ॥ ೧೮

ಕಾಮವರ್ಜಿತನೊಬ್ಬ ಕಾಮಿಸಿಗೆ ಸೋತನೊಬ್ಬ ।
ಭಾಮಿನಿಯ ಹಿಂದೆ ಹರಿದವ ।
ಕಾಮಾಂಧನಾಗಿ ಮುನಿಯು ಕಾಮಿನಿಗೈದಿದ ।
ಕಾಮದಿ ಗುರುತಲ್ಪಗಾಮಿಯೊಬ್ಬ । ೧೯

ಈ ರೀತಿ ಮುನಿಗಳ ಮತ್ತು ದೇವತೆಗಳ ನ್ಯೂನತೆಯನ್ನು ಹೇಳುತ್ತಾ :—

ಪದ :—ಒಂದೊಂದು ಗುಣಗಳು ಇದ್ದಾವು ಇವರಲ್ಲಿ ।
ಸಂದಣಿಸಿಹವು ಬಹು ದೋಷ ।

ಕುಂದೆಳ್ಳಷ್ಟಿಲ್ಲದ ಮುಕುಂದನೆ ಗತಿಯೆಂದು ।
ಇಂದಿರೆ ಪತಿಯ ನೆನೆದಳು ॥ ೨೯

ಎಂಬುದಾಗಿ ನಾರಾಯಣನನ್ನು ನೆನೆದ ಕಥೆ ವಿಸ್ತರಿಸಿದೆ. ಶೋಭಾನೆಯ ಕಡೆಯಲ್ಲಿ :

ಪದ:—ಈ ಪದನ ಪಾಡಿದ ವಾದಿರಾಜಮುನಿಯ
ಶ್ರೀಪತಿಯಾದ ಹಯವದನ ॥
ತಾಪವ ಕಳೆದು ತನ್ನ ಚರಣದ ಸ ।
ಮೀಪದಲ್ಲಿಟ್ಟು ಸಲಹಲಿ– ॥ ೧೦೮

ಇಂತು ಸ್ವಪ್ನದಲಿ ಬೋಧಿಸಿಕೊಂಡ ಲಕ್ಷ್ಮೀ
ಕಾಂತನ ಕಂದನೆನಿಸುವ ॥
ಸಂತರ ಮೆಚ್ಚಿಸಿದ ವಾದಿರಾಜೇಂದ್ರಮುನಿ
ಸಂಥದಿ ಪೇಳಿದ ಪದವಿದು ॥ ೧೦೯

ಶ್ರೀಯರಸ **ಹಯವದನ**ಪ್ರಿಯ ವಾದಿರಾಜ
ರಾಯ ರಚಿಸಿದ ಪದವಿದು ॥
ಆಯುಷ್ಯಭಾವಿಷ್ಯ ದಿನದಿನಕೆ ಹೆಚ್ಚುವುದು
ರಾಯಸದಿಂದ ಸುಖಿಸುವರು ॥ ೧೧೦

ಜೊಮ್ಮನ ದಿನದಲ್ಲಿ ಒನ್ಮೊನ್ಮೆ ಈ ಮದುವೆ
ಕ್ರಮ್ಮದಿಮಾಡಿ ವಿನೋದಿಸುವ ॥
ನಮ್ಮ ನಾರಾಯಣಗು ಈ ರಮ್ಮೆಗಡಿಗಡಿಗು ।
ಜನ್ಮವೆಂಬುದು ನರನಟನೆ ॥ ೧೧೧

ಮದುವೆಯ ಮನೆಯಲ್ಲೀ ಪದನ ಪಾಡಿದರೆ
ಮದುಮಕ್ಕಳಿಗೆ ಮುದವಹುದು ॥
ವಧುಗಳಿಗೆ ವಾಲೆ ಭಾಗ್ಯ । ದಿನದಿನಕೆ ಹೆಚ್ಚುವುದು ।
ಮದನಯ್ಯನ ಕೃಪೆಯಿಂದ ॥ ೧೧೨

ಶೋಭನವೆನ್ನಿರೆ ಸುರರೊಳು ಸುಭಗನಿಗೆ ।
ಶೋಭನವೆನ್ನಿ ಸುಪ್ರಿಯಗೆ ।
ಶೋಭನವೆನ್ನಿ ತ್ರಿವಿಕ್ರಮರಾಯಗೆ ।
ಶೋಭನವೆನ್ನೀ ಸುಗುಣನಿಗೆ ॥ ಶೋಭಾನೆ ॥

ವಾದಿರಾಜರ [illegible] ಮಗಳು ಪರಮಾನಂದ
ಭರಿತಳಾಗಲು [illegible] ಶ್ರೀಯಿಂದ ಸ್ವಾಮಿಗಳಿಗೆಯು ಮ
[illegible] ವಾದಿರಾಜರಿಗೆ ಧಾರೆ [illegible]

ರಿಯ ಅನೇಕ ಭಾಗವು ಈಗ ಕೈತಪ್ಪಿಹೋಗಿದ್ದರೂ ಹಿಂದಿನ ಗುರುತಾಗಿ ಕೆಲವು ಭಾಗ ಅವಶೇಷವಾಗಿದೆ.

ವಾದಿರಾಜರು ಬದರಿಕಾಶ್ರಮಕ್ಕೆ ಹೋಗಿ ಬಂದಾಗಿನಿಂದ ತ್ರಿವಿಕ್ರಮೋಪಾಸನೆ ಮಾಡಲಾರಂಭಿಸಿದ್ದರೆಂದು ಹಿಂದೆ ತಿಳಿಸಿದೆಯಷ್ಟೆ! ಈಗ ಬದರಿಯಲ್ಲಿರುವ ಶ್ರೀಮನ್ಮಧ್ವಾಚಾರ್ಯರವರಿಂದ ತ್ರಿವಿಕ್ರಮಮೂರ್ತಿಯನ್ನು ತರಿಸಿ ಸ್ವಾದಿಯಲ್ಲಿ ಪ್ರತಿಷ್ಠಿಸಬೇಕೆಂಬ ಯೋಚನೆಯು ರಾಜರ ಮನಸ್ಸಿಗೆ ಬಂದಿತು. ಇಂಗಿತಜ್ಞನಾದ ಅರಸಪ್ಪನಾಯಕನು ಸ್ವಾದಿಯಲ್ಲಿ ಯಾವ ಪ್ರಸಿದ್ಧ ದೇವಾಲಯವೂ ಇಲ್ಲದಿರುವುದರಿಂದ ಯಾವುದಾದರೊಂದು ಭಗವನ್ಮೂರ್ತಿಯನ್ನು ಪ್ರತಿಷ್ಠಿಸಬೇಕೆಂದು ರಾಜರನ್ನು ಪ್ರಾರ್ಥಿಸಿದನು. ರಾಜರು, ನಮ್ಮ ಸಂಕಲ್ಪವೂ ಹಾಗೆಯೇ ಇದೆ; ತಕ್ಕ ದೇವಾಲಯ ನಿರ್ಮಾಣವಾಗಬೇಕೆಂದು ನಾಯಕನಿಗೆ ತಿಳಿಸಿದರು. ನಾಯಕನು ಮಹದಾಜ್ಞೆಯೆಂದು ಪ್ರಸಿದ್ಧ ಶಿಲ್ಪಿಗಳನ್ನು ಕರೆಸಿ ದಿವ್ಯ ದೇವಾಲಯವನ್ನು ಕಟ್ಟಿಸಲಾರಂಭಿಸಿದನು. ಯಂತ್ರಗಳ ಸಹಾಯವಿರದ ಆ ಕಾಲದಲ್ಲಿ ಒಂದೊಂದು ದೊಡ್ಡ ಶಿಲೆಯನ್ನು ಮೇಲ್ಭಾವಣಿಗೇರಿಸಬೇಕಾದರೂ ನೂರಾರು ಜನರು ಸರಪಣಿಗಳಿಂದಲೂ ಹಗ್ಗಗಳಿಂದಲೂ ಬಿಗಿದು ಬಹುಶ್ರಮದಿಂದ ಸೆಳೆದುಕೊಳ್ಳಬೇಕಾಗಿತ್ತು. ಆ ಸಮಯದಲ್ಲಿ ಒಂದು ಶಿಲೆಯು ಮೇಲಕ್ಕೆ ಸಾಗದೆ ಕೆಳಗಿದ್ದ ನೂರಾರು ಜನರ ಪ್ರಾಣಹಾನಿಯಾಗುವ ಸಂಭವವುಂಟಾಯಿತು. ಅರಸಪ್ಪನಾಯಕನಿಂದ ಕಲ್ಲುಕುಟುಕನವರೆಗೂ ಎಲ್ಲರೂ ವಾದಿರಾಜರ ಮಹಾಮಹಿಮೆಗಳನ್ನು ಅರಿತವರಾಗಿದ್ದುದರಿಂದ, ಕಲ್ಲುಕುಟುಕನು ಶಿಲೆಯನ್ನು ಕುರಿತು–'ವಾದಿರಾಜರಾಣೆ, ನೀನು ಕೆಳಗೆ ಬಿದ್ದರೆ' ಎಂದು ಹೇಳಿ ನಿರುಪಾಯನಾಗಿ ನಿಂತುಕೊಂಡನು. ಕೂಡಲೆ ಆ ಶಿಲೆಯು ಕೆಳಕ್ಕೆ ಬೀಳದೆ ಅಂತರಾಳದಲ್ಲೇ ನಿಂತುಬಿಟ್ಟಿತಂತೆ! ಈ ಸಂಗತಿಯನ್ನು ಕೇಳಿದ ವಾದಿರಾಜರು ತಾವೇ ಆ ಶಿಲೆಯನ್ನು ವಿಶೇಷ ಪ್ರಯತ್ನವಿಲ್ಲದೆ ಜೋಡಿಸಿದರಂತೆ! ಈವತ್ತಿಗೂ ಅಲ್ಲಿನ ಜನರು ಆ ಶಿಲೆಯನ್ನು ತೋರಿಸಿ ಯಾತ್ರಿಕರಿಗೆ ಈ ಕಥೆಯನ್ನು ತಿಳಿಸುತ್ತಾರೆ.

ದೇವಾಲಯವು ಪೂರ್ತಿಯಾದನಂತರ, ಶಾಲಿವಾಹನಶಕ ೧೫೦೪ ನೇ ಚಿತ್ರಭಾನು ಸಂ॥ ವೈಶಾಖ ಶುದ್ಧ ಪೂರ್ಣಿಮಾದಿವಸ ತ್ರಿವಿಕ್ರಮ ಪ್ರತಿಷ್ಠೆಯಾಗಬೇಕೆಂದು ವಾದಿರಾಜರು ನಿಶ್ಚಯಮಾಡಿದರು. ಮೂರ್ತಿಯೇ ಬರಲಿಲ್ಲ – ಪ್ರತಿಷ್ಠೆ ಹೇಗೆಂದು ಜನರು ಸಂಶಯಗ್ರಸ್ತರಾದರು. ಜಲಾಧಿವಾಸ ಧಾನ್ಯಾಧಿವಾಸಗಳಿಂದ ನೂತನ ವಿಗ್ರಹವನ್ನು ಪ್ರತಿಷ್ಠಿಸುವಂತೆ ನಮ್ಮ ತ್ರಿವಿಕ್ರಮ ಪ್ರತಿಷ್ಠೆ ಇಲ್ಲವೆಂದೂ, ಶ್ರೀಮದಾಚಾರ್ಯರ ಪೂಜೆಯಲ್ಲಿರುವ ತ್ರಿವಿಕ್ರಮನು ರಥ ಸಮೇತನಾಗಿ ಬರುವನೆಂದೂ, ಇಲ್ಲಿ ನಡೆಯುವ ಪ್ರತಿಷ್ಠೆಯೆಂಬುವುದು ಕೇವಲ ಮಹಾಪೂಜೆ ಮಾತ್ರವೆಂದೂ, ಸಂಶಯಗ್ರಸ್ತರಿಗೆ ವಾದಿರಾಜರು ತಿಳಿಸಿದರು. ದೇವಾಲಯದ ಉತ್ತರ ಭಾಗದಲ್ಲಿ ಧವಳಗಂಗೆಯೆಂಬ ದಿವ್ಯ ಸರೋವರವು ನಿರ್ಮಿತವಾಯಿತು. ನಾರಾಯಣಭೂತರು ವಾದಿರಾಜರ ಅನುಗ್ರಹ ಬಲದಿಂದ ಬದರಿಗೆ ಹೋಗಿ ಶಿಲಾರಥ ಸಹಿತವಾದ ತ್ರಿವಿಕ್ರಮಮೂರ್ತಿಯನ್ನು ಸಕಾಲದಲ್ಲಿ

ತಂದಿಳಿಸಿದನು. ಸೋಮನಾಥಪುರದಲ್ಲಿ ವಾದಿರಾಜರು ಹೋಮ ಪೂಜಾದಿಗಳನ್ನು ನಡೆಸಿ, ಶ್ರೀ ತ್ರಿವಿಕ್ರಮ ಪ್ರತಿಷ್ಠೆಯನ್ನು ಮಾಡಿದರು.

ತ್ರಿವಿಕ್ರಮಮೂರ್ತಿಯ ಶಿಲಾರಥಕ್ಕೆ ನಾಲ್ಕು ಗಾಲಿಗಳಿರುವ ಕಾರಣವಿರುವುದಕ್ಕೆ ಬದಲಾಗಿ ಮೂರೇ ಗಾಲಿಗಳುಳ್ಳದ್ದಾಗಿದೆ. ಬದರಿಯಿಂದ ಬರುವ ಮಾರ್ಗದಲ್ಲಿ ನಾರಾಯಣಭೂತನು ತನ್ನನ್ನು ದುರಿಸಿದ ರಕ್ಷಣವನ್ನು ರಥದ ಗಾಲಿಯನ್ನು ಕಿತ್ತು ಬಿಸಾಡಿ ಹೊಡೆದನೆಂತಲೂ, ಆ ಕಾರಣದಿಂದ ಈಗ ಮೂರೇ ಗಾಲಿಗಳಿರುವುವೆಂತಲೂ ಅಲ್ಲಿನವರು ಕಾರಣವನ್ನು ತಿಳಿಸುತ್ತಾರೆ.

ತ್ರಿವಿಕ್ರಮಮೂರ್ತಿಯ ಪ್ರತಿಷ್ಠೆ ಕಾಲದಲ್ಲಿ ಅರಸಪ್ಪನಾಯಕನು ಅನೇಕ ದ್ರವ್ಯವನ್ನೂ ಭೂಸ್ಥಿತಿಯನ್ನೂ ಸಮರ್ಪಣೆ ಮಾಡಿದನೆಂದು ಅಲ್ಲಿನ ಶಿಲಾಶಾಸನವು ತಿಳಿಸುತ್ತದೆ. ವಾದಿರಾಜರು ತ್ರಿವಿಕ್ರಮಮೂರ್ತಿ ಪ್ರತಿಷ್ಠೆಮಾಡಿದ ದಿನದಿಂದ ಇವತ್ತಿನವರೆಗೂ ಪ್ರತಿ ಫಾಲ್ಗುಣ ಶುದ್ಧ ನವಮಿಯಿಂದ ಪೌರ್ಣಿಮಾ ಪರಿಯಂತರ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆದುಬರುತ್ತಿದೆ. ತ್ರಿವಿಕ್ರಮ ಪ್ರತಿಷ್ಠೆಯಾದಮೇಲೆ ಹದಿನೇಳು ವರ್ಷಗಳಷ್ಟು ಕಾಲ ವಾದಿರಾಜರು ಪಾರ್ಥಿವ ದೇಹದಿಂದಿದ್ದಂತೆ ಗೊತ್ತಾಗುತ್ತದೆ. ತಮ್ಮ ಸರದಿಗೆ ಬಂದ ಐದನೇ ಪರ್ಯಾಯವನ್ನು ತಮ್ಮ ಚಿಕ್ಕ ವಯಸ್ಸಿನ ಶಿಷ್ಯರಾದ ವೇದವೇದ್ಯರಿಗೊಪ್ಪಿಸಿ, ಆ ಕಾಲದಲ್ಲಿ ತಾವು ಸ್ವಾದಿಯಲ್ಲಿ-ಉಡುಪಿಯಲ್ಲಿ ನಡೆಸುವಂತೆಯೇ ಪರ್ಯಾಯೋತ್ಸವವನ್ನು ನಡೆಸಿದರು. ಸ್ವಾದಿಯಲ್ಲಿ ಉಡುಪಿಯಲ್ಲಿದ್ದಂತೆ ಅನಂತೇಶ್ವರ, ಚಂದ್ರೇಶ್ವರರೆಂಬ ಶಿವದೇವಾಲಯಗಳನ್ನೂ, ಕಡೆಗೋಲಕೃಷ್ಣನಿಗೆ ಬದಲಾಗಿ, ಮುರಲೀಧರ ಕೃಷ್ಣನನ್ನೂ ಪ್ರತಿಷ್ಠಿಸಿದರು. ವಾದಿರಾಜರು ಉಡುಪಿಯನ್ನು ಬಿಟ್ಟು ಸ್ವಾದಿಯಲ್ಲಿ ವಾಸ ಮಾಡಿದರೂ, ಅವರ ದರ್ಶನಾರ್ಥವಾಗಿ ದೇಶದೇಶಗಳಿಂದ ಜನರು ಬರಲಾರಂಭಿಸಿದರು. ಉಡುಪಿಗೆ ಹೋಗುವ ಯಾತ್ರಿಕರ ಸಂಖ್ಯೆ ಕಡಮೆಯಾಯಿತು. ವಿವಿಧ ರೋಗಪೀಡಿತರು ವಾದಿರಾಜರು ಅಭಿಮಂತ್ರಿಸಿಕೊಟ್ಟ ಅನ್ನದಿಂದಲೂ, ಅವರು ಸ್ಪರ್ಶಮಾಡಿಕೊಟ್ಟ ಮೃತ್ತಿಕಾ ಸೇವನೆಯಿಂದಲೂ, ಕಡೆಗೆ ಪಾದೋದಕದಿಂದಲೂ, ರೋಗಮುಕ್ತರಾಗುತ್ತಾ ಬಂದರು. ದೈವಾನುಗ್ರಹದಿಂದ ತಮಗೀ ಶಕ್ತಿ ಬಂದಿರುವುದನ್ನು ಸ್ವೈಕುಂಠ ವರ್ಣನೆಯಲ್ಲೇ ವಾದಿರಾಜರು—

ಅದುಭುತವಲ್ಲವೆ ಹಯವದನ ತನ್ನ ।
ಪದ ಪದುಮಗಳ ಸನ್ನಿಧಿಯ ।
ಹುದುಗಿಸಿ ವಾದಿರಾಜನ ಪಾದೋದಕದಿ ವಿ ।
ವಿಧ ಭೀತಿಗಳನೊದೆದಟ್ಟುವುದು ॥ ೧೮೦

ಭೂತಪ್ರೇತಗಳಿವನ ಪಾದೋದಕ ಭೀತಿಗೆ ।
ಕಾತರಿಸಿ ದಶದಿಶಿಗೋಡುವವು ।
ಪ್ರೀತಿಯಿಂದಲಿ ಜನರು ಕೊಡುವ ಕಾಣಿಕೆಗೆ ಶ್ರೀ ।
ನಾಥ ಜನರ ಪಾಲಿಸುವ ॥ ೧೮೧

ಎಂಬ ಮಾತುಗಳಿಂದ ಹಾಡಿ ಪರಮಾತ್ಮನಲ್ಲಿ ಎಲ್ಲವನ್ನೂ ಸಮರ್ಪಿಸಿರುವರು.

ವಾದಿರಾಜರೆಂದರೆ-**'ಪಿರಿಂಚಿ ಪ್ರಪಂಚೇ ಮದನ್ಯಃ ಕವೀಃಕಃ'** ಎಂಬುದಾಗಿ ಡಂಗುರ ಹೊಡೆಸಿದವರು. ಕವಿತಾಸರಣಿಯೊದಗಿದ ಕೂಡಲೇ ನರ ಸ್ತುತಿಪ್ರಾಸ್ತು ತಿಗೈದು, ಕವೀಶ್ವರರೆಂದು ಮದಗರ್ವಿತರಾದ ಪಂಡಿತರ ಮದವನ್ನು ಮುರಿದು ಅವರನ್ನೂ ಭಕ್ತಿಮಾರ್ಗಕ್ಕೆ ಎಳೆದುತಂದವರು. ಶಾಸ್ತ್ರವಾದಕ್ಕೆ ಬಂದವರೊಡನೆ ವಾದಿಸಿ, ಸಿದ್ಧಾಂತವನ್ನು ಸ್ಥಾಪಿಸಿ, ವಾದಿರಾಜರೆಂಬ ಸಾರ್ಥಕ ನಾಮದಿಂದ ಕರೆಸಿಕೊಂಡವರು. ಸಂಸ್ಕೃತವು ದೇವಭಾಷೆಯೆಂದು ಕರೆಸಿಕೊಂಡು ಎಷ್ಟೇ ಸನ್ಮಾನ್ಯವಾಗಿದ್ದರೂ, ಮಾತೃಭಾಷೆಯಾದ ಕನ್ನಡಕ್ಕೂ ಸಂಸ್ಕೃತದಷ್ಟೇ ಗೌರವವನ್ನು ಸಂಪಾದಿಸಿ, ಭಕ್ತಿಪುಂಜಗಳಾದ ಸಾವಿರಾರು ದೇವರ ನಾಮಗಳನ್ನು ಹಾಡಿದವರು. ಇಂತಹ ವಾದಿರಾಜರ ಹೆಸರು ಕರ್ಣಾಟಕಕ್ಕೇ ಒಂದು ಬಿರುದಲ್ಲವೆ ?

೬

ವಾದಿರಾಜರ ಬೃಂದಾವನ ಪ್ರವೇಶ

ವಾದಿರಾಜರು ತಮ್ಮ ವೃದ್ಧಾಪ್ಯದಲ್ಲಿ ಸ್ವಾದಿಯಲ್ಲೇ ವಾಸಮಾಡಿದರು. ವಯೋಧರ್ಮದಿಂದ ಅವರ ದೃಷ್ಟಿಪಾಟವವು ಕಡಮೆಯಾಯಿತು. ಕಡೆಯ ಸಾರಿ ಉಡುಪಿಗೆ ಹೋಗಿ ಶ್ರೀಕೃಷ್ಣನ ದರ್ಶನ ಮಾಡಬೇಕೆಂದು ಸಂಕಲ್ಪಿಸಿ, ಸ್ವಾದಿಯಿಂದ ಪ್ರಯಾಣ ಮಾಡಿದರು. ಉಡುಪಿಯಲ್ಲಿ ಶ್ರೀಕೃಷ್ಣನ ಬಳಿಗೆ ಹೋಗುವುದರೊಳಗೆ ತಮ್ಮ ದೃಷ್ಟಿ ಮಾಂದ್ಯವು ಪರಿಹಾರವಾಗದಿದ್ದರೆ, ಅವನ ದರ್ಶನ- ಪೂಜೆಗಳನ್ನು ಹೇಗೆ ಮಾಡಬಲ್ಲೆನೆಂದು ಸ್ವಾಮಿಯನ್ನು—

ಯದಿ ದಿಶಸಿನಯನ ಪಟುತಾ ।
ತರ್ಹಿ ಭವಚ್ಚರಣ ಕಮಲ ಸೇವಾಯೈ ।
ಅಯಾಸ್ಯಾಮಿ ದಯಾಲೋ ।
ಕೃಷ್ಣ ನ ಚೇತ್ಪೂಜಯಾಮಿ ಕಥ ಮಂಧಃ ॥ ೧

ಎಂಬುದಾಗಿ ಆರ್ಯಾವೃತ್ತದಿಂದ ಸ್ತೋತ್ರ ಮಾಡಿದರು.

ಇದೇ ಅಭಿಪ್ರಾಯವು ವಾದಿರಾಜರು ಮಾಡಿದ ಕಡೆಯ ದೇವರನಾಮವೆಂದು ಪ್ರಸಿದ್ಧವಾಗಿರುವ, ಕೇದಾರಗೌಳದ **'ಈಗಲೋ- ಇನ್ನಾವಾಗಲೋ ಈ ತನುವು ಪೋಗದಿರದು'** ಎಂಬುದರಲ್ಲೂ ಒಡೆದು ಕಾಣುತ್ತಿರುವುದು. ಮತ್ತು ವೈಕುಂಠ ವರ್ಣನೆಯ ಕಡೆಕಡೆಯಲ್ಲಿ ಬರೆದಿರುವ ನೂರಾರನೇ ನುಡಿಯಲ್ಲಿ ಸಹ ಇದೇ ಅಭಿಪ್ರಾಯವಿರುವುದು.

ಆ ನುಡಿಯೆಂದರೆ—

ಕಣ್ಣು ಕಾಣದ ಬಲು ಜೀರ್ಣ ಮನೂಜನ್ನ |
ಮನ್ನವ ತಿದ್ದಿ ಮಂಗಳವನಿತ್ತು |
ಉನ್ನತ ಕೀರ್ತಿಯ ಜಗದೊಳು ತುಂಬಿಸಿದ | ಪ್ರ
ಸನ್ನ **ಹಯವದನ** ನಿನಗೆಣೆಯೆ || ೧೦೬

ಇನ್ನು **ಹಯವದನ** ಎನ್ನಿಹ ಪರಗತಿಗೆ |
ನಿನ್ನ ಕಾರುಣ್ಯ ಕಾರಣವೊ |
ಅನ್ಯಥಾವರಿಯೆ ಶರಣ್ಯ ನೀ ಕೈಬಿಡದಿರು |
ಎನ್ನ ರಕ್ಷಿಪ ಭಾರ ನಿನ್ನದಯ್ಯಾ || ೧೦೭

ಈ ರೀತಿಯಿರುವುದು.

'ಈಗಲೋ ಇನ್ನಾವಾಗಲೋ' ಎಂಬ ಪದವಾದರೂ ಬಹು ಭಕ್ತಿಜನಕ ವಾಗಿರುವುದರಿಂದ, ವಾಚಕರ ಅವಗಾಹನೆಗೆ ಬರಲೆಂದು ಈ ಕೆಳಗೆ ಬರೆಯಲಾಗಿದೆ.

ಕೇತಾರಗೌಳ—ಛಾಪುತಾಳ

ಈಗಲೋ ಇನ್ನಾವಾಗಲೋ | ಈ ತನುವು ಪೋಗದಿರದು || ಪ.
ಭೋಗದಾಶೆಯ ಬಿಡಿಸಯ್ಯ | ನಾಗಶಯನ ನಳಿನ ನಯನ || ಅ.

ಎಂಭತ್ತುನಾಲಕು ಲಕ್ಷ | ಯೋನಿಗಳಲ್ಲಿ ಜನಿಸಿ |
ಅಂಬುಜಾಕ್ಷ ನೊಂದೆನಯ್ಯ | ಹಿಂದೆ ಮಾಡಿದಘದಿಂದ |
ಕುಂಭೀಪಾಕ ಮೊದಲಾದ | ಕುತ್ಸಿತ ನರಕದಿ ಬಿದ್ದು |
ಉಂಬ ದುಃಖವ ಬಿಡಿಸಯ್ಯ | ಉದಧಿ ಸದನ | ಉರಗಶಯನ || ೧

ಹೊನ್ನು ಮಣ್ಣಿನಾಶೆ ಬಿಡದೋ | ಪುಣ್ಯಕೇ ಮನ ಒಡಂಬಡದೋ |
ಎನ್ನದೆಂಬೋ ಮಮತೆ ತಗ್ಗದು | ಧನ್ಯಜನಕೆ ಶಿರವು ಬಾಗದು |
ನಿನ್ನ ವಾರ್ತೆ ಕರ್ಣ ಕೇಳದು | ಅನ್ಯವಾರ್ತೆಗೆ ಹೊತ್ತು ಸಾಲದು |
ಇನ್ನು ಇದರೊಳು ಹೇಸಿಕೆ ಬಾರದು | ಮುನ್ನಿನ ಗತಿಗೆ ಸಾಧನ ತೋರದು | ೨

ವೃದ್ಧನಾದೆನು ಪಲ್ಲಳಿಲ್ಲವು | ಬಿದ್ದವು ಕಣ್ಣು ಕಾಣಲೊಲ್ಲವು |
ಎದ್ದು ನಿಲ್ಲಲಾರೆನಯ್ಯಾ | ಉದ್ಧರಿಸೋ **ಹಯವದನ** |
ಬುದ್ಧಿ ನಿನ್ನ ದಿವ್ಯಪಾದ | ಪದ್ಮವ ನೆನೆವಂತೆ ಮಾಡೊ |
ಹೊದ್ದಿದವರ ಪೊರೆವ ಕರುಣಾಬ್ಧಿಯೇ ನೀನೆನಗೆ ಬಂಧು | ೩

ಹೀಗೆ ಸ್ತೋತ್ರ ಮಾಡುತ್ತಾ ವಾದಿರಾಜರು ಉಡುಪಿಯನ್ನು ಸೇರಿದರು. ಒಡನೆಯೇ ಮಧ್ವ ಸರೋವರದಲ್ಲಿ ಮಿಂದು ಗರ್ಭಾಂಕಣದಲ್ಲಿ ಶ್ರೀಕೃಷ್ಣನೆದುರಿಗೆ ಬಂದು ನಿಂತರು. ಅದುವರೆಗೆ ಮಂದವಾಗಿದ್ದ ದೃಷ್ಟಿಯು ಸ್ಫುಟವಾಗಿ ಶ್ರೀಕೃಷ್ಣನ ವಿಶ್ವರೂಪದ ದಿವ್ಯ ದರ್ಶನವೇ ಆಯಿತು.

ಮಹಾತ್ಮರುಗಳು ಲೋಕಕಲ್ಯಾಣಕ್ಕಾಗಿ ತಮ್ಮ ಅಮೂಲ್ಯ ತಪಶ್ಶಕ್ತಿಯನ್ನಾದರೂ ಉಪಯೋಗಿಸಿ, ಶರಣಾಗತರ ಇಷ್ಟಾರ್ಥಗಳನ್ನು ಸಲಿಸುವರು. ಸತ್ತವರನ್ನು ಬದುಕಿಸುವುದೇ ಮೊದಲಾದ ಮಹಿಮೆಗಳನ್ನು ತೋರಿಸುವರು. ಸ್ವವಿಷಯದಲ್ಲಿ ಮಾತ್ರ ದೇಹಸಂಬಂಧವಾಗಿ ಏನು ಕಷ್ಟಗಳೊದಗಿದರೂ, ಅದನ್ನು ಪ್ರಾರಬ್ಧಕರ್ಮವೆಂದು ಶಾಂತಿಯಿಂದ ಅನುಭವಿಸುವರು. ಶ್ರೀಕೃಷ್ಣನು ಪರಂಧಾಮಕ್ಕೆ ತೆರಳಲು ವ್ಯಾಧನ ಬಾಣಹತಿಯನ್ನು ಕಾರಣವಾಗಿ ಮಾಡಿಕೊಂಡನು. ಭೀಷ್ಮಾಚಾರ್ಯರು ಶರತಲ್ಪದಲ್ಲಿ ಶಯನ ಮಾಡಿ, ಸರಳುಗಳ ಬಾಧೆಯನ್ನು ಆನಂದದಿಂದ ಸಹಿಸಿದರು. ಅಶ್ವತ್ಥಾಮರಂಥ ಚಿರಂಜೀವಿಗಳು ಪ್ರಣಬಾಧೆಗೊಳಗಾದರು. ಪಾಂಡವರು ಪುತ್ರಶೋಕವನ್ನನುಭವಿಸಿದರು. ಅಂತೆಯೇ ವಾದಿರಾಜರು ವೃದ್ಧಾಪ್ಯದಲ್ಲಿ ಕೆಲವು ಕಾಲ ಅಂಧತ್ವವನ್ನನುಭವಿಸಿದರು. ಜ್ವರ ಪ್ರಾಪ್ತಿಯಾದರೆ, ಪೂಜಾಕಾಲದಲ್ಲಿ ಆ ಜ್ವರವನ್ನು ದಂಡದಲ್ಲಿ ಆವಾಹಿಸಿ ಪೂಜೆಯನ್ನು ನಡೆಸುತ್ತಿದ್ದರು. ಆಗ ದಂಡವು ಥರ ಬಂದಂತೆ ನಡುಗುವುದು ನೋಡಿದವರಿಗೆಲ್ಲಾ ಕಾಣುತ್ತಿತ್ತು. ಪೂಜೆ ಮುಗಿದೊಡನೆ ಆ ಜ್ವರವನ್ನು ತಾವು ಆಕರ್ಷಣೆ ಮಾಡಿ ಅದರ ಸಂಕಟಕ್ಕೊಳಗಾಗುತ್ತಿದ್ದರು.

ಉಡುಪಿಯನ್ನು ಬಿಟ್ಟು ತಮ್ಮ ಅಂತಿಮಕಾಲವನ್ನು ಸ್ವಾದಿಯಲ್ಲೇ ಕಳೆಯಬೇಕೆಂದು ನಿಶ್ಚಯಿಸಿದ್ದುದಕ್ಕೆ ತಕ್ಕಂತೆ, ಅರಸಪ್ಪನಾಯಕನ ಪ್ರಾರ್ಥನೆಗಳೂ ದಿನದಿನಕ್ಕೆ ಹೆಚ್ಚಾಗುತ್ತಾ ಬಂದವು. ವಾದಿರಾಜರು, ಉಡುಪಿಯಲ್ಲಿ ತಮ್ಮ ಕಡೆಯ ವಂದನೆಯನ್ನು ಶ್ರೀಕೃಷ್ಣನಿಗರ್ಪಿಸಿ, ಸ್ವಾದಿಗೆ ಪ್ರಯಾಣ ಬೆಳೆಸಿದರು. ಸ್ವಾದಿಯನ್ನು ಸೇರುತ್ತಲೇ ಮಹಾರಾಜನು ಅಭೂತಪೂರ್ವವಾದ ಸ್ವಾಗತವಮಾಡಿ, ಸ್ವಾಮಿಗಳನ್ನು ಅವರ ಮಠದಲ್ಲಿ ತಂದಿಳಿಸಿದನು. ಉಡುಪಿಗೆ ಪ್ರಯಾಣ ಮಾಡುವ ಕಾಲದಲ್ಲಿ ಇನ್ನೂ ಅಪೂರ್ಣವಾಗಿದ್ದ ದೇವಾಲಯಗಳ ಕಟ್ಟಡವು, ಅರಸಪ್ಪನಾಯಕನ ಗುರುಭಕ್ತಿ ವಿಶೇಷದಿಂದ ಪೂರ್ಣವಾಗಿರುವುದನ್ನು ನೋಡಿ, ವಾದಿರಾಜರಿಗೆ ಪರಮಾನಂದವಾಯಿತು. ರಾಜರು ನಾಯಕನನ್ನು ಕರೆದು–'ಪ್ರಭುವೇ ನೀನು ಮಾಡಬೇಕಾಗಿದ್ದ ದೇವರ ಸೇವೆಯು ಪೂರ್ತಿಯಾಯಿತು; ಭೂತರಾಜನಿಗೂ ನನಗೂ ಸ್ಥಳನಿರ್ಮಾಣಮಾಡುವುದು ಮಾತ್ರ ಬಾಕಿಯಾಯಿತು' ಎಂದರು. ಅರಸಪ್ಪನು–'ಸರ್ವವೂ ಸ್ವಾಮಿಗಳದೇ ಆಗಿರುವಾಗ, ಸ್ವಾಮಿಗಳಿಗೆ ಪ್ರತ್ಯೇಕ ಸ್ಥಳ ನಿರ್ಮಾಣ ಮಾಡಲು ನಾನ್ಯಾರು' ಎಂದು ಕೇಳಿದನು. ರಾಜರು–'ಹಾಗಲ್ಲ, ನಮಗೆ ಬೃಂದಾವನವಾಗಬೇಕು; ಭೂತರಾಜನಿಗೆ ಸ್ಥಳನಿರ್ದೇಶವಾಗಬೇಕು. ಬೃಂದಾವನಗಳು ಐದಾಗಬೇಕು. ಈಗಿನಿಂದಲೇ ಸಿದ್ಧವಾಗಬೇಕು' ಎಂದರು. ಬೃಂದಾವನದ ಮಾತು, ಅರಸಪ್ಪನಿಗೆ ಅಶುಭದ ಮಾತೆಂದು ತೋರಿತು. ಕಂಬನಿಗರೆಯುತ್ತಾ, ಬೃಂದಾವನದ ಮಾತು ಈಗೇಕೆಂದನು. ರಾಜರು ಅರಸನನ್ನು ಏಕಾಂತದಲ್ಲಿ ಕರೆದು, 'ನಾವು ಮೃತರಾದ ನಂತರ ಬೃಂದಾವನಪ್ರವೇಶ ಮಾಡುವವರಲ್ಲ. ನಮ್ಮ ಸುತ್ತಲೂ ಬ್ರಹ್ಮ ವಿಷ್ಣು ಮಹೇಶ್ವರ ವಾಯುದೇವರುಗಳ ಸನ್ನಿಧಾನ ವಿಶಿಷ್ಟವಾದ ನಾಲ್ಕು ಬೃಂದಾವನಗಳಾಗಬೇಕು. ಈ ವರ್ಷದ ತ್ರಿವಿಕ್ರಮನ ರಥೋತ್ಸವವನ್ನು ನಡೆಸಿ, ತರುವಾಯ ನಾವಾದರೂ ಶರೀರ

ದಿಂದಲೇ ಬೃಂದಾವನ ಪ್ರವೇಶ ಮಾಡುವೆವು. ಬೃಂದಾವನ ಪ್ರವೇಶದಿಂದ ನಮಗೆ ಯಾವ ಹಾನಿಯಿಲ್ಲ. ಯಾವ ಬಾಧೆಯೂ ಇಲ್ಲ. ಆದ್ದರಿಂದ ತಕ್ಕ ಸಿದ್ಧತೆಗಳಾಗಬೇಕು' ಎಂದು ಹೇಳಬೇಕಾದ ಸಮಾಧಾನೋಕ್ತಿಗಳನ್ನು ಹೇಳಿಕಳುಹಿಸಿದರು.

ಅರಸಪ್ಪನಾಯಕನು ಗುರ್ವಾಜ್ಞೆಗೆ ಪ್ರತಿ ಹೇಳಲಾರದೆ, ಮನಸ್ಸಿಗುಂಟಾದ ಖೇದವನ್ನು ಸಹಿಸಲಾರದೆ, ಕಂಬನಿಗರೆಯುತ್ತಲೇ ಮೇನೆಯಲ್ಲಿ ಕುಳಿತು ಅರಮನೆಯನ್ನು ಸೇರಿದನು.

ಮರುದಿನದಿಂದ ರಾಜನು ಯಾವಾಗಲೂ, ವಾದಿರಾಜರ ಬಳಿಯಲ್ಲೇ ಖಿನ್ನನಾಗಿ ಕೂಡುತ್ತಿದ್ದನು. ರಾಜಾಜ್ಞೆಯಿಂದ ಭೂತನಾಥನ ಸ್ಥಾನವೇರ್ಪಟ್ಟಿತು. ಪಂಚವೃಂದಾವನಗಳು, ಅವುಗಳಮೇಲೆ ಚಿತ್ರಿಸಬೇಕಾದ ಮತ್ಸ್ಯಾದಿ ದಶಾವತಾರಗಳಿಂದ ಶೋಭಾಯಮಾನವಾಗಿ ನಿರ್ಮಿತವಾದುವು. ಬೃಂದಾವನಗಳ ನಿರ್ಮಾಣವನ್ನು ನೋಡಿ ಜನರು ಚಕಿತರಾದರು. ದಿನದಿನಕ್ಕೆ ಜನರಿಗೆ ಸ್ವಾಮಿಗಳ ದರ್ಶನವು ದುರ್ಲಭವಾಗುತ್ತಾ ಬಂತು. ಪಟ್ಟ ಶಿಷ್ಯರಾದ ವೇದವೇದ್ಯರೂ ಅರಸಪ್ಪನಾಯಕನೂ ಎಡೆಬಿಡದೆ ಸ್ವಾಮಿಗಳ ಬಳಿಯಲ್ಲಿರುತ್ತಿದ್ದರು.

ಪದ್ಧತಿಯಂತೆ ಫಾಲ್ಗುಣಮಾಸವು ಪ್ರಾಪ್ತವಾಯಿತು. ಶುದ್ಧ ನವಮಿಯ ದಿನ ರಥೋತ್ಸವಾಂಗವಾದ ಅಂಕುರಾರ್ಪಣವಾಯಿತು. ಎಂದಿಗಿಂತ ಉತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಪೌರ್ಣಮಿಯ ಮಹಾರಥವನ್ನು ಕ್ರಮವಾಗಿ ವಾದಿರಾಜರೂ, ವೇದವೇದ್ಯರೂ, ಮಹಾರಾಜನೂ, ಸಕಲ ಪ್ರಜೆಗಳೊಡನೆ ಕಲೆತು ಕ್ಲೃಪ್ತಸ್ಥಾನದಲ್ಲಿ ಎಳೆತಂದು ನಿಲ್ಲಿಸಿದರು. **ದೇಹಾಯಾಸವಾಗಿದ್ದುದರಿಂದ ವಾದಿರಾಜರು ಮಠದ ಏಕಾಂತ ಸ್ಥಳದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು.** ಗುರ್ವಾಜ್ಞೆಯನ್ನು ಪಡೆದು ನಾಯಕನು ಅರಮನೆಗೆ ಪ್ರಯಾಣ ಮಾಡಿದನು. ವೇದವೇದ್ಯರು ಮಠದ ಪೂಜಾಕಾರ್ಯತತ್ಪರರಾದರು.

ಇಂದ್ರದೂತರು

ಆ ಕಾಲದಲ್ಲಿ ಇಂದ್ರದೇವರಿಂದ ಆಜ್ಞಪ್ತರಾದ ದೇವದೂತರು ವಾದಿರಾಜರ ಶಿರಸ್ಸಿನಲ್ಲಿ ಪುಷ್ಪವೃಷ್ಟಿಯನ್ನು ಕರೆದು, ಸಮ್ಮುಖದಲ್ಲಿ ಕೈಜೋಡಿಸಿಕೊಂಡು ನಿಂತರು. ರಾಜರು, ಆ ದೇವದೂತರನ್ನು ನೋಡಿ, ಮುಗುಳ್ನಗೆಯಿಂದ – 'ನಮ್ಮನ್ನು ಕರೆಯುವುದಕ್ಕೆ ಬಂದಿರಲ್ಲವೆ ?' ಎಂದು ಕೇಳಿದರು. ದೇವದೂತರು — 'ಅಹುದು. ದೇವೇಶನ ಆಜ್ಞೆಯಾಗಿದೆ. ಭೂಲೋಕವಾಸದ ತಮ್ಮ ಅವಧಿಯು ಮುಗಿಯಿತು. ತಾವಿನ್ನು ವಿಮಾನಾರೂಢರಾಗಿ ನಮ್ಮೊಡನೆ ಬರಬೇಕು. ನಮ್ಮ ಸಾಹಸವನ್ನು ಕ್ಷಮಿಸಬೇಕು.'

ವಾದಿರಾಜರು—'ಆಗಲಿ, ಉತ್ಸವಾಂಗವಾದ ಅವಭೃತಸ್ನಾನಮಾಡಿ ಬರುವೆವು. ಮನುಷ್ಯಮಾನದ ಮೂರು ದಿನಗಳು ಇಲ್ಲಿರಬೇಕಾಗಿದೆಯೆಂಬ ಸಂಗತಿಯನ್ನು ದೇವರಾಜನಿಗೆ ತಿಳಿಸಿರಿ'.

ತಪೋಧನರ ಮಾತಿಗೆ ಪ್ರತಿಹೇಳಲು ಶಕ್ಯವಾಗಲಿಲ್ಲ. ದೇವದೂತರು –'ಮಹೆ ದಾಜ್ಞೆ' ಎಂದು ತೆರಳಿದರು.

ಈ ಅಭಿಪ್ರಾಯವನ್ನು ಮಹಾನುಭಾವರಾದ ಜಗನ್ನಾಥದಾಸರು '**ವಾದಿರಾಜ**' ಎಂಬ ದೇವರನಾಮದಲ್ಲಿ–

'ಯತಿವರನು ತ್ರಿವಿಕ್ರಮನ ರಥೋತ್ಸವ ।
ಸಮಯವರಿತು ಉತ್ಕ್ರಮಣವ ತೊರೆದ ॥ ವಾದಿರಾಜ ॥
ಬಂದು ಕರೆಯಲು ಪುರಂದರನಾಳ್ಗಳ ।
ಹಿಂದಟ್ಟಿದ ಕರ್ಮಂದಿಗಳರಸ ॥ ವಾದಿರಾಜ ॥

ಎಂಬ ನುಡಿಗಳಾಗಿ ಹಾಡಿರುತ್ತಾರೆ.

ವಾದಿರಾಜರು ಉತ್ಸವಾಂಗವ ಅವಭೃತಸ್ನಾನವನ್ನು ಮಹೋತ್ಸವದಿಂದ ನೆರೆ ವೇರಿಸಿದರು. ಶಿಷ್ಯರಿಗೆಲ್ಲಾ ಫಲ ಮಂತ್ರಾಕ್ಷತೆಗಳನ್ನು ಕೊಟ್ಟರು. ಸ್ವಯಂ ಬೃಂದಾ ವನದಲ್ಲಿ ಕುಳಿತು, ತಾವು ಜಪಸರವನ್ನು ಹೊರಗೆ ಹಾಕಿದ ಕೂಡಲೇ ಸಂಪುಟಶಿಲೆಯನ್ನು ಮುಚ್ಚಬೇಕೆಂದು ಆಜ್ಞೆಗೈದರು. ಫಾಲ್ಗುಣ ಬಹುಳ ತೃತೀಯಾದಿವಸ (ಶಾ. ೧೫೪೨ ಶಾರ್ವರಿ ಸಂ|-ಕ್ರಿ. ಶ. ೧೬೦೦) ರಾಜರು ಹೇಳಿದಂತೆ ಜಪಸರವು ಕೆಳಗುರುಳಿತು. ಇದೇನೋ ಅತ್ಯಂತ ವಿಚಿತ್ರವಾಗಿದೆಯೆಂದು ಎದುರುನೋಡುತ್ತಿರುವ ಜನರ ಮಧ್ಯದಲ್ಲಿ ವಿಮಾನಾರೂಢರಾಗಿ ಪ್ರಯಾಣ ಮಾಡುತ್ತಿರುವ ವಾದಿರಾಜರು, ಸ್ವರ್ಣಪಾದುಕೆಗಳನ್ನೂ ಶೇಷವಸ್ತ್ರವನ್ನೂ ಮೇಲಿನಿಂದ ಅಭಯಸೂಚನೆಗೋ ಎಂಬಂತೆ ಅನುಗ್ರಹಿಸಿದರು. ಜನರೂ ಜಯಜಯವೆಂದು ಘೋಷಣಮಾಡಿದರು. ಉತ್ತರ ಕ್ಷಣದಲ್ಲಿ ಸರ್ವರೂ ಖಿನ್ನ ರಾಗಿ, ನಿರಾಶರಾಗಿ, ಕರಗತವಾಗಿದ್ದ ಕಲ್ಪವೃಕ್ಷವು ಮಾಯವಾಯಿತೆಂದು ದುಃಖಿತ ರಾದರು.

ಭಾರತೀಯ ಯತಿಗಳ ಇತಿಹಾಸದಲ್ಲಿ ಸಶರೀರರಾಗಿ ಬೃಂದಾವನ ಪ್ರವೇಶಮಾಡಿ ದವರಲ್ಲಿ ವಾದಿರಾಜರು ಮೊದಲನೆಯವರು. ಅನಂತರ ಎಷ್ಟೋ ಕಾಲದ ಮೇಲೆ ರಾಘ ವೇಂದ್ರಸ್ವಾಮಿಗಳೂ ವಾದಿರಾಜರಂತೆಯೇ ಸ್ವಯಂ ಬೃಂದಾವನ ಪ್ರವೇಶಮಾಡಿದರು. ಮೂರನೆಯವರಿನ್ನೂ ದೃಷ್ಟಿಗೋಚರವಾಗಿಲ್ಲ. ಒಂದುನೂರಾ ಇಪ್ಪತ್ತು ವರ್ಷಗಳ ಜೀವಿತದಲ್ಲಿ, ನೂರು ವರ್ಷಗಳಷ್ಟುಕಾಲ ಆಡಿದ ಮಾತುಗಳೆಲ್ಲ ಅತಿಮಾನುಷ – ಮಾಡಿದ ಕೆಲಸಗಳೆಲ್ಲ ಅತಿಮಾನುಷಗಳೆಂದು ಶತ್ರುಮಿತ್ರರಿಂದಲೂ ಹೊಗಳಿಸಿಕೊಂಡು, ಭರತ ಭೂಮಿಯನ್ನು ಮೂರು ಮೂರುಬಾರಿ ಸಂಚರಿಸಿ, ಲಕ್ಷಾವಧಿ ಪಾಮರ ಜನರನ್ನು ಉದ್ಧಾರಮಾಡಿದವರು ಮಹಾನುಭಾವರಾದ ವಾದಿರಾಜರು. ವ್ಯಾಸರಾಯರಂತೆಯೇ ತಾವೂ ದೊಡ್ಡ ಗ್ರಂಥಕರ್ತರೆನಿಸಿ ಸಂಸ್ಕೃತಕ್ಕೆ ಸಮವಾದ ಸ್ಥಾನವನ್ನೇ ಕನ್ನಡಕ್ಕೂ ಕೊಟ್ಟು, ಕನ್ನಡ ವಾಙ್ಮಯವನ್ನು ಉದ್ಧಾರಮಾಡಿದವರು ವಾದಿರಾಜರು. ಬೃಂದಾವನ ಸ್ಥರಾದಮೇಲೂ ಅಂದಿನಿಂದ ಇಂದಿನವರೆಗೆ ಭಕ್ತಾನುಕಂಪಿಗಳಾಗಿ, ಸೇವಾ ಮಾಡಿದವರಿಗೆ ವಿವಿಧ ಇಷ್ಟಾರ್ಥಗಳನ್ನು ಕೊಡುತ್ತಿರುವವರು ವಾದಿರಾಜರು. ಈ ಹೊತ್ತಿನ ದಿನವಲ್ಲಿ

ವಾದಿರಾಜರ ಪಾದೋದಕ, ಶ್ರೀ ಬೃಂದಾವನಸ್ಥ ಮೃತ್ತಿಕಾಸೇವನೆಗಳಿಂದ ಅನೇಕ ಅಪರಿಹಾರ್ಯ ವ್ಯಾಧಿಗಳು ಪರಿಹಾರವಾಗುತ್ತಿವೆ. ಜ್ಞಾನಸಂಪಾದನೆ ಮಾಡಬೇಕೆನ್ನುವವರು ಸ್ವಾದಿಯಲ್ಲಿ ಈ ಗುರುರಾಜರ ಸೇವೆಮಾಡಿ ಜ್ಞಾನಸಂಪನ್ನರಾಗುತ್ತಿದ್ದಾರೆ. ಮಹಾಮಂತ್ರಗಳನ್ನು ಪುರಶ್ಚರಣೆ ಮಾಡುವಂತೆ, ವಾದಿರಾಜಕೃತ ರೂಪವಾದ ಸ್ತೋತ್ರಗಳನ್ನು ಪಠಿಸಿ, ಜನರು ಇಷ್ಟಾರ್ಥಗಳನ್ನು ಪಡೆಯುತ್ತಿದ್ದಾರೆ. ಬೃಂದಾವನದ ಮೂಲ ಮೃತ್ತಿಕೆಯನ್ನು ಭಕ್ತಜನರು ತಮ್ಮ ತಮ್ಮ ಮನೆಗಳಲ್ಲಿ ತಂದಿಟ್ಟುಕೊಂಡು ಪೂಜೆ ಮಾಡುತ್ತಿದ್ದಾರೆ. ವರ್ಷ ಮುನ್ನೂರಾದರೂ ವಾದಿರಾಜರು ಪೂಜಿಸಿದ ತ್ರಿವಿಕ್ರಮಮೂರ್ತಿಯ ರಥೋತ್ಸವವನ್ನು ಆ ಮಠದ ಪೀಠಿಗೆಯವರು ಅದ್ಯಾಪಿ ನಡೆಸುತ್ತಾ ಬರುತ್ತಿರುವುದಲ್ಲದೆ, ವಾದಿರಾಜರ ಉತ್ಸವವನ್ನೂ ಮಾಡುತ್ತಿದ್ದಾರೆ. ಗಹನವಾದ ಅರಣ್ಯಪ್ರಾಂತವಾದರೂ ಉತ್ಸವಕಾಲದಲ್ಲಿ ಸಾವಿರಾರು ಸಂಖ್ಯೆಯ ಯಾತ್ರಿಕರು ಬಂದು ಸೇರುತ್ತಾರೆ. ವಾದಿರಾಜರಿಗಿಂತ, ವಾದಿರಾಜರ ಶಿಷ್ಯ ನಾರಾಯಣ ಭೂತನ ವೈಭವವು ಹಿರಿದಾಗಿ ಕಂಡುಬರುತ್ತಿದೆ. ಭೂತನಾಥನ ಸನ್ನಿಧಿಯಲ್ಲಿ, ಕಷ್ಟಕಾಣಿಕೆಗಳು ಹೇರಳವಾಗಿ ಬರುತ್ತಿವೆ. ಪಿಶಾಚಾದಿಗಳ ಭಯಗಳು ಪರಿಹಾರವಾಗುತ್ತಲಿವೆ. ಯಾರೋ ಮಹಾತ್ಮರು ಎಂದೋ ಇದ್ದವರು ಏನೋ ಅವರ ಕಥೆಯೆಂದು ಉದಾಸೀನತೆಯಿಂದ ಮರೆಯುವ ಚರಿತ್ರೆಯು ವಾದಿರಾಜರದಲ್ಲ. ಯಾರೋ ರಾಜರು ಬರೆದ ಶಾಸನದ ಆಧಾರದಿಂದ ಅನ್ವೇಷಕರು ತೋರಿಸಿಕೊಡುವ ಗತವೈಭವವು ವಾದಿರಾಜರದಲ್ಲ. ವಾದಿರಾಜರ ಚರಿತ್ರೆಯೆಂದರೆ ಮೂರ್ತಿವಂತ ಚರಿತ್ರೆ. ವಾದಿರಾಜರ ವೈಭವವೆಂದರೆ ಇವತ್ತಿಗೂ ಕಣ್ಣಿಗೆ ಕಾಣುತ್ತಿರುವ ವೈಭವ. ವಾದಿರಾಜರ ಮಹಿಮೆಯೆಂದರೆ ಅನುಭವಿಗಳನೇಕರ ಅನುಭವಕ್ಕೆ ಬರುತ್ತಿರುವ ಮಹಿಮೆ.

ಪೂರ್ವಪ್ರಕರಣಗಳಲ್ಲಿ ಹೇಳಿರುವಂತೆ, ಜಗನ್ನಾಥದಾಸರು, ವಾದಿರಾಜರಮೇಲೆ ಮಾಡಿರುವ ವಾದಿರಾಜರ ಸಂಕ್ಷೇಪ ಚರಿತ್ರೆಯನ್ನು ತಿಳಿಸುವ **'ವಾದಿರಾಜ'** ಎಂಬ ದೇವರ ನಾಮವನ್ನು ಸಂಪೂರ್ಣವಾಗಿ ಈ ಕೆಳಗೆ ಉದಹರಿಸುತ್ತದೆ. ಈ ಪದದ ಕೆಲವು ನುಡಿಗಳಲ್ಲಿರುವ ಮಹಿಮೆಗಳನ್ನು ಚರಿತ್ರೆಯಲ್ಲಿ ಬರೆದಿಲ್ಲ. ಕಾಲದೇಶ ನಿರ್ಣಯವಿಲ್ಲದ ಕಾರಣದಿಂದಲೂ ಚರಿತ್ರ ವಿಸ್ತಾರ ಭಯದಿಂದಲೂ ಅವನ್ನು ಓದಿಕೊಂಡರೇ ಗೊತ್ತಾಗುವುದೆಂದು ಸಂಕೋಚಪಡಿಸಲಾಗಿದೆ.

ರಾಗ ಪೂರ್ವಿ-ಆದಿತಾಳ

ವಾದಿರಾಜ | ಸಲಹೋ | ವಾದಿರಾಜ ಪ.

ವಾದಿರಾಜ ಗುರು | ನೀ ದಯವಾಗದೆ
ಈ ದುರಿತವ ಕಳೆ | ದಾದಪರ್ಯಾರೋ ಅ.

ಕಲಿಬಾಧೆಯು ವೆ | ಗ್ಗಳವಾಗಿದೆ ಈ
ಇಳೆಯೊಳು ಯತಿಕುಲ | ತಿಲಕ ಕೃಪಾಳೋ ೧

ದೇಶಿಕಾರ್ಯವಾ | ಗೀಶಕುವರ ತವ
ದಾಸ ಸಮೂಹವ | ನೀ ಸಲಹೈಯ್ಯಾ ೨

ಜನ್ಮಾಧಿ ವ್ಯಾ | ಧ್ಯುನ್ಮಾದ ಭ್ರಮ
ಸಿವ್ಮೊರೆ ಹೊಕ್ಕರಿ | ಗಿನ್ಮೊವಲುಂಟೇ ೩

ನೀ ಗತಿಯೆಂದನು | ರಾಗದಿ ನಂಬಿದ
ಭೋಗಿ ಪುರೀಶನ | ರೋಗವ ಕಳೆದೆ ೪

ಎಲರುಣಿ ಭಯಕಂ | ಜಿಲಿ ನಿಮ್ಮಾಸನ
ಕೆಳಗಿರೆ ಕಂಡದ | ನುಳುಹಿದ ಕರುಣೆ ೫

ಗರಮಿಶ್ರಿತ ನರ | ಹರಿನೈವೇದ್ಯವ
ಅರಿತು ಪೇಳೆ ಉಂ | ಡರಗಿಸಿ ಕೊಂಡೇ ೬

ಹಯವದನನ ಪದ ದ್ವಯಭಜಕಾಗ್ರಣಿ
ದಯದಿ ವಿಪ್ರನಿಗೆ | ನಯನಗಳಿತ್ತೇ ೭

ವೋದ ಮುನಿಪುತ ಮ | ಹೋದಧಿ ಪೂರ್ಣವಿ
ಧೂದಯ ಶರಣರ | ಕಾದುಕೊ ಧೊರೆಯೇ ೮

ಅರ್ಥಿಗಳಿಗೆ ಪುರು | ಷಾರ್ಥಕೊಡುವ ಸು
ತೀರ್ಥಪ್ರಬಂಧವ | ಕೀರ್ತನಗೈದೆ ೯

ಯಮಿವರನೆ ತ್ರಿವಿ | ಕ್ರಮನ ರಥೋತ್ಸವ
ಸಮಯವರಿತು ಬು | ತ್ಕ್ರಮಣವ ತೊರೆದೆ ೧೦

ಬಂದು ಕರೆಯಲು ಪು | ರಂದರ ನಾಳ್ಗಳ
ಹಿಂದಟ್ಟಿದ ಕ | ರ್ಮಂದಿಗಳರಸ ೧೧

ಭೂಮಿಪರುಪಟಳ | ಕಾಮಹೀನಾಥನು
ತಾ ವೈಮರೆದಿರೆ | ನೀ ಮುದವಿತ್ತೇ ೧೨

ನಿನ್ನೊಶನಾದ ಜಗನ್ನಾಥ ವಿಠಲನ
ಇನ್ನಾದರು ತೋ | ರೆನ್ನ ಮನದಲಿ ೧೩

ಇವಿಷ್ಟು ಪ್ರತಿಗಳಿಗೆ ಸೇರಿಸಲ್ಪಟ್ಟಷ್ಟು ವಿಷಯಗಳನ್ನು ಬರೆದರೂ [illegible] ವರ್ಷಗಳ ದೀರ್ಘಜೀವಿತದ ಶ್ರೀವಾದಿರಾಜರ ಚರಿತ್ರೆಯು [illegible]ವನ್ನು [illegible]ಗಳಿಲ್ಲ. ಕರ್ಣಾಟಕದ ಅನೇಕ ಭಾಗಗಳಲ್ಲಿ ಅನೇಕ ರೀತಿಯ ಹೇಳಿಕೆಗಳಿವೆ. ಅವುಗಳು ವಿಶೇಷವಾಗಿ ಮಹಿಮಾವರ್ಣನೆಗಳಾಗಿವೆ. ಅತಿಮಾನುಷ ವರ್ಗಗಳಲ್ಲಿ ಸೇರುವವುಗಳಾಗಿವೆ. ಮಠದಲ್ಲಿ ಬರೆದಿಟ್ಟ ವಾದಿರಾಜರ ಕಾಲದ ದಿನಚರ್ಯೆಗಳ [illegible]ಇಲ್ಲ. ಮಠಗಳಲ್ಲಿ ಬರೆ ದಿನಚರಿತ್ರೆ ಆಯಾ ದಿನ[illegible]

ಬಿಟ್ಟಿದ್ದರೆ, ಮೂರು ಶತಮಾನಗಳ ಮೇಲ್ಪಟ್ಟ ಕಾಲದಲ್ಲಿ ಆ ಕೃತಿಗಳು ಉಳಿಯಲು ಶಕ್ಯವಿಲ್ಲ. ವಾದಿರಾಜರ ನಂತರ ಅವರ ಶಿಷ್ಯರ ಕಾಲದಲ್ಲಿ ಬರೆದ **ಸ್ವಪ್ನಬೃಂದಾವನಾಖ್ಯಾನ** ಎಂಬ ದೊಡ್ಡದೊಂದು ಪುರಾಣಸರಣಿಯ ಸಾವಿರಾರು ಶ್ಲೋಕಗಳ ಪುಸ್ತಕವಿದ್ದು, ಅದಿನ್ನೂ ಹಸ್ತಪ್ರತಿಯಲ್ಲೇ ಇದೆ. ಅದರಲ್ಲಿರುವ ವಿಷಯಗಳು ಪ್ರಮೇಯಗಳಿಂದ ಕೂಡಿರುವುದರಿಂದ ಬಹು ಗಹನವಾಗಿವೆ. **ಅಣು ಬೃಂದಾವನಾಖ್ಯಾನ**ವೆಂಬ ಚಿಕ್ಕದೊಂದು ಸ್ತೋತ್ರವು ಸ್ವಾದಿಯಲ್ಲಿ ಶಿಲಾಲಿಖಿತವಾಗಿದೆ.

ಈ ಕಾಲದ ಜನರ ಬುದ್ಧಿವೇಗಕ್ಕೆ ತಕ್ಕಂತೆ ಅತಿಮಾನುಷಗಳೆನ್ನುವ ಭಾಗಗಳನ್ನು ಬದಿಗಿಟ್ಟು, ವಾದಿರಾಜರ ಮಹತ್ವವನ್ನು ಕಂಡುಹಿಡಿಯಬೇಕೆನ್ನುವವರಿಗೆ, ಅವರ ಗ್ರಂಥಗಳನ್ನೇ ಪರಿಶೀಲಿಸಬೇಕೆಂದು ಹೇಳುವುದಕ್ಕಿಂತ ಬೇರೆ ಇನ್ನೇನು ಮಾರ್ಗವೂ ತೋರಿ ಬರುವುದಿಲ್ಲ.

ಲೇಖಕರ ದೃಷ್ಟಿಯಿಂದ, ಭಕ್ತವಿಜಯಲೇಖಕನಿಗೆ, ಯಾವುದೊಂದು ವಿಷಯವನ್ನೂ ಕೂಲಂಕಷವಾಗಿ ಬರೆದನೆಂಬ ತೃಪ್ತಿ ಬರಲು ಅವಕಾಶ ದೊರೆತಿಲ್ಲ.

"ಪ್ರಾಂಶುಲಭ್ಯೇ ಫಲೇಲೋಭಾದುದ್ಬಾಹುರಿವ ವಾಮನಃ" ಎಂಬ ರಘುವಂಶೋಕ್ತಿಯಂತೆ ಲೇಖಕನ ಪ್ರಯತ್ನವಾಗಿದೆ. ಮಾಡುವುದೇನು ?

॥ ಶ್ರೀ ಪಾಂಡುರಂಗ ವಿಠಲಾಯನಮಃ ॥

ಶ್ರೀ ಪುರಂದರದಾಸರು

ಮನ್ಮನೋಭೀಷ್ಟದಾತಾರಂ ಸರ್ವಾಭೀಷ್ಟ ಫಲಪ್ರದಂ ।
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ಶ್ರೀ ಪುರಂದರದಾಸರ ಗುರುವರ್ಯರೂ ಸ್ವರೂಪೋದ್ಧಾರಕರೂ ಆದ ಶ್ರೀ ವ್ಯಾಸರಾಯಸ್ವಾಮಿಗಳು, ಪುರಂದರದಾಸರ ಗುಣಕಥನ ಮಾಡುತ್ತಾ, ಈ ಪದವನ್ನು ಮಾಡಿದ್ದಾರೆ.

ಕಾಂಬೋದಿ—ಝಂಪೆ

ದಾಸರೆಂದರೆ ಪುರಂದರ ದಾಸರಯ್ಯಾ
ವಾಸುದೇವ ಕೃಷ್ಣನ್ನ ಸೋಸಿ ಪೂಜಿಸುವಾ ಪ.

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದೂ ತುಲಸಿಮಾಲೆಗಳ ಧರಿಸಿ
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ
ಕಾಸು ಗಳಿಸುವ ಪುರುಷ ಹರಿದಾಸನೇ ? ೧

ಪಾಠಕನ ತೆರನಂತೆ ಪದಗಳನು ತಾ ಪಾಡಿ
ಕೂಟ ಜನರ ಮನವ ತೋಷಪಡಿಸಿ
ಗೂಟನಾಮವನಿಟ್ಟು ಕೋವಿದನು ತಾನೆನುತ
ಬೂಟಕೆಯ ಮಾಡಿದವ ಹರಿದಾಸನೇ ? ೨

ಡಂಭದಿಂ ಹರಿಸ್ಮರಣೆಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸಿ
ಅಂಬುಜೋದ್ಭವ ಪಿತನ ಆಗಮಗಳರಿಯದೆ
ತಂಬೂರಿ ಮೀಟಿದವ ಹರಿದಾಸನೇ ? ೩

ಯಾಯಿವಾರವಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ ? ೪

ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ
*ವಾತಸುತನಲ್ಲಿಹನ ವರ್ಣಿಸುತಲೀ

* ಮಾತುಮಾತಿಗೆ ಬಿಡದೆ ವರ್ಣಿಸುತಲೀ (ಪಾಠಾಂತರ)

ಗೀತನರ್ತನದಿ ಶ್ರೀಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರದಾಸರಿವರಯ್ಯಾ ೫

ಶ್ರೀ ಪುರಂದರದಾಸರು ಶ್ರೀ ವ್ಯಾಸರಾಯರ ಶಿಷ್ಯರು. ಲೋಕದಲ್ಲಿ ಗುರುಗಳನ್ನು ಶಿಷ್ಯರು ಸ್ತೋತ್ರಮಾಡುವುದುಂಟು. ಗುರುಗಳೇ ಶಿಷ್ಯರನ್ನು ಸ್ತೋತ್ರಮಾಡಿ ಹಾಡುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಯಾರು ಯಾರು ಎಷ್ಟೆಷ್ಟರಮಟ್ಟಿಗೆ ಭಾಗವತಧರ್ಮದ ಪುನರುದ್ಧಾರ ಮಾಡಿದವರೆಂದು ಹೆಸರು ಪಡೆದಿರಲಿ, ಯಾರು ಯಾರು ಎಷ್ಟೆಷ್ಟು ದೇವರ ನಾಮಗಳನ್ನು ಹಾಡಿರಲಿ, ಪುರಂದರದಾಸರು ಭಾಗವತಧರ್ಮಕ್ಕೆ ಮಾಡಿರುವ ಸೇವೆಯನ್ನು ಸ್ಮರಿಸದಿದ್ದರೆ, ಪುರಂದರದಾಸರ ದೇವರನಾಮಗಳನ್ನು ಹಾಡದಿದ್ದರೆ ಅದು ಭಾಗವತ ಧರ್ಮವೆನ್ನಿಸುವುದಿಲ್ಲ; ಅವರು ನಿಜವಾದ ಹರಿದಾಸರಾಗುವುದಿಲ್ಲ.

ಭಾಗವತ ಧರ್ಮೋಪದೇಶಕ್ಕೆ ವ್ಯವಸ್ಥಿತವಾದ ಮಾರ್ಗವನ್ನು ತೋರಿಸಿ ಕೊಟ್ಟವರು ಪುರಂದರದಾಸರು. ಕೀರ್ತನ ಮಾಡುವವರಿಗೆ ಹಾದಿಯನ್ನು ಹಾಕಿ ಕೊಟ್ಟವರು ಪುರಂದರದಾಸರು. ದಕ್ಷಿಣಭಾರತದ ಆಂಧ್ರ ತಮಿಳು ಕನ್ನಡ ನಾಡುಗಳಲ್ಲಿ ಪುರಂದರದಾಸರನ್ನು ಸ್ಮರಿಸದವರಿಲ್ಲ. ಅವರ ದೇವರನಾಮವೊಂದನ್ನಾದರೂ ಹಾಡದವರಿಲ್ಲ. ಪುರಂದರದಾಸರ ಹೆಸರಿನಲ್ಲಿ ಜಾತಿ ಮತ ವ್ಯತ್ಯಾಸ ನೋಡುವವರಿಲ್ಲ. ಇಂತಹ ಮಹಾಮಹಿಮರು ಪುರಂದರದಾಸರು. ಇಂತಹ ಉಪಕಾರಿಗಳು ಪುರಂದರದಾಸರು. ಮನುಷ್ಯಮಾತ್ರರಿಂದ ಸಾಧ್ಯವಾಗದ ಅನೇಕ ಮಹತ್ಕಾರ್ಯಗಳನ್ನು ಮಾಡಿರುವುದರಿಂದ ದಾಸರನ್ನು ಮನುಷ್ಯದೇಹದಲ್ಲಿ ಬಂದ ದೇವತೆಗಳೆಂದು ತಿಳಿಯಬೇಕು. ಈ ವಿಚಾರದಲ್ಲಿ ಅವರ ಶಿಷ್ಯಾಗ್ರೇಸರರಾದ ಶ್ರೀ ವಿಜಯದಾಸರು ಒಂದು ಉದಯರಾಗದಲ್ಲಿ ಪುರಂದರದಾಸರ ಸಂಪೂರ್ಣ ಚರಿತ್ರೆಯನ್ನು ಒಂಭತ್ತು ನುಡಿಗಳಾಗಿ ಹಾಡಿರುವರು.

ಭೂಪಾಳಿ

ಬಂದ ದುರಿತ ವಿನಾಶನಾ ಪ.
ಬಂದ ದುರಿತ ವಿನಾಶವಿಂದು ಪುರಂದರನ
ವಂದಿಸಿ ಅತಿ ಭಕುತಿಯಿಂದ ಸ್ಮರಿಸುವ ಜನರ
ಒಂದು ಮುಂದೇಳು ಕುಲಕೋಟಿಗಳ ಉದ್ಧಾರ
ಸಂದೇಹ ಸಲ್ಲಬಲ್ಲವರಿಗಿದು ಹರಿಯೇ ಅ.

ದ್ವಾರಕಾಪುರದಲ್ಲಿ ಶ್ರೀರಮಣ ಸಭೆಯೊಳಗೆ
ಚಾರುಮಂಚಿತನಾಗಿ ಕುಳಿತಿರಲು ಯದುಪರಿ
ವಾರ ಸುತ್ತಲು [illegible] ಸಮಯದಲ್ಲಿ
ವಾರಕಾಂತೆಯರು ಮದವೇರಿ ನೃತ್ಯವಮಾಡೆ
[illegible]
[illegible] ೧

ಬರುತಲೇ ವೈಕುಂಠಪುರದರಸಗೆರಗಿದರು
ಕರಗಳನು ಮುಗಿದು ಕಿನ್ನರಿ ಧರಿಸಿ ಹರುಷದಿಂ
ಸ್ವರವೆತ್ತಿ ರಾಗ ಮೂವತ್ತಾರರಿಂ ಯದುವರನ ಇದಿರಲಿ ನಿಂದು ಪಾಡಲಾಗ ||
ಎರಡು ಕಂಗಳ ಧಾರೆ ಸುರಿಯೆ ಬಾಷ್ಪೋದಕವು
ಕೊರಳುಬ್ಬಿ ತೊದಲುನುಡಿ ಮೈಸ್ಮರಣೆ ಹಾರಿ ಶಿರಿ
ಹರಿ ಹರೀ ಹರಿಯೆಂದು ಹರಿದಾಡುತಿರಲಾಗ ಸುರರು ಶಿರವನೆ ತೂಗಲು || ೨

ಅಚ್ಯುತನು ಪರಮ ಭಾಗವತನ ಭಕುತಿಗೆ
ಮೆಚ್ಚಿದೆನು ವರವಧಿಕ ಬೇಡು ಎಂದೆನಲಾಗ
ಮುಚ್ಚಿದಂಬಕಗಳನು ತೆರೆದು ಗೀರ್ವಾಣಮುನಿ ಎಚ್ಚರಿಕೆಯನುಗೊಳ್ಳುತ ||
ಅಚ್ಚಗನ್ನಿಕೆ ರಮಣ ದೀನಜನ ಮಂದಾರ
ನಿಚ್ಚಟೆನ್ನಯ ಕೂಡೆ ಬಿಡವಲಾಡೆನಲು ಕಲಿ
ಹೆಚ್ಚಿದ ಯುಗದಲ್ಲಿ ಸೊಲ್ಲಿಸುವೆ ಕೀರ್ತಿಗಳ ಬಿಚ್ಚಿ ತೋರಿಸುವೆನೆಂದ || ೩

ವರ ಪಡೆದು ನಾರದರು ಇರುತಿರಲು ಇತ್ತಲಾ
ಬರಲು ಕಲಿ ದೊರೆತನವು ಕಾಲಾಂತರಕ್ಕೆ ಶಿರಿ
ವರನ ದಯದಿಂದಲ್ಲಿ ಜನಿತರಾದರು ಪುರಂದರವೆಂಬ ನಗರಿಯಲ್ಲಿ ||
ಚರಿಸಿದರು ಕೆಲವು ದಿನ ಸಂಸಾರ ವೃತ್ತಿಯಲಿ
ಜರಿದು ವೈರಾಗ್ಯವನು ತೊಟ್ಟು ದೃಢಮನಸಿನಲಿ
ತರುಣಿ ಮಕ್ಕಳು ಸಹಿತ ಸೇರಿದರು ಕಿಷ್ಕಿಂಧಗಿರಿ ತುಂಗ ಪಂಪವಲ್ಲಿ || ೪

ವಾಸವನು ಮಾಡಿದರು ಪ್ರಹ್ಲಾದನವತಾರ
ವ್ಯಾಸರಾಯರ ಬಳಿ ಮುದ್ರೆ ಗುರುಮಂತ್ರ ಉಪ
ದೇಶವನೆಗೊಂಡು ವೈಷ್ಣವರಾಗಿ ಪುರಂದರದಾಸರೆಂಬೋ ಪೆಸರಿಲಿ ||
ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ
ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ ದು
ರಾಶೆಯನೆ ತೊರೆದು ವಿಠಲಸನ್ನಿಧಿಯಲ್ಲಿ ವಾಸವಾದರು
ಧರ್ಮ ನಡತೆಯಲಿ ಬಿಡದೆ || ೫

ಅಂದು ಭಕುತಗೆ ಇತ್ತ ಭಾಷೆ ತಪ್ಪಲಿ ಬಾರ
ದೆಂದು ಇಂದಿರಾಪತಿಯೊಲಿದವರ ಮುಂದೆ
ಒಂದರಘಳಿಗೆ ತೊಲಗದಲೆ ಕುಣಿದಾಡಿ ನಂದವನೆ ತೋರಿಕೊಳುತಾ ||
ಮಂದಭಾಗ್ಯರಿಗೆ ಈ ಪರಿಯುಂಟೆ ಸೊಬಗು ನಾ
ರ[illegible]ರಿಸಂದ ಕಾರಣದಿಂದ ಪರಬೊಮ್ಮ
ಬಂದು ಸಿಲುಕಿದನೆಂಬುದಿದಕೆ ಪ್ರಮಾಣವನು ಜಂಪದಲಿ ಕೇಳ್ಪುದು || ೬

ಉಪಾದಾನವನು ಬೇಡಿ ವಿಪ್ರರಿಗೆ ಪ್ರತ್ಯಕ್ಷ
ಅಪರಿಮಿತವಾಗಿ ಧನ ವಿಸ್ತರಿಸಲು ಇವರಲ್ಲಿ
ಗುಪಿತ ಚರಿತ್ರೆಯ ಕಂಡು ದೇವಮುನಿ ತಪಸಿಗಳು ತನ ಸುಫಲವಾಯಿತೆಂದು ॥
ತಪನ ಕಾಲದಲೆದ್ದು ದಾಸರ ಸದನದಲಿ
ಉಪಚಾರವನೆಗೊಂಡು ಧನ್ಯರಾದೆವು ಎನುತ
ಸುಪಥವನು ಇಕ್ಕೈಸಿ ತಾರತಮ್ಯಗಳಿಂದ ಉಪಚರಿಸುತಿರುತಿರ್ದರು ॥ ೭
ಅವರೆಂದ ವಚನಗಳೆ ವೇದಾರ್ಥಗಳಾಗಿ
ಅವನಿಯೊಳು ತುಂಬಿಹವು ಒಂದರೆ ಗ್ರಹಿಸಿದರೆ
ಭವರೋಗ ಭಸಿತಾಗಿ ಸುಜ್ಞಾನಸಂಬಂಧ ಭುವನ ನಿಧಿಯೊಳಗೆ ಮುಳುಗಿ ॥
ಪವನ ಮತವಿಡಿದು ಪರಿಪೂರ್ಣಮಾಚಾರದಲಿ
ತವಕದಿಂದಲಿ ಹರಿಯ ಪಾದಗಳನೇ ಕಂಡು
ಜವನಪುರದಾಟಿ ಜನ ತಪ ಸತ್ಯಲೋಕದಲಿ, ನವರೂಪದಲಿ ಇಪ್ಪರೋ ॥ ೮
ಏನೊ ಇದು ಎಂದು ದೂಷಿಸದಿರಿ ದಾಸರ
ಸೂನು ಪೇಳಿದನು ಗುರು ವ್ಯಾಸಮುನಿಗಳಿಗೆ
ಆ ನಾರದರೆ ಪುರಂದರದಾಸರೆಂಬಂಥ ಈ ನುಡಿಯು ಸಿದ್ಧಾಂತವು ॥
ಧ್ಯಾನದಲಿ ತಿಳಿದು ಸುಜ್ಞಾನಿಗಳ ಪದನಖ
ರೇಣಿನವನಾಗಿ ಬಿನ್ನೈಸಿದೆನು ಜ್ಞಾನಮಯ
ಆನಂದ ವಿಜಯವಿಠಲನ ಪಾದಾಂಬುಜವ ಕಾಣುವ ಜನರು ಲಾಲಿಸಿ ॥ ೯

ಮೇಲ್ಕಂಡ ಶ್ರೀ ವಿಜಯದಾಸರ ಪದದಂತೆ ಪುರಂದರದಾಸರು, ಭಗವದಾಜ್ಞೆಯಿಂದವತರಿಸಿದ ನಾರದ ಮಹಾಮುನಿಗಳು. ತಾವು ರಚಿಸಿದ ಭಕ್ತಿ ಸೂತ್ರಗಳನ್ನು (ನಾರದ ಭಕ್ತಿಸೂತ್ರ) ಆಚರಣೆಗೆ ತರಲು ಪುರಂದರದಾಸರಾಗಿ ಜನ್ಮತಾಳಿದವರು.

ನಾರದರು ಜನ್ಮ ತಾಳುವುದಕ್ಕೆ ಪೂನೆಗೆ ಹದಿನೆಂಟು ಮೈಲುಗಳ ದೂರದಲ್ಲಿರುವ ಪುರಂದರಗಡದಲ್ಲಿ ಕೋಟೀಶ್ವರರಾದ ವರದಪ್ಪನಾಯಕರ ವಂಶವನ್ನು ಆರಿಸಿಕೊಂಡರು. ಪುರಂದರಗಡವು ಆ ಕಾಲದಲ್ಲಿ ಅತಿ ಮುಖ್ಯವಾದ ದುರ್ಗವಾಗಿತ್ತು. ಆಗ ಅದು ಕರ್ನಾಟಕದ ಭಾಗವಾಗಿದ್ದುದರಿಂದ ಕನ್ನಡವು ಜನರ ಭಾಷೆಯಾಗಿತ್ತು. ನೆರೆಹೊರೆಯಲ್ಲಿ ಮಹಾರಾಷ್ಟ್ರ ಭಾಷೆಯಿದ್ದುದರಿಂದ, ಪುರಂದರಗಡದಲ್ಲಿ ಉಭಯ ಭಾಷೆಗಳ ಪ್ರಚಾರವೂ ಇದ್ದು, ಮಹಾರಾಷ್ಟ್ರರು ಶಕ್ತಿಯುತ್ತ ಪ್ರಬಲಿಸಿದಮೇಲೆ ಕನ್ನಡವು ಮರೆತುಹೋಯಿತು. ಅಚ್ಚ ಕನ್ನಡದೇಶದಲ್ಲೇ, ಮಹಾರಾಷ್ಟ್ರರ ಪ್ರಾಬಲ್ಯಕಾಲದಲ್ಲಿ ಮರಾಠೀ ದಫ್ತರಗಳಾದವೆಂದಮೇಲೆ ಪುರಂದರಗಡದಲ್ಲಿ ಈಗ ಕನ್ನಡವು ಮರೆತುಹೋಗಿರುವುದು ಆಶ್ಚರ್ಯದ ಸಂಗತಿಯೇನಲ್ಲ !

ವರದಪ್ಪನಾಯಕರಲ್ಲಿ ಐಶ್ವರ್ಯಕ್ಕೆ ತಕ್ಕಂತೆ ಸದಾಚರಣೆಯಿತ್ತು. ಪುರಂದರದಾಸರು ಶಾಲೀವಾಹನ ೧೪೦೬ರ ಸುಮಾರಿನಲ್ಲಿ ಜನಿಸಿದರು. ತಂದೆತಾಯಿಗಳು ಶಿಶುವಿಗೆ

ಶ್ರೀನಿವಾಸನಾಯಕನೆಂದು ನಾಮಕರಣ ಮಾಡಿದರು. ಶ್ರೀನಿವಾಸನು ಹೆಸರಿನಿಂದಲೂ ಕೃತಿಯಿಂದಲೂ ಶ್ರೀನಿವಾಸನೇ ಆಗಿದ್ದನು. ವರ್ಣೋಧರ್ಮವನ್ನನುಸರಿಸಿ, ಚೌಲೋಪನಯನಗಳಾದಂತೆ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ವಿದ್ಯಾಭ್ಯಾಸವೂ ಆಯಿತು. ರತ್ನಪರೀಕ್ಷೆ ಮೊದಲಾದ ವ್ಯವಹಾರ ಶಾಸ್ತ್ರಪಾಂಡಿತ್ಯವನ್ನೂ ವರದಪ್ಪನಾಯಕನು ಮಗನಿಗೆ ಉಂಟುಮಾಡಿಕೊಟ್ಟನು. ಗಾನಾಭಿರುಚಿಯಿದ್ದುದರಿಂದ ಶ್ರೀನಿವಾಸನಾಯಕನು ಸಂಗೀತವನ್ನೂ ಕಲಿತನು. ಧಾರ್ಮಿಕ ವಿದ್ಯೆ ಬರದಿರಬಾರದೆಂದು ತಂದೆಯು ಬಲವಂತವಾಗಿ ಸ್ವಲ್ಪ ಶಾಸ್ತ್ರಾಭ್ಯಾಸವನ್ನು ಸಹ ಮಾಡಿಸಿದನು. ವಯಸ್ಸು ಹದಿನೆಂಟು ತುಂಬಲು, ಸರಸ್ವತೀಬಾಯಿಯೆಂಬ ಶ್ರೀಮಂತ ಕನ್ನಿಕೆಯೊಡನೆ ಶ್ರೀನಿವಾಸನಾಯಕನ ವಿವಾಹವಾಯಿತು. ಶ್ರೀಮಂತನ ಮಗಳು, ಶ್ರೀಮಂತನ ಕೈಹಿಡಿದವಳು ಕುರೂಪಿಯಾಗಿರುವುದಂತೂ ಸಾಧ್ಯವಿಲ್ಲ. ರೂಪು ಗುಣಗಳಿಗೆ ತಕ್ಕ ಭೂತದಯೆಯೂ ದೈವಭಕ್ತಿಯೂ ಸರಸ್ವತೀಬಾಯಿಗೆ ಭೂಷಣಗಳಾಗಿದ್ದುವು. ಶ್ರೀನಿವಾಸನಾಯಕನಲ್ಲಿ ಔದಾರ್ಯವೊಂದರ ವಿನಾ ವಿನಯಾದಿ ಗುಣಗಳಿಗೇನೂ ಕಡಿಮೆಯಿರಲಿಲ್ಲ. ದೈವದ್ವೇಷವಿರದಿದ್ದರೂ ದೈವಭಕ್ತಿಯಿರಲಿಲ್ಲ. ದ್ರವ್ಯಲೋಭವೆಂಬುವುದು ಆತನ ಹುಟ್ಟುಗುಣವಾಗಿತ್ತು. ಯಾಚಕರನ್ನು ಕಂಡರೆ ಅವನಿಗೆ ಶತ್ರುವನ್ನು ಕಂಡಂತಾಗುತ್ತಿತ್ತು. ಯಾರಾದರೂ ಧರ್ಮಬೋಧನೆ ಮಾಡಿದರೆ–'ನಿಮ್ಮ ಬೋಧನೆಯೆಲ್ಲಾ ದುಡ್ಡಿಗಾಗಿ' ಎನ್ನುತ್ತಿದ್ದನು. ಲೋಭ ಗುಣದಿಂದವನು ನಾಸ್ತಿಕನಾದನು. ತಂದೆತಾಯಿಗಳು ಸತ್ತರೂ ಆತನ ಲೋಭ ಸಾಯಲಿಲ್ಲ. ಮಾಡಿಕೊಂಡ ಹೆಂಡತಿಯಾದರೂ ಅಳೆದುಕೊಟ್ಟಷ್ಟು ಪದಾರ್ಥಗಳನ್ನು ಮಾತ್ರ ಬಳಸಬೇಕಾಗಿತ್ತು. ರತ್ನಪಡಿ ವ್ಯಾಪಾರದಲ್ಲಿ ಆತನಿಗೆ ಸಮಾನರಿರಲಿಲ್ಲ. ಬಿಜಾಪುರ, ಗುಲ್ಬರ್ಗಾ, ವಿಜಯನಗರದ ರಾಜರುಗಳ ಆಸ್ಥಾನದಲ್ಲಿ ಅತ್ಯಂತ ಮಾನ್ಯ ವರ್ತಕನೆನಿಸಿದನು. ಬೆಳ್ಳಿ ಭಂಗಾರ ರತ್ನಪುಡಿ ವ್ಯಾಪಾರಗಳಿಂದ ಕೋಟ್ಯಾವಧಿ ಧನಾರ್ಜನೆ ಮಾಡಿ ನವಕೋಟಿ ನಾರಾಯಣನೆಂದು ಹೊಗಳಿಸಿಕೊಂಡನು. ಆತನಿಗೆ ನಾಲ್ಕುಜನ ಗಂಡು ಮಕ್ಕಳೂ ಒಬ್ಬ ಮಗಳೂ ಆದರು. ಕಡೆಯ ಮಗನ ವಿನಾ ಮಿಕ್ಕವರ ವಿವಾಹಗಳು ತಕ್ಕ ಶ್ರೀಮಂತ ಕುಟುಂಬಗಳ ಸಂಬಂಧದಲ್ಲೇ ಆದುವು. ವಿಜಯನಗರದ ವೀರನರಸಿಂಹ ಕೃಷ್ಣದೇವರಾಯರ ಆಸ್ಥಾನಕ್ಕೆ ಎಷ್ಟೋ ಸಲ ಹೋಗಿಬಂದರೂ, ಶ್ರೀನಿವಾಸನಾಯಕನು, ರಾಜಧಾನಿಯಲ್ಲೇ ಇದ್ದ ವ್ಯಾಸರಾಯರ ಸಂದರ್ಶನಕ್ಕೆ ಹೋದವನಲ್ಲ. ಶ್ರೀಮಂತಿಕೆಗೆ ತಕ್ಕ ದೇಹ ಸೌಖ್ಯವನ್ನು ನಾಯಕನು ಕಂಡವನಲ್ಲ-ಬಯಸಿದವನಲ್ಲ. ಎಡೆಗಾರನಾಗಿ ದೇಶದೇಶ ತಿರುಗಿ ಧನಾರ್ಜನೆ ಮಾಡುವುದರಲ್ಲಿದ್ದ ಆಸೆ-ಅಭಿಮಾನಗಳು ಆತನಿಗೆ ತನ್ನ ಪತ್ನೀಪುತ್ರರ ವಿಷಯದಲ್ಲಿರಲಿಲ್ಲ.

ಸರಸ್ವತೀಬಾಯಿಯಲ್ಲಾದರೋ ನಾಯಕನ ಎಲ್ಲ ಗುಣಗಳಿಗೂ ವಿರುದ್ಧ ಗುಣಗಳಿದ್ದುವು. ಆಕೆಯು ನಿರಂತರ ಪುರಾಣಶ್ರವಣಾದಿಗಳಿಂದ ಪರಮ ಆಸ್ತಿಕ ಶಿರೋಮಣಿಯಾಗಿದ್ದಳು. ಪತಿಯ ಸ್ವಭಾವವನ್ನು ನೋಡಿ, ಕನಿಕರದಿಂದ, ಸಮಯಸರಿತು ಧರ್ಮಮಾರ್ಗ ಬೋಧನೆ ಮಾಡುತ್ತಿದ್ದಳು. ಆದರೇನು, ಆಕೆಯ ಧರ್ಮೋಪದೇಶವು ಊಷರ ಕ್ಷೇತ್ರದಲ್ಲಿ ಬೀಜಾವಾಪನೆ ಮಾಡಿದಂತಾಗುತ್ತಿತ್ತು. ವಯಸ್ಸು ಮೂವತ್ತೈದಾದರೂ

ನಾಯಕನಲ್ಲಿ ಧರ್ಮಭಾವನೆ ಹುಟ್ಟಲಿಲ್ಲ. ಜನ್ಮಗಳಿತ್ತಿದ್ದ ಸಂಸ್ಕಾರಪ್ರೇರಣೆಯಿಂದಾದರೆ ಜೀವಿತದ ಕಾರ್ಯ ನೆರವೇರಬಹುದು. ಆದರೆ ಹಾಗೆ ಆಗುವಂತಿರಲಿಲ್ಲ.

ಶ್ರೀಹರಿಯು ತಾನು ಕೊಟ್ಟ ಹಣವನ್ನು ತಾನೇ ಸವೆಸಬೇಕೆಂದು ತನ್ನ ಸಂಕಲ್ಪಕ್ಕೆ ವಿಕಲ್ಪಬರುವುದೆಂದು, ನಾಯಕನಿಗೆ ಜ್ಞಾನೋದಯವನ್ನುಂಟುಮಾಡಲು, ವೃದ್ಧ ಬ್ರಾಹ್ಮಣರೂಪದಿಂದ ಬಾಲಕನೊಬ್ಬನನ್ನು ಕರೆದುಕೊಂಡು ಯಾಚಕನಾಗಿ ಆತನ ಬಳಿಗೆ ಬಂದನು.

ನಾಯಕನು ವಿಪ್ರನನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ವೃದ್ಧಬ್ರಾಹ್ಮಣನು 'ನಾಯಕರೆ, ನಾನೊಬ್ಬ ಬಡಬ್ರಾಹ್ಮಣ. ಈ ಬಾಲಕನಿಗೆ ಉಪನಯನಕಾಲ ಮೀರುತ್ತಾ ಬಂತು. ನಾವಕಾಶವಾಗಿರುವುದನ್ನು ನೋಡಿ, ಜಾತಿಯ ಜನರು ನನ್ನನ್ನು ಹೀಯಾಳಿಸುತ್ತಾರೆ. ವೃದ್ಧನಾದ್ದರಿಂದ ಎಲ್ಲ ಊರುಗಳಿಗೆ ಹೋಗಿ ಯಾಚಿಸಲಾರೆ. ಶ್ರೀಮಂತರಾದ ತಾವು ದೊಡ್ಡ ಮನಸ್ಸು ಮಾಡಬೇಕು. ಮಗನ ಉಪನಯನ ಮಾಡಿಸಿ, ಪುಣ್ಯಕ್ಕೆ ಭಾಗಿಗಳಾಗಬೇಕು' ಎಂದು ಕೇಳಿಕೊಳ್ಳುತ್ತಾ, ಆರು ತಿಂಗಳ ಕಾಲ ಆಶ್ರಯ ಮಾಡಿದನು. ನಾಯಕನಿಗೆ ಧರ್ಮಬುದ್ಧಿ ಹುಟ್ಟಲಿಲ್ಲ. ವೃದ್ಧನನ್ನು ಕಾಣುತ್ತಲೇ ಹುಬ್ಬುಗಂಟಿಕ್ಕಿ ಕೂಡುತ್ತಿದ್ದನು.

ಕಡೆಗೊಂದು ದಿನ ವೃದ್ಧಬ್ರಾಹ್ಮಣನು–'ಸ್ವಾಮಿ, ನಿಮಗೆ ಮನಸ್ಸು ಬಂದರೆ ಏನಾದರೂ ಕೊಡಿ, ಅಥವಾ ಇಲ್ಲವೆಂದಾದರೂ ಹೇಳಿರಿ. ನಾನು ವೃಥಾ ತಿರುಗಲಾರೆ ನೆಂದು ಖಂಡಿತವಾಗಿ ಕೇಳಿದನು. ನಾಯಕನು ಕೋಪಗೊಂಡು–ಸೇವಕರನ್ನು ಕುರಿತು, 'ಈತನನ್ನು ಎಷ್ಟು ಉದಾಸೀನತೆಯಿಂದ ಕಂಡರೂ, ಲಜ್ಜೆಗೆಟ್ಟು ಮತ್ತೆ ಮತ್ತೆ ಬರುತ್ತಿದ್ದಾನೆ. ಈತನನ್ನು ಹೊರಕ್ಕೆ ಕಳುಹಿಸಿರಿ. ಮತ್ತೆ ಬಂದರೆ ಒಳಕ್ಕೆ ಬಿಡಬೇಡಿರಿ' ಎಂದು ಕಟ್ಟಪ್ಪಣೆ ಮಾಡಿದನು. ಸೇವಕರು, ವೃದ್ಧ ಬ್ರಾಹ್ಮಣನೆಂದು ಮೈಮುಟ್ಟಲು ಹಿಂದುಮುಂದು ನೋಡುತ್ತಿರಲು–ಬ್ರಾಹ್ಮಣನು, 'ನಾಯಕರೇ! ನನ್ನನ್ನು ತಳ್ಳಿಸಬೇಡಿ. ಉಪನಯನ ಕಾರ್ಯ! ದೊಡ್ಡಮನಸ್ಸು ಮಾಡಿರಿ'ಎಂದು, ಮುಖಕ್ಕೆ ಮುಖವಿಟ್ಟಂತೆ, ಹಲ್ಕಿರಿದು ನಾಯಕನನ್ನು ಮತ್ತೆ ಯಾಚಿಸಿದನು.

ನಾಯಕನಿಗೆ ಆ ಪ್ರಾರ್ಥನೆಯನ್ನು ಕೇಳಿ ಮರುಕ ಹುಟ್ಟಲಿಲ್ಲ. ಆದರೆ ರೋಷ ಪ್ರಬಲವಾಯಿತು. ಒಡನೆ ಒಳಕ್ಕೆ ನಡೆದು ಸವೆದ ದುಡ್ಡುಗಳನ್ನು ತುಂಬಿಟ್ಟಿದ್ದ ಎರಡು ಚೀಲಗಳನ್ನು ತಂದು ಸುರಿದು, ಅವುಗಳಲ್ಲಿ ಒಂದು ದುಡ್ಡನ್ನಾರಿಸಿಕೊಳ್ಳೆಂದು ಗದರಿಸಿದನು. ಅದನ್ನು ಕಂಡು–ಅತ್ಯಂತ ಹರ್ಷಗೊಂಡ ಆ ವಿಪ್ರನು, ಒಂದನ್ನು ತೆಗೆದುಕೊಂಡು, ಬಾಲಕನೊಂದಿಗೆ ಎದ್ದು ಹೊರಟುಹೋದನು. ಅಷ್ಟೇ ಸಾಕೆಂದು ಕಾದಿದ್ದ ನಾಯಕನು ಚೀಲಗಳನ್ನು ತುಂಬಿಟ್ಟು ಹಣ ತೆಗೆದಿಟ್ಟುಕೊಂಡು, ತನ್ನ ಕಾರ್ಯತತ್ಪರನಾದನು.

ಆದರೆ, ಆ ವೃದ್ಧಬ್ರಾಹ್ಮಣನು ಅಷ್ಟಕ್ಕೇ ಬಿಡಲಿಲ್ಲ. ನಾಯಕನ ಸಾಧ್ವಿ ಮನೆಗೆ ಬಂದು ಸರಸ್ವತೀಬಾಯಿಯನ್ನು ಕಂಡನು. 'ತಾಯಿ, ನಾನು ಬಡ ಬ್ರಾಹ್ಮ

ಸಾಹುಕಾರನ ಬಳಿಗೆ ಹೋಗಿ ಆರು ತಿಂಗಳಿಂದ ಯಾಚನೆ ಮಾಡಿದೆ; ಮಗನ ಉಪನಯನ ಕಾರ್ಯವೆಂದು ಬೇಡಿದೆ, ಏನಾದರೂ ಆತನಿಗೆ ಕರುಣ ಹುಟ್ಟಲಿಲ್ಲ. ಕೊನೆಗೆ ಆ ಕೃಪಣಾಗ್ರೇಸರನು ಸವೆದ ದುಡ್ಡುಗಳ ಚೀಲವನ್ನು ಸುರಿದು ಆ ರಾಶಿಯಿಂದ ಒಂದು ದುಡ್ಡನ್ನು ಆರಿಸಿಕೊಳ್ಳೆಂದು ಜಬರಿಸಿದ. ನನ್ನನ್ನು ತಳ್ಳಿಸಿದ' ಎಂದು ನಾಯಕನನ್ನು ಆಕ್ಷೇಪಿಸಿ–'ತಾಯೇ ನೀನಾದರೋ ಶ್ರೀಮಂತಳಾಗಿರುವೆ; ದಯಮಾಡಿ ಬ್ರಹ್ಮ ಪ್ರತಿಷ್ಠಾ ಕಾರ್ಯಕ್ಕೆ ಸಹಾಯಮಾಡಮ್ಮಾ! ನಾನು ವೃದ್ಧ, ಬಹುಕಾಲ ಬದುಕಲಾರೆ. ಮಗನ ಮುಂಜಿಮಾಡಿ ಪ್ರಾಣಬಿಡಬೇಕೆಂದಿರುವೆನಮ್ಮಾ! ಇಷ್ಟು ಮಾತ್ರ ನಡೆಸಿಕೊಡಮ್ಮಾ!' ಎಂದು ಆಕೆಯನ್ನು ಪ್ರಾರ್ಥಿಸಿದನು.

ನೊಂದು ನುಡಿದ ವೃದ್ಧ ಬ್ರಾಹ್ಮಣನ ಆ ಮಾತಿನಿಂದ ಸರಸ್ವತೀಬಾಯಿಯ ಮನಸ್ಸು ಕರಗಿತು. ಏನು ಮಾಡುವುದಕ್ಕೂ ಸ್ವಾತಂತ್ರ್ಯವಿಲ್ಲದೆ, ಸ್ವಲ್ಪಹೊತ್ತು ಸುಮ್ಮನಿದ್ದು–'ಸ್ವಾಮಿ ಬ್ರಾಹ್ಮಣರೇ, ಈಗ ತಾವು ಯಾರನ್ನು ನಿಂದಿಸಿದಿರೋ ಮತ್ತೆ ಅವರನ್ನು ನನ್ನೆದುರಿಗೆ ನಿಂದಿಸಬೇಡಿ. ನಾನು ಪರತಂತ್ರಳು. ಭಿಕ್ಷುಕರಿಗೊಂದು ಮುಷ್ಟಿ ಭಿಕ್ಷೆ ಹಾಕುವ ಪುಣ್ಯವೂ ನನಗಿಲ್ಲ. ನಾನೇನು ಮಾಡಲೀ?' ಎಂಬನಿಗರೆದಳು. ಆಗಲೂ ಬ್ರಾಹ್ಮಣನು ಸುಮ್ಮನಿರದೆ–'ಸಾಧ್ವೀಮಣೀ, ನೀನು ಹೇಳುವುದು ವಾಸ್ತವ. ಆದರೆ ನಿನ್ನ ಮೂಗಿನಲ್ಲಿ ಧರಿಸಿರುವ ಮುಖರವು ನಿನ್ನ ತೌರುಮನೆಯ ಕೊಡುಗೆಯಷ್ಟೆ! ಅದನ್ನು ದಾನಮಾಡಲು ನಿನಗೆ ಸ್ವಾತಂತ್ರ್ಯವುಂಟು. ಅದನ್ನು ನೀನು ದಯಮಾಡಿ ಕೊಟ್ಟರೆ, ಮಗನ ಮುಂಜಿ ಮಾಡುವೆನು. ನಿನಗೆ ಬಹಳ ಪುಣ್ಯ ಬರುವುದು. ದೊಡ್ಡ ಮನಸ್ಸು ಮಾಡಮ್ಮಾ' ಎಂದನು.

ಯುಕ್ತಿ ಯುಕ್ತವಾದ ಆ ಮಾತು ಸರಸ್ವತೀಬಾಯಿಗೆ ನಿಜವೆನ್ನಿಸಿತು. ಆ ಮಾತಿನೆದುರು ಮನಸ್ಸನ್ನು ಬಿಗಿಹಿಡಿಯುವುದು ಕಷ್ಟವಾಯಿತು. ಮುಖರವನ್ನು ಕೊಡಲು ನಿಶ್ಚಯಮಾಡಿದಳು. ಒಡನೆಯೇ ಮನಸ್ಸಿನಲ್ಲಿ ಪತಿಯ ಭಯವಾಯಿತು. ಮತ್ತೆ ಧೈರ್ಯವನ್ನು ತಂದುಕೊಂಡಳು. ನಾನಂತೂ ಮೂಗುತಿಯನ್ನು ಬ್ರಾಹ್ಮಣನಿಗೆ ದಾನ ಮಾಡಿಬಿಡುತ್ತೇನೆ. ಪತಿಯು ಕೋಪಿಸಿ, ದಂಡಿಸಿದರೆ ದಂಡಿಸಲಿ. ಪುಣ್ಯಕಾರ್ಯಕ್ಕಾಗಿ ಕಷ್ಟವಾದರಾಗಲಿ; ದುರ್ವ್ಯಯವೇನಲ್ಲ–ಬಡವನಿಗೆ, ಅದರಲ್ಲೂ ಬ್ರಾಹ್ಮಣನಿಗೆ, ಅತಿಶಯವಾಗಿ ಉಪನಯನ ಕಾರ್ಯಕ್ಕೆ! ಇನ್ನು ಮಿಗಿಬಂದರೆ ಪ್ರಾಣತ್ಯಾಗವಾದರೂ ಮಾಡುತ್ತೇನೆ' ಎಂದು ನಿರ್ಧರಿಸಿ, ಆ ಬ್ರಾಹ್ಮಣನನ್ನು ಕರೆದು ಕೂರಿಸಿ, ತನ್ನ ಮೂಗುತಿಯನ್ನು ತೆಗೆದು ತೊಳೆದು, ತುಲಸೀದಳದೊಂದಿಗೆ ಆತನ ಕೈಯಲ್ಲಿತ್ತು–ಕೃಷ್ಣಾರ್ಪಣವೆಂದಳು.

ವೃದ್ಧ ಬ್ರಾಹ್ಮಣನು, ಮೂಗುತಿಯನ್ನು ಪಡೆದು ಸಂತುಷ್ಟನಾಗಿ, ಸರಸ್ವತೀಬಾಯಿಯ ಔದಾರ್ಯವನ್ನು ಮನಸಾರೆ ಕೊಂಡಾಡಿ, ಹೊರಟುಹೋದನು. ವೃದ್ಧವೇಷವನ್ನು ಬಿಟ್ಟು ಬೇರೊಂದು ರೂಪದಿಂದ ನಾಯಕನ ಅಂಗಡಿಗೆ ಬಂದನು. ಮುಖರವನ್ನು ತೆಗೆದು ಆತನ ಕೈಗಿತ್ತು, ಇದರ ಬೆಲೆಯೇನಾಗುವುದೆಂದು ಕೇಳಿದನು. ನಾಯಕನು

ಆ ಮುಖರವನ್ನು ನೋಡಿ ಸಂಶಯಗ್ರಸ್ತನಾದನು. ಹತ್ತಿರಿದ್ದವರು, ಒಂದರಂತೆ ಮತ್ತೊಂದಿರಬಹುದೆಂದರು. ವ್ಯಾಪಾರಿಯ ರೂಪ ಸಂಪತ್ತಿ-ವೈಭವಗಳನ್ನು ನೋಡಿ, ನಾಯಕನಿಗೆ ಹೆಚ್ಚು ಮಾತಾಡಲು ಧೈರ್ಯವಾಗಲಿಲ್ಲ. ಒಡವೆಗೆ ತಕ್ಕ ಬೆಲೆಯನ್ನು ಕಟ್ಟಲಿಲ್ಲ. ವ್ಯಾಪಾರಿಯು ನಾಲ್ಕು ನೂರು ಕೊಡುವುದಿದ್ದರೆ ಕೊಡು, ಇಲ್ಲವಾದರೆ ಬಿಡು ಎಂದು ಮುಖರವನ್ನು ಅಂಗಡಿಯಲ್ಲೊಗೆದು ಅವಸರದಿಂದ ಹೊರಟು ನಡೆದನು. ಒಡವೆಯನ್ನು ಬಿಟ್ಟು ವ್ಯಾಪಾರಿಯು ಹೊರಟುದನ್ನು ನೋಡಿ, ನಾಯಕನಿಗೆ ಭಯವಾಯಿತು. ಹತ್ತಿರಿದ್ದವರನ್ನು ಅವನೆಲ್ಲಿಗೆ ಹೋಗುವನೋ ನೋಡಿರೆಂದು ಕಳುಹಿಸಿದನು. ಅವರು, ಆತನು ವಿಠಲ ದೇವಾಲಯದವರೆಗೆ ಹೋದುದನ್ನು ಕಂಡು ಅನಂತರ ಕಾಣದೆ ತಿರುಗಿ ಬಂದು ಸಂಗತಿಯನ್ನು ತಿಳಿಸಿದರು. ನಾಯಕನ ಸಂಶಯ ಹೆಚ್ಚಿತು. ಅಂಗಡಿಯಲ್ಲಿನ ಒಡವೆಗಳನ್ನು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ತೆಗೆದಿಟ್ಟು, ಭ್ರಮೆಗೊಂಡವನಂತೆ ಓಡಾಡಿದನು. ತರುವಾಯ ಅಂಗಡಿಯಲ್ಲಿರುವುದಕ್ಕೆ ಮನಸ್ಸಿಲ್ಲದೆ, ಮುಖರವನ್ನು ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು, ಬೀಗಹಾಕಿ, ಮೊಹರುಮಾಡಿ, ಅಂಗಡಿಯನ್ನು ಮುಚ್ಚಿಕೊಂಡು ಮನೆಗೆ ಬಂದನು.

ಆ ಸಮಯದಲ್ಲಿ ಸರಸ್ವತೀಬಾಯಿಯು ದೇವರಮನೆಯಲ್ಲಿ ಒಬ್ಬಳೇ ಕುಳಿತು ಏನನ್ನೋ ಯೋಚಿಸುತ್ತಿದ್ದಳು. ನಾಯಕನು ಹೆಂಡತಿಯ ಮುಖವನ್ನು ನೋಡುವ ಕುತೂಹಲದಿಂದ ದೇವರಮನೆಗೆ ಬಂದನು. ಆಕೆಯ ಮೂಗಿನಲ್ಲಿ ಮುಖರವನ್ನು ಕಾಣದೆ, ವಿಶೇಷ ಸಂಶಯಗೊಂಡು, ಮುಖರವೆಲ್ಲೆಂದು ಪ್ರಶ್ನೆಮಾಡಿದನು. ಆಕೆಯು ಯಥಾರ್ಥವನ್ನು ಹೇಳಲು ಧೈರ್ಯ ಸಾಲದೆ, ಮಡಿಯ ಕೆಲಸವಾದಮೇಲೆ, ನೋಡಿ ಕೊಡುತ್ತೇನೆಂದಳು. ನಾಯಕನು, ಆ ಮಾತಿಗೆ ತಾಳ್ಮೆಗೊಳ್ಳದೆ-ಈಗಲೇ ತಂದುಕೊಡು, ಇಲ್ಲವಾದರೆ ಇಟ್ಟಿರುವ ಸ್ಥಳವನ್ನಾದರೂ ತೋರಿಸೆಂದು, ನಿಷ್ಠುರಮಾಡಿದನು. ಗಂಡನ ಆ ನಿಷ್ಠುರ ಮಾತನ್ನು ಕೇಳಿ, ಆ ಸಾಧ್ವಿಯು ನಿರುಪಾಯಳಾದಳು. ತುಲಸೀಪೂಜೆಯನ್ನು ಮಾಡಿ ಬರುವುದರಲ್ಲಿ ತವಕವೇಕೆಂದಳು. ಪೂಜಾಪೆಟ್ಟಿಗೆಯನ್ನು ತೆಗೆದುಕೊಂಡು ಬೃಂದಾವನದ ಬಳಿಯಲ್ಲಿ ಕುಳಿತಳು. ಯೋಚಿಸಿ ಸಾಕಾಯಿತು. ವಿಪ್ರಾಗ್ರೇಸರನಾದ ತನ್ನ ಪತಿಯು, ಅಷ್ಟು ಬೆಲೆಯ ಆ ಒಡವೆಯನ್ನು ದಾನವಾಗಿ ಕೊಟ್ಟ ವಿಚಾರ ತಿಳಿದರೆ ಸಹಿಸಲಾರದಷ್ಟು ರಂಪಮಾಡದಿರನೆಂದು ಮನಸ್ಸಿಗೆ ತೋರಿ, ಭಯವಾಯಿತು. ನೋಡಿದವರೆದುರಿಗೆ ಬೈಸಿಕೊಂಡು ಹೊಡೆಸಿಕೊಂಡು ಅವಮಾನಪಡುವುದಕ್ಕಿಂತ ಮರಣವೇ ಲೇಸು ಎಂದು ನಿರ್ಧರ ಮಾಡಿದಳು. ಮೂಗುಬಟ್ಟಿನಲ್ಲಿದ್ದ ವಜ್ರದ ಹರಳನ್ನರೆದು ಕುಡಿದು ಬಿಡುವೆನೆಂದು ಸಿದ್ಧಮಾಡಿಕೊಂಡಳು. ತುಲಸೀದೇವಿಗೆ ಸಾಷ್ಟಾಂಗ ನಮಸ್ಕಾರಮಾಡಿ ಹೀಗೆ ಪ್ರಾರ್ಥಿಸಿದಳು.

'ದೇವಿ ನಾನು ಆ ವೃದ್ಧ ಬ್ರಾಹ್ಮಣನ ಮಗನ ಉಪನಯನಕ್ಕಾಗಿ ಮುಖರವನ್ನು ದಾನಮಾಡಿದೆನು. ಶ್ರೀಹರಿಪ್ರೀತಿಯಾಯಿತು. ಪತಿಗೆ ನಿಜ ಸಂಗತಿಯನ್ನು ತಿಳಿಸದಿದ್ದರೆ ದ್ರೋಹಿಯಾಗುವೆನು. ತಿಳಿಸಿದರೆ ಪ್ರಮಾದವಾಗಿಬಿಡುವುದು. ಆತನಿಗೆ

ಧರ್ಮದ ವಾಸನೆಯಿಲ್ಲ. ಮುಖರದ ನಿಮಿತ್ತವಾಗಿ ಬೀದಿಯಲ್ಲಿ ಹಗರಣ ಮಾಡುವನು. ಮಾಡಿದ ದಾನವು ದ್ರೋಹವಾಗಿ ಪರಿಣಮಿಸುವುದು. ದಾನವು ಗುಪ್ತವಾಗಿರಲಿ. ದೀನರೂ ದರಿದ್ರರೂ ಯಾಚಿಸಿದಾಗ ಕೊಡದೆ, ಇದ್ದೂ ಇಲ್ಲವೆಂದು, ಸ್ವಾರ್ಥತೆಯಿಂದ ಬದುಕುವುದಕ್ಕಿಂದ ಸಾಯುವುದು ಮೇಲು. ಮುಂದಾದರೂ ಪತಿಗೆ ಧರ್ಮಬುದ್ಧಿಯನ್ನು ಪ್ರೇರಿಸು. ಆತ್ಮಹತ್ಯ ದೋಷಕ್ಕೆ ಗುರಿಮಾಡಿ ನನ್ನನ್ನು ದುರ್ಗತಿಗೆ ತಳ್ಳಬೇಡ. ಇದೋ ನಮಸ್ಕರಿಸುವೆನು. ನನ್ನ ಸರ್ವಾಪರಾಧಗಳನ್ನೂ ಕ್ಷಮಿಸು. ನಿನ್ನ ಪಾದಾರವಿಂದಗಳಲ್ಲಿ ತಪ್ಪದೆ ಆಶ್ರಯವನ್ನು ಕೊಡು,' ಎಂದು ಬೇಡಿಕೊಳ್ಳುತ್ತಾ ವಿಷ ಪಾನಮಾಡಲು ಬಟ್ಟಲನ್ನು ಮೇಲಕ್ಕೆತ್ತಿದಳು. ವಿಷವು ಬಾಯಿಗೆ ಬೀಳುವಷ್ಟರಲ್ಲಿ ಬಟ್ಟಲಲ್ಲಿ ಟಕ್ಕೆಂದು ಏನೋ ಬಿದ್ದಂತಾಯಿತು. ಬಟ್ಟಲು ಕೈಯಿಂದ ಕೆಳಗುರುಳಿತು. ಅದೇನೆಂದು ನೋಡಿದರೆ ತನ್ನ ಸ್ವಂತ ಮುಖರ! ಅತ್ಯಾಶ್ಚರ್ಯದಿಂದ ಒಂದೆರಡು ನಿಮಿಷ ಸ್ತಬ್ಧಳಾಗಿದ್ದು ಆನಂದಬಾಷ್ಪವನ್ನು ಸುರಿಸಿ, ಬ್ರಾಹ್ಮಣನನ್ನು ಶ್ರೀಮನ್ನಾರಾಯಣನೆಂದೇ ಭಕ್ತಿಯುತಳಾಗಿ ಭಾವಿಸಿದಳು. ಅಡಿಗಡಿಗೆ ಆತನ ರೂಪವನ್ನೂ ಕ್ರಿಯೆಯನ್ನೂ ಚಿಂತಿಸಿದಳು. ಆತನ ದರ್ಶನ ತನಗೆ ಲಭಿಸಿದುದಕ್ಕಾಗಿ ತನಗೆ ತಾನೇ ಧನ್ಯವಾದ ಮಾಡಿಕೊಂಡಳು. ಭಗವಂತನೇ! ಪುನಃ ಪುನಃ ದರ್ಶನವಿತ್ತು ಸಲಹೆಂದು ಭಕ್ತಿಪರವಶಳಾಗಿ ಬಿಕ್ಕಿ ಬಿಕ್ಕಿ ಅತ್ತಳು.

ಹೀಗೆ ಮುಹೂರ್ತಮಾತ್ರ ಬ್ರಹ್ಮಾನಂದಮಗ್ನಳಾಗಿದ್ದು ಮನಸ್ಸನ್ನು ಸಮಸ್ಥಿತಿಗೆ ತಂದುಕೊಂಡು, ತನ್ನ ಪತಿದೇವನಿಗೆ ಈ ವಿಷಯವನ್ನು ತಿಳಿಸದೆ, ಮುಖರವನ್ನು ಮಾತ್ರ ಆತನ ಕೈಗೆ ಕೊಟ್ಟಳು.

ಅದುವರೆಗೆ–'ಈ ದಿನವೇಕೆ ನನ್ನ ಬುದ್ಧಿ ವಿಪರೀತವಾಗಿದೆ? ನಾನೇಕೆ ಹೀಗೆ ಮಾತನಾಡುತ್ತಿರುವೆ?' ಎಂದು ತನ್ನಲ್ಲಿ ತಾನೇ ತರ್ಕಿಸುತ್ತಾ ಕುಳಿತಿದ್ದ ನಾಯಕನು ಮುಖರವು ಕೈಗೆ ಬಿದ್ದೊಡನೆಯೇ, ತಡಮಾಡದೆ ಮೇಲಕ್ಕೆದ್ದು, ಪೆಟ್ಟಿಗೆಯಲ್ಲಿಟ್ಟು ಬಂದಿದ್ದ ಮುಖರವನ್ನೂ ಇದನ್ನೂ ಜೊತೆಮಾಡಿ ಹೆಚ್ಚು ಲಾಭಕ್ಕೆ ಮಾರುವೆನೆಂದು, ತಟ್ಟನೆದ್ದು ಅಂಗಡಿಗೆ ಬಂದನು. ಪೆಟ್ಟಿಗೆಯ ಮೊಹರನ್ನೊಡೆದು ನೋಡಿದರೆ, ತಾನಿಟ್ಟಿದ್ದ ಸಂಪುಟದಲ್ಲಿ ಆ ಮುಖರವಿರಲಿಲ್ಲ. ಗಾಬರಿಯಿಂದ–'ಇದೇನು? ಈಗತಾನೇ ಬಾಗಿಲನ್ನು ಹಾಕಿಕೊಂಡುಹೋದೆ! ಮೊಹರು ಇದ್ದ ಹಾಗೆಯೇ ಇದೆ! ಇದರ ಮೇಲೆ ಹಾಡ ಹಗಲು! ಏನೋ ಪ್ರಮಾದವಾಗಿ ತೋರುತ್ತದೆ. ಇದು ಮನುಷ್ಯಕೃತ್ಯವೇ? ಅದೆಂದಿಗೂ ಸಾಧ್ಯವಿಲ್ಲ! ಹಾಗಿದ್ದರೆ ಮತ್ತೇನಿರಬಹುದು?' ಎಂದು ಆಶ್ಚರ್ಯದಿಂದಲೂ, ಕೋಪದಿಂದಲೂ ಮನೆಗೆ ಬಂದನು. ನೌಕರರ ಮೇಲೆ ಸಿಟ್ಟು ಮಾಡಿದನು. ಸರಸ್ವತೀಬಾಯಿಯನ್ನು ಕರೆದು,–'ನೀನು ತುಲಸೀಪೂಜೆ ಮಾಡಿದನಂತರ ಮುಖರವನ್ನು ಹುಡುಕಿ ತಂದುಕೊಡುವೆನೆಂದು ಹೇಳಿದೆಯಲ್ಲವೆ? ಆದರೆ ಪೂಜಾನಂತರ ಎಲ್ಲೂ ಹುಡುಕದೆ ಹಾಗೆಯೇ ಮುಖರವನ್ನು ನನ್ನ ಕೈಗೆ ತಂದುಕೊಟ್ಟೆಯಲ್ಲ. ಇದರಿಂದ ನನಗೆ ಅನುಮಾನಕ್ಕೆ ಕಾರಣವಾಗಿದೆ. ಈಗತಾನೇ ಅಂಗಡಿಯಲ್ಲಿ ಕ್ರಯಕ್ಕೆ ತೆಗೆದುಕೊಂಡು ಇಟ್ಟು

ಬಂದಿದ್ದ ಮುಖರವು, ಆ ಬಳಿಯಲ್ಲಿಲ್ಲ. ಮಾಯವಾಗಿದೆ. ಮುಖರವನ್ನು ಮಾರುವುದಕ್ಕೆ ತಂದವನು ಹಣವನ್ನು ತೆಗೆದುಕೊಳ್ಳದೆ ವಿಠಲನ ಗುಡಿಯುವರೆಗೆ ಹೋಗಿ ಮಾಯವಾದನಂತೆ ! ಈ ಕಾರಣಗಳಿಂದ ನನ್ನ ಮನಸ್ಸು ಅಲ್ಲಕಲ್ಲೋಲವಾಗಿದೆ. ಎದೆಯು ಬಡಿದುಕೊಳ್ಳುತ್ತಿದೆ. ವ್ಯಾಪಾರಿಯು ತನ್ನ ಮುಖರವನ್ನು ಕೊಡೆಂದರೆ ನಾನೇನು ಹೇಳಬೇಕು? ಆ ವೃದ್ಧ ಬ್ರಾಹ್ಮಣನ ರೂಪವು ನನ್ನ ಕಣ್ಣಿಗೆ ಕಟ್ಟಿದಂತಾಗಿರಲು ಕಾರಣವೇನು ? ನನಗೇಕೋ ಐಶ್ವರ್ಯದಲ್ಲಿ ಜುಗುಪ್ಸೆ ಹುಟ್ಟಿದೆ. ಜೀವನವು ಭಾರವಾಗಿದೆ. ಕಾರಣವೇನೆಂದು ಗೊತ್ತಾಗುತ್ತಿಲ್ಲ. ನೀನು ಪದೇ ಪದೇ ಧರ್ಮೋಪದೇಶ ಮಾಡುತ್ತಿದ್ದವಳು ಈಗೇಕೆ ಮಾತನಾಡಬೊಲ್ಲೆ ? ಪರಿಹಾಸ್ಯ ಮಾಡುವೆನೆಂದು ಭಯಪಡಬೇಡ. ಅನುಮಾನಿಸಬೇಡ. ನಿನ್ನ ಒಂದೊಂದು ಮಾತೂ ಸತ್ಯವಿರಬಹುದೆಂದು ತೋರುತ್ತಿದೆ. ನನ್ನ ಸಂಶಯಗಳನ್ನು ನೀನಾದರೂ ಪರಿಹರಿಸು' ಎಂದು ವ್ಯಸನಪಟ್ಟು ಹಂಬಲಿಸಿದನು.

ಸರಸ್ವತೀಬಾಯಿಯು ಪತಿಗುಂಟಾದ ಪಶ್ಚಾತ್ತಾಪಕ್ಕೆ ಕನಿಕರಗೊಂಡು, ಬ್ರಾಹ್ಮಣನು ತನ್ನಲ್ಲಿಗೆ ಬಂದು ಯಾಚಿಸಿದಾಗಿನಿಂದ, ಆವರೆಗೆ ನಡೆದುದೆಲ್ಲವನ್ನೂ ತಿಳಿಸಿದಳು. ನಾಯಕನ ಮುಖವು ವಿವರ್ಣವಾಯಿತು. ಕುತರ್ಕದ ದಾರಿಗೆ ಅಡ್ಡಕಟ್ಟೆ ಕಟ್ಟಿದಂತಾಯಿತು. ನಡೆದ ಸಂಗತಿಯು ನಿಜವಿರಬಹುದೆಂದು ನಂಬಬೇಕಾಯಿತು. ಮನುಷ್ಯಕೃತ್ಯವಲ್ಲವೆಂಬುದು ಮೊದಲಿಗಿಂತ ದೃಢವಾಯಿತು. ಬ್ರಾಹ್ಮಣನೇಕೆ ಬಂದ ! ಮಗನ ಉಪನಯನ ಮಾಡುವೆನೆಂದು ಏಕೆ ಬೇಡಿದ ? ನಾನೇಕೆ ಏನನ್ನೂ ಕೊಡಲಿಲ್ಲ ? ಮತ್ತೆ ನನ್ನ ಹೆಂಡತಿಯನ್ನೇಕೆ ಯಾಚಿಸಿದ ? ಆಕೆಗೇಕಿಂಥಾ ಧರ್ಮಬುದ್ಧಿ ಬಂತು ! ಅವಳೇಕೆ ಮುಖರವನ್ನು ದಾನಮಾಡಿದಳು ? ಆ ವ್ಯಾಪಾರಿಯು ಮುಖರವನ್ನು ಮಾರುವುದಕ್ಕೆ ನನ್ನಲ್ಲಿಯೇ ತರಲು ಕಾರಣವೇನು ? ಅದನ್ನು ಮಾರಿಗೆಗಾಗಿಯೇ ತಂದಿದ್ದ ಆ ವ್ಯಾಪಾರಿಯು ಹಣವನ್ನು ತೆಗೆದುಕೊಳ್ಳದೆಯೇ ಏಕೆ ಅದೃಶ್ಯನಾದ ? ಹೆಂಡತಿಯು ವಿಷಪಾನಮಾಡಬೇಕೆಂದು ಪ್ರಯತ್ನಿಸಿದಾಗ, ಮುಖರವೆಲ್ಲಿಂದ ಬಂದು ಬಿತ್ತು ? ಅಂಗಡಿಯಲ್ಲಿಟ್ಟಿದ್ದ ಮುಖರವೇಕೆ ಮಾಯವಾಯಿತು ? ಇದೆಲ್ಲಾ ನನ್ನನ್ನು ಪರೀಕ್ಷಿಸಲಿಕ್ಕಾಗಿಯೇ ಮಾಡಲ್ಪಟ್ಟಂತೆ ಕಾಣುತ್ತದೆ, ಎಂದು ಹಲವಾರು ಬಗೆಯಲ್ಲಿ ಮನಸ್ಸಿನಲ್ಲಿ ಯೋಚಿಸಿಕೊಂಡು, ತರುವಾಯ 'ನನ್ನ ಭಾಗ್ಯದೇವತೆಯೇ, ಸರಸ್ವತಿಯೇ, ಇಲ್ಲಿ ಬಾ' ಎಂಬುದಾಗಿ ತನ್ನ ಪತ್ನಿಯನ್ನು ಬಳಿಗೆ ಕರೆದು ಆಕೆಯೊಂದಿಗೆ ಹೀಗೆಂದು ಸಂಭಾಷಣೆ ನಡೆಸಿದನು.

ನಾಯಕ:—ಸರಸ್ವತೀ–ಇದೆಲ್ಲಾ ನಿಜವೆ ?

ಸರಸ್ವತಿ:—ನಿಜವಲ್ಲದೆ ಮತ್ತೇನು ?

ನಾಯಕ:—ಇದು ನನಗೆ ಸ್ವಪ್ನಾವಸ್ಥೆಯೋ–ಜಾಗ್ರದವಸ್ಥೆಯೋ ?

ಸರಸ್ವತಿ:—ನೀವೇ ಚೆನ್ನಾಗಿ ಯೋಚಿಸಿನೋಡಿ.

ನಾಯಕ:—ಜಾಗ್ರದವಸ್ಥೆ–ಜಾಗ್ರದವಸ್ಥೆ ! ನಾನು ನಿಜವಾಗಿ ಜಾಗ್ರದವಸ್ಥೆಯಲ್ಲೇ ಇದ್ದೇನೆ.

ನಾಯಕನು ಮತ್ತೆ ಚೆನ್ನಾಗಿ ಯೋಚಿಸಿದನು. ಬ್ರಾಹ್ಮಣರೂಪದಿಂದ ತನ್ನಲ್ಲೂ ತನ್ನ ಪತ್ನಿಯ ಬಳಿಯಲ್ಲೂ ಬಂದು ಯಾಚಿಸಿದವನೂ, ಮುಖರವನ್ನು ವಿಕ್ರಯಿಸಲು ವ್ಯಾಪಾರಿಯಾಗಿ ಬಂದವನೂ, ವಿಷಪಾನಕ್ಕೆ ಬಟ್ಟಲನ್ನು ಮೇಲಕ್ಕೆತ್ತಿದಾಗ ಅದರಲ್ಲಿ ಮುಖರವನ್ನು ಬೀಳಿಸಿದವನೂ, ನಾರಾಯಣನೇ ಸರಿ – ಮತ್ತೆ ಬೇರೆ ಯಾರೂ ಅಲ್ಲ. ಎಂದು ನಿರ್ಧಾರಮಾಡಿದನು.

'ನನ್ನ ಪತ್ನಿಗುಂಟಾದ ಜ್ಞಾನ ನನಗಾಗದೇ ಹೋಯಿತೆ ? ನಾನೆಂಥಾ ಪಾಪಿ ? ಧರ್ಮದ್ರೋಹಿ ! ಭಗವಂತನೇ ಬಂದು ಯಾಚಿಸಿದಾಗ ಆತನ ಸೇವೆ ಮಾಡದೆ ಹೋದೆ ನಲ್ಲಾ ! ಪಾಂಡುರಂಗ ! ಐಶ್ವರ್ಯಮದದಿಂದ ಉನ್ಮತ್ತನಾಗಿ ನಿನ್ನನ್ನೂ ನಿನ್ನ ಭಕ್ತರನ್ನೂ ತಿರಸ್ಕರಿಸಿ ನರಕಭಾಜನನಾದೆನಲ್ಲಾ !' ಎಂದು ತನ್ನನ್ನು ತಾನೇ ಧಿಕ್ಕಾರ ಮಾಡಿಕೊಂಡನು. ವಿಶೇಷವಾಗಿ ಹರಿನಾಮಸ್ಮರಣೆ ಮಾಡಿ ಅಪರಾಧಗಳಿಗೆ ಕ್ಷಮೆಬೇಡಿದನು.

–'ದೇವಾ, ನನ್ನ ಅಂಗಡಿಗೆ ಯಾವ ರೂಪದಿಂದ ಯಾಚಕನಾಗಿ ಬರುತ್ತಿದ್ದೆಯೋ ಅದೇ ರೂಪದಿಂದ ದರ್ಶನಕೊಟ್ಟರೆ ಸರಿ ; ಇಲ್ಲವಾದರೆ ನಿನ್ನ ನಾಮಸ್ಮರಣೆಯಿಂದಲೇ ಈ ಘಟವನ್ನು ನಿನ್ನ ಪಾದಕ್ಕೊಪ್ಪಿಸುವೆನು' ಎಂದು ಅನ್ನಪಾನಗಳನ್ನು ತೊರೆದು ನಾಮಸಂಕೀರ್ತನೆ ಮಾಡಿದನು. ಮೂರು ದಿವಸಗಳು ಕಳೆದುವು. ನಾಯಕನ ಸ್ಥಿತಿಯು ಅಸ್ವಾವಸ್ಥೆಗಿಟ್ಟಿತು. –'ಇಷ್ಟು ಹಠಬೇಡ, ಕ್ಷೀರಪಾನವನ್ನಾದರೂ ಮಾಡಿರಿ' ಎಂದು ಸಾಧ್ವಿ ಸರಸ್ವತೀಬಾಯಿಯು ಕೇಳಿಕೊಂಡಳು. ನಾಯಕನು ಒಪ್ಪಲಿಲ್ಲ. ಪತೀದೇವನೇ ಅನ್ನಪಾನಗಳನ್ನು ತೊರೆದಿರುವಾಗ ತನಗೇಕೆಂದು, ಸಹಧರ್ಮಿಣಿಯಾದ ಸರಸ್ವತೀಬಾಯಿಯೂ–ಸ್ವಾಮಿಯ ಧ್ಯಾನದಲ್ಲಿ ತಲ್ಲೀನಳಾಗಿ ಕುಳಿತುಬಿಟ್ಟಳು.

ನಾಲ್ಕನೇ ಪ್ರಾತಃಕಾಲ ಪದ್ಧತಿಯಂತೆ ಸರಸ್ವತೀಬಾಯಿಯು ತುಲಸೀಪೂಜೆಗೆ ಬಂದು ಶುದ್ಧ ಮನಸ್ಕಳಾಗಿ ಬೃಂದಾವನಲೋಲನಾದ ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಕುಳಿತಿರಲು, ಹಿಂದೆ ಬಂದಿದ್ದು ದಾನಪಡೆದ ಬ್ರಾಹ್ಮಣರೂಪೀ ಭಗವಂತನು ಪ್ರತ್ಯಕ್ಷನಾದನು. ಒಡನೆಯೇ ಸರಸ್ವತೀಬಾಯಿಯು ಎದ್ದು ನಮಸ್ಕರಿಸಿ, ಅತ್ಯಂತ ಹರ್ಷಗೊಂಡು, ಧಾರೆ ಧಾರೆಯಾಗಿ ಬರುತ್ತಿದ್ದ ಆನಂದಾಶ್ರುಗಳಿಂದ ಆತನ ಪಾದಗಳನ್ನು ತೊಳೆದಳು. ಆಕೆಯ ಭಕ್ತಿಗೆ ಮೆಚ್ಚಿದ ಸ್ವಾಮಿಯು, ಏನೂ ತಿಳಿಯದವನಂತೆ–'ಸಾಧ್ವೀ, ನನಗಾಗಿ ಏಕೆ ಅನ್ನೋದಕಗಳನ್ನು ತೊರೆದು ಸಂಕಟಪಡುತ್ತಿರುವೆ ?' ಎಂದು ಕೇಳಿದನು. ಸರಸ್ವತೀಬಾಯಿಯು, ತನ್ನ ಪತಿಯ ಪಶ್ಚಾತ್ತಾಪ ಚರಿತ್ರೆಯನ್ನು ತಿಳಿಸಿದಳು. ಆಗ ಸ್ವಾಮಿಯು ನಸುನಕ್ಕು–'ಕೇಳು ಸಾಧ್ವೀಮಣಿಯೆ, ಈ ತ್ರಿರಾತ್ರಿ ಉಪವಾಸವ್ರತದಿಂದಲೂ, ನನ್ನ ನಾಮಸ್ಮರಣೆಯಿಂದಲೂ, ನಿನ್ನ ಪತಿಯ ದುರಿತರಾಶಿಗಳು ಭಸ್ಮವಾದುವು. ಆತನ ದೇಹೇಂದ್ರಿಯಗಳೂ ಮನಸ್ಸೂ ಶುದ್ಧವಾದುವು. ಆದರೆ ಐಶ್ವರ್ಯದ ವಾಸನೆ ಇನ್ನೂ ಆತನನ್ನು ಪೂರ್ತಿಯಾಗಿ ಬಿಟ್ಟಿಲ್ಲ. ಆದ್ದರಿಂದ ಸರ್ವಸ್ವವನ್ನೂ ತ್ಯಾಗಮಾಡಿ, ನನ್ನ ದಾಸನಾಗಿ ಬಂದುನಿಂತರೆ ನನ್ನ ದರ್ಶನವಾದೀತೆಂದು ನಿನ್ನ ಪತಿಗೆ ತಿಳಿಸು, ನಿನಗೆ ಮಂಗಳವಾಗಲಿ' ಎಂದು ನುಡಿದು, ಒಡನೆ ಅದೃಶ್ಯನಾದನು.

ಸಾಧ್ವಿ ಸರಸ್ವತೀಬಾಯಿಯು ಭಗವಂತನ ಅಪ್ಪಣೆಯನ್ನು ಪತಿಗೆ ತಿಳಿಸಿದಳು.

ನಾಯಕ:—ಭಗವಂತನ ದರ್ಶನ ನಿನಗಾಯಿತೇ ?

ಸರಸ್ವತೀಬಾಯಿ:—ಆಯಿತು. ಈಗತಾನೇ ವೃದ್ಧ ಬ್ರಾಹ್ಮಣನಾಗಿ ಬಂದಿದ್ದನು.

ನಾಯಕ:—ನನಗೇಕೆ ತಿಳಿಸಲಿಲ್ಲ ?

ಸರಸ್ವತೀಬಾಯಿ:—ಆ ಮಹಾಮಹಿಮನ ದರ್ಶನವಾದಾಗ ನನಗೇನೂ ತೋಚಲಿಲ್ಲ.

ನಾಯಕ:—ಹಾ, ಎಂತಹ ಪ್ರಮಾದವಾಯಿತು. ನಾನು ಹತಭಾಗ್ಯನು ! ನೀನೇ ಧನ್ಯಳು ! ನಿನ್ನ ಪುಣ್ಯ ನನಗಿಲ್ಲ. ನೀನು ನನ್ನ ಭಾಗ್ಯದೇವತೆ ! ಆ ಬ್ರಾಹ್ಮಣರೂಪೀ ಭಗವಂತನೆಲ್ಲಿ ನಿಂತಿದ್ದ ! ಆ ಸ್ಥಳವನ್ನಾದರೂ ತೋರಿಸು. ಸರಸ್ವತೀಬಾಯಿಯು ತನ್ನ ಪತಿಯನ್ನು ಬೃಂದಾವನದ ಬಳಿಗೆ ಕರೆತಂದು, 'ಇಲ್ಲಿ, ಇಲ್ಲಿ ! ಇಲ್ಲೇ ನಿಂತು ದರ್ಶನವನ್ನಿತ್ತನು' ಎಂದಳು.

ನಾಯಕನು ಆ ಸ್ಥಳದಲ್ಲಿ ಉರುಳಿ ಹೊರಳಿ, ಧೂಳನ್ನು ಕಣ್ಣಿಗೊತ್ತಿಕೊಂಡು --'ಧನ್ಯ ಧನ್ಯ ? ಆತನೇನು ಹೇಳಿದ ? ಇನ್ನೊಮ್ಮೆ ಹೇಳು !'

ಸರಸ್ವತೀಬಾಯಿಯು–**'ನಾಥಾ, ಆ ಬ್ರಾಹ್ಮಣರೂಪೀ ಭಗವಂತನು– 'ನಿನ್ನ ಪತಿದೇವನು ಸರ್ವಸ್ವವನ್ನೂ ತ್ಯಾಗಮಾಡಿ, ಹರಿದಾಸನಾಗಿ ಬಂದರೆ, ದರ್ಶನಕೊಡುವೆನು'** ಎಂಬುದಾಗಿ ನುಡಿದನು, ಎಂದುಸುರಿದಳು.

ತನ್ನ ಪತ್ನಿಯ ವದನದಿಂದ ಬಂದ ಆ ಮಾತುಗಳನ್ನು ಕೇಳಿ, ನಾಯಕನು ಧನ್ಯನಾದೆನೆಂದುಕೊಂಡು ಆನಂದ ನಿರ್ಭರನಾಗಿ, ನಾಮಕೀರ್ತನೆ ಮಾಡುತ್ತಾ, ನರ್ತನ ಮಾಡಿದನು. ಮೈಮೇಲೆ ಅಲಂಕರಿಸಿಕೊಂಡಿದ್ದ ಆಭರಣಗಳನ್ನು ಕಿತ್ತೊಗೆದನು. ಜರಿ ವಸ್ತ್ರಗಳನ್ನಿಟ್ಟು, ಪತ್ನೀಪುತ್ರ ಸಹಿತನಾಗಿ ಸಕಲೈಶ್ವರ್ಯದಿಂದ ಪೂರ್ಣವಾಗಿದ್ದ ಮನೆಯನ್ನು ಬಿಟ್ಟು ಬೀದಿಯಲ್ಲಿ ಬಂದುನಿಂತನು. 'ನಾಯಕರಿಗೆ ಇದೇನೋ ವಿಪರೀತ ಬುದ್ಧಿ ಹುಟ್ಟಿದೆ'ಯೆಂದು ಜನರಾಡಿಕೊಳ್ಳುತ್ತಾ ಗುಂಪು ಸೇರುತ್ತಿರಲು, ಮನೆಯಮೇಲೊಂದು ತುಲಸೀದಳವನ್ನಿರಿಸಿ **'ಶ್ರೀಕೃಷ್ಣಾರ್ಪಣ'** ವೆಂದು ಕೈಮುಗಿದನು.

ಹೀಗೆ ಭಗವಂತನ ಆಜ್ಞಾನುಸಾರವಾಗಿ ಸರ್ವಸ್ವವನ್ನೂ ದಾನಮಾಡಿದ ಶ್ರೀನಿವಾಸನಾಯಕನು ನಾಮಕೀರ್ತನೆ ಮಾಡುತ್ತಾ ಪುರಂದರಗಢದ ಬೀದಿಗಳಲ್ಲಿ ಸಂಚರಿಸಿದನು. ಪತ್ನೀಪುತ್ರರು ಛಾಯಾನುವರ್ತಿಗಳಾಗಿ ಜೊತೆಗೆ ನಡೆದರು. ವೃದ್ಧ ಬ್ರಾಹ್ಮಣ ರೂಪದಿಂದ ಯಾಚನೆಗಾಗಿ ಬಂದಿದ್ದ ಶ್ರೀಹರಿಯು ಪುನಃ ಅದೇ ರೂಪತಾಳಿ ಮಾಯಾ ಮಾಣವಕನನ್ನು ಕರೆದುಕೊಂಡು ನಾಯಕನ ಕಣ್ಣೆದುರಿಗೆ ಸುಳಿದನು. ನಾಯಕನು ವಿಸ್ಮಿತನಾಗಿ ಆತನ ಪಾದಗಳಿಗೆರಗಿದನು. ಅಷ್ಟೇ ದರ್ಶನವಿತ್ತು ವೃದ್ಧಬ್ರಾಹ್ಮಣನು ಅದೃಶ್ಯನಾದನು. ನಾಯಕನು ಸ್ಮೃತಿಯನ್ನು ತಂದುಕೊಂಡು–'ಅಯ್ಯೋ ಬಂದಾತನೂ

ಮಾತನ್ನಾಡಲಿಲ್ಲವೆ ? ಇನ್ನೂ ನನ್ನ ಪಾಪವೆಷ್ಟಿರಬಹುದು !" ಎಂದು ಹಂಬಲಿಸಿ ಹೆಂಡತಿಯನ್ನು ಕುರಿತು—

ನಾಯಕ:—ಸಾಧ್ವೀ ಬ್ರಾಹ್ಮಣನನ್ನು ಕಂಡೆಯಾ ?

ಸರಸ್ವತೀಬಾಯಿ;—ಇಲ್ಲ. ಇಲ್ಲ. ನಾನು ಕಾಣಲಿಲ್ಲವಲ್ಲಾ !

ನಾಯಕ:—ಈಗ ತಾನೇ ಬಂದಿದ್ದ. ನಮಸ್ಕಾರ ಮಾಡಿದೆ! ಒಂದಾದರೂ ಮಾತನಾಡಲಿಲ್ಲ-ಕಣ್ಣು ಬಿಡುವುದರಲ್ಲಿ ಆತನೇ ಇರಲಿಲ್ಲ. ಕ್ಷಣಮಾತ್ರದಲ್ಲಿ ಮಾಯವಾದನಲ್ಲಾ !

ಸರಸ್ವತೀಬಾಯಿ:—ಇದೇನಾಶ್ಚರ್ಯ ! ನಾನ್ಯಾರನ್ನೂ ಕಾಣಲಿಲ್ಲ. ನೀವು ಕೆಳಗೆ ಬಿದ್ದುದನ್ನು ಮಾತ್ರ ನೋಡಿದೆ. ಶೈತ್ಯೋಪಚಾರಮಾಡಿದೆ.

ನಾಯಕ:—ಇನ್ನೂ ನನ್ನನ್ನು ಪರೀಕ್ಷೆ ಮಾಡಬಯಸಿರುವನೇ ! ಮಾಡಲಿ ಸಿದ್ಧನಾಗಿರುವೆನು.

ನಾಯಕನು ಮತ್ತೆ ಹರಿಭಜನೆಗಾರಂಭಿಸಿದನು. ಯಾರೋ ಅವನ ಮಡಲಿಗಿಷ್ಟು ಭಿಕ್ಷವನ್ನು ತಂದುಹಾಕಿದರು. ನಾಯಕನು ಊರಹೊರಗಿದ್ದ ಮಾರುತಿಯ ದೇವಾಲಯಕ್ಕೆ ಬಂದನು. ಪತ್ನಿ ಸರಸ್ವತೀಬಾಯಿಯು ಭಿಕ್ಷೆ ದೊರೆತ ಪದಾರ್ಥಗಳನ್ನು ಪಾಕಮಾಡಿದಳು. ನಾಯಕನು ಮಾರುತಾಂತರ್ಗತ ಶ್ರೀ ಪಾಂಡುರಂಗನಿಗೆ ನಿವೇದನ ಮಾಡಿದನು. ಭಗವಂತನ ಮಹಿಮೆಯನ್ನು ಕೊಂಡಾಡುತ್ತ ಎಲ್ಲರೂ ಪಾರಣೆಮಾಡಿದರು.

ಆ ರಾತ್ರಿ ನಾಯಕನ ಸ್ವಪ್ನದಲ್ಲಿ ಪಾಂಡುರಂಗನ ದರ್ಶನನಾಯಿತು. ಪಂಪಾಕ್ಷೇತ್ರದಲ್ಲಿ ಚಕ್ರತೀರ್ಥದ ಬಳಿಯಲ್ಲಿರುವ ವ್ಯಾಸರಾಯರಲ್ಲಿ ಉಪದೇಶಹೊಂದಿ ಹರಿದಾಸನಾಗಬೇಕೆಂದು ಅಪ್ಪಣೆಯಾಯಿತು. ಮಹದಾಜ್ಞೆಯೆಂದು, ನಾಯಕನು ಮಾರನೆಯ ದಿನವೇ ಪತ್ನೀ ಪುತ್ರರೊಂದಿಗೆ ಹಂಪೆಯನ್ನು ಕುರಿತು ಪ್ರಯಾಣಮಾಡಿದನು.

ಭಾವೀ ಕೀರ್ತನಾಚಾರ್ಯರ ಗುರುಗಳಾಗಬೇಕಾದ ವ್ಯಾಸರಾಯರ್ಯಾರೆಂಬುದನ್ನೂ,ಅವರ ಪರಂಪರೆಯನ್ನೂ ವಾಚಕರಿಗೆ ಮತ್ತೊಮ್ಮೆ ತಿಳಿಸಬೇಕಾದ ಅಗತ್ಯವಿಲ್ಲ. ವ್ಯಾಸರಾಯರ ಚರಿತ್ರೆಯಲ್ಲಿ ಎಲ್ಲವೂ ವಿದಿತವಾಗಿವೆ. ಗುರುವಿಗೆ ತಕ್ಕ ಶಿಷ್ಯ ! ಶಿಷ್ಯನಿಗೆ ತಕ್ಕ ಗುರುವೆಂಬಂತೆ, ಶ್ರೀನಿವಾಸನಾಯಕನಿಗೆ ಶ್ರೀಹರಿಯು ತಕ್ಕ ಗುರುಗಳನ್ನೇ ಆರಿಸಿಕೊಟ್ಟನು. ನಾಯಕನು ತನ್ನ ಪರಿವಾರದೊಂದಿಗೆ ಪಂಪಾಕ್ಷೇತ್ರಕ್ಕೆ ಬರುವ ದಾರಿಯಲ್ಲಿ ಅರಣ್ಯಮಧ್ಯದಲ್ಲಿ ಸರಸ್ವತೀಬಾಯಿಯು ತನಗೇಕೋ ಭಯವಾಗುತ್ತದೆಯೆಂದಳು. ಸರ್ವವನ್ನೂ ತೊರೆದು ನಿರ್ಭಯವಾಗಿರುವ ಕಾಲದಲ್ಲಿ ಭಯವೆಲ್ಲಿಂದ ಬರಬೇಕೆಂದು ನಾಯಕನು ಕೇಳಿದನು. ಪತ್ನಿಯು ಕಾರಣ ಗೊತ್ತಿಲ್ಲವೆಂದಳು.

ಆಗ ನಾಯಕನು ಏನೋ ಶಂಕಿಸಿ–'ಎಲ್ಲಿ ನಿನ್ನ ಗಂಟಿನಲ್ಲೇನಿದೆ ನೋಡೋಣ' ಎಂದನು.

ಸರಸ್ವತೀಬಾಯಿ:—ಗಂಟಿನಲ್ಲೇನಿಲ್ಲ.

ನಾಯಕ:—ಬಿಚ್ಚು ನೋಡೋಣ !

ಸರಸ್ವತೀಬಾಯಿ:—ಗಂಟನ್ನು ಬಿಚ್ಚಿ-ನೋಡಿದಿರಾ, ಇಲ್ಲೇನಿದೆ? ಇದೊಂದು ನೀವು ನೀರುಕುಡಿಯಲು ಇಟ್ಟುಕೊಳ್ಳುತ್ತಿದ್ದ ಭಂಗಾರದ ಥಾಲಿ!

ನಾಯಕ:—ನೋಡಿದೆಯಾ! ಅದರಿಂದಲೇ ಭಯವಾಯಿತು. ಈಗ ನಿರ್ಭಯ ವಾಗುವುದು ನೋಡು, ಎಂದು ಆ ಥಾಲಿಯನ್ನೆತ್ತಿ ಅರಣ್ಯದಲ್ಲಿ ಬಿಸಾಡಿದನು.

ಸರಸ್ವತೀಬಾಯಿ:—ಅಯ್ಯೋ! ನಿಮಗೆ ಕುಡಿಯುವುದಕ್ಕೂ ಒಂದು ಪಾತ್ರ ಇಲ್ಲದಂತಾಯಿತಲ್ಲಾ !

ನಾಯಕ:—ಅದರಿಂದಲೇ ಭಯಪರಿಹಾರವಾಯಿತು. ಮುಂದೇನಾದರೂ ಭಯವಾದರೆ ಹೇಳು !

ಮಾರ್ಗ ಸಾಗಿತು. ಸರಸ್ವತೀಬಾಯಿಯು ನಿರ್ಭಯವಾಯಿತೆಂದಳು. ನಿಶ್ಚಿಂತೆ ಯಿಂದ ಹರಿನಾಮ ಸಂಕೀರ್ತನ ತತ್ಪರರಾಗಿ ಎಲ್ಲರೂ ಪ್ರಯಾಣ ಸಾಗಿಸಿದರು. ದೂರ ದಲ್ಲೇ ವಿಜಯನಗರದ ಗುಡಿಗೋಪುರಗಳು ದೃಗ್ಗೋಚರವಾದುವು. ಪಂಪಾಪತಿಯ ಮಹಾದ್ವಾರದ ಬಳಿಗೆ ಬಂದು ಎಲ್ಲರೂ ಸ್ವಾಮಿಗೆ ಸಾಷ್ಟಾಂಗವೆರಗಿದರು. ಅಲ್ಲಿಂದ ಹತ್ತು ಹೆಜ್ಜೆಗಳು ಸಾಗಿದೊಡನೆಯೇ ಆ ಕಿಷ್ಕಿಂಧೆ! ಆ ವಾಲಿಯ ಆವಾಸಸ್ಥಾನ, ಆ ರಮಣೀಯವಾದ ಪಂಪಾಸರೋವರ; ಆ ಚಕ್ರತೀರ್ಥ, ಮಠವಲ್ಲಿರುವ ಆ ಗಜಶಾಲಾ, ಒಂದೊಂದರ ದರ್ಶನಮಾಡುತ್ತಾ ಎಲ್ಲರೂ ಮಠದ ಬಾಗಿಲಿಗೆ ಬಂದರು. ಎದುರಿನಲ್ಲೇ ಶ್ರೀ ವ್ಯಾಸರಾಯರು ಶಿಷ್ಯರಿಗೆ ಪಾಠ ಹೇಳುತ್ತಾ ಕುಳಿತಿದ್ದ ದೃಶ್ಯ ಗೋಚರವಾಯಿತು. ಸದ್ಗೋಷ್ಠಿಯನ್ನು ನೋಡಿ, ನಾಯಕನು ಪುಳುಕಿತಾಂಗನಾಗಿ ಹೆಜ್ಜೆಹೆಜ್ಜೆಗೂ ನಮಸ್ಕಾರ ಮಾಡುತ್ತಾ ಸ್ವಾಮಿಗಳಿಗೆದುರಾಗಿ ದೂರದಲ್ಲಿ ಕೈಜೋಡಿಸಿ ನಿಂತನು. ವ್ಯಾಸರಾಯರು ನೋಡಿ :-'ಬರಬೇಕು ನಾಯಕರು! ಪಾದಚಾರಿಗಳಾಗಿ ಬಂದಿರಾ? ಮಾರ್ಗವು ನಿರ್ಭಯವಾಗಿ ಸಾಗಿತೇ? ನಿಮ್ಮದು ದೊಡ್ಡ ತ್ಯಾಗ! ಶ್ರೀಹರಿಯು ನಿಮ್ಮನ್ನು ಬಲು ಪರೀಕ್ಷಿಸಿದಂತಿದೆ! ಬಲಿಚಕ್ರವರ್ತಿಯ ಚರಿತ್ರೆಯು ಪುನರಾವರ್ತಿಯಾದಂತಿದೆ! ನೀವು ಬರುವುದನ್ನೇ ನಿರೀಕ್ಷಿಸುತ್ತಿದ್ದೆವು. ಪಾಠವಾಯಿತು, ಇನ್ನೇನು ಪೂಜೆಯಾಗುವುದು, ಬಲು ಬಳಲಿರುವಿರಿ. ತೀರ್ಥಪ್ರಸಾದಾನಂತರ ನಾವು ನೀವು ಏಕಾಂತವಾಗಿ ಮಾತ ನಾಡೋಣ!' ಎಂದು ಸಂತೈಸಿದರು. ನಾಯಕನಿಗೆ ಸ್ವಾಮಿಗಳಾಡಿದ ಒಂದೊಂದು ಮಾತೂ ವಿಸ್ಮಯವನ್ನುಂಟುಮಾಡಿತು. 'ನನ್ನ ವೃತ್ತಾಂತವನ್ನೆಲ್ಲ ಮಹಾಸ್ವಾಮಿ ಯವರು ಇದ್ದುದಿದ್ದಂತೆಯೇ ಪ್ರಸ್ತಾಪ ಮಾಡೋಣವಾಯಿತು. ತಾವು ದೊಡ್ಡವರು, ಮಹಾ ಜ್ಞಾನಿಗಳು, ಪೂಜ್ಯರು. ಹಿಂದೆ ಎಷ್ಟೋ ವೇಳೆ ವಿಜಯನಗರಕ್ಕೆ ಬಂದೆನು, ಮಹಾಸ್ವಾಮಿಯವರ ಪಾದದರ್ಶನ ಸಹ ಮಾಡದೆ ಹೋದೆ! ಯಾವುದಕ್ಕೂ ಕಾಲ ಕರ್ಮ ಸಂಯೋಗವಾಗಬೇಕು' ಎಂದುಕೊಂಡನು. ಸ್ನಾನಾಹ್ನಿಕಗಳನ್ನು ತೀರಿಸಿ

ಕೊಂಡು, ಪೂಜಾಶಾಲೆಯಲ್ಲಿ ಬಂದು ಕುಳಿತುಕೊಂಡನು. ಸಾಂಗವಾಗಿ ನಡೆದ ದೇವ ಪೂಜಾ ಸಂಭ್ರಮವನ್ನೆಲ್ಲ ನೋಡಿ, ರೋಮಾಂಚಗೊಂಡು ಆನಂದಬಾಷ್ಪಗಳನ್ನು ಸುರಿಸಿದನು. ಸ್ವಾಮಿಗಳು ನಾಯಕನನ್ನು ಕರೆದು ಹತ್ತಿರ ಕುಳ್ಳಿರಿಸಿಕೊಂಡು ತೀರ್ಥವಿತ್ತರು. ಸಮುಖದ ಪಙ್ಕ್ತಿಯಲ್ಲಿ ಭೋಜನ ಮಾಡಿಸಿದರು. ಭೋಜನಾನಂತರ ನಾಯಕನನ್ನು ಏಕಾಂತಕ್ಕೆ ಕರೆಸಿಕೊಂಡು, ಆತನ ಅನುಭವಗಳನ್ನೆಲ್ಲ ವಿಚಾರಿಸಿ ತಿಳಿದು ಆನಂದ ಪುಳುಕಿತರಾದರು.

ಮರುದಿನ ಸುದರ್ಶನ ಹೋಮಮಾಡಿ, ನಾಯಕನಿಗೂ ಆತನ ಪತ್ನೀಪುತ್ರರಿಗೂ ಸ್ವಾಮಿಗಳು ಚಕ್ರಾಂಕನ ಮಾಡಿಸಿದರು. ಹಾಗೆ ಸಿದ್ಧನಾದ ನಾಯಕನಿಗೆ ಮಂತ್ರೋಪದೇಶವಿತ್ತು ಸ್ವಾಮಿಗಳು ಭಾಗವತ ಧರ್ಮದೀಕ್ಷಿತನನ್ನಾಗಿ ಮಾಡಿದರು.

ಶ್ರೀನಿವಾಸನಾಯಕನು ಗುರೂಪದೇಶಹೊಂದಿ, ಇಂದು ಹರಿದಾಸನಾದನು. ಮುಂದೆ ದಾಸರು ಮಾಡುವ ಕೃತಿಗಳನ್ನು **'ಪುರಂದರ ವಿಠಲನಿಗೆ'** ಅಂಕಿತಮಾಡಬೇಕೆಂದು (Dedicate) ಗುರುಗಳ ಆಜ್ಞೆಯಾಯಿತು. ಉಪದೇಶವಾದ ದಿನದಿಂದ ನಾಯಕನಿಗೆ–ಯತ್ಯಾಶ್ರಮವಾದವರಿಗೆ ಹಿಂದಿನ ನಾಮವು ಲಯವಾಗಿ ಆಶ್ರಮನಾಮವೇ ಪ್ರಸಿದ್ಧವಾಗುವಂತೆ-ಮುಂದೆ **ಪುರಂದರದಾಸರೆಂಬ** ಹೆಸರೇ ಪ್ರಸಿದ್ಧವಾಯಿತು. ಅಂದಿನಿಂದ ಅವರು ಮಾಡಿದ ಕೀರ್ತನೆಗಳನ್ನೆಲ್ಲ **'ಪುರಂದರವಿಠಲ'** ಮುದ್ರಿಕೆಯಿಂದ ಅಂಕಿತಗೊಳಿಸಿ ಶ್ರೀಹರಿಗೆ ಸಮರ್ಪಿಸುತ್ತ ಬಂದರು. ಭಗವಂತನು ಪ್ರತ್ಯಕ್ಷನಾಗಿ ದಾಸರಿಗೆ ಸಕಲಾರ್ಥಸಿದ್ಧಿಯನ್ನೂ ಅನುಗ್ರಹಿಸಿದನು. ದಾಸರು ಗುರೂಪದಿಷ್ಟವಾದ ಮಂತ್ರ ಪುರಶ್ಚರಣೆಮಾಡಿ ಸಿದ್ಧರಾದರು. ಭಗವದ್ದರ್ಶನವಾದಾಗ ಪುಳುಕಾಂಕಿತರಾದ ದಾಸರು, ಆನಂದಾಶ್ರುಗಳು ಧಾರೆಧಾರೆಯಾಗಿ ಸುರಿಯುತ್ತಿರಲು—

ಉಗಾಭೋಗ

ಇಂದಿನ ದಿನವೇ ಶುಭದಿನವು । ಇಂದಿನ ವಾರ ಶುಭವಾರ
ಇಂದಿನ ತಾರೆ ಶುಭತಾರೆ । ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ । ಇಂದು **ಪುರಂದರ ವಿಠ್ಠಲರಾಯನ**
ಸಂದರುಶನ ಫಲವೆನಗಾಯ್ತು । ಸಂದರುಶನ ಫಲವೆನಗಾಯ್ತು ॥ ೧

ಎಂದು ಹಾಡಿದರು.

ಆ ದಿನದಿಂದ ಅವರಾಡಿದ ಮಾತುಗಳು ಛಂದೋಬದ್ಧವಾದ ದೇವರನಾಮಗಳಾದುವು. ಸ್ಮರಿಸಿದಾಗ ಭಗವಂತನು ಶ್ರೀಕೃಷ್ಣರೂಪದಿಂದ ದರ್ಶನ ಕೊಡುತ್ತಿದ್ದುದರಿಂದ–'ಕೃಷ್ಣಾಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ' ಎಂಬುದಾಗಿ ಮೊದಲು ದೇವರನಾಮವನ್ನು ಹಾಡಿದರು. ತಮಗೆ ಜ್ಞಾನೋದಯವಾಗುವುದಕ್ಕೆ ತಮ್ಮ ಪತ್ನಿಯೇ ಕಾರಣಳಾದಳೆಂಬ ವಿಚಾರವನ್ನು ಮನಕ್ಕೆ ತಂದುಕೊಂಡು–'ಹೆಂಡತಿ ಸಂತತಿ ಸಾವಿರವಾಗಲಿ ದಂಡಿಗೆ ಬೆತ್ತ ಹಿಡಿಸಿದಳಯ್ಯಾ' ಎಂಬುದಾಗಿ ಹಾಡಿದ ಒಂದು ದೇವರನಾಮದಲ್ಲಿ ತಮ್ಮ ಪತ್ನಿಗೆ ಕೃತಜ್ಞತೆಯನ್ನು ತೋರಿಸಿದ್ದಾರೆ.

ಪಂತುವರಾಳಿ—ಆದಿತಾಳ

ಆದದ್ದೆಲ್ಲಾ ಒಳಿತೇ ಆಯಿತು
ಮಾಧವನಂಘ್ರಿಯ ಸೇವಿಸುವುದಕೆ
ಸಾಧನ ಸಂಪತ್ತಾಯಿತು ಪ.

ದಂಡಿಗೆ ಬೆತ್ತ ಹಿಡಿಯುವುದಕ್ಕೆ | ಮುಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ | ದಂಡಿಗೆ ಬೆತ್ತ ಹಿಡಿಸಿದನಯ್ಯಾ ೧

ಗೋಪಾಳಬುಟ್ಟಿ ಹಿಡಿಯುವುದಕ್ಕೇ | ಭೂಪತಿಯೆಂದು ನಾಚುತಲಿದ್ದೆ
ಆ ಪತ್ನೀ ವ್ರತ ಅತಿ ಘನವಾಗಲಿ | ಗೋಪಾಳಬುಟ್ಟಿ ಹಿಡಿಸಿದಳಯ್ಯಾ ೨

ತುಲಸೀಮಾಲೆ ಹಾಕುವುದಕ್ಕೇ | ಅಲಸನಾಗಿ ತಿರುಗುತಲಿದ್ದೇ
ಜಲಜನಯನ ಶ್ರೀ ಪುರಂದರ ವಿಠಲ | ತುಲಸೀಮಾಲೆ ಹಾಕಿಸಿದನು ೩

ದಾಸರ ದಿನಚರ್ಯೆ

ಶ್ರೀ ಪುರಂದರದಾಸರು, ಪ್ರತಿದಿನವೂ ಶಿಷ್ಟಾಚಾರಕ್ಕೆ ತಕ್ಕಂತೆ, ಶುದ್ಧೀಕರಣ ಸ್ನಾನ-ಪ್ರಾತರಾಹ್ನಿಕಗಳನ್ನು ಮುಗಿಸಿಕೊಂಡು, ತಂಬೂರಿಯನ್ನು ಮಿಾಟುತ್ತಾ, ಭಗವಂತನ ಗುಣಗಳನ್ನು ಸಂಕೀರ್ತನ ಮಾಡುತ್ತಾ, ಗ್ರಾಮಪ್ರದಕ್ಷಿಣೆ ಮಾಡುತ್ತಿದ್ದರು. ನಾಲ್ವರು ಮಕ್ಕಳೂ ತಾಳ ಮದ್ದಲೆ ಖಂಜರಿಗಳನ್ನು ಬಾರಿಸುತ್ತಾ ಹಿಂದಿರುತ್ತಿದ್ದರು. ಹರಿದಾಸರಾದ ಅವರ ಸ್ಥಾನಮಾನಗಳು ಅಲೌಕಿಕವಾಗಿ-ಗೌರವಾನ್ವಿತವಾಗಿದ್ದುವು. ಶ್ರೀ ಪುರಂದರದಾಸರು ರೂಪದಲ್ಲಿ ನೋಡಿದರೆ ಮನ್ಮಥಾಂಗರು ; ಐಶ್ವರ್ಯದಲ್ಲಿ ನೋಡಿದರೆ ಚಕ್ರೇಶ್ವರನ ದರ್ಬಾರಿನಲ್ಲಿ ನವಕೋಟಿ ನಾರಾಯಣನೆಂದು ಹೊಗಳಿಸಿಕೊಂಡವರು; ಜೊಡ್ಡಸ್ತಿಕೆಯಲ್ಲಿ ನೋಡಿದರೆ ಚತುರ್ದಶಭುವನದೊಡೆಯನನ್ನು, ಕಣ್ಣೆತ್ತಿ ನೋಡುವುದಕ್ಕೆ ಆರುತಿಂಗಳಕಾಲ ಯಾಚಕನಂತೆ ಅಲೆಸಿದವರು. ವಿರಕ್ತಿಯಲ್ಲಿ ನೋಡಿದರೆ ಪ್ರಪಂಚ ಸುಖದಲ್ಲಿ ಜಿಹಾಸೆ ಹುಟ್ಟಿದೊಡನೆಯೇ ಸರ್ವಸ್ವವನ್ನೂ ತ್ಯಜಿಸಿದವರು; ಜ್ಞಾನದಲ್ಲಿ ನೋಡಿದರೆ, ರಾಜಗುರುಗಳಾದ ಶ್ರೀ ವ್ಯಾಸರಾಯಸ್ವಾಮಿಗಳಿಂದ ಸಕಲಶಾಸ್ತ್ರಾರ್ಥಗಳ ಉಪದೇಶ ಹೊಂದಿದವರು; ಭಕ್ತಿಯಲ್ಲಿ ನೋಡಿದರೆ ಸ್ಮರಿಸಿದಾಗ ಶ್ರೀಹರಿಯನ್ನು ತಾಂಡವವಾಡಿಸಿದವರು. ಇಂಥವರು ದ್ವಾದಶೋರ್ಧ್ವಪುಂಡ್ರಗಳನ್ನು ಧರಿಸಿ, ತುಲಸೀ ಮಾಲೆಯನ್ನು ಹಾಕಿಕೊಂಡು, ಗಂಧರ್ವರಂತೆ ಗಾನಮಾಡುತ್ತಾ ಬಂದರೆ, ನೋಡುವವರಿಗೆ, ಬೇಡಿದವರಿಗೆ ಪುರುಷಾರ್ಥ ಚತುಷ್ಟಯಗಳನ್ನೂ ಚೆಲ್ಲಿಕೊಡುವೆನೆಂದು ಶ್ರೀಮನ್ನಾರಾಯಣನೇ ನರರೂಪದಿಂದ ಬರುತ್ತಿರುವನೋ ಎಂಬಂತೆ ಭಾಸವಾಗುತ್ತಿತ್ತು. ಅವರ ಭವ್ಯಮೂರ್ತಿಯ ದರ್ಶನವಾದರೆ, ಆ ಸುಂದರ ವಿಜಯನಗರದಲ್ಲಿ ಎಂತಹ ಪಾಪಿಯ ಮನಸ್ಸೂ ಕರಗಿ ನೀರಾಗದಿರುತ್ತಿರಲಿಲ್ಲ. ಬಡವ ಬಲ್ಲಿದರೆಂಬ ಭೇದವಿಲ್ಲದೆ, ಜನರು ತಾವು ತಾವೇ ಜೋಳಿಗೆಯನ್ನು ಹಾಕಿಕೊಂಡು ಭಕ್ತಜನರು ಕೊಡುವ ಭಿಕ್ಷೆಯನ್ನು ದಾಸರ ಮನೆಗೆ ತಂದು

ಹಾಕುತ್ತಿದ್ದರು. ಎಷ್ಟೇ ಬರಲಿ-ಬರದಿರಲಿ, ಆ ದಿನ ದೊರೆತ ಪದಾರ್ಥಗಳನ್ನು ದಾಸರು ಮಾರನೆಯ ದಿನಕ್ಕೆ ಸಂಗ್ರಹಿಸಿಡುವ ಸಂಪ್ರದಾಯವಿರಲಿಲ್ಲ. **ಯದೃಚ್ಛಾಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ** ಎಂಬ ಗೀತೋಕ್ತಿಯು ದಾಸರಲ್ಲಿ ಕೃತಿಯಿಂದ ಸ್ಪಷ್ಟವಾಗಿ ಕಂಡುಬರುತ್ತಿತ್ತು. **ಸಾಲಮಾಡಬೇಡ, ಸಾಲದೆನಬೇಡ, ನಾಳೆಗಿಡಬೇಡ,** ಎಂಬ ಮಾತುಗಳನ್ನು ಆ ಮಹಾನುಭಾವರು ಪತ್ನೀಪುತ್ರರಿಗೆ ಬೋಧಿಸುತ್ತಿದ್ದರು.

ಶ್ರೀನಿವಾಸನಾಯಕರು ತಮ್ಮ ಸರ್ವಸ್ವವನ್ನು ತ್ಯಾಗಮಾಡಿ, ಹರಿದಾಸರಾದ ವರ್ತಮಾನ ದೇಶದಲ್ಲೆಲ್ಲಾ ವ್ಯಾಪಿಸಿತು. ಪರಿಚಿತರೂ ಅಪರಿಚಿತರೂ ಕುತೂಹಲದಿಂದ ದಾಸರನ್ನು ನೋಡುವುದಕ್ಕೆ ಬರುತ್ತಿದ್ದರು. ಬಂದವರಿಗೆಲ್ಲಾ ದಾಸರ ಬಿಡಾರದಲ್ಲೇ ವಸತಿ ಭೋಜನಗಳಾಗುತ್ತಿದ್ದವು. ಅತಿಥಿ ಸತ್ಕಾರ ಮುಗಿದು, ಸರಸ್ವತೀಬಾಯಿಯ ಭೋಜನವೂ ಆದನಂತರ ಮಿಕ್ಕ ಪದಾರ್ಥಗಳನ್ನೆಲ್ಲ ಚಕ್ರತೀರ್ಥದಲ್ಲಿ ಜಲಚರಗಳಿಗೆ ಹಾಕಿಬಿಡುತ್ತಿದ್ದರು. ಅನಂತರ ದಾಸರಬಳಿಯಲ್ಲಿ ಒಂದುಕಾಳು ಧಾನ್ಯವಾಗಲೀ, ಒಂದು ಕಾಸಾಗಲಿ ಇರುತ್ತಿರಲಿಲ್ಲ.

ಈಗಲೂ ಯಾರಾದರೂ ಹುಟ್ಟುದರಿದ್ರರನ್ನು ಕಂಡರೆ-'ಅವನ ಮನೆಯಲ್ಲೇನಿದೆ? ಪುರಂದರದಾಸನ ಮನೆ' ಎಂದು ಹೇಳುವುದು ಕರ್ಣಾಟಕದ ಹಳ್ಳಿದಿಳ್ಳಿಗಳಲ್ಲಿ ಗಾದೆಯಾಗಿ ಹೋಗಿದೆ.

ಹೀಗಿದ್ದರೂ ಪರಮಾತ್ಮನು ಅವರ ಯೋಗಕ್ಷೇಮ ಭಾರವನ್ನು ವಹಿಸಿದ್ದುದರಿಂದ ದಾಸರನ್ನು ದರಿದ್ರರೆಂದು ಹೇಳುವಂತಿರಲಿಲ್ಲ. ವನವಾಸದಲ್ಲಿ ಅಕ್ಷಯಪಾತ್ರೆಯ ಪ್ರಭಾವದಿಂದ ಪಾಂಡವರು ಲಕ್ಷಾವಧಿ ಜನರನ್ನು ಸಲಹುತ್ತಿದ್ದರೂ ಅನ್ನಕ್ಕಿಲ್ಲದವರೆಂಬ ಹೆಸರು ರೂಢಿಗೆ ಬಂದಿದ್ದಂತೆ ದಾಸರಿಗೂ ನಿರ್ಗತಿಕರೆಂಬ ಹೆಸರು ಬಂದಿತ್ತು.

ದಾಸರು ಕೋಟೀಶ್ವರರಾಗಿದ್ದಾಗ, ಅವರ ಘನತೆಗೆ ತಕ್ಕ ಸ್ಥಾನಮಾನವ ಶ್ರೀಮಂತನು ದಾಸರ ಹಿರಿಯ ಮಗ ವರದಪ್ಪನಿಗೆ ಕನ್ಯಾದಾನ ಮಾಡಿದ್ದನು. ಆತನಿಗೆ ತನ್ನ ಬೀಗರು ಹರಿದಾಸರಾದ ವಿಚಾರ ತಿಳಿದು, ಆ ವಿಷಯದಲ್ಲಿ ಆಶ್ಚರ್ಯ ಖೇದಗಳೆರಡೂ ಉಂಟಾದುವು. ಅವರನ್ನು ಪ್ರತ್ಯಕ್ಷ ನೋಡಬೇಕೆಂದು ವಿಜಯನಗರಕ್ಕೆ ಬಂದನು. ಸರಸ್ವತೀಬಾಯಿಯಿಂದ ದಾಸರ ವೃತ್ತಾಂತ ಕೇಳಿತಿಳಿದನು. ಆಕೆಯನ್ನು ಕುರಿತು -'ನೀವು ಹೇಳುವುದೆಲ್ಲಾ ನಿಜವಿರಬಹುದು, ಹೆಣ್ಣುಮಕ್ಕಳ ಮೈಮೇಲಿದ್ದ ಆಭರಣಗಳನ್ನೂ ಕಳಚಿ ದಾನಮಾಡಿ, ನಾರುಮಡಿಯುಟ್ಟು ಬರುವುದೆಂಥಾ ವೈರಾಗ್ಯ ?' ಎಂದು ಆಕ್ಷೇಪಿಸಿದನು. 'ಹೆಂಗಸರ ಮೈಮೇಲೆ ಆಭರಣಗಳಿದ್ದರೆ ದೇವರು ಒಲಿಯುವುದಿಲ್ಲವೆಂದು ಹೇಳುವನೋ ?' ಎಂದು ಕೇಳಿದನು. 'ಇದೆಲ್ಲಾ ಹೆಂಗಸರಿಗೆ ತಿಳಿದಿರಬೇಕಾದ ವಿಚಾರ' ಎಂದು ಪಶ್ಚಾತ್ತಾಪಪಟ್ಟನು. ಸ್ತ್ರೀ ಸ್ವಭಾವವಾದ್ದರಿಂದ, ಆ ಮಾತುಗಳನ್ನು ಕೇಳಿದಾಗ, ಸರಸ್ವತೀಬಾಯಿಗೆ ಕ್ಷಣಕಾಲ, ಸರೀಕರೆದುರಿಗೆ ಹೀನಾಯವಾಗುವಂತೆ ಮೈಮೇಲಿದ್ದ ವಸ್ತುಗಳನ್ನು ಕೊಟ್ಟುಬಂದುದು ಸರಿಯಲ್ಲವೆಂದು ತೋರಿತು. ಬಂದ ಬೀಗರಿಗೆ ಸಕಾಲದಲ್ಲಿ ಭೋಜನ

ಮಾಡಿಸುವ ಅನುಕೂಲವಿಲ್ಲದ, ತನ್ನ ಸ್ಥಿತಿಗಾಗಿ ಬಹಳ ಸಂಕೋಚವಾಯಿತು. ಆ ದಿನ ದಾಸರು ನಗರಸಂಚಾರಕ್ಕೆ ಹೋಗುವುದು ಸ್ವಲ್ಪ ಹೊತ್ತಾಗಿದ್ದುದರಿಂದ ತಿರುಗಿ ಬರುವುದು ತಡವಾಗಬಹುದೆಂದು ಚಿಂತಿಸುತ್ತಿದ್ದಳು. ಸಹಜವಾಗಿ ದಾಸರು, ನಾಮಸಂಕೀರ್ತನಾನಂದಮಗ್ನರಾಗಿ, ಭಕ್ತಿ ಪಾರವಶ್ಯದಲ್ಲಿರುತ್ತಿದ್ದುದರಿಂದ ಹೊತ್ತುಹೊತ್ತಿಗೆ ಮನೆಗೆ ಬರುತ್ತಿರಲಿಲ್ಲ. ನೆರೆಮನೆಯಲ್ಲಿ ಸಾಲತಂದು ಪಾಕಮಾಡುವುದು ಪತಿಯಾಜ್ಞೆಗೆ ವಿರೋಧವಾಗಿತ್ತು. ಈ ಸ್ಥಿತಿಯಲ್ಲಿ ಆಕೆಗೆ ಏನುಮಾಡುವುದಕ್ಕೂ ತೋರದಿರಲು, ನೆರೆಮನೆಯ ಸ್ನೇಹಿತಳ ನೆನಪಾಯಿತು. ಆ ಸಾಧ್ವಿಗೆ ಸರಸ್ವತೀಬಾಯಿಯಮೇಲೆ ಬಹು ಪ್ರೀತಿಯಿತ್ತು. ಆಕೆಯ ಗಂಡ ಮೈಲಾರಪ್ಪನಿಗೆ ದುರ್ಗೋಪಾಸನಾಬಲದಿಂದ ಪರಶೂಶಿಲೆಯೊಂದು ದೊರೆತಿತ್ತು. ಆತನು ಆ ಶಿಲೆಯ ಪ್ರಭಾವದಿಂದ ಬೇಕಾದಷ್ಟು ಭಂಗಾರವನ್ನು ಮಾಡಿಕೊಂಡು, ದೊಡ್ಡ ಧನವಂತನಾಗಿದ್ದನು. ಸರಸ್ವತೀಬಾಯಿಯು ತನ್ನ ಮನೆಗೆ ಬೀಗರು ಬಂದಿರುವ ಧರ್ಮ ಸಂಕಟವನ್ನು ಆಕೆಯೊಡನೆ ತಿಳಿಸಿದಳು. ದಯೆಯಿಟ್ಟು ಆ ಪರಶೂಶಿಲೆಯನ್ನೂ ಕೊಟ್ಟರೆ, ತನ್ನ ಕೆಲಸವಾದನಂತರ ತಂದುಕೊಡುವೆನೆಂದು ವಚನವಿತ್ತಳು. ಆಕೆಯು ಬಹು ಜೋಪಾನವೆಂದು ಎಚ್ಚರಿಕೆಯಮಾತನ್ನು ಹೇಳಿ, ಆ ಪರಶೂಶಿಲೆಯನ್ನು ಸರಸ್ವತೀಬಾಯಿಗೆ ತಂದುಕೊಟ್ಟಳು. ಒಡನೆ ದಾಸರ ಭಾರ್ಯೆಯು ಅದರಿಂದ ಭಂಗಾರವಮಾಡಿ, ಅದನ್ನು ಪೇಟೆಯಲ್ಲಿ ಮಾರಿಸಿ, ಮನೆಗೆ ಬೇಕಾದಷ್ಟು ಪದಾರ್ಥಗಳನ್ನು ತರಿಸಿದಳು. ಮತ್ತು ಬೀಗರ ಗೌರವಕ್ಕೆ ತಕ್ಕಂತೆ ಔತಣದಡಿಗೆಗೆ ಆರಂಭಿಸಿದಳು.

ಅತ್ತ ಗ್ರಾಮಸಂಕೀರ್ತನ ಯಾತ್ರೆಗಾಗಿ ಹೋಗಿದ್ದ ದಾಸರಿಗೆ ಆ ದಿನ ಮನಸ್ಸಿಗೆ ಏನೋ ಬೇಸರಹುಟ್ಟಿದಂತಾಯಿತು. ನಾಮಕೀರ್ತನೆಗೆ ಮನ ಒಲಿಯದಂತಾಯಿತು. ಹಿಂದಿರುಗಿಬಿಡಬೇಕೆಂಬ ಇಚ್ಛೆಹುಟ್ಟಿ, ಎಂದಿಗಿಂತ ಮೊದಲೇ ಮನೆಗೆ ಬಂದುಬಿಟ್ಟರು. ಪತಿಯು ಸಕಾಲದಲ್ಲಿ ಬಂದುದರಿಂದ ಸರಸ್ವತೀಬಾಯಿಗೆ ಸಂತೋಷವಾಯಿತು. ಬೀಗರೊಡನೆ ದಾಸರ ಕುಶಲಪ್ರಶ್ನೆಯಾಯಿತು. ಅಡಿಗೆಯಮನೆಯಲ್ಲಿ ಭಕ್ಷ್ಯಗಳು ತಯಾರಾಗುತ್ತಿರುವುದನ್ನುಕಂಡು ದಾಸರು ಇದೇನು ಸಮಾಚಾರವೆಂದು ತಮ್ಮಪತ್ನಿಯನ್ನು ಪ್ರಶ್ನೆಮಾಡಿದರು.

ಸರಸ್ವತೀಬಾಯಿ :—ಬೀಗರು ಬಂದಿದ್ದಾರೆ. ಅವರಿಗೆ ಹೊತ್ತಾಗಬಾರದೆಂದು ಬೇಗ ಅಡಿಗೆಮಾಡಿದ್ದೇನೆ. ಸ್ನಾನಮಾಡಿ ದೇವರಿಗೆ ನೈವೇದ್ಯಮಾಡಿದರೆ, ಅವರಿಗೆ ಸಕಾಲದಲ್ಲಿ ಭೋಜನವಾಗುತ್ತದೆ.

ದಾಸರು:—ಅದು ಸರಿ. ಅಡಿಗೆಗೆ ಪದಾರ್ಥಗಳೆಲ್ಲಿದ್ದುವು ?

ಸರಸ್ವತೀಬಾಯಿ:—ಈಗ ಅದರ ವಿಚಾರವೇಕೆ? ಆಮೇಲೆ ಹೇಳುತ್ತೇನೆ. ಮೊದಲು ಸ್ನಾನವಾಗಲಿ.

ದಾಸರು:—ಮತ್ತೇನಿಲ್ಲ—ಯಾರು ಕೊಟ್ಟರೆಂದು ಕೇಳಿದೆ!

ಸರಸ್ವತೀಬಾಯಿ:—ಮೈಲಾರಪ್ಪನ ಹೆಂಡತಿಯನ್ನು [illegible], [illegible]ಯನ್ನು ತಂದು, ಸ್ವಲ್ಪ ಭಂಗಾರವಮಾಡಿ, ಅದರಿಂದ ಸಾಮಾನು ತರಿಸಿ ಅಡಿಗೆ ಮಾಡಿದೆ.

ದಾಸರು:—ಓ, ಆ ಪಾಪಾಚಾರಿ ಮೈಲಾರಪ್ಪನ ಪ್ರಸಾದವೋ ಇದು ! ಅದಕ್ಕೇ ನನಗೆ ನಗರಸಂಕೀರ್ತನೆಯಲ್ಲಿ ಹರಿಭಜನೆ ಮಾಡಲು ಮನಸ್ಸು ಸಮಾಧಾನವಿರಲಿಲ್ಲ. ಅದರಿಂದಲೇ ಬೇಸರ ಹುಟ್ಟಿ ಮನೆಗೆ ಬಂದೆ ! ಅದಕ್ಕೆ ಕಾರಣ ಈಗ ತಿಳಿಯಿತು. ಆ ಪಾಪಿಯ ಪದಾರ್ಥ ಮನೆಗೆ ಬಂದುದಕ್ಕೆ ಇಷ್ಟು ಪರಿಣಾಮವಾಯಿತು. ಇನ್ನು ಅದು ಉದರಪ್ರವೇಶ ಮಾಡಿದರೆ ಏನಾಗುವುದು ! ಮಾಡಿದ ಕೆಲಸ ತಪ್ಪಾಯಿತು. ಎಲ್ಲಿ ಆ ಪರಶೂಶಿಲೆಯನ್ನು ನೋಡೋಣ ! ಈ ಪದಾರ್ಥಗಳನ್ನು ಚೆಲ್ಲಿಬಿಡೋಣ ! ಗೃಹ ಶುದ್ಧಿ ಮಾಡಿ, ಹರಿನಾಮ ಸ್ಮರಣೆಯಿಂದ ಬಂದ ಪದಾರ್ಥಗಳಿಂದ ಅಡಿಗೆ ಮಾಡೋಣ !

ಸರಸ್ವತೀಬಾಯಿಯು ಸ್ತಬ್ಧಳಾದಳು. ಬೀಗರು ಬೆರಗಾದರು. ದಾಸರು ಎಲ್ಲ ಪದಾರ್ಥಗಳನ್ನೂ ಶಿಷ್ಯರಿಂದ ನದಿಗೆ ಚೆಲ್ಲಿಸಿದರು. ಗೃಹಶುದ್ಧಿಮಾಡಿ ಅಡಿಗೆಗಾರಂಭವಾಗಲೆಂದು ಹೇಳಿ, ತಮ್ಮ ಪತ್ನಿಯು ತಂದುಕೊಟ್ಟ ಆ ಪರಶೂಶಿಲೆಯನ್ನು ಚಕ್ರತೀರ್ಥದಲ್ಲಿ ಬಿಸಾಡಿಬಿಟ್ಟರು. ಸರಸ್ವತೀಬಾಯಿಗೆ ಎದೆಯೊಡೆಯಿತು. ಮೈಲಾರಪ್ಪನ ಹೆಂಡತಿಗೆ ಏನು ಹೇಳಬೇಕೆಂದು ತೋರದೆ ವ್ಯಸನಾಕ್ರಾಂತಳಾದಳು. ಅನ್ನೋದಕಗಳನ್ನು ತ್ಯಜಿಸಿದಳು. ಭೋಜನಾನಂತರ ವ್ಯಾಸರಾಯರ ಬಳಿಗೆ ಹೋದ ದಾಸರು ಆ ರಾತ್ರಿಯೆಲ್ಲಾ ಭಜನಾನಂದದಲ್ಲಿದ್ದುಬಿಟ್ಟರು.

ಮರುದಿನ ಬೆಳಗಾಗುತ್ತಲೇ, ಸರಸ್ವತೀಬಾಯಿಯ ಸ್ನೇಹಿತಳಾದ ಆ ಮೈಲಾರಪ್ಪನ ಹೆಂಡತಿಯು ಗಂಡನ ಪೂಜಾಕಾಲಕ್ಕೆ ಆ ಶಿಲೆಯನ್ನು ತಂದಿಡಬೇಕೆಂದು ಆತುರದಿಂದ ಬಂದು ಆ ಶಿಲೆಯನ್ನು ಕೇಳಿದಳು. ಮೈಲಾರಪ್ಪನ ಪೂಜೆಯೆಂದರೆ ಪರಶೂಶಿಲೆಯನ್ನು ಪೂಜಿಸಿ ಭಂಗಾರ ಮಾಡುವುದಾಗಿತ್ತು. ಸರಸ್ವತೀಬಾಯಿಯು, ಬಹು ದುಗುಡದಿಂದ, ನಡೆದ ಸಂಗತಿಯನ್ನು ತಿಳಿಸಿ ಬಹಳ ವ್ಯಥೆಪಟ್ಟಳು. ಗುಜು ಗುಜು ಮಾತುಗಳು ಹೊರಬಿದ್ದು ಕೊನೆಗೆ ಮೈಲಾರಪ್ಪನಿಗೆ ಸಂಗತಿ ತಿಳಿಯಿತು. ಅವನು ಸರ್ವನಾಶವಾಯಿತೆಂದು ಹೆಂಡತಿಯನ್ನು ಬೈದು ಹೊಡೆದು ಹಗರಣಮಾಡಿ, ದಾಸರನ್ನು ವಾಚಾಮಗೋಚರವಾಗಿ ಬೈಯುತ್ತಾ ಬೀದಿಯಲ್ಲಿ ಬಂದು ನಿಂತನು. ದಾಸರು ಸ್ವಲ್ಪವೂ ಕೋಪಿಸಿಕೊಳ್ಳದೆ, ಆ ಗೃಹಸ್ಥನನ್ನು ಕರೆದು, – 'ನಿನ್ನ ಕಲ್ಲನ್ನು ಚಕ್ರತೀರ್ಥದಲ್ಲಿ ಹಾಕಿಬಿಟ್ಟೆ ! ಅದಕ್ಕೆ ಬದಲಾಗಿ ಬೇರೆ ಕಲ್ಲನ್ನು ಕೊಡುತ್ತೇನೆ' ಎಂದರು.

ಮೈಲಾರಪ್ಪ:—ನೀವು ಏನು ಕೊಟ್ಟರೆ ನನ್ನ ಪರಶೂಶಿಲೆಗೆ ಸಮವಾದೀತು ! ಇದೇನೋ ಕಂಡವರ ಮನೆಯನ್ನು ಹಾಳುಮಾಡುವ ನಿಮ್ಮ ದಾಸತ್ವ ? ಶಿಲೆಯನ್ನು ಯಾವ ಸ್ಥಳದಲ್ಲಿ ಹಾಕಿದಿರಿ ?

ದಾಸರು:–'ಅಗೋ–ಅಲ್ಲಿ!' ಎಂದು ಚಕ್ರತೀರ್ಥದ ಮಡುವನ್ನು ತೋರಿಸಿದರು.

ಮೈಲಾರಪ್ಪ:—ಆ ಮಡುವಿನಲ್ಲಿ ಬಿದ್ದು ತೆಗೆಯುವವರ್ಯಾರು ?

ಇದೆಲ್ಲ ಹಗರಣವನ್ನು ನೋಡಿ, ಬೀಗರು – ದಾಸರನ್ನು ಕುರಿತು – 'ದಾಸರೆ, ನಿಮ್ಮ ಕೆಲಸವೊಂದೂ ಚೆನ್ನಾಗಿಲ್ಲ, ಎಷ್ಟೋ ತಲೆಗಳಿಂದ ಆರ್ಜಿಸಿದ್ದ ಧನವನ್ನೆಲ್ಲ ಒಂದು ಘಳಿಗೆಯೊಳಗೆ ಹಾಳುಮಾಡಿದಿರಿ ! ಹೆಂಡತಿಗೂ ನೊಸೆಯರಿಗೂ ಗುಂಜಿತೂಕ ಭಂಗಾರ

ಬಿಲ್ಲವಂತೆ ನಗಾಡಿದಿರಿ. ಮಕ್ಕಳ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಕೊಟ್ಟಿರಿ. ಮಾಡಿದ ಅಡಿಗೆಯನ್ನು ನದಿಗೆ ಹಾಕಿಸಿದಿರಿ. ಈ ಕಲ್ಲು ಬದಿಗೆ ಬೇಡವಾದರೆ ಬಿಟ್ಟುಬಿಡಬೇಕಾಗಿತ್ತು! ಮಿಕ್ಕವರು ತಿನ್ನಲೂ ಬಿಡಲಿಲ್ಲ. ನನ್ನ ಶಿಲೆಯನ್ನೇಕೆ ಮಡುವಿನಲ್ಲಿ ಎಸೆದು ಕಳೆದಿರಿ? ನೋಡಿದಿರಾ ನಿಮ್ಮ ದುಷ್ಟತನವನ್ನು!

ದಾಸರು ತಮ್ಮ ಮೇಲೆ ಮಾಡಿದ ಆಕ್ಷೇಪಕರ ಮಾತುಗಳನ್ನು ಕೇಳಿಯೂ, ಕೇಳದಂತಿದ್ದುಬಿಟ್ಟರು. ಇಷ್ಟೆನ್ನುವಷ್ಟರಲ್ಲಿ ಜನರ ಜಾತ್ರೆ ನೆರೆಯಿತು. ಸ್ವಾಮಿಗಳು ಮೊದಲಾಗಿ ಎಲ್ಲರೂ ಈ ವಿನೋದ ನೋಡುತ್ತಾ ನಿಂತರು. ಆಗ ದಾಸರ ಚಿಕ್ಕ ಮಗನಾದ ಮಧ್ವಪತಿಯು ಅವರ ಬಳಿಯಲ್ಲಿ ನಿಂತಿದ್ದನು. ಅವನಿಗಿನ್ನೂ ಉಪನಯನವಾಗಿರಲಿಲ್ಲ. ದಾಸರು ಅವನ ಕಡೆಗೆ ತಿರುಗಿ—'ಎಲಾ ಮಧ್ವಪತಿ, ಸುಮ್ಮನೇಕೆ ನಿಂತಿರುವೆ? ಚಕ್ರತೀರ್ಥದಲ್ಲಿ ಮುಳುಗಿ ನಾಲ್ಕು ಕಲ್ಲುಗಳನ್ನು ಆರಿಸಿಕೊಂಡು ಬಾ' ಎಂದು ಅವನ ಬೆನ್ನಮೇಲೆ ಚಪ್ಪರಿಸಿದರು. ಮಧ್ವಪತಿಯು—'ಇಗೋ ತರುವೆನು' ಎಂದು ನುಡಿಯುತ್ತಲೇ ಚಕ್ರತೀರ್ಥದ ಮಡುವಿನಲ್ಲಿ ಹಾರಿಬಿಟ್ಟನು. ಬೀಗರು ಇಂಥಾ ದುಃಖವನ್ನು ನೋಡುವುದಕ್ಕೆ ಬಂದಂತಾಯಿತೆಂದು ವ್ಯಸನಪಟ್ಟರು. ಜನರಲ್ಲಿ ಹಾಹಾಕಾರ ಹುಟ್ಟಿತು. ಅದು ಬಹು ಅಪಾಯಕರವಾದ ಮಡುವಾಗಿರದಿದ್ದರೆ—ಆ ಮಡುವಿನಲ್ಲಿ ನಕ್ರಾದಿ ದುಷ್ಟ ಜಲಚರಗಳು ತುಂಬಿರದಿದ್ದರೆ, ಮಧ್ವಪತಿಯನ್ನು ಮೇಲಕ್ಕೆಳೆದು ತರಲು, ಯಾರಾದರೂ ಧುಮುಕಿಬಿಡುತ್ತಿದ್ದರು. ಯಂತ್ರೋದ್ಧಾರಕನ ಗುಡಿಯಬಳಿ ನಿಂತಿದ್ದ ಸ್ವಾಮಿಗಳು ಹತ್ತಿರಿದ್ದವರನ್ನು ಕುರಿತು-ಮಧ್ವಪತಿಯು ಈಗ ಬರುವನೆಂದು ಸಮಾಧಾನ ಹೇಳುತ್ತಿದ್ದರು. ಮುಂದೆ ಒಂದು ಕ್ಷಣದೊಳಗಾಗಿ ಬಾಲಕ ಮಧ್ವಪತಿಯು, ಮಡುವಿನಿಂದ ಮೇಲಕ್ಕೆ ಬಂದು ನಾಲ್ಕು ಕಲ್ಲುಗಳನ್ನು ತಂದು, ತಂದೆಯ ಮುಂದಿಟ್ಟನು.

ದಾಸರು:—ಮೈಲಾರಪ್ಪ, ಇದೋ ಈ ನಾಲ್ಕೂ ನಿನ್ನವೇ ತೆಗೆದುಕೋ!

ಮೈಲಾರಪ್ಪ:—ಇದೊಂದೂ ನನ್ನ ಶಿಲೆಯಲ್ಲ! ಇದನ್ನು ತೆಗೆದುಕೊಂಡು ನಾನೇನು ಮಾಡಲಿ?

ದಾಸರು, ಈ ನಾಲ್ಕೂ ನಿನ್ನ ಶಿಲೆಗಳಿಗಿಂತ ಉತ್ತಮಶಿಲೆಗಳೆಂದು ಆತನಿಗೆ ಹೇಳಿದರು. ಮೈಲಾರಪ್ಪನು ಆ ಮಾತನ್ನು ಒಪ್ಪಲಿಲ್ಲ. ಎದೆಯನ್ನು ಬಡಿದುಕೊಳ್ಳುತ್ತಾ ಗಟ್ಟಿಯಾಗಿ ಅಮಂಗಳಧ್ವನಿ ಮಾಡಿದನು. ಆಗ ದಾಸರು ಎಲ್ಲರಿಗೂ ಕಾಣುವಂತೆ ಒಂದು ಕಲ್ಲನ್ನು ತೆಗೆದುಕೊಂಡು ಅದನ್ನು ಮತ್ತೊಂದು ಕಲ್ಲಿಗೂ ಅದನ್ನು ಮಗದೊಂದು ಕಲ್ಲಿಗೂ ಸ್ಪರ್ಶಮಾಡಿಸಿ, ಎಲ್ಲವನ್ನೂ ಬಂಗಾರವಮಾಡಿ ತೋರಿಸಿದರು. **'ಕಲ್ಲಿಂದ ಜಗ ಕಲ್ಲಿಂದ'** ಎಂಬ ದೇವರನಾಮವನ್ನು ಹಾಡಿದರು. ಜನರು ಪರಮಾಶ್ಚರ್ಯದಿಂದ ದಾಸರ ಪಾದಗಳಿಗೆರಗಿ ಮೈಲಾರಪ್ಪನನ್ನು ಮನಬಂದಂತೆ ಛೀಮಾರಿ ಮಾಡಿದರು. ಪಾಪಾಚಾರದಿಂದ ಧನ ಕೂಡಿಸ ಬಯಸುತ್ತಿರುವನೆಂದು ನಿಂದಿಸಿದರು. ಪಾಪಾಚಾರದಿಂದಾಗುವ ಹಾನಿಯನ್ನು ವಿವರಿಸಿ, ನರಕಭಾಜನನಾಗುವೆಯೆಂದು ಮೂದಲಿಸಿದರು.

ಸಂತತಿಹೀನನಾದ ನೀನು ಯಾರಿಗಾಗಿ ಕೂಡಿಸುವೆ? ನೀನು ಕೂಡಿಟ್ಟ ಧನವನ್ನು ಅನುಭವಿಸುವವರ್ಯಾರೆಂದು ಕೇಳಿದರು.

ಮೈಲಾರಪ್ಪನ ಮನಸ್ಸು ಕರಗಿತು. ತನ್ನ ದುರಾಚಾರದ ತಪ್ಪು ಗೊತ್ತಾಯಿತು. ತಾನು ಯಾರಿಗಾಗಿ ಕೂಡಿಡಬೇಕೆಂಬ ವಿಚಾರ ಮನಸ್ಸಿಗೆ ಬಂದು ವ್ಯಸನವಾಯಿತು. 'ಮೈಲಾರಪ್ಪಾ, ಈ ಬಿಲ್ಲೆಗಳನ್ನು ತೆಗೆದುಕೊಳ್ಳುವೆಯೋ – ನದಿಗೆ ಹಾಕೋಣವೋ ?' ಎಂದು ದಾಸರು ಕೇಳಿದರು. ಮೈಲಾರಪ್ಪನು ದಾಸರ ಪಾದಕ್ಕೆ ನಮಸ್ಕರಿಸಿ –'ದಾಸರೇ ನನ್ನದು ತಪ್ಪಾಯಿತು. ಈಗ ನನ್ನ ಅಜ್ಞಾನ ಪರಿಹಾರವಾಯಿತು. ನಾನು ಯಾರಿಗಾಗಿ ಧನವನ್ನು ಕೂಡಿಡಲಿ? ಇರುವ ಧನವನ್ನೇ ಅನುಭವಿಸುವವರಿಲ್ಲ! ತಮಗೆ ಶರಣಾಗತನಾಗಿರುವೆನು. ನನಗೂ ಜ್ಞಾನೋಪದೇಶಮಾಡಿ, ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿರಿ' ಎಂದು ನಮಸ್ಕಾರ ಮಾಡಿದನು.

ಕಾಲಕ್ರಮದಲ್ಲಿ ಮೈಲಾರಪ್ಪನು ದೊಡ್ಡ ಹರಿದಾಸನಾದನು. ದಾಸರು ತಮ್ಮ ಜ್ಞಾನೋದಯಕ್ಕೆ ಸರಸ್ವತೀಬಾಯಿಯು ಕಾರಣಳಾಗಿದ್ದರೂ, ಈಗ ಆಕೆಗೆ ಬೀಗರ ಹಿತವಾಕ್ಕಿನಿಂದ ಆಭರಣಗಳ ಚಾಪಲ್ಯವುಂಟಾದ್ದನ್ನು ನೋಡಿ, ಅದು 'ಸಾಂಗತ್ಯದೋಷ' ಎಂದು ಹೇಳಿ—

ಧನಾಸರಿ—ಆದಿತಾಳ

ಭಂಗಾರವಿಡಬಾರೇ । ನಿನಗೊಪ್ಪುವ । ಭಂಗಾರವಿಡಬಾರೇ ! ಪ॥
ರಂಗನಾಥನ ದಿವ್ಯ ಮಂಗಳನಾಮವೆಂಬ ಭಂಗಾರವಿಡಬಾರೇ ! ಅ॥

ಕಸ್ತೂರಿಯ ಬಟ್ಟನಿಡೇ । ನಿನ್ನ ಫಣೆಗೆ । ಕಸ್ತೂರಿಯ ಬಟ್ಟನಿಡೇ ॥ ಹೆತ್ತವರ ಕುಲಕೆ । ಕುಂದುಬಾರದಹಾಗೆ । ಮುತ್ತಿನ ಮೂಗುತಿಯನ್ನಿಡೇ ॥ ಕರ್ತೃಪತಿಯ ಮಾತ ಮೀರಬಾರದು ಎಂಬ ಮುತ್ತಿನ್ವಾಲೆಕೊಪ್ಪನ್ನಿಡೇ ! ನಿನ್ನ ಕಿವಿಗೆ ಮುತ್ತಿನ್ವಾಲೆಕೊಪ್ಪನ್ನಿಡೇ ॥ ಹತ್ತುಮಂದಿಯ ಕೈಯಲ್ಲಿ ಹೌಧೌದೆನ್ನಿಸಿಕೊಂಬ ಮಸ್ತಕ ಮಕುಟವಿಡೇ ॥೧॥

ಅರಘಳಿಗೇ ಪತಿಯ। ಅಗಲಬಾರದು ಎಂಬ। ಅಚ್ಚಮಂಗಳ ಸೂತ್ರಕಟ್ಟೇ। ನಿನ್ನ ಕೊರಳಿಗೆ ಅಚ್ಚಮಂಗಳ ಸೂತ್ರ ಕಟ್ಟೇ । ಪರಮಪುರುಷನು ನಿನ್ನ ಪಡೆದ ತಂದೆಯೆಂಬ ಪದಕಸರವಹಾಕೇ ॥ ಕರೆದೊಬ್ಬರಿಗೆ ಅನ್ನವಿಕ್ಕುವೆನೆಂತೆಂಬ ಹರಡಿ ಕಂಕಣವನಿಡೇ । ನಿನ್ನ ಕೈಗೆ ಹರಡಿ ಕಂಕಣವನಿಡೇ । ನೆರೆಹೊರೆಯವರಿಲ್ಲಾ ಸಂಸರಿಯೆಂಬಂಥ ಬಿರುದಿನೊಡ್ಯಾಣವಿಡೇ ॥೨॥

ಮಾನ ಹೊರಗೆ ಬಿಡೆನೆಂಬ ಕಂಭಾವತಿಯು । ನೇಮದ ಮಡಿಯನುಡೇ । ನಿನ್ನ ಮೈಗೆ । ನೇಮದ ಮಡಿಯ ॥ ಹೀನಗುಣವಬಿಟ್ಟು ಹಿತದಲ್ಲಿಪ್ಪೆನೆಂಬ । ಹೆಚ್ಚಿನ ಕುಪ್ಪುಸವ ತೊಡೇ ॥ ಜ್ಞಾನನಿಧಿಗಳಾದ ಗುರುಗಳ ಪಾದ । ಕ್ಕಾನತಳಾಗಿ ಬಾಳೇ । ಗುರುಗಳ ಪಾದ । ಕ್ಕಾನತಳಾಗಿ ಬಾಳೇ ॥ ಮಾನಿಗಳೊಡೆಯ ಶ್ರೀ ಪುರಂದರವಿಠಲನ ಪ್ರೇಮದರಗೀಲಿ ಕಟ್ಟೆ ॥೩॥

ಎಂಬ ಪದವನ್ನು ಹಾಡಿ ನೀತಿಯನ್ನು ಉಪದೇಶಿಸಿದರು.

ಪುರಂದರದಾಸರ ಕಾಲದಲ್ಲಿ ಶ್ರೀಕೃಷ್ಣದೇವರಾಯನು ವಿಜಯನಗರದ ಸಾರ್ವಭೌಮನಾಗಿದ್ದನು. ನವಕೋಟಿ ನಾರಾಯಣನೆನಿಸಿದ ತನ್ನ ಆಸ್ಥಾನದ ಸಾಹುಕಾರನಾದ ಶ್ರೀನಿವಾಸನಾಯಕನು ಸರ್ವಸ್ವವನ್ನು ದಾನಮಾಡಿ ಪುರಂದರದಾಸರೆಂಬ ಹೆಸರಿನಿಂದ ಹರಿದಾಸರಾಗಿರುವ ವಿಚಾರವು ಮಹಾರಾಜನಿಗೆ ಅತ್ಯಾಶ್ಚರ್ಯವನ್ನುಂಟುಮಾಡಿತು. ಅವರ ವಿಚಿತ್ರ ಮಹಿಮೆಗಳಲ್ಲೊಂದೊಂದೂ ದಿನಂಪ್ರತಿ ರಾಜನ ಕಿವಿಗೆ ಬೀಳುತ್ತ ಬಂದುವು. ಒಂದು ರಾತ್ರಿ ತಾನೇ ಅವರ ಮಹಿಮೆಯನ್ನೂ ಅವರ ವೈಭವವನ್ನೂ ನೋಡಬೇಕೆಂದು ಇಚ್ಛೆಗೊಂಡು ಮರೆಯಲ್ಲಿ ಕುಳಿತು ವ್ಯಾಸರಾಯರ ಮಠಕ್ಕೆ ಬಂದನು. ಸ್ವಾಮಿಗಳೂ, ಪುರಂದರದಾಸರೂ ಕನಕದಾಸರೂ ಭಜನಾನಂದದಲ್ಲಿದ್ದರು. ರಾಜನು ಬಂದದ್ದನ್ನು ಕಂಡು ಜನರು ದೂರದೂರ ಸರಿಯಲಾರಂಭಿಸಿದರು. ಗದ್ದಲ ಮಾಡಬೇಡಿರೆಂದು ಕೈಸಂಜ್ಞೆಯಿಂದ ತಿಳಿಸಿ, ಸ್ವಾಮಿಗಳಿಗೆ ನಮಸ್ಕಾರಮಾಡಿ ಕೃಷ್ಣದೇವರಾಯನು ರಂಗಸ್ಥಳದಲ್ಲಿ ಕುಳಿತನು. ಭಜನಾನಂದದಲ್ಲಿದ್ದವರು ಭಾವಸಮಾಧಿಯಲ್ಲಿ ರಾಧಾಮಾಧವರ ದರ್ಶನಸೌಖ್ಯಾನುಭವ ಮಾಡುತ್ತಾ ಬ್ರಹ್ಮಾನಂದಮಗ್ನರಾಗಿದ್ದರು. ಸಮಾಧಿಯಳಿದು ಸಮಸ್ಥಿತಿಗೆ ಬರುತ್ತಲೇ ಸ್ವಾಮಿಗಳು, ಮಹಾರಾಜನು ಬಂದಿರುವುದನ್ನು ತಿಳಿದು—

ಆತನನ್ನು ಕುರಿತು–'ಇದೇನು ಕೃಷ್ಣದೇವರಾಯರು ?'

ಮಹಾರಾಜ:—ಸುಕೃತವಿದ್ದುದರಿಂದ ಈ ಭಾಗ್ಯ ದೊರೆಯಿತು.

ಸ್ವಾಮಿಗಳು:— ನೋಡಿದಿರೋ ನಮ್ಮ ದಾಸರನ್ನು ?

ಮಹಾರಾಜ:—ಅವರ ಮಹಿಮೆಯನ್ನು ಕೇಳಿ ದರ್ಶನಕ್ಕೆ ಬಂದೆ. ಎಲ್ಲಾ ಗುರುಕಟಾಕ್ಷ !

ಸ್ವಾಮಿಗಳು:—ಶ್ರೀ ಹರಿಕಟಾಕ್ಷ !

ಕೃಷ್ಣದೇವರಾಯನು ಸಮಯೋಚಿತವಾದ ಒಂದೆರಡು ಮಾತುಗಳನ್ನಾಡಿ ಮಂತ್ರಾಕ್ಷತೆಯನ್ನು ಪಡೆದು ದಾಸರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಅರಮನೆಯನ್ನು ಸೇರಿದನು. ಏಕಾಂತದಲ್ಲಿ ಕುಳಿತು ದಾಸರ ಅನುಭವಗಳನ್ನು ಕೇಳಿ ಆನಂದ ಪರವಶನಾದನು. ಆಗ ದಾಸರು ಮಹಾರಾಜನೊಡನೆ ವಿನೋದದಿಂದ—

ರಾಗ—ಧನಾಸರಿ—ಆದಿತಾಳ

ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ ಪ ||
ಸಮ್ಮತಿಂದ ನಾವು ನೀವು ಸಾಟಿಮಾಡಿ ನೋಡುವ ಬನ್ನಿ ಅ ||

ಹೇಮ ಹೊನ್ನು ಹಣಗಳಿಗೆ ಹೇರಾಳ ಧನಿಕರುಂಟು
ರಾಮನಾಮ ದ್ರವ್ಯಕಿನ್ನು ನಮಗೆ ಧನಿಕರಿಲ್ಲವಯ್ಯಾ ೧

ಕಡಗ ಕಂಠಮಾಲೆಗಳಿಗೆ ಕಳ್ಳರ ಅಂಜಿಕೆಯುಂಟು
ಅಡವಿ ತುಳಸಿಮಾಲೆಗಿನ್ನು ಆರ ಅಂಜಿಕಿಲ್ಲವಯ್ಯಾ ೨

ವ್ಯಾಪಾರಾ ಉದ್ಯೋಗಕಿನ್ನು ವ್ಯಾಕುಲದ ಭಯವುಂಟು
ಗೋಪಾಳಾದ ವೃತ್ತಿಗಿನ್ನು ಗೊಡವೆ ಯಾತದಿಲ್ಲವಯ್ಯಾ ೩
ಸರಕು ಬೆಲ್ಲ ತುಪ್ಪ ಧಾನ್ಯ ಸವೆದೀತೆಂಬ ಚಿಂತೆಯುಂಟು
ಹರಿನಾಮಾಮೃತಕ್ಕೆ ಇನ್ನು ಯಾವ ಚಿಂತೆಯಿಲ್ಲವಯ್ಯಾ ೪
ನಿಮ್ಮಭಾಗ್ಯ ಲಕ್ಷ್ಮೀದೇವಿ ನಮ್ಮಭಾಗ್ಯ ನಾರಾಯಣನು
ನಮ್ಮ ನಿಮ್ಮ ಭಾಗ್ಯದೊಡೆಯ ಪುರಂದರವಿಠಲನು ೫

ಎಂಬ ದೇವರ ನಾಮವನ್ನು ಹಾಡಿ ವೈರಾಗ್ಯದ ಮಾತುಗಳನ್ನಾಡಿದರು. ಮಹಾರಾಜನು ದಾಸರ ವಿರಕ್ತಮನೋಭಾವವನ್ನು ಕಂಡು ಪರಮಾನಂದಪಟ್ಟು ಅವರನ್ನು ಯಥಾರೀತಿಯಾಗಿ ಸತ್ಕರಿಸಿ ಅನೇಕ ವಸ್ತ್ರಾಭರಣಗಳ ಬಹುಮಾನ ಮಾಡಿದನು. ದಾಸರು ರಾಜನ ಭಕ್ತಿಯನ್ನು ಶ್ಲಾಘನೆ ಮಾಡಿ, ರಾಜಾಸ್ಥಾನದಲ್ಲಿ ತಮಗೆ ಕೊಡಲ್ಪಟ್ಟ ವಸ್ತುಗಳನ್ನೆಲ್ಲ ಬಡ ಭಿಕ್ಷುಕರಿಗೆ ದಾನಮಾಡಿ ಮಠಕ್ಕೆ ಬಂದರು. ಈ ಸಂಗತಿಯು ಮಾರನೆಯ ದಿನ ಮಹಾರಾಜನಿಗೆ ತಿಳಿಯಿತು. ತಾನು ಕೊಟ್ಟದ್ದು ದಾಸರ ಗೌರವಕ್ಕೆ ಸಾಲದೆಂದು ಭಾವಿಸಿ ಅವರು ಹಾಗೆ ಮಾಡಿದರೆಂದು ಶಂಕಿಸಿದನು. ಮತ್ತೊಂದು ಸಮಯದಲ್ಲಿ ರಾಯನು ಮಠಕ್ಕೆ ಬಂದಾಗ ದಾಸರು–'ರಾಯರೆ ತಮ್ಮ ಬಹುಮಾನ ಶ್ರೀಹರಿಗೆ ಮುಟ್ಟಿದೆ. ತಾವು ಕೊಟ್ಟ ವಸ್ತ್ರಾಭರಣಗಳನ್ನು ನನ್ನ ಶರೀರಕ್ಕೆ ಅಲಂಕರಿಸಿಕೊಂಡಿದ್ದರೆ ಶ್ರೀಹರಿಗೆ ಅಷ್ಟು ಪ್ರೀತಿಯಾಗುತ್ತಿರಲಿಲ್ಲ!' ಎಂದು ಹೇಳಿದರು. ಇದರಿಂದ ರಾಯನಿಗೆ ದಾಸರಲ್ಲಿ ಅಧಿಕ ಗೌರವುಂಟಾಯಿತು.

ದಾಸರ ಪ್ರಾತಃಕಾಲದ ಗ್ರಾಮಸಂಚಾರದಿಂದ ದಿನದಿನಕ್ಕೆ ಜನರಮೇಲೆ ವಿಚಿತ್ರ ಧಾರ್ಮಿಕ ಪರಿಣಾಮವಾಯಿತು. ರಾತ್ರಿ ಭಜನೆಯಲ್ಲಿ ಸ್ವಾಮಿಗಳೂ ಕನಕದಾಸರೂ ಸೇರುತ್ತಿದ್ದುದರಿಂದ ಸಾವಿರಾರು ಜನರಿಗೆ ನಿಯಮಿತವಾದ ಶಿಕ್ಷಣ ದೊರೆತು, ಭಾಗವತ ಧರ್ಮದ ಪ್ರಚಾರವಾಯಿತು. ಜನರ ದಿನಚರ್ಯೆಯ ಪ್ರಾರ್ಥನೆಗಳು ಎಲ್ಲರಿಗೂ ಅರ್ಥವಾಗುವ ದೇವರನಾಮ ಸುಳಾದಿಗಳಲ್ಲಿ ರಚಿತವಾದುವು. ಸ್ತ್ರೀಯರು ದಾಸರ ಪದಗಳನ್ನು ನಿತ್ಯದ ಆನ್ಹಿಕದಂತೆ ಪಠನೆ ಮಾಡತೊಡಗಿದರು. ಕನ್ನಡ ಸಾಹಿತ್ಯದ ಗೌರವ ಹೆಚ್ಚಿತು. ಆಗಾಗ ದಾಸರಲ್ಲಿ ತೋರುವ ಅತಿಮಾನುಷ ಮಹಿಮೆಗಳಿಂದ ಜನರಿಗೆ ದಾಸರಲ್ಲಿ ವಿಶೇಷ ಭಕ್ತಿಯುಂಟಾಯಿತು. ದಾಸರನ್ನು ಜನರು ಜಗದುದ್ಧಾರಕ್ಕಾಗಿ ಬಂದ ಮಹಾನುಭಾವರೆಂದು ಭಾವಿಸಿದರು. ಭಾಗವತ ಧರ್ಮೋಪದೇಶದ ಕಾರ್ಯದಲ್ಲಿ ಪ್ರತ್ಯೇಕವಾಗಿ ಕೆಲಸ ಮಾಡಬೇಕೆಂದು ಬಯಸುತ್ತಿದ್ದ ವ್ಯಾಸರಾಯಸ್ವಾಮಿಗಳ ಉದ್ದೇಶವು ಉಭಯದಾಸರುಗಳಿಂದ ಫಲಕಾರಿಯಾಯಿತು. ದಿನದಿನಕ್ಕೆ ಜನಾನುರಾಗ ಭಕ್ತಿ ಹೆಚ್ಚಿದಂತೆ ಪಂಡಿತವರ್ಗದಲ್ಲಿ ಅತೃಪ್ತಿ–ಅಸಮಾಧಾನಗಳೂ ಹೆಚ್ಚಾಗತೊಡಗಿದುವು. ದಾಸರ ಯಶೋಭಿವೃದ್ಧಿಯನ್ನು ಸಹಿಸದ ಪಂಡಿತವರ್ಗದ ನಾಯಕರುಗಳು, 'ಈ ದಾಸನ ಪ್ರಾಬಲ್ಯವೇನು ? ಇವನ ಪಾಂಡಿತ್ಯವೇನು ? ಜನರ ಅಜ್ಞಾನವೇನು ? ಇವನನ್ನು ಕಟ್ಟಿಕೊಂಡು ಕುಣಿಯುವ ಸ್ವಾಮಿಗಳ ಘನತೆಯೇನು ? ಇವರ ಸಭೆಯಲ್ಲಿ ಕನಕನೂ ಒಬ್ಬ ಪಂಡಿತನೇ!

ಆ ಕುರುಬನನ್ನು ಸ್ವಾಮಿಗಳು ತಲೆಯಮೇಲೆ ಕುಳ್ಳಿರಿಸಿಕೊಂಡಿದ್ದಾರೆ. ಕಲಿಪ್ರಾಬಲ್ಯ ಮಾಡುವುದೇನು ?' ಎಂದು ಮುಂತಾಗಿ ಆಕ್ಷೇಪಿಸತೊಡಗಿದರು. ಕುರುಬ ಕನಕದಾಸರಿಂದ ಕೂಡಿ ನಡೆಯುತ್ತಿದ್ದ ಭಜನಾಗೋಷ್ಠಿಗೆ - ಕರ್ಮಬಾಹ್ಯರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರಿಗೆ ಕ್ರಮವಾಗಿ ಗೌಣವಾಚಕವಾಗಿರುವ ಶರ್ಮ, ವರ್ಮ, ಗುಪ್ತ, ದಾಸ ಎಂಬ ಶಬ್ದಗಳಲ್ಲಿ ಕೊನೆಯದಾದ ದಾಸಶಬ್ದವನ್ನು ಸೇರಿಸಿ, ದಾಸ ಕೂಟ-ಎಂದರೆ ಅಶಿಕ್ಷಿತ ಜನರ ಸಂಘವೆಂಬ (Unlawful assembly ಎಂಬಂತೆ) ನೀಚ ಅಭಿಪ್ರಾಯವನ್ನು ಆರೋಪಿಸಿ - ಸಮಸ್ತಪದವಾಚಿ ದಾಸಕೂಟ ಎಂದು ಕರೆದರು. ದಾಸಕೂಟಕ್ಕೆ ಸೇರಿದವರು ಕರ್ಮಭ್ರಷ್ಟರೆಂದು ಜರೆದರು. ಶಾಸ್ತ್ರಕ್ಕೆ ಅಪಾರ್ಥ ಮಾಡುವವರೆಂದು ಆಪಾದಿಸಿ ದುರ್ನಾಮವಿತ್ತರು. ಕಾಲಿಗೆ ಗೆಜ್ಜೆಕಟ್ಟಿ ಕುಣಿಯುವಿಕೆಯನ್ನು ಅಸಭ್ಯ ವ್ಯಾಪಾರವೆಂದರು. ಪ್ರಾಕೃತ ಪದಗಳನ್ನು ಹೇಳುವವರನ್ನು ಹರಿಕಟಿ ಗಾಯಕರ ಗುಂಪಿಗೆ ಸೇರಿಸಿದರು.

ಈ ನಿರೋಧಕೃತ್ಯಗಳು ಸ್ವಾಮಿಗಳವರಿಗೆ ತಿಳಿದಿದ್ದರೂ ಅವರು ಅರಿತೂ ಅರಿಯದವರಂತೆ ತಟಸ್ಥರಾಗಿದ್ದರು.

ಒಂದುದಿನ ಪಾತಕಾಲದಲ್ಲಿ ಸ್ವಾಮಿಗಳು ದಾಸರ ಕೀರ್ತನ ನಾಮಗಳನ್ನು ಶ್ಲಾಘಿಸಿ ಅವುಗಳನ್ನು ಬರೆದಿದ್ದ ಪುಸ್ತಕವನ್ನು ಪುರಂದರದಾಸರವರುಗಳೆದುರು ಸರ್ವಮೂಲ ಗ್ರಂಥಗಳ ವ್ಯಾಸಪೀಠದಲ್ಲಿಟ್ಟು ಮಂಗಳಾರತಿ ಮಾಡಿದರು. ಇದರಿಂದ ಪಂಡಿತರ ಸಮಿತಿಯನ್ನು ವಿಶೇಷ ಕೆರಳಿಸಿತು. ಆ ಪಂಡಿತರು ದಾಸರ ಪದಗಳು ಎಷ್ಟೇ ಚೆನ್ನಾಗಿರಲಿ, ಅವುಗಳನ್ನು ಸರ್ವಜ್ಞರ ಸರ್ವಮೂಲಗ್ರಂಥಗಳೊಡನೆ ಇಡಬಾರದೆಂದು ನಿರೋಧಿಸಿದರು. ಸ್ವಾಮಿಗಳು ನಾವಿಡದಿದ್ದರೂ ಅದು ಬಿಟ್ಟುಹೋಗುವುದಿಲ್ಲವೆಂದರು. ಕುಹಕಿಗಳು-ಎಸೆದರೆ ತಾನೇ ಹೋಗುವುದು-ಎಂದರು. ಸ್ವಾಮಿಗಳು ಪರೀಕ್ಷಿಸಬಹುದೆಂದರು. ಕುಹಕಿಗಳು ವ್ಯಾಸಪೀಠದಲ್ಲಿದ್ದ ಆ ಪುಸ್ತಕವನ್ನು ಕಿತ್ತೆಸೆದರು. ಆದರೆ, ಅದು ತಾನೇ ವ್ಯಾಸಪೀಠದ ಮೇಲೆ ಬಂದು ಕುಳಿತುಕೊಂಡಿತು. ಮತ್ತೆ ಮತ್ತೆ ಹೀಗೆ ನಡೆಯಲು ಅದಕ್ಕೆ ಸ್ವಾಮಿಗಳ ಅಭಿಮಾನವೇ ಕಾರಣವೆಂದರು. ಕೆಲವರು ಇದು ದಾಸರ ಎಸಗಿದ ಇಂದ್ರಜಾಲವೆಂದರು. ಈ ಅಂತರಂಗ ಮತ್ಸರ ದಿನದಿನಕ್ಕೆ ಬೆಳೆಯಿತು.

ಪುರಂದರದಾಸರ ಮಕ್ಕಳು ವರದಪ್ಪನವರು ಮೇಲ್ಕಂಡ ವಿಷಯವನ್ನು ಒಂದು ದೇವರನಾಮವಾಗಿ ಹಾಡಿರುವರು. ಆ ಪದದಲ್ಲಿನ ಎರಡು ನುಡಿಗಳು ಈ ಕೆಳಗೆ ಕೊಡಲ್ಪಟ್ಟಿವೆ.

ಪದಗಳ ಬರೆದ ವಹಿಗಳು ಮುಂಕೊಂಡು ।
ಮಧ್ವಶಾಸ್ತ್ರದಮೇಲೆ ಕುಳಿತಿರಲದ ಕಂಡು ।
ಹದನವರಿಯದ ದಿಂಡೆಯನೊಬ್ಬನು ।
ಪದದ ವಹಿಯ ತೆಗೆದು ಬಿಸಾಟಲಾಗ ॥

ಎರಡಾವರ್ತಿ ಬಿಸಾಡಲಾಗ ಅದು ।
ತಿರುಗಿ ತಿರುಗಿ ಬಂದು ಮೇಲೆ ಕುಳ್ಳಿರಲು ।
ಗುರು ವ್ಯಾಸರಾಯರು ನೋಡಿ ಹರುಷದಿಂದ ।
ಪುರಂದರ ಉಪನಿಷತ್ತೆಂದು ಕರೆದರು ॥

ಒಮ್ಮೆ ದಾಸರೂ ಸ್ವಾಮಿಗಳೂ ಸಭೆಯಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ದಾಸರು ಇದ್ದಕ್ಕಿದ್ದಹಾಗೆ ಅಂಗವಸ್ತ್ರವನ್ನು ಎರಡು ಕೈಗಳಿಂದಲೂ ಮುಷ್ಟಿ ಒರೆಸಿ ಗಸಗಸನೆಂದು ತಿಕ್ಕಿದರು.

ಸ್ವಾಮಿಗಳು:—ಇದೇನು ದಾಸರೆ, ವಸ್ತ್ರವೇನಾಯಿತು ?

ದಾಸರು:—ವಿಠಲನ ಗುಡಿಯಲ್ಲಿ ಪರದೆಗೆ ಉರಿ ಹತ್ತಿತ್ತು ! ಈಗ ಆರಿತು.

ಸ್ವಾಮಿಗಳು ಕುತುಕಿಗಳ ತಂಡವನ್ನು ಕರೆದು ವಿಜಯವಿಠಲನ ಗುಡಿಯಲ್ಲಿ ಏನಾಯಿತೋ ತಿಳಿದುಬರಬೇಕೆಂದು ಕಳುಹಿಸಿದರು. ಅಷ್ಟರಲ್ಲಿ-ದೇವಾಲಯದ ಅಧಿಕಾರಿಗಳೇ ಭೀತಿಯಿಂದ ಸ್ವಾಮಿಗಳ ಸನ್ನಿಧಿಗೆ ಬಂದು–'ಮಹಾಸ್ವಾಮಿಗಳಾ ದೀವಟಿಗೆಯವನ ಅಚಾತುರ್ಯದಿಂದ ಪರದೆಗೆ ಉರಿ ಹತ್ತಿಕೊಂಡಿತ್ತು. ಪುಣ್ಯಕ್ಕೆ ಪುರಂದರದಾಸರು ಅಷ್ಟರಲ್ಲಿ ಬಂದು ಅದನ್ನು ಆರಿಸಿದರು. ಅವರಿಲ್ಲದಿದ್ದರೆ ಪ್ರಮಾದವಾಗುತ್ತಿತ್ತು. ಇನ್ನುಮೇಲೆ ಜಾಗರೂಕತೆಯಿಂದ ನೋಡಿಕೊಳ್ಳುತ್ತೇನೆ, ಇವತ್ತಿಗೆ ಕ್ಷಮಾಪಣೆ ಮಾಡಬೇಕು' ಎಂದು ಬೇಡಿಕೊಂಡರು.

ಸ್ವಾಮಿಗಳು:—ದಾಸರೆಲ್ಲಿದ್ದರು ?

ಅಧಿಕಾರಿ:—ದೇವಾಲಯದಲ್ಲಿದ್ದರು.

ಸ್ವಾಮಿಗಳು:—ಇಲ್ಲೇ ಇದ್ದಾರೆ ನೋಡಿ !

ದೇವರ ಮಹಿಮೆಯಾದರೂ ತಿಳಿದೀತು ! ದಾಸರ ಮಹಿಮೆ ತಿಳಿಯುವುದಸಾಧ್ಯವೆಂದು ಹೇಳಿ, ಅಧಿಕಾರಿಯು ಸ್ವಾಮಿಗಳ ಆಜ್ಞೆ ಪಡೆದು ಕಾರ್ಯಗೌರವದಿಂದ ದೇವಾಲಯಕ್ಕೆ ತೆರಳಿದನು. ಆ ಸಂಗತಿಯನ್ನು ಕುರಿತ ಮೇಲ್ಕಂಡ ಪದದ ನುಡಿಯಿದು.

ಗುರುರಾಯರು ದಾಸರ ನೋಡುತಿರಲಾಗ ।
ಅರಿವೆಯನೊರಿಸಲು ಕರದಿಂದ ಬೇಗ ॥
ಕರೆದು ಕೇಳಲು ಸಿರಿ ವಿಠಲನ ಗುಡಿಯಲ್ಲಿ
ಪರದೆ ಹತ್ತಿದ ಉರಿ ಆರಿಸಿದೆನೆಂದರು ।

ವ್ಯಾಸರಾಯರು ಮಹಾರಾಜನ ಪ್ರಾರ್ಥನೆಯಂತೆ ರಾಜಕಾರ್ಯಾಸಕ್ತರಾಗಿ ಮುದ್ರಾಸನದಲ್ಲಿ ಕುಳಿತಾಗ ದಾಸರು ಮುಖ್ಯಪ್ರಾಣದೇವರ ಬಳಿಯಲ್ಲಿರುತ್ತಿದ್ದರು. ಮಾರುತಿಯೊಡನೆ ದಾಸರು ಮಾಡಿದ ಸಲ್ಲಾಪವು ಕೆಳಗಿನ ಈ ದೇವರನಾಮದ ರೂಪದಲ್ಲಿರುವುದು.

ಶ್ರೀರಾಗ—ಆದಿತಾಳ

ಸೇವಕತನವ ರುಚಿಯೋ ನಿನಗಯ್ಯ ।
ದೇವ ಹನುಮರಾಯ । ನೀನ್ಯಾರಿಗೆ ॥ ಪ.

ಉದಧಿಯ ದಾಟಿ ಸೀತೆಯ ಕ್ಷೇಮ ತಂದಾಗ
ಮದುವೆಯ ಮಾಡೆನ್ನಬಾರದಿತ್ತೇ ?
ಪದದಿ ಪಾಷಾಣವ ಪೆಣ್ಣ ಮಾಡಿದವಗೆ
ಇದು ಏನಸಾಧ್ಯವೋ ಹನುಮ ನೀನೊಲ್ಲದೆ ೧

ಕ್ಷಣದಲಿ ಸಂಜೀವನ ಗಿರಿ ತಂದಾಗ
ಹಣ ಹೊನ್ನು ಬೇಡಲು ಕೊಡದಿದ್ದನೇ ರಾಮ
ವಿನಯದಿ ವಿಭೀಷಣಗೆ ರಾಜ್ಯವಿತ್ತವನಿಗೆ
ಏನಸಾಧ್ಯವೋ ಇದು ಹನುಮ ನೀನೊಲ್ಲದೆ ೨

ಸಾರ್ವಭೌಮನು ಮೆಚ್ಚಿದಾಗಲೆ ನೀ ಪೋಗಿ
ಉರ್ವಿಯ ಬೇಡಲು ಕೊಡದಿದ್ದನೇ ರಾಮ
ಸರ್ವವ ತೊರೆದು ಶ್ರೀ ಪುರಂದರವಿಠಲನ
ನಿರ್ವ್ಯಾಜ ಸೇವೆಯ ಬೇಡಿದೆಯೋ ಹನುಮ ೩

ಒಮ್ಮೆ ಚಾತುರ್ಮಾಸ್ಯ ಕಳೆದು ಉತ್ಥಾನದ್ವಾದಶಿಯು ಪ್ರಾಪ್ತವಾಯಿತು. ರಾತ್ರಿ ಭಜನೆ ಜಾಗರಗಳು ಎಂದಿಗಿಂತ ಅತಿಶಯವಾಗಿ ನಡೆದುವು. ನಾಲ್ಕನೇ ಯಾಮದ ಮಂಗಳಾರತಿಯಾಗುತ್ತಲೇ ಹರಿವಾಣ ಸೇವೆಮಾಡಿ ದಾಸರು ಮನೆಗೆ ಹೋಗಿ ಬಹಳ ಆಯಾಸವಾಗಿದ್ದುದರಿಂದ ಶಯನಮಾಡಿದರು. ಇತ್ತ ಮಠದಲ್ಲಿ ಸ್ವಾಮಿಗಳು ಸ್ನಾನ ಜಪ ದೇವತಾರ್ಚನೆಗಳನ್ನು ನಡೆಸಿದರು. ದೇವರ ನೈವೇದ್ಯ ಮಹಾಮಂಗಳಾರತಿಗಳೂ ಆದವು. ದಾಸರಿನ್ನೂ ಬಾರದಿದ್ದುದರಿಂದ – ಪಾರಣೆಗೆ ಕಾಲಾತೀತವಾಗಬಾರದೆಂದು ಸ್ವಾಮಿಗಳು ಹೇಳಿಕಳುಹಿಸಿದರು. ದಾಸರನ್ನು ಕರೆಯುವುದಕ್ಕೆ ಹೋದವನು ಕುಹಕಿಗಳ ತಂಡದ ಒಬ್ಬನಾಗಿದ್ದನು.

ಕುಹಕಿ:—ದಾಸರೇ ದಾಸರೆ! ಏಳಿ ಹೊತ್ತಾಯಿತು. ಸ್ವಾಮಿಗಳು ಕಾದಿದ್ದಾರೆ. ದ್ವಾದಶೀಪಾರಣೆ ಗೊತ್ತಿಲ್ಲವೆ ?

ದಾಸರು:—(ಕಣ್ಣೊರಸಿಕೊಳ್ಳುತ್ತಾ ಎದ್ದು) ಇಗೋ ಬಂದೆ, ಬಂದೆ.

ಕುಹಕಿ:—ಸ್ನಾನಪಾನಕ್ಕೆ ಕೂತರೆ ಹೊತ್ತಾಗುತ್ತದೆ ಬೇಗ ಬನ್ನಿ, ನಿಮಗೇನು ದಾಸರು. ತಂಬಿಗೆ ತೀರ್ಥ. ತಟ್ಟೆ ಪ್ರಸಾದವಾಗಿದೆ.

ದಾಸರು:—ಇಲ್ಲ ಇಲ್ಲ! ನಡೆಯಿರಿ, ಹಿಂದೆಯೇ ಬರುತ್ತೇನೆ.

ದಾಸರು ಸ್ವಾಮಿಗಳ ಪಾರಣೆಗೆ ತಡವಾಗಬಾರದೆಂದು ಹೆಗಲಮೇಲೆ ಧೋತ್ರವನ್ನು ಹಾಕಿಕೊಂಡು ಕೈಯಲ್ಲಿ ಪಂಚಪಾತ್ರೆಯನ್ನು ಹಿಡಿದು ಮಠಕ್ಕೆ ಬಂದರು.

ಏಕಾದಶಿಯ ನಾಮಮುದ್ರೆಗಳು ಸ್ಪಷ್ಟವಾಗಿದ್ದುದರಿಂದ ಸ್ನಾನಮಾಡಿದವರಂತೆ ಕಾಣಿಸಲಿಲ್ಲ. ಸ್ವಾಮಿಗಳು ತೀರ್ಥ ತೆಗೆದುಕೊಂಡೊಡನೆಯೇ, ದಾಸರಿಗೆ ಮೊದಲು ಕೊಟ್ಟು, ಅನಂತರ ಇತರರಿಗೆ ಕೊಡುತ್ತಿದ್ದರು. ಅದರಂತೆ ದಾಸರ ಮುಖನೋಡಲು, ದೂರದಲ್ಲಿದ್ದವರು ಬಳಿಗೆ ಬಂದು ತಲೆಬಾಗಿ ತೀರ್ಥಕ್ಕೆ ಕೈಚಾಚಿದರು. ಸ್ವಾಮಿಗಳು ಮುಗುಳುನಗೆಯಿಂದ ತೀರ್ಥವನ್ನು ಕೊಟ್ಟರು. ಸಮ್ಮುಖದಲ್ಲಿ ಸಾಲಾಗಿ ಪಂಡಿತರೊಂದು ಪಙ್ಕ್ತಿಯಲ್ಲೂ ದಾಸರೂ ಇತರ ಲೌಕಿಕ ಗೃಹಸ್ಥರೊಂದು ಪಙ್ಕ್ತಿಯಲ್ಲೂ ಭೋಜನಕ್ಕೆ ಕುಳಿತರು. ಕುಹಕಿಗಳ ಪಙ್ಕ್ತಿಯಲ್ಲಿ ನೇತ್ರ ಸಂಜ್ಞೆ - ಮುಖಸಂಕೇತಗಳಿಗಾರಂಭವಾಯಿತು. ಒಬ್ಬೊಬ್ಬರಾಗಿ—ಭಕ್ತಿಯಿದ್ದವರಿಗೆ ಸ್ನಾನದ ನಿರ್ಬಂಧವಿಲ್ಲವೆಂದರು. —ಛಳಿಗಾಲ, ಯತ್ನವಿಲ್ಲವೆಂದು ಮತ್ತೊಬ್ಬರೆಂದರು. ವ್ಯಕ್ತಾವ್ಯಕ್ತವಾಗಿ ನಡೆದ ಈ ಗುಜುಗುಜು ಸ್ವಾಮಿಗಳಿಗೆ ಗೊತ್ತಾಯಿತು. ಇತರ ಪ್ರಸ್ತಾಪಗಳನ್ನು ಬಿಟ್ಟು, ಒಬ್ಬೊಬ್ಬರೂ ಒಂದೊಂದು ಶ್ಲೋಕ ಹೇಳಿರೆಂದರು. ಪಂಡಿತರದಾಗುತ್ತಲೇ ದಾಸರ ಸರದಿ ಬಂತು. ದಾಸರು ನಾನೊಂದು ಕನ್ನಡದ ಪದ ಹಾಡುತ್ತೇನೆಂದರು. ಸ್ವಾಮಿಗಳು ಆಗಬಹುದೆಂದರು.

ಸೌರಾಷ್ಟ್ರ—ಛಾಪುತಾಳ

ಮುಂದೆ ಭಲಾಯೆಂದು ಹಿಂದಾಡಿ ಕೊಂಬರ ಸಂಗ ಬೇಡ
ಕುಂದು ನಿಂದೆ ಅಪವಾದವಿಡುವವರ ಸಂಗ ಬೇಡಾ
    ಮಾತುಮಾತಿಗೆ ಮಾನವರನ್ನು ಜರಿವರ ಸಂಗ ಬೇಡಾ
    ನೀತಿವಂತರನ್ನು ಭೀತಿಪಡಿಸುವರ ಸಂಗ ಬೇಡಾ
ವಿನಯ ವಿವೇಕವಿಲ್ಲದ ವಿದ್ಯಾವಂತರ ಸಂಗ ಬೇಡ
ಧನಕೋಟಿ ಕೊಟ್ಟರು ಕಪಟದ ಮನುಜರ ಸಂಗ ಬೇಡಾ
    ತನ್ನ ಕಾರ್ಯಕ್ಕಾಗಿ ಪರರನ್ನು ಕೆಡಿಸುವನ ಸಂಗ ಬೇಡಾ
    ಘನ್ನಮಹಿಮ ಶ್ರೀ ಪುರಂದರವಿಠಲನ ಮರೆವು ಬೇಡಾ

ಎಂಬುದಾಗಿ ದಾಸರು ಹಾಡಿದರು. ಸ್ವಾಮಿಗಳು ಈ ದೇವರನಾಮಕ್ಕೆ ಪೂರ್ವ ಸಂದರ್ಭವೇನೆಂದು ಕೇಳಿದರು. ದಾಸರು ಈ ರಾತ್ರಿಯ ಕೀರ್ತನಕ್ಕೆ ಇದೇ ಪೂರ್ವ ಪೀಠಿಕೆಯೆಂದರು. 'ಹಾಗಾದರೆ ಇವತ್ತಿನ ಕೀರ್ತನೆ. ಬಲು ಸ್ವಾರಸ್ಯವಾಗಿರಬಹುದಲ್ಲವೆ ?' 'ಸ್ವಾರಸ್ಯವಷ್ಟೇ ಅಲ್ಲ; ವಿನೋದವೂ ಆಗಬಹುದೆಂದರು'—ಪ್ರಶ್ನೋತ್ತರಗಳಾದುವು.

ಭೋಜನಾನಂತರ ದಾಸರು ಸಭೆಯ ನಮಗತ್ತೆಯೊಂದನ್ನು ಹುಡುಕಿಕೊಂಡು ಹೊರಟರು.

ಸ್ವಾಮಿಗಳು:— (ಕುಹಕಿಗಳನ್ನು ಕುರಿತು) ಏನೇನು ಗುಪ್ತ ಮಾತನಾಡಿಕೊಳ್ಳುತ್ತಿದ್ದಿರಿ.

ಕುಹಕಿಗಳು:—ಮತ್ತೇನಿದೆ? ಎಲ್ಲಾ ದಾಸರ ಬಾಗ್ಯ !

ಸ್ವಾಮಿಗಳು:—ಸಮಾಚಾರವೇನು ?

ಕುಹಕಿಗಳು:—ಮುಖವನ್ನು ಸಹ ತೊಳೆಯದೆ ಊಟಮಾಡಿದ್ದೇ ಸಮಾಚಾರ.

ಸ್ವಾಮಿಗಳು:—ದಾಸರು ಮುಖ ತೊಳೆದಿರಲಿಲ್ಲವೆ ?

ಕುಹಕಿಗಳು:—ಕರೆಯುವುದಕ್ಕೆ ಹೋದಾಗ ದಾಸರಿಗೆ ನಿದ್ರೆ ಬಂದಿತ್ತು. ಕೂಗಿದ ಮೇಲೆ ಎಚ್ಚರವಾಯಿತು. ಹಾಗೇ ಬಂದು ತೀರ್ಥಕ್ಕೆ ಕೈಹಿಡಿದರು. ಮೈಲಿಗೆಯಾದೀತೆಂದು ನಾನೆಲ್ಲಾ ಹೇಳಿ ನೋಡಿದ್ದು. ವೈಷ್ಣವರಲ್ಲಿ ಸ್ವತಂತ್ರರಾಗಬಾರದು. ಒಂದೂ ಸ್ವಾರಸ್ಯವಿಲ್ಲ. ಆಚಾರವಿಲ್ಲ ! ಏನು ಹೇಳಲಾದೀತು ?

ಸ್ವಾಮಿಗಳು:—ಒಳ್ಳೇದು ಈಗ ದಾಸರೆಲ್ಲಿ ?

ಕುಹಕಿಗಳು:—ನಮ್ಮ ಜೊತೆಯಲ್ಲಿ ಕೈ ತೊಳೆಯಲಿಕ್ಕೆ ಬರಲಿಲ್ಲ. ಮೇಲ್ನದಿಗೆ ಹೋದಹಾಗೆ ಕಾಣಿಸಿತು.

ಸ್ವಾಮಿಗಳು:—ಅಲ್ಲೇನು ಮಾಡುವರೋ ನೋಡಿ !

ಕುಹಕಿಗಳು ಮಧ್ಯನದಿಗೆ ಹೋಗಿ ದಾಸರಿಗೆ ಕಾಣದಂತೆ ಬಂಡೆಯೊಂದರ ಬಳಿಯಲ್ಲಿ ಅವರ ಕೃತ್ಯಗಳನ್ನು ನೋಡುತ್ತಾ ಕುಳಿತರು.

ದಾಸರು ನದಿಯ ನಡುಗಡ್ಡೆಯ ವಿಶಾಲವಾದ ಒಂದು ಬಂಡೆಯಮೇಲೆ ಒಂದು ಕಡೆ ಭೋಜನದ ಎಂಜಲುಪಾತ್ರೆಯನ್ನು ಇಟ್ಟರು. ಭೋಜನಮಾಡಿದ ಪದಾರ್ಥಗಳನ್ನು ಪ್ರತ್ಯೇಕವಾಗಿ ತೆಗೆದು ತೆಗೆದು ಬೇರೆ ಬೇರೆಯಾಗಿ ಇಟ್ಟರು. ತರುವಾಯ ನೀರಿಗಿಳಿದು ಕ್ರಮವಾಗಿ ಸ್ನಾನಮಾಡಿ ದಡಕ್ಕೆ ಬಂದು ಸಾವಕಾಶವಾಗಿ ಆಹ್ನಿಕವನ್ನು ತೀರಿಸಿಕೊಂಡರು. ತರುವಾಯ, ಆ ಎಂಜಲಿನಲ್ಲಿದ್ದ ಭೋಜನಪದಾರ್ಥಗಳಿಗೆ ಪ್ರೋಕ್ಷಣೆ ಮಾಡಲು - ಬಿಸಿ ಬಿಸಿಯಾಗಿದ್ದ ಆ ಪದಾರ್ಥಗಳನ್ನು ಪುನಃ ಭೋಜನಮಾಡಿದರು. ಅನಂತರ ತಮ್ಮ ಮನೆಗೆ ಬಂದರು. ಕುಹಕಿಗಳು ಕಳ್ಳದೃಷ್ಟಿಯಿಂದ ಎಲ್ಲವನ್ನೂ ನೋಡಿಕೊಂಡು ಮಠಕ್ಕೆ ಬಂದರು.

ಸ್ವಾಮಿಗಳು:—ದಾಸರನ್ನು ನೋಡಿದಿರಾ ? ಅವರೇನು ಮಾಡಿದರು ?

ಕುಹಕಿಗಳು:—ಮಾಡುವುದೇನು ! ತಿಂದದ್ದೆಲ್ಲವನ್ನೂ ತೆಗೆದು ಬಂಡೆಯಮೇಲೆ ಇಟ್ಟರು. ಸ್ನಾನ ಮಾಡಿದರು. ಬಿಸಿಲಿಗೆ ಬೆನ್ನು ಕೊಟ್ಟು ಆಹ್ನಿಕಶಾಸ್ತ್ರ ಮಾಡಿದರು. ಮತ್ತೆ ಅದನ್ನೇ ತಿಂದರು.

ಸ್ವಾಮಿಗಳು:—ಇದಕ್ಕೆ ನೀವೇನೆನ್ನುವಿರಿ ?

ಕುಹಕಿಗಳು:—ಏನ್ನ ಹೇಳೋಣ ! ಏನೋ ದೋಷ ! ಏನೋ ಅಸುರೀಕೃತ್ಯ. ಇಂಥಾ ಕಥೆಗಳನ್ನು ಕೇಳಿಲ್ಲ. ಇದ ಪ್ರತ್ಯಕ್ಷ ಪ್ರಮಾಣವಾಯಿತು.

ಸ್ವಾಮಿಯವಾಗಿದ್ದವರಿಂದ ಮೊದಲ್ಗೊಂಡು ಆ ದಿನದ ಭಜನೆ ಸಮುಚಿತವಾಗಿ ಆರಂಭವಾಯಿತು.

ರಾಗ ಕಲ್ಯಾಣಿ-ಝಾಪುತಾಳ

ತನುವ ನೀರೊಳಗದ್ದಿ ಫಲವೇನು ? ತನ್ನ
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜರು ಪ.

ದಾನ ಧರ್ಮಂಗಳ ಮಾಡುವುದೆ ಸ್ನಾನ
ಜ್ಞಾನ ತತ್ವಂಗಳ ತಿಳಿವುದೆ ಸ್ನಾನ
ಹೀನ ಪಾಪಂಗಳ ಬಿಡುವುದೆ ಸ್ನಾನ
ಧ್ಯಾನದಿ ಮಾಧವನ ನೋಳ್ಪುದೆ ಸ್ನಾನ ೧

ಗುರುಗಳ ಪಾದದರ್ಶನವೇ ಸ್ನಾನ
ಹಿರಿಯರ ಸೇವೆ ಮಾಡುವುದೇ ಸ್ನಾನ
ಕರೆದು ಅನ್ನವನಿಕ್ಕುವುದೊಂದು ಸ್ನಾನ
ನರಹರಿ ಚರಣ ನಂಬುವುದೇ ಸ್ನಾನ ೨

ದುಷ್ಟರ ಸಂಗವ ಬಿಡುವುದೆ ಸ್ನಾನ
ಶಿಷ್ಟರ ಸಂಗದೊಳಿರುವುದೆ ಸ್ನಾನ
ಸೃಷ್ಟಿಯೊಳಗೆ ಶ್ರೀ ಪುರಂದರ ವಿಠಲನ
ಮುಟ್ಟಿ ಭಜಿಸಿದರೆ ನಿರಜಾಸ್ನಾನ ೩

ಎಂಬ ದೇವರ ನಾಮವು ದಾಸರ ಟೀಕೆಯಾಯಿತು. ಪದದ ಪ್ರತಿ ಮಾತಿಗೂ ಸ್ಮೃತಿ ಪುರಾಣ ವಾಕ್ಯಗಳನ್ನುದಹರಿಸಿ ಕೀರ್ತನಮಾಡಿದರು. ಏನಾದರೂ ಕುಹಕ ಜನರ ಸ್ವಭಾವ ಬದಲಾಗಲಿಲ್ಲ. ದಾಸರನ್ನು ನಿಂದಿಸುವುದು ತಪ್ಪಲಿಲ್ಲ. ಕುಹಕಿಗಳಲ್ಲಿದ್ದ ಮತ್ತೊಂದು ಗುಣವೆಂದರೆ ಒಂದು ದಿನವಾದರೂ ದಾಸರ ಕೀರ್ತನೆಗೆ ಬರದಿರುತ್ತಿರಲಿಲ್ಲ.

ದಾಸರು ಪ್ರತಿ ಪರ್ವ ದ್ವಾದಶಿಗಳಲ್ಲೂ ವಿಶೇಷ ದಿನಗಳಲ್ಲೂ ಮಠಕ್ಕೆ ಬಂದು ತೀರ್ಥಪ್ರಸಾದ ಸ್ವೀಕಾರ ಮಾಡಬೇಕಾಗಿತ್ತು. ಸಾಧಾರಣ ದಿನಗಳಲ್ಲಿ ಎಂದಾದರೂ ಸ್ವಾಮಿಗಳು ಮುಂಚಿತವಾಗಿ ಇವತ್ತು ಮಠದಲ್ಲಿ ಪ್ರಸಾದವೆಂದು ಹೇಳಿ ಕಳುಹಿಸುತ್ತಿದ್ದರು. ಆ ದಿನ ದಾಸರು ಗ್ರಾಮಸಂಚಾರಕ್ಕೆ ಹೋಗುತ್ತಿರಲಿಲ್ಲ. ಒಂದು ಮಧ್ಯಾಹ್ನ ಮಠದೌತಣ ಬಂದಿದ್ದುದರಿಂದ ದಾಸರು ಆಹ್ನಿಕ ಮಾಡಿಕೊಂಡು, ಪೂಜೆಗೆ ಕುಳಿತಿದ್ದರು. ಧೂಪಾರತಿಯ ಕಾಲಕ್ಕೆ ಸರಿಯಾಗಿ ಸ್ವಾಮಿಗಳಿಂದ ಆಹ್ವಾನ ಬಂದಿತು. ಗುರ್ವಾಜ್ಞಾ ಗೌರವದಿಂದ ನೈವೇದ್ಯ ಮಾಡದೆಯೇ ಮಠಕ್ಕೆ ಹೊರಟರು. ಅಲ್ಲಿನ್ನೂ ಸಹಸ್ರ ನಾಮಾರ್ಚನೆಯಾಗುತ್ತಿತ್ತು. ಅತ್ತ ಪರಿಚಾರಕನು ಅಕ್ಕಿಯನ್ನು ತೊಳೆದು ಕಲಗಚ್ಚನ್ನು ಚೆಲ್ಲುತ್ತಿದ್ದನು. ದಾಸರು ಅದನ್ನು ನೋಡಿ–'ಸ್ವಾಮಿ ಇವತ್ತು ನಿನಗಿದೇ ನೈವೇದ್ಯ' ಎಂದು ಕಲಗಚ್ಚನ್ನೇ 'ಕೃಷ್ಣಾರ್ಪಣ'ವೆಂದರು. ಒಡನೆಯೇ ಪೂಜಾಸನದಲ್ಲಿದ್ದು ಸ್ವಾಮಿಗಳಿಂದ ಪೂಜೆಗೊಳ್ಳುತ್ತಿದ್ದ ಗೋಪಾಲಕೃಷ್ಣಮೂರ್ತಿಯ ವದನದಿಂದ ಬಿಂದು ಬಿಂದುವಾಗಿ ಕಲಗಚ್ಚು ಬೀಳುವುದಕ್ಕಾರಂಭವಾಯಿತು. ಸ್ವಾಮಿಗಳು ಇದೇನೆಂದು ತೋರದೆ ವದನವನ್ನು ವಸ್ತ್ರದಿಂದ ಒತ್ತಿದರು. ಒತ್ತಿದ ಹಾಗೆಲ್ಲಾ ಧಾರೆ ಬರುವುದು ಹೆಚ್ಚಾಯಿತು.

ಕಾರಣವೇನಿರಬಹುದೆಂದು ಜ್ಞಾನದೃಷ್ಟಿಯಿಂದ ನೋಡಲು—ಇದು ದಾಸರ ಕೆಲಸವೆಂದು ಗೋಚರವಾಯಿತು. ಸ್ವಾಮಿಗಳು ಒರೆಸುತ್ತಿದ್ದ ತಮ್ಮ ಕೈ ನಿಲ್ಲಿಸಿ–ಕಂಬನಿದುಂಬಿದವರಾಗಿ ಪರಿಚಾರಕನನ್ನು ಕರೆದು–'ಎಲಪ್ಪೋ ನೀನು ಕರೆಯಲು ಹೋಗಿದ್ದಾಗ ದಾಸರೇನು ಮಾಡುತ್ತಿದ್ದರು' ಎಂದು ಕೇಳಿದರು.

ಪರಿಚಾರಕ :—ಮಹಾಸ್ವಾಮಿ, ಧಾರಾವತಿ ಮಾಡುತ್ತಿದ್ದರು.

ಸ್ವಾಮಿಗಳು :—ನೈವೇದ್ಯ ಮಾಡುವವರಿಗೆ ಸುಮ್ಮನಿರಬಾರದಾಗಿತ್ತೇ ?

ಪರಿಚಾರಕ :—ಅಪ್ಪಣೆಯಾದ ಸಂಗತಿ ತಿಳಿಸಿದೆ.

ಸ್ವಾಮಿಗಳು :—'ಇಂಗಿತವರಿಯದೆ ಕೆಲಸಮಾಡಿದೆ. ಸ್ವಾಮಿಯ ವದನದಿಂದ ಕಲಗಚ್ಚು ಬರುವುದನ್ನಾದರೂ ನೋಡು–ದ್ವಾಪರದಲ್ಲಿ ದ್ರೌಪದಿಯು ಕೊಟ್ಟ ಶಾಕಪತ್ರವು ಶ್ರೀಕೃಷ್ಣನಿಗೆ ಮೃಷ್ಟಾನ್ನವಾಯಿತು. ವಿದುರನರ್ಪಿಸಿದ ಒಂದು ಕುಡುತೆ ಹಾಲು ಕಾಲುವೆಯಾಗಿ ಹರಿಯಿತು. ಇಂದು ದಾಸರು ಕೊಟ್ಟ ಕಲಗಚ್ಚೇ ನಮ್ಮ ಕೃಷ್ಣನಿಗೆ ಪಂಚಭಕ್ಷವಾಯಿತು, ಎಲ್ಲರೂ ನೋಡಿರಿ. ಇನ್ನಾದರೂ ದಾಸರ ನಿಂದೆಯನ್ನು ಬಿಡಿರಿ' ಎಂದು ಆ ಕುಹಕಿಗಳನ್ನು ಕರೆದು ತೋರಿಸಿದರು.

ದಾಸರನ್ನು ಕರೆದು–'ದಾಸರೇ ಮುಂದೇನು ಗತಿ ?' ಎಂದು ಸ್ವಾಮಿಗಳು ಕೇಳಿದರು. ದಾಸರು–'ಮಹಾಸ್ವಾಮಿ ಶ್ರೀಕೃಷ್ಣನು ತೃಪ್ತನಾಗಿರುವನು' ಎಂದು ಉತ್ತರವಿತ್ತು ಕೈಮುಗಿದರು. ಅನಂತರ ದೇವರ ವದನದಿಂದ ಕಲಗಚ್ಚು ಬರುವುದು ನಿಂತಿತು. ಈ ಅಭಿಪ್ರಾಯವನ್ನು ಶ್ರೀ ವಿಜಯದಾಸರು ಒಂದು ಸುಳಾದಿಯ ಜತೆಯಲ್ಲಿ ಹೀಗೆಂದು ನಿರೂಪಿಸಿದ್ದಾರೆ.

ಅಚ್ಚುತಾರ್ಪಿತವೆಂದು ದಾಸರೀಯಲು ಕಲ
ಗಚ್ಚು ಕುಡಿದ ಕಣೋ ವಿಜಯವಿಠಲ ಮೆಚ್ಚಿ

ದಾಸವರ್ಯ ಶ್ರೀ ಪುರಂದರದಾಸರ ಮಹಿಮೆಯು ಅಪಾರವಾದುದು. ಒಂದೊಂದು ದೇವರ ನಾಮಕ್ಕೂ ಅವರ ಒಂದೊಂದು ಚರಿತ್ರೆಯೇ ಇದೆ. ಎಲ್ಲವನ್ನೂ ಬರೆಯುವುದು ದುಸ್ಸಾಧ್ಯ !

೪

ಶ್ರೀ ಪುರಂದರದಾಸರು ಮಹಾನುಭಾವರು, ಭರತಖಂಡದ ಎಲ್ಲ ತೀರ್ಥಕ್ಷೇತ್ರಗಳನ್ನೂ ಸಂದರ್ಶಿಸಿದರು. ಅಂಥಾ ಕ್ಷೇತ್ರ ಮೂರ್ತಿಗಳಮೇಲೆ ತೀರ್ಥಗಳಮೇಲೆ ಸ್ಥಳ ಪುರಾಣಗಳಮೇಲೆ ಅನೇಕ ದೇವರ ನಾಮಗಳನ್ನು ಮಾಡಿದರು. ಅವರು ಮಾಡಿದ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ದೇವರ ನಾಮಗಳ ಸಂಖ್ಯಾ ವಿವರವನ್ನು ಕೆಳಗೆ ಕಂಡ ದೇವರ ನಾಮದಲ್ಲಿ ಕೊಟ್ಟಿರುತ್ತಾರೆ. ಅನ್ಯರು ಹೇಳುವ ಪ್ರಮಾಣಗಳಿಗಿಂತ ಅವರೇ ತಿಳಿಸಿದ ಪ್ರಮಾಣ ವಚನವು ಸಂದೇಹಜನಕವಲ್ಲವಷ್ಟೆ !

ರಾಗ : ಮುಖಾರಿ

ವಾಸುದೇವನ ನಾಮಾವಳಿಯ ಕ್ಲಿಪ್ತಿಯನು
ವ್ಯಾಸರಾಯರ ದಯದಿಂದ ಬಣ್ಣಿಪೆನು ಪ.

ಕೇದಾರ ರಾಮೇಶ್ವರ ಕೇರಳ ಭೂತಳದ
ಪಾದಾರವಿಂದ ಕ್ಷೇತ್ರ ಪ್ರತಿಕ್ಷೇತ್ರವು
ಆದರದಿ ಲಕ್ಷದಿಪ್ಪತ್ತೈದು ಸಾವಿರ ಕೃತಿಯ
ವೇದ ಶಾಸ್ತ್ರ ಪುರಾಣ ಸಮ್ಮತದಿಂದ ೧

ಮಧ್ವರಾಯರ ಮಹಿಮೆ ಮಹ ಗುರು ಪರಂಪರೆ ಪ್ರ
ಸಿದ್ಧ ವ್ಯಾಸರಾಯರ ಪರಿಯಂತವು
ಶುದ್ಧ ತಂತ್ರಸಾರೋಕ್ತಿ ಸೇವಕ ತಾರತಮ್ಯ
ಉದ್ಧರಿಸಿದೈದು ಸಾವಿರವ ಪೇಳಿದೆನು ೨

ಬ್ರಹ್ಮಲೋಕ ಕೈಲಾಸ ಭರದಿ ದಿಕ್ಪಾಲರ
ಪೇರ್ಮೆ ತೊಂಭತ್ತುಸಾವಿರದಿ ಪೇಳಿದೆನು
ಸಮ್ಮತದಿ ಹಲವು ಕಥಾಸಾರ ತೊಂಭತ್ತುಸಾವಿರ
ಒಮ್ಮನದಿ ಪೇಳಿದೆನು ಕೇಳಿ ಜನರು ೩

ಅವರವರ ಮೂರ್ತಿಧ್ಯಾನ ಅವರವರ ಕೀರ್ತಿಮಾನ
ವಿವರದಿಂದಲಿ ನಾನಿಮಗೆ ವಿಸ್ತರಿಸಿದೆನು
ಘನತೆ ಅಗಣಿತ ಗಂಡಕಿಯ ಶಿಲಾಮೂರ್ತಿ
ಅನಘ ಕಲ್ಯಾಣ ಕಥೆ ಅರವತ್ತು ಸಾವಿರ ೪

ಆನ್ಹಿಕಗುಣವು ಜನ್ಮಾಷ್ಟಮಿ ಏಕಾದಶಿಯ
ನಿರ್ಣಯವನು ಶ್ರುತಿಸ್ಮೃತಿ ಸಹಿತದ
ವರ್ಣಿಸಿದೆ ಕ್ಷೀರಾಬ್ಧಿಶಯನ ಅಹೋಬಲ ನರ
ಸಿಂಹ ಮೂರ್ತಿಗಳ ಶ್ರೀನಾಮಗಳ ೫

ಸುಳಾದಿ ಅರವತ್ತುನಾಲ್ಕುಸಾವಿರ ಬಹುತರ ನಾಮಾ
ವಳಿಯು ಇಪ್ಪತ್ತೈದುಸಾವಿರವಾಗಿವೆ
ತಿಳಿದು ಶ್ವೇತದ್ವೀಪ ಅನಂತಾಸನ ವೈಕುಂಠ
ಸಲೆ ಶೇಷನ ಚರಿತ್ರೆಯನು ಪೇಳಿದೆನು ೬

ಇಂತು ನಾಲ್ಕು ಲಕ್ಷ ಎಪ್ಪತ್ತೈದುಸಾವಿರ ಕೃತಿಯು
ಕಂತು ಜನಕನ ನಾಮ ಘನಮಹಿಮೆ
ಸಂತಸದಿ ಶೃತಿ ಸ್ಮೃತಿ ಸಮ್ಮತದಿಂದ
ಪುರಂದರವಿಠಲ ವ್ಯಾಸಮುನಿಗಳು ಪೇಳಿಸಿದರು ೭

ಈ ಪಟ್ಟಿಯಲ್ಲಿ ಹೇಳುವುದು ಮತ್ತು ಬರೆದುಕೊಂಡ ಲೆಕ್ಕಗಳಾಗಿರುವುವು. ಇದು ಒಂದು ಮಾತ್ರವಲ್ಲವೆ. ಸಂಖ್ಯೆಯು ಪುರಂದರದಾಸರ ೪,೭೫,೦೦೦ಕ್ಕೆ ತಾಳೆಯಾಗುತ್ತದೆ. ಇವುಗಳ ವಿವರ ಹೀಗಿದೆ :—

೧. ಕೇದಾರದಿಂದ ರಾಮೇಶ್ವರ ಪರಿಯಂತರ, ಎಲ್ಲಾ ತೀರ್ಥಕ್ಷೇತ್ರಗಳ ಮಹಿಮೆಗಳು ಸ್ಥಳ ಪುರಾಣಗಳು ಸಹಿತವಾಗಿ	೧,೨೫,೦೦೦
೨. ಮಧ್ವಾಚಾರ್ಯರ ಮಹಿಮೆ, ಗುರುಪರಂಪರೆಯಲ್ಲಿ ವ್ಯಾಸರಾಯರವರಿಗೆ ಎಲ್ಲರ ಮಹಿಮೆ, ತಂತ್ರಸಾರ, ದೇವತಾ ತಾರತಮ್ಯ	೫,೦೦೦
೩. ಬ್ರಹ್ಮಲೋಕ ಕೈಲಾಸಲೋಕ ವಿಷ್ಣುಲೋಕದ ಲೋಕವರ್ಣನೆಗಳು	೯೦,೦೦೦
೪. ಪುರಾಣಕಥೆಗಳ ಸಾರ	೯೦,೦೦೦
೫. ದೇವತೆಗಳ ಮೂರ್ತಿಧ್ಯಾನ, ಅವರವರ ಕೀರ್ತಿಗಾನ, ಗಂಡಕೀಮಹಾತ್ಮ್ಯ ಕಲ್ಯಾಣ ಚರಿತ್ರೆಗಳು	೬೦,೦೦೦
೬. ಆಹ್ನಿಕ ಪದ್ಧತಿ, ಏಕಾದಶೀ ನಿರ್ಣಯ, ಜಯಂತೀ ನಿರ್ಣಯ, ಶ್ರುತಿಸ್ಮೃತಿಗಳ ಸಹಿತವಾಗಿ	೧೬,೦೦೦
೭. ಸುಳಾದಿಗಳು	೬೪,೦೦೦
೮. ದೇವರ ನಾಮಗಳು	೨೫,೦೦೦
ಮೊತ್ತ-	೪,೭೫,೦೦೦

ಮೇಲ್ಕಂಡ ವಿವರಣೆಯು ಎಂಥವರಿಗೂ ಎದೆಯೊಡೆಯುವಂತಿದೆ. ಹಳೇ ಪಟ್ಟಿಯಲ್ಲಿ ಬಲು ಹಿಂದಿನವರು ಬರೆದಿಟ್ಟ ದೇವರ ನಾಮವನ್ನು ಕಲ್ಪಿತವೆನ್ನುವುದು ಸಾಹಸವಾಗುತ್ತದೆ. ದಾಸರು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ದೇವರ ನಾಮಗಳನ್ನು ಮಾಡಿದರೆಂಬ ಮಾತು ಇನ್ನೂ ಇತರ ಸುಳಾದಿಗಳಲ್ಲೂ ನಾಮಗಳಲ್ಲೂ ನಿಸ್ಸಂಶಯವಾಗಿ ಉದಹರಿಸಲ್ಪಟ್ಟಿದೆ. ಪುರಂದರದಾಸರೊಬ್ಬರು ಮೇಲ್ಕಂಡ ಸಂಖ್ಯೆಯಷ್ಟು ಗ್ರಂಥರಚನೆ ಮಾಡಿದ್ದಾರೆ. ಮಿಕ್ಕ ಎಲ್ಲಾ ಕನ್ನಡ ದಾಸರೂ ಎಷ್ಟೆಷ್ಟು ಮಾಡಿರಬಹುದು? ಮಿಕ್ಕವರೆಲ್ಲರ ಗ್ರಂಥ ಸಂಖ್ಯೆಯನ್ನು ಒಂದು ಒಂದೂಕಾಲು ಲಕ್ಷ ಇರಬಹುದೆಂದು ಊಹಿಸಿದರೂ ಆರು ಲಕ್ಷ ಬರೀ ದಾಸರ ಕನ್ನಡಸಾಹಿತ್ಯವೇ ಆದಂತಾಗುವುದು. ಇಂದ ಮೇಲೆ ಮಿಕ್ಕ ಎಲ್ಲಾ ಕವಿಗಳ ಸಾಹಿತ್ಯದ ಸಂಖ್ಯೆ ಎಷ್ಟಾಗಬಹುದು! ಎಲ್ಲವೂ ಉಪಲಬ್ಧವಿದ್ದರೆ ಕನ್ನಡ ವಾಙ್ಮಯಕ್ಕೆ ಸಂಸ್ಕೃತ ಅಥವಾ ತಮಿಳು ವಾಙ್ಮಯದ ಸ್ಥಾನವೇ ಬರುತ್ತಿತ್ತಲ್ಲವೆ? ಸಾಹಿತ್ಯವೆಂಬುದು ಪಂಡಿತಸಾಹಿತ್ಯವಿರಲಿ, ದಾಸರ ಸಾಹಿತ್ಯವಿರಲಿ. ಪದ್ಯವಾಗಿರಲಿ, ವಚನವಾಗಿರಲಿ. ಕನ್ನಡಸಾಹಿತ್ಯದಲ್ಲಿ ಶತಾಂಶದಲ್ಲಿ ಒಂದಂಶವೂ ಈಗ ಉಪಲಬ್ಧವಿಲ್ಲವಲ್ಲಾ ಎಂಬ ದುಃಖಪ್ರಶ್ನೆಯಿದು.

ಮಾನವ ಪ್ರಪಂಚದ ಇತಿಹಾಸದಲ್ಲಿ ಐದು ಲಕ್ಷ ಗ್ರಂಥಗಳನ್ನು ಬರೆದರೆಂಬ ಕೀರ್ತಿ ವೇದವ್ಯಾಸರೊಬ್ಬರಿಗಿದೆ. ಆನಂತರ ಬಂದ ಮತಾಚಾರ್ಯರಲ್ಲಿ ಶಂಕರಾಚಾರ್ಯರು ಒಂದೂಕಾಲು ಲಕ್ಷ ಗ್ರಂಥಕರ್ತರೆನಿಸಿ ಪ್ರಸಿದ್ಧರಾದರು. ವಿದ್ಯಾರಣ್ಯರದೂ ಸ್ವಲ್ಪ ಕಡಿಮೆ ಇಷ್ಟೇ ಸಂಖ್ಯೆಯ ಗ್ರಂಥಗಳೆಂದು ಜನರು ಹೇಳುತ್ತಾರೆ. ರಾಮಾನುಜಾಚಾರ್ಯರು ಅನೇಕ ಸಹಸ್ರ ಗ್ರಂಥಗಳೊಡೆಯರೆನ್ನಿಸಿದರು. ಮಧ್ವಾಚಾರ್ಯರಾದರೋ ಮೂವತ್ತೇಳು ಸಾವಿರ ಗ್ರಂಥಕರ್ತರೆನಿಸಿದರು. ಪುರಂದರದಾಸರ ಗ್ರಂಥರಚನೆಯನ್ನು ಕೇವಲ ಸಂಖ್ಯಾದೃಷ್ಟಿಯಿಂದ ನೋಡಿದರೆ 'ವ್ಯಾಸರ ನಂತರ ದಾಸರೇ' ಎಂಬ ನಾಣ್ಣುಡಿಯನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ.

ಈ ಕಾಲದ ಇತಿಹಾಸ ಸಂಶೋಧಕ ಮಹಾಶಯರು (Research Scholars) ಇಂತಹ ಸಂಗತಿಗಳು ಬಂದರೆ, ಶಾಸ್ತ್ರೀಯ ವಿಚಾರಗಳನ್ನು ವಿಮರ್ಶಿಸುವ ಗೊಡವೆಗೇ ಹೋಗದೆ, ಸುಲಭವಾಗಿ, ಅತಿಶಯೋಕ್ತಿ ಎಂದು ನುಡಿದು, ಹೊಡೆದುಹಾಕಿಬಿಡುತ್ತಾರೆ. ರಾಮಕೃಷ್ಣ, ವ್ಯಾಸ, ಶಂಕರಾದಿಗಳನ್ನೂ ವಿಚಾರಸ್ಥಾನದಲ್ಲಿ ನಿಲ್ಲಿಸುತ್ತಾರೆ. ಯಾವನಾದರೊಬ್ಬ ಪಾರಶೀಕನನ್ನೋ ಐರೋಪ್ಯನನ್ನೋ ಸಾಕ್ಷಿಗೆ ಕರೆಯುತ್ತಾರೆ. ಎಷ್ಟೋ ಜನ ವ್ಯಾಸರನ್ನೂ ಶಂಕರರನ್ನೂ ಅವತಾರ ಮಾಡಿಸುತ್ತಾರೆ. ಅಥವಾ ಮತ್ಯಾರಾದರೂ ಅವರ ಹೆಸರಿನಲ್ಲಿ ಗ್ರಂಥರಚನೆ ಮಾಡಿರಬಹುದೆಂದು ನಿರ್ಣಯಿಸುತ್ತಾರೆ. ಅವರೆಲ್ಲರ ವಿಚಾರಣಕರ್ತರಾಗಿ ತಮ್ಮ ದೊಡ್ಡಸ್ತಿಕೆಯನ್ನು ಕಾಯ್ದುಕೊಳ್ಳುತ್ತಾರೆ. ಈ ತರದ ಮನೋವೃತ್ತಿಯವರು ಅಥವಾ ಪಾಶ್ಚಾತ್ಯರ ಮಾನಸಪುತ್ರರು, ನಮ್ಮ ಭಾರತಭೂಮಿಗೆ ಬೇಕಾಗಿಲ್ಲ. ದೊಡ್ಡವರು ಹೇಳಿದ ಮಾತೆಂದು ನಂಬಿ, ಭಕ್ತಿಯಿಂದ ಶೋಧನೆಮಾಡುವವರಾಗಬೇಕು ; ದಯೆಯಿಂದ ನೋಡುವವರಾಗಬೇಕು. ಆಸ್ತಿಕರಾಗಿ ವಿಚಾರಶೀಲರಾಗಬೇಕು.

ಈ ಪ್ರಸಂಗವು ಇದ್ದಂತೆ ಇರಲಿ. ಭಕ್ತವಿಜಯವು ಭಕ್ತಿವಂತರದು ; ಮುಕ್ತಿಮಾರ್ಗವನ್ನು ಹುಡುಕುವವರದು. ಪುರಂದರದಾಸರು ದೇಶಸಂಚಾರಮಾಡುತ್ತಾ ಬೇಲೂರಿಗೆ ಬಂದರು. ಆ ಕಾಲದಲ್ಲಿ, ಬೇಲೂರಲ್ಲಿ ಶ್ರೀ ಕೇಶವಸನ್ನಿಧಿಯಲ್ಲಿ ನೆಲೆಸಿದ್ದ, ವೈಕುಂಠದಾಸರು ಅವರನ್ನು ಸತ್ಕರಿಸಿ ಕೆಲವು ಕಾಲ ಅಲ್ಲೇ ನಿಲ್ಲಿಸಿಕೊಂಡರು. ಪುರಂದರದಾಸರು ಶ್ರೀ ಕೇಶವಸ್ವಾಮಿಯ ಮೇಲೆ ಅನೇಕ ದೇವರನಾಮಗಳನ್ನು ಮಾಡಿರುತ್ತಾರೆ. ಪುರಂದರದಾಸರೂ ವೈಕುಂಠದಾಸರೂ ಸೇರಿದ ಸಮಯದಲ್ಲಿ ಅನೇಕ ಅತಿಮಾನುಷ ಮಹಿಮೆಗಳು ನಡೆದಿವೆ. ಅವುಗಳಲ್ಲಿ ಒಂದೇ ಒಂದನ್ನು ಮಾದರಿಗಾಗಿ ಇಲ್ಲಿ ವಾಚಕರು ತೆಗೆದುಕೊಳ್ಳಬೇಕು. ವೈಕುಂಠದಾಸರ ಚರಿತ್ರೆಯು ಪ್ರತ್ಯೇಕವಾಗಿ ಇವರ ಮುಂದೆ ಬರುವುದರಿಂದ ಅಲ್ಲಿ ಈ ಕಥೆಗೆ ಸಂಬಂಧಿಸಿದ ಕೆಲವಂಶಗಳು ಬರುತ್ತವೆ.

ವೈಕುಂಠದಾಸರಿಗೆ ಪುತ್ರಸಂತತಿಯಿರಲಿಲ್ಲ. ಕೇಶವಸ್ವಾಮಿಯು ದಾಸರ ತೊಡೆಯ ಮೇಲೆ ಕೂಸಾಗಿ ತನ್ನ ಕೃಷ್ಣಾವತಾರ ವೈಭವವನ್ನು ತೋರಿಸುತ್ತಿದ್ದನು. ಯಾರು ಯಾರನ್ನು ಹುಡುಕಿಕೊಂಡು ಬರಬೇಕೆಂಬ ಲೌಕಿಕ ಅವರಲ್ಲಿರದಿದ್ದ ಕಾರಣ ಪುರಂದರದಾಸರೇ ವೈಕುಂಠದಾಸರ ಬಳಿಗೆ ಬರುತ್ತಿದ್ದರು. ಒಂದು ದಿನ ಪುರಂದರದಾಸರು ಬಂದಾಗ

[illegible] ವನ್ನು ವೈಕುಂಠದಾಸರಿಗೆ ತೋರಿಸುತ್ತಿದ್ದರು. ದಾಸರು ಬ್ರಹ್ಮಾನಂದದಲ್ಲಿ ಮಗ್ನರಾಗಿದ್ದರು. ಪುರಂದರದಾಸರು [illegible] ಅವರಿಗಾಗಲಿಲ್ಲ. [illegible] ಲಾಲಿಸಿದನು. ಈ ವಿಷಯವನ್ನು ನೋಡಿ ಶ್ರೀ ಪುರಂದರದಾಸರು ರಚಿಸಿದರೆಂದು ಹೇಳಲಾಗುವ ದೇವರನಾಮವನ್ನು ಈ ಕೆಳಗೆ ಕೊಡಲಾಗಿದೆ.

ರಾಗ ಭೈರವಿ—ಆದಿತಾಳ.

ಅಳುವದ್ಯಾತಕೊ ರಂಗಾ | ಅತ್ತು ರಂಜಿಸುವ ಗುಮ್ಮಾ ಪ.

ಪುಟ್ಟಿದೇಳು ದಿವಸದಲಿ | ದುಷ್ಟ ಪೂತನಿಯ ಕೊಂದೆ |
ಮುಟ್ಟಿ ಮೊಲೆಯ ಹಾಲುಂಡ ಕಾರಣ | ದೃಷ್ಟಿ ತಾಕಿತೇ ನಿನಗೆ ರಂಗಯ್ಯ ೧

ಬಾಲಕತನದಲ್ಲಿ ಗೋ | ಪಾಲರೊಡಗೂಡಿ
ಕಾಳಿಂಗ ಮಡುವನು ಕಲಕಿದ ಕಾರಣ | ಕಾಲು ಉಳುಕಿತೇ ನಿನಗೆ ರಂಗಯ್ಯ ೨

ತರುವ ಕಾಯಲು ಪೋಗಿ | ಭರದಿಂದ ಮಳೆಗರೆಯೆ
ಬೆರಳಲ್ಲಿ ಬೆಟ್ಟವನೆತ್ತಿದ ಕಾರಣ | ಬೆರಳು ಉಳುಕಿತೇ ನಿನಗೆ ರಂಗಯ್ಯಾ ೩

ವಸುದೇವ ಸುತನಾಗಿ | ಅಸುರರ ಮರ್ದಿಸಿದೆ
ಬಸುರಲಿ ಬೊಮ್ಮನ ಪಡೆದ ಕಾರಣ | ಕಿಸರು ತಾಕಿತೆ ನಿನಗೆ ರಂಗಯ್ಯಾ ೪

ಶರಣು ವೇಲಾಪುರದ | ಚೆಲುವ ಚನ್ನಿಗರಾಯ |
ಶರಣರ ಸಲಹುವ ದೊರೆ ನೀನಲ್ಲವೆ | ವರದ ಪುರಂದರ ವಿಠಲ ಗೋವಿಂದ ೫

ಎಂಬೀ ಪದವನ್ನು ರಚಿಸಿ ಹಾಡಿ, ಸ್ವಾಮಿಯನ್ನು ಲಾಲಿಸಿ ಸಮಾಧಾನ ಮಾಡಿದರು.

ಈ ನಾಮದಂತೆಯೇ 'ಇಂಥಾ ಹೆಣ್ಣನ್ನು ನಾನೆಲ್ಲಿ ಕಾಣೆನೊ' ಮೊದಲಾದವುಗಳೂ ಬಲು ಅರ್ಥವತ್ತಾದುವು.

ಒಂದು ದಿನ ದಾಸರೀರ್ವರೂ ಸಾಯಂಸಂಧ್ಯಾ ನಿಮಿತ್ತ ವಿಷ್ಣುಸಮುದ್ರದ ಏರಿಯಮೇಲೆ ಹೋಗುತ್ತಿದ್ದರು. ಬೇಲೂರು ಆ ಕಾಲದಲ್ಲಿ ಈಗಿನಷ್ಟು ಬಯಲು ಸೀಮೆಯಾಗಿರಲಿಲ್ಲ [illegible] ಗಜಗಳು [illegible] ವುದಕ್ಕೆ ಬರುತ್ತಿದ್ದುವು. [illegible] ಮಾತನಾಡುತ್ತಾ ಬ್ರಹ್ಮಾನಂದಮಗ್ನರಾಗಿದ್ದ ದಾಸರಿ[illegible] ಗೊತ್ತಾಗಲಿಲ್ಲ. ಗುಂಪಿನಿಂದ ತಪ್ಪಿಸಿಕೊಂಡ [illegible] ಕೂಗಿತು. ಪುರಂದರದಾಸರು–ದಾಸರೇ ಆನೆ ಬಂತು [illegible] ಹೇಳಿದರು. ಮರದ ಬಳಿಗೆ ಹೋಗುವಷ್ಟರಲ್ಲಿ [illegible] ಕೈಗೆ ಸಿಕ್ಕಿಬಿಟ್ಟರು. ಪುರಂದರದಾಸರು ಒಂದು ಮರದ [illegible] ಹಿಂಬದಿಯಲ್ಲಿ [illegible] ಕಾಲದಲ್ಲಿ ವೈಕುಂಠದಾಸರು–

ಮುಖಾರಿ.

ಮದಕರಿಯ ವದನಕ್ಕೆ ಕವಳವಾದೆನಲ್ಲೋ
ಮದನಪಿತ ಉಳುಹದಿರೆ ಗತಿಯಾರು ಎನಗೆ ಪ.

ತರಳ ಪ್ರಹ್ಲಾದನ್ನ ಕರೆಕರೆ ಬಡಿಸುತಿರೆ
ಪರಿಹರಿಸಲಿಲ್ಲಿಂದ ಬಂದೊದಗಿದೆ
ಮೊರೆಯಿಟ್ಟ ಕಂದನಧ್ವನಿ ನಿನಗಿಂದು ಕೇಳಿದಂತೆ
ಶರಣಜನ ಬಂಧೋ ಮುರಹರ ಪಾಲಿಸೋ ೧

ಉತ್ತಮ ಸುಧನ್ವ ವಿಭೀಷಣರು ಮೊದಲಾದ
ಪೃಥ್ವಿಯಲಿ ನಿನ್ನವರ ಸಲಹಿದಂತೆ
ಮತ್ತೆ ನಾನೀಗ ಗಜದೊಡನೆ ಕಂಗೆಡುತಿರಲು
ಅರ್ಥಿಯಲಿ ಕರಪಿಡಿದು ಸಲಹೊ ಕೇಶವರಾಯ ೨

ಆದಡೇನಾಯ್ತು ನಿನ್ನಂಘ್ರಿಯನು ನಂಬಿರಲು
ನೀದಯದಿ ಎನ್ನೊಳಗೆ ಈ ರೂಪದಿ
ಮಾಧವನೆ ಗಜವಾಗಿ ಬಂದೊದಗಿದೆಯೊ ಏನು
ನಾ ಧನ್ಯ ವೈಕುಂಠಪತಿಯೆ ಚೆನ್ನಿಗರಾಯ! ೩

ಎಂಬುದಾಗಿ ಪ್ರಾರ್ಥನೆ ಮಾಡಿದರು. ಭಗವನ್ಮಹಿಮೆ! ಆಗ ಇಂತಹ ಒಂದು ವಿಚಿತ್ರ ಸಂಗತಿ ನಡೆಯಿತು! ಆನೆಯು ಸ್ವಲ್ಪ ಹೊತ್ತು ದಾಸರನ್ನು ಅತ್ತಿತ್ತ ತಿರುಗಿಸಿ, ಪುರಂದರ ದಾಸರು ಕುಳಿತಿದ್ದ ಮರದ ಹತ್ತಿರಕ್ಕೆ ಬಂದು, ಸೊಂಡಿಲಲ್ಲಿದ್ದ ದಾಸರನ್ನು - ಆ ಮರದ ಕೆಳಗೆ ಮೆಲ್ಲನಿಳಿಸಿ, ತಲೆಯುಲ್ಲಾಡಿಸಿ, ಸೊಂಡಿಲನ್ನು ಮೇಲೆತ್ತಿಕೊಂಡು ವೈಕುಂಠ ದಾಸರನ್ನು ಬಿಟ್ಟು ಹೊರಟುಹೋಯಿತು.

ಪುರಂದರದಾಸರು :—ದಾಸರೇ! ಕೇಶವನ ಕೃಪೆಯಿಂದ ವಿಪತ್ತು ಪರಿಹಾರವಾಯಿತು! ಬಲುದೂರ ಬಂದಿದ್ದ; ಹಿಂದಿರುಗೋಣ! ಸಂಧ್ಯಾವಂದನೆ ಮಾಡಿಕೊಂಡು ದೇವಾಲಯಕ್ಕೆ ಹೋಗೋಣ!

ವೈಕುಂಠದಾಸರು :—ನನಗೇನು ಬಲ ಹೋದಂತಿದೆ.

ಪುರಂದರದಾಸರು :—ಹೆದರಬೇಡಿರಿ; ನಿಮ್ಮ ಭಕ್ತಿ ಪರೀಕ್ಷೆಗಾಗಿ, ಅಪಮೃತ್ಯುವಿಗೆ ತುತ್ತಾಗಬೇಕಾಯಿತು [illegible].

ವೈಕುಂಠದಾಸರು :—ಪುಣ್ಯತಾಂಶದಿಂದ ನಮ್ಮ ಜನ್ಮಾಂತರದ [illegible]. ಆಗಲೂ ನಿಮ್ಮಂಥವರ ಸಂಗ ಮಾತ್ರ [illegible].

ಈ ವಿಚಾರವೆಲ್ಲಿ ಜನರು ಆಶ್ಚರ್ಯಪಟ್ಟರು. ವೈಕುಂಠದಾಸರಿಗೆ ಎಷ್ಟೇ ಭಗವದನುಗ್ರಹವಿದ್ದರೂ ಆನೆಯಿಂದ ದೂರವಾಗುವ ಪ್ರಾರಬ್ಧ ಕರ್ಮವಿತ್ತಂತೆ!

ಪುರಂದರದಾಸರಂಥಾ ಶಿಷ್ಯರುಂಟೆ ಸೇವಾಭಾವದಿಂದ ಗುರುಶ್ರದ್ಧೆಯ ಮಾತ್ರದಿಂದ ತತ್ತ್ವಾಂದಲ್ಲಿ ಸರಿಸಾಟಿಯಾಗಿರುವರೆ! ವೈಕುಂಠದಾಸರು ಕಾಲಾಂತರದಲ್ಲಿ ಅವಧೂತರಾಗಿದ್ದಲ್ಲಿ ವೇಣುಗೋಪಾಲದಾಸರಾಗಿ (ರಂಗನಾಥರ ಶಿಷ್ಯ ಜ್ಞಾನವರು) ಅವತರಿಸಿದ್ದಾರೆ! ಈ ವಿವರಗಳು ಮುಂದೆ ಆಯಾ ಚರಿತ್ರ ಲೇಖನಾವಸರದಲ್ಲಿ ವಿಸ್ತಾರವಾಗಿ ಬರುವುವು.

ಕರ್ನಾಟಕದ ಸುಪ್ರಸಿದ್ಧ ಹರಿದಾಸರುಗಳೆಲ್ಲರೂ ತಿರುಪತಿ, ಪಂಢರಾಪುರ, ಉಡುಪಿ ಮತ್ತು ಬೇಲೂರು ಕ್ಷೇತ್ರಗಳಲ್ಲಿ ಹೆಚ್ಚು ಕಾಲ ವಾಸಮಾಡಿದರೆಂಬುದಕ್ಕೆ ಅವರು ಮಾಡಿದ ದೇವರ ನಾಮಗಳು ಸಾಕ್ಷಿಯಾಗಿವೆ. ವೈಕುಂಠದಾಸರೊಬ್ಬರು ಮಾತ್ರ ಬೇಲೂರನ್ನು ಬಿಟ್ಟು ಹೋಗಲು ಭಗವದಾಜ್ಞೆಯಿರಲಿಲ್ಲ.

ಪುರಂದರದಾಸರು ಮೇಲುಕೋಟೆ ನಂಜನಗೂಡು ಶ್ರೀರಂಗಪಟ್ಟಣಗಳನ್ನು ನೋಡಿಕೊಂಡು ಅಲ್ಲಲ್ಲಿಯ ದೇವತಾ ಮೂರ್ತಿಗಳನ್ನು ಸ್ತೋತ್ರಮಾಡಿ, ಮುಂದೆ ಅಬ್ಬೂರಿಗೆ ಬಂದರು. ಆ ಸಮಯದಲ್ಲಿ ವ್ಯಾಸರಾಯರು ಬ್ರಹ್ಮಣ್ಯತೀರ್ಥರ ಆರಾಧನೆಯ ನಿಮಿತ್ತ ಅಬ್ಬೂರಿಗೆ ಬಂದಿದ್ದರು. ಮಳೂರು ಅಪ್ರಮೇಯಸ್ವಾಮಿಯನ್ನು ಪುರಂದರದಾಸರು ಕೆಲವು ನಾಮಗಳಿಂದ ಕೊಂಡಾಡಿದ್ದಾರೆ. ವ್ಯಾಸರಾಯರಾದರೂ ಇದಕ್ಕೆ ಮುಂಚೆಯೇ **ತರ್ಕತಾಂಡವ**ವೆಂಬ ಪ್ರಸಿದ್ಧ ಗ್ರಂಥವನ್ನು ಬರೆದು ಮಳೂರು ಅಪ್ರಮೇಯಸ್ವಾಮಿಗೆ ಅರ್ಪಿಸಿದರು. ಆ ಗ್ರಂಥದ ಮಂಗಳಾಚರಣೆಯು ಈ ರೀತಿ ಇರುತ್ತದೆ.

ಅನಂತ ಕಲ್ಯಾಣ ಗುಣೈಕರಾಶಿ ।
ಮಶೇಷ ದೋಷೋಜ್ಝಿತಮಪ್ರಮೇಯಂ ॥
ಮುಮುಕ್ಷುಭಿಸ್ಸೇವ್ಯಮನಂತಸೌಖ್ಯ ।
ಪ್ರದಂ ರಮೇಶಂ ಪ್ರಣಮಾಮಿ ನಿತ್ಯಂ ॥

ಆ ಕಾಲದ ಚರಿತ್ರಪ್ರಸಿದ್ಧ ಸ್ಥಳಗಳು ಈ ಕಾಲದಲ್ಲಿ ಸಾಮಾನ್ಯ ಹಳ್ಳಿಗಳಾಗಿವೆ. ಮಹಾವೈಭವದಿಂದ ಮೆರೆದ ದೇವತಾಮೂರ್ತಿಗಳು ಇಂದು ಸಾಮಾನ್ಯ ಶಿಲಾಮೂರ್ತಿಗಳಾಗಿ ನಿಂತಿವೆ.

೧೫೧೩ ರಿಂದ ೧೫೫೩ ರವರೆಗೆ ಆಳಿದ ಬೆಟ್ಟದ ಚಾಮರಾಜ ಒಡೆಯರು ವ್ಯಾಸರಾಯರನ್ನೂ ಪುರಂದರದಾಸರನ್ನೂ ಬಹಳವಾಗಿ ಸತ್ಕರಿಸಿದ ಮಾತು ದಂತಕಥೆಯಲ್ಲಿ ನಿಂತುಹೋಗಿದೆ.

ಮೇಲುಕೋಟೆಯಲ್ಲಿದ್ದಾಗ, ಪುರಂದರದಾಸರು, ಅಲ್ಲಿಂದಲೇ ನೇರವಾಗಿ ಅಬ್ಬೂರಿಗೆ ಹೋಗಬೇಕೆಂದು ಯೋಚಿಸುತ್ತಿದ್ದರು! ಸ್ವಲ್ಪ ವಿಶ್ರಾಂತಿ ಪಡೆಯಲು ಒಂದು ದಿನ ಅಲ್ಲೇ ವಿಶ್ರಮಿಸಿಕೊಂಡರು! ಸಾಯಂಕಾಲ ದೇವಾಲಯದ ಕೈಂಕರ್ಯವನ್ನು ವಿಧವಾಗಿ ನೋಡುತ್ತಿದ್ದರು! ಭಸ್ಮ ರುದ್ರಾಕ್ಷಿ ಧಾರಿಯಾಗಿ ಕಾಷಾಯ ವಸ್ತ್ರಧಾರಿಯಾಗಿದ್ದ ಒಬ್ಬ ವೃದ್ಧನು, ಅಷ್ಟರಲ್ಲಿ ಅಲ್ಲಿಗೆ ದಾಸರ ಬಳಿಗೆ ಬಂದು,—" ನಿಮ್ಮ

ವ್ಯಾಧಿಗೆ ನಮ್ಮಲ್ಲಿ ಔಷಧವಿದೆ; ನಮ್ಮ ಮನೆಗೆ ಬಂದರೆ ಕೊಡುತ್ತೇನೆ" ಎಂದುಸುರಿ ಎಲ್ಲಿಗೋ ಹೋದನಂತೆ! ತರುವಾಯ ದಾಸರು ಅವನನ್ನು ಹುಡುಕಿಸಿದರಂತೆ! ಆದರೆ ಆ ಲಕ್ಷಣದ ಮನುಷ್ಯನು ಬೀದಿಬೀದಿಯಲ್ಲೇ ಇದ್ದುದು ಕಂಡು ಬರಲಿಲ್ಲವಂತೆ! ಆಗ ದಾಸರು, ಇದು ಶ್ರೀಕಂಠೇಶ್ವರನ ವ್ಯಾಪಾರವೇ ಎಂದು ನಿರ್ಧರಿಸಿ, ಅಲಸ್ಯದಲ್ಲೂ ಸಾವಕಾಶವಾಗಿದ್ದ, ಪಾದಚಾರಿಗಳಾಗಿ ನಂಜನಗೂಡಿಗೆ ಪ್ರಯಾಣ ಮಾಡಿದರಂತೆ! ಅಲ್ಲಿ ಬಹು ವಿಶೇಷ ಸಂಗತಿಗಳು ನಡೆದುವಂತೆ! ಪುರಂದರದಾಸರು ರಚಿಸಿರುವ **ಮಹಾದೇವ ಸುಳಾದಿ**ಯಲ್ಲಿ ಗರಳಪುರಿ ಮಹಾತ್ಮ್ಯೆ ಮತ್ತು ಅವರ ಮೇಲ್ಕಂಡ ಅನುಭವಗಳು ಕ್ರೋಢೀಕೃತವಾಗಿವೆ.

ಚನ್ನಪಟ್ಟಣಕ್ಕೂ ಅಬ್ಬೂರಿಗೂ ನಡುವೆ ಪುರಂದರದಾಸರು ಕಟ್ಟಿಸಿದ ಕಟ್ಟೆಯೊಂದಿದೆ. ದಾಸರ ಕಟ್ಟೆಯೆಂದು ಕರೆಸಿಕೊಂಡದ್ದು ತರುವಾಯ ದಾಸನ ಕಟ್ಟೆಯಾಯಿತು. ನಾಲ್ಕು ಶತಮಾನಗಳಷ್ಟು ದೀರ್ಘ ಕಾಲದಲ್ಲಿ ಬಹು ವ್ಯತ್ಯಾಸಗಳಾಗಿ ಅದು ಈಗ ಗೋಕಟ್ಟೆಯಾಗಿದೆ.

ಮೈಸೂರು ಸೀಮೆಯಲ್ಲಿ ಪುರಂದರದಾಸರು ಸಂದರ್ಶಿಸಿದ ಮತ್ತು ಅಲ್ಲಲ್ಲಿಯ ದೇವತಾ ಮೂರ್ತಿಗಳನ್ನು ಕುರಿತು ಹಾಡಿದ ಸ್ಥಳಗಳು :— ಕಳಸ, ಬೇಲೂರು, ಮೇಲುಕೋಟೆ, ನಂಜನಗೂಡು, ಶ್ರೀರಂಗಪಟ್ಟಣ, ತಿರುಮಕೂಡ್ಲು, ಶ್ವೇತಾದ್ರಿ, ಬನ್ನೂರು, ಅಬ್ಬೂರು, ಮಳೂರು, ಚನ್ನಪಟ್ಟಣ, ಮುಳಬಾಗಿಲು, ಹೇಮಾವತೀ ತೀರದ ನವನಾರಸಿಂಹ ಕ್ಷೇತ್ರಗಳಲ್ಲಿ – ಹೊಳೆನರಸೀಪುರ ಅಥವಾ ಗೊರೂರು.

ತಮಿಳು ನಾಡಿನ ಶೈವರಲ್ಲಾಗಲೀ, ವೈಷ್ಣವರಲ್ಲಾಗಲೀ, ಶಿವಶರಣರು ಮತ್ತು ಆಳ್ವಾರರು ಸಂದರ್ಶಿಸಿದ ಮತ್ತು ಹಾಡಿದ ಸ್ಥಳಗಳನ್ನು ಮಾತ್ರ ದೊಡ್ಡ ಸ್ಥಳಗಳೆಂದು – ಪುಣ್ಯಸ್ಥಳಗಳೆಂದು ಭಕ್ತಿಯಿಂದ ಭಾವಿಸುತ್ತಾರೆ. ಈ ದೃಷ್ಟಿಯಿಂದ ನೋಡಿದರೆ, ಮೇಲ್ಕಂಡ ಸ್ಥಳಗಳು ಕನ್ನಡಿಗರಿಗೆ ಪುಣ್ಯಸ್ಥಳಗಳೆನ್ನಿಸಿಕೊಳ್ಳುತ್ತವೆ.

ನಾರಣಪ್ಪನ ಭಾರತ

ಕುಮಾರವ್ಯಾಸನೆಂದು ಸುಪ್ರಖ್ಯಾತನಾದ ಗದುಗಿನ ನಾರಣಪ್ಪನು, ಕನ್ನಡ ಭಾರತವನ್ನು ರಚಿಸಿ, ಪುರಂದರದಾಸರ ಬಳಿಗೆ ವಿಮರ್ಶೆಗಾಗಿ ತಂದಿದ್ದನೆಂಬುದಕ್ಕೆ ಈ ಕೆಳಗಿನ ದಾಸರ ಸುಳಾದಿಯ ಮಾತುಗಳು ಸಾಕ್ಷೀಭೂತವಾಗಿವೆ.

ಸುಳಾದಿ - ಧ್ರುವತಾಳ

ಹರಿಶರಣರೆನ್ನ ಮನೆಯ ಮೆಟ್ಟಲು ಮನೆ ಪಾವನ್ನವಾಯಿತು | ಆ ಆ ಆ ಆ ಹರಿಶರಣರೆನ್ನ ಕೂಡಿ ಮಾತಾಡೆ ಜನುಮನ ಪಾವನವಾಯಿತು. ಆ ಆ. ಹರಿಶರಣರೆನ್ನ ಮನೆಯಲ್ಲುಂಡರೆ | ಎನ್ನ ಎನ್ನ ಎನ್ನ ಇಪ್ಪತ್ತೊಂದು ಕುಲ ಪಾವನ್ನವಾಯಿತು,

ತ ತ ತ ತ | ಪಂಢರಾಪುರಿ ವಿಠ್ಠ ತ ತ ತ ತ | ಪಂಢರಾಪುರಿ ದೇವ ತ ತ ತ ತ | ಪಂಢರಾಪುರಿ ಗತಿ ಎನಿಸಿಂದಿ | ಪುರಂದರವಿಠಲ ಗದುಗಿನ ವೀರನಾರಾಯಣನೊಲಿಸಿದ ೧

ಮಟ್ಟತಾಳ

ಭಾರತ ಆಗಮ ಗೋಚರವೆಂದು..................
ವಿಚಾರಿಸೆ ಮನುಜರಿಗೆ ಗೋಚರವಪ್ಪಂತೆ
ವೀರನಾರಾಯಣ ನೀಕವಿಯೆಂದೆನಿಸಿಕೊಂಡೆ |
ಕುಮಾರವ್ಯಾಸಗೊಲಿದು ಕನ್ನಡಿಸಿದೆ ಭಾರತವ
ವೀರನಾರಾಯಣ ನೀಕವಿಯೆಂದೆನಿಸಿಕೊಂಡೆ
ಸಿರಿಪುರಂದರವಿಠಲ ಗದುಗಿನ ನಾರಾಯಣ ನಿನಗಿದು ಹಿರಿದುಪ್ರೇ ?

ಅಟ್ಟತಾಳ

ಭಾರತಮಲ್ಲ ಭೀಮಸೇನಬರು | ಭಾರತಮಲ್ಲ ಅರ್ಜುನನೆಂಬರು
ಭಾರತಮಲ್ಲ ಕರ್ಣನೆಂತೆಂಬರು | ಭಾರತಮಲ್ಲರಿವರ್ಯಾರು ಅಲ್ಲ.
ಭಾರತಮಲ್ಲ ಪುರಂದರವಿಠಲ, ಗದುಗಿನ ವೀರ
ನಾರಾಯಣಸ್ವಾಮಿ ಭಾರತಮಲ್ಲ. ‖ ೬ ‖

ಮೇಲ್ಕಂಡ ಸುಳಾದಿಯ ಮೊದಲ ನುಡಿಯಲ್ಲಿ, ನಾರಣಪ್ಪನು ದಾಸರ ಮನೆಗೆ ಬಂದು, ತಾನು ರಚಿಸಿದ್ದ ಕನ್ನಡ ಭಾರತವನ್ನೋದಲು, ಅದನ್ನು ಕೇಳಿ ಆನಂದಿಸಿದ ದಾಸರು, ಅನುಗ್ರಹಿಸಿದುದರಿಂದ ಆ ಮಾತುಗಳನ್ನಾಡಿದ್ದಾರೆ. ಪ್ರಾಯಶಃ, ಕುಮಾರವ್ಯಾಸನೆಂಬ ಬಿರುದು, ನಾರಣಪ್ಪನಿಗೆ ಪುರಂದರದಾಸರ ಕಾಲದಲ್ಲೇ ಶ್ರೀ ಕೃಷ್ಣದೇವರಾಯರಿಂದ ಪ್ರಾಪ್ತವಾಗಿರಬೇಕು. ಎರಡನೇ ನುಡಿಯಲ್ಲಿ ಗದುಗಿನ ವೀರನಾರಾಯಣಸ್ವಾಮಿಯು ಕುಮಾರವ್ಯಾಸನಿಗೆ (ನಾರಣಪ್ಪನಿಗೆ) ಒಲಿದು ಅತನಿಂದ ಕನ್ನಡ ಭಾರತವನ್ನು ಹಾಡಿಸಿದನೆಂದು ಹೇಳಿರುತ್ತಾರೆ.

ಪಂಢರಪುರದಲ್ಲಿ ದಾಸರ ವೈಭವ

ಶ್ರೀ ಪುರಂದರದಾಸರು ತಮ್ಮ ತೀರ್ಥಯಾತ್ರೆಯನ್ನು ಮುಗಿಸಿ ಕೆಲವು ಕಾಲ ಪಂಢರಪುರದಲ್ಲಿ ವಾಸಮಾಡಿದರು. ದಾಸರ ಸಂಕಲ್ಪದಂತೆ ಪ್ರದ್ಯುಮ್ನ ಸಂಕರ್ಷಣ ವಾಸುದೇವ ನಾರಾಯಣ ಎಂಬ ನಾಲ್ಕು ಮೂರ್ತಿಗಳಿಗೆ ದಂಡವತ್ತು ನಮನಗಳನ್ನು ಸಮರ್ಪಿಸಬೇಕೆಂದಿತ್ತು. ಆ ಕರ್ತವ್ಯದ ಪ್ರಾರ್ಥನೆಯ ಬಹುಭಾಗವು ಪಂಢರಪುರದಲ್ಲಾಯಿತು.

ಪಾಂಡುರಂಗನಿಗೆ ದಾಸರಲ್ಲಿದ್ದ ... ದಾಸರೊಡನೆ ಸಲುಗೆಯಿಂದ, ... ನಾಟಕ ನಡೆಸಿ ... ಮಹಿಮೆಗಳನ್ನು ತೋರಿಸಿದ್ದಾನೆ. ಅವರ ದೇವರನಾಮ

ಗಳಲ್ಲಿ ದೇವರನ್ನು ಎದುರಿಗೆ ನಿಲ್ಲಿಸಿಕೊಂಡು ಮಾತನಾಡಿದಂತೆಯೂ, ವಾದಿಸಿದಂತೆಯೂ, ನಿಂದಿಸಿದಂತೆಯೂ ಕಂಡು ಬರುತ್ತದೆ. ದಾಸರೊಡನಾಡಿದ ವಿಠಲನ ಲೀಲೆಯು ಭಕ್ತ ಜನರ ಭಕ್ತಿಯನ್ನು ಉದ್ರೇಕಗೊಳಿಸುತ್ತದೆ.

ಒಂದು ದಿನ ರಾತ್ರಿ ದಾಸರು ಮೃತ್ತಿಕಾಶೌಚಕ್ಕೆ ನೀರು ತಾರೆಂದು ಅಪ್ಪಣ್ಣ ಭಾಗವತನೆಂಬ ಶಿಷ್ಯನಿಗೆ ಹೇಳಿ ಹೋದರು. ಭಾಗವತನು ನಿದ್ರೆಗಣ್ಣಿನಲ್ಲಿ 'ಹೂಂ' ಎಂದು ಮತ್ತೆ ನಿದ್ರೆ ಮಾಡಿದನು. ದಾಸರಿಗೆ, ಶಿಷ್ಯನಿಗಾಗಿ ಕಾದುಕಾದು ಸಾಕಾಯಿತು. ಅಶುಚಿಯಲ್ಲಿ ಮನೆಗೆ ಬರಲು ಸಂಕೋಚವಾಯಿತು. ಆ ಸಮಯದಲ್ಲಿ ಪಾಂಡುರಂಗನು ಭಾಗವತನ ವೇಷಧರಿಸಿ ತಂಬಿಗೆಯ ನೀರನ್ನು ದಾಸರ ಮುಂದಿಟ್ಟನು. ದಾಸರು ಶುದ್ಧಿ ಕಾರ್ಯವನ್ನು ಮುಗಿಸಿ, ಇಷ್ಟೇಕೆ ತಡಮಾಡಿದೆಯೆಂದು ತಂಬಿಗೆಯಿಂದ ಭಾಗವತನ ತಲೆಯನ್ನು ಘಟ್ಟಿಸಿದರು. ಪೆಟ್ಟು ತಿಂದವನು, – ' ಇಲ್ಲ ಗುರುಗಳೇ, ತಪ್ಪಾಯಿತು.' ಎಂದು ನುಡಿದು ಮಾಯವಾದನು. ಎಲ್ಲೋ ಓಡಿದನೆಂಬ ಸಿಟ್ಟಿನಿಂದ ದಾಸರು ಮನೆಗೆ ಬಂದು, — ' ಎಲೋ, ಅಪ್ಪಣ್ಣಭಾಗವತ ಎಲ್ಲಿ ಹೋದೆ? ಇಲ್ಲಿ ಬಾ' ಎಂದು ಕೂಗಿದರು. ನಿದ್ರಿತನಾಗಿದ್ದ ಭಾಗವತನು, ಗಾಬರಿಯಿಂದ ಎದ್ದು ಕಣ್ಣುಜ್ಜಿಕೊಳ್ಳುತ್ತಾ,– ' ನಿದ್ರೆ ಬಂತು, ಮರೆತು ಬಿಟ್ಟೆ. ಇಗೋ! ನೀರು ತರುತ್ತೇನೆ' ಎಂದು ಅಂಗಳಕ್ಕೆ ಬಂದನು.

ದಾಸರು :—ಏನು ನಿನಗೆ ಮೈಮೇಲೆ ಎಚ್ಚರಿಕೆಯಿಲ್ಲವೆ ? ತಂಬಿಗೆಯನ್ನು ಎಲ್ಲಿಟ್ಟೆ ?

ಭಾಗವತ :—ಈಗ ಎಚ್ಚರವಾಯಿತು, ತಂಬಿಗೆ ತರುತ್ತೇನೆ ಕ್ಷಮಿಸಿ.

ದಾಸರು :—ಈಗ ಹೊಲದಲ್ಲಿ ಕೊಟ್ಟ ತಂಬಿಗೆಯಲ್ಲೋ ?

ಭಾಗವತ :—ಇಲ್ಲ, ನಾನು ಬಂದಿರಲಿಲ್ಲ. ತಂಬಿಗೆ ಕೊಟ್ಟಿಲ್ಲ !

ದಾಸರು :—ಎಲಾ, ಹೊಲದಲ್ಲಿ ನೀರು ತಂದುಕೊಟ್ಟಿಯಲ್ಲೋ ! ಹೊತ್ತಾಯಿತೆಂದು ರೇಗಿ, ತಂಬಿಗೆಯಿಂದ ನಿನ್ನ ತಲೆಗೆ ನಾ ಹೊಡೆದೆ ! ನನ್ನೆದುರಿಗೆ ಸುಳ್ಳು ಹೇಳುವೆಯಾ ?

ಭಾಗವತ :—ಖಂಡಿತವಾಗಿ ಇಲ್ಲ ಗುರುಗಳೇ ! ನಾನು ಬಂದಿರಲಿಲ್ಲ. ಈಗ ತಂದುಕೊಡುತ್ತೇನೆ.

ದಾಸರು :—ಹೊಲದಲ್ಲಿ ತಂಬಿಗೆಯನ್ನು ತಂದುಕೊಟ್ಟವರ್ಯಾರು ?

ಭಾಗವತ :—ಏನೋ ನಾನರಿಯೆ ! ನಾನಲ್ಲ.

.ದಾಸರು :—ಮತ್ತ್ಯಾರು ಬಂದಿದ್ದರು ?

ಭಾಗವತ :—ನನಗೆ ತಿಳಿಯದು.

ದಾಸರು ಎಲ್ಲಾ ಶಿಷ್ಯರನ್ನೂ ವಿಚಾರಿಸಿದರು. ಪ್ರತಿಯೊಬ್ಬರೂ ನಾನು ತರಲಿಲ್ಲವೆಂದರು ! ಹಾಗೆಯೇ ಧ್ಯಾನಿಸಿ, – ' ಹಾ, ಪಾಂಡುರಂಗ !' ಎಂದು ದಾಸರು ಪುಳಕಿತ

ರಾಜರು, – 'ದೇವಾ, ಇಂತಹ ನೀಚಕಾರ್ಯಗಳನ್ನು ಮಾಡಿ, ನನ್ನನ್ನು ನೀನೇಕೆ ಗೋಳಿಸುವೆಯಾ' ಎಂದು ನಾಮಸ್ಮರಣೆ ಮಾಡುತ್ತಾ ಕುಳಿತರು.

ಪ್ರತಿ ದಿನವೂ ಬೆಳಗಿನ ಝಾವ ನಾಲ್ಕು ಘಂಟೆಗೆ ಸರಿಯಾಗಿ, ದೇವಾಲಯದಲ್ಲಿ ವಿಠಲಸ್ವಾಮಿಗೆ ಕಾಕಡಾರತಿಯಾಗುವುದು ಪದ್ಧತಿ. ಆಗ ಅರ್ಚಕರು, ಪ್ರಭಾತ ಸ್ತೋತ್ರಗಳನ್ನು ಹೇಳಿ, ರುಕ್ಮಿಣೀ ಪತಿಗೆ ಪಂಚಾಮೃತದ ಅಭಿಷೇಕ ಮಾಡುವರು. ಆ ದಿನ ಅಭಿಷೇಕ ಕಾಲದಲ್ಲಿ, ವಸ್ತ್ರಾಭರಣವನ್ನು ತೆಗೆದು ನೋಡಲು, ಮನುಷ್ಯ ದೇಹಕ್ಕೆ ಪೆಟ್ಟು ತಗುಲಿದರೆ ಹೇಗೋ ಹಾಗೆ, ಶಿಲಾಮೂರ್ತಿಯು ಶಿರಸ್ಸು ಊದಿಕೊಂಡು ಗುಬಟು ಬಂದಿತ್ತು. ಮೂರ್ತಿಯ ನೇತ್ರಗಳಿಂದ ಧಾರೆ ಧಾರೆಯಾಗಿ ನೀರು ಬರುತ್ತಿತ್ತು. ಸೇವೆಯಲ್ಲಿ ಏನಪಚಾರವಾಯಿತೋ ಎಂದು ಭಟ್ಟರು ಜಿಜ್ಞಾಸಕ್ಕೆ ಕುಳಿತರು. ಈ ವಿಚಾರ ಕರ್ಣಾಕರ್ಣಿಯಾಗಿ ಹಬ್ಬಿ ಊರ ತುಂಬಾ ಸುದ್ದಿಯಾಯಿತು. ದರ್ಶನಾಭಿಲಾಷಿಗಳು, ಎಂದಿಗಿಂತ ಅಂದು ಅಧಿಕವಾಗಿ ಬಂದು ಸೇರಿದರು. ಎಲ್ಲರೂ ನೋಡುವವರೇ ! ಏನು ಈ ವಿಚಿತ್ರ ಎನ್ನುವವರೇ !

ಅಷ್ಟು ಹೊತ್ತಿಗೆ ಸರಿಯಾಗಿ ಪುರಂದರದಾಸರು ಭಜನೆಮಾಡುತ್ತಾ ದೇವಾಲಯಕ್ಕೆ ಬಂದರು. ಪ್ರಾಕಾರದ ಸುತ್ತಲೂ, ಶಿಷ್ಯ ಪರಿವಾರ ಸಹಿತ, 'ವಿಠ್ಠಲ ವಿಠ್ಠಲ' ಎಂದು ಹಾಡುತ್ತಾ ಪ್ರದಕ್ಷಿಣೆಯಾಗಿ ನಡೆದರು. ದಾಸರು ಪಾಂಡುರಂಗನ ಅಂತರಂಗ ಭಕ್ತರೆಂಬುದು ಎಲ್ಲರಿಗೂ ಗೊತ್ತಿತ್ತು! ಅವರಿಂದ ಅತಿಮಾನುಷ ವ್ಯಾಪಾರಗಳು ಆಗಾಗ್ಗೆ ಒಂದಾಗುತ್ತಲೊಂದು ನಡೆಯುತ್ತಿರುವುದು ಜನರ ಭಕ್ತಿಯನ್ನು ಹೆಚ್ಚಿಸಿತ್ತು. ದೇವಾಲಯದ ವ್ಯವಸ್ಥಾಪಕರು, ದಾಸರ ಬಳಿಗೆ ಬಂದು, – 'ಸ್ವಾಮಿ! ದಾಸರೇ ವಿಠಲನ ತಲೆ ಊದಿದೆ! ಕಣ್ಣಿನಿಂದ ನೀರು ಬರುತ್ತಿದೆ. ಕಾರಣವೇನೋ ತಿಳಿಯಲಿಲ್ಲ' ಎಂದರು.

ದಾಸರು ಚಕಿತರಾಗಿ – 'ಏನು ವಿಠಲನ ತಲೆ ಊದಿದೆಯೇ ? ಕಣ್ಣಿನಲ್ಲಿ ನೀರು ಬರುತ್ತಿದೆಯೇ ? ಇದೇನಾಶ್ಚರ್ಯ ! ನೋಡೋಣ ! ನಡೆಯಿರಿ' ಎಂದರು. ದಾಸರು ತಂಬೂರಿಯನ್ನು ಕೆಳಗಿಟ್ಟು, ಗರ್ಭಾಂಕಣವನ್ನು ಪ್ರವೇಶಿಸಿದರು. ಅಪಾದಮಸ್ತಕ ಮೂರ್ತಿಯನ್ನು ಸ್ಪರ್ಶಮಾಡಿದರು. ಊದಿ ಗುಬಟು ಎದ್ದಿರುವ ಫಾಲ ಪ್ರದೇಶವನ್ನು ಕರದೀಪದ ಬೆಳಕಿನಲ್ಲಿ ಚೆನ್ನಾಗಿ ನೋಡಿದರು. ಕಣ್ಣಿನಿಂದ ನೀರು ಸುರಿಯುತ್ತಿರುವುದನ್ನು ಕಂಡರು. ವಿಸ್ಮೃತರಾಗಿ ಧ್ಯಾನಾಸಕ್ತರಾದರು. – 'ಹಾ ದೇವಾ ಇದೇನು ವಿಡಂಬನ ? ದ್ರೋಣ ಭೀಷ್ಮರು ಬಿಟ್ಟ ಬಾಣಕ್ಕಿಂತ ಕಂಬಿಗೆಯ ಪೆಟ್ಟು ನಿನಗೆ ತೀಕ್ಷ್ಣವಾಯಿತೆ? ನೀರು ತಾರೆಂದು ನಿನ್ನನ್ನು ಕೇಳಿದೆನೆ ? ಅಷ್ಟಕ್ಕೂ ಭಾಗವತರಿಗೆ ಮೈಮರೆತು ನಿದ್ರೆ ಬರುವಂತೆ ಮಾಡಿದವರ್ಯಾರು ? ತಪ್ಪು ನನ್ನದೋ ನಿನ್ನದೋ ? ಸಾಕೀ ವಿಡಂಬನ!' ಎಂದು ಮುಖದ ಮೇಲೆ ಕೈಯಾಡಿಸಿದರು ! ಕಣ್ಣಿನಿಂದ ನೀರು ಬರುವುದು ನಿಂತಿತು. ತಲೆಯ ಊತಗೊಂಡ ಗುಬಟು ಮಾಯವಾಯಿತು. – ಆಗ ದಾಸರು – ಆನಂದ ಬಾಷ್ಪಗಳನ್ನು ಸುರಿಸಿ, ನಗುತ್ತಾ – 'ಏನೂ ಇಲ್ಲ, ದೇವರೇ ಭಕ್ತರ ಸಂಗಡ ಸರಸವಾಡಿದ್ದಾನೆ. ಅಭಿಷೇಕ

ನಡೆಯಲಿ ’ ಎಂದು ಹೇಳಿ ಹಿಂದಿರುಗಿದರು. ಅನಂತರ ಅಭಿಷೇಕ ಮಹಾಪೂಜೆಗಳು ನಡೆದವು.

ಪಾಂಡುರಂಗನು ಇದಕ್ಕೆ ತಕ್ಕ ಪ್ರತಿಕ್ರಿಯೆ ಮಾಡದೆ ಬಿಡಲಿಲ್ಲ. ಮುಂದೊಂದು ದಿನ, ಪುರಂದರದಾಸರ ವೇಷ ತಾಳಿ, ಆ ಊರಿನ ಪ್ರಸಿದ್ಧ ವೇಶ್ಯೆಯೊಬ್ಬಳ ಮನೆಗೆ ಬಂದನು. ವೇಶ್ಯೆಯು ಶ್ರೀಮಂತಳಾಗಿದ್ದುದು ಮಾತ್ರವಲ್ಲ; ವಿದ್ಯಾವತಿಯೂ, ಸುಂದರಿಯೂ, ಪಾಂಡುರಂಗನ ಭಕ್ತಳೂ ಆಗಿದ್ದಳು. ಪುರಂದರದಾಸರಂಥವರು ತನ್ನ ಮನೆಗೆ ಬಂದುದನ್ನು ನೋಡಿ, ಧನ್ಯಳಾದೆನೆಂದುಕೊಂಡಳು.

ವೇಶ್ಯೆ :—ದಯಮಾಡಬೇಕು ದಾಸರು ! ಇಂದು ಪಾಂಡುರಂಗವಿಠ್ಠಲನೇ ನನ್ನ ಮನೆಗೆ ಬಂದಂತಾಯಿತು. ಗೃಹಪಾವನವಾಯಿತು.

ದಾಸರು :—ಭಕ್ತರ ಮನೆಗಲ್ಲದೆ ಮತ್ತೆಲ್ಲಿಗೆ ಬರಬೇಕು ? ನಿನ್ನ ಗಾನ ನರ್ತನ ವೈಭವವನ್ನು ನೋಡುವ ಇಚ್ಛೆಯಾಯಿತು, ಬಂದೆನು.

ವೇಶ್ಯೆ :—ಕೃತಾರ್ಥಳಾದೆನು. ಸೇವೆಗೆ ಸಿದ್ಧಳಾಗಿರುವೆನು.

ದಾಸರು :—ಬಡದಾಸನೆಂದು ತಿಳಿಯಬೇಡ. ನಿನಗೆ ಯೋಗ್ಯ ಬಹುಮಾನವನ್ನೇ ತಂದಿರುವೆನು. ಇಲ್ಲಿ ಬಾ ಎಂದು ಕರೆದು ರತ್ನಖಚಿತವಾದ ಕಂಕಣವನ್ನು ಆಕೆಯ ಕೈಯಲ್ಲಿಟ್ಟರು.

ವೇಶ್ಯೆಯು ಕಂಕಣವನ್ನು ನೋಡಿ ಬೆರಗಾದಳು. ಅಮೌಲ್ಯವಾದ ಆಭರಣ ದೊರಕಿತೆಂದು ಹಿಗ್ಗಿದಳು. ಪ್ರಕಟವಾಗಿ, ದಾಸರೆಷ್ಟಾದರೂ ಚೆನ್ನಾಗಿ ಬದುಕಿ ಬಾಳಿದವರೆಂದಳು. ಕಸ್ತೂರಿಯನ್ನು ಕಟ್ಟಿದ ಅರಿವೆಯಂತೆ ಬರಿದಾದರೂ ವಾಸನೆಯನ್ನು ಬಿಡುವುದಿಲ್ಲವೆಂದಳು. ದಾಸರ ವ್ಯಕ್ತಿ ಗೌರವ, ಅವರ ಗಾನಶಾಸ್ತ್ರ ಪಾಂಡಿತ್ಯ, ಅವರು ಮಾಡಿದ ಅಮೌಲ್ಯವಾದ ಬಹುಮಾನ ಇವುಗಳಿಂದ ಮನವುಬ್ಬಿ ಮೈಮರೆತು ಆ ರಾತ್ರಿಯೆಲ್ಲಾ ದಿವ್ಯ ಗಾನ ನರ್ತನಗಳಿಂದ ದಾಸರೂಪೀ ಸ್ವಾಮಿಯನ್ನು ಸಂತೋಷಪಡಿಸಿದಳು. ಬೆಳಗಾಗುತ್ತಲೇ ವಿಠಲನು – ‘ ಇಂದಿಗೇ ತೀರಿತೆಂದು ತಿಳಿಯಬೇಡ. ನಾಳೆಯೂ ಬರುತ್ತೇನೆ. ಮತ್ತೊಂದು ಕಂಕಣವನ್ನೂ ಕೊಡುತ್ತೇನೆ. ನಿನ್ನ ಗಾನ ನರ್ತನಾನಂದ ಭಾಗಿಯಾಗುತ್ತೇನೆ ’ ಎಂದು ನಗುತ್ತ ನಗುತ್ತ ಅದೃಶ್ಯನಾದನು.

ಇತ್ತ ದೇವಾಲಯದಲ್ಲಿ, ಅರ್ಚಕರು, ಸ್ವಾಮಿಗೆ ಅಭಿಷೇಕ ಕಾಲದಲ್ಲಿ ಆಭರಣಗಳನ್ನು ತೆಗೆದಿಡುವಾಗ, ಬಲಗೈಯಲ್ಲಿದ್ದ ಕಂಕಣ ಕಣ್ಮರೆಯಾಗಿದ್ದುದನ್ನು ಕಂಡುಕೊಂಡರು. ಸಡಿಲವಾಗಿ ಕೆಳಗೆಲ್ಲಾದರೂ ಬಿದ್ದಿರಬಹುದೆಂದು ಹುಡುಕಿ ನೋಡಿದರು. ಅದು ದೊರೆಯಲಿಲ್ಲ. ಇತರ ಆಭರಣಗಳೆಲ್ಲಾ ಇದ್ದು, ಕಂಕಣವೊಂದು ಮಾತ್ರ ಮಾಯವಾಗಿರುವುದರ ಕಾರಣ ತಿಳಿಯಲಿಲ್ಲ. ಬಾಡವೆಗಳಲ್ಲಿ ಒಬ್ಬೊಬ್ಬರೂ ತಮಗೆ ಬೇಡವಾದವರಮೇಲೆ ದೋಷಾರೋಪಣೆ ಮಾಡಿದರು. ದಂಡಾಧಿಕಾರಿಗಳು ಸಂಶಯಗ್ರಸ್ತರೆಂದು ತೋರಿದವರನ್ನು ಹಿಡಿದು ಕಳಿಗಳಿಂದ ಪ್ರಹರಿಸಿದರು. ಒಡವೆ ಮಾತ್ರ ಪತ್ತೆಯಾಗಲಿಲ್ಲ.

ಆ ದಿನವೂ ಎಂದಿನಂತೆ ಸಕಾಲದಲ್ಲಿ ದಾಸರು ಭಜನೆ ಮಾಡುತ್ತಾ ದೇವಾಲಯಕ್ಕೆ ಬಂದರು. ಸ್ವಲ್ಪ ಹೊತ್ತಿನ ಮೇಲೆ ಆ ವೇಶ್ಯೆಯೂ ಪಾಂಡುರಂಗನ ದರ್ಶನಕ್ಕೆ ಬಂದಳು. ವೇಶ್ಯೆಯ ಕೈಯಲ್ಲಿದ್ದ ಆ ಒಂದೇ ಕಂಕಣವನ್ನು ನೋಡಿ ದೇವಸ್ಥಾನದ ಸರಾಫನಿಗೆ ಅನುಮಾನ ಹುಟ್ಟಿತು. ಕಂಕಣವು ದೇವರ ಕಂಕಣದಂತೆಯೇ ಇದ್ದುದು ಸ್ಪಷ್ಟವಾಗಿ ಗೋಚರವಾಯಿತು. ಶ್ರೀಮಂತಳಾಗಿದ್ದುದರಿಂದ, ಆಕೆಯನ್ನು ಒಡನೆಯೇ ಕೇಳಲು ಧೈರ್ಯವಾಗದೆ, ತಡೆದು ತಡೆದು, ಕಡೆಗೆ ಸರಾಫನು – ‘ ಕಂಕಣವನ್ನು ನೋಡಲು ಸ್ವಲ್ಪ ಕೊಡುವಿರಾ ’ ಎಂದು ಪ್ರಶ್ನೆ ಮಾಡಿದನು. ವೇಶ್ಯೆಯು ಸಂದೇಹಪಡದೆ, ಒಡನೆಯೇ ಸರಾಫನ ಕೈಯಲ್ಲಿ ಆ ಕಂಕಣವನ್ನು ಕೊಟ್ಟಳು. ಅವನು ವಿಠ್ಠಲಸ್ವಾಮಿಯ ವಾಮಹಸ್ತದ ಕಂಕಣವು ಇದೇ ಎಂದು ನಿರ್ಧರಿಸಿ, ದೇವಾಲಯದ ಅಧಿಕಾರಿಗಳಿಗೆ ತಿಳಿಸಿದನು. ವೇಶ್ಯೆಗೆ ಅಪರಾಧಿ ಸ್ಥಾನದಲ್ಲಿ ನಿಂತು ಹೇಳಿಕೆ ಕೊಡುವ ಸ್ಥಿತಿ ಪ್ರಾಪ್ತವಾಯಿತು.

ಅಧಿಕಾರಿ :—ಈ ಒಡವೆ ಎಲ್ಲಿತ್ತು ?

ವೇಶ್ಯೆ :—ನನ್ನಲ್ಲಿತ್ತು.

ಅಧಿಕಾರಿ :—ನಿನಗೆ ಕೊಟ್ಟವರ್ಯಾರು ?

ವೇಶ್ಯೆ :—ಕೊಡುವವರ್ಯಾರು ? ಅದು ನನ್ನದು.

ಅಧಿಕಾರಿ :—ಕೊಟ್ಟವರ ಹೆಸರು ಹೇಳುವೆಯೋ ? ಪ್ರಹಾರವೇಕೋ ?

ವೇಶ್ಯೆ :— ಕೊಟ್ಟವರನ್ನು ಬಯಲಿಗೆಳೆಯುವ ದ್ರೋಹಿಯು ನಾನಲ್ಲ ! ಸ್ವಾಮಿ, ನನ್ನನ್ನೇಕೆ ಛಲಿಸುವಿರಿ ?

ದಂಡಾಧಿಕಾರಿಯು, ವೇಶ್ಯೆಯನ್ನು ಬಲವಾಗಿ ಪ್ರಹರಿಸಲು ಆಜ್ಞೆ ಮಾಡಿದನು. ವೇದನೆಯನ್ನು ತಾಳಲಾರದೆ, ಅವಳು – ‘ ಸ್ವಾಮಿ ನನ್ನನ್ನು ಹೊಡೆಯಬೇಡಿ. ನಾನು ತಪ್ಪಿತಸ್ಥಳಲ್ಲ. ನಿನ್ನೆ ರಾತ್ರಿ ಪುರಂದರದಾಸರು ನನ್ನ ಮನೆಗೆ ಬಂದಿದ್ದರು. ಸಂಗೀತ ಕೇಳಿ ಬಹುಮಾನ ಕೊಟ್ಟರು. ಇವತ್ತು ಇನ್ನೊಂದು ಕಂಕಣವನ್ನೂ ಕೊಡುವುದಾಗಿ ಹೇಳಿರುವರು. ನನ್ನನ್ನು ಬಿಟ್ಟುಬಿಡಿ ’ ಎಂದು ಬೇಡಿಕೊಂಡಳು. ಏನೊಂದೂ ಕಾಣದೆ ಭಜನಾನಂದದಲ್ಲಿದ್ದ ದಾಸರ ಮೇಲೆ ಅಧಿಕಾರಿಯು ಕಿಡಿಕಿಡಿಯಾದನು. ದಾಸರನ್ನು ಹಿಡಿದು ವಿಚಾರ ಸ್ಥಾನದಲ್ಲಿ ನಿಲ್ಲಿಸುವಂತೆ ಅಪ್ಪಣೆ ಮಾಡಿದನು. ‘ ಇದೇನು ಬಂತಪ್ಪಾ ’ ಎಂದು ಆಶ್ಚರ್ಯಚಕಿತರಾಗಿ ದಾಸರು, ಅಧಿಕಾರಿಯ ಮುಂದೆ ನಿಂತರು.

ಅಧಿಕಾರಿ :—ಸುಂದರಿ, ಇವನೇನೋ ಪುರಂದರದಾಸನೆಂಬುವವನು ?

ವೇಶ್ಯೆ :—(ತಲೆಬಾಗಿ) ಹೌದು !

ಅಧಿಕಾರಿ :—ಇವನು ನಿನ್ನ ಮನೆಗೆ ಬಂದಿದ್ದನೋ ?

ವೇಶ್ಯೆ :—ಹೌದು, ಬಂದಿದ್ದರು.

ಅಧಿಕಾರಿ :—ನಿನಗೇನು ಕೊಟ್ಟ ?

ವೇಶ್ಯೆ :—ಕಂಕಣವನ್ನು !

ಅಧಿಕಾರಿ :—ಮತ್ತೇನು ಹೇಳಿದ ?

ವೇಶ್ಯೆ :—ಈ ರಾತ್ರಿ ಇನ್ನೊಂದು ಕಂಕಣವನ್ನು ಕೊಡುವೆನೆಂದು !

ಅಧಿಕಾರಿಯು ಕ್ರುದ್ಧನಾಗಿ, – ‘ ಏನೋ ದಾಸ ? ಹಗಲು ರಾಮ ಭಜನೆ ; ರಾತ್ರೆ ಕಾಮ ಭಜನೆ ! ಎಷ್ಟು ದಿಸಗಳಿಂದ ಈ ಕಾರ್ಯ ಮಾಡುತ್ತಾ ಜನರನ್ನು ಮೋಸ ಗೊಳಿಸುತ್ತಿರುವೆ ?’ ಎಂದು ಥಳಿಸಿದನು.

ದಾಸರು, ಏನೊಂದು ವಿಷಯವನ್ನೂ ಅರಿಯದೆ, — ‘ ಇದೇನು ಬಂತೋ ವಿಠಲಾ ? – ನಾನೆಲ್ಲಿ ಬಂದಿದ್ದೆನೇ ತಾಯಿ ನಿನ್ನ ಮನೆಗೆ ?’ ಎಂದು ವ್ಯಸನಾಕ್ರಾಂತ ರಾದರು.

ಅಧಿಕಾರಿಯು ದಾಸರನ್ನು ಅಲ್ಲೇ ಇದ್ದ ಒಂದು ಕಂಭಕ್ಕೆ ಬಿಗಿಸಿ, ಕೊರಡೆ ಯಿಂದ ಬಲವಾಗಿ ಪ್ರಹರಿಸಿದನು. ದಾಸರು ನಿರುಪಾಯರಾಗಿ ಪೆಟ್ಟು ತಿಂದು – ‘ವಿಠಲ, ಇದು ನಿನ್ನ ಕೆಲಸ ! ನಾನು ನಿನ್ನನ್ನು ಹೊಡೆದೆ ; ನೀನು ನನ್ನನ್ನು ಹೊಡೆಸಿದೆ ! ಮುಯ್ಯಕ್ಕೆ ಮುಯ್ಯಿ ತೀರಿತು. ಇನ್ನಾಕೆ ಪರೀಕ್ಷೆ ’ ಎನ್ನುತ್ತಾ, —

ಪಂತುವರಾಳಿ ಛಾಪು

ಮುಯ್ಯಕ್ಕೇ ಮುಯ್ಯಿ ತೀರಿತೋ
ಅಯ್ಯ ವಿಜಯ್ಯ – ಸಹಯ್ಯ ಪಂಢರಿರಾಯ ಪ.

ಸಣ್ಣವನೆಂದು ನಾನೀರು ತಾರೆಂದರೆ
ಬೆಣ್ಣೆ ಕಳ್ಳ ಕೃಷ್ಣ ಮರೆವುಮಾಡಿ
ಚಿನ್ನದ ಗಿಂಡಿಲಿ ನೀರತಂದಿಡೆ ನಿನ್ನ
ಕಣ್ಣುಕಾಣದೆ ನಾ ಕೊಣೆದೆ ಪಂಢರಿರಾಯ ೧

ಎನ್ನ ಹೆಸರಿನಿಂದ ಸೂಳೆಗೆ ಕಂಕಣ
ವನ್ನು ನೀನಿತ್ತು ನಿಜರೂಪದಿ
ಸನ್ನುತ ಈಪರಿ ಭಂಡುಮಾಡಿ ಈ
ಮಾನ್ನಪರೊಳು ಎನ್ನ ಮಾನಗೊಂಡೆ ಕೃಷ್ಣಾ ೨

ಭಕ್ತವತ್ಸಲನೆಂಬ ಬಿರುದುಬೇಕಾದರೆ
ಭಕ್ತರಾಧೀನ ನೀನಿರಬೇಡವೆ
ಯುಕ್ತಿಯಲಿ ನಿನ್ನಂಥ ದೇವರ ನಾಕಾಣೆ
ಮುಕ್ತೀಶ ಪುರಂದರವಿಠಲ ಪಂಢರಿರಾಯ ೩

ಎಂಬುದಾಗಿ ಹಾಡಿದರು.

ಕೂಡಲೆ ವಿಠಲನು, ಬಾಲಕನೊಬ್ಬನ ಮೇಲೆ ಆವೇಶ ಬಂದು ‘ ನಾನೇ ದಾಸರ ವೇಷದಿಂದ ವೇಶ್ಯೆಗೆ ಕಂಕಣವನ್ನು ಕೊಟ್ಟೆ ! ಇನ್ನೊಂದು ಕಂಕಣವನ್ನೂ ಆವಳಿಗೆ

ಹೊರಡಿ. ದಾಸರನ್ನು ಬಿಡಿ. ಸ್ತಂಭವನ್ನು ದಾಸರ ಸ್ತಂಭವೆಂದು ಪೂಜಿಸಿರಿ' ಎಂಬುದಾಗಿ ಅಪ್ಪಣೆ ಮಾಡಿದನು. ಅಧಿಕಾರಿಯು ವಿಸ್ಮಿತನಾದನು. ದಾಸರನ್ನು ಬಿಚ್ಚಿಸಿ, ಕ್ಷಮಿಸಬೇಕೆಂದು, ಅವರಿಗೆ ಶರಣಾಗತನಾದನು. ವೇಶ್ಯೆಗೆ ಕಂಕಣ ಪ್ರಾಪ್ತಿಯಾಯಿತು. ಅಂದಿನಿಂದ ಅವಳು ಮಹಾಭಕ್ತಳಾಗಿ ಪಾಂಡುರಂಗನ ಸೇವೆಯಲ್ಲೇ ಜನ್ಮವನ್ನು ಕಳೆದಳು.

ದಾಸರನ್ನು ಕಟ್ಟಿಸಿದ ಸ್ತಂಭದಲ್ಲಿ ಅವರ ಆಕಾರವನ್ನು ಅಧಿಕಾರಿಯು ಚಿತ್ರಿಸಿದನು. ಮುಂದೆ, ಭಕ್ತಾದಿಗಳು, ದಾಸರ ಸ್ತಂಭದ ದರ್ಶನಮಾಡಿದ ಅನಂತರ ವಿಠಲನ ದರ್ಶನಕ್ಕೆ ಹೋಗುವುದು ವಾಡಿಕೆಗೆ ಬಂತು.

ಆ ಪದ್ಧತಿಯು ಇವತ್ತಿಗೂ ನಡೆದು ಬರುತ್ತಿದೆ. ಪಂಢರಪುರದಲ್ಲಿದ್ದಾಗ ದಾಸರ ಇಂತಹ ಮಹಿಮೆಗಳು ಅನೇಕವಾಗಿ ನಡೆದಿವೆ. ಗ್ರಂಥವಿಸ್ತಾರ ಭಯದಿಂದ ಆ ವಿಷಯಗಳನ್ನಿಲ್ಲಿ ಸಂಕ್ಷೇಪಗೊಳಿಸಲಾಗಿದೆ.

ದಾಸರು ಸೊಲ್ಲಾಪುರದಲ್ಲಿದ್ದಾಗ ಒಮ್ಮೆ ಬ್ರಾಹ್ಮಣರಿಗೂ ಲಿಂಗಾಯಿತರಿಗೂ ಮತ ಸಂಬಂಧವಾದ ವಿವಾದ ಹುಟ್ಟಿತು. ಬಹುಸಂಖ್ಯಾಕರಾದ ಲಿಂಗಾಯಿತರ ಮುಂದೆ ಬ್ರಾಹ್ಮಣರು ಪ್ರತಿಯೋಧಿಯಾಗಿ ನಿಲ್ಲಲು ಶಕ್ತರಾಗಲಿಲ್ಲ. ವಿವಾದವು ಕೇವಲ ವಾಕ್ಕಲಹದಲ್ಲೇ ಪರ್ಯವಸಾನವಾಗಲಿಲ್ಲ. ಕೈ ಕಲಿಕೆ ಯುದ್ಧಪ್ರಸಂಗವೊದಗಿತು. ಆ ಕಠಿಣ ಪರಿಸ್ಥಿತಿಯಲ್ಲಿ ದಾಸರು ಉಭಯ ಪಕ್ಷದವರನ್ನೂ ಸೇರಿಸಿ ಸಮಾಧಾನವಾಗುವಂತೆ :—

ಮಧ್ಯಮಾವತಿ — ಅಟ್ಟತಾಳ

ಜಂಗಮರು ನಾವು । ನೀವೇ ಕೇಳಿ ಪ.
ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರ । ಭವಿಗಳೆಂಚಿರಿ ಬರಿದೆ ಅ.

ಶಿವಗುರುದೈವ ಕೇಶವ ನಮ್ಮ ಮನೆದೈವ
ವರದ ಮೋಹನ ನಮ್ಮ ಗುರುಶಾಂತೇಶ
ಶಿವ ಗುರುದ್ರೋಹಮಾಡಿದ ಪರವಾದಿಗೆ
ರವರವ ನರಕದೊಳುರುಳುವದೇ ಗತಿ ೧.

ವಿಭೂತಿ ನಮಗುಂಟು । ವಿಶ್ವೇಶ ನಮಗುಂಟು
ಶೋಭನ ಮುದ್ರೆಯು ನಮಗುಂಟು ।
ಶ್ರೀ ಭಾಗೀರಥಿ ಅಗ್ನಿಮಜ್ಜನ ನಮಗುಂಟು
ಸೌಭಾಗ್ಯವೀವ ಮಹಂತಿನ ಮಠದವರು ೨.

ವಿರಕ್ತರು ನಾವು । ಶೀಲವಂತರು ನಾವು
ವೀರಭದ್ರನ ಪ್ರಿಯ ಪ್ರಿಯ ಭಕ್ತರಾವು
ಕಾರಣಕರ್ತ ಶ್ರೀ ಪುರಂದರವಿಠಲನ
ಕಾರುಣ್ಯಕೆ ಮುಖ್ಯಪಾತ್ರರು ನಾವು ೩.

ಎಂಬುದಾಗಿ ಹಾಡಿ ಸಮಾಧಾನಗೊಳಿಸಿದರು. ಮಟಮಟ ಮಧ್ಯಾಹ್ನದಲ್ಲಿ ಮತಿಗೆಟ್ಟ ಜನರು ಕೈಕಲಹಕ್ಕೆ ನಿಂತ ಸಮಯದಲ್ಲಿ, ಪುರಂದರದಾಸರು ಮತಗಳಲ್ಲಿ ಸಮರಸ ಹುಟ್ಟುವಂತೆ ಕಾಲಕ್ಕೆ ಸರಿಯಾಗಿ ಮಧ್ಯಮಾವತೀ ರಾಗದಲ್ಲಿ ದೇವರ ನಾಮವನ್ನು ಹಾಡಿದ್ದು ಪರಿಣಾಮಕಾರಿಯಾಯಿತು. ಉದ್ವೇಗವು ಉತ್ಸಾಹದಲ್ಲಿ ರೂಪಾಂತರವಾಯಿತು.

ಏನೊಂದು ಕಾರ್ಯ ಮಾಡುವುದಕ್ಕೂ ಮನುಷ್ಯನಲ್ಲಿ ವ್ಯಕ್ತಿತ್ವವಿರಬೇಕು. ಶಾಂತ ಮನಸ್ಸಿರಬೇಕು. ಆಕರ್ಷಕವಾದ ವಾಕ್ಸರಣಿಯಿರಬೇಕು. ಮೇಲಾಗಿ ಗಾನವಿರಬೇಕು. ಇಷ್ಟೂ ಇದ್ದವರಿಗೆ ಲೋಕ ವಶವಾಗುವುದೇನಾಶ್ಚರ್ಯ! ಮನುಷ್ಯನನ್ನು ಸಾಧು ಮಾರ್ಗದಲ್ಲಿ ತಂದಿಳಿಸಲು ಸಂಗೀತದಂಥಾ ವಿದ್ಯೆ ಮತ್ತೊಂದಿಲ್ಲ. ಪ್ರಯೋಗದಲ್ಲಿ ವಿಷಮವಾದರೆ ಅದರಂತೆ ಮನುಷ್ಯನನ್ನು ಹಾಳುಮಾಡುವ ವಿದ್ಯೆಯೂ ಮತ್ತೊಂದಿಲ್ಲ. (ವೇಶ್ಯೆಯರ ಬಾಯಲ್ಲಿ ಗಾನವೂ, ಅನಾಚಾರಿಯ ಬಾಯಲ್ಲಿ ಕೀರ್ತನವೂ ಬಂದು ಉಭಯ ವೃತ್ತಿಗಳೂ ಭ್ರಷ್ಟವಾದುವು).

ಅನಂತರ ದಾಸರು ಮಳಖೇಡ (ಟೀಕಾಚಾರ್ಯರ ಸನ್ನಿಧಿ) ಯಲ್ಲಿ ಕೆಲವು ದಿನವಿದ್ದು ತಿರುಪತಿಗೆ ಬಂದರು. ಅದೇ ಕಾಲದಲ್ಲಿ ಕೃಷ್ಣದೇವರಾಯನೂ ವ್ಯಾಸರಾಯ ಸ್ವಾಮಿಗಳೂ ತಿರುಪತಿಗೆ ಬಂದರು. ಆ ಸಂದರ್ಭದಲ್ಲಿ ಕನಕದಾಸರಂತೂ ಕೆಲವು ದಿನಗಳಿಂದ ತಿರುಪತಿಯಲ್ಲೇ ಇದ್ದರು.

೫

ತಿರುಪತಿಯಲ್ಲಿ ದಾಸರ ವೈಭವ

ಕರ್ಣಾಟಕ ನರಪತಿ ಕೃಷ್ಣದೇವರಾಯನು, ಒಮ್ಮೆ ಬ್ರಹ್ಮೋತ್ಸವ ನಿಮಿತ್ತವಾಗಿ ವ್ಯಾಸರಾಜಯತೀಶ್ವರರಿಂದ ಸಹಿತವಾಗಿ ತಿರುಪತಿಗೆ ಬಂದಿದ್ದನು. ದಾಸರಾದರೂ, ಆದಷ್ಟು ಅವಕಾಶವನ್ನು ಕಲ್ಪಿಸಿಕೊಂಡು, ಪ್ರತಿ ಬ್ರಹ್ಮೋತ್ಸವಕ್ಕೂ ಬರುತ್ತಿದ್ದರು. ಉತ್ಸವ ಕಾಲದ ಜೊತೆಗೆ ಮಹಾರಾಜನೂ ಮತ್ತು ಸ್ವಾಮಿಗಳೂ ಬಂದದ್ದರಿಂದ ಅಗಣಿತವಾದ ಜನಸಂದಣಿ ಸೇರಿತ್ತು. ದಾಸರ ಬಿಡಾರದಲ್ಲಿ ಎಲ್ಲಿದ್ದರೂ ನಿತ್ಯ ಸಂತರ್ಪಣೆ ತಪ್ಪುತ್ತಿರಲಿಲ್ಲ. ಸಂತರ್ಪಣೆಯ ಸಲಕರಣೆಗಳು ಅವತ್ತವತ್ತಿನ ಭಿಕ್ಷದಿಂದ ಹುಟ್ಟುತ್ತಿತ್ತು. ಭಗವತ್ಕೃಪೆಯಿಂದ, ಎಷ್ಟೇ ಜನರು ಬರಲಿ, ಮಾಡಿದ ಅಡಿಗೆಯೇ ಅಕ್ಷಯವಾಗುತ್ತಿತ್ತು. ಒಂದು ಮಧ್ಯಾಹ್ನ ಸಾವಿರಾರು ಜನರ ಪಂಕ್ತಿಯಲ್ಲಿ, ದಾಸರು, ಏನು ಬಂತು, ಏನು ಬರಲಿಲ್ಲವೆಂದು ವಿಚಾರಿಸುತ್ತಾ ಹೊರಟರು. ಜನರು ಭಕ್ಷ್ಯ ಬಂತು; ತುಪ್ಪ ಬರಲಿಲ್ಲವೆಂದು ಹೇಳಿದರು. ಮಾತು ಮಾತಿಗೆ ಅಪ್ಪಣ್ಣ ಭಾಗವತನನ್ನು ಕರೆಯುವುದು ದಾಸರ ರೂಢಿಯಾಗಿತ್ತು. ಸಹಜವಾಗಿ ಅವನೇ ದಾಸರ ಬಿಡಾರದ ಪಾರುಪತ್ಯ ಮಾಡುತ್ತಿದ್ದನು. ಪಾಕಶಾಲೆಯಲ್ಲಿ ಭಾಗವತನಿರಲಿಲ್ಲ. ದಾಸರು ಒಂದೇ ಸಮನಾಗಿ ಭಾಗವತನನ್ನು ಕೂಗುತ್ತಿದ್ದರು. ಅವನು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ತನ್ನದೇ ಭಜನಗೋಷ್ಠಿ

ಬಿಂದಿಗೆ ಕೂಡ ಮುಚ್ಚಿದಲ್ಲೇ ಇದ್ದವು. ಪಾಕಶಾಲೆಯಲ್ಲಿ ತುಪ್ಪವಿರಲಿಲ್ಲ. ದಾಸರು ಪರೀಕ್ಷೆಗೆ ಬಂದೆಂದು ಯೋಚಿಸುವ ಸಮಯಕ್ಕೆ ಸರಿಯಾಗಿ, ಶ್ರೀನಿವಾಸನು ಭಾಗವತನಂತೆ ವೇಷಧರಿಸಿ, ದೇವಾಲಯದ ಉಗ್ರಾಣದಿಂದ ದೊಡ್ಡ ತುಪ್ಪದ ಬಿಂದಿಗೆಯನ್ನು ತಂದು, – 'ಇದೋ ಗುರುಗಳೇ ತುಪ್ಪ ಬಂತು' ಎನ್ನುತ್ತಾ ಪಙ್ಕ್ತಿಗೆಲ್ಲಾ ಸಮೃದ್ಧಿಯಾಗಿ ಬಡಿಸಿದನು.

ದಾಸರು :—ಅಪ್ಪಣ್ಣಾ ತುಪ್ಪವನ್ನು ಎಲ್ಲಿಂದ ತಂದೆ ?

ವೇಷಧಾರಿ :—ಉಗ್ರಾಣದಿಂದ !

ದಾಸರು :—ಅದರ ರೊಕ್ಕ ಕೊಡುವವರ್ಯಾರೋ ?

ವೇಷಧಾರಿ :—ಶ್ರೀನಿವಾಸ !

ಉತ್ತರ ಕ್ಷಣದಲ್ಲಿ ವೇಷಧಾರಿಯು ತುಪ್ಪದ ಬಿಂದಿಗೆಯನ್ನು ಪಾಕಶಾಲೆಯಲ್ಲಿಟ್ಟು ಅದೃಶ್ಯನಾದನು. ದಾಸರು ಪಾಕಶಾಲೆಗೆ ಬಂದರು. ಭಜನೆಯನ್ನು ಮುಗಿಸಿಕೊಂಡು ಅಪ್ಪಣ್ಣ ಭಾಗವತನೂ ದಾಸರೆದುರಿಗೇ ಪಾಕಶಾಲೆಗೆ ಬಂದನು.

ದಾಸರು :—ಅಪ್ಪಣ್ಣಾ ! ಈಗ ಉಗ್ರಾಣದಿಂದ ತುಪ್ಪವನ್ನು ತಂದು ಬಡಿಸಿದಿ; ಅಷ್ಟರೊಳಗೆ ಭಜನೆಗೆಲ್ಲಿ ಹೋಗಿದ್ದೆಯೋ ?

ಅಪ್ಪಣ್ಣ :—ಇಲ್ಲ ಗುರುಗಳೇ ! ನಾನು ಭಜನೆ ಮಾಡುತ್ತಿದ್ದೆ ! ತುಪ್ಪದ ಸಮಾಚಾರವೇ ನನಗೆ ಗೊತ್ತಿಲ್ಲ !

ದಾಸರು :—ಎಲಾ ? ಈಗ ನೀನೇ ತಂದು ಬಡಿಸಿದೆ ! ನೀನು ಬಲುವಂಚಕನಾದೆ. ಹೋಗು, ಮೊದಲು ತುಪ್ಪದ ರೊಕ್ಕವನ್ನು ಕೊಟ್ಟು ಬಾ !

ಅಪ್ಪಣ್ಣ :—ನಾನಾರಿಗೆ ರೊಕ್ಕವನ್ನು ಕೊಡಲಿ ಗುರುಗಳೇ ? ನಾನು ತಂದವನೂ ಅಲ್ಲ; ಕೊಡುವವನೂ ಅಲ್ಲ.

ದಾಸರು :—ಹಾಗಿದ್ದರೆ, ಈ ಬಿಂದಿಗೆ ಇಲ್ಲಿ ಹೇಗೆ ಬಂತು ?

ಅಪ್ಪಣ್ಣ :—ದೇವರೇ ಬಲ್ಲ !

ದಾಸರು ಸಂಭವಿಸಿದ ಪೂರ್ವ ವೃತ್ತಾಂತವನ್ನು ಜ್ಞಾಪಿಸಿಕೊಂಡರು. ಧ್ಯಾನ ಮಾಡುತ್ತಾ ನಿಂತು, ಇದು ಶ್ರೀನಿವಾಸನ ವ್ಯಾಪಾರವೆಂದೇ ನಿರ್ಧರಿಸಿದರು.

ರಾಗ ಶಂಕರಾಭರಣ-ಛಾಪುತಾಳ

ಎಂದಪ್ಪಿಕೊಂಬೆ । ರಂಗಯ್ಯನ । ಎಂದಪ್ಪಿಕೊಂಬೆ ॥ ಪ.
ಎಂದಪ್ಪಿಕೊಂಬೆ ನಾನೆಂದು ಮುದ್ದಾಡುವೆ
ಎಂದಿಗೆ ಸವಿಮಾತನಾಡಿ ನಾ ದಣಿವೆ ! ಅ.

ಅಪ್ಪಣ್ಣ ಭಾಗವತನ ರೂಪನು ತಾನಾಗಿ
ತುಪ್ಪದ ಬಿಂದಿಗೆ ತಂದಪ್ಪ ಮುಕುಂದನ ೧.

ಅಂದಿಗೆ ಕಿರುಗೆಜ್ಜೆ ಅಂದದಿಘಲಿರೆನೆ
ಛಂದಾಗಿ ಕುಣಿದ ಮುಕುಂದನ ಚರಣವ ೨.

ಧರೆಯೊಳು ಸುಜನರ ಮರೆಯದೆ ಸಲಹುವ
ಪುರಂದರವಿಠಲನ ಶಿರಿಪಾದ ಪದ್ಮವ ೩.

ಎಂಬುದಾಗಿ ಸ್ತೋತ್ರ ಮಾಡಿದರು.

ದಾಸರು ನಿತ್ಯವೂ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಸರೋವರಕ್ಕೆ ಆಗ್ನೇಯ ದಿಕ್ಕಿನಲ್ಲಿ ಆಹ್ನಿಕಕ್ಕೆ ಕೂಡುತ್ತಿದ್ದರು. ಈಗಿನಂತೆ ಆಗ ಮಂಟಪಗಳೂ ಮನೆಗಳೂ ಇರಲಿಲ್ಲ. ಮಳೆ ಬರಲಿ, ಬಿಸಿಲಾಗಲಿ ತಮ್ಮ ಕ್ಲುಪ್ತ ಸ್ಥಾನವನ್ನು ಬಿಟ್ಟು ಬೇರೊಂದು ಕಡೆಯಲ್ಲಿ ಪೂಜಾಪೆಟ್ಟಿಗೆಯನ್ನಿಡುತ್ತಿರಲಿಲ್ಲ. ಇದನ್ನು ನೋಡಿ ಕೃಷ್ಣದೇವರಾಯನು ಒಂದು ಶಿಲಾಮಂಟಪವನ್ನು ಅದೇ ಸ್ಥಳದಲ್ಲಿ ಕಟ್ಟಿಸಿಕೊಟ್ಟನು. ಆ ಮಂಟಪಕ್ಕೆ 'ದಾಸರ ಮಂಟಪ'ವೆಂದು ಹೆಸರಾಯಿತು. ಯಾವ ದಾಸರೇ ಬರಲಿ, ಪುರಂದರದಾಸರು ಆಹ್ನಿಕಮಾಡಿದ ಸ್ಥಳವೆಂದು ತಾವೂ ಅಲ್ಲೇ ಪೂಜಾದಿಗಳನ್ನು ನಡೆಸುವ ಸಂಪ್ರದಾಯವಾಯಿತು.

ಪ್ರಕೃತ ಆ ಮಂಟಪವು ರೆಡ್ಡಿಯ ಕಛೇರಿಯಾಗಿದೆ. ದಾಸರ ಮಂಟಪವೆಂದು ಗುರ್ತಿಸುವವರೂ ಇಲ್ಲದಂತಾಗಿದೆ.

ಜನಸಂದಣಿ ಬಹಳವಾಗಿದ್ದಾಗ ಪುರಂದರದಾಸರು ಶ್ರೀನಿವಾಸನ ಮೂಲ ಮೂರ್ತಿಯ ದರ್ಶನಕ್ಕೆ ಹೋಗುತ್ತಿರಲಿಲ್ಲ. ದಾಸರಿಗೆ ಯಾವ ಅಡ್ಡಿಯೂ ಇರದಿದ್ದರೂ ಪ್ರಾಕಾರದಲ್ಲಿ ಪ್ರದಕ್ಷಿಣೆಮಾಡಿ, ವಿಮಾನ ಶ್ರೀನಿವಾಸನಿಗೆ ನಮಸ್ಕಾರಮಾಡಿಬಿಡುತ್ತಿದ್ದರು.

ಜನಸಂದಣಿ ಇಲ್ಲದಾಗ ಒಮ್ಮೆ ಗರ್ಭಾಂಕಣವನ್ನು ಪ್ರವೇಶಿಸಿದರೆಂದರೆ ಒಂದೆರಡು ಘಂಟೆಗಳಾದರೂ ಹೊರಗೆ ಬರುತ್ತಿರಲಿಲ್ಲ. ದಾಸರು ಏಕಾಂತ ಸೇವೆಯಲ್ಲಿರುವರೆಂದು ತಿಳಿದರೆ, ನೌಕರರು ತೆರೆಯನ್ನು ಹಾಕಿ ದೂರ ದೂರವಿರುತ್ತಿದ್ದರು. ಆಗ ದಾಸರು ಮನ ಬಂದಂತೆ ಹಾಡುತ್ತಿದ್ದರು. ಭಾವ ಸಮಾಧಿಯಲ್ಲಿ ಒಮ್ಮೊಮ್ಮೆ ಮೈಮರೆತು ಕೆಳಗೆ ಬಿದ್ದು ಬಿಡುತ್ತಿದ್ದರು. ಆ ಕಾಲದಲ್ಲಿ ಅವರ ಮಕ್ಕಳು ಮಾತ್ರ ಸಮೀಪದಲ್ಲಿದ್ದು ಸೇವೆ ಮಾಡುತ್ತಿದ್ದರು. ಕಡೆಯ ಮಗನಾದ ಮಧ್ವಪತಿಯು ದಾಸರ ಬಾಯಿಂದ ಹೊರಟ ದೇವರ ನಾಮಗಳನ್ನು ಬರೆದುಕೊಳ್ಳುತ್ತಿದ್ದನು. ಶ್ರೀನಿವಾಸನ ಪ್ರತ್ಯಕ್ಷ ದರ್ಶನಾನಂದ ಭರದಲ್ಲಿ ಪುರಂದರದಾಸರು ಈ ಸುಳಾದಿಯನ್ನು ಹಾಡಿದ್ದಾರೆ.

ಸುಳಾದಿ ಧ್ರುವತಾಳ

ಆ ಪಾದ ಆನಂದ ಆ ನಖ ಆನಂದ
ಆ ಜಾನು ಆ ಜಂಘೆ ಆನಂದಮಯವಯ್ಯ
ಆ ಊರು ಆನಂದ ಆ ಕಟಿ ಆನಂದ
ಆ ನಾಭಿ ಆ ಕುಕ್ಷಿ ಆನಂದಮಯವಯ್ಯ

ಆ ಉರ ಆನಂದ ಆ ಭುಜ ಆನಂದ
*ಆ ಕಂಬು ಆ ಗ್ರೀವ ಆನಂದಮಯವಯ್ಯ
ಆ ಸರೋರುಹಗಳು ಆನಂದಮಯವಯ್ಯ
ಆ ಸರ್ವಾಂಗದ ಅವಯವಗಳೆಲ್ಲಾ
ಅಸಂಖ್ಯ ಆನಂದ ಪುರಂದರವಿಠಲ

ಝಂಪೆತಾಳ

ಪಾವಕಕೋಟಿ ಸೂರ್ಯಪ್ರಭಾ ಸೋಲಿಸುವ
ದೇವನಂಗಕಾಂತಿ ಆನಂದಮಯವಯ್ಯ
ಹಾವ ಭಾವ ಭ್ರೂಭ್ರಮ ವಿಲಾಸಗಳೆಲ್ಲ
ದೇವನಂಗಕಾಂತಿ ಆನಂದಮಯವಯ್ಯ
ದೇವ ಶಿರಿ ಪುರಂದರವಿಠಲನಂಗಕಾಂತಿ
ಆನಂದಮಯವಯ್ಯ

ತ್ರಿಪುಟತಾಳ

ದಶಮಾರುತಗಳು ಆನಂದಮಯವಯ್ಯ
....
ಅಸಂಖ್ಯ ಆನಂದ ಪುರಂದರವಿಠಲ

ಅಟ್ಟತಾಳ

ಜೊಮ್ಮ ಜೊಮ್ಮ ಜೊಮ್ಮ ಜೊಮ್ಮ ಶ್ರೀಹರಿಯ
ಕರ್ಮವಾನಂದ ಕರಣಗಳಾನಂದ
ಹೆಮ್ಮ ಆನಂದ ಹಾಸ್ಯವಾನಂದ
ನಮ್ಮ ಪುರಂದರವಿಠಲ ದೇವನ ದಿವ್ಯ

ಆದಿತಾಳ

ಆನಂದಳರ್ಧಾಂಗಿ ಆನಂದ ಕುಮಾರ
ಆನಂದ ಪುರಂದರವಿಠಲ ಪರಮಾನಂದ

ಜತೆ

ಜ್ಞಾನ ಸುಖ ದೇಹ ಪುರಂದರವಿಠಲನ
ಆನಂದಮಯವಯ್ಯ ಅವಯವಗಳೆಲ್ಲಾ

* ಆ ಕಂಠ ಆ ಗ್ರೀವ (ಪಾಠಾಂತರ)

ಪುರಂದರದಾಸರ ಚರಿತ್ರೆಯ ಪ್ರತಿಮಾತೂ ಭಕ್ತಿಮಯ. ಅವರ ಪ್ರತಿ ಕಾರ್ಯವೂ ಅತಿಮಾನುಷ. ದಾಸರ ಮನೆಯ ಬಾಗಿಲನ್ನು ನಿತ್ಯವೂ ನದ್ಯಭಿಮಾನಿ ದೇವತಾ ಸ್ತ್ರೀಯರು ರಂಗವಲ್ಲ್ಯಾದಿಗಳಿಂದ ಅಲಂಕರಿಸುತ್ತಿದ್ದರು. ಸರಸ್ವತೀಬಾಯಿಯು – "ಇದೇನು ! ಎಷ್ಟು ಮುಂಚೆ ಎದ್ದರೂ ಯಾರೋ ಅದಕ್ಕೂ ಮುಂಚೆಯೇ ಸಾರಣೆಕಾರಣೆ ಮಾಡಿ ಹೋಗಿರುತ್ತಾರೆ ! ರಂಗವಲ್ಲಿಯ ಚಿತ್ರ ನೋಡಿದರೆ ಎಷ್ಟು ಹೊತ್ತು ಬರೆದರೂ ಮುಗಿಯುವಂತಿಲ್ಲ ! ರಾತ್ರಿ ಮಲಗುವಾಗ ಒಂದೂ ಇರುವುದಿಲ್ಲ. ಯಾವ ಮಾಯಾವಿಗಳ ಕೆಲಸವಿರಬಹುದು ? ಅವರ(ದಾಸರ)ನ್ನೇ ಕೇಳಿ ತಿಳಿಯುವೆ " ಎಂದುಕೊಂಡು,

" ಇದೇನು ? ನಿತ್ಯವೂ ಬಾಗಿಲಿಗೆ ದಿವ್ಯ ರಂಗವಲ್ಲಿಯಿಂದ ಅಲಂಕರಿಸಿರುತ್ತಾರೆ. ಮಲಗುವಾಗ ಒಂದೂ ಇರುವುದಿಲ್ಲ. ಎಷ್ಟು ಮುಂಚೆ ಎದ್ದರೂ ಯಾರೆಂಬುದು ತಿಳಿಯುವುದಿಲ್ಲ. ಯಾರೂ ಕಣ್ಣಿಗೆ ಬೀಳುವುದಿಲ್ಲ. ಯಾರಿರಬಹುದು ?"

ದಾಸರು :—ಅದೆಲ್ಲಾ ನಿನ್ನ ಭಾಗ್ಯ ! ವಿಠಲನ ಸೇವಾಭಾಗಿಗಳ ಕಾರ್ಯ. ಮಾಡುವವರು ಮಾಡಿಕೊಂಡು ಹೋಗಲಿ !

ಸರಸ್ವತೀಬಾಯಿ :—ಯಾರೆಂಬುದು ಗೊತ್ತಾಗಬೇಡವೇ ?

ದಾಸರು :—ಗೊತ್ತಾದರೆ ಅವರ ಹಿರಿಯತನವೆಲ್ಲುಳಿಯಿತು ?

ಸರಸ್ವತೀಬಾಯಿ :—ನನಗೆ ಅವರನ್ನು ನೋಡಬೇಕೆಂಬಾಸೆ !

ದಾಸರು :—ಆಸೆಯಿದ್ದರೆ ನೋಡುವೆಯಂತೆ !

ಸರಸ್ವತೀಬಾಯಿ :—ಇವತ್ತು ಅವರಿಗಾಗಿ ಜಾಗರೂಕಳಾಗಿರುತ್ತೇನೆ.

ದಾಸರು :—ಆಗಬಹುದು.

ಆ ರಾತ್ರಿ ದೇವತಾ ಸ್ತ್ರೀಯರು – ಗಂಗೆ, ಯಮುನೆ, ಕೃಷ್ಣವೇಣಿ, ಗೋದಾವರೀ, ಭೀಮರಥಿ, ತುಂಗಭದ್ರೆ, ಕಾವೇರಿಯೆಂದು ಒಬ್ಬರಿಗೊಬ್ಬರು ಮಾತನಾಡಿ ಕೊಳ್ಳುತ್ತಾ – ಇವತ್ತೇನೋ ಸರಸ್ವತೀಬಾಯಿಯು ನಮ್ಮನ್ನು ನೋಡಬೇಕಂತೆ ! ನಮಗೇನು ? ದಾಸರಂತೆ ಆಕೆಯೂ ನಮಗೆ ಮಾನ್ಯಳು !" ಎಂಬುದಾಗಿ ದಾಸರ ಮನೆಯ ಬಾಗಿಲಲ್ಲಿ ಕಾರ್ಯತತ್ಪರರಾಗಿದ್ದರು. ಈ ಸುಳಿಯನ್ನು ಕಂಡುಕೊಂಡು ಸರಸ್ವತೀಬಾಯಿಯು ಭಗವನ್ನಾಮಸ್ಮರಣೆಯಲ್ಲಿದ್ದ ಪತಿಯ ಪಾದಗಳಿಗೆರಗಿ, ಬಾಗಿಲು ತೆರೆದು ದೇವಿಯರಿಗೆ ನಮಸ್ಕಾರಮಾಡಿ ಧನ್ಯಳಾದೆನೆಂದಳು. ದೇವಿಯರು – 'ಅಮ್ಮಾ, ನರದೇಹದಲ್ಲಿ ಬಂದಿದ್ದರೂ ಅಜ್ಞಾನವಶಳಾಗದೆ ವಾಮನಮೂರ್ತಿಗೆ ಪಾರ್ವತಿಯು ಭಿಕ್ಷೆಕೊಟ್ಟಂತೆ ಬ್ರಾಹ್ಮಣ ರೂಪದಿಂದ ಬಂದ ಶ್ರೀ ಹರಿಗೆ ಭಿಕ್ಷೆಕೊಟ್ಟ ನಿಮ್ಮ ದರ್ಶನದಿಂದ ನಾವು ಪಾವನರಾದೆವು. ನದೀಸ್ವರೂಪವಾಗಿ ಲೋಕ ಪಾವನೆಯರೆನಿಸಿದ ನಮ್ಮಲ್ಲಿ ಸ್ನಾನಮಾಡುವವರ ಪಾಪ ಗಳನ್ನು ನಾವು ಧರಿಸಬೇಕಾಗುವುದು. [illegible] ದರ್ಶನಕ್ಕೆ ನಿಮ್ಮಂಥವರ ಸೇವೆಯೆಂದು ಈ ಪುಣ್ಯಕ್ಷೇತ್ರಕ್ಕೆ ಬಂದಿರುವೆವು. ಶ್ರೀ ಹರಿಯು ಸರ್ವತ್ರ ನೋಡುವವನು

ನಿಮ್ಮಂಥಾ ಭಕ್ತರು ಪಾತ್ರ ನನಗೆ ದುರ್ಲಭರು' ಎಂದು ಹೇಳಿ ಒಡನೆ ಅದೃಶ್ಯರಾದರು.

ಸರಸ್ವತೀಬಾಯಿಯು ಆನಂದಭರಿತಳಾಗಿ ನಡೆದ ವಿಷಯವನ್ನು, ದಾಸರಿಗೆ ತಿಳಿಸಿದಳು. ದಾಸರು, – “ಸರಸ್ವತೀ, ಇದೆಲ್ಲಾ ನಿನ್ನ ಭಾಗ್ಯ! ಇದಕ್ಕೆಲ್ಲಾ ನೀನೇ ಕಾರಣಳಷ್ಟೆ!” ಎಂದು ಪ್ರಶಂಸೆ ಮಾಡಿದರು. ಸರಸ್ವತೀಬಾಯಿಯು – ‘ತಮ್ಮ ಕೈಹಿಡಿದದ್ದರಿಂದ ನನಗೀಭಾಗ್ಯ ದೊರೆಯಿತು’ ಎಂದು ನಮಸ್ಕಾರ ಮಾಡಿದಳು.

ಭಕ್ತರ ಚರಿತ್ರೆಯು ಭಕ್ತರಿಗೆ ಆಧಾರವಾಗುವುದು. ಕುಹಕಿಗಳಿಗೂ ಹೇತುವಾದಿಗಳಿಗೂ ಅಪಾರ್ಥವಾಗುವುದು; ಹಾಸ್ಯಜನಕವಾಗುವುದು.

ವಿ ಜ ಯ ನ ಗ ರ

ತಿರುಪತಿ ಯಾತ್ರೆ ಮುಗಿಸಿಕೊಂಡು, ಕಂಚಿ ಮೊದಲಾದ ಸಕಲ ಕ್ಷೇತ್ರಗಳನ್ನೂ ಸಂದರ್ಶಿಸಿ, ದಾಸರು ವಿಜಯನಗರಕ್ಕೆ ಬಂದರು. ವ್ಯಾಸರಾಯರು ದಾಸರನ್ನು ಕಂಡ ಕೂಡಲೇ—

ಜಂಪೆತಾಳ

ಕಂಗಳಿಗೆ ಹಬ್ಬವಾಯಿತಯ್ಯ
ಮಂಗಳಾತ್ಮಕ ಪುರಂದರದಾಸರ ಕಂಡು ಪ.

ಸಕಲ ತೀರ್ಥಕ್ಷೇತ್ರ ಯಾತ್ರೆಮಾಡಿದ ಫಲವು
ಸಕಲ ಯಜ್ಞಾದಿ ಷಟ್ಕರ್ಮ ಫಲವು
ಭಕುತಿಯಲಿ ಸುರನದಿಯ | ಮಜ್ಜನ ಮಹಾಫಲವು
ಮುಕುತಿಯಿಂದಧಿಕ ಫಲವು
ನಿಖಿಳ ಫಲಗಳು ಇಲ್ಲಿ ತತ್ಕಾಲದಲಿ ಬಂತು
ರುಕುಮಿಣೀಪ್ರಿಯನ ಪಾದಾರವಿಂದದ ಧ್ಯಾನ
ಸಕಲಕಾಲದೊಳಿಟ್ಟು ಪ್ರೇಮದಿ ಪೂಜಿಸುವ
ಭಕತರಾಯನ ನೋಡಿದಾಕ್ಷಣದಿ ಪಡೆದೆನಾ ೧.

ಇವರ ನರರೆಂದವರು ರೌರವಾದಿ ನರಕ
ಸವಿದು ಭುಂಜಿಪರು ಸಂಶಯವಿಲ್ಲವು |
ಕವಿಜನರು ಒಪ್ಪಿದರೆ ಅವರ ಮನೋರಥವು
ನವವಿಧದಿ ಫಲಿಸುತಿಹುದು
ಅವನಿಯೊಳಗತಿ ದುರ್ಲಭವು ದಾಸತ್ವ…………
……….ಇದೇ ಪಾವನ [illegible] ಪಡೆದೆನಾ ೨.

ಧನ್ಯನಾದೆನು ನಾನು ಮನುಜದೇಹಕೆ ಬಂದು
ಮಾನ್ಯನಾದೆನು ನಾನು ಸದ್ಭಕ್ತಿ ಪಥವಿಡಿದು
ಸನ್ನುತಿಸಿ ಮನದೊಳು । ನಮಸ್ಕರಿಸಿ ಮೋದಿಸಿ
ಮನ್ನಿಸಿ ಇವರುಕ್ತಿ ಯುಕ್ತಿಗಳ
ಅನ್ಯತ್ರ ಮನವಿಡದೆ ಅಲ್ಪೋಕ್ತಿ ಜರೆದೆನಾ
ನನ್ನದೆಂಬುದ ಮರೆತು ಶುದ್ಧಾತ್ಮನಾನಾದೆ
ಪನ್ನಗಶಾಯಿ ಶ್ರೀಕೃಷ್ಣನ್ನ ದಾಸರ
ಸನ್ಮಹಿಮೆಗಳನ್ನು ಸ್ತುತಿಸಿ ಪಾವನನಾದೆ ೩.

ಎಂಬ ಪದದಿಂದ ಸ್ತೋತ್ರ ಮಾಡಿದರು.

ವ್ಯಾಸರಾಯರಿಗೆ ಗೋವಿಂದ ಭಿಕ್ಷುಗಳೆಂಬ ಸನ್ಯಾಸಿ ಶಿಷ್ಯರಿದ್ದರು. ಅವರು ಈ ಪದವನ್ನು ಕೇಳಿ, – 'ಗುರುಗಳೇ ಶಿಷ್ಯರನ್ನು ಸ್ತೋತ್ರ ಮಾಡುತ್ತೀರೆ' ಎಂದರು. ವ್ಯಾಸರಾಯರು – 'ಈ ಜನ್ಮದಲ್ಲಿ ಹೆಸರಿಗೆ ಮಾತ್ರ ಶಿಷ್ಯರವರು ; ಹಿಂದಿನ ಜನ್ಮದಲ್ಲಿ, ಅವರೇ ನಮ್ಮ ಸ್ವರೂಪೋದ್ಧಾರಕರು' ಎಂದರು.

ವ್ಯಾಸರಾಯರು ಪ್ರಹ್ಲಾದಾವತಾರರೆಂತಲೂ, ಪುರಂದರದಾಸರು ನಾರದಾವತಾರರೆಂತಲೂ ಪ್ರಸಿದ್ಧಿಯಿರುವುದರಿಂದ, ವ್ಯಾಸರಾಯರ ಈ ಮಾತು ಬಲು ಅರ್ಥವತ್ತಾಗಿರುವುದು.

ಮಧ್ವಪತಿ

ಮಧ್ವಪತಿಯು ದಾಸರ ನಾಲ್ಕನೇ ಮಗನೆಂದು ಹಿಂದೆ ತಿಳಿಸಿದೆಯಷ್ಟೆ! ಅವನಿಗೆ ಉಪನಯನವಾಗಿ ಹೆಚ್ಚುಕಾಲವಾಗಿರಲಿಲ್ಲ. ಪ್ರಾಪಂಚಿಕ ವ್ಯವಹಾರವಿನ್ನೂ ಅವನಿಗೆ ಅಷ್ಟು ಗೊತ್ತಿರಲಿಲ್ಲ. ಜಾಣಾಕ್ಷನಾಗಿದ್ದು ದಾಸರ ಬಾಯಿಂದ ಬಂದ ಪದಗಳನ್ನು ಅವನೇ ಬರೆದಿಡುತ್ತಿದ್ದನು. ವ್ಯಾಸರಾಯರಿಗೆ ಮಧ್ವಪತಿಯನ್ನು ಕಂಡರೆ ಪರಮ ಪ್ರೇಮ, – 'ಮಧ್ವಪತಿ, ಈವತ್ತು ದಾಸರು ಮಾಡಿದ ಪದ್ಯವ್ಯಾವುದು? ಭಜನೆಯಲ್ಲಿ ಏನು ಹಾಡಿದರು? ಹೇಳು, ಕೇಳೋಣ!' ಎಂದು ದಾಸರ ಪದಗಳನ್ನು ಕೇಳಿ ಆನಂದ ಪಡುತ್ತಿದ್ದರು.

ಪುರಂದರದಾಸರು ಹಂಪೆಯಲ್ಲಿದ್ದಾಗ ನಿತ್ಯವೂ ಯಂತ್ರೋದ್ಧಾರಕ ಪ್ರಾಣದೇವರಿಗೆ, ಮನೆಯಿಂದ ನೈವೇದ್ಯ ತೆಗೆದುಕೊಂಡು ಹೋಗಿ ಸಮರ್ಪಿಸುತ್ತಿದ್ದರು. ಒಮ್ಮೆ ಏನು ಕಾರಣವೋ ಆ ಕೆಲಸವನ್ನು ನಾಲ್ಕಾರು ದಿನ ಮಧ್ವಪತಿಗೆ ವಹಿಸಿದರು. ಬಾಲಕನು ಉತ್ಸಾಹದಿಂದ ಪೂಜಾ ಸಾಧನಗಳನ್ನೆಲ್ಲ ತೆಗೆದುಕೊಂಡು ಯಂತ್ರೋದ್ಧಾರಕನ ಬಳಿಗೆ ಬಂದನು. ಮಾರುತಿಗೆ ಕ್ರಮವಾಗಿ ಅಭಿಷೇಕ ಮಾಡಿ, ಗಂಧಾಕ್ಷತೆಗಳನ್ನಿಟ್ಟನು. ಪುಷ್ಪಾದಿಗಳನ್ನು ಸಮರ್ಪಿಸಿದ ತರುವಾಯ ಎಲ್ಲರಂತೆ ನೈವೇದ್ಯದ ತಟ್ಟೆಯನ್ನು ತೋರಿಸಿ ಮನೆಗೆ ತರುವುದು ಅವನಿಗೆ ಸರಿತೋರಲಿಲ್ಲ. ಸೇವೆಮಾಡುವವರ ಇಷ್ಟಾರ್ಥಗಳನ್ನು

ಕೊಡುವ ಮಾರುತಿಯು ಊಟವೇಕೆ ಮಾಡಬಾರದೆಂದು ತಟ್ಟೆಯನ್ನು ಶಿಲಾಮೂರ್ತಿಯ ಮುಖಕ್ಕೆ ಬಡಿದನು. ನನ್ನ ಅಪ್ಪ ಕೊಟ್ಟರೆ ಮಾತ್ರ ಊಟಮಾಡಿ, ನಾನು ಕೊಟ್ಟರೆ ಬಾಯಿಬಿಡುವುದಿಲ್ಲವೋ? ನಾನು ಸುಮ್ಮನಿರುವುದಿಲ್ಲ - ಮನೆಗೂ ಹೋಗುವುದಿಲ್ಲ ಎಂದು ಹಟಮಾಡಿದನು. ಬಾಲಕನ ಅಕೃತ್ರಿಮ ಸ್ವಭಾವಕ್ಕೆ ಮೆಚ್ಚಿ ಮಾರುತಿಯು ಬಾಯ್ತೆರೆದನು. ತುತ್ತು ಮಾಡಿ ಮಾಡಿ ಮಧ್ವಪತಿಯು ದೇವರಿಗೆ ಊಟಮಾಡಿಸಿದನು. ಅಂದಿನಿಂದ ಮಾರುತಿಯು – 'ಮಧ್ವಪತಿ, ಇನ್ನು ಮೇಲೆ ನಿತ್ಯ, ನೀನೇ ಬಂದು ಊಟ ಮಾಡಿಸೆ'ಂದನು. ಮಧ್ವಪತಿಯು – 'ಹಾಗೇ ಮಾಡುತ್ತೇನೆ. ಇವತ್ತಿನ ಹಾಗೆ ತಂಟೆ ಮಾಡಬೇಡ' ಎಂದನು. ಮಾರುತಿಯು – 'ಇಲ್ಲ, ಹೊತ್ತಾಯಿತು. ಮನೆಗೆ ಹೋಗು' ಎಂದನು.

ನಾಲ್ಕಾರು ದಿನಗಳಾದುವು. ದಾಸರು ಒಂದು ದಿನ ಭೋಜನಕ್ಕೆ ಕುಳಿತಿದ್ದಾಗ ಮಾರುತಿಯ ಪ್ರಸಾದವನ್ನು ಬಡಿಸಿರೆಂದರು. ನಾಲ್ಕಾರು ದಿನಗಳಿಂದ ಪ್ರಸಾದದ ಮಾತೇ ಹೊರಟಿರಲಿಲ್ಲ. ಸರಸ್ವತೀಬಾಯಿಯು – 'ಮಧ್ವಪತಿ, ನೈವೇದ್ಯವ ತಟ್ಟೆಯಲ್ಲಿ ಟ್ಟಿಯೋ?' ಎಂದು ಕೇಳಿದಳು. ಮಧ್ವಪತಿಯು, ಎಂದಿನಂತೆ ಚಕ್ರತೀರ್ಥದಲ್ಲಿ ತೊಳೆದು ತಂದಿಟ್ಟಿದ್ದ ತಟ್ಟೆಯನ್ನು ತೋರಿಸಿದನು.

ಸರಸ್ವತೀಬಾಯಿ:—ಪ್ರಸಾದವೆಲ್ಲೋ?

ಮಧ್ವಪತಿ;—ದೇವರು ತಿಂದ!

ಸರಸ್ವತೀಬಾಯಿ:—ಕಲ್ಲುದೇವರು ತಿನ್ನುವುದುಂಟೇನೋ?

ಮಧ್ವಪತಿ:—ತಿನ್ನಿಸಿದೆನಮ್ಮಾ!

ಸರಸ್ವತೀಬಾಯಿ:—ಇಲ್ಲ, ಇಲ್ಲ–ನೀನೇ ತಿಂದಿರಬೇಕು.

ಮಧ್ವಪತಿ:—ನಾನು ಸುಳ್ಳು ಹೇಳುವುದಿಲ್ಲಮ್ಮಾ!

ಪಜ್ತಿಯಲ್ಲಿ ಕುಳಿತಿದ್ದವರೆಲ್ಲ ಒಟ್ಟಿಗೆ ಗೊಳ್ಳನೆ ನಕ್ಕರು. ಮಧ್ವಪತಿಯು ಅವಮಾನವಾದಂತಾಗಿ ಅತ್ತುಬಿಟ್ಟನು.

ದಾಸರು:—ಮಧ್ವಪತಿ ಅಳುವುದ್ಯಾಕೆ? ಅವರಿಗೇನೋ ಗೊತ್ತಿಲ್ಲ! ಮಾರುತಿ ತಾನೇ ತಿಂದನೋ, ನೀನೇ ತಿನ್ನಿಸಿದೆಯೋ?

ಮಧ್ವಪತಿ:—ಮೊದಲದಿನ ತಂಟೆ ಮಾಡಿದ! ನಾನು ಅತ್ತದ್ದನ್ನು ನೋಡಿ ತಾನೇ ಬಾಯಿಬಿಟ್ಟು ನಾನು ಕೊಟ್ಟದ್ದನ್ನೆಲ್ಲಾ ತಿಂದ!

ದಾಸರು:—ಹೌದಪ್ಪಾ ಹೌದು! ಮತ್ತೇನಾದರೂ ಹೇಳಿದನೋ?

ಮಧ್ವಪತಿ:—ನಿತ್ಯವೂ ನೀನೇ ಬಂದು ತಿನ್ನಿಸೆಂದು ಹೇಳಿದ.

ದಾಸರು:—ನಾಳೆ ನನ್ನೆದುರಿಗೇ ತಿನ್ನಿಸು.

ಮಧ್ವಪತಿ:—ಓ, ಆಗಲಿ!

ಮರುದಿನ ಮಧ್ವಪತಿಯೊಡನೆ ದಾಸರೂ ದೇವಾಲಯಕ್ಕೆ ಬಂದರು. ಮಧ್ವ

ಪತಿಯು ಅಭಿಷೇಕಮಾಡಿ ಗಂಧಾಕ್ಷತೆಗಳನ್ನು ದೇವರಿಗಿಟ್ಟನು. ಪದ್ಧತಿಯಂತೆ ತುತ್ತು ಮಾಡಿ ಮಾರುತಿಯ ಬಾಯಮುಂದೆ ಹಿಡಿದನು. ಮೂರ್ತಿಯು ಬಾಯ್ದೆರೆಯಲಿಲ್ಲ. —'ನಮ್ಮಪ್ಪನೆದುರಿಗೆ ನನ್ನ ಮಾನ ಕಳೆಯುವೆಯಾ? ಒಳ್ಳೇ ಮಾತಿನಿಂದ ಊಟಮಾಡೆ'ಂದು ತುತ್ತನ್ನು ಹಿಡಿದನು. ಆದರೂ ಬಾಯ್ಬಿಡಲಿಲ್ಲ. ಮಧ್ವಪತಿಯು 'ನೀನು ಎಂದಿನಂತೆ ಬಾಯ್ಬಿಟ್ಟು ಊಟಮಾಡದಿದ್ದರೆ, ತಲೆಯೊಡೆದುಕೊಂಡು ಪ್ರಾಣ ಬಿಡುವೆ'ನೆಂದು ಛಲಮಾಡಲು, ಮಾರುತಿಯು ಬಾಲಕನಮೇಲೆ ದಯೆಯಿಂದ ಮೊದಲಿನಂತೆ ಬಾಯಿಬಿಟ್ಟು ಭೋಜನಮಾಡಿದನು. ದಾಸರು ಮಧ್ವಪತಿಯಮೇಲೆ ಮಾರುತಿದೇವನಿಗಿದ್ದ ಪರಮಾನುಗ್ರಹವನ್ನು ನೋಡಿ ಆಶ್ಚರ್ಯಪಟ್ಟರು.

ಈ ಅಭಿಪ್ರಾಯವು ಕೆಳಕಂಡ ದೇವರನಾಮದಲ್ಲಿ ಗರ್ಭೀಕೃತವಾಗಿದೆ.

ಪದ

ಕಂದಗ್ಹೇಳಿದರು ಪುರಂದರದಾಸರು
ತಂದೆ ಹನುಮನ ಪೂಜೆಮಾಡಿ ಬಾರೆಂದು ಪ

ಮಾತನು ಕೇಳಿ ತನ್ನ ಮಾತೆಯ ಬಳಿಗೆ ಬಂದು
ಪ್ರೀತಿಯಂ ನೈವೇದ್ಯ ತೆಗೆದುಕೊಂಡು
ಶ್ರೀತುಲಸಿಗಂಧ ಅಕ್ಷತೆಯಿಂದ ಪೂಜಿಸಿ
ವಾತಜನೆ ಬಾಯ್ದೆರೆಯೊ ತುತ್ತನಿಕ್ಕುವೆನೆಂದ ೧

ಏನು ಉಪಚಾರವನು ಮಾಡೆ ಬಾಯ್ದೆರೆಯದಿರೆ
ಧ್ಯಾನಿಸುತ ಕೈಮುಗಿದು ನಿಂತುಕೊಂಡು
ಏನುಕಾರಣದಿಂದ ತಂದೆ ನೀನುಣಲೊಲ್ಲೆ
ನಾನು ಮಾಡ್ದಪರಾಧವೇನಯ್ಯ ಹನುಮಾ ೨

ಹೀಗೆನ್ನಲಾವಾಗ ಬೇಗದಿಂ ಬಾಯ್ದೆರೆದು
ಆಗ ತುತ್ತುಂಡು ತಾ ತೇಗಿ ನಿಲಲು
ಹೀಗೊಂದೆರಡುಮೂರು ದಿವಸವಾಗುತ ಬರಲು
ಯೋಗಿ ನಾರದರೂಪ ದಾಸರು ನೋಡಿ ೩

ಅನ್ನಭಕ್ಷ್ಯಗಳು ಪರಮಾನ್ನ ಶಾಖಂಗಳು
ಚೆನ್ನಾಗಿ ದಧಿಘೃತ ಕ್ಷೀರವನ್ನು
ಚೆನ್ನಿಗನೆ ಉಂಡೆಯಾ ಏನುಮಾಡಿದೆ ಎನಲು-ಪ್ರ
ಸನ್ನ ಹನುಮಂತ ಉಣುತಾನೆ ಎನಲು ೪

ಎಲ್ಲಿಯ ಮಾತಿದು ಕಲ್ಲುನುಮನುಂಬನೆ
ಎಲ್ಲಿ ನೀನುಂಬುದನು ಬಲ್ಲೆನೆನಲು
ಇಲ್ಲ ಅಮ್ಮಾ ನಾನು ಹುಸಿಯನಾಡುವುದಿಲ್ಲ
ಅಲ್ಲಿಗೇ ಬನ್ನಿ ಉಂಬುದನು ತೋರಿಸುವೆ ೫

ಕಂದನ ನುಡಿಗೇಳಿ ಚಂದದಲಿ ಆವಾಗ
ತಂದೆಗಳು ಗುಡಿಯೊಳಗೆ ಹೋಗಿ ನಿಲಲು
ಗಂಧಾಕ್ಷತೆಯನ್ನಿಟ್ಟು ಭಕ್ತಿಯಿಂ ಪೂಜಿಸಿ
ಮುಂದೆ ಓಡಿಯುಲು ತುತ್ತನೊಂದ ಕೊಳದಿರಲು ೨

ಉಣುವೆಯೋ ಇಲ್ಲವೋ ಪ್ರಾಣವನು ತೊರೆಯಲೋ!
ಘನಮಹಿಮ ಹೇಳೆಂದು ಜಿಹ್ವೆಯನು ಪಿಡಿದು
ಇನಿತೆನ್ನಲಾವಾಗ ಬೇಗದಿಂ ಬಾಯ್ದೆರೆದು
ಅನುಮಾನವಿಲ್ಲದಲೆ ಹನುಮ ಬಳಿದುಂಡ ೩

ಆ ಮಹಿಮೆಯನು ಕಂಡು ಪ್ರೇಮದಿಂ ಮಗಗಾಗ
ಸೋಮಶೇಖರನ ಸಖ ಪ್ರೀತಿಯಿಂದ
ಕಾಮಿತಾರ್ಥವನೀವ ಕಲ್ಪತರು ರಕ್ಷಿಸುವ ಹ
ನುಮ ಭೀಮ ಮಧ್ವರಾಯರ ಕೃಪೆಯಿಂದ ೪

ಜಯಜಯತು ಜಯಹನುಮ | ಜಯಜಯತು ಜಯಭೀಮ
ಜಯಜಯತು ಜಯಮಧ್ವರಾಯ ಗುರುಜಯತು
ಜಯಜಯತು ಜಯತು ಶಿರಿ ವಿಠಲರಾಯನ ದೂತ
ಜಯತು ಯಂತ್ರೋದ್ಧಾರ ಮುಖ್ಯಪ್ರಾಣ ಜಯತು ೫

ಕೃಷ್ಣದೇವರಾಯನು ತನ್ನ ಕುಹುಯೋಗ ಪರಿಹಾರಾನಂತರ ಪುರಂದರದಾಸರಿಗೆ ಬಲವಂತವಾಗಿ ಗೋ ಭೂದಾನಮಾಡಲು ಒಂದನ್ನೂ ದಾಸರು ಪ್ರತಿಗ್ರಹಿಸಲಿಲ್ಲ. ದಾಸರಿಗೆ ತನ್ನ ಸೇವೆ ಏನೂ ಆಗಲಿಲ್ಲವೆಂದು ರಾಯನು ವ್ಯಸನಪಡಲು, ದಾಸರು,–'ಚಕ್ರತೀರ್ಥದೆದುರಿಗೆ ಒಂದು ಜಪಶಾಲೆಯನ್ನು ಕಟ್ಟಿಸಿಕೊಡೆಂದರು. ಅದರಂತೆ ಮಹಾರಾಜನು, ಸಾವಿರಾರು ಜನರು ಕೂತುಕೊಳ್ಳಲು ಯೋಗ್ಯವಾದ ಒಂದು ಮಂಟಪವನ್ನು ಕಟ್ಟಿಸಿದನು. ಆ ಮಂಟಪವು ಈಗಲೂ ದಾಸರ ಮಂಟಪವೆಂದು ಕರೆಸಿಕೊಳ್ಳುತ್ತಿದೆ.

೬

ಪುರಂದರದಾಸರಿಂದ ಆದ ಲೋಕೋಪಕಾರವನ್ನು ಈ ರೀತಿ ವಿಭಾಗಿಸಿ ತಿಳಿಯಬಹುದು.

೧. ಕೀರ್ತನ ಪದ್ಧತಿಯನ್ನು ಉದ್ಧರಿಸಿದರು

ಬಹು ಪುರಾತನ ಕಾಲದಿಂದ ಪ್ರಚಾರದಲ್ಲಿದ್ದ ಭಾಗವತ ಧರ್ಮ ಅಥವಾ ಕೀರ್ತನ ರೂಪದಲ್ಲಿ ಧರ್ಮೋಪದೇಶಮಾಡುವ ಪದ್ಧತಿಯನ್ನು ಕರ್ನಾಟಕದ ದೃಷ್ಟಿಯಿಂದ ಉಜ್ಜೀವನಗೊಳಿಸಿದ ಕೀರ್ತಿಯು ಅಚಲಾನಂದರಿಗೂ, ನರಹರಿತೀರ್ಥರಿಗೂ, ಶ್ರೀಪಾದರಾಯರಿಗೂ, ವ್ಯಾಸರಾಯರಿಗೂ ಭಾಗಶಃ ಸೇರುವುದು. ಆದರೆ ಸಂಪೂರ್ಣಕೀರ್ತಿಗೆ ಪಾತ್ರರ್ಯಾರೆಂದು ಕೇಳಿದರೆ ಪುರಂದರದಾಸರ ಹೆಸರನ್ನೇ ಹೇಳಬೇಕಾಗುವುದು. ಶ್ರೀ ಪುರಂದರದಾಸರನ್ನು

ಕನ್ನಡ ಗ್ರಂಥಗಳನ್ನು ರಚಿಸಿದವರು ಕರ್ಣಾಟಕದಲ್ಲಿ ಮತ್ತೊಬ್ಬರಿಲ್ಲ. ಭರತಖಂಡದಲ್ಲಿ ವ್ಯಾಸರಂತೆ ಗ್ರಂಥಕರ್ತರಾದವರು ಕರ್ಣಾಟಕದಲ್ಲಿ ದಾಸರೊಬ್ಬರೇ ಎಂಬುವುದು ಅತಿಶಯೋಕ್ತಿಯಾಗುವುದಿಲ್ಲ. ಗ್ರಂಥಗಳು ಖಿಲವಾದ ಮಾತು ಬೇರೆ. ಮಹಾರಾಷ್ಟ್ರದವರನ್ನು ನೋಡಿ ಕನ್ನಡಿಗರು ಕೀರ್ತನಪದ್ಧತಿಯನ್ನು ಕಲಿತರೆಂಬ ಮಾತಿಗೆ ಎಲ್ಲೂ ಆಧಾರವಿಲ್ಲ. ಸಮರ್ಥರಾಮದಾಸ ಪ್ರಭೃತಿಗಳ ಕಾಲವೇನಿದ್ದರೂ ಶಿವಾಜಿಯಕಾಲ (೧೬೨೭-೮೦). ಪುರಂದರದಾಸರು ೧೫೬೪ಕ್ಕೆ ಎಂಭತ್ತು ವರ್ಷಗಳಷ್ಟು ಹಿಂದೆ ಜನಿಸಿದವರು. ಪುರಂದರದಾಸರನ್ನೇ ಕರ್ಣಾಟಕದ ಕೀರ್ತನಾಚಾರ್ಯರೆಂದು ಕರೆದರೂ, ಮಹಾರಾಷ್ಟ್ರರಿಗಿಂತ ಕನ್ನಡಿಗರು ನೂರುವರ್ಷಕ್ಕೆ ಮೇಲ್ಪಟ್ಟು ಹಿರಿಯರು.

ಶ್ರೀಮಂತರ ದರ್ಬಾರಿನಲ್ಲಿ ವಿಜಾಪುರಜಿಲ್ಲೆಯ ಭೀಮಪ್ಪ ಗೋಸಾವಿ, ತಿಮ್ಮಪ್ಪ ಗೋಸಾವಿ ಎಂಬ ಹೆಸರಿನ ಕರ್ಣಾಟಕದ ಪ್ರಸಿದ್ಧ ಕೀರ್ತನಕಾರರು ಕನ್ನಡ ಕೀರ್ತನ ಮಾಡಿದುದನ್ನು ನೋಡಿ, ಮಹಾರಾಷ್ಟ್ರರು ವ್ಯವಸ್ಥಿತವಾದ ಕೀರ್ತನಪದ್ಧತಿಯನ್ನು ಅಭ್ಯಾಸಮಾಡಿದರೆಂದು ಮಹಾರಾಷ್ಟ್ರದ ಇತಿಹಾಸದಿಂದ ಗೊತ್ತಾಗುತ್ತದೆ. ರಾಜಾಶ್ರಯ ಬಲದಿಂದ ಮಹಾರಾಷ್ಟ್ರದಲ್ಲಿ ಕೀರ್ತನಕ್ಕೆ ಪ್ರಾಬಲ್ಯ ದೊರೆತಂತೆ ಕರ್ಣಾಟಕದಲ್ಲಿ ದೊರೆಯದ ಕಾರಣ ಅನೇಕರು ಮಹಾರಾಷ್ಟ್ರದಿಂದ ಕರ್ಣಾಟಕಕ್ಕೆ ಕೀರ್ತನ ಪದ್ಧತಿ ಬಂತೆಂಬ ಅಭಿಪ್ರಾಯವಿಟ್ಟುಕೊಂಡಿರುವುದಕ್ಕೆ ಅರ್ಥವಿಲ್ಲ. ಕರ್ಣಾಟಕದಿಂದ ಕೀರ್ತನ ಕಲೆಯು ಮಹಾರಾಷ್ಟ್ರಕ್ಕೂ ಆಂಧ್ರ ತಮಿಳುನಾಡುಗಳಿಗೂ ಕ್ರಮೇಣ ಪ್ರಚಾರವಾಯಿತು. ಉತ್ತರ ಹಿಂದೂಸ್ಥಾನದಲ್ಲಿ ಕಬೀರದಾಸರು ವರ್ಣಾಶ್ರಮಧರ್ಮಗಳಿಗೆ ಯೋಗ್ಯಸ್ಥಾನ ಕೊಡದೆ ತಮ್ಮದೇ ಪ್ರತ್ಯೇಕ ಪಂಥವನ್ನು ಸ್ಥಾಪಿಸಿದರು. ಪುರಂದರದಾಸರು ಹೀಗೆ ತಮ್ಮದೇ ಪ್ರತ್ಯೇಕ ಮತವನ್ನು ಸ್ಥಾಪಿಸಿದ ಕ್ರಾಂತಿಕಾರರಲ್ಲ. ಲೋಕದ ತಪ್ಪು ನಡವಳಿಕೆಗಳನ್ನು ಇವರು ಖಂಡಿಸದೆ ಬಿಡಲಿಲ್ಲ. ತಾವು ಅನುಭವಿಸದ ಒಂದು ಮಾತನ್ನೂ, ಅವರು ಜನರಿಗೆ ಉಪದೇಶಿಸಲಿಲ್ಲ. ಯಾವ ಪೂರ್ವಪಕ್ಷಗಳಿಗೂ ವಿಷಯವಾಗದೆ, **'ಅಂತೇ ಸಿದ್ಧಸ್ತು ಸಿದ್ಧಾಂತ'** ಎಂಬಂತೆ ಮಥಿತಾರ್ಥವೆನಿಸಿದ ನಿಶ್ಚಿತ ವೇದಾಂತ ತತ್ವವನ್ನೂ, ಪುರಾಣ ಚರಿತ್ರೆಗಳನ್ನೂ ಕನ್ನಡಿಸಿ ಸಮಾಜಕ್ಕೆ ಉಪದೇಶಿಸಿದರು. ಗೀರ್ವಾಣಭಾಷೆಯ ಪರಿಚಯವಿಲ್ಲದವರಿಗೂ ಸುಲಭವಾಗಿ ಕೀರ್ತನ ರೂಪದಿಂದ ಗಹನ ತತ್ವಗಳನ್ನು ಉಪದೇಶಿಸಿದರು. ಕೀರ್ತನ ಕಲೆಗೆ ಒಂದು ವ್ಯವಸ್ಥಿತವಾದ ಸ್ವರೂಪವನ್ನು ಉಂಟುಮಾಡಿದವರು ಇವರೇ ಎನ್ನಲು ಸಂದೇಹಿಸಬೇಕಾಗಿಲ್ಲ. ಆದ್ದರಿಂದಲೇ ಪುರಂದರದಾಸರಿಗೆ ಕೀರ್ತನಪದ್ಧತಿಯನ್ನು ಉದ್ಧರಿಸಿದವರೆಂಬ ಶಾಶ್ವತ ಕೀರ್ತಿಯು ಪ್ರಾಪ್ತವಾಗಿರುವುದು.

೨. ಕರ್ಣಾಟಕ ಭಾಷೋಜ್ಜೀವನ ಮಾಡಿದರು

ಹಿಂದೆ ಒಂದೆರಡು ಸ್ಥಳಗಳಲ್ಲಿ ಪ್ರಸ್ತಾಪಿಸಿರುವಂತೆ ಆ ಕಾಲದಲ್ಲಿ ಕರ್ಣಾಟಕ ಭಾಷೆಗೆ ವಿದ್ವತ್ಸಭೆಗಳಲ್ಲಿ ಗೌರವವಿರಲಿಲ್ಲ. ಧರ್ಮ ಸಂಬಂಧದ ಯಾವ ಮಾತೂ ಗೀರ್ವಾಣ ಭಾಷೆಯಲ್ಲಿ ಬಂದಲ್ಲದೆ ಅವಕ್ಕೆ ಪುರಸ್ಕಾರ ದೊರೆಯುತ್ತಿರಲಿಲ್ಲ. ನರಹರಿ

ತೀರ್ಥರು, ಶ್ರೀಪಾದರಾಜರು, ವ್ಯಾಸರಾಯರು ಈ ಮೂವರೂ ಆ ನ್ಯೂನತೆಯನ್ನು ಪರಿಹರಿಸಲು ಕನ್ನಡ ದೇವರನಾಮ ಸುಳಾದಿಗಳನ್ನು ರಚಿಸಿ, ತನ್ಮೂಲಕವಾಗಿ ಧರ್ಮಪ್ರಚಾರ ಮಾಡುತ್ತಾ ಬಂದರು. ಈ ಯತಿತ್ರಯರೆಷ್ಟೇ ಕೆಲಸ ಮಾಡಿದರೂ ಪೂರ್ತಿಯಾಗಿ ಭಾಷೋಜ್ಜೀವನ ಕಾರ್ಯಕ್ಕೆ ಟೊಂಕಕಟ್ಟಿ ನಿಲ್ಲುವರೊಬ್ಬರು ಬೇಕಾಗಿತ್ತು. ಅದೇ ವ್ಯಾಸರಾಯರ ಹಂಬಲಿಕೆಯಾಗಿತ್ತು. ತಕ್ಕಂತೆ ಪುರಂದರದಾಸರು ಬಂದೊದಗಿದರು. ಸಕಲ ಧರ್ಮಗ್ರಂಥಗಳ ಸಾರವನ್ನೂ ಕನ್ನಡಿಸಿದರು. ಶ್ರೀ ಮಧ್ವಾಚಾರ್ಯರ ಸರ್ವಮೂಲಗ್ರಂಥಗಳ ವ್ಯಾಸಪೀಠದಲ್ಲಿಟ್ಟು ಪೂಜಿಸುವಷ್ಟು ಮರ್ಯಾದೆಯನ್ನು ಕನ್ನಡ ಗ್ರಂಥಗಳಿಗೆ ಗಳಿಸಿಕೊಟ್ಟರು. ಪುರಂದರದಾಸರ ಕಾಲದಲ್ಲೇ ಸಂಸ್ಕೃತ ಮಹಾಭಾರತವು ನಾರಣಪ್ಪನಂಥಾ ಮಹಾಕವಿಯಿಂದ ಕನ್ನಡಿಸಲ್ಪಟ್ಟು-ವಿಜಯನಗರದ ರಾಜಸಭೆಯಲ್ಲಿ ಪ್ರಶಂಸೆಗೆ ಪಾತ್ರವಾಯಿತು. ನಾರಣಪ್ಪನು **ಕುಮಾರವ್ಯಾಸ** ನೆನಿಸಿದನು. ಕನ್ನಡ ವಾಙ್ಮಯಕ್ಕೆ **'ಸಂಸ್ಕೃತದಲಿನ್ನೇನು' ?** ಎಂದು ಎದೆತಟ್ಟಿ ನಿಲ್ಲುವ ಧೈರ್ಯ ಬಂತು. ಈ ಸುಕೃತಕ್ಕೆ ಭಾಗಿಗಳೂ ನಮ್ಮ ಪೂತಾತ್ಮ ಪುರಂದರದಾಸರಾದರು.

೩. ಸಂಗೀತಶಾಸ್ತ್ರವನ್ನು ಉದ್ಧರಿಸಿದರು

ಮಹಮ್ಮದೀಯ ರಾಜರ ಕಾಲದಲ್ಲಿ, ಅವರಲ್ಲಿ ಸ್ವತಂತ್ರವಾದ ಗಾನವಿದ್ಯೆಯಿಲ್ಲದಿದ್ದುದರಿಂದ ಹಿಂದೂ ಜನರ ಗಾನ ಕೌಶಲ್ಯವನ್ನು ಕಂಡು ಸಹಿಸದೆ ಗಾಯನ ಕಲೆಯನ್ನು ಅವರು 'ಹರಾಂ' ಎಂದು ತಿರಸ್ಕರಿಸಿದ್ದರು. ಅದರಂತೆಯೇ ಹಿಂದೂಗಳಾದರೂ ಸಂಗೀತ ಕಲೆಯನ್ನು ನಟವಿಟ ಗಾಯಕರಿಗೆ ಅರ್ಹವಾದದ್ದೆಂದು ಜರಿಯುವುದಕ್ಕೆ ಹೊರಟಿದ್ದರು. ಬ್ರಹ್ಮಾನಂದದಾಯಕವಾದ ಸಂಗೀತಶಾಸ್ತ್ರಕ್ಕೆ ಬಂದ ದುರವಸ್ಥೆಯನ್ನು ನೋಡಿ ಆ ಶಾಸ್ತ್ರಾಭ್ಯಾಸಿಗಳಿಗೆ ಆಶಾಭಂಗವಾಗದಂತೆ, ಅಪೂರ್ವರಾಗಗಳಲ್ಲಿ ಭಕ್ತಿಭರಿತಗಳಾದ ಸಾಹಿತ್ಯವನ್ನು ಸೇರಿಸಿ, ಅನೇಕ ಗೀತೆಗಳನ್ನೂ, ತಾನವರ್ಣಗಳನ್ನೂ, ದೇವರನಾಮಗಳನ್ನೂ ರಚನೆಮಾಡಿ ಜನರ ತಿರಸ್ಕಾರಕ್ಕೆ ದಾರಿಯಾಗದಂತೆ, ಸಂಗೀತಶಾಸ್ತ್ರಕ್ಕೆ ಮಹೋಪಕಾರ ಮಾಡಿದರು.

ತ್ಯಾಗರಾಜರಂಥಾ ಗಾನಮೂರ್ತಿಗಳಿಗೆ ಅವರ ತಾಯಿಯು ಹಾಡುತ್ತಿದ್ದ ಪುರಂದರದಾಸರ ದೇವರನಾಮಗಳೇ ಸ್ಫೂರ್ತಿದಾಯಕವಾದುವೆಂದು ತ್ಯಾಗರಾಜರ ಇತಿಹಾಸವು ತಿಳಿಸುತ್ತದೆ. ದಾಸರ ಗೀತೆಗಳಲ್ಲಿ ಪಿಳ್ಳಾರಿಗೀತೆ ಮೊದಲಾದ ಕೆಲವು ಗೀತೆಗಳು ಮಾತ್ರವಲ್ಲದೆ ತಾನವರ್ಣಗಳಾಗಲೀ ದಾಸರ ತಿಲ್ಲಾನಗಳಾಗಲೀ ಈಗ ಉಪಲಬ್ಧವಿಲ್ಲ. ಸುಳಾದಿಗಳು ವಿವಿಧ ತಾಳಗಳಲ್ಲಿ ರಚಿತವಾದ್ದರಿಂದ ಗಾನ ಶಾಸ್ತ್ರಾಭ್ಯಾಸಿಗಳಿಗೆ ಆ ಕಾಲದಲ್ಲಿ ಬಹಳ ಉಪಕಾರವಾಯಿತು.

ಈ ಕಾಲದಲ್ಲಿ ಸುಳಾದಿಗಳನ್ನು ಹಾಡುವ ಕ್ರಮವು ಮರೆತುಹೋಗಿದೆ. ರಗಳೆಗಳನ್ನು ಹಾಡುವಂತೆ, ಈಗಿನವರು ಸುಳಾದಿಗಳನ್ನು ಹಾಡುತ್ತಾರೆ. ಹೇಳುವುದಕ್ಕೆ ತಪ್ಪಿಯಾದರೆ, ಮಾತುಗಳನ್ನು ಕಿತ್ತೊಗೆಯುತ್ತಾರೆ. ಅಕ್ಷರಗಳು ಸಾಲವೆಂದು ತೋರಿದರೆ ಆಕಾರಗಳನ್ನು ಸೇರಿಸಿಬಿಡುತ್ತಾರೆ.

೪. ಮತ ವೈರಗಳನ್ನು ಪರಿಹರಿಸಿದರು

ಪ್ರಪಂಚದಲ್ಲಿ ಮತವೈರವನ್ನು ಪರಿಹರಿಸುವುದು ಎಂದಿಗೂ ಬಹು ದೊಡ್ಡ ವಿಚಾರ. ಮತಿಸಮ್ಮತವಾದದ್ದು ಮತವೆನ್ನಿಸುವುದು. ಒಬ್ಬರ ಮತಿಗೆ ಒಪ್ಪಿತವಾದದ್ದು ಮತ್ತೊಬ್ಬರಿಗೆ ಸಮ್ಮತವಾಗುವುದು ಯಾವಾಗಲೂ ಗಹನವಾದ ಸಂಗತಿ. ತಮ್ಮ ಮತವನ್ನು ಅನ್ಯರು ಅನುಮೋದಿಸುವಂತೆ ಮಾಡಲು ಬಹಳ ವಾಚಾಳತ್ವವಿರಬೇಕು. ಅನೇಕ ಸಂದರ್ಭಗಳಲ್ಲಿ ವಾಚಾಳತ್ವವೂ ಫಲಕಾರಿಯಾಗುವುದಿಲ್ಲ. ವಾಚಾಳತ್ವವು ಫಲಕಾರಿಯಾಗದಿದ್ದರೆ ಅತಿಮಾನುಷಶಕ್ತಿಗಳು ಮುಂದೆ ಬರಬೇಕು. ಲೋಕದಲ್ಲಿ ಮತಾಚಾರ್ಯರೆನಿಸಿದವರು ತಮ್ಮ ಅತಿಮಾನುಷ ಮಹಿಮೆಗಳಿಂದ ಜಯಶೀಲರಾಗಿದ್ದಾರೆ. ಅತಿಮಾನುಷ ವೃತ್ತಿಗಳಿಗೂ ವಶರಾಗದ ಜನರು ತಮ್ಮ ತಮ್ಮ ಅಭಿಪ್ರಾಯಗಳನ್ನು ಅನ್ಯರಿಗೆ ತಿಳಿಸುವ ವಾಚಾಳತ್ವವಿಲ್ಲದ ಕಾರಣ ತಟಸ್ಥರಾಗಿ ಹಾಗೇ ನಿಂತಿರುತ್ತಾರೆ. ಈ ಕಾರಣ ಒಂದೊಂದು ಮತದಲ್ಲೂ ವಿಚಾರಪರರಲ್ಲಿ ಭಿನ್ನ ಭಿನ್ನ ಕಲ್ಪನೆಗಳಾಗಿವೆ. ವಿಚಾರವಿಲ್ಲದ ಜನರು ಯಾವುದಾದರೊಂದು ಮತಕ್ಕೊಪ್ಪಿ, ಆ ಮತದ ಛಲವುಳ್ಳವರಾಗಿ, ಬುದ್ಧಿ ಬಲವನ್ನು ಉಪಯೋಗಿಸುವುದರ ಬದಲು ದೇಹಬಲವನ್ನು ಉಪಯೋಗಿಸಿ ಜಯಶೀಲರೆನಿಸುತ್ತಾರೆ. ಇಂತಹ ಜನರೇ ಲೋಕದಲ್ಲಿ ಬಹಳ ಸಂಖ್ಯಾ ಪರಿಮಿತಿಯಿಂದ ತಮ್ಮ ಮತವೇ ಸರಿಯೆಂಬುವವರು ಬಹಳ. ತಮ್ಮ ಸಂಖ್ಯೆಯನ್ನು ಬೆಳೆಸಿ ತಾವು ದೊಡ್ಡವರಾಗಬೇಕೆಂಬ ಉದ್ಯಮವೇ ಬಹಳ. ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಯಾವ ಪರಿಸ್ಥಿತಿಗೂ ವಶರಾಗದೆ ವಿಚಾರ ಸ್ವಾತಂತ್ರ್ಯವುಳ್ಳವರಾಗಿ, ಬಾಳುವುದು ಇದುವರಿಗೂ ದುಸ್ತರವಾಗಿ ಕಂಡುಬಂದಿದೆ. ಇಂಥ ಎಲ್ಲ ಪ್ರಸಂಗಗಳಲ್ಲೂ ಉದ್ವೇಗಕ್ಕೊಳಗಾಗದೆ, ಸಮಾಜವನ್ನು ರಕ್ಷಿಸುವುದು ಬಲು ಕಷ್ಟ! ಇದು ಭಗವದನುಗ್ರಹವನ್ನು ಗಳಿಸಿದ ಬುದ್ಧಿಶಾಲಿಗಳಿಗೆ ಮಾತ್ರ ಸಾಧ್ಯವಾಗುವ ಕೆಲಸ. ಆ ಕೆಲಸದಲ್ಲಿ ಯಶಸ್ವಿಗಳಾಗಿ ಮತವೈರವು ಹುಟ್ಟದಂತೆ ಸಮಾಜದಲ್ಲಿ ಶಾಂತಿಸ್ಥಾಪನೆ ಮಾಡಿದವರೆಂದರೆ ಪುರಂದರದಾಸರು. ಭರತಖಂಡದ ವೈದಿಕ ಅವೈದಿಕ ಮತಗಳಲ್ಲಿ ಸಹ ಸರ್ವಸಮ್ಮತವಾಗುವ ವಿಷಯಗಳನ್ನಾರಿಸಿ, ಸಮರಸಮಾಡಿ ತೋರಿಸಿದವರೆಂದರೆ ಪುರಂದರದಾಸರು. ವಾದಗ್ರಸ್ತ ವಿಷಯಗಳು ಬಂದಾಗ ತತ್ವನಿಶ್ಚಯ ಮಾಡಿ, ಜನರಿಗೆ ತೋರಿಸಿಕೊಟ್ಟು, ವಿವಾದಗಳನ್ನು ನಿರ್ವಿವಾದಗೊಳಿಸಿದವರು ಪುರಂದರದಾಸರು. ಸೊಲ್ಲಾಪುರದ ಬ್ರಾಹ್ಮಣ ಲಿಂಗಾಯಿತ ವಿವಾದದಲ್ಲಿ '**ಜಂಗಮರು ನಾವು**' ಎಂಬ ಪದವನ್ನು ಹಾಡಿ, ಉಭಯ ಸಮಾಜಗಳ ದ್ವೇಷ ಪರಿಹರಿಸಿದ ಒಂದು ದೃಷ್ಟಾಂತದಿಂದ, ಅಂಥಾ ಅನೇಕ ಸಂದರ್ಭಗಳಿರಬಹುದೆಂದು ವಾಚಕರು ಯೋಚಿಸಬಹುದು. ಗ್ರಂಥ ವಿಸ್ತಾರಭಯದಿಂದ ಹೆಚ್ಚು ಉದಾಹರಣೆಗಳನ್ನು ಕೊಡಲು ಸಾಧ್ಯವಿಲ್ಲ.

ಪುರಂದರದಾಸರು ಮತವೈರವನ್ನು ಪರಿಹರಿಸಿದರೆಂಬ ವಿಷಯದಲ್ಲಿ ಹಿಂದೆ, '**ಮಧ್ವ ಸಿದ್ಧಾಂತ ಪ್ರಕಾಶಿನಿ**' ಎಂಬ ಮಾಸಪತ್ರಿಕೆಯಲ್ಲಿ ಬಲು ದೊಡ್ಡ ಜಿಜ್ಞಾಸವಾಯಿತು. ಕಳೆದ (೭-೨-೧೯೩೧) ದುರ್ಮತಿ ಸಂ। ಪುಷ್ಯ ಬಹುಳ ೩೦ ರಲ್ಲಿ ಮೈಸೂರು ರಂಗಾಚಾರ್ಯರ ಸ್ಮಾರಕಮಂದಿರದಲ್ಲಿ ಪುರಂದರದಾಸರ ಚರಿತ್ರೆಯ ಮೇಲೆ ಒಂದು

ಉಪನ್ಯಾಸ ಮಾಡಿದೆನು. ದಿವಂಗತ ಸ್ವಾಮಿ ಗೋವಿಂದಾಚಾರ್ಯರು ಆ ದಿನದ ಸಭೆಗೆ ಅಧ್ಯಕ್ಷರಾಗಿದ್ದರು. ಉಪನ್ಯಾಸಾನಂತರ ಅಧ್ಯಕ್ಷರೂ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರೂ ಆ ಉಪನ್ಯಾಸವನ್ನು ಬರೆದು ಮುದ್ರಿಸಬೇಕೆಂದು ಅಪೇಕ್ಷಿಸಿದರು. ಆಗ ಪುರಂದರದಾಸರ ಚರಿತ್ರೆಯು ಸಣ್ಣದೊಂದು ಪುಸ್ತಕರೂಪವನ್ನು ತಾಳಿತು. ಮುದ್ರಣವಾದ ೧೦-೧೫ ದಿವಸಗಳಲ್ಲಿ ಒಂದುಸಾವಿರ ಪ್ರತಿಗಳೂ ಖರ್ಚಾದುವು. 'ಮಧ್ವಸಿದ್ಧಾಂತ ಪ್ರಕಾಶಿನಿ'ಯ ಪ್ರಕಾಶಕರು ಆ ಚಿಕ್ಕ ಪುಸ್ತಕವನ್ನು ತಮ್ಮ ಮಾಸಪತ್ರಿಕೆಯಲ್ಲಿ ಪ್ರಕಟಿಸುವೆವೆಂದು ನನ್ನನ್ನು ಕೇಳಿ, ಎರಡು ತಿಂಗಳ ಸಂಚಿಕೆಗಳಲ್ಲಿ ಅದನ್ನು ಪ್ರಚುರಿಸಿದರು. ಆ ಕಾಲದಲ್ಲಿ ಪ್ರಕಾಶಿನಿಯ ಮುಖ್ಯ ಲೇಖಕರಾಗಿದ್ದ ಪಂಡಿತರತ್ನಂ ಪುಂಗನೂರು ರಾಘವೇಂದ್ರಾಚಾರ್ಯರವರು ದಾಸರ, '**೪. ಮತ ವೈರಗಳನ್ನು ಪರಿಹರಿಸಿದರು, ೫. ಪಂಚಮರಲ್ಲಿ ಸಹಾನುಭೂತಿಯನ್ನು ತೋರಿಸಿದರು**' ಎಂಬ ವಿಷಯಗಳು ಅಸಮಂಜಸವೆಂದು ಹದಿನಾರು ಪುಟಗಳ ಸ್ವಾಭಿಪ್ರಾಯವನ್ನು ಬರೆದು ಪ್ರಕಟಿಸಿದರು. ಅದಕ್ಕೆ ನನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಬರೆದು ಭಿನ್ನಾಭಿಪ್ರಾಯಗಳಿಗೆ ದಾರಿಯಿರದಂತೆ ನನ್ನ ಲೇಖನವನ್ನು ಕಳುಹಿಸಿದೆನು. ಅದರ ಮೇಲೂ ಬರಬಹುದಾದ ಟೀಕೆಗಳಿಗೆ ಉತ್ತರ ಬರೆಯಲಾರೆನೆಂದೂ ತಿಳಿಸಿದೆನು. ಆ ಸಂಗತಿಗಳೆಲ್ಲಾ 'ಪ್ರಕಾಶಿನಿ'ಯಲ್ಲಿ ಮುದ್ರಣವಾಗಿ ಪ್ರಕಟವಾದುವು. ಶ್ರೀ ಆಚಾರ್ಯರ ಭಿನ್ನಾಭಿಪ್ರಾಯ ಮಾತ್ರ ಹಾಗೇ ಉಳಿಯಿತು. ಅದುವರೆಗೆ ನಮ್ಮುಭಯರಿಗೆ ಪರಿಚಯವಿರಲಿಲ್ಲ. ಆಚಾರ್ಯರು ಮೈಸೂರು ಅರಮನೆಯ ಧರ್ಮಾಧಿಕಾರಿಗಳಾಗಿದ್ದುದರಿಂದಲೂ ಪ್ರಖ್ಯಾತ ಪಂಡಿತರಾಗಿದ್ದುದರಿಂದಲೂ ಅವರಲ್ಲಿ ನನಗೆ ವಿಶೇಷ ಪೂಜ್ಯಭಾವನೆಯಿತ್ತು. ಸಂಯೋಗದಿಂದ ಗುಲ್ಬರ್ಗದಲ್ಲಿ ನಡೆದ ಮಧ್ವ ಜಯಂತಿಯ ಸಭೆಯಲ್ಲಿ ನನ್ನ ಕೀರ್ತನಾವಸರದಲ್ಲಿ ಆ ಮಹನೀಯರ ಪರಿಚಯ ನನಗಾಯಿತು. ಸರಳ ಮನಸ್ಸಿನ ಆಚಾರ್ಯರು ಕೀರ್ತನದ ಅಭಿನಂದನ ಮಾಡುವಾಗ ತಮಗಿದ್ದ ಭಿನ್ನಾಭಿಪ್ರಾಯದ ಕಾರಣ ತಿಳಿಸಿದರು. ಮರೆತುಹೋದ ವಿಷಯದ ಪ್ರಸ್ತಾಪಕ್ಕೆ ಆಗ ಕಾರಣವಿಲ್ಲವೆಂದು ನನ್ನ ಸಮಾಧಾನಗಳನ್ನು ತಿಳಿಸಿದೆನು. ಪತ್ರಿಕಾಪ್ರಸಂಗ ತಪ್ಪಿ ಪರಸ್ಪರ ಪ್ರತ್ಯಕ್ಷ ಪರಿಚಯವಾದ್ದರಿಂದ ನಾನು ಬರೆದ ವಿಷಯಗಳನ್ನು ಬದಲಾಯಿಸುವ ಕಾರಣವುಂಟಾಗಲಿಲ್ಲ. ಆದ್ದರಿಂದ ಹಿಂದಿನ ಆ ಚಿಕ್ಕ ಪುಸ್ತಕದ ವಿಷಯಗಳನ್ನು ತೆಗೆದುಕೊಂಡು, ದಾಸರ ಚರಿತ್ರೆಯನ್ನು ಈಗ ವಿಸ್ತರಿಸಿದೆನು.

೫. ಪಂಚಮರಲ್ಲಿ ಸಹಾನುಭೂತಿಯನ್ನು ತೋರಿಸಿದರು

ಜನ್ಮತಃ ಚಂಡಾಲರಾಗಿರುವವರಿಗಿಂತಲೂ ಕರ್ಮತಃ ಚಂಡಾಲರಾಗಿರುವವರು ನೀಚರೆಂದು ದಾಸರು ಭಾವಿಸಿದ್ದರು. ಹೊಲೆಯರ ವಿಷಯದಲ್ಲಿ ಅವರು ಮಾಡಿರುವ ಕೆಲವು ಕೀರ್ತನೆಗಳನ್ನು ನೋಡಿದರೆ, ಅವರ ಸಹಾನುಭೂತಿಯು ಪರಿಚಯವಾಗುತ್ತದೆ. ಅಂದ ಮಾತ್ರಕ್ಕೇ ಈ ಕಾಲದ ಸುಧಾರಕರಂತೆ ಪರ್ವತ ಶಿಖರದ ಮೇಲಿರುವವರನ್ನು ಕೆಳಕ್ಕೆ ತಳ್ಳಿ, ಸಾನುಪ್ರದೇಶದಲ್ಲಿರುವವರ ಜೊತೆಗೆ ಸೇರಿಸಬೇಕೆಂದು ದಾಸರು ಹೇಳಿಲ್ಲ.

ಸಾಮಪ್ರದೇಶವಲ್ಲಿರುವವರನ್ನು ಮೆಟ್ಟಿಲು ಮೆಟ್ಟಿಲಾಗಿ ಹತ್ತಿಸಿ ಮೇಲಕ್ಕೆ ತರಬೇಕೆಂಬುದು ದಾಸರ ಅಭಿಪ್ರಾಯವಾಗಿತ್ತು.

ಉಗಾಭೋಗ

ಹೊಲೆಯ ಬಂದನೆಂದು ಒಳಗೆ ದೇವರವಾಡಿ
ಗಣಗಣ ಗಂಟೆಯ ಬಾರಿಸುವರಯ್ಯ
ತನುವಿನ ಕೋಪವು ಹೊಲೆಯಲ್ಲವೆ
ಪರಧನ ಪರಸತಿ ಹೊಲೆಯಲ್ಲವೆ
ಹರಿಯ ವಿಸ್ಮೃತಿ ತಾನು ಹೊಲೆಯಲ್ಲವೆ
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇವಕೇನು ಮದ್ದೋ ಪುರಂದರ ವಿಠಲ ೧

ಮುಖಾರಿ—ಜಂಪೆ

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಬಲ್ಲವರು ಪೇಳಿ ಶ್ರೀ ಹರಿಭಕ್ತರಾದವರು ಪ.

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ
ಹೇಳಿದ ಹರಿಕಥೆಯ ಕೇಳದವ ಹೊಲೆಯ
ಆಳಾಗಿ ಅರಸಿಗೆ ಕೇಡು ಬಗೆವವ ಹೊಲೆಯ
ಸೂಳೆಯನು ಹೋಗುವವ ಶುದ್ಧ ಹೊಲೆಯ ೧

ಇದ್ದಾಗ ದಾನಧರ್ಮವ ಮಾಡದವ ಹೊಲೆಯ
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ
ಬದ್ಧವಾದ ನಡೆನುಡಿಯು ಇಲ್ಲದಾತನೆ ಹೊಲೆಯ
ಶುದ್ಧ ತಾನೆಂಬಾತ ಶುಂಠ ಹೊಲೆಯ ೨

ಕೊಂಡ ಸಾಲಗಳನ್ನು ಕೊಡದಾತನೇ ಹೊಲೆಯ
ಲಂಡತನದಲಿ ನಡೆವ ನರ ಭಂಡ ಹೊಲೆಯ
ಉಂಡಮನೆಗೆರಡನ್ನು ಬಗೆವಾತನೇ ಹೊಲೆಯ
ಹೆಂಡತಿಯ ನುಡಿಕೇಳಿ ತಾಯ ಬಿಡುವವ ಹೊಲೆಯ ೩

ಆಸೆ ಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯ
ಲೇಸು ಉಪಕಾರಗಳ ಮಾಡದವ ಹೊಲೆಯ
ಮೋಸದಲಿ ಜೀವನವ ಮುನಿದು ಕೆಡಿಸುವ ಹೊಲೆಯ
ಹುಸಿಯ ಬೊಗಳುವನೊಬ್ಬ ಹುಚ್ಚು ಹೊಲೆಯ ೪

ಅರಿತು ಆಚಾರವನು ನಡೆಸದಾತನೆ ಹೊಲೆಯ
ಪರಸತಿಗೆ ಮನವಳುಕುವಾತನೇ ಹೊಲೆಯ
ಗುರುಹಿರಿಯರನು ಕಂಡು ಎರಗದಾತನೆ ಹೊಲೆಯ
ಪುರಂದರ ವಿಠ್ಠಲನ ನೆನೆಯದವ ಹೊಲೆಯ ೫

ದಾಸರ ಮೇಲ್ಕಂಡ ಉಗಾಭೋಗ ಮತ್ತು ದೇವರನಾಮಗಳು ಮಾದರಿಗಾಗಿ ಕೊಡಲ್ಪಟ್ಟಿವೆ.

ಶ್ರೀನಿವಾಸನಾಯಕರು ಪುರಂದರದಾಸರಾದ ಚರಿತ್ರೆಯನ್ನು ಶ್ರೀ ವಿಜಯದಾಸರು ಸಂಕ್ಷೇಪವಾಗಿ ಒಂಭತ್ತು ನುಡಿಗಳಲ್ಲಿ ಹಾಡಿರುತ್ತಾರೆ. ಕರ್ಣಾಟಕ ಮಹಾಪುರುಷರ ಮಹೋತ್ಸವಗಳಲ್ಲೊಂದಾದ ಶ್ರೀ ದಾಸರಾಯರ ಆರಾಧನೆಯ ದಿವಸ ಈ ನಾಮವನ್ನು ಹಾಡುವುದು ಪದ್ಧತಿಯಾಗಿರುವುದರಿಂದ ಕಲಿಯುವವರಿಗೆ ಅನುಕೂಲವಾಗಿರಲೆಂದು, ಅದನ್ನು ಈ ಕೆಳಗೆ ಕೊಡಲಾಗಿದೆ.

ಸಾವೇರಿ—ಅಟ್ಟತಾಳ

ಬಿ[illegible]ರಾದೇ ಭಜಿಸಿರೋ | ಪುರಂದರ | ದಾಸರಾಯರಾ || ಪ.
ಶ್ರೀಶ ನಿಮ್ಮನುದಾಸಿಕರ | ಪರಿಪೋಷಿಸುವ ಸಂತೋಷದಲ್ಲಿ || ಅ.

ಪುರಂದರಗಡಾದ ಒಳಗೆ | ಇರುವ ಸಾವುಕಾರನೆನಿಸಿ
ಪರಿಪರಿ ಸೌಖ್ಯಗಳ ಸುರಿಸುತ್ತ | ಇರುತಿರಲು ನರಹರಿ
ತ್ವರಿತದಿ ಬ್ರಾಹ್ಮಣನಾಗುತ್ತ | ಕಾರುಣ್ಯದಿಂದ
ದ್ಧರಿಸಲೋಸುಗ ಮನೆಗೆ ಪೋಗುತ್ತ | ಯಜಮಾನ ಕಂಡು
ತ್ವರಿತದಿಂದ ಹೊರಗೆ ನೂಕಲು | ಮರುದಿವಸ ಮತ್ತೋಗಿ ನಿಂದ ೧

ಬಾರಿಬಾರಿಗೆ ಸಾವಕಾರನ | ಮೋರೆಗೆತ್ತಿ ಮೇರೆಯಿಲ್ಲದೆ
ಆರುತಿಂಗಳು ಬೆನ್ನು ಬೀಳುತ್ತ | ನಾಯಕರು ಈತನ
ದಾರು [illegible] ಬಯ್ಯುತ್ತ | ಬೇಸತ್ತು ಎರಡು
ಹಾಳು ರೊಕ್ಕ ಮುಂದೆ ಸುರಿವುತ್ತ | ಇವರೊಳೊಂದು ದು
ದ್ವಾರಿಸಿಕೋ ಎಂದು ಪೇಳಲು, [illegible] ಬಿಟ್ಟೋದ ನಗುತ ೨

ಬಿಟ್ಟಲ ಬಾಗಿಲೆ [illegible] | ಪತ್ನಿ [illegible]ನಾಗಿ
ಹೆತ್ತ ಪಿತ್ರನು ಕೊಟ್ಟ [illegible] | [illegible]
ಅತ್ಯಧಿಕದಿಂ ಬಾಯ [illegible] | [illegible] ನುಡಿದನು
ಎತ್ತಣ [illegible] | [illegible]ಗಾಗಿರ
ಮುತ್ತಿನ ಮೂಗುತಿಯ [illegible], [illegible] ೩

ಜೋಕೆಯಿಂ ಮೂಗುತಿಯನೊಯ್ದು | ಆಕೆ ಗಂಡನ ಕಣ್ಣಿಗೇ ತಾ
ನ್ನಾಕಿದನು ಪಾಕಿಕೊಡುಯೆನುತ | ಅವ ಕಂಡು ಇದು ನ
ಮ್ಮಾಕೆಯೆಂದೂ ಆತ ನುಡಿಯುತ್ತ | ಸೇವಕರು ಅಂಥಾ
ದ್ದ್ಯಾಕೆ ಇರಬಾರದು ಎನ್ನುತ್ತಾ | ಬೆಲೆ ಪೇಳು ಎನ್ನಲು
ನಾಕುನೂರು ಪಾಕಿ ಕೊಡು, ಎಂದ್ವಾಕಿ ಬಾರದೆ ತಿರುಗಿ ಪೋದ ೪

ತಿರುಗಿ ಬ್ರಾಹ್ಮಣ ಬಾರದಿರಲು | ಕರೆದು ತನ್ನ ಹೆಂಡತಿಯ
ಬರಿಯ ನಾಸಿಕವನ್ನೆ ಕಂಡನು | ಆಭರಣವೆಲ್ಲಿನೆ
ಮುರಿದು ಹೋಯಿತೆಂದು ನುಡಿದಳು | ಒಳಗ್ಹೋಗಿ ತರದಿರೆ
ಅರಿವೆ ನಿನ್ನ ಜೀವನದನು | ನಿನಕೊಂಬೆನೆಂದು
ಕರದಿ ಬಟ್ಟಲ ಧರಿಸಲಾಕ್ಷಣ | ತ್ವರಿತ ನರಹರಿ ಅದರೊಳ್ಹಾಕಿದ ೫

ಹರುಷದಿಂದಲಿ ಒಡವೆಯೊಯ್ದು | ಪುರುಷನ ಕೈಯಲ್ಲಿ ಕೊಡಲು
ತರಿಸಿ ತನ್ನಲ್ಲಿದ್ದ ಧರಣಿಯ | ಅದು ಕಾಣದಿರಲು
ಬೆರಳಕಚ್ಚಿ ಕೇಳ್ದ ಮಡದಿಯ | ನಿಜ ಪೇಳು ಎನಲು
ಅರಸಿ ನುಡಿದಳು ಕೊಟ್ಟ ಸುದ್ದಿಯ | ಅಭಿಮಾನಕಂಜಿ
ಅರೆದು ವಿಷವನು ಕುಡಿವೆನೆಂಬೆನೆ, ಸಿರಿರಮಣ ತಾ ಕೊಟ್ಟ ಪರಿಯ ೬

ದೇವರಾಯನು ತನ್ನ ಮನದ | ಭಾವ ತಿಳಿಯಲುಬೇಕು ಎನ್ನುತ
ಕೇವಲ ಬ್ರಾಹ್ಮಣನಾಗಿದ್ದ | ಪರಿಪಕ್ವ ಮನಸಿನ
ಆವಕಾಲಕೆ ಆಗಬೇಕೆಂದ | ವೈರಾಗ್ಯ ಭಾಗ್ಯದಿ
ಜೀವಿಸಿಕೊಂಡಿಪ್ಪುದೇ ಛಂದ | ಹೀಗೆನುತ ಮನೆ ಧನ
ಕೋವಿದರ ಕರೆದಿತ್ತು ಹರುಷದಿ, ಕಾವನಯ್ಯನ ದಾಸನಾದ ೭

ಲಕ್ಷ್ಮೀಪತಿಯ ಪಾದದಲ್ಲಿ | ಲಕ್ಷ್ಯವಿಟ್ಟು ವ್ಯಾಸರಾಯರ
ಶಿಕ್ಷೆಯಿಂದಂಕಿತವಕೊಳ್ಳುತ್ತಾ | ಪಾದ ಕೊರತ್ತೆಯದು
ಲಕ್ಷಪದ ಸೂಳಾದಿ ಪೇಳುತ್ತ | ಪ್ರತಿದಿವಸದಲ್ಲೂ
ಪಕ್ಷಿವಾಹನ ನಾಟ್ಯವಾಡುತ್ತ | ಅಪರೋಕ್ಷ ಪುಟ್ಟಲು
ಮೋಕ್ಷ ಸ್ಥಾನಕೆ ಕರೆದು ಒಯ್ದು, ಅಧೋಕ್ಷಜನು ತಾ ಬಿನ್ನಬಿಡದೆ ೮

ಘೋರ ನರಕಾದೊಳಗೆ ಬಿದ್ದು | ಪಾಪ ಜನರು ಚೀರುತಿರಲು
ದ್ಧಾರಮಾಡಿದ ನಾರದಂಶರು | ಪಾಮರರ ಪಾಲಿಸೆ
ಧಾರುಣಿಯೊಳವತಾರ ಮಾಡಿದರು | ಹರಿಪರ ನೆಂ
ದೋರಂತೆ ಧರೆಯೊಳಗೆ ಚರಿಸುತ | ಹೀಗೆನುತ ತಿಳಿಯಲು
ಮಾರಜನಕ ವಿಜಯ ವಿಠ್ಠಲ | ಯೋಗಿಗಳಿಗೆ ಒಲಿದ ಕಾಣಿರೊ ೯

೭

ಶ್ರೀ ಪುರಂದರದಾಸರ ಚರಿತ್ರೆಯೆಂದು ಇದುವರೆಗೆ ಬರೆದ ಸಂಗತಿಗಳೇನಿದ್ದರೂ ನಾಲ್ಕೆಂಟು ದೇವರನಾಮಗಳ ಮತ್ತು ಸುಳಾದಿಗಳ ಆಧಾರದಿಂದ ಬರೆದಿರುವುದಲ್ಲದೆ, ಅವರ ಸಂಪೂರ್ಣ ಚರಿತ್ರೆಯನ್ನು ತಿಳಿಸಿದಂತಾಗಲಿಲ್ಲ. ನಾಲ್ಕುಲಕ್ಷದ ಎಪ್ಪತ್ತೈದುಸಾವಿರ ಗ್ರಂಥಕರ್ತರ ಚರಿತ್ರೆಯು ಆ ಸಂಖ್ಯೆಗೆ ತಕ್ಕಷ್ಟಿರಬೇಕೆಂದು ಯಾರಾದರೂ ಊಹಿಸದಿರುವುದಿಲ್ಲ. ಸುಮಾರು ಎಂಭತ್ತು ವರ್ಷಗಳಷ್ಟು ಜೀವಿತಕಾಲದಲ್ಲಿ ನಲವತ್ತು ವರ್ಷಗಳಿಗಿಂತ ಹೆಚ್ಚಾಗಿ ದಾಸವರ್ಯರು ಹರಿದಾಸರಾಗಿ ದೇಶಸೇವೆಯನ್ನು ಮಾಡಿದರು. ಮೂರು ಮೂರು ವೇಳೆ ಭರತಖಂಡದ ಪ್ರದಕ್ಷಿಣೆ ಮಾಡಿದರು. ಲಕ್ಷಾವಧಿ ಪಾಮರ ಜನರನ್ನು ಧರ್ಮೋಪದೇಶದಿಂದ ಉದ್ಧಾರಮಾಡಿದರು. ಲೋಕಕ್ಕೆ ಆದರ್ಶಜೀವನವನ್ನು ತೋರಿಸಿಕೊಟ್ಟರು. ವ್ಯಾಸರಾಯರು ವೃಂದಾವನಸ್ಥರಾದಮೇಲೆ ವಿಜಯನಗರದಲ್ಲೇ ವಾಸಮಾಡಿದರು. ಐದು ಲಕ್ಷಕ್ಕೆ ಸಾಲದಿದ್ದ ಇಪ್ಪತ್ತೈದುಸಾವಿರ ನಾಮಗಳನ್ನು ಮಧ್ವಪತಿಯನ್ನು ಕರೆದು ನೀನು ಮಾಡಿ ಶ್ರೀಹರಿಗೆ ಸಮರ್ಪಣೆ ಮಾಡೆಂದರುಹಿದರು. ಅವನು ಈ ಜನ್ಮದಲ್ಲಿ ನನ್ನಿಂದ ಸಾಧ್ಯವೇ ಎಂದು ಶಂಕಿಸಿದನು. ದಾಸರು–ಈ ದೇಹದಲ್ಲಿದ್ದು ಸಾಧ್ಯವಿಲ್ಲದಿದ್ದರೆ ಮತ್ತೊಂದು ದೇಹದಲ್ಲಿದ್ದು ಮಾಡಿದರಾಯಿತೆಂದರು. ಮಧ್ವಪತಿಯು 'ಅಷ್ಟು ಭಾಗ್ಯ ನನಗಿದೆಯೇ ? ಉತ್ತಮ ಸಂಸ್ಕಾರಗಳಿಂದೊಡಗೂಡಿ ಧರ್ಮಾಧರ್ಮಗಳನ್ನು ಅರಿಯಬಲ್ಲ ಸದ್ವಂಶದಲ್ಲಿ ನಾನು ಜನ್ಮ ತಾಳಬಲ್ಲೆನೆ ?' ಎಂದನು. ದಾಸರು ಎಲ್ಲವೂ ಶ್ರೀ ವಿಠಲರಾಯನ ಅನುಗ್ರಹದಿಂದಾಗುವುದೆಂದರು.

ಮಧ್ವಪತಿಯು—'ಪುರಂದರ ವಿಠಲರಾಯನನುಗ್ರಹದಿಂದಲೋ' ಎಂದನು.

ದಾಸರು :—'ವಿಜಯವಿಠಲನನುಗ್ರಹದಿಂದ'* ಎಂದರು.

ಮಧ್ವಪತಿಯು 'ಹಾಗಾದರೆ ಧನ್ಯನಾದೆ'ನೆಂದನು. ನನ್ನಿಂದಾಗಬೇಕಾದುದನ್ನೆಲ್ಲ ತಾವೇ ನಿಂತು ಮಾಡಿಸಬೇಕೆಂದು ನಮಸ್ಕರಿಸಿದನು. ದಾಸರು–ವಿಠಲನು ಮಾಡಿಸುವನೆಂದರು.

ಈ ರೀತಿ ಪುರಂದರದಾಸರು ಮರ್ತ್ಯಲೋಕದಲ್ಲಿ ಮಾಡಬೇಕೆಂದಿದ್ದ ಸೇವೆಯನ್ನು ಪೂರೈಸಿ, ಶ್ರೀಮನ್ನಾರಾಯಣನನ್ನು ನಿರಂತರದಲ್ಲೂ ಸೇವಿಸುವ ನಿಜರೂಪವನ್ನು ಸೇರಲು ಶಾಲೀವಾಹನ ಶಕ ೧೪೮೬ನೇ ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆ (1564) ಶನಿವಾರದ ದಿವಸ

* ಈ ಮಾತು ನಡೆದದ್ದು ವಿಜಯನಗರದ ವಿಜಯವಿಠಲ ದೇವಾಲಯದ ಬಳಿಯಲ್ಲಿ ಮತ್ತು ವಿಜಯವಿಠಲನಿಂದ ಎಂಬ ಮಾತು ಬಲು ಅರ್ಥವತ್ತಾದದ್ದು. ಮಧ್ವಪತಿಯು ವಿಜಯದಾಸರಾಗಿ ಅವತರಿಸಿ, ವಿಜಯವಿಠಲ ಮುದ್ರಿಕೆಯಿಂದ ೨೫ ಸಾವಿರ ದೇವರನಾಮಗಳನ್ನು ರಚಿಸಿ ಹಾಡಿದನು.

ರಾಗ ಭೈರವಿ—ಛಾಪುತಾಳ

ತೆರಳಿದರು । ಪುರಂದರದಾಸರಾಯರು ಪ.

ತೆರಳಿದ ಭೇರಿದುಂದುಭಿ ಮೊರೆಯುತಲಿರೆ
ಪುರಂದರದಾಸರು ನಿಜ ವೈಕುಂಠಕ್ಕೆ ಅ.

ವಿದ್ಯಾನಗರದಿ । ವಿಠಲ ಸನ್ನಿಧಿಯಲ್ಲಿ
ಪೊದ್ದಿದ ಭಾಗವತರ ಸಮ್ಮೇಳದಿ ೧

ವೈಕುಂಠಕೆ ಭೂಮಿಗೆ ಹರಿನಾಮದ
ಸೋಪಾನಮಾಡಿ ಭಕ್ತರಿಗೆ ಮಾರ್ಗವ ತೋರಿ ೨

ಅಚ್ಚಗನ್ನಿಕೆಯುರಾರತಿಗಳನೆತ್ತಲು
ಅಚ್ಯುತಸಿದ್ದೆಡೆಗತಿ ಸಂಭ್ರಮದಿಂದ ೩

ರಕ್ತಾಕ್ಷಿ ಸಂವತ್ಸರ ಪುಷ್ಯ ಬಹುಳ
ದತಿಶಯುದಮಾವಾಸ್ಯ ಮಂದವಾರ ೪

ಗುರುಮಧ್ವಪತಿ ವಿಠಲನ ಧರೆಗೆ ತೋರಿ
ಪುರಂದರದಾಸರು ನಿಜ ವೈಕುಂಠಕ್ಕೆ ೫

ಶ್ರೀ ವೈಕುಂಠದಾಸರು

ಶ್ರೀ ವೈಕುಂಠದಾಸರು ಬೇಲೂರಿನವರು. ಬೇಲೂರಿನಲ್ಲಿ ಜನಿಸಿ, ಅಲ್ಲೇ ಬೆಳೆದು, ಅಲ್ಲಿಂದಲೇ ಪರಮಪದವನ್ನು ಸೇರಿದವರು. ಎಲ್ಲ ದಾಸರೂ ದೇಶಪರ್ಯಟನ ಮಾಡಿದಂತೆ, ವೈಕುಂಠದಾಸರು ಮಾಡಿದವರಲ್ಲ. ಬೇಲೂರಿಗೆ ಹತ್ತು ಮೈಲು ದೂರ ಇರುವ ಹಾದೀಕಕ್ಕೆಯಿಂದಾಚೆಗೆ ಹೋದವರಲ್ಲ.

ದಾಸರು ಜಾತ್ಯಾ ಶ್ರೀ ವೈಷ್ಣವ ಬ್ರಾಹ್ಮಣರು. ಹೆಬ್ಬಾರರೆಂಬ ಉಪ ಪಂಗಡಕ್ಕೆ ಸೇರಿದವರು. ಹೆಬ್ಬಾರ (ಎಂದರೆ, ಹೆಬ್ಬ + ಹಾರವ = ದೊಡ್ಡ ಬ್ರಾಹ್ಮಣ ಎಂಬರ್ಥದಿಂದ) ಸಂಕುಚಿತವಾದ ರೂಪ. ಅಂದರೆ ಬಹಳ ಆಚಾರವಂತ ಬ್ರಾಹ್ಮಣ. ವಿಷ್ಣುವರ್ಧನ ರಾಯನ ಕಾಲದಲ್ಲಿ ರಾಮಾನುಜಾಚಾರ್ಯರಿಗೆ ಶಿಷ್ಯರಾದ ಹೊಯ್ಸಳನಾಡಿನ ಬ್ರಾಹ್ಮಣರಿಗೆ ಹೆಬ್ಬಾರರೆಂದು ಹೆಸರಾಯಿತು. ಹೆಬ್ಬಾರ ಶಬ್ದವನ್ನು ಅಪಾರ್ಥವಾಗಿ ತಿಳಿಯುವವರು ಕೆಲವರಿದ್ದಾರೆ. ಆದು ಅವರ ಮತಾನುಯಾಯಿಗಳಲ್ಲಿದ್ದಂತೆ ಇತರರಲ್ಲಿಲ್ಲ. ಶ್ರೀ ವೈಷ್ಣವರಲ್ಲಿ ವಿವಿಧ ಪಂಗಡಗಳಾಗಿ, ದೇಶವ್ಯತ್ಯಾಸ, ಪ್ರಭುತ್ವವ್ಯತ್ಯಾಸಗಳಿಂದ ಒಬ್ಬರಲ್ಲೊಬ್ಬರು ಬೆರೆಯದೆ ಭೋಜನ ಪ್ರತಿಭೋಜನಗಳಲ್ಲಿ ತೆರೆಮರೆಗಳಾಗಿ, ಒಬ್ಬೊಬ್ಬರೂ ಮತ್ತೊಬ್ಬರನ್ನು ಹೆಚ್ಚುಕಡಿಮೆಯೆಂಬ ತಕ್ಕಡಿಯಲ್ಲಿ ತೂಗುವ ಪರಿಪಾಠವಾಯಿತು.

ವೈಕುಂಠದಾಸರ ದೌಹಿತ್ರ ಸಂತತಿಯವರು, ಈಗಲೂ ಬೇಲೂರಿನಲ್ಲಿದ್ದಾರೆ. ಈಚಿನ ಎರಡು ತಲೆಗಳವರಿಂದ ಆ ವಂಶೀಕರಲ್ಲಿ ಯಾರೂ ದಾಸರಾಗಿಲ್ಲ.

ವೈಕುಂಠದಾಸರ ಕಾಲವೆಂದರೆ **ಪುರಂದರದಾಸರ** ಸಮಕಾಲ. **ವ್ಯಾಸರಾಯರು, ಕನಕದಾಸರು, ಪುರಂದರದಾಸರು, ವಾದಿರಾಜರು** ಇವರೆಲ್ಲಾ **ವೈಕುಂಠದಾಸರ** ಸಮಕಾಲಿಕರು. ಕರ್ಣಾಟಕ ಕವಿಚರಿತೆಕಾರರು ವೈಕುಂಠದಾಸರ ಕಾಲವನ್ನು ಒಂದು ಶತಮಾನದಷ್ಟು ಮುಂದುಮಾಡಿದ್ದಾರೆ. ತಿಳಿದವರು ಅವರಿಗೆ ತಿಳಿಸದ ಕಾರಣ, ಅಥವಾ ಪದವೀಧರರಾಗಿದ್ದುದರಿಂದ ಅವರು ಇತರರನ್ನು ವಿಚಾರಿಸದ ಕಾರಣ, ಕಾಲ ವ್ಯತ್ಯಾಸವಾಗಿದೆ. ವೈಕುಂಠದಾಸರ ಪದಪದ್ಯಗಳು ಚರಿತ್ರೆಕಾರರಿಗೆ ದೊರೆತಿದ್ದರೆ ಶತಮಾನದಷ್ಟು ಕಾಲ ವ್ಯತ್ಯಾಸ ಬರುವಂತೆ ಅವರು ಬರೆಯುತ್ತಿರಲಿಲ್ಲ. ಕರ್ಣಾಟಕದ ಅಂತಿಂಥಾ ಸಾವಿರಾರು ಕವಿಗಳ ಹೆಸರನ್ನು ಶೇಖರಿಸಿ ಪಟ್ಟಿ ಮಾಡುವ ಮಹಾ ಕಾರ್ಯದಲ್ಲಿ ತೊಡಗಿದವರಿಗೆ, ಒಬ್ಬರೇ ಇರುವುದರಲ್ಲೂ ಹೆಚ್ಚು ಸಂಗತಿಗಳನ್ನು ಸಂಗ್ರಹಿಸಿ ಬರೆಯಲು ಅನುಕೂಲಿಸಿಲ್ಲ. ಎರಡೆರಡು ಪಂಕ್ತಿಗಳ ಟಿಪ್ಪಣಿ ಬರೆಯುವುದರಲ್ಲೇ ಕವಿಚರಿತೆಯ ಪುಸ್ತಕಗಳು ಮೂರಾದುವು. ಮಾಡುವುದೇನು ?

ಮಹಾಕ್ಷೇತ್ರವಾಸಿಗಳು ತಮ್ಮ ಮಕ್ಕಳಿಗೆ ಆ ಕ್ಷೇತ್ರಮೂರ್ತಿಯ ನಾಮಕರಣ ಮಾಡುವ ಪದ್ಧತಿಯಂತೆ, ವೈಕುಂಠದಾಸರಿಗೂ ಅವರ ತಂದೆ ತಾಯಿಗಳು ಕೇಶವನೆಂದು

ನಾಮಕರಣಮಾಡಿದರು. ವಯಸ್ಸು ಬಂದಂತೆ ಕೇಶವನು ಕೇಶವೈಂಗಾರ್ಯನಾದನು. ಉಪನಯನಾನಂತರ ವೇದಾಧ್ಯಯನ ಶಾಸ್ತ್ರಾಭ್ಯಾಸಗಳಾದುವು. ಕೇಶವೈಂಗಾರ್ಯನು ಸ್ವಯಂ ಪ್ರೌಢನಾದರೂ ತನ್ನ ಪ್ರೌಢಿಮೆಯನ್ನು ಜನರಿಗೆ ತೋರಿಸದೆ ಜಡನಂತಿರುತ್ತಿದ್ದನು. ದೇವರ ಹೆಸರೆತ್ತಿದರೆ, ದೇವರ ಕಥೆಯನ್ನು ಕೇಳಿದರೆ, ಭಾವಸಮಾಧಿಗೊಳಗಾಗಿ ಜಡನಾಗುತ್ತಿದ್ದನು. ಇದನ್ನು ಕಂಡು ಜನರು ಅವನೆದುರಿಗೆ ಏನೂ ಮಾತನಾಡುತ್ತಿರಲಿಲ್ಲ.

ಸ್ವಾಭಾವಿಕವಾಗಿ ಸೃಷ್ಟಿಯಲ್ಲಿ ಬಹು ಮುಂದುವರಿದ ಜೀವರು, ತಮ್ಮ ಜ್ಞಾನ ಬಲದಿಂದ ಬಲು ಸಾತ್ವಿಕ ವೃತ್ತಿಯವರಾಗಿ ಜನಿಸುತ್ತಾರೆ. ಅವರ ಶರೀರಗಳು ಸತ್ವಗುಣ ಪ್ರಧಾನಗಳಾಗಿರುತ್ತವೆ. ಪರರ ತಾಪವನ್ನು ನೋಡಿದರೆ ಅವರ ಮಾಂಸಖಂಡಗಳು ನಡುಗುತ್ತವೆ. ದುಃಖಪಡುವವರ ಜೊತೆಯಲ್ಲಿ ಅವರೂ ಸಮಭಾಗಿಗಳಾಗುತ್ತಾರೆ. ಈ ಜೀವರಲ್ಲಿ ಜ್ಞಾನಪ್ರಧಾನರು ಕೆಲವರು, ಭಕ್ತಿಪ್ರಧಾನರು ಕೆಲವರು. ಭಕ್ತಿಪ್ರಧಾನರ (Emotional People) ದೇಹಗಳು ಪ್ರಪಂಚದಲ್ಲಿ, ಜ್ಞಾನಪ್ರಧಾನರ (Intelectual People) ದೇಹಗಳಂತೆ ಬಾಳಿಕೆಗೆ ಬರುವುದಿಲ್ಲ. ಅಂತಹ ದೇಹಗಳು ಬಲುಕಾಲ ಬಾಳುವುದಕ್ಕೆ ಲೌಕಿಕವಾದ ಉಪಚಾರಗಳು ತಕ್ಕಂತಿರಬೇಕು. ಸರಿಯಾದ ಸಹವಾಸಗಳಿರಬೇಕು. ಏನುಮಾಡಿದರೂ ಅವರು ವ್ಯವಹಾರದಲ್ಲಿ ಉದಾಸೀನರಾಗಿ ಬಿಡುತ್ತಾರೆ. ಜಡರಂತೆಯೂ ವೇಷತಾಳಿಬಿಡುತ್ತಾರೆ.

ಕೇಶವೈಂಗಾರ್ಯನಾದರೋ—ಬೆಳಗಾಗಿ ಏಳುತ್ತಲೇ ವಿಷ್ಣುಸಮುದ್ರದಲ್ಲಿ ಸ್ನಾನ ಮಾಡುವುದು, ಕೇಶವಸ್ವಾಮಿಯ ದೇವಸ್ಥಾನದಲ್ಲಿ ಕಾಲಕಳೆಯುವುದು, ಏಕಾಂತ ಸ್ಥಳದಲ್ಲಿ ಕುಳಿತು ಧ್ಯಾನಮಾಡುವುದು; ಈ ಮೂರರ ವಿನಾ ಅನ್ಯಕಾರ್ಯಗಳಿಗೆ ಹೋಗುತ್ತಿರಲಿಲ್ಲ. ಬುದ್ಧಿಶೂನ್ಯನೆನ್ನಲು ಅವನಲ್ಲಿ ಮಂಕುತನವಿರಲಿಲ್ಲ. ಪ್ರೌಢನೆನ್ನಲು ಜನರಲ್ಲಿ ಬೆರೆಯುತ್ತಿರಲಿಲ್ಲ. ಗುರುಹಿರಿಯರನ್ನು ಕಂಡರೆ ವಂದಿಸುತ್ತಿದ್ದನು. ಪ್ರಪಂಚದ ಮಾತೆತ್ತಿದರೆ ಆ ಸ್ಥಳ ಬಿಟ್ಟು ಏಕಾಂತವನ್ನು ಹುಡುಕುತ್ತಿದ್ದನು. ತೆಂಗಲೆ (ತೆನ್‌ಕಲೈ) ಯವನಾದ್ದರಿಂದ ದ್ರಾವಿಡಪ್ರಬಂಧದ ಭಕ್ತಿಜನಕಗಳಾದ ಪಾಶುರಗಳನ್ನು ಬಲು ಸುಶ್ರಾವ್ಯವಾಗಿ ಗಟ್ಟಿಯಾಗಿ ಹಾಡುತ್ತಿದ್ದನು. ಅವರ ಅರ್ಥವೇನೆಂದು ಕೇಳಿದರೆ, ಆನಂದ ಬಾಷ್ಪಗಳನ್ನು ಸುರಿಸುತ್ತಾ ಹೃದಯಂಗಮವಾಗುವಂತೆ ವಿವರಿಸುತ್ತಿದ್ದನು. ದ್ರಾವಿಡಪಾಶುರಗಳಂತೆ ಕನ್ನಡದಲ್ಲಿ ಶಬ್ದಗಳನ್ನು ಕೂಡಿಸಿ ಹಾಡುತ್ತಿದ್ದನು. ವಿವಿಧ ಪುಷ್ಪಗಳನ್ನು ಸಂಗ್ರಹಿಸಿ, ಪುಷ್ಪಗಳಿಂದಲೇ ಕಿರೀಟ ಕಟಕ ಕೇಯೂರ ಹಾರಾದಿಗಳನ್ನು ಸುಂದರವಾಗಿ ರಚಿಸಿ, ಕೇಶವಸ್ವಾಮಿಗೆ ಸಮರ್ಪಿಸುತ್ತಿದ್ದನು. ಉಪಾಧಿವಂತರೊಡನೆ ವೈಕುಂಠವರ್ಣನಾಸ್ತೋತ್ರವನ್ನು ಮನೋಹರವಾಗಿ ಹಾಡುತ್ತಿದ್ದನು. ದೇವಸ್ಥಾನದಲ್ಲಿ ತೀರ್ಥಪ್ರಸಾದ ದೊರೆತವಿನಾ ಮನೆಗೆ ಬರುತ್ತಿರಲಿಲ್ಲ. ದೇವಾಲಯದಲ್ಲೇ ವಿದ್ಯಾಕಾಲವಿರುವುದರಿಂದ ಅವನ ದೇವರ ಸೇವೆಗೆ ಮತ್ತಷ್ಟು ನಿರಾತಂಕವಾಗಿತ್ತು. ದೇವಸ್ಥಾನದಲ್ಲಿ ಹೆಚ್ಚು ಪ್ರಸಾದ ದೊರೆತರೆ ಮನೆಗೇ ಹೋಗುತ್ತಿರಲಿಲ್ಲ. ಜನರು—'ಏನಪ್ಪಾ ಹೀಗಿರುವೆ? ನಿನ್ನ ಮನಸ್ಸಿನಲ್ಲಿ ಮದುವೆ

ಸಿಗಲಿಲ್ಲವೆಂದು ಚಿಂತಿಸುವೆಯಾ? ನಿನಗೇನಾಗಬೇಕು ಹೇಳು!' ಎಂದು ಕೇಳುತ್ತಿದ್ದರು. ಕೇಶವನು–'ನನ್ನ ಚಿಂತೆಯನ್ನು ಪರಿಹರಿಸಲು ನಿಮ್ಮಿಂದ ಸಾಧ್ಯವಿಲ್ಲ, ನನ್ನ ಚಿಂತೆಯನ್ನು ಕೇಶವನೇ ಪರಿಹರಿಸಬೇಕು. ನನ್ನ ಚಿಂತೆಯನ್ನು ಕೇಳುವಿರಾದರೆ,– **"ನಾನು ಕೇಶವನನ್ನು ಕಾಣಬೇಕು, ಕೇಶವನೊಡನೆ ಸಖನಂತೆ, ಸೇವಕನಂತೆ, ಶಿಷ್ಯನಂತೆ ನಲಿದಾಡಬೇಕು."** ಹಾಗೆ ಮಾಡಿಸಿಕೊಡುವಿರಾ ನೀವು? ಎಂದು ಹೇಳುತ್ತಿದ್ದನು. ಜನರು ಅಯ್ಯಂಗಾರ್ಯನ ಗೊಡವೆಯನ್ನೇ ಬಿಟ್ಟರು. ಅವನದು ದೊಡ್ಡ ಮಾರ್ಗವೆನ್ನುತ್ತಿದ್ದರು. ಅದು ಈ ಕಲಿಯುಗದಲ್ಲಿ ಸಾಧ್ಯವಲ್ಲವೆನ್ನುತ್ತಿದ್ದರು.

ತಾಯಿ ತಂದೆಗಳು ಮಗನಿಗೆ ಮದುವೆಯಾದರೆ ಹೆಂಡತಿಯ ಮೇಲಣ ಆಸೆಯಿಂದ ಅವನು ಸಂಸಾರಿಯಾಗಬಹುದೆಂದು ತರ್ಕಿಸಿ ಸೌಮ್ಯನಾಯಕಿ ಎಂಬ ಸುಂದರ ಬಾಲಿಕೆಯನ್ನು ತಂದು ಬಲವಂತವಾಗಿ ಅವನಿಗೆ ಮದುವೆಮಾಡಿದರು. ಮದುವೆಯಾದೊಡನೆಯೇ ಕೇಶವನು ವಿವಾಹಮಂಟಪವನ್ನು ಬಿಟ್ಟು ದೇವಾಲಯಕ್ಕೆ ತೆರಳಿದನು. ಸಂಜೆಯಾದರೂ ಅವನು ಸಿಗಲಿಲ್ಲ. ತಾನಾಗಿ ಮನೆಗೂ ಬರಲಿಲ್ಲ. ವಧೂವರರ ಮಾತಾಪಿತೃಗಳು ದೇವಾಲಯವನ್ನು ಬಿಟ್ಟು ಎಲ್ಲೂ ಹೊರಹೋಗಿರಲಾರನೆಂದು ಹುಡುಕಿ ಮನೆಗೆ ಕರೆತಂದರು. ಕಂಕಣ ವಿಸರ್ಜನೆಯಾಗುವವರೆಗೆ ಮನೆಯನ್ನು ಬಿಟ್ಟು ಹೋಗಬಾರದೆಂದು ವಿಧಿಸಿದರು. ಕೇಶವನು ದೇವಸ್ಥಾನಕ್ಕೆ ಯಾವ ನಿರ್ಬಂಧವೂ ಇಲ್ಲವೆಂದನು. ಅವನಿಗೆ ಉದ್ವೇಗ ಬರದಂತೆ ಎಲ್ಲರೂ ಜಾಗರೂಕತೆಯಿಂದಿದ್ದರು. ವಿವಾಹದಿಂದ ಕೇಶವನ ಮನಸ್ಸು ಸಾಸಿವೆಯಷ್ಟಾದರೂ ಪರಿವರ್ತನವಾಗಲಿಲ್ಲ. ಕೇಶವಸ್ವಾಮಿಯನ್ನು ಕಾಣುವವರೆಗೆ ತಾನು ಬ್ರಹ್ಮಚರ್ಯವನ್ನೇ ಪಾಲಿಸುವೆನೆಂದು ಶಪಥಮಾಡಿದನು. ಒಂದು ದಿನವಾದರೂ ಉಷ್ಣೋದಕದಲ್ಲಿ ಸ್ನಾನಮಾಡಲಿಲ್ಲ. ತಾಂಬೂಲವನ್ನು ಸವಿಯಲಿಲ್ಲ. ಪುಷ್ಪವನ್ನು ಮುಡಿಯಲಿಲ್ಲ. ದರ್ಪಣವನ್ನು ನೋಡಲಿಲ್ಲ. ತಾಯಿಯಾದರೂ ಸ್ತ್ರೀಯೆಂದು ಎದುರಿಗೆ ನಿಂತು ಮಾತನಾಡಲಿಲ್ಲ. ಕಣ್ಣು ತೆರೆದು ನೋಡಲಿಲ್ಲ.

ಸೌಮ್ಯನಾಯಕಿಯು ಪುಷ್ಪವತಿಯಾಗಲು, ಅಯ್ಯಂಗಾರ್ಯನು ತನ್ನ ಸಂಕಲ್ಪ ಪೂರ್ತಿಯಾದ ವಿನಾ ನಿಷೇಕ ಮುಹೂರ್ತವಿಡಬಾರದೆಂದು ತನ್ನ ತಂದೆಗೆ ತಿಳಿಸಿದನು. ಉತ್ಸವಾಭಿಲಾಷಿಯಾದ ತಂದೆಯು, ಮಗನನ್ನು ಹಿರಿಯರ ಮಾತಿಗೆ ಪ್ರತಿ ಹೇಳಬಾರದೆಂದು, ಗದರಿಸಿ ಬೆದರಿಸಿ, ಬಲವಂತವಾಗಿ ಮುಹೂರ್ತವಿಡಿಸಿದನು. ಶೃಂಗಾರ ಗೃಹಕ್ಕೆ ತಾನೇ ಕೇಶವನನ್ನು ತಳ್ಳಿ ಕವಾಟಬಂಧನ ಮಾಡಿದನು. ಏನು ಮಾಡಿದರೇನು? ಕೇಶವನ ಮನಸ್ಸು ಚಲಿಸಲಿಲ್ಲ. ಮಂಚದಮೇಲೆ ಪದ್ಮಾಸನ ಹಾಕಿ ಕುಳಿತವನು ಕದಲಲಿಲ್ಲ. ಹೆಂಡತಿಯನ್ನು ನೀನಾರೆಂದು ಮಾತನಾಡಿಸಲಿಲ್ಲ. ಭಗವನ್ನಾಮಸ್ಮರಣೆಯಲ್ಲಿ ಮಗ್ನನಾಗಿ, ನಿದ್ರೆಯನ್ನೂ ಮಾಡದೆ, ಪ್ರಭಾತ ಸಮಯದಲ್ಲೆದ್ದು, ನಿತ್ಯಸಮುದ್ರದಲ್ಲಿ ಮಿಂದು ಎಂದಿನಂತೆ ದೇವಾಲಯಕ್ಕೆ ನಡೆದನು. ತಂದೆ ತಾಯಿಗಳಿಗಿಂತ ಅತ್ತೆ ಮಾವಂದಿರ ಚಿಂತೆ ಬಲವಾಯಿತು. ಮೂರ್ಖನಿಗೆ ಮಗಳನ್ನು ಕೊಟ್ಟೆವಲ್ಲಾ ಎಂದು ದುಃಖಿತರಾದರು. ಕೆಲವು ಕಾಲವನ್ನು ಪ್ರತೀಕ್ಷೆಗಾಗಿ ಕೇಶವಯ್ಯಂಗಾರ್ಯನ ತಾಯಿ ತಂದೆಗಳು

ಮೃತರಾದರು. ಅಯ್ಯಂಗಾರ್ಯನು ಅಷ್ಟಾದರೂ ಹೆಂಡತಿಯನ್ನು ಕರೆತಂದು ಮನೆಯಲ್ಲಿ ಸಂಸಾರಮಾಡಲಿಲ್ಲ. ಬಲವಂತವಾಗಿ ಹೆಂಡತಿಯನ್ನು ತಂದು ಮನೆಯಲ್ಲಿ ಬಿಟ್ಟರೆ ಆಕೆಯೊಡನೆ ಸರಿಯಾಗಿ ಮಾತನಾಡುತ್ತಲೂ ಇರಲಿಲ್ಲ.

ಸೌಮ್ಯನಾಯಕಿಯು ಮಿಕ್ಕ ಹೆಂಗಳೆಯರಂತೆ ಖಿನ್ನಮನಸ್ಕಳಾಗಲಿಲ್ಲ. ತನ್ನನ್ನು ಮಾತನಾಡಿಸದಿದ್ದರೂ ಪತಿಸೇವೆ ಮಾಡುವುದನ್ನು ಬಿಡಲಿಲ್ಲ. ತಾನೂ ವಿರಕ್ತಳಾಗಿ ಪತಿಯ ಮನೋಭಿಲಾಷೆಯನ್ನು ಸಲ್ಲಿಸೆಂದು ಶ್ರೀ ಕೇಶವಸ್ವಾಮಿಯ ದೇವಾಲಯದಲ್ಲಿ ಸೇವೆಗಾರಂಭಿಸಿದಳು. ಪತಿಯ ಪುಷ್ಪ ಕೈಂಕರ್ಯಕ್ಕೆ ಸಹಾಯಕಳಾದಳು.

ಸೌಮ್ಯನಾಯಕಿಯ ಓರಿಗೆಯ ತರುಣಿಯರು ಅಪಳಿಮರಾಗಿಯೇ – 'ನಿನ್ನ ಗಂಡನು ಅರಸಿಕ, ನಿನ್ನ ಗಂಡನು ಪುರುಷನಲ್ಲ, ಪುರುಷನಾಗಿದ್ದರೆ ನಿನ್ನೊಡನೆ ಸರಸವಾಡುತ್ತಿರಲಿಲ್ಲವೆ?' ಎಂದು ಮೊದಲಾಗಿ ಹೀಯಾಳಿಸುತ್ತಿದ್ದರು. ಅದನ್ನು ಕೇಳಿ ಆ ಸಾಧ್ವಿಯು ಸೈರಿಸಲಾರದೇಹೋದಳು. ಪತಿಯ ಪಾದಗಳಿಗೆ ಕಂಬನಿಗರೆಯುತ್ತಾ, ನಮಸ್ಕರಿಸಿದಳು. – ನಾಥಾ ನಾನು ತಮ್ಮ ಚರಣಕಮಲ ದಾಸಿಯಲ್ಲವೆ? ನಾನೇನು ತಮ್ಮ ಸಂಕಲ್ಪಕ್ಕೆ ವಿರೋಧಿಸುವುದಿಲ್ಲ. ನನ್ನೊಡನೆ ಮಾತನಾಡಿದ ಮಾತ್ರಕ್ಕೆ ತಮಗೆ ಪಾಪ ಬರುವುದಿಲ್ಲ. ತಮಗೆ ಕೇಶವನ ದರ್ಶನವಾದರೆ ನನಗೂ ದರ್ಶನ ಮಾಡಿಸಬೇಕು. ನಿರಂತರವೂ ನನ್ನ ಸೇವೆಯನ್ನು ಸ್ವೀಕರಿಸಬೇಕು. ಇದಕ್ಕಿಂತ ಹೆಚ್ಚಿನ ಪ್ರಾರ್ಥನೆ ಮಾಡುವವಳು ನಾನಲ್ಲ'ವೆಂದಳು. ಮತ್ತೆ ಬಿಕ್ಕಿ ಬಿಕ್ಕಿ ಆ ತನ್ನ ಪತಿಯ ಪಾದಗಳನ್ನು ಹಿಡಿದು ರೋದಿಸಿದಳು.

ಸೌಮ್ಯನಾಯಕಿಯ ಮನೋವೃತ್ತಿಯನ್ನರಿತು ಅಯ್ಯಂಗಾರ್ಯನು,–"ಸರಿ, ನೀನು ಹೇಳಿದ್ದು ಸರಿ. ನಾನೇನು ನಿನ್ನನ್ನು ದ್ವೇಷಿಸುತ್ತಿಲ್ಲ. ನನ್ನ ಸಂಕಲ್ಪ ನೆರವೇರಬೇಕು. ಅನಂತರ ನಾವು ದಂಪತಿಗಳಾಗುವೆವು. **'ಸ್ತ್ರೀಯರು ಮೊರೆಯಿಟ್ಟರೆ ಕೇಶವನಿಗೆ ಮನಕರಗುವುದಂತೆ! ಹಿಂದೆ ದ್ರೌಪದಿಯ ಮೊರೆಗೇಳಿ ಕೃಷ್ಣನು ದೂರ್ವಾಸರ ಕೋಪಾಗ್ನಿಗೆ ಸಿಲುಕಿದ್ದ ಪಾಂಡವರನ್ನು ಸಲಹಿದನಂತೆ!'** ನೀನೂ ಸ್ವಾಮಿಯನ್ನು ಪ್ರಾರ್ಥಿಸು, ಒಲಿಯುವನು ಉಭಯರಿಗೂ ಒಲಿಯಲಿ. ನಾನು ದೇವಾಲಯಕ್ಕೆ ಹೋಗುವೆನು" ಎಂದು ಸಮಾಧಾನ ಮಾಡಿದನು. ಪಾಣಿಗ್ರಹಣ ಮಾಡಿದ ಹತ್ತು ವರ್ಷಕ್ಕೆ ಪತಿಯ ಒಂದುತ್ತರ ದೊರೆಯಿತೆಂದು ಸೌಮ್ಯನಾಯಕಿಯು ಸಂತುಷ್ಟಳಾದಳು. ಭಯವಿಲ್ಲದೆ ಪತಿಯೊಡನೆ ದೇವಾಲಯಕ್ಕೆ ಹೋಗುವ ಭಾಗ್ಯ ದೊರೆಯಿತೆಂದು ಆನಂದಿಸಿದಳು.

ದಂಪತಿಗಳ ಪರಿಪಕ್ವ ದೆಸೆಯನ್ನು ನೋಡಿ ಸ್ವಾಮಿಯಾದರೂ ಹೆಚ್ಚುಕಾಲ ಪರೀಕ್ಷಿಸಲಿಲ್ಲ. ಮಹಾಮುನಿಗಳ ತಪಸ್ಸಿಗೆ ಮೆಚ್ಚಿ ಪ್ರಸನ್ನನಾಗುವಂತೆ ಶಂಖ ಚಕ್ರ ಗದಾ ಪದ್ಮಪಾಣಿಯಾಗಿ ಪೀತಾಂಬರಧಾರಿಯಾಗಿ ದಿವ್ಯದರ್ಶನವಿತ್ತನು. ಕೇಶವೈಂಗಾರ್ಯನು ಪರವಶನಾಗಿಹೋದನು. ಸ್ವಾಮಿಯು–'ಈಗ ನಿನ್ನ ಮನೋರಥ ಸಿದ್ಧಿಸಿತೇ? ಇನ್ನಾದರೂ ನಿನ್ನ ಕಠಿಣ ವ್ರತವನ್ನು ಬಿಡುವೆಯಾ? ತಂಗಿಯೊಡನೆ ಸುಖದಿಂದಿರು

ನೆಯಾ? ನಿನಗೇನುಬೇಕು? ಬೇಕಾದುದನ್ನು ಕೊಡುವೆನು ಕೇಳು' ಎಂದು ಅಯ್ಯಂಗಾರ್ಯನ ತಲೆಯಮೇಲೆ ವರದ ಹಸ್ತವನ್ನಿಟ್ಟು ಸ್ನೇಹದಿ ಪ್ರಶ್ನೆಮಾಡಿದನು. ಅಯ್ಯಂಗಾರ್ಯನು–'ದೇವದೇವ, ಯಾವ ಸಾಧನೆಗೆ ಯಾವುದು ಮಹಾಫಲವೋ ಆ ಫಲರೂಪವಾಗಿ ನೀನೇ ಪ್ರಸನ್ನನಾದಮೇಲೆ ನಾನು ಕೇಳುವುದೇನಿದೆ? ನಶ್ವರವಾದ ಭೋಗಭಾಗ್ಯಗಳನ್ನು ಬಯಸುವವನು ನಾನಲ್ಲ. ನಾನು ನಿನ್ನನ್ನು ಬಿಡುವುದೆಂದರೆ–ನಿರಂತರ ಸ್ವಾಮಿಯಾಗಿ ಸಖನಾಗಿ ನೀನು ನನಗೆ ದರ್ಶನ ಕೊಡಬೇಕು. ನಿನ್ನೊಡನಾಡಿಕೊಂಡು, ನಾನಿರಬೇಕು. ಮತ್ತೇನು ಬೇಡಲಿ ದೇವ?' ಎಂದು ಸಾಷ್ಟಾಂಗ ನಮಸ್ಕಾರ ಮಾಡಿದನು.

ದೇವದೇವನು–'ಇಂದಿನಿಂದ ನೀನು ನನ್ನ ದಾಸನಾದೆ. ನಿನ್ನೊಡನೆ ನಾನು ಸಖನಾಗಿ ಸ್ವಾಮಿಯಾಗಿರುವುದು ಮಾತ್ರವಲ್ಲ; ಸೇವಕನಾಗಿಯೂ ವಿಹರಿಸುವೆನು. ತಂಗಿಯು ಬಲು ಬಳಲಿರುವಳು. ಇಂದಿನಿಂದ ನೀನು ಅವಳೊಡನೆ ಸುಖದಿಂದಿರು' ಎಂದು ವರವಿತ್ತು ಅದೃಶ್ಯನಾದನು.

ಪರಮಾತ್ಮನು ಪ್ರತ್ಯಕ್ಷನಾದ ದಿನದಿಂದ ಅಯ್ಯಂಗಾರ್ಯನು **ವೈಕುಂಠ ಕೇಶವ** ಮುದ್ರಿಕೆಯಿಂದ ಕನ್ನಡದಲ್ಲಿ ದೇವರನಾಮಗಳನ್ನು ಹಾಡಲಾರಂಭಿಸಿದನು. ಅಯ್ಯಂಗಾರ್ಯನೆಂಬ ಮಾತೇ ಕಾಲಕ್ರಮದಲ್ಲಿ ಮರೆತುಹೋಗಿ **ವೈಕುಂಠದಾಸ**ರೆಂಬ ಹೆಸರಾಯಿತು. ದಾಸ ದಂಪತಿಗಳು ಸುಖದಿಂದ ವಾಸಮಾಡಿದರು. ಸೌಮ್ಯನಾಯಕಿಗೂ ವಿವಿಧರೂಪದಿಂದ ಪರಮಾತ್ಮನ ದರ್ಶನವಾಗಿ ಆಕೆಯೂ ಮಹಾ ಜ್ಞಾನಿಯೆನ್ನಿಸಿದಳು.

೨

ವೇಲಾಪುರೀ ಮಾಹಾತ್ಮ್ಯ

ಬೇಲೂರೆಂಬುವುದು ವೇಲಾಪುರಿ ಎಂಬ ಮೂಲಪದದ ತದ್ಭವರೂಪ. ಸಂಸ್ಕೃತದಲ್ಲಿ ವೇಲಾಪುರಿಯೆಂಬ ಮಾತು ರೂಢಿಯಲ್ಲಿದೆ. ದಾಸರಪದಗಳಲ್ಲಿ ವೇಲಾಪುರಿ ವೇಲಾಪುರವೆಂಬ ಶಬ್ದಗಳ ಪ್ರಯೋಗ ಬಲುಕಡೆ ಬಂದಿವೆ. ಕ್ಷೇತ್ರಸ್ವಾಮಿ ಸೌಮ್ಯ ಕೇಶವನ ದೇವಾಲಯ ಪ್ರವೇಶ ಮಾಡುವಾಗ ಭಕ್ತಜನರು—

ನಮಃ ಕೇಶವನಾಥಾಯ ನಯನಾನಂದ ಮೂರ್ತಯೇ ।
ವೇಲಾಪುರಿ ನಿವಾಸಾಯ ಸತ್ಯಜ್ಞಾನಾಯ ವಿಷ್ಣವೇ ॥

ಎಂಬುದಾಗಿ ಧ್ಯಾನಿಸಿ—

ಸತ್ಯ ಸತ್ಯ ಪ್ರನಸ್ಸತ್ಯಂ ಉಧೃತ್ಯಭುಜಮುಚ್ಯತೇ ।
ವೇದಶಾಸ್ತ್ರಾತ್ಪರಂ ನಾಸ್ತಿ ನದೈವಂ ಕೇಶವಾತ್ಪರಂ ॥

ಎಂದು ನಮಸ್ಕಾರ ಮಾಡುತ್ತಾರೆ.

ಪ್ರಕೃತ ದೇವಾಲಯವಿರುವ ಸ್ಥಳವು ವೇಲ, ಪುರಿ ಎಂಬ ಹೆಸರಿನ ಇಬ್ಬರು ಪರಿಜನರಿಗೆ (ಅಸ್ಪೃಶ್ಯರಿಗೆ) ಸೇರಿತ್ತಂತೆ! ಆ ಸ್ಥಳವನ್ನು ದೇವಾಲಯಕ್ಕೆ ಕೊಡುವಾಗ

ಮೇಲ್ಕಂಡ ಹರಿಜನರು ವರ್ಷಕ್ಕೆ ಮೂರುದಿವಸ ರಥೋತ್ಸವ ಕಾಲದಲ್ಲಿ ತಮ್ಮ ಜನರಿಗೆ ಪ್ರವೇಶ ಸ್ವಾತಂತ್ರ್ಯವಿರಬೇಕೆಂದು ನಿಬಂಧನೆ ಮಾಡಿಕೊಂಡರಂತೆ! ಆ ಕಾರಣ **ವೇಲಾಪುರಿ**ಯೆಂದು ಕ್ಷೇತ್ರದ ಹೆಸರಾಯಿತಂತೆ!

ಸ್ಥಳ ಪುರಾಣದಲ್ಲಿ ಕೇಶವಸ್ವಾಮಿಯು ಗೌತಮ ಮಹಾಮುನಿಗಳ ಆರಾಧನೆಯಲ್ಲಿದ್ದ ಮೂರ್ತಿಯೆಂದು ಉಕ್ತವಾಗಿದೆ. ಆ ಮೂರ್ತಿಯು ಚಂದ್ರದ್ರೋಣ ಪರ್ವತ ಪ್ರಾಂತದಲ್ಲಿ ಭೂಗತವಾಗಿತ್ತು. ವಿಷ್ಣುವರ್ಧನ ಮಹಾರಾಯನು ರಾಮಾನುಜಾಚಾರ್ಯರ ಶಿಷ್ಯನಾಗಿ ವೈಷ್ಣವ ಮತವನ್ನು ಅವಲಂಬಿಸಿದಮೇಲೆ, ಬೇಲೂರಿನ ಭವ್ಯ ದೇವಾಲಯವನ್ನು ಕಟ್ಟಿಸಿದನು. ಚಂದ್ರದ್ರೋಣ ಪರ್ವತದಲ್ಲಿ ದೊರೆತ ಕೇಶವಮೂರ್ತಿಯನ್ನು ತಂದು ಪ್ರತಿಷ್ಠಿಸಿದನು. ದೇವಾಲಯದಲ್ಲಿ ನಡೆಯುವ ಒಂದೊಂದು ಮಹೋತ್ಸವಕ್ಕೂ ಉಪಯುಕ್ತವೆನ್ನಿಸುವಂತೆ ಅಪರಿಮಿತವಾದ ಜಹಗೀರುಗಳನ್ನು ಕೊಟ್ಟನು. ಅನರ್ಘ್ಯವಾದ ಆಭರಣಗಳನ್ನು ಸ್ವಾಮಿಗೆ ಕಾಣಿಕೆಯಾಗಿ ನೀಡಿದನು.

ಆ ಕಾಲದಿಂದಲೂ ಬೇಲೂರು ಮಹಾಕ್ಷೇತ್ರವೆನ್ನಿಸಿತು. ವಿಷ್ಣುವರ್ಧನರಾಯನು ಕಟ್ಟಿಸಿದ ವಿಷ್ಣುಸಮುದ್ರವು ಮಹಾತೀರ್ಥವೆನ್ನಿಸಿತು. ತಟಾಕರಚನಾಕಾಲದಲ್ಲಿ ದೊರೆತ ದೊಡ್ಡ **ಬಲಮುರೀ ಶಂಖ**ವೊಂದು ಅದ್ಯಾಪಿ ದೇವಾಲಯದಲ್ಲಿದೆ. ಅಲ್ಲಿ ದೊರೆತ ಸಾಲಿಗ್ರಾಮಗಳೇ ಸ್ವಾಮಿಯ ಆಕಂಠಮಾಲೆಯಾಗಿವೆ.

ಬೇಲೂರು ಹೊಯ್ಸಳರ ರಾಜಧಾನಿಯಾಗಿದ್ದ ಕಾರಣ ದೊಡ್ಡ ವಿದ್ಯಾಕೇಂದ್ರವೆನಿಸಿತ್ತು. ಅನೇಕ ಕವಿಗಳೂ ಸತ್ಪುರುಷರೂ ಬೇಲೂರಿನಲ್ಲಿ ಜನ್ಮತಾಳಿದರು. ಸತ್ಪುರುಷರ ಮಹಿಮಾತಿಶಯದಿಂದ ಬೇಲೂರು ಭೂವೈಕುಂಠವೆನಿಸಿತು. ವೈಕುಂಠದಾಸರ ಕಾಲದಲ್ಲಿ ಬೇಲೂರಿನ ಕೀರ್ತಿ ವಿಜಯನಗರದಲ್ಲಿ ವ್ಯಾಪಿಸಿತು. ವ್ಯಾಸರಾಯರಂಥಾ ಮಹಾಪುರುಷರು ಬೇಲೂರಿಗೆ ಯಾತ್ರಿಕರಾಗಿ ಬಂದರು. ವೈಕುಂಠದಾಸರಿಗೂ ವ್ಯಾಸರಾಯರಿಗೂ ಬಹಳ ಪರಿಚಯವಾಗಿ, ಉಭಯರಿಂದ ಕೇಶವನ ಮಹಿಮೆಯು ದಿಗ್ದೇಶಗಳಲ್ಲಿ ಪ್ರಸಿದ್ಧವಾಯಿತು. ಪಂಢರಪುರ ತಿರುಪತಿ ಕ್ಷೇತ್ರಗಳ ಪಙ್ಕ್ತಿಯಲ್ಲಿ ಬೇಲೂರೂ ಸೇರಿ ಹರಿದಾಸರಿಗೆ ಒಂದು ಮುಖ್ಯ ಸ್ಥಾನವೆನಿಸಿತು.

‘ಪರಮಾತ್ಮನು ಸರ್ವತ್ರ ಇದ್ದಾನೆ; ಅವನಿರುವ ಸ್ಥಳಕ್ಕೆ ವೈಕುಂಠವೆಂದು ಹೆಸರು; ಎಲ್ಲ ಭೂತಲವೂ, ವೃಕ್ಷಗಳೂ, ಪರ್ವತಗಳೂ, ಕ್ಷೇತ್ರಗಳೆನಿಸುವುವು; ನಿರ್ಮಲೋದಕಗಳು ಮಹಾತೀರ್ಥಗಳು; ಅವೇ ಅವನ ಪಾದೋದ್ಭವೆಯಾದ ಗಂಗೆ; ಜೀವರಾಶಿಗಳು ಪರಮಾತ್ಮನಿಗೆ ಪ್ರತೀಕಗಳು; ಅವರು ಮಾಡುವ ಭೋಜನವು ಆ ಪರಮಾತ್ಮನಿಗೆ ನೈವೇದ್ಯವು; ತಿರುಗುವುದೆಲ್ಲಾ ಮಹಾಯಾತ್ರೆ;’ ಎಂದು ಭಾವಿಸುವ ಸತ್ಪುರುಷರಿರುವ ಸ್ಥಾನಗಳು ಭೂವೈಕುಂಠನಾಮದಿಂದ ಕರೆಸಿಕೊಳ್ಳುವುದೇನರಿದು ?

ಮಹಾನುಭಾವರಾದ ಜಗನ್ನಾಥದಾಸರು ಈ ಅಭಿಪ್ರಾಯವನ್ನೊಳಗೊಂಡ—

ಭಾ.ಪ :—ಮೇದಿನಿಯ ಮೇಲುಳ್ಳ ಗೋಷ್ಪಾ
ದೋದಕಗಳೆಲ್ಲಮಲ ತೀರ್ಥವು
ಪಾದಚಾರಿ ಧರಾತಳವೆ ಸುಕ್ಷೇತ್ರ ಭವಗಣ ॥
ಶ್ರೀಧರನ ಪ್ರತಿಮೆಗಳು ಅವರುಂ
ಬೋದನವೆ ನೈವೇದ್ಯ ನಿತ್ಯದಿ
ಹಾದಿ ನಡೆವುದೆ ಯಾತ್ರೆಯೆಂದೆನಿಪರ್ಗಳ ಭಜಿಸು ॥

ಎಂಬ ಪದ್ಯವನ್ನು ಹರಿಕಥಾಮೃತಸಾರದಲ್ಲಿ ಬರೆದಿರುತ್ತಾರೆ.

ಸಾಮಾನ್ಯವಾಗಿ ಕಂಡುಬರುವ ಸ್ಥಳಗಳು ಮಹಾಸ್ಥಳಗಳಾಗಬೇಕಾದರೆ, ಮಹಾಪುರುಷರ ಆವಾಸವಾಗಬೇಕು. ಅವರಿಂದ ಅಲ್ಲಿ ಮಹಾಮಹಿಮನಾದ ಭಗವಂತನ ಮಹಿಮೆಗಳು ಪ್ರಕಟವಾಗಬೇಕು. ಎಲ್ಲಕ್ಕೂ ಮನಸ್ಸು ಕಾರಣ. ಮನಶ್ಶಕ್ತಿಯು ದೇಹ ಪಾವಿತ್ರ್ಯದಿಂದುಂಟಾಗುವುದು. ದೇಹ ಪಾವಿತ್ರ್ಯತೆಗೆ ಆಹಾರವು ಸಾತ್ವಿಕವಾದುದಾಗಿರಬೇಕು. ಜಡದೇಹ ಶುದ್ಧಿಯಿಂದ ಯುಕ್ತವಾದ ಸದ್ಭಾವನೆ ಸತ್ಸಹವಾಸಗಳಿಲ್ಲದೆ ಮಹತ್ವದ ಕಾರ್ಯ ಕಾರಣಗಳಾಗುವುದಿಲ್ಲ. ಮನಸ್ಸಿನ ಬಲದಿಂದ ಮಹಾತ್ಮರು ಅಘಟಿತ ಕಾರ್ಯಗಳನ್ನು ಘಟನೆ ಮಾಡುವರು. ಬಲವತ್ತರವಾದ ಮನಶ್ಶಕ್ತಿಯಿಂದ ಶ್ರೀ ಪುರಂದರ ದಾಸರ ಕಿರಿಯ ಕುಮಾರನಾದ ಮಧ್ವಪತಿಯು ಕಲ್ಲುಮಾರುತಿಯ ಬಾಯನ್ನು ಬಿಡಿಸಿ ಭೋಜನ ಮಾಡಿಸಿದನು. ಮನಶ್ಶಕ್ತಿಯಿಂದ ವ್ಯಾಸರಾಯರು ಗೋಪಾಲಕೃಷ್ಣಮೂರ್ತಿಯಿಂದ ತಾಂಡವನೃತ್ಯ ಮಾಡಿಸಿದರು. ಮನಶ್ಶಕ್ತಿಯಿಂದ ಶ್ರೀ ಶ್ರೀಪಾದರಾಯರು ನರಸಿಂಹತೀರ್ಥದಲ್ಲಿ ಗಂಗಾದೇವಿಯನ್ನು ಬರಮಾಡಿದರು. ಮನಶ್ಶಕ್ತಿಯಿಂದಲೇ ವಾದಿರಾಜರು ಮರಣವನ್ನು ಜಯಿಸಿದರು.

ಇವತ್ತಿನ ದಿವಸದಲ್ಲೂ ಮಹಾತ್ಮಾ ಗಾಂಧಿಯವರ ಮನಶ್ಶಕ್ತಿಯಲ್ಲವೆ ಶತಮಾನಗಳಿಂದ ಪರಿಹಾರವಾಗದ ಸ್ಪೃಶ್ಯಾಸ್ಪೃಶ್ಯ ಸಮಸ್ಯೆಯನ್ನು ಪರಿಹರಿಸಿದುದು? ಅವರ **ಉಪವಾಸ ಸಪ್ತಾಹ**ವಲ್ಲವೆ ಇಡೀ ಜಗತ್ತನ್ನು ತಳಮಳಗೊಳಿಸಿದುದು?

ಅಂತೆಯೇ, ವೈಕುಂಠದಾಸರ ಮನಶ್ಶಕ್ತಿಯಿಂದ ಶಿಲಾರೂಪಿ ಕೇಶವನು ವಿವಿಧ ಚರ್ಯೆಗಳನ್ನು ತೋರಿಸಿ ಆನಂದಪಡಿಸಿದನು. ಸಖನಂತೆ ಸ್ವಾಮಿಯಂತೆ ಸೇವಕನಂತೆ ವಿಚಿತ್ರ ವೈಭವಗಳನ್ನು ತೋರಿಸಿದನು. ಅತ್ರಿ ಪತ್ನಿ ಅನಸೂಯೆಯು ತನ್ನ ಮನಶ್ಶಕ್ತಿಯಿಂದ ತ್ರಿಮೂರ್ತಿಗಳನ್ನು ಶಿಶುಗಳನ್ನಾಗಿ ಮಾಡಿ ಜೋಗುಳ ಹಾಡಿದಂತೆ, ದಾಸರ ಪತ್ನಿ ಸೌಮ್ಯನಾಯಕಿಯು ಕೇಶವನನ್ನು ಕೂಸಾಗಿ ಮಾಡಿ ತೊಟ್ಟಿಲಲ್ಲಿಟ್ಟು ತೂಗಿದಳು. ಶ್ರೀಕೃಷ್ಣನು ತನ್ನ ಬಾಲಲೀಲೆಯನ್ನು ದಾಸದಂಪತಿಗಳ ತೊಡೆಯ ಮೇಲ್ಮಲಗಿ ತೋರಿಸಿ ಮೋಹಗೊಳಿಸಿದನು.

ವೈಕುಂಠದಾಸರು ಅರ್ಜುನಾಂಶರೆಂಬುದೂ, ಸೌಮ್ಯನಾಯಕಿಯು ಉಲೂಪಿಯೆಂಬ ನಾಗಕನ್ನಿಕೆಯೆಂಬುದೂ ಅನುಭವಿಗಳ ಅಭಿಪ್ರಾಯವಾಗಿದೆ. ಇಷ್ಟುಮಾತ್ರದಿಂದ ಜನ್ಮತಾಳಿ ಲೋಕದ ಸಾಮಾನ್ಯಜನರಿಗೆ ಮಾರ್ಗದರ್ಶಕರಾಗುವ ಮಹೋನ್ನತರ ಗುಪ್ತ

ಚರ್ಯೆಗಳನ್ನು ತಿಳಿವ ಬಗೆಯೆಂತು! ಅವರನ್ನು ನೀವೇಕೆ ಹೀಗೆ ಮಾಡುವಿರೆಂದು ಕೇಳುವರ್ಯಾರು?

ವೈಕುಂಠದಾಸರಿಗೆ ಒಬ್ಬಳೇ ಹೆಣ್ಣು ಮಗಳಾಗಿದ್ದಂತೆ ತಿಳಿದುಬರುತ್ತದೆ. ಬೇಕೆಂದೇ ದಾಸರು ತಮ್ಮ ಔರಸ ಸಂತತಿಯನ್ನು ಬೆಳೆಸಲಿಲ್ಲವಂತೆ! ತಮ್ಮ ಸಂತತಿಯಲ್ಲಿ ಅಯೋಗ್ಯರು ಜನಿಸಿ ತಮ್ಮ ಪಿತೃವರ್ಗಕ್ಕೆ ಕಳಂಕ ತರಕೂಡದೆಂದು ಹೇಳುತ್ತಿದ್ದರಂತೆ! ಶ್ರೀಪತಿಯೇ ತನ್ನ ಬಾಲಲೀಲೆಯನ್ನು ತೋರಿಸುತ್ತಿರುವಾಗ ತಮಗಿನ್ನು ಮಕ್ಕಳೇಕೆಂದು ಹೇಳುತ್ತಿದ್ದರಂತೆ.

ದಾಸರನ್ನು ಮೊದಮೊದಲು ಹುಚ್ಚನೆಂದು ಕರೆಯುತ್ತಿದ್ದ ಜನರು, ಅವರಿಗಾದ ದೈವಾನುಗ್ರಹವನ್ನು ನೋಡಿ ಕೊನೆಗೆ ತಾವೇ ಹುಚ್ಚರಾದರು. ದಾಸರಿಗೆ ಶರಣಾಗತರಾಗಿ ಶಿಷ್ಯರಾದರು. ಅರಸಿಕ ಮನುಷ್ಯ, ನಪುಂಸಕ, ಹೇಡಿ ಎಂದು ಮುಂತಾಗಿ ಸೌಮ್ಯ ನಾಯಕಿಯ ಮುಂದಾಡಿಕೊಳ್ಳುತ್ತಿದ್ದ ಹೆಂಗಳೆಯರು ಮಂಗಗಳಂತಾದರು. ದಾಸರಿಗೆ ಬ್ರಾಹ್ಮಣರು ಮಾತ್ರವೇ ಶಿಷ್ಯರಾದರೆಂತಲ್ಲ; ಭಜನಗೋಷ್ಠಿಯಲ್ಲಿ ಸಕಲ ಜಾತಿಯವರೂ ಬೆರೆದು ಅಪರ ದಾಸಾನುದಾಸರಾದರು.

ಇಂತು ಪರಿಪರಿಯಾಗಿ ಪರಮಾತ್ಮನೇ ಒಲಿದು ನಲಿಯುತ್ತಿರಲು, ದಾಸರಿಗೆ ಶ್ರೀರಂಗಯಾತ್ರೆ ಮಾಡಬೇಕೆಂಬ ಬಯಕೆಯಾಯಿತು. ಶ್ರೀವೈಷ್ಣವರಿಗೆ **ಶ್ರೀರಂಗ ಕಾಂಚೀಪುರ**ಗಳೆಂದರೆ ಬಲು ಅಭಿಮಾನ. ರಾಮಾನುಜಾಚಾರ್ಯರು ಆ ಸ್ಥಳಗಳಲ್ಲಿ ಬಹುಕಾಲವಿದ್ದು ಆ ಮೂರ್ತಿಗಳನ್ನು ಕೊಂಡಾಡಿರುವುದರಿಂದ, ಅಲ್ಲಿಗೆ ಹೋಗಿಬರಬೇಕೆಂದು ಆ ಜನರು ವಿಶೇಷ ಮಮತೆಯಿಂದ ಬಯಸುವರು. ವೈಕುಂಠದಾಸರೂ ಶ್ರೀರಂಗವನ್ನು 'ಪಾಡಿನ ಎಡಂ' ಎಂಬ ಭಕ್ತಿಯಿಂದ ನೋಡಬೇಕೆಂದು, ಹೆಂಡತಿಯನ್ನೂ ಕರೆದುಕೊಳ್ಳದೆ ಒಬ್ಬರೇ ಪ್ರಯಾಣಮಾಡಿದರು. ಕೇಶವನು ದಾಸರ ಮಾರ್ಗದಲ್ಲಿ ಮಳೆಗರೆದು ಹುಲಿ ಕರಡಿಗಳ ರೂಪದಿಂದ ಭಯಪ್ರದರ್ಶನಮಾಡಿ, 'ಸಾಕುಸಾಕು ಶ್ರೀರಂಗಯಾತ್ರೆ, ಎನ್ನುವಂತೆ ಮಾಡಿದನು. ದಾಸರು–'ಕೇಶವ, ನಾನು ರಂಗಯಾತ್ರೆ ಮಾಡುವುದು ನಿನ್ನ ಚಿತ್ತದಲ್ಲಿಲ್ಲವೆ? ಮಾರ್ಗದಲ್ಲಿವೇನು ಭಯಪ್ರದರ್ಶನ!" ಎಂದು ಸ್ವಾಮಿಗೆ ಮೊರೆಯಿಟ್ಟರು. ಕಪಟನಾಟಕಸೂತ್ರಧಾರಿಯಾದ ಶ್ರೀಹರಿಯು ಬ್ರಾಹ್ಮಣರೂಪದಿಂದ ದರ್ಶನವಿತ್ತು–'ನಾನಿರುವ ಸ್ಥಳವು ಶ್ರೀರಂಗವಲ್ಲವೆ?' ಎಂದು ನುಡಿದು ಅದೃಶ್ಯನಾದನು. ದಾಸರು ತಮಗುಂಟಾದ ಸಂದೇಹಕ್ಕೆ ಪಶ್ಚಾತ್ತಾಪಪಟ್ಟು, ಕೇಶವನನ್ನು ಕ್ಷಮೆಬೇಡಿ ಹಿಂದಿರುಗಿದರು. ಅನಂತರ ದಾಸರು ಬೇಲೂರನ್ನು ಬಿಟ್ಟು ಕದಚಲನೆ ಮಾಡಲಿಲ್ಲ. ಶ್ರೀರಂಗಯಾತ್ರಾ ನಿಮಿತ್ತ ಮಾರ್ಗದಲ್ಲಿ ಎದುರಿಗೆ ಬಂದ, ಹೆತ್ತುತ್ತೈಲಿ ಯಾತ್ರೆಯೇ ದಾಸರಿಗೆ ಮಹಾಯಾತ್ರೆಯಾಗಿ ಹೋಯಿತು. ಈ ಅಭಿಪ್ರಾಯವನ್ನು ವೈಕುಂಠದಾಸರು 'ಶ್ರೀರಂಗಯಾತ್ರೆಯನು ಮಾಡುವೆನೆನಲು' ಎಂಬ ದೇವರನಾಮದಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ.

ಬೇಲೂರಿನಲ್ಲಿ ನಂಜಪ್ಪ ಮಾದಮ್ಮ ಎಂಬ ಹೆಸರಿನ ಬಡದಂಪತಿಗಳು ವೈಕುಂಠ

ದಾಸರ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದರು. ನಂಜಪ್ಪನು ವೀರಶೈವನಾಗಿದ್ದುದರಿಂದ ಕನ್ನಡ ಭಾಷೆಯ ಶೈವಗ್ರಂಥಗಳನ್ನು ಚೆನ್ನಾಗಿ ಪಠಿಸಿ ಸಮದೃಷ್ಟಿಯುಳ್ಳವನಾಗಿದ್ದನು. ದಾಸಗೋಷ್ಠಿಯಲ್ಲಿ ನಂಜಪ್ಪನು ಕನ್ನಡ ಜಾಣನೆನಿಸಿ ಒಳ್ಳೊಳ್ಳೇ ಪದಗಳನ್ನು ಹಾಡುತ್ತಿದ್ದನು. ಮಾದಮ್ಮನನ್ನು ಜನರು ಶರಣಮ್ಮನೆಂದು ಕರೆಯುತ್ತಿದ್ದರು. ಮಾದಮ್ಮನ ದುರ್ದೈವದಿಂದ ನಂಜಪ್ಪನು ಕಾಲವಶನಾದನು. ದಂಪತಿಗಳು ಸಂತತಿಹೀನರಾಗಿದ್ದುದರಿಂದ, ದಾಯಾದರು ಅವರ ಆಸ್ತಿಪಾಸ್ತಿ ಸ್ವತ್ತುಗಳನ್ನೂ ಅಪಹರಿಸಿದರು. ಮಾದಮ್ಮನಿಗೆ ಇರುವುದಕ್ಕೆ ಮನೆ ಸಹ ದೊರೆಯಲಿಲ್ಲ. ಚಿಕ್ಕವಯಸ್ಸಿನ ಅನಾಥೆಯನ್ನು ಮಿಕ್ಕ ಬಂಧುಗಳಾದರೂ ಮನೆಗೆ ಸೇರಿಸಲಿಲ್ಲ. ಶರಣಮ್ಮನಿಗೆ ದಾಸರ ಮನೆಯೇ ಶರಣಾಲಯವಾಯಿತು. ಪ್ರತ್ಯೇಕಸ್ಥಳದಲ್ಲಿ ಪ್ರತ್ಯೇಕ ಪಾಕಮಾಡಿಕೊಂಡು ಭೋಜನಮಾಡಿ, ತನ್ನ ಮತಶೀಲವನ್ನು ಕಾಪಾಡಿಕೊಂಡು, ದಾಸರ ಉಪದೇಶವನ್ನು ಭಕ್ತಿಯಿಂದ ಕೇಳುತ್ತಾ, ಕಾಲಯಾಪನೆ ಮಾಡುತ್ತಿದ್ದಳು. ದಾಸರ ಮನೆಯಲ್ಲಿ ಹೆಚ್ಚು ಜನರಿರಲಿಲ್ಲವಾದ್ದರಿಂದ ಮಾದಮ್ಮನ ನೆರವು ಸೌಮ್ಯನಾಯಕಿಗೆ ಅನುಕೂಲವಾಗಿತ್ತು. ದಾಸರು ಮಾದಮ್ಮನನ್ನು ತಮ್ಮ ಮಗಳಂತೆ ಪ್ರೀತಿಸುತ್ತಿದ್ದರು. ಮಲೆನಾಡಿನ ಲಿಂಗಾಯಿತ ಸ್ತ್ರೀಯರ ಸ್ವಭಾವ ಸೌಂದರ್ಯವು ಮಾದಮ್ಮನಲ್ಲಿರಲಿಲ್ಲ. ಸುಂದರಿಯಾಗಿದ್ದಂತೆ ಅವಳು ಶುಚಿರ್ಭೂತಳೂ ಆಗಿದ್ದಳು. ಪುನರ್ವಿವಾಹ ವಿಧಿ (ಕೂಡಿಕೆ) ಯಿಂದ ವರಿಸಲೆಳಸಿದ ಆಕೆಯ ಕುಲಸ್ಥರನೇಕರು ನಿರಾಶರಾಗಿದ್ದರು. ಆ ಕಾರಣ ಅವಳ ಕುಲಸ್ಥರಿಗೆ ಆಕೆಯಲ್ಲಿ ದ್ವೇಷವುಂಟಾಗಿತ್ತು. ದುಷ್ಟರ ಭೀತಿಯಿಂದವಳು ದಾಸರ ಮನೆಯನ್ನು ಬಿಟ್ಟು ಅತ್ತಿತ್ತ ಕದಲುತ್ತಿರಲಿಲ್ಲ. ದೇವಾಲಯಕ್ಕೆ ಹೋಗುವಾಗಲೂ ದಾಸರನ್ನು ಹಿಂಬಾಲಿಸುತ್ತಿದ್ದಳು. ವೀರವೈಷ್ಣವರ ಮನೆಯಲ್ಲಿ ವೀರಶೈವಳಾದ ಅವಳು ವಾಸಿಸುವುದು ಅವಳ ಕುಲಸ್ಥರಿಗೆ ಅತೃಪ್ತಿಯನ್ನುಂಟುಮಾಡಿತ್ತು.

ಆ ಕಾಲದಲ್ಲಿ ಬೇಲೂರಿನ ವೈಶ್ಯ ಸಾವಕಾರನೊಬ್ಬನು ಸಂತಾನಯಂತ್ರ ಕೊಡಿರೆಂದು ದಾಸರನ್ನು ಆಶ್ರೈಸುತ್ತಿದ್ದನು. ಲಕ್ಷಾಂತರ ರೂಪಾಯಿಗಳ ಸ್ವತ್ತು ದಾಯಾದರ ಪಾಲಾಗಬಾರದೆಂದು ಶ್ರೀಮಂತನ ಸಂತಾನದ ಬಯಕೆಯಾಗಿತ್ತು. ಆರೆಮನಸ್ಸಿನಿಂದ ದಾಸರು ಕಾಲಹರಣ ಮಾಡುತ್ತಿದ್ದರು. ಸಾವಕಾರನ ತಗಾದೆ ಬಲವಾಗಲು ಒಂದು ಫಲವನ್ನಭಿಮಂತ್ರಿಸಿ, ರಾತ್ರೆ ಭಜನೆಯ ಕಾಲದಲ್ಲವನಿಗೆ ಕೊಡಬೇಕೆಂದು ತೆಗೆದಿಟ್ಟರು. ದೈವವಶಾತ್ ಸಾವಕಾರನು ಆ ರಾತ್ರೆ ಬರಲಿಲ್ಲ. ಮಾರನೆಯ ಪ್ರಾತಃಕಾಲ ಮಾದಮ್ಮನನ್ನು ಕರೆದು, ಈ ಫಲವನ್ನು ಸಾವಕಾರನಿಗೆ ಕೊಟ್ಟುಬಾರೆಂದು ಕಳುಹಿಸಿದರು.

ಮಾದಮ್ಮ:—ಅಣ್ಣಾ ! ಇದೇನು ಫಲ ? ಇದನ್ನು ಏತಕ್ಕೆ ಸಾವಕಾರನಿಗೆ ಕೊಡಬೇಕು ?

ದಾಸರು :—ಮಗಳೇ, ಇದು ಸಂತಾನಫಲ ! ಇದರ ಸ್ವೀಕಾರದಿಂದ ಸಾವಕಾರನಿಗೆ ಸಂತತಿಯಾಗುವುದು.

ಮಾದಮ್ಮ :—ಈ ಫಲವನ್ನು ತಿಂದ ಮಾತ್ರಕ್ಕೇ ಸಂತಾನವಾಗುವುದೆ ?

ದಾಸರು:—ಹೌದಮ್ಮಾ ಹಾಗೆ ಮಂತ್ರಿಸಿದ್ದೇನೆ !

ಮಾದಮ್ಮನು ಫಲವನ್ನು ತೆಗೆದುಕೊಂಡು ಸಾವಕಾರನ ಮನೆಯ ಕಡೆ ಹೊರಟಳು. ಹೊಸಲು ಬಿಟ್ಟಳಿಯುತ್ತಲೇ ಅವಳಿಗೆ ಈತೆರದ ಯೋಚನೆ ಹುಟ್ಟಿತು. –'ನನಗಂತೂ ಸಂತಾನವಿಲ್ಲ; ಫಲವನ್ನು ಭುಂಜಿಸಿದ ಮಾತ್ರಕ್ಕೇ ಸಂತಾನವಾಗುವುದಾದರೆ, ಇದನ್ನು ನಾನೇ ಏಕೆ ತಿಂದುಬಿಡಬಾರದು ? ಅವಸಾನಕಾಲಕ್ಕೆ ಒಬ್ಬ ಮಗನಿದ್ದರೆ ತಪ್ಪೇನು ? ಅವನನ್ನು ಜೇರೆ ಯಾರೂ ಕುಲದಿಂದ ಹೊರಗೆ ಹಾಕಲಾರರು. ನಾನೇನೂ ತಪ್ಪುಮಾಡಿದಂತಾಗಲಿಲ್ಲ. ಅಣ್ಣಯ್ಯನು ಮತ್ತೊಂದು ಫಲವನ್ನು ಸಾವಕಾರನಿಗೆ ಮಂತ್ರಿಸಿಕೊಟ್ಟರೆ, ಅವನಿಗೂ ಮಕ್ಕಳಾಗುತ್ತಾರೆ. ಇಷ್ಟುಮಾತ್ರಕ್ಕೇ ಅಣ್ಣಯ್ಯನು ನನ್ನಮೇಲೆ ಸಿಟ್ಟುಮಾಡಲಾರ' ಎಂದು ಮೊದಲಾಗಿ ತನ್ನಲ್ಲಿ ತಾನೇ ತರ್ಕಿಸಿದಳು. ಸಾವಕಾರನ ಮನೆಗೆ ಹೋಗದೆ ಫಲವನ್ನು ತಾನೇ ಭಕ್ಷಿಸಿದಳು. ಕೇಳಿದಾಗ ಸಂಗತಿ ತಿಳಿಸಿದರಾಯಿತೆಂದುಕೊಂಡು ಮನೆಗೆ ಬಂದುಬಿಟ್ಟಳು.

ಮೂರು ದಿನಗಳ ನಂತರ ಗ್ರಾಮಾಂತರಕ್ಕೆ ಹೋಗಿದ್ದ ಸಾವಕಾರನು ದಾಸರ ಬಳಿಗೆ ಬಂದನು. ಸ್ವಾಮಿಯವರ ಕೃಪೆ ಇನ್ನೂ ತನ್ನಮೇಲೆ ಬರಲಿಲ್ಲವೆಂದು ನುಡಿದನು. ದಾಸರು –'ಮಾದಮ್ಮಾ, ಫಲವನ್ನು ಸಾವಕಾರನಿಗೆ ಕೊಡಲಿಲ್ಲವೆ' ಎಂದು ಕೇಳಿದರು. ಮಾದಮ್ಮನು –'ಇಲ್ಲ ಅಣ್ಣಯ್ಯಾ, ಅದನ್ನು ನಾನೇ ತಿಂದುಬಿಟ್ಟೆ' ಎಂದಳು. ದಾಸರು ಸಾವಕಾರನನ್ನು ಕುರಿತು–'ಅಪ್ಪಾ, ನಿನಗೆ ಪ್ರಾಪ್ತಿಯಿಲ್ಲ' ಎಂದುಬಿಟ್ಟರು.

ಮಾದಮ್ಮನು ಸಂತಾನಫಲದ ಪ್ರಭಾವದಿಂದ ಗರ್ಭಿಣಿಯಾದಳು. ಮೊದಲಿನಿಂದ ವಿರೋಧಿಗಳಾಗಿದ್ದ ಜನರು ದಾಸರನ್ನೂ ಮಾದಮ್ಮನನ್ನೂ ನಿಂದಿಸತೊಡಗಿದರು. ಬಲವತ್ತರವಾದ ಲೋಕಾಪವಾದ ಬಂದುದರಿಂದ ಬ್ರಾಹ್ಮಣರು ದಾಸರನ್ನು ಬಹಿಷ್ಕರಿಸಿದರು. ವಿಶ್ವಾಸಕ್ಕೆ ಪಾತ್ರರಾಗಿದ್ದ ಬ್ರಾಹ್ಮಣರಾದರೂ ಸಮಾಜದ ಕಟ್ಟಿಗೊಳಗಾಗಿ ದಾಸರ ಮನೆಗೆ ಬರದಂತಾದರು.

ಹೀಗಿರಲು ದಾಸರ ಮನೆಯಲ್ಲಿ ಪಿತೃಶ್ರಾದ್ಧವೊದಗಿತು. ಮುಂಚಿತವಾಗಿ ಬ್ರಾಹ್ಮಣರಿಗೆ ಆಮಂತ್ರಣ ಕೊಡಲು ಪ್ರಯತ್ನಿಸಲಾಗಿ, ಒಬ್ಬರಾದರೂ ಆಮಂತ್ರಣವನ್ನು ಸ್ವೀಕರಿಸಲಿಲ್ಲ. ಬಹಿಷ್ಕೃತರಾದರೂ ಶ್ರಾದ್ಧಪಕ್ಷಗಳನ್ನು ವಿಘಾತವಾಗದಂತೆ ನಡೆಸಬೇಕೆಂಬ ಶಾಸ್ತ್ರನಿಯಮದ ಕಡೆಗೂ ಜನರು ಗಮನ ಕೊಡಲಿಲ್ಲ. ಗ್ರಾಮಾಂತರದವರಿಂದ ಕಾರ್ಯ ಪೂರ್ತಿಮಾಡಿಕೊಳ್ಳಬೇಕೆಂದು ದಾಸರು ಮಾದೀಹಳ್ಳಿಯ ಬ್ರಾಹ್ಮಣರಿಗೆ ಹೇಳಿಕಳುಹಿಸಿದರು. ಬರುವೆವೆಂದು ಆಶ್ವಾಸಕೊಟ್ಟ ಆ ಬ್ರಾಹ್ಮಣರಿಗೆ ಮಳೆಗಾಲವಾಗಿದ್ದುದರಿಂದ, ಯಗಚೀನದಿಯ ಪೂರ್ಣಪ್ರವಾಹ ಬಂದು ನದಿಯನ್ನು ದಾಟಲು ಸಾಧ್ಯವಾಗಲಿಲ್ಲ. ಮಧ್ಯಾಹ್ನದವರೆಗೆ ನಿರೀಕ್ಷಿಸಿ ಉಪಾಯ ತೋರದೆ ದಾಸರು ಕೇಶವನೇ ಗತಿಯೆಂದು ಕುಳಿತುಬಿಟ್ಟರು. ಅಷ್ಟು ಹೊತ್ತಿಗೆ ಕೇಶವನು ದಕ್ಷಿಣದೇಶದ ಬ್ರಾಹ್ಮಣರಂತೆ ವೇಷ ತಾಳಿ, ದಾಸರ ಮನೆ ಯಾವುದೆಂದು ವಿಚಾರಿಸುತ್ತಾ ಬಂದಿಳಿದನು. ಕೇಶವನೇ ಕರೆತಂದ

ನೆಂದು ಸಂತುಷ್ಟರಾದ ದಾಸರು, ಕಾಲಕ್ಕೆ ಸರಿಯಾಗಿ ಬಂದ ಬ್ರಾಹ್ಮಣರನ್ನು ವರಿಸಿ ಶ್ರಾದ್ಧಕರ್ಮವನ್ನು ಸಾಂಗಗೊಳಿಸಿದರು. ಬ್ರಾಹ್ಮಣರೂಪೀ ಭಗವಂತನು ದಾಸರು ಕೊಟ್ಟ ಧೋತ್ರ ದಕ್ಷಿಣೆಗಳನ್ನು ತೆಗೆದುಕೊಂಡು ದೇವಾಲಯಕ್ಕೆ ತೆರಳಿದನು.

ರಾತ್ರ್ಯಾರಾಧನೆಗೆ ದೇವಸ್ಥಾನದ ನೌಕರರು ಬಾಗಿಲು ತೆಗೆಯಲು ಸ್ವಾಮಿಯ ಪಾದಪೀಠದಲ್ಲಿ ಧೋತ್ರದಕ್ಷಿಣೆಗಳಿರುವುದು ಕಾಣಿಸಿತು. ಇದೇನಾಶ್ಚರ್ಯವೆಂದು ಅರ್ಚಕ ಪರಿಚಾರಕರಲ್ಲಿ ಜಿಜ್ಞಾಸಕ್ಕಾರಂಭವಾಯಿತು. ಜನಸಂದಣಿ ಹೆಚ್ಚಿ, ದೇವರ ಬಳಿ ಈ ಪದಾರ್ಥಗಳನ್ನಿಟ್ಟವರ್ಯಾರೆಂದು ತರ್ಕಿಸಿದರು. ಇಂತಹ ವೈಚಿತ್ರ್ಯಗಳು ಆಗಾಗ ನಡೆಯುತ್ತಿದ್ದುದರಿಂದ, ಜನರು ದಾಸರನ್ನು ಕೇಳಬೇಕೆಂದರು. ದೇವಸ್ಥಾನದ ದೀವಟಿಗನು ದಾಸರನ್ನು ಕರೆತಂದನು. ದಾಸರಿಗಾದರೂ ತಾವೇ ಕೊಟ್ಟ ವಸ್ತ್ರವು ಪಾದಪೀಠದಲ್ಲಿರುವುದನ್ನು ಕಂಡು ಪರಮಾಶ್ಚರ್ಯವಾಯಿತು. ಶ್ರಾದ್ಧಕ್ಕೆ ಕುಳಿತ ಕೆಳನಾಡಿನ ಬ್ರಾಹ್ಮಣರು ಎಲ್ಲಿಳಿದಿರುವರೆಂದು ನಗರಶೋಧನೆ ಮಾಡಿದರು. ಆ ದಿವಸ ಯಾವ ಶ್ರೀವೈಷ್ಣವ ಬ್ರಾಹ್ಮಣರೂ ಬೇಲೂರಿಗೆ ಬರಲಿಲ್ಲವೆಂದು ನಿಶ್ಚಯವಾಯಿತು. ದಾಸರು ಪುಳಕಿತರಾಗಿ– 'ಅಹುದೋ ದೇವ! ನೀನು ಸಖನಹುದು! ನೀನೇ ದಾಸನ ಮನೆಯ ಶ್ರಾದ್ಧ ನಡೆಸಲು ಬಂದವ' ಎಂದು ಪರಮಾತ್ಮನಿಗೆ ಪ್ರಣಾಮಮಾಡಿದರು.

ಕಲ್ಯಾಣಿ—ಅಟ್ಟತಾಳ

ನೀನೇ ಶ್ರಾದ್ಧಕೆ ಬಂದವ | ದೇವರ ದೇವ
ನಾನರಿಯೆ ಎನ್ನ ಗೃಹಕೆ ವೈಷ್ಣವನಾಗಿ ಪ.

ಜನನ ಸ್ಥಿತಿ ಲಯಕೆ ಕಾರಣಕರ್ತ
ನೆನಸಿ ವೇದಗಳು ಪೊಗಳುತಿರೆ
ಇನಿತು ವಿಡಂಬನ ತೋರಿ ದಾಸನ ಸಲಹಿ
ಘನಕೃಪೆ ಮಾಡಿದೆ ಚನ್ನಕೇಶವರಾಯ ೧

ತಿಳಿಯೆ ನಾನೀಗ ನಿನ್ನಯ ಕೂಡೆ ಬಂದಿರ್ದ
ಬಿಳಿಜುಟ್ಟಿನ ಬಣ್ಣ ಎಣ್ಣೆಗೆಂಪಿನ
ತಳಿತ ಪುಸ್ತಕದ ಕೊಂಕಳ ಮುಡಿಗುಡ್ಡೆಯ
ಮನುಜನಾರು ಪೇಳು ನರಹರಿಯೆ ೨

ಆವಾವಸ್ಥಾನಕ್ಕೆ ಯಾರ ನೇಮಿಸಿದೆ
ಆವಸ್ಥಾನದಿ ನೀ ಪೂಜ್ಯನಾದೆ
ದೇವ ಅಭಿಶ್ರವಣಮಂತ್ರವ ಪೇಳಿದ
ಕೋವಿದನಾರು ಪೇಳಯ್ಯ ನರಹರಿಯೆ ೩

ಗುರುಗಳಂದದಿ ನೀ ಶ್ರೀವೈಷ್ಣವನಾಗಿ
ಶರಣನ ಪಿತೃಗಳ ಶ್ರಾದ್ಧವುಂಬುವುದು

ಸಿರಿದಾಯಿತು ಎನ್ನ ನೂರೊಂದು ಕುಲಕೆಲ್ಲ
ಪರಮಪದವಾಯ್ತು ವೈಕುಂಠ ಚನ್ನಿಗರಾಯ ೪

ಈ ಪದದಲ್ಲಿ ಒಂದು ನುಡಿಯು ಶಿಥಿಲವಾಗಿದ್ದುದರಿಂದ ಅದನ್ನು ಉದ್ಧರಿಸಿ ಬರೆದಿಲ್ಲ. ದೊಡ್ಡವರ ಪದವನ್ನು ತಿದ್ದಿ ಬರೆಯಲು ಲೇಖಕನಿಗೆ ಅಧಿಕಾರವಿಲ್ಲ.

ಮೇಲ್ಕಂಡ ಪದವನ್ನು ದಾಸರು ದೇವರ ಸನ್ನಿಧಿಯಲ್ಲಿ ನಿಂತು ಹಾಡಿದರು. ಜನರು ಪರಮಾಶ್ಚರ್ಯಭರಿತರಾದರು. ದಾಸರನ್ನು ಅರಿಯದೆ ಬಹಿಷ್ಕರಿಸಿದ ತಪ್ಪಿಗೆ ಶರಣಾಗತರಾದರು.

ಮಾದಮ್ಮನಿಗೆ ಪುತ್ರೋತ್ಸವವಾಯಿತು. ತನ್ನ ಮತ ಪದ್ಧತಿಯಂತೆ ಮಗನನ್ನು **ನಂಜುಂಡ**ನೆಂದು ಕರೆದಳು. ಹೊಟ್ಟೆಯ ಮಗಳಿಗಿಂತ ಹೆಚ್ಚು ಪ್ರೀತಿಪಾತ್ರಳಾಗಿದ್ದುದರಿಂದ, ಆಕೆಗೆ ದಾಸರ ಮನೆಯಲ್ಲಿ ಎಲ್ಲ ಉಪಚಾರಗಳೂ ನಡೆದುವು. ಬಾಲಕನು ದಿನ ದಿನಕ್ಕೆ ತೇಜಃಪುಂಜನಾಗಿ ಬೆಳೆದನು. ಬ್ರಾಹ್ಮಣರ ಮನೆಯಲ್ಲಿ ಹುಟ್ಟಿ ಬೆಳೆದು, ಬ್ರಾಹ್ಮಣ ಬಾಲಕರ ಜೊತೆಯಲ್ಲಾಡಿ, ಹರಿಪರವಾದ ಸ್ತೋತ್ರಪಾಠಗಳನ್ನು ಕಲಿತು, ನಂಜುಂಡನು ಪರಮ ಹರಿಭಕ್ತನಾದನು. ಮಾದಮ್ಮನು ಮತಾಚಾರ ತಪ್ಪಬಾರದೆಂದು ಜಂಗಮರನ್ನು ಕರೆದು ನಂಜುಂಡನಿಗೆ **ಲಿಂಗಧಾರಣ** ಮಾಡಿಸಿದಳು.

ಪುರಂದರದಾಸರಿಗೆ ಅಪ್ಪಣ್ಣ ಭಾಗವತನಂತೆ, ವೈಕುಂಠದಾಸರಿಗೆ ವರದನೆಂಬ ಶಿಷ್ಯನೊಬ್ಬನಿದ್ದನು. ಅನೇಕ ಸಮಯಗಳಲ್ಲಿ ಶ್ರೀ ಕೇಶವನು ವರದನಂತೆ ವೇಷತಾಳಿ ದಾಸರ ಸೇವೆ ಮಾಡಿದ ಕಥೆಗಳಿವೆ.

ದಾಸರ ಮನೆಯ ಶ್ರಾದ್ಧವಾದ ದಿನದಿಂದ ಜನರಲ್ಲಿ ದಾಸರ ವಿಷಯವಾಗಿ ಬಹುಮಟ್ಟಿನ ಜಾಗೃತಿಯುಂಟಾಯಿತು. ಮಾದಮ್ಮನನ್ನೂ ನಂಜುಂಡನನ್ನೂ ಬಹಳ ಗೌರವದಿಂದ ಕಾಣುತ್ತ ಬಂದರು. ಮಾದಮ್ಮನನ್ನು ಶರಣಮ್ಮನೆಂದು ಕರೆಯುವ ಜನರೇ ಬಹಳವಾದರು.

ದೇವಸ್ಥಾನದಲ್ಲಿ ಪ್ರತಿದಿನವೂ ದಾಸರಿಲ್ಲದೆ ಮಹಾಮಂಗಳಾರತಿಯಾಗುತ್ತಿರಲಿಲ್ಲ. ಮಂಗಳಾವಸರದಲ್ಲಿ ದಾಸರು ಹಾಡುವ ಒಂದಾದರೂ ದೇವರ ನಾಮವನ್ನು ಕೇಳದೆ ಜನರು ಕದಲುತ್ತಿರಲಿಲ್ಲ. ದಾಸರು ಒಳಪ್ರಾಕಾರದ ಪ್ರದಕ್ಷಿಣೆಗೆ ಹೊರಟರೆ, ದೇವಸ್ಥಾನದ ದೀವಟಿಗನೊಬ್ಬನು ಅವರನ್ನು ಹಿಂಬಾಲಿಸುವುದು ಅಧಿಕಾರಿಗಳು ಕೊಟ್ಟ ಗೌರವವಾಗಿತ್ತು. ಅದೇ ದೀವಟಿಗನು ನಿತ್ಯವೂ ದಾಸರನ್ನು ಅವರ ಮನೆಗೂ ಬಿಟ್ಟು ಬರುತ್ತಿದ್ದನು. ಆ ಕಾಲದಲ್ಲಿ ಬೇಲೂರು ಬಲು ದಟ್ಟವಾದ ಮಲೆನಾಡಾಗಿದ್ದುದರಿಂದ, ಮಳೆಗಾಲದಲ್ಲಿ ಬಹಳ ಮಳೆ ಬರುತ್ತಿತ್ತು. ಮನೆಯಿಂದ ಮನೆಗೆ ಹೋಗುವುದೂ, ಬೀದಿಯಲ್ಲಿ ಓಡಾಡುವುದೂ, ಸಾಹಸಿಗಳಿಗೆ ಮಾತ್ರ ಸಾಧ್ಯವಾಗಿತ್ತು. ಅನೇಕ ಸಮಯಗಳಲ್ಲಿ, ಜನರು ಬೀದಿಯಲ್ಲೇ ಟೊಂಕಮಟ್ಟ ನೀರಿನಲ್ಲಿ ಓಡಾಡಬೇಕಾಗಿತ್ತು. ಆ ಸಂದರ್ಭಗಳಲ್ಲಿ ದೇವಸ್ಥಾನಕ್ಕೆ ಜನರು ಬರುವುದು ಬಲು ಕಡಮೆಯಾಗುತ್ತಿತ್ತು. ನಿಯಮಿತ ನೌಕರರಿಗಾದರೂ ಅಧಿಕಾರಿಗಳು ನಿರ್ಬಂಧಮಾಡಲು ಸಾಧ್ಯವಾಗುತ್ತಿರಲಿಲ್ಲ.

ಒಂದು ರಾತ್ರಿ ದಾಸರು ದೇವಾಲಯಕ್ಕೆ ಬರುವಾಗ, ಸಾಧಾರಣವಾಗಿದ್ದ ಮಳೆಯು ಮನೆಗೆ ಹೋಗುವಾಗ ಅತಿಶಯವಾಗಿ ಊರೆಲ್ಲಾ ಜಲಮಯವಾಗಿ ಕಗ್ಗತ್ತಲೆಯಾಗಿಹೋಯಿತು. ಮಳೆಯ ಭರಕ್ಕೆ ಅಂಜಿ ದೀವಟಿಗನು ಅಂದು ದೇವಸ್ಥಾನಕ್ಕೇ ಬರಲಿಲ್ಲ. ದಾಸರು ಒಂಟಿಗರಾಗಿ ಮನೆಯ ದಾರಿ ತಿಳಿಯದೆ ಪರಿತಪಿಸಬೇಕಾಯಿತು. ಬೀಗ ಮೊದಲುಮಾಡಿ ನೌಕರರು ಹೊರಟುಹೋದ ಕಾರಣ, ದೇವಸ್ಥಾನದ ಒಳಗಾದರೂ ಇರಬಹುದೆಂದರೆ ಅದಕ್ಕೂ ಸಾಧ್ಯವಾಗಲಿಲ್ಲ. ಆ ಕಾಲಕ್ಕೆ ಕೇಶವನೇ ದೀವಟಿಗನ ವೇಷ ತಾಳಿ, ಎಲ್ಲಿಂದಲೋ ಧಾವಿಸಿ ಬಂದವನಂತೆ ದಾಸರಬಳಿಗೆ ಬಂದನು. ಇವನೆಲ್ಲಿಂದ ಬಂದನೆಂದು ದಾಸರು ತಮ್ಮಲ್ಲಿ ತಾವೇ ತರ್ಕಿಸುತ್ತಿರುವಷ್ಟರಲ್ಲಿ :

ದೀವಟಿಗ :—'ಹೊತ್ತಾಗುತ್ತದೆ ಬುದ್ಧೀ ! ಬರಬೇಕು' ಎಂದನು.

ದಾಸರು :—ಎಲ್ಲಿಂದ ಓಡಿಬಂದೆಯೋ ಈ ಮಳೆಯಲ್ಲಿ ?

ದೀವಟಿಗ :—ದಾಸರ ಮನೆಯಿಂದ.

ದಾಸರು :—ಯಾವ ದಾಸರ ಮನೆ ? ನೀ ಬಂದ ದಾರಿ ಯಾವುದು ? ಒಂದಕ್ಕೊಂದು ಸಂಬಂಧವಿಲ್ಲ.

ದೀವಟಿಗ :—ಚಾಕರೀ ಮಾಡೋನಿಗೆ ಒಬ್ಬರ ಮನೆಯೇ ಬುದ್ಧಿ ?

ದಾಸರು :—ಹೋಗಲಿ, (ಇವನ ಬುದ್ಧಿ ಏಕೋ ಸರಿಯಾಗಿಲ್ಲವೆಂದುಕೊಂಡು) ಸರಿಯಾದ ದಾರಿಯಲ್ಲಿ ನಡೆ.

ದೀವಟಿಗನು ದಾಸರನ್ನು ಟೊಂಕ ಮಟ್ಟ ನೀರಿನಲ್ಲಿ ಹಾಗೂ ಹೀಗೂ ದಾಟಿಸಿ ಕರೆತಂದು ಮನೆಯ ಬಾಗಿಲು ತಲುಪಿಸಿದನು. 'ಬುದ್ಧೀ, ಬಲು ಬಾಯಾರಿಕೆ, ಓಡಿ ಬಂದೆ, ಸ್ವಲ್ಪ ನೀರು ಕೊಡಿ' ಎಂದನು.–'ಎಲ, ಹುಚ್ಚಾ, ಈ ಭರಮಳೆಯಲ್ಲಿ ನಿನಗೆ ಬಾಯಾರುವುದೇನೋ' ಎಂದರು–'ಹೌದು ಬುದ್ಧಿ, ಓಡಿಬಂದೆ'ನೆಂದು ದೀವಟಿಗನು ನುಡಿದನು.–'ಏನಾದರಾಗಲಿ, ನೀರು ಕೇಳಿದರೆ ಮೊದಲು ಕೊಡಬೇಕು' ಎಂದುಕೊಂಡು ದೀವಟಿಗನನ್ನು ಇರಹೇಳಿ–ಅಡಿಗೆಯ ಮನೆಯಲ್ಲಿದ್ದ ನೀರಿನ ತಂಬಿಗೆಯನ್ನು ತರಲು ಒಳಹೊಕ್ಕರು. ನೀರನ್ನು ಹೊರಕ್ಕೆ ತರುವಷ್ಟರಲ್ಲಿ ದೀವಟಿಗನಿರಲಿಲ್ಲ. ಬೀದಿಯ ಬಾಗಿಲಿಗೆ ಬಂದು ನಾಲ್ಕು ದಿಕ್ಕಿಗೂ ನೋಡಿ, ಅವನ ಹೆಸರು ಹಿಡಿದು ಕೂಗಿದರು. ದೀವಟಿಗನ ಸುಳಿವೇ ಗೊತ್ತಾಗಲಿಲ್ಲ. ಇದೇನಚ್ಚರಿಯೆಂದು ದಾಸರು ಬೆರಗಾದರು. ಹಾಗೇ ಧ್ಯಾನಿಸಿ ಪ್ರೇಮಾಶ್ರುಪೂರಿತನಯನರಾಗಿ—

ಮುಖಾರಿ—ಜಂಪೆ

ಏನು ಕಾರಣವೆನಗೆ ತಿಳಿಯದೋ । ಇದು ದೇವ
ನೀನುದ್ಧರಿಸುವುದಕೋ ಕೆಡಿಸುವುದಕೋ ಹರಿಯೆ ಪ.
ದುರಿತಭಯ ತಿಮಿರ ಶರಧಿಯನು ದಾಟಿಸುವವೋಲ್
ಸುರಿವ ಮಳೆಗತ್ತಲೆಯೊಳೊಬ್ಬಂಟಿಯಾಗಿ

ಕರದಲ್ಲಿ ದೀವಟಿಗೆ ಪಿಡಿದು ಸದನದ ಬಳಿಗೆ
ಕರೆತಂದು ತೃಷೆಯಾಯ್ತು ಎಂದು ಪೇಳುವುದು ೧

ಎಂಬುದಾಗಿ ಪರಮಾತ್ಮನನ್ನು ಪ್ರಾರ್ಥಿಸಿದರು.

ವರದನೆಂಬ ಶಿಷ್ಯನು ದಾಸರು ಭಕ್ತಿಪುಳಕಿತರಾಗಿ ಆಡಿದ ಮಾತನ್ನಾಗಲೀ ಹಾಡಿದ ಹಾಡನ್ನಾಗಲೀ ತಕ್ಷಣ ತಾಳೆಯೋಲೆಯಲ್ಲಿ ಲೇಖಿಸುತ್ತಿದ್ದನು. ಹೊಸಹೊಸ ಪದಗಳು ಆದ ಮಾರನೇ ದಿವಸ ಭಜನ ಗೋಷ್ಠಿಗೆ ಬಂದುಬಿಡುತ್ತಿದ್ದುವು. ಕೆಲವೊಂದ ಪದವಾದರೋ ಒಂದೇ ನುಡಿಯಲ್ಲಿ ಅರ್ಧಾಂತವಾದಂತಿದ್ದು, ಮತ್ತೆ ಕೆಲವು ದಿನಗಳ ಮೇಲೆ ಪೂರ್ತಿಯಾಯಿತು.

ಮತ್ತೊಂದು ಕಗ್ಗತ್ತಲೆಯ ರಾತ್ರಿಯಲ್ಲಿ ನಿಯಮಿತ ದೀವಟಿಗನು ಬರದಿರಲು ಕೇಶವನೇ ದೀವಟಿಗನಾಗಿ ಬಂದನು. ದಾಸರನ್ನು ಮನೆಯವರೆಗೆ ಕರೆತಂದು ಸೇರಿಸಿ,–'ಹಸಿವೆಯಾಗುತ್ತಿದೆ, ಏನಾದರೂ ಕೊಡಿ'ರೆಂದು ಬೇಡಿದನು. ದಾಸರು ತಮ್ಮ ಹೆಂಡತಿಯನ್ನು ಕುರಿತು–'ಏನಾದರೂ ಮಿಕ್ಕಿದ್ದರೆ ದೀವಟಿಗೆಯವನಿಗೆ ಕೊಡು' ಎಂದು ಹೇಳಿದರು. ಆಕೆಯು ಆ ಜೋಯಿಯ ಮಡಿಲು ತುಂಬಾ ಅನ್ನವನ್ನೂ ಕಜ್ಜಾಯವನ್ನೂ ತುಂಬಿ ಕಳುಹಿಸಿದಳು. ಮಾಯಾವಿಯಾದ ಕೇಶವನು ಸೌಮ್ಯನಾಯಕಿಯ (ಅಮ್ಮನವರ ಸನ್ನಿಧಿ) ಪೀಠದಲ್ಲಿ ಅರ್ಧಭಾಗವನ್ನೂ ತನ್ನ ಪೀಠದ ಬಳಿ ಅರ್ಧಭಾಗವನ್ನು ಇಟ್ಟು ಮಾಯವಾಗಿದ್ದನು.

ಮಾರನೆಯ ಪ್ರಾತಃಕಾಲ ಉಭಯ ಸನ್ನಿಧಿಗಳಲ್ಲಿ ಅನ್ನ ಕಜ್ಜಾಯ (ಸಜ್ಜಪ್ಪ) ಗಳಿದ್ದುದನ್ನು ಕಂಡು ಅರ್ಚಕರು, ಈ ಕೌತುಕವೇನೆಂದು ದಾಸರನ್ನೇ ಕೇಳಿದರು. ಒಂದಾಗುತ್ತಲೊಂದು ಗೊತ್ತಿಗೇ ಬರದ ಆ ದೇವದೇವನ ಲೀಲೆಯನ್ನು ನೋಡಿ, ಹಿಡಿಸಲಾರದ ಭಾವಸಮಾಧಿಗೊಳಗಾಗಿ ದಾಸರು ಒಮ್ಮೆ ನಗುತ್ತಾ, ಒಮ್ಮೆ ಅಳುತ್ತಾ—

"ಕೊಟ್ಟ ಕಜ್ಜಾಯ ಅನ್ನವನು ಶರಗೊಡ್ಡಿ
ಕಟ್ಟಿಕೊಂಡೊಯ್ದು ಲಕ್ಷ್ಮಿಯ ಬಳಿಯೊಳು–
ಇಟ್ಟರ್ಧವನು ನಿನ್ನ ಪಾದದ ಬಳಿಯಲ್ಲಿ
ಮಿಕ್ಕುದನು ತೋರ್ದೆ ವೈಕುಂಠ ಕೇಶವರಾಯ ೨

ಎಂಬುದಾಗಿ ಹಾಡಿದರು. ಈ ನುಡಿಯು ಹಿಂದಿನ ಪದಕ್ಕೆ ಸೇರಿಸಲ್ಪಟ್ಟಿತು. ಹೀಗೆ ಆಗಾಗ ಜನರಿಗೆ ಸ್ವಲ್ಪ ಮರೆವು ಬಂತೆಂದರೆ, ಶ್ರೀಹರಿಯು ಅರಿವನ್ನುಂಟುಮಾಡಲು ಏನಾದರೊಂದು ಬಗೆಯ ಮಹಿಮೆಯನ್ನು ತೋರಿ, ಭಕ್ತಜನರನ್ನು ಎಚ್ಚರಿಸುತ್ತಿದ್ದನು.

ಸತ್ಪುರುಷರು ತಾವು ಮಾಡಿದ ಸಕಲ ಸತ್ಕರ್ಮಕ್ಕೆ ಫಲರೂಪನಾಗಿ ಪರಮಾತ್ಮನೇ ಪ್ರತ್ಯಕ್ಷನಾಗಿದ್ದರೂ ತಮ್ಮ ನಿಯತ ಕರ್ಮಾಚರಣೆಯನ್ನು ಬಿಡುವುದಿಲ್ಲ. ಜೀವನ್ಮುಕ್ತರಾದರೂ ಲೋಕಶಿಕ್ಷೆಗಾಗಿ ಕರ್ಮಾಚರಣೆ ಮಾಡಬೇಕೆಂದು ವಿಧಿಸುವರು. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, ಹಿರಿಯರ ಮಾರ್ಗವನ್ನು ಕಿರಿಯರನುಸರಿಸುವರು ಎಂಬ ಅರ್ಥದ–

ಯದ್ಯದಾಚರತಿಶ್ರೇಷ್ಠಃ ತತ್ತದೇವೇತರೋಜನಃ
ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೆ III-೨೧.

ಎಂಬ ಶ್ಲೋಕವನ್ನು ಅರ್ಜುನನಿಗೆ ಉಪದೇಶಮಾಡಿದ್ದಾನೇ.

ಸ್ವವಿಷಯದಲ್ಲಿ-ಎಲೈ ಅರ್ಜುನನೇ ಮೂರುಲೋಕದಲ್ಲೂ ನಾನು ಮಾಡಬೇಕಾದ ಕರ್ತವ್ಯಗಳೇನಿಲ್ಲ; ನಾನು ಪಡೆಯದಿರುವುದಿಲ್ಲ; ನಾನು ಕರ್ಮಮಾಡಿ ಪಡೆಯಬೇಕಾದುದೂ ಏನೂ ಇಲ್ಲ; ಆದರೂ ಕರ್ಮಮಾಡುತ್ತಿರುವೆನು; ನಾನೇ ಕರ್ಮಮಾಡದಿದ್ದರೆ ಎಲ್ಲರೂ ನನ್ನ ಮಾರ್ಗವನ್ನೇ ಅನುಸರಿಸಿಬಿಡುವರು. ಅದರಿಂದ ಲೋಕನಾಶವಾಗುವುದು-ಎಂಬರ್ಥದ

ನಮೇಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷುಕಿಂಚನ
ನಾನವಾಪ್ತಮವಾಪ್ತವ್ಯಂ ವರ್ತ ಏವಚಕರ್ಮಣಿ ||
ಯದಿಹ್ಯಹಂ ನವರ್ತೇಯಂ ಜಾತುಕರ್ಮಣ್ಯತಂದ್ರಿತಃ
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥಸರ್ವಶಃ ||
ಉತ್ಸೀದೇಯುರಿಮೇ ಲೋಕಾಃ ನಕುರ್ಯಾಂ ಕರ್ಮಚೇದಹಂ |

ಈ ಶ್ಲೋಕಗಳನ್ನು ಉದಹರಿಸಿರುವನು. ಆದ್ದರಿಂದ ಯಾರಿಗೂ ಕರ್ಮವ ಬಿಡುವಂತಿಲ್ಲ.

ವೈಕುಂಠದಾಸರು ಗೋದಾನಮಾಡಬೇಕೆಂದು ಇಚ್ಛಿಸಿ ಅನೇಕ ಗೋವುಗಳನ್ನು ಸಂಪಾದಿಸಿ, ಬ್ರಾಹ್ಮಣರನ್ನು ಕರೆದು ತಾರೆಂದು ವದನನ್ನು ಕಳುಹಿಸಿದನು. ವದನು ಯೋಗ್ಯರನ್ನಾರಿಸಿ ಕರೆತರುವುದರಲ್ಲಿ, ಲೀಲಾಮಾನುಷ ವಿಗ್ರಹನಾದ ಶ್ರೀಹರಿಯು ಗೋವುಗಳ ಸಂಖ್ಯೆಗೆ ತಕ್ಕಷ್ಟು ಸಂಖ್ಯೆಯ ಶ್ರೀ ವೈಷ್ಣವ ಬ್ರಾಹ್ಮಣರೂಪದಿಂದ ದಾಸರ ಮನೆಯ ಮುಂದೆ ಬಂದು ನಿಂತನು. ದಾಸರು ದಾನ ಕೊಟ್ಟಹಾಗೆಲ್ಲಾ, ಇದು ನನಗೆ-ಇದು ನನಗೆನ್ನುತ್ತಾ ಕೈ ಚಾಚಿ ಎಲ್ಲ ಗೋವುಗಳನ್ನೂ ದಾನ ತೆಗೆದುಕೊಂಡುಬಿಟ್ಟನು. ಅಷ್ಟರಿಂದಲೇ ತೃಪ್ತನಾಗದೆ ಗೋಗಣಗಳನ್ನು ದೇವಾಲಯದೊಳಗೆ ಕೂಡಿಕೊಂಡನು. ಅಧಿಕಾರಿಗಳು ಬೀಗ ಮೊಹರುಗಳನ್ನು ತೆಗೆದು ಬಾಗಿಲನ್ನು ದಬ್ಬಿದೊಡನೆಯೇ ಬಾಲದ ಗಂಟೆಗಳನ್ನಲ್ಲಾಡಿಸುತ್ತಾ ತಲೆಗಳನ್ನೆತ್ತಿಕೊಂಡು ಗೋವುಗಳು ಸಾಲಾಗಿ ಹೊರಟವು. ಅಧಿಕಾರಿಗಳು ದೇವಾಲಯದೊಳಗೆ ಗೋವುಗಳೆಲ್ಲಿಂದ ಬಂದುವೆಂದು ವಿಚಾರಿಸುತ್ತಿರಲು ವೈಕುಂಠದಾಸರೇ ದೇವರ ಸೇವೆಗೆ ಬಂದರು.

ಅಧಿಕಾರಿಗಳು :—'ದಾಸರೇ ಇದೇನು ಒಂದರಮೇಲೊಂದು ವಿಪರೀತಕಾರ್ಯಗಳು! ಗರ್ಭಾಂಕಣದಲ್ಲಿ ಗೋವುಗಳನ್ನೆಲ್ಲಿ ತಂದು ನಿಲ್ಲಿಸಿದಿ'ರೆಂದು ಪ್ರಶ್ನೆಮಾಡಿದರು. ದಾಸರು ಸ್ತಬ್ಧರಾಗಿ-ಕೇಶವಾ—

ರಾಗ ಸಾವೇರಿ ತಾಳ ಜಂಪೆ

ಅಕಟಕಟ ಬಹಳ ಬಡತನ ಬಂದುದೇ ನಿನಗೆ
ಅಕಳಂಕ ಚರಿತ ಹರಿಯೇ ಪ.

ಪ್ರಕಟತನದಿಂದ ಗೋದಾನಕ್ಕೆ ಕೈ ನೀಡ್ದೆ
ಸುಖಮಯ ಶರೀರ ಚನ್ನ । ರಾಯಾ ಅ.

ಹಿಂದೆ ಯಜ್ಞದಲಿ ಬಲಿಯಿತ್ತ ಭೂದಾನಕ್ಕೆ । ಬಂದು ಕರಗಳ ಚಾಚಿವೆ
ಅಂದು ಕರ್ಣನುಕೊಟ್ಟ ದಾನವನು ನೀಪಿಡಿವು । ದಂದಿಗೇ ಸಾಕಾಗಲಿಲ್ಲೇ
ಇಂದು ನಿನ್ನಯ ದಾಸ ಕೊಟ್ಟ ಗೋದಾನಕ್ಕೆ । ಒಂದೊಂದು ಗೋವುಗಳಿಗೊಂದೊಂದು
ಶಿರಿ ವೈಷ್ಣವರೂಪ ನೀನಾಗಿ । ನಿಂದು ದಾನವ ಕೊಂಡೆಯೋ ಸ್ವಾಮಿ ೧.

ಉರದೊಳಗೆ ಅನವರತ ವಾಸವಾಗಿರುತಿಪ್ಪ । ಶರಧಿಸುತೆ ಕೈಬಿಟ್ಟಳೇ ।
ಬೆರೆತುಪೋದುದೆ ಪಾಲಕಡಲು ಮಾಸಿಸಿಕೊಂಡು । ಬರಡಾಯಿತೇ ಕಾಮಧೇನೂ ।
ತಿರುಕ ಹಾರುವನಂತೆ ಪರಿಪರಿಯ ದಾನಕ್ಕೆ । ಭರದಿ ಕೈ ಒಡ್ಡುತಿಹರೇ ।
ಸರುವೋತ್ತಮನೆಂಬ ಅಭಿಮಾನವಿನಿತಿಲ್ಲೆ । ದೂರಿಗೊಳಗಾಗಬಹುದೇ ಸ್ವಾಮಿ ೨.

ಇತ್ತದಾನದ ಗೋವುಗಳನೆಲ್ಲ ಗುಡಿಯೊಳಗೆ । ಮೊತ್ತದಿಂ ಕೂಡಿಕೊಂಡು ।
ಒತ್ತಿ ಮುದ್ರೆಗಳ ನಾಮಗಳಿಟ್ಟು ಬಾಲಕ್ಕೆ ಎತ್ತಿ ಗಂಟೆಗಳ ಕಟ್ಟಿ
ಅರ್ಥಿಯಿಂ ತೋರಿಸಿ ಎನ್ನಕುಲಕೋಟಿಗಳಿಗಿತ್ತೆ ಸುರಪದವನು
ಕರ್ತೃವೈಕುಂಠ ವೇಲಾಪುರಾಧೀಶ । ಭೃತ್ಯನ್ನ ಕಾಯೊ ಸತತ ಸ್ವಾಮಿ ೩.

ಎಂದು ಸ್ತೋತ್ರಮಾಡಿದರು.

ಹೀಗೆ ದಿನದಿನದಲ್ಲೂ ಪರಮಾತ್ಮನ ಅದ್ಭುತ ಮಹಿಮೆಗಳನ್ನು ಜನರು ಕಾಣುತ್ತ ಬಂದರು. ವೈಕುಂಠದಾಸರ ಮಹಿಮೆಯೆಂದರೆ ದೇವರ ಮಹಿಮೆ–ದೇವರ ಮಹಿಮೆ ಯೆಂದರೆ ದಾಸರ ಮಹಿಮೆಯೆಂಬಂತಾಯಿತು. ಅಚಿಂತ್ಯ ಮಹಿಮನ ವೈಭವವನ್ನು ಕಂಡು ಕೇಳಿದ ಜನರು ತಂಡ ತಂಡವಾಗಿ ದಾಸರ ಶಿಷ್ಯರಾದರು. ಪಾಮರರು ಪುನೀತ ರಾದರು. ಎಲ್ಲೆಲ್ಲೂ ದಾಸರ ಪದಗಳನ್ನು ಹಾಡುವುದು, ಕೇಶವನನ್ನು ಸ್ಮರಿಸುವುದು, ಈ ಕಾರ್ಯಗಳ ವಿನಾ ಜನರಿಗೆ ಇತರ ಆಸಕ್ತಿಗಳುಂಟಾಗಲಿಲ್ಲ.—

ವೇಲಾಪುರಿಯು ಭೂವೈಕುಂಠವೆನಿಸಿತು.

೩

ವೈಕುಂಠದಾಸರ ವರಪುತ್ರನಾದ ನಂಜುಂಡನು ಎಂಟು ಹತ್ತು ವರ್ಷದ ಬಾಲಕನಾದನು. ದಾಸರ ಕೈಂಕರ್ಯಕ್ಕೆ ಬೇಕಾಗುವಷ್ಟು ವಿವಿಧ ಪತ್ರಪುಷ್ಪಗಳನ್ನು ಸಂಗ್ರಹಿಸಿ ತರುವವರ ಜೊತೆಯಲ್ಲಿ ತಾನೂ ಹೋಗುತ್ತಿದ್ದನು. ಹಾದಮ್ಮನಿಗೆ ಮಾಲೆ ಗಳನ್ನು ಕಟ್ಟುವುದರಲ್ಲಿ ದಿನವು ಸಾಕಾಗುತ್ತಿರಲಿಲ್ಲ. ಆಜಾನುಬಾಹುವಾದ ಕೇಶವ

ಸ್ವಾಮಿಯ ಕಂಠದಿಂದ ಪಾದಗಳವರೆಗೆ ಧಾರಣೆಗೆ ಯೋಗ್ಯವಾದ ಪವಿತ್ರ ಮಾಲಿಕೆಯನ್ನು ಕಟ್ಟಿ ಪೂರೈಸದೆ, ಪೂರ್ಣವೇಷಿಯಾಗಿ ಮಹಾಮಂಗಳಾರತಿಯಾಗದೆ ಆಕೆಯು ಭೋಜನ ಮಾಡುತ್ತಿರಲಿಲ್ಲ.

ಕಾಲಕಾಲಕ್ಕೆ ಸಮೃದ್ಧಿಯಾಗಿ ಮಳೆಬೆಳೆಗಳಾಗಿ ಕ್ರಮವಿಲ್ಲದೆ ಅನ್ನಪಾನಗಳು ದೊರೆಯುತ್ತಿದ್ದಾಗ, ಜನರು ಜೀವನಕ್ಕಾಗಿ ದೇಶತ್ಯಾಗ ಮಾಡಬೇಕೆಂದಾಗಲೀ, ಹಗಲಿರುಳೂ ದುಡಿಯಬೇಕೆಂದಾಗಲೀ ಆವಶ್ಯಕತೆ ಕಂಡುಬಂದಿದ್ದಾಗ-ವಿಶೇಷ ಧನಸಂಗ್ರಹ ಮಾಡಿ ಮಾಡುವುದೇನು? ಇಡುವುದೆಲ್ಲಿ? ಕೊಡುವುದ್ಯಾರಿಗೆ? ಎಂಬ ಭಾವನೆಗಳಿದ್ದಾಗ-ದಾರಿದ್ರ್ಯಮೂಲವಾದ ಕ್ಷಾಮಡಾಮರಗಳಿರದೆ, ರೋಗಾದ್ಯುಪದ್ರವಗಳಿರದೆ, ಜನರು ಸುಖವಾಗಿದ್ದಾಗ-ಪರರಾಜರ ಅಂಜಿಕೆಯಿರದೆ ದೇಶದಲ್ಲಿ ಶಾಂತಿ ನೆಲಸಿದ್ದಾಗ-ಯಾರಾದರೂ ಮಾಡುವುದೇನು? ದೇಹ ಧರ್ಮಗಳನ್ನು ನಡೆಸಿಕೊಂಡು ಸೃಷ್ಟಿಕರ್ತನ ಧ್ಯಾನ ಮಾಡಿಕೊಂಡಿರುವುದಕ್ಕಿಂತ ಭಕ್ತಿಪರವಶರಾಗಿ ಅನಂತನಲ್ಲಿ ತಮ್ಮ ಆತ್ಮವನ್ನು ಚಿಂತಿಸುವುದಕ್ಕಿಂತ ಶ್ರೇಷ್ಠವಾದ ಕಾರ್ಯವಿನ್ಯಾವುದು? ಭಾಗ್ಯವಿನ್ಯಾವುದು? ಧ್ಯೇಯವಿನ್ಯಾವುದು?

ಯಂತ್ರ ತಂತ್ರಗಳ ಈ ಮಹಾನಾಗರಿಕ ಯುಗದಲ್ಲಿ ಉಗಿಬಂಡಿ ತಂತೀಕಂಭಗಳ ಸಾಮ್ರಾಜ್ಯದಲ್ಲಿ, ಭೂಮಿಯೆಂದರೆ ಭೂಮಿ, ನೀರೆಂದರೆ ನೀರು, ಆಕಾಶವೆಂದರೆ ಆಕಾಶ ಈ ಮೂರು ಸಂಚಾರ ಸ್ಥಾನಗಳಲ್ಲೂ ವಿಹಾರಯೋಗ್ಯವಾದ ವಿಮಾನಗಳಲ್ಲಿ ವಿಹರಿಸಲನುವಾದ ಕುಬೇರ ರಾವಣರ ಸೌಭಾಗ್ಯದಲ್ಲಿ, ಈ ಭಾಗ್ಯವನ್ನನುಭವಿಸುವ ಭಾಗ್ಯ ಯಾರಿಗಾದರೂ ಇದೆಯೇ? ಎಷ್ಟು ಬಂದರೂ ಮತ್ತಷ್ಟು ಬೇಕೆಂಬ ದುರಾಶಾ ದರಿದ್ರರಿಗೆ ಮನಶ್ಶಾಂತಿಯಿದೆಯೆ?

ಒಂದು ದಿನ ನಂಜುಂಡನು ಜೊತೆಯ ಬ್ರಾಹ್ಮಣ ಬಾಲಕರೊಡನೆ ತಾಳೇ ಹೂವನ್ನು ತರುವೆನೆಂದು ಹೊರಟನು. ನೂರಾರು ಮೋತೆಗಳು ದೊರೆಯುವ ವನವನ್ನು ಪ್ರವೇಶಿಸಿ, ಮುರಿಮುರಿದು ಪುಷ್ಪಗಳನ್ನು ಸೇರಿಸಿದನು. ಕೈಗೆ ಸಿಗದೆ, ಗಳುವಿಗೆ ಸಿಲುಕದೆ, ಮೇಲಿದ್ದ ಒಂದು ಪುಷ್ಪವನ್ನು ಮುರಿದು ತರುವೆನೆಂದು ಮರವನ್ನೇರಿದನು. ತಾಳೇ ವನದಲ್ಲಿ ವಾಸನೆಗಾಗಿ ಸರ್ಪಗಳು ಸೇರುವುದು ಸ್ವಭಾವ! ದಟ್ಟವಾದ ವನದಲ್ಲಿ ತಪ್ಪದೆ ಸರ್ಪಗಳಿರುವುದರಲ್ಲಿ ಸಂಶಯವಿಲ್ಲ. ಇವತ್ತಿಗೂ ಬೇಲೂರು ಪ್ರಾಂತ್ಯದಲ್ಲಿರುವಷ್ಟು ಸರ್ಪಗಳು ಮತ್ತೆಲ್ಲೂ ಇಲ್ಲ. ಮನೆಗಳಮೇಲೆ ಬಿಸಿಲುಕಾಲದಲ್ಲಿ ಧಾರಾಳವಾಗಿ ಸಂಚರಿಸುತ್ತವೆ. ಅಭ್ಯಾಸವಾಗಿರುವುದರಿಂದ, ಸರ್ಪಗಳನ್ನು ಕಂಡರೆ ಸಾಮಾನ್ಯವಾಗಿ ಜನರು ಅಂಜುವುದಿಲ್ಲ. ನಂಜುಂಡನು ದೊಡ್ಡ ಮರದಲ್ಲಿ ಅರಳಿದ್ದ ಪುಷ್ಪಕ್ಕೆ ಕೈ ಹಾಕಿದೊಡನೆಯೇ ಅಲ್ಲಿಯೇ ಸೇರಿಕೊಂಡಿದ್ದ ಕೃಷ್ಣಸರ್ಪವೊಂದು ಅವನನ್ನು ಕಚ್ಚಿಬಿಟ್ಟಿತು. ಬಾಲಕನು ಭೀತನಾಗಿ ಕೆಳಗುರುಳಿದನು. ಬಿದ್ದೊಡನೆಯೇ ಅವನಿಗೆ ಜ್ಞಾನತಪ್ಪಿತು. ಜೊತೆಗಾರರು ಅವನನ್ನು ಹೊತ್ತುತಂದು ಬಯಲು ಪ್ರದೇಶದಲ್ಲಿ ಮಲಗಿಸಿ ಶೈತ್ಯೋಪಚಾರ ಮಾಡಿದರು. ಯಾವ ರೋಗಕ್ಕೆ ಏನು ಚಿಕಿತ್ಸೆ ಮಾಡಬೇಕೆಂಬುದನ್ನು ತಿಳಿಯದ ಬಾಲಕರ ಉಪ

ಚಾರವು ನಿಷ್ಫಲವಾಯಿತು. ನಂಜುಂಡನು ಮೃತನಾದನೆಂದು ಎಲ್ಲರೂ ತಲೆತಲೆ ಬಡಿದು ಕೊಂಡು ಅತ್ತುಬಿಟ್ಟರು. ಬೇಗ ಹೋಗಿ ತಾಯಿಗೆ ತಿಳಿಸದಿದ್ದರೆ ಮತ್ತೇನು ತಪ್ಪಾಗು ವುದೋ ಎಂದು, ಮನೆಗೆ ಹೋಗಿ ನಂಜುಂಡನ ಮರಣವಾರ್ತೆಯನ್ನು ಮಾದಮ್ಮನಿಗೆ ತಿಳಿಸಿದರು. ಏಕಮಾತ್ರ ಪುತ್ರ! ಶ್ರೀ ಕೇಶವನ ವರಪುತ್ರ! ಬಲು ಗುಣವಂತ ಪುತ್ರ! ಇಂಥಾ ಪುತ್ರನ ಮರಣದಿಂದ ಶರಣಮ್ಮನಾದರೂ ಮಾದಮ್ಮನು ದುಃಖಿಸದಿರಲು ಸಾಧ್ಯವೆ? ಶ್ರೀಕೃಷ್ಣಪರಮಾತ್ಮನಂಥವನಿಂದ ಗಾಢಿಗಟ್ಟಲೆ ವೇದಾಂತವನ್ನು ಕೇಳಿದ ನರಾಂಶನೆಂದು ಹೊಗಳಿಸಿಕೊಂಡ ವೀರಾಗ್ರೇಸರ ಅರ್ಜುನನೇ ಪುತ್ರಶೋಕ ಬರಲು ಬಲು ರೋದನ ಮಾಡಿದ! ಧರ್ಮನಂದನನಂಥಾ ಅಣ್ಣನನ್ನು ಬಾಯಿಗೆ ಬಂದಂತೆ ದೂಷಿಸಿದ! ಅಂದಮೇಲೆ ಮಾದಮ್ಮನಂಥಾ ಹೆಂಗಳೆಯ ಮಾತೇನು? ಗಟ್ಟಿಯಾಗಿ ಅಳುತ್ತಾ ಬೀದಿಯಲ್ಲಿ ನಿಂತುಬಿಟ್ಟಳು. 'ನಿಂದಕರ ಹೊಟ್ಟೆ ತಣ್ಣಗಾಯಿತೆಂದಳು. ಅಣ್ಣಯ್ಯಾ, ನಂಜುಂಡನನ್ನು ಬದುಕಿಸಿಕೊಡುವಿರಾ? ಇಲ್ಲವಾದರೆ ನಾನು ಸಾಯಲೇ?' ಎಂದು ಅಮಂಗಳಧ್ವನಿ ಮಾಡಿದಳು. ದಾಸರ ಮನೆಯ ಮುಂದೆ ಜನರ ಜಾತ್ರೆ ಯಾಯಿತು. ಆಕೆಯನ್ನು ಸಮಾಧಾನಗೊಳಿಸಲು ದಾಸರಿಗೂ ಬಾಯಿ ಬರದಂ ತಾಯಿತು. 'ದೀನಬಂಧೋ! ಕೇಶವಾ! ಎಂಥಾ ವಿಷಪರೀಕ್ಷೆಗೆ ನನ್ನನ್ನು ತಂದೆಳೆ ದೆಯೋ? ಇದು ನನ್ನ ಪ್ರಾಣ ಪರೀಕ್ಷೆ! ಆಗಲಿ, ನಂಜುಂಡನ ಕಳೇಬರವನ್ನು ದೇವ ಸ್ಥಾನದ ಬಲಿಕಲ್ಲಿನ ಬಳಿಗೆ ತನ್ನಿ'ರೆಂದು ಜನರನ್ನು ಕಳುಹಿಸಿ, ದಾಸರು ಆಲಯವನ್ನು ಪ್ರವೇಶಿಸಿದರು. ಪರಮಾತ್ಮನನ್ನು ಪರಿಪರಿಯಾಗಿ ಪ್ರಾರ್ಥಿಸಿದರು. ಕೈಜೋಡಿಸಿ ಸ್ವಾಮಿಯ ಮುಂದೆ ನಿಂತು—

ಮೂಂಜಿ—ಆದಿತಾಳ

ಏಳಿಸು ನಂಜನನ | ನೀ ಬೇಗದೊಳೆಬ್ಬಿಸು ನಂಜನನ ಪ.
ಬಾಳುವ ಮಗನನು ತೋಳವಿಡಿದ ಯಮ |
ನಾಳಿದೊಡೆಯ ವೇಲಾಪುರದರಸ ಅ.

ಪತಿಯನು ನೀಗಿದ ಸತಿ ಮಾದಮ್ಮನು
ಸುತನಿಂ ಬದುಕುವೆನೆಂದೀ ಊರೊಳು |
ಅತಿ ತಿರಿತಂದು ಓವುತಲಿರ್ದಳು
ಸುತ ಮೃತನಾದನಚ್ಯುತ ಸಲಹಯ್ಯಾ ೧

ಸತ್ತಮಗನ ತಂದಿತ್ತುದಿಲ್ಲವೆ ಹೇ
ಕರ್ತೃವೆ ಸಾಂದೀಪೋತ್ತಮನಿಗೆ ಬಳಿ
ಕುತ್ತರೆಯೊಡಲೊಳು ಸತ್ತಿದ ಶಿಶು ಸಾ
ಯುತ್ತಿರಲುಳುಹಿದೆ ಚಿತ್ತಜನಯ್ಯಾ ೨

ಮರಣವನೈದಿದ ತರಳ ನಂಜುಂಡನ
ಕರುಣಿಸದಿರ್ದೊಡೆ ಶಿರವನರಿದು ನಾ
ಚರಣದೊಳಿಡುವೆನು ದುರಿತಬಹುದು ನಿನ
ಗೆರೆಯನೆ ವೈಕುಂಠದರಸ ಚನ್ನಿಗನೆ ೩

ಎಂಬುದಾಗಿ ಸ್ತೋತ್ರವಮಾಡಿದರು. ನಂಜುಂಡನನ್ನು ಬದುಕಿಸದಿದ್ದರೆ ನನ್ನ ಪ್ರಾಣವ ನ್ನೊಪ್ಪಿಸುವೆನೆಂದು ಶಿಲೆಗೆ ತಲೆಯನ್ನು ಘಟ್ಟಿಸಿದರು. ಅಷ್ಟರಲ್ಲಿ ಪಾಪನಾಶನನಾದ ಕೇಶವನು ದಾಸರ ಕೈಹಿಡಿದು–'ಅಂಥಾ ಸಾಹಸ ಬೇಡ, ಶತಾರಿಯನ್ನೂ, ತೀರ್ಥವನ್ನೂ ತೆಗೆದುಕೊಂಡು ಬಲಿಗಲ್ಲಿನ ಬಳಿ ಬಿದ್ದಿರುವ ನಂಜುಂಡನನ್ನು ಬದುಕಿಸೆ'ಂದು ಅಭಯವಿತ್ತನು.

ನಂಜುಂಡನ ಕಳೇಬರವನ್ನು ಹೊತ್ತು ತಂದ ಜನರು, ಬಲಿಗಲ್ಲಿನ ಬಳಿಯಲ್ಲಿ ಮಲಗಿಸಿ, ಮುಂದೇನಾಗುವುದೋ ಎಂದು ನಿರೀಕ್ಷಿಸುತ್ತಿದ್ದರು. ಮಾದಮ್ಮನು ಹೆಣದ ಮೇಲೆ ಬಿದ್ದು ಗೋಳಾಡುತ್ತಿದ್ದಳು. ದಾಸರು–'ಅಭಯವಾಯಿತು, ಅಭಯವಾಯಿತು, ಹೆದರಬೇಡಿ'ರೆಂದು ಕೂಗುತ್ತಾ, ಮೃತನ ಶಿರಸ್ಸಿನಮೇಲೆ ಶತಾರಿಯನ್ನು ಸ್ಪರ್ಶಮಾಡಿಸಿ, ತೀರ್ಥವನ್ನು ಪ್ರೋಕ್ಷಿಸಿದರು. ಬಾಲಕನು ಕೇಶವಾನುಗ್ರಹದಿಂದ ನಿದ್ರಿತನು ಎಚ್ಚರಗೊಳ್ಳುವಂತೆ, ಎದ್ದು ಕುಳಿತನು. ದಾಸರು ಕೊಟ್ಟ ತೀರ್ಥವನ್ನು ಪಾನಮಾಡಿದನು. ಕೈಯನ್ನು ನೋಡಿಕೊಂಡು ಏನೂ ಇಲ್ಲವೆಂದನು.–'ಅಮ್ಮಾ ಅದೇಕೆ ಅಳುವೆ ?' ಎಂದು ಪ್ರಶ್ನೆಮಾಡಿದನು. ತಾತ! ಎಂದು ದಾಸರ ಪಾದಕ್ಕೆ ನಮಸ್ಕರಿಸಿದನು.

ಆ ಕಾಲದಲ್ಲಿ ನಂಜುಂಡನಿಗೆ ದಾಸರು ಮಾಡಿದ ಆಶೀರ್ವಾದ

ಪಂತುವರಾಳಿ ಛಾಪು

ಬದುಕು ಬದುಕು ನಂಜುಂಡ
ನೀನೊದಗೆ ಮತ್ತೆ ನೂರು । ವರುಷ ಪರ್ಯಂತರ

ಜನನಿಯ ಮಾತು ಮೀರದೆ । ಪರ
ವನಿತೆಯರಿಗೆ ಮನಸೋಲದೆ ।
ಬಿನುಗುದೈವಂಗಳಿಗೆರಗದೆ । ದು
ರ್ಜನರ ಸಂಗವ ನೀ ಮಾಡದೆ ನಂಜ ೧.

ತಪ್ಪುದಾರಿಯಲಿ ನೀ ಪೋಗದೆ । ಆರು
ಒಪ್ಪದ ಕರ್ಮವನೆಸಗದೆ ।
ತಪ್ಪುಕಥೆಗಳನು ಕೇಳದೆ । ಬಲು
ಸಪ್ಪೆವಾಕ್ಯಂಗಳನಾಡದೆ ನಂಜ ೨

ಹರಿಗೆರಗುತ ಹರಿಶರಣರ್ಗೆ ನಮಿಸುತ್ತ
ಹರಿಕಥೆಗಳ ನಿತ್ಯ ಹೇಳುತ್ತ ಕೇಳುತ್ತ ।
ಹರಿಸರ್ವೋತ್ತಮನೆಂದು ನೀನಿರು ಕಂಡ್ಯ
ವರ ವೈಕುಂಠ ಕೇಶವ ರಕ್ಷಿಸುವ ನಂಜ ೩

ಹೀಗೆಂದು, ದಾಸರು ನಂಜುಂಡನಿಗೆ ಆಶೀರ್ವಾದವಮಾಡಿದರು. ಸೇರಿದ್ದ ಜನರು ಜಯಧ್ವನಿಮಾಡಿ ದಾಸರ ಪಾದಕ್ಕೆರಗಿ ಕೇಶವನನ್ನು ಸ್ಮರಿಸಿದರು.

ಇದೇ **ನಂಜುಂಡನು** ಕಾಲಾಂತರದಲ್ಲಿ ಬೇಲೂರಿನ ಫೌಜುದಾರನಾಗಿದ್ದನಂತೆ! ಫೌಜುದಾರನೆಂದರೆ ಈಗಿನ ಜಿಲ್ಲಾ ಕಲೆಕ್ಟರ್ ಅಥವಾ ಡೆಪ್ಯುಟಿ ಕಮಿಷನರ್, ಅಧಿಕಾರಿಯಾದರೂ ನಂಜುಂಡನು ದಾಸತ್ವವನ್ನು ಬಿಡದೆ ಭಜನ ಪದ್ಧತಿಯನ್ನು ಆಚರಣೆಯಲ್ಲಿಟ್ಟುಕೊಂಡಿದ್ದನಂತೆ! ಈತನು ಕವಿಯಾಗಿದ್ದರೂ ಆ ಕವತೆಗಳು ದೊರೆತಿಲ್ಲ.

ಈ ಸಮಕಾಲದಲ್ಲೇ ವ್ಯಾಸರಾಯರೂ ಪುರಂದರದಾಸರೂ ಬೇಲೂರಿಗೆ ಬಂದಿದ್ದರೆಂದು ಗೊತ್ತಾಗುತ್ತದೆ. ವ್ಯಾಸರಾಯರೊಡನೆ ವೈಕುಂಠದಾಸರು ಮಿಳಿತರಾಗಿ ಆಡಿದ ಮಾತುಗಳಾಗಲಿ, ಹಾಡಿದ ಪದಗಳಾಗಲಿ ದೊರೆತಿಲ್ಲ. ದೊರೆಯದ ಮಾತ್ರಕ್ಕೆ ಅವರವರು ಸೇರಲಿಲ್ಲವೆಂದು ಸಾಧಿಸಬೇಕಾದ ಅಗತ್ಯವಿರುವುದಿಲ್ಲ. ಪುರಂದರದಾಸರೂ ವೈಕುಂಠದಾಸರೂ ಕಲೆತಿದ್ದ ಒಂದೆರಡಂಶಗಳನ್ನು ಮಾದರಿಗಾಗಿ ಪುರಂದರದಾಸರ ಚರಿತ್ರೆಯಲ್ಲಿ ಕೊಟ್ಟಿರುವ ಕಾರಣ, ಮತ್ತವೇ ಸಂಗತಿಗಳ ಪುನರುಕ್ತಿ ಮಾಡುವುದಿಲ್ಲ. ಹಿಂದೆ ಬರೆಯದ ಬೇರೆ ಸಂಗತಿಗಳು ಅವರ ದೇವರ ನಾಮಗಳಲ್ಲಿದ್ದರೂ ಗ್ರಂಥ ವಿಸ್ತಾರಭಯದಿಂದ ಬರೆಯಲು ಸಾಧ್ಯವಿಲ್ಲ.

ಅಚ್ಯುತದಾಸರು

ಅಚ್ಯುತದಾಸರು, ಅಚಲಾನಂದದಾಸರು ಸ್ಥಾಪಿಸಿದ ಆರು ಭಾಗವತ ಧರ್ಮ ಪೀಠಗಳಲ್ಲಿ ಯಾವುದೋ ಒಂದು ಪೀಠಕ್ಕೆ ಸೇರಿದವರಿರಬೇಕು. ಇವರು ಆ ಕಾಲದ ಬಹು ಪ್ರಸಿದ್ಧ ಕೀರ್ತನಕಾರರಾಗಿದ್ದರು. ಪಾಂಡಿತ್ಯದೃಷ್ಟಿಯಿಂದ ನೋಡಿದರೆ, ಇವರಷ್ಟು ಶಾಸ್ತ್ರವ್ಯಾಸಂಗವನ್ನು ಯಾವ ದಾಸರೂ ಮಾಡಲಿಲ್ಲವೆಂದು ತಿಳಿಯಬಹುದು. ಈ ದಾಸರು ಖ್ಯಾತಿಕಾಮುಕರಾಗಿ ಬಿರುದಾವಳಿಗಳನ್ನು ಹಿಡಿಸಿಕೊಂಡು, ಪಲ್ಲಕ್ಕಿಯಲ್ಲಿ ಕುಳಿತು, ದೇಶಸಂಚಾರಮಾಡುತ್ತಿದ್ದರು. ಹೋದ ಬಳಿಯಲ್ಲಿ ಪಂಡಿತರನ್ನು ಕೆಣಕಿ ಸೋಲಿಸಿ, ಜಯಪತ್ರಿಕೆಗಳನ್ನು ಬರೆಸಿಕೊಳ್ಳುತ್ತಿದ್ದರು. ಭಗವದನುಗ್ರಹವೊಂದರ ವಿನಾ ಅಚ್ಯುತದಾಸರಿಗೆ ಇತರ ಸೌಭಾಗ್ಯಗಳಿಗೆ ಕೊರತೆಯಿರಲಿಲ್ಲ. ಇವರು ಹೊಯ್ಸಳ ಕರ್ನಾಟಕರನ್ನು ಜಯಿಸಬೇಕೆಂದು ಬರಲು ಅಲ್ಲಿನ ವಿದ್ವಾಂಸರು-ನಮಗೆಲ್ಲಾ ಹಿರಿಯರು ವೈಕುಂಠದಾಸರು ; ಅವರಿಂದ ಜಯಪತ್ರಿಕೆಯನ್ನು ತಂದರೆ, ನಾವೆಲ್ಲರೂ ಅದಕ್ಕೆ ಸಹಿ ಮಾಡುವೆವೆಂದು ಹೇಳಿ ಅವರನ್ನು ಬೇಲೂರಿಗೆ ಕಳುಹಿಸಿದರು. ಅಚ್ಯುತದಾಸರು ವೈಕುಂಠದಾಸರನ್ನು ಕುರಿತು-'ವಾಕ್ಯಾರ್ಥಕ್ಕೆ ಬರುವಿರಾ ? ಜಯಪತ್ರಿಕೆ ಕೊಡುವಿರಾ ?'

ಎಂದೇ ಹೇಳಿಕಳುಹಿಸಿದರು. ಬಂದ ದಾಸರ ಆಡಂಬರವನ್ನು ನೋಡಿ ಬೇಲೂರು ಜನರು ಬೆರಗಾದರು.

ವೈಕುಂಠದಾಸರು–'ವಾಕ್ಯಾರ್ಥಗಳು ಅರ್ಥಸಿದ್ಧಿಗಾಗಿ, ಸಿದ್ಧಾರ್ಥರಿಗೆ ವಾಕ್ಯಾರ್ಥ ಬೇಡ. ಅಚ್ಯುತದಾಸರಿನ್ನೂ ಸಾಧಕವರ್ಗದಲ್ಲಿರುವಂತೆ ಭಾಸವಾಗುತ್ತದೆ. ನಾನು ವಾಕ್ಯಾರ್ಥದವನಲ್ಲ. ನನ್ನೊಡನೆ ವಾಕ್ಯಾರ್ಥವೆಂದರೆ, 'ಕಣ್ಣುಕಿತ್ತು ಬಾಯ್ಬಿಗಿದು ಕೂಡುವುದು.' ಇದಕ್ಕೇನೆನ್ನುವರು, ಕೇಳಿಬಾರೆಂದು ವರದನನ್ನು ಕಳುಹಿಸಿದರು. ವರದನು ಬಂದು ನೋಡುವಷ್ಟರಲ್ಲಿ, ಅಚ್ಯುತದಾಸರ ಕಣ್ಣು ಕಾಣದೆ, ಮಾತನಾಡಲು ನಾಲಿಗೆ ಚಲಿಸದೆ, ಕೈಸನ್ನೆಗಾರಂಭವಾಗಿತ್ತು. ಹೀಗಾಗಲು ಕಾರಣವೇನೆಂದು ಅವರು ಚಿಂತಾಕ್ರಾಂತರಾದರು. ಜನರು ನಿಮಗೆ ವೈಕುಂಠದಾಸರ ದ್ರೋಹವಲ್ಲದೆ ಅನ್ಯಕಾರಣವಿಲ್ಲವೆಂದು ತಿಳಿಸಿದರು. ಆಗ ಅಚ್ಯುತದಾಸರು ವೈಕುಂಠದಾಸರ ಮಹಿಮೆಗಳನ್ನು ಕೇಳಿ ಭಾಗವತಾಪಚಾರವಾಯಿತೆಂದು, ನಮ್ರರಾಗಿ ದಾಸರಿಗೆ ಶರಣಾಗತರಾದರು. ವೈಕುಂಠದಾಸರು ಅಚ್ಯುತದಾಸರನ್ನು ನೋಡಿ ಮನಸುರುಗಿ, ಅವರನ್ನು ತಮ್ಮೊಂದಿಗೆ ದೇವಾಲಯಕ್ಕೆ ಕರೆದುಕೊಂಡು ಹೋದರು. ಸ್ವಾಮಿಗಳ ಬಳಿಯಲ್ಲಿ–'ದೇವಾ ಬಾಯಿಂದ ಏನೋ ಅನುಚಿತ ನುಡಿಗಳನ್ನು ನುಡಿದ ಮಾತ್ರಕ್ಕೇ ಅಚ್ಯುತದಾಸನ ನಯನ ನಾಲಗೆಗಳನ್ನು ಅಪಹರಿಸಬಹುದೆ? ಕಿತ್ತುಕೊಂಡ ನೀನೇ ಮತ್ತೆ ಕೃಪೆಮಾಡಿ ಕೊಡಬೇಕಲ್ಲದೆ ಆತನನ್ನು ಸಲಹುವವರಾರು? ಕೇಶವನ ದರ್ಶನಕ್ಕೆ ಹೋದರೆ ಕಣ್ಣು ನಾಲಿಗೆಗಳೂ ಹೋಗುವವೆಂಬ ಅಪಕೀರ್ತಿ ನಿನಗೆ ಬರಬಹುದೆ?' ಆದ್ದರಿಂದ—

ಮುಖಾರಿ—ಜಂಪೆ

ಪಾಲಿಪುದು ನಯನಗಳ ನಾಲಿಗೆಯ ನೀಗ ಶ್ರೀ
ಲೋಲ ಸಾರ್ವಭೌಮನೆ ಪ
ನೀಲಮೇಘ ಶ್ಯಾಮ ವೇಲಾಪುರಾಧೀಶ
ಶೀಲ ಅಚ್ಯುತದಾಸಗೇ! ಸ್ವಾಮೀ ಅ

ಪರಮಪದನಾಥ ಇಂ | ದಿರೆಯರಸ ಸಕಲ ನಿ | ರ್ಜರರು ಪೂಜಿಸುವಂಘ್ರಿಯು |
ಶಿರಿಯ ನೀಕ್ಷಿಸಿ ತುತಿಸಿ | ವರನಾಮಸೂಳಾದಿ | ಭರತದಿಂ ಪಾಡಿಯಾಡೀ |
ಮೊರೆಹೊಕ್ಕು ಬದುಕಲಾ | ವರಿಸಿಕೊಂಡಗಲದಿಹ | ದುರಿತ ಭವ ಶರಧಿಯು
ಪರಿದು ಕಾಯುವನೆಂದು | ಭರದೊಳೈದಿದವಗಾ |
ಶ್ವರಿಯದಾಪತ್ತಡಸಿತೋ | ಸ್ವಾಮೀ ೧

ಹಿಂದೆ ಮಾಡಿದ ಪಾಪ | ವೆಂದೆಂಬುವಕೆ ಜನನ | ದಿಂದ ತಾ ಊನನಲ್ಲ |
ವೃಂದಲೀ ನಗರವನು | ಪೊಂದಿತಾಕ್ಷಣದಿ ವಾ | ಗ್ಬಂಧವಂಧತ್ವವೆರಡು |
ಮುಂದೆ ಕೆಡವಿಪ್ಪ ಇಂಥನವರ್ಪೋಲಚ್ಯುತನು | ಅಂದವಳಿದುಬ್ಬಸದೊಳು |
ಇಂದು ನೀ ಸಲಹಿದೊಡೆ ! ಹಿಂದಾರ್ಜಿಸಿದ ಪಾಪ
ವೃಂದಗಳು ನಿಂದಿರುವವೇ ಸ್ವಾಮೀ ೨

ಮನುಜ ಮಾಡಿದ ಪಾಪ। ವನು ಗಣನೆ ಗೈವೊಡಾ। ಫಣಿರಾಜಗಳವಡು ಪದೇ ?
ಗುಣತರಂಗಿಣಿಯೆ ದು । ರ್ಗುಣಗಳೆಣಿಸಲು ಶರಣ । ಜನರೊಳಿಂ ಪುರುಳಿರು ವುದೋ
ಚಿನುಮಯನೆ ನೋಪ ದೂ। ರನೆ ದಾಸನವಗುಣಗ। ಳೆಣಿಸದೆ ಮರೆದು ಕಳೆದು।
ಘನಮಹಿಮ ಚೈತನ್ಯವನ್ನು ಇತ್ತು ಸಲಹನಾಥನನು ವೈಕುಂಠ ರಮಣಾ ಸ್ವಾಮಿ ೩

ಅನಾಥನನ್ನು ಸಲಹೆಂಬ ಸ್ತೋತ್ರ ಮಾಡಿದರು.
ಈ ಪದವಾಗುತ್ತಲೇ ಮತ್ತೆ ಭಕ್ತಿಛಲದಿಂದ ಕೇಶವನ ಮೊರೆಬೀಳುತ್ತಾ

'ಕೊಡುವದಿಲ್ಲವೆ ಪೋದ ಕಣ್ಣು ನಾಲಿಗೆಯ ನೀ ।
ನೊಡೆಯನಲ್ಲ ನಾನು ಕಿಂಕರನಲ್ಲ ಚನ್ನಾ ॥

ಎಂಬುದಾಗಿ ನಿಂದಾಸ್ತುತಿ ಮಾಡಿದಂತೆ ಪ್ರಾರ್ಥಿಸಿರುತ್ತಾರೆ. ಕಡೆಯ ನುಡಿಯಲ್ಲಿ ಅಚ್ಯುತದಾಸರಿಗೆ ನೀನು ಕಣ್ಣು ನಾಲಿಗೆಗಳನ್ನು ಕೊಡದಿದ್ದರೆ, ನನ್ನ ಕಣ್ಣು ನಾಲಿಗೆಗಳನ್ನೇ ಕಿತ್ತು ನಿನ್ನ ಪಾದಕ್ಕೊಪ್ಪಿಸುವೆನೆಂದು—

"ಹರಿಯೆ ಈಯದೊಡೆನ್ನ ಕಣ್ಣುನಾಲಿಗೆಯ ಕಿ
ತ್ತಿರಿಸುವೆನು ಮುಂದೆ ವೈಕುಂಠ ಚನ್ನಿಗರಾಯ"

ಅನಂತರ ಕೇಶವನ ಕೃಪೆಯಾಯಿತು. ವೈಕುಂಠದಾಸರ ಅನುಗ್ರಹದಿಂದ ಅಚ್ಯುತದಾಸರಿಗೆ ಹೋದ ಕಣ್ಣು ನಾಲಿಗೆಗಳು ಬಂದವು. ಆ ಕಾಲದಲ್ಲಿ ಅಚ್ಯುತದಾಸರು ವೈಕುಂಠದಾಸರನ್ನು ಹೀಗೆ ಸ್ತೋತ್ರಮಾಡಿರುತ್ತಾರೆ.

ಕಲ್ಯಾಣಿ—ಜಂಪೆ

ಅರಿಯದಪರಾಧಕೊಡ್ಡಿದೆನೊಡಲನು, ಮ
ತ್ಸರಿಸಿ ನಿನ್ನೊಡನೆ ವೈಕುಂಠದಾಸೋತ್ತಮನೆ ಪ.

ನಿನ್ನ ವಾರ್ತೆಯ ಕೇಳಿ ವಾದ ಮುಖದಲಿ ಜೈಸಿ
ಉನ್ನತದ ಬಿರುದುಗಳ ಪಡೆವೆನೆಂದು
ಸನ್ನಿಯಿಂ ಬಂದು ಈ ಬನ್ನಕೊಳಗಾದೆ ಎನ
ಗಿನ್ನು ಗತಿಯೇನು ವ್ಯುತ್ಪನ್ನ ದ್ರಾವಿಡನೆ ೧

ಮೃಗರಾಜನೊಳು ಶಣೆಸಪೋದ ಮಕರಿಯಂತೆ
ಖಗಪತಿಯ ಕಚ್ಚಪೋದಹಿಯಂದದಿ
ಗಗನ ನದ ಪಡಗ ಹರಿಗೋಲು ಮುಳುಗಿಪೆನೆಂಬ
ಬಗೆಯಾಯಿತೆನ್ನ ಕುಮತಿಯು ದಾಸರರಸ ೨

ಗರುವಿಕೆಗೆ ತಕ್ಕ ಪ್ರಾಯಶ್ಚಿತ್ತವಿಕ್ಕಿದನು
ಹರಿಯು ಸೈರಿಪನೆ ನಿನಗೆರಡೆಣಿಸಲು
ದುರಿತಾಂಬುಧಿಯ ರಾಶಿಯೊಳಗೆ ಬಿದ್ದೆನು ವೃಥಾ
ದುರುಯಶಕೆ ಗುರಿಯಾದೆ ನಿನ್ನ ಮಾನುಷನೆಂದು ೩

ಅಂದು ಸುರಪನ ಸುತನಿಗೊಲಿದುದನು ಕಂಡುದ
ಲ್ಲಿಂದ ನಿನ್ನೊಡನಾಡುವುದನು ಕಂಡೆ
ಹಿಂದಣಘರಾಶಿಗಳು ಬೆಂದುಪೋದವು ಎನಗೆ
ಮುಂದೆ ಸದ್ಗತಿಯು ದೊರಕಿದುದು ಸುಜ್ಞಾನಿ ೪

ಅಚ್ಯುತ ವಿಠಲ ಚನ್ನಿಗರಾಯ ಎಲ್ಲರೊಳು
ಮೆಚ್ಚಿ ಮಾತುಗಳನಾಡವೆ ಜಗದೊಳು
ನಿಚ್ಚಟದಿ ನಿನ್ನ ಸೃಷ್ಟಿಸಿ ವಚನವಾಡಿಸುವ
ದಚ್ಚರಿಯೆ ವೈಕುಂಠದಾಸದಾಸೇಶ ೫

ಶರಣಾಗತರಾದ ಅಚ್ಯುತದಾಸರು ತಮ್ಮ ಬಿರುದಾವಳಿಗಳನ್ನೆಲ್ಲ ವೈಕುಂಠ ದಾಸರಿಗೊಪ್ಪಿಸಿವರು. ಬಿರುದಾವಳಿಗಳ ವಿವರಣೆಯನ್ನು ನೋಡಿದರೆ, ಅಚ್ಯುತದಾಸರ ವೈಭವವೆಂಥಾದ್ದೆಂಬುದು ಗೊತ್ತಾಗುತ್ತದೆ. ಆ ಕಾಲದಲ್ಲಿ ಹರಿದಾಸರ ವರ್ಚಸ್ಸವು, ಸಮಾಜದಮೇಲೆ ಎಷ್ಟುಮಟ್ಟಿಗೆ ಇದ್ದಿರಬಹುದೆಂಬುದು ತಿಳಿದುಬರುತ್ತದೆ. ಬರಿ ಮಾತಿನಿಂದ ಬರೆಯುವುದರ ಬದಲು ಆ ಪದವನ್ನೇ ಬರೆಯುವುದರಿಂದ ವಾಚಕರಿಗೆ ಹೆಚ್ಚು ವಿಶ್ವಾಸ ಬರುತ್ತದೆ. ಏಳು ನುಡಿಗಳ ಆ ಪದದಲ್ಲಿ ದಾಸರ ಇತರ ಮಹಿಮೆಗಳ ಸಂಕ್ಷೇಪ ವಿವರಣೆಯೂ ಇದೆ.

ಕಾಂಬೋದಿ—ಜಂಪೆ

ನಿನಗಲ್ಲ ದಾರಿಗಳವಡುವದಯ್ಯ
ಘನ ಮಹಿಮೆಗಳು ಬಿರುದುಗಳು ದಾಸರರಸ ಪ.

ಕೆತ್ತನೆಯ ಪಲ್ಲಕ್ಕಿ ರತ್ನದ ಮುಖರಿಮುಖ
ಇತ್ತೆರದಿ ಶೋಭೃಭಯ ಚಾಮರಗಳು
ಸತ್ತಿಗಳು ಶಂಖಚಕ್ರದ ಪಕ್ಕೆಗಳ ಪಿಡಿದ
ಮೊತ್ತವು ಹಗಲು ದೀವಟಿಯು ಗರುಡಧ್ವಜವು ೧

ಎಡಬಲದಿ ಹಿಡಿದೇಜಿಗಳು ಭಾಗವತ ಜನರು
ಬಿಡದೆ ಪಾಡುವದು ಕುಣಿದಾಡುತಿಹುದು
ಪಡಿಯಿಲ್ಲ ವರ್ಣಕಾರರ ಚಕ್ರವರ್ತಿಯೆಂ
ದೊಡೆದು ಬಿರುದಂ ಪೊಗಳ್ವ ಪಾಠಕರ ಗಡಣ ೨

ಕರಿಯ ಮೇಲಣ ಭೇರಿಯನು ಹೊಡೆದು ಬರುತಿಹುದು
ನೆರೆಧವಳ ಶಂಖ ಪೂರೈಸುತಿಹುದು
ವರಪಂಚ ಮಹವಾದ್ಯ ಭೋರಿಡುತಲಿರುವದೀ
ಬಿರುದುಗಳು ಹರಿದಾಸರರಸಗಲ್ಲದೆ ಸ್ವಾಮಿ ೩

(ಇವಿಷ್ಟೂ ಅಚ್ಯುತದಾಸರಿಗಿದ್ದ ಬಿರುದುಗಳು.)

ಹರಿಯಿಂದ ಕವಚ ಕುಂಡಲ ಕಿರೀಟವ ಪಡೆದು
ಧರಿಸಿ ಚರಿಸುವೆ ನಿನ್ನ ಸುಕೃತವೆಂತೋ
ಧರೆಯೊಳಾರುಂಟು ಈ ಯುಗದಿ ನರನಲ್ಲದೆ
ವರತೊಂಡನಹುದು ಪ್ರತಿರೂಪೆಂದು ತೋರುತಿದೆ ೪

ಸತ್ತವರ(ರಕ್ಷಿಸುವುದಕ್ಷಿರಸನೆಗಳ ಬಳಿ
ಕಿತ್ತು ಉಳುಹುವುದು ದೇವರ ಕೈಯಲಿ
ಹತ್ತುಸಾವಿರ ಪೊನ್ನು ವಿಪ್ರಂಗೆ ಕೊಡಿಸಿದುದು
ಪ್ರತ್ಯಕ್ಷವಾಗಿ ಹರಿಯನು ತೋರಿಸಿದುದು ೫

ಹರಿವಿಶ್ವರೂಪ ತೋರಿದುದಂತರಂಗದೊಳು
ಎರಡುದಿನ ಪರಿಯಂತವಿರಿಸಿದ್ದುದು
ಸುರಗಿರಿಯ ತೋರಿದುದು ಗಂಗೆಯೊಳಗದ್ದಿದುದು
ಪರಿಚಾರನೋಲೂಳಿಗವನು ಮಾಡುವುದು ೬

ರಾಮಾನುಜಾಚಾರ್ಯರ ಮಠೋದ್ಧಾರಕನೆ ಎನ್ನ
ಪ್ರೇಮದಿಂದುಳುಹಿ ಕೀರ್ತಿಯನು ಪಡೆದೆ
ಸ್ವಾಮಿ ಅಚ್ಯುತವಿಠಲ ಕೇಶವನ ಶ್ರೀಪಾದ
ತಾಮರಸ ಭೃಂಗ ವೈಕುಂಠದಾಸೋತ್ತಮನೆ ೭

ವೈಕುಂಠದಾಸರು ಭಗವದಪರೋಕ್ಷಿಗಳಾಗಿ, ಕೇಶವನು ವಿಚಿತ್ರ ಲೀಲೆಗಳನ್ನು ತೋರಿಸಲು ಆರಂಭಿಸಿದಮೇಲೆ, ಅವರ ದರ್ಶನವಾಗಲೀ, ಅವರೊಡನೆ ಸಂಭಾಷಣೆ ಯಾಗಲೀ, ಜನರಿಗೆ ನಿಯಮಿತ ಕಾಲದಲ್ಲಿ ಮಾತ್ರ ಆಗಬೇಕಾಗಿತ್ತು. ವರದನು ದಾಸರ ಮಠದ ಪಾರುಪತ್ಯಗಾರನಂತಿದ್ದನು. ಅವನು ಸಮಯವರಿತು, ಬಂದವರ ಕಾರ್ಯ ಗಳನ್ನು ದಾಸರಿಗೆ ವರದಿಮಾಡುತ್ತಿದ್ದನು. ರಾತ್ರಿ ಭಜನ ಕಾಲದಲ್ಲಿ ದಾಸರು ಬಂದ ಜನರೊಡನೆ ಮಾತನಾಡುತ್ತಿದ್ದರು. ಪ್ರಾತಃಕಾಲ ಪೂಜೆಗೆ ಕುಳಿತರೆಂದರೆ, ಸೌಮ್ಯ ನಾಯಕಿಯೇ ದಾಸರ ಪರಿಚರಳಾಗಿರುತ್ತಿದ್ದಳು. ಭೋಜನಾನಂತರ ದಾಸರು ವಿಶಾಲ ವಾದ ಒಂದು ಕೊಟ್ಟಡಿಯಲ್ಲಿ ಏಕಾಂತವಾಗಿರುತ್ತಿದ್ದರು. ಪತ್ನಿಯಾದರೂ ಕರೆಸಿದಾಗ ವಿನಾ ಪ್ರವೇಶಿಸಲು ಧೈರ್ಯವಿರುತ್ತಿರಲಿಲ್ಲ. ಮನೆಯು ಮುಂಗಡೆಯು ಮಾದಮ್ಮನ ದಾಗಿತ್ತು. ವಿವಿಧ ಪುಷ್ಪಗಳನ್ನು ತಂದುಕೊಡುವ ಬ್ರಹ್ಮಚಾರಿಗಳೂ, ಸೇವೆ ಮಾಡುವೆ ವೆಂದು ಬರುವ ಹಿರಿಯ ಹೆಂಗಳೆಯರೂ ಮಾದಮ್ಮನ ಶಾಲೆಯಲ್ಲಿರುತ್ತಿದ್ದರು. ದಾಸರು

ಏಕಾಂತಶಾಲೆಯನ್ನು ಪ್ರವೇಶಿಸಿದರೆಂದರೆ, ಪರಮಾತ್ಮನು ನೆರೆಯ ಸ್ನೇಹಿತನಂತೆ ಬಂದು ದಾಸರೊಡನೆ ಲೆತ್ತವಾಡುವುದು, ದಾಸರು ನೋಡಬೇಕೆಂದ ಅವತಾರ ವೈಭವವನ್ನು ತೋರಿಸುವುದು, ಹೀಗೆಲ್ಲಾ ಮಹಿಮೆಯನ್ನು ಪ್ರಕಟಿಸುತ್ತಿದ್ದನು. ಏನಾದರೂ ಕಾರ್ಯ ನಿಮಿತ್ತ ದಾಸರು ವರದನನ್ನು ಕೂಗಿದರೆ, ಆ ವರದನು ಮನೆಯಲ್ಲಿರದಿದ್ದರೆ, ಸ್ವಾಮಿಯೇ **ವರದ**ನಾಗಿ ದಾಸರಿಗೆ ಅರಿವಾಗದಂತೆ ಅವರು ಹೇಳಿದ ಕೆಲಸವನ್ನು ಮಾಡುತ್ತಿದ್ದನು. ಭಕ್ತಪರಾಧೀನನಾದ ಪರಮಾತ್ಮನು, ಒಲಿಯುವುದೇ ತಡ, ಒಲಿದನೆಂದಮೇಲೆ ದಾಸರಿಗೆ ದಾಸನಾಗಿ ನಡೆದುಕೊಳ್ಳುವನು.

ಮೇಲ್ಕಂಡ ಪದದ ನಾಲ್ಕನೆ ನುಡಿಯಲ್ಲಿರುವಂತೆ ಶ್ರೀ ಕೇಶವನು ದಾಸರಿಗೆ ತನ್ನ ಉತ್ಸವದ ಜೊತೆಯಲ್ಲಿ ಬರಲು ಕವಚ ಕಿರೀಟ ಕುಂಡಲಗಳನ್ನು ಅನುಗ್ರಹಿಸಿದ್ದನಂತೆ! ಉತ್ಸವಕಾಲದಲ್ಲಿ ಅವುಗಳನ್ನು ಧರಿಸಿ, ಅಲಂಕರಿಸಿಕೊಂಡು, ದಾಸರು ಭಜನೆ ಮಾಡುತ್ತಾ ನಡೆಯುತ್ತಿದ್ದರಂತೆ! ದಾಸರು ಅರ್ಜುನಾಂಶರಾಗಿದ್ದುದರಿಂದ ಶ್ರೀ ಹರಿಯು ಇಷ್ಟು ಸುಲಭನಾಗಿ ಅವರೊಡನಾಡುತ್ತಿದ್ದನಂತೆ! ಬಡಬ್ರಾಹ್ಮಣನೊಬ್ಬನು ಋಣಪೀಡಿತನಾಗಿ ದಾಸರ ಮೊರೆಬೀಳಲು, ಅವನಿಗೆ ಭಗವಂತನಿಂದ ಅವರು ಹತ್ತುಸಾವಿರ ಹೊನ್ನುಗಳನ್ನು ಕೊಡಿಸಿದರಂತೆ!

ಒಂದು ದಿನ ದಾಸರು ದೇವಸ್ಥಾನಕ್ಕೆ ಬರುವುದಕ್ಕೆ ಮುಂಚಿತವಾಗಿಯೇ ನೌಕರರು ಆರಾಧನೆಯನ್ನು ಮುಗಿಸಿ ದೇವಸ್ಥಾನಕ್ಕೆ ಬೀಗ ಮೊಹರುಮಾಡಿಬಿಟ್ಟರು. ದಾಸರು ಆ ರಾತ್ರಿ ದೇವರ ದರ್ಶನವಾಗಲಿಲ್ಲವೆಂದು ದುಮ್ಮಾನದಿಂದ :

ಅಠಾಣೆ—ಜಂಪೆ

ಬಾಗಿಲನು ತೆಗೆದು ಸೇವೆಯನು ಕೊಡು ಹರಿಯೆ ।
ಕೂಗಿಡುವ ಧ್ವನಿಯು ಕೇಳಿಸುವುದಿಲ್ಲವೆ ನಿನಗೆ ॥ ಪ.

ಪರಮ ಪದದೊಳಗೆ ವಿಷಧರನ ತಲ್ಪದಲಿ ನೀ
ಸಿರಿಸಹಿತ ಹರುಷ ವಾರಿಧಿಯೊಳಿರಲು
ಕರಿರಾಜ ಕಷ್ಟದಿಂದಾದಿಮೂಲಾನೆಂದು
ಕರೆಯಲಾಕ್ಷಣ ಬಂದುಕಾಯ್ದೆ ಜಗವರಿಯೆ ೧

ಕಡು ಕೋಪದಿಂ ಖಳನು ಖಡುಗವನೆ ಪಿಡಿದು ನಿ
ನ್ನೊಡೆಯನೆಲ್ಲಿಹನೆಂದು ಜಡಿದು ನುಡಿಯೆ
ದೃಢ ಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸೆ
ಘುಡುಘುಡಿಸಿ ಕಂಭದಿಂದೊಡೆದು ಮೂಡಿದ ಹರಿಯೆ ೨

ಯಮಸುತನ ರಾಣಿಗಕ್ಷಯ ವಸ್ತ್ರವನ್ನಿತ್ತೆ
ಸಮಯದಲಿ ಅಜಮಿಳನ ಪೊರೆದೆಯಂದು
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ವೈಕುಂಠ ಚೆನ್ನಕೇಶವರಾಯ ೩

ಈ ಸ್ತೋತ್ರವನ್ನು ಮಾಡುತ್ತಲೇ ಮುದ್ರಿತವಾಗಿದ್ದ ಬಾಗಿಲು ತಾನಾಗಿ ತೆರೆದು ದಾಸರಿಗೆ ದೇವರ ದರ್ಶನವಾಯಿತಂತೆ !

ಒಮ್ಮೆ ದಾಸರು, 'ದೇವಾ, ನಿನ್ನ ವಿಶ್ವರೂಪವನ್ನು ಇನ್ನೊಮ್ಮೆ ನೋಡಬೇಕೆಂದು ನನಗೆ ಬಯಕೆಯಾಗಿದೆ; ದಯವಿಟ್ಟು ತೋರಿಸುವೆಯಾ ?' ಎಂದು ಕೇಳಿದರಂತೆ ! ಕೇಶವನು ಅವಶ್ಯ ಆಗಲೆಂದು ಭಾರತ ಯುದ್ಧಕಾಲದಲ್ಲಿ ತೋರಿದ ರೂಪವನ್ನೇ ದಾಸರಿಗೆ ದರ್ಶನಮಾಡಿಸಿದನಂತೆ ! ದರ್ಶನಾನಂದದಲ್ಲಿ ಎರಡು ದಿನಗಳಾದರೂ ದಾಸರು ಕೊಠಡಿಯ ಬಾಗಿಲನ್ನು ತೆಗೆಯಲಿಲ್ಲವಂತೆ ! ಕಾರಣವೇನೆಂದು ಜನರು ಗಾಬರಿಯಾಗಿ, ಬಾಗಿಲ ಬಳಿಗೆ ಬಂದು ಆಲೈಸಿದರೆ ಸ್ತೋತ್ರಮಾಡುತ್ತಿದ್ದಂತೆ ಕೇಳಿಸಿತಂತೆ ! ಸೌಮ್ಯನಾಯಕಿಯು ತವಕಪಡಬೇಡಿ, ಅಲ್ಲಿ ಹೋಗಬೇಡಿರೆಂದು ಜನರನ್ನು ನಿವಾರಿಸಿದಳಂತೆ ! ದಾಸರು ಸ್ವಾಮಿಯನ್ನು ಕುರಿತು–'ನಿನ್ನ ವಿಶ್ವರೂಪದ ಪರಮಾವಧಿಯನ್ನು ತಿಳಿವ ಬಗೆಯೇನೆ'ಂದು ಪ್ರಾರ್ಥಿಸಿದರಂತೆ ! ಸ್ವಾಮಿಯು–'ನಿನ್ನಂಥಾ ಸಂತರೆಲ್ಲರೂ ನನ್ನನ್ನು ಅನಂತನೆಂದು ಕರೆಯುವರಷ್ಟೆ !' ಎಂದು ನುಡಿದು ಅದೃಶ್ಯನಾದನಂತೆ !

ಅಚ್ಯುತದಾಸರು ವೈಕುಂಠದಾಸರಿಗೆ ಒಪ್ಪಿಸಿದ ಬಿರುದುಗಳನ್ನು ಅವರು ಶ್ರೀ ಕೇಶವಸ್ವಾಮಿಗೆ ಒಪ್ಪಿಸಿಬಿಟ್ಟರು. ದೇವಾಲಯದಿಂದ ಉತ್ಸವಗಳು ಹೊರಟರೆ ಆನೆಯ ಮೇಲೆ ನಗಾರಿ ಬಾರಿಸುತ್ತಾ ಆ ಬಿರುದುಗಳನ್ನು ಮೆರೆಸುತ್ತಾ ದಾಸರು ಉತ್ಸವದಲ್ಲಿ ಭಾಗಿಗಳಾಗುತ್ತಿದ್ದರು.

ಅಚ್ಯುತದಾಸರು ಅನಂತರ ಪರಮವಿರಕ್ತರಾಗಿ ವೈಕುಂಠದಾಸರ ಅನುಗ್ರಹದಿಂದ ಭಗವದ್ದರ್ಶನಮಾಡಿ ಕೃತಾರ್ಥರಾದರು.

ಇಂತು ವೈಕುಂಠದಾಸರ ಜೀವನಚರಿತ್ರೆಯು ಅತಿಮಾನುಷವೆನಿಸಿ ಲೋಕದಲ್ಲಿ ಅತ್ಯಂತ ಪ್ರಖ್ಯಾತವಾಯಿತು.

೪

ವೈಕುಂಠದಾಸರ ವೃದ್ಧಾಪ್ಯದಲ್ಲಿ ವಾದಿರಾಜರು ಬೇಲೂರಿಗೆ ಬಂದರು. ವಾದಿರಾಜರ ಚರಿತ್ರೆಯಲ್ಲಿ ಅವರು ಕೆಲವು ತಿಂಗಳುಗಳ ಕಾಲ ಬೇಲೂರಲ್ಲಿ ವಾಸಮಾಡಿದರೆಂದೂ, ವೈಕುಂಠದಾಸರಿಗೂ ವಾದಿರಾಜರಿಗೂ ಪರಿಚಯವಾಗಿ ಕೆಲವು ಮಹಿಮಾ ವಿಶೇಷಗಳು ನಡೆದುವೆಂದೂ ಹಿಂದೆ ತಿಳಿಸಿದೆ. ಉಭಯರೂ ಭಗವದಪರೋಕ್ಷಿಗಳಾಗಿದ್ದುದರಿಂದ ಪರಸ್ಪರ ಸಲಿಗೆಯು ಬಹುಬೇಗ ಬೆಳೆಯಿತು. ವಾದಿರಾಜರು ತಾವು ಪೀಠಾಧಿಪತಿಗಳು, ಯತಿಗಳು ಗೃಹಸ್ಥ ಧರ್ಮಿಗಳೊಡನೆ ಸುಲಭವಾಗಿ ಬೆರೆಯುವುದು ಹೇಗೆ ಎಂಬುದನ್ನು ಮರೆತುಬಿಟ್ಟರು. ವೈಕುಂಠದಾಸರು ದೊಡ್ಡವರ ಸಮಾಗಮವಾಗಿರುವಾಗ ತಮ್ಮ ನಿತ್ಯ ನಿಯಮಗಳನ್ನು ಮರೆತು, ರಾಜರೊಡನೆ ನಿರಂತರ ವಾಸಮಾಡುವುದಕ್ಕಾರಂಭಿಸಿದರು. ವೈಕುಂಠದಾಸರು ಮಠಕ್ಕೆ ಬರುವುದು ತಡವಾದರೆ, ವಾದಿರಾಜರೇ ಅವರನ್ನು ಹುಡುಕಿಕೊಂಡು ಅವರ ಮನೆಗೆ ಹೋಗುತ್ತಿದ್ದರು.

ಒಂದು ದಿನ ಭೋಜನವಾದೊಡನೆಯೇ ವೈಕುಂಠದಾಸರು ಶ್ರೀ ಕೇಶವನ ಕೃಷ್ಣಾವತಾರದ ಬಾಲಲೀಲೆಯ ಸುಖಾನುಭವ ಮಾಡುತ್ತಾ ಮನೆಯಲ್ಲಿ ನಿಂತುಬಿಟ್ಟರು. ವಾದಿರಾಜರು ವೈಕುಂಠದಾಸರನ್ನು ಬಿಟ್ಟಿರಲಾರದೆ ಅವರ ಮನೆಗೇ ಹುಡುಕಿಕೊಂಡು ಬಂದರು. ಆಗ ಶ್ರೀ ಹರಿಯು ಶಿಶುವಾಗಿ ದಾಸರ ತೊಡೆಯ ಮೇಲೆ ಶಯನಮಾಡಿ ಕ್ರೀಡಿಸುತ್ತಿದ್ದನು. ರಾಜರು ಶಿಶುವನ್ನು ನೋಡಿ ನಗುತ್ತಾ, – 'ದಾಸರೇ ಈ ಮಾಯಾ ಬಾಲಕನ್ಯಾರೆಂದು ಪ್ರಶ್ನೆಮಾಡಿದರು. ದಾಸರು – 'ಕ್ಷಮಿಸಬೇಕು. ಶ್ರೀಗಳವರು ಪೀಠವನ್ನಲಂಕರಿಸಬೇಕು' ಎಂದು ಕೈಚಾಚುತ್ತಾ —

ಪಂತುವರಾಳಿ – ಆದಿತಾಳ

ಮಗುವು ಕಾಣಯ್ಯ ಮಾಯದ ಮಗುವು ಕಾಣಯ್ಯ ಪ.
ಸುಗುಣ ವಾದಿರಾಜನೆ ಮೂಜಗವ ತನ್ನ ಉದರದೊಳಿಟ್ಟ ಅ.

ಏಕಾರ್ಣವವಾಗಿ ಸಕಲ ಲೋಕವಾಕಾರವಳಿಯೆ
ಏಕಮೇವಾದ್ವಿತೀಯನೆಂಬಾಗಮಕೆ ಸಮವಾಗಿ
ಶ್ರೀಕರಾಂಬುಜದಿಂ ಪಾದಾಂಗುಲಿಯ ತೆಗೆದು ಬಾಯೊಳಿಟ್ಟು
ಶ್ರೀಕಾಂತ ವಟದೆಲೆಯ ಮೇಲ್ಮಲಗಿ ಬ್ರಹ್ಮನ ಪಡೆದ ೧

ಮಾಯಾಪೂತನಿಯ ಕೊಂದು ಕಾಯುವ ಕೆಡಹಿ ಶಕಟನ
ಸಾಯಬಡಿದು ವತ್ಸಧೇನುಕನ ವೃಷಭನ
ನೋಯನೊಂದ್ಯಮಳಾರ್ಜುನರಿಗೆ ಸಾಯುಜ್ಯವನಿತ್ತು ತನ್ನ
ತಾಯಿಗೆ ತಾಮಣ್ಣಮೆದ್ದು ಬಾಯಬಿಟ್ಟು ತೋರಿಸಿದ ೨

ಕಡಹದ ಮರವೇರಿ ಸಂಗಡಿಗರೊಡನೆ ಕಾಳಿಂದಿಯ
ಮಡುವಿಲಿ ಧುಮುಕಿ ಕಲಕಿ ಆ ಕಾಳಿಂಗನ
ಹೆಡೆಯ ತುಳಿದು ಜಡಿಯಲವನ ಮಡದಿಯರು ಬೇಡಿಕೊಳ್ಳೆ
ಕಡಲಿಗಟ್ಟಿ ಬಂದು ಎನ್ನ ತೊಡೆಯ ಮೇಲೆ ಮಂಡಿಸಿದ ೩

ಬಳ್ಳಿಗಟ್ಟಿದುಡಿಯಲ್ಲಿ ಗುಳ್ಳಿಯ ಚೀಲವನ್ನಿಕ್ಕಿ
ಕಲ್ಲಿಗಟ್ಟ್ಯೋಗರ ಕಂಬಳಿಯ ಕೋಲು ತುದಿಯೊಳು
ಸಿಲ್ಲಿಸಿ ಹೆಗಲೊಳು ಕೊಂಬುಕೊಳಲನು ಪಿಡಿದು ಊದುತ್ತ
ಗೊಲ್ಲರನೊಡಗೂಡಿಯಾಡುತೆಲ್ಲರ ಗೋವುಗಳ ಕಾಯ್ದು ೪

ಶ್ರುತಿತತಿಗಗೋಚರನಚ್ಯುತನ ಭಾವನಾದಿ ಮೂರ್ತಿ
ರತಿಪತಿಪಿತನು ಶೇಷಶೇಷಾರಾಧ್ಯನು
ಕ್ಷಿತಿಗಧಿಕ ವೇಲಾಪುರಪತಿ ವೈಕುಂಠಕೇಶವನು
ಯತಿಯೆ ನೀ ನೋಡಲು ಶರಣಾಗತನ ತೊಡೆಯ ಮೇಲೆ ಕುಳಿತ ೫

ಎಂಬುದಾಗಿ ಹಾಡಿದರು.

ಇದಕ್ಕೆ ಪ್ರತಿಯಾಗಿ ವಾದಿರಾಜರು—

ಕಲ್ಯಾಣಿ—ಅಟ್ಟತಾಳ

ದಾಸೋತ್ತಮ ನೀನೆ ಶ್ರೀ ವೈಕುಂಠ – ದಾಸೋತ್ತಮ ನೀನೆ ಪ.

ಮಕ್ಕಳುಗಳಿಗೆ ಮೊಮ್ಮಕ್ಕಳುಗಳಿಗೆ ದೇ
ವಕ್ಕಳಿಗೆ ಮನುಮುನಿಗಳಿಗೆ
ಸಿಕ್ಕದ ಪರಬೊಮ್ಮನ ಕೂಸಮಾಡಿ ಕೊಂ
ಡಿಕ್ಕಿ ತೊಡೆಯೊಳು ಮುದ್ದಿಸಿ ಆಡಿಸುತಿಪ ೧.

ವೇದಶಾಸ್ತ್ರಾಗಮಗಳಿಗೆ ವೈದೋರದ
ಆದಿಪುರುಷನ ನೀನೊಲಿಸಿಕೊಂಡು
ಈಧರೆಯವನ ಪಾವನಮಾಡಿ ನೋಡುವ
ಸಾಧುಸಜ್ಜನ ಅಪರೋಕ್ಷ ಜ್ಞಾನಿಯಾದ ೨.

ಹರಿಸರ್ವೋತ್ತಮ ಹಯವದನ ಮೂರುತಿವೇಲಾ
ಪುರದರಸನ ಪ್ರತಿಬಿಂಬನಾದ
ವರವೈಕುಂಠದಾಸೋತ್ತಮ ಎನಗೆ ಶ್ರೀ
ಹರಿಯನ್ನು ತೋರಿಸಿ ಧನ್ಯನ ಮಾಡಿದೆ. ೩.

ಎಂದು ಗಾನಮಾಡಿದರು.

ಈ ಸ್ತೋತ್ರವನ್ನು ಕೇಳಿ ವೈಕುಂಠದಾಸರ ಮೈ ನಡುಗಿತು. ಜೀವ ಒಂದು ಹಿಡಿಯಾಯಿತು. ನಾನೆಂದರೇನು ? ಮಹಾನುಭಾವರಾದ ವಾದಿರಾಜರು ದೊಡ್ಡ ಶಬ್ದಗಳಿಂದ ಸ್ತೋತ್ರಮಾಡುವುದೆಂದರೇನು ? ಎನ್ನುತ್ತಾ ಕೇವಲ ನೈಚ್ಯಾನುಸಂಧಾನ ಮಾಡಿಕೊಂಡು, 'ಕೊಂಡಾಡಬಹುದೆ ಯತೀಂದ್ರ ಎನ್ನ' ಎಂಬ ಪದವನ್ನು ಹಾಡಿರುತ್ತಾರೆ.

ವಾದಿರಾಜರು ಬೇಲೂರಿನಲ್ಲಿರುವವರೆಗೆ, ಉಭಯರೂ ಕಲೆತಾಗ ಪರಮಾತ್ಮನು ಒಂದಿಲ್ಲೊಂದು ವಿಚಿತ್ರ ವ್ಯಾಪಾರವನ್ನು ಮಾಡಿ ತೋರಿಸುತ್ತಿದ್ದನು. ಉಭಯರಿಂದ ಬಹು ಜನರ ಪಾಪ ಸಂಚಯವಳಿದು ಅವರಿಗೆಲ್ಲಾ ಭಗವದ್ದರ್ಶನವಾಗಿಹೋಯಿತು. ವಾದಿರಾಜರ ಚರಿತ್ರೆಯಲ್ಲಿ ಬರೆದಿರುವಂತೆ ಚನ್ನನೆಂಬುವನೂ ದೊಡ್ಡ ಹರಿಶರಣನಾಗಿಬಿಟ್ಟನು. ದೊಡ್ಡವರು ಅವತರಿಸಿದ ಸಮಯವೇ ದೊಡ್ಡ ಪರ್ವಕಾಲ. ಆ ಕಾಲದಲ್ಲಿ-'ಗಾಳಿ ಬಂದಾಗ ತೂರಿಕೊಳ್ಳಿ'ರೆಂಬ ಗಾಧೆಯಂತೆ, ಬಹುಜನರು ಸಂಸಾರ ಸಮುದ್ರದಿಂದ ಪಾರಾಗಿಬಿಡುತ್ತಾರೆ. ದೇವರ ಮಹಿಮೆಯು ಅಗಾಧವು, ಭಕ್ತರ ಮಹಿಮೆಯು ಅಗಾಧತರವು. ಉಭಯ ಮಹಿಮೆಗಳ ಭಾಗ್ಯವನ್ನು ಅನುಭವಿಸುವವರ ಸುಕೃತವು ಅಗಾಧತಮವು. ಭಕ್ತರ ಮಹಿಮೆಯಿಲ್ಲದ ಭಗವನ್ಮಹಿಮೆಯು ರುಚಿಸುವುದಿಲ್ಲ. ಭಕ್ತರ ಮಹಿಮೆಯನ್ನು ಕೊಂಡಾಡಿದರೆ, ಭಗವಂತನಿಗಾಗುವಷ್ಟು ಆನಂದವು ತನ್ನ ಮಹಿಮೆಯನ್ನೇ ಕೊಂಡಾಡಿದರೆ ಆಗುವುದಿಲ್ಲ. ಭಕ್ತರ ಮಹಿಮಾ ವರ್ಣನೆಗಾಗಿಯೇ, ಭಗವಾನ್

ವೇದವ್ಯಾಸರು, ಅಷ್ಟಾದಶ ಪುರಾಣಗಳನ್ನು ರಚಿಸಿದರು. ಭಾಗವತೋತ್ತಮರಾದ ಪಾಂಡವರ ದಿವ್ಯ ಚರಿತ್ರೆಯಿಂದ ಮಹಾಭಾರತಕ್ಕೆ '**ಪಂಚಮವೇದ**'ವೆಂಬ ಗೌರವ ಉಂಟಾಯಿತು. ಮಹಾಲಕ್ಷ್ಮಿಯಾದರೂ ಪರಮಾತ್ಮನ ಅರ್ಧಾಂಗಿಯೆನಿಸಿದಳು. ಭಕ್ತರಾದರೋ ಅವನ ಪೂರ್ಣಾಂಗರೆನಿಸಿದರು. ಭಕ್ತರ ವಾಕ್ಕಿನಲ್ಲಿ ಜಯಲಕ್ಷ್ಮಿ ಇರುವಳು. ಭಕ್ತ ಪ್ರಹ್ಲಾದನಿಗಾಗಿ ಶ್ರೀ ಹರಿಯು ಸ್ತಂಭದಲ್ಲವತರಿಸಿದನು. ಭಕ್ತ ಧ್ರುವನಿಗಾಗಿ ಧ್ರುವ ಸಾಮ್ರಾಜ್ಯವೇರ್ಪಟ್ಟಿತು. ಭಕ್ತ ಪುರಂದರದಾಸರಿಗಾಗಿ ಶ್ರೀ ಹರಿಯು ಪರಿಚಾರಕನಾದನು. ಭಕ್ತ ವೈಕುಂಠದಾಸರ ಮಾತಿಗೆ ಕೇಶವನು ಸತ್ತವನನ್ನು ಬದುಕಿಸಿದನು. ಭಕ್ತರು ಮುನಿದರೆ ಕಾಯುವರಿಲ್ಲ. ಭಗವಂತನು ಮುನಿದರೆ ಭಕ್ತರುದ್ಧರಿಸುವರು. ಪುರಂದರದಾಸರು ಈ ಅರ್ಥವನ್ನು :—

ನೀನೇ ಬಲ್ಲಿದನೋ ಹರಿ ನಿನ್ನ ದಾಸರು ಬಲ್ಲಿದರೋ
ನಾನಾ ತೆರದಿ ವಿಚಾರಿಸಿ ನೋಡಲು
ನೀನೆ ಭಕ್ತಾಧೀನನಾದ ಮೇಲೆ - ನೀನೇ ಬಲ್ಲಿದನೋ ?

ಎಂದು ಯುಕ್ತಿ ಬರುವಂತೆ ಪರಮಾತ್ಮನನ್ನು ಸ್ತೋತ್ರ ಮಾಡಿದ್ದಾರೆ.

ಒಂದು ದಿನ ಮಧ್ಯಾಹ್ನ ವೈಕುಂಠದಾಸರು ಮಠಕ್ಕೆ ಬಂದು ವಾದಿರಾಜರೊಡನೆ ಮಾತನಾಡುತ್ತಿದ್ದರು. ದಾಸರು ವೃದ್ಧರಾಗಿದ್ದುದರಿಂದ ದಂತಗಳು ಸಡಲಿ ಆಗಾಗ ಉಚ್ಛಿಷ್ಟವು ಸಿಡಿಯುತ್ತಿತ್ತು. ಹತ್ತಿರದಲ್ಲಿ ಕುಳಿತು ಮಾತನಾಡುತ್ತಿದ್ದುದರಿಂದ, ರಾಜರ ಮೇಲೆ ಎಂಜಲು ಬಿಂದುಗಳು ಸಿಡಿಯುವುದನ್ನು ನೋಡಿ, ಮಠದ ಹರಿಕಾರನು, — 'ದಾಸರೇ ಸ್ವಾಮಿಗಳವರ ಮೇಲೆ ನಿಮ್ಮ ಎಂಜಲು ಸಿಡಿಯುತ್ತಿದೆ, ವಸ್ತ್ರವನ್ನು ಅಡ್ಡ ಹಿಡಿದು ಮಾತನಾಡಿರಿ' ಎಂದು ಅಧಿಕಾರವಾಣಿಯಿಂದ ನುಡಿದನು. ಹರಿಕಾರನ ಅಧಿಕ ಪ್ರಸಂಗವು ವಾದಿರಾಜರಿಗೆ ಸಹಿಸಲಿಲ್ಲ. ಒಡನೆಯೇ —

ಮುಖಾರಿ - ಜಂಪೆ

ಎಂಜಲೆನ್ನಲಿಬಹುದೆ ಮನುಜರಿರ ನೀವು । ಅಘವನ-ಧ
ನಂಜಯ ಸುವೈಕುಂಠದಾಸನ ವದನಕಣವ ಪ.

ವದನವೆಂಬಾಕಾಶದಲಿ ಭಕ್ತಿಜೀಮೂತ
ಪದುಮನಾಭನ ನಾಮಾಮೃತದ ಕಡಲ
ಮುದದಿಂದ ಪೊಕ್ಕೀಂಟೆ ಎನ್ನಂಗ ದೇಶದೊಳು
ಹದವರಿತು ಮುಕ್ತಿಫಲ ಬೆಳಸ ನೀವುದನು ೧

ಹೃದಯದಾಕಾಶದಲಿ ಶ್ರೀ ಹರಿಯನಾವಾಗ
ಹುದುಗಿಸಿದ ಕಾರಣದೊಳಂಗುಟದಲಿ
ಉದಿಸಿ ಗಂಗೆಯು ಪೋಪಡೆಡೆಯಿಲ್ಲದೆ ಇವರ
ವದನದಲಿ ಪೊರಟೆನ್ನ ಮೇಲೆ ಹರಿದುದನು ೨

ಪರಸನ್ನ ಹಯವದನ ಚರಣಸರಸಿಜ ಮಧೂ
ಕರ ಸುವೈಕುಂಠದಾಸೋತ್ತಮನ್ನ
ವರ ವದನದಲಿ ವೇದಶಾಸ್ತ್ರಾಗಮದ ತಾ
ತ್ಪರಿಯ ನಿರ್ಣಯ ಸುಧಾರಸದ ಬಿಂದುಗಳನ್ನು ೨

ಎಂದು ಹಾಡಿ ಮಠದ ಚಾಕರರಿಗೆ ಬುದ್ಧಿ ಕಲಿಸಿದರು.

ಈ ಪದದಲ್ಲಿ ವಾದಿರಾಜರಾಡಿರುವ ಮಾತು ಎಷ್ಟು ದೊಡ್ಡದು? ಇಂತಹ ಮಾತನಾಡಿದ ವಾದಿರಾಜರ ಮನಸ್ಸು ಎಷ್ಟು ವಿಶಾಲವಾದದ್ದು? ವೈಕುಂಠದಾಸರು ರಾಮಾನುಜ ಮತಸ್ಥರು; ಗೃಹಸ್ಥಾಶ್ರಮಿಗಳು! ವಾದಿರಾಜರು ಮಧ್ವಮತಸ್ಥರು. ಪೀಠಾಧಿಪತಿಗಳಾದ ಯತೀಶ್ವರರು. ಪರಮತಸ್ಥ ಗೃಹಸ್ಥನೆಂದು ತಿರಸ್ಕರಿಸಿದರೆ? ದಾಸರ ವದನಕಣಗಳು ಭಾಗೀರಥೀ ಬಿಂದುಗಳು; ಭಗವನ್ನಾಮಾಮೃತ ಕಣಗಳು ನನ್ನ ಮುಖದ ಮೇಲೆ ಹರಿದು ಬಂದವು, ಎಂದು ಎಷ್ಟು ಭೂಷಣವಾದ ಸ್ಥಾನವನ್ನು ಆ ಕಣಗಳಿಗೆ ಕೊಟ್ಟರು! ಇದೀಗ ಮತ ಮತಗಳಲ್ಲಿರುವ ಸಹಾನುಭೂತಿ! ಇದೀಗ ಭಾಗವತ ಧರ್ಮದ ಔದಾರ್ಯ! ಇದೀಗ ಮಧ್ವಮತಸ್ಥರು ಪ್ರಪಂಚಕ್ಕೆ ತೋರಿಸಿರುವ ಆದರ್ಶ! ತತ್ವವನ್ನು ಸಮರ್ಥಿಸಲು ಯುಕ್ತಿ ರಚನೆಯಲ್ಲಿ ಕುಳಿತರೆಂದರೆ, ಒಬ್ಬೊಬ್ಬರೂ ತಮ್ಮದೇ ಸಾಧು ಮಾರ್ಗವೆಂದು ಸಾಧಿಸುವರು. ಪ್ರತಿವಾದಿಯನ್ನು ನಿರುತ್ತರಗೊಳಿಸುವರು. ಅದೇ ಭಕ್ತಿ ಪಂಥಕ್ಕಿಳಿದರೆಂದರೆ ಸಮರಸವಾಗಿ ತಮ್ಮನ್ನು ತಾವೇ ಮರೆತುಬಿಡುವರು.

ಶ್ರೀ ವಾದಿರಾಜರು ಬೇಲೂರಿನಲ್ಲಿದ್ದ ತಿಂಗಳಗಟ್ಟಲೆ ಕಾಲವು, ವೈಕುಂಠದಾಸರಿಗೆ ಮಾತ್ರವಲ್ಲ – ವೈಕುಂಠದಾಸರ ದಾಸರೆನಿಸಿದ ಹರಿದಾಸವರ್ಗಕ್ಕೆಲ್ಲ – ಒಂದು ನಿಮಿಷದಂತೆ ಕಳೆಯಿತು. ವಾದಿರಾಜರು ತಮ್ಮ ದಿಗ್ವಿಜಯ ಯಾತ್ರೆಯನ್ನು ಬೆಳೆಸುವಾಗ, ಯಾತ್ರಾ ಮಂಗಳವೆಂದು —

ಆನಂದಮಯಗೆ ಚಿನ್ಮಯಗೆ
ಶ್ರೀ ನಾರಾಯಣಗಾರತಿಯೆತ್ತಿರೆ

ಎಂಬುದಾಗಿ ಶ್ರೀ ಕೇಶವನ ಮೇಲೆ ಮಂಗಳವನ್ನು ಹಾಡಿದರು.

ಈ ಮಂಗಳವನ್ನು ಶ್ರೀ ವಾದಿರಾಜರ ಚರಿತ್ರೆಯಲ್ಲಿ ಬರೆದಿರುವುದರಿಂದ, ಮತ್ತೆ ಇಲ್ಲಿ ಬರೆದರೆ ಪುನರುಕ್ತಿಯಾಗುವುದು.

ಶ್ರೀ ವೈಕುಂಠದಾಸರು ಎಪ್ಪತ್ತು ವರ್ಷಗಳಷ್ಟು ಕಾಲ ಪಾರ್ಥಿವ ದೇಹದಿಂದಿದ್ದಂತೆ ಕಾಣುತ್ತದೆ. ನಲವತ್ತು ವರ್ಷಗಳಷ್ಟು ಕಾಲ ದಾಸತ್ವದಲ್ಲಿದ್ದು ಸರಾಸರಿ ತಿಂಗಳಿಗೆ ಹತ್ತು ಕನ್ನಡ ದೇವರನಾಮ ಮಾಡಿದರೆಂದು ಎಣಿಕೆ ಮಾಡಿದರೂ, ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಕೃತಿಗಳಿರಬೇಕಾಗುತ್ತದೆ. ವೈಕುಂಠದಾಸರ ದೌಹಿತ್ರ ಸಂತತಿಯವರಲ್ಲಿ ದೊರೆತಿರುವ ಜೀರ್ಣವಹಿಯಲ್ಲಿ ಕೇವಲ ನೂರಾರು ನಾಮಗಳಿರುವಂತೆ ಕಾಣುತ್ತದೆ. ವೈಕುಂಠ ದಾಸರು ಸುಳಾದಿಗಳನ್ನು ಮಾಡಿದಂತೆ ತೋರುವುದಿಲ್ಲ. ದಾಸರು ತಮಿಳು ನಾಡಿನಲ್ಲಿ ಅವತರಿಸಿ ತಮಿಳಿನಲ್ಲೇ ಸ್ತೋತ್ರ ಪದಗಳನ್ನು ಹಾಡಿದ್ದರೆ, ಅಲ್ಲಿನವರು ಅವುಗಳನ್ನು

ಅಮೂಲ್ಯ ನಿಧಿಯೆಂದು ಸಂಗ್ರಹಿಸಿಡುತ್ತಿದ್ದರು. ಆಳ್ವಾರರಂತೆ ಭಕ್ತ ವಿಗ್ರಹಮಾಡಿಟ್ಟು ಅವರನ್ನು ಪೂಜಿಸುತ್ತಿದ್ದರು. ನಿರಭಿಮಾನಿ ಕನ್ನಡಿಗರ ಮಧ್ಯದಲ್ಲಿ ಜನ್ಮತಾಳಿದ್ದರಿಂದ ಅವರ ಹೆಸರು ಅವರ ಮತಸ್ಥರಿಗೆ ಸಹ ಗೊತ್ತಿಲ್ಲದಂತಾಗಿದೆ. ದಾಸರ ವೃದ್ಧಾಪ್ಯ ಕಾಲದಲ್ಲೇ ಪತ್ನೀವಿಯೋಗವೂ ಆಯಿತು. ಆಗ ದಾಸರ ಸೇವೆಯ ಭಾರವು ಸಂಪೂರ್ಣವಾಗಿ ವರದನ ಮೇಲೆ ಬಿತ್ತು. ಅನೇಕ ಸಮಯಗಳಲ್ಲಿ, ಶ್ರೀ ಕೇಶವನು, ವರದನ ವೇಷದಿಂದ ಅವರ ಸೇವೆ ಮಾಡುತ್ತಿದ್ದನು. ಒಂದು ಪ್ರಾತಃಕಾಲ ಮೃತ್ತಿಕಾಶೌಚಕ್ಕೆ ನೀರು ತಾರೆಂದು ಕರೆದಾಗ ವರದನಿರಲಿಲ್ಲ. ಮಾಯಾ ವರದನು ಸುಡುವ ನೀರನ್ನು ದಾಸರ ಕೈಮೇಲೆ ಸುರಿದನು. ದಾಸರು ನೋಡದೆ, – 'ಎಷ್ಟು ಬಿಸಿಯಾದ ನೀರು ಸುರಿದೆಯೋ !' ಎಂದು ಕೈಕೊಸರಿದರು. ಅದು ಮಾಯಾ ವರದನ ಮುಖಕ್ಕೆ ಬಲವಾಗಿ ತಾಕಿತು. 'ಇದೋ ಪಾದುಕೆ' ಎಂದು ಮುಂದಿಟ್ಟು ಅವನು ಮಾಯವಾದನು. ನಿಜವಾದ ವರದನು ಬರುತ್ತಲೇ ನೀರು ಕೊಟ್ಟವನು ಅವನಲ್ಲ – ಮಾಯಾವಿ ವರದನೆಂದು ಗೊತ್ತಾಯಿತು. ದಾಸರು – 'ಬೇಡ ಬೇಡವೆಂದರೂ ಇಂತಹ ನೀಚಕಾರ್ಯಗಳನ್ನೆಸಗಿ, ನನ್ನನ್ನು ಪಾಪಕ್ಕೆ ಗುರಿಮಾಡುವೆಯಾ ಕೇಶವಾ,' ಎನ್ನುತ್ತಾ – ತಿಳಿದು ಮಾಡಿದರೆ ಪಾಪ, ತಿಳಿಯದೆ ಮಾಡಿದರೆ ತನಗೆ ಆ ಪಾಪ ಲೇಪವಿಲ್ಲವೆಂದು —

ಪದ

ಪಾಪಾತ್ಮ ನಾನಲ್ಲ ಪಾಪವೆನಗಿನಿತಿಲ್ಲ
ಶ್ರೀಪತಿಯೆ ನಿನಗೆ ನೀನೇ ಮಾಡಿಕೊಂಡೆ ಪ

ವರದನ ಕರೆದರೆ ಉಷ್ಣ ಜಲ ಮೃತ್ತಿಕೆಯ
ತರಲು ಸುಡಲು ಹಣೆಯತೊಣದು ಬೈದೆ
ಮರಳಿ ನಾಚಿಕೆಯಿಲ್ಲದೆ ಪಾದಕ್ಕೆ ಹಾವುಗೆಯ
ಇರಿಸಿದಪರಾಧ ನಿನ್ನದೋ ನನ್ನದೋ ದೇವ ೧

ಎಂಬುದಾಗಿ ಹಾಡಿದರು.

ದಾಸರ ಅವಸಾನಕಾಲ ಒಬ್ಬರಿಗೂ ತಿಳಿಯಲಿಲ್ಲ. ವೃದ್ಧಾಪ್ಯದ ಅಶಕ್ತತೆಯಿಂದ ಕೆಲವು ದಿವಸಗಳು ದೇವಾಲಯಕ್ಕೂ ಹೋಗಿರಲಿಲ್ಲ. ಮನೆಯಲ್ಲಿ ದಾಸರು ಆಹ್ನಿಕವಾದ ತೀರ್ಥಪ್ರಾಶನ ಮಾಡುವ ಸಮಯದಲ್ಲಿ ಕೇಶವನ ಮಹಾಮಂಗಳಾರತಿಯ ವಾದ್ಯ ವಿಶೇಷಗಳು ದಾಸರ ಕಿವಿಗೆ ಬೀಳಲು – 'ಕೇಶವ' ಎಂದು ಎರಡು ಕೈಗಳನ್ನೂ ಜೋಡಿಸಿದರು. ಅತ್ತ ದೇವಾಲಯದಲ್ಲಿ ದೇವರ ಮೈಮೇಲಿದ್ದ ಸ್ವರ್ಣಾಭರಣಗಳೂ ಕಳಚಿ ಬಿದ್ದುವು. ಹೀಗೇಕೆ ಆಯಿತೆಂದು ವಿಚಾರಮಾಡುವ ಕಾಲಕ್ಕೆ ದಾಸರು ಪರಮಪದವನ್ನು ಸೇರಿದರೆಂಬ ವಾರ್ತೆ ಜನಜನಿತವಾಯಿತು. ಮತ್ತೆ ಮುಂದೇನಾಯಿತೆಂದು ಬರೆಯಲು ಆ ವೇಳೆಗೆ ಲೇಖಕನ ಲೇಖನಿಯೂ ಕೇಗುವಳಿತು.

ಶ್ರೀ ಕನಕದಾಸರು

ಕರ್ಣಾಟಕದಲ್ಲಿ ಕನಕದಾಸರ ಹೆಸರನ್ನು ಹೇಳದವರಿಲ್ಲ. ಗಡಿನಾಡುಗಳಲ್ಲಿ ಕನಕದಾಸರ ಹೆಸರನ್ನು ಕೇಳದವರಿಲ್ಲ. ಪುರಂದರದಾಸರ ಸಮವಯಸ್ಕರು ಕನಕದಾಸರು - ಅವರ ಸಮಕಾಲೀನರು. ಇಬ್ಬರೂ ವ್ಯಾಸರಾಯ ಸ್ವಾಮಿಗಳ ಶಿಷ್ಯರು. ಪುರಂದರದಾಸರಂತೆಯೇ – ಕೋಟೀಶ್ವರರಾಗಿದ್ದು ವೈರಾಗ್ಯ ತಾಳಿ ಹರಿದಾಸರಾದವರು ಕನಕದಾಸರು. ಇಬ್ಬರ ಚರಿತ್ರೆಯಲ್ಲೂ ಪರಮಾತ್ಮನೇ ಪರೀಕ್ಷಕನಾಗಿ – ಇಬ್ಬರನ್ನೂ ಪರಿಪರಿಯಿಂದ ಪರೀಕ್ಷಿಸಿ ವೈರಾಗ್ಯವನ್ನುಂಟುಮಾಡಿದ ಕಥೆಗಳಿವೆ. ಇಬ್ಬರ ಕವಿತೆಗಳಲ್ಲೂ ಒಂದೇ ತರದ ಶೈಲಿಯಿದೆ. ಮಾತಿನಲ್ಲಿ ಶೈಲಿಯೊಂದೇ ಆದರೂ ಕನಕದಾಸರ ಪದಗಳಲ್ಲಿ ಗೂಢಾರ್ಥ ಬಹಳ; ಒಗಟುಗಳೂ ಬಹಳ. ಜಾತಿಕುಲಗಳ ಮಾತು ಬಂದರೆ, ಕನಕದಾಸರಂತೆ ಖಂಡಿತೋಕ್ತಿಗಳನ್ನಾಡಿದವರು ಮತ್ತೊಬ್ಬರಿಲ್ಲ; ಇದಕ್ಕೆ ಅವರ ಪದಗಳೇ ಸಾಕ್ಷಿ.

ಕನಕದಾಸರು ಜಾತ್ಯಾ ಕುರುಬರು; ಎಂದರೆ ಹಾಲು ಮತಸ್ಥರು. ಧಾರವಾಡ ಜಿಲ್ಲೆಯ ಬಾಡವೆಂಬ ಗ್ರಾಮವು ದಾಸರ ಜನ್ಮಸ್ಥಳ. ತಂದೆಯ ಹೆಸರು ಬೀರಪ್ಪ. ತಾಯಿಯ ಹೆಸರು ಬಚ್ಚಮ್ಮ. ಬೀರಪ್ಪನು ಕುರುಬನೆಂದ ಮಾತ್ರಕ್ಕೆ ಸುಲಭವಾಗಿ ಜನರ ಮೋಸಕ್ಕೊಳಗಾಗುವ ದಡ್ಡನಾಗಿರಲಿಲ್ಲ. ಮಂದೆಯನ್ನು ಮೇಯಿಸಿಯೇ ಬದುಕುವಷ್ಟು ಬಡವನಾಗಿರಲಿಲ್ಲ. ಬಾಡದ ಸುತ್ತ ಹರದಾರಿ ಹತ್ತರ ಢಣಾಯಕನಾಗಿದ್ದನು. ಢಣಾಯಕನೆಂದರೆ ಸರ್ಕಾರಕ್ಕೆ ಗುತ್ತಿಗೆದಾರ. ನೂರಾರು ಗ್ರಾಮಗಳ ರೈತರಿಂದ ಕಂದಾಯವನ್ನು ವಸೂಲ್ಮಾಡಿ ವಿಜಯನಗರದ ಅರಸರಿಗೆ ನಿಗದಿಯಾದ ಹಣವನ್ನು ಕಟ್ಟುವವ. ಸಮಯ ಬಂದಾಗ ದಂಡನ್ನು ಜಮಾಯಿಸಿ ಯುದ್ಧಕ್ಕೆ ಹೊರಡುವವ. ಅಂದರೆ ಒಂದು ರೀತಿಯ ಚಿಕ್ಕ ಪಾಳೆಯಗಾರ. ಬೀರಪ್ಪನು ತನಗೆ ಸೇರಿದ ಎಲ್ಲಾ ಗ್ರಾಮಗಳ ಸರ್ವಾಧಿಕಾರಿಯಾಗಿದ್ದನು. ರೈತರಿಗೆ ತಾನೇ ಭೂಮಿಯನ್ನು ಹಂಚಿಕೊಟ್ಟು, ಅವರು ಬೆಳೆದ ಬೆಳೆಯ ಆರನೇ ಒಂದಂಶವನ್ನು ಧಾನ್ಯರೂಪವಾಗಿ ತೆಗೆದುಕೊಳ್ಳುತ್ತಿದ್ದನು. ಸಂಗ್ರಹಿಸಿದ ಧಾನ್ಯವನ್ನು ಲಾಭಕ್ಕೆ ವಿಕ್ರಯಿಸಿ, ನಿಯತವಾದ ಹಣವನ್ನು ಅರಸರ ಭಂಡಾರಕ್ಕೆ ಸಲ್ಲಿಸುತ್ತಿದ್ದನು. ಯುದ್ಧ ವಿಶಾರದನಾಗಿದ್ದುದರಿಂದ ಬೀರಪ್ಪನು, ವಿಜಯನಗರದ ಅರಸರ ಕೃಪೆಗೆ ಮುಖ್ಯ ಪಾತ್ರನಾಗಿದ್ದನು. ಗರಡೀ ಸಾಧನೆ ಬಿಲ್ಲುಯುದ್ಧ ಕತ್ತೀಸಾಧನೆಗಳಲ್ಲಿ ಬೀರಪ್ಪನಂತೆಯೇ ಅವನ ಆಡಳಿತಕ್ಕೊಳಪಟ್ಟ ಗ್ರಾಮಸ್ಥರೂ ಶೂರರಾಗಿದ್ದರು.

ಕರ್ಣಾಟಕದಲ್ಲಿ ಶೈವ ಮತವು ತಲೆಯೆತ್ತಿದಾಗಿನಿಂದ ಕುರುಬರು ಶಿವನನ್ನು ತಮ್ಮ ಕುಲದೈವವೆಂದು ಪೂಜಿಸುತ್ತಿದ್ದರು. ಮಹಾದೇವನನ್ನು ಬೀರಪ್ಪ (ವೀರಪ್ಪ)ನೆಂದು ಕರೆದಾಗಿನಿಂದ ಕುರುಬರ ದೇವರಿಗೆ ಬೀರದೇವರೆಂಬ ಹೆಸರಾಯಿತು. ರಾಮಾನುಜಾಚಾರ್ಯರು ಹೊಯ್ಸಳ ನಾಡಿನಲ್ಲಿ ನೆಲಸಿ, ವಿಷ್ಣು ಭಕ್ತಿಯನ್ನು ಉಪದೇಶಿಸಿದ

ನೇರಿ, ಕುರುಬರಲ್ಲಿ ಅನೇಕರು ತಿರುಪತಿಯ ವೆಂಕಟೇಶನನ್ನು ಪೂಜಿಸಲಾರಂಭಿಸಿದರು. ಭಸ್ಮಕ್ಕೆ ಬದಲಾಗಿ ಕುಂಕುಮ ತಿಲಕವು ಆ ಜನರ ಮತ ಚಿಹ್ನೆಯಾಯಿತು. ಶ್ರೀ ವೈಷ್ಣವ ಮತಾನುಯಾಯಿಗಳಾದ ಆಚಾರ್ಯ ಪುರುಷರು ಮತ ಪ್ರಚಾರ ನಿಮಿತ್ತದಿಂದ ಅಲ್ಲಲ್ಲಿ ನೆಲಸಿ ಗ್ರಾಮವಾಸಿಗಳ ಗುರುಗಳಾಗುತ್ತ ಬಂದರು. ಬೀರಪ್ಪನೂ ಅಂತಹ ಆಚಾರ್ಯ ಪುರುಷರೊಬ್ಬರ ಶಿಷ್ಯನಾಗಿದ್ದನು. ಬೀರಪ್ಪನು ತನಗೆ ಜನಿಸಿದ ಓರ್ವನೇ ಪುತ್ರನಿಗೆ ತನ್ನ ಕುಲದೈವ ವೆಂಕಟಪತಿಯ ಹೆಸರಿಡಬೇಕೆಂದು ತಿಮ್ಮಪ್ಪನೆಂಬುದಾಗಿ ನಾಮಕರಣ ಮಾಡಿದನು. ತಿರುಮಲೆಯಪ್ಪನೆಂಬ ತಮಿಳು ಶಬ್ದವು 'ತಿಮ್ಮಪ್ಪ'ನೆಂಬುದಾಗಿದೆ. ತಿಮ್ಮಪ್ಪನು ಬಾಲ್ಯ ಪ್ರಭೃತಿ ವೀರರಸ ಪ್ರಧಾನವಾದ ಭಕ್ತರ ಚರಿತ್ರೆಗಳನ್ನು ಕೇಳುತ್ತಿದ್ದುದರಿಂದ ಶೂರತನವೇ ಮನಸ್ಸಿನಲ್ಲಿ ನೆಲೆಸಿ, ಗರಡೀ ಸಾಧನೆ ಮಾಡುವುದು, ಕುಸ್ತಿಯಾಡುವುದು, ಕತ್ತಿ ತಿರುಗಿಸುವುದು ಮೊದಲಾದ ಶಾರೀರಕ ವ್ಯಾಯಾಮದಲ್ಲೇ ಹೆಚ್ಚಾಗಿ ಆಸಕ್ತನಾದನು. ಮೃಗ ಬೇಟೆಯಾಡುವುದು ತಿಮ್ಮಪ್ಪನಿಗೆ ಮನಮೆಚ್ಚಿದ ಕಾರ್ಯವಾಗಿತ್ತು. ಬೇಟೆಗಾರನೆಂದ ಮಾತ್ರಕ್ಕೆ ಅವನು ಸಾಧು ಪ್ರಾಣಿಗಳ ಗೊಡವೆಗೆ ಹೋಗುತ್ತಿರಲಿಲ್ಲ; ಹುಲಿ ಚಿರತೆ ತೋಳ ಮುಂತಾದ ಹಿಂಸಾ ಮೃಗಗಳನ್ನು ಬಿಡುತ್ತಿರಲಿಲ್ಲ. ತಿಮ್ಮಪ್ಪನು ಚಿಕ್ಕವನಾಗಿರುವಾಗಲೇ ಬೀರಪ್ಪನು ಮೃತನಾದುದರಿಂದ, ಮಗನು ನಿರಂಕುಶನಾಗಿದ್ದನು. ಗವಿಯಲ್ಲಿ ಮಲಗಿರುವ ಹುಲಿಯನ್ನು ಕೆಣಕಿ ಅದರೊಡನೆ ಕಾಳಗಮಾಡಿ ತನ್ನ ಶೌರ್ಯ ಪ್ರದರ್ಶನ ಮಾಡುತ್ತಿದ್ದನು. ಬಚ್ಚಮ್ಮನು ಮಗನ ಪರಾಕ್ರಮವನ್ನು ನೋಡಿ ಸಂತೋಷಪಡುತ್ತಿದ್ದಳಾದರೂ, ಏಕಮಾತ್ರ ಪುತ್ರನಾಗಿದ್ದುದರಿಂದ ಮಗನು ಬೇಟೆಗಾರನಾಗಿರುವುದು ಅವಳಿಗೆ ಇಷ್ಟವಾಗಿರಲಿಲ್ಲ. ಪ್ರೌಢ ವಿದ್ಯಾಭ್ಯಾಸಮಾಡೆಂದರೆ, ತಿಮ್ಮನು ಅದು ಬ್ರಾಹ್ಮಣ ಬಾಲಕರ ಕೆಲಸವೆನ್ನುತ್ತಿದ್ದನು. ತಂದೆಗಿದ್ದ ಢಣಾಯಕತನವು ಮಗನಿಗೂ ದೊರೆತ ಕಾರಣ, ತಿಮ್ಮಪ್ಪನು ಚಿಕ್ಕ ಪ್ರಮಾಣದಿಂದ ಒಬ್ಬ ರಾಜನಂತಾದನು. ತಂದೆಗಿಂತ ದಕ್ಷತೆಯಿಂದ ರಾಜಕಾರ್ಯ ನಿರ್ವಾಹ ಮಾಡಿದ್ದರಿಂದ-ವಿಜಯನಗರದ ಆಸ್ಥಾನದಲ್ಲಿ ಇವನ ಖ್ಯಾತಿಯು ಬಹಳವಾಯಿತು. ಅಧಿಕಾರವೂ ದೊಡ್ಡದಾಯಿತು.

ಒಮ್ಮೆ ಏನು ನಿಮಿತ್ತವೋ ಭೂಶೋಧನೆ ಮಾಡುತ್ತಿರಲು, ತಿಮ್ಮಪ್ಪನಿಗೆ ಭೂಗತವಾಗಿದ್ದ ಅಪಾರ ಧನರಾಶಿಯು ಕರಗತವಾಯಿತು. ಕನಕರಾಶಿಯು ಕರವಶವಾದುದನ್ನು ನೋಡಿ ಅದೃಷ್ಟವಂತನೆಂದು ಅವನನ್ನು ಜನರು **ಕನಕನಾಯಕ**ನೆಂದೇ ಕರೆದರು. ಕನಕನು ತನಗೆ ದೊರೆತ ದ್ರವ್ಯವನ್ನು ದುರ್ವಿನಿಯೋಗ ಮಾಡದೆ, ಕಾಗಿನೆಲೆಯಲ್ಲಿ ಭವ್ಯವಾದ ದೇವಾಲಯವನ್ನು ಕಟ್ಟಿಸಿ, ತನ್ನ ಜನ್ಮಸ್ಥಳವಾದ ಬಾಡದಲ್ಲಿದ್ದ ಆದಿಕೇಶವ ಮೂರ್ತಿಯನ್ನು ತಂದು, ಆ ದೇವಾಲಯದಲ್ಲಿ ಪ್ರತಿಷ್ಠಿಸಿದನು. ತಿರುಪತಿ ಮೊದಲಾದ ಕ್ಷೇತ್ರಗಳಲ್ಲಿ ನಡೆಯುವಂತೆ ಕಾಗಿನೆಲೆಯಲ್ಲೂ ಪೂಜಾ ಪದ್ಧತಿಯನ್ನೇರ್ಪಡಿಸಿದನು. ಕಾಲಕ್ರಮದಲ್ಲಿ ಆ ಸುತ್ತುವಳಯದ ಜನರು ತಿರುಪತಿಗೆ ಸಲ್ಲಿಸುವ ಮುಡುಪನ್ನು ಕಾಗಿನೆಲೆಯ ಕೇಶವನಿಗೇ ಸಲ್ಲಿಸುತ್ತ ಬಂದರು. ಕನಕನಾಯಕನ ವ್ಯಕ್ತಿತ್ವ, ಅವನ

ಪ್ರಭುತ್ವದ ದರ್ಪ, ಅವನೇ ನಿಂತು ನಡೆಸುವ ದೇವತಾ ಉತ್ಸವಗಳ ಪ್ರಭಾವ ಇವುಗಳಿಂದ ಕಾಗಿನೆಲೆಯು ಉತ್ತರ ಕರ್ಣಾಟಕದ ತಿರುಪತಿಯಾಯಿತು. ಕನಕನಾಯಕನಿಗೆ ತಿರುಪತಿ ತಿಮ್ಮಪ್ಪನೇ ಒಲಿದು ಕಾಗಿನೆಲೆಯಲ್ಲಿ ನೆಲೆಸಿದನೆಂದೂ, ತಿರುಪತಿಗೆ ಕೊಡುವ ಕಾಣಿಕೆಯನ್ನು ಕನಕರಾಯನಿಗೆ ಕೊಟ್ಟರೆ ತಿಮ್ಮಪ್ಪನಿಗೆ ಮುಟ್ಟುವುದೆಂದೂ ಜನರ ನಂಬಿಕೆಯಾಯಿತು. ಲೋಕವಾರ್ತೆ ಹೀಗಿದ್ದರೂ ಕನಕನಾಯಕನಿಗೆ ವೈರಾಗ್ಯದ ಗಂಧವಿರಲಿಲ್ಲ. ಬೇಟೆಯಾಡಬೇಕು ; ಮುಷ್ಟಿಯುದ್ಧದಿಂದ ಹುಲಿಯನ್ನು ಗೆಲ್ಲಬೇಕು ; ಅಧಿಕಾರ ಮಾಡಬೇಕು. ಯುದ್ಧ ಪ್ರಸಕ್ತಿ ಬಂದರೆ ತನ್ನ ಬಿಲ್ಲಾಳತನವನ್ನು ತೋರಿಸಬೇಕು ಎಂಬುದರಲ್ಲಿದ್ದ ಆದರವು, ಆತನಿಗೆ ಇತರ ವಿಷಯಗಳಲ್ಲಿರಲಿಲ್ಲ. ಅಂದಮಾತ್ರಕ್ಕೇ ಕನಕನಾಯಕನಲ್ಲಿ ಕ್ರೂರತನವೂ ಅರಸಿಕತನವೂ ಇದ್ದುವೆಂದಲ್ಲ. ಕಾಗಿನೆಲೆಯಲ್ಲಿ ದೇವಾಲಯವನ್ನು ಕಟ್ಟಿಸಿದಾಗಿನಿಂದ ಆದಿಕೇಶವನಿಗಂಕಿತ ಮಾಡಿ ಕವಿತೆಗಳನ್ನು ಬರೆಯುತ್ತಿದ್ದನು. ಅವನಲ್ಲಿ ಇದ್ದ ಭಕ್ತಿಯು ಪರಿಪಕ್ವದೆಸೆಗೆ ಬರುವುದೊಂದು ನಿಧಾನವಾಗಿತ್ತು.

ಹೀಗಿರಲು ಒಂದು ರಾತ್ರಿ ಸ್ವಪ್ನದಲ್ಲಿ ಕನಕನಿಗೆ ಕೇಶವನು ದರ್ಶನವಿತ್ತು – 'ಎಲೋ ಕನಕಾ, ನೀನು ನನ್ನ ದಾಸನಾಗು' ಎಂದು ಹೇಳಿದಂತಾಯಿತು. ಸ್ವಪ್ನಾವಸ್ಥೆಯಲ್ಲೇ – 'ತಿರಿದುಂಬುವುದಕ್ಕೆ ನಾನೇಕೆ ದಾಸನಾಗಲಿ? ನಾನು ದೊರೆತನ ಮಾಡಬೇಕು' ಎಂದು ತಾನೇ ಉತ್ತರವಿತ್ತಂತೆ ಜಾಗ್ರದವಸ್ಥೆಯಲ್ಲಿ ಜ್ಞಾಪಕವಾಯಿತು.

ಕನಕನು ಎಚ್ಚತ್ತು ಕುಳಿತನು. ತನ್ನ ಸ್ವಪ್ನ ವೃತ್ತಾಂತವನ್ನು ಸ್ಮರಿಸಿ, ಹೀಗಾಗಲು ಕಾರಣವೇನೆಂದು ಯೋಚಿಸಿದನು. ತಾನು ಹೇಳಿದ ಉತ್ತರವು ಸರಿಯಾದುದೆಂದು ತೀರ್ಮಾನಿಸಿದನು. 'ತಿರಿದುಣ್ಣುವ ದಾಸತ್ವದಿಂದೇನು ಫಲ' ಎಂದುಕೊಂಡನು. 'ಏನಾದರಾಗಲಿ, ದೇವರನ್ನು ಕಂಡ ಸ್ವಪ್ನ' ಎಂದುಕೊಂಡು ದೇವಾಲಯದಲ್ಲಿ ಪೂಜೆ ಮಾಡಿಸಿದನು. ತನ್ನ ಸ್ವಪ್ನ ವಾರ್ತೆಯನ್ನು ತನ್ನ ತಾಯಿಗೆ ತಿಳಿಸಿದನು.

ಕೆಲವು ಕಾಲಾನಂತರ ಕನಕನಾಯಕನಿಗೆ ಪತ್ನೀವಿಯೋಗವಾಯಿತು. ಅದು ಎದೆಯೊಡೆದಂತಾಗಿ, ರಾಜ್ಯ ಕಾರ್ಯದಲ್ಲಿ ಉದಾಸೀನನಾಗಿ ಕುಳಿತನು. ಅಂದಿನಿಂದ ಬೇಟೆಯಾಡುವುದನ್ನೂ ಬಿಟ್ಟನು. ಮನಸ್ಸನ್ನು ಸಮಸ್ಥಿತಿಗೆ ತಂದುಕೊಳ್ಳಬೇಕು ಎಂಬಷ್ಟರಲ್ಲಿ, ತಾನು ಬಹು ಭಕ್ತಿಯಿಂದ ಸೇವಿಸುತ್ತಿದ್ದ ತಾಯಿಯೂ ಮೃತಳಾದಳು. ಆಗ ಕನಕನ ಮನಸ್ಸಿನಲ್ಲಿ ವೈರಾಗ್ಯವಂಕುರಿಸಿತು. ಮತ್ತೆ ಒಂದು ದಿನ ಸ್ವಪ್ನವಾಗಿ ಅವರಲ್ಲಿ ಶ್ರೀ ಕೇಶವಸ್ವಾಮಿಯ ದರ್ಶನವಾಯಿತು. 'ಎಲೋ ಕನಕಾ! ನನ್ನ ಮಾತನ್ನು ಮರೆತೆಯಾ? ನನ್ನ ದಾಸನಾಗಲೊಲ್ಲೆಯಾ?' ಎಂದು ಕೇಳಿದಂತಾಯಿತು. ಆಗಲೂ ಕನಕನು – 'ನಾನೇಕೆ ದಾಸನಾಗಲಿ? ನಾನೇಕೆ ತಿರಿದು ತಿನ್ನಲಿ? ದೊರೆತನವಾಡುವುದು ಬಿಟ್ಟು!' ಎಂದು ಉತ್ತರವಿತ್ತನು. ಮತ್ತೆ – ಭಕ್ತಪರಾಧೀನನಾದ ಸ್ವಾಮಿಯು – 'ನೀನಂತೂ ದಾಸನಾಗುವುದಿಲ್ಲ?' ಎಂದು ಹೇಳಿದಂತಾಯಿತು. ಆಗ ಕನಕನು,

— ನಾನು ದಾಸನಾದರೆ ನಿನಗೇನು ಫಲ?

ಕೇಶವ:—ನೀನು ನನ್ನ ಪ್ರಿಯನಪ್ಪಾ! ನೀನು ದಾಸನಾದರೆ ನನಗೆ ಸಂತೋಷವಪ್ಪಾ!

ಕನಕ:—ನಾನು ತಿರಿದು ತಿಂದರೆ ನಿನಗೆ ಸಂತೋಷವ್ರೋ? ದೊರೆತನ ಮಾಡಿದರೆ ಸಂತೋಷವಿಲ್ಲವೋ?

ಕೇಶವ:—"ದೊರೆತನ ಹೋದರೇನು ಮಾಡುವಿ?"

ಕನಕ:—"ಕುರಿ ಕಾಯುವೆನು!"

ಕೇಶವ:—"ಕುರಿಗಳನ್ನಾದರೂ ಕಾಯುವೆ! ಅಂತೂ ನನ್ನ ದಾಸನಾಗಲೊಲ್ಲೆ!"

ಕನಕ:—"ನಾನು ಬೇರೆ. ದೈನ್ಯದಿಂದ ಜೀವಿಸುವವನಲ್ಲ!"

ಕೇಶವ:—"ಹರಿದಾಸನಾಗುವುದಿಲ್ಲವಷ್ಟೆ! ನೋಡುವೆನು ನನ್ನ ಕೈಲಾದರೆ!"

ಕನಕನು ಎಚ್ಚರಗೊಂಡು – 'ಇದೇನು ಪೀಡೆ? ನಾನೇಕೆ ದಾಸನಾಗಬೇಕು? ದೇವರಿಗೆ ನನ್ನ ಮೇಲೆ ಈ ಹಟವೇಕೆ? ಹೆಂಡತಿ ಹೋದಳು. ತಾಯಿ ಹೋದಳು. ಇನ್ನು ಹರಿದಾಸನಾಗಿ ತಿರುಪೆ ಎತ್ತುವುದೊಂದು ಬಾಕಿ ಉಳಿಯಿತು. ಒಳ್ಳೆ ಸ್ವಪ್ನ – ಒಳ್ಳೇ ಬಲವಂತ!' ಎಂದುಕೊಂಡನು.

ಕಾಲಾಂತರದಲ್ಲಿ ಕನಕನಿಗೆ ಯುದ್ಧ ಪ್ರಸಂಗವೊದಗಿತು. ತನ್ನ ರಾಜರಿಗೆ ತಲೆಬಾಗದ ದುಷ್ಟರನ್ನು ದಂಡಿಸಬೇಕಾಯಿತು. ತನ್ನ ಎದುರಾಳಿಗಳ ಗುಂಪು ತನ್ನದಕ್ಕಿಂತ ಬಲವಾಗಿದ್ದು – ಕುದುರೆಯ ರಾವುತರು ಬಿಲ್ಲುಬಾಣಗಳಿಂದ ಸಜ್ಜಾಗಿ ಕನಕನ ಸೈನ್ಯವನ್ನು ಭೇದಿಸಿದರು. ಕನಕನು ನೂರಾರು ಮಂದಿ ರಾವುತರ ಮಧ್ಯದಲ್ಲಿ ಸಿಕ್ಕಿಬಿದ್ದನು. ಪಾದಚಾರಿಯಾದ ಆತನು ಧೀರತನದಿಂದ ಖಡ್ಗಪಾಣಿಯಾಗಿ ಕಂಡವರನ್ನು ತುಂಡರಿಸುತ್ತಾ ನಡೆದರೂ, ಶತ್ರುಗಳ ಬಲವೂ ಬಲವಾಯಿತು. ಅವನ ದೇಹದಲ್ಲೆಲ್ಲಾ ಬಾಣಗಳು ನಾಟಿಕೊಂಡವು. ಖಡ್ಗವು ಕೈಯಿಂದ ಕೆಳಗುರುಳಿತು. ಕನಕನಾಯಕನು– 'ಕೇಶವಾ' ಎಂದು ಕೂಗಿಕೊಂಡು ನೆಲದ ಮೇಲೆ ಬಿದ್ದುಬಿಟ್ಟನು. ದೇಹದ ಮೇಲಿನ ಸ್ಮೃತಿ ತಪ್ಪಿತು. ಮೂರ್ಛೆಯಿಂದ ನಿಶ್ಚೇಷ್ಟಿತನಾಗಿ ಬಿದ್ದಿದ್ದ ಕನಕನಾಯಕನನ್ನು ಕಂಡು ಶತ್ರುಗಳು–ಮೃತನಾದನೆಂದುಕೊಂಡು, ಸಂತೋಷದಿಂದ ಜಯಧ್ವನಿಮಾಡುತ್ತಾ ತೆರಳಿದರು.

ಆ ಕಾಲದಲ್ಲಿ ಪರಮಾತ್ಮನು ಮಾನವ ವೇಷಧಾರಿಯಾಗಿ ಉಪಚರಿಸುತ್ತಾ ಕನಕನ ಬಳಿಯಲ್ಲಿ ಕುಳಿತನು. ಶೈತ್ಯೋಪಚಾರಮಾಡಿ ಅವನನ್ನು ಎಚ್ಚರಗೊಳಿಸಿದನು. ಎಚ್ಚರಗೊಂಡ ಕನಕನಾಯಕನು – 'ಉಸ್' ಎನ್ನುತ್ತಾ ಪಕ್ಕದಲ್ಲಿ ಕುಳಿತಿದ್ದ ಮಾಯಾಮಾನವನನ್ನು ಕುರಿತು, ನೀನ್ಯಾರೆಂದು ಕೇಳಿದನು. ಮಾಯಾವಿಯು – 'ಏನು ಕನಕಾ, ಆಗಲೇ ನನ್ನನ್ನು ಮರೆತೆಯಾ? ಈ ಹೆಣಗಳ ರಾಶಿಯಲ್ಲಿ ಬಿದ್ದು ಉರುಳುವ ದೊರೆತನ ಸುಖವ್ರೋ, ನನ್ನ ದಾಸನಾಗುವುದು ಸುಖವ್ರೋ? ಈಗಲಾದರೂ ಹೇಳು' ಎಂದನು.

ಕನಕ :—ಒಳ್ಳೇ ವಿಷ ಪರೀಕ್ಷೆ! ನನಗೆ ಮೈನೋವು ಬಹಳವಾಗಿದೆ! ಎಲ್ಲಾ ಗುಣವಾಗಲಿ! ಆಮೇಲೆ ಹೇಳುತ್ತೇನೆ.

ಮಾಯಾವಿ :—ಗುಣವಾಗುವುದೆಷ್ಟು ಹೊತ್ತು! ಈಗಲೇ ಗುಣಮಾಡು ತ್ತೇನೆ! ಸತ್ತವನನ್ನೇ ಬದುಕಿಸಿದೆ. ವ್ರಣಗಳು ಮಾಯುವುದೆಷ್ಟು ಹೊತ್ತು ?

ಕನಕ :– ಹಾಗಿದ್ದರೆ ಈಗಲೇ ಗುಣಮಾಡು. ಅನಂತರ ನನ್ನ ಮನಸ್ಸು ಹೇಗೆ ಬರುವುದೋ ನೋಡಿ ತಿಳಿಸುತ್ತೇನೆ.

ಮಾಯಾವಿ :—ಹಾಗೂ ಆಗಲಿ! (ಎಂದು ಅವನ ಮೈದಡವಿ) ಇದೋ ಗುಣ ವಾಯಿತು ನೋಡು. ಈಗೇನನ್ನುವೆ ?

ಕನಕ :—(ಪರಮಾತ್ಮನ ಕರಸ್ಪರ್ಶದಿಂದ ಪುಳುಕಿತನಾಗಿ) ಇಷ್ಟೇಕೆ ನಿನ್ನ ಪರೀಕ್ಷೆ! ನಾನು ದಾಸನಾದರೆ ನಾನು ಹೇಳಿದಂತೆ ಕೇಳುತ್ತೀಯೋ ?

ಮಾಯಾವಿ :—ಆಗಲಿ, ಕೇಳುತ್ತೇನೆ.

ಕನಕ :—ನೆನೆಸಿದಾಗ ದರ್ಶನ ಕೊಡುತ್ತೀಯೋ ?

ಮಾಯಾವಿ :—ಕೊಡುತ್ತೇನೆ.

ಕನಕ :—ಒಳ್ಳೇದು, ಹಾಗಿದ್ದರೆ ಈಗ ನಿನ್ನ ನಿಜರೂಪವನ್ನು ತೋರಿಸು. ನೋಡಿ ಧನ್ಯನಾಗುತ್ತೇನೆ.

ಮಾಯಾವಿಯು ಆಗ, ಕಣ್ಮರೆಯಾಗಿ, ಶಂಖ–ಚಕ್ರ ಗದಾ ಪದ್ಮ ಪಾಣಿಯಾಗಿ ಪೀತಾಂಬರಧಾರಿಯಾಗಿ ದರ್ಶನವಿತ್ತನು. ಕನಕನು ಪುಳುಕಾಂಕಿತನಾಗಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಸ್ಮೃತಿ ತಪ್ಪಿ, ಪರವಶನಾಗಿ ಪತಿತಪಾವನನನ್ನು ಮನಸಾರೆ ಸ್ತುತಿಸಿದನು. ಕನಕನ ಮನಸ್ಸು ಅಂದಿನಿಂದಲೇ ಪರಿವರ್ತನವಾಯಿತು. ಮಾತಿನ ಸರಣಿ ಬದಲಾಯಿತು. ದೊರೆತನದ ಹುಚ್ಚು ಬಿಟ್ಟುಹೋಯಿತು. 'ನಾನೇನೋ ಹರಿದಾಸನಾದೆ. ನನಗೆ ವಿದ್ಯವಿಲ್ಲ – ಬುದ್ಧಿಯಿಲ್ಲ. ಮಂತ್ರೋಪದೇಶ ಮೊದಲೇ ಇಲ್ಲ. ದಾಸನಾಗಿ ಮಾಡುವುದೇನೆ'ಂದು ಯೋಚಿಸುತ್ತಾ ಕುಳಿತನು. ಮತ್ತೆ ಯೋಚನೆಯು ಹಾಗೆಯೇ ಮುಂದುವರಿಯಿತು. – 'ಇಷ್ಟು ಬಗೆಯಿಂದ ನನ್ನನ್ನು ಪರೀಕ್ಷೆ ಮಾಡಿ, ದಾಸನನ್ನು ಮಾಡಿದವನು ಆ ಪರಮಾತ್ಮನು! ನೆನೆಸಿದಾಗ ದರ್ಶನ ಕೊಡುವೆನೆಂದು ವಚನವಿತ್ತಿರುವನು. ವಿದ್ಯೆ ಬುದ್ಧಿಗಳೆಲ್ಲವೂ ಅವನು ಪ್ರಸನ್ನನಾಗುವುದಕ್ಕೆ ಸಹಕಾರಿ ಗಳಷ್ಟೆ! ನನಗೇತರ ಚಿಂತೆ? ಅವನು ನಡೆಸಿದಂತೆ ನಡೆದರಾಯಿತು' ಎಂದುಕೊಂಡು ಮನೆಗೆ ಬಂದನು. ಅಧಿಕಾರವನ್ನು ತನ್ನ ಕೈಕೆಳಗಿದ್ದವರಿಗೆ ವಹಿಸಿಕೊಟ್ಟು, ಏಕತಾರಿ ಯನ್ನು ತೆಗೆದುಕೊಂಡು ದೇವಾಲಯಕ್ಕೆ ನಡೆದನು. ತಂದೆ–ತಾಯಿಗಳಿಲ್ಲ – ಹೆಂಡಿರಿಲ್ಲ. ಮಕ್ಕಳಿಲ್ಲ – ನನಗೆ ದಾಸತ್ವ ಸಿದ್ಧಿಸಿತೆಂದುಕೊಂಡನು.

ಪದ - ರೂಪಕ

ಈಶ ನಿನ್ನ ಚರಣ ಭಜನೆ | ಆಶೆಯಿಂದ ಮಾಡುವೆನು |
ದೋಷರಾಶಿ ನಾಶಮಾಡು | ಶ್ರೀಶ **ಕೇಶವ** ಪ.

ಶರಣು ಹೊಕ್ಕೆನಯ್ಯ ಎನ್ನ | ಮರಣ ಸಮಯದಲ್ಲಿ ನಿನ್ನ
ಚರಣ ಸ್ಮರಣೆ ಕರುಣಿಸಯ್ಯ **ನಾರಾಯಣ** ೧

ಶೋಧಿಸೆನ್ನ ಭವದ ಕಲುಷ | ಬೋಧಿಸಯ್ಯ ಜ್ಞಾನವೆನಗೆ
ಬಾಧಿಸುವ ಯಮನಬಾಧೆ ಬಿಡಿಸು **ಮಾಧವ** ೨

ಹಿಂದನೇಕ ಯೋನಿಗಳಲಿ | ಬಂದು ಬಂದು ನೊಂದೆ ನಾನು
ಇಂದು ಭವದ ಬಂಧಬಿಡಿಸು ತಂದೆ **ಗೋವಿಂದ** ೩

ಭ್ರಷ್ಟನೆನಿಸಬೇಡ ಕೃಷ್ಣ | ಇಷ್ಟು ಮಾತ್ರ ಬೇಡಿಕೊಂಬೆ
ಶಿಷ್ಟರೊಡನೆ ಇಟ್ಟು ಕಷ್ಟಬಿಡಿಸು **ವಿಷ್ಣುವೇ** ೪

ಮೊದಲು ನಿನ್ನ ಪಾದಪೂಜೆ | ಮುದದಿ ಮಾಡುವೆನು ನಾನು
ಹೃದಯದೊಳಗೆ ಹುದುಗಿಸಯ್ಯ **ಮಧುಸೂದನ** ೫

ಕದಡುಕೊಂಡು ಇರುವ ಪಾಪ | ಸದೆದು ಪೋಗುವಂತೆ ಮಾಡಿ
ಜಡನ ಬಾಧೆಯನ್ನು ಬಿಡಿಸೊ **ತ್ರಿವಿಕ್ರಮ** ೬

ಕಾಮಜನಕ ನಿನ್ನ ನಾಮ | ಪ್ರೇಮದಿಂದ ಪಾಡುವಂಥ
ನೇಮವೆನಗೆ ಪಾಲಿಸಯ್ಯ | ಸ್ವಾಮಿ **ವಾಮನ** ೭

ಮದನನಯ್ಯ ನಿನ್ನ ಮಹಿಮೆ | ವದನದಲ್ಲಿ ಇರುವಂತೆ
ಹೃದಯದಲ್ಲಿ ಸದನಮಾಡು | ಮುದದಿ **ಶ್ರೀಧರ** ೮

ಹಸಿಯನಾಡಿ ಹೊಟ್ಟೆ ಹೊರೆವ | ವಿಷಯದಲ್ಲಿ ರಸಿಕನೆಂದು
ಹಸಿಗೆ ಹಾಕದಿರಯ್ಯ – **ಹೃಷೀಕೇಶನೆ**| ೯

ಬಿದ್ದು ಭವವನೇಕ ಜನುಮ | ಬದ್ಧನಾಗಿ ಕಲುಷದಿಂದ
ಗೆದ್ದುಪೋಪ ಬುದ್ಧಿ ತೋರೋ **ಪದ್ಮನಾಭನೆ** ೧೦

ಕಾಮ ಕ್ರೋಧ ಬಿಡಿಸಿ ನಿನ್ನ | ನಾಮ ಜಿಹ್ವೆಯೊಳಗೆ ನುಡಿಸು
ಶ್ರೀ ಮಹಾನುಭಾವನಾದ **ದಾಮೋದರ** ೧೧

ಪಂಕಜಾಕ್ಷ ನೀನು ಎನ್ನ | ಮಂಕುಬುದ್ಧಿ ಬಿಡಿಸಿ ನಿನ್ನ
ಕಿಂಕರನ್ನ ಮಾಡಿಕೊಳ್ಳೊ **ಸಂಕರುಷಣ** ೧೨

ಏಸು ಜನ್ಮ ಬಂದರೇನು | ದಾಸನಲ್ಲವೇನೋ ನಾನು
ಘಾಸಿಮಾಡದಿರು ಎನ್ನ | **ವಾಸುದೇವನೆ** ೧೩

ಬುದ್ಧಿ ಶೂನ್ಯನಾಗಿ ಎನ್ನ – ಪದ್ಧಕಾರ್ಯಕುಹಕ ಮನವ
ತಿದ್ದಿ ಹೃದಯ ಶುದ್ಧಿಮಾಡೋ **ಪ್ರದ್ಯುಮ್ನನೆ** ೧೪

ಜನನಿ ಜನಕ ನೀನೆ ಎಂದು | ನೆನೆವೆನಯ್ಯ ದೀನಬಂಧು
ಎನಗೆ ಮುಕ್ತಿ ಪಾಲಿಸೆಂದು | **ಅನಿರುದ್ಧನೆ** ೧೫

ಹರುಷದಿಂದ ನಿನ್ನ ನಾಮ | ಸ್ಮರಿಸುವಂತೆ ಮಾಡು ನಿತ್ಯ
ಇರಿಸು ಚರಣದಲ್ಲಿ ಪ್ರೇಮ | **ಪುರುಷೋತ್ತಮ** ೧೬

ಸಾಧುಸಂಗ ಕೊಟ್ಟು ನಿನ್ನ | ಪಾದಭಜನೆಯಿತ್ತು ಎನ್ನ
ಭೇದಮಾಡಿ ನೋಡದಿರು – **ಅ-ಧೋಕ್ಷಜ** ೧೭

ಚಾರುಚರಣ ತೋರಿ ಎನಗೆ | ಪಾರುಗಾಣಿಸಯ್ಯ ಕೊನೆಗೆ
ಭಾರಹಾಕಿರುವೆ ನಿನಗೆ **ನಾರಸಿಂಹನೆ** ೧೮

ಸಂಚಿತಾರ್ಥ ಪಾಪಗಳು | ಕಿಂಚಿತಾದ ಪೀಡೆಗಳು
ಮುಂಚಿತವಾಗಿ ಕಳೆದು ಪೊರೆಯೊ ಸ್ವಾಮಿ **ಅಚ್ಯುತ** ೧೯

ಜ್ಞಾನ ಭಕ್ತಿಕೊಟ್ಟು ನಿನ್ನ | ಧ್ಯಾನದಲ್ಲಿ ಇಟ್ಟು ಸದಾ
ಹೀನ ಬುದ್ಧಿ ಬಿಡಿಸು ಮುನ್ನ-**ಜನಾರ್ದನ** ೨೦

ಜಪತಪಾನುಷ್ಠಾನವಿಲ್ಲದೆ | ಕುಪಥಗಾಮಿಯಾದ ಎನ್ನ
ಕೃಪೆಯುಮಾಡಿ ಕ್ಷಮಿಸಬೇಕು **ಉಪೇಂದ್ರನೆ** ೨೧

ಮೊರೆಯ ಇಡುವೆನಯ್ಯ ನಿನಗೆ | ಶರಧಿಶಯನ ಶುಭಮತಿಯ
ಇರಿಸೊ ಭಕ್ತನೆಂದು ಪರಮ ಪುರುಷ **ಶ್ರೀಹರೇ** ೨೨

ಪುಷ್ಟಿಸಲು ಬೇಡ ಮುಂದೆ | ಪುಟ್ಟಿಸಿದಕೆ ಪಾಲಿಸಿನ್ನು
ಇಷ್ಟೇ ಬೇಡಿಕೊಂಬೆ ನಾನು, **ಶ್ರೀ ಕೃಷ್ಣನೇ** ೨೩

ಸತ್ಯವಾದಿನಾಮಗಳನು | ನಿತ್ಯದಲ್ಲಿ ಪಠಿಸುವರನು
ಅರ್ಥಿಯಿಂದ ಸಲಹುವನು ಕರ್ತೃ **ಕೇಶವ** ೨೪

ಮರೆಯದರೆ ಹರಿಯ ನಾಮ | ಬರೆದು ಓದಿ ಕೇಳಿದರ್ಗೆ
ಕರೆದು ಮುಕ್ತಿಕೊಡುವ ನೆಲೆ-ಯಾದಿ **ಕೇಶವ** ೨೫

ಎಂಬುದಾಗಿ ಭಜನೆ ಮಾಡಿದನು.

ಆದಿಕೇಶವ ದೇವಸ್ಥಾನದ ನೌಕರರು ದಂಡನಾಯಕನು ಭಜನೆಮಾಡುತ್ತಿರುವ ರೀತಿಯನ್ನು ನೋಡಿ ಗಾಬರಿಯಾದರು. ಆಗ ಕನಕನು ಅವರನ್ನು ಬಳಿಗೆ ಕರೆದು – ' ನೋಡಿ, ಇಂದಿನಿಂದ ನಾನು ದಂಡಾಧಿಕಾರಿಯಲ್ಲ. ನನ್ನಿಂದ ನಿಮಗೆ ದಂಡನೆಯಿಲ್ಲ. ನಾನು ಹರಿದಾಸ. ನನ್ನನ್ನೂ ನಿಮ್ಮನ್ನೂ ದಂಡಿಸುವ ದಂಡನಾಯಕನು ಶ್ರೀ ಕೇಶವನು. ನನ್ನನ್ನು ನೋಡಿ ನೀವು – ಭಯಪಡಬೇಡಿ'ರೆಂದು ಸಮಾಧಾನಗೊಳಿಸಿದನು.

ಆ ರಾತ್ರಿ ಕನಕನಿಗೆ ವ್ಯಾಸರಾಯರಲ್ಲಿ ಶಿಷ್ಯತ್ವ ಪಡೆಯಬೇಕೆಂದು ಭಗವದಾಜ್ಞೆಯಾಯಿತು. ಗುರುಮುಖದಿಂದ ಉಪದೇಶವಿಲ್ಲದೆ ಶ್ರೀ ಹರಿಯು ಪ್ರೀತನಾಗನೆಂದು ಕನಕನು, ಮಾರನೆಯ ಪ್ರಾತಃಕಾಲವೇ ವ್ಯಾಸರಾಯರನ್ನು ಹುಡುಕಿಕೊಂಡು ಹೊರಟನು. ಆ ಸಮಯದಲ್ಲಿ ವ್ಯಾಸರಾಯರು ಮದನಪಲ್ಲೀ ಪ್ರಾಂತದಲ್ಲಿ ವ್ಯಾಸ ಸಮುದ್ರವನ್ನು ಕಟ್ಟಿಸುತ್ತಿದ್ದರು. ಲಕ್ಷ್ಮೀನಾರಾಯಣತೂಬು (ಕೋಣನತೂಬು) ಎಂದು ಈಗ ಹೆಸರುಗೊಂಡಿರುವ ತೂಬಿನ ದಾರಿಗೆ ಅಡ್ಡವಾಗಿ ಗುಡ್ಡದಂತಿರುವ ಬಂಡೆಗಳನ್ನು ಅಲ್ಲಿಂದ ತೆಗೆಯುವ ಬಗೆ ಹೇಗೆಂಬ ಯೋಚನೆಯಲ್ಲಿ ಮಗ್ನರಾಗಿದ್ದರು. ಹಾಗೇ ಯೋಚಿಸುತ್ತಾ ಏರಿಯ ಮೇಲೆ ನಿಂತಿದ್ದ ಸ್ವಾಮಿಗಳನ್ನು ಕಾಣುತ್ತಲೇ ವಂದನೆ ಮಾಡಿದನು. 'ನೀನು ಯಾರೆ'ಂದು ಪ್ರಶ್ನಿಸಲು – 'ಸ್ವಾಮಿ, ನಾನು ಕನಕ' ಎಂದನು.

ಸ್ವಾಮಿಗಳು :—ಯಾವ ಕನಕನೋ ನೀನು ?

ಕನಕ :—ಕುರುಬರ ಕನಕ !

ಸ್ವಾಮಿಗಳು :—ಢಣಾಯಕ ಕನಕ !

ಕನಕ :—ಢಣಾಯಕನಲ್ಲ – ಬರೀ ಕನಕ !

ಸ್ವಾಮಿಗಳು :—ಏಕೆ ಬಂದೆ ?

ಕನಕ :—ಮಂತ್ರೋಪದೇಶಕ್ಕೆ ಬಂದೆ !

ಸ್ವಾಮಿಗಳು :—ಕುರುಬನಿಗೇನು ಮಂತ್ರವೋ – 'ಕೋಣ ಮಂತ್ರ'

ಕನಕ :—ಅಷ್ಟೇ ಸಾಕು ಸ್ವಾಮಿ ಉಪದೇಶ !

ಕನಕನು ಗುರುಗಳಿಗೆ ನಮಿಸಿ, ನಿರ್ಜನವಾದ ಒಂದು ಮರದಡಿಯಲ್ಲಿ ಕುಳಿತು, "ಕೋಣ – ಕೋಣ" ಎಂದು ಜಪಿಸಿದನು. ಅವನ ಮನಶ್ಶಕ್ತಿಯಿಂದಲೂ, ಅವನ ಮೇಲಿದ್ದ ದೈವಾನುಗ್ರಹದಿಂದಲೂ, ಯಮದೇವರ ಕೋಣವೇ ಬಂದು ಎದುರಿಗೆ ನಿಂತು, 'ಏನಾಗಬೇಕು' ಎಂದಿತು. ಕನಕನು ವ್ಯಾಸರಾಯರ ಬಳಿಗೆ ಕೋಣವನ್ನು ಕರೆತಂದು, 'ಸ್ವಾಮಿ, ಗುರೂಪದೇಶದಂತೆ ಕೋಣ ಬಂದಿದೆ! ಏನು ಕಾರ್ಯ ಮಾಡಿಸಲಿ' ಎಂದು ಕೇಳಿದನು.

ವ್ಯಾಸರಾಯರು 'ಭಲೆ! ಸರಿಯಾದ ಶಿಷ್ಯ! ಪರ್ವತಾಕಾರವಾದ ಕೋಣ! ಈ ಕೋಣನಿಂದ ಆ ಬಂಡೆಗಳನ್ನು ಕಿತ್ತೊಗೆಸು' ಎಂದರು. 'ಅಪ್ಪಣೆ' ಎಂದು ಕನಕನು ಬಂಡೆಗಳನ್ನೆಲ್ಲಾ ತೆಗೆಸಿದನು. ಕಾರ್ಯ ಪೂರ್ತಿಯಾಗುತ್ತಲೂ ಬಂದು ತಿಳಿಸಿದನು. ಸ್ವಾಮಿಗಳು ಆ ಬಳಿಯಲ್ಲಿ ಹನ್ನೆರಡು ಕ್ಷೇತ್ರ ಸಾಲಿಗ್ರಾಮಗಳನ್ನು ಸ್ಥಾಪಿಸಿ ತೂಬನ್ನು ಕಟ್ಟಿಸಿದರು.

ಅನಂತರ ಕನಕನ ಯೋಗ್ಯತೆಯನ್ನರಿತು, ವ್ಯಾಸರಾಯರು ಉಪದೇಶಕೊಟ್ಟು, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಅಂದಿನಿಂದಲೇ ಕನಕನು, – ಕನಕದಾಸನಾದನು. ಪವಿತ್ರ ಮಹಿಮೆಗಳಾರಂಭವಾಯಿತು. ಲೋಕ ಪ್ರಖ್ಯಾತಿಯುಂಟಾಯಿತು.

೨

ಭಗವಾನ್ ಬಾದರಾಯಣರು ಶ್ರೀಮದ್ಭಾಗವತದಲ್ಲಿ ಭಕ್ತಿಯ ಪ್ರಾಶಸ್ತ್ಯ ಕಥನ ಮಾಡುವ ಒಂದು ಸಂದರ್ಭದಲ್ಲಿ :—

ಕಿಂಸ್ಯಾದ್ವರ್ಣಾಶ್ರಮಾಚಾರೈಃ
ಕಿಂದಾನೈಃ ಕಿಂತಪಶ್ಶತೈಃ ॥
ಸರ್ವಾಘಘ್ನೋತ್ತಮ ಶ್ಲೋಕೇ
ನಚೇದ್ಭಕ್ತಿರಧೋಕ್ಷಜೆ

ಎಂಬುದಾಗಿ ಅಪ್ಪಣೆ ಕೊಡಿಸಿರುವರು. ಈ ಶ್ಲೋಕದ ತಾತ್ಪರ್ಯವೇನೆಂದರೆ, " ಸರ್ವ ಪಾಪ ಪರಿಹಾರಕನೂ ಉತ್ತಮ ಶ್ಲೋಕನೂ ಆದ ಅಧೋಕ್ಷಜನಲ್ಲಿ, (ಜಿತೇಂದ್ರಿಯರಿಗೆ ಪ್ರತ್ಯಕ್ಷನಾಗುವವ) ಭಕ್ತಿಯೊಂದಿರದಿದ್ದರೆ, ವರ್ಣಾಶ್ರಮಾಚಾರಗಳಿಂದೇನು ? ಹಲವು ವಿಧ ತಪಸ್ಸುಗಳಿಂದೇನು ? ಎಂದರೆ ಏನೂ ಫಲವಿಲ್ಲ " ಎಂದಭಿಪ್ರಾಯ.

ಲೋಕದಲ್ಲಿ ಪ್ರತಿಯೊಂದು ಆಸ್ತಿಕಮತವೂ ಅದು ವೈದಿಕವಾಗಿರಲಿ, ಅವೈದಿಕ ವಾಗಿರಲಿ, ಭಕ್ತಿಗೆ ಅಗ್ರಸ್ಥಾನವನ್ನು ಕೊಟ್ಟಿದೆ. ಜೀವ ಬ್ರಹ್ಮೈಕ್ಯವನ್ನು ಪ್ರತಿಪಾದಿಸಿದ ಶಂಕರಾಚಾರ್ಯರಂಥ ಭಾಷ್ಯಕಾರರು ಸಹ ವಿವೇಕ ಚೂಡಾಮಣಿಯೆಂಬ ತಮ್ಮ ದಿವ್ಯ ಗ್ರಂಥದಲ್ಲಿ – ' **ಮೋಕ್ಷ ಸಾಧನ ಸಾಮಗ್ರ್ಯಾಂ ಭಕ್ತಿರೇವಗರೀಯಸೀ** ' ಎಂಬು ದಾಗಿ ಉದ್ಘೋಷಿಸಿದ್ದಾರೆ. ವ್ಯಾಖ್ಯಾನಕಾರರು ಶಂಕರರ ಭಕ್ತಿ ಶಬ್ದಕ್ಕೆ ಸ್ವಸ್ವರೂಪಾನು ಸಂಧಾನವೆಂದು ಅರ್ಥಮಾಡಿದ್ದರೂ, ಶಂಕರಾಚಾರ್ಯರ ಶಿವಾನಂದಲಹರಿ ಮೊದಲಾದ ಭಕ್ತಿಪರ ಸ್ತೋತ್ರಗಳಲ್ಲಿ ಅವರ ಹೃದಯವೇನೆಂಬುದು ಒಡೆದು ಕಾಣುತ್ತದೆ.

ಭಕ್ತಿ ಪಂಥದಲ್ಲಿ ಜಾತಿಮತಗಳಿಗೆ ಸ್ಥಾನವಿಲ್ಲ. ಸ್ತ್ರೀಪುರುಷ ವ್ಯಕ್ತಿಗತ ಭೇದ ಗಳಿಲ್ಲ. ವರ್ಣಾಶ್ರಮಗಳು ಅಡ್ಡಿ ಬರುವುದಿಲ್ಲ. ದಾನಧರ್ಮ ತಪಶ್ಚರ್ಯಾದಿಗಳು ಸಾಧಕ ಬಾಧಕಗಳಾಗುವುದಿಲ್ಲ. ಯಜ್ಞದಾನ ತಪಶ್ಚರ್ಯಾದಿಗಳಿಗೆ ನಶ್ವರವಾದ ಸ್ವರ್ಗಾದಿ ಭೋಗಗಳು ಫಲವಾದರೆ, ಭಕ್ತಿಗೆ ಶಾಶ್ವತ ಮುಕ್ತಿಯೇ ಫಲವಾಗಿರುವುದು. ಭಕ್ತಿಗೆ ಸರ್ವರೂ ಅಧಿಕಾರಿಗಳು. ಭಕ್ತರು ಇಂಥಾ ವರ್ಣದಲ್ಲೇ ಜನ್ಮತಾಳುವರೆಂಬ ನಿಯಮವಿಲ್ಲ. ದೇವತೆಗಳಂಥವರು ದೀನಜನರಲ್ಲಿ ಜನ್ಮತಾಳುವರು. ಶ್ರೀ ಕೃಷ್ಣಸಂಧವನು ದನಗಾವ ಗೊಲ್ಲ ಗೊಲ್ಲತಿಯರ ಮಧ್ಯದಲ್ಲಿ ಬೆಳೆದನು. ಆ ದೀನರ ದೈನ್ಯವನ್ನು ಪರಿ ಹರಿಸಿ, ಭಕ್ತಿಮಾರ್ಗವನ್ನು ಉಪದೇಶಿಸಿ ಅವರಿಗೆ ಮುಕ್ತಿಯನ್ನನುಗ್ರಹಿಸಿದನು. ಕನಕ ದಾಸರು ಕುರುಬರಲ್ಲವತರಿಸಿದ ರಹಸ್ಯವಾದರೂ ಅತಿಗೂಢವಾಗಿರುವುದು. ಪರಮಾತ್ಮನು ವಿವಿಧ ರೀತಿಯಲ್ಲಿ ಹರಿದಾಸನಾಗೆಂದು, ಅವರಿಗೆ ಬೋಧಿಸಿದ ಮಾತಾದರೂ ಅರ್ಥವತ್ತಾ ಗಿರುವುದು. ಕನಕದಾಸರು ಸಾಮಾನ್ಯ ಮರ್ತ್ಯರಲ್ಲ. ಈಶ್ವರಾಜ್ಞೆಯಿಂದ ಅವತರಿಸಿದ ಯಮಧರ್ಮನೆಂದು ಬಲ್ಲವರು ಹೇಳುವರು. ಆಪ್ತವಾಕ್ಯವನ್ನು ಅಪ್ರಮಾಣವೆಂದು

ತಿರಸ್ಕರಿಸಲು ಯಾರಿಗೂ ಅಧಿಕಾರವಿಲ್ಲ. ಆಪ್ತವಾಕ್ಯವನ್ನು ನಂಬದವನು ಲೋಕದಲ್ಲಿಲ್ಲ. ಪ್ರತಿಯೊಂದು ತತ್ವವನ್ನೂ ಸ್ವಾನುಭವದಿಂದ ತಿಳಿಯುವುದು ಯಾರಿಗೂ ಸಾಧ್ಯವಿಲ್ಲ. ವಿಷಪಾನ ಮಾಡಿ ಅನಂತರ ಅದು ಪ್ರಾಣಾಪಹಾರಿಯೆಂದು ಯಾರೂ ತಿಳಿಯಲು ಸಾಧ್ಯವಿಲ್ಲವಷ್ಟೆ !

ವ್ಯಾಸರಾಯರೊಡನೆ ಕನಕದಾಸರು ಕಲಿತ ದಿನದಿಂದಲೇ ಉಭಯರೂ ಕೂಡಿದ ಭಜನೆಗಾರಂಭವಾಯಿತು. ಯಾವಾಗಲೂ ಸ್ವಾಮಿಗಳ ಜೊತೆಯಲ್ಲಿ ಕನಕದಾಸರಿರುವುದು ಮಠದ ಜನರಿಗೆ ಸಹನೆಯಾಗಲಿಲ್ಲ. ಸ್ವಾಮಿಗಳು ಕನ್ನಡ ದೇವರ ನಾಮಗಳನ್ನು ಹಾಡುವುದೇ ಮೊದಮೊದಲು ಜನರಿಗೆ ಅಸಮಾಧಾನವಾಗಿತ್ತು. ಏನೋ ಅವರ ಅಭಿರುಚಿಯೆಂದು ತಟಸ್ಥರಾಗಿದ್ದರು. ಪುರಂದರದಾಸರು ಬರುತ್ತಲೂ, ಮಠದವರ ದ್ವೇಷವು ಇಮ್ಮಡಿಯಾಯಿತು. ದಾಸರು ಬ್ರಾಹ್ಮಣರಾಗಿದ್ದುದರಿಂದ ಅದೂ ಕಾಲ ಕ್ರಮದಲ್ಲಿ ಶಾಂತವಾಗಿತ್ತು. ಈಗ ಕನಕದಾಸರು ಬಂದದ್ದು, ಅವರನ್ನು ಸ್ವಾಮಿಗಳು ಭಜನೆಯಲ್ಲಿ ಸೇರಿಸಿಕೊಂಡದ್ದು ಸಹಿಸಲಾರದಷ್ಟು ಉಬ್ಬಸವಾಯಿತು. ಭಜನಗೋಷ್ಠಿಯನ್ನು ದಾಸಕೂಟವೆಂಬ ಕುಹಕ ಭಾವನೆಯಿಂದ ನಿಂದಿಸುತ್ತ ಬಂದರು. [ಈ ವಿವರವು ವ್ಯಾಸರಾಯರ ಚರಿತ್ರೆಯಲ್ಲಿ ಬಂದಿರುವುದರಿಂದ ಇಲ್ಲಿ ವಿಸ್ತರಿಸುವುದಿಲ್ಲ] ಕನಕದಾಸರನ್ನು ಏನಾದರೂ ಮಾಡಿ ಮಠದಿಂದ ಹೊರಡಿಸಬೇಕೆಂದು ಹೊಂಚು ಹಾಕುತ್ತಿದ್ದರು. ಮಠದ ಪಂಡಿತರು ಕ್ಷುಬ್ಧರಾಗಿರುವ ಸಂಗತಿಯನ್ನು ತಿಳಿದಿದ್ದರೂ ಸ್ವಾಮಿಗಳು ತಿಳಿಯದವರಂತಿದ್ದರು.

ಒಂದು ದಿನ, ವಿಜಯನಗರದಲ್ಲಿ ಮಧ್ಯಾಹ್ನ ಕಾಲದಲ್ಲಿ ಮಠದಲ್ಲಿ ವಿದ್ವದ್ಗೋಷ್ಠಿ ನೆರೆದಿದ್ದಾಗ, ಪುರಂದರದಾಸರನ್ನೂ, ಕನಕದಾಸರನ್ನೂ ಸ್ವಾಮಿಗಳು ಸಮೀಪದಲ್ಲಿ ಕರೆದು ಕೂಡಿಸಿಕೊಂಡರು. ಮೋಕ್ಷಕ್ಕೆ ಅಧಿಕಾರಿಗಳ್ಯಾರೆಂಬ ವಿಷಯದ ಮೇಲೆ ಪಂಡಿತರು ತಮ್ಮ ವಾಚಾಳತ್ವವನ್ನು ತೋರಿಸುತ್ತಿದ್ದರು. ಯಾವ ಜನ್ಮದಲ್ಲಿ ಎಷ್ಟೇ ಸಾಧನ ಮಾಡಿದರೂ, ಎಷ್ಟೇ ಜ್ಞಾನವಂತರಾದರೂ ಬ್ರಾಹ್ಮಣ ಜನ್ಮ ಬಾರದಲ್ಲದೆ ಮೋಕ್ಷವಾಗುವುದಿಲ್ಲವೆಂಬ ತೀರ್ಮಾನವನ್ನು ಸ್ವಾಮಿಗಳ ಮುಂದಿಟ್ಟರು. ಇದು ಸಕಲ ಶಾಸ್ತ್ರಗಳ ಮಥಿತಾರ್ಥವೆಂದು ನಿರೂಪಿಸಿದರು. ಸ್ವಾಮಿಗಳು ಪಂಡಿತರ ಪಾಂಡಿತ್ಯಕ್ಕೆ ತಲೆದೂಗಿ ನೀವು ಹೇಳುವುದು ಸತ್ಯ ಸತ್ಯವೆಂದನುಮೋದಿಸಿದರು. ಇಷ್ಟರೊಳಗೆ ಕನಕದಾಸರು ಕುರುಬರಾದ್ದರಿಂದ ಅವರನ್ನು ಸಮುಖದಲ್ಲಿ ಕರೆಯಬಾರದೆಂಬ ಮಾತನ್ನು ತೆಗೆಯಲು ಪಂಡಿತರಲ್ಲಿ ಗಜಿಬಿಜಿಯಾಗುತ್ತಿತ್ತು. ಈ ಇಂಗಿತವನ್ನರಿತು, ಪ್ರಕೃತ ಇಷ್ಟು ಜನರಲ್ಲಿ ವೈಕುಂಠಕ್ಕೆ ಹೋಗುವವರ್ಯಾರೆಂಬ ಪ್ರಶ್ನೆಯನ್ನು ಸ್ವಾಮಿಗಳೇ ಸಭೆಯ ಮುಂದಿಟ್ಟರು. ಇಂಥವನೇ ಮೋಕ್ಷಕ್ಕೆ ಹೋಗುವರೆಂದು ನಿರ್ಧರಿಸುವುದಕ್ಕಾಗಲೀ, ವ್ಯಕ್ತಿಶಃ ನಾನು ಹೋಗುವೆನೆಂದು ಹೇಳುವುದಕ್ಕಾಗಲೀ ಯಾರಿಗೂ ಧೈರ್ಯ ಬರಲಿಲ್ಲ. ಈ ಮಾತು ಗಹನ ವಿಚಾರವೆಂದು ಎಲ್ಲರೂ ತಟಸ್ಥರಾದರು. ಸ್ವಾಮಿಗಳು ಈ ಮಾತಿಗೆ ಪಂಡಿತರ ಹೊರತು ದಾಸರುಗಳು ಉತ್ತರ ಕೊಡಬಹುದೇ ಎಂದು ಪ್ರಶ್ನೆ ಮಾಡಿದರು. ಪಂಡಿತರಿಗೆ ತಿಳಿಯದ ವಿಷಯವು

ಪಾಮರರಿಗೆ ಹೇಳಲು ಯೋಗ್ಯತೆ ಹೇಗೆ ಬರಬೇಕೆಂದು ಒಬ್ಬೊಬ್ಬರೂ ನುಡಿದರು. ಅಂಥಾ ಧೈರ್ಯವಿದ್ದವರು ಹೇಳಿದರೆ ಹೇಳಬಹುದೆಂದು ವಕ್ರೋಕ್ತಿಗಳನ್ನಾಡಿದರು. ಆಗ ಸ್ವಾಮಿಗಳು – "ಕನಕಾ, ಇಷ್ಟು ಜನರಲ್ಲಿ ವೈಕುಂಠಕ್ಕೆ ಹೋಗುವರ್‍ಯಾರು ಹೇಳುವೆಯಾ?" ಎಂದು ಕೇಳಿದರು. ಆಗ ಕನಕದಾಸರು – "ಸ್ವಾಮಿಾ, ಈ ಮಹಾ ವಿದ್ವದ್ಗೋಷ್ಠಿಗೇ ನಾನು ಅಪರಿಚಿತ. ವ್ಯಕ್ತಿಶಃ ಕೇಳಿದರೆ ಕನಕನೇನಾಡುವನೋ ನೋಡಬೇಕೆ'ಂದನು. ಅದು ಸರಿ ಎಂದುಕೊಂಡು, ಸ್ವಾಮಿಗಳು ಒಬ್ಬೊಬ್ಬರನ್ನೂ ಬೆಟ್ಟಿಟ್ಟು ತೋರಿಸಿ, ಇವರಿಂಥವರು, ಇಷ್ಟು ಶಾಸ್ತ್ರ ವಿಶಾರದರು, ಇಂತಿಂಥಾ ಯಜ್ಞಾಚರಣೆ ಮಾಡಿದವರು ಎಂಬುದಾಗಿ ಅವರ ಪರಿಚಯ ಪ್ರಶಸ್ತಿಗಳನ್ನು ಹೇಳುತ್ತಾ – 'ಇವರು ವೈಕುಂಠಕ್ಕೆ ಹೋಗುವರೇ?' ಎಂದು ಕೇಳಿದರು. ಕನಕನು ಇವರಲ್ಲ, ಇವರಲ್ಲ, ಇವರಲ್ಲ – ಎಂದು ನುಡಿದನು. ಸ್ವಾಮಿಗಳು ಪುರಂದರದಾಸರ ಕಡೆ ಕೈತೋರಿಸಿ, – ಇವರೋ! ಎಂದರು. ಕನಕನು, – 'ಇವರೂ ಅಲ್ಲ'ವೆಂದನು. ಅಷ್ಟೆನ್ನುವುದರಲ್ಲಿ ಸಭೆಯು ಕ್ಷುಬ್ಧವಾಯಿತು. ಸ್ವಾಮಿಗಳು ತಮ್ಮ ಎದೆಯನ್ನು ಮುಟ್ಟಿಕೊಂಡು, – 'ಕನಕ! ನಾವು' ಎಂದರು. 'ನೀವೂ ಅಲ್ಲ'ವೆಂದು ಕನಕನು ನುಡಿದನು. ಪಂಡಿತರು – 'ಮಹಾಸ್ವಾಮಿ, ಈ ಶೂದ್ರನಿಂದ, ನಮಗಿರಲಿ **ನಿಮ್ಮ ದಾಸರಿಗೂ ನಿಮಗೂ** ಏಕಕಾಲದಲ್ಲಿ ಅವಮಾನವಾಯಿತು' ಎಂದರು. ಸ್ವಾಮಿಗಳು – 'ಇರಲಿ, ಕನಕಾ! ಹಾಗಿದ್ದರೆ ಯಾರೋ ವೈಕುಂಠಕ್ಕೆ ಹೋಗುವವರು' ಎಂದು ಕೇಳಿದರು. ಆಗ ಕನಕನು ನಗುತ್ತಾ – 'ಮಹಾಸ್ವಾಮಿ, **ನಾನು ಹೋದರೆ ಹೋದೇನು!**' ಎಂದನು.

ಆ ಮಾತನ್ನು ಕೇಳಿ ಉರಿಪೆದ್ದ ಪಂಡಿತರು – "ಸಾಕು ಸಾಕು, ನಮ್ಮಂಥಾ ವ್ಯಾಖ್ಯಾತರಿಗಿಲ್ಲ. **ತಾವೇ** ಅಪರೋಕ್ಷ ಜ್ಞಾನಿಗಳೆಂದು ಕರೆಯುವ ಪುರಂದರದಾಸರಿಗಿಲ್ಲ! ತಮಗೂ ಇಲ್ಲ. ಈ ಶೂದ್ರ! ಈ ಕುರುಬ! ಈ ಕನಕನೋ ವೈಕುಂಠಕ್ಕೆ ಹೋಗುವವ?" ಎಂದು ಉದ್ಗಾರ ತೆಗೆದರು. 'ಎಂಥಾ ಬ್ರಾಹ್ಮಣಾಪಮಾನ! ಎಲ್ಲಕ್ಕೂ ಸ್ವಾಮಿಗಳು ಈ ಕುರುಬನನ್ನು ಹತ್ತಿರ ಸೇರಿಸಿ – ಕೊಟ್ಟ ಸಲಿಗೆಯೇ ಕಾರಣ"ವೆಂದು ನುಡಿದರು. ಕನಕನು – 'ಸತ್ಯ ಸತ್ಯ ಎಲ್ಲಕ್ಕೂ ಸ್ವಾಮಿಗಳು ಕೊಟ್ಟ ಸಲಿಗೆಯು ಕಾರಣ! ನಾನು ಬ್ರಾಹ್ಮಣಾಪಮಾನ ಮಾಡಿದವನಲ್ಲ. ದಾಸಾರ್ಯರನ್ನೂ ಗುರುಗಳನ್ನೂ ಅಪಮಾನ ಮಾಡಿದವನಲ್ಲ. ನಾನು ಆಡಿದ ಮಾತು ಅರ್ಥವಾಗದ ದೋಷ'ವೆಂದನು. ಓರ್ವ ಪಂಡಿತನು – 'ನಿನ್ನ ಮಾತು ಅರ್ಥವಾಗದಿರಲು ಅದೇನು ದೊಡ್ಡ ಶಾಸ್ತ್ರ ವಾಕ್ಯವೋ? ಅರ್ಥವಾಗದ ಹಳೆಗನ್ನಡ ನುಡಿಯೋ? "ನಾನು ಹೋದರೆ ಹೋದೇನು" ಎಂಬುದಕ್ಕೆ ಭಾಷ್ಯಕಾರರಾಗಬೇಕೇನೋ!" ಎಂದನು.

ಕನಕನು – 'ಬ್ರಾಹ್ಮಣೋತ್ತಮರೇ, ಪಂಡಿತಾಗ್ರಣಿಗಳೇ – ಇಷ್ಟಕ್ಕೆ ಕೋಪವೇಕೆ! – ನನ್ನ ಭಾವವಿಷ್ಟೆ! "ನಾನು" ಎಂಬುವುದು ಹೋದರೆ, ಹೋದೇನು – ಇದ್ದರೆ ಇದ್ದೇನು' ಎಂದು ಕ್ಷಮೆ ಬೇಡಿ ಸಾಷ್ಟಾಂಗ ನಮಸ್ಕಾರ ಮಾಡಿದನು.

ಈ ಮಾತು ಕಿವಿಗೆ ಬಿದ್ದೊಡನೆ ಎಲ್ಲರೂ ಚಕಿತರಾದರು. ಎಷ್ಟು ಸಣ್ಣ ಶಬ್ದದಲ್ಲಿ ಎಂತಹ ಗೂಢಾರ್ಥವೆಂದು ಆಶ್ಚರ್ಯಭರಿತರಾದರು. ಆನಂದ ಮುದ್ರೆಯಿಂದ ಕನಕದಾಸನನ್ನು ಶ್ಲಾಘಿಸಿದರು. ವ್ಯಾಸರಾಯರು, ಇದೇ ದಾಸಕೂಟವೆಂದರು. ಮತ್ತೆ ಅವರಲ್ಲಿ ಚಾಣಾಕ್ಷರಾದವರೊಬ್ಬರು, – 'ಮೋಕ್ಷದಲ್ಲೂ ನಾನೆಂಬುವುದು ಹೋಗುವುದಿಲ್ಲ. ನಾನು ಎಂಬುದಿಲ್ಲದಿದ್ದರೆ, ಆನಂದಾನುಭವವಿರುವುದಿಲ್ಲ – ಅಪಸಿದ್ಧಾಂತವಾಯಿತು' ಎಂದು ಉದ್ಗಾರ ತೆಗೆದರು. ಆಗ ವ್ಯಾಸರಾಯರು – ನಾನು ಎಂದರೆ ನಾನೆಂಬ ಅಹಂಕಾರ, ಅಹಂಭಾವ, ಎಂದು ಅರ್ಥ ಮಾಡಿದರು. ;ಿಮೃತವಾಯಿತು.

ಕನಕದಾಸರು ದೇವರನ್ನು ತೋರಿಸಿದ್ದು

ವ್ಯಾಸರಾಯರು ಒಂದು ದಿನ ಸಭೆಯಲ್ಲಿ – 'ಕನಕಾ, ದೇವರನ್ನು ತೋರಿಸುವೆಯಾ ?' ಎಂದು ಕೇಳಿದರು. ಕನಕನು – 'ಆಗಲಿ ಬುದ್ಧೀ, ನಾಳೆ ತೋರಿಸುವೆನು' ಎಂದನು. – 'ಯಾವಾಗ ತೋರಿಸುವೆ? ಕಾಲ ನಿರ್ದೇಶ ಮಾಡು' ಎಂದು ಸ್ವಾಮಿಗಳು ಕೇಳಿದರು. ಕನಕನು – 'ಪೂಜಾಕಾಲದಲ್ಲಿ' ಎಂದನು.

ಮರುದಿನ ಪೂಜಾ ಕಾಲದಲ್ಲಿ ಜನರು ದೇವರ ಪ್ರತ್ಯಕ್ಷ ದರ್ಶನವಾಗುವುದೆಂದು ಬಾಯಿಬಿಟ್ಟುಕೊಂಡು ಕಾದಿದ್ದರು. ಕನಕನು ಪರಮಾತ್ಮನನ್ನು ಸ್ಮರಿಸಿ, – 'ದೇವಾ, ಎಲ್ಲರಿಗೂ ನಿನ್ನ ದರ್ಶನವಾಗಬೇಕಂತೆ! ಪೂಜಾ ಕಾಲದಲ್ಲಿ ಮಠಕ್ಕೆ ಹೋಗುವೆಯಾ ?' ಎಂದನು. ಸ್ವಾಮಿಯು – 'ಕನಕಾ, ನೀನು ಹೇಳಿದಂತೆ ಕೇಳುವೆನೆಂದು ವಚನ ಕೊಟ್ಟಿರುವೆನಷ್ಟೆ! ಯಾವ ರೂಪದಿಂದ ಹೋಗಲಿ, ನೀನೇ ಹೇಳು' ಎಂದು ಪ್ರಶ್ನೆಮಾಡಿದನು. – 'ರೂಪವೇನು, ಭೈರವಾಕಾರದಿಂದ ಹೋಗು, ನೋಡೋಣ'ವೆಂದು ಕನಕನಾಡಿದನು. ಅದರಂತೆ ಶ್ರೀ ಹರಿಯು ಭೈರವ ರೂಪ (ಜೂಲುನಾಯಿ) ದಿಂದ ಗುಂಪಿನಲ್ಲಿ ನುಗ್ಗಿದನು. ಮಠದದಿಂಡೆಯರು, – 'ಹಾ ಹಾ ನಾಯಿ ನಾಯಿ' ಎಂದು ಬಡಿದಟ್ಟಿದರು. ಕುಯ್ ಕುಯ್ ಎಂದು ಕೂಗುತ್ತಾ ಭೈರವನು ಕನಕನ ಬಳಿಗೆ ಬಂದನು. ಪೆಟ್ಟು ತಿಂದು ಬರುತ್ತಿರುವ ಭಕ್ತರ ಬಂಧುವನ್ನು ನೋಡಿ ಕನಕನು – 'ಜೂಲ್ವಾಲದ ನಾಯಕರೇ, ನೀವೇನೂಟಾ ಮಾಡಿದಿರಿ' ಎಂದು ಮೂದಲಿಸಿದನು. ಲೀಲಾಭೈರವನು, – 'ಎಷ್ಟು ದಿನದಿಂದ ಪೆಟ್ಟುಕೊಡಿಸಬೇಕೆಂದು ಕಾದಿದ್ದೆಯೋ ಕನಕಾ' ಎಂದು ಕೇಳಿದನು. –'ದೇವಾ, ಯುದ್ಧದಲ್ಲಿ ನನಗೆ ಪೆಟ್ಟುಕೊಡಿಸಿ ಕೆಡವಿದಂದಿನಿಂದ' ಎಂದನು.

ಇಂತಹ ವಿಚಿತ್ರ ಲೀಲೆಗಳನ್ನು ಅನುಭವಿಸಿದವರು ಕನಕದಾಸರು.

ಭೋಜನಾನಂತರ ಸ್ವಾಮಿಗಳು – 'ಏಕೋ ಕನಕಾ, ದೇವರನ್ನು ಜನರಿಗೆ ತೋರಿಸಲಿಲ್ಲ'

ಕನಕ :—ದೇವರನ್ನು ಬ್ರಾಹ್ಮಣರು ಹೊಡೆದೋಡಿಸಿದರು - ಮಹಾಸ್ವಾಮಿ.

ಸ್ವಾಮಿಗಳು :— ಹಾಗೆಂದರೇನೋ ? ದೇವರನ್ನು ಹೊಡೆಯುವರೇನೋ ಯಾರಾದರೂ ?

ಕನಕ :—ದೇವರು ವೈಲಿಗೆಯಲ್ಲಿ ಬಂದ ಮಹಾಸ್ವಾಮಿ, ಅದಕ್ಕೇ ಪೆಟ್ಟು ಬಿತ್ತು.

ಸ್ವಾಮಿಗಳು :—ದೇವರಿಗೆ ವೈಲಿಗೆಯೆಂದರೇನೋ ?

ಕನಕ :—ಹೌದು ಸ್ವಾಮಿ, ನಾಯಿಯಾಗಿ ಬಂದಿದ್ದ – ಸೌಟಿನಿಂದ ಬಡಿಸಿ ಕೊಂಡ !

ಸ್ವಾಮಿಗಳು ಗೊಳ್ಳೆಂದು ನಕ್ಕರು. ನಾಳೆ ಹೀಗೆಲ್ಲಾ ಮಾಡಬೇಡ. ನಾಯಿ ಯಾಗಿ ಬಂದರೆ ಜನರಿಗೆ ತಿಳಿಯುವ ಬಗೆ ಹೇಗೆ ? ಮಡಿಯಾಗಿಯೇ ಬರುವಂತೆ ಹೇಳು.

ಕನಕ :—'ಅಪ್ಪಣೆ' ಎಂದ.

ಮರುದಿನ ಪೂಜಾ ಕಾಲದಲ್ಲಿ ದೇವರನ್ನು ನೋಡಬೇಕೆಂಪು ಅತಿಶಯವಾಗಿ ಜನರ ಗುಂಪು ಸೇರಿತು. ಕನಕನು – 'ದೇವಾ, ಇವತ್ತು ಮಡಿಯಿಂದ ಮಠಕ್ಕೆ ಹೋಗು ; ಸ್ವಾಮಿಗಳು ನಿನಗೆ ಕ್ಷೀರಪಾನ ಮಾಡಿಸುವರು ; ಹೋಗುವೆಯಾ ?' ಎಂದು ಕೇಳಿದನು. ಸ್ವಾಮಿಯು – 'ಊಳಿಗಕ್ಕೆ ಒಪ್ಪಿದ ಮೇಲೆ ಮೀರಿ ನಡೆಯುವುದು ಹೇಗೆ? ಆಗಲಿ' ಎಂದನು.

ಪೂಜಾಕಾಲ ! ಜನರು ಎಲ್ಲಾ ಬಾಗಿಲುಗಳಲ್ಲೂ ಹಣಿಕಿ ನೋಡುತ್ತಿದ್ದಾರೆ ! ಕನಕನು ದೂರದಲ್ಲಿ ನಿಂತು, 'ನಡಿ ನಡಿ' ಎನ್ನುತ್ತಿದ್ದಾನೆ. ಪರಮಾತ್ಮನು – ಕೃಷ್ಣಸರ್ಪ ನಾಗಿ, ಹೆಬ್ಬಾಗಿಲಿನಿಂದ ಮಂಟಪವನ್ನು ಕುರಿತು ಬರುತ್ತಿದ್ದಾನೆ. ಜನರು 'ಹಾವು ಬಂತು – ಹಾವು ಬಂತೆ'ಂದು ಬೆದರಿ ಸ್ಥಳಬಿಟ್ಟು ಓಡುತ್ತಿದ್ದಾರೆ. ಎಡಬಲ ಸೇವೆಯವರೂ ಭಯಗೊಂಡು ಒಳಹೊಕ್ಕಿದ್ದಾರೆ. ಸ್ವಾಮಿಗಳು ಮಾತ್ರ ಕುಳಿತ ಪೀಠದಿಂದ ಕದಲದೆ ಕುಳಿತಿದ್ದಾರೆ. ಹತ್ತಿರ ಬರುತ್ತಲೇ ಫಣವನ್ನು ಹಿಡಿದು ಕೈಯಾಡಿಸುತ್ತಿದ್ದಾರೆ. ಕ್ಷೀರದ ಪಾತ್ರೆಯನ್ನು ಹಿಡಿದು ಕುಡಿಸುತ್ತಿದ್ದಾರೆ. ಸ್ವಾಮಿಗಳು ಸರ್ಪವನ್ನು ಹಿಡಿದಿರುವುದನ್ನು ಕಂಡು ಜನರು ಸೇರುತ್ತಿದ್ದಾರೆ. ಹಾಯ್ ಹಾಯ್ ಎಂದು ಕೈಮುಗಿಯುತ್ತಿದ್ದಾರೆ !

ಕನಕದಾಸರು :—

ಪಂತುವರಾಳಿ – ರೂಪಕತಾಳ

ಈತನೀಗ ವಾಸುದೇವನು – ಈ ಸಮಸ್ತ ಜಗಕಧೀಶ ಪ.
ಈತನೀಗ ವಾಸುದೇವ ಈ ಸಮಸ್ತ ಜಗಕಧೀಶ
ದೂತಗೊಲಿದು ತೇರತೇಜಿಗಳನು ಪಿಡಿದು ನಡೆಸಿದಾತ ಅ.

ದನುಜೆಯಾಳಿದನಣ್ಣನಣ್ಣನ ಪಿತನ ಮರೆಸಿ ಕೌರವೇಂದ್ರ
ನನುಜೆಯಾಳಿದವನ ಶಿರವ ಛೇದಿಸೀ
ತನ್ನನುಜೆಯಾಳಿದವನ ಬೆಂಕಿ ಮುಟ್ಟದಂತೆ ಕಾಯ್ದು ಉಗ್ರ
ನನುಜೆಯಾಳಿದವನ ನೋಡಿರೋ, ರಂಗನು ೧

ಕ್ರೂರವಾದ ಗರಳಮುಖದಿ ಭೂರಿಭಟರೊಳಧಿಕ ಅಸಮ
ವೀರನೆಚ್ಚಿಬಪ್ಪ ಶರವನೂ ಈಕ್ಷಿಸಿ
ಧಾರುಣಿಯ ಚರಣತಳದೊಳೊತ್ತಿನರನ ತಲೆಯ ಕಾಯ್ದ
ಭಾರಭರಿತ ಭಾರಕರ್ತನೂ ರಂಗನು ೨

ವ್ಯೋಮಕೇಶಸಿಪ್ಪದೆಶೆಯ ನಾಂತು ಪ್ರೋತ್ತ ಪ್ರಾಣವುಳ್ಳ
ಸಾಮಜಾವನೇರಿ ಬಪ್ಪನ ಶಕ್ತಿಗೆ
ಪ್ರೇಮದಿಂದ ಉರವನಾಂತು ಡಿಂಗರಿಗನ್ನ ಕಾಯ್ದ ಸಾರ್ವ
ಭೌಮ ಬಡದಾದಿ ಕೇಶವರಾಯನೂ ರಂಗನು ೩

ಎಂಬುದಾಗಿ ಹಾಡುತ್ತಿದ್ದಾರೆ. ಈ ರೀತಿ ವಿಚಿತ್ರ ವ್ಯಾಪಾರ ನಡೆದು ಹೋಯಿತು. ಪೂಜಾನಂತರ ವ್ಯಾಸರಾಯರು ಕನಕದಾಸರನ್ನು ಸಮುಖದಲ್ಲಿ ಕರೆದು ತೀರ್ಥ ಕೊಟ್ಟರು. ಕನಕದಾಸರ ವ್ಯಕ್ತಿತ್ವವನ್ನು ನೋಡಿ, ಅವರಿಗೆ ಮೊದಲು ತೀರ್ಥ ದೊರೆಯಿತೆಂದು ಆಕ್ಷೇಪಿಸಲು ಯಾರಿಗೂ ಬಾಯಿ ಬರಲಿಲ್ಲ. ವರ್ಣಾಶ್ರಮ ನಿಯಮಗಳು ಅನೇಕ ದೃಷ್ಟಿಯಿಂದ ಜಗತ್ತಿಗೆ ಕಲ್ಯಾಣಕಾರಿಗಳಾಗಿವೆ. ಕೆಲವು ಸಮಯಗಳಲ್ಲಿ ಛಲಗಾರರಿಂದ ಅವೇ ಬಲುಬಾಧಕವಾದವೆಂಬಷ್ಟು ಬೇಸರವನ್ನುಂಟು ಮಾಡಿವೆ. ಕನಕದಾಸರು ಜಾತ್ಯಾ ಕುರುಬರಾದರೇನು ? ವರ್ಣ ನಿಯಮಗಳನ್ನು ಸಡಿಲಗೊಳಿಸಬಾರದೆಂದು ಅವರೊಡನೆ ಸವ್ಯವಹಾರ ಮಾಡದಿದ್ದರೇನು ? ಅವರ ಜ್ಞಾನವು ವರ್ಣಾಧಿಕರೆನಿಸಿದವರಿಗೆ ಬರುವ ಬಗೆ ಹೇಗೆ ? ಗೊಲ್ಲರಲ್ಲಿ ಬೆಳೆದನೆಂದು ಶ್ರೀ ಕೃಷ್ಣನನ್ನು ಪೂಜಿಸದಿರಲು ಸಾಧ್ಯವೇ ?

ಸ್ವಾಮಿಗಳು ಸಮುಖದಲ್ಲಿ ಕರೆದು ಕನಕದಾಸರಿಗೆ ತೀರ್ಥವನ್ನು ಕೊಡುತ್ತಲೇ ಅವರು ಪರವಶರಾಗಿ—

ಕಾಂಬೋದಿ - ಜಂಪೆ

ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು
ಪದುಮನಾಭನ ಪಾದದೊಲುಮೆ ಎನಗಾಯ್ತು ಪ

ಹರಿತೀರ್ಥಪ್ರಸಾದ ಜಿಹ್ವೆಗೆ ದೊರಕಿತು
ಹರಿಯನಾಮಾಮೃತವು ಕಿವಿಗೊದಗಿತು
ಹರಿದಾಸರು ಎನ್ನ ಬಂಧುಗಳಾದರು
ಹರಿಯ ಶ್ರೀಮುದ್ರೆ ಆಭರಣವಾಯ್ತು ೧

ಮುಕ್ತರಾದರು ಎನ್ನ ನೂರೊಂದು ಕುಲದವರು
ಮುಕ್ತಿಮಾರ್ಗಕೆ ಯೋಗ್ಯ ನಾನಾದೆನು
ಅಕಳಂಕ ಶ್ರೀ ಹರಿಯ ಭಕ್ತಿಗೆ ಮನವೊಲಿದು
ರುಕುಮಿಣೀಯರಸ ಕೈವಶನಾದನೆನಗೆ ೨

ಇಂದೆನ್ನ ಜೀವಕ್ಕೆ ಸಕಲ ಸಂಪದವಾಯ್ತು
ಮುಂದೆನ್ನ ಜನ್ಮ ಸಾಫಲ್ಯವಾಯ್ತು
ತಂದೆ ಶ್ರೀ ಕಾಗಿನೆಲೆಯಾದಿ ಕೇಶವರಾಯ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ

ಎಂಬುದಾಗಿ ಹಾಡಿದರು.

ಕನಕದಾಸರಿಗೆ ತಮ್ಮ ಜಾತಿಯ ಜನರಲ್ಲಿರುವ ಅನಾಚಾರಗಳನ್ನು ತಪ್ಪಿಸಿ ಅವರನ್ನು ಸನ್ಮಾರ್ಗಕ್ಕೆ ತರಬೇಕೆಂಬ ಯೋಜನೆ ಹುಟ್ಟಿತು. ಕುರುಬರಲ್ಲಿ ಅಜ್ಞಾನದಿಂದ ಆವರಿಸಿಕೊಂಡಿದ್ದ ದೊಡ್ಡ ಅನಾಚಾರವೇನೆಂದರೆ, ಮನೆ ಮನೆಗೂ ದೇವರ ಹೆಸರಿನ ಮೇಲೆ ದೇವದಾಸಿಯರನ್ನು ಬಿಡುವುದು. ಈ ದುರ್ವೃತ್ತಿಯನ್ನು ದಾಸರು ಬಹುವಾಗಿ ಖಂಡಿಸಿ ತಮ್ಮ ಕಾಲದಲ್ಲಿ ಕಂಡ ಕಂಡ ಕಡೆ ಆ ಆಚರಣೆಯನ್ನು ತಪ್ಪಿಸಿದರು. ದೇವರ ಹೆಸರ ಮೇಲೆ ಪ್ರಾಣಿಗಳನ್ನು ಬಲಿಕೊಡುವುದು ಅವರ ಮತ್ತೊಂದು ಅನಾಚಾರವಾಗಿತ್ತು. ಕುರುಬರೆಲ್ಲರೂ ತಮ್ಮ ಕುಲದೇವರ ಉತ್ಸವ ಮಾಡುವೆನೆಂದೂ ಕುಲಸ್ಥನಾದ್ದರಿಂದ ನೀನೂ ಬರಬೇಕೆಂದೂ ಕನಕದಾಸರನ್ನು ಕರೆಯುವುದಕ್ಕೆ ಬಂದರು. ಕನಕದಾಸರು ಸಂತೋಷದಿಂದ – "ಅಯ್ಯಾ ನಿಮ್ಮ ಜೊತೆಯಲ್ಲಿ ದೇವರ ಉತ್ಸವಕ್ಕೆ ಬರಲು ನನಗೆ ಯಾವ ಅಡ್ಡಿಯೂ ಇಲ್ಲ. ನೀವು ಮಾಡುವ ಅನಾಚಾರವು ನನಗೆ ಸರಿ ಬರುವುದಿಲ್ಲ. ದೇವರ ಹೆಸರಿನಿಂದ ನೀವು ಪ್ರಾಣಿಗಳನ್ನು ಬಲಿಕೊಡುತ್ತಿರುವಿರಿ. ಆ ದುರಾಚಾರವನ್ನು ನೀವು ಬಿಡುವಿರಾದರೆ ಈಗಲೇ ಬರುತ್ತೇನೆ" ಎಂದರು. ಆ ಜನರು – 'ಕನಕಪ್ಪಾ, ನೀನು ದೇವರ ಮನುಷ್ಯ! ನಿನ್ನನ್ನು ಬ್ರಾಹ್ಮಣರೆಲ್ಲಾ ಕೊಂಡಾಡುತ್ತಿರುವರು. ನಿನಗೆ ದೇವರೇ ಪ್ರತ್ಯಕ್ಷನೆಂದು ಹೇಳುತ್ತಿರುವರು. ನಮ್ಮ ಉತ್ಸವವು ಹತ್ತು ಜನರ ಕೆಲಸ; ಅಲ್ಲೇ ಬಂದು ನೀನು ಏನು ಹೇಳಬಯಸುತ್ತೀಯೋ ಅದನ್ನು ಹೇಳು. ನಿನ್ನನ್ನು ಬಿಟ್ಟು ನಾವು ಉತ್ಸವ ಮಾಡುವವರಲ್ಲ" ಎಂದು ಕೇಳಿಕೊಂಡರು.

ಕನಕದಾಸರು ಒಡನೆಯೇ ಆ ಜನರೊಡನೆ ಹೊರಟರು. ಮನೆಗೊಂದು ಕುರಿಯಂತೆ ಬಲಿಕೊಡಲು ಸಿದ್ಧರಾಗಿದ್ದ ಆ ಜನರನ್ನು ನೋಡಿ – "ಅಯ್ಯಾ, ನಿಮ್ಮ ದೇವರು ರಕ್ತವನ್ನು ಬೇಡುವುದಿಲ್ಲ. ಅವನಿಗೆ ಬೇಕಾಗಿರುವುದು ಭಕ್ತಿ. ವೃಥಾ ಪ್ರಾಣಿಗಳನ್ನು ಕೊಲ್ಲಬೇಡಿರಿ" ಎಂದು ಹೇಳುತ್ತಾ

ಜೋಗಿಸಾವೇರಿ - ಆದಿತಾಳ

ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು
ಬಿನುಗು ದೈವದಗೊಡವೆ ಬೇಡಿ ನರಕತಪ್ಪದೋ ಪ.

ಎಕ್ಕನಾತಿಯರು [1]ಕಾಟ [2]ಜಕ್ಕಿಯರು ಕನ್ಯೆಯರು
ಸೊಕ್ಕಿನಿಂದ ಸೊಂಟಮುರುಕ ಬೈರೇದೇವರು

---

1 ಕಿರಾತರ ದೇವತೆ (ಕಾಟನಾಯಕ ಮುಂತಾಗಿ) 2 ತಪ್ಪಸ್, ತತ್ಸಮ-ಯಕ್ಷಿ.

ಮಿಕ್ಕಮಾರಿಮಸಣಿ ಚೌಡಿ ಮೈಲಾರಿ ಮೊದಲಾದ – ಇಂಥ
ತಕ್ಕುದೈವದ ಗೊಡವೆಬೇಡ ನರಕ ತಪ್ಪದು ೧

ಸುತ್ತಣವರ ಮಾತುಕೇಳಿ ಗುತ್ತಿಯು ಯೆಲ್ಲಮ್ಮಗೊಲಿದು
ಬತ್ತಲೆ ದೇವರ ಮುಂದೆ ಬಲಿಯ ನೋಡಿರೋ
ಮತ್ತೆಬೇವಿ ನುಡಿಗೆಯನ್ನು ಅರ್ಥಿಯಿಂದ ಉಟ್ಟುಕೊಂಡು
ಮುಕ್ತಿಕಾಂಬೆನೆಂಬ ಆಸಕ್ತಿ ಬೇಡಿರೋ ! ೨

[3]ತೂಳದವರ ಮಾತುಕೇಳಿ ಖೂಳರೆಲ್ಲರು ಕೂಡಿಕೊಂಡು
ಹಾಳುಮಾಡಿ ಕೈಯಲ್ಲಿದ್ದ ಹೊನ್ನು ಹಣಗಳ
ಬಾಳುತಿಪ್ಪ ಕೋಣಕುರಿಯ ಏಳಬೀಳ ಕೊರಳಕೊಯಿದು
ಬೀಳಬೇಡಿ ನರಕಕೆಂದು ಹೇಳಬಂದೆನೊ ೩

[4]ಹೊಳ್ಳದ [5]ಬಿಚ್ಚೇರು ತಾವು ಸುಳ್ಳರೆಲ್ಲರು ಕೂಡಿಕೊಂಡು
ಬೆಳ್ಳನೆ ಬೆಳತನಕ ನೀರತಡಿಯಲ್ಲಿ ಕುಳಿತು
[6]ಗುಳ್ಳ [7]ಗೊರಜೆ ಕೂಡಿತಿಂದು [8]ಕಳ್ಳುಕೊಡನ ಬರಿದುಮಾಡಿ
ಇಂಥ – ಪೊಳ್ಳುದೈವದ ಗೊಡವೆಬೇಡ ನರಕತಪ್ಪದು ೪

ಪೊಡವಿಗಧಿಕ ವಿಜಯನಗರದೊಡೆಯ ಕಟ್ಟಿ ವೆಂಕಟೇಶ
ಕಡುಚೆಲ್ವ ಸತ್ವದಧೀರ ಕನಕನೊಡೆಯನ
ಬಡವಾದಿ ಕೇಶವನ ಪಾದಬಿಡದೆ ಭಕ್ತಿಯಿಂದ ಭಜಿಸಿ
ಇಂಥ – ಜಡದೈವದ ಗೊಡವೆಬೇಡ ನರಕತಪ್ಪದು ೫

ಎಂಬ ಪದವನ್ನು ಹಾಡಿ ಆ ಜನರಿಗೆ ಉಪದೇಶ ಮಾಡಿದರು. ಕನಕದಾಸರ ಉಪದೇಶವನ್ನು ಕೇಳಿದ ಜನರು ಆ ದಿನವೇ ಪ್ರಾಣಿಗಳ ಬಲಿಯನ್ನು ಕೊಡುವ ದುರಾಚಾರವನ್ನು ಬಿಟ್ಟು ಸಾತ್ವಿಕ ರೀತಿಯಿಂದ ತಮ್ಮ ಉತ್ಸವವನ್ನು ನೆರವೇರಿಸಿದರು.

ಕನಕದಾಸರ ಉಪದೇಶದಿಂದ ಕುರುಬರಲ್ಲಿ ಮಾತ್ರ ಸುಧಾರಣೆಯಾಯಿತೆಂದಲ್ಲ. ಸಕಲ ಶೂದ್ರ ಜಾತಿಯವರೂ ಹೆಚ್ಚು ಪ್ರಮಾಣದಿಂದ ತಮ್ಮಲ್ಲಿದ್ದ ಅನಾಚಾರಗಳನ್ನು ತ್ಯಜಿಸಿದರು. ಮನೆ ಮನೆಗೆ ಸೂಳೆಯರನ್ನು ಬಿಡುವುದು, ಮದ್ಯಪಾನ ಮಾಡುವುದು, ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವುದು, ಈ ಮೂರೂ ಕನಕದಾಸರ ಕಾಲದಲ್ಲಿ ಬಲುಮಟ್ಟಿಗೆ ಕಡಿಮೆಯಾದವು.

---

3 ಆವೇಶ ಬಂದು ದೇವರ ಮುಂದೆ ಕುಣಿಯುವವರು. 4 ತುಚ್ಛರಾದ, 5 ಭಿಕ್ಷುಕರು 6 ಗುಳ್ಳದ ಕಾಯಿ 7 ಒಂದು ಬಗೆಯ ಸೊಪ್ಪು 8 ಹೆಂಡದ ಕೊಡ

ಕನಕದಾಸರ ಉಪದೇಶವು ಅವರ ನಂತರವೂ ಕೆಲವು ಕಾಲ ಸಮಾಜದಲ್ಲಿ ವ್ಯವಸ್ಥಿತ ರೀತಿಯಿಂದ ನಡೆದು ಬಂದಿದ್ದರೆ ಮತ್ತೆ ಮೇಲ್ಕಂಡ ಮೂರು ದುರಾಚಾರಗಳೂ ತಲೆಯೆತ್ತುತ್ತಿರಲಿಲ್ಲ. ಸದುಪದೇಶಗಳು ಒಮ್ಮೆಯಾದರೆ ಸಾಲುವುದಿಲ್ಲ. ಮೇಲೆ ಮೇಲೆ ಆಗುತ್ತಲೇ ಇರಬೇಕು. ದುರ್ಮಾರ್ಗಕ್ಕೆ ಉಪದೇಶಕರು ಬೇಕಾಗುವುದಿಲ್ಲ. ಸನ್ಮಾರ್ಗಕ್ಕೆ ಉಪದೇಶಕರು ಎಷ್ಟು ಮಂದಿಯಿದ್ದರೂ ಸಾಕಾಗುವುದಿಲ್ಲ.

ಕನಕದಾಸರ ತಿರುಪತಿ ಯಾತ್ರೆ

ಕನಕದಾಸರೊಡನೆ ವಿಚಿತ್ರ ವಿನೋದಗಳಿಂದ ವಿಹರಿಸುವ ಶ್ರೀ ಹರಿಯು – ‘ ಎಲೋ ಕನಕಾ, ನೀನು ನನ್ನ ಮದುವೆಗೆ ಬಾ ’ ಎಂದು ಕರೆದನು. ಕನಕನು – ‘ದೇವ ನಿನಗೆ ಮದುವೆಯೇ ? ಸೀತಾ–ಕಲ್ಯಾಣವೆನಲು ಇದು ತ್ರೇತಾಯುಗವೇ ? ರುಕ್ಮಿಣೀ ಕಲ್ಯಾಣವೆನಲು ಇದು ದ್ವಾಪರಯುಗವೇ ? ಈ ಕಲಿಯುಗದಲ್ಲಿ ನಿನಗೆ ಹೆಣ್ಣು ಕೊಡುವ ವರ್‍ಯಾರು ? ನಿನ್ನ ಅವತಾರವೆಲ್ಲಿ ? ಇದನ್ನಾದರೂ ತಿಳಿಸು ’ ಎಂದನು. ಹರಿಯು – ‘ ಕನಕಾ, ತಿರುಪತಿಗೆ ಬಾರೋ ! ಪದ್ಮಾವತೀ ಕಲ್ಯಾಣ ಮಹೋತ್ಸವಕ್ಕೆ ’ ಎಂದನು. ಕನಕನ ಪಯಣ ಸಾಗಿತು. ಏಕತಾರಿಯನ್ನು ಬಗಲಿಗೆ ಕಟ್ಟಿಕೊಂಡು, ಪಾದಚಾರಿಯಾಗಿ ನಡೆದನು. ಆ ಕಾಲದಲ್ಲಿದ್ದ ತಿರುಪತಿಯ ಮಹಂತನು, ಮಹಾಭಕ್ತನಾಗಿದ್ದುದರಿಂದ, ಆತನ ಸ್ವಪ್ನದಲ್ಲಿ – ‘ ನನ್ನ ಭಕ್ತ ಕನಕದಾಸನು ಬರುವನು. ಅವನನ್ನು ಮರ್ಯಾದೆಯಿಂದ ಬರಮಾಡು ’ ಎಂದು ಶ್ರೀನಿವಾಸನ ಪ್ರೇರಣೆಯಾಯಿತು. ಮಹಂತನು ದೇವಸ್ಥಾನದ ಮರ್ಯಾದೆಗಳಿಂದ ಸಹಿತನಾಗಿ, ದಾಸರನ್ನೆದುರುಗೊಳ್ಳಲು, ಬೆಟ್ಟದಿಂದ ಇಳಿದು ಬರುತ್ತಿದ್ದನು. ಏಕತಾರಿಯನ್ನು ಮೀಟುತ್ತಾ ಭಜನೆಮಾಡಿಕೊಂಡು, ಬರುತ್ತಿರುವ ಕನಕದಾಸರನ್ನು ನೋಡಿ, ವ್ಯಕ್ತಿಜ್ಞಾನವಾಗದೆ **ಕನಕದಾಸರು** ಎಲ್ಲಿ ಬರುತ್ತಿರುವರು ಎಂದು ಪ್ರಶ್ನೆ ಮಾಡಿದನು. ದಾಸರು—

“ ಮುಂದೆ ಬರುವವರಿಗೆ ಹಿಂದೆ — ಹಿಂದೆ ಬರುವವರಿಗೆ ಮುಂದೆ ”

ಎಂಬುದಾಗಿ ಉತ್ತರ ಕೊಟ್ಟರು.

ಮಹಂತನು, ಇವನ್ಯಾರೋ ಹುಚ್ಚು ಮಾತನಾಡುವನೆಂದು ಮುಂದೆ ಹೆಜ್ಜೆಯಿಟ್ಟನು. ಮನಸ್ಸಿನಲ್ಲಿ ಏಕೋ ಕಳವಳವಾಗಿ, ಮತ್ತೆ ಅವನನ್ನೇ ಕರೆದು – ‘ **ನೀವು ಯಾತರವರು ?** ಎಲ್ಲಿಂದ ಬಂದಿರಿ ?’ ಎಂದು ಪ್ರಶ್ನೆ ಮಾಡಿದನು. ಕನಕದಾಸರು ಏಕತಾರೆಯನ್ನು ಮೀಟುತ್ತಾ !

ಕೇದಾರಗೌಳ - ಅಟ್ಟತಾಳ

ಯಾತರವನೆಂದುಸುರಲಿ–ಜಗನ್ನಾಥ ಮಾಡಿದನು ನರಜನ್ಮವ ಪ.
ಇಂದ್ರಿಯದ ಸೂತಕ ಮಲಮೂತ್ರ ದುರ್ಗಂಧ
ದಿಂದಲಿ ಬಂದೆನು ನಿಜವರಿಯದೆ

ಬಂದದ್ದು ಮೂತ್ರಕುಳಿ ತಿಂದದ್ದು ಹೊಲೆಮಾಂಸ
ಹಿಂದೆ ಹೀಗಿರಲದಿನ್ನೇತರ ಕುಲವಯ್ಯ ೫
ಒಂಭತ್ತು ಯಜ್ಞದಿಂದೊಸರುವ ಹೊಲಸಿನ
ಬೊಂಬೆತುಂಬಿ ತುಳುಕಾಡುತ್ತಲಿ
ಇಂಬಿಲ್ಲದೇ ತನುವನುಳಿಸಿ ಕೊಂಡಿರುವಂಥ
ಡಂಭತನಕಿನ್ನಾವ ಕುಲವಯ್ಯ ಹೇಳಯ್ಯ ೬
ಎಲುವು ನರಗಳು ಬಿಗಿದ ಪಂಜರದ ಕರುಳಿನ
ಹೊಲೆದೇಹದವಯವವನೇಂ ಪೇಳಲಿ
ಚೆಲುವತೊಗಲಿನ ಹೊದ್ದಿಸಿರುವಂಥ ಬಲುಭ್ರಾಂತ
ಹೊಲೆಯಗಿನ್ನ್ಯಾತರ ಕುಲವಯ್ಯ ಹೇಳಯ್ಯ ೭
ಹಚ್ಚಡದ ಮೇಲಿನ್ನು ರೊಚ್ಚು ಬಿದ್ದಂತೆ ತನು
ಮುಚ್ಚಿಕೊಂಡಿದ್ದು ಹೆಣಗಾಡುತ
ನಿಶ್ಚಿಂತ ನಿರ್ದೋಷ ನೆಲೆಯಾದಿ ಕೇಶವನ
ಹುಚ್ಚೇರಿದೆನಗೆ ಇನ್ನಾತರ ಕುಲವಯ್ಯ ೮

ಎಂಬುದಾಗಿ ಹಾಡಲು, ಮಹಂತನು ಇವನೆಲ್ಲೋ ಹುಚ್ಚನ ಹಾಗೆ ಕಾಣುತ್ತಾನೆ; ಮುಂದೆ ಹೋಗೋಣವೆಂದು ಗಾಳಿಗೋಪುರದವರೆಗೂ ನಡೆದನು. ಸಂಜೆಯಾದರೂ ಕನಕದಾಸರ್‍ಯಾರೆಂದು ಗೊತ್ತಿಗೆ ಬರಲಿಲ್ಲ. ಹಿಂದಿರುಗಿ ತನ್ನ ಮಠಕ್ಕೆ ಬಂದುಬಿಟ್ಟನು.

ಇತ್ತ ಮುಂದೆಯೇ ನಡೆದಿದ್ದ ಕನಕದಾಸರು ದೇವಾಲಯಕ್ಕೆ ಬಂದರು. ಜನ ಸಂದಣಿಯಲ್ಲಿ ಇಳಿಯುವುದಕ್ಕೆ ಸ್ಥಳ ಸಹ ದೊರೆಯಲಿಲ್ಲ. ನೀನಾರೆಂದು ಗುರ್ತಿಸುವ ಜನರು ದೊರೆಯಲಿಲ್ಲ. ದೇವರ ದರ್ಶನ ಮಾಡಬೇಕೆಂದರೆ ಅವಕಾಶ ದೊರೆಯಲಿಲ್ಲ. ಸಂಜೆಯಾದರೂ ತುತ್ತನ್ನ ದೊರೆಯಲಿಲ್ಲ. ಛತ್ರಿಯಲ್ಲಿ ನಡುಗುತ್ತಾ – 'ಭಲಾ, ಇದೋ ನಿನ್ನ ಮದುವೆಯ ವೈಭವ? ಆಗಲಿ' ಎನ್ನುತ್ತಾ—

ಪೂರ್ವಿ—ಅಟ್ಟತಾಳ

ಬಂದೆನಯ್ಯ ಗೋವಿಂದಶೆಟ್ಟಿ–ಇಂದು ನಿನ್ನ ಮದುವೆಗೆ ಬಾರೆಂದೆನೆ ಪ.
ಅಪ್ಪ ಅತಿರಸ ತುಪ್ಪ ಚನ್ನಪಾಲು
ಒಪ್ಪುವ ಸಕ್ಕರೆ ಯಾಲಕ್ಕಿಯು
ಅಪ್ಪುರೂಪವಾದ ಕಜ್ಜಾಯವನೆಲ್ಲ
ಚಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ ೧
ಒಡೆದ ಮಡಕೆಯೆಲ್ಲ ಅರೆದು ನಾಮವಮಾಡಿ
ತಡೆಯದೆ ಒಂದೊಂದು ಕಾಸಿಗೆ ಕೊಡುವ
ಒಡಲು ತುಂಬೆ ಮಿಕ್ಕ ಭಕ್ತರ ನೋಡದೆ
ಒಡವೆಯುಗಳಿಸುವ ಲೋಭಿಶೆಟ್ಟಿ ೨

ಶೇಷಗಿರಿಯ ಮೇಲೆ ಇರುವ ತಿಮ್ಮಶೆಟ್ಟಿ
ದೇಶ ದೇಶಕ್ಕೆಲ್ಲಾ ಪ್ರಸಿದ್ಧ ಶೆಟ್ಟಿ
ಆಶೆಯ ತೋರಿ ಮುಡುಪನ್ನೆ ತರಿಸುವ
ಕೇಶವ ನಾರಾಯಣ ವೆಂಕಟಶೆಟ್ಟಿ ೩

ಎಂಬುದಾಗಿ ದೇವರನ್ನು ಪರಿಹಾಸ್ಯಮಾಡಿ ಹಾಡಿರುವರು.

ಸಮರಾತ್ರಿಯಾಯಿತು. ಹೊಟ್ಟೆಗೆ ಅನ್ನವಿಲ್ಲ. ಹೊದೆಯಲು ಬಟ್ಟೆಯಿಲ್ಲ. ಜನರ ಸದ್ದಡಗಿತು. ಶ್ರೀ ಹರಿಯು ಓರ್ವ ಪರಿಚಾರಕನ ವೇಷತಾಳಿ ದಾಸರ ಬಳಿಗೆ ಬಂದನು. ಬಿಸಿಬಿಸಿಯಾದ ಓಗರಗಳನ್ನೂ ಬಿಸಿ ಹಾಲನ್ನೂ ಕುಡಿಯಲು ಕೊಟ್ಟನು. ಅನ್ನಾತುರರಾಗಿದ್ದ ದಾಸರು ಎಲ್ಲವನ್ನೂ ಗಬಗಬನೆ ತಿಂದರು. ಪರಿಚಾರಕನು ನಾಲ್ಕು ಮಡಿಕೆ ಮಡಿಸಿದ ಜರತಾರಿಯ ಧೋತ್ರವನ್ನು ಹೊದಿಯುವುದಕ್ಕೆ ಕೊಟ್ಟನು. ಆಗ ದಾಸರು ಚೇತರಿಸಿಕೊಂಡು ನೀನ್ಯಾರೆಂದು ಕೇಳಿದರು. – 'ನಾನೇ!' ಎನ್ನುತ್ತಾ ಪರಮಾತ್ಮನು ಮಾಯವಾದನು. ಪರಮಾತ್ಮನ ಮಾಯೆಯನ್ನು ತಿಳಿಯಲಾರದೆ ಕನಕ ದಾಸರು ಗಾಢನಿದ್ರೆ ಮಾಡಿದರು. ಬೆಳಿಗ್ಗೆ ಹತ್ತು ಘಂಟೆಯಾದರೂ ಏಳಲಿಲ್ಲ.

ಅತ್ತ ದೇವಾಲಯದಲ್ಲಿ ದೇವರಿಗೆ ಉಡಿಸಿದ್ದ ಧೋತ್ರವೇ ಇಲ್ಲದಿರಲು, ಮಹಂತನ ವರೆಗೂ ವಿಚಾರ ಮುಟ್ಟಿತು. ದೇವಾಲಯವನ್ನು ಪ್ರವೇಶಿಸಿ ದೇವರು ಉಟ್ಟವಸ್ತ್ರವನ್ನು ಕದ್ದವರ್ಯಾರೆಂದು ಹುಡುಕುತ್ತಿರಲು, ಒಂದು ಮಂಟಪದಲ್ಲಿ ಆ ಧೋತ್ರವನ್ನೇ ಹೊದ್ದು ಕೊಂಡು ನಿದ್ರಿಸುತ್ತಿರುವ ಕನಕದಾಸರು ಸಿಕ್ಕಿದರು. 'ಹತ್ತು ಘಂಟೆಯಾದರೂ, ದೇವರ ಧೋತ್ರವನ್ನು ಕದ್ದು ಹೊದ್ದುಕೊಂಡು ನಿದ್ರಿಸುತ್ತಿರುವೆಯಾ?' ಎಂದು ದೂತರು ಕಳಿ ಗಳಿಂದ ಪ್ರಹರಿಸಿದರು. ದಾಸರು ಧೋತ್ರವನ್ನು ನೋಡಿ, 'ಇದು ನಿನ್ನ ಮಾಯವೋ' ಎಂದು ಪುಳಕಿತರಾಗಿ ಶ್ರೀನಿವಾಸನನ್ನು ಸ್ತುತಿಸಿದರು. 'ನಿನ್ನನ್ನು ಗೋವಿಂದಶೆಟ್ಟಿ, ನಿನ್ನನ್ನು ಲೋಭಿ' ಎಂದು ಮೊದಲಾಗಿ ಬಿಡುನುಡಿಯಾಡಿದುದಕ್ಕೆ ಇದು ಫಲವೋ ಎಂದುಕೊಂಡರು. ಪೆಟ್ಟುಗಳನ್ನು ತಾಳಲಾರದೆ ಮತ್ತೆ ಗೋವಿಂದನ ಮೊರೆಬಿದ್ದು ಸ್ತುತಿ ಸಿದರು.

ಪದ - 'ತುತಿಸಬಲ್ಲೆನೆ ನಾನಿನ್ನ' - ಎಂಬಂತೆ, ಅಟ್ಟತಾಳ

ಗೋವಿಂದ ಸಲಹೆನ್ನನು–ಸದಾನಂದ, ಗೋವಿಂದ ಸಲಹೆನ್ನನು ಪ.

ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ
ಸೇವಕರಡಿಯ ಸೇವಕನೈಯ ಗೋವಿಂದ ಅ. ಪ.

ತಮನ ಸಂಹರಿಸಿ ವೇದವತಂದ ಗೋವಿಂದ
ಅಮರರಿಗಮೃತ ಪಾನವನಿತ್ತ ಗೋವಿಂದ
ರಮಣಿಯತಂದ ವರಹರೂಪಿ ಗೋವಿಂದ
ಭ್ರಮಿಸಿ ಕಂಭದೊಳುದುಭವಿಸಿದ ಗೋವಿಂದ
ಕ್ಷಮೆಯನಳೆದ ಬ್ರಹ್ಮಚಾರಿಯೆ ಗೋವಿಂದ

ಸಮರದೊಳವಿಳರಾಯರಕೊಂದ ಗೋವಿಂದ
ಕಮಲಾಕ್ಷ ಕಡಲಕಟ್ಟಿದ ಧಿಟ್ಟ ಗೋವಿಂದ
ಮಮತೆಯೊಳೆಳೆಯು ಗೋಗಳಕಾಯ್ದ ಗೋವಿಂದ
ರಮಣಿಯರ್ಗೊಲಿದು ಬತ್ತಲೆನಿಂದೆ ಗೋವಿಂದ
ವಿಮಲತುರುಗವನೇರಿದ ಕಲ್ಕಿ ಗೋವಿಂದ

ನಮಿಪರಿಗೊಲಿವೆ ಗೋವಿಂದ – ನಿಂದಿಪರಿಗೆ
ಶಮನನಂತಿಹೆ ಗೋವಿಂದ – ಎಲ್ಲರೊಳಿಪ್ಪ
ಅಮಿತಮಹಿಮ ಗೋವಿಂದ – ಇಂಗಡಲೊಳು
ಗಮನನಿರ್ಜಿತ ಗೋವಿಂದ – ಅಚ್ಯುತ ಸರ್ವೋ
ತ್ತಮನೆ ಚಿನ್ಮಯ ಗೋವಿಂದ – ನಿಶ್ಚಲ ಭಕ್ತಿ
ಕ್ರಮವ ಬೋಧಿಸೊ ಗೋವಿಂದ – ಪಾಪವನೆಲ್ಲ
ಶಮನಗೊಳಿಪ ಗೋವಿಂದ – ನಮೋ ಲಕ್ಷ್ಮೀ
ರಮಣ ದಶಾವತಾರವ ತಾಳಿದ ಹರಿಯೇ ೧

ಮನವೆನ್ನ ಮಾತಕೇಳದುಕಾಣೊ ಗೋವಿಂದ
ಮನವಗೆಲ್ಲುವಬಗೆ ಎನಗಿಲ್ಲ ಗೋವಿಂದ
ಕನಸಿನಂತಹದೇಹ ಸ್ಥಿರವಲ್ಲ ಗೋವಿಂದ
ಬಿನುಗುಬುದ್ಧಿಗಳನ್ನು ಬಿಡಿಸಯ್ಯ ಗೋವಿಂದ
ನೆನಹು ನಿನ್ನೊಳಗಿಟ್ಟು ಸಲಹಯ್ಯ ಗೋವಿಂದ
ನೆನೆವ ದಾಸರ ಮನದೊಳಗಿಹ ಗೋವಿಂದ
ವನಜಲೋಚನ ನಾನಿನ್ನವನಯ್ಯ ಗೋವಿಂದ
ಘನಮಹಿಮನೆ ನಿನ್ನ ಮರೆಹೊಕ್ಕೆ ಗೋವಿಂದ
ಮುನಿಗಳ ಮನದೊಳು ಮಿನುಗುವ ಗೋವಿಂದ
ನಿನಗಿಲ್ಲದಪಕೀರ್ತಿ ಎನಗೇನೊ ಗೋವಿಂದ

ಜನನರಹಿತ ಗೋವಿಂದ – ನಿನ್ನಡಿಗಳ
ನೆನಹುಕೊಡೋ ಗೋವಿಂದ – ದುರ್ವಿಷಯ ವಾ
ಸನೆಯ ಬಿಡಿಸೊ ಗೋವಿಂದ – ಕುತ್ಸಿತ ಕೆಟ್ಟ
ತನವ ಬಿಡಿಸೊ ಗೋವಿಂದ – ಸದ್ಗುಣವೆಂಬ
ಧನವ ತುಂಬಿಸೊ ಗೋವಿಂದ – ಇದಕೆ ಬಡ
ತನವೆ ನಿನಗೆ ಗೋವಿಂದ – ಸದಾ ನಿನ್ನ
ಘನ ಸ್ಮರಣೆಕೊಡು ಗೋವಿಂದ – ಸದಾನಂದ
ಸನಕ ಸನಂದನಾರ್ಚಿತಪಾದ ಹರಿಯೇ ೨

ನರಬೊಂಬೆಗಳಮಾಡಿ ಕುಣಿಸುವೆ ಗೋವಿಂದ
ನರರ ನೋಡಿ ನೋಡಿ ನಗುತಿರ್ಪ ಗೋವಿಂದ
ಅರಿದೆನೆಂಬರಿಗಂತ್ಯ ತೋರದೋ ಗೋವಿಂದ
ಅರಿಯದಂಖಿಳರೊಳಡಗಿರ್ಪ ಗೋವಿಂದ
ಅರಿಯಾಡಂಬರಗಳಿಗಳವಡದ ಗೋವಿಂದ
ಪರಮಪಾವನನೆಂಬ ಬಿರುದುಳ್ಳ ಗೋವಿಂದ
ಪರಮಪುರುಷ್ಕಪುರುಷೋತ್ತಮ ಗೋವಿಂದ
ಪರಬ್ರಹ್ಮ ಪರಮಪರಾತ್ಪರ ಗೋವಿಂದ
ಮರೆಹೊಕ್ಕ ಭಕ್ತರ ಸಲಹುವ ಗೋವಿಂದ
ಕರಿರಾಜ ಕರೆಯಲೊದಗಿಬಂದ ಗೋವಿಂದ

ಗರುಡಗಮನ ಗೋವಿಂದ – ಕಿನ್ನರಸಿದ್ಧ
ಗರುಡಸನ್ನುತ ಗೋವಿಂಧ – ಅಪರಿಮಿತ
ಕರುಣಾಸಾಗರ ಗೋವಿಂದ – ಅರಿಯದಂಥ
ಪರಮಜ್ಯೋತಿಯೆ ಗೋವಿಂದ – ಗಂಗೆಯಪೆತ್ತ
ಚರಣನಿರ್ಮಲ ಗೋವಿಂದ – ತೆತ್ತೀಸಕೋಟ
ಸುರರ ಪೊರೆವ ಗೋವಿಂದ – ಶ್ರೀ ವೈಕುಂಠ
ಪುರದೊಳಗಿಹ ಗೋವಿಂದ – ಅಚ್ಯುತಾನಂತ
ತಿರುಪತಿ ನೆಲೆಯಾದಿಕೇಶವ ಹರಿಯೇ ೩

ಈ ಪ್ರಕಾರ ಸ್ತೋತ್ರಮಾಡಲು, ದಾಸರ ಮೈಮೇಲೆ ಬಿದ್ದ ಪೆಟ್ಟುಗಳು ಶ್ರೀನಿವಾಸನ ಮೂರ್ತಿಯ ಮೇಲೆ ಆಕಾರ ತಾಳಿದುವು. ಮಹಂತನಿಗೆ ಪೆಟ್ಟು ತಿಂದವನ್ಯಾರೋ ಮಹಾತ್ಮನಿರಬೇಕೆಂಬ ಪೂಜ್ಯಭಾವನೆ ಹುಟ್ಟಿತು. ಬಾಲಕನೊಬ್ಬನ ಮೇಲೆ ಆವೇಶ ಬಂದು – 'ದಾಸರನ್ನು ಬಿಡಿರಿ. ಸ್ತೋತ್ರವನ್ನ ಪರಿಗೇ ಕೊಡಿರಿ, ಅವರನ್ನು ಸನ್ಮಾನಿಸಿರಿ' ಎಂದು ಭಗವದಾಜ್ಞೆಯಾಯಿತು.

ಒಡನೆಯೇ ಮಹಂತನು, ಈ ಸತ್ಪುರುಷರೇ ಕನಕದಾಸರಿರಬೇಕೆಂದರಿತು, ದೇವಾಲಯದ ಛತ್ರಚಾಮರ ಮೊದಲಾದ ಮರ್ಯಾದೆಗಳಿಂದ ಸನ್ನಿಧಿಗೆ ಕರೆತಂದನು. ಸ್ವಾಮಿಯ ಸಮುಖದಲ್ಲಿ ನಿಲ್ಲಿಸಿ, ಏಕಾಂತಸೇವೆ ಮಾಡಬಹುದೆಂದು ಕನಕದಾಸರಿಗೆ ಹೇಳಿ ತೆರೆಯನ್ನು ಹಾಕಿಸಿದನು.

ಆಗ ದಾಸರು – 'ಸಾಕು ಸಾಕು, ನಿನ್ನ [illegible]'ಯೆಂದು ಶ್ರೀನಿವಾಸನನ್ನು ಮೂದಲಿಸಿದರು. ಸ್ವಾಮಿಯು ನಿಜರೂಪದಿಂದ ನಗೆ ವಚನಗಳಾಡಿ ದಾಸರನ್ನು ಸಂತೈಸಿದನು. ಆ ಕಾಲದಲ್ಲಿ ಕನಕದಾಸರು ನಿಂದಾಸ್ತುತಿ ರೂಪವಾಗಿ ಸ್ವಾಮಿಯ ಸಮ್ಮುಖದಲ್ಲಿ,

ಕಲ್ಯಾಣಿ—ಅಟ್ಟತಾಳ

ನಿನ್ನ ನಾನೇನೆಂದನೋ ವೆಂಕಟರಾಯ
ಎನ್ನ ನೀ ಸಲಹಬೇಕೋ ಪ.
ನಿನ್ನ ನಾನೇನೆಂದೆ ನಿಗಮಗೋಚರಸ್ವಾಮಿ
ಪನ್ನಂಗಶಯನ ಪಾಲ್ಗಡಲೊಡೆಯನೆ ಕೃಷ್ಣ ಅ.

ಘೋರ ಸೋಮಕ ವೇದಚೋರ ತಮನ ಸೀಳಿ
ವಾರಿಧಿಗಿಳಿದು ಪರ್ವತವನೆತ್ತಿ
ಧಾರುಣಿಯನು ಕದ್ದ ದನುಜವಲ್ಲಣನಾದ
ನಾರಸಿಂಹ ನಿನಗೆ ಶರಣೆಂದೆನಲ್ಲದೆ

ನೀರ ಪೊಕ್ಕವನೆಂದೆನೆ–ಬೆನ್ನಿಲಿ ಘನ
ಭಾರಪೊತ್ತವನೆಂದೆನೆ–ಮಣ್ಣು ನಗೆದು
ಬೇರ ಮೆದ್ದವನೆಂದೆನೆ–ಹಿರಣ್ಯಕನು
ದರ ಬಗೆದ ನರಹರಿಯೆಂದೆನಲ್ಲದೆ ೧

ಧರೆಯ ದಾನವಬೇಡಿ–ಶಿರವ ಅಡಿಯೊಳೊತ್ತಿ
ಪರಶುಪಿಡಿದು ಕ್ಷತ್ರಿಯರ ಸವರಿ
ಚರಣದಿ ಪಾಷಾಣ ಪೆಣ್ಣುಮಾಡಿದ ಪುಣ್ಯ
ಚರಿತಯಾದವಪತಿ ಶರಣೆಂದೆನಲ್ಲದೆ

ಶಿರುಕಹಾರವನೆಂದನೆ–ಹೆತ್ತತಾಯ
ಕೊರಳಕೊಯ್ದವನೆಂದನೆ–ವನವಾಸಕ್ಕೆ
ಭರದಿ ಚರಿಸಿದನೆಂದೆನೆ–ಪೂತನಿಯನು
ಸರಕುಮಾಡದೆ ಕೊಂದ ಹರಿಯೆಂದೆನಲ್ಲದೆ ೨

ಚಿತ್ತಜಕೋಟಿಲಾವಣ್ಯ ತೇಜದಿಬಂದು
ಉತ್ತಮ ಸ್ತ್ರೀಯರ ವ್ರತವಳಿದು
ಮತ್ತೆ ಕಲ್ಕಿಯಾಗಿ ಯವನರ ಕೆಡಹಿದ
ಹತ್ತಾವತಾರದ ಹರಿಯೆಂದೆನಲ್ಲದೆ

ಬತ್ತಲಿದ್ದವನೆಂದೆನೆ–ತೇಜಿಯನೇರಿ
ಒತ್ತಿ ಆಳ್ದವನೆಂದೆನೆ–ಬಾರಿಬಾರಿಗು
ಮತ್ತೆ ಪುಟ್ಟದನೆಂದೆನೆ–ಆದಿಕೇಶವ
ಭಕ್ತವತ್ಸಲನೆಂದು ಪೊಗಳಿದೆನಲ್ಲದೆ ೩

ಎಂಬ ಪದವನ್ನು ಹಾಡಿದರು.

ಕೆಳಗೆ ಕಂಡ ಪದವು ಕನಕದಾಸರು ವ್ಯಾಸರಾಯರ ಬಳಿ ಶಿಷ್ಯತ್ವವಹಿಸಿದ್ದರ ಸೂಚನೆಯನ್ನೂ, ಅವರೇ ಹೇಳಿಕೊಂಡಿರುವ ತಮ್ಮ ಪೂರ್ವ ಚರಿತ್ರೆಯನ್ನೂ ತಿಳಿಸುತ್ತದೆ.

ಮೋಹನ - ಜಂಪೆ

ಹರಿ ನಿನ್ನ ಪದಕಮಲ ಕರುಣದಿಂದಲಿ ಎನಗೆ
ದೊರೆಕಿತೀ ಗುರುಸೇವೆ ಹರಿಯೆ ಪ.
ಗುರುಮಂತ್ರ ಮೂಲ ಸದ್ಗುರುಮೂರ್ತಿ ನೀನಾಗಿ
ಬಳಿಯ ಸೇರಿಸಿದೆ ಹರಿಯೇ ಅ.

ಮೊದಲು ನಿನ್ನುಪದೇಶಕೆದುರಿಸೀ ತಿರುಗೆ ನೀ
ನದನೆಲ್ಲ ಕ್ಷಮಿಸಿದೆಯೊ ಹರಿಯೇ
ಸುದತಿ ಮಕ್ಕಳಮೋಹ ಮದವೇರಿ ನಾನಿರಲು
ಪದುಮಾಕ್ಷ ನೀಬಂದು ಪದೋಪದಿಗೆ ಸಾರಿದೆಯೋ ೧

ಅರಿಗಳು ದಂಡೆತ್ತಿಬರಲು ನಾನವರೊಡನೆ
ಪರಿಪರಿ ಹೋರಾಡುತಿರಲು
ದುರುಳರೆನ್ನನು ಜೈಸಿ ಹರಿದಟ್ಟಿ ಬಂದೆನ್ನ
ಧರೆಗುರುಳಿಸಿದೆಯೊ ಹರಿಯೇ ೨

ಸಾರಿಹೊರಡುವ ಛತ್ರಿ ಭೇರಿ ತಮ್ಮಟೆಗಳು
ಭೋರೆಂದು ವಾದ್ಯಗಳು ಹರಿಯೇ
ವೀರರಾಹುತ ಬಲದ ಭಾರವನು ತರಿದಹಂ
ಕಾರವನು ಮುರಿದೆ ಹರಿಯೇ ೩

ದೊರೆತನವ ಬಿಡಿಸಿ ಸುಸ್ಥಿರಮಾರ್ಗವನು ತೋರಿ
ಪರಿಪಾಲಿಸಿದೆಯೆನ್ನ ಹರಿಯೇ
ದುರುಳತನದಲಿ ಜನರ ಪರಿಪರೀ ಬಾಧಿಸಿ
ಸೂರೆಗೊಂಬುದು ಪರೀಹಾರವಾಯಿತು ಹರಿಯೇ ೪

ನೀರು ಶುಕ್ತಿಯಸೇರಿ ಘೋರ ಮುತ್ತಾದ ಪರಿ
ಸೇರಿಸೋ ನಿನ್ನಂಘ್ರಿ ಹರಿಯೇ
ಆರಿಗಂಜುವನಲ್ಲ ಅಧಿಕಪುರಿ ಕಾಗಿನೆಲೆಯಾದಿ
ಕೇಶವರಾಯನಾದ ಶ್ರೀ ಹರಿಯೇ ೫

ದಾಸರ ಮಾತುಗಳು ಅನುಭವದ ಮಾತುಗಳು. ಯುಕ್ತಿಗೆ ಸಿಲುಕುವವಲ್ಲ. ವಾಕ್ಯಾರ್ಥಗಳಿಗೆ ಬರುವವಲ್ಲ. ಸಮುದ್ರದ ಆಳವು ಮುಳುಗಿದವರಿಗೇ ತಿಳಿಯುವುದು.

ಸಕ್ಕರೆಯು ಸಿಹಿಯಾಗಿದೆಯೆಂದು ಹೇಳಬಹುದು; ಸೀ ಹೇಗಿದೆಯೆಂದು ಕೇಳಿದರೆ ಸವಿದು ನೋಡಬೇಕಾಗುವುದು. ದಾಸರಪದಗಳಾದರೂ ಜ್ಞಾನಪ್ರಧಾನಗಳಲ್ಲ; ಶಬ್ದಪ್ರಧಾನಗಳಲ್ಲ, ಅಲ್ಲಿ ನೋಡಬೇಕಾದುದು ಅರ್ಥ. ಅಲ್ಲಿ ಮಾಡಿಕೊಳ್ಳಬೇಕಾದ್ದು ಅನುಭವ. ದಾಸ ಸಾಹಿತ್ಯವು ಪಾಮರ ಸಾಹಿತ್ಯವಲ್ಲ, ಅದು ಪಂಡಿತರ ಸಾಹಿತ್ಯವೂ ಅಲ್ಲ. ಈರ್ವರಿಗೂ ನಿಲುಕದ ಅನುಭವ ಸಾಹಿತ್ಯ !

೩

ಕನಕದಾಸರು ತಮ್ಮ ಜೀವಿತದ ಬಹುಭಾಗವನ್ನು ತಿರುಪತಿಯಲ್ಲಿ ಕಳೆದಂತೆ ಕಾಣುತ್ತದೆ. ಅವರಿದ್ದಾಗ ತಿರುಪತಿಯಲ್ಲಿ ಒಂದಿಲ್ಲೊಂದು ಮಹಿಮೆಯು ಕಂಡುಬಂದಿದೆ. ಭಗವದ್ಭಕ್ತರೆಂದರೆ ಪ್ರವಾಹದಲ್ಲಿರುವ ವಿದ್ಯುಚ್ಛಕ್ತಿಯನ್ನು ಕೇಂದ್ರೀಕರಿಸುವ ಯಂತ್ರಗಳಿದ್ದಂತೆ! ಭಾಗವತರ ಸಾನ್ನಿಧ್ಯದಿಂದ ಭಗವಂತನ ಮಹಿಮೆಯು ಅಭಿವ್ಯಕ್ತಿಗೆ ಬರುವುದು. ಭಾಗವತರ ಮಹಿಮೆಯು ಬೇರೇ ಮಾತಿನಿಂದ ಕರೆಯುವ ಭಗವಂತನ ಮಹಿಮೆಯೇ ! ಶ್ರೀಮದ್ಭಾಗವತದಲ್ಲಿ ನವಯೋಗೀಶ್ವರರ ಮಹಿಮೆಯನ್ನು ಕಥನಮಾಡುವಾಗ ವ್ಯಾಸಭಗವಾನರು – 'ಏಷಾಂ ಸುಚರಿತಂ ಭಗವನ್ಮಹಿಮೋಪಬೃಂಹಿತಂ' ಎಂದು ಹೇಳಿರುತ್ತಾರೆ. ಭಕ್ತರ ಮಹಿಮೆಗಳು ಯಾವ ದೇಶ, ಯಾವ ಕಾಲ, ಯಾವ ಜನಾಂಗಗಳಲ್ಲಿ ನೋಡಿದರೂ ಒಂದೇ ತರಗತಿಯವುಗಳಾಗಿವೆ. ಕಲ್ಪಿತ ಕಥೆಗಳೆನ್ನಲು ಅವರವರೇ ಬರೆದಿಟ್ಟಿರುವ ಪದ-ಪದ್ಯಗಳು ಬಾಧಕಗಳಾಗಿವೆ. ಒಂದೊಂದು ವಿಷಯವನ್ನೂ ಪರಂಪರೆಯಾಗಿ ವಿವಿಧ ಜನರು ಹೇಳುವ ಕ್ರಮವು ಸ್ವಲ್ಪ ಹೆಚ್ಚು ಕಡಿಮೆ ಸಮಾನವಾಗಿದೆ. ಅಂದಮೇಲೆ ಸುಳ್ಳುಕಥೆಯೆನ್ನುವುದಕ್ಕೆ ಸಾಧ್ಯವಿಲ್ಲ. ಜನತೆಯ ಮನೋಭೂಮಿಕೆಯಲ್ಲಿ ಸಂಶಯಗಳು ಉತ್ಪನ್ನವಾಗುವುದೆಂದರೆ, ಹೇಳುವವರ ಅಥವಾ ಬರೆಯುವವರ ದೋಷವೆಂದು ಹೇಳಬೇಕಾಗುತ್ತದೆ. ಭಕ್ತರು ಮನಶ್ಶಕ್ತಿಯಿಂದ ಏನು ಬೇಕಾದರೂ ಮಾಡಬಲ್ಲರು. ಕಣ್ಣಿಗೆ ಕಾಣಿಸದಿದ್ದರೂ ಮನಶ್ಶಕ್ತಿಯು ಗ್ರಹಗಳ ಶಕ್ತಿಗೆ ಮೀರಿದ ಕೆಲಸವನ್ನು ಮಾಡಬಲ್ಲುದು. ಶ್ರೀ ಕೃಷ್ಣ ಚೈತನ್ಯರ ಚರಿತ್ರೆಯನ್ನೋದಿದರೆ ಅವರ ಮನಶ್ಶಕ್ತಿಯೆಂಥಾದ್ದೆಂಬುದು ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಪಂಢರಿನಾಥನ ಯಾತ್ರೆಗೆ ಹೊರಟ ಒಬ್ಬ ಅತ್ತೆಯ ಮನೆಯ ಸೊಸೆಯ ಕಥೆಯು ಅಪ್ರಾಸಂಗಿಕವಾಗುವುದಿಲ್ಲ, – ಅದರ ವಿವರವೆಂತೆಂದರೆ :—

ಪಂಢರಿನಾಥನ ಯಾತ್ರೆಯ ನಿಮಿತ್ತ ಒಂದು ಮಹಾರಾಷ್ಟ್ರ ಹರಿದಾಸರ ಗುಂಪು ಪ್ರಯಾಣ ಮಾಡುತ್ತಿತ್ತು. ಓರ್ವ ತರುಣಿಯು ಬಾವಿಗೆ ನೀರು ಸೇದುವುದಕ್ಕೆ ಬಂದಿದ್ದವಳು ದಾಸರ ಮೇಳವನ್ನು ನೋಡಿ, – 'ನೀವು ಭಜನೆಮಾಡುತ್ತಾ ಎಲ್ಲಿಗೆ ಹೋಗುವಿರಿ' ಎಂದು ಪ್ರಶ್ನೆ ಮಾಡಿದಳು. ದಾಸರು, –'ತಂಗೀ ನಾವು ಪಂಢರಿಗೆ ಏಕಾದಶೀ ದರ್ಶನಕ್ಕೆ ಹೋಗುವೆ'ವೆಂದು ಉತ್ತರವಿತ್ತು ತೆರಳಿದರು. ತರುಣಿಯು ನಾನೂ ಪಾಂಡುರಂಗನ ದರ್ಶನಕ್ಕೆ ಬರುವೆನೆಂದು ಬಾವಿಯ ಕಟ್ಟೆಯಮೇಲೆ ಹಗ್ಗವನ್ನೂ ಕೊಡಗಳನ್ನೂ ಇಟ್ಟು

ಅವರನ್ನು ಹಿಂಬಾಲಿಸಿದಳು. ಆಕೆಯ ಮನಶ್ಶಕ್ತಿ ಅಥವಾ ಭಕ್ತಿಭಾವಕ್ಕೆಮೆಚ್ಚಿ ಪಾಂಡು ರಂಗನು ಸೊಸೆಯ (ಆ ತರುಣಿಯ) ವೇಷವನ್ನು ತಾಳಿ, ನೀರಿನ ಬಿಂದಿಗೆಗಳನ್ನು ಹೊತ್ತು ಕೊಂಡು ಆ ಗೃಹಿಣಿಯ ಮನೆಗೆ ನಡೆದನು. ತರುಣಿಯು ಬರುವವರೆಗೆ ಅತ್ತೆಯ ಮನೆಯ ಸೊಸೆಯಾಗಿ ತಾನೇ ದುಡಿದನು. ಯಾತ್ರೆ ಮಾಡಿ ಹರಿದಾಸರ ಮೇಳದಲ್ಲಿ ಬರುತ್ತಿರುವ ತರುಣಿಯನ್ನು ನೋಡಿ ಶ್ರೀ ಹರಿಯು – 'ಇಗೋ ನಿನ್ನ ಹಗ್ಗ, ನಿನ್ನ ಕೊಡಗಳು ಜೋಪಾನ' ಎಂದು ಹೇಳಿ ಮಾಯವಾದನು. ಆಗ ಆ ತರುಣಿಗೆ ಪಾಂಡು ರಂಗನೇ ತನ್ನ ವೇಷದಿಂದ ಸೊಸೆಯಾಗಿದ್ದನೆಂಬ ಜ್ಞಾನೋದಯವಾಯಿತು. ಯಾತ್ರೆಗೆ ಹೋಗಿದ್ದ ಅದೇ ಗ್ರಾಮಸ್ಥರು ಮನೆಯವರ ಮುಂದೆ ನಿಮ್ಮ ಸೊಸೆಯು ಪಂಢರಪುರಕ್ಕೆ ಬಂದಿದ್ದಳೆಂದು ತಿಳಿಸಿದರು. ಅವರು ನಮ್ಮ ಸೊಸೆಯು ಮನೆಯನ್ನು ಬಿಟ್ಟು ಎಲ್ಲೂ ಹೋಗಿಲ್ಲವೆಂದರು. ವಿಚಾರವು ವಿಮರ್ಶೆಗೆ ಬಂದಿತು. ಸೊಸೆಯೇ – "ನಾನು ಪಂಢರ ಪುರಕ್ಕೆ ಹೋಗಿದ್ದುದು ನಿಜ. ಇದೋ ಪ್ರಸಾದ ತೆಗೆದುಕೊಳ್ಳಿ"ರೆಂದು,ಅತ್ತೆ ಮಾವಂದಿರಿಗೆ ನಮಸ್ಕಾರಮಾಡಿದಳು. ಇದುವರೆಗೆ ಸೊಸೆಯಾಗಿದ್ದವಳ್ಯಾರೆಂಬ ಯೋಚನೆ ಮನೆಯ ವರಿಗುಂಟಾಯಿತು. ಸೊಸೆಯು – ಪಾಂಡುರಂಗನೇ ಸೊಸೆತನ ಮಾಡಿದನೆಂದು ಭಕ್ತಿ ಪುಳುಕಿತಳಾಗಿ ಕಂಬನಿಗರೆಯುತ್ತಾ ನುಡಿದಳು. ಅತ್ತೆ ಮಾವಂದಿರು – 'ತಾಯೇ, ನೀನೇ ಧನ್ಯಳು ! ನಿನ್ನಿಂದ ನಮ್ಮ ಕುಲಕೋಟಿ ಪಾವನವಾಯಿತು. ನಿನ್ನ ಜ್ಞಾನ ನಮಗೆ ಬರಲಿಲ್ಲ' ಎಂದು ಸೊಸೆಯನ್ನು ಸನ್ಮಾನಿಸಿದರು. ತಾವೂ ಪಾಂಡುರಂಗನ ಭಕ್ತ ರಾದರು. ಆದ್ದರಿಂದ ಮನಶ್ಶಕ್ತಿಯು ಬಲು ದೊಡ್ಡದು. ಭಕ್ತಿಪಂಥದ ಹಿಂದೆ ಎಲ್ಲ ಪಂಥಗಳೂ ! ಎಲ್ಲರೂ ಭಕ್ತರಾಗಬೇಕು. ಭಕ್ತಿ ರಸಾಯನವನ್ನು ಸವಿಯಬೇಕು.

ಭಕ್ತಿ ಪಂಥವು ಸಗುಣೋಪಾಸನೆಯ ಪ್ರಥಮ ಸೋಪಾನವೆಂದು ಕೆಲವರಾಡ ಬಹುದು. ತತ್ಕಾಲದಲ್ಲಿ ತೋರುವ ಅತಿಮಾನುಷ ಮಹಿಮೆಗಳು ಕೇವಲ ಭಾವನಾ ತರಂಗಗಳೆನ್ನಬಹುದು. ಸ್ವಪ್ನದಂತೆ ಅಸ್ಥಿರವೆನ್ನಬಹುದು. ಮಿಥ್ಯವೆನ್ನಬಹುದು. ಅಂದಮಾತ್ರದಿಂದೇನು ? ಕೇವಲ ನಿರ್ಗುಣೋಪಾಸನೆಯನ್ನೇ ಪರಮಾರ್ಥ ಸೋಪಾನ ವೆಂದು ಸಾರಿದ, ಜೀವ ಬ್ರಹ್ಮೈಕ್ಯವನ್ನು ಪ್ರತಿಪಾದಿಸಿದ, ಸತ್ಯವೆಂದು ತೋರುವ ಜಗತ್ತನ್ನು ತ್ರಿಕಾಲದಲ್ಲೂ ಮಿಥ್ಯವೆಂದು ಸಾಧಿಸಿದ (ತ್ರೈಕಾಲಿಕನಿಷೇಧ ಪ್ರತಿಯೋಗಿತ್ವಂ =ಮಿಥ್ಯಾತ್ವಂ) ಶಂಕರಾಚಾರ್ಯರ ಜೀವಿತ ಚರಿತ್ರೆಯನ್ನು ನೋಡೋಣ ! ಅವರ ಅನುಭವದಿಂದಲೇ ಭಕ್ತಿಪಂಥದ ಸ್ಥಾನವನ್ನು ನಿರ್ಧರಿಸೋಣ !

೧. ಶಂಕರಾಚಾರ್ಯರು ತಮ್ಮ ತಾಯಿಯಾದ ಆರ್ಯಾಂಬೆಯೊಡನೆ ಪೂರ್ಣಾನದೀಸ್ನಾನಕ್ಕೆ ನಿತ್ಯವೂ ಹೋಗುತ್ತಿದ್ದನರು, ವ್ಯಾಸಂಗ ನಿಮಿತ್ತದಿಂದ ಒಮ್ಮೆ ಹೋಗಲಿಲ್ಲ. ಆಚಾರ್ಯರ ಮನೆಯಿಂದ ನದಿಯು ದೂರವಾಗಿತ್ತು. ಆರ್ಯಾಂಬೆಯು ಏಕಾಂಗಿಯಾಗಿ ನದೀಸ್ನಾನಕ್ಕೆ ಹೊರಟಳು. ಬರುವಾಗ ಬಿಸಿಲಧಗೆಯನ್ನು ತಾಳಲಾರದೆ ಉದಕ ಕುಂಭವನ್ನು ಕೆಡವಿಕೊಂಡು ಮೂರ್ಛೆಹೋಗಿ ಬಿದ್ದು ಬಿಟ್ಟಳು. ಬಹಳ ಹೊತ್ತಾ ದರೂ ತಾಯಿ ಬರದಿರಲು ಆಚಾರ್ಯರು ಹುಡುಕಿಕೊಂಡು ಹೋದರು. ಮೂರ್ಛಾ

ಕ್ರಾಂತಳಾದವಳನ್ನು ಶೈತ್ಯೋಪಚಾರಮಾಡಿ ಎಬ್ಬಿಸಿದರು. ಮನೆಯಿಂದ ನದಿಯು ದೂರವಾಗಿರುವುದರಿಂದಲ್ಲವೇ, ತನ್ನ ತಾಯಿಗೀಶ್ರಮವಾಯಿತೆಂದು, ಪೂರ್ಣಾದೇವಿಯನ್ನು ತಮ್ಮ ಮನೆಯ ಪಕ್ಕದಲ್ಲಿ ಹರಿಯುವಂತೆ ಪ್ರಾರ್ಥಿಸಿದರು. ಮರುದಿನ ಉದಯ ಕಾಲದಲ್ಲಿ ನೋಡಿದರೆ, ಆಚಾರ್ಯರ ಮನೆಯ ಪಕ್ಕದಲ್ಲಿ ನದಿಯು ಹರಿಯುತ್ತಿತ್ತು. ಜನರೆಲ್ಲರೂ ಆಚಾರ್ಯರ ತಪಶ್ಶಕ್ತಿಗೆ ಆಶ್ಚರ್ಯಭರಿತರಾದರು.

೨. ಪೂರ್ಣಾನದಿಯು ಶಂಕರಾಚಾರ್ಯರ ಮನೆಯ ಪಕ್ಕದಲ್ಲಿ ಹರಿಯಲಾರಂಭಿಸಿದಾಗಿನಿಂದ, ಪ್ರವಾಹ ಕಾಲದಲ್ಲಿ ಅಗ್ರಹಾರದ ಸಮೀಪದಲ್ಲಿದ್ದ ಗೋಪಾಲಕೃಷ್ಣ ದೇವಾಲಯದ ಗರ್ಭಾಂಕಣದಲ್ಲಿ ನೀರು ನುಗ್ಗಿ, ದೇವಸ್ಥಾನವನ್ನು ಶಿಥಿಲಗೊಳಿಸುತ್ತಿತ್ತು. ಗೋಪಾಲಕೃಷ್ಣನು ಶಂಕರಾಚಾರ್ಯರ ಸ್ವಪ್ನದಲ್ಲಿ – 'ಶಂಕರಾ, ನಿನ್ನ ತಾಯಿಯ ನಿಮಿತ್ತವಾಗಿ, ನನ್ನ ದೇವಾಲಯವನ್ನು ನಿರ್ಮೂಲಗೊಳಿಸುವೆಯಾ? ನನ್ನನ್ನು ಪ್ರತ್ಯೇಕ ಸ್ಥಳದಲ್ಲಿ ಪ್ರತಿಷ್ಠಿಸಬಾರದೆ?' ಎಂದು ಕೇಳಿದನು. ಶಂಕರಾಚಾರ್ಯರು ಸ್ವಪ್ನ ಬೋಧಿತರಾಗಿ, ಪ್ರತ್ಯೇಕ ಮಂದಿರವನ್ನು ಕಟ್ಟಿಸಿ, ಅಲ್ಲಿ ಗೋಪಾಲಕೃಷ್ಣನನ್ನು ಪ್ರತಿಷ್ಠಿಸಿದರು.

೩. ಶಂಕರಾಚಾರ್ಯರು ಕ್ರಮ ಸನ್ಯಾಸಕ್ಕಾಗಿ ಗೋವಿಂದ ಭಗವತ್ಪಾದರ ಆಶ್ರಮದಲ್ಲಿ ವಾಸಮಾಡುತ್ತಿದ್ದಾಗ, ನರ್ಮದಾ ನದಿಯಲ್ಲಿ ಮಹಾಪ್ರವಾಹ ಬಂದು ಸುತ್ತ ಮುತ್ತಣ ಗ್ರಾಮಗಳು ಮುಳುಗುವ ಸ್ಥಿತಿಗೆ ಬಂದಿದ್ದುವು. ಗ್ರಾಮಸ್ಥರು ಪ್ರಾಣ ಭೀತಿಯಿಂದ ಎತ್ತರದಲ್ಲಿದ್ದ ಆಶ್ರಮಕ್ಕೆ ಬಂದು ತಮ್ಮ ದುಃಖ ಸಂಗತಿಯನ್ನು ತಿಳಿಸಿದರು. ಆಚಾರ್ಯರು, ಮಿತಿಮೀರಿ ಬರುತ್ತಿದ್ದ ನರ್ಮದೆಯ ಮಹಾ ಪ್ರವಾಹವನ್ನು, ತಮ್ಮ ಕಮಂಡುಲದಲ್ಲಿ ಆಕರ್ಷಿಸಿ ಶೋಷಣೆಮಾಡಿ, ಜನರ ಅಸತ್ತನ್ನು ಪರಿಹರಿಸಿದರು. ಇತ್ಯಾದಿ.

ಇದರಂತೆ ಪ್ರತಿಮತಾಚಾರ್ಯರ ಜೀವನ ಚರಿತ್ರೆಗಳಲ್ಲೂ ವಿಶೇಷ ಮಹಿಮೆಗಳಿವೆ. ಮಹಾತ್ಮರೆಂದಕೂಡಲೇ ಅತಿಮಾನುಷ ಮಹಿಮೆಗಳ ಸುರಿಮಳೆಯಿಂದೇ ಅರ್ಥವಾಗುತ್ತದೆ.

ಕನಕದಾಸರು ಮತ್ತು ಉಡುಪಿ

ಕನಕದಾಸರು ಸಕಲ ತೀರ್ಥಕ್ಷೇತ್ರಗಳ ಯಾತ್ರೆ ಮಾಡಿ ಉಡುಪಿಗೆ ಬಂದರು. ಆ ಕಾಲದಲ್ಲಿ ವಾದಿರಾಜರು ದೇಶಸಂಚಾರದಲ್ಲಿದ್ದರು. ಶ್ರೀ ಕೃಷ್ಣ ದರ್ಶನ ಮಾಡಬೇಕೆಂದರೆ, ದಾಸರಿಗೆ ಅವಕಾಶ ದೊರೆಯಲಿಲ್ಲ. ಬಹು ಸಂಕೋಚವಾದ ಗರ್ಭಾಂಕಣದಲ್ಲಿ ಪ್ರವೇಶಿಸಿ ದರ್ಶನಮಾಡಲು, ನಿಯಮ ಬಹಳವಾದ್ದರಿಂದ, ಕೆಲವು ಮೇಲ್ವರ್ಗದವರಿಗಲ್ಲದೆ, ಇತರರಿಗೆ ಅವಕಾಶವಿರಲಿಲ್ಲ. ಹೊರಭಾಗದ ಕಿಟಕಿಯಿಂದ ದರ್ಶನಮಾಡಲು ಜನಸಂದಣಿ ಬಹಳವಾಗಿರುತ್ತಿದ್ದುದರಿಂದ ಅವಕಾಶ ದೊರೆಯಲಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ದಾಸರು ದೇವಾಲಯದ ಪಶ್ಚಿಮ ಭಾಗದಲ್ಲಿ ಸ್ತೋತ್ರಮಾಡುತ್ತಾ ನಿಂತುಕೊಂಡರು. ಪರ್ಯಾಯಸ್ಥ ಸ್ವಾಮಿಗಳು ಶ್ರೀ ಕೃಷ್ಣನಿಗೆ ಅಲಂಕಾರಮಾಡಿ ಸಹಸ್ರ ನಾಮಾರ್ಚನೆ

ಮಾಡುತ್ತಿದ್ದರು. ಒಮ್ಮೆಯಾದರೂ ಶ್ರೀ ಕೃಷ್ಣದರ್ಶನವಾದರೆ ಸಾಕೆಂದು ದಾಸರು ಇಣಿಕಿ ನೋಡುತ್ತಾ,—

ಮೋಹನ — ಜಂಪೆ

ಪೂರ್ವ ಜನ್ಮದಿ ನಾನು ಮಾಡಿದ ಕರ್ಮದಿಂ
ದೂರ್ವಿಯೊಳಗೀ ಜನ್ಮತಾಳಿದೆನೊ ಕೃಷ್ಣ ಪ
ಕಾರುಣ್ಯನಿಧಿ ಎನ್ನ ಕಾಯಬೇಕಯ್ಯ ಹರಿ
ವಾರಿಜನಾಭನೆ ಮುದ್ದು ಉಡುಪಿಯ ಕೃಷ್ಣ ಅ. ಪ.

ಪುಟ್ಟಿ ಬಂದಮೇಲೆ ಸುಖವಕಾಣವೆ ಬಲು
ಕಷ್ಟಪಡುತಿಹೆನೊ ಕೃಷ್ಣಾ
ತೊಟ್ಟಿಲ ಶಿಶುವು ಬಾಯ್ಬಿಟ್ಟು ಒರಲುವತೆರದಿ ಕಂ
ಗೆಟ್ಟು ಬಾಯ್ಬಿಡುತಲಿಹೆನೋ
ಮುಟ್ಟದಿರು ನಡೆಯೆಂದು ಜನರೆಲ್ಲರೂ ಎನ್ನ
ಅಟ್ಟಿ ಬಡಿಯುತ್ತಲಿಹರೋ ಕೃಷ್ಣಾ
ಇಷ್ಟು ಕೋಟಲೆಗಳನು ಬಿಡಿಸದಿದ್ದರೆ ಯಾರು
ಸೃಷ್ಟಿಯೊಳು ಕರಪಿಡಿವರೋ ಕೃಷ್ಣಾ ೧

[ಈ ಪದದ ಇನ್ನೆರಡು ನುಡಿಗಳು ಶುದ್ಧವಾಗಿಲ್ಲ. ಹಸ್ತಪ್ರತಿಗೂ, ಹಿರಿಯರಿಂದ ಕೇಳಿದ್ದ ಮಾತಿಗೂ ವ್ಯತ್ಯಾಸವಿದೆ. ಆದ್ದರಿಂದ ಬರೆದಿಲ್ಲ.]

ಎಂಬುದಾಗಿ ಸ್ತೋತ್ರ ಮಾಡುತ್ತಾ, ಒಮ್ಮೆ ದರ್ಶನಕ್ಕೆ ಬಿಡಿರೋ ಎಂದು ಒದಲಿದರು. ಮಠದ ಚಾಕರರು 'ನೀನು ಯಾವ ಕುಲದವನು' ಎಂದು ಕೇಳಿದರು. ಆಗ ದಾಸರು,—

ಕಾಂಬೋದಿ

ಕುಲ ಕುಲ ಕುಲವೆನ್ನುತಿಹರೇ–ಕುಲಯಾವುದು ನೋಡಿ ಸತ್ಯಸಜ್ಜನರೆ ಪ.

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೇ ?
ಹಸುವಿನ ಮಾಂಸದೊಳುದಿಸಿದ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ ? ೧

ಮೃಗಗಳ ಮೈಯ್ಯಲ್ಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ವಿಬುಧರೆಲ್ಲಾ
ಬಗೆದರೆ ನಾರಾಯಣನ್ಯಾವ ಕುಲದವ
ಅಗಜೆಯೊಲ್ಲಭ ಯಾತರ ಕುಲದವನು ೨

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವ ಪಂಚೇಂದ್ರಿಯ ಕುಲವ್ಯಾವುದು
ಆತ್ಮಾಂತರಾತುಮ ನೆಲೆಯಾದಿ ಕೇಶವ
ಪ್ರೀತನಾದ ಮೇಲೆ ಯಾತರ ಕುಲವೋ ೩

ಎಂಬುದಾಗಿ ಹಾಡಿದರು.

ಚಾಕರರು – "ಈ ತತ್ವಜ್ಞಾನ ನಮಗೆ ಬೇಡ. ಆಚಾರವಿದ್ದಂತೆ ನಡೆಸುವವರು ನಾವು. ನಿನಗೆ ದೇವರು ಒಲಿದಿದ್ದರೆ ನಿದರ್ಶನವನ್ನು ತೋರಿಸು. ಆಮೇಲೆ ನಾವೇ ನಿನ್ನನ್ನು ಕರೆದೊಯ್ಯುವೆವು" ಎಂದು ಹೇಳಿ, ತಮ್ಮ ಕಾರ್ಯತತ್ಪರರಾದರು.

ಇಷ್ಟು ಮಾತ್ರಕ್ಕೇ ದಾಸರು ಖಿನ್ನರಾಗಲಿಲ್ಲ. ಪರವಶರಾಗಿ ಸ್ವಾಮಿಯನ್ನು ಸ್ತೋತ್ರ ಮಾಡುತ್ತಾ ನಿಂತುಬಿಟ್ಟರು. ಪೂರ್ವ ದ್ವಾರದಲ್ಲಿ ದೇವರಿಗಭಿಮುಖವಾಗಿ ಜನರು ದರ್ಶನ ಮಾಡುತ್ತಾ ನಿಂತಿದ್ದರು. ಕನಕದಾಸರ ಮನಶ್ಶಕ್ತಿಯಿಂದ, ಅವರ ಭಕ್ತಿ ಪಾರವಶ್ಯತೆಗೆ ಮೆಚ್ಚಿಯೋ ಎಂಬಂತೆ, ಪೂರ್ವಾಭಿಮುಖನಾಗಿದ್ದ ಶ್ರೀ ಕೃಷ್ಣಮೂರ್ತಿಯು ಥಟಕ್ಕನೆ ಪಶ್ಚಿಮಾಭಿಮುಖನಾದನು. ಸ್ವಾಮಿಗಳಾದಿಯಾಗಿ ಸರ್ವರೂ ಇದೇನು ವಿಚಿತ್ರವಾಯಿತೆಂದು ಅತ್ಯಾಶ್ಚರ್ಯಭರಿತರಾದರು. ಕನಕದಾಸರ ಸ್ತೋತ್ರದಿಂದ ದೇವರೇ ಪಶ್ಚಿಮಾಭಿಮುಖನಾದನೆಂದು ಜನರು ದಾಸರನ್ನು ಹೊಗಳಲಾರಂಭಿಸಿದರು. ಆ ರಾತ್ರಿ ಸ್ವಪ್ನದಲ್ಲಿ ಸ್ವಾಮಿಗಳಿಗೆ – 'ಇನ್ನು ಮೇಲೆ ನಾನು ಪಶ್ಚಿಮಾಭಿಮುಖನಾಗಿರುವೆ' ಎಂದು ಶ್ರೀ ಕೃಷ್ಣನ ಆಜ್ಞೆಯಾಯಿತು. ಆ ದಿವಸದಿಂದ ಶ್ರೀ ಕೃಷ್ಣನು ಪಶ್ಚಿಮಾಭಿಮುಖನಾಗಿಯೇ ನಿಂತಿರುವನು. ಇಷ್ಟು ಕಾಲವಾದರೂ ಪಶ್ಚಿಮಕ್ಕೆ ಗರ್ಭಾಂಕಣದ ಪ್ರತ್ಯೇಕ ಕವಾಟ ನಿರ್ಮಾಣವಾಗಿಲ್ಲ. ಪೂರ್ವ ದ್ವಾರವನ್ನು ಮಾತ್ರ ಕಾಲಾಂತರದಲ್ಲಿ ಮುಚ್ಚಿಬಿಟ್ಟರು. ಕನಕದಾಸರಿಗೆ ದರ್ಶನವಾದ ಸ್ಥಳದಲ್ಲಿ **'ಕನಕನ ಕಿಂಡಿ'** ಎಂದು ಒಂದು ಕಟಾಂಜನವು ನಿರ್ಮಿತವಾಯಿತು. ದೇವಾಲಯಕ್ಕೆ ದರ್ಶನಾರ್ಥ ಬರುವ ಜನರೆಲ್ಲರೂ ಅದ್ಯಾಪಿ ಆ ಕಿಂಡಿಯಿಂದ ಮೊದಲು ಕೃಷ್ಣದರ್ಶನ ಮಾಡಿ, ತರುವಾಯ ಮಹಾದ್ವಾರವನ್ನು ಪ್ರವೇಶಿಸುತ್ತಾರೆ. ಕನಕದಾಸರು ವಾಸಮಾಡುತ್ತಿದ್ದ ಸ್ಥಳದಲ್ಲಿ ಒಂದು ಮಂಟಪವು ನಿರ್ಮಿತವಾಗಿದೆ.

ಕನಕದಾಸರ ಮಹಿಮೆ ಜನರಿಗೆ ಗೊತ್ತಾದ ಮಾತ್ರಕ್ಕೇ ಅವರ ಭೋಜನ ಮೊದಲಾದ ವ್ಯವಸ್ಥೆಯನ್ನು ಯಾರೂ ಮಾಡಲಿಲ್ಲ. ಶ್ರೀ ಕೃಷ್ಣನೇ ಅವರ ಮಹಿಮೆಯನ್ನು ಮತ್ತಷ್ಟು ವಿಸ್ತರಿಸಿ ತಿಳಿಸಬೇಕೆಂದು ಯಾರಿಗೂ ಪ್ರೇರಿಸಲಿಲ್ಲ. ದಾಸರು ಯಾವಾಗ ಎಲ್ಲಿರುವರೆಂಬುದು ಜನರಿಗೆ ಗೊತ್ತಾಗುತ್ತಿರಲಿಲ್ಲ. 'ಕೃಷ್ಣಾ, ನಿನ್ನೂರಿಗೆ ಬಂದರೂ ನನಗೊಂದು ತುತ್ತು ಅನ್ನವಿಲ್ಲವೇ ದೇವಾ!' ಎಂದು ಒಮ್ಮೆ ಕನಕದಾಸರು ಸ್ವಾಮಿಗೆ ಮೊರೆಯಿಟ್ಟರು. ಸ್ವಾಮಿಯು ತನ್ನ ಆಭರಣವೊಂದನ್ನು ಕೊಟ್ಟು, ಇದರಿಂದ ಜೀವಿಸೆಂದು ಹೇಳಿದನು. ದಾಸರು ಊರಿನ ವೈಕುಂಠದಾಸನುಭೋಗನೆಂಬ ವರ್ತಕನಲ್ಲಿ ಆ ಆಭರಣವನ್ನು ಒತ್ತೆಯಿಟ್ಟು ತಂದ ಹಣದಿಂದ ಕೆಲವು ಕಾಲ ಜೀವಿಸಿದರು.

ವಾದಿರಾಜರು ಸಂಚಾರವನ್ನು ಮುಗಿಸಿ ಉಡುಪಿಗೆ ಬರಲು ಉಡುಪಿಯ ವೈಭವವು ಶತಾಧಿಕವಾಯಿತು. ಕನಕದಾಸರು ಉಡುಪಿಗೆ ಬಂದಿರುವುದು ವಾದಿರಾಜರಿಗೆ ಪರಮಾನಂದವನ್ನುಂಟು ಮಾಡಿತು. ದಾಸರನ್ನು ಸರ್ವದಾ ಸಮೀಪದಲ್ಲಿಟ್ಟುಕೊಂಡು ಭಗವದ್ವಿಷಯದಲ್ಲಿ ಆಸಕ್ತರಾಗಿರುತ್ತಿದ್ದರು. ಪ್ರತಿರಾತ್ರಿಯಲ್ಲೂ, ವಾದಿರಾಜರೂ, ಕನಕ ದಾಸರೂ ಕೂಡಿ ಶ್ರೀ ಕೃಷ್ಣನ ಮುಂದೆ ಭಜನೆಮಾಡುತ್ತಿದ್ದರು. ಒಂದೊಂದು ದಿನವೂ ಏನಾದರೊಂದು ವಿಚಿತ್ರ ಮಹಿಮೆಯು ಕಂಡುಬರುತ್ತಿತ್ತು.

ಒಂದು ಏಕಾದಶೀ ಪ್ರಾತಃಕಾಲ ವಾದಿರಾಜರು ದೇವರ ಆಭರಣಗಳ ಪೆಟ್ಟಿಗೆ ಯನ್ನು ತರಿಸಿ ಝಡತಿಮಾಡಿದರು. ಆಭರಣಗಳ ಪೈಕಿ ಎಲ್ಲವೂ ಇದ್ದು ಒಂದು ಹಾರ ಮಾತ್ರ ಇರಲಿಲ್ಲ. ಏನಾಯಿತೆಂದು ವಿಚಾರಮಾಡಲು, ಕನಕದಾಸರು – ' ಸ್ವಾಮಿ, ಶ್ರೀ ಕೃಷ್ಣನಿಗೆ ಉಪವಾಸ ಮಾಡಬೇಕಾಗಿ ಬಂದದ್ದರಿಂದ ಒತ್ತೆ ಇಟ್ಟಿದ್ದಾನೆ ' ಎಂದರು. ಸ್ವಾಮಿಗಳು – 'ಹಾಗೆಂದರೇನು ? ಯಾರಲ್ಲಿ ಒತ್ತೆಯಿಟ್ಟಿದ್ದಾನೆ ? ದಾಸರೇ ಶ್ರೀಕೃಷ್ಣನಿಗೆ ಉಪವಾಸವಾಯಿತೋ, ಕನಕದಾಸರಿಗೆ ಉಪವಾಸವಾಯಿತೋ ?' ಎಂದು ನಕ್ಕರು. ದಾಸರು – ' ದಾಸನಿಗೆ ಉಪವಾಸವಾದರೆ ಕೃಷ್ಣನಿಗುಪವಾಸವಲ್ಲವೇ ?' ಎಂದರು. ಅನಂತರ ವೈಕುಂಠಶಾನುಭೋಗನಲ್ಲಿದ್ದ ಆಭರಣವನ್ನು ತರಿಸಿ ಸ್ವಾಮಿಗೆ ಸಮರ್ಪಿ ಸಿದರು.

ಕನಕದಾಸರು ಬಿಡಿಯಾಗಿ ದೇವರ ನಾಮಗಳನ್ನು ಮಾಡಿರುವುದು ಮಾತ್ರ ವಲ್ಲದೆ, ಇಡಿಯಾದ ಅನೇಕ ಗ್ರಂಥಗಳನ್ನೂ ರಚಿಸಿರುವರು. ಅವುಗಳಲ್ಲಿ ಹರಿಭಕ್ತಿಸಾರ, ನಳಚರಿತ್ರೆ, ಮೋಹನ ತರಂಗಿಣಿ, ನೃಸಿಂಹಸ್ತವ, ರಾಮಧಾನ್ಯ ಚರಿತ್ರೆಗಳು ಮುಖ್ಯ ವಾದವುಗಳು.

ಕನಕದಾಸರು ಉಡುಪಿಯನ್ನು ಬಿಟ್ಟನಂತರ ಹೆಚ್ಚು ಕಾಲ ವಾಸಮಾಡಿದ ಸ್ಥಳ ವೆಂದರೆ ಬೇಲೂರು. ಬೇಲೂರಿಗೆ ದಾಸರು ಅನೇಕವೇಳೆ ಬಂದಿದ್ದಂತೆ ಗೊತ್ತಾಗುತ್ತದೆ. ಕಾಗಿನೆಲೆಯಾದಿಕೇಶವ ಮುದ್ರಿಕೆಯಿಂದ ಹಾಡಿದ ದೇವರ ನಾಮಗಳು ಬಹಳವಾಗಿದ್ದರೂ, ಕಾಗಿನೆಲೆಯೆಂಬ ಸ್ಥಳದಲ್ಲಿ ವೇಲಾಪುರೀ ಎಂಬ ಪ್ರಯೋಗವಿರುವ ಕನಕದಾಸರ ದೇವರ ನಾಮಗಳೂ ಅನೇಕವಾಗಿವೆ. ಈ ಮುದ್ರಿಕೆಗಳಲ್ಲಿ ಅರಿಯದವರು ವೈಕುಂಠದಾಸರ ಪದ ಗಳನ್ನೂ ಬೆರೆಸಿ ಕನಕದಾಸರ ಪದಗಳೆಂದು ತಪ್ಪಾಗಿ ಹಾಡುತ್ತಾರೆ. ಕನಕದಾಸರು ಬೇಲೂರಿನಲ್ಲಿದ್ದಾಗ ಮಾತ್ರ ಕಾಗಿನೆಲೆ ಎಂಬ ಸ್ಥಳದಲ್ಲಿ ವೇಲಾಪುರೀ ಎಂದು ಸೇರಿಸಿ ಹಾಡಿದ್ದಾರೆ. ಅವರವರ ಮಾತಿನ ಸರಣಿಯಿಂದಲಾದರೂ ಅರ್ಥಮಾಡಿಕೊಂಡು ಹಾಡಲು ಉಭಯರ ಹೆಚ್ಚು ನಾಮಗಳ ಪರಿಚಯವಿದ್ದವಿನಾ ಸಾಧ್ಯವಾಗುವುದಿಲ್ಲ.

ಸಾಮಾನ್ಯವಾಗಿ ದಾಸರುಗಳು ಪದಗಳನ್ನು ಯಾವ ರಾಗ ಯಾವ ತಾಳಗಳಲ್ಲಿ ಹಾಡಿದರೋ ನುಡಿಗಳಲ್ಲಿ ಕಾಲ ವ್ಯತ್ಯಾಸಗಳನ್ನು ಯಾವ ರೀತಿ ಇಟ್ಟು ಹಾಡಿದರೋ ಎಲ್ಲಿ ಶಬ್ದ ಸಂಕೋಚ ಮಾಡಿದರೋ, ಒಂದೂ ತಿಳಿಯದ ಜನರು ಪರಂಪರೆಯಿಂದ ಹಾಡಿದ ಪದ್ಧತಿಯನ್ನೂ ಗಮನಿಸದೆ ಈಗ ಮನಸ್ವೀ ಹಾಡುತ್ತಿದ್ದಾರೆ. ಬೇಡವೆನ್ನಿಸಿದ ಶಬ್ದ

ಗಳನ್ನು ಕಿತ್ತೊಗೆದು, ತಾವು ಹಾಡುವ ಮಟ್ಟಿಗೆ ತಕ್ಕಂತೆ ಪ್ರತಿ ಶಬ್ದಗಳನ್ನು ಕೂಡಿಸು ತ್ತಿದ್ದಾರೆ. ಹೀಗೆಲ್ಲಾ ಅವಾಂತರಗಳಾಗಿ ದಾಸರ ಪದಗಳಲ್ಲಿ ಜನರಿಗಿದ್ದ ಭಕ್ತಿಭಾವವು ಕಡಿಮೆಯಾಗುತ್ತಿದೆ. ಈಗೀಗ ದೇವರನಾಮಗಳನ್ನು ಛಾಪಿಸುತ್ತಿರುವ ಸಂಸ್ಥೆಗಳಲ್ಲಿ ಸಹ ವ್ಯವಸ್ಥೆಯಿಲ್ಲದಿರುವುದು ವಿಷಾದಕರವಾಗಿದೆ.

ಪ್ರಕೃತ ವೈಕುಂಠದಾಸರಿಗೆ, ಕನಕದಾಸರು ಬೇಲೂರಿಗೆ ಬಂದರೂ ಅವರು ತಮ್ಮ ಸ್ವರೂಪಾಚ್ಛಾದನೆ ಮಾಡಿಕೊಂಡು ತಮ್ಮ ಮನೆಯ ಬಾಗಿಲಿನಲ್ಲಿದ್ದುದ್ದು ಗೊತ್ತಾಗಲಿಲ್ಲ. ಬಾಗಿಲಲ್ಲಿ ಕಂಬಳಿಯನ್ನು ಹೊದ್ದುಕೊಂಡು ಕೋಲನ್ನು ಹಿಡಿದುಕೊಂಡು ಕುಳಿತಿರುವ ವ್ಯಕ್ತಿ ಯಾರೆಂದು ವೈಕುಂಠದಾಸರು ವಿಚಾರಿಸಲಿಲ್ಲ. ವೈಕುಂಠದಾಸರು ದೇವಾಲಯ ದಿಂದ ಬರುವಾಗ, ದೀವಟಿಗನ ಕೈದೀವಟಿಗೆಯನ್ನು ತಾವೇ ತೆಗೆದುಕೊಂಡು ಕನಕದಾಸರು ಮಾರ್ಗವನ್ನು ತೋರಿಸುವುದು, ಮನೆಯ ಊಳಿಗ ಮಾಡುವುದು, ಕೆಲವು ದಿವಸಗಳ ವರೆಗೆ ಗೊತ್ತಾಗಲಿಲ್ಲ. ಕೆಲಸಕ್ಕೆ ಮಾತ್ರವಿದ್ದು, ಊಟದ ವೇಳೆಯಲ್ಲಿ ಇರದಿರುವುದು ಕೆಲವು ದಿನಗಳ ಮೇಲೆ ವರದನ ಗಮನಕ್ಕೆ ಬಂದಿತು. ಅವನು ನೀನ್ಯಾರೆಂದು ವಿಚಾರಿ ಸಿದನು. ಕನಕದಾಸರು,

ಪೂರ್ವಿ - ಅಟ್ಟತಾಳ

ಬಂಟನಾಗಿ ಬಾಗಿಲ ಕಾಯುವೆ – ವೈ
ಕುಂಠದಾಸೋತ್ತಮ ದಾಸರಮನೆಯ ಪ.

ಹೊರಸುತ್ತು ಪ್ರಾಕಾರ ಸುತ್ತಿ ನಾ ಬರುವೆ
ಬರುವ ಹೋಗುವರ ವಿಚಾರಿಸಿ ಬಿಡುವೆ
ಕರದ ಕೋಲಪೊತ್ತು ಅಲ್ಲಿ ನಿಂದಿರುವೆ
ಶ್ರೀ ಹರಿಯ ವಾಲಗದ ಸಮುಖದಲಿರುವೆ ೧

ವೇಳೆವೇಳೆಗೆ ಊಳಿಗವ ನಾ ಮಾಡುವೆ
ಆಳವಂಟಿಗೆ ಚಾಮರ ಬೀಸುವೆ
ಕಾಳಿಂದಿ ಅಡಪಾವ ಹೊತ್ತು ನಿಂದಿರುವೆ
ಸಾಲುಮುತ್ತಿನ ಸತ್ತಿಗೆಯ ಪಿಡಿವೆ ೨

ಎಂಜಲ ಹರಿವಾಣವ ಬೆಳಗುವೆ
ಕಂಜನಾಭನ ಪಾದಕಮಲವ ನೆನೆವೆ
ರಂಜುಳ್ಳ ಕುಸುಮದ ಮಾಲೆ ತಂದಿಡುವೆ
ಸಂಜೆಗೆ ಪಂಜಿನ ದಾಸನಾಗಿರುವೆ ೩

ತೊತ್ತುತೊಂಡನಾಗಿ ಬಾಗಿಲ ಕಾಯುವೆ
ಚಿತ್ರದ ಚಾವಡಿ ರಜವ ಬಳಿವೆ
ಮುತ್ತಿನ ರಂಗವಲ್ಲಿಯನಿಟ್ಟು ಬರುವೆ
ರತ್ನಕಂಬಳಿಯ ಹೊತ್ತು ಹಾಸುವೆ ೪

ಮೀಸಲು ಊಳಿಗವನ್ನು ಮಾಡುವೆನು
ಶೇಷಬ್ರಹ್ಮಾದಿ ವಂದಿತನಾದ ನಮ್ಮ
ವಾಸುದೇವ ಆದಿಕೇಶವರಾಯನ
ದಾಸ ದಾಸ ದಾಸ ದಾಸರ ಮನೆಯ ೫

ಎಂಬುದಾಗಿ ಉತ್ತರವಿತ್ತರು.

ಹಾಡುವ ಧ್ವನಿಯನ್ನು ಕೇಳಿ ವೈಕುಂಠದಾಸರು ಯಾರಿರಬಹುದೆಂದು ಹೊರಗೆ ಬಂದರು. ಆದಿಕೇಶವನ ಮುದ್ರಿಕೆಯು ಕಿವಿಗೆ ಬಿದ್ದೊಡನೆಯೇ, ವಿಪರೀತ ಕಾರ್ಯವಾಯಿತೆಂದು – "ಬರಬೇಕು ಕನಕದಾಸರು! ಹೀಗೆ ಮಾಡಬಹುದೇ ತಾವು? ಸ್ವರೂಪವನ್ನು ಆಚ್ಛಾದನೆ ಮಾಡಿಕೊಂಡು ಸೇವಕನಂತೆ ನಟಿಸಿ ಸೇವೆಮಾಡಿ, ನನ್ನನ್ನು ಪಾಪಕ್ಕೆ ಗುರಿಮಾಡಿದಿರಲ್ಲಾ!" ಎನ್ನುತ್ತಾ, ಕನಕದಾಸರ ಕೈಹಿಡಿದು ಏಕಾಂತ ಗೃಹಕ್ಕೆ ಕರೆದುಕೊಂಡು ಹೋದರು. ತಮ್ಮಂಥವರಿಂದ ಸೇವೆ ತೆಗೆದುಕೊಂಡ ಪಾಪಕ್ಕೆ ಪ್ರಾಯಶ್ಚಿತ್ತವೇನೆಂದು ಕೇಳಿದರು. ಕನಕದಾಸರು – "ದೇವರ ಊಳಿಗವು ಎಲ್ಲೆಲ್ಲೂ ದೊರೆಯುವುದು. ದಾಸರ ಮನೆಯ ಊಳಿಗ ದೊರೆಯುವುದು ದುರ್ಲಭವು. ಅದುದರಿಂದ ಹೀಗೆ ಮಾಡಿದೆನು. ಶ್ರೀ ಕೇಶವನೇ ನಿಮ್ಮ ಊಳಿಗದವನಷ್ಟೆ" ಎಂದರು.

ವೈಕುಂಠದಾಸರು – "ನಿಮ್ಮ ಮೇಲೆ ಶ್ರೀ ಕೇಶವನ ಅನುಗ್ರಹವಿರುವಷ್ಟು ಮತ್ತಾರ ಮೇಲಿರುವುದೆಂಬುದನ್ನು ನೀವೇ ಹೇಳಿ! ಇದಕ್ಕೆ ನಿಮ್ಮ ಅನುಭವವೇ ಸಾಕ್ಷಿ" ಎಂದರು. ಉಭಯರೂ ನೀವು ದೊಡ್ಡವರು, ನೀವು ದೊಡ್ಡವರು ಎನ್ನುವವದರಲ್ಲಿ ಸಂಧ್ಯಾಕಾಲವಾಯಿತು. 'ಅಣೋರಣೀಯನೂ ಮಹತೋ ಮಹೀಯನೂ' ಆದ ಪರಮಾತ್ಮನೆದುರಿಗೆ ದೊಡ್ಡವರ್ಯ್ಯಾರು ಚಿಕ್ಕವರ್ಯ್ಯಾರು? ನಿಜವಾಗಿ ದೊಡ್ಡವರೆನಿಸಿದವರು ತಾವು ದೊಡ್ಡವರೆಂದು ಹೇಳಿಕೊಳ್ಳುವುದಿಲ್ಲ. ಮನಸ್ಸಿನಿಂದಲೂ ತಮ್ಮ ದೊಡ್ಡಸ್ತಿಕೆಯನ್ನು ಚಿಂತಿಸುವುದಿಲ್ಲ. ಅನಂತನೂ ಅಪ್ರಮೇಯನೂ ಆದ ಪರಮಾತ್ಮನನ್ನು ತಿಳಿದ ಮೇಲೆ ಯಾರಲ್ಲಿ ಏನು ದೊಡ್ಡತನವಿದ್ದೀತು! ಕನಕದಾಸರು – ನಾನು ಮಾರ್ಜಾರ ಕಿಶೋರ, ತಾವು ಮರ್ಕಟಕಿಶೋರ – ಇಷ್ಟೇ ನಮ್ಮಿಬ್ಬರಲ್ಲಿರುವ ವ್ಯತ್ಯಾಸವೆಂದರು.

ಮಾರ್ಜಾರ ಕಿಶೋರ ನ್ಯಾಯವೆಂತಲೂ ಮರ್ಕಟ ಕಿಶೋರ ನ್ಯಾಯವೆಂತಲೂ ಭಕ್ತಿಯಲ್ಲಿ ಎರಡು ಪ್ರಕಾರಗಳಿವೆ.

೧ ಮಾರ್ಜಾರ ಕಿಶೋರ ನ್ಯಾಯದಲ್ಲಿ ಕಿಶೋರವು (ಬೆಕ್ಕಿನ ಮರಿಯು) ತನ್ನ ರಕ್ಷಣೆಯ ಯಾವ ಜವಾಬ್ದಾರಿಯನ್ನೂ ವಹಿಸುವುದಿಲ್ಲ. ತಾಯಿ ಬೆಕ್ಕು ಎಲ್ಲಿಯ ತನಕ ಮರಿಯನ್ನು ಬಾಯಲ್ಲಿ ಕಚ್ಚಿಕೊಂಡು ನಿರಪಾಯವಾಗಿ ಸಲಹುವುದೋ ಅಲ್ಲಿಯ ತನಕ ಅದಕ್ಕೆ ಪ್ರಾಣಾಪಾಯವಿಲ್ಲ. ಅದರಂತೆ ಜೀವನಿಗೆ ಯಾವ ಕರ್ತೃತ್ವವೂ ಇಲ್ಲ. ಈಶ್ವರನೇ ಕಾಪಾಡುವನು. ಈ ಪ್ರಕಾರದ ನಂಬಿಕೆಯುಳ್ಳ ಭಕ್ತರು ಮಾರ್ಜಾರ ಕಿಶೋರ ನ್ಯಾಯಿಗಳೆನಿಸುವರು.

೨ ಮರ್ಕಟ ಕಿಶೋರ ನ್ಯಾಯದಲ್ಲಿ ಕಿಶೋರವು (ಕೋತಿಯ ಮರಿಯು) ತನ್ನ ರಕ್ಷಣೆಯ ಜವಾಬ್ದಾರಿಯನ್ನು ತಾನೇ ವಹಿಸುವುದು. ಎಲ್ಲಿಯ ತನಕ ಅದು ತನ್ನ ತಾಯಿಯ ಉದರವನ್ನು ಗಟ್ಟಿಯಾಗಿ ಹಿಡಿದಿರುವುದೋ ಅಲ್ಲಿಯ ತನಕ ಅದಕ್ಕೆ ಪ್ರಾಣಾಪಾಯವಿಲ್ಲ. ತಾಯಿ

ಈ ಮಾತನ್ನು ಕೇಳಿ ವೈಕುಂಠದಾಸರು – 'ಅಹುದಹುದು. ತಾವಾಡಿದುದು ಸತ್ಯ. ಸ್ವಪ್ರಯತ್ನದಿಂದ ದಾಸನಾದವನು ನಾನು; ಈಶ್ವರ ಪ್ರೇರಣೆಯಿಂದ ದಾಸರಾದವರು ತಾವು. ಉಭಯ ಮಾರ್ಗಗಳೂ ಕೂಡುವ ಕೇಂದ್ರವು ಒಂದೇ ಅಷ್ಟೆ!' ಎಂದರು.

ಉಭಯದಾಸರೂ ಅಪರೋಕ್ಷ ಜ್ಞಾನಿಗಳು. ಈರ್ವರೂ ಶ್ರೀ ಕೇಶವೋಪಾಸಕರು. ಆಡುವ ಮಾತೆಲ್ಲಾ ಸರಸವೇದಾಂತಸಾರ. ಈರ್ವರೂ ದೇವಾಲಯದಲ್ಲಿ ಪರವಶರಾಗಿ ಗಾನ ಮಾಡುವರು. ನರ್ತನ ಮಾಡುವರು. ಪರವಶರಾಗುವರು. ಒಂದೊಂದು ದಿನ ಒಬ್ಬೊಬ್ಬರ ಕೀರ್ತನೆ. ಕನಕದಾಸರು ಒಮ್ಮೆ ಒಗಟು ಪದಗಳನ್ನು ಹಾಡುವರು. ವೈಕುಂಠದಾಸರು ಅರ್ಥವಿವರಣೆ ಮಾಡುವರು. ಉಭಯರಲ್ಲೂ ಕೇಶವನು ಅತಿಮಾನುಷ ಮಹಿಮೆಗಳನ್ನು ತೋರಿಸುವನು. ಈ ಸೌಭಾಗ್ಯಗಳನ್ನನುಭವಿಸುವವರು ಸಾವಿರಾರು ಜನರು. ಇದಕ್ಕಿಂತ ಬೇಕಾದುದು ತ್ರಿಭುವನಗಳಲ್ಲಿ ಮತ್ತಾವುದು? ವೇಲಾಪುರಿಯು ಶ್ರೀ ಕೇಶವ ಕ್ಷೇತ್ರವೆಂಬುವುದು ಮರೆತು ಹರಿದಾಸ ಕ್ಷೇತ್ರವೆನಿಸಿತು. ದಾಸರಿದ್ದರೆ ಜನರು ದೇವಾಲಯದಲ್ಲಿರುವರು. ಇರದಿದ್ದರೆ ಜನರಿರರು. ಇಂತಹ ವೈಭವವು ನಡೆದು ಹೋಯಿತು.

ಕನಕದಾಸರು **ಹರಿಭಕ್ತಿಸಾರ**ವೆಂಬ ಹೆಸರಿನಿಂದ ಭಾಮಿನೀ ಷಟ್ಪದಿಯಲ್ಲಿ ಒಂದು ಮೊತ್ತ[illegible]ದ ಗ್ರಂಥವನ್ನು ಬೇಲೂರಿನಲ್ಲಿದ್ದಾಗ ರಚಿಸಿದರು. ಹರಿಭಕ್ತಿಸಾರದ ಮೊದಲ ಮತ್ತು ಕೊನೆಯ ಪದ್ಯಗಳು ಇದನ್ನು ಸಮರ್ಥಿಸುವುದರಿಂದ ಅವುಗಳನ್ನು ಈ ಕೆಳಗೆ ಕೊಡುತ್ತೇವೆ.

ಶ್ರೀಯರಸ ಗಾಂಗೇಯನುತ ಕೌಂ
ತೇಯ ವಂದಿತ ಚರಣಕಮಲದ
ಛಾಯತಾಂಬಕ ರೂಪಚಿನ್ಮಯ ದೇವಕೀತನಯ

ರಾಯ ರಘುಕುಲವರ್ಯ ಭೂಸುರ
ಪ್ರೀಯ ಸುರಪುರನಿಲಯ ಚೆನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತ

ಮಂಗಳಂ ಜಗದಾದಿಮೂರ್ತಿಗೆ
ಮಂಗಳಂ ಜಯಪುಣ್ಯಕೀರ್ತಿಗೆ
ಮಂಗಳಂ ಕರಕಲಿತ ಚಕ್ರವಿದಳಿತ ನಕ್ರನಿಗೆ

ಮರ್ಕಟವು ಮರದಿಂದ ಮರಕ್ಕೆ ಹಾರಿದರೂ ಎಲ್ಲಿ ಸಂಚರಿಸಿದರೂ ಮರಿಯು ತಾಯಿಯ ಉದರವನ್ನು ಬಿಡದೆ ಗಟ್ಟಿಯಾಗಿ ಹಿಡಿದಿರುವುದು ಎಂದು ಅದು ತನ್ನ ಹಿತವನ್ನು ಬಯಸುವುದೋ ಅಂತೇ ತಾಯಿಯು ಅದರ ಕ್ಷೇಮ ಚಿಂತನೆಯನ್ನೂ ಬಿಡುವುದು. ಅದರಂತೆಯೇ ಪರಮಾತ್ಮನನ್ನು ಆಶ್ರಯಿಸುವ ಕರ್ತವ್ಯವು ಜೀವನದು. ಈ ಪ್ರಕಾರದ ನಂಬಿಕೆಯುಳ್ಳ ಭಕ್ತರು **ಮರ್ಕಟ ಕಿಶೋರ ನ್ಯಾಯಿಗಳೆನಿಸುವರು.**

ಮಂಗಳಂ ದ್ರೌಪದಿಯ ಪೊರೆದಗೆ
ಮಂಗಳಂ ಧ್ರುವರಾಜಗೊಲಿದಗೆ
ಮಂಗಳಂ ಬೇಲೂರು ಚೆನ್ನಿಗರಾಯ ಕೇಶವಗೆ

ಕನಕದಾಸರು ಬಹುಕಾಲ ವಾಸಮಾಡಿದ ಸ್ಥಳಗಳಲ್ಲಿ ಬೇಲೂರೂ ಒಂದಾಗಿದೆ. ಪುರಂದರದಾಸರು ಸಂಚರಿಸಿದ ಕ್ಷೇತ್ರ-ಪ್ರತಿಕ್ಷೇತ್ರಗಳ ದರ್ಶನಮಾಡಿ ಬರುವುದು ಕನಕದಾಸರು ಮಾಡಿಕೊಂಡಿದ್ದ ಪದ್ಧತಿಯಾಗಿ ಕಾಣುತ್ತದೆ. ಪುರಂದರ – ಕನಕದಾಸರುಗಳು ಸಂಚರಿಸಿದ ಸ್ಥಳಗಳನ್ನು ಬಿಡದೆ ಕ್ರಿ. ಶ. ೧೮೭೫ ರವರೆಗೂ ಇದ್ದ ಕರ್ಣಾಟಕದ ಎಲ್ಲಾ ಪ್ರಸಿದ್ಧ ಹರಿದಾಸರೂ ಸಂದರ್ಶಿಸಿ ಆಯಾ ಕ್ಷೇತ್ರಮೂರ್ತಿಗಳನ್ನು ಕೊಂಡಾಡಿರುವುದು ಬಹುಮಾನ್ಯವಾದ ಸಂಪ್ರದಾಯವೆಂದು ಕಂಡುಬಂದಿದೆ.

ಕನಕದಾಸರು ಬೇಲೂರಿನಿಂದ ಪ್ರಯಾಣಮಾಡಿದಾಗ, ವೈಕುಂಠದಾಸರು, ಎಷ್ಟು ಮಹೋತ್ಸವಮಾಡಿ ಅವರನ್ನು ಹಿಂಬಾಲಿಸಿದರೆಂಬುವುದು ವರ್ಣನೆಗೆ ಸಿಲುಕದ ವಿಷಯವಾಗಿದೆ. ನಿರ್ಗಮನೋತ್ಸವದಲ್ಲಿ ಯಗಚೀನದಿಯ ಪರ್ಯಂತರ ಜನರ ದೃಷ್ಟಿ ಕೇಂದ್ರದಲ್ಲಿದ್ದ ದಾಸರು ತಮ್ಮ ಸಹಜ ಸ್ವಭಾವದಿಂದ ಏಕತಾರೆಯನ್ನು ಹಿಡಿದುಕೊಂಡು ಪಾದಚಾರಿಗಳಾಗಿ ಪ್ರಯಾಣ ಮಾಡಿದ ಸಂಗತಿಯಾದರೋ ಅವರ ಸರಳತೆಯ ಮೂರ್ತಿ ಮಂತ ನಿದರ್ಶನವಾಗಿದೆ. ಮೇನೆಪಲ್ಲಕ್ಕಿಗಳಲ್ಲಿ ಕುಳಿತು ನೂರಾರು ಶಿಷ್ಯ ಪರಿವಾರದಿಂದ ಯುಕ್ತರಾಗಿ ಪ್ರಯಾಣ ಮಾಡಬೇಕೆಂದರೆ ಕನಕದಾಸರಿಗೆ ದೊಡ್ಡದಾಗಿರಲಿಲ್ಲ. ರಾಜ್ಯಾಡಳಿತ ಮಾಡುವುದನ್ನು ಬಿಟ್ಟು, ಎಂದು ಹರಿದಾಸರಾದರೋ ಅಂದಿನಿಂದ ಕನಕದಾಸರು ಒಂದು ದಿನವಾದರೂ ಯಾನಾರೋಹಣ ಮಾಡಲಿಲ್ಲ. ಬೇಲೂರಿನಿಂದ ಹೊರಟವರು ಮೇಲುಕೋಟೆಯನ್ನು ಸೇರುವವರೆಗೆ ಮಾರ್ಗದಲ್ಲಿ ವಿಶ್ರಮಿಸಿಕೊಳ್ಳಲಿಲ್ಲ. ಮೇಲುಕೋಟೆಯಲ್ಲಿ ಚಲುವರಾಯಸ್ವಾಮಿಯ ಮೇಲೆ ಕನಕದಾಸರು ಅನೇಕ ದೇವರ ನಾಮಗಳನ್ನು ಹಾಡಿರುತ್ತಾರೆ. ಅಂತೆಯೇ ನಂಜನಗೂಡು ಶ್ರೀರಂಗಪಟ್ಟಣ ಮಳೂರು ಮುಳಬಾಗಿಲುಗಳಲ್ಲಿ ಹಾಡಿದ ನಾಮಗಳೂ ಹೇರಳವಾಗಿವೆ.

ಕನಕದಾಸರು ತಮ್ಮ ಯಾತ್ರೆಯನ್ನು ಮುಗಿಸಿ, ಲಕ್ಷಾವಧಿ ಜನರನ್ನು ಭಕ್ತಿವಂತರನ್ನಾಗಿ ಮಾಡಿ, ವ್ಯಾಸರಾಯರ ಸನ್ನಿಧಿಯಲ್ಲಿ ಕೆಲವು ಕಾಲವಿರಬೇಕೆಂದು ವಿಜಯನಗರಕ್ಕೆ ಬಂದರು. ವ್ಯಾಸರಾಯರಾದರೂ ಮಹಾಯಾತ್ರಾರೂಪವಾದ ದೊಡ್ಡ ಸಂಚಾರಗಳನ್ನು ಪದೇ ಪದೇ ಮಾಡದಿದ್ದರೂ ಆಗಾಗ ಕರ್ಣಾಟಕದ ಒಳರಾಷ್ಟ್ರಗಳಲ್ಲಿ ಸಂಚರಿಸಿ ಬರುತ್ತಿದ್ದರು. ಯಾವುದು ತಪ್ಪಿದರೂ ತಿರುಪತಿ ಯಾತ್ರೆಯು ವರ್ಷಕ್ಕೊಮ್ಮೆ ತಪ್ಪುತ್ತಿರಲಿಲ್ಲ. ವ್ಯಾಸರಾಯರು ಮೇನೆಯಲ್ಲಿ ಕುಳಿತು ಹೊರಟರೆಂದರೆ ಎಲ್ಲರಿಗಿಂತ ಮುಂದೆ ಕನಕದಾಸರು ಪ್ರಯಾಣ ಮಾಡುತ್ತಿದ್ದರು. ವಾರ್ತಾವಾಹಕನಂತೆ – "ಗುರುಸಾರ್ವಭೌಮರು ದಯಮಾಡುತ್ತಿದ್ದಾರೆ; ದರ್ಶನಮಾಡಿರಿ; ಸದುಪದೇಶವನ್ನು ಪಡೆಯಿರಿ; ಭಕ್ತಿವಂತರಾಗಿರಿ; ಮುಕ್ತಿ ಪಥವನ್ನು ಹಿಡಿಯಿರಿ" ಎಂದು ಜನರಿಗೆ ಸಾರುತ್ತಿದ್ದರು. ಗುಂಪು ಗುಂಪಾಗಿ ಜನರು ಬಂದು ಗುರುಗಳನ್ನು ಸತ್ಕರಿಸಿ, ಅವರ ಉಪದೇಶ

ವನ್ನು ಕೇಳಿ ಕೃತಾರ್ಥರಾಗುತ್ತಿದ್ದರು. ಅರಣ್ಯ ಮಾರ್ಗದಲ್ಲಿ ವ್ಯಾಸಭಗವಾನರ ಮತ್ತು ದಾಸವರ್ಯರ ಮಾನಸಪೂಜೆಗಾರಂಭವಾಗುತ್ತಿತ್ತು. ವನ್ಯ ಫಲಪುಷ್ಪಗಳನ್ನು ಕನಕದಾಸರು ಮಾನಸಿಕವಾಗಿ ಶ್ರೀ ಹರಿಗೆ ಸಮರ್ಪಿಸುತ್ತಾ ಮಾರ್ಗಕ್ರಮಣ ಮಾಡುತ್ತಿದ್ದರು. ಕನಕದಾಸರು ಅರ್ಪಿಸಿದ ಫಲಪುಷ್ಪಗಳನ್ನು ವ್ಯಾಸರಾಯರು ಚಿಂತನೆಮಾಡಿದ ಕೂಡಲೇ ದಾಸರು ಓಡಿ ಬಂದು – ಮಹಾಸ್ವಾಮಿ, ಅವು ನಿರ್ಮಾಲ್ಯವೆಂದು ಹೇಳುತ್ತಿದ್ದರು. ಕನಕದಾಸರ ಜ್ಞಾನವನ್ನು ನೋಡಿ ವ್ಯಾಸರಾಯರು ಆಶ್ಚರ್ಯಪಡುತ್ತಿದ್ದರು ಪೂಜಾ ಕಾಲದಲ್ಲಿ ಪೆಟ್ಟಿಗೆಯನ್ನು ತೆರೆದೊಡನೆಯೇ ಕನಕದಾಸರು ಅರ್ಪಿಸಿದ ಕುಸುಮಗಳು ಕಂಗೊಳಿಸುತ್ತಿದ್ದುವು. ವ್ಯಾಸರಾಯರು ಮಠದ ಜನರನ್ನು ಕರೆದು, ಇದು ನೋಡಿ, ಕನಕದಾಸರ ಮಾನಸ ಪೂಜಾ ಪ್ರಭಾವವೆನ್ನುತ್ತಿದ್ದರು.

ಒಂದು ಏಕಾದಶಿಯ ಮಧ್ಯಾಹ್ನ ಸ್ವಾಮಿಗಳು ಗೋಪಾಲಕೃಷ್ಣಸ್ವಾಮಿಗೆ ಸಮರ್ಪಿಸಿದ ಕದಳೀಫಲಗಳನ್ನು ತಟ್ಟೆಯಲ್ಲಿಟ್ಟುಕೊಂಡು ಮಠದ ಬ್ರಾಹ್ಮಣ ನೌಕರರನ್ನು ಕರೆದು – "ನೀವು ಕೆಲಸಗಾರರು, ದಾರ್ಢ್ಯವಿದ್ದವರು ಉಪವಾಸಮಾಡಬಹುದು; ಇಲ್ಲದಿದ್ದವರು ಈ ಫಲಗಳನ್ನು ಏಕಾಂತ ಸ್ಥಳದಲ್ಲಿ ಭುಜಿಸಬಹುದು" ಎಂದು ಎಲ್ಲರಿಗೂ ಕೊಟ್ಟು, ಕನಕದಾಸರಿಗೂ ನೀನೂ ಹಾಗೇ ಮಾಡೆಂದು ಎರಡು ಫಲಗಳನ್ನು ಕೈಗೆ ಹಾಕಿದರು. ಎಲ್ಲರೂ ಫಲಗಳನ್ನು ಭಕ್ಷಿಸಿ, ಸ್ವಾಮಿಗಳು ನಮ್ಮ ಇಂಗಿತವರಿತು ತಕ್ಕಂತೆ ನಡೆಸಿದರೆಂದು ಸಂತುಷ್ಟರಾದರು. ಕನಕದಾಸರಾದರೋ – "ಸ್ವಾಮಿ ತಾವು ಹೇಳಿದಂತೆ ನನಗೆ ಏಕಾಂತಸ್ಥಳವು ದೊರೆಯಲಿಲ್ಲ. ತತ್ವಾಭಿಮಾನಿಗಳಿಲ್ಲದ, ವಾಯು ಸೂರ್ಯಚಂದ್ರಾದಿಗಳಿಗೆ ಗೋಚರವಿಲ್ಲದ, ಸರ್ವಸಾಕ್ಷಿಯೂ ಸರ್ವತ್ರವ್ಯಾಪ್ತನೂ ಆದ ದೇವರಿಲ್ಲದ ಏಕಾಂತ ಸ್ಥಳವು ಯಾವುದೋ ತಾವೇ ತೋರಿಸಿಕೊಡಬೇಕೆಂದು ಆ ಫಲಗಳನ್ನು ಮುಂದಿಟ್ಟರು. ನೌಕರರ ಮನಸ್ಸು ಖಿನ್ನವಾಯಿತು. ಸ್ವಾಮಿಗಳು–'ನಿಮಗೂ ದಾಸರಿಗೂ ಇರುವ ವ್ಯತ್ಯಾಸವು ಇದೆ' ಎಂದರು.

ಭಗವತ್ಪರರಾದವರ ಆಚರಣೆಗಳಿಗೂ ಸಾಮಾನ್ಯಜನರ ಭಾವನೆ ಆಚರಣೆಗಳಿಗೂ ಜಗತ್ತಿನಲ್ಲಿ ಮಹದಂತರವಿರುವುದು. ಹೀಗೆ ವ್ಯಾಸರಾಯರ ಸನ್ನಿಧಿಯಲ್ಲಿ ಬಹುದಿನಗಳಿದ್ದು– ಕನಕದಾಸರು ಸ್ವಾಮಿಗಳ ಅನುಮತಿಯನ್ನು ಪಡೆದು ತಿರುಪತಿಗೆ ಪ್ರಯಾಣಮಾಡಿದರು. ಕೆಲವು ಕಾಲಾನಂತರ ಕಾಗಿನೆಲೆಯಲ್ಲಿದ್ದು ಸಮೀಪಸ್ಥವಾದ ಕದರು ಮುಂಡರಿಗಿಯಲ್ಲಿ ಮೋಹನ ತರಂಗಿಣಿಯೆಂಬ ಗ್ರಂಥವನ್ನು ರಚಿಸಿ ಶ್ರೀ ಕೇಶವನಿಗರ್ಪಿಸಿದರು. ಕನಕದಾಸರ ಕಳಕಳಿಯು ಯಾವಾಗಲೂ ಅಜ್ಞಾನಿಜನಗಳ ಉದ್ಧಾರದ ಕಡೆಗಿದ್ದಿತು. ತತ್ವವರಿಯದೆ ಕುಲದ ಹೆಸರಿನಿಂದ ಶ್ರೇಷ್ಠತ್ವ ತೋರಿಸುವವರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಿದ್ದರು. ಕರ್ನಾಟಕದಲ್ಲಿ ವಿವಿಧ ಜಾತಿಭೇದಗಳುಳ್ಳ ಬಹು ಜನಾಂಗದಲ್ಲಿ ವಿಷ್ಣುಭಕ್ತಿ ನೆಲೆಸುವುದಕ್ಕೂ, ಅವರಲ್ಲಿದ್ದ ಅನಾರ್ಯ ಪದ್ಧತಿಗಳು ಕಣ್ಮರೆಯಾಗಿ ಆರ್ಯಸಂಸ್ಕೃತಿಯು ನೆಲೆಸುವುದಕ್ಕೂ ಕನಕದಾಸರೇ ಮುಖ್ಯ ಕಾರಣರಾದರು. ಜಾತಿಭೇದದಿಂದಲೇ ಊರು–ಜಾತಿಭೇದದಿಂದಲೇ ಆಳುತ್ತಿರುವ ಭರತಖಂಡದಲ್ಲಿ, ಯಾವುದಾದರೊಂದು ಜಾತಿಯಲ್ಲಿ

ಸತ್ಪುರುಷರು ಅವತರಿಸಿದರೆಂದರೆ, ಅವರ ವರ್ಚಸ್ಸವು ಇತರ ಜಾತಿಗಳವರ ಮೇಲೆ ಕೂಡುವುದು ಸುಲಭವಾಗಿ ಸಾಧ್ಯವಾಗುವುದಿಲ್ಲ, ಮಾತೆತ್ತಿದರೆ 'ನಮ್ಮ ಜಾತಿಯವರಲ್ಲ' ಎಂಬುದಾಗಿ ಜನರಾಡಿಬಿಡುತ್ತಾರೆ. ಕನಕದಾಸರಂಥಾ ವಿಭೂತಿಪುರುಷರು ಶೂದ್ರ ಸಮಾಜದಲ್ಲಿ ಜನ್ಮತಾಳಿದುದರಿಂದ ಅವರ ಉಪದೇಶಕ್ಕೆ ಆ ಸಮಾಜದಲ್ಲಿ ಯಾವಸ್ಥಾನ-ಆದರ ಗೌರವ ದೊರೆಯಿತೋ ಅವು ಬ್ರಾಹ್ಮಣರಲ್ಲಿ ಅವತರಿಸಿದ್ದರೆ ದೊರೆಯುತ್ತಿರಲಿಲ್ಲ. ಆಯಾ ಜನರಲ್ಲಿ ಅವರ ಪದ್ಧತಿಗೆ ತಕ್ಕಂತೆ ಒಳಹೊಕ್ಕು ನಡೆದು, ಅವರನ್ನು ತಮ್ಮ ದಾರಿಗೆಳೆತರುವುದು, ಬಹಳ ತಾಳ್ಮೆಯುಳ್ಳವರಿಂದ ಮಾತ್ರ ಸಾಧ್ಯ! ಒಮ್ಮೊಮ್ಮೆ ಕನಕದಾಸರು ಶೂದ್ರಜನರ ಉತ್ಸವದಲ್ಲಿ ಜೇಡು ಕೊರಳಿಗೆ ತಮ್ಮಟೆಯನ್ನು ಕಟ್ಟಿಕೊಂಡು ಕುಣಿಯುತ್ತಾ ಪದಗಳನ್ನು ಹಾಡಿ ಜ್ಞಾನೋಪದೇಶಮಾಡಿದ್ದಾರೆ.–'ಡುಬ್‌ಡುಬು' ಎಂದು ಬಾರಿಸುತ್ತಾ–

ಪದ

ದೇವಿ ನಮ್ಮ ದ್ಯಾವರು ಬಂದರು–ಬನ್ನೀರೇ ನೋಡ ಬನ್ನಿರೇ ಪ.

ಕೆಂಗಣ್ಣ ಮೀನನಾಗಿ ನಮರಂಗ
ಗುಂಗಾಡಿ ಸೋಮನ ಕೊಂದಾನ್‌ಮ್ಯಾ
ಗುಂಗಾಡಿ ಸೋಮನ ಕೊಂದೂ ವೇದವ
ಭಂಗಾರ ದೊಡಲೋನಿಗಿತ್ತಾನ್‌ಮ್ಯಾ ೧

ದೊಡ್ಡ ಮಡುವಿ–ನೊಳಗೇ ನಮರಂಗ
ಗುಡ್ಡವ ಬೆನ್ನಿಲಿ ಪೊತ್ತಾನ್‌ಮ್ಯಾ
ಗುಡ್ಡವ ಬೆನ್ನಿಲಿ ಪೊತ್ತೂ ಸುರರನ್ನು
ದೊಡ್ಡವರನ್ನಾ ಮಾಡ್ಯಾನ್‌ಮ್ಯಾ ೨

ಚನ್ನ ಕಾಡಿನಹಂದಿಯಾಗಿ ನಮರಂಗ
ಚಿನ್ನದ ಕಣ್ಣನ ಕೊಂದಾನ್‌ಮ್ಯಾ
ಚಿನ್ನದ ಕಣ್ಣನ ಕೊಂದೂ ಭೂಮಿಯ
ವನ್ನಜ ಸಂಭವಗಿತ್ತಾನ್‌ಮ್ಯಾ ೩

ಸಿಟ್ಟಲಿ ಸಿಂಹನಾಗಿ ನಮರಂಗ
ಹೊಟ್ಟೆಯ ಕರುಳ ಬಗೆದಾನ್‌ಮ್ಯಾ
ಹೊಟ್ಟೆಯ ಕರುಳ ಬಗೆದೂ ನಮರಂಗ
ಪುಟ್ಟಗೆ ಪಟ್ಟವ ಕೊಟ್ಟಾನ್‌ಮ್ಯಾ ೪

ಹುಡುಗ ಹಾರುವನಾಗಿ ನಮರಂಗ
ಬೆಡಗಿನ ಮುಗಿಲಿಗೆ ಬೆಳೆದಾನ್‌ಮ್ಯಾ
ಬೆಡಗಿನ ಮುಗಿಲಿಗೆ ಬೆಳೆದೂ ಬಲಿಯನ್ನು
ಅಡಿಯಿಂದ ಪಾತಾಳಕ್ಕೊತ್ಯಾನ್‌ಮ್ಯಾ ೫

ತಾಯ ಮಾತನು ಕೇಳಿ ಸಾವಿರ ತೋಳಿನ
ಆವಿನ ಕಳ್ಳನ ಕೊಂದಾನ್ಮ್ಯಾ
ಆವಿನ ಕಳ್ಳನ ಕೊಂದೂ ಭೂಮಿಯ
ಅವನಿ ಸುರರೀಗೆ ಇತ್ತಾನ್ಮ್ಯಾ

ಪಿಂಗಳ ಕಣ್ಣಿನ ಮಂಗಗಳಾ ಕೂಡಿ
ಛಂಗನೆ ಲಂಕೆಗೆ ಪೋದಾನ್ಮ್ಯಾ
ಛಂಗನೆ ಲಂಕೆಗೆ ಪೋಗಿ ನಮರಂಗ
ಹೆಂಗಸು ಕಳ್ಳನ ಕೊಂದಾನ್ಮ್ಯಾ

ಕರಿಯ ಹೊಳೆಯಲಿ ತುರುಗಳ ಕಾಯುತ್ತ
ಉರಗನ ಮಡುವ ಧುಮುಕಾನ್ಮ್ಯಾ
ಉರಗನ ಹೆಡೆಮೇಲೆ ಹಾರ್ಯಾರಿ ಕುಣಿವಾಗ
ನಾರೇರಿಗೊರವ ಕೊಟ್ಟಾನ್ಮ್ಯಾ ೮

ಬಿಂಕದ ಗೋವಳನಾಗಿ ನಮರಂಗ
ಡೊಂಕಿನ ಮುದುಕಿಯ ಕೂಡಾನ್ಮ್ಯಾ
ಡೊಂಕಿನ ಮುದುಕಿಯ ಕೂಡಿ ಮಾವನ
ಬಿಂಕವನೆಲ್ಲ ಮುರಿದಾನ್ಮ್ಯಾ ೯

ಭಂಡನಂದದಿ ಪುಂಡರೀಕಾಕ್ಷನು
ಕಂಡ ಕಂಡಲ್ಲಿ ತಿರುಗ್ಯಾನ್ಮ್ಯಾ
ಕಂಡ ಕಂಡಲ್ಲಿ ತಿರುಗಿ ತ್ರಿಪುರರ
ಹೆಂಡಿರನ್ನೆಲ್ಲ ಕೆಡಿಸ್ಯಾನ್ಮ್ಯಾ ೧೦

ಚಲುವ ಹೆಂಡತಿ ಕುದುರೆಯಮಾಡಿ
ಒಳ್ಳೆಯ ರಾವುತನಾದನ್ಮ್ಯಾ
ಒಳ್ಳೆಯ ರಾವುತನಾಗಿ ಯುವನರ
ಪೊಳ್ಳ ಹೊಟ್ಟೆಯ ಮೇಲೊದ್ದಾನ್ಮ್ಯಾ ೧೧

ಪೋಲಿಸ ಮೇಸ್ತ್ರಯ್ಯ ಭರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ಕಟೆದಾನ್ಮ್ಯಾ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು
ಕನಕಪ್ಪ ಕುಣಿಕುಣಿದಾಡ್ಯಾನ್ಮ್ಯಾ ೧೨

ಎಂಬುದಾಗಿ ಹಾಡಿದ್ದಾರೆ. ಈ ಪದವನ್ನು ಉತ್ಸಾಹದಿಂದ ಸಾವಿರಾರು ಜನರು ಕೇಳಿದ್ದಾರೆ. ಪ್ರಾಣಿಗಳ ಬಲಿ ಕೊಡುವುದನ್ನು ಬಿಟ್ಟು ಕನಕದಾಸರ ಶಿಷ್ಯರಾಗಿದ್ದಾರೆ.

ಉಪದೇಶವು ಯಾವಾಗಲೂ ಜನರ ಪರಗತಿಗೆ ತಕ್ಕುದಾಗಿರಬೇಕು. ತಿಳಿಯುವ

ವಿಷಯವನ್ನು ತಿಳಿಸಿಕೊಡಲು ಅವರವರ ತಿಳುವಿನ ದಾರಿಯಲ್ಲೇ ಹೋಗಬೇಕು. ಹಾಗೆ ಮಾಡಿದಲ್ಲದೆ ಸಮಾಜ ಸುಧಾರಣೆಯಾಗುವುದಿಲ್ಲ. ಈ ದಾರಿಯಲ್ಲಿ ಪ್ರವೇಶಿಸಿ ಜಯ ಶೀಲರಾದವರೆಂದರೆ ಕನಕದಾಸರು. ಕನಕದಾಸರ ಸಮಾಜ ಸೇವೆಯು ಅತಿ ಮಹತ್ವದ ಸೇವೆಯು, ಕನಕದಾಸರ ಹಿಂದೂಸಮಾಜ ಸಂಘಟನೆಯು ಅವರ ಯಶಸ್ವಿಯಾದ ದಿಗ್ವಿಜಯವು. ಜಾತಿಜಾತಿಗಳಲ್ಲಿ ತಿರಸ್ಕೃತರಾದವರಿಗೆ ಪುರಸ್ಕಾರ ಕೊಟ್ಟವರು ಕನಕ ದಾಸರು. ಸಾರಾಂಶದ ಮಾತಿನಿಂದ ಕರೆಯಬೇಕಾದರೆ ತಿರಸ್ಕಾರ ಶಬ್ದಕ್ಕೇ ತಿರಸ್ಕಾರ ಕೊಟ್ಟವರು ಕನಕದಾಸರು.

ಕಾಗಿನೆಲೆಯಲ್ಲಿ ವಿವಿಧರೀತಿಯಿಂದ ನಿಂದಿತಳಾಗಿ ಜೀವಿಸಿದ್ದ ವೇಶ್ಯೆಯೊಬ್ಬಳು ತನ್ನ ವೃತ್ತಿಯು ತನಗೇ ಬೇಸರವಾಗಲು, ವಿರಕ್ತಳಾಗಿ ಶಿಷ್ಯಳಾಗಿರುವೆನೆಂದು ದಾಸರನ್ನು ಕೇಳಿಕೊಂಡಳು. ಕನಕರು ಆಕೆಗೆ ಕೇಶವ ದೇವಾಲಯದ ಮಾಲಾಕಾರಿಯಾಗಿರುವಂತೆ ನೇಮಿಸಿ ತಮ್ಮ ಬಿಡಾರದಲ್ಲಿ ವಸತಿಯನ್ನು ಮಾಡಿಕೊಟ್ಟರು. ವೃದ್ಧಾಪ್ಯದಲ್ಲಿ ದಾಸರಿಗೆ ಪ್ರಾರಬ್ಧಕರ್ಮ ಬಿಡಲಿಲ್ಲವೆಂದು ಜನರು ನಿಂದಿಸಲು ಅಂಜಲಿಲ್ಲ. ಮಾಲಾಕಾರಿಯು ಮಹಾ ಭಕ್ತಳಾಗಿದ್ದು ದಾಸರ ವಸ್ತ್ರಕ್ಷಾಲನ ಶಯ್ಯಾರಚನ ಸೇವಾಮಾಡುತ್ತಿದ್ದಳು. ಗಾನರಸಿಕಳಾಗಿದ್ದುದರಿಂದ ಆದಿಕೇಶವನ ದೇವಾಲಯದಲ್ಲಿ ದಾಸರ ಪದಗಳನ್ನು ಹಾಡುತ್ತಿದ್ದಳು. ವಯಸ್ಕರಾಗಿದ್ದರೂ ದಾಸರ ದೇಹದಾರ್ಢ್ಯವನ್ನೂ ವಿರಕ್ತಳಾಗಿದ್ದರೂ ಮಾಲಾ ಕಾರಿಯ ಸೌಂದರ್ಯವನ್ನೂ ಒಂದುಗೂಡಿಸಿದ ಜನರ ಸಲುವಾಗಿ ದಾಸರು ಶ್ರೀ ಆದಿಕೇಶ ವನ ದೇವಾಲಯದಲ್ಲಿ ಭಗವಂತನಿಗೆ ಸರ್ವಸಮರ್ಪಣಾ ಮನೋಭಾವದಿಂದ ಪ್ರೇರಿತರಾಗಿ

ಕೇತಾರಗೌಳ—ಅಟ್ಟತಾಳ

ತನು ನಿನ್ನದು ಜೀವನ ನಿನ್ನದೋ ಪ.
ಅನುದಿನದಲಿ ಬಾಹ–ಸುಖದುಃಖ ನಿನ್ನದಯ್ಯ ಅ.

ಸವಿನುಡಿ ವೇದ ಪುರಾಣಶಾಸ್ತ್ರಂಗಳ
ಕಿವಿಯಲ್ಲಿ ಕೇಳುವ ಕಥೆ ನಿನ್ನದೋ—
ನವಮೋಹನಾಂಗಿಯರ ರೂಪವ ಕಣ್ಣಿಂದ
ಎವೆಯಿಕ್ಕದೆ ನೋಡಿದ ನೋಟ ನಿನ್ನದಯ್ಯ ೧

ಒಡಗೂಡಿ ಗಂಧಕಸ್ತೂರಿ ಪರಿಮಳಗಳ
ಬಿಡದೆ ಲೇಪಿಸಿಕೊಂಡ ಸುಖ ನಿನ್ನದೋ
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡುರುಚಿಗೊಂಡರೆ ಆ ರುಚಿ ನಿನ್ನದಯ್ಯ ೨

ಮಾಯಾಪಾಶದ ಬಲೆಯೊಳಗೆ ಸಿಲ್ಕಿರುವಂಥ
ಕಾಯಪಂಚೇಂದ್ರಿಯಂಗಳು ನಿನ್ನವೋ
ನ್ಯಾಯದಿ ಕನಕನೊಡೆಯನಾದಿಕೇಶವ
ರಾಯ ನೀನಲ್ಲದೆ ನರರ ಸ್ವತಂತ್ರವೇ— ೩

ಎಂಬುದಾಗಿ ಹಾಡಿದರು. ನಿಂದ್ಯರಿಗೆ ನಿಂದೆಗಳು ಬರದಿರವು. ಕನಕದಾಸರೂ ಪುರಂದರ ದಾಸರಂತೆ ದೀರ್ಘಜೀವಿಗಳು. ಐವತ್ತು ವರ್ಷಕ್ಕೆ ಮೇಲ್ಪಟ್ಟು ಸಮಾಜಸೇವೆ ಮಾಡಿದವರು. ಜಾತಿಮತಗಳ ವಿವಾದದ ಬಹು ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಬಹು ಶಾಂತಿಯಿಂದ ಕೆಲಸಮಾಡಿ ಸಮಾಜವನ್ನುದ್ಧರಿಸಿದವರು. ನಿರ್ಭಯವಾಗಿ—

ಕಾಂಬೋದಿ—ಅಟ್ಟತಾಳ

ಕುಲಕುಲಕುಲವೆಂದು ಹೋರಾಡದಿರಿ, ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರಾ ಪ.

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ—
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ— ೧

ಜಲವೆ ಸಕಲಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರು ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ದೇಹದ
ನೆಲೆಯನರಿತು ನೀ ನೆನೆ ಕಂಡ್ಯ ಮನುಜಾ ೨

ಹರಿಯೆ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಂದೆಲ್ಲೂ ಹರಿದಾಡಿರೋ
ಶಿರಿಕಾಗಿನೆಲೆಯಾದಿ ಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ ೩

ಎಂದು ಹಾಡಿ ಸಮಾಜವನ್ನು ಕಟ್ಟಿದವರು ತೊಂಭತ್ತು ವಯಸ್ಸಾದರೂ ಜಗಜಟ್ಟಿಯಂತೆ ಕಂಗೊಳಿಸಿದವರು. ಹೆಸರಿಗೆ ತಕ್ಕಂತೆ ಕನಕವರ್ಣದ ಶರೀರಕಾಂತಿಯಿಂದ ಶೋಭಿಸಿದವರು.

ಕನಕದಾಸರ ಕಡೆಯ ದರ್ಶನವಾದದ್ದು ಕನಕಗಿರಿಯಲ್ಲಿಂದು (ತಿರುಪತಿ) ಬಹು ಜನರಾಡಿದರೆ, ದೇಶಾಭಿಮಾನಿಗಳು ಕಾಗಿನೆಲೆಯಲ್ಲಿಂದು, ಆದಿ ಕೇಶವನ ಪಾದಪೀಠದಲ್ಲಿರುವ ದಾಸರ ವಿಗ್ರಹವನ್ನು ತೋರಿಸುವರು.

ಕನಕದಾಸರು ಪುರಂದರದಾಸರ ತಂಬೂರಿಯನ್ನು ತಿರುಪತಿಯ ಭಂಡಾರದಲ್ಲಿಟ್ಟರು. ತಮ್ಮ ಏಕತಾರೆಯನ್ನೂ ದಂಡವನ್ನೂ ವೆಂಕಟಪತಿಯ ಗರ್ಭಗೃಹ ಪ್ರವೇಶಮಾಡುವ ದ್ವಾರದ ಮೇಲ್ಭಾಗದಲ್ಲಿ ಬಂಧಿಸಿದರು. ವ್ಯಾಸರಾಯ ಗುರುಗಳಿಗೆ ನಮೋ ಎಂದರು. ಪುರಂದರದಾಸರ ಪಾದವೇ ಗತಿಯೆಂದರು. ದೇವರ ಸೇವೆಗೆಂದು ಒಳಗೆ ಪ್ರವೇಶಮಾಡಿದರು.

ಮಹಂತರು, ಬಲು ಹೊತ್ತಾದರೂ ಕನಕದಾಸರು ಏಕಾಂತಸೇವೆಯಿಂದ ಹೊರಗೆ ಬರಲಿಲ್ಲವೆಂದು ತೆರೆಯನ್ನು ತೆರೆದರು. ಕನಕದಾಸರು ಕಾಣಿಸಲಿಲ್ಲ. ಅಲ್ಲಿ ಕಂಡೆ ಇಲ್ಲಿ ಕಂಡೆನೆಂಬ ಜನರಾಡಿಕೆಯು ಜನತೆಯಲ್ಲಿ ಕಡಿಮೆಯಾಗಲಿಲ್ಲ.

ತಮಿಳುನಾಡಿನ ಆಳ್ವಾರರ ಚರಿತ್ರೆಯಲ್ಲಿ ಶ್ರೀರಂಗದ ರಂಗನಾಥನ ಪಾದಾರ ವಿಂದದಲ್ಲಿ ಅದೃಶ್ಯರಾದ ಆಳ್ವಾರರೊಬ್ಬರ ಕಥೆಯು ಕನ್ನಡಿಗರಿಗೆ ಕರ್ಣತಾಡಿತವಾಗಿತ್ತು. ತಿರುಪತಿಯ ವೇಂಕಟಪತಿಯ ಪಾದಾರವಿಂದದಲ್ಲಿ ಕನ್ನಡದಾಸರೊಬ್ಬರು ಅದೃಶ್ಯರಾದ ಸಂಗತಿಯು ಚರಿತ್ರೆಯ ಪುನರಾವರ್ತನವಾಯಿತು.

ಅವರೇ ಇಲ್ಲದಂತಾದಮೇಲೆ ಅವರ ಗೊಡವೆಯ ವಿಸ್ತಾರವಿನ್ನೇಕೆ ?

ಶ್ರೀ ರಾಘವೇಂದ್ರ ಸ್ವಾಮಿಗಳು

"ದೇವರೆಂದರೆ ತಿರುಪತಿಯ ತಿಮ್ಮಪ್ಪನೇ! ಗುರುವೆಂದರೆ ಮಂಚಾಲೆಯ ರಾಘಪ್ಪನೇ!" ಎಂಬ ನಾಣ್ಣುಡಿಯು ನಮ್ಮ ಚರಿತ್ರ ಪುರುಷರ ಮಹಿಮೆಯನ್ನು ಕೊಂಡಾಡುತ್ತಿರುವುದು. ಈ ಮಹನೀಯರು ಗೌತಮಗೋತ್ರದವರು. ಇವರ ಪೂರ್ವಿಕರು ಕುಂಭಕೋಣೆಯಲ್ಲಿದ್ದರೆಂದು ತಿಳಿಯಬರುತ್ತದೆ. ಈ ವಂಶೀಕರು ಕ್ರಿ. ಶ. ಹದಿಮೂರನೇ ಶತಮಾನದಿಂದಲೂ ಮಾಧ್ವವೈಷ್ಣವರು. ಈ ವಂಶದಲ್ಲಿ ಜನಿಸಿದ ಕೃಷ್ಣಭಟ್ಟರೆಂಬುವರು ಕುಲಕ್ರಮದಿಂದ ಬಂದಿದ್ದ ವೇದಾಧ್ಯಯನದ ಜೊತೆಗೆ ವೀಣಾ ವಾದನವನ್ನೂ ಕಲಿತು ಪ್ರಖ್ಯಾತರಾದರು. ಇವರ ಮಧುರವಾದ ವೀಣಾಗಾನವನ್ನು ಕೇಳಿ, ಆ ಕಾಲದ ಜನರು ಅವರನ್ನು ವೀಣಾಕೃಷ್ಣಭಟ್ಟರೆಂಬ ಅಡ್ಡ ಹೆಸರಿನಿಂದ ಕರೆದರು. ಭಟ್ಟರೆಂಬ ಹೆಸರು ಮಾಧ್ವಮಂಡಲಿಯಲ್ಲಿ ಅಪೂರ್ವವೆಂದು ತೋರಬಹುದು. ಎರಡು ಶತಮಾನಗಳಿಂದ ಆ ಶಬ್ದದ ರೂಢಿ ತಪ್ಪಿರುವುದು ನಿಜ. ಭಟ್ಟ, ಶಾಸ್ತ್ರಿ, ಜೋಯಿಸ, ಅವಧಾನಿ, ತಂತ್ರಿ, ಆಚಾರ್ಯ ಎಂಬ ಹೆಸರುಗಳು ಆಯಾ ಶಾಸ್ತ್ರಾಧ್ಯಯನಮಾಡಿದ ಬ್ರಾಹ್ಮಣ ಸಾಮಾನ್ಯಕ್ಕೇ ಬರುವ ಗೌರವ ನಾಮಗಳು. ಆಚಾರ್ಯ ಶಬ್ದವು ಎಲ್ಲಕ್ಕಿಂತ ಪೂಜ್ಯನಾಮವೆಂದು ಮಾಧ್ವರು ಆ ಹೆಸರನ್ನೇ ವಿಶೇಷ ರೂಢಿಯಲ್ಲಿಟ್ಟುಕೊಂಡರು.

ಕೃಷ್ಣಭಟ್ಟರು ವೇದಾಧ್ಯಯನ ಗಾನ ವಿದ್ಯೆಗಳ ಜೊತೆಗೆ ಕಾವ್ಯವನ್ನೂ ಶಾಸ್ತ್ರವನ್ನೂ ಚೆನ್ನಾಗಿ ಕಲಿತರು. ಆ ಕಾಲದ ಬ್ರಾಹ್ಮಣರಲ್ಲಿ ಸಾಮಾನ್ಯವಾಗಿ ಉಪನಯನವಾದಂದು ಮೊದಲ್ಗೊಂಡು, ವೇದಾಧ್ಯಯನ ಮಾಡುತ್ತಿದ್ದರು. ಸ್ವಶಾಖೆಯೊಂದಿಗೆ ಅನ್ಯಶಾಖಾವೇದಗಳನ್ನೂ ಕಲಿತು ದ್ವಿವೇದಿ–ತ್ರಿವೇದಿಗಳೆಂಬ ಹೆಸರನ್ನು ಪಡೆಯುತ್ತಿದ್ದರು. ಎಲ್ಲೆಲ್ಲೂ ಶಾಸ್ತ್ರಾಭ್ಯಾಸ ನಡೆಯುತ್ತಿತ್ತು. ಕೇವಲ ವಿದ್ಯಾವಿಹೀನನೆನಿಸಿದವನೂ ತನ್ನ ನಿತ್ಯ ನೈಮಿತ್ತಿಕ ಕರ್ಮಗಳಿಗಾಗುವಷ್ಟಾದರೂ ವೇದವನ್ನು ಕಲಿಯದಿರುತ್ತಿರಲಿಲ್ಲ. ಬ್ರಾಹ್ಮಣರ ಮನೆಗಳೇ ಗುರುಕುಲಗಳಾಗಿದ್ದುವು.

ಕೃಷ್ಣಭಟ್ಟರ ವೀಣಾಪಾಂಡಿತ್ಯವು ಎಲ್ಲೆಲ್ಲೂ ಪ್ರಖ್ಯಾತವಾಯಿತು. ಇವರು ದೇಶಪರ್ಯಟನಮಾಡುತ್ತಾ ಕರ್ಣಾಟಕಕ್ಕೆ ಕೇಂದ್ರವಾಗಿದ್ದ ರಾಜಧಾನಿ ವಿಜಯನಗರಕ್ಕೆ ಬಂದರು. ಆಗಿದ್ದ ಸಾರ್ವಭೌಮ ಕೃಷ್ಣದೇವರಾಯನು (೧೫೧೯–೧೫೩೦) ಭಟ್ಟರ ಉಭಯ ವಿದ್ಯಾ ಪಾಂಡಿತ್ಯಕ್ಕೆ ಮೆಚ್ಚಿ, ಆಸ್ಥಾನದಲ್ಲಿ ಮಹಾ ವಿದ್ವಾಂಸರಾಗಿರುವಂತೆ ನಿಲ್ಲಿಸಿಕೊಂಡು ಅವರಿಂದ ವೀಣೆಯನ್ನು ಕಲಿತನು. ವಿಜಯನಗರದ ಕರ್ಣಾಟಕರಾಜರು ಮೆಚ್ಚಿದಮೇಲೆ ಕೇಳುವುದೇನು! ವಿಶೇಷ ಧನರಾಶಿಯೂ ಅನರ್ಘ್ಯ ಆಭರಣಗಳೂ ಭಟ್ಟರಿಗೆ ಗುರುಕಾಣಿಕೆಯಾದುವು. ಇವರ ಮಗ ಕನಕಾಚಲಭಟ್ಟನು, ತಂದೆಯಂತೆಯೇ ಪ್ರಖ್ಯಾತನಾಗಿ ಅನೇಕರಿಗೆ ವೇದವನ್ನೂ ಗಾಯನವನ್ನೂ ಕಲಿಸಿದನು. ಈತನ ಜೀವಿತದ ಕೊನೆಯ ಭಾಗದಲ್ಲಿ ತಿಮ್ಮಣ್ಣಭಟ್ಟನೆಂಬೋರ್ವನೇ ಪುತ್ರನಾದನು. ಕನಕಾಚಲ

ಭಟ್ಟನು ಮಾಡಿದ ವಿದ್ಯಾದಾನ ಮಹಿಮೆಯಿಂದಲೋ ಎಂಬಂತೆ ತಿಮ್ಮಣ್ಣಭಟ್ಟನೂ ದೊಡ್ಡಪಂಡಿತನಾದನು. ಈತನ ಕಾಲದಲ್ಲಿ ವಿಜಯನಗರದ ಪರಿಸ್ಥಿತಿ ಕೆಟ್ಟು ದುಷ್ಪರಿಣಾಮವಾಗತೊಡಗಿತು. ಸ್ವಚ್ಛಂದ ವೃತ್ತಿಯ ಅಳಿಯ ರಾಮರಾಜನು ವಿದ್ವಜ್ಜನರಿಗೆ ಆಶ್ರಯದಾತನಾಗಿರಲಿಲ್ಲ. ಆದಕಾರಣ ಅನೇಕಮಂದಿ ವಿದ್ವಾಂಸರು, ಆ ರಾಜಧಾನಿಯನ್ನು ಬಿಟ್ಟು ಬೇರೆ ಬೇರೆ ಕಡೆಗಳಿಗೆ ಹೋಗಿ ನೆಲೆಸಿದರು. ವೀಣಾ ತಿಮ್ಮಣ್ಣ ಭಟ್ಟನಿಗೂ ಇದೇ ಗತಿಯಾಗಿ ಕಾಂಚೀಪುರದ ಬಳಿಯಿರುವ ಭುವನಗಿರಿಯಲ್ಲಿ ನೆಲೆಸಿದನು. ಪಿತೃ ಪಿತಾಮಹರು ಕೂಡಿಟ್ಟು ಹೋಗಿದ್ದ ಧನದಿಂದ ಕೆಲಕಾಲ ಜೀವನ ಮಾಡಿದನು. ಈತನ ಪತ್ನಿ ಗೋಪಮ್ಮನಾದರೋ ನಿಗಮವನ್ನನುಸರಿಸಿದ ಸ್ಮೃತಿಗಳಂತೆಯೂ ದಿನನಾಥನನ್ನನುಸರಿಸಿದ ಪದ್ಮಿನಿಯಂತೆಯೂ, ವಸಿಷ್ಠನನ್ನನುಸರಿಸಿದ ಅರುಂಧತಿಯಂತೆಯೂ ಪತಿಪರಾಯಣೆಯಾಗಿದ್ದಳು. ಈ ದಂಪತಿಗಳಿಗೆ ವೆಂಕಮ್ಮನೆಂಬ ಮಗಳೂ ಗುರುರಾಜನೆಂಬ ಮಗನೂ ಜನಿಸಿದರು. ಮಧುರೆಯ ಲಕ್ಷ್ಮೀನೃಸಿಂಹಾಚಾರ್ಯರೆಂಬ ಸಚ್ಛಾಸ್ತ್ರ ಪಾರಂಗತ ಬ್ರಾಹ್ಮಣರೊಂದಿಗೆ ವೆಂಕಮ್ಮನ ವಿವಾಹವಾಯಿತು. ಗುರುರಾಜನಿಗೆ ಚೌಲೋಪನಯನಗಳಾದುವು. ಇಷ್ಟಾದರೂ ಆ ದಂಪತಿಗಳಿಗೆ ಸಂತತಿಯ ಹಂಬಲವು ತಪ್ಪಲಿಲ್ಲ. ಹಿರಿಯರು ಕೂಡಿಟ್ಟ ಧನವು ಮುಗಿಯುತ್ತ ಬಂದರೂ ಮನಸ್ಸಿಗೆ ತಾಪವಾಗಲಿಲ್ಲ. ಗುರುರಾಜನ ನಂತರ ಏಳೆಂಟು ವರ್ಷಗಳಾದರೂ ಮತ್ತೆ ಮಕ್ಕಳಾಗಲಿಲ್ಲ. ಕಾಮಿತಾರ್ಥ ಪ್ರದಾಯಕನಾದ ಶ್ರೀನಿವಾಸನಿರುವಾಗ ಭಯವೇನೆಂದುಕೊಂಡು, ಆ ದಂಪತಿಗಳು, ಒಂದೇ ಮನಸ್ಸಿನಿಂದ ಸೇವೆ ಮಾಡಿ ಮತ್ತೊಬ್ಬ ಮಗನನ್ನು ಪಡೆವೆವೆಂದು ಕೃತನಿಶ್ಚಿತರಾಗಿ ತಿರುಪತಿಗೆ ಬಂದೇಬಿಟ್ಟರು. ಇಬ್ಬರೂ ಕಟ್ಟುನಿಟ್ಟಾದ ಸೇವೆ ಮಾಡಲು ಸಿದ್ಧರಾಗಿ ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕಿದರು. ಆಹಾರ ನಿಯಮನದಿಂದಲೂ ಭಗವತ್ಸೇವೆಯ ಪ್ರಭಾವದಿಂದಲೂ ಇವರ ದೇಹೇಂದ್ರಿಯಗಳು ಪವಿತ್ರವಾದುವು. ಸ್ವಾಮಿಯನ್ನು ಪರಿಪರಿ ಕೊಂಡಾಡಿ ದೇಹ ಪೋಷಣೆಯ ಹಂಗನ್ನು ತೊರೆದರು. ದಿನದ ಮೇಲೆ ದಿನಗಳು ಕಳೆದಂತೆ, ತಿಂಗಳುಗಳೂ ಕಳೆದುವು. ಹೀಗಿರಲು ಒಂದು ರಾತ್ರೆ ಸ್ವಪ್ನದಲ್ಲಿ ತಿಮ್ಮಣ್ಣನಿಗೆ ಶ್ರೀನಿವಾಸನು ದರ್ಶನವಿತ್ತನು.–"ಎಲವೊ ಬ್ರಾಹ್ಮಣ! ನಿನ್ನಿಷ್ಟಾರ್ಥವು ಸಿದ್ಧಿಸಿತು. ನಿನ್ನ ಸೇವೆಗನುರೂಪನಾದ ಪುತ್ರನೇ ಜನಿಸುವನು. ಅವನು ಸಕಲ ವಿದ್ಯಾವಿಶಾರದನೂ ಭಕ್ತಾಗ್ರಣಿಯೂ, ಸರ್ವಜ್ಞನೂ ಆಗಿ ನಿನ್ನ ವಂಶದ ಕೀರ್ತಿಯನ್ನು ಆಚಂದ್ರಾರ್ಕವಾಗಿ ನಿಲ್ಲಿಸುವನು. ಚಿಂತಿಸದಿರು" ಎಂದು ವರವಿತ್ತನು. ಭಟ್ಟನು ಸ್ವಪ್ನಾವಸ್ಥೆಯಲ್ಲಿ ದರ್ಶನವಿತ್ತ ಶಂಖ ಚಕ್ರ ಗದಾ ಪದ್ಮ ಪೀತಾಂಬರ ವನಮಾಲಾಧಾರಿಯಾದ ಶ್ರೀಹರಿಯನ್ನು ಪರಿಪರಿಯಾಗಿ ಸ್ತೋತ್ರಮಾಡಿದನು. ಮಂದಹಾಸದಿಂದ ಕರುಣಾಮೃತವನ್ನೇ ವರ್ಷಿಸುತ್ತಿದ್ದ ಶ್ರೀನಿವಾಸನು ಅದೃಶ್ಯನಾಗಲು, ಭಟ್ಟನಿಗೆ ಎಚ್ಚರವಾಯಿತು. ಜಾಗ್ರತಾವಸ್ಥೆಯಲ್ಲಿ ಏನೂ ಕಾಣದೆ ಸ್ತಬ್ಧನಾಗಿ ಏನೇನೋ ಯೋಚಿಸಿದನು. ವಿಷಯಗಳನ್ನು ಪರಿಷ್ಕರಿಸಿಕೊಳ್ಳುವುದು ದುಸ್ಸಾಧ್ಯವಾಯಿತು. ಒಂದರ ಮೇಲೊಂದು ತರಂಗಗಳಂತೆ ವಿಚಾರಗಳು ಭಾಸವಾದುವು. ಎಲ್ಲವನ್ನೂ ಅಡಗಿಸಿಟ್ಟುಕೊಳ್ಳುವುದಕ್ಕೆ ಮನಃಕೋಶವು ಹಿಡಿಸದಷ್ಟಾಯಿತು. ಒಡನೆಯೇ

ಹೆಂಡತಿಯನ್ನೆಬ್ಬಿಸಿ, ತನ್ನ ಸ್ವಪ್ನ ವೃತ್ತಾಂತವನ್ನು ಹೇಳಲಾರಂಭಿಸಿದನು. ದೇವರ ಸಾಕ್ಷಾತ್ಕಾರವನ್ನು ಹೇಳಲು ಪ್ರಾರಂಭಿಸುವಷ್ಟರಲ್ಲೇ ಆನಂದಬಾಷ್ಪಗಳುದುರಿದುವು. ಮಾತು ಹೊರಡದಂತೆ ಕಂಠರೋಧವಾಯಿತು. ಮತ್ತೆ ಮನಸ್ಸನ್ನು ಬಿಗಿಹಿಡಿದು ಹೇಳತೊಡಗಿದನು. ಗೋಪಮ್ಮನೂ ಕೋಮಲ ಸ್ವಭಾವದವಳೇ ಆಗಿದ್ದುದರಿಂದ ಪತಿಯ ಆನಂದದಲ್ಲೇ ಸಮಭಾಗಿಯಾಗಿಬಿಟ್ಟಳು. ಅಂತೂ ಇಬ್ಬರೂ ಪುನಃ ನಿದ್ರೆಗೈಯದೆ ಉಳಿದ ರಾತ್ರಿಯನ್ನೆಲ್ಲಾ ಸ್ವಾಮಿಯ ಧ್ಯಾನದಲ್ಲೇ ಪರವಶರಾಗಿ ಕಳೆದರು. ಬೆಳಗಾಗುತ್ತಲೇ ಎದ್ದು ಸ್ವಾಮಿ ಪುಷ್ಕರಣಿಯಲ್ಲಿ ಮಿಂದು ವೇಂಕಟಪತಿಯ ದರ್ಶನಮಾಡಿ ಸೇವೆಯನ್ನು ಮುಗಿಸಿ-ಭುವನಗಿರಿಗೆ ಬಂದರು. ಶ್ರೀನಿವಾಸನ ಪ್ರೀತ್ಯರ್ಥವಾಗಿ ಯಾತ್ರಮಂಗಳಮಾಡಿ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸಿದರು. ಸ್ವಲ್ಪಕಾಲವೆನ್ನುವುದರೊಳಗೆ ಗೋಪಮ್ಮನು ಫಲವತಿಯಾಗಿ ಎಂದಿಗಿಂತ ತೇಜಸ್ವಿನಿಯಾಗಿ ಕಾಣಿಸಿದಳು. ನವಮಾಸ ತುಂಬಲು ಒಂದು ಶುಭದಿನ ವಾರ ನಕ್ಷತ್ರಗಳಲ್ಲಿ ಗಂಡು ಶಿಶುವನ್ನು ಪ್ರಸವಿಸಿದಳು. ಜ್ಯೋತಿಷ್ಕರು ಶಿಶುವಿನ ಕುಂಡಲಿಯನ್ನು ಶೋಧಿಸಿ, ಈ ಬಾಲಕನು ಪೂರ್ಣಾಯುಷ್ಮಂತನೂ,ಸರ್ವಜ್ಞನೂ ಸರ್ವರಿಂದಲೂ ವಂದನೀಯನೂ ಆಗುವನೆಂದು ಜಾತಕ ಬರೆದರು. ವೆಂಕಟೇಶನ ಅನುಗ್ರಹದಿಂದ ಜನಿಸಿದ ಆ ಪುತ್ರನಿಗೆ ತಿಮ್ಮಣ್ಣನು ವೇಂಕಟಭಟ್ಟನೆಂದೇ ನಾಮಕರಣ ಮಾಡಿದನು. ಬಾಲಕನ ಶ್ರೇಯೋಭಿವೃದ್ಧಿಗಾಗಿ ಬಹು ವಿಧ ದೇವತಾಸೇವೆಗಳೂ ದಾನಧರ್ಮಗಳೂ ನಡೆದುವು. ಭಟ್ಟದಂಪತಿಗಳ ಆನಂದವು ಮೇರೆಯನ್ನರಿಯದಾಯಿತು.

ತಿಮ್ಮಣ್ಣಭಟ್ಟನು ವಿಜಯನಗರವನ್ನು ಬಿಟ್ಟು ಬಹು ವರ್ಷಗಳಾಗಿದ್ದರೂ, ಭುವನಗಿರಿಯಂಥಾ ಚಿಕ್ಕ ಊರಿನಲ್ಲಿ ಪರಿಸ್ಥಿತಿಗೆ ಹೊಂದಿಕೊಂಡು ಮಿತವ್ಯಯಿಯಾಗಿ ಜೀವಿಸುವುದನ್ನು ಕಲಿಯಲಿಲ್ಲ. ದೊಡ್ಡಸ್ತಿಕೆಯು ಹಂತದಿಂದ ಕೆಳಗಿಳಿಯಲಿಲ್ಲ. ಶಿಷ್ಯರುಗಳ ಮತ್ತು ಸೇವಕರ ಸಂಖ್ಯೆ ಕಡಮೆಯಾಗಲಿಲ್ಲ. ಸಾಲದುದಕ್ಕೆ ಹಿರಿಯಮಗ ಗುರುರಾಜನ ವಿವಾಹವೂ ನಡೆದು ಸಂಸಾರ ದೊಡ್ಡದಾಯಿತು. ದಾರಿದ್ರ್ಯದ ಚಿಂತೆಯಿಂದ ದೇಹಕ್ಕೆ ವ್ಯಾಧಿಯಡರಿತು. ಜೊತೆಗೆ ವೃದ್ಧಾಪ್ಯವೂ ಪ್ರಾಪ್ತವಾಯಿತು.

ಹೀಗಿರಲು ಕುಂಭಕೋಣೆಯಲ್ಲಿ ವಿಜಯೀಂದ್ರಸ್ವಾಮಿಗಳ ಮಹಾ ಸಮಾರಾಧನೆಗೆ ಬರಬೇಕೆಂದು ಭುವನಗಿರಿಯ ವಿದ್ವಜ್ಜನರಿಗೆ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಸನ್ನಿಧಿಯಿಂದ ಆಜ್ಞಾಪತ್ರ ಬಂದಿತು. ಗುರ್ವಾಜ್ಞೆಯೆಂದು ಭಟ್ಟನು ಮಕ್ಕಳಿಬ್ಬರನ್ನೂ ಕರೆದುಕೊಂಡು ಪ್ರಯಾಣಿಕರೊಡನೆ ಹೊರಟನು. ಶ್ರೀಗಳವರ ದರ್ಶನದಿಂದ ಧನ್ಯನಾಗಿ ಮಕ್ಕಳನ್ನವರ ಪಾದಗಳಲ್ಲಿ ಸಮರ್ಪಿಸಿದನು. ಭಟ್ಟನ ಚಿಕ್ಕಮಗನಮೇಲೆ ಸ್ವಾಮಿಗಳ ಕಟಾಕ್ಷವಾಯಿತು. ಅವರು ಬಾಲಕನ ಪಟುತ್ವವನ್ನೂ ತೇಜಸ್ಸನ್ನೂ ನೋಡಿ, ತಮ್ಮಲ್ಲಿ ತಾವೇ ಏನೋ ಯೋಚಿಸಿಕೊಂಡು ಸುಮ್ಮನಾದರು. ಆರಾಧನೆಗೆ ಬಂದಿದ್ದ ಜನರೆಲ್ಲರಿಗೂ ಬಾಲಕನಮೇಲೆ ವಿಚಿತ್ರ ಪ್ರೇಮವುಂಟಾಗಿ, ಎಲ್ಲರೂ ಅವನನ್ನು ಮಾತನಾಡಿಸಿ ಸಂತೋಷಪಡುತ್ತಿದ್ದರು. ಭಟ್ಟನಾದರೋ-ಸ್ವಾಮಿಗಳ ಏಕಾಂತಸಮಯದಲ್ಲಿ ತನ್ನ ಅಂತರ್ದುಃಖಗಳನ್ನು ಹೇಳಿಕೊಂಡು ಮಕ್ಕಳ ಭವಿಷ್ಯಕ್ಕಾಗಿ ಚಿಂತಿಸಿದನು. ಶ್ರೀಗಳವರು

ನಕ್ಕು–'ಭಟ್ಟರೇ'–'ಸರಕ್ಷಿತಾ ರಕ್ಷತಿಯೋಹಿ ಗರ್ಭೇ' ಎಂಬ ಭಾಗವತೋಕ್ತಿಯನ್ನು ಮನನಮಾಡಿರಿ; ನಿಮಗೇತರ ಚಿಂತೆ? ನಿಮಗಿಂತ ನಿಮ್ಮ ಮಕ್ಕಳು ಚೆನ್ನಾಗಿ ಬಾಳುವರು. ಚಿಕ್ಕಮಗನ ಯೋಚನೆ ಹೆಚ್ಚಾಗಿರಬಹುದಲ್ಲವೆ? ಅವನ ಭಾರ ಮೂಲರಾಮನದು. ನಿಮಗಾದರೋ ದೇಹದಾರ್ಢ್ಯ ಕಡಮೆಯಾಗಿರುವುದು. ಒಂದು ಸ್ಥಳದಲ್ಲಿದ್ದು ಕಾಲ ಕಳೆಯುವುದೊಳ್ಳೆಯದು," ಎಂದು ಮುಂತಾಗಿ ಅಪ್ಪಣೆಯಿತ್ತು, ವಿಶೇಷ ಧನಸಹಾಯ ಮಾಡಿ ಕಳುಹಿಸಿದರು.

ಭಟ್ಟನಿಗೆ ಕುಂಭಕೋಣೆಯು ಪೂರ್ವಿಕರ ಸ್ಥಳವಾಗಿದ್ದರೂ, ಸ್ಥಿತಿಗತಿಗಳ ಅಭಾವಕಾರಣದಿಂದ ಈಗ ಅದೂ ಪರಸ್ಥಳವಾಗಿತ್ತು. ಆದುದರಿಂದ ಆತನು ತನ್ನ ಅಂತಿಮಕಾಲವನ್ನು ಭುವನಗಿರಿಯಲ್ಲಿ ಕಳೆಯುವುದೇ ಕ್ಷೇಮವೆಂದು ಯೋಚಿಸಿ ಅಲ್ಲಿಗೇ ಹಿಂತಿರುಗಿದನು.

ಇತ್ತ ಚಿಕ್ಕಮಗನಿಗೆ ಐದಾರು ವರ್ಷಗಳಾದುವು. ಕುಂಭಕೋಣೆಯಲ್ಲಿ ಸ್ವಾಮಿಗಳ ದರ್ಶನಮಾಡಿ ಬಂದಾಗಿನಿಂದ ತಾನೂ ಹಾಗೆಯೇ ಪೂಜೆಮಾಡುವೆನೆಂದು, ಯತಿಗಳಂತೆ ತಲೆಗೊಂದು ವಸ್ತ್ರವನ್ನು ಕಟ್ಟಿಕೊಂಡು, ತನ್ನ ಆಟದ ದೇವರ ಮುಂದೆ ಕೂಡುತ್ತಿದ್ದನು. ತಾಯಿತಂದೆಗಳವನ ವಿಚಿತ್ರ ಆಟವನ್ನು ಕಂಡು ಬೆರಗಾಗಿಬಿಡುತ್ತಿದ್ದರು. ತನ್ನ ದೇಹಾಲಸ್ಯ ಕಾರಣದಿಂದ, ಭಟ್ಟನು, ಆ ಬಾಲಕನ ವಿದ್ಯಾಭ್ಯಾಸದ ಭಾರವನ್ನು ಅಣ್ಣನಾದ ಗುರುರಾಜನಿಗೇ ಒಪ್ಪಿಸಿದ್ದನು.

ತಿಮ್ಮಣ್ಣ ಭಟ್ಟನ ವ್ಯಾಧಿ ದಿನ ದಿನಕ್ಕೆ ಹೆಚ್ಚಿತು. ಗುಣವಾಗುವ ಭರವಸೆ ತಪ್ಪಿತು. ಹಿರಿಯನಾದುದರಿಂದ ಗುರುರಾಜನಿಗೆ ಹೇಳತಕ್ಕ ಬುದ್ಧಿವಾದಗಳನ್ನು ಹೇಳಿದನು. ವೇಂಕಟಭಟ್ಟನನ್ನೂ ಗೋಪಮ್ಮನನ್ನೂ ಅವನ ಕೈಹಿಡಿದೊಪ್ಪಿಸಿ, ಮಾನದಿಂದ ಕಾಪಾಡೆಂದು ನುಡಿದು, ಗದ್ಗದ ಕಂಠನಾಗಿ ಎಚ್ಚರದಪ್ಪಿದನು. ಸ್ವಲ್ಪ ಹೊತ್ತಿನಮೇಲೆ ಮೈತಿಳಿದು ಹರಿನಾಮಸ್ಮರಣೆಗಾರಂಭಿಸಿದನು. ಶ್ವಾಸಗತಿಯು ವ್ಯಸ್ತವಾಗಲು ಎಲ್ಲರೂ ನಿರಾಶರಾದರು. ಸ್ವಲ್ಪಕಾಲ ಕಳೆಯುವುದರೊಳಗೇ ಭಟ್ಟನು ಹರಿನಾಮಸ್ಮರಣೆಯಿಂದ ಕಳೇಬರವನ್ನು ತ್ಯಜಿಸಿದನು.–ಅನಂತರ ಗುರುರಾಜಾಚಾರ್ಯನು ಬಹುಕಷ್ಟದಿಂದ ಸಂಸಾರವನ್ನು ನಿರ್ವಹಿಸಬೇಕಾಯಿತು. ತಾನು ಕಲಿತಿದ್ದ ವೀಣಾವಿದ್ಯೆಯನ್ನೇ ಜೀವನೋಪಾಯ ಸಾಧನವನ್ನಾಗಿ ಮಾಡಿಕೊಂಡನು. ಒಂದೇ ಸ್ಥಳದಲ್ಲಿದ್ದು ಜೀವಿಸುವುದು ಕಷ್ಟವಾಗಿ ದೇಶಾಟನೆಗೂ ಪ್ರಾರಂಭಿಸಿದನು. ಧರ್ಮಿಷ್ಟರಾದ ಜನರ ಸಹಾಯದಿಂದ ತಮ್ಮನಿಗೆ ಗರ್ಭಾಷ್ಟಮದಲ್ಲೇ ಉಪನಯನವಮಾಡಿದನು. ತನ್ನ ತಾಪತ್ರಯದಲ್ಲಿ ಅವನ ವಿದ್ಯಾವ್ಯಾಸಂಗವು ಸಾಂಗವಾಗದೆಂದು ತಿಳಿದು, ಅವನನ್ನು ಮಧುರೆಗೆ ಕರೆದುಕೊಂಡು ಹೋಗಿ ಭಾವನ ಮನೆಯಲ್ಲಿ ಬಿಟ್ಟುಬಂದನು.

ಮಧುರೆಯಲ್ಲಿ ಲಕ್ಷ್ಮೀನೃಸಿಂಹಾಚಾರ್ಯನು ವೇಂಕಟಭಟ್ಟನನ್ನು ಪ್ರೀತಿಯಿಂದ ಕಾಣುತ್ತಾ ಅವನಿಗೆ ಚೆನ್ನಾಗಿ ವಿದ್ಯೆಯನ್ನು ಕಲಿಸಿದನು. ಹದಿನೆಂಟು ವರ್ಷಕಾಲ ನಿರಾತಂಕನಾಗಿ ವ್ಯಾಸಂಗ ನಡೆದುದರಿಂದ, ವೇದಗಳು ತರ್ಕ ವೇದಾಂತ ವ್ಯಾಕರಣ ಶಾಸ್ತ್ರ

ಗಳಲ್ಲೂ ಭಟ್ಟನು ಮಹಾ ಪಂಡಿತನೆನಿಸಿದನು. **'ಸುಧಾವಾ ಪಠನೀಯಾ-ವಸುಧಾವಾ ಪಾಲನೀಯಾ'** ಎಂಬ ಗಾದೆಗೆ ಸರಿಯಾಗಿ, ಭಟ್ಟನಿಗೆ ಸುಧಾಪಾಠವಾಗುವುದೊಂದು ಉಳಿದಿತ್ತು. ಅನಂತರ ಮಧುರೆಯನ್ನು ಬಿಟ್ಟು ಭುವನಗಿರಿಗೆ ಬಂದು ಅಣ್ಣನಿಂದ ವೀಣೆಯನ್ನು ಕಲಿತನು. ದಿನದಿನಕ್ಕೆ ಸುಧಾವ್ಯಾಸಂಗದ ಹಂಬಲು ಹೆಚ್ಚುತ್ತಿರಲು ಅಣ್ಣನ ಅನುಮತಿಯನ್ನು ಪಡೆದು ಶ್ರೀ ಸುಧೀಂದ್ರಸ್ವಾಮಿಗಳವರಲ್ಲಿ ವ್ಯಾಸಂಗ ಮಾಡಲು ಕುಂಭಕೋಣೆಗೆ ಬಂದನು.

ಸ್ವಾಮಿಗಳಿಗೆ ಭಟ್ಟನು ಮೂರು ವರ್ಷದ ಬಾಲಕನಾಗಿದ್ದಾಗ, ತಮ್ಮ ತಂದೆಯೊಡನೆ ಮಹಾ ಸಮಾರಾಧನೆಗೆ ಬಂದಿದ್ದಾಗಿನಿಂದ ಅವನ ವಿಚಾರದಲ್ಲಿ ಪರಮಾದರವಿತ್ತು. ಪರಭಾರೆಯಾಗಿ, ಆಗಾಗ ಅವನ ವ್ಯಾಸಂಗ ಹೇಗೆ ನಡೆಯುತ್ತಿರುವುದೆಂದು ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಈಗ ಭಟ್ಟನು ತಾನಾಗಿ ತಮ್ಮಲ್ಲಿಗೇ ವ್ಯಾಸಂಗಕ್ಕೆ ಬಂದನೆಂದಮೇಲೆ ಹೇಳುವುದೇನು ? ಸ್ವಾಮಿಗಳಿಗೆ ಪರಮಾನಂದವಾಯಿತು. ಇತರ ಶಿಷ್ಯರಿಗೆ ತಮ್ಮ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಳಿಸದೆ ಎಲ್ಲರೊಡನೆ ಭಟ್ಟನಿಗೂ ಸುಧಾಪಾಠಕ್ಕಾರಂಭಿಸಿದರು.

ವೇಂಕಟಭಟ್ಟನ ಸಹಾಧ್ಯಾಯಿಗಳು ವಿಶೇಷತಃ ಕುಂಭಕೋಣಾವಾಸಿಗಳಾಗಿದ್ದರು. ಅವರು ತಾವೇ ಪರಮಪ್ರವೀಣರೆಂದೂ, ಹೊಸಬನಾದ ಭಟ್ಟನು ಯಾತಕ್ಕೂ ತರವಲ್ಲದವನೆಂದೂ ಗರ್ವಿಷ್ಟರಾಗಿದ್ದರು. ತಾವು ಉತ್ತಮ ತರಗತಿಯಲ್ಲಿ ವ್ಯಾಸಂಗ ಮಾಡುವವರಾಗಿದ್ದುದರಿಂದ ಸಾಮಾನ್ಯರೊಡನೆ ಮಾತನಾಡುವುದು ತಮ್ಮ ಅಂತಸ್ತಿಗೆ ಅಗೌರವವೆಂದು ಅವರ ಭಾವನೆಯಾಗಿತ್ತು. ಅವರೆಲ್ಲರೂ ವ್ಯಾಸಂಗಕ್ಕಿಂತ ಹೆಚ್ಚಾಗಿ ವಿನೋದಗಳಲ್ಲಿ ಕಾಲಹರಣ ಮಾಡುತ್ತಿದ್ದರು. ಭಟ್ಟನು ಮಿತಭಾಷಿಯಾಗಿದ್ದುದರಿಂದ ಮೊದ್ದು ಮನುಷ್ಯನೆಂದರಿತು, ಅವರು ಅವನನ್ನು ತಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ಅವರ ಈ ಒಣಗರ್ವವು ಭಟ್ಟನಿಗೆ ಸರಿಬೀಳುತ್ತಿರಲಿಲ್ಲ. ಭಟ್ಟನು ತನ್ನಷ್ಟಕ್ಕೆ ತಾನೇ ಪಾಠವಾದ ಭಾಗಗಳನ್ನು ಚಿಂತನೆಮಾಡಿಕೊಳ್ಳುತ್ತಾ, ಅಪ್ರಕೃತ ಮಾತನ್ನು ಯಾವಾಗಲೂ ಯಾರೊಡನೆಯೂ ಆಡದೆ ಮೌನದಿಂದಿರುತ್ತಿದ್ದನು. ಸಹಾಧ್ಯಾಯಿಗಳಿಗದು ಸರಿಬೀಳುತ್ತಿರಲಿಲ್ಲ. ಮೊದಮೊದಲು ಉದಾಸೀನವಾಗಿದ್ದುದು ಕಡೆಗೆ ಅದು ದ್ವೇಷವಾಗಿ ಪರಿಣಮಿಸಿತು. ಅವರು ಏನಾದರೂ ಮಾಡಿ ಭಟ್ಟನನ್ನು ತಮ್ಮ ಜೊತೆಯಲ್ಲಿ ಪಾಠಕ್ಕೆ ಸೇರದಂತೆ ಮಾಡಬೇಕೆಂದೂ, ಸಾಧ್ಯವಾದರೆ ಕುಂಭಕೋಣೆಯಿಂದಲೇ ಅವನನ್ನು ಓಡಿಸಿಬಿಡಬೇಕೆಂದೂ ದುರಾಲೋಚನೆಯಲ್ಲಿದ್ದರು. ಈ ತಂತ್ರಗಳು ಭಟ್ಟನಿಗೆ ತಿಳಿಯಲಿಲ್ಲ. ಚಿಕ್ಕ ತರಗತಿಯ ಬಾಲಕರು ತಮಗೆ ತಿಳಿಯದ ವಿಷಯದಲ್ಲಿ ಪ್ರಶ್ನೆ ಮಾಡಿದರೆ ಪ್ರೀತಿಯಿಂದ ಹೇಳಿಕೊಡುತ್ತಿದ್ದನು. ತಾನು ಸ್ವಾಮಿಗಳಲ್ಲಿ ವ್ಯಾಸಂಗ ಮಾಡಿದ ಸುಧಾಗ್ರಂಥದ ಪ್ರಮೇಯಾಂಶಗಳನ್ನು ಪುಷ್ಟೀಕರಿಸಿ–**'ಪರಿಮಳಾ'** ಎಂಬ ಹೆಸರಿನಿಂದ ಗ್ರಂಥವಾಗಿ ಬರೆದಿಡುತ್ತಿದ್ದನು. ಭಟ್ಟನು ವಾಸವಾಗಿದ್ದ ಮಂಟಪಕ್ಕೆ ಅಡ್ಡ ಗೋಡೆಯೊಂದರ ವಿನಾ ಬಾಗಿಲು ಸಹಾ ಇರಲಿಲ್ಲ. ರಾತ್ರಿಯವೇಳೆ ಬೆಳಕಿಗೇ ಗತಿಯಿರ

ಲಿಲ್ಲ. ಮರಗಳ ಕೆಳಗೆ ಉದುರಿಬಿದ್ದ ಎಲೆಗಳನ್ನು ತಂದುರಿಸಿ ಆ ಬೆಳಕಿನಲ್ಲಿ ಗ್ರಂಥವನ್ನು ಬರೆದಿಡುತ್ತಿದ್ದನು. ಹಗಲು ಸ್ನಾನಾನ್ಹಿಕಗಳಲ್ಲೂ ರಾತ್ರೆ ಹೆಚ್ಚುಕಾಲ ಗ್ರಂಥ ಲೇಖನ ದಲ್ಲೂ ಕಳೆದುಹೋಗುತ್ತಿತ್ತು. ಅನೇಕ ದಿನಗಳು ರಾತ್ರೆಯ ಊಟವೂ ಸಿಕ್ಕುತ್ತಿರಲಿಲ್ಲ. ತಾನು ಇಷ್ಟು ಕಷ್ಟಪಡುತ್ತಿದ್ದನಾದರೂ, ಆ ಸಂಗತಿಯನ್ನು ಒಂದು ದಿನವೂ ಗುರುಗಳ ಮುಂದೆ ಹೇಳಿಕೊಳ್ಳುತ್ತಿರಲಿಲ್ಲ. ಹೀಗಿದ್ದರೂ, ಸಹಾಧ್ಯಾಯಿಗಳ ಕನಿಕರಕ್ಕೆ ಅವನು ಪಾತ್ರನಾಗಲಿಲ್ಲ. ಅವರು ಸ್ವಾಮಿಗಳ ಮುಂದೆ ಅವನ ವಿಷಯದಲ್ಲಿ ಏನಾದರೂ ಕ್ಷುದ್ರ ಹೇಳಿ, ಭಟ್ಟನನ್ನು ಓಡಿಸಬೇಕೆಂದು ಹೊಂಚುಹಾಕುತ್ತಿದ್ದರು. ಮಾಡುವುದೇನು ? ದುರ್ಜನರ ಸ್ವಭಾವವೇ ಇಂಥಾದ್ದು ! ಪರರಲ್ಲಿಲ್ಲದ ದೋಷಾರೋಪಣೆಮಾಡುವರು. ವಿದ್ಯವನ್ನು ವಿವಾದಕ್ಕೆ ಉಪಯೋಗಿಸುವರು. ದೇಹಬಲವನ್ನು ಪರಪೀಡೆಗೆ ಮೀಸಲಾ ಗಿಡುವರು. ಧನವಿದ್ದರೆ ಮದೋನ್ಮತ್ತರಾಗಿ ಅದರ ಬಲದಿಂದ ಮಾಡಬಾರದುದನ್ನೇ ಮಾಡುವರು.

ಭಟ್ಟನಲ್ಲಿ ಹುಡುಕಿದರೂ ದೋಷಗಳು ಸಿಗುವಂತಿರಲಿಲ್ಲ. ಸಹಾಧ್ಯಾಯಿಗಳೆಲ್ಲ ಒಮ್ಮೆ ಕೃದ್ಧರಾಗಿ ಗುರುಗಳ ಬಳಿಗೆ ಬಂದು ಅವನು ಬಳಿಯಲ್ಲಿಲ್ಲದ ಸಮಯ ಸಾಧಿಸಿ– “ಮಹಾಸ್ವಾಮಿ, ಭಟ್ಟನು ಶುದ್ಧ ದಡ್ಡನು. ಓದುವೆನೆಂದು ನಮ್ಮೊಡನೆ ಕುಳಿತು ಕೊಂಡಿರುವುದೇ ಪ್ರತಿಷ್ಠೆಯೆಂದು ತಿಳಿದಿರುವನು. ಸರಿಯಾಗಿ ಚಿಂತನೆಮಾಡುವುದಿಲ್ಲ. ಶಿಷ್ಟಾಚಾರಕ್ಕೆ ವಿರೋಧವಾಗಿ, ಮಡಿಯ ಕಾಲದಲ್ಲಿ, ನಟವಿಟ ಗಾಯಕರಂತೆ ಸಂಗೀತ ವನ್ನು ಗೊಣಗುಟ್ಟುತ್ತಾನೆ. ಚಿಕ್ಕ ತರಗತಿಯ ಬಾಲಕರೊಡನೆ ಯಾವಾಗಲೂ ಇವನಿಗೆ ಚಕ್ಕಂದ. ಇಂಥವನೊಡನೆ ವ್ಯಾಸಂಗ ಮಾಡುವುದು ನಮ್ಮಂತಹ ಪ್ರತಿಷ್ಠಿತರಿಗೆ ವಿದ್ವ ನ್ಮರ್ಯಾದೆಯಲ್ಲ. ಒಂದು ವಾಕ್ಯವನ್ನಾದರೂ ಅರ್ಥಮಾಡಿಕೊಳ್ಳುವ ಯೋಗ್ಯತೆಯಿಲ್ಲ ದವನನ್ನು ನಮ್ಮ ತರಗತಿಯಿಂದ ತಪ್ಪಿಸಿಬಿಡಬೇಕು” ಎಂದು ಏಕಕಂಠದಿಂದ ಹೇಳಿದರು. ಭಟ್ಟನ ಯೋಗ್ಯತೆಯನ್ನರಿತಿದ್ದ ಸ್ವಾಮಿಗಳು, ಸುಮ್ಮನಿದ್ದು ಸ್ವಲ್ಪ ಯೋಚಿಸಿ–“ಒಳ್ಳೇದು, ಅವನನ್ನು ನಾವೇ ವಿಚಾರಿಸಿಕೊಳ್ಳುತ್ತೇವೆ. ಆ ಭಾರ ನಮಗಿರಲಿ” ಎಂದು ಹೇಳಿ ಕಳು ಹಿಸಿದರು. ಕ್ಷುದ್ರಗಾರರು ತಮ್ಮ ಮಂತ್ರ ಫಲಿಸಿತೆಂದು ಒಳಗೇ ಹಿಗ್ಗಿದರು.

ಮರುದಿನ ಸ್ವಾಮಿಗಳು ಯಾವುದೋ ಸಂದಿಗ್ಧ ವಿಷಯವೊಂದನ್ನು ವಿಸ್ತರಿಸದೆ ಪಾಠವನ್ನಲ್ಲಿಗೇ ನಿಲ್ಲಿಸಿ, ವಿದ್ಯಾರ್ಥಿಗಳೆಲ್ಲರೂ ಈ ವಾಕ್ಯವನ್ನು ಚೆನ್ನಾಗಿ ಯೋಚಿಸಿ ಕೊಂಡು ಬರಬೇಕೆಂದು ಹೇಳಿಕಳುಹಿಸಿಕೊಟ್ಟರು. ಭಟ್ಟನಾದರೋ, ಆ ವಾಕ್ಯವನ್ನು ವಿಶದಪಡಿಸಿ ಹೇಳಿರದಿದ್ದರೂ ಗುರುಭಕ್ತಿಯ ಪ್ರಭಾವದಿಂದಲೋ ಎಂಬಂತೆ ತನ್ನ ಬುದ್ಧಿ ಬಲದಿಂದ ವಿಸ್ತರಿಸಿ, ಸಮಂಜಸಾರ್ಥ ವಿವರಣೆಯನ್ನು ‘ಪರಿಮಳ’ದಲ್ಲಿ ಬರೆದಿಟ್ಟಿದ್ದನು.

ಆ ರಾತ್ರೆ ಸ್ವಾಮಿಗಳು ದ್ವಾರಪಾಲಕನೊಬ್ಬನ ಕೈಯಲ್ಲಿ ದೀಪವನ್ನು ಹಿಡಿಸಿ ಕೊಂಡು, ಎಲ್ಲಾ ವಿದ್ಯಾರ್ಥಿಗಳೂ ಗಾಢನಿದ್ರೆಯಲ್ಲಿರುವುದನ್ನು ಕಂಡು, ಭಟ್ಟನ ಮುರುಕು ಮಂಟಪಕ್ಕೂ ಬಂದು ನೋಡಿದರು. ಅದುವರೆಗೆ ಭಟ್ಟನು ಆ ಮುರುಕು ಮಂಟಪದಲ್ಲಿರುವುದರ ಕಲ್ಪನೆ ಸ್ವಾಮಿಗಳಿಗಾಗಿರಲಿಲ್ಲ. ಅವನು ವ್ಯಾಸಂಗವನ್ನು ಮುಗಿಸಿ

ಆಗತಾನೇ ಮಲಗಿದ್ದನು. ನಿದ್ರೆ ಹತ್ತಿದ್ದುದರಿಂದ ಸ್ವಾಮಿಗಳು ಬಂದ ಸುಳಿವು ಅವನಿಗೆ ತಿಳಿಯಲಿಲ್ಲ. ತಲೆಯಮೇಲೆ ಮುರಿದುಬೀಳುವಂತಿದ್ದ ಮಂಟಪವನ್ನೂ, ದೀಪಕ್ಕೆ ಗತಿಯಿಲ್ಲದೆ ತರಗೆಲೆಗಳನ್ನುರಿಸಿ ಬೆಳಕು ಮಾಡಿಕೊಂಡು ವ್ಯಾಸಂಗಮಾಡುವ ದರಿದ್ರ ದೆಸೆಯನ್ನೂ ನೋಡಿ, ಸ್ವಾಮಿಗಳ ಮನಸ್ಸು ಮರುಗಿತು. ತಲೆಯ ಪಕ್ಕದಲ್ಲಿಟ್ಟುಕೊಂಡಿದ್ದ ಛಿದ್ರಛಿದ್ರ ಕಾಗದಗಳ 'ಪರಿಮಳ'ದಲ್ಲಿ ಅದೇನು ಬರೆದಿರುವನೆಂದು ತೆಗೆದು ನೋಡಿದರು. ಆ ದಿನದ ಸಂದಿಗ್ಧವಾಕ್ಯದ ಸ್ಪಷ್ಟಾರ್ಥವು ಅಲ್ಲಿ ಬರೆಯಲ್ಪಟ್ಟಿದ್ದುದನ್ನು ಓದಿ ಸ್ವಾಮಿಗಳಿಗೆ ಪರಮಾನಂದವಾಯಿತು. ಆನಂದಾಶ್ರುಗಳುದುರಿದುವು. ಪುಸ್ತಕವನ್ನು ಬಗಲಿಗಿಟ್ಟುಕೊಂಡರು. ಭಟ್ಟನ ಹರಕುಚಿಂದಿಯ ಹೊದಿಕೆಯನ್ನು ನೋಡಿ ಮತ್ತೂ ಮನಮರುಗಿ ತಾವು ಹೊದ್ದಿದ್ದ ಶಹಲನ್ನು ಹೊದ್ದಿಸಿ ಮಠಕ್ಕೆ ಬಂದರು.

ಬೆಳಗಿನ ತಂಗಾಳಿ ಬೀಸಲು ಭಟ್ಟನಿಗೆ ಎಚ್ಚರವಾಯಿತು. ತನ್ನ ತಲೆಯ ಪಕ್ಕದಲ್ಲಿಟ್ಟುಕೊಂಡಿದ್ದ ಪುಸ್ತಕವನ್ನು ಕಾಣದೆ ಹುಡುಕಿದನು. ಅದು ಸಿಕ್ಕಲಿಲ್ಲ. ಮರೆತು ಮತ್ತೆಲ್ಲಾದರೂ ಇಟ್ಟಿರಬಹುದೆಂದು ಮಂಟಪದಲ್ಲೆಲ್ಲಾ ಹುಡುಕಿದನು. ಅದು ಅಲ್ಲೆಲ್ಲೂ ಇರಲಿಲ್ಲ. ತಟ್ಟನೆ ತನ್ನ ಮೈಮೇಲಿದ್ದ ಹೊದಿಕೆಯನ್ನು ನೋಡಿ ಗಾಬರಿಗೊಂಡನು. ಸ್ವಾಮಿಗಳ ಶಹಲು ಇಲ್ಲಿ ಬಂದುದು ಹೇಗೆ? ನಾನು ಮಲಗುವಾಗ ಹರಕು ಬಟ್ಟೆಯನ್ನೇ ಹೊದ್ದುಕೊಂಡಿದ್ದೆನು. ಪಕ್ಕದಲ್ಲಿದ್ದ ಪುಸ್ತಕ ಮಾಯವಾಗಿದೆ. ಹೊಸದಾಗಿ ಶಹಲು ಬಂದಿದೆ! ಸಹಾಧ್ಯಾಯಿಗಳ್ಯಾರಾದರೂ ಹೀಗೆ ಮಾಡಿರಬಹುದೆ? ಅವರಿಗೆ ನಾನು ಮಾಡಿರುವ ಅನ್ಯಾಯವೇನು? ಸ್ವಾಮಿಗಳ ಶಹಲು ಅವರಿಗೆ ಹೇಗೆ ಸಿಕ್ಕಬೇಕು! ಸ್ವಾಮಿಗಳಿಗೀಸಂಗತಿ ತಿಳಿದರೆ ನನ್ನನ್ನು ಕಳ್ಳನೆಂದೇ ಭಾವಿಸುವರಲ್ಲಾ! ಏನು ಮಾಡಲಿ? ಯಾರನ್ನು ಕೇಳಲಿ? ನಡೆದಿರುವ ಸಂಗತಿಯನ್ನು ಗುರುಗಳಿಗೆ ತಿಳಿಸಿಬಿಡುವುದು ನನ್ನ ಕೆಲಸ. ನಾನು ನಿರಪರಾಧಿಯೆಂಬುವನ್ನು ದೇವರು ಬಲ್ಲ. ಗುರುಗಳ ಮನಸ್ಸಿಗೆ ನನ್ನ ಮೇಲೆ ಸಂಶಯಬಂದರೆ ನನ್ನನ್ನು ಮಠದಿಂದ ಓಡಿಸಿಬಿಡುವರು. ಸರ್ವಜ್ಞ ಶಾಸ್ತ್ರಾಧ್ಯಯನಮಾಡಿ ಕೃತಾರ್ಥನಾಗುವ ಸುಕೃತ ನನಗಿಲ್ಲದಂತಾಗುವುದು. ಸಚ್ಛಾಸ್ತ್ರ ವ್ಯಾಸಂಗವು ಸುಗಮವಾಗಿ ನಡೆಯುವುದೇ ಈಶ್ವರಾನುಗ್ರಹವೆಂದು ಹಿರಿಯರು ಹೇಳುವರು. ಆ ಭಾಗ್ಯವೂ ನನ್ನಪಾಲಿಗೆ ಇಲ್ಲದೆಹೋಯಿತೇ? ಸ್ವಾಮಿಗಳು ನನ್ನನ್ನು ಕಳ್ಳನೆಂದು ತಿಳಿದರೆ ನಾನು ಒಬ್ಬರಿಗೂ ಮುಖವನ್ನು ತೋರಿಸುವ ಹಾಗಿಲ್ಲ. ಈಗ ನಡೆದಿರುವುದರ ವಾಸ್ತವಾಂಶವಾದರೂ ಹೊರಬೀಳಬೇಕು! ಇಲ್ಲವೆ ನನ್ನ ಜೀವಿಕೆಯ ಪರಮಾವಧಿಯಾದರೂ ಮುಗಿಯಬೇಕು" ಎಂದು ಪರಿಪರಿಯಾಗಿ ಗೋಳಾಡಿ, ಶಹಲನ್ನು ತಲೆಯಮೇಲಿಟ್ಟುಕೊಂಡು, ಮಠಕ್ಕೆ ಹೋದನು. ಸ್ವಾಮಿಗಳನ್ನು ಕಂಡು ಸಾಷ್ಟಾಂಗ ಪ್ರಣಾಮಮಾಡಿದನು. ಶಹಲನ್ನು ಕಣ್ಣಿಗೊತ್ತಿಕೊಂಡು ಮುಂದಿಟ್ಟು,—"ಮಹಾಸ್ವಾಮಿ, ನಾನು ಯಾವ ವಿಚಾರವನ್ನೂ ಅರಿತವನಲ್ಲ. ತಮ್ಮ ಶಹಲನ್ನು ಯಾರೋ ತಂದು, ನನಗೆ ನಿದ್ರೆ ಬಂದಾಗ ಹೊದಿಸಿರುತ್ತಾರೆ. ನನ್ನ ಬಳಿಯಿದ್ದ ಒಂದು ಪುಸ್ತಕವನ್ನೂ ತೆಗೆದುಕೊಂಡು ಹೋಗಿದ್ದಾರೆ. ಸಹಾಧ್ಯಾಯಿಗಳು ಹೀಗೆ ಮಾಡಿರಬಹುದೆಂದು ಯೋಚಿಸಲು ನನ

ಗ್ಯಾರೂ ದ್ವೇಷಿಗಳಿಲ್ಲ. ಯಾರನ್ನಾಗಲೀ ದ್ವೇಷಿಸುವುದೂ ದೂಷಿಸುವುದೂ ನನ್ನ ಸ್ವಭಾವ ವಲ್ಲ. ಇದೆಲ್ಲಾ ಹೇಗೆ ನಡೆಯಿತೋ ನನಗೆ ಗೊತ್ತಿಲ್ಲ. ಸರ್ವಜ್ಞರಾದ ತಾವೇ ವಿಚಾರಿಸ ಬೇಕು. ಇದೋ ಈ ಶಹಲನ್ನು ಸ್ವೀಕರಿಸಬೇಕು. ಪೂಜ್ಯಪಾದರ ದೇಹಸ್ಪರ್ಶದಿಂದ ಪರಿ ಶುದ್ಧವಾಗಿದ್ದ ಇದು–ಈ ಪಾಪಾತ್ಮನ ಶರೀರ ಸೋಕಿ ಅಪವಿತ್ರವಾಯಿತೆಂದು ವಿಷಾದಿಸು ತ್ತೀನೆ" ಎಂದು ಪ್ರಣಾಮಮಾಡಿ, ಕಣ್ಣೀರುದುರಿಸಿದನು. ಈತನ ನಿಷ್ಕಪಟಿಲ ಸ್ವಭಾವ ವನ್ನು ನೋಡಿ, ಸ್ವಾಮಿಗಳ ಮನಸ್ಸು ಕರಗಿತು.–"ವೆಂಕಣ್ಣಾ ಇದೇಕೆ ಹೀಗೆ ಗಾಬರಿ ಗೊಂಡಿರುವೆ ? ನಿನ್ನ ಸ್ವಭಾವ ನಮಗೆ ತಿಳಿಯದೆ ? ಏನೂ ಪ್ರಮಾದವಾಗಿಲ್ಲ ಹೆದರದಿರು. ಪಾಠಕಾಲದಲ್ಲಿ ವಿಚಾರಿಸೋಣ ! ನಿನ್ನಲ್ಲಿ ನಮಗೆ ಪೂರ್ಣ ಭರವಸೆಯಿರುವುದು. ಪುಸ್ತಕ ಯೋಗ್ಯಕಾಲದಲ್ಲಿ ತಾನಾಗಿ ಸಿಗಬಹುದು ; ಯೋಚಿಸಬೇಡ. ಶಹಲನ್ನು ತೆಗೆದುಕೋ ! ಅದು ನಿನ್ನದೇ" ಎಂದು ನುಡಿದು ಜಪಕ್ಕೆ ಕುಳಿತರು.

ಪಾಠಶಾಲೆಯ ವೇಳೆಗೆ ಸರಿಯಾಗಿ ಶಿಷ್ಯರು ಒಬ್ಬೊಬ್ಬರಾಗಿ ಬಂದು ಗುರು ಗಳನ್ನು ಎದುರುನೋಡುತ್ತಿದ್ದರು. ಆ ದಿನ ಭಟ್ಟನು ಬರುವುದು ಸ್ವಲ್ಪ ತಡವಾಯಿತು. ಮೊದಲು, ಸ್ವಾಮಿಗಳ ಬಳಿಗೆ ಭಟ್ಟನು ಬಂದು ಹೋಗಿದ್ದ ಸಂಗತಿ ವಿದ್ಯಾರ್ಥಿಗಳಿಗೆ ಗೊತ್ತಾಗಿರಲಿಲ್ಲ. ಅನಂತರ ಸ್ವಾಮಿಗಳು ಪಾಠಶಾಲೆಗೆ ಬಂದು ಅನುಗ್ರಹ ಪೀಠವನ್ನಲಂ ಕರಿಸಿ, ಇನ್ನೂ ವೆಂಕಟಭಟ್ಟನು ಬರಲಿಲ್ಲವೇ" ಎಂದು ಕೇಳಿದರು. ಇಷ್ಟೇ, ಅಲ್ಲಿದ್ದ ವಿದ್ಯಾರ್ಥಿಗಳಿಗೆ ಸಹನೆಯಾಗಿದೆ, ಪರಸ್ಥಳದವನೊಬ್ಬನಿಗಾಗಿ, ಸ್ಥಳೀಕರಿಗೆಲ್ಲಾ ಪಾಠಕ್ಕೆ ಏಕೆ ತಡವಾಗಬೇಕೆಂದು ಸ್ವಾಮಿಗಳನ್ನು ಕೇಳಿದರು. ಸ್ವಾಮಿಗಳು–'ಪಾಪ ಆ ಬಡವನ ಮೇಲೇಕೆ ನಿಮ್ಮೆಲ್ಲರಿಗೂ ಅಷ್ಟುಕೋಪ ? ಸ್ವಲ್ಪ ಹೆಚ್ಚು ಕಡಮೆ ಬರುತ್ತಾನೆ. ಅವನ ತೊಂದರೆ ಏನಿರುವುದೋ' ಎಂದು ಉತ್ತರ ಕೊಟ್ಟರು ! ಶಿಷ್ಯರಲ್ಲೊಬ್ಬನು–'ಸ್ವಾಮಿಗಳೇ ಹೀಗೆ ಅಪ್ಪಣೆ ಕೊಡಿಸಿದ ಮೇಲೆ ನಾವೇನು ಹೇಳುವುದು ? ಅವನಿಗಿಷ್ಟವಕಾಶವೇ ಸಾಕು ! ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತಾಯಿತು ! ಸಂಸ್ಥಾನದ ಗೌರವದಿಂದ ಹೇಳಿದೆನು. ಇಷ್ಟರಮೇಲೆ ಗುರುಚಿತ್ತ" ಎಂದು ಸುಮ್ಮನಾದನು. ಎಲ್ಲರಿಗೂ ಭಟ್ಟನ ಮೇಲೆ ಅಸೂಯೆ ಇದ್ದುದರಿಂದ–ಅವನು ಹೊತ್ತಾಗಿ ಏಳುತ್ತಾನೆಂದು ಒಬ್ಬನೂ, ಸ್ನಾನಾನ್ಹಿಕಗಳನ್ನು ಸರಿಯಾಗಿ ಮಾಡುವುದಿಲ್ಲವೆಂದು ಒಬ್ಬನೂ, ನೇಮವಿಲ್ಲದಿದ್ದರೂ ನಾಮ ಬಹಳವೆಂದು ಒಬ್ಬನೂ, ಮತ್ತೆ ಮತ್ತೆ ಕ್ಷುದ್ರವನ್ನೇ ಹೇಳುತ್ತಿದ್ದರು. ಏನಾದರೂ, ಸ್ವಾಮಿಗಳು–ಅದಕ್ಕೆಲ್ಲ ಕಿವಿಗೊಡದೆ ಮೌನದಿಂದಿದ್ದುಬಿಟ್ಟರು.

ಭಟ್ಟನು, ತನ್ನಿಂದ ಆದಿನದ ಪಾಠಕ್ಕೆ ವೇಳೆಯಾಯಿತೆಂದು, ಗಾಬರಿಯಿಂದಲೇ ಅವಸರವಾಗಿ ಬಂದು ಗುರುಗಳಿಗೆರಗಿ, ಸಹಾಧ್ಯಾಯಿಗಳ ಪಙ್ತ್ತಿಯಲ್ಲಿ ಕುಳಿತನು, ಸ್ವಾಮಿಗಳೇ ಸುಮ್ಮನಿದ್ದರೂ, ಶಿಷ್ಯರಲ್ಲೊಬ್ಬನು–"ಏನು ವೆಂಕಣ್ಣಾಚಾರ್ಯರೇ, ತಮ ಗಾಗಿ ಸ್ವಾಮಿಗಳೂ ಪಾಠಕ್ಕೆ ಕಾಯಬೇಕೋ ? ಇನ್ನು ಮೇಲಾದರೂ ಸ್ವಲ್ಪ ಜಾಗ್ರತೆ ಸುಪ್ರಭಾತವಾಗಲಿ ! ನಿಮ್ಮಂತೆಯೇ ನಾವೂ ಇದ್ದರೆ, ಊಟಪಾಠಗಳೆರಡೇ ಸಾಕೆನ್ನುತ್ತಿ ದ್ದೆವು. ಸ್ವಲ್ಪ ನಮ್ಮಮೇಲೆ ದಯಮಾಡಿರಿ," ಎಂದು ಕ್ರೋಧದಿಂದ ನುಡಿದನು.

ಸ್ವಾಮಿಗಳು-'ಎಲ್ಲವನ್ನೂ ಪಾಠಾನಂತರ ವಿಚಾರಿಸೋಣ!" ಎಂದು, ಹಿಂದಿನದಿನದ ವಾಕ್ಯವನ್ನು ಕುರಿತು ಪ್ರಶ್ನೆಮಾಡಿದರು. ಸಹಾಧ್ಯಾಯಿಗಳ್ಯಾರೂ ಉತ್ತರ ಕೊಡದಿರುವ ವಿಷಯದಲ್ಲಿ ಎಲ್ಲರಂತೆ ತಾನೂ ಸುಮ್ಮನಿರುವುದೇ ಒಳ್ಳೆಯದೆಂದು ಭಟ್ಟನೂ ಮೌನದಿಂದಿದ್ದನು. ಅದು ಹೋಗಲಿ, ಹಿಂದಿನ ಪಾಠಗಳ ವ್ಯಾಸಂಗವೆಷ್ಟು ಸುಟ್ಟಿಗೆ ನಡೆದಿರುವುದೋ ನೋಡೋಣವೆಂದು ಪ್ರಶ್ನಿಸಿದರೆ, ಎಲ್ಲ ಪ್ರಶ್ನೆಗಳಿಗೂ ಭಟ್ಟನೇ ಉತ್ತರ ಕೊಡಬೇಕಾಯಿತು. ಅನಂತರ ಸ್ವಾಮಿಗಳು ಅಂದಿನ ಪ್ರಶ್ನೆಗೆ 'ಪರಿಮಳ' ಗ್ರಂಥದಲ್ಲಿ ಭಟ್ಟನು ಬರೆದಿದ್ದ ಸಮಂಜಸಾರ್ಥವನ್ನು ಶಿಷ್ಯರಿಗೆ ಓದಿ ಹೇಳಿ-'ನೋಡಿದಿರೋ ಭಟ್ಟನೆಂಥಾ ಪಂಡಿತನೆಂಬುದನ್ನು ! ಸುಮ್ಮನೇ ಆತನನ್ನು ತಿರಸ್ಕರಿಸಿದಿರಿ-ಕೀಳಾಗಿ ಕಾಣುತ್ತಿರುವಿರಿ' ಎಂದು ಆ ಗ್ರಂಥವನ್ನು ಕಣ್ಣಿಗೊತ್ತಿಕೊಂಡು-'ವೆಂಕಣ್ಣಾ, ನಿನ್ನ ಮೇಲೆ ಸರ್ವಜ್ಞರೂ ಟೀಕಾಕೃತ್ಪಾದರೂ ಪರಮಾನುಗ್ರಹಮಾಡಿರುವರು. ಇದರಂತೆ ಅನೇಕ ಗ್ರಂಥಗಳನ್ನು ರಚಿಸಿ ಈಶ್ವರಾನುಗ್ರಹಕ್ಕೆ ಪಾತ್ರನಾಗು' ಎಂದು ಹರಿಸಿ, ಪರಿಮಳ ಪುಸ್ತಕವನ್ನು ಆತನ ಕೈಗೆ ಕೊಟ್ಟು, ಹಿಂದಿನದಿನ ತಾವು ಮಾಡಿದ ವ್ಯಾಪಾರವನ್ನು ವಿಶದವಾಗಿ ತಿಳಿಸಿದರು. ಕ್ಷುದ್ರಗಾರರ ತಲೆತಗ್ಗಿತು. ಮುಖ ಚಿಕ್ಕದಾಯಿತು. ಆತನ ಪ್ರತಿಭೆಗಾಗಿ ಅತ್ಯಾಶ್ಚರ್ಯ ವುಂಟಾಯಿತು !-ಒಂದಿಗೇ ಕಲ್ಮಷಚಿತ್ತರಾದ್ದರಿಂದ ಅಸೂಯೆಯೂ ಬೆಳೆಯಿತು. ವೆಂಕಣ್ಣನ ಸಂಶಯ ಪರಿಹಾರವಾಯಿತು. ತಾನು ಅನ್ಯಥಾ ಭಾವಿಸಿದೆನೆಂದು ಆತನು ಸ್ವಾಮಿಗಳವರಲ್ಲಿ ಕ್ಷಮೆ ಬೇಡಿದನು.

ಮುಂದೆ ಯಥಾಕಾಲದಲ್ಲಿ ನಡೆದ ಸುಧಾ ಮಂಗಳಕಾಲದಲ್ಲಿ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು ವಿದ್ವತ್ಸಭೆ ನಡೆಯಿಸಿ-**'ಪರಿಮಳ'** ಗ್ರಂಥವನ್ನು ಎಲ್ಲರಿಗೂ ತೋರಿಸಿ, ಅದರ ಮಹತ್ವವನ್ನು ಪ್ರಶಂಸೆಮಾಡಿ, ಸರ್ವಸಮ್ಮತಿಯಿಂದ ವೆಂಕಟಭಟ್ಟನಿಗೆ **ಪರಿಮಳಾಚಾರ್ಯ** ಎಂಬ ಬಿರುದನ್ನೂ ಉತ್ತಮವಾದ ವಸ್ತ್ರ ಬಹುಮಾನವನ್ನೂ ಅನುಗ್ರಹಿಸಿದರು.

ಇದಾದ ಕೆಲವು ದಿನಗಳ ಮೇಲೆ ಸ್ವಾಮಿಗಳು ದ್ವಿಗ್ವಿಜಯಾರ್ಥವಾಗಿ ಮನ್ನಾರಗೆ ಬಂದರು. ಅಲ್ಲಿನ ಜನರನೇಕರು ಗುರುಸೇವೆಯಿಂದ ಕೃತಾರ್ಥರಾಗಿ ಶಿಷ್ಯರಾದರು. ಆ ಊರಿನಲ್ಲಿ ಬಹುಕಾಲದಿಂದ ವಾಸಮಾಡಿಕೊಂಡಿದ್ದ ಸನ್ಯಾಸಿಗಳೊಬ್ಬರು ಸ್ವಾಮಿಗಳೊಡನೆ ವ್ಯಾಕರಣ ಮಹಾಭಾಷ್ಯದಲ್ಲಿ ವಾಕ್ಯಾರ್ಥಮಾಡಬೇಕೆಂದು ಬಂದರು. ವಾಕ್ಯಾರ್ಥದಲ್ಲಿ ಪರಿಮಳಾಚಾರ್ಯನು ಪ್ರವೇಶಿಸಿ-ಉತ್ತರಪಕ್ಷ ಸಿದ್ಧಾಂತ ಮಾಡಿದುದರಿಂದ ಸ್ವಾಮಿಗಳು ಸುಪ್ರೀತರಾಗಿ-ಭಟ್ಟನಿಗೆ-**ಮಹಾಭಾಷ್ಯಾಚಾರ್ಯ** ಎಂಬ ಬಿರುದನ್ನೂ ದಯಪಾಲಿಸಿ, ತಂಜಾವೂರಿಗೆ ಬಿಜಯಮಾಡಿದರು.

ತಂಜಾವೂರು ಸಂಸ್ಥಾನ

ವಿಜಯನಗರದ ಕರ್ನಾಟಕ ಸಾಮ್ರಾಜ್ಯವು ನಾಶವಾದ ಮೇಲೆ (೧೫೬೫) ತಂಜಾವೂರು ಸಂಸ್ಥಾನವು ತಲೆಯೆತ್ತಿತು. ನಾಯಕ ಮನೆತನದ ರಾಜರು ಸುಮಾರು

ನೂರೈವತ್ತು ವರ್ಷಕಾಲ ತಂಜಾವೂರನ್ನಾಳಿದರು. ಇವರ ಕಾಲದಲ್ಲಿ ಕಾವೇರಿಯ ದಕ್ಷಿಣಪ್ರಾಂತವೆಲ್ಲಾ ತಂಜಾವೂರಿಗೆ ಸೇರಿತ್ತೆಂದು ಹೇಳಬಹುದು. ಅಚ್ಯುತರಾಜ, ರಘುನಾಥ ಭೂಪಾಲ, ವಿಜಯರಾಘವನಾಯಕರೆಂಬುವರು, ನಾಯಕ ಮನೆತನದ ಪ್ರಸಿದ್ಧ ರಾಜರು. ಸಂಸ್ಕೃತಾಂಧ್ರಭಾಷೆಗಳಲ್ಲಿವರು ಮಹಾಪ್ರವೀಣರು. ರಘುನಾಥನು ಚಿಕ್ಕವನಾಗಿದ್ದಾಗಲೇ, ಅಚ್ಯುತರಾಜನು ಮಗನ ಪಾಂಡಿತ್ಯವನ್ನು ಪರೀಕ್ಷಿಸಬೇಕೆಂದು, ಶ್ರೀಕೃಷ್ಣನ ಮೇಲೆ ಕವಿತ್ವಮಾಡೆಂದು ಹೇಳಿದನು. ರಘುನಾಥನು ಆಶುಕವಿತೆಯಿಂದ **'ಪಾರಿಜಾತ ಹರಣ'** ಎಂಬ ಗ್ರಂಥವನ್ನು ಬರೆದು ತಂದೆಗೊಪ್ಪಿಸಿದನು. ಎರಡು ಘಳಿಗೆಗಳಲ್ಲಿ ಬರೆದನೆಂದು ಪ್ರತೀತಿಯಿರುವ ಈ ಗ್ರಂಥರಾಜವನ್ನು ಎರಡು ದಿವಸಗಳಲ್ಲಿ ಬರೆದಿರಬಹುದೆಂದು ಹೇಳಹೊರಟರೂ ಉತ್ಪ್ರೇಕ್ಷೆಯೆನ್ನುವಷ್ಟು ಬುದ್ಧಿ ದೌರ್ಬಲ್ಯವಿರುವ ಈ ಕಾಲದಲ್ಲಿ ಗ್ರಂಥ ರಚನೆಯ ಕಾಲದ ಮಾತೆತ್ತುವುದು ಅಪ್ರಸಕ್ತವೆನ್ನಲೇಬೇಕು. ಪ್ರತಿಜ್ಞಾಪೂರ್ವಕ ಘಂಟೆಗೆ ನೂರು ಶ್ಲೋಕಗಳನ್ನು ಕವಿತ್ವಮಾಡಿ ಹೇಳುವವರೂ, ಅವಧಾನ ವಿದ್ಯೆಯಲ್ಲಿ ವಿಶಾರದರೆನಿಸಿ, ಶತಾವಧಾನ ಸಹಸ್ರಾವಧಾನ ಮಾಡಿ ತೋರಿಸುವವರೂ, ಇನ್ನೂ ಭರತ ಭೂಮಿಯಲ್ಲಿ ಒಬ್ಬೊಬ್ಬರು ಕಣ್ಣಿಗೆ ಬೀಳುತ್ತಿರುವುದನ್ನಾದರೂ ನೋಡಿ, ನಮ್ಮ ಪೂರ್ವಿಕರ ವಿದ್ಯಾಬುದ್ಧಿಗಳ ಮಟ್ಟವೆಷ್ಟುಮಟ್ಟಿನದೆಂಬುದನ್ನು ಗ್ರಹಿಸಿ ಒಪ್ಪಿಕೊಳ್ಳುವ ಕಾಲವಿನ್ನೂ ಹಿಂದಾಗಿಲ್ಲವೆಂದು ಮಾತ್ರ ಆಧುನಿಕರಿಗೆ ಜ್ಞಾಪಿಸಿಕೊಡಬಹುದು. ರಘುನಾಥ ಭೂಪಾಲನು, ರಚಿಸಿದ ನೂರು ಗ್ರಂಥಗಳಲ್ಲಿ ಈಗ ಹನ್ನೆರಡು ಮಾತ್ರ ದೊರೆತಿವೆ. ಈತನ ಆಂಧ್ರ ಗ್ರಂಥಗಳಲ್ಲಿ ರಾಮಾಯಣವು ಅತ್ಯಂತ ಪ್ರಸಿದ್ಧವಾದದ್ದು. ಈ ಗ್ರಂಥದ ಸ್ವಾರಸ್ಯವನ್ನು ನೋಡಿ, ಮಧುರವಾಣಿಯೆಂಬ ಕವಯಿತ್ರಿಯು, ಅದನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡಿರುತ್ತಾಳೆ. ರಾಮಭದ್ರಾಂಬೆಯೆಂಬ ಪ್ರಸಿದ್ಧ ಕವಯಿತ್ರಿಯು ಸಂಸ್ಕೃತದಲ್ಲಿ "ರಘುನಾಥಾಭ್ಯುದಯ" ಎಂಬ ಹೆಸರಿನಿಂದ ಆ ಭೂಪಾಲನ ಗುಣಗಳನ್ನು ವರ್ಣಿಸಿರುತ್ತಾಳೆ. ಇದೂ ಅಲ್ಲದೆ, ರಘುನಾಥ ಭೂಪಾಲನು ದೊಡ್ಡ ಶತಾವಧಾನಿಯಾಗಿದ್ದನು. ಸಂಗೀತ ವಿದ್ಯೆಯಲ್ಲಿ ಆ ಕಾಲದಲ್ಲಿ ರಘುನಾಥನ ಸಮಾನರು ಮತ್ತೊಬ್ಬರಿರಲಿಲ್ಲವಂತೆ! **'ಸಂಗೀತಸುಧಾ'** ಎಂಬ ಗ್ರಂಥವನ್ನು ರಚಿಸಿ, ಜಯಂತಸೇನ ಮೊದಲಾದ ರಾಗಗಳನ್ನೂ, ರಾಮಾನಂದ ಮೊದಲಾದ ಹೊಸ ತಾಳಗಳನ್ನೂ, ತನ್ನ ಹೆಸರಿನ ಒಂದು ಹೊಸ ಮೇಳವನ್ನೂ ಕಂಡುಹಿಡಿದು, ಅವರಲ್ಲಿ ಯಾವ ಪ್ರಸಿದ್ಧರಾಗವನ್ನಾದರೂ ಬಾರಿಸುವುದಕ್ಕೆ ಅನುಕೂಲವಾಗುವಂತೆ ಮಾಡಿರುತ್ತಾನೆ. **'ಸಾಹಿತ್ಯಸುಧಾ'** ಗ್ರಂಥಕರ್ತನಾದ ಗೋವಿಂದ ದೀಕ್ಷಿತನೇ ಮಹಾರಾಜನ ಮುಖ್ಯಮಂತ್ರಿಯಾಗಿದ್ದನು. ಪರಾಕ್ರಮದಲ್ಲಿ ನೋಡಿದರೆ, ಪೋರ್ಚುಗೀಸರನ್ನು ಗೆದ್ದು, ನೇಪಾಳದ ರಾಜನಿಗೆ ಜಾಫ್ನಾದ್ವೀಪವನ್ನು ಬಿಡಿಸಿಕೊಟ್ಟು ಅವನನ್ನು ತನಗೆ ಅಂಕಿತನನ್ನಾಗಿ ಮಾಡಿಕೊಂಡ ಭೂಪನಿವನು. ರಘುನಾಥ ಭೂಪಾಲನು ಕಟ್ಟಿಸಿದ ಅನೇಕ ದೇವಾಲಯಗಳೂ ತಟಾಕಗಳೂ, ವಿದ್ವಜ್ಜನರಿಗೆ ಕಟ್ಟಿಸಿಕೊಟ್ಟ ಅಗ್ರಹಾರಗಳೂ ಆತನ ಔದಾರ್ಯವನ್ನು ಪ್ರಕಟಿಸುತ್ತವೆ.

ಸುಧೀಂದ್ರ ತೀರ್ಥರು ಇಂಥಾ ಮಹಾರಾಜನ ಆಸ್ಥಾನದಲ್ಲಿದ್ದ ಪಂಡಿತರೊಡನೆ ವಾದಿಸಿ ಕೀರ್ತಿ ಪಡೆದಿದ್ದುದರಿಂದ ಮಹಾರಾಜನು ಸ್ವಾಮಿಗಳಿಗೆ ಕನಕಾಭಿಷೇಕ ಮಾಡಿಸಿದ್ದನು. ಈ ಪೂರ್ವ ಪರಿಚಯವೇ ಸ್ವಾಮಿಗಳು ಮತ್ತೆ ತಂಜಾವೂರಿಗೆ ಬರಲು ಕಾರಣವಾಯಿತು.

ಅತ್ತ ಅಚ್ಯುತರಾಜನ ಕಾಲದಲ್ಲೂ ರಘುನಾಥ ಭೂಪಾಲನ ಕಾಲದಲ್ಲೂ ಕೆಲವು ಕಾಲ ಮುಖ್ಯಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನು ರಾಜನೀತಿಯಲ್ಲೂ ವಿದ್ಯಾಪಾಂಡಿತ್ಯದಲ್ಲೂ ಅರಸರಿಗೆ ತಕ್ಕ ಮಂತ್ರಿಯಾಗಿದ್ದು, ಲೋಕಪ್ರಖ್ಯಾತರಾದ ಅಪ್ಪಯ್ಯ ದೀಕ್ಷಿತರ ಅನೇಕ ಗ್ರಂಥರಚನೆಯಲ್ಲಿ ಸಹಾಯಮಾಡಿ ತನ್ನ ಮಗ ಯಜ್ಞನಾರಾಯಣ ದೀಕ್ಷಿತನನ್ನು ಮಹಾಪಂಡಿತನನ್ನಾಗಿ ಮಾಡಿ ಸ್ವರ್ಗವಾಸಿಯಾಗಿದ್ದನು. ಯಜ್ಞನಾರಾಯಣ ದೀಕ್ಷಿತನಾದರೋ ತನ್ನ ಪಾಂಡಿತ್ಯವನ್ನು ಅತಿಶಯವನ್ನಾಗಿ ಬೆಳೆಸಿ,ಅನೇಕ ಯಜ್ಞಗಳನ್ನಾಚರಿಸಿ, ಮಹಾ ಕರ್ಮಠನೆಂಬ ಖ್ಯಾತಿ ಪಡೆದು ಪರಮ ಪೂಜ್ಯನಾಗಿದ್ದನು. ಈತನು ಸ್ವಾಮಿಗಳೊಡನೆ ವಾಕ್ಯಾರ್ಥಮಾಡಿ ತನ್ನ ಪಾಂಡಿತ್ಯವನ್ನು ತೋರಿಸಬೇಕೆಂದು ಮಠಕ್ಕೆ ಬಂದನು. ಪರಸ್ಪರ ಸಂಭಾಷಣೆಯಲ್ಲಿ 'ಕಾಕತಾಳೀಯ'ವೆಂಬುದೇ ವಾಕ್ಯಾರ್ಥಕ್ಕೆ ವಿಷಯವಾಯಿತು. ಪರಿಮಳಾಚಾರ್ಯನು ವಾದಕ್ಕೆ ಪ್ರವೇಶಿಸಲು, ದೀಕ್ಷಿತನು ಸಮ್ಮತಿಸದೆ ಸ್ವಾಮಿಗಳೇ ಮಾತನಾಡಬೇಕೆಂದು ಕೇಳಿಕೊಂಡನು. ಅವರು ಪರಿಮಳಾಚಾರ್ಯನಿಂದ ಸಾಧ್ಯವಾಗದೆ ಹೋದರೆ ತಾವು ವಾಕ್ಯಾರ್ಥಮಾಡುವೆವೆಂದೂ, ಜ್ಞಾನಕ್ಕೆ ವಯಸ್ಸೂ ಪದವಿಯೂ ಕಾರಣವಲ್ಲವೆಂದೂ, ಅಪ್ಪಣೆಕೊಡಿಸಿದುದರಿಂದ ಯತ್ನವಿಲ್ಲದೆ ಆಚಾರ್ಯನೊಡನೆ ವಾದಕ್ಕೆ ಒಪ್ಪಿಕೊಂಡನು. ವಿಷಯಗಳು ಒಂದರ ಹಿಂದೊಂದು ಬೆಳೆಯುತ್ತಾ ಕ್ರಮೇಣ–'ತತ್ವಮಸಿ'ಗಾರಂಭವಾಯಿತು. ಪ್ರತಿಜ್ಞಾಪೂರ್ವಕವಾಕ್ಯಾರ್ಥವಾಗಬೇಕೆಂಬ ತೀರ್ಮಾನವಾದುದರಿಂದ ಉಭಯರೂ ತಮ್ಮ ಪ್ರತಿಜ್ಞೆಯನ್ನು ತಿಳಿಸಿದರು.

ದೀಕ್ಷಿತ ಪ್ರತಿಜ್ಞಾ

೧. ತತ್ವಮಸ್ಯಾದಿ ಮಹಾವಾಕ್ಯಗಳು ಭೇದ ಪ್ರತಿಪಾದಕಗಳಲ್ಲ.

೨. ವ್ಯವಹಾರದೆಸೆಯಲ್ಲಿ ಕಂಡುಬರುವ ಭೇದವನ್ನೇ ಸತ್ಯವೆಂದು ಹೇಳುವುದಕ್ಕೆ ವೇದಾಂತಗಳು ಬೇಕಾಗಿಲ್ಲ.

೩. ದ್ವೈತಮತವು ವೇದಮೂಲವಲ್ಲ.

ಈ ವಾಕ್ಯಾರ್ಥದಲ್ಲಿ ಸೋತರೆ ಮಹಾರಾಜಸಭೆಯಲ್ಲಿ ದೊರೆತ ಭಟ್ಟಾಚಾರ್ಯನೆಂಬ ಬಿರುದನ್ನು ತ್ಯಜಿಸಿ ಚಕ್ರಾಂಕನಮಾಡಿಸಿಕೊಂಡು ಸ್ವಾಮಿಗಳ ಶಿಷ್ಯನಾಗುವೆನು.

ಪರಿಮಳಾಚಾರ್ಯ ಪ್ರತಿಜ್ಞಾ

೧. ತತ್ವಮಸಿಯು ಆಪಾತತಃ ರಮಣೀಯವಾಗಿ ಅಭೇದವನ್ನು ಹೇಳುವಂತೆ ಕಂಡುಬಂದರೂ ಪೂರ್ವೋತ್ತರ ವಾಕ್ಯಗಳನ್ನು ನೋಡಿದರೆ, ಅದು ಅಭೇದ ಬೋಧಕ

ವೆಂದಿಗೂ ಅಲ್ಲ. ಶ್ವೇತಕೇತುವನ್ನು ಸನ್ಮಾರ್ಗಕ್ಕೆ ತರಲು ಉದ್ದಾಲಕನು ಬುದ್ಧಿ ಹೇಳುವ ವಾಕ್ಯದಲ್ಲಿ 'ನೀನೆ ಬ್ರಹ್ಮ'ನೆಂದು ಹೇಳುವುದು ಅಸಂಭವ. ಹಾಗೆ ಹೇಳಿದ್ದರೆ ಶ್ವೇತ ಕೇತುವೆಂದಿಗೂ ಜ್ಞಾನಿಯಾಗುತ್ತಿರಲಿಲ್ಲ.

೨. ಜೀವ ಬ್ರಹ್ಮೈಕ್ಯವನ್ನು ಹೇಳುವುದಕ್ಕೆ ವಿಧಿನಿಷೇಧ ಬೋಧಕವಾದ ವೇದಶಾಸ್ತ್ರಗಳಿರಬೇಕಾಗಿಲ್ಲ.

೩. ಅದ್ವೈತವು ಸೌಗತ (ಭೌದ್ಧ) ಮತದಂತೆ ಇರುವುದರಿಂದ ವೇದಮೂಲ ವೆಂದು ಹೇಳಲಾಗುವುದಿಲ್ಲ.

ಈ ವಾಕ್ಯಾರ್ಥದಲ್ಲಿ ಸೋತರೆ ಇಮುವರೆಗೆ ಪ್ರಾಪ್ತವಾಗಿರುವ ಬಿರುದುಗಳನ್ನು ಬಿಟ್ಟು ದೀಕ್ಷಿತನ ಶಿಷ್ಯನಾಗುವೆನು.

ಈ ಸ್ವಾರಸ್ಯವಾದ ವಾಕ್ಯಾರ್ಥವನ್ನು ಕೇಳಲು ಬಹುಜನ ಪಂಡಿತರು ದಿನವೂ ಬಂದು ಸೇರುತ್ತಿದ್ದರು. ದೀಕ್ಷಿತನು ತನ್ನ ಪಾಂಡಿತ್ಯ ಪ್ರಕಾಶಕ್ಕೆ ಇದಕ್ಕಿಂತ ಉತ್ತಮ ಸಮಯ ಸಿಕ್ಕದೆಂದು ಅನೇಕ ತರಹೆಯಿಂದ ಸ್ವಾಮಿಗಳೂ ತಲೆದೂಗುವಂತೆ ಪರಿಮಳಾ ಚಾರ್ಯನ ಮೇಲೆ ಪೂರ್ವಪಕ್ಷಗಳನ್ನು ಹೇಳಿ, ಇವರ ಮೇಲೆ ಸಮಾಧಾನವೇ ಹುಟ್ಟುವು ದಿಲ್ಲವೆಂದು ವಿಜೃಂಭಿಸಿದನು. ಪರಿಮಳಾಚಾಯನು ಲೀಲೆಯಿಂದಲೋ ಎಂಬಂತೆ ಒಂದೊಂದಕ್ಕೂ ಸಮಾಧಾನ ಹೇಳುತ್ತಾ, ದೀಕ್ಷಿತನ ಮೇಲೆ ಮತ್ತೆ ಪ್ರಶ್ನೆಗಳ ಹೊರೆ ಯನ್ನು ಹೊರಿಸಿದನು. ಕಡೆ ಕಡೆಗೆ ಪರಿಮಳಾಚಾರ್ಯನ ಪ್ರಶ್ನೆಗಳಿಗೆ ಉತ್ತರ ಕೊಡು ವುದು ದೀಕ್ಷಿತನಿಗೆ ದುಸ್ಸಾಧ್ಯವಾಯಿತು. ನಿರುತ್ತರನಾದರೂ ನಿರ್ಮತ್ಸರಿಯಾದ ದೀಕ್ಷಿತನು ಸ್ವಾಮಿಗಳಿಗೆ ನಮಸ್ಕರಿಸಿ ಪರಿಮಳಾಚಾರ್ಯನ ಪಾಂಡಿತ್ಯವು ಪೀಠ ಪ್ರಭಾವವೆಂದೊಪ್ಪಿ ಕೊಂಡು, ತನ್ನ ಪ್ರತಿಜ್ಞೆಯಂತೆ ಚಕ್ರಾಂಕನಮಾಡಿಸಿಕೊಂಡು ಶ್ರೀಮಠದ ಮುಖ್ಯ ಶಿಷ್ಯನಾದನು. ಸ್ವಾಮಿಗಳಿಗಿದು ಪರಮಲಾಭವಾಯಿತು. ಪರಿಮಳಾಚಾರ್ಯನಿಗೆ ಪೂರ್ವಪ್ರತಿಜ್ಞೆಯಂತೆ ಸ್ವಾಮಿಗಳೇ ಭಟ್ಟಾಚಾರ್ಯನೆಂಬ ಬಿರುದನ್ನು ದಯಪಾಲಿಸಿದರು. ನಿರ್ಗತಿಕನಾಗಿದ್ದ ವೆಂಕಟಭಟ್ಟನು, ಇಂದು **ಮಹಾಭಾಷ್ಯಪರಿಮಳ ವೇಂಕಟಭಟ್ಟಾ ಚಾರ್ಯ**ನಾಗಿ ಹೋದನು. ಮತ್ತೆ ಕೆಲವು ದಿವಸಗಳಲ್ಲಿ ಸ್ವಾಮಿಗಳು ಸಂಚಾರವನ್ನು ಮುಗಿಸಿ, ಕುಂಭಕೋಣೆಗೆ ಬಂದರು. ಪರಿಮಳಾಚಾರ್ಯನು ಗೃಹಕೃತ್ಯ ನಿಮಿತ್ತ ಭುವನಗಿರಿಗೆ ಬರಬೇಕಾಯಿತು. ಈತನ ದಿಗ್ವಿಜಯ ಚರಿತ್ರೆಯನ್ನು ಕೇಳಿದ್ದ ಭುವನ ಗಿರಿಯ ವಿದ್ವಜ್ಜನರು ಭಟ್ಟನು, ಭಟ್ಟಾಚಾರ್ಯನಾಗಿ ಬಂದುದನ್ನು ಕಂಡು ಅನೇಕ ವಿದ್ವನ್ಮರ್ಯಾದೆಗಳನ್ನೂ ಆದರಾತಿಥ್ಯಗಳನ್ನೂ ಮಾಡಿ ಆತನನ್ನು ಬಹುಪರಿಯಿಂದ ಅಭಿನಂದಿಸಿದರು.

ಶ್ರೀನಿವಾಸನ ಅನುಗ್ರಹದಿಂದ ಅವತರಿಸಿದ ಅತ್ಯಂತ ಪ್ರತಿಭಾಶಾಲಿಯಾದ ಆ ಆಚಾರ್ಯ ಮಹೋದಯನ ಯೋಗ್ಯತೆಯನ್ನು ಏನೆಂದು ವರ್ಣಿಸೋಣ!

ವೇದದಲ್ಲಿ ನೋಡಿದರೆ ಘನಾಂತ ಅಧ್ಯಯನ ಮಾಡಿದ ತ್ರಿವೇದಿ ; ಶಾಸ್ತ್ರದಲ್ಲಿ

ಷಟ್ಶಾಸ್ತ್ರಸಂಪನ್ನ, ಗಾನವೋ ಮೃದುಮಧುರ, ಮೇಲಾಪ ವೀಣಾವಾದನ, ಸರಸಕವಿತೆ, ಪ್ರತಿವಾದಿ ಭಯಂಕರವಾದ ವಾಚಾಳತ್ವ, ನಿಷ್ಠೆಯಲ್ಲಿ ಮೂವತ್ತು ವರ್ಷಗಳ ಮೇಲಾಗಿದ್ದರೂ ಅಸ್ಖಲಿತ ಬ್ರಹ್ಮಚಾರಿ, ಗುರುಕುಲವಾಸಿ, ಅಗ್ನಿದೇವತಾರಾಧಕ, ಆದುದರಿಂದ ವಜ್ರಕಾಯ. ತೇಜಸ್ಸಿನಲ್ಲಿ ಸೂರ್ಯಸದೃಶ. ವಂಶೋನ್ನತ್ಯ ನೋಡಿದರೆ, ರಾಜಾಧಿರಾಜರೂ ತಲೆಬಾಗಿ ನಡೆವ ಗೌತಮರ ಶ್ರೋತ್ರೀಯ ಮನೆತನ, ಇಂತಹ ವರನಿಗೆ ದಾರಿದ್ರ್ಯದೋಷವೊಂದಿದ್ದ ಮಾತ್ರಕ್ಕೇ ಕನ್ಯಾದಾನ ಮಾಡದವರ್‍ಯಾರು? ಭುವನಗಿರಿಯ ಮಹಾಜನರೇ ಸರಸ್ವತಿಯೆಂಬ ಸತ್ಕುಲಪ್ರಸೂತೆಯಾದ ಕನ್ಯೆಯನ್ನು ತಂದು ವಿವಾಹ ಮಾಡಿದರು. ಕೆಲವು ಕಾಲಾನಂತರ ಸರಸ್ವತಿಯು ಪ್ರಾಪ್ತವಯಸ್ಕಳಾಗಿ ಪತಿಸೇವನೊಡನೆ ವಾಸಮಾಡುವ ಭಾಗ್ಯವಂತಳಾದಳು. ಈ ನೂತನ ದಂಪತಿಗಳ ಪ್ರೇಮವು ಅನ್ಯಾದೃಶವಾಗಿತ್ತು. ಸಕಲ ಸದ್ಗುಣಗಳೂ ಮೂರ್ತೀಭವಿಸಿ ವ್ಯಕ್ತಿದ್ವಯಗಳಾಗಿರುವಂತೆ ಭಾಸವಾಗುತ್ತಿತ್ತು. ಸಂತತಿಯ ಯೋಚನೆ ಹುಟ್ಟಿದ ಹೊತ್ತಿಗೆ ಸರಿಯಾಗಿ ಈ ದಂಪತಿಗಳಿಗೆ ಪುತ್ರೋತ್ಸವವಾಯಿತು. ಪರಿಮಳಾಚಾರ್ಯರು ಮಗನಿಗೆ ಲಕ್ಷ್ಮೀನಾರಾಯಣನೆಂದು ನಾಮಕರಣ ಮಾಡಿದರು.

ಮಹಾಭಾಷ್ಯ ಪರಿಮಳ ವೇಂಕಟ ಭಟ್ಟಾಚಾರ್ಯರಿಷ್ಟು ದೊಡ್ಡ ವಿದ್ವಾಂಸರಾಗಿದ್ದರೂ, ದಾರಿದ್ರ್ಯಮಾತ್ರ ಅವರನ್ನು ಬಿಡದೆ ಹಿಂಬಾಲಿಸಿತ್ತು. ತ್ರಾಸಿನಲ್ಲಿಟ್ಟು ತೂಗುವ ಹಾಗಿದ್ದರೆ, ಸ್ವಲ್ಪವೂ ಏರುಪೇರಿರದೆ ಸರಿಯಾಗಿರುತ್ತಿತ್ತೆಂದು ಹೇಳಬಹುದು. ಆದರೆ ಬಡತನದ ಕ್ಲೇಶಗಳೆಷ್ಟಿದ್ದರೂ ವಿದ್ವಾಂಸರಾದ ಅವರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಶಾಂತವಾಗಿರುವುದಕ್ಕೇ ಯತ್ನಿಸುತ್ತಿದ್ದರು. ದೂರದೇಶಗಳಿಂದ ಅನೇಕಮಂದಿ ವಿದ್ಯಾಭಿಲಾಷಿಗಳಾಗಿ ಬಂದವರು ಅವರಲ್ಲಿ ವ್ಯಾಸಂಗಮಾಡುತ್ತಿದ್ದರು. ಶಿಷ್ಯರಿಗೆ ಮುಕ್ತಿಮಾರ್ಗವನ್ನು ತೋರಿಸುವುದರೊಂದಿಗೆ ಭುಕ್ತಿಯನ್ನು ಒದಗಿಸುವುದೂ ಅವರ ತಲೆಯಮೇಲೆ ಬಿದ್ದಿತ್ತು. ಆದರೂ ಸರ್ವದಾ ಪ್ರವಚನ ಮಾಡಿಕೊಂಡಿರುತ್ತಿದ್ದ ಅವರ ಮೇಲಿನ ಗೌರವದಿಂದ ಗೃಹಸ್ಥರನೇಕರು ದ್ರವ್ಯಸಹಾಯಮಾಡುತ್ತಿದ್ದರು. ಆದರೆ ಅದು ಎಷ್ಟುಮಾತ್ರವೂ ಸಾಲುತ್ತಿರಲಿಲ್ಲ. ಆದುದರಿಂದ ಒಮ್ಮೆ ದ್ರವ್ಯಾರ್ಜನೋದ್ದೇಶದಿಂದ ದೇಶಾಟನಮಾಡಬೇಕಾಯಿತು. ಶಿಷ್ಯರ-ಪರಿವಾರದ ಅಟ್ಟಹಾಸವನ್ನು ಕಟ್ಟಿಕೊಳ್ಳದೆ, ಪರಿಮಳಾಚಾರ್ಯರು ಏಕಾಂಗಿಗಳಾಗಿ ಒಂದು ದೊಡ್ಡ ಊರಿಗೆ ಬಂದರು. ಆ ಊರ ನ್ಯಾಯಾಧಿಪತಿಯು ಸಾತ್ವಿಕನೆಂದೂ ಬ್ರಾಹ್ಮಣಾಭಿಮಾನಿಯೆಂದೂ ತಿಳಿದು ಬಂದುದರಿಂದ ಆತನ ಮನೆಯಲ್ಲೇ ಬಿಡಾರವಾಯಿತು. ಆತನು ದೇವಬ್ರಾಹ್ಮಣ ಭಕ್ತನೂ ವಿದ್ಯಾಭಿಮಾನಿಯೂ ಆಗಿದ್ದುದರಿಂದ ಆಚಾರ್ಯರನ್ನು ಮರ್ಯಾದೆಯಿಂದ ಕಂಡು, ಆ ಊರಲ್ಲಿರುವವರೆಗೆ ತನ್ನ ಮನೆಯಲ್ಲೇ ಇರಬೇಕೆಂದು ಕೇಳಿಕೊಂಡನು. ಮಾರನೆಯ ದಿನ ಆ ಗೃಹಸ್ಥನ ಮನೆಯಲ್ಲಿ ಕುಲದೇವತಾ ಸಮಾರಾಧನೆಯು ಸಮಾರಂಭವಿತ್ತು. ಅನೇಕಮಂದಿ ಸ್ಥಳೀಕ ಬ್ರಾಹ್ಮಣರು ಆಮಂತ್ರಿತರಾಗಿ ತಮ್ಮ ಮಾನಾನುಗುಣವಾಗಿ ಪೀಠಗಳಲ್ಲಿ ಮಂಡಿಸಿದ್ದರು. ಪರಿಮಳಾಚಾರ್ಯರು ತಮ್ಮ ಸ್ನಾನಾಹ್ನಿಕಾದಿಗಳನ್ನು ಮುಗಿಸಿಕೊಂಡು ದೂರದಲ್ಲೊಂದು

ಕಡೆ ಕುಳಿತು ಸುಧಾಪಾರಾಯಣವಮಾಡುತ್ತಿದ್ದರು. ಹಸಿವು ದಾರಿದ್ರ್ಯಗಳ ಪ್ರತ್ಯಕ್ಷಸ್ವರೂಪವನ್ನು ಕಂಡಿದ್ದ ಅವರ ಮನಸ್ಸು ಆಡಂಬರ-ಮರ್ಯಾದೆಗಳನ್ನು ಮೆಚ್ಚುತ್ತಿರಲಿಲ್ಲ. ಗೃಹಸ್ಥನ ಮನೆಯ ಪುರೋಹಿತನ ಅಂದಿನ ಓಡಾಟಕ್ಕೂ ಮಾತುಗಾರಿಕೆಗೂ ಕೊನೆ ಮೊದಲಿರಲಿಲ್ಲ. ಆತನ ಧ್ವನಿ ಮನೆಯ ಎಲ್ಲಾ ಭಾಗಗಳಲ್ಲೂ ಮೊಳಗುತ್ತಿತ್ತು. ಆ ಧೂರ್ತನಾದ ಪುರೋಹಿತನ ಕಣ್ಣಿಗೆ ಪರಿಮಳಾಚಾರ್ಯರು ಯಾರೋ ಅನ್ನಾರ್ಥಿಯಾಗಿ ಬಂದು ಕುಳಿತಿದ್ದ ಬಡಬ್ರಾಹ್ಮಣನಂತೆ ತೋರಿದರು. ಆ ಸಂದರ್ಭದಲ್ಲಿ ನೂರಾರು ಜನರಿಗೆ ಹಚ್ಚಿಕೊಳ್ಳಲು ಸಾಕಾಗುವಷ್ಟು ಗಂಧವನ್ನು ತೇಯ್ದು ಒದಗಿಸಲು ತಕ್ಕ ಸಹಾಯಕನೊಬ್ಬನ ಆವಶ್ಯಕತೆ ಆತನಿಗಿತ್ತು. ಪುರೋಹಿತನು ಅಲ್ಲಲ್ಲಿ ಹುಡುಕಿನೋಡಿ ತಕ್ಕವರ್‍ಯಾರನ್ನೂ ಕಾಣದೆ ಪರಿಮಳಾಚಾರ್ಯರ ಬಳಿಗೆ ಬಂದು, ಸಾಣೆಯಕಲ್ಲನ್ನೂ ಗಂಧದ ಕೊರಡನ್ನೂ ಮುಂದಿಟ್ಟು-'ಹು'-ಎಂದು ಆ ಕೆಲಸವನ್ನೊಪ್ಪಿಸಿದನು. ಆಚಾರ್ಯರು ಆತನ ಅಭಿಪ್ರಾಯವನ್ನು ಗ್ರಹಿಸಿ ಏನೂ ಹೇಳದೆ, ಯತ್ನವಿಲ್ಲದೆ-ಕೈಲಾದಷ್ಟು ಗಂಧವನ್ನು ತೇಯ್ದು ಒಂದು ಬಟ್ಟಲಿಗೆ ತುಂಬಿಟ್ಟನು. ಪುರೋಹಿತನು ಮತ್ತೊಮ್ಮೆ ಬಂದು-'ಗಂಧವಾಯಿತೇ ? ಎಷ್ಟು ಹೊತ್ತು ! ಎಂದುಕೊಳ್ಳುತ್ತಾ-ಬಟ್ಟಲಿನಲ್ಲಿದ್ದ ಗಂಧವನ್ನು ನೋಡಿ-ಇಷ್ಟು ಸಾಲದು. ಮತ್ತಷ್ಟಾಗಬೇಕು ! ಹೊತ್ತಾದರೆ ರಾಯರು ಸಿಟ್ಟುಮಾಡುತ್ತಾರೆ! ಬೇಗ ಬೇಗ ಸಾಗಲಿ' ಎಂದು ಅವಸರಪಡಿಸಿದನು. ಪರಿಮಳಾಚಾರ್ಯರು, ಸಾಮರ್ಥ್ಯವಿಲ್ಲದೆ-'ಶ್ರೀಹರೀ ಒಂದು ತುತ್ತನ್ನಕ್ಕಾಗಿ ಇಂಥಾ ಕಷ್ಟವೇ ! ಈ ಪುರೋಹಿತನಿಗೆ ನಾನೇನು ಮಾಡಿದೆ! ಎಲ್ಲೋ ದೂರದಲ್ಲಿ ಕೂತದ್ದೇ ತಪ್ಪಾಯಿತೇ !' ಎಂದುಕೊಂಡು, ಪುನಃ ತೇಯಲು ಪ್ರಾರಂಭಿಸಿದರು. ಆಗ ಅವರು ಕ್ರಮಾನುಸಾರ ಮಾಡುತ್ತಿದ್ದ ಪಾರಾಯಣದಲ್ಲಿ ಅಗ್ನಿಸೂಕ್ತ ಪಾರಾಯಣವು ಸಾಗಿತ್ತು. ನೈವೇದ್ಯಾದಿಗಳಾದ ತರುವಾಯ, ಪುರೋಹಿತನು ಎಲ್ಲರಿಗೂ ತೀರ್ಥಕೊಟ್ಟು ಗಂಧ ವಿನಿಯೋಗಮಾಡಿದನು. ಅತಿಥಿಗಳೆಲ್ಲರಿಗೂ ಗಂಧವನ್ನು ಲೇಪಿಸಿಕೊಂಡೊಡನೆಯೇ ತಾಪವಾಗಿ ಬೊಬ್ಬೆಗಳೆದ್ದುವು. ಉರಿಯನ್ನೂ ಬೇಗೆಯನ್ನೂ ತಾಳಲಾರದೆ ಬ್ರಾಹ್ಮಣರು ಹಾಹಾಕಾರ ಮಾಡಸಾಗಿದರು. ಕಾರಣವೇನೆಂಬುದು ಯಾರಿಗೂ ತಿಳಿದಿರಲಿಲ್ಲ. ಗೃಹಸ್ಥನು ತನಗೇನು ದ್ರೋಹ ಘಟಿಸಿತೋ ಎಂದು ಚಿಂತಾಕ್ರಾಂತನಾಗಿ ಪುರೋಹಿತನನ್ನು ಕರೆದು ಈದಿನ ಮೊದಲಿನಿಂದ ನಡೆದ ವೃತ್ತಾಂತವೇನೆಂದು ವಿಚಾರಿಸಿದನು. ಪುರೋಹಿತನು ಗಾಬರಿಗೊಂಡು-'ಸ್ವಾಮಿ ನನಗೆ ಕೆಲಸ ಹೆಚ್ಚಾಗಿತ್ತು. ಈ ಬ್ರಾಹ್ಮಣನಿಗೆ ಗಂಧ ತೇಯಲು ಹೇಳಿದೆ. ಈತನು ತೇಯ್ದಿಟ್ಟದ್ದು ಸಾಲುವಂತಿರಲಿಲ್ಲ. ಮತ್ತಷ್ಟು ತೇಯಬೇಕೆಂದು ಸ್ವಾಭಾವಿಕವಾಗಿಯೇ ಸ್ವಲ್ಪ ಗಟ್ಟಿಯಾಗಿ ಹೇಳಿದೆ. ಆಗ ಈತನು ಏನೇನೋ ಅಂದುಕೊಂಡು ಅಗ್ನಿಸೂಕ್ತ ಪಾರಾಯಣ ಮಾಡುತ್ತಾ ಗಂಧವನ್ನು ತೇಯ್ದಿಟ್ಟನು. ಈತನು ಮಂತ್ರಸಿದ್ಧನೋ ಏನೋ ತಿಳಿಯದು. ಅನಾಮಧೇಯನಂತೆ-ಎಲ್ಲೋ ಒಂದು ಕಡೆ ಕುಳಿತಿದ್ದುದರಿಂದ ಆ ಕೆಲಸ ಮಾಡೆಂದು ಹೇಳಿದೆ. ಮತ್ತೆ ಬೇರೆ ಏನೂ ನಡೆದಿಲ್ಲ' ಎಂದು ನುಡಿದನು. ಬ್ರಾಹ್ಮಣರು-'ಅಹುದು ಅದೇ ಕಾರಣವಿರಬಹುದು. ಆ ಬ್ರಾಹ್ಮ

ಣರು ಮಂತ್ರ ಸಿದ್ಧರಿರಬಹುದು. ಸ್ವಾತ್ತ್ವಿಕರೂ ನಿಗರ್ವಿಗಳೂ ಆದ್ದರಿಂದ ಪುರೋಹಿತರ ದೃಷ್ಟಿ ಅವರ ಮೇಲೆ ಬಿತ್ತೆಂದು ತೋರುತ್ತೆ! ಆ ಬ್ರಾಹ್ಮಣವರ್ಯರೇ ಈಗ ನಮ್ಮ ತಾಪವನ್ನು ಶಮನಮಾಡಬೇಕು' ಎಂದು ನುಡಿದು-ಪರಿಮಳಾಚಾರ್ಯರಿಗೆ ನಮಸ್ಕಾರ ಮಾಡಿದರು. ಗೃಹಸ್ಥನು-ತನ್ನ ಪುರೋಹಿತನನ್ನು 'ಯಾರ ಯೋಗ್ಯತೆ ಏನೆಂದು ತಿಳಿಯದೆ ದುಡುಕಿ, ತಪ್ಪುಮಾಡಿದಿರಿ-ಎಂದು ಗದರಿಸಿ, ತಾನೂ ಆಚಾರ್ಯರ ಪಾದಕ್ಕೆ ನಮಸ್ಕರಿಸಿ, ತನ್ನ ಅವಜ್ಞತೆಯನ್ನು ಕ್ಷಮಿಸಿ ಕಾಪಾಡಬೇಕೆಂದು ಪ್ರಾರ್ಥಿಸಿಕೊಂಡನು.

ಪರಿಮಳಾಚಾರ್ಯರು ತಮ್ಮ ಕೆಲಸ ಸ್ವಲ್ಪ ಕೈಗೂಡಿತೆಂದುಕೊಂಡು, ಅಲ್ಲಿದ್ದ ಬ್ರಾಹ್ಮಣರ ಮತ್ತು ಆ ಗೃಹಸ್ಥನ ಕ್ಷೇಮವೇದಿ - ಮುಕ್ಕಿದ್ದ ಗಂಧವನ್ನು ವರುಣಸೂಕ್ತದಿಂದ ಅಭಿಮಂತ್ರಿಸಿ ಎಲ್ಲರಿಗೂ ಕೊಡಿಸಿದರು. ಅದನ್ನು ಲೇಪಿಸಿಕೊಂಡ ತಕ್ಷಣವೇ ಎಲ್ಲರ ತಾಪವೂ ಪರಿಹಾರವಾಯಿತು. ಬ್ರಾಹ್ಮಣರಿಗೆ ಈ ಮಹನೀಯರು ಮಹಾನುಭಾವರು ಮಂತ್ರಸಿದ್ಧರು ಎಂಬ ಗೌರವ-ಆದರಗಳುಂಟಾದವು. ಗೃಹಸ್ಥನು ಪರಿಮಳಾಚಾರ್ಯರನ್ನು ಬಹಳವಾಗಿ ವಂದಿಸಿ ನೂರುರೂಪಾಯಿಗಳನ್ನು ತನ್ನ ಕಾಣಿಕೆಯಾಗಿ ಸಮರ್ಪಿಸಿ ಪಾದಾಭಿವಾದನಮಾಡಿದನು. ದೊರೆತಷ್ಟು ದ್ರವ್ಯವೇ ಸಾಕೆಂದು ಆಚಾರ್ಯರು ಮುಂದೆ ಮತ್ತೆಲ್ಲೂ ಹೋಗದೆ ಭುವನಗಿರಿಗೇ ಹಿಂದಿರುಗಿದರು. ಆ ದ್ರವ್ಯ ಮುಗಿದಮೇಲೆ ಮತ್ತೆಲ್ಲೂ ಹೋಗಲಿಲ್ಲ. ಕಷ್ಟದಿಂದ ದಿನಗಳನ್ನು ತಳ್ಳಿದರು. ಮಂತ್ರ ಸಿದ್ಧಿಯನ್ನು ತೋರಿಸಿದುದೇ ಕಾರಣವಾಗಿ ಬ್ರಾಹ್ಮಣರಿಗೆ ಸಂತಾಪವಾಯಿತೆಂದೂ, ಅದಕ್ಕಾಗಿಯೇ ಗೃಹಸ್ಥನು ನೂರುರೂಪಾಯಿಗಳನ್ನು ಕೊಟ್ಟನೆಂದೂ ತೋರಿತು. ತಪಶ್ಶಕ್ತಿಯನ್ನು ಹಾಗೆ ದುರುಪಯೋಗಪಡಿಸುವುದು ಅವರ ಮನಸ್ಸಿಗೆ ಉಚಿತವೆನ್ನಿಸಲಿಲ್ಲ. ಧರ್ಮ ಸಂಸ್ಥಾಪನೆಗೆ ಹೊರಡುವವರು ಇಂತಹ ಮಹಿಮೆಗಳನ್ನು-ಅಜ್ಞಜನರಲ್ಲಿ ನಂಬಿಕೆ ಹುಟ್ಟಿಸಲಿಕ್ಕಾಗಿ-ತೋರಿಸಬೇಕಲ್ಲದೆ, ನಿತ್ಯದ ಚರಿತಾರ್ಥಕ್ಕಾಗಿ ಉಪಯೋಗಮಾಡುವುದು ಸಮಂಜಸವಲ್ಲವೆಂದು ನಿಶ್ಚೈಸಿದರು. ಬರುತ್ತ-ಬರುತ್ತ ಅವರ ತಪಶ್ಶಕ್ತಿ ಹೆಚ್ಚಿತು. ಸಾಂಸಾರಿಕ ದುಃಖಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವುದರಿಂದ ಫಲವಿಲ್ಲವೆಂಬ ಅನುಭವವಾಯಿತು. ಧರ್ಮದೃಷ್ಟಿಯುಳ್ಳವರ ಸಹಾಯದಿಂದ ಮುಂದೆ ಕೆಲವುಕಾಲ ಅವರ ಸಂಸಾರಯಾತ್ರೆ ಸಾಗಿತು. ಈ ಎಲ್ಲ ಕಷ್ಟ ಸುಖಗಳಲ್ಲೂ ಸರಸ್ವತೀಬಾಯಿಯು ಗಂಡನಿಗೆ ತಕ್ಕ ಹೆಂಡತಿಯಾಗಿ ಹೊಂದಿಕೊಂಡಿದ್ದಳು.

ಹೀಗಿರಲು ಒಂದು ದಿನ ರಾತ್ರಿ-ಇಂತಹ ರಿಕ್ತಾವಸ್ಥೆಯಲ್ಲಿದ್ದ ಅವರ ಮನೆಗೇ ಕಳ್ಳರು ನುಗ್ಗಿ-ಇದ್ದಬದ್ದ ನಾಲ್ಕು ಒಡಕು ಪಾತ್ರೆಗಳನ್ನು ಹೊತ್ತುಕೊಂಡು ಹೋದರು. ಮರುದಿನದ ಅಡುಗೆಗೆ ಪದಾರ್ಥಗಳ ಮಾತಿರಲಿ-ಪಾತ್ರೆಗಳೇ ಇರಲಿಲ್ಲ. ಸಾಧ್ವೀ ಸರಸ್ವತೀಬಾಯಿಯು ಖಿನ್ನಳಾಗಿ ಪತಿಯ ಮುಂದೆ ತಲೆ ತಗ್ಗಿಸಿ ನಿಂತು,-'ಮುಂದೇನು ಗತಿ? ಮನೆಯಲ್ಲೇನೂ ಉಳಿಯಲಿಲ್ಲ. ಮಧ್ಯಾಹ್ನಕೃತ್ಯ ಹೇಗೆ ನಡೆಯಬೇಕು' ಎಂದು ಕಂಬನಿ ತುಂಬಿದವಳಾಗಿ ನುಡಿದಳು. ಪರಿಮಳಾಚಾರ್ಯರ ಮನಸ್ಸು ಈ ಮಾತಿನಿಂದ ಅಲ್ಲ ಕಲ್ಲೋಲವಾಯಿತು,-'ಏನು ನಿಂತು, ನೀನು ಈ ಬಗೆ ವಾಸ! ಕಳ್ಳರೇ ನಮ್ಮ

ಪ್ರಯಾಣವನ್ನು ಸುಲಭಮಾಡಿಕೊಟ್ಟರು. ಕುಂಭಕೋಣೆಗೆ ಹೋಗಿ ಗುರುಗಳು ಹೇಳಿದಂತೆ ಕೇಳಿಕೊಂಡು ಕಾಲ ಕಳೆಯೋಣ ನಡೆಯಿರಿ' ಎಂದು ಪರಿಮಳಾಚಾರ್ಯರು ಪ್ರಯಾಣಸನ್ನದ್ಧರಾದರು. ದೇವರ ಪೆಟ್ಟಿಗೆ ಪುಸ್ತಕಗಳ ಗಂಟನ್ನು ಶಿಷ್ಯರು ಹೊತ್ತರು. ಪತ್ನಿ ಸರಸ್ವತೀಬಾಯಿಯು ಲಕ್ಷ್ಮೀನಾರಾಯಣನನ್ನು ಎತ್ತಿಕೊಂಡಳು. ಸಾಗಿತು ಸವಾರಿ!

ಆಚಾರ್ಯರಿಗೆ ಕುಂಭಕೋಣೆಯಲ್ಲಿ ಶ್ರೀ ಸುಧೀಂದ್ರತೀರ್ಥರ ದರ್ಶನವಾಯಿತು. ಮಾತ್ರವಲ್ಲ, ಸ್ವಾಗತವೂ ಕಾದಿತ್ತು. ಆಚಾರ್ಯರು ಬಾಯಿಬಿಡುವಷ್ಟರಲ್ಲೇ ಸ್ವಾಮಿಗಳು– 'ತಿಳಿಯಿತು. ನೀವು ಸಂಸ್ಥಾನವನ್ನು ಬಿಟ್ಟು ಬೇರೆ ವಾಸಮಾಡುವುದು ಮೂಲರಾಮರ ಚಿತ್ತದಲ್ಲಿರಲಿಲ್ಲ. ಆಗಬೇಕಾದುದೇ ಆಯಿತು. ಇನ್ನೇಕೆ ತಾಪತ್ರಯ! ಮಠದಲ್ಲಿದ್ದು ಪಾಠಪ್ರವಚನ ಮಾಡಿಕೊಂಡಿರಿ' ಎಂದು ಅಪ್ಪಣೆಮಾಡಿದರು. ಪರಿಮಳಾಚಾರ್ಯರಿಗಿದು ಮಹದುಪಕಾರವಾಯಿತು. ನಿತ್ಯವೂ ಕಾವೇರಿಯಲ್ಲಿ ಸ್ನಾನಾಹ್ನಿಕಗಳನ್ನು ಮಾಡಿಕೊಂಡು ವಿಜಯೀಂದ್ರರ ದಿವ್ಯ ಬೃಂದಾವನ ಸನ್ನಿಧಿಯಲ್ಲಿ ಪ್ರವಚನ ಮಾಡುತ್ತಾ, ಮಠದಲ್ಲಿ ದೊರೆತ ತೀರ್ಥಪ್ರಸಾದಗಳಿಂದ ಸಂತುಷ್ಟರಾಗಿ ಕುಟುಂಬ ಸಮೇತ ಕುಂಭಕೋಣೆಯಲ್ಲೇ ನೆಲೆಸಿದ್ದರು.

ಹೀಗೆ ಕೆಲವು ದಿನಗಳು ಕಳೆದುವು. ಮುಂದೆ ಒಮ್ಮೆ ಶ್ರೀ ಸುಧೀಂದ್ರ ಸ್ವಾಮಿಗಳವರಿಗೆ ದೇಹಾಲಸ್ಯವಾಯಿತು. ಅವರು ಆಚಾರ್ಯರನ್ನು ಕರೆಸಿ–ನೀವು ಆಶ್ರಮಸ್ವೀಕಾರ ಮಾಡಬೇಕೆಂದರು. ಪರಿಮಳಾಚಾರ್ಯರು, ಆ ಮಾತು ಕೇಳಿ–ಸ್ತಬ್ಧರಾದರು. ತರುವಾಯ–'ಸ್ವಾಮಿ, ನನಗೆ ಅಷ್ಟರ ಯೋಗ್ಯತೆಯಿಲ್ಲ. ಸಂಸಾರದ ಅಭಿಮಾನ ಬಿಟ್ಟಿಲ್ಲ. ಹೆಂಡತಿ ಇನ್ನೂ ತೀರದ ಬಾಲೆ. ಮಗನ ಉಪನಯನವಾಗಿಲ್ಲ. ಮಹಾ ಪೀಠಕ್ಕೆ ಯೋಗ್ಯರಾದವರನ್ನು ಆರಿಸಿ ಅನುಗ್ರಹಿಸಬೇಕು. ನನ್ನ ಸಾಹಸದ ಮಾತನ್ನು ಕ್ಷಮಿಸಬೇಕು,' ಎಂದು ನಮಸ್ಕಾರಮಾಡಿದರು. ಸ್ವಾಮಿಗಳು ಆ ಮಾತಿಗೆ ಸಮ್ಮತಿಸದೆ ಮತ್ತೆ–'ಈ ಪೀಠಕ್ಕೆ ನೀವೇ ತಕ್ಕವರು. ನಿಮ್ಮಲ್ಲಿ ಯಾವ ನ್ಯೂನತೆಯೂ ಇಲ್ಲ. ಸಂಸಾರದ ವಿಚಾರವೇನು? ಅದರ ಅಪೂರ್ಣತೆ ನೀಗುವುದೆಂದಿಗೆ?' ಎಂದು ನುಡಿದರು. ಆಚಾರ್ಯರು–ಒಪ್ಪಿಕೊಳ್ಳಲು ಧೈರ್ಯಸಾಲದೆ ಮತ್ತೆ ಕ್ಷಮೆಯನ್ನೇ ಬೇಡಿದರು.

ಸ್ವಾಮಿಗಳ ಮನಸ್ಸಿನಿಂದ ಆ ವಿಚಾರ ಮರೆಯಾಗಲಿಲ್ಲ. ಪರಿಮಳಾಚಾರ್ಯರು ಪ್ರಾರಂಭದ ಸಲಹೆಗೆ ಹಾಗೆ ನಿಷೇಧ ಸೂಚಿಸಿದರಾದರೂ, ತಕ್ಕಷ್ಟು ಅವಕಾಶಕೊಟ್ಟು–ಹೇಗಾದರೂ ಮುಂದೆ ಇವರನ್ನೇ ಆ ಮಹಾಪೀಠದಲ್ಲಿ ಕೂಡಿಸಬೇಕೆಂದು ಸ್ವಾಮಿಗಳು ನಿಶ್ಚೈಸಿದರು. ಸ್ವಾಮಿಗಳ ಪೂರ್ವಾಶ್ರಮದ ಸೋದರಳಿಯನೊಬ್ಬನು, ತನಗೆ ಪ್ರಾಪ್ತವಾಗಿದ್ದ ಸಾಂಸಾರಿಕ ಕ್ಲೇಶಗಳಿಂದ ಮನನೊಂದವನಾಗಿದ್ದು–ಮಠಕ್ಕೆ ಬಂದಾಗಲೆಲ್ಲ–ತನಗೆ ಆಶ್ರಮಕೊಡಿರೆಂದು ಕೇಳುತ್ತಿದ್ದನು.–'ಆಗಲಿ ಕಾಲಬರಲಿ' ಎಂದು ಸ್ವಾಮಿಗಳು ಹೇಳುತ್ತಲಿದ್ದರು. ಪರಿಮಳಾಚಾರ್ಯರು ಸನ್ಯಾಸಕ್ಕೆ ಒಡಂಬಡದಿರಲು ಸ್ವಾಮಿಗಳಿಗೆ ಆತನ

ನೆನಪಾಯಿತು. ಒಡನೆಯೇ ಆತನನ್ನು ಕರೆಯಿಸಿ, 'ನಿನಗೆ ಸಂನ್ಯಾಸಬೇಕೋ ಮಠಾಧಿಪತ್ಯ ಬೇಕೋ' ಎಂದು ಕೇಳಿದರು. ಇದ್ದಕ್ಕಿದ್ದ ಹಾಗೆಯೇ-ಸ್ವಾಮಿಗಳ ದೇಹಾಲಸ್ಯಕಾಲದಲ್ಲಿ ಈ ಪ್ರಶ್ನೆಮಾಡಿದುದನ್ನು ಕೇಳಿ ಭೀತನಾದ ಆತನು, ಏನು ಮಾತನಾಡಿದರೇನು ಪ್ರಮಾದ ವಾಗುವುದೋ ಎಂದು ಗೊಂದಲದಲ್ಲಿ ಸಿಕ್ಕಿಬಿದ್ದು-'ಮಹಾಸ್ವಾಮಿಾ, ನನಗೆ ಸನ್ಯಾಸ ಮಾತ್ರ ಸಾಕೆಂದು' ನುಡಿದುಬಿಟ್ಟನು. ಸ್ವಾಮಿಗಳು ತಮಗೆ ಗುಣವಾಗುವವರೆಗೆ ಪೂಜಾದಿಗಳು ನಿರ್ವಿಘ್ನವಾಗಿ ನಡೆಯಲು ಅನುಕೂಲವಾಯಿತೆಂದು ಸಂತಸಗೊಂಡು-ಆತನಿಗೆ ಆಶ್ರಮಕೊಟ್ಟು ಯಾದವೇಂದ್ರರೆಂಬ ನಾಮಧೇಯ ಕರೆದರು. ಮೂಲರಾಮರ ಪೂಜೆಯೊಂದನ್ನು ಬಿಟ್ಟು ಮಿಕ್ಕ ಪೂಜೆಯನ್ನು ನೂತನ ಯತಿ ಯಾದವೇಂದ್ರರಿಗೊಪ್ಪಿಸಿ ದರು. ಕೆಲವು ದಿನಗಳ ಮೇಲೆ ಸ್ವಾಮಿಗಳಿಗೆ ಚೆನ್ನಾಗಿ ಗುಣವಾಯಿತು. ಯಾದವೇಂದ್ರರನ್ನು ತಮ್ಮ ಪ್ರತಿನಿಧಿಗಳನ್ನಾಗಿ ದೇಶಸಂಚಾರಕ್ಕೆ ಕಳುಹಿಸಿದರು. ಅವರು ಉತ್ತರ ದೇಶ ಯಾತ್ರೆಗೆ ಹೊರಟವರು ಬಹುದಿನಗಳಾದರೂ ಹಿಂದಿರುಗಲಿಲ್ಲ. ಇತ್ತ ಸ್ವಾಮಿಗಳಿಗೆ ವೃದ್ಧಾಪ್ಯ ವಾಗಿದ್ದುದರಿಂದ ಮೇಲೆ ಮೇಲೆ ಏನಾದರೊಂದು ವಿಧವಾದ ಆಲಸ್ಯವಾಗುತ್ತಿತ್ತು. ಈ ಕಾರಣದಿಂದ ಅವರು ಇನ್ನು ಹೆಚ್ಚುಕಾಲ ತಮ್ಮ ದೇಹ ಉಳಿಯಲಾರದೆಂದು ತಿಳಿದರು. ಸಂಸ್ಥಾನ ಪಾಲಕರು ಯಾರಾಗಬೇಕೆಂಬುವುದೇ ಸ್ವಾಮಿಗಳಿಗೆ ದೊಡ್ಡ ಯೋಚನೆ ಯಾಯಿತು. ಹೀಗಿರಲು ಒಂದುದಿನ ರಾತ್ರಿ ಮೂಲರಾಮರು ಗುರುರೂಪದಿಂದ ದರ್ಶನ ವಿತ್ತು, -'ಪರಿಮಳಾಚಾರ್ಯರಿಗೆ ಆಶ್ರಮಕೊಡಿ' ಎಂದು ಹೇಳಿದ ಹಾಗಾಯಿತು. ಸ್ವಾಮಿಗಳು ಮರುದಿನ ಆಚಾರ್ಯರನ್ನು ಕರೆಸಿ, ತಮ್ಮ ಸ್ವಪ್ನ ವೃತ್ತಾಂತವನ್ನು ತಿಳಿಸಿ ದರು. ಸಮೀಪದಲ್ಲಿದ್ದ ಆಪ್ತಜನರು, ಆಚಾರ್ಯರೇನೆನ್ನುವರೋ ಎಂದು ಅವರ ಕಡೆಗೆ ತಿರುಗಿದರು. ಸ್ವಾಮಿಗಳು-'ವೆಂಕಣ್ಣಾಚಾರ್ಯರೇ ನೀವಿದಕ್ಕೆ ಪ್ರತ್ಯುತ್ತರ ಕೊಡಬೇಡಿ. ನಿಮ್ಮ ಮಗನ ಉಪನಯನದ ಯೋಚನೆ ತಾನೇ! ಅದೇನು ! ಬ್ರಹ್ಮೋಪದೇಶ ಕಾರ್ಯವು ಈ ಮಾಘದಲ್ಲೇ ನಡೆದು ಹೋಗಲಿ. ಇದೋ ತೆಗೆದುಕೊಳ್ಳಿ !' ಎಂದು ವಿಶೇಷವಾಗಿ ಧನಸಹಾಯವಿತ್ತು ಕಳುಹಿಸಿದರು. ಪರಿಮಳಾಚಾರ್ಯರು ಬಿಟ್ಟಿಂದು ಬಾಯಿ ಬಿಡಲು ಸಾಧ್ಯವಾಗದೆ, ಎತ್ತಲಾರದಷ್ಟು ಹಣವನ್ನು ಹೊತ್ತುಕೊಂಡು ಮನೆಗೆ ಬಂದು,-'ಲಕ್ಷ್ಮೀನಾರಾಯಣನ ಉಪನಯನಕ್ಕಾಗಿ ಸ್ವಾಮಿಗಳವರ ಅನುಗ್ರಹವಾಯಿ ತೆಂದು'- ಆ ದ್ರವ್ಯವನ್ನೆಲ್ಲ ತಮ್ಮ ಪತ್ನಿ ಸರಸ್ವತೀಬಾಯಿಯ ವಶಕ್ಕೆ ಕೊಟ್ಟರು. ಆಗ ಮಿಕ್ಕ ಯಾವ ವಿಚಾರವನ್ನೂ ತಿಳಿಸಲಿಲ್ಲ.

ಮಾಘಮಾಸ ಪ್ರಾಪ್ತವಾಯಿತು. ಜ್ಯೋತಿಷ್ಯರು ಯೋಗ್ಯವಾದ ಮುಹೂರ್ತ ವನ್ನಿಟ್ಟುಕೊಟ್ಟರು. ಲಕ್ಷ್ಮೀನಾರಾಯಣನ ಉಪನಯನವೆಂದು ನೆಂಟರಿಷ್ಟರು ನೆರೆದರು. ಅಣ್ಣ ಗುರುರಾಜಾಚಾರ್ಯರೂ, ಭಾವ ಲಕ್ಷ್ಮೀನರಸಿಂಹಾಚಾರ್ಯರೂ ಯಜಮಾನರಾಗಿ ನಿಂತು ಕಾರ್ಯ ನಿರ್ವಹಣಕ್ಕೆ ಟೊಂಕಕಟ್ಟಿಕೊಂಡರು. ಶಾಸ್ತ್ರನಿಯಮಕ್ಕೂ ಸಂಪ್ರದಾ ಯಕ್ಕೂ ಲೋಪ ಬಾರದಂತೆ ನಡೆಯಬೇಕಾದ ಕಾರ್ಯಗಳೆಲ್ಲ ಸಾಂಗವಾಗಿ ನಡೆದುವು.

ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರಿಂದ ವಟು ಲಕ್ಷ್ಮೀನಾರಾಯಣನಿಗೆ ಬ್ರಹ್ಮೋಪದೇಶವಾಯಿತು.

ಆ ರಾತ್ರಿ ಆಚಾರ್ಯರಿಗೊಂದು ಸ್ವಪ್ನವಾಗಿ, ಅದರಲ್ಲಿ ವಾಗ್ದೇವಿಯ ದರ್ಶನವಾಯಿತು. ಸರ್ವಾಭರಣಭೂಷಿತೆಯಾಗಿ ಮಂದಹಾಸದಿಂದ ಎದುರಿಗೆ ನಿಂತಿದ್ದ ದೇವಿಯನ್ನು ನೋಡಿ-ಆಚಾರ್ಯರು ವೇದಮಾತೆಯೆಂದೇ ತಿಳಿದರು. ಪಾದಗಳಿಗೆ ನಮಸ್ಕರಿಸಿ ನಿಂತ ಆಚಾರ್ಯರನ್ನು ಕುರಿತು ಪ್ರಸನ್ನಳಾದ ದೇವಿಯು-'ಆಚಾರ್ಯ, ನಾನು ಜ್ಞಾನ ಸಾಗರ ಮಥನಕಾಲದಲ್ಲಿ ಉದಿಸಿದ ವಿದ್ಯಾಲಕ್ಷ್ಮಿಯು. ನನ್ನನ್ನು ದೇವತೆಗಳು ವಾಗ್ದೇವಿಯೆಂದು ಕರೆಯುವರು. ಜನ್ಮವೆತ್ತಿ ಬಹುಕಾಲವಾದರೂ ಪಾಲಕರಿಲ್ಲದೆ ಕೃಶಳಾಗಿರಲು, ಆನಂದತೀರ್ಥ ಮುನಿಗಳ ಕರುಣವಾಯಿತು. ಅವರು ವ್ಯಾಸೋಕ್ತಿ ಕಾಮಧೇನುವಿನಿಂದ ಭಾಷ್ಯವೆಂಬ ಕ್ಷೀರವನ್ನು ಕರೆದು ನನ್ನನ್ನು ಶೈಶವದಲ್ಲಿ ಸಲಹಿದರು. ಅಕ್ಷೋಭ್ಯತೀರ್ಥ-ಜಯತೀರ್ಥರುಗಳಿಂದ ನನಗೆ ಯುವ್ವನವುಂಟಾಯಿತು. ಕಲ್ಪಾಂತ ಪರ್ಯಂತ ಜೀವಿಸಿರಬೇಕೆಂಬ ನನ್ನಿಂದ ವ್ಯಾಸತೀರ್ಥರು **ನ್ಯಾಯಾಮೃತ**ಪಾನ ಮಾಡಿಸಿ, ಜ್ಞಾನಚಂದ್ರನ **ಚಂದ್ರಿಕೆ**ಯಲ್ಲಿ **ತರ್ಕತಾಂಡವ** ನರ್ತನ ಮಾಡಿಸಿದರು. ವಿಜಯೀಂದ್ರರೇ ಮೊದಲಾದ ಮುನಿಗಳು ದಿವ್ಯವಸ್ತ್ರಾಭರಣಗಳಿಂದ ನನ್ನನ್ನು ಶೃಂಗರಿಸಿದರು. ಆದರೇನು ? ಮತ್ತೆ ಅಜ್ಞಾನವು ಮುಸುಕಿ ಕತ್ತಲೆಯಾಯಿತು. ಮನಬಂದಂತೆ ಸಂಚರಿಸಿ **ಪರಿಮಳ**ಯುಕ್ತವಾದ **ಸುಧಾ**ಪಾನ ಮಾಡಬೇಕೆಂದರೆ, ಕಾರ್ಮುಗಿಲಿನಿಂದ **ಚಂದ್ರಿಕೆ**ಯು ಮಬ್ಬಾಗಿ **ಪ್ರಕಾಶ**ಶೂನ್ಯವಾಗಿದೆ. ಸುಧೀಂದ್ರರು ನನ್ನನ್ನು ರಾಜಸಭೆಗಳಲ್ಲಿ ಮೆರೆಸಿದರೂ ಅಜ್ಞಾನಾಂಧಕಾರದಲ್ಲಿ ನಿರ್ಭಯಳಾಗಿ ಸಂಚರಿಸುವಂತಿಲ್ಲ. ನಿನಗೆ ಪ್ರಸನ್ನಳಾಗಿರುವೆನು. ನಿನ್ನ ವಾಕ್ಕಿನಲ್ಲಿ ಜಯಪ್ರದಳಾಗಿ ನೆಲೆಸುವೆನು. ಮೂಲರಾಮನು ನಿನ್ನ ಸೇವೆಯನ್ನು ಕೈಗೊಳ್ಳಲು ಸಿದ್ಧನಾಗಿರುವನು. ಕ್ಷಿಪ್ರದಲ್ಲಿ ಸನ್ಯಾಸಿಯಾಗು' ಎಂದು ನುಡಿದಳು.

ಆಚಾರ್ಯರಿಗೆ ಎಚ್ಚರವಾಯಿತು. ತಮ್ಮ ಜೀವಿತ ಚರಿತ್ರೆಯ ಒಂದೊಂದಂಶವನ್ನೂ ಜ್ಞಾಪಿಸಿಕೊಂಡರು. ಎಲ್ಲಕ್ಕಿಂತ ಹೆಚ್ಚಾಗಿ ಗುರುಗಳ ಅಪ್ಪಣೆಯೂ, ವಾಗ್ದೇವಿಯ ವರವೂ ಸ್ಪಷ್ಟವಾಗಿ ಸ್ಮರಣೆಗೆ ಬಂದವು. ಆನಂದಬಾಷ್ಪಗಳಿಂದ ಪುಳುಕಿತರಾಗಿ ತಮ್ಮ ಪ್ರಿಯಪತ್ನಿಗೆ ಈ ವಿಷಯವನ್ನು ತಿಳಿಸದೆ ಮುಂದುವರಿಯುವುದು ದ್ರೋಹವೆಂದು ಭಾವಿಸಿದರು. **"ಸನ್ಯಾಸ'** ವಿಷಯವನ್ನು ಕೇಳಿದೊಡನೆ ಸರಸ್ವತೀಬಾಯಿ ಏನೆನ್ನುವಳೋ ಎಂದು ಸ್ವಲ್ಪ ಭಯತೋರಿತು. ಅಂದು ಉಪನಯನದ ಗಡಿಬಿಡಿಯಲ್ಲಿ ಆ ಸಾಧ್ವಿಯು ಮನೆಗೆಲಸಗಳನ್ನೆಲ್ಲ ಮುಗಿಸಿ, ಮಲಗುವುದು ಹೊತ್ತಾಗಿಬಿಟ್ಟಿತ್ತು. ವಿಶ್ರಾಂತಿಯಿಲ್ಲದುದರಿಂದಲೂ, ದೇಹಾಯಾಸದಿಂದಲೂ ಆಕೆಗೆ ಅಂದು ಗಾಢನಿದ್ರೆ ಬಂದಿತ್ತು. ಆ ಪರಿಸ್ಥಿತಿಯಲ್ಲಿ ಆಕೆಯನ್ನು ಒಡನೆ ಎಚ್ಚರಗೊಳಿಸಲು ಆಚಾರ್ಯರಿಗೆ ಮನಸ್ಸಾಗಲಿಲ್ಲ. ಅದು ಬಹು ಕಠಿಣವೆನ್ನಿಸಿತು. ಹಾಗೆಯೇ ಆಕೆಯ ಪ್ರಸನ್ನ ಮುಖವನ್ನು ನೋಡುತ್ತಾ ಕುಳಿತರು. ತಮ್ಮ ಕೈ ಹಿಡಿದಾಗಿನಿಂದ ಹಲವಾರು ಸಂದರ್ಭಗಳಲ್ಲಿ ಆಕೆಯಲ್ಲಿ ವ್ಯಕ್ತವಾಗಿದ್ದ ಒಂದೊಂದು ಸುಗುಣವೂ ನೆನಪಿಗೆ ಬರಲು ಕಣ್ಣುಗಳು ತುಂಬಿ ತುಳುಕಿದುವು. ಬೆಳಗಿನ

ಘೂವವಾಗುತ್ತಾ ಬಂದುದರಿಂದ ಯತ್ನವಿಲ್ಲದೆ ಎಚ್ಚರಗೊಳಿಸಬೇಕಾಯಿತು. ಸರಸ್ವತೀಬಾಯಿಯು ತನಗಿಂತಲೂ ಮುಂಚೆಯೇ ಎಚ್ಚತ್ತಿದ್ದ ಪತಿಯ ಧ್ವನಿಯಿಂದ ಎಚ್ಚತ್ತು, ಎಂದೂ ಇಲ್ಲದ ನಿದ್ರೆ ಅಂದು ತನ್ನನ್ನು ಆವರಿಸಿತೆಂದು ಲಜ್ಜಿತಳಾದಳು. ಆಚಾರ್ಯರಿಗೆ ಕೂಡಲೇ ತಮ್ಮ ವಿಚಾರದ ಪ್ರಸ್ತಾಪನೆಯನ್ನು ಆರಂಭಿಸುವಷ್ಟು ಧೈರ್ಯಬರಲಿಲ್ಲ. ಹಾಗ ಲಕ್ಷ್ಮೀನಾರಾಯಣನ ಉಪನಯನವು ಸಂಭ್ರಮವಾಗಿ ನಡೆಯಿತೆಂದು ಆಕೆ ಸಂತೃಪ್ತಳಾಗಿದ್ದಳು. ತನಗೆ ಆ ಮಹತ್ಕಾರ್ಯ ಹೇಗೆ ನಡೆದೀತೆಂಬ ವ್ಯಸನವಿತ್ತೆಂತಲೂ ಆದರೆ ಗುರುಗಳ ಅನುಗ್ರಹದಿಂದ ಅದು ಪರಿಹಾರವಾಯಿತೆಂತಲೂ ಹೇಳಿ, ಆಕೆ ಬಹು ಸಮಾಧಾನವನ್ನು ವ್ಯಕ್ತಪಡಿಸಿದಳು. ಈ ಮಾತಿನಿಂದ ಆಚಾರ್ಯರು ಮಾತನಾಡಲು ಪೀಠಿಕೆ ಸಿಕ್ಕಿದಂತಾಯಿತು. ಗುರುಗಳು ತಮ್ಮ ವಿಷಯದಲ್ಲಿ ಅನುಗ್ರಹಿಸಿದ ಮಹದುಪಕಾರ ಒಂದೊಂದನ್ನೂ ಆಕೆಯ ಮುಂದೆ ಹೇಳುತ್ತಾ ಬಂದು, ಅವರು ಅಪ್ಪಣೆಕೊಡಿಸಿದ ಒಂದು ಮಾತನ್ನಾದರೂ ನಡೆಸಿ ಕೃತಾರ್ಥರಾಗುವ ಪುಣ್ಯಮಾತ್ರ ತಮಗಿಲ್ಲವೆಂದು ಗದ್ಗದ ಕಂಠದಿಂದ ಮಾತನ್ನು ನಿಲ್ಲಿಸಿದರು. ಆ ಮಾತನ್ನು ಕೇಳಿ ಸಾಧ್ವೀಸರಸ್ವತೀಬಾಯಿಯು 'ಆ–ಅಂಥಾದ್ದೇನು? ಅದೇಕೆ ಹೀಗೆ ನುಡಿಯುವಿರಿ? ಸ್ವಾಮಿಗಳ ಅಪ್ಪಣೆಯಂತೆ ನಡೆಯುವುದೇ ನಮ್ಮ ಜನ್ಮದ ಮೊದಲ ಕರ್ತವ್ಯ! ಅವರ ಆಜ್ಞೆಯನ್ನು ಮೀರುವುದೆಂದರೇನು? ಏನಾದರೂ, ನಮ್ಮ ಪ್ರಾಣಗಳನ್ನು ಅವರ ಪಾದಕ್ಕೆ ಒಪ್ಪಿಸಿಯಾದರೂ ನಾವು ಕೃತಾರ್ಥರಾಗಬೇಕು' ಎಂಬುದಾಗಿ ನುಡಿದಳು. ಆಚಾರ್ಯರು–'ನೀನು ಹೇಳುವುದೆಲ್ಲ ಸರಿ; ಅದು ನನ್ನೊಬ್ಬನಿಂದ ಮಾತ್ರ ಹೇಗೆ ಸಾಧ್ಯ! ನೀನೂ ಸಹಾಯವಾಗಬೇಕು. ಇಲ್ಲದಿದ್ದರೆ ಗುರುದ್ರೋಹವೇ ಘಟಿಸುವುದು' ಎಂದರು. ಆಗ ಸರಸ್ವತೀಬಾಯಿಯು–'ರಾಮರಾಮ! ತಮ್ಮ ಕಾರ್ಯವ್ಯಾಪ್ರದಕ್ಕೆ ನನ್ನ ಸಹಾಯವಿಲ್ಲದೆ ಹೋಗಿದೆ? ನಾನೇಕೆ ನಿಮ್ಮ ಕಾರ್ಯಕ್ಕೆ ವಿಘ್ನಕಾರಿಯಾಗಲಿ?' ಎಂದಳು. ಆಚಾರ್ಯರು–'ಅಹುದು. ಆದ್ದರಿಂದಲೇ ನಿನ್ನನ್ನು ಕೇಳುವೆ'ನೆಂದರು. ಸರಸ್ವತೀಬಾಯಿಯು ಧೈರ್ಯವನ್ನು ಕೂಡಿಸಿ–'ನನ್ನನ್ನು ಕೇಳಬೇಕಾದುದೇನೂ ಇಲ್ಲ. ಖಂಡಿತವಾಗಿಯೂ ನೀವಾಡಿದ್ದೇ ನನ್ನ ಮಾತು. ಮಾಡಿದ್ದು ನನ್ನ ಕೆಲಸ. ತಮ್ಮ ಸಂತೋಷವೇ ನನಗೆ ಸುಖ. ತಮ್ಮ ದೇಹದ ನೆರಳು ನಾನು, ತಾವೆತ್ತ ತಿರುಗಿದರೆ ಅತ್ತ ಹಿಂದಾಗಲೀ–ಮುಂದಾಗಲೀ ಅನುಸರಿಸಿ ನಡೆವವಳು ನಾನು! ತಾವು ಸರ್ವಥಾ ಸಂದೇಹಿಸಬಾರದು. ಗುರುಗಳಾಜ್ಞೆ ಏನೆಂಬುದನ್ನು ಇನ್ನೂ ಹೇಳಬಾರದೇ?' ಎಂದು ಕೇಳಿದಳು. ಆಚಾರ್ಯರು–ಮ-ತ್ತೇ-ನೂ ಇಲ್ಲ. ಗುರುಗಳು ನನಗೊಂದು ಘನವಾದ ಮರ್ಯಾದೆ ಮಾಡಬೇಕೆಂದಿರುವರು. ಅದನ್ನು ತೆಗೆದುಕೊಳ್ಳುವ ವಿಷಯವಾಗಿ ಇಷ್ಟುಮಾತು' ಎಂದರು.–ಆಗ ಸರಸ್ವತೀಬಾಯಿಯು–'ಸುಮ್ಮನೇ ನನ್ನ ಮೇಲೆ ಭಾರಹಾಕಬೇಡಿರಿ. ನಿಮಗೆ ಇದುವರೆಗೆ ಆಗದಿರುವ ಮರ್ಯಾದೆ ಯಾವುದು? ಬಾರದಿರುವ ದೊಡ್ಡಸ್ತಿಕೆಯಾವುದು? ನಿಮ್ಮ ಮೇಲಿರುವಷ್ಟು ಗುರುಗಳ ಅನುಗ್ರಹ ಭೂಮಂಡಲದಲ್ಲಿ ಮತ್ತಾರ ಮೇಲೂ ಇಲ್ಲವೆಂದೇ ತಿಳಿದಿರುವೆನು. ಅವರೇ ವಿದ್ಯಾದಾನ ಮಾಡಿದರು. ವಿದ್ವತ್ಸಭೆಗಳಲ್ಲಿ ಯಾರಿಗೂ ಲಭ್ಯವಾಗದ ಬಿರುದುಗಳನ್ನು ಕೊಟ್ಟರು.

ಮುಖ್ಯವೇನು ? ಅವರಿಂದಲೇ ನಮ್ಮ ಜೀವನ ಬೆಳಗಿತು. ಲಕ್ಷ್ಮೀನಾರಾಯಣನ ಉಪನಯನ ಇಷ್ಟು ಸಂಭ್ರಮದಿಂದ ನಡೆದುದೂ ಅವರ ಅನುಗ್ರಹದಿಂದಲೇ! ಇನ್ನೂ ಏನು ಬೇಕಾದರೂ ಮಾಡಲಿ, ಅದರ ಸುಖವನ್ನು ನಾನೂ ತಮ್ಮ ಜೊತೆಯಲ್ಲೇ ಅನುಭವಿಸುವೆನು' ಎಂದಳು. ಆಚಾರ್ಯರು-'ಅದೋ ಅಲ್ಲೇ ಅಭಿಪ್ರಾಯಭೇದ! ಅನುಭವದಲ್ಲಿ! ಅದು ನನ್ನ ಜೊತೆಯಲ್ಲಿ ನೀನಿದ್ದು ಅನುಭವಿಸುವುದಲ್ಲ.' ಎಂದರು. ಆಗಲೂ ಸರಸ್ವತೀಬಾಯಿಗೆ ಸಂದರ್ಭ ಅರ್ಥವಾಗಲಿಲ್ಲ. ಸಂದೇಹ ಬರಲಿಲ್ಲ. ಇನ್ನೂ ಹಿಂದಿನ ಮಾತಿನ ಧೋರಣೆಯಲ್ಲೇ-'ಆಗಲಿ, ನನಗಲ್ಲದಿದ್ದರೆ ನಿಮಗೇ ಇರಲಿ! ಇನ್ನೇನು ಮೇನೆ ಪಲ್ಲಕ್ಕಿಗಳನ್ನು ಕೊಡಬಹುದು! ಅವರ ಮೇಲೆ ಕುಳಿತು ನೀವೇ ಮೆರೆಯಿರಿ! ಕಣ್ಣಾರೆ ನೋಡಿ ನಾನೂ ಸಂತೋಷಪಡುವೆನು' ಎಂದಳು, ಆಚಾರ್ಯರು-ಆಕೆಯ ಮುಗ್ಧ ಭಾವಕ್ಕೆ ಕಸಿಕರಗೊಂಡು-' ಅಲ್ಲ ಅಲ್ಲ-ಅದೂ ಅಲ್ಲ'ವೆಂದರು. ಆಗ ಸರಸ್ವತೀಬಾಯಿಯು ಬೇಸತ್ತು-'ಹಾಗಿದ್ದರೆ ಅದೇನೋ ಸ್ಪಷ್ಟವಾಗಿ ಹೇಳಿಬಿಡಿ. ನಾನು ಸಮ್ಮತಿಸಲಾರೆನೆಂಬ ಭಯ ಬೇಡ. ಮೂರು ಮೂರು ಬಾರಿ ಸಮ್ಮತಿಸಿದ್ದೇನೆ' ಎಂಬುದಾಗಿ ನುಡಿದಳು. ಆಗ ಆಚಾರ್ಯರು-'ಕೇಳು, ಸಮ್ಮತಿಸಿರುವೆಯಾದ್ದರಿಂದ ಹೇಳುವೆನು ಕೇಳು!-ಹೇಳಲೋ? ಕೇಳುವೆಯೋ? ಕೇಳು. ಸ-ನ್ಯಾ-ಸ' ಎಂದು ನುಡಿದರು. ಸರಸ್ವತೀಬಾಯಿಯು, ತತ್ಕ್ಷಣವೇ ಗಂಭೀರ ಮುಖಮುದ್ರೆಯಿಂದ 'ಆ ಸ-ನ್ಯಾ-ಸ! ಸ-ನ್ಯಾ-ಸ! ಅದೇ ನನಗೆ ಸರ್ವನಾಶ! ಶ್ರೀಹರೇ!' ಎಂದು ನುಡಿದು ಸ್ಮೃತಿ ತಪ್ಪಿ ಬಿದ್ದುಬಿಟ್ಟಳು. [ಸರಸ್ವತೀಬಾಯಿಗೆ ಸನ್ಯಾಸದ ಪ್ರಶ್ನೆ ತಮ್ಮ ಪತಿಯ ಪಾಲಿಗೆ ಬರಬಹುದೆಂಬ ಕಲ್ಪನೆಗೆ ಕಾರಣವೇ ಇರಲಿಲ್ಲ. ಈ ಹಿಂದೆಯೇ ಯಾದವೇಂದ್ರರಿಗೆ ಆಪ್ತರಾಗಿದ್ದುದರಿಂದ ಮುಂದಿನ ಮಠರಾಜ್ಯಭಾರ-ಸಂಸ್ಥಾನಾಧಿಕಾರ ಎಲ್ಲ ಅವರದೆಂದೇ ಭಾವಿಸಿದ್ದಳು. ಆಚಾರ್ಯರು ಈ ಮೊದಲೇ ಸನ್ಯಾಸ ಸ್ವೀಕಾರಮಾಡದಿದ್ದ ಕಾರಣವೇನೆಂಬುದೂ ಆಕೆಗೆ ಚೆನ್ನಾಗಿ ಗೊತ್ತಿತ್ತು.]

ಅನಂತರ ಆಚಾರ್ಯರಾಡಿದ ಒಂದುಮಾತಿಗೂ ಸರಸ್ವತೀಬಾಯಿಯು ಉತ್ತರ ಕೊಡಲಿಲ್ಲ. ಪ್ರತಿ ಮಾತನಾಡಿ ಗಂಡನ ಮನಸ್ಸನ್ನು ನೋಯಿಸುವುದು ಮಹಾ ಪಾತಕವೆಂದು ಆಕೆ ತಿಳಿದಳು. ಹರಿಗುರುಗಳ ಚಿತ್ತಕ್ಕೇ ಹೀಗೆ ಬಂದಿರುವಾಗ, ತನ್ನೊಬ್ಬಳ ಸೌಖ್ಯಕ್ಕಾಗಿ ತಾನು ಬೇಡವೆಂದರೆ,ಜನರು ತನ್ನನ್ನು ಸ್ವಾರ್ಥಪರಳೆಂದು ನಿಂದಿಸಬಹುದೆಂದು ಭೀತಳಾದಳು. ಒಂದುವೇಳೆ, ಬೇಡವೆಂದರೂ ತನ್ನ ಮಾತು ನಡೆಯಲಾರದೆಂದು ಸಂದೇಹಪಟ್ಟಳು. ಪತಿಯು ಒಂದುವೇಳೆ ತನ್ನ ಮಾತನ್ನು ಮನ್ನಿಸಿದರೂ-ಮೊದಲಿನಂತೆ ಆತನ ಮನಸ್ಸು ಶಾಂತವಾಗಿರಲಾರದೆಂದೂ ತಿಳಿದಳು-ಮತ್ತೆ ತನ್ನಲ್ಲಿ ತಾನೇ-ಪತಿಯು ಸನ್ಯಾಸಿಯಾದರೆ, ಆತನನ್ನು ಕಣ್ಣಿನಿಂದ ನೋಡಿ, ಆತನ ಸೇವೆ ಮಾಡುವ ಭಾಗ್ಯ ಹೊಂದಿರುವುದಿಲ್ಲ; ಆದರೆ ಲೋಕವೆಲ್ಲವೂ ಪೂಜಿಸುವ ಆ ಮಹಾನುಭಾವನ ಅರ್ಧಾಂಗಲಕ್ಷ್ಮಿಯಾಗಿದ್ದೆನೆಂಬ ಹೆಮ್ಮೆ-ತನ್ನ ಪಾಲಿಗಿದ್ದೇ ಇರುವುದು; ಎಂದುಕೊಂಡಳು. ಮಗ ದೊಡ್ಡ-'ಓಹೋ ಸನ್ಯಾಸಿಯ ಹೆಂಡತಿ'ಯೆಂಬ ಗಾದೆಗೆ ಸರಿಯಾಗಿ ನೋಡುವವರ

ಕಣ್ಣಿಗೆ ತನ್ನ ಬಾಳ್ವೆ ಅಮಂಗಳವಾಗಿ ಕಾಣುವುದಲ್ಲವೆ? ಅಂಥವರ ಕಣ್ಣಿಗೆ ಹುಣ್ಣಾಗಿ ತಾನೇಕೆ ಬದುಕಿರಬೇಕು? ಜೀವಿತಕಾಲದಲ್ಲಿ ಯಾವ ಕೊರತೆಯೂ ಆಗಲಿಲ್ಲ. ಸತ್ಕುಲದಲ್ಲಿ ಜನಿಸಿ ಮಾತಾಪಿತೃಗಳ ಪ್ರೇಮದಿಂದ ಬಾಲ್ಯ ಕಳೆಯಿತು. ಮಹಾಪಂಡಿತರೂ ಸಕಲ ಗುಣಸಂಪನ್ನರೂ ಆದ ಪತಿದೇವರ ಕೈಹಿಡಿದೆನು. ವಂಶೋದ್ಧಾರಕ್ಕೆ ಪುತ್ರ ಸಂತಾನವಾಯಿತು. ಮಗನ ಉಪನಯನವೂ ಆಯಿತು. ಅಂದಮೇಲೆ ಆಗಬೇಕಾದುದೆಲ್ಲಾ ಆಯಿತು. ಪತಿಯು ಯತ್ಯಾಶ್ರಮ ಸ್ವೀಕಾರಮಾಡಿದಮೇಲೆ, ಈ ದೇಹದ ಮೇಲಿನ ಪೂರ್ಣಾಧಿಕಾರ ನನಗೇ ಬರುವುದು. ಅನಂತರ ಮನಸ್ಸಿಗೆ ಬಂದಂತೆ ಮಾಡಿಕೊಂಡು ಬಿಡಬಹುದು' ಎಂದು ಮೊದಲಾಗಿ ಚಿಂತಿಸಿದಳು. ಆಚಾರ್ಯರು ತರುವಾಯ ಸ್ವಲ್ಪ ಹೊತ್ತು-ಹೆಂಡತಿಯೇನೆನ್ನುವಳೋ ನೋಡೋಣವೆಂದು ಸುಮ್ಮನಿದ್ದು ನಿರೀಕ್ಷಿಸಿದರು. ಮೃದುನುಡಿಗಳಿಂದ ಮಾತನಾಡಿಸಿದರು.-ಸರಸ್ವತೀಬಾಯಿಯು-ಮರುಮಾತಾಡಲಿಲ್ಲ. ವ್ಯಸನವನ್ನು ತೋರ್ಪಡಿಸಲಿಲ್ಲ. 'ತಮ್ಮ ಚಿತ್ತ!' ಎಂದು ಮಾತ್ರ ಹೇಳಿಬಿಟ್ಟಳು.

ಬೆಳಗಾಗುತ್ತಲೇ, ಆಚಾರ್ಯರು ಸ್ನಾನ ಪೂಜೆಗಳನ್ನು ಮುಗಿಸಿಕೊಂಡು ಸ್ವಾಮಿಗಳ ಬಳಿಗೆ ಬಂದರು. ರಾತ್ರೆ ತಮಗಾದ ಸ್ವಪ್ನವನ್ನೂ ಪತ್ನಿ ಸರಸ್ವತೀಬಾಯಿಯು ಮನನೊಂದು ಕೊಟ್ಟ ಒಪ್ಪಿಗೆಯ ವಿಚಾರವನ್ನೂ ವಿಜ್ಞಾಪಿಸಿದರು. ಅಲ್ಲೇ ಕುಳಿತಿದ್ದ ಬರಡು ಮನಸ್ಸಿನ ಕೆಲಜನರು-ಈ ಸರಸ್ವತಿಯ ಮನಸ್ಸು ನೋಯದಿದ್ದರೆ ಆ ಸರಸ್ವತಿಯು ಹೇಗೆ ಪ್ರಸನ್ನಳಾಗಬೇಕೆಂದು ಸ್ವಾರಸ್ಯವಾದ ಮಾತನಾಡಿದರು. ಮತ್ತೆ ಕೆಲ ಅಪ್ತರು ಆ ಸಾಧ್ವಿಯ ಅಶನವಸನಗಳಿಗೆ ವ್ಯಸನ ತೋರದಂತೆ ತಕ್ಕ ವ್ಯವಸ್ಥೆ ಮಾಡಿದರಾಯಿತೆಂದರು. ಸ್ವಾಮಿಗಳಿಗೇನೋ ಪರಮಾನಂದವಾಯಿತು. ಮಠದಲ್ಲಿ ಪ್ರಯಾಣಸಿದ್ಧತೆಯ ಗಡಿಬಿಡಿ ಪ್ರಾರಂಭವಾಯಿತು. ತಂಜಾವೂರಿಗೆ ಸಂಸ್ಥಾನದ ದಿಗ್ವಿಜಯವೆಂದು ವರ್ತಮಾನ ಹೊರಟಿತು. ಆಚಾರ್ಯರ ಆಶ್ರಮ ಸ್ವೀಕಾರ ವಿಷಯ ಯಾರಿಗೂ ತಿಳಿಯಲಿಲ್ಲ. ತಮ್ಮ ಅಣ್ಣ ಮತ್ತು ಭಾವಂದಿರುಗಳಿಗೆ ತಮಗೆ ಸನ್ಯಾಸವಾಗುವ ವಾರ್ತೆಯನ್ನು ತಿಳಿಸದಿರಲು ಆಚಾರ್ಯರಿಂದ ಸಾಧ್ಯವಾಗಲಿಲ್ಲ. ಅವರೆಲ್ಲರೂ ಆ ಧರ್ಮಸಂಕಟ ಸಂದರ್ಭದಲ್ಲಿ ಸರಸ್ವತೀಬಾಯಿಯನ್ನು ಭುವನಗಿರಿಗೆ ಕರೆದೊಯ್ಯಬೇಕೆಂದು ನಿಶ್ಚಯಿಸಿದರು. ನಾಲ್ಕಾರು ದಿನಗಳಲ್ಲಿ ಗುರುರಾಜಾಚಾರ್ಯರ ಪ್ರಯಾಣ ಸಿದ್ಧವಾಯಿತು. ಪರಿಮಳಾಚಾರ್ಯರು ಎಲ್ಲರನ್ನೂ ಕೆಲವು ದೂರ ಸಾಗಕಳುಹಿಸಲು ಬಂದರು. ಸರಸ್ವತೀಬಾಯಿಯು ನಿರುಪಾಯಳಾಗಿ ತನ್ನ ಪತಿದೇವರ ಪಾದಗಳಿಗೆ ಕಡೆಯ ನಮಸ್ಕಾರ ಮಾಡಿದಳು. "ನಾಥಾ, ನನ್ನ ಇಹಲೋಕದ ಬಾಳ್ವೆಯ ಭಾರ ವಹಿಸಿ ಕಾಪಾಡಿದಂತೆ ಪರಗತಿಗೂ ತಾವೇ ಕಾರಣರಾಗಬೇಕೆಂ"ದು ಬೇಡಿದಳು. ಉಕ್ಕಿಬಂದ ದುಃಖದಿಂದ ರೋದಿಸುತ್ತಾ ಆಚಾರ್ಯರ ಪಾದಗಳನ್ನು ಹಿಡಿದಳು. ಪರಿಮಳಾಚಾರ್ಯರು ಆಕೆಯ ತಲೆಯಮೇಲೆ ಕೈಯಿಟ್ಟು, ದುಃಖವು ಮಿತಿಮೀರಿ ಬರಲು ತಾವೂ ಗಟ್ಟಿಯಾಗಿ ಅಳುತ್ತಾ-'ಆಗಲಿ' ಎಂದರು. ಈ ದಂಪತಿಗಳ ದುಸ್ಥಿತಿಯಲ್ಲಿ ಹಿರಿಯತನದ ಪಟ್ಟ ಕಟ್ಟಿಕೊಂಡ ಗುರುರಾಜಾಚಾರ್ಯನಿಗಾದರೋ ಒಂದು ಕಡೆ, ತಮ್ಮನಿಗೆ ಜಗದ್ಗುರು ಪದವಿಯನ್ನು ಸ್ವಾಮಿಗಳು

ಅನುಗ್ರಹಿಸುವರೆಂಬ ಅತಿಶಯಾನಂದದಿಂದ ಆತನ ಮುಖವನ್ನು ನೋಡಿದಾಗಲೆಲ್ಲ ಬಿಸಿ ಬರುತ್ತಿರುವ ಪ್ರೇಮಾಶ್ರುಗಳು–ಮತ್ತೊಂದು ಕಡೆ, ಹೆತ್ತ ಮಗನಿಗಿಂತ ಹೆಚ್ಚಿನ ಪ್ರೇಮಕ್ಕೆ ಪಾತ್ರಳಾದ ನಾದಿನಿ ಸರಸ್ವತೀಬಾಯಿಯ ಹೃದಯವಿದ್ರಾವಕ ಪ್ರಲಾಪವನ್ನು ನೋಡಿ ನೇತ್ರಗಳನ್ನು ಭೇದಿಸಿಕೊಂಡು ಧಾರೆಯಾಗಿ ಹರಿಯುವ ದುಃಖಾಶ್ರುಗಳು. ಈ ಎರಡರ ಹೊಡೆತದಲ್ಲಿ ತನ್ನ ದೇಹದಲ್ಲಿ ಇಂದ್ರಿಯಗಳೂ ಪ್ರಾಣಗಳೂ ಅಂಟಿರುವುವೋ ಇಲ್ಲವೇ ಅಂತರಾಳದಲ್ಲಿದ್ದು ತನ್ನನ್ನು ಭ್ರಮೆ ಮೋಹಗಳಿಗೆ ಒಳಗುಮಾಡಿರುವುವೋ ಎಂಬಂತೆ ಭಾಸವಾಗುತ್ತಿತ್ತು. ಆದರೂ ಗುರುರಾಜಾಚಾರ್ಯನು ಎಷ್ಟೋ ಹೊತ್ತಿನಮೇಲೆ, ಪುರುಷಸ್ವಭಾವದ ಪೌರುಷ್ಯದ ಸೋಗುಹಾಕಿ ತತ್ಕಾಲದಲ್ಲಾಡಬೇಕಾದ ಒಣ ಸಮಾಧಾನದ ನಾಲ್ಕು ಮಾತುಗಳನ್ನಾಡಿ, ಪ್ರಯತ್ನಪೂರ್ವಕ ಸರಸ್ವತೀಬಾಯಿಯನ್ನು ಬಂಡಿಯಮೇಲೆ ಕೂಡಿಸಿದನು. ಅಷ್ಟೇ ಸಾಕೆಂದು ಕಾದಿದ್ದ ಬಂಡಿಯವನು ಎತ್ತುಗಳನ್ನು ಚಮಕಾಯಿಸಲು ದಾರಿ ಸಾಗಿತು. ಪರಿಮಳಾಚಾರ್ಯರು ಮತ್ತೆ ದೂರದಿಂದಲೇ ಅಣ್ಣ ಅತ್ತಿಗೆಯರಿಗೆ ನಮಸ್ಕರಿಸಿ, ಮಠವನ್ನು ಸೇರಿದರು.

ಅತ್ತ ತಂಜಾವೂರಿನಲ್ಲಿ ಮಹಾರಾಜನು ಸ್ವಾಮಿಗಳ ಸ್ವಾಗತ ಸಮಾರಂಭಕ್ಕೆ ಎಂದಿಗಿಂತ ಅಟ್ಟಹಾಸದಿಂದ ಸಲಕರಣೆಗಳನ್ನು ಸಿದ್ಧಗೊಳಿಸಿದ್ದನು. ಸಕಲ ಮರ್ಯಾದೆಗಳೊಡನೆ ರಾಜಪ್ರತಿನಿಧಿಗಳೂ, ಆಸ್ಥಾನದ ಮಹಾ ವಿದ್ವಾಂಸರುಗಳೂ ಅಶೇಷ ವೈದಿಕ ಲೌಕಿಕ ಮಹಾಜನಗಳೂ, ಮಾರ್ಗದಲ್ಲಿ ಕಾದಿದ್ದು ಗುರುಗಳನ್ನು ಉತ್ಸವದಿಂದ ಕರೆತಂದು, ಸಿದ್ಧವಾಗಿದ್ದ ಬಿಡಾರದಲ್ಲಿಳಿಸಿದರು. ಮಹಾರಾಜನು ಗುರುದರ್ಶನದಿಂದ ಪರಮ ಧನ್ಯನಾಗಿ ಸಂದರ್ಭೋಚಿತ ಸೇವೆಗಳನ್ನು ಸಮರ್ಪಿಸಿದನು. ಒಂದೆರಡು ದಿವಸಗಳು ಕಳೆಯಲು ಸ್ವಾಮಿಗಳು ಸಮಯವರಿತು, ಮಹಾರಾಜನೊಡನೆ ತಮ್ಮ ಕಾಲ ಸಮೀಪಿಸಿತೆಂದೂ, ತಮ್ಮ ಸ್ಥಾನದಲ್ಲಿ ಮಹಾಭಾಷ್ಯ ಪರಿಮಳ ವೇಂಕಟಭಟ್ಟಾಚಾರ್ಯರಿಗೆ ಆಶ್ರಮ ಕೊಟ್ಟು ಪಟ್ಟಾಭಿಷೇಕಮಾಡಲು ಸಂಕಲ್ಪಿಸಿದ್ದೇವೆಂದೂ, ಸಂಸ್ಥಾನದ ಅಭಿಮಾನವು ಮಹಾರಾಜರಿಗೆ ಸೇರಿದ್ದೆಂದೂ ತಿಳಿಸಿದರು. ಕಾಲ ಸಾಮೀಪ್ಯದ ವಿಷಯದಲ್ಲಿ ಸ್ವಾಮಿಗಳಾಡಿದ ಮಾತಿನಿಂದ ಮಹಾರಾಜನಿಗೆ ಖೇದವಾಯಿತು. ಆದರೂ ಪ್ರಭುವು ಗಾಂಭೀರ್ಯದಿಂದ ಮನೋವೇದನೆಯನ್ನು ತೋರ್ಪಡಿಸದೆ, ತನ್ನ ಕಡೆಯಿಂದ ಆಗಬೇಕಾದುದೆಲ್ಲವೂ ಸಿದ್ಧವಾಗಿದೆಯೆಂದು ತಿಳಿಸಿ ನಮಸ್ಕರಿಸಿ, ಅರಮನೆಗೆ ಬಂದನು.

ಪರಿಮಳಾಚಾರ್ಯರಿಗೆ ಆಶ್ರಮವಾಗುವುದೆಂಬ ವರ್ತಮಾನ ಚೋಳ ಮಂಡಲದಲ್ಲೆಲ್ಲ ಪ್ರಚಾರವಾಯಿತು. ಮಹಾಪೀಠಕ್ಕೆ ತಕ್ಕವರನ್ನೇ ಆರಿಸಿರುವರೆಂಬ ಸಂತೋಷದಿಂದ ಸಹಸ್ರಾವಧಿ ಪಂಡಿತರು ತಂಜಾವೂರಿಗೆ ಬಂದರು. ಪ್ರತಿ ಮಧ್ಯಾಹ್ನ ಕಾಲಗಳಲ್ಲಿ ವಿದ್ವತ್ಪರೀಕ್ಷೆಯೂ, ನ್ಯಾಯ ವೇದಾಂತ ವಾಕ್ಯಾರ್ಥಗಳೂ ನಡೆಯುತ್ತಿದ್ದುವು.

ಇತ್ತ ಪರಿಮಳಾಚಾರ್ಯರಿಂದ ವಿಧ್ಯುಕ್ತವಾಗಿ ನಡೆಯಬೇಕಾದ ಆತ್ಮಶ್ರಾದ್ಧಾದಿ ಕರ್ಮಗಳೆಲ್ಲ ಸಾಂಗವಾಗಿ ಪೂರೈಸಿದುವು. ಶಾಲಿವಾಹನಶಕ ೧೫೪೫ನೆಯ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುದ್ಧ ದ್ವಿತೀಯಾ ಕ್ರಮಸನ್ಯಾಸವೂ, ಶ್ರೀ ರಾಘ

ವೇಂದ್ರತೀರ್ಥರೆಂಬ ಆಶ್ರಮ ನಾಮಕರಣವೂ, ಸಕಲ ರಾಜಮರ್ಯಾದೆಗಳ ಸಮೇತ ಮಹಾಪಟ್ಟಾಭಿಷೇಕವೂ ನಡೆದುವು. ಮಹಾರಾಜನೇ ಮೊದಲಾಗಿ ಸಕಲರೂ ನೂತನ ಗುರುಗಳಿಗೆ ಗೌರವ ಕಾಣಿಕೆಗಳನ್ನೊಪ್ಪಿಸಿದರು. ಸುಧೀಂದ್ರರೂ ನೂತನ ಗುರುಗಳ ಕಡೆಯಿಂದ ಮಹಾರಾಜನಿಗೆ ಯೋಗ್ಯ ಸನ್ಮಾನವನ್ನು ಮಾಡಿಸಿದರು. ಸಭೆಯನ್ನು ಅಲಂಕರಿಸಿದ್ದ ವಿದ್ವಾಂಸರು ಉಭಯ ಗುರುಗಳಮೇಲೂ ಕವಿತಾವೃಷ್ಟಿಗರೆದರು. ಹರಿದಾಸರು ಸುಸ್ವರದಿಂದ ಗಾನಮಾಡಿದರು. ಅನ್ನದಾನ ಭೂರಿದಕ್ಷಿಣೆಗಳು ಅಮಿತವಾಗಿ ಸೂರೆಯಾದುವು. ಈ ಮಹೋತ್ಸವವನ್ನು ಮುಗಿಸಿಕೊಂಡು ಉಭಯ ಸ್ವಾಮಿಗಳೂ ಕುಂಭಕೋಣೆಗೆ ಬಿಜಯಂಗೈದರು.

ಪರಿಮಳಾಚಾರ್ಯರಿಗೆ ಸಂಸ್ಥಾನಾಧಿಪತ್ಯ ಪ್ರಾಪ್ತವಾದ ಸಂಗತಿ ಕುಂಭಕೋಣೆಯ ಜನರಿಗೆ ಅತ್ಯಂತ ಸಂತೃಪ್ತಿಯನ್ನುಂಟುಮಾಡಿತು. ಆದ್ದರಿಂದ ಅವರು ಉಭಯ ಗುರುವರ್ಯರನ್ನೂ ಮಹೋತ್ಸವದಿಂದ ಪುರಪ್ರವೇಶಮಾಡಿಸಿದರು. ಹಿರಿಯ ಸ್ವಾಮಿಗಳು, ತಮಗೆ ತಮ್ಮ ಗುರುಗಳಾದ ವಿಜಯೀಂದ್ರತೀರ್ಥರಿಂದ ಉಪದಿಷ್ಟವಾದ ಚತುಷ್ಷಷ್ಟಿ ಕಲೆಗಳನ್ನೂ ತಮ್ಮ ಶಿಷ್ಯರಾದ ರಾಘವೇಂದ್ರತೀರ್ಥರಿಗೆ ಉಪದೇಶಿಸಿದರು. ಚತುಷ್ಷಷ್ಟಿ ಕಲೆಗಳಲ್ಲಿ ಕೆಲವು ಈ ಕಾಲದಲ್ಲಿ ಮರೆತುಹೋಗಿವೆ. ಕೆಲವು ವೈಖರಿಯಿಂದ ಬೇರೆ ರೂಪ ತಾಳಿ ಅಭಿವೃದ್ಧಿಯಲ್ಲಿವೆ.

ದುಃಖಪ್ರಸಂಗ

ಶ್ರೀ ರಾಘವೇಂದ್ರತೀರ್ಥ ಶ್ರೀಪಾದಂಗಳವರು ಪೀಠಾರೋಹಣ ಮಾಡಿದಮೇಲೆ ಶ್ರೀ ಸುಧೀಂದ್ರರು ಕೆಲವು ತಿಂಗಳು ಮಾತ್ರ ಕುಂಭಕೋಣೆಯಲ್ಲಿದ್ದರು. ಅನಂತರ ಅವರು ತಮ್ಮ ಅಂತಿಮ ಕಾಲವನ್ನು ವಿರೂಪಾಕ್ಷನ ಸನ್ನಿಧಾನದಿಂದ ಪವಿತ್ರವಾದ ಪಂಪಾಕ್ಷೇತ್ರದಲ್ಲಿ ಕಳೆದು ತುಂಗಭದ್ರೆಯ ನಡುಗಡ್ಡೆಯಲ್ಲಿರುವ ಬೃಂದಾವನ ಕ್ಷೇತ್ರದಲ್ಲಿ ಸಮಾಧಿಸ್ಥರಾದರು. ಅಂದಿನಿಂದ ಆ ನಡುಗಡ್ಡೆಗೆ **ನವಬೃಂದಾವನ**ವೆಂಬ ಹೆಸರಾಯಿತು. ಸುಧೀಂದ್ರರಿಗಿಂತ ಎಷ್ಟೋ ಪೂರ್ವಕಾಲದಿಂದ ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯಕಾಲದಲ್ಲಿ ಆ ಸಾಮ್ರಾಟರ ಕುಲಗುರುಗಳೆನಿಸಿದ್ದ ಎಂಟುಮಂದಿ ಯತೀಶ್ವರರು ಆ ಏಕಾಂತ ಸ್ಥಳದಲ್ಲಿ ಬೃಂದಾವನಸ್ಥರಾಗಿದ್ದರು. ಆ ಎಂಟುಮಂದಿ ಯತೀಶ್ವರರೆಂದರೆ–೧. ಪದ್ಮನಾಭತೀರ್ಥರು, ೨. ಮಾಧವತೀರ್ಥರು, ೩. ಕವೀಂದ್ರರು, ೪. ವಾಗೀಶರು, ೫. ರಘುವರ್ಯರು, ೬. ಗೋವಿಂದತೀರ್ಥರು, ೭. ವ್ಯಾಸತೀರ್ಥರು, ೮. ಶ್ರೀನಿವಾಸತೀರ್ಥರು.

ದುರ್ಮರಣ

ಪರಿಮಳಾಚಾರ್ಯರು ಸನ್ಯಾಸ ಸ್ವೀಕಾರಮಾಡಿ ರಾಘವೇಂದ್ರತೀರ್ಥರೆಂಬ ಹೆಸರಿನಿಂದ ಸ್ವಾಮಿಗಳಾದ ಸಂಗತಿಯನ್ನು ಎಷ್ಟು ಬಚ್ಚಿಡಬೇಕೆಂದರೂ ಗುರುರಾಜಾಚಾರ್ಯನಿಂದ ಸಾಧ್ಯವಾಗಲಿಲ್ಲ. ಸರಸ್ವತೀಬಾಯಿಯು ತನ್ನ ಪತಿಯು ಯತಿಯಾದ

ರೆಂದು ಕೇಳಿದೊಡನೆಯೇ ಮಿತಿಮೀರಿದ ದುಃಖದಿಂದ ಮನಸ್ಸನ್ನು ಸಮಸ್ಥಿತಿಗೆ ತಂದು ಕೊಳ್ಳಲಾರದೆ, ಓಡಿಹೋಗಿ ಒಂದು ಭಾವಿಯಲ್ಲಿ ಬಿದ್ದು ಪ್ರಾಣಬಿಟ್ಟಳು. ಆಕೆಗೆ ಈ ದುರ್ಮರಣದಿಂದ ಪಿಶಾಚಜನ್ಮವೇ ಪ್ರಾಪ್ತವಾಯಿತು. ಈ ಸಂಗತಿಯನ್ನು ತಿಳಿದು ಶ್ರೀ ರಾಘವೇಂದ್ರಸ್ವಾಮಿಗಳು ತಮ್ಮ ತಪಶ್ಯಕ್ತಿಯಿಂದ ಆಕೆಗೆ ಆ ನೀಚಸ್ಥಿತಿಯನ್ನು ಪರಿಹರಿಸಿ, ಅಂದಿನಿಂದ ತಮ್ಮ ಪೂರ್ವಾಶ್ರಮದ ಗೋತ್ರಜರು, ವಿವಾಹಾದಿ ಶುಭ ಕಾಲಗಳಲ್ಲಿ ಸರಸ್ವತೀಬಾಯಿಯನ್ನುದ್ದೇಶಿಸಿ ಸುವಾಸಿನಿಯ ಪೂಜೆ ಮಾಡಬೇಕೆಂದು ವಿಧಾಯಕ ಮಾಡಿದರು. ಆ ಪದ್ಧತಿಯು ಗೌತಮ ಗೋತ್ರಜರಲ್ಲಿ ಈಗಲೂ ಆಚರಣೆಯಲ್ಲಿದೆ.

ಆಶಾಭಂಗ

ಪೂರ್ವದಲ್ಲಿ ಸಂಸ್ಥಾನದ ದೇವತಾರ್ಚನೆಗೆ ತೊಂದರೆ ಬರಬಾರದೆಂದು ಸುಧೀಂದ್ರ ಸ್ವಾಮಿಗಳಿಂದ ಸನ್ಯಾಸಪಡೆದಿದ್ದ ಯಾದವೇಂದ್ರರು ತಮ್ಮ ಗುರುಗಳು ವೃಂದಾವನಸ್ಥ ರಾದುದನ್ನು ಕೇಳಿ ಕುಂಭಕೋಣೆಗೆ ಬಂದರು. ರಾಘವೇಂದ್ರರು ಅವರನ್ನು ಆಶ್ರಮ ಜ್ಯೇಷ್ಠರೆಂದು ನಮಸ್ಕರಿಸಿ ಮಠದಲ್ಲಿಳಿಸಿಕೊಂಡು ಸತ್ಕರಿಸಿದರು. ಯಾದವೇಂದ್ರರು ತಾವೇ ಮೊದಲು ಆಶ್ರಮ ಪಡೆದವರಾದುದರಿಂದ ಸಂಸ್ಥಾನಾಧಿಪತ್ಯ ತಮಗೆ ಬರಬೇಕೆಂದು ಅಪೇಕ್ಷಿಸಿದರು. ರಾಘವೇಂದ್ರರು ಹಿರಿಯರ ಮನಸ್ಸನ್ನು ನೋಯಿಸಬಾರದೆಂದು ಅವರಿಗೆ ಸರ್ವಸ್ವವನ್ನೂ ಒಪ್ಪಿಸಿ, ವಿಜಯೀಂದ್ರರ ಬೃಂದಾವನದ ಸನ್ನಿಧಿಯಲ್ಲಿ ಪ್ರವಚನ ಮಾಡಿ ಕೊಂಡಿರಬೇಕೆಂದು ನಿಶ್ಚೈಸಿದರು. ಆದರೆ ಮಠದ ಶಿಷ್ಯರಿಗೆ ಅದು ಸಮ್ಮತವಾಗಲಿಲ್ಲ. ಈ ಧರ್ಮಸಂಕಟದಲ್ಲಿ ನ್ಯಾಯ ನಿರ್ಣಯಮಾಡಲು, ತಂಜಾವೂರಿನಿಂದ ವಿಜಯ ರಾಘವ ನಾಯಕನೇ ಕುಂಭಕೋಣೆಗೆ ಬರಬೇಕಾಯಿತು. ಯಾದವೇಂದ್ರರೇ ಹೋಗಿ ಕರೆಯು ದಿದ್ದರೆ ನಾಯಕರಾಜನು ಬರುತ್ತಿರಲಿಲ್ಲ. ರಾಜನು ಉಭಯರ ಆಶ್ರಮ ಚರಿತ್ರೆಯನ್ನೂ ವಿಚಾರಿಸಿದನು. ತನ್ನ ಸಮ್ಮುಖದಲ್ಲಿ ರಾಘವೇಂದ್ರತೀರ್ಥರಿಗೆ ಆಶ್ರಮವಾಗಿ ಮಠರಾಜ್ಯ ದಲ್ಲಿ ಪಟ್ಟಾಭಿಷೇಕವಾಗಿರುವ ಬಲವತ್ತರ ಕಾರಣದ ಮುಂದೆ ಯಾದವೇಂದ್ರರ ವಾದ ಬಲಿಷ್ಠವಾಗಲಿಲ್ಲ. ಶಿಷ್ಯಮಂಡಲಿಯು ಬೇಡವೆಂದರೂ ರಾಘವೇಂದ್ರರ ಪಕ್ಷವನ್ನು ಬಿಡಲಿಲ್ಲ. ಈ ಕಾರಣದಿಂದ ಯಾದವೇಂದ್ರರು ನಿರಾಶರಾಗಬೇಕಾಯಿತು. ಪಾಪ! ವೃದ್ಧ ಯತಿಗಳು ಕೃಷ್ಣಾತೀರಕ್ಕೆ ಹೋಗಿ, ಮುಡುಮಾಲೆಂಬ ಸ್ಥಳದಲ್ಲಿ ಕೆಲವುಕಾಲವಿದ್ದು ನಂತರ ಸಮಾಧಿಸ್ಥರಾದರು.

ಹೀಗೆಲ್ಲಾ ನಡೆಯುವ ಪ್ರಸಂಗಗಳು ನಡೆದುವು! ರಾಘವೇಂದ್ರರಿಗೆ ಯಾದ ವೇಂದ್ರರು ಅಸಂತುಷ್ಟರಾದರೆಂದು ವ್ಯಸನವಾಯಿತು. ಕಾಲಕ್ರಮದಲ್ಲಿ 'ರಾಘವೇಂದ್ರ ರಾಜ್ಯವಾಳಿದ! ಯಾದವೇಂದ್ರ ದನ ಕಾದ' ಎಂಬ ಮಾತು ರೂಢಿಗೆ ಬಂದುಬಿಟ್ಟಿತು. ಕಾಲಿಲ್ಲದ ಕಥೆಯು ಮತ್ತೂ ಬೆಳೆದು-ರಾಘವೇಂದ್ರ ಯಾದವೇಂದ್ರರಿಬ್ಬರೂ ತಮ್ಮ ವಿವಾದವನ್ನು ನಿರ್ಣಯಿಸುವಂತೆ ತಜ್ಞರನ್ನು ಪ್ರಶ್ನಿಸಿದಾಗ-ರಾಘವೇಂದ್ರ-ಯಾದ ವೇಂದ್ರರಲ್ಲಿ ರಾಜ್ಯವಾಳಿದವರ್ಯಾರೋ ಅವರು ಸಂಸ್ಥಾನಾಧಿಪತ್ಯಕ್ಕೆ ಯೋಗ್ಯರು. ಆ

ಹೆಸರುಗಳೇ ಸೂಚಿಸುವಂತೆ ಈಗಲೂ ನಡೆದುಕೊಂಡರಾಯಿತು ಎಂಬ ತೀರ್ಮಾನ ಹೊರಟಿತಂತೆ! ಅದರಂತೆಯೇ ಆ ಯತಿವರ್ಯರು ನಡೆದುಕೊಂಡರೆಂದು ಚೋಳದೇಶೀಯರ ಮನೆಮಾತಿನ ಒಂದು ದಂತಕಥೆ ಪ್ರಚಾರದಲ್ಲಿದೆ! ದಂತಕಥೆಯೆಂದರೆ ಇದೇ ತಾನೇ!

ಸ್ವಾಮಿಗಳ ಪೂಜಾ

ನಾರಾಯಣ ಪಂಡಿತಾಚಾರ್ಯರು ಪೂರ್ವದಲ್ಲಿ ನಡೆದ ರಾಮಾವತಾರ ಕಥೆಯನ್ನು ಸಂಗ್ರಹಿಸಿ ಬರೆಯುತ್ತಾ, ಅನಂತರದಲ್ಲಿ ನಡೆದ ಕೃಷ್ಣಾವತಾರ ಕಥೆಯ 'ಕೃಷ್ಣಸ್ಯೇವಸ್ವ ಫಲ್ಗುಜಃ' ಎಂಬ ಉಪಮಾನ ಕೊಟ್ಟು ಭರತನು ರಾಮನಿಗೆ ನಮಸ್ಕಾರ ಮಾಡಿದುದನ್ನು ವರ್ಣಿಸಿರುತ್ತಾರೆ. ಉಪಮಾನವು ಯಾವಾಗಲೂ ಹಿಂದೆ ನಡೆದ ವಿಷಯದ ವರ್ಣನೆಯಾಗಿರಬೇಕು. ಅಥವಾ ಕಾವ್ಯವನ್ನು ಬರೆದ ಕಾಲದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ ಮಾತನ್ನು ತೆಗೆದುಕೊಂಡು ಹಿಂದಿನದನ್ನು ಜ್ಞಾಪಿಸುವುದಾಗಬೇಕು. ಈ ನಿಯಮದಂತೆ ಆಧುನಿಕರಿಗೆ ಒಪ್ಪಿತವಾಗಬಹುದಾದ ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆಯ ಉಪಮಾನ ತೆಗೆದುಕೊಂಡು ಸ್ವಾಮಿಗಳ ಪೂಜೆ ಹೇಗಿತ್ತೆಂದು ತಿಳಿಸಬೇಕಾಗಿದೆ. ಆ ಉಪಮಾನವೆಂದರೆ ರಾಮಲಾಲನ ಕಥೆ. ಆ ಕಥೆಯು ಹೀಗಿದೆ:—ಒಬ್ಬ ಸಾಧುವು ಶ್ರೀ ರಾಮಕೃಷ್ಣ ಪರಮಹಂಸರ ಬಳಿಗೆ ಬಂದನಂತೆ! ಅವನು ಶ್ರೀರಾಮನ ಬಾಲಮೂರ್ತಿಯ ಉಪಾಸಕನಾಗಿದ್ದನಂತೆ! ಅವನ ಭಕ್ತಿಗೆ ವಶನಾದ ರಾಮನು ಅವನೊಡನೆ ರಾಮಾವತಾರ ಬಾಲಲೀಲೆಗಳನ್ನು ತೋರಿಸುತ್ತಿದ್ದನಂತೆ! ಅವನು ಪ್ರಯಾಣಮಾಡುವಾಗ ಆ ಮೂರ್ತಿಯನ್ನು ಪರಮಹಂಸರಿಗೆ ಕೊಟ್ಟು ಹೋದನಂತೆ! ಪರಮಹಂಸರು ರಾಮಲಾಲನನ್ನು ಉಪಚರಿಸುತ್ತಾ, ಗಂಗೆಯಲ್ಲಿ ಬಲುಹೊತ್ತು ಮಿಂದರೆ ಶೀತವಾಗುವುದೆಂದು ಗದರಿಸುತ್ತಾ, ದಾರಿ ನಡೆದಾಗ ಹೊಡೆಯುತ್ತಾ ತಾಯಿ ಮಗನನ್ನು ಆಡಿಸುವಂತೆ ಆಡಿಸಿದರಂತೆ! ಈ ಕಥೆಯು ಯಶೋದಾ ಕೃಷ್ಣರ ಕಥೆಯಷ್ಟೇ ದೊಡ್ಡದಾಗಿರಬಹುದು. ಪರಮಹಂಸರು ಶ್ರೀರಾಮಚಂದ್ರನ ಬಾಲಲೀಲೆಯ ಆನಂದವನ್ನನುಭವಿಸಿರಬಹುದು. ಭಕ್ತಿಯು ಯುಕ್ತಿಯ ಅಳತೆಗೆ ಒಳಪಡುವುದಲ್ಲ. ಭರತಖಂಡದ ಭಕ್ತರ ಜೀವನ ಚರಿತ್ರೆಗಳಲ್ಲಿ ಇಂತಹ ಕಥೆಗಳಿಗೆ ಬಡತನವಿಲ್ಲ. ಮೂರ್ತಿ ಪೂಜೆಯಿಂದರಾಗಲೀ ನೈಚ್ಯಾನುಸಂಧಾನದ ಭಕ್ತಿಯಿಂದರಾಗಲೀ, ದೇವರು ಭಕ್ತರೊಡನಾಡಿ ಅತಿಮಾನುಷ ಲೀಲೆಗಳನ್ನು ತೋರಿಸಿದನೆಂದರಾಗಲೀ ಆಧುನಿಕರಿಗೆ ಬಲು ಬೇಸರವಾಗಿಬಿಡುತ್ತದೆ. ಕೆಲಕೆಲವು ವಿಷಯಗಳಿಗಂತು ಅವರು ಸುಲಭವಾಗಿ ದಾಸ್ಯ ಮನೋಭಾವ (Slavish mentality) ಎಂದುಬಿಡುತ್ತಾರೆ. ಸ್ವಾಮಿ ವಿವೇಕಾನಂದರಂಥಾ ಆಂಗ್ಲ ವಿದ್ಯಾವಿಶಾರದರು ಪರಮಹಂಸರ ಶಿಷ್ಯರಾಗದಿದ್ದರೆ, ಅವರ ಹೆಸರು ಪ್ರಶಂಸೆಗೆ ಬರುತ್ತಿರಲಿಲ್ಲ. ಅವರು ವಿವಿಧ ರೀತಿಯಲ್ಲಿ ಮಾಡಿದ ಸಾಧನೆಗಳ ವಿಧ ವಿಧಾನಗಳನ್ನು ಜನರು ನಂಬುತ್ತಿರಲಿಲ್ಲ. ಪ್ರಕೃತ ಶ್ರೀ ರಾಘವೇಂದ್ರಸ್ವಾಮಿಗಳ ಪೂಜೆ ಹೇಗೆ ನಡೆಯುತ್ತಿತ್ತೆಂಬುದರ ಕಡೆಗೆ ತಿರುಗಿದರೆ, ಅದರ ವಿವರವು ಗೊತ್ತಾಗುತ್ತದೆ.

ಶ್ರೀ ರಾಘವೇಂದ್ರಸ್ವಾಮಿಗಳು ಪ್ರತಿದಿನವೂ ಬ್ರಾಹ್ಮೀ ಮುಹೂರ್ತದಲ್ಲಿದ್ದು ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು, ಶಿಷ್ಯರಿಗೆ ವೇದಾಂತ ಪ್ರವಚನ ಮಾಡಿಸುತ್ತಿದ್ದರು. ಮಧ್ಯಾಹ್ನ ಸ್ನಾನ ಜಪಗಳಾದೊಡನೆಯೇ **ಬ್ರಹ್ಮಕರಾರ್ಚಿತ ಶ್ರೀ ಮೂಲರಾಮ, ಸರ್ವಜ್ಞ ಕರಾರ್ಚಿತ ದಶಾವತಾರಪೀಠ ದಿಗ್ವಿಜಯರಾಮ, ವೇದವ್ಯಾಸರಿಂದ ಆನಂದತೀರ್ಥ ಮುನಿಗಳಿಗೆ ಅನುಗ್ರಹೀತವಾದ ವ್ಯಾಸಮುಷ್ಟಿ, ನೀಲಾದೇವಿಯರಿಂದ ಆರಾಧಿತವಾದ ವೈಕುಂಠ ವಾಸುದೇವಮೂರ್ತಿ, ಜಲಮುರಿ ಶಂಖ, ಜಯತೀರ್ಥ ಕರಾರ್ಚಿತ ಜಯರಾಮ,** ಈ ದಿವ್ಯ ಮೂರ್ತಿಗಳನ್ನು ಆರಾಧಿಸುತ್ತಿದ್ದರು. ಸ್ವಾಮಿಗಳ ಪೂಜೆಯು ನಾವು ಕಾಣುವ ಪೂಜಾರಿಗಳ ಕಲ್ಲು ಕಂಚುಗಳ ಪೂಜೆಯಾಗಿರಲಿಲ್ಲ. ಒಂದೊಂದು ರೂಪವನ್ನು ಚಿಂತಿಸುವಾಗಲೂ ಆ ರೂಪವನ್ನು ಮೂರ್ತಿಯಲ್ಲಿ ಕಂಡ ವಿನಾ, ಅವರು ನಗುತ್ತಾ ತುಲಸೀದಳವನ್ನು ಅರ್ಪಿಸುತ್ತಿರಲಿಲ್ಲ. ಭಗವಂತನು ಅವರ ಭಾವನೆಗೆ ತಕ್ಕಂತೆ ಒಡನಾಡದಿರುತ್ತಿರಲಿಲ್ಲ. ಈ ಬಗೆಯ ಪೂಜೆಗೆ ಕಾಲದ ಅಳತೆಯಿರುತ್ತಿರಲಿಲ್ಲ. ಯಾವ ಮೂರ್ತಿಯಲ್ಲಿ ಯಾವ ರೂಪವನ್ನು ಕಂಡರೂ, **ವೇಣುಗೋಪಾಲ** ರೂಪವು ಸ್ವಾಮಿಗಳ ಮನಸ್ಸನ್ನಾವರಿಸದೆ ಬಿಡುತ್ತಿರಲಿಲ್ಲ. ಇದಕ್ಕೆ ಸ್ವಾಮಿಗಳ ಪೂರ್ವಜನ್ಮ ಸಂಸ್ಕಾರವು ಕಾರಣವಾಗಿತ್ತು. ಆದುದರಿಂದ ಸ್ವಾಮಿಗಳು ಸುವರ್ಣಮಯವಾದ ವೇಣುಗೋಪಾಲಮೂರ್ತಿಯನ್ನು ಪ್ರತ್ಯೇಕವಾಗಿ ನಿರ್ಮಿಸಿ ಆರಾಧನೆಗಾರಂಭಿಸಿದರು. ಒಂದು ದಿನ ವೇಣುಗೋಪಾಲನ ವೈಭವವನ್ನು ನೋಡುತ್ತಾ ಪರವಶರಾಗಿ ವೀಣೆಯನ್ನು ತರಿಸಿ, ಬಾರಿಸುತ್ತಾ ಹಾಡಿದರು. ಹಾಡಿದ ಪದವು ಲಯಬದ್ಧವಾಗಿ ಅದನ್ನೇ ಹಾಡಿಕೊಂಡು ಆನಂದಿಸುವವರಿಗೆ ಅನುಕೂಲವಾಗಿ ಹೀಗಿದೆ:—

ರಾಗ: ಭೈರವಿ—ತಾಳ: ತ್ರಿಪುಟ ಛಾಪು

ಇಂದು ಎನಗೆ ಗೋವಿಂದ ನಿನ್ನ ಪಾದಾರ
ವಿಂದವ ತೋರೊ ಮುಕುಂದನೆ ಪ.

ಮಂದರೋದ್ಧಾರನೆ ನಂದಗೋಪನ ಕಂದ
ಇಂದಿರಾರಮಣ ಗೋವಿಂದ ಗೋಕುಲಾನಂದ ಅ.

ನೊಂದೆನಯ್ಯಾ ಭವ ಬಂಧನದೊಳು ಸಿಲುಕಿ
ಮುಂದೆ ದಾರಿಕಾಣದೆ ಕುಂದಿದೆ ಜಗದೊಳು
ಕಂದ ನಾನೆಂದೆನ್ನ ಕುಂದುಗಳೆಣಿಸದೆ
ತಂದೆ ನೀ ಕಾಯೊ ಕಂದರ್ಪ ಜನಕನೆ ೧

ಮೂಢತನದಿ ಬಲು ಹೇಡಿ ಜೀವನನಾಗಿ
ದೃಢಭಕ್ತಿಯ ಮಾಡಲಿಲ್ಲವೊ ಹರಿಯೇ
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ಸ್ವಾಮಿ ೨

ಧಾರುಣಿಯೊಳು ಭೂಭಾರ ಜೀವನನಾಗಿ
ಮೇರೆದಪ್ಪಿ ನಡೆದು ಸೇರಿದೆ ಕುಜನರ
ಯಾರೂ ಕಾಯುವರಿಲ್ಲ ಸೇರಿದೆ ನಿನಗಯ್ಯಾ
ಧೀರ ವೇಣುಗೋಪಾಲ ಪಾರಗಾಣಿಸೋ ಸ್ವಾಮಿ ॥ ೩

ಈ ಪದವನ್ನು ಹಾಡಿದೊಡನೆ ದಾಸರಿಗೆ ಗೋಪಾಲನು ವೇಣುಗಾನಮಾಡುತ್ತ ಗತಿಗೆ ಬಂದಂತೆ ದರ್ಶನ ನೀಡಿದನಂತೆ! ಶ್ರೀಮದಾಚಾರ್ಯರಲ್ಲಿ ಲಬ್ಧ ಸಂಪ್ರದಾಯದವರಿಗೆ ಲಬ್ಧ ಸಂಪ್ರದಾಯದ ಕವಿತೆಗಳು ಹೃದಯಕ್ಕೆ ತಾಕುವುದಿಲ್ಲ. ಕಲ್ಲು ಕರಗಿಸುವಂತಹ ಮಧುರ ಸಾಹಿತ್ಯವೆಂಬುದೆ ಇದು. ಭಕ್ತಿಶೂನ್ಯ ನೀರಸಹೃದಯದವರಿಗೆ ಅರ್ಥವಾಗದಿರುವುದು.

ಮೂಲರಾಮದೇವರ ಪೌರಾಣಿಕ ಕಥೆ

ಚತುರ್ಮುಖ ಬ್ರಹ್ಮದೇವನು ಜಗದಾದಿಯಲ್ಲಿ ಮಂತ್ರಶಾಸ್ತ್ರವನ್ನನುಸರಿಸಿ ವಿಶ್ವಕರ್ಮನಿಂದ ಸೀತಾರಾಮಮೂರ್ತಿಗಳನ್ನು ಮಾಡಿಸಿ ಪೂಜಿಸಿದನಂತೆ! ಈ ಪ್ರತಿಮೆಗಳು ಬ್ರಹ್ಮನಿಂದ ಮನುವಿಗೂ ಮನುವಿನಿಂದ ಸೂರ್ಯನಿಗೂ ಕ್ರಮವಾಗಿ ಬಂದುವಂತೆ! ಕುಲಕ್ರಮದಿಂದ ಬಂದ ಇವೇ ಮೂರ್ತಿಗಳನ್ನು ಶ್ರೀರಾಮನೂ ಪೂಜಿಸಿದನಂತೆ! ಮೃಗಯಾರ್ಥವಾಗಿಯಾಗಲೀ, ದಿಗ್ವಿಜಯಾರ್ಥವಾಗಿಯಾಗಲೀ, ಪತಿಯು ಪ್ರಯಾಣ ಬೆಳೆಸಿದಾಗ ಸೀತೆಯು ಅಯೋಧ್ಯೆಯಲ್ಲಿರುತ್ತಿದ್ದಳಂತೆ! ಆ ಕಾಲದಲ್ಲಿ ಪತಿಸೇವೆ ತಪ್ಪಿಹೋಗುವುದರಿಂದ ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ಕೇಳಿಕೊಂಡಳಂತೆ! ರಾಮನು–"ನೋಡು, ನನಗೆ ನಮ್ಮಪ್ಪ ರಾಮನೆಂದು ನಾಮಕರಣ ಮಾಡಿದ್ದಾನೆ; ನಿನಗೆ ನಿಮ್ಮಪ್ಪ ಸೀತೆಯೆಂದು ಹೆಸರಿಟ್ಟಿದ್ದಾನೆ. ನಮ್ಮ ಮನೆಯಲ್ಲಿ ಪರಂಪರೆಯಾಗಿ ಪೂಜಿಸುತ್ತ ಬಂದಿರುವ ಮೂರ್ತಿಗಳಿಗೂ ಸೀತಾರಾಮರೆಂಬ ಹೆಸರಿದೆ. ಅದೇ ಹೆಸರಿನ ನಾವು ದೈವಯೋಗದಿಂದ ದಂಪತಿಗಳಾಗಿದ್ದೇವೆ; ಆದ್ದರಿಂದ ನಮ್ಮ ಆ ಹೆಸರಿನ ಮೂರ್ತಿಗಳನ್ನೇ ನೀನು ನನ್ನ ಪ್ರವಾಸಕಾಲದಲ್ಲಿ ಆರಾಧಿಸಿದರೆ ನನ್ನ ಬಳಿ ಇದ್ದಂತೆಯೇ ಆಗುವುದು" ಎಂದನಂತೆ. ಅಂದಿನಿಂದ ಸೀತೆಯು ಆ ಮೂರ್ತಿಗಳನ್ನು ಆರಾಧಿಸಿದಳಂತೆ! ಪೂಜೆಯ ಸೌಲಭ್ಯಕ್ಕೆ ಮೂರ್ತಿಯನ್ನು **ಮೂಲರಾಮ**ನೆಂದು ಕರೆದವಳು ಸೀತೆಯಂತೆ! ಅನಂತರ ಆ ಮೂರ್ತಿಗಳು ಲಕ್ಷ್ಮಣನಿಗೂ ಸೌಭರಿ ಮುನಿಗೂ ದೊರೆತವಂತೆ! ದ್ವಾಪರಯುಗದಲ್ಲಿ ಸೌಗಂಧಿಕಾಪುಷ್ಪವ್ಯಾಜದಿಂದ ಹೋಗಿದ್ದ ಭೀಮಸೇನನಿಗೆ ಮಾರುತಿಯ ದರ್ಶನವಾದಾಗ ಆ ಸಂದರ್ಭದ ಜ್ಞಾಪಕಾರ್ಥವಾಗಿ ಆ ಮೂರ್ತಿಗಳು ಮಾರುತಿಯಿಂದ ಪಾಂಡವ ಸಂತತಿಗೆ ಲಭಿಸಿದುವಂತೆ! ಒಂದುಸಾವಿರ ವರ್ಷಕಾಲ ಪಾಂಡವ ಸಂತತಿಯವರಿಂದ ಪೂಜೆಗೊಂಡ ಅವೇ ಸೀತಾರಾಮಮೂರ್ತಿಗಳು ಕ್ಷೇಮಕಾಂತರಾಜನ ನಂತರ ಒರಿಸ್ಸಾದ ಗಜಪತಿರಾಜರ ವಶವರ್ತಿಗಳಾದುವಂತೆ! ಪೌರಾಣಿಕಕಾಲ ಕಳೆದು ಇತಿಹಾಸಕಾಲ ಬಂದೊದಗಿದಾಗ **ಶ್ರೀಮನ್ಮಧ್ವಾಚಾರ್ಯ**ರವರು (ಹದಿಮೂರನೆಯ ಶತಮಾನ) ಒರಿಸ್ಸಾ ದೇಶಕ್ಕೆ ಬರಲು

ಆ ರಾಜ್ಯದ ದಫ್ತರದಾರರಾಗಿದ್ದ ಸ್ವಾಮಿ ಶಾಸ್ತ್ರಿಗಳೆಂಬ ಮಹಾಪಂಡಿತರು ಆಚಾರ್ಯರೊಡನೆ ವಾದಭೂಮಿಗಿಳಿದರಂತೆ!

ಶಾಸ್ತ್ರಿಗಳು ರಾಜತಂತ್ರ ವಿಶಾರದರಾಗಿದ್ದುದರ ಜೊತೆಗೆ ಶಾಸ್ತ್ರಪಾಂಡಿತ್ಯವನ್ನೂ ಗಳಿಸಿದ್ದುದರಿಂದ, ಅವರಿಗೆ ಮಧ್ವಾಚಾರ್ಯರಂಥಾ ಮಹಾಪುರುಷರೊಡನೆ ವಾಕ್ಯಾರ್ಥ ಮಾಡುವ ಭಾಗ್ಯವುಂಟಾಯಿತು. ಆಚಾರ್ಯರೊಡನೆ ನಡೆದ ಈ ವಾಕ್ಯಾರ್ಥವೇ ಶಾಸ್ತ್ರಿಗಳ ವೈರಾಗ್ಯಪ್ರಾಪ್ತಿಗೂ ಸನ್ಯಾಸಗ್ರಹಣಕ್ಕೂ ಕಾರಣವಾಯಿತು. ಆಶ್ರಮ ಸ್ವೀಕಾರಾನಂತರ ಸ್ವಾಮಿ ಶಾಸ್ತ್ರಿಗಳ ಆಶ್ರಮನಾಮ **ನರಹರಿತೀರ್ಥ**ರೆಂದಾಯಿತು. ನರಹರಿತೀರ್ಥರು ಆಚಾರ್ಯರೊಂದಿಗೇ ತೀರ್ಥಾಟನೆಗೆ ಜೊತೆಯಲ್ಲೇ ಪ್ರಯಾಣಮಾಡಬೇಕೆಂದು ಸಿದ್ಧರಾಗಲು, ಆಚಾರ್ಯರು–"ಮೂಲ ಸೀತಾರಾಮ ವಿಗ್ರಹಗಳು ರಾಜಭಂಡಾರದಲ್ಲಿವೆ. ಕಾಲಕ್ರಮದಲ್ಲಿ ಅವುಗಳನ್ನು ತಮ್ಮ ಬಳಿಗೆ ತರುವ ಸನ್ನಿವೇಶಗಳೊದಗುವುವು. ಅವರೆಗೆ ನೀವು ಇಲ್ಲೇ ಇರಿ" ಎಂದು ಅಪ್ಪಣೆ ಕೊಟ್ಟರು.

ಕೆಲವು ಕಾಲಾನಂತರ ಆಗಿದ್ದ ಗಜಪತಿರಾಜನು ಗರ್ಭಿಣಿಯಾಗಿದ್ದ ತನ್ನ ಪತ್ನಿಯನ್ನು ಬಿಟ್ಟು ಚಿಕ್ಕವಯಸ್ಸಿನಲ್ಲೇ ಮೃತನಾದನು. ಸಿಂಹಾಸನದ ಪದವಿಗೆ ರಾಜದಾಯಾದರಲ್ಲಿ ವಿವಾದ ಹುಟ್ಟಿತು. 'ಪಟ್ಟದಾನೆಯು ಯಾರ ಕೊರಳಿಗೆ ಮಾಲೆ ಹಾಕಿದರೆ ಅವರಿಗೆ ರಾಜ್ಯಪದವಿ' ಎಂಬ ತೀರ್ಮಾನಕ್ಕೆ ಎಲ್ಲರೂ ಒಪ್ಪಿದರು. ಸೊಂಡಿಲಿನಲ್ಲಿ ಮಾಲೆಯನ್ನು ಧರಿಸಿದ ಪಟ್ಟದಾನೆಯು ಸರ್ವಾಭರಣಭೂಷಿತರಾಗಿ ಕುತೂಹಲದಿಂದಿದ್ದ ರಾಜಕುಮಾರರನ್ನು ಬಿಟ್ಟು ದೂರದಲ್ಲಿ ಕುಳಿತು ವಿನೋದ ನೋಡುತ್ತಿದ್ದ ಶ್ರೀ ನರಹರಿತೀರ್ಥರ ಕೊರಳಿಗೆ ಮಾಲಾರ್ಪಣಮಾಡಿತು. ಪೂರ್ವಾಶ್ರಮದಿಂದ ರಾಜ್ಯದ ಹಿತೈಷಿಗಳಾಗಿದ್ದು ಪ್ರಕೃತ ಸನ್ಯಾಸಾಶ್ರಮ ಧರ್ಮಪಾಲನೆಯಲ್ಲಿದ್ದ ಆ ಮಹನೀಯರು ರಾಜ್ಯಭಾರ ಮಾಡುವುದು ಸರ್ವಸಮ್ಮತವಾಯಿತು. ದೈವಾನುಗ್ರಹದಿಂದ ರಾಣಿಯ ಗರ್ಭದಲ್ಲಿ ಪುತ್ರಸಂತಾನವಾಯಿತು. ರಾಜಪುತ್ರನ ಬೆಳೆವಣಿಗೆ ವಿದ್ಯಾಬುದ್ಧಿಗಳ ಅಭಿವೃದ್ಧಿಯನ್ನೂ ರಾಜ್ಯದ ಆಡಳಿತವನ್ನೂ ಹನ್ನೆರಡು ವರ್ಷಗಳಿಗೆ ಮೇಲ್ಪಟ್ಟಷ್ಟು ಕಾಲ ನಿರ್ವಹಿಸಿದ ಶ್ರೀ ನರಹರಿತೀರ್ಥರು ರಾಜಕುಮಾರನಿಗೆ ರಾಜ್ಯಾಭಿಷೇಕಮಾಡಿ ತೀರ್ಥಾಟನೆಗೆ ಸಿದ್ಧರಾದರು. ನೂತನರಾಜನೂ ರಾಜಮಾತೆಯೂ ವಿಶೇಷ ಕೃತಜ್ಞತೆಯಿಂದ ಒಪ್ಪಿಸಿದ ಕಾಣಿಕೆಗಳನ್ನು ಶ್ರೀ ನರಹರಿತೀರ್ಥರು ಅವರಿಗೇ ಒಪ್ಪಿಸಿ–ಅವರ ಅನುಮತಿ ಪಡೆದು, ರಾಜಭಾಂಡಾರದಲ್ಲಿ ಬಹುಕಾಲದಿಂದ ಪೂಜೆಯಿಲ್ಲದೆ ಮುದ್ರಿತವಾಗಿ ಇಡಲ್ಪಟ್ಟಿದ್ದ ಶ್ರೀ ಸೀತಾರಾಮ ವಿಗ್ರಹಗಳನ್ನೂ, ಭವನಾಸಿ ರಾಮಟಂಕೆಯ ವರಹಗಳನ್ನೂ ತೆಗೆದುಕೊಂಡು ಹಸ್ತಿನಾವತಿಗೆ ಬಂದು ಆಗ ಸಂಚಾರದಲ್ಲಿದ್ದ ಶ್ರೀಮದಾಚಾರ್ಯರಿಗೆ ಒಪ್ಪಿಸಿದರು. ಆಚಾರ್ಯರ ಕರಕಮಲಗಳಿಂದ ಆ ದಿವ್ಯಮೂರ್ತಿಗಳ ಪೂಜೆ ನೂರೆಂಟು ದಿವಸಗಳ ಪರ್ಯಂತ ನಡೆಯಿತು. ಶ್ರೀಮದಾಚಾರ್ಯರು ಸಂಸ್ಥಾನವನ್ನು ಪ್ರಥಮ ಶಿಷ್ಯರಾದ ಪದ್ಮನಾಭತೀರ್ಥರಿಗೆ ಒಪ್ಪಿಸಿ-ಬದರಿಕಾಶ್ರಮಕ್ಕೆ ತೆರಳಿದನಂತರ, ನರಹರಿತೀರ್ಥರೇ ಮುಂತಾಗಿ ಅನೇಕಮಂದಿ ಮುನಿಗಳು ಇದೇ ಮೂರ್ತಿಗಳ ಆರಾಧನೆಮಾಡಿದರು. ಮಠವಿಭಾಗವಾದಾಗ ಕೈತಪ್ಪಿಹೋಗಿದ್ದ

ಮೂಲರಾಮರ ಸೇವೆಯು ಶ್ರೀ ರಘುನಂದನತೀರ್ಥರ ಕಾಲದಲ್ಲಿ ಈ ಮಠಕ್ಕೆ ಪ್ರಾಪ್ತವಾಯಿತು. ಅದ್ದರಿಂದ ಶ್ರೀ ರಾಘವೇಂದ್ರ ಮಠದ ಗುರುಪರಂಪರೆಯನ್ನು ಕಥನಮಾಡುವಾಗ ಶ್ರೀ ಮಠದಲ್ಲಿ–

ಪರ್ಕರಪಹೃತಾ ಮೂಲ
ರಾಮಾರ್ಚಾ ಗುರ್ವನುಗ್ರಹಾತ್ ।
ಏನಾನೀತಾ ನಮಸ್ತಸ್ಮೈ
ರಘುನಂದನ ಭಿಕ್ಷವೇ ॥

ಎಂಬುದಾಗಿ ಹೇಳುವಂತ ಚರಮಶ್ಲೋಕವನ್ನು ಹೇಳುತ್ತಾರೆ.

ಉತ್ತರಾದಿ ಮಠಕ್ಕೂ ಈ ಮಠಕ್ಕೂ ಇರುವ ವಿವಾದಗಳಿಗೆ ಈ ಪ್ರತಿಮೆಗಳೇ ಕಾರಣ. ರಾಘವೇಂದ್ರಮಠದವರು :–

ಕರ್ಣತಃ ವರ್ಣತಶ್ಚೈವ
ಪೀಠತಃ ಪರಿಮಾಣತಃ ।
ಪರಸ್ಥ ಸೀತಾಸದೃಶೋ
ಮೂಲರಾಮಸ್ತು ಮನ್ಮಠೇ ॥

ಎಂಬ ಹೋಲಿಕೆಯನಾಗುವ ಯುಕ್ತಿಯಿಂದ ಮೂಲರಾಮವಿಗ್ರಹವು ತಮ್ಮಲ್ಲಿರುವುದೆಂದೂ, ಸೀತಾವಿಗ್ರಹವು ಉತ್ತರಾದಿಮಠದಲ್ಲಿರುವುದೆಂದೂ ಸಮರ್ಥನೆ ಮಾಡುತ್ತಾರೆ. ಪರ್ವಜ್ಞ ಕರಾರ್ಚಿತ ಶ್ರೀ ರಾಮಪ್ರತಿಮೆಗಳಿಗೆ ಉತ್ತರಾದಿಮಠದಲ್ಲಿ ಅಭಾವವಿರುವ ಕಾರಣ ಅಭಿಜ್ಞರು ಈ ವಿವಾದಕ್ಕೆ ಕೈಹಾಕುವುದಿಲ್ಲ. ಹನುಮ ಭೀಮ ಮಧ್ವ ಈ ಅವತಾರ ತ್ರಯಗಳಲ್ಲೂ ಪೂಜೆಗೊಂಡಿರುವ ಕಾರಣ ಮೂಲರಾಮನೆಂದ ಕೂಡಲೇ ನಮ್ಮ ಜನರು ಮೈಮರೆಯುತ್ತಾರೆ.

ಪೂಜಾರಹಸ್ಯವರಿಯದ ವಿಧರ್ಮಿಗಳ ಮಾಯೆಗೊಳಗಾದ ಜನರು, ಮೂರ್ತಿ ಪೂಜೆಯೆಂದರೆ, ಮೂಗುಮುರಿಯುವುದು ಈಗೀಗ ಕಂಡುಬರುತ್ತಿದೆ. ಬೌದ್ಧರನ್ನು ಅನುಕರಣಮಾಡಿದ ಹಿಂದೂಗಳಿಂದ ಮೂರ್ತಿಪೂಜೆ ರೂಢಿಗೆ ಬಂತೆಂದು ಕೆಲವರು ಕಾಲದ ಚೀಟಿಗಳನ್ನು ಬರೆಯುತ್ತಾರೆ. ಮತ್ತೆ ಕೆಲವರು, ಕಾಡುಜನರ ಪದ್ಧತಿಯಾದ ಮೂರ್ತಿ ಪೂಜೆಯನ್ನು ಹಿಂದೂಗಳು ಇನ್ನೂ ಬಿಟ್ಟಿಲ್ಲವೆನ್ನುತ್ತಾರೆ. ಈ ಜಳ್ಳುಜನರ ಪೊಳ್ಳುಮಾತುಗಳು ಮೂರ್ತಿಪೂಜೆಯನ್ನು ಎಂದಿಗೂ ಖಂಡಿಸಲಾರವು. ಭಾವನಾತ್ಮಕ ವಿಚಾರವು ಶಬ್ದಮೂರ್ತಿಯು ಉಚ್ಚಾರವಾದಕೂಡಲೇ ಆ ನಾದತರಂಗವು ಒಂದು ಆಕಾರವನ್ನು ತಾಳುತ್ತದೆ. ಉಪಾಸಕನ ಅಭಿರುಚಿಯಂತೆ, ಆ ಆಕಾರವು ಕರಚರಣಾದಿ ಅಂಗಸೌಷ್ಠವ ತಾಳಿ ಒಂದು ಸುಂದರ ಮೂರ್ತಿಯಾಗುತ್ತದೆ. ಮೂರ್ತಿರಚನೆಯನ್ನು ಮತ್ತಷ್ಟು ಪರಿಶೀಲಿಸುವರು, ಅದನ್ನು ಸ್ತ್ರೀ ಅಥವಾ ಪುರುಷಮೂರ್ತಿಯೆಂದು ಕರೆಯುತ್ತಾರೆ. ಅರಿತವರು ಮನಸ್ಸಿನ ಸಹಾಯದಿಂದ ಉಪಾಸಿಸುತ್ತಾರೆ. ಆ ಷೋಡಶೋಪಚಾರದಿಂದ ಗೃಹಸ್ಥ ಮನೆಗೆ ಬಂದ ಅತಿಥಿ ಸತ್ಕಾರದಂತೆ ಸ್ನಾನಭೋಜನಾದಿ ಸತ್ಕಾರವನ್ನೆಸಗುತ್ತಾನೆ. ಈ ಮಾತುಗಳನ್ನು ಮಂತ್ರಶಾಸ್ತ್ರ ರಹಸ್ಯ ತಿಳಿಯದವರಿಗೆ ಮಾತ್ರ (ಭಾವನಾತ್ಮಕ)

ಯಂತ್ರ (ಮೂರ್ತಿ) ತಂತ್ರ (ಪೂಜಾವಿಧಾನ)ಗಳೆಂಬ ವಿಧಿವಿಧಾನಗಳೆಸಿಸುತ್ತಾನೆ. ಆದುದರಿಂದ ಪ್ರಾಣಿವರ್ಗಕ್ಕೇ ಮೂರ್ತಿಪೂಜೆಯು ಬಿಟ್ಟಿದ್ದಲ್ಲ. ತಿರ್ಯಗ್ಜಂತುಗಳು ಸಹ ಒಂದನ್ನು ನೋಡಿ ಮತ್ತೊಂದು ಪ್ರೀತಿಸಿದರೆ ಅದು ಮೂರ್ತಿಪೂಜೆಯಾಗಿಬಿಡುತ್ತದೆ. ನಾಗರಿಕನಾದ ಮಾನವನು ತಮ್ಮ ಪ್ರೀತಿಪಾತ್ರರಾದವರ ಭಾವಚಿತ್ರಗಳನ್ನು ಮನೆಯಲ್ಲಿಟ್ಟುಕೊಳ್ಳುವುದೂ, ಲೋಕೋಪಕಾರಿಗಳ ತೈಲಚಿತ್ರಗಳನ್ನು ಸಾರ್ವಜನಿಕಸ್ಥಾನಗಳಲ್ಲಿ ಅನಾವರಣಮಾಡುವುದೂ, ಮತ್ತು ರಾಜಾಧಿರಾಜರ ಮತ್ತು ಮಹಾಪುರುಷರ ಶಿಲಾ ಅಥವಾ ಲೋಹಪ್ರತಿಮೆಗಳನ್ನು ದೊಡ್ಡ ದೊಡ್ಡ ಚೌಕಗಳಲ್ಲಿ ನಿಲ್ಲಿಸುವುದೂ-ಇವೆಲ್ಲಾ ಮೂರ್ತಿಪೂಜೆಯ ತರಗತಿಗೆ ಸೇರುವಾಗ, ನಿಖಿಲ ಪ್ರಪಂಚಕ್ಕೂ ನಿಯಾಮಕನಾದ ಪರಮಾತ್ಮನನ್ನು ಗುರ್ತಿಸಲು ಮೂರ್ತಿಗಳನ್ನು ಮಾಡಿಕೊಂಡು, ಅವುಗಳಿಗೆ ಪುಷ್ಪಹಾರಗಳನ್ನು ಹಾಕಿ ಗೌರವಿಸಿದ್ದಾದರೆ ತಪ್ಪೇನು? ಮತ್ತು ಮೂರ್ತಿಪೂಜೆಯನ್ನು ಮನ್ನಿಸುವವರು ಸಹ ಈ ಬಗೆಯ ಪೂಜೆಯನ್ನು ಅಪ್ರಬುದ್ಧರ ಪೂಜೆಯೆಂದು ನಿರಾಕರಿಸುವುದಾದರೆ, ಆ ನಿರಾಕರಣೆಯನ್ನು, ಎಂ.ಎ. ಪರೀಕ್ಷೆಯಾದಮೇಲೂ ಪ್ರಾಥಮಿಕ ಶಾಲೆಯಲ್ಲಿ ಕಲಿತ ವರ್ಣಮಾಲಿಕೆಯನ್ನೇ ಉಪಯೋಗಿಸಿ ನಾನಾದರೂ ಬರೆಯಬೇಕೇ ಎಂದು ಕೇಳುವವನ ಮಾತಿನಂತೆ ಜಳ್ಳುಮಾತಾಗುವುದೆಂದರೆ ಅಪರಾಧವೇನು?

ಅಂತು ಶ್ರೀ ರಾಘವೇಂದ್ರಸ್ವಾಮಿಗಳು ಮೂರ್ತಿಪೂಜೆಯಿಂದಲೇ ರಾಮಕೃಷ್ಣಾದಿ ಅವತಾರಗಳ ವೈಭವವನ್ನು ಪ್ರತ್ಯಕ್ಷೀಕರಿಸಿಕೊಂಡರು. ಅಂತರ್ಮುಖಿಗಳಾಗಿ ಜ್ಯೋತಿದರ್ಶನದಿಂದ ಜ್ಞಾನದ ಪರಮಾವಧಿಗೇರಿದರು.

ಶ್ರೀ ರಾಘವೇಂದ್ರರಂತೆ ಲೋಕದಲ್ಲಿ ಭಗವತ್ಸಾಕ್ಷಾತ್ಕಾರ ಮಾಡಿಕೊಂಡ ಮಹನೀಯರು ಅನೇಕರಿರಬಹುದು. ಅಂತಹವರು ಸ್ವಯಂಕೃತಾರ್ಥರಾಗಿದ್ದರೆ ಅವರ ಹೆಸರು ಜನರ ಜ್ಞಾಪಕದಲ್ಲಿರುವುದಿಲ್ಲ. ತಮ್ಮ ದಾರಿಯನ್ನು ಇತರರಿಗೂ ತೋರಿಸಿ ಲೋಕವನ್ನು ಉದ್ಧರಿಸಿದ್ದರೆ ಮಾತ್ರ ಜನರು ಅವರನ್ನೆಂದಿಗೂ ಮರೆಯುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಶ್ರೀ ರಾಘವೇಂದ್ರರ ಹೆಸರು ಎಂದಿಗೂ ಮರೆಯುವಂಥದಲ್ಲ. ಧರ್ಮಸ್ಥಾಪನೆ ಮತ್ತು ಮತಪ್ರಚಾರ ಕಾರ್ಯ ಈ ಎರಡೂ ಪೀಠಾಧಿಪತಿಗಳ ಕರ್ತವ್ಯವಾದ ಕಾರಣ ಪ್ರಚಾರ ದೃಷ್ಟಿಯಿಂದಲೇ ಸ್ವಾಮಿಗಳು ದಕ್ಷಿಣದೇಶದ ಯಾತ್ರೆಯನ್ನು ಪ್ರಥಮತಃ ಕೈಕೊಂಡರು. ಆ ಕಾಲದಲ್ಲಿ ಕ್ಷೇತ್ರಗಳೊಂದೊಂದೂ ವಿದ್ಯಾಕೇಂದ್ರಗಳೇ ಆಗಿದ್ದುವು. ಅಲ್ಲಿದ್ದ ಪಂಡಿತರು ಕೇವಲ ಸನ್ಯಾಸಿಗಳು ಪೀಠಾಧಿಪತಿಗಳು ಎಂದಮಾತ್ರಕ್ಕೇ ಗೌರವಿಸುತ್ತಿರಲಿಲ್ಲ. ವಾಕ್ಯಾರ್ಥದಲ್ಲಿ ಒಡಂಬಟ್ಟ ವಿನಾ ಸಾಷ್ಟಾಂಗ ನಮಸ್ಕಾರ ಮಾಡುತ್ತಿರಲಿಲ್ಲ. ವಾದವೆಂದರೆ ಕೇವಲ ಚರ್ಚಾ ಮಾತ್ರವಲ್ಲ. ವಾದದಲ್ಲಿ ಗೆದ್ದವರ ಆಶ್ರಮವನ್ನು ಸೋತವರು ಸ್ವೀಕರಿಸಬೇಕೆಂದಾಗಲೀ, ಸೋತವರು ತಮ್ಮ ಸರ್ವಸ್ವವನ್ನೂ ಒಪ್ಪಿಸಿ, ಗೆದ್ದವರನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಬೇಕೆಂದಾಗಲೀ, ಜಯಪತ್ರಿಕೆಗಳನ್ನು ಬರೆದುಕೊಡಬೇಕೆಂದಾಗಲೀ ಪ್ರತಿಜ್ಞಾಪೂರ್ವಕ ನಡೆಯಬೇಕಾಗಿತ್ತು. ಪೂರ್ವದ ಮತಸ್ಥಾಪಕರು ಹೀಗೆ ಮಾಡಿಯೇ ಅನೇಕ ಜಹಗೀರುಗಳನ್ನೂ ಬಿರುದಾವಳಿಗಳನ್ನೂ

ಸಂಪಾದಿಸಿದರು. ಈ ಬಗೆಯ ಯಾತ್ರೆಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳನ್ನು ಎದುರಿಸಿ ವಾದಕ್ಕೆ ನಿಂತವರೆಂದರೆ ಭಲ್ಲಪುರಿಯ ಭೈರವಭಟ್ಟ ವೀರಭದ್ರ ಪಂಡಿತರೆಂಬ ಪ್ರಬಲ ಶೈವ ವಾದಿಗಳು. ಈರ್ವರೂ ಆ ಕಾಲದಲ್ಲಿ ಪರಮ ಪ್ರಸಿದ್ಧರಾಗಿ ಅನೇಕ ಗ್ರಾಮಗಳನ್ನೂ ಶಿಷ್ಯ ಸಂಘವನ್ನೂ ಪಡೆದಿದ್ದರು. ಉಭಯರೂ ಸ್ವಾಮಿಗಳನ್ನು ಜೈಸಬೇಕೆಂದು ವಾದಿಸಿ ಸೋತು ತಮ್ಮ ಗ್ರಾಮಗಳಲ್ಲಿ ಎರಡನ್ನು ಕಾಣಿಕೆಯಾಗಿ ಒಪ್ಪಿಸಿ ಶಿಷ್ಯರಾದರು. ಆ ಪ್ರಾಂತ್ಯದಲ್ಲಿ ಸ್ವಾಮಿಗಳು ವಾದಿನಿಗ್ರಹಮಾಡಿ, ಶಿಷ್ಯರನ್ನು ಸಂಪಾದಿಸಿದ ಸ್ಥಳಗಳಲ್ಲಿ ಮುಖ್ಯವಾದುವು ಅರುಣಾಚಲ, ರಂಭಮುಖ, ಮಧುರಾ, ವೃದ್ಧಾಚಲ, ಶ್ರೀರಂಗ, ಕಂಚಿ, ನಾಮಗಿರಿ ಮತ್ತು ರಾಮೇಶ್ವರ ಕ್ಷೇತ್ರಗಳೆಂದು ಹೇಳಬಹುದು. ಅನಂತರ ಪಶ್ಚಿಮತೀರದ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ಶ್ರೀಮದಾಚಾರ್ಯರ ಸರ್ವಸಿದ್ಧಿಗೂ ಮೂಲಸ್ಥಾನವಾದ ಉಡುಪಿಗೆ ಬಂದರು. ಮಧ್ವಸರೋವರ ಸ್ನಾನ ಶ್ರೀಕೃಷ್ಣ ದರ್ಶನಗಳಿಂದ ತೃಪ್ತರಾಗಿ ಅನಂತೇಶ್ವರ ದೇವಾಲಯದಲ್ಲಿ ಆಚಾರ್ಯರು ಪಾಠ ಹೇಳುತ್ತ ಕುಳ್ಳಿರುತ್ತಿದ್ದ ಸ್ಥಳದೆದುರಿಗೆ ಒಂದು ವರ್ಷಕಾಲ ಶಿಷ್ಯರಿಗೆ ಪ್ರವಚನ ಮಾಡಿಸಿ, ವ್ಯಾಸತೀರ್ಥಕೃತ ಚಂದ್ರಿಕಾ ಗ್ರಂಥಕ್ಕೆ **ಪ್ರಕಾಶ**ವೆಂಬ ಟೀಕೆಯನ್ನೂ, ತಂತ್ರದೀಪಿಕಾಕ್ಕೆ **ನ್ಯಾಯ ಮುಕ್ತಾವಳಿ** ಎಂಬ ವ್ಯಾಖ್ಯಾನವನ್ನೂ ರಚಿಸಿದರು. ಅನಂತರ ಸ್ವಾಮಿಗಳು ಸುಬ್ರಹ್ಮಣ್ಯಕ್ಕೂ ಅಲ್ಲಿಂದ ಈಗಿನ ಮೈಸೂರು ಸೀಮೆಗೂ ದಿಗ್ವಿಜಯ ಮಾಡಿದರು. ಕಾವೇರೀ ಮೂಲದಲ್ಲಿ ಏಕಾಂತ ತಪಶ್ಚರ್ಯದಲ್ಲಿದ್ದು, ತೀರ ಮಾರ್ಗದಲ್ಲೇ ಪ್ರಯಾಣಮಾಡಿ ಅನೇಕ ಶಿಷ್ಯರನ್ನು ಸಂಪಾದಿಸಿ, ಉತ್ತರ ಅಭಿಮುಖರಾಗಿ ಹೊರಟು ಹರಿಹರವನ್ನು ಸೇರಿದರು. ಅಲ್ಲಿಂದ ಪಂಪಾಕ್ಷೇತ್ರ ನವಬೃಂದಾವನಗಳಲ್ಲಿ ಕೆಲಕೆಲವು ದಿನಗಳಿದ್ದು, ಬೃಂದಾವನಸ್ಥ ಗುರುಗಳ ಸೇವೆಮಾಡಿ, ತರುವಾಯ ಆದವಾನಿಗೆ ಬಂದರು.

ಅನಾಥ ಬಾಲಕ

ಆಗ ಆದವಾನಿಯಲ್ಲಿ ವೆಂಕಣ್ಣನೆಂಬ ಬಾಲಕನೊಬ್ಬನು ಅತಿ ಬಾಲ್ಯದಲ್ಲೇ ಮಾತಾಪಿತೃಗಳನ್ನು ಕಳೆದುಕೊಂಡು ಅನಾಥನಾಗಿ ಸೋದರಮಾವನ ಮನೆಯಲ್ಲಿ ಸೇರಿಕೊಂಡಿದ್ದನು. ಬಾಲಕನ ಸ್ವತ್ತನ್ನು ತಾನು ಅನುಭವಿಸುತ್ತಾ ಬಾಲಕನಲ್ಲಿ ಕನಿಕರವಿಲ್ಲದೆ ಆ ಮಾವನು ಅವನನ್ನು ಮನೆಯ ದನಕರುಗಳ ಕಾವಲಿಗೆ ನಿಯಮಿಸಿದ್ದನು. ಅಕ್ಷರಾಭ್ಯಾಸವನ್ನೇ ಕಾಣದ ವೆಂಕಣ್ಣನು, ದನಗಾಯುವವರ ವೇಷಭಾಷೆಗಳನ್ನೇ ಕಲಿತು, ವಾರಿಗೆಯ ಬ್ರಾಹ್ಮಣ ಬಾಲಕರೊಂದಿಗೆ ಬೆರೆಯಲು ನಾಚುತ್ತಿದ್ದನು. ಒಂದು ದಿನ ಅವನು ಕಾಡಿಗೆ ದನಗಳನ್ನು ಹೊಡೆದುಕೊಂಡು ಹೋದಾಗ, ಬಿಸಿಲಾಗಿದ್ದುದರಿಂದ ಒಳಲಿಕೆಗೆ ನಿದ್ರೆಬಂದು, ಒಂದು ಆಲದ ಮರದ ಕೆಳಗೆ ಮಲಗಿಕೊಂಡನು. ಅವನಿಗೆ ಗಾಢನಿದ್ರೆ ಬಂದಿದೆ;–ಆಗ ಆ ಪುರಾತನ ವೃಕ್ಷದ ಪೊಟ್ಟರೆಯಲ್ಲಿ ಸೇರಿಕೊಂಡಿದ್ದ ಒಂದು ಕೃಷ್ಣಸರ್ಪವು ನಿಶ್ಶಬ್ದವಾಗಿರುವುದನ್ನು ಕಂಡು ಹೊರಕ್ಕೆ ಬಂದು ಅವನ ಮೈಮೇಲೆಲ್ಲ ಹರಿದಾಡಿ, ತಲೆಯಮೇಲೆ ಹೆಡೆಯಾಡಿಸಿದುದನ್ನು ದೂರದಲ್ಲಿದ್ದ ಗೋಪಾಲಕರು ಕಂಡು

ಭೀತರಾದರು. ಸರ್ಪವು ಕಣ್ಮರೆಯಾದಮೇಲೂ ವೆಂಕಣ್ಣನ ಬಳಿಗೆ ಬಂದು ನೋಡಲು ಧೈರ್ಯವಿಲ್ಲದೆ ಆ ಬಾಲಕರು, ಅವನ ಮಾವನಿಗೆ ನಿಮ್ಮ ಅಳಿಯ ವೆಂಕಣ್ಣ ಮೃತನಾಗಿರುವನೆಂದು ತಿಳಿಸಿದರು. ಮಾವನು ಗಾಬರಿಯಿಂದ ಬಂದು ನೋಡುವಲ್ಲಿ ಹಾವು ಕಾಣಲಿಲ್ಲ. ವೆಂಕಣ್ಣನೂ ಎಚ್ಚತ್ತಿರಲಿಲ್ಲ. ಉಸಿರಾಡುವ ಲಕ್ಷಣವನ್ನು ನೋಡಿ, ಏನೂ ಅಪಾಯವಾಗಿಲ್ಲವೆಂದರಿತು ಎಬ್ಬಿಸಲು, ಮಾವನ ಧ್ವನಿ ಕೇಳಿದ ವೆಂಕಣ್ಣನು ಭಯಗ್ರಸ್ತನಾಗಿ ಎಚ್ಚತ್ತು-ಎದ್ದು ನಿಂತನು. ದೂರ ನಿಂತಿದ್ದ ಅಳಿಯನನ್ನು ಕಂಡು, ಕಾಡಿನಲ್ಲಿ ಹೀಗೆಲ್ಲಾ ಮೈಮರೆತು ಮಲಗಬೇಡ-ಎಂದು ಹೇಳಿದುದೇ ಮಾವನ ಅನುಗ್ರಹ ವಾಕ್ಯವಾಯಿತು. ಗೋಪಾಲಕರು ವೆಂಕಣ್ಣನು ಅದೃಷ್ಟವಂತನೆಂದರು. ಮಾವನು 'ಹೌದು, ದನಗಳನ್ನು ಕಾಯುವ ದೊಡ್ಡ ಅದೃಷ್ಟವಂತ'ನೆಂದನು.

ತಮ್ಮೂರಲ್ಲಿ ಬಂದು ಬಿಡಾರಮಾಡಿದ್ದ ಸ್ವಾಮಿಗಳ ಬಳಿಗೆ, ಆರ್ತರೂ, ಅರ್ಥಾರ್ಥಿಗಳೂ ಹೋಗಿ ಬರುತ್ತಲಿದ್ದುದನ್ನು ವೆಂಕಣ್ಣನು ನೋಡಿದನು. ತಾನೂ ಸ್ವಾಮಿಗಳನ್ನು ಕಾಣಬೇಕೆಂದು ಇಷ್ಟವಾಯಿತು. ಒಂದು ದಿನ ಶುದ್ಧನಾಗಿ ಸ್ನಾನಮಾಡಿ ಗೋಪೀಚಂದನ ನಾಮ ಮುದ್ರೆಗಳನ್ನು ಹಾಕಿಕೊಂಡು, ಜನಸಂದಣಿ ಸೇರುವುದಕ್ಕೆ ಮೊದಲೇ, ಜಪಕ್ಕೆ ಕುಳಿತಿದ್ದ ಸ್ವಾಮಿಗಳನ್ನು ನೋಡಿ ನಮಸ್ಕರಿಸಿದನು. ಆ ದೀನ ಬಾಲಕನ ಮುಖವನ್ನು ನೋಡಿ, ಸ್ವಾಮಿಗಳು-'ಯಾರಪ್ಪಾ, ಯಾಕೆ ನಿಂತಿರುವೆ ?' ಎಂದು ಕೇಳಿದರು. ಅಷ್ಟರಿಂದಲೇ ಕೃತಾರ್ಥನಾದೆನೆಂದು ತಿಳಿದ ಬಾಲಕನು-'ಸ್ವಾಮಿ ನಾನು ಬಾಲ್ಯದಲ್ಲಿ ತಂದೆತಾಯಿಗಳನ್ನು ಕಳೆದುಕೊಂಡ ಅನಾಥ. ಮಾವನ ಮನೆಯ ದನಗಳನ್ನು ಕಾಯುವುದು ನನ್ನ ಜೀತ. ಬ್ರಾಹ್ಮಣನಾಗಿ ಹುಟ್ಟಿದರೂ ವಿದ್ಯೆ ಬರುವುದಿಲ್ಲ. ಉಪನಯನ ಸಂಸ್ಕಾರವಾಗಿದೆಯಾದರೂ ಸರಿಯಾಗಿ ಸಂಧ್ಯಾವಂದನೆ ಬರುವುದಿಲ್ಲ. ಮುಂದೆ ನನ್ನ ಗತಿಯೇನೋ ತಿಳಿಯುವುದಿಲ್ಲ. ತಮ್ಮ ಸನ್ನಿಧಿಯಲ್ಲಿ ಏನು ಹೇಳುವುದಕ್ಕೂ ತೋರುವುದಿಲ್ಲ' ಎಂದು ಹೇಳಿ ಅತ್ತುಬಿಟ್ಟನು. ಅನಾಥನ ಆ ದುರ್ದಸೆಯನ್ನು ಕೇಳಿ ಕನಿಕರಗೊಂಡ ಸ್ವಾಮಿಗಳವರು, ಹತ್ತಿರ ಬಾರೆಂದು ಕರೆದು, ಅವನಿಗೆ ಚಕ್ರಾಂಕನ ಮಾಡಿ,-'ಮಹಾ ಆಪತ್ತು ಬಂದಾಗ ನನ್ನ ಸ್ಮರಣೆ ಮಾಡು' ಎಂದು ಹೇಳಿ, ಉತ್ತೃತ್ತಿ ಮಂತ್ರಾಕ್ಷತೆಗಳನ್ನು ದಯಪಾಲಿಸಿದರು. ಅಷ್ಟರಲ್ಲೇ ಮಠಕ್ಕೆ ಬಂದ ಜನರು. ಈ ದನ ಕಾಯುವ ಹುಡುಗನ ತಲೆಯಮೇಲೆ ಅಡವಿಯಲ್ಲಿ ಹಾವು ಹೆಡೆಯಾಡಿಸಿದ ಕಥೆಯನ್ನು ಸ್ವಾಮಿಗಳಿಗೆ ತಿಳಿಸಿದರು. ಸ್ವಾಮಿಗಳು ಅದನ್ನು ಕೇಳಿ,-'ದನಗಳನ್ನು ಕಾಯುವನೇ ಜನಗಳನ್ನೂ ಕಾದಾನು' ಎಂದು ಉತ್ತರವಿತ್ತರು. ಈ ಮಾತು ಊರು ತುಂಬಾ ನಾಣ್ಣುಡಿಯಾಗಿ ಹಬ್ಬಿ ಮಾವನ ಕಿವಿಗೂ ಬಿದ್ದಿತು. ನೋದರಳಿಯನ ಭವಿಷ್ಯವು ಅವನಿಗೆ ನಂಬನೆಯಾಗಲಿಲ್ಲ. ಕೆಲವು ಕಾಲಾನಂತರ ಮಾವನು ಮೃತನಾಗಲು, ವೆಂಕಣ್ಣನು ತನ್ನ ಪಳ್ಳಿಯನ್ನು ಸೇರಿ ವ್ಯವಸಾಯಗಾರನಾದನು. ಅಕ್ಷರ ವಿದ್ಯೆ ಬರದಿದ್ದರೂ ವ್ಯವಹಾರ ಕುಶಲನೆನಿಸಿಕೊಂಡನು. ಎಲ್ಲರೂ ಸಂಪತ್ಸಮಯವನ್ನು ಎದುರುನೋಡಿದರೆ, ಈ ವೆಂಕಣ್ಣನು, ತನಗೆ ಮಹಾ ವಿಪತ್ತು ಯಾವಾಗ ಬರುವುದೋ ಎಂದು ಕಾಲ ಪ್ರತೀಕ್ಷೆ ಮಾಡಿದನು.

ಅಸದುಲ್ಲಾಖಾನ್ (೧೬೬೨-೧೬೮೭)

ಆ ಕಾಲದಲ್ಲಿ ಅಸದುಲ್ಲಾಖಾನನೆಂಬ ಪಠಾಣನು ಆದವಾನಿಯ ಸುಭಾದಾರನಾಗಿ ನವಾಬನೆಂದೇ ಕರೆಯುಕೊಳ್ಳುತ್ತಾ-ರಾಯಚೂರು ಮೊದಲಾದ ಕರ್ನಾಟಕ ಪ್ರಾಂತಗಳನ್ನು ಆಳುತ್ತಿದ್ದನು. ಬಿಜಾಪುರದ ಬಾದಷಹರಿಗೆ ಅಂಕಿತನಾಗಿದ್ದರೂ ಕೃತಜ್ಞನಾಗಿರದೆ ಸ್ವತಂತ್ರನಾಗಿ ರಾಜ್ಯವನ್ನು ವಿಸ್ತರಿಸುತ್ತಿದ್ದನು. ಯುದ್ಧದ ಖರ್ಚಿಗೆ ಹಣ ಬೇಕಾದಾಗ ನಜರಾಣದ ವಸೂಲಿಗೆ ಸ್ವಯಂ ಗ್ರಾಮಗಳಮೇಲೆ ಧಾಳಿ ಮಾಡುತ್ತಿದ್ದನು. ದಂಡಧಾರಿಗಳಾದ ದೀರ್ಘಬಾಹುಗಳನ್ನು ಕಂಡ ಕೂಡಲೇ ಹಳ್ಳಿವಾಸಿಗಳು ಕೇಳಿದ್ದನ್ನು ಕೊಟ್ಟು ಕುತ್ತಿನಿಂದ ಪಾರಾಗುತ್ತಿದ್ದರು. ವೆಂಕಣ್ಣನ ಗ್ರಾಮಕ್ಕೂ ಸರದಿ ಬರಲು ಜನರು ಗ್ರಾಮವನ್ನಲಂಕರಿಸಿ ಸಜ್ಜುಗೊಳಿಸಲು ಅಣಿಮಾಡಿದರು. ಅಸದುಲ್ಲನು ಆನೆಯಮೇಲೆ ಕುಳಿತು ಗ್ರಾಮವನ್ನು ಪ್ರವೇಶಿಸಿದನು. ಸರಸೆಂಯಾಗಿ ಜನರು ಕಾಣಿಕೆಯನ್ನೊಪ್ಪಿಸುತ್ತಾ ಮೆರವಣಿಗೆಯ ಜೊತೆಯಲ್ಲಿ ಬರುತ್ತಿದ್ದರು. ಒಳ್ಳೆಯ ಉಡುಪುಧರಿಸಿ ಉತ್ಸವವನ್ನು ಹಿಂಬಾಲಿಸಿ ಬರುತ್ತಿದ್ದ ವೆಂಕಣ್ಣನ ಕಣ್ಣಿಗೆ ಉತ್ಸವವು ಅಂದವಾಗಿ ಉತ್ಸಾಹಜನಕವಾಗಿತ್ತು. ಅಷ್ಟರಲ್ಲಿ ಅಶ್ವಸೈನಿಕನೊಬ್ಬನು ಬಂದು ನವಾಬನಿಗೆ ಒಂದು ವರದಿಯ ಪತ್ರವನ್ನು ಒಪ್ಪಿಸಿದನು. ಲಕ್ಕೋಟೆಯನ್ನೊಡೆದು ಅದನ್ನು ಓದಿ ತಿಳಿಸುವ ಕಾರಕೂನನೊಬ್ಬನು ಆ ಸಮಯಕ್ಕೆ ಬೇಕಾಗಿದ್ದುದರಿಂದ, ಆಗ ಆನೆಯ ಹತ್ತಿರದಲ್ಲೇ ನಡೆದುಬರುತ್ತಿದ್ದ ವೆಂಕಣ್ಣನ ಮೇಲೆ ನವಾಬನ ಕಟಾಕ್ಷವಾಯಿತು. ಸಂಕೇತವನ್ನರಿತ ನವಾಬನ ಖಡ್ಗಪಾಣಿ ಸೇವಕರು ವೆಂಕಣ್ಣನನ್ನು ಆನೆಯ ಮೇಲೇರಿಸಿ ನವಾಬನ ಬಳಿ ಕೂಡಿಸಿದರು. ನವಾಬನು ಲಕ್ಕೋಟೆಯನ್ನು ಅವನ ಕೈಗೆ ಕೊಟ್ಟು ಸುನಾವಣೆಮಾಡೆಂದನು. ವೆಂಕಣ್ಣನು ಭಯದಿಂದ 'ಓದುವುದಕ್ಕೆ ಬಾರದು' ಎಂದು ಹೇಳಿದ ಮಾತು ನವಾಬನಿಗೆ ನಂಬಿಕೆಯನ್ನುಂಟುಮಾಡಲಿಲ್ಲ. ಪ್ರತಿ ಹೇಳಿದನೆಂಬ ಸಿಟ್ಟಿನಿಂದ ನವಾಬನು-'ಬ್ರಾಹ್ಮಣನಾಗಿ ಓದುವುದಕ್ಕೆ ಬರುವುದಿಲ್ಲವೆಂದು ಸುಳ್ಳು ಹೇಳುವೆಯಾ ? ಕಾಫಿರ್ ! ಓದದಿದ್ದರೆ ಆನೆಯ ಕಾಲಿನಿಂದ ತುಳಿಸಿಬಿಡುತ್ತೇನೆ' ಎಂದು ಗದರಿಸಿದನು. ವೆಂಕಣ್ಣನು ಬಹು ದಿನಗಳಿಂದ ನಿರೀಕ್ಷಿಸಿಕೊಂಡಿದ್ದ ಮಹದಾಪತ್ತು ಅಂದು ಬಂತೆಂದುಕೊಂಡು, ನಿರುಪಾಯನಾಗಿ ಚಿಂತಿಸುತ್ತಾ, ಸುಕೃತ ವಿಶೇಷದಿಂದ ಆ ಸಮಯಕ್ಕೆ ಗುರುಗಳಾಜ್ಞೆಯು ಜ್ಞಾಪಕಕ್ಕೆ ಬರಲು, 'ಶ್ರೀ ರಾಘವೇಂದ್ರಾಯ ನಮಃ' ಎಂದು ಸ್ಮರಿಸಿ ಲಕ್ಕೋಟೆಯನ್ನೊಡೆದನು. ಪತ್ರವನ್ನು ಬಿಚ್ಚಿ ನೋಡಿದೊಡನೆಯೇ ವೆಂಕಣ್ಣನಿಗೆ ವಿಚಿತ್ರ ಸ್ಫೂರ್ತಿಯುಂಟಾಗಿ, ಬಹು ದಿನಗಳಿಂದ ಅಭ್ಯಾಸವಿದ್ದ ಕಾರಕೂನನಂತೆಯೇ ಕ್ರಮವಾಗಿ ಸುನಾವಣೆಮಾಡಿದನು. ನವಾಬನ ಸೈನಿಕರು ಯುದ್ಧದಲ್ಲಿ ಜಯಶೀಲರಾದುದಕ್ಕಾಗಿ ಬರೆದು ಕಳುಹಿಸಿದ್ದ ವರದಿಯೇ ಅದಾಗಿದ್ದುದರಿಂದ ಅಸದುಲ್ಲನಿಗೆ ಸಂತೋಷವಾಯಿತು. ಆ ಆನಂದದ ಭರದಲ್ಲಿ ವೆಂಕಣ್ಣನಿಗೆ ನವಾಬನು 'ದಿವಾನ' ಎಂಬ ಕಿತಾಬನ್ನು ಕೊಟ್ಟು ಬಹುಮಾನ ಮಾಡಿದನು. ಅಂದಿನಿಂದ ವೆಂಕಣ್ಣನ ಪ್ರಾಬಲ್ಯ ಬೆಳೆಯಿತು. ರಾಜಕಾರ್ಯದಲ್ಲಿ ಸಲಹೆ ಕೊಡುವುದೂ, ರಾಜದರ್ಬಾರಿಗೆ ಹೋಗಿಬರುವುದೂ ವೆಂಕಣ್ಣನ ಘನತೆಯಾಯಿತು. ಕಾಲಕ್ರಮದಲ್ಲಿ

ನವಾಬನೇ ವೆಂಕಣ್ಣನಿಗೆ ಆದವಾನಿಯಲ್ಲಿ ದೊಡ್ಡದೊಂದು ಮನೆಯನ್ನು ಕಟ್ಟಿಸಿಕೊಟ್ಟು ಅಲ್ಲೇ ಇರುವಂತೆ ಅಪ್ಪಣೆ ಮಾಡಿದನು. ಖಜಾನೆದಾರ, ದಫ್ತರದಾರ ಕೆಲಸಗಳಲ್ಲಿ ನುರಿತ ವೆಂಕಣ್ಣನು ಅಲ್ಪಾವಧಿಯಲ್ಲೇ ಆದವಾನಿಯ ದಿವಾನನಾದನು.

ಬಾಲ್ಯದಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು ಪಾಲಕರಿಲ್ಲದೆ ಮಾವನ ಮನೆಯ ದನಗಳನ್ನು ಕಾದುಕೊಂಡು ವಜ್ರಕುಂತನೆನ್ನಿಸಿಕೊಂಡಿದ್ದ ಅನಾಥನು ಕೇವಲ ಗುರುಕಟಾಕ್ಷಬಲದಿಂದ ಇಂದು ಆದವಾನಿಯ ದಿವಾನನಾದನು. ಸಾಮಾನ್ಯ ಮಾನವ ಜೀವನದಲ್ಲಿ ಪಡೆಯಬಹುದಾದ ಪದವಿಯ ಪರಮಾವಧಿಸ್ಥಾನಕ್ಕೇರಿದನು.

ನಹ್ಯಮ್ಮಯಾನಿತೀರ್ಥಾನಿ ನದೇವಾಮೃಚ್ಛಿಲಾಮಯಾಃ ||
ತೇಪುನಂತ್ಯುರುಕಾಲೇನ ದರ್ಶನಾದೇವಸಾಧವಃ ||

ಎಂಬ ವ್ಯಾಸೋಕ್ತಿಗೆ ಚ್ಯುತಿಯುಂಟೆ?

ಅತ್ತ ಶ್ರೀರಾಘವೇಂದ್ರ ಯತಿವರ್ಯರು, ಶ್ರೀ ಜಯತೀರ್ಥಕೃತ ಟೀಕಾ ಗ್ರಂಥ ಗಳನ್ನು ಮಳಖೇಡೆಯಲ್ಲಿ ಅವರ ಬೃಂದಾವನ ಸನ್ನಿಧಿಯಲ್ಲಿ ಪಾಠಹೇಳಿ ಮಂಗಳಮಾಡಿದರು. ಕೃಷ್ಣಾತೀರದ ಸಂಚಾರದಲ್ಲಿ ಅಣುಭಾಷ್ಯಕ್ಕೆ ಟೀಕೆಯನ್ನು ರಚಿಸಿ ಶ್ರೀಹರಿಗರ್ಪಿಸಿದರು.

ವಿಜಯನಗರ (ಉತ್ತರ ಸರ್ಕಾರದಲ್ಲಿನ ಜಮೀನ್ದಾರಿ) ದ ರಾಜನು ವಿದ್ಯಾಪಕ್ಷ ಪಾತಿಯಾಗಿದ್ದುದರಿಂದ ಶ್ರೀರಾಘವೇಂದ್ರರನ್ನು ತನ್ನ ರಾಜಧಾನಿಗೆ ಬರಮಾಡಿಕೊಂಡು ಯೋಗ್ಯರೀತಿಯಿಂದ ಸತ್ಕಾರಮಾಡಿದನು. ರಾಜನ ಆಸ್ಥಾನದಲ್ಲಿದ್ದ ಮಹಾ ಪಂಡಿತರು ಜೀವೇಶ್ವರ ತತ್ವ, ಪಂಚಭೇದತಾರತಮ್ಯಗಳ ವಿಚಾರದಲ್ಲಿ ದೀರ್ಘಕಾಲ ಸ್ವಾಮಿಗಳೊಡನೆ ವಾದನಡೆಸಿ ಶಿಷ್ಯರಾದರು. ಈ ದಿಗ್ವಿಜಯದ ಗುರುತಾಗಿ ಮಹಾರಾಜನು ಸ್ವಾಮಿಗಳವ ರಿಗೆ ಶ್ವೇತಚ್ಛತ್ರಮರ್ಯಾದೆಯನ್ನೂ ಧನಕನಕಗಳನ್ನೂ ಸಮರ್ಪಿಸಿದನು. ಉತ್ತರ ಯಾತ್ರೆಯಲ್ಲಿ ಕಾಶಿ, ಗಯಾ, ಪ್ರಯಾಗ, ಬದರಿ, ಅಯೋಧ್ಯಾ, ಗೋಕುಲ ಬೃಂದಾವನ ಕ್ಷೇತ್ರಗಳಲ್ಲಿ ತಮ್ಮ ವಿದ್ಯಾಪ್ರಭಾವದಿಂದಲೂ, ತಪಶ್ಶಕ್ತಿಯಿಂದಲೂ ಬಹು ಸನ್ಮಾನಿತ ರಾಗಿ, ಶ್ರೀ ರಾಘವೇಂದ್ರರು ಸ್ವದೇಶಾಭಿಮುಖರಾಗಿ ಪ್ರಯಾಣ ಕೈಕೊಂಡು, ಪಂಢರಪುರ ಕೊಲ್ಲಾಪುರ ಕ್ಷೇತ್ರಗಳಲ್ಲಿ ಕೆಲವುಕಾಲ ವಾಸಮಾಡಿದರು.

ಬಿಜಾಪುರ ಪ್ರಾಂತ ಸಂಚಾರದಲ್ಲಿ ಬ್ರಾಹ್ಮಣ ಸೇವಕನೊಬ್ಬನು, ತಾನು ಬಂದು ಬಹಳ ದಿನಗಳಾದುವೆಂದೂ, ಊರಿಗೆ ಹೋಗಿ ಲಗ್ನಮಾಡಿಕೊಳ್ಳಬೇಕೆಂದೂ, ತನ್ನ ಸಂಬಳವನ್ನು ಕೊಡಿಸಬೇಕೆಂದೂ ಸ್ವಾಮಿಗಳನ್ನು ಪ್ರಾರ್ಥಿಸಿದನು. ಆಗ ಮೃತ್ತಿಕಾ ಶೌಚದ ಸಮಯವಾಗಿದ್ದುದರಿಂದ, ಸ್ವಾಮಿಗಳು–'ನೋಡು! ಈಗ ನನ್ನ ಕೈಯಲ್ಲಿರು ವುದು ಮೃತ್ತಿಕೆ. ಸಂಬಳ ಕೊಡೆಂದರೆ ಈಗೆಲ್ಲಿ ಕೊಡಲಿ? ಕೈಯ್ಯಲ್ಲಿದ್ದುದನ್ನೇ ಕೇಳುವೆ ಯಾದರೆ ಇದನ್ನೇ ಕೊಡುವೆನು, ಹಿಡಿ' ಎಂದು ವಿನೋದಮಾಡಿದರು. ಸೇವಕನು– 'ಸ್ವಾಮಿಗಳವರು ಪರಮಾನುಗ್ರಹಮಾಡಿಕೊಟ್ಟ ಮೃತ್ತಿಕೆಯೇ ಲಕ್ಷವರಹ! ಅದನ್ನೇ ಅನುಗ್ರಹಿಸಬೇಕು' ಎಂದು ಉಡಿಯೊಡ್ಡಿದನು. ಸ್ವಾಮಿಗಳು ಆ ಸೇವಕನ ದಾರ್ಢ್ಯಕ್ಕೆ ಮೆಚ್ಚಿ,–'ನೀನು ಹೇಳಿದಂತೆ ಲಕ್ಷವರಹದ ಮೃತ್ತಿಕೆಯನ್ನು ಕೊಳ್ಳೆಂ'ದು ಅನುಗ್ರಹಿಸಿ

ದರು. ಸೇವಕನು ಅದನ್ನೇ ಗಂಟು ಕಟ್ಟಿಕೊಂಡು, ನಮಸ್ಕರಿಸಿ ಪ್ರಯಾಣಮಾಡಿದನು. ಮಾರನೆಯ ದಿನ, ರಾತ್ರಿ ಒಂದು ದೊಡ್ಡ ಗ್ರಾಮದಲ್ಲಿ ಕಾಲಯಾಪನೆಮಾಡೋಣವೆಂದು ಶ್ರೀಮಂತನೊಬ್ಬನ ಮನೆಯ ಜಗಲಿಯಮೇಲೆ ತಂಗಿದನು. ಶ್ರೀಮಂತನು ಆ ಊರಿನ ದೇಶಾಯಿಯಾಗಿದ್ದನು. ಪೇಷ್ವಾಯಿ ಸಿಸ್ತಿನ ವಾಡೆಯಾಗಿದ್ದುದರಿಂದ ಮನೆಯ ಎರಡು ಭಾಗಗಳಲ್ಲೂ ಪ್ರವಾಸಿಗಳಿಗೆ ಇಳಿದುಕೊಳ್ಳಲು ವಿಸ್ತಾರವಾಗಿ ಸ್ಥಳವಿತ್ತು. ದೇಶಾಯಿಯ ಹೆಂಡತಿಯು ಎರಡು ದಿನಗಳಿಂದ ಪ್ರಸವ ವೇದನೆಯನ್ನನುಭವಿಸಿ ಆಗತಾನೇ ಗಂಡುಮಗು ವನ್ನು ಪ್ರಸವಿಸಿದ್ದಳು. ಸ್ವಲ್ಪ ಹೊತ್ತಿನಮೇಲೆ ಬಾಗಿಲಲ್ಲಿ ಭಯಂಕರ ರೂಪವೊಂದು ಕಾಣಿಸಿ–ಅಲ್ಲೇ ಮಲಗಿದ್ದ ಬ್ರಾಹ್ಮಣನನ್ನು ಜಬರಿಸಿ,–'ದಾರಿಯನ್ನು ಬಿಡು–ಇಲ್ಲವೇ ನಿನ್ನ ತಲೆದಿಂಬಿನಲ್ಲಿರುವುದನ್ನು ಬಿಸಾಡು' ಎಂದು ಗರ್ಜಿಸಿತು. ಆತನ ತಲೆದಿಂಬಿನಲ್ಲಿ ಮೃತ್ತಿಕೆಯನ್ನು ಬಿಟ್ಟು ಮತ್ತೇನೂ ಇರಲಿಲ್ಲ. ಆಗ ಆ ಬ್ರಾಹ್ಮಣನಿಗೆ ಸ್ವಾಮಿಗಳವರ ಮೃತ್ತಿಕೆಯ ಪ್ರಭಾವ ಚೆನ್ನಾಗಿ ತಿಳಿಯಿತು. ಬ್ರಹ್ಮರಾಕ್ಷಸವಾದರೋ–ಆವರಿಗೆ ದೇಶಾ ಯಿಯ ಏಳುಮಂದಿ ಮಕ್ಕಳನ್ನು ಕೊಂದು ಈ ಎಂಟನೆಯದರ ಪ್ರಾಣಕ್ಕೆ ಸಂಚಕಾರ ತಂದಿತ್ತು. ಭೂತನ ವಿಕಾರರೂಪಕ್ಕೆ ಬ್ರಾಹ್ಮಣನು ಬೆದರಿದರೂ ಮೃತ್ತಿಕಾಪ್ರಭಾವದಿಂದ ಪಾರಾಗುವೆನೆಂದು ನಿರ್ಧರಿಸಿದನು. ಸರಸ್ವತೀಬಾಯಿಯ ಪಿಶಾಚ ಜನ್ಮವನ್ನು ಪರಿಹರಿಸಿ ಸದ್ಗತಿಯಿತ್ತ ಸ್ವಾಮಿಗಳ ಮಹಿಮೆಯ ನೆನಪು ಬ್ರಾಹ್ಮಣನಿಗಾಯಿತು.–'ಮೃತ್ತಿಕೆ ಯಿರುವುದರಿಂದ ಬದುಕಿರುವೆ–ಇಲ್ಲದಿದ್ದರೆ ನಿನ್ನನ್ನು ಕೊಂದುಬಿಡುತ್ತಿದ್ದೆ. ಒಳ್ಳೆ ಮಾತಿ ನಿಂದ ದಾರಿ ಬಿಡು' ಎಂದು ಆ ಭೂತವು ಮತ್ತೆ ಗರ್ಜಿಸಿತು.–'ಒಳಗೆ ಹೋಗಿ ಏನು ಮಾಡುವೆ' ಎಂದು ಬ್ರಾಹ್ಮಣನು ಕೇಳಿದನು. ಭೂತವು–'ಈಗ ಹುಟ್ಟಿರುವ ದೇಶಾ ಯಿಯ ಮಗುವನ್ನು ಕೊಂದುಬಿಡುವೆನು' ಎಂದಿತು.–'ಶಿಶುಹತ್ಯೆ ಮಹಾ ಪಾಪ! ಮಾಡಬಾರದು. ಹೊರಟುಹೋಗು' ಎಂದು ಬ್ರಾಹ್ಮಣನು ನುಡಿದನು–'ನನ್ನ ವಂಶ ವನ್ನೇ ನಾಶಮಾಡಿದ್ದಾನೆ, ದೇಶಾಯಿ! ಬಿಡುವುದಿಲ್ಲ' ಎಂದಿತು ಭೂತ.

ಬ್ರಾಹ್ಮಣನಿಗೆ ಭೂತದ ಭಯವೊಂದು ಕಡೆ, ಮೃತ್ತಿಕೆಯಿರುವ ಧೈರ್ಯ ವೊಂದು ಕಡೆ. ಕೊನೆಗೆ ಧೈರ್ಯಮಾಡಿ ಗಂಟಿನಲ್ಲಿದ್ದ ಮೃತ್ತಿಕೆಯಲ್ಲಿ ಸ್ವಲ್ಪವನ್ನು ತೆಗೆದುಕೊಂಡು–ಆ ಭೂತವನ್ನು ಉದ್ದೇಶಿಸಿ–'ನಿನ್ನನ್ನೀಗ ಧೂಳಿಪಟಮಾಡುವೆನು. ನೋಡು' ಎಂದು ಅದನ್ನು ಆ ಭೂತದ ಮೇಲೆಸೆದು–**'ಶ್ರೀರಾಘವೇಂದ್ರಾಯನಮಃ'** ಎಂಬ ಅಷ್ಟಾಕ್ಷರಿಯನ್ನು ಜಪಿಸಿದನು.

ಏನಾಶ್ಚರ್ಯವು! ಆ ಮೃತ್ತಿಕೆಯ ಪ್ರಭಾವದಿಂದ ಆ ಭೂತವು ದೊಡ್ಡ ಜ್ವಾಲೆ ಯೋಪಾದಿಯಲ್ಲಿ ಉರಿದುಹೋಯಿತು. ಅದರ ಆ ದುಷ್ಟ ಜನ್ಮವಿಮೋಚನೆಯಾ ಯಿತು. ಬ್ರಾಹ್ಮಣನ ಗುರುಭಕ್ತಿ ಹೆಚ್ಚಿತು. ಹೊರಗಾಗುತ್ತಿದ್ದ ಗದ್ದಲವೇನೆಂದು ತಿಳಿ ಯಲು ಬಾಗಿಲು ತೆಗೆದು ದೇಶಾಯಿಯು ಜಗಲಿಯ ಮೇಲಿದ್ದ ಬ್ರಾಹ್ಮಣನನ್ನು ಕುರಿತು 'ನೀನು ಯಾರು? ಇಲ್ಲಿ ನಡೆದ ಗಲಾಟೆಯೇನು?' ಎಂದು ವಿಚಾರಿಸಿದನು. ಬ್ರಾಹ್ಮ ಣನು, ತನಗೂ ವಿಕಟಾಕಾರದ ಭೂತನಿಗೂ ನಡೆದ ಸಂಭಾಷಣೆಯ ವಿಚಾರವನ್ನೆಲ್ಲ

ವಿಶದವಾಗಿ ತಿಳಿಸಿದನು. ತನ್ನ ಸಂತಾನರಕ್ಷಣೆಗೆ ಆ ಬ್ರಾಹ್ಮಣನು ಕಾರಣನಾದನೆಂದು ದೇಶಾಯಿಯು ಬಹು ಸಂತೋಷಪಟ್ಟು, ಕೃತಜ್ಞತೆಯಿಂದ, ಆತನನ್ನು ಕೆಲವುಕಾಲ ತನ್ನ ಮನೆಯಲ್ಲಿಟ್ಟುಕೊಂಡು ಆದರಿಸಿ–ಸತ್ಕಾರಮಾಡಿದನು. ಆತನು ಲಗ್ನವಾಗುವುದಕ್ಕಾಗಿ ಸ್ವಾಮಿಗಳ ಸನ್ನಿಧಿಯಿಂದ ಬಂದವನೆಂಬ ವಿಚಾರವನ್ನು ತಿಳಿದು, ಆತನ ವಿದ್ವತ್ತಿಗೂ–ತನಗಾತನಿಂದ ಆದ ಉಪಕಾರಕ್ಕೂ ಮೆಚ್ಚಿ, ತನ್ನ ಅಣ್ಣನ ಮಗಳನ್ನು ಕೊಟ್ಟು ವಿವಾಹ ಮಾಡಿ–ಅವನ ಆಸ್ತಿಯನ್ನೆಲ್ಲಾ ಬ್ರಾಹ್ಮಣನಿಗೆ ದಾನಮಾಡಿದನು. ಮೃತ್ತಿಕಾ ಪ್ರಭಾವ ದಿಂದ ರಾಘವೇಂದ್ರಸ್ವಾಮಿಗಳ ಸೇವಕನಾಗಿದ್ದ ಬ್ರಾಹ್ಮಣನು ದೇಶಾಯಿಯಾದನು. ಶ್ರೀಮಂತನಾದನು. ಮೃತ್ತಿಕೆಯ ಬೆಲೆಯು ಲಕ್ಷ ವರಹವೆಂಬುದು ಅಕ್ಷರಶಃ ಸತ್ಯವಾಯಿತು.

ಇದಾದ ಕೆಲವು ದಿವಸಗಳಮೇಲೆ ಸ್ವಾಮಿಗಳು ಕಿರೀಟಗಿರಿಯ ದೇಶಾಯಿಯ ಪ್ರಾರ್ಥನೆಯ ಮೇರೆಗೆ ಅವನ ಮನೆಗೆ ಬಂದಿಳಿದರು. ಗುರುದರ್ಶನಾಭಿಲಾಷೆಯಿಂದ ಸುತ್ತಮುತ್ತಣ ಸಾವಿರಾರು ಜನರು ಬಂದು ಸೇರಿದರು. ದೇಶಾಯಿಯ ಚಿಕ್ಕ ಅಡಿಗೆಯ ಮನೆಯ ಗಾರೆಯ ತೊಟ್ಟಿಯಲ್ಲಿ ಅತಿಥಿಗಳಿಗೆ ಸಮೃದ್ಧಿಯಾಗಿ ಬಡಿಸುವಷ್ಟು ಮಾವಿನ ಹಣ್ಣಿನ ಸೀಕರಣೆಯನ್ನು ಮಾಡಿ ತುಂಬಿದ್ದರು. ಬಂದ ಜನರು ಸ್ನಾನ ಜಪ ಗುರು ದರ್ಶನ ದೇವಪೂಜಾ ಸಂದರ್ಶನ ಇತ್ಯಾದಿಗಳಲ್ಲಿ ಮಗ್ನರಾಗಿದ್ದರು. ಗೃಹಸ್ಥನೂ ಗೃಹಿಣಿಯೂ ಮೇಲ್ವಿಚಾರಣೆಯಲ್ಲಿ ತೊಡಗಿ ವಿರಾಮವಿಲ್ಲದೆ ತಿರುಗಾಡುತ್ತಿದ್ದರು. ಸ್ವಾಮಿಗಳ ಪೂಜೆಗಾರಂಭವಾಗಲು ಎಲ್ಲೆಲ್ಲಿದ್ದವರೂ ಹಜಾರಕ್ಕೆ ಬಂದು ತುಂಬಿದರು. ದೇಶಾಯರಿಗೆ ಐದಾರುವರ್ಷದ ಸುಂದರ ಬಾಲಕನೊಬ್ಬನಿದ್ದನು. ಅವನು ಅಲ್ಲಲ್ಲಿ ಓಡಾಡುತ್ತಾ ಸೀಕರಣೆಯ ಗಚ್ಚಿನ ತೊಟ್ಟಿಯಲ್ಲಿ ಬಗ್ಗಿನೋಡಿ ಪವನ ತಪ್ಪಿ ಅದರಲ್ಲಿ ಬಿದ್ದು ಮುಳುಗಿ ಹೋದನು. ಯಜಮಾನಿಯು ಅಲ್ಲಲ್ಲಿ ಸುತ್ತುತ್ತಿದ್ದು–ಎಷ್ಟೋ ಹೊತ್ತಿನಮೇಲೆ ಮಗನಿಗೂ ಪೂಜೆಯನ್ನು ತೋರಿಸಬೇಕೆಂದು ಹುಡುಕುತ್ತಾ ಬಂದು, ಗಾರೆಯ ಸೀಕರಣೆಯ ತೊಟ್ಟಿಯಲ್ಲಿ ಮುಖಮುಡಿಯಾಗಿ ಬಿದ್ದು ತೇಲುತ್ತಿದ್ದ ಮಗನ ದೇಹವನ್ನು ನೋಡಿದಳು. ಗದ್ದಲವಾದೀತೆಂದು ದುಃಖವನ್ನಡಗಿಸಿಕೊಂಡು ಗಂಡನನ್ನು ಕರೆದು ತೋರಿಸಿದಳು. ಸತಿಪತಿಗಳು ಮುಂದೇನು ಮಾಡಬೇಕೆಂದು ತೋರದೆ ಅಗಾಧ ಸಂಯಮದಿಂದ–'ನೀನು ಹೇಳಿದಂತೆ–ನೀವು ಹೇಳಿದಂತೆ' ಎಂದುಕೊಂಡು ಸ್ವಲ್ಪಹೊತ್ತು ಕಳೆದರು. ಕೊನೆಗೆ ವಿಚಕ್ಷಣಳಾದ ಆ ಸಾಧ್ವಿಯು–'ಆದದ್ದಾಯಿತು. ಹುಡುಗನು ಮೃತನಾದ ಸಂಗತಿ ತಿಳಿದರೆ ಮಧ್ಯಾಹ್ನಕಾಲದಲ್ಲಿ ಎಲ್ಲರೂ ಹೊರಟುಹೋದಾರು. ಸ್ವಾಮಿಗಳನ್ನೂ ಸಹಸ್ರಾವಧಿ ಬ್ರಾಹ್ಮಣರನ್ನೂ ಉಪವಾಸ ಕಳುಹಿಸುವುದು ಶ್ರೇಯಸ್ಕರವಲ್ಲ. ಅದೃಷ್ಟವಿದ್ದರೆ ಮತ್ತೆ ಮಕ್ಕಳಾದಾರು! ಮೃತಶರೀರವನ್ನು ಮುಚ್ಚಿಟ್ಟು, ಭೋಜನವಾಗುವವರೆಗೆ ದೂರದಲ್ಲಿರೋಣ! ಮುಂದೆ ದೇವರು ಮಾಡಿಸಿದಂತಾಗಲಿ' ಎಂದು ಸೂಚಿಸಿದಳು. ಸಲಹೆಯು ದೇಶಾಯಿಗೆ ಯುಕ್ತವೆಂದು ತೋರಿತು. ಇಬ್ಬರೂ ದುಃಖವನ್ನಡಗಿಸಿಕೊಂಡು ಚಿಕ್ಕ

ಅಡಿಗೆಯ ಮನೆಗೆ ಬೀಗ ಹಾಕಿ, ಕಾರ್ಯತತ್ಪರರಂತೆ ದೂರ ದೂರದಲ್ಲೇ ಓಡಾಡಿಕೊಂಡಿದ್ದರು.

ಪೂಜಾಕಾಲಕ್ಕೆ ದೇಶಾಯರು ಬರಲಿಲ್ಲವೆಂದು ಜನರಾಡಿಕೊಂಡರು. ತೀರ್ಥಕಾಲದಲ್ಲಿ ದೇಶಾಯರನ್ನು ಕರೆಯೆಂದು ಗುರ್ವಾಜ್ಞೆಯಾಯಿತು. ಆಗಲಾತನು, ತಾನು ಮತ್ತೆ ಸ್ನಾನಮಾಡಿ ಬರಬೇಕು; ಭಿಕ್ಷಾ ಸ್ವೀಕಾರಾನಂತರ ತೀರ್ಥ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಕಳುಹಿಸಿದನು. ಮತ್ತೆ ಮತ್ತೆ ಇದೇ ಪ್ರಶ್ನೋತ್ತರವಾಯಿತು. ಹೇಗಿದ್ದರೆ ಹಾಗೇ ಬರಬಹುದೆಂದು ಸ್ವಾಮಿಗಳ ಅಪ್ಪಣೆಯಾಯಿತು. ವಿಧಿಯಿಲ್ಲದ ಮಾತೆಂದು ದೇಶಾಯಿಯು ದುಃಖವನ್ನು ಬಹು ಪ್ರಯತ್ನದಿಂದ ತಡೆದುಕೊಂಡು ದೂರದಲ್ಲಿ ಬಂದು ನಿಂತುಕೊಂಡನು. ಸ್ವಾಮಿಗಳು–'ಏನು ದೇಶಾಯರೇ ಒಬ್ಬರೇ ಬಂದಿರಿ?' ಎಂದರು. ದೇಶಾಯಿಯು–'ನಮ್ಮವರೆಲ್ಲರೂ ಕೆಲಸದಲ್ಲಿರುವರು. ಭಿಕ್ಷಾನಂತರ ತೀರ್ಥಕ್ಕೆ ಬರುವರು' ಎಂದನು. ಸ್ವಾಮಿಗಳು–'ನಿಮ್ಮವರ ಮಾತಲ್ಲ! ನಿಮ್ಮ ಚಿರಂಜೀವಿ' ಎಂದರು. ದೇಶಾಯಿಯು–'ಅವನು ಊರಲ್ಲಿಲ್ಲ. ಸೋದರಮಾವನ ಮನೆಗೆ ಹೋಗಿದ್ದಾನೆ; ಬರುವಹಾಗಿಲ್ಲ' ಎಂದನು. ಸ್ವಾಮಿಗಳು–'ಇವತ್ತೇಕೆ ಕಳುಹಿಸಿದಿರಿ? ಅವನು ಬಂದಲ್ಲದೆ ಭಿಕ್ಷಾಸ್ವೀಕಾರವಿಲ್ಲ. ಮೊದಲು ಕರೆಸಿರಿ' ಎಂದರು. ದೇಶಾಯಿಯ ದುಃಖ ಮೇರೆ ಮೀರಿತು–'ಇಲ್ಲ ಸ್ವಾಮಿ, ಅವನು ಬರುವುದು ಮುಗಿಯಿತು. ಸೀಕರಣೆಯ ಗಚ್ಚಿನಲ್ಲಿ ಬಿದ್ದು ಸತ್ತ' ಎಂದು ತಡೆಯಲಾರದೆ ಗಟ್ಟಿಯಾಗಿ ರೋದನಮಾಡಿದನು. ಸ್ವಾಮಿಗಳು ವಿವರವನ್ನು ವಿಚಾರಿಸಿದರು. ಜನರು 'ಮುಂದೇನು ಗತಿ' ಎಂದು ಭ್ರಾಂತರಾದರು. 'ಪ್ರಮಾದ ಪ್ರಮಾದ–ಮೃತಶರೀರವೆಲ್ಲಿ, ತರಿಸಿರೆಂ'ದು ಸ್ವಾಮಿಗಳ ಆಜ್ಞೆಯಾಯಿತು.

ದೇಶಾಯಿಯು ಎತ್ತಲಾರದೆ ಹೆಂಡತಿಯ ಸಹಾಯದಿಂದ ಮಗನ ಹೆಣವನ್ನು ಹೊತ್ತು ತಂದು ದೂರದಲ್ಲಿ ಮಲಗಿಸಿದನು. ಸ್ವಾಮಿಗಳು ಕೃಪಾಕಟಾಕ್ಷದಿಂದ ನೋಡಿ–'ಮೂಲರಾಮದೇವರು ಮನೆಗೆ ಬಂದಿರುವಾಗ ಮರಣವೆಲ್ಲಿ ಬಂತು ದೇಶಾಯರೇ?' ಎನ್ನುತ್ತಾ, ಮಂತ್ರಪೂತವಾದ ಉದಕವನ್ನು ಪ್ರೋಕ್ಷಿಸಿದರು. ನಿದ್ರೆಯಿಂದ ಎಚ್ಚರಿಸುವನಂತೆ ಬಾಲಕನು ಎದ್ದು ಕುಳಿತನು. ದೇಶಾಯಿದಂಪತಿಗಳ ಆನಂದಕ್ಕೆ ಪಾರವಿಲ್ಲದಾಯಿತು. ಮಗನನ್ನೆತ್ತಿ ಮುದ್ದಿಸುತ್ತಾ, ಸ್ವಾಮಿಗಳಿಗೆ ವಂದಿಸುತ್ತಾ ಉಭಯರೂ ಬಾಲಕನೊಡನೆ ಮಂಗಳಸ್ನಾನಮಾಡಿ ಬಂದರು. ಸ್ವಾಮಿಗಳು ಎಲ್ಲರಿಗೂ ತೀರ್ಥಕೊಟ್ಟು ಸಮುಖದಲ್ಲಿ ದಂಪತಿಗಳನ್ನೂ ಬಾಲಕನನ್ನೂ ಕುಳ್ಳಿರಿಸಿಕೊಂಡು ಭಿಕ್ಷಾಸ್ವೀಕಾರಮಾಡಿದರು. ದೇಶಾಯಿಯು, ಕಿರೀಟಗಿರಿ ಗ್ರಾಮವನ್ನೇ, ಕೃತಜ್ಞತೆಯಿಂದ ಸ್ವಾಮಿಗಳಿಗೆ ದಾನಮಾಡಿದನು. ಸ್ವಾಮಿಗಳ ತಪಶಕ್ತಿಯನ್ನೂ ಗೃಹಸ್ಥನ ಔದಾರ್ಯವನ್ನೂ ಜನರು ಸಹಸ್ರಮುಖಗಳಿಂದ ಕೊಂಡಾಡಿದರು.

[ಕಿರೀಟಗಿರಿ ಈಗಲೂ ಶ್ರೀಮಠದ ಜಹಗೀರಾಗಿದೆ. ಗದಗು ತಾಲ್ಲೂಕಿಗೆ ಸೇರಿದೆ.] ಈ ಕಥೆಯನ್ನು ಜಗನ್ನಾಥದಾಸರು–'ರಾಘವೇಂದ್ರ'–ಎಂಬ ತಮ್ಮ ದೇವರ ನಾಮದಲ್ಲಿ—

ಚೂತಫಲರಸದಿ । ಪೋತ ಮುಳುಗೆ ಮೃತಿ
ಭೀತಿಯ ಬಿಡಿಸಿದಾ–ನಾಥಜನಾಪ್ತ–ರಾಘವೇಂದ್ರ–
ಎಂಬುದಾಗಿ ಹಾಡಿರುತ್ತಾರೆ.

ಈ ಸಂಗತಿಯನ್ನು ಧರ್ಮದ್ರೋಹಿಗಳಾದ ಕೆಲಮಂದಿ ಕುಹಕಿಗಳು ಕೇಳಿದರು. 'ಸತ್ತವರನ್ನು ಬದುಕಿಸುವುದೆಲ್ಲಾದರೂ ಉಂಟೆ' ಎಂದರು. 'ದುಡ್ಡಿಗಾಗಿ ಬ್ರಾಹ್ಮಣರು ಹರಡಿದ ಸುದ್ದಿ' ಎಂದರು. ಭೋಳೇತನದ ದೇಶಾಯಿಗೆ ಮರುಳುಮಾಡಿದರೆಂದರು. ಸ್ವಾಮಿಗಳನ್ನು ಪರೀಕ್ಷಿಸಬೇಕೆಂದು ಹುಡುಗನೊಬ್ಬನಿಗೆ ಸತ್ತವನಂತೆ ವೇಷಹಾಕಿದರು, ಹೇಳಿಕೊಡಬೇಕಾದ್ದನ್ನು ಅವನಿಗೆ ಹೇಳಿಕೊಟ್ಟರು.–'ಸ್ವಾಮಿಾ, ಹುಡುಗ ಸತ್ತುಹೋದ ದೇಶಾಯರ ಮಗನನ್ನು ಬದುಕಿಸಿದಂತೆ ನಮ್ಮ ಹುಡುಗನನ್ನೂ ಬದುಕಿಸಿರಿ' ಎಂದು ಸುಳ್ಳು ಅಳು ಅಳುತ್ತಾ–ಅವನನ್ನು ಹೊತ್ತುಕೊಂಡು ಮಠದ ಮುಂದೆ ಬಂದು ಇಳಿಸಿದರು.

ಸ್ವಾಮಿಗಳು ಗದ್ದಲವೇನೆಂದು ವಿಚಾರಿಸಿದರು. ಸಂಗತಿ ನಿಜವೇ ಎಂದು ಒತ್ತಿ ಒತ್ತಿ ಕೇಳಿದರು. ಆ ಕುಹಕಿಗಳು–'ನಿದ್ದೆಮಾಡುತ್ತಿದ್ದ ಹುಡುಗನನ್ನು ಎಬ್ಬಿಸಿದಂತಲ್ಲ ಸ್ವಾಮಿಾ, ನಿಜವಾಗಿ ಸತ್ತಿದ್ದಾನೆ–ಬದುಕಿಸಿ ಸ್ವಾಮಿಾ' ಎಂದು ಗದ್ದಲಮಾಡಿದರು. ಸ್ವಾಮಿಗಳು–'ಮೃತನೆಲ್ಲಿ ತೋರಿಸಿರಿ' ಎಂದರು. ಕುಹಕಿಗಳು ಕರೆದುಕೊಂಡುಹೋಗಿ ವೇಷಧಾರಿಯ ಮುಸುಕು ತೆಗೆದು ತೋರಿಸಿ ಮತ್ತೆ ಮುಚ್ಚಿದರು.–'ನಮ್ಮನ್ನು ಪರೀಕ್ಷೆ ಮಾಡುವಿರಾ?' ಎಂದು ಸ್ವಾಮಿಗಳು ಕೇಳಿದರು. ಆ ನೀಚರು–'ಪರೀಕ್ಷೆಯೇನು ಸ್ವಾಮಿಾ ಸತ್ತಿದ್ದಾನೆ, ಬದುಕಿಸಿ ಸ್ವಾಮಿಾ' ಎಂದರು. ಆ ಮಾತನ್ನು ಕೇಳಿ ಸ್ವಾಮಿಗಳು–'ನಾವು ನಿದ್ರೆಮಾಡುವವರನ್ನು ಎಬ್ಬಿಸುವರಲ್ಲದೆ, ಸತ್ತವರನ್ನು ಬದುಕಿಸುವವರಲ್ಲ' ಎಂದು ನುಡಿದು ಹಿಂದಿರುಗಿದರು. ಕುಹಕಿಗಳು ವೇಷಧಾರಿಯನ್ನು ತಟ್ಟಿ–'ಏಳೋ, ಸ್ವಾಮಿಗಳ ಮುಂದೆ ಓಡಿಹೋಗೋ' ಎಂದು ಕೂಗಿದರು. ಅವನೇಳಲೇ ಇಲ್ಲ. ಮಲಗಿದವನು ದೀರ್ಘನಿದ್ರೆ ಮಾಡಿಯೇಬಿಟ್ಟನು. ಕುಹಕಿಗಳು ತಪ್ಪಾಯಿತೆಂದು ಪಾದಕ್ಕೆಬಿದ್ದು ಕ್ಷಮೆ ಬೇಡಿದರು. ಸ್ವಾಮಿಗಳು ನಮ್ಮ ಮಾತಿಗೆ ಮರುಮಾತಿಲ್ಲವೆಂದರು. ಪಾಪಿಗಳ ಕೃತಿಯಿಂದ ಸಮಾಜದ ಸಜ್ಜನರು ತಲೆ ತಗ್ಗಿಸಬೇಕಾಯಿತು.

ಸತಾಮುತ್ಪಾದ್ಯ ಸಂತೋಷಂ ವರಂ ದೇಹೀತಿ ನೋವದೇತ್ ॥
ಸತಾಮುತ್ಪಾದ್ಯ ಸಂತಾಪಂ ಶಾಪಂ ದೇಹೀತಿ ನೋವದೇತ್ ॥

ಯಾರಿಗೂ, ಎಂದಿಗೂ ದೊಡ್ಡವರೊಡನೆ ಸಲಿಗೆ ತರವಲ್ಲ!

ಶ್ರೀ ರಾಘವೇಂದ್ರಸ್ವಾಮಿಗಳ ದೀರ್ಘಕಾಲ ದೇಶಸಂಚಾರದಿಂದ ವಿಶೇಷ ಧರ್ಮ ಪ್ರಚಾರವಾಯಿತು. ಸತ್ತವರನ್ನು ಬದುಕಿಸುವುದೇ ಮೊದಲಾದ ಆ ಮಹಾಮಹಿಮರ ಅತಿ ಮಾನುಷ ಚರ್ಯೆಗಳಿಂದ ಜನರ ಭಕ್ತಿ ಹೆಚ್ಚಾಯಿತು. ಕರ್ನಾಟಕದಲ್ಲಂತೂ, ಶ್ರೀರಾಘವೇಂದ್ರ ಯತಿವರ್ಯರ ಹೆಸರು ಮಾನವ ಪ್ರಾಣಿಗಳ ಮನೆಮಾತಾಯಿತು. ಆ ಸಮಯದಲ್ಲಿ ಸನ್ನಿಹಿತವಾದ ಚಾತುರ್ಮಾಸ್ಯವನ್ನು ಮಾನವಿಯ ಸಮಿಾಪದಲ್ಲಿರುವ ಪುರಾತನ ಮಾರುತಿಯ ದೇವಾಲಯದಲ್ಲಿ ಕಳೆಯಬೇಕೆಂಬ ಸಿದ್ಧತೆಯಾಯಿತು. ಸುತ್ತ

ಮುತ್ತಣ ಭಕ್ತಜನರು ಸ್ವಾಮಿಗಳನ್ನು ಉತ್ಸವದಿಂದ ಕರೆತಂದರು. ದೇವಾಲಯಕ್ಕೆ ಕಟ್ಟಿಗೆಯ ಹೊರೆಯನ್ನು ತರುತ್ತಿದ್ದ ಹೊಲೆಯನೊಬ್ಬನು, ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದ ಸ್ವಾಮಿಗಳ ಸಂಭ್ರಮವನ್ನು ನೋಡಿ, ಹೊರೆಯನ್ನು ಕೆಳಕ್ಕೊಗೆದು ಕೈಜೋಡಿಸಿ ನಿಂತನು. ನಿಂತವನನ್ನು ನೋಡಿ ಸ್ವಾಮಿಗಳು–'ಏನೋ ಕನಕಾ! ನಿನ್ನ ಗತಿ ಹೀಗಾಯಿತೇ ?' ಎಂದರು. ಹೊಲೆಯನು–'ಹೌದು ನನ್ನೊಡೆಯ ವ್ಯಾಸರಾಯ, ನನ್ನ ಕರ್ಮ' ಎಂದನು. ಸ್ವಾಮಿಗಳು–'ನಿನಗೇನಾಗಬೇಕು ಕೇಳು' ಎಂದರು.–ಹೊಲೆಯನು 'ಜನ್ಮಾ ಸಾಕು ಮಾಡಪ್ಪಾ' ಎಂದನು. ಸ್ವಾಮಿಗಳು–'ದೇವರ ಸೇವೆ ಏನು ಮಾಡುವೆ ?' ಎಂದು ಕೇಳಿದರು. ಹೊಲೆಯನು–'ಬಡವ, ನಾನೇನು ಮಾಡಲಪ್ಪಾ, ಇದ್ದದ್ದನ್ನು ತಂದು ಕೊಡುತ್ತೇನೆ' ಎಂದನು.

ಉತ್ಸವವು ಸಂಭ್ರಮದಿಂದ ದೇವಾಲಯವನ್ನು ತಲ್ಪಿತು. ಸಂಕಲ್ಪಕ್ಕೆ ಕೂಡ ಬೇಕಾದ ಸಲಕರಣೆಗಳು ಸಿದ್ಧವಾದುವು. ಸ್ನಾನ ಪೂಜೆ ಭಿಕ್ಷೆ ಭೋಜನಾದಿಗಳು ಅತಿಶಯವಾಗಿ ನಡೆದುವು. ಮಧ್ಯಾಹ್ನಾತ್ಪರ ಎಲ್ಲರೂ ವಿಶ್ರಾಂತಿಯಲ್ಲಿದ್ದರು. ಸ್ವಾಮಿಗಳು ದೇವಸ್ಥಾನದ ವಸಾರೆಯಲ್ಲಿ ಕುಳಿತು ವೇದಭಾಷ್ಯವನ್ನು ಬರೆಯುತ್ತಿದ್ದರು.

ಹೊಲೆಯನು ಏನೂ ಗತಿಯಿಲ್ಲದೆ ಮನೆಯಲ್ಲಿ ಸಿಕ್ಕಿದ ಒಂದು ಬೊಗಸೆ ಸಾಸಿವೆಯನ್ನು ತೆಗೆದುಕೊಂಡು ಬಂದು ಧ್ವಜಸ್ತಂಭದ ಬಳಿಯಲ್ಲಿ ನಿಂತನು. ಸ್ವಾಮಿಗಳು–'ಏನು ತಂದೆಯೋ ಕನಕಾ!" ಎಂದು ಕೇಳಿದರು ಅವನು ತಂದಿದ್ದ–ಸಾಸಿವೆಯನ್ನು ಅಲ್ಲೇ ಸುರಿದು–'ಇಷ್ಟೇ ನನ್ನೊಡೆಯಾ, ಇನ್ನೇನೂ ಇಲ್ಲ' ಎಂದನು. ಆ ದಿನ ಗುರುಗಳಾಜ್ಞೆಯಿಂದ ಅವನಿಗೆ ನಿರಶನವ್ರತವಾಯಿತು. ಮರುದಿನ ಸ್ವಾಮಿಗಳು, ಆ ಹೊಲೆಯನು ತಂದುಕೊಟ್ಟ ಸಾಸಿವೆಯನ್ನು ಅಡಿಗೆಗೆ ಉಪಯೋಗಿಸಬೇಕೆಂದು ಸರ್ವಾಧಿಕಾರಿಗೆ ತಿಳಿಸಿದರು. ಸರ್ವಾಧಿಕಾರಿಯು 'ವ್ರತಕಾಲ* ಸಾಸಿವೆಯನ್ನು ಉಪಯೋಗಿಸುವುದು ಹೇಗೆ ?' ಎಂದು ಕೇಳಿದನು. ಸ್ವಾಮಿಗಳು–'ಮಹಾಭಕ್ತನು ಕೊಟ್ಟದ್ದು, ಅವನ ಜ್ಞಾಪಕಾರ್ಥವಾಗಿ ನಮ್ಮ ಮಠದಲ್ಲಿ ಮುಂದೆ ವ್ರತಕಾಲದಲ್ಲೂ ಸಾಸಿವೆಯನ್ನು ಉಪಯೋಗಿಸಬೇಕು. ನಮ್ಮ ಶಿಷ್ಯರೂ ಈ ಸಂಪ್ರದಾಯ ಪಾಲನೆ ಮಾಡಬೇಕು' ಎಂದು ಆಜ್ಞೆಮಾಡಿದರು. ಸರ್ವಾಧಿಕಾರಿಯು ಸಂಶಯ ಪರಿಹಾರಾರ್ಥವಾಗಿ–'ಭಕ್ತನ್ಯಾರು' ಎಂದು ಕೇಳಿದನು. ಸ್ವಾಮಿಗಳು ಹೊಲೆಯನನ್ನು ತೋರಿಸಿ–'ಅವನೇ' ಎಂದರು. ಸರ್ವಾಧಿಕಾರಿಗೆ ಈ ಉತ್ತರದಿಂದ ತೃಪ್ತಿಯಾಗಲಿಲ್ಲ. ಸ್ವಾಮಿಗಳು, ಶಿಷ್ಯರನ್ನು ಕರೆದು–'ಇವನು ಪೂರ್ವಜನ್ಮದಲ್ಲಿ ಕನಕ' ನಮ್ಮ ಪೂರ್ವಜನ್ಮದಲ್ಲಿ ನಮಗೇ ದೇವರನ್ನು

* ಚಾತುರ್ಮಾಸ್ಯ ವ್ರತದಲ್ಲಿ–ಆಷಾಢ ಶು॥ ಏಕಾದಶಿಯಿಂದ ಒಂದು ತಿಂಗಳ ಪರ್ಯಂತರ ಶಾಖಗಳು ಹುಳಿ, ಖಾರ, ಸಾಸಿವೆ, ವರ್ಜ್ಯಪದಾರ್ಥಗಳು. ಶ್ರಾವಣ ಭಾದ್ರಪದಗಳಲ್ಲಿ ಕ್ರಮವಾಗಿ ಮೊಸರು ಹಾಲು ವರ್ಜ್ಯ. ಆಶ್ವೀಜ ಶುದ್ಧ ಏಕಾದಶಿಯಿಂದ ಒಂದು ತಿಂಗಳು ದ್ವಿದಳಧಾನ್ಯಗಳು, ಹುಳಿ, ಮೆಣಸಿನಕಾಯಿ ವರ್ಜ್ಯಪದಾರ್ಥಗಳು. ತರಕಾರಿಗಳಲ್ಲೂ ಕೆಲವು ಮಾತ್ರ ಸ್ವೀಕಾರ. ಈ ವ್ರತ ದಕ್ಷಿಣದೇಶದ ಮಾಧ್ವರಲ್ಲೂ, ಮಹಾರಾಷ್ಟ್ರದಲ್ಲೂ ಆಚರಣೆಯಲ್ಲಿದೆ.

ತೋರಿಸಿದವ, ಜನ್ಮಬಂಧ ಮುಕ್ತನಾದರೂ ಸ್ವೇಚ್ಛೆಯಿಂದ ಹೊಲೆಯನಾಗಿ ಹುಟ್ಟಿದ್ದಾನೆ' ಎಂಬುದಾಗಿ ಅಪ್ಪಣೆ ಕೊಡಿಸಿದರು. ಸರ್ವಾಧಿಕಾರಿಯು ತಾನು ಪಟ್ಟ ಸಂಶಯಕ್ಕೆ ಕ್ಷಮೆ ಬೇಡಿ, ಆ ದಿನದ ಅಡಿಗೆಗೆ ಆ ಸಾಸಿವೆಯನ್ನು ಉಪಯೋಗವಾಡಿದನು. ಹೊಲೆಯನು ಶುದ್ಧನಾಗಿ ತೀರ್ಥಪ್ರಸಾದ ದೊರೆಯುವುದನ್ನು ಎದುರುನೋಡುತ್ತಿದ್ದನು. ಸ್ವಾಮಿಗಳು ಭಿಕ್ಷೆ ಭೋಜನಗಳಾದೊಡನೆಯೇ ಹೊಲೆಯನಿಗೆ ಧ್ವಜಸ್ತಂಭದ ಬಳಿಯಲ್ಲಿ ತೀರ್ಥಪ್ರಸಾದ ಗಳನ್ನು ಅನುಗ್ರಹಿಸಿದರು. ಗುರುಕಟಾಕ್ಷದಿಂದಲೂ ಅವನ ಸಂಸ್ಕಾರ ಪ್ರಭಾವದಿಂದಲೂ ಆ ಹೊಲೆಯನಿಗೆ ಜ್ಞಾನ ಪಕ್ವವಾಯಿತು. ರಾಮನಾಮ ಸ್ಮರಣೆಮಾಡುತ್ತಾ, ಎಲ್ಲರೂ ಕಾಣುವಂತೆಯೇ ಕಳೇಬರವನ್ನು ತ್ಯಜಿಸಿದನು.

ಸ್ವಾಮಿಗಳು ಹೊಲೆಯನ ಕಳೇಬರವನ್ನು ದೇವಾಲಯದ ಎದುರಿನ ಬಯಲು ಸ್ಥಳದಲ್ಲಿ ಭೂಸ್ಥಾಪನೆ ಮಾಡಿಸಿ, ಕನಕನಿಗೆ ಮೋಕ್ಷವಾದ ಸ್ಥಳವೆಂದು ಅಲ್ಲಿ ಧ್ವಜಸ್ತಂಭ ವನ್ನು ಸ್ಥಾಪಿಸಿದರು.

ಬಿದಿರಹಳ್ಳಿ ಶ್ರೀನಿವಾಸಾಚಾರ್ಯರು

ಬಿದಿರಹಳ್ಳಿ (ಶಿರಹಟ್ಟಿ ತಾಲ್ಲೂಕು) ಶ್ರೀನಿವಾಸಾಚಾರ್ಯರೆಂಬ ಟಿಪ್ಪಣಿಕಾರರು ಇದೇ ಕಾಲದಲ್ಲಿ ತಮ್ಮ ಗ್ರಂಥಗಳನ್ನು ಸ್ವಾಮಿಗಳಿಗೆ ತೋರಿಸಬೇಕೆಂದು ಮಠಕ್ಕೆ ಬಂದರು. ಸ್ವಾಮಿಗಳು ಅವರ ಟಿಪ್ಪಣಿಗಳನ್ನು ನೋಡಿ ಸಂತೋಷಪಟ್ಟು, ಸನ್ಯಾಸಾಶ್ರಮ ಸ್ವೀಕಾರಮಾಡಿದವರಿಗೇ ಲಭ್ಯವಾಗುವ 'ತೀರ್ಥ' ಎಂಬ ಬಿರುದನ್ನು ಅವರಿಗೆ ದಯಪಾಲಿಸಿದರು. ಅಂದಿನಿಂದ ಆಚಾರ್ಯರು ಶ್ರೀನಿವಾಸತೀರ್ಥರಾದರು. ಶ್ರೀನಿವಾಸತೀರ್ಥರು ಸ್ವಯಂ ಉತ್ತರಾದಿ ಮಠದ ಶಿಷ್ಯರಾಗಿದ್ದುದರಿಂದ ಶ್ರೀ ರಾಘವೇಂದ್ರ ಮಠದಲ್ಲಿ ನೂತನವಾಗಿ ವ್ರತ ಕಾಲದಲ್ಲಿ ಸಾಸಿವೆಯನ್ನು ತೆಗೆದುಕೊಂಡದ್ದಕ್ಕೆ ಒಳಪಡದೆ, ಪ್ರತ್ಯೇಕ ಸಾಸಿವೆ ಇಲ್ಲದ ಸಾರನ್ನು ಮಾಡಿಸಿ ಉಪಯೋಗಿಸಿದರು. ಗುರುಸಾನ್ನಿಧ್ಯದಲ್ಲಿ ಇದು ಅಧಿಕ ಪ್ರಸಂಗವಾಗಿತ್ತು. ಸ್ವಾಮಿಗಳು ಅವರ ವಿದ್ವತ್ತಿಗಾಗಿ ಉತ್ತಮ ಮರ್ಯಾದೆಗಳನ್ನು ಮಾಡಿ ಮಂತ್ರಾಕ್ಷತೆ ಕೊಟ್ಟು ಕಳುಹಿಸಿದರು. ಆಚಾರ್ಯರ ವಿದ್ಯಾಗುರುಗಳಾದ ಯಾದವಾರ್ಯರು ತಮ್ಮ ಶಿಷ್ಯರನ್ನು ನೋಡಿ, ಒಡನೆಯೇ—'ಏನು ಗುರುದ್ರೋಹವನ್ನೇ ಸಂಪಾದಿಸಿಕೊಂಡು ಬಂದಹಾಗಿದೆ' ಎಂದರು. ಆಚಾರ್ಯರು 'ಹಾಗೆಂದರೇನು! ಸ್ವಾಮಿಗಳವರು ಗ್ರಂಥಗಳನ್ನು ನೋಡಿ, ಪರಮಾನಂದಭರಿತರಾದರು. ಸನ್ಯಾಸಾಶ್ರಮಿಗಳಿಗೆ ಕೊಡುವ 'ತೀರ್ಥ' ಎಂಬ ಬಿರುದನ್ನು ದಯಪಾಲಿಸಿದರು' ಎಂದು ನುಡಿದರು. ಯಾದವಾರ್ಯರು 'ಬಹುಮಾನ ಹಾಗಿರಲಿ; ನಿನ್ನ ಮುಖ ತೇಜೋಹೀನವಾಗಿದೆ. ಆಯುಸ್ಸೇ ಗ್ರಾಸವಾಗುತ್ತಿದೆ. ಮಠದ ಶಾತ್ಯ ಮಾಡಬೇಡವೆಂದು ಮೊದಲೇ ಹೇಳಿದ್ದೆ. ಗುರುದ್ರೋಹವೇನು ಮಾಡಿದೆ? ಹೇಳು' ಎಂದು ಗದರಿಸಿದರು. ಆಗ ಆಚಾರ್ಯರು ಖಿನ್ನರಾಗಿ,—'ಏನೂ ಇಲ್ಲ. ಆ ಮಠದಲ್ಲಿ ವ್ರತಕಾಲದಲ್ಲಿ ಸಾಸಿವೆಯನ್ನು ಉಪಯೋಗಿಸುವ ಹೊಸ ಸಂಪ್ರದಾಯ ಮಾಡಿಕೊಂಡಿದ್ದಾರೆ; ನಾನು ನನ್ನ ಮಠ ಸಂಪ್ರದಾಯ ಪಾಲನೆ

ಮಾಡಬೇಕೆಂದು ಪ್ರತ್ಯೇಕ ಸಾರು ಮಾಡಿಸಿಕೊಂಡೆ; ಇಷ್ಟೆ!' ಎಂದರು. ಅದನ್ನು ಕೇಳಿದ ಯಾದವಾರ್ಯರು–'ನೋಡಿದೆಯಾ? ಅದೇ ತಪ್ಪು! ಮಹಾತ್ಮರ ಸನ್ನಿಧಿಯಲ್ಲಿ ನಿನ್ನ ಪ್ರತಿಷ್ಠೆಯೇತರದು? ಅವರ ಸನ್ನಿಧಿಯಲ್ಲಿ ಅವರ ನಿಯಮದಂತಿದ್ದು ಅನುಗ್ರಹ ಪಡೆಯಬೇಕಾಗಿತ್ತು! ಮಂತ್ರಾಕ್ಷತೆಯೆಲ್ಲಿ ನೋಡೋಣ, ತಾರೆ'ಂದರು. ಶ್ರೀನಿವಾಸಾಚಾರ್ಯರು ಅಕ್ಷತೆಯ ಭರಣಿಯನ್ನು ಕೊಟ್ಟರು. ಯಾದವಾರ್ಯರು ತೆರೆದು ನೋಡಿ,–'ಕಪ್ಪಾಗಿದೆ. ಮೊದಲು ಹೋಗಿ ಕ್ಷಮೆ ಬೇಡಿ, ಅನುಗ್ರಹ ಪಡೆದು ಬಾ' ಎಂದು ಅವರನ್ನು ಹಿಂದಿರುಗಿ ಕಳುಹಿಸಿದರು. ತಾವು ಮಾಡಿದ ತಪ್ಪಿಗೆ ಉಪವಾಸವೇ ಪ್ರಾಯಶ್ಚಿತ್ತವೆಂದು ಶ್ರೀನಿವಾಸಾಚಾರ್ಯರು ಅನ್ನೋದಕಗಳನ್ನು ತೊರೆದು ಶ್ರೀಮಠಕ್ಕೆ ಬಂದು, ಮ್ಲಾನವದನರಾಗಿ ರಾಘವೇಂದ್ರರಿಗೆ ನಮಸ್ಕಾರ ಮಾಡಿದರು. ಸ್ವಾಮಿಗಳು ಆಚಾರ್ಯರನ್ನು ಕುರಿತು–'ಹೀಗೇಕೆ ಬಂದಿರಿ' ಎಂದು ಕೇಳಿದರು. ಆಚಾರ್ಯರು ನಡೆದ ಸಂಗತಿಗೆ ಕ್ಷಮೆ ಬೇಡಿ, ಉದ್ಧಾರ ಮಾಡಬೇಕೆಂದರು. ರಾಘವೇಂದ್ರರು–'ಪ್ರಮಾದವೇನಿಲ್ಲ. ಮೂರು ಉಪವಾಸದ ಪಾರಣೆಯಾಗಲಿ, ಎಲ್ಲವೂ ಸರಿಹೋಗುವುದು' ಎಂದರು. ಗುರುಗಳ ಸಮ್ಮುಖದಲ್ಲಿ ಆಚಾರ್ಯರ ಪಾರಣೆಯಾಯಿತು. ಸಂಪ್ರದಾಯದ ತತ್ತ್ವಾರ್ಥವನ್ನು ಆಚಾರ್ಯರಿಗೆ ಸ್ವಾಮಿಗಳು ವಿವರವಾಗಿ ತಿಳಿಸಿದರು. ಗುರ್ವನುಗ್ರಹವನ್ನು ಪಡೆದು, ಶ್ರೀನಿವಾಸಾಚಾರ್ಯರು ತೇಜೋವಂತರಾಗಿ ಯಾದವಾರ್ಯರ ಬಳಿಗೆ ಪ್ರಯಾಣ ಮಾಡಿದರು.

ಮುಳಿಯಾಳದ ಮೂವರು ಜ್ಯೋತಿಷ್ಕರು

ಜ್ಯೋತಿರ್ವಿದ್ಯೆಯಲ್ಲಿ ಪಾರಂಗತರಾದ ಮುಳಿಯಾಳದ ಮೂರುಜನ ಪಂಡಿತರು, ತಮ್ಮ ವಿದ್ಯಾ ಪರೀಕ್ಷೆಮಾಡಬೇಕೆಂದು ಸ್ವಾಮಿಗಳ ದರ್ಶನ ಮಾಡಿದರು. ಸ್ವಾಮಿಗಳು ಒಡನೆಯೇ ದ್ವಾದಶರಾಶಿಗಳಲ್ಲಿ ಗ್ರಹಗಳನ್ನು ಗುರ್ತಿಸಿ, ಹೀಗೊಂದು ಜಾತಕವಿದ್ದರೆ ಏನು ಹೇಳುವಿರೆಂದು ಪ್ರಶ್ನೆ ಮಾಡಿದರು. ವಿದ್ವತ್ಪರೀಕ್ಷೆಯದಾದ ಕಾರಣ ಒಬ್ಬೊಬ್ಬರೂ ಪ್ರತ್ಯೇಕ ಸ್ಥಳಗಳಲ್ಲಿ ಕುಳಿತು ಬರೆದು ಪ್ರತ್ಯೇಕವಾಗಿ ಹೇಳಬೇಕೆಂದು ನಿಬಂಧನೆಯಾಯಿತು. ಫಲ ಹೇಳುವಾಗ, ಈ ಬಗೆಯ ಜಾತಕ ಮಾನವಪ್ರಾಣಿಯಾಗಿರುವುದು ಅಸಂಭವವೆಂತಲೂ, ಹಾಗಿದ್ದರೆ ಜಾತಕನು ಲೋಕಾಚಾರ್ಯನಾಗಿರಬೇಕೆಂತಲೂ ಹೇಳಿದ ಮಾತಿನಲ್ಲಿ ಮೂವರದೂ ಏಕವಾಕ್ಯವಾಯಿತು. ಫಲದ ಮಾತಿರಲಿ, ಜಾತಕನ ಆಯುಸ್ಸು ಎಷ್ಟಿದೆಯೆಂದು ಪ್ರಶ್ನೆಮಾಡಿದಾಗ, ಒಬ್ಬನು ನೂರು ವರ್ಷವೆಂತಲೂ, ಎರಡನೆಯವನು ಮುನ್ನೂರು ವರ್ಷವೆಂತಲೂ, ಮೂರನೆಯವನು ಏಳುನೂರು ವರ್ಷವೆಂತಲೂ, ಭಿನ್ನ ರೀತಿಯಿಂದ ಹೇಳಿದರು. ಸಭೆಯಲ್ಲಿದ್ದ ಪಂಡಿತರು ಇದೇನು ವಿಪರೀತಫಲವೆಂದು ಪ್ರಶ್ನಿಸಲು–ಸ್ವಾಮಿಗಳು ಮೂವರು ಹೇಳಿದ್ದೂ ಸರಿ; ಒಬ್ಬರದು ದೇಹವೃಷ್ಟಿ; ಇನ್ನೊಬ್ಬರದು ಗ್ರಂಥವೃಷ್ಟಿ; ಮತ್ತೊಬ್ಬರದು ಪ್ರಭಾವವೃಷ್ಟಿ ಎಂದರು. ಸಂದೇಹ ನಿವಾರಣೆಯಾಗದಿರಲು–ಮತ್ತೆ ಸ್ವಾಮಿಗಳೇ, ನೂರು ವರ್ಷಗಳು ಜಾತಕನು ದೇಹದಿಂದ ಕಾಣಿಸಿಕೊಳ್ಳುವ

ಕಾಲಾವಧಿ; ಮುನ್ನೂರು ವರ್ಷಗಳು ಜಾತಕನ ಗ್ರಂಥಗಳ ಪ್ರಚಾರ ಕಾಲಾವಧಿ; ಏಳು ನೂರು ವರ್ಷಗಳು ಜಾತಕನ ಬೃಂದಾವನದಲ್ಲಿ ಮಹಿಮೆಗಳು ನಡೆಯುವ ಕಾಲಾವಧಿ! ಎಂದು ಸಮಾಧಾನಮಾಡಿ, ಆ ಮಹಾ ಪಂಡಿತರುಗಳಿಗೆ ತಕ್ಕಂತೆ ಬಹುಮಾನ ಮಾಡಿದರು. ಸನಿಾಪಸ್ಥರು–'ಈ ವಿಪರೀತಫಲದ ಜಾತಕನು ಯಾರಿರಬಹುದು' ಎಂದು ಪ್ರಶ್ನೆ ಮಾಡಿದರು. ಸ್ವಾಮಿಗಳು–ಆ ವಿಪರೀತ ಮನುಷ್ಯ **'ನಿಮ್ಮ ಮೂಲರಾಮದೇವರ ಪೂಜಾರಿ'** ಎಂದು ವಿನೋದಮಾಡಿದರು.

ದೇಶ ಪರ್ಯಟನದಲ್ಲಿ ಬಹು ದೀರ್ಘಕಾಲ ಕಳೆಯಿತು; ತಮ್ಮ ಜನ್ಮಕ್ಕೆ ಕಾರಣನಾದ ತಿರುಪತಿಯ ಶ್ರೀ ಶ್ರೀನಿವಾಸನ ಸೇವೆಮಾಡಿ, ತರುವಾಯ ಕುಂಭಕೋಣೆಯನ್ನು ಸೇರಬೇಕೆಂಬ ಅಭಿಲಾಷೆ ಸ್ವಾಮಿಗಳಿಗಾಯಿತು. ಸಂಸ್ಥಾನ ದಿಗ್ವಿಜಯವಾಗುವ ಸಮಾಚಾರ ತಿಳಿದ ಕ್ಷೇತ್ರಪಾಲಕರು ಸ್ವಾಮಿಗಳನ್ನು ರಾಜಮರ್ಯಾದೆಯಿಂದ ಇದಿರ್ಗೊಂಡರು. ಸ್ವಾಮಿಗಳು ಸುವರ್ಣದಿಂದ ತಮ್ಮ ತುಲಾಭಾರವನ್ನು ಶ್ರೀನಿವಾಸನಿಗೊಪ್ಪಿಸಿ, ಬ್ರಹ್ಮೋತ್ಸವ ಮೊದಲಾದ ಸಕಲ ಸೇವೆಗಳನ್ನೂ ಮಾಡಿದರು. ತಿರುಪತಿಯಲ್ಲಿ ತಮ್ಮದೇ ಪ್ರತ್ಯೇಕ ಮಠವನ್ನು ಕಟ್ಟಿಸಿ ಶ್ರೀನಿವಾಸನ ನಿತ್ಯಸೇವೆಗೆ ಕೆಲವು ಕಟ್ಟಲೆಗಳನ್ನು ಏರ್ಪಡಿಸಿದರು. ತಿರುಪತಿಯಿಂದ ಕಾಳಹಸ್ತಿ ಕಂಚೀಕ್ಷೇತ್ರಗಳ ಮಾರ್ಗವಾಗಿ ಕುಂಭಕೋಣೆಯನ್ನು ಸೇರಿದರು.

ಶ್ರೀ ರಾಘವೇಂದ್ರರ ಸಾನ್ನಿಧ್ಯವಿಲ್ಲದೆ ಶೂನ್ಯವಾಗಿದ್ದ ಕುಂಭಕೋಣೆಯು ಮತ್ತೆ ಇಂದ್ರನ ಅಮರಾವತಿಯಾಯಿತು. ರಾಘವೇಂದ್ರ ಮಠವೆಂದರೆ ಚತುರ್ದಶ ಕಲೆಗಳ ನಿಲಯವಾಗಿತ್ತು. ನಾಯಕ ಸಂತತಿಯ ರಾಜರು ಗೀರ್ವಾಣ ವಿದ್ಯಾವಿಶಾರದರಾಗಿದ್ದರು. ವರ್ಣಾಶ್ರಮ ಧರ್ಮರಕ್ಷಣೆ ಆ ರಾಜರ ಬಿರುದಾಗಿತ್ತು. ಹಾಗೆ ಮಾಡುವುದು ಆ ಕಾಲದ ಜನರಿಗೆ ಬೇಕಾಗಿತ್ತು. ಬಲಕಾರ್ಯಕ್ಕೆ ಚತುರಂಗ ಸೇನೆಯಿದ್ದಂತೆ, ಜ್ಞಾನಕಾರ್ಯಕ್ಕೆ ಚತುಶ್ಶಾಸ್ತ್ರಪಂಡಿತರ ಬೆಂಬಲ ರಾಷ್ಟ್ರಕ್ಕಿತ್ತು. ಶ್ರೀಮಠದಲ್ಲಿ ಅಭ್ಯಾಸ ಮಾಡಿ ಪಾರಂಗತರಾದ ಪಂಡಿತರಿಗೆ ರಾಜಾಂಗಣದಲ್ಲಿ ಪ್ರತ್ಯೇಕ ಪರೀಕ್ಷೆಯಿರಲಿಲ್ಲ. ವಿದ್ವಾಂಸರ ಸಂಖ್ಯೆ ಬೆಳೆದಂತೆ, ಅಗ್ರಹಾರಗಳನ್ನು ಕಟ್ಟಿಸಿ ಭೂದಾನ ಮಾಡುವುದೂ, ದೇವಾಲಯಗಳನ್ನು ನಿರ್ಮಿಸಿ, ಅಲ್ಲಿ ಅಧ್ಯಯನ ಪ್ರವಚನಗಳನ್ನು ಮಾಡಿಕೊಂಡಿರಬೇಕೆಂದು ವಿಧಿಸುವುದೂ, ಆ ಕಾಲದ ರಾಜರ ಶೀಲವಾಗಿತ್ತು. ಹಾಗಿರದಿದ್ದರೆ ನದೀತೀರಗಳಲ್ಲಿ ಮೈಲಿಗೊಂದು ಅಗ್ರಹಾರ, ಅಲ್ಲೆಲ್ಲಾ ಸ್ನಾನಘಟ್ಟಗಳು, ಮತ್ತು ದೇವಾಲಯಗಳ ಅವಶೇಷಗಳನ್ನು ಕಂಡುಹಿಡಿಯುವ ಕೆಲಸ ಇತಿಹಾಸ ಸಂಶೋಧಕರಿಗೆಲ್ಲಿ ಸಿಗುತ್ತಿತ್ತು? ಒಂದೊಂದು ಅಗ್ರಹಾರವೂ ವೇದ ವಿದ್ಯೆಯ ಪ್ರೌಢ ಪಾಠಶಾಲೆಯಾಗಿತ್ತು. ವಿದ್ವಾಂಸರನ್ನು ಪೋಷಿಸುವ ಭಾರ ರಾಜನದಾಗಿತ್ತು. ಆದುದರಿಂದ ವಿದ್ಯಾಪರೀಕ್ಷೆಗೆ ಬರುವ ಜನಸಂದಣಿ ಮಠದಲ್ಲಿ ಬಹಳವಾಗಿರುತ್ತಿತ್ತು. ವಿದ್ಯೆಯಲ್ಲಿ ಮತ ಪಕ್ಷಪಾತವಿರಲಿಲ್ಲ. ಸ್ವಯಂ ಬಹಳ ಕಷ್ಟಪಟ್ಟವರಾದ ಕಾರಣ ಸ್ವಾಮಿಗಳು ವಿದ್ಯಾವಂತರಿಗೆ ಮನಬಂದಂತೆ ದಾನ ಮಾಡುತ್ತಿದ್ದರು. ಗಾಯಕರಿಗೆ ಸ್ವಾಮಿಗಳು ಕಲ್ಪವೃಕ್ಷವಂತಿದ್ದರು. ವಿಜಯಾಂದ್ರರೂ

ಸುಧೀಂದ್ರರೂ ಮಠದಲ್ಲಿ ಹೇರಳವಾಗಿ ಧನಸಂಗ್ರಹ ಮಾಡಿಟ್ಟಿದ್ದರು. ಜಹಗೀರು ಗ್ರಾಮ ಭೂಮಿಗಳಿಗೆ ಮಿತಿಯಿರಲಿಲ್ಲ. ಆ ಕಾಲದಲ್ಲಿ ಸಂತತಿಯಿಲ್ಲದವರ ಸ್ವತ್ತು ಮಠಕ್ಕೇ ಸೇರುತ್ತಿತ್ತು. ಧರ್ಮ ಮಾಡಬೇಕೆಂಬುವರು ಏನಿದ್ದರೂ ಮಠಕ್ಕೊಪ್ಪಿಸಿಬಿಡುತ್ತಿದ್ದರು. ಸಾರಾಂಶದ ಮಾತೆಂದರೆ ಮಠವೇ ದೇಶದ ಸಾರ್ವಜನಿಕ ಭಂಡಾರವಾಗಿತ್ತು.

ಈ ಕಾಲದಲ್ಲಿ ಶ್ರೀ ರಾಘವೇಂದ್ರರ ಗ್ರಂಥ ರಚನಾಕಾರ್ಯವು ಭರದಿಂದ ಸಾಗಿತು. ವೇದಭಾಷ್ಯ ಮೊದಲ್ಗೊಂಡು ಸ್ವಾಮಿಗಳು ರಚಿಸಿದ ಗ್ರಂಥ ಸಂಖ್ಯೆಯು ನಲವತ್ತನಾಲ್ಕಾಯಿತು. ಅದು ಮುದ್ರಣ ಸೌಕರ್ಯವಿಲ್ಲದ ಕಾಲವಾಗಿದ್ದುದರಿಂದ ಗ್ರಂಥಗಳನ್ನು ಹಸ್ತಾಕ್ಷರದಿಂದ ಪ್ರತಿಮಾಡಿ ದಾನಮಾಡಿದರೆ ಮಹಾ ಪುಣ್ಯವೆಂಬ ಭಾವನೆಯಿತ್ತು. ಅದು ಕಾರಣ ಶ್ರೀ ರಾಘವೇಂದ್ರಸ್ವಾಮಿಗಳವರ ಕಾಲದಲ್ಲಿ ವಿದ್ಯಾಪ್ರಚಾರ ಕಾರ್ಯ ವಿಶೇಷ ರೀತಿಯಿಂದ ನಡೆಯಿತು.

ಮೂವರು ಯಾತ್ರಿಕರು

ಹೀಗಿರಲು ಒಮ್ಮೆ ಮೂವರು ಯಾತ್ರಿಕ ಬ್ರಾಹ್ಮಣರು ಗುರುದರ್ಶನಾಭಿಲಾಷೆಯಿಂದ ಕುಂಭಕೋಣೆಗೆ ಬಂದರು. ಮಾರ್ಗಾಯಾಸ ಬಿಸಿಲತಾಪಗಳಿಂದ ಅವರಿಗೆ ಇಚ್ಛಾ ಭೋಜನದ ಚಪಲವಾಯಿತು. 'ಈ ದಿನ ನಮ್ಮಿಷ್ಟದಂತೆ ಭೋಜನ ಮಾಡಿಸಿದರೆ ಸ್ವಾಮಿಗಳು ಅಪರೋಕ್ಷಜ್ಞಾನಿಗಳು-ಮಹಾತ್ಮರು' ಎಂದುಕೊಂಡು ಕಾವೇರಿಗೆ ಸ್ನಾನಕ್ಕೆ ಬಂದರು. ಪರಸ್ಪರ ಮಾತನಾಡಿಕೊಳ್ಳುತ್ತಿರುವಾಗ, ಮಠದ ಪರಿಚಾರಕನು ಸ್ವಾಮಿಗಳ ವಸ್ತ್ರವನ್ನು ಒಗೆಯುತ್ತಾ-"ಸ್ವಾಮಿ, ನಿಮಗೆ ಇಚ್ಛಾ ಭೋಜನವೇ ಆಗುವುದು. ಬೇಗ ಮಠಕ್ಕೆ ಬನ್ನಿ" ಎಂದು ಕರೆದನು. ಯಾತ್ರಿಕರಿಗೆ, ನಮ್ಮ ಮಾತೂ-ನಮ್ಮ ಮನದಿಚ್ಛೆಯೂ ಇವನಿಗೆ ಹೇಗೆ ತಿಳಿಯಿತೆಂದು ಆಶ್ಚರ್ಯವಾಗಿ, ನಿಮಗೆ ನಮ್ಮ ಇಚ್ಛೆ ಹೇಗೆ ಗೊತ್ತಾಯಿತೆಂದರು. ಆಗ ವಸ್ತ್ರದ ಗಂಟನ್ನು ಕೆಳಗಿಟ್ಟಿದ್ದ ಪರಿಚಾರಕನು, ನಿಮ್ಮನ್ನಾರು ಮಾತನಾಡಿಸಿದರೆಂದನು. ಇವನ್ಯಾರೋ ಹುಚ್ಚನಿರಬೇಕೆಂದು ಯಾತ್ರಿಕರು ತರ್ಕಿಸುತ್ತಿರುವಲ್ಲಿ, ವಸ್ತ್ರದ ಗಂಟನ್ನು ಹೊತ್ತುಕೊಂಡ ಆ ಪರಿಚಾರಕನು-"ಬೇಗ ಬನ್ನಿ! ನಿಮ್ಮಿಚ್ಛಾ ಭೋಜನವಾಗುತ್ತದೆ" ಎಂದು ನುಡಿದು ಹೊರಟುಹೋದನು. ಮೂವರಿಗೂ ಪರಿಚಾರಕನ ಈ ಚರ್ಯೆ ಅರ್ಥವಾಗಲಿಲ್ಲ. ಆದರೂ ಆದಷ್ಟು ಶೀಘ್ರವಾಗಿ ತಮ್ಮ ಆಹ್ನಿಕವನ್ನು ಮುಗಿಸಿಕೊಂಡು, ಹೊತ್ತಾದೀತೆಂದು, ಯಾತ್ರಿಕರು ಮಠಕ್ಕೆ ಬಂದರು. ಆಗಲೇ ಪೂಜೆ ಮುಗಿದು ತೀರ್ಥಕೊಡುವ ಕಾಲವಾಗಿತ್ತು. ಯಾತ್ರಿಕರೂ ಎಲ್ಲರ ಜೊತೆಯಲ್ಲಿ, ಸ್ವಲ್ಪ ಹಿಂದಾಗಿ ತೀರ್ಥಕ್ಕೆ ಕೈಯೊಡ್ಡಿದರು. ಸ್ವಾಮಿಗಳು ಅವರ ಕುಶಲ ಪ್ರಶ್ನೆಮಾಡಿ,-'ಪಾಪ, ನಡೆದುಬಂದ ಆಯಾಸ, ಬಿಸಿಲತಾಪ, ಯಾರಿಗಾದರೂ ಜಿಹ್ವಾ ಚಾಪಲ್ಯ' ಎನ್ನುತ್ತಲೇ ತೀರ್ಥವನ್ನು ಕೊಟ್ಟರು. ಭೋಜನ ಕಾಲದಲ್ಲಿ ಬಡಿಸುವವರನ್ನು ಕರೆದು,-'ಈ ಮೂವರಿಗೂ ಇಂತಿಂಥಾ ಪದಾರ್ಥಗಳನ್ನೇ ಸಮೃದ್ಧಿಯಾಗಿ ಬಡಿಸು'-ಎಂದರು. ಭೋಜನಾನಂತರ ಯಾತ್ರಿಕರು, ತಾವು ಮನಸ್ಸಿನಲ್ಲಿ ಮಾಡಿ

ಕೊಂಡಿದ್ದ ಭೋಜನದ ಬಯಕೆ ಪೂರ್ತಿಯಾದುದನ್ನೂ, ಪರಿಚಾರಕನು ನದಿಯಲ್ಲಿದ್ದಾಗ್ಗೆ ಆಡಿದ ಮಾತಿನ ಅರ್ಥವಾಗದ ಸಂದರ್ಭವನ್ನೂ ಸ್ವಾಮಿಗಳಿಗೆ ವಿಜ್ಞಾಪಿಸಿದರು. ಸಮೀಪದಲ್ಲಿದ್ದ ಪಂಡಿತರು–'ಸ್ವಾಮಿಗಳು ನಿಮ್ಮ ಇಂಗಿತದಂತೆ-ಇಚ್ಛಾ ಭೋಜನ ಮಾಡಿಸಿದ್ದು ದೊಡ್ಡದಲ್ಲ; ಮಠದ ಪರಿಚಾರಕನು ಸ್ವಾಮಿಗಳ ವಸ್ತ್ರವನ್ನು ಕೈಯಲ್ಲಿ ಹಿಡಿದಾಗ–ಮತ್ತು ಹಿಡಿಯದಿದ್ದಾಗ ಆಡಿದ ಮಾತುಗಳೆರಡನ್ನೂ ಅರ್ಥಮಾಡಿಕೊಳ್ಳಿರಿ'ಂದರು.

ವೀರ ಕ್ಷಾಮ

ಆ ಕಾಲದಲ್ಲೇ ದಕ್ಷಿಣ ದೇಶದಲ್ಲಿ ವೀರ ಕ್ಷಾಮವುಂಟಾಯಿತು. ಅನ್ನೋದಕಗಳಿಗೆ ಗತಿಯಿಲ್ಲದ ಸಾವಿರಾರು ಜನರು ಕುಂಭಕೋಣೆಗೂ ತಂಜಾವೂರಿಗೂ ತಂಡ ತಂಡವಾಗಿ ಬಂದರು. ಪರಮ ಧಾರ್ಮಿಕನಾದ ವಿಜಯರಾಘವನಾಯಕನು ದೇಶದಲ್ಲೆಲ್ಲಾ ಅನ್ನಸತ್ರಗಳನ್ನು ಇಡಿಸಿದನು. ಕ್ಷಾಮವು ವರ್ಷ ವರ್ಷಕ್ಕೂ ಹೆಚ್ಚಿತು. ರಾಜನ ಧಾನ್ಯ ಭಂಡಾರ ಬರಿದಾಗುತ್ತಾ ಬಂತು. ನೆರೆಹೊರೆಯ ರಾಜ್ಯದ ಜನರೂ ತಂಜಾವೂರಿಗೇ ಬಂದುಬಿಟ್ಟರು. ಲಕ್ಷಾವಧಿ ಜನರನ್ನು ರಕ್ಷಿಸುವುದು ರಾಜನಿಗೆ ಕಷ್ಟಕ್ಕಿಟ್ಟುಕೊಂಡಿತು. ಸ್ವಾಮಿಗಳಿಂದ ಪರ್ಜನ್ಯ ಜಪ ಮಾಡಿಸಿ, ದೇಶಕ್ಕೆ ಸುವೃಷ್ಟಿಯನ್ನುಂಟುಮಾಡಬೇಕೆಂದು ಸ್ವಯಂ ರಾಜನೇ ಕುಂಭಕೋಣೆಗೆ ಬಂದನು. ಬಂದು ಪಾದಕ್ಕೆರಗಿದ ರಾಜನನ್ನು ಕುರಿತು ಕುಶಲ ಪ್ರಶ್ನೆ ಮಾಡಿದೊಡನೆ, ನಾಯಕನು–'ಸದ್ಗುರೋ, ಈ ಕ್ಷಾಮದಲ್ಲಿ ಅನ್ನಕ್ಕೆ ಗತಿಯಿಲ್ಲದೆ ಜನರು ಸಾಯುವ ಕಾಲ ಬಂದಿದೆ. ಬೊಕ್ಕಸ ಬರಿದಾಗುತ್ತಾ ಬಂತು. ದೇಶದಲ್ಲಿ ಧಾನ್ಯ ಸಂಗ್ರಹವಿಲ್ಲ. ಜನರ ಕಷ್ಟ ಕಣ್ಣಿಂದ ನೋಡಲಸಾಧ್ಯವಾಗಿದೆ. ತಪಸ್ವಿಗಳಾದ ತಾವೇ ಪರಿಹಾರ ಮಾಡಬೇಕು' ಎಂದು ಬೇಡಿಕೊಂಡನು. ರಾಜನಾದ ಮಾತ್ರಕ್ಕೆ ಲಕ್ಷಾವಧಿ ಜನರನ್ನು ತಡೆಯುವುದಕ್ಕಾದೀತೆ? ಪ್ರಜೆಗಳಿಗೆ ಸಮೃದ್ಧಿಯಿದ್ದರೆ ರಾಜನಿಗೆ ಸಮೃದ್ಧಿ! ಪ್ರಜೆಗಳ ನಿರ್ಗತಿಕರಾದರೆ ರಾಜನೂ ಕ್ಷಾಮಪೀಡಿತನಾಗಬೇಕಲ್ಲದೆ ಅನ್ಯಥಾ ಮಾರ್ಗವೇನಿದೆ?

ಮಹಾರಾಜನ ಪ್ರಜಾವಾತ್ಸಲ್ಯವನ್ನು ನೋಡಿ ಸ್ವಾಮಿಗಳಿಗೆ ಸಂತೋಷವಾಯಿತು. ರಾಜನನ್ನು ಕುರಿತು–'ಈಶ್ವರ ಸಂಕಲ್ಪವನ್ನು ನಿವಾರಿಸುವುದು ಸಾಧ್ಯವಿಲ್ಲ. ಕ್ಷಾಮಡಾಮರಗಳಿಗೆ ಪ್ರಜೆಗಳ ಪಾಪಾಚರಣೆ ಕಾರಣ. ಈಶ್ವರ ಸಂಕಲ್ಪವನ್ನು ಎದುರಿಸದೆ, ಮನುಷ್ಯ ಪ್ರಯತ್ನದಲ್ಲಿ ಸಾಧ್ಯವಾದುದನ್ನು ಮಾಡಿ ಜನ ರಕ್ಷಣೆ ಮಾಡಬೇಕು. ಕ್ಷಾಮ ನಿವಾರಣೆಯಾಗುವವರೆಗೆ ನಾವು ತಂಜಾವೂರಿನಲ್ಲಿರುವೆವು. ನಿನ್ನ ರಾಜ್ಯದ ಧಾನ್ಯ ಭಂಡಾರದಲ್ಲಿ ಅಕ್ಷಯವಾಗುವಂತೆ ಶ್ರೀ ದೇವಿಯನ್ನು ಪ್ರಾರ್ಥನೆ ಮಾಡುವೆವು. ಹೆದರಬೇಡ,' ಎಂದು ಅಭಯ ಪ್ರದಾನ ಮಾಡಿದರು. ಇತ್ತ ಕುಂಭಕೋಣೆಯ ಮಠದಲ್ಲಿ–ಇಂದು ನಡೆಯುತ್ತಿರುವಂತೆಯೇ ಮುಂದೂ ನಡೆಯುತ್ತಿರಲಿ, ಎಂದು ಅನ್ನದಾನದ ವ್ಯವಸ್ಥೆ ಮಾಡಿದರು. ಮಹಾರಾಜನೊಡನೆ ರಾಘವೇಂದ್ರರು ತಂಜಾವೂರಿಗೆ ಬಂದರು.

ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಂಡ ಮಂತ್ರಸಿದ್ಧರಾದ ಮಹಾನುಭಾವರ ಅತಿ

ಮಾನುಷ ಶಕ್ತಿಯನ್ನು ಯಾವ ಮಾತುಗಳಿಂದ ಬಣ್ಣಿಸೋಣ! ಅಥವಾ ಬರಿಸು ತಿಳಿಸೋಣ! ಸ್ವಾಮಿಗಳವರು ನಿತ್ಯವೂ ಧಾನ್ಯರಾಶಿಯ ಮೇಲೆ ಶ್ರೀ ಬೀಜಮಂತ್ರವನ್ನು ಬರೆದು ಅಕ್ಷಯವಾಗುವಂತೆ ಅನುಗ್ರಹಿಸಿದರು. ಅನ್ನ ಸತ್ರಗಳಿಗೆ, ಕೇಂದ್ರ ಭಂಡಾರದಿಂದ ಧಾನ್ಯ ರಾಶಿಗಳನ್ನು ಕಳುಹಿಸಿದರು. ಕೆಲವು ತಿಂಗಳುಗಳಿಗೂ ಸಾಲದಿದ್ದ ಧಾನ್ಯ ಸಂಗ್ರಹವು ವರ್ಷಗಳಾದರೂ ಮುಗಿಯಲಿಲ್ಲ! ಈ ಮಹಾ ಮಹಿಮೆಯನ್ನು ಏನೆಂದು ಹೊಗಳೋಣ!

ಅಂದು ಶ್ರೀಹರಿಯು ದ್ರೌಪದಿಯು ಕೊಟ್ಟ ಶಾಕಪತ್ರದಿಂದ ತೃಪ್ತನಾಗಿ ಎಂಭತ್ತು ಸಾವಿರ ಶಿಷ್ಯರೊಡನೆ ಪಂಕ್ತಿಗಾಗಿ ಬಂದ ದೂರ್ವಾಸರಿಗೆ ವೃಷ್ಟ್ಯಾನ್ನವನ್ನೀಸಿದನು. ಭಕ್ತರ ಕೋರಿಕೆಯನ್ನು ಸಲಿಸಿ ಬಹು ದಿನಗಳಾದುವೆಂದೋ ಎಂಬಂತೆ ಇಂದು ಗುರು ರಾಘವೇಂದ್ರರ ಪ್ರಾರ್ಥನೆಗೆ ಮೆಚ್ಚಿ ಲಕ್ಷಾಂತರ ಮಂದಿ ಕ್ಷಾಮಪೀಡಿತರನ್ನು ಸಲಹಿದನು.

ಸ್ವಲ್ಪ ಕಾಲದಮೇಲೆ ಸುವೃಷ್ಟಿಯಾಗಿ ಕ್ಷಾಮ ನಿವಾರಣೆಯಾಯಿತು. ರಾಜ್ಯದ ಎಲ್ಲೆಡೆಯಲ್ಲೂ ಸುಭಿಕ್ಷವಾಯಿತು. ಪ್ರಜೆಗಳು ರಾಜನನ್ನೂ ಗುರುಗಳನ್ನೂ ಕೊಂಡಾಡಿ ಕೃತಜ್ಞತೆಯಿಂದ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು. ರಾಜನು ಅಂತಹ ಕಷ್ಟಕಾಲದಲ್ಲಿ ಅನುಗ್ರಹಮಾಡಿ ಪ್ರಜಾಸಂರಕ್ಷಣೆ ಮಾಡಿದ್ದಕ್ಕಾಗಿ ಗುರುಗಳವರಲ್ಲಿ ಅತಿಶಯ ಕೃತಜ್ಞತಾಪೂರ್ವಕ ಸೇವೆ ಸಲ್ಲಿಸಿದನು. ಆ ಕಾಲದಿಂದ ಶ್ರೀ ರಾಘವೇಂದ್ರ ಮಠಕ್ಕೆ ಆ ಪ್ರಾಂತದ ಜನರು, ದೀಪಾರಾಧನ ಕಾಣಿಕೆಯನ್ನು ವರ್ಷಂಪ್ರತಿ ಸಲ್ಲಿಸುವ ಸಂಪ್ರದಾಯ ಮಾಡಿಕೊಂಡರು.

ಈ ಪದ್ಧತಿಯು ಸುಬುಧೇಂದ್ರರ ಕಾಲದವರೆಗೆ ನಿರಾತಂಕವಾಗಿ ನಡೆದುಬಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಶ್ರೀ ಮಠವು ಮೈಸೂರು ಸೀಮೆಗೆ ಬಂದಿತು. ಆ ದೇಶದಲ್ಲಿ ಮಠದ ಸಂಚಾರ ಕಡಿಮೆಯಾಯಿತು. ಜನರಲ್ಲಿದ್ದ ಸಂಪ್ರದಾಯವು ಕಾಲಕ್ರಮದಲ್ಲಿ ತಲೆಮಾರಿನಿಂದ ತಲೆಮಾರಿಗೆ ಮರೆಯುತ್ತ ಬಂತು. ಆದರೂ ಸಂಪ್ರದಾಯಜ್ಞರು ಈಗಲೂ ಮಠದ ಸಂಚಾರ ಆ ಪ್ರಾಂತದಲ್ಲಾದರೆ, ಕಾಣಿಕೆಯನ್ನು ಸಲ್ಲಿಸುವುದು ಸಂತೋಷದ ಸಂಗತಿಯಾಗಿದೆ.

ವಿಜಯರಾಘವನಾಯಕನು ಗುರ್ವನುಗ್ರಹದಿಂದ ಕಷ್ಟ ಪರಿಹಾರವಾಗಿ ಇಷ್ಟಪ್ರಾಪ್ತಿಯಾಯಿತೆಂದು, ತನ್ನ ಮನಸ್ತೃಪ್ತಿಗಾಗಿ ರತ್ನಮಾಲಿಕೆಯೊಂದನ್ನು ಮೂಲರಾಮನಿಗರ್ಪಿಸಿದನು. ಸುದರ್ಶನ ಹೋಮಕಾಲದಲ್ಲಿ ಮಾಲಿಕೆಯನ್ನು ಸ್ವಾಮಿಗಳ ಕೈಗೆ ಕೊಡಲು, ಅವರು ಅದನ್ನು ಯಜ್ಞೇಶ್ವರನಿಗೆ ಸಮರ್ಪಿಸಿ ಕೈಮುಗಿದರು. ಹತ್ತಿರಿದ್ದವರೂ ರಾಜನೂ ಅದನ್ನು ನೋಡಿ ಏನೂ ಮಾತನಾಡಲಾರದೆ ಖಿನ್ನ ಮನಸ್ಕರಾಗಿದ್ದರು. ಸ್ವಾಮಿಗಳು, ತರುವಾಯ ಉಪಚಾರಕಾಲದಲ್ಲಿ ಅಗ್ನಿಕುಂಡದಿಂದ ಅದೇ ಮಾಲಿಕೆಯನ್ನು ತೆಗೆದು ಶ್ರೀ ಮೂಲರಾಮನಿಗರ್ಪಿಸಿದರು. ಮಾಲಿಕೆಯು ಸ್ವಲ್ಪವೂ ವಿರೂಪವಾಗದೆ ಥಳಥಳಿಸುತ್ತಿದ್ದುದನ್ನು ಕಂಡು, ರಾಜನೂ ಮಹಾಜನರೂ ಮಹದಾಶ್ಚರ್ಯಪಟ್ಟರು.

ಪತಿತದ್ವಿಜ

ಸ್ವಾಮಿಗಳು ತಂಜಾವೂರನ್ನು ಬಿಟ್ಟು ಎರಡನೇ ಸಲ ರಾಮೇಶ್ವರ ಯಾತ್ರೆಗಾಗಿ ತಾಮ್ರಪರ್ಣೀ ತೀರದಲ್ಲಿ ಕಲ್ಲಡಕುರ್ಚಿಗೆ ಬಂದರು. ಆ ಅಗ್ರಹಾರದಲ್ಲಿ ಪತಿತ ಬ್ರಾಹ್ಮಣನೊಬ್ಬನು, ತನ್ನನ್ನು ಜನರು ಬಹಿಷ್ಕರಿಸಿರುವರೆಂತಲೂ, ಕರೆದರೆ ಹವ್ಯ ಕವ್ಯಾದಿಗಳೊಂದಕ್ಕೂ ಬರುವುದಿಲ್ಲವೆಂತಲೂ, ಗೋಷ್ಠಿಯಲ್ಲಿ ಸೇರಿಸಿ ಉದ್ಧಾರಮಾಡಬೇಕೆಂತಲೂ ಬೇಡಿಕೊಂಡನು. ಪತಿತನ ಋಜುಭಾವ ನೋಡಿ ಸ್ವಾಮಿಗಳಿಗೆ ಆತನಮೇಲೆ ದಯೆಯುಂಟಾಯಿತು. ಪೂಜಾಕಾಲದಲ್ಲಿ ಸ್ನಾನಾದಿಗಳಿಂದ ಶುದ್ಧನಾಗಿ ಬಾರೆಂದು ಗುರ್ವಾಜ್ಞೆಯಾಯಿತು. ಅದರಂತೆ ಆ ಪತಿತ ವಿಪ್ರನು ಬರಲು ಸ್ವಾಮಿಗಳು, ಶಂಖೋದಕ ಪ್ರೋಕ್ಷಣೆ ಮಾಡಿ, ತೀರ್ಥವಿತ್ತು ಪಙ್ಕ್ತಿಭೋಜನವನ್ನು ಕರುಣಿಸಿದರು. ಎದುರಿಗೆ ಮಾತನಾಡಲು ಧೈರ್ಯವಿಲ್ಲದ ಅಗ್ರಹಾರಿಕರು, ಸ್ವಾಮಿಗಳ ಹಿಂದುಗಡೆ,-ದುಡ್ಡು ಕೊಟ್ಟವರೆಲ್ಲಾ ಪಙ್ಕ್ತಿಪಾವನರಾಗುತ್ತಾರೆಂದು ದೂರಿಕೊಂಡರು. ಈ ಮಾತು ಹೇಗೋ ಸ್ವಾಮಿಗಳಿಗೂ ತಿಳಿಯಿತು. ಸಂಶಯಗ್ರಸ್ತರನ್ನು ಮಠಕ್ಕೆ ಕರೆಸಿದರು. ಬಿಳಿಯ ವಸ್ತ್ರವನ್ನು ಭಲ್ಲಾತಕಿಯ ರಸ(ಗೇರು)ದಲ್ಲಿ ತೋಯಿಸಿ, ಅವರ ಕೈಯಿಂದಲೇ ಒಣಗಿಸಿ ತರಿಸಿದರು. ವಸ್ತ್ರದಮೇಲೆ ಶಂಖೋದಕ ಪ್ರೋಕ್ಷಣೆಮಾಡಿ, ಮೊದಲಿನಂತೆ ಬಿಳಿ ವಸ್ತ್ರವನ್ನೇ ಮಾಡಿ ತೋರಿಸಿದರು. 'ನೋಡಿದಿರೋ, ಇದರಂತೆಯೇ ನಿಮ್ಮ ಅಗ್ರಹಾರದ ಈ ಪತಿತ ಬ್ರಾಹ್ಮಣನಾದರೂ ಶುದ್ಧನಾದನು. ಇದರಲ್ಲಿನ್ನೂ ಸಂದೇಹವಿದೆಯೇ ? ಲೋಕದಲ್ಲಿ ಪ್ರತಿ ಪ್ರಾಣಿಯೂ ಜ್ಞಾತಾಜ್ಞಾತವಾದ ಅನೇಕ ಪಾಪಗಳಿಗೆ ಗುರಿಯಾಗುವನು. ಮನುಷ್ಯನ ಪಾಪಕ್ಕೆ ಶಿಕ್ಷೆ ವಿಧಿಸಬೇಕೆಂದರೆ ದೇವನು ನಿಮಿಷಕ್ಕೊಂದು ಬ್ರಹ್ಮಾಂಡ ಲಯ ಮಾಡಬೇಕಾದೀತು! ದೇವರು ದಯಾಮಯನು; ಪತಿತಪಾವನನು. ಪತಿಯ ಪ್ರೇಮದ್ರೋಹಿಯೆನಿಸಿದ ಅಹಲ್ಯೆಯನ್ನುದ್ಧರಿಸಿದವನು. ಚಂಡಾಲರಲ್ಲಿ ಬೆರೆತ ಪಾತಕಿ ಅಜಾಮಿಳ-ಮಾಧವರನ್ನು ಸಲಹಿದವನು. ಯಾವನಾಗಲಿ, ಮಾಡಿದ ಕೆಲಸದಲ್ಲಿ ತನ್ನ ತಪ್ಪನ್ನು ತಿಳಿದನೆಂದರೆ ಅರ್ಧ ದೋಷ ಪರಿಹಾರವಾಗುವುದು; ತಪ್ಪನ್ನು ಪರರ ಮುಂದೆ ಹೇಳಿಕೊಂಡು ಪಶ್ಚಾತ್ತಾಪ ಪಟ್ಟರೆ ದೋಷದೂರನಾಗುವನು. ನಿಮ್ಮ ತಿರಸ್ಕಾರದಿಂದಲೂ, ತನ್ನ ಪಶ್ಚಾತ್ತಾಪದಿಂದಲೂ ಆತನು ದೋಷದೂರನಾಗಿದ್ದಾನೆ. ಅವನನ್ನು ದೂಷಿಸಿದರೆ ನೀವೇ ದೋಷಿಗಳಾಗುವಿರಿ' ಎಂಬುದಾಗಿ ಹೇಳಿ ಸಮಾಧಾನಗೊಳಿಸಿದರು. ಅಗ್ರಹಾರಿಕರು, ಸ್ವಾಮಿಗಳ ತೀರ್ಮಾನಕ್ಕೆ ಅನ್ಯಥಾ ನುಡಿದುದಕ್ಕಾಗಿ ಪಾಪಾಕ್ರಾಂತರಾಗಿ ಕ್ಷಮೆ ಬೇಡಿದರು. ಹೀಗೆ ದೀನರನ್ನುದ್ಧರಿಸುತ್ತಾ, ದುರ್ವಾದಿಗಳನ್ನು ನಿಗ್ರಹಿಸುತ್ತಾ, ಶಿಷ್ಯರಿಗೆ ನಿರಂತರ ಪ್ರವಚನ ಮಾಡುತ್ತಾ ತತ್ಕಾಲದ ಸೇತುಯಾತ್ರೆಯನ್ನು ಮುಗಿಸಿ, ಸ್ವಾಮಿಗಳು ಕುಂಭಕೋಣೆಯನ್ನು ಸೇರಿದರು.

ಸ್ವಾಮಿಗಳ ಕಡೆಯ ಸಂಚಾರ

ಕೆಲವು ಕಾಲಾನಂತರ ಸ್ವಾಮಿಗಳು ಭಕ್ತಜನರನ್ನುದ್ಧರಿಸಲು ಪುನಃ ಸಂಚಾರವನ್ನು ಕೈಕೊಂಡು ಉತ್ತರ ಕರ್ಣಾಟಕಕ್ಕೆ ಬಂದರು. ಆಗ ತುಂಗಭದ್ರೆಯ ಮೇಲಣ

ಸೀಮೆಗಳು ಸವಣೂರು ನವಾಬನಿಗೆ ಸೇರಿದ್ದುವು. ಅಂದು ರಾಜರೆಂದರೆ, ಎಲ್ಲಾ ನವಾಬರೇ! ಉತ್ತರದಲ್ಲಿ ದೆಹಲಿಯು, ದಕ್ಷಿಣದಲ್ಲಿ ಬಿಜಾಪುರದ ಬಾದಶಹರು ತಮ್ಮ ಸುಭಾದಾರರಿಂದ ಭಂಡಾರವನ್ನು ತುಂಬಿಸಿಕೊಳ್ಳುತ್ತಿದ್ದರು. ತಂಜಾವೂರಿನಲ್ಲಿ ರಘುನಾಥ ಭೂಪಾಲನ ಅನಂತರ ಬಂದ ರಾಜರು ಶಕ್ತರಾಗಿರಲಿಲ್ಲ. ಮೈಸೂರರಸರು ದೆಹಲಿಯವರಿಗೆ ಅಂಕಿತರಾಗಿದ್ದರು. ಹಿಂದೂಜನರ ಮಾನ ಪ್ರಾಣಗಳು ತುರುಕರ ಕೈಯಲ್ಲಿದ್ದುವೆಂದು ಹೇಳಬೇಕಾದುದಿಲ್ಲ. ಉತ್ತರ ಕರ್ನಾಟಕದಲ್ಲಿ ಜನರು ನಿರ್ಭಯವಾಗಿ ಸಂಚರಿಸುವುದು ಗಂಡಾಂತರವಾಗಿತ್ತು. ಆಂಗ್ಲೇಯರು ಸಾರ್ವಭೌಮರಾಗಿ, ದೇಶೀಯರನ್ನು ನಿರ್ವೀರ್ಯರನ್ನಾಗಿ ಮಾಡಿದ ಈ ಕಾಲದಲ್ಲೂ ಮುಸಲ್ಮಾನರ ಹಾವಳಿ ಬಲವಾಗಿರುವಾಗ, ಅವರೇ ರಾಜರಾಗಿದ್ದಾಗ ಇನ್ನು ಕೇಳುವುದೇನಿದೆ? ಅಂದಮೇಲೆ ಹಿಂದೂ ಮತಪ್ರಚಾರಕರ ಪಾಡೇನು? ತಪಶ್ಶಕ್ತಿಯಿಂದ ತಮ್ಮ ಅತಿಮಾನುಷ ಮಹಿಮೆಗಳನ್ನು ತೋರಿಸಿದ ವಿನಾ ಆ ಜನರು ಗುಣಬದ್ಧರಾಗುತ್ತಿರಲಿಲ್ಲ. ಪೀಠಾಧಿಪತಿಗಳು ಸ್ವಧರ್ಮಿಗಳಾದ ಪಂಡಿತರನ್ನು ವಾಕ್ಯಾರ್ಥದಲ್ಲಿ ಒಡಂಬಡಿಸಿ, ಗಹನ ತತ್ತ್ವಗಳನ್ನು ಸುಲಭವಾಗಿ ತಿಳಿಯುವಂತೆ ಗ್ರಂಥ ರಚನೆ ಮಾಡಬೇಕಾಗಿದ್ದುದು ಒಂದುಕಡೆ; ವಿಧರ್ಮಿಗಳು ಗುಣಬದ್ಧರಾಗದಿದ್ದರೆ, ಅದ್ಭುತ ಶಕ್ತಿಯನ್ನು ತೋರಿಸಿ, ಶರಣಾಗತರಾಗುವಂತೆ ಮಾಡಿಕೊಳ್ಳಬೇಕಾಗಿದ್ದುದು ಒಂದುಕಡೆ. ಹೀಗಿತ್ತು, ಅಂದಿನ ಪೀಠಾಧಿಪತಿಗಳ ಸ್ಥಾನದ ಮಹತ್ತ್ವ!

ಹೀಗಿರಲು ಆಗಿದ್ದ ನವಾಬನು ನಜರಾಣದ ವಸೂಲಿಗೆ ರಾಣೀವಾಸವನ್ನು ಕರೆದುಕೊಂಡು ಹೊರಟು ಕೃಷ್ಣಾಪುರದ ತೋಪಿನಲ್ಲಿ (ಈಗಿನ ಹುಬ್ಬಳ್ಳಿಯ ಸಮೀಪದ ಸ್ಥಳ) ಬಿಡಾರಮಾಡಿದ್ದನು. ಬಂದ ದಂಡಿನ ಸರಬರಾಯಿ, ಅವರು ಹೊಡೆದ ಕೊಳ್ಳೆ ಮೇಲೆ ನವಾಬನ ಗೌರವಕ್ಕೆ ತಕ್ಕ ಸುವರ್ಣ ಪುಷ್ಪ, ಇಷ್ಟೂ ಆದಲ್ಲದೆ ನವಾಬನ ಡೇರೆಯ ಗೂಟಗಳು ಕದಲುತ್ತಿರಲಿಲ್ಲ. ಗ್ರಾಮದಲ್ಲಿ ಸವಾರರು ಸುಲಿಗೆ ನಡೆಸಿದ್ದರು. ಡೇರೆಯಲ್ಲಿ ನವಾಬನು ನಿದ್ರಿಸುತ್ತಿದ್ದನು. ನವಾಬನ ಚಿಕ್ಕ ವಯಸ್ಸಿನ ಮಗನೊಬ್ಬನು ತೋಪಿನಲ್ಲಿ ಕುಣಿದಾಡುತ್ತಿದ್ದನು. ಇದೇ ಸಮಯದಲ್ಲಿ ಮಠದ ಪರಿವಾರವು ತೋಪಿನ ಮಾರ್ಗವನ್ನು ದಾಟಿತು. ಸ್ವಾಮಿಗಳ ಮೇನೆಯು ತೋಪಿನ ಮತ್ತೊಂದು ಭಾಗದ ನಿರ್ಜನ ಪ್ರದೇಶದಲ್ಲಿಳಿಯಿತು. ಬೋಯಿಗಳು ದಣಿವಾರಿಸಿಕೊಳ್ಳುತ್ತಾ ಕುಳಿತರು.

ಆ ಬಿಸಿಲು ಬೇಗೆಯಲ್ಲಿ—ಮೇಲೆ ಹೇಳಿದಂತೆ ಮರದ ತಂಗಾಳಿಯಲ್ಲಿ ಆಡುತ್ತಿದ್ದ ನವಾಬನ ಮಗನು ಅಲ್ಲೇ ಇದ್ದ ಹುತ್ತವೊಂದನ್ನು ಕೆದರಲು, ಅದರಲ್ಲಿದ್ದ ಹಾವು ಕಚ್ಚಿ ಚಿಟ್ಟೆಂದು ಚೀರಿದನು. ನವಾಬನೂ, ಬೇಗಮರೂ ಗಾಬರಿಗೊಂಡು—ಏನು ಗತಿಯೆಂದು ತಲ್ಲಣಿಸುತ್ತಿರುವಷ್ಟರಲ್ಲಿ ಜನಸಂದಣಿ ಸೇರಿತು. ಬಾಲಕನು ಮೂರ್ಛೆಗೊಂಡು ಬಿದ್ದಿದ್ದನು. ಜನರು ಓಡಾಟದಲ್ಲಿ ಕಾಲ ಕಳೆಯುತ್ತಾ ಅನ್ಯ ಏನೂ ತಿಳಿಯದೆ ಹಾಹಾಕಾರಪಡುತ್ತಿರುವ ಸಮಯದಲ್ಲಿ ಸ್ವಾಮಿಗಳು ಇದೇನು ಗದ್ದಲವೆಂದು ಕೇಳಿ, ಮೇನೆಯಿಂದಿಳಿದು ಬಂದರು. ಕಾಷಾಯ ವಸ್ತ್ರಧಾರಿಗಳನ್ನು ಕಂಡ ನವಾಬನು ವಂದಿಸಿ, ಸಂಗತಿಯನ್ನು ತಿಳಿಸಿದನು. ಸ್ವಾಮಿಗಳು ದಯದೋರಿದ್ದರಿಂದ ಧ್ಯಾನಮಾನಸರಾಗಿ, ಗರುಡಮಂತ್ರ

ಪುರಶ್ಚರಣೆಯಿಂದ ವಿಷಬಾಧೆಯನ್ನು ಪರಿಹರಿಸಿ ಮಂತ್ರಪೂತವಾದ ಉದಕವನ್ನು ಆ ಕುಮಾರನ ಬಾಯಲ್ಲಿ ಹಾಕಿಸಿದರು. ಕುಮಾರನು ಬದುಕಿ ಮೇಲಕ್ಕೆದ್ದನು. ರಾಣಿಯರಿಗೂ ನವಾಬನಿಗೂ ಪರಮಾನಂದವಾಯಿತು. ಆ ತೋಪಿನಲ್ಲೇ ಸ್ವಾಮಿಗಳ ಸತ್ಕಾರವಾಗಬೇಕೆಂದು ಸಕಲ ಸಾಧನಗಳನ್ನೂ ಸಿದ್ಧಗೊಳಿಸಿಕೊಟ್ಟು-ಅವರ ಪರಿವಾರದವರನ್ನೂ ಕರೆಸಿ ಆದರಿಸಿದನು. ಸ್ವಾಮಿಗಳವರು ತನಗೆ ಮಾಡಿದ ಮಹೋಪಕಾರದ ಕೃತಜ್ಞತೆಗಾಗಿ ಕೃಷ್ಣಾಪುರ ಮೊದಲಾದ ಹನ್ನೆರಡು ಗ್ರಾಮಗಳ ಜಹಗೀರು ಕೊಟ್ಟನು. [ಈ ಜಹಗೀರು ತಾಮ್ರಶಾಸನದಿಂದ ಸಕಾರಣವಾಗಿ ಗೊತ್ತಾಗುವುದು. ಕಂಪೆನಿಯ ಸರ್ಕಾರ ಬಂದಾಗ, ಆ ಗ್ರಾಮಗಳು ಮಠದ ಅನುಭವದಿಂದ ಕೈಬಿಟ್ಟುಹೋದುವು].

ಜಲನಿರ್ಮಾಣ

ಅನಂತರ ಒಮ್ಮೆ ಸಂಚಾರ ಕಾಲದಲ್ಲಿ ನೀರು ನೆರಳಿಲ್ಲದ ಮಾರ್ಗಮಧ್ಯದಲ್ಲಿ ಮಠದ ಶೂದ್ರಸೇವಕನೊಬ್ಬನ ಹೆಂಡತಿಗೆ ಪ್ರಸವವೇದನೆಯಾಗಲು, ಸ್ವಾಮಿಗಳು ಶಾಟಿಯನ್ನು ಆಕೆಯಮೇಲೆ ಅಂತರಾಳದಲ್ಲಿ ನಿಲ್ಲುವಂತೆ ಮಾಡಿ ತನ್ಮೂಲಕ ನೆರಳನ್ನು ಕಲ್ಪಿಸಿಕೊಟ್ಟು, ತಮ್ಮ ದಂಡದಿಂದ ದಿವ್ಯ ಸ್ವಾದೂದಕ ಕುಂಡವನ್ನು ನಿರ್ಮಿಸಿ, ಆ ದೀನರನ್ನು ಸಲಹಿದರು.

[ಇಂತಹ ಮಹಿಮೆಗಳು ಶ್ರೀ ರಾಘವೇಂದ್ರ ಗುರುವರ್ಯರ ಚರಿತ್ರೆಯಲ್ಲಿ ಹೇರಳವಾಗಿರುವುವು. ಸಂಸ್ಕೃತದಲ್ಲಿ ಕಾವ್ಯವಾಗಿ ಬರೆದಿಟ್ಟವರು-ಏನೋ ಹೊಂದಿಸಿ ಬರೆದಿರಬಹುದೆಂದು ಹೇಳಲು ಅವಕಾಶವಿಲ್ಲ. ವೇದದಲ್ಲಿ, ಗೀತೆಯಲ್ಲಿ, ಆಚಾರ್ಯರುಗಳ ವಾಕ್ಯದಲ್ಲಿ ಯಾವ ಬಗೆಯ ಪ್ರಮಾಣಬುದ್ಧಿಯಿರುವುದೋ ಹಾಗೆ ಅಪರೋಕ್ಷಿಗಳಾದ ಹರಿದಾಸರ ಮಾತಿನಲ್ಲೂ ನಮ್ಮವರಿಗೆ ಪ್ರಮಾಣಬುದ್ಧಿಯಿದೆ. ಆದುದರಿಂದ ಯಾವುದನ್ನೂ ತಿರಸ್ಕರಿಸುವಂತಿಲ್ಲ. ನಮ್ಮ ಕಾಲದ ಹರಿದಾಸ ನಾಮಧಾರಿಗಳನ್ನು ನೋಡಿ ಹಿಂದಿನವರೂ ಹೀಗೆಯೇ ಇದ್ದರೇನೋ ಎಂದು ಭಾವಿಸುವುದು ಉಚಿತವಲ್ಲ. ರಾಘವೇಂದ್ರ ಸ್ವಾಮಿಗಳವರ ಜೀವಿತಕಾಲದ ಮಾತಿರಲಿ! ಅವರು ಬೃಂದಾವನಸ್ಥರಾಗಿ ಇನ್ನೂರೈವತ್ತು ವರ್ಷಗಳ ಮೇಲಾಗಿದ್ದರೂ, ಅಂದಿನಿಂದ ಇಂದಿನವರೆಗೆ ಸೇವೆಮಾಡುವವರ ಮತ್ತು ಇಷ್ಟಾರ್ಥಪಡೆಯುವವರ ಅನುಭವಗಳನ್ನು ಕೇಳಿದರೆ ಅಥವಾ ಆ ಸ್ಥಳದಲ್ಲಿ ಪ್ರತ್ಯಕ್ಷ ನೋಡಿದರೆ, ಪರಮಪಾಪಿಗೂ ಆಶ್ಚರ್ಯವೆನಿಸದಿರುವುದಿಲ್ಲ-ಅಗಾಧವೆನಿಸಿ ಪೂಜ್ಯಬುದ್ಧಿಯುಂಟಾಗದಿರುವುದಿಲ್ಲ.]

ಒಂದು ಮಧ್ಯಾಹ್ನ ಶಿಷ್ಯರಿಗೆ ಪಾಠ ಹೇಳುತ್ತಿರುವಾಗ ಕುಸುಮವರ್ತಿಯ ಕೃಷ್ಣದ್ವೈಪಾಯನ ಸ್ವಾಮಿಗಳು ಅರ್ಚಿರಾದಿ ಮಾರ್ಗದಿಂದ ವೈಕುಂಠಗಮನ ಮಾಡುತ್ತಿರುವುದನ್ನು ಜ್ಞಾನದೃಷ್ಟಿಯಿಂದ ಕಂಡು, ಶ್ರೀ ರಾಘವೇಂದ್ರಸ್ವಾಮಿಗಳು ಎದ್ದುನಿಂತು-'ನಾವು ಯಾವಾಗ?' ಎಂದು ಪ್ರಶ್ನೆಮಾಡಿದರು. [ಅಂದು ಶಾ. ಶ. ೧೫೯೧ ಜ್ಯೇಷ್ಠ ಶು. ೧೫] ಕೃಷ್ಣದ್ವೈಪಾಯನರು, ಕೈಬೆರಳ ಸಂಕೇತದಿಂದ ಎರಡುವರ್ಷ, ಎರಡು ತಿಂಗಳು,

ಎರಡು ದಿವಸವೆಂಬರ್ಥದ್ಯೋತಕವಾಗುವಂತೆ ಸಂಜ್ಞೆ ಮಾಡಿದರು. ರಾಘವೇಂದ್ರರು, ಬಾಯಿಯಿಂದ ಇನ್ನೂ ಎರಡುವರ್ಷ, ಎರಡು ತಿಂಗಳು, ಎರಡು ದಿವಸವೇ ಎಂದುಚ್ಚರಿಸಿ, ನಮಸ್ಕಾರಮಾಡಿ ಕುಳಿತರು. ಓದುತ್ತಿದ್ದ ಶಿಷ್ಯರು, ಇದೇನು ಸಮಾಚಾರವೋ ಕರುಣಿಸ ಬೇಕೆಂದು ಪ್ರಾರ್ಥಿಸಿದರು. ಸ್ವಾಮಿಗಳು–'ಮತ್ತೇನಿಲ್ಲ, ಕೃಷ್ಣದ್ವೈಪಾಯನರು ಪರಂ ಧಾಮವೈದಿದರು. ನಮ್ಮ ಅವಧಿಯನ್ನು ಬೆರಳ ಸಂಜ್ಞೆಯಿಂದ ತಿಳಿಸಿದರು; ಅಷ್ಟೆ!' ಎಂದರು. ಒಡನೆ ಉತ್ತರ ರಾಂತಿ ಹೇಳಿ, ನಾಳೆ ಆ ಮಹಾನುಭಾವರ ಪುಣ್ಯತಿಥಿಯ ನ್ನಾಚರಿಸಬೇಕೆಂದು ಆಜ್ಞೆಗೈದರು.

ಹೀಗೆ ವಿಭವಮಯವಾದ ಸ್ವಾಮಿಗಳ ಸಂಚಾರ ಬೆಳೆಯಿತು. ಪೂರ್ವಪರಿಚಿತ ನಾದ ವೆಂಕಣ್ಣನು ಹೇಗಿರುವನೋ ನೋಡೋಣವೆಂದು ಶ್ರೀ ರಾಘವೇಂದ್ರರು ಅದವಾನಿಗೆ ದಯಮಾಡಿಸಿದರು. ಶ್ರೀ ಶ್ರೀಗಳವರ ಆಗಮನ ವಾರ್ತೆಯನ್ನು ಕೇಳಿ ದಿವಾನ ವೆಂಕಣ್ಣನು ಸಕಲ ರಾಜವೈಭವಗಳಿಂದ ಸ್ವಾಮಿಗಳನ್ನು ಎದುರುಗೊಂಡು ತನ್ನ ಮನೆಯ ಲ್ಲಿಳಿಸಿಕೊಂಡು ಸತ್ಕಾರಮಾಡಿದನು. ಸ್ವಾಮಿಗಳು–'ಏನು ದಿವಾನರೆ, ಈ ಪದವಿ ನಿಮಗೆ ಹೇಗೆ ಬಂತು?' ಎಂಬುವಾಗಿ ಕೇಳಿದರು. ವೆಂಕಣ್ಣನು–'ಎಲ್ಲಾ ಮಹಾಸ್ವಾಮಿಗಳವರ ಚರಣಾನುಗ್ರಹ' ಎಂದುತ್ತರಕೊಟ್ಟನು. ಸ್ವಾಮಿಗಳು–'ನಿಮ್ಮ ಯೋಗ್ಯತೆ ದೊಡ್ಡದು; ದೇವರ ಕೃಪೆಯಾಯಿತು' ಎಂದರು. ವೆಂಕಣ್ಣನು–'ಶ್ರೀಪಾದಾನುಗ್ರಹವಿರದಿದ್ದರೆ ನನ್ನ ಯೋಗ್ಯತೆ–ನಮ್ಮ ಮಾವ ಹೇಳಿದಂತೆ ದನಾಕಾಯುವ ದೊಡ್ಡಯೋಗ್ಯತೆ' ಎಂದು ಉತ್ತರ ಕೊಟ್ಟನು. ವೆಂಕಣ್ಣನ ಪೂರ್ವಸ್ಮರಣೆಯನ್ನೂ, ಕೃತಜ್ಞತೆಯನ್ನೂ ಕಂಡು ಸ್ವಾಮಿಗಳು ಸಂತುಷ್ಟರಾದರು.

ಮಹಾನುಭಾವರಾದ ಇಂಥಾ ಗುರುಗಳ ದರ್ಶನಮಾಡಿ, ತನ್ನ ನವಾಬನಾದ ಸಿದ್ದಿಮಸೂದಖಾನನೂ ಕೃತಾರ್ಥನಾಗಲಿ ಎಂಬ ಆಸೆ ವೆಂಕಣ್ಣನ ಮನಸ್ಸಿನಲ್ಲಿ ಉಂಟಾ ಯಿತು. 'ಹುಜೂರ್ ತ್ರಿಕಾಲಜ್ಞರಾದ ಮಹಾತ್ಮರು, ತಮ್ಮ ಸೇವಕನ ಮನೆಗೆ ದೈವ ಯೋಗದಿಂದ ಬಂದಿಳಿದಿರುವರು; ಅವರ ಮಹಿಮೆ ಅಪಾರವಾದದ್ದು, ಅವರ ಅನುಗ್ರಹ ಬಲದಿಂದಲೇ ನನಗೆ ಈ ಪದವಿ ದೊರೆಯಿತು. ತಾವೂ ಅವರ ದರ್ಶನ ಮಾಡಬೇಕೆಂದು ನನ್ನ ಅಪೇಕ್ಷೆ' ಎಂದು ವಿಜ್ಞಾಪಿಸಿದನು. ಅದನ್ನು ಕೇಳಿದ ಒಣಗರ್ವದ ಆಸದುಲ್ಲನು– 'ಆಗಲಿ ವೆಂಕಣ್ಣಾ, ನಿಮ್ಮ ಗುರುಗಳ ದೊಡ್ಡಸ್ತಿಕೆಯನ್ನು ನಾನೇ ಬಂದು ಪರೀಕ್ಷೆ ಮಾಡು ತ್ತೇನೆ. ನಿಮ್ಮ ಗುರುಗಳು ಸಿದ್ಧರಾಗಿರಲಿ' ಎಂದು ಹೇಳಿ ಕಳುಹಿಸಿದನು. ನವಾಬನ ಈ ತಿರಸ್ಕಾರ–ಘೋಷಣೆಯು ಮಾತ್ರ ವೆಂಕಣ್ಣನಿಗೆ ಹಿತವಾಗಲಿಲ್ಲ. ಅತೃಪ್ತನಾಗಿ, ನಾನು ನಮ್ಮಸಿರುವ ಈ ನರರಾಕ್ಷಸನನ್ನೇಕೆ ಕರೆದೆನೋ ಎಂದು ವ್ಯಸನಪಟ್ಟನು. ಬರುವೆನೆಂದ ಮೇಲೆ ರಾಜಯೋಗ್ಯವಾದ ತಕ್ಕ ಸಿದ್ಧತೆ ಮಾಡದಿದ್ದರೆ ತೀರದು! ಮರ್ಯಾದೆಗೆ ತಕ್ಕಂತೆ ತನ್ನ ಮನೆಯನ್ನು ಶೃಂಗರಿಸಿ, ಸ್ವಾಮಿಗಳಿಗೆ ನಡೆದ ಸಂಗತಿಯನ್ನು ತಿಳಿಸಿದನು. ನವಾ ಬನು ಸಾಯಂಕಾಲವಾಗುತ್ತಲೇ–ಬೇಕೆಂದು ಒಂದು ತಟ್ಟೆಯ ತುಂಬ ಕುರಿಯ ಮಾಂಸ ವನ್ನು ತುಂಬಿಸಿಕೊಂಡು, ಕಿನ್‌ಕಾಬಿನ ಮುಸುಗುಹಾಕಿಸಿದ ಆ ತಟ್ಟೆಯನ್ನು ಸೇವಕರಿಂದ

ತೆಗೆಸಿಕೊಂಡು ಸ್ವಾಮಿಗಳ ದರ್ಶನಕ್ಕೆಂದು ಬಂದನು. ವೆಂಕಣ್ಣನು ತಟ್ಟೆಯನ್ನು ನೋಡಿ, ಗುರುಗಳ ಗೌರವಕ್ಕೆ ತಕ್ಕ ಕಾಣಿಕೆಯನ್ನು ತಂದಿರಬೇಕೆಂದುಕೊಂಡು ಸಂತೋಷಪಟ್ಟು, ಸ್ವಾಮಿಗಳು ಕೂಡುವ ಸಿಂಹಾಸನದೆದುರಿಗೆ ಮಣೆಯಮೇಲಿಡಿಸಿದನು. ಖಾನನೂ ಉಚಿತ ವಾದ ಒಂದು ಉನ್ನತಾಸನದಲ್ಲಿ ಮಂಡಿಸಿದನು. ಖಾನನ ಕೃತ್ರಿಮವನ್ನರಿತ ಸ್ವಾಮಿಗಳು ಮುಗುಳ್ನಗೆ ನಗುತ್ತಾ, ಒಡ್ಡೋಲಗಕ್ಕೆ ಬಂದು ತಮ್ಮ ದಿವ್ಯಾಸನದಲ್ಲಿ ಕುಳಿತರು. ಎಲ್ಲರೂ ಪ್ರಣಾಮಮಾಡಲು ನವಾಬನೂ ತನ್ನ ಪದ್ಧತಿಯಂತೆ ಸಲಾಂ ಮಾಡಿದನು. ಸ್ವಾಮಿಗಳು ನವಾಬನ ಕುಶಲಪ್ರಶ್ನೆಮಾಡಿದರು. ಖಾನನು ತಟ್ಟೆಯನ್ನು ತೋರಿಸಿ, ನನ್ನ ಬಡಸೇವೆಯನ್ನು ಸ್ವೀಕರಿಸಬೇಕೆಂದನು. ಸ್ವಾಮಿಗಳು–'ಆಹಾ ಆಗಬಹುದು, ನೀವಿರುವುದೇ ನಮಗಿಂಥಾ ಸೇವೆ ಮಾಡುವುದಕ್ಕೆ!' ಎಂದು ಪರಿಚಾರಕನ ಕಡೆ ತಿರುಗಿ, 'ನವಾಬರು ನೈವೇದ್ಯಕ್ಕೆ ತಂದಿದ್ದಾರೆ! ನೀರು ತಾರೆ'ಂದರು. ಪರಿಚಾರಕನು, ಕಮಂಡು ಲೋದಕವನ್ನು ಸ್ವಾಮಿಗಳವರ ಹಸ್ತಕ್ಕೆ ಬಗ್ಗಿಸಿದನು. ಸ್ವಾಮಿಗಳು, ಆ ತಟ್ಟೆಯಮೇಲೆ ಉದಕಪ್ರೋಕ್ಷಣೆಮಾಡಿ–'ನಿಮ್ಮ ಸೇವೆ ದೇವರಿಗೆ ಮುಟ್ಟಿತು' ಎಂದು ನುಡಿದು, ದೀವಟಿಗ ನನ್ನು ಕರೆದು–'ಮುಸುಗು ತೆಗೆ' ಎಂದರು. ದೀಪಧಾರಿಯು ತಟ್ಟೆಯ ಕಿಂಕಾಬಿನ ಮುಸುಗು ತೆಗೆದನು. ಎಲ್ಲವೂ ಫಲ ಪುಷ್ಪಗಳಾಗಿದ್ದುವು. ಪ್ರತ್ಯಕ್ಷವಾಗಿ ಮಾಂಸವನ್ನು ತುಂಬಿಸಿಕೊಂಡು ತಂದಿದ್ದ ಆ ತಟ್ಟೆಯಲ್ಲಿ ದಿವ್ಯ ಫಲಗಳೂ ಪುಷ್ಪಗಳೂ ಇದ್ದುದನ್ನು ಕಂಡು ನವಾಬನು ಪರಮಾಶ್ಚರ್ಯಪಟ್ಟನು. ತನ್ನ ಮೋಸವು ಜ್ಞಾನಿಗಳಾದ ಸ್ವಾಮಿ ಗಳಿಗೆ ತಿಳಿಯಿತೆಂದು ಭಯಪಟ್ಟನು. ಎದ್ದು ಅಗಾಧ ನಮ್ರತೆಯಿಂದ ಬಗ್ಗಿ ಸಲಾಂ ಮಾಡಿ, ಅಹಂಕಾರದಿಂದ ತಮ್ಮನ್ನು ಪರೀಕ್ಷಿಸಿದ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿ ಕೊಂಡನು. ಸ್ವಾಮಿಗಳು ಮಂದಹಾಸದಿಂದಲೇ–'ನವಾಬರೇ, ನಿಮ್ಮಂಥಾ ರಾಜರಿದ್ದರೇ ನಮ್ಮಂಥಾ ಯತಿಗಳ ತೇಜಸ್ಸು ಗೊತ್ತಾಗಲು ಅವಕಾಶವುಂಟು. ನಿಮ್ಮ ತಪ್ಪೇನಿಲ್ಲ; ನಿಮ್ಮ ಸ್ವಭಾವಕ್ಕೆ ತಕ್ಕಂತೆ ನೀವು ಮಾಡಿದಿರಿ. ನಮ್ಮ ಸ್ವಭಾವಕ್ಕೆ ತಕ್ಕಂತೆ ನಾವು ಮಾಡಿದೆವು; ರಾತ್ರಿ ಭೋಜನಕ್ಕೆ ವೇಳೆಯಾಯಿತು. ತಾವು ಬಂದದ್ದು ನಮಗೆ ಭೂಷಣ!' ಎಂದು ಅದೇ ಫಲಪುಷ್ಪಗಳನ್ನೂ ರಾಜಯೋಗ್ಯವಾದ ಶಹಲು ಜೋಡಿ ಯನ್ನೂ ಮರ್ಯಾದೆಮಾಡಿ ಕಳುಹಿಸಿದರು.

ಅಸದುಲ್ಲಾ ಖಾನನು ಸ್ವಾಮಿಗಳ ತಪಃಪ್ರಭಾವಕ್ಕೆ ಅದ್ಭುತಪಟ್ಟನು. ಕ್ಷಮಾ ಗುಣಕ್ಕೆ ಮನಸೋತನು. ದಿವಾನನನ್ನು ಜೊತೆಗೇ ಕರೆದುಕೊಂಡು ಅರಮನೆಗೆ ಹೋದನು.–'ಈ ಮಹಾನುಭಾವರಿಗೆ ಏನು ಸೇವೆಮಾಡಿ ಪಾಪವನ್ನು ಕಳೆದುಕೊಳ್ಳಲಿ? ಆದವಾನಿಯನ್ನೇ ಕೊಟ್ಟು ಅವರ ಅನುಗ್ರಹ ಪಡೆಯಲೇ! ಏನಾದರೂ ಸರಿ, ಅವರ ಅನುಗ್ರಹವಾದರೆ ಸಾಕು' ಎಂದುಕೊಂಡು ತನ್ನ ಮನಸ್ಸಿನ ಕಳವಳವನ್ನು ವೆಂಕಣ್ಣನಿಗೂ ತಿಳಿಸಿ–ಏನು ಹೇಳುವರೋ ತಿಳಿದುಬಾರೆಂದು ಆತನನ್ನು ಕಳುಹಿಸಿದನು.

ನವಾಬನಿಗೆ ಅನ್ನೋದಕಗಳು ಬೇಡವಾದುವು. ಜನ್ಮಪ್ರಭೃತಿ ಮಾಡಿದ

ಕ್ರೂರ ಕೃತ್ಯಗಳ ನೆನಪಾಗಿ ಬಾಳು ಗೋಳೆನಿಸಿತು. ಸ್ವಾಮಿಗಳನ್ನು ನೋಡಿದಾಗಿನಿಂದ ಅವರ ಭಾವವೇ ಅವನ ಮನಸ್ಸಿನಲ್ಲಿ ನಿಂತಿತು.

ವೆಂಕಣ್ಣನು ನವಾಬನ ವಿಜ್ಞಾಪನೆಯನ್ನು ಸ್ವಾಮಿಗಳಿಗೆ ತಿಳಿಸಿದನು. ಸ್ವಾಮಿಗಳು–ಮಂಚಾಲಿಯ ಕಾಡುಪ್ರದೇಶವನ್ನು ಕೊಟ್ಟರೆ ಸಾಕೆಂದರು. ವೆಂಕಣ್ಣನು, ಒಳ್ಳೆ ಜಹಗೀರನ್ನು ಕೇಳಿದರಾದೀತೆಂದನು. ಸ್ವಾಮಿಗಳು ಮಂಚಾಲೆಯೊಂದೇ ಸಾಕೆಂದರು. ಕಾರಣವೇನೆಂದು ವೆಂಕಣ್ಣನು ಒತ್ತಿ ಒತ್ತಿ ಕೇಳಲು–'ಪೂರ್ವದಲ್ಲಿ ಪ್ರಹ್ಲಾದನಾಗಿದ್ದವನು ನಾನು. ಅಲ್ಲಿರುವ ಮಂಚಾಲಮ್ಮ ನಮ್ಮ ಕುಲದೇವತೆ. ಆ ಸ್ಥಳದಲ್ಲಿ ಅನೇಕ ಯಜ್ಞಗಳನ್ನು ಮಾಡಿದ್ದೆನು. ಯಜ್ಞಕುಂಡವಿದ್ದ ಸ್ಥಳದಲ್ಲೇ ಬೃಂದಾವನವಾಗಬೇಕೆಂಬುದು ನನ್ನ ಅಪೇಕ್ಷೆ! ತಿಳಿಯಿತೇ ನನ್ನ ಆಶೆ!' ಎಂದರು. ಈ ರಹಸ್ಯ ತಿಳಿದ ವೆಂಕಣ್ಣ ಮರು ಮಾತಾಡಲಿಲ್ಲ. ನವಾಬನಿಗೂ ಮಂಚಾಲೆಯಂಥಾ ಒಂದು ಕಾಡು ಸ್ಥಳವನ್ನು ಕೊಡುವುದರಿಂದ ಪೂರ್ಣಸೇವೆಯಾಗುವುದಿಲ್ಲವೆನ್ನಿಸಿತು. ಆದರೂ ಅದು ಸ್ವಾಮಿಗಳವರ ಇಚ್ಛೆಯಾಗಿದ್ದುದರಿಂದ ಯಾರೂ ಪ್ರತಿ ಹೇಳಲು ಸಾಧ್ಯವಿರಲಿಲ್ಲ. ಮಂಚಾಲೆಯು ಆ ಕಾಲದಲ್ಲಿ ಒಬ್ಬ ಫಕೀರನ ಜಹಗೀರಿಗೆ ಸೇರಿತ್ತು. ರಾಜಾಜ್ಞೆಯಿಂದ ವೆಂಕಣ್ಣನು ಆ ಸ್ಥಳವನ್ನು ಮಠಕ್ಕೆ ಬಿಡಿಸಿಕೊಟ್ಟನು. ರಾಜನ ಖರ್ಚಿನಿಂದಲೇ ಮಠ ಮೊದಲಾದುವುಗಳನ್ನು ಕಟ್ಟಿಸಲು ಸ್ವಾಮಿಗಳೊಡನೆ ವೆಂಕಣ್ಣನೂ ಮಂಚಾಲೆಗೆ ಬಂದನು.

ಶ್ರೀ ರಾಘವೇಂದ್ರರು ಮಂತ್ರಾಲಯ (ಮಂಚಾಲೆ) ವನ್ನು ಸೇರಿದೊಡನೆಯೇ ಮೊದಲು ಕುಲದೇವಿ ಮಂಚಾಲಮ್ಮನ ದರ್ಶನಮಾಡಿದರು. ತಾವು ಅಲ್ಲೇ ವೃಂದಾವನಸ್ಥರಾಗಿರಬೇಕೆಂಬ ಅಭಿಲಾಷೆಯನ್ನು ದೇವಿಗೆ ವಿಜ್ಞಾಪಿಸಿದರು. ಭಕ್ತಾಗ್ರಣಿಯನ್ನು ನೋಡಿ, ನಿಜರೂಪದಿಂದ ದೇವಿಯು ಹೀಗೆ ನುಡಿದಳು:–'ಯತಿರಾಜಾ, ಸಕಲ ಜಗನ್ನಿಯಾಮಕನೇ ನಿನ್ನ ಅನನ್ಯ ಭಕ್ತಿಗೆ ವಶನಾಗಿ ಸ್ತಂಭದಿಂದವತರಿಸಿ ಬಂದು ದುಷ್ಟ ಹಿರಣ್ಯಕನನ್ನು ಸದೆಬಡಿದನು. ನಿನ್ನಲ್ಲಿ ತೋರಿಸಿರುವ ದಯೆಯನ್ನು, ಭಗವಂತನು ಮತ್ತ್ಯಾವ ಭಕ್ತರಲ್ಲೂ ಮತ್ತ್ಯಾವ ಅವತಾರದಲ್ಲೂ ತೋರಿಸಿಲ್ಲವು. ಬೃಂದಾವನದಲ್ಲಿ ನೀನಿದ್ದು, ಭಕ್ತಜನರ ಸಕಲ ಕೋರಿಕೆಗಳನ್ನೂ ಸಲ್ಲಿಸಿ ಕೀರ್ತಿವಂತನಾಗು. ನನ್ನ ಕ್ಷೇತ್ರದ ಹೆಸರು ಮರೆಯದಂತೆ ನನ್ನ ಪ್ರಿಯಲಾಂಛನವಾದ ಮೇಷ ಮಸ್ತಕವನ್ನು ಮಹಾದ್ವಾರದಮೇಲೆ ಪ್ರತಿಷ್ಠಿಸು. ಆ ಲಾಂಛನವು ಸಕಲ ಆಸುರೀಶಕ್ತಿಯನ್ನೂ ಗೆಲ್ಲುವುದು.'

ವೆಂಕಣ್ಣನು ರಾಜಾಜ್ಞೆಯಂತೆ ಸುಸ್ಥಾನವಾಸಕ್ಕೆ ತಕ್ಕ ಮಠವನ್ನು ಕಟ್ಟಿಸಿದನು. ಅಸದುಲ್ಲನು ಸ್ವಾಮಿಗಳ ಅಚ್ಛಿನ್ನಭಕ್ತನಾಗಿ ಆಗಾಗ ಗುರುದರ್ಶನಕ್ಕೆ ಬರುತ್ತಿದ್ದನು. ಸತ್ಸಹವಾಸದ ಬಲದಿಂದ ಅವನ ದುರಾಚಾರದ ಪದ್ಧತಿ ದೂರವಾಯಿತು. ಸಂಸ್ಥಾನಕ್ಕೆ ಬೇಕಾದುದನ್ನೆಲ್ಲಾ ತನ್ನ ಖರ್ಚಿನಿಂದಲೇ ಮಾಡುವಂತೆ ದಿವಾನನಿಗೆ ಕಟ್ಟಪ್ಪಣೆ ಮಾಡಿದ್ದನು.

ವೆಂಕಣ್ಣನು ಸ್ವಾಮಿಗಳ ಅಪ್ಪಣೆಯಂತೆ ವಿವಿಧ ವಿದ್ಯಾವಿಶಾರದರಾದ ಅರುವತ್ತು

ಶ್ರೋತ್ರಿಯ ಕುಟುಂಬಗಳಿಗೆ ವಾಸಯೋಗ್ಯವಾದ ಅಗ್ರಹಾರವನ್ನು ಕಟ್ಟಿಸಿ, ವೃತ್ತಿಗಳನ್ನೇರ್ಪಡಿಸಿದನು. ಬೃಂದಾವನದಲ್ಲಿಡಲು ಏಳುನೂರು ಸಾಲಿಗ್ರಾಮಗಳ ಸಂಗ್ರಹವಾಯಿತು. ಸ್ವಾಮಿಗಳ ಬೃಂದಾವನಪ್ರವೇಶಕ್ಕೆ ಬೇಕಾದ ಸಿದ್ಧತೆಗಳಾದುವು. ಶಾಲಿವಾಹನಶಕ ೧೫೯೩ನೇ ಶ್ರಾವಣ ಬಹುಳ ದ್ವಿತೀಯಾ ಗುರುವಾರವು ಶುಭದಿನವೆನಿಸಿತು. ಮುಂದಿನ ಮಠ ರಾಜ್ಯಭಾರಕ್ಕೆ ಯೋಗೀಂದ್ರರು ನಿಯಮಿತರಾದರು. ಸ್ವಾಮಿಗಳು ಬೃಂದಾವನ ಪ್ರವೇಶಮಾಡುವುದು ಎಲ್ಲರಿಗೂ ವ್ಯಸನವನ್ನುಂಟುಮಾಡಿತು. ದಿವಾನ ವೆಂಕಣ್ಣನ ದುಃಖ ಹೇಳತೀರದಾಯಿತು. ಗುರುಗಳೆದುರಿಗೆ ನಿಲ್ಲುವುದು, ಕಣ್ತುಂಬಿ ಮರೆಯಾಗುವುದು, ಇಷ್ಟರಲ್ಲೇ ಆಗಿಹೋಯಿತು. ಸ್ವಾಮಿಗಳು ಬೃಂದಾವನಸ್ಥರಾದ ಮೇಲೆ ಹೇಗೆ ಜೀವಿಸಿರಬೇಕೆಂದು ಚಿಂತಿಸಿದನು. ಶಿಷ್ಯರೊಬ್ಬೊಬ್ಬರೂ ಜೀವಂತರಾಗಿರುವಾಗಲೇ ಬೃಂದಾವನ ಪ್ರವೇಶವೇಕೆಂದು ಆಕ್ಷೇಪಣೆಯನ್ನೆತ್ತಿದರು. ಸತ್ತವರನ್ನು ಬದುಕಿಸುವ ಮಹಾನುಭಾವರಿಗೆ ಬೃಂದಾವನವೇಕೆಂದರು. ಜ್ಯೋತಿಷ್ಕರ ಮಾತಿನಂತೆ ಏಳುನೂರು ವರ್ಷ ಆಯುಸ್ಸಿರುವಾಗ ನಮ್ಮನ್ನು ಪರದೇಶಿಗಳನ್ನಾಗಿಮಾಡಿ, ತಾವು ಮಾತ್ರ ಮುಕ್ತರಾಗುವ ಪ್ರಸಂಗವೇಕೆಂದರು. ಒಟ್ಟುಗೂಡಿ ನಿಂತು, ತಮ್ಮ ಅಪರಾಧಗಳೇನಿದ್ದರೂ ಕ್ಷಮಿಸಿ ಬೃಂದಾವನದ ಯೋಚನೆಯನ್ನು ಬಿಡಿರೆಂದು ಬೇಡಿಕೊಂಡರು.

ಸ್ವಾಮಿಗಳು, ಅವರ ಪ್ರಾರ್ಥನೆಯನ್ನು ಲಾಲಿಸಿ, ದಯಾರ್ದ್ರಹೃದಯರಾಗಿ, ಎಲ್ಲರನ್ನೂ ಸಮುಖದಲ್ಲಿ ಕೂಡಿಸಿಕೊಂಡು,–'ಕೇಳಿ, ಬೃಂದಾವನ ಪ್ರವೇಶದಿಂದ ಬಾಧೆಯಾದೀತೆಂದು ಭಯಪಡಬೇಡಿ. ಏಳುನೂರು ವರ್ಷಗಳವರೆಗೆ ನಮ್ಮ ದೇಹಕ್ಕೆ ಹಾನಿಯಿಲ್ಲ. ದೇಹ ಬಿಡುವುದಾದರೂ ನಮ್ಮ ಇಚ್ಛೆಯಲ್ಲಿದೆ; ನಿಮ್ಮ ಭಕ್ತಿಗೆ ತಕ್ಕಂತೆ ಸ್ವಪ್ನದಲ್ಲಿ ದರ್ಶನ ಕೊಡುವೆವು. ಕ್ಷಮೆ ಬೇಡಲು ನಿಮ್ಮಲ್ಲಿ ಅಪರಾಧವೇನಿಲ್ಲ. ಭಕ್ತಿಯಿಂದ ಮಾಡಿದ ಸೇವೆಗೆ ಮುಕ್ತಿಯೇ ನಿಮಗೆ ಫಲ. ಮುಕ್ತಿಯೋಗ್ಯರಾಗಿರದಿದ್ದರೆ ಮೂಲರಾಮನು ಇಷ್ಟುಕಾಲ ನಿಮ್ಮಿಂದ ಸೇವೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಲೋಕಚಿಂತೆಯನ್ನು ಕಟ್ಟಿಕೊಂಡಿರುವ ನಮಗೆ ನಿಮ್ಮ ಕಲ್ಯಾಣಚಿಂತನೆಯಿಲ್ಲವೆ? ನಮ್ಮನ್ನು ಸೇವಿಸಿದಂತೆಯೇ ಯೋಗೀಂದ್ರರನ್ನೂ ಸೇವಿಸಿ ಕೃತಾರ್ಥರಾಗಿರಿ; ವ್ಯಸನವನ್ನು ಬಿಡಿರಿ' ಎಂದು ಸಮಾಧಾನಮಾಡಿದರು.

ಕ್ಷೇತ್ರ ರಕ್ಷಣೆಗಾಗಿ ಸ್ವಾಮಿಗಳು ಅಷ್ಟದಿಕ್ಕುಗಳಲ್ಲೂ ದೇವತಾಮೂರ್ತಿಗಳನ್ನು ಸ್ಥಾಪಿಸಿದರು. ಬೃಂದಾವನಕ್ಕೆ ಬೇಕಾದ ಶಿಲಾಕೆಲಸವು ಪ್ರಮಾಣವನುಸರಿಸಿ ಸಿದ್ಧವಾಯಿತು. ಶ್ರಾವಣ ಬಹುಳ ದ್ವಿತೀಯಾ ಗುರುವಾರ ಎಂದಿಗಿಂತಧಿಕವಾಗಿ ಮೂಲರಾಮನನ್ನು ಪೂಜಿಸಿ, ಸಂಸ್ಥಾನವನ್ನು ಯೋಗೀಂದ್ರರಿಗೆ ಒಪ್ಪಿಸಿಕೊಟ್ಟರು. ದೇವಿಯ ಆಜ್ಞೆಯಂತೆ, ಮೇಷಮಸ್ತಕ ಲಾಂಛನದಿಂದ ಚಿತ್ರಿತವಾಗಿದ್ದ ಮಹಾದ್ವಾರವನ್ನು ಪ್ರತಿಷ್ಠಿಸಿ, ಮೋಹರಿ ಮೃದಂಗಾದಿ ವಾದ್ಯಗಳು ಭೋರ್ಗರೆಯುತ್ತಿರಲು, ಅರುವತ್ತು ಮಂದಿ ಬ್ರಾಹ್ಮಣರು ವೇದಪಾರಾಯಣ ಮಾಡುತ್ತಿರಲು, ದಿವಾನ ವೆಂಕಣ್ಣನೇ ಮೊದಲಾದವರು ಕೈಮುಗಿಯುತ್ತಿರಲು, ಯೋಗೀಂದ್ರರು ಹಸ್ತಾವಲಂಬನ ಕೊಡುತ್ತಿರಲು, ಸಕಲ ರಾಜ

ಮರ್ಯಾದೆಗಳಿಂದ ಪ್ರತಿಷ್ಠಿತವಾಗಿದ್ದ ಶಿಲಾವರಣದಲ್ಲಿ, ಜಪಸರವನ್ನು ಕೈಕೊಂಡು, ಪೂರ್ವಾಭಿಮುಖರಾಗಿ, ಚಿನ್ಮುದ್ರಾಧಾರಿಗಳಾಗಿ, ಭಕ್ತಾಗ್ರಣಿಯಾದ ಮಾರುತಿಯನ್ನು ನೋಡುತ್ತಾ, ಶ್ವಾಸಗತಿಯನ್ನು ನಿರೋಧಿಸಿ, ಅರೆತೆರೆದ ಕಣ್ಣುಳ್ಳವರಾಗಿ, **ಶ್ರೀ ರಾಘವೇಂದ್ರತೀರ್ಥ ಶ್ರೀಪಾದಂಗಳವರು ಸಮಾಧಿಸ್ಥರಾದರು.**

ಅವಶಿಷ್ಟ ಭಾಗ

ಯೋಗೀಂದ್ರತೀರ್ಥರು ಪಟ್ಟಾಭಿಷಿಕ್ತರಾಗಿ ಪೀಠಾರೋಹಣ ಮಾಡಿದ ನಂತರ 'ಆದರ್ಶನಂತಸ್ಯಮೃತೇರ್ನಿದರ್ಶನಂ' ಎಂಬ ಆಚಾರ್ಯಸಂಪ್ರದಾಯದಂತೆ, ರಾಘವೇಂದ್ರಸ್ವಾಮಿಗಳವರ ಮಹಾ ಸಮಾರಾಧನೆಯನ್ನು ಮಾಡಿದರು. ಯಾವ ಸಮಯದಲ್ಲಿ ಸಂಪುಟಶಿಲೆಯನ್ನಿಡಬೇಕೆಂದು ಗುರ್ವಾಜ್ಞೆಯಾಗಿತ್ತೋ ಅದರಂತೆ ನಡೆಯಿತು. ಬೃಂದಾವನದಲ್ಲಿ ಏಳು ನೂರುವರ್ಷ ಮಹಿಮೆ ನಡೆಯುವುದೆಂಬುದಕ್ಕೆ ದ್ಯೋತಕವಾಗಿ ಸಂಗೃಹೀತವಾಗಿದ್ದ ಏಳು ನೂರು ಸಾಲಿಗ್ರಾಮಗಳು ಮೇಲ್ಭಾಗದಲ್ಲಿಡಲ್ಪಟ್ಟುವು. ದಿವಾನ ವೆಂಕಣ್ಣನು ತನ್ನ ಸರ್ವಸ್ವವನ್ನೂ ಗುರುಸೇವೆಗೆ ಸಮರ್ಪಿಸಿ ಪುಣ್ಯಭಾಗಿಯಾದನು. ಬೃಂದಾವನ ಪ್ರವೇಶ ಮಾಡಿದ ದಿನದಿಂದ ವಿಚಿತ್ರ ಮಹಿಮೆಗೆ ಪ್ರಾರಂಭವಾಯಿತು. ಮಧ್ವಮತದ ಇತಿಹಾಸದಲ್ಲಿ ಸಶರೀರರಾಗಿ ಬೃಂದಾವನ ಪ್ರವೇಶಮಾಡಿದ ಯತೀಶ್ವರರೆಂದರೆ ಮೊದಲನೆಯವರು ಶ್ರೀ ವಾದಿರಾಜರು; ಎರಡನೆಯವರೇ ಶ್ರೀ ರಾಘವೇಂದ್ರರು. ಇವರು ಕಾಮರೂಪಿಗಳಾದ ದೇವತೆಗಳಾಗಿರದಿದ್ದರೆ ಸಶರೀರಸಮಾಧಿ ಸಾಧ್ಯವಾಗುತ್ತಿರಲಿಲ್ಲ. ಪರಕಾಯಪ್ರವೇಶ ಮೊದಲಾದ ಮಹಾಯೋಗಸಾಧನೆಗಳು ಇಂಥವರಿಗಲ್ಲದೆ, ಸಾಮಾನ್ಯರಿಗೆ ಸಾಧಿಸುವುದಿಲ್ಲ.

ಆಂಗ್ಲೇಯರು ಭರತಖಂಡವನ್ನು ಪ್ರವೇಶಿಸಿದಾಗ, ಸರ್ ವಿಲಿಯಂ ಟೆಂಪಲ್ ಎಂಬಾತನು–'ಉಂಗುಷ್ಟಮಾತ್ರ ಭೂಸ್ಪರ್ಶದಿಂದ ಪಂಚಾಗ್ನಿ ಮಧ್ಯೆ ತಪಸ್ಸು ಮಾಡುವವರನೇಕರು ಭರತಖಂಡದಲ್ಲಿದ್ದಾರೆ. ಐನೂರು ಆರುನೂರು ವರ್ಷಗಳಾಗಿದ್ದರೂ ಮರಣವನ್ನು ಜೈಸಿ, ಕುಮಾರಾವಸ್ಥೆಯಲ್ಲಿರುವ ಯೋಗಿಗಳು ಗಂಗಾತೀರದಲ್ಲಿ ಹೇರಳವಾಗಿದ್ದಾರೆ. ಭರತಖಂಡವು ಮರಣವನ್ನು ಜೈಸಿದ ಪುಣ್ಯಾತ್ಮರ ದೇಶ, ಈ ದೇಶಕ್ಕೆ ಮಿಷನರಿಗಳು ಬಂದು ಮಾಡುವುದೇನಿದೆ?' ಎಂದು ಬರೆದಿಟ್ಟಿದ್ದಾನೆ. ಮಹಾರಾಯರು ಕಾಲಿಟ್ಟಾಗ ಹಾಗಿದ್ದ ದೇಶವು ಮೂರೇ ಶತಮಾನಗಳ ಅವಧಿಯಲ್ಲಿ ಮಾರ್ಪಟ್ಟು ಹೀಗಾಗಿರುವುದನ್ನು ನೋಡಿದರೆ, ವ್ಯತ್ಯಾಸವು ಸ್ವರ್ಗ ನರಕಗಳಷ್ಟಾಗಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಇದೇ ವೇಗದಲ್ಲಿ ಇನ್ನೊಂದು ಶತಮಾನ ಕಳೆದರೆ ಭರತಖಂಡದ ಕಥೆಯು ಐಗುಪ್ತದ ಮಮ್ಮಿಗಳ ಕಥೆಯಂತಾಗುವುದರಲ್ಲಿ ಸಂಶಯವಿಲ್ಲ.

ಶ್ರೀ ರಾಘವೇಂದ್ರಸ್ವಾಮಿಗಳವರು ಬೃಂದಾವನಸ್ಥರಾದ ಕಾಲದಲ್ಲಿ – ಅವರ ಮುಖ್ಯ ಶಿಷ್ಯರಾದ ಬಿಚ್ಚಾಲಿಯ (ಭಿಕ್ಷಾಲಯ–ಮಂತ್ರಾಲಯಕ್ಕೆ ಆರುಮೈಲು) ಅಪ್ಪಣ್ಣಾಚಾರ್ಯರೆಂಬುವರು ಊರಿನಲ್ಲಿರಲಿಲ್ಲ. ದೇಶಸಂಚಾರ ಮುಗಿಸಿಕೊಂಡು ಊರಿಗೆ ಬರು

ತ್ತಲೇ ಸಮಾಚಾರ ಕೇಳಿ, ಉತ್ಕಟವಾದ ಗುರುಭಕ್ತಿಯಿಂದ ಒಡನೆಯೇ ತುಂಗಭದ್ರೆಯಲ್ಲಿ ಸ್ನಾನಮಾಡಿ, ಗುರುಸ್ತೋತ್ರಮಾಡುತ್ತಾ, ನದಿಯ ಮಾರ್ಗದಲ್ಲೇ ಮಂತ್ರಾಲಯಕ್ಕೆ ಹೊರಟರು. **"ಶ್ರೀ ಪೂರ್ಣಬೋಧ ಗುರುತೀರ್ಥ ಪಯೋಬ್ಧಿಪಾರಾ"** ಎಂಬುದಾಗಿ ಪ್ರಾರಂಭವಾದ ದಿವ್ಯಸ್ತೋತ್ರವು-**ಯೋ ಭಕ್ತ್ಯಾ ಗುರುರಾಘವೇಂದ್ರ ಚರಣದ್ವಂದ್ವಂ ಸ್ಮರನ್ ಯಃ ಪಠೇತ್। ಸ್ತೋತ್ರಂ ದಿವ್ಯಮಿದಂ ಸದಾನಹಿಭವೇತ್ತಸ್ಯಾ ಸುಖಂ ಕಿಂಚನ ॥ ಕಿಂತ್ವಿಷ್ಟಾರ್ಥ ಸಮೃದ್ಧಿರೇವ ಕಮಲಾನಾಥ ಪ್ರಸಾದೋ ದಯಾತ್ । ಕೀರ್ತಿರ್ದಿಗ್ವಿಜಿತಾ ವಿಭೂತಿರತುಲಾ... ....** ೩೧

ಎನ್ನುವವರೆಗೆ ಹರಿದು ಬಂದು ದೇವಾಲಯ ಪ್ರವೇಶಮಾಡಿದ ಆಚಾರ್ಯರಿಗೆ ಬೃಂದಾವನ ದರ್ಶನವಾಗಿ, ವಾಙ್ನಿರೋಧವಾಗಿ ತಟಸ್ಥರಾಯಿತು. ಕಂಬನಿಗರೆಯುತ್ತಾ ಆಚಾರ್ಯರು ಅಡಿಗಡಿಗೆ ನಮಸ್ಕಾರಮಾಡುತ್ತಾ ನಿಜದರ್ಶನ ಬೇಡಿದರು. ಸ್ತೋತ್ರದಿಂದ ಸಂತುಷ್ಟರಾದ ಶ್ರೀ ರಾಘವೇಂದ್ರರು ದಿವ್ಯರೂಪದಿಂದ ದರ್ಶನವಿತ್ತದ್ದು ಮಾತ್ರವಲ್ಲದೆ,-'ಆಚಾರ್ಯ, ನಿನ್ನೀಸ್ತೋತ್ರವು ಭಗವದರ್ಪಿತವಾಗಿದೆ' ಎಂದು ಅಭಯವಿತ್ತು, ಮೇಲ್ಕಂಡ ಶ್ಲೋಕದಲ್ಲಿ ಪೂರ್ತಿಯಾಗದೆ ನಿಂತಿದ್ದ ಭಾಗವನ್ನು -**'ಸಾಕ್ಷೀ ಹಯಾಸ್ತೋತ್ರಹಿ'** ಎಂಬ ವಾಕ್ಯದಿಂದ ಪೂರ್ಣಮಾಡಿದರು.

ಅನಂತರ ಆಚಾರ್ಯರು ಸ್ತೋತ್ರವು ಪೂರ್ಣವಾಗಬೇಕೆಂದು-

ಇತಿ ಶ್ರೀರಾಘವೇಂದ್ರಾರ್ಯ ಗುರುರಾಜಪ್ರಸಾದತಃ
ಕೃತಂಸ್ತೋತ್ರಮಿದಂ ಪುಣ್ಯಂ ಶ್ರೀಮದ್ಭಿರಪ್ಪಣಾಭಿಧೈಃ ॥ ೩೨.

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥ ೩೩.

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ
ಶ್ರೀರಾಘವೇಂದ್ರ**ಗುರವೇ** ನಮೋತ್ಯಂತ ದಯಾಲುವೇ ॥ ೩೪.

ಎಂಬ ಶ್ಲೋಕಗಳನ್ನೂ ರಚಿಸಿ, ಸ್ಮರಣಶಕ್ತಿಯಿಂದ ಆದ್ಯಂತವಾಗಿ ಬರೆದಿಟ್ಟರು.

ರಾಘವೇಂದ್ರಸ್ವಾಮಿಗಳನ್ನು ಅನೇಕಮಂದಿ ಭಕ್ತರು ಅನೇಕ ಸ್ತೋತ್ರಗಳಿಂದ ಕೊಂಡಾಡಿದ್ದಾರೆ. ಗುರ್ವನುಗೃಹೀತವಾಗಿರುವ ಕಾರಣ ಈ ಸ್ತೋತ್ರಕ್ಕಿರುವ ಪ್ರಾಶಸ್ತ್ಯ ಮತ್ಯಾವುದಕ್ಕೂ ಬಂದಿಲ್ಲ. ಪೀಠಸ್ಥಯತಿಗಳಾಗಲೀ ಈ ಸ್ತೋತ್ರವನ್ನೇ ಪಠಿಸುತ್ತಾರೆ. ಈ ಸ್ತೋತ್ರವನ್ನು ತ್ರಿಸಂಧ್ಯೆಗಳಲ್ಲಿ ಪಠಿಸಿ ಭಕ್ತರು ಇಷ್ಟಾರ್ಥಗಳನ್ನು ಪಡೆಯುತ್ತಾರೆ. ಈ ಸ್ತೋತ್ರ ಪುರಶ್ಚರಣೆಯಿಂದ ಸಕಲ ಆಪತ್ತುಗಳೂ ನಿವಾರಣೆಯಾಗುತ್ತಿವೆ.

ಸಂಸ್ಕೃತ ಬಾರದವರಿಗೆ ಸ್ತೋತ್ರಾರ್ಥ ಸುಲಭವಾಗಿ ತಿಳಿಯಬೇಕೆಂದು ಕನ್ನಡದಲ್ಲಿ ಹಾಡಾಗಿ ರಚಿಸಿರುವ ನುಡಿಗಳನ್ನು ಈ ಕೆಳಗೆ ಕೊಡಲಾಗಿದೆ.

ಕನ್ನಡ ರಾಘವೇಂದ್ರ ಸ್ತೋತ್ರ

ರಾಗ: ಸೌರಾಷ್ಟ್ರ — ಛಾಪು

ಶ್ರೀ ರಘುರಾಮ ಪದಾಂಬುಜ ಭೃಂಗನೆ ಶ್ರೀ ರಾಘವೇಂದ್ರ ಸದ್ಗುರುವರನೆ ।
ಸಾರಿದೆ ನಿನ್ನ ಪದಾರವಿಂದ ಯುಗಳಾರಾಧನೆಯಿತ್ತು ಸಲಹೆಮ್ಮನು ಪ.

ಶ್ರೀ ಮಧ್ವಶಾಸ್ತ್ರಸುಧಾಂಬುಧಿಯೊಳು ಪುಟ್ಟಿ ಕಾಮಾರಿ ಶಿರಮುಟ್ಟಿ ಪೂರ್ಣೋತ್ತರ ।
ಆ ಮಹಾ ಅಲೆಯೊಳು ಚರಿಸಿ ದೇವಾಳಿಯಿಂ ಪ್ರೇಮದಿ ಸೇವ್ಯವಾಗಿರುತಿರುವ ೧

ಹರಿ ಪಾದಾಂಬುಜದಲ್ಲಿ ಬೆರೆದು ಪಂಚಭೇದ ವರ ತಾರತಮ್ಯಾದಿ ದುರ್ವಾದವ ।
ತರಿದ ಶ್ರೀಗುರು ವಾಗ್ದೇವತಾ ನದಿಯೆಮ್ಮ ನಿರುತ ನಿರ್ಮಲಗೈಸಿ ಕರುಣಿಸಲಿ ೨

ಗುರು ರಾಘವೇಂದ್ರನೆ ಸಕಲಪ್ರದಾತನೆ ನಿರುತ ನಿನ್ನಡಿಯಲ್ಲಿ ಭಕ್ತಿಯೊಳು ॥
ಇರುವರ ಪಾಪ ಪರ್ವತವನ್ನು ಭೇದಿಪೆ ವರವೃಷ್ಟಿಯೆಂಬ ವಜ್ರಾಯುಧದಿ ೩

ಭೂ ವಿಬುಧೇಂದ್ರನೆ ಸೇವಿಸಿ ಹರಿಯ ಮಹಾ ವಿಭವವನೆಲ್ಲ ಪಡೆದವನೆ ।
ದೇವ ಸ್ವಭಾವನೆ ಯಾವಾಗಲೆಮ್ಮಿಷ್ಟ ದೇವ ತರುವಿನಂತೆ ನೀಡುವುದು ೪

ಶೀಲಸ್ವರೂಪನೆ ಸಂಸಾರದುಃಖವ ತೂಲರಾಶಿಗೆ ಕಾಲಾನಲನೆ ।
ಮೇಲೆನಿಸುವ ಸುಖಿ ಧೈರ್ಯಶಾಲಿಯೆ ಗ್ರಹಾಳಿಗಳನು ನಾಶಮಾಡುವನೆ ೫

ಭವ ಶರಧಿಗೆ ಸೇತುವೆಯೆನಿಸಿರುವನೆ ಭುವಿಯೊಳು ದ್ವೇಷಿಗಳಿಲ್ಲದಿಹ ।
ಸು ವಿಮಲರೂಪನೆ ತವಕದಿ ಪರವಾದಿ ನಿವಹಕೆ ವಾಗ್ಬಂಧಗೈಯುವನೇ ೬

ವರ ವಿದ್ವಜ್ಜನವರಿಯಲತ್ಯಧಿಕವಾಗಿರುವ ಜ್ಞಾನವು ವಾಗ್ವೈಖರಿಯಿಂಪಲಿ ।
ಪರವಾದಿಗಳ ಗೆದ್ದ ರಾಘವೇಂದ್ರ ಸದ್ಗುರುವೆ ನಮ್ಮಿಷ್ಟವ ಸಲಿಸುವುದು ೭

ಸಂತಾನ ಸಂಪತ್ತು ಭಕ್ತಿ ವಿಜ್ಞಾನವು ಮುಂತಾದ ವಾಗ್ದೇಹ ಪಾಟವವ ।
ಸಂತೋಷದಿಂದಿತ್ತು ನಮ್ಮ ಶರೀರದ ಸಂತಾಪರುಜೆಯ ನಿಗ್ರಹಿಸುವನೆ ೮

ಮೇದಿನಿಯೊಳು ಗಂಗಾದಿ ತೀರ್ಥಾಧಿಕವಾದ ನಿನ್ನಯ ಪಾದೋದಕವು ।
ಮೋದವು ಬ್ರಹ್ಮಹತ್ಯಾದಿ ತ್ರೈತಾಪವ ಛೇದಿಸಿ ಸುಕೃತವ ಕೊಡುತಿಹುದು ೯

ಭುವಿಯೊಳು ಬಂಜೆಗೆ ಮಕ್ಕಳ ಕೊಡುವುದು ಅವಯವದಖಿಳ ವೈಕಲ್ಯವನು ।
ತವಕದಿ ಸಕಲಗ್ರಹವ ನಿಗ್ರಹಿಸುತ ವಿವಿಧ ಪಾತಕ ಪರಿಹರಿಸುವುದು ೧೦

ನಿನ್ನ ಪದಾಬ್ಜದ ರಜಧರಿಸಿರುವರ ನಿನ್ನ ಪದಾಂಬುಜ ಕೀರ್ತಿಪರ ।
ಉನ್ನತ ಪರಿಪಕ್ವವಾದ ವಾಗ್ಮಿಗಳ ನಿನ್ನ ಸಂದರ್ಶಿಸೆ ದುರಿತಹರ ೧೧

ಜಯ ಸರ್ವತಂತ್ರ ಸ್ವತಂತ್ರನೆ ಜಯಜಯ ಜಯಜಯ ಶ್ರೀ ಮಧ್ವಮತವರ್ಧನ ।
ಜಯ ವಿಜಯೀಂದ್ರರ ಕರಕಮಲ ಸಂಜಾತ ಜಯತು ಸುಧೀಂದ್ರರ ವರಪುತ್ರನೆ ೧೨

ಪರಮ ಹಂಸೋತ್ತಮ ಪೂರ್ಣಾಯು ಜ್ಞಾನವು ನಿರುತ ಯಶವು ಪುಣ್ಯ ಭಕ್ತಿಯನು ।
ಸಿರಿಯ ಸುಪುತ್ರರ ವೃದ್ಧಿಗೊಳಿಸಿನ್ನು ಪರಿಪರಿ ಭಯವೆಲ್ಲ ಪರಿಹರಿಸೋ ೧೩

ದುರುಳ ದುರ್ವಾದಿಗಳನು ನಿಗ್ರಹಿಸುವ ದುರುಳರ ಹೃದಯ ಪ್ರಭೇದಿಸುವ ।
*"ಎರಡೆಂಬ" ಚಿನ್ಹೆಯ ಧರಿಸಿದ ವಿದ್ಯಾ ಪರಿಪೂರ್ಣ ಗುರುವನ್ಯರಿನ್ನಿಲ್ಲವು ೧೪

ಹರಿಯ ಪ್ರಸನ್ನತೆ ಪಡೆದು ಪ್ರಸಿದ್ಧನಾಗಿರುತ ಸ್ಮರನ ಗೆಲಿದಿಷ್ಟಗಳ ।
ತ್ವರಿತದಿ ಕೊಡುವ ಶ್ರೀ ಗುರುರಾಘವೇಂದ್ರರ ಹೊರತನ್ಯ ಗುರುವಿಲ್ಲ ಧರೆಯೊಳಗೆ ೧೫

ಮರೆವು ಮೂರ್ಛಾ ಕ್ಷಯ ಅಜ್ಞಾನ ಭ್ರಾಂತಿ ಉರುತರ ಮೂಕತ್ವ ಸಂದೇಹವು ।
ಕರಚರಣದ ಕಂಪ ಮೊದಲಾದ ಇಂದ್ರಿಯ ಪರ ದುಷ್ಟದೋಷವ ಪರಿಹರಿಸೋ ೧೬

"ಶ್ರೀ ರಾಘವೇಂದ್ರಾಯನಮಃ" ಎಂಬ ದಿವ್ಯ ಸಾರಾಷ್ಟಾಕ್ಷರ ಜಪಿಸುತಲಿ ।
ಆರಾಧಿಸುವರ ಇಷ್ಟಾರ್ಥ ಕೊಡುವೆಯೊ ಆದರದಿಂದಲಿ ಅನವರತ ೧೭

ತನ್ನ ದೇಹದಿಂದ ಉತ್ಪನ್ನವಾಗುವ ತನ್ನಿಂದ ತನ್ನ ಬಂಧುಗಳಿಂದಾದ ।
ಉನ್ನತ ದೋಷಗಳನ್ನು ನಿವರ್ತಿಸಿ ಮುನ್ನ ಕೊಡುವೆ ಸಕಲೇಷ್ಟಗಳ ೧೮

ಸ್ವಾರ್ಥಸಿದ್ಧಿಗೆ ಈ ಸ್ತೋತ್ರ ತ್ರಿಕಾಲದಿ ಪ್ರಾರ್ಥಿಸಲಿಹಪರದಿಷ್ಟಗಳ ।
ಅರ್ಥಿಯಿಂ ಪಡೆದು ಕೃತಾರ್ಥನಾಗುವ ಯಥಾರ್ಥವು ಇದಕೆ ಸಂದೇಹವಿಲ್ಲ ೧೯

ಈ ಮಹಿಯೊಳಗೆ ಅಗಮ್ಯಮಹಿಮ ಉದ್ದಾಮ ಸುಕೀರ್ತಿ ವಿಶಾರದನೆ ।
ಶ್ರೀ ಮಧ್ವಮತ ದುಗ್ಧಾಬ್ಧಿಗೆ ಚಂದ್ರನೆ ಸ್ವಾಮಿ ನಿರ್ದೋಷಿ ನೀ ಎನ್ನ ಕಾಯೋ ೨೦

ವೃಂದಾವನದ ಪ್ರದಕ್ಷಿಣೆ ಮಾಡಲು ಪೊಂದುವ ಸಕಲ ಯಾತ್ರಾಫಲವ ।
ವೃಂದಾವನದ ಉದಕಬಿಂದು ಧರಿಸಲು ಸಂದೇಹವೇ ತೀರ್ಥಫಲ ಬರಲು ೨೧

ನಮಿಸುವೆ ಸರ್ವಾಭೀಷ್ಟ ಸಿದ್ಧಿಗೆ ನಾನು ವಿಮಲ ಶಾಸ್ತ್ರಾರ್ಥ ಜ್ಞಾನಗಳು ।
ಕ್ರಮದಿ ಲಭಿಸೆ ನಿನ್ನ ನಾಮೋಚ್ಚಾರಣೆ ಅಮಿತ ಹರುಷದಿಂದ ಮಾಡುವೆನು ೨೨

ಪರಿಪರಿ ದುಃಖದಿ ಪರಿಪೂರ್ಣವಾಗಿಹ ಉರುತರ ಗಂಭೀರವಾಗಿರುವ ।
ಅರಿಯಲಸದಳ ಪಾತಾಳವು ಉತ್ತರಿಸಲಸಾಧ್ಯವು ಸಮವಿಲ್ಲದ ೨೩

ನಿರುತ ದೋಷಗಳೆಂಬ ಜಲಪಿಶಾಚಿಗಳಿಂದ ಜೆರೆದರಿಷಡ್ವರ್ಗ ತರಂಗದಿ ।
ಪರಿಮಿತಿಯಿಲ್ಲದ ಭಯ ಸಮೂಹನೆ ಬಿಳಿ ನೊರೆಯು ವ್ಯಸನವಗಾಧವಾದ ೨೪

ಎಂದಿಗು ಹಿಂಗದ ವಿಷಜಲವಿರುತಿಹ ಬಂಧಕವಾದ ಸಂಸಾರವೆಂಬ ।
ಸಿಂಧುವಿನೊಳು ಬಿದ್ದು ಮಗ್ನನಾದೆ ರಾಘವೇಂದ್ರ ಗುರುವೆ ಎನ್ನನುದ್ಧರಿಸೋ ೨೫

---

*"ಭೇದ ಚಿನ್ಹಾಧರೋ ಗುರುಃ" ಎಂಬುದರ ಭಾಷಾಂತರ ಪ್ರಾಸಕ್ಕೆ ಲೋಪವಾಗದಂತೆ ಮಾಡಿದ ಯತ್ನವಿದು.

ನಿಷ್ಠೆಯಿಂದಲಿ ಸ್ತೋತ್ರಮಾಡಲಷ್ಟಾದಶ ಕುಷ್ಠಾಂಧ ಮೂಕ ಬಧಿರತ್ವ ಹರ ।
ಸೃಷ್ಟಿಯೊಳಗೆ ಪೂರ್ಣಾಯು ಸಂಪತ್ತಿ ಉತ್ಕೃಷ್ಟ ಸುಖಗಳನಿತ್ತು ಸಲಹುವನೋ ೨೬

ಮುದದಿ ಈ ಸ್ತೋತ್ರದಿಂದಭಿಮಂತ್ರಿತವಾದ ಉದಕ ಪ್ರಾಶನದಿಂದ ಉದರದೊಳು ।
ಉದ್ಭವಿಸಿದ ಮಹಾರೋಗಗಳೆಲ್ಲವು ಅಧಿಕ ಶೀಘ್ರದಿ ನಾಶವಾಗುವುವು ೨೭

ವೃಂದಾವನದ ಬಳಿ ಸ್ತೋತ್ರ ಪ್ರದಕ್ಷಿಣೆಯಿಂದ ವಂದಿಪೆ ಕುಂಟನಾದವನು ।
ಚೆಂದದಿ ನಡೆಯುವ ಶಕ್ತಿಯ ಕಾಲೊಳು ಪೊಂದುವ ಗುರುವಿನನುಗ್ರಹದಿ ೨೮

ರವಿ ಶಶಿಗ್ರಹಣ ಪುಷ್ಯಾರ್ಕಾದಿ ದಿನದಲ್ಲಿ ಸ್ತವನವ ನೂರೆಂಟುಸಲ ಮಾಡಲು ।
ತವಕದಲಿ ಭೂತಪ್ರೇತ ಪಿಶಾಚಿಯ ವಿವಿಧ ಬಾಧೆಗಳೆಲ್ಲ ಪರಿಹರವು ೨೯

ವಿಮಲ ವೃಂದಾವನದೆಡೆಯೊಳು ಸ್ತೋತ್ರದಿ ನಮಿಸುತ್ತ ದೀಪವನಿಡುವವರು ।
ಶ್ರಮವಿಲ್ಲದೆ ಸುಜ್ಞಾನ ಸತ್ಪುತ್ರರ ಮಮತೆಯಿಂದಲಿ ಹೊಂದಿ ಸುಖಿಸುವರು ೩೦

ಪರವಾದಿಗಳ ದಿಗ್ವಿಜಯ ದಿವ್ಯಜ್ಞಾನ ಪರಿಪೂರ್ಣ ಭಕ್ತಿಯು ವರ್ಧಿಸುತ ।
ನಿರುತದಿ ಸಕಲೇಷ್ಟ ದೊರಕಿಪ ವಿಷಯದಿ ಬರಿದಾದ ಯೋಚನೆ ಫಲವಿಲ್ಲವು ೩೧

ಚೋರ ಮಹೋರಗ ನೃಪ ನಕ್ರವ್ಯಾಘ್ರಾದಿ ಘೋರಭಯವ ಪರಿಹರಿಸುವುದು ।
ಧಾರುಣಿಯೊಳಗೀ ಸ್ತೋತ್ರ ಪ್ರಭಾವವೆ ಸಾರುತಲಿಹುದು ಸಂದೇಹವಿಲ್ಲ ೩೨

ಪರಿಶುದ್ಧ ಭಕ್ತಿಯಿಂ ಗುರುರಾಘವೇಂದ್ರರ ಚರಣವ ಸ್ಮರಿಸಿ ಸಂಸ್ತುತಿಸುವರು ।
ಅರಿಯರು ಲವಲೇಶ ದುಃಖವ ಸ್ವಪ್ನದಿ ಹರಿಯ ಅನುಗ್ರಹ ಬಲದಿಂದಲಿ ೩೩

ವಸುಧೆಯೊಳಗೆ ಸಕಲೇಷ್ಟ ಸಮೃದ್ಧಿಯು ದಶದಿಶಿಯೊಳು ಕೀರ್ತಿ ಸಮವಿಲ್ಲದ ।
ಎಸೆವ ಐಶ್ವರ್ಯವು ದೊರೆಯುವುದಿದಕೆ **'ಹಯಾಸ್ಯನೆ'** ಸಾಕ್ಷಿಯಾಗಿರುತಿಹನು ೩೪

ಧರೆಯೊಳಗತಿಪೂಜ್ಯ ಗುರು ರಾಘವೇಂದ್ರನೆ ನಿರುತದಿ ಸತ್ಯಧರ್ಮದಿ ರತನೆ!
ಸ್ಮರಿಸುವರಿಗೆ ಸುರತರುವೆ ನಮಿಪರಿಗೆ ಸುರಭಿಯೆನಿಸಿ ನಿತ್ಯ ಪೊರೆಯುವನೆ ೩೫

ಮಂಗಳ ಮಂತ್ರಾಲಯ ಪುರಕಧಿಪನೆ ಮಂಗಳ ತುಂಗಾತೀರದೊಳು ।
ಹಿಂಗದೆ ವಿಹರಿಸಿ ಶ್ರೀ ರಾಮಚಂದ್ರನ ಮಂಗಳ ಮೂರ್ತಿಯ ಪಾಡುವನೆ ೩೬

ಮಠದ ಜಹಗೀರು

ಶ್ರೀಮಠಕ್ಕೆ ಶ್ರೀ ವಿಜಯೀಂದ್ರ, ಸುಧೀಂದ್ರ, ರಾಘವೇಂದ್ರ ಮತ್ತು ಸುಮತೀಂದ್ರ ಸ್ವಾಮಿಗಳು ಬಹಳ ಜಹಗೀರನ್ನು ಸಂಪಾದಿಸಿದರು. ಎಲ್ಲ ಭೂಮಿ ಸೀಮೆಗಳೂ ಉಳಿದು ಮಠದ ಅನುಭವದಲ್ಲಿದ್ದರೆ, ಶ್ರೀ ರಾಘವೇಂದ್ರ ಮಠವು, ಪ್ರಟ್ಟ ಪ್ರಮುಕೋಟಿಯಂಥಾ ಒಂದು ಸಂಸ್ಥಾನವಾಗಿರುತ್ತಿತ್ತು. ಹಿಂದೂ ರಾಜರ ಪರಸ್ಪರ ಯುದ್ಧ, ಹಿಂದೂ ಮಹಮ್ಮದೀಯರ ಯುದ್ಧ, ಈರ್ವರನ್ನೂ ಮೂಲೆಗೆ ಕೂರಿಸಿದ ಬ್ರಿಟಿಷರ ಯುದ್ಧಗಳಲ್ಲಿ

ಗೆದ್ದವರ ಧರ್ಮವನ್ನು ಸೋತವರು ನಡೆಸದಿದ್ದ ಕಾರಣ ಬಹು ಗ್ರಾಮಗಳು ಮಠದ ಕೈಬಿಟ್ಟುಹೋದುವು. ಅಲ್ಲದೆ ಮಠದ ಸಂಚಾರದ ಕಾಲದಲ್ಲಿ, ಈಗಿನ ಪ್ರಯಾಣ ಸೌಕರ್ಯಗಳಿಲ್ಲದಿದ್ದ ಕಾರಣ, ಅಲ್ಲಲ್ಲಿ ನಿಯಮಿತರಾದ ಗುತ್ತಿಗೆದಾರರು ತಮಗೆ ಅನುಕೂಲವಾಗುವಂತೆ, ಸ್ವಾಮಿಗಳಿಂದ ಕಾಗದ ಪತ್ರಗಳನ್ನು ಬರೆಸಿಕೊಂಡು, ಅನೇಕ ಗ್ರಾಮ ಭೂಮಿಗಳನ್ನು ಅಪಹರಿಸಿದರು. ಇದರಂತೆ ಮಠದ ಜಹಗೀರುಗಳದೂ ಒಂದು ಕರ್ಮಕಥೆಯಾಯಿತು.

ಮೇಜರ್ ಮನ್ರೋ

ಮೂರನೇ ಮೈಸೂರು ಯುದ್ಧದಲ್ಲಿ ಇಂಗ್ಲೀಷರೂ ಮರಾಠರೂ ನಿಜಾಮರೂ ಸೇರಿ ಟಿಪ್ಪುವನ್ನು ಸದೆಬಡಿದು ಅರ್ಧರಾಜ್ಯವನ್ನು ಕಸಿದುಕೊಂಡಾಗ, ನಿಜಾಮನಿಗೆ ಬಳ್ಳಾರಿ ಕಡಪ ಕರ್ನೂಲು ಪ್ರಾಂತ್ಯಗಳು ಹಂಚಿಕೆಯಾಗಿದ್ದುವು. ಮತ್ತೆ ಕ್ರಿ.ಶ. ೧೮೦೦ರಲ್ಲಿ ರಾಜತಂತ್ರ ವಿಶಾರದರಾದ ಕಂಪೆನಿಯ ಅಧಿಕಾರಿಗಳು ನಿಜಾಮನಿಂದ ಆ ಪ್ರಾಂತಗಳನ್ನು ತಾವೇ ತೆಗೆದುಕೊಂಡುಬಿಟ್ಟರು. ಆಗ ಬಳ್ಳಾರಿ ಅನಂತಪುರ ಎರಡೂ ಸೇರಿ ಒಂದು ಜಿಲ್ಲೆಯಾಗಿತ್ತು. ಮೇಜರ್ ಮನ್ರೋ ಎಂಬಾತನು ಬಳ್ಳಾರಿಯ ಪ್ರಿನ್ಸಿಪಲ್ ಕಲೆಕ್ಟರಾಗಿ ಬಂದನು. ದೇವಾದಾಯ ಬ್ರಹ್ಮಾದಾಯಗಳಲ್ಲಿ ಮನಸ್ಸಿಗೆ ಸಮರ್ಪಕವಿಲ್ಲದವುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾ ರಾಜ್ಯವ್ಯವಸ್ಥೆ ಮಾಡುವಾಗ, ಮೇಜರನು ಮಂತ್ರಾಲಯಕ್ಕೂ ತನಿಖೆಗೆ ಬಂದನು. ಒಂದು ಸಮಾಧಿಯ ದೀಪಾರಾಧನೆಗೆ ಪೂರ್ತಾ ಒಂದು ಗ್ರಾಮದ ಉತ್ಪತ್ತಿಯೇಕೆಂದು ಕೇಳಿದಾಗ ಜನರು–'ಇದು ಮಹಾಸ್ಥಳ. ಯಾತ್ರಿಕರು ಸಾವಿರಾರು ಸಂಖ್ಯೆಯಿಂದ ಬರುತ್ತಾರೆ. ಜಹಗೀರನ್ನು ಸರ್ಕಾರಕ್ಕೆ ಸೇರಿಸಬಾರದು.' ಎಂದು ಕೇಳಿಕೊಂಡರು. 'ಸ್ಥಳದಲ್ಲಿ ಮಹತ್ವವೇನಿದೆಯೋ ನಾನೇ ನೋಡುತ್ತೇನೆ' ಎಂದು ಕಲೆಕ್ಟರನು ಹೇಳಿದನು.–'ಸ್ಥಳದ ಮಹತ್ವ, ಸ್ವಾಮಿಗಳ ಮಹಾಮಹಿಮೆ ಈ ಫರಂಗಿಯವನಿಗೇನು ಗೊತ್ತಾದೀತು' ಎಂದು ಜನರು ಸಂಶಯಪಟ್ಟರು. ಮೇಜರ್ ಮನ್ರೋವು ತನ್ನ ಕಾಲಿನ ಮೋಜವನ್ನು ತೆಗೆದಿಟ್ಟು, ಹುಜೂರು ಶಿರಸ್ತೇದಾರನನ್ನು ಕರೆದುಕೊಂಡು, ಬೃಂದಾವನದ ಎದುರಿಗೆ ಬಂದು ನಿಂತನು. ಸುಕೃತ ವಿಶೇಷದಿಂದ ಚಿನ್ಮುದ್ರಾಧಾರಿಗಳಾಗಿ ಕುಳಿತ ಸ್ವಾಮಿಗಳವರ ದಿವ್ಯದರ್ಶನವೇ ಆತನಿಗಾಯಿತು. ಹುಜೂರು ಶಿರಸ್ತೇದಾರನನ್ನು ಹತ್ತಿರಕ್ಕೆ ಕರೆದು–'ಅವರೋ ಸಮಾಧಿಯಲ್ಲಿರುವ ಯತಿಗಳು?' ಎಂದು ಕೇಳಿದನು. ಶಿರಸ್ತೇದಾರನು, 'ಅಲ್ಲಿ ಕಾಣುವುದು ಬೃಂದಾವನ ಮಾತ್ರ ಈಗ ಯತಿಗಳ್ಯಾರೂ ಇಲ್ಲ'ವೆಂದನು. ಉತ್ತರಕ್ಷಣದಲ್ಲಿ ಸಾಹೇಬನಿಗೂ ಯತಿಗಳ ದರ್ಶನವಾಗಲಿಲ್ಲ. ಇದರಿಂದ ಅವನಿಗೆ ವಿಲಕ್ಷಣ ಮನೋಭಾವನೆಯುಂಟಾಯಿತು. ಭಕ್ತಿಯಿಂದ ತನ್ನ ಪದ್ಧತಿಯಂತೆ ವೃಂದಾವನಕ್ಕೆ ವಂದನೆಮಾಡಿದನು. ಮಠದಿಂದ ದೊರೆತ ಪ್ರಸಾದವನ್ನು ಸ್ವೀಕರಿಸಿ, ಜಹಗೀರಿಯನ್ನು ಬಿಸಿಕೊಟ್ಟನು.

ಈ ಮನ್ರೋಮಹಾಶಯನು ಬರೆದಿಟ್ಟ ಮಾತುಗಳನ್ನು ಬಳ್ಳಾರಿ ಡಿಸ್ಟ್ರಿಕ್ಟ ಗೆಜೆಟಿಯರಿನಲ್ಲಿ ಒಂದು ರೀತಿಯಲ್ಲಿ ಬರೆದಿಟ್ಟಿದ್ದಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರು

ಆ ಕಾಲದಲ್ಲಿ ಶ್ರೀ ಸುಬುಧೇಂದ್ರ ತೀರ್ಥರು ಮಠದ ಮಹಾ ಪೀಠವನ್ನು ಅಲಂಕರಿಸಿದ್ದರು. ಮಠಕ್ಕಿದ್ದ ಹಗಲುದೀವಟಿಗೆ, ಆನೆಯಮೇಲೆ ನಗಾರಿ, ಈ ಮರ್ಯಾದೆಗಳಿಗೆ ಮೈಸೂರು ಸೀಮೆಯಲ್ಲಿ ಪ್ರತಿಬಂಧಕವುಂಟಾಗಿತ್ತು. ಪೂರ್ಣಯ್ಯನವರಂಥಾ ದಿವಾನರ ಕಾಲದಲ್ಲಿ ಸಹ ಆ ಪ್ರತಿಬಂಧಕ ಪರಿಹಾರವಾಗಲಿಲ್ಲ. ಈ ಕಾರಣದಿಂದ ಸ್ವಾಮಿಗಳು ಮಂತ್ರಾಲಯವನ್ನು ಬಿಟ್ಟು ಬಹುಕಾಲ ದೇಶಪರ್ಯಟನ ಮಾಡಲಿಲ್ಲ. ಏಕತ್ರವಾಸವಾದ್ದರಿಂದ, ಮಠದ ಐಶ್ವರ್ಯವೂ ಪರಾಧೀನವಾಯಿತು.

ಕೃಷ್ಣರಾಜ ಪ್ರಭುಗಳು ವಿದ್ವದ್ಗೋಷ್ಠಿಯಲ್ಲಿ ಮಂಡಿಸಿದರೆಂದರೆ ಎಲ್ಲರೊಡನೆಯೂ ಬಲು ಧಾರಾಳವಾಗಿ ಮಾತನಾಡುತ್ತಿದ್ದರು. ಪ್ರಭುಗಳು ಶಾಸ್ತ್ರ ವಿಚಾರದಲ್ಲಿ ಗಹನ ಪ್ರಶ್ನೆಗಳನ್ನು ಕೇಳಿದರೆ, ಆ ಕಾಲದ ಮಹಾಪಂಡಿತರೇ ಅವಧಿಯನ್ನು ಪಡೆದು ಉತ್ತರ ಕೊಡಬೇಕಾಗಿತ್ತು. ಎಲ್ಲಾ ಮತಗಳೂ, ಎಲ್ಲಾ ಮಠಗಳೂ ಕ್ಷೇತ್ರಮೂರ್ತಿಗಳೂ ರಾಜರಕ್ಷಣೆಯನ್ನು ಪಡೆದ ಕಾಲವೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ. ಆಗ ವೀಣಾಭಕ್ಷಿ ವೆಂಕಟಸುಬ್ಬಯ್ಯನೆಂಬಾತನು ಮಹಾರಾಜರ ಮೆಚ್ಚಿನ ಮಂತ್ರಿಯಾಗಿದ್ದನು. ಅವನು ಒಮ್ಮೆ ಮಹಾರಾಜರ ಸಮಯವರಿತು–'ಎಲ್ಲಾ ಗುರುಗಳಿಗೂ ತಮ್ಮ ಈ ಧರ್ಮಸಂಸ್ಥಾನದಲ್ಲಿ ಮರ್ಯಾದೆಯಿದೆ. ನನ್ನ ಗುರುಗಳಿಗೆ ಮಾತ್ರ ಇಲ್ಲ' ಎಂದು ವ್ಯಸನಪಟ್ಟನು. ಪ್ರಭುಗಳು–'ನಿನ್ನ ಗುರುಗಳ್ಯಾರು ? ಕರೆಸು, ಅವರಿಗೂ ಬೇಕಾದ ಮರ್ಯಾದೆ ಮಾಡುತ್ತೇನೆ'ಂದರು. ಭಕ್ಷಿಯು 'ನನ್ನದು ರಾಯರ ಮಠ, ಗುರುಗಳು ಮಂತ್ರಾಲಯದಲ್ಲಿದ್ದಾರೆ; ಅವರಿಗೆ ಸಂಚಾರ ಮಾಡಲು ಬಿರುದಿನ ಪ್ರತಿಬಂಧಕವಿದೆ. ಮಹಾರಾಜರು ದಿವ್ಯಚಿತ್ತಕ್ಕೆ ತಂದು, ಅದನ್ನು ಪರಿಹರಿಸಿ, ಅರಮನೆಯಿಂದಲೇ ಅವರನ್ನು ಆಹ್ವಾನಿಸಿದರೆ ಬರುತ್ತಾರೆ' ಎಂದು ಸುಲಭವಾಗಿ ನುಡಿದನು. ಅವನ್ನು ಲಾಲಿಸಿದ, ಉದಾರಮನಸ್ಸಿನ ಪ್ರಭುಗಳು ಸಕಲ ಬಿರುದಾವಳಿಗಳೊಡನೆ ಸಂಚರಿಸುವ ಅವಕಾಶವನ್ನುಂಟುಮಾಡಿ, ಅರಮನೆಯ ಇಸ್ತಕಪಾಲನ್ನು ಮಂತ್ರಾಲಯಕ್ಕೆ ಕಳುಹಿಸಿ ಶ್ರೀ ಮಠವನ್ನು ಮೈಸೂರಿಗೆ ಬರಮಾಡಿದರು. ಸಕಲ ಪಂಡಿತರೂ ರಾಜಬಂಧುಗಳೂ ಪೂಜಾಮಹೋತ್ಸವವನ್ನು ನೋಡುತ್ತಾ ಕುಳಿತಿದ್ದಾಗ–'ಮೂಲರಾಮದೇವರು ಇಷ್ಟೇಕೆ ಕೃಶರಾಗಿದ್ದಾರೆ' ಎಂದು ಮಹಾರಾಜರು ಪ್ರಶ್ನೆಮಾಡಿದರು. ಸಮೀಪಸ್ಥ ಪಂಡಿತರು, ಸರಸ ಶ್ಲೋಕಗಳ ರೂಪವಾಗಿ 'ವನವಾಸ ಸೀತಾವಿಯೋಗ ಕಾರಣಗಳಿಂದ ಕೃಶರಾಗಿದ್ದಾರೆ'ಂದು ವಿಜ್ಞಾಪಿಸಿದರು. ಆಗ ಸುಬುಧೇಂದ್ರಸ್ವಾಮಿಗಳು–'ಆಸ್ಥಾನದ ವಿದ್ವಾಂಸರು ನಮ್ಮ ರಾಮನು ಕೃಶನಾಗಿರುವ ಕಾರಣವನ್ನು ಶ್ಲೋಕರೂಪವಾಗಿ ಹೇಳಿದ್ದು ಪಕ್ಷತಃ ಸರಿ; ಶಾಸ್ತ್ರದೃಷ್ಟಿಯಿಂದ ನೋಡಿದರೆ, ವನವಾಸವೇ ಅವತಾರದ ಉದ್ದೇಶವಾದ್ದರಿಂದ–ನಮ್ಮ ರಾಮನು ಕೃಶನಾಗಲು ಕಾರಣವಿಲ್ಲ. ಲಕ್ಷ್ಮೀಸ್ವರೂಪಳಾದ ಸೀತಾದೇವಿಯು ನಿತ್ಯಾನಪಾಯಿನಿಯಾದ್ದರಿಂದ ಸೀತಾವಿಯೋಗವೇ ಆತನಿಗಿಲ್ಲವಾದ ಕಾರಣ ಅದರಿಂದಲೂ ಕೃಶನಾಗಿಲ್ಲ. ಆದರೆ, ಕೃಷ್ಣರಾಜ

ಪ್ರಭುವಿಗೆ ಜನ್ಮಾಂತರದಲ್ಲಿ ಮಾಡಿದ ಸೇವೆಗೆ ರಾಜ್ಯಪದವಿಯನ್ನು ಕೊಟ್ಟೆ! ಈಗ ಮಾಡಿರುವ ಮಹಾಸೇವೆಗೆ ಯಾವ ಪದವಿಯನ್ನು ಕೊಡಲಿ? ಎಂಬ ಯೋಚನೆಯಿಂದ ಬಹಳವಾಗಿ ಕೃಶನಾಗಿದ್ದಾನೆ ನಮ್ಮ ರಾಮನು' ಎಂದರು. ಯುಕ್ತಿಯುಕ್ತವಾದ ಆ ಮಾತು ಮಹಾರಾಜರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿತು. ಸ್ವಾಮಿಗಳ ಪ್ರತಿಭೆಯನ್ನು ನೋಡಿ, ಅವರ ವಿಷಯದಲ್ಲಿ ಪೂಜ್ಯಭಾವನೆಯುಂಟಾಯಿತು. ಇಷ್ಟು ಕಾರಣದಿಂದಲೇ ರಾಘವೇಂದ್ರಮಠಕ್ಕೆ ನಂಜನಗೂಡಿನಲ್ಲಿ ವಾಸಸ್ಥಾನವೇರ್ಪಟ್ಟಿತು. ಅಂಬಳೆ ಮೊದಲಾದ ಗ್ರಾಮಗಳ ಜಹಗೀರಾಯಿತು. ತಿಂಗಳಿಗೆ ಐದುನೂರು ರೂಪಾಯಿಗಳ ಸೇವೆ ಏರ್ಪಾಟಾಯಿತು. ಶ್ರೀ ಮೂಲರಾಮನಿಗೆ ಅನರ್ಘ್ಯಾಭರಣಗಳು ದೊರೆತು ಮರುದಿನದ ಪೂಜಾಕಾಲದಲ್ಲೇ ಸ್ವಾಮಿಯು ಪುಷ್ಟಾಂಗನಾದನು.

ಇಂದೆಂದರೆ ರಾಜತ್ವ! ರಾಜನೆಂದರೆ ಮುಮ್ಮಡಿ ಕೃಷ್ಣರಾಜ! ಕರ್ಣಾಟಕ ಭೋಜ!

ಪುಣ್ಯಶ್ಲೋಕರ ಪುಣ್ಯಚರಿತ್ರೆಯನ್ನು ಆನಂದಬಾಷ್ಪದ ಕಡೆಯ ಮಾತುಗಳಿಂದ ಬರೆಯಬೇಕೆಂದರೆ:–'ಶ್ರೀ ರಾಘವೇಂದ್ರ ಗುರು ಸಾರ್ವಭೌಮರು ಭೌತಿಕದೃಷ್ಟಿಗ ಗೋಚರರಾಗಿದ್ದರೂ ವೃಂದಾವನಸ್ಥರಾಗಿ ಇನ್ನೂ ಇದ್ದಾರೆ. ಶಾಲೀವಾಹನಶಕೆಯ ೨೫೯೩ನೆಯ ಶ್ರಾವಣ ಬಹುಳ ಬಿದಿಗೆಯವರೆಗೂ ಭಕ್ತರ ಇಷ್ಟಾರ್ಥಗಳನ್ನು ದಯಪಾಲಿಸುತ್ತಾರೆ. ಭಕ್ತರ ಭಕ್ತಿಗನುಸಾರವಾಗಿ ವಿವಿಧ ರೀತಿಯಿಂದ ದರ್ಶನ ಕೊಡುತ್ತಾರೆ' ಎಂದು ಬರೆಯಬೇಕು.

ಅದ್ಯಾಪಿ, ಮಂತ್ರಾಲಯದಲ್ಲಿ ವಿಚಿತ್ರ ಮಹಿಮೆಗಳು ನಡೆಯುತ್ತಿರುವುದು ಇದಕ್ಕೆ ಸಾಕ್ಷಿ! ಸೇವೆಮಾಡಿ ಬಂದವರ ವಿಚಿತ್ರಾನುಭವಗಳು ಇದಕ್ಕೆ ಸಾಕ್ಷಿ! ಕುಷ್ಠಾದಿ ದುರ್ವ್ಯಾಧಿಗಳು ಪರಿಹಾರವಾಗುತ್ತಿರುವುದು ಇದಕ್ಕೆ ಸಾಕ್ಷಿ! ಮೂಲ ಮೃತ್ತಿಕೆಯನ್ನು ತೆಗೆದುಕೊಂಡುಹೋಗಿ ಶಾಖಾ ಬೃಂದಾವನಗಳನ್ನು ಪ್ರತಿಷ್ಠಿಸಿದರೆ ಅಲ್ಲೂ ಈ ಬಗೆಯ ಅಸಾಧ್ಯ ಮಹಿಮೆಗಳು ನಡೆಯುತ್ತಿರುವುದು ಇದಕ್ಕೆ ಸಾಕ್ಷಿ! ಎಲ್ಲ ಜಾತಿ, ಎಲ್ಲ ಮತಗಳವರೂ ಏಕನಿಷ್ಠೆಯಿಂದ ಸೇವೆ ಮಾಡುತ್ತಿರುವುದು ಇದಕ್ಕೆ ಸಾಕ್ಷಿ!

ಮುಖ್ಯವೇನು, ಶ್ರೀ ರಾಘವೇಂದ್ರರು ಅಗಮ್ಯ ಮಹಿಮರು! ಈ ವಿಚಾರ, ಶ್ರೀ ಕ್ಷೇತ್ರದರ್ಶನ ಮಾಡಿದರೆ ಜನರಿಗೆ ಮನವರಿಕೆಯಾದೀತು! ಪುಣ್ಯಶ್ಲೋಕರ ಕಥಾ ಶ್ರವಣ ಮಾಡಿದರೆ ಮನಸ್ಸು ಮೃದುವಾದೀತು! ಮುಕ್ತಿಯ ಸೋಪಾನ ಕರಗತವಾದೀತು!

ಅಪರೋಕ್ಷಜ್ಞಾನಿಗಳಾದ ಶ್ರೀ ಗೋಪಾಲದಾಸರು ಸ್ವಾಮಿಗಳ ಮಹಿಮೆಯನ್ನು ಈ ಕೆಳಕಂಡ ಸುಳಾದಿಯಲ್ಲಿ ಬಣ್ಣಿಸುತ್ತಾರೆ. ಲೇಖಕನ ಕಲುಷವಾಣಿಯನ್ನು ಓದಿ ಬೇಸರಪಟ್ಟವರು ದಾಸರಾಯರ ದಿವ್ಯ ಸುಳಾದಿಯನ್ನು ಪಠಿಸಿ ಪುನೀತರಾಗಲಿ.

ಶ್ರೀ ರಾಘವೇಂದ್ರ ಸುಳಾದಿ

ಧ್ರುವತಾಳ

ಧರೆಯೊಳಗೆ ನಮ್ಮ ಗುರುರಾಘವೇಂದ್ರರಾಯರು | ನಿರುತಿಪ್ಪ . ಮಹಿಮೆಯನರಿದೆಷ್ಟು ವರ್ಣಿಸುವೆ | ಸ್ಥಿರವಾಗಿ ಮಂತ್ರಾಲಯಪುರ ತುಂಗಾತೀರದಿ | ಹರಿಭಕ್ತ ಪ್ರಹ್ಲಾದ ಪೂರ್ವ ಯಾಗ ಇಲ್ಲೀ ಮಾಡಿ | ಸುರರಿಗಮೃತವುಣಿಸಿ ಪರಮಕ್ರಿಯಾಪರನಾದಿ | ಪುಣ್ಯಸ್ಥಾನವೆಂದು ಅರಿತು ಈ ಸ್ಥಳದಲ್ಲಿ | ಗುರುರಾಘವೇಂದ್ರರಾಯರು ಶರೀರ ಪ್ರಯೋಗಿಸಿ | ಪರ ಲೋಕಸಾಧನ ಪರಿಪೂರ್ತಿಮಾಡಿಕೊಂಡು | ಶಿರಿಕೃಷ್ಣನ ಚರಣಕ್ಕೆರಗಿ ಸಂತೋಷದಲಿ | ಧರೆಯಮೇಲಿದ್ದ ಜನರ ಪೊರೆಯ ಬೇಕೆಂದೆನಲು | ಹರಿ ನೋಡಿದ ನಿವರ ಮನವು ದಯಾಳುತನವ | ಗುರುವಂತರ್ಯಾಮಿಯಾಗಿ ವರವ ನೀಡಲು ಜನಕೆ | ನರಹರಿ ತಾನಿ ನಿಂದು ನಿರುತ ಪೂಜೆಯಗೊಂಡು | ಸಿರಿಯುಳ್ಳ ಕೀರುತಿಯ ಸುರರ ಪಾಲಕ ಚಕ್ರ ಧರ ನಾರಾಯಣ ತಾನು ಪರಸನ್ನಿಧಾನನಾಗಿ | ವರಗೆ ಫಲವನೀವ ಇಹಪರದಲಿ ನಿತ್ಯ | ಕರುಣಾಕರ ರಂಗ ಗೋಪಾಲವಿಠಲ | ಶರಣರ ಪೊರೆಯುವ ಚರಿಯ ಪರಿಪರಿಯುಂಟು ‖ ೧

ಮಟ್ಟತಾಳ

ನರಹರಿ ರಾಮಕೃಷ್ಣ ಶಿರಿ ವೇದವ್ಯಾಸ | ಎಡೆಬಿಡದಿವರಲ್ಲಿ ಹರಿಮೂರುತಿಗಳು | ಪರಿವಾರ ಸಹಿತಾಗಿ ಶಿರಿ ಸಹ ನಿಂದಿಹರು | ಸುರರ ಗುರು ಮಧ್ವಾಚಾರ್ಯರೆ ಮೊದಲಾಗಿ | ತರುವಾಯದಲಿನ್ನು ತಾರತಮ್ಯಾನುಸಾರ | ಪರಿಪರಿಯಿಪ್ಪರು ಹರಿಸೇವೆಗೆ ಎಂದು | ಗರುಡವಾಹನರಂಗ ಗೋಪಾಲವಿಠ್ಠಲ | ಶರಣರ ಪಾಲಿಸುವ ವಿವರವ ನೋಡಿರೋ ‖ ೨

ತ್ರಿಪುಟತಾಳ

ನರಹರಿರೂಪನಾಗಿ ವಾಸವಾಗಿ ಇಲ್ಲಿ | ದುರಿತದುಷ್ಕೃತ ಬ್ರಹ್ಮಹತ್ಯಗಳೋಡಿಸುವ | ಶಿರಿರಾಮನಾಗಿ ವಾಸವಾಗಿ ಇಲ್ಲಿ | ಪರದೇಶಿಗಳಾಗಿ ರಾಜ್ಯಕಳೆದುಕೊಂಡ | ನರಪರು ಬಂದರೆ ಸ್ಥಿರಪಟ್ಟ ಕಟ್ಟುವ | ಶಿರಿಕೃಷ್ಣನಾಗಿ ವಾಸವಾಗಿ ಇಲ್ಲಿ | ವರಸುತಾತುರರಾಗಿ ಬಂದ ಜನರಿಗೆ | ವರಪುತ್ರರನಿತ್ತು ಮದುವೆ ಮುಂಜಿ | ಹರಕೆಗಳ ಕೈಕೊಂಡು ಹರುಷ ಬಡಿಸುವ | ಶಿರಿವೇದವ್ಯಾಸನಾಗಿ ವಾಸವಾಗಿ ಇಲ್ಲಿ | ಗರುವದಿಂದ ಬಂದ ದುರ್ವಾದಿಗಳನೆಲ್ಲ | ದೂರ ಓಡಿಸಿ ಮುರಿವ ಅವರ ಕುತರ್ಕವ | ಹರಿ ಪರನೆಂಬ ಅರಿವನಿವ | ಶರಣಜನಕ್ಕಿನ್ನು ಪರಜ್ಞಾನಸುಧೆಯ | ಕರೆದು ಕೊಡುವ ಉಪನಿಷತ್ತಿನಿಂದ | ಶಿರಿವಂದಿತನಾದ ಗೋಪಾಲವಿಠ್ಠಲ | ಪರಿಪರಿಯಿಂದ ಪಾಲಿಗ ಕೈಕೊಳುತಿಪ್ಪ ‖ ೩

ಅಟ್ಟತಾಳ

ರಾಘವೇಂದ್ರನೆಂಬ ರೂಪನೆ ತಾನಾಗಿ | ರಾಘವೇಂದ್ರನೆಂಬ ನಾಮ ವಿವರಿಸಿಕೊಂಡು | ರಾಘವೇಂದ್ರರಿನ್ನು ಮಾಡಿದಂಥಾ ಪುಣ್ಯ | ಭೋಗವರಿತು ತನ್ನ ಭಾಗವತರಿ

ಗೀವ । ಸಾಗಿಸಿ ಸಲಹುತ ಭಕತರ ಸಂಸಾರಾ । ಮೋಘಕೀರುತಿಯ ಇವರಿಗೆ ತಂದೀವ । ರಾಘವೇಂದ್ರಮೂರ್ತಿ ಗೋಪಾಲವಿಠ್ಠಲ । ಭಾಗವತರಿಂದ ಬಹು ಪೂಜೆಗೊಂಬ ॥ ೪

ಆದಿತಾಳ

ದಿನದಿನಕಿಲ್ಲಿ ನೂತನ ಪೂಜೆಗಳು । ದಿನದಿನಕಿಲ್ಲಿ ನೂತನೋತ್ಸವಗಳು ॥ ದಿನದಿನಕಿಲ್ಲಿ ನೂತನ ಕೀರ್ತಿಗಳು । ದಿನದಿನಕಿಲ್ಲಿ ನೂತನ ವಾರ್ತೆಗಳು । ಜನರ ಸಂದಣಿ ವಿಪ್ರಭೋಜನಂಗಳು । ಜನರಿಂದ ಮಾಡಿಸಿ ಈಪ್ಸಿತ ಕೊಡುವನು । ಜನುಮುಸಫಲಮಾಡಿ ಜನನ ನೀಗುವರು । ದಿನ, ಸಪ್ತ ಶತ ವರುಷದಿನ ಪರಿಯಂತರ । ದಿನಕರ ಶತತೇಜ ಜನನಾಯಕನಿಲ್ಲಿ । ಅನುವಾಗಿ ತಾನಿಂದು ಜನರ ಪಾಲಿಸುವ । ಗುಣಗಣ ಪರಿಪೂರ್ಣ ಗೋಪಾಲ ವಿಠ್ಠಲ । ಅಣೋರಣಿಯೆಂಬುವಗೆ–ಎಣೆಯಾರು ಜಗದಲ್ಲಿ ॥ ೫

ಜತೆ

ಮಂತ್ರಸಿದ್ಧಕ್ಷೇತ್ರ ಇದು ನೋಡಿಕೊ ಇಲ್ಲಿ ।
ಮಂತ್ರ ಪ್ರತಿಪಾದ್ಯ ಗೋಪಾಲವಿಠ್ಠಲ ॥

‘ಓಂ ತತ್ಸತ್’

ಶ್ರೀ ಕರ್ಣಾಟಕ ಭಕ್ತವಿಜಯ

ಭಾಗ ೨

ಶ್ರೀ ವಿಜಯದಾಸರು

ಅಜ್ಞಾನ ತಿಮಿರಾದಿತ್ಯಂ ಆತ್ಮಾನಂದ ಪದಪ್ರದಂ ।
ವಿಜ್ಞಾನ ವಿಮಲಂ ಶ್ರೇಷ್ಠಂ ವಿಜಯಾರ್ಯ ಗುರುಂ ಭಜೆ ॥

ತುಂಗಭದ್ರಾತೀರದಲ್ಲಿ ಚೀಕಲಪರಿಯೆಂಬುವ ಗ್ರಾಮ. ಗ್ರಾಮವು ಬಹುಕಾಲ ಬೇರೆ ಬೇರೇ ಮುಸಲ್ಮಾನ ರಾಜರ ಆಳಿಕೆಯಲ್ಲಿದ್ದು ಈಗ ಹೈದರಾಬಾದು ಸೀಮೆಯ ರಾಯಚೂರು ಜಿಲ್ಲಾ ಮಾನವೀ ತಾಲ್ಲೂಕಿಗೆ ಸೇರಿದೆ. ಮಾನವಿಗೆ ಎಂಟುಮೈಲು ದೂರ ದಲ್ಲಿದೆ. ಬ್ರಹ್ಮಾಶ್ವತ್ಥ ವಿದುರಾಶ್ವತ್ಥಗಳಂತೆ, ಚೀಕಲಪರಿಯು ಶ್ರೀ ಶ್ರೀಪಾದರಾಜರಿಂದ ಸ್ಥಾಪಿತವಾದ ಅಶ್ವತ್ಥನರಸಿಂಹ ಕ್ಷೇತ್ರವೆನ್ನಿಸಿದೆ. ಶ್ರೀ ಕ್ಷೇತ್ರದಲ್ಲಿ ಅದ್ಯಾಪಿ ಜನರು ಅಶ್ವತ್ಥ ನರಸಿಂಹಸ್ವಾಮಿಯನ್ನು ಭಕ್ತಿಯಿಂದ ಸೇವೆಮಾಡಿ ಇಷ್ಟಾರ್ಥಗಳನ್ನು ಪಡೆಯು ತ್ತಿದ್ದಾರೆ.

ಕ್ರಿ.ಶ. ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿ ಶ್ರೀನಿವಾಸಪ್ಪನೆಂಬ ಬ್ರಾಹ್ಮಣನು ಈ ಚೀಕಲಪರಿಯಲ್ಲಿ ವಾಸಮಾಡುತ್ತಿದ್ದನು. ಈತನ ಹೆಂಡತಿಯ ಹೆಸರು ಕೂಸಮ್ಮ. ಈ ದಂಪತಿಗಳು ಅಶ್ವತ್ಥನರಸಿಂಹನ ಅನುಗ್ರಹದಿಂದ ಮೂವರು ಮಕ್ಕಳನ್ನು ಪಡೆದರು. ಇವರಲ್ಲಿ ಹಿರಿಯನ ಹೆಸರು ದಾಸಪ್ಪ.

ಭರತಖಂಡ ಸಾಮಾನ್ಯದಲ್ಲಿ ಮಹಾಪುರುಷರೆನಿಸಿದವರು ವಿಶೇಷತಃ ಹಳ್ಳಿವಾಸಿ ಗಳು. ಬಡ ತಂದೆತಾಯಿಗಳಿಂದ ಜನಿಸಿದವರು.

ದಾಸಪ್ಪನಿಗೆ ಬಡತನದ ಕಾರಣದಿಂದಲೂ, ಹಳ್ಳಿಯ ವಾಸದಿಂದಲೂ ಹೆಚ್ಚಿನ ವಿದ್ಯಾಭ್ಯಾಸವಾಗಲಿಲ್ಲ. ಮುಂದೆ, ಪ್ರಖ್ಯಾತ **ವಿಜಯದಾಸ**ರೆನ್ನಿಸಿ ಸ್ವಾನುಭವವನ್ನು ಹೇಳಿಕೊಂಡಿರುವ ದೇವರನಾಮ ಸುಳಾದಿಗಳನ್ನು ನೋಡಿದರೆ ಒಪ್ಪೊತ್ತಿನ ಊಟಕ್ಕೆ ಅವಮಾನಪಟ್ಟು ಅಂಡಲೆದ ಕಥೆಯು ಗೊತ್ತಾಗುತ್ತದೆ. ತಂದೆತಾಯಿಗಳಿಗೆ ತಿಳಿಸದೆ ದೇಶಾಂತರ ಗತಿಯಾದ ಕನಿಕರದ ದೈನ್ಯಸ್ಥಿತಿಯು ಹೊರಬೀಳುತ್ತದೆ.

ಆ ಕಾಲದಲ್ಲಿ ಆದವಾನಿಯಲ್ಲಿ ರಾಘವೇಂದ್ರರಾಯನೆಂಬ ತಹಸೀಲ್ದಾರನಿದ್ದನು. ಆದವಾನಿಯಂಥಾ ಬಸಾಲತ್‌ಜಂಗನ ರಾಜಧಾನಿಯಲ್ಲೂ ತಹಸೀಲಿನ ಬಿಟ್ಟಿಬೇಗಾರಿ ಗಳಿಗೆ ಮಿತಿಯಿರಲಿಲ್ಲ. ಅಧಿಕಾರದ ಅರ್ಹತೆಯು ಆಗ ವಿದ್ಯದಲ್ಲಿರಲಿಲ್ಲ; ದಯಾದಾಕ್ಷಿ ಣ್ಯಾದಿ ಸದ್ಗುಣಗಳಲ್ಲಿರಲಿಲ್ಲ; ನಿಸ್ಪೃಹತೆಯಲ್ಲಿ ಮೊದಲೇ ಇರಲಿಲ್ಲ! ಹೆಚ್ಚು ಹೆಚ್ಚಾಗಿ ಜನರನ್ನು ಹಿಡಿಸಿ ಹೊಡೆಸಿದವನೂ, ಸುಲಿಗೆ ಮಾಡಿ ನವಾಬನ ಬೊಕ್ಕಸವನ್ನು ತುಂಬಿಸಿ ದವನೂ, ರಾಜಾನುಗ್ರಹಕ್ಕೆ ಪಾತ್ರನಾಗುತ್ತಿದ್ದನು. ಇವತ್ತಿಗೂ ಸರ್ಕಾರದ ರಕ್ಷಣೆಯ ಇಲಾಖೆಗಳಲ್ಲಿ (Police and Military)' ಹಿಂದುಗಳಿಗಿಂತ ಮುಸಲ್ಮಾನರು ದಕ್ಷ ರೆನಿಸಿಕೊಂಡಿರುವುದರ ರಹಸ್ಯವಿದರಲ್ಲಿರುವುದು.

ತಹಸೀಲ್ದಾರ ರಾಘವೇಂದ್ರರಾಯನಾದರೋ-ಯಾವ ರೀತಿಯಿಂದಲೂ ಮುಸಲ್ಮಾನ ಅಧಿಕಾರಿಗಳಿಗಿಂತ ಕಡಿಮೆಯಾಗಿರಲಿಲ್ಲ. ಆದ್ದರಿಂದಲೇ ರಾಜಾನುಗ್ರಹಕ್ಕೆ ಸಂಪೂರ್ಣ ಪಾತ್ರನಾಗಿ ಆದವಾನಿಯ ತಹಸೀಲಿಯಲ್ಲಿ ಅಧಿಕಾರ ಗಳಿಸಿದ್ದನು. ಸಾಲದುದಕ್ಕೆ ಆ ಸಂದರ್ಭದಲ್ಲಿ ರಾಘವೇಂದ್ರರಾಯನ ಮಗನ ಲಗ್ನ ಬೇರೆ ಒದಗಿತು. ತಾಲ್ಲೂಕಿನ ಪ್ರತಿ ಕುಲಕರಣಿಯೂ ಒಂದೊಂದು ಬುದ್ದಲಿ (ಕುದುರೆಯಮೇಲೆ ಹೇರುವ ಚರ್ಮದ ಹಸಿಬೆ) ತುಪ್ಪವನ್ನು ತಂದುಕೊಡಬೇಕೆಂಬ ಕಟ್ಟಲೆಯಾಯಿತು. ಇಷ್ಟುಮಾತ್ರವಲ್ಲದೆ ಪ್ರತಿ ಕುಲಕರಣಿಯೂ ಲಗ್ನಕಾಲದಲ್ಲಿ ಹಾಜರಿರಬೇಕು. ವಧೂವರರಿಗೆ ಯೋಗ್ಯ ಉಡುಗೊರೆಗಳನ್ನು ಓದಿಸಬೇಕು.

ಹೆಚ್ಚು ಉಡುಗೊರೆಯನ್ನು ಓದಿಸಿದವನು ತಹಸೀಲ್ದಾರನ ಪರಮಾನುಗ್ರಹಕ್ಕೆ ಪಾತ್ರನಾಗುತ್ತಿದ್ದನು. ಅವನಿಗೆ ತಹಸೀಲ್ದಾರನ ಪಕ್ಕದಲ್ಲಿ ಕುಳಿತು ಭೋಜನಮಾಡುವ ಸನ್ಮಾನ ದೊರೆಯುತ್ತಿತ್ತು. ಬಹುಮಾನದ ಸಲುವಾಗಿ ಕುಲಕರಣಿಗಳಲ್ಲಿ ಪೈಪೋಟಿ ನಡೆದು ಶ್ರೀಮಂತನಾದವನು ಜಯಶೀಲನಾಗುತ್ತಿದ್ದನು.

ಆದವಾನಿಯಂಥಾ ರಾಜಧಾನಿ! ಬಸಾಲತ್‌ಜಂಗನಂಥಾ ನವಾಬನನ್ನು ಮನೆಗೆ ಕರೆಯುವ ಲಗ್ನ ಸಮಾರಂಭ! ಅಗಾಧವಾದ ಕಲ್ಯಾಣಮಂಟಪ! ವಾದ್ಯ ವೈಭವಗಳು! ಸೂಳೆಯರ ಮೇಳಗಳು! ಸಡಗರದ ನೆಂಟರಿಷ್ಟರು. ಮೃಷ್ಟಾನ್ನ ಭೋಜನಕ್ಕೆ ಇದೇ ಸಮಯವೆಂದು ಹಾತೊರೆದು ನೆರೆದಿರುವ ತಿರುಕ ಹಾರವರ ಸಂದಣಿ! ಎಲ್ಲೆಲ್ಲೂ ಗಡಿಬಿಡಿ!

ಚೀಕಲಪರಿಯ ದಾಸಪ್ಪನಿಗೆ ತಹಸೀಲ್ದಾರನ ಮಗನ ಲಗ್ನವಾರ್ತೆಯು ತಿಳಿಯಿತು. ಯಾರಿಗುಂಟು ಯಾರಿಗಿಲ್ಲ! ಎಂಟಾನೆಂಟುದಿನಗಳ ಮೃಷ್ಟಾನ್ನಭೋಜನ-ದಕ್ಷಿಣೆಗಳು! ಆದವಾನಿಗೆ ಬಂದಿಳಿದನು. ಲಗ್ನಮಂಟಪದಲ್ಲಿ ನೆರೆದಿದ್ದ ಭೋಜನಕೂಟದಲ್ಲಿ ಸಾಲಾಗಿ ಕುಳಿತಿದ್ದ ಸಾವಿರಾರು ಮಂದಿ ಬ್ರಾಹ್ಮಣರ ಗುಂಪಿನಲ್ಲಿ, ಇದ್ದದ್ದರಲ್ಲಿ ಉಚ್ಚಸ್ಥಾನದಲ್ಲಿ ಒಂದಗ್ರಎಲೆಯ ಮುಂದೆ ಕುಳಿತನು. ದಾಸಪ್ಪನು ಬಡವನಾಗಿದ್ದರೂ ದೃಢಾಂಗನಾಗಿದ್ದನು. ಬಡತನ ದಡ್ಡತನಗಳ ಸೌಲಭ್ಯ ತೆಗೆದುಕೊಂಡು ಜನರು ಅವನನ್ನು '**ಕೂಸೀ ಮಗ ದಾಸ**'ನೆಂದು ಕರೆಯುತ್ತಿದ್ದರು.

ಇನ್ನೇನು ಭೋಜನಕ್ಕೆ ಕೂಡುವ ಸಮಯ! ಅಷ್ಟರಲ್ಲಿ ರಾಘವೇಂದ್ರರಾಯನು ಪಜ್ತಿಯಮೇಲೆ ಬಂದನು. ಅವನುಟ್ಟ ಪೀತಾಂಬರ! ಕೈಯೊಳಗಿನ ಭಂಗಾರದ ಥಾಲಿ! ಬೆರಳುಗಳಲ್ಲಿನ ಉಂಗುರಗಳು! ಅವನ ಬೊಜ್ಜುಹೊಟ್ಟೆ! ಇವುಗಳನ್ನು ನೋಡಿ ಜನರು ಬೆರಗಾದರು. ಮಹರಾಯ, ಮಹರಾಯ! ನಳಮಾಂಧಾತರಾಯನೆಂದು ರಾಯನನ್ನು ಹೊಗಳಿದರು. ರಾಯನು ಸಂತುಷ್ಟನಾಗಿ ಮೀಸೆಯಮೇಲೆ ಕೈಯಾಡಿಸಿದನು.

ರಾಯನು ಪಜ್ತಿಯಮೇಲೆ ಬಂದ ಕಾರಣವು ಬೇರೆಯಾಗಿತ್ತು. ಸಾವಿರಾರು ಜನರಿಗೆ ಗಂಧವನ್ನು ತೇಯ್ದು ಒಪಗಿಸುವ ಬಿಟ್ಟಿಯನ್ನು ಕಂಡುಹಿಡಿಯುವುದಾಗಿತ್ತು. ದುರ್ದೈವಕ್ಕೆ ತಕ್ಕಂತೆ ದಾಸಪ್ಪನಮೇಲೆ ತಹಸೀಲ್ದಾರನ ಕಟಾಕ್ಷವಾಯಿತು. 'ಏಳು, ಏಳು, ಮರಗಟ್ಟಲೆ ತಿನ್ನುವುದಕ್ಕೆ ಕುಳಿತೆಯಾ? ನಿನಗೇನು ಧಾಡಿ? ಈ ಕೊರಡು

ಮುಗಿಯುವತನಕ ಗಂಧವನ್ನು ತೇಯಿ ನಡೆ! ನಿನ್ನ ಹೆಸರೇನು?' ಎಂದು ಜಬರಿಸಿದನು. ದಾಸಪ್ಪನಿಗೆ ಅವಮಾನವಾಯಿತು, ಉಪಾಯವಿಲ್ಲದೆ ಎದ್ದು ನಿಂತನು.

ತಹಸೀಲ್ದಾರ :—ಸುಮ್ಮನೆ ನಿಂತೆಯಾ? ನಿನ್ನ ಹೆಸರೇನು!

ದಾಸಪ್ಪ :—ದಾಸಪ್ಪ!

ತಹಸೀಲ್ದಾರ :—ಯಾವೂರ ದಾಸಪ್ಪ? ದಾಸ! ಅಪ್ಪ!

ದಾಸಪ್ಪ :—ಚೀಕಲಪರಿಯ ದಾಸಪ್ಪ!

ತಹಸೀಲ್ದಾರ :—ನೀನೇನೋ ಆ 'ಕೂಸೀಮಗದಾಸ?' ನಡೆ ನಡೆ.

ದಾಸಪ್ಪನಿಗೆ ಈ ಮಾತಿನಿಂದ ಬಹಳ ಮನೋವ್ಯಥೆಯುಂಟಾಯಿತು! ಮಾಡುವನೇನು? ಬಡತನ! ಹಾಳು ಹೊಟ್ಟೆ! ತುಲಸೀಕಟ್ಟೆಯಮೇಲೆ ಗಂಧವನ್ನು ತೇಯುತ್ತಾ ಕುಳಿತನು. ಮೊದಲನೇ ಪಙ್ತಿಯಾಯಿತು. ಎರಡನೇ ಪಙ್ತಿಯಾಯಿತು. ಮೂರನೇ ಪಙ್ತಿಗೂ ಊಟಕ್ಕೆ ಬಾರೆಂದು ಅವನನ್ನು ಯಾರೂ ಕರೆಯಲಿಲ್ಲ. ಸಂಜೆಯಾಯಿತು. ಉರುಟಣೆ ಆರತಿಗಳಾದುವು. ರಾತ್ರಿ ಭೋಜನವೂ ಆಯಿತು. ಎಲ್ಲೆಲ್ಲಿದ್ದವರು ಅಲ್ಲಲ್ಲೆ ಮಲಗಿದರು. ದಾಸಪ್ಪನು ಅಪ್ಪುಗೈ ಹಾಕಿಕೊಂಡು ಬೃಂದಾವನದ ಬಳಿಯಲ್ಲಿ ಕುಳಿತನು. ರಾಘವೇಂದ್ರರಾಯನಂಥಾ ಶ್ರೀಮಂತ–ತಹಸೀಲ್ದಾರನು ಬಡವನನ್ನು ಜ್ಞಾಪಿಸಿಕೊಳ್ಳುವುದುಂಟೆ?

ಬಂದ ಬಂಧುಜನರ ಯೋಗಕ್ಷೇಮ ವಿತರಣೆಯಲ್ಲಿ ಮನೆಯ ಯಜಮಾನನಿಗೇ ಮಲಗಲು ಸ್ಥಳ ದೊರೆಯಲಿಲ್ಲ. ರಾತ್ರೆ ಎಷ್ಟೋ ಹೊತ್ತಾದಮೇಲೆ, ಹಾಸಿಗೆಯನ್ನು ಹೊರಿಸಿಕೊಂಡು, ಕೈದೀಪ ಹಿಡಿಸಿಕೊಂಡು ತಹಸೀಲ್ದಾರನು ಅಂಗಳಕ್ಕೆ ಬಂದನು. ರಾಯ ಬಂದನೆಂಬ ಭಯದಿಂದ ದಾಸಪ್ಪನು ಎದ್ದುನಿಂತನು. ಅವನ ಮೇಲೆ ಮತ್ತೆ ರಾಯರ ಕಟಾಕ್ಷವಾಯಿತು.

ತಹಸೀಲ್ದಾರ :—ಯಾರದು ನಿಂತಿರುವವರು?

ದಾಸಪ್ಪ :—ನಾನು ದಾಸಪ್ಪ!

ತಹಸೀಲ್ದಾರ :—ಥೂ ನಿನ್ನ ಮನೆ ಹಾಳಾಗ! ಇಲ್ಲೇಕೆ ನಿಂತೆ ದೆವ್ವದ ಹಾಗೆ! ಹೋಗು ಎಲ್ಲಾದರೂ!

ದಾಸಪ್ಪನಿಗೆ ಊಟದ ಮಾತಂತಿರಲಿ! ರಾತ್ರೆ ಇರುವುದಕ್ಕೂ ಸ್ಥಳವಿಲ್ಲದಂತಾಯಿತು. ಸೇವಕರು ಅವನನ್ನು ಮನೆಯಿಂದ ಹೊರಡಿಸಿ ಕವಾಟ ಬಂಧನಮಾಡಿದರು. ತುಲಸೀಕಟ್ಟೆಯ ಮೇಲೆ ತಹಸೀಲ್ದಾರನಿಗೆ ಶಯನವಾಯಿತು.

ದಾಸಪ್ಪನು ತನ್ನ ಮನಸ್ಸಿನಲ್ಲಿ–ಒಂದು ತುತ್ತನ್ನಕ್ಕಾಗಿ ಎಷ್ಟು ಅವಮಾನ ಶ್ರೀ ಹರೇ! ಇಂಥಾ ಬಾಳು ಹಾಳಾಗಲಿ! ಎಂದುಕೊಂಡು ದುಃಖಿಸುತ್ತಾ, ಯಾರ ಮನೆಯಲ್ಲೂ ಸ್ಥಳ ಸಿಗದೆ ಕಾಲು ಹೋದಕಡೆ ನಡೆದು ಬೆಳಗಾಗುವ ಹೊತ್ತಿಗೆ ಛಾಗಿಗೆ ಬಂದನು.

ಭಾಗಿಯ ಕುಲಕರಣಿ ಕೇಶವರಾಯನು, ತಲೆಗೆ ಲಪ್ಪಾಟಿಯನ್ನು ಸುತ್ತಿ, ಕೈಯಲ್ಲಿ ತಂಬಿಗೆಯನ್ನು ಹಿಡಿದು,-ಎದುರಿಗೆ ಬರುತ್ತಿದ್ದ ದಾಸಪ್ಪನನ್ನು ಕಂಡನು. ಅಚ್ಚಳಿಯದಂತಿದ್ದ ನಾಮಮುದ್ರೆಗಳನ್ನು ನೋಡಿ, ಯಾರೋ ಆಚಾರ್ಯರೆಂದು-

ಕೇಶವರಾಯ :—ಆಚಾರ್ಯಸ್ವಾಮಿಾ, ಬೇಗ ಮನೆಗೆ ನಡೆಯಿರಿ. ನಾನು ಆದವಾನಿಗೆ ಹೋಗಬೇಕು. ನನ್ನ ಪಙ್ಕ್ತಿಗೆ ಬರುವದಿದ್ದರೆ, ಈಗಲೇ ನಿಮ್ಮ ಸ್ನಾನ ವಾಗಲಿ-ನಿಮ್ಮದೇ ನೈವೇದ್ಯವಾಗಲಿ !

ದಾಸಪ್ಪ :—ಆಗಲಿ ರಾಯರೇ ! ತಮ್ಮ ಪಙ್ಕ್ತಿಗೇ ಬರುತ್ತೇನೆ. ನನಗಾದರೂ ಹಸಿವೆಯಾಗಿದೆ. ಪ್ರಯಾಣದ ಅವಸರವಿದೆ.

ಕೇಶವರಾಯ :— ಹಾಗಿದ್ದರೆ ನಡೆಯಿರಿ. ಈಗ ಬರುತ್ತೇನೆ.

ಕೇಶವರಾಯನು ಸಾಲದೇ ಬಂತೆಂದು ಮತ್ತೊಂದು ಬುಡ್ಡಲಿ ತುಪ್ಪವನ್ನು ಕುದುರೆಯ ಮೇಲೆ ಹೇರಿಸಿದ್ದನು. ಅವಸರದ ಊಟಕ್ಕೆ ಎರಡುಸೇರು ಹುಗ್ಗಿ, ತಕ್ಕಷ್ಟು ಗೊಜ್ಜು ತಯಾರಾಗಿತ್ತು. ದಾಸಪ್ಪನ ಸ್ನಾನವಾಯಿತು. ಅವನೇ ನೈವೇದ್ಯ ಸಮರ್ಪಣೆ ಮಾಡಿದನು. ಇಬ್ಬರೂ ಭೋಜನಕ್ಕೆ ಕುಳಿತರು. ರಾಯನ ಉಪಚಾರೋಕ್ತಿಗಳಿಂದ ಮಕ್ಕಳಿಗೆ ಸಹ ಮಿಗದಂತೆ ದಾಸಪ್ಪನೇ ಎಲ್ಲವನ್ನೂ ಭುಂಜಿಸಿದನು. ರಾಯನ ತಾಯಿಯು ಬ್ರಾಹ್ಮಣರು ಭೋಕ್ತಾಪುರುಷರೆಂದು ಸಮೃದ್ಧಿಯಾಗಿ ಬೆಣ್ಣೆ ಮೊಸರುಗಳನ್ನು ಬಡಿಸಿದಳು. ರಾಯನು ಒಂದು ರೂಪಾಯಿ ದೇಶಾವರವನ್ನೂ ಕೊಟ್ಟು ಆದವಾನಿಗೆ ಪ್ರಯಾಣ ಮಾಡಿದನು.

ದಾಸಪ್ಪನು ತಹಸೀಲ್ದಾರನ ಮನೆಯಲ್ಲಾದ ಅವಮಾನವನ್ನು ಸ್ಮರಿಸಿ ಕೊಳ್ಳುತ್ತಾ, ಊರಿಗೆ ಹೋಗದೆ, ತಂದೆತಾಯಿಗಳಿಗೆ ವರ್ತಮಾನವನ್ನೂ ಕೊಡದೆ, ಉತ್ತರಯಾತ್ರೆಗೆ ತೆರಳಿದನು-'ಬಡ ತಂದೆತಾಯಿಗಳೇನುಮಾಡುವರು? ಅವರಲ್ಲಿ ವಿತ್ತವಿಲ್ಲ; ನನ್ನಲ್ಲಿ ವಿದ್ಯವಿಲ್ಲ. ನನಗಾಗಿ ಅಳುವ ಹೆಂಡಿರು ಮಕ್ಕಳು ಮೊದಲೇ ಇಲ್ಲ. ಇಂತಹ ಬಾಳ್ವೆಯು ಹಾಳಾಗಲಿ ! ನಾನಾಗಿ ಆತ್ಮಹತ್ಯ ಮಾಡಿಕೊಂಡರೆ ಪಾಪ ! ಕಾಡುಮೃಗಗಳಾದರೂ ನನ್ನನ್ನು ತಿನ್ನಲಿ. ರೋಗದಿಂದಾದರೂ ನನಗೆ ಮರಣಬರಲಿ.' ಎನ್ನುತ್ತಾ ಮಾರ್ಗಕ್ರಮಣಮಾಡಿ, ಕಾಶಿಯನ್ನು ಸೇರಿ, ಗಂಗೆ ಮೊದಲಾದ ತೀರ್ಥಗಳಲ್ಲಿ ಮಿಂದು, ಕ್ಷೇತ್ರಮೂರ್ತಿಗಳ ದರ್ಶನಮಾಡಿ, ವಿರಾಗಿಯಾಗಿ ನಾಲ್ಕು ವರ್ಷಕಾಲ ಸಂಚರಿಸಿ, ಮರಳಿ ತನ್ನ ಇಪ್ಪತ್ತನೇ ವಯಸ್ಸಿಗೆ ಚೀಕಲಪರಿಗೆ ಬಂದನು. ಕೇಶವರಾಯನ ಮನೆಯ ಹುಗ್ಗಿ ಇನ್ನೂ ನನ್ನುದರದಲ್ಲಿದೆಯೆಂದನು. ಅವನಿಗೆ ಪ್ರತ್ಯುಪಕಾರವೇನು ಮಾಡಲೆಂದು ಕೊಂಡನು.

ದೇಶಾಂತರಗತನಾಗಿದ್ದ ಮಗನನ್ನು ನೋಡಿ ತಂದೆತಾಯಿಗಳಿಗೆ ಪರಮಾನಂದ ವಾಯಿತು. ಹೀಗೇ ಇದ್ದರೆ ಮತ್ತೆಲ್ಲಾದರೂ ಹೋಗಿಬಿಡುವನೆಂದು ಚೀಕಲಪರಿಯಲ್ಲೇ ಇದ್ದ ಅರಳಮ್ಮ (ಅರಳಿಯಮ್ಮ=ಅಶ್ವತ್ಥನರಸಿಂಹದೇವರ ಹೆಸರು) ನೆಂಬ ಕನ್ನಿಕೆಯನ್ನು

ತಂದು ವಿವಾಹಮಾಡಿದರು. ದಾಸಪ್ಪನು ಆ ಪತ್ನಿಯೊಂದಿಗೆ ಹದಿನಾರುವರುಷ ಸಂಸಾರ ಮಾಡಿಕೊಂಡಿದ್ದು-ತಂದೆತಾಯಿಗಳು ಮೃತರಾಗುತ್ತಲೇ-ಮತ್ತೆ ಕಾಶೀಯಾತ್ರೆಮಾಡುವೆ ನೆಂದು ಪ್ರಯಾಣಮಾಡಿದನು, ಮಾರ್ಗದಲ್ಲಿ ಕಳ್ಳರು ಆತನನ್ನು ಬಡಿದು, ಇದ್ದ ಒಂದು ತಂಬಿಗೆಯನ್ನೂ ಅಪಹರಿಸಿದರು. ತಂಬಿಗೆಯಿದ್ದರೆ, ಅದರ ಅಭಿಮಾನವಾದರೂ ಇರು ತ್ತಿತ್ತು-ಅದೂ ಹೋಗಿ ಮತ್ತಷ್ಟು ನಿಶ್ಚಿಂತೆಯಾಯಿತು. ಭಗವದನುಗ್ರಹವಾದರೆ ಮನೆಗೆ ಹೋಗುವೆನು, ಇಲ್ಲದಿದ್ದರೆ ಮಣಿಕರ್ಣಿಕೆಯಲ್ಲಿ ದೇಹತ್ಯಾಗಮಾಡಿದರೆ ಆತ್ಮಹತ್ಯಾ ದೋಷಬರುವುದಿಲ್ಲವೆಂದು ಹಿರಿಯರು ಹೇಳುತ್ತಿದ್ದರು, ಎಂದು ಮೊದಲಾಗಿ ಯೋಚಿ ಸುತ್ತಾ ಕಾಶಿಗೆ ಬಂದನು. ಅಲ್ಲಿಂದ ಗಯೆಗೆ ಹೋಗಿ ವಿಷ್ಣುಪಾದದಲ್ಲಿ ಪಿಂಡದಾನಮಾಡಿ ಪಿತೃಋಣ ತೀರಿಸಿಕೊಂಡನು. ಮತ್ತೆ ಕಾಶಿಗೆ ಬಂದು ಸಾಧುಗಳ ಗುಂಪಿನಲ್ಲಿ ಸೇರಿ, ಎಂದಾದರೂ, ಯಾವುದಾದರೂ ಛತ್ರದಲ್ಲಿ ಊಟಮಾಡಿ, ಶುದ್ಧ ಮನಸ್ಸಿನಿಂದ ಶ್ರೀಹರಿ ಯನ್ನು ಧ್ಯಾನಿಸುತ್ತಾ ಕಾಲಯಾಪನೆ ಮಾಡಿದನು.

ಇಷ್ಟು ಕಷ್ಟಗಳನ್ನು ಅನುಭವಿಸಿ, ಅನನ್ಯ ಗತಿಕನಾಗಿ ಧ್ಯಾನಿಸುತ್ತಿ ರಲು, ಒಂದು ರಾತ್ರಿ ಸ್ವಪ್ನದಲ್ಲಿ-ಮಲಗಿದ್ದ ಮಗನನ್ನು ತಂದೆಯು ಎಬ್ಬಿಸು ವಂತೆ, ಶ್ರೀಹರಿಯು ಪುರಂದರದಾಸರ ರೂಪದಿಂದ ಬಂದು ದಾಸಪ್ಪನನ್ನು ಎಬ್ಬಿಸಿದನು. ಗಂಗೆಯ ಆಚೆಯ ದಡದಲ್ಲಿರುವ ವ್ಯಾಸಕಾಶಿಗೆ ಕರೆದೊಯ್ದನು. ವೇದವ್ಯಾಸರ ದರ್ಶನಮಾಡಿಸಿದನು. ಇಂದಿನಿಂದ ನೀನು ಹರಿದಾಸನಾದೆ ಯೆಂದು ಆತನ ನಾಲಿಗೆಯ ಮೇಲೆ 'ವಿ ಜ ಯ' ಎಂಬ ಬೀಜಾಕ್ಷರಗಳನ್ನು ಬರೆದನು. ನೀನು ಮಹಾಕವಿಯೆನಿಸಿ ರಾಜಾಧಿರಾಜರಂತೆ ವಿಭವಶಾಲಿ ಯಾಗುವೆಯೆಂದು ಹರಸಿದನು. ಸ್ವಪ್ನದಲ್ಲೇ ದಾಸಪ್ಪನು-ದಾಸರೂಪೀ ಭಗ ವಂತನಿಗೂ ವೇದವ್ಯಾಸರಿಗೂ ವಂದನೆ ಮಾಡಿದನು. ಉತ್ತರ ಕ್ಷಣದಲ್ಲಿ ಎದ್ದು ಕುಳಿತನು.

ಆ ನಿಮಿಷದಿಂದ ದಾಸಪ್ಪನ ದೃಷ್ಟಿಯೇ ಬದಲಾಯಿತು. ಆಡಿದ ಮಾತು ಹಾಡಾಯಿತು. ಮಣಿಕರ್ಣಿಕೆಯ ಘಟ್ಟದಲ್ಲಿ ಜಪಮಾಡುತ್ತಾ ಕುಳಿತರೆ ಬಂದು ಬಂದು ವಂದಿಸುವ ಜನರೇನು, ವಸ್ತ್ರಗಳನ್ನೂ ದಕ್ಷಿಣೆಯನ್ನೂ ಮುಂದಿಡುವದೇನು? ನಾನು ತಾನೆಂದು ಸೇವಿಸುವ ಜನರೇನು! ಎಂಟು ಹತ್ತುದಿನಗಳೊಳಗಾಗಿ ದಾಸಪ್ಪನ ಬಿಡಾರವು ವಿಜಯದಾಸರ ಮಠವಾಗಿ ಹೋಯಿತು. ದಕ್ಷಿಣದೇಶದ ಯಾತ್ರಿಕರೆಲ್ಲಾ ದಾಸರನ್ನಾ ಶ್ರಯಿಸಿದರು. ಸ್ವಪ್ನವು ಅಕ್ಷರಶಃ ಸತ್ಯವಾಯಿತು. ಅಷ್ಟರಲ್ಲೇ ಆತನು, ಅನೇಕ ದೇವರ ನಾಮಗಳನ್ನು ಹಾಡಿ ವಿಜಯ ವಿಠಲನಿಗರ್ಪಿಸಿದನು. ದಾಸಪ್ಪನೆಂದು ಕರೆಯುವ ಜನರೇ ಇಲ್ಲವಾಯಿತು. ವಿಜಯದಾಸರೆಂಬ ವಿಖ್ಯಾತಿಯುಂಟಾಯಿತು. ದಾಸರ ಬಾಯಿಂದ ಬಂದ ಮಾತುಗಳು ವೇದವಾಕ್ಯಗಳಂತೆ ಗೌರವಾರ್ಹವಾದುವು. ದಾಸರ ಸಿದ್ಧಿಯು ಪ್ರಸಿದ್ಧಿ ಯಾಗಿ ಕಾಶೀ ಮಹಾರಾಜನ ಕಿವಿಗೆ ಮುಟ್ಟಿತು. ಅವನು ಮೇನೆ ಪಲ್ಲಕ್ಕಿಗಳನ್ನೂ ವಸ್ತ್ರ ಬಹುಮಾನಗಳನ್ನೂ ತಂದೊಪ್ಪಿಸಿದನು.

'ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ' ಎಂಬಂತೆ ಭಗವದನು ಗ್ರಹವಾದಮೇಲೆ ಕೇಳುವುದೇನು ?

ಲೋಕದಲ್ಲಿ ಐದು ಪ್ರಕಾರದ ಸಿದ್ಧಪುರುಷರಿರುವರು. ಇವರಲ್ಲಿ **ನಿತ್ಯಸಿದ್ಧರು ಕೆಲವರು, ಮಂತ್ರಸಿದ್ಧರು ಕೆಲವರು, ಕೃಪಾಸಿದ್ಧರು ಕೆಲವರು, ಹಠಸಿದ್ಧರು ಕೆಲವರು, ಸ್ವಪ್ನಸಿದ್ಧರು ಕೆಲವರು.** ಪರಶು ಶಿಲೆ ಸೋಕಿದ ಕಬ್ಬಿಣವು ಭಂಗಾರ ವಾಗುವಂತೆ ಸಿದ್ಧಪುರುಷರು ಪರಮಪಾವನರಾಗುವರು. ಅವರು ಮರಳಿ ಸಂಸಾರಕ್ಕೆ ಬಾರರು. ಕದಾಚಿತ್ ಬಲವತ್ತರ ಕಾರಣಗಳಿಂದ ಜನ್ಮ ತಾಳಿದರೂ ಅಂಥವರಿಂದ ಪಾಪ ಕರ್ಮಗಳಾಗುವುದಿಲ್ಲ.

ಭಗವದನುಗ್ರಹವಾದರೆ ಮನೆ, ಇಲ್ಲದಿದ್ದರೆ ಮರಣವೆಂದು ಜೀವದ ಹಂಗು ತೊರೆದು ಬಂದ ದಾಸಪ್ಪನು ಇಂದು ಮಹಾ ಸಿದ್ಧಪುರುಷನೆನಿಸಿದನು. ಕೂಸಿಮಗ ದಾಸನು, **ವಿಜಯದಾಸರು** ಎಂಬ ಪಾವನ ನಾಮದಿಂದ ಕರೆಸಿಕೊಂಡನು.

ಕಾಶಿಯಿಂದ ಪ್ರಯಾಣ ಹೊರಟರೆ, ವಿಜಯದಾಸರ ಜೊತೆಯಲ್ಲಿ ಮೇನೆ ಪಲ್ಲಕ್ಕಿಗಳೂ ಹೊರಟವು. ನೂರಾರು ಜನ ಶಿಷ್ಯರಾದರು. ಊರಿಂದೂರಿಗೆ ದಾಸರ ಆಗಮನವನ್ನು ತಿಳಿಸುವ ವಾರ್ತಾವಾಹಿಗಳಾದರು ಸಾಮಾನುಗಳನ್ನು ಹೊರುವುದಕ್ಕೆ ಎತ್ತು ಕುದುರೆಗಳೊದಗಿದುವು. ರಾಜಧಾನಿ ನಗರಗಳಲ್ಲಿ ರಾಜಾಧಿರಾಜರಿಂದ ಸನ್ಮಾನ ! ಊರೂರುಗಳಲ್ಲಿ ಜನಮಂಡಲಿಗಳಿಂದ ಸ್ವಾಗತ ! ಹೋದ ಕಡೆಯೆಲ್ಲಾ ಮೃಷ್ಟಾನ್ನ ಭೋಜನ ! ಬೇಡಬೇಡವೆಂದರೂ ಬರುವ ಶಾಲು ಶಕಲಾತಿಗಳು ! ಹೀಗೆಲ್ಲಾ ದಾಸರ ವೈಭವ ಹೆಚ್ಚಿತು. ವಿಜಯನಗರದ ಜಮೀನ್ದಾರನು (ಗೋದಾವರಿ ಜಿಲ್ಲೆ) ವಿಜಯ ದಾಸರ ಖ್ಯಾತಿಯನ್ನು ಕೇಳಿ, ಚಕ್ರವರ್ತಿಗಳಿಗಾಗಲೀ, ಜಗದ್ಗುರುಗಳಿಗಾಗಲೀ ಮಾಡು ವಂತೆ ಮಹಾ ಸನ್ಮಾನ ಮಾಡಿದನು. ದಾಸರಿಂದ ಕಥಾಶ್ರವಣ ಮಾಡಿ ಕೃತಾರ್ಥನಾದೆ ನೆಂದನು.

ಈ ಎಲ್ಲವನ್ನೂ ಒಂದೊಂದಾಗಿ ಧ್ಯಾನಿಸಿಕೊಂಡು, ತಮ್ಮಲ್ಲಿ ತಾವೇ ನಗುತ್ತಾ ಆಶ್ಚರ್ಯಪಡುತ್ತಾ, ಪರಮಾತ್ಮನನ್ನು ವಂದಿಸುತ್ತಾ, ಆದವಾನಿಯ ತಹಸೀಲ್ದಾರನನ್ನು ಜ್ಞಾಪಿಸಿಕೊಳ್ಳುತ್ತಾ, ಭಾಗೀ ಕೇಶವರಾಯನ ಮನೆಯ ಹುಗ್ಗಿಯನ್ನೂ ಆತನ ಉಪಕಾರ ವನ್ನೂ ಸ್ಮರಿಸಿಕೊಂಡು ಮಹಾನುಭಾವರಾದ ವಿಜಯದಾಸರು ಒಮ್ಮೆ—

ಸೌರಾಷ್ಟ್ರ — ಅಟ್ಟತಾಳ

ನಿನ್ನ ಒಲುಮೆಯಿಂದ । ನಿಖಿಳ ಜನರು ಬಂದು । ಮನ್ನಿಸುವರೊ ಮಹಾರಾಯ ॥ ಎನ್ನ ಪುಣ್ಯಗಳಿಂದ ಈ ಪರಿಯುಂಟೇನೋ । ನಿನ್ನದೆ ಸಕಲ ಸಂಪತ್ತೂ ॥ ಪ ॥

ಸಂಜೆ ತನಕ ಇದ್ದು ಸಣ್ಣ ಸೌಟು ತುಂಬ
ಗಂಜಿ ಕಾಣದೆ ಬಳಲಿದೆನೋ । ಹಿಂದೆ ॥
ವ್ಯಂಜನ ನಾನಾ ಸುಭಕ್ಷ್ಯಭೋಜ್ಯಂಗಳ
ಭುಂಜಿಸುವುದು ಮತ್ತೇನೋ ೧

ಒಬ್ಬ ಹೆಂಗಸಿಗೆ ಅನ್ನವ ನಿಕ್ಕುವುದಕೆ ನಾ
ತಬ್ಬಿಬ್ಬುಗೊಂಡೆನೊ ಹಿಂದೆ ॥
ನಿರ್ಭರದಿಂದಲಿ ಸರ್ಬರಕೂಡಿನ್ನು
ಹಬ್ಬವನುಂಬೆ ಶ್ರೀ ಹರಿಯೇ ೨

ನೀಚತ್ವ ತಿಳಿಯದೆ ಸರ್ವರ ಚರಣಕ್ಕೆ॥
*ಚಾಚಿದೆನೋ ಸಲೆ ಹಸ್ತಗಳ ॥
ಯೋಚಿಸಿ ನೋಡಲು ಸೋಜಿಗವಾಗಿದೆ
ವಾಚಕ್ಕೆ ನಿಲುಕದು ಹರಿಯೇ ೩

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ
ಮೆದ್ದೆನೆಂದರೆ ಈಯಗಾಣೆ ॥
ಇದ್ಧರೆಯೊಳು ಸತ್ಪಾತ್ರರಿಗುಣಿಸುವ
ಪದ್ಧತಿಯೇನೊ ಧರ್ಮಾತ್ಮಾ ೪

ಜೀರ್ಣಮಲಿನವಸ್ತ್ರ ಕಾಣದ ಮನುಜಗೆ
ಊರ್ಣವಿಚಿತ್ರದ ವಸನಾ ॥
ವರ್ಣವರ್ಣಗಳಿಂದ ಬಾಹೋದಿದೇನೊ ಸಂ
ಪೂರ್ಣಗುಣಾರ್ಣವ ದೇವ ೫

ವೈದೀಕ ವೃತ್ತಿಯ ಕೊಡುವಗೆ ಲೌಕಿಕ
ವೈದಿಸುವುದು ಬಲು ಖ್ಯಾತೇ ॥
ಮೈದುನಗೊಲಿದ ಶ್ರೀ ವಿಜಯವಿಠ್ಠಲ ನಿನ್ನ
ಪಾದಸಾಕ್ಷಿ ಅನುಭವವೋ ೬

ಎಂಬುದಾಗಿ ಪರಮಾತ್ಮನನ್ನು ಸ್ತೋತ್ರಮಾಡಿದರು.

ವಿಜಯದಾಸರು ಕಾಶಿಯಿಂದ ಕರ್ಣಾಟಕಕ್ಕೆ ಬರುವುದಕ್ಕೆ ವರ್ಷಾಂತರಗಳಾದುವು. ಊರೂರಲ್ಲಿ ಜನರ ಸ್ವಾಗತ! ಆ ಜನರಿಗೆ ಭಾಗವತ ಧರ್ಮೋಪದೇಶ. ಒಂದೊಂದು ವೇಳೆಯಲ್ಲಿ ನೀರು ನೆರಳಿಗಭಾವವಾದ ಗೊಂಡಾರಣ್ಯದಲ್ಲಿ ಬಿಡಾರ. ಈ ರೀತಿ ಪ್ರಯಾಣ ಸಾಗಿತು. ಒಮ್ಮೆ ಒಂದು ಅರಣ್ಯಮಧ್ಯದಲ್ಲಿ ಯುಗಾದಿಯಂಥಾ ಹಬ್ಬದ ದಿನ ನಿಲ್ಲಬೇಕಾಯಿತು. ಜನರು ವರ್ಷಾದಿಯಲ್ಲಿ ಅರಣ್ಯದಲ್ಲಿರಬೇಕಾಯಿತೆಂದು

* ಚಾಚಿದೆ ನೊಸಲ ಹಸ್ತಗಳ (ಪಾ.)

ಮಿಡುಕಿದರು. ಎಡಬಲ ಎಲ್ಲಿ ನೋಡಿದರೂ ವಾಸಾರ್ಹವಾದ ಗ್ರಾಮ ದೊರೆಯಲಿಲ್ಲ. ಗ್ರಾಮವಿದ್ದರೆ ನೀರಿಗಭಾವ! ತೀಕ್ಷ್ಣವಾದ ಬಿಸಿಲ ಬಾಧೆ! ಮಾಡುವುದೇನು?

ಇಂಥಾ ಪರಿಸ್ಥಿತಿಯಲ್ಲಿ ಜೊತೆಯಲ್ಲಿದ್ದ ಜನರಿಗೆ ಹಬ್ಬವಾಗಬೇಕಾಯಿತು, ಜನರಿಗೆ ಮಂಗಳಸ್ನಾನವಾಗಬೇಕಾಯಿತು, ಮೃಷ್ಟಾನ್ನಭೋಜನವಾಗಬೇಕಾಯಿತು. ದಾಸರು ತಮ್ಮ ಬಳಿಯಲ್ಲಿ ಉಡುಗೊರೆಗಳಾಗಿ ಬಂದಿದ್ದ ನೂತನ ವಸ್ತ್ರಗಳನ್ನು ಎಲ್ಲರಿಗೂ ದಾನಮಾಡಿದರು. ರಾತ್ರಿ ಕೀರ್ತನಕಾಲದಲ್ಲಿ ಹಬ್ಬವೆಂದರೇನು? ಹಬ್ಬವನ್ನು ಮಾಡುವ ಬಗೆ ಹೇಗೆ? ಜನರನ್ನು ಕಾಡಿ ಬೇಡಿ ಹಬ್ಬ ಮಾಡಿದರೆ ಹಬ್ಬವಾಗುವುದೆ? ಸಾಲ ವಾದರೂ ತಂದು ಮೃಷ್ಟಾನ್ನವುಂಡರೆ ಹಬ್ಬವಾಗುವುದೆ? ಎಂಬ ವಿಚಾರಗಳಮೇಲೆ ಭಾಷಣ ಮಾಡತೊಡಗಿದರು. ಬರೇ ಹಬ್ಬದ ಪ್ರಸ್ತಾವನೆಯೇ ಆ ದಿನದ ಕೀರ್ತನವಾಯಿತು. ಹಬ್ಬದ ವಿವರವನ್ನು ವರ್ಣಿಸಿ ಕೆಳಕಂಡ ಸುಳಾದಿಯನ್ನು ಹಾಡಿದರು.

ಹಬ್ಬ ಸುಳಾದಿ

ಧ್ರುವತಾಳ

ಹಬ್ಬಗಳಿವೆ ಕೇಳಿ ಊರ್ಬಿಯೊಳಗೆ ನೈ। ದರ್ಭಿರಮಣ ಕರುಣಾಬ್ಧಿಯೊಲಿದ ಬಳಿಕ। ಒಬ್ಬರ ಕಾಡಿ ಬೇಡಿ ಹಬ್ಬ ಮಾಡಿದರಿಂದ। ಉಬ್ಬುತೀರದು ಕಾಣೋ ಬುಬ್ಬುಧ ಜನರಿಗೆ। ಲಭ್ಯವಾದ ಧಾನ್ಯ ರುಬ್ಬಿ ಗಂಜಿಯಕಾಸಿ। ಒಬ್ಬ ಸತಿಪತಿ ಇಬ್ಬರಾನಂದದಿಂದ। ಹೆಬ್ಬೆಟ್ಟಿನಿಂದ ಸವಿದು ಸಭ್ಯರಾಗಿಪ್ಪುದೆ। ಹಬ್ಬವು ಬಲು ಹಬ್ಬ ಹಬ್ಬವು ಕಾಣಿರೋ॥ ನಿರ್ಭಯವಾದ ರತ್ನಗರ್ಭದಲ್ಲಿ ಕುಟೀರ। ಗುಬ್ಬಿಯ ಗೂಡಿನಷ್ಟು ಗರ್ಭವಾಸವ ರಚಿಸಿ। ನಿರ್ಬಂಧವಿಲ್ಲದೆ ಲಭ್ಯವಾಗಿಪ್ಪುದೆ। ಹಬ್ಬವು ಬಲುಹಬ್ಬ ಹಬ್ಬವು ಕಾಣಿರೋ॥ ಕರ್ಬೂರ ನಂತೆ ತಿಂದು ಕೊಬ್ಬಿ ತಿರುಗುವಂಗೆ। ದುರ್ಭಾಗ್ಯವಲ್ಲದೆ ಹಬ್ಬವೆನಿಸುವುದೆ। ಕರ್ಬುಬಿಲ್ಲ ನಯ್ಯ **ವಿಜಯವಿಠಲ**ನಿಗೆ। ದರ್ಭೆಯೇರಿಸಿದರೆ ಸರ್ಬರ ಕರಪಿಡಿವ॥ ೧

ಮಟ್ಟತಾಳ

ಕಾಮಕ್ರೋಧಂಗಳ ಬಿಡುವುದೆ ಬಲು ಹಬ್ಬ। ನೇಮ ನಿಷ್ಠೆ ನಿತ್ಯ ಮಾಳ್ಪುದೆ ಬಲು ಹಬ್ಬ। ಕಾಮನ ಉಪಹತಿಗೆ ಅಂಜುವುದೇ ಹಬ್ಬ। ಕಾಮುಕ ಜನರುಗಳ ಬಿಡುತಿಪ್ಪುದೇ ಹಬ್ಬ। ಭೂಮಿಯೊಳಗೆ ಜ್ಞಾನಿಯಾಗುವುದೇ ಹಬ್ಬ। ಸ್ವಾಮಿ ಭೃತ್ಯನ್ಯಾಯ ತಿಳಿವುದೆ ಬಲು ಹಬ್ಬ। ವ್ಯೋಮ ಗಂಗಾಜನಕ ವಿಜಯ ವಿಠಲನ। ಧಾಮದೊಳಗೆ ಪೂಜೆ ಮಾಡುವುದೇ ಹಬ್ಬ॥ ೨

ತ್ರಿಪುಟತಾಳ

ಬಂದ ಅತಿಥಿಗಳ ಪೂಜಿಸುವುದೆ ಹಬ್ಬ। ಮಂದಾಕಿನಿಯಲ್ಲಿ ಮಜ್ಜನವೇ ಹಬ್ಬ। ನಿಂದಕ ಜನರಲ್ಲಿ ಬೆರೆಯದಿಪ್ಪುದೆ ಹಬ್ಬ। ವಂದಿಸಿ ಗುರುಗಳಿಗೆ ಎರಗುವುದೇ ಹಬ್ಬ।

ಕುಂದು ಸಜ್ಜನರನ್ನು ನುಡಿಯದಿಪ್ಪುದೆ ಹಬ್ಬ । ತಂದೆ ತಾಯಿಗಳಿಗೆ ಅನುಕೂಲವೇ ಹಬ್ಬ। ಅಂದರೆ ನಗುತ ಸಂತೋಷಪಡುವುದೆ ಹಬ್ಬ । ಇಂದು ನಾಳೆಗೆ ಎಂಬ ಚಿಂತೆ ಬಿಡುವುದೆ ಹಬ್ಬ। ಇಂದ್ವರ್ಕವುಳ್ಳನಕ **ವಿಜಯವಿಠಲನ**। ಒಂದೇ ಭಕುತಿಯಿಂದ ಭಜಿಸುವುದೆ ಹಬ್ಬ ॥ ೩

ಅಟ್ಟತಾಳ

ಋಣರೂಪವಾಗದ ಸಂಸಾರವೆ ಹಬ್ಬ । ಗುಣವಂತನಾಗಿ ಸಂಚರಿಸುವುದೇ ಹಬ್ಬ। ಕನಸಿಲಿ ಹಣ ಹೆಣ್ಣು ಬಯಸದಿಪ್ಪುದೆ ಹಬ್ಬ। ಮನವಾಚಾಕಾಯಕ್ಕೆ ಬಡತನವೇ ಹಬ್ಬ। ಮನ ನೆರೆಹೊರೆ ನೋಡಿ ಬಳಲದಿಪ್ಪುದೆ ಹಬ್ಬ। ಅನಿಮಿಷ ಜಾಗರ ಹರಿವಾಸರವೆ ಹಬ್ಬ। ದಿನ ಪ್ರತಿದಿನ ಸತ್ಕರ್ಮಾಚರಣೆ ಹಬ್ಬ। **ಮಣಿಕರ್ಣಿಕೆಯಲ್ಲಿ** ದೇಹತ್ಯಾಗವೇ ಹಬ್ಬ। ತನುವಿಗೆ ವ್ಯಾಧಿ ಬಾರದಿಪ್ಪುದೆ ಹಬ್ಬ। ಚಿನುಮಯ ಮೂರುತಿ **ವಿಜಯವಿಠಲನ**। ಮನಸಿನೊಳನುದಿನ ಈಕ್ಷಿಸುವುದೆ ಹಬ್ಬ ॥ ೪

ಆದಿತಾಳ

ಕಾಲನ ಬಾಧೆಗೆ ಸಿಲುಕದಿಪ್ಪುದೆ ಹಬ್ಬ। ಕಾಲಕಾಲಕೆ ಯಾತ್ರೆ ತೀರ್ಥ ಮಾಳ್ಪುದೆ ಹಬ್ಬ। ಪೇಳುವ ಹರಿಕಥಾಶ್ರವಣವೆ ದೊಡ್ಡಹಬ್ಬ। ನಾಲಿಗೆಯಿಂದ ಹರಿ ಸ್ತೋತ್ರವೇ ಹಬ್ಬ। ಹಾಳು ಹರಟೆ ಬಿಟ್ಟು ಹೊತ್ತು ಕಳೆವುದು ಹಬ್ಬ। ಶ್ರೀಲೋಲ ಪರನೆಂದುಕೂಗಾಡುವುದು ಹಬ್ಬ। ವಾಲಯ ಗಯಾದಲ್ಲಿ ಕುಲ ಪವಿತ್ರವೆ ಹಬ್ಬ। ಫಾಲ ಲಿಪಿಗೆ ಮನನೋಯದಿಪ್ಪುದೆ ಹಬ್ಬ। ವ್ಯಾಳಿಗೆ ದೊರೆತದ್ದು ಭುಂಜಿಸುವುದೆ ಹಬ್ಬ। ಬೀಳು ನುಡಿವವರ ಬಿಟ್ಟುಕೊಡವುದು ಹಬ್ಬ। ಫಾಲಾಬ್ಧಿಶಯನ ಶ್ರೀ **ವಿಜಯವಿಠಲನ್ನ**। ಊಳಿಗದವನಾಗಿ ವಾಲ್ಗೈಸುವುದೆ ಹಬ್ಬ ॥ ೫ ॥

ಜತೆ

ದಂಪತಿಗಳು ಏಕವಾಗಿಪ್ಪುದೇ ಹಬ್ಬ
ಮಿಂಚು ಶಂಪದಂತೆ ವಿಜಯವಿಠಲ ಪೊಳೆವುದೆ ಹಬ್ಬ

ಈ ಪ್ರಕಾರ ವಿಜಯದಾಸರು ಪರಿವಾರಸಹಿತರಾಗಿ ಚೀಕಲಪರಿಗೆ ಮರಳಿ ಬಂದರು. ತುಂಗಭದ್ರೆಯಲ್ಲಿ ಮಿಂದು ಅಶ್ವತ್ಥನರಸಿಂಹನಿಗೆರಗಿದರು. ದಾಸಪ್ಪನು ವಿಜಯ ದಾಸರಾಗಿ ಬಂದುದನ್ನು ಕಂಡು ಬಂಧುಜನರು ಪರಮಾನಂದಭರಿತರಾದರು. ಯಾರ ಸಂತೋಷ ಹೇಗಾದರಿರಲಿ ! ಪಾಣಿಗೃಹೀತಳಾದ ಅರಳಮ್ಮನಿಗೆ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳನ್ನು ಕಂಡಂತಾಯಿತು. ಕಾಲಾಂತರದಲ್ಲಿ ದಾಸರಿಗೀರ್ವರು ಮಕ್ಕ ಳಾದರು. ಒಬ್ಬನ ಹೆಸರು ಶೇಷಗಿರಿದಾಸನೆಂದು. ಆ ಕಾಲದಲ್ಲಿ ವಿಜಯದಾಸರಿಂದ ಅಂಕಿತವನ್ನು ಪಡೆದ ಶಿಷ್ಯರ ಸಂಖ್ಯೆ ಅರವತ್ತಕ್ಕಿಂತ ಹೆಚ್ಚಾಗಿತ್ತು.* ಒಬ್ಬೊಬ್ಬರೂ

*ಲೇಖಕನಿಂದ ಹಿಂದಿನ ಐದನೇ ತಲೆಯವರಾದ ವೆಂಕಟದಾಸರೆಂಬುವರು ಶ್ರೀ ದಾಸಾರ್ಯರ ಅರವತ್ತು ಮಂದಿ ಶಿಷ್ಯರ ಪೈಕಿ ಒಬ್ಬರು.

ಅಪರೋಕ್ಷಜ್ಞಾನಿಗಳೆನಿಸಿದರು. ವಿಜಯದಾಸರಂತೆ ಸಾವಿರಾರು ದೇವರನಾಮ ಸುಳಾದಿಗಳನ್ನು ರಚಿಸಿದರು. ಆ ಮಹನೀಯರಲ್ಲಿ ಕೆಲವರ ಹೆಸರು ಉಪಲಬ್ಧವಾದರೂ ಐತಿಹಾಸಿಕ ದೃಷ್ಟಿಯಿಂದ ಬರೆದಿಡಲು ಸರಿಯಾದ ಚರಿತ್ರೆ ದೊರೆತಿಲ್ಲ.

"ಭಕ್ತಿಯಲಿ ಭಾಗಣ್ಣ | ಯುಕ್ತಿಯಲಿ ಮೋಹನ್ನ | ಶಕ್ತಿಯಲಿ ತಿಮ್ಮಣ್ಣ |" ಎಂಬಂತೆ ಈ ಮೂವರ ಹೆಸರುಗಳು ಇತರರಿಗಿಂತ ಹೆಚ್ಚು ಪ್ರಖ್ಯಾತಿಗೆ ಬಂದಿರುವುವು. ಇವರ ಸಂಕ್ಷೇಪ ಚರಿತ್ರೆಗಳು ಮುಂದಿನ ಅಧ್ಯಾಯಗಳಲ್ಲಿ ಕ್ರಮಾನುಸರಿಸಿ ಬರುವುವು.

ಶ್ರೀ ವಿಜಯದಾಸರು ಭೃಗು ಮಹಾಮುನಿಗಳ ಅವತಾರವೆಂದು ಅನೇಕ ಹರಿದಾಸರುಗಳ ಆಪ್ತ ವಾಕ್ಯಗಳಿವೆ. ಆ ಮುನಿವರೇಣ್ಯರೇ ತ್ರೇತೆಯಲ್ಲಿ ಸುರಲೀಲನೆಂಬ ಕಪಿನಾಯಕನಾಗಿ ಶ್ರೀ ರಾಮಚಂದ್ರನ ಸೇವೆ ಮಾಡಿದರಂತೆ! ದ್ವಾಪರದಲ್ಲಿ ಸಿಕಂಪನೆಂಬ ಯಾದವನಾಗಿ ಶ್ರೀ ಕೃಷ್ಣಪರಮಾತ್ಮನ ಸೇವೆ ಮಾಡಿದರಂತೆ! ಕಲಿಯುಗದಲ್ಲಿ ಪುರಂದರದಾಸರ ಮನೆಯಲ್ಲಿ ಆಕಳ ಕರುವಾಗಿದ್ದು, ಅನಂತರ ಅವರ ಕಡೆಯ ಮಗ ಮಧ್ವಪತಿಯಾಗಿ ಅವತರಿಸಿದರಂತೆ!

ಪಂಚಲಕ್ಷ ನಾಮಗಳನ್ನು ಮಾಡಬೇಕೆಂದು ಸಂಕಲ್ಪಿಸಿ, ಒಂದು ಪಾದ ನ್ಯೂನವಾಗಿರಲು, ಮಧ್ವಪತಿಯನ್ನು ಕುರಿತು, ಆ ಪಾದ ಪೂರ್ತಿಮಾಡೆಂದು ಪುರಂದರದಾಸರು ಹೇಳಿದ ಹಾಗೂ, ಈ ಜನ್ಮದಲ್ಲಿ ನನ್ನಿಂದ ಸಾಧ್ಯವೇ ಎಂದವನು ಕೇಳಿದ ಹಾಗೂ, ಈ ಜನ್ಮದಲ್ಲಲ್ಲದಿದ್ದರೆ, ಮುಂದಿನ ಜನ್ಮದಲ್ಲಿ ಮಾಡೆಂದು ದಾಸರು ಹೇಳಿದ ಹಾಗೂ, ಹಿಂದೆ ಪುರಂದರದಾಸ ಚರಿತ್ರೆಯಲ್ಲಿ ಓದಿದ ಜ್ಞಾಪಕವು ವಾಚಕರಿಗಿರುವುದಷ್ಟೆ! ಆ ಕಾರ್ಯ ಪೂರ್ತಿಗಾಗಿ ಮಧ್ವಪತಿಯೇ ವಿಜಯದಾಸರಾಗಿ ಈ ಸಮಯದಲ್ಲಿ ಅವತರಿಸಿದನು. ವಿಸ್ತಾರವಾದ ಕಾಲ ದೇಶಗಳಲ್ಲಿ ಜನ್ಮ ಕರ್ಮಗಳ ಚರಿತ್ರೆಯನ್ನು ತಿಳಿಯಬಲ್ಲವರ್‍ಯಾರು? ಭಗವಾನ್ ಶ್ರೀಕೃಷ್ಣನು ಶ್ರೀಮದ್ಭಗವದ್ಗೀತೆಯಲ್ಲಿ—

> ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
> ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥೫॥ IV ಅಧ್ಯಾಯ

ತಾ॥ ಅರ್ಜುನಾ, ನನಗೂ ನಿನಗೂ ಎಷ್ಟೋ ಜನ್ಮಗಳಾದುವು; ಅವುಗಳನ್ನು ನಾನು ಬಲ್ಲೆ, ನೀನು ತಿಳಿಯೆ—ಎಂಬುದಾಗಿ ಉಪದೇಶ ಮಾಡಿದ್ದಾನೆ.

ಧರ್ಮ ಸಂಸ್ಥಾಪನೆಗಾಗಿ ಭಗವದವತಾರಗಳಾದ ಸಮಯಗಳನ್ನು ಕಾಯುತ್ತಿದ್ದು ದೇವತೆಗಳೂ ಮಹರ್ಷಿಗಳೂ ಭೂಲೋಕದಲ್ಲಿ ಜನ್ಮತಾಳುವರು. ಶ್ರೀ ರಾಮಾವತಾರಕಾಲದಲ್ಲಿ ದೇವತೆಗಳು *ವಾನರರಾದರು. ಕೃಷ್ಣಾವತಾರದಲ್ಲಿ ಯಾದವ ಪಾಂಡವ ವಂಶಗಳಲ್ಲೂ ದೀನ ದನಗಾಪರ ಕುಲದಲ್ಲೂ ಜನ್ಮತಾಳಿದರು. ಲೋಕಸೇವಾಪರಾಯಣ

* (ವಾ + ನರ) ವಾಪಕ್ಷ ನರ. ನರರನ್ನು ನರರೆಂದು ಕರೆಯುವ ಸಹನೆಯಿಲ್ಲದ ರಾಕ್ಷಸರು ಕರ್ನಾಟಕದ ಪೂರ್ವನಿವಾಸಿಗಳನ್ನು ವಾನರರೆಂದು ಕರೆದರು.

ರಿಗೆ ಕುಲದ ಗೊಂದಲವೆಲ್ಲಿ ಬರಬೇಕು? ರತ್ನವು ತಿಪ್ಪೆಯಲ್ಲಿದ್ದರೂ ಅದರ ಕಾಂತಿಗೆ ಕೊರತೆ ಬರುವುದಿಲ್ಲವಷ್ಟೆ!

ದೇವತೆಗಳಾದರೂ ಭೂಲೋಕದಲ್ಲವತರಿಸಿ ತಮ್ಮ ಸಾಧನೆಗಳನ್ನು ಪೂರ್ತಿ ಮಾಡಿಕೊಳ್ಳಬೇಕು! ವಾಸನಾವಿಶೇಷಗಳನ್ನು ಕಳೆದುಕೊಳ್ಳಬೇಕು. ಜ್ಞಾನಿಗೂ ವಾಸನೆ ತಪ್ಪುವುದಿಲ್ಲ. ವಿಶ್ವಾಮಿತ್ರ ಪರಾಶರ ಪ್ರಭೃತಿಗಳು ವಾಸನಾವಿಶೇಷದಿಂದ ಮೋಹವಶ ರಾದರು. ಭರತಚಕ್ರವರ್ತಿಯಂಥಾ ತಪೋಧನನು ಒಂದು ಮೃಗದಲ್ಲಿ ಮಮತೆಯಿಟ್ಟು ಮೃಗಜನ್ಮ ತಾಳಿದನು. ವಿಷಯಗಳನ್ನು ಧ್ಯಾನಿಸಿದ ಕೂಡಲೇ ಅವುಗಳ ಪರಿಚರ್ಯ ವಾಗುವುದು. ಪರಿಚರ್ಯ (ಸಂಗ) ದಿಂದ ಕಾಮನೆಯುಂಟಾಗುವುದು. ಲಭಿಸದಿದ್ದರೆ ಕ್ರೋಧ ಹುಟ್ಟುವುದು. ಕ್ರೋಧದಿಂದ ಲೋಭ ಮೋಹಗಳುಂಟಾಗುವುವು. ಲೋಭ ಮೋಹಗಳಿಂದ ಸ್ಮೃತಿಭ್ರಂಶ ಬುದ್ಧಿ ನಾಶಗಳಾಗುವುವು. ಅವುಗಳಿಂದಲೇ ಕಡೆಗೆ ಸರ್ವ ನಾಶವಾಗುವುದು.

ವಾಸನೆಗಳನ್ನು ಗೆಲುವುದಕ್ಕೆ ಬಲವಾದ ಮನಶ್ಶಕ್ತಿ ಬೇಕು! ಮನಶ್ಶಕ್ತಿಯನ್ನು ಪಡೆಯುವುದೇ ದೊಡ್ಡ ತಪಸ್ಸು.

ಮನಸ್ಸಿಗೆ ವಿಷಯಸ್ಪರ್ಶವಾದ ಕೂಡಲೇ ಅದು ಜೀವನ ಕಾರಣ ಶರೀರದಲ್ಲಿ ವಜ್ರಲೇಪದಂತಾಗಿಬಿಡುವುದು. ಜೀವನನ್ನು ಜನ್ಮಬಂಧನಕ್ಕೆ ಸಿಕ್ಕಿಸಿಬಿಡುವುದು. ಕಾರಣಶರೀರವನ್ನು ಲಿಂಗಶರೀರವೆಂದು ಶಾಸ್ತ್ರಜ್ಞರು ಕರೆಯುವರು. ಲಿಂಗಶರೀರವು ಧಾನ್ಯದಮೇಲಿನ ಹೊಟ್ಟಿನಂತೆ ಉತ್ಪತ್ತಿಗೆ ಕಾರಣವಾಗಿ ಜೀವನನ್ನಾವರಿಸಿರುವುದು. ವಿದ್ಯುದಣುವಿನಷ್ಟು (Electron) ಸೂಕ್ಷ್ಮ ಪರಿಮಾಣದ ಸಚ್ಚಿದಾನಂದರೂಪೀ ಜೀವ ನನ್ನು ಆವರಿಸಿರುವ ಲಿಂಗದೇಹದ ನಾಶದಿಂದ ಸಕಲ ವಾಸನಾ ನಾಶವಾಗಿ ಭಗವದಪ ರೋಕ್ಷವಾಗುವುದು. ಅಪರೋಕ್ಷಿಯಾದವನ ಲಿಂಗದೇಹವು ಹುರಿದ ಬೀಜದಂತೆ ದಗ್ಧಪಟ ನ್ಯಾಯವಾಗಿರುವುದು. ಸಿದ್ಧಾಂತವಾದಿಗಳು ಆ ದಗ್ಧಪಟದ ನಾಶವಾದರೂ ವಿರಜಾ ಸ್ನಾನದಿಂದಾಗುವುದೆಂದು ಹೇಳುವರು. ಆ ಮಹಾ ಸಾಧನೆಗೋಸ್ಕರ ಸಕಲ ದೇವತೆಗಳೂ ಮುನಿಗಳೂ ಭೂಲೋಕದಲ್ಲಿ ಜನ್ಮವೆತ್ತುವರು. ತಾವು ಉದ್ಧಾರವಾಗುವುದರ ಜೊತೆಗೆ ಲೋಕವನ್ನೇ ಉದ್ಧರಿಸುವರು. ಒಮ್ಮೆ ರಾಜರಾಗುವರು. ಒಮ್ಮೆ ಭಿಕ್ಷುಕರಾಗುವರು. ಒಮ್ಮೆ ಉತ್ತಮ ಕುಲದಲ್ಲವತರಿಸುವರು. ಮತ್ತೊಮ್ಮೆ ನೀಚಕುಲದಲ್ಲವತರಿಸುವರು. ಎಲ್ಲ ಜನ್ಮಗಳ ಎಲ್ಲ ಅನುಭವವನ್ನೂ ಪಡೆಯುವರು.

ಆದುದರಿಂದ ಭೃಗುಋಷಿಗಳಂಥವರು ವಿವಿಧ ಜನ್ಮಗಳನ್ನೆತ್ತಿ ಕಡೆಗೆ ವಿಜಯ ದಾಸರಾದರು. ಪುರಂದರದಾಸರ ಪರಮಾನುಗ್ರಹ ಬಲದಿಂದ ಭಗವದಪರೋಕ್ಷಿಗಳಾದರು.

ವಿಜಯದಾಸರ ತಮ್ಮ ಆನಂದದಾಸರು (ಹಯವದನ ವಿಠಲಾಂಕಿತರು) ದಾಸ ವರ್ಯರ ಸಂಕ್ಷೇಪ ಚರಿತ್ರೆಯನ್ನು ಉದಯರಾಗದಲ್ಲಿ ಕೆಳಕಂಡಂತೆ ಹಾಡಿರುವರು.

ಭೂಪಾಳಿ — ಝಂಪೆತಾಳ

ನೆನೆಸಿದವರಘನಾಶನ | ದಾಸರ | ನೆನೆಸಿದವರಘನಾಶನ || ಪ.

ನೆನೆಸಿದವರಘನಾಶ | ಅನುಮಾನವಿಲ್ಲಿದಕೆ |
ವನಜನಾಭನು ಒಲಿದು | ಘನವಾಗಿ ಪಾಲಿಸುವ |
ದಿನದಿನದಿ ವಿಜಯರಾಯರ | ದಿವ್ಯತರವಾದ |
ಗುಣಕರ್ಮಗಳ ಬಿಡದೆ | ನೆನೆದು ಕೊಂಡಾಡಿರೋ || ಅ.

ಆದಿಯಲಿ ಸುರಮುನಿಯ | ಪಾದ ಸೇವೆಯಮಾಡಿ |
ಮೋದದಲಿ ಸುರಲೀಲ | ಎಂಬ ಕಪಿ ತ್ರೇತೆಯಲಿ |
ಆ ದ್ವಾಪರದಿ ನಿಕಂಪನನೆಂಬ ನಾಮದಲಿ
ಶ್ರೀಧರನ ಸೇವಿಸುತಲಿ ||
ಕಾದಿದ್ದು ಕಲಿಯುಗದಿ ಪುರಂದರದಾಸರ |
ಸ್ವಾದುವಚನವ ಕೇಳಿ ತುರುಕರೂವಾಗಿದ್ದು |
ಖೇದವಿಲ್ಲದೆ ಜನಿಸಿ ಬರುತಬರುತಾ ಮತ್ತೆ
ಮೇದಿನೀ ಸುರಜನ್ಮದಿ || ೧

ವರತುಂಗಭದ್ರ ತೀರದಗ್ರಾಮ ಅಶ್ವತ್ಥ |
ನರಸಿಂಹ ಚೀಕಲಪರಿಯೆಂಬ ಗ್ರಾಮದಲಿ |
ಇರುತಿಪ್ಪ ಶ್ರೀನಿವಾಸಪ್ಪ ದ್ವಿಜ ಕೂಸಮ್ಮ
ಗುರುಸೇವೆ ಮಾಡಿ ಮಾಡಿ ||
ವರ ಪಡೆದು ಪಡೆದಳ್ಳೆ ಎರಡೊಂದು ಪುತ್ರರನು |
ಹಿರಿಯಮಗ ದಾಸಪ್ಪನೆಂದು ಇವರ ನಾಮ |
ಕರೆದು ಮುದ್ದಿಸಿ ಸಾಕಿ ಮುಂಜಿ ಮದುವೆಯಮಾಡಿ
ಇರುತಿರಲು ಕೆಲವು ಕಾಲ || ೨

ಲೋಕಜನರಂತೆ ಲೌಕೀಕದೊಳು ಸಂಚರಿಸಿ |
ಈ ಕಾಯಕೋಸುಗಾನೇಕ ಜನರಾಸೇವೆ |
ಕಾಕಪ್ಪೆಯಾಗಿ ವಸ್ತ್ರಾನ್ನ ಕಾಣದೆ ಮರುಗಿ |
ಸಾಕುವರಿಲ್ಲವೆನುತ ||
ಬೇಕಾದ ದೇಶವನು ಚರಿಸುತಿರೆ ಒಂದುಕಡೆ |
ತಾಕಿ ಚೋರರು ಬಂದು ವಸ್ತ್ರಗಳನಪಹರಿಸೆ |
ಯಾಕೆ ಬಂಧು-ಬಳಗವೆಂದೆನುತ ಅಲ್ಲಿಂದ |
ನಾಕನದಿ ಮಾವೆನೆಂದು || ೩

ಹಿರಿಯರಿಗೆ ಪೇಳದಲೆ ತೆರಳಿ ಯಾತ್ರೆಗೆ ಪೋಗಿ ।
ಎರಡೆಂಟು ವತ್ಸರದ ತರಳ ಪ್ರಾಯದಲಿಂದ ।
ಸರುವ ತೀರ್ಥಕ್ಷೇತ್ರದಲಿ ಮಿಂದು ವಿಂಶತಿ । ವ
ತ್ಸರಕೆ ತಿರುಗಿ ಬಂದು ॥
ವರ ಮಾತೃಪಿತರು ಸೋದರರಿಂದ ಸಹಸಾಗಿ
ಬೆರೆದು ಮಾನವರಂತೆ ಸಂಸಾರವೃತ್ತಿಯಲಿ
ಎರಡೆಂಟು ವರುಷವಿರುತಿಪ್ದು ಮೆಲ್ಲನೆ ಹರಿಯ
ವರಕೃಪೆಯ ಪಡೆವೆನೆಂದು ॥ ೪

ಮತ್ತೆ ಪೊರಟರು ಶಿರಿ ಉತ್ತಮ ಶ್ಲೋಕ ಹರಿ ।
ಪೆತ್ತ,ಗಂಗೆಯ ಸ್ನಾನ ಗಯದಲ್ಲಿ ಪಿಂಡವ ।
ನ್ನಿತ್ತು ಮರಳೀ ಬಂದು ವಾರಣಾಸಿಯಲ್ಲಿ ।
ಉತ್ತಮರ ಸಂಗದಿಂದ ॥
ನಿತ್ಯಸ್ನಾನ ಸಂಧ್ಯ ಶುಚಿಯಾಗಿ ಮಲಗಿರಲು ।
ಸತ್ಯವಾಗೀ ಸ್ವಪ್ನದಲಿ ನರಹರಿಯು ಪಡೆವ ।
ಪುತ್ರನೆಬ್ಬಿಸಿದಂತೆ ದಾಸರ ರೂಪಿನಲಿ ।
ಹತ್ತೆಗರೆದು–ಕರುಣದಿ ॥ ೫

ಸುರನದಿಯ ದಾಟಿಸಿ ಕರೆತಂದು ಆಚೆಯ ।
ಲ್ಲಿರುತಿಪ್ಪ ವ್ಯಾಸಕಾಶಿಯ ಪುರದ ಘೊರೆಯಾದ ।
ಶಿರಿವಾಸುದೇವ ಬಲು ಸುರರ ಸಂದಣಿಯೊಳಗೆ ।
ಪರನಾಗಿ ಕುಳಿತಿರಲು ॥
ಭರದಿಂದ ತೋರಿ ಸುಸ್ಥಿರಪಾಗಿ ಸ್ತುತಿಸೆಸುತ ।
ಕರೆದು ಪೇಳಿ ಅವರ ಪರಿಯಿಂದಲಾದರಿಸಿ ।
ಹರುಷದಿಂದಲಿ ನೀನು ಹರಿ ಚರಿತೆ ಪೇಳೆನುತ ।
ಕರುಣರಸದಿಂದರುಹಲು ॥ ೬

ಎಚ್ಚತ್ತು ನೋಡಿ ಶಿರಿ ಅಚ್ಯುತನ ಮಹಿಮೆಯನು ।
ಬೆಚ್ಚಿ ಬೆದರಿದೆನೆನುತ ಹೆಚ್ಚಿ ಸಂತೋಷದಲಿ ।
ಕೊಚ್ಚಿ ಪೋದುವು ಮನದ ಹೆಚ್ಚಿದ ಪಾಪಗಳು ।
ತಚ್ಚಿತ್ತದಲ್ಲಿ ಹರಿಯ ॥
ನಿಚ್ಚಮನಬಂದಂತೆ ಅಚ್ಚ ಸುಖತೀರ್ಥಮತ ।
ನೆಚ್ಚಿ ಕವನ. ಪೇಳಿ ನುಚ್ಚು ಮನವುಳ್ಳವರ ।
ನಿಚ್ಚಟದಲಿ ತಿದ್ದಿ ಅಚ್ಚ ಜ್ಞಾನಭಕ್ತಿ ।
ಮೆಚ್ಚುಗಾಣಿಕೆಯಿತ್ತರು ॥ ೭

ತೃತೀಯ ಕಾಶೀಯಾತ್ರೆ ಮಾಡಿಬಂದಾಗ ಉ ।
ನ್ನತವಾಗಿ ನಭೆ ಗಂಗೆ ಉಕ್ಕೇರಿ ಗಗನಕ್ಕೆ ।
ಅತಿಶಯದಿ ಬಂದು ಮತ್ಸ್ಯೋದರಿಯ ನಾಮದಲಿ ।
ಪ್ರತಿಯಿಲ್ಲದಂತೆ ತೋರೆ ॥
ತುತಿಸಿ ಅಲ್ಲಿಂದ ಸೇತು ಸ್ನಾನಕಂಬಂದು ।
ರತಿಯಿಂದಲೇ ಮಾಡಿ ಸರ್ವರನು ಉದ್ಧರಿಸಿ ।
ಮಿತಿಯಿಲ್ಲದಲೆ ಸೇತುಕಾಶಿ ಪರಿಯಂತರ ।
ಕಥೆಯಿಂದ ಕೀರ್ತಿ ಪಡೆದ ॥ ೮

ಲೋಕೋಪಕಾರಕ್ಕೆ ಹದಿನೆಂಟು ವತ್ಸರಾ ।
ನೇಕ ತೀರ್ಥಕ್ಷೇತ್ರ ತಿರುಗಿ ವೈರಾಗ್ಯದಲಿ ।
ಶ್ರೀಕಾಂತ ಹರಿಯ ಮನದೊಳಗೆ ಧ್ಯಾನಿಸಿಕೊಳುತ ।
ಪ್ರಾಕೃತರ ಸಂಗ ತೊರೆದು ॥
ವೈಕುಂಠಯಾತ್ರೆಯನು........*ಸಂವತ್ಸರದ ಕಾ ।
ರ್ತೀಕ ಶುದ್ಧ ದಶಮಿ ಗುರುವಾರ ಪ್ರಹರದಲಿ ।
ರಾಕೇಂದು ಬಿಂಬ ಹಯವದನ ವಿಠ್ಠಲನಂಘ್ರಿ ।
ಜೋಕೆಯಲಿ-ಸೇರಿದರು ॥

ಕಲ್ಲೂರು ಸುಬ್ಬಣ್ಣಾಚಾರ್ಯರು

ಆ ಕಾಲದಲ್ಲಿ ಕಲ್ಲೂರಿನಲ್ಲಿ ಸುಬ್ಬಣ್ಣಾಚಾರ್ಯರೆಂಬ ಸುಧಾಪಾಠಕರೊಬ್ಬರಿದ್ದರು. **"ಸುಧಾಯಾಮದ್ವಿತೀಯೋಸ್ಮಿ ಯಾದುಪತ್ಯೇ ವಿಶೇಷತಃ"** ಎಂಬ ಪ್ರತಿಜ್ಞಾಪಾಲಕ ಪಂಡಿತರನೇಕರಲ್ಲಿ ಆಚಾರ್ಯರೊಬ್ಬರಾಗಿದ್ದರು. **"ಸುಧಾವಾ ಪಠನೀಯಾ**

*ಈ ಪದದ ಕಡೆಯ ನುಡಿಯ ಸಂವತ್ಸರ ಸ್ಥಾನವನ್ನು ಚರ್ಚಾಸ್ಪದವಾಗಿರುವುದರಿಂದ ಹಾಗೇ ಬಿಟ್ಟಿದೆ. ಈ ಪದದಲ್ಲೂ ಮತ್ತು ಜಗನ್ನಾಥದಾಸರ ಪದದಲ್ಲೂ, ಜನರು ಯುವಸಂವತ್ಸರವೆಂದು ಹಾಡುವ ಪರಿಪಾಠವಿದೆ. ಮೂಲಸ್ಥಳದ ಪ್ರತಿಯಿಂದ ಉದ್ಧರಿಸಿ ಹಾಡುವೆವೆಂದು ಯಾರಾದರೂ ಹೇಳಿದರೆ, ಆ ಮೂಲಸ್ಥಳದ ಪ್ರತಿಯಾದರೂ ಯಾರೋ ಬರೆದಿಟ್ಟ ಪ್ರತಿಯಾಗಿರುವುದರಿಂದಲೂ ಅಲ್ಲೇ ಲೇಖಕರ ದೋಷವಿರಬಹುದಾದ್ದರಿಂದಲೂ, ಅದರ ಮೇಲೂ ಭರವಸೆಯಿಡುವಂತಿಲ್ಲ. ಏಕೆಂದರೆ ವಿಜಯದಾಸರಿಗಿಂತ ಬಹಳ ಚಿಕ್ಕವರು ಜಗನ್ನಾಥದಾಸರು. ಜಗನ್ನಾಥದಾಸರೇ ವಿಜಯರಾಯರ ನಿರ್ಯಾಣದ ಪದ ಮಾಡಿರುವರೆಂದು ಜನರು ಹಾಡುವುದರಲ್ಲಿ ಯುವ ಸಂವತ್ಸರವಿದ್ದರೆ ಶುಕ್ಲಸಂವತ್ಸರದಲ್ಲಿ ನಿರ್ಯಾಣಮಾಡಿದ ಜಗನ್ನಾಥದಾಸರು, ಆ ಪದವನ್ನು ಹಾಡಿರಲು ಶಕ್ಯವಿಲ್ಲ. ಶುಕ್ಲವಾದ ನಂತರ ಆರನೆಯದಾಗಿ ಯುವಸಂವತ್ಸರ ಬರುತ್ತದೆ. ಅರವತ್ತು ವರ್ಷಗಳ ಹಿಂದಿನ ಯುವಸಂವತ್ಸರವೆನ್ನುವುದಾದರೆ, ವಿಜಯದಾಸರು ಗೋಪಾಲದಾಸರಿಂದ ಜಗನ್ನಾಥ ದಾಸರಿಗೆ ಆಯುರ್ದಾನ ಮಾಡಿಸಿದ ಕಾಲಕ್ಕೆ ವ್ಯತ್ಯಾಸ ಬರುತ್ತದೆ. ಆದ್ದರಿಂದ ವಿಜಯದಾಸರ ನಿರ್ಯಾಣವು ಯುವ ಸಂವತ್ಸರವೆಂದು ಹೇಳುವುದು ಬಲು ಬಾಧಕವಾಗುತ್ತದೆ.

ವಸುಧಾವಾ ಪಾಲನೀಯಾ" ಎಂಬುದು ಆ ಕಾಲದ ಗಾದೆಯಾಗಿತ್ತು. ವಿದ್ವಾಂಸರಿಗೆ ಪುಣೆಯ ಪೇಷ್ವಾಯಿಗಳು ಆಶ್ರಯದಾತರಾಗಿದ್ದರು. ಆಚಾರ್ಯರಿಗೆ ವಿಜಯದಾಸರ ಪ್ರಾಬಲ್ಯ ಸಹನೆಯಾಗಿರಲಿಲ್ಲ. **ಕೂಸೀ ಮಗ ದಾಸನ** ಪ್ರಾಬಲ್ಯವೇತರದೆಂದು ದಾಸರನ್ನು ಮನಬಂದಂತೆ ನಿಂದಿಸುತ್ತಿದ್ದರು. ದಾಸರಿಗೀ ಸಂಗತಿ ತಿಳಿದರೂ ಪ್ರತಿಮಾತನಾಡದೆ ಸುಮ್ಮನಿರುತ್ತಿದ್ದರು. ಸುಧಾ ಮಂಗಳಕ್ಕೆ ಸಾವಿರಾರು ಜನರು ಸೇರಿದರು. ಮಂಗಳ ಭಕ್ಷ್ಯವು ಮಂಡಿಗೆಯಾಗಬೇಕೆಂಬ ವ್ಯವಸ್ಥೆಯಾಯಿತು. ಮೂರುಸಾವಿರ ಮಂಡಿಗೆಗಳನ್ನು ಮಾಡಿಸಬೇಕೆಂದು ಪ್ರಸಿದ್ಧನಾದೊಬ್ಬ ಪಾಚಕನನ್ನು ಗೊತ್ತುಮಾಡಿದರು. ಮಂಗಳಕ್ಕೆ ಪೂರ್ವದಿನವೇ ಬಂದಿರಬೇಕಾಗಿದ್ದ ಪಾಚಕನು ದೇಹಾಲಸ್ಯ ಕಾರಣದಿಂದ ಮಂಗಳದ ದಿನ ಪ್ರಾತಃಕಾಲ ಎಂಟುಗಂಟೆಯಾದರೂ ಬರಲಿಲ್ಲ. ಆಚಾರ್ಯರೂ ವ್ಯವಸ್ಥಾಪಕರೂ ಮುಂದೆ ಗತಿಯೇನೆಂದು ಚಿಂತಾಕ್ರಾಂತರಾದರು. ಈ ಸಂಗತಿಯನ್ನು ಜ್ಞಾನದೃಷ್ಟಿಯಿಂದ ತಿಳಿದ ವಿಜಯರಾಯರು ಉತ್ಸವಭಂಗವಾಗಬಾರದೆಂದು ಪಾಚಕನ ವೇಷತಾಳಿ ಕಲ್ಲೂರಿಗೆ ಬಂದರು. ವ್ಯವಸ್ಥಾಪಕರನ್ನು ಕಂಡು–'ನೀವು ಚಿಂತಿಸಬೇಡಿ, ಸಕಾಲದಲ್ಲಿ ಮೂರಲ್ಲ ನಾಲ್ಕುಸಾವಿರ ಮಂಡಿಗೆಗಳನ್ನು ಮಾಡುವೆನೆ'ಂದು ಭರವಸೆಕೊಟ್ಟರು. ವೇಷಧಾರಿಯು ವಿಜಯದಾಸರೆಂದು ಯಾರಿಗೂ ತಿಳಿಯಲಿಲ್ಲ. ದಾಸರು ತಮ್ಮ ರೂಪವನ್ನು ಆಚ್ಛಾದನೆ ಮಾಡಿಕೊಂಡು, ಕ್ಲುಪ್ತ ಸಂಖ್ಯೆಯ ಮಂಡಿಗೆಗಳನ್ನು ಮಾಡಿಟ್ಟು – ಆಚಾರ್ಯರ ಸುಧಾನುವಾದದ ಸಭೆಯಲ್ಲಿ ಬಂದು ಕುಳಿತರು. ತುಂಡು ಪಂಚೆಯನ್ನುಟ್ಟು ಹರುಕು ಚೌಕವನ್ನು ಹೆಗಲಮೇಲೆ ಹಾಕಿಕೊಂಡಿರುವ ಪಾಚಕನು **ವಿಜಯದಾಸ**ರೆಂದು ಕೆಲ ಕೆಲಜನರಿಗೆ ಗೊತ್ತಾಯಿತು. ಜನರಲ್ಲಿ ವಿಜಯದಾಸರು, ವಿಜಯದಾಸರು ಎಂಬ ಗುಜು ಗುಜು ಬಲವಾಯಿತು. ಪ್ರಕಟವಾಗಿ ಎಲ್ಲರ ಕಣ್ಣಿಗೂ ಪಾಚಕನು **ವಿಜಯದಾಸ**ರಾಗಿ ಕಾಣಿಸಿದನು.

ವ್ಯವಸ್ಥಾಪಕ :—(ದಾಸರ ಪಾದಗಳಿಗೆರಗಿ) ಇದೇನು ? ಈ ವೇಷದಿಂದ ನಮ್ಮನ್ನು ಋಣಿಗಳನ್ನಾಗಿ ಮಾಡೋಣವಾಯಿತು ! ನಮ್ಮ ಅಪರಾಧವನ್ನು ಕ್ಷಮಿಸಬೇಕು. ತಮ್ಮ ಗುರುತು ಮೊದಲು ನಮಗೆ ತಿಳಿಯಲಿಲ್ಲ.

ವಿಜಯದಾಸರು :—ನಮ್ಮ ಗುರುತಿನಿಂದೇನಾಗಬೇಕು ? ನಾನು **ಕೂಸೀ ಮಗ ದಾಸ**ನೆಂಬುದನ್ನು ಆಚಾರ್ಯರು ಮೊದಲಾಗಿ ಎಲ್ಲರೂ ಬಲ್ಲರು. ಉತ್ಸವಭಂಗವಾಗಬಾರದೆಂದು ಬಂದೆ ! ಮಾಡಬೇಕಾದ ಸೇವಾ ಮಾಡಿದೆ. ನಾನು ನಿಮ್ಮನ್ನು ಕ್ಷಮಿಸಲು ಅಪರಾಧವೇನು ಮಾಡಿರುವಿರಿ ?

ವ್ಯವಸ್ಥಾಪಕ :—ಮಹಾಸ್ವಾಮಿ, ನಾನು ತಮ್ಮನ್ನು ಎಂದಿಗೂ ಕೂಸೀ ಮಗ ದಾಸನೆಂದವನಲ್ಲ. ಮಂದಮತಿಗಳಾರಾದರೂ ಬಿಡಿ ಮಾತನಾಡಿದ್ದರೆ ಅಂಥವ ಪರವಾಗಿ ನಾನು ಕ್ಷಮೆ ಬೇಡುವೆನು.

ವಿಜಯದಾಸರು :—ಹಾಗಾಡಿದರೆ ಅಪರಾಧವೆಂದು ನಾನೆಣಿಸಿಲ್ಲ. ಪ್ರಕೃತ ಸುಧಾನುವಾದ ಶ್ರವಣಮಾಡೋಣ !

ಅಷ್ಟರಲ್ಲಿ ಸುಬ್ರಹ್ಮಣ್ಯಾಚಾರ್ಯರಿಗೆ ಪಾಚಕವೇಷಧಾರಿಯು ವಿಜಯದಾಸರೆಂದು ಗೊತ್ತಾಯಿತು. ದಾಸರು ಆಚಾರ್ಯರ ವ್ಯಾಸಪೀಠದ ಬಳಿಗೆ ಬಂದು ವಂದನೆಮಾಡಿದರು. ಆಚಾರ್ಯರು–'ನೀವೋ ಆ ವಿಜಯದಾಸರೆಂಬುವರು?' ಎಂದು ಕುಶಲಪ್ರಶ್ನೆ ಮಾಡಿದರು. ದಾಸರು–'ಅಹುದು, ನಾನೇ ಆ ವಿಜಯದಾಸ.'

ವಿಜಯದಾಸರು:—ಆಚಾರ್ಯರು ಪರಮಾನುಗ್ರಹಮಾಡಿ ನ್ಯಾಯ ಸುಧೆಯ ಒಂದು ವಾಕ್ಯವನ್ನು ಉಪದೇಶಮಾಡಬೇಕು.

ಆಚಾರ್ಯರು:—ನಿಮಗೆ! **ನ್ಯಾ ಯ ಸು ಧೆ ಯ ವಾ ಕ್ಯ!** ನ್ಯಾಯ ಸುಧೆಯೆಂದರೇನೆಂದು ತಿಳಿದಿರಿ? ನಿಮಗೆ ಗ್ರಂಥಗಳೇನೇನಾಗಿವೆ?

ವಿಜಯದಾಸರು:—ನನಗೇನಾಗಿವೆ ಸ್ವಾಮಿ, ದಾಸಗೆ?

ಆಚಾರ್ಯರು:—ಕಾವ್ಯವಾಗಿದೆಯೇ?

ವಿಜಯದಾಸರು:—ಇಲ್ಲ.

ಆಚಾರ್ಯರು:—ಆಚಾರ್ಯರ ಭಾಷ್ಯಶ್ರವಣವಾದರೂ ಮಾಡಿದ್ದೀರಾ?

ವಿಜಯದಾಸರು:—ಇಲ್ಲ.

ಆಚಾರ್ಯರು:—ಹಾಗಿರುವಲ್ಲಿ ಸುಧಾವಾಕ್ಯವನ್ನು ಉಚ್ಚಾರಮಾಡಲಿಕ್ಕಾದರೂ ನಿಮಗೇನಧಿಕಾರ? ನಿಮ್ಮಂಥವರಿಗೆ ಅರ್ಥವಾಗುವುದೇ? ಸುಧಾವಾಕ್ಯವನ್ನು ನಿಮ್ಮ ಕನ್ನಡ ಪದವೆಂದು ತಿಳಿದಿರಾ?

ವಿಜಯದಾಸರು:—ಅರ್ಥ ಅನರ್ಥಗಳೊಂದೂ ಬೇಡ. ಗುರೂಪದೇಶವೆಂದು ಒಂದು ವಾಕ್ಯವನ್ನು ಅನುಗ್ರಹಿಸಿದರೆ ಪಠಿಸಿಕೊಂಡಿರುವೆನು.

ಆಚಾರ್ಯರು:—ಹಾಗೆ ಪಠಿಸುವುದಕ್ಕೆ ಅದು ಹೆಂಗಸರ ಹಾಡಲ್ಲ. ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಕುಣಿಯುವುದಕ್ಕೆ ಅದು ದಾಸರ ಪದವಲ್ಲ!

ನೆರೆದಿದ್ದ ಜನರಿಗೆ ಆಚಾರ್ಯರ ಪರುಷವಾಣಿಯು ವಿಷಾದಜನಕವಾಯಿತು. ಅವರು 'ಆಚಾರ್ಯಸ್ವಾಮಿಾ, ದಾಸರು ದೊಡ್ಡವರು. ದಾಸರಲ್ಲಿ ವಿಶ್ವಾಸವಿಟ್ಟಿರುವ ಜನರು ಈ ಸಭೆಯಲ್ಲಿ ಬಹಳ ಮಂದಿ ಇದ್ದಾರೆ. ಅವರಿಗೆಲ್ಲಾ ಅಸಮಾಧಾನವಾಗುತ್ತದೆ. ಪ್ರಕೃತ ಪ್ರಸ್ತಾವನೆಯನ್ನು ಸಂಕ್ಷೇಪಮಾಡಿ ತಮ್ಮ ಸುಧಾನುವಾದ ಮಾಡಬೇಕು, ಮಹೋತ್ಸವವನ್ನು ಸಾಂಗಗೊಳಿಸಬೇಕು' ಎಂದು ಬೇಡಿಕೊಂಡರು.

ಆಚಾರ್ಯರು:—ನಾನಾಡಿದ ಮಾತಿನಲ್ಲಿ ತಪ್ಪೇನು? ದಾಸರು ದೊಡ್ಡವರಾದರೆ,–ದಾಸರಲ್ಲಿ ಜನರ ವಿಶ್ವಾಸವಿದ್ದರೆ ಇರಲಿ; ನಮಗವರ ವಿಷಯದಲ್ಲಿ ಅಸೂಯೆಯಿಲ್ಲ. ಶಾಸ್ತ್ರದ ಮಾತಿಗೆ ಬಂದರೆ ನಾನಾಡಬೇಕಾದ ಮಾತನ್ನು ಆಡಬೇಕಾಗುವುದು. ಸುಧೆಯೆಂದರೆ ಸಾಮಾನ್ಯ ಗ್ರಂಥವಲ್ಲ. ಸುಧಾವಾಕ್ಯವು ಅಸಂಸ್ಕಾರಿಗಳಿಗೆ ಅರ್ಥವಾಗುವುದಲ್ಲ. ಅದೇನು ಪಾಮರಜನರ ಕನ್ನಡ ಪದವಲ್ಲ! ನಿಮ್ಮ ದಾಸರು ಸುಧಾವಾಕ್ಯವನ್ನು

ಉಪದೇಶಮಾಡಿರೆಂದು ಏಕೆ ಕೇಳಬೇಕು ? ಅದರ ಅರ್ಥ ಅವರಿಗಾಗುವುದಿದ್ದರೆ ಈಗಲೇ ನಮ್ಮಲ್ಲಿ ಶಾಂತಿ ಹಾಕಲಿ !' ಎಂದು ನುಡಿದರು.

ವಿಜಯದಾಸರು :—'ಆಚಾರ್ಯರ ಕೋಪಕ್ಕೆ ನಾನು ಅರ್ಹನಲ್ಲ. ನಾನು ಬಂದದ್ದು ಮಹಾಪ್ರಸಾದಕ್ಕೆ ! ಏನೋ ಒಂದು ವಾಕ್ಯ ಉಪದೇಶವಾದರೆ ಆಗಲೆಂದು ಭಕ್ತಿಯಿಂದ ಬೇಡಿದೆ. ಆಚಾರ್ಯರ ಚಿತ್ತಕ್ಕೆ ಬರಲಿಲ್ಲ. ಉತ್ಸವ ಭಂಗವಾಗದಂತೆ ಮುಂದೆ ಸಾಗಲಿ ಆಚಾರ್ಯರ ಅನುವಾದ' ಎಂದರು.

ಆಚಾರ್ಯರು ಅಷ್ಟಕ್ಕೇ ಸುಮ್ಮನಾಗಲಿಲ್ಲ.

ಆಚಾರ್ಯರು :—ದಾಸರೆ, ಸುಧಾವಾಕ್ಯವನ್ನು ಬೇಡುವುದಕ್ಕೆ ನಿಮಗೇನಧಿಕಾರ ? ನಿಮ್ಮ ವ್ಯಾಸಂಗವೇನು ? ನಿಮ್ಮ ಗುರುಗಳ್ಯಾರು ?

ವಿಜಯದಾಸರು :—ಆಚಾರ್ಯರೆ, ಸಿಟ್ಟಾಗಬಾರದು, ನಾನು ಅಧಿಕಾರಿಯಲ್ಲ. ನನ್ನ ಗುರುಗಳೆಂದರೆ ದಾಸರೊಬ್ಬರು ವ್ಯಾಸರೊಬ್ಬರು. ಅವರ ಮಾತಿನಿಂದ ದಾಸನಾದವನು ನಾನು ! ನನ್ನನ್ನು ಕ್ಷಮಿಸಬೇಕು.

ಆಚಾರ್ಯರು :—ದಾಸರ ಜೊತೆಗೆ ವ್ಯಾಸರನ್ನೂ ಕರೆತಂದಿರಾ ? ನಟ ವಿಟ ಗಾಯಕರಂತೆ ನರ್ತನರಂಗಕ್ಕೆ !

ವಿಜಯದಾಸರು :—ಆಚಾರ್ಯರಿಗಷ್ಟೇಕೆ ಅನುಮಾನ ? ವ್ಯಾಸರೂ ನಟರು. ಶ್ರೀಕೃಷ್ಣನೊಬ್ಬ ನಟ. ಶ್ರೀಮದಾಚಾರ್ಯರೊಬ್ಬ ನಟರು. ಸುಧಾಗ್ರಂಥಕರ್ತರಾದ ಟೀಕಾಕೃತ್ಪಾದರೂ ನಟರು. ನರಹರಿತೀರ್ಥರೂ, ಶ್ರೀಪಾದರಾಯರೂ, ವ್ಯಾಸರಾಯರೂ, ರಾಘವೇಂದ್ರಸ್ವಾಮಿಗಳೂ ಎಲ್ಲಾ ನಟರೆ !

ಆಚಾರ್ಯರು :—ನಾರಾಯಣ ! ನಾರಾಯಣ ! ಒಳ್ಳೇ ಯೋಚನೆ ಮಾಡಿದಿರಿ. ಎಲ್ಲರನ್ನೂ ದಾಸಕೂಟಕ್ಕೆ ಸೇರಿಸಿದಿರಿ. ನಿಮ್ಮ ಸಾಹಸ ದೊಡ್ಡದು ! ಚಿಂತೆಯಿಲ್ಲ ! ಸುಧಾವಾಕ್ಯ ನಿಮಗೆ ಅರ್ಥವಾದೀತೆ ?

ವಿಜಯದಾಸರು :—ಉಪದೇಶಕರು ಅರ್ಥಮಾಡಿಕೊಂಡಿದ್ದರೆ, ಶಿಷ್ಯರಿಗೆ ಅರ್ಥವಾಗದೆ ಏನು ?

ಆಚಾರ್ಯರು :-(ಸಿಟ್ಟಿನಿಂದ) ಏನು, ನಮಗೇ ಅರ್ಥವಾಗಿಲ್ಲವೆನ್ನುವಿರೋ ?

ವಿಜಯದಾಸರು :—ನಾನು ಹಾಗೆ ಹೇಳುವುದಿಲ್ಲ. ಸರ್ವಜ್ಞಶಾಸ್ತ್ರವು

'ಬಾಲ ಸಂಘಮಪಿ ಬೋಧಯತಿಭೃಶಂ, ದುರ್ನಿರೂಪ ವಚನಂ ಚ ಪಂಡಿತೈಃ' ಎಂದು ಕೇಳಿರುವೆನು.

ಆಚಾರ್ಯರ ಕೋಪ ಬಲವಾಯಿತು. ದಾಸರುಗಳಿಂದ ಶಾಸ್ತ್ರ ಮರ್ಯಾದೆ ಕೆಟ್ಟಿತೆಂದರು. ಈಗ 'ಅನುವಾದವನಾದರೂ ಘಲ್ಲಿಸಿರೆಂದು', ತಟಸ್ಥರಾಗಿ ಕುಳಿತರು. ಮುಂದೇನು ಮಾಡಬೇಕೆಂದು ಜನರು ತಿಳಿಯದಾದರು.

ಆಗ ವಿಜಯದಾಸರು ಸಭೆಯಿಂದೆದ್ದು ಪಾಕಶಾಲೆಗೆ ನಡೆದರು. ನೀರು ತರುತ್ತಿದ್ದ ಪರಿಚಾರಕನ ಕೈಹಿಡಿದುಕೊಂಡು ಮತ್ತೆ ಸಭೆಗೆ ಬಂದರು. ಎಲ್ಲರೂ ಕೇಳುವಂತೆ-'ಎಲಪ್ಪಾ ನಿನ್ನ ಶಾಖೆ ಯಾವುದೆಂದು ಕೇಳಿದರು. ಪರಿಚಾರಕನು ಕಣ್ವಶಾಖೆ'ಯೆಂದನು. 'ನಿನಗೆ ಸಂಧ್ಯಾವಂದನೆ ಬರುವುದೇ? ನಿನ್ನ ಪ್ರವರವೇನು ಹೇಳುವೆಯಾ' ಎಂದು ಮತ್ತೆ ಕೇಳಿದರು. ಅವನು-'ಸ್ವಾಮಿಾ, ನನಗೊಂದೂ ತಿಳಿಯದು' ಎಂದನು. ಸ್ವಲ್ಪ ಹೊತ್ತು ಮಾತನಾಡಿಸಿದುದರಲ್ಲಿ ಅವನು ಏನೂ ತಿಳಿಯದ ಶುಂಠನೆಂದು ಜನರಿಗೆ ಗೊತ್ತಾಯಿತು. ವಿಜಯದಾಸರು ಅವನ ತಲೆಯಮೇಲೆ ಅಕ್ಷತೆಯ ಕಾಳನ್ನು ಹಾಕಿ, ಅವನ ಕೈಯನ್ನು ತಮ್ಮ ಕೈಯ್ಯಿಂದ ಹಿಡಿದು-'ಎಲವೋ! ನೀನೀಗ ಸುಧಾನುವಾದ ಮಾಡು. ಯಾವ ವಾರ್ಯರಂಥಾ ಟಿಪ್ಪಣಿಕಾರರಿಗೆ ಗಹನವೆನಿಸಿರುವ ಸ್ಥಳಗಳ್ಯಾವುವು? ಆಚಾರ್ಯರಿಗೆ ಅರ್ಥವಾಗದ ಸ್ಥಳಗಳ್ಯಾವುವು? ಎಲ್ಲವನ್ನೂ ವಿಶದೀಕರಿಸು' ಎಂದು ನುಡಿದರು.

ವಿಜಯದಾಸರ ಪರಮಾನುಗ್ರಹದಿಂದ ಪರಿಚಾರಕನು-'ಶ್ರೀಯಃಪತ್ಯೇ' ಎಂಬ ಮಂಗಳಾಚರಣ ಶ್ಲೋಕದಿಂದಾರಂಭಿಸಿ, ಜಯತೀರ್ಥರು ಎಷ್ಟು ನೈಚ್ಯಾನುಸಂಧಾನ ಪೂರ್ವಕ :—

ನ ಶಬ್ದಾಬ್ಧೌ ಗಾಢಾ, ನ ಚ ನಿಗಮ ಚರ್ಚಾಸು ಚತುರಾ।
ನ ಚ ನ್ಯಾಯೇ ಪ್ರೌಢಾ, ನ ಚ ವಿದಿತವೇದ್ಯಾ ಅಪಿವಯಂ।
ಪರಂ ಶ್ರೀಮತ್ಪೂರ್ಣಪ್ರಮತಿ ಗುರು ಕಾರುಣ್ಯ ಸರಣಿಂ।
ಪ್ರಪನ್ನಾ ಮಾನ್ಯಾಸ್ಮಃ, ಕಿಮಪಿಚವದಂತೋಽಪಿ ಮಹತಾಂ॥ ೮

ಎಂಬ ಶ್ಲೋಕವನ್ನು ಬರೆದು ಸುಧಾರಂಭ ಮಾಡಿರುವರೋ ಅದನ್ನು ವಿವರಿಸಿ, ಪರಿಮಳಕಾರರು, ಯಾದುಪತ್ಯಕಾರರು ಮೊದಲಾದ ಟಿಪ್ಪಣಿಕಾರರ ಟಿಪ್ಪಣಿಗಳಲ್ಲಿ ಆಚಾರ್ಯರಿಗೆ ಮನಗಾಣದಿದ್ದ ಸಂಗತಿಗಳನ್ನೆಲ್ಲಾ ಪಟಪಟನೆ ಅನುವಾದ ಮಾಡಿದನು.

ಸಭೆಯು ನಿಬ್ಬೆರಗಾಗಿ ಅವನು ಮಾಡಿದ ಆ ಅನುವಾದವನ್ನು ಕೇಳಿ ಮೂಕರಂತೆ ಕುಳಿತಿದ್ದರು. ವಿಜಯದಾಸರು ಕೈಬಿಟ್ಟ ಕೂಡಲೇ ಪರಿಚಾರಕನು ಮೊದಲಿನಂತೆಯೇ ಶುಂಠನಾಗಿ ಕಾಣಿಸಿದನು. ಜನರಿಗೆ ಪರಮಾಶ್ಚರ್ಯವಾಯಿತು. ಆಚಾರ್ಯರೂ ಅವನ ಬಾಯಿಂದ ಬಂದ ಆ ಅನುವಾದವನ್ನು ಕೇಳಿ ವಿಶೇಷ ಆಶ್ಚರ್ಯಪಟ್ಟರು. ತಲೆದೂಗಬೇಕಾಯಿತು. ದಾಸರಲ್ಲಿ ಭಗವದನುಗ್ರಹವಿದೆಯೆಂದು ಒಪ್ಪಬೇಕಾಯಿತು. ಮಂಗಳಾನಂತರ ಆಚಾರ್ಯರು ಏಕಾಂತದಲ್ಲಿ ದಾಸರನ್ನು ಕಂಡು ಶರಣಾಗತರಾದರು. 'ನನ್ನನ್ನು ಶಿಷ್ಯನನ್ನಾಗಿ ಮಾಡಿಕೊಂಡು ಅಪರೋಕ್ಷ ಜ್ಞಾನಪ್ರದಾನ ಮಾಡಬೇಕು' ಎಂದು ಪ್ರಾರ್ಥಿಸಿದರು. ವಿಜಯರಾಯರು ಆಚಾರ್ಯರಲ್ಲಿ ಚೆನ್ನಾಗಿ ವೈರಾಗ್ಯೋದಯವಾಗಿರುವುದನ್ನು ಕಂಡು ತಮ್ಮ ಜೊತೆಯಲ್ಲಿ ಕೆಲವು ಕಾಲ ನಿಲ್ಲಿಸಿಕೊಂಡು, **ಕಂಕಣಾಕಾರ ಸುಳಾದಿ**ಯನ್ನು ಉಪದೇಶ ಮಾಡಿದರು. ಆಚಾರ್ಯರು ಕಾಲಕ್ರಮದಲ್ಲಿ ಭಗವದುಪಾಸನೆಯಿಂದ ಭಗವದಪರೋಕ್ಷಿಗಳಾದರು. ಹರಿದಾಸನಾಗಿರಬೇಕೆಂಬ ಅಭಿಲಾಷೆ ಆಚಾರ್ಯರಿಗೆ ಬಹಳವಾದುದರಿಂದ ವಿಜಯರಾಯರು ಅವರಲ್ಲಿ ಕೃಪೆಮಾಡಿ ಸಂಪ್ರ

ದಾಯಾನುಸಾರ ಅವರಿಗೆ ಹರಿದಾಸಪೀಠದಲ್ಲಿ ಅಭಿಷೇಕಮಾಡಿ **'ವ್ಯಾಸವಿಠಲ'** ಎಂಬ ಅಂಕಿತವನ್ನು ಕರುಣಿಸಿದರು. ಪ್ರಖ್ಯಾತ ಸುಬ್ಬಣ್ಣಾಚಾರ್ಯರು ಹರಿದಾಸರಾಗಿ ತಮ್ಮ ಗುರುಗಳಾದ ಶ್ರೀ ವಿಜಯದಾಸರನ್ನು ಹೀಗೆಂದು ಸ್ತೋತ್ರ ಮಾಡಿದ್ದಾರೆ.

ಗೀತೆಯ ಮಟ್ಟು — ರೂಪಕತಾಳ

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ ।
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ ॥ ಪ.

ದಾಸರಾಯನಾ ದಯವ । ಸೂಸಿ ಪಡೆದನಾ ।
ದೋಷರಹಿತನಾ ಸಂ । ತೋಷ ಭರಿತನಾ ॥ ೧

ಜ್ಞಾನವಂತನಾ ಬಲು । ನಿಧಾನಿ ಶಾಂತನಾ ।
ಮಾನವಂತನಾ ಮಹ । ವದಾನ್ಯದಾಂತನಾ ॥ ೨

ಹರಿಯ ಭಜಿಸುವಾ ನರ । ಹರಿಯ ಯಜಿಸುವಾ ।
ದುರಿತ ತ್ಯಜಿಸುವಾ ಜನಕೆ । ಹರುಷ ಸುರಿಸುವಾ ॥ ೩

ಮೋದಭರಿತನಾ ಪಂಚ । ಭೇದವರಿತನಾ ।
ಸಾಧುಚರಿತನಾ ಮನ ವಿ । ಷಾದ ಮರೆತನಾ ॥ ೪

ಇವರ ನಂಬಿದಾ ಜನಕೆ । ಭಯವಿದೆಂಬುದೂ ।
ಹವಣವಾಗದೋ ನ । ಮ್ಮವರ ಮತವಿದೂ ॥ ೫

ಪಾಪ ಕೋಟಿಯಾ ರಾಶಿ । ಲೇಪವಾಗದೋ ।
ತಾಪ ಕಳೆವನೋ ಬಲು ದ । ಯಾಪಯೋನಿಧೀ ॥ ೬

ಕವನ ರೂಪದೀ ಹರಿಯ । ಸ್ತವನ ಮಾಡಿದಾ ।
ಭುವನ ಬೇಡಿದಾ ಮಾ । ಧವನ ನೋಡಿದಾ ॥ ೭

ರಂಗನೆಂದನಾ ಭವವು । ಹಿಂಗಿತೆಂದನಾ ।
ಮಂಗಳಾಂಗನಾ ಅಂತ । ರಂಗವರಿತನಾ ॥ ೮

ಕಾಶಿನಗರದಲ್ಲಿದ್ದ । ವ್ಯಾಸದೇವನಾ–ದಯವ ।
ಸೂಸಿ ಪಡೆದನಾ । ಉಲ್ಲಾಸತನದಲೀ ॥ ೯

ಚಿಂತೆ ಬೇಡಿರೋ ನಿ । ಶ್ಚಿಂತರಾಗಿರೋ ।
ಶಾಂತ ಗುರುಗಳಾ ಪಾದ । ವಿಂತು ನಂಬಿರೋ ॥ ೧೦

ಖೇದವಾಗದೋ ನಿಮಗೆ । ಮೋದವಾಹುದೋ ।
ಆದಿ ದೇವನಾ ಸು । ಪ್ರಸಾದವಾಹುದೋ ॥ ೧೧

ಪಾಪ ತಡೆವನೂ ಬಂದ । ಪಾಪ ಕಡಿವನೂ ।
ಶ್ರೀಪತಿಯ ಪದ ಸ । ಮೀಪನಿಡುವನೂ ॥ ೧೨

ಗಂಗೆ ಮಿಂದರೇ ಮಲವು । ಹಿಂಗಿತ್ತಲ್ಲದೇ ।
ರಂಗನೊಲಿಯನೋ ಭಕ್ತರ । ಸಂಗ ದೊರಕದೇ ॥ ೧೩

ವೇದ ಪೋದಲೂ ಬರಿದೆ । ವಾದ ಮಾಡಲೂ ।
ಹಾದಿಯಾಗದೋ ಬುಧರ । ಪಾದ ನಂಬದೇ ॥ ೧೪

ಲೆಕ್ಕವಿಲ್ಲದಾದೇಶ । ತುಕ್ಕಿ ಬಂದರೂ ।
ದುಃಖವಲ್ಲದೇ ಲೇಶ । ಭಕ್ತಿ ದೊರಕದೂ ॥ ೧೫

ದಾನಮಾಡಲೂ ದಿವ್ಯ । ಗಾನಪಾಡಲೂ ।
ಜ್ಞಾನ ದೊರೆಯದೋ ಇವ । ರಧೀನವಾಗದೇ ॥ ೧೬

ಇಷ್ಟು ಯಾತಕೇ ಕಂಡ । ಕಷ್ಟವ್ಯಾತಕೇ ।
ಥಿಟ್ಟಗುರುಗಳಾ ಪಾದ । ಮುಟ್ಟಿ ಭಜಿಸಿರೋ ॥ ೧೭

ಪೂಜೆಮಾಡಲೂ ಕಂಡ । ಗೋಜು ಬೀಳಲೂ ।
ಬೀಜ ಮಾತಿದೂ ಫಲ ಸ । ಹಾಜ ದೊರಕದೂ ॥ ೧೮

ಸುರರು ಎಲ್ಲರೂ ಇವರ । ಕರವ ಪಿಡಿವರೋ ।
ತರಳರಂದದೀ ಹಿಂದೆ । ತಿರುಗುತಿಪ್ಪರೋ ॥ ೧೯

ಗ್ರಹಗಳೆಲ್ಲವೂ ಇವರ್ಗೆ । ಸಪಯಮಾಡುತಾ ।
ಅಹೋರಾತ್ರಿಲೀ ಸುಖದ । ನಿವಹ ಕೊಡುವವೂ ॥ ೨೦

ವ್ಯಾಧಿ ಬಾರದೋ ದೇಹ । ಬಾಧೆ ತಟ್ಟದೋ ।
ಆದಿದೇವನಾ ಸುಪ್ರ । ಸಾದವಾಹುದೋ ॥ ೨೧

ಪತಿತ ಪಾಮರಾ ಮಂದ । ಮತಿಯು ನಾ ಬಲೂ ।
ತುತಿಸಲಾಪನೇ ಇವರ । ಅತಿಶಯಂಗಳಾ ॥ ೨೨

ಕರುಣದಿಂದಲೇ ಎಮ್ಮ । ಪೊರೆವನಲ್ಲದೇ ।
ದುರಿತಕೋಟಿಯಾ ಬೇಗ । ತರಿವ ದಯದಲೀ ॥ ೨೩

ಮಂದಮತಿಗಳೂ ಇವರ । ಚೆಂದವರಿಯದೇ ।
ನಿಂದಿಸೂವರೋ ಭವದ । ಬಂಧ ತಪ್ಪದೋ ॥ ೨೪

ಇಂದಿರಾಪತೀ ಇವರ । ಮುಂದೆ ಕುಣಿವನೋ ।
ಅಂದ ವಚನವಾ ಜನಕೆ । ತಂದುಕೊಡುವನೋ ॥ ೨೫

ಉದಯಕಾಲದೀ ಈ । ಪದವ ಪಠಿಸಲೂ ।
ಮದಡನಾದರೂ ಜ್ಞಾನ । ಉದಯವಾಹದೂ । ೨೬

ಪಠಿಯಿಃದಲ್ಲವೋ ವ್ಯಾಸ । ವಿಠಲ ಬಲ್ಲನೋ ।
ಪಠಿಸಬಹುದಿದೂ ಕೇಳಿ । ಕುಟಿಲರಹಿತರೂ ॥ ೨೭

ಈ ಪದವನ್ನು **'ವಿಜಯ ಕವಚ'**ವೆಂದು ಇಂದಿಗೂ ಪಠಿಸುವ ಜನರನೇಕರಿರುವರು. ಚಿಪ್ಪಗಿರಿಯಲ್ಲಿ ದಾಸರ ಕಟ್ಟೆಯಲ್ಲಿ ಸೇವೆಮಾಡುವವರು ಈ ಪದವನ್ನು ಪಠನೆಮಾಡುವರು. ಶುದ್ಧ ಮನಸ್ಸಿನಿಂದ ಸೇವೆ ಮಾಡಿದವರ ಇಷ್ಟಾರ್ಥಗಳು ಒಂದು ಸಪ್ತಕದಲ್ಲಿ ಸಿದ್ಧಿಯಾಗಿರುವ ದೃಷ್ಟಾಂತಗಳು ಹೇರಳವಾಗಿರುವುವು.

ಭಕ್ತರ ಚರಿತ್ರೆಗಳಲ್ಲಿ ಎಲ್ಲಿ ನೋಡಿದರೂ ಕರ್ಮಕಾಂಡದವರಮೇಲೂ ಪಂಡಿತರುಗಳಮೇಲೂ ಹರಿದು ಬೀಳುವಂತೆ ವಾಚಕರಿಗೆ ಕಂಡುಬರಬಹುದು. ವಸ್ತುಸ್ಥಿತಿಯು ಹಾಗಿರುವುದಿಲ್ಲ. ಕರ್ಮಠರಾಗಿರಬಾರದೆಂದೂ ಪಾಂಡಿತ್ಯವನ್ನು ಸಂಪಾದಿಸಬಾರದೆಂದೂ ಯಾವ ಹರಿದಾಸರೂ ಹೇಳುವುದಿಲ್ಲ. ಕೆಸರಿನಿಂದ ಕೆಸರನ್ನು ತೊಳೆದಂತೆ ಕರ್ಮವನ್ನು ಕರ್ಮವೆಂದಿಗೂ ಕಡೆಗಾಣಿಸುವುದಿಲ್ಲವಾವ ಕಾರಣ ಜ್ಞಾನವನ್ನು ಸಂಪಾದಿಸಬೇಕೆಂದು ಹೇಳುವವರು ಹರಿದಾಸರು. ಜ್ಞಾನವು ಕೇವಲ ಶಬ್ದಾರ್ಥವಾಗಿರದೆ ಅದು ಭಕ್ತಿಯಾಗಿ ರೂಪಾಂತರವಾಗಬೇಕೆಂದು ಉಪದೇಶಿಸುವವರು ಹರಿದಾಸರು. ಭಾಗವತ ಧರ್ಮದ ಭಕ್ತಿಯು ಮೂಢಭಕ್ತಿಯಲ್ಲ. ಅಥವಾ ಬೇರೆ ಮಾತಿನಿಂದ ಕರೆಯುವ ಅಂಧಶ್ರದ್ಧೆಯಲ್ಲ. ಶ್ರುತಿಯಾದರೂ–'ನಾಯಮಾತ್ಮಾ ಪ್ರವಚನೇನ ಲಭ್ಯಃ। ನ ಮೇಧಯಾ ನ ಬಹುನಾ ಶ್ರುತೇನ' ಎಂಬುದಾಗಿ ಉದ್ಘೋಷಿಸುವುದು. ದಾಸರ ಮತವು ಉಪನಿಷತ್ತುಗಳ ಮತ. ದಾಸರ ಮತವು ಗೀತೆಯ ಮತ. ಗೀತೆಯನ್ನೂ ಉಪನಿಷತ್ತುಗಳನ್ನೂ ಬಿಟ್ಟು ವೇದ ಮತದಲ್ಲಿ ವೇದಾಂತವಿರುವುದಿಲ್ಲ. ಅರ್ಥವರಿತು ಕರ್ಮ ಮಾಡುವವರು ಹರಿದಾಸರು. ಪಾಂಡಿತ್ಯದ ಪ್ರಯೋಜನವನ್ನು ಅನುಭವಿಸುವವರು ಹರಿದಾಸರು. ಪಡೆದ ಪಾಂಡಿತ್ಯವನ್ನು ಪಾಮರರಿಗೆ ಸುಲಭವಾಗಿ ಉಪದೇಶ ಮಾಡಬೇಕೆನ್ನುವವರು ಹರಿದಾಸರು. ತಾನು ಕಲಿತ ವಿದ್ಯದ ಫಲವನ್ನು ಪರರಿಗೆ ಕೊಡದಿದ್ದರೆ ಅದೊಂದು ಪ್ರಕಾರದ ಬದ್ಧತೆಯೆನ್ನುವವರು ಹರಿದಾಸರು. ಈ ವಿಧದ ವ್ಯಾಧಿಗೆ ಇಂಗ್ಲೀಷಿನಲ್ಲಿ (Spiritual constipation) ಎನ್ನುವರು.

ನಿಜವಾಗಿ ನೋಡಿದರೆ ವಿಜಯದಾಸರು ನಿರಕ್ಷರಕುಕ್ಷಿಗಳು. ಪಡಬಾರದ ದಾರಿದ್ರ್ಯ ದುಃಖವನ್ನನುಭವಿಸಿದವರು. ಮಾತೆತ್ತಿದರೆ **'ಇವನೋ ಕೂಸೀ ಮಗ ದಾಸ'** ಎಂದು ಹೀಯಾಳಿಸಿಕೊಂಡವರು. ಅಂಥವರಿಗೆ ಗುರುಕಟಾಕ್ಷವಾಯಿತು. ಪರಮಾತ್ಮನ ಪ್ರಸಾದವಾಯಿತು. ಅವರು ಅನುಗ್ರಹಿಸಿದ ಮಾತ್ರಕ್ಕೇ ವಜ್ರಮುಂಠನ ಬಾಯಿಂದ ಶಾಸ್ತ್ರಾರ್ಥಗಳ ಅನುವಾದವಾಯಿತು. ಯಾವ ಸಾಧನೆಗೆ ಯಾವುದು ಗುರಿಯೋ ಆ ಗುರಿಯನ್ನೇ ಕಂಡವರಿಗೆ ತಿಳಿಯದ ಶಾಸ್ತ್ರಗಳ್ಯಾವವು? ಬರದ ಭಾಷೆಗಳ್ಯಾವವು? ಕುದುರೆಯ ರಾಹುತನಾಗಿದ್ದ ಧೋಂಡೋ ರಘುನಾಥರಾಯನಲ್ಲವೇ ಅಕ್ಷೋಭ್ಯಮುನಿಗಳ ಕಾರುಣ್ಯದಿಂದ ಪ್ರಸಿದ್ಧ ಟೀಕಾಚಾರ್ಯರಾದುದು! ಶ್ರೀಮದ್ಭಾಗವತದಲ್ಲಿ ರಹೂಗಣನಂಥಾ ಮಹಾರಾಜನಿಗೆ ತತ್ವೋಪದೇಶ ಮಾಡಿದ ಜಡಭರತ ಯೋಗಿಯು–ಎಲ್ಲಿ ಓದಿ ಯಾವ ಪಾಂಡಿತ್ಯವನ್ನು ಸಂಪಾದಿಸಿದ್ದನು?

ರಹೂಗಣೈ ತತ್ತಪಸಾನಯಾತಿ ।
ನ ವಿದ್ಯಯಾ ನಿರ್ವಸನಾದ್ಗೃಹಾದ್ವಾ ।
ನ ಛಂದಸಾನೋತ ಜಲಾಗ್ನಿ ಸೂರ್ಯೈಃ ।
ವಿನಾ ಮಹತ್ಪಾದ ರಜೋಭಿಷೇಕಂ ॥

ಎಂಬ ಅಮೃತವಾಣಿಯು ಆ ಜಡಭರತ ಯೋಗಿಯದಲ್ಲವೆ ?

ವ್ಯಾಧಸ್ಯಾ ಚರಣಂ, ಧ್ರುವಸ್ಯಚ ವಯಃ, ವಿದ್ಯಾ ಗಜೇಂದ್ರಸ್ಯಕಾ ।
ಕಾಜಾತಿರ್ವಿದುರಸ್ಯ, ಯಾದವಪತೇರುಗ್ರಸ್ಯ ಕಿಂ ಪೌರುಷಂ ।
ಕುಬ್ಜಾಯಾಃ ಕಮನೀಯ ರೂಪಮಧಿಕಂ, ಕಿಂ ತತ್ ಸುಧಾಮ್ನೋಧನಂ ।
ಭಕ್ತ್ಯಾತುಷ್ಯತಿ ಕೇಶವಃ, ನತು ಧನೈಃ, ಭಕ್ತಪ್ರಿಯಃ ಶ್ರೀಪತಿಃ ॥

ಎಂಬಂತೆ ಸದಾಚರಣೆಗಾಗಲಿ, ವಯಸ್ಸಿಗಾಗಲಿ, ವಿದ್ಯಕ್ಕಾಗಲಿ, ಜಾತಿಗಾಗಲಿ, ಪರಾಕ್ರಮಕ್ಕಾಗಲಿ, ರೂಪಕ್ಕಾಗಲಿ, ಧನಕ್ಕಾಗಲಿ, ಒಲಿಯೆಂದರೆ ದೇವರು ಒಲಿಯುವವನಲ್ಲ. ಅವನು ಒಲಿಯುವುದು ಭಕ್ತಿಯೊಂದಕ್ಕೇ! ಸದಾಚರಣೆ ಮೊದಲಾದುವುಗಳು ಭಕ್ತಿಗೆ ಸಹಕಾರಿಗಳಾಗಿರಬೇಕು. ಅಂಥಾ ಭಕ್ತಿಪಂಥದ ಅನುಯಾಯಿಗಳು ಹರಿದಾಸರು. ಅಂಥಾ ಭಕ್ತಿಪಂಥದ ಪ್ರಚಾರಕರು ಹರಿದಾಸರು.

ಅನನ್ಯಾಶ್ಚಿಂತಯಂತೋ ಮಾಂ । ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ । ಯೋಗಕ್ಷೇಮಂ ವಹಾಮ್ಯಹಂ ॥ ೨೨ ॥ ix

ಎಂಬ ಗೀತೋಕ್ತಿಯ ಆದರ್ಶಜೀವಿಗಳು ಹರಿದಾಸರು.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥ ೬೬ ॥ xvii

ಎಂಬ ಭಗವದ್ವಾಕ್ಯವನ್ನು ಅಕ್ಷರಶಃ ಪಾಲಿಸಿದವರು ಹರಿದಾಸರು.

ಸತ್ರಯಾಗ

ವಿಜಯದಾಸರು ಪುರಂದರದಾಸರು ವಾಸವಾಗಿದ್ದ ಚಕ್ರತೀರ್ಥದ ಬಳಿಯಲ್ಲಿ ತಾವೂ ವಾಸಮಾಡಿ, ಒಮ್ಮೆ ದಾಸರ ಆರಾಧನಾಂಗವಾಗಿ ಸತ್ರಯಾಗವನ್ನಾರಂಭಿಸಿದರು. ಅವಧಿಯಿಲ್ಲದೆ ಸಹಸ್ರಾರು ಜನರಿಗೆ ಮೃಷ್ಟಾನ್ನ ಭೋಜನ ದೊರೆಯುವುದೆಂದು ದೂರ ದೇಶಗಳಿಂದ ಅಗಣಿತ ಜನರು ಆ ಮಹಾಕ್ಷೇತ್ರಕ್ಕೆ ಬಂದು ನೆರೆದರು. ದೇಹರಕ್ಷಣೆಗೆ ಆಹಾರ ಹೇಗೋ, ಆತ್ಮರಕ್ಷಣೆಗೆ ಹಾಗೆ ಧರ್ಮೋಪದೇಶಮಾಡುತ್ತಿದ್ದುದರಿಂದ, ಜನರು ಭುಕ್ತಿ ಮುಕ್ತಿಗಳೆರಡಕ್ಕೂ ಶ್ರೀ ವಿಜಯದಾಸರೇ ಮಾರ್ಗದರ್ಶಿಗಳೆಂದು ಅವರನ್ನು ಆಶ್ರಯಿಸಿದರು.

ಆ ಕಾಲದಲ್ಲಿ ಆನೆಗೊಂದಿಯಲ್ಲಿ ತಿಮ್ಮಪ್ಪನಾಯಕನೆಂಬ ಒಬ್ಬ ಶ್ರೀಮಂತ ಚಿನಿವಾರನು (ಬೆಳ್ಳಿ ಭಂಗಾರಗಳ ವ್ಯಾಪಾರಿ) ವ್ಯಾಪಾರದಿಂದ ಬಹು ಧನವನ್ನಾರ್ಜಿಸಿ

ಗರ್ಭಿಣಿಯಾದ ತನ್ನ ಹೆಂಡತಿಗೆ ಜೀವನೋಪಾಯವನ್ನು ಕಲ್ಪಿಸದೆ ತನ್ನ ತಮ್ಮಂದಿರ ವಶಕ್ಕೆ ಐಶ್ವರ್ಯವನ್ನೊಪ್ಪಿಸಿ ಮೃತನಾಗಿದ್ದನು. ಕೃತಘ್ನರಾದ ತಮ್ಮಂದಿರು ಅಣ್ಣನ ಮರಣಾನಂತರ ಅತ್ತಿಗೆಯನ್ನು ಮನೆಯಿಂದ ಹೊರಗೆ ಹಾಕಿ ಅವಳ ಆಸ್ತಿಯನ್ನು ತಾವೇ ಆಕ್ರಮಿಸಿದರು. ಆ ದೀನ ಹೆಂಗಳೆಯು ತನ್ನ ಬಡತಾಯಿಯ ಮನೆಯನ್ನು ಸೇರಿ ಮಗನನ್ನು ಹಡೆದಳು. ದುರ್ದೈವಕ್ಕೆ ತಾಯಿಯೂ ಮೃತಳಾಗಲು, ಆಶ್ರಯದಾತರಿಲ್ಲದೆ ಅವಳು ಆನೆಗೊಂದಿಗೇ ಬಂದಳು. ಆಗಲೂ ದಾಯಾದರು ಆ ಶಿಸುವಿನಲ್ಲಾದರೂ ಕನಿಕರ ತಾಳದೆ ಆಕೆಯನ್ನು ಮನೆಗೆ ಕರೆದು ರಕ್ಷಿಸಲಿಲ್ಲ. ಕೂಲಿಯ ಹೆಂಗಸಿನಂತೆ ದುಡಿದುಕೊಂಡು ಮನೆಯಲ್ಲಿರುವೆನೆಂದರೆ ಅದಕ್ಕೂ ಅವಕಾಶಕೊಡಲಿಲ್ಲ. ಸಾಲದುದಕ್ಕೆ ಶಿಶುವು ನಮ್ಮಣ್ಣನದಲ್ಲವೆಂದು ಸುದ್ದಿಯನ್ನು ಹುಟ್ಟಿಸಿದರು. ಭೀಮಪ್ಪನಾಯಕನಿಂದ ಉಪಕೃತರಾಗಿದ್ದ ಆ ಊರಿನ ಬಡಜನರು ಮಾತ್ರ ಆಕೆಗೆ ಆಗಾಗ ಅನ್ನೋದಕಗಳನ್ನು ಕೊಟ್ಟು ದಯೆತೋರಿಸುತ್ತಿದ್ದರು. ಎಣ್ಣೆನೀರಿಲ್ಲದ ಕಾರಣದಿಂದಲೂ, ಕಾಲಕಾಲಕ್ಕೆ ಸರಿಯಾದ ಆಹಾರವಿಲ್ಲದ ಕೊರತೆಯಿಂದಲೂ ಶಿಸುವಿಗೆ ಮೈಯೆಲ್ಲಾ ಕಜ್ಜಿಯಾಗಿ ದುರ್ಗಂಧಮಯವಾಗಿತ್ತು. ಶಿಸುವಿನ ಸಂಪರ್ಕದಿಂದ ತಾಯಿಗಾದರೂ ಅದೇ ದುರ್ಗತಿಯುಂಟಾಗಿತ್ತು. ವಿಜಯದಾಸರ ಸತ್ರಯಾಗವು, ಈ ಬಡಪ್ರಾಣಿಗೆ ಬಲು ಅನುಕೂಲವಾಯಿತು. ನಿರಾಕ್ಷೇಪವಾಗಿ ಯಾರನ್ನೂ ಕೇಳದೆ ಎರಡು ಹೊತ್ತೂ ಬಿಸಿ ಬಿಸಿಯಾಗಿ ಮಗುವಿಗೆ ಹೊಟ್ಟೆತುಂಬಾ ಉಣಿಸಿ, ತಾನೂ ಉಣ್ಣುವ ಸೌಭಾಗ್ಯ ದೊರೆತಂತಾಯಿತು. ಆದರೂ ಕಜ್ಜಿ ಬುರುಕಳೆಂದು ಯಾರೂ ಆಕೆಯ ಬಳಿ ಕೂಡುತ್ತಿರಲಿಲ್ಲ. ಅವಳಾದರೂ ಜನರ ಗುಂಪಿನಲ್ಲಿ ಸೇರುತ್ತಿರಲಿಲ್ಲ. ಒಂದು ದಿನ ಮಧ್ಯಾಹ್ನ ಹೀಗಾಯಿತು! ಒಂದು ಪಜ್ತಿಯ ಕಡೆಯಲ್ಲಿ ಆಕೆ ಪ್ರತ್ಯೇಕವಾಗಿ ಮಗುವನ್ನು ಕೂಡಿಸಿಕೊಂಡು ಎಲೆಯ ಮುಂದೆ ಕುಳಿತಳು. ಜನರು ಹೆಚ್ಚಾಗಿ ಬಂದುದರಿಂದ ಆಕೆಯನ್ನನುಸರಿಸಿ ಸಾಲಾಗಿ ಮತ್ತೆ ಎಲೆಗಳನ್ನು ಹಾಕಿದರು. ಭೋಜನದ ಮಧ್ಯ ಸಮಯ! ಭಕ್ಷ್ಯಗಳನ್ನು ಬಡಿಸುತ್ತಿದ್ದಾರೆ! ಮಗುವು ಮಿತಿಮೀರಿ ತಿಂದು ಹೇಸಿಕೆಮಾಡಿಬಿಟ್ಟಿತು. ಪಕ್ಕದಲ್ಲಿದ್ದವರು, ಅದರ ತಾಯಿಯನ್ನು ವಾಚಾಮಗೋಚರ ಬೈದು ಪಜ್ತಿಯಿಂದೆದ್ದುಬಿಟ್ಟರು. ಆಕೆಯೂ ಈ ಹಾಳು ಮಗುವಿನಿಂದ ಎಲ್ಲಿ ಹೋದರೂ ತನಗೆ ಬಾಳಲೆಡೆಯಿಲ್ಲವೆಂದು ಅಳುತ್ತಾ ಎದ್ದುಬಿಟ್ಟಳು.

ಇರುವುದಕ್ಕೆ ಮನೆಯಿಲ್ಲ. ತಿನ್ನುವುದಕ್ಕೆ ಅನ್ನವಿಲ್ಲ. ಯಾರಾದರೂ ಆಶ್ರಯ ಕೊಟ್ಟಾರೆಂದರೆ ಕಜ್ಜಿಬುರುಕ ಮಗು. ಸಾಲದುದಕ್ಕೆ ಬಂಧು ಜನರು ಹೊರಿಸಿದ ಅಪವಾದ. ಈ ದುಃಖಗಳಿಂದ ಬಲು ನೊಂದು ಏನುಮಾಡುವುದಕ್ಕೂ ದಿಕ್ಕು ತೋರದೆ, ಬೆಳಗಿನ ಝಾವದಲ್ಲಿ ಮಗುವನ್ನು ಉಡಿಯಲ್ಲಿ ಕಟ್ಟಿಕೊಂಡು, ಆ ಸಾಧ್ವಿಯು ತುಂಗಭದ್ರೆಯ ಮಡುವಿನಲ್ಲಿ ಪ್ರವೇಶಿಸುವೆನೆಂದು ನಿರ್ಜನವಾದ ನವ ಬೃಂದಾವನದ ನಡುಗಡ್ಡೆಗೆ ಬಂದಳು.–'ಇನ್ನೇಕೆ ಅಳುವೆ! ಇಬ್ಬರಿಗೂ ಕಾಲ ಸಮೀಪಿಸಿದೆ' ಎಂದು ಮಗುವನ್ನು ದಪ್ಪನೆ ಕೆಳಗೆ ಕೂಡಿಸಿ ಗಂಡುಗಚ್ಚೆಯನ್ನು ಕಟ್ಟಿದಳು. ಅತ್ತಿತ್ತ ಯಾರಾದರೂ ಇದ್ದು ಕಂಡಾರೆಂದು ಸುತ್ತಲೂ ನೋಡಿದಳು. ಆ ಸಮಯದಲ್ಲಿ ವಿಜಯರಾಯರು ನವಬೃಂದಾ

ವನದ ಸಮೀಪದಲ್ಲಿ ಪ್ರದಕ್ಷಿಣೆಗಾಗಿ ಬಂದಿದ್ದವರು—ಆಕೆಯು ಮಾತನಾಡಿದ ಶಬ್ದವನ್ನು ಕೇಳಿ—'ಯಾರಮ್ಮಾ ಅದು ? ಈ ಕತ್ತಲೆಯಲ್ಲಿ !' ಎಂದು ಕೇಳಿದರು.

ಹೆಂಗಸು :—(ಗಾಬರಿಯಿಂದ) ಯಾರಾದರೇನು ?

ವಿಜಯರಾಯ :—ಇಲ್ಲ ತಾಯಿ, ಹೆದರಬೇಡ. ಇಲ್ಲಿಗೇಕೆ ಬಂದೆ ಹೇಳು !

ಹೆಂಗಸು :—ಯಾಕೋ ಬಂದೆ ! ಸಾಯುವುದಕ್ಕೆ ! ನೀವೊಬ್ಬರು ಬಂದಿರಾ ಮೃತ್ಯುವಾಗಿ !

ವಿಜಯರಾಯರು :—(ಓಡಿಬಂದು) ಯಾಕೆ ತಾಯಿ ! ಇಷ್ಟು ಬೇಸರ ಗೊಂಡಿರುವೆ ? ಸಾಯುವುದೆಂದರೇನು ? ಏನಾಗಿದೆ ನಿನಗೆ ?

ಹೆಂಗಸು :—(ದುಃಖವನ್ನು ತಾಳಲಾರದೆ) ಅಪ್ಪಾ, ನನ್ನ ಕಥೆಯನ್ನೇನೆಂದು ಹೇಳಲಿ ? ಈ ಹಾಳು ಮಗುವಿನಿಂದ ಸಾಕಾಗಿದೆ ನನ್ನ ಬಾಳು ! ಈ ಮಗುವನ್ನೂ ನದಿ ಯಲ್ಲಿ ಹಾಕಿ ನಾನೂ ಬಿದ್ದು ಸಾಯುತ್ತೇನೆ. ಅಲ್ಲಿಗೆ ಈ ದುಃಖ ತೀರುತ್ತದೆ.

ದಯಾಮಯರಾದ ವಿಜಯರಾಯರು, ಆ ಹೆಂಗಳೆಯನ್ನು ಬಲು ಬಗೆಯಿಂದ ಸಮಾಧಾನಗೊಳಿಸಿದರು. ಆಕೆಯ ಪೂರ್ವ ವೃತ್ತಾಂತವನ್ನೆಲ್ಲ ಕೇಳಿ, ತುಂಬಾ ಕನಿಕರ ಪಟ್ಟರು. ನಿನಗೆ ಮಗುವಿನಿಂದ ಅಷ್ಟು ದುಃಖವಾಗಿದ್ದರೆ, ಅವನನ್ನು ನನಗೆ ಕೊಟ್ಟು ಬಿಡೆಂದರು. ನೀನು ನನ್ನ ತಂಗಿಯಾಗಿ ನನ್ನ ಮನೆಯಲ್ಲಿ ಸುಖದಿಂದ ವಾಸವಾಗಿರು ಎಂದು ಅಭಯ ಕೊಟ್ಟರು. ದಾಸರಾಯರ ಆ ಮಾತುಗಳನ್ನು ಕೇಳಿ, ಆ ದೀನಳು—'ಅಪ್ಪಾ, ನನ್ನ ಈ ಜನ್ಮದಲ್ಲಿ ನನ್ನನ್ನು ಕುರಿತು,ಇಂಥಾ ಮಾತನಾಡಿದವನನ್ನು ನೋಡಲಿಲ್ಲ. ನೀವೇ ನನ್ನ ತಂದೆ, ತಾಯಿ ! ಈ ಮಗನನ್ನು ಕೊಂದು ನಾನೂ ಸತ್ತು ಯಾವ ನರಕಕ್ಕೆ ಹೋಗಲಿ ? 'ಕೃಷ್ಣಾರ್ಪಣ' ಈ ಮಗನನ್ನು ನಿನ್ನ ಪಾದಕ್ಕೊಪ್ಪಿಸಿದೆ' ಎಂದಳು. ವಿಜಯರಾಯರು ಸಮೀಪದಲ್ಲಿ ಕುಳ್ಳಿರಿಸಿಕೊಂಡರು. ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡರು. ಆಗಲೇ ಆಶೀರ್ವಾದರೂಪವಾಗಿ—

ಕಾಂಬೋಧಿ — ಝಂಪೆತಾಳ

ಚಿರಂಜೀವಿಯಾಗೆಲವೊ ಚಿಣ್ಣ ನೀನು ।
ಹರಿದಾಸ ದಾಸ ದಾಸರ ಪಾದ ಧೂಳಾಗಿ ॥ ಪ.

ಜರಿಯಬೇಡ ಹರಿಯ ಮರೆಯಬೇಡೆಂದೆಂದು ।
ತಿರಿಯಬೇಡ ಖಳರ ಮನೆಗೆ ಪೋಗಿ ।
ಒರೆಯಬೇಡನ್ಯರಿಗೆ ರಹಸ್ಯ ತತ್ವಗಳನ್ನು ।
ಬೆರೆಯಬೇಡನ್ಯ ಸತಿಯರ ಸ್ವಪ್ನದಲ್ಲೂ ॥ ೧

ಸಾಲಮಾಡಲಿಬೇಡ ಸಾಲದೆಂದೆನಬೇಡ ।
ನಾಳೆಗೇ ಹೇಗೆಂಬ ಚಿಂತೆಬೇಡ ।
ಖೂಳಜನರೊಡನೆ ಮಿತ್ರತ್ವ ಮಾಡಲಿಬೇಡ ।
ಬಾಳುವರ ಸಂಗದಲಿ ಬಾಳೆಲವೊ ಬಾಲ ॥ ೨

ಲೋಕವಾರ್ತೆಯ ನಿನ್ನ ಕಿವಿಗೆ ಕೇಳಿಸಬೇಡ ।
ಶ್ರೀಕಾಂತನಾ ವಾರ್ತೆ ಕೇಳದಿರಬೇಡ ।
ಪಾಕವನುಮಾಡಿ ಏಕಾಂಗಿಯಾಗುಣಬೇಡ ।
ಲೌಕೀಕವನುಸರಿಸಿ ದಣು ಕೊಳಲಿಬೇಡ ॥ ೩

ಪಂಡಿತರು ಪಾಮರರು ಆರಿಗಾದರು ನಿನ್ನ ।
ಕಂಡವರಿಗೆಲ್ಲ ಕೌತುಕ ತೋರಲಿ ।
ಹೆಂಡಿರು ಮಕ್ಕಳು ಅಳಿಯ ಸೊಸೆ ಮೊಮ್ಮಕ್ಕಳು ।
ಉಂಡುಟ್ಟು ದ್ವಿಜರು ಸಹ ಗಂಡುಗಲಿಯಾಗಿರೆಲೊ ॥ ೪

ಮಂದಮತಿಗಳ ಕೂಡೆ ಮಾತಾಡದಿರು ಹರಿ ।
ನಿಂದಕರ ಕಣ್ಣೆತ್ತಿ ನೋಡಬೇಡ ।
ಇಂದಿರಾರಮಣ ಶಿರಿ ವಿಜಯವಿಠಲನ *ಚರಣ ।
ದಂದ್ವಡಲಿ ಮಸ್ತಕವನೀಡದಿರಬೇಡ ॥ ೫

ಎಂಬುದಾಗಿ ಹಾಡಿ, ಮಗುವಿನ ಕಿವಿಯಲ್ಲಿ ಮಂತ್ರೋಪದೇಶ ಮಾಡಿದರು. ಮಗುವು ಅಳುವುದನ್ನು ನಿಲ್ಲಿಸಿ ದಾಸರ ಮುಖವನ್ನು ನೋಡಿ ನಗುವುದಕ್ಕಾರಂಭಿಸಿತು. ತಾಯಿಗೆ ಪರಮಾನಂದವಾಯಿತು. ಮಗುವನ್ನೆತ್ತಿಕೊಂಡು, ಸಾಧ್ವಿಯನ್ನೂ ಕರೆದುಕೊಂಡು, ವಿಜಯದಾಸರು ಚಕ್ರತೀರ್ಥದ ಬಳಿಯ ಪುರಂದರದಾಸರ ಮಂಟಪಕ್ಕೆ ಬಂದರು. ದಾಸರ ಪತ್ನಿ ಅರಳಮ್ಮನು ತುಂಗಭದ್ರೆಯಲ್ಲಿ ಮಿಂದು ಗೌರೀಪೂಜೆ ಮಾಡುತ್ತಿದ್ದಳು. 'ಇದೋ ಈ ಬಾಲಚಂದ್ರನು ನಿನ್ನ ಮಗನು' ಎಂದು ಆ ಮಗುವನ್ನು ತಮ್ಮ ಪತ್ನಿಯ ಮುಂದೆ ದಾಸರು ಮಲಗಿಸಿದರು. ಇವನ ಹೆಸರು ಮೋಹನನೆಂದು ಕರೆಯಬೇಕೆಂದರು. ಅಷ್ಟರಲ್ಲಿ ಅರಳಮ್ಮನಿಗೆ ಶೇಷಗಿರಿಯೆಂಬ ತನ್ನ ಮೃತ ಪುತ್ರನ ನೆನಪಾಗಿ ಕಣ್ಣಿನಲ್ಲಿ ನೀರುದುರಿತು. ದಾಸರು–'ಸತ್ತವರಿಗಳಬಾರದು, ಇದ್ದವರೇ ನಮ್ಮ ಮಕ್ಕಳೆಂದು ತಿಳಿಯಬೇಕು. ತಿಳಿಯಿತೇ ನಾವಾಡಿದ ಮಾತು?' ಎಂದರು. ಅರಳಮ್ಮನು ದುಃಖವನ್ನಡಗಿಸಿಕೊಂಡು ಅನಾಥ ಬಾಲಕನಿಗೆ ಹಾಲನ್ನು ತಂದು ಕುಡಿಸಿ, ಎಣ್ಣೆಯೊತ್ತಿ ಬಿಸಿ ನೀರೆರೆದು ಮಲಗಿಸಿದಳು. ಆ ಅನಾಥ ಹೆಂಗಳೆಯನ್ನು ಬಾರೆಂದು ಕರೆದುಪಚರಿಸಿ, ಸ್ನಾನಮಾಡಹೇಳಿ, ಉಡುವುದಕ್ಕೆ ವಸ್ತ್ರವನ್ನು ತಂದುಕೊಟ್ಟಳು. ಹದಿನೈದು ದಿವಸಗಳೊಳಗೆ ತಾಯಿ ಮಕ್ಕಳ ರೋಗ ವಾಸಿಯಾಯಿತು. ಮೋಹನನು ಸುಂದರಾಂಗನಾಗಿ ಹೆಸರಿಗೆ ತಕ್ಕಂತೆ ಕಂಗೊಳಿಸಿ

* ಪದ, ದ್ವಂದ್ವಮಸ್ತಕತನಕ ನೋಡದಿರಬೇಡ. (ಪಾಠಾಂತರ)

ದನು. ವಿಜಯದಾಸರ ಮೋಹದ ಪುತ್ರನಾದ ಮೋಹನನು ಕಾಲಾಂತರದಲ್ಲಿ ಪ್ರಸಿದ್ಧ **ಮೋಹನದಾಸರಾದರು.** ದಾಯಾದರು ನಿಸ್ಸಂತಾನರಾಗಿ ಮೃತರಾಗಲು ಪಿತ್ರಾರ್ಜಿತ ವಾದ ಸಕಲೈಶ್ವರ್ಯವೂ ಮೋಹನದಾಸರದಾಯಿತು. ದ್ರೋಹಚಿಂತನೆಯಿಂದ ಪ್ರಾಪ್ತ ವಾದ ಐಶ್ವರ್ಯವು ಪಾಪಮಯವಾದುದೆಂದು ಮೋಹನದಾಸರು,' ಸರ್ವಸ್ವವನ್ನೂ ಸತ್ಕಾರ್ಯದಲ್ಲಿ ವಿನಿಯೋಗಿಸಿದರು.

ವಿಜಯದಾಸರು ಕಾಶಿಯಲ್ಲಿ ವೈನಾನುಗ್ರಹಕ್ಕೆ ಪಾತ್ರರಾಗಿ ಮಹಾ ವಿಭವದಿಂದ ಚೀಕಲಪರಿಗೆ ಬರುವ ಮಾರ್ಗದಲ್ಲಿ, ಆದವಾನಿಯ ದಿವಾನರ ಮನೆಯಲ್ಲಿ ಬಂದಿಳಿದಿದ್ದಾಗ ದಿವಾನರ ಮಗನನ್ನು ನೋಡಿ-'ಏನೋ **ಪಂಗನಾಮದ ತಿಮ್ಮಣ್ಣ !"** ಎಂದು ಮಾತ ನಾಡಿಸಿದ್ದರು. ದಾಸರ ಬಾಯಿಂದ ಬಂದ ಆ ಮಾತೇ ಜನರ ರೂಢಿಗೆ ಬಂದು, ತಿಮ್ಮಣ್ಣ ನನ್ನು ಪಂಗನಾಮದ ಎಂಬ ಹೆಸರಿನಿಂದ ಸಹಿತವಾಗಿಯೇ ಎಲ್ಲರೂ ಕರೆಯಲಾರಂಭಿಸಿದರು. ಅಂದಿನಿಂದ ಅವನಿಗೆ ಒಂದು ಪ್ರಕಾರದ ವೈರಾಗ್ಯವು ಹುಟ್ಟಿ ದೇವೋನ್ಮಾದಿಯಂತಾದನು. ವಂಶಗೌರವದಿಂದ ತಿಮ್ಮಣ್ಣನು ಬಸಾಲತ್ ಜಂಗನ ದಿವಾನನಾದನು. ಆಗಲೂ ಅವನ ವೈರಾಗ್ಯ ಕಡಮೆಯಾಗಲಿಲ್ಲ. ವಿಜಯರಾಯರು ಆತನನ್ನು ಆ ಹೆಸರಿನಿಂದ ಕರೆಯಲು ಕಾರಣವು ಪ್ರತ್ಯೇಕವಾಗಿತ್ತು. ಶ್ರೀ ಪುರಂದರದಾಸರ ಸಮಕಾಲಿಕರಾಗಿದ್ದ ಬೇಲೂರಿನ ವೈಕುಂಠದಾಸರು ಮತ್ತೆ ತಿಮ್ಮಣ್ಣನಾಗಿ ಅವತರಿಸಿದರು. ಅವರ ಪೂರ್ವ ವೃತ್ತಾಂತವನ್ನು ತಿಳಿದೇ ಜ್ಞಾನಿಗಳಾದ ವಿಜಯರಾಯರು ಹಾಗೆ ಸಂಬೋಧಿಸಿದ್ದರು. ಅಷ್ಟುಮಾತ್ರದಿಂ ದಲೇ ಆತನಿಗೆ ಪೂರ್ವಜನ್ಮದ ಜ್ಞಾನವುಂಟಾಯಿತು. ಪಂಗನಾಮದ ಎಂಬ ಮಾತಿನ ರಹಸ್ಯವು ವೈಕುಂಠದಾಸರು ದಪ್ಪವಾಗಿ ಮೂರು ನಾಮಗಳನ್ನು ಹಚ್ಚಿಕೊಳ್ಳುತ್ತಿದ್ದುದರ ಜ್ಞಾಪಕವನ್ನು ಉಂಟುಮಾಡುವುದಾಗಿತ್ತು. ತಿಮ್ಮಣ್ಣಯ್ಯನಿಗೆ ಇದ್ದ ಒಬ್ಬ ಮಗನನ್ನು ಬಸಾಲತ್ ಜಂಗನು ಇಸ್ಲಾಂಧರ್ಮಕ್ಕೆ ಸೇರಿಸಿಕೊಂಡದ್ದರಿಂದ ಬಹು ಸಂತಾಪವಾ ಗಿತ್ತು. ವಿಜಯದಾಸರ ಶಿಷ್ಯನಾಗಿ ವೇಣುಗೋಪಾಲ ವಿಠಲಾಂಕಿತವನ್ನು ಪಡೆದು ಅಧಿ ಕಾರವನ್ನು ಬಿಡಬೇಕೆಂದು ಯೋಚಿಸಿದರೂ, ವಿಜಯದಾಸರು ಅವಕಾಶಕೊಡಲಿಲ್ಲ. ಆಗ ಅಧಿಕಾರದ ಬೇಸರದಿಂದ—

ಕಲ್ಯಾಣಿ—ಝಂಪೆತಾಳ.

ನಿನ್ನ ನಂಬಿದ ನರಗೆ-ಅನ್ಯರಾಶ್ರಯವೇಕೋ ।
ಜನ್ನ ಗುರು ವಿಜಯರಾಯಾ ಪ.

ಬನ್ನ ಬಡುವೆನು ಜೀಯ । ಘನ್ನ ಭವದೊಳು ಸಿಲುಕಿ
ಇನ್ನು ಕಡೆಹಾಯ್ಸೊ ಬೇಗ । ಈಗ ಅ.

ಸಪ್ತದ್ವೀಪಾಧಿಪನ ಪುತ್ರನೊಬ್ಬನು ಪರರ
ಭೃತ್ಯನಾಗುವುದುಚಿತವೇ ? ।
ಮತ್ತೆ ಸುರಧೇನುವಿನ ಹತ್ತಿಲಿರುವನಿಗಿನ್ನು
ಹಸ್ತು ಬಳಲುವುದುಚಿತವೇ ?

ಒತ್ತಿ ಸುರನದಿ ನರನ ಸುತ್ತ ಪರಿಯಲು ನೀರಿ
ಗಾರ್ತನಾಗುವುದುಚಿತವೇ ?
ನಿತ್ಯಸುಬದಾರಿ ವಿಚಿತ್ರದಲಿ ತೋರೆನಾ
ಹಸ್ತ ನರಗೊಡ್ಡುವುದು ಎತ್ತಲುಚಿತವೊ ಗುರುವೆ ? ೧

ಕ್ಷೀರವಾರಿಧಿ ಸೇರಿ ನೀರು ಮಜ್ಜಿಗೆಗಾಗಿ
ಚೀರಿ ಒದರುವುದುಚಿತವೆ ?
ದಾರಿಯಲಿ ಸುಧೆರಸ ಸೂರೆಯಾಗಲು ಜಲದ
ವಾರ ಹುಡುಕುವುದುಚಿತವೆ ?
ನೂರಾರು ವಸನದ ಹೇರು ಮನೆಯೊಳಗಿರಲು
ಕೋರಿಯುಡುವುದು ಉಚಿತವೆ ?
ವಾರವಾರಕೆ ಹರಿಯು ತೋರುವ ನರನ ಬಿಟ್ಟು
ಕ್ರೂರನನು ಸೇವಿಸುವುದಾರಿಗುಚಿತವೊ ಗುರುವೆ ? ೨

ಸಾಕಿ ಸಲಹೆಂದು ಅತಿವ್ಯಾಕುಲದಿ ಬಂದವನ
ನೂಕಿ ಬಿಡುವುದು ಉಚಿತವೆ ?
ಏಕುಬುದ್ಧಿಯನಿತ್ತು ಜೋಕೆಮಾಡದೆ ಮನವ
ನೇಕಮಾಡುವುದುಚಿತವೆ ?
ಬೇಕಾದ್ದವರಕೊಡುವೆ ಲೋಕದವರಿಗೆ ಎನ್ನ
ಕಾಕುಮಾಡುವುದುಚಿತವೆ ?
ಶ್ರೀಕಾಂತ ವೇಣುಗೋಪಾಲ ವಿಠಲ ನಿನ್ನ
ಸಾಕು ಮನ್ನಿಸುತಿರಲು ನಾ ಕೆಡುವುದುಚಿತವೆ ? ೩

ಎಂಬುದಾಗಿ ಪ್ರಾರ್ಥಿಸಿದರು. ಆದರೆ, ದಾಸರು ಮಾತ್ರ–'ನೀನು ಅಧಿಕಾರದಲ್ಲಿದ್ದು ಮಾಡುವ ಸೇವೆಯೂ ಬಹಳವಾಗಿರುವುದೆ'ಂದು ತಿಮ್ಮಣ್ಣಯ್ಯನವರನ್ನು ಹತ್ತಿರ ಸೇರಿಸಿ ಕೊಳ್ಳಲಿಲ್ಲ.

ಬಸಾಲತ್ ಜಂಗನು ಎಷ್ಟು ಕ್ರೂರನಾಗಿದ್ದರೂ ಅವನ ಅತ್ಯಾಚಾರಗಳಿಗೆ ದಿವಾನರು ಅಂಕುಶದಂತಿದ್ದರು. ನವಾಬನು ಅಫೀಮು ಸೇವನೆಮಾಡುವುದು, ಮದ್ಯಪಾನ ಮಾಡುವುದು, ಮತ್ತು ನಿರಂತರ ರಾಣಿವಾಸದಲ್ಲಿರುವುದೇ ಮೊದಲಾದ ಕಾರಣಗಳಿಂದ ರಾಜಕಾರ್ಯನಿರ್ವಾಹದ ಹೆಚ್ಚಿನ ಜವಾಬ್ದಾರಿಯನ್ನು ದಿವಾನರ ಮೇಲೆ ಬಿಟ್ಟಿದ್ದನು. ಯದ್ಯಪಿ ಮಹಾರಾಷ್ಟ್ರದ ಪೇಷ್ವಾಯಿಗಳು ನವಾಬನ ದ್ವೇಷಿಗಳಾಗಿದ್ದರೂ ತಿಮ್ಮಣ್ಣಯ್ಯನವರ ದಕ್ಷತೆಗಂಜಿ ಆದವಾನಿಯ ಮೇಲೆ ಧಾಳಿ ಮಾಡಲಿಲ್ಲ. ತಿಮ್ಮಣ್ಣಯ್ಯನವರು ಮಾತ್ರ, ತಮ್ಮ ಮಗನನ್ನೇ ಜಾತಿ ಕೆಡಿಸಿದನೆಂಬ ಕಾರಣದಿಂದ ನವಾಬನ ಮೇಲೆ ದ್ವೇಷವನ್ನು ವಹಿಸಿದ್ದರೆ, ಮಹಾರಾಷ್ಟ್ರರು ಸಂಚುಮಾಡಿ ಆದವಾನಿಯನ್ನು ಸ್ವಾಧೀನ ಮಾಡಿಕೊಳ್ಳದೆ ಬಿಡುತ್ತಿರಲಿಲ್ಲ. ಅವನ ಅಪರಾಧ ಸಹಸ್ರವಿದ್ದರೂ ಅವನ ಉಪ್ಪುತಿಂದು

ಅವನಿಗೆ ದ್ರೋಹ ಮಾಡಬಾರದೆಂದು ಅಯ್ಯನವರು ನವಾಬನ ಹಿತಚಿಂತಕರಾಗಿಯೇ ಇದ್ದರು. ಹಿಂದೂಜನರ ಮನಸ್ಸಿನ ರಚನೆಯೇ ಹಾಗಿರುವಾಗ ತಿಮ್ಮಣ್ಣಯ್ಯನವರೊಬ್ಬರು ಹೊರತಾಗುವ ಬಗೆ ಹೇಗೆ ?

ವಿಜಯದಾಸರು ಭಾಗವತಧರ್ಮ ಪ್ರಚಾರಕಾರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಮೋಹನದಾಸರಾದಿಯಾದ ಶಿಷ್ಯಪರಿವಾರಸಹಿತರಾಗಿ ಸಂಚಾರ ಹೊರಟರು. ದಾಸರಾಯರ ಉಪದೇಶದಿಂದ ಸಾವಿರಾರು ಜನರು ಶಿಷ್ಯರಾಗುತ್ತ ಬಂದರು. ಅಂಕಿತ ಪಡೆದು ಶಿಷ್ಯರಾದವರಿಗೆ ಹರಿದಾಸ ಲಕ್ಷಣ ಹೀಗಿರಬೇಕೆಂದು ಈ ಕೆಳಕಂಡ ಸುಳಾದಿಯನ್ನು ರಚಿಸಿ ಉಪದೇಶಮಾಡಿದರು.

ಹರಿದಾಸ ಲಕ್ಷಣ ಸುಳಾದಿ

ಧ್ರುವತಾಳ

ಹರಿದಾಸ ಲಕ್ಷಣವಿರಬೇಕು ಈ ಪರಿ । ಗರುವ ಕೋಪ ಮದ ಮತ್ಸರ ಬಿಡಬೇಕು । ಮರುತ ಮತಕ್ಕೆ ಎಲ್ಲಿ ಸರಿಗಾಣೆನೆನುತಲಿ । ಧರೆಯೊಳು ಕೂಗಿ ಡಂಗುರ ಹೊಡೆಯಬೇಕು । ಎರಡಾರು ಪುಂಡ್ರ ವಿರಚಿಸಿ ಪಂಚಮುದ್ರೆ । ಧರರಾಗಿ ತಪ್ತಾಂಕಿತ ಧರಿಸಬೇಕು ಭುಜದಿ । ಸಿರಿಬೊಮ್ಮ ಭವಾದ್ಯರಿಗೆ ತರತಮ ಭೇದದಿಂದ । ಎರಗಿ ಎನ್ನೊಳಗಿದ್ದು ಪ್ರೇರಿಪೆಂದಾಡಲಿಬೇಕು । ಗುರುಹಿರಿಯರಿಗಾದರಪೂರ್ವಕದಿಂದ । ಕರವ ಮುಗಿದು ನಮಸ್ಕರಿಸುತಲಿರಬೇಕು । ನೆರೆಹೊರೆಯವರಿಗೆ ನಿರುತದಲಿದ್ದರು ಬೇ । ಸರಗೊಳಿಸದೆ ಸಂಚರಿಸುತಲಿರಬೇಕು । ಹರಣಹರಿಯಾಧೀನ, ನೆರೆದ ಸತಿಸುತರು । ನಿರುತ ಹರಿಗೆ ದಾಸರೆಂದು ಗಣಿಸಬೇಕು । ಹರಿದಿವಸ ಹರಿಚರಿತೆ ಹರಿಸ್ಮರಣೆ ಹರಿಪೂಜೆ । ಹರಿಶ್ರವಣ ಅಂತರ ಶುದ್ಧಿಯಿರಲಿಬೇಕು । ಹರಿಪರದೇವತೆ ವಿಜಯವಿಠಲಗತಿ ಸುರರಾದ್ಯರಿಗೆ ಎಂದು ಉರವಣಿಸಿ ನುಡಿಯಬೇಕು ॥ ೧

ಮಟ್ಟತಾಳ

ಪರಧನ ಪರಸತಿ ಪರನಿಂದ್ಯವಿವರ । ಸರಸದಲ್ಲಿರದೆ ಚರಿಸಬೇಕು ದೂರ । ನರರು ಜರಿಪರೆ ಆದರವೆಂದು ತಿಳಿದು । ಹರುಷಬಡಲಿಬೇಕು ನಿರುತದಲಿ । ಸುರತರು ದೊರೆತಂತೆ ಕರೆದು ಮನ್ನಿಸಿದರು । ಹಿರಿಹಿರಿಹಿಗ್ಗದೆ ಬರಡು ತಾನಿರಬೇಕು । ನೆರೆದ ಸಂದಣಿಯೊಳು ಚರಿಸಬಾರದು ಪೋಗಿ । ಬರಿದೆ ಕುಳಿತು ಹಾಳು ಹರಟೆಯನಾಡದಲೆ । ಮರಿಯಾದೆಯ ಸೊಲ್ಲು ಇರಬೇಕು ತನ್ನೊಳು । ಪರಮ ತತ್ವವ ತಿಳಿದು ದುರುಳರಿಗರುಹದೆ । ಸುರಿಯಬೇಕು ಸುಖ ಮರಳಿ ಮರಳಿ ನೆನೆದು । ಪರಮಗುಪ್ತಾನಂದ ವಿಜಯವಿಠಲನ । ನೆರೆನಂಬಲಿಬೇಕು ಕುರುಹು ಕಾಣಿಸುವಂತೆ ॥ ೨

ತ್ರಿಪುಟತಾಳ

ಲೇಸಾದರು ಹರಿಯ ಕಾರುಣ್ಯವೆನಬೇಕು । ಲೇಸಾಗದೆ ಬಲು ಕ್ಲೇಶ ಬಂದೊದಗಲು । ಏಸು ಜನ್ಮದ ಪಾಪರಾಶಿ ಬಂದೊದಗಿತೋ । ಈ ಶರೀರಕೆ ಬಂದು ಪ್ರಾಪ್ತವಾದದ್ದು ಅನುಭ । ವೀಸದೆ ಬಿಡದೆಂದು ಸತ್ಯದಿಂದಿರಬೇಕು । ಲೇಶವಾದರು ದುಃಖ ಹಚ್ಚಿಕೊಳ್ಳದೆ ಮಹಾ । ತೋಷದಲ್ಲಿರಬೇಕು ನೋಯದಲೆ । ಶ್ರೀಶನೆ ಗತಿಯೆಂದು ಬೇಸರವಲೆ ಬಂದ । ಕ್ಲೇಶಗಳುಣಬೇಕು ಬಂದಾಗಲೂ । ದೇಶ ಕಾಲ ಗುಣ ಪರಿಪೂರ್ಣ ಹರಿಯಿರೆ । ಘಾಸಿ ಎಲ್ಲಿಯದೆಂದು ನಲಿಯಬೇಕು । ಶ್ರೀ ಸತಿ ಕಾಲ ವೇದ ಜೀವಪ್ರಳಯದಲ್ಲಿ । ನಾಶವಾಗದು ಭೇದ ಸಿದ್ಧವೆಂದೆನಬೇಕು । ವಾಸುದೇವ ನಮ್ಮ ವಿಜಯವಿಠ್ಠಲನ್ನ । ದಾಸಾನುದಾಸರ ದಾಸನಾಗಲಿಬೇಕು ॥ ೩

ಅಟ್ಟತಾಳ

ಬಡತನ ಬಂದರೆ ಹಿಗ್ಗುತಲಿರಬೇಕು । ಜಡನಾಗಿ ಬಾಹಿರದಲ್ಲಿ ತೋರಲಿಬೇಕು। ಅಡಿಗಡಿಗೆ ಲಜ್ಜೆಗೆಡಬೇಕು ಸರ್ವದಾ । ಒಡಲಿಗೆ ಚಿಂತೆಮಾಡದೆ ದೃಢವಿರಬೇಕು । ಒಡವೆ ವಸ್ತು ತಾಯಿತಂದೆ ಈ ಲೋಕದ । ಒಡೆಯ ಕೃಷ್ಣನೆಂದು ಬಿಡದೆ ನಂಬಲಿಬೇಕು । ಎಡೆಗೆ ಪರಿಮಿತ ಧಾನ್ಯ ತರಲಿಬೇಕು । ಕೊಡಬೇಕು ಕೊಡಬೇಕು ಒಬ್ಬರಿಗದರೊಳು । ಕಡುಗಲಿ ವಿಜಯವಿಠಲನ ಪಾದ । ಪಿಡಿದು ಭಜಿಸಬೇಕು ನಲಿನಲಿದಾಡುತ ॥ ೪

ಆದಿತಾಳ

ಉಟ್ಟದಕಿಂತ ಮೇಲು ಇಟ್ಟದಕಿಂತ ಮೇಲು । ತೊಟ್ಟದಕಿಂತ ಮೇಲು ವಿಠಲನ ಸ್ಮರಣೆ ಮನ । ಮುಟ್ಟಿ ಬಹಿರದಲ್ಲಿ ಅಟ್ಟಹಾಸದಿಂದ । ಚಿಟ್ಟಕ್ಕಿ ಕೂಗುವುದು ಇಷ್ಟು ಸುಖಕೆ ಮೇಲು । ದಟ್ಟಡಿಯಿಂದ ತಿಳಿದು ನಿಷ್ಠೆಯಿಂದಲಿರಲು । ಇಷ್ಟಪ್ರಾಪುತ ಅವಗಾರಿಷ್ಟವು ಪರಿಹರ । ಹುಟ್ಟು ಸಾವಿಲ್ಲದ ವಿಜಯವಿಠಲ ತಾನು । ಕೊಟ್ಟು ಸಾಕುವ ದಯವಿಟ್ಟು ದಾಸನಮಾಡಿ ॥ ೫

ಜತೆ

ಈ ಪರಿಯಿದ್ದವಗೆ ಅನಂತ ಜನುಮಕ್ಕು ।
ತಾಪತ್ರಯಗಳಿಲ್ಲ ವಿಜಯವಿಠಲ ಬಲ್ಲ ॥

ಪುರಂದರದಾಸರ ನಂತರ ಹೆಚ್ಚು ಸುಳಾದಿಗಳನ್ನು ಬರೆದವರೆಂದರೆ ವಿಜಯದಾಸರು. ಅನಂತರ ಗೋಪಾಲದಾಸರು. ದಾಸರ ಒಂದೊಂದು ಸುಳಾದಿಗಳೂ ಬಲು ಅರ್ಥವತ್ತಾಗಿವೆ, ನೀತಿಬೋಧಕವಾಗಿವೆ, ತತ್ವಪುಂಜಗಳಾಗಿವೆ. ಒಂದೊಂದು ಸುಳಾದಿಯ ರಚನೆಯ ಕಾಲ ಕಾರಣಗಳನ್ನು ಬರೆಯಬೇಕೆಂದರೆ ಸಾವಿರ ಪುಟಗಳಾದರೂ ಮುಗಿಯುವಂತಿಲ್ಲ. ಸುಳಾದಿಗಳನ್ನೇ ಪ್ರತ್ಯೇಕ ಮುದ್ರಿಸುವ ಅನುಕೂಲ ದೊರೆತಾಗ ವಾಚಕರು ಪ್ರೋತ್ಸಾಹವಿತ್ತು ಓದಿ ಆನಂದಿಸಬೇಕೆಂದು ಪ್ರಾರ್ಥನೆಯಿದೆ.

ತಿರುಪತಿ

ಒಮ್ಮೆ ಶ್ರೀ ವಿಜಯದಾಸರು ತಿರುಪತಿಗೆ ಬಂದು ಪುರಂದರದಾಸರ ಮಂಟಪದಲ್ಲಿಳಿದರು. ಶ್ರೀನಿವಾಸನ ಸ್ತೋತ್ರರೂಪವಾದ ಅನೇಕ ಪದ ಸುಳಾದಿಗಳನ್ನು ಹಾಡಿದರು. ಅದು ಬ್ರಹ್ಮೋತ್ಸವದ ಕಾಲವಾಗಿದ್ದುದರಿಂದ, ಗರ್ಭಾಂಗಣಕ್ಕೆ ಪ್ರವೇಶಿಸಿ ದೇವರ ದರ್ಶನ ಮಾಡುವ ಅವಕಾಶ ದೊರೆಯದ ತೊಂದರೆಯಿತ್ತು. ಸ್ವಾಮಿ ಸಂದರ್ಶನಕ್ಕಾಗಿ ನೆರೆದು ಕಾದಿದ್ದ ಜನಸಮೂಹವನ್ನು ನೋಡಿ, ದೇವರನ್ನು ಉದ್ದೇಶಿಸಿ ಹೀಗೆ ಹಾಡಿದರು.

ಮುಖಾರಿ — ಝಂಪೆತಾಳ

ನಿನ್ನ ದರುಶನಕೆ ಬಂದವನಲ್ಲವೋ । ದೇವ
ಪುಣ್ಯಪಂತರ ದಿವ್ಯ ಚರಣನೋಡಲು ಬಂದೆ ॥ ಪ.

ಎಲ್ಲೆಲ್ಲಿಯೂ ನಿನ್ನ ವ್ಯಾಪ್ತಿ ತಾನಾಗಿರಲು ।
ಇಲ್ಲಿಗೇ ಬರುವ ಕಾರಣವ್ಯಾವುದೋ ।
ಸೊಲ್ಲಿಗೇ ಸ್ತಂಭದಲಿ ತೋರಿದ ಮಹಾಮಹಿಮ ।
ಎಲ್ಲಿಲ್ಲವೋ ನೀನು ಬಲ್ಲ ಭಕುತರಿಗೇ ? ॥ ೧

ಕರೆದಾಗಲೇ ಓಡಿಬಂದೊದಗುವ ಸ್ವಾಮಿ ।
ಮರಳಿ ಗಾವುದನೇಸಿ ಬರಲ್ಯಾತಕೆ ? ।
ನೆರೆನಂಬಿದವರಿಗಾವಲ್ಲಿಯಾದರೆ ಏನೊ ।
ಅರಿತವರ ಮನದಲ್ಲಿ ನಲಿದಾಡುವ ಚಲುವ ॥ ೨

ಕಠಿಣವೋ ನಿನ್ನ ಭಕ್ತರ ದರುಶನ ಲಾಭ ।
ಸಟೆಯಲ್ಲ ವೇದಗಳು ಸಾರುತಿಹವೋ ।
ವಟು ಮೊದಲಾದ ಸದ್ವೈಷ್ಣವರ ದಿವ್ಯಾಂಘ್ರಿ ।
ತೃಟಿಯಾದರೆನಗೆ ನೋಂಕಲು ಗತಿಗೆ ದಾರಿ ॥ ೩

ನೀನಿದ್ದ ಸ್ಥಾನದಲಿ ಸಕಲ ಪುಣ್ಯಕ್ಷೇತ್ರ ।
ನೀನಿದ್ದ ಸ್ಥಾನದಲಿ ಸಕಲ ತೀರ್ಥ ।
ನೀನಿದ್ದ ಸ್ಥಾನದಲಿ ಸರ್ವ ತಾತ್ವಿಕರುಂಟು ।
ನಾನಿಂತು ಬಂದದ್ದು ನಿನಗೆ ತಿಳಿಯದೆ ಸ್ವಾಮಿ ॥ ೪

ಧ್ಯಾನಕ್ಕೆ ಸಿಲುಕುವ ನಿನ್ನ ಕಾಣಲಿಬಹುದು ।
ಜ್ಞಾನಿಗಳು ಬರುವರೆಂತೋ ಅಲ್ಲಿಗೆ ?
ಅನಂತ ಜನ್ಮದಲಿ ಜಪತಪ ವ್ರತಹೋಮ ।
ಏನುಮಾಡಿದರಿಷ್ಟು ಜನ ಕೂಡುವುದೊ ದೇವ । ೫

ಇದನೆ ಲಾಲಿಸು ಜೀಯ ನಿನ್ನದೊಂದೇ ಮೂರ್ತಿ |
ನಿದರುಶನವಲ್ಲದೆ ಮಿಗಿಲಾವುದೋ |
ಪದೆ ಪದೆಗೆ ಮಧ್ವಮತ ಪೊಂದಿದ ಸುಜನರ |
ಹೃದಯದಲಿ ಒಂದೊಂದು ಪರಿ ನಿನ್ನ ರೂಪಗಳು || ೬

ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ |
ನೆಲೆಗಾಣೆ ನೆಲೆಗಾಣೆ ಈ ಧರೆಯೊಳು |
ಒಲಿದು ಭಕ್ತರಿಗಾಗಿ ಮದುವೆ ಹಬ್ಬಿಸಿಕೊಂಡೆ |
ಸುಲಭ ದೇವರದೇವ ವಿಜಯ ವಿಠ್ಠಲರೇಯ || ೭

ತಮಗೆ ದರ್ಶನಭಾಗ್ಯ ನೀಡಲಿಲ್ಲವೆಂಬುದಕ್ಕಾಗಿಯೋ ಎಂಬಂತೆ ಸ್ವಾಮಿಯನ್ನು ಮೂದಲಿಸಿದಂತೆ ಈ ಕೆಳಕಂಡ ಪದವನ್ನು ಹಾಡಿದ್ದಾರೆ.

ಭೈರವಿ — ಝಂಪೆತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ಪ.

ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆಸಿಕೊಂಬ
ಇಲ್ಲ ತನಗೆಂದೊಬ್ಬ ಸುಳ್ಳುಮಾತಾಡಿದರೆ
ಎಲ್ಲವನು ಕಸುಕೊಂಬ ಕಳ್ಳ ಧೊರೆಗೆ ೧

ತನ್ನ ನೋಡುವೆನೆಂದು ಮುನ್ನೂರ್ಗಾವುದ ಬಂದು
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ
ಹೊನ್ನು ಹಣ ಕಸುಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಡೆಸುವಾ ಅನ್ಯಾಯಕಾರಿಗೆ ೨

ಗಿಡ್ಡ ಹಾರುವನಾಗಿ ಶರಗೊಡ್ಡಿ ದಾನವಬೇಡಿ
ದುಡ್ಡು ಕಾಸುಗಳಿಗೆ ಕೈಯನೀಡಿ
ಅಡ್ಡಬಿದ್ದ ದಾಸರಿಗೆ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಶಿರಿ ವಿಜಯ ವಿಠಲಗೇ ೩

ಎಂಬುದಾಗಿ ಮಂಗಳಹಾಡಿ ತಮ್ಮ ಮಂಟಪಕ್ಕೆ ಬಂದರು. ಆ ದಿನ ದಾಸರಿಗೆ ಇತರರಂತೆ ದೇವರ ದರ್ಶನವಾಗಲಿಲ್ಲ. ಆದ್ದರಿಂದ ಅಂದು ಅವರಿಗೆ ಭೋಜನವೂ ಆಗಲಿಲ್ಲ.

ಮಾರನೆಯ ದಿನ ವಿಜಯದಶಮಿ. ಸ್ವಾಮಿಯ ಬ್ರಹ್ಮರಥಾರೋಹಣವಾಯಿತು. ಲಕ್ಷಾಂತರ ಜನರು ಸೇರಿದ ಉತ್ಸವದಲ್ಲಿ ರಥವು ಮುಂದರಿಯಿತು. ದಾಸರ ಶಿಷ್ಯರು ನಿನ್ನೆಯೂ ದರ್ಶನವಾಗಲಿಲ್ಲ. ಇವತ್ತೂ ದರ್ಶನವಿಲ್ಲ. ಉತ್ಸವಮೂರ್ತಿಯನ್ನಾದರೂ ನೋಡಿ ಪಾರಣೆ ಮಾಡೋಣವೆಂದು ದಾಸರನ್ನು ಅವಸರಿಸಿದರು. ದಾಸರು ಯಾರ ಮಾತನ್ನೂ ಕಿವಿಗೆ ಹಾಕಿಕೊಳ್ಳದೆ ಧ್ಯಾನದಲ್ಲಿ ಕುಳಿತಿದ್ದರು. ಮತ್ತೆ ಮತ್ತೆ ಶಿಷ್ಯರು

ಜ್ಞಾಪಿಸಲು–'ಶ್ರೀನಿವಾಸನ ರಥವು ಸಾಗಿತೇ?' ಎಂದು ಕೇಳಿದರು. 'ಶಿಷ್ಯರು–ಹೌದು, ಸಾಗಿತು' ಎಂದರು. 'ಹಾಗಿದ್ದರೆ ನಾನೊಂದು ಚೀಟಿಯನ್ನು ಬರೆದುಕೊಡುವೆನು. ಅದನ್ನು ರಥದ ಬಳಿಯಲ್ಲಿ ಹಾಕಿ ಬನ್ನಿರಿ' ಎಂದು ಹೇಳಿದರು. ಚೀಟಿಯಲ್ಲಿ—

ಐಶ್ವರ್ಯ ಮದಮತ್ತಸ್ಸನ್ ನ ಜಾನೀಷೇ ಮದಾಗಮಂ ।
ಪರಪಾದಿ ಭಯೇ ಪ್ರಾಪ್ತೇ ಮದಧೀನಾ ತವಸ್ಥಿತಿಃ ॥

ಎಂಬುದಾಗಿ ಬರೆದರು. ಶಿಷ್ಯರು ರಥದ ಬಳಿಗೆ ಹೋಗಿ ಚೀಟಿಯನ್ನು ಹಾಕಿ ಬಂದರು. ರಥವು ನಿಂತುಬಿಟ್ಟಿತು. ಎಷ್ಟು ಪ್ರಯತ್ನ ಮಾಡಿದರೂ ಕದಲಲಿಲ್ಲ. ಯಾರಾದರೂ ಹರಕೆ ಬಾಕಿಯಿದ್ದರೆ ಒಪ್ಪಿಸಬೇಕೆಂದು ಮಹಂತರೇ ಮೊದಲಾದ ಅಧಿಕಾರಿಗಳು ಜನರನ್ನು ಎಚ್ಚರಿಸಿದರು. ಏನು ಮಾಡಿದರೂ ರಥವು ಮುಂದೆ ಬರಲಿಲ್ಲ. ಯಾರ ಸೇವೆಯೂ ಬಾಕಿಯಿರಲಿಲ್ಲ. ಮಹಂತರು ಪರಮಾತ್ಮನನ್ನು ಪರಿಪರಿಯಾಗಿ ಪ್ರಾರ್ಥಿಸಿದರು. ಕಾಲ ಮೀರುತ್ತಾ ಬಂತು. ಜನರು ನಿಂತ ಬಳಿಯಲ್ಲೇ ತಟಸ್ಥರಾಗಿ ಕುಳಿತರು. ಆಗ ಬಾಲಕ ನೊರ್ವನಮೇಲೆ ದೇವರ ಆವೇಶ ಬಂದು–'ನನ್ನ ದಾಸರನ್ನು ಕರೆತಂದರೆ ನಾನು ಬರುವೆನು' ಎಂದು ಶ್ರೀನಿವಾಸನ ಆಜ್ಞೆಯಾಯಿತು. ಮಹಂತರು ದಾಸರ್ಯಾರೆಂದು ಕಂಡು ಹಿಡಿದು, ದೇವಸ್ಥಾನದ ಸಕಲ ಪರಿವಾರದವರಿಗಳಿಂದ ವಿಜಯದಾಸರನ್ನು ಪ್ರಾರ್ಥಿಸಿ ರಥದ ಬಳಿಗೆ ಕರೆತಂದರು. ದಾಸರು ಶ್ರೀನಿವಾಸನು ತಮ್ಮ ಮಾತಿಗೆ ಮಾನವಿತ್ತನೆಂದು—

ಸಾವೇರಿ — ಆದಿತಾಳ

ಸಾಗೀ ಬಾರಯ್ಯ ಭವ । ರೋಗದ ವೈದ್ಯನೆ ।
ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು ॥ ಪ.
ಭಾಗೀರಥಿ ಪಿತ ಭಾಗವತರ ಸಂ ।
ಯೋಗ ರಂಗ ಉರ । ಗಾಗಿರಿ ವೆಂಕಟ ॥ ಅ.

ರಥದ ಮಧ್ಯದೊಳಿಪ್ಪ । ರಥಾಂಡಾಜವಾಹನ ।
ರಥಾಂಗ ಪಾಣಿಯೆ ದಶ । ರಥ ನೃಪತಿ ಪಾಲ ಪಾ ।
ರಥಗೆ ಸಾರಥಿಯಾಗಿ । ರಥವ ನಡೆಸಿ ಅತಿ ।
ರಥ ಮಹಾರಥರ ವಿ । ರಥರ ಮಾಡಿಸಿ ಗೆಲಿದೆ ॥
ಪ್ರಥಮದೈವ ಮ । ನ್ಮಥ ಪಿತ ದೈತ್ಯರ ।
ಮಥನ ಭಕ್ತರ ಮನೋ । ರಥ ಪರಿಪೂರ್ಣನೆ ।
ಸತತ ಸುಪರ್ಣನೆ । ಕಥಾಶ್ರವಣದಿ ಸ ।
ತ್ಪಥವ ಪಾಲಿಸುತಿಪ್ಪ । ಪ್ರಥಮಾಂಗದೊಡೆಯನೆ ॥ ೧

ನಿಲ್ಲದೆ ಬರುವುದು । ಫುಲ್ಲಾಲೋಚನ ಶಿರಿ ।
ವಲ್ಲಭ ಸರ್ವರಿಗು । ಬಲ್ಲಿದನ ಪ್ರತಿ ।
ಮಲ್ಲ ನಿರೋಧಿಯೆ । ಮೆಲ್ಲಮೆಲ್ಲನೆ ಪಾದ ।
ಪಲ್ಲವ ಪಾಲಿಸುತ್ತ । ಸಲ್ಲಲಿತಮಾಗಿ ॥

ಎಲ್ಲ ಕಾಲದಿ ನಮ್ಮ। ನೆಲ್ಲರ ಸಲಹುವ।
ಎಲ್ಲಿ ನಿನಗೆ ಸರಿ । ಇಲ್ಲವೊ ನೋಡಲು ।
ಸಲ್ಲುವುದೋ ಬಿರು । ದಲ್ಲಿಗಲ್ಲಿಗೆ ಗುಣ ।
ಬಲ್ಲವರಾರಯ್ಯ । ಕಲ್ಲು ಕೊನೆಯೊಳಿಪ್ಪ ॥ ೨

ಬೊಮ್ಮ ಮೊದಲು ಮನುಜೋ । ತ್ತುಮ್ಮರು ಕಡೆಯಾಗಿ ।
ನಿಮ್ಮ ದಾಸರುಗಳ ಸಂಬಂಧಿಯರ ಪಾದ ।
ನಮ್ಮಿಕೊಂಡಿಪ್ಪಂಥಾ । ಧಮ್ಮ ನಾನು ಸರ್ವೋ ।
ತ್ತುಮ್ಮನೆ ಅನೇಕ ಮ । ಹಿಮ್ಮಾ ಸರ್ವಭೂಷಿತ ॥

ರಮ್ಮೆ ಧರಣಿದೇವಿ । ಇಮ್ಮಹಿಷೇರಗೂಡಿ ।
ಸಮ್ಮುಖವಾಗುತ । ಗಮ್ಮನೆ ಬಾಬಾ ।
ಹಿಮ್ಮೆಟ್ಟದೆ ಶಿರಿ । ವಿಜಯವಿಠಲ ಅನು ।
ಪಮ್ಮ ಮಹಿಮ ಪರ । ಬೊಮ್ಮ ತಿರುಮಲೇಶ ॥ ೩

ಎಂಬುದಾಗಿ ಶ್ರೀನಿವಾಸನನ್ನು ಪ್ರಾರ್ಥಿಸಿದರು. ರಥವು ವಿಶೇಷ ಪ್ರಯತ್ನವಿಲ್ಲದೆ ದಡ ದಡನೆ ಸಾಗಿ ಬಂದು ನೆಲೆಗೆ ನಿಂತಿತು. ದಾಸರ ಮೇಲಿನ ಪರಮಾತ್ಮನ ಅನುಗ್ರಹವನ್ನು ಜನರು ಸಹಸ್ರ ಮುಖಗಳಿಂದ ಕೊಂಡಾಡಿದರು. ವಿಜಯದಾಸರು ತಿರುಪತಿಯಲ್ಲಿದ್ದಾಗ ಅನೇಕ ಮಹಿಮೆಗಳು ನಡೆದುವು. ಗ್ರಂಥ ವಿಸ್ತಾರ ಭಯದಿಂದ ಅವುಗಳನ್ನು ಸಂಕ್ಷೇಪಿಸ ಬೇಕಾಗಿದೆ.

ವಿಜಯದಾಸರು ದಕ್ಷಿಣದೇಶದ ಎಲ್ಲ ಕ್ಷೇತ್ರಮೂರ್ತಿಗಳಮೇಲೆ ಹಾಡಿರುವ ದೇವರನಾಮಗಳನ್ನು ನೋಡಿದರೆ, ಪುರಂದರದಾಸರಂತೆಯೇ ಅವರೂ ಎಲ್ಲೆಡೆಗಳನ್ನೂ ಸಂದರ್ಶಿಸಿದಂತೆ ಗೊತ್ತಾಗುತ್ತದೆ. ಮೈಸೂರು ಸೀಮೆಯ ನಂಜನಗೂಡು ಶ್ವೇತಾದ್ರಿ ಬೇಲೂರು ಮೇಲುಕೋಟೆಗಳ ದೇವರಮೇಲೆ ಅವರು ಹಾಡಿದ ಬಹಳ ಹಾಡುಗಳು ಈಗಲೂ ಜನರ ರೂಢಿಯಲ್ಲಿವೆ. ಹೊಲೆಯರೆಂದು ಕರೆಸಿಕೊಳ್ಳುವ ಇಂದಿನ ಹರಿಜನಾಭಿದ ನಿನ್ನು ಜಾತಿಯ ಜನರಲ್ಲಿ ದಾಸರಿಗಿದ್ದ ಕನಿಕರವು ಹೊಲೆಯ ಸುಳಾದಿ, ಹೊಲತೀ ಸುಳಾದಿ ಗಳಿಂದ ಗೊತ್ತಾಗುತ್ತದೆ. ಈ ಕಾಲಕ್ಕೆ ಅವು ಮುಖ್ಯವೆಂದು ಕಂಡುಬರುವುದರಿಂದ ಅವು ಗಳನ್ನು ಈ ಕೆಳಗೆ ಉದಹರಿಸಲಾಗಿದೆ.

ಹೊಲೆಯ ಸುಳಾದಿ

ಧ್ರುವತಾಳ

ಹೊಲೆಯನಾವನೊ ಈ ಕಲಿಯುಗದೊಳಗೆ ನಿ । ಶ್ಚಲವಾಗಿ ತಿಳಿವುದು ಸುಲಭ ಮಾನವರು । ನಲಿದು ಕೇಳುವುದು ಚಂಚಲ ಮಾಡದಲೆ । ಫಲಿತಾರ್ಥವಿದು ಹಂಬಲಿಸದು ಸತತದಲಿ । ಹಲವು ಮಾತೇನು ನಿರ್ಮಲನಾಗಿ ಕೋಪವ । ಕಳೆಯಲರಿಯದವ ಹೊಲೆಯ

ಶುದ್ಧ ಹೊಲೆಯ । ಕಳವು ಮತ್ತೊಂದು ವಾರ್ತೆ ಘಳಿಕೆಯಾಗದ ಪ್ರತಿ । ಕಲಕಲವಾಗಿ ಬಿಡದಲಾಡುವನೇ ಹೊಲೆಯ । ಘಳಿಗೆ ತೊಲಗದವರ ಬಳಿಯಲ್ಲಿ ನಿರಂತರ । ಸುಳಿದಾಡುವನು ಅನಾಚಾರಿ ಹೊಲೆಯ । ಬಳಗಬರಲು ಬಿಟ್ಟು ಒಳಗೆ ಉಂಬುವ ಹೊಲೆಯ । ಕುಲಗೇಡಿಯಾಗಿ ವಂಶಾವಳಿಯ ಕೆಡಿಸುವ ಹೊಲೆಯ । ಮಲಗಿದ್ದವರ ಮೋಸಗೊಳಿಸಿ ಮನೆಯ ಬದುಕ । ಸೆಳೆದು ಕೊಂಡೊಯ್ವ ಖಳ ಎಂದಿಗೂ ಹೊಲೆಯ । ಇಳೆಯ ವಲ್ಲಭ ನಮ್ಮ ವಿಜಯ ವಿಠಲನ । ತಿಳಿದು ಪೂಜಿಸದವ ಮಲಿನ ಹೊಲೆಯ ॥ ೧

ಮಟ್ಟತಾಳ

ಅನ್ನದಾನವನ್ನು ಮಾಡದಿದ್ದವ ಹೊಲೆಯ । ಹೊನ್ನುಹಣಗಳಿಸಿ ಕೂಡಿಡುವನೆ ಹೊಲೆಯ । ಕನ್ನಿಕೆಯನ್ನು ಮಾರಿಕೊಂಬುವ ಹೊಲೆಯ । ಹೆಣ್ಣಿನ ಬಣ್ಣಕ್ಕೆ ಸೋಲುವನೇ ಹೊಲೆಯ । ತನ್ನ ಪರಾಕ್ರಮ ಪೇಳಿಕೊಂಬುವ ಹೊಲೆಯ । ಮನ್ನಣೆಮಾಡಲು ಹಿಗ್ಗುವನೇ ಹೊಲೆಯ । ಅನ್ನದಗೋಸುಗ ಹೊತ್ತುಗಳೆಯುವ ಹೊಲೆಯ । ಅನ್ಯಜನರ ನೋಡಿ ಬಳಲುವನೇ ಹೊಲೆಯ । ಉಣ್ಣಲಿಕ್ಕೆ ಹಿಂದೆ ಹಂಗಿಸುವನೆ ಹೊಲೆಯ । ಬಿನ್ನ ಬಿದ್ದನ್ನ ಒಪ್ಪಿಸಿ ಕೊಡುವನೆ ಹೊಲೆಯ । ಮಣ್ಣು ಕೂಡಿಸಿ ಧಾನ್ಯ ಮಾರುವನೇ ಹೊಲೆಯ । ಎನ್ನದು ಎಂದೆಂಬ ಸೊಲ್ಲು ಪೇಳುವ ಹೊಲೆಯ । ಪನ್ನಂಗಶಯನ ಶ್ರೀ ವಿಜಯ ವಿಠಲನ । ಸನ್ನುತಿಸಿ ಜ್ಞಾನ ಪಡೆಯದಿದ್ದವ ಹೊಲೆಯ ॥ ೨

ತ್ರಿಪುಟತಾಳ

ಶ್ರವಣಕೇಳುತಲಿದ್ದು ಪೋಗುವವ ಹೊಲೆಯ । ಅವಸರದೊಳಗೆ ಕಯ್ಯ ಬಿಡುವವ ಹೊಲೆಯ । ನವನೀತ ವಿಕ್ರಯಕ್ಕೆ ಕೊಡುವ ಭೂಸುರ ಹೊಲೆಯ । ಯವನರಲ್ಲಿ ಸೇವೆ ಮಾಡುವನೇ ಹೊಲೆಯ । ಕವಿಗಳ ಆವಾಗ ನಿಂದಿಸುವನೆ ಹೊಲೆಯ । ದಿವದಲ್ಲಿ ಸಂಭೋಗ ಮಾಡುವನೇ ಹೊಲೆಯ! ಸವಿಯೆಂದು ನೀರುಳ್ಳಿ ತಿಂಬುವನೇ ಹೊಲೆಯ। ರವಿಯು ಮೂಡಲು ಮಲಗಿ ಹೊರಳುವನೇ ಹೊಲೆಯ । ಶವ ಕೇರಿಯೊಳಗಿರಲು ಉಂಬುವನೇ ಹೊಲೆಯ । ಕಿವಿಗೊಟ್ಟು ಕೊಂಡೆಯ ಕೇಳುವನೇ ಹೊಲೆಯ । ಅವನಿಯೊಳಗೆ ಕ್ಷಮೆಯಿಲ್ಲದವನೆ ಹೊಲೆಯ । ಜವನ ಭೀತಿಗೆ ಎಚ್ಚರಿಯದವ ಹೊಲೆಯ । ಸವತಿಯ ಮೇಲೆ ಮಗಳಕೊಡುವನೆ ಹೊಲೆಯ । ಬವರದಲ್ಲಿ ನೃಪನ ಒಪ್ಪಿಸುವನೆ ಹೊಲೆಯ । ಗವ ಹೊಡಿ ಬದುಕುಮಾಡಿಸುವನೆ ಹೊಲೆಯ । ಪವಮಾನನುತ ನಮ್ಮ ವಿಜಯ ವಿಠನನಂಘ್ರಿ । ನವ ಭಕುತಿಯಲ್ಲಿ ಅರ್ಚಿಸದವ ಹೊಲೆಯ ॥ ೩

ಅಟ್ಟತಾಳ

ಕ್ರತು ಮಾಡುವಲ್ಲಿಗೆ ಪೋಗದಿದ್ದವ ಹೊಲೆಯ । ಸತಿಸತಿಗೆ ಭೇದ ವಿಕ್ಕುವನೇ ಹೊಲೆಯ । ಋತುಕಾಲದಲ್ಲಿ ಬೇರೆ ಇಪ್ಪನೆ ಹೊಲೆಯ । ಪಿತಮಾತಾ ಗುರುಗಳ ಬೈಯುವನೇ ಹೊಲೆಯ । ಯತಿಗಳ ನಿಂದಿಸುವನು ಹೇಡಿ ಹೊಲೆಯ । ಮತಿಯಿಂದ

ಸಾಲತಂದು ತಿಂದವನೇ ಹೊಲೆಯ । ಕ್ಷಿತಿಯೊಳು ಅಪಕೀರ್ತಿ ಹೊತ್ತವನೇ ಹೊಲೆಯ । ರತಿ ಪತಿ ಪಿತ ವಿಜಯವಿಠಲನ ಬಿಟ್ಟು । ಸತತ ಸಂಸಾರದಿ ಆಸಕ್ತನೇ ಹೊಲೆಯ ॥ ೪

ಆದಿತಾಳ

ಬಿಸಜನಾಭನ ದಿವಸ ಮಾಡದಿದ್ದವ ಹೊಲೆಯ । ನೊಸಲಲ್ಲಿ ಪುಂಡ್ರವ ಹಚ್ಚದವ ಹೊಲೆಯ । ಅಶನ ಘಾತಕನಾಗಿ ತಿರುಗುವನೇ ಹೊಲೆಯ । ಪಶು ಶಿಶುಗಳ ಒದ್ದು ನೂಕುವನೇ ಹೊಲೆಯ । ಹಸಿದು ಬಂದವರನ್ನು ಕಳುಹುವನೇ ಹೊಲೆಯ । ಸೊಸೆಯ ಮಕ್ಕಳಂತೆ ಅರಿಯದಿದ್ದವ ಹೊಲೆಯ। ಪಸನಾದ ಪರಿಪಾದ ತೀರ್ಥಕೊಳದವ ಹೊಲೆಯ। ಪಸರಿಸಿ ಅನರ್ಪಿತ ಅನ್ನವುಂಬುವ ಹೊಲೆಯ । ಅಸುರಾರಿ ವಿಜಯ ವಿಠಲನ ದೈವವೆಂದು ಕುಶಲದಿ ಹಾಡಿ ಪಾಡದವನೆ ಹೊಲೆಯ ೫

ಜತೆ

ಇದರೊಳು ಕ್ರಮವುಂಟು । ವಿಜಯವಿಠಲನ
ಪದಗಳರ್ಚಿಸದವ ಎಂದಿಗೂ ಹೊಲೆಯ ॥

ಹೊಲತಿ ಸುಳಾದಿ

ಧ್ರುವತಾಳ

ಹೊಲತಿ ಮತ್ತಾವಳೊ ಹೊಲೆಗೇರಿಯೊಳಗಿಲ್ಲ। ಹೊಲೆಗೇರಿಯೊಳಗಿದ್ದ ಹೊಲತಿ ಹೊಲತಿಯಲ್ಲ । ಕುಲವೆ ಅವಳಾದರು ಹೇಳುವದಿಲ್ಯಾಕವಳು । ಒಳಗೆ ಬರಳು ನಮ್ಮೊಳು ತಿರುಗಬಲ್ಲಳೆ । ಕಲಕಲವಾಗಿ ನಮ್ಮ ಬಳಿಯಲ್ಲಿ ಒಂದರ। ಘಳಿಗೆ ಬಿಡವಲಿದ್ದು ಹೊಲೆಗಲಸುವಳ । ಕುಲಕೋಟಿಗಳ ಕೇವಲವಾಗಿ ನಿತ್ಯಸತ್ಯ । ಸುಲಭನಾಗಿಪ್ಪ ಕರತಳದೊಳಗಿನ ಮುಕ್ತಿ । ಗಳ ದೂರಮಾಡಿ ನರಕಕ್ಕೆಳೆವಂತೆ ಮಾಡುವಳು । ಇಳೆಯೊಳಗುಂಟಾದ ಹೊಲತಿಯ ನಡತೆಯ । ನೆಲೆಯ ತಿಳಿದು ಸ್ನೇಹ ಬಳಸಿರೊ ಜನರೆಲ್ಲ । ಬಲದೇವ ವಿಜಯ ವಿಠಲನ ಚರಣಕ್ಕೆ । ಒಲಿಯದವಳು ಶುದ್ಧ ಹೊಲತಿ ಕಾಣಿರೊ ನಿತ್ಯ ॥ ೧

ಮಟ್ಟತಾ

ಮಕ್ಕಳ ಬಲುಮೆಯಲಿ ಗಂಡನ ಪಾದದಲಿ । ಭಕ್ತಿಯ ಮಾಡದಲೆ ಇಪ್ಪವಳೇ ಹೊಲತಿ । ರೊಕ್ಕ ಕದ್ದು ಕೊಟ್ಟು ವ್ಯಾಪಾರವ ಮಾಡಿ । ಸಿಕ್ಕರುಣಿಯಾಗಿ ತಿರುಗುವಳೇ ಹೊಲತ । ನಕ್ಕು ನಾಚಿಕೆಗೆಟ್ಟು ಕಂಡಲ್ಲಿ ಚರಿಸಿ । ಕಕ್ಕಸ ಮನದಲ್ಲಿ ಇಪ್ಪಳೇ ಹೊಲತಿ । ರಕ್ಕಸಾಂತಕ ವಿಜಯ ವಿಠಲ ಶ್ರೀಹರಿಯ । ಭಕ್ತವತ್ಸಲಿ ದ್ವೇಷ ಮಾಡುವಳೇ ಹೊಲತಿ। ೨

ತ್ರಿಪುಟ

ಪಙ್ಕ್ತಿಯೊಳಗೆ ಪ್ರಾಪಂಚದವಳೆ ಹೊಲತಿ । ಪಂಥವಾಸಿಗಳ ನಿಕ್ಕುವಳೇ ಳೆ ಹೊಲತಿ । ನಿಂತಲ್ಲಿ ಮನೆವಾರ್ತೆ ಪೇಳುವಳೇ ಹೊಲತಿ । ಸಂತತ ಶುಚಿಯಿಲ್ಲದವ

ಹೊಲತಿ । ಶಾಂತಗುಣದಿ ನಿತ್ಯ ನಡೆಯದವಳೆ ಹೊಲತಿ । ಕಂತುಗೇಡಿ ಪತಿಗೆಂತೆನಿಪಳೆ ಹೊಲತಿ । ಮಂತ್ರೋಪದೇಶವ ಮಾಡುವಳೇ ಹೊಲತಿ । ಚಿಂತಿಸಿ ಪರರಿಗೆ ಕದ್ದೊಯ್ವಳೇ ಹೊಲತಿ । ಶಾಂತಮೂರುತಿ ನಮ್ಮ ವಿಜಯ ವಿಠಲನಂಘ್ರಿ । ಸಂತತ ಪತಿಯಲ್ಲಿ ನೆನೆಯ ದವಳೆ ಹೊಲತಿ ॥ ೩

ಅಟ್ಟತಾಳ

ಮದ್ದಿಕ್ಕಿ ಜನರನ್ನು ಕೆಡಿಸುವಳೇ ಹೊಲತಿ । ಇದ್ದದ್ದ ಇಲ್ಲವೆಂದಾಡುವಳೇ ಹೊಲತಿ । ಶುದ್ಧಿಗೈಯದೆ ಪಾಕ ಕೆಡಿಸುವಳೇ ಹೊಲತಿ । ಸುದ್ದಿಗೆ ಕಿವಿಜೋತು ಪೋಗು ವಳೇ ಹೊಲತಿ । ನಿದ್ರೆಯಲ್ಲೇ ಆಸಕ್ತಳು ಹೊಲತಿ । ಶುದ್ಧರಂಕೆಯ ಮೀರಿ ನಡೆಯುವಳೇ ಹೊಲತಿ । ಕದ್ದು ಬಾಯಸವಿಯ ಸವಿಯುವಳೇ ಹೊಲತಿ । ಸಿದ್ಧ ಮಹಿಮ ಸ್ವಾಮಿ ವಿಜಯ ವಿಠಲನಲ್ಲಿ ಸದ್ಭಕ್ತಿಯರಿಯದವಳು ಹೀನ ಹೊಲತಿ ॥ ೪

ಆದಿತಾಳ

ವೈಷ್ಣವ ಜ್ಞಾನವ ನಂಬದವಳು ಹೊಲತಿ । ಶಿಷ್ಟಾಚಾರವ ಬಿಟ್ಟು ನಡೆಯುವಳೇ ಹೊಲತಿ । ಕೆಟ್ಟರುವರ ಸಂಗಡಾಡುವಳೇ ಹೊಲತಿ । ಗುಟ್ಟಾಗಿ ಸಂಸಾರ ಮಾಡದವಳೆ ಹೊಲತಿ । ಹೊಟ್ಟೆಗೆ ಸುಗ ಕೃತ್ಯ ಬಿಟ್ಟುಂಬುವಳೆ ಹೊಲತಿ । ಅಟ್ಟುಹಾಕುವನೆಂಬ ಸೊಲ್ಲಿನವಳು ಹೊಲತಿ । ನಿಷ್ಠುರ ವಚನಗಳಾಡುವಳೇ ಹೊಲತಿ । ಪುಟ್ಟಿದ ಮನೆಗಪ ಕೀರ್ತಿ ತರುವಳೆ ಹೊಲತಿ । ಧಿಟ್ಟಮೂರುತಿ ನಮ್ಮ ವಿಜಯವಿಠಲನ್ನ । ಪಟ್ಟಣಸೇರದ ನಾರಿಯೆ ಹೊಲತಿ ॥ ೫

ಜತೆ

ಸಂತತೆಸಗಿದ ಕರ್ಮ ತನ್ನನಾಳುವ ಪತಿಯ ।
ಕಾಂತ ವಿಜಯವಿಠಲಗೆನ್ನದವಳೆ ಹೊಲತಿ ॥

ಶ್ರೀ ವಿಜಯದಾಸರು ದಕ್ಷಿಣ ಯಾತ್ರೆಯಾದನಂತರ ಕೆಲವು ಕಾಲ ಚೀಕಲಪರಿ ಯಲ್ಲಿ ವಾಸಮಾಡಿದರು. ಇವರು ರಚಿಸಿದರೆಂದು ಹೇಳಲಾಗುವ ಇಪ್ಪತ್ತೈದು ಸಾವಿರ ನಾಮುಗಳಲ್ಲಿ ಈಗ ಒಂದು ಸಾವಿರದಷ್ಟೂ ದೊರೆಯದಿರುವುದು ಕನ್ನಡಿಗರ ದುರ್ದೈವ ವಾಗಿದೆ. ಭಗವದುಪಾಸನಾಕ್ರಮವನ್ನು ದಾಸರು ವಿವಿಧ ಸುಳಾದಿಗಳಾಗಿ ಬರೆದರು. ಆ ಸುಳಾದಿಗಳಲ್ಲಿ ಹೇಳಿರುವಂತೆ ಚಕ್ರಗಳನ್ನು ರೇಖಿಸಿ, ಕ್ಲುಪ್ತಸ್ಥಾನಗಳಲ್ಲಿ ಬೀಜಾಕ್ಷರ ಗಳನ್ನು ಬರೆದು ಗುರ್ತಿಸಿ, ಉಪಾಸಕರಿಗೆ ನಕ್ಷೆಗಳಂತೆ ರಚಿಸಿಕೊಡಲು ಅವಕಾಶವಿದೆ. ಯೋಗಶಾಸ್ತ್ರ, ಮಂತ್ರಶಾಸ್ತ್ರ, ತಂತ್ರಶಾಸ್ತ್ರಗಳಿಂದ ಯಾವುದು ತಿಳಿಯಲು ಗಹನವೋ ಅದು ಶ್ರೀ ವಿಜಯದಾಸರ ಸುಳಾದಿಗಳಿಂದ ಸುಲಭವಾಗಿ ಗೊತ್ತಾಗುತ್ತದೆ.

ಈ ಕಾಲದಲ್ಲಿ ಅಂಥಾ ಗುಪ್ತ ವಿದ್ಯೆಗಳನ್ನು ಅಭ್ಯಸಿಸುವವರಾರು ? ಉಪಾಸಕ ರನ್ನು ಕಾಣುವುದೆಲ್ಲಿ ?

ಹೀಗಿರಲು ಕೆಲವು ಕಾಲಾನಂತರ ತೃತೀಯ ಕಾಶೀಯಾತ್ರೆ ಮಾಡಬೇಕೆಂಬ ಯೋಚನೆ ದಾಸರಿಗುದಯಿಸಿತು. ಶಿಷ್ಯ ಪರಿವಾರವೆಲ್ಲವೂ ಹೊರಟಿತು. ಮೋಹನ ದಾಸರಿಗೆ ಮಾತ್ರ ಜೊತೆಯಲ್ಲಿ ಪ್ರಯಾಣಮಾಡಲು ಅಪ್ಪಣೆಯಾಗಲಿಲ್ಲ. ದಾಸರು ಹೊರಡುವಾಗ ಮೋಹನದಾಸರ ಹೆಂಡತಿಯನ್ನು ಕರೆದು–'ಮೋಹನನಿಗೆ ಅಪಮೃತ್ಯು ಬರುವುದು. ಮೃತನಾದನೆಂದು ದೇಹವನ್ನು ಸಂಸ್ಕಾರಕ್ಕೆ ಕೊಡಬೇಡ. ಅವನು ಮತ್ತೆ ಬದುಕುತ್ತಾನೆ. ಈ ಸಂಗತಿಯನ್ನು ಅವನಿಗೆ ಹೇಳಬೇಡ' ಎಂಬುದಾಗಿ ಗುಟ್ಟಾಗಿ ತಿಳಿಸಿದರು. ದಾಸರು ಪ್ರಯಾಣ ಬೆಳೆಸಿದಮೇಲೆ, ಮೋಹನದಾಸರು ಆನೇಗೊಂದಿಗೆ ಬಂದು ಬಿಟ್ಟರು. ಕೆಲವು ಕಾಲಾನಂತರ ಮೋಹನದಾಸರಿಗೆ ದೇಹಾಲಸ್ಯವಾಯಿತು. ನಾಲ್ಕಾರು ದಿವಸಗಳ ಜ್ವರ ಬಂದು ಅವರು ಮೃತರಾದವರಂತೆ ಕಂಡುಬಂದರು. ದೇಹವನ್ನು ಸಂಸ್ಕಾರ ಮಾಡಬೇಕೆಂದು ಪ್ರಯತ್ನಿಸಿದ ಜನರಿಗೆ, ಅವರ ಮಡದಿಯು ಅವಕಾಶ ಕೊಡಲಿಲ್ಲ. ವಿಜಯರಾಯರನ್ನು ಸ್ಮರಿಸುತ್ತಾ ದುಃಖಿಸುತ್ತಾ ಕುಳಿತಳು. ಜನರಾದರೂ, ಅಕೆಗೆ ದಾಸರಿಂದ ಅಭಯಪ್ರದಾನವಾಗಿರುವ ಸಂಗತಿಯನ್ನು ತಿಳಿದು, ಆಕೆಯೊಡನೆ ತಾವೂ ಉಪವಾಸ ಕುಳಿತರು. ಈ ರೀತಿ ಮೂವತ್ತಾರು ಘಂಟೆಗಳು ಕಳೆದುವು.

ಅತ್ತ ಮೋಹನದಾಸರ ಜೀವಾತ್ಮನನ್ನು ಕೊಂಡೊಯ್ದು ಯಮದೂತರು ಧರ್ಮ ರಾಜನ ಬಳಿಯಲ್ಲಿ ನಿಲ್ಲಿಸಿದರು. ಧರ್ಮರಾಜನು ಈತನ ಧರ್ಮಾಧರ್ಮಗಳೇನೆಂದು ವಿಚಾರಿಸಿದನು. ವಿಜಯದಾಸರಂಥಾ ಅಪರೋಕ್ಷಜ್ಞಾನಿಗಳ ಶಿಷ್ಯನು ತಾನು ಎಂಬ ಗರ್ವದಿಂದ ಈತನು ಬ್ರಹ್ಮಜ್ಞಾನಿಗಳನ್ನು ಕಂಡರೆ ವಂದನೆ ಮಾಡುತ್ತಿರಲಿಲ್ಲ ಎಂಬದರ ವಿನಾ ಮತ್ತಾವ ಅಪರಾಧವೂ ಈತನಲ್ಲಿಲ್ಲವೆಂದು ಚಿತ್ರಗುಪ್ತರಿಂದ ವರದಿಯಾಯಿತು.

ಆಗ ಧರ್ಮರಾಜನು–"ವಿಜಯದಾಸರಂಥಾ ಬ್ರಹ್ಮಜ್ಞಾನಿಗಳ ಶಿಷ್ಯನಿವನು. ಸ್ವಯಂ ವೇದವೇತ್ತನಿವನು. ಇಂಥವನು ವೇದದ ಆಜ್ಞೆಯನ್ನು ಪಾಲಿಸದಿದ್ದರೆ ಅಜ್ಞಾನಿಗಳನ್ನು ದೂರುವುದೇಕೆ? ತಿಳಿಯದೆ ಮಾಡಿದ ಪಾಪಕ್ಕಿಂತ ತಿಳಿದೂ ತಿಳಿದು ಪಾಪ ಮಾಡಿದರೆ ಅದರ ದೋಷ ಬಲವತ್ತರವಾದುದು. ಈತನು ದಂಡಾರ್ಹನು. ಈತನ ಶಿರಸ್ಸನ್ನು ಗರಗಸದಿಂದ ಕೊಯ್ಯಿರಿ" ಎಂದು ಆಜ್ಞೆ ಮಾಡಿದನು.

ಆಗ ಮೋಹನದಾಸರು–'ವಿಜಯರಾಯಾ! ನಿಮ್ಮನ್ನು ನಂಬಿಯೂ ನನಗೀ ದಂಡನೆಯೇ?' ಎಂದು ತಮ್ಮ ಗುರುಗಳಿಗೆ ಮೊರೆಯಿಟ್ಟರು.

ಆ ಕಾಲಕ್ಕೆ ಸರಿಯಾಗಿ ದಾಸರು ತಮ್ಮ ನಿಜರೂಪದಿಂದ (ಭೃಗುಋಷಿ) ಧರ್ಮ ರಾಜನ ಸಭೆಗೆ ಬಂದರು. ಧರ್ಮರಾಜನು ತನ್ನ ಸಭೆಗೆ ಬಂದ ಆ ಭೃಗುಮುನಿಗಳನ್ನು ಅರ್ಘ್ಯಾದಿಗಳಿಂದ ಸತ್ಕರಿಸಿದನು. ಆಗ ಭೃಗುಮುನಿಗಳು–'ಯಮರಾಜ, ನಿನ್ನ ಸತ್ಕಾರ ಉಪಚಾರಗಳು ಹಾಗಿರಲಿ! ನಿರಪರಾಧಿಯನ್ನು ದಂಡನೆಗೇಕೆ ಗುರಿಮಾಡಿದೆ' ಎಂದರು. ಧರ್ಮರಾಜನು ಚಕಿತನಾಗಿ 'ಹಾಗೇನೂ ಮಾಡಿಲ್ಲವಲ್ಲಾ! ಅನ್ಯಾಯವಾಗಿದ್ದರೆ ತಿಳಿಸಿರಿ' ಎಂದನು. ಆಗ ಮುನಿಗಳು,–'ಇಲ್ಲಿ ನೋಡು, ಈ ಮೋಹನನು ನಮ್ಮ ಶಿಷ್ಯನು. ಈತನ ಭೂಲೋಕದ ವಾಸಾವಧಿ ಇನ್ನೂ ಮುಗಿದಿಲ್ಲ. ಯಾರನ್ನೋ ಕರೆತರುವುದಕ್ಕೆ ಬದ

ಲಾಗಿ ನಿನ್ನ ದೂತರು, ಈತನನ್ನು ಕರೆತಂದಿದ್ದಾರೆ. ಆತನನ್ನು ಬಿಟ್ಟುಬಿಡು,' ಎಂಬು ದಾಗಿ ನುಡಿದರು. ವಿಚಾರಮಾಡಿ ನೋಡಿದ್ದರಲ್ಲಿ ಋಷಿವಾಕ್ಯವು ಸತ್ಯವೆಂದು ವ್ಯಕ್ತ ವಾಯಿತು. ಮೋಹನದಾಸರಿಗೆ ಯಮಬಂಧನದಿಂದ ಬಿಡುಗಡೆಯಾಯಿತು.

ಇತ್ತ ಆನೆಗೊಂದಿಯಲ್ಲಿ ಮೋಹನದಾಸರ ಬಂಧುಜನರು ಎಷ್ಟುಕಾಲ ಹೆಣ ವನ್ನು ಮನೆಯಲ್ಲಿಟ್ಟುಕೊಂಡಿರಬೇಕು? ಸತ್ತವರು ಬದುಕುವುದೆಂದರೇನು? ವಿಜಯ ದಾಸರೇನಾಡಿದರೋ ಈಕೆ ಏನು ತಿಳಿದಳೋ ಎಂದು ನುಡಿಯಲಾರಂಭಿಸಿದರು. ಅವರಲ್ಲಿ ಅಧಿಕಪ್ರಸಂಗಿಯೊಬ್ಬನು-ಈ ಹೆಂಗುಸನ್ನು ಕೇಳುವುದೇನು? ಎಲ್ಲವನ್ನೂ ಸಿದ್ಧಮಾಡಿ ದ್ದೇನೆ. ನಾವೇ ಹೆಣವನ್ನು ಮುಟ್ಟಿ ಹೊರಕ್ಕೆ ಸಾಗಿಸೋಣ ಎಂದು ಹೊರಟನು. ಹೆಂಗಳೆಯು ದಿಕ್ಕಿಲ್ಲದೆ ಗೋಳಾಡಿದಳು. ಇನ್ನು ಸ್ವಲ್ಪ ಹೊತ್ತಾದರೂ ತಡೆಯಿರಪ್ಪಾ! ಎಂದು ಮೊರೆಯಿಟ್ಟಳು. ಆ ಉದ್ಧಟನು ಆಕೆಯ ಮಾತನ್ನು ಲಕ್ಷ್ಯಮಾಡದೆ ಶವದ ಬಳಿಗೆ ಬಂದನು. ಅಷ್ಟರಲ್ಲಿ ಮೋಹನದಾಸರ ಆತ್ಮವು ಮೃತಶರೀರವನ್ನು ಪ್ರವೇಶಿಸಿತು. **'ನನಗೆ ಸಿದ್ಧಮಾಡುವೆಯಾ? ನಡೆ ನಿನಗೆಲ್ಲಾ ಸಿದ್ಧವಾಗಿದೆ!'** ಎಂದು ನುಡಿದು ಮೋಹನದಾಸರು ಜಗ್ಗನೆದ್ದು ಕುಳಿತರು. ಉದ್ಧಟನು ಗರಹೊಡೆದಂತಾಗಿ ಹಿಂದು ಮುಂದಾಗಿ ಅವಸರದಿಂದ ನಡೆದನು. ಗಿಡ್ಡಾಗಿದ್ದ ಕಲ್ಲಬಾಗಿಲುವಾಡವು ಅವನ ತಲೆಗೆ ಬಡಿದು ನೆಲಕ್ಕೆ ಬಿದ್ದು ಅವನಲ್ಲೇ ಮೃತನಾದನು.

ಮೋಹನದಾಸರು ಸುತ್ತ ಮುತ್ತ ನೋಡಿ-'ಇದೇನು ಜನರ ಕೂಟ? ಬಾಗಿ ಲಲ್ಲಿ ಬೆಂಕಿಯೇನು? ನೀನೇಕೆ ಅಳುತ್ತಿರುವೆ' ಎಂದು ಹೆಂಡತಿಯನ್ನು ಪ್ರಶ್ನೆಮಾಡಿದರು. ಆ ಸಾಧ್ವಿಯ ದುಃಖಾಶ್ರುಗಳು ಆನಂದಾಶ್ರುಗಳಾಗಿ ಪರಿಣಮಿಸಿದುವು. ನಡೆದ ಸಂಗತಿ ಯನ್ನೂ ವಿಜಯರಾಯರು ತನಗೆ ಕೊಟ್ಟಿದ್ದ ಅಭಯ ವಚನವನ್ನೂ ಆಕೆ ಪತಿಗೆ ತಿಳಿಸಿ ದಳು. ಅಷ್ಟರಲ್ಲಿ ವಿಜಯದಾಸರೇ ಮೋಹನದಾಸರೆದುರಿಗೆ ಬಂದು ನಿಂತರು. ಆಗ ಮೋಹನದಾಸರು ಆನಂದಾತಿಶಯದಿಂದ--

ಸುರುಟಿ ಅದಿತಾಳ.

ತಂದೆ ವಿಜಯರಾಯಾ! ಈ ವೇಳೆಗೆ | ಬಂದೆ ವಿಜಯರಾಯಾ ಪ.
ಹಿಂದೇಸು ಜನುಮವೊ | ಮುಂದೇಸು ಜನುಮವೊ
ಒಂದು ತಿಳಿಯದಾ ದೆಂದೆಂದಿಗು ನಿನ್ನ || ಅ.

ಸೂರ್ಯನ ಸುತನಂತೆ, ಅಲ್ಲಿ ಮಹಾ
ಶೂರ ದೂತರಂತೆ |
ಕಾರ್ಯ ಅಕಾರ್ಯವ ನರಿಯದೆ ನಿನ್ನ ಪರಿ-
ಚಾರ್ಯನ ಎಳೆಯಲು ಭಾರ್ಯಳು ಮೊರೆಯಿಡೆ ೧

ಅದು ಧೈರ್ಯವ ನೋಡಿ–ಸುದತಿ ತನ್ನ
ಹೃದಯ ಬದ್ಧಮಾಡೀ ।
ಮದುಸೂಧನನೇ ಮುದತೀರಥರೆಂದು
ಒದರಿದಳ್ವದರಿದಳ್ವಿಜಯರಾಯರೆಂದು ೨
ಕರಗಳನೇ ಕಟ್ಟೀ–ಎಳೆಯುತಿರೆ
ಶಿರವನ್ನೇ ಮೆಟ್ಟಿ–
ಶಿರಿಮೋಹನ ವಿಠಲನ ಪದವನೆ ತೋರೀ
ಧರೆಗೆ ತಂದು ಬಿಟ್ಟೆ ಕರುಣಾಳುವೆ ಎನ್ನ ೩

ಎಂಬುದಾಗಿ ಗುರುಸ್ತೋತ್ರಮಾಡಿದರು. ಸಾಂಶರಾದ ದೇವತೆಗಳ ಶಕ್ತಿಯನ್ನು ತಿಳಿಯುವ ಬಗೆ ಹೇಗೆ? ಮರ್ತ್ಯದೇಹದಲ್ಲಿ ಬಂದರೂ ಅವರು ತಮ್ಮ ಮಹಿಮೆಯನ್ನು ಅಡಗಿಸಿಟ್ಟು ಕೊಳ್ಳುವ ಬಗೆ ಹೇಗೆ? ಉತ್ತರ ಕ್ಷಣದಲ್ಲಿ ವಿಜಯರಾಯರು–'ನನಗೆ ಸ್ನಾನಕ್ಕೆ ವೇಳೆಯಾಯಿತು' ಎಂದು ಅದೃಶ್ಯರಾದರು. ಆ ದಿನದಲ್ಲಿ, ದಾಸವರ್ಯರು ಪರಿವಾರಸಹಿತರಾಗಿ ವಾರಣಾಸಿಯಲ್ಲಿದ್ದರು.

ಮೋಹನದಾಸರು ಚೇತರಿಸಿಕೊಂಡು ತಮ್ಮ ಜನ್ಮವೃತ್ತಾಂತವನ್ನು ಕುರಿತು ಧ್ಯಾನಿಸುತ್ತ ಕುಳಿತರು. ತಮ್ಮ ತಾಯಿ ಪಟ್ಟ ಕಷ್ಟಗಳಲ್ಲೊಂದೊಂದನ್ನೂ ಸ್ಮರಿಸಿ ಕಂಬನಿಗರೆದರು. ಮಗುವಾದ ತಮ್ಮನ್ನು ನದಿಯಲ್ಲಿ ಬಿಸುಟು ತಾನೂ ಸಾಯುವೆನೆಂದು ಹೊರಟಿದ್ದ–ತಮ್ಮತಾಯಿಗೆ ಅಭಯವಿತ್ತು ತಾಯಿಮಕ್ಕಳನ್ನು ಸಲಹಿದ ವಿಜಯದಾಸರ ಕಾರುಣ್ಯವನ್ನು ಕೊಂಡಾಡಿದರು. ತತ್ಕಾಲದಲ್ಲಿ ಬಂದ ಪ್ರಾಣಾಪತ್ತಿನಿಂದ ಪಾರುಮಾಡಿ ದಿವ್ಯದರ್ಶನವಿತ್ತು ಅದೃಶ್ಯರಾದ ಗುರುವರ್ಯರ ಮೂರ್ತಿಯನ್ನೇ ಧ್ಯಾನಿಸುತ್ತ ಎದ್ದು ನಿಂತರು. ದೈವೀ ಪ್ರೇರಣೆಯಿಂದಲೋ ಎಂಬಂತೆ—

ಯದುಕುಲ ಕಾಂಬೋದಿ—ಝಂಪೆತಾಳ.

ನಿನ್ನಪಾದವನಂಬಿ ಅನ್ಯರಾಶ್ರಯವೇಕೊ ।
ಚನ್ನಗುರು ವಿಜಯರಾಯಾ ॥ ಪ.
ಇನ್ನೇನು ಇನ್ನೇನು ಎನ್ನ ಕುಲಕೋಟಿ ಪಾ ।
ವನ್ನವಾದುದು ನಿಶ್ಚಯಾ ಸ್ವಾಮಿ ॥ ಅ.
ಪಂಚ ಮಹಾ ಪಾತಕರೊಳಗೆ ಮೂರನೆ ಕಕ್ಷಿ
ಕಾಂಚನ ದ್ರೋಹಿ ನಾನು । ಎನ್ನ
ಮುಂಚೆ ಬಂದಾಗ ಕೈ ಪಿಡಿದೆ । ಪ್ರ
ಪಂಚವ ಬಿಡು ಎಂದು ನುಡಿದೆ । ಒಲಿದು
ಸಂಚಿತಾಗಾಮಿ ತೊಡೆದೆ ॥ ಎನ್ನ
ಕಂಚು ಕಟ್ಟಳೆ ಮೇಣ ಕಲ್ಲುಗಳ ಕಾಸಿಗೆ
ಪಂಥೇರು ಮಾಡಿ ನಡೆದೆ । ಬಿಡದೆ ॥

ವ್ಯಾಸರಾಯರ ಗುಹೆಯೊಳಗೆ ಕುಳಿತು ನವಸ
ನ್ಯಾಸಿಗಳ ಸಮಕ್ಷದಲ್ಲಿ । ಎನ್ನ
ದಾಸನಾಗೆನುತ ನೀ ಪೇಳ್ದಿ । ಒಲಿದು ।
ದೋಷಾಂಕುರವನೆಲ್ಲ ಸೀಳ್ದಿ । ಎನ್ನ
ವಾಸಿ ಪಂಥವನೆಲ್ಲ ಕಳೆವೆ । ನಮ್ಮ
ಶ್ರೀಶ ಸರ್ವೋತ್ತಮನಹುದೆಂದು ಬರೆದು ಸಂ
ತೋಷದಿಂದೆನ್ನ ಪೊರೆದೇ ಸ್ವಾಮಿ ॥ ೨

ರಾಜಾಧಿರಾಜರು ಬಂದು ಪ್ರಾರ್ಥಿಸೆ ಗುರು
ರಾಜ ನೀನವರಲ್ಲಿ ಬರುವೆ । ದಿವ್ಯ
ಭೋಜನವ ಮಾಡಿ ಫಲಗರೆವೆ । ಇನ್ನು
ರಾಜಧಾನಿಗೆ ಪೋಗಿ ಬರುವೆ । ಉಡು
ರಾಜನಂದದಿ ನಿತ್ಯ ಮೆರೆವೆ । ಎನ್ನ
ಪೂಜೆ ಫಲವೆಂದು ಆವಾಗ ನಿನ್ನ ಪದ
ರಾಜೀವ ಧೇನಿಸುವೆನೋ ಸ್ವಾಮಿ ॥ ೩

ಎನ್ನನೊಬ್ಬನ ಪಾಲಿಸಿದುದು ಘನತೆಯಲ್ಲ
ಚಿನ್ನ ವರದನ ಸಂತತಿಯೆಲ್ಲಾ । ಇನ್ನು
ನಿನ್ನ ಪಾದಕೆ ಬಿಟ್ಟುದಲ್ಲಾ । ವಾಕು
ಅನ್ಯಥಾ ಮಾಳ್ಪುದು ಸಲ್ಲ । ಮೋ
ಹನ್ನವಿಠಲ ಇದನು ಬಲ್ಲ । ಅಯ್ಯ
ಪನ್ನಂಗಶಯನ ಪ್ರಸನ್ನನಾದುದಕಿದು
ಎನ್ನ ಮನೋರಥ ಸಿದ್ಧಿಯೋ ಸ್ವಾಮಿ ॥ ೪

ಎಂಬುದಾಗಿ ಹಾಡಿದರು.

ಈ ಪದದಲ್ಲಿ ಮೋಹನದಾಸರು ತಾವು ಚಿನಿವಾರ ವಂಶದವರೆಂಬುದನ್ನೂ, ಕಾಂಚನದ್ರೋಹಿಯೆಂಬ ಮಾತಿನಿಂದ ಭಂಗಾರದ ವ್ಯಾಪಾರಿಕರೆಂಬುದನ್ನೂ, ವ್ಯಾಸರ ಗುಹೆಯಲ್ಲಿ ಹರಿದಾಸನಾಗೆಂದು ಮೊದಲಾಗಿ ಆಶೀರ್ವಾದಮಾಡಿದ 'ಚಿರಂಜೀವಿಯಾಗೆಲವೊ ಚಿಣ್ಣ ನೀನು' ಎಂಬ ಪದದ ಸಾರಾಂಶವನ್ನೂ ಸಂಕ್ಷೇಪವಾಗಿ ಹೇಳಿದ್ದಾರೆ. ಅಲ್ಲದೆ ತಮ್ಮ ವಂಶದ ಮೇಲೇ ನಿಮ್ಮ ಕೃಪೆಯಿರಬೇಕೆಂದು ಪ್ರಾರ್ಥಿಸಿದ್ದಾರೆ. ಈ ಪ್ರಾರ್ಥನೆಗನುಸಾರವಾಗಿ ಯಾವ ಪ್ರಖ್ಯಾತ ಹರಿದಾಸರ ಕ್ರಮವಾದ ವಂಶವೂ ಇರದೆ ಮೋಹನದಾಸರ ವಂಶ ಮಾತ್ರ ಚಿಪ್ಪಗಿರಿಯಲ್ಲಿ ನಡೆದುಬಂದಿರುವುದು ದೃಷ್ಟಾಂತವಾಗಿದೆ.

ಅತ್ತ ವಿಜಯರಾಯರು ಕಾಶಿಯಲ್ಲಿ ಕೆಲವುಕಾಲ ವಾಸಮಾಡಿದರು. ಒಂದು ದಿನ ಹನುಮಾನ್ ಘಾಟಿನಲ್ಲಿ ಒಂದು ವಿಶೇಷ ಪರ್ವಕಾಲದಲ್ಲಿ ಘಟ್ಟದ ಮೆಟ್ಲಡಿಯಲ್ಲಿ ಆಹ್ನಿಕ ಮಾಡುತ್ತಾ ಕುಳಿತಾಗ ಗಂಗಾದೇವಿಯನ್ನು ಪ್ರಾರ್ಥಿಸಿದರು. ಪರ್ವಕಾಲಕ್ಕೆ

ಸರಿಯಾಗಿ ಜಾಹ್ನವಿಯು ಮೆಟ್ಟಲು ಮೆಟ್ಟಲಾಗಿ ಏರುತ್ತಾ ಬಂದು ದಾಸರಿಗೆ ಅಭಿಷೇಕ ಮಾಡುವಳೋ ಎಂಬಂತೆ ಮೇಲೆ ಹರಿದು ಕ್ರಮವಾಗಿ ಇಳಿಯುತ್ತಾ ಒಂದು ಮುಹೂರ್ತದೊಳಗೆ ಮೊದಲಿದ್ದ ಬಳಿ ಹರಿಯಲಾರಂಭಿಸಿದಳು. ದಾಸರಮೇಲೆ ಗಂಗಾಜಲ ಹರಿದಿದ್ದರೂ ಅವರ ವಸ್ತ್ರ ತೊಯ್ದಿರಲಿಲ್ಲ. ನಾಮಮುದ್ರೆಗಳು ಅಳಿಸಿರಲಿಲ್ಲ. ಈ ಅಭಿಪ್ರಾಯವನ್ನು ವಿಜಯರಾಯರ ತಮ್ಮಂದಿರು ಜೊತೆಯಲ್ಲಿದ್ದು ಕಂಡದ್ದು ಕಂಡಂತೆ **'ನೆನೆಸಿದವರಘನಾಶನಾ'** ಎಂಬ ಉದಯರಾಗದ ಎಂಟನೇ ನುಡಿಯಲ್ಲಿ ಸೂಕ್ಷ್ಮವಾಗಿ ತಿಳಿಸಿರುತ್ತಾರೆ.

ಕಾಶಿಯಿಂದ ಮರಳಿ ಬರುತ್ತಾ, ಶ್ರೀ ವಿಜಯದಾಸರು, ಧರ್ಮೋಪದೇಶದಿಂದ ಜನರನ್ನು ಉದ್ಧರಿಸಿ, ಮಹಾಮಹಿಮೆಗಳನ್ನು ತೋರಿಸುತ್ತಾ ಕರ್ಣಾಟಕದಲ್ಲಿ ಯಾವುದೋ ಒಂದು ಗ್ರಾಮದ ಬಳಿಗೆ ಬಂದರು. ಆ ಸ್ಥಳಕ್ಕೆ ಸಮೀಪದ ಗ್ರಾಮದಲ್ಲಿ ಶ್ರೀ ಉತ್ತರಾದಿ ಮಠಾಧಿಪತಿಗಳಾದ ಶ್ರೀ ಸತ್ಯಬೋಧತೀರ್ಥರು ಶಿಷ್ಯಾನುಗ್ರಹಾರ್ಥವಾಗಿ ದಯಮಾಡಿಸಿದ್ದರು. ದಾಸರು ಬಂದಿಳಿಯಬೇಕಾಗಿದ್ದ ಗ್ರಾಮಸ್ಥರು ಅವರಿಗೆ ಯೋಗ್ಯ ರೀತಿಯಿಂದ ಸ್ವಾಗತಮಾಡುವ ವ್ಯವಸ್ಥೆ ಮಾಡಿದ್ದರು. ಶ್ರೀ ಸತ್ಯಬೋಧರ ಮಠದ ವೈಭವ ಹೇಗೋ ಹಾಗೆಯೇ ದಾಸರ ವೈಭವವೂ ಪರಿಪೂರ್ಣವಾಗಿದ್ದುದರಿಂದ ಒಂದು ಸನ್ಯಾಸಿಗಳ ಮಠ, ಮತ್ತೊಂದು ಗೃಹಸ್ಥರ ಮಠವೆಂದು ಜನರು ಆಡಿಕೊಳ್ಳುವಂತಿದ್ದಿತು.

ದಾಸರು ಬಂದಿಳಿಯುವ ಗ್ರಾಮದಲ್ಲಿ ಬಾಲವಿಧವೆಯೊಬ್ಬಳು ಜನರಿಂದ ದೂಷಿತಳಾಗಿ ಸಮಾಜದಿಂದ ಬಹಿಷ್ಕೃತಳಾಗಿದ್ದಳು. ಅಕೆಯ ಪಾಪಕೃತ್ಯಕ್ಕಿಂತ ಜನರ ತಿರಸ್ಕಾರವು ನೂರುಮಡಿಯಾಗಿತ್ತು. ಆಕೆಯು ತನ್ನ ಪಾಪಕ್ಕೆ ಪಶ್ಚಾತ್ತಾಪಪಟ್ಟು ಸ್ವಾಮಿಗಳು ಬೇರೆ ತಮ್ಮೂರಿಗೆ ಬಂದು ತನ್ನನ್ನೇನು ಮಾಡುವರೋ ಎಂಬ ಭೀತಿಯಿಂದ ಪರಿತಪಿಸುತ್ತಿದ್ದಳು. ವಿಜಯದಾಸರು ತಮ್ಮೂರಿಗೆ ಬರುವ ಸಮಾಚಾರವು ಆಕೆಗೆ ತಿಳಿಯಿತು. ದಾಸರೆಂದರೆ ಕರುಣಾಳುಗಳೆಂಬುದೂ ಆಕೆಗೆ ಗೊತ್ತಿತ್ತು. ಈ ಸಮಯದಲ್ಲಿ ಅವರ ಪದರಿಗೆ ಬಿದ್ದು ಅವರ ಅನುಗ್ರಹಕ್ಕೆ ಪಾತ್ರಳಾಗಬೇಕೆಂದು ನಿರ್ಧರಿಸಿದಳು. ಊರಿನ ಪ್ರಮುಖ ಜನರು ಗ್ರಾಮಗಡಿಯಲ್ಲಿ ವಾದ್ಯವೈಭವದಿಂದ ದಾಸರನ್ನು ಸ್ವಾಗತಿಸಲು ಅವರ ಆಗಮನವನ್ನು ನಿರೀಕ್ಷಿಸುತ್ತ ಕಾದಿದ್ದರು. ಅವರಿಗಿಂತ ಮುಂಚಿತವಾಗಿ ಆ ದೀನಳು ಗ್ರಾಮದಗಡಿಯನ್ನೂ ಮೀರಿ ಒಂದು ಮೈಲಿಯಾಚೆಗೆ ಹೋಗಿ ದಾಸರಿಗಾಗಿ ಎದುರು ನೋಡುತ್ತಿದ್ದಳು. ಊರ ಜನರು–'ಏನೇ ಮಂಗಳೇ! ನೀನೂ ದಾಸರನ್ನು ಎದುರುಗೊಳ್ಳುವೆಯಾ?' ಎಂದು ಪರಿಹಾಸ್ಯಮಾಡಿದರು.–ದಾಸರು ದೇವರ ಹಸಿಬೆಯನ್ನು ಹೆಗಲಿಗೆ ಹಾಕಿ ಕೊಂಡು ನಾಗರ ಹೆಡೆಯ ತಂಬೂರಿಯನ್ನು ಮೀಟುತ್ತಾ ಹಾಡಿಕೊಂಡು ಬರುತ್ತಿದ್ದುದು ಅನಾಥೆಯ ಕಣ್ಣಿಗೆ ಕಾಣಿಸಿತು. ಆಗ ಆಕೆಯು ಒಡನೆ ಓಡಿಹೋಗಿ ಆ ಮಹಾನುಭಾವರ ಪಾದಗಳಿಗೆರಗಿ–'ಉದ್ಧರಿಸುವಿರಾದರೆ ಪಾದಗಳನ್ನು ಬಿಡುವೆನು. ಇಲ್ಲವಾದರೆ ಪ್ರಾಣ ಬಿಡುವೆ'ನೆಂದು ರೋದನಮಾಡಿದಳು.

ದಾಸರು :—ತಂಗೀ ನೀನ್ಯಾರಮ್ಮಾ!

ಅನಾಥೆ :—ನಾನೊಬ್ಬ ಅನಾಥಳು.

ದಾಸರು :—ಪಾದವನ್ನು ಬಿಟ್ಟೇಳು.

ಅನಾಥೆ :—ವಾಗ್ದಾನಮಾಡಿರಿ–ಬಿಡುವೆನು.

ದಾಸರು :—ಏಕಮ್ಮಾ ಹಟಮಾಡುವಿ ?

ಅನಾಥೆ :—ಸ್ವಾಮಿಾ, ನಾನು ದೂಷಿತಳು ನಿಜ. ತಾವು ನನ್ನನ್ನು ಉದ್ಧರಿಸಬೇಕು. ನನ್ನ ಮನೆಯಲ್ಲಿ ಆತಿಥ್ಯ ಸ್ವೀಕರಿಸಬೇಕು. ಊರಿನವರ ಬಾಧೆಯನ್ನು ತಾಳಲಾರೆ. ಸ್ವಾಮಿಗಳು ಬೇರೆ ಊರಿಗೆ ಬರುವರಂತೆ !

ದಾಸರು ;—(ಆಕೆಯ ಪಶ್ಚಾತ್ತಾಪಕ್ಕೆ ಮರುಗಿ) ಒಳ್ಳೇದು ಪಾದವನ್ನು ಬಿಡು. ನಿನ್ನ ಆತಿಥ್ಯವನ್ನೇ ಮೊದಲು ಸ್ವೀಕರಿಸುವೆವು.

ಅನಾಥೆ :—ಊರಿನವರು ಗಡಿಯಲ್ಲಿ ಕಾದಿದ್ದಾರೆ. ನನ್ನ ಮನೆಗೆ ಬಂದರೆ ನಿಮ್ಮನ್ನೂ ನಿಂದಿಸುತ್ತಾರೆ. ಲೋಕಾಪವಾದಕ್ಕಂಜದೆ ಮತ್ತೊಮ್ಮೆ ಅಭಯವಿತ್ತರೆ ಪಾದವನ್ನು ಬಿಡುವೆನು.

ದಾಸರು ಬೇಕಾದವರು ಬೇಕಾದ ಮಾತನಾಡಲಿ ! ನಾವು ನಿನ್ನಮನೆಗೇ ಮೊದಲು ಬರುವೆವು. ನೀನೂ ನಮ್ಮ ಜೊತೆಯಲ್ಲೇ ಬಾರೆಂದು ಆಕೆಯನ್ನು ಕರೆದುಕೊಂಡೇ ಗಡಿಯ ಬಳಿಗೆ ಬಂದರು. ಗ್ರಾಮಸ್ಥರು ದಾಸರಿಗೆ ವಂದನೆಮಾಡಿ ಗ್ರಾಮ ಪ್ರವೇಶಮಾಡಿಸಿದರು. ದಾಸರು–'ಅಪ್ಪಾ ನಾವು ಇವತ್ತು ಈ ತಂಗಿಯ ಮನೆಗೆ ಹೋಗುವೆವು. ನಾಳಿನಿಂದಾಗಲಿ ನಿಮ್ಮ ಆತಿಥ್ಯ !' ಎಂದರು. ಜನರು–'ಸ್ವಾಮಿಾ ಇವಳು ದೂಷಿತಳು. ಇವಳ ಮನೆಗೆ ಹೋಗಬಾರದು. ತಾವು ಮಿಾರಿ ಹೋಗುವಿರಾದರೆ ಜನರು ತಮ್ಮನ್ನೂ ಬಹಿಷ್ಕರಿಸುವರು' ಎಂದರು. ದಾಸರು–'ನಾವಲ್ಲೇ ಹೋಗುವರು' ಎಂದು ಆಕೆಯ ಮನೆಗೇ ನಡೆದರು. ದಾಸರನ್ನು ವಂದಿಸಿದ ಜನರೇ ನಿಂದಿಸಲಾರಂಭಿಸಿದರು.

ಆದರೆ ಆದೀನ ಸ್ತ್ರೀಯ ಸಂತೋಷವು ಅವರ್ಣನೀಯವಾಯಿತು. ಶ್ರೀಮಂತಳಾಗಿದ್ದುದರಿಂದ ಆತಿಥ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ಧಾರಾಳವಾಗಿ ತಂದಿರಿಸಿದಳು. ನೂರಾರು ಜನರಿಗೆ ಮುಂಡಿಗೆಯ ಪ್ರಸ್ಥವಾಯಿತು. ಹಾಲು ಸಕ್ಕರೆ ತುಪ್ಪಗಳನ್ನು ಬಡಿಸಲು ತಾನೇ ನಿಂತು ಸಮೃದ್ಧಿಯಾಗಿ ಬಡಿಸಿ ಎಲ್ಲರಿಗೂ ತೃಪ್ತಿಯನ್ನುಂಟುಮಾಡಿದಳು. ಭಕ್ಷ್ಯಭೋಜ್ಯಗಳೆಲ್ಲವನ್ನೂ ಬಡಿಸಿ ಆದನಂತರ ಪರಿಚಾರಕನು ದಾಸರ ಎಡೆಗೆ ಅನ್ನವನ್ನು ಬಡಿಸಿದನು. ಆಗಲಾ ದೀನಳು ಪರಮತೃಪ್ತಳಾಗಿ ತಾನೇ ಅವರಿಗೆ ಕೆನೆಮೊಸರನ್ನು ಬಡಿಸಿ ದಾಸರೆದುರಿಗಿದ್ದ ಸ್ತಂಭಕ್ಕೆ ಬೆನ್ನು ಕೊಟ್ಟು ನಿಂತಳು. ಇಂದಿಗೆ ನಾನು ಧನ್ಯಳಾದೆನೆಂದುಕೊಂಡಳು. ದಾಸರ ಕಾರುಣ್ಯದಿಂದ ಪಾವನಳಾದೆನೆಂದು ಕಂಬನಿಗರೆದಳು. ತಟಸ್ಥಳಾದಳು. ದಾಸರು ಉತ್ತರಾಪೋಶನ ತೆಗೆದುಕೊಂಡರು. ಇತ್ತ ಅದೇ ನಿಮಿಷದಲ್ಲಿ ಆ ಧನ್ಯಾತ್ಮಳ ಪ್ರಾಣಶಕ್ತಿಯ ಉತ್ತರಾಪೋಶನವಾಯಿತು. ದಾಸರು ತಂಗೀ ತಂಗೀ–

ಎಂದು ಆಕೆಯನ್ನು ಕೂಗಿದರು. ನಿಂತಿದ್ದ ದೇಹದಲ್ಲಿ ಶ್ವಾಸನಾಯುವಿರಲಿಲ್ಲ. ಕಣ್ದೆರೆದ ನಗೆಮುಖ ಅಂದಗೆಟ್ಟಿರಲಿಲ್ಲ.

ದಾಸರು ಶಿಷ್ಯರನ್ನು ಕರೆದು, ಅನ್ನದಾತಳು ತಾಯಿಯು, ಇಂದು ಆಕೆಯು ಮೃತಳಾಗಿದ್ದಾಳೆ. ಆಕೆಯ ಉತ್ತರಕ್ರಿಯೆಗೆ ಸಿದ್ಧಪಡಿಸಿರೆಂದರು. ಅಗ್ನಿಯನ್ನು ತೆಗೆದು ಕೊಂಡು ದಾಸರೇ ಮುಂದೆ ಹೊರಟರು. ಸ್ವಯಂ ಆಕೆಯ ಔರ್ಧ್ವದೈಹಿಕ ಕ್ರಿಯೆಯನ್ನೆ ಸಗಿದರು. ಊರಿನವರು ಸುತ್ತು ಮುತ್ತ ಹೊಂಚುಹಾಕುತಿನ್ದು ನಾನು ಮುಂದು ತಾನು ಮುಂದೆಂದು ಅವಳ ಆಸ್ತಿಕ ಭಾಗಕ್ಕೆ ಬಂದು ನಿಂತರು. ಸ್ವಾಮಿಗಳಿಗೀ ಸಂಗತಿಯನ್ನು ತಿಳಿಸಿ, ದಾಸರಿಗೆ ಬಹಿಷ್ಕಾರ ಪತ್ರವನ್ನು ತರಿಸಿ ಶುಭ ಸ್ವೀಕಾರವ ದಿವಸ ಅದನ್ನು ಓದಿಸಿದರು. ದಾಸರು ಪತ್ರಿಕೆಯ ಸಾರಾಂಶವನ್ನು ಕೇಳಿ ನಕ್ಕು–ಓದಿದವನಿಗೆ ಶಹಲು ಜೋಡಿಯನ್ನು ಹೊದಿಸಿದರು. 'ಸ್ವಾಮಿಗಳು ಯಾರಿಗೆ ಬಹಿಷ್ಕಾರ ಹಾಕಿದರು ? ದಾಸಗೋ ರಾಮುನಿಗೋ ?" ಎಂದು ಕೇಳಿದರು.

ಮಾರನೆಯ ದಿನ ಅತ್ತ ಮಠದಲ್ಲಿ ಸ್ವಾಮಿಗಳ ಪೂಜೆಗಾರಂಭವಾಯಿತು. ರಾಮಚಂದ್ರದೇವರ ಮೂರ್ತಿಯನ್ನು ತೆಗೆದು ನೋಡಿದರೆ ಕಳಾಹೀನವಾಗಿ ಕಾಣಿಸಿತು. ಆವಾಹನಾದಿ ತಾಂತ್ರಿಕನ್ಯಾಸಗಳನ್ನು ಮಾಡತೊಡಗಿದರೆ ಎಲ್ಲವೂ ವಿಮುಖವಾಗಿ ವಮನವಾಗುವಂತೆ ಸಂಕಟವಾಯಿತು. ಹೀಗೇಕಾಯಿತೆಂದು ಸ್ವಾಮಿಗಳು ತಮ್ಮಲ್ಲಿ ತಾವೇ ವಿಚಾರಮಾಡಿ ಕಾರಣ ತಿಳಿಯದೆ, ಏನಾದರೂ ಮಡಿಮೈಲಿಗೆಗಳ ವ್ಯತ್ಯಾಸವಾಗಿದೆಯೋ ಎಂದು ಸೇವಕರನ್ನು ಪ್ರಶ್ನೆಮಾಡಿದರು. ತೇಜೋಮಯಮೂರ್ತಿಯು ನೀಲವರ್ಣವಾಗಿ ಉಗ್ರಾಕಾರವಾಗಿ ಕಾಣಲು ಏನು ಅಪರಾಧ ನಡೆದಿದೆಯೆಂದು ವಿಚಾರಿಸಿದರು. ಯಾರೂ ಏನೂ ಹೇಳಲಿಲ್ಲ. ಸ್ವಾಮಿಗಳಿಗಾದರೂ ಏನೂ ಗೊತ್ತಾಗಲಿಲ್ಲ. ಮನಸ್ಸಿನಲ್ಲಿ ಬಹು ವ್ಯಥೆಯುಂಟಾಯಿತು. 'ಹೇ ರಾಮಚಂದ್ರಾ, ಸ್ವಾಮಿ, ನನ್ನ ಸೇವೆ ನಿನಗೆ ಸಾಕಾಯಿತೇ? ನನ್ನ ಕೈ ಬಿಟ್ಟೆಯಾ ?" ಎಂದು ಉದ್ಗರಿಸಿ ಘಟ್ಟಿಯಾಗಿ ಉಸುರ್ಗರೆದರು. ವ್ಯಸನದಿಂದ ಸ್ಮೃತಿತಪ್ಪಿದವರೋಪಾದಿಯಲ್ಲಿ ಮುಂದೇನುಗತಿಯೆಂದು ತೋರದೆ ಹತಾಶರಾಗಿ ಕುಳಿತರು. ಆಗ–'ನನ್ನ ದಾಸನಿಗೆ ಬಹಿಷ್ಕಾರ ಹಾಕಿದರೆ ನಿನ್ನ ಬಳಿ ನಾನಿರುವೆನೆ ?" ಎಂದ ಹಾಗಾಯಿತು.

ಶ್ರೀ ಸತ್ಯಬೋಧರು ಒಡನೆಯೇ ದುರ್ವಾರ್ತೆಯನ್ನು ತಮಗೆ ಹೇಳಿ ಬಹಿಷ್ಕಾರ ಪತ್ರ ಬರೆಸಿದವರ ಮೇಲೆ ಸಿಟ್ಟುಮಾಡಿ, ದಾಸರನ್ನು ಕೂಡಲೇ ಕರೆತರುವಂತೆ ಕುದುರೆಯ ಸವಾರನೊಂದಿಗೆ ಪತ್ರ ಕಳುಹಿಸಿದರು.

ಆ ದಿವಸ ದಾಸರು–'ಇವತ್ತು ರಾಮಚಂದ್ರ ದೇವರ ಪ್ರಸಾದಕ್ಕೆ ಹೋಗಬೇಕಾಗುವುದು ; ಅಡಿಗೆ ಮಾಡಬೇಡಿರಿ' ಎಂದು ಶಿಷ್ಯರಿಗೆ ಹೇಳಿದ್ದರು.

'ಬಹಿಷ್ಕಾರ ಬಂದಮೇಲೆ ಪ್ರಸಾದ ಹೇಗೆ ಸಿಗಬೇಕು' ಎಂದು ಶಿಷ್ಯರು ಕೇಳಿದರು. ದಾಸರು ನಗುತ್ತಾ–'ಆಗ್ರಹಮಾಡಿದ ಗುರುಗಳ ಅನುಗ್ರಹವೂ ತಡವಿಲ್ಲ'ವೆಂದು ನುಡಿದರು.

ಕುದುರೆಯ ಸವಾರನು ಪತ್ರವನ್ನು ತಂದೊಪ್ಪಿಸಿದನು. ದಾಸರು-ಇದೋ ಶುದ್ಧಪತ್ರಿಕೆ ಬಂತೆಂದರು. ಎಲ್ಲರೂ ಕೂಡಲೇ ಹೊರಡಿರೆಂದರು,-ಎಂದೂ ಇಲ್ಲದೆ, ದಾಸರು ಅಂದು ಶ್ರೀಗಳವರಿಗೆ ಹೊತ್ತಾಗುವುದೆಂದು ಮೇನೆಯಲ್ಲಿ ಕುಳಿತು ವೇಗವಾಗಿ ಪ್ರಯಾಣಮಾಡಿದರು. ರತ್ನಮಂಟಪದ ಮುಂದೆ ಕುಳಿತಿದ್ದ ಶ್ರೀಗಳವರಿಗೆ ಸಾಷ್ಟಾಂಗ ಪ್ರಣಾಮಮಾಡಿ-ಕೈ ಜೋಡಿಸಿ ನಿಂತುಕೊಂಡರು. ಸತ್ಯಬೋಧರು –'ದಾಸರೇ, ನಿಮ್ಮಲ್ಲಿ ಶ್ರೀರಾಮಚಂದ್ರ ದೇವರ ಅನುಗ್ರಹವು ಪೂರ್ಣವಾಗಿರುವುದು; ನಮ್ಮ ದೇವರನ್ನು ನಮಗೆ ಕೊಡಿರಿ' ಎಂದರು. ದಾಸರು ವಿನಯದಿಂದ–'ಮಹಾಸ್ವಾಮಿಗಳೇ, ತಮ್ಮ ದೇವರು ತಮ್ಮಲ್ಲೇ ಇರುವರು. ಪೂಜೆಯಾಗಬಹುದು' ಎಂದರು. ಸನ್ನಿಧಿಗೆ ಬರಲು ತಾಮಸವಾದುದಕ್ಕೆ ಕ್ಷಮಿಸಬೇಕೆಂದು ಮತ್ತೆ ನಮಸ್ಕಾರಮಾಡಿದರು. ಎಂದಿನಂತೆ ಸಾಂಗವಾಗಿ ಪೂಜೆಯಾಯಿತು. ಸಮುಖದಲ್ಲಿ ದಾಸರನ್ನು ಕೂಡಿಸಿಕೊಂಡು, ಶ್ರೀಗಳವರು ಭಿಕ್ಷಾಸ್ವೀಕಾರ ಮಾಡಿದರು. ಸ್ವಲ್ಪವೂ ವಿಶ್ರಮಿಸಿಕೊಳ್ಳದೆ ಏಕಾಂತ ಸ್ಥಳಕ್ಕೆ ದಾಸರನ್ನು ಕರೆಸಿಕೊಂಡರು.

ಸತ್ಯಬೋಧರು :—ದಾಸರೇ, ನಿಮ್ಮಲ್ಲಿ ರಾಮಚಂದ್ರದೇವರ ಅನುಗ್ರಹ ಪೂರ್ಣವಾಗಿದೆ. ನಿಮ್ಮಂಥಾ ಶಿಷ್ಯರಿರುವುದು ಶ್ರೀಮಠಕ್ಕೆ ಭೂಷಣವಲ್ಲವೆ ?

ವಿಜಯರಾಯರು :—ಎಲ್ಲವೂ ಶ್ರೀಪಾದಾನುಗ್ರಹ !

ಸತ್ಯಬೋಧರು :—ದೂಷಿತಳ ಮನೆಯಲ್ಲಿ ನೀವೇಕೆ ಭೋಜನಮಾಡಿದಿರಿ ?

ವಿಜಯರಾಯರು :—ಮಾಡದಿದ್ದರೆ ಸ್ತ್ರೀಹತ್ಯ ಪಾಪಕ್ಕೆ ಗುರಿಯಾಗುತ್ತಿದ್ದೆ !

ಸತ್ಯಬೋಧರು :—ದೂಷಿತಳೆಂಬುವುದು ಗೊತ್ತಾಗಲಿಲ್ಲವೆ ?

ವಿಜಯರಾಯರು :—ಗೊತ್ತಾಗದಿದ್ದರೆ, ಭೋಜನವೆಲ್ಲಿಮಾಡುತ್ತಿದ್ದೆ !

ಸತ್ಯಬೋಧರು :—ಹಾಗೆ ಮಾಡುವುದು ಲೋಕವಿರೋಧವಲ್ಲವೆ ?

ವಿಜಯದಾಸರು :—ಹೌದು ! ಪಾಪಿಯ ಉದ್ಧಾರದ ಬಗೆ ಹೇಗೆ ? ಆಕೆ ಅಡಿಗೆ ಮಾಡಲಿಲ್ಲ; ಆಕೆ ಬಡಿಸಲಿಲ್ಲ; ಮನೆ ಏನು ಮಾಡಿತು.

ಸತ್ಯಬೋಧರು :—ಪೂರ್ವಾಶ್ರಮದಲ್ಲಿ ನಮ್ಮ ನಿಮ್ಮ ಪರಿಚರ್ಯವಾಗಲಿಲ್ಲ. ಉಪಾಯವಿಲ್ಲ.

ವಿಜಯರಾಯರು :—ಅದರಿಂದ ಕೊರತೆಯೇನು ? ಮಹಾಪೀಠದಲ್ಲಿರುವುದು ಮತ್ತೂ ವಿಶೇಷ. ಸೇವೆಗೆ ದಾಸನು ಸದಾ ಸಿದ್ಧನಾಗಿರುವನು.

ಸತ್ಯಬೋಧರು ಅಷ್ಟರಿಂದಲೇ ತೃಪ್ತರಾಗಲಿಲ್ಲ. 'ನೀವು ಅಪರೋಕ್ಷಿಗಳು. ನಿಜಸಂಗತಿಯೇನೆಂಬುದನ್ನು ನಮಗಾಗಿ ತಿಳಿಸಿರಿ'ಎಂದರು. ವಿಜಯರಾಯರು–'ಸ್ವಾಮಿ ಆಕೆಯೂ ನಾನೂ ಭೂಲೋಕದಲ್ಲಿ ಜನ್ಮವೆತ್ತಬೇಕೆಂದು ಒಟ್ಟಿಗೆ ಹೊರಟೆವು. ಆಕೆಯು ಭೂಲೋಕದ ಮಾಯೆಯಲ್ಲಿ ಸಿಕ್ಕಿ ಪಾಪಿಯಾದಾಗ ಮಾತ್ರ ನನ್ನನ್ನು ಕೈಬಿಡಬೇಡಿರೆಂದು ಕೇಳಿಕೊಂಡಳು. ನಾನು ಆಗಬಹುದೆಂದು ವಚನವಿತ್ತೆನು. ಇಷ್ಟೇ ಪೂರ್ವ ವೃತ್ತಾಂತ;

ಆಕೆಯು ದೇವತಾಸ್ತ್ರೀ' ಎಂದರು. ಮುಂದೆ ಬಹು ದಿವಸಗಳ ಕಾಲ ಸ್ವಾಮಿಗಳು ಮತ್ತು ದಾಸರು, ಉಭಯರ ಏಕತ್ರ ವಾಸವಾಯಿತು.

ವಿಜಯದಾಸರು ಮತ್ತೆ ರಾಮೇಶ್ವರಾದಿ ಮಹಾ ಕ್ಷೇತ್ರಗಳನ್ನೂ ಉಡುಪಿಯನ್ನೂ ಸಂದರ್ಶಿಸಿದರು. ಉಡುಪಿಯ ಶ್ರೀಕೃಷ್ಣ ಮಹಿಮೆಗಳನ್ನು ಅನೇಕ ಪದ ಸುಳಾದಿಗಳಿಂದ ಕೊಂಡಾಡಿ ಆದವಾನಿಯ ಸಮೀಪದಲ್ಲಿರುವ ಛಾಗಿಗೆ ಬಂದರು. ಊರಾಚೆಯಿರುವ ಮಾರುತಿಯ ದೇವಾಲಯದಲ್ಲಿ ದಾಸರ ವಸತಿಯಾಯಿತು.

ಛಾಗೀ ಕೇಶವರಾಯನ ಮನೆಯಲ್ಲಿ ಆತನ ಮಗನ ನಿಷೇಕ ಮುಹೂರ್ತವು ಅದೇ ಸಮಯದಲ್ಲಿದ್ದು, ರಾಯರ ಮನೆಯಲ್ಲಿ ಮಹೋತ್ಸವ ನಡೆದಿತ್ತು. ಈ ಸಂಚಾರದಲ್ಲಿ ಗೋಪಾಲದಾಸರೂ ವಿಜಯದಾಸರನ್ನು ಹಿಂಬಾಲಿಸಿದ್ದರು. ನೀರಿಗೆ ಬಲು ಶ್ರಮವಾಗಿದ್ದುದರಿಂದ ಭಾವಿಗಳಲ್ಲಿ ಚಿಪ್ಪಿನಿಂದ ಕೆರೆದು ಸ್ನಾನಪಾನಗಳಿಗೆ ತಕ್ಕಷ್ಟು ನೀರನ್ನು ಒದಗಿಸಿಕೊಳ್ಳಲು ಬಲು ಹೊತ್ತಾಗುತ್ತಿತ್ತು. ಸಾಲದುದಕ್ಕೆ ಆಗ ಸ್ನಾನಕ್ಕೆಂದು ಸಿದ್ಧವಾಗಿದ್ದ ನೀರನ್ನು ವಿಜಯದಾಸರು, ನೀರಿಗಾಗಿ ಹುಡಾಯಿಸುತ್ತಿದ್ದ ಒಂದು ಕತ್ತೆಗೆ ಕುಡಿಸಿಬಿಟ್ಟರು. ಮತ್ತೆ ನೀರು ಸಿದ್ಧವಾಗಲು ಕಾಲ ನಿರೀಕ್ಷಣೆ ಮಾಡಬೇಕಾಯಿತು.

ಅಷ್ಟರಲ್ಲಿ ದುರ್ದೈವಕ್ಕೆ ತಕ್ಕಂತೆ ಮದವಣಿಗನು ಹಸೆಮಣೆಯಮೇಲೆ ಬರುವ ಸಡಗರದಲ್ಲಿ ಬಾಗಿಲಿಗೆ ತಲೆತಗಲಿ ಬಿದ್ದು ಮೂರ್ಛಾಕ್ರಾಂತನಾದನು. ತಲೆಯಿಂದ ಧಾರಾಳವಾಗಿ ರಕ್ತ ಹರಿಯಲಾರಂಭಿಸಿತು. ಶೈತ್ಯೋಪಚಾರ ಮಾಡುವಷ್ಟರಲ್ಲಿ ಆ ತರುಣ ಮೃತನಾದ. ಜನರಲ್ಲಿ ಹಾಹಾಕಾರವೆದ್ದಿತು. ಮದವಣಿಗಿತ್ತಿಯ ರೋದನವು ಮುಗಿಲುಮುಟ್ಟಿತು.

ವಿಜಯದಾಸರು :—ಭಾಗಣ್ಣಾ ನೋಡಿದೆಯಾ, ಕತ್ತೆಗೆ ನೀರು ಕುಡಿಸಿದುದರಿಂದ ಊಟಕ್ಕೆ ಹೊತ್ತಾಯಿತೆಂದೆಯಲ್ಲ! ಕುಡಿಸದಿದ್ದರೂ ಇಷ್ಟುಹೊತ್ತಿಗೆ ಊಟವಾಗುತ್ತಿತ್ತೇನು! ಊರೊಳಗಿನ ಗದ್ದಲ ಕೇಳಿದೆಯಾ ?

ಗೋಪಾಲದಾಸರು (ಭಾಗಣ್ಣ) :—ಛಾಗೀ ಕೇಶವರಾಯನ ಮಗ ಸತ್ತನೆಂಬ ಸುದ್ದಿ ಬಂದಿದೆ. ಮೂರು ಜನ್ಮಗಳ ಗಣಿತಮಾಡಿದರೂ ಅವನಿಗೆ ಮರಣ ಬರಲು ಕಾರಣವಿಲ್ಲ. ಮರಣ ಹೇಗೆ ಬಂತು ?

ವಿಜಯದಾಸರು :—ನಿನಗೆ ಮೂರುಜನ್ಮಕ್ಕಿಂತ ಹೆಚ್ಚು ಎಣಿಸುವುದಕ್ಕೇ ಬರುವುದಿಲ್ಲ, ಅವನ ಏಳನೇ ಜನ್ಮದ ಪಾತಕವಿದು. ಗೊತ್ತಾಯಿತೇ ?

ಗೋಪಾಲದಾಸರು :—ಉತ್ಸವಭಂಗ! ಆ ಹುಡುಗಿ ಮಾಡಿದ ಪಾಪವೇನು? ದಾಸಾರ್ಯರು ಬಂದಾಗಲೇ ಈ ದುಃಖ ಬರಬೇಕೆ ?

ವಿಜಯದಾಸರು :—ಮಾಡುವುದೇನು ? ಕೇಶವರಾಯ ಸಜ್ಜನ! ಒಂದು ಕಾಶೀಯಾತ್ರೆ ಪುಣ್ಯವನ್ನು ಧಾರೆಯೆರೆದು ಮದವಣಿಗನನ್ನು ಬದುಕಿಸೋಣವೇ ?

ಗೋಪಾಲದಾಸರು :—ಕಾಶೀಯಾತ್ರಾಫಲ ಬಲು ದೊಡ್ಡದು. ಅದನ್ನು ಕಳೆದುಕೊಳ್ಳುವ ಬಗೆ ಹೇಗೆ? ಬೇಕಾದರೆ ಕತ್ತೆಗೆ ನೀರು ಕುಡಿಸಿದ ಪುಣ್ಯವನ್ನು ಧಾರೆಯೆರೆದು ಬದುಕಿಸಬಹುದು.

ವಿಜಯದಾಸರು :—ಛೀ, ಛೀ. ಕಾಶೀಯಾತ್ರೆಯಿಂದಗಳಿಸಿದ ಪುಣ್ಯಕ್ಕಿಂತ ಕತ್ತೆಗೆ ಪ್ರಾಣದಾನ ಮಾಡಿದ ಪುಣ್ಯದೊಡ್ಡದೋ ಭಾಗಣ್ಣ ! ಮತ್ತೆ ಬೇಕಾದರೆ ಕಾಶೀ ಯಾತ್ರೆ ಮಾಡಬಹುದು.

ಹೀಗೆ ಗುರು ಶಿಷ್ಯರ ವಿನೋದವಾರ್ತೆಗಳಾದುವು. ಅತ್ತ ಕುಲಕರಣಿಯು ತಲೆಯ ಮೇಲೆ ಕೈ ಹೊತ್ತು ಮುಂದೇನು ಗತಿಯೆಂದು ಕುಳಿತನು. ನಿಷೇಕಮಹೋತ್ಸ ವಕ್ಕೆ ಹೆಣ್ಣಿನವರ ಜೊತೆಯಲ್ಲಿ ಬಂದಿದ್ದ ಆನೇಗೊಂದಿಯ ನೆಂಟರಲ್ಲೊಬ್ಬಳು, ವಿಜಯ ದಾಸರು ಮೋಹನದಾಸರನ್ನು ಬದುಕಿಸಿದ್ದ ಸಮಾಚಾರವನ್ನು ಅಲ್ಲಿದ್ದವರಿಗೆ ತಿಳಿಸಿದಳು. ಮದವಣಿಗಳನ್ನೇ ದಾಸರ ಪಾದದಲ್ಲಿ ಕೆಡಹಿದರೆ ತಪ್ಪದೆ ಅವಳ ಮಾಂಗಲ್ಯಭಾಗ್ಯವುಂಟಾ ಗುವುದೆಂದು ಉಪಾಯವನ್ನೂ ಸೂಚಿಸಿದಳು. ಹೆಂಗಸರೆಲ್ಲಾ ಒಂದುಗೂಡಿ, ದೇವರೇ ಗತಿಯೆಂದು, ಏನೂ ತಿಳಿಯದ ಆ ಹುಡುಗಿಯನ್ನು ಹುರಿದುಂಬಿಸಿ ದಾಸರಬಳಿಗೆ ಕಳು ಹಿಸಿದರು. ದಾಸರಿತ್ತಕಡೆಯೋ ಗೋಪಾಲದಾಸರೊಡನೆ ಮಾತನಾಡುತ್ತಿದ್ದಾಗ, ಆ ಬಾಲೆಯು ದಾಸರ ಪಾದಗಳಿಗೆ ನಮಸ್ಕರಿಸಿದಳು. ತಟಕ್ಕನೆ ದಾಸರು,–'**ದೀರ್ಘ ಸುಮಂಗಲೀ ಭವ**' ಎಂದುಬಿಟ್ಟರು. ಬಾಲಕಿಯು ತಮ್ಮ ಮಾತು ಸತ್ಯವಾಗಬೇಕೆಂದು ಗಟ್ಟಿಯಾಗಿ ಕುಳಿತಳು. ನಡೆದ ಸಂಗತಿಯನ್ನು ತಿಳಿಸಿ ಗೋಳಿಟ್ಟಳು. ಆ ಎಳೆಯ ಬಾಲಕಿಯ ದುರವಸ್ಥೆಯನ್ನು ನೋಡಿ ಕರುಳು ಮರುಗಿದ ದಾಸರು–'ನೋಡಿದೆಯಾ ಭಾಗಣ್ಣಾ ! ಈಗೇನು ಮಾಡಬೇಕು ? ನನ್ನ ಬಾಯಿಂದ ಮಾತು ಹೊರಟು ಹೋಯಿತು. ಆ ಮಾತನ್ನು ನುಡಿಸಿದವನು ಶ್ರೀ ಹರಿಯು ; ಪರೀಕ್ಷೆಗೇ ಬಂದಮೇಲೆ ಅವನ ಮಾತನ್ನು ಅವನೇ ಕಾಪಾಡಿಕೊಳ್ಳದಿದ್ದರೆ ಯಾರಿಗೆ ಅಪಕೀರ್ತಿ ?' ಎಂದು ನುಡಿದು–'ಅಗಲಿ ಮಗಳೆ, ಹೆದರಬೇಡ ! ಒಂದರ ಜೊತೆಗೆ ಮತ್ತೊಂದಾದೀತು !' ಎಂದುಕೊಂಡು, ಎಲ್ಲ ರೊಡನೆ ಶವವಿದ್ದ ಬಳಿಗೆ ಬಂದರು. ಪರಮಾತ್ಮನನ್ನು ಕೆಳಕಂಡ ಹದಿಮೂರು ಉಗಾ ಭೋಗಗಳಿಂದ ಸ್ತುತಿಸಿದರು.

ಉಗಾಭೋಗಗಳು

ಪುರಂದರದಾಸರು ವೈಶ್ಯಮಾದಮ್ಮನ। ವರ ಕುಮಾರಕನ ಬದುಕಿಸಿದರು ಗಡ ! । ಗುರು ವ್ಯಾಸಮುನಿ ಭೂಪತಿಗೆ ಬಂದ ದು। ಸ್ತರವಾ ಕುಹುಯೋಗ ಬಿಡಿಸಿದರು ಗಡ ! । ಶಿರಿನಾರಾಯಣಯೋಗಿ ವ್ಯಾಸಮುನಿಗೆ ಬಂದ । ಉರಗ ಬಾಧೆಯ ಕಳೆದು ಪಾಲಿಸಿದರು ಗಡ ! । ಹರಿಯೆ ಈ ಕಲಿಯುಗದಿ ನಿನ್ನ ಶರಣರು ಇಂಥಾ । ಚರಿಯಮಾಡಿದ್ದರು ಅವ ನಾವರು ಇನಿತು । ಸ್ಮರಣೆಮಾಡಿದವಗೆ ಮನಸು ನಿರ್ಮಲ ಕಾಣೊ ! । ಧರೆಯೊಳು ಈ ಮನುಜರಾಡಿದ್ದೇ ವೇದ । ನೆರೆನಂಬಿದವರಿಗೆ ರೋಗ ಹಿಂಗಳವುದು । ಪರಮಶುದ್ಧ ಹರಿ ಶರಣರ್ಗೆ ಎದುರುಂಟೆ ? । ಕರುಣಾಕರ ಮೂರ್ತಿ **ವಿಜಯವಿಠಲ** ನಿನ್ನ । ಚರಣ ಸೇವಿಸುವವರ ಪಡಿದೊತ್ತು ನಾನಯ್ಯ ॥ ೧

ಪ್ರಮೋದ ಸಂವತ್ಸರದ ಚೆನ್ನವರಿಗೆ । ಮೋದ ಕುಂದದು ಕಾಣೋ ನೀನೊಲಿದಿ ರಲು ಪ್ರಮೋದವಲ್ಲದ ಕ್ಲೇಶವೇನಿಲ್ಲ । ಸ್ವಾಮಿ ಲಾಲಿಸಿಕೇಳೊ ಇಷ್ಟದೈವ । ಪ್ರಮಾದ

ದಿಂದಲಿ ಬಂದಿದ್ದ ಕಾಲಕ್ಕು | ಗೋಮಾಯುವಿನಂತೆ ಓಡಿಪೋಗುವುದು | ಶ್ರೀ ಮನೋ
ಹರ ನಮ್ಮ **ವಿಜಯವಿಠಲ** ನಿನ್ನ| ನಾಮನೆನೆವ ಮಾರ್ತಾಂಡಮುನಿಯ ನೋಡೊ॥ ೨

ಕಾಲನಾಮಕ ಭಗವಂತ ನಿನ್ನಯ ಭೀತಿ | ಕಾಲನಾಮಕಳಾದ ದುರ್ಗೆಯಳಿಗೆ | ಕಾಲಗರುಡ ಶೇಷ ರುದ್ರರಿಗೆ ದುರ್ಗಾಭಯ | ಕಾಲಯಮನಿಗೆ ಇವರ ಭಯ, ಇವನ ಭೀತಿ | ಕಾಲನೆಂಬ ಇವನ ತಮ್ಮಗಾಗುವುದು | ಕಾಲಮೃತ್ಯುವಿಗೆ ಈ ಕಾಲನ ಭಯ | ಕಾಲದೂತರಿಗೆ ಭಯ ಇವರಿಂದ ಕ್ಷುದ್ರ | ಕಾಲದೇವತೆಗಳಿಗೆ ದೂತರಿಂದ ಭಯ | ಕಾಲ ಕಾಲಕಿರಲು ಸ್ವಾತಂತ್ರ್ಯದಲಿ ಲೇಶ | ಕಾಲವಾದರು ನನನ ಮುಟ್ಟುವರೆ ? | ಕಾಲ ನಿಯಾಮಕ ನಿನ್ನ ನಂಬಲು ಸರ್ವ | ಕಾಲದಲಿ ಸುಖವುಂಟು ನಿರೋಗದಿ | ಕಾಲದೇಶ
ಪೂರ್ಣ ವಿಜಯವಿಠನೆ | ಕಾಲಿಗೆರಗುವೆನು ಕರ ಪಿಡಿದು ಸಲಹಯ್ಯ॥ ೩

ರುದ್ರಾಂತರ್ಗತ ನರಸಿಂಹ ರೋಗ ಹರ | ಭದ್ರವಾಗಲಿ ಇವಗೆ ಇವನ ಪತ್ನಿ | ಆರ್ದ್ರಳಾಗಿ ಚಾಲಿವರಿದು ವಂದಿಪಳು ಸ | ಮುದ್ರಶಾಯಿ ಇವಳ ಮಂಗಳ ಸೂತ್ರ | ನಿದ್ರೆಯೊಳಾದರು ಸ್ಥಿರವಾಗಿರಲಿ ಉ | ಪದ್ರಗಳು ಬಂದರೆ ಪರಿಹರಿಸು | ಅದ್ರಿಧರಿಸಿ ಗೋಕುಲ ಕಾಯ್ದ ಕರುಣಾಸ | ಮುದ್ರ ಆಪತ್ಕಾಲ ಬಾಂಧವನೆ | ಕ್ಷುದ್ರ ದೇವತೆಗೆ ಈ ಪರಿ ಶಕ್ತಿಯುಂಟೆ ? | ಛಿದ್ರ ಸಾಸಿರವಿರೆ ಕ್ಷಮಿಸಬೇಕು | ಮುದ್ರಧರಾಪಾಲ **ವಿಜಯ**
ವಿಠಲನೆ ದಾ | ರಿದ್ರ್ಯಭಂಜನ ಎನಗೆ ಇದೆ ಮಾತುರಕೊಡೊ ॥ ೪

ಮಂಗಳಪ್ರದ ನೀನು ನಿನ್ನ ಭಜಿಸಿದ ಜನರ | ಸಂಗದಲಿ ಇದ್ದ ಮಾನವಗೆ ಸತತ ಮಂಗಳವಲ್ಲದೆ ಲೇಶ ಕ್ಲೇಶಗಳಿಲ್ಲ | ತುಂಗ ಮಂಗಳ ತರಂಗ ವಾರ್ಧಿಚಂದ್ರ | ಹಿಂಗಳೆದುರೋಗವ ಹಿರಿದಾಗಿ ಬ್ರಾಹ್ಮಣಗೆ | ಅಂಗ ಆರೋಗ್ಯನಾಗಲಿ ಅಂಗನೆ | ಗಂಗಾ
ಜನಕ ನಮ್ಮ **ವಿಜಯವಿಠಲ** ನಿನ್ನ | ಅಂಘ್ರಿಧ್ಯಾನವೆ ಸರ್ವ ಅರಿಷ್ಟನಾಶ ॥ ೫

ಒಬ್ಬ ಸತಿ ಪತಿಗಾಗಿ ಮುನಿಯಶಾಪವಧರಿಸಿ | ಅಬ್ಜಬಾಂಧವನ ನಿಲಿಸಿದಳು ನೋಡೋ | ಒಬ್ಬ ಸತಿ ಪತಿಗಾಗಿ ಧರ್ಮನ ಸಭೆಸಾರಿ | ನಿಬ್ಬರದಿ ಪ್ರಾಣವನು ಪಡೆದಳು ನೋಡೋ | ಒಬ್ಬ ಸತಿ ಪತಿಗಾಗಿ ಚಿತ್ರಗುಪ್ತರಾಡಿದ | ಶಬ್ದಲಾಲಿಸಿ ಐದೆತನ ಪಡೆದಳೋ | ಉರ್ಬಿಯೊಳೀಪರಿ ಸತಿಯರ ಸ್ವಧರ್ಮ | ನಿರ್ಭಿಡೆಯಾಗಿದೆ ನಿನ್ನ ದಯದಿ | ಅಬ್ಜನಾಭನೆ ಇವನ ಮೇಲೆ ದಯಮಾಡು ಕರು | ಣಾಬ್ಧಿಯೆ ಉಪೇಕ್ಷೆಮಾಡದಲೆ |
ಅಬ್ಬರದ ದೈವ **ವಿಜಯವಿಠಲರೇಯ** | ಲಬ್ಧವಾಗಲಿ ನಾನು ಬೇಡಿದ ವರವು ॥ ೬

ಮರಿಗುಬ್ಬಿ ಬಾಯಿಬಿಟ್ಟಂತೆ ಬಿಡುತಲಿ ನಿಂದು | ಶರಗೊಡ್ಡಿ ಬೇಡಿ ಕೇಳುತ್ತಿ ಹೆಳೋ ಜೀಯ | ಪರಮ ಪುರುಷ ನೀನು ಎನ್ನೊಳು ವ್ಯಕ್ತನಾಗಿ | ಇರುತಿರಲು ತಿಳಿದು ಬಲು ದೈನ್ಯದಿಂದ | ಶರಣಪೇಳುವ ಮಾತು ನಿನ್ನದೇ ಎಂದಿಗು | ಸರಿ[illegible] ಜ್ಞಾನಿಗಳು ಪೇಳುತಿಹರೋ | ಬರಿದಾಗ ಗೊಡದಿರು ಬ್ರಾಹ್ಮಣಗೆ ಬಂದ | ದುರಿತ ತರಿದಟ್ಟಿ ರೋಗಗಳ ಕಳೆಯೋ | ಮರಣ ವಿರಹಿತ ನಮ್ಮ **ವಿಜಯವಿಠಲ** | ನಿನ್ನ ಸರಿ ಘೋರೆಯು ಕಾಣೆ
ರಕ್ಷಿಸುವಲ್ಲಿ ॥ ೭

ನಿನ್ನ ಮನದೊಳಗೆ ಉಳಿಸುವೆನೆಂಬುವುದು । ಘನ್ನವಾಗಿರಲಿಕ್ಕೆ ಎನ್ನೊಳಗೆ । ಇನ್ನಿತು ಪ್ರೇರಿಸಿ ನೀನೆ ನುಡಿಸಿದ್ದು । ಘನ್ನವಲ್ಲವೆ ಇದಕೆ ಸಂಶಯವಿಲ್ಲ । ಇನ್ನು ಯೋಚಿಸಲೇಕೆ ಭಕ್ತಪಾಲಕ ಬಿರಿದು । ಅನ್ನಂತಕಾಲಕ್ಕು ನಿನ್ನದಯ್ಯಾ । ಉನ್ನಂತ ಮಹಿಮ ಶಿರಿ ವಿಜಯವಿಠಲರೇಯ । ಎನ್ನ ಮಾನಾಪಮಾನ ಮತ್ತಾರದಲ್ಲಾ ॥ ೮

ಅಬಲೆಯು ಮಾತಿಗೆ ಮನಸುಕರಗಿತು ನಿನ್ನ । ಅಬುಜ ಪಾದಕೆ । ಬಿಡದೆ ಬಿನ್ನೈಸಿಪೆ । ಪ್ರಬಲ ನೀನಾವ ಕಾರಣದಿಂದ ಚನ್ನಾಗಿ ವಿಬುಧೇಶ ನಾನಾರೋಗ ವಿನಾಶನೆ । ಶುಭವ ಕೊಡು ಜೀಯ ನಿನಗಲ್ಲವೆ ಅನ್ಯ । ವಿಭುಗಳಿಗೆ ಶರಣೆನ್ನೆ ಸರ್ವಕಾಲ । ಶಬತ ಮಾತುರವಲ್ಲ ಅಂತರಂಗದ ಸ್ತೋತ್ರ । ಶಬರಿಗೆ ಒಲಿದವನೆ ಸತ್ಯಮೂರ್ತಿ । ಕುಬುಜೆಯ ತಿದ್ದಿದ ವಿಜಯವಿಠಲರೇಯ। ನಿಬಿಡ ಕರುಣಾಂಬುಧಿ ಮಹಾದುರಿತಾರಿ॥ ೯

ಒಂದೆರಡು ಮೂರು ನಾಲ್ಕೈದಾರು ಏಳು । ಒಂದೇಳು ಒಂಭತ್ತು ಹತ್ತು ಸಾರಿ। ವಂದಿಸಿ ಸ್ತೋತ್ರಮಾಡಿದುದಕ್ಕೆ ಅವರವರ । ಬಂಧನ ಪರಿಹರಿಸಿ ಕಾಯ್ದೆ ನೀನು । ಒಂದೊಂದು ಚಿತ್ತಕ್ಕೆ ಅನುಭವನೋಡಿ । ಇಂದು ಪ್ರಾರ್ಥಿಸಿದೆನೊ ಪಾರ್ಥಸೂತ । ಅಂದ ಮಾತಸು ಬರಿದಾಗದಂತೆ ದೇವ । ಬಂದಪಮೃತ್ಯುವ ಕಡೆಗೆ ಮಾಡಿ । ನಂದವಿತ್ತು ಈ ದೇಹದಿ ಸುಖಪಡಿಸು । ತಂದೆ ಈ ಭಕತನ ಮೊರೆಯ ಕೇಳಿ । ಕಂದರ್ಪಪಿತ ನಮ್ಮ ವಿಜಯವಿಠಲ ನಿನ್ನ । ಪೊಂದಿದ ಮೇಲೆ ಮುನ್ನಾವ ಕ್ಲೇಶಗಳಿಲ್ಲ ॥ ೧೦

ಮಾತು ಮಿಂಚಿತು ಕಾಣೊ ಹೆಂಗಳೆಯ ಮನ । ಪ್ರೀತಿಗೆ ಆತುಮದೊಳಗಿಪ್ಪ ಆತ್ಮ ಕೇಳೊ । ಭೂತಳದೊಳಗೆ ಭಕ್ತರಧೀನನೆಂದು । ಖ್ಯಾತವಾಗಿದೆ ನೋಡು ಸರ್ವದಲ್ಲಿ ನೀತ ಗುಣವಂತ ನಿನ್ನವರ ದಾಸನು । ಜ್ಞಾತಾ ಜ್ಞಾತದಿ ನುಡಿದೆನಯ್ಯಾ। ನೀ ತವಕದಿಂದ ನುಡಿಯ ಪಾಲಿಸದಿರಲು । ದಾತರೊಬ್ಬರ ಕಾಣೆ ಬ್ರಹ್ಮಾಂಡದಿ । ಯಾತರವನಲ್ಲ ನಿನ್ನ ನಾಮವೆ ಗತಿ ಬಿ । ನ್ನಾತು ಕಾಯೊ ಎನ್ನ ಮನನ್ನೈವವೆ । ವಾತಾಂತರ್ಗತ ನಮ್ಮ ವಿಜಯವಿಠಲರೇಯ । ಪ್ರೀತನಾಗು ಎನ್ನಸ್ತುತಿಗೆ ಪೈದೋರಿ ॥ ೧೧

ದೇವ ನಿನ್ನ ಪಾದದಾಣೆ ಭಕ್ತರಾಣೆ । ಈ ವಚನ ಸತ್ಯಮಾಡುವದು ಎನಗೆ । ಇವನ ಜೀವದಾನ ಕೊಡು ಇದೇ ದೇಹದಲಿ । ಮೂರು ವರುಷ ಎನ್ನಾಯುಷದೊಳಿತ್ತು । ಕಾವುದಲ್ಲದೆ ಇನ್ನು ಸುಮ್ಮನಿಪ್ಪುದು ಸಲ್ಲ । ಸಾವಿರ ಬ್ರಾಹ್ಮಣ ಭೋಜನ ಮಾಡಿಸುವೆ । ದೇವ ನಿನ್ನ ಪಾದದಾಣೆ ಭಕತರಾಣೆ । ಈ ವೇಳೆಗೆ ಬಂದ ಅಪಮೃತ್ಯು ಓಡಿಸು । ಭೂವಿಬುಧರೆಲ್ಲ ಕಷ್ಟಪಡುವುದ ನೋಡಿ । ಕೋವಿದರಾಯ ಎನ್ನಾಣೆ ಕೇಳಿದು ಸತ್ಯ । ಪಾವನ್ನ ಮೂರುತಿ ವಿಜಯವಿಠಲರೇಯ ಜೀವಿಸೊಂದಲಿ ರಕ್ಷಿಸಿ ಮಾಡಿಸೊ ॥ ೧೨

ಅನ್ನಂತ ಜನ್ಮಕ್ಕೆ ನಿನ್ನ ಬೇಡಿಕೊಂಬುದು । ಅನ್ನತೆಯಿಲ್ಲವೆಂಬುದ ಕೇಳಬಲ್ಲೆ । ಚಿಣ್ಣ ಧ್ರುವ ಪ್ರಹ್ಲಾದ ಮೊದಲಾದ ಭಕ್ತರ । ಘನ್ನತೆ ಏನೆಂಬೆ ಲೋಕದಲ್ಲಿ । ಮನ್ನಿಸು ಮಹರಾಯ ವಿಜಯವಿಠಲರೇಯ । ಬನ್ನದ ಕೈಕೊಂಡು ಭಕ್ತನ್ನ ಪಾಲಿಸೋ ॥ ೧೩

ದಾಸರು ಈ ಪ್ರಕಾರ ಸ್ತೋತ್ರಮಾಡಿ ಅನನ್ಯ ಭಾವನೆಯಿಂದ ಪರಮಾತ್ಮನನ್ನು

ಧ್ಯಾನಿಸುತ್ತಿರಲು, ಭಕ್ತಿಪಾರವಶ್ಯದಿಂದ ಧಾರೆಯಾಗಿ ಹರಿಯುತ್ತಲಿದ್ದ ಬಾಷ್ಪಗಳನ್ನು ಗೋಪಾಲದಾಸರು ಒರೆಸುತ್ತಾ ನಿಂತಿರಲು, ಮನೆಯ ಹೊರಭಾಗದಲ್ಲಿ-ಬೇಡಬೇಡವೆಂದು ಬರುವ ಜನರನ್ನು ಯಜಮಾನನು ನಿವಾರಿಸುತ್ತಿರಲು, ಒಳಗೆ ದಿವ್ಯ ಜ್ಯೋತಿಯೊಂದು ಹೊಳೆದಂತಾಯಿತು. ವಿಜಯದಾಸರು ಶ್ರೀಹರೇ ಎಂದು ಕಣ್ದೆರೆದರು. ಮೃತ ದೇಹ ದೊಳಗೆ ಪ್ರಾಣಸಂಚಾರವಾಗಿ ಚಲನೆದೋರಿತು. ತರುಣನು ಕಣ್ಣುಗಳನ್ನು ತಿಕ್ಕುತ್ತಾ ಎದ್ದು ಕುಳಿತನು. ಜನಗಳೆಲ್ಲ ಜಯಜಯವೆಂದು ಆನಂದೋದ್ಗಾರಮಾಡಿದರು. ವಿಜಯ ದಾಸರು ಮದವಣಿಗನನ್ನು ತಮ್ಮ ತೊಡೆಯಮೇಲೆ ಕೂಡಿಸಿಕೊಂಡು ತಮ್ಮ ಆಯುಸ್ಸಿ ನಲ್ಲಿ ಮೂರು ವರುಷಗಳನ್ನು ಧಾರೆಯೆರೆದರು. ಯಜಮಾನ ಕೇಶವರಾಯನ ಆನಂದವು ಮೇರೆ ಮೀರಿತು. ಅಪರಿಮಿತ ಆನಂದೋದ್ರೇಕದಿಂದ ದಾಸರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ದಾಸರು ಮದವಣಿಗನಿಗೆ ಆಯುರ್ದಾನಮಾಡುವರು ಯಾರಾದರಿದ್ದರೆ ಬನ್ನಿರೆಂದು ಕರೆದರು. ತೊಂಭತ್ತು ವರ್ಷದ ಮುದುಕಿ ಕೇಶವರಾಯನ ತಾಯಿಯು- ನಾನಿನ್ನು ವೃಧ್ಧಾಪ್ಯದಲ್ಲಿ ಕಷ್ಟಪಡಲಾರೆ. ನನ್ನ ಆಯುಸ್ಸೆಲ್ಲವೂ ಮೊಮ್ಮಗನಿಗೆ ಬರಲೆಂದು ಮುಂದೆ ಬಂದು ನಿಂತಳು. ಆಕೆಯ ಆಯುರ್ಮಾನವಿನ್ನೂ ಏಳು ವರ್ಷಗಳಿರುವುವೆಂದು ತಿಳಿದು ದಾಸರು, ಮುಂದೆ ಒಟ್ಟು ಹತ್ತು ವರ್ಷಕಾಲ ಈ ತರುಣನು ಜೀವಿಸುವನೆಂದು ಅಭಯದಾನ ಮಾಡಿದರು. ದಾಸರ ಆಜ್ಞೆಯಂತೆ ನಡೆಯಬೇಕಾಗಿದ್ದ ಮಹೋತ್ಸವವು ಆ ದಿನವೇ ನಡೆಯಿತು. ಗೋಪಾಲದಾಸರು ವಿಜಯದಾಸರ ಬಾಯಿಂದ ಬಂದ ಸಹಸ್ರ ಬ್ರಾಹ್ಮಣ ಭೋಜನವನ್ನು ಮಾಡಿಸೆಂದು ಕೇಶವರಾಯನಿಗೆ ತಿಳಿಸಿದರು. ರಾಯನು ಒಂದಲ್ಲದಿದ್ದರೆ ಹತ್ತುಸಹಸ್ರ ಬ್ರಾಹ್ಮಣ ಭೋಜನ ಮಾಡಿಸುವೆನೆಂದು ಸಂತೋಷದಿಂದ ನುಡಿದನು. ಅಂದು ಆ ಮನೆಯೇ ಸಂತೋಷ ಸಂಭ್ರಮಗಳಿಂದ ನಲಿದಾಡಿತು.

ವಿಜಯದಾಸರು ಕೇಶವರಾಯನನ್ನು ಕರೆದು ನಿನಗೆ ನಮ್ಮ ಪೂರ್ವ ಪರಿಚಯ ವೇನಾದರಿದೆಯೇ ಎಂದು ಕೇಳಿದರು. ರಾಯನು ನನಗೆ ಜ್ಞಾಪಕವಿಲ್ಲವೆಂದನು. ದಾಸರು- 'ಮಹರಾಯ! ನಿನ್ನ ಮನೆಯ ಹುಗ್ಗಿಯ ಪ್ರಭಾವ' ವೆಂದು ಪೂರ್ವ ವೃತ್ತಾಂತವನ್ನು ತಿಳಿಸಿದರು.

"ಉಪ್ಪು ಇಕ್ಕಿದವನನ್ನು ಮುಪ್ಪಿನತನಕ ನೆನೆ" ಎಂಬ ಗಾಧೆಯನ್ನು ವಿಜಯ ದಾಸರು ಅಕ್ಷರಶಃ ನಡೆಸಿದರು. ರಾಯನು ಆದರದಿಂದ ಮಾಡಿದ ಒಂದು ದಿನದ ಅನ್ನ ದಾನಕ್ಕೆ ಪ್ರತಿಯಾಗಿ ದಾಸರು, ಅವನ ಮಗನ ಅಪಮೃತ್ಯುವನ್ನೇ ಪರಿಹರಿಸಿ, ತಮ್ಮ ಆಯುಸ್ಸಿನಲ್ಲಿ ಮೂರು ವರ್ಷಗಳ ಆಯುರ್ದಾನ ಮಾಡಿದರು. ಸತ್ಪಾತ್ರರಿಗೆ ಅನ್ನದಾನ ಮಾಡಿದ್ದರ ಪ್ರಭಾವವು ಕಾದಿದ್ದು ಕೇಶವರಾಯನ ವಂಶೋದ್ಧಾರವಾಯಿತು.

ವಿಜಯದಾಸರು ಛಾಗಿಯಿಂದ ಚೀಕಲಪರಿಗೆ ಬಂದು ಕೆಲವುಕಾಲ ಅಲ್ಲಿ ವಾಸ ಮಾಡಿದರು. ವಯಸ್ಸು ಎಪ್ಪತ್ತಾಗಿದ್ದುದರಿಂದ ಮುಂದೆ ಮತ್ತೆಲ್ಲೂ ಅವರು ದೇಶ ಸಂಚಾರ ಮಾಡಲಿಲ್ಲ. ಮೋಹನದಾಸರು ಮಾತ್ರ ಎಡೆಬಿಡದೆ ದಾಸರ ಸಮೀಪದಲ್ಲಿರು ತ್ತಿದ್ದರು. ತಮ್ಮ 'ಅಂತಿಮಕಾಲದಲ್ಲಿ ಭಾಸ್ಕರಕ್ಷೇತ್ರವೆನಿಸಿದ ಚಿಪ್ಪಗಿರಿಯಲ್ಲಿರಬೇಕೆಂಬ

ಅಭಿಲಾಷೆ ದಾಸರಿಗುಂಟಾಯಿತು. ಚಿಪ್ಪಗಿರಿಯು ಈಗಿನ ಗುಂತಕಲ್ಲು ಸ್ಟೇಷನ್ನಿಗೆ ಐದು ಮೈಲು ದೂರದಲ್ಲಿದೆ. ಬಳ್ಳಾರಿ ಜಿಲ್ಲಾ ಆಲೂರು ತಾಲ್ಲೂಕಿಗೆ ಸೇರಿದೆ.

ಚಿಪ್ಪಗಿರಿಯಲ್ಲಿ ಜೈನರಾಜರ ಕಾಲದ ಎಂದರೆ ಹನ್ನೆರಡನೇ ಶತಮಾನದ ಬಲು ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಒಂದು ಭೋಗೇಶ್ವರ ದೇವಾಲಯ. ಒಂದು ಚನ್ನಕೇಶವ ದೇವಾಲಯ. ಮತ್ತೊಂದು ವೆಂಕಟೇಶ ದೇವಾಲಯ. ಚನ್ನಕೇಶವ ದೇವಾಲಯದಲ್ಲಿ ವಿಜಯನಗರದ ಕೃಷ್ಣದೇವರಾಯನ ಕನ್ನಡದ ದಾನಶಾಸನಗಳಿವೆ. ಚಿಪ್ಪಗಿರಿಯು ಜೈನರಾಜರ ಕಾಲದಲ್ಲಿ ಕೋಟೆಕೊತ್ತಲುಗಳಿಂದ ಶೋಭಿಸುತ್ತಿದ್ದು ಈಗ ಒಂದು ಸಾಧಾರಣ ಹಳ್ಳಿಯಾಗಿದೆ.

ವಿಜಯದಾಸರು ಪ್ರಥಮತಃ ಭೋಗೇಶ್ವರ ದೇವಾಲಯದಲ್ಲಿಳಿದರು. ಆ ಊರಿಗೆ ಅರ್ಧ ಮೈಲಿ ದೂರದಲ್ಲಿ ಒಂದು ಪುರಾತನ ವಟವೃಕ್ಷವಿದ್ದು ಸಮೀಪದಲ್ಲಿ ಒಂದು ಸರೋವರವಿತ್ತು. ಏಕಾಂತ ಸ್ಥಳವಾಗಿದೆಯೆಂದು ದಾಸರು ಅಲ್ಲಿ ಸ್ನಾನಾಹ್ನಿಕಗಳನ್ನು ಮಾಡಿಕೊಂಡು ವೃಕ್ಷಮೂಲದಲ್ಲಿ ಧ್ಯಾನಕ್ಕಾಗಿ ಕೂಡುತ್ತಿದ್ದರು. ಆ ಪ್ರದೇಶವು ಚಂದಪ್ಪ ನೆಂಬ ಕುರುಬನಿಗೆ ಸೇರಿತ್ತು. ಅವನು ಇಪ್ಪತ್ತೈದು ಕೂರಿಗೆ (ನೂರು ಎಕರೆ) ಭೂಮಿಗೆ ಒಡೆಯನಾಗಿ ತನ್ನ ಕುರಿಗಳ ಮಂದೆಯನ್ನು ಅಲ್ಲೇ ಇಟ್ಟು ಸಾಕುತ್ತಿದ್ದನು. ತನ್ನ ಭಾವಿಯಲ್ಲಿ ಸ್ನಾನಮಾಡಿ ತನ್ನ ಮರದ ಕೆಳಗೆ ತಪಸ್ಸು ಮಾಡುತ್ತ ಕುಳ್ಳಿರುವ ವೃದ್ಧರಾದ ದಾಸರನ್ನು ನೋಡಿ, ಯಾರೋ ಸತ್ಪುರುಷರೆಂದು ಚಂದಪ್ಪನು ಅವರನ್ನು ಆದರ ಗೌರವಗಳಿಂದ ಕಾಣುತ್ತಿದ್ದನು. ಆಗಾಗ ದಾಸರ ಬಳಿಯಲ್ಲಿ ಕುಳಿತು ಏನಾದರೂ ಉಪದೇಶ ಹೊಂದುತ್ತಿದ್ದನು. ಒಮ್ಮೆ ಆತನು ದಾಸರನ್ನು ಕುರಿತು–ಹೀಗೆಂದು ಪ್ರಶ್ನೆ ಮಾಡಿದನು.

ಚಂದಪ್ಪ :—ಸ್ವಾಮಿಾ, ಊರೊಳಗಿನ ದೊಡ್ಡ ದೊಡ್ಡ ದೇವಾಲಯಗಳನ್ನು ಬಿಟ್ಟು, ಇಲ್ಲಿ ನನ್ನ ಈ ಭಾವಿಯಲ್ಲೇ ಸ್ನಾನಮಾಡಿ, ಇಲ್ಲಿ ಮರದ ಕೆಳಗೇ ಬಯಲಲ್ಲಿ ಏಕೆ ಕೂಡುತ್ತಿರುವಿರಿ ?

ದಾಸರು :—ಚಂದಪ್ಪಾ, ಇದು ಪವಿತ್ರ ಸ್ಥಾನವಾಗಿದೆ. ಏಕಾಂತಸ್ಥಳವಾಗಿದೆ. ಅಲ್ಲದೆ ನಿನ್ನ ಭಾವಿಯಲ್ಲಿ ನಮ್ಮ ದೇವರಿದ್ದಾನೆ. ಅದಕ್ಕೇ ಇಲ್ಲಿದ್ದೇನಪ್ಪಾ !

ಚಂದಪ್ಪ :—ನನ್ನೀಭಾವಿಯಲ್ಲಿ ದೇವರೆಲ್ಲಿದ್ದಾನೆ ಸ್ವಾಮಿಾ ? ನಿತ್ಯ ಕಪಿಲೆ ಹೊಡೆಯುತ್ತೇನೆ. ಭಾವಿಯೆಲ್ಲಾ ಜಲಗಾಡುತ್ತೇನೆ ! ಎಲ್ಲೂ ಕಾಣೆನಲ್ಲಾ !

ದಾಸರು :—ಅಲ್ಲೇ ಇದ್ದಾನಪ್ಪಾ !

ಚಂದಪ್ಪ :—ನಮ್ಮ ಭಾವಿಯಲ್ಲಿ ನಾನು ಕಾಣದ್ದು ನಿಮಗೇನು ಗೊತ್ತು ಸ್ವಾಮಿಾ ?

ದಾಸರು :—ನಿನ್ನ ಈ ಭಾವಿಯ ಏಳನೇ ಮೆಟ್ಟಿಲಲ್ಲಿ ದೇವರಿದ್ದರೆ, ನೀನೇನು ಮಾಡುವೆ ?

ಚಂದಪ್ಪ :—ದೇವರಿದ್ದರೆ ಗುಡೀ ಕಟ್ಟಿಸುತ್ತೇನೆ ! ಭೂಮಿಾ ಕೊಡುತ್ತೇನೆ.

ದಾಸರು. ನಿನಗೆ ಸಂಶಯವಿದ್ದರೆ ಈಗಲೇ ಇಳಿದು ನೋಡು.

ಕುತೂಹಲದಿಂದ ಚಂದಪ್ಪನು ಒಡನೇ ಭಾವಿಯಲ್ಲಿಳಿದನು. ದಾಸರು ಹೇಳಿದ ಏಳನೆಯ ಮೆಟ್ಟಿಲಮೇಲೆ ಹುಡುಕಾಡಿದನು. ಪ್ರಯತ್ನದಿಂದ ಮುಳುಗಿ ಅದನ್ನು ಮೇಲೆ ತೆಗೆದಿಟ್ಟನು. ಅದು ಗೋಪಾಲಕೃಷ್ಣ ವಿಗ್ರಹವಾಗಿತ್ತು. ಚಂದಪ್ಪನಿಗೆ ತುಂಬಾ ಸಂತೋಷವಾಯಿತು. ಒಡನೆಯೇ–'ಸ್ವಾಮಿ, ನನಗೆ ನಾಲ್ವರು ಮಕ್ಕಳಿರುವರು, ಅವರಿಗೆ ಇಪ್ಪತ್ತು ಕೂರಿಗೆ ಭೂಮಿಯನ್ನು ಹಂಚಿಕೊಡುವೆನು. ಉಳಿದ ಐದು ಕೂರಿಗೆಯ ಭೂಮಿಯನ್ನು ಸ್ವಾಮಿಗೆ ಬಿಟ್ಟುಕೊಡುವೆನು. ಸ್ವಾಮಿಗೊಂದು ಗುಡಿ ಕಟ್ಟಿಸುವೆನು' ಎಂದು ನುಡಿದನು. ನುಡಿದುದು ಮಾತ್ರವಲ್ಲ–ತನ್ನ ನುಡಿಯಂತೆಯೇ ನಡೆದನು. ಅನಂತರ ದಾಸರು ಗೋಪಾಲಕೃಷ್ಣ ಸನ್ನಿಧಿಯಲ್ಲಿ ವಾಸಮಾಡಿದರು.

ವಿಜಯದಾಸರ ಜೀವನಚರಿತ್ರೆಯು ಆದ್ಯಂತವೂ ಆಸಕ್ತಿಯಿಂದ ಗಮನಿಸುವ ಚರಿತ್ರೆಯಾಗಿದೆ. ಬಾಲ್ಯದಲ್ಲಿ ಅವರು ಪಟ್ಟ ಶ್ರಮವು ಅವರ್ಣನೀಯವಾದುದು. ದೈವಾನುಗ್ರಹವಾದಮೇಲೆ ಅವರಿಗುಂಟಾದ ಸನ್ಮಾನ–ವೈಭವಗಳೂ ಅವರ್ಣನೀಯವಾದುವು. ವಿಜಯದಾಸರಂಥಾ ದಯಾಮಯರು ಮತ್ತೊಬ್ಬರಾಗಲಿಲ್ಲ. ಜನರು ಅಗಣಿತ ಧನರಾಶಿಯನ್ನು ಸಮರ್ಪಿಸಿದರೂ ತಮ್ಮ ಕುಟುಂಬದ ವಾಸಕ್ಕೆಂದು ಕಡೆಗೊಂದು ಗುಡಿಸಲನ್ನು ಮಾಡಿಕೊಳ್ಳಲಿಲ್ಲ. ಕಡೆಗಾಲದಲ್ಲಿ ಚಂದಪ್ಪನು ಅವರಿಗಾಗಿ ಕಟ್ಟಿಕೊಟ್ಟ ಕುಟೀರವು ದಾಸರ ವಾಸಸ್ಥಾನವಾಯಿತು. 'ಸಾಲ ಮಾಡಬೇಡ, ಸಾಲವೆನಬೇಡ, ನಾಳೆಗೆನಬೇಡ' ಎಂಬ ಪುರಂದರದಾಸರ ಆದರ್ಶಗಳು ವಿಜಯರಾಯರಲ್ಲಿ ಮೂರ್ತಿಮತ್ತಾಗಿ ಕಂಡುಬಂದವು.

ವಿಜಯದಾಸರ ಪದಗಳ ಧಾಟಿಗಳನ್ನು ನೋಡಿದರೆ ಆ ಕಾಲಕ್ಕೆ ಮಾತ್ರವಲ್ಲ; ಅವು ಈ ಕಾಲದಲ್ಲೂ ಸುಂದರವಾದ ಮಾದರಿಗಳಾಗಿವೆ. ಅನೇಕ ಪದಗಳು, ಪಲ್ಲವಿಗಳ ಮಟ್ಟದಲ್ಲಿದ್ದು, ವಿನ್ಯಾಸಮಾಡಿ ಹಾಡಲು ಅನುಕೂಲವಾಗಿವೆ. ರಾಗ, ರಾಗಕ್ಕೆ ತಕ್ಕ ಭಾವ, ಭಾವಕ್ಕನುಗುಣವಾದ ಕಾಲ, ಈ ಎಲ್ಲವನ್ನೂ ನೋಡಲು, ವಿಜಯರಾಯರ ಪದಗಳು ಆದರ್ಶಗಳಾಗಿವೆ. ಹಾಡುವವರ ಲೋಪದಿಂದಲೂ, ಮುದ್ರಣಕಾರರ ಅವಿಚಾರದಿಂದಲೂ, ದಾಸರ ಪದಗಳು ತಪ್ಪು ತಪ್ಪಾಗಿ ಕಿವಿಗೆ ಬಿದ್ದ ಮಾತ್ರಕ್ಕೇ ಆ ದೋಷಗಳನ್ನು ದಾಸರಲ್ಲಿ ಆರೋಪಿಸುವುದು ಯೋಗ್ಯವಲ್ಲ. ದಾಸರ ಅನೇಕ ಸುಳಾದಿ ಉಗಾಭೋಗಗಳು ಬಲು ತಪ್ಪು ಪಾಠವಾಗಿರುವುದು ಮಾತ್ರವಲ್ಲದೆ, ಇಲ್ಲದ ಮಾತುಗಳು ಸೇರಿರುವುದು ಸಹ ಕಂಡುಬರುತ್ತಿದೆ. ವಾಙ್ಮಯ ದೃಷ್ಟಿಯಿಂದ ದಾಸಸಾಹಿತ್ಯ ಶೋಧನಾ ಕಾರ್ಯವು ಇನ್ನಾದರೂ ವ್ಯವಸ್ಥಿತ ರೀತಿಯಿಂದ ನಡೆಯುವಿದ್ದರೆ, ಕರ್ನಾಟಕಕ್ಕೇ ದೊಡ್ಡ ನಷ್ಟವಾಗುವುದರಲ್ಲಿ ಸಂಶಯವಿಲ್ಲ. ವಿಜಯದಾಸರ ಕಟ್ಟೆ ಚಿಪ್ಪಗಿರಿಯಲ್ಲಿ ದಾಸರ ದೇವರನಾಮಗಳನ್ನು ಬರೆದಿಟ್ಟಿರುವ ಕೆಲವು ಶಿಥಿಲ ವಹಿಗಳಿವೆ. ಅವುಗಳನ್ನು ಬರೆದಿಟ್ಟವರ ದೋಷ ಬೇಕಾದ್ದಿರಲಿ! ಇದ್ದಂತೆಯಾದರೂ ಕೆಡದಂತೆ ಜೋಪಾನಮಾಡುವ ಪ್ರಯತ್ನ ಮಾಡುವರೂ ಇಲ್ಲವಾಗಿದೆ. ಮೋಹನದಾಸರ ವಂಶೀಕರೆಂದು ಚಿಪ್ಪಗಿರಿಯಲ್ಲಿರುವವರಿಗೆ ದೊಡ್ಡ ಕುಟುಂಬೀಕರಾದ್ದರಿಂದ, ಈಗಿನ ಕಾಲದಲ್ಲಿ ಜೀವನ ಸಂಗ್ರಾಮವೇ ದೊಡ್ಡದಾಗಿದೆ. ದೇಶದ ದುರ್ದೈವದಿಂದ ಅಲ್ಲಿನ ಜನರಿಗೆ ಕನ್ನಡ ಮಾತನಾಡುವ ರೂಢಿಯಿಲ್ಲದಿರುವುದು

ಮಾತ್ರವಲ್ಲ–ಆ ಭಾಷೆಯನ್ನು ಓದಿ ಬರೆಯುವ ಅಭ್ಯಾಸವೂ ಆಗುತ್ತಿಲ್ಲ. ಮನೆಯಲ್ಲಿ ಮಾತನಾಡುವುದು ಕನ್ನಡ ಭಾಷೆಯಲ್ಲಾದರೆ, ಹೊರಗಿನ ವ್ಯವಹಾರವೆಲ್ಲ ತೆಲುಗು ಭಾಷೆಯಲ್ಲಾಗಿದೆ. ಪುರಂದರದಾಸರ ಗ್ರಂಥಗಳಂತೂ ವಿಜಯನಗರದ ಜೊತೆಯಲ್ಲೇ ಅದೃಶ್ಯವಾದುವು. ವಿಜಯದಾಸರ ಕಟ್ಟೆಯಲ್ಲಿ ಮೇಲೆ ಹೇಳಿದಷ್ಟಲ್ಲದೆ ಮಿಕ್ಕ ಯಾವ ಹರಿದಾಸರ ಸ್ಥಾನದಲ್ಲೂ ಪುಸ್ತಕ ಭಂಡಾರವಿಲ್ಲ. ವಿಜಯರಾಯರ ಕಟ್ಟೆಗೆ ಬಂದು, ಪದಗಳನ್ನು ಬರೆದುಕೊಂಡು ತಿರುಗಿ ಕಳುಹಿಸುವೆನೆಂದು ಅನೇಕರು ತೆಗೆದುಕೊಂಡು ಹೋದ ಪುಸ್ತಕಗಳು ಮೂಲಸ್ಥಳಕ್ಕೆ ಬರಲಿಲ್ಲವೆಂಬ ಮಾತು ವಿಷಾದಜನಕವಾಗಿದೆ. ಮುಂದಿನ ಪೀಳಿಗೆಯ ಜನರಿಗೆ ವಿಜಯದಾಸರಂಥಾ ಮಹಾತ್ಮರೊಬ್ಬರು ಕನ್ನಡಿಗರಲ್ಲಿ ಇದ್ದರೆಂದು ತಿಳಿಸಲು ಆಧಾರಗಳೇ ದೊರೆಯದಿದ್ದರೆ ಎಂಥಾ ಅಪರಾಧವಾಗುವುದೆಂದು ಪರಿತಾಪಗೊಳ್ಳುವ ಜನರನ್ನು ನೋಡಬೇಕೆಂದರೂ ಸಿಗದಿದ್ದರೆ ಮಾಡುವುದೇನು ?

ಕನ್ನಡಿಗರ ಉದಾಶೀನತೆ ಈಗಿನ ಸ್ಥಿತಿಯಲ್ಲೇ ಇರುವುದಾದರೆ, ಇನ್ನೂ ಹತ್ತಿಪ್ಪತ್ತು ವರ್ಷಕಾಲ ಚಿಪ್ಪಗಿರಿಯಲ್ಲಿ ದಾಸರ ಆರಾಧನಾಂಗವಾದ ಮಹಾ ಸಮಾರಾಧನೆ ಯಾಗಬಹುದು ! ದಾಸರಲ್ಲಿ ಭಕ್ತಿಯುಳ್ಳ ಜನರು ಬಂದು ದೇಶದಲ್ಲಿ ಒಂದೆರಡು ಮನೆತನದ ಹಿರಿಯರಿದ್ದರೆ, ಆ ಹಿರಿಯರಿರುವವರೆಗೆ ಅವರ ಮನೆಯಲ್ಲಿ ದಾಸರ ಪುಣ್ಯತಿಥಿಯನ್ನಾಚರಿಸಬಹುದು. ಇದಕ್ಕಿಂತ ಹೆಚ್ಚಾಗಿ ಏನು ನಡೆಯುವುದೆಂದು ಭಾವಿಸಲು ಯಾರಿಗೂ ಸಾಧ್ಯವಿಲ್ಲ.

ದಾಸರ ನಿಜವಾದ ಆರಾಧನೆಯೆಂದರೆ ದಾಸರ ಗ್ರಂಥಗಳ ಪ್ರಚಾರ. ದಾಸರ ಪದಗಳನ್ನು ಹಾಡೋಣ ! ದಾಸರ ಗ್ರಂಥಗಳನ್ನು ಮುದ್ರಿಸೋಣ ! ಇದಕ್ಕಿಂತ ದೊಡ್ಡ ಪ್ರತಿಯ ಆರಾಧನೆಯು ಮತ್ತಾವುದೂ ಇರುವುದಿಲ್ಲ.

ಪ್ರಕೃತ ಚಿಪ್ಪಗಿರಿಯಿರುವುದು ಬಳ್ಳಾರಿ ಜಿಲ್ಲೆಯಲ್ಲಿ ! ಕೇವಲ ಸಂಕುಚಿತ ದೃಷ್ಟಿಯಿಂದ ನೋಡಿದರೆ ವಿಜಯದಾಸರು ಮಧ್ವಮತಸ್ಥರು. ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿರುವ ಬ್ರಾಹ್ಮಣರೆಂದರೆ ಮಾಧ್ವರೇ ! ತಮ್ಮ ಜಿಲ್ಲೆಯಲ್ಲಿರುವವರು, ತಮ್ಮ ಮತಸ್ಥರು, ಅಂದಿಗೂ ಇಂದಿಗೂ ಎಂದೆಂದಿಗೂ, ಮಹಾನುಭಾವರಾದ ಅಪರೋಕ್ಷಜ್ಞಾನಿಗಳಾದ ಮಹಾನುಭಾವರು–ಎಂಬ ಅಭಿಮಾನ ಶ್ರದ್ಧಾ ಭಕ್ತಿಗಳಿಂದಲಾದರೂ ಬಳ್ಳಾರಿಯ ಜನರು ದಾಸರ ಸಾಹಿತ್ಯವನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಚಾರಗೊಳಿಸುವ ಪ್ರಯತ್ನ ಮಾಡುವರೆ ?

ಹಾಗೆ ದೊಡ್ಡ ಮನಸ್ಸು ಮಾಡುವರಾದರೆ, ಹದಿನೆಂಟನೇ ಶತಮಾನದಲ್ಲಿ ಹುಟ್ಟಿ, ಅದೇ ಶತಮಾನದಲ್ಲಿ ಒಂದಾನೊಂದು ಕಾರ್ತೀಕ ಶುದ್ಧ ದಶಮಿ ಗುರುವಾರ ಪ್ರಾತಃಕಾಲ ವಿಜಯದಾಸಾರ್ಯರು ವೈಕುಂಠವಾಸಿಗಳಾದರೆಂದು ದುಃಖಿಸುವರ್‍ಯಾರು ? ದಾಸರನ್ನು ಮರೆಯುವವರ್‍ಯಾರು ?

ಶ್ರೀ ಗೋಪಾಲದಾಸರು

ಅರ್ಥಗಳಲ್ಲಿ ಪುರುಷಾರ್ಥ ಚತುಷ್ಟಯಗಳಂತೆ, ಕರ್ನಾಟಕದಲ್ಲಿ ಹರಿದಾಸ ಚತುಷ್ಟಯರು ಅತ್ಯಂತ ಪ್ರಸಿದ್ಧರೆನಿಸಿದರು. ಈ ನಾಲ್ವರ ಹಿಂದಾಗಲೀ, ಮುಂದಾಗಲೀ ನೂರಾರುಮಂದಿ ಪ್ರಖ್ಯಾತ ಹರಿದಾಸರುಗಳು ಅವತರಿಸಿ ಎಷ್ಟೇ ಮಹತ್ಕಾರ್ಯಮಾಡಿ ತೋರಿಸಿದ್ದರೂ, ಇವರ ಸ್ಥಾನಮಾನಗಳು ಅವರಿಗೆ ದೊರೆತಿಲ್ಲ. ಈ ನಾಲ್ವರು ದಾಸರ ವಾಕ್ಯಗಳೆಂದರೆ ವ್ಯಾಸವಾಕ್ಯಗಳಂತೆ ಇಂದಿಗೂ ಮಾನ್ಯವಾಗಿವೆ. ಪಂಡಿತೋತ್ತಮರು ಸಂಶಯಗ್ರಸ್ತ ಪ್ರಮೇಯಗಳು ಒದಗಿದರೆ, ನಿಸ್ಸಂಶಯವಾದ ದಾಸರವಾಕ್ಯಗಳನ್ನು ಉದಹರಿಸಿ ಕೂಡಲೇ ಶಿರಸಾ ಮನ್ನಿಸುತ್ತಾರೆ. ಈ ಭಾಗ್ಯವು ದಾಸಚತುಷ್ಟಯರ ವಾಕ್ಯಗಳಿಗಿದ್ದಂತೆ ಇತರ ದಾಸರ ವಾಕ್ಯಗಳಿಗೆ ವ್ಯಾಪಕವಾಗಿಲ್ಲ. ಈ ನಾಲ್ಕುಮಂದಿ ದಾಸವರ್ಯರುಗಳೆಂದರೆ, ಶ್ರೀ ಪುರಂದರದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು ಮತ್ತು ಶ್ರೀ ಜಗನ್ನಾಥದಾಸರು.

ಪ್ರಸಕ್ತ ಚರಿತ್ರೆಯಾದರೋ-ಈ ನಾಲ್ವರಲ್ಲಿ ಒಬ್ಬರಾದ **'ಭಕ್ತಿಯಲಿ ಭಾಗಣ್ಣ'** ನೆಂದು ಪೂಜ್ಯತೆಯನ್ನು ಪಡೆದ ಮಹಾನುಭಾವರಾದ, ಶ್ರೀ ಗೋಪಾಲದಾಸರದಾಗಿರುವುದು. ವಿಜಯದಾಸರ ಶಿಷ್ಯರುಗಳಲ್ಲಿ ಮೊದಲನೆಯ ದಾಸವರ್ಯರದಾಗಿರುವುದು. ತ್ಯಾಗದಲ್ಲಿ-ಜಗನ್ನಾಥದಾಸರಂಥವರಿಗೆ ತಮ್ಮ ಆಯುಸ್ಸಿನಲ್ಲಿ-ನಲವತ್ತು ವರ್ಷ ಆಯು ದಾನಮಾಡಿದ ತ್ಯಾಗಮೂರ್ತಿಗಳದಾಗಿರುವುದು. ಬಿಂಬೋಪಾಸನಾಕ್ರಮವನ್ನು ಚಿತ್ರಪಟದಂತೆ ಬರೆದಿಟ್ಟು ಬಲು ಜನರಿಗೆ ಉಪದೇಶವಿತ್ತು ಅಪರೋಕ್ಷಿಗಳನ್ನಾಗಿ ಮಾಡಿದ ದಯಾಮಯರದಾಗಿರುವುದು. ಕರ್ನಾಟಕದಲ್ಲಿ ಗೋಪಾಲದಾಸರ ಹೆಸರನ್ನು ಕೇಳದವರಿಲ್ಲ. ಗೋಪಾಲ ವಿಠಲ ಮುದ್ರಿಕೆಯ ಒಂದು ಪದವನ್ನಾದರೂ ಹಾಡದವರಿಲ್ಲ.

ಗೋಪಾಲದಾಸರು ರಾಯಚೂರು ಜಿಲ್ಲೆಯವರು. ದೇವದುರ್ಗ ತಾಲ್ಲೂಕಿಗೆ ಸೇರಿದ ಮೊಸರುಕಲ್ಲೆಂಬ ಗ್ರಾಮವು ದಾಸರ ಜನ್ಮಸ್ಥಳವು. ತಾತನ ಹೆಸರು ಮುದ್ಗಲ್ಲಪ್ಪ. ತಂದೆಯ ಹೆಸರು ಮುರಾರಿರಾಯ! ತಾಯಿಯ ಹೆಸರು ವೆಂಕಮ್ಮ. ಗೋತ್ರವಾದರೋ ಹರಿತಸ. ಜನನಕಾಲ ಸುಮಾರು ಶಾಲಿವಾಹನಶಕ ೧೬೪೦ ಅಂದರೆ ಕ್ರಿಸ್ತಾಬ್ದ ೧೭೧೭. ದಾಸರ ಚರಿತ್ರೆಗೆ ಅವರ ತಮ್ಮ ರಂಗದಾಸರು, ಮಾಡಿದ ೮೪ ನುಡಿಗಳ ದೇವರ ನಾಮವು ಪ್ರಮಾಣವಾಗಿರುವುದು. ನಮ್ಮ ಹಿರಿಯರ ಕಡತದ ವಾಕ್ಯಾವಳಿಗಳು ಪ್ರಮಾಣವಾಗಿರುವುವು. ಮತ್ತು ದಾಸರ ಅನೇಕ ಪದ-ಸುಳಾದಿಗಳು ಪ್ರಮಾಣವಾಗಿರುವುವು. ಚರಿತ್ರೆಯಲ್ಲಿ ಯಾವ ತರದ ಕಲ್ಪನೆಗಳೂ ಬರಲಿಲ್ಲ.

ದೇವದುರ್ಗ ತಾಲ್ಲೂಕು ಮೊಸರುಕಲ್ಲೆಂಬ ಆ ಗ್ರಾಮದಲ್ಲಿ ಮೇಲೆ ಹೇಳಿದಂತೆ ಹರಿತಸ ಗೋತ್ರದ ಮುದ್ಗಲ್ಲಪ್ಪನೆಂಬ ಬಡಬ್ರಾಹ್ಮಣನಿದ್ದನಷ್ಟೆ! ಆತನು ವೈದೀಕನೆನ್ನು

ವುದಕ್ಕೆ ಯಾವ ಶಾಸ್ತ್ರಾಧ್ಯಯನ ಮಾಡಿದ್ದನೆಂದೂ ಹೇಳಿಕೆಯಿಲ್ಲ. ಲೌಕಿಕನೆನ್ನುವುದಕ್ಕೆ ಸರ್ಕಾರದ ಉದ್ಯೋಗಮಾಡಿದವನಲ್ಲ. ದೊಡ್ಡ ಜಮೀನ್ದಾರ ಅಥವಾ ಜಹಗೀರದಾರನಲ್ಲ. ವ್ಯಾಪಾರಮಾಡಿದ ಚಿನಿವಾರನೂ ಅಲ್ಲ. ಪಿತ್ರಾರ್ಜಿತವಾದ ಕೆಲವು ಕೂರಿಗೆ ಹೊಲಗಳಿಂದ ಬಂದಷ್ಟರಲ್ಲಿ ತೃಪ್ತನಾಗಿ ಜೀವನ ಮಾಡುತ್ತಿದ್ದನು. ಷುಗ ಮುರಾರಿಯು ಕಾಲದಲ್ಲಿ ಸಂಸಾರ ದೊಡ್ಡದಾಯಿತು. ಪಿತ್ರಾರ್ಜಿತ ಭೂಸ್ಥಿತಿಯೂ ಒಂದೊಂದಾಗಿ ಕೈಬಿಟ್ಟುಹೋಯಿತು. ಮುರಾರಿಗೆ ನಾಲ್ವರು ಗಂಡುಮಕ್ಕಳಾದರು. ಕಡೆಯ ರಂಗಪ್ಪನು ತೊಟ್ಟಿಲ ಕೂಸಾಗಿದ್ದಾಗ ಮುರಾರಿಯು ಮೃತನಾದನು. ಅವನ ಅಣ್ಣ ತಮ್ಮಂದಿರು ಮುರಾರಿಯು ಹೆಂಡತಿ ಮಕ್ಕಳ ಯೋಗಕ್ಷೇಮ ನೋಡಲಿಲ್ಲ. ಸಾಲದುದಕ್ಕೆ ಪುತ್ರವಂತಳೆಂದು ದ್ವೇಷಮಾಡಿ ವೆಂಕಮ್ಮನನ್ನು ಮನೆಯಿಂದ ಓಡಿಸಿದರು.

ಅನಾಥ ವಿಧವೆಗೆ ಪಾಲಕರಿಲ್ಲದಂತಾಯಿತು. ಮಕ್ಕಳನ್ನೂ ಕರೆದುಕೊಂಡು, ಆ ಹೆಂಗಸು ಭಿಕ್ಷುಕಳಾಗಿ ಸಂಚರಿಸುತ್ತಾ ಗದ್ವಾಲ ಸಂಸ್ಥಾನಕ್ಕೆ ಸೇರಿದ ಸಂಕಾಪುರಕ್ಕೆ ಬಂದಳು. ಊರಿನವರು ಇಳಿದುಕೊಳ್ಳಲು ಸ್ಥಳ ಕೊಡದಿದ್ದ ಕಾರಣ, ಅವಳು ಊರಿಗೆ ಅರ್ಧಮೈಲು ದೂರದಲ್ಲಿರುವ ಮಾರುತಿಯ ಗುಡಿಯಲ್ಲಿ ವಾಸಮಾಡಿದಳು. ಮನೆಭಿಕ್ಷ ಕಣಭಿಕ್ಷಗಳಿಂದ ವಿಧವೆಯು ಜೀವಿಸಬೇಕಾಯಿತು. ಮಾರುತಿಯ ದೇವಾಲಯವಾದರೂ ಈಗಿರುವಂತೆ ಗಟ್ಟಿ ಕಟ್ಟಡವಾಗಿರಲಿಲ್ಲ. ಒರಟು ಕಲ್ಲುಗಳನ್ನು ಒಂದರ ಮೇಲೊಂದು ಪೇರಿಸಿದ ಮೆತ್ತಿಗೆಯಿಲ್ಲದ ಗುಡಿಯು ಹಾವು ಚೇಳುಗಳಿಗೆ ಆವಾಸವಾಗಿತ್ತು. ಮಕ್ಕಳಿಗೆ ಮಾನಮುಚ್ಚಲು ಬಟ್ಟೆಯಿಲ್ಲ, ಎಣ್ಣೆ ಜಿಣ್ಣೆ ಧೂಪದೀಪಗಳು ಅಪರಿಚಿತ ಪದಾರ್ಥಗಳು. ಜೋಳ ಸಜ್ಜೆಗಳ ರೊಟ್ಟಿಯ ಜೊತೆಗೆ ಅಕ್ಕಿಯ ಅನ್ನವನ್ನು ಕಂಡ ದಿನವೇ ಮಕ್ಕಳಿಗೆ ಹಬ್ಬದ ದಿನವಾಗಿತ್ತು. ವಿಧವೆಯ ದಾರಿದ್ರ್ಯವನ್ನು ನೋಡಲಾರದೆ ಯಾವನೋ ಪುಣ್ಯಾತ್ಮನು ಆಕೆಗೊಂದು ಸೀಳು ಗದ್ದೆಯನ್ನು ಕೊಟ್ಟನು. ಪಕ್ಕದ ಗದ್ದೆಯ ರೈತನು ಉಚಿತವಾಗಿ, ಆ ಗದ್ದೆಯಲ್ಲಿ ಭತ್ತವನ್ನು ಬೆಳೆಸಿದನು. ಪಾಜೀ ಕುಲಕರಣಿಗೆ ವೆಂಕಮ್ಮನ ಇಷ್ಟು ಭಾಗ್ಯವೇ ಸಹನೆಯಾಗಲಿಲ್ಲ. ವೆಂಕಮ್ಮನು ತನ್ನ ಮನೆಯಲ್ಲಿ ಬಿಟ್ಟೀಚಾಕರಿ ಮಾಡದಿದ್ದ ಕಾರಣ, ಗದ್ದೆಯನ್ನು ಕೊಯ್ಯುವ ಕಾಲಕ್ಕೆ ಸರಿಯಾಗಿ, ಸರ್ಕಾರೀ ಕೆರೆಯ ನೀರನ್ನು ಉಪಯೋಗಿಸಿಕೊಂಡಳೆಂದು ಆ ದೀನಳ ಮೇಲೆ ಅಪವಾದ ಹಾಕಿದನು. ಗದ್ದೆಯ ಭತ್ತವನ್ನು ಆ ಅಪರಾಧಕ್ಕೆ ದಂಡವೆಂದು ತನ್ನ ಮನೆಗೆ ಸಾಗಿಸಿದನು. ದೀನ ವಿಧವೆಯು ಕುಲಕರಣಿಯ ಕಾಲಿಗೆಬಿದ್ದು 'ಅರ್ಧವಾದರೂ ಕೊಡಪ್ಪಾ' ಎಂದು ಮೊರೆಯಿಟ್ಟಳು. ಆ ಪಾಪಿಯು ಅವಳನ್ನು ಕಾಲಿನಿಂದ ಒದ್ದು, ಹೆಚ್ಚು ಗದ್ದಲ ಮಾಡಿದರೆ ಗುಡಿಯಿಂದ ಓಡಿಸುವೆನೆಂದು ಹೆದರಿಸಿದನು. ಇದನ್ನು ನೋಡುತ್ತಿದ್ದ–ಭಾಗಣ್ಣನಿಗೆ ಕಣ್ಣಿನಿಂದ ದಳದಳನೆ ನೀರುದುರಿತು. ಬಾಲಕನಾದುದರಿಂದ ಕುಲಕರಣಿಯ ಸಂಗಡ ಮಾತನಾಡುವ ಧೈರ್ಯ ಬರಲಿಲ್ಲ. ತಾಯಿಯನ್ನೇ ಕುರಿತು–'ಅಮ್ಮಾ, ನಮಗಾಗಿ ನಿನಗಿಂಥ ಕಷ್ಟವಾಯಿತು! ಕುಲಕರಣಿಯೇ ಉಂಡು ಬದುಕಲಿ! ಆದರೆ ನಮ್ಮಂಥಾ ಮಕ್ಕಳು ಅವನಿಗಾಗಬೇಡ! ಆ ಪಾಳು ಕೆರೆಗೆ ನೀರೂ ಬರಬೇಡ!' ಎಂದು ಶಪಿಸಿದನು.

ದಾರುಚರ್ಮವಿನಿಶ್ವಾಸಃ ದಹತೇ ಲೋಹಪಂಚಕಂ ।
ಸಾಧು ಸಜ್ಜನ ಸಂತಾಪಂ ಕಿಮಾಶ್ಚರ್ಯಂ ಕುಲಕ್ಷಯಂ ॥

ಎಂಬಂತೆ ಆ ಬಾಲಕನ ಶಾಪವು ಅಕ್ಷರಶಃ ಸತ್ಯವಾಯಿತು. ಕಾಲಾಂತರದಲ್ಲಿ ಕುಲಕರಣಿಯ ವಂಶವು ದೌಹಿತ್ರರಿಂದ ಬೆಳೆಯಬೇಕಾಯಿತು. ಆ ಕೆರೆಯಲ್ಲಿ ಇಂದಿಗೂ ಏನು ಮಾಡಿದರೂ ನೀರು ನಿಲ್ಲುವುದಿಲ್ಲ.

ವೆಂಕಮ್ಮನು ಎಷ್ಟು ಕಷ್ಟವಾದರೂ ಸಹಿಸಿ ಮಕ್ಕಳನ್ನು ಸಾಕಿದಳು. ತನ್ನಾ ಮಕ್ಕಳು ದೊಡ್ಡವರಾದರೆ ತನ್ನ ಕಷ್ಟ ನೀಗೀತೆಂದು ತಿಳಿದುಕೊಂಡಳು. ಆ ಗ್ರಾಮದ ಪಳ್ಳಿಕೂಟ (School)ದ ಅಯ್ಯನವರಿಗೆ ತನ್ನ ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸೆಂದು ಮೊರೆಬಿದ್ದಳು. ಆ ದಯಾಳು ಉಪಾಧ್ಯಾಯನು ತಬ್ಬಲಿ ಮಕ್ಕಳೆಂದು ಅಕ್ಕರೆಯಿಂದ ವೆಂಕಮ್ಮನ ನಾಲ್ವರು ಮಕ್ಕಳಿಗೂ ವಿದ್ಯಾದಾನ ಮಾಡಿದನು. ಸಂಕಾಪುರದ ಶಾನುಭೋಗ ಗುಂಡಪ್ಪನೆಂಬ ಪುಣ್ಯಾತ್ಮನು ತನ್ನ ಮಗನ ಜೊತೆಯಲ್ಲೇ ಭಾಗಣ್ಣನಿಗೆ ಧರ್ಮೋಪನಯನ ಮಾಡಿದನು. ಪುರೋಹಿತ ಆಚಾರ್ಯರಿಂದ ಭಾಗಣ್ಣನಿಗೆ ಸಂಧ್ಯಾವಂದನ ಅಗ್ನಿಕಾರ್ಯ ಮೊದಲಾದ ಮಂತ್ರಗಳೆಲ್ಲ ಅರ್ಥವತ್ತಾಗಿ ಪಾಠವಾದುವು. ಒಮ್ಮೆ ಕೇಳಿದ ಪಾಠವನ್ನು ಏಕಸಂಧಿಗ್ರಾಹಿಯಾಗಿ ಒಡನೆಯೇ ಒಪ್ಪಿಸುತ್ತಿದ್ದುದರಿಂದ ವಿದ್ಯಾಗುರುಗಳಿಗೆ ಭಾಗಣ್ಣನಲ್ಲಿ ವಿಶೇಷ ಪ್ರೀತಿಯುಂಟಾಯಿತು. ಇತರರಿಗೆ ಎಂಟು ಹತ್ತು ವರ್ಷಗಳಲ್ಲಾಗುವ ಪಾಠವು ಭಾಗಣ್ಣನಿಗೆ ಒಂದೆರಡು ವರ್ಷಗಳಲ್ಲೇ ಆಯಿತು. ಭಾಗಣ್ಣನಂತೆಯೇ ಮಿಕ್ಕ ಮೂವರೂ ಕ್ರಮವಾಗಿ ವಿದ್ಯಾವಂತರಾದರು. ಮಕ್ಕಳ ವಿದ್ಯಾಬುದ್ಧಿ ಪ್ರೌಢಿಮೆಗಳನ್ನು ನೋಡಿ ತಾಯಿ ವೆಂಕಮ್ಮನ ದುಃಖಗಳು ಕಡಿಮೆಯಾದುವು.

ಭಾಗಣ್ಣನು ತನ್ನ ಸಕಲ ಅರಿಷ್ಟಗಳೂ ಪರಿಹಾರವಾಗಿ ಇಷ್ಟಾರ್ಥ ಪ್ರಾಪ್ತಿಯಾಗಬೇಕಾದರೆ,—

ನ ಗಾಯಿತ್ರ್ಯಾಃ ಪರಂ ಮಂತ್ರಂ । ನ ಮಾತುಃ ಪರದೇವತಾ ॥

ಎಂಬಂತೆ ಗಾಯಿತ್ರೀ ಪುರಶ್ಚರಣೆ ಮಾಡಬೇಕೆಂದು ನಿಶ್ಚಯಿಸಿದನು. ತಾಯಿ ವೆಂಕಮ್ಮನಾದರೂ ಧ್ರುವ ಮಹಾರಾಜನಿಗೆ—

ತಮೇವ ವತ್ಸಾಶ್ರಯ ಭಕ್ತವತ್ಸಲಂ
ಮುಮುಕ್ಷುಭಿರ್ಮೃಗ್ಯ ಪದಾಬ್ಜ ಪದ್ಧತಿಂ ।
ಯೋ ಮೃಗ್ಯತೇ ಹಸ್ತಗೃಹೀತ ಪದ್ಮಯಾ
ಶ್ರಿಯೈಃ ತರೈರಂಗ ವಿಮೃಗ್ಯ ಮಾಣಯಾ ॥

ಎಂದು ಉಪದೇಶಿಸಿದ ಸುನೀತಿದೇವಿಯಂತೆ, ಮಗನ ಸಂಕಲ್ಪಕ್ಕೆ ನೆರವಾದಳು. ಸುಮುಹೂರ್ತದಲ್ಲಿ ಭಾಗಣ್ಣನ ತಪಸ್ಸಿಗಾರಂಭವಾಯಿತು. ಸಂಕಾಪುರದ ಬಳಿಯ ಭಾವಿಯಲ್ಲಿ ಪ್ರಾತಃಕಾಲ ಸ್ನಾನಮಾಡುವುದು, ಪಕ್ಕದಲ್ಲಿದ್ದ ವಟವೃಕ್ಷದ ಬುಡದಲ್ಲಿ

ಕುಳಿತು ಗಾಯಿತ್ರೀ ಮಂತ್ರ ಜಪಮಾಡುವುದು. ಈ ರೀತಿ ಎರಡು ವರ್ಷಕಾಲ ಮೌನ ವ್ರತದಿಂದ ಭಾಗಣ್ಣನು ತಪಸ್ಸುಮಾಡಿದನು

ಕೆಲಮಂದಿ ದುಷ್ಟ ಜನರು ಭಾಗಣ್ಣನು ಮೂಗುಹಿಡಿದು ಮೌನದಿಂದ ಕೂಡುವುದನ್ನು ನೋಡಿ, ಮಾತನ್ನಾಡಿಸಿ ವ್ರತಭಂಗ ಮಾಡಬೇಕೆಂದು ಪರಿಪರಿಯ ತೊಂದರೆಗಳನ್ನಿತ್ತರು. ಬಾಯಿಗೆ ಬಂದಂತೆ ವೆಂಕಮ್ಮನನ್ನು ಪರಿಹಾಸ್ಯಮಾಡಿದರು. ದಾಯಾದನೊಬ್ಬನು–ನಾ ಕಾಣದ ಭಾಗಣ್ಣನೇ ಇವನು? ಈಗ ಮಾತನಾಡಿಸಿಬಿಡುವೆನೆಂದು ಬಾಲಕನಮೇಲೆ ಕುದಿಯುವ ನೀರನ್ನು ಸುರಿದನು. ಏನಾದರೂ ಭಾಗಣ್ಣನು ಚಲಿಸಲಿಲ್ಲ. ಬಿಸಿನೀರು ಸುರಿದವನಿಗೇ ಬೊಬ್ಬುಳಿಗಳಾಗಿ ಗುಣವಾಗುವುದು ದುಸ್ತರವಾಯಿತು. ಇದನ್ನು ಕಂಡ ಇತರ ಜನರು ಅವನ ತಂಟೆಗೆ ಹೋಗಬಾರದೆಂದು ತಟಸ್ಥರಾದರು.

ವೇದಮಾತೆಯಾದರೂ ಬಾಲಕನನ್ನು ಎಷ್ಟುಕಾಲ ಪರೀಕ್ಷಿಸುವುದೆಂದು ಪ್ರಸನ್ನಳಾದಳು. ಭಾಗಣ್ಣನ ನಾಲಿಗೆಯಮೇಲೆ ಬೀಜಾಕ್ಷರಗಳನ್ನು ಬರೆದು ಅನುಗ್ರಹಿಸಿ ಅದೃಶ್ಯಳಾದಳು. ಅಂದಿನಿಂದಲೇ ಭಾಗಣ್ಣನು ವರಕವಿಯಾದನು. ಯಾರನ್ನು ನೋಡಿದರೂ ಅವರ ಮೂರುಜನ್ಮದ ವೃತ್ತಾಂತವನ್ನು ತಿಳಿಯುವ ಮಹಾಜ್ಞಾನವು ಭಾಗಣ್ಣನಿಗೆ ಲಭ್ಯವಾಯಿತು.

ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಒಂದು ದಿನ ಮಧ್ಯಾಹ್ನ ಭಾಗಣ್ಣನ ಹೊಟ್ಟೆಗೆ ಒಂದು ಸರ್ಪವು ಸುತ್ತಿಕೊಂಡು ತಲೆಯಮೇಲೆ ಹೆಡೆಯಾಡಿಸಿ ಕ್ರೀಡಿಸುತ್ತಿತ್ತು. ಅದನ್ನು ಕಂಡ ಗೋಪಾಲಕರು, ಗಾಬರಿಗೊಂಡು ವೆಂಕಮ್ಮನಿಗೂ ಊರ ಜನರಿಗೂ ತಿಳಿಸಿದರು. ಆಕೆಯೂ ಗ್ರಾಮಸ್ಥರೂ ಬಂದು ನೋಡಲು, ಭಾಗಣ್ಣನು ಸರ್ಪಭೂಷಣನಾಗಿ ಪದ್ಮಾಸನಾಸೀನನಾಗಿ ಕುಳಿತಿದ್ದನು. ತಿಳಿದವರು–'ಭಾಗಣ್ಣನು ಮಹಾಪುರುಷ! ನಾವು ಪರೀಕ್ಷೆಮಾಡುತ್ತಾ ನಿಲ್ಲಬಾರದು, ಶೇಷಶಾಯಿಯೇ ಅವನನ್ನು ರಕ್ಷಿಸುವನು' ಎಂದು ಬಂದವರಿಗೆ ಸಮಾಧಾನಹೇಳಿ ಎಲ್ಲರೊಡನೆ ಹೊರಟುಹೋದರು.

ವೆಂಕಮ್ಮನಿಗಾದರೋ–ದಾಯಾದನು ಮಗನಮೇಲೆ ಕುದಿಯುವ ನೀರು ಚೆಲ್ಲಿ ಅದರಿಂದ ತಾನೇ ಪಟ್ಟ ಕಷ್ಟವನ್ನು ಕಣ್ಣಾರೆ ನೋಡಿದ್ದುದರಿಂದ, ಗಾಯಿತ್ರೀ ಮಂತ್ರ ಪ್ರಭಾವದಿಂದ ಹೀಗೆಲ್ಲಾ ಆಗಿ ಕ್ಷೇಮವಾಗುವುದೆಂದು ಧೈರ್ಯವುಂಟಾಗಿತ್ತು.

ರಾತ್ರಿ ಭಾಗಣ್ಣನು ಮಾರುತಿಯ ದೇವಾಲಯಕ್ಕೆ ಬರಲು, ತಾಯಿಯು–'ಕಂದಾ, ಸರ್ಪವೇಕೆ ನಿನ್ನನ್ನು ಸುತ್ತಿಕೊಂಡಿತ್ತು? ನಿನಗೆ ಆಗ ಭಯವಾಗಲಿಲ್ಲವೆ?' ಎಂದು ಕೇಳಿದಳು. ಆಗ ಅವನು–'ಅವಸರವೇಕೆ? ಮುಂದೆ ತಾನೇ ಗೊತ್ತಾಗುವುದು?' ಎಂದು ನೆಲದಮೇಲೆ ಬರೆದು ಮೌನದಿಂದಲೇ ಉತ್ತರ ಹೇಳಿದನು.

ಸಂಕಾಪುರದಲ್ಲಿ ಈಗಲೂ ಭಾಗಣ್ಣನಿಗೆ ಅಪರೋಕ್ಷವಾದ ಸ್ಥಳವೆಂದು ವಟವೃಕ್ಷವಿದ್ದ ಗುರುತನ್ನೂ ಭಾವಿಯನ್ನೂ ತೋರಿಸುತ್ತಾರೆ.

ಗಾಯಿತ್ರೀ ಮಂತ್ರ ಪುರಶ್ಚರಣೆಯಿಂದ ಲೋಕದಲ್ಲಿ ಸಿದ್ಧಿಸದ ಕಾರ್ಯ

ಗಳ್ಯಾವವು ? ಗಾಯಿತ್ರೀ ಮಂತ್ರ ಪುರಶ್ಚರಣೆಯಿಂದ ವಿಶ್ವಾಮಿತ್ರರು ಬ್ರಹ್ಮರ್ಷಿಯೂದರು. ಗಾಯಿತ್ರೀ ಮಂತ್ರ ಪುರಶ್ಚರಣೆಯಿಂದಲೇ ವಿದ್ಯಾರಣ್ಯರು ವಿಜಯನಗರದಲ್ಲಿ ಕನಕವೃಷ್ಟಿಯನ್ನು ಕರೆಸಿದರು. ಸಕಲ ವೇದಗಳೂ ಗಾಯಿತ್ರಿಯಿಂದ ಉತ್ಪನ್ನವಾದುವು. ಗಾಯಿತ್ರಿಯ ಇಪ್ಪತ್ತನಾಲ್ಕು ವರ್ಣಗಳೇ ಶ್ರೀಮದ್ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಾದುವು.

ಇದೇ ಕಾಲದಲ್ಲಿ ಗದ್ವಾಲಿಯ ವಿದ್ವತ್ಸಭೆಗೆ ಬಂದು ಸನ್ಮಾನಿತನಾದ ತ್ರಿಲಿಂಗ ದೇಶದ ಕವೀಶ್ವರನೊಬ್ಬನು ಐಜಿಗೆ ಬಂದು ತನ್ನ ವಿದ್ಯಾಪ್ರದರ್ಶನ ಮಾಡಿದನು. ಕವಿಯ ಪಾಂಡಿತ್ಯಕ್ಕೆ ಮೆಚ್ಚಿದ ಜನರು ಆತನಿಗೆ ಯೋಗ್ಯ ಸಂಭಾವನೆ ಮಾಡಬೇಕೆಂದು ಪ್ರಯತ್ನಿಸಿದರು. ಕವಿಯು ತನಗೆ ಸಂಭಾವನೆ ಮಾತ್ರ ಸಾಲದು; ಆ ಪ್ರಾಂತದ ವಿದ್ವಜ್ಜನರು ಜಯಪತ್ರಿಕೆಯನ್ನು ಬರೆದುಕೊಡಬೇಕೆಂದು ಕೇಳಿದನು. ಆ ಕಾಲದ ಕವಿಗಳಿಗೆ ಹೋದ ಕಡೆಗಳಲ್ಲೆಲ್ಲಾ ಜಯಪತ್ರಿಕೆ ಬರೆಸಿಕೊಳ್ಳುವುದೊಂದು ಚಟವಾಗಿದ್ದಿತು. ಸುತ್ತುವಳಯದ ವಿದ್ವಾಂಸರಾದವರೋ–ಕವಿಗೆ ಸಂಭಾವನೆ ಕೊಡುವುದಕ್ಕೂ ಜಯಪತ್ರ ಕೊಡುವುದಕ್ಕೂ ವ್ಯತ್ಯಾಸವಿದೆಯಾದ್ದರಿಂದ ತಾವು ಬರೆದುಕೊಡುವುದಿಲ್ಲವೆಂದು ನಿರಾಕರಿಸಿದರು. ಪ್ರಮುಖ ದೊಡ್ಡ ಮನುಷ್ಯರು, ಆಗತಾನೇ ಪ್ರಶಂಸೆಗೆ ಬರುತ್ತಿದ್ದ ಭಾಗಣ್ಣ ಬ್ರಹ್ಮಚಾರಿಯ ಬಳಿಗೆ ಕವಿಯನ್ನು ಕಳುಹಿಸಿದರಾಯಿತೆಂದು ಹಂಚಿಕೆ ಮಾಡಿದರು. ಕವಿಯು ಭಾಗಣ್ಣನ ಬಳಿಗೆ ಬಂದು ಜಯಪತ್ರಿಕೆ ಬರೆದುಕೊಡೆಂದೇ ಕೇಳಿದನು.

ಭಾಗಣ್ಣ :—ಜಯಪತ್ರಿಕೆ ನಿನ್ನ ದೇಹಬಲಕ್ಕೋ ವಿದ್ಯಾಬಲಕ್ಕೋ ?

ಕವಿ :—ಕವಿತ್ವಕ್ಕೆ !

ಭಾಗಣ್ಣ :—ಕ್ಷುದ್ರ ಗ್ರಾಮಾಧಿಪತಿಗಳನ್ನು ಕೊಂಡಾಡುವ ಕವಿತ್ವಕ್ಕೋ ?

ಕವಿ :—ಗದ್ವಾಲಧರಾಧೀಶ್ವರರು ನನಗೆ ಉತ್ತಮ ಸನ್ಮಾನ ಮಾಡಿದ್ದಾರೆ.

ಭಾಗಣ್ಣ :—ರಾಜಮರ್ಯಾದೆ ನಿನಗಾದಮೇಲೆ ವಿದ್ವಾಂಸರ ಗೊಡವೆಯೇಕೆ ?

ಕವಿ :—ವಿದ್ವಾಂಸರ ಜಯಪತ್ರಿಕೆಯು ನನಗೆ–ಇತರ ಸಂಸ್ಥಾನಗಳ ದಿಗ್ವಿಜಯಕ್ಕೆ ಸಾಧಕವಾಗುವುದು.

ಭಾಗಣ್ಣ :—ಹಾಗಿದ್ದರೆ, ನಾನು ನಿನಗೆ ಜಯಪತ್ರ ಕೊಡುವುದಿಲ್ಲ. ಕವಿತ್ವ ಸ್ಪರ್ಧೆ ನಿನಗೆ ಬೇಕಿದ್ದರೆ, ದೇವರಮೇಲೆ ಕವನ ಮಾಡು, ನಾನೂ ಮಾಡುವೆನು. ನನ್ನನ್ನು ಜಯಿಸಿದರೆ ಆಗ ನಾನೇ ನಿನಗೆ ಜಯಪತ್ರ ಕೊಡುವೆನು.

ಕವಿಯು ಭಾಗಣ್ಣನ ಮಾತು ಕೇಳಿ ಎದೆಗುಂದಿದನು. ಕವಿತ್ವ ಸ್ಪರ್ಧೆಯಲ್ಲಿ ಭಾಗಣ್ಣನ ಮುಂದೆ ನಿಲ್ಲದೇಹೋದನು. ಭಾಗಣ್ಣನು–'ನಿನ್ನ ಬಿರುದುಗಳನ್ನು ಕಿತ್ತುಕೊಂಡು ಕಳುಹಿಸಬೇಕಾಗಿತ್ತು. ಇನ್ನೂ ವರ್ಧಿಷ್ಣು ನೀನಾಗಿರುವುದರಿಂದ ನಿನ್ನನ್ನು ಸುಮ್ಮನೆ ಬಿಟ್ಟಿರುವೆನು. ಇನ್ನು ಮುಂದೆ ಸರಸ್ವತಿಮಾಡಿ ಸರಸ್ವತಿಯನ್ನು ವಿಕ್ರಯಿಸಬೇಡ; ನಿನ್ನ ಕವಿತ್ವವು ಭಗವದ್ಗುಣಾನುವಾದನದಿಂದ ಪಾವನವಾಗಲಿ' ಎಂದು ಬದ್ಧಿ

ಹೇಳಿದನು. ಜನರು ಕವಿಗೆ ಮೀಸಲಾಗಿಟ್ಟಿದ್ದ ಸಂಭಾವನೆಯನ್ನು ಭಾಗಣ್ಣನಿಗೇ ಸಮರ್ಪಿಸಿದರು.

ಭಾಗಣ್ಣ ಬ್ರಹ್ಮಚಾರಿಯ ಒಂದೊಂದು ಚರಿತ್ರೆಯೂ ಗದ್ವಾಲದ ರಾಜಾರಾಮ ಭೂಪಾಲನಿಗೆ ತರಂಗತರಂಗವಾಗಿ ತಿಳಿಯಿತು. ಭೂಪಾಲನು, 'ನನ್ನ ರಾಜ್ಯದಲ್ಲಿ ಇಂಥಾ ಮಂತ್ರಸಿದ್ಧರೂ ಕವೀಶ್ವರರೂ ಇರುವರೇ?' ಎಂದು ತಾನಾಗಿ ಬ್ರಹ್ಮಚಾರಿಯ ಸಂದರ್ಶನ ಮಾಡಲು ಸಂಕಾಪುರಕ್ಕೆ ಬಂದನು. ಅಧಿಕಾರಿಗಳು ರಾಜಯೋಗ್ಯವಾದ ಪಟಗೃಹವನ್ನು ಭಾಗಣ್ಣನಿದ್ದ ಮಾರುತಿಯ ದೇವಾಲಯದ ಬಳಿಯಲ್ಲಿ ನಿರ್ಮಿಸಿ, ತಳಿರು ತೋರಣಗಳಿಂದಲಂಕರಿಸಿದರು. ರಾಜಾಗಮನ ಕಾರಣದಿಂದ ಮಾರುತಿರಾಯನಿಗೂ ಪಂಚಾಮೃತಾಭಿಷೇಕದ ಸುಯೋಗ ದೊರೆಯಿತು. ಮೇಲ್ಪಟ್ಟ ಅಧಿಕಾರಿಗಳು ಮೊದಲು ಭಾಗಣ್ಣನಿಂದ ರಾಜಾಶೀರ್ವಾದ ಮಾಡಿಸಬೇಕೆಂದು ಸಿದ್ಧತೆ ಮಾಡಿದರು. ಭಾಗಣ್ಣನು ಅದಕ್ಕೊಪ್ಪದೆ ಗ್ರಾಮಧರ್ಮವನುಸರಿಸಿ ಕುಲಕರಣಿಗೇ ಮೊದಲು ರಾಜದರ್ಶನವಾಗಬೇಕೆಂದನು. ಗಜಾರೂಢನಾಗಿ ಬರುತ್ತಿದ್ದ ರಾಜನನ್ನು ನೋಡಿ ಜನರು ವಾದ್ಯವೈಭವದಿಂದ ಕರೆತಂದರು. ರಾಜನು ಕುಲಕರಣಿಯನ್ನು ಕರೆದು-'ನಾನು ನಿಮ್ಮಿಂದ ಮರ್ಯಾದೆ ಮಾಡಿಸಿಕೊಳ್ಳಲು ಬಂದಿಲ್ಲ. ಬ್ರಹ್ಮಚಾರಿಗಳನ್ನು ಕಾಣಲು ಬಂದಿರುವೆನು. ಅವರ ಬಳಿಗೆ ನನ್ನನ್ನು ಕರೆದುಕೊಂಡು ಹೋಗು' ಎಂದು ನುಡಿದನು. ಗುಂಡಪ್ಪನು 'ಬ್ರಹ್ಮಚಾರಿಗಳು ಇದೇ ಗುಡಿಯಲ್ಲಿರುವರು' ಎಂದು ಸಿದ್ಧವಾಗಿದ್ದ ಪಟಗೃಹದಲ್ಲಿ ರಾಜನನ್ನು ತಂದಿಳಿಸಿದನು. ರಾಮ ಭೂಪಾಲನು ಪರಿಶುದ್ಧನಾಗಿ ಅತ್ಯಂತ ಭಯಭಕ್ತಿಯಿಂದ ಬ್ರಹ್ಮಚಾರಿಯಿದ್ದ ಗುಡಿಗೆ ಬಂದು ನಮಸ್ಕರಿಸಿದನು. ಪರಸ್ಪರರ ಕುಶಲ ಪ್ರಶ್ನೆಯಾಯಿತು. ಭೂಪಾಲನು-'ತಮ್ಮಂಥಾ ಸತ್ಪುರುಷರಿಂದ ನನ್ನ ರಾಷ್ಟ್ರ ಪಾವನವಾಯಿತು' ಎಂದು ಧನ್ಯವಾದಗಳನ್ನರ್ಪಿಸಿದನು. ಭಾಗಣ್ಣನು-'ಮಹಾಪ್ರಭೋ ನಿನ್ನಂಥಾ ಧರ್ಮಪ್ರಭುವಿನ ರಾಜ್ಯದಲ್ಲಿ ನನ್ನಂಥಾ ಬ್ರಹ್ಮಚಾರಿಗಳನೇಕರಾದರು' ಎಂದು ನುಡಿದನು. ಭಾಗಣ್ಣನ ಅನೇಕ ಧಾರ್ಮಿಕ ವಾಕ್ಯಗಳಿಂದ ಮಹಾರಾಜನಿಗೆ ಪರಮಾನಂದವಾಯಿತು. ಆಗಲೇ, ತನ್ನ ಕಾಣಿಕೆಯಿಂದು ಕೆಲವು ಭೂಮಿಗಳನ್ನೂ, ಅಶ್ವಸಹಿತವಾದ ಇತರ ಗುರುಮರ್ಯಾದೆಗಳನ್ನೂ ಭಾಗಣ್ಣ ಬ್ರಹ್ಮಚಾರಿಗೆ ಸಮರ್ಪಿಸಿದನು. (ಆ ಭೂಮಿಕಾಣಿಗಳು ಈಗಲೂ ದಾಸರ ವಂಶೀಕರ ಅನುಭವದಲ್ಲಿವೆ.)

ಅನಂತರ ಭಾಗಣ್ಣನು, ಸಂಕಾಪುರವನ್ನು ಬಿಟ್ಟು ತಾಯಿ ತಮ್ಮಂದಿರಿಂದ ಸಹಿತನಾಗಿ ಉತ್ತನೂರಲ್ಲಿ ವಾಸಮಾಡಿದನು. ಉತ್ತನೂರಿಗೆ ಬಂದ ದಿನದಿಂದ ವೆಂಕಮ್ಮನಿಗೆ ಭಿಕ್ಷೆ ಬೇಡುವುದು ತಪ್ಪಿತು. ದಾಸಪ್ಪ, ಶೀನಪ್ಪ, ರಂಗಪ್ಪ ಈ ಮೂವರಿಗೂ ಲೌಕಿಕ ಮಾಡಬೇಕೆಂಬ ಇಚ್ಛೆಯಾಗಿ ಗದ್ವಾಲಿಗೆ ಬಂದರು. ಭಾಗಣ್ಣನಿಗೆ ತಮ್ಮಂದಿರು ಲೌಕಿಕ ಮಾಡುವುದು ಇಷ್ಟವಿರಲಿಲ್ಲ. ಮುಂದುವರಿದು ಹೋಗುವವರನ್ನು ಬೇಡವೆಂದು ತಡೆಯುವುದು ಸರಿಯಲ್ಲವೆಂದು ಸುಮ್ಮನಿದ್ದನು.

ಉತ್ತನೂರಿನಲ್ಲಿ ಭಾಗಣ್ಣನು ನಿತ್ಯವೂ ಮಾಡುತ್ತಿದ್ದ ಕೆಲಸವೆಂದರೆ ಜನರಿಗೆ ಅದೃಷ್ಟ ಹೇಳುವುದು; ವೆಂಕಟೇಶದೇವರ ಗುಡಿಯಲ್ಲಿ ಹಾಡುತ್ತಾ ನರ್ತನಸೇವೆ ಮಾಡುವುದು. 'ವೆಂಕಟಕೃಷ್ಣ'* ಎಂಬ ಮುದ್ರಿಕೆಯಿಂದ ಕವಿತ್ವ ಮಾಡುವುದು.

ಭಾಗಣ್ಣನ ಭಕ್ತಿಗೆ ಮೆಚ್ಚಿ, ವೆಂಕಟಪತಿಯು ಶ್ರೀಕೃಷ್ಣರೂಪದಿಂದ ನರ್ತನ ಮಾಡುತ್ತಿದ್ದನು. ಜನರು ಅವನನ್ನು ದೇವತಾಪುರುಷನೆಂದು ಭಕ್ತಿಯಿಂದ ಕಾಣುತ್ತಿದ್ದರು.

ಭಾಗಣ್ಣನ ಬಳಿಗೆ ಅದೃಷ್ಟವನ್ನು ಕೇಳಲು ಬರುವ ಜನಸಂದಣಿ ದಿನದಿನಕ್ಕೆ ಬಲವಾಯಿತು. ಬೇಡಬೇಡವೆಂದರೂ ಅಗಣಿತ ಧನರಾಶಿ ಬಂದು ಸೇರಲಾರಂಭಿಸಿತು. ಅಂದು ಕಣಭಿಕ್ಷದಿಂದ ಜೀವಿಸಿದ ಭಾಗಣ್ಣನು ಇಂದು ಶ್ರೀಮಂತನೆನಿಸಿದನು. ಬಡತನದ ದುಃಖಾನುಭವ ಮಾಡಿದ್ದುದರಿಂದ ಬಡವರಿಗೆ ಮನಬಂದಂತೆ ದಾನಮಾಡುತ್ತಿದ್ದನು. ಭಾಗಣ್ಣನ ಮನೆಯು ದೊಡ್ಡ ಅನ್ನಛತ್ರವಾಯಿತು. 'ಹಸಿದವರಿಗೆ ಅಶನ ಕೊಡಿರಿ, ದೀನರಿಗೆ ದ್ರವ್ಯದಾನ ಮಾಡಿರಿ, ಶ್ರೀನಿವಾಸನ ಪಾದವನ್ನು ಭಜಿಸಿರಿ' ಎಂಬುದೇ ಭಾಗಣ್ಣನ ಉಪದೇಶವಾಯಿತು. ಮಗನೆಷ್ಟು ಧಾರಾಳಿಯಾಗಿದ್ದನೋ ತಾಯಿ ವೆಂಕಮ್ಮನು ಅಷ್ಟೇ ಲೋಭಿಯಾಗಿದ್ದಳು. ಅತಿಥಿಗಳಿಗೆ ತುಪ್ಪ ಮೊಸರುಗಳನ್ನು ಬಡಿಸಬೇಕೆಂದರೆ ಆ ಹೆಂಗಳೆಗೆ ಕೈ ಬರುತ್ತಿರಲಿಲ್ಲ. ಭಿಕ್ಷುಕರಿಗೆ ಬೊಗಸೆ ತುಂಬಾ ಭಿಕ್ಷೆ ನೀಡೆಂದರೆ ಅವಳು ಹಿಂಜರಿಯುತ್ತಿದ್ದಳು. 'ಭಾಗಣ್ಣಾ, ನಾನು ಒಂದು ಬೊಗಸೆ ಜೋಳಕ್ಕೆ ರಾತ್ರಿಯೆಲ್ಲಾ ಅವಲಕ್ಕಿ ಕುಟ್ಟಿದೆನೋ' ಎಂದು ಹೇಳುತ್ತಿದ್ದಳು. ಬಂದ ಧಾನ್ಯಗಳನ್ನು ಬಚ್ಚಿಡುವುದರಲ್ಲಿದ್ದ ಆದರವು ಅವಳಿಗೆ ಕೊಡುವುದರಲ್ಲಿರಲಿಲ್ಲ. ಇಂಗಿತಜ್ಞನಾದ ಭಾಗಣ್ಣನು ತಾಯಿಯ ಮನಸ್ಸನ್ನು ನೋಯಿಸಲಾರದೆ, ಭಿಕ್ಷುಕರ ಧ್ವನಿ ಕೇಳಿದೊಡನೆಯೇ ತಾನೇ ಎದ್ದು ಬಂದು ಅವರಿಗೆ ಆ ದಿನ ಮತ್ತೆಲ್ಲೂ ಭಿಕ್ಷೆ ಕೇಳದಷ್ಟು ಕೊಟ್ಟು ಕಳುಹಿಸುತ್ತಿದ್ದನು.

ವೆಂಕಮ್ಮನ ಪಾತಿರಲಿ. ಮೈಸೂರು ಸೀಮೆಯಲ್ಲಿ ಹಿಂದೆ ಒಬ್ಬ ಗೃಹಸ್ಥನು ಬಲು ದೊಡ್ಡ ಅಧಿಕಾರದಲ್ಲಿದ್ದನು. ಅವನೂ ಪ್ರಾರಂಭದಲ್ಲಿ ಬಡತನದ ಪರಮಾವಧಿಯನ್ನನುಭವಿಸಿ, ಮುಂದೆ ಮಹದೈಶ್ವರ್ಯಾನುಭವದಲ್ಲಿದ್ದವನು. ಅವನ ತಾಯಿಯು ವೆಂಕಮ್ಮನಿಗಿಂತ ಲೋಭಿಯಾಗಿದ್ದಳು. ಭಿಕ್ಷುಕರು ಬಂದರೆ ಕಿಡಿಕಿಡಿಯಾಗಿ ರೇಗಿ, ಬಲು ಹೊತ್ತು ಕಾಯಿಸಿ, ಕೊನೆಗೆ ಮುಷ್ಟಿಯಲ್ಲಿ ಮೂರು ಕಾಳು ತಂದು ಹಾಕುತ್ತಿದ್ದಳು. ಗುಣವಂತ ಮಗನು–ಬಂದವರಿಗೆ ಕಾಯಿಸದೆ, ಕೈತುಂಬಾ ಭಿಕ್ಷೆ ಕೊಡಮ್ಮಾ, ಎಂದನು. ಆ ತಾಯಿಯು ಆಗ–'ಮಗನೇ ನಿನಗೆ ಹೋಗುವುದೇನು? ಒಂದು ಬೊಗಸೆ ಅಕ್ಕಿಗೆ ದಿನವೆಲ್ಲಾ ದುಡಿದು ನಿನ್ನನ್ನು ಸಾಕಿದ್ದೇನೆ; ಮುಂಜಿ ಮಾಡಲು ಗತಿಯಿಲ್ಲದೆ, ಐದನೇ ವರ್ಷದಲ್ಲೇ ನಿನಗೆ ಕಳ್ಳ ಜನಿವಾರ ಹಾಕಿದ್ದೇನೆ. ನಾನು ನಿನಗಾಗಿ ಪಟ್ಟ ಕಷ್ಟ ದೇವರಿಗೆ ಗೊತ್ತು' ಎಂದಳು. ಅದನ್ನು ಕೇಳಿದ ಗೃಹಸ್ಥನು–'ಅಮ್ಮಾ ಹಾಗಾದರೆ ನನಗೆ ನಿಜವಾಗಿ

* ಭಾಗಣ್ಣನು ವಿಜಯದಾಸರ ಶಿಷ್ಯನಾದಮೇಲೆ 'ಗೋಪಾಲವಿಠಲ' ಮುದ್ರಿಕೆಯು ಗುರುಗಳಿಂದ ದೊರೆಯಿತು. ಅನಂತರ ಗೋಪಾಲದಾಸರೆಂಬ ಹೆಸರಾಯಿತು. ಮೊದಲು ಮಾಡಿದ ಕವಿತ್ವದಲ್ಲಿ ಮಾತ್ರ 'ವೆಂಕಟಕೃಷ್ಣ' ಮುದ್ರಿಕೆಯಿದೆ.

ಉಪನಯನವಾಗಲಿಲ್ಲವೇ ?' ಎಂದು ಕೇಳಿದನು. ಆಗಲಾ ತಾಯಿಯು ಕಣ್ಣಿನಲ್ಲಿ ನೀರು ತಂದು–'ಇಲ್ಲಪ್ಪಾ, ನಿನಗೆ ಉಪನಯನವಾಗಲಿಲ್ಲ' ಎಂದಳು. ಆಗ ಗೃಹಸ್ಥನು ಪಶ್ಚಾತ್ತಾಪಪಟ್ಟು, ಪುರೋಹಿತರನ್ನು ಕರೆಯಿಸಿ, 'ಕ್ರಮವಾಗಿ ಉಪನಯನಾದಿ ಸಂಸ್ಕಾರಗಳನ್ನು ವಿಧಿಬದ್ಧವಾಗಿ ನಡೆಯಿಸಿಕೊಂಡು ಬ್ರಾಹ್ಮಣ್ಯವನ್ನು ಸಂಪಾದನೆ ಮಾಡಿದನು.

ಬಡತನವು ಯಾರಿಗೂ ಬಲು ಕೆಟ್ಟದ್ದು. ಭಗವತ್ಕೃಪೆಯಿಂದ ಐಶ್ವರ್ಯ ಪ್ರಾಪ್ತವಾದರೂ ಅನೇಕರಿಗೆ ಆ ಪೂರ್ವ ಸಂಸ್ಕಾರಬಲದಿಂದ ಔದಾರ್ಯಗುಣ ಬರುವುದಿಲ್ಲ.

ಭಾಗಣ್ಣನ ಮನೆಯಲ್ಲಿ ಏನು ಕಾರಣದಿಂದಲೋ ಒಂದು ದೊಡ್ಡ ಸಮಾರಾಧನೆಯಾಯಿತು. ಜನಸಂದಣಿ ಬಲವಾಗಿದ್ದುದರಿಂದ ಸಿದ್ಧವಾಗಿದ್ದ ಅಡಿಗೆಯ ಜೊತೆಗೆ ಮತ್ತಷ್ಟು ಮಾಡಬೇಕಾಯಿತು. ಲೋಭಿ ವೆಂಕಮ್ಮನು ಅಕ್ಕಿ ತುಂಬಿದ್ದ ಗುದಾಣವನ್ನು ಮರೆಮಾಚಿ ಮನೆಯಲ್ಲಿ ಅಕ್ಕಿಯಿಲ್ಲವೆಂದಳು. ಭಾಗಣ್ಣನು ಹೇಗೋ ಆ ದಿನದ ಕಾರ್ಯವನ್ನು ನಿರ್ವಹಿಸಿದನು. ಮರುದಿನ ತಾಯಿಯು ಮುಚ್ಚಿಟ್ಟಿದ್ದ ಗುದಾಣವನ್ನು ತೆಗೆದು ನೋಡಿ–'ಅಮ್ಮಾ ಅಕ್ಕಿಯ ಗುದಾಣದ ತುಂಬಾ ಏನಿದೆ ನೋಡು ಬಾ' ಎಂದು ಕರೆದನು. ತನ್ನ ಗುಟ್ಟು ಬಯಲಾಯಿತೆಂದು ವೆಂಕಮ್ಮನು ಬಂದು ನೋಡಲು–ಗುದಾಣವು ಕ್ರಿಮಿಮಯವಾಗಿತ್ತು. ಭಾಗಣ್ಣನು 'ನೋಡಿದೆಯೋ ಲೋಭದ ಫಲ ಹೇಗಿದೆ' ಎಂದನು. ಅಂದಿನಿಂದ ಅವಳು ಉದಾರಿಯಾದಳು.

ಹೀಗಿರಲು ಗದ್ವಾಲಿಗೆ ಲೌಕಿಕ ಮಾಡಿ ಜೀವಿಸುವೆವೆಂದು ಹೋಗಿದ್ದ ಮೂವರು ತಮ್ಮಂದಿರಿಗೂ ರಾಜಾಸ್ಥಾನದಲ್ಲಿ ನೌಕರಿ ಸಿಗುವುದಕ್ಕೆ ಬದಲಾಗಿ ಚೋರತ್ವದ ಆಪಾದನೆಯಾಗಿ ಕಾರಾಗೃಹವಾಸ ಪ್ರಾಪ್ತವಾಯಿತು. ದುಷ್ಟ ಅಧಿಕಾರಿಗಳು ಆ ಬಾಲಕರ ಮೇಲೆ ರಾಜಾನುಗ್ರಹವಾದರೆ ಭಾಗಣ್ಣನ ಬಲುಮೆಯಿಂದ ಅವರು ದೊಡ್ಡ ಪದವಿಗೇರುವರೆಂದು ಅಸೂಯೆಯಿಂದ ಮೂವರಿಗೂ ನಿಗಡಬಂಧನ ಮಾಡಿಸಿದರು. ಈ ಸಂಗತಿಯನ್ನು ಜ್ಞಾನದೃಷ್ಟಿಯಿಂದ ತಿಳಿದ ಭಾಗಣ್ಣನು ಅವರನ್ನು ಬಿಡಿಸಿ ಉತ್ತನೂರಿಗೆ ಕರೆತಂದನು. ಅಂದಿಗೇ ವೆಂಕಮ್ಮನ ಮತ್ತು ತಮ್ಮಂದಿರ ಲೌಕಿಕ ಉದ್ಯೋಗ ಮಾಡಬೇಕೆಂಬ ದುರಾಶೆ ಪೂರ್ತಿಯಾಯಿತು.

ಅನಂತರ ಭಾಗಣ್ಣನು, ಆದವಾನಿಯಲ್ಲಿ ದಿವಾನಗಿರಿ ಮಾಡುತ್ತಿದ್ದ ಪಂಗನಾಮದ ತಿಮ್ಮಣ್ಣಯ್ಯನವರ ಬಳಿಯಲ್ಲಿ ಕೆಲವುಕಾಲ ವಾಸಮಾಡಿದನು. ಎಲ್ಲಿದ್ದರೂ ಭಾಗಣ್ಣನ ಭವಿಷ್ಯ ಹೇಳುವ ವ್ಯಾಪಾರವು ಯಶಸ್ವಿಯಾಗಿ ನಡೆದು ಧನಪ್ರಾಪ್ತಿಯಾಗುತ್ತಿತ್ತು. ಅನುಕೂಲ ಕಾಲದಲ್ಲೇ ಕಾಶೀಯಾತ್ರೆ ಮಾಡುವ ಅಭಿಲಾಷೆ ಭಾಗಣ್ಣನಿಗಾಗಿ ಅಲ್ಲಿಗೂ ಹೋಗಿ ತನ್ನ ಅದೃಷ್ಟ ವಿದ್ಯಾಬಲದಿಂದ ಪ್ರಖ್ಯಾತನಾದನು. ಆ ಸಮಯದಲ್ಲೇ ಭಾಗಣ್ಣನಿಗೆ ವಿಜಯದಾಸರ ದರ್ಶನವಾಯಿತು. ವಿಜಯದಾಸರು ಆಗಲೇ ಪುರಂದರದಾಸರ ಅನುಗ್ರಹದಿಂದ ಹರಿದಾಸರಾಗಿ ದೈವಾನುಗ್ರಹಕ್ಕೆ ಪಾತ್ರರಾಗಿದ್ದರು. ಅನೇಕರು ಅವರನ್ನು ಹಿಂಬಾಲಿಸಿದ್ದರೂ ಭಾಗಣ್ಣನಮೇಲೆ ಮೊದಲು ಅವರ ವಿಶೇಷ ಕೃಪೆಯಾಯಿತು. **'ಗೋಪಾಲವಿಠಲ'** ಎಂಬ ಅಂಕಿತ ದೊರೆತು ಭಾಗಣ್ಣನು ಪ್ರಖ್ಯಾತ

ಗೋಪಾಲದಾಸರಾದನು. ಮುಂದೆ ಕಾಲಕ್ರಮದಲ್ಲಿ ಗೋಪಾಲದಾಸರು, ತಮ್ಮ ತಮ್ಮಂದಿರಿಗೆ ಕ್ರಮವಾಗಿ ವರದಗೋಪಾಲವಿಠಲ, ಗುರು ಗೋಪಾಲವಿಠಲ, ತಂದೆ ಗೋಪಾಲವಿಠಲ ಎಂಬ ಅಂಕಿತಗಳನ್ನು ಅನುಗ್ರಹಿಸಿದರು. ಕಡೆಯವನಾದ ರಂಗಪ್ಪನ ವಿನಾ ಮಿಕ್ಕ ಈರ್ವರೂ ಗೋಪಾಲದಾಸರಂತೆಯೇ ಮಹಾ ಅಪರೋಕ್ಷಜ್ಞಾನಿಗಳೆನಿಸಿದರು.

ಗೋಪಾಲದಾಸರ ಕಾಲದಲ್ಲಿ ಐಜಿಯಲ್ಲಿ ವೆಂಕಟನರಸಿಂಹಾಚಾರ್ಯರೆಂಬ ಪ್ರಖ್ಯಾತ ಪಂಡಿತರಿದ್ದರು. ಅವರಿಗೆ ವೆಂಕಟರಾಮಾಚಾರ್ಯನೆಂಬ ಮಗನಿದ್ದನು. ತಂದೆಗೆ ಮಗನನ್ನು ತನಗೆ ಸಮಾನನಾದ ಪಂಡಿತನನ್ನಾಗಿ ಮಾಡಬೇಕೆಂಬ ಅಭಿಲಾಷೆಯಿತ್ತು. ಮಗನಿಗೆ ಮಾತ್ರ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿರಲಿಲ್ಲ. ಆಚಾರ್ಯರಿಗಿಂತ ಅವರ ಹೆಂಡತಿಗೆ ತನ್ನ ಉದರದಲ್ಲಿ ಜನಿಸಿದ ಮಗನು ದಡ್ಡನಾಗುವನಲ್ಲಾ ಎಂಬ ವ್ಯಾಕುಲವು ಬಾಧಿಸುತ್ತಿತ್ತು. ಪುತ್ರ ಪ್ರೇಮದಿಂದ ಆಚಾರ್ಯರು ಮಗನನ್ನು ದಂಡಿಸುತ್ತಿರಲಿಲ್ಲ.

ಆಚಾರ್ಯರು ಬಹುಮುಖದಿಂದ ಗೋಪಾಲದಾಸರ ಖ್ಯಾತಿಯನ್ನು ಕೇಳಿದ್ದರು. ಸ್ವಯಂ ಮಹಾವಿದ್ವಾಂಸರಾಗಿದ್ದುದರಿಂದ ತಾವಾಗಿ ದಾಸರ ಬಳಿಗೆ ಹೋಗುವುದು ತಮ್ಮ ಆಚಾರ್ಯಪಟ್ಟಕ್ಕೆ ಅಗೌರವವೆಂದು ತಿಳಿದಿದ್ದರು. ಆಚಾರ್ಯರ ಪತ್ನಿಯಾದರೋ-ಆಚಾರ್ಯರ ಕಿವಿಗೆ ಬೀಳುವಂತೆ ಗೋಪಾಲದಾಸರ ಅನೇಕ ದೇವರ ನಾಮುಗಳನ್ನು ಹಾಡುತ್ತಿದ್ದಳು.—ದಾಸರ-

ವಗತನದಲಿ ಸುಖವಿಲ್ಲ ಅದ । ನೊಲ್ಲೆಂದರೆ ಬಿಡದಲ್ಲ ॥

ಎಂಬ ದೇವರನಾಮವನ್ನು ಹಾಡಿದಾಗ ಆಚಾರ್ಯರು ಅದರ ಅರ್ಥ ಸ್ವಾರಸ್ಯಕ್ಕಾಗಿ ಮಾರುಹೋಗಿ, ಮೂರು ಮೂರು ಬಾರಿ ಹೇಳಿಸಿ ಕೇಳುತ್ತಿದ್ದರು-ಆ ಪದ ವಿಸ್ತಾರವಾದರೋ ಈ ರೀತಿಯಾಗಿರುವುದು.

ಕಾಂಬೋದಿ—ಆದಿತಾಳ

ವಗತನದಲಿ ಸುಖವಿಲ್ಲ-ಅದ । ನೊಲ್ಲೆಂದರೆ ಬಿಡದಲ್ಲ ॥ ಪ.
ಹಗರಣ ಜಗದೊಳು ಮಿಗಿಲಾಯಿತು ಪ । ನ್ನಗನಗ ನಗರನಿವಾಸ । ಅ.

ಮೂರು ಬಣ್ಣಿಗೆಯ ಮನೆಗೆ । ಮೂರೆರಡು ಭೂತಗಳು
ನಾಲ್ಕು ಪ್ರಾಕಾರಕ್ಕೆ। ಮೂರಾರು ಛಿದ್ರಗಳು ॥
ಮೂರು ಅವಸ್ಥೆಯು ದಿನಕೆ । ಮೂರು ನೂರಾರು ಹತ್ತರಲಿ ।
ಮೂರು ವಿಧದನ್ನದಿಂದ । ಮೂರು ತಾಪಕ್ಕಾರಲಾರೆ ೧

ಐದುಮಂದಿ ಭಾವನವರು । ಐದು ಮೈದುನರು ಕೂಡಿ
ಐದು ಪರಿ ತಾನಾಗಿ ಮಾಪ । ನೈದು ಕತ್ತಲೆಯು ಕೋಣೆ ।
ಗೈದುವಂತೆ ಮಾಡುವರು। ಐದು ತಂದು ಬೆಚ್ಚಿಸುವರು
ಐದನೆ ಬೊಕ್ಕಸದ ಕೋಣೆ । ಗೈದುವ ಪರಿ ನಾಕಾಣೆ ॥ ೨

ಆರಾರು ಎರಡು ಸಾವಿರ । ದಾರಿಯಲಿ ಹೋಗಿಬರುವರು
ಆರು ಮೂರು ಮೂರು ಸಾವಿರ । ದಾರು ನೂರು ನಿತ್ಯದಲ್ಲಿ
ಆರು ನಾಲ್ಕು ಮಂದಿ ಹಿರಿಯ । ಪಾರುಪತ್ಯಗಾರರಿಡಕೆ
ಆರು ಎರಡು ವಿಧದಲಿನ್ನ । ಗಾರುಮಾಡುತಿಪ್ಪರೋ ೩

ಒಬ್ಬ ಬೆಳಕು ಮಾಡುವ ಮ । ತ್ತೊಬ್ಬ ಕತ್ತಲೆಗೈಸುವ
ಒಬ್ಬ ಎರಡೂ ಮಾಡುವ ಮ । ತ್ತೊಬ್ಬ ಸಿಂತು ನೋಡುವ ।
ಒಬ್ಬ ಮೂವರ ಒಳಗೆ । ಹಬ್ಬಿಕೊಂಡಿಪ್ಪವರಂತೆ
ಒಬ್ಬನ ಕಾಣದೆ ನಾ । ತಬ್ಬಿಬ್ಬಿಗೊಳಗಾದೆ ೪

ಆರು ಹತ್ತರ ಮೂಲದಿ । ಆರು ಮಂದಿ ಬಿಡದೆ ಎನ್ನ
ಘೋರಿಸುವರು ಮುರುಳೊಂದು ವಿ । ಚಾರಮಾಡಲೀಸರೋ ।
ಆರು ಮೂರು ವಿಧದ ಸೋಪ । ಸ್ಕಾರ ಒಂದಾದರೂ ಇಲ್ಲ
ಆರೆ ಇಬ್ಬರು ಸವತೇರ । ಹೋರಾಟವ ಏನನೆಂಬೆ ೫

ಹಡೆದತಾಯಿ ಮಾಯಾದೇವಿ । ಹಿಡಿದು ಬದುಕುಮಾಡಿಸುವಳು
ಒಡಹುಟ್ಟಿದೈವರು ಎನ್ನ । ಕಡೆಗಣ್ಣಿಂದ ನೋಡರೋ ।
ಬಿಡದೆ ಹತ್ತಿರಕಾದಿಪ್ಪ । ನುಡಿಸನು ಹಿರಿಯಣ್ಣನವರ
ಮಡದಿಯ ತ್ಯಾಗಕ್ಕೇನೆಂಬೆ । ತನ್ನ । ಒಡವೆ ಲೇಶವೀಯಳೋ ೬

ಅತ್ತೆ ಅತ್ತಿಗೆಯರು ಎನ್ನ । ಸುತ್ತಮುತ್ತ ಕಾದು ಕಟ್ಟಿ
ಎತ್ತ ಹೋಗಲೀಸರೋ ನಿನ್ನ । ಮತ್ತೆ ತೋರಲೀಸರೋ ।
ಅತ್ತ ಬಾರಲೀಸರು ಸರಿ । ಹೊತ್ತಿಗೆ ಬಂದೊದಗಿವ ನೃಪನ
ಭೃತ್ಯರು ಎಳೆದೊಯ್ಯುವಾಗ । ಹೆತ್ತಯ್ಯ ನೀ ಬಿಡಿಸದಿರಲು ೭

ಮನೆಯೊಳು ನಾಳಿನ ಗ್ರಾಸಕೆ। ಅನುವಿಲ್ಲ ಅನುಮಾನವಾಗಿದೆ
ಋಣದಿಂದ ಕಡೆಹಾಯ್ವ ಮಾರ್ಗವನು ಲೇಶವಾದರು ಕಾಣೆ।
ಗುಣಿಸಲು ಈ ಕಾಳಪುರುಷನ । ಅನುಬಂಧದಿಂದ ನಾನಿನ್ನು
ದಣಿದೆನು ಇನ್ನೇನು ನಿನ್ನ । ಅಣುಗರೋಳೋಲಾಡಿಸೋ ೮

ನಿನ್ನ ಹೊಂದಿ ಇಷ್ಟು ಭವಣೆ । ಯನ್ನು ಬಡರು ಈ ಜನರು ।
ನಿನ್ನ ದೂರಿ ಜರಿವರೊ ನಾ। ನಿನ್ನು ತಾಳಲಾರೆನೋ ॥
ಘನ್ನಕರುಣ ಸೌಭಾಗ್ಯ ಸಂ । ಪನ್ನ ಗೋಪಾಲ ವಿಠಲ
ಬಿನ್ನಪವನ್ನು ಚಿತ್ತೈಸಿ । ಪನ್ನಗಶಯ್ಯ ಮಹರಾಯ ೯

ಈ ಪದವನ್ನು ಕೇಳಿ ಆಚಾರ್ಯರು ತಲೆದೂಗಿದ ಸಮಯನೋಡಿ, ಆಚಾರ್ಯರ ಪತ್ನಿಯು–'ಭಾಗಣ್ಣನವರು ಮಹಾನುಭಾವರು–ಅಪರೋಕ್ಷಜ್ಞಾನಿಗಳು' ಎಂದು ಸ್ತೋತ್ರ ಮಾಡುತ್ತಿದ್ದಳು.

ಆಚಾರ್ಯರಿಗೆ ಪದ ಚೆನ್ನಾಗಿದೆಯೆಂಬುದಕ್ಕಿಂತ, ದಾಸರಿಗೆ ಹೆಚ್ಚಿನ ಮಾನ ಕೊಡಲು ಇಷ್ಟವಿರಲಿಲ್ಲ. ಹೆಂಡತಿಯು–ದಾಸರು ಅಪರೋಕ್ಷಜ್ಞಾನಿಗಳು ಎಂದಕೂಡಲೇ ಕಿಡಿಕಿಡಿಯಾಗುತ್ತಿದ್ದರು. 'ಹೆಂಗಸು ನಿನಗೇನು ಗೊತ್ತು ? ಅಪರೋಕ್ಷಜ್ಞಾನ ನಮ್ಮಂಥ ವಿದ್ವಾಂಸರಿಗೇ ಆಗಿಲ್ಲ ! ಭಾಗಣ್ಣಗೆಲ್ಲಿಂದ ಬಂದೀತು ? ಸುಮ್ಮನಿರೆಂ'ದು ಆಕೆಯ ವಾಗ್ಬಂಧಮಾಡುತ್ತಿದ್ದರು. ಆಕೆಯು-'ನೀವು ಹಾಗೇ ಅನ್ನಿ, ನಾನು ಹೀಗೇ ಅನ್ನುತ್ತೇ ನೆ'ನ್ನುತ್ತಿದ್ದಳು. ಒಮ್ಮೆ ಭಾಗಣ್ಣನ ಬಳಿಗೆ ಹೋಗಿ ಮಗನ ಭವಿಷ್ಯವೇನೋ ಕೇಳಿಬನ್ನಿ ರೆನ್ನುತ್ತಿದ್ದಳು. ಮೇಲೆ ಮೇಲೆ ಅದೇ ಮಾತನಾಡುತ್ತಿದ್ದ ಹೆಂಡತಿಯ ಮಾತನ್ನು ಮೀರಲು ಆಚಾರ್ಯರಿಗೆ ಸಾಧ್ಯವಾಗಲಿಲ್ಲ.

ಒಂದು ಪ್ರಾತಃಕಾಲ ತುಲಸಿಯನ್ನು ತರುವ ನೆಪಮಾಡಿಕೊಂಡು ವೆಂಕಟನರ ಸಿಂಹಾಚಾರ್ಯರು ಉತ್ತನೂರಿಗೆ ಬಂದರು. ಐಜಿಗೆ ಉತ್ತನೂರು ಒಂದೇ ಹರದಾರಿ ದೂರ ವಿದ್ದುದರಿಂದ ಅವರಿಗೆ ಮಾರ್ಗಾಯಾಸವಾಗಲಿಲ್ಲ. ವೆಂಕಟೇಶದೇವರ ಗುಡಿಗೆ ಬಂದ ಸಮಯದಲ್ಲಿ ಗೋಪಾಲದಾಸರೊಬ್ಬರೇ ಮಂದಿರದಲ್ಲಿ ಕುಳಿತಿದ್ದರು. ಆಚಾರ್ಯರು ದೇವ ರಿಗೆ ನಮಸ್ಕಾರಮಾಡಿ, ಭಾಗಣ್ಣನನ್ನು ತಾವಾಗಿ ಮಾತಾಡಿಸುವ ಬಗೆ ಹೇಗೆಂದು ಯೋಚಿ ಸುತ್ತ ಅತ್ತಿತ್ತ ನೋಡಿದರು.

ಗೋಪಾಲದಾಸರು :—ನಮಸ್ಕಾರ ಆಚಾರ್ಯರಿಗೆ ! ಅಕ್ಕನವರು ಕಳುಹಿಸಿದ ರೇನೋ ! ಬನ್ನಿ ಬನ್ನಿ !

ಆಚಾರ್ಯರು :—ಏನೂ ಇಲ್ಲ; ತುಲಸಿಗೆ ಬಂದಿದ್ದೆ ! ಹಾಗೇ ದೇವರದರ್ಶನ ಮಾಡೋಣವೆಂದು ಗುಡಿಗೆ ಬಂದೆ !

ಗೋಪಾಲದಾಸರು :—ಇರಲಿ, ಚಿಂತೆಯಿಲ್ಲ. ಅಕ್ಕನವರು ಕಳುಹಿಸದಿದ್ದರೆ ತಾವೆಲ್ಲಿ ಬರುತ್ತಿದ್ದಿರಿ ? ಮಗನ ಚಾಪಲ್ಯವೇನೋ ?

ಆಚಾರ್ಯರು :—ಅಂಥಾದ್ದೇನಿಲ್ಲ. ಅದೆಲ್ಲಾ ಹೆಂಗಸರ ಚಾಪಲ್ಯ !

ಗೋಪಾಲದಾಸರು :—ಹೆಂಗಸರಿಗೆ ಮಗನ ಚಾಪಲ್ಯ. ಆಚಾರ್ಯರಿಗೆ ಹೆಂಗ ಸರ ಚಾಪಲ್ಯ.

ಆಚಾರ್ಯರು ದಾಸರ ಮರ್ಮಗರ್ಭಿತವಾದ ಮಾತಿಗೆ ಬೆರಗಾದರು. ಹೆಂಡತಿಯಮಾತು ಸತ್ಯವಿರಬಹುದೆಂದರಿತರು. ವೆಂಕಟರಾಮನ ಭವಿಷ್ಯವೇನಾದೀತೆಂದ ಪ್ರಶ್ನೆಮಾಡಿದರು. ದಾಸರು ನಗುತ್ತಾ, 'ವೆಂಕಟರಾಮಾಚಾರ್ಯನು ಪಂಡಿತೋತ್ತಮ ನಾಗುವನು. ವೆಂಕಟರಾಮಾಚಾರ್ಯನು ಹಿರಿಯರಿಂದಲೂ ವಂದಿತನಾಗುವನು ; ಅಗ್ನಿ ಸದೃಶನಾದ ವೆಂಕಟರಾಮನ ಯೋಚನೆ ನಿಮಗೇಕೆ'ಂದರು. ಆಚಾರ್ಯರು 'ನೀವೇನು ಹೇಳಿದರೂ ವ್ಯಾಸಂಗವಿಲ್ಲದೆ ಅವನು ಪಂಡಿತನಾಗುವ ಬಗೆ ಹೇಗೆ'ಂದರು. ದಾಸರು 'ಆಚಾರ್ಯರೇ, ವೆಂಕಟರಾಮನ ಪೂರ್ವಸಂಸ್ಕಾರವು ಬಲವತ್ತರವಾಗಿರುವುದು. ಅವನಿಗೆ ಸಕೃತ್ ಶ್ರವಣಮಾತ್ರದಿಂದ ಮಹಾ ಪಾಂಡಿತ್ಯವುಂಟಾಗುವುದು. ಆ ಕಾಲವು ದೂರದ

ಲ್ಲಿಲ್ಲ; ಅತಿ ಸಮೀಪದಲ್ಲಿರುವುದು; ನೀವು ಮಾತ್ರ ನಿಶ್ಚಿಂತರಾಗಿದ್ದರಾಯಿತೆ'ಂದರು.

ದಾಸರ ಭವಿಷ್ಯದಂತೆ ಕಾಲಕ್ರಮದಲ್ಲಿ ವೆಂಕಟರಾಮಾಚಾರ್ಯನು ಮಹಾ ಪಂಡಿತನಾದನು. ಗೋಪಾಲದಾಸರು ತಾವು ಹೇಳಿದಂತೆ, ಆಚಾರ್ಯನು ಪಂಡಿತನಾದು ದನ್ನು ನೋಡಿ–'ಕಂಡೆನಾ ಕರುಣೆಗಳೊಳಗ್ರೇಸರರಾದ ಪಂಡಿತ ರಾಮಾರ್ಯರು' ಎಂಬು ದಾಗಿ ಪದವನ್ನು ಮಾಡಿರುತ್ತಾರೆ.

ವೆಂಕಟರಾಮಾಚಾರ್ಯನು ತಾನೆಷ್ಟು ಪಂಡಿತನಾದರೂ ಗೋಪಾಲದಾಸರ ಜ್ಞಾನ ತನಗಾಗಲಿಲ್ಲವೆಂದು ಮಿಡುಕುತ್ತಿದ್ದನು. ಅದೇ ಕಾರಣದಿಂದ ಅಶನವಸನಗಳಲ್ಲೂ ಪಾಣಿಗೃಹೀತಿಯಲ್ಲೂ ಅತ್ಯಂತ ವಿರಕ್ತನಾದನು. ಈ ಜನ್ಮದಲ್ಲಿ ದಾಸರಿಗಾದಂತೆ ತನಗೂ ಅಪರೋಕ್ಷಜ್ಞಾನವಾದರೆ ಎಲ್ಲ ಸಾಧನೆಯೂ ಸಫಲವಾಯಿತೆಂದು ಮಂತ್ರೋಪಾಸನಾರತ ನಾದನು. ಗೋಪಾಲದಾಸರಾದರೋ ನೋಡುವವರ ಕಣ್ಣಿಗೆ ಮಹಾ ಭೋಗಿಗಳಂತೆ ಕಾಣಿಸುತ್ತಿದ್ದರು. ಕುದುರೆಯ ಸವಾರಿ ಮಾಡುವುದು; ಬೆಲೆಬಾಳುವ ಶಾಲುಗಳನ್ನು ಹೊದೆಯುವುದು, ಮೃಷ್ಟಾನ್ನಭೋಜನಮಾಡುವುದು; ಗಂಧಕಸ್ತೂರಿಗಳನ್ನು ಲೇಪಿಸಿ ಕೊಳ್ಳುವುದು; ಖರ್ಚು ಕಳೆದುಳಿದ ಹಣವನ್ನು ಕೂಡಿಡುವುದು, ಈ ರೀತಿಯೆಲ್ಲಾ ಮಾಡುತ್ತಿದ್ದರು. ಇದನ್ನು ನೋಡಿ ಆಚಾರ್ಯನ ಶಿಷ್ಯರು, ನಮ್ಮ ಆಚಾರ್ಯರ ವೈರಾಗ್ಯ ದಾಸರಲ್ಲಿಲ್ಲವೆಂದು ನಿಂದಿಸುತ್ತಿದ್ದರು. ದಾಸರು ಅವರಿಗೆ ಜ್ಞಾನೋಪದೇಶಮಾಡಿದಂತೆ ಈ ಸುಳಾದಿಯನ್ನು ರಚಿಸಿದ್ದಾರೆ.

ವೈರಾಗ್ಯ ಸುಳಾದಿ

ಧ್ರುವತಾಳ

ವೈರಾಗ್ಯ ಮಾರ್ಗಕೇಳು–ದಾರಿದ್ರಮಾರ್ಗಕೀಳು | ಮಾರಮಣನ ಪಾದ ಆರಾ ಧಿಸುವುದಕ್ಕೆ | ನಾರಿಯ ಧಾರಣಿಯ ಧನವ ಬಿಟ್ಟರಾಯಿತೆ | ವೈರಾಗ್ಯವಲ್ಲ–ಕಂಡ್ಯ ಧೀರರಿಗೆ ‖ ಶರೀರಕ್ಕಾಪಾರ ಭಸ್ಮಧರಿಸಿಕೊಂಡು | ಚೀರವಸ್ತ್ರವನುಟ್ಟು ತಿರುಗಿದರೂ | ಆರಾದರೂ ಇವನ ಅವಧೂತನೆಂತೆಂದು | ಸಾರಿಸಾರಿಗೆ ಇನ್ನು ಕರೆವರೇನೈ ‖ ವೈರಾಗ್ಯ ವೆಂಬಂಥ ವಾರುತಿಯೊಂದಲ್ಲವೆ | ಶ್ರೀರಮಣಗೆ ಇದು ಪ್ರಿಯವಲ್ಲ | ನಾರಿಸುತರುಗಳು ಶರೀರಬಂಧುಗಳೆಂ| ದರಿತಿರಬೇಕು ಅನುದಿನವು ‖ ನೀರ ಒಳಗೆ ಇನ್ನು ಕಮಲವು ಇದ್ದಂತೆ| ಕಾರಣನಾಗಿ ಕಾರ್ಯವಿಲ್ಲದಿರಬೇಕು | ಮಾರಮಣ ನಮ್ಮ **ಗೋಪಾಲ ವಿಠಲನು** | ತೋರಿಕೊಟ್ಟ ವೈರಾಗ್ಯ ಸಾರುವೆನು ‖ ೧

ಮಟ್ಟತಾಳ

ಸ್ವಯೋಗ್ಯತೆಯೊಳಗೆ ಆಯತನಾದಷ್ಟೇ | ನೋಯದೆ ಉಣುವುದೇ ನ್ಯಾಯದ ವೈರಾಗ್ಯ | ಆಯಾಸವ ಪಡದೆ ಪರರ ಶ್ರೇಯಸ ನೋಡಿ | ಶ್ರೀಯುಕರನಿತ್ತ ನೆಂಬುವೆ ವೈರಾಗ್ಯ | ಪ್ರೀಯದಿ ನೀನಿತ್ತ ಕರ್ತೃತ್ವವು ಎನಗೆ | ನೀ ನಿನ್ನಲ್ಲದೆ ಎನ್ನಿಂದಾಗದು ಎನು

ತಲಿ । ನೋಯದೆ ಇಪ್ಪುದೆ ನ್ಯಾಯದ ವೈರಾಗ್ಯ। ಮಾಯಾರಮಣ ನಮ್ಮ **ಗೋಪಾಲ ವಿಠಲನ** । ಪ್ರೀಯದಿ ನೆಚ್ಚಿ ಅನ್ಯಕ್ಕೆರಗದಿಪ್ಪುದೆ ವೈರಾಗ್ಯ ॥ ೨

ತ್ರಿಪುಟತಾಳ

ಧನವ ಪರಿತ್ಯಾಗ ಮಾಡಿದರಾಯಿತೆ । ಘನವಾದ ವೈರಾಗ್ಯವಲ್ಲ ನೋಡಿ । ಧನವ ಬಿಟ್ಟಿರವೇ ದನಗಳು ಅನುದಿನ । ಘನವೇನು ಇವಕೆ ಅವಕೆ ನೋಡು । ಮನೆಯ ಬಿಟ್ಟೇಕಾಂತದಲಿ ಕುಳಿತರಾಯಿತೆ । ಘನವಾದ ವೈರಾಗವಲ್ಲ ನೋಡಿ । ಮನೆಯ ಬಿಟ್ಟಿರವೇ ಅನುದಿನ ಗೂಗಿಗಳು । ಘನವೆಂದು ಕರಿವರೆ ಜ್ಞಾನಿಗಳು। ತನುಮನದಭಿಮಾನವನು ಬಿಟ್ಟರಾಯಿತೆ । ಘನವಾದ ವೈರಾಗ್ಯವಲ್ಲ ನೋಡಿ । ತನುಮನದಭಿಮಾನವನು ಬಿಟ್ಟು ಕುನ್ನಿ ತಾ । ಮನೆ ಮನೆ ತಿರುಗದೆ ಅನುಗಾಲವು । ಘನಮಹಿಮ ಚೆಲ್ವ **ಗೋಪಾಲ ವಿಠಲನ** । ನೆನೆದು ಏಕಾಂತದಲಿ ನಿರ್ಮಲಮನನಾಗೋ ॥ ೩

ಅಟ್ಟತಾಳ

ಆಗ ಭೋಗಂಗಳು ಆಗದೆ ಇರಲ್ಯಾಕೆ । ಯಾಗಂಗಳ ಮಾಡಿ ಅರ್ಪಿಸೆ ಹರಿಗೆ ಸಮ । ಭಾಗವೆರಡು ಹರಿಯಿಂದಾದದ್ದು ಎಂದು । ಭೋಗಿಸುತಿಪ್ಪುದೆ ವೈರಾಗ್ಯ ವೈರಾಗ್ಯ । ಕಾಗೆಯಂತೆ ಮಯ್ಯ ಕಪ್ಪಗೆ ಮಾಡಿನ್ನು । ರೋಗ ಬಂದ್ಯವ್ಯಂತೆ ನಾಮವ ಬಡಕೊಂಡು । ಭೋಗದ ವಸ್ತು ಪರಿತ್ಯಾಗ ಮಾಡಿನ್ನು । ಆಗುವ ಕಾರ್ಯಗಳಾಗುತ್ತಲಿರೆ ಅಂತೆ । ಹ್ಯಾಗೆ ಜನರು ಕಾಂಬ ಹಾಗೇಪೆ ಬಾಹಿರ । ವೈರಾಗ್ಯವನು ಮಾಡೆ ವೈರಾಗ್ಯ ವಲ್ಲವೊ । ನಾಗಶಯನ **ಗೋಪಾಲ** ವಿಠಲ ನಮ್ಮ । ತಾಗಿ ಉಣಿಸಿದ್ದು ಉಂಡಿಹುದೆ ವೈರಾಗ್ಯ ॥ ೪

ಆದಿತಾಳ

ಧನವ ಕಟ್ಟಿದ ಚೀಲ ಧಾನ್ಯ ತುಂಬಿದ ಗೋಣಿ । ಪುನಗು ಜಿಕ್ಕಿನಂತೆ ಪುಣ್ಯಾತ್ಮರಘದಂತೆ । ಒಣಗಿಪ್ಪ ಗೋಡೆಗೆ ಹರಳು ಬಿಸಾಟಿನಂತೆ । ಉಣುವ ಜಿಹ್ವೆಗೆ ಕೈ ಅನುಕೂಲವಾದಂತೆ । ಮನಸಿಗೆ ಹರುಷವ ಸಾಧವ ಮಾಡಿಪ್ಪು । ತನುವಿಗೆ ಸುಖವೆಂದು ತಿಳಿದು ಕೆಡದಲೆ । ಗುಣಿಸುತ ಅಲ್ಲಲ್ಲಿ ಗುಣ ತಿಳಿದು ಹರಿಯ । ನೆನೆದು ನೆನೆದು ದಿನಗಳೆವುದೆ ವೈರಾಗ್ಯ ॥ ಮುನಿನುತ ಸಿರಿ **ಗೋಪಾಲವಿಠಲನು** । ಇನಿತೀಪರಿಯಾಗಿದ್ದವನ ಪೊರೆವ ॥ ೫

ಜತೆ

ಅರಿಯದ ವೈರಾಗ್ಯ ಹರಹಿಕೊಂಬುದಕಿಂತ । ಅರಿತು ಮೊರೆಯ ಹೊಗಿರೋ **ಗೋಪಾಲವಿಠಲನ** ॥

ಶಿಷ್ಯರಿಗಾಗಿ ಹೇಳಿದ ಸುಳಾದಿಯು ಗುರುವಿಗೇ ಅನ್ವಯಿಸಿತೆಂದು ಆಚಾರ್ಯನು ತನ್ನ ಶುಷ್ಕ ವೈರಾಗ್ಯವನ್ನು। ತ್ಯಜಿಸಿದನು.

ಭರತಭೂಮಿಯಲ್ಲಿ ಯಾವ ಹರಿದಾಸರ ವೈರಾಗ್ಯ ಲಕ್ಷಣವನ್ನು ನೋಡಿದರೂ ಅದೊಂದು ಪ್ರತ್ಯೇಕ ಮಾರ್ಗವಾಗಿರುವುದು. ಒಮ್ಮೆ ಕಬೀರದಾಸರ ಬಳಿಗೆ ಬಂದ ಶಿಷ್ಯನೋರ್ವನು ರಾಮತಾರಕಮಂತ್ರದ ಉಪದೇಶಪಡೆದನು. ಮಂತ್ರಪುರಶ್ಚರಣೆ ಮಾಡುವುದಕ್ಕಿಂತ ಆ ಶಿಷ್ಯನಿಗೆ ತನ್ನ ವೇಷಭೂಷಣಗಳು ಹೇಗಿರಬೇಕೆಂಬ ಯೋಚನೆ ಬಲವಾಯಿತು. ಅವನು ತನ್ನಲ್ಲಿ ತಾನೇ ಯಾವ ತೀರ್ಮಾನವನ್ನೂ ಮಾಡಿಕೊಳ್ಳಲು ಸಮರ್ಥನಾಗಲಿಲ್ಲ. ಮಹಾಮಂತ್ರವನ್ನೇ ಉಪದೇಶಿಸಿದ ಗುರುಗಳು ವೇಷಭೂಷಣಗಳ ವಿಚಾರವನ್ನೂ ಕುರಿತು ತಿಳಿಸಲಾರರೇ ಎಂದು ಕಬೀರದಾಸರ ಬಳಿಗೆ ಮತ್ತೆ ಬಂದನು. ದಾಸರು ಶಿಷ್ಯನನ್ನು ನೋಡಿ 'ಎಷ್ಟು ಲಕ್ಷ ಜಪವಾಯಿತು' ಎಂದು ಪ್ರಶ್ನೆಮಾಡಿದರು. ಆಗ ಶಿಷ್ಯನು–'ಜಪಕ್ಕೆ ನಾನಿನ್ನೂ ಕುಳಿತಿಲ್ಲ. ಮಧ್ಯದಲ್ಲಿ ನನಗೊಂದು ಸಂಶಯ ಬಂತು! ಅನುಷ್ಠಾನ ಪರರು ತಲೆಯನ್ನು ಬೆಳೆಸಬೇಕೇ–ಬೋಳಿಸಬೇಕೇ ಕೇಳಲು ಬಂದೆ' ಎಂದನು. ಆಗ ಕಬೀರದಾಸರು–'ಮೂರ್ಖಾ! ತಲೆಯ ಕೂದಲಿಗೂ ಮಂತ್ರಜಪಕ್ಕೂ ಏನು ಸಂಬಂಧವೋ? ಹೇಳುವೆನು ಕೇಳು. 'ಕಬೀರ ಪಂಥ ಹರಿನಾಮ ರಟಾವ್, ಬಾಲಬಡಾವ್ ನಹಿತೋ ಘೋಟ ಘುಟಾವ್' ಎಂದರು. ಈ ಮಾತಿನ ಅಭಿಪ್ರಾಯವೇನೆಂದರೆ – ಕಬೀರಪಂಥ ಹರಿಭಜನೆ, ಕೂದಲನ್ನು ಬೆಳೆಸಿದರೆ ಬೆಳೆಸು–ಬೋಳಿಸಿದರೆ ಬೋಳಿಸು, ಎಂಬುದಾಗಿರುವುದು.

ವೆಂಕಟರಾಮಾಚಾರ್ಯನು ತನ್ನ ಪಾಠ ಪ್ರವಚನಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡದೆ, ಗೋಪಾಲದಾಸರ ನಡೆನುಡಿಗಳನ್ನೇ ಗಮನಿಸುತ್ತಾ, ಅವರ ಬಳಿಯಲ್ಲಿ ವಾಸ ಮಾಡಿದನು. ತಂದೆ ವೆಂಕಟನರಸಿಂಹಾಚಾರ್ಯನು–'ನಿನ್ನ ತಾಯಿಯಂತೆ ನಿನಗೂ ಭಾಗಣ್ಣನ ಗಾಳಿ ಬಡಿಯಿತು' ಎಂದು ಆಕ್ಷೇಪಿಸಿದರು. ಅದಕ್ಕೆ ಮಗನು–'ಹಾಗಲ್ಲ. ದಾಸರ ಒಂದೊಂದು ಮಾತೂ ಮನಮುಟ್ಟುವ ಅನುಭವದ ಮಾತಾಗಿದೆ' ಎಂದು ನುಡಿದನು.

ಒಂದು ದಿನ ಆಚಾರ್ಯನು ದಾಸರೊಡನೆ ಮಾತನಾಡುತ್ತಾ ಕುಳಿತಿರಲು ಕಾಲ ಗೊತ್ತಾಗದ ಸಮರಾತ್ರಿಯಾಗಿ ಬಿಟ್ಟಿತು. ಆಚಾರ್ಯನು ಸಂಧ್ಯಾವಂದನೆಗೆ ಕಾಲಾತೀತವಾಯಿತೆಂದನು. ದಾಸರು–'ಆಚಾರ್ಯ! ಇದುವರೆಗೆ ಮಾಡಿದ್ದು ಸಂಧ್ಯಾವಂದನೆಯಾಗಲಿಲ್ಲವೆ? ಸಂದೇಹ ಬಿಡಿರಿ; ಸಂಧ್ಯಾವಂದನ ಮಾಡೋಣ ಬನ್ನಿರೆಂ'ದರು. ಉಭಯರೂ ಸಂಧ್ಯಾವಂದನೆಗೆ ಕುಳಿತರು. ದಾಸರು ಆಚಾರ್ಯನ ಅರ್ಘ್ಯಸಮಯದಲ್ಲಿ ಪ್ರಾಯಶ್ಚಿತ್ತಾರ್ಘ್ಯ ಕೊಡಬೇಕಾದುದಿಲ್ಲವೆಂದರು. ಅಷ್ಟು ಮಾತ್ರದಿಂದ ಆಚಾರ್ಯನ ಸಂದೇಹ ನಿವೃತ್ತಿಯಾಗಲಿಲ್ಲ. ದಾಸರು ಬೀದಿಯ ಬಾಗಿಲು ತೆರೆದು ಪಶ್ಚಿಮಾಭಿಮುಖವಾಗಿ,–'ಆಚಾರ್ಯ, ಅದೋ ಸೂರ್ಯನನ್ನು ನೋಡೆಂ'ದರು. ಆಚಾರ್ಯನು–'ಇದಾವ ತಪಶ್ಶಕ್ತಿ'ಯೆಂದು ವಿರಗಾಗಿ ಪ್ರಶ್ನೆಮಾಡಿದನು. ದಾಸರು–'ಇಷ್ಟುಮಾತ್ರ ಮಂತ್ರಶಕ್ತಿ ಇಲ್ಲದಿದ್ದರೆ ಸಂಧ್ಯಾವಂದನೆಯನ್ನೇಕೆ ಮಾಡಬೇಕು' ಎಂದರು.

ಆಚಾರ್ಯನು ಸಮರಾತ್ರಿಯಲ್ಲಿ ತನಗೆ ದಾಸರು ಸೂರ್ಯದರ್ಶನಮಾಡಿಸಿದ

ಸಂಗತಿಯನ್ನು ತನ್ನ ತಂದೆಗೆ ತಿಳಿಸಿದನು. ವೆಂಕಟನರಸಿಂಹಾಚಾರ್ಯರು 'ಅದೇನು ಮಾಯಾಜಾಲವೊ' ಎಂದು ಸಂಶಯಪಟ್ಟರು. ಆಚಾರ್ಯನು-'ಒಂದುದಿನವಾದರೂ ತಾವು ದಾಸರಕೀರ್ತನ ಶ್ರವಣಮಾಡಿದರೆ ಅನೇಕ ಸಂಶಯಗಳುಪರಿಹಾರವಾದಾವು' ಎಂದನು. ಅದನ್ನು ಕೇಳಿ ವೆಂಕಟನರಸಿಂಹಾಚಾರ್ಯರು-'ನಾವು ಕೀರ್ತನ ಕೇಳಬೇಕೆ? ನಮ್ಮನ್ನೂ ನೀನು ಮೆಲ್ಲನೆ ದಾಸರಬುಟ್ಟಿಗೆ ಕೆಡಹುವಂತಿದೆ. ನೀನಿಷ್ಟು ಹೇಳಿದಮೇಲೆ-'ಆಗಲಿ, ದಾಸರಕೀರ್ತನ ನಡೆಯುವಂತೆ ನಡೆಯಲಿ. ನಾವು ಕೇಳುವೆವೆಂಬ ಸುದ್ದಿಯನ್ನು ಭಾಗಣ್ಣ ನಿಗೆ ಹೇಳಬೇಡ. ದೂರದಲ್ಲೇ ನಿಂತು ನಾಲ್ಕು ಮಾತುಗಳನ್ನು ಕೇಳುವೆವು' ಎಂದರು.

ದಾಸರು ಕೀರ್ತನಕ್ಕೆ ಕೂಡುವ ಹೊತ್ತಿಗೆ ಸರಿಯಾಗಿ ದಾಸಪ್ಪನು (ಗೋಪಾಲ ದಾಸರ ಮೂರನೇ ತಮ್ಮ) ಮುಂಟಪವನ್ನು ಶೃಂಗರಿಸಿ, ಕೆಳಗಿನ ಆವರಣದಲ್ಲಿ ಒಂದು ಬೆಳ್ಳಿಯ ಮಣ್ಣೆಯನ್ನಿಡುತ್ತಿದ್ದನು. ಆ ಮಣೆಯು ಯಾವಾಗಲೂ ಬರಿದಾಗಿರುತ್ತಿತ್ತು. ದಾಸರು ಆ ಮಣೆಯನ್ನು ನೋಡುತ್ತಲೇ ಕೀರ್ತನಾರಂಭಮಾಡುತ್ತಿದ್ದರು. ಯಾರಕಡೆಗೂ ನೋಡದೆ, ಆ ಮಣೆಯನ್ನು ನೋಡುತ್ತಾ ಕೀರ್ತನಮಾಡುವುದು ಅನೇಕರಿಗೆ ಸಂಶಯ ವನ್ನುಂಟುಮಾಡುತ್ತಿತ್ತು. ಸಂಪ್ರದಾಯಸ್ಥ ಪುರಾಣೀಕರು ಭಾರತಪುರಾಣ ಹೇಳುವಾಗ ಅಶ್ವತ್ಥಾಮಾಚಾರ್ಯರಿಗೂ, ಭಾಗವತಪುರಾಣ ಹೇಳುವಾಗ ಶುಕಾಚಾರ್ಯರಿಗೂ ಪೀಠ ಗಳನ್ನು ಮಿಾಸಲಿಡುವಂತೆ ದಾಸರು ತಮ್ಮ ಕೀರ್ತನಕಾಲದಲ್ಲಿ ಮಾರುತಿರಾಯನಿಗೋಸ್ಕರ ಆ ಬೆಳ್ಳಿಯ ಮಣೆಯನ್ನು ಮಿಾಸಲಿಡುತ್ತಿದ್ದರು. ಆಚಾರ್ಯನು ಎಂದೂ ಇಲ್ಲದೆ ಇವತ್ತು ತನ್ನ ತಂದೆಯು ಕೀರ್ತನ ಕೇಳಲಿಕ್ಕೆ ಬಂದಿರುವರೆಂದು ಆಗಾಗ ಹೊರಗೆ ಬರುತ್ತಾ, ಒಳಗೆ ಹೋಗುತ್ತಾ, ಕೀರ್ತನಸ್ವಾರಸ್ಯ ಹೇಗಿದೆಯೆಂದು ಪ್ರಶ್ನೆಮಾಡಿದನು. ವೆಂಕಟನರಸಿಂಹಾ ಚಾರ್ಯರು-'ಭಾಗಣ್ಣ ಛಲೋ ಹೇಳ್ತಾನೆ. ನೆಟ್ಟಗಿದೆ-ನೆಟ್ಟಗಿದೆ ಎನ್ನುತ್ತಾ - ಏನೋ ದಾಸ ಒಳ್ಳೇ ಮಂಗ್ಯಾನ್ನ ಸಾಕಿದ್ದಾನೇನು?' ಎಂದು ಕೇಳಿದರು. ವೆಂಕಟರಾಮಾಚಾ ರ್ಯನು (ತಮ್ಮ ತಂದೆಗಿನ್ನೂ ದಾಸರಲ್ಲಿ ವಿಶ್ವಾಸ ಬರಲಿಲ್ಲವೆಂದು ಖಿನ್ನನಾಗಿ-'ಮಂಗ್ಯ ಎಲ್ಲಿ ಬರಬೇಕು ? ಅದೇಕೆ ಹೀಗೆ ಕೇಳುವಿರಿ?' ಎಂದನು. ವೆಂಕಟನರಸಿಂಹಾಚಾರ್ಯರು 'ಅದೋ ನೋಡು. ಬೆಳ್ಳಿಯ ಮಣೆಯಮೇಲೆ ಕೂತಿರುವುದೇನು' ಎಂದರು. ಆಚಾ ರ್ಯನು ತನಗೇನೂ ಕಾಣಿಸುತ್ತಿಲ್ಲವೆಂದನು. ಉತ್ತರಕ್ಷಣಕ್ಕೆ ತಂದೆ ನರಸಿಂಹಾಚಾರ್ಯ ರಿಗೂ ಕಾಣಿಸಲಿಲ್ಲ. ವಿಚಾರಮಾಡುವಲ್ಲಿ ಬೆಳ್ಳಿಯ ಮಣೆಯು ಮಾರುತಿಯದೆಂದು ಗೊತ್ತಾಯಿತು. ತಮಗೆ ಒಮ್ಮೆ ದರ್ಶನವಾಗಿ, ಮತ್ತೆ ದರ್ಶನವಾಗದಿದ್ದುದನ್ನೂ, ತಮಗಾದಂತೆ ಮಗನಿಗೆ ದರ್ಶನವಾಗದಿದ್ದುದನ್ನೂ ನೋಡಿ ಆಚಾರ್ಯರು ಭೀತರಾದರು. ದಾಸರನ್ನು ಸಾಧಾರಣರೆಂದು ತಿಳಿದು ಅನಾದರದಿಂದ ಮಾತನಾಡುತ್ತಿದ್ದುದು ಅಪಚಾರ ವಾಯಿತೆಂದು ಪಶ್ಚಾತ್ತಾಪಪಟ್ಟು, ಮಗನಿಗಿಂತ ಹೆಚ್ಚಾಗಿ ತಾವೂ ದಾಸರ ಅನುಯಾಯಿ ಗಳಾದರು.

ಇದೆಲ್ಲವನ್ನೂ ನೋಡಿ ನೋಡಿ ವೆಂಕಟರಾಮಾಚಾರ್ಯನಿಗೆ ಅಪರೋಕ್ಷವ

ಹೆಂಬಲು ಬಲವಾಯಿತು. ಏನುಮಾಡಿದರೆ ತನ್ನಲ್ಲಿ ಭಗವತ್ಕೃಪೆಯಾದೀತೆಂದು ದಾಸರನ್ನು ಬಾರಿ ಬಾರಿಗೂ ಕೇಳುತ್ತ ಬಂದನು. ದಾಸರು–

"ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂವೇತ್ತಿ ತತ್ತ್ವತಃ ॥೩॥ VII ಗೀತಾ.

ಎಂಬಂತೆ ನಿಮ್ಮ ಯತ್ನವೇನೋ ಸರಿ. ನೀವು ಸಿದ್ಧರಾದರೂ ಕಾಲ ಬರಬೇಕು. ಈ ಜನ್ಮದಲ್ಲೇ ನಿಮಗೆ ಭಗವದ್ದರ್ಶನವಾದೀತೆಂದು ಹೇಳಲು ಸಾಧ್ಯವಿಲ್ಲ. ನಿಮಗಿನ್ನೂ ವಾಸನಾ ಪರಂಪರೆಗಳು ಬಿಟ್ಟಿಲ್ಲ. ಬಾಹ್ಯ ವೈರಾಗ್ಯಗಳು ನಿಜವಾದ ವೈರಾಗ್ಯಗಳಲ್ಲ" ವೆಂದರು.

ಆಚಾರ್ಯನಿಗೆ ದಾಸರ ಮಾತಿನಿಂದ ಎದೆಗುಂದಿತು. ಈ ಜನ್ಮದಲ್ಲೇ ಭಗವದ್ದರ್ಶನವಾಗದಿದ್ದರೆ ಮುಂದೆ ಇಂಥಾ ಜನ್ಮ ಬಂದೀತೆಂಬ ನಂಬುಗೆಯೇನೆಂಬ ಭಯವಾಯಿತು. ಉತ್ತಮ ಸನ್ನಿವೇಶ ಸಂಸ್ಕಾರ ಬಲಗಳುಳ್ಳ ಜನ್ಮ ಬಂದರೂ ಗೋಪಾಲ ದಾಸರಂಥಾ ಅಪರೋಕ್ಷ ಜ್ಞಾನಿಗಳ ಸಹವಾಸ ದೊರೆಯುವದೆಂತೆಂಬ ಯೋಚನೆಯಾಯಿತು. ಈ ಕಾರಣಗಳಿಂದ ಸ್ವಲ್ಪ ಮಾತ್ರ ಪ್ರತಿಬಂಧಕವಾಗಿದ್ದ ಅಹಂಮಮತೆಯು ನಿರ್ಮೂಲವಾಯಿತು. ತಾವೇ ನನ್ನ ಮಾರ್ಗದರ್ಶಿಗಳೆಂದು ದಾಸರ ಮೊರೆಬಿದ್ದನು. ದಾಸರು ಆಚಾರ್ಯನಿಗೆ ಅಭಯವಿತ್ತು ಸನ್ಯಾಸ ಸ್ವೀಕಾರಮಾಡಿ ಬಂದರೆ ನಿಮ್ಮ ಇಷ್ಟಾರ್ಥವು ಸಿದ್ಧಿಸುವುದೆಂದರು. ಆಚಾರ್ಯನು ದಾಸರ ವಾಕ್ಯವನ್ನು ಭಗವದ್ವಾಕ್ಯದಂತೆ ಶಿರಸಾವಹಿಸಿದನು. ಸನ್ಯಾಸಸ್ವೀಕಾರ ಮಾಡುವುದರಿಂದ ಜನ್ಮಾಂತರವಾದಂತಾಗುವುದೆಂಬ ಮಾತಿನ ಔಚಿತ್ಯವನ್ನು ಗ್ರಹಿಸಿ, ದಾಸರನ್ನು ಬಾರಿಬಾರಿಗೂ ವಂದಿಸಿದನು. ವಸುಧೇಂದ್ರ (ಭುವನೇಂದ್ರ) ಸ್ವಾಮಿಗಳಿಂದ ಆಶ್ರಮಸ್ವೀಕಾರಮಾಡುವೆನೆಂದು ಮಂತ್ರಾಲಯಕ್ಕೆ ಪ್ರಯಾಣಮಾಡಿದನು.

ಭುವನೇಂದ್ರರು–ಮಹಾಪಂಡಿತನೂ ತೇಜೋವಂತನೂ ಪೂರ್ವವಯಸ್ಕನೂ ಆದ ಆಚಾರ್ಯನು ವೈರಾಗ್ಯ ತಾಳಿ ಸನ್ಯಾಸಗ್ರಹಣಮಾಡಲು ಬಂದುದನ್ನು ನೋಡಿ ಸಂತುಷ್ಟರಾದರು. ತಮ್ಮ ವೃದ್ಧಾಪ್ಯದಲ್ಲಿ ಶ್ರೀರಾಘವೇಂದ್ರರ ಮಹಾಪೀಠಕ್ಕೆ ಯೋಗ್ಯ ಅಧಿಕಾರಿಯು ಪ್ರಯತ್ನವಿಲ್ಲದೆ ದೊರೆತನೆಂದು ತಿಳಿದರು. ಶಾಸ್ತ್ರನಿಯಮವನ್ನನುಸರಿಸಿ ಆಚಾರ್ಯನಿಗೆ ತುರೀಯಾಶ್ರಮವನ್ನಿತ್ತು **ಶ್ರೀ ವ್ಯಾಸ ತತ್ವಜ್ಞ**ರೆಂದು ನಾಮಕರಣಮಾಡಿದರು. ಆಶ್ರಮಸ್ವೀಕಾರಾನಂತರ ವ್ಯಾಸತತ್ವಜ್ಞರು ಸಂಸ್ಥಾನಾಧಿಪತ್ಯವನ್ನು ಬಯಸಿ ಬಂದವರಲ್ಲವೆಂಬುದು ಭುವನೇಂದ್ರರಿಗೆ ಗೊತ್ತಾಯಿತು. ವ್ಯಾಸತತ್ವಜ್ಞರು ಕೆಲವು ದಿವಸಗಳನಂತರ ದಾಸರ ಬಳಿಗೇ ಬಂದುಬಿಟ್ಟರು. ಗೋಪಾಲದಾಸರಿಂದ ವ್ಯಾಸ ತತ್ವಜ್ಞರಿಗೆ ಅಪರೋಕ್ಷಜ್ಞಾನ ಪ್ರಾಪ್ತಿಯಾಯಿತು. ವ್ಯಾಸತತ್ವಜ್ಞರು **'ವಾಸುದೇವ ವಿಠಲ'** ಮುದ್ರಿಕೆಯಿಂದ ಕನ್ನಡದೇವರ ನಾಮಗಳನ್ನು ಹಾಡುತ್ತಾ ಗೋಪಾಲದಾಸರೊಡನೆ ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು, ಕೈಯಲ್ಲಿ ತಂಬೂರಿಯನ್ನು ಬಾರಿಸುತ್ತಾ ಭಗವದ್ಭ

ಜನೆಗಾರಂಭಿಸಿದರು. ಏಕಾಂತ ಸ್ಥಳವೂ ಹಾಗೂ ತುಂಗಭದ್ರಾ ತೀರವೂ ಆಗಿದ್ದುದರಿಂದ ವೇಣಿ ಸೋಮಪುರದಲ್ಲಿ ಉಭಯರೂ ವಾಸಮಾಡಿದರು.

ಸನ್ಯಾಸ ಧರ್ಮವನ್ನವಲಂಬಿಸಿದ ವ್ಯಾಸತತ್ವಜ್ಞರು ದಾಸರೊಡನೆ ಸೇರಿಕೊಂಡು ಕನ್ನಡ ಪದಗಳನ್ನು ಹಾಡುತ್ತಾ ನರ್ತನಮಾಡುವುದು ಮುಂತಾದ ವಿಚಾರಗಳು ಮಂತ್ರಾಲಯದಲ್ಲಿದ್ದ ಭುವನೇಂದ್ರರಿಗೆ ತರಂಗತರಂಗವಾಗಿ ವರ್ತಮಾನ ತಿಳಿದುವು. ಅವರು ಕುಪಿತರಾಗಿ–'ನಮ್ಮಿಂದ ಆಶ್ರಮ ಪಡೆದೂ ಸಂಸ್ಥಾನಾಧಿಪತ್ಯವನ್ನು ನಿರಾಕರಿಸಿ, ನೀವು ದಾಸರಂತೆ ನರ್ತನಾದಿಗಳನ್ನು ಮಾಡುತ್ತಿರುವಿರೆಂದು ಕೇಳುತ್ತೇವೆ. ನೀವು ಕೂಡಲೇ ಎಲ್ಲವನ್ನೂ ಬಿಟ್ಟು ಮಂತ್ರಾಲಯಕ್ಕೆ ಬರದಿದ್ದರೆ ನಿಮಗೆ ಬಹಿಷ್ಕಾರ ಹಾಕುತ್ತೇವೆ" ಎಂಬುದಾಗಿ ಆಜ್ಞಾ ಪತ್ರವನ್ನು ಕಳುಹಿಸಿದರು. ವ್ಯಾಸತತ್ವಜ್ಞರು–ಪ್ರತ್ಯುತ್ತರವಾಗಿ 'ಸಂಸ್ಥಾನಪಾಲನೆಗಾಗಿ ನಾನು ಸನ್ಯಾಸಿಯಾದವನಲ್ಲ' ಎಂದು ವಿಜ್ಞಾಪಿಸಿ–'ನಂಬಿದೆ ಖರೆಯ–ಶ್ರೀಹರಿಯ' ಎಂಬುದಾಗಿ ಕನ್ನಡ ದೇವರ ನಾಮವನ್ನು ಬರೆದು ಸ್ವಾಮಿಗಳ ಬಳಿಗೆ ಕಳುಹಿಸಿ, ತಮ್ಮನ್ನು ಕ್ಷಮಿಸಬೇಕೆಂದು ಪತ್ರಬರೆದರು. ಅನಂತರವೇ **ವರದೇಂದ್ರ**ರೆಂಬುವರಿಗೆ ಸಂಸ್ಥಾನಾಧಿಪತ್ಯವಾಯಿತು.

ವ್ಯಾಸತತ್ವಜ್ಞರನ್ನು ಐಜೀ ಸ್ವಾಮಿಗಳೆಂದು ಕರೆಯುವುದು ಜನರ ರೂಢಿಯಾಯಿತು. ಸ್ವಾಮಿಗಳೂ ದಾಸರೂ ಏಕತ್ರವಾಸಮಾಡಿದ ಕಾಲದಲ್ಲಿ ನಡೆದ ಅನೇಕ ಮಹಿಮಾ ವಿಶೇಷಗಳನ್ನು ಆ ಪ್ರಾಂತದ ಜನರು ಇಂದಿಗೂ ಹೀಗೆ ಹೀಗೆ ನಡೆದುವೆಂದು ಹೇಳುವರು. ಆ ಪೈಕಿ ಮಾದರಿಗಾಗಿ ಒಂದೇ ಸಂಗತಿಯನ್ನು ಸಂಕ್ಷೇಪವಾಗಿ ಉದಹರಿಸುವೆನು.

ಒಂದು ಮಧ್ಯಾಹ್ನ, ಗೋಪಾಲದಾಸರೂ ಅವರ ಇಬ್ಬರು ತಮ್ಮಂದಿರೂ ಐಜೀ ಸ್ವಾಮಿಗಳೂ ಭಗವಂತನ ಶ್ರೀಕೃಷ್ಣಾವತಾರ ವೈಭವವನ್ನೂ ಗೋಪಿಯರ ಭಕ್ತಿಯನ್ನೂ ವರ್ಣಿಸುತ್ತಾ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ದಾಸಪ್ಪದಾಸರು ಆಗಲೇ ತಮಗುಂಟಾದ ಪಾರವಶ್ಯದಿಂದ ಪರಮಾತ್ಮನ ವಿರಹವನ್ನು ಸೈರಿಸಲಾರೆವೆಂದು ಗೋಪಿಯರು ಪ್ರಾರ್ಥನೆಮಾಡಿದ ಘಟ್ಟವನ್ನು ಆಶು ಕವಿತೆಯಿಂದ—

ರಾಗ ತೋಡಿ ಆದಿತಾಳ

ಆಗಲಿ ಸೈರಿಸಲಾರೆವೋ । ವೇಣುಗೋಪಾಲ ಪ
ಆಗಲಿ ಸೈರಿಸಲಾರೆವೋ । ನಗಧರ ಪನ್ನಗ ನಗಾಧೀಶ
ಮೃಗಮದ ತಿಗರಿನ । ನಗೆ ಮೊಗ ಚೆನ್ನಿಗ ।
ನಿಗಮಗಳಿಗೆ ಸಿಗ । ದಗಣಿತ ಸುಗುಣ–ನಿನ್ನಗಲಿ ಅ.

ಗುಲುಗಂಜಿ ಬರ್ಹಿಯಗರಿಯ । ಎಳೆದಳಿರು ಕೇತಕಿಯ ಗರಿಯು ।
ಥಳಥಳಿಪ ಫಾಲದರಳೆಲೆಯು । ಹೊಳೆವ ಕುಂಡಲಗಳ ಪ್ರಭೆಯು ।

ಉಲಿವಹಾರ ಗಳದಿ ಒಪ್ಪುತ್ತಾ ಸುಧಾಮರಾವು ।
ಗೆಳೆಯರಿಂದ ಕೂಡಿ ಪಾಡುತ್ತಾ । ರಾಜಬೀದಿಯೊಳು ।
ಸುಳಿದು ಕುಲುಕಿ ನಲಿನಲಿದಾಡುತ್ತಾ । ನಿತ್ಯ ಗೋವತ್ಸ ।
ಗಳನು ಸಂರಕ್ಷಣೆಮಾಡುತ್ತ । ಕೊಳಲನೂದುತ್ತ ।
ಸುಳಿವಳಿಗಿಳಿಶಿಖಿಗಳ ಕುಲಾವಳಿಗಳ। ಘಲಿ ಘಲಿ ಘಲಿರೆಂದು ಕುಣಿಸುತ್ತಾ।
ಎಳೆವಾರಿಗಣ್ಣಿಲಿ ನೋಡುತ್ತಾ। ಲಲನೇರಾ ತನುಮನ ಶೆಳೆಯುತ್ತಾ ।
ಕಿಲಿಕಿಲ ನಗುತೆನ್ಮೊಳು ರಮಿಸುತ ಕೆಂ ।
ದೊಳದುಟಿ ಸವಿಯುವ ಚೆಲುವ ಚೆನ್ನಿಗ ॥ ೧

ದೇವ ಕೊಳಲನೂದುವುದು । ನಾವು ಕೇಳಿ ಮುದದಿ ನಲಿದು ।
ಗೋವ್ಯಾಘ್ರ ಏಕತ್ರ ಬೆರೆದು । ಕೇವಲ ವೈರತ್ವ ಮರೆದು।
ಮೇವು ಜರಿದು ನಿನ್ನನೆ ನೋಡುತ್ತಾ । ಖಗಮೃಗ ಏಕೋ ।
ಭಾವದಿಂದ ಗಾನವ ಕೇಳುತ್ತಾ । ಚಿತ್ರದಿ ಬರೆದ ।
ಭಾವದಂತೆ ಜಗಕೆ ತೋರುತ್ತಾ । ಮನೆಮನೆಯೊಳು ।
ನಾವೀವಾರ್ತೆ ಕಿವಿಯಲಿ ಕೇಳುತ್ತಾ । ನಿಲ್ಲದೆ ತ್ವರಿತ ।
ತಾವನಬಾವನ ಮಾವಿನಮರದೊಳು । ಗೋವಳ ನಿನ್ನನು ಕಾಣುತ್ತಾ ।
ಭಾವಜ ಕಲೆಗಳು ಉಕ್ಕುತ್ತಾ । ಭಾವದಿ ಬಿಗಿ ಬಿಗಿ ದಪ್ಪುತ್ತಾ ।
ಈ ವಿಧ ಮುದ ನಮಗೀವ ಸುಖಾಂಬುಧಿ ।
ಪೂವಿನ ಶರಪಿತ ಮಾವನ ಬೆರೆದರೆ । ೨

ಅನಘ ನಿನ್ನನುಗಾರರ ಕೂಡಿ । ವನವನ ಸುಳಿಯಲು ನೋಡಿ ।
ಕೊನೆಗಣ್ಣಿಂದ ಸನ್ನೆಮಾಡಿ । ಮನೆಯ ಕೆಲಸಗಳೀಡಾಡಿ ।
ವನಿತೇರೆಲ್ಲ ಮಾತನಾಡುತ್ತಾ । ಚಲುವ ಮೂರ್ತಿಯ ।
ಮನದೊಳಗೆ ಧ್ಯಾನವಮಾಡುತ್ತಾ। ಊದುವ ಕೊಳಲ ।
ಧ್ವನಿಯ ಕರ್ಣದಿಂದ ಕೇಳುತ್ತಾ । ಬಂಧುಗಳ ಮಾತ ।
ಗಣನೆ ಮಾಡದಲೆ ಮೀರುತ್ತಾ । ನಿನ್ನನರಸುತ್ತ ।
ತನುಮನಧನವನು ಗಣನೆಗೆ ತಾರದೆ । ವನವನ ತಿರುಗುತ ಬಂದೇವೋ ।
ತನುಮನ ಒಪ್ಪಿಸಿ ನಿಂದೇವೋ । ಕ್ಷಣವನು ಅಗಲದಿರೆಂದೇವೋ ।
ಚಿನುಮಯ ಗುರು ಗೋಪಾಲವಿಠಲ ಮಾ ।
ಮನೋಹರ ಮುನಿಜನಮನ ಮಂದಿರ ನಿನ್ನಗಲಿ॥ ೩

ಎಂಬುದಾಗಿ ಹಾಡಿ ಭಾವ ಸಮಾಧಿಗೊಳಗಾದರು. ಗೋಪಾಲದಾಸರು ಸ್ವಾಮಿಗಳನ್ನು ಕುರಿತು, ಅಗೋ ವೇಣುಗಾನವಾಗುವುದು ಕೇಳಿರೆಂದರು. ಉಭಯರೂ ತಲ್ಲೀನರಾಗಿ ಶ್ರೀಕೃಷ್ಣನ ಗಾನಾನಂದದಲ್ಲಿ ಪರವಶರಾದರು.

ದಾಸರೂ ಸ್ವಾಮಿಗಳೂ ಕಲೆತಾಗಲೇ ಐಜೀಸ್ವಾಮಿಗಳ ಶಿಷ್ಯರು ಪಾಠ ಓದುವುದಕ್ಕೆ ಬಂದಿದ್ದರು. ಪಾಠಾರಂಭವೂ ನಾಲ್ವರು ಸತ್ಪುರುಷರ ವಾಚಾರಂಭಣವೂ ಏಕ ಕಾಲದಲ್ಲಿ ನಡೆದುದರಿಂದ ಸ್ವಾಮಿಗಳ ಗಮನವು ದಾಸರ ಕಡೆಗೆ ವಾಲಿತು. ಶಿಷ್ಯರು ಅವರವರ ಮಾತುಗಳನ್ನು ಕೇಳುತ್ತಾ ಕುಳಿತಿದ್ದರು. ಗೋಪಾಲದಾಸರು ವೇಣುಗಾನವಾಗುವುದು ಕೇಳಿರೆಂದು ಸ್ವಾಮಿಗಳಿಗೆ ಹೇಳಿದ ಕೂಡಲೇ ಶಿಷ್ಯರುಗಳು–'ಒಳ್ಳೇ ಹುಚ್ಚರ ಸಹವಾಸ ದೊರೆಯಿತೆ'ಂದು, ತಮ್ಮ ಪುಸ್ತಕಗಳನ್ನು ಕಟ್ಟಿಟ್ಟು ಕುಳಿತರು. ಸ್ವಾಮಿಗಳು ಬಹಿರ್ಮುಖರಾಗುತ್ತಲೇ ಶಿಷ್ಯರ ಕಡೆಗೆ ತಿರುಗಿ, 'ಯಾವ ವಾಕ್ಯವದು ಹೇಳುತ್ತಿದ್ದುದು!' ಎಂದು ಕೇಳಿದರು. ಶಿಷ್ಯರು ಪುಸ್ತಕವನ್ನು ಕಟ್ಟಿಟ್ಟೆವೆಂದು ಹೇಳಿ ಪುನಃ ಬಿಚ್ಚಲು ತೊಡಗಿದರು.

ಸ್ವಾಮಿಗಳು :—ಪುಸ್ತಕವನ್ನು ಕಟ್ಟಿಡಲು ಕಾರಣವೇನು ?

ಶಿಷ್ಯರು :—ಬಲು ವೇಳೆಯಾಯಿತು. ದಾಸರು – ವೇಣುಗಾನವಾಗುವುದು ಕೇಳಿರೆಂದು ಬೇರೆ ಶ್ರೀಗಳವರಿಗೆ ಹೇಳಿದರು. ಶ್ರೀಗಳವರೂ ಅತ್ತಕಡೆ ಆಸಕ್ತರಾಗಿದ್ದಿರಿ. ವೇಣುಗಾನವಾದ ಮೇಲೆ, ಶ್ರೀಕೃಷ್ಣನು ಬಂದಮೇಲೆ, ಅವನ ಹಿಂದೆ ಗೋವುಗಳೂ ಬರುವವು. ಅವು ಎಲ್ಲಾದರೂ ಪುಸ್ತಕದ ಮೇಲೆ ಸಗಣಿಯನ್ನು ಹಾಕುವವೆಂದು ಹೆದರಿ ನಾವು ಕಟ್ಟಿಟ್ಟೆವು !

ಸ್ವಾಮಿಗಳು ಕೋಪದಿಂದ 'ಭ್ರಷ್ಟರಿರಾ [illegible]ನುಗೆ ಪರಿಹಾಸ್ಯವಾಯಿತೇ ! ನಿಮ್ಮ ಪುಸ್ತಕದ ಮೇಲೆ ಸಗಣಿಯೇ ಬಿದ್ದುಹೋಯಿತು. ಹುಂ[illegible] ಎಂದು ಶಪಿಸಿದರು. ಆ ಶಿಷ್ಯರ ವಂಶೀಕರು ಈಗಲೂ ಜ್ಞಾನಶೂನ್ಯರಾಗಿ, ತೇಜೋಹೀನರಾಗಿರುವರು. ದೊಡ್ಡವರ ಅಪಚಾರವೆಂಬುದು ಕುಲಕುಲವನ್ನೇ ಬಾಧಿಸುವುದು.

ವ್ಯಾಸ ತತ್ವಜ್ಞರು ಅನೇಕ ಸಂಸ್ಕೃತ ಗ್ರಂಥಗಳಿಗೆ ಟಿಪ್ಪಣಿಗಳನ್ನು ಬರೆದು ವಿದ್ವಜ್ಜನರಿಗೆ ಉಪಕಾರಮಾಡಿದಂತೆ, ಸಾವಿರಾರು ದೇವರನಾಮಗಳನ್ನು ರಚಿಸಿ ಪಾಮರ ಜನರಿಗೂ ತತ್ತ್ವೋಪದೇಶಮಾಡಿ ಮಹೋಪಕಾರವಮಾಡಿರುವರು. ಗದ್ವಾಲ ಸಂಸ್ಥಾನದ ಮಹಾರಾಜನಾಗಿದ್ದ ರಾಜಾರಾಮ ಭೂಪಾಲನು ವ್ಯಾಸತತ್ವಜ್ಞರ ಅನೇಕ ಮಹಿಮೆಗಳನ್ನು ನೋಡಿ ಅವರ ಶಿಷ್ಯನಾದನು.

ಗದ್ವಾಲ ಸಂಸ್ಥಾನವು ಯಾವಾಗಲೂ ಹೈದರಾಬಾದಿಗೆ ಆಶ್ರಿತ ಸಂಸ್ಥಾನವಾಗಿದ್ದು ಪ್ರತಿವರ್ಷವೂ ಕಪ್ಪವನ್ನು ಸಲ್ಲಿಸುತ್ತಿತ್ತು. ದೇಶದಲ್ಲಿ ಮಳೆಬೆಳೆಗಳಾಗದೆ ಒಂದು ವರ್ಷದ ಪೊಗದಿಯು ಕೇಂದ್ರ ಸರ್ಕಾರಕ್ಕೆ ಗದ್ವಾಲ ಸಂಸ್ಥಾನ ಖಜಾನೆಯಿಂದ ಸಲ್ಲುವುದು ತಡವಾಯಿತು. ರಾಜಾರಾಮ ಭೂಪಾಲನು ನವಾಬನೊಡನೆ ತನಗೆ ತಕ್ಕಷ್ಟು ಕಾಲಾವಕಾಶಕೊಡಬೇಕೆಂದು ಪತ್ರವ್ಯವಹಾರ ನಡೆಸಿದ್ದನು. ವ್ಯವಸ್ಥಿತವಾದ ರಾಜ್ಯ ಪದ್ಧತಿಯಿಲ್ಲದ ಆ ಕಾಲದಲ್ಲಿ ಸೇನಾಪತಿಗಳ ಪ್ರಾಬಲ್ಯವೇ ಬಲವತ್ತರವಾಗಿತ್ತು. ಒಬ್ಬ ಮುಸಲ್ಮಾನ ಸರದಾರನಿಗೂ ಗೋಪಾಲಹರಿಯೆಂಬ ದಳಪತಿಗೂ ಗದ್ವಾಲರಾಜನಮೇಲೆ ಬಹುಕಾಲದಿಂದ ದ್ವೇಷವಿತ್ತು. ಆ ಅಧಿಕಾರಿಗಳು ನವಾಬನಿಗೆ ತಿಳಿಸದೆ ತುಂಗಭದ್ರಾ–

ಕೃಷ್ಣಾನದಿಗಳ ಇಕ್ಕೆಲಗಳಲ್ಲಿ ತಮ್ಮ ದಂಡುಗಳನ್ನು ನಿಲ್ಲಿಸಿ ಕೂಡಲೇ ಕಪ್ಪವನ್ನು ಸಲ್ಲಿಸುವೆಯೋ ಯುದ್ಧಕ್ಕೆ ಬರುವೆಯೋ ಎಂದು ಗದ್ವಾಲಭೂಪಾಲನಿಗೆ ಹೇಳಿಕಳುಹಿಸಿದರು. ಭೂಪಾಲನು ಕಪ್ಪಕೊಡಲು ಹಣವಿಲ್ಲದೆ, ಯುದ್ಧಮಾಡಲು ಬಲವಿಲ್ಲದೆ, ಏನುಮಾಡಿ ರಾಜ್ಯರಕ್ಷಣೆಮಾಡಿಕೊಳ್ಳಬಹುದೆಂದು ಆಪ್ತನೊಬ್ಬನ ಮೂಲಕ ವ್ಯಾಸತತ್ವಜ್ಞರ ಬಳಿಗೆ ಬಿನ್ನಪವನ್ನು ಕಳುಹಿಸಿದನು. ವ್ಯಾಸತತ್ವಜ್ಞರು ಆ ಸಂದರ್ಭದಲ್ಲಿ ದೇವತಾರ್ಚನೆಗೆ ಕುಳಿತಿದ್ದರು. ಪುರಾಣಿಕನು ಭಾಗವತ ಪುರಾಣ ಹೇಳುತ್ತಿದ್ದನು. ವಾರ್ತಾವಾಹಿಯು ರಾಜಕಾರ್ಯದ ಅವಸರವಿದೆಯೆಂದು ಕ್ಷಮೆ ಬೇಡಿ, ಸ್ವಾಮಿಗಳಿಗೆ ಭೂಪಾಲನ ಮನವಿಯನ್ನು ವಿಜ್ಞಾಪಿಸಿದನು. ಸ್ವಾಮಿಗಳು ಸ್ವಲ್ಪ ಹೊತ್ತು ಯೋಚಿಸಿ ಒಂದು ತಾಡಾವಾಲೆಯಮೇಲೆ—

ಧರ್ಮೋಭವತು ಸದ್ಧರ್ಮಃ । ಮಾರ್ಗಣಾಸ್ಸಂತು ಮಾರ್ಗಣಾಃ ॥
ವಾಹಿನೀ ವಾಹಿನೀ ರಾಜನ್ । ಸ್ಯಾದರಾತಿ ಪರಾಜಯಃ ॥

ಎಂಬುದಾಗಿ ಅರ್ಥಗರ್ಭಿತವಾದ ಒಂದು ಶ್ಲೋಕವನ್ನು ಬರೆದು ಕಳುಹಿಸಿದರು. ಭೂಪಾಲನು ಸ್ವಾಮಿಗಳ ಪತ್ರಾಭಿಪ್ರಾಯ ತಿಳಿಯದೆ, ಪಂಡಿತರನ್ನು ಕರೆಸಿ ಶ್ಲೋಕಾಭಿಪ್ರಾಯವೇನೆಂದು ಕೇಳಿದನು. ಅವರು ಭಾವಾರ್ಥವನ್ನು ಗ್ರಹಿಸಲಾರದೆ ಶಬ್ದಾರ್ಥ ವಿವರಣೆ ಮಾಡಿದರು. ಪಂಡಿತರ ಅರ್ಥದಿಂದ ರಾಜನಿಗೆ ತೃಪ್ತಿಯಾಗಲಿಲ್ಲ. ನಾನು ಕೇಳಿದ ವಿಷಯವೇನು, ಅವರು ದಾಸರೊಡನೆ ಕುಳಿತು ಬರೆದು ಕಳುಹಿಸಿದ ಶ್ಲೋಕವೇನು ಒಂದಕ್ಕೊಂದು ಸಂಬಂಧವಿಲ್ಲವೆಂದು, ಅಶ್ವಾರೂಢನಾಗಿ ತಾನೇ ವೇಣೀಸೋಮಪುರಕ್ಕೆ ಬಂದನು. ಸ್ವಾಮಿಗಳನ್ನು ಕುರಿತು–'ಏನು ಗುರುಗಳೇ ನನ್ನ ಆತುರವೆಂಥಾದ್ದು ? ನೀವು ಬರೆದು ಕಳುಹಿಸಿದ ಶ್ಲೋಕವೇನು ? ಶ್ಲೋಕಗಳನ್ನು ಬರೆಯುವ ಸಮಯವೇ ಇದು ? ಉಭಯ ಸರದಾರರು ಕೋಟೆಗೆ ಹಲ್ಲಾಹಾಕಿದರೆ ನನ್ನ ಪಾಡೇನಲಿ, ರಾಣಿಯರ ಮಾನದಗತಿಯೇನು ? ನನ್ನನ್ನು ವೃಥಾ ಬಳಲಿಸಿದಿರಿ' ಎಂದು ವಿಜ್ಞಾಪಿಸಿಕೊಂಡನು. ಸ್ವಾಮಿಗಳು-'ರಾಜನೇ ಹೀಗೇಕೆ ನುಡಿಯುವಿ ? ನಿನ್ನ ಆವಸರಕ್ಕೆ ತಕ್ಕ ಉತ್ತರವನ್ನೇ ಬರೆದು ಕಳುಹಿಸಿದ್ದೇವೆ. ನಿನ್ನ ಆಸ್ಥಾನದ ಕಾವ್ಯಪಂಡಿತರಿಗೆ, ಸದ್ಧರ್ಮಃ=ನಿನ್ನ ಸಮೀಚೀನವಾದ ಧರ್ಮವು, ಧರ್ಮೋಭವತು=ಧನುಸ್ಸಾಗಲಿ, ಮಾರ್ಗಣಾಃ=ಶ್ರುತಿವಾಕ್ಯಗಳು, ಮಾರ್ಗಣಾಸ್ಸಂತು=ಬಾಣಗಳಾಗಲಿ ; ವಾಹಿನೀ=ತುಂಗಭದ್ರಾ ಕೃಷ್ಣಾಪ್ರವಾಹವು ವಾಹಿನೀ ಭವತು=ಪೂರ್ಣಪ್ರವಾಹವಾಗಲಿ ; ಅದರಿಂದ ರಾಜನೇ, ಸ್ಯಾದರಾತಿಪರಾಜಯಃ= ಶತ್ರುಗಳ ಪರಾಜಯವಾಗಲಿ, ಎಂಬಷ್ಟು ಅರ್ಥ ಹೇಳಲು ತಿಳಿಯಲಿಲ್ಲವೆ ? ಇದರಲ್ಲಿ ಸಂಶಯವೇನಿದೆ'ಯೆಂದು ನುಡಿದರು.

ರಾಜನು,–'ಶ್ಲೋಕಾರ್ಥವಾಯಿತು. ಅದರಿಂದ ನನ್ನ ಇಷ್ಟಾರ್ಥಮಾತ್ರ ಆಗಲಿಲ್ಲ' ಎಂದನು.

ಸ್ವಾಮಿಗಳು, ಕೋಪದಿಂದ, ಹನ್ನೊಂದಕ್ಷೋಹಿಣೀ ಕೌರವನ ಸೈನ್ಯದ ಮೇಲೆ ಧನುರ್ಬಾಣ ಹಿಡಿದು ಯುದ್ಧಮಾಡಿದ, ಧೃಷ್ಟದ್ಯುಮ್ನನ ಮಾತಿನಲ್ಲಿ ನಿನಗೆ ಸಂಶಯವೇ?

ನಡೆ ನಡೆ. ಬೆದರಬೇಡ ಎರಡೂ ನದಿಗಳಲ್ಲಿ ಪ್ರವಾಹ ಬಂದು, ಉಭಯ ಸರದಾರರ ಸೈನ್ಯಗಳೂ ನಾಶವಾಗುವುವು. ಅಧೈರ್ಯಪಡಬೇಡ' ಎಂದು ಭರವಸೆಕೊಟ್ಟು, ಫಲ ಮಂತ್ರಾಕ್ಷತೆಗಳನ್ನು ಕೊಟ್ಟು ರಾಜನನ್ನು ಆಶೀರ್ವದಿಸಿ ಕಳುಹಿಸಿದರು. ರಾಜನು ಪ್ರತಿಮಾತನಾಡಲು ಶಕ್ತನಾಗಲಿಲ್ಲ. ಗುರುಗಳ ಮಾತಿನಲ್ಲಿ ಸಂಶಯವಿಲ್ಲ ;-ಆದರೆ ಮಾತ್ರ ಈ ಚೈತ್ರಮಾಸದಲ್ಲಿ ಪ್ರವಾಹ ಬರುವುದು ಹೇಗೋ ಎಂದು ಚಿಂತಿಸುತ್ತಾ ಗದ್ವಾಲಿಗೆ ಬಂದನು. ರಾಣಿಯರನ್ನು ಸುರಕ್ಷಿತವಾದ ಗೋಪ್ಯಸ್ಥಾನದಲ್ಲಿಟ್ಟನು. ಫಿರಂಗಿಗಳನ್ನು ಸಜ್ಜುಗೊಳಿಸಿ ತನ್ನ ಮಿತಸೈನ್ಯದೊಡನೆ ರಾತ್ರಿಯೆಲ್ಲಾ ಕೋಟೆಯನ್ನು ಕಾಯುತ್ತಾ ಎಚ್ಚರವಾಗಿ ಕುಳಿತನು.

ಅತ್ತ ಉಭಯ ಸೈನ್ಯಗಳವರೂ ಸುತ್ತ ಮುತ್ತಣ ಗ್ರಾಮಗಳಲ್ಲಿ ಸಿಕ್ಕಿದ ಕುರಿ ಕೋಳಿಗಳನ್ನು ಹಿಡಿದು ತಂದು-ಕೊಂದು ತಿಂದು, ಅಕ್ಕಪಕ್ಕಗಳಲ್ಲಿದ್ದ ಈಚಲುಗಿಡಗಳ ಹೆಂಡವನ್ನು ಕುಡಿದು ಸ್ಮೃತಿತಪ್ಪಿ ಬೇಸಿಗೆಯ ಧಗೆಗೆ ತಾಳಲಾರದೆ ನದಿಯ ಪಾತ್ರದಲ್ಲಿ ಶಯನಮಾಡಿದರು. ಸೈನಿಕರಂತೆಯೇ ಸೈನ್ಯಾಧಿಪತಿಗಳೂ ಮನಬಂದಂತೆ ಮದ್ಯಪಾನಮಾಡಿ ವೇಶ್ಯಾಲೋಲರಾಗಿ ನೀರಿನ ದಡದಲ್ಲೇ ಮಂಚಗಳನ್ನು ಹಾಕಿಕೊಂಡು ನಿದ್ರಾವಶರಾದರು. ಮಧ್ಯರಾತ್ರಿಯಲ್ಲಿ ಏಕಾಏಕಿ ಅನಿರೀಕ್ಷಿತವಾಗಿ ಉಭಯನದಿಗಳಲ್ಲೂ ಮೇರೆದಪ್ಪಿ ಪ್ರವಾಹ ಬಂದು ಬೆಳಗಾಗುವುದರೊಳಗೆ ಹೇಳುವುದಕ್ಕೆ ಹೆಸರಿಲ್ಲದಂತೆ ಎರಡು ಸೈನ್ಯಗಳೂ ಕೊಚ್ಚಿ ಹೋದವು. ತೀರಗ್ರಾಮವಾಸಿಗಳು ದಂಡಾಳುಗಳನ್ನು ಕಾಣದೆ, ದಡಗಳಲ್ಲಿ ಕಟ್ಟಿದ್ದ ಕುದುರೆಗಳನ್ನು ಹಿಡಿದು ತಂದು,-'ಮಹಾಸ್ವಾಮಿ ಉಭಯನದಿಗಳಲ್ಲೂ ಪೂರ್ಣಪ್ರವಾಹ ಬಂದಿದೆ. ಸೈನಿಕರೇನಾದರೋ ಗೊತ್ತಿಲ್ಲ. ನಾವು ಅಲ್ಲೆಲ್ಲಾ ಹುಡುಕಿ ಯಾರನ್ನೂ ಕಾಣದೆ ಕೈಗೆ ಸಿಕ್ಕಿದ ಈ ಕುದುರೆಗಳನ್ನು ತಂದಿದ್ದೇವೆ' ಎಂದು ಅವುಗಳನ್ನೆಲ್ಲಾ ಮಹಾ ರಾಜನಿಗೊಪ್ಪಿಸಿದರು. ಈ ಸುವಾರ್ತೆಯನ್ನು ಕೇಳಿ ಭೂಪಾಲನಿಗೆ ಪರಮಾನಂದವಾ ಯಿತು. ಗುರುಗಳಾಡಿದಮಾತು ಅಕ್ಷರಶಃ ಸತ್ಯವಾಯಿತೆಂದು ಕೃತಜ್ಞತಾಪ್ರದರ್ಶನಕ್ಕಾಗಿ ಜಹಗೀರುಗ್ರಾಮಗಳನ್ನೂ ಉತ್ತಮವಾದ ಇತರ ಸೇವೆಗಳನ್ನೂ ಸ್ವಾಮಿಗಳಿಗೆ ಸಮರ್ಪಣೆ ಮಾಡಿದನು. ಗದ್ವಾಲದ ಕೇಶವಸ್ವಾಮಿಯ ದೇವಾಲಯದಲ್ಲಿ ಮಹೋತ್ಸವವನ್ನು ನಡೆಯಿಸಿದನು. ರಾಜರಾಮ ಭೂಪಾಲನು ಕೊಟ್ಟ ಜಹಗೀರು ಅದ್ಯಾಪಿ ಸ್ವಾಮಿಗಳ ಪೂರ್ವಾಶ್ರಮದ ವಂಶೀಕರ ಅನುಭವದಲ್ಲಿದೆ. ಗದ್ವಾಲರಾಜ ಸಂತತಿಯವರು ಇಂದಿಗೂ ಮಹಾತ್ಮರಾದ ಶ್ರೀ ವ್ಯಾಸತತ್ವಜ್ಞರ ಪುಣ್ಯನಾಮವನ್ನು ಮರೆಯದೆ-ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದಾರೆ.

ಗೋಪಾಲದಾಸರು ಬದರಿಯಿಂದ ರಾಮೇಶ್ವರದವರೆಗಿನ ಎಲ್ಲಾ ಕ್ಷೇತ್ರಗಳ ಯಾತ್ರೆ ಮಾಡಿದ್ದರೂ, ಏನುಕಾರಣವೋ ಪಂಢರಪುರಿಗೆ ಮಾತ್ರ ಹೋಗಿರಲಿಲ್ಲ. ಒಮ್ಮೆ ದೇಶಸಂಚಾರಮಾಡಿ ಬಂದನಂತರ ಪ್ರತಿವರ್ಷವೂ ಬ್ರಹ್ಮೋತ್ಸವ ಕಾಲದಲ್ಲಿ ತಿರುಪತಿಗೆ ಹೋಗಿ ಬರುವುದರ ವಿನಾ ಮತ್ತೆಲ್ಲೂ ವಿಶೇಷ ಸಂಚಾರ ಮಾಡುತ್ತಿರಲಿಲ್ಲ. ಉತ್ತನೂರು ತಪ್ಪಿದರೆ ವೇಣೀಸೋಮಪುರ ಈ ಎರಡರಲ್ಲೊಂದೆಡೆ ದಾಸರು ಇರುತ್ತಿದ್ದರು.

ಹೀಗಿರಲು ಒಂದು ಪ್ರಾತಃಕಾಲ ತುಲಸಿಯ ನಿಮಿತ್ತ ಎಂದಿನಂತೆ ದಾಸರು ಅಡವಿಗೆ ಹೋದರು. ಸವಾರನೊಬ್ಬನು ಅವರ ಹೆಜ್ಜೆಯನ್ನೇ ಅನುಸರಿಸಿ ಕುದುರೆಯ ನ್ನೋಡಿಸುತ್ತಾ ಬಂದನು. ದಾಸರು ಮಾರ್ಗಬಿಟ್ಟು ಹೋದರೂ ಅವನು ಹಿಂಬಾಲಿಸು ವುದನ್ನು ಬಿಡಲಿಲ್ಲ. ರಾವುತನ ಭೃಕುಟಿಬದ್ಧ ಮುಖವು ಭಯವನ್ನುಂಟುಮಾಡುವಂ ತಿತ್ತು–ಓಡಿದಹಾಗೆಲ್ಲಾ ಸವಾರನು ದಾಸರನ್ನು ಅರಸಿಕೊಂಡೇ ಬಂದನು. ದಾಸರು, 'ನಾನೇನು ಮಾಡಿದೆನಪ್ಪಾ ನಿನಗೆ ದ್ರೋಹವನ್ನು ?', ಎನ್ನುತ್ತಾ ಕಾಡುಬಿದ್ದು ಓಡಿದರು. ದಾಸರು ಪೂರ್ತಿ ಸುಸ್ತಾಗಿ ನಿಲ್ಲುವವರೆಗೆ ಅವರ ಬೆನ್ನು ಬಿಡಲಿಲ್ಲ. ಮತ್ತು ಮುಂದೆ ಧಾವನ ಮಾಡಲಾರದೆ, ದಾಸರು ನಿಂತಲ್ಲೇ–'ಏನುಮಾಡುವಿಯೋ ಮಾಡು' ಎಂದು ನಿಂತುಬಿಟ್ಟರು. ಸವಾರನು ಮರಾಟಿಯಲ್ಲಿ ದಾಸರನ್ನು ಸಂಬೋಧಿಸಿ–'ಆಲೇನಾಹಿ' ಎಂದು ಒಂದು ಮಾತು ಹೇಳಿ–ಒಡನೆ ಮಾಯವಾದನು.

ದಾಸರು ಕೆಲಸಮಯ ಸ್ಮೃತಿತಪ್ಪಿದಂತಾಗಿದ್ದು – ತರುವಾಯ ಎಚ್ಚತ್ತು ನೋಡಲು, ಆ ಸವಾರನಿರಲಿಲ್ಲ. ಇದೇನು ಈ ಮಾಯವೆಂದು ಧ್ಯಾನಿಸುತ್ತಾ–ಈ ಸುಳಾದಿ ಯನ್ನು ಹೇಳಿಕೊಂಡರು.

ಸುಳಾದಿ

ಧ್ರುವತಾಳ

ನೀಲಕುದುರೆಯನೇರಿ ಶಾಲು ಟೊಂಕಕ್ಕೆ ಸುತ್ತಿ | ಕಾಲು ಕುಪ್ಪುಸ ತೊಟ್ಟು ಮೇಲೆ ಮೋಹನ್ನ ಹಾಕಿ | ತೋಳುತಾಯಿತ ಸಿರಕೆ ಮೇಲಾದ ವಸ್ತ್ರ ಸುತ್ತಿ | ಫಾಲ ಕಸ್ತೂರಿಸಿಟ್ಟು ಮೈಗೆ ಗಂಧವ ಪೂಸಿ | ಪ–ಲಾಯನದಿ ಅಶ್ವವೇರಿ ಹಾರಾಡಿಸುತ್ತ | **ಆಲೆನಾಹೀ** ಎಂದು ಕೇಳಿದನಾರವ್ವ ? | ವೇಳೆ ಸಾಲದಾಯಿತು ಕೇಳುವುದಕ್ಕೆನಗೆ | ಕೇಳುವುದಕ್ಕೆ ಮತ್ತೆ ವಚನ ಗದ್ಗದವಾಯ್ತು | ಏಳದು ವಚನವು ಉಚ್ಚರಿಸುವೆನೆನಲು | ಆಲೋಚನೆಗೆ ಅತಿ ವಿಚಿತ್ರವು | ಕೇಳಿಲ್ಲ ಕಂಡಿಲ್ಲ ಇಂಥಾ ಪುರುಷನ ಎಂದೂ | ಕಾಳ ಕತ್ತಲೆಯಲ್ಲ–ನೋಡೆ ಹಗಲು | ಕೇಳು ತಗ್ಗು ಮಿಟ್ಟೆ ಮಳೆಯ ಮಂಜೀರವಲ್ಲ | ಹೇಳ ಲೇನಿದು ಒಂದು ಸೋಜಿಗವು | ಕಾಲು ಏಳದು ಇಂದು ನಡೆಯಲು ಎನಗಿನ್ನು | ಆಲೋ ಚನೆಯೆಲ್ಲಾ ಅತ್ತಲಾಗಿ ಎನ್ನ ಕೇಳಿದನಲ್ಲೆ ಆರೆ ಮಾತಿನಿಂದಲಿ ಎನ್ನ | ಪೇಳು ಆ ಪುರು ಷನು ಅವನಾಹ ? | ಆಲೋಚನೆಗೆ ಎನಗೆ ತೋರುತಲಿದೆ ತುಲಸಿ | ಮಾಲೆ ಪರಿಮಳ ಗಂಧ ಕುರುಹಿನಿಂದ ಶೀಲ ಮೂರುತಿ ಪಂಢರಿಯ **ಗೋಪಾಲವಿಠಲ** | ಓಲಾಡಿಸುತ್ತ ಕುದುರೆ ಓಲಾಡಿ ಪೋದನೆಂದು || ೧

ಮಟ್ಟತಾಳ

ಕಂಡೀರ ಕಂಡೀರಾಖಂಡ ವ್ಯಾಪ್ತನೀತ | ಕಂಡೀರ ಕಂಡಿರಾ ಬ್ರೊಹ್ಮಾಂಡ ದೊಡೆಯನ | ಕಂಡೀರ ಮಣಿಮೌಳಿ ಮಲ್ಲಿಗೆ ದಂಡೆಯು | ಕಂಡೀರ ಶಿರಿ ಅಜ ಭವಾದಿ

ಗಳನ್ನ | ತೊಂಡರ ಮಾಡಿ ಬಿಡದೆ ಕಾಯ್ವ ಗೋಪಾಲನ್ನ | ಕಂಡೀರ ಕಂಡೀರಾ ಕಪಟ ನಾಟಕ ಹರಿಯ | ಕಂಡೀರ ಕಂಡಿರಾ **ಗೋಪಾಲವಿಠಲನ** ॥ ೨

ರೂಪಕತಾಳ

ಆವರೂಪದಲ್ಲಿ ಗೋವಕಾಯ್ದ ರೂಪ | ಆವ ಈ ರೂಪವೆ ಅಜಾದಿರೂಪವು | ಆವ ಈ ರೂಪವೆ ಆತ್ಮಾದಿರೂಪವು | ಆವ ಈ ರೂಪವೆ ಅನಂತರೂಪವು | ಶ್ರೀ ವಿಷ್ಣು ರೂಪ ಮತ್ತಿವನೆ ಸಾಕ್ಷಾತು ನೋಡೆ | ಈ ವಿಧರೂಪ ಅನಂತ ವಿರಾಟರೂಪ | ಆವ ರಾವುತನಂತೆ ಅಶ್ವವೇರಿ ಎನ್ನ | ಆ ವಿಧದಲ್ಲಿನ್ನು ಕಾವು ಗೊಳಿಸಿದರೇನು ? | ನಾವೊಂದರಿತ ವನಲ್ಲ ನಿನ್ನ ಲೀಲೆ| ಆವಲ್ಲಿಗೊ ನಾನರಿಯೆ ಬರಹೇಳಿದ್ದು ! | ಸೇವಕನ ಸ್ಥಿತಿ ನೀನೆ ಬಲ್ಲೆಯೊ ಸ್ವಾಮಿ| ನೋವಿಗೆ ಮನವೊಯ್ದು ವಶವಮಾಡಲಿ ಬೇಡ | ನಾವೊಬ್ಬನೆ ಅಲ್ಲ ನಿನ್ನ ಪೊಂದಿ ನಡೆವ | ಶ್ರೀ ವಿಜಯರಾಯರ ಸಹವಾಸದಲಿಪ್ಪ | ಜೀವರುಗಳಿಗೆಲ್ಲ ನೋವೆಂಬುದೇ ಬೇಡ | ದೇವ ಪಂಢರಿರಾಯ **ಗೋಪಾಲವಿಠಲ** | ನೀವಲಿವದಕಿಂತ ಈ ವರವನೆ ನೀಡು ॥ ೩

ಝಂಪೆತಾಳ

ನೋಡಿದಂತೆನ್ನನು ನೋಡುತಿದ್ದರೆ ಕೊನೆಗೆ | ಮಾಡಿಕೊಂಬೆ ಮನಕೆ ಆವ ನಾದಾನೆಂದು | ನೋಡ ನೋಡದೃಶ್ಯವಾದ ಕಾರಣ ಮನಕೆ | ನೋಡೆ ಎಂತಿಪ್ಪುದು ನೋಡುವರಿಗೆ | ಆಡುವ ಮಾತಲ್ಲ ಕಂಡ ಕಂಡಂತಿನ್ನು | ನೋಡಬಾರದೆ ಒಂದು ಘಳಿಗೆ ನಿಂತು ? | ನೋಡಿದಾಕ್ಷಣ ನಿನ್ನ ಬೇಡುತಿದ್ದೆನೇನ ? | ನೋಡು ಯೋಗ್ಯತೆಯರಿತು ನೋಡು ಘೊರೆಯೆ | ನೋಡು ಆವ ಸ್ಥಳಕೆ ಬರಲಿ ನಾನು ದೇವ | ನೋಡೆ ತಿಳಿಯದು ಸ್ವಾಮಿ **ಗೋಪಾಲವಿಠಲ** ॥ ೪

ತ್ರಿಪುಟತಾಳ

ಆವದೇಶಕೆ ಬರಲಿ ಆವ ಕ್ಷೇತ್ರ ನೋಡಲಿ | ಆವದಾವುದು ಬಿಡಲಿ ಆವುದ ಜಪಿಸಲಿ | ಆವದಾವುದುಡಲಿ ಆವದಾವುದ ತೊಡಲಿ | ದೇವ ನೀನಲ್ಲದಿಲ್ಲ ಇದರೊಳಗೊಂದೂ| ಆವಲ್ಲಿಗೋ ಕಾಣೆ ನೀನು ಬರಹೇಳಿದ್ದು | ಕಾವ ಕರುಣಿ ನಮ್ಮ **ಗೋಪಾಲವಿಠಲ** | ದೇವ ಪಂಢರಿರಾಯ ವಿಜಯರಾಯರ ಪ್ರೀಯ ॥ ೫

ಅಟ್ಟತಾಳ

ಶರಣು ಗೋಪಾಳರಾಯ ಶರಣು ನಿರ್ಜಿತಮಾಯಾ | ಶರಣು ಮುಕ್ತಾಶ್ರಯ ಶರಣು ಆನಂದಮಯ | ಶರಣು ಅಘಟಿತ ಘಟಿಕ ಅನಂತ ಐಶ್ವರ್ಯ | ಶರಣು ಮಹಾಪ್ರಭು ರಾಜಾಧಿರಾಜ | ಶರಣು ಶರಣು ಅಯ್ಯ ಪೂತುರೆ ಪೂತುರೆ | ಶರಣು ಶರಣು ನಮ್ಮ **ಗೋಪಾಲವಿಠಲ** | ಶರಣು ಶರಣು ಶಿರಿ ಅಜಭವಾದಿಗಳೊಡೆಯ | ಶರಣು ಶರಣು ನಿನ್ನ ಪರಿವಾರಕೆ ಎಲ್ಲಾ ॥ ೬

ಆದಿತಾಳ

ಮಾನಿಸರೂಪದಿ ಮನೆ ಮನೆ ಪೊಕ್ಕನೆ । ಮಾನಿಸರೂಪದಿ ಮನೆ ಮನೆಗೋಡಿದನೆ । ಮಾನಿಸರೂಪದಿ ಕೆನೆವಾಲ ಕದ್ದನೆ । ಮಾನಿಸರೂಪದಿ ಧನುವ ಮುರಿದನೆ । ಮಾನಿಸರೂಪದ ಅಮಾನಿಸಮಹಿಮನೆ । ಮಾನಿತವೇನಯ್ಯ ಮರೆಮೋಸಮಾಡುವುದು । ಮಾನಿಸನೆಂದು ನಿನ್ನ ಮನವಿ ಸಿಕ್ಕೈಸಿದೆ । ಮಾನಿಸಾನ್ನವನುಂಡ ಮನುಜನಾದುದರಿಂದ ಮನವಾಚಾಕಾಯದಿ ಮರೆಹೊಕ್ಕೆನೋ ಸ್ವಾಮಿ । ಮಾನವಿತ್ತು ಕಾಯೊ-**ಗೋಪಾಲ ವಿಠಲ** ॥ ೭

ಜತೆ

ಎಲ್ಲಿ ನೋಡಲು ಮತ್ತಲ್ಲಿ ನೀನಿರೆ ಬರ । ಲಿಲ್ಲ ವೆಂಬುದೇನೊ **ಗೋಪಾಲ ವಿಠಲ** ॥

ಎಂಬುದಾಗಿ, ಸವಾರನಾಗಿ ಬಂದವನು ಪಾಂಡುರಂಗನೆಂದೇ ನಿಶ್ಚಯಿಸಿ ಸ್ತೋತ್ರ ಮಾಡುತ್ತಾ ಮನೆಗೆ ಬಂದರು. ಆ ದಿನವೆಲ್ಲಾ ದಾಸರು ಭಾವಸಮಾಧಿಯಲ್ಲಿದ್ದರು. ಸಮಾಧಿಯಿಳಿದನಂತರ, ಮನಸ್ಸಿನಂತೆ ದೇಹವೂ ಸಮಸ್ಥಿತಿಗೆ ಬರಬೇಕಾದರೆ ತಕ್ಕ ಉಪಚಾರಗಳಾಗಬೇಕು. ಹಾಗಿಲ್ಲದಿದ್ದರೆ ಅಂತಹ ದೇಹಗಳು ಬಹುಕಾಲ ಬಾಳುವುದಿಲ್ಲ. ದಾಸರ ತಮ್ಮಂದಿರಿಬ್ಬರೂ ದಾಸರಬಳಿಯಲ್ಲೇ ಇದ್ದು ಸೇವೆಮಾಡಿದರು. ನಾಲ್ಕಾರು ದಿನಗಳು ಕಳೆದನಂತರ ದಾಸರು ತಮ್ಮಂದಿರನ್ನು ಕುರಿತು–'ನಾವು ಪಂಢರಿಗೆ ಬರಲಿಲ್ಲವೆಂದು ಪಾಂಡುರಂಗನು ಆಗ್ರಹದಿಂದ ನಮ್ಮನ್ನು ಓಡಾಡಿಸಿ– **ಅಲೇನಾಹೀ ?** ಎಂದು ಎಚ್ಚರಿಸಿದ್ದಾನೆ. ಪಂಢರಪುರಿಗೂ ಮತ್ತೆ ಉಡುಪಿ ಮೊದಲಾದ ಸ್ಥಳಗಳಿಗೂ ಯಾತ್ರೆ ಮಾಡಿ ಬರೋಣ ನಡೆಯಿರಿ. ನಾದಬ್ರಹ್ಮ, ಅನ್ನಬ್ರಹ್ಮ, ಕಾಂಚನ ಬ್ರಹ್ಮರನ್ನು ಬಿಟ್ಟರೆ ಹರಿದಾಸರಿಗೆ ಬೇರೆ ಗತಿಯಾವುದಿದೆ' ಎಂದು ಮೊದಲು ಪಂಢರಿನಾಥನ ಯಾತ್ರಾ ಮಂಗಳೋತ್ಸವವನ್ನು ನೆರವೇರಿಸಿದರು. ದಾಸರು ಭೀಮರಥಿಯಲ್ಲಿ ಜಾಹ್ನವಿಯನ್ನು ಧ್ಯಾನಿಸಿ ಸ್ನಾನಮಾಡಲು ಉದಕವೃದ್ಧಿಯಾದುದನ್ನು ನೋಡಿ, ಭಕ್ತಜನರು ಅವರನ್ನು ಮಹಾಪುರುಷರೆಂದು ತಿಳಿದರು.

ಧ್ಯಾನವೆಂಬುದು ಸಕಲಸಿದ್ಧಿಗಳ ಸೋಪಾನವು. ಧ್ಯಾನದಿಂದ ಪ್ರಪಂಚದ ಅಂತರ್ಬಹಿಸ್ಥಿತಿಗಳು ಗೋಚರವಾಗುವುವು. ಪ್ರಾರ್ಥನಾ ಮಂತ್ರಗಳನ್ನುಚ್ಚರಿಸುವುದೇ ಧ್ಯಾನವೆನ್ನಿಸುವುದಿಲ್ಲ. ಧ್ಯಾನವು ಮಂತ್ರಸ್ತೋತ್ರಗಳ ರೂಪದಲ್ಲಿ ಮಾತ್ರವಿಲ್ಲ. ಅದು ವ್ಯಕ್ತಿಯು ಮಾಡುವ ಸತ್ಯಶೋಧನೆಯಾಗಿರುವುದು. ಮಹಾತ್ಮರು ಉದಕ ತತ್ವವನ್ನು ಧ್ಯಾನಿಸಿ ಸ್ನಾನಮಾಡಿದರೆ ಉದಕವೃದ್ಧಿಯಾಗುವುದು. ಅವರು ಅಗ್ನಿ ತತ್ವವನ್ನು ಚಿಂತಿಸಿದರೆ-ವರೆ ಅವರೇ ಅಗ್ನಿಗೋಳದಂತೆ ಕಾಣಿಸುವರು. ಧ್ಯಾನವು ವ್ಯಕ್ತಿಯನ್ನು ಭೂಪಥದಿಂದ ಸ್ವರ್ಗಪಥಕ್ಕೇರಿಸುವುದು. ದುಃಖದಿಂದ ಶಾಂತಿಸಾಮ್ರಾಜ್ಯಕ್ಕೆ ಕರೆದೊಯ್ಯುವುದು. ಇಂತಹ ಸ್ವಾಭಾವಿಕ ಸಾಧನಾಮಾರ್ಗದ ರಹಸ್ಯವನ್ನು ತಿಳಿಯದವರು ಮಹಾತ್ಮರ ಅಂತಹ ಕೃತಿಗಳನ್ನು ಅತಿಮಾನುಷವೆನ್ನುವರು. ತಮಗೆ ತಿಳಿಯದ ಮಾತ್ರದಿಂದ–

ಧ್ಯಾನಬಲದಿಂದುಂಟಾಗುವ ಫಲಪರಿಣಾಮಗಳನ್ನು ಅವರು ಸುಳ್ಳೆಂದು ಜರಿಯುವುದಕ್ಕೂ ಹಿಂದೆಗೆಯುವುದಿಲ್ಲ.-ಇದಂತಿರಲಿ-

ಅತ್ತ ಶ್ರೀ ಗೋಪಾಲದಾಸರ ಸಾನ್ನಿಧ್ಯದಿಂದ ಪಂಢರಪುರದಲ್ಲಿ ಭಕ್ತಜನರಿಗೆ ಮಹೋತ್ಸವವಾದಂತಾಯಿತು. ಅದೇ ಕಾಲಕ್ಕೆ ಸರಿಯಾಗಿ ಆನೆಗೊಂದಿಯಿಂದ ದಿವಾನ ಪಂಗನಾಮದ ತಿಮ್ಮಣ್ಣಯ್ಯನವರು ಯಾತ್ರಿಕರಾಗಿ ಶ್ರೀ ಕ್ಷೇತ್ರಕ್ಕೆ ಬಂದರು. ಅಯ್ಯನವರಿಗೂ ಪಟ್ಟವರ್ಧನ ಸಂಸ್ಥಾನಗಳ ಸರದಾರರಿಗೂ ಸ್ನೇಹವಿತ್ತು. ಆ ಸರದಾರರೆಲ್ಲರೂ ಪಾಂಡುರಂಗನ ಭಕ್ತರಾಗಿ, ತಾವು ಪಂಢರಪುರಿಗೆ ಬಂದಾಗ್ಗೆ ವಾಸಮಾಡಲು ಪ್ರತ್ಯೇಕ ಮನೆಗಳನ್ನು ಕಟ್ಟಿಸಿಕೊಂಡಿರುವುದು ಈಗಲೂ ಶ್ರೀ ಕ್ಷೇತ್ರದಲ್ಲಿ ಕಂಗೊಳಿಸುತ್ತಿರುವುದು. ಅಯ್ಯನವರ ಲೌಕೀಕವರ್ಚಸ್ಸವು ಸರದಾರರನ್ನೂ ಗೋಪಾಲದಾಸರ ಕೀರ್ತನಗಳಿಗೆ ಆಕರ್ಷಣಮಾಡಿತು. ಅಲ್ಲಿನವರೆಗೆ ಮಹಾರಾಷ್ಟ್ರದಲ್ಲಿ ಕರ್ಣಾಟಕದಂತೆ ವ್ಯವಸ್ಥಿತವಾದ ಕೀರ್ತನ ಪದ್ಧತಿ ಏರ್ಪಟ್ಟಿರಲಿಲ್ಲ. ಮಹಾರಾಷ್ಟ್ರ ಭಕ್ತರ ಕೀರ್ತನವು ಮಾತನಾಡಿದಂತೆ ಓವಿಗಳನ್ನು ಹೇಳುವುದು, 'ವಿಠಲ ವಿಠಲ' ಎಂದು ನಾಮಭಜನೆ ಮಾಡುತ್ತಾ ಕರತಾಳ ಪೂರ್ವಕ ನರ್ತನಮಾಡುವುದು ಇಷ್ಟರಿಂದ ಪೂರ್ತಿಯಾಗುತ್ತಿತ್ತು. ಭಕ್ತಿ ಪಾಂಡಿತ್ಯಗಳೆರಡೂ ಕಲೆತ ಕೀರ್ತನವು ಆ ದೇಶೀಯರಿಗೆ ಆ ಭಾಷೆಯಲ್ಲಿ ಅತ್ಯಂತ ಅಪೂರ್ವವಾಗಿತ್ತು. ಗೋಪಾಲದಾಸರ ಕೀರ್ತನ ಶ್ರವಣದಿಂದ ಶ್ರೀಮಂತ ಸರದಾರರು ಅತ್ಯಂತ ಸಂತುಷ್ಟರಾಗಿ ಕಾಲಾಂತರದಲ್ಲಿ ಮರಾಠಿಯಲ್ಲೂ ಅದೇ ಪ್ರಕಾರದ ಕೀರ್ತನಪದ್ಧತಿಯನ್ನು ಆಚರಣೆಯಲ್ಲಿ ಬರುವಂತೆ ಮಾಡಿಕೊಂಡರು.

ಗೋಪಾಲದಾಸರು ಪಂಢರಪುರದಿಂದ ಕೊಲ್ಹಾಪುರಕ್ಕೂ, ಅನಂತರ ಮೈಸೂರು ಸೀಮೆಯ ಶಿವಮೊಗ್ಗೆಯ ಮಾರ್ಗವಾಗಿ ಉಡುಪಿಗೂ ಪ್ರಯಾಣಮಾಡಿದರು.

ಆ ಕಾಲದಲ್ಲಿ ಮುಂಡಗದ್ದೆಯ (Shimoga District) ಛಿದ್ರಂಬ ಒಬ್ಬ ತುಂಟಮನುಷ್ಯನು ಯಾತ್ರಿಕರಿಗೆ ಕಂಟಕನಾಗಿ ಅವರನ್ನು ನಿಷ್ಕರುಣೆಯಾಗಿ ಸುಲಿಗೆಮಾಡಿ ಜೀವಿಸುತ್ತಿದ್ದನು. ಮುಂಡಗದ್ದೆಯ ಮಾರ್ಗದಲ್ಲಿ ಯಾತ್ರಿಕರನ್ನು ಕಂಡಕೂಡಲೇ, ವಿನಯಸಂಪನ್ನನಂತೆ ನಟಿಸಿ ಅವರ ಆದರಾತಿಥ್ಯಮಾಡುವನಂತೆ ಸೇವೆಗೆ ಸಿದ್ಧನಾಗುತ್ತಿದ್ದನು. ಮೋಸವರಿಯದ ಜನರು ಅವನ ಉಪಚಾರಕ್ಕೆ ಮರುಳಾಗಿ, ತಮ್ಮ ದ್ರವ್ಯ ರಕ್ಷಣೆಯ ಭಾರವನ್ನು ನಂಬಿಕಸ್ಥನಂತೆ ಕಂಡು ಬರುತ್ತಿದ್ದ ಅವನ ಸಾಮರ್ಥ್ಯದಲ್ಲಿ ಭರವಸೆಯಿಟ್ಟು ಅವನಿಗೇ ವಹಿಸಿಬಿಡುತ್ತಿದ್ದರು. ಯಾತ್ರಿಕರನ್ನು ಕುರಿತು, ಛಿದ್ರನು-'ಸ್ವಾಮಿ ಇದು ಕಳ್ಳಕಾಕರಿರುವ ದಾರಿ. ಘಾಟಿಯನ್ನಿಳಿಯುವಾಗ ನೀವು ಜಾಗರೂಕರಾಗಿರಬೇಕು. ನಿಮ್ಮ ದ್ರವ್ಯವೇನಿದ್ದರೂ-ನನ್ನ ಕಡೆಯ ಜನರ ವಶಕ್ಕೆ ಕೊಟ್ಟಿದ್ದರೆ, ನಿಮಗೆ ಪ್ರಾಣಾಪಾಯವಾಗದಂತೆ ರಕ್ಷಿಸಿ, ಅವರು ಘಟ್ಟವಿಳಿದ ಕೂಡಲೇ ನಿಮ್ಮ ಸ್ವತ್ತನ್ನು ನಿಮಗೆ ಕೊಡುವರು. ನೀವು ಆ ನನ್ನ ಸೇವಕರಿಗೆ ನಿಮಗೆ ತಿಳಿದ ಬಹುಮಾನ ಮಾಡಬಹುದು' ಎಂದು ಹೇಳಿ ನಂಬಿಸಿ, ಕಡೆಗೆ ಮೋಸಮಾಡುತ್ತಿದ್ದನು. ಹಾಗೆ ತನ್ನನ್ನು ನಿಜ ದ್ರವ್ಯವನ್ನು ವಹಿಸಿಕೊಡದೆ, ಸ್ವತಂತ್ರವಾಗಿ ಪ್ರಯಾಣಮಾಡುತ್ತಿದ್ದ ಜನರ ಮೇಲೆ ತನ್ನ ಜನರ

ಕಾವಲಿಟ್ಟು, ಇಕ್ಕಟ್ಟಿನ ಸ್ಥಳಗಳಲ್ಲಿ ಅವರನ್ನು ಹೊಡೆದು ಬಡಿದು, ಅವರ ಸರ್ವಸ್ವವನ್ನೂ ಅಪಹರಿಸುತ್ತಿದ್ದನು. ಘಟ್ಟಪ್ರಾಂತದಲ್ಲಿ ಭೀಮನು ಜನರ ಕೊಲೆಮಾಡಿ ದರಿಗಳಲ್ಲಿ ತಳ್ಳಿದರೂ ಪತ್ತೆಯಾಗುತ್ತಿರಲಿಲ್ಲ. ಆದರೆ ದಂಡಪಾಣಿಗಳೂ ಖಡ್ಗಧಾರಿಗಳೂ ಆದ ತಕ್ಕ ಸಿಬ್ಬಂದಿಯೊಡನೆ ಯಾತ್ರೆ ಮಾಡುವವರಿಗೆ ಮಾತ್ರವೇ ಈ ಭೀಮನ ಅಂಜಿಕೆಯಿರುತ್ತಿರಲಿಲ್ಲ. ಪಾಪ, ಎಲ್ಲರಿಗೂ ಅದು ಹೇಗೆ ಸಾಧ್ಯವಾದೀತು!

ಗೋಪಾಲದಾಸರ ಜೊತೆಯಲ್ಲಿ ನೂರಾರುಮಂದಿ ಯಾತ್ರಿಕರು ಅಶ್ವಾರೂಢರಾಗಿ ಪ್ರಯಾಣ ಮಾಡುತ್ತಿದ್ದುದರಿಂದ ಭೀಮನಿಗೆ ಅವರನ್ನು ಎದುರಿಸಲು ಸಾಧ್ಯವಾಗಲಿಲ್ಲ. ದಾಸರ ಕಡೆಯವರಿಗೆ ಭೀಮನ ಆತಿಥ್ಯದ ಆವಶ್ಯಕತೆಯಿರಲಿಲ್ಲ. ದಾಸರಲ್ಲೂ ಅವರ ಅನುಯಾಯಿಗಳ ಗುಂಪಿನಲ್ಲೂ ದ್ರವ್ಯ ಸಂಪತ್ತಿಗೆ ಕಡಿಮೆಯಿರಲಿಲ್ಲ. ಭೀಮನು ಹೇಗಾದರೂ ಮಾಡಿ ಈ ದೊಡ್ಡ ಗುಂಪನ್ನು ಸುಲಿಯಬೇಕೆಂದು ಉದ್ದೇಶಿಸಿ-ಮೂರು ಕಳ್ಳಗಂಡಿಗಳಲ್ಲಿ ಬಲವಾದ ಕಾವಲಿರಿಸಿದನು. ತಾನೇನೋ ಸಾತ್ವಿಕ ಮನುಷ್ಯನಂತೆ ದಾಸರ ಗುಂಪಿನ ಜೊತೆಯಲ್ಲೇ ಪ್ರಯಾಣಮಾಡಿದನು. ದಾಸರು ಬೀಡಿಕೆ ಮಾಡಿದ ಸ್ಥಳಗಳಲ್ಲಿ ತಾನೂ ಇಳಿದುಕೊಂಡನು. ಅವರಲ್ಲಿ ದೊರೆತ ಪ್ರಸಾದವನ್ನೇ ಎಲ್ಲರಂತೆ ತಾನೂ ಭುಜಿಸಿದನು. ದಾಸರ ಭಜನೆಯ ಕಾಲದಲ್ಲಿ ಠಕ್ಕು ಭಕ್ತಿಯನ್ನು ತೋರಿಸುತ್ತಾ ತಾನೂ ಶ್ರೋತೃವೃಂದದಲ್ಲಿ ಕುಳಿತನು. ಇವನ ಚರ್ಯೆಯನ್ನು ನೋಡಿ ಗೋಪಾಲದಾಸರು ತಮ್ಮ ಚಿಕ್ಕ ತಮ್ಮ ದಾಸಪ್ಪದಾಸರೊಡನೆ—

ಗೋಪಾಲದಾಸರು :—ತಮ್ಮಾ ನೋಡಿದೆಯಾ ಈ ಮಾರೀಚನನ್ನು!

ದಾಸಪ್ಪದಾಸರು :—ನೋಡಿದೆ, ಬಲು ಠಕ್ಕನಾಗಿ ಕಾಣುತ್ತಾನೆ.

ಗೋಪಾಲದಾಸರು :—ಇವನೇ ಆ ಮುಂಡಗದ್ದೆಯ ಭೀಮ. ಯಾತ್ರಿಕರಿಗೆ ಔತಣಮಾಡಿಸುತ್ತಾನೆ. ದಾನದಕ್ಷಿಣೆಗಳನ್ನು ಕೊಡುತ್ತಾನೆ. ಅನಂತರ ಕಳ್ಳಗಂಡಿಯಲ್ಲಿ ಕಾದಿದ್ದು ಇದ್ದುದು ಬದ್ದುದನ್ನೆಲ್ಲ ಸುಲಿದುಕೊಳ್ಳುತ್ತಾನೆ. ಈಗ ನಮ್ಮೆಲ್ಲರ ಸುಲಿಗೆ ಮಾಡಲು ಹೊಂಚುಹಾಕಿದ್ದಾನೆ.

ದಾಸಪ್ಪದಾಸರು :—ಇರಬಹುದೆಂದು ತೋರುತ್ತೆ. ನಮ್ಮ ಜೊತೆಯಲ್ಲಿ ಹೆಂಗಸರು ಮಕ್ಕಳಿದ್ದಾರೆ. ಒಡವೆ ವಸ್ತುಗಳಿವೆ. ಯಾತ್ರಿಕರ ಬಳಿಯಲ್ಲಿ ಸಾಕಷ್ಟು ಹಣವೂ ಇದೆ. ಪಾರಾಗುವ ಬಗೆ ಹೇಗೆ?

ಗೋಪಾಲದಾಸರು:—ಸರ್ವಜ್ಞರನ್ನು (ಶ್ರೀ ಮಧ್ವಾಚಾರ್ಯರನ್ನು) ಹಿಂಬಾಲಿಸಿದ ಕಳ್ಳರ ಕಥೆಯೇ ಈ ಭೀಮನದಾಗುವುದು. ಅವರ ಗತಿಯೇ ಇವರಿಗೂ ಉಂಟಾಗುವುದು. ಯೋಚನೆಯೇಕೆ?

ಅಣ್ಣತಮ್ಮಂದಿರು ಹೀಗೆ ಮಾತನಾಡಿಕೊಳ್ಳುತ್ತಾ ಪ್ರಯಾಣ ಸಾಗುತ್ತಿರುವಾಗ ದಾಸರ ಪರಿವಾರವು ಆ ಕಣಿವೆಯ ಇಕ್ಕಟ್ಟಾದ ಒಂದು ಸ್ಥಳವನ್ನು ಸೇರಿತು. ಭೀಮನು ಎಲ್ಲರಿಗಿಂತ ಮುಂದೆ ಬಂದು ತನ್ನ ನೂರಾರು ಮಂದಿ ಕಳ್ಳರೊಡನೆ ಸೇರಿಕೊಂಡನು.– 'ಒಳ್ಳೇ ಬೇಟೆ ಸಿಕ್ಕಿತು ಬಿಡಬೇಡಿರಿ. ಹೆಂಗಸರು ಮಕ್ಕಳೆಂದು ನೋಡಬೇಡಿರಿ. ಒಬ್ಬೊ

ಬ್ಬಳ ಮೇಲೆ ಸೇರುಗಟ್ಟಲೆ ಭಂಗಾರವಿದೆ. ಒಬ್ಬಿಬ್ಬರನ್ನು ಬಲವಾಗಿ ಪ್ರಹರಿಸಿದಿರೆಂಪರೆ ಮಿಕ್ಕವರೆಲ್ಲ ಪ್ರಾಣಭಯದಿಂದ ಸುಲಭವಾಗಿ ಇದ್ದದ್ದನ್ನೆಲ್ಲ ಒಪ್ಪಿಸುವರು' ಎಂದು ಆ ಪಾಪಿಯು ತನ್ನ ಅನುಯಾಯಿಗಳನ್ನು ಪ್ರೋತ್ಸಾಹಿಸಿದನು. ಕುದುರೆಯ ಮೇಲೆ ಕುಳಿತು ಮುಂದೆ ಬರುತ್ತಿದ್ದ ದಾಸರನ್ನು 'ನಿಲ್ಲಿರಿ' ಎಂದು ಹೂಂಕರಿಸಿ ತಡೆದನು.

ದಾಸರು :—'ಏನು ಭೀಮ, ನಮ್ಮೆಲ್ಲರ ಸುಲಿಗೆ ಮಾಡಲು ಬಂದೆಯಾ ?' ಎಂದರು. ಭೀಮನು, ಇದಾರು ತನ್ನನ್ನು ಗುರುತಿಸಿ ಮಾತನಾಡುವವರೆಂದು ಚಕಿತನಾದನು. ದಾಸರಮುಖವನ್ನು ನೋಡಿ–'ಯಾರೋ ನನ್ನನ್ನು ಭೀಮ ಎನ್ನುವವರು' ಎಂದು ಮೇಲೇರಿ ಬಂದನು. ಆಗ ದಾಸರು ಏನೂ ಮಾತನಾಡದೆ, ಅವನನ್ನೊಮ್ಮೆ ದಿಟ್ಟಿಸಿ ನೋಡಿದರು. ಜನರಮೇಲೆ ಪ್ರಯೋಗಿಸಲು ದಂಡವನ್ನೆತ್ತಿದ ಭೀಮನಿಗೂ ಅವನ ಅನುಚರರಿಗೂ--ಎತ್ತಿದ ಕೈಗಳು ಹಾಗೇ ಸೆಟೆದು ನಿಂತು–ಇಳಿಸಲು ಬರದಂತಾದುವು. ನಿಂತವರು ನಿಂತಂತೆಯೇ ನಿಶ್ಚೇಷ್ಟಿತರಾದರು. ದಾಸರು ತಮ್ಮ ಕಡೆಯವರಿಗೆ ಹೆದರಬೇಡಿರೆಂದು ಆಶ್ವಾಸನವಿತ್ತು, ಮೌನವಾಗಿ ಮುಂದುವರಿದು ನಡೆದರು. ಭೀಮನು ತನ್ನಂತೆ ತನ್ನ ಕಡೆಯವರಿಗೂ ಆದ ಮುಗ್ಧಾವಸ್ಥೆಯನ್ನು ಕಂಡು, ಹೀಗೇಕಾಯಿತೆಂದು ಒಬ್ಬೊಬ್ಬರೂ ಮುಖನೋಡಿಕೊಂಡು ಪ್ರಶ್ನೆಮಾಡಿಕೊಂಡರು. ಯಾರಿಂದಲೂ ಸರಿಯಾದ ಉತ್ತರ ಬರದಿದ್ದುದನ್ನು ನೋಡಿ, ಯಾತ್ರಿಕರ ಸಂಖ್ಯೆ ಹೆಚ್ಚಾಗಿದ್ದುದರಿಂದ ತಮ್ಮೆಲ್ಲರಿಗೂ ಏನೋ ಕ್ಷಣಕಾಲ ಹಾಗಾಗಿರಬಹುದೆಂದು ಪುನಃ ಧೈರ್ಯ ತಾಳಿದನು. ಏನಾದರೂ ಈ ಗುಂಪನ್ನು ಬಿಡಬಾರದೆಂದು ಕಳ್ಳರನ್ನು ಹುರಿಗೊಳಿಸಿ, ಒಳದಾರಿಯಿಂದ ಪ್ರಯಾಣ ಮಾಡಿ, ಮತ್ತೊಂದು ಕಣಿವೆಯ ಬಳಿ ತನ್ನ ಗುಂಪಿನವರೊಂದಿಗೆ ಸಜ್ಜಾಗಿ ನಿಂತನು. ದಾಸರು ತಮ್ಮನನ್ನು ಕುರಿತು, ನಿಮಗೆಲ್ಲಾ ಮತ್ತೊಮ್ಮೆ ಪಾರೀಜನ ದರ್ಶನವಾಗುವುದೆಂದರು. ಯಾತ್ರಿಕರು ಹಿಂದಾದಂತೆಯೇ ಮುಂಪೂ ಕಳ್ಳರ ಗತಿಯಾದೀತೆಂದು ನಿರ್ಭಯದಿಂದ ಮುಂದೆ ನಡೆದರು. ದಾಸರು ಹಿಂದಿನಂತೆಯೇ ಮತ್ತು ಅಧಿಕವಾಗಿಯೋ ಅಂತೂ ಏನಾದರಾಗುವುದೆಂದರು. ಯಾತ್ರಿಕರು ಕಣಿವೆಯ ಬಳಿಗೆ ಬರಲು ಭೀಮನು ಜೇವದ ಹಂಗು ದೊರೆದು ಗುಂಪಿನಮೇಲೆ ಬಿದ್ದನು. ಕಳ್ಳರು ದಂಡಗಳನ್ನೆತ್ತಲಾರದೆ ಕುರುಡರಾಗಿ ತಡವರಿಸುತ್ತಾ ನಿಂತುಬಿಟ್ಟರು. ಭೀಮನು ಇವರೇನೋ ಕಣ್ಣುಕಟ್ಟು ಮಾಡಿರುವರೆಂದು ಚಿಂತಾತುರನಾಗಿ, ಮುಹೂರ್ತಕಾಲಾನಂತರ, ಎಲ್ಲರೂ ತಮ್ಮ ಸ್ಥಿತಿ ಹೀಗೇಕಾಯಿತೆಂದು ಚರ್ಚಿಸುತ್ತಾ–ಆದರೂ ಧೈರ್ಯಗೆಡದೆ, ಮುಂದೆ ಹಾಗಿದ್ದ ಯಾತ್ರಿಕರನ್ನು ಮೂರನೆಯ ಕಣಿವೆಯ ಬಳಿಯಲ್ಲಾದರೂ ಸುಲಿಯಬೇಕೆಂದು ನಿಶ್ಚಯಿಸಿ–ಒಳದಾರಿಯಲ್ಲಿ ನಡೆದು ಇನ್ನೊಂದು ಇಕ್ಕಟ್ಟಿನ ಸ್ಥಳದಲ್ಲಿ ಇದೇ ಕಡೆಯ ಸಾಹಸವೆಂದು ಕಾದು ನಿಂತನು. ಈ ಸಲದ ಭೀಮನ ಪರಾಭವವು ಅವನು ಜನ್ಮದಲ್ಲಿ ಮರೆಯುವಂತಾಯಿತು. ಭೀಮನೂ ಅವನ ಅನುಯಾಯಿಗಳಾದ ಕಳ್ಳರೂ ಎತ್ತಿದ ಕೈಯನ್ನು ಇಳಿಸಲಾರದೆ, ಮಾತನಾಡಲು ನಾಲಿಗೆ ಬಾರದೆ, ನೋಡಲು ಕಣ್ಣು ಕಾಣದೆ ಸ್ಥಾಣುಗಳಂತ ನಿಶ್ಚೇಷ್ಟಿತರಾಗಿ ಹೋದರು. ಯಾತ್ರಿಕರೆಲ್ಲಾ ಆ ಕಣಿವೆಯನ್ನೂ ದಾಟಿ ಮುಂದೆ ಹೋದರು.

ಆ ದಿನವೆಲ್ಲಾ ಕಳೆದರೂ, ಭೀಮನಿಗೂ ಆ ಕಳ್ಳರಿಗೂ ಎತ್ತಿದ ಕೈ ಇಳಿಸಲು ಬರಲಿಲ್ಲ. ಹಿಂದಿನಂತೆ ಕಣ್ಣು ಕಾಣಿಸಲಿಲ್ಲ. ಸಾಲದುದಕ್ಕೆ ನಾಲಿಗೆಯ ವ್ಯಾಪಾರವೂ ನಿಂತು ಹೋಯಿತು. ಮುಂದೆ ನಡೆದ ದಾಸರ ಪರಿವಾರವು ಸಮೀಪದಲ್ಲೇ ಇದ್ದ ಒಂದು ಜಲ ವಸತಿಯ ಸ್ಥಳದಲ್ಲಿ ಬಿಡಾರಮಾಡಿ ಆ ದಿನದ ಪೂಜೆ ಭೋಜನಗಳನ್ನು ನೆರವೇರಿಸಿದರು. ರಾತ್ರಿಯ ಭಜನೆಯು ಎಂದಿನಂತೆ ಉದ್ರೇಕ ಜನಕವಾಗಿಯೇ ನಡೆಯಿತು. ದಾಸರ ಸಂಗಡಿಗರು ಕಳ್ಳರಿಗಾದ ಚಿತ್ರಗತಿಯನ್ನು ನೆನೆನೆನೆದು ಆಶ್ಚರ್ಯಭರಿತರಾದರು. ದಾಸರ ಅಗಾಧಮಹಿಮೆಯಿಂದ ಆ ಪರಿಣಾಮವಾಯಿತೆಂದು ತಮಗೆ ತಾವೇ ಧನ್ಯವಾದ ಮಾಡಿಕೊಂಡರು.

ನಿಂತ ಜಳಿಯಲ್ಲೇ ನಿಂತಿದ್ದ ಭೀಮನೂ ಅವನ ಜೊತೆಯ ಕಳ್ಳರೂ ಆಹಾರವಿಲ್ಲದೆ ಪರಿತಪಿಸುತ್ತಾ, ರಾತ್ರಿ ಭಜನೆಯಾಗುತ್ತಿದ್ದ ಸಪ್ಪಳವನ್ನು ಕೇಳಿ, ತಡವರಿಸಿಕೊಂಡು ದಾಸರಿದ್ದ ಬಳಿಗೆ ಬಂದು ಶರಣಾಗತರಾದರು. ಎಲ್ಲರ ಯಜಮಾನ ಭೀಮನು–'ಸ್ವಾಮಿ ನಾವು ಮಹಾಪಾಪಿಗಳು. ನಿಮ್ಮ ಪಾದಗಳಲ್ಲಿ ಅಗಾಧ ಅಪರಾಧ ಮಾಡಿದ್ದೇವೆ. ತಾವು ಸತ್ಪುರುಷರು. ಮಹಾನುಭಾವರು. ನಮ್ಮ ಕಣ್ಣು ನಾಲಿಗೆಗಳನ್ನು ಅನುಗ್ರಹಿಸಬೇಕು. ನಮ್ಮ ಸಕಲ ಅಪರಾಧಗಳನ್ನೂ ಕ್ಷಮಿಸಿ ಕಾಪಾಡಬೇಕು.' ಎಂದು ಸಂಜ್ಞೆಯಿಂದಲೇ ಬೇಡಿಕೊಂಡನು. ದಾಸರು–'ಎಲೋ ಪಾಪಿ, ನೀನು ಇಷ್ಟು ಜನ ದುರುಳರ ಗುಂಪನ್ನು ಕಟ್ಟಿಕೊಂಡು, ಎಷ್ಟು ಜನ ಯಾತ್ರಿಕರ ಸುಲಿಗೆಮಾಡಿ, ಎಷ್ಟು ಜನರ ಕೊಲೆ ಮಾಡಿ ಇನ್ನೂ ಜೀವಿಸಿರುವೆಯಲ್ಲಾ! ನಾನು ಬ್ರಾಹ್ಮಣನಾದುದರಿಂದ ನಿಮ್ಮ ಈ ದುಸ್ಥಿತಿಯನ್ನು ನೋಡಿ ನಿಮ್ಮನ್ನು ಕ್ಷಮಿಸಬೇಕಾಗಿದೆ. ಇನ್ನು ಮುಂದೆ ಈ ಜನ್ಮದಲ್ಲಿ ಇಂಥಾ ಪಾಪಕಾರ್ಯಗಳನ್ನು ಮಾಡುವುದಿಲ್ಲವೆಂದು ಪ್ರಮಾಣಮಾಡಿದರೆ ಮಾತ್ರ ನೀವು ಮೊದಲಿನಂತಾಗುವಿರಿ' ಎಂದು ಜಬರಿಸಿದರು. ಆ ಪಾಪಿಗಳ ದುಃಖಸ್ಥಿತಿಯನ್ನು ನೋಡಿ ಕನಿಕರತಾಳಿ ಅವರಲ್ಲಿ ಕೃಪೆಮಾಡಿದರು. ದಾಸರ ದಯಾಮಯ ಕಟಾಕ್ಷವೂ ಅನುಗ್ರಹವೂ ಅವರಿಗೆ ಪೂರ್ವಸ್ಥಿತಿಯಂತೆ ಇಂದ್ರಿಯಗಳ ಸ್ವಾಧೀನತೆಯನ್ನುಂಟುಮಾಡಿದುವು. ಆಗಲಾ ಕಳ್ಳ ಭೀಮನು–'ಸ್ವಾಮಿ ಹುಟ್ಟಿದಾಗಿನಿಂದ ನಮ್ಮ ಜನ್ಮವೇ–ಹೀಗೆ ಯಾತ್ರಿಕರ ಸುಲಿಗೆ ಮಾಡಿ ಜೀವಿಸುವುದಾಯಿತು. ಇದು ದುಷ್ಕರ್ಮವೆಂದು ತಿಳಿದಿದ್ದೇವೆ. ಆದರೆ ಮುಂದೆ ನಮ್ಮ ಜೀವನೋಪಾಯ ಮಾರ್ಗವೇನು? ನಾವು ಹೇಗೆ ಜೀವಿಸೋಣ? ಅಪ್ಪಣೆ ಕೊಡಿಸಬೇಕು' ಎಂದು ಪ್ರಾರ್ಥಿಸಿದನು. ಆಗ ದಯಾಮಯರಾದ ದಾಸರು 'ಯಾರೋ ಪೂರ್ವರಾಜರು ಭೂಗತಮಾಡಿದ್ದ ನಿಕ್ಷೇಪವನ್ನು ತೋರಿಸಿ, ಆ ಧನದಿಂದ ಭೂಮಿಕಾಣಿಗಳನ್ನು ಪಡೆದು–ದುಡಿಮೆಮಾಡಿ ಒಕ್ಕಲುತನದಿಂದ ಬದುಕಿರಿ' ಎಂದು ಆಶೀರ್ವಾದ ಮಾಡಿ ಕಳುಹಿಸಿದರು. ಭೀಮನೇ ಮುಂತಾದ ಆ ಕಳ್ಳರ ಸಂಗಡಕ್ಕೆ ಇದೊಂದು ಪರಿಯ ಅನುಗ್ರಹವೇ ಆಯಿತು. ಚಂದನವೃಕ್ಷವು ತನ್ನನ್ನು ಕಡಿವ ಕೊಡಲಿಗೂ ತನ್ನ ಸುಗಂಧವನ್ನು ತಗುಲಿಸುವಂತೆ, ಸತ್ಪುರುಷರಾದ ಪುರಂದರರು ತಮ್ಮ ಸರ್ವಸ್ವವನ್ನೂ ಸೂರೆಗೊಳ್ಳಲು ಸಿದ್ಧರಾಗಿದ್ದ ಆ ಕೇಡಿಗರಿಗೂ ಸನ್ಮಾರ್ಗವನ್ನೂ ಜೀವನೋಪಾಯದ ಸರಳಮಾರ್ಗ

ವನ್ನೂ ತೋರಿಸಿ ಉದ್ಧರಿಸಿದರು. ಹರಿದಾಸರ ದಯಾಮಯ ಮನಸ್ಥಿತಿಯೇ ಇಂಥಾದ್ದು !

ಗೋಪಾಲದಾಸರು ಉಡುಪೀಕ್ಷೇತ್ರದಲ್ಲಿದ್ದು ಹಾಡಿದ ದೇವರನಾಮ ಸುಳಾದಿಗಳು ಅತ್ಯಂತ ಸ್ಫರ್ತಿದಾಯಕಗಳಾಗಿವೆ. ಮಹಿಮಾದ್ಯೋತಕಗಳಾಗಿವೆ. ದಾಸರು ಉತ್ತನೂರಿಗೆ ಬಂದನಂತರ ಗುರುಗಳಾದ ವಿಜಯರಾಯರ ಆಜ್ಞಾನುಸಾರ ಮಾನವಿಯ ನರಸಿಂಹಾಚಾರ್ಯರಿಗೆ (ಭಾವೀ ಜಗನ್ನಾಥದಾಸರು) ಪ್ರಾಪ್ತವಾಗಿದ್ದ ಉದರ ಶೂಲೆಯನ್ನು ಪರಿಹರಿಸಿ, ತಿರುಪತಿಯಲ್ಲಿ ಮತ್ತೆ-ತಮ್ಮ ಆಯುಸ್ಸಿನಲ್ಲಿ ನಲವತ್ತು ವರ್ಷಗಳ ಆಯುರ್ದಾನಮಾಡಿ, ಹರಿದಾಸಪದವಿಯಲ್ಲಿ ದೀಕ್ಷೆಯನ್ನನುಗ್ರಹಿಸಿದರು. ಈ ಚರಿತ್ರೆಯು ಮುಂದೆ ಜಗನ್ನಾಥದಾಸರ ವೈಭವ ವಿವರಣೆಯಲ್ಲಿ ವಿಸ್ತಾರವಾಗಿ ಬರುವುದರಿಂದ ಇಲ್ಲಿ ವಿಸ್ತರಿಸುವುದಿಲ್ಲ.

ಜಗನ್ನಾಥದಾಸರಿಗೆ ರೋಗ ನಿವಾರಣೆಮಾಡಿ, ಆಯುರ್ದಾನ ಮಾಡಿದನಂತರ ಆ ಉದರಶೂಲೆಯು ಪ್ರಾರಬ್ಧರೂಪವಾಗಿ ಗೋಪಾಲದಾಸರನ್ನು ಬಾಧಿಸತೊಡಗಿತು. ಆ ಕಾರಣದಿಂದ ದಾಸರು ಪ್ರಾತಃಕಾಲ ಹತ್ತುಘಂಟೆಯೊಳಗೆ ಭೋಜನಮಾಡಲಾರಂಭಿಸಿದರು. ಇಷ್ಟಾದರೂ, ಏನಾದರೊಂದು ಬಲವತ್ತರ ಕಾರಣದಿಂದ ಭೋಜನಮಾಡುವುದು ತಡವಾದರೆ, ಉದರಶೂಲೆಗೊಳಗಾಗಿ ದಾಸರು ದುಃಖಾನುಭವ ಮಾಡುತ್ತಿದ್ದರು. ಹೀಗಿರಲು ತಿರುಪತಿಯ ಬ್ರಹ್ಮೋತ್ಸವಕ್ಕೆ ಪದ್ಧತಿಯಂತೆ ಪಾದಚಾರಿಗಳಾಗಿ ಪ್ರಯಾಣಮಾಡುವ ಸರದಿ ಬಂತು. ದಾಸರು ಪ್ರಾರಬ್ಧಾನುಭವದ ಭೀತಿಯೇನಿದ್ದರೂ ತಮ್ಮ ನಿಯಮ ಮೀರದೆ ಪಾದಚಾರಿಗಳಾಗಿಯೇ ಪ್ರಯಾಣ ಬೆಳಸಿದರು. ಶೀಳು ದಾರಿಗಳ ಅರಣ್ಯದಲ್ಲಿ ನಡೆಯುತ್ತಿರುವಾಗ ದಾಸರ ಮತ್ತು ಅವರ ತಮ್ಮಂದಿರ ಮಾರ್ಗಗಳು ಬೇರೆ ಬೇರೆಯಾದುವು. ಮುಂದೆ ಮುಂದೆ ನಡೆದ ತಮ್ಮಂದಿರು ತಂಗಿದ ಬಳಿಗೆ-ಮಧ್ಯಾಹ್ನವಾದರೂ ಗೋಪಾಲದಾಸರು ಬರಲಿಲ್ಲ. ಚಿಕ್ಕ ತಮ್ಮ ಗುರು ಗೋಪಾಲದಾಸರು (ದಾಸಪ್ಪದಾಸರು) ಕಾಲಾತೀತವಾದ್ದರಿಂದ ತಮ್ಮ ಅಣ್ಣಂದಿರಿಲ್ಲೀ ಉದರಶೂಲೆಗೊಳಗಾಗಿ ಶಯನಮಾಡಿರಬೇಕೆಂದು ಚಿಂತಾಕ್ರಾಂತರಾದರು. ತಾವು ಮುಂದೆ ನಡೆದು ಬಂದುದರಿಂದ ಹಿರಿಯರಿಗೆ ಅಪಚಾರ ಮಾಡಿದಂತಾಯಿತೆಂದೂ, ಇನ್ನು ಮುಂದೆ ಅವರಿಗೆ ಉದರಶೂಲೆ ಬರದಂತೆ ಪರಮಾತ್ಮನನ್ನು ಪ್ರಾರ್ಥಿಸಬೇಕೆಂದೂ ಸ್ನಾನಮಾಡಿ, ಕೆಳಕಂಡಂತೆ, ಮಧ್ಯಾಹ್ನ ಕಾಲಕ್ಕೆ ತಕ್ಕ ಮಧ್ಯಮಾವತೀ ರಾಗದಲ್ಲಿ ಒಂದು ಪದವನ್ನು ರಚಿಸಿ ಹಾಡಿದರು —

ಮಧ್ಯಮಾವತಿ-ತ್ರಿಪುಟತಾಳ

ವಿಜಯ ವಿಠ್ಠಲರಾಯಾ । ಅಸ್ಮದ್ಗುರೋರ್ಗುರು ಪ.
ವಿಜಯರಾಯರ ಪ್ರಿಯಾ । ಸ್ತುತಿ ಶ್ರವಣ ವಂದನೆ
ಭಜನೆ ತಿಳಿಯನು ಜೀಯಾ । ಒಲಿದೆನ್ನ ಪಾಲಿಸು
ನಿಜಯ ಸುಖ ಸುಖದಾಯ । ನಿರ್ಧೂತಮಾಯಾ ॥

ತ್ರಿಜಗದೀಶ್ವರ ತ್ರಿಗುಣರಹಿತಾ
ವ್ರಜ ಜನಾರ್ತಿಹ ಸತತ ಶ್ರೀ ವಧೂ
ಭುಜಕೃತಾಶ್ರಿತ ಕುಂಕುಮಾಂಕಿತ
ನಿಜಪದಾಂಬುಜ ತೋರೊ ಮನದಲಿ ॥ ೨.

ಇಂದ್ರಭವಮುಖ ಅಮರ । ತಾರಾನಿಕರದೊಳು
ಚಂದ್ರನಂತಿಪ ಧೀರ । ಪುರುಷೋತ್ತಮನೆ ಖಚ
ರೇಂದ್ರ ಸ್ಕಂಧ ವಿಹಾರ । ಮಮಸ್ವಾಮಿ ಸತತ ಫ
ಣೀಂದ್ರ ಶೈಲಾಗಾರಾ । ಸೌಂದರ್ಯ ಸಾರಾ ॥
ಚಂದ್ರಮಂಡಲ ಮಧ್ಯವರ್ತಿಯೆ
ಚಂದ್ರಮಂಡಲ ನಿಭಶುಭಾನನ
ಚಂದ್ರ ಸೋದರಿ ರಮಣ ಯದುಕುಲ
ಚಂದ್ರ ಗೋಪಾಂಗನೆಯರ ಹೃದಯ
ಚಂದ್ರ ಕಾಂತಿಯ ಮಣಿ ಸಮೂಹಕೆ
ಚಂದ್ರ ಮುನಿಹೃತ್ಕುಮುದ ಕೋರಕ
ಚಂದ್ರ ಚಕ್ರ ಗದಾಬ್ಜಧರ ಶತ
ಚಂದ್ರ ಪಾಣಿ ಸುಜನ ಚಕೋರಕೆ
ಚಂದ್ರ-ಚಂದ್ರ ಕುಲಾಬ್ಧಿ ಚಂದ್ರನೆ
ಚಂದ್ರ ರವಿಸ್ಮರನಂತೆ ಪ್ರಭೋ ಅಜ
ಚಂದ್ರ ಶೇಖರನುತ ಚರಣ ನಖ
ಚಂದ್ರ ಚಂದ್ರಿಕೆ ತೋರಿ ಮನದಲಿ ॥ ೩.

ಮೌನವ್ರತ ಶ್ರುತಿಧ್ಯಾನ । ಅಹರಹಃ ಜಪ ವ್ಯಾ
ಖ್ಯಾನ ಧರ್ಮಸುದಾನ । ಅಜಿತೇಂದ್ರಿಯರಿಗಹಿ
ಕಾನುಭವ ಕಾರಣ । ಡಾಂಭಿಕರಿಗಿವು ಫಲ
ವೇನ ಕೊಡವೊ ನಿದಾನ । ಮೋಕ್ಷಕಿವೆ ಕಾರಣ

ನಾನು ಅಜಿತೇಂದ್ರಿಯನು ಡಾಂಭಿಕ
ಈ ನುಡಿದ ಸಾಧನದೊಳೊಂದನು
ಕಾನ ಕಂಡೂ ಕೇಳಿ ಅರಿಯೆನು
ನೀನೊಲಿದು ರಕ್ಷಿಪ ಉಪಾಯವ
ನೀನೆ ಬಲ್ಲೆಯೊ ವಿಭುವೆ ಸುಖಮಯ
ಮೀನ ಮಂದರ ಧರ ಧರಾಧರ
ಶ್ರೀ ನೃಸಿಂಹ ಮಾಣವಕ ಭಾರ್ಗವ
ಜಾನಕೀಪತಿ ಕೃಷ್ಣ ಬುದ್ಧನೆ

ದೀನ ವತ್ಸಲ ಕಲ್ಕಿ ಹಯಮುಖ
ನಾನಾರೂಪ ಗುಣಾತ್ಮಕನೆ ಜಗ
ತ್ರಾಣ ನಿಖಿಳ ಬಿಂಬಾಹ್ವಯ ಕ್ರಿಯಾ
ಜ್ಞಾನ ಪಾಲಿಸು ಶ್ರೀನಿಕೇತನ ೨

ನಾನು ಮಾಡುವ ಸ್ನಾನ | ನಿಮಗದೆ ವಿಚಿತ್ರ
ಸ್ನಾನ ಗಂಧಸುವಸನ | ಉಪವೀತಸ್ರಕು ಅಚ
ಮಾನ ದೇಹವೆ ಭವನ | ಮನಸಿನ ಬಯಕೆಗಳು
ನಾನಾ ಮಣಿಗಳಾಭರಣ | ದೀಪವೆ ಸುಜ್ಞಾನ ||

ಕೋಣತ್ರಯ ಹೃದಯಾಬ್ಜ ಪೀಠವು
ಈ ನೆರೆದ ಜನರೇ ಆವರಣವು
ಪಾನ ಉಂಬನ್ನವೆ ನೈವೇದ್ಯವು
ಘ್ರಾಣೇಂದ್ರಿಯ ವಿಷಯ ಧೂಪವು
ಕಾಣಿಕೆ ಭಕುತಿ ಗತಿ ಪ್ರದಕ್ಷಿಣೆ ಶ
ಯಾನ ನಮನ ನುಡಿಯೆ ಮಹಾಜಪ
ಏನಕಂಡುದು ಕೇಳಿದುದು ಸುಖ
ಶ್ರೇಣಿ ನಿನ್ನಯ ಪ್ರತಿಮೆಗಳು ಜಗ
ತ್ರಾಣ ಗುರುಗೋಪಾಲ ವಿಠಲ
ದೀನ ವತ್ಸಲ ಸಾತ್ವತಾಂಪತಿ
ನೀನಿರುತ ಒಲಿದೆನ್ನ ಪಾಲಿಸು || ೩

ಎಂಬುದಾಗಿ ಪ್ರಾರ್ಥನೆ ಮಾಡಿದರು. ಗುರು ಗೋಪಾಲದಾಸರ ಪದಗಳಲ್ಲಿ ಇದು ಬಲು ಅರ್ಥವತ್ತಾದ ಪದವು. ಮಹಿಮಾ ಪ್ರದರ್ಶಕವಾದ ಪದವು.

ಸನಾತನ ಧರ್ಮರೀತ್ಯಾ ಸನ್ಯಾಸಿಯಾದ ವಿನಾ ಹಿರಿಯರಿಗೆ ಕಿರಿಯರು ಅನುಗ್ರಹಮಾಡಲು ಅಧಿಕಾರವಿರುವುದಿಲ್ಲ. ದಾಸಪ್ಪ ದಾಸರಿಗೆ ಗೋಪಾಲದಾಸರು ಅಣ್ಣಂದಿರು; ವಿದ್ಯಾಗುರುಗಳು; ಅಪರೋಕ್ಷಕ್ಕೂ ಗುರುಗಳು. ಗೋಪಾಲದಾಸರಿಗೆ ವಿಜಯದಾಸರು ಗುರುಗಳು. ಅನುಗ್ರಹವು ಯಾವಾಗಲೂ ಗುರುಮುಖದಿಂದ ಬರಬೇಕು. ಆದುದರಿಂದ ದಾಸಪ್ಪ ದಾಸರು, 'ವಿಜಯವಿಠಲರಾಯ' ಎಂಬುದಾಗಿ ತಮ್ಮ ಗುರುಗಳೆನಿಸಿದ ವಿಜಯದಾಸರ ಉಪಾಸ್ಯಮೂರ್ತಿಯ ಹೆಸರಿನಿಂದ ಪ್ರಾರ್ಥನಾ ರೂಪವಾದೀಪದವನ್ನಾರಂಭಿಸಿದರು. ಉದರಶೂಲೆಯು ಉಷ್ಣತೆಯಿಂದುಂಟಾಗುವ ವ್ಯಾಧಿ. ಉಷ್ಣವನ್ನು ಪರಿಹರಿಸಲು ಔಷಧವಾದರೂ ಶೀತಲವಾಗಿರಬೇಕು. ಈ ಪದದ ಪ್ರಥಮ ಚರಣದಲ್ಲಿ ಪರಮಾತ್ಮನನ್ನು ಚಂದ್ರನಿಗೆ ವಿಶೇಷಿಸಿ ಮಾತುಮಾತಿಗೆ ಚಂದ್ರ ಶಬ್ದವನ್ನು ಪ್ರಯೋಗಿಸಿರುವುದರಿಂದ, ಸೀತ ಕಿರಣನು ಉಷ್ಣವ್ಯಾಧಿಯನ್ನು ಪರಿಹರಿಸುವನು. ಎರಡನೇ ಚರಣದಲ್ಲಿ ದಾಸಪ್ಪ ದಾಸರು ಸ್ವಾಹಂಕಾರ ಖಂಡನೆ ಮತ್ತು ದಶಾವತಾರಗಳ ವರ್ಣನೆಯನ್ನು ಕುರಿತು ಹಾಡಿರು

ಪದು. ಮೂರನೇ ಚರಣದಲ್ಲಿ ಪದಕರ್ತರು ತಮ್ಮ ಅಣ್ಣಂದಿರಿಗೆ ಆನ್ಹಿಕಫಲವನ್ನು ಸಮರ್ಪಿಸಿರುವರು.

ಈ ಪದವನ್ನು ಇತ್ತ ದಾಸಪ್ಪ ದಾಸರು ಹಾಡಿದಾಗ, ಅತ್ತ ನರಳುತ್ತ ಮಲಗಿದ್ದ ಗೋಪಾಲದಾಸರಿಗೆ ಇದಕ್ಕಿದ್ದಹಾಗೆ ಉದರದಲ್ಲಿದ್ದ ವ್ಯಾಧಿಯು ಮಾಯವಾಗಿ ಶೀತಲವಾಯಿತು. ಪರಮಾತ್ಮ ಸಾಕ್ಷಾತ್ಕಾರವಾಗಿ ವಿಚಿತ್ರಾನಂದ ಪ್ರಾಪ್ತಿಯಾಯಿತು. ಧ್ಯಾನ ಮಾಡದೆ ಭಗವದ್ದರ್ಶನಾನಂದವಾದುದನ್ನೂ, ಔಷಧವಿಲ್ಲದೆ ಉದರವೇದನೆಯು ಪರಿಹಾರವಾದುದನ್ನೂ ಕುರಿತು ಯೋಚಿಸಿ, ಇದು ತಮ್ಮ ತಮ್ಮಂದಿರ ಪ್ರಾರ್ಥನೆಯಿಂದಾಯಿತೆಂದು ತಿಳಿದರು. ತಮ್ಮನ ಭಕ್ತಿ ಭಾವವನ್ನೂ ಪರಮಾತ್ಮನ ಕಾರುಣ್ಯವನ್ನೂ ಅಡಿಗಡಿಗೆ ಚಿಂತಿಸಿ ಪ್ರೇಮರಸದಲ್ಲಿ ಪರವಶರಾದರು. ಗುರು ಗೋಪಾಲದಾಸರು (ದಾಸಪ್ಪ ದಾಸರು) ಅಣ್ಣಂದಿರನ್ನು ಹುಡುಕಾಡುತ್ತಾ ಬಂದು, ಮರದಡಿಯಲ್ಲಿ ವ್ಯಾಧಿಯ ಬಾಧೆಯೇನೂ ಇಲ್ಲದೆ ಆನಂದಭರಿತರಾಗಿರುವುದನ್ನು ಕಂಡು, ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ನಮಸ್ಕಾರಮಾಡಿದರು. ದಾಸರು–'ತಮ್ಮಾ ಉದರಶೂಲೆಯನ್ನು ಪರಿಹರಿಸಿದುದು ಅಪರಾಧವೇ ? ಭಗವದ್ದರ್ಶನ ಮಾಡಿಸಿದುದು ಅಪರಾಧವೇ ? ನಿನ್ನ ಉಪಕಾರವು ಮಹತ್ತರವಾದುದು. ನಾವು ಬಡ ಮಾತಾಪಿತೃಗಳ ಉದರದಲ್ಲಿ ಜನಿಸಿದೆವು. ಬಾಲ್ಯದಲ್ಲಿ ನಮ್ಮ ಜೀವನವು ದುಃಖಮಯವಾಗಿತ್ತು. ಯಾರ ಋಣವನ್ನು ತೀರಿಸಿದರೂ ಕಾರುಣ್ಯಮಯಿಯಾದ ನಮ್ಮ ತಾಯಿಯ ಋಣವನ್ನು ಮಾತ್ರ ನಾವು ತೀರಿಸಲಾರೆವು. 'ನ ಮಾತುಃ ಪರದೇವತಾ' ಎಂಬ ಅಮೃತವಾಣಿಯನ್ನು ಹಿರಿಯರು ನಮಗಾಗಿ ರಚನೆ ಮಾಡಿ ಕೊಟ್ಟಂತೆ ಕಾಣುತ್ತದೆ. ಜನ್ಮಾಂತರ ಸುಕೃತ ವಿಶೇಷದಿಂದ ನಾಲ್ವರು ಸಹೋದರರಾದ ನಮ್ಮಲ್ಲಿ ಮೂವರಿಗೆ ಅಪರೋಕ್ಷಜ್ಞಾನ ದೊರೆಯಿತು. ಬಾಲ್ಯದಲ್ಲೇ ನನ್ನಲ್ಲಿ ಕೃಪೆ ಮಾಡಿದ ಗಾಯತ್ರೀಮಾತೆಯ ಕಾರುಣ್ಯವನ್ನು ಏನೆಂದು ವರ್ಣಿಸಲಿ ? ಆಕೆಯ ಅನುಗ್ರಹಬಲದಿಂದಲ್ಲವೇ ನಮಗೀ ಶ್ರೀಮಂತಿಕೆ ದೊರೆಯಿತು ? ಚಿಕ್ಕ ತಮ್ಮ ರಂಗಪ್ಪನ ಯೋಚನೆಯು ನನಗೆ ಬಹಳವಾಗಿರುವುದು. ನಮ್ಮ ಮನೆತನವು ಅವನಿಂದಲೇ ಬೆಳೆಯಬೇಕು. ಅವನಿನ್ನೂ ಸಂಸಾರಿಯಾಗಿರುವುದರಿಂದ ಅವನನ್ನು ಪ್ರಾಪಂಚಿಕದಲ್ಲಿಟ್ಟರಬೇಕಾಗಿದೆ. ತಮ್ಮಾ ತಿರುಪತಿಯಾತ್ರೆಗೆ ನೀನು ಮಾಡಿದ ಸಹಾಯವು ಅಪಾರವಾದುದು. ಆ ವೆಂಕಟೇಶನೇ ಸರ್ವ ರಕ್ಷಕನು' ಎಂದು ನುಡಿದು, ತಮ್ಮನು ತಂದಿದ್ದ ಪಾಯಸವನ್ನು ಸವಿದು ಪ್ರಯಾಣ ಮಾಡಿದರು.

ಗೋಪಾಲದಾಸರ ಕಾಲದಲ್ಲಿ ಶ್ರೀ ಉತ್ತರಾದಿ ಮಠದ ಧರ್ಮಪೀಠದಲ್ಲಿ ಸತ್ಯಪ್ರಿಯತೀರ್ಥರ ಶಿಷ್ಯರಾದ ಶ್ರೀ ಸತ್ಯಬೋಧರು ಮಠ ರಾಜ್ಯಭಾರ ಮಾಡುತ್ತಿದ್ದರು. ಸತ್ಯಬೋಧರ ಕಾಲವೆಂದರೆ ಉತ್ತರಾದಿಮಠದ ಮಹೋನ್ನತಿಯ ಕಾಲ. ಪುಣೆಯ ಶ್ರೀಮಂತ ಪೇಶ್ವಾಯಿಗಳು, ಕೊಲ್ಹಾಪುರದ ಛತ್ರಪತಿ ಮಹಾರಾಜರು, ಬರೋಡೆಯ ಗಾಯಕವಾಡರು, ತಂಜಾವೂರಿನ ಮಹಾರಾಷ್ಟ್ರರಾಜರು, ಕಡೆಗೆ ಸವಣೂರಿನ ಪಠಾನ

ನವಾಬರು ಸಹ ಶ್ರೀಮಠದಲ್ಲಿ ವಿಶೇಷಭಕ್ತಿಯನ್ನಿಟ್ಟು ಅಸಾಧಾರಣವಾದ ಮರ್ಯಾದೆ ಮಾಡುತ್ತಿದ್ದರು.

ಸತ್ಯಬೋಧರಿಗೆ ಒಮ್ಮೆ ವಿಜಯದಾಸರ ಪರಿಚಯವಾಗಿ ಅವರ ಮಹಾಮಹಿಮೆಯ ಪ್ರತ್ಯಕ್ಷ ಅನುಭವವಾಗಿದ್ದರೂ, ದಾಸರೆಂದರೆ ಒಂದು ಬಗೆಯ ಉದಾಸೀನತೆಯು ಅವರಲ್ಲಿ ಸ್ವಭಾವಿಕವಾಗಿತ್ತು. ಸಮೀಪಸ್ಥರ ಪ್ರೇರಣೆಯ ಜೊತೆಗೆ ಹರಿದಾಸನಾಮಧಾರಿಗಳ ಜ್ಞಾನ ಶೂನ್ಯತೆಯ ದಾಸಕೂಟ ಕಲ್ಪನೆಯು, ಸ್ವಾಮಿಗಳ ಉದಾಸೀನವನ್ನು ಇನ್ನೂ ಹೆಚ್ಚಿಸಿತ್ತು. ಪರರ ಮುಖದಿಂದಲೇ ಲೋಕಾನುಭವ ಮಾಡಿಕೊಳ್ಳಬೇಕಾದ ರಾಜ್ಯಾಧಿಪರಿಗೂ, ಮಠಾಧಿಪತಿಗಳಿಗೂ, ವ್ಯತ್ಯಾಸ ಭಾವನೆಗಳು ಬರುವುದು ಯಾವ ಕಾಲದಲ್ಲೂ ಹೊಸದೇನಲ್ಲ. ಹೀಗಿರಲು ರಾಯಚೂರಿನಲ್ಲಿ ಗೋಪಾಲದಾಸ ಸೋದರರಿಗೆ ಸ್ವಾಮಿಗಳ ದರ್ಶನ ಲಾಭವಾಯಿತು. ಗೃಹಸ್ಥ ಶಿಷ್ಯರನೇಕರು, ದಾಸತ್ರಯರು ಮಹಾ ಅಪರೋಕ್ಷ ಜ್ಞಾನಿಗಳೆಂದು ಜನರಾಡುವುದು ಸ್ವಾಮಿಗಳಿಗೆ ಕೌತುಕವನ್ನುಂಟುಮಾಡಿತು. ಮೂವರು ದಾಸಸೋದರರ ಅಪರೋಕ್ಷಜ್ಞಾನವೆಂಥಾದ್ದೋ ಪರೀಕ್ಷೆಮಾಡೋಣವೆಂದು, ಸತ್ಯಬೋಧರು ಪ್ರತ್ಯೇಕ ಕೊಟ್ಟಡಿಗಳಲ್ಲಿ ಮೂವರಿಗೂ ತಾಳಾವಾಲೆಗಳನ್ನು ಕೊಟ್ಟು ಕೂಡಿಸಿ, ಒಂದು ಪದವನ್ನು ಪೂರ್ತಿಮಾಡಿರೆಂದು ಆಜ್ಞೆಗೈದರು. ಈ ವಿಧದ ಪರೀಕ್ಷೆ ಕೊಡುವುದು ಗೋಪಾಲದಾಸರಿಗೆ ಇಷ್ಟವಾಗಿರದಿದ್ದರೂ, ಗುರುತ್ವ ಗೌರವಕ್ಕೆ ತಲೆಬಾಗಬೇಕಾಯಿತು. ದೂರದೂರದ ಪ್ರತ್ಯೇಕ ಸ್ಥಳಗಳಲ್ಲಿ ಕುಳಿತ ದಾಸ ಸಹೋದರರು ಮೂವರೂ ಕೂಡಿ ಮಾಡಬೇಕಾದ ಪದಪಲ್ಲಿ, ಮೊದಲು ಪಲ್ಲವಿ, ಅನುಪಲ್ಲವಿ ಮತ್ತು ಕಡೆಯ ಅಂಕಿತದ ನುಡಿಗಳನ್ನು ಹಿರಿಯರಾದ ಗೋಪಾಲದಾಸರು ಬರೆದರು. ಮೊದಲನೆಯ ಮತ್ತು ಎರಡನೆಯ ನುಡಿಗಳನ್ನು ಕ್ರಮವಾಗಿ ಶೀನಪ್ಪದಾಸರೂ, ದಾಸಪ್ಪದಾಸರೂ ಬರೆದರು. ಸ್ವಲ್ಪಹೊತ್ತು ಬಿಟ್ಟು ಸ್ವಾಮಿಗಳು, ದಾಸರು ಬರೆದಾಯಿತೇ ವಿಚಾರಿಸಿರೆಂದರು. ಗೋಪಾಲದಾಸರು ಎಂದೋ ಆಯಿತೆಂದು ಉತ್ತರವಿತ್ತರು. ಅದೇನು ಬರೆದಿರುವರೊ ಎಂಬ ಕುತೂಹಲದಿಂದ ಸ್ವಾಮಿಗಳು ಮೂವರನ್ನೂ ಸಮುಖಕ್ಕೆ ಕರೆದು ನೀವು ಬರೆದಿರುವುದನ್ನು ಓದಿರೆಂದರು. ಆಗ ಅವರು ಓದಿದ ಪದವು ಇದು—

ಅಸಾವೇರಿ—ಝಂಪೆತಾಳ

ಮಾರಮದಘನ್ನ ಸಮ್ಮೀರ ಮಧ್ವಾಮತೋ
ದ್ಧಾರ ಶುಭ ಗುಣಸಾಗರ । ಪಾರಾ ಪ.

ಧೀರ ಶ್ರೀ ಸತ್ಯಬೋಧಾರ್ಯ ಗುರು ಕರುಣದಲಿ
ವೈರಿವರ್ಗವ ಗೆಲಿದೆ ಧಾರುಣಿಯೊಳು ಮೆರೆದೆ ಅ.

—ಗೋಪಾಲದಾಸರು.

ಮುನಿ ನಿಮ್ಮ ಮಹಿಮೆಯನು ತಿಳಿಯದಲೆ ದಂಡೆತ್ತಿ
ಮನಸಿಜನು ಬರಲು ಕೇಳಿ । ತಾಳೀ
ಘನಮಹಿಮ ಸತ್ಯಪ್ರಿಯ ಗುರುಕರುಣ ದೃಢಕವಚ
ವನು ಧರಿಸಿ ಧೀರನಾಗೀ । ಸಾಗೀ ।
ಮನೋಜಯಾ ದ್ಯಷ್ಟಾಂಗ ಯೋಗಾದಿ ಸಾಧನದಿ
ಮಣಿಯದಲೆ ಮಾರಮಲತೂ । ಕಲೆತೂ ।
ಪ್ರಣವಾದಿ ಮಂತ್ರ ಪ್ರತಿಪಾದ್ಯ ಮೂರ್ತಿಗಳ ಚಮೂ
ಸೊನೆ ಮಾಡಿ ಅರಿಪೃತನ ಹಣಿದು ಓಡಿಸಿದೆ ೧

—ಸೀನಪ್ಪದಾಸರು.

ಕುಸುಮಾಸ್ತ್ರನಂಗನಾಗಲು ಉಡುಸಹಿತ ಹಿಮಗು
ನೆಸಗಿ ನಭಕೈದಿ ನಿಂದಾ । ಮಂದಾ ।
ಶ್ವಸನ ಮೆಲ್ಲನೆ ಜರಿಯೆ ವನಕೆ ಪೋದವ ಸಂತ
ಝಷವು ಮಕರಿಯ ದೊಳಡಗೀ । ನಡುಗೀ ।
ಎಸೆವ ಶುಕಪಿಕ ಸಮೂಹಗಳಂಜಿ ಬಾಯ್ಬಿಡುತ
ದಶದಿಶೆಯೊಳಡಗಿ ಪೋಗೀ । ಕೂಗೀ ।
ಪೊಸ ಮಲ್ಲಿಕಾದಿ ಕುಟ್ಮಲನಂಜಿ ಬಾಯ್ಬಿಡಲು
ಯಶ ಶರಧಿ ತವಕೀರ್ತಿ ಪಸರಿಸಿತು ಲೋಕದಲಿ ೨

—ದಾಸಪ್ಪದಾಸರು.

ಮಾರನಪಜಯ ಕಂಡು ಕ್ರೋಧಾದಿ ವೈರಿಗಳು
ದೂರದಲಿ ನಿಂದು ನಮಿಸೀ । ಗಮಿಸೀ ।
ವೀರ ಕರ್ಣನು ತನ್ನ ವಿಾರಿ ತ್ಯಾಗವ ಕಂಡು
ಸಾರಿ ರವಿಮಂಡಲವನೂ । ಅವನೂ ।
ಧೀರ ನಿಮ್ಮ ಪಾಂಡಿತ್ಯಕಂ ಫಣಿಪ ಬಾಗಿ ಶಿರ
ಧಾರುಣಿಯ ಕೆಳಗೆ ನಡೆದಾ । ಬಿಡದಾ ।
ಶ್ರೀರಾಮ ವ್ಯಾಸ ಗೋಪಾಲವಿಠಲನಂಘ್ರಿ
ಆರಾಧಕರೆ ನಿಮ್ಮ ಚಾರುಚರಣಕೆ ನಮಿಪೆ ೩

—ಗೋಪಾಲದಾಸರು.

ಮೂವರು ದಾಸರ ಮುಖಗಳಿಂದ ಈ ರೀತಿ ಉಚ್ಚರಿತವಾಯಿತು. ಸತ್ಯಬೋಧರು ಆ ದಾಸರುಗಳ ಈ ಕೃತಿಯನ್ನು ಕಂಡು ಪರಮಾಶ್ಚರ್ಯಭರಿತರಾದರು. ‘ ದಾಸರೆ ನಮ್ಮ ಮತಕ್ಕೆ ನೀವು ಮೂವರೂ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳೆಂದರು. ಈ ರೀತಿ ಮಾಡಿದ ಪರೀಕ್ಷೆಯಿಂದ ನಿಮ್ಮ ಮಹಿಮೆಯು ಲೋಕಕ್ಕೇ ವಿದಿತವಾಯಿತೆಂದರು. ಮೂವರಿಗೂ ಅನರ್ಘ್ಯಗಳಾದ ಮುತ್ತಿನ ಕಂಠಿಗಳ ಬಹುಮಾನಮಾಡಿದರು. ತುಳಸೀ

ಮಣಿಯ ಬಡದಾಸರಿಗೆ ಮುತ್ತಿನ ಕಂಠಿಗಳೇಕೆಂದು ದಾಸರು ಕೇಳಿದರು. ರಾಮಚಂದ್ರ ದೇವರ ಪ್ರಸಾದವು ಸ್ವೀಕಾರಾರ್ಹವೆಂದು ಸ್ವಾಮಿಗಳು ನುಡಿದರು. ಮೇಲ್ಕಂಡ ಪದವು ರಚಿತವಾದ ಕ್ರಮವನ್ನು ನೋಡಿದ ಮಾತ್ರದಿಂದ ಮೂವರು ದಾಸರೂ ಎಂಥಾ ಜ್ಞಾನಿಗ ಳೆಂಬುದು ಗೊತ್ತಾಗುತ್ತದೆ. ಕಾವ್ಯ ರಸಾಸ್ವಾದನ ಪರರಿಗೆ ಪದದಲ್ಲಿನ ಕಾವ್ಯದಿಂದ ಪರಮಾನಂದವಾಗುತ್ತದೆ. 'ದಾಸರ ಪದದಲ್ಲಿ ರಸವಿಲ್ಲ; ತಂಗಡೀ ಹೂವಿನಲ್ಲಿ ವಾಸನೆ ಯಿಲ್ಲ'ವೆಂದು ಹರಿದಾಸರನ್ನು ನಿಂದಿಸುವವರ ವಾಗ್ಬಂಧನ ವಾಗುತ್ತದೆ.

ಪ್ರಕೃತಕಾಲವಾದರೋ ಭರತಖಂಡದ ಒಂದೊಂದು ಭಾಷೆಯೂ ಸಂಸ್ಕೃತಿಯೂ ಉಜ್ಜೀವನವಾಗುತ್ತಿರುವ ಕಾಲ. ಬಲುಕಾಲದ ಅಭ್ಯಾಸದಿಂದ ರೂಪಾಂತರವಾಗಿರುವ ಧರ್ಮಕ್ಕೆ ನೂತನ ಸ್ವರೂಪವುಂಟಾಗುತ್ತಿರುವ ಕಾಲ. ದೇಶದ ನೈತಿಕ ಸಾಮಾಜಿಕ ಸಾಂಪತ್ತಿಕ ಧಾರ್ಮಿಕ ರಾಜಕೀಯ ವಿಷಯಗಳೆಲ್ಲದರ ಪುನರ್ವ್ಯವಸ್ಥೆಯಾಗುತ್ತಿರುವ ಕಾಲ. ತಮ್ಮ ತಮ್ಮ ಪೂರ್ವಾಚಾರ್ಯರುಗಳು ಹೇಗಿದ್ದರೆಂಬುವನ್ನು ವಿಚಾರಿಸಿ, ಅವರ ಧ್ಯೇಯಗಳನ್ನು ಆದರ್ಶವಾಗಿಟ್ಟುಕೊಂಡು, ಭಾರತದ ಭವಿತವ್ಯತೆಯನ್ನು ನಿರ್ದೇಶಿಸುತ್ತಿ ರುವ ಕಾಲ. ವಿವಿಧ ಕಲೆಗಳು ತಲೆಯೆತ್ತುತ್ತಿರುವ ಕಾಲ. ಇಂತಹ ಕಾಲದಲ್ಲಿ ನಮ್ಮ ಕರ್ಣಾಟಕವಾದರೂ ಕೆಲವರಾಡುತ್ತಿರುವಂತೆ ಅತ್ಯಂತ ಹಿಂದುಳಿದಿರುವ ರಾಷ್ಟ್ರವೇನಾಗಿಲ್ಲ. ತನ್ನ ಪರಿಸ್ಥಿತಿಗೆ ತಕ್ಕಂತೆ ಮುಂಮುವರಿಯುತ್ತಿರುವ ಲಕ್ಷಣಗಳು ಎಲ್ಲೆಲ್ಲೂ ಕಂಡುಬರುತ್ತಿವೆ. ಕರ್ಣಾಟಕದ ಚಿತ್ತವೃತ್ತಿ ಹೇಗಿದೆಯೆಂಬುದನ್ನು ಕನ್ನಡದ ಚಿತ್ರಕಲೆಗಳಿಂದ ನೋಡ ಬಹುದು. ರಂಗಭೂಮಿಯಲ್ಲಿ ಕರ್ಣಾಟಕದ ನಾಟ್ಯಕಲೆಯ ಬೆಳೆವಣಿಗೆಯ ವೇಗವನ್ನು ಕಾಣಬಹುದು. ಗಾನ ಕೀರ್ತನಗಳ, ಭದ್ರಪೀಠದ ಮೇಲೆ ಉಭಯ ಕಲೆಗಳೂ ಎಂತಹ ಆದರ್ಶವನ್ನು ಭರತಖಂಡಕ್ಕೆ ತೋರಿಸುತ್ತಿವೆಯೆಂಬುದನ್ನು ಪರೀಕ್ಷಿಸಬಹುದು. ಇಂತಹ ಕಾಲದಲ್ಲೇ ಕರ್ಣಾಟಕ ಭಕ್ತವಿಜಯವು ಮೊತ್ತವಾದೀ ಗ್ರಂಥರೂಪವನ್ನು ತಾಳಿ ಕನ್ನಡಿ ಗರ ಕರಗತವಾಗಲಿರುವುದು. ಕನ್ನಡ ಹರಿದಾಸರ ಕವಿತೆಗಳ ಮಾದರಿಗಳನ್ನೂ ಅವರು ಗಳ ಜೀವನದ ಆದರ್ಶಗಳನ್ನೂ ಕನ್ನಡಿಗರ ಮುಂದಿಡಲೆಳೆಸಿರುವುದು.

'ಹರಿದಾಸರು ಕರ್ಣಾಟಕಕ್ಕೆ ತೋರಿಸಿದ ಆದರ್ಶವೇನು? ದಾಸರಿಂದ ಈ ಆಧುನಿಕಕಾಲದಲ್ಲಿ ಜನರು ಕಲಿಯಬೇಕಾದುದೇನು?' ಎಂದು ದಾಸರ ಪದಗಳಲ್ಲಿ ವಿಶ್ವಾಸವಿಲ್ಲದವರೂ, ದಾಸರ ಪದಗಳೆಂದು ಕಲ್ಪಿತ ಪದಗಳನ್ನು ಹೇಳಿ ಕೇಳುವವರೂ ದಾಸರ ಇತಿಹಾಸವನ್ನೇ ತಿಳಿಯದವರೂ ಸುಲಭವಾಗಿ ಪ್ರಶ್ನೆ ಮಾಡಬಹುದು. ಅಂಥ ವರು ಈಗ ತಾವು ನೋಡುತ್ತಿರುವ ಆಶಾದಾಸರುಗಳ ಮಾನದಿಂದ ಪ್ರಶ್ನೆಮಾಡಿದರೆ ತಪ್ಪಿಲ್ಲ. ಹಿಂದಿನ ದಾಸರುಗಳು ಈಗಿನವರಂತಿರಲಿಲ್ಲ. ಹಿಂದಿನ ದಾಸರುಗಳಲ್ಲನೇಕರು ತಮ್ಮ ಕೋಟ್ಯವಧಿ ದ್ರವ್ಯವನ್ನು ಜನತಾ ಜನಾರ್ದನನ ಸೇವೆಗೊಪ್ಪಿಸಿ, ತಾವು ಬ್ರಹ್ಮ ಸಾಕ್ಷಾತ್ಕಾರಮಾಡಿಕೊಂಡು, ಕೃತಾರ್ಥರಾದುದು ಮಾತ್ರವಲ್ಲದೆ ದೇಶ ದೇಶ ವನ್ನೇ ಉದ್ಧಾರಮಾಡಿದರು. ಮತ್ತೆ ಕೆಲವರು ರಾಜ್ಯಾಧಿಕಾರವನ್ನು ಸಹ ತ್ಯಜಿಸಿ ಲೋಕ ಸೇವೆಗೆ ನಿಂತರು. ಇತರ ಕೆಲವರು ತಾವು ಪಂಡಿತೋತ್ತಮರಾಗಿದ್ದರೂ, ಲೋಕ

ಸೇವೆಗಾಗಿ ಹರಿದಾಸ ಮಾರ್ಗಕ್ಕಿಳಿದರು. ಖಂಡಿತೋಕ್ತಿಯಿಂದ ಹೇಳುವುದಾದರೆ, ಪ್ರಪಂಚದಲ್ಲಿ ಕನ್ನಡ ವಾಙ್ಮಯಕ್ಕೇನಾದರೂ ಮರ್ಯಾದೆ ದೊರೆತಿದ್ದರೆ ಅದು ಸತ್ಪುರುಷರಾದ ಹರಿದಾಸರಿಂದ ದೊರೆಯಿತು. ಇತರ ಕವಿಗಳಿಂದಲ್ಲ. ಪಾಮರರಿಗೆ ಸಮಾಜದಲ್ಲೇನಾದರೂ ಮರ್ಯಾದೆ ದೊರೆತಿದ್ದರೆ, ಅದು ವಿಶಾಲ ಮನಸ್ಸಿನ ಹರಿದಾಸರಿಂದ ದೊರೆಯಿತು. ಪಂಡಿತರಿಂದಲ್ಲ. ಜನತೆಯಲ್ಲಿ ಜಾತಿಮತದ್ವೇಷಗಳು ಕಡಮೆಯಾಗಿ ಶಾಂತಿಯೇನಾದರೂ ಆ ಕಾಲದಲ್ಲಿ ನೆಲೆಸಿದ್ದರೆ ಅದೂ ಸಮದರ್ಶಿಗಳಾದ ಹರಿದಾಸರಿಂದಾಯಿತು. ರಾಜರಿಂದಲ್ಲ. ಮಹಾರಾಷ್ಟ್ರದಲ್ಲಿ ರಾಜಕಾರಣದಲ್ಲಿ ಪ್ರವೇಶಿಸಿ, ಸಮಾಜವನ್ನು ಏಕರೂಪಕ್ಕೆ ತಂದು ರಾಜ್ಯಸ್ಥಾಪನೆ ಮಾಡಿಸಿದ ಯಶವು ಹರಿದಾಸರದಲ್ಲದೆ, ಇತರರದಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಸಂಘಟನೆ, ಶುದ್ಧಿ, ಹಿಂದೂ ಮುಸಲ್ಮಾನರಲ್ಲಿ ನಡೆದ ಯಶವು ಕಬೀರ ಪಂಥದ ಹರಿದಾಸರದಲ್ಲದೆ ಇತರರದಲ್ಲ. ಒಟ್ಟಿನಲ್ಲಿ ವಿಚಾರ ಮಾಡಿದರೆ ಹರಿದಾಸರ ಕಾರ್ಯಗಳು ಸಂಕುಚಿತವಾದುವಲ್ಲ, ವ್ಯಾಪಕವಾದುವುಗಳು. ಅವು ಕೇವಲ ಒಂದು ಜಾತಿ, ಒಂದು ಮತ, ಒಂದು ರಾಷ್ಟ್ರಕ್ಕೇ ಸಂಬಂಧಿಸಿದುವುಗಳಲ್ಲ. ವಿಶ್ವವ್ಯಾಪ್ತವಾದುವುಗಳು. ತ್ಯಾಗದ ಪರಮಾವಧಿಯನ್ನು ನೋಡಬೇಕು, ಹರಿದಾಸರ ಜೀವನದಲ್ಲಿ! ದಯೆಯ ಪರಮಾವಧಿಯನ್ನು ನೋಡಬೇಕು, ಹರಿದಾಸರ ಉಪದೇಶದಲ್ಲಿ! ಸಮತ್ವದ ಪರಮಾವಧಿಯನ್ನು ನೋಡಬೇಕು, ಹರಿದಾಸರ ಚರ್ಯದಲ್ಲಿ! ಈ ಎಲ್ಲ ಆದರ್ಶಗಳಿಗೆ ನಿಧಿಸ್ವರೂಪರು, ಸ್ವರ್ಣ ಖನಿಗಳು ಹರಿದಾಸರು. ಮತ್ತೆ ಕೇಳಿದರೆ, ಕರ್ನಾಟಕದ ಹರಿದಾಸರು! ಹರಿದಾಸರ ಜೀವನದಲ್ಲಿ ಆದರ್ಶಗಳು ಸಿಗುವುದಿಲ್ಲವೆಂದರೆ, ಅವು ಪ್ರಪಂಚದಲ್ಲಿ ಬೇರೆಡೆಗಳಲ್ಲಿ ಸಿಗುವುದೂ ಸಾಧ್ಯವಲ್ಲ

ದಾಸರು ರಾಯಚೂರಿನಿಂದ ಮಂತ್ರಾಲಯದ ಮಾರ್ಗ ಹಿಡಿದು ಉತ್ತನೂರಿಗೆ ಪ್ರಯಾಣಬೆಳೆಸಿದರು. ಮಾರ್ಗ ಮಧ್ಯದ ಒಂದಾನೊಂದು ಗ್ರಾಮದ ಗೌಡನೊಬ್ಬನು ಮಹಾರೋಗ ಪೀಡಿತನಾಗಿ ಚಿಕಿತ್ಸೆಗಳಿಂದ ಗುಣವಾಗದಿರಲು, ಶ್ರೀ ರಾಘವೇಂದ್ರಸ್ವಾಮಿಗಳ ಮೊರೆಬಿದ್ದು-'ಸ್ವಾಮಿ, ನನಗೆ ರೋಗನಾಶಿಯಾದರೆ ಲಕ್ಷ ಬ್ರಾಹ್ಮಣಭೋಜನ ಮಾಡಿಸುವೆ'ನೆಂದು ಹರಕೆಮಾಡಿಕೊಂಡಿದ್ದನು. ಗೌಡನಿಗೆ ಲಕ್ಷಜನ ಬ್ರಾಹ್ಮಣರ ಮಾತಿರಲಿ; ಹತ್ತುಮಂದಿಗಾದರೂ ಮೃಷ್ಟಾನ್ನ ಉಣಿಸುವ ಯೋಗ್ಯತೆಯಿರಲಿಲ್ಲ. ಭವರೋಗ ನಿವಾರಕರಾದ ರಾಘವೇಂದ್ರಸ್ವಾಮಿಗಳ ಅನುಗ್ರಹದಿಂದ ಗೌಡನ ವ್ಯಾಧಿ ಪರಿಹಾರವಾಯಿತು. ಮಾಡಿಕೊಂಡ ಹರಕೆಯನ್ನು ಸಲ್ಲಿಸುವ ಬಗೆ ಹೇಗೆಂದು ಗೌಡನು ಚಿಂತಾಪರನಾಗಿ ದಿನದಿನಕ್ಕೆ ಕೃಶನಾಗುತ್ತ ಬಂದನು. ರೋಗ ಪರಿಹಾರಮಾಡಿದ ಗುರುಗಳೇ ತನ್ನ ಹರಕೆಯನ್ನೂ ಸಾಧಿಸಿಕೊಡಬೇಕೆಂದು ಗುರುಗಳ ಸ್ಮರಣೆಗಾರಂಭಿಸಿದನು. ಗೌಡನು ಮಾಡಿಕೊಂಡ ಹರಕೆಯು ಆತನ ಹೆಂಡತಿಯೊಬ್ಬಳ ವಿನಾ ಇತರರಿಗೆ ತಿಳಿದಿರಲಿಲ್ಲ. ಹರಕೆ ಹನ್ನೆರಡು ವರ್ಷವೆಂದು – ಮರೆತು ನಿಶ್ಚಿಂತನಾಗಿರುವುದು ಗೌಡನ ಸ್ವಭಾವದಲ್ಲಿರಲಿಲ್ಲ. ಸ್ವಯಂ ವೀರಶೈವನಾಗಿ, ಬ್ರಾಹ್ಮಣ ಗುರುಗಳಿಗೆ ಹರಕೆಯನ್ನೇಕೆ ಮಾಡಿಕೊಂಡೆಯೆಂದು ಕುಲಸ್ಥರು ಆಕ್ಷೇಪಿಸಬಹುದೆಂಬ ಭಯ ಮಾತ್ರ ಗೌಡನನ್ನು ಬಿಟ್ಟಿರಲಿಲ್ಲ. ಹೀಗಿರಲು

ಒಂದಾನೊಂದು ಶ್ರಾವಣ ಸೋಮವಾರದ ದಿನ ಗುರುಗಳನ್ನೇ ಸ್ಮರಿಸುತ್ತಾ ಗೌಡನು ಉಪವಾಸಮಾಡಿದನು. ತನ್ನ ತೋಟದ ಭಾವಿಯ ಬಳಿ ಮೃತ್ತಿಕೆಯಿಂದ ಒಂದು ಲಿಂಗಾಕಾರವನ್ನು ರಚಿಸಿ, ದೊರೆತ ಪುಷ್ಪಗಳನ್ನು ತಂದು, ಇದು ರಾಘಪ್ಪನಿಗೆಂದು ಪೂಜಿಸಿದನು. ಅಂದು ಮನೆಗೂ ಹೋಗದೆ ಭಾವಿಯ ಕಟ್ಟೆಯಮೇಲೆಯೇ ಶಯನವಾಡಿದನು. ಆ ರಾತ್ರಿ ಗೌಡನ ಸ್ವಪ್ನದಲ್ಲಿ ಗುರು ರಾಘವೇಂದ್ರರು ದರ್ಶನವಿತ್ತು–'ಎಲವೋ ಗೌಡ! ನನ್ನ ಹೆಸರಿನಿಂದೇಕೆ ವೃಥಾ ಉಪವಾಸಮಾಡುವೆ? ನಾಡಿದ್ದು ಬುಧವಾರ ಕುದುರೆಯ ಮೇಲೆ ಕುಳಿತು ಮೂವರು ಬ್ರಾಹ್ಮಣರು ಬರುವರು. ಅವರಿಗೆ ನೀನು ಭೋಜನ ಮಾಡಿಸಿದೆಯೆಂದರೆ ನಿನ್ನ ಲಕ್ಷ ಬ್ರಾಹ್ಮಣ ಭೋಜನದ ಹರಕೆ ಸಂದಂತಾಯಿತು. ಅವರ ಆಶೀರ್ವಾದದಿಂದ ನಿನ್ನ ಶ್ರೇಯೋಭಿವೃದ್ಧಿಯಾಗುವುದು' ಎಂದು ವರವಿತ್ತು ಅದೃಶ್ಯರಾದರು.

ಗೌಡನು ಎದ್ದು ಕುಳಿತು ಇಂದಿಗೆ ಧನ್ಯನಾದೆನೆಂದುಕೊಂಡನು. ಒಡನೆಯೇ ಮನೆಗೆ ಹೋಗಿ ತನ್ನ ಹೆಂಡತಿಗೆ ಈ ಸ್ವಪ್ನವಾರ್ತೆಯನ್ನು ತಿಳಿಸಿದನು. ಮಂಗಳವಾರ ಕಳೆದು ಬುಧವಾರವೆಂದಿಗೆ ಬರುವುದೆಂದು ನಿರೀಕ್ಷಿಸಿದನು. ಹೊಸ ಮಡಿಕೆ ಕುಡಿಕೆಗಳನ್ನು ತಂದು, ತನ್ನ ಮನೆಯಲ್ಲಿ ದೊರೆತ ಗೋಕ್ಷೀರವನ್ನು ಕಾಯಿಸಿ ಕೆನೆನೊಸರಿಗೆಂದು ಹೆಪ್ಪು ಕೊಡಿಸಿದನು. ಸ್ವಲ್ಪ ಹಲಸಂದೆಯನ್ನೂ ಜೋಳದ ನುಚ್ಚನ್ನೂ ನವಣಕ್ಕಿಯನ್ನೂ ತೆಗೆದುಕೊಂಡು, ಬುಧವಾರ ಸೂರ್ಯೋದಯಕ್ಕೆ ಮುಂಚಿತವಾಗಿ ಆಗಂತುಕರ ದಾರಿ ಕಾಯುತ್ತಾ ಕುಳಿತನು. ಭಾಗಣ್ಣ ಸಹೋದರರು ಮೂವರೂ ಪರಸ್ಪರವಾಗಿ ಹೀಗೆ ಸಂಭಾಷಿಸಿಕೊಂಡರು.

ಭಾಗಣ್ಣದಾಸರು :—(ಕುದುರೆಯಮೇಲೆ ಕುಳಿತು ಬರುತ್ತಾ) ತವಮ್ಮಾ, ಇವತ್ತು ನಮಗೆ ಮೃಷ್ಟಾನ್ನಯೋಗವಿರುವುದು ಬಲ್ಲೆಯಾ?

ದ್ವಿತೀಯರು :—ರಾಯರು ಮಾಡಿಸುವರೇನು?

ತೃತೀಯರು :—ಹೌದು, ಗೌಡನ ಲಕ್ಷ ಬ್ರಾಹ್ಮಣಭೋಜನದ ಹರಕೆ!

ದಾಸತ್ರಯರೂ ಕುದುರೆಗಳಮೇಲೆ ಕುಳಿತು ಎಂಟು ಗಂಟೆಯವೇಳೆಗೆ ಸರಿಯಾಗಿ ಗೌಡನ ಭಾವಿಯ ಬಳಿಯಲ್ಲಿಳಿದು–'ಏನಪ್ಪಾ ಗೌಡ, ಇದೋ ಬಂದಿರುವೆವು ನೋಡು' ಎಂದರು. ಗೌಡನು ಚಕಿತನಾದನು. ಸ್ವಪ್ನವಾರ್ತೆಯು ಸತ್ಯವಾಯಿತೆಂದು ಮೂವರ ಪಾದಗಳಿಗೂ ನಮಸ್ಕಾರಮಾಡಿದನು. ಗೋಪಾಲದಾಸರು–'ನಮ್ಮ ಊಟಕ್ಕೆ ಸಾಮಾನು ತಂದಿರುವೆಯೋ' ಎಂದರು. ಗೌಡನು–'ಇದೋ ಸ್ವಾಮಿ, ಹುಳಿಗೆ ಹಲಸಂದೆ, ಅನ್ನಕ್ಕೆ ನವಣಕ್ಕಿ-ಜೋಳದ ನುಚ್ಚುಗಳು, ಹಾಲು ಮೊಸರು ಗಡಿಗೆಗಳು, ಹುಳಿ ಉಪ್ಪು ಖಾರಗಳು' ಎಂದು ಒಂದೊಂದಾಗಿ ತೆಗೆದು ಮುಂದಿರಿಸಿದನು. ದಾಸರು ಮೂವರಿಗೆ ಸಾಕಾಗುವಷ್ಟು ಸಾಮಾನುಗಳನ್ನು ತೆಗೆದುಕೊಂಡು, 'ಇನ್ನಿಬ್ಬರ ಸಾಮಾನು ಹೆಚ್ಚಾಗಿದೆ, ಇದನ್ನು ನೀವು ಗಂಡಹೆಂಡಿರು, ಈ ತೋಟದಲ್ಲಿಯೇ ಅಡಿಗೆ ಮಾಡಿಕೊಂಡು ಊಟಮಾಡಿರಿ' ಎಂದು ನುಡಿದು, ಕೈ ಮುಟ್ಟಿ ಆ ಪದಾರ್ಥಗಳನ್ನು ಗೌಡನ ಉಡಿಗೆ

ಹಾಕಿದರು. ಗೌಡನು ಮಹಾಪ್ರಸಾದವೆಂದು ಸ್ವೀಕರಿಸಿದನು. ದಾಸರ ಸ್ನಾನವಾಗುತ್ತಲೇ ಗೌಡ ದಂಪತಿಗಳು ಭಾವಿಯಲ್ಲಿ ಸ್ನಾನಮಾಡಿದರು. ತಮ್ಮ ಅಡಿಗೆಯನ್ನು ಮಾಡಿಕೊಂಡು, ದಾಸರ ಪೂಜೆ-ಭೋಜನಗಳಾಗುವವರೆಗೆ ಕಾದು ಕುಳಿತರು.

ಗೋಪಾಲದಾಸರು :—ತಮ್ಮ, ನಮ್ಮಮ್ಮನ ಕಾಲದಲ್ಲಿ ನೋಡು, ಇಂಥಾ ರುಚಿಯಾದ ಊಟ ಉಂಡಿದ್ದೆವು. ಇಂದು ಮತ್ತೊಮ್ಮೆ ದೊರೆಯಿತು ಆ ರುಚಿ ಭೋಜನ.

ಸೀನಪ್ಪದಾಸರು :—ಹೌದು ಹೌದು, ಅದು ನೈವೇದ್ಯದ ಪ್ರಭಾವ! ರಸಗತ ಭಗವದ್ರೂಪಗಳು, ಇಂದು ಮೂರ್ತಿಮತ್ತಾಗಿ ಸುರಸವಾಗಿವೆ. ತತ್ವೇಶರು ಸುಪ್ರೀತರಾಗಿದ್ದಾರೆ.

ದಾಸಪ್ಪದಾಸರು :—ಇದೆಲ್ಲಾ ಗೌಡನ ಭಕ್ತಿಪ್ರಭಾವ. ಗೌಡನ ಮೇಲೆ ರಾಯರ ಅನುಗ್ರಹದ ಪ್ರಭಾವ. ಮೇಲಾಗಿ, ಲಕ್ಷ ಬ್ರಾಹ್ಮಣ ಭೋಜನವು ಮೂವರ ಭೋಜನದಿಂದಲೇ ತೀರುವಾಗ ರುಚಿಯಾಗಿರದೆ ಏನಾದೀತು?

ದಾಸತ್ರಯರೂ ಭೋಜನಾನಂತರ ಆಚಮನಮಾಡಿ, ತೀರ್ಥಪ್ರಾಶನಾನಂತರ ಭಾವಿಯ ಹಾಸುಕಲ್ಲಿನ ಮೇಲೆ ಕುಳಿತರು. ಗೌಡದಂಪತಿಗಳು ಮೂವರಿಗೆ ದಕ್ಷಿಣೆಯೆಂದು ಮೂರು ಮುಷ್ಟಿಗಳನ್ನೂ, ಬೆಟ್ಟಡಿಕೆಗಳನ್ನೂ ಮುಂದಿಟ್ಟು ನಮಸ್ಕಾರ ಮಾಡಿದರು. ಗೋಪಾಲದಾಸರು ಗೌಡದಂಪತಿಗಳನ್ನು ಕುರಿತು–'ನಿಮ್ಮ ಸೇವೆಯಿಂದ ರಾಯರು ಸುಪ್ರೀತರಾದರು. ಲಕ್ಷ ಬ್ರಾಹ್ಮಣ ಭೋಜನದ ಪುಣ್ಯ ನಿಮಗೆ ದೊರೆಯಿತು. ಇಬ್ಬರಿಗಾಗುವಷ್ಟು ಹೆಚ್ಚು ಪದಾರ್ಥಗಳನ್ನು ನೀವು ಕೊಟ್ಟ ಕಾರಣ, ನಿಮ್ಮ ವಂಶದಲ್ಲಿ ನಿಮ್ಮ ಕಾಲದಲ್ಲಿ ಮಾತ್ರವಲ್ಲದೆ, ಮಕ್ಕಳು ಮೊಮ್ಮಕ್ಕಳ ಕಾಲದಲ್ಲೂ ನಿಮ್ಮ ಮನೆಯಲ್ಲಿ ಧಾನ್ಯ ಸಮೃದ್ಧಿಯುಂಟಾಗುವುದು, ನಿಮ್ಮ ದಕ್ಷಿಣೆಯು ಲಕ್ಷಲಕ್ಷವಾಗಿ ವೃದ್ಧಿ ಹೊಂದಿ ನಿಮ್ಮಿಂದ ಮೂರು ಪೀಳಿಗೆಯತನಕ ಶ್ರೀಮಂತರಾಗಿರುವಿರಿ. ನಮ್ಮ ಕಾರ್ಯವಾಯಿತು, ನಾವಿನ್ನು ಪ್ರಯಾಣಮಾಡುವೆವು' ಎಂದು ಆಶೀರ್ವಾದ ಮಾಡಿ ಅಶ್ವಾರೂಢರಾದರು.

ಪಾತ್ರವರಿತು ಮಾಡುವ ದಾನದ ಪ್ರಭಾವವೆಂದರೆ ಇದು. ಹಿಂದೂ ಸಮಾಜದಲ್ಲಿ, ಮಾತೆತ್ತಿದರೆ ಶುಭಾಶುಭ ಕರ್ಮಗಳಲ್ಲಿ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು, ದಕ್ಷಿಣೆ ಕೊಡಬೇಕು ಎಂಬ ಮಾತುಗಳ ಚಲಾವಣೆಯಿರುವುದು. ಲಕ್ಷಾವಧಿ ವರ್ಷಗಳಿಂದ ಈ ವಿಧವಾದ ಆಚರಣೆಯಿರುವುದನ್ನು ನೋಡಿದ ಮಾತ್ರದಿಂದಲೇ–ಇದರಲ್ಲೇನೋ ಅರ್ಥವಿದೆಯೆಂದು ಯಾರಿಗಾದರೂ ತೋರದಿರುವುದಿಲ್ಲ. ಜಾತಿ ಮತ ಮತ್ಸರಗಳ ಈ ಕಾಲದಲ್ಲಾದರೋ ಬ್ರಾಹ್ಮಣ ಭೋಜನವೆಂಬ ಮಾತು ಕಿವಿಗೆ ಬಿದ್ದ ಕೂಡಲೇ ಹಾಸ್ಯಾಸ್ಪದವಾಗುವುದು. ಹೀಗೆ ಆಗಲು ಬ್ರಾಹ್ಮಣರಲ್ಲಿ ಬ್ರಾಹ್ಮಣ್ಯ ಲೋಪವಾಗುತ್ತಿರುವುದು ಕಾರಣವಲ್ಲದೆ, ಜನರ ಅಜ್ಞಾನದಿಂದಲ್ಲ. ಬ್ರಹ್ಮಜ್ಞಾನಿಯಾದ ಬ್ರಾಹ್ಮಣನ ಭೋಜನವೆಂದರೆ ಅದೊಂದು ಪರಿಯ ಯಜ್ಞಾಚರಣೆಯೆನ್ನಿಸುವುದು. ಬ್ರಹ್ಮವೇತ್ತನು, ತನ್ನ ದೇಹಸೃಷ್ಟಿಯು ಕೇವಲ ಪರಮಾತ್ಮನ ಸೇವೆಗಾಗಿಯೇ ಇರುವುದೆಂದು ತಿಳಿಯುವನು.

ತಾನು ಮಾಡುವ ಭೋಜನವನ್ನು ಶರೀರಾಂತರ್ವರ್ತಿ ವೈಶ್ವಾನರನಿಗೆ ಕೊಡುವ ಆಹುತಿ ಯೆಂದು ಭಾವಿಸುವನು. ಅನ್ನಂಬ್ರಹ್ಮ ಎಂಬ ವೇದವಾಕ್ಯದಂತೆ, ಭೋಜನ ಪದಾರ್ಥ ಗಳ ವಿವಿಧ ರಸಗಳಲ್ಲಿ ವಿವಿಧ ಭಗವದ್ರೂಪಗಳ ಚಿಂತನೆಮಾಡಿ, ಅವುಗಳನ್ನು ತನ್ನ ಅಂತ ರ್ಯಾಮಿಯಲ್ಲಿ ಐಕ್ಯಾನುಸಂಧಾನಮಾಡುವನು. ಈ ವಿಧವಾದ ಭೋಜನ ಕ್ರಮದಲ್ಲಿ ಪಿಂಡಾಂಡದ ಸೃಷ್ಟಿಸ್ಥಿತಿಗಳು, ಶರೀರದ ಇಪ್ಪತ್ತಾಲ್ಕು ತತ್ವಗಳು, ತನ್ನಿಯಾಮಕ ದೇವತೆ ಗಳು, ಈ ಎಲ್ಲ ಚಿಂತನೆಗಳುಂಟಾಗಿ, ಆಹಾರ ಪದಾರ್ಥಗಳು ಸಂಪಾದಿಸಿದವನ ಮತ್ತು ಪಾಕಮಾಡಿದವನ ಸಂಬಂಧ ದೋಷಗಳಿಂದ ವಿಮುಕ್ತವಾಗಿ, ಪರಿಶುದ್ಧವಾಗಿ, ತೇಜೋ ಮಯವಾಗಿ, ಶರೀರಕ್ಕೆ ಉಪಚಯ ತತ್ವದೇವತೆಗಳಿಗೆ ಆತ್ಮಪ್ರದರ್ಶನಗಳುಂಟಾಗಿ ಪರ ಮಾತ್ಮನ ಪ್ರೀತಿಗೆ ಕಾರಣವಾಗುವುವು. ಈ ಅನುಸಂಧಾನದಿಂದ ಭೋಜನ ಮಾಡುವವ ನಿಗೆ ವಿಷವಾದರೂ ಅಮೃತವಾಗುವುದು. ಆದ್ದರಿಂದ ಇಂತಹ ಬ್ರಹ್ಮಜ್ಞಾನಿಗಳಿಗೆ ಅನ್ನ ದಾನ ಮಾಡುವುದನ್ನು ಕೇವಲ ಪುಣ್ಯಕರವೆಂದು ಜನರು ಭಾವಿಸಿದ್ದರು. ಇಂತಹ ಪುಣ್ಯ ಪುರುಷರನ್ನು ಆನಂದಪಡಿಸುವುದೇ ಈಶ್ವರಪೂಜೆಯೆಂದು ಜನರು ನಂಬಿದ್ದರು. ಈ ಕಾರಣಗಳಿಂದ ಬ್ರಾಹ್ಮಣಭೋಜನ ಮಾಡಿಸುವುದು ಎಲ್ಲ ಸಾಧನೆಗಳಿಗಿಂತ ಉತ್ತಮ ಸಾಧನೆಯೆಂದು ಸಮಾಜದ ಭಾವನೆಯಾಯಿತು. ಹಿಂದಿನ ಕಾಲದಲ್ಲಿ ಇಂತಹ ನಿಷ್ಠ ಬ್ರಾಹ್ಮಣರೇ ಹೇರಳವಾಗಿದ್ದುದರಿಂದ ಸಮುದಾಯತ್ವೇನ ಬ್ರಾಹ್ಮಣ ಭೋಜನ ಮಾಡಿ ಸುವುದು ಧರ್ಮಸಾಧಕವೆಂಬ ಕಲ್ಪನೆಯುಂಟಾಗಿ ಸಮಾಜದಲ್ಲಿ ಆಚರಣೆಗೆ ಬಂದಿತು. ಇಂತಹ ಬ್ರಹ್ಮವೇತ್ತರಾದ ಬ್ರಾಹ್ಮಣರಾದರೂ ಬಲವತ್ತರವಾದ ಕಾರಣಗಳಿದ್ದ ವಿನಾ ಪರಾನ್ನಭೋಜನ ಮಾಡುತ್ತಿರಲಿಲ್ಲ. ತಮ್ಮ ಪುಣ್ಯ ಲೋಪವಾಗುವುದೆಂದು ಯಾವುವೇ ರೀತಿಯ ಪ್ರತಿಗ್ರಹವನ್ನೂ ಮಾಡುತ್ತಿರಲಿಲ್ಲ. ಈ ವಿಷಯದಲ್ಲಿ ಪೌರಾಣಿಕವಾದ ಅರ್ಥ ವತ್ತಾದ ಕಥೆಯೊಂದಿರುವುದು. ಅದರ ಕ್ರಮವೇನೆಂದರೆ—

ದ್ವಾಪರಾಂತ್ಯದಲ್ಲಿ ಯುಧಿಷ್ಠಿರ ಮಹಾರಾಜನು ರಾಜಸೂಯ ಯಾಗಮಾಡಿ ಲಕ್ಷಾವಧಿ ಬ್ರಾಹ್ಮಣರನ್ನು ಅನ್ನದಾನ ವಸ್ತ್ರದಾನ ಹಿರಣ್ಯಾದಿ ದಾನಗಳಿಂದ ಸಂತೋಷ ಪಡಿಸಿದನು. ಯಜ್ಞವು ಸಾಂಗವಾಗುತ್ತಲೇ ಶ್ರೀಕೃಷ್ಣ ಪರಮಾತ್ಮನಿಗೆ ಅಗ್ರಪೂಜೆ ಮಾಡಿ, ತಾನು ಸಾಮ್ರಾಟಪದವಿಯಲ್ಲಿ ಪಟ್ಟಾಭಿಷಿಕ್ತನಾದನು. ಯುಧಿಷ್ಠಿರನಿಗೆ ತಾನು ಮಾಡಿದ ಧರ್ಮಕಾರ್ಯಗಳನ್ನು ಕುರಿತು ಯೋಚಿಸಿಕೊಂಡಾಗ ತನ್ನ ಸಮಾನ ಧರ್ಮಾತ್ಮರು ಮತ್ತೊಬ್ಬರಿಲ್ಲವೆಂಬ ಗರ್ವವುಂಟಾಯಿತು. ಇದನ್ನರಿತ ಶ್ರೀಕೃಷ್ಣನು–ಮೊಳಕೆಯಾಗಿರು ವಾಗಲೇ ಧರ್ಮನಂದನನ ಈ ಅಹಂಕಾರವನ್ನು ಖಂಡಿಸಬೇಕೆಂದು ಬಗೆದನು. ಅವನನ್ನು ಕುರಿತು–'ಅಯ್ಯಾ ಧರ್ಮನಂದನ, ಲೋಕತ್ರಯಗಳಲ್ಲಿ ನಿನ್ನಂಥಾ ಧರ್ಮಾತ್ಮರಿನ್ನಿಲ್ಲ. ಲಕ್ಷಾವಧಿ ಬ್ರಾಹ್ಮಣರನ್ನು ಸಂತುಷ್ಟಿಗೊಳಿಸಿ, ರಾಜಸೂಯ ಯಾಗಮಾಡಿ, ಶಾಶ್ವತ ವಾದ ಕೀರ್ತಿಯನ್ನು ಸಂಪಾದಿಸಿರುವೆ. ಯಾವ ಲೋಕಾಧಿಪರು ನಿನ್ನನ್ನು ಗೌರವಿಸು ವರು. ಅಮರಾವತಿಯ ಅರಸನಾದ ಇಂದ್ರನು ನಿನ್ನನ್ನು ತನ್ನ ಅರ್ಧ ಸಿಂಹಾಸನದಲ್ಲಿ ಕುಳ್ಳಿರಿಸಿಕೊಳ್ಳುವನು. ಅಸಹಾಯ ಶೂರರಾದ ಭೀಮಾರ್ಜುನರಂಥಾ ತಮ್ಮಂದಿರು

ನಿನಗಿರುವರು. ನಿನಗೆ ಲೇಶವಾದರೂ ಶ್ರಮ ಕೊಡದಂತೆ ರಾಜ್ಯಕಾರ್ಯವನ್ನೆಲ್ಲ ಅವರೇ ನಿರ್ವಹಿಸಿ, ನಿನಗೆ ಕೀರ್ತಿಯನ್ನು ತಂದುಕೊಡುತ್ತಿರುವರು. ಈ ಸಂತೋಷ ಕಾಲದಲ್ಲಿ ನಾವಿರ್ವರೂ ಕಲೆತು ದೇಶಪರ್ಯಟನ ಮಾಡಿ ಬರೋಣ! ಸುತಳ ಲೋಕಾಧಿಪತಿಯಾದ ಬಲಿಚಕ್ರವರ್ತಿಯನ್ನು ನೋಡಬೇಕೆಂಬ ಕುತೂಹಲ ನನಗೆ ಬಹಳವಾಗಿದೆ. ಆ ಪುಣ್ಯಶ್ಲೋಕನ ಮನೆಯ ಬಾಗಿಲನ್ನು ವಾಮನಮೂರ್ತಿಯು ಗದಾಪಾಣಿಯಾಗಿ ಕಾಯುತ್ತಿರುವನಂತೆ! ಅಲ್ಲಿಗೆ ಹೋಗಿ ಬರೋಣವೇ?' ಎಂದು ಕೇಳಿದನು. ಧರ್ಮನಂದನನು–'ಶ್ರೀಕೃಷ್ಣಾ ಒಳ್ಳೆಯ ಸಲಹೆಯನ್ನು ಮಾಡಿದೆ. ಈಗಲೇ ಪ್ರಯಾಣ ಮಾಡೋಣ ನಡೆ' ಎಂದು ಕುತೂಹಲದಿಂದ ನುಡಿದನು. ಶ್ರೀಕೃಷ್ಣ ಯುಧಿಷ್ಠಿರರೀರ್ವರೂ ರಥಾರೂಢರಾಗಿ ಬಲಿಚಕ್ರವರ್ತಿಯ ಅರಮನೆಯ ಮಹಾದ್ವಾರದ ಬಳಿಗೆ ಬಂದರು. ವಾಮನಮೂರ್ತಿಯು ಈರ್ವರನ್ನೂ ಪುರಸ್ಕರಿಸಿ ಬಂದ ಕಾರ್ಯವೇನೆಂದು ಪ್ರಶ್ನೆ ಮಾಡಿದನು. ಶ್ರೀಕೃಷ್ಣನು–'ತ್ರಿವಿಕ್ರಮಾ, ರಾಜಸೂಯ ಯಜ್ಞ ಮಾಡಿ ಲಕ್ಷಾವಧಿ ಬ್ರಾಹ್ಮಣರನ್ನು ತುಷ್ಟಿಗೊಳಿಸಿ, ಸಾಮ್ರಾಟ್ಪದದಲ್ಲಿ ಪಟ್ಟಾಭಿಷಿಕ್ತನಾದ ಯುಧಿಷ್ಠಿರ ಚಕ್ರೇಶ್ವರನು ಬಲಿರಾಜನನ್ನು ನೋಡಲು ಬಂದಿರುವನು. ಧರ್ಮನಂದನನೆಂದರೆ ಸಾಮಾನ್ಯ ಮರ್ತ್ಯನಲ್ಲ. ಆದ್ದರಿಂದ, ಬಲಿರಾಜನು ಯೋಗ್ಯರೀತಿಯಿಂದ ಧರ್ಮರಾಜನನ್ನು ಬಂದು ಕಂಡು ಗೌರವಿಸುವಂತೆ ತಕ್ಕ ಪ್ರಯತ್ನ ಮಾಡು'ಎಂದನು. ಕೃಷ್ಣನ ಮಾತನ್ನು ಕೇಳಿ ವಾಮನನು ನಗುತ್ತಾ, ನೀನು ಹೇಳಿದ ಸಂಗತಿಯನ್ನು ಬಲಿರಾಜನಿಗೆ ತಿಳಿಸುವೆನೆಂದು ನುಡಿದು, ರಾಕ್ಷಸಾಧಿಪತಿಯ ಮುಂದೆ ಶ್ರೀಕೃಷ್ಣನಾಡಿದ ಮಾತನ್ನೇ ಅಕ್ಷರಶಃ ತಿಳಿಸಿದನು. ಬಲಿಯು 'ಏನು, ಲಕ್ಷಾವಧಿ ಬ್ರಾಹ್ಮಣರನ್ನು ತಣಿಸಿ ರಾಜಸೂಯ ಮಾಡಿದ ನನ್ನ ಸಮರ್ಯಾರೆಂದು ಮದಗರ್ವಿತನಾದ ಆ ಯುಧಿಷ್ಠಿರನು ತನ್ನ ಪ್ರತಿಷ್ಠೆಯನ್ನು ತೋರಿಸಲು ನನ್ನ ಬಳಿಗೆ ಬಂದಿರುವನೆ? ಆ ನೀಚನ ಮುಖಾವಲೋಕನ ಮಾಡುವುದಿಲ್ಲವೆಂದು ಖಂಡಿತವಾಗಿ ತಿಳಿಸು'ಎಂದು ನುಡಿದನು.

ಶ್ರೀಕೃಷ್ಣ :—ವಾಮನಮೂರ್ತಿ, ಏಕೆ ಒಬ್ಬನೇ ಬಂದೆ? ಬಲಿರಾಜನ ಸಮಯ ವೇನು? ಅವನೇನೆಂದನು?

ವಾಮನ :—ಕೃಷ್ಣಾ, ಅವನೆಷ್ಟಾದರೂ ರಕ್ಕಸನು. ಹೇಳಿ ಫಲವಿಲ್ಲ. ಈಗ ಸಮಯ ಸರಿಯಾಗಿಲ್ಲ!

ಶ್ರೀಕೃಷ್ಣ :—ಸಮಯವಿಲ್ಲದಿದ್ದರೆ ಚಿಂತೆಯಿಲ್ಲ. ನೀನೇನು ಹೇಳಿದೆ? ಧರ್ಮರಾಜನು ಬಂದಿರುವ ಸಂಗತಿಯನ್ನು ನಾನು ತಿಳಿಸಿದ ಮಾತಿನಿಂದಲೇ ತಿಳಿಸಿದೆಯಷ್ಟೆ!

ವಾಮನ :—ನಿನ್ನ ಮಾತಿಗೆ ಮತ್ತಷ್ಟು ಸೇರಿಸಿ ಹೇಳಿದೆ! ಧರ್ಮಾತ್ಮನಾದ ಯುಧಿಷ್ಠಿರನ ಗುಣಕಥನವನ್ನೂ ಮಾಡಿದೆ! ಫಲವೇನು?

ಶ್ರೀಕೃಷ್ಣ :—ಹೋಗಲಿ! ಆ ಬಲಿರಾಜನಾಡಿದ ಮಾತೇನೆಂದಾದರೂ ಹೇಳು!

ವಾಮನ :—ಆ ಮಾತಿನಿಂದ ಫಲವೇನು? ಆ ಮಾತನ್ನು ನೀವು ಕೇಳಬಾರದು!

ಶ್ರೀಕೃಷ್ಣ :—ಚಿಂತೆಯಿಲ್ಲ. ಅದರಿಂದ ಧರ್ಮನಂದನನಿಗೆ ಆಯಾಸವಿಲ್ಲ. ಹೇಳು !

ವಾಮನ :—ಆ ಮಾತನ್ನು ನನ್ನ ಬಾಯಿಂದಲೂ ಬರಿಸಬೇಕೆನ್ನುವೆಯಾ, ಕೇಳು. ಆ ಲಕ್ಷಾವಧಿ ಬ್ರಾಹ್ಮಣರ ಭೋಜನ ಮಾಡಿಸಿ, ರಾಜಸೂಯ ಯಾಗ ಮಾಡಿದೆನೆಂಬ ಮದಗರ್ವಿತನಾದ ಯುಧಿಷ್ಠಿರನೇ ? ಆ ನೀಚನ ಮುಖಾವಲೋಕನ ವನ್ನೂ ಮಾಡುವುದಿಲ್ಲವೆಂದು ಹೇಳಿದನು.

ಆಗ ಶ್ರೀಕೃಷ್ಣನು–'ಯುಧಿಷ್ಠಿರಾ, ನಾವಿಲ್ಲಿಗೆ ಬಂದುದೇ ತಪ್ಪಾಯಿತು. ಎಷ್ಟಾ ದರೂ ಅವನು ರಕ್ಕಸ. ನಿನ್ನನ್ನು ವೃಥಾ ದಣಿಸಿದ ತಪ್ಪು ನನ್ನದಾಯಿತು. ಅನ್ಯೋ ಪಾಯವಿಲ್ಲ. ಬಂದುದಕ್ಕೆ ಆ ಬಲಿಯನ್ನು ಕಣ್ಣಿಂದ ನೋಡಿದೆವೆಂಬ ತೃಪ್ತಿಯಾದರೂ ಆಗಬೇಕಾಗಿತ್ತು. ನಾವು ಹೊರಟ ವೇಳೆಯೇ ಸರಿಯಲ್ಲ. **ಮತ್ತೊಮ್ಮೆ** ಬೇರೆ ರೀತಿ ಯಿಂದ ಪ್ರಯತ್ನ ಮಾಡೋಣವೆ ?

ಧರ್ಮನಂದನನು 'ಕೃಷ್ಣಾ, ಆದದ್ದಾಯಿತು. ಬಲಿರಾಯನನ್ನು ಕಣ್ಣಿಂದ ಲಾದರೂ ನೋಡಬೇಕಾಗಿತ್ತು. ನನಗೆ ಯಾವ ಬಹುಮಾನವೂ ಬೇಡ. ಎಂದನು' ಶ್ರೀ ಕೃಷ್ಣನು ಮತ್ತೆ ವಾಮನಮೂರ್ತಿಯ ಬಳಿಗೆ ಬಂದು–'ವಾಮನಾ, ಆ ಗೋವಳ ಕೃಷ್ಣ ಬಂದಿದ್ದಾನೆಂದು ತಿಳಿಸಿ ಸಹಾಯ ಮಾಡುವೆಯಾ ?' ಎಂದನು.

ವಾಮನನು–'ಅದಕ್ಕೇನು ? ಹೇಳುವ ಮಾತು ಹೇಳಿ ಬರುತ್ತೇನೆ'ಂದನು. 'ಬಲಿರಾಜಾ, ಶ್ರೀಕೃಷ್ಣನು ನಿನ್ನ ದರ್ಶನಾಭಿಲಾಷಿಯಾಗಿ ಬಂದಿರುವನು' ಎಂದು ಆ ದಾನ ವೇಂದ್ರನಿಗೆ ತಿಳಿಸಿದನು.

ಆ ಮಾತುಗಳನ್ನು ಕೇಳಿದ ಬಲಿರಾಜನು–'ಏನು ಭೂಭಾರ ಪರಿಹಾರಾರ್ಥವಾಗಿ ದ್ವಾಪರದಲ್ಲವತರಿಸಿ ಧರ್ಮಸಂಸ್ಥಾಪನೆ ಮಾಡಿದ ಶ್ರೀಕೃಷ್ಣ ಪರಮಾತ್ಮನು, ನನ್ನಂಥಾ ಪಾಮರನಿಗೆ ದರ್ಶನವೀಯಲು ದಯಮಾಡಿಸಿದನೆ ? ನಾನು ಧನ್ಯನು' ಎಂದು ಒಡನೆ ಅರ್ಘ್ಯಪಾದ್ಯಾದಿ ಷೋಡಶೋಪಚಾರಗಳಿಗೆ ಬೇಕಾದ ಸಾಮಗ್ರಿಗಳನ್ನು ತೆಗೆಸಿಕೊಂಡು ಬಂದು ಶ್ರೀಕೃಷ್ಣಸ್ವಾಮಿಯ ಪಾದಾರವಿಂದಗಳಿಗೆ ನಮಸ್ಕಾರಮಾಡಿ, ಉಪಚರಿಸಿ, ದಿವ್ಯಾಸನದಲ್ಲಿ ಕುಳ್ಳಿರಿಸಿ, ಸ್ವಾಮಿಯನ್ನು ಅಪಾರವಾಗಿ ಸ್ತೋತ್ರಮಾಡಿದನು. ಶ್ರೀ ಕೃಷ್ಣನು–'ಬಲಿರಾಜಾ, ನಿನ್ನನ್ನು ನೋಡಿ ನನಗೆ ಪರಮಾನಂದವಾಯಿತು. ನನ್ನ ಜೊತೆಯಲ್ಲಿ ಬಂದಿರುವವನಾರೆಂದು ಬಲ್ಲೆಯಾ ? ಧರ್ಮಾತ್ಮನಾದ ಯುಧಿಷ್ಠಿರನ ರಾಜ ಸೂಯದ ಸದ್ವಾರ್ತೆಯನ್ನು ಕೇಳಿಲ್ಲವೆ ? ನನ್ನನ್ನು ಸನ್ಮಾನಿಸುವುದಿರಲಿ, ಮೊದಲು ಧರ್ಮನಂದನನನ್ನು ಪೂಜಿಸು' ಎಂದು ನುಡಿದನು.

ಆ ಮಾತನ್ನು ಕೇಳಿದ ಬಲಿಯು–'ಆ ನೀಚನ ಮುಖಾವಲೋಕನವೇ ಪಾಪ ವೆಂದು ಭಾವಿಸಿರುವ ನನ್ನನ್ನು, ದೇವ–ಏತಕ್ಕೆ ಬಲಾತ್ಕರಿಸುವೆ ? ಲಕ್ಷಾವಧಿ ಬ್ರಾಹ್ಮಣರ ಭೋಜನ ಮಾಡಿಸಿದ ವಾರ್ತೆಯು ಅವನಿಗೆ ಕೀರ್ತಿಯೇ ? ಬ್ರಾಹ್ಮಣರು ಪರಾನ್ನವನ್ನು ಹುಡುಕಿಕೊಂಡು ಬರುವಷ್ಟು ದುರ್ಗತಿಗೆ ಬಂದರೆ ? ಇವನ ರಾಜ್ಯಭಾರದಲ್ಲಿ ಬ್ರಾಹ್ಮಣ

ರಿಗೆ ಇವನ ಅನ್ನ ಸಿಕ್ಕಿತೆಂದು ತಮ್ಮ ನಿತ್ಯಕರ್ಮವನ್ನೂ ತ್ಯಜಿಸಿ ಬರುವಷ್ಟು ದಾರಿದ್ರ್ಯ ಬಂದಿತೇ? ಸ್ವಾಮಿಯೇ ಕೇಳು–ನನ್ನ ಪಿತೃ ಶ್ರಾದ್ಧಕ್ಕೆ ವರ್ಷಕ್ಕೊಮ್ಮೆ ಇಬ್ಬರು ಬ್ರಾಹ್ಮಣರನ್ನು ಸಂಪಾದಿಸುವುದು ಎಷ್ಟೋ ಕಷ್ಟವಾಗಿದೆ! ಎಷ್ಟೋ ಕಠಿಣವೆನ್ನಿಸಿದೆ. ಬ್ರಾಹ್ಮಣರೆಂದರೆ ಶಮದಮಾದಿ ಗುಣಸಂಪನ್ನರು, ತಪೋನಿಷ್ಠರು, ಶೌಚಾಚಾರಪರರು, ಕ್ಷಮಾವಂತರು, ಋಜುಮಾರ್ಗಗಾಮಿಗಳು, ಜ್ಞಾನ ವಿಜ್ಞಾನ ಆಸ್ತಿಕ್ಯಾದಿ ಗುಣಭೂಷಿತರು. ಪಾತ್ರಾಪಾತ್ರಿನಲ್ಲೂ ಪುಣ್ಯಕ್ಷೀಣವಾಗುವುದೆಂಬ ಭೀತಿಯಿಂದ ಪ್ರತಿಗ್ರಹ ಮಾಡುವವರಲ್ಲ, ಪರಾನ್ನವನ್ನು ಬಯಸುವವರಲ್ಲ. ಅಂಥಾ ಬ್ರಾಹ್ಮಣರು ಅನ್ನಾರ್ಥಿಗಳಾಗುವಂತಹ ಕಾಲ ಪ್ರಾಪ್ತವಾದುದಕ್ಕೆ ಈ ರಾಜನೇ ಕಾರಣನಲ್ಲವೆ?' ಎಂದು ವಿಜ್ಞಾಪಿಸಿದನು. ಈ ವಾಕ್ಯಗಳನ್ನು ಕೇಳಿ ಧರ್ಮರಾಜನ ಗರ್ವವು ಅಡಗಿಹೋಯಿತು.

ಬ್ರಾಹ್ಮಣ್ಯದ ನಿಜ ಲಕ್ಷಣವಾದರೋ ಹೀಗಿರುವುದು. ಈ ಗುಣಗಳನ್ನು ಕಳೆದುಕೊಂಡು, ನಾವು ಬ್ರಾಹ್ಮಣ ಗೋತ್ರೋದ್ಭವರೆಂದು, ಬ್ರಾಹ್ಮಣ ನಾಮಧಾರಿಗಳು ಪರಾನ್ನವನ್ನು ಬಯಸುವರಾದರೆ, ಅವರನ್ನು ಆ ಪವಿತ್ರನಾಮದಿಂದ ಕರೆಯುವುದು ಪಾಪವೆನ್ನಿಸುವುದು. ಅಂಥವರಿಗೆ ಅನ್ನದಾನ ಮಾಡುವುದರಿಂದ ಭೂತತೃಪ್ತಿಯಾಯಿತೆಂದು ಸಮಾಧಾನಪಡಬಹುದಲ್ಲದೆ, ಅದರಿಂದ ಹೆಚ್ಚು ಪುಣ್ಯವೇನೂ ಬರಲಾರದು.

ಗೋಪಾಲದಾಸಾರ್ಯರು ಕೇವಲ ಬ್ರಹ್ಮವೇತ್ತರಾದುದರಿಂದ ಆ ಮೂವರ ಭೋಜನ ಮಾತ್ರದಿಂದ ಗೌತಮನಿಗೆ ಲಕ್ಷ ಬ್ರಾಹ್ಮಣ ಭೋಜನ ಮಾಡಿಸಿದ ಪುಣ್ಯ ಪ್ರಾಪ್ತಿಯಾಗುವುದರ ಜೊತೆಗೆ ಅವನ ಮೂರು ತಲೆಯ ತನಕ ಮಹದೈಶ್ವರ್ಯವೂ ವಂಶಾಭಿವೃದ್ಧಿಯೂ ಆದುವು.

ಚಿತ್ರಲೇಖನದಲ್ಲಿ ಗೋಪಾಲದಾಸರು ಬಲು ಕುಶಲರಿದ್ದರು. ವಿಜಯದಾಸರು ಮಾಡಿದ ಕಂಕಣಾಕಾರ ಸುಳಾದಿಯನ್ನು ಚಕ್ರಾಬ್ಜದಲ್ಲಿಟ್ಟು ಬೀಜಾಕ್ಷರಗಳನ್ನು ಆಯಾ ಸ್ಥಳಗಳಲ್ಲಿ ಗುರ್ತಿಸಿ–ಉಪಾಸಕರಿಗೆ ಸೌಲಭ್ಯವನ್ನು ಕಲ್ಪಿಸಿಕೊಟ್ಟವರು ಗೋಪಾಲದಾಸರು. ಪುರಾಣಗಳನ್ನು ಶೋಧಿಸಿ ಪರಮಾತ್ಮನ ವಿರಾಡ್ರೂಪವನ್ನೂ ಲೋಕಗಳ ಸ್ಥಾನಗಳನ್ನೂ ತೋರಿಸಿ, ಬ್ರಹ್ಮಾಂಡದ ಪಟವನ್ನು ಬಲು ಸುಂದರವಾಗಿರುವಂತೆ ಸಪ್ರಮಾಣವಾಗಿ ಬರೆದವರು ಗೋಪಾಲದಾಸರು. ದಾಸರು ಬರೆದ ಬ್ರಹ್ಮಾಂಡ ಚಿತ್ರವು ಆ ವಂಶೀಕರಿಂದ ಮಾನ್ಯವಾಗಿ ಅದ್ಯಾಪಿ ಅವರ ರಕ್ಷಣೆಯಲ್ಲಿದೆ. ಮಹಾಮಂತ್ರಮೂರ್ತಿಗಳನ್ನು ಶಿಲ್ಪಶಾಸ್ತ್ರಾನುಸಾರ ಬರೆದು ಮಂತ್ರದ ವರ್ಣಗಳನ್ನು ಯೋಗ್ಯಸ್ಥಾನಗಳಲ್ಲಿ ಗುರ್ತಿಸಿ, ಆವಾಹನಾದಿ ಷೋಡಶೋಪಚಾರಗಳಿಂದ ದಿನದಿನದ ಕೀರ್ತನಕಾಲದಲ್ಲಿ ಪೂಜಿಸುವುದು ದಾಸರ ಪದ್ಧತಿಯಾಗಿತ್ತು. ಒಮ್ಮೆ ದಾಸರು, ಒಂದು ಮೂರ್ತಿಯನ್ನು ಆವಾಹನೆ ಮಾಡಿ ಪೂಜಿಸಿದರೆಂದರೆ ಆ ಪತ್ರದಲ್ಲಿ ವಿಚಿತ್ರ ಶಕ್ತಿಯುಂಟಾಗಿಬಿಡುತ್ತಿತ್ತು. ಸಂತಾನಾದಿ ಇಷ್ಟಾರ್ಥಗಳನ್ನು ಬಯಸುವವರಾಗಲಿ, ರೋಗಪೀಡಿತರಾಗಲೀ ಭೂತಾದಿ ಭಯಬಾಧಿತರಾಗಲೀ, ಮಂತ್ರ ಬೇಕೆಂದು ದಾಸರ ಬಳಿಗೆ ಬಂದರೆ, ಅವರು ತಾವು ಪೂಜಿಸಿದ ಒಂದೊಂದು ಚಿತ್ರವನ್ನು ಕೊಟ್ಟು ಕಳುಹಿಸುತ್ತಿದ್ದರು. ಆ ಜನರು

ಆಯಾ ಮೂರ್ತಿಗಳನ್ನು ಪೂಜಿಸಿ, ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಿದ್ದರು. ಈ ಎಲ್ಲ ಪ್ರಕಾರದ ಸಿದ್ಧಿಗೂ, ಅವರ ಮಂತ್ರೋಪಾಸನಾಬಲವೂ, ಅವರ ಮೇಲಿದ್ದ ಭಗವದನುಗ್ರಹವೂ ಕಾರಣವಾಗಿದ್ದುವು.

ಗೋಪಾಲದಾಸರಿಗೆ ಪುರುಷರಂತೆ ಅನೇಕ ಸ್ತ್ರೀಯರೂ ಶಿಷ್ಯರಾಗಿದ್ದರೆಂದು ತಿಳಿಯಬರುತ್ತಿದೆ. ಸ್ತ್ರೀಯರ ಪೈಕಿ ಹೆಳವನಕಟ್ಟೆಯ ಗಿರಿಯಮ್ಮನೆಂಬಾಕೆಯು ಪ್ರಸಿದ್ಧಳು. ಆಕೆಯು ಭಕ್ತಳಾಗಿದ್ದುದು ಮಾತ್ರವಲ್ಲದೆ, ಕವಯಿತ್ರಿಯೂ ಆಗಿದ್ದಳು. ಗೋಪಾಲದಾಸರಿಂದ ಶ್ರೀಕೃಷ್ಣ ಮಂತ್ರೋಪದೇಶಪಡೆದು ದಾಸರು ಕೊಟ್ಟಿದ್ದ ಕೃಷ್ಣಪ್ರತೀಕವನ್ನು ಪೂಜಿಸುತ್ತಾ ಕೃಷ್ಣ ಸಾಕ್ಷಾತ್ಕಾರ ಮಾಡಿಕೊಂಡಿದ್ದಳು.

ಆ ಕಾಲದಲ್ಲಿ ರಾಣೀಬೆನ್ನೂರು, ಹರಿಹರ, ಹೊನ್ನಾಳಿ ಪ್ರಾಂತಗಳಲ್ಲಿದ್ದ ವೇದವಿದ್ಯಾಪಾರಂಗತರು ನಿಯತವಾಗಿ ಗದ್ವಾಲ ಸಂಸ್ಥಾನದ ವಿದ್ವತ್ಸಭೆಗೆ ಶಿಷ್ಯ ಸಮೇತರಾಗಿ ಬಂದು ಸನ್ಮಾನ ಪಡೆಯುತ್ತಿದ್ದರು. ಇಂದಿನಂತೆ ಪ್ರಯಾಣ ಸೌಕರ್ಯಗಳು ಇಲ್ಲದಿದ್ದ ಆ ಕಾಲದಲ್ಲಿ ಕುದುರೆಗಳೇ ಪಂಡಿತರ ಪುಷ್ಪಕ ವಿಮಾನಗಳಾಗಿದ್ದುವು. ವಿನೋದಗೋಷ್ಠಿಯಲ್ಲಿ ಪ್ರಸ್ತಾವನೆಗೆ ಬರುವಂತೆ ವಿದ್ವದಶ್ವಗಳು ಹೊಟ್ಟೆಯಲ್ಲೊಂದು ಮರಿ ಹಿಂಬಾಲಿಸಿ ಬರುವುದೊಂದು ಮರಿ ಎಂಬ ರೀತ್ಯಾ, ಪಂಡಿತರ ಪೂಜೆ ಭೋಜನ ಸಾಮಗ್ರಿಗಳ ಕಂಟಲೆಯನ್ನು ಹೊತ್ತುಕೊಂಡು ನಡೆಯುತ್ತಿದ್ದುವು. ಕಾರ್ತಿಕ ಪೌರ್ಣಿಮೆಗೆ ಗದ್ವಾಲಿಯನ್ನು ಸೇರುವ ಅವಸರಕ್ಕೆ ದೀಪಾವಳಿಯ ಭಾವನ ಬಿದಿಗೆಯು ವಿದ್ವಾಂಸರ ಪ್ರಯಾಣದ ಪ್ರಶಸ್ತ ದಿನವಾಗುತ್ತಿತ್ತು. ದೀಪಾವಳಿಯಾಗುತ್ತಲೇ ಶಿಷ್ಯಸಹಿತರಾಗಿ ಹೊರಟ ಪಂಡಿತರುಗಳು ದೇಶಪರ್ಯಟನ ಮಾಡಿಕೊಂಡು ಯುಗಾದಿಗೆ ಪುನಃ ಹಿಂದಿರುಗಿ ಸ್ವಸ್ಥಳವನ್ನು ಸೇರುತ್ತಿದ್ದರು. ಶಿಷ್ಯರ ಸಂಖ್ಯೆ ಹೆಚ್ಚಾಗಿದ್ದಂತೆ ಪಂಡಿತರ ಪ್ರಾಶಸ್ತ್ಯವಾದರೂ ಹೆಚ್ಚುತ್ತಿತ್ತು. ಶಿಷ್ಯ ಸಂಭಾವನೆಯೊಂದು ವಿದ್ವತ್ಸಭೆಗಳಲ್ಲಿ ಪ್ರತ್ಯೇಕವಾಗಿ ಬರುವ ಹಣವು ಗುರುಗಳಿಗೇ ಸೇರುವ ಸಂಪ್ರದಾಯವಿದ್ದುದರಿಂದ ತತ್ಕಾಲದ ಅನುಕೂಲತೆಗಾದರೂ ದೊರೆತಷ್ಟು ಹೆಚ್ಚುಮಂದಿ ಶಿಷ್ಯರನ್ನು ಕರೆದುಕೊಂಡೇ ಗುರುಗಳು ದಿಗ್ಜಯಕ್ಕೆ ಹೊರಡುತ್ತಿದ್ದರು. ಮೇಲೆ ಹೇಳಿದ ಸ್ಥಳಗಳ ಪಂಡಿತರು ಮಂತ್ರಾಲಯದ ಮಾರ್ಗವಾಗಿ ವೇಣೀ ಸೋಮಪುರಕ್ಕೆ ಬಂದು ದಾಸರನ್ನೂ ವ್ಯಾಸತತ್ವಜ್ಞರನ್ನೂ ಕಂಡು ಗದ್ವಾಲಿಗೆ ಹೋಗುತ್ತಿದ್ದರು. ಪ್ರಾಯಿಕವಾಗಿ ವೇಣೀ ಸೋಮಪುರದಲ್ಲಿ ಸಭಾ ಯಾತ್ರಿಕರು ಸೇರುತ್ತಿದ್ದ ದಿವಸಗಳು ಉತ್ಥಾನ ಏಕಾದಶಿ ದ್ವಾದಶಿ ತ್ರಯೋದಶಿ ತಿಥಿಗಳಾಗಿರುತ್ತಿದ್ದುವು. ಗೋಪಾಲದಾಸರ ಮತ್ತು ವ್ಯಾಸತತ್ವಜ್ಞರ ಖ್ಯಾತಿಯು ವಿದ್ವಾಂಸರುಗಳನ್ನು ಆಕರ್ಷಣ ಮಾಡುವ ಸಾಧನವಾಗಿತ್ತು. ಮೇಲಾಗಿ ಗೋಪಾಲದಾಸರು ಬಂದ ಪಂಡಿತರುಗಳಿಗೆ ಊಟ[illegible]ರಿತ್ತು, ಸನ್ಮಾನ ಕೊಡುವ ಪದ್ಧತಿಯನ್ನೂ ನಡೆಸಿಕೊಂಡು ಬಂದಿದ್ದರು. ಮೇಲೆ ಹೇಳಿದ ಸ್ಥಳಗಳ ಪಂಡಿತರಿಗೆ ಹೆಳವನಕಟ್ಟೆಯ ಗಿರಿಯಮ್ಮನ ಹೆಸರೆತ್ತಿದರಾಗುತ್ತಿರಲಿಲ್ಲ. ದಾಸಕೂಟದವರಿಂದ ಧರ್ಮದ ಮಾರಣಹೋಮವಾಯಿತೆಂದು ಗಳಹುತ್ತಿದ್ದರು. ಹೆಂಗಸಿಗೇಕೆ ರಾಗರಾಗವಾಗಿ ಹಾಡುವ ಭಜನೆ? ಹೆಂಗಸಿಗೇಕೆ ಪ್ರತಿಮೆಯ ಪೂಜೆ? ಹೆಂಗಸು

ಕವಿತ್ವ ಮಾಡುವುದೆಂದರೇನು ? ಎಂದು ಗಿರಿಯಮ್ಮನನ್ನು ಜರಿಯುತ್ತಿದ್ದರು. ಸ್ತ್ರೀಯರಿಗೆ ಗೃಹಕಾರ್ಯನಿರ್ವಾಹ, ಪತಿಸೇವಾ, ಪುರಾಣ ಶ್ರವಣಗಳ ವಿನಾ ಹೆಚ್ಚು ಸ್ವಾತಂತ್ರ್ಯ ಕೊಡುವುದು ಶಾಸ್ತ್ರ ವಿರೋಧವೆನ್ನುತ್ತಿದ್ದರು. ಇದಕ್ಕೆ ಪ್ರತಿಯಾಗಿ ಆ ಪ್ರಾಂತದ ಜನರು ಆಕೆಯು ರಚಿಸಿದ ದೇವರನಾಮಗಳನ್ನು ಹಾಡುವುದು, ಆಕೆಯನ್ನು ದೇವತಾಮನುಷ್ಯಳೆಂದು ತಿಳಿಯುವುದು, ಆಕೆಗೆ ದೇವರು ಪ್ರತ್ಯಕ್ಷವೆನ್ನುವುದು, ಆಕೆಗೆ ಸಾಷ್ಟಾಂಗ ನಮಸ್ಕಾರ ಮಾಡುವುದು, ಈ ರೀತಿ ನಡೆದುಕೊಳ್ಳುತ್ತಿದ್ದರು. ಸಕಲ ಜಾತಿಯ ಜನರೂ ಆಕೆಯ ಬಾಯಿಂದ ಬಂದ ಮಾತನ್ನು ವರಪ್ರಸಾದವೆನ್ನುತ್ತಿದ್ದರು. ಆಕೆಯ ಕೈಯಿಂದ ಬಂದ ವಿಭೂತಿ ಮೃತ್ತಿಕೆಗಳು ಸರ್ವಜ್ವರ ಪರಿಹಾರಕವೆನ್ನುತ್ತಿದ್ದರು. ಆಕೆಯನ್ನು ಹಿಂದೆ ದೂಷಿಸುತ್ತಿದ್ದ ಪಂಡಿತರಾದವರೂ, ಆಕೆಯೊಡನಾದವರೂ ಭೋಜನಕ್ಕೆ ಕರೆದರೆ, ಪಾಕ ನೀವು ಚೆನ್ನವೆ, ಎದುರಿಗೆ ನೀವು ಮಹಾಜ್ಞಾನಿಯೆಂದು ಶ್ಲಾಘಿಸಿ, ಭೋಜನಮಾಡಿ ಬರುತ್ತಿದ್ದರು. ಆ ಪಂಡಿತರ ಬಂಧುವರ್ಗದ ಸ್ತ್ರೀಯರು ಗಿರಿಯಮ್ಮನ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದರು. ಗೋಪಾಲದಾಸರಿಗೆ ಈ ಕುಹಕ ವರ್ತನೆಗಳು ತಿಳಿಯದಿರುತ್ತಿರಲಿಲ್ಲ.

ಗಿರಿಯಮ್ಮನನ್ನು ಹಿಂದುಗಡೆ ದೂಷಿಸುತ್ತಿದ್ದ ಪಂಡಿತರಲ್ಲೊಬ್ಬರು ವೇಣೀಸೋಮಪುರಕ್ಕೆ ಬಂದ ಒಂದು ಸಮಯದಲ್ಲಿ ಗೋಪಾಲದಾಸರು ವೇಣುಗೋಪಾಲ ದೇವಾಲಯದಲ್ಲಿ ಕುಳಿತು ಎಲ್ಲರ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವಂತೆ ಬಿಂಬೋಪಾಸನವಮೇಲೆ ಭಾಷಣ ಮಾಡಿದರು. ವ್ಯಾಸತತ್ವಜ್ಞರು ಯಾವಾಗಲೂ ದಾಸರನ್ನ ಗಣಿಸುತ್ತಿರಲಿಲ್ಲ. ತಮಗೆ ನಮಸ್ಕಾರಮಾಡಲು ಬಂದವರಿಗೆ ಗೋಪಾಲದಾಸರ ಕಡೆಗೆ ಕೈ ತೋರಿಸುತ್ತಿದ್ದರು. ದಾಸರಿಗೆ ನಮಸ್ಕಾರಮಾಡಲು ಹಿಂದೆಗೆಯುತ್ತಿದ್ದವರು, ಯುಕ್ತಿಗಳಾವುದರಿಂದ ವ್ಯಾಸತತ್ವಜ್ಞರ ಮಾತನ್ನು ಮೀರುವುದಕ್ಕಾಗುತ್ತಿರಲಿಲ್ಲ. ಹೀಗಿರಲು ಒಂದು ದಿನ, ಸಂಧ್ಯಾಕಾಲವಾಯಿತೆಂದು ಎಲ್ಲರೂ ತುಂಗಭದ್ರೆಗೆ ನಡೆದರು. ಎಲ್ಲರನ್ನನುಸರಿಸಿ ಗೋಪಾಲದಾಸರೂ ಸೋಪಾನಘಟ್ಟಕ್ಕೆ ಬಂದರು. ಪಂಡಿತರು ಒಬ್ಬರನ್ನು ಕಂಡಾಗ ಮತ್ತೊಬ್ಬರು ಹೆಚ್ಚು ಮಡಿಮಾಡಿ ತೋರಿಸುವಂತೆ ಮೂರು ಮೂರು ವೇಳೆ ಒದ್ದೆಗಳನ್ನು ಬದಲಾಯಿಸಿ ಸಂಧ್ಯಾವಂದನೆಗೆ ಕುಳಿತರು. ಗೋಪಾಲದಾಸರು ಬೇಕೆಂತಲೇ ವಸ್ತ್ರಾಂತರ ಮಾಡಿಕೊಳ್ಳದೆಯೇ ಸಂಧ್ಯಾವಂದನೆಗಾರಂಭಿಸಿದರು. ಇದನ್ನು ಕಂಡ ಪಂಡಿತರು ತಮ್ಮ ಸಂಧ್ಯಾವಂದನಾ ಕಾರ್ಯವನ್ನು ಬಿಟ್ಟು, ದಾಸರು ಮಡಿಯುಡಲಿಲ್ಲವೆಂದು ಗುಜಗುಟ್ಟಲಾರಂಭಿಸಿದರು ದಾಸಕೂಟದವರೇ ಹೀಗೆಂದರು. ಗಿರಿಯಮ್ಮನೂ ಇದೇ ಗುಂಪಿನವಳೆಂದರು. ಎಲ್ಲವನ್ನು ಕೇಳಿ ದಾಸರು ಮುಸಿ ನಗು ನಗುತ್ತಾ ದೇವಾಲಯಕ್ಕೆ ಬಂದರು. ಶಿಷ್ಯದಾಸರೂ, ದಾಸಶ್ರೇಷ್ಠದಾಸರೂ ಕೀರ್ತನದ ಪದ್ಧತಿಯನ್ನು ನಡೆಸಿದರು. ಸ್ವಾಮಿಗಳ ಜಪವಾದೊಡನೆಯೇ ದಾಸರ ಕೀರ್ತನಕ್ಕಾರಂಭವಾಯಿತು. ನದಿಯಲ್ಲಿ ಮಡಿಯ ಗೊಂದಲವೇ ನಡೆದದ್ದರಿಂದ ದಾಸರು—ಈ ಕೆಳಕಂಡ **'ಮಡಿ ಸುಳಾದಿ'**ಯನ್ನು ರಚಿಸಿ ಹಾಡಿದರು.

ಸುಳಾದಿ

ಧ್ರುವತಾಳ

ಮಡಿಮಾಡಬೇಕು ಒಳ್ಳೇ ನಡತೆ ಕಲಿಯಬೇಕು । ಎಡಹಿ ಮುಗ್ಗುತ ನೀರ ಮಡುವಿನೊಳಗೆ ಪೋಗಿ । ಬುಡುಗುಳಿಯಂತೆ ಮಿಂದು ಗುಡುಗುಡುಗುಟ್ಟುತ । ನಡುವೆ ಮಂತ್ರಗಳ ಕಡುವೇಗ ನುಡಿದು ನಾಮ। ಬಡಿದು ಮುದ್ರೆಯ ಪಚ್ಚೆ ಜಪಮಾಲೆ ತೋಳಿಸು । ಅಡಿಗಡಿಗೆ ಕಾಮಕ್ರೋಧ ಒಡಲೊಳು ಮಲಮೂತ್ರ । ಕ್ಷುಧಿತ ರಕ್ತಮಾಂಸ ಕಡು ಘೋರ ಇಂದ್ರಿಯಗಳ । ಕೊಡದೊಳು ಮದ್ಯ ತುಂಬಿ ಮುದಿಗೆ ಪೂಮಾಲೆ ಸುತ್ತಿ । ಕಡು ಪರಿಮಳ ದ್ರವ್ಯ ಶ್ರೀಗಂಧ ಲೇಪಿಸಿ । ನಡು ಬೀದಿಯೊಳಗಿಟ್ಟು ಬಿಡಗು ತೋರಿಸಿನ್ನು । ಮಡಿಮಾಡಿದರದು ಮಡಿಯಾಗಬಲ್ಲುದೆ ಕಂ। ಡೆಡೆಯಲ್ಲಿ ವ್ಯಾಪ್ತನಾದ **ಗೋಪಾಲವಿಠಲ** ನೆಂದು । ದೃಢ ನುಡಿಯನೊಮ್ಮೆ ನುಡಿದು ಮಡಿಮಾಡಿದವ । ಮಡಿವಂತ ಮಡಿವಂತ ಮಡಿವಂತನೋ ! ॥ ೧

ಮಟ್ಟತಾಳ

ಮಡುವಿನೊಳಗೆ ಇದ್ದ ಕರಿರಾಜನ ನೋಡು । ಕಡುಭಲ ಭಕುತ ಪ್ರಹ್ಲಾದನ ನೋಡು । ಅಡವಿಯ ಸೇರಿದ ಧ್ರುವರಾಯನ ನೋಡು । ಕಡುಪಾತಕಿ ಅಜಾಮಿಳನ ನೀನೆ ನೋಡು । ಎಡೆಯ ಕೊಂಡೋಡಿದ ಹನುಮಂತನ ನೋಡು । ಕಡೆಮೊಪಲಿಲ್ಲದ ಮುನಿಗಳನೇ ನೋಡು । ಕಡಲಶಯನ **ಗೋಪಾಲವಿಠಲ**ನಾಮ । ನುಡಿದರಲ್ಲದೆ ಮಡಿ ಮಾಡಿ ದಣಿದರೆ ? ॥

ತ್ರಿಪುಟತಾಳ

ಗುರುಮುಖವಿರಬೇಕು ಹರಿದೈವವೆನಬೇಕು । ಪರ ಉಪಕಾರ ಇರಬೇಕು ಪ್ರತಿ ಕ್ಷಣ । ಪರರು ತನ್ನವರು ಸಮರೆಂದು ತಿಳಿಯಬೇಕು । ಒರಿಸು ಹಿಗ್ಗದೆ ತಾನಸ್ವತಂತ್ರ ನೆನಬೇಕು । ಪರಮಾಣು ಸ್ಥಳದಲ್ಲಿ ಹರಿವ್ಯಾಪ್ತನೆನಬೇಕು, ಈ । ಪರಿಯಲ್ಲಿ ತಿಳಿದರೆ ಅವನೆ ಮುಕ್ತಿಯೋಗ್ಯ । ಶಿರಿರಮಣ ನಮ್ಮ **ಗೋಪಾಲವಿಠಲನ** । ಕರುಣಕ್ಕೆ ಪಾತ್ರ ನಾದವನೆ ಇದನರಿವ ॥ ೩

ಅಟ್ಟತಾಳ

ನಿತ್ಯ ಸಂಸಾರಿಗೆ ಅತ್ಯಂತ ದೂರವು । ದೈತ್ಯಗಂತು ಸ್ವಪ್ನದಲ್ಲೂ ನಾಸ್ತಿ । ಸತ್ವ ಜೀವರಿಗೆ ಹರಿ ಕರುಣ ಮಾಳ್ಪ । ತತ್ವಾಭಿಮಾನಿ ದೇವತೆಗಳಿಗೆ ಪೇಳಿ । ಮೊತ್ತ ದೋಷಂ ಗಳ ಕಲಿಯಾಧೀನಮಾಡಿ । ಉತ್ತಮ ಕರ್ಮಂಗಳ ಮಾಡಿಸಿ । ಸತ್ಯ ಲೋಕಾಧಿಪನ ಕಲ್ಪಾಂತರದಲ್ಲಿ । ಸತ್ವ ಜೀವಿಗಳ ವಿರಜೇಲಿ ಬ್ರಹ್ಮನ ಸಹ । ಮುಕ್ತಿಯೈದಿಪ ಶಕ್ತ್ಯನು ಸಾರ। ಸತ್ಯ ಸಂಕಲ್ಪ **ಗೋಪಾಲವಿಠಲನ**। ಭೃತ್ಯರೀ ಧನ್ಯರೋ, ಉತ್ತಮೋತ್ತಮರೋ॥ ೪

ಆದಿತಾಳ

ಎತ್ತ ಪೋದರೇನು ಎತ್ತ ನಿಂತರೇನು । ಚಿತ್ತ ಬಂದಂತೆ ಚಿಗಿದಾಡಿದರೇನು । ಚಿತ್ತದಲ್ಲಿ ಹರಿಯ ಕಾಣುವ ಭಕ್ತರಿಗೆ । ಮತ್ತೆ ಇತರ ಜನರ ಪರಿವೆ ಏಸೋ । ಮತ್ತೆ ರವಿಯ ನೋಡಿ ಘೂಕ ಜರಿದರೇನು । ಚಿತ್ತ ಬಂದ ಪರಿ ಜನರಾಡಿದರೇನು । ಉತ್ತಮೋತ್ತಮ ನಮ್ಮ **ಗೋಪಾಲವಿಠಲನ** । ಚಿತ್ತಾನುಸಾರ ನಡೆದವನೆ ಧನ್ಯನೋ ॥ ೫

ಜತೆ

ಆವಾವ ಕರ್ಮಗಳ ದೇವಗರ್ಪಿಸುವ
ಜೀವರೆ ಧನ್ಯರೊ **ಗೋಪಾಲವಿಠಲ**

ಹೀಗೆ ಹಾಡಿ ಮಡಿಮಾಡುವ ಪರಿಯನ್ನೂ ಮಡಿಯ ನಿಜ ತತ್ವವನ್ನೂ ವಿವರಿಸಿದರು. ಸಂಧ್ಯಾವಂದನೆಗೆ ಪ್ರಾರಂಭ ಮಾಡುವಾಗ ಉದಕ ಪ್ರೋಕ್ಷಣೆ ಮಾಡಿಕೊಳ್ಳುತ್ತಾ—

ಅಪವಿತ್ರಃ ಪವಿತ್ರೋವಾ । ಸರ್ವಾವಸ್ಥಾಂಗ ತೋಪಿವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ । ಸ ಬಾಹ್ಯಾಭ್ಯಂತರಶ್ಶುಚಿಃ ॥

ತಾ॥ ಅಪವಿತ್ರನಾಗಲೀ ಪವಿತ್ರನಾಗಲೀ, ಸಕಲಾವಸ್ಥೆಗಳನ್ನೂ ಹೊಂದಿದವನಾಗಲೀ ಪುಂಡರೀಕಾಕ್ಷನಾದ ಪರಮಾತ್ಮನನ್ನು ಯಾವನು ಸ್ಮರಿಸುವನೋ ಅವನು ಹೊರಗೂ ಒಳಗೂ ಶುಚಿರ್ಭೂತನಾಗುವನು.

ಎಂಬುದಾಗಿ ಶ್ಲೋಕವನ್ನು ಹೇಳಿಕೊಳ್ಳುವರು ಶ್ಲೋಕಾರ್ಥವನ್ನು ತಿಳಿದು ನಡೆಯುವುದಿಲ್ಲ. 'ಆಸನ ಪ್ರಾಣಾಯಾಮೇ ವಿನಿಯೋಗಃ' ಎನ್ನುತ್ತಾ ಆಸನ ಹಾಕಿ ಕೂಡುವುದಿಲ್ಲ. ಪ್ರಾಣಾಯಾಮವನ್ನಂತು ಕ್ರಮವರಿತು ಮಾಡುವುದಿಲ್ಲ. ಹೀಗಿದ್ದರೂ ಪರನಿಂದೆ ಮಾಡುವುದನ್ನಂತೂ ಜನರು ಬಿಡುವುದಿಲ್ಲ.

ನ ಜಲೈರ್ಮಾರ್ಜನಂ ಸಂಧ್ಯಾ । ನ ಮಂತ್ರೋಚ್ಚಾರಣಾದಿ ಭಿಃ ॥
ಸಂಧೀಯತೇ ಪರಬ್ರಹ್ಮಾ । ಸಾ ಸಂಧ್ಯಾ ಸದ್ಭಿರುಚ್ಯತೇ ॥

ಎಂಬೀರೀತ್ಯಾ ಸಂಧ್ಯಾವಂದನ ಮಾಡುವವರು ಪರಬ್ರಹ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವರು. ಬ್ರಹ್ಮ ಸಾಕ್ಷಾತ್ಕಾರಕ್ಕೆ ವಿಧಿವತ್ತಾಗಿ ಮಾಡುವ ಸಂಧ್ಯಾವಂದನೆಯೊಂದು ಸಾಲದೆ? ಎಂದು ಮೊದಲಾಗಿ ಸಂಧ್ಯಾಭಾಷ್ಯವನ್ನೇ ಕೀರ್ತನರೂಪದಲ್ಲಿ ಅನುವಾದ ಮಾಡಿದರು. ವಿಧಿವತ್ತಾಗಿ ಮಾಡುವ ಸಂಧ್ಯೆಯ ಫಲವೇನೆಂಬುದಕ್ಕೆ ಪೌರಾಣಿಕ ಆಖ್ಯಾನಗಳನ್ನು ವಿಸ್ತಾರವಾಗಿ ವಿವರಿಸಿದರು. ದಾಸರ ಅನುವಾದವನ್ನು ಕೇಳಿ ಪಂಡಿತರ ಮನಸ್ಸು ಕರಗಿತು. ತಾವು ಅವರ ನಿಂದೆ ಮಾಡಿದುದು ಅಯುಕ್ತವೆಂದು ಮರುಗಿದರು. ದಾಸರ ಪಾದಗಳಿಗೆರಗಿದರು.

ಗಿರಿಯಮ್ಮನನ್ನು ಬಹಳವಾಗಿ ನಿಂದಿಸುತ್ತಿದ್ದ ಪಂಡಿತನೊಬ್ಬನು 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಸ್ಮೃತಿ ವಾಕ್ಯವಿರುವಾಗ, ಸ್ತ್ರೀಯರು ಗಾನಮಾಡುವುದು,

ದೇವರ ಮುಂದೆ ನರ್ತನಸೇವಾ ಮಾಡುವುದು, ಕವಿತ್ವ ಮಾಡುವುದು, ಇಂಥಾ ಕಾರ್ಯಗಳಲ್ಲಿ ಪ್ರವೃತ್ತರಾಗುವುದು ಗರ್ಹ್ಯವಲ್ಲವೆ?' ಎಂದು ಪ್ರಶ್ನೆಮಾಡಿದನು.

ದಾಸರು–'ಇಷ್ಟುಮಾತ್ರಕ್ಕೇ ಸ್ತ್ರೀಯರು ಯಾವ ಸ್ವಾತಂತ್ರ್ಯ ವಹಿಸಿದಂತಾಯಿತು? ಅಥವಾ ಅವರಿಗೆ ಯಾವ ಸ್ವಾತಂತ್ರ್ಯವನ್ನು ಕೊಟ್ಟಂತಾಯಿತು? ಉಪನಿಷದಾದಿ ಗ್ರಂಥಗಳಲ್ಲಿ ಬ್ರಹ್ಮಜಿಜ್ಞಾಸ ಮಾಡಿದ ಸ್ತ್ರೀಯರ ಉದಾಹರಣೆಗಳಿಲ್ಲವೆ? ವರ್ತಮಾನಕಾಲದಲ್ಲಿ ಮಧುರವಾಣಿ ರಾಮಭದ್ರಾಂಬೆಯರಂಥಾ ಕವಯಿತ್ರಿಯರ ಸಂಸ್ಕೃತ ಕಾವ್ಯಗಳು ರಾಜಸಭೆಗಳಲ್ಲಿ ಮಾನ್ಯವಾಗಿಲ್ಲವೆ? ಪುರಾಣಗಳಲ್ಲಿ ಸುಲಭೆ ಮೊದಲಾದ ಯೋಗಿನಿಯರ ಚರಿತ್ರೆಗಳಿಲ್ಲವೆ? ಸ್ತ್ರೀಯರು ಸಂತತಿದಾಯಕರಾದ್ದರಿಂದ ಅವರ ದೇಹಗಳು ಹೆಚ್ಚಿನ ಸ್ವತಂತ್ರ ಕೆಲಸಗಳಿಗೆ ಅರ್ಹಗಳಲ್ಲವೆಂದು ಸ್ಮೃತಿಕಾರರು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಬರೆದಿರುವರು. ಅಂದ ಮಾತ್ರಕ್ಕೇ ಸ್ತ್ರೀಯರು ದೇವರ ಭಜನೆ ಮಾಡಬಾರದೆ? ಭಕ್ತಿ ಪುಳಕಿತರಾಗಿ, ಯಾರ ಮುಂದೂ ಅಪ್ಪ-ಅಮ್ಮನ್ನು ಸೃಷ್ಟಿಸಿದ ಪರಮಾತ್ಮನ ಮುಂದೆ ನರ್ತನ ಮಾಡಬಾರದೆ? ಸ್ಫೂರ್ತಿಯಿಂದ ಬಂದ ಮಾತುಗಳು ಕವಿತೆಗಳಾದರೆ ತಪ್ಪೇನು? ಗಾನದ ಅಧಿದೇವತೆಯು ಸ್ತ್ರೀಯಳು. ಗಾನಾಧಿಕಾರಿಗಳು ಸ್ತ್ರೀಯರು. ಸ್ತ್ರೀಯರ ಮಂಜುಳ ಧ್ವನಿಯು ಪುರುಷರಿಗಿಲ್ಲ. ನೀವು ಯಾರನ್ನು ಮನಸ್ಸಿನಲ್ಲಿಟ್ಟುಕೊಂಡು ಆಕ್ಷೇಪಿಸುವಿರೋ ಆ ನಮ್ಮ ಶಿಷ್ಯಳು ಗಿರಿಯಮ್ಮನು ಸಾಮಾನ್ಯ ಸ್ತ್ರೀಯಲ್ಲ. ಆಕೆಯಂತೆ ಸಾಧನೆ ಮಾಡುವುದು ನಮ್ಮಂಥವರಿಗೆ ಸಾಧ್ಯವಿಲ್ಲ. ಆಕೆಯ ಭಕ್ತಿ ನಮಗಿಲ್ಲ. ಆಕೆಯ ನಿಂದೆಯು ಸ್ತೋತ್ರಮದ್ರೋಹವಾಗುವುದು. ಆಕೆಯನ್ನು ವಂದಿಸಿದವರು ಉದ್ಧಾರವಾಗುವಂತೆ ನಿಂದಿಸಿದವರು ನರಕಭಾಜನರಾಗುವರು. ಶ್ರೀಕೃಷ್ಣ ಪರಮಾತ್ಮನು ಗೋಪಿಯರ ಭಕ್ತಿಯುತವಾದ ಗಾನಕ್ಕೆ ಮೆಚ್ಚಿದಂತೆ ಮುನಿಗಳ ಶುಷ್ಕ ಕರ್ಮಾಚರಣೆಗೆ ಮೆಚ್ಚಲಿಲ್ಲ. ದ್ರೌಪದಿಯ ಸ್ತೋತ್ರಕ್ಕೆ ಒಲಿದುಬಂದಂತೆ ಧರ್ಮನಂದನನ ಸ್ತೋತ್ರಕ್ಕೆ ಬರಲಿಲ್ಲ. ಶ್ರೀಮಧ್ವಾಚಾರ್ಯರ ಅಕ್ಕ ಕಲ್ಯಾಣೀದೇವಿಯು ಆಚಾರ್ಯರು ತೌಲವ ಭಾಷೆಯಲ್ಲಿ ಹಾಡಿದ ಪದಗಳನ್ನು ಹಾಡಿ ಹಾಡಿ, ಅಪರೋಕ್ಷ ಜ್ಞಾನಿಯೆನ್ನಿಸಿದಳು. ಪುರಂದರದಾಸರಂಥವರ ವೈರಾಗ್ಯಕ್ಕೆ ಅವರ ಪತ್ನಿ ಸರಸ್ವತೀ ಬಾಯಿಯು ಕಾರಣಳಾದಳು. ಶ್ರೀಪುರಂದರವಿಠಲ ಮುದ್ರಿಕೆಯಿಂದ ಆಕೆಯು ಮಾಡಿರುವ ಪ್ರಮೇಯಪುಂಜಗಳಾದ ದೇವರನಾಮಗಳನ್ನು ಕೇಳಿರುವಿರಷ್ಟೆ! ನೀವಾದರೂ ಅಂತಹ ಸ್ತ್ರೀಯರ ಉದರದಲ್ಲೇ ಜನಿಸಿದವರಷ್ಟೆ!' ಎಂದರು. ಪಂಡಿತರ ಬಾಯಿ ಕಟ್ಟಿ ಹೋಯಿತು.

ಹೀಗೆ ಮಹಾನುಭಾವರಾದ ಗೋಪಾಲದಾಸರ ಜೀವಿತದಲ್ಲಿ ಮೂವತ್ತೇಳು ವರ್ಷಗಳು ಕಳೆದುವು. ಬಾಲ್ಯದ ಕೆಲವು ವರ್ಷಗಳ ವಿನಾ ಮಿಕ್ಕ ಜೀವಿತ ಕಾಲವು ಮಹಾ ಶ್ರೀಮಂತಿಕೆಯದಾಗಿತ್ತು. ಅದೃಷ್ಟ ದೇವಿಯ ವಿದ್ಯಾಪ್ರಭಾವದಿಂದ ಅಗಣಿತ ಧನರಾಶಿಯು ಅವರನ್ನು ಸೇರಿತು. ದ್ರವ್ಯ ಬಂದಂತೆ ದಾನಮಾಡುವುದು ಅವರ ಸ್ವಭಾವವಾಗಿತ್ತು. ಈ ಪರಿಸ್ಥಿತಿಯಲ್ಲಿ ಎರಡುಸಲ ಭರತಖಂಡದ ತೀರ್ಥಕ್ಷೇತ್ರಗಳ ಯಾತ್ರೆ

ಮಾಡಿ, ಅಗಮ್ಯ ಸ್ಥಳಗಳನ್ನು ನೋಡಿ, ಸಂಚರಿಸಿದ ಎಡೆಗಳಲ್ಲೆಲ್ಲ ಭಾಗವತ ಧರ್ಮವನ್ನು ಉಪದೇಶ ಮಾಡಿದರು. ಗೋಪಾಲದಾಸರ ವೈರಾಗ್ಯವು ಎಲ್ಲ ವಿಹಿತಭೋಗಗಳ ತ್ಯಾಗ ವಾಗಿರಲಿಲ್ಲ. ಎಲ್ಲದರ ಮಧ್ಯದಲ್ಲಿದ್ದು ಎಲ್ಲವನ್ನೂ ಅನುಭವಿಸುತ್ತಿದ್ದರೂ ಅದರ ದುರಭಿ ಮಾನ ಬಿಡುವುದೆಂದಾಗಿತ್ತು. ಆಡಿದಂತೆ ನಡೆಯುವುದೂ, ನಡೆದಂತೆ ಉಪದೇಶ ಮಾಡು ವುದೂ ಅವರ ಪದ್ಧತಿಯಾಗಿತ್ತು. ಈ ವಿಷಯದಲ್ಲಿ ವಿಜಯದಾಸರಿಗೂ ಇವರಿಗೂ ಮಾರ್ಗಭೇದವಿತ್ತು. ವಿಜಯದಾಸರೊಡನೆ ಗೋಪಾಲದಾಸರು ಸಂಚಾರ ಮಾಡಿ ದಾಗಲೂ ಇವರು ವಿಭವಮೂರ್ತಿಗಳೇ ಆಗಿದ್ದರು. ವಿಜಯದಾಸರು, ದೈವಾಯುತ್ತ ವಾಗಿ ಸಕಲ ವೈಭವಗಳೂ ದೊರೆತಿದ್ದರೂ, ಅದರ ಅನುಭವ ಮಾಡುತ್ತಿರಲಿಲ್ಲ. ಮೇನೆ ಪಲ್ಲಕ್ಕಿಗಳಲ್ಲಿ ಕೂಡುತ್ತಿರಲಿಲ್ಲ. ಶಾಲು ಸಕಲಾತಿಗಳನ್ನು ಹೊದಿಯುತ್ತಿರಲಿಲ್ಲ. ಗೋಪಾಲ ದಾಸರಾದರೋ ಇದಕ್ಕೆಲ್ಲಾ ಪ್ರತಿಯಾಗಿದ್ದರು. ವಿಜಯದಾಸರಿಗೆ ರಾಜಾಧಿರಾಜರು, ಬಹುಮಾನಮಾಡಿದ ಶಾಲು ಸಕಲಾತಿಗಳನ್ನು ತಾವೇ ಹೊದಿಯುತ್ತಿದ್ದರು. ದಾಸರು ಮೇನೆ ಪಲ್ಲಕ್ಕಿಗಳಲ್ಲಿ ಕುಳಿತು ತಾವು ಅವರಿಗಿಂತ ಮುಂದೆ ಪ್ರಯಾಣಮಾಡುತ್ತಿದ್ದರು. ವಿಜಯದಾಸರನ್ನು ಎದುರುಗೊಳ್ಳಲು ಬರುವ ಜನರು, ಗೋಪಾಲದಾಸರನ್ನೇ ವಿಜಯ ದಾಸರಿರಬಹುದೆಂದು ಭ್ರಮಿಸಿ ನಮಸ್ಕರಿಸುತ್ತಿದ್ದರು. ಹಾಗೆ ಬಂದವರಿಗೆ ಗೋಪಾಲ ದಾಸರು–'ನಿಮ್ಮ ದಾಸರು ಹಿಂದೆ ಪಾದಚಾರಿಗಳಾಗಿ ಬರುತ್ತಿರುವರೆ'ಂದು ತೋರಿಸು ತ್ತಿದ್ದರು. ವಿಜಯದಾಸರು–'ವಿಭವಮೂರ್ತಿಗಳಿಗೆ ಮರ್ಯಾದೆ ಮಾಡಿರಿ. ನಾನು ಬಡ ದಾಸ. ಅವರದು ದೇವಜಾತಿ, ನನ್ನದು ಮನುಷ್ಯ ಜಾತಿ' ಎನ್ನುತ್ತಿದ್ದರು. ಇಷ್ಟು ಮಾತ್ರದಿಂದ ಗುರುಶಿಷ್ಯರಿಗೆ ವಿರೋಧವಿರಲಿಲ್ಲ. ಭಿನ್ನ ಜೀವ ಭಿನ್ನ ಕರ್ಮಗಳುಳ್ಳ ಜೀವರ ವಿಚಾರಗಳು, ಭಿನ್ನ ಭಿನ್ನವಾಗಿರಬೇಕಾದುದು ಸ್ವಾಭಾವಿಕವೆಂದು ವಿಜಯ ದಾಸರು ಹೇಳುತ್ತಿದ್ದರು.

ಒಂದು ದಿನ ಗೋಪಾಲದಾಸರು, ವ್ಯಾಸ ತತ್ವಜ್ಞರ ಸಮುಖಕ್ಕೆ ತಮ್ಮ ಮೂವರು ತಮ್ಮಂದಿರನ್ನೂ ಕರೆದು–'ತಮ್ಮಂದಿರಾ, ನನ್ನ ಪೂರ್ವಜನ್ಮ ವೃತ್ತಾಂತವನ್ನು ಹೇಳುವೆನು ಕೇಳಿರಿ' ಎಂದರು. ಎಲ್ಲರೂ ಕೌತುಕದಿಂದ ದಾಸರಮುಂದೆ ಕುಳಿತರು. ದಾಸರು ತಮ್ಮ ಹಿಂದಿನ ಹದಿನಾಲ್ಕು ಜನ್ಮಗಳ ಅನುಭವವನ್ನು ಕುರಿತು ವಿವರಿಸುತ್ತಾ– 'ವಾಸನಾ ವಿಶೇಷದಿಂದ ನಾನು ಮ್ಲೇಂಛ ಕಿರಾತ ಜನ್ಮಗಳಲ್ಲಿ ಸಹ ಬಂದೆನು. ಭೂಪತಿಯ ಜನ್ಮತಾಳಿದಂತೆ, ಭಿಕ್ಷುಕನೂ ಆಗಿದ್ದೆನು. ನಾಲ್ಕು ವಿಪ್ರಜನ್ಮಗಳಲ್ಲಿ ಮಹಾದೇವನನ್ನಾ ರಾಧಿಸಿದೆನು. ಆ ದೇವನ ಕೃಪೆಯಿಂದ ನನಗೆ ಹರಿಭಕ್ತಿಯುಂಟಾಯಿತು. ನಾನು ಭಜನಾರಂಭಮಾಡಿದಾಗಲೆಲ್ಲ ಮೊದಲು ಮಹಾದೇವನ ಸ್ತೋತ್ರಮಾಡಲು ಇದೇ ಕಾರಣ. ಪುರಂದರದಾಸರ ತಾರತಮ್ಯ ಪದ್ಧತಿಯನ್ನು ಅನುಸರಿಸಲಿಲ್ಲವೆಂದು ಜನರು ನನ್ನನ್ನಾಡಿ ಕೊಳ್ಳುವರು. ಇಷ್ಟದೇವತಾ ಪ್ರಾರ್ಥನೆಮಾಡಿ, ಅನಂತರ ದೇವತಾತಾರತಮ್ಯ ಚಿಂತನೆ ಮಾಡಿದರೆ ಬಾಧಕವಿಲ್ಲ. ದಾಸಪ್ಪನು (ಗುರುಗೋಪಾಲದಾಸರು) ನನ್ನನ್ನು ಬಲು ದೊಡ್ಡವನೆಂದು ಭಾವಿಸಿ, ನನ್ನ ಪೂರ್ವಜನ್ಮವೃತ್ತಾಂತಗಳನ್ನು ತಿಳಿಯಬೇಕೆಂದು ಬಲು

ವೇಳೆ ಪ್ರಯತ್ನಿಸಿದನು. ಅವನಿಗೆ ನನ್ನ ಸ್ವರೂಪವನ್ನು ತೋರಗೊಡದೆ ನಾನು ಪ್ರತಿಬಂಧಕ ಮಾಡಿದೆನು. ಆದುದರಿಂದ ಆ ವಿವರವನ್ನೀಗ ತಿಳಿಸುವೆನು. ಒಂದೆರಡು ಜನ್ಮಗಳಲ್ಲಾದ ಬಾಹ್ಯಾಪರೋಕ್ಷವು ನನಗೇನೂ ಫಲಕಾರಿಯಾಗಲಿಲ್ಲ. ಈ ಜನ್ಮದಲ್ಲಿ ನನ್ನ ಪುಣ್ಯೋದಯದಿಂದ, ಮಹಾನುಭಾವರಾದ ವಿಜಯದಾಸರಂಥಾ ಸ್ವರೂಪೋದ್ಧಾರಕರು ದೊರೆತು, ನನಗೆ ಬಿಂಬಾಪರೋಕ್ಷವನ್ನು ಅನುಗ್ರಹಿಸಿದರು. ಪ್ರಾರಬ್ಧಕರ್ಮವನ್ನು ಪೂರಯಿಸಲು ಇನ್ನೆರಡು ಜನ್ಮಗಳನ್ನು ತಾಳುವೆನು. ವ್ಯಾಸತತ್ವಜ್ಞರ ವಂಶದಲ್ಲಿ (ಪೂರ್ವಾಶ್ರಮದ ಮಗ) ಜನಿಸಿ ಯಜ್ಞಸೋಮಯಾಜಿಯಾಗುವೆನು. ನಮ್ಮ ಈ ವಂಶವು ನಮ್ಮ ಚಿಕ್ಕ ತಮ್ಮ ರಂಗಪ್ಪನಿಂದ ಬೆಳೆಯುವ ಕಾರಣ ಬಹು ಕಾಲದ ಮೇಲೆ ಆತನ ಸಂತತಿಯಲ್ಲಿ ಜನಿಸಿ ಬರುವೆನು. ನಮ್ಮ ವಂಶದವರು ಮುಂದೆ ಹರಿದಾಸವೃತ್ತಿಯನ್ನು ಬಿಟ್ಟು ವೈದ್ಯರೂ ಜ್ಯೋತಿಷ್ಕರೂ ಆಗಿ ಕ್ರಮೇಣ ಪಾಚಕ ಪರಿಚಾರಕ ವೃತ್ತಿಗಿಳಿದು ಹೀನರೂ ದೀನರೂ ಆಗುವರು. ನನ್ನ ವಂಶದ ಯಾವ ಜನನಿಯು ಕುಡಿಯುವುದಕ್ಕೆ ಸಹ ಪಾತ್ರೆಗೆ ಗತಿಯಿಯಿಲ್ಲದೆ ಮಣ್ಣುಗಡಿಗೆಗಳಲ್ಲಿ ನೀರನ್ನು ಕುಡಿಯುವಳೋ ಅಂಥವಳ ಉದರದಲ್ಲಿ ನಾನು ಜನ್ಮ ತಾಳುವೆನು. ಜನಿಸಿದ ಹನ್ನೆರಡು ವರ್ಷಗಳಲ್ಲಿ ನಾನು ಭೂಸ್ಥಾಪನೆ ಮಾಡಿರುವ ನಾಲ್ಕು ಭಾಂಡದ್ರವ್ಯದಿಂದ ವಂಶಜರ ದಾರಿದ್ರ್ಯವನ್ನು ಪರಿಹಾರ ಮಾಡುವೆನು. ಭಾಗವತ ಧರ್ಮದ ಪುನರುದ್ಧಾರವಾಗಬೇಕಾದ ಆ ಕಾಲದಲ್ಲಿ ಬಹಳ ಮಹತ್ವದ ಸಂಗತಿಗಳು ನಡೆಯುವುವು. ನನ್ನ ಮರಣಾನಂತರ ಅಸ್ತಿಗಳನ್ನು ಊರಮುಂದಿನ ಭಾವಿಯಲ್ಲಿ ನೀವು ಗೋಪನಮಾಡಬೇಕು. ನಾನೇ ಆ ಭಾಂಡವನ್ನು ಗಂಗೆಗೆ ಕೊಂಡೊಯ್ಯುವೆನು' ಅಲ್ಲಿನತನಕ ನನ್ನ ವಂಶಜರ್ಯಾರೂ ಮಹಾಯಾತ್ರೆಮಾಡಬಾರದು' ಎಂದು ಮೊದಲಾಗಿ ಆಪ್ತ ವಾಕ್ಯಗಳನ್ನು ಉಪದೇಶಮಾಡಿದರು. ಎಲ್ಲರೂ, ಬಾಷ್ಪಪೂರಿತನಯನರಾಗಿ ದಾಸರ ವಾಕ್ಯಗಳನ್ನು ಶ್ರವಣಮಾಡಿದರು.

ಅದ್ಯಾಪಿ, ಸೋಮಪುರದಲ್ಲೂ, ಉತ್ತನೂರಲ್ಲೂ ಗೋಪಾಲದಾಸರು ವಾಸಮಾಡಿದ್ದ ಮನೆಗಳಿವೆ. ಉತ್ತನೂರಿನ ಮನೆಯು ಬಲು ಶಿಥಿಲವಾಗಿದ್ದರೂ ಅದನ್ನು ಸರಿ ಮಾಡಿಕೊಳ್ಳುವ ಶಕ್ತಿ ಆ ವಂಶೀಕರಿಗಿಲ್ಲ. ಮನೆಯ ಒಂದು ಭಾಗದ ಆವರಣ ಬಿದ್ದು ಹೋಗಿದೆ. ಅದೇ ಗೋಪಾಲದಾಸರ ಭಂಡಾರವಿರುವ ಸ್ಥಳವೆಂದು ವಂಶೀಕರು ತೋರಿಸುತ್ತಾರೆ. ಆ ಭಾಗವನ್ನು ಗದ್ವಾಲರಾಜರ ಬಂಧುಗಳೊಬ್ಬರು ತಿಳಿಯದೆ ತಮ್ಮ ಬಂಗಲೆಯ ಆವರಣದಲ್ಲಿ ಸೇರಿಸಿಕೊಂಡಿದ್ದರಂತೆ! ಅದರಿಂದ, ಅವರಿಗೆ ಬಲು ಬಾಧಕವಾಗಲು ಮತ್ತೆ ದಾಸವಂಶೀಕರ ವಶಕ್ಕೆ ಬಿಟ್ಟುಕೊಟ್ಟರಂತೆ! ಆ ಮನೆಯಲ್ಲಿ ಗೋಪಾಲದಾಸರು ಇಟ್ಟುಕೊಂಡಿದ್ದ ಶಿಥಿಲವಾದ ತಂಬೂರಿಯಿದೆ. ವಿಜಯದಾಸರಿಂದ ಲಬ್ಧವಾದ ವಿಠಲ ಪ್ರತಿಮೆ ಮತ್ತು ಗೋಪಾಲದಾಸರ ದೇವರ ಪೆಟ್ಟಿಗೆಗಳಿರುವ ಒಂದು ಭಾಗವು ದೇವರ ಮನೆಯೆನಿಸಿದೆ. ವಂಶೀಕರನ್ನು ಕಾಶೀಯಾತ್ರೆಗೆ ಬರುವಿರಾ ಎಂದು ಕೇಳಿದರೆ, ಗುರ್ವಾಜ್ಞೆಯಿಲ್ಲವೆನ್ನುತ್ತಾರೆ. ದಾಸರ ಅಸ್ತಿಗಳಿರುವ ಭಾವಿ ಯಾವುದೆಂದರೆ ಊರ ಮುಂದಿರುವ ಶಿಥಿಲವಾದ ಭಾವಿಯೊಂದನ್ನು ತೋರಿಸುತ್ತಾರೆ. ಭಾವಿಯನ್ನಾದರೂ ಏಕೆ

ಹೂಳು ತೆಗೆಸಿ ಸರಿಮಾಡಲಿಲ್ಲವೆಂದರೆ ಹಾಗೆ ಮಾಡಕೂಡದೆಂದು ಆಜ್ಞೆ ಮಾಡಿದೆನೆನ್ನುತ್ತಾರೆ. ಈ ಸಂಗತಿಗಳು ಓದುವವರಿಗೆ ಯಾವುದೇ ಪ್ರಕಾರದ ಒಂದು ಮಹತ್ವದ ಭಾವನೆಯನ್ನು ಉಂಟುಮಾಡದಿದ್ದರೂ, ಅವರ ವಂಶೀಕರಿಗಾಗಲೀ ಆ ಊರಿನವರಿಗಾಗಲೀ ಸಾಮಾನ್ಯ ವಿಚಾರಗಳೆನ್ನಿಸಿಲ್ಲ.

ಗೋಪಾಲದಾಸರು ತಮ್ಮ ಜೀವಿತದ ಅಂತಿಮ ಸಂವತ್ಸರದಲ್ಲಿ ಸಹ ತಿರುಪತಿ ಯಾತ್ರೆಯನ್ನು ಬಿಡಲಿಲ್ಲ. ಆಗ ಅವರು ಇನ್ನೂ ನಾಲ್ವತ್ತು ವರ್ಷ ವಯಸ್ಸಿನವರಾಗಿದ್ದುದರಿಂದ ಅವರ ದೇಹಶಕ್ತಿ ಕುಂದಿರಲಿಲ್ಲ. ತಮ್ಮಂದಿರು ಚಿಂತಿಸಿದಂತೆ ಕಾಲವಿಚಾರದಲ್ಲಿ ಅವರು ಚಿಂತಿಸುತ್ತಿರಲಿಲ್ಲ. ಚಿತ್ರಭಾನು ಸಂವತ್ಸರದ ಬ್ರಹ್ಮೋತ್ಸವದಲ್ಲಿ–ಹಿಂದೆ ಎಂದೆಂದೂ 'ದೇವ, ಸ್ವಾಮಿನ್ನಃ ಪುನರ್ದರ್ಶನಂ' ಎನ್ನುತ್ತಿದ್ದವರು, ಅನ್ನಲಿಲ್ಲ—

ಪೋಗುವೆನು, ಬರಲಾರೆ ಮರಳಿ, ಇಲ್ಲಿ
ನಾಗ ಗಿರಿವಾಸ ಈಶ-ಶ್ರೀಶಾ ಪ.

ಎಂಬುದಾಗಿ ಮಾತ್ರ ಹಾಡಿ, ತಂಬೂರಿಯ ತಂತಿ ಕಡಿಯಿತೆಂದರು. ಈ ಪದಕ್ಕೆ ಅಂಕಿತವಿಲ್ಲವೆಂದರು. ಬೇರೆ ತಂತಿಯನ್ನು ಕಟ್ಟಿ ಪದ ಪೂರ್ತಿಮಾಡಬಹುದೆಂದು ಶಿಷ್ಯನೊಬ್ಬನು ನುಡಿದನು. ಹೊಸ ತಂಬೂರಿ ಬಂದಾಗ ಹೊಸ ತಂತಿಯೆಂದು ದಾಸರು ನುಡಿದರು. ಉತ್ತನೂರಿಗೆ ಬಂದನಂತರ ವೆಂಕಟೇಶನ ದೇವಾಲಯದಲ್ಲಿ ವಾಸಮಾಡಿದರು. ಹಿರಿಯರ ಹಿಂದಿರಬೇಕೆಂದು ಮೂರು ತಿಂಗಳು ತಡವಾಯಿತೆಂದರು.* ಚಿತ್ರಭಾನು ಸಂವತ್ಸರದ ಪುಷ್ಯ ಬಹುಳ ಅಷ್ಟಮೀ ದಿವಸ ಶನಿವಾರವಾಗಿದ್ದುದರಿಂದ ದಾಸರ ಮನೆಯಲ್ಲೂ ದೇವಾಲಯದಲ್ಲೂ ಪಂಚಾಮೃತಾಭಿಷೇಕ ಸಹಸ್ರನಾಮಾರ್ಚನೆಗಳು ನಡೆದುವು. ದಾಸರು ದಾಸಪ್ಪನನ್ನು ಕರೆದು ಒಂದು ಹಿಡಿ ದರ್ಭೆಯನ್ನು ತಾರೆಂದರು. ದಾಸಪ್ಪನು ಈಗೇಕೆ ದರ್ಭೆಯೆಂದನು. 'ಬೇಕಪ್ಪಾ! ನಡೆಯುವಷ್ಟು ನಡೆಸಬೇಕಪ್ಪಾ!' ಎಂದು ದಾಸರೆಂದರು. ದಾಸಪ್ಪನಿಗೆ ಸಂಶಯ ತೋರಿ ದಾಸರ ಪಕ್ಕದಲ್ಲಿ ಕುಳಿತನು. ದಾಸರು ದರ್ಭೆಯನ್ನು ಹಾಸಿಕೊಂಡು ಅದರಮೇಲೆ ಕುಳಿತರು. ಮನೆಯಲ್ಲಿ ಅತಿಥಿಗಳ ಭೋಜನ ಸಮಾರಂಭದ ಮೇಲ್ವಿಚಾರಣೆಯಲ್ಲಿ ಸೀನಪ್ಪನಿದ್ದನು. ಧ್ಯಾನದಲ್ಲಿ ಕುಳಿತಿದ್ದ ದಾಸರ ದೇಹದಲ್ಲಿ ಶ್ವಾಸವ್ಯಾಪಾರವು ಯಾವಾಗ ನಿಂತಿತೆಂಬುವುದು ಪಕ್ಕದಲ್ಲಿದ್ದ ದಾಸಪ್ಪನಿಗಾದರೂ ಗೊತ್ತಾಗಲಿಲ್ಲ. ಅಣ್ಣಂದಿರು ಏನು ಮಾಡುತ್ತಿರುವರೋ ನೋಡೋಣವೆಂದು ಸೀನಪ್ಪ (ವರದ ಗೋಪಾಲದಾಸರು)ನು ಬಂದು ನೋಡಿದವನು—

---

* ಈ ಮಾತಿನ ಅಭಿಪ್ರಾಯ, ಪುರಂದರದಾಸರ ಆರಾಧನೆಯ ದಿನವು ಪುಷ್ಯ ಬಹುಳ ಅಮಾವಾಸ್ಯೆಯಾಗಿದ್ದುದರಿಂದ ಅದರ ಹಿಂದೆ ಎಂಟು ದಿವಸಗಳೆಂದು. ಮೂರು ತಿಂಗಳು ತಡವಾಯಿತೆಂಬುದರ ಭಾವವಾದರೋ, ಜಗನ್ನಾಥದಾಸರಿಗೆ ಆಯುರ್ದಾನ ಮಾಡಿದ ಅವಧಿಯಿಂದ ಕಳೆದುಹೋದ ಮೂರು ತಿಂಗಳೆಂದು ಗೊತ್ತಾಗುತ್ತದೆ.

ಮಾಂಜಿ—ಝಂಪೆ

ಅಣ್ಣ ಭಾಗಣ್ಣ ನೀ । ಕಣ್ಣಿಗೇ ಮರೆಯಾಗಿ
ಪುಣ್ಯ ಲೋಕವ ಸೇರಿದ್ಯಾ । ಗುರುವೇ ಪ.

ಸಣ್ಣವರು ನಾವು ಅನುಗುಣ್ಯ ನಿನ್ನಯ ಚರಣ
ವನ್ನು ಬಿಟ್ಟಿರಲಾರೆವೋ । ಗುರುವೇ ಅ.

ಚಿಕ್ಕಂದಿನಿಂದ ಬಲು ಅಕ್ಕರದಿ ನೀನೆಮಗೆ
ದಿಕ್ಕೆಂದು ನಂಬಿದ್ದೆವೋ । ಗುರುವೇ
ಕಕ್ಕಸದ ಯಾತನೆಯ ಕರೆಕರೆಯ ಸಂಸಾರ
ಹೊಕ್ಕು ನೋಡಿನ್ನರಿಯೆವೋ । ಗುರುವೇ
ಮಕ್ಕಳಾಟಿಕೆಮಾಡಿ ಠಕ್ಕಿಸಿ ನಮ್ಮನಿ
ಲ್ಲಿಕ್ಕಿ ಪೋಪುದನರಿಯೆವೋ । ಗುರುವೇ
ಪಕ್ಕಿವಾಹನ ನಿನ್ನ ಕರೆದೊಯ್ದನೇ ಅಕಟ
ದಿಕ್ಕುಗೇಡಿಗಳಾದೆವೋ । ಗುರುವೇ ೧

ಮನಸಿಗತಿ ಹರುಷವಾದಂಥ ಮಾತುಗಳಾಡಿ
ಕುಣಿಸಿ ಕುಣಿದಾಡಿಸಿವೆಯೋ । ಗುರುವೇ
ಅನಘ ನಿನ್ನಂಥ ಅಣ್ಣನ ಜನುಮಜನುಮಕ್ಕು
ಘನವಾಗಿ ಬಯಸುತಿಹೆವೋ । ಗುರುವೇ
ಕ್ಷಣಕ್ಷಣಕೆ ನೀ ಮಾಡಿದುಪಕಾರವನು ಸ್ಮರಿಸಿ
ಮಣಿದು ನಮೋ ನಮೋ ಎಂಬೆವೋ । ಗುರುವೇ
ಕನಸಿನಂತಾಯ್ತು ತವಚರಿಯ ಗುಣರೂಪಂಗ
ಳೆಣಿಸೆ ಎದೆ ಭುಗಿಲೆಂಬುದೋ । ಗುರುವೇ ೨

ಪರಮ ಸುಖದಾಯಿ ಗುರುರಾಯ ನೀನಲ್ಲದಲೆ
ಪರರನಾಶ್ರೈಸರಿಯೆವೊ । ಗುರುವೇ
ಅರಿಯುದವನಲ್ಲ ನಮ್ಮಭಿಮಾನದೊಡೆಯನೇ
ಪೊರೆವ ಭಾರವು ನಿನ್ನದೋ । ಗುರುವೇ
ಪರಿಪರಿಯಲೀ ನಿಮಗೆ ಪೇಳುವುದೇನು ತವ
ಚರಣ ಕಟ್ಟಿದ್ದ ಬಿರುದೋ । ಗುರುವೇ
ವರದ ಗೋಪಾಲವಿಠಲನ ದಾಸಾಗ್ರಣಿಯೆ ನಾ
ನರಿಯೆ ಸೌಭಾಗ್ಯ ನಿಧಿಯೋ । ಗುರುವೇ ೩

ಎಂಬುದಾಗಿ ದುಃಖದಿಂದ ಹಾಡಿದನು. ಯಾರು ಯಾರನ್ನು ಏನೆಂದು ಪಾಡಿದರೇನು ? ಬಂದವರು ಇಂದಾದರೂ, ಎಂದಾದರೂ ಹೋಗಲಿಕ್ಕೇ ಬೇಕಷ್ಟೆ !

ಅದ್ಯಾಪಿ ಉತ್ತನೂರಿನ ವೇಂಕಟೇಶ ದೇವಾಲಯದಲ್ಲಿ ಗೋಪಾಲದಾಸರು ಹಾಡಿದ ಮಂಗಳವನ್ನು ಹಾಡುತ್ತಲೇ ಸ್ವಾಮಿಗೆ ಆರತಿಯನ್ನೆತ್ತುವುದು ನಡೆದುಬರುತ್ತಿದೆ.

ಸುರಟಿ—ಛಾಪುತಾಳ

ಮಂಗಳಂ ಮಂಗಳಂ ದಯಾನಿಧೇ ಮಂಗಳಂ ಮಂಗಳಂ ಪ.

ನಂದನಂದನ ಶಾಮಸುಂದರ ಶುಭಕಾಯ
ಇಂದೀವರಾಕ್ಷ ಮುಕುಂದ ಮುರಾರೇ । ಮಂಗಳಂ ೧

ದೇವದೇವೇಶನೆ ದೇಹಿಕಲ್ಯಾಣಂ
ಶ್ರೀವರ ಶ್ರೀಕರ ಶ್ರೀ ಶ್ರೀನಿವಾಸಾ । ಮಂಗಳಂ ೨

ರಾಜಿತ ವರದ ಗೋಪಾಲವಿಠಲ ಮಹಾ
ರಾಜ ಭಕತಕಲ್ಪ ಭೂಜ ಸುತೇಜಾ । ಮಂಗಳಂ ೩

ಶ್ರೀ ಜಗನ್ನಾಥದಾಸರು

ಜಲಜೇಷ್ವ ಸಿಭಾಕಾರಂ । ಜಗದೀಶ ಪದಾಶ್ರಯಂ
ಜಗತೀತಲ ವಿಖ್ಯಾತಂ । ಜಗನ್ನಾಥಗುರುಂ ಭಜೇ

ಜಗನ್ನಾಥ ದಾಸರೆಂದರೆ–ಅದ್ವೈತಮತಸ್ಥಾಪಕರಾದ ಶಂಕರಾಚಾರ್ಯರ ಪೀಠದಲ್ಲಿ ಬಂದ ವಿದ್ಯಾರಣ್ಯಸ್ವಾಮಿಗಳಂತೆ–ವಿಶಿಷ್ಟಾದ್ವೈತ ಮತಸ್ಥಾಪಕರಾದ ರಾಮಾನುಜಾಚಾರ್ಯ ಪೀಠದಲ್ಲಿ ಬಂದ ವೇದಾಂತ ದೇಶಿಕರಂತೆ–ದ್ವೈತಮತಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ಪೀಠದಲ್ಲಿ ಬಂದ ಜಯತೀರ್ಥರಂತೆ–ಪುರಂದರದಾಸರಿಂದ ಪುನರುಧೃತವಾದ ಭಾಗವತ ಧರ್ಮಕ್ಕೆ ನವಚೈತನ್ಯವನ್ನುಂಟುಮಾಡಿದ ಮಹಾಪುರುಷರು. ಜನಸಾಮಾನ್ಯರಲ್ಲಿ–ಆಚಾರ್ಯರು ಷಟ್ಶಾಸ್ತ್ರ ಸಂಪನ್ನರು, ಪ್ರತಿವಾದಿ ಭಯಂಕರರು, ಅಗ್ರಪೂಜಾರ್ಹರು ಎಂದು ಸನ್ಮಾನಿತರಾದವರು. ಹರಿದಾಸರೆಂದರೆ ತಿರಸ್ಕರಿಸುವವರು. ಅಷ್ಟುಮಾತ್ರವಲ್ಲ – ಹರಿದಾಸರಿಗೆ ಪುರಸ್ಕಾರವಿತ್ತವರ ಮೇಲೆ ಸಿಟ್ಟುಮಾಡುತ್ತಿದ್ದವರು. ಹರಿದಾಸರು ಶಾಸ್ತ್ರಕ್ಕೆ ಅಪಾರ್ಥಮಾಡುವರೆಂದು ಜರಿಯುತ್ತಿದ್ದವರು. ಕಡೆಗೆ ಕಾಲಕರ್ಮಸಂಯೋಗದಿಂದ ಸ್ವಯಂ ಹರಿದಾಸರಾದವರು.

ಕ್ರಿ. ಶ. ೧೭೦೦ರ ಸುಮಾರಿನಲ್ಲಿ ರಾಯಚೂರು ಜಿಲ್ಲಾ ಮಾನವೀ ತಾಲ್ಲೂಕು ಬ್ಯಾಗವಟ್ಟವೆಂಬ ಗ್ರಾಮದಲ್ಲಿ ನರಸಪ್ಪನೆಂಬ ಬ್ರಾಹ್ಮಣನು ಕುಲಕರಣಿಯಾಗಿದ್ದನು. ಆ ಕಾಲವಾದರೋ– ದೇಶವಿದೇಶಗಳ ಸಮಾಚಾರವನ್ನರಿಯದ ಕಾಲ. ನ್ಯಾಯಾನ್ಯಾಯ ವಿಮರ್ಶೆಗೆ ಹೆಸರಿಗಾದರೂ ಕಾನೂನುಗಳಿಲ್ಲದಿದ್ದ ಕಾಲ. ಮುಸಲ್ಮಾನರು ಧರ್ಮದ ಹುಚ್ಚಿನಿಂದ ಹಿಂದೂಪ್ರಜೆಗಳನ್ನು ಪಶುಗಳಂತೆ ಕಾಣುತ್ತಿದ್ದ ಕಾಲ. ಅಂಥಾ ಕಾಲದಲ್ಲಿ ಜನರ ಬಾಳ್ವೆಯು ಕೇವಲ ಗಂಡಾಂತರದ್ದಾಗಿತ್ತಲ್ಲದೆ ನೆಮ್ಮದಿಯದಾಗಿರಲಿಲ್ಲ.

ಕುಲಕರಣಿಕೆಯೆಂಬುದು ಬಹಳ ಜವಾಬುದಾರಿಯ ಕೆಲಸ. ಭೂತದಯಾಪರನೂ, ಆತ್ಮಸಾಕ್ಷಿಗೆ ಅಂಜುವವನೂ, ಕುಲಕರಣಿಯಾಗಿರುವುದು ಅಂದು ಸಾಧ್ಯವಾಗಿರಲಿಲ್ಲ. ರೈತರಿಂದ ಬರಲಿ, ಬರದಿರಲಿ, ಸರಕಾರದ ಕಂದಾಯವನ್ನು ಕೈಯಿಂದ ಕೊಟ್ಟು ನಿಧಾನವಾಗಿ ಬರಮಾಡಿಕೊಳ್ಳುವ ಎದೆಗಾರಿಕೆಯೂ ಶಕ್ತಿಯೂ ಕುಲಕರಣಿಗಿರಬೇಕಾಗಿತ್ತು. ಅಧಿಕಾರಿಗಳು ಬಂದಾಗ ಅವರಿಗೆ ಆದರಾತಿಥ್ಯಮಾಡಿ ಅವರ ಪ್ರಸನ್ನತೆಯನ್ನು ಪಡೆಯುವ ಶ್ರೀಮಂತಿಕೆಯು ಕುಲಕರಣಿಗಿರಬೇಕಾಗಿತ್ತು. ಪ್ರಸಕ್ತಿಬಂದಾಗ ನವಾಬನಿಗೆ ನಜರಾಣವನ್ನು ಜನರಿಂದ ವಸೂಲ್ಮಾಡಿಕೊಡುವ ಕಠಿಣಮನಸ್ಸು ಕುಲಕರಣಿಗಿರಬೇಕಾಗಿತ್ತು. ಈ ಮೂರೂ ಇಲ್ಲದಿದ್ದರೆ ಅಂತಹ ಕುಲಕರಣಿಯು ಶಕ್ತನೆನ್ನಿಸುತ್ತಿರಲಿಲ್ಲ.

ನರಸಪ್ಪನು ಭೂತದಯಾಪರನೂ ಆತ್ಮಸಾಕ್ಷಿಗಂಜುವವನೂ ಆಗಿದ್ದುದರಿಂದ ಆಗಿನ ಮುಸಲ್ಮಾನರ ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರನಾಗಿರಲಿಲ್ಲ. ಇಷ್ಟೇ ಕಾರಣ

ದಿಂದ ಅವನು ಮನೆಮಠಗಳನ್ನೂ ಭೂಮಿಕಾಣಿಗಳನ್ನೂ ಕಳೆದುಕೊಂಡು ದಂಡನೆಗೊಳಗಾಗಬೇಕಾಯಿತು. ಇರುವುದಕ್ಕೆ ಮನೆಯಿಲ್ಲದೆ, ತಿನ್ನುವುದಕ್ಕೆ ಅನ್ನವಿಲ್ಲದೆ, ಆದವಾನಿಗೆ ಮಂಗನಾಮದ ತಿಮ್ಮಣ್ಣಯ್ಯನವರ ಬಳಿಗೆ ಬರಬೇಕಾಯಿತು.

ತಿಮ್ಮಣ್ಣಯ್ಯನವರು ಆದವಾನಿಯ ನವಾಬ ಬಸಾಲತ್ ಜಂಗನ ಮುಖ್ಯಮಂತ್ರಿಗಳಾಗಿದ್ದರು. ನವಾಬನ ರಾಜ್ಯವಿಸ್ತಾರವೂ ದಿಗ್ವಿಜಯ ಕೀರ್ತಿಯೂ ತಿಮ್ಮಣ್ಣಯ್ಯನವರ ಕರ್ತೃತ್ವಶಕ್ತಿಯಿಂದಾಗಿತ್ತು. ಅಯ್ಯನವರಿಗೆ ಎಷ್ಟೇ ರಾಜಾನುಗ್ರಹವಿದ್ದರೂ ನವಾಬನ ಬಳಿಯ ಮುಸಲ್ಮಾನ ಅಧಿಕಾರಿಗಳು ಅವರನ್ನು ದ್ವೇಷಿಸುತ್ತಿದ್ದರು. ನವಾಬನ ಮನಸ್ಸನ್ನು ಕೆಡಿಸಿ, ಅಯ್ಯನವರನ್ನು ಪದಚ್ಯುತರನ್ನಾಗಿ ಮಾಡಲು ಹೊಂಚುಹಾಕುತ್ತಿದ್ದರು. ಅಯ್ಯನವರಾದರೋ ಅಧಿಕಾರದ ಅಸ್ಥಿರತೆಯನ್ನರಿತು, ವಿಜಯದಾಸರ ಶಿಷ್ಯರಾಗಿ **ವೇಣುಗೋಪಾಲ ವಿಠಲಾಂಕಿತ**ವನ್ನು ಪಡೆದು ಮಹಾಜ್ಞಾನಿಗಳಾಗಿದ್ದರು. ಅದೇ ಕಾಲದಲ್ಲಿ ಅಯ್ಯನವರ ಏಕಮಾತ್ರ ಪುತ್ರ ವಾಸಪ್ಪನನ್ನು ಬಸಾಲತ್ ಜಂಗನು ಇಸ್ಲಾಂ ಧರ್ಮಕ್ಕೆ ಸೇರಿಸಿಕೊಂಡು ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು. ವಾಸಪ್ಪನ ಹೆಸರು ರಹಿಮತ್ತುಲ್ಲಾ ಖಾನನೆಂದಾಯಿತು. ವಾಸಪ್ಪನಮೇಲೆ ನವಾಬನ ದೃಷ್ಟಿ ಬೀಳಲು ಅವನ ಸೌಂದರ್ಯವೇ ಕಾರಣವಾಯಿತು. ಮಂತ್ರಿಕುಮಾರನೆಂದು ರಾಜಗೃಹದಲ್ಲಿ ದೊರೆತ ಪುರಸ್ಕಾರವು ಅವನನ್ನು ಭ್ರಷ್ಟಗೊಳಿಸಿತು. ಮಾಡುವುದೇನು? ರಾಜನು ಮಾಡಿದ ಕಾರ್ಯವನ್ನು ಮಂತ್ರಿಯು ಖಂಡಿಸುವ ಬಗೆ ಹೇಗೆ? ಈ ಕಾರಣದಿಂದ ಅಯ್ಯನವರ ಮನಸ್ಸು ಖಿನ್ನವಾಗಿತ್ತು. ನಿರುಪಾಯರಾಗಿ ವ್ಯಸನವನ್ನು ಮರೆಮಾಚಿಕೊಂಡು ರಾಜಸೇವೆಯಲ್ಲಿ ನಿರತರಾಗಿದ್ದರು.

ನರಸಪ್ಪನು ಅಯ್ಯನವರನ್ನು ಕಂಡು ತನ್ನ ದುಃಖಸಂಗತಿಗಳನ್ನು ಹೇಳಿಕೊಂಡನು. ಅಯ್ಯನವರು–'ನರಸಪ್ಪಾ, ನಿನಗೆ ಲೌಕಿಕ ವೃತ್ತಿಯು ಆಗಿಬರುವುದಿಲ್ಲ. ನೀನು ಕೇವಲ ಧಾರ್ಮಿಕ ಮನುಷ್ಯನಾಗಿರುವೆ. ಹರಿದಾಸನಾಗುವೆಯಾದರೆ, ನಿನಗೀಗಲೇ ಮಂತ್ರೋಪದೇಶಪೂರ್ವಕ ಅಂಕಿತ ಕೊಡುವೆನು. ಇದಕ್ಕೆ ನೀನೇನೆನ್ನುವೆ'ಯೆಂದರು. ನರಸಪ್ಪನು, ಅಷ್ಟೇ ಪರಮಾನುಗ್ರಹವಾದರೆ ಕೃತಾರ್ಥನಾದೆನೆಂದು ನಮಸ್ಕಾರಮಾಡಿದನು. ಅಯ್ಯನವರು **'ನರಸಿಂಹ ವಿಠಲ'**ಎಂಬ ಅಂಕಿತವಿತ್ತು ನರಸಪ್ಪನನ್ನು ನರಸಿಂಹದಾಸರನ್ನಾಗಿ ಮಾಡಿದರು. ಮಾನವಿಯಲ್ಲಿ ಇರುವುದಕ್ಕೆ ಮನೆಯನ್ನೂ, ಕೆಲವು ಕೂರಿಗೆ (ನಾಲ್ಕು ಎಕರೆಗೆ ಒಂದು ಕೂರಿಗೆ) ಭೂಮಿಯನ್ನೂ ಮಾಡಿಕೊಟ್ಟು ನೀನು ಅಲ್ಲೇ ನಿಶ್ಚಿಂತನಾಗಿ ಕಾಲಯಾಪನೆ ಮಾಡೆಂದರು. ಅಂದಿನಿಂದ ನರಸಿಂಹದಾಸರು ಮಾನವಿಯಲ್ಲೇ ವಾಸಮಾಡಿದರು.

ನರಸಿಂಹ ದಾಸರಿಗೆ ಶಾಲೀವಾಹನಶಕ ೧೬೫೦ಕ್ಕೆ ಸಲ್ಲುವ ಕೀಲಕ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆಯ ದಿನ ಓರ್ವ ಕುಮಾರನು ಉದಯಿಸಿದನು (ಕ್ರಿ. ಶ. ೧೭೨೮). ದಾಸರು ಮಗನಿಗೆ ಶ್ರೀನಿವಾಸನೆಂದು ನಾಮಕರಣಮಾಡಿದರು. ಈ ಬಾಲಕನೇ ಮುಂದೆ

ಪರಮಪ್ರಸಿದ್ಧ **ಜಗನ್ನಾಥದಾಸರೆಂದು** ವಿಖ್ಯಾತನಾಮದು. ಬಾಲಕನ ತಾಯಿಯ ಹೆಸರು ಲಕ್ಷ್ಮಕ್ಕ.

ಶ್ರೀನಿವಾಸನು ಬೆಳೆದಂತೆ ಅವನ ವಿದ್ಯಾಭ್ಯಾಸವೂ ಬೆಳೆಯಿತು. ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಕ್ರಮಪಾಠ ನಡೆದು ಸೀನಪ್ಪನು ಮಹಾಪಂಡಿತನೆನಿಸಿದನು. ಪಾಂಡಿತ್ಯ ಮಾತ್ರವಲ್ಲದೆ ಸೀನಪ್ಪನಲ್ಲಿ ಕವಿತಾಶಕ್ತಿಯು ದೈವಾಯತ್ತವಾಗಿತ್ತು. ಸಂಸ್ಕೃತದಲ್ಲಾಗಲೀ, ಕನ್ನಡದಲ್ಲಾಗಲೀ ನಿಂತ ನಿಂತಹಾಗೆ ಶ್ಲೋಕಗಳನ್ನು ರಚಿಸಿ ಹೇಳುತ್ತಿದ್ದನು. ಇದರಿಂದ ಸೀನಪ್ಪನಲ್ಲಿ ಜನಾದರಣೆ ಬಹಳವಾಯಿತು.

ಅದೇ ಸಮಕಾಲದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಮಹಾಪೀಠದಲ್ಲಿ **ವರದೇಂದ್ರ ತೀರ್ಥ ಶ್ರೀಪಾದಂಗಳವರು** ಧರ್ಮಸಾಮ್ರಾಜ್ಯವನ್ನು ಪಾಲಿಸುತ್ತಿದ್ದರು. ಮಠದ ಕಾರ್ಯಸ್ಥಾನವು ಮಂತ್ರಾಲಯವಾಗಿತ್ತು. ದೇಶಾಂತರಗಳಿಂದ ನೂರಾರು ಜನರು ಬಂದು ಸ್ವಾಮಿಗಳಲ್ಲಿ ಶಾಸ್ತ್ರವ್ಯಾಸಂಗವಮಾಡುತ್ತಿದ್ದರು. ಸೀನಪ್ಪನ ಕವಿತಾ ಪ್ರತಿಭೆಯು ಸ್ವಾಮಿಗಳ ಸನ್ನಿಧಿಯಲ್ಲಿ ಪ್ರಶಂಸೆಗೆ ಬಂದಿತು. ಸ್ವಾಮಿಗಳು, ತಮ್ಮ ಮಠದ ಶಿಷ್ಯನು ಇಂಥಾ ಪ್ರತಿಭಾಶಾಲಿಯಾಗಿರುವನೆಂಬ ಸಂತೋಷದಿಂದ, ಅವನನ್ನು ಮಂತ್ರಾಲಯಕ್ಕೆ ಕರೆದುಕೊಂಡು ಬರಬೇಕೆಂದು ನರಸಿಂಹದಾಸರಿಗೆ ಶ್ರೀಮುಖವನ್ನು ಬರೆಸಿದರು. ದಾಸರು ಗುರು ಕಾರುಣ್ಯವಾಯಿತೆಂದು ಪತ್ನೀಪುತ್ರರಿಂದೊಡಗೂಡಿ ಮಂತ್ರಾಲಯಕ್ಕೆ ಬಂದರು.

ಸ್ವಾಮಿಗಳು ಸೀನಪ್ಪನನ್ನು ಹತ್ತಿರಕ್ಕೆ ಕರೆದು–'ನೀನು ಮಹಾ ಕವಿಯಾಗಿರುವೆಯಂತೆ; ನಿನ್ನ ವಾಣಿಯನ್ನು ನಮಗಿಷ್ಟು ಶ್ರವಣಮಾಡಿಸಪ್ಪಾ!' ಎಂದರು. ಶ್ರೀನಿವಾಸನು–'**ವರದೇಂದ್ರ ಪಂಚರತ್ನ**' ಎಂಬ ಹೆಸರಿನಿಂದ ಐದು ಶ್ಲೋಕಗಳನ್ನು ವಿವಿಧ ವೃತ್ತಗಳಲ್ಲಿ ರಚಿಸಿ ಶ್ರೀಗಳವರಿಗೆ ಸಮರ್ಪಿಸಿದನು. ಮೊದಲ ಶ್ಲೋಕವು ವರದೇಂದ್ರರ ಮತ್ತು ವರದರಾಜಸ್ವಾಮಿಯ ಪರವಾಗಿತ್ತು. ಎರಡನೆಯದು ವರದೇಂದ್ರರ ಪರವಾಗಿ ದ್ದಂತೆ ರಾಘವೇಂದ್ರಸ್ವಾಮಿಗಳ ಮತ್ತು ರಾಮಚಂದ್ರದೇವರ ಪರವಾಗಿತ್ತು. ಮೂರನೆಯದು ವಾಸುದೇವನ ವಾಯುದೇವರ ಮತ್ತು ವರದೇಂದ್ರರ ಪರವಾಗಿತ್ತು. ನಾಲ್ಕನೆಯದು ಮೂಲರಾಮದೇವರು ಮಠಕ್ಕೆ ಬಂದ ಕಥೆಯನ್ನು ಸೂಚಿಸುವ ಮತ್ತು ವರದೇಂದ್ರರ ಸಂಸ್ಥಾನ ಪಾಲನೆಯ ಚರಿತೆಯದಾಗಿತ್ತು. ಐದನೆಯದು ತನಗಿರುವ ವಿದ್ಯಾಭಿಲಾಷೆಯನ್ನು ವಿಜ್ಞಾಪಿಸುವ ಗುರು ನಮಸ್ಕಾರವಾಗಿತ್ತು.

ಸೀನಪ್ಪನ ಪಾಂಡಿತ್ಯವನ್ನು ನೋಡಿ ಗುರುಗಳು ಬೆರಗಾದರು. 'ಅಪ್ಪಾ ನಿನ್ನಂಥಾ ಶಿಷ್ಯನನ್ನೇ ನಾವು ಬಯಸುತ್ತಿದ್ದೆವು. ನಿನಗೆ ನಾಳೆಯಿಂದಲೇ ರಾಯರ ಸನ್ನಿಧಿಯಲ್ಲಿ ಪಾಠಾರಂಭಮಾಡುವೆವು. ನಿನ್ನಿಂದ ಜಗತ್ತಿನಲ್ಲಿ ಬಹಳ ದೊಡ್ಡ ಕಾರ್ಯವಾಗುವುದು. ಜಗನ್ನಾಥನೇ ನಿನ್ನಲ್ಲಿ ಜಯಪ್ರದನಾಗಿ ನೆಲೆಸುವನು' ಎಂದು ಆಶೀರ್ವಾದ ಮಾಡಿದರು. ಸೀನಪ್ಪನು ನಮಸ್ಕರಿಸಿ–'ಧನ್ಯೋಸ್ಮಿ–ಅನುಗೃಹೀತೋಸ್ಮಿ' ಎಂದು ಭಕ್ತಿ ಪುಳಕಿತನಾಗಿ ನುಡಿದನು.

ಮರುದಿನದಿಂದಲೇ ಶ್ರೀನಿವಾಸನಿಗೆ **ತತ್ವಪ್ರಕಾಶಿಕಾ** ಪಾಠಾರಂಭವಾಯಿತು. ಕೆಲವೇ ವರ್ಷಗಳಲ್ಲಿ **ವ್ಯಾಸತ್ರಯ**ದಲ್ಲಾಗಲೀ, **ನ್ಯಾಯಸುಧೆ**ಯಲ್ಲಾಗಲೀ ಶ್ರೀನಿವಾಸನಿಗೆ ಸದೃಶರು ಮತ್ತೊಬ್ಬರಿಲ್ಲನೆಂಬ ಖ್ಯಾತಿಯುಂಟಾಯಿತು. ಸ್ವಾಮಿಗಳು ಮಂತ್ರಾಲಯದಲ್ಲಿರಲಿ, ಪ್ರವಾಸದಲ್ಲಿರಲಿ, ಶ್ರೀನಿವಾಸನನ್ನು ಎಡೆಬಿಡುತ್ತಿರಲಿಲ್ಲ.

ಪುಣೆಯಂಥಾ ವಿದ್ವನ್ನಗರಿಯಲ್ಲಿ ಸ್ವಾಮಿಗಳ ಪರಮಾನುಗ್ರಹದಿಂದ ಶ್ರೀನಿವಾಸನು, ಪೂರ್ವೋತ್ತರ ಮೀಮಾಂಸಾ ಶಾಸ್ತ್ರಗಳಲ್ಲಿ ಅಸದೃಶನೆನಿಸಿದನು.

ಶ್ರೀನಿವಾಸನಿಗೆ ವ್ಯಾಸಂಗ ಮುಗಿದು ಪ್ರಾಪ್ತ ವಯಸ್ಸುಂಟಾಗಲು, ವರದೇಂದ್ರರೇ ಉತ್ತಮ ಸ್ಥಳದಲ್ಲಿ ಲಗ್ನಮಾಡಿಸಿದರು. ಇನ್ನು ಮುಂದೆ ಮಾನವಿಯಲ್ಲಿ ವಾಸಿಸಿದ್ದು ಪಾಠಪ್ರವಚನ ಮಾಡುತ್ತಿರಬೇಕೆಂದು ಆಜ್ಞೆಗೈದರು. ತದನಂತರ ಶ್ರೀನಿವಾಸನು ಪ್ರಖ್ಯಾತ ಶ್ರೀನಿವಾಸಾಚಾರ್ಯರೆನಿಸಿ ಮಾನವಿಯಲ್ಲಿ ನೆಲೆಸಿದನು.

ಮುಂದೆ ಕಾಲಕಳೆದಂತೆ, ಶ್ರೀನಿವಾಸಾಚಾರ್ಯರು ದೊಡ್ಡಸ್ತಿಕೆಯನ್ನು ಬೆಳೆಸಲು ಬೇಕಾದ **ಪರಾನ್ನನೇಮ, ಸ್ತ್ರೀಶಾಕನೇಮ, ಪರಪಾಕನೇಮ,** ನೈವೇದ್ಯನೇಮ ಇವುಗಳನ್ನೆಲ್ಲಾ ಕಟ್ಟಿಕೊಂಡರು. ತಿಮ್ಮಣ್ಣಯ್ಯನವರು ಮಾಡಿಕೊಟ್ಟ ಭೂಮಿಯಿಂದ ನಿರಾತಂಕವಾಗಿ ಜೀವನವಾಗುತ್ತಿದ್ದುದರಿಂದ, ಪರಾಶ್ರಯ ಮಾಡುವ ಆವಶ್ಯಕತೆಯು ಆಚಾರ್ಯರಿಗಿರಲಿಲ್ಲ. ಮುಂದೆ ತಾಯಿತಂದೆಗಳೂ ಮೃತರಾದ್ದರಿಂದ ಆಚಾರ್ಯರು ಯಾರಿಗೂ ತಲೆಬಾಗಬೇಕಾದ ಕಾರಣವಿರಲಿಲ್ಲ. ವಿದ್ವನ್ಮರ್ಯಾದೆ, ವೈದಿಕ ಮರ್ಯಾದೆ ಸ್ವಾಮಿಗಳ ಶಿಷ್ಯತ್ವದ ಮರ್ಯಾದೆಗಳು ಒಂದಕ್ಕೊಂದು ಸಹಾಯಕವಾಗಿ, ಆಚಾರ್ಯರ ದೊಡ್ಡಸ್ತಿಕೆಯು ದಿನದಿನಕ್ಕೂ ಬೆಳೆದುಬಂದಿತು. ಇವತ್ತಿಗೂ ನಿಜಾಂ ಕರ್ನಾಟಕದಲ್ಲಿ ಅವಶೇಷವಾಗಿರುವ ವೈದಿಕತ್ವದ ಹಿರಿಮೆಯು ಸ್ವವಿಷಯದಲ್ಲಿ ಬಹುವಚನ, ಪರ ವಿಷಯದಲ್ಲಿ ಏಕವಚನ ಪ್ರಯೋಗಗಳು, ಆಚಾರ್ಯರ ಭಾಷೆಯಲ್ಲಿ ತಾನೇತಾನಾಗಿ ನೆಲೆಸಿದುವು. ವಿದ್ಯಾಗೌರವದಿಂದ ಅನೇಕ ಶಿಷ್ಯರು ವ್ಯಾಸಂಗಕ್ಕೆ ಬಂದು ಸೇರಿದ್ದರಿಂದಂತೂ ಆಚಾರ್ಯಪಟ್ಟವು ದಿಗಂತವನ್ನು ಮುಟ್ಟಿತು. ಸ್ನಾನಾನಂತರ ಮನೆಯವರ ಮತ್ತು ಶಿಷ್ಯರ ವಿನಾ ಅನ್ಯರಿಗೆ ಆಚಾರ್ಯರೊಡನೆ ಸಂಭಾಷಣೆ ಮಾಡುವ ಅವಕಾಶವೂ ತಪ್ಪಿಹೋಯಿತು. ಮಾತೆತ್ತಿದರೆ ಮಡಿ ಮೈಲಿಗೆಗಳ ಗೊಂದಲ ಬಲವಾಯಿತು. ಪ್ರಾಕೃತ ಭಾಷೆಯು ಮೈಲಿಗೆಯ ಭಾಷೆಯಾಯಿತು. ಜನರ ದೃಷ್ಟಿಯಲ್ಲಿ ಆಚಾರ್ಯರು ಬಹು ದೊಡ್ಡವರಾದರು.

ಶ್ರೀನಿವಾಸಾಚಾರ್ಯರಿಗೆ ಹರಿದಾಸರೆಂದರೆ ಆಗುತ್ತಿರಲಿಲ್ಲ. ಕನ್ನಡ ಪದಗಳೆಂದರೆ ಸೇರುತ್ತಿರಲಿಲ್ಲ. ಹರಿದಾಸರಾಗಿದ್ದ ತಮ್ಮ ತಂದೆಗಳ ಹೆಸರನ್ನು ದಾಸ ಶಬ್ದ ಸಹಿತವಾಗಿ ಕರೆಯದೆ, ನಮ್ಮ ಹಿರಿಯರು ನಮ್ಮ ಆಚಾರ್ಯರು ಎಂದು ಕರೆದುಕೊಳ್ಳಲಾರಂಭಿಸಿದರು. ಆ ಕಾಲದಲ್ಲಿ ರಾಯಚೂರು ಹರಿದಾಸ ಭೂಯಿಷ್ಠವಾಗಿತ್ತು. ಚೀಕಲಪರಿಯಲ್ಲಿ **ವಿಜಯದಾಸರೂ,** ಕಲ್ಲೂರಿನಲ್ಲಿ **ಸುಬ್ಬಣ್ಣದಾಸರೂ,** ಆದವಾನಿಯಲ್ಲಿ ದಿವಾನ ತಿಮ್ಮಣ್ಣಯ್ಯನವರೂ, ಉತ್ತನೂರಿನಲ್ಲಿ **ಗೋಪಾಲದಾಸರೂ,** ವೇಣೀ

ಸೋಮಪುರದಲ್ಲಿ **ವ್ಯಾಸ ತತ್ವಜ್ಞರೂ** ಮಹಾ ಪ್ರಖ್ಯಾತರೆನಿಸಿ, ಅಪರೋಕ್ಷಜ್ಞಾನಿಗಳೆಂದು ಜನಸಾಮಾನ್ಯರ ಭಕ್ತಿಗೌರವಗಳಿಗೆ ಪಾತ್ರರಾಗಿದ್ದರು. ಜನರು ದಾಸರಲ್ಲಿ ಭಕ್ತಿ ಮಾಡುತ್ತಿದ್ದಂತೆ ವಿದ್ವಾಂಸರಾದ ಆಚಾರ್ಯರುಗಳಲ್ಲಿ ಭಕ್ತಿ ಮಾಡುತ್ತಿರಲಿಲ್ಲ. ದೇವರನಾಮಗಳಲ್ಲಿ ತೋರಿಸುತ್ತಿದ್ದ ಆದರವನ್ನು ಮಂತ್ರ ಸ್ತೋತ್ರಗಳಲ್ಲಿ ತೋರಿಸುತ್ತಿರಲಿಲ್ಲ. ಈ ವಿಧವಾದ ಜನರ ಆಚರಣೆಯು ನಮ್ಮ ಶ್ರೀನಿವಾಸಾಚಾರ್ಯರಿಗೆ ಬಹು ಬೇಸರವನ್ನುಂಟುಮಾಡುತ್ತಿತ್ತು. ಇದೇ ದಾಸರಮೇಲಿನ ದ್ವೇಷಕ್ಕೂ ಕಾರಣವಾಯಿತು. ಈ ವಿಧವಾದ ಪರಿವರ್ತನೆಗೆ ವಿಜಯದಾಸರೇ ಮುಖ್ಯಕಾರಣರೆಂದರಿತು, ಅವರನ್ನು ವಾಚಾಮಗೋಚರವಾಗಿ ನಿಂದಿಸತೊಡಗಿದರು. "ಈ ಕೂಸೀಮಗದಾಸಗೆ **ಅಪರೋಕ್ಷವೆ ?** ಇವನ ಕನ್ನಡಪದಗಳು ಶಾಸ್ತ್ರಾರ್ಥಗಳೇ ? ಇವನ ಕುಣಿತದಿಂದ ಶ್ರೀಹರಿ ಪ್ರೀತಿಯೇ ?" ಎಂದು ಮಾತುಮಾತಿಗೆ ವಿಜಯದಾಸರ ದೂಷಣೆಗಾರಂಭಿಸಿದರು. ವಿಜಯದಾಸನ ಸಹವಾಸದಿಂದ ಕಲ್ಲೂರು ಸುಬ್ಬಣ್ಣದಾಸರಂಥಾ ಸುಧಾ ಪಾಠೀಕರು ಭ್ರಷ್ಟರಾದರು ! ಗೋಪಾಲದಾಸನಿಂದ ವ್ಯಾಸ ತತ್ವಜ್ಞರಂಥಾ ಟಿಪ್ಪಣಿಕಾರರು ಪದಚ್ಯುತರಾದರು ! ಮಾಡುವುದೇನು ? **ಕಲಿಪ್ರಭಾವ**ವೆಂದು ಜರಿಯಲಾರಂಭಿಸಿದರು. ಈ ಕಾರಣ ಆಚಾರ್ಯರ ಮೇಲಿದ್ದ ಜನರ ವಿಶ್ವಾಸ ಕಡಿಮೆಯಾಗತೊಡಗಿತು.

ಹೀಗಿರಲು ಶ್ರೀನಿವಾಸಾಚಾರ್ಯರನ್ನು ಉದ್ಧರಿಸಬೇಕೆಂದು ಸದ್ಭಾವನೆಗೊಂಡು ವಿಜಯದಾಸರು ಮಾನವಿಗೆ ದಯಮಾಡಿಸಿದರು. ಅಂತರಂಗದಲ್ಲಿ ಹೇಗೇ ಇರಲಿ, ಬಹಿರಂಗದಲ್ಲಾದರೂ ಆಚಾರ್ಯರನ್ನು ಬಿಟ್ಟು ಕೆಲಸ ಮಾಡಬಾರದೆಂದು ಜನರು ದಾಸರ ಸ್ವಾಗತಕ್ಕೆ ಅವರನ್ನು ಕರೆದರು. ಆಚಾರ್ಯರು, ಆ ಮಾತಿಗೆ ಪ್ರತ್ಯುತ್ತರವಾಗಿ, 'ಸ್ವಾಗತ ಮಾಡುವುದಕ್ಕೆ ದಾಸರೇನು ಸ್ವಾಮಿಗಳೋ' ಎಂದು ಪರಿಹಾಸ್ಯಮಾಡಿ, ಬಂದವರನ್ನು ಅವಮಾನಿಸಿದರು. ಆಚಾರ್ಯರೊಬ್ಬರು ಬರದಿದ್ದ ಮಾತ್ರಕ್ಕೆ ವಿಜಯದಾಸರಿಗಾಗುವ ಸಾರ್ವಜನಿಕ ಮರ್ಯಾದೆಗೆ ಲೋಪವಾಗಲಿಲ್ಲ. ಜನರು ಮಹೋತ್ಸವದಿಂದ ದಾಸರನ್ನೂ ಅವರ ಪರಿವಾರದವರನ್ನೂ ಕರೆತಂದು ಯೋಗ್ಯಸ್ಥಳದಲ್ಲಿ ಇಳಿಸಿ ಉಪಚರಿಸಿದರು.

ದಾಸರು ಯಾವ ಊರಿಗೇ ಬರಲಿ, ಪ್ರಾತರಾಹ್ನಿಕವನ್ನು ಮುಗಿಸಿ, ಕೊರಳಿಗೆ ತಂಬೂರಿಯನ್ನು ಹಾಕಿಕೊಂಡು, ಭಜನೆಮಾಡುತ್ತಾ ಗ್ರಾಮಪ್ರದಕ್ಷಿಣೆ ಮಾಡುತ್ತಿದ್ದರು. ಪ್ರತಿಬಾಗಿಲಲ್ಲಿ ನಿಂತು ಆ ಮನೆಯ ಬ್ರಾಹ್ಮಣರಿಗೆ ತಮ್ಮಲ್ಲಿ ತೀರ್ಥಪ್ರಸಾದಕ್ಕೆ ಬರಬೇಕೆಂದು ಆಮಂತ್ರಣ ಕೊಡುತ್ತಿದ್ದರು. ದಾಸರ ಜೊತೆಯಲ್ಲಿ ನೂರಾರು ಜನರಿರುತ್ತಿದ್ದರು. ಭಜನೆಯ ಧ್ವನಿ ಕೇಳಿದೊಡನೆಯೇ ಯಾರಾದರೂ ಬಾಗಿಲಿಗೆ ಬಂದು ದಾಸರಿಗೆ ವಂದಿಸದಿರುತ್ತಿರಲಿಲ್ಲ. ಆಚಾರ್ಯರ ಮನೆಯ ಬಾಗಿಲಿಗೆ ಬರುತ್ತಲೇ, ಜೊತೆಯಲ್ಲಿದ್ದವರು– 'ಸ್ವಾಮಿ ಇದು ಶ್ರೀನಿವಾಸಾಚಾರ್ಯರ ಮನೆ'ಯೆಂದರುಹಿದರು. ಇಷ್ಟಾದರೂ ಒಳಗಿದ್ದ ಆಚಾರ್ಯರು ಎದ್ದು ಬರಲಿಲ್ಲ. ದಾಸರೇ ಮನೆಯ ಒಳಹೊಕ್ಕು ಅವರಿದ್ದ ಬಳಿಗೆ ಹೋಗಿ– 'ಆಚಾರ್ಯರೇ, ತಾವು ಈ ದಿನ ನಮ್ಮಲ್ಲಿಗೇ ತೀರ್ಥಪ್ರಸಾದಕ್ಕೆ ಬರಬೇಕು' ಎಂದು ಆಮಂತ್ರಿಸಿದರು. ಆಗಲೂ ಆಚಾರ್ಯರು ಕೂತಬಳಿಯಿಂದ ಅಲುಗದೆ, ಯುಕ್ತರೀತಿ

ಯಿಂದ ಎದ್ದು ಗೌರವಿಸದೆ, 'ಒಳ್ಳೇದು' ಎಂದಿಷ್ಟು ಮಾತ್ರ ಉತ್ತರ ಕೊಟ್ಟು ಕಳುಹಿಸಿದರು. ಆಚಾರ್ಯರಾಗಿ ದಾಸರಿಗೆ ಗೋಪಾಳವನ್ನು ಹಾಕಲಿಲ್ಲ. ಶಿಷ್ಯರು ಅದಕ್ಕಾಗಿ ಕಾಯಲಿಲ್ಲ. ದಾಸರ ಪ್ರಯಾಣ ಭಜನೆಮಾಡುತ್ತಾ ಮುಂದೆ ಸಾಗಿತು.

ದಾಸರ ಬಿಡಾರದಲ್ಲಿ ಆ ದಿನದ ಪೂಜೆ ಭೋಜನಾದಿಗಳು ಎಂದಿಗಿಂತ ಸ್ವಲ್ಪ ಹೆಚ್ಚು ಹೊತ್ತಾಯಿತು. ಭೋಜನ ಸಮಯದಲ್ಲಿ ಯಾರನ್ನೂ ಮತ್ತೆ ಕರೆಯುವ ಪದ್ಧತಿಯಿಲ್ಲದಿದ್ದರೂ ವಿಜಯರಾಯರು–'ಆಚಾರ್ಯರೇಕೆ ಬರಲಿಲ್ಲ! ಅವರನ್ನು ಕರೆದು ಬಾರೆ'ಂದು ಶಿಷ್ಯನನ್ನು ಕಳುಹಿಸಿದರು. ಆಚಾರ್ಯರು ದಾಸರ ಸ್ವವೇಶ್ಮದಲ್ಲಿ ಭೋಜನ ಮಾಡುವುದು ತಮ್ಮ ಶಿಷ್ಟಾಚಾರಕ್ಕೆ ವಿರೋಧವೆಂದು ಜಾಗ್ರತೆ ಭೋಜನಮಾಡಿ ಶಯನ ಮಾಡಿದ್ದರು. ಕರೆಯಬಂದವನಿಗೆ **'ಆಚಾರ್ಯರಿಗೆ ಊಟ ಹೊತ್ತು ಹೋದರೆ ಹೊಟ್ಟೆ ಶೂಲೆ ಬರುತ್ತದೆ. ಆದ್ದರಿಂದ ಮುಂಚಿತವಾಗಿ ಅವರು ಊಟ ಮಾಡಿದರೆಂದು ತಿಳಿಸು'** ಎಂಬುದಾಗಿ ಹೇಳಿ ಕಳುಹಿಸಿದರು. ದಾಸರು ಆ ಸಂಗತಿಯನ್ನು ಕೇಳಿ–**'ಹಾಗೆಯೇ, ಹಾಗಿದ್ದರೆ ಹಾಗೇ ಆಗಲಿ'** ಎಂದು ನುಡಿದು ಎಲ್ಲರೊಡನೆ ಭೋಜನಕ್ಕೆ ಕುಳಿತರು. ಆ ರಾತ್ರೆ ಕೀರ್ತನಕ್ಕೆ ಬರಬೇಕೆಂದು ಕರೆದರೂ ಆಚಾರ್ಯರು ಬರಲಿಲ್ಲ.

ಇಷ್ಟು ಮಾತ್ರ ಮಾಡಿದ ಭಾಗವತಾಪಚಾರವೇ ಪ್ರಮಾದಕ್ಕಿಟ್ಟಿತು. ಶ್ರೀನಿವಾಸಾಚಾರ್ಯರಿಗೆ ಅನೃತಮಾಡಿದುದಕ್ಕೆ ತಕ್ಕಂತೆ, ಊಟ ಹೊತ್ತು ಹೋದರೆ ಹೊಟ್ಟೆ ಶೂಲೆಯು ನಿಜವಾಗಿಯೂ ಬರುವುದಕ್ಕಾರಂಭಿಸಿತು. ಔಷಧ ಸೇವನೆಮಾಡಿದಂತೆಲ್ಲಾ ವ್ಯಾಧಿಯು ಕಡಿಮೆಯಾಗುವುದಂತಿರಲಿ–ಅತಿಶಯವಾಗಿ ಬೆಳೆಯಲಾರಂಭಿಸಿತು. ಆಗಾಗ ಬರುತ್ತಿದ್ದ ವ್ಯಾಧಿಯು ನಿತ್ಯವಿಧಿಯಾಗಿ ಪರಿಣಾಮಶೂಲೆಯೆನಿಸಿತು. ಪಾಠಪ್ರವಚನವು ಸಾಗದಂತಾಯಿತು. ಆಚಾರ್ಯರು ದಿನದಿನಕ್ಕೆ ಕ್ಷಯಿಸುತ್ತಾ ಬಂದರು. ಹೊಟ್ಟೆ ನೋವಿನ ಬಾಧೆಯಿಂದ ಬದುಕುವುದೇ ದುಸ್ತರವೆಂಬಂತಾಯಿತು! ಮುಂದೇನು ಗತಿಯೆಂದು ತೋರದಂತಾಯಿತು!

ಯಾರಿಗಾದರೂ ಸ್ವೋತ್ತಮ ದ್ರೋಹವೆಂಬುದು ಬಲು ಕೆಟ್ಟದು. ಇಂದ್ರದ್ಯುಮ್ನನೆಂಬ ಮಹಾರಾಜನು ಅಗಸ್ತ್ಯರಿಗೆ ಮಾಡಿದ ಅಪಚಾರದಿಂದ ಗಜ ಜನ್ಮತಾಳಿ ದುಃಖಪಟ್ಟನು. ನೃಗರಾಜನೆಂಬ ದಾನ ಶೌಂಡನು ಬ್ರಾಹ್ಮಣಶಾಪದಿಂದ ಓತೀಕೇತನಾದನು. ಗೌತಮರ ಶಾಪದಿಂದ ಇಡೀ ಬ್ರಾಹ್ಮಣ ಕುಲವೇ ಜ್ಞಾನಶೂನ್ಯವಾಗಿ ವೇದವ್ಯಾಸಾವತಾರವಾಗದೆ ಉದ್ಧಾರದ ಮಾರ್ಗವನ್ನು ಕಾಣಲಿಲ್ಲ. ದೂರ್ವಾಸರ ಶಾಪದಿಂದ ತ್ರಿಲೋಕಾಧಿಪತಿಯಾದ ಇಂದ್ರನು ಪದಚ್ಯುತನಾದನು. ವಿಜಯದಾಸರ **'ಹಾಗೇ ಆಗಲಿ'** ಎಂಬ ಮಾತು ಶ್ರೀನಿವಾಸಾಚಾರ್ಯರಿಗೆ ಶಾಪಪ್ರಾಯ ಎಂಬಂತಾಗಿ ಕ್ರೂರ ಪರಿಣಾಮಶೂಲೆಯಾಗಿ ಪರಿಣಮಿಸಿತು. ಔಷಧಿಯಿಂದ ಪರಿಹಾರವಾಗದ ವ್ಯಾಧಿಯನ್ನು ದೇವರ ಸೇವೆಯಿಂದ ಕಳೆದುಕೊಳ್ಳಬೇಕೆಂದು ಆಚಾರ್ಯರು ತಿರುಪತಿಗೆ ಹೋಗಿ ಸೇವೆ ಮಾಡಿದರು.

**ನ ಭಜತಿ ಕುಮನೀಷಿಣಾಂ ಸ ಇಜ್ಯಾಂ । ಹರಿರಧನಾತ್ಮಜನಪ್ರಿಯೋ ರಸಜ್ಞಃ॥
ಶ್ರುತ ಧನಕುಲ ಕರ್ಮಣಾಂ ಮದೈರ್ಯೇ । ವಿದಧತಿಪಾಪ ಮ
ಕಿಂಚನೇಷು ಸತ್ಸು ॥**

ತಾ॥ ತಾವು ಬಹುಶ್ರುತರು, ಧನವಂತರು, ಉತ್ತಮ ಕುಲದವರು, ಕರ್ಮಠರು ಎಂಬ ಮದಗಳಿಂದ ಕೂಡಿದ ಅಜ್ಞಾನಿಗಳು, ದೇವರೇ ಸರ್ವಸ್ವವೆಂದು ನಂಬಿದ ಸತ್ಪುರುಷರಿಗೆ ದ್ರೋಹ ಮಾಡಿ, ಭಗವಂತನನ್ನು ಪೂಜೆಯಿಂದ ಒಲಿಸುವೆನೆಂದರೆ, ಅಂಥವರ ಪೂಜೆಯನ್ನು ಬಡವರಾಧಾರಿಯಾದ ಪರಮಾತ್ಮನು ಸ್ವೀಕರಿಸುವುದಿಲ್ಲ.

ಎಂಬ ಭಾಗವತೋಕ್ತಿಯಂತೆ ಆಚಾರ್ಯರ ವ್ಯಾಧಿಯು ಶ್ರೀನಿವಾಸನ ಸೇವೆಯಿಂದ ಗುಣವಾಗಲಿಲ್ಲ. ಶ್ರೀನಿವಾಸನು ಆಚಾರ್ಯರ ಸೇವೆಯನ್ನು ಸ್ವೀಕರಿಸಲಿಲ್ಲ. ಆಚಾರ್ಯರು ತಿರುಪತಿಯನ್ನು ಬಿಟ್ಟು ಘಟಿಕಾಚಲಕ್ಕೆ ಬಂದು, ಅಲ್ಲಿ ವಾಯುಸ್ತುತಿ ಪುರಶ್ಚರಣೆಯಿಂದ ಮುಖ್ಯ ಪ್ರಾಣದೇವರ ಸನ್ನಿಧಿಯಲ್ಲಿ ಬಹು ಕಠಿಣಸೇವೆ ಮಾಡಿದರು ಘಟಿಕಾಚಲದ ಮುಖ್ಯಪ್ರಾಣನ ಕೃಪೆಯೂ ಆಚಾರ್ಯರಿಗಾಗಲಿಲ್ಲ. ಅನಂತರ ಆಚಾರ್ಯರು ಮಂತ್ರಾಲಯಕ್ಕೆ ಬಂದರು. ಅಲ್ಲಿ ಭಜಕರಿಗೆ ಕಾಮಧೇನುವೂ ನಮಿಸುಗೆ ಕಲ್ಪವೃಕ್ಷವೂ ಎಂದು ಕೀರ್ತಿತರಾಗಿರುವ ಶ್ರೀ ರಾಘವೇಂದ್ರಸ್ವಾಮಿಗಳ ಸೇವೆಗಾರಂಭಿಸಿದರು. ಆ ಕಾಲದಲ್ಲಿ ವರದೇಂದ್ರತೀರ್ಥರು ಪುಣೆಯಲ್ಲಿದ್ದುದರಿಂದ ಆಚಾರ್ಯರಿಗೆ ವ್ಯಾಧಿಯ ಕಾರಣವನ್ನು ತಿಳಿಸುವವರು ಅಲ್ಲಾರೂ ದೊರೆಯಲಿಲ್ಲ. ಸೇವೆಮಾಡಿ ಸಾಕಾಯಿತು. ದಿನದಿನಕ್ಕೆ ವ್ಯಾಧಿ ಬಲಿಯಿತು. ಹರಿಗುರುಗಳೆಲ್ಲರೂ ತಮ್ಮನ್ನು ಕೈಬಿಟ್ಟರೆಂದು ಆಚಾರ್ಯರು ಮರುಗಿದರು–ದುಃಖಿತರಾದರು. ಕೇವಲ ಪಾದೋದಕ ಸೇವನೆಯಿಂದ ಒಂದು ಸಪ್ತಕ ಸೇವೆ ಮಾಡಿದರು. ಆಗಲಂತೂ ಆಚಾರ್ಯರು ವಿಶೇಷ ಸೋತುಹೋದರು. ಬಳಲಿಕೆ ಅತಿಶಯವಾಯಿತು. ಏಳನೆಯ ರಾತ್ರಿ–'ಈ ದಿನವೂ ರಾಯರ ಪ್ರಸಾದವಾಗದಿದ್ದರೆ, ಮಾರನೆಯ ಪ್ರಾತಃಕಾಲ ತುಂಗಭದ್ರಾ ಪ್ರವೇಶಮಾಡಿ ಪ್ರಾಣತ್ಯಾಗ ಮಾಡುವೆನೆ'ಂದು ನಿಶ್ಚಯಿಸಿದರು.

ಹಂತುನಃ ಕಾಯಜಾನ್ ದೋಷಾನ್ । ಆತ್ಮಾತ್ಮೀಯ ಸಮುದ್ಭವಾನ್ ।
ಸರ್ವಾನಪಿ ಪುಮರ್ಥಾಂಶ್ಚ । ದದಾತು ಗುರುರಾತ್ಮವಿತ್ ॥

ಎನ್ನುತ್ತಾ – **'ಶ್ರೀ ರಾಘವೇಂದ್ರಾಯನಮಃ, ಶ್ರೀ ರಾಘವೇಂದ್ರಾಯನಮಃ'** ಎಂದು ಜಪಿಸುತ್ತಾ, ಮಹಾದ್ವಾರದಲ್ಲಿ ಮೈಮರೆದು ಮಲಗಿಬಿಟ್ಟರು.

ಪ್ರಭಾತವಾಗುವುದೇ ತಡ – ತುಂಗಾಪ್ರವೇಶಮಾಡಿ, ದೇಹತ್ಯಾಗಮಾಡುವೆನೆಂದು ಶಪಥಮಾಡಿದ್ದ ಆಚಾರ್ಯರಿಗೆ ಒಂದು ವಿಚಿತ್ರ ಸ್ವಪ್ನವಾಯಿತು. ಶ್ರೀ ರಾಘವೇಂದ್ರಸ್ವಾಮಿಗಳು ನಿಜರೂಪದಿಂದ ಪ್ರತ್ಯಕ್ಷರಾಗಿ—

"ತಮ್ಮಾ ನೀನು ನನಗೆ ಅನ್ಯನಲ್ಲ. ನಿನ್ನ ವ್ಯಾಧಿಯು ನನ್ನಿಂದಾಗಲಿ, ಶ್ರೀಹರಿ ವಾಯುಗಳಿಂದಲಾಗಲೀ ಪರಿಹಾರವಾಗುವಂಥದಲ್ಲ. ನೀನು ಸರ್ವೋತ್ತಮರ ದ್ರೋಹವನ್ನು ಗಳಿಸಿಕೊಂಡಿರುವೆ. ವಿಜಯದಾಸರೆಂಬುವರ ಸಾಮಾನ್ಯರೆಂದು ತಿಳಿದೆಯಾ!

ಭೃಗುಮುನಿಗಳೇ ಶ್ರೀ ವಿಜಯದಾಸರು. ಅವರ ನೈವೇದ್ಯದಲ್ಲಿ ಭೋಜನಮಾಡಲು ನಿರಾಕರಿಸಿ ಅನೃತವಾಡಿದೆ. ಆದರಿಂದಲೇ ನಿನಗೀವ್ಯಾಧಿ ಪ್ರಾಪ್ತವಾಯಿತು. ವಿಜಯರಾಯರು ಚೀಕಲಪರಿಯಲ್ಲಿರುವರು. ಅವರಿಗೇ ಶರಣಾಗತನಾಗು. ಅವರೇ ನಿನ್ನನ್ನು ಉದ್ಧರಿಸುವರು. ಮುಂದೆ ನಿನ್ನಿಂದ ಬಹುವಾಗಿ ಸರ್ವಜ್ಞರ ಸೇವೆಯಾಗುವುದಿದೆ. ನೀನು ಜಗದ್ವಿಖ್ಯಾತನಾಗುವೆ! ಸಾಯುವೆನೆಂಬ ಸಾಹಸಬೇಡ. ನಿನ್ನ ದುಷ್ಕರ್ಮವಿಂದಿಗೆ ತೀರಿತು. ಫಲಮಂತ್ರಾಕ್ಷತೆಗಳನ್ನು ತೆಗೆದುಕೋ!" ಎಂದು ಅನುಗ್ರಹಿಸಿ ಅದೃಶ್ಯರಾದರು.

ಆಚಾರ್ಯರಿಗೆ ಎಚ್ಚರವಾಯಿತು. ಕಣ್ಣುತ್ತೆರೆಯಿಟ್ಟು ಮೈಬೆವರಿತು. ಬುದ್ಧಿಯೋಡದೆ ನಿಶ್ಚೇಷ್ಟರಾಗಿ ಸ್ವಲ್ಪ ಹೊತ್ತು ಕುಳಿತರು. ಕೈಯಲ್ಲಿದ್ದ ಉತ್ತತ್ತಿಯನ್ನೂ ಮಂತ್ರಾಕ್ಷತೆಯನ್ನೂ ಕಂಡರು. ಸ್ವಪ್ನವೋ ಜಾಗ್ರತೆಯೋ ಎಂದು ಮೂರು ಮೂರು ಬಾರಿ ಅತ್ತಿತ್ತ ನೋಡಿದರು. ಅರುಣೋದಯವಾಗುತ್ತಿರುವುದನ್ನು ಕಂಡರು. ಜಾಗ್ರತನಾಗಿ ಕುಳಿತಿರುವೆನೆಂದು ಮನಸ್ಸಿಗೆ ನಿರ್ಧರವಾಯಿತು. ಮಂತ್ರಾಕ್ಷತೆಯನ್ನು ತಲೆಯ ಮೇಲೆ ಹಾಕಿಕೊಂಡರು. ಇಂದಿಗೆ ಗುರುಕೃಪೆಯಾಯಿತೆಂದು ಮನಸ್ಸಿಗೆ ಹರ್ಷವಾಯಿತು. ಇಂದಿಗೆ ನನ್ನ ದುಷ್ಕರ್ಮ ಸವೆಯಿತೆಂದುಕೊಂಡರು. **ವಿಜಯರಾಯ! ಪಾಹಿ ಪಾಹಿ!** ಎಂದು ತಾವು ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಡುತ್ತಾ ಕುಳಿತರು. ಇನ್ನು ಕುಳಿತು ಫಲವಿಲ್ಲವೆಂದುಕೊಂಡರು. ಏಳುವುದಕ್ಕೆ ಪ್ರಯತ್ನಿಸಿ ಸಾಮರ್ಥ್ಯವಿಲ್ಲದೆ ಕುಸಿದು ಕೆಳಗೆ ಬಿದ್ದರು. ಏಳುತ್ತಿರುವ ಪತಿಯನ್ನು ನೋಡಿ, ಆಚಾರ್ಯರ ಪತ್ನಿಯು ಕೈ ಹಿಡಿದು ಉಪಚರಿಸಿದಳು. ನದಿಗೆ ಕರೆದೊಯ್ದು ಸ್ನಾನಮಾಡಿಸಿದಳು. ತಾನೇ ಗೋಪೀಚಂದನವನ್ನು ತೇಯ್ದು ದ್ವಾದಶನಾಮಗಳನ್ನು ಬಳಿದಳು. ತನಗೆ ತಿಳಿದಂತೆ, ಮೃದುವಾಗಿ ಪಂಚಮುದ್ರೆಗಳನ್ನು ಒತ್ತಿದಳು.

ರೋಗದಿಂದ ಕೃಶವಾದ ದೇಹ! ಸೇವೆಯಿಂದ ಬಳಲಿದ ಇಂದ್ರಿಯಗಳು! ನಿರಾಶೆಯಿಂದ ನೊಂದ ಮನಸ್ಸು! ಏಳು ದಿನಗಳ ಉಪವಾಸದಿಂದ ಕುಗ್ಗಿಹೋದ ಕಂಠಸ್ವರ! ಇಂತಹ ಸ್ಥಿತಿಯಲ್ಲೂ ಆಚಾರ್ಯರು ಕೈ ಸಂಜ್ಞೆಯಿಂದ ರಾಯರ ಗುಡಿಗೆ ಹೋಗಬೇಕೆಂದರು. ಪತ್ನಿಯೂ, ಮಗ ದಾಮೋದರನೂ ಪ್ರಯತ್ನದಿಂದ ಆಯಾಸವಾಗದಂತೆ ಎತ್ತಿಕೊಂಡು ಬಂದರು. ಗುರುದರ್ಶನ ಮಾಡಿಸಿದರು. ಪಾದೋದಕ ಮೃತ್ತಿಕಾ ಪ್ರಸಾದಾದಿಗಳು ದೊರೆತವು. ಪತ್ನಿಯು ಉತ್ತತ್ತಿಯ ಗಂಜಿಯನ್ನುಮಾಡಿ ಪತಿಗೆ ಪಾರಣೆ ಮಾಡಿಸಿದಳು. ನಾಲ್ಕಾರು ದಿವಸಗಳಲ್ಲಿ ಆಚಾರ್ಯರಿಗೆ ಸ್ವಲ್ಪ ಚೈತನ್ಯವುಂಟಾಯಿತು.

ಆಚಾರ್ಯರ ಪ್ರಯಾಣ

ಶ್ರೀನಿವಾಸಾಚಾರ್ಯರು ದೋಣಿಯಲ್ಲಿ ಕುಳಿತು ಚೀಕಲಪರಿಯ ಮಾರ್ಗವಾಗಿ ಪ್ರಯಾಣಮಾಡಿದರು. ಶ್ರೀಪಾದರಾಯರು ಪ್ರತಿಷ್ಠಿಸಿದ ಅಶ್ವತ್ಥ ನರಸಿಂಹ ದೇವರಬಳಿ ವಿಜಯರಾಯರು ಪ್ರದಕ್ಷಿಣೆ ಮಾಡುತ್ತಿರುವುದು ಕಾಣಿಸಿತು. ಆಚಾ

ರ್ಯರು ಮೇನೆಯಿಂದ ಕೆಳಗಿಳಿದರು. ಅಲ್ಲಿಂದ ಹೆಜ್ಜೆ ನಮಸ್ಕಾರಹಾಕುತ್ತಾ ದಾಸರಿದ್ದ ಕಟ್ಟೆಯಬಳಿಗೆ ಬಂದರು. ದೀರ್ಘದಂಡ ನಮಸ್ಕಾರಮಾಡಿ–**'ವಿಜಯರಾಯಾ ಪಾಹಿ ಪಾಹಿ'** ಎನ್ನುತ್ತಾ ಪ್ರಜ್ಞೆತಪ್ಪಿದಂತಾದರು. ಸ್ವಲ್ಪ ಸಮಯವಾಯಿತು. ಸಂಜ್ಞೆ ತಿಳಿದು,–**'ಪ್ರಭೋ ಗುಬ್ಬಿಯಮೇಲೆ ಬ್ರಹ್ಮಾಸ್ತ್ರವೇ ?'** ಎಂದು ಎದ್ದು ಕುಳಿತು ಕೊಂಡರು. ವಿಜಯರಾಯರು ಆಚಾರ್ಯರ ಮೈದಡವಿ–'ಆಚಾರ್ಯ, ಬಳಲಿದೆ ಬಲು ಬಳಲಿದೆ. ಇನ್ನೇನು ನಿನ್ನಮೇಲೆ ರಾಯರ ಕೃಪೆಯಾಯಿತು ! ನಿನ್ನ ದುಷ್ಕೃತ್ಯವೆಲ್ಲಾ ಇಂದಿಗೆ ಕಳೆದು ಹೋಯಿತು. ಹಿಂದಾದುದಕ್ಕೆ ಚಿಂತಿಸದಿರು. ಪ್ರಾರಬ್ಧಕರ್ಮವು ಭೋಗಿಸದೆ ಬಿಡದು. ಅಂದು, ನಿನಗಾಗಿಯೇ ನಾನು ಮಾನವಿಗೆ ಬಂದಿದ್ದುದು. ಆದರೆ ಇಂದಿಗೆ ಶ್ರೀ ಹರಿಕೃಪೆ ನಿನ್ನಲ್ಲಾಯಿತು' ಎಂದು ಉಪಹರಿಸಿದರು.

ಆಚಾರ್ಯರಿಗೆ ಏನು ಮಾತಾಡುವುದಕ್ಕೂ ತೋರದಂತಾಯಿತು. ಕಂಠನಿರೋಧ ವಾಗಿ ಕಣ್ಣುಗಳಿಂದ ಪ್ರೇಮಾಶ್ರುಗಳು ಮೇರೆವಪ್ಪಿಹರಿದುವು. ವಿಜಯರಾಯರ ಪಾದದಲ್ಲಿ ಹೊರಳಿ ಪಾದಧೂಳಿಯನ್ನು ಕಣ್ಣುಗಳಿಗೆ ಸವರಿಕೊಂಡರು. ಆ ದಿನ ಆಚಾರ್ಯರಿಗೆ ವಿಜಯರಾಯರಲ್ಲೇ ಆತಿಥ್ಯ-ಉಪಚಾರಗಳಾದುವು. 'ಆಚಾರ್ಯ, ನೀನು ನಾಳೆ ಉತ್ತ ನೂರಿಗೆ ಹೋಗು.* ಭಾಗಣ್ಣ (ಗೋಪಾಲದಾಸರು) ನು ನಿನಗಾಗಿ ಎದುರುನೋಡು ತ್ತಿರುವನು. ಅವನೇ ನಿನ್ನ ಸ್ವರೂಪ ಗುರುವು. ಅವನಿಂದ ನಿನಗೆ ಅಪರೋಕ್ಷವಾಗು ವುದು. ನೀನು ಪ್ರಖ್ಯಾತ ಹರಿದಾಸನಾಗುವೆ' ಎಂದು ವಿಜಯರಾಯರು ಹರಸಿದರು. ಮರುದಿನ ಆಚಾರ್ಯರು ಪಾದಚಾರಿಗಳಾಗಿ ಉತ್ತನೂರಿಗೆ ಪ್ರಯಾಣಮಾಡಿದರು. ವಿಜಯರಾಯರ ಅನುಗ್ರಹದಿಂದ ಆಚಾರ್ಯರಿಗೆ ದೇಹದಲ್ಲಿ ವಿಚಿತ್ರಶಕ್ತಿ ಹುರಿಗೂಡಿದಂ ತಾಯಿತು.

ಗೋಪಾಲದಾಸರ ಚರಿತ್ರೆಯಲ್ಲಿ ತಿಳಿಸಿರುವಂತೆ, ಉತ್ತನೂರೆಂಬುವುದು ಗದ್ವಾಲ ಸಂಸ್ಥಾನಕ್ಕೆ ಸೇರಿದ ಒಂದು ಗ್ರಾಮ. ಗೋಪಾಲದಾಸರಿಗೆ ಪ್ರಸನ್ನನಾದ ವೆಂಕಟಪತಿಯ ದೇವಾಲಯವು ಅದ್ಯಾಪಿ ಅಲ್ಲಿ ಕಂಗೊಳಿಸುತ್ತಿದೆ. ಶ್ರೀನಿವಾಸಾಚಾರ್ಯರು ಬರುವರೆಂ ದರಿತು, ಗೋಪಾಲದಾಸರು, ಬರುವವರ ಕಾಲಿಗೆ ಮುಳ್ಳು ತಗುಲಬಾರದೆಂದು ದೇವ ಸ್ಥಾನದ ಅಂಗಳ ಪ್ರದೇಶದಲ್ಲಿ ಗುಡಿಸುತ್ತಿದ್ದರು. ಗೋಪಾಲದಾಸರು ಎಷ್ಟು ಜ್ಞಾನಿಗಳಾ ಗಿದ್ದರೋ, ನೋಡುವವರ ಕಣ್ಣಿಗೆ ಅಷ್ಟೇ ಸರ್ವಸಾಮಾನ್ಯ ಮನುಷ್ಯರಂತೆ ಕಾಣಿಸು ತ್ತಿದ್ದರು. ಆಚಾರ್ಯರು ಉತ್ತನೂರಿಗೆ ಬರಲು ಎರಡುಮೂರು ದಿವಸ ಹಿಡಿಯಿತು. ಅವರು ಅಲ್ಲಿಗೆ ಬಂದ ದಿನ ದೇವಾಲಯದ ಬಳಿ ಕಸ ಗುಡಿಸುತ್ತಿದ್ದ ದಾಸರನ್ನು ನೋಡಿ,

---

* ಗೋಪಾಲದಾಸರು, ಅಂದು ಮಾನವಿಯಲ್ಲಿ ಆಚಾರ್ಯರು ಮಾಡಿದ ವಿಜಯ ದಾಸರ ನಿಂದೆಯನ್ನು ಕೇಳಿ, ಗುರುನಿಂದೆಯನ್ನು ಕೇಳಿದ ಕ್ಕಾಗಿ ಉಪವಾಸ ಮಾಡಿದರಂತೆ! ವಿಜಯದಾಸರು–'ನಾವೇ ದುಃಖಿಸದಿರುವ ವಿಷಯದಲ್ಲಿ ನೀನು ದುಃಖಿಸಲು ಕಾರಣವಿಲ್ಲ; ಎಂದಿ ದ್ದರೂ ಆಚಾರ್ಯರು ನಿನ್ನ ಬಳಿಗೇ ಬರುವರು' ಎಂದು ಹೇಳಿದರಂತೆ! ಅದರಂತೆ, ವಿಜಯ ದಾಸರು ಈಗ ಆಚಾರ್ಯರನ್ನು ಗೋಪಾಲದಾಸರ ಬಳಿಗೆ ಕಳುಹಿಸಿದರಂತೆ!

ಆಚಾರ್ಯರು 'ಈ ಊರಲ್ಲಿ ಗೋಪಾಲದಾಸರ ಮನೆಯೆಲ್ಲಿದೆ' ಎಂದು ಪ್ರಶ್ನೆ ಮಾಡಿದರು. ದಾಸರು, 'ಮನೆಯು ಊರೊಳಗಿದೆ' ಎಂದು ಉತ್ತರವಿತ್ತರು. ಆಚಾರ್ಯರು ದಾಸರ ಮನೆಗೆ ಹೋಗಿ ವಿಚಾರಿಸಲಾಗಿ, ದೇವಾಲಯದ ಬಳಿ ಗುಡಿಸುತ್ತಿದ್ದವರೇ ಗೋಪಾಲದಾಸರೆಂದು ಗೊತ್ತಾಯಿತು. 'ಅಯ್ಯೋ ನನ್ನ ಅಜ್ಞಾನವೇ?' ಎಂದುಕೊಳ್ಳುತ್ತಾ, ಆಚಾರ್ಯರು ಹಿಂದಿರುಗಿ ಬಂದು ದಾಸರ ಪಾದಗಳಿಗೆರಗಿದರು. ದಾಸರು–'ಬರಬೇಕು ಆಚಾರ್ಯರು, ತಮಗಾಗಿಯೇ ಮಾರ್ಗನಿರೀಕ್ಷಣೆ ಮಾಡುತ್ತಿದ್ದೆ' ಎಂದು ಅವರೊಡನೆ ದೇವಾಲಯ ಪ್ರವೇಶಮಾಡಿದರು. 'ತಮಗೆ ರಾಯರು ಹೀಗೆ ಹೇಳಿದರಲ್ಲವೆ? ವಿಜಯದಾಸರು ಈ ಮಾತುಗಳನ್ನು ತಿಳಿಸಿದರಲ್ಲವೆ?' ಎಂದು ಅಕ್ಷರಶಃ ಅವರವರಾಡಿದ ಮಾತುಗಳನ್ನೇ ಕೇಳಿ ಆಚಾರ್ಯರ ಕುಶಲಪ್ರಶ್ನೆ ಮಾಡಿದರು. ಆಚಾರ್ಯರು ದಾಸರ ಮಾತುಗಳನ್ನು ಕೇಳಿ, ಮುಗ್ಧರಂತೆ ಕುಳಿತುಬಿಟ್ಟರು. ಸ್ವಲ್ಪ ಹೊತ್ತಿನಮೇಲೆ–'ತಾವು ನನ್ನ ಸ್ವರೂಪ ಗುರುಗಳು. ನನ್ನ ಸಕಲ ಇಷ್ಟಾರ್ಥಗಳೂ ತಮ್ಮಿಂದ ಸಿದ್ಧಿಸಬೇಕು' ಎಂದು ಶರಣಾಗತರಾದರು.

ಅಪರೋಕ್ಷ ಜ್ಞಾನಿಗಳ ಮಹಿಮೆಯು ಇಷ್ಟೇ ಎಂದು ಸಾಮಾನ್ಯರಿಗೆ ತಿಳಿಯುವುದಿಲ್ಲ. ಆತ್ಮ ಸಾಕ್ಷಾತ್ಕಾರ ಮಾಡಿಕೊಂಡವರಿಗೆ ಜನ್ಮಬಂಧನಗಳಿಲ್ಲ. ಅಂಥವರು ಜೀವನ್ಮುಕ್ತರೆನ್ನಿಸಿಕೊಳ್ಳುತ್ತಾರೆ. ಜೀವನ್ಮುಕ್ತರು, ಸೂಕ್ಷ್ಮ ಶರೀರದಿಂದ ಯಾವ ಲೋಕಗಳಲ್ಲಿ ಬೇಕಾದರೂ ಸಂಚರಿಸಬಲ್ಲರು. ಆಲೋಚನೆ ಮಾತ್ರದಿಂದ ಎಲ್ಲರ ಮನೋಗತಗಳನ್ನೂ ತಿಳಿಯಬಲ್ಲರು. ಪ್ರಸನ್ನರಾಗಿ ಯಾರನ್ನು ಬೇಕಾದರೂ ಉದ್ಧರಿಸಬಲ್ಲರು. ಅವರಿಗೆ ಜನನ ಮರಣಗಳು ಇಚ್ಛಾಮಾತ್ರದಲ್ಲಿರುವುವು. ಪರಕಾಯ ಪ್ರವೇಶವನ್ನು ಕಲಿತವರೇ ವಿಚಿತ್ರ ಚರ್ಯೆಗಳನ್ನು ಮಾಡಿ ತೋರಿಸುವಾಗ, ಬ್ರಹ್ಮವೇತ್ತರ ವಿಚಾರವನ್ನು ಹೇಳುವುದೇನು? ಸರ್ವಸಿದ್ಧಿಪ್ರದಾಯಕನಾದ **ಗಣಾಧಿಪತಿಯೇ** ಗೋಪಾಲದಾಸರಾಗಿ ಅವತರಿಸಿದನೆಂಬ ಜ್ಞಾನಿಗಳ ಅನುಭವವಿರಲು, ಆ ಸರ್ವ ಶರಣ್ಯನ ಪ್ರಭಾವವನ್ನು ಬಣ್ಣಿಸಲು ಸಮರ್ಥರಾರು?

ದಾಸರ ಮತ್ತು ಶ್ರೀನಿವಾಸಾಚಾರ್ಯರ ಸ್ನಾನಾನ್ಹಿಕಗಳಾದುವು. ಪೂಜಾನಂತರ ದಾಸರು–'ಆಚಾರ್ಯರೇ, ನೈವೇದ್ಯ ವಿಷಯ ಹೇಗೆ?' ಎಂದರು. ಆ ಮಾತಿನಿಂದಂತೂ ಆಚಾರ್ಯರು ತತ್ತರಿಸಿಹೋದರು. 'ಸ್ವಾಮಿ, ಇನ್ನು ನನ್ನನ್ನು ತಾವು ಪರೀಕ್ಷಿಸಬಾರದು. ಒಮ್ಮೆ ನೈವೇದ್ಯ ಕಲಾಪಕ್ಕೆ ಬಿದ್ದು ನನ್ನ ಗತಿ ಹೀಗಾಯಿತು. ಮತ್ತದೇ ಮಾತೆತ್ತಿದರೆ ನನ್ನ ಪರಿಣಾಮವೇನಾದೀತು? ವಿದ್ಯಾ ಮದದಿಂದ ಮಾಡಿದ ಕಾರ್ಯಕ್ಕೆ ಫಲಾನುಭವವಾಯಿತು. ತಾವು ನನ್ನಲ್ಲಿ ಪರಮಾನುಗ್ರಹ ಮಾಡಬೇಕು. ನನ್ನ ಸಾಹಸದ ಮಾತನ್ನು ಕ್ಷಮಿಸಬೇಕು' ಎಂದು ಮೊರೆಯಿಟ್ಟರು.

ದಾಸರು ನೈವೇದ್ಯ ವೈಶ್ವದೇವ ಬಲಿಹರಣಗಳನ್ನು ಮುಗಿಸಿ, ಭಕ್ಷ್ಯರಿಯನ್ನಭಿಮಂತ್ರಿಸಿ ಆಚಾರ್ಯರಿಗೆ ಕೊಟ್ಟರು. ಆಚಾರ್ಯರ ಉದರವ್ಯಾಧಿಗೆ ಹರಿಪಾದೋದಕವು

ಔಷಧವಾಗಿ, ಭಕ್ಕರಿಯು ಪಥ್ಯವಾಗಿ, ಅಂದಿನಿಂದಲೇ ಹೊಟ್ಟೆಶೂಲೆ ಬರುವುದು ನಿಂತು ಹೋಯಿತು. ದಿನದಿನಕ್ಕೆ ಆರೋಗ್ಯ ಹೆಚ್ಚುತ್ತ ಬಂತು.

ಗೋಪಾಲದಾಸರು ಪ್ರತಿ ವರ್ಷವೂ ತಿರುಪತಿಗೆ ಬ್ರಹ್ಮೋತ್ಸವಕ್ಕೆ ಹೋಗುತ್ತಿದ್ದು ದುಂಟಷ್ಟೆ! ದಾಸರನ್ನು ಹಿಂಬಾಲಿಸಿ ನೂರಾರು ಜನರು ಪ್ರಯಾಣ ಮಾಡುತ್ತಿದ್ದರು. ದಾಸರ ಯಾತ್ರೆಯು ಗಂಟುಮೂಟೆಗಳನ್ನು ಕುದುರೆಗಳಮೇಲೂ ಎತ್ತುಗಳಮೇಲೂ ಹೇರಿ ಕೊಂಡು ಪಾದಚಾರಿಗಳಾಗಿ ನಡೆಯುವ ಯಾತ್ರೆಯಾಗಿತ್ತು. ಯಾತ್ರಿಕನು ವಾಹನ ವೇರಲು ದಾಸರ ಅನುಮತಿಯಿರಲಿಲ್ಲ. ಮಾರ್ಗಕ್ರಮಣಮಾಡುವಾಗ ಎಲ್ಲರೂ ಭಜನೆ ಮಾಡಿಕೊಂಡು, ಮಧ್ಯಾಹ್ನ ಕಾಲಕ್ಕೆ ಒಂದು ಗ್ರಾಮವನ್ನಾಗಲೀ ಪಟ್ಟಣವನ್ನಾಗಲೀ ಸೇರಬೇಕಾಗಿತ್ತು. ಯಾತ್ರೆಗೆ ಹೊರಟ ದಿನದಿಂದ, ತಿರುಗಿ ಬಂದು ದೇವರ ಸಮಾರಾಧನೆ ಮಾಡುವವರೆಗೆ ಸ್ತ್ರೀಯಾಗಲೀ, ಪುರುಷನಾಗಲೀ ಏಕಭುಕ್ತವಲ್ಲಿದ್ದು, ಬ್ರಹ್ಮಚರ್ಯ ವ್ರತಪಾಲನೆ ಮಾಡಬೇಕಾಗಿತ್ತು. ಇಷ್ಟು ನಿಯಮ ಪಾಲಿಸುವ ದಾರ್ಢ್ಯವಿದ್ದವರು ದಾಸರನ್ನು ಹಿಂಬಾಲಿಸುತ್ತಿದ್ದರು.

ಗುರುಗಳಾದ ಗೋಪಾಲದಾಸರು ಯಾತ್ರೆಗೆ ಸಿದ್ಧರಾದುದನ್ನು ನೋಡಿ, ಶ್ರೀನಿವಾಸಾಚಾರ್ಯರು ದೇಹದಾರ್ಢ್ಯವಿರದಿದ್ದರೂ ತಾವೂ ಜೊತೆಯಲ್ಲಿ ಹೊರಟರು. ಗೋಪಾಲದಾಸರು, ಆಚಾರ್ಯರು-ದೇಹಾಶಕ್ತತೆಯ ಕಾರಣಕ್ಕಾಗಿ ಕುದುರೆಯಮೇಲೆ ಕುಳಿತು ಪ್ರಯಾಣ ಮಾಡುಬಹುದೆಂದರು. ಆದರೂ, ಎಲ್ಲರಂತೆಯೇ ಆಚಾರ್ಯರೂ ಪಾದಚಾರಿಗಳಾಗಿಯೇ ನಡೆದರು. ಎಲ್ಲರೊಂದಿಗೆ ವೇಂಕಟಗಿರಿಯನ್ನು ಹತ್ತಿ, ಮೇಲೆ ಸ್ವಾಮಿ ಪುಷ್ಕರಣಿಯಲ್ಲಿ ಮಿಂದು, ಸ್ವಾಮಿ ವೇಂಕಟಪತಿಯ ದರ್ಶನಮಾಡಿದರು. ದಾಸರ ಆಜ್ಞೆಯನ್ನು ಪಡೆದು ತಮ್ಮ ಬಿಡಾರದಲ್ಲಿ ಶಯನ ಮಾಡಿದರು.

ಬಹುಕಾಲ ವ್ಯಾಧಿಯನ್ನನುಭವಿಸಿದುದರಿಂದ ಪ್ರಾಪ್ತವಾಗಿದ್ದ ದೌರ್ಬಲ್ಯದ ಜೊತೆಗೆ ಏಕಭುಕ್ತದಿಂದ ಮಾರ್ಗಕ್ರಮಣ ಮಾಡಿದುದೂ, ಪ್ರಯಾಸಪಟ್ಟು ಪರ್ವತಾ ರೋಹಣ ಮಾಡಿದುದೂ ಸೇರಿ ಆಚಾರ್ಯರಿಗೆ ಬಹು ಆಯಾಸವಾಯಿತು ತಕ್ಕ ಆರೈಕೆಯೂ ಇಲ್ಲದುದರಿಂದ ಬಲು ಸಂಕಟವುಂಟಾಗಿ ಊರ್ಧ್ವಶ್ವಾಸಕ್ಕಿಟ್ಟಿತು. ಒಂದೆರಡು ನಿಮಿಷಗಳಲ್ಲಿ ಹೃದಯವ್ಯಾಪಾರವು ನಿಂತುಹೋಯಿತು.

ಗೋಪಾಲದಾಸರು ಸ್ವಾಮಿಯ ಉತ್ಸವದ ಜೊತೆಯಲ್ಲಿ ಭಜನೆಮಾಡು ತ್ತಿದ್ದವರು, ಇದ್ದಕ್ಕಿದ್ದಹಾಗೆ ತಮ್ಮ ಬಿಡಾರಕ್ಕೆ ಬಂದು, ಆಚಾರ್ಯರು ಮೃತರಾಗಿದ್ದು ದನ್ನು ಕಂಡು ದುಃಖಿತರಾದರು. 'ಆಚಾರ್ಯರೇ, ನಿಮ್ಮ ಮರಣಕ್ಕೆ ನಾನೇ ಕಾರಣ ನಾದೆನೇ!' ಎಂದುಕೊಂಡರು.

ಅಷ್ಟರಲ್ಲಿ ವಿಜಯದಾಸರು, ಸೂಕ್ಷ್ಮ ಶರೀರದಿಂದ ಬಂದು, ದಾಸರನ್ನು ಕುರಿತು 'ಭಾಗಣ್ಣ, ನಿನ್ನ ಆಯುಸ್ಸಿನಲ್ಲಿ ಆಚಾರ್ಯನಿಗೆ ನಾಲ್ವತ್ತು ವರ್ಷಗಳನ್ನು ಧಾರೆಯೆರೆದು ಬದುಕಿಸು' ಎಂದು ಆಜ್ಞೆಗೈದರು.

ತಮ್ಮ ಗುರುಗಳ ಆಜ್ಞೆಯನ್ನು ಶಿರಸಾ ಮಾನ್ಯಮಾಡಿ, ಗೋಪಾಲದಾಸರು, ಆಗ ಅಪಮೃತ್ಯು ಪರಿಹಾರಕನೂ, ಆಯುರ್ದಾತನೂ ಆದ ಧನ್ವಂತರೀ ರೂಪಿ ಶ್ರೀನಿವಾಸನನ್ನು ಹೀಗೆಂದು ಪ್ರಾರ್ಥನೆ ಮಾಡಿದರು.

ಕಲ್ಯಾಣಿ—ಝಂಪೆತಾಳ

ಎನ್ನ ಬಿನ್ನಪ ಕೇಳೊ । ಧನ್ವಂತ್ರಿ ದಯಮಾಡೊ
ಸಣ್ಣವನು ಇವ ಕೇಪಲ ಪ.
ಬನ್ನಬಡಿಸುವ ರೋಗ । ವನ್ನು ಮೋಚನಮಾಡಿ
ಚನ್ನಾಗಿ ಪಾಲಿಸುವುದೋ ಕರುಣಿ ಅ.
ಆರೋಗ್ಯ ಆಯುಸ್ಸು ಐಶ್ವರ್ಯವೆಂಬ ಈ
ಮೂರು ವಿಧ ವಸ್ತುಂಗಳು
ನಾರಾಯಣನ ಭಜಕರಾದವರ ಸಾಧನಕೆ
ಪೂರಣಾವಾಗಿಪ್ಪವೋ ।
ಘೋರ ವ್ಯಭಿಚಾರ ಪರನಿಂದೆ ಪರವಿತ್ತಾಪ
ಹಾರಮಾಡಿದ ದೋಷದಿ ।
ದರಿದ್ರರಾಗುವರು ಮೂರು ವಿಧದಿಂದಲೇ
ಕಾರಣನು ನೀನೆ ದುಷ್ಕರ್ಮ ಪರಿಹರಿಸೋ ೧
ವಸುಮತಿಯಮೇಲಿನ್ನು ಅಸುರಜನರೇ ಬಹಳ
ವಶವಲ್ಲ ಕಲಿಯ ಬಾಧೆ ।
ಬಿಸಿಲಿಂದ ಪೀಡತವಾದ ಸಸಿಗಳಂತೆ ।
ಶಿಶುಗಳು ನಾವಿಪ್ಪೆವೋ ।
ಅಸುರಾರಿ ನಿನ್ನ ಕರುಣಾಮೃತದ ಮಳೆಗರೆದು
ಕುಶಲದಲಿ ಪಾಲಿಸುವುದು ।
ಕೆಸರಿಂದ ಕೆಸರು ತೊಳೆದಂತೆ ಕರ್ಮದ ಪಥವು
ಅಸುನಾಥ ಹರಿಯೆ ಸಲಹೋ-ಸ್ವಾಮಿ ೨
ಅನ್ಯರನು ಭಜಿಸದಲೆ ನಿನ್ನನೇ ಸ್ಮರಿಸುತ್ತ ।
ನಿನ್ನ ಚಿನ್ಹೆಗಳನ್ನೆ ಧರಿಸಿ ।
ನಿನ್ನ ನಾಮೋಚ್ಚರಿಸಿ ನಿನ್ನವರವನೆನಿಸಿ ।
ನಿನ್ನಿಂದ ಉಪಜೀವಿಸಿ ।
ಅನ್ನ ಆರೋಗ್ಯ ಅಲ್ಪವು ಆಗೆ ಅನ್ಯರಿಗೆ
ಇನ್ನು ಅಲ್ಪರಿಯಬೇಕೆ ? ।
ನಿನ್ನ ಸಂಕಲ್ಪ ಭಕುತರನು ಪೋಷಿಪೆನೆಂದು ।
ಘನ್ನ ಬಿರುದನ್ನು ಉಳುಹೋ ಸ್ವಾಮಿ

ಆಧಿವ್ಯಾಧಿಗಳು ಉನ್ಮಾದ ವಿಭ್ರಮ ನಾನಾ |
ಬಾಧೆಗೌಷಧವು ನೀನೆ |
ಈ ದಾವ ನಿನ್ನ ಕರಕಮಲದಿಂ ಸುಧೆಗರೆದು |
ಸಾಧುಗಳ ಪಾಲಿಸುವೆ ನೀ |
ಮೋದಬಡಿಸುವೆ ನಿನ್ನ ಸಾಧಿಸುವವರಿಗೆ ಶು |
ಭೋದಯಂಗಳೆ ನೀಡಿ |
ಆದರಿಸಿ ಅವಗೆ ತವ ಪಾದ ಧ್ಯಾನವನಿತ್ತು
ಸಾಧುಗಾಳೊಳಗಿರಿಸಿ ಮೋದ ಕೊಡು ಸರ್ವದಾ ೪

ನಿನ್ನವರಲಿ ಇವಗೆ ಇನ್ನು ರತಿಯನೆ ಕೊಡೋ |
ನಿನ್ನವನೆಂದು ಅರಿದು |
ನಿನ್ನ ಪ್ರಾರ್ಥಿಸಿದೆ ನಾನನ್ಯರಿಗೆ ಅಲ್ಪರಿಯೆ |
ಎನ್ನ ಪಾಲಿಸುವ ಧೊರೆಯೇ |
ಎನ್ನ ಮಾತಲ್ಲ ಇದು ಎನ್ನ ಹಿರಿಯರ ಮಾತು |
ಮನ್ನಿಸಬೇಕು ಕರುಣಿ |
ಅನ್ನಂತ ಗುಣಪೂರ್ಣ ಗೋಪಾಲವಿಠ್ಠಲ |
ಇನ್ನಿದನೆ ಪಾಲಿಸುವುದೋ (ಕರುಣಿ) ಪ್ರಭುವೇ ೫

ಹೀಗೆಂದು ಸ್ತೋತ್ರಮಾಡಿ, ಗೋಪಾಲದಾಸರು, ಶಾ. ಶ. ೧೬೯೧ನೆಯ ವಿರೋಧಿ ಸಂವತ್ಸರದ ಭಾದ್ರಪದ ಶುದ್ಧ ನವಮಿಯ ದಿವಸ ತಮ್ಮ ಆಯುಸ್ಸಿನಲ್ಲಿ ನಲವತ್ತು ವರ್ಷಗಳನ್ನು ಶ್ರೀನಿವಾಸಾಚಾರ್ಯರಿಗೆ ಧಾರೆಯೆರೆದರು.

ಒಡನೆ ಆಚಾರ್ಯರು ನಿದ್ರೆಯಿಂದೇಳುವವರಂತೆ ಎದ್ದು ಚೇತರಿಸಿಕೊಂಡು ಕುಳಿತರು. ಸುತ್ತಲೂ ಜನರೇಕೆ ನೆರೆದಿರುವರೆಂದು ನೋಡಿದರು. ಪಕ್ಕದಲ್ಲಿ ಕುಳಿತಿದ್ದ ಗೋಪಾಲದಾಸರನ್ನು ಕಂಡು ಲಜ್ಜಿತರಾಗಿ ದೂರ ಸರಿದರು. ದಾಸರು ಆಚಾರ್ಯರ ತಲೆಯಮೇಲೆ ಕೈಯಾಡಿಸುತ್ತಾ, ಪರಮಾತ್ಮನನ್ನು ಸ್ಮರಿಸಿ ಆನಂದಪುಳಕಿತರಾದರು.

ದಾಸರ ಬಿಡಾರದಲ್ಲಿ ಯಾರೋ ಸತ್ತರೆಂಬ ವರ್ತಮಾನ ಹಬ್ಬಿದ್ದುದು ತಪ್ಪಿ-ಸತ್ತಿಲ್ಲ ಬದುಕಿವ್ಹಾರೆಂಬ ವಾರ್ತೆ ಬೀದಿಯ ತುಂಬ ಹರಡಿತು. ಕೇಳಿದವರಿಗೆ ಉತ್ತರ ಕೊಡುವುದು ಕಠಿಣವಾಗಿ ಒಳಗಿದ್ದವರು ಹೊರಗೇ ಬಂದುಬಿಟ್ಟರು.

ಆಚಾರ್ಯರಿಗೆ ಜನರಾಡಿಕೊಳ್ಳುತ್ತಿದ್ದ ಒಂದೊಂದು ಮಾತೂ ವಿಪರೀತವಾಗಿ ತೋರಿತು. ಜನರಾಡುವಂತೆ ನಾನು ಮೃತನಾಗಿದ್ದೆನೆ? ಮೃತನಾಗಿದ್ದರೆ ಬದುಕಿದುದು ಹೇಗೆ? ಮಲಗಿದ್ದಾಗ ಮರಣ ಸಂಕಟವಾದದ್ದು ನಿಜ. ಮತ್ತೇನಾಯಿತೋ ತಿಳಿಯ ಲಿಲ್ಲ. ಭಾಗಣ್ಣದಾಸರಿಂದ ನನ್ನ ಸ್ವರೂಪೋದ್ಧಾರವಾಗುವುದೆಂದು ವಿಜಯದಾಸರು ಹೇಳಿದ್ದರು. ಅವರಿಂದ ನನ್ನ ಪರಿಣಾಮಶೂಲೆಯು ಪರಿಹಾರವಾಯಿತು. ಮಹನೀಯ

ರಿಂದಾಗದ ಕಾರ್ಯಗಳಾವುವು? ಬ್ರಹ್ಮಣ್ಯತೀರ್ಥರು ರಾಮಾಚಾರ್ಯನನ್ನು ಬದುಕಿಸಿದರು. ವೃದ್ಧ ದಂಪತಿಗಳಿಗೆ ಸಂತಾನವಾಗಲೆಂದು ಅನುಗ್ರಹಿಸಿದರು. ಅಂಥವರ ಉದರದಲ್ಲುದಿಸಿದ ಚಂದ್ರಿಕಾಚಾರ್ಯರು ಕರ್ಣಾಟಕ ಸಾಮ್ರಾಜ್ಯಕ್ಕೆ ದೇವತಾಸ್ವರೂಪರೆನಿಸಿದರು. ಈಗ ಭಾಗಣ್ಣದಾಸರೇ ನನ್ನನ್ನು ಬದುಕಿಸಿರಬೇಕು. ಈ ಮಾತು ಎಂದಿಗೂ ಸುಳ್ಳಾಗಿರಲಿಕ್ಕಿಲ್ಲ. ಆದರೂ ಅವರನ್ನೇ ಒಮ್ಮೆ ಕೇಳಿಬಿಡುವೆನು ಎಂದುಕೊಂಡರು.

ಆಚಾರ್ಯರು :—(ದಾಸರ ಪಾದದಮೇಲೆ ತಲೆಯಿಟ್ಟು) ಗುರುಗಳೇ ಇಷ್ಟೆಲ್ಲಾ ಜನರ ಗದ್ದಲವೇಕಾಯಿತು ?

ದಾಸರು :—ನಿನಗಾಗಿ ಆಯಿತು.

ಆಚಾರ್ಯರು :—ನಾನು ಮಾಡಿದುದೇನು ?

ದಾಸರು :—ಏನಿಲ್ಲ, ಮೃತನಾಗಿದ್ದುದು !

ಆಚಾರ್ಯರು :—ಮೃತನಾಗಿದ್ದರೆ ಬದುಕಿಸಿದವರಾರು ?

ದಾಸರು :—ವಿಜಯದಾಸರು.

ಹತ್ತಿರದಲ್ಲಿದ್ದ ಗೋಪಾಲದಾಸರು ತಮ್ಮ ಗುರುಗೋಪಾಲದಾಸರು–'ಆಚಾರ್ಯರೆ, ನಿಮ್ಮಲ್ಲಿ ವಿಜಯರಾಯರು ಪರಮಾನುಗ್ರಹ ಮಾಡಿದ್ದಾರೆ. ಅಣ್ಣಂದಿರ ಆಯುಸ್ಸಿನಲ್ಲಿ ನಾಲ್ವತ್ತು ವರ್ಷಗಳನ್ನು ನಿಮಗೆ ಧಾರೆಯೆರೆಸಿದ್ದಾರೆ. ವಿಜಯರಾಯರ ಆಜ್ಞೆಯಿಂದ ಅಣ್ಣಂದಿರು ನಿಮ್ಮನ್ನು ಬದುಕಿಸಿದ್ದಾರೆ. ಇನ್ನುಮೇಲೆ ಭಾಗವತಾಪಚಾರಕ್ಕೆ ಹೋಗಬೇಡಿರಿ. ದೈವಾಯತ್ತವಾಗಿ ದೊರೆತ ಈ ನಾಲ್ವತ್ತು ವರ್ಷಕಾಲ ಸಾಧನೆಮಾಡಿ, ಭಗವದನುಗ್ರಹವನ್ನು ಸಂಪಾದಿಸಿರಿ' ಎಂಬುದಾಗಿ ನುಡಿದರು.

ಆಚಾರ್ಯರು–'ಮಹಾನುಭಾವರೇ ಈ ರಹಸ್ಯಗಳಲ್ಲೊಂದನ್ನೂ ಅರಿಯದ ಪಾಮರನು ನಾನು ! ನನಗೆ ಮಾರ್ಗದರ್ಶಿಗಳು ತಾವು. ಈ ಗುಪ್ತ ವಿದ್ಯೆಯ ರಹಸ್ಯಾನುಭವವನ್ನು ತಾವು ನನಗೆ ಮಾಡಿಕೊಡಬೇಕು. ನನ್ನನ್ನು ಉದ್ಧರಿಸಬೇಕು' ಎಂದು ಕಂಬನಿಗರೆದರು. ಗುರುಗೋಪಾಲದಾಸರ ಪಾದಗಳಿಗೆರಗಿದರು.

ಗುರುಗೋಪಾಲದಾಸರು–'ಆಚಾರ್ಯರೇ, ಇದೆಲ್ಲವೂ ತಪಸ್ಸಿನಿಂದ ಬರುವುದಲ್ಲ, ವಿದ್ಯದಿಂದ ಪ್ರಾಪ್ತವಾಗುವುದಲ್ಲ, ಸನ್ಯಾಸಿಯಾದರೆ ತಿಳಿಯುವುದಲ್ಲ, ದೇವತಾ ಉಪಾಸನೆಗಳಿಂದ ಬರುವುದಲ್ಲ. ಇದಕ್ಕೆ **ದೊಡ್ಡವರ ಕಾರುಣ್ಯವಾಗಬೇಕು, ದೊಡ್ಡವರ ಪಾದಧೂಳಿಯಲ್ಲಿ ಅಭಿಷಿಕ್ತರಾಗಬೇಕು, ದೊಡ್ಡವರೇ ಒಲಿದು ಮಾರ್ಗ ತೋರಿಸಬೇಕು.** ಇಷ್ಟರಲ್ಲೇ ನಿಮಗೆ ಎಲ್ಲವೂ ಲಭಿಸುವುದು. ಚಿಂತಿಸಬೇಡಿರಿ' ಎಂದು ಅವರ ಸಂಶಯ ಪರಿಹಾರಮಾಡಿದರು.

ಆಗ ಆಚಾರ್ಯರಿಗೆ ತಮ್ಮ ಸ್ಥಾನಮಾನ್ಯವೆಂದು ಗೊತ್ತಾಯಿತು. ತಮ್ಮ ಪಾಂಡಿತ್ಯದ ಬೆಲೆಯು ತಿಳಿಯಿತು. ಶಬ್ದ ಪಾಂಡಿತ್ಯವು ನಿಜವಾದ ಪಾಂಡಿತ್ಯವಲ್ಲವೆಂಬ ಅನುಭವವಾಯಿತು. ನಿಜವಾಗಿ ಅವರುಗಳ ಸ್ಥಾನಮಾನದಿಂದ ತಾನು ಪಾಮರನೆಂದೇ ತಿಳಿದರು.

ಅಧೋಧಃ ಪಶ್ಯತಃ ಕಸ್ಯ । ಮಹಿಮಾನೋಪಚೀಯತೇ ॥
ಉಪರ್ಯುಪರಿ ಪಶ್ಯಂತಃ । ಸರ್ವ ಏವ ದರಿದ್ರತಿ ॥

ತಾ॥ ತನ್ನಿಂದ ಕೆಳಗಿರುವವರನ್ನು ನೋಡಿದರೆ ಯಾರಿಗೆ ತಾನೇ ತಾನು ದೊಡ್ಡವನೆಂದು ಗೊತ್ತಾಗುವುದಿಲ್ಲ? ಆದರೆ ಮೇಲೆಮೇಲೆ ನೋಡುತ್ತಾ ಹೋದರೆ, ಯಾರು ದರಿದ್ರರೆನಿಸುವುದಿಲ್ಲ!

ಲೋಕದಲ್ಲಿ ಪಾಂಡಿತ್ಯಕ್ಕಾಗಿ ಪಂಡಿತರಾಗುವವರನೇಕರು. ಅನುಭವಕ್ಕಾಗಿ ಪಂಡಿತರಾಗುವವರು ಕೆಲವರು. ಪಾಂಡಿತ್ಯಕ್ಕಾಗಿ ಪಂಡಿತರಾದವರು ಅನುಭವಿಗಳನ್ನು ಜರಿಯುವರು. ವಾಗಾಡಂಬರದಿಂದ ತಮ್ಮ ಪ್ರಪಂಚವನ್ನು ಸಾಗಿಸುವರು. ತೋರಿಕೆಗೆ ತಮ್ಮ ಕರ್ಮ ಶ್ರದ್ಧೆಯನ್ನು ಮಂಡಿಸುವರು. ಲೋಕ ವಶೀಕರಣಕ್ಕೆ ಸಹಸ್ರಾವಧಿ ಶಾಸ್ತ್ರ ಪಙ್ಕ್ತಿಗಳನ್ನು ಉದಹರಿಸುವರು. ಒಂದು ಪಙ್ಕ್ತಿಯ ಅನುಭವವನ್ನು ತಾವು ಮಾಡಿ ಕೊಂಡಿರುವುದಿಲ್ಲ. ಇಂಥವರಿಗೆ ಲೋಕಮನ್ನಣೆ ಬಹಳವಾಗುವುದು. ಜನರು ಪಂಡಿತರು ದೊಡ್ಡವರೆನ್ನುವರು, ಕರ್ಮಠರೆನ್ನುವರು, ಅವರಿಗೆ ನಮಸ್ಕಾರ ಮಾಡುವರು, ದಾನ ದಕ್ಷಿಣೆಗಳನ್ನು ಕೊಡುವರು, ಇದರಿಂದ ಅವರು ತಮ್ಮನ್ನು ತಾವೇ ಮರೆಯುವುದು, ತಮ್ಮನ್ನು ತಾವೇ ದೊಡ್ಡವರೆಂದು ತಿಳಿದುಕೊಳ್ಳುವರು. ದೊಡ್ಡಸ್ತಿಕೆಯ ರಕ್ಷಣೆಗೆ ಮುದುರಿ ಮುರಿದು ಕೂಡುವರು, ಇದೇ ಜೀವಿತದ ಸರ್ವಸ್ವವೆಂದು ಹಿಗ್ಗಿ ಕೆಟ್ಟುಹೋಗುವರು.

ಅನುಭವವಿಲ್ಲದ ವಿದ್ಯೆಯು ಧಾನ್ಯ ತುಂಬಿದ ಚೀಲದಂತೆ! ಅನುಭವವಿಲ್ಲದ ವಿದ್ಯೆಯು ಮೇಣದ ತಟ್ಟೆಯ ಹಾವಿನಂತೆ! ಅನುಭವವಿಲ್ಲದ ವಿದ್ಯೆಯು ಪಂಚಾಂಗದಲ್ಲಿ ಬರೆದಿರುವ ಮಳೆಯಂತೆ! ಅನುಭವವಿಲ್ಲದ ವಿದ್ಯೆಯು ಕಾಗದದಲ್ಲಿ ಬರೆದ ಕಾನೂನಿನಂತೆ!

ಪಂಡಿತರೇ ಅನುಭವಿಗಳಾಗಿರುವುದು ಪ್ರಪಂಚದಲ್ಲಿ ಕಂಡುಬಂದಿಲ್ಲ. ಅನುಭವಿಗಳೆಲ್ಲರೂ ಪಂಡಿತರಾಗಿರುವುದೂ ಪ್ರಪಂಚದಲ್ಲಿ ಕಂಡುಬಂದಿಲ್ಲ. ಪಾಂಡಿತ್ಯವೆಂಬುವುದು ಸೈನಿಕನು ಕಲಿತ ಕವಾತಿನಂತೆ! ರಣಾಂಕದಲ್ಲಿ ನಿಂತಾಗ ಮಾತ್ರ ಕವಾತು ಮಾಡುವೆನೆಂದರೆ ಅವನ ತಲೆ ಉಳಿಯುವುದಿಲ್ಲ. ಅಲ್ಲಿ ಬೇಕಾದುದು ಅನುಭವ.

ಶ್ರೀನಿವಾಸಾಚಾರ್ಯರಿಗೆ ವಿಚಾರಮಾಡುತ್ತ ಕುಳಿತಹಾಗೆಲ್ಲ ದಿಗ್ಭ್ರಮೆಯಾಯಿತು. ದೇಹಾಯಾಸದಿಂದ ಮತ್ತೆ ಶಯನಮಾಡಿದರು. ಗೋಪಾಲದಾಸರು ಆಚಾರ್ಯರಿಗೇನಾದರೂ ಆಹಾರವನ್ನು ತಂದುಕೊಡಲಿಕ್ಕೆಂದು ದೇವಾಲಯಕ್ಕೆ ಹೊರಟರು.

ಅಷ್ಟರಲ್ಲಿ ದಯಾಮಯನೂ ಭಕ್ತಬಂಧುವೂ ಆದ ಶ್ರೀನಿವಾಸನು ಗೋಪಾಲದಾಸರ ರೂಪದಿಂದ ದಧ್ಯೋದನವನ್ನೂ ಮುದ್ಗಾನ್ನವನ್ನೂ (ಪೊಂಗಲು) ಒಂದು ಗಿಂಡಿಯತುಂಬ ಪರಿಮಳೋದಕವನ್ನೂ ತೆಗೆದುಕೊಂಡು ದಾಸರ ಬಿಡಾರಕ್ಕೆ ಬಂದನು. ಆಚಾರ್ಯರ ಬಳಿಯಲ್ಲಿ ಕುಳಿತು–'ಸ್ವಲ್ಪ ಸ್ವಲ್ಪವಾಗಿ ಆಹಾರವನ್ನು ತೆಗೆದುಕೋ! ಈ ತೀರ್ಥವನ್ನು ಪ್ರಾಶನಮಾಡು' ಎಂದು ಮುಂದುವರಿಸಿದನು. ಆಚಾರ್ಯರು ಮಡಿಯುಡಬೇಕೆಂದರು. ವೇಷಧಾರಿಯು

ವೇಂಕಟಾಗ್ರೇ ಶುಚಿಕ್ಷೇತ್ರೇಽ ಶುಚಿದೋಷೋನವಿದ್ಯತೆ ||
ತಸ್ಮಾದ್ವೇಂಕಟನಾಥಸ್ಯ ಭುಕ್ತ್ಯೇಷೋಗ್ರಾಹ್ಯ ಉತ್ತಮಃ ||

ಎಂಬ ವಾಕ್ಯಗಳನ್ನು ಉದಹರಿಸಿದನು.

ಗುರುವಾಕ್ಯವೆಂದು ಆಚಾರ್ಯರು ಮೆಲ್ಲಮೆಲ್ಲನೆ ಪ್ರಸಾದವನ್ನು ಸವಿಸಿದರು. ಆಹಾ, ಎಷ್ಟು ರುಚಿಯಾಗಿದೆಯೆಂದರು. ತಮ್ಮ ಜೀವಿತಚರಿತೆಯನ್ನು ಧ್ಯಾಸಿಸುತ್ತಾ, ಗಿಂಡಿಯ ತೀರ್ಥವನ್ನು ಪಾನಮಾಡಿದರು. ಈಗ ನನ್ನ ದೇಹದಲ್ಲಿ ನವಚೈತನ್ಯವಂಕುರಿಸಿ ತೆಂದರು. ಇಂಥಾ ರುಚಿಕರವಾದ ಪ್ರಸಾದವನ್ನು ಎಂದೂ ತಿನ್ನಲಿಲ್ಲ–ಇಂಥಾ ಪರಿಮಳೋದಕವನ್ನೂ ಕುಡಿಯಲಿಲ್ಲ ಎಂದುಕೊಂಡರು.

ವೇಷಧಾರಿಯು ಆಚಾರ್ಯರ ವೈದಡವಿ ಉಪಚಾರೋಕ್ತಗಳನ್ನಾಡಿದನು. ಇವತ್ತಿನಿಂದ ನಿನ್ನ ಜೀವನ ಚರಿತ್ರೆಯು ಹೊಸದಾಯಿತೆಂದನು. ಕಾರ್ಯವಿರುವುದೆಂದು ಹೊರಟು ಅದೃಶ್ಯನಾದನು.

ಗೋಪಾಲದಾಸರಿಗೆ ಮಂಟಪಳ್ಳಿಯ ಬಳಿ ನಿಂತು ಸಾಕಾಯಿತು. ಭಗವನ್ನಿವೇದಿತವಾದ ಬಿಸಿ ಬಿಸಿ ಪ್ರಸಾದವು ದೊರೆಯುವುದು ತಡವಾಯಿತು. ವಿಶೇಷಪ್ರಯತ್ನದಿಂದ ಪ್ರಸಾದವನ್ನು ಸಂಪಾದಿಸಿದರು. ಸ್ವಾಮಿ ಪುಷ್ಕರಣಿಯಲ್ಲಿ ಒಂದು ತಂಬಿಗೆಯ ತುಂಬ ನೀರನ್ನು ತುಂಬಿಕೊಂಡರು. ದುಡುದುಡನೆ ತಮ್ಮ ಮಂಟಪಕ್ಕೆ ಬಂದರು. 'ಏನು ಮಾಡಲಿ ಹೊತ್ತಾಯಿತು?' ಎಂದು ಪಶ್ಚಾತ್ತಾಪಪಟ್ಟರು. 'ಆಚಾರ್ಯ, ಈ ಪ್ರಸಾದವನ್ನು ಸ್ವಲ್ಪ ಭಕ್ಷಣೆಮಾಡಿ ನೀರು ಕುಡಿ'ಯಿರೆಂದರು.

ಆಚಾರ್ಯ :—ಮತ್ತೇಕೆ ಪ್ರಸಾದ?

ದಾಸರು :—ಅಲ್ಲವಪ್ಪಾ, ಬರೀ ಹೊಟ್ಟೆಯಲ್ಲಿರಬೇಡ. ಸ್ವಲ್ಪ ತೆಗೆದುಕೊಂಡು ನೀರು ಕುಡಿದರೆ ಶ್ರಮ ಪರಿಹಾರವಾಗುತ್ತದೆ.

ಆಚಾರ್ಯ :—ಈಗ ತಾವೇ ದಧ್ಯೋದನವನ್ನೂ ಮುದ್ಗಾನ್ನವನ್ನೂ ತಂದು ಕೊಟ್ಟಿರಿ. ನಾನು ಭಕ್ಷಿಸಿದೆ! ತಾವೇ ಕೊಟ್ಟ ಪರಿಮಳೋದಕವನ್ನು ಪಾನಮಾಡಿದೆ!

ದಾಸರು :—ನಾನೆಲ್ಲಿ ತಂದುಕೊಟ್ಟೆ? ನೀವೆಲ್ಲಿ ತಿಂದಿರಿ?

ಆಚಾರ್ಯ :—ತಾವೇ ತಂದು ಕೊಟ್ಟಿರಿ! ನಾನೇ ತಿಂದೆ!

ದಾಸರು :—ಸರಿಯಾಯಿತು; ನಾನು ಈಗಲೇ ತಂದಿದ್ದೇನೆ! ನೀವು ಆಯಾಸ ವಿಕಾರದಿಂದ ಮಾತನಾಡುವಿರೋ ಏನೋ? ಸ್ವಲ್ಪ ಸಿಧಾನಿಸಿ, ಆರುವುದಕ್ಕೆ ಮುಂಚೆ ಈ ಆಹಾರವನ್ನು ಸ್ವಲ್ಪ ತೆಗೆದುಕೊಳ್ಳಿರಿ.

ಆಚಾರ್ಯರು :—ಗುರುಗಳೇ, ಈಗ ನನಗೆ ಆಯಾಸವಿಲ್ಲ. ನವಚೈತನ್ಯವಂಕುರಿಸಿದೆ. ಬೆಟ್ಟವನ್ನಿಳಿದು ಮತ್ತೆ ಹತ್ತಿಬಂದೇನೆಂಬ ಉತ್ಸಾಹವಿದೆ. ನಾನು ಅಸತ್ಯವಾಡುವುದಿಲ್ಲ. ನನ್ನ ಕೈಯಲ್ಲಿ ಮುದ್ಗಾನ್ನದ ಪರಿಮಳವಿನ್ನೂ ಹೋಗಿಲ್ಲ. ಬೇಕಾದರೆ ನೋಡಿರೆಂದು ಕೈಚಾಚಿದರು. ದಾಸರು ಆಚಾರ್ಯರ ಕೈಯನ್ನಾಘ್ರಾಣಿಸಿ ಇದೇನು ಭಗವನ್ಮಾಯೆ

ಯೆಂದು ಚಿಂತಿಸಿದರು. ಶ್ರೀನಿವಾಸನೇ ತಮ್ಮ ರೂಪದಿಂದ ಈ ಕಾರ್ಯ ಮಾಡಿದನೆಂದು ನಿಶ್ಚಯಿಸಿದರು.–'ಆಚಾರ್ಯ ನೀನು ಧನ್ಯ ಧನ್ಯ ! ನಿನಗೆ ಪ್ರಸಾದವನ್ನು ತಂದುಕೊಟ್ಟ ವನು ಶ್ರೀನಿವಾಸನು. ನಿನಗೆ ಭಗವದ್ದರ್ಶನವಾಯಿತು. ಅದೇ ನಿನ್ನ ಉದ್ಧಾರದ ಭಗವದ್ರೂಪ. ಆ ರೂಪ ಚಿಂತನೆಯನ್ನೇ ನೀನು ಮಾಡತಕ್ಕದ್ದು ! ಬಂದವನು ನಾನಲ್ಲ; ತಂದವನು ನಾನಲ್ಲ ; ಆ ರೂಪ ನನ್ನದಲ್ಲ !' ಎಂದು ಪರವಶರಾದರು.

ಆ ದಿನ ನಡೆದ ಈ ಚರ್ಯವು ಹರಿದಾಸರ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ಮಹಾಮಹಿಮೆಯೆನಿಸಿತು. ಆ ರಾತ್ರಿ ಭಜನೆಯು ಎಂದಿಗಿಂತ ಅತಿಶಯ ವಾಗಿ ನಡೆಯಿತು. ಆ ದಿನದ ಚರಿತ್ರೆಯನ್ನು ರಸಪುಷ್ಟಿಯಾಗಿರುವಂತೆ ದಾಸರು ಕೀರ್ತನೆ ಮಾಡಿದರು. ಸಾವಿರಾರು ಮಂದಿ ಯಾತ್ರಿಕರು, ಪರಮಾತ್ಮನು ಪ್ರಕಟಿಸಿದ ಈ ವಿಚಿತ್ರ ಮಹಿಮೆಯನ್ನು ಕೇಳಿ ಪರಮಾನಂದಭರಿತರಾದರು.

ಆಚಾರ್ಯರ ಸ್ವಪ್ನ

ಆಚಾರ್ಯರ ಮನಸ್ಸಿನಲ್ಲಿ ಆ ದಿನ ನಡೆದ ವಿಚಿತ್ರ ಚರ್ಯೆಯ ಚಿತ್ರವೇ ನೆಲೆಸಿದ್ದುದರಿಂದ ಆ ರಾತ್ರೆ ಅವರಿಗೆ ಗಾಢನಿದ್ರೆ ಬರಲಿಲ್ಲ. ಜಾಗ್ರದವಸ್ಥೆಯಿಂದ ಸುಷುಪ್ತಿಗೆ ಬರುವ ಮಧ್ಯದಲ್ಲಿ ಆಚಾರ್ಯರಿಗೆ ಸ್ವಪ್ನದಲ್ಲಿ ಭಗವದ್ದರ್ಶನವಾಯಿತು. ತಮ್ಮ ಬಾಲ್ಯ ಪ್ರಭೃತಿ ಜನ್ಮಚರಿತ್ರೆಯು ಒಂದೊಂದಾಗಿ ಚಲಚ್ಚಿತ್ರ ಪಠದಂತೆ ಕಣ್ಣೆದುರಿಗೆ ನಿಂತಂತಾಯಿತು. ಹಿಂದೆ ಕಾಣಿಸಿದ ರಾಘವೇಂದ್ರಸ್ವಾಮಿಗಳ ರೂಪವು ತಮ್ಮನ್ನು ವಿಜಯದಾಸರ ಪಾದದಲ್ಲಿ ಸಮರ್ಪಿಸಿದಂತೆ ತೋರಿತು. ವಿಜಯದಾಸರು ಗೋಪಾಲ ದಾಸರ ಪಾದದಲ್ಲೂ, ಗೋಪಾಲದಾಸರು ಶ್ರೀನಿವಾಸನ ಪಾದದಲ್ಲೂ ತಮ್ಮನ್ನು ಒಪ್ಪಿಸಿದ ಚಿತ್ರವು ಕಾಣಿಸಿತು. ತಮ್ಮ ಮರಣ ಚಿತ್ರ, ವಿಜಯದಾಸರು ಗೋಪಾಲದಾಸರಿಗೆ ಆಯುರ್ದಾನಮಾಡೆಂದು ಆಜ್ಞಾಪಿಸಿದ ಚಿತ್ರ, ಗೋಪಾಲದಾಸರು – 'ಎನ್ನ ಬಿನ್ನಪ ಕೇಳು, ಧನ್ವಂತ್ರಿ ದಯಮಾಡು' ಎಂದು ಮಾಡಿದ ಚಿತ್ರ, ತಾನು ಬದುಕಿದ ಚಿತ್ರ, ದಾಸರ ರೂಪದಿಂದ ಪ್ರಸಾದವಿತ್ತ ಶ್ರೀನಿವಾಸನ ಚಿತ್ರ. ಎಲ್ಲವೂ ಒಂದರ ಹಿಂದೊಂದು ಕಂಗೊಳಿಸಿ ದುವು. ಎಲ್ಲ ಚಿತ್ರಗಳಿಗಿಂತ ಶ್ರೀನಿವಾಸನು ದಾಸರ ರೂಪದಿಂದ ಬಂದ ಬಿಂಬರೂಪದ ಚಿತ್ರವು ತೇಜಃಪುಂಜನಾಗಿ ಕಾಣಿಸಿತು. ತಾನು ಹರಿದಾಸನಾಗಿ ಶ್ರೀನಿವಾಸನ ಮುಂದೆ ಕೀರ್ತನಮಾಡುತ್ತಿದ್ದಂತೆ ನೂತನ ಚಿತ್ರವೊಂದು ಹೊಳೆಯಿತು. ಆಗ ವಿಜಯದಾಸರು.—

ಶಂಕರಾಭರಣ—ಅಟ್ಟತಾಳ

ಧ್ಯಾನವನು ಮಾಡು | ಬಿಂಬ ಮೂರುತಿಯ |
ಆನಂದ ಬಲಿ ಉಳಿತು | ಅಂತರಂಗದೊಳಗೆ | ಪ.

ಸದಾಚಾರನಾಗಿ ದ್ವಾದಶ ಗುರುಗಳಿಗೆರಗಿ
ಮುದದಿಂದ ಮೂಲ ಮಂತ್ರವನೆ ಜಪಿಸಿ |
ಹೃದಯನಿರ್ಮಲನಾಗಿ ದೇಹಸ್ಥಿತಿಯ ತಿಳಿದು
ಪದುಮಾಸನವ ಹಾಕಿ ಪರಮ ವಿಶ್ವಾಸದಲಿ– ೧

ಅಂಗ ಚಲಿಸದೆ ಚೆನ್ನಾಗಿ ದೃಢವಾಗಿ
ಕಂಗಳಮುಚ್ಚಿ ಇಂದ್ರಿಯಂಗಳ ತಿಳಿದು ।
ಮಂಗಳ ಶೋಭಿತಾಖಂಡ ಧ್ಯಾನವಂತ
ರಂಗದೊಳಗೆ ಕುಳಿತು ಎಲ್ಲವನು ಕಾಣೊ ೨
ಭಗವದ್ರೂಪಗಳೆಲ್ಲ ಒಂದೇಸಾರಿ ಸ್ಮರಿಸಿ
ಮಗುಳೆ ಆ ಪರಮಗುರುವಿನ ಮೂರುತಿ ।
ತೆಗೆದು ವಂದನೆಮಾಡಿ ಅಲ್ಲಿಂದ ಹರುಷದಲಿ
ಸ್ವಗುರು ಬಿಂಬಮೂರ್ತಿಯಲಿ ಐಕ್ಯಚಿಂತನೆಮಾಡಿ ೩
ತಿರುಗಿ ಮೆಟ್ಟಿಗೆ ಮೂರು ವೇಗದಿಂದಲಿ ನಿನ್ನ
ವರಮೂರ್ತಿಯಲ್ಲಿ ಚಿಂತನೆಯಮಾಡಿ ।
ಭರದಿಂದ ಎಲ್ಲವ ತಂದು ಹೃದಯದಲ್ಲಿ
ಸ್ಥಿರವಾಗಿ ಇಪ್ಪ ಮೂರುತಿಯನ್ನು ಕೂಡಿಸಿ ॥ ೪
ಆತನೆ ಬಿಂಬ ಮೂರ್ತಿಯೆಂದು ತಿಳಿಮುಕೋ
ಆ ತರುವಾಯ ನಾಡಿಗಳ ಗ್ರಹಿಸಿ ।
ಆ ತೈಜಸನ ಕಂಡು ವಿಶ್ವಮೂರುತಿಯಲ್ಲಿ
ಪ್ರೀತಿಯುಳ್ಳವನಾಗಿ ಪ್ರತೀಕರಿಸು ಮಗುಳೆ ॥ ೫
ಜ್ಞಾನಪ್ರಕಾಶದಲಿ ಇದ್ದ ನಿನ್ನ ಹೃದಯ
ಸ್ಥಾನದಲಿ ಅಷ್ಟದಳ ಕಮಲಮಧ್ಯ ॥
ಶ್ರೀನಿವಾಸನ ಮೂರ್ತಿ ನಿಲಿಸಿ ಬಾಹಿರದಲ್ಲಿ
ಏನೇನು ಪೂಜೆಯೋ ಸಿಲ್ಲದಲೆ ಮಾಡೊ ॥ ೬
ಗುಣ ನಾಲ್ಕರಿಂದ ಉಪಾಸನೆಯಮಾಡಿ
ಕ್ಷಣಕ್ಷಣಕೆ ಶ್ರೀಹರಿಯ ಪಾದವ ನೋಡುತ ।
ಅಣೋರಣಿ ಚೇತನ ಚೇತನಕ್ಕೆ ನಿಯಾಮಕ
ಫಣಿಶಯನನಲ್ಲದೆ ಮತ್ತೊಬ್ಬರಿಲ್ಲವೆಂದು ॥ ೭
ಮಮತೆಯನ್ನೆ ತೊರೆದು ಮೋಕ್ಷೊಂದಪೇಕ್ಷಿಸದೆ ।
ಸಮವಿಷಮ ತಿಳಿದೊಂದೆ ಭಕುತಿಯಿಂದ ॥
ಸಮಾಧಿಗೊಳಗಾಗಿ ದೃಷ್ಟಿಸರ್ವತ್ರಾನು
ಕ್ರಮದಿಂದಾನಂದಭರಿತ ಭಾವುಕನಾಗಿ ॥ ೮
ಈ ಪರಿ ಧ್ಯಾನಿಸಲು ದೇವ ಕರುಣವ ಮಾಳ್ಪ
ಪಾಪಸಂಚಿತವು ಪ್ರಾರಬ್ಧನಾಶ ॥
ಅಪರೋಕ್ಷಿತನಾಗೊ ನಿನ್ನ ಯೋಗ್ಯತೆ ಎಷ್ಟೊ
ಗೋಪಾಲ ವಿಜಯ ವಿಠಲನಲ್ಲಿ ವಾರ್ಗೈಸಿ ॥ ೯

ಎಂಬುದಾಗಿ ಉಪದೇಶಮಾಡಿದಂತೆ ಕಾಣಿಸಿತು. ಎಚ್ಚರವಾಯಿತು.

ಆಚಾರ್ಯರು ಗೋಪಾಲದಾಸರ ಪಾದಕ್ಕೆ ನಮಸ್ಕಾರಮಾಡಿದರು. ಸ್ವಪ್ನ ವಾರ್ತೆಯನ್ನು ಚಾರುಚೂರು ಬಿಡದಂತೆ ನಿವೇದನಮಾಡಿದರು.

ಗೋಪಾಲದಾಸರು ಅದೇ ಬಿಂಬೋಪಾಸನೆಯ ಮಾರ್ಗವೆಂದು* **ಚಕ್ರಾಬ್ಜಾದಿಕ ಮಂಡಲ** ವಿಚಾರವನ್ನು ಮತ್ತಷ್ಟು ವಿಸ್ತರಿಸಿದರು. ಸ್ವಪ್ನದೃಷ್ಟ ಬಿಂಬರೂಪವನ್ನೇ ನೀನು ಉಪಾಸನೆಮಾಡಬೇಕೆಂದರು. ನಿನಗೆ ಅಪರೋಕ್ಷದ ಹಾದಿ ಹತ್ತಿತೆಂದರು. ಇನ್ನು ಮೇಲೆ ಸ್ಮರಿಸಿದಾಗ ಭಗವದ್ದರ್ಶನವಾದೀತೆಂದರು. ಬಾಹ್ಯದರ್ಶನವು ಅಂತರಂಗ ದರ್ಶನದ ಸೋಪಾನವೆಂದರು.

'ಯಮೇವೈಷ ವೃಣುತೇ ತೇನಲಭ್ಯಃ'

ಎಂಬಂತೆ ಈ ಭಾಗ್ಯವು ಭಗವತ್ಪ್ರಸಾದ ರೂಪವಾಗಿ ತಾನಾಗಿ ಲಭಿಸಬೇಕೆಂದರು. ಪ್ರಯತ್ನಕ್ಕೆ ಸಿಲುಕುವುದಲ್ಲವೆಂದರು. ಎಲ್ಲರೊಡಗೂಡಿ ಸ್ವಾಮಿ ಪುಷ್ಕರಣಿಯಲ್ಲಿ ಮಿಂದರು. ಗುಡಿಗೆ ಹೋಗಿ ಶ್ರೀನಿವಾಸನ ದರ್ಶನಮಾಡಿದರು. ಆನಂದ–ಆನಂದವೆಂದು ನಲಿದಾಡಿದರು.

ವಿಜಯರಾಯರು, ಬಿಂಬೋಪಾಸನೆಯ 'ಧ್ಯಾನವನು ಮಾಡು' ಎಂಬ ದೇವರ ನಾಮವನ್ನು ಚೀಕಲಪರಿಯಲ್ಲಿ ಹಾಡಿದ ರಾತ್ರಿಯೇ ಅತ್ತ ತಿರುಪತಿಯಲ್ಲಿದ್ದ ಶ್ರೀನಿವಾಸಾಚಾರ್ಯರಿಗೆ ಆ ನಾಮದ ಉಪದೇಶವು ಸ್ವಪ್ನದಲ್ಲಾಯಿತು. **'ಗೋಪಾಲ ವಿಜಯ ವಿಠಲ'** ಎಂಬುದಾಗಿ, ವಿಜಯರಾಯರು ಯಾವ ನಾಮದಲ್ಲೂ ಅಂಕಿತ ಹಾಕಿ ಹಾಡಿಲ್ಲ. ಗುರು ಪರಮಗುರು ಎಂಬ ಮರ್ಯಾದೆಯನ್ನು ತೋರಿಸುವ ಎರಡೂ ಅಂಕಿತಗಳಿಂದ ಕೂಡಿದ ಈ ನಾಮವು ಬಲು ಅರ್ಥವತ್ತಾದದ್ದು. ಬಹು ಮಹಿಮಾಭರಿತವಾದದ್ದು. ಆಚಾರ್ಯರು ಜಗನ್ನಾಥದಾಸರಾದಮೇಲೆ ನಿತ್ಯವೂ ಸದಾಚಾರ ಸ್ಮೃತಿಯನ್ನು ಪಠಿಸಿದಂತೆ ಈ ಪದವನ್ನು ಪಠಿಸುತ್ತಿದ್ದರು. ಈ ಪದದ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡೇ ಹರಿಕಥಾಮೃತಸಾರದಲ್ಲಿ ಅವರು ಬಿಂಬೋಪಾಸನಾಕ್ರಮವನ್ನು ವ್ಯಾಖ್ಯಾನ ರೂಪವಾಗಿ ರಚಿಸಿರುತ್ತಾರೆ.

ದಾಸರ ಒಂದೊಂದು ದೇವರನಾಮವೂ ಕಾರಣವಿಲ್ಲದೆ ಹುಟ್ಟಿಲ್ಲ. ಸಾಧಾರಣ ಸ್ತೋತ್ರ ಪದಗಳಿಗೆ ಈ ನಿಯಮವಿಲ್ಲ. ದಾಸರುಗಳ ಭಾವ ಸಮಾಧಿಯಲ್ಲಿ ಸ್ವಯಂ ಸ್ಫೂರ್ತಿಯಿಂದ ರಚಿತವಾಗಿ ಹೊರಬಿದ್ದ ದಿವ್ಯ ನಾಮಗಳು ಶಾಸ್ತ್ರಾರ್ಥಗಳ ಕ್ರೋಢಪತ್ರಗಳಂತಿವೆ.

ಉತ್ತನೂರಿನಲ್ಲಿ ತಿರುಪತಿ ಯಾತ್ರೆಮಾಡಿ ಬಂದವರ ಸಮ್ಮೇಳನವಾಯಿತು. ದಾಸರನ್ನು ಹಿಂಬಾಲಿಸಿದವರು ದೇವರ ಸಮಾರಾಧನೆಯ ಪ್ರಸಾದವನ್ನು ಸ್ವೀಕರಿಸಿದಲ್ಲದೆ ಊರಿಗೆ ಪ್ರಯಾಣ ಮಾಡುತ್ತಿರಲಿಲ್ಲ. ದಾಸರು ಊರಿಗೆ ಬಂದ ಸಮಾಚಾರ ತಿಳಿದು ಐಜೀಸ್ವಾಮಿ (ವ್ಯಾಸ ತತ್ವಜ್ಞರು) ಗಳೂ ಉತ್ತನೂರಿಗೆ ಬಂದರು.

---

*ಇದೊಂದು ಶ್ರೀ ಚಕ್ರದಂತಿರುವ ಬೀಜಾಕ್ಷರಗಳಿಂದ ಕೂಡಿದ ಉಪಾಸನಚಕ್ರ. ಬ್ರಹ್ಮಾಂಡ ತತ್ವಗಳು ಇದರಲ್ಲಿ ಅಡಕವಾಗಿರುತ್ತವೆ.

ವ್ಯಾಸ ತತ್ವಜ್ಞರು :—ನೋಡಿದಿರಾ ದಾಸರೆ, ಶ್ರೀನಿವಾಸಾಚಾರ್ಯರು ಕೆಟ್ಟ ಕೇಡ !

ಗೋಪಾಲದಾಸರು :—ಕೆಡುವ ಕಾಲ ಬಂದರೆ ಅವರೇನು ಮಾಡುವರು ?

ಶ್ರೀನಿವಾಸಾಚಾರ್ಯರು :—ಸ್ವಾಮಿಗಳವರೇ ಹೀಗಂದರೆ ನಾನೇನು ಮಾಡಬೇಕು? ತಪ್ಪುಗಳನ್ನು ಒಪ್ಪಿಕೊಳ್ಳಬೇಕು.

ವ್ಯಾಸ ತತ್ವಜ್ಞರು :—ಆಚಾರ್ಯರೇ, ವಿನೋದದ ಮಾತಿಗೆ ಖಿನ್ನರಾಗಬೇಡಿರಿ. ನಿಮ್ಮನ್ನು ನೋಡಿ ನಮಗೆ ಪರಮಾನಂದವಾಗಿದೆ.

ಶ್ರೀನಿವಾಸಾಚಾರ್ಯರು :—ಆನಂದಪಟ್ಟರೆ ಸಾಲದು ಸ್ವಾಮಿ, ಅನುಗ್ರಹ ಮಾಡಬೇಕು.

ಗೋಪಾಲದಾಸರು :—ಅವರಾಡುವುದೆಲ್ಲಾ ಅನುಗ್ರಹದ ಮಾತುಗಳೇ ?

ಗದ್ವಾಲ ಸಂಸ್ಥಾನದ ರಾಜಾರಾಮ ಭೂಪಾಲನು, ವ್ಯಾಸ ತತ್ವಜ್ಞರ ಮತ್ತು ಗೋಪಾಲದಾಸರ ಅಚ್ಚಿನ್ನ ಭಕ್ತನಾಗಿದ್ದನು. ದಾಸರು ತಿರುಪತಿ ಯಾತ್ರೆಮಾಡಿ, ಬಂದ ಸಮಾಚಾರ ತಿಳಿದು, ಆತನು ಮಹಾಪ್ರಸಾದಾಭಿಲಾಷೆಯಿಂದ ಉತ್ತನೂರಿಗೆ ಬಂದನು. ದಾಸರು ಮಾಡುವ ಸಮಾರಾಧನೆಯೆಂದರೆ ಮಹಾರಾಜನು ಮಾಡಿಸುವ ಸಮಾರಾಧನೆಯಾಗಿತ್ತು. ಆ ಸಮಯದಲ್ಲಿ ರಾಜನು ಬ್ರಾಹ್ಮಣರಿಗೆ ಮಾತ್ರವಲ್ಲದೆ ಸಕಲರಿಗೂ ಅನ್ನದಾನ ಮಾಡುತ್ತಿದ್ದನು. ಮಹಾರಾಜನ ಜೊತೆಯಲ್ಲಿ ಅವನ ರಾಣಿಯರೂ, ರಾಜಬಂಧುಗಳೂ ತಪ್ಪದೆ ಬರುತ್ತಿದ್ದರು.

ತಿರುಪತಿಯ ಸಮಾರಾಧನೆಯಾಯಿತು. ಮಹಾರಾಜನಿಂದ ಅಧಿಷ್ಠಿತವಾದ ಸಭೆಯಲ್ಲಿ ಗೋಪಾಲದಾಸರು ಕೀರ್ತನಾರಂಭಮಾಡಿದರು. ದಾಸರ ಮೂವರು ತಮ್ಮಂದಿರೂ ತಾಳದಮ್ಮಡಿಗಳನ್ನು ಬಾರಿಸುತ್ತಾ ಆಲಾಪನೆ ಮಾಡಿದರು. ವ್ಯಾಸ ತತ್ವಜ್ಞರಾದಿಯಾಗಿ ಸಾವಿರಾರು ಜನರು ಕೀರ್ತನ ಶ್ರವಣ ಮಾಡಿದರು. ಅಂದು ಶ್ರೀನಿವಾಸಾಚಾರ್ಯರಿಗೆ ತಾವೂ ಹರಿದಾಸರಾಗಿ ಕೀರ್ತನ ಮಾಡಬೇಕೆಂಬ ಅಭಿಲಾಷೆ ಉದಯಿಸಿತು. ದಾಸರು ಶಾಸ್ತ್ರಗಳಿಗೆ ಅಪಾರ್ಥ ಮಾಡುವರಲ್ಲವೆಂದು ಮನಸ್ಸಿಗೆ ಒಪ್ಪಿತವಾಯಿತು. ಆಗ ಮರ್ಯಾದೆಯ ಆಚಾರ್ಯರಪಟ್ಟ ಬೇಡವಾಯಿತು. ಕಥಾನಂತರ, ಗೋಪಾಲದಾಸರು ಶಯನ ಮಾಡುವ ಸಮಯದಲ್ಲಿ–'ಸ್ವಾಮಿ ನಾನೂ ಹರಿದಾಸನಾಗಬೇಕು. ನಾಮ ಸಂಕೀರ್ತನ ಮಾಡಬೇಕು. ಭಕ್ತಿಪರವಶನಾಗಿ ನರ್ತನ ಮಾಡಬೇಕು ಎಂಬ ಅಪೇಕ್ಷೆಯುದಯಿಸಿದೆ. ಈ ಭಾಗ್ಯವನ್ನು ತಾವು ಕರುಣಿಸಬೇಕು" ಎಂದು ಪ್ರಾರ್ಥನೆಮಾಡಿದನು.

ದಾಸರು :—'ನೀವು ಇದುವರೆಗೇ ದಾಸರಾಗಲಿಲ್ಲವೆ? ನಮ್ಮ ಮತವೇ ಹರಿದಾಸ ಮತ. ಶ್ರೀಹರಿಯೊಬ್ಬನು ಈಶ. ರಮಾಬ್ರಹ್ಮಾದಿ ನಿರೀಲಿಕ ಪರ್ಯಂತ ಎಲ್ಲರೂ ದಾಸರೇ ! ಹೊಸದಾಗಿ ದಾಸತ್ವ ವಹಿಸಬೇಕಾದುದೇನಿದೆ? ನಾವು ನಿಮಗೆ ಕರುಣಿಸಬೇಕಾದ ಭಾಗ್ಯವಿನ್ನೇನುಳಿದಿದೆ? ನಿಮಗೆ ಕೊಡಬೇಕಾದುದನ್ನೆಲ್ಲ ವಿಜಯರಾಯರು

ಕೊಡಿಸಿದರು. ಹೇಳಬೇಕಾದುದನ್ನು ಪ್ರಮಾಣಮಾಡಿದಂತೆ ಶ್ರೀನಿವಾಸನ ಸನ್ನಿಧಿಯಲ್ಲಿ ಹೇಳಿದರು. ಇನ್ನೂ ನಿಮಗಿರುವ ಸಂಶಯವೇನು ಹೇಳಿರಿ–ಎಂದರು.

ಶ್ರೀನಿವಾಸಾಚಾರ್ಯರು :—ಮತ್ತೇನಿಲ್ಲ. ದಾಸಕೂಟಕ್ಕೆ ಸೇರಬೇಕು, ಅಂಕಿತ ಪ್ರದಾನವಾಗಬೇಕು ಅಷ್ಟೆ !

ದಾಸರು :—ಇನ್ನೂ ನಿಮಗೆ ದಾಸಕೂಟದ ನಚ್ಚಿದೆಯೆಂದು ಕಾಣುತ್ತದೆ. ಎಲ್ಲರೂ ದಾಸಕೂಟದವರೇ ! ಈಶಕೂಟದಲ್ಲಿ ಯಾರೂ ಇಲ್ಲ. ಅಂಕಿತದ ಶಿಷ್ಟಾಚಾರ ವನ್ನು ಕೇಳುವಿರಾದರೆ–ಅದು ಪಾಂಡುರಂಗನದು ! ಆಗಲಿ ನೋಡೋಣ—ಎಂದು ಸಿದ್ರಿತ ರಾದರು.

ಆಚಾರ್ಯರು ವಿಶ್ರಾಂತಿಗಾಗಿ ವೇಂಕಟರಮಣನ ಗುಡಿಗೆ ತೆರಳಿದರು. 'ಎಲ್ಲವೂ ಆಯಿತು. ಇನ್ನು ಅಂಕಿತವೊಂದಾದರೆ ನಾನೂ ದಾಸನಾಗಿಬಿಡುತ್ತೇನೆ. ಗುರುಗಳ ಚಿತ್ತಕ್ಕೆ ಬರಬೇಕು. ಶ್ರೀಹರಿಯೇ ಅವರಿಗೆ ಪ್ರೇರಿಸಬೇಕು' ಎಂದು ಭಗವನ್ನಾಮಸ್ಮರಣೆ ಮಾಡುತ್ತಾ ಶಯನಮಾಡಿದರು.

ಮಾರನೆಯ ಪ್ರಾತಃಕಾಲ ರಾಜಾ ರಾಮಭೂಪಾಲನು ಸ್ವಾಮಿಗಳ ಮತ್ತು ದಾಸರ ಆಶೀರ್ವಾದ ಪಡೆದು ಗದ್ವಾಲಿಗೆ ತೆರಳಿದನು. ದಾಸರು ಆಚಾರ್ಯರನ್ನು ಸಂಬೋಧಿಸಿ–'ನಿಮಗೆ ಪಂಢರಪುರದಲ್ಲಿ ಅಂಕಿತ ದೊರೆಯುತ್ತದೆ. ಭೀಮರಥಿಯಲ್ಲಿ ಮುಳುಗಿದ ಕೂಡಲೇ ಕೈ ತಡವಿದರೆ ನಿಮಗೊಂದು ಶಿಲೆಯು ದೊರೆಯುತ್ತದೆ. ಅದರಲ್ಲಿ ನಿಮ್ಮ ಅಂಕಿತವಿರುತ್ತದೆ. ಆ ದಿನವೇ ನಿಮಗೆ ಬಿಂಬಾಪರೋಕ್ಷವಾಗುತ್ತದೆ. ಅಂದಿನಿಂದ ನೀವು ಹರಿದಾಸರಾಗುತ್ತೀರಿ' ಎಂದು ನುಡಿದರು.

ಆಚಾರ್ಯರಿಗೆ ಮಿತಿಮೀರಿದ ಸಂತೋಷವಾಯಿತು. 'ಯಾತ್ರೆ ಮಾಡುವವರು ಉಪವಾಸ ಹೊರಡಬೇಕಷ್ಟೆ ! ಈಗಲೇ ಪ್ರಯಾಣಮಾಡಲು ನನಗಪ್ಪಣೆಯಿರುವುದಷ್ಟೆ !' ಎಂಬುದಾಗಿ ಗುರುಗಳನ್ನು ಕೇಳಿದರು. ಗುರುಗಳು 'ಶುಭಮಸ್ತು' ಎಂದರು. ಸ್ವಾಮಿ ಗಳೂ ದಾಸರೂ ಆಚಾರ್ಯರನ್ನು ಗ್ರಾಮಗಡಿಯ ತನಕ ಕಳುಹಿಸಿ ಬಂದರು.

ಆಚಾರ್ಯರಿಗೆ ಆ ಪ್ರಯಾಣವಲ್ಲಿ ಯಾವ ವೇಗದಿಂದ ನಡೆದೆನೆಂಬುದು ಗೊತ್ತಾಗಲಿಲ್ಲ. ಮಿಂದೆನೋ ಉಂಡೆನೋ ಉಟ್ಟೆನೋ ಒಂದೂ ತಿಳಿಯಲಿಲ್ಲ. ಎಂದಿಗೆ ಪಂಢರಪುರಿಗೆ ಹೋದೇನು ? ಎಂದು ಭೀಮರಥಿಯಲ್ಲಿ ಮಿಂದೇನು ? ಎಂದು ಅಂಕಿತ ಶಿಲೆ ದೊರೆತೀತು ? ಇನ್ನೆಂದು ಆ ಪಾಂಡುರಂಗನ ದರ್ಶನವಾದೀತು ? ಈ ವಿಚಾರಗಳೇ ಆ ಕಾಲದಲ್ಲೆಲ್ಲ ಅವರ ಬುದ್ಧಿಕೋಶವನ್ನಾವರಿಸಿತ್ತು. ಒಂದು ಗಾವುದಹಲ್ಲಿ ಆ ಕ್ಷೇತ್ರವಿನು ವಾಗಲೇ ಹೆಜ್ಜೆ ನಮಸ್ಕಾರ ಹಾಕುತ್ತಾ ಹೊರಟರು.

ಮಧ್ಯಮಾವತಿ—ಆದಿತಾಳ

ಎಂದು ಕಾಂಬೆನು ಪಾಂಡುರಂಗ ಮೂರುತಿಯು ।
ಇಂದುಭಾಗ ನಿವಾಸ ನರನ ಸಾರಥಿಯ ಪ.

ಅರುಣಾಬ್ಜೋಪಮ ಚಾರುಚರಣಾಂಗುಲಿ ನಖರ ।
ತರುಣೇಂದುಚ್ಛವಿ ತಿರಸ್ಕರಿಸುವ ಪ್ರಕರ ॥
ಕಿರುಗೆಜ್ಜೆ ಖಡೆಯನೂಪುರ ಪೆಂಡೆ ಶಫರ ।
ತೆರಜಂಘೆಜಾನು ಭಾಸ್ವರ ರತ್ನಮುಕುರ ॥ ೧

ರಂಭಾ ಪೋಲುವ ಊರ್ಧ್ವಪೊಂಬಣ್ಣಾಂಬರವ ।
ಕುಂಭೀಮಸ್ತಕಮೋಲ್ ಸಿತಂಬಾದಿ ಪೊಳೆವ ॥
ಕಂಬುಮೇಖಳ ಕಂಜ ಗಂಭೀರನಾಭಿ ।
ಅಂಬುಧಿಶಾಯಿ ವಿಧಿ ಶಂಭುಪೂಜಿತನ ॥ ೨

ಲವ ಕುಕ್ಷಿತ್ರಿವಳ ಭಾರ್ಗವಿ ವತ್ಸ ಉದ್ಯ ।
ದ್ರವಿ ಪೋಲುವ ಕೌಂಸ್ತುಭ ನವ ವೈಜಯಂತಿ ॥
ಸುವಿಶಾಲಹೃದಯಮೋಳ್ ವಿವಿಧ ಹಾರಗಳ ।
ನವನೀತ ಚೋರ ಶ್ರೀ ಪವಮಾನಾರ್ಚಿತನ ॥ ೩

ಪದಕ ಸರಿಗೆಯು ಜಾಂಬೂನದ ಕಂಬುಕಂಠ ।
ರದನಿಶರತೆರಬಾಹು ಚದುರ ಭುಜಕೀರ್ತಿ ॥
ಬದರಸಂಕಾಶ ಅಂಗದ ರತ್ನ ಕಟಕ ।
ಪದುಮನಾಭನ ಕರವ ಮಧ್ಯದಲಿ ಇಟ್ಟವನ ॥ ೪

ವಿಧು ಬಿಂಬೋಪಮ ಚೆಲ್ವವದನ ಕೆಂದುಟಿಯು ।
ಬಿದುರಾಭರದನ ಇಂಗದಿರೋಲ್ಕಿರುನಗೆಯ ॥
ಕದಪು ಕನ್ನಡಿ ನಾಸಾತುದಿ ಚಂಪಕ ನನೆಯು ।
ಉಪಕೇಶಾಯತನೇತ್ರ ಯುಮಮಂಬೋಗ್ರವನ ॥ ೫

ಕಲಿತ ಕುಂಡಲಕರ್ಣ ಸುಲತಾಭ್ರೂಯುಗಳ ।
ಲಲಿತ ಬಾಲಶಶಾಂಕ ತಿಲಕಾಂಕಿತ ಫಾಲ ॥
ಅಳಿಜಾಲವೆಸಿಪ ಕುಂತಳ ರತ್ನಖಚಿತ ।
ಕಲಧೌತ ಮುಕುಟ ದಿಗ್ವಲಯ ಬೆಳಗುವನು ॥ ೬

ಎಂಬುದಾಗಿ [illegible] ಬಂದರು. ವಿಠಲನ ಭಜನೆ ಮಾಡುತ್ತಿರುವ [illegible] ಮಾಡಿದರು. ಅಕ್ರೂರನು ಗೋಕುಲ [illegible] ನಮಸ್ಕಾರ, ಗೋವುಗಳಿಗೆ ನಮಸ್ಕಾರ, ವತ್ಸಗಳಿಗೆ ನಮಸ್ಕಾರ, ಗೋಪಾಲಕರಿಗೆ ನಮಸ್ಕಾರ, ಗೋಪೀಜನರಿಗೆ ನಮಸ್ಕಾರ, ಸಭಾಮಂಟಪ

ರಿಗೆ ನಮಸ್ಕಾರ, ಶ್ರೀಕೃಷ್ಣನಿಗೆ ನಮಸ್ಕಾರ' ಎಂದಂತೆ, ಆಚಾರ್ಯರು ಶ್ರೀಕ್ಷೇತ್ರಕ್ಕೆ ನಮಸ್ಕಾರ, ಕ್ಷೇತ್ರವಾಸೀ ಪಶುಪಕ್ಷಿಗಳಿಗೆ ನಮಸ್ಕಾರ, ಸಗೋತ್ರರಿಗೆ ನಮಸ್ಕಾರ, ಪುಂಡರೀಕಮುನಿಗೆ ನಮಸ್ಕಾರ, ಭೀಮರಥಿಗೆ ನಮಸ್ಕಾರ, ಶ್ರೀ ರುಕ್ಮಿಣೀಶನಿಗೆ ನಮಸ್ಕಾರವೆನ್ನುತ್ತಾ, ಚಂದ್ರಭಾಗೆಯಲ್ಲಿ ಮುಳುಗಿದರು. ಬಲದ ಕಣ್ಣು ಬಲದ ಭುಜಗಳು ಪ್ರಸ್ಫುರಿಸಿದಂತಾಗಲು ಶುಭಸೂಚನೆಯಾಯಿತೆಂದು ತಮ್ಮ ಬಲಭಾಗದಲ್ಲಿ ಕೈಯಾಡಿಸಿ ನೋಡಿದರು. ಚಚ್ಚೌಕನಾದ ಶಿಲೆಯೊಂದು ಕರಗತವಾಯಿತು.

ಅದನ್ನು ಮೇಲಕ್ಕೆ ತೆಗೆದು ನೋಡಿದರು. ಆ ದಿವ್ಯ ಶಿಲೆಯಲ್ಲಿ ಬಾಲಬೋಧ ಲಿಪಿಯಲ್ಲಿ '**ಜಗನ್ನಾಥವಿಠಲ**' ಎಂದು ಬರೆದಿತ್ತು. ಗುರುಗಳಾಜ್ಞೆಯಾಗಿದ್ದಂತೆ ಅದೇ ತಮ್ಮ ಅಂಕಿತವೆಂದು ತಿಳಿದರು. ಆನಂದಭರಿತರಾಗಿ, ಆ ಶಿಲೆಯನ್ನು ತಲೆಯಮೇಲಿಟ್ಟುಕೊಂಡು, ಆವರೆಗೆ ಹಾಡುತ್ತ ಬಂದ ಪದವನ್ನು ಮುಂದುವರಿಸಿ—

ಶಠಕೂರ್ಮರೂಪಿಯ ಕಿಟಿ ಮಾನವ ಹರಿಯ |
ವಟು ಭಾರ್ಗವ ಕಾಕುತ್ಸ್ಥ ಶಠಕಂಸದ್ವಿಷನ ||
ನಿಟಿಲಾಂಬಕ ಸಹಾಯ್ಯ ಖಳಕಟಕಾರಿ ಭೀಮಾ |
ತಟವಾಸ **ಜಗನ್ನಾಥವಿಠಲ** ಮೂರುತಿಯ || ೭

ಎಂಬ ನುಡಿಯಿಂದ ಅಂಕಿತವನ್ನು ಹಾಕಿ ಪದ ಪೂರ್ಣಮಾಡಿದರು.

ಇದು ಶ್ರೀ ಜಗನ್ನಾಥದಾಸರು ಮಾಡಿದ ಮೊಟ್ಟಮೊದಲನೆಯ ಕನ್ನಡ ಪದ. ಅನಂತರ ಶ್ರೀ ವಿಷ್ಣುಸಹಸ್ರನಾಮವನ್ನು ಪಠಿಸುತ್ತಾ ಮಹಾದ್ವಾರದ ಬಳಿಯಲ್ಲಿ ಸ್ವಾಮಿಗೆ ಅನಂತ ಪ್ರಣಾಮಗಳನ್ನು ಮಾಡಿದರು. ಪುರಂದರದಾಸರ ಸ್ಥಳವೆನಿಸಿದ ದಿವ್ಯಸ್ತಂಭದ ಬಳಿಯಲ್ಲಿ ಪ್ರದಕ್ಷಿಣೆ ಮಾಡಿ ಕೈಜೋಡಿಸುತ್ತಾ ಸ್ವಾಮಿಗೆ ಅಭಿಮುಖನಾಗಿ ನಿಂತುಕೊಂಡರು. ಭಗವದ್ರೂಪಗಳನ್ನು ಪರಮಗುರುಗಳಾದ ವಿಜಯದಾಸರ ಬಿಂಬದಲ್ಲೂ, ಆ ಬಿಂಬವನ್ನು ಸ್ವಗುರುಗಳಾದ ಗೋಪಾಲದಾಸರ ಬಿಂಬದಲ್ಲೂ ಐಕ್ಯಚಿಂತನೆಮಾಡಿ, ತಮ್ಮ ಸ್ವಪ್ನದೃಷ್ಟವಾದ ದಿವ್ಯಮೂರ್ತಿಯನ್ನು ಚಿಂತಿಸಿದರು.

ಆ ಕಾಲದಲ್ಲಿ ಗುರ್ವಾಜ್ಞೆಯಾಗಿದ್ದಂತೆ ಆಚಾರ್ಯರಿಗೆ ಸ್ವಗುಣಾಚ್ಛಾದಕವಾದ ಆವರಣವು ಭೇದಿಸಿತು. ಪರಮಾಚ್ಛಾದಕ ತೆರೆಯು ತೆರೆಯಿತು.

ಭಿದ್ಯತೇ ಹೃದಯಗ್ರಂಥಿಃ । ಛಿದ್ಯಂತೇ ಸರ್ವಸಂಶಯಾಃ ॥
ಕ್ಷೀಯಂತೇ ಚಾಸ್ಯ ಕರ್ಮಾಣಿ । ತಸ್ಮಿನ್ ದೃಷ್ಟೇ ಪರಾವರೇ ॥

ಎಂಬ ಉಪನಿಷದ್ವಾಕ್ಯದಂತೆ ಸೂರ್ಯದರ್ಶನವಾದರೆ ಹೇಗೋ ಹಾಗೆ ಜೀವಾಂತರ್ಗತ ಭಗವದ್ದರ್ಶನವಾಯಿತು. ಸರ್ವ ಸಂಶಯಗಳೂ ಪರಿಹಾರವಾದುವು. ಸಂಚಿತಾಗಾಮಿ ಕರ್ಮಗಳು ಕ್ಷಯಿಸಿದುವು. ಬಿಂಬಾಪರೋಕ್ಷವಾಯಿತು. ಸಕಲ ಜಗತ್ತೂ ಕರತಲಾಮಲಕದಂತಾಯಿತು.

ಬಹಿರಂಗದಲ್ಲಾದರೋ ಕೋಟಿಸೂರ್ಯ ಪ್ರಕಾಶಮಾನನಾದ ಪಾಂಡುರಂಗನ

ಪ್ರತ್ಯಕ್ಷ ದರ್ಶನವಾಯಿತು. ಆಗ ದರ್ಶನವಾದಂತೆ ಆಚಾರ್ಯರು ಸ್ವಾಮಿಯನ್ನು ಶಿರಸ್ಸಿನಿಂದ ಪಾದಪರ್ಯಂತರ ವರ್ಣನೆಮಾಡಿದರು.

ಸೋಪಸ—ಆದಿತಾಳ

ಕಂಡೆ ಸಂಘರಾಜನ | ಶ್ರೀ ಮನಃಪ್ರಿಯನ ಪ.
ಚಂಡ ವಿಕ್ರಮ ಕರ | ದಂಡ ಮುನಿಪಗೊಲಿ |
ದಂಡಜಾಧಿಪ ಪ್ರ | ಕಾಂಡ ಸುಪೀಠನ ಅ.

ಮಣಿಮಯ ಮಕುಟ ಮಧುಪನ ವೆರ | ಪೆರೆ
ಫಣಿಯೊಳಿಟ್ಟ ಕಸ್ತುರಿ ತಿಗರ |
ವನರುಹ ಉಪಮಲೋಚನಯುಗ ಚಂಪಕನಾಸವ |
ಕುಂಡಲದ ವಿಕಾಸವ
ಕದಪಿನ ವಿಲಾಸವ
ಮೊಗದ ಮಂದಹಾಸವ || ೧

ಕುಂದ ಕೋರಕದಶನಾವಳಿಯ | ಬಿಂಬ
ದಂದದಿ ಪೊಳೆವ ಅಧರ ಕಳೆಯ | 16416
ಕಂಧರ ತ್ರಿವಳಿ ಪುರಂದರ ಇಭಕರ ಪೋಲುವ |
ಭುಜಯುಗ ವಿಶಾಲವ
ಕರತಲ ರಸಾಲವ
ನಖರ ಮಲ್ಲಿಕಾಲವ ೨

ಅತಿ ವಿಸ್ತೃತ ವಕ್ಷಸ್ಥಳವ | ಶಿರಿ
ಸತಿ ಸದನಾರ್ಕದಂದದಿ ಪೊಳೆವ ||
ರತುನ ಕೌಸ್ತುಭದೀಧಿತಿ ವಿಲಸಿತ ವೈಜಯಂತಿಯಾ |
ಉದರ ರೋಮ ಪಙ್ತಿಯಾ |
ನಾಭಿ ವಲ್ಮೀಕದಂತಿಹ |
ಕುಕ್ಷಿತ್ರಿವಳಿ ಕಾಂತಿಯ | ೩

ಮುಂಬಿಸೆಲಂತೆ ಕನಕಚೇಲ | ಸುನಿ |
ತಂಬದಿ ಪೊಳೆವ ಗೋಲಿಯ ಚೀಲ |
ಕಂಬು ಕೋಶಕನ ನಿತಂಬ ಮೇಖಳಬ ಕದಂಬವ |
ಊರು ಕದಳೀಸ್ತಂಭವ |
ಜಾನುಗಳಿಂದು ಬಿಂಬವ |
ಆಚರಿಪ ವಿಡಂಬವ || ೪

ಮಾತಂಗ ಕರದ ಜಂಘೆಗಳ । ಗುಲ್ಫ
ಜಾತಿಮಣಿಕಾಂಗುಲಿ ಸಂಘಗಳ ॥
ಜ್ಯೋತಿ ಬೆಳಗೆ ಜಗನ್ನಾಥ ವಿಠಲನಂಘ್ರಿ ಪುಷ್ಕರ ।
ಉದಿತ ಶತಭಾಸ್ಕರ ।
ಗಭಸ್ತಿ ತಿರಸ್ಕರ ।
ಸುಜನರ ಯಶಸ್ಕರ ॥ ೫

ಇದು **ಜಗನ್ನಾಥದಾಸರ.** ಎರಡನೆಯ ದೇವರನಾಮ ಅನಂತರ **'ಪಾಲಿಸು ಪಂಢರಿ ಪುರಿರೇಯಾ'** ಮತ್ತು **'ಧನ್ಯನಾದೆ'** ಎಂಬ ಎರಡು ದೇವರನಾಮಗಳನ್ನು ಮಾಡಿದರು.

ಇಂದು ಗೋಪಾಲದಾಸರ ಅನುಗ್ರಹದಿಂದ ಶ್ರೀನಿವಾಸಾಚಾರ್ಯರು ಅಪರೋಕ್ಷ ಜ್ಞಾನಿಗಳೆನಿಸಿ ಲೋಕವಿಖ್ಯಾತ **ಜಗನ್ನಾಥದಾಸ**ರಾದರು. ಮುದ್ರಿಕೆಯ ಹೆಸರು ರೂಢಿಗೆ ಬಂದಬಂದಂತೆ ಶ್ರೀನಿವಾಸಾಚಾರ್ಯರೆಂಬ ಹೆಸರು ಕಾಲಕ್ರಮದಲ್ಲಿ ಮರೆತುಹೋಯಿತು.

ದಾಸರು ಪಂಢರಪುರದಲ್ಲಿರುವವರೆಗೆ ನಿತ್ಯವೂ ಪಾಂಡುರಂಗನಮೇಲೆ ಹಾಡಿದ ದೇವರನಾಮಗಳು ಬಲು ಅರ್ಥವತ್ತಾಗಿವೆ. ಅವರ ಅನುಭವದ ಮಾತುಗಳಿಂದ ಭರಿತ ವಾಗಿವೆ.

ವಿಠಲನು ದಾಸರಿಗೆ ಮಾಡಿದ ಔತಣ

ಜಗನ್ನಾಥದಾಸರು ಅಪರೋಕ್ಷ ಜ್ಞಾನಿಗಳಾದರೇನು ? ಮಹಾ ಪಂಡಿತೋತ್ತ ಮರೆನ್ನಿಸಿದರೇನು ? ಜೊತೆಯಲ್ಲಿ ಸೇವೆಮಾಡಲು ಒಬ್ಬ ಶಿಷ್ಯನಿಲ್ಲ. ಹೊತ್ತು ಹೊತ್ತಿಗೆ ಅನ್ನೋದಕಗಳಿಲ್ಲ. ನೀನಾರೆಂದು ವಿಚಾರಿಸುವ ಜನರಿಲ್ಲ. ವಾಸಮಾಡಲು ಅನುಕೂಲ ವಾದ ಒಂದು ಸ್ಥಳವಿಲ್ಲ. ಮಲಗಲು ಹಾಸಿಗೆಯಿಲ್ಲ. ಬೆಳಿಗ್ಗೆ ಎದ್ದು ಭೀಮರಥಿಯಲ್ಲಿ ಸ್ನಾನಮಾಡುವುದು, ಪಾಂಡುರಂಗನ ದರ್ಶನಮಾಡುವುದು, ಭಜನಾನಂದದಲ್ಲಿ ಪರವಶರಾಗಿ ರುವುದು, ಅಪರಾಹ್ನದಲ್ಲಿ ಅನುಕೂಲವಾದರೆ ತಮ್ಮ ಕೈಯಿಂದ ತಾವೇ ಒಂದಿಷ್ಟು ಅಡಿಗೆ ಮಾಡಿಕೊಳ್ಳುವುದು, ಸ್ಥಳ ದೊರೆತಲ್ಲಿ ಶಯನಮಾಡುವುದು, ಇಂತಹ ದರಿದ್ರದಶೆಯನ್ನ ನುಭವಿಸುತ್ತಿದ್ದರು. ಮಾನವಿಯಲ್ಲಿ ಪ್ರವಚನಾಚಾರ್ಯರಾಗಿದ್ದಾಗ ಇದ್ದ ಮೇನೆ ಪಲ್ಲಕ್ಕಿಗಳನ್ನಾಗಲೀ, ಶಿಷ್ಯ ಸೇವಕ ಪರಿವಾರವನ್ನಾಗಲೀ ಪಂಢರಪುರದಲ್ಲಿ ಬಯಸಲು ಶಕ್ಯವಿರಲಿಲ್ಲ.

ಹೀಗಿರಲು ದಾಸರು ಶ್ರೀ ಕ್ಷೇತ್ರದಲ್ಲಿ ವಾಸಮಾಡಬೇಕೆಂದಿದ್ದ ಹನ್ನೆರಡು ದಿವಸ ಗಳ ಅವಧಿಯು ಮುಗಿಯಿತು. ಊರಿಗೆ ಪ್ರಯಾಣ ಮಾಡಬೇಕೆಂದು ನಿಶ್ಚಯಮಾಡಿ ಕೊಂಡರು.

ಆ ದಿನ ಪಾಂಡುರಂಗನು ಒಂದು ವಿಚಿತ್ರ ಚರ್ಯೆಮಾಡಿ ತೋರಿಸಿದನು. ದಾಸರು ಎಂದಿನಂತೆ ಪ್ರಾತಃಕಾಲ ದೇವಾಲಯಕ್ಕೆ ಬಂದರು. ಗರ್ಭಾಂಕಣವನ್ನು

ಹೊಕ್ಕು ರುಕ್ಮಿಣೀಪತಿಯ ದರ್ಶನಮಾಡಿದರು. ನಾನಾ ಕೀರ್ತನೆ ಮಾಡುತ್ತಾ ಪ್ರಾಕಾರದಲ್ಲಿ ಪ್ರದಕ್ಷಿಣೆಗಾರಂಭಿಸಿದರು. ಆ ಸಂದರ್ಭದಲ್ಲಿ ಕಪಟನಾಟಕ ಸೂತ್ರಧಾರಿಯು ಯಾತ್ರಿಕ ಬ್ರಾಹ್ಮಣವೇಷ ಧರಿಸಿ–'ದಾಸರೆ, ಈದಿನ ತಾವು ನಮ್ಮಲ್ಲಿ ಭೋಜನಕ್ಕೆ ಬರಬೇಕು' ಎಂದು ಆಮಂತ್ರಿಸಿದನು. ದಾಸರು–'ನೀವು ಯಾರು? ಇರುವುದೆಲ್ಲಿ? ನಮ್ಮನ್ನು ಕರೆಯುವ ಕಾರಣವೇನು?' ಎಂದು ಪ್ರಶ್ನೆಮಾಡಿದರು. ಗೃಹಸ್ಥನು–'ನಾನೊಬ್ಬ ಯಾತ್ರಿಕನು. ನಮ್ಮೂರು ವೈಕುಂಠಪುರದ ಅಗ್ರಹಾರ, ಇಳಿದಿರುವುದು ರುಕ್ಮಿಣಿಯ ದೇವಾಲಯ, ಸತ್ಪಾತ್ರರೆಂದು ತಮ್ಮನ್ನು ಕರೆದೆನು' ಎಂದನು. ದಾಸರು ಆ ವ್ಯಕ್ತಿಯ ತೇಜಸ್ಸನ್ನು ನೋಡಿ, ತಿರಸ್ಕರಿಸಲು ಮನಸ್ಸು ಬರದೆ ಆಗಬಹುದೆಂದರು. ಎಷ್ಟುಹೊತ್ತಿಗೆ ಬರಬೇಕೆಂದು ಕೇಳಿದರು. ಆ ವ್ಯಕ್ತಿಯು, 'ಮಧ್ಯಾಹ್ನ ಸರಿಯಾಗಿ ಒಂದು ಘಂಟೆಗೆ ಮತ್ತೆ ಕರೆಸಿಕೊಳ್ಳದೆ ಬಂದರಾಯಿತು' ಎಂದನು. ದಾಸರು, ಅನಾಯಾಸವಾಗಿ ಪ್ರಯಾಣ ಕಾಲಕ್ಕೆ ಮಂಗಳಭೋಜನ ದೊರೆಯಿತೆಂದು ಸಂತುಷ್ಟರಾದರು. ವ್ಯಕ್ತಿಯು–'ತಮಗೆ ಸ್ತ್ರೀ ಪಾಕನೇಮವೇನಾದರುಂಟೆ?' ಎಂದನು. ದಾಸರು–'ತಮ್ಮಂಥವರಲ್ಲಿ ಯಾವ ನೇಮವೂ ಇಲ್ಲ'ವೆಂದುಬಿಟ್ಟರು. 'ಹಾಗಿದ್ದರೆ ತಮ್ಮ ಭಜನೆ ನಡೆಯಲಿ'ಎಂದು ವ್ಯಕ್ತಿಯು ಮಾಯವಾದನು.

ಮಧ್ಯಾಹ್ನ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಒಂದು ಘಂಟೆಗೆ ಸರಿಯಾಗಿ ತಂಬಿಗೆ ಥಾಲಿಗಳನ್ನು ಹಿಡಿದುಕೊಂಡು ದಾಸರು ರುಕ್ಮಿಣೀ ಅಮ್ಮನವರ ಗುಡಿಗೆ ಬಂದರು. ಹತ್ತೆಂಟು ಜನರು ಸಾಲಾಗಿ ಪಙ್ತಿಯಲ್ಲಿ ಕುಳಿತಿರುವುದನ್ನು ಕಂಡರು. ಯಜಮಾನನು ದಾಸರಿಗಾಗಿ ಮೀಸಲಿಟ್ಟಿದ್ದ ಸ್ಥಳದಲ್ಲಿ ಅವರನ್ನು ಕುಳ್ಳಿರಿಸಿದನು. ಮುತ್ತೈದೆಯರು ಒಬ್ಬರ ಹಿಂದೊಬ್ಬರು ಸಿಸ್ತಾಗಿ ಬಡಿಸುತ್ತ ಬಂದರು. ಊಟಮಾಡುವವರ ಸಂಖ್ಯೆಗಿಂತ ಬಡಿಸುವವರ ಸಂಖ್ಯೆಯೇ ಹೆಚ್ಚಾಗಿದ್ದಂತೆ ಕಾಣಿಸಿತು. ಇಂತಹ ಸುಂದರ ಸ್ತ್ರೀಯರೆಲ್ಲಿಂದ ಬಂದರೆಂದು ದಾಸರಿಗೆ ವಿಸ್ಮಯವಾಯಿತು. ಕ್ಷುತ್ತು ಬಹಳವಾಗಿದ್ದುದರಿಂದ ಬುದ್ಧಿಗೆ ಹೆಚ್ಚು ಕ್ಲೇಶಕೊಡದೆ, ಯಾರಾದರಾಗಲಿ, ಹೇಗಾದರಿರಲಿ, ಹೇಗೂ ಶಿಷ್ಟರು. ಊಟವಾದರಾಯಿತೆಂದು ತಟಸ್ಥರಾದರು. ಬಡಿಸಿದ ಪದಾರ್ಥಗಳು ಅಗಣಿತವಾಗಿದ್ದುವು. ಯಜಮಾನನು ಆಪೋಶನಹಾಕಿ ಕೃಷ್ಣಾರ್ಪಣವೆಂದನು. ದಾಸರಿಗೆ ಉಪಚಾರೋಕ್ತಿಗಳ ಸುರಿಮಳೆಯಾಯಿತು. ಪದಾರ್ಥಗಳ ರುಚಿ ಮಾಧುರ್ಯಗಳು ಅಲೌಕಿಕವಾಗಿದ್ದುವು. ದಾಸರು ಇಂಥಾ ಊಟವನ್ನು ಉಂಡು ಕಾಣೆನೆಂದು ಯಜಮಾನನ ಧರ್ಮಶ್ರದ್ಧೆಯನ್ನು ಕೊಂಡಾಡಿದರು. ಭೋಜನವಾಯಿತು, ಎಲ್ಲರೂ ಉತ್ತರಾಪೋಶನ ತೆಗೆದುಕೊಂಡರು. ದಾಸರ ದೃಷ್ಟಿಗೆ ಯಾರು ಎಲ್ಲಿ ಹೋದರೆಂಬುದು ತಿಳಿಯಲಿಲ್ಲ. ಕುಳಿತಿದ್ದ ಜಾಗದಲ್ಲಿ ಉತ್ತರ ಕ್ಷಣದಲ್ಲಿ ಎಲೆಗಳಿರಲಿಲ್ಲ, ಮುತ್ತೈದೆಯರ ಸುಳಿವಿಲ್ಲ, ಯಜಮಾನನು ಮೊದಲೇ ಇಲ್ಲ. ದಾಸರು ಅತ್ಯಂತ ವಿಸ್ಮಯಗೊಂಡು, ಇದೇನು ಇಂದ್ರಜಾಲವಾಯಿತೆಂದು ಮಹಾದ್ವಾರದ ಬಳಿಗೆ ಬಂದರು. ಅಲ್ಲಿ ಯಜಮಾನನು ಕಾಣಿಸಿಕೊಂಡು–'ದಾಸರೆ, ನಮ್ಮೂರಿನಲ್ಲಿ ನಿಮಗೆ ಬಹಳ ಶ್ರಮವಾಯಿತು. ತಮ್ಮ ಯೋಗಕ್ಷೇಮವನ್ನು ವಿಚಾರಿಸದ ನನ್ನ

ತಪ್ಪನ್ನು ಕ್ಷಮಿಸಬೇಕು. ಪ್ರಸಾದವನ್ನು ಸ್ವೀಕರಿಸಬೇಕು' ಎಂದು ನುಡಿದು, ಸುರಗಿ ಹೂವಿನಮಾಲೆ, ಬುಕ್ಕಿಟ್ಟು, ಫೇಡೆಯ ಉಂಡಿಗಳನ್ನು ಕಟ್ಟಿದ ಗಂಟನ್ನು ದಾಸರ ಕೈಯಲ್ಲಿಟ್ಟು ಅದೃಶ್ಯನಾದನು. ದಾಸರು ಇದು ಏನೋ ವಿಚಿತ್ರವಾಯಿತಾಗಿದೆಯೆಂದು ಮಹಾದ್ವಾರದ ಬಳಿ ಕುಳಿತು, ತಮ್ಮಲ್ಲಿ ತಾವೇ, ಬಲುಹೊತ್ತು ತರ್ಕಿಸಿದರು. ರುಕ್ಮಿಣೀಪತಿಯ ಲೀಲೆಯಲ್ಲದೆ ಮತ್ತೆ ಬೇರೆಯಿಲ್ಲವೆಂದು ನಿರ್ಧರಿಸಿದರು. ಪ್ರಯಾಣಕಾಲದಲ್ಲಿ ಪರಮಾತ್ಮನೇ ಮಹಾಪ್ರಸಾದವಿತ್ತನೆಂದು ಆನಂದಭರಿತರಾದರು. ಭಾವ ಸಮಾಧಿಯಲ್ಲಿ ಲೀನರಾಗಿ ಆನಂದಬಾಷ್ಪಗಳಿಂದ ಶ್ರೀಹರಿಯ ಕಾರುಣ್ಯವನ್ನು ಕೊಂಡಾಡಿದರು–'ದೇವ, ಪುರಂದರದಾಸರೊಡನೆ ವಿಚಿತ್ರಲೀಲಾವಿಭೂತಿಗಳನ್ನು ತೋರುತ್ತಾ ವಿನೋದವಾಡಿದ ಕಥೆಗಳನ್ನು ಕೇಳಿದ್ದೆನು. ಗೋಪಾಲದಾಸರಿಗೆ ನಿನ್ನ ಕ್ಷೇತ್ರಕ್ಕೆ ಬರಬೇಕೆಂದು, ಸವಾರನಾಗಿ ಓಡಾಡಿಸಿ 'ಆಲೇನಾಹಿ' ಎಂದು ಅದೃಶ್ಯನಾದ ಮಹಿಮೆಯನ್ನು ಕೇಳಿದ್ದೆನು. ಗೋಪಾಲದಾಸರು — 'ನೀಲಕುದುರೆಯನೇರಿ' ಎಂಬ ಸುಳಾದಿಯನ್ನು ಹಾಡಿದ ಕಾರಣವನ್ನು ಕೇಳಿದ್ದೆನು. ಇಂದು ಪಾಮರನಾದ ನನಗೆ ವೃಷ್ಟಾನ್ನ ಉಣಿಸಿ ಪ್ರಸಾದವಿತ್ತು ಪಾವನನಮಾಡಿದ ಚರ್ಯವನ್ನು ಪ್ರತ್ಯಕ್ಷ ಕಂಡೆನು, ನೀನು ಭಕ್ತಾನುಕಂಪಿಯಹುದು, ನೀನು ಪತಿತಪಾವನನಹುದು, ನೀನು ದಾಸರ ದಾಸನಹುದು ಎಂಬುದಾಗಿ ಅನಂತ ಪ್ರಣಾಮಗಳನ್ನು ಮಾಡಿದರು. ಮಹಾಪ್ರಸಾದವನ್ನು ತಲೆಯಮೇಲಿಟ್ಟುಕೊಂಡು ನಡೆದರು.

ದಾಸರು ನಿಧಾನವಾಗಿ ಮಾರ್ಗಕ್ರಮಣಮಾಡಿದರು. ಮಳಖೇಡೆಯಲ್ಲಿ ಶ್ರೀ ಜಯತೀರ್ಥರ ದರ್ಶನಮಾಡಿದರು. ಮಂತ್ರಾಲಯದಲ್ಲಿ ರಾಯರ ದರ್ಶನಮಾಡಿ, ತಮ್ಮ ವೃತ್ತಾಂತವನ್ನು ನಿವೇದನಮಾಡಿದರು. ವೇಣೀಸೋಮಪುರಕ್ಕೆ ಬರುವ ಹೊತ್ತಿಗೆ ಗೋಪಾಲದಾಸರು ವ್ಯಾಸತತ್ವಜ್ಞರೊಡನೆ ಜಗನ್ನಾಥದಾಸರ ನಿಮಿತ್ತವಾಗಿ ಕಾದಿರುವರೋ ಎಂಬಂತೆ ಅಲ್ಲೇ ದರ್ಶನಕೊಟ್ಟರು. ಉಭಯಗುರುಗಳನ್ನೂ ಕಂಡು ಜಗನ್ನಾಥದಾಸರು, ಸಾಷ್ಟಾಂಗ ನಮಸ್ಕಾರಮಾಡಿದರು. ವ್ಯಾಸತತ್ವಜ್ಞರು–'ನೀವೇನಪ್ಪಾ, ಪಾಂಡುರಂಗನಿಂದ ಔತಣಮಾಡಿಸಿಕೊಂಡು ಬಂದ ಧನ್ಯಾತ್ಮರು' ಎಂದರು. ಗೋಪಾಲದಾಸರು– 'ನೀವು ಜಗನ್ನಾಥದಾಸರಾಗಿ ವೈಕುಂಠೇಶಾದಶಿಗೆ ತಿಂಗಳಾಯಿತಷ್ಟೆ,!' ಎಂದರು. ಕೇಳುವುದೇನು! ಮೂವರೂ ಬ್ರಹ್ಮಜ್ಞಾನಿಗಳು, ಅವರ ಸಂಭಾಷಣೆಗಳೆಂಥವೋ! ಅವರ ಅನುಭವಗಳೆಂಥವೋ! ಅವರಂತೆ ಬ್ರಹ್ಮಜ್ಞಾನಿಗಳಾದವರಿಗೇ ಗೊತ್ತು.

ಆ ಕಾಲದಲ್ಲಿ ಜಗನ್ನಾಥದಾಸರು, ತಮ್ಮ ಸ್ವರೂಪೋದ್ಧಾರಕರಾದ ಗೋಪಾಲದಾಸರನ್ನು ಈ ಪದವನ್ನು ಹಾಡಿ ಸ್ತೋತ್ರಮಾಡಿದ್ದಾರೆ.

ಮೋಹನ—ಅಟ್ಟತಾಳ

ಗೋಪಾಲದಾಸರಾಯ–। ನಿನ್ನ ಯ ಪಾದ
ಸಾ ಪೊಂದಿದೆನು ನಿಶ್ಚಯ ಪ

ಈ ಪೀಡಿಸುವ ತ್ರೈತಾಪಗಳೋಡಿಸಿ
ಕೈ ಪಿಡಿದೆನ್ನನು । ನೀ ಪಾಲಿಸನುದಿನ ಅ.

ಘೋರವ್ಯಾಧಿಗಳನೋಡಿ । ವಿಜಯರಾಯ
ಭೂರಿ ಕರುಣವಮಾಡಿ ।
ತೋರಿದರಿವರೆ ಉದ್ಧಾರಕರೆಂದಂದಿ
ನಾರಭ್ಯ ತವಪಾದ ಸೇರಿಪೆ ಸಲಹೆಂದು

ಸೂರಿಜನ ಸಂಪ್ರೀಯ ಸುಗುಣೋದಾರ
ದುರುಳನ ದೋಷ ನಿಚಯವ ।
ದೂರಗೈಸು ದಯಾಂಬುನಿಧೆ ನಿ
ವಾರಿಸುತ ಕರಪಿಡಿದು ಬೇಗದಿ– ೧

ಅಪಮೃತ್ಯುವನು ಪರಿದೆ । ಎನ್ನೊಳಗಿದ್ದ
ಅಪರಾಧಗಳ ಮರೆದೆ ।
ಚಪಲಚಿತ್ತನಿಗೊಲಿದು । ವಿಪುಲಮತಿಯನಿತ್ತು
ನಿಪುಣನೆಂದೆನಿಸಿದೆ । ತಪಸಿಗಳಿಂದಲಿ

ಕೃಪಣವತ್ಸಲ ನಿನ್ನ ಕರುಣಕೆ
ಉಪಮೆಗಾಣೆನು ಸಂತತವು ಕಾ
ಶ್ಯಪಿಯೊಳಗೆ ಬುಧರಿಂದ ಜಗದಾ
ಧಿಪನ ಕಿಂಕರನೆನಿಸಿ ಮೆರೆದೆ ೨

ಎನ್ನ ಪಾಲಿಸಿದಂದದಿ । ಸಕಲಾಪ
ಪನ್ನರ ಸಲಹೊ ಮೋದಿ ।
ಅನ್ಯರಿಗೀಸರಿ ಬಿನ್ನಪಗೈಯೆ ಜ
ಗನ್ನಾಥವಿಠಲನ ಸನ್ನುತಿಸುವ ಧೀರ

ನಿನ್ನ ನಂಬಿದ ಜನರಿಗೀಪರಿ
ಬನ್ನವೇ ಭಕ್ತಾನುಕಂಪಿ ಶ
ರಣ್ಯ ಬಂದೊದಗೀ ಸಮಯದಿ ಅ
ಹರ್ನಿಶಿ ಧೇನಿಸುವೆ ನಿನ್ನನು ೩

ಈ ಪದದಲ್ಲಿ ಜಗನ್ನಾಥದಾಸರು ತಮ್ಮ ಪೂರ್ವಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿಕೊಂಡಿದ್ದಾರೆ.

ಗೋಪಾಲದಾಸರು ಜಗನ್ನಾಥದಾಸರಲ್ಲಿ ಪ್ರಸನ್ನರಾಗಿ–“ಇನ್ನೇನು ನೀವು ಕೃತಾರ್ಥರಾದಿರಿ. ಜೀವನ್ಮುಕ್ತರೆನಿಸಿದಿರಿ. ಸ್ಥಿತಪ್ರಜ್ಞರ ಪಙ್ಕ್ತಿಯಲ್ಲಿ ಕುಳಿತಿರಿ. ಜನನ ಮರಣಗಳು ನಿಮ್ಮ ಅಧೀನವಾದುವು. ಪರಮಾತ್ಮನ ಪ್ರಸಾದ ನಿಮಗಾಯಿತು. ನಿಮ್ಮ ಉದ್ಧಾರದ ನಿಮಿತ್ತ ನೀವು ಮಾಡಿಕೊಳ್ಳಬೇಕಾದ ಸಾಧನೆ ಪೂರ್ತಿಯಾಯಿತು. ಇನ್ನು ನೀವು ಮುಂದೆ ಮಾಡಬೇಕಾದ ಕಾರ್ಯವೆಂದರೆ ಶ್ರೀಹರಿಸೇವೆ ಅದೇ. ಲೋಕಸೇವೆ. ನಿಮ್ಮಿಂದ ಅಗಾಧ ಧರ್ಮಪ್ರಚಾರಕಾರ್ಯವಾಗಬೇಕು. ನಿಮ್ಮಿಂದ ಪಾಮರರ ಉದ್ಧಾರವಾಗಬೇಕು. ಮನುಷ್ಯನು ತನ್ನ ಮಟ್ಟಿಗೆ ತಾನು ಉದ್ಧಾರವಾಗುವುದು ದೊಡ್ಡದಲ್ಲ. ತನ್ನಿಂದ ಬಹುಜನರ ಉದ್ಧಾರವಾಗಬೇಕು. ಟೀಕಾಟಿಪ್ಪಣಿಗಳನ್ನು ಬರೆಯುವ ಬಹುಜನರಾದರು. ಪಾಮರರನ್ನು ಉದ್ಧರಿಸುವ ದಯಾಮಯ ದಾಸರು ದೊರೆಯಲಾರರು. ನಮ್ಮದು ಭಾಗವತಧರ್ಮ. ಸಕಲ ಧರ್ಮಗಳೂ ಭಾಗವತ ಧರ್ಮದ ಅಂಗೋಪಾಂಗಗಳು. ಭಕ್ತಿಯಿಲ್ಲದೆ ಧರ್ಮವಿಲ್ಲ. ಭಕ್ತಿಯಿಲ್ಲದೆ ಮುಕ್ತಿಯಿಲ್ಲ. ಪಾಠ ಪ್ರವಚನ ಪುರಾಣಗಳಿಗಿಂತ ಪರಿಣಾಮಕಾರಿಯೆಂದು ಶುಕಾಚಾರ್ಯರಂಥವರು ಕೀರ್ತನರಂಗಕ್ಕಿಳಿದರು. ನರಹರಿತೀರ್ಥರು, ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು ಇವರುಗಳೆಲ್ಲಾ ಯತೀಶ್ವರರಾದರೂ, ವಿಶೇಷತಃ ಕೀರ್ತನದಿಂದ ಧರ್ಮಪ್ರಚಾರಮಾಡಿದರು. ಅವರ ಕಾಲವಾಯಿತು, ಇದು ನಿಮ್ಮ ಕಾಲ. ವಿಜಯರಾಯರು ನಿಮಗೆ ಬೆಂಬಲವಾಗಿರುವರು. ಅವರೇ ನಿಮಗೆ ಜಯಪ್ರದರಾಗಿರುವರು. ಪುರಂದರದಾಸರ ಲಕ್ಷಾವಧಿ ಪದ ಸುಳಾದಿಗಳು ವಿಜಯನಗರದ ವಿನಾಶಕಾಲದಲ್ಲಿ ಅದೃಶ್ಯವಾದುವು ನೀವು ಮತ್ತೆ ಗ್ರಂಥಕರ್ತರಾಗಬೇಕು. ಪ್ರಚಾರಕರಾಗಬೇಕು. ನಿಮ್ಮ ಹೆಸರು ಮುಂದೆ ಜಯಜಯಾಕಾರವಾಗುವುದು. ನಮ್ಮ ಕಾಲವು ಸಮಾಪಿಸಿತು. ನಮ್ಮ ಜನ್ಮದಲ್ಲಿ ಆರ್ಜಿಸಿದ ವಿಶೇಷ ಪುಣ್ಯವು ನಿಮ್ಮದಾಗಿರುವುದು. ಚೀಕಲಪರಿಯಲ್ಲಿ ವಿಜಯದಾಸರ ದರ್ಶನಮಾಡಿ ನೀವಿನ್ನು ಕಾರ್ಯಕ್ಷೇತ್ರದಲ್ಲಿ ನಿಲ್ಲಬೇಕು” ಎಂಬ ಹಿತೋಕ್ತಿಗಳನ್ನಾಡಿದರು. ಜಗನ್ನಾಥದಾಸರು ಕೈಜೋಡಿಸಿಕೊಂಡು, ಎಲ್ಲವನ್ನೂ ಶ್ರದ್ಧಾಭಕ್ತಿಯಿಂದ ಕೇಳಿ–‘ಮಹದಾಜ್ಞಾ, ಮಹದಾಜ್ಞಾ’ ಎಂದು ಪ್ರಣಾಮ ಮಾಡಿದರು. ವ್ಯಾಸತತ್ವಜ್ಞರು ಜಯಜಯವೆಂದರು. ಗೋಪಾಲದಾಸರು ಜಗನ್ನಾಥದಾಸರನ್ನು ಕೃಪಾಪೂರ್ಣ ಹೃದಯದಿಂದ ಬೀಳ್ಕೊಟ್ಟರು.

ಚೀಕಲಪರಿಯ ಅಶ್ವತ್ಥವೃಕ್ಷದ ಬಳಿ ವಿಜಯದಾಸರು ಬಾದರಾಯಣದಾಸರೇ ಮೊದಲಾದ ಶಿಷ್ಯರಿಗೆ ಉಪದೇಶಮಾಡುತ್ತಾ ಕುಳಿತಿದ್ದರು. ಮೋಹದ ಮಕ್ಕಳಂತಿದ್ದ ಮೋಹನದಾಸರು ಗಾನಮಾಡುತ್ತಿದ್ದರು. ಆ ಸಂದರ್ಭದಲ್ಲಿ ಗೋಪಾಲದಾಸರ ಬಳಿಯಿಂದ ಹೊರಟುಬಂದ ಜಗನ್ನಾಥದಾಸರು ದೂರದಿಂದ ಹರಿದಾಸಗೋಷ್ಠಿಯನ್ನು ಕಂಡು ದೀರ್ಘದಂಡ ನಮಸ್ಕಾರ ಮಾಡಿದರು.

ಮೋಹನ—ಅಟ್ಟತಾಳ

ರತ್ನ ದೊರಕಿತಲ್ಲಾ | ಎನಗೆ ದಿವ್ಯ ರತ್ನ ದೊರಕಿತಲ್ಲಾ
ರತ್ನ ದೊರಕಿತು ಎನ್ನ ಜನ್ಮ ಪ | ವಿತ್ರವಾಯಿತು ಈ ದಿನದಿ ನಾ ಪ.
ಯತ್ನಗೈಯುತ ಬರುತಿರಲು ಪ್ರ | ಯತ್ನವಿಲ್ಲದೆ ವಿಜಯರಾಯರೆಂಬ ಅ.

ಪಥದಿ ನಾ ಬರುತಿರಲು | ಥಳಥಳಿಸಿಂದು | ಅತಿಕಾಂತಿ ಥಳಥಳಿಸಲು | ಬೆರಗಾಗುತ್ತ
ಅತಿಶೋಭ್ಯವ ಕಾಣಲು | ಸೇವಿಸುತಿರೆ || ಸತತ ಕರುಣಿಸಿದಾದರಿಸಿ ಮನೋ
ರಥವ ಪೂರೈಸುತಲಿ ದಿವ್ಯ ಸ | ನ್ಮತಿಯ ಪಾಲಿಸಿ ಮೋಕ್ಷ ಸಾಧನ
ಅತಿಶಯದಿ ತೋರುತ್ತ ಪೊರೆದ ೧

ಜ್ಞಾನವೆಂಬೋ ಪುತ್ಥಳಿ | ಕಂಬಿಯಲ್ಲಿ | ಆನೆಮುತ್ತಿನ ಭಕ್ತಿಯಲಿ | ಸುಜ್ಞತನದಾಲಾ
ನಾನಾವಿಧ ಹವಳದಲಿ | ಸೇರಿಸುತ್ತ || ಪ್ರಾಣಪದಕವೆಂಬ ಮಾಲೆ ಅನು
ಮಾನವಿಲ್ಲದೆ ಕೊರಳಿಗ್ಹಾಕುತ | ಗಾನದಿಂ ಕುಣಿಯುತ್ತ ಪಾಡುತ
ದೀನಜನರುದ್ಧಾರಗೈವ ೨

ಶೋಧಿಸಿ ಗ್ರಂಥಗಳ | ಸುಳಾದಿಯ | ಮೋದದಿಂದಲಿ ಬಹಳ | ಕವಿತೆಮಾಡಿ |
ಸಾಧುಜನಕೆ ಸುಕಾಲ | ಆನಂದವಿತ್ತು || ವಾದಿಜನರಿಗೆ ಬೋಧ ಬೋಧಿಸಿ
ಮಾಧವ ಜಗನ್ನಾಥವಿಠಲನ | ಪಾದಕಮಲಕೆ ಮಧುಪನಂದದಿ
ಮೇದಿನಿಯೊಳ್ ತೋರುತ್ತ ಮೆರೆವ ೩

ಎಂಬುದಾಗಿ ಸ್ತೋತ್ರ ಮಾಡಿದರು. ವಿಜಯರಾಯರು ಜಗನ್ನಾಥದಾಸರನ್ನು ಕರೆದು ಆದರಿಸಿ ಪಕ್ಕದಲ್ಲಿ ಕೂಡಿಸಿಕೊಂಡರು. 'ದಾಸರೇ ಭಾಗಣ್ಣನ ಮಾತೇ ನಮ್ಮ ಮಾತು. ಸರ್ವಜ್ಞರೂ ಟೀಕಾಕೃತ್ಪಾದರೂ ರಾಯರಲ್ಲಿ (ರಾಘವೇಂದ್ರ ಗುರುಗಳು) ಹೇಗೆ ನಿಂದು ಮಹಾಕಾರ್ಯ ಮಾಡಿದರೋ, ಹಾಗೆಯೇ ಶ್ರೀಪಾದರಾಯರೂ, ಚಂದ್ರಿಕಾಚಾರ್ಯರೂ, ವಾದಿರಾಜರೂ, ಶ್ರೀ ಪುರಂದರದಾಸರಾಯರೂ ನಿಮ್ಮಲ್ಲಿ ನಿಂತು ಮಹಾ ಲೋಕಸೇವಾ ಕಾರ್ಯ ನಡೆಸುವರು. ಭಾಗಣ್ಣನು ಮಾಡಿದ ಆಯುರ್ದಾನವು, ನಿಮ್ಮ ಲೋಕಸೇವೆಗೆ ಸಹಕಾರಿಯಾಯಿತು. ನಿನಗೆ ದುಃಖಪ್ರಾರಬ್ಧ ತೀರಿ ಸುಖಪ್ರಾರಬ್ಧ ಪ್ರಾರಂಭವಾಯಿತು. ನಿಮ್ಮನ್ನು ರಾಜಾಧಿರಾಜರು ಪೂಜಿಸುವರು. ಮಠಾಧಿಪತಿಗಳು ಮನ್ನಿಸುವರು. ಜನರು ನಿಮ್ಮ ದಾಸಾನುದಾಸರಾಗುವರು. ನಿಮ್ಮ ವಾಕ್ಕಿನಲ್ಲಿ ಜಯಲಕ್ಷ್ಮಿಯು ನೆಲಸಿ ಕೀರ್ತಿಯನ್ನುಂಟುಮಾಡುವಳು' ಎಂದು ಅನುಗ್ರಹವಾಕ್ಯಗಳನ್ನಾಡಿದರು.

ಜಗನ್ನಾಥದಾಸರು ಧನ್ಯಭಕ್ತಿಯುತರಾಗಿ ಕೈ ಜೋಡಿಸಿಕೊಂಡು, ಎಲ್ಲವನ್ನೂ ಕೇಳಿ, 'ವಿಜಯರಾಯರ ಕರುಣಾನುಗ್ರಹದಿಂದಲೇ ನನ್ನ ಜನ್ಮಯಾತ್ರೆಯು ದಿಗ್ಜಯವಲ್ಲವೆ, ಮತ್ತೇನಾಗಬೇಕು? ಮೋಹನದಾಸರಾಡಿದ

ವಿ ಎನಲು ವಿಮಲತೆಯು
ಜ ಎಂದವಗೆಜಯವು
ಯ ಎನಲು ಯಾಗಫಲವು

ಎಂಬುದರ ಪ್ರಥಮ ಫಲಭೋಗಿಯೇ ನಾನಾದೆನು. ತಮ್ಮ ಪಾದದರ್ಶನದಿಂದ ಧನ್ಯನಾದೆನು' ಎಂದು ನಮಸ್ಕಾರ ಮಾಡಿದರು.

ಜಗನ್ನಾಥದಾಸರ ಪ್ರಥಮ ಕೀರ್ತನವು ಚೀಕಲಪರಿಯಲ್ಲಿ ವಿಜಯದಾಸರ ದಿವ್ಯ ಸನ್ನಿಧಿಯಲ್ಲಾಯಿತು.

ಪರಮಗುರುಗಳ ಆಜ್ಞೆಯನ್ನು ಪಡೆದು, ಜಗನ್ನಾಥದಾಸರು ಮಾನವಿಗೆ ಬಂದರು. ಆಚಾರ್ಯರಲ್ಲುಂಟಾದ ಬದಲಾವಣೆಯನ್ನು ನೋಡಿ ಜನರು ಆಶ್ಚರ್ಯಭರಿತರಾದರು. ಒಂದು ಕಡೆ ಶಾಸ್ತ್ರಪಾಠ, ಮತ್ತೊಂದು ಕಡೆ ಕೀರ್ತನರೂಪದಿಂದ ಸಕಲ ಶಾಸ್ತ್ರಾರ್ಥ ನಿರೂಪಣ ಈ ರೀತಿ ದಾಸರಾಯರ ಧರ್ಮೋಪದೇಶ ಪ್ರಾರಂಭವಾಯಿತು. ದಾಸರಲ್ಲಿ ವ್ಯಾಸಂಗಕ್ಕೆಂದು ನೂರಾರು ಮಂದಿ ಶಿಷ್ಯಜನರು ದೇಶ ದೇಶಗಳಿಂದ ಬಂದು ಸೇರಿದರು. ಗುರುಗಳಾಜ್ಞೆಯಿಂದ, ತೀರ್ಥಾಟನ ವ್ಯಾಜದಿಂದ, ಧರ್ಮೋಪದೇಶ ಕಾರ್ಯದಲ್ಲಿ ದೀಕ್ಷೆ ವಹಿಸಿ ಶ್ರೀ ಜಗನ್ನಾಥದಾಸಾರ್ಯರು ಸಂಚಾರ ಹೊರಡಲುದ್ಯುಕ್ತರಾದರು.

ಸುರಪುರ ಸಂಸ್ಥಾನ

ಸುರಪುರವು ಆ ಕಾಲದಲ್ಲಿ ಒಂದು ಚಿಕ್ಕ ಕರ್ಣಾಟಕ ಸಂಸ್ಥಾನವಾಗಿತ್ತು. ರಾಜ್ಯದ ಉತ್ಪತ್ತಿಯು ಒಂಭತ್ತು ಲಕ್ಷಕ್ಕೆ ಮೀರಿರಲಿಲ್ಲ. ನಾಯಕವಂಶದ ರಾಜರು ಆ ರಾಜ್ಯವನ್ನು ಪಾಲಿಸುತ್ತಿದ್ದರು. ಸುರಪುರದ ರಾಜರು ಧರ್ಮಾತ್ಮರಾಗಿದ್ದರೆಂಬುದಕ್ಕೆ ಈಗಲೂ ಅವರು ಕೊಟ್ಟ ಜಹಗೀರುಗಳು ಸಾಕ್ಷಿಯಾಗಿವೆ. ಜಗನ್ನಾಥದಾಸರ ಕಾಲದಲ್ಲಿ ವೆಂಕಟಪ್ಪನಾಯಕನೆಂಬಾತನು ದೊರೆತನ ನಡೆಸುತ್ತಿದ್ದನು. ನಾಯಕನು ತಿರುಪತಿಯ ಶ್ರೀನಿವಾಸನ ಭಕ್ತನಾಗಿದ್ದನು.

ಜಗನ್ನಾಥದಾಸರು ಪರಿವಾರ ಸಹಿತ ಮೊದಲು ಸುರಪುರದ ಮಾರ್ಗವಾಗಿ ಧರ್ಮಪ್ರಚಾರ ಕಾರ್ಯಕ್ಕೆ ಹೊರಟರು. ದಾಸರೊಡನೆ ವಿದ್ಯಾರ್ಥಿಗಳಾಗಿ ಕೆಲವರು, ಯಾತ್ರಿಕರಾಗಿ ಕೆಲವರು, ಹೀಗೆ ನೂರಾರು ಜನರಿದ್ದರು. ದಾಸರ ಸಂಚಾರವು ಮಠಾಧಿಪತಿಗಳ ಸಂಚಾರದಂತೆ ಅಟ್ಟಹಾಸಯುಕ್ತವಾಗಿತ್ತು. ದಾಸರು ಮೇನೆಯಲ್ಲೂ, ಅನುಯಾಯಿಗಳು ಕುದುರೆಗಳಮೇಲೂ ಪ್ರಯಾಣಮಾಡುತ್ತಿದ್ದರು. ದಾಸರ ಪೂರ್ವಚರಿತ್ರೆಯನ್ನೂ ಅವರು ಮಾಡುವ ಕೀರ್ತನವನ್ನೂ ಕೇಳಿ, ವೆಂಕಟಪ್ಪನಾಯಕನು ಅವರನ್ನು ಬಹುವಾಗಿ ಸತ್ಕರಿಸಿ ಶಿಷ್ಯನಾದನು.

ಇದೇ ಕಾಲದಲ್ಲಿ ಒಬ್ಬಾನೊಬ್ಬ ಬಡಗೃಹಸ್ಥನು, ಹೆಂಡತಿಮಕ್ಕಳನ್ನು ಸಾಕಲಾರದಷ್ಟು ದರಿದ್ರನಾಗಿ, ದಾಸರ ಅನುಗ್ರಹಾಕಾಂಕ್ಷಿಯಾಗಿ ಹಿಂಬಾಲಿಸಿದ್ದನು. ನಾಲ್ಕೆಂಟು ಮಜಲುಗಳಾದರೂ ಇವನ್ಯಾರು, ಏಕೆ ಬರುತ್ತಿರುವನೆಂಬುದು ದಾಸರಿಗೆ ಶ್ರುತವಾಗಲಿಲ್ಲ. ಒಂದು ದಿನ ತೀರ್ಥ ಸಮಯದಲ್ಲಿ ಮ್ಲಾನವದನನಾಗಿ ಹಿಂದೆ ಹಿಂದೆ ನಿಂತಿರುತ್ತಿದ್ದ ಆತನನ್ನು ನೋಡಿ, ದಾಸರು–'ಏನಾರಪ್ಪ? ತೀರ್ಥಕ್ಕೆ ಬಾರೆ'ಂದು ಕರೆದರು. ಬಡವನು ಅಷ್ಟುಮಾತ್ರಕ್ಕೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. 'ಸ್ವಾಮಿಾ, ನಾನು ಹೆಂಡತಿ ಮಕ್ಕಳ

ಜೀವನಕ್ಕೆ ತಂದುಹಾಕಲಾರದಷ್ಟು ದರಿದ್ರನಾಗಿ, ತಮ್ಮನ್ನು ಹಿಂಬಾಲಿಸಿರುವ ಪಾಪಿ' ಎಂದನು. 'ತಮ್ಮ ಜೊತೆಯಲ್ಲಿದ್ದರೆ ಮೊದಲು ಭುಕ್ತಿ, ಅನಂತರ ಮುಕ್ತಿ ದೊರೆಕೀ ತೆಂದು, ಅವರನ್ನೆಲ್ಲ ತೊರೆದು ಬಂದಿರುವೆನು' ಎಂದನು. 'ಗೃಹಸ್ಥನಾದ್ದರಿಂದ ಬೇರೊಬ್ಬ ರನ್ನು ಯಾಚಿಸಿ ಬದುಕಿದವನಲ್ಲ'ವೆಂದನು. ಮತ್ತೆ ಹೆಂಡತಿ ಮಕ್ಕಳನ್ನು ಸ್ಮರಿಸಿಕೊಂಡು, 'ಈ ಹೊತ್ತಿಗೆ ಅದೇನಾಗಿರುವರೋ' ಎಂದು ಪ್ರಲಾಪಿಸಿದನು. ದಾಸರು ಆತನ ವಿಷಯ ದಲ್ಲಿ ಕನಿಕರ ತಾಳಿ-'ಅಪ್ಪಾ ನಿನಗೇನು ಬರುವುದು' ಎಂದರು. 'ಸ್ವಾಮಿ ಕನ್ನಡ ಓದಿ ಬರೆಯುವುದಕ್ಕೆ ಬರುತ್ತದೆ. ಸಂಧ್ಯಾವಂದನ, ದೇವ ಪೂಜಾದಿ ಮಂತ್ರಗಳು ಬರುತ್ತವೆ. ದೇವರನಾಮಗಳನ್ನು ಹಾಡುವುದಕ್ಕೆ ಬರುತ್ತದೆ ಇಷ್ಟೆ!' ಎಂದನು.

ದಾಸರು ಗೃಹಸ್ಥನ ಮುಖವನ್ನು ಹಾಗೇ ಸ್ವಲ್ಪಹೊತ್ತು ನೋಡಿದರು. 'ಹಿಂದಿನ ಏಳು ಜನ್ಮಗಳಲ್ಲಿ ಹುಡುಕಿದರೂ ನಿನ್ನಿಂದ ಸತ್ಪಾತ್ರದಾನವಾಗಿಲ್ಲವಲ್ಲ-ದೇವರು ನಿನಗೆ ಹೇಗೆ ಕೊಡಬೇಕು?' ಎಂದು-'ಒಳ್ಳೇದು ನಿನ್ನ ಬಳಿ ಈಗ ಏನಿದೆ ಹೇಳು!' ಎಂದರು. ಆ ಗೃಹಸ್ಥನು-'ಉಟ್ಟು ಹೊದ್ದಿರುವ ಬಟ್ಟೆಗಳು, ಇದೊಂದು ಒಡಕು ತಂಬಿಗೆ ಇಷ್ಟೇ ನನ್ನಲ್ಲಿರುವುದು' ಎಂದನು. ದಾಸರು-'ಆ ತಂಬಿಗೆಯನ್ನೇ ಯಾರಾದರೂ ಸತ್ಪಾತ್ರ ರಿಗೆ ದಾನಮಾಡೆ'ಂದರು. 'ತಮಗಿಂತ ಸತ್ಪಾತ್ರರು ಮತ್ತೊಬ್ಬರಿಲ್ಲ'ವೆಂದು, ಅವನು ದಾಸರ ಮುಂದೆ ತಂಬಿಗೆಯನ್ನಿಟ್ಟು ಕೃಷ್ಣಾರ್ಪಣವೆಂದನು. ದಾಸರೇ-'ಈ ತಂಬಿಗೆಯನ್ನು ಮಾರಿ ಸಕ್ಕರೆಯನ್ನು ತಾರೆ'ಂದರು. ಆತನು ತಂದ ಸಕ್ಕರೆಯ ಜೊತೆಗೆ ಮತ್ತಷ್ಟು ಸೇರಿಸಿ ಪಾನಕ ಮಾಡಿಸಿದರು. ಗೃಹಸ್ಥನ ಕೈಯಿಂದ ವಸಂತಮಾಧವನ ಹೆಸರಿನಮೇಲೆ ಕೃಷ್ಣಾರ್ಪಣ ವೆನಿಸಿ, ಪಙ್ತಿಯಲ್ಲಿ ಕುಳಿತವರಿಗೆ ದಾನಮಾಡಿಸಿದರು. ತಾವೂ ಪಾನಕವು ಬಲು ರುಚಿ ಯಾಗಿದೆಯೆಂದು ಸವಿದರು. ಗೃಹಸ್ಥನ ದಾರಿದ್ರ್ಯ ಪರಿಹಾರವಾಗಲೆಂದು **ನೃಸಿಂಹ ಸುಳಾದಿ**ಯನ್ನು ರಚಿಸಿ, ಆತನಿಗೆ ಉಪದೇಶಮಾಡಿದರು.

ಗೃಹಸ್ಥನು ಸುಳಾದಿಯ ಪಠನೆಗೆ ಆ ಪ್ರಾಂತದ ಗುಡ್ಡ ಸಾಲನ್ನಾಶ್ರಯಿಸಿದನು. ಅಲ್ಲಿ **ಚಂದ್ರಿಕಾಚಾರ್ಯ**ರಿಂದ ಪ್ರತಿಷ್ಠಿತವಾದ ಒಂದು ಮಾರುತಿಯ ದೇವಾಲಯ ವಿತ್ತು. ಸಮೀಪದಲ್ಲೊಂದು ನೀರಿನ ದೊಣೆಯೂ, ಸೀತಾರಾಮಫಲ ಗಿಡಗಳೂ ಇದ್ದುವು. ಗೃಹಸ್ಥನು ದೇವರೇ ಗತಿಯೆಂದು ಆ ವಾನರನಾಥನ ಗುಡಿಯಲ್ಲಿ ವಾಸಮಾಡಿದನು. ಇದ್ದ ತಂಬಿಗೆಯೂ ಹೋದ್ದರಿಂದ ಹೊದ್ದ ಧೋತ್ರವೇ ಅವನಿಗೆ ಪಾತ್ರವೂ ಆಗಿತ್ತು. ಬೆಳಗಾಗಿ ಏಳುವುದು, ಅಡವಿಯ ತುಲಸಿಯನ್ನು ತಂದಿಡುವುದು, ದೊಣೆಯಲ್ಲಿ ಮಿಂದುವುದು, ಧೋತ್ರವನ್ನದ್ದಿ ಮಾರುತಿಯ ತಲೆಯಮೇಲೆ ಹಿಂಡಿ, ಅಭಿಷೇಕ ಮಾಡುವುದು. ತುಲಸಿಯ ಅರ್ಚನೆ ಮಾಡುವುದು. ಸೀತಾರಾಮ ಫಲಗಳ ನಿವೇದನಮಾಡುವುದು; ಅವನ್ನೇ ಆಹಾರಮಾಡಿಕೊಳ್ಳುವುದು. ದಾಸರು ಉಪದೇಶಿಸಿದ ನೃಸಿಂಹ ಸುಳಾದಿಯನ್ನು ನಿರಂತರ ಪಠಿಸುವುದು. ಈ ರೀತಿ ಗೃಹಸ್ಥನು ಕಾಲಯಾಪನೆ ಮಾಡಿದನು. ಗೃಹಸ್ಥನ ಪುಣ್ಯ ಪರಿ ಪಾಕದಿಂದ, ಆ ಸಮಯದಲ್ಲೇ ಸುರಪುರದ ವೆಂಕಟಪ್ಪನಾಯಕನು ಬೇಟೆಯಾಡುತ್ತಾ ಆ ಗುಡ್ಡಕ್ಕೆ ಬಂದನು. ಅಲ್ಲೇ ಒಂದೆರಡು ದಿನ ಯೋಗ್ಯವಾದ ಸ್ಥಳವನ್ನಾರಿಸಿ, ಪಟಗೃಹ

ದಲ್ಲಿ ವಾಸಮಾಡಿದನು. ಆ ವೇಳೆಯಲ್ಲಿ, ಒಬ್ಬ ಕುದುರೆಯ ರಾವುತನು ರಾಜಧಾನಿಯಿಂದ ಒಂದು ಪತ್ರವನ್ನು ತಂದು ರಾಜನಿಗೊಪ್ಪಿಸಿದನು. ಲಕ್ಕೋಟೆಯನ್ನೊಡೆದು ಸುನಾವಣಿಮಾಡುವ ಮುತ್ಸದ್ದಿಯೊಬ್ಬನಾಗಬೇಕಾಯಿತು. ಸಮೀಪದಲ್ಲೇ ಯಾರಾದರೂ ಬ್ರಾಹ್ಮಣರಿದ್ದರೆ ಕರೆತರುವಂತೆ ರಾಜಾಜ್ಞೆಯಾಯಿತು. ರಾವುತನ ಕೈಗೆ, ಅಲ್ಲೇ ಸೇವೆ ಮಾಡುತ್ತಿದ್ದ ಮೇಲ್ಕಂಡ ಬಡಬ್ರಾಹ್ಮಣನು ಸಿಕ್ಕಿದನು. ರಾವುತನು, ಆತನನ್ನು ಧೊರೆಯ ಬಳಿಗೆ ಬಾರೆಂದು ಕರೆದೊಯ್ದನು. ಗೃಹಸ್ಥನಿಗೆ ರಾಜನೇನು ಮಾಡುವನೋ ಎಂಬ ಭೀತಿಯುಂಟಾಯಿತು. ರಾಜನು, ಬ್ರಾಹ್ಮಣನನ್ನು ನೋಡಿ-ಆ ಲಕ್ಕೋಟೆಯನ್ನೊಡೆದು ಓದಿ ಸುನಾವಣೆಮಾಡೆಂದನು. ಗೃಹಸ್ಥನು ಧೈರ್ಯದಿಂದ ಪತ್ರದ ಸಂಗತಿಯನ್ನು ಓದಿ ತಿಳಿಸಿದನು. ನಾಯಕನಿಗೆ ಸಂತೋಷವಾಯಿತು. ಆಗ ಧೊರೆಯು-ಬ್ರಾಹ್ಮಣನನ್ನು 'ನೀನಾರು-ಇಲ್ಲೇಕಿರುವೆ?' ಎಂದು ವಿಚಾರಿಸಿದನು. ಆಗಲಾತನು-'ಪ್ರಭೋ ನಾನೊಬ್ಬ ಬಡಬ್ರಾಹ್ಮಣ, ಸುರಪುರ ರಾಜ್ಯದವನು, ಜಗನ್ನಾಥದಾಸರ ಶಿಷ್ಯನು. ಅವರ ಅಪ್ಪಣೆಯನ್ನು ಪಾಲಿಸುತ್ತ ಈ ಪರ್ವತದಲ್ಲಿ ನರಸಿಂಹ ಸುಳಾದಿಯನ್ನು ಪಾರಾಯಣ ಮಾಡಿಕೊಂಡಿರುವವನು' ಎಂಬುದಾಗಿ ತಿಳಿಸಿದನು.

ನಾಯಕ :—ನೀನು ಎಲ್ಲಿ ವಾಸಮಾಡುತ್ತೀ ?

ಬ್ರಾಹ್ಮಣ ;—ಈ ಗುಡಿಯಲ್ಲಿ !

ನಾಯಕ :—ನಿನಗೆ ಹೆಂಡಿರು ಮಕ್ಕಳಿರುವರೇ ?

ಬ್ರಾಹ್ಮಣ :—ಇರುವರು.

ನಾಯಕ :—ನಿನಗೆ ಹೊಲಮನೆಗಳಿರುವುವೆ ?

ಬ್ರಾಹ್ಮಣ :—ಇಲ್ಲ.

ನಾಯಕ :—ಜುಟ್ಟು ಜ[illegible] ಧರಿಸಿರುವ ಬ್ರಾಹ್ಮಣರಿಗೆಲ್ಲ ಮಾನ್ಯವಿರುವ ನನ್ನ ರಾಜ್ಯದಲ್ಲಿ ನಿನಗೆ ಏನೂ ಇದಿರಲು ಕಾರಣವೇನು ?

ಬ್ರಾಹ್ಮಣ :—ನನ್ನ ದೌರ್ಭಾಗ್ಯ !

ನಾಯಕ :—ನೀನು ವೈದಿಕನೋ-ಲೌಕಿಕನೋ ?

ಬ್ರಾಹ್ಮಣ :—ಲೌಕಿಕ.

ನಾಯಕ :—ನಮ್ಮಲ್ಲಿ ನೌಕರಿಮಾಡುವೆಯಾ ?

ಬ್ರಾಹ್ಮಣ :—ಮಾಡುವೆನು !

ವೆಂಕಟಕೃಷ್ಣನಾಯಕನು ಸುರಪುರಕ್ಕೆ ಬಂದು ನನ್ನನ್ನು ನೋಡೆಂದು ಹೇಳಿ, ರಾಜಕಾರ್ಯ ಗೌರವದಿಂದ ಅತ್ಯಾತುರನಾಗಿ ಪ್ರಯಾಣಮಾಡಿದನು. ಬ್ರಾಹ್ಮಣನೂ ಒಂದು ಮಂಡಲ ಸೇವೆ ಪೂರ್ತಿಮಾಡಿ, ಸುರಪುರಕ್ಕೆ ಪ್ರಯಾಣಮಾಡಿದನು. ದರಿದ್ರ ಬ್ರಾಹ್ಮಣನಿಗೆ ಜಗನ್ನಾಥದಾಸರ ಹೆಸರಿನ ಗೌರವದಿಂದ ಸುಲಭವಾಗಿ ರಾಜದರ್ಶನವಾಯಿತು. ಮನೆ ಮಾನ್ಯಗಳಾದುವು. ರಾಜನ ಖಾಸಿಗೆಯಲ್ಲಿ ನೌಕರಿಯಾಯಿತು. ಗೃಹ

ಷನು ಹೆಂಡತಿ ಮಕ್ಕಳನ್ನು ಕರೆತಂದು ಸುರಪುರದಲ್ಲಿ ಸುಖವಾಗಿ ವಾಸಮಾಡಿದನು. ಕಾಲಕ್ರಮದಲ್ಲಿ ರಾಜಾನುಗ್ರಹದಿಂದ ಅವನು ರಾಜನ ಖಜಾನೆಯ ಮುಖ್ಯಾಧಿಕಾರಿ ಯಾದನು. ಅನಂತರ ಸುರಪುರದ ದಿವಾನಗಿರಿಯೂ ಅವನಿಗೆ ಆ ಮುಖ್ಯಸ್ಥನಿಗಾಯಿತು. ಮಹಾಪದವಿ ದೊರೆತರೂ, ಆ ಗೃಹಸ್ಥನು ನೃಸಿಂಹ ಸುಳಾದಿಯ ಪಾರಾಯಣವನ್ನು ಬಿಡಲಿಲ್ಲ. ಜಗನ್ನಾಥದಾಸರ ಉಪಕಾರವನ್ನು ಮರೆಯಲಿಲ್ಲ.

ನೃಸಿಂಹ ಸುಳಾದಿ

ಧ್ರುವತಾಳ

ದುರಿತವನ ಕುಠಾರಿ ದುರ್ಜನ ಕುಲವೈರಿ । ಶರಣಾಗತ ವಜ್ರಪಂಜರ-ಕುಂಜರ । ವರಸಂರಕ್ಷಕ, ಜನ್ಮಮರಣ ರಹಿತ, ಮಹಿತ । ಪರಮ ಕರುಣಾಸಿಂಧು ಭಕುತಬಂಧು । ಸ್ವರತ ಸ್ವತಂತ್ರ ಜಗದ್ಭರಿತ ಚಿತ್ಸುಖ ಪೂರ್ಣ । ಹರಿಯೆ ಕ್ಷರಾಕ್ಷರ ಪುರುಷೋತ್ತಮ । ಉರುಗಾಯ ವೈಕುಂಠ ಮಂದಿರ ಚಂದಿರ । ತರಣಿ ಕೋಟಿ ಸಂಕಾಶ-ಮಹಲಕೇಶ । ಧುರದೊಳಗರ್ಜುನನ ತುರಗ ನಡೆಸಿದ ಸಂ । ಗರ ಭಯಂಕರ ಲೋಕೈಕವೀರ । ನರಸಿಂಹ ನಿನ್ನ ಪಾದಕ್ಕೆರಗಿ ಬೇಡಿಕೊಂಬೆ । ಮೊರೆಹೊಕ್ಕ ದಾಸಗೆ ಬಂದ ಭಯವ ಹರಿ । ಹರಿಸಿ ಸೌಖ್ಯವ ಕರುಣಿಸು ದಯದಿಂದ । ಸರುವಸಂತರ್ಯಾಮಿ ಲೋಕಸ್ವಾಮಿ । ಸ್ಮರಣೆ ಮಾತ್ರದಿ ಅಜಾಮಿಳಗೆ ಮುಕ್ತಿಯನಿತ್ತೆ । ಅರಿದೆನೋ ನಿನಗೆ ಪೊರೆವುದೆಮ್ಮ । ಸಕಲ ಕಾಮದ **ಜಗನ್ನಾಥವಿಠಲ** ಭಕ್ತ । ಪರಿಪಾಲಕನೆಂಬ ಬಿರುದು ನಿನ್ನದಲ್ಲವೆ ?

ಮಟ್ಟತಾಳ

ವಿಧಿಪಿತ ನೀನಲ್ಲದೆ ನಿಧಿಸತಿಗಳು ಉಂಟೆ ? । ಸಧನನಾಗಿ ಇಪ್ಪೆ ನಿನ್ನ ದಾಸರಿಗಾಗಿ । ಮಧುಸೂದನ **ಜಗನ್ನಾಥ** ವಿಠಲರೇಯ । ನಿಧನನೆನಿಸಿಕೊಂಬೆ ನಿನ್ನ ದ್ವೇಷಿಗಳಿಗೆ

ರೂಪಕತಾಳ

ಮೂರುಲೋಕ ಸ್ವಾಮಿ ಸರ್ವಜ್ಞ ಸುಖಪೂರ್ಣ । ಪ್ರೇರಕ ಸಾಕ್ಷಿ ಕಾರಣ ಕಾರ್ಯದೋಷವಿ । ದೂರ ಸದ್ಗುಣಸಾಂದ್ರ ಸದ್ಗುಣಾಂಬುಧಿಚಂದ್ರ । ಧಾರಕನು ಜಗಕೆ ನೀನಿರೆ ಎಮ್ಮ ಮ । ನೋರಥ ಸಲಿಸುವದೇನಸಾಧ್ಯವೊ ನಿನಗೆ । ಕ್ರೂರದಾನವರ ಸಂಹರವಮಾಡಿಸು ಗುರು । ಮಾರುತಸುತನ ಶೀಘ್ರದಲಿ । ಈ ಸ್ವಲ್ಪದಿಂದ ಪ್ರಾರ್ಥಿಸುವ ಭಕ್ತಗೆ ಭೂರಿ । ನಾರದ ಭಾಗ್ಯವನಿತ್ತು ಕೃಪೆಯನಿಡು ಅನುದಿನ । ಧೀರ **ಜಗನ್ನಾಥವಿಠಲ** ನೀನಿಲ್ಲದೆ । ನಮ್ಮಂಥ ಭಕ್ತರ ಪಾಪ ಕಾರಣಗಳು ಜಗದಿ ? ೩

ಝಂಪೆತಾಳ

ಹಿತನೆಂದೆ ನಿಂದ ಪ್ರಹ್ಲಾದನ ಬಂದ್ಯುದೇ । ಪಿತಗಾಗಿ ಬಂದ ಭಯವ ಪರಿಹರಿ ಸಿದೆ ಬ್ರಾಹ್ಮ್ಯ । ಸದಯ ಹೊರೆಯೋ ನಿಮ್ಮಂಬಕನ ಕರುಣಿಸಿ । ಕ್ಷಿತಿಜನಾಲಯದಿ ಬಳಲುವ

ಬಾಲೆಯರ ದ್ವಾರಾ । ವತಿಗೆ ಕರೆದೊಯ್ದು ಒಲಿದವರ ಪೋಷಿಸಿದೆ ಮಾ । ರುತಿಯ ಕರದಿಂ ಬೃಹದ್ರಥನ ಕುವರನ ಕೊಲಿಸಿ । ಪೃಥುವಿಪರ ಬಿಡಿಸಿ ಪಾಲಿಸಿದೆ ಕರುಣದಲಿ ಕುರು । ಪೃತನದೋಳ್ಪಾಂಡವರ ಗೆಲಿಸಿ ಕೀರ್ತಿಯ ಪಡೆದೆ । ಶತಮೋದನಸ್ತ್ರದಿಂದಲಿ ಗರ್ಭದೊಳಗೆ ಪೀ । ಡಿತನಾದ ಶಿಶು ಪರೀಕ್ಷಿತನ ಸಂತೈಸಿದೆ । ಸಿತಿಕಂಠಗೊಲಿದು ನಾಯಕನಾಗಿ ಮುಪ್ಪುರದ । ಸತಿಯರನು ಒಲಿಸಿ ಕೀರುತಿಯಿತ್ತೆ ಭಕ್ತನಿಗೆ । ಮಿತಿ ಯುಂಟೆ ನಿನ್ನ ಕರುಣಕೆ ದೇವಪತಿ ಸಾಂ । ಪ್ರತ ಬೇಡಿಕೊಂಬೆ ಬಿನ್ನಪ ಕೇಳಜಸ್ರ ಸಂ । ಸ್ತುತಿಪ ಭಕುತರ ಮನೋರಥವ ಪೂರೈಸು ಸು । ವ್ರತನಾಮ **ಶ್ರೀಜಗನ್ನಾಥವಿಠಲ** ಭಾಗ । ವತ ಜನರ ಪ್ರಿಯ ನೀನೇ ಗತಿ ಎನಗೆ ಇಹಪರದಿ ೪

ತ್ರಿಪುಟತಾಳ

ನೀ ಸಲಹಲಿನ್ನಾರು ಮೂಲೋಕದೊಳು ಬಂದ । ಡೈಸುವರು ಒಳಹೊರಗೆ ದಾನವ ದಿವೌಕಸರು ನಿನಗೆ ಸಮರ್ಪಕ ಕಾರ್ಯ ಮ । ಹಾಸುಖವಿ ನಡೆಸುವರು ನಿರುತ ಲಕ್ಷ್ಮೀ । ದಾಸಿ ಎಂದೆನಿಸಳು ನಿನ್ನರಮನೆಯಲ್ಲಿ । ದೇಶಕಾಲಗುಣ ಕರ್ಮಾದಿಗಳು ನಿನಗಾ । ವಾಸಕೆ ಯೋಗ್ಯವಾದ ಸ್ಥಾನವೆನಿಸುವ । ಈಶಲೋಕಕೆ ಲೇಶಾಯಾಸ ಕಾಣೆನೊ ಕರು । ಣಾಸಮುದ್ರನೆ ಒಲಿದು ಎಮ್ಮ ಮನದ ಅಭಿ । ಲಾಷೆ ಪೂರೈಸೆಂದು ಬೇಡಿದೆನೋ ದೇವ । ವ್ಯಾಸ ಕೀಟಗೆ ಒಲಿದು ಕೊಟ್ಟೆ ಮಹಾ ಸಿಂ । ಹಾಸನವೇರಿಸಿ ನೀ ಪೊರೆದೆಯೊ ಪ । ರಾಶರಾತ್ಮಜ ನಿನ್ನ ಗುಣಗಳ ಬಣ್ಣಿಸೆ । ನಾ ಸಮರ್ಥನೆ ಎಂದೆಂದಿಗಾದರು ದೇವ । ನೀ ಸುಲಭನೆಂದಾಶ್ರಯಿಸಿದೆ ನಾ ಬಿ । ನ್ನೈಸಿದೆನೋ ಈ ರೀತಿಯಲ್ಲಿ ಸರು । ವಾಸು ನಿಲಯ **ಶ್ರೀ ಜಗನ್ನಾಥವಿಠಲರೇಯ** । ಈಸು ಮಾತುಗಳೇಕೆ ಮನ್ಮನದ । ಆಶೆ ಪೂರ್ತಿಯಮಾಡಿ ಎಮ್ಮ [illegible] ಉ । ದಾಸಿಸದೆ ಅನುದಿನ ನೋಳ್ಪುದು ॥ ೫

ಅಟ್ಟತಾಳ

ನಿಗಮತತಿಗಳಿಗೆ ವೇದ್ಯನಾಗದ ನಿನ್ನ । ಅಗಣಿತ ಮಹಿಮೆ ಲಕುಮಿ ಬೊಮ್ಮ ಭವಾ । ದಿಗಳು ತಾವರಿಯರು ಸಾಕಲ್ಯ ಮಂದ ಜೀ । ವಿಗಳಿಗೆ ಗೋಚರಿಸುವುದೆ ನಿನ್ನ ರೂಪ । ಭಗವಂತ ನೀನೆ ದಯಾಳುವೆಂದರಿದು ನಾ । ಪೊಗಳಿದೆನೊ ಯಥಾಮತಿಯೊಳಗೆ ಶ್ರೀಶ । ಬಗೆಯದೆ ನಿನ್ನಪರಾಧ ಕೋಟಿಗಳ । ಜಗತೀಪತಿ ತನ್ನ ಮಗುವಿನ ತೊದಲು ಮಾ । ತುಗಳನೆ ಕೇಳಿ ತಾ ನಗುತ [illegible] ಬಗೆ । ಬಗೆಯಿಂದ ಪೂರ್ತಿಸಿ ಮಿಗೆ ಹರುಷದಿಂದ । ಬಿಗಿದಪ್ಪಿ [illegible] ಶಿಶುವಿನ । ತೆಗೆದು [illegible] ಮತ್ತೆ ಹಗೆಗೊಂಬನೇನೋ ತ್ರೈ । ಯುಗನೆ ಬಿಡದೆ [illegible] ದಾಸಗೆ । ಬಗೆ ಬಡತನವೇಕೆ ಸಂಸಾರದೊಳಗೆ ನಾ । [illegible] ಈ । ಜಗಕೆ ರೂಪ ಒಂದಾಗೆ ಅಪುದಸಾಧ್ಯವೊ । ಗಗನ ಭೂ ಪಾತಾಳ ವ್ಯಾಪ್ತರೂಪನೆ ಕರ । ಮುಗಿದೆ ಗೋಚರಿಸೆಮ್ಮ ದೃಗುಯುಗಗಳಿ ಗಿಂದು । ಯುಗವರ್ತ **ಶ್ರೀ ಜಗನ್ನಾಥವಿಠಲ** ನರ । ಮೃಗನಾಗಿ ಕಂಭದಿಂದೊಗೆದು ಬಂದೊದಗಿದೆ ॥ ೬

ಆದಿತಾಳ

ಶ್ರೀನಿಧಿ ಪ್ರತಿ ದೇಹಂಗಳಲ್ಲಿ ಗತಿ । ನೀನಲ್ಲದೆ ಎಮಗಾರಿಹರಿಲ್ಲಿ । ಆ ನಳಿನ ಭವ ಭವಾದ್ಯ ನಿಮಿಷರ ನಿ । ಜಾನಂದವರಿತು ಫಲಗಳ ಕೊಡುವೆ ಮು । ರಾನುಭಾವ ಎಮ್ಮಭಿಮತ ಸಲಿಸುವ । ದೇನಚ್ಚರಿ ನಿನ್ನರಸಿ ಲಕುಮಿ ಕಡೆ । ಗಣ್ಣಿಳು ಪರಮೈಶ್ವರ್ಯದ ಪ್ರಾಂತ ಚಿ । ದಾನಂದಮಯನೆ ಪ್ರಣತರ ಅಧಿಕಾ । ರಾನುಸಾರ ನಡೆಸುವ ಮುಖ್ಯ । ಪ್ರಾಣಪತಿಗೆ ನೂತನ ವಿಜ್ಞಾಪನ । ವೇನುಂಟನುದಿನದಲಿ ಪಾಳ್ಪುದು । ಮಾನವ ಗುರು **ಜಗನ್ನಾಥವಿಠಲ** ಕರುಣಾನಿಧಿ ಸರ್ವದ ಸುಲಭ ನೀನಲ್ಲದೆ ॥ ೭

ಜತೆ

ಚಟುಲ ಕಾರ್ಯಗಳ ಸಂ । ಘಟನೆ ಮಾಡುವೆಯೊ ನಿ ।
ಷ್ಕುಟಿಲ **ಜಗನ್ನಾಥ । ವಿಠಲ** ದೇವೋತ್ತಮ ॥

ದಾಸರ ಉತ್ತರಯಾತ್ರೆಯು ಹತ್ತು ಹನ್ನೆರಡು ವರ್ಷಕಾಲ ಹಿಡಿಯಿತು. ಶಾಸ್ತ್ರಪಾಂಡಿತ್ಯವೊಂದು ಕಡೆ, ಕೀರ್ತನ ವೈಖರಿಯೊಂದು ಕಡೆ ಸೇರಿ ಉತ್ತರಭಾರತದಲ್ಲಿ ದಾಸರ ಖ್ಯಾತಿಯು ಬಹಳ ಪ್ರಶಂಸೆಗೆ ಬಂದಿತು. ವಿದ್ವತ್ಕ್ಷೇತ್ರಗಳಲ್ಲಿ ಗೀರ್ವಾಣಭಾಷೆಯಲ್ಲಿ ಕೀರ್ತನಮಾಡುತ್ತಿದ್ದುದರಿಂದ ದಾಸರ ಭಾಗವತ ಧರ್ಮಪ್ರಚಾರಕ್ಕೆ ಅಲ್ಲಿ ಸಹ ಹೆಚ್ಚಿನ ಅವಕಾಶ ದೊರೆಯಿತು.

ದಾಸರು ಸಕಲಯಾತ್ರೆಗಳನ್ನೂ ಮಾಡಿ ಉತ್ತರದಿಂದ ದಕ್ಷಿಣಕ್ಕೆ ಬರುತ್ತಾ ಗದ್ವಾಲ ಮಹಾರಾಜನ ಪ್ರಾರ್ಥನೆಯಂತೆ ಅಲ್ಲಿ ಕೆಲವುಕಾಲ ವಾಸಮಾಡಿದರು. ಸುರಪುರದಲ್ಲಿ ತಮ್ಮ ಶಿಷ್ಯ ಹೇಗಿರುವನೋ ತಿಳಿಯಬೇಕೆಂದು ತಮ್ಮ ಆಗಮನದ ವಾರ್ತೆಯನ್ನು ಅವರಿಗೆ ಹೇಳಿ ಕಳುಹಿಸಿದರು. ದಿವಾನಗಿರಿಯನ್ನು ಮಾಡುತ್ತಿದ್ದ ಆ ಗೃಹಸ್ಥನು ಪತ್ನೀ ಪುತ್ರರನ್ನೂ ಕರೆದುಕೊಂಡು ಅದುವರೆಗೆ ತಾನು ಆರ್ಜಿಸಿದ್ದ ಧನಕನಕಸಹಿತನಾಗಿ ದಾಸರ ದರ್ಶನಕ್ಕೆ ಬಂದನು. ಚರಣಾನುಗ್ರಹದಿಂದ ದೊರೆತ ಸರ್ವಸ್ವವನ್ನೂ ಸ್ವೀಕರಿಸಬೇಕೆಂದು ನಮಸ್ಕಾರಮಾಡಿದನು. ದಾಸರು ನಗುತ್ತಾ–'ರಾಯಾ! ನಿನ್ನ ಸೇವಾಫಲ ನಮಗೆ ಆಗಲೇ ಮುಟ್ಟಿದೆ. ಎಲ್ಲವನ್ನೂ ಇಟ್ಟುಕೊಂಡು ಪುತ್ರಪೌತ್ರ ಪರಂಪರೆಯಾಗಿ ಸೌಖ್ಯದಿಂದ ನೀನು ಬಾಳು' ಎಂದು ಆಶೀರ್ವಾದ ಮಾಡಿದರು.* ಗೃಹಸ್ಥನು ಬಿಡದೆ ದಾಸರನ್ನು ಸುರಪುರಕ್ಕೆ ಕರೆದುಕೊಂಡು ಹೋದನು. ಪೂರ್ವ ಪರಿಚಿತನಾದ ಸುರಪುರದ ರಾಜನು ಆ ಸಮಯದಲ್ಲಿ ದಾಸರಿಗೆ ಆ ಕಾಲದ ೬೦೦ ವರಹ ಉತ್ಪತ್ತಿಯ ಗ್ರಾಮಗಳನ್ನು ಜಹಗೀರು ಕೊಟ್ಟನು. ದಾಸರು ಅವುಗಳನ್ನು ತಮ್ಮ ಪುರೋಹಿತ ವಂಶದವರಿಗೆ ಕಾಲಾಂತರದಲ್ಲಿ ದಾನಮಾಡಿದರು.

ದಾಸರು ಬಹುಕಾಲ ದೇಶಸಂಚಾರದಲ್ಲಿದ್ದುದರಿಂದಲೂ, ದೇಶದಲ್ಲಿ ರಾಜಕೀಯ ಪರಿಪ್ಲವಗಳು ಹೆಚ್ಚಿ ಯುದ್ಧಪ್ರಸಕ್ತಿಯಿದ್ದುದರಿಂದಲೂ ಮುಂದೆ ಸ್ಪಷ್ಟವಾದ ಮಾನವಿ

* ಈ ವಂಶದವರು ಈಗಲೂ ಕಲ್ಬುರ್ಗಿ ಜಿಲ್ಲೆಯಲ್ಲಿದ್ದಾರೆ.

ಯಲ್ಲಿ ಕೆಲವು ಕಾಲ ವಾಸಮಾಡಿದರು. ಆ ಸಂದರ್ಭದಲ್ಲಿ ಅವರಿಗೆ ಪುತ್ರಶೋಕ ಪ್ರಾಪ್ತ ವಾದದ್ದು ಮಾತ್ರವಲ್ಲದೆ ಇದ್ದ ಒಬ್ಬ ಮಗಳಿಗೂ ಮನೆತಪ್ಪಿ–ವೈಧವ್ಯ ಪ್ರಾಪ್ತಿಸಿತು. ಆಕೆಯು ತೌರುಮನೆಯನ್ನು ಸೇರಬೇಕಾಯಿತು. ಮಗಳ ಮನಶ್ಶಾಂತಿಗಾಗಿ ದಾಸರು ತತ್ವಸುವಾಲಿಯೆಂಬ ಸುಮಾರು ೬೦೦ ನುಡಿಗಳ ಗ್ರಂಥವನ್ನು ರಚಿಸಿ, ನಿತ್ಯಭಜನೆಗೆ ಅನು ಕೂಲಮಾಡಿಕೊಟ್ಟರು. ಅದ್ದರಿಂದ ಆಕೆಯ ಭಕ್ತಿಯು ಬಲಿದು, ಆಕೆಯು ಮಹಾ ಜ್ಞಾನಿಯೆನಿಸಿದಳು.

ತತ್ವ ಸುವಾಲಿಯ ಪದಗಳು, ಎಷ್ಟು ಸರಳ ಮತ್ತು ಎಷ್ಟು ಮನಸ್ಸು ಕರಗು ವಂತಿವೆಯೆಂಬುದಕ್ಕೆ ಕೆಲವು ಮಾದರಿಗಳನ್ನು ಈ ಕೆಳಗೆ ಉದಹರಿಸಿದೆ.

ಸುವಾಲಿ

ಪತಿತ ನಾನಾದರೂ ಪತಿತಪಾವನ ನೀನು | ರತಿಪತಿಜನಕ ನಗಪಾಣಿ | ನಗಪಾಣಿ
ನೀನಿರಲು ಇತರ ಚಿಂತ್ಯಾಕೋ ಎನಗಿನ್ನು ? || ೧೦

ನಡೆನುಡಿಗಳಪರಾಧ ಒಡೆಯ ನೀನೆಣಿಸಿದರೆ | ಬಡವ ನಾನೆಂತು ಬದುಕಾಲೊ |
ಬದುಕಾಲೊ ಕರುಣಾಳು ಕಡೆ ಬೀಳ್ವದೆಂತೋ ಭವದಿಂದ || ೧೧

ಏನೇನು ಕಲ್ಪದಲಿ ದಾಸನಾ ನಿನಗಯ್ಯ | ಈಶ ನೀನೆಂಬ ನುಡಿ ಸಿದ್ಧ | ನುಡಿ
ಸಿದ್ಧವಾಗಿರಲುದಾಸೀನಮಾಡಾಲುಚಿತಲ್ಲ || ೧೨

ಆವ ಯೋನಿಯೊಳಿರಿಸು ಆವ ಲೋಕದೊಳಿರಿಸು | ಆವಾಗ ನಿನ್ನ ನೆನೆವಂತೆ |
ನೆನೆವಂತೆ ಕರುಣಿಸೊ ದೇವಕೀಕಂದ ದಯದಿಂದ || ೧೩

ಶಿಷ್ಟನೆಂದೆನಿಸೆನ್ನ ಭ್ರಷ್ಟನೆಂದೆನಿಸು ಸ | ರ್ವೇಷ್ಟಪೂರುತಿಯೇ ಜನರಿಂದ |
ಜನರಿಂದ ನುಡಿಸಿದ್ದು ಇಷ್ಟವೇ ಕಾಣೋ ಎನಗಿನ್ನು || ೧೪

ಶರಣಪಾಲಕನೆಂಬ ಬಿರುದಿದ್ದ ಕಾರಣ | ಪೊರೆಯದಿರೆ ಎನ್ನ ನಗರೇನೋ |
ನಗರೇನೋ ಮೂಲೋಕದರಸಾ ನಾ ನಿನ್ನ ಬಿಡೆ ಕಂಡ್ಯಾ || ೧೫

ಪಾಪಪುಣ್ಯಗಳ ಅರ್ಥವನ್ನು ಯುಕ್ತಿ ಯುಕ್ತವಾಗಿ ವಿವರಿಸುವ ನುಡಿಯನ್ನು ಓದಿದರೆ ದಾಸರ ಮನಸ್ಸು ಗೊತ್ತಾಗುತ್ತದೆ.

ಪಾಪ ಪುಣ್ಯಗಳು ಎರಡಾವನೆ ನಿನ್ನರಿವು | ಪ್ರಾಪಕನು ನೀನು ಇರಲಾಗಿ |
ಇರಲಾಗಿ ತಿಳಿಯದುದೆ ಪಾ [illegible] ಯುವುದೇ ಮಹಾ ಪುಣ್ಯ ||

ದಾಸರ ಈ ಮಾತಿನಿಂದ ಗ್ರೀಸಿನ ತತ್ವಜ್ಞಾನಿಯಾದ ಸಾಕ್ರೆಟೀಸನ 'Knowledge is virtue, ignorance is vice' ಎಂಬ ಮಾತಿನ ನೆನಪಾಗುತ್ತದೆ. ದಾಸರಂತೂ ಇಂಗ್ಲೀಷು ಓದಿದವರಲ್ಲ. ಅವರ ಕಾಲದಲ್ಲಿ ಇಂಗ್ಲೀಷು ಶಾಲೆಯೂ ಇರಲಿಲ್ಲ.

ಸಾಕ್ರೆಟೀಸನು ಹೀಗೆ ಹೇಳಿರುವನೆಂದು ತಿಳಿಸುವರೂ ಅವರಿಗೆ ದೊರೆಯಲು ಸಾಧ್ಯವಿರಲಿಲ್ಲ. ಆದರೂ ಯಾವ ದೇಶ ಯಾವ ಕಾಲ ಯಾವ ವ್ಯಕ್ತಿಗಳಲ್ಲಾಗಲೀ ಅಮರವಾದ ವಿಶ್ವ ತತ್ವವು ಹೇಗೆ ಬುದ್ಧಿಗೋಚರವಾಗುವುದೆಂಬುದನ್ನು ಇಲ್ಲಿ ನೋಡಬಹುದು.

ವಿಧಿ ನಿಷೇಧ ಮಡಿ ಮೈಲಿಗೆಗಳನ್ನು ಕುರಿತು

ವಿಧಿ ನಿಷೇಧಗಳೆಂಬುದಧಮಾಧಿಕಾರಿಗ | ಲ್ಲದೆ ನಿನ್ನ ನಾಮ ಸರ್ವತ್ರ | ಸರ್ವತ್ರ
ಚಿಂತಿಸುವ ಬುಧರಿಗಿನ್ನುಂಟೇ ಜಗದೊಳು || ೩೬

ಜಡದೊಳಗೆ ನಿಂದು ನಿರ್ಮಲರಾದೆನೆಂದು ತ | ಮ್ಮೊಳು ತಾವೇ ಹಿಗ್ಗೀ ಸುಖಿ
ಸುವರು | ಸುಖಿಸುವರು ಪರಮಮಂಗಳಮೂರ್ತಿ ನಿನ್ನ ನೆನೆಯಾದೆ || ೩೭

ಜಲಭೂತಜಲ ಜನರ ಮಡಿಮಾಡಲಾಯಿತೆ | ಜಡಧಿ ಮಂದಿರನ ಶುಭನಾಮ |
ಶುಭನಾಮ ಮೈಲಿಗೆಯ ಕೆಡೆಸಿ ಮಂಗಳವ ಕೊಡದೇನೊ || ೩೮

ಓಡಿಯೋಗುವ ಮಡಿಯ ಮಾಡಿದಣಿಯಲಿ ಬೇಡ | ನೋಡು ಸರ್ವತ್ರ ಹರಿ
ರೂಪ | ಹರಿರೂಪ ನೋಡಿ ಕೊಂಡಾಡು ಮನವುಬ್ಬೀ ಸುಖಿಸುತ್ತ || ೩೯

ಚಿಂತಾತುರರಾದವರಿಗೆ ಧೈರ್ಯದ ಮಾತು

ಮನವೆ ಆಲೋಚಿಸಿಕೋ ನಿನಗಿದ್ದ ಚಿಂತೆ ನ | ಮ್ಮನಿರುದ್ಧಗಿಲ್ಲೇ ಅನುಗಾಲ |
ಅನುಗಾಲ ಸಲಹುವ ಬಿನುಗು ಮಾನವರಾ ಬಿಡುವ್ರೋನೇ || ೪೧

ಭಂಡಮನವೇ ಕೇಳು ಕಂಡಕಂಡವರಿಗಿ | ನ್ನಂಡಲೆದರೇನೋ ಪುರುಷಾರ್ಥ |
ಪುರುಷಾರ್ಥ ಸ್ವಾಮಿಸದ ಪುಂಡರೀಕವನೇ ನೆರೆನಂಬು | ೪೨

ಅಶನವಸನಗಳೀವ ವಸುದೇವ ಸುತನಿರಲು | ಹುಸಿಯಾಗಿ ಬದುಕೋ ನರರೀಗೆ |
ನರರಿಗಾಲ್ಪರಿದರೆ ಹಸಿವೆಯುಡುಗುವ್ರುದೇ ಎಲೆ ಜೀವಿ || ೪೩

ಹಿಂದೆ ಜನ್ಮಾಂತರದಿ ತಂದುಕೊಟ್ಟವರ್ಯ್ಯಾರು | ಇಂದು ಮುಂದೀವ ಧೊರೆ
ಯಾರು | ಧೊರೆಯಾರು ಎಲೆ ಮನವೆ ಮಂದಮತಿಯಾಗಿ ಕೆಡಬೇಡ || ೪೪

ಪೂಜಾ

ಭೂಮಂಡಲವೆ ಪೀಠ ವ್ಯೋಮಮಂಡಲ ಛತ್ರ | ಸೋಮ ಸೂರ್ಯಾರೇ ಮಹ
ದೀಪ | ಮಹದೀಪ ನಕ್ಷತ್ರಸ್ತೋಮಗಳೆ ನಿನಗೆ ಉಪದೀಪ || ೫೬

ಮಳೆಯೆ ಮಜ್ಜನವು ದಿಗ್ವಲಯಗಳು ವಸನಗಳು | ಬೆಳೆವ ಬೆಳಸುಗಳೇ
ನೈವೇದ್ಯ | ನೈವೇದ್ಯ ಜನರ ಕಂಗಳ ಕಾಂತಿ ನಿನಗೇ ಆರಾರ್ತಿ || ೫೭

ಭೂರುಹವ ಚಾಮರವ ಮಾಡುವೆನು ಶರಧಿಯ | ಘೋರ ಘರ್ಜನೆಯೇ ಮಹ ವಾದ್ಯ | ಮಹವಾದ್ಯ ಜೀವರ ಸಾರಸುಸ್ವರವೇ ಸಂಗೀತ || ೩೮

ಪಾತಾಳ ಪಾದುಕ ವಿಧಾತಲೋಕವೆ ಮಕುಟ | ಶ್ವೇತದ್ವೀಪಗಳೇ ಒಡ್ಯಾಣ | ಒಡ್ಯಾಣ ವೈಕುಂಠ ಆತಪತ್ರಗಳೇ ನಿನಗೀವೆ || ೩೯

ನಡೆವುದೇ ಹರಿಯಾತ್ರೆ ನುಡಿವುದೇ ಹರಿನಾಮ | ಕುಡಿವ ನೀರುಗಳೇ ಅಭಿಷೇಕ| ಅಭಿಷೇಕ ದಿನದಿನದಿ ಒಡಲಿಗುಂಬುವುದೇ ನೈವೇದ್ಯ || ೬೦

ಧರ್ಮ

ತತ್ತತ್ಪದಾರ್ಥದೊಳು ತತ್ತದಾಕಾರನಾ | ಗೆತ್ತ ನೋಡಿಸುದೂ ಇರುತಿಪ್ಪ | ಇರುತಿಪ್ಪ ಶ್ರೀಹರಿಗೆ ಭೃತ್ಯನೆಂಬುವುದೇ ಬಲು ಧರ್ಮ || ೬೩

ಸ್ವರ್ಗ ನರಕಗಳು

ನರಕ ಸ್ವರ್ಗಗಳೆಂಬವೆರಡು ಇಲ್ಲಿಹವು | ವಿಸ್ಮರಣೆಯೇ ನರಕ ಸ್ಮೃತಿ ಸ್ವರ್ಗ | ಸ್ಮೃತಿ ಸ್ವರ್ಗವಿರೆ ಬಾಹ್ಯ ನರಕ ಭಯಕಂಜೇ ಎಂದೆಂದೂ || ೯೪

ಅಪರಾಧ

ಅಪರಾಧಿ ನಾನೆಂಬುದುಪಚಾರ ಮಾತ್ರ ನಿನ | ಗಪರಾಧಿಯೆಂದೋದಿಳೆ ಯೋಳು | ಇಳೆಯೋಳು ಇನ್ನುಂಟೆ ಅಪರಾಧಿಯೆಂಬೋದಪರಾಧ ||

ಇದೇ ಧಾಟಿಯಲ್ಲಿ ನವಗ್ರಹಸ್ತೋತ್ರ ತುಲಸೀಸ್ತೋತ್ರ ಶಿವಸ್ತೋತ್ರ ಮೊದಲಾದುವುಗಳೂ ಇವೆ. ಮಾತುಗಳು ಮನಮುಟ್ಟುವಂತೆ–ಕಣ್ಣೀರು ತರುವಂತೆ ಇವೆ.

ಜಗನ್ನಾಥದಾಸರ ಕಾಲದಲ್ಲಿ ಉತ್ತರಾದಿ ಮಠದಲ್ಲಿ ಸತ್ಯಬೋಧತೀರ್ಥ ಶ್ರೀಪಾದಂಗಳವರು ಧರ್ಮಸಾಮ್ರಾಜ್ಯ ಪರಿಪಾಲಕರಾಗಿದ್ದರು. ಸತ್ಯಬೋಧರ ಕಾಲವೆಂದರೆ, ಶ್ರೀಮಠದ ಮಹದೈಶ್ವರ್ಯದ ಕಾಲ. ನವರತ್ನಗಳನ್ನು ಒಂಭತ್ತು ಭಂಗಾರದ ಕೊಡಗಳಲ್ಲಿ ತುಂಬಿಟ್ಟು ರಾಮಚಂದ್ರದೇವರಿಗೆ ರತ್ನಾಭಿಷೇಕ ಮಾಡುತ್ತಿದ್ದ ಕಾಲ. ತಂಜಾವೂರು, ಅನಂತಶಯನ, ಮೈಸೂರು, ಸವಣೂರು ಸಂಸ್ಥಾನಗಳಲ್ಲಿ ಮಠದ ಶಿಷ್ಯರು ದಿವಾನಗಿರಿ ಮೊದಲಾದ ಮಹಾಪದವಿಗಳನ್ನು ವಹಿಸಿದ್ದ ಕಾಲ. ಗುಮಿಯ ಗಯಾವಾಳ ರಂಘಾ ಕಠಿಣಚಿತ್ತರು ದಾಸಾನುದಾಸರಾಗಿ ಶಿಷ್ಯತ್ವ ವಹಿಸಿದ ಕಾಲ. ಸತ್ಯಬೋಧರು ವ್ಯಾಸರಾಯರಂತೆ ವಿಷವನ್ನು ಅರಗಿಸಿಕೊಂಡವರು. ಅಪರರಾತ್ರಿಯಲ್ಲಿ ಸೂರ್ಯದರ್ಶನ ಮಾಡಿಸಿದವರು. ವೇದ ವಿದ್ಯಾಭಿವೃದ್ಧಿಗೆ ಲಕ್ಷಗಟ್ಟಲೆ ದ್ರವ್ಯವನ್ನು ವ್ರಯಮಾಡಿದ ಮಹಾನುಭಾವರು.

ಸವಣೂರು ದಿವಾನ ಖಂಡೇರಾಯರು, ಶ್ರೀಮಠದ ಶಿಷ್ಯರಾಗಿದ್ದರು. ಸವ

ಣೂರು ನವಾಬನಂಥಾ ಪಠಾಣನು ಸ್ವಾಮಿಗಳ ಭಕ್ತನಾಗಿದ್ದನು. ಸ್ವಾಮಿಗಳು ಸಂಸ್ಥಾನ ಸಹಿತ ಸವಣೂರಲ್ಲಿರಲು ರಾಜಪ್ರಧಾನರೀರ್ವರೂ ಕಾರಣರಾಗಿದ್ದರು. ಗುರು ಮಹಾ ಸಮಾರಾಧನೆಯ ಕಾಲದಲ್ಲಿ ಶ್ರೀಗಳವರು ದೊಡ್ಡ ವಿದ್ವತ್ಸಭೆಯನ್ನು ನೆರೆಯಿಸಿ, ಪಂಡಿತರಾದವರಿಗೆ ವಿಶೇಷ ದ್ರವ್ಯದಾನ ಮಾಡುತ್ತಿದ್ದರು. ಜಗನ್ನಾಥದಾಸರು ಮಹಾ ಪಂಡಿತರಾಗಿದ್ದುದರ ಜೊತೆಗೆ, ಹರಿದಾಸರಾಗಿ ಧರ್ಮಪ್ರಚಾರ ಕಾರ್ಯಕ್ಕೂ ತೊಡಗಿ ಮಾಡುತ್ತಿದ್ದ ಮಹಾ ಸತ್ಕಾರ್ಯವನ್ನು ಕುರಿತ ಅವರ ಪ್ರಖ್ಯಾತಿಯನ್ನು ಕೇಳಿ, ಅವರನ್ನು ಸ್ವಾಮಿಗಳವರು ಪ್ರಯತ್ನಪೂರ್ವಕ ಸವಣೂರಿಗೆ ಕರೆಸಿಕೊಂಡರು. ದಾಸರನ್ನು ಕರೆಸುವುದೆಂದರೆ ಒಂದು ಸಂಸ್ಥಾನವನ್ನೇ ಕರೆಸಿದಂತಾಗಿತ್ತು. ಧೂಳಿದರ್ಶನದಲ್ಲೇ ದಾಸರು ಸ್ವಾಮಿಗಳನ್ನು ಈ ಪದದಿಂದ ಸ್ತೋತ್ರಮಾಡಿದರು.

ಮುಖಾರಿ—ಅಟ್ಟತಾಳ

ವಾದಿ ವಾರಣ ಪಂಚವದನ–ಸತ್ಯ
ಬೋಧ ಸದ್ಗುರು ಜಿತ ಮದನ ಪ.

ಬಾದರಾಯಣರಾಮ ವೈದೇಹಿ ಚರಣಾಬ್ಜಾ
ರಾಧಕ ನಿತ್ಯ ಸುಮೋದವಿತ್ತು ಕಾಯೊ ಅ.

ಶ್ರೀ ಮಧ್ವಮತ ವಾರಿಧಿ ಸೋಮ । ದ್ವಿಜ
ಸ್ತೋಮ ಸದ್ಗುಣಗಣಧಾಮ ॥
ಕಾಮಿತ ವರಕಲ್ಪ ಭೂಮಿಜ ವಿಬುಧ ಸು
ಪ್ರೇಮಿ ಸಂಯಮಿ ಕುಲೋದ್ಧಾಮ ದಯಾನಿಧೆ ॥

ಗೋಮಿನೀ ವಲ್ಲಭನ ಪದಯುಗ । ತಾಮರಸಗಳನನುದಿನದಿ ಬಿಡ
ದೇ ಮನಾಬ್ಜದಿ ಭಜಿಸುತಿಪ್ಪ ಮ । ಹಾಮಹಿಮ ನಾ ತುತಿಸಬಲ್ಲೆನೆ ॥ ೧

ದೀನಜನರ ಬಂಧು ನಿನ್ನ । ಪದ
ಕ್ಕಾ ನಮಿಸುವೆ ಸುಪ್ರಸನ್ನ ॥
ದಾನಮಾನಗಳಿಂದ ಜ್ಞಾನಿಜನರಿಗೆ ಮ ।
ಹಾನಂದ ಬಡಿಸುತ್ತ ಸಾನುರಾಗದಿ ನಿತ್ಯ ॥

ಶ್ರೀನಿಕೇತನ ನಿನ್ನ ಕಾಯೆ । ಜ್ಞಾನಿವಾಸಸ್ಥಾನವೆನಿಪ ಮ
ಹಾನುಭಾವ ಭವಪ್ರದಾಂಭೋ । ಜಾನುಗನು ಎಂದೆನ್ನ ಪಾಲಿಸು ॥ ೨

ಸತ್ಯ ಪ್ರಿಯರ ಕರಕಮಲ । ಜಾತ
ನಿತ್ಯನಿರ್ಜಿತ ಘೋರ ಶಮಲ ॥
ಚಿತ್ತಜಪಿತ ಜಗನ್ನಾಥ ವಿಠಲನ ।
ಚಿತ್ತಾನುವರ್ತಿಗಳಾಗಿ ಸಂಚರಿಸುತ ॥

ಅತ್ಯಧಿಕ ಸಂತೋಷದಲಿ ಪ್ರ । ತ್ಯರ್ಥಿಗಳನುತ್ತರಿಸಿ ಮಿಗೆ ಪುರು
ಷೋತ್ತಮನೆ ಪರನೆಂದು ಡಂಗುರ । ನೆತ್ತಿ ಹೊಯ್ಸಿ ಕೃತಾರ್ಥನೆಸಿಸಿದೆ ॥ ೩

ಮಹಾ ಸಮಾರಾಧನೆ ಮುಗಿದಮೇಲೂ ಸ್ವಾಮಿಗಳು ದಾಸರನ್ನು ಕಳುಹಿಸ ಲಿಲ್ಲ. ನಿರಂತರ ದಾಸರೊಡನೆ ಸ್ವಾಮಿಗಳ ಏಕಾಂತವು ಮಠದ ಪಂಡಿತರಿಗೆ ಸಹನೆಯಾಗ ಲಿಲ್ಲ. ಸತ್ಯಪ್ರಿಯರ ಕಾಲದಿಂದಲೂ ವಿಜಯದಾಸರಾದಿಯಾದ ಹರಿದಾಸರ ಯೋಗ್ಯತೆ ಯನ್ನು ಪರೀಕ್ಷಿಸುತ್ತಿದ್ದ ಸತ್ಯಬೋಧರಿಗೆ ಜಗನ್ನಾಥದಾಸರಲ್ಲಿ ಅತ್ಯಂತ ವಿಶ್ವಾಸ ಹುಟ್ಟಿತು. ಅವರು ದಾಸರಾದ ಸಂದರ್ಭದ ಪೂರ್ವ ಚರಿತ್ರೆಯನ್ನು ಕೇಳಿ ಸ್ವಾಮಿಗಳು ಪುಳುಕಿತ ರಾದರು. ವ್ಯಾಸರಾಯಮಠ ಉಡುಪೀ ಮಠಗಳಲ್ಲಿದ್ದಂತೆ, ತಮ್ಮ ಮಠದಲ್ಲೂ ಪೂಜಾ ಕಾಲದಲ್ಲಿ, ಜಗನ್ನಾಥರಾಯರು ಮಠಕ್ಕೆ ಬಂದ ಗುರುತಿಗೋ ಎಂಬಂತೆ, ಭಾಗವತರು ಗಾನಮಾಡಿ ಭಗವಂತನ ಸ್ತೋತ್ರಮಾಡುವ ಪದ್ಧತಿಯನ್ನು ಆಚರಣೆಗೆ ತಂದರು. ಉತ್ತ ರಾದಿ ಮಠದಲ್ಲಿ ಹರಿದಾಸರೆಂದರೆ ಇದ್ದ ಒಂದು ಪ್ರಕಾರದ ಅನಾದರವು ಜಗನ್ನಾಥದಾಸ ರಿಂದ ನಿವಾರಣೆಯಾಯಿತು.

ಸತ್ಯಬೋಧರು ತಮ್ಮ ಪೂರ್ವಾಶ್ರಮದಲ್ಲಿ ಭೂವರಾಹ ಮೂರ್ತಿಯ ಉಪಾಸಕ ರಾಗಿದ್ದರು. ಅವರ ಪೂರ್ವಾಶ್ರಮದ ಹೆಸರು ರಾಮಾಚಾರ್ಯರೆಂದು. ಯತ್ಯಾಶ್ರಮಿಗ ಳಾಗಿ ಸಂಸ್ಥಾನಪಾಲಕರಾದ ಮೇಲೆ ಅವರ ಉಪಾಸನಾಕ್ರಮವು ಬದಲಾಗಬೇಕಾಯಿತು. ರಾಮಮೂರ್ತಿಯನ್ನು ಧ್ಯಾನಿಸುತ್ತ ಕುಳಿತರೆ, ಹಿಂದೆ ಮಾಡಿದ್ದ ಉಪಾಸನೆಯ ಪ್ರಭಾವ ದಿಂದ, ಭೂವರಾಹಮೂರ್ತಿಯ ದರ್ಶನವಾಗುತ್ತಿತ್ತು. ಸ್ವಾಮಿಗಳು, ಇದಲ್ಲ–ರಾಮ ರೂಪದರ್ಶನವಾಗಬೇಕು ಎಂದು ತಲೆಯನ್ನು ಅಲುಗಾಡಿಸುತ್ತಿದ್ದರು. ಪಕ್ಕದಲ್ಲಿದ್ದ ಜಗನ್ನಾಥದಾಸರು,–ಅದೇಕೆ ? ಪೂರ್ವಾಶ್ರಮದಲ್ಲಿ ಪ್ರಸನ್ನವಾಗಿದ್ದ ರೂಪವು ಈಗ ರೂಪಾಂತರವಾಗಬಾರದು. ತಮ್ಮನ್ನು ಜಗದ್ಗುರು ಪೀಠದಲ್ಲಿ ಕೂಡಿಸಲು ಕಾರಣವಾದ ಉಪಾಸನೆಯು ಭೂವರಾಹನದು, ಶ್ರೀಗಳವರು ಶ್ರೀರಾಮನಲ್ಲಿ ಭೂವರ+ಅಹನನ್ನು ಚಿಂತಿಸಿದರಾಯಿತೆಂದರು. ಸತ್ಯಬೋಧರು ಕಣ್ತೆರೆದು ದಾಸರಕಡೆಗೆ ನೋಡಿ, ನೀವು ನಮ್ಮಲ್ಲೂ ಅಂತರ್ಯಾಮಿಗಳಾದಿರಾ ? ನಿಮಗೆ ನಮ್ಮ ಪೂರ್ವಾಶ್ರಮದಿಂದ ವಂದನೆಗ ಳೆಂದರು. ಭಗವದನುಗ್ರಹಕ್ಕೆ ಪದವಿಯೂ ಆಶ್ರಮವೂ ಹೇಗೆ ಎದುರಾದಾವು ? ಸತ್ಯ ಬೋಧರು ಆಶ್ರಮಕ್ಕೆ ಬಂದ ಹೊಸದರಿಯಲ್ಲಿ ವಿಜಯದಾಸರ ಸಮಾಗಮವಾಗಿತ್ತು. ಆಗ ಹರಿದಾಸರಲ್ಲೂ ಭಗವದನುಗ್ರಹವಿರುವುದೆಂದು ಗೊತ್ತಾಯಿತು. ಗೋಪಾಲದಾಸ ಸಹೋದರರು ಬಂದಾಗ ನಡೆದ ಪರೀಕ್ಷೆಯಿಂದ ಹರಿದಾಸರು ಅಪರೋಕ್ಷಜ್ಞಾನಿಗಳಾಗಿರುವ ಸಂಭವವುಂಟೆಂದು ಅನುಭವಕ್ಕೆ ಬಂದಿತು. ವರ್ತಮಾನಕಾಲದಲ್ಲಿ ಜಗನ್ನಾಥದಾಸರು ಸ್ವಾಮಿಗಳೊಡನೆ ಹೆಚ್ಚುಕಾಲವಿದ್ದುದರಿಂದ, ಹರಿದಾಸರಲ್ಲಿ ಶಾಸ್ತ್ರಪಾಂಡಿತ್ಯವೂ ಕವಿತಾ ಪ್ರೌಢಿಮೆಯೂ ಅಪರೋಕ್ಷಜ್ಞಾನವೂ ಸಮ್ಮಿಳಿತವಾಗಿರುವುದೆಂಬುದು ಸ್ಪಷ್ಟವಾಯಿತು.

ಜಗನ್ನಾಥದಾಸರು ಮೈಸೂರು ಸೀಮೆಯಲ್ಲಿ ಸಂಚರಿಸಬೇಕೆಂದು ಯೋಚಿಸುವ ಕಾಲಕ್ಕೆ ಸರಿಯಾಗಿ ಶವಣೂರು ಸಮೀಪದ ಕರ್ಜಗಿಯ ಜನರು ತಮ್ಮಲ್ಲಿಗೆ ಬರಬೇಕೆಂದು

ಪ್ರಾರ್ಥಿಸಿದರು. ಕರ್ಜಗಿಯು ವರದಾತೀರದಲ್ಲಿರುವ ನಿಸರ್ಗಸುಂದರವಾದ ಒಂದು ಚಿಕ್ಕ ಊರು. ಆಗ ಆ ಊರಿನಲ್ಲಿ ಘನಾಂತ ಅಧ್ಯಯನಮಾಡಿದ ಅಧ್ಯಾಪಕರೂ, ಅಗ್ನಿಹೋತ್ರಿಗಳೂ, ಪ್ರವಚನಾಚಾರ್ಯರುಗಳೂ ಬಹುಮಂದಿಯಿದ್ದರು. ಇವರಿಗೆಲ್ಲಾ ಪುಣ್ಯಶ್ಲೋಕರಾದ ಖಂಡೇರಾಯರ ಆಶ್ರಯವಿತ್ತೆಂದು ಹೇಳಬೇಕಾದ ಕಾರಣವಿಲ್ಲ. ಜಗನ್ನಾಥದಾಸರಿಗೆ ಕರ್ಜಗಿಯ ಜನರು ಅನನ್ಯ ಸಾಧಾರಣವಾದ ಸ್ವಾಗತಮಾಡಿದರು. ದಾಸಪ್ಪನೆಂಬ ಗೃಹಸ್ಥನ ದೊಡ್ಡಮನೆಯಲ್ಲಿ ದಾಸರಿಗೆ ಬಿಡಾರವಾಯಿತು.

ದಾಸಪ್ಪನು ಶಾಸ್ತ್ರವೇತ್ತನಾಗಿದ್ದರೂ, ಪ್ರಾಪಂಚಿಕ ಸುಖಾಭಿಲಾಷಾಮಗ್ನನಾಗಿ, ಆಚಾರಶೂನ್ಯನಾಗಿ–ಅಂತೆಯೇ ವೇಶ್ಯಾಲೋಲನಾಗಿಯೂ ಇದ್ದನು. ಅಂಥವನ ಮನೆಯಲ್ಲಿ ದಾಸರ ಬಿಡಾರವನ್ನೇರ್ಪಡಿಸಲು, ಅವನ ಮನೆಯು ವಿಶಾಲವಾಗಿ ಸಕಲ ಸೌಕರ್ಯ ಪೂರ್ಣವಾಗಿದ್ದುದು ಕಾರಣವಾಗಿತ್ತು. ದಾಸರ ತನ್ನ ಮನೆಗೆ ಬಂದಿದ್ದಾರೆಂದು, ದಾಸಪ್ಪನು ಲಕ್ಷ್ಯಮಾಡಲಿಲ್ಲ. ಮುಂಚಿತವಾಗಿ ಊಟಮಾಡಿ, ಎಂದಿನಂತೆ ವೇಶ್ಯಾಗೃಹಕ್ಕೆ ತೆರಳಿದನು. ಊರಜನರು ತನ್ನ ಮನೆಗೆ ದಾಸರು ಅತಿಥಿಗಳಾಗಿ ಬಂದರೂ, ದಾಸಪ್ಪನು ತನ್ನ ಮನೆಗೆ ಬರಲಿಲ್ಲ. ದಾಸರಿಗೀ ಸಂಗತಿ ತಿಳಿಯದಿರಲಿಲ್ಲ; ದಾಸಪ್ಪನ ಹೆಂಡತಿ ಗುಂಡಮ್ಮನೆಂಬ ಸಾಧ್ವಿಯು ಖಿನ್ನಳಾಗಿ ಬಂದವರ ಆದರ ಸತ್ಕಾರದಲ್ಲೂ ಕ್ಷೇಮ ಚಿಂತನೆಯಲ್ಲೂ–ಶ್ರದ್ಧಾಪೂರ್ವಕ ನಿರತಳಾಗಿದ್ದಳು. ದಾಸರ ರಾತ್ರಿ ಪೂಜಾಭಜನೆ ಸಿದ್ಧತೆಗಳಾದುವು. ಆಕಾಲಕ್ಕೆ ಸರಿಯಾಗಿ ದಾಸಪ್ಪನು ತನ್ನ ಗಲ್ಲೀಮೀಸೆಯನ್ನು ನೇವರಿಸುತ್ತಾ, ತಾಂಬೂಲವನ್ನು ಜಗಿಯುತ್ತಾ, ತಂಬಾಕನ್ನು ಸೇವಿಸುತ್ತಾ ಮನೆಗೆ ಬಂದನು. ಆಕಸ್ಮಾತ್ತಾಗಿ ಸಕಾಲಕ್ಕೆ ಬಂದ ಪತಿಯೊಡನೆ ಗುಂಡಮ್ಮನು ಇವೊಂದು ದಿನವಾದರೂ ಮನೆಯಲ್ಲಿರಬಾರದೇ ಎಂದು ಕಂಬನಿಗರೆಯುತ್ತಾ ಬೇಡಿಕೊಂಡಳು.

ಯಾವ ಸಂಸ್ಕಾರಬಲವೋ, ಜನ್ಮಾಂತರೀಯ ಪುಣ್ಯವಿಶೇಷವೋ ದಾಸಪ್ಪನು–'ದೊಡ್ಡವರು ಮನೆಗೆ ಬಂದಿದ್ದಾರೆ. ಅದಕ್ಕೇನು ಹಾಗೇ ಆಗಲಿ. ಅವರ ಬಳಿ ಪೈಲಿಗೆಯಿಂದೇಕೆ ಕೂಡಬೇಕು ? ನೀರು ಕಾಯಲಿ ! ಸ್ನಾನಮಾಡಿ ಕೀರ್ತನಕ್ಕೆ ಕೂಡುತ್ತೇನೆ' ಎಂದನು. ಅಲ್ಪ ಸಂತೋಷಿಯಾದ ಆ ಸಾಧ್ವಿಗೆ ಅಷ್ಟಕ್ಕೇ ಪರಮಾನಂದವಾಯಿತು. ದೊಡ್ಡವರು ಮನೆಗೆ ಬಂದದ್ದರಿಂದ ತನ್ನ ಗಂಡನಿಗೆ ಸದ್ಬುದ್ಧಿ ಬಂತೆಂದು ಹಿಗ್ಗಿದಳು. ನಿಮಿಷ ಮಾತ್ರದಲ್ಲಿ ಸ್ನಾನದ ಸಿದ್ಧತೆಯಾಯಿತು. ದಾಸಪ್ಪನು ಸ್ನಾನಮಾಡಿ ಶುದ್ಧನಾಗಿ ಮಡಿಯುಟ್ಟು, ಎಂದೂ ಇಲ್ಲದ ನಾಮಮುದ್ರೆಗಳನ್ನು ಧರಿಸಿ, ದಾಸರೆದುರಿಗೆ ಕುಳಿತನು. ಬಂದು ಕುಳಿತ ಗೃಹಸ್ಥನನ್ನು ನೋಡಿ–ದಾಸರ ಶಿಷ್ಯರಾದ ಪ್ರಾಣೇಶದಾಸರು–'ಗುರುಗಳೇ ಇಂದು ನಾನು ಭಜನೆಗಾರಂಭಿಸುತ್ತೇನೆ' ಎಂದರು. ಜಗನ್ನಾಥದಾಸರು, 'ಅದಕ್ಕೇನು ? ಹಾಗೇ ಮಾಡು' ಎಂದರು. ಪ್ರಾಣೇಶದಾಸರು, ಪದ್ಧತಿಯಂತೆ ಯಾವ ಪದವನ್ನೂ ಹಾಡಲಿಲ್ಲ. ಕಡೆಗೆ ಪುರಂದರದಾಸರ 'ಸತತ ಗಣನಾಥ ಸಿದ್ಧಿಯನೀವ' ಎಂಬುದರ ಉಚ್ಚಾರವನ್ನೂ ಮಾಡಲಿಲ್ಲ. ದಾಸಪ್ಪನ ಕಡೆ ನಿಟ್ಟಿಸಿದ ದೃಷ್ಟಿಯಿಂದ—

ಪೂರ್ವಿ—ಆದಿತಾಳ

ಆದದ್ದಾಯ್ತಿನ್ನಾದರು ಒಳ್ಳೇ । ಹಾದಿ ಹಿಡಿಯೊ ಪ್ರಾಣೀ ॥ ಪ.
ಈ ದುರ್ನಡತಿಂದ್ಹೋದರಿಹಪರದಿ । ಮೋದೆಂದಿಗು ಕಾಣೀ ಪ್ರಾಣೀ ॥ ಅ

ನೆಲ ಸತಿ ಧನದೊಳಾನವರತ । ಹುಳಾಗಿರುವೆಯಲ್ಲೋ
ಸ್ಥಳಾಸ್ಥಳರಿಯದೆ ಕಲಾಪ ಮಾಡ್ಯಘ । ಕೊಳಾಗುವುದು ಸಲ್ಲೋ
ಹಲ ಹಿಡಿದು ವಿಧಿ ಕುಲಾಚರಣೆ ಬಿಡೆ । ಪಲಾತೆಗುವರಲ್ಲೋ
ಎಲಾ ಕೇಳು ಒಂದು ತಿಲಾಮಾತ್ರ ನೀ । ಗೆಲಾಹ ಬಗೆಯಿಲ್ಲೋ ಪ್ರಾಣಿ ॥ ೧

ಶಿಲಾದಿ ವಿಗ್ರಹ ಥಳಾಸಿ ಹರಿಯೆಂ । ಬ್ಯೆಲಾ ಕೇವಲ ಸುಳ್ಳೋ
ಚಲಪ್ರತಿಮೆ ಪದಗಳರ್ಚಿಸದಲೆ । ಮಲಾಘಳಿಸಿದೆಲ್ಲೋ
ಕಳಾ ಬಿಡದಿರೆ ಅನಿಲಾನ ಹರಿಮನೆ । ಮೊಳಾಗಿರುವುದಲ್ಲೋ
ನಳಾಭರತ ಮುಖ ನಿಳಾಣ್ಮರಂದದಿ । ಭಲಾ ಎನಿಸಿಕೊಳ್ಳೋ ಪ್ರಾಣಿ ॥ ೨

ಬಿಲಾ ಸೇರುತಲಿ ಕೆಳಾಗಿ ತಪಿಸಲು । ಫಲಾ ಲೇಶತ್ತಿಲ್ಲೋ
ಖಳಾರಿದಿನ ಬಿಂದು ಜಲಾ ಕೊಳ್ಳೆನೆಂದು । ಛಲಾ ಮಾಡಲಿಲ್ಲೋ
ಬಲಾದರದಲಿಂತುಲಾದಿ ಸ್ನಾನ ಮೊ । ದಲಾದ ವ್ರತವೆಲ್ಲೋ
ಬಲಾರಿನುತ ಪ್ರಾಣೇಶವಿಠಲನ । ಬಲಾ ಘಳಿಸಿಕೊಳ್ಳೋ ಪ್ರಾಣೀ ॥ ೩

ಎಂಬುದಾಗಿ ಹಾಡಿದರು. ಜಗನ್ನಾಥದಾಸರು-'ಇದೇನು ಯೋಗಣ್ಣಾ ? (ಪ್ರಾಣೇಶ ದಾಸರ ಹೆಸರು ಯೋಗೀಂದ್ರರಾಯರೆಂದು) ರಾಯರಮೇಲೆ ಹರಿದುಬೀಳುತ್ತೀ ? ಗಣಪ್ಪನನ್ನೇಕೆ ಬಿಟ್ಟೆ ?' ಎಂದರು.

ಪ್ರಾಣೇಶದಾಸರು :—ಇವತ್ತಿನ ಗಣಪತಿ ಪ್ರಾರ್ಥನೆ ಹೀಗೆ !

ಜಗನ್ನಾಥದಾಸರು :—ರಾಯರಮೇಲೆ ಸಿಟ್ಟು ಬೇಡಪ್ಪಾ !

ಪ್ರಾಣೇಶದಾಸರು :—ಸಿಟ್ಟೇನು ಯಥಾರ್ಥದ ಮಾತಿಗೆ ?

ದಾಸಪ್ಪ :—ಹೌದು ಸ್ವಾಮಿಾ, ಅವರ ಮಾತು ಸತ್ಯ ! ನನಗೆ ತಕ್ಕಂತೆ ಹೇಳಿದರು.

ಪ್ರಾಣೇಶದಾಸರು :—ಹೇಳಿದಂತೆ ಮಾಡುವೆಯಾ ?

ದಾಸಪ್ಪ :—ಅಪ್ಪಣೆ ಸ್ವಾಮಿಾ, ಮಾಡುವೆನು.

ಪ್ರಾಣೇಶದಾಸರು :—ನಿನ್ನ ಈ ಗಲ್ಲೀಮಿಾಸೆಗೇನು ಹೇಳುವೆ ?

ದಾಸಪ್ಪ :—ಅದರ ಸಂಸ್ಕಾರ ನಾಳೆಯೇ ಮಾಡಿಬಿಡುವೆನು ! ತಮ್ಮ ಶಿಷ್ಯನಾಗುವೆನು !

ಜಗನ್ನಾಥದಾಸರು :—ಯೋಗಣ್ಣ ನಿನ್ನ ಮಾತು ಬಲು ತೀಕ್ಷ್ಣವಾಯಿತು.

ದಾಸಪ್ಪ :—ತೀಕ್ಷ್ಣವಲ್ಲ ಸ್ವಾಮಿಾ, ಅವರು ಯಥಾರ್ಥವಾದಿಗಳು.

ಪ್ರಾಣೇಶದಾಸರು :—ನೀನು ದಾಸನಾಗಬೇಕಾದರೆ ನಿನ್ನ ಎಲ್ಲಾ ದುರ್ಗುಣಗಳನ್ನೂ ಬಿಡಬೇಕು.

ದಾಸಪ್ಪ :—ಬಿಡುವೆನು-ತಡವಿಲ್ಲ.

ಈ ಮಾತುಗಳನ್ನು ಕೇಳಿ, ಗುಂಡಮ್ಮನು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ದೊಡ್ಡವರ ಪಾದಧೂಳಿಯಿಂದ ವಂಶ ಪಾವನವಾಯಿತೆಂದುಕೊಂಡಳು. ಪರಮಾತ್ಮಾ, ಮುಂದಾದರೂ ನನ್ನ ಗಂಡನಿಗೆ ಸದ್ಬುದ್ಧಿ ಬರಲೆಂದು ಮೊರೆಯಿಟ್ಟಳು.

ತರುವಾಯ ಜಗನ್ನಾಥದಾಸರ ಕೀರ್ತನೆಗಾರಂಭವಾಯಿತು.

ಶ್ರೀರಾಗ—ಝಂಪೆತಾಳ

ಸ್ಮರಿಸು ಸಂತತ ಹರಿಯನು ಪ.

ಸ್ಮರಿಸು ಸಂತತ ಹರಿಯ | ಕರುಣಾಳುಗಳ ಧೊರೆಯ |
ಸರಸಿಯೊಳಗಂದು ಕರಿಯ | ನರನ ಸಂಗರದೊಳಗೆ |
ಕಾಯ್ದುದರಿಯ | ಜಪ ಹೋಮ ತಪ ದಾನಗಳಿಗೆ ದೊರೆಯ |
ಜಗದೀಶ | ಶರಣು ಹೊಕ್ಕವರ ಮರೆಯ | ಧೊರೆಯ | ಅ. ಪ.

ಎಂಬ ಪದವು ದಾಸರ ಪೀಠಿಕೆಯಾಯಿತು. ಸಕಲ ಶಾಸ್ತ್ರಸಾರಭೂತವಾದ ಈ ಪದದ ಒಂದೊಂದು ಮಾತನ್ನೂ ವಿಸ್ತರಿಸುತ್ತಾ—

ತಾನೆ ಇಹಪರ ಸೌಖ್ಯ | ದಾನಿಗಳರಸನೆಂದು
ಸಾನುರಾಗದಿ ನಂಬಿದ | ಜನಕೆ ಸುರಧೇನು
ವಂದದಲಿ ಮೋದ | ಸಲಿಸುವ | ಮಹಾನಂದ
ಪೂರ್ಣಬೋಧ | ಪತಿ ಸಾಮ | ಗಾನಲೋಲ
ನ ಪ್ರಸಾದಾ | ಪಾದ || ೧

ಅಣುವಿನೊಳಗಣುವಹನು | ಘನಕೆ ಘನ
ತಮನಹನು | ಅಣುಮಹದ್ವಯ ಲಕ್ಷಣ |
ಕಲ್ಯಾಣಗುಣಜ್ಞಾನ ಘನಲಕ್ಷಣ | ಸಂಪೂರ್ಣ
ಮನಮುಟ್ಟಿ ಕರೆಯೆ ಕ್ಷಣ | ಬಂದೊದಗಿ
ಕುಣಿವ ಲಕ್ಷ್ಮೀವಕ್ಷನ | ಅನಪೇಕ್ಷನ || ೨

ನೋಡಿ ನೋಡಿಸುತಿಹನು | ಬೇಡಿ ಬೇಡಿಸು
ತಿಹನು | ನೀಡಿ ನೀಡಿಸುವ ಪಿಡಿವ | ಪಿಡಿಸುವನು
ಮಾಡಿ ಮಾಡಿಸುವ ಬಡವ | ರೊಡೆಯ ಕೊಂ
ಡಾಡುವರ ಒಡನಾಡುವ | ಈ ಮಹಿಮೆ
ಗೀಡೆಂದು ಆವ ನುಡಿವ | ಕೆಡುವ || ೩

ಚೆಲುವರೊಳಗತಿ ಚೆಲುವ । ಸುಲಭರೊಳ .
ಗತಿ ಸುಲಭ । ಒಲಿವ ಮನಬಂದ ತೆರದಿ । ಗುಣ
ಕರ್ಮ ಕುಲಶೀಲವೆಣಿಸ ಮನದಿ । ಭಕುತಿಯಲಿ
ಫಲವ ಕೊಡೆ ತಾ ತವಕದಿ । ಶಬರಿಯಂಜಲ
ನುಂಡ ಕರುಣ ಶರಧೀ । ಭರದಿ ॥ ೪

ಎಲ್ಲೆಲ್ಲಿ ನೋಡೆ ಮ । ತ್ತಲ್ಲಲ್ಲಿ ನೆಲೆಸಿಹನು ।
ಬಲ್ಲಿದನು ಭಾಗ್ಯವಂತ । ನಂಬಿದರಿಗಲ್ಲದೇ
ಒಲಿಯ ಭ್ರಾಂತ ದುಷ್ಟಜನ । ರೊಲ್ಲ ನಿಶ್ಚಯ ಮಹಾಂತ ।
ಒಡೆಯ ಕೈವಲ್ಯದಾಯಕನ ಇಂಥಾ । ಸಂಥಾ ॥ ೫

ಪ್ರಾದೇಶ ಮಾತ್ರ ಸ್ಥಿತ । ಭೂದೇವಿಯರಸ ಕಾ
ಕೋದರಾದ್ಯಮರವ್ರಾತ । ಸಹಿತ ಮಹದಾದಿ ಪೃಥ್ವ್ಯಂತ ಭೂತ
ದೊಳು ನೆಲೆಸಿ । ಕಾದುಕೊಂಡಿಹ ವಿಧಾತಾ ।
ಅಂಡ ತ್ರಿದ । ಶಾಧಿಪನ ಸುತನ ಸೂತ । ಸ್ವರತ ॥ ೬

ಸ್ವಗತ ಭೇದವಿಶೂನ್ಯ । ನಿಗಮಸಂಚಾರ ಶ್ರೀ
ಜಗನ್ನಾಥ ವಿಠಲರೇಯ । ತನ್ನ ಪಾ
ದಗಳ ಧ್ಯಾನಿಪರ ನೋಯ । ಗೊಡದಂತೆ
ಹಗಲಿರುಳು ಕಾವ ಮಾಯಾ । ರಮಣ ನಮ್ಮ
ನಗಲಿ ಸೈರಿಸನು ಪ್ರೀಯ । ಧ್ಯೇಯ ॥ ೭

ಎಂಬ ನುಡಿಗಳನ್ನು ಪಾಡಿ ಅರ್ಥಾನುವಾದ ಮಾಡಿದರು. ಅದು ಜನರ ಭಕ್ತಿಯನ್ನು ಹೆಚ್ಚಿಸಿತು. ಕಂಗಳಿಂದ ನೀರನ್ನು ತರಿಸಿತು. ದಾಸರು ಸ್ತಬ್ಧರಾದರು. ಶಿಷ್ಯರು ಸ್ತಬ್ಧರಾದರು. ಕೇಳಿದವರು ಸ್ತಬ್ಧರಾದರು. ಪ್ರಪಂಚವೇ ಸ್ತಬ್ಧವಾದಂತಾಯಿತು. ದಾಸಪ್ಪನ ವೃತ್ತಿಯು ಅವರ್ಣನೀಯವಾಯಿತು. ದಾಸರು ತನ್ನ ಉದ್ಧಾರಕ್ಕೇ ತನ್ನ ಮನೆಗೆ ಬಂದರೆಂದರಿತನು. ಧಾರೆಯಾಗಿ ಬರುವ ಕಂಬನಿಯ ಕಣಗಳನ್ನು ಕಿರುಬೆರಳಿನಿಂದ ಮಿಾಟುತ್ತಾ ಸ್ಥಾಣುವಿನಂತಾದನು.

ಗುಂಡಮ್ಮನಾದರೋ ಗಂಡನನ್ನು ನೋಡುವಳು ; ದಾಸರನ್ನು ನೋಡುವಳು ; ದೇವರನ್ನು ನೋಡುವಳು; ಭಕ್ತಿಪರವಶಳಾಗಿ ಅಳುವಳು. ಈ ರೀತಿ ಆ ರಾತ್ರಿ ಕಳೆಯಿತು. ಕೀರ್ತನವಾಯಿತು. ಬಂದಿದ್ದವರೆಲ್ಲ ತಮ್ಮ ತಮ್ಮ ಗೃಹಗಳನ್ನು ಕುರಿತು ತೆರಳಿದರು. ದಾಸರು ವಿಶ್ರಮಿಸಿಕೊಂಡರು.

ದಾಸಪ್ಪನು, ಹೆಂಡತಿಯನ್ನು ಕುರಿತು–'ನೋಡು, ನಾನು ಹರಿದಾಸನಾಗಿಬಿಡುವೆನು. ನನಗೆ ನೀನೇ ಗುರುವಾದೆಯಲ್ಲವೆ? ನಿನ್ನ ಮಾತೇ ನಾನು ದಾಸರ ಕೀರ್ತನ ಕೇಳಲು ಕಾರಣವಾಯಿತಲ್ಲವೆ? ನಿನ್ನ ನೋಟವೇ ! ಆ 'ಇದೊಂದು ದಿನವಾದರೂ ಮನೆಯಲ್ಲಿರಬಾರದೇ ?' ಎಂದು ಕಂಬನಿದುಂಬಿ ನೋಡಿದ, 'ಆ ಒಂದು ನೋಟವೇ ನನಗೆ

ಮಾತಾಯಿತಲ್ಲವೆ? ನೀನು ಪುಣ್ಯಾತ್ಮಳು. ನಾನು ಪಾಪಾತ್ಮನು. ನೀನು ಪತಿವ್ರತೆಯು; ನಾನು ನಿನ್ನ ಪ್ರೇಮದ್ರೋಹಿಯು. ನಿನ್ನಿಂದ ನನ್ನ ಮನೆಗೆ ಕೀರ್ತಿ ಬಂದಿತು. ನನ್ನಿಂದ ನನ್ನ ಮನೆಗೆ ಅಪವಾದ ಬಂದಿತು. ನಿಜವಾಗಿ ನೀನು ನನ್ನನ್ನು ಕ್ಷಮಿಸುವೆಯಾ?' ಎಂದು ಹೆಂಡತಿಯ ಗಲ್ಲವನ್ನು ಹಿಡಿದು, ಕರವಸ್ತ್ರದಿಂದ ಕಣ್ಣನ್ನೊರಸಿಕೊಳ್ಳುತ್ತಾ, ಅಂಗಲಾಚಿ ಪ್ರಶ್ನೆ ಮಾಡಿದನು. ಗುಂಡಮ್ಮನಿಗೆ ಅದೊಂದು ಅಳುವ ದಿನವಾಗಿಬಿಟ್ಟಿತು. ಗಂಡನ ಭುಜದಮೇಲೆ ತಲೆಯಿಟ್ಟು—

ಗುಂಡಮ್ಮ:—ನೀವು ಹೀಗೆನ್ನಬಾರದು, ನನ್ನನ್ನು ಕ್ಷಮೆ ಬೇಡಬಾರದು, ನೀವೇ ನನ್ನ ಗುರುವು, ನನ್ನ ಸರ್ವಸ್ವವೂ ನೀವೇ!

ದಾಸಪ್ಪ:—ನಿನ್ನ ಈ ಸದ್ಗುಣದ ಮಾತಿಗೇ ನಾನು ನಿನ್ನನ್ನು ಗುರುವೆನ್ನುವುದು. ನಿಜವಾಗಿ ನನ್ನನ್ನು ಕ್ಷಮಿಸಿರುವೆಯಾ?

ಗುಂಡಮ್ಮ:—ರಾಮ ರಾಮ. ಕೇಳಬಾರದ ಮಾತು! ನಿದ್ರೆಗೆಟ್ಟರೆ, ನಿಮ್ಮ ಮೈಗಾಗುವುದಿಲ್ಲ. ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಿರಿ.

ಗುಂಡಮ್ಮನು ಗಂಡನಿಗೆ ಹಾಸಿಗೆಯನ್ನು ಸಿದ್ಧಪಡಿಸಿದಳು. ಎದುರಿಗಿದ್ದರೆ ಆತನು ಮತ್ತೆ ಮರುಗುವನೆಂದು ಕಣ್ಮರೆಯಾದಳು. ದಾಸಪ್ಪನು, ತನ್ನಲ್ಲಿ ತಾನು–'ಏನು ಮಾತನಾಡಿದರು ದಾಸರು! 'ಆಪದ್ದಾಯ್ತಿನ್ನಾದರೂ ಒಳ್ಳೇ ಹಾದಿ ಹಿಡಿಯೋ ಪ್ರಾಣಿ!' ಎಂಥಾ ಉಪದೇಶವಿದು! ಎಲ್ಲಿಂದ ಬಂದರೀಸದ್ಗುರುಗಳು?" ಎಂದುಕೊಳ್ಳುತ್ತಾ, ತನ್ನ ತಪ್ಪುಗಳೊಂದೊಂದನ್ನೂ ನೆನೆಸಿಕೊಳ್ಳುತ್ತಾ, ಹೆಂಡತಿಯ ಶಾಂತಗುಣವನ್ನು ಮೆಚ್ಚಿಕೊಳ್ಳುತ್ತಾ, ಸ್ವಲ್ಪ ಹೊತ್ತು ಹೊರಳಾಡಿದನು. ಹೆಂಡತಿಯು ಸುಪ್ರಭಾತದ ಉದಯರಾಗವನ್ನು ಹಾಡುತ್ತಾ, ಮನೆಗೆಲಸ ಮಾಡುತ್ತಿರುವುದು ಕಾಣಿಸಿತು. ಬೆಳಗಾಗುತ್ತಿರುವುದನ್ನು ಕಂಡು, ಹಾಸಿಗೆಯಿಂದೆದ್ದು ಕುಳಿತನು. ನಾಪಿತನನ್ನು ಕರೆಸಿ ದೀಕ್ಷಾವಿಸರ್ಜನೆ ಮಾಡಿಸಿಕೊಂಡನು. ತನ್ನ ವೇಶ್ಯೆಗೆ ಕಡೆಯ ಮಾತನ್ನು ಹೇಳಿ–ನಿನಗೆ ಬೇಕಾದುದನ್ನು ಬೇಡೆಂದನು. ಆ ಗುಣವಂತೆಯು, ತಾವೇ ಪರಗತಿಯ ಮಾರ್ಗವನ್ನು ಕಾಣುವಿರಾದರೆ, ತಮ್ಮ ಕೈ ಹಿಡಿದ ನನ್ನ ಗತಿಯೇನಾಗಬೇಕೆಂದಳು. ನನಗೂ ಸದ್ಗುರುಗಳನ್ನು ತೋರಿಸಿರೆಂದಳು. ಗುರುಗಳ ಕೀರ್ತನ ಕೇಳಿ ನಾನೂ ನಿಜವಾದ ದೇವದಾಸಿಯಾಗುವೆನೆಂದಳು. ಇನ್ನು ಮುಂದೆ ಪಾಪಕೃತ್ಯದಿಂದ ಜನ್ಮವನ್ನು ಅಪವಿತ್ರಗೊಳಿಸುವ ಪಾಪಿ ನಾನಾಗಲಾರೆನೆಂದಳು!

ದಾಸಪ್ಪನು ಸ್ನಾನಮಾಡಿ, ನೂತನ ಯಜ್ಞೋಪವೀತವನ್ನು ಧರಿಸಿ, ಮಂತ್ರೋಪದೇಶಕ್ಕೆ ಸಿದ್ಧನಾಗಿ ಕುಳಿತನು. ವೇಶ್ಯೆಯೂ ಮೈಯೊಳೆಯ ಶುದ್ಧಳಾಗಿ ಮುತ್ತೈದೆಯರಿಗೆ ಮರವಬಾಗಿನ ಕೊಡುವೆನೆಂದು ಸಿದ್ಧತೆಮಾಡಿಕೊಂಡಳು. ದಾಸಪ್ಪನ ಮನೆಯು ತಳಿರು ತೋರಣಗಳಿಂದಲಂಕೃತವಾಯಿತು.

ದಾಸಪ್ಪನ ಮುಖವನ್ನು ನೋಡಿದ ಜನರು, ಕಂಡವರಿಗೆಲ್ಲಾ ಗಲ್ಲೀಮಾಸೆಯ ಕಥೆಯನ್ನು ಕಥನಮಾಡತೊಡಗಿದರು.

ಜಗನ್ನಾಥದಾಸರು, ಬ್ರಾಹ್ಮೀಮುಹೂರ್ತಕ್ಕೇ ಎದ್ದು ಬಗಲುಬಂದನ್ನು ತೊಟ್ಟುಕೊಂಡು–ಲಪ್ಪಾಟಿಯನ್ನು ಸುತ್ತಿಕೊಂಡು ಹೊರಗೆ ಹೋಗಿದ್ದವರು, ಬುಟ್ಟಿಯು ತುಂಬ ತುಲಸಿ ಪುಷ್ಪಗಳನ್ನು ತೆಗೆದುಕೊಂಡು, ಶಿಷ್ಯರ ಸಹಿತ ಮನೆಗೆ ಬಂದರು. ಪ್ರಾಣೇಶ ದಾಸರು ದಾಸಪ್ಪನ ಮುಖವನ್ನು ಬಿರಿಬಿರಿ ನೋಡಿದರು. ಜಗನ್ನಾಥದಾಸರು–'ಏನು ಹಟವಾದಿ ಗೃಹಸ್ಥನಪ್ಪಾ!' ಎಂದರು. 'ಹಟವಾದಿಯೇನು? ಹೇಗಾಗಬೇಕೋ ಹಾಗಾದನೆ'ಂದು ಪ್ರಾಣೇಶದಾಸರು ನುಡಿದರು. ದಾಸಪ್ಪನಿಗೆ ಪ್ರಾಣೇಶದಾಸರ ಮಾತು ಬಲು ಆಪ್ಯಾಯಮಾನವಾಯಿತು.

ಜಗನ್ನಾಥದಾಸರು ತುಲಸೀದಳಗಳನ್ನು ಆರಿಸಿಟ್ಟು ಸ್ನಾನಮಾಡಿದರು. ಗುರುಗಳನ್ನನುಸರಿಸಿ ಸರ್ವರ ಸ್ನಾನಾಹ್ನಿಕಗಳಾದುವು. ದಾಸರು ದಾಸಪ್ಪನನ್ನು ಕರೆದು–**"ಶ್ರೀದವಿಠಲ"** ಮುದ್ರಿಕೆಯನ್ನು ಮಂತ್ರೋಪದೇಶಪೂರ್ವಕ ಅನುಗ್ರಹಿಸಿದರು. ದಾಸಪ್ಪನ ದಾಸತ್ವಸ್ವೀಕಾರ ಸಮಾರಂಭವು, ಮದುವೇಮನೆಯ ಉತ್ಸವದಂತಾಯಿತು. ಆ ದಿನದ ಭಜನ ಕೀರ್ತನಗಳು ಅಭೂತಪೂರ್ವಗಳಾದುವು. ದಾಸಪ್ಪನ ಹೆಸರು **ಕರ್ಜಗೀ ದಾಸ**ರೆಂದು ಪ್ರಖ್ಯಾತವಾಯಿತು. ಕರ್ಜಗೀದಾಸರಾಯರು, ಮುಂದೆ ಸ್ವಲ್ಪ ಕಾಲದಲ್ಲೇ ಗುರುಗಳಿಗೆ ತಕ್ಕ ಶಿಷ್ಯರೆನಿಸಿ, ಅಪರೋಕ್ಷಜ್ಞಾನಿಗಳ ಪಙ್ಕ್ತಿಯಲ್ಲಿ ಕುಳಿತರು.

ಜಗನ್ನಾಥದಾಸರು ಮತ್ತು ಮೈಸೂರು

ದಾಸರು ಹರಿಹರೇಶ್ವರನ ಮೇಲೆ ಮಾಡಿರುವ ಸ್ತೋತ್ರದಿಂದ ಅವರು ಹರಿಹರದ ಮಾರ್ಗವಾಗಿ ಮೈಸೂರು ಸೀಮೆಯನ್ನು ಪ್ರವೇಶಿಸಿರಬೇಕೆಂದು ಕಾಣುತ್ತದೆ. ಆ ಕಾಲದಲ್ಲಿ ಟಿಪ್ಪುಸುಲ್ತಾನನು ಮೈಸೂರರಸರನ್ನು ಮೂಲೆಗೆ ಕೂಡಿಸಿ ತಾನೇ ರಾಜ್ಯವಾಳುತ್ತಿದ್ದನು. ಅಧಿಕಾರಿಗಳ ರಹದಾರಿಯಿಲ್ಲದೆ, ಪ್ರವಾಸಿಗಳು ಮೈಸೂರು ರಾಜ್ಯವನ್ನು ಪ್ರವೇಶಿಸಲು ಆಸ್ಪದವಿಯಿರಲಿಲ್ಲ. ಶ್ರೀರಂಗಪಟ್ಟಣದಲ್ಲಿದ್ದ ಫೌಜುದಾರ ವೆಂಕಟಸುಬ್ಬಯ್ಯನೆಂಬ ಅಧಿಕಾರಿಯ ಸಹಾಯದಿಂದ ದಾಸರ ಸಂಚಾರವು ಸುಗಮವಾಯಿತು. ಮಾಡುವುದೇನು? ಒಂದು ಕಡೆ ಹೈದರಾಬಾದಿನ ಹಜರತ್ತರು, ಒಂದುಕಡೆ ಆದವಾನಿಯ ಖಾನರು, ಒಂದುಕಡೆ ಸವಣೂರಿನ ಪಠಾಣರು, ಒಂದು ಕಡೆ ಮೈಸೂರಿನ ಸುಲ್ತಾನರು ಹೀಗೆ ಕರ್ಣಾಟಕದ ಚತುರ್ದಿಕ್ಕುಗಳೂ ಮುಸಲ್ಮಾನರ ಅಂಕೆಯಲ್ಲಿದ್ದುವು. ಇವರಿವರ ಪರಸ್ಪರ ವೈರ. ಇವರ ಮೇಲೆ ಮರಾಠಿಗರ ವೈರ, ಇವರೆಲ್ಲರ ಮೇಲೆ ಸರ್ವಭಕ್ಷಕರಾದ ಬ್ರಿಟಿಷರ ಸವಾರಿ! ಇಂಥಾ ಪರಿಸ್ಥಿತಿಯಲ್ಲಿ ದಾಸರ ತೀರ್ಥಾಟನೆಯಾಗಬೇಕು; ಧರ್ಮಪ್ರಚಾರವಾಗಬೇಕು; ಗ್ರಂಥ ರಚನೆಯಾಗಬೇಕು.

ದಾಸರು ಬೇಲೂರು ಮೇಲುಕೋಟೆ ಮೊದಲಾದ ಕ್ಷೇತ್ರಗಳ ದರ್ಶನಮಾಡಿಕೊಂಡು, ಶ್ರೀರಂಗಪಟ್ಟಣದಲ್ಲಿ ವೆಂಕಟಸುಬ್ಬಯ್ಯನ ಮನೆಯಲ್ಲಿ ಬಂದಿಳಿದರು. ಟಿಪ್ಪುವಿನ ಬಳಿ ಪೂರ್ಣಯ್ಯನವರು ಮುಖ್ಯಾಧಿಕಾರಿಗಳಾಗಿದ್ದರು. ದಿವಾನಗಿರಿಯ ಸರ್ವಾಧಿಕಾರ

ವಿರದಿದ್ದರೂ, ಜನರು ಅವರನ್ನು ದಿವಾನರೆಂದೇ ಕರೆಯುತ್ತಿದ್ದರು. ಸುಲ್ತಾನನು ಅಯ್ಯನವರನ್ನು 'ಚಿಚ್ಚಾ' ಎಂದು ಕರೆಯುತ್ತಿದ್ದನು.

ಹೈದರನ ಮರಣಕಾಲದಲ್ಲಿ ಪೂರ್ಣಯ್ಯನವರ ಸಹಾಯವಿರದಿದ್ದರೆ ಟಿಪ್ಪುವು ಮೈಸೂರು ಸುಲ್ತಾನನಾಗಲು ಸಾಧ್ಯವಿರಲಿಲ್ಲ. ಟಿಪ್ಪುವು ಆಗ ಸುಲ್ತಾನನಾಗದಿದ್ದರೆ, ಮೈಸೂರು ಸಹ ಭಾರತದಲ್ಲಿ, ನೇಪಾಳ ಭೂತಾನ ದೇಶಗಳಂತೆ ಒಂದು ಸ್ವತಂತ್ರಸಂಸ್ಥಾನವಾಗಿರುತ್ತಿತ್ತು. ಈಗಿನ ನಾಲ್ಕರಷ್ಟು ವಿಸ್ತಾರವುಳ್ಳ ಮದ್ರಾಸಾಧಿಪತ್ಯಕ್ಕೆ ಸಮಾನವಾದ ಅಖಂಡ ಕರ್ನಾಟಕವಾಗಿರುತ್ತಿತ್ತು. ಮೈಸೂರಿಗೆ ಕೊಡಗು ಅನಂತಶಯನಗಳಂಥಾ ಆಶ್ರಿತ ಸಂಸ್ಥಾನಗಳಿರುತ್ತಿದ್ದುವು.

ಪೂರ್ಣಯ್ಯನವರು ಧರ್ಮಾಭಿಮಾನಿಗಳೂ ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅನೇಕ ವಿದ್ವಜ್ಜನರು ಅವರ ಆಶ್ರಯದಲ್ಲಿದ್ದರು. ಪಂಡಿತರ ಪ್ರಾಬಲ್ಯದಿಂದ ದಾಸರಿಗೆ ಪೂರ್ಣಯ್ಯನವರಲ್ಲಿ ಪ್ರವೇಶದೊರೆಯಲಿಲ್ಲ. ಅಯ್ಯನವರು ಶಿಷ್ಟಾಚಾರ ಸಂಪನ್ನರಾಗಿದ್ದರು. ಕಚೇರಿಯಿಂದ ಬಂದೊಡನೆ ಸ್ನಾನಮಾಡಿ ಪಂಡಿತರೊಡನೆ ವಿವಿಧಮತ ಪ್ರಕ್ರಿಯೆಗಳ ಪರಾಮರ್ಶಮಾಡುತ್ತಿದ್ದರು. ತುಲನಾತ್ಮಕ ವಿಚಾರಸರಣಿಯು ಅಯ್ಯನವರ ಗೀಳಾಗಿತ್ತು. ಅರಬ್ಬೀ ಪಾರ್ಶೀ ಭಾಷೆಗಳ ಪರಿಶ್ರಮ ಅಯ್ಯನವರಿಗೆ ಬಹಳವಾಗಿತ್ತು. ಅವರಿಗಿದ್ದ ಇಸ್ಲಾಂಧರ್ಮದ ಪಾಂಡಿತ್ಯನೋಡಿ ಮೌಲ್ವಿಗಳು ಅಯ್ಯನವರಿಗೆ ತಲೆಬಾಗುತ್ತಿದ್ದರು. ಜಗನ್ನಾಥದಾಸರ ಮತ್ತು ಪೂರ್ಣಯ್ಯನವರ ಪರಿಚಯರ್ವಾಗಬೇಕೆಂಬ ಅಭಿಲಾಷೆಗೆ ಸಮಯ ಸನ್ನಿವೇಶಗಳೊದಗಿಬರಲಿಲ್ಲ. ದಾಸರಾಗಿ ಮುಂದುವರಿದು ಅಯ್ಯನವರನ್ನು ಕಾಣಲು ಹೋಗಲಿಲ್ಲ.

ಫೌಜುದಾರನ ಮನೆಯ ನಿತ್ಯ ಕೀರ್ತನದ ವರದಿಯು ಪೂರ್ಣಯ್ಯನವರಿಗೆ ತರಂಗತರಂಗವಾಗಿ ತಿಳಿಯುತ್ತ ಬಂತು. ವೆಂಕಟಸುಬ್ಬಯ್ಯನು ದಾಸರ ಕೀರ್ತನವೈಖರಿಯನ್ನೂ ಅವರ ಅಗಾಧ ಪಾಂಡಿತ್ಯವನ್ನೂ ಅಯ್ಯನವರಿಗೆ ತಿಳಿಸಿದನು. ಅವರನ್ನು ಒಂದು ದಿನವಾದರೂ ಕೀರ್ತನಕ್ಕೆ ಬರಬೇಕೆಂದು ಆಹ್ವಾನಿಸಿದನು.

ಪೂರ್ಣಯ್ಯನವರ ಸಮೀಪವರ್ತಿಪಂಡಿತರು – 'ಕೀರ್ತನದಲ್ಲೇನಿದೆ? ಕನ್ನಡ ಹಾಡುಗಳಿಂದ ಕಲಿಯಬೇಕಾದ ಶಾಸ್ತ್ರಾರ್ಥವೇನಿದೆ? ದಾಸರೆನಿಸಿದವರ ಪಾಂಡಿತ್ಯವೆಷ್ಟಿದ್ದೀತು? ಪಾಮರರೂ ಸ್ತ್ರೀ ಶೂದ್ರಾದಿಗಳೂ ಕೇಳಲರ್ಹವಾದ ಕೀರ್ತನವನ್ನು, ಪೂರ್ಣಯ್ಯನವರಂಥವರು ಕೇಳಬೇಕೆ?' ಎಂದು ಮೊದಲಾಗಿ ಹೇಳಿ, ಅಯ್ಯನವರ ಮನಸ್ಸನ್ನು ತಿರುಗಿಸಿದರು.

ವೆಂಕಟಸುಬ್ಬಯ್ಯನು, ಜಗನ್ನಾಥದಾಸರು ಇತರ ದಾಸರಂತಲ್ಲ; ಒಮ್ಮೆ ಕೇಳಿ ನೋಡಿದರೆ ಗೊತ್ತಾದೀತೆಂದು ಮೇಲೆ ಮೇಲೆ ಅಯ್ಯನವರನ್ನು ಒತ್ತಾಯಪಡಿಸಿ ಕರೆದನು. ಲೌಕಿಕ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು – 'ಆಗಲಿ ಎಂದಾದರೊಂದುದಿನ ಬರುವೆನು' ಎಂದು ಅವರು ಆಶ್ವಾಸವಿತ್ತರು.

ಜಗನ್ನಾಥದಾಸರಾದರೋ ಸಾಯಂ ಸಂಧ್ಯಾವಂದನೆಮಾಡಿ ರಾತ್ರಿ ಒಂಭತ್ತು ಘಂಟೆಯೊಳಗೆ ಕೀರ್ತನವನ್ನು ಮುಗಿಸಿಬಿಡುತ್ತಿದ್ದರು. ಭೋಜನಾನಂತರ ಕೀರ್ತನ ಮಾಡುವ ಅಶ್ಲಾಘ್ಯ ಪದ್ಧತಿ ದಾಸರಲ್ಲಿರಲಿಲ್ಲ. ಜನರ ಮನೋವೃತ್ತಿಯನ್ನನುಸರಿಸುವವರು ಅವರಾಗಿರಲಿಲ್ಲ.

ಒಂದು ದಿನ ಪೂರ್ಣಯ್ಯನವರು ರಾತ್ರಿ ಭೋಜನಮಾಡಿ ತಾಂಬೂಲವನ್ನು ಸವಿಯುತ್ತಾ, ದೀವಟಿಗೆಯನ್ನು ಹಿಡಿಸಿಕೊಂಡು ಫೌಜುದಾರನ ಮನೆಗೆ ಬಂದರು. ಅಷ್ಟು ಹೊತ್ತಿಗೆ ದಾಸರು ಕೀರ್ತನ ಮುಗಿಸಿ ಶಯನಮಾಡಿದ್ದರು. ವಸಾರೆಯಲ್ಲಿ ಕೆಲಸಮಾಡುತ್ತ ಕುಳಿತಿದ್ದ ಫೌಜುದಾರನು ದಿವಾನರು ಬಂದರೆಂದು ಜಗ್ಗನೆದ್ದು ದಾಸರ ಬಳಿಗೆ ಬಂದನು. ಪೂರ್ಣಯ್ಯನವರು ಫೌಜುದಾರನ ದಿಂಬಿಗೊರಗಿ ಕುಳಿತರು. 'ವೆಂಕಟಸುಬ್ಬಯ್ಯಾ' ಎಂದು ಕೂಗುತ್ತಾ, 'ದಾಸರು ವಿಶ್ರಮಿಸಿಕೊಂಡಿದ್ದರೆ ತೊಂದರೆ ಕೊಡಬೇಕಾದ್ದಿಲ್ಲ' ಎಂದು ಹೇಳಿದರು. ಎಷ್ಟಾದರೂ ಫೌಜುದಾರಿಯು ತಾಬೇದಾರಿ. ದೊರೆತ ಸಮಯವನ್ನು ಕಳೆದುಕೊಳ್ಳಬಾರದೆಂಬ ಕವಕವ!

ಫೌಜುದಾರ :—ದಾಸರೆ, ದಾಸರೆ, ದಿವಾನರು ಬಂದಿದ್ದಾರೆ. ಒಳ್ಳೇ ಸಮಯ. ಒಂದೇ ಪದ, ಸ್ವಲ್ಪ ಅರ್ಥಾನುವಾದ ಮಾಡಿದರೆ ಸಾಕು.

ದಾಸರು :—ಅದ್ಯಾವ ದಿವಾನರೋ ?

ಫೌಜುದಾರ :—ಪೂರ್ಣಯ್ಯನವರು ! ಯಜಮಾನರು !

ದಾಸರು :—ನಮ್ಮ ದಿವಾನ ಮಲಗಿ ತಾಸು ಹೊತ್ತಾಯಿತು. ನಿಮ್ಮ ದಿವಾನ ನಾಳೆ ಬಂದರೆ ಬರಲಿ.

ಫೌಜುದಾರ :—ಇಲ್ಲ, ದೊಡ್ಡವರು ಬಂದಿದ್ದಾರೆ. ಸ್ವಲ್ಪ ಲೌಕಿಕ ನೋಡಬೇಕು. ದಯಮಾಡಿ ಏಳಬೇಕು.

ದಾಸರು :—ಮಂಗಳ ಹಾಡಿದಮೇಲೆ – ದೇವರಿಗೆ ಶಯನೋತ್ಸವ ಮಾಡಿಸಿದ ಮೇಲೆ ಮತ್ತೆಲ್ಲಿಯ ಕೀರ್ತನೆ? ತಿಂದು ತೇಗಿ ತಾಂಬೂಲ ಜಗಿಯುತ್ತಾ ಕೇಳುವುದಕ್ಕೆ ಕೀರ್ತನವು ಗಾಯನವಲ್ಲ.

ವೆಂಕಟಸುಬ್ಬಯ್ಯನಿಗೆ ಧರ್ಮಸಂಕಟಕ್ಕಿಟ್ಟಿತು. ದಾಸರು ದೊಡ್ಡವರು ಮೇಲಾಗಿ ಗುರುಗಳು. ಪೂರ್ಣಯ್ಯನವರು ಮೇಲ್ಪಟ್ಟ ಅಧಿಕಾರಿಗಳು. ಎಂದೂ ಬಂದವರಲ್ಲ! ಮಾಡುವುದೇನು ? ಏನು ಹೇಳಬೇಕು ?

ಜಾಣಾಕ್ಷರಾದ ಪೂರ್ಣಯ್ಯನವರು ದಾಸರ ಬಳಿ ಏನೋ ಅಸಂದರ್ಭವಿರಬೇಕೆಂದು ತಿಳಿದರು. ವೆಂಕಟಸುಬ್ಬಯ್ಯನನ್ನು ಕರೆದು–'ದಾಸರಿಗೆ ತೊಂದರೆ ಕೊಡಬೇಡ. ಮತ್ತೊಮ್ಮೆ ನಾನೇ ಬರುತ್ತೇನೆ. ಭೋಜನಾನಂತರ ಕೀರ್ತನೆ ಕೇಳುವುದು ಮರ್ಯಾದೆಯಲ್ಲ. ನೀನಿದಕ್ಕಾಗಿ ಸಂಕೋಚಪಡಬೇಡ' ಎಂದು ಹೇಳಿ ವೀಳ್ಯಪಾಣಿಗಳಾಗಿ ತೆರಳಿದರು.

ಕೆಲವು ದಿವಸಗಳನಂತರ ದಾಸರು ದಕ್ಷಿಣ ಯಾತ್ರೆಗಾಗಿ ಪ್ರಯಾಣ ಬೆಳೆಸಿದರು.

ಪುರಂದರ–ವಿಜಯದಾಸರುಗಳು ಸಂಚರಿಸಿದ ಕ್ಷೇತ್ರಗಳಲ್ಲಿ ಸಂಚರಿಸಿದರು. ಕ್ಷೇತ್ರಮೂರ್ತಿಗಳನ್ನು ದಿವ್ಯಪದಗಳಿಂದ ಕೊಂಡಾಡಿದರು. ಅನಂತಶಯನದ ಮಾರ್ಗ ಹಿಡಿದು ಉಡುಪಿಗೆ ಬಂದರು.

ಉಡುಪಿಯಲ್ಲಿ ಅಷ್ಟಮಠಾಧಿಪತಿಗಳು ದಾಸರ ಯೋಗ್ಯತೆಯನ್ನು ಕುರಿತು ಅವರಿಗೆ ಉಚಿತ ಸನ್ಮಾನ ಮಾಡಿದರು. ದಾಸರು ಅಪರೋಕ್ಷಜ್ಞಾನಿಗಳು. ಅನೇಕ ಅತಿಮಾನುಷ ಮಹಿಮೆಗಳನ್ನು ತೋರಿಸಿದವರು, ಅಪ್ರತಿಮ ಪಂಡಿತರು, ಎಂದು ಸೊಗಸಾಗಿ ಲೋಕವಾರ್ತೆಯು ವ್ಯಾಪಿಸಿತು. ಕೃಷ್ಣಮಠದ ರಾಜಾಂಗಣದಲ್ಲಿ ಮಠಾಧಿಪತಿಗಳು ಕುಳಿತು, ದಾಸರ ಕೀರ್ತನ ಶ್ರವಣ ಮಾಡಿದರು. ವಾದಿರಾಜರ ಗ್ರಂಥಗಳಿಗೆ ವ್ಯಾಖ್ಯಾನ ಮಾಡುತ್ತಿರುವರೋ ಎಂಬಂತೆ ಪ್ರತಿಪದಗಳನ್ನೂ ಹಾಡಿ ಅನುವಾದ ಮಾಡುವುದು, ಸಾವಿರಾರು ಜನರಿಗೆ ಪರಮಾನಂದವನ್ನುಂಟುಮಾಡಿತು. ಕವಿಗಳು ದಾಸರ ಕೀರ್ತನ ಕೇಳಿದರೆ, ಮೂಕನು ವಾಚಾಳನಾಗುವನು, ಕುಂಟನು ನಡೆದಾಡುವನು ಎಂದು ಕವಿತೆ ಮಾಡಿ ಹೇಳಿದರು. ಯತೀಶ್ವರರು ಮುಕ್ತಕಂಠದಿಂದ ಜಯಜಯಕಾರ ಮಾಡಿದರು.

ಉಡುಪಿಯಂಥಾ ಕ್ಷೇತ್ರದಲ್ಲಿ ಆ ಕಾಲದಲ್ಲೂ ಕುಹಕಿಗಳಿರದಿರಲಿಲ್ಲ. ಜೇಕಿದ್ದ ಬಳಿ ಕತ್ತಲೆಯಿರುವುದೆಂಬ ಮಾತು ಸುಳ್ಳಲ್ಲ. ನಾಲ್ವರು ಕುಹಕಿಗಳು ಓರ್ವ ಮೂಕನನ್ನು ಕೀರ್ತನರಂಗದಲ್ಲಿ ದಾಸರೆದುರಿಗೆ ಕುಳ್ಳಿರಿಸಿದರು. ಮಠಾಧಿಪತಿಗಳ ಮಧ್ಯೆ ಮಹಾವಿದ್ವಾಂಸರ ಮಧ್ಯೆ, ಇವನನ್ನೂ ಕೂಡಿಸಿದವರ್ಯಾರೆಂದು ಜನರು ಆಕ್ಷೇಪಿಸಿದರು. ಕೀರ್ತನ ಸ್ವಾರಸ್ಯದಲ್ಲಿ ಯಾರೂ ಉತ್ತರ ಕೊಡಲಿಲ್ಲ. ಅಷ್ಟರಲ್ಲಿ ದಾಸರು ಅವನು ಅಲ್ಲೇ ಇರಬೇಕೆಂದರು. ಕೀರ್ತನವಾಯಿತು. ಮಂಗಳ ಹಾಡುವುದಕ್ಕೆ ಪೂರ್ವದಲ್ಲಿ ದಾಸರು ಆ ಮೂಕನನ್ನು ಕುರಿತು—

ದಾಸರು :—ಏನಪ್ಪಾ ಕ್ಷೇಮವೇ ?

ಮೂಕ :—ಚರಣಾನುಗ್ರಹದಿಂದ ಕ್ಷೇಮ.

ದಾಸರು ;—ಇಷ್ಟು ದಿನ ನೀನೇಕೆ ಮಾತನಾಡಲಿಲ್ಲ.

ಮೂಕ :—ಅದೇಕೋ ನನಗೆ ಗೊತ್ತಿಲ್ಲ.

ದಾಸರ ಇದೆಂಥಾ ಪರಮಾನುಗ್ರಹವೆಂದು ಜನರು ಆಶ್ಚರ್ಯಘಟಿತರಾದರು. ಮೂಕನನ್ನು ಸಭಾಮಧ್ಯದಲ್ಲಿ ಕರೆತಂದು ಕೂಡಿಸಿದ ನಾಲ್ವರೂ ಸಮೀಪದಲ್ಲೇ ಇದ್ದರು. ದಾಸರು ಅವರ ಕಡೆಗೆ ತಿರುಗಿದರು.

ದಾಸರು :—ಏನಪ್ಪಾ ನಾಲ್ವರೂ ಕ್ಷೇಮವೆ ?

ನಾಲ್ವರೂ :—(ಮಾತನಾಡಲು ಪ್ರಯತ್ನಿಸಿ, ಬಾರದೆ, ಭಯದಿಂದ ಕಣ್ಣೀರು ಸುರಿಸುತ್ತಾ ಕೈ ಸಂಜ್ಞೆಯಿಂದ) ಇಲ್ಲ !

ದಾಸರು :—ಹೀಗೇಕಾದಿರಿ ?

ನಾಲ್ವರೂ :—(ಅಪರಾಧ ಕ್ಷಮಿಸಬೇಕೆಂದು ಸನ್ನೆ ಮಾಡಿ) ನಮ್ಮ ಅಪರಾಧ (ಅಕ್ಷರದಲ್ಲಿ).

'ಒಳ್ಳೇದು-'ನಿಮಗೀ ಪಾಪವಿಮೋಚನೆಯಾಗಬೇಕಾದರೆ ಮಧ್ವ ಸರೋವರದಲ್ಲಿ ಮಿಂದು, ಒಂದು ಸಪ್ತಕ ಶ್ರೀಕೃಷ್ಣಸೇವೆ ಮಾಡಬೇಕು. ಜನರುಂಡ ಪತ್ರಾವಳಿಯನ್ನು ತೆಗೆಯಬೇಕು. ಇನ್ನುಮೇಲೆ ಶ್ರೀಕೃಷ್ಣನನ್ನು ಪರೀಕ್ಷಿಸಬಾರದು. ತಿಳಿಯಿತೆ?' ಎಂದರು. ಪ್ರಾಣೇಶದಾಸರು–ಜನರ ಕಡೆ ನೋಡಿ, ಪುರಂದರದಾಸರ—

ಅಂದುಂಟು ಇಂದಿಲ್ಲ । ವೆನದಿರಿ ದಾಸರ
ಮುಂದಾಡು ತೈದಾನೆ । ಪುರಂದರವಿಠಲ ॥ ಮಾನಿಸ ॥

ಎಂಬ ದೇವರ ನಾಮವನ್ನು ಹಾಡಿ, ದಾಸರ ಪರೀಕ್ಷೆ ಮಾಡಬೇಡಿರೆಂದರು.

ಜಗನ್ನಾಥದಾಸರ ಮಹಿಮೆಯು ಅಗಾಧವಾದುದು. 'ಗಾಳಿ ಬಂದಾಗಲೇ ತೂರಿಕೊಳ್ಳಿರೋ' ಎಂಬಂತೆ ಮಹಾತ್ಮರು ಅವತಾರ ಮಾಡಿದಾಗ ಅವರಿಂದ ಉದ್ಧಾರ ವಾಗುವವರು ಬಹಳ ಮಂದಿ. ಅವರ ನಿಂದೆಯಿಂದ ದುಷ್ಟ ಫಲಾನುಭವ ಮಾಡುವವರೂ ಬಹಳ ಮಂದಿ.

ಜಗನ್ನಾಥದಾಸರು ಉಡುಪಿಯಿಂದ ಸುಬ್ರಹ್ಮಣ್ಯಕ್ಕೂ, ಅಲ್ಲಿಂದ ಮತ್ತೆ ಮೈಸೂರು ಸೀಮೆಗೂ ಬಂದರು. ಇಷ್ಟರಲ್ಲಿ ಕೆಲವು ವರ್ಷಗಳೇ ಕಳೆದು, ರಾಜ್ಯ ಪರಿ ವರ್ತನವಾಗಿತ್ತು. ಟಿಪ್ಪೂಸುಲ್ತಾನನು ಮಡಿದು, ಶ್ರೀ ಮುಮ್ಮಡಿ ಕೃಷ್ಣರಾಜ ಒಡೆ ಯರು ಮಹಾರಾಜರಾಗಿದ್ದರು. ಪೂರ್ಣಯ್ಯನವರು ದಿವಾನರಾಗಿದ್ದರು. ಹಿಂದೆ ಬಂದಾಗ ಬಹುಮುಖದಿಂದ ದಾಸರು ಮಹಾಮಹಿಮರೆಂದು ಕೇಳಿದ್ದರೂ ಅವರ ದರ್ಶನಲಾಭವಾಗ ಲಿಲ್ಲವೆಂಬ ಚಿಂತೆ ಪೂರ್ಣಯ್ಯನವರಿಗಿತ್ತು. ಅದರ ನಿವಾರಣೆಗೋ ಎಂಬಂತೆ, ಅಯ್ಯ ನವರು ಮಹಾರಾಣಿ ಲಕ್ಷ್ಮಮ್ಮಣ್ಣಿಯವರಲ್ಲಿ ವಿಜ್ಞಾಪಿಸಿ, ದಾಸರಿಗೆ ರಾಜಯೋಗ್ಯವಾದ ಸ್ವಾಗತ ಮಾಡಿಸಿ, ತಮ್ಮ ಮನೆಯಲ್ಲಿಳಿಸಿಕೊಂಡರು.

ಅತ್ತ ರಾಣೀವಾಸದ ಅಮ್ಮನವರು ಪ್ರತಿನಿತ್ಯವೂ ದಾಸರನ್ನು ಅರಮನೆಗೆ ಕರೆಸಿ ಕೊಂಡು ಅವರಿಂದ ಕೀರ್ತನ ಶ್ರವಣಮಾಡಿದರು. ಬಹುಕಾಲ ಹೈದರಲ್ಲಿ–ಟಿಪ್ಪೂ ಸುಲ್ತಾ ನರ ಆಕ್ರಮಣದಿಂದ ಕೈತಪ್ಪಿದ್ದ ರಾಜ್ಯವು ಭಗವತ್ಕೃಪೆಯಿಂದ ಪುನಃ ಪ್ರಾಪ್ತವಾಗಿ ಸತ್ಕಥಾ ಶ್ರವಣಕ್ಕೆ ಅನುಕೂಲವಾಯಿತೆಂದು ಅತ್ಯಂತ ಸಮಾಧಾನ ಹೊಂದಿದ್ದರು. ಜಗನ್ನಾಥ ದಾಸರಂಥಾ ಸತ್ಪುರುಷರ ಪಾದಧೂಳಿಯಿಂದ ರಾಜಗೃಹವು ಪಾವನವಾಯಿತೆಂದು ಹರ್ಷ ಗೊಂಡರು. ಅವರ ದಿವ್ಯೋಪದೇಶದಿಂದ ಧನ್ಯರಾದೆವೆಂದು ಧನಕನಕ ವಾಹನಾದಿ ಅನೇಕ ಮರ್ಯಾದೆಗಳನ್ನು ಮಾಡಿದರು. [ದಾಸರು ಅರಮನೆಗೆ ಬಂದ ಜ್ಞಾಪಕಾರ್ಥವಾಗಿ, ಭಜನ ಪದ್ಧತಿಯನ್ನೇರ್ಪಡಿಸಿದರು. ಆ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹು ದಾದರೂ, ಧರ್ಮಾತ್ಮರಾದ ಮೈಸೂರು ರಾಜರ ಅರಮನೆಯಲ್ಲಿ ಅದ್ಯಾಪಿ ನಿತ್ಯ ಭಜನೆಯು ನಡೆದುಬರುತ್ತಿದೆ. ಇದನ್ನು ನೋಡಿದರೆ ಆ ಮಹಾನುಭಾವರ ವರ್ಚಸ್ಸ ವೆಂಥಾದ್ದಾಗಿತ್ತೆಂಬುದರ ಕಲ್ಪನೆಯಾಗುತ್ತದೆ.]

ಇವತ್ತಿನ ದಿನವಲ್ಲಿ ಧರ್ಮಾತ್ಮರಾದ ಆ ಮಹಾರಾಣಿ ಲಕ್ಷ್ಮಮ್ಮಣ್ಣಿಯವರಿಲ್ಲ. ಅಭಿನವ ಭೋಜರೆನಿಸಿದ ಕೃಷ್ಣರಾಜ ಒಡೆಯರಿಲ್ಲ. ಜಗನ್ನಾಥದಾಸರು ಮೊದಲೇ ಇಲ್ಲ. ಲಕ್ಷ್ಮಮ್ಮಣ್ಣಿಯವರು ಕೊಟ್ಟ ಮೇನೆಯೊಂದು ಮಾನವಿಯಲ್ಲಿ ದಾಸರ ಗುಡಿಯಲ್ಲಿದೆ. ಮೈಸೂರನ್ನು ಮಾನವಿಯಲ್ಲಿ ಜ್ಞಾಪಿಸುತ್ತಿದೆ.

ಜಗನ್ನಾಥದಾಸರು ತಮ್ಮ ಮನೆಯಲ್ಲೇ ಇಳಿದಿದ್ದರೂ, ಅರಮನೆಯಲ್ಲಿ ನಿತ್ಯ ಕೀರ್ತನೆಗಳಾಗುತ್ತಿದ್ದರೂ, ಪೂರ್ಣಯ್ಯನವರಿಗೆ ಆವರೆಗೆ ಶ್ರವಣಲಾಭವಾಗಿರಲಿಲ್ಲ. ರಾಜ್ಯವ್ಯವಸ್ಥೆಯ ಜವಾಬ್ದಾರಿಯು ಬಲು ದೊಡ್ಡದಾಗಿದ್ದುದರಿಂದ ಅವರ ಪ್ರತಿನಿಮಿಷವೂ ಬಹು ಅಮೌಲ್ಯವಾಗಿರುತ್ತಿತ್ತು. ವಿಸ್ತಾರವಾದ ತೊಟ್ಟಿಯ ಮನೆಯು ದಿವಾನರದಾಗಿದ್ದುದರಿಂದ, ದಾಸರಿಳಿದಿದ್ದ ಭಾಗವೇ ಪ್ರತ್ಯೇಕವಾಗಿತ್ತು. ಅರಮನೆಯಿಂದ ಖಾಸಾ ಲವಾಜಮಾ ಬರುತ್ತಿದ್ದುದರಿಂದ ದಾಸರ ಯೋಗಕ್ಷೇಮವು ಮಹಾರಾಣಿಯವರದಾಗಿತ್ತು. ತಾವು ಭೋಜನಕ್ಕೆ ಕುಳಿತಾಗ ಮಾತ್ರ ಪೂರ್ಣಯ್ಯನವರು ಗೃಹಕೃತ್ಯಗಳ ಎಲ್ಲಾ ವಿಚಾರ ಮಾಡುತ್ತಿದ್ದರು.

ಒಂದು ಮಧ್ಯಾಹ್ನ ! 'ದಾಸರು ಮನೆಯಲ್ಲಿ ಬಂದಿಳಿದಿದ್ದರೂ ಅವರ ಪಙ್ತಿ ಲಾಭ ನಮಗಾಗಿಲ್ಲ, ನೈವೇದ್ಯ ನೇಮ ತಿಳಿದಲ್ಲದೆ ಅವರನ್ನು ಕರೆಯುವಂತಿಲ್ಲ. ಕೀರ್ತನ ಮಾಡಿಸುವುದಕ್ಕೆ ಸಮಯವಾಗಿಲ್ಲ. ಒಂದು ದಿನ ಅವರನ್ನು ಭೋಜನಕ್ಕೆ ಕರೆಯಬೇಕು. ಕೀರ್ತನಮಾಡಿಸಬೇಕು. ಅಪ್ಪಣೆಕೊಡಬೇಕು. ಈ ವಿಷಯದಲ್ಲಿ ನಿಯಮಸ್ಥ ಆಚಾರ್ಯರುಗಳ ಅಭಿಪ್ರಾಯವೇನು' ಎಂದು ಪೂರ್ಣಯ್ಯನವರು ಕೇಳಿದರು.

ಪಂಡಿತರುಗಳು–'ಅವರ ನೈವೇದ್ಯದಲ್ಲಿ ನಾವು ಸೇರುವುದು ಸಾಧ್ಯವಿಲ್ಲ. ಸನ್ನಿಹಿತವಾಗಿರುವ ಏಕಾದಶಿಯದಿನ ಕೀರ್ತನ ಮಾಡಿಸಿದರೆ ನೈವೇದ್ಯ ಕಲಾಪವಿರುವುದಿಲ್ಲ. ರಾಯರಿಗೆ ಹೇಗೋ ಹಾಗೆ ನಮಗೂ ದಾಸರ ಪಙ್ತಿಲಾಭವಾಗಬೇಕು. ಪ್ರಸಾದಭಾಗಿಗಳಾಗಿ ಅವರು ಬಂದರೆ ಎಲ್ಲರಿಗೂ ಸಂತೋಷ' ಎಂದರು. ಪೂರ್ಣಯ್ಯನವರು 'ಸಂಭಾವನೆಯೋ ?' ಎಂದರು. ಸಂಭಾವನೆ ತಾರತಮ್ಯಾನುಸಾರ ನಡೆಯಬೇಕು. ಶ್ರೀಪಾದ ಪುತ್ರರೂ, ಮನೆತನಸ್ಥ ಆಚಾರ್ಯರೂ ವಿದ್ವಾಂಸರೂ ಆದರೆ ಆ ಮರ್ಯಾದಾ ಬೇರೆ! ಸಾಧಾರಣ ವೈದೀಕರಾಗಿ ಪುರಾಣ ಹೇಳುವರಾದರೆ ಆ ಮರ್ಯಾದೆ ಬೇರೆ! ದಾಸರು ವೈದೀಕರೂ ಅಲ್ಲ; ಗೃಹಸ್ಥರೂ ಅಲ್ಲ, ಕೀರ್ತನಮಾಡುವುದರಿಂದ ಅವರ ಮರ್ಯಾದಾ ಒಂದು ಪ್ರಕಾರದಿಂದಾಗಬೇಕು. ಅರಮನೆಯಲ್ಲಾದ ಸಂಭಾವನೆ ರಾಯರಿಂದಲೇ ಆಗಿದೆಯಷ್ಟೆ! ಅಲ್ಲಿ ಕೀರ್ತನಮಾಡುವುದಕ್ಕೂ ಇಲ್ಲಿ ಮಾಡುವುದಕ್ಕೂ ವ್ಯತ್ಯಾಸವಿದೆ. ಇಷ್ಟುಮಂದಿ ವಿದ್ವಾಂಸರು ಕುಳಿತು ಕೇಳುವುದೇ ದಾಸರಿಗೆ ಸಂಭಾವನೆ. ಯದೃಚ್ಛಾಲಾಭ ಸಂತುಷ್ಟಿಯು ಬ್ರಾಹ್ಮಣನಿಗಿರಬೇಕಾದ ದೊಡ್ಡಗುಣ. ತಾರತಮ್ಯವರಿತು ರಾಯರು ನಡೆಸಬೇಕು' ಎಂದು ಪಂಡಿತರ ಸಲಹೆಯಾಯಿತು. ಪೂರ್ಣಯ್ಯನವರು ಪ್ರಮುಖರಾದವರು ಗೊತ್ತಾಗಿ ಹೇಳಿರೆಂದು ಮತ್ತೆ ಕೇಳಿದರು. ಧರ್ಮಾಧಿಕಾರಿಗಳೆನಿಸಿದ್ದ ಸತ್ಯವರಾಚಾರ್ಯರೆಂಬುವರು–'ಇದು ಛಳಿಗಾಲ, ದಾಸರಿಗೆ ವಸ್ತ್ರ ಬಹುಮಾನವೂ ಆಗಬೇಕು.

ಬಂದು ಒಳ್ಳೇ ಮಂಡ್ಯದ ಧಾವಳಿ–ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಎಂಬ ಪಂಚಮೂರ್ತಿಗಳ ಪ್ರೀತ್ಯರ್ಥವಾಗಿ ಐದು ರೂಪಾಯಿ ಕೊಟ್ಟರಾಯಿತೆ'ಂದರು.

ಪೂರ್ಣಯ್ಯನವರಿಗೆ ಆಚಾರ್ಯರ ಸಲಹೆಯು ತೃಪ್ತಿಕರವೆನಿಸಲಿಲ್ಲ. ಏಕಾದಶಿಯ ದಿನವೇ ಕೀರ್ತನವಾಗಲೆಂದು ನಿಶ್ಚಯಮಾಡಿದರು.

ಶಿಷ್ಯರಾದ ಪ್ರಾಣೇಶದಾಸರು ದಾಸರಾಯರ ಪೂಜಾಪೆಟ್ಟಿಗೆಯನ್ನು ಕೀರ್ತನಕ್ಕೆ ಅಣಿಮಾಡಿದ ಹಜಾರದಲ್ಲಿ ಮಂಡಿಸಿದರು. ತಂಬೂರಿ ತಾಳವನ್ನು ಹಿಡಿದವರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು. ಸುತ್ತುಗಟ್ಟಿದ್ದ ಪಂಡಿತ ವೃಂದದೊಡನೆ ಪೂರ್ಣಯ್ಯನವರು ಬಂದು ಸಭೆಯನ್ನಲಂಕರಿಸಿದರು. ವ್ಯವಧಾನ ಸಿಕ್ಕಿದಾಗ ಬಿಡಬಾರದೆಂದು ಕಾದಿದ್ದ ಆಚಾರ್ಯರೊಬ್ಬರು ಯಾವುದೋ ಕಗ್ಗಂಟು ವಾಕ್ಯವೊಂದನ್ನು ವಿಮರ್ಶೆಗೆ ತೆಗೆದರು. ಒಬ್ಬೊಬ್ಬರೂ ತಮ್ಮ ತಮ್ಮ ಪಾಂಡಿತ್ಯವನ್ನು ಸೂರಿಗೊಳಿಸುತ್ತಾ, ಮೊದಲೇ ಕ್ಲಿಷ್ಟವಾಗಿದ್ದ ವಾಕ್ಯವನ್ನು ಮತ್ತಷ್ಟು ಕಗ್ಗಂಟು ಮಾಡಿಟ್ಟರು. ದಾಸರು ಮಣೆಯಮೇಲೆ ಕುಳಿತು **ಶ್ರೀರಂಗದ** ರಂಗನಾಥಸ್ವಾಮಿಯನ್ನು ಚಕ್ರಾಬ್ಜಮಂಡಲದಮೇಲೆ ಚಿತ್ರಿಸಿ ಅಲಂಕರಿಸಿದರು. ಪೂರ್ಣಯ್ಯನವರು ವಾಕ್ಯಾರ್ಥವನ್ನು ಅಲ್ಲಿಗೇ ಸಾಕುಮಾಡಿ–ಇನ್ನು ಕೀರ್ತನಾರಂಭವಾಗಲೆಂದು ಪ್ರಾರ್ಥಿಸಿದರು. ದಾಸರು ಗುರುದೇವತಾ ಪ್ರಾರ್ಥನೆಮಾಡಿ–

ಕಾಂಬೋದಿ—ಆದಿತಾಳ

ಪಿಂಡಾಂಡದೊಳಗಿನ | ಗಂಡನ ಕಾಣದೆ | ಮುಂಡೆಯರಾದರು ಈ | ಪಂಡಿತರೆಲ್ಲ || ಪ.

ಎಂಬ ಪುರಂದರದಾಸರ ಪದವನ್ನು ಪೀಠಿಕೆ ಮಾಡಿಕೊಂಡು, ಕೀರ್ತನಪ್ರಾರಂಭಿಸಿದರು. ಪದಗರ್ಭವನ್ನು ಕೇಳಿದ ಪಂಡಿತರು ಒಮ್ಮೆಗೇ ರುಷ್ಟರಾದರು. ತತ್ಕಾಲದಲ್ಲಿ ಪೂರ್ಣಯ್ಯನವರು–'ದುಡುಕಬೇಡಿ, ದಾಸರೇನು ಹೇಳುವರೋ ಪೂರ್ತಿ ಕೇಳಿ ತರುವಾಯ ಮಾತನಾಡಿರೆ'ಂದು ಮುಂದರಿಪವರನ್ನು ನಿವಾರಿಸಿದರು. ದಾಸರು ಪಿಂಡಾಂಡ ಬ್ರಹ್ಮಾಂಡ ವಿಷಯಗಳನ್ನೂ, ಪಿಂಡಾಂಡದಲ್ಲಿ ಗಂಡನಾದ ಬ್ರಹ್ಮಾಂಡನಾಯಕನ ವ್ಯಾಪ್ತಿ ಮತ್ತು ಪ್ರಾಪ್ತಿ ವಿಚಾರಗಳನ್ನೂ ಜಿಜ್ಞಾಸೆಮಾಡುತ್ತಾ, ಪಂಡಿತರು ಕಗ್ಗಂಟುಮಾಡಿಟ್ಟ ವಾಕ್ಯವನ್ನು ಸುಲಭವಾಗಿ ಸಿದ್ಧಾಂತಮಾಡಿದರು. ಗೋಪಾಲದಾಸರ—

ಕಾಂಬೋದಿ—ಆದಿತಾಳ

ಭ್ರಾಂತಿ ಬಿಡದೋ ಭಾಗ್ಯಪುರುಷನೆ | ದುರ್ವಿಷಯ ಮರೆದು
ಶಾಂತಚಿತ್ತನಾಗುವ ತನಕ | ಏ ಪ್ರಾಣಿ ನಿನ್ನ ಪ.
[illegible]ಕಾಲಕೆ ಪರೀಕ್ಷಿತ್ರಾಜನ | ಗುರುಗಳ ಮುಖದಿಂದ
ಕೇಳಿದ್ದೇ ಕೇಳುತ್ತ ಹೇಳುತ್ತ | ಮನನವ ಮಾಡುತ್ತ |
ಕೇಳಿದಂತೆ ಧ್ಯಾನವ ಮಾಡುತ್ತ | ಮಾಡಿದ್ದು ಮಹಾಕೆ |
ಮೇಲಾಗಿ ಬಂದೊದಗುವತನಕ | ಹೇ ಪ್ರಾಣಿ ನಿನ್ನ || ೧

ಪಾಂಚಜನ್ಯ ಅರಿಪಾಣಿ ಸರ್ವತ್ರ । ತದ್ರಾಣಿ ಲಕುಮಿ ।
ಅಂಚೆಗಮನ ವಾಯುಪ್ರಾಣ ಭಾರತಿ । ಭುಜಂಗಪತಿಯು ।
ಪಂಚಾನನ ಖಗ ಸುತ್ರಾಮ ಕಾಮ । ಈ ಬಗೆ ತರತಮ
ಪಂಚಭೇದವ ತಿಳಿಯುವತನಕ । ಹೇ ಪ್ರಾಣ ನಿನ್ನ ॥ ೨

ಪೂರಕ ರೇಚಕ ಕುಂಭಕದಿಂದಲಿ । ಹೃದಯಸ್ಥ ಭ್ರಾತಿಕ ।
ಮಾರುತನ ಜೈಸಿ ಅಣಿಮಾದಿಸಿದ್ಧಿ । ಅಷ್ಟಾಂಗಯೋಗಿ ।
ಧಾರಕನಾಗಿ ನಿಸ್ಸಂಗದಿ ಚರಿಸಿ । ಭಾರತಿಪತಿಯಾದ ಸ ।
ಮಾರನ ಒಲಿಮೆಯು ಆಗುವತನಕ । ಹೇ ಪ್ರಾಣ ನಿನ್ನ ॥ ೩

ಅಂತಿ ಅಂತಾವೇಶಾಧಿಷ್ಠಾನ । ಅಂತರ್ಯಾಮಿಗಳ ।
ಸಂಶಯ ರಹಿತದಿ ರೂಪಗಳ ತಿಳಿದು । ಕ್ರೋಧಾದಿಗಳಳಿದು ।
ಕಂಸಾರಿಯು ಕರುಣವನೀ ಬಲವಾಡಿ । ಹಿಂಸೆಗಳೀಡ್ಯಾಡಿ ।
ಹಂಸೋಪಾಸಕನಾಗುವತನಕ । ಹೇ ಪ್ರಾಣ ನಿನ್ನ ॥ ೪

ಹಂಚು ಹಾಟಕ ಸಮವರ್ತಿಯೆನಿಸಿ । ಶೀತೋಷ್ಣವ ಸಹಿಸಿ ।
ಸಂಚಿತ ಆಗಾಮಿಗಳನು ದಹಿಸಿ । ಇಂದ್ರಿಯಗಳ ಜೈಸಿ ।
ಪಂಚವೃತ್ತಿ ತನುಮನ ವಶಕರಿಸಿ । ಧ್ಯಾನದಿ ಶ್ರೀಹರಿ ।
ಮಿಂಚಿನಂದದಿ ಪೊಳೆಯುವತನಕ । ಹೇ ಪ್ರಾಣ ನಿನ್ನ ॥ ೫

ವಿಷಯವಾ ವಿಷಯಗಳೆರವನ್ನೇ ತಿಳಿದು । ವಶವಾಗದನ್ನ ।
ವಿಷಯಗಳೆಂಬುದನ್ನು ನೆರೆ ತಿಳಿದು । ದುರಾಶೆ ತೊರೆದು ।
ಹಸಿವು ತೃಷೆಗಳ ಹಗಲಿರುಳು ಮರೆದು । ದುರ್ವಾಸನ ಜರಿದು ।
ಕುಶಲವಾರ್ತೆಯು ಕೇಳುವತನಕ । ಹೇ ಪ್ರಾಣ ನಿನ್ನ ॥ ೬

ಸ್ವಾತಂತ್ರ್ಯಸ್ವಾತಂತ್ರ್ಯವೆಂಬುದನು । ವಿವೇಕದಿ ತಿಳಿದು ।
ಸ್ವಾತಂತ್ರ್ಯ ಮುಖ್ಯನು ಹರಿಯೆಂದು । ಧ್ಯಾನಕ್ಕೆ ತಂದು ।
ಸ್ವಾತಂತ್ರ ನಾನಲ್ಲವೋ ಎಂದು । ಆಪ್ತನು ನೀನೆಂದು ।
ವ್ಯಾಪ್ತವರ್ತಿಯಾಗುವತನಕ । ಹೇ ಪ್ರಾಣ ನಿನ್ನ ॥ ೭

ಸಕಲೇಂದ್ರಿಯಗಳಿಂದಲಿ ಹರಿಸೇವೆ । ಮಾಡುತ ಭಕುತಿಯಲಿ ।
ಕಕುಲಾತಿಯು ಹಗಲಿರುಳು ಬಿಡುತಲಿ । ಮುಖ್ಯರಿಂದಲಿ ।
ಲಕುಮಿಪತಿ ಗೋವಿಂದನ ಮೂರುತಿಯು । ನೆನೆಯುತ್ತ ನಿರುತ ।
ಸುಖಿಸುತ್ತ ನರ್ತಿಸುವತನಕ । ಹೇ ಪ್ರಾಣ ನಿನ್ನ ॥ ೮

ಬಿಂಬ [illegible] । ತಿಳಿದು ಸರ್ವತ್ರ ।
[illegible] । [illegible] ।
[illegible] ಸ್ವತಂತ್ರ್ಯ [illegible] । [illegible] ।
ಬಿಂಬ ಕ್ರಿಯೆ [illegible] ಕಾಣುವತನಕ । ಹೇ ಪ್ರಾಣ ನಿನ್ನ ॥ ೯

ಎಂಬ ಪದವನ್ನು ಹಾಡಿ, ಮಾತುಮಾತಿಗೆ ಬ್ರಹ್ಮಸೂತ್ರಗಳು, ತತ್ತ್ವಪ್ರಕಾಶಿಕಾ, ಅಣುವ್ಯಾಖ್ಯಾನ, ನ್ಯಾಯಸುಧಾ, ವ್ಯಾಸತ್ರಯಗಳು, ಉಪನಿಷದ್ಭಾಷ್ಯಗಳು, ಭಗವದ್ಗೀತಾದಿಗಳನ್ನುದಹರಿಸಿ, ಪ್ರೇಮರಸದಲ್ಲಿ ಬೆರೆದು, ತಾವು ಪರವಶರಾಗಿ, ಕುಳಿತವರನ್ನು ಪರವಶಗೊಳಿಸಿ, ಹರಿವಾಣ ಸೇವೆಯ ಕಾಲಕ್ಕೆ ಮಂಗಳಹಾಡಿ, ಕೀರ್ತನವನ್ನು ಮುಗಿಸಿದರು.

ಸಭೆಯಲ್ಲಿದ್ದ ಪಂಡಿತಾಗ್ರಣಿಗಳು ದಾಸರ ಅನುಪಮ ಪಾಂಡಿತ್ಯ, ಅಗಾಧ ಜ್ಞಾನ ಭಕ್ತ್ಯಾದಿ ಗುಣಗಳಿಗೆ ದಾಸರಾಗಿ, ಕುಹಕ ವೃತ್ತಿಗಳಿಗೆ ಕ್ಷಮೆಬೇಡಿ, ಪಾದಾಕ್ರಾಂತರಾದರು.

ಪೂರ್ಣಯ್ಯನವರ ಆನಂದವು ಎಲ್ಲೆ ಮೀರಿತು. ಒಂದು ಸಾವಿರ ವರಹಗಳಿಂದ ಪೂರ್ಣವಾದ ಹರಿವಾಣವನ್ನು ಮುಂದಿಟ್ಟು ದಿವ್ಯ ಶಾಲು ಜೋಡಿಯನ್ನು ಹೊದಿಸಿ ಸಾಷ್ಟಾಂಗ ನಮಸ್ಕಾರ ಮಾಡಿದರು.

ದಾಸರು :—ರಾಯರೇ! ನಿಮ್ಮ ಸಂಕಲ್ಪಕ್ಕೆ ವಿರೋಧವಾಯಿತು. ನನ್ನ ಯೋಗ್ಯತೆಗೆ ಈ ಮರ್ಯಾದೆಯಲ್ಲ!

ಪೂರ್ಣಯ್ಯ :—ಹಾಗೆನ್ನಬಾರದು, ನನ್ನ ಬಡಸೇವೆಯನ್ನು ಸ್ವೀಕರಿಸಬೇಕು.

ದಾಸರು :—ಹಾಗಲ್ಲ-ಇದು ಬಡಸೇವೆಯೆಂದಲ್ಲ! ತಮ್ಮ ಸಂಕಲ್ಪವು ಒಂದು ಮುಂಡ್ಯದ ಥಾವಳಿ, ಐದು ರೂಪಾಯಿ! ಅಲ್ಲವೆ?

ಪೂರ್ಣಯ್ಯ :—(ಬೆದರಿ) ತಾವು ಅಪರೋಕ್ಷ ಜ್ಞಾನಿಗಳು! ನಾನು ಸಂಕಲ್ಪ ಮಾಡಿದ್ದು ನಿಜ. ನನ್ನನ್ನು ಕ್ಷಮಿಸಬೇಕು!

ದಾಸರು :—ನನಗೆ ಮರ್ಯಾದೆ ಮಾಡುವಿರಾದರೆ ನಿಮ್ಮ ಸಂಕಲ್ಪದಂತಾಗಬೇಕು. ಜ್ಞಾನಕ್ಕೆ ಮರ್ಯಾದೆ ಮಾಡುವಿರಾದರೆ, ಶ್ರೀಮದಾಚಾರ್ಯರಿಗೆ ಮಾಡಬೇಕು.

ಪೂರ್ಣಯ್ಯನವರು ಮತ್ತೆ ಮತ್ತೆ ಕ್ಷಮೆಬೇಡಿ, ದಾಸರ ಅನುಗ್ರಹಕ್ಕೆ ಪಾತ್ರರಾದರು.

ಪಂಡಿತರು, ರಂಗವಲ್ಲಿಯ ಚಿತ್ರವನ್ನು ನೋಡಿ, ಇದರ ರಹಸ್ಯವೇನೆಂದು ಕೇಳಿದರು. ದಾಸರು-ಇದು ಉಪಾಸನಾಚಕ್ರ. ಮೂರ್ತಿಯು ಶ್ರೀ ರಂಗನಾಥನೆಂದರು.

ಪೂರ್ಣಯ್ಯನವರು ಆಭರಣವೇಕಿಲ್ಲವೆಂದರು.* ದಾಸರು, ಇವತ್ತು ಶ್ರೀರಂಗದ ರಂಗನಾಥನಿಗೆ ಶ್ರೀ ತುಲಸೀಮಾಲೆಯೇ ಸರ್ವಾಭರಣವೆಂದರು.

---

* ಇದರ ಪರೀಕ್ಷೆಯನ್ನು ಮಾಡಲೆಳಸಿ, ಪೂರ್ಣಯ್ಯನವರು ಕಾಲಾಂತರದಲ್ಲಿ ಒಂದಿಬ್ಬರು ಸವಾರರನ್ನು ಶ್ರೀರಂಗಕ್ಕೆ ಕಳುಹಿಸಿ, ಆ ದಿನ ಶ್ರೀ ರಂಗನಾಥನ ಆಭರಣಗಳನ್ನು ಒಪ್ಪಕ್ಕೆ ಕೊಟ್ಟಿದ್ದಂತೆಯೂ ಶ್ರೀ ತುಲಸೀಮಾಲಾ ಮಾತ್ರವೇ, ಸ್ವಾಮಿಗೆ ಆಭರಣವಾಗಿದ್ದುದೂ ವರ್ತಮಾನ ತಿಳಿಸಿಕೊಂಡರು.

ಜಗನ್ನಾಥದಾಸರು ತೀರ್ಥಯಾತ್ರೆಯನ್ನು ಪೂರೈಸಿ ಮಾನವಿಗೆ ಬಂದನಂತರ, ದೊಡ್ಡ ಪ್ರಮಾಣದ ಸಂಚಾರವನ್ನು ಕೈಗೊಳ್ಳಲಿಲ್ಲ. ಪ್ರಸ್ಥಾನತ್ರಯಗಳೆಂದು ಪ್ರಸಿದ್ಧವಾದ ಗೀತಾ, ಬ್ರಹ್ಮಸೂತ್ರಗಳು ಮತ್ತು ದಶೋಪನಿಷತ್ತುಗಳನ್ನು ಕನ್ನಡ ಪದ್ಯಗಳಾಗಿ ಮಾಡಿದರೆಂಬ ಪ್ರತೀತಿ ಬಹಳವಿದ್ದರೂ, ಗುರುತಿಗೆ ಒಂದು ಪದ್ಯವಾದರೂ ಉಪಲಬ್ಧವಾಗಿಲ್ಲ. ೫೬೪ ಬ್ರಹ್ಮಸೂತ್ರಗಳ ವಿವರಣೆಯು, ಸೂತ್ರಕ್ರಮದಂತೆ ಮಾಡಿದರೆಂಬ ಭಾಮಿನೀ ಷಟ್ಪದಿಗಳಲ್ಲಿ ಕೆಲವು ಲೇಖಕರ ಲಿಖಿತವಹಿಗಳಿಂದ ದೊರೆಯುತ್ತವೆ. ಜಗನ್ನಾಥದಾಸರು ಮಾಡಿದರೆಂಬ ಶಿರೋನಾಮೆಯಿದ್ದರೂ ಅಂಕಿತದ ಪದ್ಯ ದೊರೆಯದಿರುವುದರಿಂದ ಪ್ರಕಟಿಸಲು ಯೋಚನೆಯಾಗಿದೆ. ಇದರಂತೆಯೇ ಗೀತೆಯು ಮತ್ತು ಉಪನಿಷತ್ತುಗಳ ಪಾಡಾಗಿದೆ. ಮಾನವಿಯಲ್ಲಿ ವಿಚಾರಿಸಿದರೆ, ದಾಸರ ಒಂದೂ ಸಹಿಯಿಲ್ಲ. ಜಗನ್ನಾಥವಿಠಲಾಂಕಿತ ಮಧುಪರ್ಣದ ಶಿರೆಯು ಐವತ್ತು ವರ್ಷಗಳ ಹಿಂದೆ ನಡೆದ ಹಿಂದೂ ಮುಸಲ್ಮಾನರ ದೊಂಬಿ ಜಗಳದಲ್ಲಿ ಹೋಯಿತೆಂದು ಹೇಳುತ್ತಾರೆ. ಈಗ ಮಾನವಿಯಲ್ಲಿ ನೋಡಸಿಗುವ ವಸ್ತುಗಳೆಂದರೆ, ವೈನೂರವನಮುನಿತನವನು ಕೊಟ್ಟ ಮೇಣೆ, ಅವರು ಒರಗಿ ಕೂಡುತ್ತಿದ್ದ ಸ್ತಂಭ ಮತ್ತು ದಾಸರ ತಂಬೂರಿ.

ದಾಸರು ರಚಿಸಿದ ತಂತ್ರಸಾರವು ಕೆಳಕಂಡಂತಿದೆ

ಪದ—ಝಂಪೆತಾಳ

ಪಾಹಿ ಪಂಕೇರುಹೇಕ್ಷಣ – ಸರ್ವಕಾಮದ | ಪಾಹಿ ಪದ್ಮಾಲಯ ನಿಕೇತನ ಸದಾ | ಪಾಹಿ ಪಾಹಿ || ಪ.

ಜಯತು ಚತುರಾನನ ಫಣೀಂದ್ರಾದಿ ಬುಧ ವಿನುತ | ಜಯತು ಚತುರಾನನ ರಮಾವಲ್ಲಭ | ಜಯತು ಸಂಪೂರ್ಣ ಚಿತ್ಸುಖಮಯ ಸುಗುಣನಿಲಯ | ಜಯತು ಜನ್ಮಾದಿಕಾರಣ ದೋಷಹಾ || ೧

ಕಮಲಾಕ್ಷ ಪರಮ ಸಂಪ್ರೀತಿಯಿಂದ ಲಕ್ಷ್ಮೀಕರ | ಕಮಲದಿಂ ಸೇವೆಗೊಳುತಿರಲು ಆಗ || ಅಮರನಿಕರಾರಾಧ್ಯ ಕಮಲಾಸನನು ಬಂದು | ನಮಿಸಿ ಬಿನ್ನೈಸಿದನು ತನ್ನ ಪಿತಗೆ || ೨

ಅನಘ ಸರ್ವೋತ್ತಮನೆ ಅನಂತಗುಣಗಣನೆ | ನಾನಾವ ವಿಧ ಮಾಡ್ಯಾವ ರೀತಿ | ಆ ವಿಚಾರವನು ಪೇಳ್ನೆಲು ನಿಗಮರಾ | ಜೀವ ಸಂಘಕೆ ಇಂತೆಂದು ನುಡಿದ || ೩

ಪದ್ಮಸಂಭವ ಕೇಳು ನಾನೆ ಸರ್ವೋತ್ತಮನು | ಎನಗನಂತಾನಂತ ಮಂಗಳ ಗುಣ || ಪ್ರಣವವಾಚ್ಯನು ನಾನು ಅಷ್ಟವರ್ಣಾತ್ಮಕ | ಪ್ರಣವದ ವಿಚಾರವನು ಪೇಳ್ವೆ ನಿನಗೆ || ೪

ನಾದವ ಕೇಳು ಅಕಾರ ಉಕಾರ ಮಕಾರ | ನಾದ ಬಿಂದು ಘೋಷ ಶಾಂತತಿ ಶಾಂತರು || ಈ ಪಂಚವರ್ಣದಲಿ ವಿಶ್ವತೈಜಸ ಪ್ರಾಜ್ಞ | ತೋದವನು ತುರ್ಯಾತ್ಮ ಅಂತರಾತ್ಮ || ೫

ಪರಮಾತ್ಮ ಜ್ಞಾನಾತ್ಮನೆಂಬಿಷ್ಟ ರೂಪದಿಂ । ದಿಸುತಿಹೆನು ವೇದಾದಿಯಲಿ ಸರ್ವದಾ ॥ ಪರಮ ಋಷಿಗಳು ಈ ಮಹಾಮಂತ್ರ ಜಪಮಾಡಿ ಮ । ತ್ಸ್ವರವನೈದುವರು ಸತ್ವರದಿಂದಲಿ ॥ ೬

ವಾರಿರುಹಸಂಭವನೆ ಕೇಳಕಾರದಲಿ ಹದಿ । ನಾರು ಅಚ್ಚುಗಳು ಜನಿಸಿದವು ಕ್ರಮದಿ ॥ ಚಾರು ಅಜ ಆನಂದ ಇಂದ್ರೇಶ ಮೊದಲಾದ । ಈರೆಂಟು ಮೂರ್ತಿಗಳು ವಿಶ್ವಜನಿತ ॥ ೭

ಉ, ಮ, ನಾದ, ಬಿಂದು, ಘೋಷಗಳಿಂದ ಕಚಟತಪ । ವಿಮಲವರ್ಗಗಳು ಪುಟ್ಟಿದುವು ಐದು ॥ ಕಮಲಭವ ಕೇಳು ತೈಜಸಪ್ರಾಜ್ಞತುರ್ಯ ಆ । ತುಮ ಅಂತರಾತ್ಮ ಮೂರ್ತಿಗಳಿಂದಲಿ ॥ ೮

ಪಂಚ ವಿಂಶತಿರೂಪ ಅಭಿವ್ಯಕ್ತವಾದುವು ವಿ । ರಿಂಚಿ ಕೇಳ್ ಶಾಂತಿಯಿಂ **ಯ ರ ಲ ವಗಳು**॥ ಸಂಚಿಂತಿ **ಸತಿಶಾಂತದಿಂದ ಶ ಷ ಸ ಹ ಳ** ಕೇಳ್। ಪಂಚಾಕ್ಷರಂಗಳು ಜನಿಸಿದಾವು ॥ ೯

ಪರಮಾತ್ಮ ಜ್ಞಾನಾತ್ಮರೂಪದಿಂ ಒಂಭತ್ತು। ನಿರುಪಮ ಮೂರ್ತಿಗಳು ಶೋಭಿಸಿದುವು ॥ ಪರಮೇಷ್ಠಿ ನಾರಾಯಣಾಕ್ಷರ ಮಂತ್ರ । ಒರೆವೆ ನಿನಗಾನು ಸಾಂಗೋಪಾಂಗದಿ ॥ ೧೦

ತಾರಗತ ಅಷ್ಟವರ್ಣಂಗಳಿಂ **ಓಂ ನಮೋ । ನಾರಾಯಣಾಯ** ಎಂಬೀ ಮಂತ್ರವು ॥ ಚಾರು ಅಷ್ಟಾರ್ಣತದ್ವಾಚ್ಯ ಮೂರ್ತಿಗಳೆಂಟು । ಸಾರ ವಿಶ್ವಾದಿ ಪ್ರಣವಸ್ಥ ಭಿನ್ನ ॥ ೧೧

ಓಂ ಭೂಃ ಓಂ ಭುವಃ ಓಂ ಸ್ವಃ ಓಂಮಹಃ। ಓಂ ಭೂರ್ಭುವಸ್ಸ್ವಃ ಈ ವ್ಯಾಹೃತಿ ॥ ಅಂಬುಜೋದ್ಭವ ಪ್ರಣವದಾದಿ ನಾಲ್ವರ್ಣದಿಂ । ಸಂಭವಿಸಿತೀ ಮಂತ್ರ ಸುಲಭದಿಂದ । ೧೨

ತನಯ ಕೇಳೀ ಮಂತ್ರಗತ ನಾಲ್ಕು ರೂಪಗಳು। ಅನಿರುದ್ಧ ಪ್ರದ್ಯುಮ್ನ ಸಂಕರುಷಣ ॥ ಅನಘ ಶ್ರೀವಾಸುದೇವನ ಮೂರ್ತಿ ಚಿಂ । ತನೆಮಾಡು ಈ ವ್ಯಾಹೃತಿಯಲಿ ಬಿಡದೆ ॥ ೧೩

ನಿಗಮಾದಿ ಮೊದಲು ನಾಲ್ವರ್ಣದಿಂ **ಓಂ ನಮೋ । ಭಗವತೇ ವಾಸುದೇವಾಯ** ಎಂಬ ॥ ಯುಗಳಾಕ್ಷರಾತ್ಮಕ ಮಂತ್ರ ಪ್ರತಿಪಾದ್ಯ । ಭಗವದ್ರೂಪಗಳ ಪೇಳುವೆನು ನಿನಗೆ ॥ ೧೪

ಕೇಶವ ನಾರಾಯಣ ಮಾಧವ ಗೋವಿಂದ । ಕ್ಲೇಶನಾಶನ ವಿಷ್ಣು ಮಧುಸೂದನ ॥ ಶ್ರೀಶ ಶ್ರೀ ತ್ರಿವಿಕ್ರಮನು ವಾಮನ ಶ್ರೀ ಧರಹೃಷೀ । ಕೇಶಾಂಬುರುಹನಾಭ ದಾಮೋದರ ॥ ೧೫

ತ್ರುತಿಸು ಅವರ್ಣ್ಯ ಅಷ್ಟಾರ್ಣದಿಂ ಮೂರುವ್ಯಾಹೃತಿಯಿಂದ ದ್ವಿಷಡಕ್ಷರದಿಂದ ॥ ಚತುರಾಸ್ಯ ಕೇಳು ಗಾಯಿತ್ರಿ ಉತ್ಪನ್ನವಾ । ಯಿತು ಕೇಶವಾದಿ ಕೃಷ್ಣಾಂತರೂಪ ॥ ೧೬

ವಿತತವಾದುದು ಪುರುಷಸೂಕ್ತ ಗಾಯಿತ್ರಿಯಿಂ । ದತುಳ ಈ ಪುರುಷ ಸೂಕ್ತದಲಿ ವೇದ ॥ ತತಿಗಳುದಿಸಿದುವು ನಿಗಮಬ್ರಹ್ಮಸೂತ್ರ ಭಾ । ರತ ಪಂಚರಾತ್ರ್ಯಾದಿ ಆಗಮಗಳು ॥ ೧೭

ಶತಕೋಟಿ ಮೂಲರಾಮಾಯಣ ಪುರಾಣಗಳು ॥ ಸ್ಮೃತಿ ಸಮೂಹಗಳು ಪುರಾಣಗಳು । ಇತರ ವೈದಿಕ ಸುಶಬ್ದಗಳು ಜನಿಸಿದುವು ಸಂ । ತತವಾಚ್ಯನಾನು ಸಂದೇಹವಿಲ್ಲ ॥ ೧೮

ಉದಯಿಸುವ ರವಿಯುವ್ರೋಲ್ಕಾಂತಿ ಜ್ಞಾನಾನಂದ । ಮೊದಲಾದ ದಿವ್ಯಗುಣಮಯ ಶರೀರ ॥ ಸುದರುಶನ ದರ ಗದಾಂಬುಜಗಳಾಯುಧವೆನಗೆ । ತ್ರಿದಶಗುಣವೇಯ ಸರ್ವೇಶ ನಾನು ॥ ೧೯

ಇದ್ದೆಸೆಯುಲಿನ್ನ ಸೇವಿಪರು ಶ್ರೀ ಭೂದೇವಿ । ಕೃದ್ಧೋಲ್ಕ ವಿಶ್ವ ಕೇಶವ ಮತ್ಸ್ಯಕಾದಿ ॥ ಮದ್ರೂಪಗಳ ಮಧ್ಯಗನು ನಾನು ಬ್ರಹ್ಮಫಣಿ । ಪಾದ್ಯರತಿ ಭಕ್ತಿ ಸೇವ್ಯನು ಸಮರ್ಥ ॥ ೨೦

ಅರಿದರವರ ಭಯಾಂಕಿತ ಚತುರ್ಭುಜ ಜನನಾ । ಲ್ಕೆರಡು ರೂಪಂಗಳು ಪ್ರದೀಪವರ್ಣ ॥ ಸದಾಭರಣ ವಿಭೂಷಿತವಾದ ಮದ್ರೂಪ । ನಿರುತ ಪೇಯವು ಮುಮುಕ್ಷುಗಳಿಂದಲಿ ॥ ೨೧

ತಾರನಾರಾಯಣಾಷ್ಟಾಕ್ಷರವು ವ್ಯಾಹೃತಿಯು ಈರಾರುವರ್ಣ ಗಾಯತ್ರಿಮಂತ್ರ॥ ಸಾರಮಾತೃಕ ಪುರುಷಸೂಕ್ತ ಸ್ತ್ರೈಣ ವಗಳಿವು । ನೀರಜಾಸನ ಕೇಳು ಮಹಮಂತ್ರವು॥ ೨೨

ಸೀತಾರಮಣ ಮೂಲರಾಮನತಿ ಹರುಷದಲಿ । ಧಾತಗುಪದೇಶಿಸಿದನೀ ತೆರದಲಿ ॥ ಪ್ರೀತಿಯಿಂದಲಿ ಬ್ರಹ್ಮ ಪರಾವರ್ತಿ ಪಠಿಸೆ ಶೀ । ಘ್ರಾತಪತ್ರನು ಕಾಮಿತಾರ್ಥವೀವ ॥ ೨೩

ಕರುಣಾಬ್ಧಿ ವಸುಧೇಂದ್ರರಾಯರ ಕೃಪಾಬಲದಿ । ವಿರಚಿಸಿದೆನೀ ಗ್ರಂಥ ಪದರೂಪದಿ ॥ ಅರಸಿಕರು ನಿಂದಿಸಲು ಕುಂದಾವುದಿದಕೆ ಭಾ । ಸ್ಕರನುದಯ ಘೂಕಮೋಹಿಸುವ ತೆರದಿ ॥ ೨೪

ಧರ್ಮಾರ್ಥಕಾಮ ಮೋಕ್ಷಗಳೀವ ಗ್ರಂಥವಿದು । ನಿರ್ಮಾಣಮಾಡಿಸಿದ ರಾಮಚಂದ್ರ ॥ ಭರ್ಮಗರ್ಭಗೆ ಒಲಿದು ಪೇಳಿದ ಮಹಾ ಮಂತ್ರ । ಮರ್ಮಗಳನರಿತು ಜಪಿಸುವನು ಧನ್ಯ ॥ ೨೫

ಮಂಗಳ ರಮಾಪತಿಗೆ ಮಂಗಳ ದ್ರುಹಿಣಪತಿಗೆ । ಮಂಗಳ ದಶಪ್ರಮತಿ ಮುನಿಮಾನ್ಯಗೆ ॥ ಮಂಗಳ ಶಿವೇಂದ್ರಾದಿ ಸುರನಿಕರ ಪೂಜ್ಯನಿಗೆ । ಮಂಗಳ **ಜಗನ್ನಾಥ ವಿಠಲಯ್ಯಗೇ** ॥ ೨೬

ಇಪ್ಪತ್ತರೇಳೆನಿಪ ಪದಗಳೆಂಬತಿ ವಿಮಲ । ಪುಷ್ಪಮಾಲಿಕೆ ಮೂಲರಾಮನಡಿಗೆ । ಅರ್ಪಿಸಿದನೀ ಸುಮನಸಾಮನನು ದಿನದಲ್ಲಿ । ಒಪ್ಪದಿರವೇ ಬುಧರ ಮಸ್ತಕದಲಿ ॥ ೨೭

ಜಗನ್ನಾಥದಾಸರು ರಚಿಸಿದ ಮೊತ್ತವಾದ ಗ್ರಂಥಗಳಲ್ಲಿ **ಹರಿಕಥಾಮೃತಸಾರ** ವೊಂದು ಕನ್ನಡ ತೆಲುಗು ಬಾಲಬೋಧ ಲಿಪಿಗಳಲ್ಲಿ ಮುದ್ರಿತವಾಗಿ ಪ್ರಚಾರದಲ್ಲಿದೆ. ದೇವದೈತ್ಯರ ತಾರತಮ್ಯ ಸಂಧಿಗಳು, ಪದಾರ್ಥಗಳಲ್ಲಿ ಭಗವದ್ರೂಪ ವರ್ಣನೆಯ ಸಂಧಿಗಳು, ಜ್ಞಾಪಕದಲ್ಲಿ ನಿಲ್ಲುವುದು ಶ್ರಮಸಾಧ್ಯವಾದ್ದರಿಂದ ಅವುಗಳನ್ನು ಬಿಟ್ಟು ಮಿಕ್ಕ ಪದ್ಯಗಳು ನಿರಂತರ ಪಠನೆಗೆ ಅರ್ಹವಾಗಿವೆ.

ಶ್ರೀ ದಾಸರವರ ಹರಿಕಥಾಮೃತಸಾರವನ್ನು ಆಸ್ವಾದಿಸುತ್ತಾ ಕರ್ಜಗಿಯ ದಾಸಪ್ಪ ದಾಸರು ವೈಮಶಿದು—

ಸಾರವೆಂದರೆ ಹರಿಕಥಾಮೃತ। ಸಾರವೆಂಬುವುದೆಮ್ಮ ಗುರುವರ। ಸಾರಿದಲ್ಲದೆ ತಿಳಿಯದೆನುತ ಮಹೇಂದ್ರನಂದನನ॥ ಸಾರಥಿಯು ಬಲಗೊಂಡು ಸಾರಾ। ಸಾರಗಳ ನಿರ್ಣೈಸಿ ಪೇಳ್ದನು। ಸಾರ ನಡೆವ ಮಹಾತ್ಮರಿಗೆ ಸಂಸಾರವೆಲ್ಲಿಹದೋ॥ ೩

ದಾಸವರ್ಯರ ಮುಖದಿ ನಿಂದು ರ। ಮೇಶನನು ಕೀರ್ತಿಸುವ ಮನದಭಿ। ಲಾಷೆಯನು ವರ್ಣಾಭಿಮಾನಿಗಳೊಲಿದು ಪೇಳಿಸಿದ॥ ಈ ಸುಲಕ್ಷಣ ಕಾವ್ಯದೊಳು ಯತಿ। ಪ್ರಾಸಗಳಿಗೆ ಪ್ರಯತ್ನವಿಲ್ಲದೆ। ಲೇಸು ಲೇಸೆನೆ ಶ್ರಾವ್ಯವಾದುದು ಕುರುಹು ಕವಿಗಳಿಗೆ॥ ೪

ಪ್ರಾಕೃತೋಕ್ತಿಗಳೆಂದು ಜರಿವ ಮ। ಹಾ ಕೃತಘ್ನರು ಜರಿವರಲ್ಲದೆ। ಸ್ವೀಕೃತವ ಮಾಡದಲೆ ಬಿಡುವರೆ ಕುರುಹೆ ಕವಿಗಳಿಗೆ॥ ಶ್ರೀಕೃತೀಪತಿಯಮಲ ಗುಣಗಳು। ಈ ಕೃತಿಯೊಳುಂಟಾದ ಬಳಿಕಿದು। ಪ್ರಾಕೃತವೆ? ಸಂಸ್ಕೃತದ ಸಡಗರವೇನು ಸುಗುಣರಿಗೆ॥ ೫

ಎಂಬ ಪದ್ಯಗಳನ್ನು ಫಲಸ್ತುತಿಯಲ್ಲಿ ಬರೆದಿರುತ್ತಾರೆ. ಮತ್ತು ಹಾಗೆಯೇ ಮುಂದುವರಿಯುತ್ತಾ—

ಸತಿಯರಿಗೆ ಪತಿಭಕುತಿ, ಪತ್ನಿಯ। ವ್ರತ ಪುರುಷರಿಗೆ, ಹರುಷ ನೆಲೆಗೊಂ। ಡತಿ ಮನೋಹರವಾಗಿ ಗುರುಹಿರಿಯರಿಗೆ ಜಗದೊಳಗೇ॥ ಸತತ ಮಂಗಳವೀವ ಬಹಳ ಸು। ಕೃತಿಗಳೆನಿಸುತ ಸುಲಭದಿಂ ಸ। ದ್ಗತಿಯ ಪಡೆವರು ಹರಿಕಥಾಮೃತಸಾರವನು ಪಠಿಸೆ॥ ೨೧

ಎಂಬ ಮಾತುಗಳನ್ನಾಡಿದ್ದಾರೆ.

ಜಗನ್ನಾಥದಾಸರು ಹರಿಕಥಾಮೃತಸಾರವನ್ನು ತಮ್ಮ ಎಂಭತ್ತನೇ ವಯಸ್ಸಿನಲ್ಲಿ ಬರೆದರಂತೆ! ಬರೆಯುವ ಕಾಲದಲ್ಲಿ ವೃದ್ಧಾಪ್ಯದಿಂದ ಜೋಲುಬಿದ್ದಿದ್ದ ಹುಬ್ಬುಗಳು ಕಣ್ಣಿಗೆ ಮರೆಯಾಗಿದ್ದರೆ ಶಿಷ್ಯರು ಎತ್ತಿ ಹಿಡಿಯುತ್ತಿದ್ದರಂತೆ! ತಾಡವಾಲೆಯಮೇಲೆ ಘಂಟೆಯಿಂದ ಕರಕರನೆ ಬರೆಯುತ್ತಾ ಇದ್ದಕ್ಕಿದ್ದ ಹಾಗೇ ಕೈ ನಿಲ್ಲಿಸಿ ಒಮ್ಮೆ ದಾಸರು ನಕ್ಕರಂತೆ! ಶಿಷ್ಯರು, ಕಾರಣವೇನೆಂದು ಕೇಳಿದರಂತೆ! ದಾಸರು–'ಅಪ್ಪಾ ತತ್ವಾಭಿಮಾನಿ ದೇವತೆಗಳು ಈ ಗ್ರಂಥವನ್ನು ಬರೆಸುತ್ತಿದ್ದಾರೆ. ವರ್ಣಾಭಿಮಾನಿ ದೇವದೇವಿಯರು ನಾನು ಮುಂದು–ತಾನು ಮುಂದೆಂದು ಮುಂದೆ ಬಂದು ನಿಲ್ಲುತ್ತಿದ್ದಾರೆ! ನಗದೆ ಏನು ಮಾಡಲಿ!' ಎಂಬುದಾಗಿ ಹೇಳಿದರಂತೆ!

ಈ ಮಾತು ಅತಿಶಯೋಕ್ತಿಯಲ್ಲ. ನಿರಂತರ ತತ್ವನ್ಯಾಸ ಮಾತೃಕಾನ್ಯಾಸ

ಮಾಡುವವರಿಗಿದು ಹೊಸ ವಿಷಯವಲ್ಲ. ಮಂತ್ರೋಪಾಸಕರಿಗೆ ಧ್ಯಾನ ಶ್ಲೋಕಗಳಲ್ಲಿ ಉಕ್ತವಾದ ಭಗವನ್ಮೂರ್ತಿಯು ಕಣ್ಣೆದುರಿಗೆ ನಿಲುವುದು ಸಹಜ ಧರ್ಮವಾಗಿದೆ. ಶಾಸ್ತ್ರವನ್ನು ನಂಬುವರಾಗಬೇಕು; ಉಪಾಸಕರಾಗಬೇಕು. ಎರಡೂ ಅಲ್ಲದವರಿಗೆ ಈ ಮಾತು ಅರ್ಥವಾಗುವುದಿಲ್ಲ.

ಹರಿದಾಸರ ಮನಸ್ಸು ಎಷ್ಟು ಉದಾರವಾದುದೆಂಬುದಕ್ಕೆ ಕೆಳಕಂಡ ಎರಡೇ ಪದ್ಯಗಳ ನಿದರ್ಶನ ಸಾಕು.

ಸರ್ವ ದೇಶವು ಪುಣ್ಯದೇಶವು | ಸರ್ವಕಾಲವು ಪರ್ವಕಾಲವು |
ಸರ್ವ ಜೀವರು ದಾನಪಾತ್ರರು ಮೂರು ಲೋಕದೊಳು ||
ಸರ್ವ ಮಾತುಗಳೆಲ್ಲ ಮಂತ್ರವು | ಸರ್ವ ಕೆಲಸಗಳೆಲ್ಲ ಪೂಜೆಯು |
ಶರ್ವ ವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ || ೪ || ಸಂಧಿ–೧೦
ಆವ ಕುಲದವನಾದಡೇನಿ | ನ್ನಾವ ದೇಶದೊಳಿದ್ದಡೇನಿ |
ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ ||
ಶ್ರೀವರನ ಸರ್ವತ್ರದಲಿ ಸಂ | ಭಾವಿಸುತ ಪೂಜಿಸುತ ಮೋದಿಪ |
ಕೋವಿದರಿಗುಂಟೇನೊ ಭಯ ದುಃಖಾದಿ ದ್ವಂದ್ವಗಳು || ೪ || ಸಂಧಿ–೧೩

ಜಗನ್ನಾಥದಾಸರ ಹರಿಕಥಾಮೃತಸಾರವನ್ನು ನೋಡಿ–ಪ್ರಾಣೇಶದಾಸರು .—

ಶಿಖದಲಿಪ್ಪ ಪೀಯೂಷ | ಸುಖದಿ ಪಿತೃಗಳುಂಡರು | ಅಕಟಕಾಣಾರೀ ನರರೆಂದೂ | ತಂಗಿ ನೋಡಿದೇನೇ || ಪ್ರಕಟಗ್ರಂಥ ಶೋಧಿಸಿ | ಯುಕುತಿಂದ್ಹರಿಕಥಾಮೃತ | ಸಕಲರಿಗುಣಿಸೀ ಸುಖಿಸುವರೀ | ತಂಗಿ ನೋಡಿದೇನೆ || ೨

ಎಂಬುದಾಗಿ ದಾಸರ ಸ್ತೋತ್ರಪದ ಮಾಡಿದ್ದಾರೆ.

ಕರ್ಜಗಿಯ ದಾಸಪ್ಪದಾಸರು ಶ್ರೀ ದಾಸರಾಯರಲ್ಲಿ ಭಕ್ತಿಮಾಡುವ ಜನರ ಪಠಣೆಗೆ ಯೋಗ್ಯವಾಗಿರುವಂತೆ ಕೆಳಕಂಡ ದೇವರನಾಮವನ್ನು ರಚಿಸಿರುತ್ತಾರೆ.

ಪೂರ್ವಿ—ರೂಪಕತಾಳ

ಸಂಗಸುಖವ ಬಯಸಿ ಬದುಕಿರೋ
ರಂಗನೊಲಿದ ಭಾಗವತರ   ಪ.

ಪುಷ್ಟಿಮಾರ್ಗಭ್ಯಾಸವು | ಸೃಷ್ಟಿಸಾಧ್ಯಕ್ಷರಿಸಿಸಿ
ಶಿಷ್ಟ ಸದಾಚಾರವಿಲ್ಲ | ನಿಷ್ಠರಾಗಿ ನಿತ್ಯ ಸುಮ್ಮ
ಶ್ರೇಷ್ಠ ಕೀರ್ತನೆಯ ಪಾಡುತಾ | ಕಾಮ್ಯಕರ್ಮ |
ಬಿಟ್ಟು ಭಕುತಿಯನ್ನು ಮಾಡುತಾ | ನೇಮದಿಂದ
ತುಷ್ಟಿಗೈಸಿ ಖಳರ ಕಾಡುತಾ || ಬಂದ ಲಾಭ
ನಷ್ಟ ಕಷ್ಟಗಳನು ಒಡಂ | ಬಟ್ಟು ಬಗೆಯ ಪೇಳಲಿಷ್ಟು || ೧

ಭೂತದಯಾಶೀಲರಾದ । ನೀತ ಗುರುದ್ವಾರ **ಜಗ**
ನ್ನಾಥವಿಠಲಂಕಿತವನು । ಪ್ರೀತಿಯಿಂದ ಪಡೆದು ಸಂ ।
ಗೀತ ವೃತ್ತ ಪದ ಸುಳಾದಿಯ । ಪೇಳಿ ಪ್ರೇಮಾತಿಶಯದಿ
ಮಧುವಿರೋಧಿಯ । ಒಲಿಸಿಕೊಂಡು ।
ಪೂತರಾದ ಜನರ ಬಾಧೆಯ । ದೂರಮಾಡಿ ॥
ಖ್ಯಾತರಾಗಿಹರು ಪುಸಿಯ । ಮಾತಿದಲ್ಲ ಮೀರೆ ಸಲ್ಲ ॥ ೨

ಮೇದಿನಿಯೊಳಗುಳ್ಳ ಗಂ । ಗಾದಿ ತೀರ್ಥಪತಿಗಳಿವರ
ಕಾದುಕೊಂಡಿಹರು ಬಿಡದೆ । ಸ್ವಾದಿ ರಾಜೇಂದ್ರರ ಪ್ರ ।
ಸಾದದಿಂದ ಹರಿಕಥಾಮೃತ । ಸಾರತತ್ವ ।
ಸಾಧುಜನರಿಗಾಗಿ ಪ್ರಾಕೃತ । ದಿಂದ ಪರ ।
ಮಾದರದಲಿ ಪೇಳಿ ದುಷ್ಕೃತ ॥ ದೂರಮಾಡಿ ॥
ಮೋದಿಸುವರಿಗೆಣೆಯಗಾಣೆ । ಶ್ರೀದ ವಿಠಲನಾಣೆ ॥ ೩

ಜಗನ್ನಾಥದಾಸರ ಜೀವಿತದಲ್ಲಿ ಎಂಭತ್ತೆರಡು ವರ್ಷಗಳಾದುವು. ಬಾಲ್ಯ ಪ್ರಭೃತಿ ನಲವತ್ತೆರಡು ವರ್ಷಗಳು ವಿದ್ಯಾಭ್ಯಾಸ ಪಾಠಪ್ರವಚನಗಳಲ್ಲಿ ಕಳೆದುವು. ಉಳಿದ ನಲವತ್ತು ವರ್ಷಗಳು ದಾಸಾರ್ಯರ ಆಜ್ಞೆಯಂತೆ, ಗ್ರಂಥರಚನೆ ದೇಶಸಂಚಾರ, ಧರ್ಮ ಪ್ರಚಾರಗಳಲ್ಲಿ ಕಳೆದುವು. ಗಹನ ತತ್ವಗಳು ಸುಲಭ ಕನ್ನಡ ದೇವರನಾಮ ಸುಳಾದಿಗಳಲ್ಲಿ ರಚಿತವಾದುವು. ಕನ್ನಡ ವಾಙ್ಮಯದ ಗೌರವವು 'ಸಂಸ್ಕೃತದಲಿನ್ನೇನು' ಎಂಬ ಮಟ್ಟಕ್ಕೇರಿತು. ದಾಸರು ತಮ್ಮ ಜನ್ಮದ ವ್ಯಾಪಾರವಾಯಿತೆಂದರು.

ಶಾಲಿವಾಹನ ಶಕ ೧೭೩೧ನೇ ಶುಕ್ಲ ಸಂವತ್ಸರದ ಭಾದ್ರಪದ ಶುದ್ಧ ನವಮಿಗೆ ಗೋಪಾಲದಾಸರು ವಿಜಯದಾಸರ ಆಜ್ಞೆಯಂತೆ ತಿರುಪತಿಯಲ್ಲಿ ಜಗನ್ನಾಥದಾಸರಿಗೆ ನಲವತ್ತುವರ್ಷ ಆಯುರ್ದಾನಮಾಡಿದ ಅವಧಿಯು ಮುಗಿಯಿತು. ವೃದ್ಧಾಪ್ಯದಲ್ಲಿ ಸಮೀಪದಲ್ಲಿರಬೇಕೆಂದು ಪ್ರಾಣೇಶದಾಸರೂ ದಾಸಪ್ಪದಾಸರೂ ಮಾನವಿಗೆ ಬಂದರು. ದಾಸರು ದೃಢಾಂಗರಾಗಿದ್ದುದನ್ನು ನೋಡಿ ಯಾರೂ ನಿರ್ಯಾಣಕಾಲದ ಯೋಚನೆ ಮಾಡಲಿಲ್ಲ. ದಾಸರು ತಮ್ಮ ಆಯುರ್ದಾನದ ಪರಮಾವಧಿಯನ್ನು ಯಾರಿಗೂ ತಿಳಿಸಲಿಲ್ಲ.

ಭಾದ್ರಪದ ಶುದ್ಧ ನವಮಿಯ ದಿವಸ, ಬಹುಕಾಲದಿಂದ ನಡೆಸಿಕೊಂಡು ಬಂದ ಪದ್ಧತಿಯಂತೆ, ಆಯುರ್ದಾನದ ದಿನವೆಂದು ಸತ್ಪಾತ್ರರನ್ನು ಕರೆಸಿ, ಮೃಷ್ಟಾನ್ನಭೋಜನ ಮಾಡಿಸಿದರು. ಮುಂಚಿತವಾಗಿ ಭಜನೆಗೆ ಸಿದ್ಧವಾಗಲೆಂದು ಪ್ರಾಣೇಶದಾಸರಿಗೆ ಹೇಳಿದರು.

ಸಾಯಂಸಂಧ್ಯೆಯಾಯಿತು. ಸ್ತೋತ್ರಪಠನೆಯಾಯಿತು. ಜಗನ್ನಾಥದಾಸರು, 'ಸತತ ಗಣನಾಥ ಸಿದ್ಧಿಯನೀವ' ಎಂಬ ಉಗಾಭೋಗವನ್ನು ಹಾಡಿದರು. ಮಿಕ್ಕ ದೇವತಾ ಪ್ರಾರ್ಥನೆಗಳನ್ನು ಪ್ರಾಣೇಶದಾಸರೂ, ದಾಸಪ್ಪದಾಸರೂ ಹಾಡಿದರು. ಪದ್ಮಾಸನಾಸೀನರಾಗಿ–ಜಗನ್ನಾಥದಾಸರು ಲಯಚಿಂತನೆಮಾಡುತ್ತಾ ಕುಳಿತರು. ದಾಸರೇಕೆ

ಕಣ್ಣುಮುಚ್ಚಿ ಕುಳಿತರೆಂಬ ಕಲ್ಪನೆ ಯಾರಿಗೂ ಆಗಲಿಲ್ಲ. ದೇವತಾಪ್ರಾರ್ಥನೆಯು ಪೂರ್ವರಂಗ ಮುಗಿದರೂ ದಾಸರು ಕಣ್ಣು ಬಿಡಲಿಲ್ಲ. ಎಲ್ಲರೂ ತಟಸ್ಥರಾಗಿ ದಾಸರಲ್ಲಿ ನೆಟ್ಟದೃಷ್ಟಿಯುಳ್ಳವರಾಗಿ ಕುಳಿತರು.

ಬ್ರಹ್ಮನೇತ್ರರಿಗಾಗುವಂತೆ ದಾಸರ ನೆತ್ತಿಯು ಸಿಡಿಯಿತು. ಅದೇನೆಂದು ಪ್ರಾಣೇಶ ದಾಸರು ನೋಡುವಷ್ಟರಲ್ಲಿ ದಾಸರ ನಿರ್ಯಾಣವಾಯಿತೆಂಬ ಗದ್ದಲವಾಯಿತು. ಕಣ್ಣು ತೆರೆಯಲಿಲ್ಲ. ಮುಖವಂದವು ಕೆಡಲಿಲ್ಲ. ಕೈಯ್ಯಲ್ಲಿದ್ದ ತಂಬೂರಿಯು ಕದಲಲಿಲ್ಲ. ಜನರು, ದಾಸರಾಯರು, ನಮ್ಮನ್ನಗಲಿದರೇ–ಪರದೇಶಿಗಳಾದೆವೇ–ಎಂದು ದುಃಖಿತರಾದರು.

ಮನಸ್ಸನ್ನು ಸಮಸ್ಥಿತಿಗೆ ತಂದುಕೊಂಡು, ಗಂಟಲನ್ನು ಸರಿಪಡಿಸಿಕೊಂಡು, ಉದ್ವೇಗವನ್ನಡಗಿಸಿಕೊಂಡು–ಕರ್ಜಗೀದಾಸರು—

ಮುಖಾರಿ—ಝಂಪೆತಾಳ

ತೆರಳಿದರು ಶ್ರೀ ಜಗನ್ನಾಥ ದಾಸಾರ್ಯರು
ಶಿರಿಪತಿಯ ಸ್ಮರಿಸಿ ಹರಿಪುರಕೆ ಹರುಷದಲಿ ಪ.
ವರ ಶುಕ್ಲ ವತ್ಸರದ ಭಾದ್ರಪದ ಸಿತಪಕ್ಷ
ಹರಿವಾರ ನವಮಿಯಲ್ಲಿ
ಸುರಸಿದ್ಧಸಾಧ್ಯ ಸನ್ಮುನಿಗಣಾರ್ಚಿತಪಾದ
ಹರಿಯೆ ಪರನೆಂದೆನುತಲಿ
ಧರಣಿಯನು ತ್ಯಜಿಸಿ ಬಹುಮಾನ ಪೂರ್ವಕವಾಗಿ
ಬೆರೆದು ಸುರಸಂದಣಿಯಲಿ
ಪರಮಾರ್ಥ ವೈದಿ ಮನ ಹರಿಯ ಪಾದದಲಿಟ್ಟು
ವರವಿಷ್ಣುದೂತ ನೈವಾಸಿಕರ ಒಡಗೂಡಿ ೧
ಅತಿಪ್ರೇಮಿಗಳು ಹಸನ್ಮುಖರು ದಯ ಬೀರುವರು ।
ಖತಿದೂರರಿವರು ಜಗದಿ ।
ಮಿತಿಮೀರಿ ಶ್ರೀಹರಿಯ ಕಥೆ ನಾನಾ ಪರಿಯಲಿ
ಅತಿಶಯದಿ ಪೇಳಿ ಇಹಕೆ
ಸತತವೂ ಶರಣರ್ಗೆ ಗತಿಯಾಗುವಂತೆ ಸ
ತ್ಪಥವಿಡಿಸಿ ಕರುಣದಿಂದ ।
ಹಿತವಂತರೆನಿಸಿ ಸಮ್ಮತವಾಗಿ ಸರ್ವರಿಗೆ
ಮತಿಪೇಳಿ ಕೊಟ್ಟು ಸದ್ಗತಿಗೋಸುಗವಾಗಿ ೨
ಆಚರಣೆಯಲಿ ಒಂದರಘಳಿಗೆ ಬಿಡದೆ ಬಲು
ಖೇಚರರೂಢ ಹರಿಯ
ಸ್ವೋಚಿತಾರಾಧನೆಯ ಮಾಡಿ ಮರೆಯುದಲೆ ಮಹಾ
ವೈಚಿತ್ರ್ಯವನ್ನು ತೋರಿ

ಈ ಚರಾಚರದಿ ಸಂಗೀತ ಸಾಹಿತ್ಯದಲಿ
ಪ್ರಾಚುರ್ಯವಂತರೆನಿಸಿ ।
ಈ ಚತುರ್ದಶ ಭುವನಪತಿ ಶ್ರೀದವಿಠಲನ
ಯೋಚನೆಯ ಬಿಡದೆ ಮಂಗಳ ಶಬ್ದವಾದ್ಯದಿಂ ೩

ಎಂಬುದಾಗಿ ಹಾಡಿದರು.

ಶ್ರೀ ಜಗನ್ನಾಥದಾಸರು ವಾಸವಾಡುತ್ತಿದ್ದ ಮನೆಯು ಈಗ ದಾಸರ ದೇವಾಲಯವಾಗಿದೆ. ಯಾವ ಸ್ತಂಭಕ್ಕೆ ದಾಸರು ಕೂಡುತ್ತಿದ್ದರೋ ಅದನ್ನು ದಾಸರ ಸನ್ನಿಧಾನವೆಂದು ಮುಖವಾಡವಿಟ್ಟು ಪೂಜಿಸುತ್ತಿದ್ದಾರೆ. ಪ್ರತಿ ಭಾದ್ರಪದ ಶುದ್ಧ ನವಮಿಯಲ್ಲಿ ದಾಸರ ಆರಾಧನೆ ನಡೆಯುತ್ತಿದೆ. ರಥೋತ್ಸವವಾಗುತ್ತಿದೆ. ಸಾವಿರಾರು ಮಂದಿ ಭಕ್ತ ಜನರು ಉತ್ಸವದಲ್ಲಿ ಭಾಗಿಗಳಾಗಿ ದಾಸರ ಪದಗಳನ್ನು ಹಾಡುತ್ತಾರೆ. ಈಚೆಗೆ **ಲಿಂಗಸೂಗೂರು ವಕೀಲ ಹನುಮಂತರಾಯರು** ನೂತನ ರಥ ನಿರ್ಮಾಣಮಾಡಿಸಿದ್ದಾರೆ. ದಾಸರಾಯರು ಸಹ್ಲಾದರಾಯನ ಅವತಾರವೆಂಬ ಆಪ್ತವಚನಗಳಿವೆ. ಪ್ರಹ್ಲಾದ ಸಹ್ಲಾದರ ಅವತಾರ ಭೂತರೆನಿಸಿದ **ರಾಘವೇಂದ್ರಸ್ವಾಮಿಗಳ ಮತ್ತು ಜಗನ್ನಾಥದಾಸರ** ಮಂತ್ರಾಲಯ ಮಾನವಿಗಳು ಭಾವುಕರ ಕಾಶಿ ಪ್ರಯಾಗಗಳಾಗಿವೆ.—ಪ್ರಾಣೇಶದಾಸರು–

ಕಾಶಿ ಪ್ರಾಯಾಗ ವಾರಣಾಸಿಗಿಂದಧಿಕವಾದ
ದಾಸರಾಯರಿಪ್ಪ ಸ್ಥಾನವು । ತಂಗಿ ನೋಡಿದೇನೆ ।
ನಾಶವಾಗೋದಘವಾಸ । ಮೀಸಲಾಗುವುದು ಶ್ರೀ ಪ್ರಾ
ಣೇಶವಿಠಲ್ಲ ಕೈಸೇರುವ । ತಂಗಿ ನೋಡಿದೇನೆ ೩

ಎಂಬುದಾಗಿ ಹಾಡಿರುತ್ತಾರೆ.

"ಪುಣ್ಯಾನಿಮಾ ಪರಮಭಾಗವತಾಸ್ಮರಾಮಿ" ಎಂಬಂತೆ, ಭಾಗವತೋತ್ತಮರ ನಾಮಸ್ಮರಣೆಮಾಡಿದವರು ಧನ್ಯರು, ಮಾನ್ಯರು, ಕೃತಕೃತ್ಯರು.

ಮಹೀಪತಿರಾಯರು

ಮಹೀಪತಿರಾಯರ ಹೆಸರು ಪ್ರಾಯಶಃ ಮರೆತ ಹೆಸರೆಂದು ಹೇಳಬೇಕು. ವಿಜಾಪುರ ಜಮಖಂಡಿ ಪ್ರಾಂತ್ಯಗಳಲ್ಲಿ ಇವರ ಜ್ಞಾಪಕವಿದ್ದಷ್ಟು ಧಾರವಾಡ ದೇಶದಲ್ಲಿಲ್ಲ. ಮೈಸೂರ ಕನ್ನಡಿಗರಿಗೆ ಇವರ ಹೆಸರು ಕೇಳಿ ಸಹ ಗೊತ್ತಿಲ್ಲ. ರಾಯರು ಮಹಾಮಹಿಮರು, ಯೋಗಿಗಳು, ಸಾವಿರಾರು ಸುಂದರ ದೇವರನಾಮಗಳನ್ನು ಹಾಡಿದವರು. ಇವರ ವಂಶದಲ್ಲಿ, ತಂಬೂರಿಯವರು ಚಿಕ್ಕಣಿಕೆಯವರು ಎಂದು ಎರಡು ವಿಭಾಗವಾಗಿ ಆರಾರು ಪೀಳಿಗೆಯವರು ಅದೇ ಕ್ರಮದಲ್ಲಿ ಶ್ರೇಯೋವಂತರಾಗಿ ಬೆಳೆದಿದ್ದಾರೆ.

ಬೆಳಗಾಂವೀ ಜಿಲ್ಲಾ ಅಥಣೀ ತಾಲ್ಲೂಕಿಗೆ ಸೇರಿದ ಐಗಳಿಗ್ರಾಮವು ಮಹೀಪತಿ ರಾಯ ಪೂರ್ವಜರು ವಾಸವಾಗಿದ್ದ ಸ್ಥಳ. ರಾಜದಂಡದಿಂದ ಹಿರಿಯರು ಕುಲಕರಣಿಕೆ (ಶಾನುಭೋಗತನ)ಯನ್ನು ಕಳೆದುಕೊಂಡು ವಿಜಾಪುರದಲ್ಲಿ ಭಿಕ್ಷಾವೃತ್ತಿಯಿಂದ ಜೀವನ ಮಾಡಿದರು. ರಾಯರು ಸಂಸ್ಕೃತ ಕನ್ನಡ ಉರ್ದು ಪಾರ್ಶಿ ಭಾಷೆಗಳಲ್ಲಿ ಪಂಡಿತರಾಗಿ ಪುರಾಣದಿಂದ ಕೆಲವು ಕಾಲ ಪ್ರಸಿದ್ಧಿ ಪಡೆದರು. ಕಲೆಕ್ಟರ ಕಛೇರಿಯಿಂದ ಬರುವ ಮಾರ್ಗದಲ್ಲಿರುವ ನೃಸಿಂಹದೇವಾಲಯವೇ ರಾಯರ ಪುರಾಣದ ಕಟ್ಟೆ. 'ಕಛೇರಿಯು ಬಾದಶಹರ ಅರಮನೆಯಾಗಿತ್ತು. ಗೋಳಗುಮ್ಮಟ ಮಸೀದಿಗಳು ಮತ್ತು ಕೆಲವು ಗೋರಿಗಳು ಆ ಸಾಮ್ರಾಜ್ಯದ ಅವಶೇಷಗಳು. ವಿಜಾಪುರದ ಬಾದಶಹರು ಇತರ ಮುಸಲ್ಮಾನ ರಾಜರಂತೆ ಹಿಂದೂ ಧರ್ಮದ್ವೇಷಿಗಳಾಗಿರಲಿಲ್ಲವಂತೆ! ಕೆಲವು ಮಂದಿ ಹಿಂದೂಗಳನ್ನು ಧರ್ಮಾಂತರ ಮಾಡಿದ್ದ ಮಾತ್ರಕ್ಕೇ-ಹಿಂದೂಗಳಲ್ಲೇ ಕೆಲವರು ರಾಜ ಜನಾಂಗಕ್ಕೆ ಸೇರಬೇಕೆಂದು ಧರ್ಮಾಂತರವಾದ ಮಾತ್ರಕ್ಕೆ, ಎಲ್ಲಾ ಕಳಂಕಗಳನ್ನೂ ರಾಜಮನೆತನಕ್ಕೆ ಕೊಡುವುದು ಯೋಗ್ಯವಲ್ಲವೆಂದು ಉದಾರ ಭಾವನೆಯ ಹಿಂದೂಗಳು ಹೇಳುತ್ತಾರೆ. ಈ ಬಗೆಯ ಸವಿನುಡಿಗಳಿಂದ ಹಿಂದೂ ಮುಸಲ್ಮಾನರ ವೈರ ಪರಿಹಾರವಾಗುವುದಾದರೆ ಆಗಲಿ! ಗತ ಗೋಷ್ಠಿಯಿಂದೇನು ?

ಒಂದು ದಿನ ಮಹಮ್ಮದ್ ಷಹನೆಂಬ ಬಾದಶಹನು ಮೇನೆಯಲ್ಲಿ ಕುಳಿತು ಊರೊಳಗೆ ಬರುತ್ತಿದ್ದನು. ಹಿಂದುಮುಂದಣ ಕುದುರೇ ಸವಾರರು, ನರಸಿಂಹ ದೇವಾಲಯದಲ್ಲಿ ಪುರಾಣಶ್ರವಣಕ್ಕೆ ನೆರೆದಿದ್ದ ಜನರ ಮಧ್ಯದಲ್ಲಿ ಮಾರ್ಗಮಾಡಿಕೊಂಡು ಹೋಗುವುದರಲ್ಲಿ ಗಡಿಬಿಡಿಯಾಯಿತು. ಅದು ಬಾದಶಹನ ದೃಗ್ಗೋಚರವಾಯಿತು. ಬಾದಶಹನು-'ಅಲ್ಲೇನು ನಡೆಯುತ್ತಿದೆ? ಆ ಜನರಿಗೆ ತೊಂದರೆಮಾಡದೆ ನಡೆಯಿರಿ' ಎಂದು ಹೇಳಿದನು. ಸವಾರರಿಂದ 'ಅಲ್ಲಿ ಹಿಂದೂಜನರ ಪುರಾಣವಾಗುತ್ತಿದೆ. ನೂರಾರು ಜನ ಗಂಡಸರು, ಹೆಂಗಸರು ಎಲ್ಲಾ ಸೇರಿದ್ದಾರೆ' ಎಂದು ಉತ್ತರ ಬಂದಿತು. ಇದನ್ನು ಕೇಳಿ ನವಾಬನು, ಮೇನೆಯನ್ನು ನಿಲ್ಲಿಸಿದನು. ಶ್ರೋತೃಗಳಾಗಿ ನೆರೆದಿದ್ದ ಹಿಂದೂಗಳಲ್ಲಿ

ಪ್ರಮುಖರಾದವರು ಮುಂದೆ ಬಂದು ನವಾಬನಿಗೆ ಮುಜರೆ ಮಾಡಿದರು. ‘ತಮ್ಮ ಕೊರಾಣದ ಪಠಣೆಯಾದಂತೆ ನಮ್ಮ ಜನರ ಪುರಾಣವಿಲ್ಲಿ ನಡೆಯುತ್ತಿದೆ; ಆದಕಾರಣ ಇಷ್ಟು ಉತ್ಸವ-ಕೇಳುವವರ ಉತ್ಸಾಹ; ಸಂಭ್ರಮ’ ಎಂದು ಉತ್ತರವಿತ್ತರು. ಬಾದಷಹನು ಸಂತುಷ್ಟನಾಗಿ ‘ನಿಮ್ಮ ಶಾಸ್ತ್ರೀ ಮಹಾರಾಜರು ನಮಗೂ ಪುರಾಣ ಹೇಳುವರೋ ?’ ಎಂದು ಪ್ರಶ್ನೆಮಾಡಿದನು. ಅಷ್ಟರಲ್ಲಿ ಮಹೀಪತಿರಾಯರೇ ಪುರಾಣ ಮುಗಿಸಿ, ಹೊರಕ್ಕೆ ಬಂದು ವಂದಿಸಿ-‘ಆಗಬಹುದು-ಹೇಳಬಲ್ಲೆ’ ಎಂದರು. ಬಾದಷಹನು-‘ಆಗಲಿ, ನಾನು ನಿಮ್ಮ ಹಿಂದೂಜನರ ಪುರಾಣ ಕೇಳುತ್ತೇನೆ. ನಿಮ್ಮನ್ನು ವಾಡೆಗೆ ಕರೆಸಿಕೊಳ್ಳುತ್ತೇನೆ’ ಎಂದು ಮೇಣೆಗೆ ಏರಿಸಲು ಆಜ್ಞೆಯಿತ್ತನು. ಮುಸಲ್ಮಾನ ಪ್ರಭುವು ತಮ್ಮ ಪುರಾಣಶ್ರವಣ ಮಾಡುವನಂತೆ ಎಂಬ ಸಂತೋಷ ಹಿಂದೂಗಳಿಗುಂಟಾಯಿತು.

ಸ್ವಲ್ಪಾವಧಿಯಲ್ಲೇ, ಬಾದಷಹನು ತನ್ನ ರಾಜಕಾರ್ಯಗಳನ್ನು ಮುಗಿಸಿ ಪುರಾಣಿಕರನ್ನು ಕರೆತರುವಂತೆ ಆಜ್ಞೆಮಾಡಿದನು. ಅಂದೇ ಮಹೀಪತಿರಾಯರಿಗೆ ಮೇಣೆಯಲ್ಲಿ ಕುಳಿತು ರಾಜಸಭೆಗೆ ಹೋಗಿ ಬರುವ ಸಂಯೋಗ ಒದಗಿಬಂತು. ದೊಡ್ಡ ದೊಡ್ಡ ಅಧಿಕಾರಿಗಳೂ, ಮೌಲ್ವಿಗಳೂ, ಪಂಡಿತರೂ, ದುಭಾಷಿಗಳೂ ರಾಜಾಗಮನಕ್ಕೆ ಪೂರ್ವಭಾವಿಯಾಗಿ ಸಿದ್ಧರಾಗಿ ಕಾದಿದ್ದರು. ರಾಜಾಗಮನವಾದಕೂಡಲೇ ಭದ್ರಪೀಠದಲಿದ್ದ ಪುರಾಣಿಕರ ವಿನಾ ಮಿಕ್ಕವರೆಲ್ಲ ಮುಜರೆ ಮಾಡಿದರು. ಪುರಾಣಿಕರು-ಅನುವಾದಕ್ಕಾಗಿ ಕೂಡುವ ಸ್ಥಳವು ಎತ್ತರವಾಗಿದ್ದು, ಹಿಂದೂ ಪದ್ಧತಿಯಂತೆ ಕಾಯಿ ಕರ್ಪೂರ ಧೂಪ ದೀಪಗಳಿಂದ ಸಜ್ಜಾಗಿತ್ತು. ವ್ಯಾಸಪೀಠದಲ್ಲಿದ್ದ ರಾಯರು ಮಂಗಳಾರತಿ ಮಾಡಿ **‘ಶ್ರೀ ಗಣೇಶಾಯ ನಮಃ’** ಎಂದೇ ಪುರಾಣವನ್ನು ಪಾರ್ಶೀಭಾಷೆಯಲ್ಲಿ ಪ್ರಾರಂಭಿಸಿದರು. ಆ ಒಂದು ದಿನ ಸ್ವಲ್ಪ ಹೊತ್ತು, ಬಾದಷಹನು ಪುರಾಣ ಕೇಳಬಹುದೆಂದಿದ್ದರೆ, ಅದು ರಾಜವಾಡೆಯಲ್ಲಿ ನಿತ್ಯನಿಯಮವಾಗಿಬಿಟ್ಟಿತು. ರಾಯರ ಭಾಷಾಮಾಧುರ್ಯ, ಪುರಾಣದ ವಿಷಯಗಾಂಭೀರ್ಯ, ವರ್ಣನೆಯ ಸೊಬಗು ಇವುಗಳಿಂದ ನವಾಬನು ಸುಪ್ರೀತನಾದನು. ಭಾಗವತ ಭಾರತ ರಾಮಾಯಣಗಳು ಒಂದಾಗುತ್ತಲೊಂದು ನಡೆದು, ಮಹಾ ಮಂಗಳಗಳಾಗಿ ಬ್ರಾಹ್ಮಣರಿಗೆ ಮಾತ್ರವಲ್ಲ, ಹಿಂದೂಗಳಿಗೆ ಮಾತ್ರವಲ್ಲ, ಮುಸಲ್ಮಾನರಾದಿಯಾಗಿ ಸಕಲ ಜನಗಳಿಗೆ ಸಮಾರಾಧನೆಗಳಾದುವು. ಬಾದಷಹನ ಪ್ರೇಮವು ಮಹೀಪತಿರಾಯರ ಮೇಲೆ ಬಹಳವಾಯಿತು. ಅನರ್ಘ್ಯ ವಸ್ತ್ರಾಭರಣಗಳು ರಾಯರ ಪೆಠಾರಿಗಳನ್ನು ಸೇರಿದುವು. ಇಷ್ಟರಿಂದಲೇ ರಾಯರ ರಾಜಕೀಯ ಪೂರ್ತಿಯಾಗಲಿಲ್ಲ. ರಾಯರನ್ನು ಬಿಟ್ಟಿರುವುದು ನವಾಬನಿಗೆ ಸಾಧ್ಯವಾಗಲಿಲ್ಲ. ನವಾಬನ ಖಾಸಗೀ ಖಜಾನೆದಾರ ಪದವಿಯೇ ರಾಯರಿಗೆ ಪ್ರಾಪ್ತವಾಯಿತು. ಖಜಾನೆದಾರ ಪದವಿಯೆಂದರೆ ಸಣ್ಣಪುಟ್ಟ ಅಧಿಕಾರವಲ್ಲ. ರಾಯರಿಗದು ಮಹಾಪದವಿಯೇನಲ್ಲ. ಕೋಟ್ಯಾಂತರ ಹಣದ ಲಿಖಿತಪತ್ರಗಳ ವ್ಯವಸ್ಥೆಯ ಆಳು ಚಾಕರಿಯಾಯಿತು. ಬಲು ಜವಾಬುದಾರಿಯ ಕೆಲಸವಾಗಿಬಿಟ್ಟಿತು. ಪದವಿಗೆ ತಕ್ಕಂತೆ ರಾಜವಾಡೆ, ಬಾಗಿಲಲ್ಲಿ ನೂರಾರು ಕುದುರೆಗಳ ಪಹರೆ, ಆನೆ ಮಹಲು ಮೇಣೆ ಪಲ್ಲಕ್ಕಿಗಳ ಸಡಗರವೆಲ್ಲಾ ರಾಯರ ಭಾಗ್ಯವಾಯಿತು. ಆ ಕಾಲದ ರಾಜ್ಯಾಧಿಕಾರಿಗಳ

ವಸತಿಗಳು ಹೇಗಿದ್ದವೆಂಬುದಕ್ಕೆ ವಿಜಾಪುರದ ಅವಶೇಷಗಳು ಸಾಕ್ಷಿಯಾಗಿವೆ. ಎಷ್ಟು ಕೋಟಿ ದ್ರವ್ಯ ಖರ್ಚುಮಾಡಿ, ಆ ಶಿಲಾಮಯ ಕಟ್ಟಡಗಳನ್ನು ಕಟ್ಟಿಸಿದರೋ, ದುಡ್ಡು ಕೊಟ್ಟೇ ಕಟ್ಟಿಸಿದರೋ – ಅಧಿಕಾರದರ್ಪಕ್ಕೊಳಗಾದ ಜನರು ಕಟ್ಟಿದರೋ ಊಹಿಸಲು ಸಾಧ್ಯವಿಲ್ಲದಂತಿದೆ. ಮಹಾ ವಜೀರನನ್ನು ಬಿಟ್ಟರೆ, ಎರಡನೆಯ ಅಧಿಕಾರವೇ ಮಹೀಪತಿ ರಾಯರದಾಯಿತು. ಸೈನಿಕರ ತನಖಾಗಳು (ತಿಂಗಳ ಸಂಬಳಗಳು) ಕಾಲಕಾಲಕ್ಕೆ ಸರಿಯಾಗಿ ದೊರಕುತ್ತಿದ್ದುದರಿಂದಲೂ, ದಂಡಿಗೆ ಸರಬರಾಯಿ ಮಾಡಿದ ವರ್ತಕರಿಗೆ ಖಜಾನೆದಾರನ ಬಾಗಿಲು ಕಾಯುವುದು ತಪ್ಪಿ ಸಲೀಸಾಗಿ ಸಕಾಲಕ್ಕೆ ಹಣ ದೊರೆಯುತ್ತಿದ್ದ ಕಾರಣವೂ, ರಾಯರ ಆಡಳಿತವು ನವಾಬನಿಗೆ ಮೆಚ್ಚಿಕೆಯಾದಂತೆ, ಮುಸಲ್ಮಾನ ಅಧಿಕಾರಿಗಳಿಗೂ ತೃಪ್ತಿಕರವಾಯಿತು. ರಾಯರ ಮನೆಯಲ್ಲಿ ಅಂತರಂಗ ಬಹಿರಂಗಗಳಿರಲಿಲ್ಲ. ಮುಸಲ್ಮಾನ ಅಧಿಕಾರಿಗಳ ಮನೆಗಳಲ್ಲಿರುವಂತೆ ಜನಾನಾ ಪಡಗರವಿರಲಿಲ್ಲ. ಯಾವಾಗಲೂ ಯಾರಿಗೂ ರಾಯರ ಭೇಟಿಯು ತ್ರಾಸದಾಯಕವಾಗಿರಲಿಲ್ಲ. ಪ್ರಾಮಾಣದ ಅಕ್ಕಿಯಿಂದ ಜೀವಿಸುವುದು ತಪ್ಪಿ, ಮರ್ಯಾದೆಯಿಂದ ಜೀವನಮಾಡುವ ಸೌಕರ್ಯ ದೊರೆಯಿತೆಂಬಷ್ಟೇ ತೃಪ್ತಿ ರಾಯರಿಗಿತ್ತು. ಬಾದಷಹನ ರಾಣೀವಾಸದಲ್ಲೂ ರಾಯರು ಹೋಗಿ ಬರಲು ಅಡೆತಡೆಗಳಿರಲಿಲ್ಲ. ಬಾದಷಹನಿಗೆ ಹೇಗೋ ರಾಣಿಯರಿಗೂ ಹಾಗೆಯೇ ರಾಯರನ್ನು ಕಾಣದಿದ್ದರೆ, ಅವರು ಹೇಳುವ ಕಥೆಗಳನ್ನು ಕೇಳದಿದ್ದರೆ ಆ ದಿನವು ಸುದಿನವೆನಿಸುತ್ತಿರಲಿಲ್ಲ. ರಾಯರು ಮಾತ್ರ–ಇದು ಮೂರು ದಿನದ ಭಾಗ್ಯ, ನಾಯಿಯ ತಲೆಯ ಮೇಲಣ ಬುತ್ತಿ–ಎನ್ನುತ್ತಿದ್ದರು. ತಮ್ಮ ಬಡಜೀವನದ ಪದ್ಧತಿಯನ್ನು ರಾಯರು ಬಿಡಲಿಲ್ಲ. ದೊಡ್ಡಸ್ತಿಕೆಯ ಜೀವನದ ಅಭ್ಯಾಸವಾಗುವುದು ಅಪಾಯಕಾರಿ ಎಂಬ ಅರಿವು ಅವರಿಗಿರದಿರಲಿಲ್ಲ. ಅದೇ ಸಜ್ಜಿಯ ಭಕ್ಕರಿ, ಅದೇ ನುಚ್ಚು, ರಾಯರ ವೃಷ್ಟಾನ್ನವಾಗಿತ್ತು. ಖರ್ಚು ಕಳೆದು ಉಳಿದ ಧನವನ್ನು ರಾಯರು ಬಡಜನರಿಗೆ ದಾನಮಾಡುತ್ತಿದ್ದರು.

ನುಂಗ ನುಂಗಿಯರು

ವಿಜಾಪುರದಲ್ಲಿ ಷಹಾನುಂಗ, ಷಹಾನುಂಗಿ ಎಂಬ ಹೆಸರಿನ ಅಣ್ಣತಂಗಿಯರು ದಿಗಂಬರರಾಗಿ ಸಂಚರಿಸುತ್ತಿದ್ದರು. ಇವರು ಸೂಫೀಪಂಥದವರಾಗಿ ಒಳ್ಳೇ ಯೋಗಾಭ್ಯಾಸಿಗಳಾಗಿದ್ದ ಕಾರಣ ಇವರನ್ನು ಹಿಂದೂ ಮುಸಲ್ಮಾನರೆಂಬ ಭೇದವಿಲ್ಲದೆ ಎಲ್ಲರೂ ಭಯಭಕ್ತಿಯಿಂದ ಕಾಣುತ್ತಿದ್ದರು. ರಾಯರು ಖಜಾನೆಯ ಕೆಲಸದ ಜೊತೆಗೆ ಬಾದಷಹನು ಹೇಳಿದ ಕೆಲಸಗಳನ್ನೆಲ್ಲಾ ಮಾಡಬೇಕಾಗಿತ್ತು. ಆ ಕಾಲದಲ್ಲಿ ಬೇಗಂ ತಲಾವ್ ಎಂಬ ಕೆರೆಯ ಕಾಮಗಾರಿ ನಡೆದಿತ್ತು. ಬಾದಷಹನ ಆಜ್ಞೆಯಿಂದ ರಾಯರು, ಆ ಕೆರೆಯ ಕೆಲಸ ಎಷ್ಟುಮಟ್ಟಿಗೆ ನಡೆದಿದೆಯೆಂದು ವಿಚಾರಿಸಲು ಆಗಾಗ ಹೋಗಿಬರುತ್ತಿದ್ದರು. ಷಹಾನುಂಗನು ಯಾವ ಹೊತ್ತಿನಲ್ಲಿ ಎಲ್ಲಿರುವನು, ಎಲ್ಲಿ ಊಟಮಾಡುವನು, ಎಲ್ಲಿ ಮಲಗುವನು ಎಂಬ ವಿಚಾರ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಜನರು ಮಾತ್ರ ಅವನು ಊಟ

ವನ್ನೇ ಮಾಡುವುದಿಲ್ಲವೆಂದು ಹೇಳುತ್ತಿದ್ದರು. ಅವನ ಬಾಯಿಂದ ಒಳ್ಳೇಮಾತು ಬಂದರೆ ಜನರ ಕಲ್ಯಾಣವಾಗುತ್ತದೆ ಎಂಬ ನಂಬಿಕೆ ಎಲ್ಲರಿಗೂ ಇತ್ತು, ಕೆಟ್ಟಮಾತು ಬಂದರೆ ಕೆಡಕೂ ಆಗುತ್ತಿತ್ತು. ಆದ್ದರಿಂದ ಆ ಅಣ್ಣತಂಗಿಯರನ್ನು ಮಾತನಾಡಿಸಲು ಯಾರೂ ಸಾಹಸಮಾಡುತ್ತಿರಲಿಲ್ಲ. ಹೆದರುತ್ತಲೂ ಇದ್ದರು.

ಒಂದು ದಿನ ರಾಯರು ಕೆರೆಯನ್ನು ನೋಡಿಕೊಂಡು ರಾಜನಾಡೆಗೆ ಬರುತ್ತಿದ್ದಾರೆ. ಕೋಟೆಯ ಕಂಪುಕದ ಬಳಿ ನುಂಗನು ನಿಂತಿದ್ದಾನೆ. ರಾಯರ ಮೇನೆಯನ್ನು ನೋಡಿ ನಗುತ್ತಿದ್ದಾನೆ. 'ಅರೇ ಬೇಟಾ ಆರೇ' ಎಂದು ಕರೆಯುತ್ತಿದ್ದಾನೆ. ಮೇನೆಯೂ ನುಂಗನ ಬಳಿಯಲ್ಲೇ ಹಾದುಹೋಗುತ್ತಿದೆ. ಅವನ ಮಾತನ್ನು ಯಾರೂ ಲಕ್ಷಿಸಲಿಲ್ಲ. ರಾಯರ ಗಮನವೂ ಅವನ ಕಡೆಗೆ ಹೋಗಲಿಲ್ಲ. ಹೀಗೆ ಒಂದು ಬಾರಿಯಲ್ಲ–ಅನೇಕಬಾರಿ ನಡೆದಿದೆ. ಕಡೆಗೆ ಒಂದು ದಿನ ನುಂಗನು ಮೇನೆಯನ್ನು ಹಿಡಿದು ನಿಲ್ಲಿಸಿದ್ದಾನೆ. ಎಂದಿನಂತೆಯೇ 'ಅರೇ ಬೇಟಾ ಆರೇ' ಎಂದು ಕರೆದಿದ್ದಾನೆ. ರಾಯರ ಕೈಹಿಡಿದಿದ್ದಾನೆ.

ರಾಯರು ನುಂಗನನ್ನು ನೋಡಿ ಗಾಬರಿಗೊಂಡರು. ಮೇನೆಯಿಂದಿಳಿದರು. ನನ್ನಿಂದ ಏನಾಗಬೇಕೆಂದು ನುಂಗನನ್ನು ಕೇಳಿದರು. ಅವನು ನಿನ್ನ ಕೈಯಲ್ಲಿ ಏನಿದೆಯೆಂದು ಕೇಳಿದನು. ರಾಯರು–ಸಿಕ್ಕಾ (ಮೊಹರುಂಗುರ) ಇದೆಯೆಂದು ಹೇಳಿದರು. ನುಂಗನು ಅದನ್ನೇ ತಾರೆಂದನು. ರಾಯರು ಏನು ಹೇಳುವುದಕ್ಕೂ ತೋರದೆ, ಮುಗ್ಧರಂತಾಗಿ, ಸಿಕ್ಕವನ್ನು ನುಂಗನಕೈಗೆ ಕೊಟ್ಟರು. ನುಂಗನು ಆ ಉಂಗುರವನ್ನು ತೆಗೆದುಕೊಂಡು ಒಡನೆ ಓಡಿಬಿಟ್ಟನು. 'ಸರ್ಕಾರೀ ಉಂಗುರ–ಮೊಹರುಂಗುರ ಕೊಡು ಕೊಡು' ಎಂದು ಕೂಗಿದಷ್ಟೂ–ವೇಗವಾಗಿ ಓಡಿದನು. ರಾಯರು ಕರ್ತವ್ಯಮೂಢರಾಗಿ ಅತ್ತಿತ್ತ ನೋಡುತ್ತಾ ಅವನ ಬಳಿಗೆ ಓಡಿಹೋದರು. ರಾಯರು ಹತ್ತಿರಕ್ಕೆ ಬಂದುದನ್ನು ಕಂಡು, ನುಂಗನು ಉಂಗುರವನ್ನು ಕಂದಕದಲ್ಲೆಸೆದನು. 'ಸಿಕ್ಕಾ–ಸಿಕ್ಕಾ' ಎಂದು ಗಹಗಹಿಸಿ ನಗತೊಡಗಿದನು. ಅಷ್ಟರಲ್ಲಿ ಅವನ ತಂಗಿ ನುಂಗಿಯೂ ಬಂದಳು. ಅದೇನೆಂದು ಕೇಳಿದಳು. ಅದೇ' ಸಿಕ್ಕಾ–ಸಿಕ್ಕಾ' ಎಂದು ನುಂಗನು ಮತ್ತೆ ಚಪ್ಪಾಳೆ ತಟ್ಟಿ ನಕ್ಕನು. ನುಂಗಿಯೂ ಹಾಗೆಯೇ ನಕ್ಕಳು. ರಾಯರ ಮುಖಕ್ಕೆ ಕೈ ತಿರುಗಿಸಿ 'ಸಿಕ್ಕಾ' ಎಂದು ಮತ್ತೆ ನಕ್ಕಳು.

ಧರ್ಮಸಂಕಟ

ರಾಯರಿಗೆ ಇದು ಒಳ್ಳೇ ಧರ್ಮಸಂಕಟವಾಯಿತು. ಹುಚ್ಚನೊಡನೆ ಏನು ಮಾಡಬಲ್ಲರು? ಮುಂದೇನು ಮಾಡುವುದೆಂದು ತೋರದಾಯಿತು. ದಂಡಿಸಬಲ್ಲರೆ? ಸತ್ಪುರುಷನೆಂಬ ಭಯ! ದಂಡಿಸಿದರೂ ಫಲವೇನು? ಹಿಂದೊಮ್ಮೆ ಬಾದಷಹನ ಜನಾನಾಕ್ಕು ನುಂಗನು ನುಗ್ಗಿದ್ದನಂತೆ! ರಾಣಿಯರು ಗಾಬರಿಗೊಂಡರಂತೆ! 'ಮೌತ್ಕಾ ಫಾಣ್, ಮೌತ್ಕಾ ಫಾಣ್' ಎಂದುಕೊಂಡು ಹೊರಟುಹೋದನಂತೆ! ರಾಜನ ಅರಮನೆಯಲ್ಲಿ 'ಮೌತ್ಕಾ ಫಾಣ್' ಎಂದರೆ ಹೆಣದ ವಾಸನೆಯಲ್ಲದ ಬರಬೇಕು. ಆ ಮಾತಿನ

ಅರ್ಥವನ್ನು ಯಾರು ಹೇಗೆ ಮಾಡಿಕೊಳ್ಳಬೇಕು? 'ಏನೋ ಹುಚ್ಚ ಹೋಗಲಿ' ಎಂದುಕೊಂಡು ಎಲ್ಲರೂ ಸುಮ್ಮನಾದರಂತೆ. ಪ್ರಕೃತ ರಾಯರ ಸುತ್ತಲೂ ಜನರು ನೆರೆದು-'ಏನು ರಾವ್‌ಸಾಹೇಬ್-ಏನು ರಾವ್‌ಸಾಹೇಬ್' ಎಂದು ಕೇಳಲಾರಂಭಿಸಿದರು. ಜನರ ಗುಂಪು ಸೇರಿದಂತೆಲ್ಲಾ, ಅವರನ್ನು ನೋಡಿ ನೋಡಿ, ನುಂಗ ನುಂಗಿಯರು ಇನ್ನೂ ಬಲವಾಗಿ ಚಪ್ಪಾಳೆ ತಟ್ಟ ಸಾಗಿದರು. ಎಲ್ಲರಿಗೂ ಭಯ, ನೋಡುವರಿಗೊಳ್ಳೇ ನೋಟವಾಯಿತು.

ರಾಯರ ಪದವಿ ದೊಡ್ಡದು. ಗುಂಪಿನಲ್ಲಿ ಖಿನ್ನರಾಗಿ ನಿಲ್ಲುವುದು ಯೋಗ್ಯವಲ್ಲ. ಯಾರನ್ನಾದರೂ ಮುಳುಗಿಸಿ ಉಂಗುರವನ್ನು ಹುಡುಕಿಸಿ ತೆಗೆಸುವುದು ಉಚಿತವಲ್ಲ. ಮೊಹರುಂಗುರವಿಲ್ಲದೆ ಅರಮನೆಗೆ ಹೋಗುವುದೂ ಸರಿಯಲ್ಲ. ಮೊಹರುಂಗುರ ಕಳೆದು ಹೋಗುವುದೆಂದರೆ ಅದೊಂದು ಪ್ರಕಾರದ ಅಪಶಕುನ. ಏನು ಮಾಡುವುದೆಂದು ತೋರದಾಯಿತು. ರಾಯರು-ನುಂಗನ ಕೈಹಿಡಿದು-'ಯಾರಿಂದಲಾದರೂ ಆ ಉಂಗುರವನ್ನು, ಮುಳುಗಿಸಿ ತೆಗೆಸಲೇ' ಎಂದು ಕೇಳಿದರು. ನುಂಗನು ನಕ್ಕನು, 'ಸರ್ಕಾರೀ ಉಂಗುರ-ನಗುವ ವಿಚಾರವಲ್ಲ. ದಯಮಾಡಿ ಅಪ್ಪಣೆಕೊಡಿ'ಎಂದು ಅಂಗಲಾಚಿ ಕೇಳಿದರು. ನುಂಗನು ರಾಯರ ಮುಖವನ್ನು ದಿಟ್ಟಿಸಿ ನೋಡಿದನು. ಅವರ ಮನಸ್ಸಿನಲ್ಲಾದ ವಿಚಾರಗಳನ್ನು ಗ್ರಹಿಸಿದನು. 'ಅರೇ ನುಂಗಿ' ಎಂದು ತನ್ನ ತಂಗಿಯನ್ನು ಕರೆದನು. ಆ ಸಿಕ್ಕಾ ತಾರೆಂದು ಕಂದುಕದುಕಡೆ ಕೈ ಚಾಚಿದನು. ಒಡನೆ ನುಂಗಿಯು ನೀರಲ್ಲಿ ಧುಮುಕಿದಳು. ಒಂದು ಬೊಗಸೆಯ ತುಂಬ ಸಿಕ್ಕಾಗಳನ್ನು ತಂದು ಸುರಿದಳು. ರಾಯರಿಗೆ ವಿಸ್ಮಯವಾಯಿತು. ಮನಸ್ಸಿನಲ್ಲಿ ಕಳವಳವಾಯಿತು. 'ನಿನ್ನ ಸಿಕ್ಕಾ ನೀನು ಆರಿಸಿಕೋ' ಎಂದು ನುಂಗನು ನುಡಿದನು. ಎಲ್ಲವೂ ಒಂದರಂತೆ ಮತ್ತೊಂದಿವೆ. ಯಾವುದನ್ನು ಆರಿಸಿಕೊಳ್ಳಬೇಕು? ಜನ್ಮದಲ್ಲಿ ಇದೇನೋ ಒಂದು ದೊಡ್ಡ ಪರಿವರ್ತನದ ಕಾಲ ಬಂತೆಂದು ರಾಯರು ತರ್ಕಿಸಿದರು. ಕೊನೆಗೆ ನುಂಗನೇ ಒಂದು ಸಿಕ್ಕಾವನ್ನು ತೆಗೆದು-'ಇದೇ ನಿನ್ನ ಸಿಕ್ಕಾ! ತೆಗೆದುಕೋ!' ಎಂದು ಮೂಸಿನೋಡಿ-'ಮೌತ್ಕಾ ಫೌಜ್-ಮೌತ್ಕಾ ಫೌಜ್, ಬಿಸಾಡು, ಬಿಸಾಡು' ಎನ್ನುತ್ತಲೇ ಗುಂಪಿನೊಳಗೆ ನುಗ್ಗಿ ಎಲ್ಲಿಗೋ ಹೊರಟುಹೋದನು. ರಾಯರಿಗೆ ಎದೆಯೊಡೆಯಿತು. ಬಾದಶಹಾನಿಗೆ ಈ ಸಂಗತಿ ತಿಳಿಯಿತು. ಅವನೂ-ಮರಾಠರ ಧಾಳಿಯೊಂದುಕಡೆ, ಔರಂಗಜೇಬನ ಹಗೆತನವೊಂದುಕಡೆ, ನುಂಗನ ಮಾತಿನ ಅರ್ಥವೇನೋ ಎಂದು ಚಿಂತಾತುರನಾದನು. ರಾಯರ ಕನಸುಮನಸ್ಸುಗಳಲ್ಲಿ ನುಂಗನು ತಾನೇ ತಾನಾದನು.

ಮಹೀಪತಿರಾಯರು ದಿಗಂಬರನ ಮಾತಿನ ಅರ್ಥವೇನೆಂಬುದನ್ನು ಅವನಿಂದಲೇ ತಿಳಿಯಬೇಕೆಂದು ಬಯಸಿ, ಅವನೆಲ್ಲಿರುವನೋ ನೋಡಿ ಕರೆತರುವಂತೆ ದೂತರನ್ನು ಕಳುಹಿಸಿದರು. ಅವನು ಸಿಕ್ಕಲಿಲ್ಲ-ಮಾತ್ರವಲ್ಲ, ಅವನು ಎಲ್ಲಿರುವನೆಂಬ ವಾರ್ತೆ ಯಾರಿಂದಲೂ ತಿಳಿಯಲಿಲ್ಲ.

ಒಂದು ಸಂಧ್ಯಾಕಾಲ, ರಾಯರು ಜೇಗಂತಲಾವಿನ ದಾರಿಯಲ್ಲಿ ಒಬ್ಬರೇ ಪಾದಚಾರಿಗಳಾಗಿ ನಡೆಯುತ್ತಿದ್ದಾರೆ. ಹೆಜ್ಜೆಹೆಜ್ಜೆಗೆ ನಿಲ್ಲುತ್ತಿದ್ದಾರೆ. ನುಂಗನ ಮೌತ್ಕಾ

ಫೌಣ್ ಮಾತಿನ ಅರ್ಥವೇನಿರಬೇಕೆಂದು ಗುಣಿಸುತ್ತಿದ್ದಾರೆ. ಕತ್ತಲಾಗುತ್ತಿದೆ. ದೀವಟಿಗೆಯವರಿಲ್ಲ. ಕೆಸರು ಬಳಿದ ಮೈಯಿಂದ ನುಂಗನು ಎತ್ತಲಿಂದಲೋ ಬರುತ್ತಿದ್ದಾನೆ. 'ಅರೇ ಬೇಟಾ ಅರೇ' ಎಂದು ಕರೆಯುತ್ತಿದ್ದಾನೆ. ರಾಯರು ಧ್ವನಿ ಬಂದ ಕಡೆಗೆ ತಿರುಗಿದರು. ಅದೇ ನುಂಗನೇ ಹೌದೆಂದು ನಿಶ್ಚಯಮಾಡಿದರು. ಅವನ ಪಾದಗಳಿಗೆರಗಿ, ನಿನ್ನ ಮಾತಿಗೆ ಅರ್ಥವೇನೆಂದು ಕೇಳಿದರು. ನುಂಗನು–'ಅದಕ್ಕೆ ಅದೇ ಅರ್ಥ. ನೀನು ಅಧಿಕಾರ ಬಿಡು. ಸಾರವಾಡದಲ್ಲಿ ಭಾಸ್ಕರಸ್ವಾಮಿಗಳಿಗೆ ದೊರೆಯಿತು. ಆಮೇಲೆ ಗೊತ್ತಾಗುವುದು ಅದರ ಸುಖ' ಎಂದನು.

ರಾಯರು–'ಭಾಸ್ಕರಸ್ವಾಮಿಯೇಕೆ? ಯಾರೇಕೆ? ನೀನೇ ನನ್ನ ಗುರುವಾಗು' ಎಂದರು. ನುಂಗನು–'ನೀನು ಹಿಂದು, ನೀನು ಬ್ರಾಹ್ಮಣ, ನಿನಗೆ ಅಲ್ಲೇ ಆಗಬೇಕು ಉಪದೇಶ. ಗುರು ಒಂದೇ, ಮಾರ್ಗ ಬೇರೆ. ತಿಳಿಯಿತೇ' ಎಂದು ನಡೆದುಬಿಟ್ಟನು.

ರಾಯರಿಗೆ ಆ ರಾತ್ರಿ ಕಲ್ಪಶತವಾಯಿತು. ವಿಚಾರಗಳು ಒಂದರ ಹಿಂದೆ ಒಂದು ತರಂಗಗಳಂತೆ ಬಂದುವು. ಪುರಾಣ ಕಥೆಗಳೊಂದೊಂದನ್ನೂ ತಮ್ಮ ಜೀವನದ ಅನುಭವದೊಡನೆ ಒರೆ ಹಚ್ಚಿದರು. ಅಧಿಕಾರ ಬಿಡುವುದೇ ಸರಿ. ಭಾಸ್ಕರಸ್ವಾಮಿಗಳನ್ನು ಕಾಣುವುದೇ ಸರಿ. ನುಂಗನು ಮಹಾಪುರುಷ. ಅವನೊಬ್ಬ ಅವಧೂತ. ಅವನು ಹೇಳುವ ಸುಖವನ್ನು ಈ ಜನ್ಮದಲ್ಲೇ ಅನುಭವಿಸಬೇಕು ಎಂಬುದು ರಾಯರ ನಿಶ್ಚಯವಾಯಿತು.

ಮಾರನೇ ರಾತ್ರಿ ಬಹಳ ಹೊತ್ತಾದಮೇಲೆ ಬಾದಶಹನನ್ನು ಕಾಣಬೇಕೆಂದು ರಾಯರು ರಾಜವಾಡೆಗೆ ಬಂದರು. ಬಲವತ್ತರವಾದ ರಾಜಕಾರ್ಯವಿದೆಯೆಂದು ದೂತರು ರಾಯರನ್ನು ನವಾಬನ ಅಂತಃಪುರಕ್ಕೆ ಕರೆದೊಯ್ದರು. ಬಾದಶಹನು ಕಾಗದ ಪತ್ರಗಳನ್ನು ನೋಡಿ ಕೈಬರಹ ಮಾಡುತ್ತಿದ್ದವನು,–ರಾಯರು ಬಂದುದನ್ನು ನೋಡಿ, 'ಏನು ರಾವ್‌ಸಾಹೇಬ್ ಈ ಅವೇಳೆಯಲ್ಲಿ ಬಂದಿರಿ. ಅವಸರದ ಕಾರ್ಯವೇನಿದೆ?' ಎಂದು ತಿವಾಸಿಯಲ್ಲಿ ಕುಳಿತನು. ರಾಯರು–'ಅವಸರದ ಕಾರ್ಯವಿರುವ ಕಾರಣ,–ಮನಸ್ಸು ನಿಲ್ಲದ ಕಾರಣ, ಈ ವೇಳೆಯಲ್ಲಿ ಏಕಾಂತದಲ್ಲಿ ಕಾಣಲು ಬರಬೇಕಾಯಿತು. ನನ್ನ ತಪ್ಪನ್ನು ಕ್ಷಮಿಸಬೇಕು' ಎಂದು ಖುರ್ನಿಷ್ ಮಾಡಿದರು. ಬಾದಶಹನು–'ನಿಮ್ಮಲ್ಲಿ ತಪ್ಪಿಲ್ಲ. ನಿಮ್ಮಂತಹ ಆಪ್ತರು ನಮಗೆ ಮತ್ತಾರೂ ಇಲ್ಲ. ನೀವು ಯಾವಾಗಲಾದರೂ ಬರಬಹುದು, ಬೇಕಾದ್ದು ಕೇಳಬಹುದು' ಎಂದನು. ರಾಯರ ಬಾಯಿಂದ ಮುಂದೆ ಮಾತು ಹೊರಡದಂತಾಯಿತು; ಬಾದಶಹನು ಮುಖವನ್ನು ನೋಡಿದಂತೆಲ್ಲಾ ಮಾತೆತ್ತಲು ಲಜ್ಜೆಯಾಯಿತು. 'ಏನೂ ಇಲ್ಲ, ಏನೂ ಇಲ್ಲ' ಎನ್ನುವುದರಲ್ಲೇ ಕಾಲ ಕಳೆಯಿತು.

ಬಾದಶಹಾ :—ರಾವ್ ಸಾಹೇಬ್ ನಿಮ್ಮ ಮನಸ್ಸು ನನಗೆ ಗೊತ್ತಾಯಿತು. ಯಾರು ನಿಮ್ಮ ಮೇಲೆ ಏನು ದೂರು ಹೇಳಿದರೂ ನಾನು ಕೇಳುವುದಿಲ್ಲ. ನಾನಿರುವ ತನಕ ನಿಮ್ಮ ಅಧಿಕಾರಕ್ಕೆ ಚ್ಯುತಿಯಿಲ್ಲ. ಈಗಲಾದರೂ ಏನು ಹೇಳಿ!

ರಾಯರು :—ಮಹಾಪ್ರಭೋ, ಅದೇನೂ ಇಲ್ಲ. ಆ ಚಿಂತೆ ನನಗಿಲ್ಲ. ನುಂಗನ ಮಾತು, ತಿಳಿಸಲು ಬಂದೆ.

ಬಾಬಾಹಾ :—ಆ ಹುಚ್ಚನ ಮಾತೇನು? ಅವನಾಡುವದೇನಿದ್ದರೂ ಅದೇ 'ಹೌತ್ಯಾ ಫಾಣ್' ತಾನೇ!

ರಾಯರು :—ಆಲಿಸಬೇಕು. ಅವನನ್ನು ಹುಚ್ಚನೆನ್ನುವಹಾಗಿಲ್ಲ. ಬೊಗಸೆ ತುಂಬಾ ನಿಷ್ಠೆಗಳನ್ನು ತಂದಿ ನುಂಗಿದಾಗಲೇ ನನಗೆ ಆಶ್ಚರ್ಯವಾಯಿತು. ನನ್ನನ್ನು ಅಧಿಕಾರ ಬಿಡು, ಭಾಸ್ಕರಸ್ವಾಮಿಗಳ ಶಿಷ್ಯನಾಗು ಎಂದು ಹೇಳುತ್ತಾನೆ. ಅದು ನನ್ನ ಮನಸ್ಸಿಗೆ ಬಹಳ ಹತ್ತಿಬಿಟ್ಟಿದೆ. ಆದ್ದರಿಂದ ನನಗೆ ಅಪ್ಪಣೆಯಾಗಬೇಕು.

ಬಾಬಾಹಾ :—ಓಂದೂಗಳು ನೀವು ಬಹು ಭಯಸ್ಥರು. ನುಂಗನ ಮಾತು ನಿಮಗೆ ಗುರುವಾಕ್ಯವಾಗಿದ್ದರೆ, ಸ್ವಾಮಿಜೀ ಅವರಿಗೆ ಶಿಷ್ಯರೂ ಆಗಿ ಅಧಿಕಾರವನ್ನೂ ಮಾಡಬಾರದೇಕೆ? ಇಷ್ಟೇ ತಾನೆ ಇದಕ್ಕೇಕೆ ಚಿಂತೆ!

ರಾಯರು, ಮತ್ತೆ ಉತ್ತರ ಬೆಳೆಸಲು ಧೈರ್ಯವಾಗದೆ,-'ಮತ್ತೊಮ್ಮೆ ಕಾಣುತ್ತೇನೆ, ಆವೇಳೆಯಲ್ಲಿ ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಬೇಕು' ಎಂದು ಖುರ್ನಿಷ್ ಮಾಡಿ ಮನೆಗೆ ಬಂದರು.

ಭಾಸ್ಕರಸ್ವಾಮಿಗಳು

ಭಾಸ್ಕರಸ್ವಾಮಿಗಳು ಆ ಕಾಲದ ಯೋಗಿಗಳಲ್ಲಿ ರಾಜಯೋಗಿಗಳು. ಕರ್ಣಾಟಕ ಮಹಾರಾಷ್ಟ್ರ ದೇಶಗಳಲ್ಲೆಲ್ಲಾ ಅವರ ಶಿಷ್ಯರು ಹೇರಳವಾಗಿದ್ದರು. ನಾರವಾಡವು ಒಂದು ಕಾಲು ಹಳ್ಳಿಯಾದರೂ ಸ್ವಾಮಿಗಳ ಕಾಲದಲ್ಲಿ ಗುರುದರ್ಶನಕ್ಕೆ ಬರುವವರಿಗೆ ಯಾತ್ರಾ ಸ್ಥಳವಾಗಿತ್ತು. ಸಿಂದಿಗಿ ಜಕ್ಕಪ್ಪಯ್ಯನವರೂ ರುಕ್ಮಿಣಿ ಪಂಡಿತರೂ ಸ್ವಾಮಿಗಳ ಪರಮಾನುಗ್ರಹಕ್ಕೆ ಪಾತ್ರರಾಗಿ ಬಹಳ ಸಾಧಕರಾಗಿದ್ದರು. ಲೌಕಿಕವನ್ನು ತ್ಯಜಿಸಿ ಯೋಗಿಗಳಾಗಿದ್ದರೂ ಭೋಗಿಜನರ ಕಾಟ ಭಾಸ್ಕರಯೋಗಿಗಳಿಗೆ ತಪ್ಪುತ್ತಿರಲಿಲ್ಲ. ಸತ್ಪುರುಷರೆಂದ ಕೂಡಲೇ ಹರಿದಾಡುವ ಬೇಡಿಕೆಗಳಿಂದ ಬರುವ ಜನರು ಬಹಳ. ತಿರಸ್ಕರಿಸಬೇಕೆಂದರೆ ಅವರಿಗೆ ಬಹು ಬೇಗ ಪ್ರತ್ಯಕ್ಷವಾದರೆ ತಪೋಭಂಗ ಬಹಳ. ಕೆಲವರು ಯೋಗಿಗಳು ಪ್ರತ್ಯಕ್ಷದೋಷದಿಂದ, ಭೋಗಿಜನರು ಬಂದರೆಂದರೆ ಬೈಯ್ಯುವುದು, ಮಾತನಾಡದಿರುವುದು, ಅವರಿಗೆ ತಮ್ಮ ಹತ್ತಿರದಲ್ಲಿ ಅಸಹ್ಯವೆನಿಸುವಂತೆ ಮಾಡುವುದು ಹೀಗೆಲ್ಲಾ ವರ್ತಿಸುತ್ತಾರೆ. ಅಂಥವರು ಮುಂದುವರಿದ್ದರೆ ತಮಗೆ ಸ್ವಲ್ಪ ಬಾಧಕವಾದರೂ ತಾಳಿಕೊಳ್ಳುತ್ತಾರೆ. ಭಾಸ್ಕರಸ್ವಾಮಿಗಳ ಮಹಿಮೆಯು ಬಹಳ ಜಾತ್ರೆಗೆ ಕಾರಣವಾಗಿತ್ತು.

ಬೇರೆ ಬೇರೆ ಜಾತಿಯವರಿಗೆ ಭಾಸ್ಕರಸ್ವಾಮಿಗಳಲ್ಲಿ ಬಹಳ ವಿಶ್ವಾಸ. ಯೋಗಿಗಳಲ್ಲಿ ಮತ ಪಂಥಗಳಿಗೆ ಅವಕಾಶವಿರುವುದಿಲ್ಲ. ವರ್ಣಾಶ್ರಮಗಳ ಕಟ್ಟು ಅವರನ್ನು ಬಾಧಿಸುವುದಿಲ್ಲ. ಆಯಾ ಸಂಪ್ರದಾಯದ ಯೋಗ ವಿದ್ಯೆಯೇ ಪರ್ಷಿಯಾ ದೇಶದಲ್ಲಿ ಸೂಫೀ ಪಂಥವಾಗಿ ಪ್ರಚಾರದಲ್ಲಿ ಬಂದ್ದು ಮುಸಲ್ಮಾನರಿಗೆ ಅಂಗಭೂತವಾಯಿತು. ಸೂಫೀ ಪಂಥಿಗಳಲ್ಲಿ ಪ್ರಾಯಶಃ

ಮತಭಲವಿರುವುದಿಲ್ಲ. ಆದುದರಿಂದ ನುಂಗನುಂಗಿಯರು ಭಾಸ್ಕರಸ್ವಾಮಿಗಳ ಆದರಕ್ಕೆ ಪಾತ್ರರಾಗಿದ್ದರು. ಅಂತೆಯೇ ವೀರಶೈವ ಮತಸ್ಥರಿಗಾದರೂ ಸ್ವಾಮಿಗಳಲ್ಲಿ ಭಕ್ತಿ ಬಹಳ ವಾಗಿತ್ತು. ಎಲ್ಲಾ ಮತೀಯ ಸಾಧಕರಿಗೂ ಸ್ವಾಮಿಗಳು ಆಪ್ರಿಯದಾತರಾಗಿದ್ದರು. ವರ್ಣಾಶ್ರಮ ತತ್ವಗಳಲ್ಲಿ ಪೂಜ್ಯಭಾವನೆಯಿದ್ದುದರಿಂದ ಮಹೀಪತಿರಾಯರಿಗೆ ನುಂಗನು ಸ್ವಯಂಗುರುವಾಗದೆ ಭಾಸ್ಕರಸ್ವಾಮಿಗಳ ಬಳಿಗೆ ಹೋಗಬೇಕೆಂದು ಮಾರ್ಗ ತೋರಿಸಿದನು.

ಅತ್ತ ಮಹೀಪತಿರಾಯರಿಗೆ ಅಧಿಕಾರದಲ್ಲಿ ಬಲು ಜುಗುಪ್ಸೆ ಹುಟ್ಟಿತು. ಬಾದಷಹನು ತಮ್ಮನ್ನು ಸಂತೋಷದಿಂದ-ಮನಃಪೂರ್ವಕ ನಿವೃತ್ತಿಗೊಳಿಸಲು ತಕ್ಕ ಹಂಚಿಕೆಗಳನ್ನೇ ಯೋಚಿಸತೊಡಗಿದರು. ಅದೇ ಸಮಯದಲ್ಲಿ ಬಾದಷಹಾನ ಚಿಕ್ಕರಾಣಿಯು ತನ್ನ ತಮ್ಮನಿಗೆ ಒಂದು ಯೋಗ್ಯ ಅಧಿಕಾರ ಕೊಡಬೇಕೆಂದು ಒತ್ತಾಯಪಡಿಸುತ್ತಿದ್ದಳು. ಲಷ್ಕರೀಖಾತೆಯಲ್ಲಿ ದೊಡ್ಡ ಪದವಿ ಸಿಗಬೇಕೆಂದರೆ ಶತ್ರುಗಳು ಬಹಳವಾಗಿದ್ದುದರಿಂದ ಯೋಗ್ಯತೆ, ಆಡಳಿತ ದಕ್ಷತೆಗಳ ಆವಶ್ಯಕತೆ ಹೆಚ್ಚಾಗಿತ್ತು. ಖಜಾನೆದಾರ ಪದವಿಯು ಕೇವಲ ಲೆಖ್ಖಾಚಾರ ಪ್ರಾಮಾಣಿಕತೆಗಳಿಂದ ಸಾಗುವುದಾಗಿದ್ದ ಕಾರಣ ಆ ಪದವಿಗೆ ಸ್ಪರ್ಧಿಸುವರು ವಿರಳರಾಗಿದ್ದರು. ರಾಯರು ನಿಮ್ಮ ತಮ್ಮನಿಗೇ ಕೊಡಿಸುವುದಾದರೆ ತಮ್ಮ ಪದವಿಯನ್ನು ಸಂತೋಷದಿಂದ ಬಿಟ್ಟುಕೊಡುವುದಾಗಿ ಚಿಕ್ಕರಾಣಿಯೊಡನೆ ಪ್ರಸ್ತಾಪಿಸಿದರು. ಆಕೆಗೆ ಬೇಕಾಗಿದ್ದುದೂ ಅಷ್ಟೆ! ದಾಕ್ಷಿಣ್ಯಪರನಾದ ಬಾದಷಹಾನು ರಾಣಿಯ ಸಲಹೆಗೆ ಮನಸೋತನು. ರಾಯರನ್ನು ಬಹಳವಾಗಿ ಉಪಚರಿಸಿ, ಬೇಕಾದ ವಿಲ್ಲತ್ತುಗಳನ್ನೂ ಕೊಟ್ಟು, ಅಧಿಕಾರ ಶೃಂಖಲೆಯಿಂದ ಅವರನ್ನು ಬಿಡುಗಡೆಮಾಡಿದನು.

ರಾಯರು ಅಧಿಕಾರವನ್ನು ಬಿಟ್ಟಮೇಲೆ ಮತ್ತೊಮ್ಮೆ ನುಂಗನುಂಗಿಯರ ದರ್ಶನ ಮಾಡಿದರು. ತಮ್ಮ ಸರ್ವಸ್ವವನ್ನೂ ಬಡಜನರಿಗೆ ದಾನಮಾಡಿ ಸಾರವಾಡಕ್ಕೆ ಹೊರಡುವಾಗ ನುಂಗನು, ರಾಯರ ಬೆನ್ನು ಛಪ್ಪರಿಸಿ, 'ನೋಡುವಿ, ಮುಂದೆ ಮೌತ್ಕಾ ಫೌಜ್' ಎನ್ನುತ್ತಲೇ ಪದಕ್ರಮಣ ಮಾಡಿದನು.

ಮಹೀಪತಿರಾಯರು ನಮಸ್ಕಾರ ಮಾಡುತ್ತಲೇ ಭಾಸ್ಕರಸ್ವಾಮಿಗಳು ನಕ್ಕರು. ನಿಮ್ಮ ಗುರು 'ಷಹಾನುಂಗ' ನಾನಲ್ಲವೆಂದರು. ನಮ್ಮಲ್ಲಿ ನಿಮಗೆ ಅಭ್ಯಾಸ ಮಾತ್ರ, ಎಂದರು. ರುಕ್ಮಿಣೀಪಂಡಿತರೂ, ಸಿಂದಗೀ ಜಕ್ಕಪ್ಪಯ್ಯನವರೂ ರಾಯರ ಸಹಾಧ್ಯಾಯಿಗಳಾದರು. ನಾಲ್ಕಾರು ವರ್ಷಗಳ ಅಭ್ಯಾಸದಲ್ಲಿ ಯಾರಿಗೂ ಸಾಧ್ಯವಾಗದ ವಜ್ರಯೋಗ ಲಂಬಿಕಾಯೋಗಗಳು ರಾಯರಿಗೆ ಸಿದ್ಧಿಸಿದುವು. ಪೂರ್ವಜನ್ಮಗಳಲ್ಲಿ ಮಾಡಿದ ಯೋಗದ ಫಲವಿದೆಂದು ಸ್ವಾಮಿಗಳು ರಾಯರಿಗೆ ಜನ್ಮಾಂತರಗಳ ಜ್ಞಾಪಕಮಾಡಿಕೊಟ್ಟರು. ಆದ್ದರಿಂದಲೇ ಅರ್ಜುನನ ಸಂಶಯ ಪರಿಹಾರಾರ್ಥವಾಗಿ ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು—

ಪಾರ್ಥ ನೈವೇಹನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ ॥ ೪೦

ಪ್ರಾಪ್ತ ಪುಣ್ಯಕೃತಾನ್ ಲೋಕಾನುಷಿತ್ವಾ ಶಾಶ್ವತೀಸ್ಸಮಾಃ ।
ಶುಚೀನಾಂ ಶ್ರೀಮತಾಂಗೇಹೇ ಯೋಗಭ್ರಷ್ಟೋಽಭಿಜಾಯತೇ ॥ ೪೧

ಅಥವಾ ಯೋಗಿನಾಮೇವ ಕುಲೇಭವತಿ ಧೀಮತಾಂ ।
ಏತದ್ಧಿ ದುರ್ಲಭತರಂ ಲೋಕೇ ಜನ್ಮಯದೀದೃಶಂ ॥ ೪೨

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಂ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ ॥ ೪೩–ಸಂಧಿ ೬

ಎಂಬುದಾಗಿ ಉಪದೇಶಿಸಿರುವ ವಾಕ್ಯಗಳು ಪ್ರಕೃತ ವಿಚಾರದಲ್ಲಿ ಹೊಂದಿಕೆಯಾಗಿರುವುವು. ಜನ್ಮಾಂತರ ಸಂಸ್ಕಾರವಿರದಿದ್ದರೆ ನಾಲ್ಕಾರು ವರ್ಷಗಳಲ್ಲಿ ಮಹೀಪತಿರಾಯರು ಅಷ್ಟು ದೊಡ್ಡ ಸಿದ್ಧಿಗಳನ್ನು ಪಡೆಯುತ್ತಿರಲಿಲ್ಲ. ಜನ್ಮಾಂತರ ಶಾಸ್ತ್ರವು ಸತ್ಯವಾಗಿರದಿದ್ದರೆ, ಸ್ವಲ್ಪಾವಧಿಯಲ್ಲಿ ಯೋಗಸಿದ್ಧಿಯು ಸಾಧ್ಯವಾಗುತ್ತಿರಲಿಲ್ಲ. ಈಶ್ವರನನ್ನೇ ಒಪ್ಪದ ಬೌದ್ಧಾದಿ ಮತೀಯರು ಸಹ ಜನ್ಮಾಂತರಗಳುಂಟೆಂದು ಬುದ್ಧಿಯಿಂದಲೇ ತರ್ಕಿಸಿ, ನಂಬಿರುವಾಗ ಈಶ್ವರನನ್ನೂ ಒಪ್ಪಿ, ಜನ್ಮಾಂತರಗಳನ್ನು ಒಪ್ಪದಿರುವುದು ಎಂಥಾ ತಿಳಿಗೇಡಿತನ!

"ಯೋಗಶ್ಚಿತ್ತವೃತ್ತಿ ನಿರೋಧಃ" ಎಂಬ ಸೂತ್ರಾರ್ಥದಂತೆ, ಮನಸ್ಸಿನ ಚಂಚಲ ವೃತ್ತಿಯನ್ನು ತಡೆಯುವುದಕ್ಕೆ ಯೋಗವೆಂದು ಅರ್ಥವಾಗುತ್ತದೆ. ವಸ್ತುಗಳ ಪರಸ್ಪರ ಸಂಬಂಧಗೊಳಿಸುವುದೆಂಬುದು ಯೋಗಶಬ್ದದ ಮತ್ತೊಂದರ್ಥ! ಅಥವಾ ಭಕ್ತಿಯೋಗ (ಭಕ್ತಿಯೆಂಬ ಉಪಾಯ) ಜ್ಞಾನಯೋಗ (ಜ್ಞಾನವೆಂಬ ಉಪಾಯ) ಕರ್ಮಯೋಗ (ಕರ್ಮವೆಂಬ ಉಪಾಯ) ಎಂಬರ್ಥದಿಂದ ಯೋಗಶಬ್ದಕ್ಕೆ ಉಪಾಯವೆಂಬ ಮಗದೊಂದು ಅರ್ಥವೂ ಉಂಟೆಂದು ತಿಳಿಯಬಹುದು. ನಿರೋಧಗೊಳಿಸುವುದೆಂದರೆ ಬರಿದುಮಾಡುವುದಲ್ಲ. ಮನಸ್ಸು ಬರಿದಾಗುವುದಲ್ಲ. ವೃತ್ಯಂತರಗಳಲ್ಲಿರುವುದನ್ನು ತಡೆದು ಒಂದು ವಸ್ತುವಿನಲ್ಲಿ ಕೇಂದ್ರೀಕರಿಸುವುದು ಮಾತ್ರ. ಆಸನಗಳನ್ನು ಹಾಕುವುದರಿಂದ ದೇಹ ಶುದ್ಧಿ, ದೇಹ ಸ್ವಾಧೀನಗಳೆರಡೂ ಆಗುತ್ತವೆ. ಶ್ವಾಸವನ್ನು ನಿಯಮನ ಮಾಡುವುದರಿಂದ ಚಿತ್ತಶುದ್ಧಿ ಚಿತ್ತೈಕಾಗ್ರತೆಗಳೆರಡೂ ಆಗುತ್ತವೆ. ಹೀಗೆ ಶುದ್ಧವಾದ ದೇಹದಿಂದ ಏಕಾಗ್ರವಾದ ಮನಸ್ಸಿನಿಂದ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಸುಲಭವಾದ ಉಪಾಯ. ಈ ಉಪಾಯವೇ ಯೋಗ! ಇಂತಹ ಉಪಾಯದಿಂದ ಸಾಧಕರು ಸುಲಭವಾಗಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಮುಕ್ತರಾಗಲೆಂದು ಪತಂಜಲಿ ಮಹಾಮುನಿಗಳು ಬಹು ದೊಡ್ಡ ಯೋಗಶಾಸ್ತ್ರವನ್ನು ಬರೆದು ಲೋಕಕ್ಕೆ ಮಹೋಪಕಾರಮಾಡಿರುವರು.

ಯೋಗವನ್ನು ಮತತ್ರಯದ ಆಚಾರ್ಯರುಗಳೂ ಖಂಡಿಸಿರುವರೆಂದು ಅವಿಚಾರಿಗಳು ಭಾವಿಸುವರು. ಶಂಕರಾಚಾರ್ಯರಿಗಿಂತ ರಾಮಾನುಜಾಚಾರ್ಯರೂ ಅವರಿಗಿಂತ ಮಧ್ವಾಚಾರ್ಯರೂ ಯೋಗವನ್ನು ಕಟುತರವಾಗಿ ಖಂಡಿಸಿರುವರೆಂದು ಹೇಳುವ ವಾದದಲ್ಲಿ ಅರ್ಥವಿಲ್ಲ. ಮೂವರೂ ಯೋಗದ ಯಾವ ಭಾಗವನ್ನು ಖಂಡಿಸಿರುವರೆಂಬುದನ್ನು ನಿಧಾನವಾಗಿ ವಿಚಾರಿಸಿದರೆ ಅಪಾರ್ಥವಾಗುವುದಿಲ್ಲ. ವಜ್ರೋಳಿ ಮೊದಲಾದ ಯೋಗಗಳನ್ನು

ಸ್ವಾಧೀನಪಡಿಸಿಕೊಂಡವರು ಭೋಗಿಗಳಾಗಿ ಅತ್ಯಾಚಾರ ಅನಾಚಾರ ಅನೀತಿಗಳನ್ನಾಚರಿಸುವುದನ್ನು ಕಂಡು, ಆ ಬಗೆಯ ಯೋಗವನ್ನು ಅವರು ಖಂಡಿಸಿದರಲ್ಲದೆ ಬ್ರಹ್ಮಸಾಕ್ಷಾತ್ಕಾರಕ್ಕೆ ಅನುಕೂಲವಾದ ಯೋಗವನ್ನು ಅವರು ಖಂಡಿಸಿಲ್ಲ. ಯೋಗವು ಅಂಥಾ ತುಚ್ಛವಾದ ವಿದ್ಯೆಯಾಗಿದ್ದರೆ ಶ್ರೀಕೃಷ್ಣನು ಗೀತೆಯ ಆರನೇ ಅಧ್ಯಾಯದ ಕೊನೆಯಲ್ಲಿ—

ತಪಸ್ವಿಭ್ಯೋಧಿಕೋ ಯೋಗೀ । ಜ್ಞಾನಿಭ್ಯೋಪಿ ಮತೋಧಿಕಃ ॥
ಕರ್ಮಿಭ್ಯಶ್ಚಾಧಿಕೋ ಯೋಗೀ । ತಸ್ಮಾದ್ಯೋಗೀ ಭವಾರ್ಜುನ ॥

ಎಂಬುದಾಗಿ ಉಪದೇಶಿಸುತ್ತಿರಲಿಲ್ಲ !

ಬೌದ್ಧಮತದ ಪ್ರಾಬಲ್ಯಕಾಲದಲ್ಲಿ ಯೋಗದ ದುರುಪಯೋಗವೂ ಒಂದು ಕಡೆ ಆಗುತ್ತಿತ್ತು. ಬುದ್ಧದೇವನು ಒಂದಾದರೂ ಗ್ರಂಥವನ್ನು ಬರೆಯದಿದ್ದರೂ, ಆತನ ಅನುಯಾಯಿಗಳಲ್ಲಿ ಬಲು ಭಿನ್ನ ಪಂಥಗಳಾದುವು. ಭಿಕ್ಷು ಭಿಕ್ಷುಣಿಯರ (**Monks and nuns**) ವಿಹಾರಗಳು ಅಕ್ಷರಶಃ ವಿಹಾರಸ್ಥಾನಗಳಾದುವು. ಧರ್ಮದ ಕವಚದಲ್ಲಿ 'ಸೌಗತ ಭಿಕ್ಷುಷು ಪರದಾರಾನಾಕ್ರಮತ್ಸ್ವಪಿ ಈರ್ಷ್ಯಾಮಲಂ ನ ಕಾರ್ಯಂ' ಎನ್ನುವವರೆಗೆ ಉಪದೇಶವು ಅಧೋಗತಿಗಿಳಿಯಿತು. ಅಂತೆಯೇ ಯೋಗವೂ ಭೋಗಸಾಧನೆಗೆ ಅಂಗಭೂತವಾಯಿತು. ಯಾವ ಇಂದ್ರಿಯದಿಂದ ಯಾವ ಕಾರ್ಯ ಮಾಡಿಸುವುದು ಅಸಾಧ್ಯವೋ ಅಂಥಾ ಕಾರ್ಯವನ್ನು ಅಭ್ಯಾಸಬಲದಿಂದ ಆ ಇಂದ್ರಿಯದಿಂದ ಮಾಡಿ ತೋರಿಸಿದವರು ಮಹಾಪುರುಷರೆಂದು ಕರೆಸಿಕೊಂಡರು. ಅಂಥವರು ನೀತಿಯನ್ನು ಮೀರಿ ನಡೆದರೂ ಅದನ್ನು ಪಾಪಕಾರ್ಯವೆಂದು ನಿಂದಿಸುವ ಧೈರ್ಯ ಜನತೆಯಲ್ಲಿ ತಪ್ಪಿಹೋಯಿತು. ವಜ್ರಯೋಗವನ್ನೇ ದೃಷ್ಟಾಂತವಾಗಿಟ್ಟುಕೊಂಡರೆ ಅದು ಜನನೇಂದ್ರಿಯ ಶಕ್ತಿಯನ್ನು ಹೆಚ್ಚಿಸುವ ಉಪಾಯವೆನ್ನಬೇಕು. ಮತ್ತಷ್ಟು ಸ್ಪಷ್ಟಪಡಿಸುವುದಾದರೆ, ಪ್ರಾಣರಸವನ್ನು ತಡೆದಿಟ್ಟುಕೊಳ್ಳುವುದು. ಬಿಟ್ಟು ಮತ್ತೆ ಸೇದಿಕೊಳ್ಳುವುದು ಈ ಎರಡೂ ವಜ್ರೋಳಿಯ ಫಲವೆನ್ನಬೇಕು. ಈ ಶಕ್ತಿಯನ್ನು ಪಡೆದವರು ಭೋಗಿಗಳಾದರೆ ಕೇಳುವುದೇನು ? ಅವರ ಅನೀತಿಯನ್ನು ತಡೆಯುವುದು ಹೇಗೆ ಸಾಧ್ಯ ? ವಜ್ರೋಳಿಯ ಜೊತೆಗೆ ಪರಕಾಯ ಪ್ರವೇಶ ಯೋಗಸಾಮರ್ಥ್ಯವೂ ಸ್ವಾಧೀನವಾಯಿತೆಂದರೆ ಯಾವ ದೇಹವನ್ನು ಬೇಕಾದರೂ ಸೇರಬಹುದು, ಮನಬಂದವರೊಡನೆ ಮನಬಂದಂತೆ ಭೋಗಿಸಬಹುದು. ಇದೇ ಯೋಗದ ಮಹಾಫಲವಾಗಿದ್ದರೆ,–ಇಷ್ಟು ಮಾತ್ರವೇ ಯೋಗಶಾಸ್ತ್ರದ ಉಪದೇಶವಾಗಿದ್ದರೆ, ಅಂತಹ ಯೋಗವು ಅತ್ಯಂತ ಗರ್ಹ್ಯವೇ ಸರಿ ! ಇಂತಹ ಅತಿವರ್ತನೆಗಳನ್ನು ಖಂಡಿಸುವುದಕ್ಕಾಗಿ ಆಚಾರ್ಯರುಗಳು ಯೋಗವನ್ನು ಖಂಡಿಸಿದರಲ್ಲದೆ, ಸಾತ್ವಿಕ ಯೋಗವನ್ನು ಅವರು ಖಂಡಿಸಲಿಲ್ಲ. 'ಯಮನಿಯಮಾದಿ ಅಷ್ಟಾಂಗ ಯೋಗನಿರತರಾದ' ಎಂದು ಮೊದಲಾದ ವಕ್ಕಣೆಯಿಂದ ಯಾವ ಪೀಠಾಧಿಪತಿಗಳಿಗೂ ವಿಜ್ಞಾಪನ ಪತ್ರ ಬರೆಯುವ ರೂಢಿ ಇಂದಿಗೂ ಇರುವುದನ್ನು ನೋಡಿಯಾದರೂ, ಮತತ್ರಯದ ಆಚಾರ್ಯರುಗಳು ಯೋಗ ವಿರೋಧಿಗಳಲ್ಲವೆಂಬುದನ್ನು ತಪ್ಪದೆ ನಂಬಬೇಕು.

ನಾಟಕ ಸರ್ಕಸ್ ಮೊದಲಾದ ಪ್ರಯೋಗ ಮಾಡಿ ತೋರಿಸುವಂತೆ ಈಗೀಗ

ಆಸನ ಪ್ರಾಣಾಯಾಮಗಳ ಪ್ರಯೋಗಮಾಡಿ ತೋರಿಸುವವರನ್ನು ಜನರು ನೋಡಿರಬಹುದು. ಆಸನಗಳನ್ನು ಹಾಕುವುದರಿಂದುಂಟಾಗುವ ಅವರ ಅಂಗಸೌಷ್ಠವ ದೇಹಕಾಂತಿ ದೃಷ್ಟಿಪಾಟವ ಮೊದಲಾದುವುಗಳನ್ನು ನೋಡಿ, ಆಶ್ಚರ್ಯಪಟ್ಟಿರಬಹುದು. ಪ್ರಾಣಾಯಾಮದ ಫಲವೆಂದು ದಿನಗಟ್ಟಲೆ ಮಣ್ಣಿನಲ್ಲಿ ಹುದುಗಿ ಕುಳಿತಿದ್ದು ಮೇಲೆ ಬರುವವರನ್ನು ನೋಡಿ ಆಶ್ಚರ್ಯಪಟ್ಟು ನಾವೂ ಪ್ರಾಣಾಯಾಮವನ್ನು ಕಲಿಯಬೇಕೆಂದು ಅಪೇಕ್ಷಿಸಿರಬಹುದು. ಇಷ್ಟು ಮಾತ್ರವೇ ಯೋಗದ ಫಲವಲ್ಲ! ಇದು ಯೋಗದ ಆಭಾಸಫಲಮಾತ್ರ. ಜ್ಞಾನಿಗಳು ಇದನ್ನು ಯೋಗವೆಂದು ಎಂದೂ ಕರೆಯುವುದಿಲ್ಲ.

ಯೋಗೀಯುಂಜೀತ ಸತತಂ ಆತ್ಮಾನಂ ರಹಸಿಸ್ಥಿತಃ ।
ಏಕಾಕೀಯತ ಚಿತ್ತಾತ್ಮಾ ನಿರಾಶೀರಪರಿಗ್ರಹಃ ॥ ೧೦

ಶುಚೌದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನ ಕುಶೋತ್ತರಂ ॥ ೧೧

ತತ್ರೈಕಾಗ್ರಂ ಮನಃಕೃತ್ವಾಯತ ಚಿತ್ತೇಂದ್ರಿಯ ಕ್ರಿಯಃ ।
ಉಪವಿಶ್ಯಾಸನೇಯುಂಜ್ಯಾತ್ ಯೋಗಮಾತ್ಮ ವಿಶುದ್ಧಯೇ ॥ ೧೨

ಸಮಂಕಾಯ ಶಿರೋಗ್ರೀವಂ ಧಾರಯನ್ನಚಲಂಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂಸ್ವಂ ದಿಶಶ್ಚಾನವಲೋಕಯನ್ ॥ ೧೩

ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿ ವ್ರತೇಸ್ಥಿತಃ ।
ಮನಸ್ಸಂಯಮ್ಯಮಚ್ಚಿತ್ತೋ ಯುಕ್ತ ಆಸೀತಮತ್ಪರಃ ॥ ೧೪

ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣ ಪರಮಾಂಮತ್ಸಂಸ್ಥಾಮಧಿಗಚ್ಛತಿ ॥ ೧೫

ಎಂಬಂತೆ ಯಾವನು ಯೋಗಾಭ್ಯಾಸಮಾಡುವನೋ ಅವನೇ ಯೋಗಿಯೆನಿಸುವನು. ಯೋಗಿಯು ತ್ಯಾಗಿಯಾಗಿರಬೇಕು. ಯೋಗಿಯು ಮಂತ್ರೋಪಾಸಕನಾಗಿರಬೇಕು. ಅವನ ಮಂತ್ರೋಪಾಸನೆಗೆ ಆಸನ ಪ್ರಾಣಾಯಾಮಗಳು ಸಾಧನವಾಗಿರಬೇಕು. ಆಸನ ಪ್ರಾಣಾಯಾಮಗಳು—ಮಂತ್ರೋಪಾಸನೆಯಲ್ಲಿ ದೇಹ ಮನಸ್ಸುಗಳು ಸ್ವಾಧೀನದಲ್ಲಿರುವಷ್ಟು ಮಾತ್ರ ಅಭ್ಯಾಸವಾಗಿದ್ದರೇ ಸಾಕು. ಹೆಚ್ಚಿನ ಸಿದ್ಧಿಗಳು ಪ್ರಾಪ್ತವಾಗಿದ್ದರೆ ತಪ್ಪಲ್ಲ. ಪ್ರಾಪ್ತವಾಗದಿದ್ದರೆ ಬಾಧಕ ಮೊದಲೇ ಇಲ್ಲ.

ಆದ್ದರಿಂದಲೇ ಮಹೀಪತಿರಾಯರು ಪ್ರಯೋಗ ಪಟುಗಳನ್ನು ನೋಡಿ :—

ಬೇಹಾಗ್—ಆದಿತಾಳ

ವಾಸುದೇವನಾಶ್ರಯಿಸದ ಉಪಾಸನ್ಯಾತಕೆ ।
ಧ್ಯಾಸ ಬಲಿಯದಿಹ ಮಿಗಿಲಭ್ಯಾಸವ್ಯಾತಕೆ ॥ ಪ.

ಎಂಬ ಪಲ್ಲವಿಯನ್ನು ಪದಗರ್ಭವನ್ನಾಗಿಟ್ಟು ಐದು ನುಡಿಗಳ ಕೆಳಕಂಡ ಪದವನ್ನು ಹಾಡಿರುತ್ತಾರೆ :—

ಹೃದಯ ಶುದ್ಧವಾಗದೆ ಉದಯ ಸ್ನಾನವ್ಯಾತಕೆ
ಬದಿಯಲಿಹ ಸುವಸ್ತು ಕಾಣದ ಜ್ಞಾನವ್ಯಾತಕೆ
ಉದರ ಕುದಿಯು ಶಾಂತಿಪೊಂದದ ಸಾಧನವ್ಯಾತಕೆ
ಬುಧರ ಸೇವೆಗೊದಗದಲಿಹ ಸ್ವಧನವ್ಯಾತಕೆ ೧

ಭಾವನೆಲೆಯು ಗೊಳ್ಳದಲಿಹ ಭಕುತಿಯಾತಕೆ
ಕಾವನಯ್ಯನ ಕಾಣದಲಿಹ ಯುಕುತಿಯಾತಕೆ
ದೇವದೇವನ ಸೇವೆಗಲ್ಲದ ಶಕುತಿಯಾತಕೆ
ಹೇವಹೆಮ್ಮೆಯಳಿಯದಲಿಹ ವಿರಕ್ತಿಯೇತಕೆ ೨

ತತ್ವದ ನೆಲೆ ತಿಳಿಯದಿಹ ವಿದ್ವತ್ವವೇತಕೆ
ಸತ್ವಗುಣ ವಿಚಾರವಿಲ್ಲದಿಹ ಕವಿತ್ವವೇತಕೆ
ಚಿತ್ತ ಶುದ್ಧವಾಗದಿಹ ಮಹತ್ವವೇತಕೆ
ವಿತ್ತದಾಶೆ ತೊರೆಯದ ಸಿದ್ಧಿಯೇತಕೆ ೩

ನೀತಿಮಾರ್ಗವರಿಯದವನ ರೀತಿಯೇತಕೆ
ಮಾತಿನ ಮಿತಿಯಿಲ್ಲದವನ ಪ್ರೀತಿಯೇತಕೆ
ರೀತಿ ಆದರವಿಲ್ಲದಮೃತ ಊಟವೇತಕೆ
ಜ್ಯೋತಿ ತನ್ನೊಳರಿಯದ ಯತಿತ್ವವೇತಕೆ ೪

ಮನವು ಸ್ಥಿರಗೊಳ್ಳದವನ ಶ್ರವಣವೇತಕೆ
ನೆನೆವು ನೆಲೆಗೊಳ್ಳದಿದ್ದರೆ ಮನನವೇತಕೆ
ತನುವಿನಲ್ಲಿ ಘನವ ಕಾಣದ ಅನುಭವವ್ಯಾತಕೆ
ದಾನಿ ಮಹೀಪತಿಸ್ವಾಮಿಯ ಕಾಣದ ಜನ್ಮವೇತಕೆ ೫

ರಾಯರು ಮಧ್ವಮತಸ್ಥರಾದರೂ ಮಾಧ್ವ ತತ್ವಗಳನ್ನು ವಿಸ್ತರಿಸಿ ಪದಗಳನ್ನು ಹಾಡಿಲ್ಲ. ಇತರ ದಾಸರ ಪದಗಳಂತೆ ಇವರ ಪದಗಳಲ್ಲಿ ಪೌರಾಣಿಕ ವಿಚಾರಗಳ ವರ್ಣನೆಯಿಲ್ಲ. ಇವರ ಪದಗಳಲ್ಲಿರುವುದೆಲ್ಲಾ ಯೋಗದ ಅನುಭವಗಳು. ಹರಿದಾಸ ಸಾಹಿತ್ಯದಲ್ಲಿ ಶರಣರ ವಚನ ಶಾಸ್ತ್ರದ ಘೋಷಣೆಯನ್ನು ಕಾಣಬೇಕೆಂದರೆ ಮಹೀಪತಿರಾಯರ ಪದಗಳಲ್ಲಿ !

ಹವ್ಯಕವ್ಯಗಳಲ್ಲಿ ರಾಯರು ತಾವು ತಿಳಿದಿದ್ದ ಮತದ ನಿಬಂಧನೆಗೊಳಪಟ್ಟು ನಡೆಯುತ್ತಿರಲಿಲ್ಲ. ವೈದಿಕ ನಿಂದೆಗೆ ರಾಯರು ಅಂಜುತ್ತಿರಲಿಲ್ಲ. ಒಮ್ಮೆ ಏನಾಯಿತೆಂದರೆ—

ರಾಯರ ಮನೆಯಲ್ಲಿ ಪಿತೃಶ್ರಾದ್ಧವಿತ್ತು. ಮತಾಧಿಕಾರಿಯನ್ನು ಪೌರೋ

ಹಿತ್ತಲಕ್ಕೆ ಕರೆಸಿದರು. ಆಚಾರ್ಯರು ಎಷ್ಟುಹೊತ್ತಿಗೆ ಬರಬೇಕೆಂದು ಕೇಳಿದರು. ನೀವು ಉಂಡು ಹತ್ತು ತಾಸಿಗೆ ಬಂದರಾಯಿತೆಂದು ರಾಯರೆಂದರು. ಹತ್ತು ತಾಸೆಂದರೆ ಸಾಯಂಕಾಲದ ನಾಲ್ಕು ಘಂಟೆ! ಆಚಾರ್ಯರು–'ಶ್ರಾದ್ಧವೆಂದು ಹೇಳುವಿರಿ; ಉಂಡು ಬರುವುದು ಹೇಗೆ? ಇದೇನು ಹೊಸ ಸಂಪ್ರದಾಯ? ನಾನು ನೇಮದಿಂದಲೇ ಬರುತ್ತೇನೆ; ಅದ ಹೊತ್ತಾಗಲಿ!' ಎಂದರು. ರಾಯರು–'ಶ್ರಾದ್ಧ ನಮ್ಮಪ್ಪಂದು; ಮಾಡುವವ ನಾನು; ನಿಮಗ್ಯಾತರ ಕಾಳಜಿ? ಉಂಡೇ ಬರ್ರಿ; ತಾಂಬೂಲಾ ಜಗೀತಾನೂ ಬರ್ರಿ;' ಎಂದರು. ಪುರೋಹಿತರಿಗಿದು, ವಿಪರೀತವೆನಿಸಿತು. ದೊಡ್ಡರಾಯ, ಮೇಲೆ ಯೋಗಾಭ್ಯಾಸಿ; ದಡ್ಡನೇನ್ನು ಅಲ್ಲ, ಎಲ್ಲಾ ತಿಳಿದವ, ದಕ್ಷಿಣೆಯ ಜೊತೆಗೆ ಧೋತ್ರದ ಜೋಡೂ ಬರುತ್ತದೆ. ಧೋತ್ರ ನನಗೆ, ದಕ್ಷಿಣೆ ಮಠಕ್ಕೆ, ಎಂದು ರಾಯರು ಹೇಳಿದ ಹೊತ್ತಿಗೇ ಹೇಳಿದಂತೆಯೇ ಬಂದಿಳಿದರು. ರಾಯರ ದಿವಾನಖಾನೆಯಲ್ಲಿ ಜಕ್ಕಪ್ಪಯ್ಯನವರೂ ರುಕ್ಮಿಣೀಪಂಡಿತರೂ ಬೆಳಗಿನಿಂದ ತಾಂಬೂಲ ಜಗಿಯುತ್ತಾ, ತಂಬಾಕು ಹಾಕುತ್ತಾ ಮಾತಾಡುತ್ತಾ ಕುಳಿತಿದ್ದರು. ಇಬ್ಬರಿಗೂ ಆಸ್ತಿಕದ ಮಾತಿರಲಿ; ಇನ್ನೂ ಸ್ನಾನವೇ ಆಗಿರಲಿಲ್ಲ. ಆಚಾರ್ಯರು ಬಂದದ್ದು ನೋಡಿ ರಾಯರು ಸ್ನಾನಮಾಡಿದರು. ಪೂಜೆ ಮುಗಿಯಿತು. ಶ್ರಾದ್ಧದ ಸಿದ್ಧತೆಯಾಯಿತು. ಆಚಾರ್ಯರು ಸಂಕಲ್ಪಮಾಡಿಸಿ,–'ಅಯಾಸ್ಥಾನಗಳಿಗೆ ಬ್ರಾಹ್ಮಣರೆಲ್ಲಿ? ಬರಲಿ' ಎಂದರು. ರಾಯರು 'ಬರುವುದೆಲ್ಲಿಂದ ಒಳಗೇ ಇದ್ದಾರೆ, ಬರುತ್ತಾರೆ' ಎಂದರು. ಅಯ್ಯನವರನ್ನೂ ಪಂಡಿತರನ್ನೂ ಹೆಸರು ಹಿಡಿದು ಕೂಗಿದರು. ಇಬ್ಬರೂ ಇದ್ದಂತೆಯೇ ಎದ್ದು ಬಂದು ಮಣೆಗಳಮೇಲೆ ಕುಳಿತರು. ಆಚಾರ್ಯರಿಗೆ ಈ ಧರ್ಮಲಂಡತನ ಸಹಿಸಲಿಲ್ಲ.

ಆಚಾರ್ಯ :—'ಏನು ರಾಯರೆ ಹೀಗೂ ಉಂಟೆ? ಬ್ರಾಹ್ಮಣರು ಸ್ಮಾರ್ತರೇ ಆಗಲಿ. ಅದರ ಆಕ್ಷೇಪ ನಾನು ಮಾಡುವುದಿಲ್ಲ. ಶ್ರಾದ್ಧದ ದಿನ ಒಂದಿಷ್ಟು ಮಡಿ ಮೈಲಿಗೆಯ ವಿಚಾರ ಬೇಡವೆ? ಸ್ನಾನ ಸಹ ಬೇಡವೆ ಬ್ರಾಹ್ಮಣರಿಗೆ?

ರಾಯರು :—ಆಚಾರ್ಯರು ಸಿಟ್ಟಾಗಬಾರದು. ಬ್ರಾಹ್ಮಣರ ಗುಣದೋಷ ವೆಣಿಸುವುದು ನನ್ನ ಕೆಲಸವಲ್ಲ. ಅವರೇನೆನ್ನುವರೋ ಕೇಳೋಣ!

ಅಯ್ಯನವರು :—ಆಚಾರ್ಯರು ಕೇಳಿದ್ದು ಸರಿ; ನೋಡಿ–ಈಗಲೇ ನಾನು ತೀರ್ಥಭಾವಿಯಲ್ಲಿ ಸ್ನಾನಮಾಡಿ ಬಂದೆ. ಅದಕ್ಕೆ ರಾಮೇಶ್ವರನೇ ಸಾಕ್ಷಿ. ಹಾದಿಯುದ್ದಕ್ಕೂ ನೀರು ಸೋರಿದೆ. ಹೆಜ್ಜೆಯ ಗುರುತಿದೆ. ನನ್ನ ಜಟೆಯನ್ನು ಹಿಂಡುತ್ತೇನೆ ನೀರು ಬರುತ್ತಿದೆ ನೋಡಿ.

ಆಚಾರ್ಯರಿಗೆ ಎಲ್ಲವನ್ನೂ ನೋಡಿ ಆಶ್ಚರ್ಯವೆನಿಸಿತು. ದೊಡ್ಡವರ ವಿಚಾರ ಮಾತಾಡಿದ್ದೇ ಅನುಚಿತವೆನಿಸಿತು.. ಶ್ರಾದ್ಧಕರ್ಮವೂ ಪೂರೈಸಿತು. ಸೂರ್ಯದರ್ಶನ ಕಾಲಕ್ಕೆ ಚಂದ್ರೋದಯವಾಗಿತ್ತು. ರಾಯರು ಆಚಾರ್ಯರನ್ನು ಕರೆದು–ಕಾಲಾತೀತವಾಗಿದ್ದೆ ನೀವೂ ಸೂರ್ಯದರ್ಶನ ಮಾಡಿರೆಂದರು. ರಾಯರು ಮಾಡಿದ್ದು ಚಂದ್ರದರ್ಶನ.

ಆಚಾರ್ಯರಿಗಾದದ್ದು ಸೂರ್ಯದರ್ಶನ. ಮನೆಯಲ್ಲಿ ದೀಪದರ್ಶನ. ಇದು ಶ್ರಾದ್ಧ! ವಿಚಿತ್ರ ಶ್ರಾದ್ಧ!

ಇದರಿಂದ ತಿಳಿಯಬೇಕಾದುದಿಷ್ಟೆ! ಅಧಿಕಾರಿಗಳಲ್ಲಿ, ವಿಧಿನಿಯತರು, ವಿಧ್ಯ ನಿಯತರು, ಸ್ವೇಚ್ಛಾನಿಯತರು ಎಂಬುದಾಗಿ ಮೂರು ಬಗೆಯವರಿರುತ್ತಾರೆ. ವಿಧ್ಯ ನಿಯತರ ಪ್ರಸ್ತಾಪವಿಲ್ಲಿಲ್ಲ. ಏನಿದ್ದರೂ ಸ್ವೇಚ್ಛಾನಿಯತರದು. ಈ ಬಗೆಯವರು, ಬಹು ಜನ್ಮಗಳಲ್ಲಿ ಬಹುಕಾಲ ವಿಧಿಬದ್ಧರಾಗಿ ನಡೆದು ಮೇಲ್ತರಗತಿಗೆ ಹೋಗಿರುತ್ತಾರೆ. ಇವ ರಿಗೆ ಸಾಮಾನ್ಯರ ನಿಯಮಗಳು ನಿಯಮಗಳಾಗುವುದಿಲ್ಲ. ಲೋಕಸಂಗ್ರಹಾರ್ಥವಾಗಿ ಇವರು ಕರ್ಮಗಳನ್ನು ಮಾಡಿದರೆ ಮಾಡಬಹುದು. ಬಿಟ್ಟರೆ ಬಿಡಬಹುದು. ಮೇಲ್ಕಂಡ ಮೂರು ಬಗೆಯವರೂ ದೊಡ್ಡ ತರಗತಿಯವರಾದ್ದರಿಂದ ನಮ್ಮ ಅಳತೆಗೆ ಸಿಗುವರಲ್ಲ. ಇವರ ಸ್ಥಾನಮಾನ ತಿಳಿಯದೆ ಇತರರು ಅವರನ್ನು ಅನುಕರಣಮಾಡುವುದು ಯುಕ್ತವಲ್ಲ. ಮತ್ತು ತಮ್ಮ ತರಗತಿಗೆ ಸಹಜವಾದ ಅರ್ಥವತ್ತಾದ ಲೋಕಾಚಾರವನ್ನು ಬಿಡುವುದೂ ವಿಹಿತವಲ್ಲ.

ಮೇಲೆ ಹೇಳಿದ ತೀರ್ಥಭಾವಿ ಈಗಲೂ ಇದೆ. ಭಾವಿಕರು ಅದನ್ನು ಮಹಾ ತೀರ್ಥವೆಂದು ತಿಳಿಯುತ್ತಾರೆ. ಅದೇ ರಾಮೇಶ್ವರ ದೇವಾಲಯವೂ ಇದ್ದೇ ಇದೆ.

ಮಹೀಪತಿರಾಯರಿಗೆ ತಮ್ಮ ಅಕ್ಕನಲ್ಲಿ ಬಲು ಗೌರವ. ಆಕೆ ರಾಯರ ಗೃಹ ಕೃತ್ಯದ ಒಡತಿಯಾಗಿ ಅತಿಥಿ ಅಭ್ಯಾಗತರ ಆರಾಧನೆ ಮಾಡುತ್ತಿದ್ದಳು. ರಾಯರಿಗೆ ಈರ್ವರು ಗಂಡುಮಕ್ಕಳು. ದೇವರಾಯನು ಹಿರಿಯ, ಕೃಷ್ಣರಾಯನು ಕಿರಿಯ. ಇಬ್ಬ ರಿಗೂ ಮಹೀಪತಿರಾಯರ ಮಕ್ಕಳೆಂಬ ಗೌರವದ ವಿನಾ ಹೆಸರಾದ ವಿದ್ವತ್ತವಿರಲಿಲ್ಲ. ಆದ್ದ ರಿಂದ ಸ್ವತಂತ್ರ ಜೀವನ ಸಂಪಾದನೆ ಮಾಡುವ ಶಕ್ತಿಯಿರಲಿಲ್ಲ. ಅಕ್ಕನಿಗೆ ಮಕ್ಕಳ ಗತಿಯೇನೆಂಬ ಯೋಚನೆ ಬಹಳ. ಆಕೆಯೇ ಒಮ್ಮೆ ಹೀಗೆಂದು ಕೇಳಿದಳು–'ತಮ್ಮಾ ಮಹೀ! ನೀನೇನೋ ದೊಡ್ಡವನಾದಿ, ಮಕ್ಕಳನ್ನು ಮಾತ್ರ ಕಾಡುಪಾಲು ಮಾಡಿದಿ' ಎಂದು. ರಾಯರು–'ಅದ್ಯಾಕವ್ವಾ ಹೀಗನ್ತಿ? ಅವರಿಗೇನಾಗಬೇಕು ಹೇಳು' ಎಂದರು. 'ಆಗಬೇಕೇನು? ಅವರನ್ನೂ ನಿನ್ನಹಾಂಗೇ ಮಾಡಬೇಕು' ಅಂದಳು. ರಾಯರು ನಕ್ಕು– 'ನನ್ನ ಮಕ್ಕಳು ನನ್ನಹಾಂಗೇ ಯಾಕೆ, ನನಗಿಂತ ಅಧಿಕರೂ ಆಗುವರು. ಅವರೂ ಯೋಗಿಗಳೇ! ಅವರಿನ್ನೂ ಸುಪ್ತಾವಸ್ಥೆಯಲ್ಲಿದ್ದಾರೆ. ಇಷ್ಟರಲ್ಲೇ ವ್ಯಕ್ತಾವಸ್ಥೆಗೆ ಬರು ತ್ತಾರೆ. ನೀನೇ ನೋಡುವಿ' ಎಂದರು. ರಾಯರ ಅನುಗ್ರಹ ಬಲದಿಂದ ಕಾಲಾಂತರದಲ್ಲಿ ಉಭಯ ಪುತ್ರರೂ ಪ್ರಖ್ಯಾತ ಯೋಗಿಗಳೇ ಆಗಿ, ಕವಿಗಳೂ ಆದರು. ಈರ್ವರೂ ಹಾಡಿದ ಯೋಗಸಂಬಂಧ ಪದಗಳು ಅವರ ವಂಶೀಕರ ಬಳಿಯಲ್ಲಿ ಹೇರಳವಾಗಿವೆ.

ರಾಯರ ಮನೆಯಲ್ಲಿ ಅಧಿಕಾರದಲ್ಲಿದ್ದಾಗಿನ ಖರ್ಚೇ ವಿರಕ್ತರಾಗಿ ಕಾಖಂಡಿಕೆ ಯಂಥಾ ಕುಗ್ರಾಮದಲ್ಲಿದ್ದರೂ ನಡೆಯುತ್ತಿತ್ತು. ತಿಂಗಳಾಗುತ್ತಲೇ ಮನೆಗೆ ಸಾಮಾನು ಕೊಟ್ಟ ವರ್ತಕನು ಪಟ್ಟಿಯನ್ನು ಕೊಟ್ಟೊಡನೆಯೇ, ಅವನನ್ನು ತಿರುಗಿಸದೆ, ತಮ್ಮ ಗಾದಿಯ ಕೆಳಗೆ ಕೈಹಾಕಿ ಅವನ ಹಣವೆಷ್ಟೋ ಅಷ್ಟನ್ನು ತೆಗೆದುಕೊಡುತ್ತಿದ್ದರು.

ಒಮ್ಮೊಮ್ಮೆ ಸಾಹುಕಾರನಿಗೆ ಹೆಚ್ಚು ಹಣ ದೊರೆತು ಅವನು ಅದನ್ನು ವಾಪಸು ತೆಗೆದು ಕೊಳ್ಳಬೇಕೆನ್ನುತ್ತಿದ್ದನು. ರಾಯರು–'ಕೈನೀರಿದ್ದೆಲ್ಲಾ ಕೃಷ್ಣಾರ್ಪಣ' ಎಂಬ ಪುರಂದರ ದಾಸರ ವಾಕ್ಯವನ್ನುದಹರಿಸಿ, ಅದು ನಿನ್ನದೇ ಎಂದುಬಿಡುತ್ತಿದ್ದರು. ವರ್ತಕನಿಗೆ ಹೆಚ್ಚು ಹಣ ದೊರಕಿತೆಂಬ ಸಂತೋಷ! ಆದರೆ ಅದು ಅವನಲ್ಲಿ ನಿಲ್ಲುತ್ತಿರಲಿಲ್ಲ. ಏನಾದರೂ ಧರ್ಮಕಾರ್ಯಗಳಿಗೆ ವಿನಿಯೋಗವಾಗಿಬಿಡುತ್ತಿತ್ತು. ವರ್ತಕನಂತೆ ಆ ಊರ ಗೌಡನಿಗೂ, ರಾಯರ ಬಳಿ ಹಣವೆಲ್ಲಿ ಬಂತು! ಹೇಗೆ ಬಂತು? ಎಂಬ ವಿಚಾರ. ಈರ್ವರೂ ರಾಯರ ಮನೆಯ ಕೆಲಸಗಾರನ ಸ್ನೇಹ ಮಾಡಿದರು.–'ಎಲವೋ ನಿಮ್ಮ ರಾಯರು ಗಾದಿಯ ಕೆಳಗೆ ಎಷ್ಟು ಹಣವಿಟ್ಟಿದ್ದಾ'ರೆಂದು ಕೇಳಿದರು. ಅವನು 'ನಮ್ಮ ರಾಯರ ಬಳಿ ಹಣ ವೆಲ್ಲಿಂದ ಬರಬೇಕು? ದಿನವಹಿ ಬಳಿಯುವವನು ನಾನು! ಗಾದಿಯನ್ನು ಹಾಸುವವನು ನಾನು' ಎಂದನು.

ಗೌಡನಿಗೆ ರಾಯರ ಆಳು ಮನುಷ್ಯ ಒಳ್ಳೇ ಭೋಳೆಯವನೇ ಸಿಕ್ಕಿದ್ದಾನೆಂದೆನಿಸಿತು! ಅವನಿಗೆ ಹಣದ ಆಸೆ ಬಹಳ! ರಾಜಾನುಗ್ರಹ ಪಡೆದು ದೊಡ್ಡ ದೇಶಮುಖನೆಂದೆನಿಸಿಕೊಳ್ಳಬೇಕೆಂಬ ಆಸೆಯೂ ಬಹಳವಿತ್ತು! ಯಾವುದಕ್ಕೂ ಮೊದಲು ಹಣ ಬೇಕಷ್ಟೆ! ರಾಯರು ಖಜಾನೆದಾರರಾಗಿದ್ದ ಕಾರಣ ಬಹಳ ಹಣವನ್ನು ಸಂಗ್ರಹಿಸಿ ತಾವು ಕೂಡುವ ತಿವಾಸಿಯ ಕೆಳಗೆ ಇಟ್ಟುಕೊಂಡಿರುವರೆಂದು ಅವನು ತರ್ಕಿಸಿದನು. ರಾಯರು ಅಜಾತಶತ್ರುಗಳೆಂಬುದೂ, ಅವರ ಮನೆಯು ಯಾರಿಗಾದರೂ ಮುಕ್ತದ್ವಾರವಾಗಿರುವುದೆಂಬುದೂ, ಅವನಿಗೆ ಗೊತ್ತಿತ್ತು. ಬೇಕಾದಷ್ಟು ಹಣವೆಲ್ಲಿಂದ ಬಂತೆಂದು ರಾಯರನ್ನು ರಾಜದಂಡಕ್ಕೆ ಗುರಿಮಾಡಲು ಗೌಡನಿಗೆ ಧೈರ್ಯವಿರಲಿಲ್ಲ. ಬಾದಷಹನ ಅನುಗ್ರಹ ರಾಯರಮೇಲೆ ಬಹಳವಾಗಿದ್ದುದರಿಂದ ಅವರಿಗೆ ವಿರೋಧವಾಗಿ ನಡೆದರೆ, ತನ್ನ ಪರಿಣಾಮ ನೆಟ್ಟಗಾಗಲಾರದೆಂಬ ತಿಳಿವು ಗೌಡನಿಗಿತ್ತು. ಈ ಪರಿಸ್ಥಿತಿಯನ್ನು ಆಳವಾಗಿ ಯೋಚಿಸಿ, ರಾಯರ ಶಿಷ್ಯನೆಂದು ಸೋಗುಹಾಕಿ, ಸಮಯಾನುಕೂಲ ನೋಡಿ, ರಾಯರ ಭಂಡಾರವನ್ನು ದೋಚಿಬಿಡಬೇಕೆಂದು ಗೌಡನು ದುರಾಲೋಚನೆಮಾಡಿದನು. ಮರುದಿನದಿಂದಲೇ ರಾಯರ ಭಜನಗೋಷ್ಠಿಯಲ್ಲಿ ಶಿಷ್ಯನಾಗಿ ಗೌಡನು ಸೇರಿಕೊಂಡನು. ಗೌಡನ ಮುಖ ನೋಡಿ ರಾಯರು–'ಗೌಡರು ನಮ್ಮ ಶೋಧನೆಗೆ ಬಂದಿದ್ದಾರೆ' ಎಂದುಕೊಂಡು ನಕ್ಕರು. ಬೇಕೆಂದೇ ಗೌಡನಿಗೆ ತಮ್ಮ ಮನೆಯ ಸರ್ವಾಧಿಪತ್ಯವನ್ನೂ ವಹಿಸಿದರು. ಒಮ್ಮೊಮ್ಮೆ ರಾಯರಾಡುತ್ತಿದ್ದ ಮರ್ಮಭೇದಕಗಳಾದ ಮಾತುಗಳನ್ನು ಕೇಳಿ ಗೌಡನು ಗಾಬರಿಗೊಳ್ಳುವನು. ಅವರ ಸರಳಸ್ವಭಾವವನ್ನು ನೋಡಿ, ಮತ್ತೊಮ್ಮೆ ಧೈರ್ಯಗೊಳ್ಳುವನು. ಬಹು ದಿನಗಳವರೆಗೆ ರಾಯರೊಬ್ಬರ ವಿನಾ ಗೌಡನ ಮನಸ್ಸು ಯಾರಿಗೂ ತಿಳಿಯಲಿಲ್ಲ.

ಮಹೀಪತಿರಾಯರು ಗುರು ಜಯಂತ್ಯುತ್ಸವವನ್ನು ಬಹು ವಿಜೃಂಭಣೆಯಿಂದ ಪ್ರತಿವರ್ಷ ನಡೆಸುತ್ತಿದ್ದರು. ಸ್ವಯಂ ಗಾಯಕರಾಗಿದ್ದುದರಿಂದ ರಾಯರು, ಗಾನವೇತ್ತರಿಗೆ ಉದಾರಾಶ್ರಯ ಕೊಡುತ್ತಿದ್ದರು. ಅಗ್ರಸ್ಥಾನವೇ ವೈದಿಕ ಪಂಡಿತರಿಗೆ ದೊರೆಯುತ್ತಿದ್ದುದರಿಂದ ಸುತ್ತಮುತ್ತಣ ವಿದ್ವಾಂಸರೆಲ್ಲ ಉತ್ಸವ ಕಾಲದಲ್ಲಿ ಅಲ್ಲಿಗೆ ಬಂದು ಸನ್ಮಾನಿತ

ರಾಗುತ್ತಿದ್ದರು. ರಾಯರು ಉತ್ಸವದ ಎಲ್ಲ ವ್ಯವಸ್ಥೆಯನ್ನೂ ಗೌಡನಿಗೇ ವಹಿಸಿದರು. ಪ್ರತಿ ವರ್ಷದ ಯಾದಿಯಂತೆ ಹಣದ ಗಂಟೇ ಗೌಡನ ಕೈಗೆ ಸಿಕ್ಕಿತು. ಉತ್ಸವಾಂಗವಾಗಿ ಮನೆಯ ಸಾರಣೆ ಕಾರಣೆ ಮಾಡಿಸುವಾಗ ಗೌಡನು ಮನೆಯನ್ನೆಲ್ಲಾ ಬಹುತರವಾಗಿ ಶೋಧಿಸಿದನು. ರಾಯರು ಯೋಗಾಭ್ಯಾಸಕ್ಕೆ ಕೂಡುತ್ತಿದ್ದ ಗೋಪ್ಯಸ್ಥಳದಲ್ಲಿ ಯಾರಿಗೂ ಪ್ರವೇಶವಿರದಿದ್ದ ಕಾರಣ ಅಲ್ಲೇ ಗುಪ್ತಧನವಿರಬೇಕೆಂದು ಯೋಚಿಸಿ, ಆ ಮನೆಯಲ್ಲಿ ಇಲಿ ಹೆಗ್ಗಣಗಳ ಬಿಲಗಳಿರುವ ಕಾರಣ ಅದನ್ನು ಚೆನ್ನಾಗಿ ಅಗೆಸಿ ಸರಿಮಾಡಿಸಬೇಕೆಂದು ರಾಯರನ್ನು ಅನುಮತಿ ಕೇಳಿ, ಎಂಟಾನೆಂಟು ದಿನ ಆ ಚಿಕ್ಕ ಮನೆಯೊಂದರ ಕೆಲಸಮಾಡಿಸಿ ನಿರಾಶನಾದನು. ಗೌಡನಿಗೆ ಹಣ ಮಾತ್ರ ಎಲ್ಲೂ ದೊರೆಯಲಿಲ್ಲ. ರಾಯರು, ನಡೆದ ಕೆಲಸಕ್ಕೆ ಮೆಚ್ಚಿಕೆಯನ್ನು ತೋರಿಸುವ ನೆವದಲ್ಲಿ–'ಗೌಡರೇ ನಿಮ್ಮ ಕೈವಾಡದಿಂದ ನಮ್ಮ ಮನೆಯನ್ನು ಶೋಧಮಾಡುವ ಇಲಿ ಹೆಗ್ಗಣಗಳ ಸಂತಾನವೇ ಅಡಗಿಹೋಯಿತು. ನಿಶ್ಚಿಂತೆಯಾಯಿತು' ಎಂದರು. ಉತ್ಸವ ಮುಗಿದು ಬಂದ ಜನರೆಲ್ಲಾ ಪ್ರಯಾಣ ಮಾಡಿದರು. ಅಯ್ಯನವರನ್ನೂ ಪಂಡಿತರನ್ನೂ ಕಳುಹಿಸಿಬರಲು ಹೋಗಿದ್ದ ರಾಯರು ಕತ್ತಲೆಯಲ್ಲಿ ಒಬ್ಬರೇ ಮನೆಗೆ ಬರುವಾಗಲೂ ಗೌಡನು ಅಚ್ಚಿನ್ನ ಭಕ್ತನಂತೆ ಹಿಂಬಾಲಿಸಿದ್ದನು. ಅವನಿಗೆ ರಾಯರನ್ನು ಹೆದರಿಸಿ ಕೇಳಲು ಇದಕ್ಕಿಂತ ಉತ್ತಮ ಸಮಯ ಮತ್ತೊಂದು ದೊರೆಯಲಾರದೆನಿಸಿತು. ಹಿಂದೆ ಬರುತ್ತಿದ್ದವನು, ಒಡನೆ ಒಂದು ಹೆಜ್ಜೆ ಮುಂದೆ ಬಂದು, ರಾಯರ ಕೈಯನ್ನು ಗಟ್ಟಿಯಾಗಿ ಹಿಡಿದು–'ಹಣವೆಲ್ಲಿದೆ ಹೇಳಿ! ಹೇಳದಿದ್ದರೆ ಬಿಡುವುದಿಲ್ಲ' ಎಂದನು. ರಾಯರು ಗಾಬರಿಗೊಳ್ಳಲಿಲ್ಲ; ಮತ್ತು ಆ ವಂಚಕನನ್ನು ಕುರಿತು–'ಎಲವೋ ಗೌಡ, ನೀನು ನಮ್ಮ ಭಜನಗೋಷ್ಠಿಗೆ ಬಂದು ಸೇರಿದ ದಿನವೇ ನಿನ್ನ ಮನಸ್ಸು ನನಗೆ ಗೊತ್ತಾಯಿತು. ಅದಕ್ಕೇ ಸರ್ವ ಸ್ವಾತಂತ್ರ್ಯವನ್ನೂ ನಿನಗೆ ವಹಿಸಿದೆನು. ನೀನು ನನ್ನೊಂದಿಗೆ ಛಲಮಾಡಿ ಫಲವಿಲ್ಲ. ಅಂದು ನಾನು–'ಗೌಡರೆ ನಿಮ್ಮ ಕೈವಾಡದಿಂದ ನಮ್ಮ ಮನೆಯನ್ನು ಶೋಧಮಾಡುವ ಇಲಿ ಹೆಗ್ಗಣಗಳ ಸಂತಾನವೇ ಅಡಗಿಹೋಯಿತು' ಎಂದ ನನ್ನ ಮಾತು ನಿನಗೆ ಶಾಪವಾಯಿತು. ಮುಂದೆ ಮಾತನಾಡಿದರೆ 'ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ನಡೆ, ಇಲ್ಲಿಂದ' ಎಂದು ಜಬರಿಸಿಬಿಟ್ಟರು. ಆ ದುರ್ದೈವಿಯು ಮರುಮಾತಾಡುವ ಧೈರ್ಯವಿಲ್ಲದೆ, ಮತ್ತೆ ಎದುರಿಗೆ ಬರಲು ಮುಖವಿಲ್ಲದೆ, ಇದ್ದ ಗೌರವವನ್ನೂ ಕಳೆದುಕೊಂಡು ಅಲ್ಲಿಂದ ಹೊರಟು ನಡೆದನು. ಮುಂದೆ ಕಾಲಾಂತರದಲ್ಲಿ ಮಹಾ ವ್ಯಾಧಿಪೀಡಿತನಾಗಿ ಮೃತನಾದನು. ಅವನ ಸಂತತಿಯು ಈ ಹೊತ್ತಿನವರೆಗೂ ದತ್ತಕವಾಗಿ ಬೆಳೆದುಬರುತ್ತಿರುವುದರ ವಿನಾ, ದೊಡ್ಡವರ ವಿಕೋಪದಿಂದ, ಔರಸವಾಗಿ ಬೆಳೆಯುತ್ತಿಲ್ಲ.

ರಾಯರು ರಚಿಸಿದ ಸಾವಿರಾರು ದೇವರನಾಮುಗಳು, ಕಾಖಂಡಿಕೆಯಲ್ಲಿ ಅವರ ವಂಶೀಕರ ಬಳಿಯಲ್ಲಿವೆ. ಅವುಗಳ ಶೋಧಮಾಡಿ ಮುದ್ರಿಸಿ ಪ್ರಚುರಗೊಳಿಸುವ ಕಾಲವಿನ್ನೂ ಬಂದಿಲ್ಲ. ವಂಶೀಕರು ಉತ್ಸವದ ಸಹಾಯಕ್ಕೆಂದು ವಿಜಾಪುರ ಜಮುಖಂಡೀ ಪ್ರಾಂತಗಳಲ್ಲಿ ಸಂಚಾರ ಬಂದಾಗ ರಾಯರ ಪದಗಳನ್ನು ಹಾಡುತ್ತಾರೆ. ಆಗ ಜನರಿಗೆ

ಮಹೀಪತಿರಾಯರ ಪುಣ್ಯಸ್ಮರಣೆಯಾಗಿ ಅಷ್ಟಕ್ಕೇ ತಟಸ್ಥನಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಆ ವಂಶೀಕರ ಬಾಯಿಂದ ಬಂದ ಎರಡು ಹಾಡುಗಳನ್ನು ಕೇಳಿದಾಗ ಸುಮನೋಹರವಾಗಿ ಕಂಡುಬಂದ ಕಾರಣ ಅವನ್ನು ಮಾದರಿಗಾಗಿ ಕೆಳಗೆ ಕೊಡಲಾಗಿದೆ.

ಸೌರಾಷ್ಟ್ರ—ಝಂಪೆತಾಳ

ಆರ್ತಿಯಾಗಿದೆ ಬನ್ನಿ ಅರಿತು ನೋಡುವ ಗುರುಮೂರ್ತಿಯಿಂದ
ನಿರುತವಾಗಿ ಪೂರ್ಣ ಬೆರೆತು ಕೂಡುವ ಬನ್ನಿ ಗುರ್ತಿನಿಂದ ಪ.

ಸೂರ್ಯನಿಲ್ಲದೆ ಸುಪ್ರಕಾಶ ತುಂಬಿದೆ ಹೇಳಲೇನ
ತುರಿಯಾವಸ್ಥೆಯಲ್ಲಿ ಬೆರೆದು ಕೂಡಿದ ಜ್ಞಾನಿ ಬಲ್ಲ ಖೂನ!
ಬರಿಯ ಮಾತನಾಡಿ ಹೊರೆಯ ಹೇಳುವದಲ್ಲ ಅರಿವಸ್ಥಾನ
ಪರಿಯಾಯದಿಂದಲಿ ಪರಿಣಮಿಸಿ ನೋಡು ಪರಮಪ್ರಾಣ ೧

ಚಂದ್ರನಿಲ್ಲದೆ ಬೆಳದಿಂಗಳು ಬಿದ್ದಿದೆ ಬಲುಬಾಳ
ಇಂದ್ರಾದಿಗಳೆಲ್ಲ ಹರುಷದಿ ನೋಡುವರು ಸರ್ವಕಾಲ
ಸುಂದರವಾದ ಸುವಸ್ತು ಒಳಗೊಂದಚಲ
ಸಾಂದ್ರವಾಗಿ ಸುಖತುಂಬಿ ಬೆಳಗುತಿದೆ ಥಳಥಳ ೨

ಮನದ ಕೊನೆಯಲ್ಲಿದ್ದ ಘನಸುಖನೋಡಿರಿ ನೆನೆದು ಬೇಗ
ನಾನೀನೆಂಬುವ ಮಾತು ಏನು ತಾಳುವದಲ್ಲ ರಾಜಯೋಗ
ಅನುಭವಿಗಳಿಗಿದು ಅನುಕೂಲವಾಗುವುದು ಬ್ರಹ್ಮಯೋಗ
ಜ್ಞಾನಿಮಹೀಪತಿ ತಾನೆ ತಾನಾದ ಸದ್ಗುರುವಿನ ೩

ಭೀಮಪಲಾಸ್

ಶೋಧಿಸಿ ನೋಡಿರೋ ಸದಾ । ಬೋಧದ ನಿಜಬೋಧ ಪ.

ಶೋಧಿಸಿನೋಡಿ ಸದ್ಗುರು ಕೃಪೆಯಿಂದ । ಸಾಧನಕಿದು ಬಲು ಆನಂದ
ಭೇದಿಸಿ ನೋಡುವುದಿದೆ ತನ್ನಿಂದ । ಆದಿ ಅನಾದಿ ಸಹಜಾನಂದ ೧

ತಂತುವಿಡಿದು ಅದರಂತೆ ತಾನೋಡಿ । ಎಂತೆಂಬುದ ನಿಜ ಅಂತೇಕೂಡಿ
ಅಂತರಾತ್ಮದಿ ಅನುಭವ ಬೆರೆದಾಡಿ । ಸಂತತ ಸದಮಲ ಸುಖಸೂರ‍್ಯಾಡಿ ೨

ವಿಹಿತಕೆ ವಿಹಿತಾಗುವ ಸುಪಥ । ದ್ವೈತಾದ್ವೈತಕಿದೇ ರಹಿತ ।
ಮಹಮಹಿಮರ ಆನಂದ ಭರಿತ । ಮಹೀಪತಿ ಮನೋನ್ಮನದ ಸುವಸ್ತ ೩

ಈ ಎರಡೂ ಪದಗಳಲ್ಲಿರುವಂತೆ ರಾಯರ ಪದಗಳಲ್ಲಿರುವ ಗುಹ್ಯಾರ್ಥವನ್ನು ಬಿಡಿಸಿ ಮುದ್ರಿಸಿದರೆ, ಅಭ್ಯಾಸಿಗಳಿಗೆ ಯೋಗಶಾಸ್ತ್ರದ ಒಂದು ಕೈಪಿಡಿಯೊದಗಿದಂತಾಗುವುದರಲ್ಲಿ ಸಂಶಯವಿಲ್ಲ.

ಈಗೀಗ ನಮ್ಮಲ್ಲಿ ಉದ್ದಾಮ ಕನ್ನಡಸಾಹಿತಿಗಳು ತಲೆಯೆತ್ತುತ್ತಿದ್ದಾರೆ. ತಮ್ಮನ್ನು ಅನ್ಯರೆಂದು ದ್ವೇಷಿಸಿ ದೂಷಿಸುವವರ ಜೋಳಿಗೆಗೆ ಕೈಹಾಕುತ್ತಿದ್ದಾರೆ. ರಸವಿಲ್ಲದ ಮಾತಿನಲ್ಲಿ ರಸಹುಟ್ಟಿಸಿ ತೋರಿಸಿ ಕೊಡುತ್ತಿದ್ದಾರೆ. ತಮ್ಮದು ತಮಗೇ ತಿಳಿಯದೆ ಅನ್ಯರಿಂದ ತಿಳಿದರೂ ಅದರ ಮೇಲೆ ತಮ್ಮ ವಾಚಾಳತ್ವದಿಂದ ವಿಜೃಂಭಿಸುತ್ತಿರುವವರ ನಡುವೆ ನಗೆಗೀಡಾಗುತ್ತಿದ್ದಾರೆ. ಈಗಿನ ನೂತನ ಸಾಹಿತಿಗಳಿಗೆ ತಮ್ಮನ್ನೂ ತಮ್ಮದನ್ನೂ ಬಿಟ್ಟರೆ ಅನ್ಯಗತಿಯಿಲ್ಲವೆಂದವರು ಬಡಬಡಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿರುವುದನ್ನರಿತು ಅನೇಕ ಸಾಹಿತಿಗಳ ಮಧ್ಯದಲ್ಲಿ ಒಬ್ಬಿಬ್ಬರಾದರೂ ಯಾವುದೇ ಬಗೆಯ ದ್ವೇಷ ದೂಷಣೆಗಳಿಗೆ ಅವಕಾಶವಿರದ ಹರಿದಾಸ ಸಾಹಿತ್ಯದ ಕಡೆಗೆ ತಮ್ಮ ದೃಷ್ಟಿಯನ್ನು ಬೀರಲೆಂದು ಜ್ಞಾಪಿಸುವ ಕಾಲವೀಗ ಬಂದಿದೆ. ಯಾರು ಬೇಕಾದರೂ ಸುಲಭವಾಗಿ ಬರೆದು ಸೇರಿಸಲು ಸಾಧ್ಯವಿರದ-ವೃತ್ತವಾಗಿ, ಪದ್ಯವಾಗಿ, ಪದವಾಗಿ ಛಂದೋಬದ್ಧವಾಗಿರುವ ಸಹಜಸುಂದರ ಸಾಹಿತ್ಯದಲ್ಲಿ ಅಂಥವರು ಮನವಿಟ್ಟು ಶೋಧನೆಗೆ ಹೊರಟರೆ, ಮಹದುಪಕಾರವಾಗುವುದರಲ್ಲಿ ಸಂಶಯವಿಲ್ಲ. ದಾಸಸಾಹಿತ್ಯವೆಂದರೆ,-ಅದೇ ಶಂಖ ಚಕ್ರ, ಅದೇ ತ್ರಿಶೂಲ ಡಮರುಗಗಳ ವರ್ಣನೆಯ ಸ್ತೋತ್ರ ಪದಗಳ ಸಾಹಿತ್ಯಮಾತ್ರವಲ್ಲ ! ಪುರಾಣ ಕಥೆಗಳಿಂದ ಕೀರ್ತನಕಾರರ ಹೊಟ್ಟೆಹೊರಿಸುವ ಸಾಹಿತ್ಯವಲ್ಲ. ಮಾನವರಿಗೆ ಹೆಂಗರುಳಿಗೆ ತಾಕಿ, ಅವರ ಅಂತಃಕರಣವನ್ನು ಕರಗಿಸುವ ಸಾಹಿತ್ಯ. ಅವರ ಕಠಿಣ ಮನಸ್ಸನ್ನು ಮೃದುಗೊಳಿಸುವ ಸಾಹಿತ್ಯ. ಬೇಕಾದ ನೀತಿ ಪದಗಳು ಬೇಕಾದ ಲೋಕಾನುಭವಗಳು, ಯೋಗವಿಚಾರಗಳು, ಹಲವಾರು ಶಾಸ್ತ್ರ ವಿಚಾರಗಳು, ಗಹನವಾದ ವೇದಾಂತ ವಿಚಾರಗಳು ಈ ಎಲ್ಲವನ್ನೂ ಸುಲಭ ಶೈಲಿಯಲ್ಲಿ ಮೃದುನುಡಿಗಳಿಂದ ಬರೆದಿಟ್ಟಿರುವ ಸಾಹಿತ್ಯ ! ಜನರನ್ನು ಏರುಪೇರು ಮಾಡಿರದ, ಪವಾಡಗಳ ಪ್ರಾತಿರದೆ, ಕಾಲದ ಅಭಿರುಚಿ, ಕಾಲದ ಭಾವನೆಗಳಿಗೆ ತಕ್ಕ ಮಾತುಗಳಿಂದ ಕೂಡಿ ಮನೋಜ್ಞವಾಗಿರುವ ಪದ ಸುಳಾದಿಗಳನ್ನೇ ಆರಿಸಿದರೆ, ದಾಸಸಾಹಿತ್ಯದಲ್ಲಿ-ಈಗಲೂ ಕಳೆದುಳಿದಿರುವುದು ಬಹಳಿಂದೇ ಕಂಡುಬರುತ್ತದೆ. ಅಂತಹ ಒಬ್ಬೊಬ್ಬ ದಾಸರ ಗ್ರಂಥಗಳ ಸಂಗ್ರಹವನ್ನು ಬೇರೆಬೇರೆಯಾಗಿ ಮುದ್ರಿಸಿದರೇ ಇಪ್ಪತ್ತಕ್ಕಿಂತ ಹೆಚ್ಚು ಸಂಖ್ಯೆಯ ಯೋಗ್ಯವಿರುವ ಪುಸ್ತಕಗಳಾಗುವುದರಲ್ಲಿ ಅನುಮಾನವಿಲ್ಲ. ಕನ್ನಡ ವಾಙ್ಮಯಾಧಿದೇವತೆ - ಸರಸ್ವತಿಯ ಉಡಿದುಂಬಿ - ಉತ್ತಮ ಸೇವೆಯಾಗುವುದರಲ್ಲಿ ಸಂಶಯವಿಲ್ಲ.

ಮಹೀಪತಿರಾಯರಿಗೆ ಬ್ರಾಹ್ಮಣರಲ್ಲಿ ಮಾತ್ರವಲ್ಲದೆ ಮುಸಲ್ಮಾನರಲ್ಲೂ ಲಿಂಗಾಯಿತರಲ್ಲೂ ಅನೇಕರು ಶಿಷ್ಯರಿದ್ದರು. ರಾಯರ ಅಕ್ಕನೂ ಅತ್ತಿಗೆ ತುಕ್ಕಪ್ಪನವರೂ ಎಡೆಬಿಡದೆ ಸೇವಿಸುತ್ತಿದ್ದ ಭಕ್ತರುಗಳು. ಇವರಿಬ್ಬರ ಜೊತೆಗೆ ಲಿಂಗಾಯಿತ ಮುರುಡಪ್ಪನೆಂಬಾತನೊಬ್ಬ. ಹಿರಿಯರಾದುದರಿಂದ ಅಕ್ಕ ಅತ್ತಿಗೆಯರಿಗೆ ರಾಯರಮೇಲೆ ಅಧಿಕಾರ ಬಹಳ. ಸತ್ಪುರುಷರು ಪವಾಡಗಳನ್ನು ಮಾಡಿ ತೋರಿಸುವರು. 'ನಮ್ಮ ಮಹೀಪತಿ ಒಂದೂ ಮಾಡಲಿಲ್ಲ. ಮಾಡಿದರೆ ನೋಡಬೇಕು' ಎಂದು ಆ ಹಿರಿಯರ ಬಯಕೆ. ರಾಯರ ದೃಷ್ಟಿಯಲ್ಲಿ-'ಅತಿಮಾನುಷ ಮಹಿಮೆಗಳೆಂದರೆ ಹಾವಾಡಿಗರ ಆಟ.' ಆದ್ದರಿಂದ

ಅದು ಅವರಿಗೆ ಇಷ್ಟವಾಗಿರಲಿಲ್ಲ. ಮಾಡಬೇಕೆಂದರೆ ಕಷ್ಟವೂ ಆಗಿರಲಿಲ್ಲ. ರಾಯರು–'ಅಂಥಾ ಕಾರ್ಯಗಳನ್ನು ಮತಸ್ಥಾಪಕರು ಮಾಡಿ ಜನಗಳನ್ನು ಒಲಿಸಿಕೊಳ್ಳಬೇಕು. ನಮಗೇಕೆ ಆ ವಿಚಾರ' ಎನ್ನುತ್ತಿದ್ದರು. ಈ ಮಾತು ಆ ಹೆಂಗಳೆಯರಿಗೆ ಹೇಗೆ ತೃಪ್ತಿಯನ್ನುಂಟುಮಾಡಬೇಕು ?

ಹೀಗಿರಲು ರಾಯರ ಶಿಷ್ಯ ಮುರುಡಪ್ಪನ ಹೆಂಡತಿಗೆ ಸನ್ನಿಪಾತ ಜ್ವರ ಪ್ರಾಪ್ತವಾಯಿತು. ಔಷಧಗಳಿಂದ ಗುಣವಾಗದೆ, ಅದರಿಂದ ಆಪತ್ಕಾಲ ಸನ್ನಿಹಿತವಾಯಿತು. ಹೆಂಡತಿಯ ಔಷಧೋಪಚಾರಗಳ ಸೇವೆಯಲ್ಲಿ ಮುರುಡಪ್ಪನಿಗೆ ರಾಯರ ಮನೆಗೆ ಬರಲು ಅವಕಾಶ ತಪ್ಪಿತು. ರಾಯರ ಅಕ್ಕನೂ ತುಕ್ಕವ್ವನವರೂ ಆಗಾಗ ಹೋಗಿ ರೋಗಿಯನ್ನು ನೋಡಿ ಬರುತ್ತಿದ್ದರು. 'ಪಾಪ, ಬಡವ, ಮಕ್ಕಳುವಂದಿಗ, ಚಟ್ಟಿ ಭಕ್ತರಿಗೂ ಪರದಾಟ ಬಂತು' ಎಂದು ಮರುಗುತ್ತಿದ್ದರು. ರೋಗಿಗೆ ಅಸ್ವಾವಸ್ಥೆಯಾಗಿದೆಯೆಂದು ಹೆಂಗಳೆಯರೀರ್ವರೂ ಚಡಬಡಿಸಿದರು. ರಾಯರು ಆಗಲೇ ತಮ್ಮ ನಿತ್ಯದ ಯೋಗಾಭ್ಯಾಸದಿಂದ ಬಹಿರ್ಮುಖರಾಗಿ ಮನೆಯ ಒಳಗೆ ಬಂದರು. 'ಏನಕ್ಕಾ ಬಲು ಚಡಬಡಿಸುವಿರಿ ?' ಎಂದರು. ತುಕ್ಕವ್ವನವರು–'ಇನ್ನೇನು ಇಷ್ಟುಹೊತ್ತಿಗೆ ಮುರುಡಪ್ಪನ ಹೆಂಡತಿ ಸತ್ತಿದ್ದಾಳು' ಎಂದರು. ರಾಯರು–'ಸತ್ತರೆ ಸಾಯಲಿ ಬಿಡು, ಸತ್ತರೆ ಬದುಕುತ್ತಾಳೆ. ಬದುಕಿದರೆ ಸಾಯುತ್ತಾಳೆ' ಎಂದರು. ಅಕ್ಕನಿಗೀಮಾತು ಅರ್ಥವಾಗಲಿಲ್ಲ. 'ಮಹೀ, ಸಾಕು ಬಿಡು, ನಿನ್ನ ವಗಟ; ಸುಟ್ಟಿತು ನಿನ್ನ ಯೋಗ ! ಮನೇ ಮಗನಿಗಿಂತ ಹೆಚ್ಚಾಗಿದ್ದ ; ಅವರಿಗಿನ್ಯಾರಿದ್ದಾರೆ ದಿಕ್ಕು? ಇದಕ್ಕಿಂತ ವ್ಯಾಳ್ಯ ಸಿಗಬೇಕು ಹ್ಯಾಂಗೆ? ನೋಡು ನಡಿ, ಆಕೀನ ಬದುಕಿಸು ನಡಿ' ಎಂದರು.

ರಾಯರು ಅಕ್ಕನ ಛಿಡೆಯುಕ್ಕೊಳಗಾದರು. 'ಅಕ್ಕಾ, ತುಕ್ಕವ್ವಾ, ನಡೀರಿ, ಹೋಗೋಣ' ಎಂದರು. ಮೂವರೂ ಮುರುಡಪ್ಪನ ಮನೆಗೆ ಬಂದರು. ಆ ಬಡವನ ನೆಂಟರಿಷ್ಟರಲ್ಲಿ ಆಯಿತೆಂದು ಕೆಲವರು, ಇನ್ನೇನು ಹತ್ತಿರಕ್ಕೆ ಬಂತು–ಮುಗಿಯಿತೆಂದು ಕೆಲವರು, ಹಲುಬಿಕೊಂಡು ಗೋಳಾಡುತ್ತಿದ್ದರು. ಮುರುಡಪ್ಪನು ಕಕ್ಕಾಬಿಕ್ಕಾಗಿ ಬಂದ ಗುರುಗಳನ್ನು ಗೌರವಿಸತೊಡಗಿದನು. ರಾಯರು ಒಂದು ದಿನದ ಅಭ್ಯಾಸದ ಪುಣ್ಯ ಸಾಕೆಂದುಕೊಂಡರು. 'ಏನಾದರೂ ಮಾಡಿ ಬದುಕಿಸಿರಪ್ಪಾ !' ಎಂದು ಬಂಧುಜನರು ಮೊರೆಯಿಟ್ಟರು.

ರಾಯರು :—'ಏನೋ ಮುರುಡಪ್ಪ ! ಮನೆಯವರ ತ್ರಾಸ, ಮಂದೀ ತ್ರಾಸ ! ನಿನ್ನ ಹೆಂಡತಿ ಬದುಕಬೇಕಂತೆ ! ಏನು ಮಾಡಬೇಕು ಹೇಳು !

ಮುರುಡಪ್ಪ :—ಗುರು ಕೊಟ್ಟದ್ದು, ಸಣ್ಣ ಸಣ್ಣ ಮಕ್ಕಳು.

ರಾಯರು :—ಬದುಕತಾಳೆ ಬಿಡು. ನನ್ನ ಆಯುಷ್ಯಾನೇ ಕೊಡ್ತೀನಿ ಬಿಡು.

ಮುರುಡಪ್ಪ :—ತಮ್ಮದು ಬ್ಯಾಡ, ನಮ್ಮಪ್ಪಾ ! ನನ್ನ ಆಯುಷ್ಯ ಕೊಡಿಸಿ.

ರಾಯರು :—ಹಾಂಗಾದ್ರೆ ನೀನೇ ಸಾಯ್ತೀ ಬಿಡು.

ತುಕ್ಕವ್ವನವರು :—ಯಾರದ್ದೂ ಬ್ಯಾಡ. ನನ್ನ ಆಯುಷ್ಯದಿಂದ ಕೊಡಿಸಿರಿ.

ರಾಯರು :—'ಯಾರ ಆಯುಷ್ಯವೂ ಬೇಡ. ನಮ್ಮ ಆಯುಷ್ಯವೇ ಆಕೆಗೆ ಬರಲಿ' ಎಂದು ದತ್ತರಾಜನನ್ನು ಸ್ಮರಿಸಿದರು. ಮೃತಪ್ರಾಯಳಾದ ಆಕೆಯ ಬಾಯಿ ತೆರೆಯಿಸಿ ಕ್ಷೀರಪಾನ ಮಾಡಿಸಿದರು. ರೋಗಿಯು ರಾಯರು ಕುಡಿಸಿದಷ್ಟೂ ಹಾಲು ಕುಡಿದಳು. ಕಣ್ಣು ತೆರೆದು ಕೈ ಮುಗಿದಳು. ರಾಯರು ಗುಟುಕಿಗೊಂದು ವರ್ಷದಂತೆ ಆಯುಷ್ಯವೆಂದರು. ಜನರು ಸತ್ತವಳನ್ನೇ ರಾಯರು ಬದುಕಿಸಿದರೆಂದರು. ಯಾರಿಗಾಗುವ ಸಂತೋಷಕ್ಕಿಂತ ರಾಯರ ಅಕ್ಕ ಅತ್ತಿಗೆಯರಿಗೆ ಹೆಚ್ಚು ಸಂತೋಷವಾಯಿತು. ಇದೊಂದು ರಾಯರ ಅತಿಮಾನುಷ ಮಹಿಮೆಯೆಂದು ಪ್ರಖ್ಯಾತವಾಯಿತು.

ರಾಯರ ಕಡೆಗಾಲದಲ್ಲಿ ಷಹಾನುಂಗನ ದರ್ಶನವಾಯಿತು. ಅವನು–'ಹ್ಯಾಂಗಿದೆ ಸುಖ?' ಎಂದ. ರಾಯರು–'ಪರಮಾನಂದ' ಎಂದರು. ನುಂಗನು–'ನೌಬತ್ತು ಕೇಳಿಸಿತೋ?' ಎಂದು ಕೇಳಿದ. ಕೇಳಿಸಿತೆಂದರು. ನುಂಗ ನಕ್ಕ. ರಾಯರು ನಕ್ಕರು. ಇಬ್ಬರೂ ಮತ್ತೆ ಮತ್ತೆ ನಕ್ಕರು.

ಷಹಾನುಂಗನ ಸಮಾಧಿ ವಿಜಾಪುರದ ಕೋಟೆಯ ಹೊರಭಾಗದಲ್ಲಿದೆ. ಅಂಥಿಂಥವರಿಗೆಲ್ಲಾ ಕಂತೆಯನ್ನು ಹೊದಿಸುವ ಮುಸಲ್ಮಾನರು ಅವನ ಸಮಾಧಿಯನ್ನು ಕಣ್ಣೆತ್ತಿ ನೋಡುವುದಿಲ್ಲ. ಮಾರ್ಗಶೀರ್ಷ ಪೌರ್ಣಿಮಾ ಕಾಖುಂಡಿಕೆಯಲ್ಲಿ ರಾಯರ ಆರಾಧನೆ ನಡೆಯುತ್ತದೆ. ನೂರಾರು ಜನರು ಸೇರುತ್ತಾರೆ. ಎಲ್ಲೇ ಇರಲಿ, ವಂಶೀಕರಿಗೆ ಬಂದು ಸೇರಲು ಅದು ಸಕಾಲ. ಕಾಲ ಅನಾದಿ. ಆ-ಈ-ಶಬ್ದಗಳಿಂದ ಕರೆಸಿಕೊಳ್ಳುವುದಲ್ಲ, ನಡೆಸಿದಂತೆ ನಡೆಯುವುದು. ಆದ್ದರಿಂದ ಕಾಲಕ್ಕೆ ರಾಜನು ಕಾರಣವೋ, ರಾಜನಿಗೇ ಕಾಲ ಕಾರಣವೋ ಎಂಬುದು [illegible] [illegible] [illegible] ಪ್ರಶ್ನೆ! ಉತ್ತರ

"ರಾಜಾ ಕಾಲಸ್ಯ ಕಾರಣಂ"

॥ ತತ್ಸತ್ ॥

ಪ್ರಸನ್ನ ವೆಂಕಟರಾಯರು

ಸುಪ್ರಸಿದ್ಧರಾದ ದಾಸ ಚತುಷ್ಟಯರ ನಂತರ ಸಮಾಜದಲ್ಲಿ ಸತ್ಪುರುಷರೆಂಬ ಖ್ಯಾತಿ ಪಡೆದವರೂ, ಕನ್ನಡ ವಾಙ್ಮಯ ಸೇವೆ ಮಾಡಿದವರೂ ಯಾರಾದರಿದ್ದರೆ-ಆ ಪಙ್ಕ್ತಿಯಲ್ಲಿ ಅಗ್ರಪೂಜೆಗೆ ಅರ್ಹರು ಪ್ರಸನ್ನ ವೆಂಕಟರಾಯರು. ಪ್ರಸನ್ನ ರಾಯರು ವಿಜಯದಾಸರ ಸಮಕಾಲೀನರು, ದಾಸರಿಗಿಂತ ವಯಸ್ಸಿನಲ್ಲಿ ಚಿಕ್ಕವರು, ಜನ್ಮಸ್ಥಳ ಬಾಗಿಲಕೋಟೆ. ಬಾಗಿಲಕೋಟೆಯು ಉತ್ತರ ಕರ್ಣಾಟಕದ ವಿಜಾಪುರ ಜಿಲ್ಲೆಗೆ ಸೇರಿದ ಒಂದು ತಾಲ್ಲೂಕು ಸ್ಥಳ. ಕೃಷ್ಣಾನದಿಗೆ ಉಪನದಿಯಾದ ಘಟಪ್ರಭಾತೀರ. ಘಟಪ್ರಭೆಯು ಪ್ರಖ್ಯಾತ ನದಿಯಲ್ಲ. ನದೀತೀರವಾಸವಾದುದರಿಂದ ಅನೇಕ ಬ್ರಾಹ್ಮಣ ಕುಟುಂಬಗಳು ಮೊದಲಿನಿಂದ ನೆಲೆಸಿವೆ. ಒಂದು ಕಾಲದಲ್ಲಿದ್ದಂತೆ, ವೇದವಿದ್ಯಾಪಾರಂಗತರನ್ನು ಈ ಕಾಲದಲ್ಲಿ ನೋಡಲು ಸಾಧ್ಯವಿಲ್ಲ. ಊರಿನ ಖ್ಯಾತಿ ರೈಲುಮಾರ್ಗದ ತೀರವಾದ್ದರಿಂದ-ಈಗ ವ್ಯಾಪಾರದಿಂದ ಬೆಳೆಯಬೇಕಾಗಿದೆ. ಕೋಟೆಯ ಒಳಭಾಗದಲ್ಲಿ ನದಿಯ ದಡಕ್ಕೆ ಹತ್ತಿದಂತೆ ಪ್ರಸನ್ನರಾಯರ ಆ ಕಾಲದ ಮನೆಯಿದೆ. ರಾಯರ ಜ್ಞಾಪಕವನ್ನುಂಟುಮಾಡುವ ದೇವತಾಮೂರ್ತಿಗಳಿವೆ. ತಂಬೂರಿ ಭವನಾಶಿಗಳು ವಂಶೀಕರ ಪೂಜ್ಯ ಪದಾರ್ಥಗಳಾಗಿವೆ. ಪ್ರತಿ ಭಾದ್ರಪದ ಶುದ್ಧ ದ್ವಾದಶಿಯ ದಿನ ಪೂರ್ವಪದ್ಧತಿಯಂತೆ ರಾಯರ ಸ್ಮಾರಕೋತ್ಸವವು ಸೂಕ್ಷ್ಮಪ್ರಮಾಣದಿಂದ ನಡೆಯುತ್ತಿದೆ. ಸ್ಮಾರಕೋತ್ಸವವು, ಜನ್ಮತಿಥಿಯದಲ್ಲ; ಪುಣ್ಯತಿಥಿಯದು! ಪ್ರಸನ್ನ ವೆಂಕಟರ ತಾಳಾವಾಲೆಯ ಪುಸ್ತಕಗಳು ಮೊನ್ನೆಮೊನ್ನಿನ ತನಕ ಇದ್ದವಂತೆ! ವಂಶೀಕರು ಮನೆಯನ್ನು ಬಿಟ್ಟಿದ್ದಾಗ-ಬಹಳ ಮಳೆಬಂದು ಮನೆಯು ಕುಸಿದುಬಿದ್ದಾಗ-ಪುಸ್ತಕಗಳು ಹಿಸುಕಿಹೋಗಿ ನದಿಯ ಪಾಲಾದವಂತೆ! ಆ ಕಾಲದಿಂದ ಬಂದ ಭೂಮಿ ಕಾಣಿಗಳನ್ನು ವಂಶೀಕರು ಉಳಿಸಿಕೊಂಡು ಬಂದಿರುವಂತೆ, ರಾಯರ ಗ್ರಂಥಗಳನ್ನೂ ಉಳಿಸಿಕೊಂಡಿದ್ದರೆ, ಕೀರ್ತಿಯಿರುತ್ತಿತ್ತು.

ಪ್ರಸನ್ನ ವೆಂಕಟರ ದೇವರನಾಮಗಳನ್ನು ವಿಶೇಷತಃ ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಹಳೆಯಕಾಲದ ಬ್ರಾಹ್ಮಣಸ್ತ್ರೀಯರು ಸ್ತೋತ್ರಪಾಠದಂತೆ ಪೂಜ್ಯಭಾವನೆಯಿಂದ ಹಾಡುತ್ತಾರೆ. ಈ ಕಾಲದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ರಮವು ಬೇರೆಯಾಗಿರುವ ಕಾರಣ, ರಾಜರಿಗೆ ಆಯುರ್ದಾನ ಮಾಡುವ ಗತ್ತಿನ ಹಾಡುಗಳನ್ನು ಕಲಿಯಬೇಕಾಗಿರುವ ಕಾರಣ, ಹಳೆಯ ಉಪಯುಕ್ತ ಹಾಡುಗಳ ಪಾಠವಾಗಲು ಅವಕಾಶವಿಲ್ಲ.

ಪುರುಷರಲ್ಲಿ ಪ್ರಸನ್ನ ವೆಂಕಟರ ನೂರಾರು ಹಾಡುಗಳನ್ನು ಹಾಡುವವರೆಂದರೆ-ಲೇಖಕನು ಕಂಡಂತೆ ಧಾರವಾಡದ ಶ್ರೀ ಮುದುವೀಡು ಕೃಷ್ಣರಾಯರು! ಮುದುವೀಡರನ್ನು ನೋಡದವರೂ ಕೇಳದವರೂ ಕರ್ಣಾಟಕದಲ್ಲಿ ಯಾರೂ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಮುದುವೀಡು ಕೃಷ್ಣರಾಯರ ಜೊತೆಯಲ್ಲಿ ಲೇಖಕನು ಸುಮಾರು ಒಂದು

ತಿಂಗಳಷ್ಟು ಕಾಲ ವಾಸಮಾಡಿದ್ದಾನೆ. ರಾಯರು ಬೆಳಗಿನ ಸ್ನಾನಕ್ಕೆದ್ದು ಪ್ರಸನ್ನ ರಾಯರ ಉದಯರಾಗಗಳಿಂದ ಆರಂಭಿಸಿ, ಬಿಡಿ ಪದಗಳತನಕ ಹಾಡುವುದನ್ನು ಕೇಳಿದ್ದಾನೆ. ಒಂದೊಂದು ಪದವನ್ನು ಹೇಳುವಾಗಲೂ,-'ಆಹಾ ಎಂಥಾ ಮಾತು! ಏನು ಭಕ್ತಿ!' ಎನ್ನುತ್ತಲೇ, ಹಿಡಿದ ಚಹಾಪಾತ್ರೆಯನ್ನು ಹಿಡಿದಂತೆಯೇ ತಾಸುಗಟ್ಟಲೆ ಹಿಡಿದು, ಹುಚ್ಚನಂತೆ ಕುಳಿತಿದ್ದಾನೆ. ಹಾಗಿರದಿದ್ದರೆ ಪ್ರಸನ್ನ ವೆಂಕಟರ ಹೆಸರು, ಶ್ರೀ ಕರ್ಣಾಟಕ ಭಕ್ತವಿಜಯದಲ್ಲಿ ಬರುತ್ತಿರಲಿಲ್ಲ.

ಪ್ರಸನ್ನ ವೆಂಕಟರ ಪದಗಳೂ ಮತ್ತು ಭಾಗವತವೂ ಈಚೆಗೆ ಧಾರವಾಡದಲ್ಲಿ ಮುದ್ರಿತವಾಗಿವೆ. ಆದರೆ ಶುದ್ಧವಾಗಿ ಆಗಿಲ್ಲ. ರಾಗ ತಾಳಗಳ ಸರಿಯಾದ ನಿರ್ದೇಶವಿಲ್ಲ. ಪ್ರಾಸಸ್ಥಳಗಳಿಗೆ ತಕ್ಕ ರೇಖೆಗಳು ಬಿದ್ದಿಲ್ಲ. ಸಾಲದುದಕ್ಕೆ ಅಕ್ಷರ ವ್ಯತ್ಯಾಸಗಳೂ ಬಹಳವಾಗಿವೆ. ಇವೆಲ್ಲವನ್ನೂ ಸರಿಯಾಗಿ ಹೊಂದಿಸಿ ಪಾಠ ಮಾಡುವುದು ಗ್ರಂಥಕರ್ತರ ಸಹಾಯವಿಲ್ಲದೆ ಸಾಧ್ಯವಾಗುವುದಿಲ್ಲ. ಇಂತಹ ಪುಸ್ತಕಗಳನ್ನು ಸಾಹಿತ್ಯ ಪರಿಷತ್ತಿನವರ ಅಭಿಪ್ರಾಯದ ಬಗ್ಗೆ ಕಳುಹಿಸಿದರೆ ಅವರೇನು ಬರೆದಾರು? ಯಾವ ಪದ್ಯದಿ ವೃತ್ತಗಳಿಗೂ ಹೊಂದಿಸಿ ಓದಿಕೊಳ್ಳಲು ಬರದಿದ್ದ ಕಾರಣ-ಪದಗಳನ್ನು ತಾಳದ ಕಾಲಗಳಿಗೆ ತಕ್ಕಂತೆ ಹಾಡಲು ತಿಳಿಯದಿದ್ದ ಕಾರಣ-ಅವರೂ ಪ್ರಸನ್ನ ರಾಯರ ತಲೆಗೊಂದು ಚೀಟಿ ಕಟ್ಟಿದ್ದಾರೆ. ಯಾರ ಪದಗಳನ್ನು ಕೇಳಿ ವಿಜಯರಾಯರಂಥವರು-ಇದು ಕಾಕಂಬಿಯೆಂದು ತಲೆದೂಗುತ್ತಿದ್ದರೋ ಅಂಥ ಪದಗಳನ್ನು ಹೇಳುವ ಅಭ್ಯಾಸ ಈ ಕಾಲಕ್ಕೆ ಮರೆತು ಹೋಗಿದೆ.

ಪ್ರಸನ್ನ ವೆಂಕಟರ ಜೀವನ ಚರಿತ್ರೆಯು ಇತರ ದಾಸವರ್ಯರಷ್ಟು ವಿಶದವಾಗಿ ತಿಳಿಯಲು ಸಾಧ್ಯವಿಲ್ಲ. ನಮ್ಮಲ್ಲಿರುವ ಹೊತ್ತಿಗೆಯಲ್ಲಿ ಹಿರಿಯರು ಬರೆದಿಟ್ಟಿರುವುದಕ್ಕೂ ಬಾಗಿಲಕೋಟೆಯ ಪ್ರಾಂತದಲ್ಲಿ ಹಿರಿಯ ಜನರು ಹೇಳುವುದಕ್ಕೂ ಹೊಂದಿಕೆಯಾಗುವ ಸಂಗತಿಗಳು ಮಾತ್ರ ಕೆಳಕಂಡಂತಿವೆ.

ಪ್ರಸನ್ನ ರಾಯರ ಪೂರ್ವಿಕರು ಬಾಗಿಲಕೋಟೆಯವರಾಗಿರಲಿಲ್ಲ. ಕಾಖಂಡಿಕೆಯಿಂದ ಬಾಗಿಲಕೋಟೆಗೆ ಬಂದು ನೆಲೆಸಿದವರು. ಕಾಖಂಡಿಕೆಯು ಬಾಗಿಲಕೋಟೆಯ ಸಮೀಪದಲ್ಲಿರುವ ಒಂದು ಗ್ರಾಮ. ತಂದೆತಾಯಿಗಳ ತಮ್ಮ ಹಿರಿಯಮಗನ ವಶಕ್ಕೆ ಪ್ರಸನ್ನ ವೆಂಕಟರಾಯರೆಂದು ಮುಂದೆ ಪ್ರಸಿದ್ಧಿಗೆ ಬಂದ ವೆಂಕಪ್ಪನೆಂಬ ಬಾಲಕನನ್ನು ಒಪ್ಪಿಸಿ ಕಾಲಮಾಡಿದರು. ಅಣ್ಣ ಅತ್ತಿಗೆಯರ ಕೈಕೆಳಗೆ ಬೆಳೆದ ವೆಂಕಪ್ಪನಿಗೆ ವಿದ್ಯಾಭ್ಯಾಸವಾಗಲಿಲ್ಲ. ವೆಂಕಪ್ಪನಮೇಲೆ ಅಣ್ಣನಿಗಿದ್ದ ಅಂತಃಕರಣ ಅತ್ತಿಗೆಗಿರಲು ಕಾರಣವಿರಲಿಲ್ಲ. ಅಣ್ಣನು ಮನೆಯ ಯಜಮಾನ. ಊರಿನಲ್ಲೂ ಸುತ್ತಮುತ್ತಲಿನ ಹತ್ತು ಹದಿನಾರು ಹಳ್ಳಿಗಳಲ್ಲೂ ಪುರಾಣ ಹೇಳುವ ದೊಡ್ಡ ವಿದ್ವಾಂಸ. ಅಂದಮೇಲೆ ಅತ್ತಿಗೆಯ ಅಧಿಕಾರ ದಡ್ಡ ಮೈದುನನ ಮೇಲೆ ಸಾಮಾನ್ಯವಾದುದಾಗಿರಲಿಲ್ಲ. ಹಬ್ಬ ಹರಿದಿನಗಳ ಹೊರತು ನಿಶ್ಚ ದಿನಗಳಲ್ಲಿ ಅಣ್ಣನ ಪಂಕ್ತಿಯ ಊಟ ತಮ್ಮನಿಗೆ ಸಿಗುತ್ತಿರಲಿಲ್ಲ. ಬೆಳಗಾಗುತ್ತಲೇ ವೆಂಕಪ್ಪನು ದನಗಳನ್ನು ಕಾಡಿಗೆ ಹೊಡೆಯಬೇಕು. ಕೊಟ್ಟಿಗೆಯನ್ನು ಬಳಿಯಬೇಕು.

ನದಿಯಲ್ಲಿ ಮಿಂದು ಮಡಿ ನೀರು ತಂದಿಡಬೇಕು. ಅತ್ತಿಗೆಯು ಬೇಸತ್ತಾಗ ಆಕೆಯ ಮಡಿಗಳನ್ನು ಹರವಬೇಕು. ಆನಂತರ ತಂಗಳ ಒಣಭಕ್ಕರಿಯನ್ನು ಕಡಿಯುತ್ತಾ ಹೊಲಕ್ಕೆ ಹೋಗಬೇಕು. ಮನೆಗೆ ಬೇಗ ಬಂದರೆ ಕಷ್ಟ, ಬಾರದಿದ್ದರೆ ಕಷ್ಟ! ವೆಂಕಣ್ಣನ ಪಾಂಡಿತ್ಯ ವೆಂದರೆ, ವೆಂಕಟೇಶ ಸ್ತೋತ್ರ ಹೇಳಿಕೊಳ್ಳುವುದು. ತ್ರಿಸಂಧ್ಯೆಗಳಲ್ಲೂ ನಿಯಮದಿಂದ ಸಂಧ್ಯಾವಂದನೆ-ಗಾಯಿತ್ರೀ ಜಪಗಳನ್ನು ಮಾಡುವುದು. ಶೀಲವೆಂದರೆ ಅದಷ್ಟು ಸಲ ಒಪ್ಪೆಗಳನ್ನು ಬದಲಾಯಿಸಿ ಮಡಿಯುಡುವುದು.

ಒಂದು ಬೇಸಿಗೆಯ ಕಾಲ! ವೈಶಾಖಮಾಸ! ಅಗ್ನಿ ನಕ್ಷತ್ರಗಳ ದಿನಗಳೆಂದರೆ ಬಾಗಿಲಕೋಟೆಯಲ್ಲಿ ಪ್ರಳಯಕಾಲವಿದ್ದಂತೆ! ವೆಂಕಪ್ಪನು ಪದ್ಧತಿಯಂತೆ ದನಗಳನ್ನು ಅಡವಿಗೆ ಹೊಡೆದು ಬಂದನು. ಕೊಟ್ಟಿಗೆಯನ್ನು ಬಳಿದು ಕಣಿಕೆಯನ್ನು ಕತ್ತರಿಸಿಟ್ಟನು. ಅತ್ತಿಗೆಯ ವಸ್ತ್ರಗಳನ್ನು ಒಗೆದಿಟ್ಟು, ನದಿಯಲ್ಲಿ ಮಿಂದು ಮನೆಗೆ ಬಂದನು. ಮಡಿಗಳನ್ನು ಹರಹಿ ಚಿಲ್ಲರೆ ಕೆಲಸಗಳನ್ನೂ ಮಾಡಿದನು. ಹಸಿವು ಬಾಯಾರಿಕೆಗಳಿಗೆ ತಾಳಲಾರದೆ— 'ಅತ್ತಿಗೆಯವರೇ, ಈ ಹೊತ್ತು ನನಗೆ ಬಲು ತಾಪವಾಗಿದೆ. ಒಣಭಕ್ಕರಿ ಗಂಟಲಲ್ಲಿ ಹೋಗುವಹಾಗಿಲ್ಲ. ಬಿಸಿಲಲ್ಲಿ ಹೊಲಕ್ಕೆ ಹೋಗಬೇಕು. ಕುಡಿಯಲಿಕ್ಕೆ ಒಂದಿಷ್ಟು ಮಜ್ಜಿಗೆಯನ್ನಾದರೂ ಕೊಟ್ಟರಾದೀತು' ಎಂದು ಕೇಳಿದನು. ಆ ಪ್ರಶ್ನಾತ್ಮಕಿಗೆ ಇಷ್ಟೇ ಮಹಾ ಅಪರಾಧವಾಗಿಬಿಟ್ಟಿತು. ಗಂಡನು ಬೇರೆ ಗ್ರಾಮಾಂತರ ಹೋಗಿದ್ದನು. ಇಷ್ಟರ ಅಧಿಕಾರವೂ ಅವಳದೇ ಆಗಿತ್ತು. **'ಏನೋ ಎಂಕ್ಯ! ಈಗ ನಿನಗೆ ಕುಡೀಲಿಕ್ಕೆ ತಣ್ಣನೇ ಮಜ್ಜಿಗೀ ಬೇಕು. ಸಂಜೀಕಡೀ ಬಣ್ಣನೇ ಹೆಂಡ್ತಿ ಬೇಕು. ಮುಡಿಯೋರು ತಲೀಮೇಲೆ ಅರಿವೀ ಹಾಕ್ಕೊಂಡು ದುಡೀಲಿ, ನೀನು ಖುಷ್ಮಗೆ ಉಂಡು ಮೋಜುಮಾಡಬೇಕಂತೀ ಮೋಜು'** ಎಂದಳು.

ಈ ನಿಷ್ಠುರೋಕ್ತಿಯು ವೆಂಕಪ್ಪನಿಗೆ ಸಹಿಸಲಿಲ್ಲ. ದೀನನಾದರೂ ಅವನು ಬಲು ಮಾನವಂತನಾಗಿದ್ದುದರಿಂದ ಜರ್ಝರಿತನಾದನು. ಮನೆಯಲ್ಲಿ ಮಿಕ್ಕ ಮಜ್ಜಿಗೆಯನ್ನು ಕಟ್ಟಿನ ಬಾನಿಗೆ ಸುರುವೋದರ ಬದಲು ನನಗಾದರೂ ಕೊಟ್ಟರಾದೀತೆಂದು ಮಾತ್ರ ಕೇಳಿದೆನೆಂದು ಕಣ್ತುಂಬಿ ಮೆಲ್ಲನೆ ನುಡಿದನು. ಅತ್ತಿಗೆಯ ಪದ ಬರದಿರುವುದನ್ನು ನೋಡಿ,—'ಸರಿ, ಇಲ್ಲಿ ಇನ್ನಿರಬಾರದೆ'ಂದು ನಿಶ್ಚಯಮಾಡಿದನು.—'ಅತ್ತಿಗೆಯವರೇ ತಪ್ಪಾಯಿತು. ನಾನು ಹೋಗಿಬರುತ್ತೇನೆ. ಅಣ್ಣನವರು ಊರಿಗೆ ಬಂದಮೇಲೆ, ನಾನು ಪರಗೆ ಹೋದನೆಂದು ಹೇಳಿರಿ' ಎಂದು ನುಡಿದು ಮನೆಯಿಂದ ಹೊರಟು ನಡೆದನು.

ಒಂದು ಥಾಲಿ ಮಜ್ಜಿಗೆ! ಒಂದೇ ಥಾಲಿ ಮಜ್ಜಿಗೆಗೆ ನನ್ನ ಮನೆಯಲ್ಲಿ ನಾನಿಗೆ ಪರಾಧೀನನಾಯಿತೇ? ಅತ್ತಿಗೆಯ ಕಠಿಣೋಕ್ತಿಯನ್ನು ಕೇಳಬೇಕಾಯಿತೇ? ನನಗೇನಿದೆ ಈ ಮನೆಯಲ್ಲಿ? ನನಗೇನಿದೆ ಈ ಊರಲ್ಲಿ? ಅತ್ತಿಗೆಯು ನೀರೆರೆಗೆದು-ಕತ್ತೆ ಚಾಕರಿ ಮಾಡಿ, ತುತ್ತನ್ನಕ್ಕೂ ಕುತ್ತು ಬಂದಿತಲ್ಲ! ಅತ್ತಿಗೆ ಸುಖದಿಂದಿರಲಿ. ವೆಂಕಟೇಶ ನೀನೇ ನನ್ನ ಮನೆ ದೈವ, ನೀನು ನನ್ನ ಇಷ್ಟದೈವ, ನೀನು ನನ್ನ ಕುಲದೈವ, ನಿನ್ನ ಗಿರಿಗೆ ಬರುತ್ತೇನೆ. ನನ್ನ ಬಾಳನ್ನು ಪಾವನಗೊಳಿಸಿದೆಯಾ, ಬಾಳುತ್ತೇನೆ. ಇಲ್ಲವೇ ಗಿರಿಯಲ್ಲಿ

ಪ್ರಾಣಬಿಡುತ್ತೇನೆ’ ಎಂಬುದಾಗಿ ಸಂಕಲ್ಪಿಸಿಕೊಂಡು ವೆಂಕಪ್ಪನು ವೆಂಕಟಗಿರಿಗೆ ಬಂದನು. ಸ್ವಾಮಿ ಪುಷ್ಕರಣಿಯಲ್ಲಿ ಮಿಂದನು. ಧರ್ಮದರ್ಶನದ ಕಾಲದಲ್ಲಿ, ಜನರ ನೂಕುನುಗ್ಗಲಿನಲ್ಲಿ ತಾನೂ ನುಗ್ಗಿದನು. ವೆಂಕಟಪತಿಯ ದರ್ಶನ ಮಾಡಿದನು. ಧಾರೆಧಾರೆಯಾಗಿ ಕಣ್ಣೀರು ಸುರಿಸಿದನು. ತನ್ನ ದುಃಖಗಳನ್ನು ಸ್ಮರಿಸಿದನು. ದರ್ಶನದ ಅವಧಿ ಮುಗಿಯಿತು. ಸನ್ನಿಧಿಯ ತೆರೆ ಮರೆಯಾಯಿತು. ಜನರು ಹಿಂದಿರುಗಿದರು. ತಿರುಗದವರನ್ನು ಸೇವಕರು ತಿರುಗಿಸಿದರು. ಅವರೇ ವೆಂಕಪ್ಪನನ್ನು ಕೃಷ್ಣಾಜಿನದ ಸುರುಳಿಯಿಂದ ಹೊಡೆದು ಹೊರಗೆ ನೂಕಿದರು. ಅವನು ಹುಚ್ಚನಂತೆ-ಮೂಕನಂತೆ ಪ್ರದಕ್ಷಿಣೆ ಮಾಡುತ್ತಾ, ವಿಮಾನ ಶ್ರೀನಿವಾಸಮೂರ್ತಿಯನ್ನು ನೋಡುತ್ತಾ, ಇಲ್ಲಿ ಯಾರ ಅಂಕೆಯೆಂದು ನೆನೆದು ಕುಳಿತನು.

ವೆಂಕಪ್ಪನಿಗೆ ಅನ್ನ ನೀರು ಕೊಟ್ಟವರ್ಯಾರು? ಎಲ್ಲಿದ್ದ? ಎಲ್ಲಿ ಮಲಗಿದ? ಬಲ್ಲವರ್ಯಾರು? ಯಾರಾದರೂ ಗೌರವಿಸಲು ಅವನಿಗಿದ್ದ ವಿದ್ಯೆ ಪರಮಾವಧಿ ಕನ್ನಡ ಬಾಲಬೋಧೆಗಳ ಓದುಬರಹ; ನಿತ್ಯಕರ್ಮಗಳಿಗನುಕೂಲವಾದ ಅರ್ಥ ತಿಳಿಯದ ವೇದಾಭ್ಯಾಸ! ಅವನ ಮನಸ್ಸನ್ನಾವರಿಸಿದ್ದುದು ವೆಂಕಟೇಶ ಚರಿತ್ರ. ನವರಾತ್ರಿಯಲ್ಲಿ ಅವರಣ್ಣನು ಹೇಳುತ್ತಿದ್ದ ಪುರಾಣ ಕೇಳಿ, ಅವನ ಮನಸ್ಸು ಪರಿಪಕ್ವವಾಗಿತ್ತು. ಭೀಮನೆಂಬ ಕುಂಬಾರನನ್ನು ಸಶರೀರವಾಗಿ ಶ್ರೀನಿವಾಸನು ಸ್ವರ್ಗಕ್ಕೆ ಕಳುಹಿದ ಕಥೆ ಕೇಳಿ ಅವನಿಗೆ ದೇವರಲ್ಲಿ ವಿಶೇಷ ಭರವಸೆಯಿತ್ತು. ಕಾಶೀಯಾತ್ರೆಗೆ ಹೋಗಿದ್ದ ತಪಸ್ವೀ ಬ್ರಾಹ್ಮಣನ ಪತ್ನೀಪುತ್ರರನ್ನು ಅಸ್ತಿ ತೀರ್ಥದಲ್ಲದ್ದಿ ಬದುಕಿಸಿ ತೊಂಡಮಾನರಾಜನ ಮಾನ ಕಾಯ್ದ ಕಥೆ ಕೇಳಿ ಸ್ವಾಮಿಯಲ್ಲಿ ಅಧಿಕ ವಿಶ್ವಾಸವಿತ್ತು. ವೃದ್ಧ ಬ್ರಾಹ್ಮಣನಿಗೆ ಶ್ರೀನಿವಾಸನು ಯೌವನವನ್ನು ಕರುಣಿಸಿದನೆಂಬ ಕಥೆ ಕೇಳಿ, ನಂಬಿಕೆ ಸ್ಥಿರಪಟ್ಟಿತ್ತು. ಅವನು ಉನ್ಮತ್ತನಂತೆ ವನವನ ತಿರುಗುವನು, ಕಂಡಕಂಡ ತೀರ್ಥಗಳಲ್ಲಿ ಮೀಯುವನು. ವನ್ಯಫಲಗಳನ್ನು ಶ್ರೀಹರಿಗೆ ಸಮರ್ಪಿಸಿ ತಾನೂ ಭುಜಿಸುವನು. ಎಲ್ಲಿದ್ದರೂ ಧರ್ಮದರ್ಶನದ ಕಾಲಕ್ಕೆ ದೇವಾಲಯಕ್ಕೆ ಬಂದು, ಒಳನುಗ್ಗಿ ಸ್ವಾಮಿ ಸಂದರ್ಶನ ಮಾಡುವನು. ಯಾತ್ರಿಕರು ಕನಿಕರದಿಂದ ಮಾತನಾಡಿಸಿದರೆ ಪ್ರತಿಮಾತಾಡದೆ ಕೈಮುಗಿಯುವನು. ಏನಾದರೂ ಕೊಡಲು ಬಂದರೆ, ನಮಿಸಿ, ದಳದಳನೆ ಕಣ್ಣೀರು ಸುರಿಸಿ ಸ್ಥಳ ಬಿಟ್ಟುಹೋಗುವನು. ‘ಕೊಟ್ಟರೆ ದೇವ ನೀನು ಕೊಡಬೇಕು, ಬಾಚಿದರೆ ನಿನ್ನ ಮುಂದ ಕೈ ಚಾಚಬೇಕು, ಆಡಿದರೆ ನಿನ್ನೊಡನೆ ಮಾತಾಡಬೇಕು. ಅನ್ಯರ ಗೊಡವೆ ನನಗೇನು? ನನಗಾಗಿ ಚಿಂತಿಸುವವರಿದ್ದರೆ ಅವರನ್ನು ಬಿಟ್ಟುಬಂದ ಪಾಪ ನನಗೆ ಬರುತ್ತಿತ್ತು. ನನಗೆ ನೀನೇ ಅಣ್ಣ, ನೀನೇ ತಾಯಿ, ನೀನೇ ತಂದೆಯೆನ್ನುತ್ತಿದ್ದನು. ಈ ದುಃಖದಿಂದಲೇ ತಿರುಗಿ ತಿರುಗಿ ನೆನೆನೆನೆದು ನಿನ್ನನ್ನು ಕಾಣದ ಈ ದೇಹ ಬಿದ್ದುಹೋದರೆ, ಹೋಗಲಿ-ಪಶುಪಕ್ಷಿಗಳ ಆಹಾರವಾಗಲಿ! ಆಗ ನಾನೆಂಬುವುದೆಲ್ಲಿದ್ದೀತು? ಆ! ಇದೆ ಎಲ್ಲಿ ಹೋದೀತು? ಆ ನಾನು ಏನಾಗಬಹುದು? ಮತ್ತೆ ಹುಟ್ಟಬಹುದೆ? ಮನುಷ್ಯನಾಗಿ ಹುಟ್ಟಬಹುದೆ? ಹುಟ್ಟಿ ಮಾಡುವುದೇನು? ಹುಟ್ಟದಂತೇ ಆಗಬಿಟ್ಟರೆ? ಅಹುದು, ಅದೇ ಬೇಕಾದ್ದು!

ಆದರೆ ಮಾತ್ರ ನಿನ್ನನ್ನು ನೋಡಬೇಕು. ಅನಂತರ ಏನಾದರೂ ಆಗಬೇಕು' ಹೀಗೆಲ್ಲಾ ಚಿಂತಿಸುವನು, ದುಃಖಿಸುವನು, ತರ್ಕಿಸುವನು. ಉತ್ಕಟ ದುಃಖವಾದರೆ ಕಣ್ಣೀರುದುರಿಸುವನು.

ವೆಂಕಪ್ಪನಿಗೆ ಪುರಂದರದಾಸರೆಂದರೆ ಬಹಳ ಭಕ್ತಿ. ಅಲ್ಲಲ್ಲಿ ತಪ್ಪುತಪ್ಪಾಗಿ ಪಾಠಮಾಡಿದ 'ಬಂದು ನಿಂತಿಹ ನೋಡಿ' ಎಂಬ ದೇವರನಾಮದಲ್ಲಿ ಮಮತೆ ಬಹಳ. ನಾಮದ ಪ್ರತಿ ಪದವನ್ನೂ ಮನನ ಮಾಡುವನು. ಆ ಪದವು ತನ್ನದೇ ಆಗಿದ್ದರೆ, ತಾನೇ ಮಾಡಿದ್ದಾಗಿದ್ದರೆ, ತಾನೇ ಅವರಾಗಿದ್ದರೆ ಹೇಗಿರುತ್ತಿತ್ತೆಂದುಕೊಳ್ಳುವನು. ತನ್ನ ಚಿಕ್ಕ ಮನಸ್ಸಿನಲ್ಲಿ ತನ್ನ ಪರಿಮಿತ ಭಾವನೆಗೆ ತಕ್ಕಂತೆ ಒಂದು ದೇವರ ಮೂರ್ತಿಯನ್ನು ಕಲ್ಪಿಸುವನು. ಅದರಲ್ಲಿ ಎಲ್ಲವನ್ನೂ ಚಿಂತಿಸುವನು. ಮತ್ತೆ ನಿರಾಶನಾಗಿ ಇದಲ್ಲ–ಅದಲ್ಲವೆನ್ನುವನು. ಉನ್ಮತ್ತನ ಪ್ರಲಾಪದಂತೆ, ಹುಚ್ಚನ ಕನಸಿನಂತೆ ತನ್ನ ಭಾಷೆ ಭಾವನೆಗಳಿಂದುಕೊಳ್ಳುವನು. ತಾನು ದಾಸನಾಗಬೇಕು; ತನಗೊಬ್ಬ ಗುರುವಾಗಬೇಕು; ಗುರುವಿನಿಂದ ಅಂಕಿತವಾಗಬೇಕು; ದೇವನ ಕಾರುಣ್ಯವಾಗಬೇಕು; ಎಲ್ಲವೂ ಸರಿ. ಪುರಂದರದಾಸರಂಥಾ ಗುರುಗಳು ದೊರೆಯುವ ಬಗೆ ಹೇಗೆ? ಹೀಗೆಲ್ಲಾ ಚಿಂತಿಸುತ್ತಾ, ಮನ ಮರುಗಿದಂತೆ, ಅವನ ಮನಃಪರಿಪಕ್ವವಾಯಿತು. ಆಹಾರದ ಅಭಾವದಿಂದ, ವಿವಿಧ ದಂಡನೆಗಳಿಂದ ಅವನ ದೇಹ ಶುದ್ಧಿಯಾಯಿತು. ಚಿಂತಿಸಿದಾಗಲೆಲ್ಲ ದಾಸರ ರೂಪವೊಂದು ಭಾಸವಾಗುತ್ತ ನಡೆಯಿತು. ದೇವನ ಚಿಂತನೆ ಮಾಡಿದರೆ, ಇವೆಲ್ಲಿ ಬಂತು ಈ ರೂಪವೆಂದು 'ಹು, ಹು, ಹೂ' ಎನ್ನುವನು. ಮನಸ್ಸಿನಲ್ಲಿ ತನ್ನ ದೇವರನ್ನು ಚಿತ್ರಿಸಿಕೊಂಡಂತೆಲ್ಲಾ ದಾಸರ ರೂಪವೇ ಸ್ಥಿರವಾಯಿತು. ನಿರಾಶನಾದನು, ನಿರುಪಾಯನಾದನು, ಚಿಂತನೆಯ ದಾರಿ ತಪ್ಪಿತೆಂದನು. ಮಾರ್ಗದರ್ಶಕರಿಲ್ಲವೇ ಎಂದು ತೊಳಲಿದನು.

ಲೋಕದಲ್ಲಿ ಮಾನವಪ್ರಾಣಿಯು ತನ್ನ ಜೀವಿತದ ಅಲ್ಪಾವಧಿಯನ್ನು ತಿಳಿದಂತೆ-ತನ್ನ ಅಪೂರ್ಣತೆ, ಅಧೀನತೆಗಳನ್ನು ತಿಳಿದಂತೆ–ಒಬ್ಬನು ಸುಖಿ, ಒಬ್ಬನು ದುಃಖಿ, ಒಬ್ಬನು ಶ್ರೀಮಂತ, ಒಬ್ಬನು ಬಡವ, ಒಬ್ಬನು ಆಳುವವ, ಒಬ್ಬನು ಅಳುವವ, ಇವನ್ನೆಲ್ಲಾ ನೋಡಿದಂತೆ,–ತನ್ನ ಈ ಜನ್ಮವೇ ಎಲ್ಲಕ್ಕೂ ಕಾರಣವಲ್ಲವೆಂದೂ, ತಾನು ಹಿಂದೆ ಏನೋ ಆಗಿದ್ದು, ಮುಂದೆ ಏನೋ ಆಗಬಹುದೆಂದೂ, ತನ್ನ ಹಿಂದುಮುಂದುಗಳು ಒಂದಕ್ಕೊಂದು ಕಾರಣವಾಗಿರಬೇಕೆಂದೂ, ಎಲ್ಲಕ್ಕೂ ಬಲವಾದ ಶಕ್ತಿಯೊಂದಿದ್ದು ಅದಕ್ಕೆ ತಾನು ಒಳಪಟ್ಟಿರುವನೆಂದೂ ವಿವೇಕದಿಂದ ನಿಶ್ಚಯಿಸುವನು. ಈ ಎಲ್ಲ ನಂಬಿಕೆಗಳ ನಡುವೆ ತನ್ನದೇ ಒಂದು ಪ್ರಪಂಚ; ತನ್ನದೇ ಒಂದು ನೀತಿ; ತನ್ನದೇ ಒಂದು ನ್ಯಾಯ; ತನ್ನದೇ ಒಂದು ದೇವರು; ಹೀಗೆಲ್ಲಾ ಕಲ್ಪಿಸಿಕೊಂಡು ತನ್ನ ಚಿಕ್ಕ ತಕ್ಕಡಿಯಲ್ಲಿ ಜಗತ್ತಿನ ನ್ಯಾಯಾನ್ಯಾಯಗಳ ತೂಕ ಮಾಡುವನು. ತಾನೆಷ್ಟು ಸರಿಯಾಗಿದ್ದರೂ, ತಾನೆಷ್ಟು ಮೊರೆಬಿದ್ದರೂ, ತನ್ನನ್ನು ಆ ದೇವರು ಕಾಪಾಡುತ್ತಿಲ್ಲವೆಂದು ಆ ದೇವರ ತಲೆಗೆ ಅಪರಾಧದ ಹೊರೆಯನ್ನು ಹೊರಿಸುವನು. ಹಿಂದೆ ಆದದ್ದಾಯಿತು, ಮುಂದಾದರೂ ತನ್ನ ಬೇಡಿಕೆಗಳನ್ನು ಸಲ್ಲಿಸೆಂದು ಕೇಳುವನು; ಕೇಳಿದ್ದು ದೊರೆಯದಿದ್ದರೆ ಆ ದೇವರಮೇಲೆ ಸಿಟ್ಟು

ಮಾಡುವನು. ಸಿಟ್ಟು ಉದಾಸೀನತೆಯಾಗಿ, ಉದಾಸೀನತೆ ಶಾಂತವಾದಮೇಲೆ ಮತ್ತೆ ಅದೇ ದೇವರಿಗೆ ಅನೇಕ ಹರಕೆ ಹಾಕಲು ಹೊರಡುವನು. ಇವೆಲ್ಲಾ ಸಾಧಕರ ಮನೋ ರಾಜ್ಯದಲ್ಲಿ ನಿರಂತರವಾಗಿ ಬರುವ ತರಂಗಗಳು. ಇವು ವೆಂಕಪ್ಪನ ಬಡ ಮನಸ್ಸಿನಲ್ಲೂ ಬರದೇಹೋಗಲಿಲ್ಲ. ತಾನು ತನ್ನ ಮನಸ್ಸಿನಲ್ಲಿ ತೋರಿದ ರೀತಿಯಲ್ಲಿ-ಜನರು ಹೇಳಿ-ಕೇಳಿದ ರೀತಿಯಲ್ಲಿ-ಒಬ್ಬ ದೇವರನ್ನು ಚಿಂತಿಸಿದರೆ ಆ ರೂಪ ತನ್ನೆದುರಿಗೆ ನಿಲ್ಲಬೇಕೋ, ಯಾವುದೋ ದಾಸರ ರೂಪ ಕಣ್ಣಿಗೆ ಕಟ್ಟಿದಂತಾಗಬೇಕೋ? ಇದು ಅವನ ಯುಕ್ತಿಗೆ ಹೊಂದದಂತಾಯಿತು. ಪುರಂದರದಾಸರ ಸ್ಮರಣೆ ಮಾಡಿದ ಕಾರಣ ಆ ದಾಸರ ರೂಪ ಮನಸ್ಸಿನಲ್ಲಿ ನೆಲೆಸಿರಬಹುದೇ ಎಂಬ ಸಂದೇಹವಾಯಿತು. ತಾನು ಕಂಡದ್ದು ದಾಸರ ರೂಪವಾಗಿರಲು ಕಾರಣವಿಲ್ಲವೆಂದೆನಿಸಿತು! ಈ ಯೋಚನೆಯಲ್ಲಿ ಮುಳುಗಿದ ವೆಂಕಪ್ಪನಿಗೆ ದಿಕ್ಕು ತೋರದಂತಾಯಿ.

"ಅಸ್ಯಚ್ಯುತೋ ಗುರುದ್ವಾರಾತ್" ಎಂಬ ಶಾಸ್ತ್ರ ನ್ಯಾಯದಂತೆ ದೇವರು ಯಾವುದೇ ಜಗದ್ವ್ಯಾಪಾರವನ್ನು ಸ್ವಯಂ ಬಂದು ಮಾಡುವುದಿಲ್ಲ. ತರತಮ ಭಾವಗಳಿಗನುಸರಿಸಿ, ಗುರುಶಿಷ್ಯ ನ್ಯಾಯವನ್ನು ತೋರಿಸಿ, ಆ ಆ ರೂಪಗಳೇ ಅವರವರಿಗೆ ಉಪಾಸ್ಯ ರೂಪಗಳೆನ್ನಿಸಿ, ತಾನೇ ಎಲ್ಲವನ್ನೂ ಮಾಡುವವನಾದರೂ, ಒಂದನ್ನೂ ಮಾಡದ 'ಜಗದ್ವ್ಯಾಪಾರ ವರ್ಜ್ಯಂ' ಎನಿಸಿ, ಜಗನ್ನಿಯಂತನಾಗಿರುವನು. ವೆಂಕಪ್ಪನಿಗೆ ಕಾಣಿಸಿದ ರೂಪವು, ಅವನ ಸ್ವರೂಪೋದ್ಧಾರಕ್ಕೆ ಕಾರಣರಾಗಿಪ್ಪ ಗುರು ರೂಪವಾಗಿದ್ದುದರಿಂದ ಆ ರೂಪದ ವಿನಾ ಅನ್ಯ ರೂಪದರ್ಶನವು ಸ್ಥಿರವಾಗಲು ಕಾರಣವಿರಲಿಲ್ಲ. ಅದರ ಅರಿವು ವೆಂಕಪ್ಪನಿಗಾಗಲಿಲ್ಲ.

ಹೀಗಿರಲು, ಒಂದು ಮಧ್ಯಾಹ್ನ ಧರ್ಮದರ್ಶನದ ಕಾಲ! ವೆಂಕಪ್ಪನು ವೆಂಕಟಪತಿಯ ಗರ್ಭಾಂಕಣದಲ್ಲಿ ನಿಂತಿದ್ದಾನೆ! ಮಳೆ ಬರುತ್ತಿದ್ದುದರಿಂದಲೂ, ಜನಸಮ್ಮರ್ದವಿದ್ದುದರಿಂದಲೂ, ಶ್ರೀನಿವಾಸಮೂರ್ತಿಯ ಸನಿಹದಲ್ಲಿ ಹೆಚ್ಚು ಕಾಲ ನಿಲ್ಲುವ ಭಾಗ್ಯ ಲಭಿಸಿದೆ. ಸ್ವಾಮಿಯನ್ನು ಕಣ್ಣು ತುಂಬ ನೋಡುತ್ತಾನೆ. ಇದೇ ರೂಪ ತನ್ನ ಮನಸ್ಸಿನಲ್ಲಿ ಸ್ಥಿರವಾಗಿರಬೇಕೆಂದು ಕಣ್ಣು ಮುಚ್ಚುತ್ತಾನೆ. ಆ ರೂಪದ ಬದಲು ದಾಸರ ರೂಪ ಮುಂದೆ ಬರುತ್ತದೆ. ಕಣ್ಣು ಬಿಡುತ್ತಾನೆ, ಅದು ಮರೆಯಾಗುತ್ತದೆ. ಆವರ್ತಿ ಹೆಚ್ಚಿದ ಹಾಗೆ ಒಳಗೆ-ಹೊರಗೆ ದಾಸರೂಪವೇ ಸ್ಥಿರವಾಗುತ್ತಿದೆ. ಗುಡಿಯೊಳಗೆ ನಿಂತರೂ ಹೀಗೇಕೆ ಆಯಿತೆಂದು ತಳಮಳಿಸುತ್ತಾನೆ. ಮೈಮೇಲೆ ಸ್ಮೃತಿಯಿಲ್ಲ. ಆಗ ಅಂಶಿಯಿಂದ ಅಂಶರೂಪವಾದ ದಾಸರ ತೇಜೋಮಯ ಅಂತರ್ಯಾಮಿ ರೂಪದಿಂದ 'ವೆಂಕಪ್ಪಾ ನಿನಗೆ ಪ್ರಸನ್ನನಾಗಿದ್ದೇನೆ. ನಿನ್ನ ಚಿಂತನೆಯು ಫಲರೂಪವಾಯಿತು. ಚಿಂತೆ ಪರಿಹಾರವಾಯಿತು' ಎಂಬ ಪ್ರಸನ್ನ ಉದ್ಗಾರಗಳು ಬರುತ್ತಿವೆ. ಎಲ್ಲವನ್ನೂ ನೋಡಿ, ಸ್ಮೃತಿಗೊಂಡು, ಸಮಚಿತ್ತನಾಗಿ ವೆಂಕಪ್ಪನು ಸಂತುಷ್ಟನಾಗುತ್ತಾನೆ. ಗರ್ಭಾಂಕಣವನ್ನು ಬಿಟ್ಟು ವಿಮಾನ ಶ್ರೀನಿವಾಸನೆದುರಿಗೆ ನಿಂತು ಹಾಡುತ್ತಾನೆ. ಹಾಡಿದ ಹಾಡು ದಿವ್ಯ ಕವಿತೆಯಾಗುತ್ತದೆ. ಕೇಳಿದವರಿಗೆ ಆನಂದವೆನಿಸುತ್ತದೆ. ಕೇಳಿದ ಜನರಿಗೆ ಯಾವನೋ

ಸತ್ಪುರುಷನಿವನೆಂಬ ಭಕ್ತಿಯುಂಟಾಗುತ್ತದೆ. ವೆಂಕಪ್ಪನ ಅಂತರಂಗದಲ್ಲಿ ಜ್ಯೋತಿರ್ದರ್ಶನ ವಾಗುತ್ತದೆ. ಒಡನೆಯೇ ಸಕಲ ಜಗತ್ತೂ ಅವನಿಗೆ ಕರತಲಾಮಲಕದಂತೆ ಸ್ಪಷ್ಟವಾಗಿ ಕಾಣುತ್ತದೆ. ವಿದ್ಯೆಯಿರದಿದ್ದರೂ ಬುದ್ಧಿ, ಬುದ್ಧಿಯಿಂದ ಸಿದ್ಧಿ, ಸಿದ್ಧಿಯಿಂದ ಪ್ರಸಿದ್ಧಿ, ಒಂದರ ಹಿಂದೊಂದು ತಾನೇ ಲಭಿಸುತ್ತವೆ. ಇವನನ್ನು ಕಂಡು ಜನರಾಗಲೇ ಹಿಂಬಾಲಿಸುತ್ತಾರೆ. ತಮ್ಮ ಕಷ್ಟದುಃಖಗಳ ನಿವಾರಣೋಪಾಯ ಕೇಳುತ್ತಾರೆ. ಎಲ್ಲವನ್ನೂ ನೆನೆದು, ಎಲ್ಲರನ್ನೂ ನೋಡಿ ವೆಂಕಪ್ಪನು ನಗುತ್ತಾನೆ. ಅದೇನು ಸ್ಮೃತಿಯೋ ವಿಸ್ಮೃತಿಯೋ ಅವನಿಗೇ ಆಶ್ಚರ್ಯವೆನಿಸುತ್ತದೆ.

ಹೀಗಾಯಿತು ವೆಂಕಪ್ಪನಿಗೆ ಸಾಕ್ಷಾತ್ಕಾರ. ಹೀಗಾಯಿತು ವೆಂಕಪ್ಪನಿಗೆ ದುಃಖ ಪರಿಹಾರ. ಹೀಗಾದವನು ಪ್ರಸನ್ನ ವೆಂಕಟರಾಯ.

ಮಹಾನುಭಾವರಾದ ವಿಜಯದಾಸರು :—

ಸುಳಾದಿ

ಎಲ್ಲಿದ್ದರೇನು ಸಿರಿವಲ್ಲಭನ ತೊಂಡರಿಗೆ। ಇಲ್ಲವಿಲ್ಲವು ದೋಷ ಎಳ್ಳನಿತಾದರು। ಕೊಳ್ಳಿಗೆ ಇರುವೆಯು ಚಲ್ಲವರಿದು ಮುತ್ತಿ। ನಿಲ್ಲದೆ ಬದುಕಿ ತಾವೆಲ್ಲಾ ಪೋಪುದು ಉಂಟೆ?। ಸೊಲ್ಲು ಸೊಲ್ಲಿಗೆ ರಂಗನಿಲ್ಲದಿನ್ನಿಲ್ಲವೆಂಬ। ಬಲ್ಲಿದ ಭಕ್ತಿಯುಳ್ಳ ಭಕ್ತರಿಗೆ। ಎಲ್ಲಿಯು ದೋಷ ಮತ್ತೆಲ್ಲಿಯು ಜನನವು। ಬಲ್ಲವರಿಗೆ ಧ್ಯಾನದಲ್ಲಿ ಆನಂದವು। ಚೆಲ್ವರೆ ಮಾರ್ಗ ತೋರಿಸಿ ವಿಜಯವಿಠಲರೇಯ। ಸಲ್ಲಿಸುವನು ತನ್ನಲ್ಲಿ ಮನವಿಡಲು॥ ೧

ಎಂಬುದಾಗಿ ಹೇಳಿದಂತೆ ವೆಂಕಪ್ಪನು ವೆಂಕಟರಾಯರಾದಮೇಲೆ ಎಲ್ಲಿದ್ದರೇನು!

ನಾಹಂ ವಸಾಮಿ ವೈಕುಂಠೇ। ನ ಯೋಗೀ ಹೃದಯೇ ರವೌ॥
ಮದ್ಭಕ್ತಾ ಯತ್ರಗಾಯಂತೇ। ತತ್ರ ತಿಷ್ಠಾಮಿ ನಾರದ॥

ಎಂಬುದಾಗಿ ಭಗವದ್ಭಕ್ತಿಯಿರುವಾಗ ಪ್ರಸನ್ನರಾಯರಿದ್ದ ಬಳಿ ವೈಕುಂಠವಾಯಿತು. ಅವರಿದ್ದ ಬಳಿ ತೀರ್ಥಕ್ಷೇತ್ರಗಳಾದುವು. ಅವರೆಂದ ವಚನಗಳೇ ವೇದಾರ್ಥಗಳಾದುವು. ಅವರೇ ಎಷ್ಟೋ ಜನರಿಗೆ ಪ್ರತ್ಯಕ್ಷ ಪರಬ್ರಹ್ಮರಾದರು.

ಪ್ರಸನ್ನ ವೆಂಕಟರಾಯರು ಭಗವದನುಗ್ರಹವನ್ನು ಸಂಪಾದಿಸಿ, ಭರತ ಖಂಡದ ವಿವಿಧ ಕ್ಷೇತ್ರಗಳಲ್ಲಿ ಸಂಚರಿಸಿ, ಪರಮಾತ್ಮನ ಲೀಲಾವಿಭೂತಿಯನ್ನು ಕೊಂಡಾಡಿ, 'ಬ್ರಹ್ಮಾಂಡದೊಳಗೆ ಯಾವಲ್ಲಿ ನೋಡಿದರೂ ನಮ್ಮೂರೇ ವಾಸಿ' ಎಂಬ ಪುರಂದರದಾಸರ ಪ್ರಸ್ತೋಕ್ತಿಯಂತೆ ಬಾಗಿಲಕೋಟೆಗೇ ಮರಳಿ ಬಂದರು. ಅದೇ ಅಣ್ಣ ಅತ್ತಿಗೆಯರ ಪಾದಗಳಿಗೆರಗಿದರು. ಎಷ್ಟೋ ಕಾಲ ತಮ್ಮನ ವರ್ತಮಾನವನ್ನೇ ಕೇಳಿ ತಿಳಿಯದಿದ್ದ ಅವರ ಅಣ್ಣನಿಗೆ ಪರಮಾನಂದವಾಯಿತು. ಅತ್ತಿಗೆಯನ್ನು ಮಾತನಾಡಿಸುತ್ತಾ, ರಾಯರು–'ನಾನು ಅದೇ ಮೂರ್ಖ. ನೀವು ನನ್ನ ಹಾಂಗೇ ಕರೀಬೇಕು. ಈಗ ಮರ್ಯಾದೆ ಮಾಡಬಾರದು' ಎಂದರು. 'ಅವಸ್ಥಾ ಪೂಜ್ಯತೇ ರಾಮ' ಎಂಬ ಲೋಕೋಕ್ತಿಯಿರು

ನಾಗ, ಆ ಪ್ರಾಣಿಯಾದರೂ ರಾಯರನ್ನು ಯಾವ ಬಾಯಿಂದ 'ಯೆಂಕ್ಯಾ' ಎಂದು ಕರೆದಾಳು? ಒಂದು ಥಾಲಿ ಮಜ್ಜಿಗೆಯ ಲೋಭವಿದೆಂದು ಸ್ಮರಿಸದಿದ್ದಾಳು? ಆ ಪುಣ್ಯಾತ್ಮಳು 'ವೆಂಕಣ್ಣಾ! ನಿನ್ನನ್ನು ಬಲು ನೋಯಿಸಿದ ಕಡುಪಾಪಿ ನಾನು! ಸೀರೆಯೊಗೆಸಿ, ನೀರು ಹೊರಿಸಿದ ಮಹಾಪಾಪಿ ನಾನು, ಉಣಬಡಿಸುವಾಗಲೂ, ಪಙ್ಕ್ತಿಭೇದ ಮಾಡಿದ ಪಾಪಾತ್ಮಳು ನಾನು. ದನಕ್ಕೆ ಚೆಲ್ಲುವ ಒಂದು ಥಾಲಿ ಮಜ್ಜಿಗೆಯನ್ನು ನಿನಗೆ ಕೊಡದೆ ಕಾಡಿಗಟ್ಟುತ್ತಿದ್ದ ದುರಾತ್ಮಳು ನಾನು. ಅಪ್ಪಾ, ನೀನೆಷ್ಟು ನೊಂದೆಯೋ? ಎಷ್ಟು ಕಷ್ಟಪಟ್ಟೆಯೋ? ಆ ಪಾಪ, ಆ ಶಾಪ, ಅದರಿಂದ ಹೊಟ್ಟೆಯ ಮಕ್ಕಳನ್ನು ತಿಂದುಕೊಂಡೆ. ಪೈರು ಹೋಯಿತು, ಪಙ್ಕ್ತಿ ಹೋಯಿತು. ಬಣವೆಗೇ ಬೆಂಕಿ ಬಿತ್ತು. ಒಂದಾಯಿತು–ಎರಡಾಯಿತೆನ್ನಲೇ? ಇನ್ನಾದರೂ ನಮ್ಮ ಈ ಮನೆ, ಅದೇ ನಿನ್ನ ಮನೆ, ಊರ್ಜಿತವಾಗಲೆಂದು ಹರಸು. ವೆಂಕಣ್ಣಾ, ನೀನು ವೆಂಕಟಪತಿಯ ಭಕ್ತ! ನನ್ನ ಸರ್ವಾಪರಾಧವನ್ನೂ ಕ್ಷಮಿಸು' ಎಂಬುದಾಗಿ ಬೇಡಿಕೊಂಡಳು.

ರಾಯರು ಅತ್ತಿಗೆಯ ಮಾತುಗಳನ್ನು ಕೇಳಿ ಕಂಬನಿಗರೆದರು. ಇವೆಲ್ಲಾ ಪ್ರಾಚೀನ ಕರ್ಮಫಲವೆಂದರು. 'ಮುಂದೆ ಎಲ್ಲಾ ಒಳ್ಳೇದಾಗುತ್ತದೆ, ಅತ್ತಿಗೇ. ಚಿಂತಿಸಬೇಡ'ವೆಂದು ಹೇಳಿದರು.

ಪ್ರಸನ್ನ ವೆಂಕಟರಾಯರು ತಮ್ಮ ಬಾಲ್ಯ ಸಂಸ್ಕಾರವನ್ನು ದೊಡ್ಡವರಾದರೂ ಮರೆಯಲಿಲ್ಲ. ಮನೆಯಲ್ಲಿ ಕೂಡುವುದಕ್ಕಿಂತ, ಅವರಿಗೆ ಅಡವಿಯೇ ಆನಂದಾಶ್ರಮವಾಗಿತ್ತು. ಬಾಗಿಲಕೋಟೆಯ ಎದುರುಭಾಗದ ಗುಡ್ಡಸಾಲು ಅವರ ವಿಹಾರ ಸ್ಥಾನವಾಗಿತ್ತು. ಯಾವುದಾದರೊಂದು ಗುಜ್ಜುಗಿಡದ ನೆರಳಿನಲ್ಲಿ ಕುಳಿತು ಭಾಗವತ ಪಠನೆ ಮಾಡುವುದು ರಾಯರ ದಿನಚರ್ಯೆಯಾಗಿತ್ತು. ಭಾಗವತವನ್ನು ಓದಿದಂತೆಲ್ಲಾ ಅದರ ಸಾರಾಂಶವನ್ನು ಕನ್ನಡ ಹಾಡುಗಳಾಗಿ ಬರೆಯುತ್ತಿದ್ದರು. ಅವರ ಕವಿತೆಗಳಲ್ಲಿ ಬಿಡಿಯಾಗಿ ಬರೆದ ಸ್ತೋತ್ರ ಪದಗಳೇ ಬೇರೆ, ಇಡಿಯಾಗಿ ಬರೆದ ಭಾಗವತ ಕಥೆಯೇ ಬೇರೆ! ಭಾಗವತವೆಂದಕೂಡಲೇ ದಶಮಸ್ಕಂಧ, ದಶಮಸ್ಕಂಧವೆಂದರೆ ಪೂರ್ವಾರ್ಧ! ಅದೆಂದರೆ ಕೃಷ್ಣಲೀಲಾ, ಎಂಬಷ್ಟೇ ಅರ್ಥದ ಕವಿತೆ ರಾಯರದಲ್ಲ. ಭಾಗವತದ ಆದ್ಯಂತವನ್ನೂ ಹಾಡಾಗಿ ವೃತ್ತವಾಗಿ ದ್ವಿಪದಿಯಾಗಿ ಸಂಪೂರ್ಣವಾಗಿ ಕನ್ನಡಿಸಿದವರು ಪ್ರಸನ್ನ ರಾಯರು. ಪ್ರಕೃತ ಉಪಲಬ್ಧವಾಗಿ ಮುದ್ರಿತವಾಗಿರುವುದೆಂದರೆ ರಾಯರ ಕೆಲವು ಬಿಡಿ ಪದಗಳು ಮತ್ತು ದಶಮಸ್ಕಂಧದ ಪೂರ್ವಾರ್ಧ ಮಾತ್ರ. ಉತ್ತರ ಕರ್ಣಾಟಕದ ಗ್ರಂಥ ಶೋಧಕರು ಪ್ರಸನ್ನ ವೆಂಕಟರ ಭಾಗವತವನ್ನು ಪೂರ್ತಿಯಾಗಿ ಸಂಗ್ರಹಿಸಿ ಶೋಧಿಸಿ ಮುದ್ರಿಸಿದರೆ ಮಹಾರಾಷ್ಟ್ರದ ಏಕನಾಥ ಭಾಗವತದಂತೆ ಅದೊಂದು ಉಪಯುಕ್ತ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ರಾಯರು ದಶಮಸ್ಕಂಧದ ಪೂರ್ವಾರ್ಧವನ್ನು ಪ್ರಾರಂಭಿಸುವಾಗ ಸಾರಂಗ ರಾಗದಲ್ಲಿ, ಕನ್ನಡ ಮಾತುಗಳೆಂದು ಉದಾಸೀನವಾಡದೆ ಕೇಳಿರೆಂದೇ ಪ್ರಾರ್ಥಿಸಿ, ಪದವನ್ನು ಪ್ರಾರಂಭಿಸಿದ್ದಾರೆ. ಆ ಪದವು—

ಸಾರಂಗ — ಆದಿತಾಳ

ಶ್ರೋತವ್ಯವು ಇದೆ ಮಂತವ್ಯವು ಇದೆ ಧ್ಯಾತವ್ಯವು ನಮಗೆ ।
ಪೂತವು ಹರಿಗುಣಗಾಥೆಯು ಮುಕುತಿಯ ಪಾಥೇಯವು ನಮಗೆ ॥ ಪ.

ಶ್ರೀಮದ್ದಶಮಸ್ಕಂಧ ಭಾಗವತ ಭೂಮಿಪ ಪರಿಕ್ಷಿತನು ।
ಧೀಮಜ್ಜನಗುರು ಶುಕಮುನಿಗೆ ನಮಿಸಿ ಪ್ರೇಮದಿ ಕೇಳಿದನು ।
ಈ ಮುಕುತಿಯ ಪಥ ಸಾಧನವು ಖಳ ಪಾಮರರಿಗೆ ದೂರ ।
ಶ್ರೀ ಪಶುಪಾಲಕುಮಿಯ ರಮಣನ ದಾಸರಸ್ತೋಮಕೆ ಸೌಖ್ಯಕರ ॥ ೧

ಕರ್ಣಪುಟಗಳಿಗೆ ನೈರಂತರದಲಿ ಪೂರ್ಣ ಸುಧಾರಸವು ।
ನಿರ್ಣಾಯಕ ಶ್ರೀ ದಶಪ್ರಮತಿ ಶಾಸ್ತ್ರಾರ್ಣವಜ್ಞರ-ಹಿತವು ।
ಚೂರ್ಣೀಕೃತ ಪಾಪಾಚಲ ವಜ್ರವು ಸ್ವರ್ಣವಿಪಗ ಕಥೆಯು ।
ವರ್ಣಾವರ್ಣಗಳಿಂ ಕೀರ್ತಿಪರಾಭರ್ಣ ಸುಖದ ತತಿಯು ॥ ೨

ಎನಗಿಂತೊಂದೀರ್ಗುಣ ಜ್ಯೇಷ್ಠರ ಕ್ರಮವನು ಬಲಗೊಂಡಬುಜಾ ।
ಸನ ಪರ್ಯಂತರ ಗುರುಗಳಿಗೆರಗುವೆ ಅಣುಬಾಲಿಶಮನುಜ ।
ಎಣಿಸದಲಿನ್ನಯ ನುಡಿತಪ್ಪುಗಳನು ಮನುಜೋತ್ತಮ ಮುಖಗು ।
ಕನಡುಕ್ತಿಗಳಿವು ಎನ್ನದೆ ಕೇಳಿರಿ ಘನರು ದಯಾಪರರು ॥ ೩

ಚಿದ್ಗುಣಗಣನಿಧಿ ಚಿನ್ಮಯರೂಪ ಸಚ್ಚಿದ್ಗೃಹತ್ರಯ ತಾನು ।
ಹೃದ್ಗೃಹನಿಲಯ ಸದಾಶ್ರಿತಜನ ಸುಖದೋಗ್ಧಾಮರಧೇನು ।
ವಾಗ್ದೇವಿಯರಸ ವನಜಾಸನನುತ ದುಗ್ಧಾಬ್ಧೀಶ್ವರನು ।
ಅಗ್ರೇಸರ ಭಗವಜ್ಜನ ಸಜ್ಜನರುಗ್ಘಡಿಸುವರಿದನು ॥ ೪

ಆರಿದಪೇಳುವರೂ ಕೇಳುವರು ಮುರಾರಿಯ ಚಾರಿತೆಯ ।
ಕೀರುತಿ ವ್ಯಾಸಕುಮಾರನು ವರ್ಣಿಪ ಚಾರು ಮುಕುತಿ ಗತಿಯು ।
ಈರೇಳ್ಜಗದಘ ಪರಿಪುದು ಕರ್ಣಾಪೂರಿತ ಪೀಯೂಷವು ।
ನಾರಾಯಣ ಪ್ರಸನ್ವೇಂಕಟ ಕೃಷ್ಣನ ತೋರಿಕೊಡುವರಸವು ॥ ೫

ಎಂಬಂತಿದೆ. ಸಂಸ್ಕೃತ ನಾಟಕಗಳಲ್ಲಿ ಹೀನ ಪಾತ್ರಗಳಿಗಾಗಿ ಪ್ರಾಕೃತದ ಗದ್ಯಪದ್ಯಗಳನ್ನು ಬರೆದು ಕೆಳಗೆ ಸಂಸ್ಕೃತ ಮಾಡಿಕೊಡುವಂತೆ, ಪ್ರಸನ್ನ ರಾಯರು ಮಕ್ಕಳ ಮುದ್ದುನುಡಿಯ ಕೆಲವು ಪದಗಳನ್ನು ಶ್ರೀ ಕೃಷ್ಣಲೀಲಾ ಪ್ರಸಂಗದಲ್ಲಿ ಹಾಕಿದ್ದಾರೆ. ಅದರ ಮಾದರಿಯೊಂದರೆ :—

ಯಶೋದೆಯಮ್ಮಾ ನಂಗನ್ನೆತ್ತಿಕೋ ಅಮ್ಮಾ
ಯಶೋದೆಯಮ್ಮಾ—ರಂಗ................
ವತ್ತಿ ಬಲು ಅತ್ತು ಬಂದೀನೇ ನಾ ಇತ್ತೇ ಅನ್ನಿಮ್ಮ ತಿಂದೇನೇ ಪ.
ಹೊಟ್ಟೆ....ಹಸ್ತು....................ಇಷ್ಟೇ

ತುತಿ ಬಾಯಿ ವಂಗ್ಯಾವೆ ಬಿಚಿವಾವು ವಾಕತ್ತಿ ಬತ್ತಾವೆ
ತುಟಿ........ವಣಗ್ಯಾವೆ....ಬಿಸಿಹಾಲು ವಾಕರಿಕೆ........
ಅತ್ತಿವಾವು ಪಪ್ಪುಕಾಯಿ ಅಮ್ಮಮವ್ಮೊಲ್ಲೆ ಉತ್ತತ್ತಿ
ಹಸಿಹಾಲು ಉಪ್ಪಿನಕಾಯಿ..................
ಬೆಣ್ಣೀ ತಿಂದೇನೆ ೧

ಯಕ್ಕೋಬಾ ಯಂಬ್ಯಾರೇ ಬಿಚಿನೀಲು–ಬುಕ್ಕಚ್ಚಿ ವಾಬ್ಯಾಲೇ
ಎರಕೋ....ಎನಬೇಡೇ....ಬಿಸಿ ನೀರು ಬುಕ್ಕಸ್ಸಿ ಮಾಡಬ್ಯಾಡೇ
ಬತ್ಲೊ ತುಂಬೀಕೊಲು ಬೆತ್ಲು ಮಲಿಗಳ ಕೂಡುಂದೇನೆ
ಬಟ್ಲೊ...............ಡು ಬೆಕ್ಕು....ರಿ................ಡೇ.... ೨

ಉಗ್ಗು ಕೂಶು ಬಾಯಂಗೇ ಚಪ್ಪಶ್ಶಿ ಮಗ್ಗಮ್ಮಿ ಕೂಯಂಗೇ
........ಕುಡಿಸು....ನಂಗೇ....ಚಪ್ಪರಿಸಿ ಮಲಗಿ ಅಮ್ಮಿ ಕೊಡು ನಂಗೇ
ಗೊಗ್ಗ ಮಿಾಶಿ ಜೋಗಿಗೆ ಕೋಬ್ಯಾಡೇ ಬಾಗಿಲ ಹೊಗ್ಗೆ ಜತ್ತಿಂಗ
.........................ಕೊಡಬ್ಯಾಡೇ........ಹೊರಗೆ....ನಾನೇ ೩

ಕಲ್ಲ ಕಿತ್ನ ಎಂತಾಡೇ ಬಂಗಾರ್ದ ಬುಲ್ಲಿ ಬೆಲ್ಲ ತಿಂತಾಡೇ
ಕಳ್ಳ ಕೃಷ್ಣ................
ಗಲ್ಲ ಕತ್ತಿ ಕತ್ತಿ ಉಮ್ಮ ಹಲ್ಲನೊತ್ತುತಾಡೇ ಕೊಲ್ಲುಬಾಲದೇ
....ಕಚ್ಚಿ ಕಚ್ಚಿ...................ದುಷ್ಟ ಗೊಲ್ಲ ತೇಲನ್ನಾ........ ೪

ನಚ್ಚತ್ರ ತಂದುಕೋಲೇ ಚಂದುಮಾಮನ್ನಿತ್ತತ್ತ ಕಲೆತಾಲೇ
ನಕ್ಷತ್ರ...................ಡೇ................
ಪುತ್ತಮಿಲ್ಲಿ ತುಂಬವಲ್ಲೆ ಮುತ್ತು ಕೊತ್ತಾಲೇ ಸಣ್ಣ ಬುತ್ತಿ ತುಂಬ
.................................ಕೊಟ್ಟರೆ............
ಹನ್ನು ಕೊಂದು ತಿಂದೇನೆ................
ಹಣ್ಣು........ಡು............ ೫

ಲಾಲೀ ಮಗಚ್ಚು ಬಾಲೇ ಕಿತ್ನನಮೇಲೆ ಜೋಗುಲ ಪಾಲೇ
........ಮಲಗಸು........ರೇ....ಕೃಷ್ಣನ.............ಳ–ಪಾಡೇ
ಬಾಲಬವ್ವು ಕಂದು ಯನಗಂಜಿಕೆ ಬತ್ತದೆ
..................ಡು.............
ದೂಲ ಎನ್ನ ಬಿತ್ತು ನೀ ವೋಗಬ್ಯಾಲೆ
....ರ............ಟ್ಟು....ಹೋಗಬ್ಯಾಡೇ ೬

ಕೂಚಿಗೆವಿನ್ನ ಕೊಬ್ಯಾಲೇ ನಂಗಂಗಚ್ಚತಾನೆ ಅವನೋಡೇ
ಕೂಸಿ........ಕೊಡಬ್ಯಾಡೇ ನನಗೆ ಅಣಕಿಸುತ್ತಾನೆ....ಅವನೋಡೇ
ಪಾಚನ್ನ ವೆಂಕಟಕೃಷ್ಣಪ್ಪ ಕನ್ನಡೀಲೀ
ಪ್ರಸನ್ನ ವೆಂಕಟಕೃಷ್ಣಪ್ಪ............
ನಚುನಗೀ ನಗತಾನೇ ಕಲತಾಲೇ
ನಸುನಗೀ............ ....ಕರತಾರೇ........ ೭

ಪದದ ಮೂರನೇ ನುಡಿಯಲ್ಲಿ 'ಬುಲ್ಲಿ ಜಿಲ್ಲ' ಎಂಬ ಮಾತು ಓದುಗರಿಗೆ ಅಶ್ಲೀಲವೆನಿಸಬಹುದು. ಕವಿಗಳ ಕಾಲದ ಭಾವನೆ-ಬಳಕೆಗಳನ್ನು ಯೋಚಿಸಿದರೆ ಅಪಾರ್ಥವಾಗುವುದಿಲ್ಲ. ಚಲಚ್ಚಿತ್ರಗಳ ಅಶ್ಲೀಲ ದೃಶ್ಯಗಳನ್ನೂ ನಾಗರಿಕ ಯುವತಿಯರ ಅಶ್ಲೀಲ ಉಡಿಗೆಗಳನ್ನೂ ಸಹಿಸಿರುವ ಕಾಲವಿದು. ಅಶ್ಲೀಲ ಕಾದಂಬರೀ ಗ್ರಂಥಗಳ ಭಂಡಾರ ಬೆಳೆಯುವ ಕಾಲವಿದು. ಆದುದರಿಂದ ಪ್ರಸನ್ನ ರಾಯರ ಮೇಲ್ಕಂಡ ಪ್ರಯೋಗವನ್ನು ಬಲು ದೂರ ಯೋಚಿಸುವ ಕಾರಣವಿರುವುದಿಲ್ಲ. ಕಡೆಯ ನುಡಿಯಲ್ಲಿರುವ ಸ್ವಾರಸ್ಯವೆಂದರೆ-ನಿಲುಗನ್ನಡಿಯ ಎದುರಿಗೆ ಕುಳಿತು ಯಶೋದೆ ಕೃಷ್ಣನಿಗೆ ಸ್ತನ್ಯಪಾನ ಮಾಡಿಸುತ್ತಿದ್ದಾಳೆ. ಕೃಷ್ಣನಿಗೆ ತಾನು ಮಾಡಿದಂತೆ ಮಾಡುತ್ತಿರುವ ಪ್ರತಿಬಿಂಬ ಕಾಣಿಸುತ್ತಿದೆ. ಅದನ್ನು ಅವನು ಅಣಕಿಸಿ ಪ್ರತಿಬಿಂಬದಲ್ಲಿನ ಕೃಷ್ಣ ತನ್ನನ್ನು ಅಣಕಮಾಡುತ್ತಾನೆಂದು ದೂರುತ್ತಾನೆ. ಮತ್ತೆ ಆ ಕೃಷ್ಣನಿಗೆ ಸ್ತನ್ಯಪಾನ ಮಾಡಿಸಬೇಡವೆಂದು ಹೇಳುತ್ತಾನೆ. ಮತ್ತೊಂದು ಸಮವೃತ್ತ ಸಮಶ್ಲೋಕಿಯಾದ ಗೋಪೀಗೀತವನ್ನು ಕನ್ನಡಾಭಿಮಾನದಿಂದ ಪಾರಾಯಣ ಪರಾಯಣೆಯರಾದ ಸಹೋದರಿಯರ ಅನುಕೂಲತೆಗಾಗಿ ಕೆಳಗೆ ಬರೆದಿದೆ.

ಗೋಪೀಗೀತಾ

ಜಯವ್ರಜಕ್ಕೆ ನೀ ಜನಿಸೆ ಅಧಿಕವು । ಶ್ರೀಯುಳವಾಸವು ಶಾಶ್ವತಿಲ್ಲಿಯು ।
ಪ್ರಿಯಗೆ ಪ್ರಾಣವರ್ಪಿಸಿ ನೋಡುವ । ಪ್ರಿಯರ ದೃಷ್ಟಿಗೇ ಪ್ರಾಪ್ತಿಯಾಗದೇ ॥ ೧

ಸ್ವಜನ ವಿಸ್ಮಯಾಸ್ಮಿತವಲಳಿದಿಯೋ । ವ್ರಜದ ದುಃಖವನೊದ್ದ ವೀರನೇ ।
ಭಜಿಪ ಕಿಂಕರೀರ್ಬಾಸವಾ ಹರೇಂಬುಜ ಸಮಾಸ್ಯವಾಕ್ಷಿಗೆ ತೋರ್ಪನೆ ॥ ೨

ಶರತಕಾಲದ ಸ್ವಚ್ಛ ಗರ್ಭದ ಸಿರಿಗೆ ಪ್ರೋಲುವಾಸ್ಯೇಕ್ಷಣೊಪ್ಪುವ ।
ಸುರತಸ್ವಾಮಿ ನೀಂ ಶುಲ್ಕದಾಸೇರಂ ವರದ ಕಾಯುವೇ ವಧೆಯುದಾವುವೈ ॥ ೩

ವಿಷದ ನೀರ್ದೊರೆಸ್ಯಾಳಕ್ಷರಿಂ ವಿಷಮುಗಾಳಿ ಮಳೆ ವೈದ್ಯುತಾಗ್ನಿಯಿಂ ।
ವೃಷಭ ಮುಖ್ಯರಿಂ ವಿಶ್ವದುಃಖದಿಂ ವೃಷಭ ನಮ್ಮನು ರಕ್ಷಿಸಿದೆಯೊ ನೀ ॥ ೪

ಅಖಿಳದೇಹಿನಂತರ್ನಿಯಾಮಕ ಗೋಕುಲ ರಕ್ಷಕರ್ಗೆಂತೊ ಬಾಲಕ ।
ವಿಖನಸಾರ್ಚಿತ ಸರ್ವಗೋಪಿಕಾ ಸಖ ನೀ ಪುಟ್ಟಿದೇ ಸಾತ್ವ ವಂಶದಿ ॥ ೫

ವರವರಿಷ್ಠನೇ ವೃಷ್ಣಿಕಾಂತನೇ ಶರಣು ಹೊಕ್ಕರ ಸಂಸೃತೀಹರ ।
ನೆರೆ ಕರಾಬ್ಜವನ್ನಿಟ್ಟು ಶಿರ್ಸವಾ । ದರಿಸು ಶ್ರೀಕರ ಧರಿಸಿದಕರ ॥ ೬

ಪ್ರಣತ ಪ್ರಾಣಿಗಳ ಪಾಪಕರ್ಷಕಾ । ವಿನ ಬಳೀಲಿಪ್ಸ ವೈಷ್ಣವಾರ್ಜಿತಾ ।
ಫಣಿ ಪೆಡೇಲಿಹ ಪಾದಪದ್ಮವಸ್ತನಕೆ ಹೊಂದಿಸೈ ತಾಪವಾರಿಸೈ ॥ ೭

ಬುಧರ ಮೆಚ್ಚಿನ ಬುದ್ಧಿಕಾರಣ ಮಧುರ ಮಾತಿನಾಂಭೋಜ ನೇತ್ರನೆ ।
ತ್ವದೀಯ ಆಜ್ಞೆಯ ತಪ್ಪದಿಪ್ಪುವರ್ಗಧರಸೋಮವ ಊಡುವೀರನೆ ॥ ೮

ನಿನ ಕಥಾಮೃತವು ನೀಚ ಜೀವನಂ ಮುನಿಗಳರ್ಥವು ಮತ್ತೆ ಅಘಹರಂ ।
ಮನನ ಭವ್ಯವು ಮಹಾಭಾಗ್ಯವು ನೆನೆವ ಭಕ್ತರು ನಿತ್ಯದಾತರು ॥ ೯

ಪ್ರಿಯನೆ ಹಾಸವು ಪ್ರೇಮನೋಟವು ದಯೆಯ ಕ್ರೀಡೆಯು ಧ್ಯಾನಶೋಭೆಯುಃ ।
ನಯರಹಸ್ಯವು ನಮ್ಮ ಮನವು ಜೇಯಿಸಿ ನೊಯಿಸುವ ಬುದ್ಧಿಕೈತವ ॥ ೧೦

ವ್ರಜವ ಬಿಟ್ಟು ಆವನ್ನು ಮೇಸುವಾಂಬುಜವ ಹೋಲುವಾ ಅಂಘ್ರಿಗೊತ್ತುವ ।
ರಜತೃಣಾಶ್ಮನಾಲೋಚಿಸಿ ಮನ ಭಜಿಸದೈ ಸುಖ ಭೂಪತೇ ಸಖ ॥ ೧೧

ದನದ ಧೂಳಿಯಿಂದೊಪ್ಪುವಳಕದಿಂ ವನಜ ವಕ್ತ್ರವನೀಕ್ಷಿಸಿ ಮನವು ।
ನೆನೆಸಿ ಇಚ್ಛಿಪೆವು ನಿನ್ನ ರೂಪವ ಇನನ ಅಸ್ತದಿ ವೀರ ನಿತ್ಯದಿ ॥ ೧೨

ಭಕತರಿಚ್ಛಿಪ ಅಬ್ಜೇಜನರ್ಚಿತ ಪೃಥಿವಿಭೂಷಿಪಾಪತ್ತುವಾರಿಪ ।
ಸುಖಕೆ ಶ್ರೇಷ್ಠವಾ ಸತ್ಪದಾಬ್ಜವಾ ಸುಕುಚವಲ್ಲಿಡೈ ಸುವ್ಯಥೇ ಸುಡೈ ॥ ೧೩

ಸುರತ ಹುಟ್ಟುವ ಶೋಕವಟ್ಟುವ ಸ್ವರಿಪವಂಶವ ಸಂಧಿಸೊಪ್ಪುವ ।
ನರರ ರಾಗವನಟ್ಟೆ ಮರೆಸುವ ಅರಸ ನಿನ್ನಧರಾಂಕಿತ ಸುಧಾ ॥ ೧೪

ಹಗಲು ಚರಿಸುವಿ ಹೋಗಿಯಾಟವಿ ಯುಗಕೆ ಪೆಗ್ಗಳ ಒಂದು ತೃಟಿಯದು ।
ಮೊಗದ ಸಿರಿಗುರುಳ್ಮೆಚ್ಚಿ ನೋಡಲು ಮುಗುಳೆ ಜಡದೊಳು ಮೋಹಿಸೆನೀಗಳು॥ ೧೫

ಎಳೆಯಃರಿನಿಯರ ಇಪ್ಪರಾಪ್ತರ ಬಲವ ಮೀರುತ ಬಂದೆವಚ್ಯುತ ।
ಲಲಿತಗೀತದಾಲಾಪ ಮೋಹದಾಬಲೆರ ನೈಶಕೆ ಬಿಟ್ಟೆ ಕುಹಕ ॥ ೧೬

ಮುಗುಳು ನಗೆಮೊಗ ಮೋಹನೋಟವು ಮುಗುಳುಗಣಿಯನ ಮಿಾಟುವಾ ಘನ ।
ಮಿಗಿಲು ನಿಮ್ಮದೆ ಮಾಟಕಂಡೆವೆ ಬಿಗಿದು ಅಪ್ಪುವೆಂಬೆಸೆವ ಮೋಹವು ॥ ೧೭

ಆಕಳ ಕಾವರಾ ಮಂಗಳಾಹರ ಪ್ರಕಟ ನಿನ್ನದು ಪಾಪ ಪ್ರೋಪುದು ।
ಸ್ವಕೀಯರಾರ್ತಹಾ ಸರ್ವರೋಗಹಾ ನಿಖಿಳರಾಸೆಯಾ ನೀ ಪೂರೈಸಯ್ಯಾ ॥ ೧೮

ಪ್ರಸನ್ನ ವೆಂಕಟ ಪಶುಪ್ರಪಾಲಕ ಅಸೆಯರ್ಗೀತವ ಅರಿತು ಮಾಧವ ।
ಪ್ರಸನ್ನವಾಗುವಾಪತ್ತು ಹರಿಸುವ ಶಶಿಮುಖಿಯರೊಳು ಸ್ನೇಹ ತತ್ಪರ ॥ ೧೯

ಪ್ರಸನ್ನ ವೆಂಕಟರಾಯರು ದಶಮಸ್ಕಂಧ ಪೂರ್ವಾರ್ಧದ ಕೊನೆಯಲ್ಲಿ ಎಷ್ಟೋ ಕಳಕಳಿಯಿಂದ 'ಅಮ್ಮಮ್ಮಚ್ಚರಿಯ ವಿಚಿತ್ರ ಚರಿತ್ರ' ಎಂಬ ಹನ್ನೊಂದು ನುಡಿಯ ಪದದಲ್ಲಿ—

ಸಂಸೃತಿಯ ಭಯವೇಕೆ ದ್ವೇಷಿಗಳಾತಂಕ
ಲೇಶಲೇಶವಿಲ್ಲ ಸ್ವಪ್ನದಲ್ಲೂ ।
ತೋಷವೇ ಪೆಗ್ಗಳ । ಕೃಷ್ಣ ಸಂಭಾಷಣೆ । ಸಹ । ವಾಸ
ಅಪವರ್ಗವಾಸ ॥ ೮

ಅನಂತ ಗುಣನಾಮ ಪೂರ್ಣನು ಮುಕ್ತೇಶ ।
ತಾ ನಾಲಿಗೆಯಲಿ ನಿಂತು ನುಡಿಸಿದನು ।
ಪ್ರಾಣೇಶ ಪ್ರೇರಣೆಯ ಪ್ರಾಕೃತದ ಪದವಿದು ।
ಜ್ಞಾನಿಗಳಿಗೆ ನಿತ್ಯ ಸಮ್ಮತವೂ-ಸಮ್ಮತವೂ ॥ ೯

ಈ ದಶಮಸ್ಕಂಧ ಭಾಗವತ ಪೂರ್ವಾರ್ಧವ ।
ಮೇದಿನಿಯಲಿ ಹೇಳಿ ಕೇಳಿದರ್ಗೆ ।
ಯಾದವಕುಲರತ್ನ ಸರ್ವ ಪುರುಷಾರ್ಥವ ।
ಸಾಧಿಸಿಕೊಡುವ ಸತ್ಯವು ನಿತ್ಯವೂ ॥ ೧೦

ಪ್ರಸನ್ನ ಚಾರಿತ್ರ ಪ್ರಸನ್ನ ಶೋಭನ ವಕ್ತ್ರ ।
ಪ್ರಸನ್ನಾಪಾಂಗನೇತ್ರ ಪ್ರಸನ್ನ ಗಾತ್ರ ।
ಪ್ರಸನ್ನ ವೆಂಕಟಕೃಷ್ಣ ಪ್ರಸನ್ನನಾದರೆ ನಿತ್ಯ ।
ಪ್ರಸನ್ನ ತರೋಕ್ತಿ ಬಾಹವು ಭಕ್ತಜನಕೆ ॥ ೧೧

ಎಂಬುದಾಗಿ ಫಲಸ್ತುತಿ ಹಾಡಿದ್ದಾರೆ.

ಒಂದು ಕಥೆಯನ್ನನುಸರಿಸಿ ಬರೆಯುವ ಕವಿತೆಗಿಂತ ಬಿಡಿಯಾದ ಸ್ತೋತ್ರ ಪದಗಳೂ ಅನುಭವದ ಮಾತುಗಳೂ ಹೇಳಿ-ಕೇಳುವುದಕ್ಕೆ ಬಲು ರಮ್ಯವಾಗಿರುತ್ತವೆ. ಆ ಪದಗಳ ಮಾದರಿಯೆಂದರೆ—

ಕಾಂಬೋದಿ — ಝಂಪೆತಾಳ

ಸತತ ಕಲ್ಯಾಣವಚ್ಯುತ ಭಟರಿಗೆ ।
ರತಿಪತಿಪಿತನಂಘ್ರಿ ರತ ಮಹಾತ್ಮರಿಗೆ ॥ ಪ.

ಅರಿಗಳೇ ಸಖರಕ್ಕು ಅತಿ ವಿಷಾಮೃತವಕ್ಕು
ಉರಗ ಪೂಮಾಲೆಯಕ್ಕು ಉರಿ ತಣ್ಣಗಕ್ಕು ।
ಶರಧಿ ಗೋಷ್ಪದವಕ್ಕು ಶರಘಾತ ಚೆಂಡಕ್ಕು
ನರಹರಿಯ ನಾಮವನು ನಂಬಿ ಭಜಿಪರಿಗೆ ॥ ೧

ಆಧಿವ್ಯಾಧಿಗಳಿಲ್ಲ ಅಶುಭವಾರ್ತೆಗಳಿಲ್ಲ
ಕ್ರೋಧ ನೃಪ ಭಯವಿಲ್ಲ ಕಾಕುಮತಿಯಿಲ್ಲ |
ಖೇದ ಮನಕಿಲ್ಲೆಂದು ಖಿನ್ನತೆಯು ಮುಖಕಿಲ್ಲ
ಶ್ರೀಧವನ ನವಭಕುತಿ ಶೀಲಜೀವರಿಗೆ || ೨

ಪಾಪತಾಪಗಳೋಟ ಪರಿದು ಬಹ ಎಡರೋಟ
ಆಪತ್ತುಗಳಿಗೋಟ ಆಲಸ್ಯಕೋಟ |
ಕೋಪದಾರಿದ್ರ್ಯತೆಗೋಟ ಕಲಿವ್ಯಸನಪುಡಕೋಟ |
ಶ್ರೀ ಪ್ರಸನ್ವೇಂಕಟನ ನಂಬಿ ಭಜಿಪರಿಗೆ || ೩

ಈ ಪದದಲ್ಲಿರುವ ಮಾತುಗಳೆಲ್ಲ ಅವರ ಅನುಭವದ ನಿರೂಪಣೆಯಾಗಿದೆ. ಒಂದೊಂದರ ವಿವರಕ್ಕೂ ಬಲವತ್ತರ ಪ್ರಮಾಣಗಳು ಸಿಗದ ಚಿಕ್ಕ ಕಥೆಗಳಿವೆ. ಆ ವಿಸ್ತಾರಕ್ಕೆ ಗ್ರಂಥ ವಿಸ್ತಾರದ ಭಯವು ಬಾಧಕವಾಗಿದೆ.

ರಾಯರ ಜೀವನದಲ್ಲಿ ಬಹು ಮುಖಜನಿತವಾದ ಹೇಳಿಕೆಯೊಂದುಂಟು. ಅದೆಂದರೆ ಅವರು ಅಡವಿಯ ಹುಲಿಗಳೊಡನೆ ಆಟವಾಡುತ್ತಿದ್ದರೆಂಬುವುದು. ಈ ಬಗೆಯ ಹೇಳಿಕೆಗಳು ನಮ್ಮ ಪುರಾಣಗಳಲ್ಲೂ ಮಹಾಪುರುಷರ ವಿಜಯ ಚರಿತ್ರೆಗಳಲ್ಲೂ ಹೇಳಲಸಾಧ್ಯವಾದಷ್ಟು ದೊರೆಯುತ್ತವೆ. ಸಮದೃಷ್ಟಿಯುಳ್ಳ ಮಹಾತ್ಮರಿಗೆ ಅಸಾಧ್ಯ ಕಾರ್ಯಗಳೊಂದೂ ಇಲ್ಲ. ಮಹರ್ಷಿಗಳ ಪುಣ್ಯಾಶ್ರಮಗಳಲ್ಲಿ ಮೃಗಜಾತಿ ಪಕ್ಷಿಜಾತಿಗಳು ಪರಸ್ಪರ ವೈರಭಾವ ತೊರೆದು ವಿಹರಿಸುತ್ತಿದ್ದವೆಂದು ಎಷ್ಟೋ ಗ್ರಂಥಗಳು ಸಾರುತ್ತಿವೆ. ಮನೆಗಳಲ್ಲಿ ಪಳಗಿದ ಕ್ರೂರಸ್ವಭಾವದ ಪಶುಗಳು ತಮ್ಮ ಯಜಮಾನನನ್ನು ಕಂಡೊಡನೆ ನಿರ್ಭೀಯತೆಯಿಂದ ಆಡುವುದನ್ನು ನೋಡಲು ಸಾಧ್ಯವಿದೆ.

ಪ್ರಸನ್ನ ರಾಯರು ಊರೂರಿಗೆ ಹೋಗುವಾಗ ಶಿಷ್ಯರನ್ನು ಮುಂದೆ ಕಳುಹಿಸಿ, ದೇವರ ಪೆಟ್ಟಿಗೆ ಪೂಜಾ ಸಾಮಾನುಗಳನ್ನು ಹೊತ್ತು ಸಾಗಿಸುವ ಕುದುರೆಯೊಂದನ್ನು ಮುಂದೆ ಬಿಟ್ಟುಕೊಂಡು, ತಾವೊಂದು ಕುದುರೆಯ ಮೇಲೆ ಕುಳಿತು ಪ್ರಯಾಣ ಮಾಡುತ್ತಿದ್ದರಂತೆ; ಗುಡ್ಡಗಾಡಿನಲ್ಲಿ ಹುಲಿಯನ್ನು ಹುಡುಕಿ ಅದರ ಕಿವಿಗಳನ್ನು ಹಿಡಿದು ದರದರನೆ ಎಳೆತಂದು ದೇವರ ಕಂಟಳೆಯನ್ನು ಹೊರಿಸಿ ಮೈ ಛಪ್ಪರಿಸಿ ನಡೆಯೆಂದು ಚಾಕರಿ ಮಾಡಿಸುತ್ತಿದ್ದರಂತೆ! ಹುಲಿಯು ಎಡಬಲಗಳಲ್ಲಿ ತಮ್ಮ ಎರಡೂ ಕುದುರೆಗಳನ್ನು ನಡೆಸುತ್ತಿದ್ದರಂತೆ! ರಾಯರು ಮೈ ಛಪ್ಪರಿಸಿದೊಡನೆ ಹುಲಿಯು ಸಾಧುವಾದ ಎತ್ತಿನಂತೆ ಅವರನ್ನು ಹಿಂಬಾಲಿಸುತ್ತಿತ್ತಂತೆ! ಗ್ರಾಮದ ಅಗಸಿಯ ಬಳಿಗೆ ಬಂದೊಡನೆ–'ಹುಲಿರಾಯಾ, ನಿನ್ನ ನೋಡಿ ಮಂದಿ ಗಾಬರಿಯಾದಾರು; ಇನ್ನು ಮೇಲೆ ಗೋಹತ್ಯ ಮಾಡಬೇಡ; ನಡಿ ಅಡವಿಗೆ' ಎಂದು ಮೈಮೇಲೆ ಕೈಯಾಡಿಸಿ, ಅದರ ಹಣೆಗೆ ಅಂಗಾರ ಹಚ್ಚಿ ಕಳುಹಿಸುತ್ತಿದ್ದರಂತೆ! ಆ ಹುಲಿಯು ಮತ್ತೆ ಗೋಜಾತಿಯ ತಂಟೆಗೆ ಹೋಗುತ್ತಿರಲಿಲ್ಲವಂತೆ! ಇದನ್ನರಿತು ಹಳ್ಳಿಯ ಜನರು ರಾಯರನ್ನು ತಮ್ಮ ತಮ್ಮ ಗ್ರಾಮಗಳಿಗೆ ಕರೆದುಕೊಂಡು ಹೋಗುವ ವ್ಯಾಜದಲ್ಲಿ ಅಡವಿಯ ಹುಲಿಗಳ ಬಾಧೆ ತಮ್ಮ ದನಕರುಗಳಿಗಾಗದಂತೆ ಮಾಡಿ

ಕೊಳ್ಳುತ್ತಿದ್ದರಂತೆ! 'ರಾಯರು ಓಡಾಡಿದ ಅಡವಿ, ನಮ್ಮ ದನಗಳನ್ನು ಹುಲಿ ಮುರಿಯು ಲಾರದು; ರಾಯರ ಆಣೆಯಿದೆ' ಎಂಬ ಮಾತು ಆ ಕಾಲದ ಹಳ್ಳಿಗರ ಮನೆಮಾತಾ ಗಿತ್ತಂತೆ! ಹುಲಿಗೆ ಅಂಗಾರ ಹಚ್ಚುತ್ತಿದ್ದ ಕಾರಣ ರಾಯರಿಗೆ ಅಂಗಾರದ ಆಚಾರ್ರು ಎಂದು ಜನರು ಹೆಸರಿಟ್ಟಿದ್ದರಂತೆ!

ತುಲಸೀಕೇರಿಯೆಂಬ ಹಳ್ಳಿಯಲ್ಲಿ ರಾಯರ ಕಾಲದಿಂದ ಅನುಭವಿಸುತ್ತಿದ್ದ ಹೊಲವು, ಈಗಲೂ ಮಠೀಕರ ಅನುಭವದಲ್ಲಿದೆ. ಆ ಹೊಲಕ್ಕೆ 'ಕರಿಬಾಯಿ ಆಚಾರ್ರ ಹೊಲ' ಎಂಬ ಹೆಸರಿದೆ. ಕಾರಣವೇನೆಂದು ವಿಚಾರಿಸಿದರೆ:—ಪ್ರಸನ್ನ ರಾಯರ ಕಾಲ ದಲ್ಲಿ ಆ ಹೊಲವನ್ನು ಮಾಡುತ್ತಿದ್ದ ರೈತನು ಲಾವಣಿಯನ್ನು ಕೊಡದೆ ಹೊಲ ಬೆಳೆಯಲೇ ಇಲ್ಲವೆಂದು ಅನೃತವಾದಿದನಂತೆ! ರಾಯರು-'ಲಾವಣಿ ಕೊಡಲಾರೆಯಾ? ಹೊಲ ಬೆಳೆಯಲಿಲ್ಲವೇ? ಹಾಗಿದ್ದರೆ **ಹಾಗೇ ಆಗಲಿ** ಹೋಗು' ಎಂದುಬಿಟ್ಟರಂತೆ! ಮುಂದೆ ಮೂರು ನಾಲ್ಕು ವರ್ಷಗಳು ಸುತ್ತಮುತ್ತಣ ಹೊಲಗಳು ಚೆನ್ನಾಗಿ ಬೆಳೆಯುತ್ತಿದ್ದರೂ, ಆ ಹೊಲದಲ್ಲಿ ಮಾತ್ರ ಏನೂ ಬೆಳೆಯುತ್ತಿರಲಿಲ್ಲವಂತೆ! ಲಾವಣಿಯ ಮಾತಿರಲಿ! ರೈತ ನಿಗೆ ಉಣ್ಣುವುದಕ್ಕೆ ಜೋಳದ ಕಾಳಿಗೇ ಅಭಾವವಾಯಿತಂತೆ! ಊರೆಲ್ಲಾ ಬೆಳೆದು ಆ ಒಂದು ಹೊಲ ಬೆಳೆಯಲಿಲ್ಲವೆಂದು ಲಾವಣಿ ಕೊಡದಿರುವುದು ಸಾಧ್ಯವಾಗಲಿಲ್ಲವಂತೆ! ರೈತನು ಕಂಗೆಟ್ಟು ರಾಯರಿಗೆ ಶರಣಾಗತನಾಗಿ, ಒಳ್ಳೆ ಶಬ್ದ ನುಡಿಯಿರೆಂದು ಕೇಳಿಕೊಂಡ ನಂತೆ! ರಾಯರು ಆಗಲೂ-'**ಹಾಗೇ ಆಗಲಿ**' ಎಂದರಂತೆ! ರೈತನ ಕಷ್ಟ ಪರಿಹಾರ ವಾಗಿ ಅವನ ನಷ್ಟ ಮುಟ್ಟುವತನಕ ರಾಯರು ಆ ಹೊಲದ ಲಾವಣಿಯನ್ನು ಕೇಳಲಿಲ್ಲ ವಂತೆ!

ಪ್ರಸನ್ನ ರಾಯರು ಭಾಗವತದ ಭಾಷಾಂತರ ಮಾಡಿದರು. ಕೆಲವು ಬಿಡಿ ಪದ ಗಳನ್ನು ಬರೆದರು, ಎಂದಿಷ್ಟೇ ಹೇಳುವಂತಿಲ್ಲ. ಹಳ್ಳಿ ಜನರು ಹೇಳುವ ರಾಗದಲ್ಲಿ-'ಪರ ಸನ್ನ ವೆಂಕಟ, ಪರಸನ್ನ ಕೃಷ್ಣ' ಎಂಬ ಮುದ್ರಿಕೆ ಹಾಕಿ, ಸುವ್ವಾಲೆ ಜೋಗುಳಗಳನ್ನೂ ಬರೆದಿದ್ದಾರೆ. ಅವರಲ್ಲಿ ಹಳ್ಳಿಗರ ಜೀವನವನ್ನು ತಿಳಿಸಿದ್ದಾರೆ. ಮತ್ತೆ ತಮ್ಮ ಬಾಲ್ಯದ ಅನುಭವ, ಅತ್ತಿಗೆಯ ಅಧಿಕಾರ ದರ್ಪ, ತಾವು ತಿರುಪತಿಗೆ ಹೋದ ಕಥೆ, ಇವೆಲ್ಲವನ್ನೂ ಮನಮರುಗುವ ರೀತಿಯಲ್ಲಿ ಹಾಡಿದ್ದಾರೆ.

ಲೋಕದಲ್ಲಿ ಒಂದು ದೇಶ ಕಾಲದಲ್ಲಿದ್ದ ಯಾರ ದೊಡ್ಡಸ್ತಿಕೆಯನ್ನಾಗಲೀ ಯಾರ ಉಪಕಾರವನ್ನಾಗಲೀ ಮತ್ತೆ ಯಾವುದೋ ದೇಶ ಕಾಲಗಳಲ್ಲಿ ಅಳೆದರೆ ಅರ್ಥ ವಾಗುವುದಿಲ್ಲ; ಜನರಿಗೆ ಮಹತ್ವವೆನಿಸುವುದಿಲ್ಲ. ಪ್ರಸನ್ನ ರಾಯರಿದ್ದ ಕಾಲ, ಆ ಕಾಲ ದಲ್ಲಿದ್ದ ಪ್ರಯಾಣ ಸೌಕರ್ಯ, ಆ ಕಾಲದ ಪ್ರಭುತ್ವ, ಆ ಕಾಲದ ಜನರ ಭಾವನೆ, ಈ ದೃಷ್ಟಿಯಿಂದ ನೋಡಿದರೆ, ಪ್ರಸನ್ನ ರಾಯರೇ ಏಕೆ, ಎಲ್ಲ ಹರಿದಾಸರೂ ಈ ಕಾಲದ ಸಕಲ ಸೌಕರ್ಯಗಳ ಮಧ್ಯದಲ್ಲಿ ಯಾವ ಮಹಾಪುರುಷರೂ ಮಾಡದ ಮಹಾ ಕಾರ್ಯ ಗಳನ್ನೇ ಮಾಡಿ ತೋರಿಸಿದ್ದಾರೆ. ರಾಜಕಾರಣದಲ್ಲಿ ಪ್ರವೇಶಿಸಿ ಸ್ವಾರ್ಥ ತ್ಯಾಗ ಮಾಡಿ, ದೇಶಸೇವೆ ಮಾಡುವ ಜನರು ಬಹು ಸಂಖ್ಯೆಯಿಂದ ಒಂದೊಂದು ಶತಮಾನದಲ್ಲೂ ಬರ

ಬಹುದು. ಅದೇ ಧರ್ಮ ಸುಧಾರಣೆಮಾಡಿ, ಇಹ ಪರ ಸಾಧನೆ ಮಾಡಿಕೊಡುವ ಮಹಾಪುರುಷರು ಬರುವುದು ಬಲು ದುರ್ಲಭ. ತಮ್ಮ ಪೂರ್ತಿ–ಎಂದರೆ ತಮ್ಮ ಮಟ್ಟಿಗೆ ತಾವು ಉದ್ಧಾರವಾಗುವ ಜನರಿಗಿಂತ ತನ್ನೊಡನೆ ಜನ ಜಾತಿಯನ್ನೇ ಉದ್ಧರಿಸುವ ಜನರು ಬಲು ದೊಡ್ಡವರು. ರಾಜಕಾರಣ ಧರ್ಮಕಾರಣಗಳೆರಡರಲ್ಲೂ ಪ್ರವೇಶಿಸಿ ದೇಶೋದ್ಧಾರ ಮಾಡುವವರು ಒಂದು ಸಾವಿರ ವರ್ಷಕ್ಕೆ ಒಬ್ಬರೂ ಬರುತ್ತಿಲ್ಲ. ಅಂಥವರೆಂದರೆ ವಿದ್ಯಾರಣ್ಯರು, ವ್ಯಾಸರಾಯರು, ಸಮರ್ಥ ರಾಮದಾಸರು ಈ ಮೂವರ ನಂತರ ನಾಲ್ಕನೆಯವರಿನ್ನೂ ಬರಲಿಲ್ಲ.

ಪ್ರಸನ್ನ ರಾಯರು ಮಾತ್ರ ಆ ವಂಶದಲ್ಲಿ ಮಹಾಪುರುಷರಾದರು; ದೇವರನ್ನು ಕಂಡರು; ಎಂಬ ನ್ಯೂನತೆಯಾಗಲಿಲ್ಲ. ಅವರ ಅನುಗ್ರಹಬಲದಿಂದ ಅವರ ಸಂತತಿಯಲ್ಲಿ ಮೂರು ತಲೆಗಳ ತನಕ ಅವರಿಗೆ ಸಮಾನರೇ ಜನ್ಮತಾಳಿದರು. ಅವರಷ್ಟೇ ಗೌರವವನ್ನು ಪಡೆದರು. ರಾಯರ ಮೊಮ್ಮಕ್ಕಳು ಕಾಖಂಡಿಕಿ ಅಣ್ಣಯ್ಯಾಚಾರ್ಯರೆಂಬುವರು, ಐವತ್ತೇ ವರ್ಷಗಳ ಹಿಂದೆ, ಉತ್ತರ ಕರ್ಣಾಟಕದಲ್ಲೆಲ್ಲಾ ಮಹಾ ಪ್ರಖ್ಯಾತಿಯನ್ನು ಪಡೆದರು. ಅವರ ವಿಷಯದಲ್ಲಿ ಮಂಗಳವೇಡೆ ವಿಠಲರಾಯರೆಂಬ ಬ್ರಿಟಿಷ್ ಸರ್ಕಾರದ ಡೆಪ್ಯುಟಿ ಕಲೆಕ್ಟರು ಬಾಗೇವಾಡಿಯಲ್ಲಿದ್ದಾಗ ಬರೆದಿಟ್ಟ ಮಾತು ಆಶ್ಚರ್ಯಜನಕವಾಗಿದೆ. ಜಯತೀರ್ಥರೆಂಬ (ಟೀಕಾಚಾರ್ಯರು) ಮಹಾನುಭಾವರು ಜನ್ಮವೆತ್ತಿದ ಸ್ಥಳ ಮಂಗಳವೇಡೆ. ಮಂಗಳವೇಡೆಯು ಪಟವರ್ಧನ ಸಂಸ್ಥಾನಿಕರಿಗೆ ಸೇರಿದ ಒಂದು ತಾಲ್ಲೂಕಿರುವ ಊರು. ವಿಠಲರಾಯರಿಗೆ ಧರ್ಮದಲ್ಲಿ ಬಲು ಶ್ರದ್ಧೆ. ಕಮಿಶನರಾದರೂ ರಾಯರ ಸಮಯ ನೋಡಿ ಅವರೊಂದಿಗೆ ಮಾತನಾಡಬೇಕು–ಎಂಬಷ್ಟು ಗೌರವವಿಟ್ಟಿದ್ದರಂತೆ! ರಾಯರಿಗೆ ಸ್ವಪ್ನದಲ್ಲಿ ಯಾವ ಸಂಬಂಧವಿಲ್ಲದಿದ್ದರೂ, 'ನಿನ್ನ ಬಳಿಗೆ ದೂರ್ವಾಸರು ಬರುವರು; ಅವರನ್ನು ಸತ್ಕರಿಸು; ಅವರಿಂದ ಜ್ಞಾನ ಸಂಪಾದಿಸು' ಎಂಬ ಸೂಚನೆಯಾಯಿತಂತೆ! ರಾಯರು ಈ ಕಲಿಗಾಲದಲ್ಲಿ ದೂರ್ವಾಸರೆಂದರೇನು? ನನ್ನಂಥವನ ಮನೆಗೆ ಬರುವುದೆಂದರೇನು? ಯಾರಿಗೆ ಯಾವ ಸಂಬಂಧ? ಎಂದು ಅನುಮಾನಿಸಿದರಂತೆ! ಮಾರನೇ ರಾತ್ರಿ–ಮತ್ತೆ 'ಬಂದವರನ್ನೇ ದೂರ್ವಾಸರೆಂದು ತಿಳಿ, ಆದರಿಸು' ಎಂದು ಎಚ್ಚರ ಕೊಟ್ಟಂತಾಯಿತಂತೆ! ವಿಠಲರಾಯರು ಸ್ವಪ್ನ ಸೂಚನೆಯಂತೆ ಮನೆಯನ್ನು ಶೃಂಗರಿಸಿ, ಬೇಕಾದ ಪಕ್ವಾನ್ನಗಳನ್ನು ಮಾಡಿಸಿ, ಹಾದಿ ನೋಡುತ್ತ ಕುಳಿತರಂತೆ! ಅಪರಾಹ್ಣದಲ್ಲಿ ಮೇಲೆ ಹೇಳಿದ ಆಚಾರ್ಯರು ರಾಯರ ಮನೆಗೆ ಬಂದರಂತೆ! ರಾಯರು ಅವರ ಸತ್ಕಾರ ಮಾಡಿ, ಏಕಾಂತದಲ್ಲಿ ಸ್ವಪ್ನ ವಾರ್ತೆಯನ್ನು ತಿಳಿಸಿದರಂತೆ! ಆಚಾರ್ಯರು ನಮ್ಮ ಸ್ವರೂಪ ವ್ಯಕ್ತವಾಯಿತು; ಇನ್ನು ಹೆಚ್ಚು ಕಾಲ ಈ ದೇಹದಲ್ಲಿರುವದಿಲ್ಲವೆಂದು ಹೇಳಿದರಂತೆ! ರಾಯರಿಗೆ ಸ್ವಪ್ನ ತಿಳಿಸಿದ್ದು ಅನುಚಿತವಾಯಿತೆಂದು ಪರಿತಾಪವಾಯಿತಂತೆ! ಹೇಳಿದಂತೆ ನಡೆಯುವುದು ನಡೆದುಹೋಯಿತಂತೆ!

ವಿಶಾಲವಾದ ಈ ಪ್ರಪಂಚದಲ್ಲಿ ಬಹುಮಂದಿ ಪುಣ್ಯಜೀವಿಗಳು, ಎಲ್ಲೆಲ್ಲಿಯೂ ಜನ್ಮತಾಳಿ ಮಾನವ ಬುದ್ಧಿಗೆ ನಿಲುಕದ–ನಿಲುಕದ ಅನೇಕಾನೇಕ ಕಾರ್ಯಗಳನ್ನು ಮಾಡಿ

ತೋರಿಸಿ, ಜನತೆಗೆ ಸಾಮಾನ್ಯರಂತೆ ಕಾಣಿಸಿ, ಲೋಕವನ್ನು ಸಂದೇಹಗಳಿಗೇ ಗುರಿಮಾಡುವರು. ವಿಚಾರಪರರು ಅರ್ಥಮಾಡಿಕೊಳ್ಳುವರು. ಅವಿಚಾರಿಗಳು ಮದಿಸಿ ಮುಗ್ಧರಾಗಿ, ದುರ್ವಾದ ಮಾಡುವರು. ಇದು ಯಾವಾಗಲೂ ಪ್ರಪಂಚದ ಸ್ವಭಾವ.

ಪ್ರಸನ್ನ ವೆಂಕಟರಾಯರು, ತಮ್ಮ ಅಂತ್ಯಕಾಲದಲ್ಲಿ ಬಾದಾಮಿಯಲ್ಲಿದ್ದರೆಂದು ಗೊತ್ತಾಗುತ್ತದೆ. ಗುಡ್ಡದ ಕೆಳಗೆ ಕಲ್ಯಾಣಿಯೊಂದರ ಪಡದಲ್ಲಿರುವ ಕಟ್ಟೆಯನ್ನು ಪ್ರಸನ್ನರಾಯರ ಕಟ್ಟೆಯೆಂದು ಕರೆಯುತ್ತಾರೆ. ಆ ಕಟ್ಟೆಯಿರುವ ಜಾಗವು ಪ್ರಸನ್ನರು ನಿರ್ಯಾಣ ಮಾಡಿದ ಜಾಗವಂತೆ !

ಗಿರಿಯಮ್ಮನವರು

ಹೆಳವನಕಟ್ಟೆಯ ಗಿರಿಯಮ್ಮನವರ ಹೆಸರು ಉತ್ತರ ಕರ್ಣಾಟಕದ ಹರಿಭಕ್ತ ಪಂಥಿಗಳಿಗೆ ಮನೆಯ ಮಾತು. ಗಂಡಸರಿಗಿಂತ ಹೆಂಗಸರಿಗೆ ಗಿರಿಯಮ್ಮನು ಮನೆಯ ದೇವರು. ಸ್ತ್ರೀ ಜಾತಿಯಲ್ಲಿ ಜನಿಸಿದ ಕಾರಣದಿಂದಾಗಲೀ, ಆಕೆಯ ಹಾಡುಗಳನ್ನು ಹಾಡುವ ಗೌರವದಿಂದಾಗಲೀ, ಎರಡು ಶತಮಾನಗಳಾದರೂ ಗಿರಿಯಮ್ಮನ ಹೆಸರು ಮರೆತಿಲ್ಲ. ಗಂಡಸರ ಜಾತಿಗೆ ಪುರಂದರದಾಸರ ಪದಗಳಾದರೆ ಹೆಂಗಸರ ಜಾತಿಗೆ ಗಿರಿಯಮ್ಮನ ಪದಗಳಿವೆ ಎಂಬ ಅಭಿಮಾನವಳಿದಿಲ್ಲ. ಗಿರಿಯಮ್ಮನ ಚಂದ್ರಹಾಸ, ಕಾಲೀಯಮರ್ದನ ಕಥೆಗಳಿಂದ ಏಕಾದಶೀ ಜಾಗರಮಾಡುವ ಸ್ತ್ರೀಯರು ಧಾರವಾಡ ದೇಶದಲ್ಲಿ ಇನ್ನೂ ಕೆಲವರಿದ್ದಾರೆ. ಮೈಸೂರಿನಲ್ಲಾದರೂ ಇಪ್ಪತ್ತೈದು ವರ್ಷಗಳ ಹಿಂದೆ, ತುಲಾಸ್ನಾನ ಮಾಘಸ್ನಾನ ನಿಮಿತ್ತ ಹೋಗಿಬರುವ ಮೂರು ಹರಿವಾರಿಯುದ್ದಕ್ಕೂ ಸ್ತ್ರೀಯರ ಮಂಜುಳ ಧ್ವನಿಯಿಂದ ರಂಜಿತವಾದ ಗಿರಿಯಮ್ಮನ ಹಾಡುಗಳು ಕೇಳಿಬರುತ್ತಿದ್ದುವು. ರಾಣೀಬೆನ್ನೂರು, ಹರಿಹರ ಪ್ರಾಂತ್ಯಗಳಲ್ಲಿ ಗಿರಿಯಮ್ಮನನ್ನು ನೆನೆಸುವ ಜನರು ಬಹಳ. ಕಾರಣವೇನೆಂದರೆ ಗಿರಿಯಮ್ಮನ ಜನ್ಮಸ್ಥಳ ರಾಣೀಬೆನ್ನೂರು.

ಗಿರಿಯಮ್ಮನ ತಂದೆಯ ಹೆಸರು ಭಿಷ್ಟಪ್ಪ. ಆಕೆಯು ಲಗ್ನವಾದದ್ದು ಮಲೇಬೆನ್ನೂರು (ಹರಿಹರ ತಾಲ್ಲೂಕು) ಶ್ಯಾನುಭೋಗ ತಿಪ್ಪರಸನೊಡನೆ.

ಜನ್ಮಾಂತರ ಸಂಸ್ಕಾರಬಲದಿಂದ ಗಿರಿಯಮ್ಮನು ಬಾಲ್ಯಪ್ರಭೃತಿ ದೇವೋನ್ಮಾದಿಯಂತಿದ್ದಳು. ಲಗ್ನವಾಗುತ್ತಲೇ ಗಿರಿಯಮ್ಮನಿಗೆ ಗಂಡನ ಮನೆಯ ವಾಸವಾಯಿತು. ಜನರ ಜನ್ಮಾಂತರಗಳು, ಆಗುಹೋಗುಗಳನ್ನು ಹೇಳುವುದರಿಂದ ಆ ಬಾಲಕಿಯಲ್ಲಿ ಜನರಿಗೆ ಬಹಳ ಗೌರವವು ಹುಟ್ಟಿತು. ಬಂಧನಕ್ಕೆ ಮಾತ್ರವಲ್ಲದೆ ಗಿರಿಯಮ್ಮನ ವಿವಾಹವು ಸಂಸಾರಕ್ಕಾಗಲಿಲ್ಲ. ಶರೀರದಲ್ಲಿ ಶಂಖ ಚಕ್ರ ಚಿಹ್ನೆಗಳು ಬಹುವಾಗಿದ್ದುದನ್ನು ಕಂಡ ಸ್ತ್ರೀಯರು ಆಕೆಯನ್ನು ರಾಧಿಕೆಯೆಂದು ಭಾವಿಸಿದರು. ಆಕೆ ಎತ್ತಿಳಿಸಿದ ಮಕ್ಕಳು ಆಯುಷ್ಮಂತರಾಗುವರೆಂದು ಬಗೆದರು. ಉತ್ತರ ದೇಶದ ನಿರಾರಾಬಾಯಿ ಅಹಲ್ಯಾಬಾಯಿಯರ ಹೆಸರನ್ನು ಗಿರಿಯಮ್ಮನಿಗಿಟ್ಟು ಸಂತುಷ್ಟರಾದರು. ಅಳುವ ಮಕ್ಕಳು ಗಿರಿಯಮ್ಮನನ್ನು ಕಂಡು ಕಿಲಿಕಿಲಿ ನಗಬೇಕು; ಆಕೆಯ ಕರಸ್ಪರ್ಶವಾದರೆ ಜ್ವರ ಪರಿಹಾರವಾಗಬೇಕು; ಹೀಗೆಲ್ಲಾ ಆದರೆ ಆಕೆಯನ್ನು ದೇವತೆಯೆಂದು ಕರೆಯದವರ್‍ಯಾರು? ಗೌರವಿಸದವರ್‍ಯಾರು? ಕರೆದರೆ ತಪ್ಪೇನು?

ಕಣಿ ಕೇಳುವ ಜನರು ತಂದೊಪ್ಪಿಸುವ ಕಾಣಿಕೆಯಿಂದ ಸುಖಜೀವನವಾಗುತ್ತಿದ್ದುದರಿಂದ ಗಿರಿಯಮ್ಮನ ಮಾವನಿಗೆ ಸೊಸೆಯಲ್ಲಿ ಬಹು ಪ್ರೀತಿ. ಅತ್ತೆ [illegible] ಎತ್ತುವ

ಕೈಗೊಡು. ನಾದಗಿತ್ತಿಯರೊಡನೆ ಮನೆಯ ಕೆಲಸಗಳಿಗೆ ಕೈಹಾಕಿದರೆ ಮಾವನು ಮಾಡಗೊಡನು. ಅತ್ತೆಯು ಹೋಗಗೊಡಳು. ತಂದೆತಾಯಿಗಳು ಹೆಂಡತಿಯನ್ನು ಗೌರವಿಸುತ್ತಿದ್ದುದರಿಂದಲೂ, 'ಗಿರಿಯಮ್ಮನ ಗಂಡ ಈತ ತಿಪ್ಪರಸ' ಎಂದು ಜನರು ಮರ್ಯಾದೆ ಮಾಡುತ್ತಿದ್ದುದರಿಂದಲೂ ತಿಪ್ಪರಸನು ವಿವಾಹದಿಂದ ಸಂತುಷ್ಟನಾಗಿದ್ದನು.

ನಿಶೇಕ ಕಾಲ ಪ್ರಾಪ್ತವಾಗಲು ಪುರೋಹಿತರು ಪದ್ಧತಿಯಂತೆ ದಂಪತಿಗಳನ್ನು ಭದ್ರಪೀಠದಮೇಲೆ ಕೂಡಿಸಿ, ಹವನ ಹೋಮಗಳನ್ನು ಮಾಡಿಸಿದರು. ಶಯ್ಯಾಗೃಹದ ಶೃಂಗಾರಕ್ಕೆ ರಸಿಕ ನಾರಿಯರು ನಿಂತರು. ಆಗಬೇಕಾದುದೆಲ್ಲ ಆಯಿತು. ಸಂಜೆಯ ತನಕ ಒಂದೂ ಮಾತನಾಡದಿದ್ದ ಗಿರಿಯಮ್ಮನು–'ಅತ್ತೆಯವರೇ, ನೀವು ನನ್ನನ್ನು ನೋಡಿರುವಿರಷ್ಟೆ! ನನ್ನ ವಿಚಾರ ನಿಮಗೆ ತಿಳಿದಿರುವುದಷ್ಟೆ! ನಾನು ಲೋಕದ ನಾರಿಯಂತಲ್ಲವೆಂದು ನೀವೇ ಅರಿತ್ತಿರುವಿರಷ್ಟೆ! ಅಂದಮೇಲೆ ನೀವು ನನ್ನ ಮಾತನ್ನು ಲಾಲಿಸಬೇಕು. ನಾನು ನಿಮ್ಮ ಮನೆಗೆ ಸೊಸೆಯಾಗಿ ಬಂದವಳು ನಿಜ. ನನ್ನ ಜನ್ಮ ಸಂಸಾರಕ್ಕಾಗಿ ಅಲ್ಲ. ನಿಮ್ಮ ಮಕ್ಕಳಿಗೆ ಬೇರೆ ಲಗ್ನ ಮಾಡಿಸಬೇಕು; ಆ ಹೆಂಡತಿಯೊಡನೆ ಅವರು ಸುಖದಿಂದಿರಬೇಕು, ನಾನಿದ್ದಂತೆ ನಾನಿರಬೇಕು, ಇಷ್ಟು ಮಾತ್ರ ನಡೆಸಿಕೊಡಬೇಕು' ಎಂದು ನುಡಿದಳು.

ಸೊಸೆಯ ಮಾತು ಕೇಳಿ ಅತ್ತೆಯು ಉತ್ಸಾಹವಡಗಿತು. ಮಾವನು ಮುಗ್ಧನಾದನು. ಬಂದ ಹೆಂಗಳೆಯರು ಮನೆ ತುಂಬಾ ಗುಜುಗುಟ್ಟಿದರು. ಹುಡುಗಿಗೆ ಹೇಳುವವರು ಬುದ್ಧಿ ಹೇಳಿದರು. ತಿಪ್ಪರಸನ ಗೆಳೆಯರು–'ಹೆಂಡತಿಯನ್ನು ಪೂಜೆ ಮಾಡುವುದಕ್ಕೆ ಮಾಡಿಕೊಂಡೆಯೇನೋ? ನೀನು ಗಂಡಸಲ್ಲವೇನೋ?' ಎನ್ನುವ ತನಕ ಮುಂದುವರಿಸಲು ಸಾಹಸ ಮಾಡಿದರು. ಯಾರ ಮಾತೂ ನಡೆಯಲಿಲ್ಲ. ಯಾರಿಗೂ ಧೈರ್ಯ ಬರಲಿಲ್ಲ. ಎಲ್ಲರೂ–'ಇವಳ ಮಾತೇ ಬೇರೆ, ಇವಳ ವಿಚಾರವೇ ಬೇರೆ, ಆಗುವಂತೆ ಆಗಿದ್ದರೆ ಚೆನ್ನಾಗಿತ್ತು! ಮಾಡುವುದೇನು ದೈವೇಚ್ಛೆಗೆ?' ಎಂದು ಸುಮ್ಮನಾದರು. ತಿಪ್ಪರಸನು ಹೆಂಡತಿಯ ಎಲ್ಲಾ ವೃತ್ತಾಂತವನ್ನೂ ಚಿಂತಿಸಿ–'ಸರಿ, ಅವಳಾಡಿದ್ದು ಸರಿ, ಅವಳ ಇಷ್ಟದಂತೆ ನಡೆಯಬೇಕು. ಅವಳನ್ನು ಸಾಮಾನ್ಯ ಸ್ತ್ರೀಯೆಂದು ನಾನು ತಿಳಿದಿಲ್ಲ. ಅವಳ ಹೆಸರಿನಿಂದ ನನಗೆ ಗೌರವ, ನಮ್ಮ ಮನೆಗೆ ಗೌರವ, ನಮ್ಮ ವಂಶಕ್ಕೇ ಗೌರವ. ಮಾತನ್ನು ಬೆಳೆಸಬೇಕಾದುದಿಲ್ಲ' ಎಂದು ತಂದೆತಾಯಿಗಳನ್ನು ಸಮಾಧಾನಗೊಳಿಸಿದನು. ಇದರಿಂದ ತಿಪ್ಪರಸನ ಗೌರವ ಹೆಚ್ಚಿತು. ಗಿರಿಯಮ್ಮನು ದೇವತಾ ಸ್ತ್ರೀ ಎನಿಸಿದಳು. ಗಿರಿಯಮ್ಮನೆಂದು ಹೆಸರು ಹಿಡಿದು ಕರೆವ ಜನರೇ ಇಲ್ಲದಂತಾಯಿತು. 'ಅಮ್ಮನವರು–ಅಮ್ಮನವರು' ಎಂಬುದೇ ಗಿರಿಯಮ್ಮನ ಪೂಜ್ಯ ನಾಮವಾಯಿತು.

ಲೋಕದಲ್ಲಿ ಬಹು ಜನ್ಮಸಾಧನ ಮಾಡಿದ ಪಕ್ವ ಜೀವಿಗಳು ತಮ್ಮ ಸಂಚಿತ ಆಗಾಮಿ ಕರ್ಮಗಳನ್ನು ದಹಿಸಿ ಪ್ರಾರಬ್ಧ ಕರ್ಮಾನುಭವಕ್ಕೆ ಮಾತ್ರ ಎಲ್ಲೋ ಹೇಗೋ ಜನ್ಮ ತಾಳುವರು. ನೀಚ ಯೋನಿಗಳಲ್ಲಿ ಜನಿಸಿದರೂ ಅವರ ಬುದ್ಧಿಶಕ್ತಿ ಕಲುಷಿತವಾಗುವುದಿಲ್ಲ. ಹಿಂದಿನ ಜನ್ಮದಲ್ಲಿ ವಿದ್ಯಾಭ್ಯಾಸ ಮಾಡದಿದ್ದರೂ ಸಂಸ್ಕಾರ ಬಲದಿಂದ ಜ್ಞಾನಿಗಳಾಗಿ ಕಾಣಿಸಿಕೊಳ್ಳುವರು. ಅವರಿಗೆ ಸ್ವಾಭಾವಿಕವೆನ್ನಿಸುವ ಕಾರ್ಯಗಳು

ಅಪಕ್ವ ಮಾನವರಿಗೆ **ಅತಿಮಾನುಷ**ವೆಂಬಂತಾಗುವುವು. ಜನರ ನಿಂದೆ ವಂದನೆಗಳನ್ನು
ಅವರು ಗಣನೆಮಾಡುವುದಿಲ್ಲ. ಅವರ ದೃಷ್ಟಿಯಲ್ಲಿ ಲೋಕವ್ಯಾಪಾರಗಳು ಅತಿ ತುಚ್ಛ
ವಾಗಿ ಕಾಣುವುವು. ಜನರ ಆಗುಹೋಗುಗಳನ್ನು ಹೇಳುವುದು ಅವರ ದಯಾಳುತನ.
ಹೇಳದಿರುವುದು ಅವರ ಮಿತಸ್ವಭಾವದ ಲಕ್ಷಣ. ಮಿತಸ್ವಭಾವದ ಮಿತಿ ಮೀರಿದರೆ ಜನ
ರನ್ನು ನೋಡಿ ನಗುವರು, ಅಳುವರು, ಹುಚ್ಚರಂತೆ ತೋರಿಸಿಕೊಂಡುಬಿಡುವರು.

ಹೀಗೆ ಗಿರಿಯಮ್ಮನು–ದೊಡ್ಡಸ್ತಿಕೆ ಎಷ್ಟು ಬೆಳೆದರೂ ಮನೆಯಲ್ಲಿ ತಾನೇ ಅಡಿಗೆ
ಮಾಡುವಳು. ಹೆಳವನಕಟ್ಟೆಯಿಂದ ನೀರು ಹೊತ್ತು ತರುವಳು. ಹಿರಿಗಿತ್ತಿಯರ ಮಕ್ಕಳ
ನ್ನಾಡಿಸುವಳು.

ನಮ್ಮ ಈ ಕಥಾನಾಯಕಿಗೆ ಹೆಳವನಕಟ್ಟೆಯ ಗಿರಿಯಮ್ಮನೆಂದು ಹೆಸರಿರುವ
ಕಾರಣ, ಆ ಹೆಳವನಕಟ್ಟೆಯ ವಿಚಾರವನ್ನು ಸಂಕ್ಷೇಪವಾಗಿ ತಿಳಿಸಬೇಕಾಗುತ್ತದೆ. ಮಲೇ
ಬೆನ್ನೂರ ಸಮೀಪದಲ್ಲಿ ಹೆಳವನಕಟ್ಟೆಯೆಂಬ ಕೆರೆಯಿದೆ. ಕಟ್ಟೆಗೆ ಹೊಂದಿದಂತೆ ರಂಗನಾಥ
ಸ್ವಾಮಿಯ ದೇವಾಲಯವಿದೆ. ಸ್ಥಳವು ಪುರಾತನ ಕ್ಷೇತ್ರವೆನಿಸಿದೆ. ಜಲವು ಪಾವನತೀರ್ಥ
ವಾಗಿದೆ. ಪೂರ್ವಿಕರು ಭರತಖಂಡದ ಪ್ರತಿ ಕ್ಷೇತ್ರ ಪರ್ವತ ನದೀ ತಟಾಕ ವಾಪೀ ಕೂಪ
ಗಳಿಗೂ ಮಹತ್ವ ಕೊಟ್ಟು, ಅಲ್ಲಲ್ಲಿ ವಾಸಿಸುತ್ತಿದ್ದ ಭಕ್ತಜನರ ಶ್ರದ್ಧೆಯನ್ನು ರಕ್ಷಿಸಿದ್ದಾರೆ.
ಊರೂರಿಗೆ ಸ್ಥಳ ಪುರಾಣಗಳನ್ನು ಬರೆದಿದ್ದಾರೆ. ಅಷ್ಟಾದಶ ಪುರಾಣಕರ್ತರೆಂದು ವೇದ
ವ್ಯಾಸರ ಪ್ರಸಿದ್ಧಿಯಿರುವ ಕಾರಣ ಬರೆದವರಿಗೆಲ್ಲಾ ಎಡೆಗೊಡುವ ಸ್ಕಾಂದ ಭವಿಷ್ಯೋತ್ತರ
ಬ್ರಹ್ಮಾಂಡ ಪುರಾಣಗಳಲ್ಲಿ ತಮ್ಮದನ್ನೂ ಸಮಾವೇಶ ಮಾಡಿದ್ದಾರೆ. ಹಾಗೆ ಸೇರಿಸಿರುವ
ಪುರಾಣ ಭಾಗಗಳಲ್ಲಿ ಸುಂದರ ಕಥೆಗಳಿದ್ದು ನೀತಿಬೋಧಕವಾಗಿರುವುವುಗಳಿಂದ ಯಾವ
ಬಾಧಕವೂ ಆಗಿಲ್ಲ. ಈ ದೃಷ್ಟಿಯಿಂದ ರಾಜಭೃತ್ಯನ ಆಜ್ಞೆಯೂ ರಾಜಾಜ್ಞೆಯಾಗು
ವಂತೆ ಪುರಾಣಗಳು ವ್ಯಾಸಕೃತಗಳಾಗಿವೆ.

ಪ್ರಕೃತ, ಹೆಳವನಕಟ್ಟೆಯೆಂದರೆ **ಪಂಗುತೀರ್ಥ**ವೆಂಬ ಸಂಸ್ಕೃತದ ಮೂಲನಾಮ
ವಾಗುತ್ತದೆ. ದೇವಜಾತಿಯ ಅರುಣನಿಗೆ ತೊಡೆಗಳಿಲ್ಲದ ಕಾರಣ ಪಂಗುವೆಂಬ ಹೆಸರಾಗು
ತ್ತದೆ. ಆ ಪಂಗುವು ಒಂದಾನೊಂದು ಕಾಲದಲ್ಲಿ ತಪಸ್ಸುಮಾಡಿ ಪರಮಾತ್ಮನನ್ನು ಪ್ರತ್ಯಕ್ಷ
ಗೊಳಿಸಿಕೊಂಡ ಕಥೆ ಪುರಾಣದಲ್ಲಿದೆ. ಅದೇ ಕಥೆಯು ಪ್ರಾಯಶಃ ರೂಪಾಂತರವಾಗಿ
ಕೆಲವು ಶತಮಾನಗಳ ಹಿಂದಿದ್ದ ಒಬ್ಬ ಹೆಳವನ ಕಥೆಯಾಗಿ, ಕಟ್ಟೆಯು ಅವನು ಕಟ್ಟಿಸಿದು
ದಾಗಿ, ಶ್ರೀ ರಂಗನಾಥನು ಹುತ್ತದಲ್ಲಿ ಪ್ರಸನ್ನನಾಗಿ, ಅವನು ಕಟ್ಟಿಸಿದ ದೇವಾಲಯ
ವದಾಗಿ ಪ್ರಕಾಶವಾಗಿದೆ. ಐತಿಹಾಸಿಕ ಹೆಳವನು ಪುರಾಣದ ಅರುಣನಾಗಿದ್ದಾನೆ. ಅವನ
ವಿಸ್ತಾರವೆಂದರೆ :—

ಹೆಳವನಕಟ್ಟೆಯ ಬಳಿ ಕುಮಾರನ ಹಳ್ಳಿಯೆಂಬ ಗ್ರಾಮ, ಗ್ರಾಮದಲ್ಲೊಬ್ಬ
ಹೆಳವ. ಅವನು ಕಟ್ಟೆಯಿರುವ ಸ್ಥಳದಲ್ಲಿ (ಪ್ರಾಯಶಃ ಭಿಕ್ಷಕ್ಕಾಗಿ) ಕೂರುತ್ತಿದ್ದನು.
ಪಕ್ಕದಲ್ಲಿ ಗುಡ್ಡಗಳಿರುವ ಕಾರಣ–ಕಟ್ಟೆಯ ಒಳಭಾಗವು ತಗ್ಗು ನೆಲವಾಗಿದ್ದ ಕಾರಣ ಅಲ್ಲಿ
ಹಳ್ಳ ಕೊಳ್ಳಗಳಿದ್ದ ಕಾರಣ–ಕೊಳ್ಳಗಳು ಒಸತೆಗಳಾಗಿ ದನಗಳು ಮೇಯುವುದಕ್ಕೆ

ಉತ್ತಮ ಪ್ರದೇಶವಾಗಿತ್ತು. ಸುತ್ತೆಂಟು ಗ್ರಾಮಗಳ ದನಗಳು ಅಲ್ಲಿಗೆ ಮೇಯಲು ಬರುತ್ತಿದ್ದುವು. ದನಗಾವರು ಕೂತಬಳಿಯೇ ಕೂತಿರುತ್ತಿದ್ದ ಹೆಳವನಿಗೆ ದನಗಳನ್ನು ನೋಡಿಕೊಳ್ಳೆಂದು ಹೇಳಿ ತಮ್ಮ ಮಟ್ಟಿಗೆ ತಾವು ಆಟವಾಡುತ್ತಿದ್ದರು. ತಮ್ಮ ಮಾತನ್ನು ಕೇಳಿ ಹಾಗೆಯೇ ದನಗಳನ್ನು ನೋಡಿಕೊಳ್ಳುತ್ತಿದ್ದ ಕಾರಣ, ದನಗಾಯುವವರು ಬುತ್ತಿಯಲ್ಲಿ ಆ ಹೆಳವನಿಗೂ ಸ್ವಲ್ಪಭಾಗ ಕೊಡುತ್ತಿದ್ದರು. ಹೆಳವನ ಜೀವನ ಹೀಗೆ ನಿಶ್ಚಿಂತೆಯಿಂದ ಸಾಗುತ್ತಿತ್ತು. ಅವನು ಕೂತ ಬಳಿ ಮಳೆ ಗಾಳಿ ಬಿಸಿಲುಗಳಿಗೆ ಮರೆಯಾಗಿ ಒಂದು ಗುಡಿಸಲಾಯಿತು. ದನಗಾವರು ಕರೆದು ಕುಡಿದ ಹಾಲು ಹೆಳವನ ಸುಖಜೀವನವಾಯಿತು. ಹೆಳವನಿಗೆ ತಾನಿದ್ದಲ್ಲಿ ಒಂದು ಗೋಕಟ್ಟೆಯನ್ನು ಕಟ್ಟಬೇಕೆಂಬ ಇಚ್ಛೆಯಾಯಿತು. ಗೊಲ್ಲರ ನೆರವೂ ದೊರೆಯಿತು. ಊರವರು ಬಂದರು. ಸುತ್ತಮುತ್ತಣ ಗ್ರಾಮಸ್ಥರೂ ಬಂದರು. ಮಳೆಯಿಂದ ಕಲ್ಲುಮಣ್ಣುಗಳ ಕಟ್ಟೆಯು ಗಟ್ಟಿಯಾಗಿ ನೀರೂ ತುಂಬಿತು. ಗ್ರಾಮಸ್ಥ ಜನಗಳಿಗೆ ವಸತಿಯಾಯಿತು. ಕಟ್ಟೆಗೆ ಹೆಳವನಕಟ್ಟೆಯೆಂಬ ನಾಮಕರಣವಾಯಿತು.

ಹೆಳವನಕಟ್ಟೆಯ ಪಕ್ಕದಲ್ಲಿ ಒಂದು ಹುತ್ತವಿತ್ತು. ಕೆಚ್ಚಲು ಭಾರವಾದ ಆಕಳೊಂದು ಹುತ್ತದ ಪಕ್ಕಕ್ಕೆ ಹೊದ್ದಿದ್ದ ಕಲ್ಲಿಗೊತ್ತಿ ಹಾಲು ಕರೆಯುತ್ತಿತ್ತು. ಅಡವಿಯ ದನಗಳೂ ಎಮ್ಮೆಗಳೂ ಕೆಚ್ಚಲು ಭಾರವಾದಾಗ ಹೀಗೆ ಮಾಡುವುದುಂಟು. ಇದನ್ನು ನೋಡಿ ಹೆಳವನಿಗೆ ಆಶ್ಚರ್ಯವಾಯಿತು. ಹುತ್ತದಲ್ಲಿ ಏನೋ ಇರಬೇಕೆಂಬ ಭಾವನೆಯಾಯಿತು. ಭಾವನೆಗೆ ತಕ್ಕಂತೆ ಒಂದು ದಿನ ದೇವತಾ ಸ್ವಪ್ನವಾಯಿತು. ಹುತ್ತವನ್ನು ಬಗೆದರೆ ರಮಾಪತಿಬ್ರಹ್ಮರ ಮೂರ್ತಿಗಳು ದೊರೆತುವು. ಕಾಲಾಂತರದಲ್ಲಿ ಸಮೀಪದಲ್ಲೇ ಗುಡಿಯಾಯಿತು. ದೇವರಿಗೆ ವಕ್ಕಲು ನಾವೆಂದು ಜನರು ನಡೆದುಕೊಂಡರು. ಸ್ಥಳವು ರಂಗನಾಥ ಕ್ಷೇತ್ರವೆನ್ನಿಸಿತು.

ಲಾಲಿಸಿದರೆ ಮಕ್ಕಳು ; ಪೂಜಿಸಿದರೆ ದೇವರು !

ಹೆಳವನು ಕಟ್ಟಿಸಿದ ಕಟ್ಟೆಯೂ, ದೇವಾಲಯವೂ ಕಾಲಾಂತರದಲ್ಲಿ ಕಾರಣಾಂತರವಾಗಿ ರಂಗಭಕ್ತರಿಂದ ಜೀರ್ಣೋದ್ಧಾರವಾದುವು. ಈಗಿರುವ ವಿಸ್ತಾರ ಆಕಾರಗಳು ಮೈಸೂರರಸರಿಂದ ಆಗಿವೆ. ಹೆಳವನಕಟ್ಟೆ ಅಂದು ಬಲು ಚಿಕ್ಕದಾಗಿರಬೇಕು. ಈಗಿನ ಕಟ್ಟಿರುವ, ಬೆಟ್ಟಕ್ಕೆ ತಾಕುವ ಕಟ್ಟೆ ನೂರಾರು ವರ್ಷಗಳದ್ದಾಗಿರಬೇಕು.

ಗೋಪಾಲದಾಸರು ಬಂದದ್ದು

[illegible] ಮಹಾನುಭಾವರಾದ ಗೋಪಾಲದಾಸರು ಮಲೇಬೆನ್ನೂರಿಗೆ ಬಂದರು. ರಂಗನ ಯಾತ್ರೆಯು ಉದ್ದೇಶವಾಗಿದ್ದುದರಿಂದ ಯಾತ್ರಿಕರ ಗುಂಪು ದಾಸರನ್ನು ಹಿಂಬಾಲಿಸಿತ್ತು. ದಾಸರು ಬಂದಾಗ ಅಮ್ಮನು ಗುಡಿಯಲ್ಲಿ ರಂಗವಲ್ಲಿಯನ್ನು ಚಿತ್ರಿಸುತ್ತಿದ್ದಳು; ಯಾರೋ ದೊಡ್ಡವರ ಆಗಮನವಾಗುತ್ತದೆನ್ನುತ್ತಿದ್ದಳು. ದಾಸ

ಖ್ಯಾತಿ ಅಮ್ಮನಿಗೆ ತಿಳಿದಿತ್ತು. ದಾಸ ಸಹೋದರರನ್ನು ಕಂಡೊಡನೇ ಸರ್ವರಿಗೂ ನಮಸ್ಕಾರ ಮಾಡಿದಳು. ದಾಸರು–'ಅಮ್ಮಾ ಚಿತ್ರ ಚೆನ್ನಾಗಿದೆ. ಅದರಮೇಲೇ ಇವತ್ತು ನಮ್ಮ ಪೂಜೆ' ಎಂದರು. ಅಮ್ಮನು–'ಅದಕ್ಕೇ ಚಿತ್ರಿಸಿದೆ'ನೆಂದಳು. ಕೇಳಿದವರಿಗೆ ಮಾತು ವಿಚಿತ್ರವೆನ್ನಿಸಿತು. ದಾಸರ ಸ್ನಾನಾಹ್ನಿಕಗಳಾದುವು. ಅಮ್ಮನೇ ವಿವಿಧ ಪಕ್ವಾನ್ನಗಳನ್ನು ಮಾಡಿ ನೈವೇದ್ಯಕ್ಕಿಟ್ಟಳು. ದಾಸರಾಯರು ದ್ವಾದಶಸ್ತೋತ್ರ ಪಠನೆ ಮಾಡುವಾಗ ಸ್ತೋತ್ರದಲ್ಲಿ ವರ್ಣಿತವಾಗಿರುವಂತೆ ಭಗವದ್ದರ್ಶನವಾಗುವುದು ವಾಡಿಕೆಯಾಗಿತ್ತು. ವಾತಾವರಣ ದೋಷದಿಂದ ದರ್ಶನವಾಗದಿದ್ದರೆ ಸ್ತೋತ್ರದ ಮೂರನೇ ಅಧ್ಯಾಯದ 'ಕುರು ಭುಂಕ್ಷ್ವ ಚ ಕರ್ಮನಿಜಂ ನಿಯತಂ' ಎಂಬ ಶ್ಲೋಕವನ್ನಾರಂಭಿಸಿ, ಚಿತ್ತವನ್ನು ಕೇಂದ್ರೀಕರಿಸುತ್ತಿದ್ದರು. ಅನಂತರ ಪಠಿಸುವ ಸ್ತೋತ್ರವು, ಅದೇ ಮೊದಲಿನ ಎರಡು ಅಧ್ಯಾಯಗಳಿಂದ ಕ್ರಮವಾಗಿ ಪೂರ್ತಿಯಾಗುತ್ತಿತ್ತು. ಶ್ರೀಮದಾಚಾರ್ಯರಿಂದ ರಚಿತವಾದ ದ್ವಾದಶಸ್ತೋತ್ರದ ಎರಡು ಅಧ್ಯಾಯಗಳನ್ನಾದರೂ ಪಠಿಸದೆ, ಮಧ್ವಮತಸ್ಥರು ಮಹಾನೈವೇದ್ಯ ಮಾಡುವುದಿಲ್ಲ. ಈ ವಿಚಾರದಲ್ಲಿ ಭಕ್ತಿಜನಕವಾದ ಐತಿಹ್ಯವೊಂದಿರುವುದು. ಅದೇನೆಂದರೆ—

ಶ್ರೀಮದಾಚಾರ್ಯರವರು ಶಿಷ್ಯರಿಗೆ ಪಾಠ ಹೇಳುವಾಗ ತಮ್ಮ ಗ್ರಂಥಗಳನ್ನು ಹೊರುತ್ತಿದ್ದ ಎತ್ತಿನ ಮುಖ ನೋಡುತ್ತಿದ್ದರಂತೆ! ಶಿಷ್ಯರು ನಮ್ಮನ್ನು ನೋಡದೆ ಎತ್ತಿನ ಮುಖ ನೋಡಲು ಕಾರಣವೇನೆಂದು ಕೇಳಿದರಂತೆ! ಮುಂದೆ ಈ ಎತ್ತು ನಮ್ಮ ಗ್ರಂಥಗಳಿಗೆ ವ್ಯಾಖ್ಯಾನ ಬರೆಯುವುದು ಎಂದು ಆಚಾರ್ಯರು ನುಡಿದರಂತೆ! ಸಂಚಾರ ಕಾಲದಲ್ಲಿ ಎತ್ತಿಗೆ ವಿಷಪ್ರಯೋಗವಾಗಿ ಅಸ್ತಾವಸ್ಥೆಗಿಟ್ಟಿತಂತೆ! ಆಚಾರ್ಯರು ದ್ವಾದಶ ಸ್ತೋತ್ರದ ಎರಡು ಅಧ್ಯಾಯಗಳನ್ನು ಪಠಿಸಿ ಎತ್ತನ್ನು ಬದುಕಿಸಿದರಂತೆ! ಈ ಕಾರಣದಿಂದ ನೈವೇದ್ಯಸಮರ್ಪಣಾಸಂದರ್ಭದಲ್ಲಿ ದ್ವಾದಶಸ್ತೋತ್ರದ ಮೊದಲ ಎರಡು ಅಧ್ಯಾಯಗಳನ್ನು ಪಠಿಸುವ ಆಚರಣೆಯಿದೆ. ಅಧ್ಯಾಯದ ಶ್ಲೋಕಗಳಲ್ಲಿ ಎತ್ತಿನ ಸಂಬಂಧವಾದ ಪ್ರಾರ್ಥನೆಯಿಲ್ಲ. ನೈವೇದ್ಯ ಸಮಯದಲ್ಲಿ ವಿಷಪ್ರಯೋಗದ ಸುದ್ದಿ ಬಂದ ಕಾರಣ–ಆಚಾರ್ಯರು ಮತ್ತದೇ ಅಧ್ಯಾಯಗಳನ್ನು ಪಠಿಸಿ ಕಮಂಡಲೋದಕವನ್ನು ಪ್ರೋಕ್ಷಿಸಿದ ಕಾರಣ, ಸ್ತೋತ್ರಕ್ಕೆ ಮಹತ್ವವುಂಟಾಗಿದೆ.

ಗಿರಿಯಮ್ಮನ ಸುಕೃತ ವಿಶೇಷದಿಂದ 'ವಂದೇವಂದ್ಯಂ' ಎಂದು ಶ್ರೀ ದ್ವಾದಶ ಸ್ತೋತ್ರವನ್ನು ಪ್ರಾರಂಭಿಸುವಾಗಲೇ ದಾಸರಿಗೆ ಅಮ್ಮನು ರಚಿಸಿದ್ದ ಗೋಪಾಲಕೃಷ್ಣನ ದಿವ್ಯರೂಪ ದರ್ಶನವಾಯಿತು, ದಾಸರು ಅಮ್ಮನಕಡೆ ನೋಡಿದರು. ಅಮ್ಮನು ದೇವರ ಕಡೆ ನೋಡಿದಳು. ಗೋಪಾಲದಾಸರಾಯರ ಅನುಗ್ರಹದಿಂದ ಗೋಪಾಲಕೃಷ್ಣನ ರೂಪ ದರ್ಶನವಾಯಿತೆಂದಳು. ಆ ಆನಂದ ಭರದಲ್ಲಿ ಉಭಯರಿಗೂ ಬಹಳ ಹೊತ್ತು ಕಳೆಯಿತು. ತಮಗೆ ದರ್ಶನವಿತ್ತ ಆನಂದಮೂರ್ತಿಯನ್ನು ಚಿತ್ರಿಸಿ ದಾಸರು ಅಮ್ಮನಿಗೆ ಪ್ರಸಾದವೆಂದು ಅನುಗ್ರಹಿಸಿದರು. ಅಂದಿನಿಂದ–ಆ ಮೂರ್ತಿಯಿಂದ ಗಿರಿಯಮ್ಮನಿಗೆ ಭಗವಂತನ ವಿವಿಧ ಲೀಲಾ ವಿಭೂತಿಗಳ ದರ್ಶನಕ್ಕೆ ಪ್ರಾರಂಭವಾಯಿತು. ಪೂರ್ವಪುಣ್ಯ ಬೇಕು–ಇದಕ್ಕೆ!

ಪೂಜೆಮಾಡಬೇಕು–ಹೀಗೆ! ಸಾಕ್ಷಾತ್ಕಾರಮಾಡಿಕೊಳ್ಳದ ಪೂಜೆ ನಿಜವಾದ ಪೂಜೆಯಲ್ಲ. ಅದು ಬಿಟ್ಟರೆ ಗತಿಯಿಲ್ಲ. ಮೂರ್ತಿಪೂಜೆಯನ್ನು ಖಂಡಿಸುವುದರ ಅರ್ಥ ಇಲ್ಲಿದೆ. ಪೂಜೆಗೆ ಭಕ್ತಿಯಿರಬೇಕು. ಭಕ್ತಿಯು ಪೂಜಕನ ಆತ್ಮಶಕ್ತಿಯಾಗಬೇಕು. ಶಕ್ತಿಯಿಂದ ವ್ಯಕ್ತಿದರ್ಶನವಾಗಬೇಕು. ಹೀಗೆ ಸಾಕ್ಷಾತ್ಕಾರಮಾಡಿಕೊಂಡ ಭಕ್ತರು ಅನೇಕರಾದರು. ಸಾಕ್ಷಾತ್ಕಾರ ಮಾಡಿಕೊಳ್ಳದ ಪೂಜೆಯನ್ನವರೇ ಖಂಡಿಸಿದರು. ಜಗನ್ನಾಥದಾಸರು–'ಲೋಹ ಕಲ್ಲ ಪ್ರತಿಮೆ ಪೂಜಿಸಲು ಅಲ್ಲೇನಿಲ್ಲ' ಎಂಬುದಾಗಿಯೂ, ಪ್ರಾಣೇಶದಾಸರು "ಶಿಲಾದಿ ವಿಗ್ರಹಘಳಾಸೆ ಹರಿಮೆಂಬಿಲಾ–ಕೇವಲ ಸುಳ್ಳೋ" ಎಂಬುದಾಗಿಯೂ ಆಡಿದ ಮಾತನ್ನು ಈ ಕ್ರಮದಲ್ಲಿ ಅರ್ಥಮಾಡಬೇಕು. ಜೀವೇಶ್ವರೈಕ್ಯವನ್ನು ಪ್ರತಿಪಾದಿಸಿದ ಶಂಕರಾಚಾರ್ಯರೂ ಮೂರ್ತಿಪೂಜೆಯನ್ನು ಬಿಡಲಿಲ್ಲ. ರಾಮಾನುಜ ಮಧ್ವಾಚಾರ್ಯರುಗಳು ತಮ್ಮ ಜೀವಿತದ ಸರ್ವಸ್ವವೆಂದು ಮೂರ್ತಿಪೂಜೆಮಾಡಿದರು. ಮೂರ್ತಿಯಿಲ್ಲದೆ ಧ್ಯಾನವಿಲ್ಲ. ಮೂರ್ತಿಯಿಲ್ಲದೆ ಆವಾಹನವಿಲ್ಲ. ಮೂರ್ತಿಯಿಲ್ಲದೆ ಉಪಚಾರಗಳಿಲ್ಲ. ಯೋಗಿಯ ಧ್ಯಾನದಲ್ಲಿ ನಿಲ್ಲುವುದು ಮೂರ್ತಿ. ಕರ್ಮಠರು ಅಗ್ನಿಯಲ್ಲಿ–'ಚತ್ವಾರಿಶೃಂಗಾ ತ್ರಯೋಸ್ಯಪಾದಾಃ ದ್ವೇಶೀರ್ಷೇ" ಇತ್ಯಾದಿ ಭಾವಿಸುವುದು ಮೂರ್ತಿ. ಅಪ್ರಬುದ್ಧರು ಎದುರಿಗಿಟ್ಟುಕೊಳ್ಳುವುದೂ ಮೂರ್ತಿ. ಮೂರ್ತಿಗೆ ಉಪಾಸಕನು ಕೊಟ್ಟದ್ದೇ ರೂಪ. ಅದು ಸೌಮ್ಯವಾಗಬಹುದು; ಉಗ್ರವಾಗಬಹುದು. ಸುರೂಪವಾಗಬಹುದು. ಸ್ತ್ರೀಯಾಗಬಹುದು; ಪುರುಷನಾಗಬಹುದು.

ಗಿರಿಯಮ್ಮನು ಉಷಃಕಾಲದಲ್ಲಿ ಎಲ್ಲರೂ ಏಳುವುದಕ್ಕೆ ಮೊದಲು ಎದ್ದು–ಶುದ್ಧಳಾಗಿ ಗೋಪಾಲದಾಸರು ಕೊಟ್ಟ ಪ್ರತೀಕದ ಪೂಜೆಮಾಡುವಳು. ಮೊಸರು ಕಡೆಯುತ್ತಾ ಮಂಜುಳಸ್ವರದಿಂದ ಗಾನಮಾಡುವಳು–'ಕೃಷ್ಣಾ, ಇಗೋ ಮಿಸಲು ಬೆಣ್ಣೆ, ಕೆನೆಮೊಸರು; ತಿನ್ನು ಬಾ' ಎನ್ನುವಳು, ನಗುವಳು. ತಿನ್ನದಿದ್ದರೆ ಹೊಡೆಯುವೆನೆಂದು ಸಿಟ್ಟುಮಾಡುವಳು. ಮತ್ತೆ ಗಹಗಹಿಸಿ ನಗುವಳು. ಶ್ರೀ ಹರಿಯು ಭಕ್ತಳ ಭಕ್ತಿಗೆ ಮೆಚ್ಚಿ ಶ್ರೀಕೃಷ್ಣಲೀಲೆಯ ಒಂದೊಂದಾಟಗಳನ್ನೂ ಆಡಿ ತೋರಿಸುವನು. ಕೃಷ್ಣನಾಗುವನು. ಗೊಲ್ಲನಾಗುವನು. ರಾಧೆಯಾಗುವನು. ಜೇಡಿಮಂತೆ ಆಡುವನು. ಅಮ್ಮನು ಅವನು ಆಡಿದಂತೆ ಹಾಡುವಳು.

ಗಿರಿಯಮ್ಮನ ಮೇಲಣ ತಿಪ್ಪರಸನ ಭಕ್ತಿ ದಿನ ದಿನಕ್ಕೆ ಅತಿಶಯವಾಯಿತು. ಆಕೆಯೆದುರಿಗೆ ಓಡಾಡುವುದಕ್ಕೇ ನಾಚುವನು. ಬಡಿಸಲು ಬಂದಾಗ ಹತ್ತಕ್ಕೆ ಒಂದು ಮಾತಾಡುವನು. ಆಕೆಯ ಕರಸ್ಪರ್ಶವಾದ ಪದಾರ್ಥಗಳನ್ನು ಮಹಾಪ್ರಸಾದವೆಂದು ಭುಜಿಸುವನು. ಆಕೆಯು ರಂಗವಲ್ಲಿಯಿಡುತ್ತಾ ತನ್ನದೇ ಮುದ್ರಿಕೆಯಿಂದ ರಚಿಸಿ ಹಾಡುವ ದೇವರ ನಾಮಗಳನ್ನು ಕೇಳಿ ಆನಂದ ಬಾಷ್ಪ ಸುರಿಸುವನು. ಲೋಕದಲ್ಲಿ ಪತಿಭಕ್ತಿ ಮಾಡುವ ಸತಿಯರ ಚರಿತ್ರೆಗಳು ಹೇರಳವಾಗಿದ್ದರೆ, ಸತಿಭಕ್ತಿಮಾಡುವ ಪತಿಯ ಉದಾಹರಣೆ ತಿಪ್ಪರಸನದಾಯಿತು.

ಗಂಡನ ವೈರಾಗ್ಯಭಾವ ನೋಡಿ ಗಿರಿಯಮ್ಮನು ಹೆದರಿದಳು. ಪ್ರತ್ಯೇಕ

ಲಗ್ನಮಾಡಿ ಗಂಡನ ಮನಸ್ಸಂತೋಷಪಡಿಸಬೇಕೆಂದು ಹವಣಿಸಿದಳು. ಸಂಗತಿಯನ್ನು ಅತ್ತೆಮಾವಂದಿರಿಗೆ ತಿಳಿಸಿದಳು. ಗಂಡನ ಪಾದಗಳಿಗೆರಗಿ ನಿಮಗೆ ಲಗ್ನಮಾಡುವೆನೆಂದಳು.

ಗಂಡನ ಮದುವೆ

ಈ ಕಾಲದ ವೇಳೆಗೆ ಗಿರಿಯಮ್ಮನ ಭಕ್ತಕೋಟಿಯು ಶತಾಧಿಕವಾಯಿತು. ರಂಗನಾಥನ ಸೇವೆಗೆ ಬರುವ ಜನರು ತಾವು ತಂದದ್ದನ್ನು ಅಮ್ಮನಿಗೆ ಕೊಟ್ಟರಾಯಿತೆಂದು ಒಪ್ಪಿಸಿಬಿಡುವರು. ಅಮ್ಮನು ಹೇಳಿದ ಕೆಲಸಗಳನ್ನು ಬಲು ಭಕ್ತಿಯಿಂದ ಮಾಡುವರು. ಆದರೆ–ಲೋಕವೇ ಗೌರವಿಸುತ್ತಿದ್ದ ಗಿರಿಯಮ್ಮನನ್ನು ನಿಂದಿಸಲು ನಾದಗಿತ್ತಿಯರು ಹಿಂದೆಗೆಯುತ್ತಿರಲಿಲ್ಲ.–"ಅತ್ತೆ ಮುಗ್ಧೆ, ಮಾವ ಮುದುಕ, ಗಂಡ ಷಂಢ; ಹೇಳುವುದೇನು ಸಂಸಾರ? ಹೆಂಗಸಿಗೆ ಹಾಡೇಕೆ? ಕವಿತೆಯೇಕೆ? ದೇವರು ಪ್ರತ್ಯಕ್ಷನಾಗಲು ಇವಳೇನು ಸುಧಾಪಾರೀಕಳೇ? ಇವಳ ಕಣೀ ಕೇಳಿ ಜನರು ಕಾಳುಕಡ್ಡಿ ತಂದುಕೊಟ್ಟರೆ–ತಿಂದು ಹೋಗುವರೇ ಬಹಳ! ಮನೆಗೆ ಬಂದ ಆದಾಯವೇನು?" ಹೀಗೆಲ್ಲಾ ಆಡುವುದು ಬಲವಾಯಿತು. ಇದನ್ನೆಲ್ಲಾ ಅರಿತೂ ಅರಿಯದವಳಂತೆ ಅಮ್ಮನು ತನ್ನ ನಾದಗಿತ್ತಿಯರನ್ನು ಎಂದಿನಂತೆ ಉಪಚರಿಸುವಳು. ಅವರ ಮಕ್ಕಳನ್ನು ಆಡಿಸುವಳು, ಏನು ಮಾಡಿದರೇನು? ಅಮ್ಮನ ಸೇವೆ ಅಪರಾಧವಾಯಿತು. ಹೆಂಡತಿ ಗಂಡನ ಮದುವೆಮಾಡುವುದು ಬೂಟಾಟಿಕೆ ಯೆನಿಸಿತು. ಮದುವೆಯಾದರೆ–ಆ ಖರ್ಚು ಮನೆಯಮೇಲೆ ಬಿದ್ದರೆ–ತೀರಿಸುವರ್‍ಯಾರೆಂಬ ಬಿಡಿನುಡಿ ಬಲವಾಯಿತು. ಇಂಗಿತಜ್ಞಳಾದ ಅಮ್ಮನು ದಾಯಾದರಿಗೆ ಅನಾಯಾಸವಾಗುವಂತೆ ಲಗ್ನದ ಸಿದ್ಧತೆಮಾಡಿದಳು. ಯೋಗ್ಯ ಕನ್ನಿಕೆಯನ್ನು ನಿಶ್ಚಯಿಸಿ ಲಗ್ನಕ್ಕೆ ಬರಬೇಕೆಂದು ಭಕ್ತ ಜನರಿಗೆ ಕರೆಯೋಲೆ ಬರೆದಳು. ಇಷ್ಟು ಮಾತ್ರಕ್ಕೇ ಭಕ್ತಜನರು ಬೇಕಾದ ಉಪಾಯನ ಗಳನ್ನು ಕಳುಹಿಸಿ, ತಕ್ಕ ವಸ್ತ್ರ ಪಾತ್ರಗಳೊಡನೆ ವಿವಾಹಕಾಲಕ್ಕೆ ಬಂದರು. ತನ್ನ ವಿವಾಹಕಾಲದಲ್ಲಿ ಕೊಟ್ಟಿದ್ದ ಆಭರಣಗಳನ್ನು ಅಮ್ಮನು ತಂಗಿಗೆ ಬಳುವಳಿ ಮಾಡಿದಳು. ತನ್ನನ್ನು ಮರ್ಯಾದೆಯಿಂದ ರಕ್ಷಣೆಮಾಡಿದ ಕೃತಜ್ಞತೆಗೆ ಉಡುಗೊರೆಯಿತ್ತು ಪತಿಯ ಪಾದಗಳಿಗೆ ನಮಸ್ಕಾರಮಾಡಿದಳು. ನಾದಗಿತ್ತಿಯರು ತಮಗೆ ದೊರೆತ ವಸ್ತ್ರ ಉಡುಗೊರೆ ಗಳಿಂದ ತತ್ಕಾಲದಲ್ಲಿ ಪ್ರಸನ್ನರಾದರು.

ತಿರಸ್ಕಾರ

ಅಮ್ಮನಲ್ಲಿ ಭಕ್ತಿಮಾಡುವ ಸ್ತ್ರೀ ಪುರುಷರ ತಂಡವನ್ನು ನೋಡಿ ಅಸೂಯೆ ಪಡುವ ಶಿಷ್ಟರ ಗುಂಪು ಒಳಗೇ ಬೆಳೆಯಿತು. ಅಮ್ಮನ ನಾದಗಿತ್ತಿಯರು ಶಿಷ್ಟರ ಪಕ್ಷ ವಹಿಸಿದರು. ತಿಪ್ಪರಸನ ಮನೆಗೆ ಬರುವವರಲ್ಲಿ ಕೆಲವರು ಸ್ತ್ರೀಲಂಪಟ ರೆನಿಸಿಕೊಂಡರು. ಮತ್ತೆ ಕೆಲವರು ಅಪುತ್ರವತಿಯರು ಅಡಿಗೆಯನ್ನು ಮುಟ್ಟಬಾರದೆಂದರು. ಇನ್ನೂ ಕೆಲವರು–'ನ ಸ್ತ್ರೀಸ್ವಾತಂತ್ರ್ಯಮರ್ಹತಿ' ವಚನಬಲದಿಂದ ಅಮ್ಮನ ವರ್ತನೆ ಧರ್ಮ ವಿರುದ್ಧವೆಂದರು. ಈ ಕಾರಣಗಳಿಂದ ಅಮ್ಮನಿಗೆ ಅಡಿಗೆಯ ಅಧಿಕಾರ ತಪ್ಪಿತು.–'ಇಲ್ಲಿ ಬರಬೇಡ.–ಅದು ಮುಟ್ಟಬೇಡ' ಎಂಬ ನುಡಿಮಾತುಗಳು ಬಲವಾದವು.

ಆದರೆ, ಅಭಿಜ್ಞರು ಯಾವ ಗೊಡವೆಗೂ ಹೋಗದೆ ಅಮ್ಮನ ಅಡಿಗೆಯನ್ನು ಮಹಾಪ್ರಸಾದವೆಂದು ಸ್ವೀಕರಿಸುತ್ತಿದ್ದರು.

ಅದೇ ಸಮಯದಲ್ಲಿ ಶ್ರೀ ಸುಮತೀಂದ್ರ ಸ್ವಾಮಿಗಳು (ಶ್ರೀ ರಾಘವೇಂದ್ರಮಠ ಪೀಠಿಗೆಯವರು) ಸಂಚಾರಕ್ರಮದಿಂದ ಮಲೇಬೆನ್ನೂರಿಗೆ ಬಂದು ರಂಗನಾಥ ದೇವಾಲಯ ದಲ್ಲಿಳಿದರು. ಗಿರಿಯಮ್ಮನ ವಿರೋಧಿಗಳು ಆಕೆಗೆ ಅಪಮಾನಮಾಡಿಸುವುದಕ್ಕೆ ಇದೇ ಸಮಯವೆಂದು ಮಠದ ಅಧಿಕಾರಿಗಳಿಗೆ ಇಲ್ಲದ ಸಲ್ಲದ ಸುದ್ದಿಗಳನ್ನೆಲ್ಲ ಹೇಳಿದರು. ಇಂತಹ ದೂರು ಬಂದರೇ ಸಾಕೆಂಬ ಅಧಿಕಾರಿಗಳು :—

೧. ಸ್ತ್ರೀಯಾದವಳು ವಿವಾಹಾರಭ್ಯ ಗಂಡನೊಡನೆ ಸಂಸಾರಮಾಡಿಕೊಂಡಿದ್ದು, ಸಂತಾನ ಪಡೆದು ಪಿತೃಗಳಿಗೆ ಸದ್ಗತಿಯನ್ನುಂಟುಮಾಡುವುದನ್ನು ಬಿಟ್ಟು, ವಿರಾಗಿಯಂ ತಿರುವುದು ಒಂದಪರಾಧ.

೨. ಕುಲಸ್ತ್ರೀಯರು ತಾಳಹಾಕಿಕೊಂಡು ಹಾಡುವುದೂ-ನರ್ತನಮಾಡು ವುದೂ ಒಂದಪರಾಧ.

೩. ಸ್ತ್ರೀಯರಿಗೆ ಧರ್ಮೋಪದೇಶಮಾಡುವ ಅಧಿಕಾರವಿರದಿದ್ದರೂ ಜನರ ಗುಂಪು ಸೇರಿಸಿ ಉಪದೇಶಕೊಡುವುದು ಒಂದಪರಾಧ.

'ಈ ಮೂರು ಅಪರಾಧಗಳನ್ನೂ ಗಿರಿಯಮ್ಮನು ಮಾಡಿರುವಕಾರಣ ಆಕೆಗೆ ಸ್ವಾಮಿಗಳಿಂದ ಮುದ್ರಾಧಾರಣೆಯಾಗುವುದಿಲ್ಲ. ತೀರ್ಥ ದೊರೆಯುವುದಿಲ್ಲ' ಎಂದು ತೀರ್ಮಾನಿಸಿದರು. ತಿಪ್ಪರಸನಿಗೆ ಮಠದ ಅಧಿಕಾರಿಗಳ ತೀರ್ಮಾನ ತಿಳಿದು ವಿಷಾದ ವಾಯಿತು. ಈ ಗೊಂದಲದಲ್ಲಿ ಏನಿಲ್ಲದಿದ್ದರೂ ಭಕ್ತಳಾದ ಗಿರಿಯಮ್ಮನಿಗೆ, ದೇವರ ದರ್ಶನ ದೊರೆತರೆ ಸಾಕೆಂಬ ಸ್ಥಿತಿಯಾಯಿತು . ಅಧಿಕಾರಿಗಳು ದೂರದಿಂದ ದರ್ಶನಮಾಡ ಬಹುದೆಂಬಷ್ಟು ಕೃಪೆಮಾಡಿದರು. ನಾರಗಿತ್ತಿಯರು ಮಕ್ಕಳಿಲ್ಲದವರಿಗೆ ಮುದ್ರಾಧಾರಣೆ ಯಿಲ್ಲವಂತೆ ಎಂದು ಮನೆತುಂಬಾ ಕೋಲಾಹಲವೆಬ್ಬಿಸಿದರು. ಅಮ್ಮನು ಎಲ್ಲವನ್ನೂ ಕೇಳಿ-ಏನೂ ಉದ್ವೇಗಗೊಳ್ಳದೆ-ದೂರದಲ್ಲಿ ಮೂಲರಾಮನ ದರ್ಶನಮಾಡುತ್ತಾ ನಿಂತಳು. ಸ್ವಾಮಿಗಳಿಗೆ ಅಧಿಕಾರಿಗಳ ಅಧಿಕಪ್ರಸಂಗ ಗೊತ್ತಾಗಿರಲಿಲ್ಲ. ಕುಹಕಿಗಳ ತಂತ್ರ ತಿಳಿದಿರ ಲಿಲ್ಲ. ಪೂಜೆ ಮಂಗಳಾರತಿಗಳಾದುವು. ತೀರ್ಥಕಾಲದಲ್ಲಿ ಸ್ವಾಮಿಗಳು-**"ಇವತ್ತು ಮಹಾತ್ಮಳಾದ ಗಿರಿಯಮ್ಮನ ಭಿಕ್ಷವೆಂದು ಕೇಳುತ್ತೇವೆ. ಆ ಪುಣ್ಯಾತ್ಮಳೆಲ್ಲಿ? ತೀರ್ಥಕ್ಕೆ ಬರಲಿ"** ಎಂದರು. ಸಮೀಪದಲ್ಲಿದ್ದ ಮಠಾಧಿಕಾರಿಗೆ ಸ್ವಾಮಿಗಳು ಈ ಪ್ರಶ್ನೆ ಮಾಡುವರೆಂಬ ನಿರೀಕ್ಷಣೆಯಿರಲಿಲ್ಲ. ಅವನು ನಿರುಪಾಯನಾಗಿ-'ಆಕೆ ಅಪುತ್ರವತಿ, ಅಲ್ಲದೆ ಇನ್ನೂ ಕೆಲವು ದೋಷಗಳಿರುವಂತೆ ತಿಳಿದುಬರುತ್ತದೆ. ಭಿಕ್ಷಾಸ್ವೀಕಾರಾನಂತರ ವಿಚಾರಮಾಡಬೇಕಾಗುತ್ತದೆ. ನೀಳೆಯಾಗಿರುವುದರಿಂದ ಮಿಕ್ಕವರಿಗೆ ತೀರ್ಥವಾಗಬ ಹುದು' ಎಂದನು-"ಎಂಥವರಿಗೆ ಯಾವ ದೋಷ? ಆಕೆ ತೀರ್ಥಕ್ಕೆ ಬರಲಿ" ಎಂದು ಗುರ್ವಾಜ್ಞೆಯಾಯಿತು. ಅಧಿಕಾರಿಯು ನಿರುತ್ತರನಾಗಿ, ತಾನೇ ಅಮ್ಮನಿದ್ದ ಬಳಿಗೆ ಬಂದು, ತೀರ್ಥಕ್ಕೆ ಬರಬೇಕೆಂದು ಕರೆದನು. ಅಮ್ಮನು ಸಂಕೋಚದಿಂದ, ಸಮ್ಮುಖಕ್ಕೆ

ಬಂದು ಕೈ ಚಾಚಿದಳು. ಸ್ವಾಮಿಗಳು ಆಕೆಯ ಕೈಯನ್ನು ಕ್ಷಣಹೊತ್ತು ನೋಡಿ,–'ಇದ್ಯಾವ ದೇವತಾಲಕ್ಷಣ ! ಈ ಲಕ್ಷಣದ ಕೈಗೆ ಮಕ್ಕಳಿಲ್ಲವೆ ? ಚಕ್ರಪಾಣಿಯೇ ಮಗನಾಗಬೇಕು ಈ ಪುಣ್ಯಾತ್ಮಳಿಗೆ ! ಇದು ದೇವಕಿಯ ಕೈಲಕ್ಷಣ. ಇದು ಕೌಸಲ್ಯೆಯ ಕೈಲಕ್ಷಣ. ಇದು ದೇವಹೂತಿಯ ಕೈಲಕ್ಷಣ ! ಅಮ್ಮಾ ಯಶೋದಮ್ಮಾ, ನಿನ್ನಂಥ ಪುಣ್ಯಾತ್ಮಳ ದರ್ಶನ ಇಷ್ಟುಕಾಲಕ್ಕೆ ನಮಗೆ ಲಭಿಸಿತು. ನಿನ್ನ ಮಹಿಮೆಯನ್ನು ನಮಗಿಷ್ಟು ತೋರಿಸಮ್ಮಾ' ಎಂದರು. ಅಮ್ಮನು–'ದೊಡ್ಡವರು ಹೀಗೆಂದರೆ ಪಾಮರಳ ಗತಿಯೇನಾಗಬೇಕು !' ಎಂದು ಕೇಳಿದಳು.–'ನಾವು ದೊಡ್ಡವರು-ನೀವು ದೊಡ್ಡವರು. ದೊಡ್ಡ ದೊಡ್ಡವರು ಕೂಡಿ ಮತ್ತೇನಾಡಬೇಕಮ್ಮಾ' ಎಂದರು ಸ್ವಾಮಿಗಳು. ಕುಹಕಿಗಳ–ವಾರಗಿತ್ತಿಯರ ಮಾತುಕೇಳಿ–ಆಕೆಯನ್ನು ಅಪಾರ್ಥಮಾಡಿಕೊಂಡಿದ್ದ ಮಠದ ಅಧಿಕಾರಿಗಳ ಸೊಲ್ಲೇ ಅಡಗಿಹೋಯಿತು.

ಸ್ವಾಮಿಗಳ ಭಿಕ್ಷೆ ಭೋಜನಾದಿಗಳೆಲ್ಲ ಆದುವು. ಆಯಾಸವಾಗಿದ್ದುದರಿಂದ ಜನರು ಅಲ್ಲಲ್ಲೆ ವಿಶ್ರಮಿಸಿಕೊಂಡರು. ಅಮ್ಮನು ಗುಡಿಯಲ್ಲಿದ್ದರೆ ಜನರು ಧೈರ್ಯದಿಂದ ಒಳಗೆ ಬರುತ್ತಿರಲಿಲ್ಲ. ಸ್ವಾಮಿಗಳಿದ್ದುದರಿಂದ ಮಠದ ಸೇವಕರು ಯಾರನ್ನೂ ಬಿಡುತ್ತಿರಲಿಲ್ಲ. ಅಮ್ಮನಾದರೋ ತನ್ನ ನಿಯಮಿತ ಆಹ್ನಿಕಗಳನ್ನು ಮುಗಿಸದೆ ಭೋಜನಮಾಡುತ್ತಿರಲಿಲ್ಲ. ಅಮ್ಮನ ಆಹ್ನಿಕವೆಂದರೆ ಹಾಡು ಹೇಳಿಕೊಳ್ಳುತ್ತಾ ರಂಗವಲ್ಲಿಯಲ್ಲಿ ಚಿತ್ರ ಬರೆಯುವುದು. ಅದರಲ್ಲಿ ತನ್ನ ಅನುಕೂಲತೆಯಂತೆ ವಾರದ ಇಂತಿಂತಹ ದಿನಗಳಲ್ಲಿ–ಇಂತಿಂತಹ ಚಿತ್ರಗಳೆಂದು ವಿಭಾಗಮಾಡಿಕೊಂಡಿದ್ದಳು. ಚಿತ್ರ ಬರೆದು ಕುಂಕುಮಾಕ್ಷತೆಗಳಿಂದ ಪೂಜಿಸಿ, ದಾಸರು ಅನುಗ್ರಹಿಸಿದ್ದ ವೇಣುಗೋಪಾಲನನ್ನು ಮುಂದಿಸಿ ಹಾಡುವಳು. ಹಾಡಿದಂತೆ ನೋಡುವಳು ; ನಲಿಯುವಳು ; ಅಮ್ಮನು ಪರಮಾತ್ಮನ ಲೀಲಾವಿಭೂತಿಗಳನ್ನು ನೋಡಿ ಹಾಡಿದಂತೆ ಯಾವ ದಾಸರೂ ನೋಡಲಿಲ್ಲ–ಹಾಡಲಿಲ್ಲ. ಜ್ಞಾನಯೋಗಿಗಳಿಗೆ ಈ ಭಾಗ್ಯವೇ ಇಲ್ಲ ವಸಾರೆಯಲ್ಲಿ ವ್ಯಾಸಪೀಠದ ಮುಂದೆ ಕುಳಿತಿದ್ದ ಸ್ವಾಮಿಗಳು ಅಮ್ಮನ ಹಾಡುಗಳನ್ನು ಕೇಳಿದರು. ಬಾಲಗೋಪಾಲನ ನರ್ತನದ ಕಿರುಗೆಜ್ಜೆಯ ಧ್ವನಿಯನ್ನು ಕೇಳಿ ವಿಸ್ಮಿತರಾದರು. ಆಗ ಪುಣ್ಯಾತ್ಮಳಾದ ಗಿರಿಯಮ್ಮನು ಜಗನ್ಮೋಹನಮೂರ್ತಿಯನ್ನು ಶಿಶುವಾಗಿ ಮಾಡಿ ಬಗಲಿನಲ್ಲೆತ್ತಿಕೊಂಡು ಇವನೇ ನನ್ನ ರಂಗಧಾಮನೆಂದು ಸ್ವಾಮಿಗಳ ಮುಂದೆ ಕೂಡಿಸಿದಳು. ನನ್ನ ಮುದ್ದು ಕಂದನಿಗೆ ಮಂಗಳಾಕ್ಷತೆಯನ್ನು ಕೊಡಿರೆಂದು ಬೇಡಿದಳು.

ಸುಮತೀಂದ್ರರು ಪರಮಾನಂದದಿಂದ ಆ ಲೋಕೋತ್ತರ ಬಾಲನನ್ನೆತ್ತಿಕೊಂಡು, ಆನಂದಬಾಷ್ಪಗಳಿಂದ–'ವ್ಯಾಸರಾಯರಿಗೆ ಕನಕದಾಸರು ಪರಮಾತ್ಮನನ್ನು ತೋರಿಸಿದಂತೆ, ವಾದಿರಾಜರಿಗೆ ವೈಕುಂಠದಾಸರು ಕೇಶವನನ್ನು ತೋರಿಸಿದಂತೆ, ತಾಯೇ ನನಗೆ ನೀನು ಬಾಲ ಮುಕುಂದನ ದರ್ಶನಮಾಡಿಸಿದೆ. ನೀನೇ ಯಶೋದೆ, ನೀನೇ ದೇವಕಿ, ನೀನೇ ಕೌಸಲ್ಯೆ, ನೀನೇ ಅನಸೂಯೆ ! ನಿನ್ನನ್ನು ಏನೆಂದು ಕರೆಯಲಮ್ಮಾ?' ಎಂದು ಅಭಿ

ನಂದಿಸಿದರು. ಅಮ್ಮನು ಇವನೇ ನಿಮ್ಮ ಮೂಲರಾಮನೆಂದು–'ರಾಮ ಶ್ರೀ ರಘು ನಂದನ' ಎಂಬುದಾಗಿ ಹಾಡಿ—

ಮದನಕೋಟಿ ಮೋಹನಾಂಗ | ಮಾಧವ ಪುಣ್ಯಚರಿತ ಕರುಣಾಪಾಂಗ ||
ಹೆಳವನಕಟ್ಟೆ ನಿಲಯ ವೆಂಕಟ ಶ್ರೀರಂಗ | ಸುಮತೀಂದ್ರ ಹೃದಯ ಪಂಕಜಭೃಂಗ ||
ಸದಾನಂದ

ಕದನ ವಿಕ್ರಮ ಬಾಹು ಕೋದಂಡಧೃತ ಸೀತಾ
'ರಾಮ ಶ್ರೀ ರಘುನಂದನ' ಎಂಬ ಕಡೆಯ ನುಡಿಯನ್ನು ಹಾಡಿ, ಸ್ವಾಮಿಗಳಿಗೆ ನಮಸ್ಕಾರ ಮಾಡಿದಳು.—

ಮಾರನೆಯ ಪ್ರಾತಃಕಾಲ ಸ್ವಾಮಿಗಳು ಆಹ್ನಿಕದಲ್ಲಿದ್ದಾಗ ತಪ್ತ ಮುದ್ರಾಂಕನಕ್ಕಾಗಿ ಶಿಷ್ಯ ಮಂಡಲಿಯು ಕಾದು ನಿಂತಿದ್ದರು. ಸುದರ್ಶನಹೋಮ ಮುಂತಾದ ಕಾರ್ಯಗಳು ನಡೆದಿವೆ. ಆಗ ಗಿರಿಯಮ್ಮನು ಬಂದು ನಮಸ್ಕರಿಸಿ–'ಸ್ವಾಮಿ, ಪೂರ್ವಪುಣ್ಯದಿಂದ ನಾನು ವಿಷ್ಣುಭಕ್ತರ ಮನೆಯನ್ನು ಸೇರಿ, ಶ್ರೀ ಕೃಷ್ಣಮೂರ್ತಿಯ ಸೇವೆ ಮಾಡಿಕೊಂಡು ಈ ಹೆಣ್ಣು ಜನ್ಮವನ್ನು ನೀಗುತ್ತಿರುವೆನು. ತೀರ್ಥಯಾತ್ರೆಗಳನ್ನು ಮಾಡಿ ಅರಿಯೆನು. ದೊಡ್ಡವರ ಸೇವೆ ಮಾಡುವ ಪುಣ್ಯ ಜನ್ಮದಲ್ಲೇ ಇಲ್ಲ. ಅನೇಕ ತೀರ್ಥಯಾತ್ರೆ ಮಾಡಿ, ಪಾಮರರನ್ನು ಪುನೀತರನ್ನಾಗಿಮಾಡುವ ಮಹಾಮಹಿಮರು ತಾವು' ಎಂದು ಪ್ರಾರ್ಥನೆ ಮಾಡಿದಳು. ಮುದ್ರಾಧಾರಣೆಗಾಗಿ ಎರಡು ಕೈಗಳನ್ನೂ ಚಾಚಿದಳು. ಶ್ರೀ ಶ್ರೀಗಳವರು ಶಂಖ ಚಕ್ರಾಂಕಿತವಾದ ದೇವಿಯ ಹಸ್ತಗಳನ್ನು ನೋಡಿ–'ಅಮ್ಮಾ, ನಿನಗೆ ಶ್ರೀಹರಿಯೇ ಚಕ್ರಾಂಕನ ಮಾಡಿರುವನು. ನಿನ್ನಂಥವಳಿಗೆ ಚಕ್ರಾಂಕನ ಮಾಡುವ ಅಧಿಕಾರ ನಮ್ಮದಲ್ಲ. ನಿನ್ನ ದರ್ಶನದಿಂದ ಪಾಮರರ ಮಾತೇಕೆ; ನಾವು ಪುನೀತರಾದೆವು' ಎಂದು ದೇವಿಯ ಗುಣಕಥನ ಮಾಡಿದರು.

ಸ್ತ್ರೀಯರ ಚಿತ್ತವು ಬಲು ಚಂಚಲವೆಂದೂ ಸ್ತ್ರೀಯರು ಚಪಲೆಯರೆಂದೂ ಕವಿಗಳು ವರ್ಣಿಸುವರು. ಅವರು ಕೊಟ್ಟ ದೋಷವು ರೂಢಿಯಲ್ಲಿ ಗುಣವಾಗಿ ಪರಿಣಮಿಸಿರುವುದು. ಆ ಶಬ್ದಗಳ ಪ್ರಯೋಗ ಮಾಡದಿದ್ದರೆ ಸ್ತ್ರೀಯರ ಸ್ತ್ರೀತ್ವವನ್ನು ವರ್ಣಿಸಿದಂತಾಗುವುದಿಲ್ಲವೆಂದು ಬೇರೇ ಜನರ ಭಾವನೆಯಾಗಿರುವುದು. ಗೀತೆಯಲ್ಲಿ ಅರ್ಜುನನು–'ಚಂಚಲಂ ಹಿ ಮನಃ ಕೃಷ್ಣ' ಎಂದು ಮನಸ್ಸಿನ ಲಕ್ಷಣವನ್ನು ಹೇಳಿರುವನು. ಆ ಚಾಂಚಲ್ಯವು ಪುರುಷರ ಅಥವಾ ಸ್ತ್ರೀಯರ ಚಿತ್ತವೆಂಬ ವಿಶೇಷಣದಿಂದ ಕೂಡಿರುವುದಿಲ್ಲ. ಮನಸ್ಸು ಜಡವಲ್ಲ. ಯಾವ ದೇಹದಲ್ಲಿದ್ದರೂ ಅದರ ಲಕ್ಷಣ ಒಂದೇ ಆಗಿರುವುದು. ಸ್ತ್ರೀಪುಂ ದೇಹಗಳು ಸಾಧಕಬಾಧಕಗಳಲ್ಲ. ಅಸ್ವತಂತ್ರತೆಯಿಂದ ಚಾಂಚಲ್ಯ ಬರುವುದು ಸ್ವಭಾವ. ಮನಸ್ಸಿನ ದಾರಿಯರಿತು ತಕ್ಕ ವ್ಯವಸಾಯಗಳಿಂದ ಸಂಸ್ಕರಿಸಿದರೆ ಸ್ತ್ರೀಯರಂಥಾ ಸ್ಥಿರಚಿತ್ತರು–ಸ್ತ್ರೀಯರಂಥಾ ಸ್ಥಿತಪ್ರಜ್ಞರು–ಪುರುಷರಾಗುವುದಿಲ್ಲ ನಿಧಾನವೆಂದು ರೂಢಿಯಿಂದ ಗೊತ್ತಾಗುತ್ತದೆ. 'ಬಹುಶಾಖಾಹ್ಯನಂತಾಶ್ಚ ಬುದ್ಧಯೋऽವ್ಯವಸಾಯಿನಾಂ' ಎಂಬ ಗೀತೋಕ್ತಿಯು ಅವ್ಯವಸಾಯಿಗಳ ಚಿತ್ತದ ಲಕ್ಷಣವನ್ನು ಇಷ್ಟಂತೆ ವರ್ಣಿಸಿದೆ. ಇಂದಿಗೂ ನಮ್ಮ

ಧರ್ಮದ ಆಜ್ಞೆಯನ್ನು ಸ್ತ್ರೀಯರಂತೆ ಪುರುಷರು ಪಾಲಿಸುತ್ತಿಲ್ಲ. ಪ್ರಾಣಾಪತ್ತಿನಲ್ಲೂ ಸ್ಥಿರಮತಿಗಳಾದ ಸ್ತ್ರೀಯರ ನಿದರ್ಶನಗಳಿಗೆ ಬಡತನ ಬಂದಿಲ್ಲ. ಮುಖ್ಯವಾಗಿ ಯೋಗ್ಯ ಮಾರ್ಗದರ್ಶನಬೇಕು. ಮಾರ್ಗದಲ್ಲಿರುವವರಿಗೆ ವಿಘ್ನಗಳು ಬರದಿರಬೇಕು. ಆ ಎಲ್ಲ ಭಾಗ್ಯವೂ ದೊರೆತುದರಿಂದ ಗಿರಿಯಮ್ಮನು ಮಹಾನುಭಾವಳಾದಳು. ಗಿರಿಯಮ್ಮನ ಮಾರ್ಗಕ್ಕೆ ಸಹಾಯಕನಾಗಿ ಗಂಡನಾದ ತಿಪ್ಪರಸನು ಧನ್ಯನೆನಿಸಿದನು. ದೂರ್ವಾಸ ಮುನಿಗಳು ಪಾಂಡವರ ಸತ್ವಪರೀಕ್ಷೆಗೆ ಬಂದಾಗ–'ನಾವೆಲ್ಲಾ ಕರೆದರೆ ಬರುವುದಿಲ್ಲ. ಸ್ತ್ರೀಯರು ಮೊರೆಯಿಟ್ಟರೆ ಕನಿಕರದಿಂದ ಕೃಷ್ಣನು ಬೇಗ ಬರುವನು. ನಮ್ಮ ವಿಪತ್ತು ದೂರಾಗುವುದು. ದ್ರೌಪದೀ, ಕೃಷ್ಣನನ್ನು ನೀನು ಕರೆ' ಎಂದು ಧರ್ಮನಂದನನು ಆಡಿದ ಮಾತು ಬಲು ಅರ್ಥವತ್ತಾಗಿರುವುದು. ಬಹು ದೇಹದಂಡನೆಯಿಂದ ಪುರುಷರು ಸಾಧಿಸುವುದನ್ನು ಸ್ತ್ರೀಯರು ಸುಲಭವಾಗಿ ಸಾಧಿಸಿಬಿಡುವರು. ಒಂದೇ ಮಾತಿನಲ್ಲಿ ಹೇಳುವುದಾದರೆ ಕರ್ಮಯೋಗಿಗಳು ಕಠಿಣ ಯಜ್ಞಾದಿ ಕರ್ಮಗಳಿಂದ ಯಾವ ಚಿತ್ತಶುದ್ಧಿಯನ್ನು ಪಡೆಯುವರೋ, ಅಸಂಪ್ರಜ್ಞಾತಾದಿ ಸಮಾಧಿಗಳಿಂದ ಯೋಗಿಗಳು ಯಾವ ಯೋಗಸಿದ್ಧಿಯನ್ನು ಸಂಪಾದಿಸುವರೋ, ಅದನ್ನು ಗಿರಿಯಮ್ಮನು ಕೇವಲ ಈಶ್ವರಪ್ರೇಮದಿಂದ ಸಂಪಾದಿಸಿದಳು.

ಗಿರಿಯಮ್ಮನ ಜೀವನದಲ್ಲಿ ಒಂದೊಂದೂ ಅತಿಮಾನುಷ ಘಟನೆಗಳಿವೆ. ಹಿಂದೆಲ್ಲಾ ಹೇಳಿದಂತೆ ಅತಿಮಾನವರಿಗೆ ಮಾನವರ ಚರ್ಯೆ ಅರ್ಥವಾಗುವುದಿಲ್ಲ. ಅಂತೆಯೇ ಅತಿಮಾನವರ ಚರ್ಯೆ ಮಾನವರಿಗೂ ಅರ್ಥವಾಗುವುದಿಲ್ಲ.

ಕೆಳಗೆ ಬರೆದಿರುವ ಮಳೆಯ ಹಾಡಿನಿಂದ ಜನರು ಮಳೆಯಿಲ್ಲದೆ ಕಂಗೆಟ್ಟು ಅಮ್ಮನನ್ನು ಪ್ರಾರ್ಥಿಸಿದಾಗ ಮಳೆಗರೆಸಿ ಜನರ ರಕ್ಷಣೆಮಾಡಿದ ಕಥೆಯು ವ್ಯಕ್ತವಾಗುತ್ತದೆ.

ರಾಗ—ಮುಖಾರಿ

ಮಳೆಯ ದಯಮಾಡೋ–ರಂಗ–ನಿಮ್ಮ
ಕರುಣ ತಪ್ಪಿದರೆ ಉಳಿಯದು ಲೋಕ ಪ.

ಪಶುಜಾತಿ ಹುಲ್ಲೆ ಸಾರಂಗ ಮೃಗಗಳು ಬಹಳ
ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು।
ತೃಷೆಯಡಗದೆ ತಲ್ಲಣಿಸಿ ಮೂರ್ಛೆಗೊಂಡು
ದೆಶೆದೆಶೆಗೆ ಬಾಯ್ಬಿಡುತ್ತಿಹವಯ್ಯ ಹರಿಯೇ ೧

ಧಗೆಯಾಗಿ ದ್ರುಮಗುಂದಿ ಇರುವ ಭಾವಿಯ ನೀರ
ಮೊಗೆಮೊಗೆದು ಪಾತ್ರೆಯಲಿ ನಾರಿಯರು।
ಹಗಲೆಲ್ಲ ತರುತಿಹರು ಯೋಚನೆಯ ಮಾಡುತ್ತ
ಬೇಗದಿಂದಲಿ ತರಿಸೊ ವೃಷ್ಟಿಯನು ಹರಿಯೆ ೨

ಸಂದುಹೋದುವು ಜ್ಯೇಷ್ಠ ಆಷಾಢ ಶ್ರಾವಣ
ಬಂದಿದೇ ಭಾದ್ರಪದ ಮಾಸವೀಗ |
ಇಂದು ಪುರಂದರಗೆ ಹೇಳಿ ವೃಷ್ಟಿಯ ತರಿಸೊ
ಸಂದೇಹವ್ಯಾಕೆ ಹೆಳವನಕಟ್ಟಿಯ ರಂಗ ೩

ತಿಪ್ಪರಸನು ಪಟ್ಟದ ಶಾನುಭೋಗನಾಗಿದ್ದರೂ ಕೆಲಸವನ್ನು ಅವನ ತಮ್ಮ ವೆಂಕಟರಾಯನು ನಿರ್ವಹಿಸುತ್ತಿದ್ದನು. ತಿಪ್ಪರಸನ ಸ್ವಾಭಾವಿಕವಾದ ಸಾತ್ವಿಕತನಕ್ಕೆ ಕುಲಕರಣಿಕೆ ಒಪ್ಪುತ್ತಿರಲಿಲ್ಲ. ಆ ಕಾಲದ ಕುಲಕರಣಿಕೆಯು ಗೊತ್ತಾದ ಕಾಲದಲ್ಲಿ ಕಂದಾಯವನ್ನು ವಸೂಲ್ಮಾಡಿ-ಲೆಖ್ಖವನ್ನಿಡುವುದು ಮಾತ್ರವಾಗಿರಲಿಲ್ಲ. ಭೂಮಿಗೆ ಗೊತ್ತಾದ ಕಂದಾಯವಿರಲಿಲ್ಲ. ಕಂದಾಯವು ದ್ರವ್ಯರೂಪವಾಗಿರಲಿಲ್ಲ. ಒಬ್ಬ ಕುಲಕರಣಿಯ ಜೀವಿತದಲ್ಲಿ, ಒಬ್ಬ ಗೊತ್ತಾದ ರಾಜಪ್ರತಿನಿಧಿಗೆ ಕಂದಾಯ ಕಟ್ಟುವ ಅಭ್ಯಾಸವಿರಲಿಲ್ಲ-ಸಾಧ್ಯತೆಯಿರಲಿಲ್ಲ. ಒಂದು ವರ್ಷ ಚಿತ್ರದುರ್ಗದ ನಾಯಕರಿಗೆ ಕಂದಾಯ ಕೊಟ್ಟರೆ, ಮತ್ತೊಂದು ವರ್ಷ ಮರಾಠಾಸರದಾರರಿಗೆ ಕೊಡಬೇಕಾಗಿ ಬರುತ್ತಿತ್ತು. ಮತ್ತೆ ಮೈಸೂರು ನವಾಬರ ಧಾಳಿಯಾದರೆ ಅವರಿಗೆ ಕಂದಾಯ ಕೊಟ್ಟು ಅಂಕಿತರಾಗಿರಬೇಕಾಗಿತ್ತು. ಕುಲಕರಣಿಯ ಜವಾಬುದಾರಿಯೆಂದರೆ,-'ರೈತರನ್ನು ಹಿಡಿದು ಭೂಮಿಯನ್ನು ಹಂಚಿ ವ್ಯವಸಾಯ ಮಾಡಿಸಬೇಕು. ರಾಶಿಯ ಕಾಲದಲ್ಲಿ ಧಾನ್ಯವನ್ನು ಅಳೆಸಿ ರಾಜಾದಾಯವನ್ನು ಪ್ರತ್ಯೇಕಿಸಿಡಬೇಕು. ಅದನ್ನು ವರ್ತಕರಿಗೆ ಮಾರಿ ಹಣವನ್ನು ವಸೂಲ್ಮಾಡಬೇಕು. ಅಮಿಾಲನು ವರಾತ ಮಾಡಿದಾಗ ಹಣವನ್ನು ಕಟ್ಟಬೇಕು. ಅಮಿಾಲನ ಅನುಗ್ರಹವನ್ನು ಗಳಿಸದ ಕುಲಕರಣಿಗೆ ರಾಜದಂಡ ತಪ್ಪುತ್ತಿರಲಿಲ್ಲ. ಸ್ವಲ್ಪ ಹೆಚ್ಚು ಕಡಮೆಯಾದರೂ ನಿಗಡಬಂಧನವೇ ದಂಡನೆಯಾಗುತ್ತಿತ್ತು.

ಹೀಗಿರಲು ಏನು ಕಾರಣವೋ, ಒಮ್ಮೆ ವೆಂಕಟರಾಯನಮೇಲೆ ಅಮಿಾಲನ ಅನುಗ್ರಹ ತಪ್ಪಿತು. ಅಮಿಾಲನು ಕೇಳಿದಾಗ ಹಣ ಒದಗುವುದು ಕಠಿಣವಾಯಿತು. ವೆಂಕಟರಾಯನಿಗೆ ಅಪಮಾನ ಮಾಡುವುದೇ ಅಮಿಾಲನ ಉದ್ದೇಶವಾಗಿದ್ದುದರಿಂದ ಆತನಿಗೆ ನಿಗಡಬಂಧನವಾಯಿತು. ಮೇಲ್ಪಟ್ಟ ಅಧಿಕಾರಿಗಳಲ್ಲಿ ದೂರು ಹೇಳಿಕೊಂಡು ಪಾರಾಗುವುದು ಈಗಿನಂತೆ ಸುಲಭಸಾಧ್ಯವಾಗಿರಲಿಲ್ಲ. ಅಮಿಾಲನು ತನ್ನ ಮೇಲ್ಪಟ್ಟ ಫೌಜುದಾರನಿಗೆ ವರದಿಮಾಡಿದ ಅಪರಾಧವಾದರೂ-'ವೆಂಕಟರಾಯನು ಗಿರಿಯಮ್ಮನೆಂಬ ಪವಾಡಗಾತಿಯು ಮಾಡುವ ಸಮಾರಾಧನೆಗೆ ಬಟಾಯಿ ಧಾನ್ಯವನ್ನು ಉಪಯೋಗಿಸಿ ರಾಜದ್ರೋಹಮಾಡಿದ್ದಾನೆ' ಎಂಬುವುದಾಗಿತ್ತು. ಅಪರಾಧ ವೆಂಕಟರಾಯನಿಗೆ ಕೂಡುವಂತಿರಲಿಲ್ಲ. ಸಕಾಲಕ್ಕೆ ಹಣ ಒದಗದಿರಲು, ವರ್ತಕರಿಗೆ ವ್ಯಾಪಾರವಾಗದಿದ್ದುದು ಕಾರಣವಾಗಿತ್ತು. ಇಂಥಾ ಪ್ರಸಂಗದಲ್ಲಿ ಅಮಿಾಲನು ಅವಧಿಯನ್ನು ಕೊಟ್ಟು ನಿಧಾನವಾಗಿ ವಸೂಲ್ಮಾಡಿಕೊಳ್ಳಬಹುದಾಗಿತ್ತು. ತಮ್ಮ ಕರಣೀಕನಿಗೆ ರಾಜದಂಡನೆಯಾದುದನ್ನು ಸೈರಿಸದ ರೈತರು ಧೈರ್ಯತಾಳಿ, ರೊಟ್ಟಿ ಬುತ್ತಿಗಳನ್ನು ಕಟ್ಟಿಕೊಂಡು ಫೌಜುದಾರನ ಮನೆಯ ಬಾಗಿಲು ಕಾಯ್ದರು. ವೆಂಕಟರಾಯನು ಕೊಡಬೇಕಾದ ಹಣವನ್ನು ತಾವೇ

ಕೊಡುವೆವೆಂದು ವಿಜ್ಞಾಪಿಸಿಕೊಂಡರು. ಅಧಿಕಾರಿಯು ಅಮಿಲ್ದಾರನ ವರದಿಯನ್ನೂ ರೈತರ ಹೇಳಿಕೆಯನ್ನೂ ವಿಮರ್ಶೆ ಮಾಡಿದನು. ಇಷ್ಟು ಮಾತ್ರಕ್ಕೇ ವೆಂಕಟರಾಯನಂಥಾ ದೊಡ್ಡ ಮನುಷ್ಯನಿಗೆ ಅಪಮಾನ ಮಾಡಬೇಕಾಗಿರಲಿಲ್ಲವೆಂದು ಪಶ್ಚಾತ್ತಾಪಪಟ್ಟನು. ಗಿರಿಯಮ್ಮನೆಂಬ ಪವಾಡಗಾತಿಯು ಕಥೆಯೇನೆಂದು ವಿಚಾರಿಸಿದನು. ಅಮ್ಮನ ವಿಚಾರವನ್ನೂ ರೈತರಿಗೆ ಆಕೆಯಲ್ಲಿದ್ದ ವಿಶೇಷ ಭಕ್ತಿಯನ್ನೂ ತಿಳಿದು, ಆ ಸತ್ಪುರುಷಳ ದರ್ಶನಕ್ಕೆ ತಾನೇ ಬರುವೆನೆಂದು ಹೊರಟನು.

ಫೌಜುದಾರನು ಗಿರಿಯಮ್ಮನ ದರ್ಶನಕ್ಕೆ ಬರುವ ಸಂಗತಿ ಅಮಿಲ್ದಾರನಿಗೆ ತಿಳಿದು ಭಯವಾಯಿತು. ವೆಂಕಟರಾಯನಿಗೆ ಸಿಗಡಬಂಧನ ಮಾಡಿಸಿದ್ದಿರಲಿ-ಅಮ್ಮನ ದರ್ಶನ ಮಾಡಿದ ಫೌಜುದಾರನು, ತನಗೇ ಅದನ್ನೆಲ್ಲಿ ತಿರುಗಿಸುವನೋ ಎಂಬ ಭಯವಾಯಿತು. ಈ ಕಾರಣದಿಂದ, ಅಮಿಲ್ದಾರನು, ಒಡನೆ ವೆಂಕಟರಾಯನನ್ನು ಬಿಡುಗಡೆ ಮಾಡಿಸಿದನು. ಫೌಜುದಾರನ ಅನುಗ್ರಹ ಪಡೆಯಬೇಕೆಂದು ರಾಜೋಪಚಾರವನ್ನೇರ್ಪಡಿಸಿ ವಾದ್ಯ ವೈಭವದಿಂದ ಆ ಅಧಿಕಾರಿಯನ್ನು ಎದುರುಗೊಂಡನು. ಅಧಿಕಾರಿಯು-'ನಾನು ಬಂದಿರುವುದು ರಾಜಕಾರ್ಯಕ್ಕಲ್ಲ, ಅಮ್ಮನವರ ದರ್ಶನಕ್ಕೆ! ಅಮ್ಮನವರು ಕೊಟ್ಟ ಪ್ರಸಾದವನ್ನು ಸ್ವೀಕರಿಸುವುದಕ್ಕೆ! ಆದ್ದರಿಂದ ನಿಮ್ಮ ಊಟಕ್ಕೆ ಬರುವುದಿಲ್ಲ. ನೀವು ನಿಮ್ಮ ಕೆಲಸ ಮಾಡಿಕೊಂಡಿದ್ದು ಕರೆದಾಗ ಬರಬಹುದೆ'ಂದು ಹೇಳಿಕಳುಹಿಸಿದನು.

ಫೌಜುದಾರನು ಅಮ್ಮನವರ ದರ್ಶನಲಾಭ ಪಡೆದು, ಅವರ ದಿನಚರ್ಯವನ್ನೂ ಅವರನ್ನು ಹಿಂಬಾಲಿಸಿದ ಭಕ್ತಜನರ ಭಕ್ತಿಭಾವಗಳನ್ನೂ ನೋಡಿ ಮೆಚ್ಚಿಕೊಂಡನು. ಅಮ್ಮನವರಿಗೆ ಏನು ಸೇವೆ ಮಾಡಲೆಂದು ತಾನೇ ಕೇಳಿದನು. ಅವರು-**'ದೇವರಲ್ಲಿ ಭಕ್ತಿಯಿಡಿರಿ, ನನಗೂ ಅಂಥಾ ಭಕ್ತಿ ಬರಲೆಂದು ಪ್ರಾರ್ಥನೆ ಮಾಡಿರಿ'** ಎಂದು ಹೇಳಿದರು. ಈ ಮಾತು ಕೇಳಿ ಅಧಿಕಾರಿಯ ಸ್ಥಿತಿಯೇ ಬದಲಾಯಿತು. 'ತಾಯಿ, ತಾವಂತೂ ಏನೂ ಅಪೇಕ್ಷಿಸುವವರಲ್ಲ. ವೆಂಕಟರಾಯರಿಗಾದರೂ ಏನು ಮಾಡಿಕೊಡಲಿ; ಅಪ್ಪಣೆಯಾಗಬೇಕು' ಎಂದು ಕೇಳಿದನು. ಅಮ್ಮನವರು-ಅದನ್ನು ಅವರೇ ಕೇಳುವರೆಂದು ನುಡಿದರು. ವೆಂಕಟರಾಯರಿಗೆ ಲೌಕಿಕ ಬಿಡಲೆಂದರೆ, ಲೌಕಿಕ ಅವರನ್ನು ಬಿಡಲಿಲ್ಲವೆಂದರು. ಇಂಥಾ ಭಾಗವತೋತ್ತಮರಿಗೆ ಅಪಚಾರವಾದದ್ದಕ್ಕೆ ಅಮಿಲ್ದಾರನಿಗೆ ಶಿಕ್ಷೆ ಮಾಡುವೆನೆಂದು ಅಧಿಕಾರಿಯು ನುಡಿದನು. ಅಮ್ಮನವರು-'ಬೇಡ ಬೇಡ. ಅಮಿಲ್ದಾರನಿಗೆ ಶಿಕ್ಷೆ ಮಾಡುವುದೂ ನನಗೆ ಶಿಕ್ಷೆ ಮಾಡುವುದೂ ಒಂದೇ' ಎಂದರು. ಅಧಿಕಾರಿಯು ತನಗೆ ಪ್ರಸಾದ ಅನುಗ್ರಹವಾಗಬೇಕೆಂದನು. ಅಮ್ಮನವರು ನಕ್ಕು-'ಇವತ್ತು ನಮ್ಮ ಮನೆಯಲ್ಲಿ ನುಚ್ಚು ಭಕ್ಕರಿ ತಿಳಿಸಾರು ಇತ್ತೇ! ಅದು ನಿಮಗೆ ಪ್ರಸಾದವಾದರೆ ಸಿದ್ಧವಾಗಿದೆ' ಎಂದರು. ಅದನ್ನೇ ಸ್ವೀಕರಿಸಿ-ಅಧಿಕಾರಿಯು ಸಂತೋಷಪಟ್ಟು-ತನ್ನ ಬಿಡಾರಕ್ಕೆ ನಡೆದನು.

ಅಮ್ಮನವರ ಮಾತು ಅಧಿಕಾರಿಯ ಹೃದಯವನ್ನು ಕಲಕಿಸಿತು. ಅಮಿಲ್ದಾರನು ಬ್ರಾಹ್ಮಣನಾಗಿ ಇಂಥಾ ಸತ್ಪುರುಷರ ದ್ರೋಹ ಗಳಿಸಿದನೇ ಎಂಬ ಪರಿತಾಪವಾಯಿತು.

ಅಧಿಕಾರದಿಂದ ಘಟಿಸುವ ಪಾಪ, ಸಜ್ಜನರ ಮನಸ್ಸಿನ ತಾಪಗಳನ್ನು ಕುರಿತು ಚಿಂತಿಸಿದನು. ಸಂಧ್ಯಾಕಾಲದಲ್ಲಿ ಅಮೀಲನಿಗೆ ಬಾರೆಂದು ಹೇಳಿಕಳುಹಿಸಿದನು. 'ಅಮೀಲರೇ, ಇಂಥಾ ಸಾತ್ವಿಕರಿಗೆ ಏಕೆ ಅಪಚಾರಮಾಡಿದಿರಿ'ಎಂದು ಕೇಳಿದನು. ಅಮೀಲನು, ದಿಕ್ಕುತೋರದೆ-'ಮಹಾಸ್ವಾಮಿ, ವೆಂಕಟರಾಯನು ಈ ಪ್ರಾಂತ್ಯಕ್ಕೆಲ್ಲಾ ಪಾಳೆಯಗಾರನಾಗಿದ್ದಾನೆ, ಸರ್ಕಾರದ ಕೆಲಸ ಸರಿಯಾಗಿ ಮಾಡುವುದಿಲ್ಲ, ಸಮಾರಾಧನೆ ಮಾಡಿಕೊಂಡೇ ಕಾಲ ಕಳೆಯುತ್ತಾನೆ ಎಂಬ ವರ್ತಮಾನಗಳನ್ನು ಕೇಳಿ, ಅವನನ್ನು ಕರೆಸಿದೆ. ಮಾತುಮಾತಿಗೆ ಅವನು, **ಅಮ್ಮನವರ ಆಣೆ, ದೇವರ ಆಣೆ**ಮಾಡಿ, ನನ್ನನ್ನು ಛಲಿಸಿದನು. ನಾನು ಅವನನ್ನು ಈ ಅವಿಧೇಯತೆಗಾಗಿ ದಂಡಿಸಬೇಕಾಯಿತು. ಸಿಗಡಬಂಧನ ಮಾಡಿದಾಗಲೂ, **ಅಮ್ಮನವರ ಆಣೆ**ಯಿಂದು ಬೇಡಿಗಳನ್ನು ಮುರಿದಿದ್ದಾನೆ. ಇವನು ಮಾಂತ್ರಿಕನಿರಬಹುದೆಂದು ಕಾರಾಗೃಹದಲ್ಲಿಟ್ಟು, ಪ್ರಭುಗಳ ಸವಾರಿ ಬರುವುದನ್ನು ಕೇಳಿ ಬಿಟ್ಟೆ! ಇಷ್ಟೇ ನಡೆದಿರುವ ಸಂಗತಿ' ಎಂದು ವಿಜ್ಞಾಪಿಸಿದನು. ಅಧಿಕಾರಿಯು-'ಅಮ್ಮನವರನ್ನು ಆಗಾಗ ದರ್ಶನಮಾಡಿ, ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕೆಂತಲೂ, ಸಾತ್ವಿಕರನ್ನು ಕಂಡರೆ ಮರ್ಯಾದೆಯಿಂದ ವರ್ತಿಸಬೇಕೆಂತಲೂ, ಅಧಿಕಾರವು ಅಶಾಶ್ವತವೆಂತಲೂ, ಅಮೀಲನಿಗೆ ಬುದ್ಧಿ ಹೇಳಿದನು. ಅನಂತರ ವೆಂಕಟರಾಯನಿಗೆ ಪ್ರಭುವಿನ ಆಜ್ಞೆಯಾಯಿತು. ರಾಯನಿಂದ **ಅಮ್ಮನವರ** ಜನ್ಮ-ಜೀವನ ಚರಿತ್ರೆಯನ್ನು ಕೇಳಿ ಫೌಜುದಾರನು ಪಾಪಕ್ಷಯವಾಯಿತೆಂದುಕೊಂಡನು. 'ಅಮ್ಮನವರು ವಿರಕ್ತರು. ಅವರು ಏನೂ ಅಪೇಕ್ಷಿಸುವುದಿಲ್ಲ; ನೀನು ಸಂಸಾರಿಯಾದ್ದರಿಂದ ಏನು ಬೇಕೋ ಕೇಳು; ಅದನ್ನು ಮಾಡಿಕೊಡುವೆನು' ಎಂದು ಅಧಿಕಾರಿಯು ಕೇಳಿದನು. ವೆಂಕಟರಾಯನು-'ಸ್ವಾಮಿ, ವಂಶಪಾರಂಪರ್ಯವಾಗಿ, ನಮ್ಮ ಪರಗಣಿಯಲ್ಲಿ, ಪ್ರತಿ ಗ್ರಾಮದಲ್ಲಿ ಭೂಮಿ, ಮನೆ, ಕಣಾ ನಾಡಿಗತನ ಮತ್ತು ದೇಶಪಾಂಡೇಗಿರಿ ಇಷ್ಟನ್ನೂ ಮಾಡಿಕೊಡಬೇಕೆ'ಂದು ಕೇಳಿದನು. ಅಧಿಕಾರಿಯು ಅವನು ಬೇಡಿದಂತೆ ನಡೆಸಿಕೊಟ್ಟನು.

ಕಣ್ಣು ಕೊಟ್ಟ ಕಥೆ

ಗಿರಿಯಮ್ಮನವರು ಹಾಡಿದ 'ತೋರಬಾರದೆ ನಿಮ್ಮ ಚರಿತೆಯ' ಎಂಬ ದೇವರನಾಮದಿಂದ, ಪುಂಗನೂರು ರಾಜಕುಮಾರನಿಗೆ ಕಣ್ಣು ಬಂದ ಕಥೆಯು ಗೊತ್ತಾಗುತ್ತದೆ. ರಾಜಕುಮಾರನು ಹುಟ್ಟು ಕುರುಡನಾಗಿರಲಿಲ್ಲವಂತೆ! ಮಧ್ಯಕಾಲದಲ್ಲಿ ಅಂಧತ್ವವುಂಟಾಗಲು ತಿರುಪತಿಯಲ್ಲಿ ಸೇವೆಮಾಡಿದನಂತೆ! ವೆಂಕಟಪತಿಯು ಒಂದು ಕಣ್ಣು ಕೊಟ್ಟು, ಮತ್ತೊಂದು ಕಣ್ಣನ್ನು ನನ್ನ ಭಕ್ತಳಾದ ಗಿರಿಯಮ್ಮನು ಕೊಡುವಳೆಂದು ಸ್ವಪ್ನದಲ್ಲಿ ಆಜ್ಞೆ ಮಾಡಿದನಂತೆ! ರಾಜಕುಮಾರನು ಅಮ್ಮನವರ ಬಳಿಗೆ ಬರಲು, ಅವರು ಒಂದು ಅರಳೀ ಎಲೆಯ ಮೇಲೆ-ತಾವಿಟ್ಟಿದ್ದ ನಂದಾದೀಪದ ಕಾಡಿಗೆಯನ್ನು ತೆಗೆದು ಕಣ್ಣಿಗೆ ಸವರಿದರಂತೆ! ಅದರಿಂದ ರಾಜಕುಮಾರನ ಅಂಧತ್ವವು ಪರಿಹಾರವಾಗಿ, ಅವನು ದೇವರ ಸೇವೆ ಮಾಡಿದನಂತೆ!

ಮೇಲ್ಕಂಡ ಪದಗರ್ಭವು ಈ ಕೆಳಗಿನ ಮೂರು ನುಡಿಗಳಿಂದ ಪೂರ್ತಿಯಾಗಿದೆ.

ಪದ

ತೋರಬಾರದೆ ನಿಮ್ಮ ಚರಿತೆಯ
ನರರೊಳು ನಗೆಗೇಡು ಮಾಡದೆ ಪ.

ಕಲ್ಲೊಳು ಕಾಂತೆಯ ಮಾಡಿ ಕಾದವನೆಂ
ದೆಲ್ಲರು ಜಗದೊಳು ಪೇಳುವರು
ಅಲ್ಲಿ ಮಾಡಿದ ಹಾಗೆ ಇಲ್ಲಿ ತೋರಿಸಿದರೆ
ಬಲ್ಲಿದನೆನ್ನೊಡೆಯ ದೊಡ್ಡವನೆಂದು ಸಾರುವೆ ? ೧

ಅಹಹ ಕುಬುಜೆಯಳ ತನುವನೆತ್ತಿ
ಮಹಿಯೊಳು ಯುವತಿಯ ಮಾಡಿದೆಯೆಂಬರು
ಬಹು ಪರಾಕ್ರಮವನ್ನು ಈಗ ತೋರಿಸಿದರೆ
ಅಹುದೋ ಎನ್ನೊಡೆಯ ದೊಡ್ಡವನೆಂದು ಹೊಗಳುವೆ ೨

ನೀನೇ ಗತಿಯೆಂದು ಬಂದ ಭಕ್ತನ ಕ
ಣ್ಣಾನವ ತಿದ್ದಿ ನಿಜ ತೋರಿಸಯ್ಯ
ದೀನದಯಾಳು ಹೆಳವನ ಕಟ್ಟೆ ರಂಗಯ್ಯ
ದಾಸಿ ಎನ್ನೊಡೆಯ ದೊಡ್ಡವನೆಂದು ಹೊಗಳುವೆ ೩

ದಿಬ್ಬನ ಹಳ್ಳಿಯ ಪವಾಡದವರು

ಮಲೇಬೆನ್ನೂರಿಗೆ ಸಮೀಪದಲ್ಲಿ ದಿಬ್ಬನಹಳ್ಳಿಯೆಂಬ ಗ್ರಾಮವಿದೆ. ಅಲ್ಲಿ ಪವಾಡದವರು ಎಂಬ ಮನೆತನದ ಒಕ್ಕಲಿಗರಿದ್ದಾರೆ. ಅವರು ಪ್ರತಿವರ್ಷ ಹೆಳವನಕಟ್ಟೆಯ ರಂಗನಾಥಸ್ವಾಮಿಯ ರಥೋತ್ಸವವಾಗುತ್ತಲೇ ದೇವರನ್ನು ತಮ್ಮ ಹಳ್ಳಿಯ ಮನೆಗೆ ಕರೆದುಕೊಂಡು ಹೋಗಿ ಸೇವೆಯನ್ನು ಸಲ್ಲಿಸುತ್ತಾರೆ. ಕಾರಣವೇನೆಂದು ಕೇಳಿದರೆ ಕೆಳಕಂಡ ಕಥೆಯನ್ನು ಹೇಳುತ್ತಾರೆ.

ಗಿರಿಯಮ್ಮನ ಕಾಲದಲ್ಲಿ ರಂಗಪ್ಪನೆಂಬ ರಂಗನಾಥನ ಭಕ್ತನೊಬ್ಬನಿದ್ದನಂತೆ! ಅವನು ಅಮ್ಮನವರ ಭಕ್ತನಾಗಿ ನಡೆದುಕೊಳ್ಳುತ್ತಿದ್ದನಂತೆ! ದೇವರ ಸೇವೆಗೆ ಬಂದಿದ್ದ ಕಾಲದಲ್ಲಿ ಅವನ ಒಂದು ವರ್ಷದ ಮಗುವು ಮೃತವಾಯಿತಂತೆ! ದುಃಖಿತರಾದ ತಾಯಿ ತಂದೆಗಳನ್ನು ಸಂತೈಸಿ, ಅಮ್ಮನವರು ಆ ಮಗುವನ್ನು ಬದುಕಿಸಿದರಂತೆ! ಈ ಬಗೆಯ ಪವಾಡ ಅವರ ಮನೆಯಲ್ಲಿ ನಡೆದ ಕಾರಣ ಆ ಮನೆತನಕ್ಕೆ ಪವಾಡದವರೆಂಬ ಹೆಸರು ಬಂತಂತೆ! ಅಮ್ಮನವರು ಕೂಸನ್ನು ಬದುಕಿಸಿದ ಪ್ರಾರ್ಥನೆಯಾದ ಪದದ ಕಡೆಯ ಮಾತುಗಳಿವು :—

ಶಿಶುತನದಲ್ಲಿ ನೀ ಪಶುಗಳನು ಸಲಹಿದೆ
ಶಶಿಭೂಷಣ ಸಖನೆ ಶಿಶುವ ಕಾಪಾಡೋ ೩
ಸಾಂದೀಪನಿಗೊಲಿದೆ ಸಂದೇಹವಿಲ್ಲದೆ
ತಂದೆ ಹೆಳವನಕಟ್ಟೆ ರಂಗ ಕರುಣಾಪಾಂಗ ೪

ಗಿರಿಯಮ್ಮನು ದಾಸ ಚತುಷ್ಟಯರ ಪಙ್ಕ್ತಿಗೆ ಸೇರಿದ ಸಾವಿರಾರು ದೇವರ ನಾಮಗಳನ್ನೂ ಕೆಲವು ಕಥೆಗಳನ್ನೂ ಬರೆದವಳು. ಈಕೆಯ ಪದಗಳಲ್ಲಿ ತತ್ವದ ವಿಸ್ತಾರವಿಲ್ಲ. ತಾರತಮ್ಯದ ಪದಗಳು ಈಕೆಯ ಬಾಯಲ್ಲಿ ಬಂದಂತೆ ಕಾಣುವುದಿಲ್ಲ. ಮಾಧವನನ್ನು ಸ್ತುತಿಸಿದಂತೆ ಶಿವನನ್ನೂ ಸ್ತುತಿಸಿರುವಳು. ತನ್ನ ತಾಯಿಯ ಮನೆ ದೈವ ವಾದ ಮೈಲಾರಲಿಂಗನ ಸ್ತೋತ್ರಗಳು ಈಕೆಯ ಬಾಯಿಂದ ಬಲು ಸುಂದರವಾಗಿ ಬಂದಿವೆ. ಮಾರುತಿಯನ್ನು ಸ್ತೋತ್ರಮಾಡುವಾಗ ಹರಿದಾಸರು ಸಾಧಾರಣವಾಗಿ ಹನುಮ ಭೀಮ ಮಧ್ವ ಎಂಬ ಅವತಾರಗಳನ್ನು ವರ್ಣಿಸಿದಂತೆ ಈಕೆ ವರ್ಣಿಸಿಲ್ಲ. ಏಕನಾಥೆಯೆಂಬ ಗ್ರಾಮದೇವತೆಯನ್ನು ಪಾರ್ವತಿಯೆಂದೇ ಸ್ತೋತ್ರ ಮಾಡಿರುತ್ತಾಳೆ.

ಪರಮಾತ್ಮನನ್ನು ತಾಯಿಯೆಂದು ಉಪಾಸನೆಮಾಡಿದವರು ಕೆಲವರು, ತಂದೆ ಯೆಂದು ಉಪಾಸನೆಮಾಡಿದವರು ಕೆಲವರು; ಸಖನೆಂದು ಉಪಾಸನೆಮಾಡಿದವರು ಕೆಲವರು; ಪತಿಯೆಂದು ಉಪಾಸನೆಮಾಡಿದವರು ಕೆಲವರು; ವಿಟನೆಂದು ಉಪಾಸನೆ ಮಾಡಿದವರು ಕೆಲವರು. ಗಿರಿಯಮ್ಮನಾದರೋ ಪರಮಾತ್ಮನನ್ನು ಪುತ್ರನೆಂದೇ ಉಪಾಸನೆ ಮಾಡಿದಳು. ಶ್ರೀಕೃಷ್ಣನನ್ನು ಮಗುವೆಂದೇ ಆಡಿಸಿ, ಮಗುವೆಂದೇ ಮುದ್ದಿಸಿ, ಮಗುವೆಂದೇ ಹಾಡಿ-ಹಾಡಿದವಳು ಗಿರಿಯಮ್ಮ. ಸುಮತೀಂದ್ರಸ್ವಾಮಿಗಳು 'ಯಶೋದಮ್ಮ' ಎಂದು ಕರೆದ ಮಾತನ್ನು ಪ್ರಮಾಣವಾಗಿಟ್ಟುಕೊಂಡು ಗಿರಿಯಮ್ಮನು ಯಶೋದಾದೇವಿಯ ಅವತಾರವೆನ್ನುವರು ಕೆಲವರು-ಕೆಲವರು ಆಕೆಯು ಯಾರೇ ಆಗಿರಲಿ! ಗಿರಿಯಮ್ಮನು ದೊಡ್ಡವಳು. ಗಿರಿಯಮ್ಮನು ದೊಡ್ಡ ಕವಯಿತ್ರಿ; ಗಿರಿಯಮ್ಮನು ದೇವರನ್ನು ಕಂಡವಳು.

ಗಿರಿಯಮ್ಮನು ಪುರಂದರದಾಸರಂತೆ ಸರ್ವಸ್ವವನ್ನು ದಾನಮಾಡಿ ಜ್ಞಾನಪಡೆಯ ಲಿಲ್ಲ. ಗಿರಿಯಮ್ಮನು ವಿಜಯದಾಸರಂತೆ ಕಷ್ಟಪಟ್ಟು ದೇಶ ದೇಶ ತಿರುಗಿ ಜ್ಞಾನಸಂಪಾ ದಿಸಲಿಲ್ಲ. ಗಿರಿಯಮ್ಮನು ಜಗನ್ನಾಥ ದಾಸರಂತೆ ರೋಗಗ್ರಸ್ತಳಾಗಿ ದೊಡ್ಡವರ ಮೊರೆ ಬಿದ್ದು ಆಯುಸ್ಸು ಐಶ್ವರ್ಯ ಆರೋಗ್ಯಗಳನ್ನೂ ಜ್ಞಾನವನ್ನೂ ಸಂಪಾದಿಸಲಿಲ್ಲ, ಆದರೆ ಗಿರಿಯಮ್ಮನು ಯಾರಂತೆಯೂ ಕಷ್ಟಪಡದೆ, ಎಲ್ಲರಂತೆ ಜ್ಞಾನವನ್ನು ಸಂಪಾದಿಸಿ, ಎಲ್ಲರಿ ಗಿಂತ ಅಧಿಕವಾಗಿ ಪರಮಾತ್ಮನೊಡನೆ-ಕೂಡಾಡಿದವಳು.

ಇಂತಹ ಗಿರಿಯಮ್ಮನ ಅಂತಿಮಕಾಲವೂ ಒಂದು ಬಗೆಯ ಸಮಾಧಿಯೇ ಆಯಿತು. ಹೊನ್ನಾಳಿಗೆ ಸಮೀಪದಲ್ಲಿ ಕಮ್ಮಾರಗಟ್ಟೆ ಎಂಬ ಗ್ರಾಮವಿದೆ. ಗ್ರಾಮವು ಪವಿತ್ರವಾದ ತುಂಗಭದ್ರಾ ತೀರದಲ್ಲಿದೆ. ಆ ಸ್ಥಳದಲ್ಲಿ ನದಿಗೆ ಸೋಪಾನವನ್ನೂ ಮಾರುತಿಗೆ ದೇವಸ್ಥಾನ ವನ್ನೂ ಅಮ್ಮನವರೇ ಕಟ್ಟಿಸಿದ್ದಂತೆ! ತನ್ನ ಅಂತಿಮಸ್ಥಾನದಲ್ಲಿ ಸ್ಮಾರಕವಿರಬೇಕೆಂದೇ ದೇವಾಲಯವನ್ನೂ ಸೋಪಾನವನ್ನೂ ಕಟ್ಟಿಸಿರಬೇಕೆಂದು ಬಲ್ಲವರು ತರ್ಕಿಸುತ್ತಾರೆ.

ಅಮ್ಮನು ತುಂಗಭದ್ರೆಯ ಪೂರ್ಣಪ್ರವಾಹದಲ್ಲಿ ಅದೃಶ್ಯಳಾದಳೆಂದು ಕೆಲವರ ಅಭಿಪ್ರಾಯವಿದೆ. ಅಮ್ಮನ ಹೆಸರಿನ ಕಟ್ಟೆಯಿರುವುದನ್ನು ನೋಡಿ, ಅದು ಅಮ್ಮನು ನಿರ್ಯಾಣಮಾಡಿದ ಸ್ಥಳವೆಂದು ಮತ್ತೆ ಕೆಲವರು ಅಭಿಪ್ರಾಯ ಪಡುತ್ತಾರೆ. ಈ ಎರಡನ್ನೂ ಬಿಟ್ಟು ನಿರ್ಯಾಣಕ್ಕಾಗಿ ಅಮ್ಮನನ್ನು ಹಂಪೆಗೆ ಕರೆದೊಯ್ಯುವರು ಕೆಲವರಿದ್ದಾರೆ. ಹೇಗೇ ಇರಲಿ, ಅಮ್ಮನ ಪುಣ್ಯತಿಥಿಯಾದ ಶ್ರಾವಣ ಶುದ್ಧ ಪಂಚಮಿಯ ದಿವಸ ಅಮ್ಮನು ಸ್ಥಾಪಿಸಿದ ಮಾರುತಿಗೆ ರಥೋತ್ಸವವಾಗುತ್ತದೆ. ಭಕ್ತಜನರು, ದೇವರಿಗೆ ನಡೆದುಕೊಂಡಂತೆ ಮಹಾತ್ಮಳಾದ ಗಿರಿಯಮ್ಮನಿಗೂ ನಡೆದುಕೊಳ್ಳುತ್ತಾರೆ. ಅಮ್ಮನ ಕಟ್ಟೆಗೆ ಹರಕೆಮಾಡಿಕೊಂಡು ಇಷ್ಟಾರ್ಥ ಪೂರ್ಣವಾಯಿತೆಂದು ತೃಪ್ತಿಪಡುವವರೂ ದೊರೆಯುತ್ತಾರೆ.

ಅಗಸರ ಬಂಡೆಯಾಗಿ ಸಾವಿರಾರು ವರುಷವಿರುವುದಕ್ಕಿಂತ ಪೂಜೆಗಲ್ಲಾಗಿ ಮೂರು ದಿವಸ ಬಾಳಿದರೂ ಸಾಕಲ್ಲವೆ?

ವೇಣುಗೋಪಾಲದಾಸರು

[ವಿಜಯದಾಸರ ನಂತರ ವೇಣುಗೋಪಾಲದಾಸರ ಚರಿತ್ರೆಯನ್ನು ಪ್ರತ್ಯೇಕವಾಗಿ ಬರೆಯಬೇಕಾಗಿತ್ತು. ಹಾಗೆ ಬರೆಯದಿರಲು ಗ್ರಂಥದ ಪುಟಸಂಖ್ಯೆ ಬೆಳೆದೀತೆಂಬ ಭಯವು ಕಾರಣವಾಯಿತು. ವಿಜಯದಾಸರ ಚರಿತ್ರೆಯಲ್ಲಿ ಅಲ್ಪ ಪರಿಚಯ ಮಾಡಿಕೊಟ್ಟಿರುವುದು ಸಾಕೆಂಬಷ್ಟು ತತ್ಕಾಲದ ತೃಪ್ತಿಯಾಯಿತು. ಆದರೂ ವಿಜಯದಾಸರ ಚರಿತ್ರೆಯ ೩೯೮ ಮತ್ತು ೩೯೯ನೆಯ ಪುಟಗಳಲ್ಲಿ ಬರೆದಿರುವ ವೇಣುಗೋಪಾಲರಾಯರ ಮಾತುಗಳ ಜೊತೆಗೆ ಅತಿ ಮುಖ್ಯವಾದ ಕಡೆಯ ಮಾತುಗಳನ್ನು ಕೆಲವನ್ನು ಹೇಳಬೇಕೆಂದೆನಿಸಿತು.]

ತಿಮ್ಮಣ್ಣಯ್ಯನವರು–ರಂಗನಾಮದ ತಿಮ್ಮಣ್ಣಯ್ಯನವರು, ವೇಣುಗೋಪಾಲದಾಸರು, ಈ ಮೂರೂ ದಾಸರ ಹೆಸರುಗಳು. ತಿಮ್ಮಣ್ಣನೆಂಬುವುದು ಮಾತಾಪಿತೃಗಳಿಂದ ಬಂದ ಹೆಸರಾದರೆ, ರಂಗನಾಮದ ತಿಮ್ಮಣ್ಣನೆಂಬುವುದು, ವಿಜಯದಾಸರಿಂದ ಬಂದ ಹೆಸರಾಯಿತು. ವೇಣುಗೋಪಾಲದಾಸರೆಂಬುವುದು, ಅವರ ಮುದ್ರಿಕೆಯ ಪ್ರಸಿದ್ಧಿಯಿಂದ ರೂಢಿಗೆ ಬಂದ ಹೆಸರಾಯಿತು. ತಂದೆಯ ಹಕ್ಕುದಾರಿಯ ಮೇಲೆ ತಿಮ್ಮಣ್ಣನವರು ಆದವಾನೀ ಸುಭೆಯ ದಿವಾನರಾಗಿದ್ದರೆಂಬ ನೆನಪು ವಾಚಕರಿಗಿರಬಹುದು. ಅವರು ರಾಜ ಸೇವೆಗೆ ಬೇಸತ್ತು ವಿಜಯದಾಸರ ಶಿಷ್ಯರಾಗಿ–"ನಿನ್ನ ನಂಬಿದ ನರಗೆ ಅನ್ಯರಾಶ್ರಯವೇಕೋ ಚನ್ನ ಗುರು ವಿಜಯರಾಯಾ" ಎಂಬುದಾಗಿ ಗುರುಸ್ತೋತ್ರಮಾಡಿರುವುದನ್ನು ಓದಿದ ನೆನಪೂ ಇರಬಹುದು.

ರಾಯರ ಏಕಮಾತ್ರ ಪುತ್ರನನ್ನು ನವಾಬನು ಇಸ್ಲಾಂಧರ್ಮಕ್ಕೆ ಸೇರಿಸಿಕೊಂಡ ಮೇಲೆ ಅವನು ತನ್ನ ಮಗಳನ್ನೇ ಕೊಟ್ಟು ವಿವಾಹಮಾಡಿದನು. ಧರ್ಮಾಂತರನಾದ ರಾಯರ ಮಗನು ಕಾಲಾಂತರದಲ್ಲಿ ಆದವಾನಿಯ ಪದವಿಯನ್ನೂ ಅನುಭವಿಸಿದನು.

ರಾಯರ ಆಧಿಪತ್ಯದ ಕಾಲದಲ್ಲಿ ನವಾಬನ ಸಂಪೂರ್ಣ ಪ್ರೇಮವು ಅವರ ಮೇಲಿತ್ತು. ಮರಾಠರು ಆದವಾನಿಯನ್ನು ಸ್ವಾಧೀನಪಡಿಸಿಕೊಳ್ಳದಿದ್ದುದಕ್ಕೂ ರಾಯರೇ ಕಾರಣರಾಗಿದ್ದರು. ಹೀಗಿದ್ದರೂ ಇತರ ಮುಸಲ್ಮಾನ ಅಧಿಕಾರಿಗಳು, ರಾಯರ ಮೇಲಿದ್ದ ನವಾಬನ ನಂಬಿಕೆಯನ್ನು ತಪ್ಪಿಸಬೇಕೆಂದು ಕುತಂತ್ರ ಹೂಡಿದರು. ಇಂತಹ ಕಾಲದಲ್ಲಿ ರಾಯರು ತಮ್ಮ ಮಗಳ ವಿವಾಹವನ್ನು ಅಟ್ಟಹಾಸದಿಂದ ಮಾಡಿದರು. ನವಾಬನೂ ಮುಸಲ್ಮಾನ ಅಧಿಕಾರಿಗಳೂ ರಾಯರ ಔತಣವುಂಡು, ಲೌಕಿಕಕ್ಕನುಸರಿಸಿ ಮದುಮಕ್ಕಳಿಗೆ ಯೋಗ್ಯ ಬಹುಮಾನವನ್ನು ಕೊಟ್ಟರು. ಆ ರಾತ್ರಿ ವಧೂವರರ ಮೆರವಣಿಗೆಯು ದಿವಾನರ ಪದವಿಗೆ ತಕ್ಕಂತೆ ಶೋಭಿಸುತ್ತಿತ್ತು. ಇವೆಲ್ಲವನ್ನು ನೋಡಿ, ಸಹಿಸಲಾರದ ಕ್ಷುದ್ರಗಾರರು, ಮಹಲಿನ ಮೇಲೆ ನಿಂತು ರಾತ್ರಿಯ ಅಮಲಿನಲ್ಲಿ ಮೆರವಣಿಗೆ ಚೆನ್ನಾಗಿದೆಯೆಂದು ಮಾತಾಡುತ್ತಿದ್ದ ನವಾಬನ ಬುದ್ಧಿಯನ್ನು ಕೆಡಿಸಿದರು.–'ಈ ಕಾಫರನ ಮಗಳ ಮದುವೆಗೆ ಇಷ್ಟೇಕೆ ಅಟ್ಟಹಾಸ? ಎಷ್ಟು ಹಣ ತಿಂದು ನನ್ನ ಕಣ್ಣೆದುರಿಗೇ ಆಡಂಬರ ಮಾಡಿ

ದ್ದಾನೆ! ಇವನ ಮನೆಯನ್ನು ಜಫ್ತ್‌ಮಾಡಿರಿ; ನೆರೆವಣಿಗೆಯಲ್ಲಿರುವ ಸವಾರರನ್ನೂ ಪಂಜಿನವರನ್ನು ಹಿಂದಕ್ಕೆ ಕರೆಸಿರಿ' ಎಂಬ ಉದ್ಗಾರಗಳು ನವಾಬನ ಬಾಯಿಂದ ಬರುವಂತೆ ಮಾಡಿದರು. ಕೇಳುವುದೇನು? ಮನೆಗೆ ಹೋಗದಂತೆ ಸುತ್ತ ಅರಬರ ಪಹರೆಯಾಯಿತು. ಉತ್ಸವ ಭಂಗವಾಯಿತು.

ಅನಿರೀಕ್ಷಿತವಾಗಿ, ನವಾಬನ ಅವಿಚಾರದಿಂದಾದ ಅಪಮಾನದಿಂದ ರಾಯರು ಬಲು ಸಂಕಟಪಟ್ಟರು. ನಿರುಪಾಯರಾಗಿ ಮಲಗವೇಲಿಗೆ ಬಂದು ಕಂಬೋಲಿಯ ಶಾಸ್ತ್ರ ಪೂಡಿ, ಬಂಧು ಜನರನ್ನು ಬೀಳ್ಕೊಟ್ಟರು.

ಅತ್ತ ನವಾಬನ ಕಡೆಯವರು, ದಿವಾನರ ಮನೆಯಲ್ಲಿ ದೊರೆತ ಮೂರು ಲಕ್ಷ ಸ್ವತ್ತನ್ನು ಜಫ್ತ್‌ಮಾಡಿ ಬೊಕ್ಕಸಕ್ಕೆ ಸೇರಿಸಿದರು. ವೇಣುಗೋಪಾಲರಾಯರ ಮೇಲೆ ಆಪಾದನೆ ಹೊರಿಸಿ, ದಂಡಿಸುವ ಹಂಚಿಕೆಯಲ್ಲಿದ್ದರು. ನವಾಬನಾದರೋ-ಸ್ವಜನರ ಮಾತುಕೇಳಿ ಮಾಡಿದ ಕೃತಿಗೆ ವಿಷಾದಪಟ್ಟು ಮುಂದೇನು ಮಾಡಬೇಕೆಂಬುದು ತೋರದೆ ದಿಙ್ಮೂಢನಾಗಿದ್ದನು.

ವೇಣುಗೋಪಾಲರಾಯರಿಗೆ ಮಾಡಿದ ಅಪಮಾನದ ಸಂಗತಿ ಪುಣೆಯ ಪೇಷ್ವಾಯಿಗಳಿಗೆ ತಿಳಿಯಿತು. ಅವರು ನವಾಬನ ವರ್ತನೆಯನ್ನು ಖಂಡಿಸಿ, ರಾಯರ ಪದವಿಯನ್ನವರಿಗೇ ಕೊಟ್ಟು ಗೌರವಿಸದಿದ್ದರೆ, ಪರಿಣಾಮ ನೆಟ್ಟಗಾಗಲಾರದೆಂದು ರಾಯಸ ಕಳುಹಿಸಿದರು. ಮುಸಲ್ಮಾನರ ಪ್ರಾಬಲ್ಯವಡಗಿ ಮಹಾರಾಷ್ಟ್ರರಿಗೆ ಅವರು ಅಂಜುತ್ತಿದ್ದ ಕಾಲವದಾಗಿದ್ದುದರಿಂದ ನವಾಬನೇ ರಾಯರನ್ನು ಸಮಾಧಾನಗೊಳಿಸಲು ಮಲಗವೇಲಿಗೆ ಬಂದನು. ಮೂರ್ಖಜನರ ಮಾತಿನಮೇಲೆ ನಡೆದುಹೋದ ಕೃತಿಗೆ ವಿಷಾದಪಟ್ಟನು. ತಾನು ಜೀವಂತನಾಗಿರುವ ತನಕ ಸುಭೆಯ ದಿವಾನಗಿರಿಯನ್ನು ರಾಯರೇ ಮಾಡಬೇಕೆಂದು ಕೇಳಿಕೊಂಡನು. ರಾಯರು ಪುನಃ ಲೌಕಿಕ ಮಾಡುವುದಿಲ್ಲವೆಂದೇ ಪ್ರಾಯೋಪವೇಶಕ್ಕೆ ಕುಳಿತವರು ಸಂಕಲ್ಪವನ್ನು ಬದಲಿಸಲಿಲ್ಲ.—ನಿರ್ಯಾಣಕಾಲಕ್ಕೆ ಸ್ವಲ್ಪ ಮುಂಚಿತವಾಗಿ ಹಾಡಿದ ದೇವರನಾಮವು ಈ ಕೆಳ ಕಂಡಂತಿದೆ.

ಮಧ್ಯಮಾವತಿ—ತ್ರಿಪುಟತಾಳ

ಪಾಲಿಸುವುದು ಎನ್ನ ಪಾವನ್ನ, ವೇಣುಗೋ
ಪಾಲ ಗುಣಗಣಪೂರ್ಣ, ನಿನ್ನಂಘ್ರಿ ಭಜನೆಯ
ಲೋಲರಲ್ಲಿಡು ಮುನ್ನ-ಆನಂದ ಘನ್ನ ಪ.

ಶ್ರೀಲತಾಂಗಿಯ ರಮಣ ಶೋಭಿತ
ಮಾಲೆ ಮುಕ್ತಾಭರಣ ಭಕುತರ
ಕಾಲಕಾಲಕೆ ಪೊರೆವದಾತ ವಿ
ಶಾಲಮಹಿಮನೆ ಮೇಲು ಕರುಣವಿ- ಅ.

ಏಸು ಜನುಮಗಳಿಂದ, ಭವದೊಳಗೆ ಬಂದು
ವಾಸವಾದುದರಿಂದ, ಭವದೊಳಗೆ ಪರಿ ಪರಿ
ಕ್ಲೇಶಪಟ್ಟೆ ಗೋವಿಂದ, ಖತಿ ಸಾಗರದೊಳು
ಈಸಲಾರೆ ಮುಕುಂದ–ನೀ ಕಡಿಯೊ ಬಂಧ,

ವಾಸುದೇವಾನಂತ ಶ್ರೀಧರ
ಕೇಶವಾ ದಾಮೋದರಾಚ್ಯುತ
ಶ್ರೀಶ ಸುಂದರ ಹಾಸ ಹರಿ ಸ
ರ್ವೇಶ ಸಜ್ಜನ ಪೋಷಕನೆ
ವಾಸವಾನುಜ ವಾಸವ ವಿನುತ
ವಾಸಿ ಪಂಥಗಳಿಲ್ಲದಿಹ ಸುಖ
ದಾಶ ರಾವಣನಾಶ ಗೈಸಿದ
ದಾಶರಥೆ ಮನದಾಶೆ ಪೂರ್ತಿಸಿ

ಅರಿಗುಸುರಲಿ ನಾನು, ಅಲ್ಪಜ್ಞ ಜನರಿಗೆ
ಸಾರಿ ಪೇಳಿದರೇನು, ಸರ್ವಜ್ಞ ನಿನ್ನನು
ದೂರನೋಡದೆ ಮಾಣು, ನೆನೆವರಿಗೆ ಬೆಂಬಲ
ಸಾರಿನ ಸುರಧೇನು–ರಥಾಂಡಜನು

ಏರಿ ಮೆರೆವ ಯದುಕುಲೋತ್ತಮ
ಮಾರಜನಕ ಮಂದರೋದ್ಧರ
ವಾರಿಜಾಸನ ವಂದಿತಾಂಘ್ರಿ
ಸಾರ ಹೃದಯರ ಸಾಕುತಿಪ್ಪನೆ

ಕ್ರೂರಕುಲ ಕುಠಾರ, ಕುಂಭಿಣಿ
ಭಾರ ಪರಿಹರ ಭವ ವಿಮೋಚಕ
ನೀರಜಾಕ್ಷ ನಿಗಮವೇದ್ಯ
ಅಹಾರ ಕೌಸ್ತುಭ ಹೃದಯ ಶೋಭಿತ ೨

ಮನವ ನಿಲ್ಲಿಸೋ ಜೀಯಾ, ದುರ್ಲಭದಿ ಬಂದಿಹ
ಮಾನವಾಗ್ರಣಿ ಕಾಯೋ ಸ್ಥಿರವಲ್ಲವೋ ಈ
ತನುವು ತಿರುಮಲರಾಯ, ಇದರೊಳಗೆ ಸಲಹಲು
ಘನತೆ ನಿನಗತಿಶಯ್ಯಾ–ಬಿಡು ನಿನ್ನ ಮಾಯಾ

ವನಜಜಾಂಡವ ಪಡೆದು ಸರ್ವರ
ದಿನದಿನದಿ ಪೊರೆಯುತ್ತ ಪರಮಾ
ದನುಜ ದಿವಿಜರ ಮನೆಯ ಮಾಡಿ
ಅನುದಿನದೊಳಗಾಡುತಿಪ್ಪನೆ

ಮುನಿಜನರ ಹೃದಯಾಬ್ಜ ಮಂದಿರ
ಬಿನಗು ದೈವರ ಗಂಡ ಗಜನೃಪ
ವನಿತೆ ವಸುಧೆಯ ಕಾಯ್ದ ವೇಣು
ಗೋಪಾಲ ವಿಠಲ ಒದಗಿ ಈಗಲೆ ೩

ಮುಲಗವೇಲಿಯಲ್ಲಿ ಒಂದು ಕಲ್ಯಾಣಿಯನ್ನು ರಾಯರು ಪ್ರಾಯೋಪವೇಶ ಮಾಡಿದ ಕಲ್ಯಾಣಿಯೆಂದು ಜನರು ತೋರಿಸುತ್ತಾರೆ. ನಿರ್ಜಲ ವ್ರತದಿಂದ ಕಳೆದ ದಿವಸಗಳ ಸಂಖ್ಯೆಯನ್ನು ನಲವತ್ತೆರಡೆಂದು ಬಲ್ಲವರು ಹೇಳುತ್ತಾರೆ. ವೇಣುಗೋಪಾಲರಾಯರ ನಿರ್ಯಾಣವು ರಾಜದಂಡದಿಂದಲೇ ಆಯಿತೆಂದೂ, ಪುಣೆಯ ಪೇಶ್ವಾಯಿಗಳು ರಾಯಸ ಕಳುಹಿಸಲಿಲ್ಲವೆಂದೂ ಏಕಪಕ್ಷದ ಹೇಳಿಕೆಯಿದೆ. ಬಹುಪಕ್ಷ-ಪ್ರಬಲ ಪ್ರಮಾಣಗಳಿಂದ ಏಕಪಕ್ಷದ ದುರ್ಬಲ ಪ್ರಮಾಣಕ್ಕೆ ಮಹತ್ವ ಕೊಡಬೇಕಾಗಿಲ್ಲ.

ತಿಮ್ಮಣ್ಣಯ್ಯನವರು ಬಹಳ ಪದ ಸುಳಾದಿಗಳನ್ನು ಹಾಡಿದವರು. ಗೋಪಾಲದಾಸರಷ್ಟೇ ಮಾನ್ಯರಾದವರು. ಭಾಷೆ-ಭಾವನೆಗಳಲ್ಲಿ ಗೋಪಾಲದಾಸ-ಸೋದರರಿಗೂ ಇವರಿಗೂ ವ್ಯತ್ಯಾಸ ಕಂಡುಬರುವುದಿಲ್ಲ. ಅಂಕಿತವನ್ನು ನೋಡಿದ ವಿನಾ-ಈ ರಾಯರ ಪದವಿದೆಂದು ಗುರ್ತಿಸಲು ಸಾಧ್ಯವಿಲ್ಲ. ಗೋಪಾಲವಿಠಲ, ವರದಗೋಪಾಲವಿಠಲ, ಗುರುಗೋಪಾಲವಿಠಲ, ವೇಣುಗೋಪಾಲವಿಠಲ ಮುದ್ರಿಕೆಗಳಲ್ಲಿ ಪಾಠಮಾಡುವರಿಂದ ಬಲು ವ್ಯತ್ಯಾಸವಾಗುತ್ತಲಿದೆ. ಸಂಪ್ರದಾಯಸ್ಥರ ಹಸ್ತಪ್ರತಿಗಳ ಪ್ರಮಾಣದಿಂದ ಪದಗಳು ಇಂಥವರವೇ ಎಂದು ನಿರ್ಧರಿಸಬೇಕಾಗಿದೆ. ಹಿಂದೆ ವೈಕುಂಠದಾಸರಾಗಿದ್ದವರೂ, ಮುಂದೆ ಮೊದಲಕಲ್ಲು ಶೇಷದಾಸರಾದವರೂ ಇವರೇ ಎಂದು ಅನುಭವಿಗಳ ಆಪ್ತವಾಕ್ಯಗಳಿವೆ. ಹಾಡಿದ ಪದಗಳಲ್ಲಿ ಸೂಚನೆಗಳಿವೆ. ತಿಮ್ಮಣ್ಣಯ್ಯನವರ ವಂಶೀಕರು ಆದವಾನಿ ಪ್ರಾಂತ್ಯದಲ್ಲಿದ್ದಾರೆ. ವೈದಿಕ ಪದ್ಧತಿಯಂತೆ ಪ್ರತಿವರ್ಷ ರಾಯರ ಆರಾಧನೆಯನ್ನು ನಡೆಸುತ್ತಾರೆ.

ಅಣ್ಣಾವಧೂತರು (ಬಡ ಅಣ್ಣಯ್ಯಾಚಾರ್ಯರು)

ಅಣ್ಣಾವಧೂತರು ಅಥವಾ ಬಡ ಅಣ್ಣಯ್ಯಾಚಾರ್ಯರೆಂಬುವರು **'ವಿಠಲವ್ಯಾಸ'** ಮುದ್ರಿಕೆಯಿಂದ ಅನೇಕ ದೇವರನಾಮಗಳನ್ನು ಹಾಡಿದ್ದಾರೆ. ಅವಧೂತರ ಪದಗಳು ಸಂಸ್ಕೃತ, ಕನ್ನಡ, ಉರ್ದು ಹೀಗೆ ಮೂರು ಭಾಷೆಗಳಲ್ಲಿವೆ. ಯಾವ ಭಾಷೆಯುಲ್ಲಾಗಲೀ–ಕೊರಡೆಯ ಪೆಟ್ಟಿನಂತೆ, ಖಂಡಿತೋಕ್ತಿಯಾಡುವುದು ಅವಧೂತರ ಧೋರಣೆಯಾಗಿದೆ. ಅವಧೂತರು ಮೊದಲಿನಿಂದ ಯೋಗಾಭ್ಯಾಸಿಗಳು. ನ್ಯಾಯ ವೇದಾಂತ ಶಾಸ್ತ್ರಗಳಲ್ಲಿ ಅಪ್ರತಿಮ ಪಂಡಿತರು. ಅತ್ಯಂತ ಬಡವರಾಗಿದ್ದುದು ಕಾರಣವಾಗಿ **'ಬಡ'** ಶಬ್ದವು ಆಚಾರ್ಯರ ಅಡ್ಡ ಹೆಸರಾಯಿತು. ಸಾಂಸಾರಿಕ ಕ್ಲೇಶವು ಆಚಾರ್ಯರನ್ನು ಅವಧೂತರನ್ನಾಗಿ ಮಾಡಿತು. **'ಕರತಲಭಿಕ್ಷಸ್ತರುತಲವಾಸಃ'** ಎಂಬುವುದು ಜನರಾಡುವ ಅವಧೂತರ ಚರ್ಯವಾಯಿತು. ಅವಧೂತರ ಕಾರ್ಯಕ್ಷೇತ್ರವು, ತುಂಗಾವರದಾ ನದಿಗಳ ಮಧ್ಯಪ್ರದೇಶವಾಗಿತ್ತು. ಉಡಲು ಒಂದು ತುಂಡು ಪಂಚೆ, ಹೆಗಲ ಮೇಲೆ ಧಾವಳಿ, ಕೈಯಲ್ಲಿ ತೆಂಗಿನ ಚಿಪ್ಪು, ಜನಿವಾರದಲ್ಲಿ ಒಂದು ಒಡಕು ನಾರಾಯಣ ಮುದ್ರೆ, ಇಷ್ಟು ಅಣ್ಣಾವಧೂತರ ಚರ ಆಸ್ತಿಗಳು. ಆಡಿದ ಮಾತು, ಶಾಪಾನುಗ್ರಹಗಳಾಗುತ್ತಿದ್ದ ಕಾರಣ ಜನರಿಗೆ ಅವಧೂತರಲ್ಲಿ ವಿಶೇಷ ಭಯಭಕ್ತಿಗಳಿದ್ದುವು. ನಿರ್ದೇಶವಿಲ್ಲದೆ ತಿರುಗುವುದು, ಯಾರ ಮನೆಯ ಬಾಗಿಲಲ್ಲಾದರೂ ನಿಂತು 'ಭಿಕ್ಷಾ' ಎನ್ನುವುದು, ಸಿಕ್ಕಿದ್ದನ್ನು ಅಲ್ಲೇ ತಿಂದು, ಚಿಪ್ಪಿನ ತುಂಬಾ ನೀರು ಕುಡಿಯುವುದು; ಈ ಕೃತಿಗಳಿಂದ ಅವಧೂತರು ನೋಡಿದವರಿಗೆ ಹುಚ್ಚರಂತೆಯೇ ಕಂಡುಬರುತ್ತಿದ್ದರು. ಪೇಟೆಗೆ ಬಂದರೆ ಹುಡುಗರು ಹುಚ್ಚ ಬಂದನೆಂದು ಹಿಂಬಾಲಿಸುತ್ತಿದ್ದರು. ಹುಚ್ಚರಂತಿದ್ದ ಅವಧೂತರು–ಯಾರದಾದರೂ ಅಂಗಡಿಗೆ ಕೈಹಾಕಿ ಸಿಕ್ಕಿದ ತೀನಿಯ ದಿನಸುಗಳನ್ನು ಬೊಗಸೆ ಬೊಗಸೆಯಾಗಿ ಹಿಂಬಾಲಿಸಿದ ಹುಡುಗರಲ್ಲಿ ಹಂಚುತ್ತಿದ್ದರು. ಅವಧೂತರು ಕೈಯಿಟ್ಟ ಅಂಗಡಿಗೆ ಏಳಿಗೆಯಾಗುವುದೆಂಬ ಅನುಭವ ವ್ಯಾಪಾರಿಗಳಿಗಾಗಿತ್ತು. ಆದರಿಸಿ ಕರೆದವರ ಅಂಗಡಿಗೆ ಅವರು ಬರುತ್ತಿರಲಿಲ್ಲ. ಅವರು ಬೈದರೆ ಒಳ್ಳೇದಾಗುತ್ತಿರಲಿಲ್ಲವೆಂಬ ಅನುಭವವೂ ಜನರಿಗುಂಟಾಗಿತ್ತು.

ಒಂದು ದಿನ ಇದ್ದಕ್ಕಿದ್ದ ಹಾಗೇ ಅವಧೂತರು ಖಂಡೇರಾಯರ ಮನೆಗೆ ಬಂದರು. ಖಂಡೇರಾಯರೆಂದರೆ ಅಂದಿನ ಸವಣೂರ ದಿವಾನರು. ಆ ಕಾಲದಲ್ಲಿ ಸವಣೂರು ತಕ್ಕಷ್ಟು ದೊಡ್ಡ ಸಂಸ್ಥಾನವಾಗಿತ್ತು. ಸವಣೂರಿನ ಕೀರ್ತಿ ಯಾವತ್ತೂ ಖಂಡೇರಾಯರದಾಗಿತ್ತು. ದಿವಾನರು ಅವಧೂತರನ್ನು ಕಾಣುತ್ತಲೇ ಭ್ರಮೆಗೊಂಡರು. ಎಂದೂ ಇಲ್ಲದೆ ಅಲಭ್ಯ ಲಾಭವಾಗಿ, ಆಚಾರ್ಯರು ಬಂದ ಕಾರಣವೇನೆಂದು ಅವರ ಪಾದಗಳಿಗೆರಗಿದರು. ಅವಧೂತರು–**'ರಾಯಾ ನಿಮ್ಮ ಥೊರೀ ಭೆಟ್ಟೀ ಮಾಡಿಸು'** ಎಂದರು.

ರಾಯರಿಗೆ, ಈ ಅರೆ ಬತ್ತಲೆಯ ಹುಚ್ಚನನ್ನು ನವಾಬನ ಬಳಿಗೆ ಕರೆದುಕೊಂಡುಹೋಗುವ ಬಗೆ ಹೇಗೆಂಬ ಯೋಚನೆ ಹಿಡಿಯಿತು. ವ್ಯಕ್ತಿಯನ್ನು ನೋಡಿ ತಾಳಿಕೆ ಬರುವಂತಿಲ್ಲ. ಉಕ್ತಿಯಿಂದ ನವಾಬನಿಗೆ ಸಂತೋಷವಾಗುವ ಹಾಗಿಲ್ಲ! ಏನು ಮಾಡಬೇಕೆಂದು ಚಿಂತೆ ಯಾಯಿತು. ಆಗ ರಾಯರು ತತ್ಕಾಲದಲ್ಲಿ ಏನಾದರೂ ಉಪಾಯ ಮಾಡಿ ನಿವಾರಿಸೋಣವೆಂದು–'ಆಚಾರ್ಯರೇ ಈ ದಿನ ನವಾಬರು ಯಾರಿಗೂ ಭೆಟ್ಟಿಯಾಗುವುದಿಲ್ಲ, ಮತ್ತೊಮ್ಮೆ ನೋಡೋಣ' ಎಂದರು. ಆಚಾರ್ಯರು, ಅಷ್ಟಕ್ಕೇ ಬಿಡಲಿಲ್ಲ–'ಇಂದಲ್ಲ ದಿದ್ದರೆ ನಾಳೆಯಾಗಲಿ, ಅಂತೂ ನವಾಬ ಸಾಹೇಬರ ಭೆಟ್ಟಿಯಾಗಲಿ' ಎಂದರು. ರಾಯರು–'ಏನು ಸೇವೆ ಮಾಡುವುದಕ್ಕೂ ನಾನೇ ಸಿದ್ಧನಿರುವಾಗ ನವಾಬರ ಗೊಡವೆ ಯೇಕೆ? ನನಗೇ ಅಪ್ಪಣೆಯಾಗಲಿ' ಎಂದರು. ಆಚಾರ್ಯರು–'ನಿನ್ನ ಕಟ್ಟಿಕೊಂಡು ನಾನೇನು ಮಾಡಲಿ? ಭೆಟ್ಟಿ ಮಾಡಿಸೆಂದರೆ, ಮಾಡಿಸಬೇಕು! ನಾಳೆ ಬರ್ತೀನಿ, ತಿಳೀತೋ?' ಎಂದು ನಡೆದುಬಿಟ್ಟರು. ಖಂಡೇರಾಯರು–'ಇವರೇನು ಹುಚ್ಚಾಚಾರ್ರು; ಬಂದರೆ ಬಂದರು, ಬಿಟ್ಟರೆ ಬಿಟ್ಟರು. ಮಾತಿಗೆ ನೆಲೆಯಿಲ್ಲ, ಲಹರಿ ಬಂದಂತೆ ನಡೆಯುವವರು' ಎಂದು ಉದಾಸೀನರಾಗಿದ್ದರು. ಆದರೆ ಆಚಾರ್ಯರು ಮೂರನೇ ದಿನ ಹೊತ್ತಿಗೆ ಸರಿಯಾಗಿ ಬಂದೇ ಬಂದರು. 'ರಾಯಾ, ನಡೀ ಹೋಗೋಣ!' ಎಂದರು.

ಖಂಡೇರಾಯರು ಎಲ್ಲೋ ಹುಚ್ಚನ ಸಹವಾಸ ಬಂತಲ್ಲಾ! ಎಂದುಕೊಂಡು–'ಆಚಾರ್ಯರೇ, ರಾಜದರ್ಶನಕ್ಕೆ ಬರೀ ತಲೆಯಿಂದ ಹೋಗಬಾರದು, ಏನಾದರೂ ಸುತ್ತಿಕೊಂಡು ಬನ್ನಿರೆಂದರು. 'ಸರಿ' ಎಂದುಕೊಂಡು ಆಚಾರ್ಯರು ಬೀದಿಗೆ ಹೋಗಿ, ಯಾರದೋ ಮನೆಯ ಭಾವಿಯಮೇಲಿದ್ದ ಯಾವುದೋ ಒಂದು ಸೆಣಬಿನ ಹಗ್ಗವನ್ನು ತಲೆಗೆ ಸುತ್ತಿಕೊಂಡು ಬಂದು–'ಹು, ಆಯಿತು ನಡೀ' ಎಂದರು. ರಾಯರು ಅದನ್ನು ನೋಡಿ ಬಿದ್ದುಬಿದ್ದು ನಗುತ್ತಾ–'ಏನು ಆಚಾರ್ಯರೆ, ಹಗ್ಗ ಸುತ್ತಿಕೊಂಡು ಬಂದಿರಿ! ರಾಜದರ್ಶನಕ್ಕೆ ತಲೆಗೆ ಹಗ್ಗ ಸುತ್ತಿಕೊಂಡು ಹೋಗುವುದೇ? ಒಂದು ಶಾಲನ್ನಾದರೂ ಸುತ್ತಬಾರದೆ?' ಎಂದರು. ಆಚಾರ್ಯರು–'ರಾಯಾ, ನಾ ದೇಶಾವಾರ ಮಾಡಲಿಲ್ಲ, ನಮ್ಮಪ್ಪ ಮಾಡಲಿಲ್ಲ, ನೀ........ಮಗ ಕೊಡಲಿಲ್ಲ. ಏನು ಮಾಡೋದದೆ? ಕೆಲಸ ಆದರಾಯಿತು, ನಡೀ! ತಲೇಮೇಲೆ ಏನಾದರೂ ಇದ್ದರಾಯಿತಷ್ಟೆ!' ಎಂದರು.

ರಾಯರು ಹಿಡಿಸಲಾರದಷ್ಟು ನಕ್ಕರು. ಕನಿಕರದಿಂದ ತಮ್ಮ ಬಳಿಯಿದ್ದ ಒಂದು ಹೊಸ ಶಾಲನ್ನು ತೆಗೆದು ಆಚಾರ್ಯರ ತಲೆಗೆ ಸುತ್ತಿದರು. ಮೈಮೇಲೊಂದು ಶಾಲನ್ನು ಹೊದಿಸಿದರು,–'ಬರ್ರೀ ಆಚಾರ್ರೇ ಹೋಗೋಣ' ಎಂದರು.

ಆಚಾರ್ಯರಿಗೆ ನವಾಬರ ಭೇಟಿಮಾಡಿಸಿ,–"ಇವರು ನಮ್ಮಲ್ಲಿ ದೊಡ್ಡ ಮಹಾತ್ಮಗಳು. ತಮ್ಮ ದರ್ಶನಕ್ಕೆ ಬಂದಿದ್ದಾರೆ" ಎನ್ನುವಷ್ಟರಲ್ಲಿ, ನವಾಬನು–"ಖಂಡೇರಾವ್! ಏನು ಈತ ಹುಚ್ಚನಹಾಗೆ ಕಾಣುತ್ತಾನಲ್ಲ!" ಎಂದನು.

ಅವಧೂತರು–ಒಡನೇ–"ಹುಜೂರ್ ನಾನು ಹುಚ್ಚ! ಕಾರಣವೇನು ಕೇಳುವಿರಾ!" ಎಂದು ಹೇಳುತ್ತಲೇ–ಕೆಳಕಂಡ ಪದವನ್ನು ನವಾಬನು ತಲೆದೂಗುವಂತೆ ಹಾಡಿ

ದರು. ಹುಚ್ಚನ ಕಂಠ, ಹುಚ್ಚನ ಮಾತುಗಳನ್ನು ಕೇಳಿ, ನವಾಬನೇ ಹುಚ್ಚನಂತಾದನು– 'ಖಂಡೇರಾವ್ ಬಡಾ ಅಣ್ಣಾಚಾರಿ ಹೈ' ಎಂದನು.

ಆ ಪದವು ಹೀಗಿದೆ:—

ಧನ್ಯಾಸಿ—ಆದಿತಾಳ

ಹರ್ದಂಬೇ ಪರವಾಹುವಾ ಮೈ | ಹರ್ದಂಬೇ ಪರವಾಹುವಾ ಪ.
ಅಂಧಾ ಹೋಕರ್ ಏಕೇಲಾ ಮೈ | ಫಿರತಾಥಾ ಜಂಗಲ್ ||
ಗುರು ಫೂಕರ ಕಾನ್ಮೇ ಅಖಿಯಾ | ಪಾಕಕಿಯಾ ಚೀದಿಲ್ || ೧
ಅಪೇ ಖೋಲ್ಕರ್ ಕುಫೂಲ್ ದಿಲ್ಕಾ | ದಿಖಾಯಾವೂ ಜಾಲ್ ||
ಘುಸೀ ಹೋಕರ್ ಹಮ್ಕು ಕ್ಯಾ | ಕರೇಗಾ ಜೀಕಾಲ್ || ೨
ದಿಯಾ ಸದ್ಗುರು ಮರ್ಷೀ ವಿಠಲ | ವ್ಯಾಸ ನಾಮುಕಾ ಭಾಂಗ್ ||
ಛಾನಛಾನಕರ ಪೀಕೋ | ಮೈಮಸ್ತಾನ್ ಹುವಾ ಜೀದಂಗ್ || ೩

ಈ ಪದದ ಅರ್ಥವು ಕೆಳಕಂಡಂತಿರುವುದು.

ಪ್ರತಿ ಶ್ವಾಸಕ್ಕೂ ಜಗತ್ತು ನನಗೆ ಲಕ್ಷ್ಯವಿಲ್ಲದೆ ಹೋಯಿತು. ಪ.

ಕುರುಡನಾಗಿ (ಜ್ಞಾನಶೂನ್ಯನಾಗಿ) ಒಬ್ಬನೇ ಕಾಡುತಿರುಗುತ್ತಿದ್ದೆ ! ಅಂದರೆ ಸಂಸಾರಾರಣ್ಯದಲ್ಲಿ ತಿರುಗುತ್ತಿದ್ದೆ ! ಗುರುವು ದೊರೆತು ಕಿವಿಯಲ್ಲಿ ಊದಿದನು. ಮನಃಪರಿಪಾಕವಾಯಿತು. ೧

ಅವನೇ ಅಜ್ಞಾನ ಮುಪ್ರೆಯನ್ನೊಡೆದನು. ಜಗತ್ತು ಪ್ರಕಾಶವಾಯಿತು. ನಮ್ಮ ಮೇಲೆ ಸಿಟ್ಟುಮಾಡಿ ಯಮನು ಏನು ಮಾಡಬಲ್ಲನು ? ೨

ಗುರುವೇ **ವಿಠಲವ್ಯಾಸ** ಎಂಬ ಭಂಗಿಯನ್ನು ಕೊಟ್ಟನು. ಶೋಧಿಸಿ, ಶೋಧಿಸಿ ಕುಡಿದು ನಾನು ಉನ್ಮತ್ತನಾದೆನು.

ಸಂತುಷ್ಟನಾದ ನವಾಬನು ಅವಧೂತರಿಗೆ ಬಹಳ ಬಹುಮಾನಮಾಡಿದನಂತೆ ! ಆಪರೇನು ! ಅವಧೂತರು ಮಹಲಿನಿಂದ ಕೆಳಗಿಳಿಯುತ್ತಲೇ ಎಲ್ಲವನ್ನೂ ಕಂಡ ಕಂಡವರಿಗೆ ದಾನಮಾಡಿ, ಯಥಾಪ್ರಕಾರ ಬಡವರ ಬಾಗಿಲಲ್ಲಿ ನಿಂತು–'ಭಿಕ್ಷಾ' ಎಂದರಂತೆ ! ದೊಡ್ಡವರ ಮಾತೇ ಬೇರೆ ! ಅವರ ಮಾರ್ಗವೇ ಬೇರೆ ! ಇತರರಿಗೆ ಅದೆಂತು ಅರ್ಥವಾದೀತು ?

ಅವಧೂತರ ಕನ್ನಡ ಪದವಾದರೂ ಹೀಗಿದೆ.

ಪೂರ್ವಿ—ಆದಿತಾಳ

ದಾವಾಧಾರದ ದುರ್ವಿಷಯದಿ ನೀ | ಮುಳುಗಿ ಹರಿಯುತಿದ್ದೀ ? ಪ.
ಕೋವಿದರನು ಕೇಳೀ ಜೀವಕೆ ಸುಖ | ನಾನಾನಾ ತೆರದೀ ಅ.

ಕಾಲನದೂತರು ಕರುಣುಳ್ಳವರೇ । ಹಾಳಾಯಿತೆ ಯಮನೂರು ?
ಭಾಳದೂರ ಹೋಗ್ಯಾರೇ ಬಂದರೆ । ನಾಳೆ ಹೇಳುವಯಾರ್ಾರು ?
ತಾಳೆಂದರೆ ತಾಳ್ವರೆ ರವಿ ಶಶಿಗಳು ? ಆಳ್ಗಳೆ ನಿನಗವರು ?
ಚಾಳಕತನವೇನು ಶ್ರುತಿಸ್ಮೃತಿಗಳಲಿ । ಹೇಳುವವೇನೇನು ? ೧

ಮೃತ್ಯುವಿನಾ ವೈದತ್ತಲಿ ಕುತ್ತಿಗೆ । ಒತ್ತಿಬಿಟ್ಟರೆಂತೋ ?
ಕರ್ತೃಯಮನ ವ್ಯಾಪಾರ್ಹ್ಯೋಗ್ಯದು ಮ । ತ್ತುತ್ತುಮಗಾಯ್ತೆಂತೋ ?
ಚಿತ್ರರಗುಪ್ತರು ಇತ್ತಣ ವಾರ್ತೆಯ । ಮರ್ತು ಬಿಟ್ಟರೆಂತೋ ?
ಚಿತ್ರಕೆ ಚಂಚಲ ತಾ ಬ್ಯಾಡೆಂದೀ । ಗುತ್ತವು ಶಾಪೆಂತೋ ? ೨

ಇಷ್ಟು ಭವಣಿ ಮುಂದಿಟ್ಟುಕೊಂಡು ನೀ । ಕೆಟ್ಟುಪೋಗಬ್ಯಾಡಾ !
ದೃಷ್ಟಿ ಒಬ್ಬನಲ್ಲಿಟ್ಟರೆ ಜಗದೊಳು । ಕಷ್ಟಾಹುದೆ ನೋಡಾ !
ಘಟ್ಟನೆ ಈ ಭವ ನಷ್ಟಾಗುನ ಹಾಂ । ಗಿಷ್ಟು ಮಾಡೋ ಮೂಢಾ ।
ವಿಠ್ಠಲ ವೇದವ್ಯಾಸನ ನಿಜಪದ । ನಿಷ್ಠೆಯ ಬಿಡಬೇಡಾ ॥ ೩

ಎಂಬಂತೆ ಖಂಡಿತೋಕ್ತಿಯನ್ನು ಸ್ಪಷ್ಟಪಡಿಸುತ್ತಿದೆ. ಹರಿದಾಸ ಪಂಥಿಗಳು ಭಕ್ತಿಯಲ್ಲಿ ಬೆರೆದರೆ ಎಷ್ಟು ಮೃದುಳ ಮಾತನ್ನಾಡುವರೋ–ತತ್ವ ನಿಶ್ಚಯಕ್ಕೆ ಹೊರಟರೆ ಅಷ್ಟೇ ಕಠಿಣ ವಾಗಿ ನುಡಿಯುವರು. ತರ್ಕಸಿದ್ಧವಾಗಿ ಮಾತಾಡುವ ಪಂಡಿತರ ಬಾಯಲ್ಲಿ ದಾಸರಂತೆ ಖಂಡಿತೋಕ್ತಿಗಳು ಬರದಿರಲು ಅನುಭವದ ಅಭಾವವೇ ಕಾರಣ. ಭಾಗವತಧರ್ಮದಲ್ಲಿ ಮಾನವ ಪ್ರಾಣಿಗಳಿಗೆಲ್ಲಾ ಸ್ಥಾನವಿದೆ. ಆಖಂಡಲನಂತೆ (ಇಂದ್ರನಂತೆ) ಅಮಿತೈಶ್ವರ್ಯ ವನ್ನನುಭವಿಸುತ್ತಿದ್ದವರು ವಿರಕ್ತರಾಗಿ ಹರಿದಾಸರಾದುದಕ್ಕೆ ಪುರಂದರದಾಸ ಪ್ರಭೃತಿಗಳ ನಿದರ್ಶನವಿದೆ. ಪೀಠಾಧಿಪತಿಗಳು, ಗ್ರಂಥಕರ್ತರೆನಿಸಿದವರು ಸಹ ಹರಿದಾಸರಾಗಿ ಹಾಡಿದುದಕ್ಕೆ ನರಹರಿತೀರ್ಥ, ಶ್ರೀಪಾದರಾಜ, ವ್ಯಾಸರಾಯ, ವಾದಿರಾಜಸ್ವಾಮಿಗಳಂಥಾ ಮಹಾಪುರುಷರ ನಿದರ್ಶನವಿದೆ. ಪಂಡಿತೋತ್ತಮರೂ ಪ್ರವಚನಾಚಾರ್ಯರೆನಿಸಿದವರು ನಮ್ರಾಭೂತರಾಗಿ ಹರಿದಾಸರಾದುದಕ್ಕೆ ಜಗನ್ನಾಥದಾಸರು, ಕಲ್ಲೂರು ಸುಬ್ಬಣ್ಣದಾಸರಂಥಾ ಅನೇಕರ ನಿದರ್ಶನವಿದೆ. ರಾಜ್ಯಪದವಿಯನ್ನನುಭವಿಸಿ ಬೇಸತ್ತು ಹರಿದಾಸರಾದುದಕ್ಕೆ ವೇಣು ಗೋಪಾಲರಾಯರಂಥವರ ನಿದರ್ಶನವಿದೆ. ಜನ್ಮ ಪ್ರಭೃತಿ ದಾರಿದ್ರ್ಯಾದಿ ದುಃಖಗಳಿಂದ ಪೀಡಿತರಾದವರು ಸಹ ಜಿತಮನಸ್ಕರಾಗಿ ಹರಿದಾಸರಾದುದಕ್ಕೆ ವಿಜಯದಾಸರು ಪ್ರಸನ್ನ ವೆಂಕಟರಾಯರಂಥಾ ಮಹನೀಯರ ನಿದರ್ಶನವಿದೆ. ಯೋಗಿಗಳು ಅವಧೂತರು ಸಹ ಹರಿದಾಸರಾದುದಕ್ಕೆ ಮಹೀಪತಿರಾಯರು ಮತ್ತು ಅಣ್ಣಾವಧೂತರ ನಿದರ್ಶನವಿದೆ. ಸ್ತ್ರೀಯರು ಶೂದ್ರರು ಸಹ ಹರಿದಾಸರಾಗಿ ಉನ್ನತ ಪದವಿಯನ್ನು ಪಡೆವರೆಂಬುವಕ್ಕೆ ಗಿರಿಯಮ್ಮನವರ ಮತ್ತು ಕನಕದಾಸರ ನಿದರ್ಶನವಿದೆ. ಭಾಗವತ ಧರ್ಮವೆಂಬುವುದು ಶ್ರೀಕೃಷ್ಣ ಪರಮಾತ್ಮ ನಿಂದ ಉಪದಿಷ್ಟವಾದ ಗೀತಾಧರ್ಮ.

ಬುಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ
ಶಬ್ದಾದೀನ್ ವಿಷಯಾಂ ಸ್ತ್ಯಕ್ತ್ವಾ ರಾಗದ್ವೇಷೌವ್ಯುದಸ್ಯ ಚ ೫೧

ವಿವಿಕ್ತ ಸೇವೀ ಲಘ್ವಾಸೀ ಯತವಾಕ್ಕಾಯ ಮಾನಸಃ
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ೫೨
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮ ಭೂಯಾಯ ಕಲ್ಪತೇ ೫೩
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ ೫೪
ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ವತಃ
ತತೋಮಾಂ ತತ್ವತೋಜ್ಞಾತ್ವಾ ವಿಶತೇ ತದನಂತರಂ ೫೫
ಸರ್ವ ಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ೫೬

(೧೮ನೇ ಅಧ್ಯಾಯ)

ಎಂಬಂತೆ ಯಾವಾತನು ಆತ್ಮಸಂಯಮಮಾಡಿ ಶಾಶ್ವತ ಪದವನ್ನು ಪಡೆಯುವನೋ ಅವನು ಹರಿದಾಸನು. ಅಂತಹ ಹರಿದಾಸರಲ್ಲಿ ಅಣ್ಣಾವಧೂತರು ಅಥವಾ ಬಡ ಅಣ್ಣಯ್ಯಾಚಾರ್ಯರು ಅವಧೂತ ಹರಿದಾಸರು.

ಈ ಅವಧೂತರ ಸಂಸ್ಕೃತ ಕನ್ನಡ ಉರ್ದು ಭಾಷೆಗಳ ಪದಗಳನ್ನೆಲ್ಲಾ ಸಂಗ್ರಹಿಸಿ ಒಂದು ಪುಸ್ತಕರೂಪಕ್ಕೆಳಿಸಿದರೆ ಹರಿದಾಸ ಸಾಹಿತ್ಯದಲ್ಲಿ ಒಂದು ಅತ್ಯುತ್ತಮ ಪತ್ಯ ಪುಸ್ತಕವಾಗುವುದರಲ್ಲಿ ಸಂಶಯವಿಲ್ಲ.

ಸುರಪುರದ ಆನಂದದಾಸರು

ಆನಂದದಾಸರೆಂಬ ಹೆಸರಿಗೆ ತಕ್ಕಂತೆ ಸಾರ್ಥಕನಾಮದಿಂದ ಕರೆಸಿಕೊಂಡ ದಾಸರಿವರು. ಇವರ ಮಾತುಗಳು ಆನಂದ, ಕೃತಿಗಳು ಆನಂದ; ಕವಿತೆಯಾನಂದ; ಗಾನವಾನಂದ; ವೀಣಾವಾದನವಾನಂದ!

ಸುರಪುರದ ಮಟ್ಟುಗಳು, ಸುರಪುರದ ಜಾವಡಿಗಳು, ಸುರಪುರದ ಬಹನಿ ಎಂಬ ಮಾತುಗಳ ಚಲಾವಣೆ ಹಿಂದಿನ ಕಾಲದ ಗಾನರಸಿಕರಲ್ಲಿದ್ದುದಕ್ಕೆ ಈ ಮಹನೀಯರು ಕಾರಣ! ಮುಮ್ಮಡಿ ಕೃಷ್ಣರಾಜ ಪ್ರಭುಗಳ ಸನ್ನಿಧಿಯಲ್ಲಿ, ಇವರ ಗಾಯನ ಕೀರ್ತನಗಳನ್ನು ಕೇಳಿದ ಮೈಸೂರ ಹಿರಿಯರು ಇಂಥಾ ಕಂಠಸ್ವರ, ಇಂಥಾ ಮಾಧುರ್ಯ, ಇಂಥಾ ಬಹನಿಗಳನ್ನು ಕೇಳಲಿಲ್ಲ. ಇಂಥವರನ್ನು ಮತ್ತೆ ಕಾಣಲಿಲ್ಲ ಎಂದು ಹೇಳುತ್ತಿದ್ದರು. ಆ ಕಾಲದಲ್ಲಿ ತಂಜಾವೂರು ಪ್ರಾಂತ್ಯದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಸುಂದರಂ ಸುಬ್ಬಯ್ಯ ಎಂಬ ಸಂಗೀತಗಾರರನ್ನಾಗಲೀ, ಮೈಸೂರ ಆಸ್ಥಾನದಲ್ಲಿ ಪರಮ ಪ್ರಖ್ಯಾತರಾಗಿದ್ದ ವೀಣೆಯ ಸಾಂಬಯ್ಯ ಸದಾಶಿವರಾಯರೆಂಬ ಗಾಯನಾಚಾರ್ಯರುಗಳನ್ನಾಗಲೀ ತಲೆದೂಗಿಸಿದ ಗಾಯಕರೆಂದರೆ ಆನಂದದಾಸರು. ಇವರ ವಿಶ್ವತೋಮುಖವಾದ ಪಾಂಡಿತ್ಯವು ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಗಾಯಕರ ಮಧ್ಯದಲ್ಲಿ ಇವರು ಗಾಯನಾಚಾರ್ಯರು. ನ್ಯಾಯ ವೇದಾಂತ ಶಾಸ್ತ್ರ ಪಾರಂಗತರ ಮಧ್ಯದಲ್ಲಿ ಇವರಿಗೆ ಅಗ್ರಮರ್ಯಾದೆ. ಸಾಹಿತ್ಯ ಶಾಸ್ತ್ರ ಪಾರಂಗತರ ಮಧ್ಯದಲ್ಲಿ ಇವರು ಉದ್ದಾಮ ಸಾಹಿತಿಗಳು, ಕನ್ನಡ ಜಾಣರಲ್ಲಿ ಇವರು ನೆರೆ ಜಾಣರು.

ಇಷ್ಟು ವಿದ್ಯೆಗಳಲ್ಲೂ ದಾಸರು ಪಾರಂಗತರಾಗಲು, ಆ ಕಾಲದಲ್ಲಿ ಸುರಪುರ ಸಂಸ್ಥಾನದಲ್ಲಿ ರಾಜಾಶ್ರಯದಲ್ಲಿದ್ದ ಮತತ್ರಯದ ಪಂಡಿತರುಗಳಲ್ಲಿದ್ದ ಸ್ಪರ್ಧೆಯು ಕಾರಣವಾಯಿತು. ಪ್ರತಿ ಪಂಡಿತನೂ ದಾಸರ ಬಾಲ್ಯದಲ್ಲಿ ಆನಂದನು ತನ್ನವನೆಂದೇ ವಿದ್ಯಾಭ್ಯಾಸ ಮಾಡಿಸಿದನು. ಒಬ್ಬೊಬ್ಬನೂ ಇವನು ಏಕಸಂಧಿಗ್ರಾಹಿಯೆಂದು ಪ್ರೀತಿಯಿಂದ ಬಾಲಕನಿಗೆ ತಾನು ಕಲಿತ ವಿದ್ಯೆಯನ್ನು ಸಾಂಗವಾಗಿ ಕಲಿಸಿದನು.

ರಾಜಾಸ್ಥಾನದ ನಕಲಿಗಾರನ ಅನುಕರಣಮಾಡಿ ಮೃಗಗಳಂತೆ ಪಕ್ಷಿಗಳಂತೆ ಕೂಗುವುದೂ ಬಾಲಕನ ಮತ್ತೊಂದು ವಿದ್ಯಾಪ್ರೌಢಿಮೆಯಾಯಿತು.

ಆನಂದದಾಸರ ಜನ್ಮಭೂಮಿ ತುಂಗಭದ್ರಾತೀರದಲ್ಲಿರುವ ಚೀಕಲಪರವಿಯೆಂಬ ಗ್ರಾಮ. ಯಾವ ಕ್ಷೇತ್ರದಲ್ಲಿ ಶ್ರೀಪಾದರಾಯರು ತಪಸ್ಸು ಮಾಡಿ ಅಶ್ವತ್ಥ ನರಸಿಂಹನನ್ನು ಪ್ರತಿಷ್ಠಿಸಿದರೋ, ಯಾವ ಕ್ಷೇತ್ರದಲ್ಲಿ ಅದೇ ಅಶ್ವತ್ಥ ನರಸಿಂಹದೇವರ ಸೇವೆಯಿಂದ ಕೂಸಮ್ಮನೆಂಬ ಸಾಧ್ವೀಮಣಿಯು ವಿಜಯದಾಸರಂಥಾ ವಿಭೂತಿಪುರುಷರನ್ನು ಮಗನನ್ನಾಗಿ ಪಡೆದಳೋ, ಅದೇ ಕ್ಷೇತ್ರವೇ ಆನಂದದಾಸರ ಜನ್ಮಭೂಮಿಯಾಯಿತು. ಬಾಲ್ಯ

ದಲ್ಲಿ ಮಾತಾಪಿತೃಗಳ ನಿಯೋಗವಾಗಿ, ವಿದ್ಯಾರ್ಜನೆಗೆ ಸುರಪುರಕ್ಕೆ ಹೋಗಿ ಅಲ್ಲಿನ ರಾಜರ ಆಶ್ರಯದಲ್ಲಿ ವಾಸಮಾಡಿ, ವಿದ್ಯಾಭ್ಯಾಸ ಮಾಡಿದ ಕಾರಣ ಆನಂದದಾಸರಿಗೆ ಸುರಪುರದ ದಾಸರೆಂಬ ಹೆಸರಾಯಿತು.

ಪೂರ್ವ ವೃತ್ತಾಂತ

ಆನಂದ, ಶೇಷ ಎಂಬಿಬ್ಬರು ಅಣ್ಣತಮ್ಮಂದಿರು, ವಿದ್ಯಾಭ್ಯಾಸಕ್ಕಾಗಿ, ರಾಜಾಚಾರ್ಯರೆಂಬ ಮಹಾ ಪಂಡಿತರ ಬಳಿಗೆ, ಯಾರದೋ ಪರಿಚಯ ಪತ್ರವನ್ನು ತೆಗೆದುಕೊಂಡು ಸುರಪುರಕ್ಕೆ ಬಂದರು. ಸುರಪುರವು ಎಷ್ಟೇ ಚಿಕ್ಕ ಸಂಸ್ಥಾನವಾಗಿದ್ದರೂ, ಒಂಭತ್ತು ಲಕ್ಷ ಆದಾಯದ ಸೀಮೆಯೆಂದು ಪರಿಮಿತಿಯನ್ನು ತೋರಿಸುತ್ತಿದ್ದರೂ, ಆಳಿದ ರಾಜರ,ಧರ್ಮಾಭಿಮಾನವಿದ್ಯಾ ಪ್ರೇಮಗಳಿಂದ ಆ ದೇಶದ ಖ್ಯಾತಿಯು ಭರತಖಂಡದಲ್ಲೆಲ್ಲಾ ವ್ಯಾಪಿಸಿತ್ತು. ಅಂತಹ ಧರ್ಮ ಸಂಸ್ಥಾನಕ್ಕೂ ರಾಜ್ಯದಾಹಿಗಳಾಗಿದ್ದ ಕಂಪನಿಯವರ ಆಡಳಿತ ಕಾಲದಲ್ಲಿ ಆಪತ್ತೊದಗಿತು. ಬ್ರಿಟಿಷರಮೇಲೆ ರಾಜನು ಬಂಡಾಯ ಮಾಡಿದ ನೆಂಬ ಆಪಾದನೆಯಾಯಿತು. ರಾಜ್ಯತ್ಯಾಗ ಮಾಡಿದ ಕಾಲದಲ್ಲಿ ರಾಜನು :—

"ನೀವು ನನ್ನನ್ನು ಏನು ಬೇಕಾದರೂ ಮಾಡಬಹುದು.

ನಮ್ಮ ಪ್ರಜೆಗಳನ್ನೂ, ನಮ್ಮ ಪೂರ್ವೀಕರು ಮಾಡಿದ ಧರ್ಮಗಳನ್ನೂ ಅಳಿಸದಂತೆ ಕಾಪಾಡಬೇಕು" ಎಂಬುದಾಗಿ ಕೇಳಿಕೊಂಡನು.

ಸ್ವಲ್ಪ ಕಾಲಾನಂತರ ಸುರಪುರ ರಾಜ್ಯವು ಕಂಪನಿಯವರಿಂದ ಬಲವಂತರಾದ ಹೈದರಾಬಾದು ನಿಜಾಮರಿಗೆ ಸೇರಿತು. ರಾಜರು ರಾಜ್ಯವಾಳುತ್ತಿದ್ದಾಗ ರಾಜ್ಯದ ಮೂರನೇ ಎರಡು ಭಾಗವು ಧರ್ಮಾದಾಯವಾಗಿತ್ತು. ವರ್ಷಕ್ಕೆ ನೂರರಿಂದ ಆರುಸಾವಿರದವರೆಗಿನ ಉತ್ಪತ್ತಿಯುಳ್ಳ ಜಹಗೀರುಗಳು ವಿವಿಧ ವೃತ್ತಿವಂತರ ವಶದಲ್ಲಿದ್ದುವು. ಜುಟ್ಟು ಜನಿವಾರಗಳಿದ್ದ ಬ್ರಾಹ್ಮಣರಿಗೆಲ್ಲಾ ಜಹಗೀರು ಕೊಟ್ಟ ಧೊರೆಗಳೆಂದು-ಸಂತೋಷದಿಂದಾಗಲೀ ಅಸೂಯೆಯಿಂದಾಗಲೀ ಜನರಾಡಿಕೊಳ್ಳುತ್ತಿದ್ದರು. ಮುಸಲ್ಮಾನರ ಅಧಿಕಾರದಲ್ಲಿ ಆ ರಾಜಧರ್ಮಗಳು ಎಷ್ಟೇ ಸಂಪೂರ್ಣಾಕಾರಕ್ಕೆ ಬಂದಿದ್ದರೂ, ಇಂದಿಗೂ ಆ ಸಂಸ್ಥಾನದಲ್ಲಿ ಧರ್ಮರಾಜ್ಯದ ಕುರುಹುಗಳನ್ನು ತೋರಿಸುವ ಅವಶೇಷಗಳು ಹೇರಳವಾಗಿವೆ.

ಆನಂದ ಸಹೋದರರು ಪಂಡಿತ ರಾಜಾಚಾರ್ಯರ ಪದರಿಗೆ ಬಿದ್ದ ದಿನದಿಂದ ಬಾಲಕರ ಪ್ರೌಢವಿದ್ಯಾಭ್ಯಾಸಕ್ಕಾರಂಭವಾಯಿತು. ಬಾಲಕರ ಕಂಠಮಾಧುರ್ಯವನ್ನು ಕೇಳಿ ಕಂಠ ವೀಣೆಯವರೆಂಬ ಖ್ಯಾತಿ ಪಡೆದಿದ್ದ ಶ್ರೀ ವೈಷ್ಣವಮತಸ್ಥ ಗಾನಪಂಡಿತರು, ಅವರಿಗೆ ಬಲವಂತವಾಗಿ ಗಾನವಿದ್ಯೆಯನ್ನು ಕಲಿಸಿದರು. ಬಾಲಕರು ಬೆಳಗಿನ ಝಾವದಲ್ಲಿ ಸಂಗೀತವನ್ನು ಅಭ್ಯಾಸಮಾಡಿ ಗರಡಿಯಲ್ಲಿ ವ್ಯಾಯಾಮ ಮಾಡುವರು. ಬೆಟ್ಟದಲ್ಲಿರುವ ಭಾವಿಗಳಲ್ಲಿ ಸ್ನಾನಮಾಡಿ, ಸಂಧ್ಯಾದಿಗಳನ್ನು ತೀರಿಸಿಕೊಂಡು, ತರುವಾಯ ಪಂಡಿತರುಗಳಲ್ಲಿ ವ್ಯಾಸಂಗಮಾಡುವರು. ಹಿರಿಯನಾದುದರಿಂದ ಆನಂದನ ವ್ಯಾಸಂಗವು ಹಿರಿದಾಗಿ ಬೆಳೆಯಿತು. ಕಿರಿಯನು ಎಲ್ಲ ರೀತಿಯಿಂದಲೂ ಕಿರಿಯನೆನಿಸಿದನು.

ಹೀಗಿರಲು–'**ಸದ್ಯಃ ಫಲಂತು ಸಂಗೀತಂ**' ಎಂಬ ಗಾದೆಗನುಸಾರವಾಗಿ ಆನಂದನಗಾನ ಪಾಂಡಿತ್ಯದ ಪ್ರಶಂಸೆಯು ರಾಜನ ಕಿವಿಗೆ ಬಿದ್ದಿತು. ರಾಜನೇ ಆನಂದನನ್ನು ಕರೆಸಿ ವಿವಿಧರೀತಿಯಲ್ಲಿ ಪರೀಕ್ಷಿಸಿ, ವಿದ್ವದ್ವೇತನಮಾಡಿಕೊಟ್ಟನು. ನಿರ್ಮತ್ಸರಿಗಳಾದ ವಿದ್ವಾಂಸರು ಆನಂದನ ವಿಶ್ವತೋಮುಖವಾದ ಪಾಂಡಿತ್ಯವನ್ನು ನೋಡಿ ಸಂತುಷ್ಟರಾದರು. ವಿದ್ಯಾರ್ಥಿ ದೆಶೆಯಲ್ಲಿದಾಗಲೇ ಪಂಡಿತರ ಪಙ್ಕ್ತಿಯಲ್ಲಿ ಕುಳಿತ ಇವನನ್ನು ನೋಡಿ ಅವರು ಪರಮಾನಂದಭರಿತರಾದರು. ಇವನ ಎಲ್ಲ ಬಗೆಯ ವಿದ್ವತ್ಪರಿಚಯದ ಪ್ರದರ್ಶನವನ್ನು ಏಕಕಾಲದಲ್ಲಿ ಮಾಡಿಸಿ ನೋಡಬೇಕೆಂದು ಪಂಡಿತರು ಬಯಸಿದರು. ಗಾಯನದಲ್ಲಿ ಕುಳಿತರೆ ಇವನ ಇತರ ಶಾಸ್ತ್ರ ಪಾಂಡಿತ್ಯ ಗೊತ್ತಾಗುವುದಿಲ್ಲ. ಶಾಸ್ತ್ರ ಪಾಂಡಿತ್ಯ ಪ್ರದರ್ಶನವಾದರೆ ಗಾನವಿದ್ಯಾ ಪ್ರೌಢಿಮೆ ಪ್ರದರ್ಶನವಾಗುವುದಿಲ್ಲ. ಆದುದರಿಂದ ಕೀರ್ತನವಾದರೆ ಎಲ್ಲಾ ವಿದ್ಯೆಗಳ ಸಮರಸ ಪರಿಚಯವಾಗಬಹುದು. ಎಂತೂ ಆನಂದನಿಂದ ಕೀರ್ತನ ಮಾಡಿಸಬೇಕು. ಅದನ್ನು ಕೇಳಿ ಎಲ್ಲರೂ ಸುಖಿಸಬೇಕು–ಎಂಬುದಾಗಿ ವಿದ್ವಾಂಸರುಗಳೆಲ್ಲ ಬಯಸಿದರು.

ಆದರೆ ಆನಂದನ ದೃಷ್ಟಿಯಲ್ಲಿ–ಕೀರ್ತನವೆಂದರೆ ಭಗ್ನಮನೋರಥರ ಭಿಕ್ಷಾವೃತ್ತಿಯಂದಾಗಿತ್ತು. **ವಾಕ್ಯಾರ್ಥಮಾಡುವುದು** ಪಾಂಡಿತ್ಯ ಪ್ರದರ್ಶನದಿಂದ ಮಾಡುವ ಯಾಚನೆಯಾಗಿತ್ತು. **ಗಾನಮಾಡುವುದು** ರಾಜಾಧಿರಾಜರನ್ನು ತಲೆದೂಗಿಸುವ ಗಂಡುವೃತ್ತಿಯಾಗಿತ್ತು. ಗಾನಮಾಡುವುದರಲ್ಲಿ ಒಲಿದಂತೆ ಮಿಕ್ಕ ವೃತ್ತಿಗಳಲ್ಲಿ ಆನಂದನ ಮನಸ್ಸು ಒಲಿದಿರಲಿಲ್ಲ. ಇದಕ್ಕೆ ಕಾರಣ ಸುರಪುರದ ರಾಜರ ಗಾನರಸಿಕತೆಯಾಗಿತ್ತು. ರಾಜನು ಮಾತೆತ್ತಿದರೆ ಗಾಯಕರನ್ನು ಕರೆಸಿ–ಕಛೇರಿ ನಡೆಸಿ ಮೆಚ್ಚಿ, ಮಾಡುತ್ತಿದ್ದ ಸನ್ಮಾನವು ಪ್ರತ್ಯಕ್ಷ ಪ್ರಮಾಣವಾಗಿತ್ತು. ಪುರುಷರಿಗಿಂತ ಗಾನವಿದ್ಯಾಫಲವು ಸ್ತ್ರೀಯರಿಗೆ ಹೆಚ್ಚಾಗಿರುತ್ತಿತ್ತು. ಆ ಕಾಲದಲ್ಲಿ ನರ್ತಕಿಯರನೇಕರು ಸುರಪುರದ ರಾಜನ ಆಶ್ರಯದಲ್ಲಿದ್ದರು. ಆ ಕಾಲದಲ್ಲಿ ವೇಶ್ಯಾಲೋಲರಾಗಿರುವುದು ರಾಜರಿಗೆ ಭೂಷಣ ಎಂಬ ಅಭಿಪ್ರಾಯವು ಜನಮನದಲ್ಲಿದ್ದುದರಿಂದ–ಅದು ಅಪವಾದವಾಗಿರಲಿಲ್ಲ. ರಾಜಾನುಗ್ರಹಕ್ಕೆ ಪಾತ್ರರಾದ ನರ್ತಕಿಯರಿಗೆ ಗಾಯನವನ್ನು ಕಲಿಸಬೇಕೆಂಬ ರಾಜಾಜ್ಞೆಯನ್ನನುಸರಿಸಿ ಆನಂದನು ಆ ಜನರ ವಿದ್ಯಾಗುರುವಾದನು.

ಇವೆಲ್ಲವನ್ನು ನೋಡಿ ರಾಜಾಚಾರ್ಯರಿಗೆ ಸಂತೋಷವಾಗುವುದರ ಜೊತೆಗೆ, [illegible] ಎಲ್ಲಿ ಮಾರ್ಗ ತಪ್ಪುವನೋ ಎಂಬ ಕಳವಳವೂ ಅವರನ್ನು ಬಾಧಿಸಿತು. ವೇದಾಂತ ಪ್ರವಚನದ ವಿನಾ ಇದಕ್ಕೆ ಅನ್ಯೋಪಾಯವಿಲ್ಲವೆಂದು ಆಚಾರ್ಯರು ಆನಂದನಿಗೆ ಗೀತಾಭಾಷ್ಯ ಪಾಠ ಹೇಳಲು ಪ್ರಾರಂಭಿಸಿದರು.

ಇದೇ ಸಮಯದಲ್ಲಿ ಜಗನ್ನಾಥದಾಸಾರ್ಯರ ಶಿಷ್ಯರಾದ ಶ್ರೀಶ ವಿಠಲಾಂಕಿತವನ್ನು ಪಡೆದ ದಾಸವರ್ಯರು ಸುರಪುರಕ್ಕೆ ಬಿಜಯಂಗೈದರು. ಕಾಲದ ಲೌಕಿಕವನ್ನನುಸರಿಸಿ ರಾಜ ದರ್ಬಾರಿನಲ್ಲಿ ಕೀರ್ತನವಾದೊಡನೆ ವಿದ್ವಾಂಸರೊಬ್ಬೊಬ್ಬರ ಮನೆಯಲ್ಲೂ ದಾಸರ ಕೀರ್ತನಗಳಿಗಾರಂಭವಾಯಿತು. ಶ್ರೀಶವಿಠಲಾಂಕಿತ ದಾಸರಿಗೆ ಪುಂಡರೀಕಾಕ್ಷದಾಸರೆಂಬ

ಮತ್ತೊಂದು ರೂಢಿಯ ಹೆಸರೂ ಇತ್ತು. ಜಗನ್ನಾಥದಾಸರ ಶಿಷ್ಯರಾಗುವುದಕ್ಕೆ ಮೊದಲು, ಅವರು ಶ್ರೀಮಂತರಾಗಿದ್ದು ದೇಶಾಂತರದ ಸಾಹುಕಾರರಿಂದ ಬರುತ್ತಿದ್ದ ಹುಂಡಿಗಳಿಗೆ ಹಣವನ್ನು ಕೊಡುತ್ತಿದ್ದುದರಿಂದ ಆ ಹೆಸರಿನ ರೂಢಿ ದಾಸರಾದ ಮೇಲೂ ಕಡೆಯತನಕ ತಪ್ಪಲಿಲ್ಲ. ಪುರಂದರ ದಾಸರಂತೆ ಇವರೂ ಸಹ ಸಕಲೈಶ್ವರ್ಯವನ್ನೂ ದಾನಮಾಡಿ ಹರಿದಾಸರಾದ ಕಾರಣ ಶ್ರೀವಿಠಲ ದಾಸರಲ್ಲಿ ಜನರ ಭಕ್ತಿ ಗೌರವಗಳು ಬಹಳವಾಗಿದ್ದುವು. ದಾಸರ ಕೀರ್ತನ ಶ್ರವಣದಿಂದ ಆನಂದನ ಮನಸ್ಸು ಅಲ್ಲಕಲ್ಲೋಲವಾಯಿತು. 'ಕೀರ್ತನವು ಭಗ್ನಮನೋರಥರ ಭಿಕ್ಷಾವೃತ್ತಿ' ಎಂಬ ತಪ್ಪು ತಿಳುವಳಿಕೆಯು ದೂರವಾಯಿತು. ವಿದ್ವಾಂಸರು ಬಯಸಿದಂತೆ ತಾನೂ ಕೀರ್ತನಕಾರನಾಗಬೇಕು-ಕೀರ್ತನಮಾಡಬೇಕು ಎಂಬ ಬಯಕೆ ಆನಂದನಿಗುಂಟಾಯಿತು. ರಾಜಾಚಾರ್ಯರ ಮನೆಯಲ್ಲಿ ನಡೆದ ದಾಸರ ಕೀರ್ತನಕ್ಕೆ ರಾಗರಚನೆಮಾಡಲು ಆನಂದನೇ ಟೊಂಕಕಟ್ಟಿ ತಂಬೂರಿಯನ್ನು ಮೀಟುತ್ತಾ ದಾಸರ ಪಕ್ಕದಲ್ಲಿ ನಿಂತನು. ಕೀರ್ತನ ವಿಷಯವು ಶ್ರೀ ಕೃಷ್ಣನ ಅಗ್ರಪೂಜಾ (ರಾಜಸೂಯ ಯಾಗ) ನಿರೂಪಣೆಯಾಗಿತ್ತು. ಭೀಮ ಜರಾಸಂಧರ ವಾಗ್ವಾದದಲ್ಲಿ ಭೀಮನು ಬ್ರಹ್ಮತರ್ಕ ಬಲದಿಂದ ಶ್ರೀಕೃಷ್ಣನು ಸಾಕ್ಷಾನ್ನಾರಾಯಣನೆಂದು ಸ್ಥಾಪಿಸಿ ಜೈಸಿದ ಕಥಾವಿಸ್ತಾರದಲ್ಲಿ ದಾಸರ ಪಾಂಡಿತ್ಯವು ಆನಂದನಿಗೆ ಆನಂದೋದ್ವೇಗ ಆವೇಶಗಳನ್ನುಂಟು ಮಾಡಲು ಕಾರಣವಾಯಿತು. ಆಗ ಆತನು ಸ್ವಯಂಸ್ಫೂರ್ತಿಯಿಂದ.—

ಸುರಟಿ — ಆದಿತಾಳ

ಜಗದೊಡೆಯಗೆ ನೀ ಜಾಳುಮಾತುಗಳ
ಬೊಗಳದಿರೆಲೊ ಮೂಢ ಪ.
ಹಗೆಯ ಬಗೆಯಬೇಡ ಮಗಧ ನಿನ್ನ ಕರ
ಳ್ಬಗಿದು ಶಾಕಿನಿ ಗಣಗಳಿಗುಣಿಸುವೆ ಅ.

ನಿಗಮಗೋಚರಗೆ ನವನೀತದ ಕಳ
ವುಗಳ ಕಲ್ಪಿಸುವರೇ ?
ಹಗಲಿರುಳಗಲದ ಶಿರಿ ಮೈ ಸೋಕದಗೆ ಜಾ
ರಿಗನೆಂದುಸುರುವರೇ ?
ನಗಚಾಪಗೆ ಭುಗಿಲ್ಲುಗಿಸುವನಿಗೆ ಹೇ
ಡಿಗನೆಂದಾಡುವರೇ ? ಚತುರ್
ಮೊಗನೈಯಗೆ ಮೊಮ್ಮಗನೆಂದೆನ್ನಲು
ನಗೆಗೇಡಲ್ಲವೆ ಮುಗುಧ ಮೂರ್ಖ ನೀ ೧

ಎಂಬುದಾಗಿ ಹಾಡಿದನು. ಪದವನ್ನು ಕೇಳಿ ಶ್ರೀದಾಸರಾದಿಯಾಗಿ ಎಲ್ಲ ಪಂಡಿತರೂ ಆಶ್ಚರ್ಯಭರಿತರಾದರು. ರಾಜಾಚಾರ್ಯರು ಶಿಷ್ಯನ ಪ್ರೌಢಿಮೆಯನ್ನು ನೋಡಿ ಉಬ್ಬಿದ ಮನದಿಂದ–'ಇದೇನು ಹೊಂದಿಕೆ? ಇದೇನು ಹಾಡಿಕೆ?' ಎಲ್ಲವೂ ಸರಿ, ಆನಂದ,

ಪದಕ್ಕೆ ಅಂಕಿತ ಬೇಡವೇ?' ಎಂದರು. ಅದಕ್ಕೆ ಆನಂದನು-'ದಾಸರು ಪರಮಾನುಗ್ರಹ ಮಾಡಿ, ನನ್ನನ್ನೂ ದಾಸಾನುದಾಸನನ್ನಾಗಿ ಮಾಡಿದಾಗ! ಅಂಕಿತೋಪದೇಶ ಕೊಟ್ಟು ಸ್ವರೂಪೋದ್ಧಾರ ಮಾಡಿದಾಗ!' ಎಂದನು.

ಶ್ರೀಶದಾಸರು, ತಾವು ಸುರಪುರಕ್ಕೆ ಬಂದ ಕಾರ್ಯ ಸಫಲವಾಯಿತು' ಎಂದು ತೃಪ್ತಿಗೊಂಡರು. ಆನಂದನಂಥಾ ಶಿಷ್ಯ ದೊರೆತಮೇಲೆ ತಮಗೆ ಬ್ರಹ್ಮಾನಂದವಾದಂತಾಯಿತೆಂದರು. ಸಕಲ ಪಂಡಿತರೂ-'ಸಾಧು, ಸಾಧು' ಎಂದು ಆನಂದನನ್ನು ಹರಸಿದರು.

ಆನಂದನ ಗೀತಾಮಂಗಳಕ್ಕೆ, ಆಚಾರ್ಯರು ಸುದಿನವನ್ನು ನಿಶ್ಚೈಸಿದರು. ಆನಂದನಿಗೆ ಅಂಕಿತೋಪದೇಶಕ್ಕೆ ಅದೇ ಶುಭದಿನವಾಗಿಯೂ ಏರ್ಪಟ್ಟಿತು. ಸಕಲ ವಿದ್ವಜ್ಜನರ ಸಮ್ಮುಖದಲ್ಲಿ ಗೀತಾಮಂಗಳ ಮಹೋತ್ಸವವಾಯಿತು. ಆಚಾರ್ಯರು ಇಂದಿಗೆ ನಮ್ಮ ಕಾರ್ಯ ಪೂರ್ತಿಯಾಯಿತೆಂದರು. **'ಏಕಸ್ಮಿನ್ ಜನ್ಮನಿ ಏಕೈಕ ವಿದ್ಯಾ'** ಎಂಬ ಅಪವಾದದಿಂದ ಆನಂದನು ರಹಿತನಾದನೆಂದರು.

ಶ್ರೀಶದಾಸರು ಅಂಕಿತೋಪದೇಶಕ್ಕೆ ಪೂರ್ವಭಾವಿಯಾಗಿ ನಡೆಸಬೇಕಾದ ಕಾರ್ಯಗಳನ್ನೆಲ್ಲ ನಡೆಸಿದರು. ವಿಜಯರಾಯರಿಂದ ಪರಂಪರಾಗತವಾಗಿ ಬಂದ **ಶ್ರೀ ನರಸಿಂಹಮೂರ್ತಿಗೆ** ತಂತ್ರ ಶಾಸ್ತ್ರಾನುಸಾರವಾಗಿ ಮಹಾಪೂಜೆ ಮಾಡಿದರು. ಆನಂದನನ್ನು ಭದ್ರಪೀಠದಮೇಲೆ ಕುಳ್ಳಿರಿಸಿ, ತಮ್ಮ ಬಿಂಬಮೂರ್ತಿಯನ್ನು ಅವನಲ್ಲಿ ಆವಾಹಿಸಿದರು. **ಕಮಲೇಶವಿಠಲಾಂಕಿತ**ದಿಂದ ನೀನು ಹರಿದಾಸನಾದೆಯೆಂದರು. ಇಂದೇ ಸ್ಫೂರ್ತಿಯಿಂದ ನೀನೇ ಕೀರ್ತನಸೇವಾ ಮಾಡಬೇಕೆಂದು ಆಜ್ಞೆಗೈದರು.

ಆನಂದನು ಹರಿದಾಸಪಟ್ಟದಲ್ಲಿ ಅಭಿಷಿಕ್ತನಾದುದನ್ನು ನೋಡಿ ಆಸ್ಥಾನದ ಪಂಡಿತರು ಆನಂದಭರಿತರಾದರು. ತಾವೆಲ್ಲರೂ ಬಯಸಿದಂತೆ ಆನಂದನ ಸಕಲ ವಿದ್ಯಾ ಪ್ರವರ್ತನಕ್ಕೆ ಇವತ್ತಿನ ಕೀರ್ತನವೇ ಶುಭಾರಂಭವೆಂದರು. ಆ ರಾತ್ರೆ ಶ್ರೀಶದಾಸರು ಸಂಪ್ರದಾಯ ಪ್ರಕಾರ ಭಗವದ್ಭಜನೆ ಮಾಡಿ ಆನಂದನನ್ನು ತಾವು ಕುಳಿತಿದ್ದ ಭದ್ರಪೀಠದಲ್ಲಿ ಕುಳ್ಳಿರಿಸಿ ಕೀರ್ತನಾರಂಭವಾಗಬಹುದೆಂದರು. ಆಚಾರ್ಯರು ರಸಭರಿತವಾದ ಅಪೂರ್ವ ಕಥೆಯನ್ನೇ ಹೇಳಬೇಕೆಂದರು.

ಆನಂದದಾಸರು ಗುರುಜನರ ಆಜ್ಞೆಯನ್ನು ಶಿರಸಾವಹಿಸಿ ಪೌರಾಣಿಕವಾದ **'ಪರಮಾನ್ನದ ಕಥಾ'** ಎಂಬ ದೂರ್ವಾಸಮುನಿಗಳು ಶ್ರೀಕೃಷ್ಣನನ್ನು ವಿವಿಧ ರೀತಿಯಲ್ಲಿ ಪರೀಕ್ಷಿಸಿ, ವರಪ್ರದಾನಮಾಡಿದ ಆಖ್ಯಾನವನ್ನು ಆರಂಭಿಸಿದರು. ಆಖ್ಯಾನದ ಕಡೆಯಲ್ಲಿ ಕೃಷ್ಣಪ್ರಶಂಸಾರೂಪವಾದ ಈ ಕೆಳಕಂಡ ಪದವನ್ನು ಹಾಡಿದರು.

ಕೇದಾರಗೌಳ— ಆದಿತಾಳ

ಬ್ರಹ್ಮಣ್ಯದೇವನೆಂಬುವ ಮಹಾಬಿರಿದು ನಿನಗೆ ಸಲ್ಲುವುದಯ್ಯಾ ಪ.
ಬ್ರಹ್ಮರುದ್ರಾದ್ಯರುಗಳು ದೈವವೆಂ
ದ್ಹಮ್ಮಿನಿಂದ ಹೊಡೆದಾಡುವರು ಬರಿದೆ ಅ.

ಹಿಂದೆ ಸರಯು ತೀರದೊಳ್ ಮಹಾಮರ
ಬೃಂದವೆಲ್ಲ ಕೂಡಿ । ಸರ್ವೇಶ್ವರ ।
ಸಂದೇಹವ ತಿಳಿಸಲು ಭೃಗುಮುನಿಗಳಿ
ಗಂದೆ ಆಜ್ಞೆಮಾಡಿ ॥
ಮಂದಜಾಸನೇಂದುಧರರ ಪರಿಭವ
ದಿಂದ ಬೆಂದು ನಿನ್ನ ಸನ್ನಿಧಾನಕೆ ।
ಬಂದು ಪಾದದಿಂದಲೊದೆಯಲವಗಭಿ
ವಂದನಂಗೈದು ಘಳಿಸಿದೆ ಪರ ೧
ರಾಯಸೂಯ ಯಾಗದೊಳ್ ಮಹಾ ಮಹ
ರಾಯ ಸಂದಣಿಯಲಿ । ಅಗ್ರಪೂ ।
ಜಾ ಯತಾರ್ಥದಿಂದ ಗಾಂ ।
ಗೇಯ ಸಮ್ಮುಖದಲೀ ॥ ೨
ಆವದೇವಗಿಲ್ಲ ಶಕುತಿ ಬ್ರಹ್ಮ ಕು
ಲಾವ ಮಾನದಿಂದ ಪೇಳ್ದುದನು ಕೇಳ್
ಕಾವ **ಕಮಲೇಶ ವಿಠಲ** ಪ್ರತ್ಯ
ಕ್ಷಾವಲೋಕನದಲಿ ಧನ್ಯನಾದೆ ೩

ಈ ಪದ ದಾಸರ ಕವಿತಾಶೈಲಿಯು ಪದ ಜೋಡಣೆಯಿಂದ ಎಷ್ಟು ಬಂಧುರವಾಗಿದೆ-ಎಷ್ಟು ಅರ್ಥವತ್ತಾಗಿದೆ ಎಂಬುದು ಗಮನಾರ್ಹವಾಗಿದೆ.

ಆನಂದದಾಸರ ಕೀರ್ತನ ಸದ್ವಾರ್ತೆಯು ರಾಜ ಸನ್ನಿಧಿಯಲ್ಲಿ ಬಹುಮುಖದಿಂದ ಶ್ರುತವಾಯಿತು. ರಾಜನು ತನ್ನ ಆನಂದನು ಆನಂದದಾಸರಾದ ಉತ್ತಮಾಂಗವಾಗಿ ವಿದ್ವಜ್ಜನರಿಗೆಲ್ಲಾ ರಾಜಯೋಗ್ಯವಾದ ವಸ್ತ್ರ ಬಹುಮಾನ ಮಾಡಿದನು. ದ್ವಿತೀಯ ವಿಘ್ನವಾಗದಂತೆ ರಾಜದರ್ಬಾರಿನಲ್ಲಿ ಮುಂದಿನ ಕೀರ್ತನ ಮಾಡಬೇಕೆಂದು ತಾನೇ ಆಜ್ಞೆ ಮಾಡಿದನು.

ಕನಕಾಭಿಷೇಕ

ಆನಂದದಾಸರು ಕೀರ್ತನರಂಗಕ್ಕೆ ಕಾಲಿಟ್ಟ ಕೂಡಲೇ ಅವರಿಗೆ ಬಂದ ಪ್ರಾಶಸ್ತ್ಯವು ಅನನ್ಯ ಸಾಧಾರಣವಾಗಿದ್ದಿತು. ರಾಜ ಸನ್ನಿಧಿಯಲ್ಲಿ, ದಾಸರು ಮಾಡಿದ ಕೀರ್ತನಗಳೆಂದರೆ ಭಗವದ್ಗೀತೆಯ ಮೂರು ಷಟ್ಕಗಳು. ಗೀತೆಯ ಪ್ರಥಮ ಶ್ಲೋಕವಾದ:—

ಧರ್ಮಕ್ಷೇತ್ರೇ ಕುರುಕ್ಷೇತ್ರೇ। ಸಮವೇತಾ ಯುಯುತ್ಸವಃ ॥
ಮಾಮಕಾಃ ಪಾಂಡವಾಶ್ಚೈವ। ಕಿಮಕುರ್ವತ ಸಂಜಯ ।

ಎಂಬುದನ್ನು ಅಧ್ಯಾತ್ಮ ರೀತ್ಯಾ ಶರೀರ, ಅಹಂಕಾರ-ಮಮಕಾರಗಳು, ಶುದ್ಧವಾದ ಭಕ್ತಿ ವೈರಾಗ್ಯಾದಿ ಗುಣಗಳು ಎಂಬ ಯೋಜನೆ ಮಾಡಿ, ಅನುವಾದ ಮಾಡಿದರು. ಅಮುಖ್ಯ

ಭಾಗವೆಂದು—ಗೀತಾಭ್ಯಾಸಿಗಳು ಸಾಮಾನ್ಯವಾಗಿ ಉಪೇಕ್ಷಿಸುವ ಅರ್ಜುನ ವಿಷಾದಯೋಗವನ್ನೂ ದ್ವಿತೀಯಾಧ್ಯಾಯದ ಮೊದಲ ಹತ್ತು ಶ್ಲೋಕಗಳನ್ನೂ ವ್ಯಕ್ತಿ ಕಥೆಯಾಗಿ ತೆಗೆದು ಕೊಳ್ಳದೆ ತತ್ವನಿರೂಪಣೆಯೆಂದು ವಿಸ್ತರಿಸಿದ ದಾಸರ ಅನುವಾದವು, ಅವರ ವಿದ್ಯಾ ಗುರುಗಳನ್ನೂ ಇತರ ವಿದ್ವಾಂಸರನ್ನೂ ಮುಗ್ಧರನ್ನಾಗಿ ಮಾಡಿತು.

ದಾಸರು ಬರೆದಿಟ್ಟಿರುವ—**'ಕೀರ್ತನಗೀತೆ'**ಯಲ್ಲಿ ಪ್ರತಿ ಅಧ್ಯಾಯಕ್ಕೂ ಎರಡು ಪದಗಳು, ಕೆಲವು ಆರ್ಯಗಳು ಮತ್ತು ಷಟ್ಪದಿಗಳು ಈ ರೀತಿ ಬಲು ಬಂಧುರವಾದ ಸಂಗ್ರಹವಿದೆ. ವಿಶ್ವರೂಪ ವರ್ಣನೆಯ ಕನ್ನಡ ದಂಡಕವು ಶ್ರೀ ಭಾಷ್ಯಕಾರರ ವೈಕುಂಠ ಗದ್ಯದಂತೆ ಸುಂದರವಾಗಿದೆ. ಆನಂದದಾಸರು ಮಾಡಿದ **ಕೀರ್ತನಗೀತೆ**ಯನ್ನು ಸಂಕ್ಷೇಪವಾದ ವ್ಯಾಖ್ಯಾನಮಾಡಿ ಮುದ್ರಿಸಿದರೆ, ಕನ್ನಡಿಗರಿಗೊಂದು ಗೀತೆಯ ಕೈಪಿಡಿಯನ್ನು ಮಾಡಿಕೊಟ್ಟಂತಾಗುತ್ತದೆ. ದಾಸರ ಕೀರ್ತನಗೀತೆಯ ಮೊದಲನೆಯ ಪದವು :—

ಬೇಹಾಗ್—ಆದಿತಾಳ

ನಿನ್ನ ಸೇವಕನ ಬಿನ್ನಪಂಗಳನು
ಮನ್ನಿಸಿ ಪಾಲಿಪುದೈ ಪ.
ಚನ್ನಾರ ಚಲುವರಾಯ ನೀಲ ನಿಭ
ವರ್ಣ ಮದನ ಮೋಹನ್ನ ಕರುಣಾಸಂಪನ್ನ ಅ.

ತ್ವರದಿಂದಲಿ ಸಂಗರ ಮಹೋತ್ಸವಕೆ
ನೆರೆದ ಮಹೋತ್ತಮರು
ಗುರು ಗುರುಸುತ ಭೀಷ್ಮ ಕೃಪಾಚಾರ್ಯಾ
ದ್ಯರ ಮೇಲೆನ್ನಯ ಕರವೆರವಾಗಲು ತರವೆ ೧
ಮಾವ ಭಾವಮೈದುನ ಶ್ವಶುರಾನುಜ
ವಾವೆಯವರಿಗೆಲ್ಲಾ
ಸಾವ ಬಗೆದು ಈ ಭೂವಲಯದ ಭಾ
ಗ್ಯಾವ ಭೋಗವಿದು ನಾನೊಲ್ಲೆ ನಿಜವಿದು ೨
ಬಂಧುಗಳನು ನೆರೆ ಕೊಂದ್ಯಮರಾಯನ
ಮಂದಿರದೊಳಗೆಲ್ಲಾ
ಬಂಧಿಸಿ ಕಮಲೇಶವಿಠಲ ನೀ ನೋಡುವ
ದಂದವೆ ತವಪದ ದ್ವಂದ್ವಗಳಿಗೆ ವಂದಿಸುವೆ ೩

ಎಂಬಂತೆ ಪ್ರಾರಂಭವಾಗಿದೆ.

ಸಾರಾಂಶದ ಮಾತೆಂದರೆ, ದಾಸರ ಕೀರ್ತನವು ಒಂದು ಪ್ರಕಾರದಲ್ಲಿ—ಸಕಲ ಮತಗಳ ಅನುವಾದಮಾಡಿ, ಮಾಡಿದ ಸಿದ್ಧಾಂತವಾಗಿತ್ತು. ರಾಜನು ದಾಸರ [illegible] ಪರಮಾನಂದಪಟ್ಟು, ಪರವಶನಾಗಿ ಸಕಲ ಪಂಡಿತರ ಸಮ್ಮುಖದಿಂದ—ದಾಸರಿಗೆ ಆನಂದ

ಪೇಕಹೂಡಿದನು. ಅಂದು ಮೊದಲು ದಾಸರ ಯೋಗಕ್ಷೇಮವು ಮಹಾರಾಜನದಾಯಿತು. ಆನಂದದಾಸರು ಬಲು ದೊಡ್ಡ ತರಗತಿಯವರಾದರು. ಜನರು ಅವರನ್ನು ಕಾಣುವ ರೀತಿಯೇ ಬದಲಾಯಿತು.

ಆನಂದದಾಸರ ಕೀರ್ತಿಯು ಗದ್ವಾಲ, ವನಪರ್ತಿ, ದೋಮಕೊಂಟೆ ಮೊದಲಾದ ರಾಜರ ವಿದ್ವತ್ಸಭೆಗಳಲ್ಲಿ ಪ್ರಶಂಸೆಗೆ ಬಂದಿತು. ಆಯಾ ರಾಜರು ದಾಸರನ್ನು ತಮ್ಮ ತಮ್ಮ ಆಸ್ಥಾನಗಳಿಗೆ ಬರಮಾಡಿಕೊಂಡು ಸ್ಪರ್ಧೆಯಿಂದಲೋ ಎಂಬಂತೆ ಬಹುಮಾನಿಸಿದರು. ದಾಸರ ಕೀರ್ತನವು, ರಾಜ ದರ್ಬಾರಿನಲ್ಲಾದ ವಿನಾ ಸುಲಭವಾಗಿ ಕೇಳಬೇಕೆಂದರೆ ದೊರೆಯುತ್ತಿರಲಿಲ್ಲ. ಆನಂದ ದಾಸರಷ್ಟು ವಿಭವಶಾಲಿ ದಾಸರು ಯಾರೂ ಆಗಲಿಲ್ಲವೆಂದರೆ ಅತಿಶಯೋಕ್ತಿಯಾಗುವುದಿಲ್ಲ. ದಾಸರ ದಿನಚರ್ಯೆಯೆಂದರೆ, ಉಷಃಕಾಲದಲ್ಲಿ ರುದ್ರ ವೀಣೆಯನ್ನು ಬಾರಿಸಿ ಹಾಡುವುದು, ತರುವಾಯ ಜಟ್ಟಿಗಳಂತೆ ದಂಡೆಯೊತ್ತುವುದು ಪ್ರೌಢ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು, ರಾಜಾನುಗ್ರಹಕ್ಕೆ ಪಾತ್ರರಾದ ನರ್ತಕಿಯರಿಗೆ ಮಧ್ಯಾಹ್ನಕಾಲದಲ್ಲಿ ಗಾನನರ್ತನಗಳನ್ನು ಕಲಿಸುವುದು, ಸಂಧ್ಯಾಕಾಲದಲ್ಲಿ ಸಂಗಡಿಗರೊಡನೆ ಗುಡ್ಡಕ್ಕೆ ಹೋಗಿ ಮೃಗಗಳಂತೆ, ಪಕ್ಷಿಗಳಂತೆ ಕೂಗಿ ವಿನೋದಗೊಂಡು ಅವುಗಳೊಡನೆ ಆಟಮಾಡುವುದು. ಇಷ್ಟರ ವಿನಾ, ನೋಡುವವರಿಗೆ ಅವರಲ್ಲಿ ಯಾವದೇ ಬಗೆಯ ವೈರಾಗ್ಯ ಲಕ್ಷಣ ಕಂಡುಬರುತ್ತಿರಲಿಲ್ಲ. ಅರಸುಮಕ್ಕಳಂತೆ ಅಂಗರೇಖು ಮುಂಡಾಸುಗಳನ್ನು-ದಾಸರು-ಧರಿಸುತ್ತಿದ್ದುದು, ಶಿಷ್ಟ ಸಂಪ್ರದಾಯಸ್ಥರಿಗೆ ಸಮ್ಮತವಿರಲಿಲ್ಲ. ನರ್ತಕಿಯರ ಪರಿವಾರವೇ ಶಿಷ್ಯರಾಗಿದ್ದುದರಿಂದಲೂ, ಸುಗಂಧ ದ್ರವ್ಯಗಳಿಂದ ಯಾವಾಗಲೂ ಘಮಘಮಿಸುತ್ತಿದ್ದುದರಿಂದಲೂ ಸಂಕುಚಿತಮನಸ್ಕರು, ದಾಸರನ್ನು ದೂರವೇ ಬಿಡಲಿಲ್ಲ. ಬಾಹ್ಯ ಪರಿಸ್ಥಿತಿ ಹೀಗಿದ್ದರೂ ಆನಂದದಾಸರು ಅಂತರ್ಮುಖಿಗಳಾಗಿದ್ದರು. ರಾತ್ರಿಕಾಲದಲ್ಲಿ ವಿದ್ಯಾರ್ಥಿಗಳಂತೆ ವ್ಯಾಸಂಗಮಾಡುವುದೂ, ಪುರಾಣಕಥೆಗಳನ್ನು ಕೀರ್ತನಕ್ಕೆ ಹೊಂದಿಸಿ ಪದ ಪದ್ಯಗಳಾಗಿ ಬರೆದಿಡುವುದೂ, ದಾಸರ ಮನಮೆಚ್ಚಿದ ಕಾರ್ಯವಾಗಿತ್ತು. ಹೀಗೆ ದಾಸರು ರಚಿಸಿದ ಆಖ್ಯಾನಗಳಲ್ಲಿ ನಲವತ್ತು ಲೇಖಕನ ಪಿತ್ರಾರ್ಜಿತವಾಗಿವೆ. ಭರತ ನಾಟ್ಯಕ್ಕೆ ಅನುಕೂಲವಾದ ನಾಯಕನಾಯಕೀಭಾವದಿಂದ ರಚಿಸಿದ ಅನೇಕ ಜಾವಡಿಗಳಲ್ಲಿ ಕೆಲವು ಸಂಗ್ರಹೀತವಾಗಿವೆ. ಅಭಿನಯ ಕಲೆಯೇ ಮುಳುಗಿ ಹೋಗಿರುವ ಕಾರಣ ಆನಂದ ದಾಸರ ಜಾವಡಿಗಳನ್ನು ಹಾಡುವವರು ಈ ಕಾಲದಲ್ಲಿ ದೊರೆಯುವುದಿಲ್ಲ. ಆನಂದದಾಸರ ಆಖ್ಯಾನಗಳಲ್ಲಿ ನಾಲ್ವಾರು ಪದಗಳಿಗಿಂತ-ಹತ್ತೆಂಟು ಆರ್ಯೆಗಳು-ಅಷ್ಟೇಸಂಖ್ಯೆಯ ವೃತ್ತಗಳಿಗಿಂತ ಹೆಚ್ಚಾಗಿರುವುದಿಲ್ಲ. ವಿಷಯಗಳನ್ನು ಇವರಷ್ಟು-ಕ್ರೋಡೀಕರಿಸಿ ಬರೆದವರು ಹರಿದಾಸರುಗಳಲ್ಲಿ ಬಹಳ ವಿರಳ. ಭಾರತೀಯ ಗಾನಕಲೆಯಲ್ಲಿ ಹಿಂದೂಸ್ಥಾನಿ, ಕರ್ಣಾಟಕೀ ಎಂಬ ಪ್ರತ್ಯೇಕ ಪದ್ಧತಿಗಳ ಸಾಮರಸ್ಯವು ಆನಂದದಾಸರ ಪದಗಳಲ್ಲಿ ದೊರೆಯುವಂತೆ ಅನ್ಯತ್ರ ದೊರೆಯುವುದಿಲ್ಲ. ಅಪರೂಪ ರಾಗಗಳಲ್ಲಿ ವರ್ಣಮಟ್ಟುಗಳನ್ನೆತ್ತುವುದು, ಅದರಲ್ಲಿ ತಾಳಭೇದ ಕಾಲಭೇದಮಾಡಿ ತೋರಿಸುವುದು-ಇವು ಆನಂದದಾಸರಿಗೆ ಸಾಧಿಸಿದಂತೆ ಅನ್ಯರಿಗೆ ಸಾಧಿಸಿಲ್ಲ.

ಸುರಪುರದ ದೊಡ್ಡ ತರಗತಿಯ ರಸಿಕ ಜನರ ಮನೆಗಳಲ್ಲಿ ಗಾಯನವಾದನ ಸಂಭ್ರಮಗಳಿರುತ್ತಿದ್ದುದರಿಂದ–ಮಧ್ಯಾಹ್ನಕಾಲಗಳಲ್ಲಿ ಅಲ್ಲಿ ತಪ್ಪದೆ ಅನೇಕರು ಸೇರುತ್ತಿದ್ದರು. ವಿದ್ವಜ್ಜನರಿಗೆ ರಾಜಾಶ್ರಯದಿಂದ ಸುಖಜೀವನವಾಗುತ್ತಿದ್ದಾಗ,–ನಿತ್ಯ ಜೀವನವೇ ಸಂಗ್ರಾಮವಾಗಿ ಪರಿಣಮಿಸದಿದ್ದಾಗ – ಕಾವ್ಯಾಲಾಪನ ಗಾಯನಗಳಿಂದಲ್ಲದೆ ಜನರ ಕಾಲಯಾಪನೆ ಹೇಗಾಗಬೇಕು ? ಆ ಕಾಲದಲ್ಲಿ ರಾಜ ಬಂಧುಗಳಲ್ಲಿ ಸಹ ಕವಿಗಳು ಹೇರಳವಾಗಿದ್ದರು. ಆಂಧ್ರ, ಕನ್ನಡ, ಸಂಸ್ಕೃತಭಾಷೆಗಳಲ್ಲಿ ಕವಿತ್ವ ಮಾಡುವುದು, ಸಮಸ್ಯೆಗಳನ್ನು ಪೂರ್ಣಮಾಡುವುದು, ಹಾಡುವುದು, ರಾಜನಿಗೆ ವಿದ್ವದ್ಗೋಷ್ಠಿಯಲ್ಲಿ ನಡೆದ ಸಂಗತಿಗಳನ್ನು ವರದಿಮಾಡುವುದು ಇವೆಲ್ಲಾ ದೊಡ್ಡವರ ಕೆಲಸವಾಗಿತ್ತು. ಇಂತಹ ಸಂದರ್ಭಗಳಲ್ಲಿ ಆನಂದದಾಸರು ಇತರರೊಡನೆ ಪ್ರಶ್ನೋತ್ತರಗಳಂತೆ ಹಾಡಿದ ಹಾಡುಗಳು ಮನೋರಂಜಕವಾಗಿವೆ. ತತ್ವೋಪದೇಶವಾಗಲೀ, ಪುರಾಣಕಥೆಗಳ ಕಥನವಾಗಲೀ, ಆ ಪದಗಳಲ್ಲಿರದಿದ್ದರೂ, ಪದಗಳು ಜೀವನದ ಸುಂದರ ಭಾವನೆಗಳನ್ನು ವರ್ಣಿಸಿವೆ. ಅಶ್ಲೀಲವಲ್ಲದ ಶೃಂಗಾರ, ಕಟ್ಟಳೆಗಳಿಲ್ಲದ ಭಕ್ತಿ, ಜಿಜ್ಞಾಸ ಹುಟ್ಟಲೆಡೆಗೊಡದ ತತ್ವ ಈ ಮೂರನ್ನೂ ಆನಂದದಾಸರ ಸಾಹಿತ್ಯದಲ್ಲಿ ನೋಡಬಹುದು.

ಹೀಗೆ ಆ ಕಾಲದ ಭಾವನೆಗೆ ತಕ್ಕಂತೆ, ಒಬ್ಬ ಸುಸಂಸ್ಕೃತ ಮಾನವನಿಗೆ ಬರಬೇಕಾದ ಪ್ರಾಶಸ್ತ್ಯಗಳೆಲ್ಲಾ ಆನಂದದಾಸರಿಗೆ ಲಭಿಸಿದ್ದುವು. ಅಪಜಯ, ಆಶಾಭಂಗ ಬೇಸರಗಳು ಅವರ ಜೀವನದ ಪ್ರಥಮ ತರಂಗದಲ್ಲಿ ಬರಲಿಲ್ಲ. ನಲವತ್ತು ವರ್ಷ ವಯಸ್ಸಾದರೂ ಸುಕುಮಾರ ಯುವಕರಂತೆ–ಆನಂದದಿಂದಿದ್ದರು ಆನಂದದಾಸರು !

ಲೋಕದಲ್ಲಿ ಮಾನವನು ಎಷ್ಟೇ ವಿದ್ಯಾಪಾರಂಗತನಾದರೂ, ಸಾಮಾಜಿಕ ನಿಯಮಗಳನ್ನನುಸರಿಸಿ ಅವನು ನಡೆದರೂ, ಅವನಲ್ಲಿ ಮಾನವತ್ವ ವುಂಟಾಗುವುದಲ್ಲದೆ, ಅತಿಮಾನವತ್ವ ಬರುವುದಿಲ್ಲ. ಸಮಾಜ ಜೀವಿಯಾದ ಮಾನವನಿಗೆ ಅಶನವಸನಗಳು ಸಮೃದ್ಧಿಯಾಗಿ ದೊರೆಯುತ್ತಿದ್ದಾಗ, ಅವನ ಸಮಾಜವು ಅವನನ್ನು ಗೌರವಿಸುತ್ತಿದ್ದಾಗ, ಮಾತುಮಾತಿಗೆ ದೇವರ ಆವಶ್ಯಕತೆಯುಂಟಾಗುವುದಿಲ್ಲ. ಅಭ್ಯಾಸ ಬಲದಿಂದ ಶಾಸ್ತ್ರವಾಕ್ಯಗಳನ್ನುದಹರಿಸಿ, ದೇವರ ಮತ್ತು ಧರ್ಮದ ಮಾತಾಡಿದ ಮಾತ್ರಕ್ಕೆ, ಆ ಮಾತು ಅನುಭವದ ಮಾತಾಗುವುದಿಲ್ಲ. ಲೋಕದೃಷ್ಟಿಯಲ್ಲಿ ದೊಡ್ಡವನಾದ ಮನುಷ್ಯನು ದೇವರ ದೃಷ್ಟಿಯಲ್ಲಿ ದೊಡ್ಡವನೆನಿಸುವುದಿಲ್ಲ. ಹರಿದಾಸರೆಂದರೆ ಅತಿಮಾನವರು ; ಹರಿದಾಸರೆಂದರೆ ಸತ್ಪುರುಷರು ಆನಂದದಾಸರು. ತಮಗೆ ಆಶ್ರಯದಾತನಾಗಿದ್ದ ಸುರಪುರದ ರಾಜನಿರುವವರೆಗೆ ಆ ತರಗತಿಗೆ ಏರಲಿಲ್ಲ.

ಹೀಗಿರಲು ಆಗಿದ್ದ ರಾಜನು ಮೃತನಾಗಿ ಅವನ ದತ್ತಕ ಪುತ್ರನಿಗೆ ರಾಜ್ಯಾಭಿಷೇಕವಾಯಿತು. ಯಾವುದೋ ಬಡ ಸಂತತಿಯಿಂದ ಆರಿಸಲ್ಪಟ್ಟು ಬಂದ ಆ ರಾಜನಲ್ಲಿ ರಾಜಗುಣಗಳಿರಲಿಲ್ಲ. ತಂದೆಯಂತೆ ಈ ದತ್ತಕ ಪುತ್ರನು ವಿದ್ವಜ್ಜನರಿಗೆ ಆಶ್ರಯದಾತನಾಗಲಿಲ್ಲ. ರಾಜ್ಯ ಪ್ರಾಪ್ತಿಯಾದೊಡನೆ ಈ ಯುವಕರಾಜನು ಮೋದಿಖಾನೆಯ ಅಕ್ಕಿ ಜೋಳಿಗಳ ಲೆಖ್ಖಾಚಾರಕ್ಕೆ ಹೊರಟನು. ಅನವಶ್ಯವಾಗಿ ಈ ಬ್ರಾಹ್ಮಣರಿಗೆಲ್ಲಾ ಪಡಿಭತ್ಯ

ವೇಕೆಂದು ಪ್ರಶ್ನಿಸಲಾರಂಭಿಸಿದನು. ಈ ಕಾರಣದಿಂದ ಇತರರೆಲ್ಲರಿಗೆ ಆದಂತೆ ಆನಂದದಾಸರ ಮನೆಗೆ ಸಲ್ಲುತ್ತಿದ್ದ ಉಪಾಯನವೂ ನಿಂತುಹೋಯಿತು. ಶ್ರಮಜೀವಿಗಳಲ್ಲದ ಈ ಬಾಯಿ ಭಾಗವತರಿಗೆ ರಾಜವೇತನವೇಕೆಂದು ದಾಸರಿಗೆ ಕೊಡುತ್ತಿದ್ದ ಮೂವತ್ತು ವರಹಗಳ ಮಾಸಾಶನವನ್ನು ನಿಲ್ಲಿಸಿದನು. ಮುಂದೆ ದಾಸರು ಜೀವಿಸುವ ಬಗೆ ಹೇಗೆ? ಜನ್ಮ ಪ್ರಭೃತಿ ಒಬ್ಬರನ್ನು ಯಾಚಿಸಿದವರಲ್ಲ. ಕೀರ್ತನ ಮಾಡಿಸಿರೆಂದು ಕೇಳಿದವರಲ್ಲ. ಮನೆ ತುಂಬ ಬಳಗ, ಐವತ್ತು ಜನ ವಿದ್ಯಾರ್ಥಿಗಳು, ಮೇಲಾಗಿ ಆಳುಕಾಳುಗಳು. ಒಂದೊಂದು ಆಭರಣವೂ ಒತ್ತೆ ಬಿದ್ದಿತು. ಕೂತಕೂತ ಹಾಗೆ ಗಾನ ರಚನೆ ಮಾಡುವ ಲಹರಿ ಹೋಯಿತು. ಪಾಠಪ್ರವಚನಗಳು ನಿಂತುಹೋದುವು. ಬೆಳಗಾದರೇನುಗತಿ? ರಾತ್ರಿಗೇನು ಗತಿ ಎಂಬ ಚಿಂತೆ ಬಲವಾಯಿತು. ಈ ಅವಸ್ಥೆಯಲ್ಲಿ ಹಬ್ಬಹರಿದಿನಗಳೆಲ್ಲ ಬರಬೇಕು. ಶ್ರಾವಣಮಾಸದ ಸಂಪಚ್ಛುಕ್ರವಾರದಂಥಾ ಉತ್ಸವ ದಿವಸ ದಾಸರ ಮನೆಯಲ್ಲಿ ಊಟಕ್ಕೇ ಅಭಾವವಾಯಿತು. ಬಂಧುಗಳು ಸರಿದರು, ಶಿಷ್ಯರು ಹೊಸ ಗುರುಗಳನ್ನಾಶ್ರಯಿಸಿದರು. ಮನೆಯಲ್ಲಿ ಉಳಿದವರೆಂದರೆ, ಸಹಧರ್ಮಿಣಿ ಮತ್ತು ಮಗಳು ತುಂಗಮ್ಮ. ಮೂವರ ಬಿನಾ ನಾಲ್ಕನೆಯವರಿಲ್ಲ. ಆಗ–ಆಗ ಬೇಕಾಯಿತು, ದಾಸರಿಗೆ ದೇವರ ಸಹಾಯ! ಸಮಸ್ತ ದಾರಿದ್ರ್ಯಪರಿಹಾರಕಳೂ, ಸಂಪನ್ನಿಯಾಮಕಳೂ ಆದ ಮಹಾಲಕ್ಷ್ಮಿಯ ಉಪಾಸನೆ ಮಾಡುವೆನೆಂದು ಸಂಕಲ್ಪಿಸಿ ದಾಸರು ಪುರಶ್ಚರಣೆಗೆ ಕುಳಿತರು. ದಾಸರನ್ನು ಗೌರವಿಸುತ್ತಿದ್ದ ವತನದಾರರು ರಹಸ್ಯವಾಗಿ ಕೊಡುತ್ತಿದ್ದ ಪದಾರ್ಥಗಳಿಂದ ಮನೆಯವರ ಜೀವನವಾಯಿತು. ಒಂದು ವರ್ಷದ ಮಿತಾಹಾರ–ಜಿತಮನಸ್ಸಿನ ಉಪಾಸನೆಯಿಂದ ದಾಸರ ತೇಜಸ್ಸು ಹೆಚ್ಚಿತು. ದೇವಿಯಲ್ಲಿ ಕಾರುಣ್ಯೋದಯವಾಯಿತು. ಕೊಲ್ಹಾಪುರಕ್ಕೆ ಬರಬೇಕೆಂದು ಸ್ವಪ್ನಸೂಚನೆಯಾಯಿತು. ಮಹಾಮಾತೆಯ ದರ್ಶನಮಾಡುವೆನೆಂದು ಪಾದಚಾರಿಗಳಾಗಿ ದಾಸರು ಪ್ರಯಾಣಮಾಡಿದರು.

ಬಂದು ಸೇರಿದ ಕಾಲ ಶರನ್ನವರಾತ್ರಿ! ಶ್ರೀ ಕ್ಷೇತ್ರವನ್ನು ಸೇರಿ ದೇವಿಯ ದರ್ಶನ ಮಾಡಿದ್ದು ಶುಕ್ರವಾರ! ಮಹಾಮಾತೆಯ ದರ್ಶನವಾದಾಗ ದಾಸರು—

ಧನಾಸರಿ — ಆದಿತಾಳ

ಕರುಣದಿ ಕಣ್ಣು ತೆರೆಯೆ | ನಾರನ್ನ ಶಿರಿಯೆ ಪ.

ಧರಣಿಯೊಳಗೆ ಸುಂ | ದರತರ ಕೊಲ್ಹಾ
ಪುರ ಸಿಂಹಾಸನದಿ ಮೆರೆವ ದೊರೆಯೆ ಅ.

ವಿಧಿ ಭವಾದಿಗಳ ಸದನಗಳಿಗೆ ಅ
ಭ್ಯುದಯ ಕಟಾಕ್ಷದ ಸುಧೆಯನುಗರಿಯೆ ೧

ಸುಂದರಾನನರವಿಂದದ ಮಲ್ಲಿಗೆ
ಮಂದಹಾಸ ಮಕರಂದವ ಸುರಿಯೆ ೨

ಕಡುಬೆಡಗಿನ ನಿನ್ನಡಿದಾವರೆಗಳ
ಬಿಡದೆ ಭಜಿಪ ವರಕೊಡು ಸುಂದರಿಯೆ ೩

ಬಡವರಭೀಷ್ಟೆಯ ಕೊಡುವಳೆಂದು ಬಡ
ಬಡಿಸಿ ಬಂದೆ ನಿನ್ನೊಡಲಿನ ವೊರೆಯೆ ೪

ಕೊಟ್ಟರೆ ಕಮಲೇಶವಿಠ್ಠಲರಾಯನ
ಪಟ್ಟದರಸಿಯೆಂಬ ಕಟ್ಟಳೆ ಖರೆಯೆ ೫

ಎಂಬುದಾಗಿ ಹಾಡಿದರು.

ಅದೇ ಸಮಯದಲ್ಲಿ ಛತ್ರಪತಿ ಮಹಾರಾಜನು ಶ್ರೀ ದೇವಿಯ ದರ್ಶನಕ್ಕೆ ಬಂದು ಗರ್ಭಾಂಕಣದಲ್ಲಿ ಪೂಜೆ ಮಾಡುತ್ತಿದ್ದನು. ರಾಜಭಟರು–'ಯಾರು ಗದ್ದಲ ಮಾಡುವರು? ಪೂಜೆಗೆ ವಿಘ್ನವಾಗುವುದು; ಸ್ವಲ್ಪ ಹೊತ್ತು ಸುಮ್ಮನಿರಹೇಳು' ಎಂದು ಅಧಿಕಾರ ಮಾಡಿದರು. ಮಹಾರಾಜನು ಅವರನ್ನು ನಿವಾರಿಸಿ, ದಾಸರ ಹಾಡು ಕೇಳುತ್ತಾ, ಪರವಶನಾಗಿ ನಿಂತುಬಿಟ್ಟನು. ತನ್ನ ಸೇವೆಯಾದೊಡನೆ–'ಹಾಡಿದವರ್‍ಯಾರು? ಎಲ್ಲಿದ್ದಾರೆ' ಎಂದು ಪರಭಾರೆಯಾಗಿ ವಿಚಾರಿಸಿ, ಅರಮನೆಯನ್ನು ಸೇರಿದನು.

ಕೊಲ್ಹಾಪುರವು ಎರಡು ಶತಮಾನಗಳ ಹಿಂದೆ ಸಂಪೂರ್ಣ ಕರ್ಣಾಟಕವಾಗಿತ್ತು. ಅರಸರು ಮಹಾರಾಷ್ಟ್ರರಾದ ಕಾರಣ–ಕನ್ನಡಿಗರನೇಕರು ದೇಶ ಬಿಟ್ಟ ಕಾರಣ–ರಾಜಭಾಷೆ ಮಾತ್ರವಾಗಿದ್ದ ಮರಾಠಿಯು ದೇಶಭಾಷೆಯೂ ಆದಕಾರಣ–ಈಗ ಆ ದೇಶವು ಮಹಾರಾಷ್ಟ್ರದಲ್ಲಿ ಸಮಾವೇಶವಾಗಿದೆ.

ಆನಂದದಾಸರ ಕಾಲದಲ್ಲಿ ಕೊಲ್ಹಾಪುರವು ಈಗಿನಷ್ಟು ಮಹಾರಾಷ್ಟ್ರವಾಗಿರಲಿಲ್ಲ. ಉಭಯ ಭಾಷೆಗಳೂ ಸಮಸಮವಾಗಿದ್ದು, ರಾಜರೂ ಕನ್ನಡವನ್ನು ತಿಳಿದವರಾಗಿದ್ದರು. ದಾಸರ ಗಾನವನ್ನು ಕೇಳಿದ ಮಹಾರಾಜನು ಮರುದಿನ ಪ್ರಾತಃಕಾಲ ಅವರನ್ನು ಬರಮಾಡಿಕೊಂಡು, ಅವರ ಪೂರ್ವೋತ್ತರಗಳನ್ನು ವಿಚಾರಿಸಿದನು. ರಾಜಾನುಗ್ರಹವಾದ ಮೇಲೆ ಕೇಳುವುದೇನು? ದಾಸರಿಗೆ ಪ್ರತ್ಯೇಕ ಬಿಡಾರವಾಯಿತು. ಸೇವೆಗೆ ಜನರಾದರು. ಸುರಪುರದಿಂದ ಸ್ವಜನರು ಬಂದು ಸೇರಿದರು. ದಸರೆಯಿಂದ ದೀಪಾವಳಿಯವರೆಗೆ ಅರಮನೆಯಲ್ಲಿ ಗಾಯನ ಕೀರ್ತನಗಳ ಕೋಲಾಹಲವಾಯಿತು. ರಾಜನು ಮೆಚ್ಚಿ ದಾಸರಿಗೆ ಮಾಡಿದ ಸನ್ಮಾನವೆಂದರೆ, ಆರು ಸಹಸ್ರ ವರಹಗಳು–ತಕ್ಕ ವಸ್ತ್ರಭೂಷಣಾದಿಗಳು.

ದಾಸರು ದೇವಿಯ ಕಾರುಣ್ಯದಿಂದ ತಮ್ಮ ದಾರಿದ್ರ್ಯ ಪರಿಹಾರವಾಯಿತೆಂದು ಉತ್ಸಾಹದಿಂದ ಉತ್ಸಾಹಜನಕವಾದ ಆರಭಿ ರಾಗದಲ್ಲಿ ಕೆಳಕಂಡ ಪದವನ್ನು ಹಾಡಿದರು. ಹಿಂದಿನ ಪದದಲ್ಲಿ–'ನಮ್ಮ ಇಷ್ಟಾರ್ಥವನ್ನು ಕೊಟ್ಟರೆ ನೀನು ಕಮಲೇಶವಿಠ್ಠಲನ ಪಟ್ಟದ ರಾಣಿ; ಕೊಡದಿದ್ದರೆ ರಾಣಿಯಲ್ಲ' ಎಂಬರ್ಥ ಬರುವಂತೆ ಹಾಡಿದ ಅಪಚಾರಕ್ಕೆ ಈ ಪದದಲ್ಲಿ ಗಂಭೀರವಾದ ಕ್ಷಮಾಪಣೆಯಿದೆ, ಆ ಪದವಿರುವ ಕ್ರಮವೆಂತೆಂದರೆ :—

ಆರಭಿ — ಆದಿತಾಳ

ರಮಾ-ಸಮುದ್ರನ ಕುಮಾರಿ ನಿನ್ನಯ
ಸಮಾನರ್ಯಾರಮ್ಮಾ ಪ.
ಸುಮಾಸ್ತ್ರನಯ್ಯನೆದೆಮೇಲೆ ಸತತ ಬ
ಹು ಮಾನದಲಿ ಮೆರೆವ ಮಹಾಮಹಿಮಳೇ ಅ.

ಕನಕ ಮಕುಟ ಮಂಡಿತ ಕುಟಿಲಾಳಕಜಾಲೇ । ಶ್ರೀ ಚಂ ।
ದನ ಕುಂಕುಮ ಕಸ್ತುರಿ ತಿಲಕಾಂಕಿತ ಫಾಲೇ ।
ಮಣಿಮಯ ಕುಂಡಲ ಶೋಭಿತ ಕರ್ಣಕಪೋಲೇ । ಚಂಪಕ ।
ನನೆ ನಾಸಾಗ್ರದೊಳೊಗುವ ಮೌಕ್ತಿಕ ಲೋಲೇ ॥
ಮಿನುಗುವ ಮಾಣಿಕಮಣಿಯಧರ ಪುಟದೊ
ಳಿನಿವರ ವಜ್ರದಿ ಕಣಿಗಳ ರಾಜಿ ದ
ಶನಯುತ ಸ್ಮೇರಾನನ ಶುಭಕಾಂತಿಯಿಂ
ವನಜ ಭವನ ಮನೆಗೆ ಮಂಗಳಗರೆವ ೧

ಕೊರಳೊಳು ಪರಿಮಳ ಪರಿಪರಿ ಪುಷ್ಪದ ಮಾಲೇ । ಒಪ್ಪುವ
ಕರಿರಾಜನ ಕರದಿರುವಿಕೆ ಕರಗಳ ಲೀಲೇ ।
ಶರಣಾಗತ ಜನ ಪರಿಪಾಲನರತ ಶೀಲೇ । ಗಂಡನ ।
ಪರಿರಂಭಣ ಸಾಮ್ರಾಜ್ಯದ ಸುಖದನುಕೂಲೇ ॥
ಕರುಣಿಸಮ್ಮ ತವ ಕರುಣಕಟಾಕ್ಷದ
ಶಿರಿಯ ಬೆಳಗಿನೊಳ್ ಪರಿಚರಿಸುವ ಸುಜ
ನರ ಚರಣಾಂಬುಜ ಪರಿಮಳದೊಳು ಮನ
ವೆರಗಿಸುವುದು ಸೌಂದರ್ಯ ಶಿಖಾಮಣಿ ೨

ರಮಣೀಯ ವಿಮಲ ಕಮಲಾಯತದಳನೇತ್ರೇ । ಚಂಪಕ ।
ಸುಮದ ಸುವರ್ಣ ಪರಿಮಳದ ಸುಂದರಗಾತ್ರೇ ।
ಕಮಲ ಭವೇಂದ್ರಾದ್ಯಮರ ಮುನಿಗಣಸ್ತೋತ್ರೇ । ಶ್ರೀ
ಕಮಲೇಶ ವಿಠಲರಾಯನ ಕರುಣಕೆ ಪಾತ್ರೇ ॥
ಭ್ರಮಿಸುವೆನು ಭವದತಿಮಿರದೊಳಗಹಂ
ಮಮಮದದಿಂದಲಿ ಸುಮಾರ್ಗವರಿಯದೆ
ವಿಮಲದೃಷ್ಟಿ ಚಂದ್ರಮನಮೃತಕಿರಣ
ನಮಗೆ ಸಲಿಸೆ ಮಾರಮಣಿ ಮಜ್ಜನನಿ ॥ ೩

ಎಂಬಂತಿದೆ.

"ಅರ್ಥಾಃ ಬಹಿಶ್ಚರಾಃ ಪ್ರಾಣಾಃ" ಎಂಬಂತೆ ರಮಾದೇವಿಯ ಅನುಗ್ರಹದಿಂದ ಪ್ರಾಣಬಂದಂತೆ ಹಣ ಬಂದಾಗ ದೇವಿಯನ್ನು ಕೊಂಡಾಡದವರ್ಯಾರು ? ಹಣವಿದ್ದರೆ ಚಿಂತೆ,

ಇಲ್ಲದಿದ್ದರೆ ಚಿಂತೆ, ಇದ್ದದ್ದನ್ನು ಖರ್ಚುಮಾಡಲು ಮತ್ತೆ ಚಿಂತೆ! ಇವೆಲ್ಲಾ ಜೀವನದಲ್ಲಿ ಬರುವ ಅನಿವಾರ್ಯ ಚಿಂತೆಗಳು!

ದೇವಿಯ ಕಾರುಣ್ಯವಾಯಿತು! ದ್ರವ್ಯಪ್ರಾಪ್ತಿಯಾಯಿತು! ಮುಂದೇನು? ಉಡುಪೀ ಯಾತ್ರೆಯಾದರೂ ಮಾಡೋಣವೆಂದು, ಆನಂದದಾಸರು ಪ್ರಯಾಣ ಮಾಡಿದರು. ದಾಸರು ಬಂದಾಗ ಉಡುಪಿಯಲ್ಲಿ ಪರ್ಯಾಯ ಮಹೋತ್ಸವವು ವಿಜೃಂಭಣೆಯಿಂದ ನಡೆಯುತ್ತಿತ್ತು. ಸಾವಿರಾರು ಮಂದಿ ಯಾತ್ರಿಕರು ಉತ್ಸವದಲ್ಲಿ ಭಾಗಿಗಳಾಗಿ ಆನಂದಪಡುತ್ತಿದ್ದರು. ಅಷ್ಟಮಠಾಧಿಪತಿಗಳೂ ಆನಂದದಾಸರ ಕೀರ್ತನೆಗಳನ್ನು ಕೇಳಿ ಪರಮಾನಂದಭರಿತರಾಗಿ, ದಾಸರನ್ನು ವಿಶೇಷರೀತಿಯಿಂದ ಸನ್ಮಾನಿಸಿದರು. ಶ್ರೀ ಕ್ಷೇತ್ರದಲ್ಲಿದ್ದಾಗ ದಾಸರು ಭಾಗವತ ದಶಮಸ್ಕಂಧವನ್ನು ಕನ್ನಡ ಕೀರ್ತನಕ್ಕಿಳಿಸಿ ಶ್ರೀ ಕೃಷ್ಣನಿಗೆ ಸಮರ್ಪಿಸಿದರು. ಅನಂತರ ದಾಸರು ಸಕಲ ಧರ್ಮಪೀಠಗಳಿಗೂ ವಿದ್ವಜ್ಜನರಿಗೂ ಆಶ್ರಯದಾತನಾದ ಶ್ರೀಕೃಷ್ಣ ಮಹಾಪ್ರಭುವಿನ ಮೈಸೂರು ರಾಜಧಾನಿಗೆ ಬಂದಿಳಿದರು. ದಾಸರ ಬಿಡಾರವು ಈ ಗ್ರಂಥ ಲೇಖಕನ ಪಿತಾಮಹರಾದ ಪರಮಪೂಜ್ಯರೆನಿಸಿದ್ದ ವೆಂಕಟೇಶದಾಸರ ಮನೆಯಲ್ಲಾಯಿತು. ಆನಂದದಾಸರ ಖ್ಯಾತಿಯನ್ನು ಕೇಳಿದ್ದ ಜನರು, ಶ್ರೀಮನ್ಮಹಾರಾಜರಲ್ಲಿ ಪ್ರಥಮ ಕೀರ್ತನವನ್ನು ಮಾಡಿಸಬೇಕೆಂದು ಭೂಮ್ಯಾಕಾಶಗಳಷ್ಟು ಪ್ರಯತ್ನ ಮಾಡಿದರು. ದಾಸರ ಗಾಯನ ಕೇಳಲು ವೀಣೆಯ ಸಾಂಬಯ್ಯನವರೂ ಸದಾಶಿವರಾಯರೂ ದಿನವಹಿ ಬರುತ್ತಿದ್ದರು. ಒಂದು ಕಡೆ ಆನಂದಾಳ್ವಾರರು, ಕುಣಿಗಲು ರಾಮಾ ಶಾಸ್ತ್ರಿಗಳು, ಕಾಶೀ ಆಚಾರ್ಯರು; ಮತ್ತೊಂದು ಕಡೆ ಆಸ್ಥಾನದ ಗಾನಪಂಡಿತರುಗಳು; ಹೀಗೆ ಪ್ರಮುಖ ವಿದ್ವನ್ಮಣಿಗಳು ದಾಸರ ಪಾಂಡಿತ್ಯ ಪ್ರತಿಭೆಗಳನ್ನು ಪ್ರಶಂಸಿಸುವುದರಲ್ಲಿ ಪರ್ಯವಸಾನವಾಯಿತಲ್ಲದೆ, ಎರಡು ವರ್ಷಗಳಾದರೂ ರಾಜದರ್ಬಾರಿನಲ್ಲಿ ಕೀರ್ತನವಾಗಲಿಲ್ಲ. ಊರಿಗೆ ಯಾವ ವಿದ್ವಾಂಸರು ಬಂದಿದ್ದಾರೆಂದು, ರಾಜನೇ ಖುದ್ದಾಗಿ ಪ್ರಶ್ನೆ ಮಾಡಿದ ವಿನಾ ಮುಂದುವರಿದು ಮಾತನಾಡುವ ಧೈರ್ಯ ಯಾರಿಗೂ ಬರಲಿಲ್ಲ. ಕೃಷ್ಣರಾಜ ಪ್ರಭುವಿನೆದುರಿಗೆ ಕೀರ್ತನಮಾಡಿದ ವಿನಾ, ಅನ್ಯಸ್ಥಳಗಳಲ್ಲಿ ಮೊದಲ ಕೀರ್ತನ ಮಾಡುವುದಿಲ್ಲವೆಂದು ದಾಸರ ಸಂಕಲ್ಪವಾಗಿತ್ತು. ದಿವಸಗಳು ಕಳೆದಂತೆ ದಾಸರಲ್ಲಿದ್ದ ಹಣವೂ ಮುಗಿಯಿತು. ಮೈಸೂರು ರಾಜಧಾನಿಯಲ್ಲಾದ ಈ ವಿಚಿತ್ರ ಪರಿಸ್ಥಿತಿಯನ್ನು ಕಂಡು, ದಾಸರು ಪ್ರಯಾಣ ಸನ್ನದ್ಧರಾಗಬಯಸಿದರು. ಆ ಸಂದರ್ಭದಲ್ಲಿ ಅರಮನೆಯ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಪೇಷ್ಕಾರನು ದಾಸರನ್ನು ಕಂಡು–'ಸ್ವಾಮಿ ದಾಸರೇ, ರಾಜ ಸನ್ನಿಧಿಯಲ್ಲಿ ಪ್ರಥಮ ಕೀರ್ತನವಾಗದ ಮಾತ್ರಕ್ಕೆ–ತಮ್ಮ ಕೀರ್ತನ ಕೇಳಬೇಕೆಂದು ಕುತೂಹಲಪಡುವವರಿಗೆ ನಿರಾಶೆಯಾಗಬಾರದು; ಯಾರ ಮನೆಯಲ್ಲಾದರೂ ಕೀರ್ತನಮಾಡುವುದು ತಮ್ಮ ಸಂಕಲ್ಪಕ್ಕೆ ವಿರೋಧವಾಗಿರಬಹುದು. ಪ್ರಸನ್ನ ಕೃಷ್ಣಸ್ವಾಮಿಯ ಸನ್ನಿಧಿಯಲ್ಲಿ ತಾವು ಕೀರ್ತನಮಾಡಿರಿ. ಅಕಸ್ಮಾತ್ ಮಹಾರಾಜರಿಗೆ ಈ ಸಂಗತಿ ಶ್ರುತವಾದರೆ, ಶ್ರೀಕೃಷ್ಣಾನುಗ್ರಹದಿಂದ ಪ್ರಭುಗಳು ವಿಚಾರಿಸುವ ಯೋಗ ದೊರೆಯಬಹುದು' ಎಂಬುದಾಗಿ ವಿಜ್ಞಾಪಿಸಿದನು. ದಾಸರು ಆ ಮಾತಿಗೆ ಸಂತೋಷ

ಪಟ್ಟು-'ವಿಪ್ರ ವಾಕ್ಯೇ ಜನಾರ್ದನಃ' ಎಂದಿರುವುದರಿಂದ-'ಆಗಲಿ! ಕೀರ್ತನ ವ್ಯವಸ್ಥಾ ಮಾಡಿರಿ' ಎಂದು ಹೇಳಿದರು. ಸಂಧ್ಯಾಕಾಲಕ್ಕೆ ಸರಿಯಾಗಿ ಕೀರ್ತನಾರಂಭವಾಯಿತು. ಮಹಾರಾಜರು ಸಂಧ್ಯಾವಂದನೆಗೆ ಕುಳಿತು ಆಚಮನ ಮಾಡುವುದಕ್ಕೂ, ದಾಸರು ಗಾನ ಪ್ರಾರಂಭಮಾಡುವುದಕ್ಕೂ ಸಮಯವು ಹೊಂದಿಕೆಯಾಯಿತು. ಗಾನಲೋಲರಾದ ಕೃಷ್ಣಪ್ರಭುಗಳು, ಗಾನಪನ್ನಾಲೈಸುತ್ತಾ, ಒಂಭತ್ತು ಘಂಟೆಯು ಗುಂಡು ಹೊಡೆದರೂ, ಭಂಗಾರದ ಥಾಲಿಯಮೇಲೆ ಕೈಯಿಟ್ಟು ಕುಳಿತವರು ಅತ್ತಿತ್ತ ತಿರುಗಲಿಲ್ಲ. ಕೀರ್ತನ ಮಂಗಳವಾಯಿತು. ನಿಸ್ತಬ್ಧವಾಯಿತು. ಮಹಾರಾಜರು ಹರಿಕಾರನನ್ನು ಕರೆದು-'ಗುಡಿಯಲ್ಲಿ ಹರಿಕಥೆ ಮಾಡಿದವರ್ಯಾರು' ಎಂದು ಕೇಳಿದರು. ಹರಿಕಾರನು-'ಅವರೇ ಮಹಾಸ್ವಾಮಿ! ಸುರಪುರದ ಆನಂದದಾಸರು! ಎರಡು ವರ್ಷಗಳಿಂದ ಮೈಸೂರಲ್ಲಿದ್ದವರು! ಊರಿಗೆ ಪ್ರಯಾಣಮಾಡಬೇಕೆಂದು, ದೇವರ ಸನ್ನಿಧಿಯಲ್ಲಿ ತಮ್ಮ ಕೀರ್ತನಸೇವೆ ಸಲ್ಲಿಸಿದರು' ಎಂದನು.

ಮಹಾರಾಜರು :—ಅವರು ಯಾವಾಗ ಪ್ರಯಾಣಮಾಡುವರು ?

ಹರಿಕಾರ :—ನಾಳೆ ಮಾಡುವರೆಂದು ಕೇಳಿದೆ !

ಮಹಾರಾಜರು :—ಎರಡು ವರ್ಷಗಳಿಂದ ನಮಗೇಕೆ ಹೇಳಲಿಲ್ಲವೋ ?

ಹರಿಕಾರ :—ಅಷ್ಟರ ಧೈರ್ಯ ನನಗಿಲ್ಲ ಮಹಾಸ್ವಾಮಿ !

ದಾಸರು ಮನೆಗೆ ಬಂದು ಭೋಜನಮಾಡಿ ಕುಳಿತುಕೊಳ್ಳುವಷ್ಟರಲ್ಲಿ ಅರಮನೆಯ ಹರಿಕಾರ ಬಂದನು.-'ತಾವು ನಾಳೆ ಪ್ರಯಾಣ ಮಾಡಕೂಡದಂತೆ! ಬೆಳಿಗ್ಗೆ ಶಿವಪೂಜಾಕಾಲಕ್ಕೆ ಅರಮನೆಗೆ ಬರಬೇಕಂತೆ! ಹುಜೂರು ಹುಕ್ಕುಂ ಆಗಿದೆ' ಎಂದು ತಿಳಿಸಿದನು. ಈ ಸುದ್ದಿಯನ್ನು ಕೇಳಿ ಜನರಿಗೆ ತಮ್ಮ ಹಂಚಿಕೆ ಸಫಲವಾಯಿತೆಂದು ಸಂತೋಷವಾಯಿತು.

ಮಾರನೆಯ ಪ್ರಾತಃಕಾಲ-ದಾಸರು ಸ್ನಾನಾಹ್ನಿಕಗಳನ್ನು ಮುಗಿಸಿಕೊಳ್ಳುವ ವೇಳೆಗೆ, ಅವರನ್ನು ಕರೆದೊಯ್ಯಲು ಮೇನೆ ಬಂದಿತು. ಅರಮನೆಗೆ ಬಂದ ದಾಸರು ವೈದಿಕ ಮರ್ಯಾದೆಯಂತೆ ರಾಜಾಶೀರ್ವಾದ ಮಾಡಿದರು.

ಮಹಾರಾಜರು :—ಯಾವ ತಾಯಿ ಹೆತ್ತಳಯ್ಯಾ ನಿನ್ನ! ಏನು ಗಂಧರ್ವಗಾನ ಮಾಡಿದೆ! ನನ್ನ ಸಂಧ್ಯಾವಂದನೆಯನ್ನೂ ನಿಲ್ಲಿಸಿಬಿಟ್ಟೆ !

ದಾಸರು :—ಪ್ರಭುಗಳ ಗಾನಾಭಿರುಚಿ ಅಂಥಾದ್ದು !

ಮಹಾರಾಜರು :—ಯಾವ ಊರು, ಎಂದು ಬಂದೆ? ಹೇಳದೇ ಕೇಳದೆ ಪ್ರಯಾಣಮಾಡುತ್ತಿದ್ದೆಯೋ ?

ದಾಸರು :—ಸುರಪುರ ಸ್ವಸ್ಥಳ! ಬಂದು ಎರಡು ವರ್ಷವಾಯಿತು. ಸನ್ನಿಧಿಯ ತನಕ ದಾದುಹತ್ತಲಿಲ್ಲ, ಅದಕ್ಕೆ....

ಮಹಾರಾಜರು :—ಆ ! ನನ್ನಮೇಲೆ ಎರಡು ವರ್ಷದ ಬಾಕೀ ಬೇರೆ ಹೊರಿಸುವೆಯಾ ? ನೀನು ಹಾಡಿದ ದೇವರನಾಮಗಳು ಯಾರು ಮಾಡಿದುವು ?

ದಾಸರು :—ಸಮಯೋಪಯೋಗಿಯಾಗಿರಲೆಂದು ನಾನೇ ಮಾಡಿಕೊಂಡವು.

ಮಹಾರಾಜರು :—ಎಷ್ಟು ಕಥೆಗಳನ್ನು ಮಾಡುವೆ ಹೀಗೆ ?

ದಾಸರು :—ನನ್ನ ಸ್ವಂತ ಕವಿತೆಯು ನಾಲ್ವತ್ತು ಕಥೆಗಳು. ಮಿಕ್ಕವು ಕೇಳುವ ತನಕ !

ಮಹಾರಾಜರು :—ಭಳೇ ದೇಶದ ಬ್ರಾಹ್ಮಣ !

ಕೃಷ್ಣರಾಜ ಪ್ರಭುಗಳಿಗೆ ಅತಿಶಯ ಪ್ರೀತಿಯುಂಟಾದರೆ ಯಾರನ್ನಾದರೂ ಏಕವಚನದಿಂದ ಮಾತನಾಡಿಸುವುದು ಪದ್ಧತಿಯಾಗಿತ್ತು ! ಏಕವಚನದಿಂದ ಕರೆಸಿಕೊಂಡವನೂ, ಅವರಿಂದ ಬೈಸಿಕೊಂಡವನೂ ಅದೃಷ್ಟಶಾಲಿಯೆನಿಸಿಕೊಳ್ಳುತ್ತಿದ್ದನು. ಕೃಷ್ಣರಾಜವಡೆಯರನ್ನು ಅಭಿನವಭೋಜ, ಕಲಿಯುಗದ ಕರ್ಣ ಎಂದು ಆ ಕಾಲದ ಜನರು ಆಡಿಕೊಳ್ಳುತ್ತಿದ್ದುದರಲ್ಲಿ ಲೇಶವಾದರೂ ಅತಿಶಯೋಕ್ತಿಯಿರಲಿಲ್ಲ. ಯುಕ್ತಿ ಬರುವಂತೆ ಮನಸ್ಸಿಗೆ ತಾಕುವ ಮಾತಾಡಿದವರಿಗೆ ಕೊಡುವುದರಲ್ಲಿ ಆ ಪ್ರಭುವಿಗೆ ಸಮರು ಹಿಂದೆ ಹುಟ್ಟಲಿಲ್ಲ-ಮುಂದೆ ಹುಟ್ಟುವುದಿಲ್ಲ.

ಆನಂದದಾಸರು ರಾಜದರ್ಶನವಾದ ದಿನದಿಂದ ರಾಜರ ಅತಿಥಿಗಳಾದರು. ಬೆಳಗಾಗುವುದರೊಳಗೆ ರಾಜಾಜ್ಞೆಯಿಂದ ನೂರಾರು ಜನರಿಗಾಗುವಷ್ಟು ಅವ್ವಲ್ ಲವಾಜಮಾ ಮೋತೀಖಾನೆಯಿಂದ ಬರಬೇಕು. ಬಂದುದನ್ನು ದಾಸರು ನಿತ್ಯಸಮಾರಾಧನೆ ಮಾಡಿ ಸದ್ವಿನಿಯೋಗ ಮಾಡಬೇಕು. ಮಹಾರಾಜರು ಆನಂದದಾಸರಿಂದ ರಚಿತವಾದ ನಲವತ್ತು ಕೀರ್ತನಗಳನ್ನೂ ಕೇಳಿದರು. ಪ್ರತಿಫಲವಾಗಿ ದಾಸರನ್ನು ಭದ್ರಪೀಠದಲ್ಲಿ ಕುಳ್ಳಿರಿಸಿ, ಕಟಕ ಕಂಠಿಗಳಿಂದ ಅಲಂಕರಿಸಿ ಕನಕಾಭಿಷೇಕ ಮಾಡಿದರು. ಆನಂದದಾಸರಿಗೆ ಮಾಡಿದಂಥಾ ಮರ್ಯಾದೆಯನ್ನು ಶ್ರೀ ಕೃಷ್ಣರಾಜವಡೆಯರು ಬೇರೆ ಯಾರಿಗೂ ಮಾಡಲಿಲ್ಲವೆಂದು ಲೋಕದಲ್ಲಿ ಪ್ರಸಿದ್ಧಿಯಾಯಿತು. ದಾಸರು ಸುರಪುರವನ್ನು ಸೇರುವ ತನಕ ಅವರ ಧನಕನಕಗಳನ್ನು ರಕ್ಷಣೆಮಾಡಲು ರಾಜಾಜ್ಞೆಯಿಂದ ರಾಜದೂತರು ಹಿಂಬಾಲಿಸಿ ಹೋದರೆಂದಮೇಲೆ ಆ ಮಹಾಪ್ರಭುವಿನ ವಿದ್ಯಾಭಿಮಾನವನ್ನು ವರ್ಣಿಸುವ ಬಗೆ ಹೇಗೆ ?

ಆನಂದದಾಸರ ಜೀವಿತದ ತೃತೀಯ ತರಂಗವು ವೈರಾಗ್ಯಮಯವಾಯಿತು. ಈ ಮಧ್ಯಕಾಲದಲ್ಲಿ ಸುರಪುರದ ರಾಜನು ಕಂಪನಿಯ ಸರ್ಕಾರದ ಮೇಲೆ ಬಂಡಾಯ ಮಾಡಿದನೆಂಬ ಆಪಾದನೆಯಾಯಿತು. ಬ್ರಿಟಿಷರಿಗೆ ಮೈಸೂರು ನೆರವಾಗಿ ಸುಲಭವಾಗಿ ಸುರಪುರವನ್ನು ಗೆದ್ದಿತು. ಗೆದ್ದಾಗ ಸಿಕ್ಕಿದ ಬೆಲೆಬಾಳುವ ಸಾಮಾನುಗಳೆಂದರೆ ರಾಣಿವಾಸದ ಬಾಗಿಲಿಗೆ ಕಟ್ಟುತ್ತಿದ್ದ ಮುತ್ತಿನ ಪರದೆ ಮುಂತಾದ ಕೆಲವೇ ವಸ್ತುಗಳ ವಿನಾ ಮೈಸೂರಿಗೆ ಯಾವುದೇ ಬಗೆಯ ಹೆಚ್ಚಿನ ಪ್ರಯೋಜನವಾಗಲಿಲ್ಲ. ಸುರಪುರ ರಾಜ್ಯವು ಬ್ರಿಟಿಷರ ಪಾಲಾಗಿ ತಾಮ್ರಮುಖಿಯೋರ್ವನ ವಿಚಾರಣೆಗೊಳಪಟ್ಟಿತು. ಸುರಪುರದ ರಾಜನು ಬ್ರಿಟಿಷರ ವಿರೋಧಿಯಲ್ಲ-ಬಂಡಾಯ ಮಾಡಿದವನಲ್ಲ-ಎಂಬ ದೂರು ಮುಗಿಲು

ಮುಟ್ಟಿದಾಗ ರಾಜಸಂತತಿಗೆ ದೊರಿತ ಸೌಭಾಗ್ಯವೆಂದರೆ, ಈಗ ಅರವತ್ತು ಸಾವಿರ ಉತ್ಪತ್ತಿಯುಳ್ಳ ಕೆಲವು ಗ್ರಾಮಗಳ ಜಹಗೀರು ಮಾತ್ರ. ಕಾಲಾಂತರದಲ್ಲಿ ಸುರಪುರವು ಹೈದರಾಬಾದಿಗೆ ಸೇರಿ, ಗುಲ್ಬರ್ಗಾ ಜಿಲ್ಲೆಯಲ್ಲಿ ಸಮಾವೇಶಗೊಳಿಸಲ್ಪಟ್ಟಿತು. ಹಿಂದಿನ ರಾಜರ ಕಾಲದಲ್ಲಿ ಬಂದಿದ್ದ ಹೊಲ ಮನೆಗಳ ಜೊತೆಗೆ ಮೈಸೂರರಸರಿಂದ ಪ್ರಾಪ್ತವಾದ ಧನಕನಕಗಳಿದ್ದರೂ ಆನಂದದಾಸರಿಗೆ ಆ ಹಾಳು ಪಟ್ಟಣದಲ್ಲಿ ವಾಸಮಾಡುವುದು ಬೇಸರವಾಯಿತು. ದೇವರನ್ನು ಕಾಣಬೇಕೆಂಬ ಹಂಬಲು ಬಲವಾಯಿತು. ಮಂತ್ರಸಿದ್ಧಿ ಕ್ಷೇತ್ರವೆಂದು ಹೆಸರಾದ ಶ್ರೀ ಮಂತ್ರಾಲಯದಲ್ಲಿ ಕೆಲವು ಕಾಲ ವಾಸಮಾಡಿದರು. ಆ ಕಾಲದಲ್ಲಿ ಇಭರಾಂಪುರದ (ಇಬ್ರಾಹಿಂಪುರ) ಕೃಷ್ಣಾಚಾರ್ಯರೆಂಬ ಸತ್ಪುರುಷರ ಸಹವಾಸ ದಾಸರಿಗೆ ದೊರೆಯಿತು. ಆಚಾರ್ಯರನ್ನು ಹೆಸರಿಟ್ಟು ಕರೆಯುವುದು ಅಪಚಾರವೆಂಬಷ್ಟು ಭಕ್ತಿಯುಳ್ಳ ಜನರು, ಅವರನ್ನು ಅಪ್ಪಾ ಅವರು, ಪರಿಮಳಾಚಾರ್ಯರು ಎಂದು ಕರೆಯುತ್ತಿದ್ದರು. ಆಚಾರ್ಯರು ಅಪರೋಕ್ಷಜ್ಞಾನಿಗಳು, ಮಹಾಮಹಿಮೆಗಳನ್ನು ತೋರಿಸಿದವರು ಎಂಬ ಗೌರವವು ಆ ಪ್ರಾಂತದಲ್ಲಿ ಮಾತ್ರವಲ್ಲದೆ, ಮೈಸೂರು ರಾಜ್ಯದಲ್ಲೂ ಜನರಿಗೆ ಗೊತ್ತಿದ್ದುದರಿಂದ ಸಾವಿರಾರು ಜನರು ಆಚಾರ್ಯರ ಭಕ್ತರಾಗಿದ್ದರು. ಮುಮ್ಮಡೀ ಕೃಷ್ಣರಾಜ ಒಡೆಯರು ಆಚಾರ್ಯರನ್ನು ಬರಮಾಡಿಕೊಂಡು, ಬಹು ಪರಿಯಿಂದ ಸತ್ಕರಿಸಿದ ವಿಚಾರವು, ಆಚಾರ್ಯರ ಚರಿತ್ರೆಯಲ್ಲಿ ಲಿಖಿತವಾಗಿದೆ.

ಒಂದು ಮಧ್ಯಾಹ್ನ ಆನಂದದಾಸರು ರಾಘವೇಂದ್ರಸ್ವಾಮಿಗಳವರ ಬೃಂದಾವನ ಸನ್ನಿಧಿಯಲ್ಲಿ ರುದ್ರವೀಣೆಯನ್ನು ಬಾರಿಸುತ್ತಿದ್ದಾರೆ. ದಾಸರ ಮಗಳು ತುಂಗಮ್ಮನು ವೀಣೆಯ ನಾದಕ್ಕೆ ಧ್ವನಿಯನ್ನು ಕೂಡಿಸಿ ಹಾಡುತ್ತಿದ್ದಾಳೆ. ನಾದಾನುಸಂಧಾನ ಸುಖದಲ್ಲಿ ದಾಸರು ದೇಹೇಂದ್ರಿಯಗಳನ್ನು ಮರೆತಿದ್ದಾರೆ. ಆಚಾರ್ಯರು–'ಅಹುದೋ ಆನಂದ! ಗಾನಮಾಡುವುದು ನಿನ್ನ ಸ್ವರೂಪಕ್ಕೆ ಹತ್ತಿದ್ದು, ಇಲ್ಲೂ ಗಂಧರ್ವ; ದೇವಲೋಕದಲ್ಲೂ ನೀನು ಗಂಧರ್ವನೇ!' ಎಂದು ಬೆನ್ನು ಚಪ್ಪರಿಸಿದ್ದಾರೆ. 'ಈಗ ಆಯಿತೇ ನಿನ್ನ ಸ್ವರೂಪ ಜ್ಞಾನ?' ಎಂದಿದ್ದಾರೆ.

ದಾಸರು, ಆಚಾರ್ಯರ ಧ್ವನಿ ಕೇಳಿ, ಯೋಗದಿಂದ ಬಹುರ್ಮುಖರಾದಂತೆ ಎಚ್ಚತ್ತು ನಮಸ್ಕರಿಸಿದರು. 'ಇಂಥಾ ಉಪಚಾರೋಕ್ತಿಗಳೇ ನನ್ನನ್ನು ನಟವಿಟ ಗಾಯಕರ ಪಜ್ತಿಯಲ್ಲಿ ಸೇರಿಸಿದುವು. ಓದಿದ್ದೆಲ್ಲಾ ವ್ಯರ್ಥವಾಯಿತು. ದೇವರದಾರಿ ತಿಳಿಯದಾಯಿತು. ಆಚರಣೆಗೆ ಮನಸ್ಸು ಸ್ಥಿರವಾಗುವುದಿಲ್ಲ, ಗಾನದಿಂದ ದೇವರನ್ನು ಒಲಿಸಬೇಕೆನ್ನಿಸುತ್ತಿದೆ' ಎಂಬುದಾಗಿ ಅಂಗಲಾಚಿದರು. ಆಚಾರ್ಯರು–'ಸತ್ಯ, ನಾವು ಹೇಳಿದ್ದೂ ಅದೇ! ನಿನ್ನ ಸ್ವರೂಪ ಅಂಥಾದ್ದು! ನಿನಗೆ ಅದೇ ದಾರಿಯಲ್ಲೇ ಸಾಕ್ಷಾತ್ಕಾರವಾಗುವುದು. ಎಲ್ಲರ ಶ್ರಮ ನಿನಗಿಲ್ಲ. ನಿನ್ನ ಭಾಗ್ಯ ಎಲ್ಲರ ಪಾಲಿಗಿಲ್ಲ'ವೆಂದರು. ದಾಸರು ಮತ್ತೆ–'ಏನು ಭಾಗ್ಯವೋ ಕಾಣೆ! ರಾಜರಿಂದ ಬಂದ ಭಾಗ್ಯವೇ ನನ್ನ ದೌರ್ಭಾಗ್ಯವೆಂದು ಕಾಣುತ್ತದೆ. ಅದಕ್ಕೇ ನನಗೆ ಭಗವದ್ದರ್ಶನವಾಗಲಿಲ್ಲವೋ ಏನೋ?' ಎಂದರು. ಆಚಾರ್ಯರು ಆ ಮಾತಿಗೆ ಅಧಿಕಾರ ವಾಣಿಯಿಂದ–'ನಿನ್ನ ಸ್ವರೂಪವೇ ಅಂಥಾದ್ದೆಂದರೆ!

ನಿನಗೆ ಕ್ಷಿಪ್ರದಲ್ಲಿ ಭಗವದ್ದರ್ಶನವಾಗುವುದೆಂದರೆ!' ಎಂದು ನುಡಿದರು. ಮತ್ತೆ ದಾಸರು ಉತ್ತರ ಕೊಡಲಿಲ್ಲ. ಸ್ವರೂಪದ ಮಾತನ್ನು ಆಚಾರ್ಯರು ಒತ್ತಿ ಒತ್ತಿ ಹೇಳಿದ್ದು ದಾಸರಿಗೆ ಮನಸ್ಸಿನಲ್ಲಿ ರೂಢಮೂಲವಾಯಿತು. ಕೆಲವು ಕಾಲ ಏಕಾಂತದಲ್ಲಿರಬೇಕೆಂದು ತುಂಗಭದ್ರೆಯಿಂದ ಎರಡು ಮೈಲು ದೂರವಿರುವ ಪಂಚಮುಖನ ಸನ್ನಿಧಿಯನ್ನು ಸೇರಿದರು. ತಮ್ಮ ಇಷ್ಟದೇವತೆ, ಕುಲದೇವತೆ ಮತ್ತು ಗುರೂಪದಿಷ್ಟದೇವತೆಯಾದ ನೃಸಿಂಹ ಮಂತ್ರೋಪಾಸನೆ ಮಾಡಿದರು. ನೆನೆಸಿದಂತೆ ರೂಪದರ್ಶನ, ಗುಣಕ್ರಿಯಾನುಭವಗಳು, ದಾಸರಿಗಾದುವು. ಹೀಗೆ ಒಂದರಮೇಲೊಂದು ಭಗವದನುಭವಗಳು ಬರುತ್ತಿರುವಾಗ ಮಂತ್ರಾಲಯದಲ್ಲಿ ಶ್ರಾವಣಬಹುಳ ದ್ವಿತೀಯಾ ತಿಥಿಗೆ ಮುಂಚಿತವಾಗಿ ಆರಾಧನೆಯ ಮಹೋತ್ಸವದಲ್ಲಿರಬೇಕೆಂದು ತುಂಗಭದ್ರೆಗೆ ಬಂದರು. ವರ್ಷಾಕಾಲ! ಪೂರ್ಣಪ್ರವಾಹ! ಅಂಬಿಗರು ಹರಿಗೋಲನ್ನು ಹಾಕಲು ಒಡಂಬಡರು. ಪೌರ್ಣಿಮೆಯಾದರೂ, ಮೋಡ ದಿಂದ ಮುಚ್ಚಿದ್ದ ಕಾರಣ ಅಂಬಿಗರು ಹರಿಗೋಲನ್ನು ಪ್ರವಾಹದಲ್ಲಿ ಬಿಡಲು ಹಿಂದೆಗೆದರು! ಸಂಧ್ಯಾಕಾಲದ ಕತ್ತಲೆ! 'ರಾಯರೇ ಗತಿ! ಹರಿಗೋಲನ್ನು ಹಾಕಿರೆಂದು ದಾಸರ ಒತ್ತಾಯ. ಮಳೆ ಹೊಡೆತ! ಬಿರುಗಾಳಿ! ಕೈಮೀರಿದರೆ, ದಾಸರೇ ನಾವು ಪಾರಾ ದೇವು! ನಿಮ್ಮ ಗತಿಯೇನು' ಎಂಬುದಾಗಿ ಅಂಬಿಗರ ಪರಿತಾಪ. ಕೊನೆಗೆ ದಾಸರ ಒತ್ತಾಯಕ್ಕೆ ತಲೆಬಾಗಿ ಅಂಬಿಗರು ಹರಿಗೋಲನ್ನು ನೀರಿಗೆ ಬಿಟ್ಟರು. ತುಂಬು ನದಿ ಯಲ್ಲಿ ಪ್ರಯಾಣ ಸಾಗಿತು. ಪ್ರವಾಹದ ಸೆಳೆತದಲ್ಲಿ ಹರಿಗೋಲು ನಡೆಸುವವರ ಕೈ ಮೀರಿತು. ಸಣ್ಣ ಗೂಬರಾಯಿ, ದೊಡ್ಡ ಗೂಬರಾಯಿಗಳೆಂಬ ಬಂಡೆಗಳನ್ನೂ ದಾಟಿತು. ನಿವರ್ತಿ ಸಂಗಮದ ದಾರಿಯೊಳಗೇ ಜಲಸಮಾಧಿಯಾಗುವ ಸ್ಥಿತಿಯೊದಗಿತು. ಅಂಬಿಗರು– 'ನಮ್ಮಿಂದ ಸಾಧ್ಯವಿಲ್ಲ–ಹಾರಿಕೊಳ್ಳುವೆವೆಂದರು. ದಾಸರು ಹೀಗೂ ಆಗಬೇಕೇ? ಎನ್ನುತ್ತಾ, ರಾಘವೇಂದ್ರ ಸ್ತೋತ್ರವನ್ನು ಪಠಿಸುತ್ತಾ–ಅನನ್ಯ ಗತಿಕರಾಗಿ––

ಸಂಸಾರೇ ಕ್ಷಯಸಾಗರೇ ಪ್ರಕೃತಿತೋಽ ಗಾಧೇ ಸದಾದುಸ್ತರೇ ।
ಸರ್ವಾವದ್ಯ ಜಲಗ್ರಹೈ ರನುಪಮೈಃ ಕಾಮಾದಿ ಭಂಗಾಕುಲೇ ॥
ನಾನಾ ವಿಭ್ರಮದುರ್ಭ್ರಮೈರತಿಭಯ ಸ್ತೋಮಾದಿ ಫೇನೋತ್ಕಟೇ ।
ದುಃಖೋತ್ಕೃಷ್ಟ ವಿಷೇ ಸಮುದ್ಧರ ಗುರೋ ಮಾಮಗ್ನ ರೂಪಂ ಸದಾ ॥

ಎಂಬ ಶ್ಲೋಕಗಳನ್ನುಚ್ಚರಿಸಿ ಕೈ ಮುಗಿದರು.

ಇಂತಹ ವಿಷಮ ಪರಿಸ್ಥಿತಿಯಲ್ಲಿ, ದಕ್ಷಿಣ ದಡದಿಂದ–'ಹೆದರಬೇಡಿ, ಹೆದರಬೇಡಿ; ಬಂದೆ, ಬಂದೆ!' ಎಂಬ ಧ್ವನಿ ಕೇಳಿಸಿತು. ಕೌಪೀನಧಾರಿಯೋರ್ವನು ಹಗ್ಗದ ಕುಣಿಕೆ ಯನ್ನು ಹರಿಗೋಲಿಗೆ ಕಟ್ಟಿ, 'ಎಳೆ–ಗಟ್ಟಿಯಾಗಿ ಎಳೆ' ಎಂದು ಚೀತ್ಕಾರ ಮಾಡಿದನು. ದಡದಲ್ಲಿ ಮತ್ತೊಬ್ಬ ಕೌಪೀನಧಾರಿಯು–'ಎಳೆಯುತ್ತಿದ್ದೇನೆ, ಎಳೆಯುತ್ತಿದ್ದೇನೆ' ಎಂದು ಉತ್ತರ ಕೊಟ್ಟನು. ಹರಿಗೋಲ ಪಕ್ಕದಲ್ಲಿ ಈಜುತ್ತಾ ಹಗ್ಗವನ್ನು ಜಗ್ಗುತ್ತಿದ್ದ ಕೌಪೀನ ಧಾರಿಯನ್ನು ಕುರಿತು, ದಾಸರು–'ಇಂಥಾ ವಿಷಮಯದಲ್ಲಿ ನಮ್ಮನ್ನು ಪಾರುಮಾಡಲು ಬಂದ ಪುಣ್ಯಾತ್ಮರು ನೀವ್ಯಾರಪ್ಪಾ?' ಎಂದು ಕೇಳಿದರು. ಕೌಪೀನಧಾರಿಯು–'ಮಾತಿಗೆ ಸಮಯವಿದಲ್ಲ–ಹರಿಗೋಲು ದಡ ಸೇರಲಿ, ಆಮೇಲೆ ಮಾತನಾಡೋಣ' ಎಂದು ನಿವಾರಿಸಿ

ದನು. ಅಂಬಿಗರು ಹುಸ್ಸೆಂದು ಬಸವಳಿದು, ಹುಟ್ಟು ಹಾಕುವ್ರುವನ್ನು ನಿಲ್ಲಿಸಿ–ರಕ್ಷಣೆಗೆ ಬಂದವರು ಗಂಗೆಮಕ್ಕಳು ಬೇರೆ ಅಲ್ಲ–ಯಾರೋ ಬೇರೆಯವರಿರಬೇಕೆಂದು ಅವರನ್ನೇ ಎವೆಯಿಕ್ಕದೆ ನೋಡುತ್ತಾ–'ಹೂ ಯಾರಾದರಾಗಲೀ, ಸದ್ಯಕ್ಕೆ ಬ್ರಾಹ್ಮಣನ ಪ್ರಾಣ ವುಳಿಯಿತೆ'ಂದುಕೊಂಡರು. ಹರಿಗೋಲು ಭರದಿಂದ ದಡ ಸೇರಿತು. ಕೌಪೀನಧಾರಿಯು ಅಂಬಿಗನ ಕೈಯಲ್ಲಿ ಏನೋ ಕೊಟ್ಟನು. 'ನಡೆಯಿರಿ ದಾಸರೆ ಊರಿಗೆ' ಎಂದು ಕರೆದು ಕೊಂಡು ಹೊರಟನು. ದಾಸರು ಯಾವ ಮಾತನಾಡುವುದಕ್ಕೂ ಬಾಯಿ ಬಾರದೆ, ಮೌನವಾಗಿ ಕೆಲವು ದೂರ ನಡೆದು—

ದಾಸರು :—ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವಿರಿ ?

ಕೌಪೀನಧಾರಿ :—ಎಲ್ಲಿಗೇನು ? ಮಂಚಾಲೆಗೆ !

ದಾಸರು :—ಮಂಚಾಲೆ ಇಲ್ಲಿಗೆಷ್ಟು ದೂರವಿದೆ ?

ಕೌಪೀನಧಾರಿ :—ದೂರದ ಮಾತೇಕೆ ಬನ್ನಿ ! ಒಂದು ಹರದಾರಿಯಿದೆ.

ದಾಸರು :—ನಿಮ್ಮ ಹೆಸರೇನು ?

ಕೌಪೀನಧಾರಿ :—ರಾಘಪ್ಪ–ಮಂಚಾಲೆ !

ದಾಸರು :—ಹಿಂದಿನವರ ಹೆಸರು ?

ಕೌಪೀನಧಾರಿ :—ವಾದಪ್ಪ–ಮಂಚಾಲೆ !

ಈ ಮಾತು ಕೇಳಿ ದಾಸರ ತಲೆ ತಿರುಗಿದಂತಾಯಿತು. ಇದು ಕೇವಲ ದೈವಿಕ ವ್ಯಾಪಾರವೆಂದು ಮನಸ್ಸಿಗೆ ನಿಶ್ಚಯವಾಯಿತು. ತಮಗೆ ರಕ್ಷಕರಾಗಿ ಬಂದ ವೇಷಧಾರಿ ಗಳು ಆಪದ್ಬಂಧುಗಳಾದ ಶ್ರೀ ರಾಘವೇಂದ್ರ ಯತಿಗಳೆಂದೇ ನಿರ್ಧರಿಸಿದರು. ತಟ್ಟನೆ ಮುಂದಿದ್ದ ಕೌಪೀನಧಾರಿಯ ಪಾದಗಳಿಗೆರಗಿ–'ಪಾಮರನಮೇಲೆ ತಮ್ಮ ಕೃಪೆ ಅಪಾರ ವಾಯಿತು. ನನ್ನ ಉದ್ಧಾರಕರ್ತರು ತಾವು' ಎಂದು ನುಡಿದು, ಆನಂದದಾಸರು, ಆನಂದ ಬಾಷ್ಪಗಳಿಂದ ಪುಳುಕಿತರಾದರು. ವೇಷಧಾರಿಯು–'ದೇವರು ನಮ್ಮನ್ನು ಇಟ್ಟಿರುವುದೇ ಇದಕ್ಕೆ ! ಪ್ರವಾಹದಲ್ಲಿ ಸಿಕ್ಕಿ ಕಷ್ಟಪಡುವವರನ್ನು ದಾಟಿಸುವುದಕ್ಕೆ ! ಅನನ್ಯ ಶರಣರ ಉದ್ಧಾರಕ್ಕೆ !' ಎಂದು ನುಡಿದು ಅದೃಶ್ಯನಾದನು. ಹಿಂದೆ ನೋಡಿದರೆ, ಹಿಂಬಾಲಿಸಿ ಬಂದಿದ್ದ ಕೌಪೀನಧಾರಿಯೂ ಇರಲಿಲ್ಲ. ದಾಸರು ಬೆಳದಿಂಗಳಿನಲ್ಲಿ ದಾರಿ ನಡೆಯುತ್ತಾ, ಮನಸ್ಸಿನಲ್ಲಿ ಬರುವ ವಿಷಯಗಳ–ಪೂರ್ವಪಕ್ಷ ಸಿದ್ಧಾಂತ ಮಾಡಿಕೊಳ್ಳುತ್ತಾ ಸರಿ ರಾತ್ರಿಯ ವೇಳೆಗೆ ರಾಯರ ಮಠದ ಮಹಾದ್ವಾರದ ಬಳಿಗೆ ಬಂದರು. ಪ್ರೈಮನಗಳು ದಣಿಯುವತನಕ–**'ಶ್ರೀ ರಾಘವೇಂದ್ರಾಯ ನಮಃ'** ಎಂದು ಪ್ರದಕ್ಷಿಣೆ ನಮಸ್ಕಾರ ಗಳನ್ನು ಹಾಕುವುದರಲ್ಲಿ ಬೆಳಗಾಯಿತು. ಆಚಾರ್ಯರು, ಆ ವೇಳೆಯಲ್ಲಿ ಸಂಗಡಿಗರಾದ ಏಳು ಮಂದಿ ಸತ್ಪುರುಷರೊಡನೆ ಉತ್ತರ ಬಾಗಿಲಿನಿಂದ ಆಲಯವನ್ನು ಪ್ರವೇಶಿಸಿ–'ಏನು ಆನಂದಾ ! ಪ್ರವಾಹದಿಂದ ಪಾರಾದೆಯಾ ? ರಾಯರ ದರ್ಶನವಾಯಿತೆ ?' ಎಂಬುದಾಗಿ ದಾಸರ ಕುಶಲಪ್ರಶ್ನೆ ಮಾಡಿದರು. ದಾಸರು ಆ ಸತ್ಪುರುಷರ ವೃಂದಕ್ಕೆ ಸಾಷ್ಟಾಂಗ

ನಮಸ್ಕಾರ ಮಾಡಿ, 'ಎಲ್ಲವೂ ಚರಣಾನುಗ್ರಹದಿಂದ ಆಯಿತು' ಎಂದರು. ಆಚಾರ್ಯರು 'ಮತ್ತೆ ನೋಡು ಆನಂದ! ಈ ಸತ್ಪುರುಷರಲ್ಲಿ ಕೆಲವರನ್ನು ನೀನು ಬಲ್ಲೆ! ಮಿಕ್ಕವರು ಇಂಥಿಂಥವರು–ಎಂದು ಅವರ ಸಂಕ್ಷೇಪ ಬ್ರಹ್ಮಾನುಭವಗಳನ್ನು ವರ್ಣಿಸಿ ಹೇಳಿದರು. ಎಲ್ಲರಿಗೂ ನಿನ್ನ ಗಾಯನ ಕೇಳಬೇಕೆಂಬ ಅಪೇಕ್ಷೆಯಿದೆ. ಸಮಯೋಚಿತವಾಗಿ ಒಂದು ಉದಯರಾಗ ಹಾಡು ನೋಡೋಣ' ಎಂದರು. ಆನಂದದಾಸರು ಮಹದಾಜ್ಞೆಯೆಂದು, ಈ ಪುಣ್ಯಶ್ಲೋಕರ ನಾಮಸ್ಮರಣೆಗಿಂತ ಬೇರೊಂದಿಲ್ಲವೆಂದು, ಈ ಕೆಳಕಂಡ ಪದವನ್ನು ಆಶುಕವಿತೆಯಿಂದ ರಚಿಸಿ ಹಾಡಿದರು.

ಭೂಪಾಳಿ — ಅಟ್ಟತಾಳ

ಶ್ರೀ ರಾಘವೇಂದ್ರರಾಯರ ಪಾದಾಂಬುಜ
ದಾರಾಧಕರ ಕೊಂಡಾಡಿರೋ ಪ.
ನಾರಾಯಣ ನಾಮ ಪಾರಾಯಣರ ಪ
ದಾರವಿಂದ ಸುಧಾಸಾರವ ಬೀರುವ ಅ.

ಅಲವಬೋಧ ಸತ್ಕುಲದೀಪರೆನಿಸಿದ
ಹುಲುಗಿಯ ನರಸಪ್ಪಾಚಾರ್ಯರ
ಕಲಿಯೊಳು ಕಲಿಕೃತ ಕಲ್ಮಷ ಕಳೆವ ನಿ
ರ್ಮಲ ರಾಯಚ್ಚೂರು ಕೃಷ್ಣಾರ್ಯರ
ಇಳೆಯೊಳು ಚೌಷಷ್ಠಿ ಕಳದಿ ನಿಪುಣರಾದ
ಯಳವೇಲಿ ಹಯಗ್ರೀವಾಚಾರ್ಯರ
ಹಲವು ಸಜ್ಜನರೊಳು ತಿಳಿಸಿಕೊಳ್ಳದಲಿಪ್ಪ
ಬಲವಂತ ಯೋಗಿ ನಾರಾಯಣಾರ್ಯರ ೧

ಧರಣಿದೇವರಿಗೆ ನಿರುತಾನ್ನವನೀವ
ವರ ಹರಿಹರ ಭೀಮಾಚಾರ್ಯರ
ಹರಿದಾಸರಿಗೆ ಮಂದಿರವಾದ ಇಭರಾಂ
ಪುರದಲ್ಲಿ ಮೆರೆವ ಕೃಷ್ಣಾರ್ಯರ
ಶಿರಿಪಾದ ಪುತ್ರ ಪಂಡಿತರೊಳಗಗ್ರೇ
ಸರ ಶ್ರೀರಂಗದ ರಾಮಾನುಜಾಚಾರ್ಯರ
ಸುರಪುರ ಶ್ರೀ ನರಹರಿಯ ಪಾದಾಂಬುಜ
ಶಿರಿಯೊಳ್ಮೆರೆವ ಅಸ್ಮದ್ಗುರು ರಾಘಾಚಾರ್ಯರ ೨

ಶ್ರೀ ರಾಘವೇಂದ್ರರಾಯರು ಭೂಮಿಯೊಳವ
ತಾರಮಾಡಿದ ಆರಂಭದಿಂ
ದಾರಾರುಬೃಂದಾವನ ಪೂಜಾಸ್ತೋತ್ರದಿಂ
ದಾರಾಧಿಸುವರಾನಂದದಿ

ಸಾರಭಕ್ತರ ಪಾದಾರವಿಂದಕೆ ನಮ
ಸ್ಕಾರಮಾಡಿರೊ ಸಾಷ್ಟಾಂಗದಿ
ಧೀರ ಶ್ರೀ ಕಮಲೇಶವಿಠಲನೊಲಿದು ತನ್ನ
ಸಾರೂಪ್ಯವ ಕೊಟ್ಟು ಸಲಹುವ ಸಂತತ ೩

ಆಗಿಂದಾಗಲೇ ಆಶುಕವಿತೆಯಿಂದ ಹಾಡಿದ ಈ ದೇವರನಾಮದಲ್ಲಿ—ಕ್ಷೇತ್ರಾಧಿಪತಿಗಳು ಶ್ರೀ ರಾಘವೇಂದ್ರಸ್ವಾಮಿಗಳಾದ್ದರಿಂದ ಅವರ ಹೆಸರಿನಿಂದಲೇ ಪದ ಪ್ರಾರಂಭವಾಗಿದೆ; ಆಚಾರ್ಯರೊಡನೆ ಬಂದ ಸತ್ಪುರುಷರೆಲ್ಲರ ಅಲ್ಪ ಪರಿಚಯವಾಗಿದೆ; ಕಡೆಯಲ್ಲಿ ಸ್ವಗುರುಗಳ ಹೆಸರನ್ನು ಹೇಳಿರುವುದರಲ್ಲಿ ಔಚಿತ್ಯವಿದೆ; ಪಠನೆಮಾಡುವ ಭಾವಿಕರಿಗೆ ಪುಣ್ಯಶ್ಲೋಕರ ನಾಮಸ್ಮರಣೆಯು ಉದಯರಾಗವಾಗಿದೆ. ಮೇಲಾಗಿ ರಾಯರ ಭಕ್ತರಿಗೆಲ್ಲಾ ವಂದನೆಯಿದ್ದು ಶ್ರೀ ಹರಿಗುಣಗಾಯನವಾಗಿದೆ.

ಇಭರಾಂಪುರದ ಕೃಷ್ಣಾಚಾರ್ಯರು—'ಏನು ಆನಂದ! ನಮ್ಮ ಹಾಡೇ ಹಾಡಿಬಿಟ್ಟೆಯಲ್ಲ!' ಎಂದರು. ದಾಸರು—'ಪುಣ್ಯಶ್ಲೋಕರು ತಾವಾದ್ದರಿಂದ ನಾಮಸ್ಮರಣೆ ಮಾಡಿದೆ ಮಾತ್ರ!' ಎಂದರು. 'ನೀನೇನಪ್ಪಾ ಗಂಧರ್ವ' ಎಂದು ಆಚಾರ್ಯರ ಮಾರುತ್ತರವಾಯಿತು.

ಆನಂದದಾಸರು ತುಂಗಭದ್ರೆಯ ಪ್ರವಾಹದಿಂದ ಪಾರಾಗಿ, ರಾಘವೇಂದ್ರಸ್ವಾಮಿಗಳ ಪ್ರತ್ಯಕ್ಷದರ್ಶನಮಾಡಿದ ದಿನದಿಂದ—'ದರ್ಶನಾದೇವಸಾಧವಃ' ಎಂಬ ಭಾಗವತೋಕ್ತಿಯಂತೆ, ಅನುಭವಿಸುವ ಆನಂದವು ಬಿಂಬಾಪರೋಕ್ಷದ ಆನಂದವಾಯಿತು. ಬಿಂಬಾಪರೋಕ್ಷವು ಸಾಧನೆಯ ಪರಮಾವಧಿಯು. ಅದೇ ಯೋಗಿಗಳ ಜ್ಯೋತಿ ದರ್ಶನವೆಂಬುದು. ಅದರಿಂದ ಸಂಚಿತಾಗಾಮಿ ಕರ್ಮಗಳ ನಾಶವಾಗುವುದು. ವಿಷಯ ವಾಸನೆಯಡಗುವುದು. ಪ್ರಾರಬ್ಧಕರ್ಮವು ಸಾಧಕನ ಜ್ಞಾನದಿಂದಾಗಲೀ, ಭೋಗದಿಂದಾಗಲೀ ಕ್ಷಯಿಸಿಬಿಡುವುದು. 'ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ' ಇತ್ಯಾದಿ ಶ್ರುತಿ ಪ್ರತಿಪಾದ್ಯ ವಸ್ತುವೇ 'ಸಬ್ರಹ್ಮಸ್ಸಹರಿಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ್ವರಾಟ್' ಎನಿಸುವುದು. ಸಾಧಕನ ಕಾರಣ ಶರೀರವು ಜ್ಯೋತಿರ್ದರ್ಶನದಿಂದ ದಗ್ಧಪಟದಂತಾಗುವುದು. ಅನಂತರ ಆ ದೇಹವು ಹುರಿದ ಬೀಜದಂತೆ ಜನ್ಮಗಳಿಗೆ ಕಾರಣವಾಗುವುದಿಲ್ಲ. ಅಂಥಾ ಸಿದ್ಧಪುರುಷರು ಒಂದು ವೇಳೆ ಇಚ್ಛಾಮಾತ್ರದಿಂದ ಜನ್ಮ ತಾಳಿದರೂ ಅವರನ್ನು ವಾಸನೆಗಳು ಬಾಧಿಸುವುದಿಲ್ಲ. ಇಂದ್ರಿಯಾರ್ಥಗಳಾದ ವಿಷಯಗಳನ್ನು ಇಂದ್ರಿಯಗಳು ಚಾಪಲ್ಯವಶವಾಗಿ, ಯಾವಾಗ ಗ್ರಹಿಸುವುದಿಲ್ಲವೋ ಆಗ ಸಾಧಕನು ಸ್ಥಿತಪ್ರಜ್ಞನಾಗುವನು. ಸ್ಥಿತಪ್ರಜ್ಞನಿಗೆ ಪ್ರಾಜ್ಞನಾಮಕ ಪರಮಾತ್ಮನ ದರ್ಶನವಾಗುವುದು. ಈ ಒಂದು ಸ್ಥಿತಿಯನ್ನು ಸಂಪಾದಿಸಲು ಜೀವನು ತೊಳಲಿ ಬಳಲಿ ಬಹು ಜನ್ಮಗಳನ್ನೆತ್ತುವನು.

ಆನಂದದಾಸರು ಅಪರೋಕ್ಷಿಗಳಾದರು. ಸಕಲ ಜಗತ್ತು ಅವರಿಗೆ ಕರತಲಾಮಲಕದಂತಾಯಿತು. ಆಚಾರ್ಯರು ಅಧಿಕಾರವಾಣಿಯಿಂದಾಡಿದ ಮಾತು ಸತ್ಯ

ವಾಯಿತು. 'ಎಲ್ಲರ ಶ್ರಮ ನಿನಗಿಲ್ಲ, ಆನಂದ–ನಿನ್ನ ಭಾಗ್ಯ ಎಲ್ಲರಿಗಿಲ್ಲ' ಎಂಬುವುದು ಅನುಭವದಿಂದಲೇ ಆನಂದದಾಸರಿಗೆ ಸಿದ್ಧಿಯಾಯಿತು.

ಅಪರೋಕ್ಷಿಗಳಾದ ಮಾತ್ರಕ್ಕೇ ಅವರೇನು ಹೊಸ ಕವಚ ಕಿರೀಟ ಕುಂಡಲ ಗಳನ್ನು ಧರಿಸಿಬರುವರೇ? ಲೋಕದ ದೃಷ್ಟಿಯಲ್ಲಿ ಇದ್ದಂತೆಯೇ ಇರುವರು! ಹಿಂದಾಡಿದ ಮಾತುಗಳನ್ನೇ ಇಂದೂ ಆಡುವರು. ಹಿಂದಾಡಿದುದು ಬಾಡಿಗೆಯ ಮಾತಾಗಿದ್ದರೆ ಇಂದಾಡುವ ಅವೇ ಮಾತು ಸ್ವಂತಮಾತು! ಹಿಂದಿನ ಕೀರ್ತನದಲ್ಲಿ ಗಾನ ಬಹಳ ವಾಗಿದ್ದರೆ, ಇಂದಿನ ಕೀರ್ತನದಲ್ಲಿ ಜ್ಞಾನ ಬಹಳ ಇಷ್ಟೇ!

ಅಪರೋಕ್ಷಜ್ಞಾನ ಪ್ರಾಪ್ತವಾದಮೇಲೆ ಆನಂದದಾಸರು ಹತ್ತುವರ್ಷಗಳ ಕಾಲ ಪಾರ್ಥಿವ ಶರೀರದಿಂದಿದ್ದರು. ಮಂತ್ರಾಲಯ, ಗದ್ವಾಲ, ಇಭರಾಂಪುರ, ವೇಣೀ ಸೋಮ ಪುರ, ಸುರಪುರ ಇಷ್ಟು ಸ್ಥಳಗಳ ವಿನಾ ಅವರು ಮತ್ತೆಲ್ಲೂ ಸಂಚರಿಸಲಿಲ್ಲ. ರಾಜ ದರ್ಬಾರಿನಲ್ಲಿ ಕೇಳಿದರೇ ಕೀರ್ತನ–ಇಲ್ಲದಿದ್ದರೆ ಆನಂದದಾಸರ ಕೀರ್ತನ ಕೇಳಲು ಸಿಗುವು ದಿಲ್ಲ–ಎಂಬ ಅಪವಾದ ದೂರವಾಯಿತು. ದಾಸರು ಸರ್ವಸುಲಭರಾದರು. ನಿಂತಾಗ, ಕುಳಿತಾಗ ಆಡಿದ ಮಾತುಗಳೆಲ್ಲವೂ ದಿವ್ಯ ಕೀರ್ತನವೇ ಆಗಿತ್ತು.

ದಾಸರ ಅಂತಿಮ ಕಾಲವೂ ಆನಂದಮಯವಾಯಿತೆಂಬುವುದು ಆನಂದದ ಸಂಗತಿಯೇ ಸರಿ. ಸುರಪುರದ ಗೋಪಾಲಕೃಷ್ಣ ದೇವಾಲಯದ ಬಹಿರಾಂಗಣದಲ್ಲಿ ಸಾವಿರಾರು ಜನರ ಸಮ್ಮೇಳನದಲ್ಲಿ ದಾಸರು ಕೀರ್ತನ ಮಾಡುತ್ತಿದ್ದಾರೆ. ಭಾದ್ರಪದ ಶುದ್ಧ ದ್ವಾದಶಿಯಾದ ಕಾರಣ, ವಾಮನಾವತಾರವು ಅಂದಿನ ಕಥಾವಸ್ತುವಾಗಿದೆ. ಬಲಿ ರಾಜನಿಗೆ ಸುತಳ ಲೋಕಾಧಿಪತ್ಯ ಕೊಟ್ಟು ಪಟ್ಟಾಭಿಷೇಕವಾಗಿದೆ. ಮುಂದಿನ ಮನ್ವಂತರ ದಲ್ಲಿ ನನ್ನ ಆಶ್ರಯದಿಂದ ನೀನೇ ಇಂದ್ರನಾಗುವೆ. ಈಗ ಮತ್ತೇನು ಬೇಡುವೆ ಬೇಡು ಎಂದು ತ್ರಿವಿಕ್ರಮನ ಆಜ್ಞೆಯಾಗಿದೆ. ಭಕ್ತ ಬಲಿರಾಜನು–'ಇನ್ನು ಬೇಡುವುದೇನಿದೆ ಮಹಾಪ್ರಭೋ' ಎಂದು—

ಬೇಹಾಗ್ — ಆದಿತಾಳ

ಬೇಡುವದೇನ ಭವ ವಿಮೋಚನ ಪ.
ಆವ ಸಾಧನಕೆ ಆವುದು ಕಡೆ ತವ
ಪಾವನ ಪಾದದ ಸೇವೆ ದೊರೆತಮೇಲ್ ೧

ಅಮರೇಶನ ಪದ ಭ್ರಮಿಸಿದುದಕೆ ಸಿರಿ
ಕಮಲೇಶವಿಠಲನೆ ನಮಗೆ ದೊರೆತಮೇಲ್ ೨

ಎಂದು ಪ್ರಾರ್ಥಿಸಿದನೆಂಬ ಅಭಿಪ್ರಾಯವಿಟ್ಟು ದಾಸರು ಹಾಡುತ್ತಿದ್ದಾರೆ. ಆನಂದ ಪಾರ ವಶ್ಯದಲ್ಲಿ ಆನಂದದಾಸರ ಹೃದಯ ವ್ಯಾಪಾರವು ಲೀನವಾಗಿದೆ! ಮಾತು ನಿಂತ ಕಾರಣ ವೇನೆಂದು ಎಷ್ಟೋ ಹೊತ್ತು ನೋಡಿದ ಜನರು, ದೇಹವನ್ನು ಸ್ಪರ್ಶಮಾಡಲಾಗಿ–ಅದು ಶೀತಲವಾಗಿದೆ! ಆಗ ಜನರು ಪರಮಾಶ್ಚರ್ಯಗೊಂಡರೂ, ಭಕ್ತಿಯಿಂದ ಕೀರ್ತನದ

ಆರತಿಯನ್ನು ದಾಸರ ಪಾರ್ಥಿವ ಮೂರ್ತಿಗೆ ಬೆಳಗಿ-ನಮಸ್ಕಾರ ಮಾಡಿದ್ದಾರೆ. ಸರ್ವತ್ರ ಜಯಜಯಕಾರವಾಗಿದೆ.

ಅನಾಯಾಸೇನ ಮರಣಂ। ವಿನಾ ದೈನ್ಯೇನ ಜೀವನಂ ॥
ಅನಾರಾಧಿತ ಗೋವಿಂದ। ಚರಣಸ್ಯೋ ಭಯಂಕುತಃ ॥

ಎಂಬ ಶ್ಲೋಕವು ಆನಂದದಾಸರಿಗಾಗಿಯೇ ರಚಿತವಾಯಿತೋ ಏನು ?

ಇದು ಜನ್ಮದ ರೀತಿ ! ಇದು ಜನ್ಮದ ನೀತಿ !

ಮೊದಲಕಲ್ಲು ಶೇಷದಾಸರು

ಆದಿಶಿಲಾ ಎಂಬುದು ಗದ್ವಾಲ ಸಂಸ್ಥಾನದಲ್ಲಿರುವ ಒಂದು ಪಾವನಕ್ಷೇತ್ರ. ಅಷ್ಟೋತ್ತರ ಶತ ತಿರುಪತಿ ಕ್ಷೇತ್ರಗಳಲ್ಲಿ ಮೊದಲನೆಯದು. ಆದ್ದರಿಂದ ಕ್ಷೇತ್ರಕ್ಕೆ ಈ ಹೆಸರು ಬಂದಿದೆ. ಕ್ಷೇತ್ರ ಮಹಿಮೆಯನ್ನು ತಿಳಿಸಲು ಸ್ಥಳಪುರಾಣವಿದೆ. ಪುರಾಣ ಕಾಲದಲ್ಲಿ ರಾಜಧಾನಿಗಳಿದ್ದ ಅಥವಾ ಸತ್ಪುರುಷರು ತಪಸ್ಸು ಮಾಡಿಕೊಂಡಿದ್ದ ಸ್ಥಳಗಳ ಕಥೆಗಳನ್ನು **ಸ್ಥಳಪುರಾಣ** ಎಂಬ ಹೆಸರಿನಿಂದ ಪುಣ್ಯಾತ್ಮರು ಬರೆದಿಟ್ಟಿದ್ದಾರೆ. ಸ್ಥಳ ಪುರಾಣವಿಲ್ಲದ ಪುರಾತನ ಊರೇ ಭರತ ಭೂಮಿಯಲ್ಲಿಲ್ಲವೆಂದರೆ ತಪ್ಪಾಗುವುದಿಲ್ಲ;-ಅಥವಾ ಅತಿಶಯೋಕ್ತಿಯೆನಿಸುವುದಿಲ್ಲ. ಸ್ಥಳಪುರಾಣಗಳು ಕಾಲ್ಪನಿಕ ಕಥೆಗಳಲ್ಲ. ಅವು ಆಯಾ ಸ್ಥಳಗಳ ಚರಿತ್ರೆಗಳು. ಭಾರತೀಯ ಇತಿಹಾಸಗಳ ಅಸ್ತಿಭಾರವು, ಧರ್ಮದ ತಳಗಳ್ಳಿನ ಮೇಲೆ ಕಟ್ಟಲ್ಪಟ್ಟಿರುವುದರಿಂದ ಪುರಾಣಗಳು ಇದುವರೆಗೆ ಜೀವಂತವಾಗಿರಲು ಕಾರಣವಾಗಿದೆ. ಆಯಾ ಪ್ರಾಂತದಲ್ಲಿ ಯಾವುದೋ ಕಾಲದಲ್ಲಿ ಬಾಳಿದ ರಾಜರ ಅಥವಾ ಜ್ಞಾನಿಗಳ ಚರಿತ್ರೆಯು ಆ ಪ್ರಾಂತ ನಿವಾಸಿಗಳಿಗೆ ಆದರ್ಶ ಧರ್ಮವೆನಿಸಿದೆ. ಚಿಕಿತ್ಸಕ ಬುದ್ಧಿಯಿಂದ ವಿಚಾರಮಾಡಿದರೆ, ಸ್ಥಳಪುರಾಣಗಳು, ಪ್ರಯಾಣ ಸೌಕರ್ಯಗಳಿಲ್ಲದಿದ್ದ ಆ ಕಾಲದ ಜನರಿಗೆ ದೇಶಾಭಿಮಾನವನ್ನುಂಟುಮಾಡುವ ಉಪದೇಶಗಳಾಗಿದ್ದುವು-ಆಗಿವೆ. ಪುರಾಣಗಳು, ಅತಿಶಯೋಕ್ತಿ ಉತ್ಪ್ರೇಕ್ಷೆಗಳಿಂದ ರಹಿತಗಳಾಗಿರುವುದು ಸಾಧ್ಯವಿಲ್ಲ. ಈಗಿನ ಜನರಿಗೆ ಅವುಗಳಲ್ಲಿ ಆರಿಸಿಕೊಳ್ಳಲು ವಿಷಯಗಳಿಗೆ ಕೊರತೆಯಿಲ್ಲ. ಮೊದಲನೆಯದು ಪುರಾಣಗಳಲ್ಲಿರುವ ಸರಳ ಕಾವ್ಯಶೈಲಿ. ಎರಡನೆಯದು ಅಲ್ಲಿನ ಇತಿಹಾಸ, ದೇಶಾಭಿಮಾನ ಜನಕಗಳಾದ ಗಿರಿ, ವನ, ನದಿಗಳ ಪ್ರಾಶಸ್ತ್ಯದ ವರ್ಣನೆ. ಮೂರನೆಯದು ತಂದಿಟ್ಟ ಬಳಿಯೇ ಉತ್ತಮ ಕ್ಷೇತ್ರ-ಅಲ್ಲಿರುವವೇ ಗಂಗಾದಿ ತೀರ್ಥಗಳು. ಅಲ್ಲಿದ್ದ ಪೂರ್ವ ನಿವಾಸಿಗಳು ಸತ್ಪುರುಷರು ಎಂಬ ಅವರಮೇಲಣ ಭಕ್ತಿ, ಇಷ್ಟೂ ಪುರಾಣಗಳಿಂದಾಗುವ ಪ್ರಯೋಜನಗಳು. ಒಂದೇ ಮಾತಿನಲ್ಲಿ ಹೇಳುವುದಾದರೆ, ಪುರಾಣಗಳು ಸಾರ್ವಕಾಲಿಕ, ಸಾರ್ವಜನಿಕವಾದ ಶೈಲಿಯಲ್ಲಿ, ಎಂದರೆ ಅಜ್ಞ-ಪ್ರಾಜ್ಞರುಭಯರೂ ಪುರಸ್ಕರಿಸಲರ್ಹವಾದ ಶೈಲಿಯಲ್ಲಿ-ವಿವಿಧ ವರ್ಣನೆಗಳಿಂದ ಜನಮನೋರಂಜನೆ ಮಾಡುವ ಕಂಪನ ಕಥೆಯಂಥಾ ಕಥೆಗಳಿಂದಾರಂಭಿಸಿ, ವೇದದ ವೇದಾಂತದತಸಕ ಜನಜೀವನದ ಆದರ್ಶಗಳನ್ನು ಕೂಡಿಸಿಟ್ಟಿರುವ ಉಪದೇಶ ಗ್ರಂಥಗಳೆನ್ನಬೇಕು.

ಆಫ್ರಿಕಾಖಂಡದ ನೈಲ್ (ನೀಲ) ನದಿಯ ಉಗಮಸ್ಥಾನವನ್ನು ಕಂಡುಹಿಡಿಯಲು ಎಷ್ಟೋ ಜನ ಯುರೋಪ್ಯರು, ಎಷ್ಟೋ ಧನ, ಜನ, ಸಹಾಯಗಳಿಂದ ಎಷ್ಟೋ ಸಲ ಪ್ರಯತ್ನಮಾಡಿ ನಿರಾಶರಾದರಂತೆ! ಕರ್ನಲ್ ವಿಲ್‌ಫರ್ಡ್ ಎಂಬ ಗೃಹಸ್ಥನು ಕುಶದ್ವೀಪದ ವರ್ಣನೆ, ಅಲ್ಲಿನ ನೀಲನದಿ, ಆ ನದಿಯ ಉಗಮಸ್ಥಾನವಾದ ಚಂದ್ರಸ್ಥಾನ

ಸರೋವರ, ಇವುಗಳ ಪೌರಾಣಿಕ ವರ್ಣನೆಯನ್ನು ಕೇಳಿದನಂತೆ! ಅದರಂತೆ ಒಂದು ನಕಾಶೆ(Map) ಯನ್ನು ಬರೆದನಂತೆ! ಆ ನಕಾಶೆಯು ಈಗಿನ ಆಫ್ರಿಕಾಖಂಡದ ನಕಾಶೆಯಂತಿತ್ತಂತೆ! ನೀಲ ಮತ್ತು ನೈಲ್ ಎಂಬ ಹೆಸರುಗಳನ್ನು ನೋಡಿ, ನೀಲ ಶಬ್ದವು ನೈಲ್ ಎಂಬ ಅಪಭ್ರಂಶರೂಪವಾಗಿರಬೇಕೆಂದು ನಿಶ್ಚಯಿಸಿದನಂತೆ!. ಆಗಿನ ಕುಶದ್ವೀಪಕ್ಕೆ ಕ್ರಿಸ್ತಯುಗದಲ್ಲಿ ಆಫ್ರಿಕವೆಂಬ ಹೆಸರು ಬಂದಿರಬಹುದೆಂದುಕೊಂಡನಂತೆ! ಅದರಂತೆ ನೀಲ ನದಿಯ ಉಗಮಸ್ಥಾನದ ಶೋಧನೆಗೆ ಹೊರಟನಂತೆ! ಅವನ ಶೋಧನಕಾರ್ಯವು ಯಶಸ್ವಿಯಾಯಿತಂತೆ!

—Modern Review February 1928.

ಮೇಲ್ಕಂಡ ಒಂದೇ ದೃಷ್ಟಾಂತದಿಂದ ಪುರಾಣಗಳ ಉಪಯುಕ್ತತೆಯು ಆಧುನಿಕರಿಗೆ ಗೊತ್ತಾಗದಿರಲಿಕ್ಕಿಲ್ಲ. ಪುರಾಣಗಳೆಂದರೆ ಇರುವ ಉದಾಶೀನತೆಯು ಕಡಮೆಯಾಗದಿರಲಿಕ್ಕಿಲ್ಲ.

ಆದಿಶಿಲೆ (ಮೊದಲಕಲ್ಲು) ಯು ತುಂಗಾ ಭದ್ರಾ ಕೃಷ್ಣಾ ನದಿಗಳ ಮಧ್ಯದಲ್ಲಿದೆ. ಆದರೆ ಎರಡೂ ನದಿಗಳು ಎರಡು ಕಡೆಯಿಂದಲೂ ಒಂದೊಂದು ಗಾವುದಕ್ಕೆ ಕಮ್ಮಿ ದೂರದಲ್ಲಿಲ್ಲ. ಕ್ಷೇತ್ರವು ಹಿಂದೆ ದೊಡ್ಡ ಪಟ್ಟಣವಾಗಿದ್ದ ಅಥವಾ ನಿರ್ಜನ ಪ್ರದೇಶವಾಗಿದ್ದ ಕುರುಹುಗಳು ಇತಿಹಾಸ ಕಾಲದಲ್ಲಿ ಕಂಡುಬಂದಿಲ್ಲ. ಊರಿಗೆ ಒಂದು ಮೈಲಿ ದೂರದಲ್ಲಿ ಸಣ್ಣದೊಂದು ಗುಡ್ಡವಿದೆ. ಅದು ಸ್ವಯಂವ್ಯಕ್ತ ಶ್ರೀನಿವಾಸ ಕ್ಷೇತ್ರವೆನಿಸಿದೆ. ಊರ ಪಕ್ಕದಲ್ಲಿರುವ ಶ್ರೀನಿವಾಸ ದೇವಾಲಯವೂ ಆದರಂತಿದ್ದು, ಅದೇ ಕೀರ್ತಿಯನ್ನು ಪಡೆದು, ಸೇವಿಸುವವರಿಗೆ ಇಷ್ಟಾರ್ಥದಾಯಕ ಸ್ಥಳವಾಗಿದೆ. ಪಕ್ಕದಲ್ಲಿರುವ ಕೊಳವನ್ನು ಜನರು ಸ್ವಾಮಿಪುಷ್ಕರಣಿಯೆನ್ನುತ್ತಾರೆ. ದೇವರಿಗೆ ಅಭಿಷೇಕ ಮಾಡುವವರು ಬ್ರಾಹ್ಮಣರು. ಅಲಂಕಾರ ಮಾಡುವವರು ಬೇಡಜಾತಿಯವರು. ಕಾಡುಬಂಡೆಗೆ ಹೊಂದಿಸಿ ಕಟ್ಟಿರುವ ಗುಡಿಯು ಈಚಿನದಾಗಿದೆ. ಸುತ್ತಣ ಪ್ರಕೃತಿಯು ಅಷ್ಟು ಸುಂದರವಾಗಿರದಿದ್ದರೂ, ಆಲಯದ ಆವರಣವನ್ನು ಹೊಕ್ಕ ಕೂಡಲೇ ಉಂಟಾಗುವ ಮನಶ್ಶಾಂತಿಯು ಅನುಭವದ ಮಾತಾಗಿದೆ. ಇಂತಹ ಪಾವನ ಸ್ಥಳದಲ್ಲಿದ್ದು ತಪಶ್ಚರ್ಯವಾಡಿ ಪ್ರಖ್ಯಾತಿ ಪಡೆದವರು **ಮೊದಲಕಲ್ಲು ಶೇಷದಾಸರು.** ಅಪರೋಕ್ಷಜ್ಞಾನಿಗಳು, ಮಹಾಮಹಿಮೆಗಳನ್ನು ತೋರಿಸಿದ ಹರಿದಾಸ ಪರಂಪರೆಯಲ್ಲಿ ಕೊನೆಯವರು. ಇವರ ನಂತರ ಕಳೆದ ಈಚಿನ ಐವತ್ತು ವರ್ಷಗಳಲ್ಲಿ ಈ ತರಗತಿಯ ಜನರು ಕರ್ಣಾಟಕದಲ್ಲಿ ಉದಯವಾಗಲಿಲ್ಲ. ಇತರ ದೇಶಗಳಲ್ಲಿ ಬಂದ ವರ್ತಮಾನವಿಲ್ಲ. ಇದರ ಕಾರಣವೇನೆಂಬುದು ಗೊತ್ತಾಗುವಂತಿಲ್ಲ.

ಮೊದಲಕಲ್ಲು ಶೇಷದಾಸರು ಭಾರದ್ವಾಜ ಗೋತ್ರದವರು. ಗದ್ವಾಲಿಗೆ ಐದು ಮೈಲಿ ದೂರದಲ್ಲಿರುವ ಚಿಂಚೋಳಿ ಗ್ರಾಮವು ಇವರ ಹುಟ್ಟೂರು. ಕ್ರಿ. ಶ. ೧೮೦೦ರ ಸುಮಾರಿನಲ್ಲಿ ಇವರು ಜನ್ಮತಾಳಿರಬೇಕು. ಗ್ರಾಮದ ಕುಲಕರಣಿಯಾಗಿ ದೇಶದಲ್ಲಿ ಸನ್ಮಾನ್ಯ ಗೃಹಸ್ಥರೆನ್ನಿಸಿದ್ದ ಇವರು [illegible] ವೃತ್ತಿಯನ್ನು ನಡೆಸುತ್ತಿದ್ದರು. ಕಾರ್ತಿಕ–ಮಾಘಮಾಸಗಳಲ್ಲಿ ಗದ್ವಾಲಿಯಲ್ಲಿ ನಡೆಯುತ್ತಿದ್ದ ವಿದ್ವತ್ಸಭೆಗೆ ಬರುತ್ತಿದ್ದ ವಿದ್ವಜ್ಜನರಿಗೆ ಕುಲಕರಣಿ

ಶೇಷಪ್ಪನು ಆಶ್ರಯದಾತನಾಗಿ ಆತಿಥ್ಯ ಮಾಡುತ್ತಿದ್ದನು. ಪಂಡಿತರು, ಗದ್ವಾಲಿಗೆ ಹೋಗಿ-ಬರುವ ಎರಡು ವೇಳೆಗಳಲ್ಲೂ ಶೇಷಪ್ಪನ ಮನೆಯಲ್ಲಿಳಿಯದೆ, ತಮ್ಮ ವಿದ್ವತ್ತನ್ನು ಪ್ರದರ್ಶಿಸದೆ, ಪ್ರಯಾಣ ಮಾಡುತ್ತಿರಲಿಲ್ಲ. ಕುಲಕರಣಿಯೊಂದರೆ ಆ ಕಾಲದ ಮೊಗಲಾಯಿ ಗ್ರಾಮಾಧಿಕಾರಿಯಾಗಿದ್ದುದರಿಂದ, ಮಹಾ ಕರ್ತೃತ್ವಶಾಲಿಯಾಗಿದ್ದನೆಂಬುದನ್ನು ವಾಚಕರು ನೆನಸಿನಲ್ಲಿಡಬೇಕು. ಪರಮ ಪ್ರಖ್ಯಾತ ಪಂಡಿತರು ಮಾತ್ರವಲ್ಲದೆ ಸತ್ಪುರುಷರೂ ಎನಿಸಿದ್ದ **ಸುರಪುರದ ಆನಂದದಾಸರೂ, ಯಳಮೇಲೀ ಹಯಗ್ರೀವಾಚಾರ್ಯರೂ** ಶೇಷಪ್ಪನ ಅತಿಥಿಗಳಾಗಿರುತ್ತಿದ್ದುದು ರಾಜದರ್ಬಾರಿನಲ್ಲೂ ಪ್ರಶಂಸೆಗೆ ಬರುತ್ತಿತ್ತು. ನರ್ತಕಿಯರ ನರ್ತನ, ಗಾಯಕರ ಗಾಯನ, ವಿದ್ವಾಂಸರ ವಾಕ್ಯಾರ್ಥಗಳ ಯೋಗ್ಯತಾ ನಿರ್ಣಯದಲ್ಲಿ ಶೇಷಪ್ಪನು ಅಸದೃಶನೆನಿಸಿದ್ದನು. ಮರ್ಯಾದೆ ಮಾಡುವುದರಲ್ಲೂ ಯೋಗ್ಯತೆಯನ್ನನುಸರಿಸಿ ನಡೆಯುತ್ತಿದ್ದನು. ಕಾಯದೆ ಕಾನೂನುಗಳ ವ್ಯಾಪನೆಯಿರದಿದ್ದ ಆ ಕಾಲದಲ್ಲಿ ಜನರು, ಗೌಡ ಕುಲಕರಣಿಗಳನ್ನು ತಮ್ಮ ರಾಜರೆಂದೇ ಭಾವಿಸುತ್ತಿದ್ದರು. ಅಂದ ಮಾತ್ರಕ್ಕೆ ಕುಲಕರಣಿಯು ಜನರನ್ನು ಹಿಂಸಿಸಿ ಧಕಿಸುತ್ತಿರಲಿಲ್ಲ. ಜನರ ಎಲ್ಲಾ ವ್ಯವಹಾರಗಳ ತೀರ್ಮಾನವು ಕುಲಕರಣಿಯಿಂದಾಗುತ್ತಿತ್ತು. ಆದ್ದರಿಂದ ಅವರು ಅವನ ಖರ್ಚುವೆಚ್ಚಗಳನ್ನು ಸಂತೋಷದಿಂದ ನಡೆಸುತ್ತಿದ್ದರು. ಸಭಾಕಾಲಗಳಲ್ಲಾಗುವ ಖರ್ಚು ಗ್ರಾಮಸ್ಥರು ಮಾಡಬೇಕಾದುದೆಂಬ ನಂಬಿಕೆ ಜನರಿಗಿತ್ತು. ಇಷ್ಟರಮೇಲೆ ಅದು ಸಮೃದ್ಧಿಯ ಕಾಲ. ಗದ್ವಾಲರಾಜರು ವಿದ್ವತ್ಸಭಾನಿಮಿತ್ತ ಸಾವಿರಗಟ್ಟಲೆ ಖರ್ಚುಮಾಡುತ್ತಿದ್ದರಾದರೆ, ಶೇಷಪ್ಪನು ನೂರರಗಟ್ಟಲೆ ಖರ್ಚುಮಾಡಲು ಹಿಂದೆಗೆಯುತ್ತಿರಲಿಲ್ಲ. ಬಂದ ಅತಿಥಿಗಳನ್ನು ಮೃಷ್ಟಾನ್ನವಿತ್ತು ಆದರಿಸುತ್ತಿದ್ದನು. ಆದರೆ ಆತನ ಜಿಹ್ವಾಚಾಪಲ್ಯವು ಬದನೇಕಾಯಿಯ ಎಣ್ಣೆಗಾಯಿ ತಿಂದಲ್ಲದೆ ತೀರುತ್ತಿರಲಿಲ್ಲ. ಇಷ್ಟು ಮಾತ್ರಕ್ಕೇ ಆ ಕಾಲದ ಶಿಷ್ಟ ಸಂಪ್ರದಾಯಸ್ಥರಿಗದು ಬಲು ವಿರೋಧವಾಗಿ ಕಾಣಿಸುತ್ತಿತ್ತು. ಆಳುತನದ ದೇಹಾಕೃತಿಗಳಲ್ಲಿ ಶೇಷಪ್ಪನು ಎತ್ತರವಾದ ಧನ್ಯಾಕೃತಿಯ ಆಳು. ಗರಡೀಸಾಧನೆ ಮಾಡಿದ್ದ ಕಾರಣ ಆತನ ಮೈಕಟ್ಟು ಪ್ರೇಕ್ಷಣೀಯವಾಗಿತ್ತು. ಉಡಲು ಯಾವಾಗಲೂ ಜರತಾರಿಯ ಧೋತ್ರ, ನಿತ್ತ್ರುವುದು ಗಟ್ಟೀ ಮಲ್ಲು ರುಮಾಲು. ಉಡುಪು ನಿರ್ಮಲವಾಗಿ ಗರಿಮುರಿಯಾಗಿರಬೇಕು. ರಾಜದರ್ಬಾರಿಗೆ ಹೋದರೂ, ಶೇಷಪ್ಪನ ನಿಲುವಂಗಿ ಧೋತ್ರ ರುಮಾಲುಗಳ ಶಿಸ್ತು ಆ ಕಾಲದ ಜನರಿಗೆ ಬಲು ಮನೋಹರವಾಗಿ-ಮೆಚ್ಚಿಕೆಯದಾಗಿತ್ತು.

ಕಣ್ಣಿಗೆ ಕಾಣುವಷ್ಟೇ ದೇಶಕ್ಕೆ ಒಬ್ಬ ರಾಜನಿದ್ದ-ಕಾಲ್ನಡಿಗೆಯಿಂದಲೇ ಮಾರ್ಗಕ್ರಮಣ ಮಾಡಬೇಕಾಗಿದ್ದ-ಕೈಬರಹದಿಂದಲೇ ಗ್ರಂಥ ಭಂಡಾರಗಳನ್ನು ತುಂಬಬೇಕಾಗಿದ್ದ-ಯಂತ್ರ ತಂತ್ರಗಳನ್ನೇ ಕಾಣದಿದ್ದ ಆ ಕಾಲಕ್ಕೂ, ಕಿವಿಗೆ ಕೇಳುವಷ್ಟು ದೇಶಕ್ಕೆಲ್ಲಾ ಒಬ್ಬನೇ ರಾಜನಿರುವ-ನೆನೆಸಿದಾಗ ಘಂಟೆಗೆ ನೂರಾರು ಮೈಲು ಪ್ರಯಾಣಮಾಡಲನುವಾದ ರೈಲು ಆಕಾಶ ವಿಮಾನಗಳಿರುವ-ನಿಮಿಷಕ್ಕೆ ಸಾವಿರಗಟ್ಟಲೆ ಹಾಳೆಗಳನ್ನು ಮುದ್ರಿಸುವ ಸೌಕರ್ಯವಿರುವ ಈ ಕಾಲಕ್ಕೂ ಅಜಗಜಗಳಷ್ಟು ಅಂತರವಿದೆಯೆಂದು ಕಾಣಿಸ

ಬಹುದು. ಆದರೆ ಆ ಕಾಲದಲ್ಲಿದ್ದ ಸುಖಶಾಂತಿ ಸಮೃದ್ಧಿ ತೃಪ್ತಿಗಳು ಈ ಕಾಲದಲ್ಲಿಲ್ಲ. ನಾವು ಅನುಸರಿಸುತ್ತಿರುವ ನಾಗರೀಕತೆಯ ಫಲವು ನಮ್ಮದಲ್ಲ. ಅದರಿಂದ ನಮಗೆ ಯಾವುದೇ ಬಗೆಯ ಆದಾಯವಾಗುತ್ತಿಲ್ಲ.

ಆ ಕಾಲದಲ್ಲಿ (ಒಂದು ಶತಮಾನದ ಹಿಂದೆ) ಗದ್ವಾಲ ಸಂಸ್ಥಾನವನ್ನು ನಾಗರ ದೊಡ್ಡಿಯ ರಾಜಬಂಧು ಮನೆತನದಿಂದ ದತ್ತುಕುಮಾರನಾಗಿ ಬಂದಿದ್ದ ಸೋಮಭೂಪಾಲ ನೆಂಬಾತನು ಆಳುತ್ತಿದ್ದನು. ಆತನು ಬಹು ಕಠಿಣ ಮನೋವೃತ್ತಿಯುಳ್ಳವನಾಗಿದ್ದನು. ತನ್ನ ರಾಜ್ಯದ ಅಧಿಕಾರಿಗಳಲ್ಲಿ ಆತನಿಗೆ ನಂಬಿಕೆಯಿರಲಿಲ್ಲ. ಕಂಡವರನ್ನು ಕಾರಾಗೃಹ ದಲ್ಲಿಟ್ಟು ದಂಡಿಸುತ್ತಿದ್ದ ಕಾರಣ ಆತನಲ್ಲಿ ಪ್ರಜೆಗಳಿಗೆ ಅನುರಾಗವಿರಲಿಲ್ಲ. ರಾಜ್ಯದ ದಿವಾನಗಿರಿಯೇ ಮೊದಲಾದ ದೊಡ್ಡ ದೊಡ್ಡ ಅಧಿಕಾರ ಮಾಡುತ್ತಿದ್ದ ಗೋವಿಂದರಾಯ, ಕರ್ನೂಲು ಗೋಪಾಲರಾಯ, ಗುಂಜಹಳ್ಳಿ ಭೀಮಣ್ಣ ಮೊದಲಾದವರಿಗೂ ನಿರ್ಬಂಧ ತಪ್ಪ ಲಿಲ್ಲ. ದಯಾಗುಣವೆಂಬುದನ್ನೇ ಆತ ಕಂಡಿರಲಿಲ್ಲ. ದತ್ತು ಮಾಡಿಕೊಂಡ ವೆಂಕಟ ಲಕ್ಷ್ಮಮ್ಮ ರಾಣಿಯು ಆತನ ವರ್ತನೆಗಳಿಗಾಗಿ ಅತ್ಯಂತ ಚಿಂತಿಸುತ್ತಿದ್ದಳು.

ಹೀಗಿರಲು ಒಮ್ಮೆ ಈ ಸೋಮಭೂಪಾಲನ ವಕ್ರದೃಷ್ಟಿಯು ಕುಲಕರಣಿ ಶೇಷಪ್ಪನಮೇಲೆ ಬಿತ್ತು. ಶೇಷಪ್ಪನ ಉಡಿಗೆ ತೊಡಗೆ, ಆತನ ದಾನ ಧರ್ಮ ಜನಾನು ರಾಗಗಳ ಪ್ರಶಂಸೆ ಇವುಗಳನ್ನು ನೋಡಿ ಸಂತೋಷಪಡುವುದರ ಬದಲು ಅಸೂಯಾಪರ ನಾದನು. ದೋಷಗಳನ್ನೇ ಹುಡುಕುತ್ತಾ ಕುಳಿತರೆ, ಯಾರಲ್ಲಿ ತಾನೇ ತಪ್ಪು ಸಿಕ್ಕುವು ದಿಲ್ಲ? ಶೇಷಪ್ಪನು ಸರ್ಕಾರಕ್ಕೆ ಕಟ್ಟಬೇಕಾದ ಹಣ ಬರುವುದು ಒಮ್ಮೆ ತಡವಾಯಿತು. ಇಷ್ಟೇ ಕಾರಣವಾಗಿ, ಸರ್ಕಾರದ ಹಣವನ್ನು ಬಳಸಿಕೊಂಡು ದುರುಪಯೋಗಪಡಿಸಿದನೆಂಬ ಆಪಾದನೆಯಾಯಿತು. ರಾಜದರ್ಬಾರಿಗೆ ಕರೆಯಿಸಲು–ಆಗಲೂ ಶೇಷಪ್ಪನು ಎಂದಿನಂತೆ ತನ್ನ ವಸ್ತ್ರಭೂಷಣಾದಿಗಳನ್ನು ಧರಿಸಿ ಬಂದಿದ್ದನು. ಧೊರೆಯು ಶೇಷಪ್ಪನ ಗಿಪ್ಪೆ ಮಡಿಯು ರುಮಾಲು ಮುಂತಾದ ಆಡಂಬರದ ಉಡುಪನ್ನು ನೋಡಿ ಹೀಯಾಳಿಸಿದನು. ಅಷ್ಟಕ್ಕೇ ನಿಲ್ಲದೆ, ಸೇವಕನ ಕೈಯಿಂದ ಆತನ ರುಮಾಲು ಕೆಳಗುರುಳುವಂತೆ ಹೊಡೆಸಿ ಅವಮಾನ ಪಡಿಸಿದನು. ಶೇಷಪ್ಪನಂಥಾ ದೊಡ್ಡ ಮನುಷ್ಯನಿಗಾದ ಈ ಅವಮಾನವನ್ನು ನೋಡಿ ಜನರು ಪರಿತಪಿಸಿದರು.

ಆಗ ಶೇಷಪ್ಪನು ರಾಜನನ್ನು ಕುರಿತು–'ರುಮಾಲು ಕೆಳಗುರುಳುವುದಕ್ಕೂ ತಲೆ ಯುರುಳುವುದಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಉರುಳಿದ ರುಮಾಲನ್ನು ಪುನಃ ನಾನು ಧರಿಸುವವನಲ್ಲ. ಇಂದಿನಿಂದ ನಾನು ತಮ್ಮ ಕುಲಕರಣಿಯಲ್ಲ. ತಾವು ನನ್ನ ರಾಜರಲ್ಲ. ಇದೋ ತಮ್ಮ ದಫ್ತರ, ತಮ್ಮ ಲೆಕ್ಕಣಿಕೆ! ಯಾರಿಂದ ಬೇಕಾದರೂ ಕೆಲಸಮಾಡಿಸಿ ಕೊಳ್ಳಬಹುದು. ನನ್ನ ಮನೆ ಮಾನ್ಯಗಳನ್ನು ಜಫ್ತಿ ಮಾಡಿಕೊಳ್ಳಬಹುದು. ನಾನಿನ್ನು ಹೊರಡುವೆನು' ಎಂದು ನುಡಿದು, ರಾಜಸಭೆಯಿಂದ ತೆರಳಿದನು.

ಶೇಷಪ್ಪನಿಗೆ ಅವಮಾನ ಮಾಡುವುದೇ ಅಂದಿನ ಸಭೆಗೆ ಮುಖ್ಯೋದ್ದೇಶವಾ ಗಿದ್ದುದರಿಂದ, ರಾಜಸಭೆಯೂ ಅಲ್ಲಿಗೇ ಮುಕ್ತಾಯವಾಯಿತು. ಕುಲಕರಣಿ ಶೇಷಪ್ಪ

ನವರಿಗೆ ರಾಜಸಭೆಯಲ್ಲಾದ ಅವಮಾನದ ವಾರ್ತೆಯು ಊರಲ್ಲೆಲ್ಲಾ ವ್ಯಾಪಿಸಿತು. ಮಾನವಂತನಾದ ಶೇಷಪ್ಪನು, ಎಲ್ಲಿ ಆತ್ಮಹತ್ಯ ಮಾಡಿಕೊಳ್ಳುವನೋ ಎಂಬ ಭಯ ಜನರಿಗುಂಟಾಯಿತು. ಆತನನ್ನು ಊರಲ್ಲಿ ಕಾಣದ ಜನರು ದರೂರ ಮಾರ್ಗ ಹಿಡಿದು ಹುಡುಕಲು ಹೊರಟರು. ಅಧಿಕಾರಿ ಜನರು, ಏನಾದರೂ ಉಪಾಯಮಾಡಿ ಮತ್ತೆ ಆತನಿಗೆ ರಾಜಸಭೆಯಲ್ಲಿ ಬಹುಮಾನ ಮಾಡಿಸಿ, ದಫ್ತರವನ್ನು ಕೊಡಿಸಿ–ಆತನನ್ನು ಉದ್ಯೋಗದಲ್ಲಿ ನಿಲ್ಲಿಸಬೇಕೆಂದು ಯೋಚಿಸಿದರು. ಶೇಷಪ್ಪನು ಯಾರ ಕೈಗೂ ಸಿಗಲಿಲ್ಲ, ಆತನು ಪುನಃ ದರೂರಿಗೂ ಹೋಗಲಿಲ್ಲ. ಹೀಗೆ ಎಷ್ಟೋ ದಿನಗಳು ಕಳೆದುವು. ಆವೇಳೆ ಆತನು ಚಿಂತಲರೇವಿನಲ್ಲಿ ಶ್ರೀ ವ್ಯಾಸರಾಯರಿಂದ ಪ್ರತಿಷ್ಠಿತನಾದ ಶ್ರೀ ಮಾರುತಿರಾಯನ ಸೇವೆಯಲ್ಲಿ ತೊಡಗಿರುವನೆಂದು ಜನರಿಗೆ ಗೊತ್ತಾಯಿತು. ಇಲ್ಲಿಗೆ ಶೇಷಪ್ಪನ ಲೌಕಿಕ ಲಾಲಸೆಯು ಮುಗಿದಂತಾಯಿತು.

ತಪಶ್ಚರ್ಯೆ

ಚಿಂತಲರೇವಲಿನ ಮಾರುತಿ ದೇವಾಲಯಕ್ಕೆ ಆ ಕಾಲದಲ್ಲಿ ಕೇವಲ ಗರ್ಭಾಂಕಣವೂ ಸುತ್ತಣ ಪೌಳಿಯೂ ಮಾತ್ರ ಇತ್ತು. ಮಾರುತಿಯು ಮೂರ್ತಿಯ ಸುತ್ತ ಹುತ್ತ ಬೆಳೆದು ಒಳಗೆ ಪ್ರವೇಶಮಾಡಲು ದಾರಿಯಿಲ್ಲದಂತಾಗಿತ್ತು. ದೇವಾಲಯದ ಬಳಿ ಹಿಂಸಾಕಾರ್ಯ ಮಾಡಿದರೆ, ತಮ್ಮ ಮನೆಮಾರು ಮಕ್ಕಳುಮರಿಗಳಿಗೆ ಕ್ಷೇಮವಾಗದೆಂದು ಗ್ರಾಮಸ್ಥ ರೈತರು ದೂರಪ್ರದೇಶದಲ್ಲಿ ವಾಸಮಾಡುತ್ತಿದ್ದರು. ಹಾಗೂ ಮೀರಿ ಆ ಬಳಿ ಪ್ರಾಣಹಿಂಸೆ ಮಾಡಿದವರಿಗೆ ಭಯಂಕರ ಸ್ವಪ್ನಸೂಚನೆಯಾಗಿ ಹಾನಿಯುಂಟಾಗುತ್ತಿತ್ತು. ರಾತ್ರಿ ಕಾಲದಲ್ಲಿ ಪೌಳಿಯೊಳಗೆ ಮಲಗಿದರೆ ತಮ್ಮ ಪರಿಣಾಮವಾಗದೆಂದು ಜನರು ಭೀತರಾಗಿದ್ದರು. ಆ ಭೀತಿ ಇಂದಿಗೂ ತಪ್ಪಿಲ್ಲ. ಮೀರಿ ನಡೆದವರಿಗೆ ಆಗುವ ಹಾನಿಯೂ ತಪ್ಪಿಲ್ಲ. ಆ ಗ್ರಾಮದ ಜನರನ್ನು ಕರೆದು ವಿಚಾರಿಸಿದರೆ, ಆ ದೇವರಿಗೆ ಸಂಬಂಧಿಸಿದ ಕಥೆಗಳನ್ನು ಒಬ್ಬೊಬ್ಬರೊಂದೊಂದು ಬಗೆಯಲ್ಲಿ ಹೇಳುತ್ತಾರೆ. ನಂಬದಿರಲು ಸಾಧ್ಯವಾಗದ ಅನುಭವಗಳನ್ನು ಹೇಳುತ್ತಾರೆ. ಈಚೆಗೆ ಗದ್ವಾಲರಾಜರು ಗರ್ಭಾಂಕಣಕ್ಕೆ ಹೊಂದಿದಂತೆ ಮೂರಂಕಣದ ಒಂದು ಮಂಟಪವನ್ನೂ ಸುತ್ತ ಯಾತ್ರಿಕರಿಗನುಕೂಲವಾಗುವಂತೆ ಪಾಕಶಾಲೆ, ವಸತಿ ಗೃಹಗಳನ್ನೂ ನಿರ್ಮಾಣಮಾಡಿದ್ದಾರೆ. ಸಂಸಾರಿಗಳು ವಾಸಮಾಡಲು ಅನುಕೂಲವಿದ್ದ ಮಾತ್ರಕ್ಕೇ ಸ್ವೇಚ್ಛೆಯಾಗಿರಲು ಅವಕಾಶವಿಲ್ಲ. ಮೊನ್ನೆ ತಾನೇ ಮರಾಠವಾಡಿಯ ಅಧಿಕಾರಿಯೊಬ್ಬನು–'ಇಂಥಾ ದೇವಾಲಯಗಳನ್ನೆಷ್ಟೋ ನೋಡಿದ್ದೇನೆ. ಮೋಸಗಾರರು ಕಥೆಗಳನ್ನು ಕಟ್ಟಿ ಹೇಳುತ್ತಾರೆ. ಮೂಢ ಜನರಿಂದ ಧನಾರ್ಜನೆ ಮಾಡುತ್ತಾರೆ. ನಾನ್ಯಾರಿಗೂ ಹೆದರುವನಲ್ಲ' ಎಂದು ಅಶುಚಿ ವರ್ತನದಿಂದ, ದೇವಾಲಯದ ಪೌಳಿಯೊಳಗೆ ಒಂದು ತಿಂಗಳು ವಾಸಮಾಡಿ, ಕಷ್ಟಗಳಿಗೊಳಗಾಗಿ ಕಡೆಗೆ ಮೃತನೂ ಆದನೆಂಬ ಸಂಗತಿಯನ್ನು ಅಲ್ಲಿಯ ಪ್ರಾಮಾಣಿಕ ಜನರು, ನಾನು ಅಲ್ಲಿಗೆ ಹೋಗಿದ್ದಾಗ (ತಾ॥ ೧೩-೧೦-೧೯೩೩, ಶ್ರೀಮುಖ ಸಂವತ್ಸರದ ಆಶ್ವೀಜ ಬಹುಳ

ನವಮಿ ಶುಕ್ರವಾರ) ತಿಳಿಸಿದನು. ಇಂತಹ ಕಥೆಗಳನ್ನು ಬರೆಯಲು ಭಯವಾಗುತ್ತದೆ. ಘಜನೀ ಮಹಮ್ಮದ್, ಔರಂಗಜೇಬ್ ಮೊದಲಾದವರ ಕಾಲದಲ್ಲಿ ಸೋಮನಾಥ-ಕಾಶೀ ವಿಶ್ವನಾಥರೇನು ಮಾಡುತ್ತಿದ್ದರೆಂದು ಕೇಳಿದರೆ ಉತ್ತರ ಕೊಡಲು ಬರದೆ ಬಾಯಿ ಬಂದಾಗುತ್ತದೆ. ಏನೇ ಇರಲಿ-ಮಂತ್ರಗಳಲ್ಲೂ, ತಪಸ್ವಿಗಳಿಂದ ಪ್ರತಿಷ್ಠಿತವಾದ ಮೂರ್ತಿಗಳಲ್ಲೂ ಶಕ್ತಿಯಿಲ್ಲವೆಂದು ಹೇಳಲು ಸಾಧ್ಯವಿಲ್ಲ.

ಶೇಷಪ್ಪನು ಚಿಂತಲರೇವಲನ್ನು ಸೇರಿದ ದಿನದಿಂದ ನಿತ್ಯವೂ ಶ್ರೀ ಕೃಷ್ಣವೇಣಿಯಲ್ಲಿ ಸ್ನಾನಮಾಡುವನು. ಅಗ್ರೋದಕವನ್ನು ತಂದು ಮಾರುತಿಗೆ ಅಭಿಷೇಕ ಮಾಡುವನು. ವೀರ ಆಂಜನೇಯ ಮಂತ್ರವನ್ನು ಒಂಟಿಗಾಲಲ್ಲಿ ನಿಂತು ಜಪಿಸುವನು. ಸಾಯಂಕಾಲದೊಳಗೆ ಒಂದಿಷ್ಟು ಬೇವಿನ ಸೊಪ್ಪನ್ನರೆದು ಗುಳಿಗೆ ಮಾಡಿ ಪಂಚಪ್ರಾಣಾಹುತಿಯೆಂದು ಭುಜಿಸುವನು. ಮತ್ತೆ ನದಿಯಲ್ಲಿ ಮಿಂದು ಸಾಯಂಸಂಧ್ಯೆಯನ್ನು ಮಾಡಿ ದೇವಾಲಯದ ಸುತ್ತ ದೇವರನಾಮಗಳನ್ನು ಹಾಡುತ್ತಾ ಪ್ರದಕ್ಷಿಣೆ ಮಾಡುವನು. ಮಿತಿಮೀರಿ ನಿದ್ರೆ ಬಂದರೆ, ಅಲ್ಲೇ ಶಯನಮಾಡುವನು. ಪಟ್ಟೆಮಂಚ, ಮೊಳಕಾಲುದ್ದದ ಸುಪ್ಪತ್ತಿಗೆ, ಚಾಚಿದ ಕಡೆಗೆ ಕೈಕಾಲು ದಿಂಬುಗಳು, ಮೇಲಾಗಿ ಮಂಚದ ಪರದೆ, ಇಷ್ಟೆಲ್ಲಾ ಶಯನ ಸಾಮಗ್ರಿಗಳಿದ್ದರೂ ಆಯಾಸದ ಸೋಗುಹಾಕಿ, ಹುಸ್ ಹುಸ್ ಎನ್ನುತ್ತಾ, ಉಭಯ ಪಾರ್ಶ್ವಗಳಲ್ಲೂ ಅಂಗಮರ್ದನ ಮಾಡಿಸಿಕೊಳ್ಳುತ್ತಿದ್ದ ಅಂದಿನ ವೈಭವವೆಲ್ಲಿ? ಭೂಮಿಯೇ ಹಾಸಿಗೆ, ಆಕಾಶವೇ ಹೊದ್ದಿಕೆ ಮಾಡಿಕೊಂಡು ಪವಡಿಸುವ ಇಂದಿನ ಈ ಪರಿಭವವೆಲ್ಲಿ? ನಿಜವಾದ ಸುಖ, ನಿಜವಾದ ಶಾಂತಿ ಇರುವುದೆಲ್ಲಿ? ಅವು ಹೊರಗೋ ಒಳಗೋ?

ಶೇಷಪ್ಪನು ಚಿಂತಲರೇವಿನಲ್ಲಿ ತಪಸ್ಸು ಮಾಡುತ್ತಿದ್ದ ಸಂಗತಿ ದಮ್ಮೂರಲ್ಲಿ ಜನಜನಿತವಾಗಿ ತಿಳಿಯಿತು. ಆತನು ಅತ್ಯಂತ ಜನಾನುರಾಗಿಯಾಗಿದ್ದುದರಿಂದ ಊರ ಜನರೂ, ತಾಯಿ-ಹೆಂಡತಿ ಮಕ್ಕಳುಗಳೂ ತಮ್ಮ ಧಣಿಯನ್ನು ಏನಾದರೂ ಮಾಡಿ ಊರಿಗೆ ಕರೆದುಕೊಂಡು ಹೋಗಬೇಕೆಂದು ದೇವಾಲಯದ ಬಳಿ ಬಂದಿಳಿದರು. 'ಕುಲಕರಣಿಕೆ ಹೋಯಿತೇನು? ರಾಜನು ಮುನಿದನೇನು? ಮನೆಯಿಲ್ಲವೇ ಮಾನ್ಯವಿಲ್ಲವೇ? ಆಡಿದಂತೆ ಮಾಡುವ ಜನರಿಲ್ಲವೆ? ಸಭಾಕಾಲದಲ್ಲಿ ಬರುವ ಜನರ ಆತಿಥ್ಯ ಮಾಡಲು ಗ್ರಾಮಸ್ಥರಿಲ್ಲವೆ? ನಿಮಗೇನು ಕಡಿಮೆಯಾಗಿದೆ. ಊರಿಗೆ ಬನ್ನಿರಿ' ಎಂದು ಒಬ್ಬೊಬ್ಬರೂ ಪರಿಪರಿಯಾಗಿ ಬೇಡಿಕೊಂಡರು. ಶೇಷಪ್ಪನು-ಆ ಎಲ್ಲ ಪ್ರಾರ್ಥನೆಗಳಿಗೆ ಒಂದೇ ಉತ್ತರವಾಗಿ-'ಊರಿಗೆ ಬರುವ ಕಾಲವಿದಲ್ಲ, ಮತ್ತೆ ಲೌಕಿಕ ಮಾಡುವವನು ನಾನಲ್ಲ. ನರರ ಸೇವೆಯನ್ನು ತಪ್ಪಿಸಿ, ಶ್ರೀಹರಿಯನ್ನು ತೋರಿಸೆಂದು ವಾನರನಾಥನ ಮೊರೆಬಿದ್ದಿರುವೆನು. ಹರಿಯನ್ನು ಕಾಣುವೆನು-ಇಲ್ಲವೇ ಹರಣವನ್ನು ನೀಗುವೆನು. ಮಾತೆಗೂ ಮಡದಿ ಮಕ್ಕಳಿಗೂ ನಾನು ದ್ರೋಹಮಾಡಿ ಬಂದಿಲ್ಲ. ರಾಜದ್ರೋಹವನ್ನು ಮಾಡಿದವನೂ ನಾನಲ್ಲ. ಇದ್ದ ಹೊಲ ಮನೆಗಳನ್ನು ರಕ್ಷಿಸಿಕೊಂಡು ಮನೆಯವರು ಸುಖವಾಗಿ ಬಾಳ್ವೆ ಮಾಡಿಕೊಂಡಿರಿ. ಊರಿನವರು ನಿಜವಾಗಿ ನನ್ನನ್ನು ಪ್ರೀತಿಸುತ್ತಿದ್ದರೆ, ಹರಿನಾಥನು ನನ್ನ ಹರಕೆಯನ್ನು ನೆರವೇರಿಸುವಂತೆ ಪ್ರಾರ್ಥಿಸಿರಿ. ಇಷ್ಟೇ ನಿಮ್ಮನ್ನು

ನಾನು ಬೇಡುವುದು' ಎಂದು ನುಡಿದು ಮೌನ ತಾಳಿದನು. ಯಾರ ಮಾತೂ ನಡೆಯಲಿಲ್ಲ. ಎಲ್ಲರೂ ನಿರಾಶರಾದರು.

ಶೇಷಪ್ಪನ ತಪಸ್ಸು ದಿನದಿನಕ್ಕೆ ಇನ್ನೂ ಕಠಿಣವಾಗಿ ಬೆಳೆಯಿತು. ಯಾರೊಡನೆಯೂ ಮಾತನಾಡುವುದನ್ನು ಬಿಟ್ಟು ಆತನು ಮೌನಸ್ವಾಮಿಯಾದನು. ಒಂದು ಮಂಡಲವಾಯಿತು, ಎರಡನೆಯ ಮಂಡಲವೂ ಕಳೆಯಿತು. ದೇವರ ಕೃಪೆ ತನ್ನಮೇಲೆ ಆಗಲಿಲ್ಲವೆಂದು ಬೇಸತ್ತು, ಮಾರುತಿಯ ಬಳಿಯಿದ್ದ ಹುತ್ತದಲ್ಲಿ ಸರ್ಪವೇನಾದರೂ ಇದ್ದರೆ, ಅದು ತನ್ನನ್ನು ಕಚ್ಚಿ ಕೊಲ್ಲಲೆಂದು ಅದನ್ನು ಕೈಯಿಂದಲೇ ಬಗೆದನು. ಬಲುಕಾಲದಿಂದ ಅಲ್ಲಿ ವಾಸಮಾಡಿಕೊಂಡಿದ್ದ ಒಂದು ಸರ್ಪವು ಹುತ್ತದಿಂದ ಹೊರಕ್ಕೆ ಬಂದು, ಶೇಷಪ್ಪನುದ್ದಕ್ಕೂ ನಿಂತು ಹೆಡೆಯಾಡಿಸಿ ಹೊರಟುಹೋಯಿತು. 'ನಿನಗೂ ನಾನು ಬೇಡವಾದೆನೇ?' ಎಂದುಕೊಂಡು, ಆತನು ಬೇವಿನ ತೊಪ್ಪಲನ್ನೂ ತಿನ್ನದೆ ನಿರಾಹಾರ-ಉಪವಾಸ ಮಾಡಿದನು.- ಮಂತ್ರ ಪುರಶ್ಚರಣೆ ಮಾಡುತ್ತಾ ನಿಲ್ಲಲು ಶಕ್ತಿಯಿಲ್ಲದೆ ಕುಳಿತನು. ಕುಳಿತಿರುವುದೂ ಶ್ರಮವಾಗಿ ಮಲಗಿದನು. ದೇಹಾಯಾಸ ಬಹಳವಾಗಿದ್ದುದರಿಂದ ಅವನಿಗೆ ಅಲ್ಲೇ ನಿದ್ರೆ ಬಂತು. ಸ್ವಲ್ಪ ಹೊತ್ತಿನಮೇಲೆ ಕೈಯಲ್ಲಿ ತಂಬೂರಿಯನ್ನು ಹಿಡಿದು ನಿಂತ ಭವ್ಯರೂಪವೊಂದು ಆತನಿಗೆ ಸ್ವಪ್ನಾವಸ್ಥೆಯಲ್ಲಿ ದೃಗ್ಗೋಚರವಾಯಿತು. 'ಶೇಷಪ್ಪ-ನೀನಿಷ್ಟು ದೇಹ ದಂಡನೆ ಮಾಡಬೇಡ. ನಿನ್ನ ಇಷ್ಟಾರ್ಥವು ಸ್ವಲ್ಪ ಕಾಲದಲ್ಲೇ ಸಿದ್ಧಿಸುವುದು' ಎಂದು ನುಡಿದಂತಾಯಿತು. ಶೇಷಪ್ಪನು ತಲೆಯಮೇಲೆ ಹೊಡೆದರೆ ಏಳುವರಂತೆ ತತ್‌ಕ್ಷಣ ಎದ್ದು ಕುಳಿತನು. 'ಈ ಮಾತು ಹೇಳಿದವರು ಯಾರು? ಸ್ವಪ್ನದಲ್ಲಿ ತಂಬೂರಿಯವರು ಬರಲು ಕಾರಣವೇನು? ನಾನ್ಯಾವ ದಾಸರನ್ನೂ ನೆನೆಸಿದವನಲ್ಲವಷ್ಟೆ! ನನ್ನ ಮನೋವಿಕಾರದಿಂದ ಹೀಗಾಗಿರಲು ಕಾರಣವಿಲ್ಲವಲ್ಲಾ!' ಎಂದುಕೊಳ್ಳುತ್ತಾ ನಾಮಸ್ಮರಣೆಗಾರಂಭಿಸಿದನು. ಮರುದಿನ ತನ್ನ ಪದ್ಧತಿಯಂತೆ ಬೇವಿನ ತೊಪ್ಪಲನ್ನೇ ತಿಂದು ಸೇವೆ ಮಾಡಿದನು. ನಾಲ್ಕನೇ-ಮೂರನೇ ದಿನಗಳಲ್ಲೂ ಇದೇ ರೀತಿ ಸೇವೆ ಮಾಡುತ್ತಿರಲು-ಶೇಷಪ್ಪನು ವಿಶೇಷ ಭಕ್ತಿಮಾಡುತ್ತಿದ್ದ ಯಳಮೇಲೀ ಹಯಗ್ರೀವಾಚಾರ್ಯರು ಸ್ವಪ್ನದಲ್ಲಿ ದರ್ಶನ ಕೊಟ್ಟಂತಾಯಿತು. 'ಏಕೆ ಶೇಷಪ್ಪ! ವಿಜಯರಾಯರ ಮಾತನ್ನು ಅನಾದರಮಾಡಿದೆ? ಇನ್ನೀ ಕಠಿಣ ವ್ರತವನ್ನು ಬಿಡು. ಏಕಭುಕ್ತದಿಂದ ಸೇವೆಮಾಡಿದರೆ ಪ್ರಾಣಪತಿಯು ಒಲಿಯದೆ ನಿನ್ನುಪ್ರದಿಲ್ಲ. ನಿನ್ನ ದೇಹದಂಡನೆಯು ಅಸುರ ವ್ಯಾಪಾರವೆನ್ನಿಸುವುದು. ನಿನ್ನ ಸೇವೆಯು ಸಾತ್ವಿಕರೀತಿಯಿಂದ ನಡೆಯಲಿ' ಎಂದಂತಾಯಿತು. ಸ್ವಪ್ನಾವಸ್ಥೆಯಲ್ಲೇ ಶೇಷಪ್ಪನು-'ಆಚಾರ್ಯಸ್ವಾಮಿ, ಉಂಡು ಸೇವೆ ಮಾಡೆನ್ನುವಿರಲ್ಲಾ! ನನಗೆ ಉಣಬಡಿಸುವರ್ಯಾರು?' ಎಂದು ಕೇಳಿದನು. 'ನಿನಗೆ ಉಣಿಸಲು ಭಕ್ತನೊಬ್ಬನು ತಾನಾಗಿ ಬರುವನು' ಎಂದು ನುಡಿದು ಆಚಾರ್ಯರ ರೂಪವು ಅದೃಶ್ಯವಾಯಿತು.

ಹಿಂದಿನಂತೆ ಶೇಷಪ್ಪನು ಎದ್ದು ಕುಳಿತು ಚಿಂತಿಸತೊಡಗಿದನು. ಮೊದಲು ಸ್ವಪ್ನದಲ್ಲಿ ದರ್ಶನ ಕೊಟ್ಟವರು ವಿಜಯರಾಯರಾದರೆ, ಅವರ ಸ್ಮರಣೆ ನಾನೆಲ್ಲಿ ಮಾಡಿದೆ? ಸ್ಮರಿಸದೆಯೇ ಅವರು ಬರಲು ಕಾರಣವೇನು? ದೊಡ್ಡವರು, ದಯಾಳುಗಳು-ಬಂದರೆ

ಬರಲಿ! ಅವನ ಮಾತು ಮೀರಿದ್ದು ನನಗಂತೂ ಅಪರಾಧವೆನಿಸುವುದಿಲ್ಲ. ಏಕೆಂದರೆ, ಅವರ್ಯಾರೆಂಬುದು ನನಗೆ ಗೊತ್ತಿರಲಿಲ್ಲ. ಒಂದು ವೇಳೆ ಅಪರಾಧವಾಗಿದ್ದರೆ, ದಯಾಮಯರಾದ ಅವರೇ ಕ್ಷಮಿಸಲಿ! ನಮ್ಮ ಆಚಾರ್ಯರು ಸ್ವಪ್ನದಲ್ಲಿ ದರ್ಶನಕೊಟ್ಟು ಹೇಳಿದಮೇಲೆ, ಅವರ ಮಾತನ್ನು ನಡೆಸುವುದು ನನ್ನ ಕರ್ತವ್ಯ! ಎಂದು ಮೊದಲಾಗಿ ತರ್ಕಿಸಿದನು.

ಮಾರನೆಯ ಪ್ರಾತಃಕಾಲ ರೇವಸಹಳ್ಳಿಯ ತಿಮ್ಮಪ್ಪನೆಂಬ ಬಡಗೃಹಸ್ಥನು, ಸ್ವಲ್ಪ ಅಕ್ಕಿಯನ್ನೂ, ಅಲಸಂದಿಯನ್ನೂ, ಉಪ್ಪುಹುಳಿ ಖಾರಗಳನ್ನೂ ಗಂಟು ಕಟ್ಟಿ ತಲೆಯಮೇಲೆ ಇಟ್ಟುಕೊಂಡು, ಚಿಂತಲರೇವಿಗೆ ಬಂದನು. ಬಂದಾತನು–ಶೇಷಪ್ಪನ ಪಾದಗಳಿಗೆರಗಿ–'ಸ್ವಾಮಿ ತಾವಿಷ್ಟು ಕಠಿಣಸೇವಾ ಮಾಡಬಾರದು; ತಮ್ಮ ಸೇವಕನಾಗಿ ನಾನಿದ್ದು, ತಮಗೆ ಅಡಿಗೆ ಮಾಡಿ, ಬಡಿಸುತ್ತೇನೆ. ತಾವು ಭೋಜನಮಾಡಿ ಮನದಣಿಯ ಸೇವೆಮಾಡಬಹುದು' ಎಂದು ಬೇಡಿಕೊಂಡನು. ಶೇಷಪ್ಪನು ಇದೇನೋ ದೈವಿಕ ವ್ಯಾಪಾರವೆಂದುಕೊಂಡು, ಅದಕ್ಕೆ ಸಮ್ಮತಿಸಿದನು. ಬರೀ ಬಾಯಲ್ಲಿ ನುಡಿದುದು ಮಾತ್ರವಲ್ಲ – ಛಾಯೆಯು ದೇಹವನ್ನು ಅನುವರ್ತಿಸಿಕೊಂಡಿರುವಂತೆ ತಿಮ್ಮಪ್ಪನು ಕುಲಕರಣಿ ಶೇಷಪ್ಪನ ಸೇವೆ ಮಾಡಿದನು. ಹೀಗೆಯೇ ಕೆಲವು ಕಾಲ ಕಳೆಯಲು ಮುಂದೆ ಕಾಲಕ್ರಮದಲ್ಲಿ ದೇವರ ಸೇವೆಗೆ ಬರುವವರ ಸಂಖ್ಯೆಗಿಂತ, ಶೇಷಪ್ಪನನ್ನು ನೋಡಲು ಬರುವ ಜನಸಂಖ್ಯೆ ಬಲವಾಯಿತು. ಸಾಲದುದಕ್ಕೆ ಬರಗಾಲವೂ ಪ್ರಾಪ್ತವಾದ ಕಾರಣ ನೂರಾರು ಜನರಿಗೆ ಅನ್ನದಾನ ಮಾಡುವ ಭಾರವು ತಿಮ್ಮಪ್ಪನಮೇಲೆ ಬಿತ್ತು. ಸುತ್ತಮುತ್ತಣ ಗ್ರಾಮಗಳ ರೆಡ್ಡಿಗಳು ಪ್ರತಿದಿನವೂ ಅರ್ಧ ಚೀಲ ಜೋಳ, ಅರ್ಧ ಚೀಲ ಅಕ್ಕಿ ಮತ್ತು ತಕ್ಕಷ್ಟು ಮಿಕ್ಕ ಸಾಮಾನುಗಳು ಸಹಿತ ತಿಮ್ಮಪ್ಪನ ಬಳಿಗೆ ಕಳುಹಿಸುತ್ತಾ ಬಂದರು. ಭೋಜನವು ಬ್ರಾಹ್ಮಣರಿಗೆ ಮಾತ್ರವಲ್ಲ–ಬರುತ್ತ ಬರುತ್ತ, ಅನ್ನಾತುರರಾಗಿ ಬಂದವರಿಗೆಲ್ಲಾ ಇಲ್ಲವೆನ್ನದೆ ನಡೆಯಲಾರಂಭವಾಯಿತು. ಈ ಸಮಾಚಾರಗಳನ್ನು ಕೇಳಿ, ವೆಂಕಟಲಕ್ಷಮ್ಮ ರಾಣಿಯು, ಬಡಜನರ ಭೋಜನ ನಿರ್ವಹಣ ಭಾರವನ್ನು ವಿಶೇಷತಃ ತಾನೇ ವಹಿಸಿ, ಬಹುಜನರ ಪ್ರಾಣದಾನ ಮಾಡಿದಳು. ವಸ್ತುಸ್ಥಿತಿ ಹೀಗಿದ್ದರೂ, ಮೌನಸ್ವಾಮಿ ಶೇಷಪ್ಪನು ಅನ್ನದಾನ ಮಾಡುವನೆಂಬ ಕೀರ್ತಿಯು ಲೋಕದಲ್ಲಿ ವ್ಯಾಪಿಸಿತು. ಎರಡು ವರ್ಷಗಳ ಅಖಂಡ ಮಂತ್ರೋಪಾಸನೆಯಿಂದ ಶೇಷಪ್ಪನಿಗೆ **ಆಂಜನೇಯನ ದರ್ಶನ ಪರಮಾನುಗ್ರಹಗಳೂ ತನ್ಮೂಲಕ ಶ್ರೀರಾಮಚಂದ್ರಪ್ರಭುವಿನ ದರ್ಶನಾನಂದ ಸೌಭಾಗ್ಯಗಳೂ ಉಂಟಾದುವು.** ಅಷ್ಟರಲ್ಲಿ ಶೇಷಪ್ಪನನ್ನು ಮಹಾಪುರುಷನೆಂದು ಜನರು ಗೌರವಿಸಲಾರಂಭಿಸಿದರು. ಆತನ ಬಾಯಿಂದ ಬರುವ ಮಾತುಗಳು ಶಾಸ್ತ್ರಾರ್ಥಗಳೆನಿಸಿದುವು. ನಿಂತಲ್ಲಿ, ಕುಳಿತಲ್ಲಿ ನೂರಾರು ಜನರು ಆತನನ್ನು ಬಿಡದೆ ಆಶ್ರಯಿಸತೊಡಗಿದರು.

ಅನಂತರ ಶೇಷಪ್ಪನು, **ವಿಜಯರಾಯರ** ಜನ್ಮಸ್ಥಳವಾದ ಚೀಕಲಪರವಿಯಲ್ಲಿ ಕೆಲವು ದಿನಗಳವರೆಗೆ ಶ್ರೀ ಅಶ್ವತ್ಥನರಸಿಂಹನ ಸೇವೆಮಾಡಿ, ತರುವಾಯ ತಿಪ್ಪಗಿರಿಗೆ

ಬಂದು ಕೆಲವುಕಾಲ ಸೇವಿಸಿದನು. ಸ್ವಪ್ನದಲ್ಲೇ ದರ್ಶನಕೊಟ್ಟು ಕೃಪೆಮಾಡಿದ ದಯಾಮಯರಾದ ಶ್ರೀ ವಿಜಯರಾಯರು ಈ ಸಮಯದಲ್ಲಿ ನಿಜರೂಪದಿಂದ ಪ್ರೈದೋರಿದರು. 'ಶೇಷಪ್ಪಾ, ನಿನ್ನ ಅಧಿಕಾರ ದೊಡ್ಡದು! ಹಿಂದಿನ ಎರಡು ಜನ್ಮಗಳಲ್ಲಿ ಭಗವದ್ದರ್ಶನ ಮಾಡಿದವ ನೀನಾದರೂ, ಅದು ಕೇವಲ ಬಾಹ್ಯಾಪರೋಕ್ಷನಾಗಿತ್ತು. ಬಿಂಬಾಪರೋಕ್ಷವಾದರೆ ಅದು ಜನ್ಮಜನ್ಮಾಂತರಗಳಲ್ಲೂ ಸಹ ಸಹಾಯಮಾಡುವುದು. ಬಿಂಬಾಪರೋಕ್ಷಿಗೆ ಜನ್ಮಬಂಧನಗಳಿಲ್ಲ. ಇಚ್ಛಾಮಾತ್ರದಿಂದ ಆತನು ಜನ್ಮವೆತ್ತಿದರೂ, ಅವನ ಜ್ಞಾನಕ್ಕೆ ಲೋಪ ಬರುವುದಿಲ್ಲ. ಹಿಂದಿನಂತೆ ಈ ಜನ್ಮದಲ್ಲೂ ನಿನಗೆ ಅಂಕಿತಕೊಟ್ಟು ಹರಿದಾಸನನ್ನಾಗಿ ಮಾಡುವ ಕೆಲಸ ಮಾತ್ರ ನಮ್ಮ ಪಾಲಿಗೆ ಬಂದಿದೆ. ವಿಜಯವಿಠಲ ಪರಮಾತ್ಮನು ನಿನಗೆ **'ಗುರು ವಿಜಯವಿಠಲ'** ಎಂಬ ಅಂಕಿತವನ್ನು ಕರುಣಿಸಿದ್ದಾನೆ. ಚಕ್ರತೀರ್ಥದಲ್ಲೂ, ನವ ಬೃಂದಾವನದಲ್ಲೂ ಒಂದೊಂದು ಸಪ್ತಕ ಸೇವೆ ಮಾಡಿದರೆ, ನರಹರಿತೀರ್ಥರು, ವ್ಯಾಸರಾಯರು ಮೊದಲಾದ ಮಹಾಮುನಿಗಳ ದರ್ಶನಲಾಭ ನಿನಗಾಗುವುದು. ಅನಂತರ ಮಹಾರುದ್ರೋಪಾಸನೆ ಮಾಡಿದರೆ ಈ ಜನ್ಮದಲ್ಲೇ ನಿನಗೆ ಬಿಂಬಾಪರೋಕ್ಷವಾಗುವುದು. ನೀನು ಪ್ರಖ್ಯಾತ ಹರಿದಾಸನೆನಿಸುವೆ' ಎಂದು ಅನುಗ್ರಹಮಾಡಿ ಕಳುಹಿಸಿದರು. ಶೇಷಪ್ಪನು ಪರಮಾನಂದಭರಿತನಾಗಿ ಚಕ್ರತೀರ್ಥಕ್ಕೆ ಬಂದು, ಯಂತ್ರೋದ್ಧಾರಕ ಪ್ರಾಣಪತಿಯನ್ನು ಕೆಳಕಂಡ ದೇವರನಾಮದಿಂದ ಸ್ತೋತ್ರಮಾಡಿದನು. ಇದೇ ಶೇಷಪ್ಪನ ಮುಖದಿಂದ ಹೊರಟ ಮೊದಲ ದೇವರನಾಮ :—

ತೋಡಿ — ಆದಿತಾಳ

ನಂಬಿದೆ ನಿನ್ನ ಪಾದ ಮುಖ್ಯಪ್ರಾಣ ಪ.
ನಂಬಿದೆ ನಿನ್ನ ಪಾದ ಡಂಭವ ತೊಲಗಿಸು ।
ಡಿಂಬದೊಳಗೆ ಹರಿಯ । ಬಿಂಬ ಪೊಳೆವಂತೆ ಮಾಡಿ ಅ.

ಅಂತರಂಗದ ಉಸುರ । ಹೊರಗೆ ನೂಕಿ ಅಂತರಂಗಕ್ಕೆ ಸೇದುವ ।
ಪಂಥದಾಳು ನೀನೆ । ಕಂತುಜನಕನಲ್ಲಿ
ಮಂತ್ರಿಯೆನಿಸಿ, ಸರು । ವಾಂತರಯಾಮಿಯಾಗಿ ॥

ಇಂತು ನಾನಾಬಗೆ ತಂತುವ ನಡೆಸುವ
ಹೊಂತಕಾರಿ ಗುಣ । ವಂತ ಬಲಾಢ್ಯ ೧

ಇಪ್ಪತ್ತುಒಂದು ಸಾವಿರ । ಐದೊಂದುನೂರ
ಅಪ್ರತಿ ಹಂಸಮಂತ್ರಾ ॥
ತಪ್ಪದೆ ದಿನದಿನ ಒಪ್ಪದಿಂದಲಿ ಜಪಿಸಿ
ತಪ್ಪಿಸಿ ಭವವ ಸ । ಮಿಪ್ಪದ ಜೀವರಿಗೆ ॥

ಅಪ್ಪನಂದದಿ ಪುಣ್ಯ । ಬಪ್ಪಂತೆ ಕರುಣಿಸು
ಕಪ್ಪುವರ್ಣನ ಕೂ । ಡೊಪ್ಪಿಸಿ ಪಾಲಿಸು ೨

ಹತ್ತೇಳು ಎರಡಯುತ | ನಾಡಿಗಳಲ್ಲಿ
ಸುತ್ತಿ ಸುತ್ತುವ ಮಾರುತ ||
ಉತ್ತರ ಲಾಲಿಸು | ಉತ್ಕ್ರಮಣದಲ್ಲಿ
ನೆತ್ತಿಯ ದ್ವಾರದಿಂದ | ಲೆತ್ತ ಪ್ರೋಗಲೀಸದೆ ||

ತತ್ತ್ವವರೊಳು ಜೀ | ವೋತ್ತಮನೆ ಸಮ
ಚಿತ್ತ ಯನಗೆ ಕೊ | ಡುತ್ತ ಉದ್ಧರಿಸೋ ೩

ಪಂಚಪ್ರಾಣರೂಪನೆ | ಸತ್ವಶರೀರ
ಪಂಚೇಂದ್ರಿಯಗಳಪ್ಪನೆ ||
ಮುಂಚಿನ ಪರಮೇಷ್ಟಿ | ಸಂಚಿತಾಗಾಮಿ ಬಿಡಿಸಿ
ಕೊಂಚಮಾಡು ಪ್ರಾರಬ್ಧ | ವಂಚನೆಗೈಸದೆ ||

ಅಂಚಂಚಿಗೆ ಪರ | ಪಂಚಗಳೋಡಿಸಿ |
ಪಂಚವಕ್ತ್ರ ಹರಿ | ಮುಂಚದ ಗುರುವೇ || ೪

ಯೋಗಾಸನದೋಳಿಪ್ಪ | ಯುತ್ರೋದ್ಧಾರಕ |
ಭಾಗವತ ಜನರಪ್ಪ ||
ಯೋಗಿಗಳೀಶ ವ್ಯಾಸ | ಯೋಗಿಗೊಲಿದ ನ್ಯಾಸ |
ಶ್ರೀ ತುಂಗಭದ್ರವಾಸ | ಬಾಗುವೆ ಕೊಡು ಲೇಸ ||

ಶ್ರೀ ಗುರು ವಿಜಯವಿಠಲನ ಪಾದಕೆ |
ಬಾಗಿದ ಭವದೂರ ಜಾಗರ ಮೂರುತಿ || ೫

ಈ ಪದವು ಬಹು ಶಾಸ್ತ್ರಾರ್ಥಗರ್ಭಿತವಾಗಿದೆ. ಮೊದಲನೆಯ ಕವಿತೆಯಾದರೂ ವಿಜಯದಾಸರ ಕವಿತಾಶೈಲಿಯಂತೆ ನುರಿತ ಕವಿತೆಯಾಗಿದೆ. ಕಾಲ ತಾಳ ರಾಗ ವರ್ಣ ಮಟ್ಟುಗಳು ಬಲು ಪ್ರೌಢರೀತಿಯಲ್ಲಿದ್ದು, ಕೇಳುವವರಿಗೆ ಆನಂದದಾಯಕವಾಗಿದೆ. ಪದದ ಮಾತಿನ ರೀತಿಯನ್ನು ನೋಡಿದರೆ ಮಾರುತಿರಾಯನನ್ನು ಎದುರಿಗೆ ನಿಲ್ಲಿಸಿಕೊಂಡು ಹಾಡಿ ದಂತಿದೆ. ಈ ಪದವನ್ನು ಹಾಡಿದಾಗಿನಿಂದ ಶೇಷಪ್ಪನು ಶೇಷದಾಸರಾದನು.

ಮಹಾನುಭಾವರಾದ ಶೇಷದಾಸರಿಗೆ ಚಕ್ರತೀರ್ಥದಲ್ಲಿ ಮಾರುತಿಯ ಪುನ ರ್ದರ್ಶನವೂ, ನವಬೃಂದಾವನದಲ್ಲಿ ಚಂದ್ರಿಕಾಚಾರ್ಯರಾದಿಯಾದ ಮಹಾಮುನಿಗಳ ಪ್ರತ್ಯಕ್ಷ ದರ್ಶನವೂ ಆಯಿತು. ಅಷ್ಟೇ ಸಂಚಾರಮಾಡಿಕೊಂಡು ಬಂದ ಶೇಷದಾಸರಿಗೆ ಚಿಂತಲರೇವಲಕ್ಕೆ ಬಂದೊಡನೆ ಜನರು ನಡೆದುಕೊಳ್ಳುವ ಕ್ರಮವೇ ಬದಲಾಯಿತು–ಬೇರೆ ರೀತಿಯದಾಯಿತು. ದಾಸರ ಬಾಯಿಂದ ಹೊರಟ ಶಬ್ದಗಳು ಶಾಪಾನುಗ್ರಹಗಳಾದುವು. ಮಹಾರಾಣಿ ವೆಂಕಟಲಕ್ಷ್ಮಮ್ಮನು ತಾನಾಗಿ ದಾಸರ ದರ್ಶನಕ್ಕೆ ಬಂದು ಕುಶಲ ಪ್ರಶ್ನೆ ಮಾಡಿದಳು. ದಾಸರ ಬಿಡಾರವು ಮಠಪತಿಗಳ ಸಂಸ್ಥಾನದಂತಾಯಿತು. ದಿನವೂ ನೂರಾರು ಜನರು ಬರಬೇಕು. ಬಂದವರಿಗೆ ಮೃಷ್ಟಾನ್ನಭೋಜನವಾಗಬೇಕು. ಧನುರ್

ಶ್ರವಣವಾಗಬೇಕು. ನಾನು ಮುಂದು, ತಾನು ಮುಂದು ಎಂದು ಜನರು ಬೇಕಾದುದನ್ನು ತಂದುಕೊಡಬೇಕು. ಈ ರೀತಿಯೆಲ್ಲಾ ನಡೆಯಲಾರಂಭವಾಯಿತು. ದಿವಾನ ಗೋವಿಂದ ರಾಯ, ಖಜಾನೆದಾರ ಶ್ರೀನಿವಾಸರಾಯರಂಥಾ ದೊಡ್ಡ ಗೃಹಸ್ಥರುಗಳು ಶಿಷ್ಯರಾದರು. ನಡೆಯಿತು ವೈಭವ !

"ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ !

— ೨ —

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥ vii-೩ ಗೀತಾ.

ಪರಮಾತ್ಮನು ವಿಚಿತ್ರ ವಿಶ್ವಸೃಷ್ಟಿಯಲ್ಲಿ ಜೀವರಾಶಿಗಳು ಮಾನವ ಜನ್ಮಕ್ಕೆ ಬರಲಿಕ್ಕೆ ಕೋಟ್ಯಾವಧಿ ವರ್ಷಗಳು ಕಳೆದು ಹೋಗುವುವು. ಸ್ಥಾವರಗಳಿಂದ ಜಂಗಮ—ಜಂತು ವರ್ಗಕ್ಕೆ ಬಂದಮೇಲೆ ಎಷ್ಟೋ ಜನ್ಮಗಳು—ಎಷ್ಟೋ ಅನುಭವಗಳನ್ನು ಪಡೆದು ಕೊಂಡು ಜೀವಿಯು ಮಾನವನಾಗುವನು. ಪೂರ್ವ ಸಂಸ್ಕಾರಗಳು ಬಲವತ್ತರವಾಗಿರುವುದರಿಂದ ಮಾನವನಾದರೂ ಅವನ ಪಶುಸ್ವಭಾವವು ಅನೇಕ ಜನ್ಮಗಳನ್ನೆತ್ತಿದ ವಿನಾ ಹೋಗುವುದಿಲ್ಲ. ಜೀವಿಯು ಉತ್ತಮ ಸಂಸ್ಕಾರ ಸನ್ನಿವೇಶಗಳಿರುವ ಜನ್ಮದಲ್ಲಿ ಬಂದಾಗ, ನಾನ್ಯಾರು, ನನ್ನ ಹಿಂದಿನ ವೃತ್ತಾಂತವೇನು, ನನ್ನ ಭವಿತವ್ಯತೆಯೇನು, ನನ್ನ ಅಪೂರ್ಣತೆಗಳು ಪೂರ್ಣತೆಯನ್ನು ಹೊಂದುವ ಬಗೆ ಹೇಗೆ ? ಎಂಬ ವಿಚಾರಗಳಲ್ಲಿ ಮಗ್ನನಾಗುವನು. ಈ ವಿಚಾರಗಳ ಸೆಳೆತದಲ್ಲಿ ಸಿಕ್ಕಿದಾಗ ಕಳೆದುಹೋಗುವ ಜನ್ಮಗಳಿಗೆ ಕೊನೆಮೊದಲಿರುವುದಿಲ್ಲ. ಮೊದಮೊದಲು ಮಾನವನು ಇಂದ್ರಿಯಗೋಚರ ವಿಷಯಗಳನ್ನು ಮಾತ್ರ ನಂಬುವನು. ಅತೀಂದ್ರಿಯವಸ್ತುಜ್ಞಾನ ಮಾಡಿಕೊಳ್ಳಬೇಕೆಂದು ಅವನು ಪ್ರಯತ್ನ ಪಟ್ಟಾಗ ಮಾರ್ಗತಪ್ಪಿದನೆಂದರೆ, ಅದರಿಂದ ಸಹ ಬಹು ಜನ್ಮಗಳು ವ್ಯರ್ಥ ಕಳೆದು ಹೋಗುವುವು. ಅನಂತವಾದ ಕಾಲದಲ್ಲಿ ಕಳೆದುಹೋದ ಕಾಲವ್ಯಾವುದು, ಉಳಿದಿರುವ ಕಾಲವ್ಯಾವುದು ಎಂಬ ವಿಚಾರಗಳಿಗೆ ಎಡೆಯಿರುವುದಿಲ್ಲ. ಸುಕೃತವಶಾತ್ ಸರಿಯಾದ ಮಾರ್ಗದರ್ಶಿಗಳು ದೊರೆತರೆ ಅವನ ಉದ್ಯಮವು ಸಫಲವಾಗುವುದು. ಆದ್ದರಿಂದಲೇ ಶ್ರೀಕೃಷ್ಣಪರಮಾತ್ಮನು ಅನೇಕ ಸಹಸ್ರಮಾನವರಲ್ಲಿ ಯಾವನಾದರೊಬ್ಬನು ಸಿದ್ಧಿಯನ್ನು ಪಡೆಯಬೇಕೆಂದು ಯತ್ನಿಸುವನು. ಹಾಗೆ ಸಿದ್ಧಿ ಹೊಂದಿದ ಸಾವಿರಾರು ಜನರಲ್ಲಿ ಯಾವನೋ ಓರ್ವನು ನನ್ನನ್ನು ತತ್ವತಃ ತಿಳಿಯುವನು ಎಂಬರ್ಥವನ್ನು ಮೇಲ್ಕಂಡ ಶ್ಲೋಕದಿಂದ ಅರ್ಜುನನಿಗೆ ಉಪದೇಶಮಾಡಿರುವನು.

ಪರಮಾತ್ಮನ ದಶಾವತಾರ ಚರಿತ್ರೆಯನ್ನು ತಾತ್ವಿಕ ದೃಷ್ಟಿಯಿಂದ ವಿವೇಚಿಸುವುದಾದರೆ ಒಂದೊಂದು ಅವತಾರಗಳಿಗೆ ಅಂತರವಿರುವಷ್ಟು ಕಾಲವೇ ಜೀವನಿಗೆ ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಬರಲು ಬೇಕಾಗುವುದೆಂದು ಗೊತ್ತಾಗುವುದು. ಮಾನವತ್ವದ ಬೆಳವಣಿಗೆಯನ್ನು ವಾಮನ ಭಾರ್ಗವರಾಮ ಕೃಷ್ಣ ಬುದ್ಧ ಎಂಬ ಐದು

ಅವತಾರಗಳಲ್ಲಿ ತೋರಿಸುವುದು ಬಲು ಅರ್ಥವತ್ತಾಗಿರುವುದು. ಮಾನವತ್ವದ ಪರಿಪೂರ್ಣತೆಯನ್ನು ತೋರಿಸಿದ ರಾಮಾವತಾರಕ್ಕೂ ಅತಿಮಾನವತ್ವದ ಲಕ್ಷಣವನ್ನು ತೋರಿಸಿದ ಕೃಷ್ಣಾವತಾರಕ್ಕೂ ಇರುವ ಕಾಲದ ಅಂತರವೇ ಮಾನವನು ಅತಿಮಾನವ(Superman)ನಾಗಲು ಬೇಕಾಗುವುದು. ಆಗಲೇ ಅವನನ್ನು ಜನರು ಯೋಗೀಶ್ವರನೆನ್ನುವರು. ವೇದಾಂತಿಯೆನ್ನುವರು. ಇಷ್ಟಾದರೂ ಯೋಗಿಯು ತ್ಯಾಗಿಯಾಗಲು ಕೃಷ್ಣ ಬುದ್ಧಾವತಾರಗಳಷ್ಟು ಅಂತರದ ಕಾಲ ಬೇಕಾಗುವುದು. ಅಂದ ಮಾತ್ರಕ್ಕೇ–ದಶಾವತಾರತ್ವವನ್ನು ಅಪಾರ್ಥಮಾಡಿಕೊಳ್ಳಲು ಕಾರಣವಿಲ್ಲ. ಪರಮಾತ್ಮನೂ ಈ ರೀತಿ ಜನ್ಮ ಪರಂಪರೆಗಳಲ್ಲಿ ಸಿಲುಕಿ ಪೂರ್ಣತೆಯನ್ನು ಪಡೆಯಬೇಕಾಯಿತೇ ಎಂದು ಅಪಾರ್ಥಮಾಡಿಕೊಳ್ಳಬಾರದು. ಪರಮಾತ್ಮನು ಪರಿಪೂರ್ಣನು, ಸರ್ವಜ್ಞನು, ಜನ್ಮಾದಿ ಬಂಧರಹಿತನು. ಲೋಕದ ಜನರ ಉದ್ಧಾರಾರ್ಥವಾಗಿ ಈ ರೀತಿ ಅವತರಿಸಿ ಮಾರ್ಗ ತೋರಿಸಿರುವನು ಮಾತ್ರ. ಇಂಥ ಸಂಶಯವೇ ಬಂದ ಸಂದರ್ಭದಲ್ಲಿ, ಸ್ವಾಮಿಯು ಅರ್ಜುನನಿಗೆ ಉಪದೇಶಿಸಿದ ಮಾತುಗಳನ್ನು ಕೇಳಿದರೆ ಸಂಶಯ ಪರಿಹಾರವಾಗುವುದು :—

> ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ ।
> **ತಾನ್ಯಹಂ ವೇದ ಸರ್ವಾಣಿ** ನತ್ವಂ ವೇತ್ಥ ಪರಂತಪ ॥
>
> ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।
> **ಪ್ರಕೃತಿಂಸ್ವಾಮಧಿಷ್ಠಾಯ** ಸಂಭವಾಮ್ಯಾತ್ಮಮಾಯಯಾ ॥ ೬
>
> ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ೭
>
> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
> ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥ ೮
>
> ಜನ್ಮಕರ್ಮ ಚ ಮೇ ದಿವ್ಯಂ ಏವಂ ಯೋವೇತ್ತಿ ತತ್ವತಃ ।
> ತ್ಯಕ್ತ್ವಾದೇಹಂ ಪುನರ್ಜನ್ಮನೈತಿಮಾಮೇತಿ ಸೋಽರ್ಜುನ ॥ ೯

ಹೀಗೆ ಜನ್ಮಪರಂಪರೆಗಳಲ್ಲಿ ಬಂದು ಸಿದ್ಧಿಹೊಂದಿದ ಮಾನವರು, ಎಷ್ಟೋಕಾಲಗಳಿಗೊಮ್ಮೆ ಎಷ್ಟೋ ಕೋಟಿ ಜನಗಳ ಮಧ್ಯದಲ್ಲಿ ದೃಗ್ಗೋಚರರಾಗುವರು. ಅವರು ಜೀವನದ ಆದರ್ಶವನ್ನು ತೋರಿಸಿ ಬಹು ಸಂಖ್ಯಾಕ ಜನರಿಗೆ ಮಾರ್ಗದರ್ಶಿಗಳಾಗುವರು 'ಗಾಳಿ ಬಂದಾಗಲೇ ತೂರಿಕೊಳ್ಳಿರೋ । ನಾಳೆಯೆನ್ನಬೇಡಿ, ಇವೇ ವೇಳೆ ಕಾಣಿರೋ' ಎಂಬ ಶ್ರೀ ಪುರಂದರದಾಸಾರ್ಯರ ಉಕ್ತಿಯಂತೆ, ಅಂಥವರು ಬಂದ ಸಮಯದಲ್ಲಿ ಅನೇಕ ಅಪಕ್ವ ಜೀವರು, ಅವರ ಅನುಕಂಪದಿಂದ ಪರಿಪಕ್ವ ದೆಸೆಗೆ ಬಂದು ಜನ್ಮ ಬಂಧನದಿಂದ ದೂರಾಗುವರು.

ಹಿಂದೆ ವೈಕುಂಠದಾಸರಾಗಿದ್ದವರೇ ಅನಂತರ ಸಂಗನಾಮದ ತಿಮ್ಮಣ್ಣಯ್ಯನವರಾಗಿದ್ದು, ಈಗ ಶೇಷದಾಸರಾಗಿ ಬಿಂಬಾಪರೋಕ್ಷವನ್ನು ಪಡೆಯಲು ಸಾಧನೆಮಾಡುತ್ತಿರು

ವರು. ಬಿಂಬಾಪರೋಕ್ಷಕ್ಕೆ ಬಾಹ್ಯಾಪರೋಕ್ಷವು ಪ್ರಥಮ ಸೋಪಾನವಾಗಿರುವುದು. ಬಾಹ್ಯಾಪರೋಕ್ಷದೆಶೆಯಲ್ಲಿ ವಾಕ್ಸಿದ್ಧಿಯೇ ಮೊದಲಾದ ಅನೇಕ ಸಿದ್ಧಿಗಳುಂಟಾಗುವುವು. ಬಿಂಬಾಪರೋಕ್ಷವಾದ ಮೇಲಂತು, ಅವರ ಯೋಗ್ಯತೆಯು ಅನಂತ ಗುಣಾಧಿಕವಾಗಿ ಪರಿಣಮಿಸುವುದು.

ದಾಸರಿದ್ದ ಬಳಿಗೆ ಕಾಮ್ಯಾರ್ಥಿಗಳಾಗಿ ಜನರು ಬರುವುದು ಬಲವಾಯಿತು. ದಯಾಳುಗಳಾದ್ದರಿಂದ ಯಾರನ್ನು ತಿರಸ್ಕರಿಸುವುದೂ ಅವರಿಗೆ ದುಸ್ಸಾಧ್ಯವಾಯಿತು. ಯಂತ್ರ ಪ್ರದಾನದಿಂದಲೂ, ಅಭಿಮಂತ್ರಿತ ಫಲದಾನದಿಂದಲೂ, ಸಂತಾನಾರ್ಥಿಗಳು ಸಂತತಿಯನ್ನು ಪಡೆದರು. ದಾಸರು ಸ್ನಾನಮಾಡಿದ ಸ್ಥಳದ ಮೃತ್ತಿಕೆಯ ಲೇಪನದಿಂದ ಅನೇಕರ ಕುಷ್ಠಾದಿರೋಗಗಳು ಪರಿಹಾರವಾದವು. ಸೇವಾರೂಪವಾಗಿ ಶಾಲು ಪೀತಾಂಬರಗಳು ಮುತ್ತಿನಕಂಠಿ ಮೊದಲಾದ ಆಭರಣಗಳೂ ಅಗಣಿತವಾಗಿ ಬರಲಾರಂಭವಾದವು. ಇದೆಲ್ಲವನ್ನೂ ನೋಡಿ ದಾಸರು ಹೆದರಿದರು. ಏಕಾಂತ ಸ್ಥಳದಲ್ಲಿದ್ದು ತಪಸ್ಸುಮಾಡಬೇಕೆಂದು ಬಯಸಿದರು. 'ದೇವ-ನಿನ್ನ ಅಂಗಡಿಯನ್ನು ನಿನಗೇ ಒಪ್ಪಿಸುವೆನು, ನನ್ನನ್ನು ಬಿಡುಗಡೆಮಾಡು' ಎಂದು ಪ್ರಾಣರಾಯನ ಮೊರೆಬಿದ್ದರು. ಭಕ್ತಾನುಕಂಪಿಯಾದ ಮಾರುತಿರಾಯನು,-'ಇನ್ನು ಮುಂದೆ, ಮೊದಲುಕಲ್ಲಿನಲ್ಲಿ ಏಕಾಂತ ತಪಶ್ಚರ್ಯದಲ್ಲಿದ್ದು ಇಷ್ಟಾರ್ಥವನ್ನು ಪಡೆ'ಯೆಂದು ಆಜ್ಞೆಗೈದನು. ಚಿಂತಲರೇವಿನಿಂದ ಮೊದಲುಕಲ್ಲಿಗೆ ಪ್ರಯಾಣ ಮಾಡುವಾಗ ಕೆಳಕಂಡ ಸುಳಾದಿಯಿಂದ-ದಾಸರು ಪ್ರಾಣಪತಿಯನ್ನು ಸ್ತೋತ್ರಮಾಡಿದರು.

ಸುಳಾದಿ

ಧ್ರುವತಾಳ

ಘನದಯಾನಿಧಿಯಾದ ಪವನರಾಯನೆ ನಮೊ। ಪುನರಪಿ ನಮೋ ನಿನ್ನ ಪಾದ ಸರಸೀರುಹಕೆ। ಮಣಿದು ಬೇಡಿಕೊಂಬೆ ನೀನೇ ಗತಿಯೆಂದು। ನಿನಗಿಂತ ಹಿತರ್ಯಾರೋ ಜೀವನಕೆ। ಸನಕಾದಿವಂದ್ಯನ ಆಜ್ಞೆಯಿಂದಲಿ ಪರ। ಮಾಣು ಜೀವಿಗಳಲ್ಲಿ ವ್ಯಾಪ್ತನಾಗಿ ಬಿಡದೆ। ಅಣುರೂಪಗಳಿಂದ ನಿಂದು ಮಾಡಿದ ಕ್ರಿಯ। ಮನಸಿಜ ವೈರಿಯಿಂದ ತಿಳಿಯಲೊಶವೆ। ಹೀನ ಮನಸಿನಿಂದ ಜಪ್ಪನಾವನ ನಾನು। ಗುಣರೂಪಕ್ರಿಯಗಳ ವಿದಿತ ನೀನು। ತನುವಿನೊಳಗೆ ಮೂರು ಕೋಟ್ಯಧಿಕ ಎಪ್ಪತ್ತೆರಡು। ಎನಿಪ ಸಾಸಿರ ರೂಪದಿಂದ ಸತಿಯ ಸಹಿತ। ತೃಣ ಮೊದಲಾದ ಜೀವಪ್ರಕೃತಿ ಕಾಲಕರ್ಮ। ಅನುಸಾರವಾಗಿ ಕ್ರಿಯೆಗಳನೆ ಮಾಡಿ। ಅನಿಮಿತ್ತ ಬಾಂಧವನೆನಿಸಿ ಸಜ್ಜನರಿಗೆ। ಜ್ಞಾನ ಭಕ್ತ್ಯಾದಿಗಳ ನೀನೆ ಇತ್ತು। ಮನದಲ್ಲಿ ಹರಿರೂಪ ಸಂದರುಶನವಿತ್ತು। ಘನೀಭೂತವಾದ ಆನಂದದಿಂದ। ವಿನಯದಿಂದಲಿ ಜೀವರ ಪೊರೆವ ಉಪಕಾರ। ಮನು ಸ್ಮರಿಸಲಾಪೆನೆ ಎಂದಿಗು ಗುಣನಿಧಿಯೆ। ಇನಕೋಟಿತೇಜ **ಗುರು ವಿಜಯವಿಠಲರೇಯ**। ಇನಿತು ನಿನ್ನೊಳು ಲೀಲೆ ಮಾಳ್ಪ ಆವಾಕಾಲ ॥ ೧

ಮಟ್ಟತಾಳ

ಮಿನುಗುವ ಕಂಠದಲಿ ಎರಡು ದಳದ ಕಮಲ | ಕರ್ಣಿಕ ಮಧ್ಯದಲಿ ನೆಲೆಸಿರುತ ಲಿಪ್ಪು | ವನಜಾಸನನಿಡಿದು ತೃಣಜೀವರ ತನಕ | ತನುಗಳಿಗೆ ವಿಹಿತವಾದ ಶಬ್ದಗಳನ್ನು | ನೀನೇ ಮಾಡಿ ಅವರವರಿಗೆ ಉಣಿಸುತ್ತ | ಘನತೆಯನೆ ಇತ್ತು ಕಾಣಿಸಿಕೊಳ್ಳದಲೆ | ಮನುಜಾಧಮರಿಗೆ ಮಾಡುವ ಮೊಸಗಿಸಿ | ಕೊನೆಗಾಣದವರನ್ನು ನಿತ್ಯ ದುಃಖಗಳಿಂದ | ದಣಿಸುವೆ ಪ್ರಾಂತದಲಿ ಕೊನೆಮೊದಲಿಲ್ಲದಲೆ | ದನುಜಮರ್ದನ **ಗುರು ವಿಜಯವಿಠಲ** ರೇಯ | ನಿನಗಿತ್ತನೀಪರಿ ಸ್ವಾತಂತ್ರ್ಯ ಮಹಿಮೆಯನು ॥ ೨

ರೂಪಕತಾಳ

ನಾಸಿಕ ಎಡದಲ್ಲಿ ಭಾರತಿ ತಾನಘೋ | ಶ್ವಾಸ ಬಿಡಿಸುವಳು ನಿನ್ನಾಜ್ಞದಿ | ನಾಸಿಕ ಬಲದಲ್ಲಿ ಈಶಾನಾಜ್ಞದಿ ಊರ್ಧ್ವ | ಶ್ವಾಸ ಬಿಡಿಸಿ ಪೊರೆವೆ ಜೀವರನ್ನು | ತಾಸಿಗೊಂಭೈನೂರು ಕ್ರಮದಿ ಇಪ್ಪತ್ತೊಂದು | ಸಾವಿರದಾರ್ನೂರು ದಿನದಿನದಿ | ಘೋಷ ಶಬ್ದದಿಂದಲಿ ಹರಿಯನ್ನು ಪೂಜಿಸುವ | ಅಸೀತಿ ನಾಲಕ್ಕು ಲಕ್ಷ ಜೀವರಿಗೆ | ಲೇಸು ಮಿತ್ರಗಳನ್ನು ಅದರಂತೆ ನಿರ್ದೇಶ | ವಾಸಗೈಸುವೆ ನೀನೆ ಪ್ರಾಂತದಲಿ | ಈ ಸುಜ್ಞಾನದ ರೀತಿಯುಪಾಸನ ಮಾಳ್ಪರಿಗೆ | ಶ್ವಾಸ ಮಂತ್ರದ ಪುಣ್ಯ ಲೇಶವೀವೆ | ಕಾಸಿನಿಂದಲಿ ಕೋಟಿ ದ್ರವ್ಯ ಪ್ರಾಪ್ತದಂತೆ | ವಾಸುದೇವನು ಇದಕೆ ತುಷ್ಟನಾಗಿ | ಈ ಶರೀರದಿ ಪೊರೆವ ಕ್ಲೇಶ ಪರಿಹರಿಸ | ಈ ಸಂಜ್ಞೆಯಿಂದಲಿ ದಿವಿಜರೆಲ್ಲಾ | ದಾಸರಾಗಿಹರ್ಯಯ್ಯ ನಿನ್ನ ಪಾದವ ಬಿಡದೆ | ಕ್ಲೇಶ ಆನಂದಗಳೆಲ್ಲ ನಿನ್ನಾಧೀನ | ದೇಶ ಕಾಲ ಪೂರ್ಣ **ಗುರು ವಿಜಯವಿಠಲ** | ಭಾಸುರ ಜ್ಞಾನ ನಿನ್ನಿಂದಲೀವ ॥ ೩

ಝಂಪೆ ತಾಳ

ಪಂಚದ್ವಾರಗಳಲ್ಲಿ ಪಂಚರೂಪಗಳಿಂದ | ಪಂಚರೂಪನ ಧ್ಯಾನ ಮಾಳ್ಪ ನಿನ್ನ | ಪಂಚಮುಖ ಮೊದಲಾದ ಅಮರರೆಲ್ಲರು ನಿ | ಶ್ಚಂಚಲದಿ ಭಜಿಸುತಿಹ ಅನವರತ | ವಾಂಛಿತಂಗಳನಿತ್ತು ಪೊರೆವ ಮುಖ್ಯಪ್ರಾಣ | ಪಂಚೀಕರಣಕ್ಕೆ ಮುಖ್ಯನಾಗಿ ನೀನೆ | ಪಂಚರೂಪಗಳಿಂದ ಪಂಚಾಗ್ನಿಗತನಾಗಿ | ಪಂಚ ವ್ಯಾಪಾರಗಳ ಮಾಳ್ಪದೇವಾ | ಪಂಚದ್ವಾರದಲಿಪ್ಪ ಪಂಚಪಂಚಮರರು | ಸಂಚರಿಸುವರಯ್ಯ ನಿನ್ನಿಂದಲಿ | ಪಂಚಭೇದಗಳರುಹಿ ಶುದ್ಧ ಶಾಸ್ತ್ರಗಳಿಂದ ಪ್ರ | ಪಂಚವನು ಸಲಹುವ ಉಪಕಾರಿಯು ನೀ | ಕಿಂಚಿನರ ಪ್ರಿಯ **ಗುರು ವಿಜಯವಿಠಲ**ರೇಯ | ಮಿಂಚಿನಂದದಿ ಪೊಳೆಯುವಂತೆ ಮಾಡೋ ॥ ೪

ತ್ರಿಪುಟತಾಳ

ದಳ ಅಷ್ಟವುಳ್ಳ ರಕ್ತಾಂಬುಜದ ಮಧ್ಯ | ಪೊಳೆವ ಕರ್ಣಿಕೆಯಲ್ಲಿ ಶೋಭಿಸುವ | ಮೂಲೇಶನ ಪಾದ ಸಂತತವನ್ನೆ ನೀಡು | ಸಲೆ ಭಕುತಿಯಿಂದ ಪೂಜಿಸುವ ನಿನ್ನ ಚರಣ | ಮೂಲದಲ್ಲಿ ಜೀವ ಲಕ್ಷ್ಯಿಸಿ ಲಕ್ಷ್ಯನಾಗಿ | ಸ್ಥಳವ ನೀಡಿದ ಭಾವ ನಿನ್ನದಯ್ಯಾ | ಒಲ್ಲೆ

ನೆಂದರೆ ಬಿಡದು ಭಕತರ ಅಭಿಮಾನ । ಒಲಿದು ಪಾಲಿಸಬೇಕು ಘನಮಹಿಮ । ಖಳದರ್ಪ ಭಂಜನ **ಗುರು ವಿಜಯವಿಠಲ** । ಒಲಿವ ನಿನ್ನಯ ಕೃಪೆಗೆ ವಿಮಲಚರಿತ ॥ ೫

ಅಟ್ಟತಾಳ

ಜಾಗರ ಸ್ವಪ್ನ ಸುಷುಪ್ತಿಯಲ್ಲಿ ನೀನೇ । ಜಾಗರೂಕನಾಗಿ ಜೀವರ ಪಾಲಿಪೆ । ಭಾಗತ್ರಯದಲ್ಲಿ ವಿಭಾಗವ ಮಾಡುವೆ । ನಾಗಭೂಷಣಾದಿ ಸುರರಿಗೆ ಜೀವನ । ಸಾಗರ ಮೊದಲಾದ ಸಕಲದರಲಿ ವ್ಯಾಪ್ತ । ನಾಗರಾಜನ ಅಂಗುಟದಿ ಮಾಟದ ಶಕ್ತ । ಯುಗಾದಿಕೃತನಾಮ **ಗುರು ವಿಜಯವಿಠಲನ** । ಯೋಗವ ಪಾಲಿಸಿ ಭವದೂರ ಮಾಡುವದು ॥ ೬

ಆದಿತಾಳ

ಅಸುರರ ಪುಣ್ಯವನು ಭಕತರಿಗಿತ್ತು ಅವ । ರ ಸಮೀಚೀನ ಕರ್ಮ ವನುಜರಿಗುಣಿಸುವೆ । ಈಶನೇ ಗತಿಯೆಂದು ನೆರೆನಂಬಿದವರಿಗೆ । ಸುಸಮೀಚೀನವಾದ ಮೋದಗಳೀವೆ ನಿತ್ಯ । ವಸುಧೆಯ ಭಾರವನು ಧರಿಸಿ ತ್ರಿಕೋಟಿಯ । ಸುಶರೀರಗಳಿಂದ ಬಹಿರಾವರಣದಲ್ಲಿ । ವಾಸವಾಗಿ ಭೂತಹೃತ್ಕಮಲದಲಿ ನಿಂದು । ಬಿಸಜಾಂಡವನು ಪೊರೆವ ಕರುಣಿ ನೀನೆ । ಅಸಮ ನೆನಿಸುವ **ಗುರು ವಿಜಯವಿಠಲರೇಯ** । ವಶವಾಗುವನು ನಿನ್ನ ಕರುಣವಿದ್ದವನಿಗೆ ॥ ೭

ಜತೆ

ಹರಿಯ ವಿಹಾರಕ್ಕೆ ಆವಾಸನೆನಿಸುವೆ
ಗುರು ವಿಜಯವಿಠಲನ ಸುಪ್ರೀತಘನದೂತ

ಮೊದಲಕಲ್ಲು ದೇವಾಲಯದ ಪಕ್ಕದಲ್ಲಿ ಒಂದು ಪುರಾತನ ಶಿವಾಲಯವಿರುವುದು. ಅಲ್ಲಿರುವ ಲಿಂಗವನ್ನು ಕ್ಷೇತ್ರಕ್ಕೆ ಮೂಲಮೂರ್ತಿಯೆಂದು ಕರೆಯುವರು. ಆಲಯವು ಆಕಾರದಲ್ಲಿ ಒಬ್ಬಿಬ್ಬರ ವಿನಾ ಹೆಚ್ಚು ಜನರು ಪ್ರವೇಶಮಾಡಲಾರದಷ್ಟು ಚಿಕ್ಕದಾಗಿರುವುದು. ದಾಸರು ಮೊದಲಕಲ್ಲಿಗೆ ಬಂದವರು, ಈಗ ಛತ್ರವೆಂದು ಕರೆಸಿಕೊಳ್ಳುತ್ತಿರುವ ಶಿಲಾಮಂಟಪದ ಸ್ಥಾನದಲ್ಲಿದ್ದ ಮನೆಯಲ್ಲಿ ವಸತಿಮಾಡಿದರು. ರುದ್ರಾನುಗ್ರಹದಿಂದ ಬಿಂಬಾಪರೋಕ್ಷವಾಗುವುದೆಂದು ಹೇಳಿದ್ದ ವಿಜಯರಾಯರ ಆಜ್ಞಾನುಸಾರ ಮಹಾದೇವನನ್ನು ಕುರಿತು ತಪಸ್ಸಿಗಾರಂಭಿಸಿದರು. ಪಂಚಾಕ್ಷರೀಮಂತ್ರ ಪಾರಾಯಣಶೀಲರಾಗಿ ಉಗ್ರಮೂರ್ತಿಯಾದ ಮಹಾರುದ್ರದೇವರನ್ನು ಉಗ್ರತಪಸ್ಸಿನಿಂದಲೇ ಒಲಿಸುವೆನೆಂದು ತಪಗೈದರು. ಚಿಂತಲರೇವಿನಲ್ಲಿ ಬೇವಿನ ತೊಪ್ಪಲು ಅವರ ಆಹಾರವಾಗಿತ್ತಾದರೆ, ಮೊದಲಕಲ್ಲಿನಲ್ಲಿ ಬಿಲ್ವ ಪತ್ರೆಯೇ ಅವರ ಆಹಾರವಾಯಿತು. ಒಂದೊಂದುವೇಳೆ ದಿವಸಗಳು ಕಳೆದರೂ ದಾಸರು ಬಹಿರ್ಮುಖರಾಗುತ್ತಿದ್ದಿಲ್ಲ. ಆಲಯವಿರುವುದು ಕಾಡುಸ್ಥಳವಾಗಿರುವುದರಿಂದ ಅಲ್ಲಿ ಸರ್ಪಗಳು ಧಾರಾಳವಾಗಿ ಸಂಚರಿಸುತ್ತಿದ್ದುವು.

ಒಂದು ದಿನ ರಾತ್ರಿಯಾದರೂ ದಾಸರು ಬಹಿರ್ಮುಖರಾಗದಿರಲು, ತಿಮ್ಮಪ್ಪನು, ಇನ್ನೂ ಏಕೆ ಬರಲಿಲ್ಲವೆಂದು ಕರದೀಪ ತೆಗೆದುಕೊಂಡು ಗುಡಿಗೆ ಬಂದನು. ಅಲ್ಲಿ–ದೊಡ್ಡದೊಂದು ಸರ್ಪವು ದಾಸರ ಮೈಗೆ ಸುತ್ತಿಕೊಂಡು ಮಾಲಾಕಾರವಾಗಿರುವುದನ್ನು ಕಂಡು, ಗಾಬರಿಗೊಂಡು ದೂರದಲ್ಲಿ ನಿಂತನು. ಸ್ವಲ್ಪ ಹೊತ್ತಿನಮೇಲೆ ದಾಸರು ಆ ಸರ್ಪವನ್ನು ಮೈದಡವಿ ಕಳುಹಿಸಿ, ಸಮಾಧಿಯಿಂದೆದ್ದು ತಿಮ್ಮಪ್ಪನಿದ್ದ ಬಳಿಗೆ ಬಂದರು. ಅವನು ತಾನು ಕಂಡ ಸಂಗತಿಯನ್ನು ಹೇಳಲು ಬಾಯಿ ಬಾರದೆ,–'ದಾಸರೇ, ಇನ್ನು ಮೇಲೆ ರಾತ್ರಿಕಾಲದಲ್ಲಿ ಗುಡಿಯಲ್ಲಿರಬೇಡಿ; ಅಲ್ಲಿ ಸರ್ಪಗಳ ಸಂಚಾರವಿದೆಯೆಂದು ಹೇಳುತ್ತಾರೆ' ಎಂದನು. ದಾಸರು–'ಹೇಳುತ್ತಾರೆ ಕೇಳುತ್ತಾನೆ ಎಂದೇಕೆ ಸಂಕೋಚಪಟ್ಟು ನುಡಿಯುವೆ! ಕಂಡೆನೆಂದೇ ಹೇಳು, ಭಯವೇನು? ಕೇಳು ತಿಮ್ಮಪ್ಪಾ! ನಮ್ಮ ಆರಾಧ್ಯ ದೇವತೆಯು ಮಹಾದೇವರೆಂದು ಬಲ್ಲೆಯಷ್ಟೆ!' ಎಂದರು. ಮತ್ತೊಂದು ರಾತ್ರಿಯೂ ಅದಕ್ಕಿಂತ ಆಶ್ಚರ್ಯವಾದ ನೋಟವನ್ನು ನೋಡಿ, ತಿಮ್ಮಪ್ಪನು ಎದೆಗುಂದಿದನು. ಹುಲಿಯು ಗುಡಿಯ ಬಾಗಿಲಲ್ಲಿ ಬಂದು ಕುಳಿತಮೇಲೆ ಅದು ದಾಸರನ್ನು ಸುಮ್ಮನೆ ಬಿಡುವುದಿಲ್ಲ. ಅವರಾದರೋ ಕಣ್ಣು ಮುಚ್ಚಿ ಕುಳಿತರೆಂದರೆ, ದಿವಾರಾತ್ರಿಗಳನ್ನು ಗಣಿಸುವುದಿಲ್ಲ. ತಪಸ್ವಿಗಳಾದ ಮಾತ್ರಕ್ಕೇ ಹಾವು ಹುಲಿಗಳ ಸಂಗಡ ಸರಸವೇ? ಎಂದುಕೊಂಡು ದೂರದಲ್ಲಿ ಕತ್ತಲಲ್ಲಿ ನಿಂತುಕೊಂಡನು. ಬಹಿರ್ಮುಖರಾದ ದಾಸರು ಯಥಾಪ್ರಕಾರ ಸರ್ಪವನ್ನು ಮೈದಡವಿ ಕಳುಹಿಸಿ–ಹುಲಿಯ ಮೈಮೇಲೆ ಛಪ್ಪರಿಸಿ–'ಮೃಗರಾಜಾ ನಿನ್ನನ್ನು ಯಾರಾದರೂ ನೋಡಿ ಭಯಪಟ್ಟಾರು, ನೀನಿನ್ನು ಹೋಗು!' ಎಂದು ನುಡಿದು ಮನೆಯ ಕಡೆಗೆ ತಿರುಗಿದರು. ಹುಲಿಯು ಬಾಲವನ್ನಾಡಿಸುತ್ತಾ ಛಂಗನೆ ಲಂಘಿಸಿ ಅಡವಿಯನ್ನು ಸೇರಿತು. ತಿಮ್ಮಪ್ಪನು ದಾಸರು ಬಂದುದನ್ನು ಕಂಡು, ಛಳಿಬಂದವನಂತೆ ನಡುಗುತ್ತಾ,–'ದಾಸರೇ, ನೀವು ವಿಷಪರೀಕ್ಷೆಗೆ ಹೊರಟಂತೆ ಕಾಣುತ್ತದೆ. ಹೊಲ ಮನೆ ಹೆಂಡಿರು ಮಕ್ಕಳನ್ನು ತೊರೆದಂತೆ ದೇಹಾಭಿಮಾನವನ್ನೂ ಬಿಟ್ಟಂತೆ ಕಾಣುತ್ತದೆ. ನೀವೇನೇ ಹೇಳಿದರೂ ನನಗೆ ಬೇರೆ ಧೈರ್ಯ ಬರುವುದಿಲ್ಲ' ಎಂದು ನುಡಿದನು. ಆಗ ದಾಸರು–'ತಿಮ್ಮಪ್ಪ ನೀನು ಭಯಸ್ಥ ಮನುಷ್ಯ! ಇನ್ನುಮೇಲೆ ಸರಿರಾತ್ರಿಯಾದನಂತರ ಗುಡಿಗೆ ಬರಬೇಡ; ಅಪರರಾತ್ರಿಯಲ್ಲಿ ನಾನು ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ. ಇಷ್ಟುಮಾಡು ನಾಳಿನಿಂದ: ಅದೇನೆನ್ನುವಿಯೋ– ಒಂದು ಬಟ್ಟಲು ಹಾಲುಮಾತ್ರ ಸಂಧ್ಯಾಕಾಲದಲ್ಲಿ ತಂದಿಡು. ಅಷ್ಟುಸಾಕು' ಎಂದು ಧೈರ್ಯಹೇಳಿ, ಬೆಳಗಿನ ಝಾಮವಾಗುತ್ತಿದ್ದುದರಿಂದ ಪುಷ್ಕರಣಿಗೆ ಸ್ನಾನಕ್ಕೆ ಹೊರಟರು. ತಿಮ್ಮಪ್ಪನು ದೇವರ ಪಾತ್ರೆಗಳನ್ನೂ ಮಡಿ ಅಂಗವಸ್ತ್ರವನ್ನೂ ತೆಗೆದುಕೊಂಡು ಬಂದು–'ದಾಸರೇ, ಹುಲಿ ಏಕೆ ಬಂತು? ಅದರ ಮೈಮೇಲೆ ನೀವು ಹೇಗೆ ಧೈರ್ಯದಿಂದ ಛಪ್ಪರಿಸಿದಿರಿ? ಅದೆಲ್ಲವನ್ನೂ ನನಗೆ ತಿಳಿಯುವಂತೆ ಹೇಳಿರಿ' ಎಂದನು.

ದಾಸರು :—ತಿಮ್ಮಪ್ಪಾ, ಶಿವನು ಸರ್ಪಭೂಷಣನೆಂದು ಕೇಳಿ ಬಲ್ಲೆಯಷ್ಟೆ!

ತಿಮ್ಮಪ್ಪ :—ಕೇಳಿಬಲ್ಲೆ! ಆದರೆ ನಿಮ್ಮ ಕೊರಳಿಗೆ ಸರ್ಪವೇಕೆ ಸುತ್ತಿಕೊಳ್ಳಬೇಕು? ನಿಮಗೆ ಅದರಿಂದ ಭಯವಾಗುವುದಿಲ್ಲವೆ?

ದಾಸರು :—ಶಿವನನ್ನೇ ನಾವು ಒಲಿಸುವಾಗ, ಅವನ ಸರ್ಪ ಒಲಿಯುವುದಿಲ್ಲವೇ ನಮಗೆ ?

ತಿಮ್ಮಪ್ಪ :—ಹುಲಿಯೋ ?

ದಾಸರು :—ಶಿವನ ಹೆಂಡತಿಯು ಸಿಂಹವಾಹಿನಿಯೆಂದು ಕೇಳಿಬಲ್ಲೆಯಾ ?

ತಿಮ್ಮಪ್ಪ :—'ಸಿಂಹವಾಹಿನ್ಯೈ ನಮಃ' ಎಂದು ನಾಮಾವಳಿಯನ್ನು ಹೇಳಿದಾಗ ಕೇಳಿದ್ದೇನೆ.

ದಾಸರು :—ಸರಿ ; ಶಿವನಿದ್ದ ಬಳಿ, ಅವನ ಹೆಂಡತಿಯೂ ಬರಬೇಕಷ್ಟೆ ! ಬರುವಾಗ ಅವಳು ತನ್ನ ವಾಹನವೇರಿ ಬಂದರೆ ತಪ್ಪೇನು ?

ತಿಮ್ಮಪ್ಪ :—ಅವಳ ವಾಹನ ಸಿಂಹ-ಹುಲಿಯಲ್ಲ !

ದಾಸರು :—ನೀನು ನೋಡಿದ್ದು ಹುಲಿಯೋ ಸಿಂಹವೋ ಹತ್ತಿರ ಬಂದು ನೋಡಿದೆಯೇನು ?

ತಿಮ್ಮಪ್ಪ :—ಇಲ್ಲ.

ತಿಮ್ಮಪ್ಪನು, ಸರಳಸ್ವಭಾವದ ಏನೂ ತಿಳಿಯದ ಮನುಷ್ಯನು ! ದಾಸರಸೇವೆ ಮಾಡಿದರೆ ತನಗೆ ಸದ್ಗತಿಯಾಗುವುದೆಂದು ನಂಬಿ ಅವರನ್ನು ಆಶ್ರಯಿಸಿರುವವನು. ಮನೆಯ ಆಡಳಿತವನ್ನು ಮಗನಿಗೆ ಒಪ್ಪಿಸಿ, ಬಂದವನಾಗಿದ್ದುದರಿಂದ ಅವನಿಗೆ ದಾಸರ ಸೇವೆ ಮಾಡುವುದರ ವಿನಾ ಬೇರೊಂದು ಕೆಲಸವಿರಲಿಲ್ಲ. ಅವನೊಡನೆ ಸನ್ನೆಯಿಂದ ಮಾತನಾಡುತ್ತಿದ್ದ ದಾಸರು ಬೇರೆ ಯಾರೊಡನೆಯೂ ಮಾತನ್ನಾಡುತ್ತಿರಲಿಲ್ಲ.

ಹೀಗೆ ಒಂದು ವರ್ಷ ಕಳೆದನಂತರ ದಾಸರು, ಒಂದು ದಿನ ತಿಮ್ಮಪ್ಪನನ್ನು ಸಂಬೋಧಿಸಿ, –'ಇವತ್ತು ನಾವು ಪಾರಣೆ ಮಾಡುವೆವು. ಅಡಿಗೆ ಮಾಡು' ಎಂದರು. ತಿಮ್ಮಪ್ಪನು ಸಂತೋಷದಿಂದ–'ನಿಮ್ಮ ತಪಸ್ಸು ಮುಗಿಯಿತೇನು? ದೇವರು ಒಲಿದನೇನು?' ಎಂದು ಕೇಳಿದನು. ದಾಸರು–'ಎಲ್ಲವೂ ಆಯಿತಪ್ಪಾ ! ನಿನ್ನ ದಯದಿಂದ' ಎಂದರು– 'ಹಾಗಿದ್ದರೆ, ಅಡಿಗೆ ಏನೇನು ಮಾಡಲಿ ?' ಎಂದು ತಿಮ್ಮಪ್ಪನು ಕೇಳಿದನು. ದಾಸರು– 'ಊರೊಳಗೆ ಹೋಗಿ ನಾನು ಊಟಮಾಡುವೆನೆಂದು ಹೇಳು ! ಯಾರಾದರೂ ಭಿಕ್ಷ ಕೊಟ್ಟರೆ ದೊರೆತದ್ದನ್ನು ತಂದು ಅಡಿಗೆ ಮಾಡು' ಎಂದರು. ಸಂತೋಷಭರಿತನಾದ ತಿಮ್ಮಪ್ಪನು–'ಇವತ್ತು ದಾಸರು ಪಾರಣೆಮಾಡುತ್ತಾರೆ. ಯಾರು ಯಾರು ಏನು ಭಿಕ್ಷ ಕೊಡುವಿರೋ ಕೊಡಿರಿ' ಎಂದು ಕೂಗುತ್ತಲೇ ಊರೊಳಕ್ಕೆ ನಡೆದನು. ಇಂತಹ ಸಮಯ ಬಂದೀತೇ ! ಎಂದು ಕಾದಿದ್ದ ಜನರು, ಆತನು ಹೋ[illegible]ದನ್ನು ಸಾಮಾನುಗಳನ್ನು ಕೊಟ್ಟು, ಕಳುಹಿಸಿದರು.

ದಾಸರ ಪಾರಣೆಯ ದಿವಸದಿಂದ ಮೊದಲಕಲ್ಲಿನಲ್ಲಿ ನಿತ್ಯ ಸಮಾರಾಧನೆಗೆ ಆರಂಭ ವಾಯಿತು. 'ದಾಸರು ಮೌನವ್ರತವನ್ನು ಮುಗಿಸಿದರಂತೆ ! ಜನರೊಡನೆ ಮಾತನಾಡುವ ರಂತೆ, ನಮ್ಮ ಇಷ್ಟಾರ್ಥಗಳನ್ನು ಪಡೆಯಲು ಇದೇ ಸಮಯ' ಎಂದು ಜನರು ಹತ್ತಿರದ-

ದೂರದ ಸ್ಥಳಗಳಿಂದ ಬರಲು ಪ್ರಾರಂಭಿಸಿದರು. ತಿಮ್ಮಪ್ಪನ ಸಂತೋಷಕ್ಕೆ ಮೇರೆಯಿಲ್ಲ ದಂತಾಯಿತು. ದಾಸರು ವಾಸಮಾಡಿದ ಸ್ಥಳದಲ್ಲಿ ಭಕ್ತ ಜನರು ಶಿಲಾಮಂಟಪವೊಂದನ್ನು ನಿರ್ಮಾಣಮಾಡಿದರು. ಏಕಾಂತದಲ್ಲಿ ಕೂಡಲಿಕ್ಕನುಕೂಲವಾಗುವಂತೆ ಮಂಟಪದ ಮೇಲ್ಭಾಗದಲ್ಲಿ ಒಂದು ಕೋಣೆಯನ್ನೂ ಕಟ್ಟಿದರು. ಆ ಮೇಲ್ಭಾಗದ ಕೋಣೆಗೆ ತಿಮ್ಮಪ್ಪನ ವಿನಾ ಮತ್ತೆ ಯಾರೂ ಪ್ರವೇಶಿಸುತ್ತಿರಲಿಲ್ಲ.

ದಾಸರು ಏಕಾಂತದಲ್ಲಿ ಕುಳಿತಾಗ ಮಾಡುತ್ತಿದ್ದ ಕೆಲಸವೆಂದರೆ, ವಿಜಯದಾಸರಿಂದ ರಚಿತವಾದ ಕಂಚಿನ ತಗಡಿನಲ್ಲಿ ಉತ್ಕೀರ್ಣವಾದ ಸುದರ್ಶನಚಕ್ರವನ್ನು (ಶ್ರೀ ಚಕ್ರದಂತಹ ಯಂತ್ರ) ಮುಂದಿಟ್ಟುಕೊಂಡು ಚಿಂತನೆಮಾಡುವುದು, ಜ್ಞಾನಾರ್ಜನೆಗಾಗಿ ಬಂದವರು ಯಾರಾದರೂ ಇದ್ದರೆ ಅವರನ್ನು ಮಾತ್ರ ಮೇಲಕ್ಕೆ ಬರಮಾಡಿಕೊಂಡು, ಬಿಂಬೋಪಾಸನಾಕ್ರಮವನ್ನು ಉಪದೇಶಿಸುವುದು. ಇಷ್ಟರ ವಿನಾ, ನೂರಾರು ಜನರು ಬರುವರಲ್ಲಾ, ಅವರ ಆದರಾತಿಥ್ಯ ನಡೆಯುವುದು ಹೇಗೆ? ಅಕ್ಕಿ ಬೆಲ್ಲ ತುಪ್ಪ ತೊಗರಿಬೇಳೆ ಇವೆಲ್ಲ ಎಲ್ಲಿಂದ ಬರಬೇಕು? ಹೇಗೆ ಬರಬೇಕು! ಈ ಮುಂತಾದ ಯೋಚನೆಗಳೇ ಅವರ ತಲೆಯಲ್ಲಿ ಬರಲಿಲ್ಲ. ಉಗ್ರಾಣಿ, ದೀವಟಿಗ, ಪಾಚಕ, ಪರಿಚಾರಕರುಗಳು ಜನ್ಮಾವಧಿ ಭಕ್ತಿಯಿಂದ ಸೇವೆಮಾಡಲು-ಬಂದೊದಗಿದರು. ಧನಧಾನ್ಯಗಳು ಊರೂರಿಂದ ಬರುವುದು ನಿತ್ಯನಿಧಿಯಾಗಿ ಹೋಯಿತು.–'ತಿರುಪತಿ ತಿಮ್ಮಪ್ಪನಿಗೆ ಹಾಕಿದ್ದ ಮುಡುಪನ್ನು ತಮಗೆ ಕೊಡುವಂತೆ ಸ್ವಪ್ನವಾಯಿತು. ಮುಡುಪು ತಂದಿದ್ದೇವೆ. ಸ್ವೀಕರಿಸಬೇಕು' ಎಂದು ಒಪ್ಪಿಸುವರು ಬರಲಾರಂಭಿಸಿದರು. ಗದ್ವಾಲದ ದಾಮೋದರದಾಸ್ ಶೇಟನೆಂಬ ಶ್ರೀಮಂತನು, ಗದಗು ಕೊಪ್ಪಳ ಪ್ರಾಂತಗಳಿಂದ ತಮಗೆ ಹುಂಡಿ ಬಂದಿದೆಯೆಂದು ಹಣವನ್ನು ಕಳುಹಿಸುತ್ತ ಬಂದನು. ತಿಂಗಳು ತಿಂಗಳಿಗೂ ಬರುವವರು ಸಾವಿರಾರು ಜನರು, ಬರುವುದು ಸಾವಿರಾರು ರೂಪಾಯಿ ಎಂಬಂತಾಯಿತು.

ಕಾಮಿತಾರ್ಥ ಪ್ರದಾಯಕರಾದ ಮಹಾದೇವರ ಪರಮಾನುಗ್ರಹವಾದ ಮೇಲೆ ಐಶ್ವರ್ಯಕ್ಕೆ ಕಡಮೆಯಲ್ಲಿ ಬಂತು! ಆ ದೇವರ ದೇವನ ಅನುಗ್ರಹವೇ ದಾಸರಿಗೆ ಬಿಂಬಾಪರೋಕ್ಷಕ್ಕೆ ಕಾರಣವಾದ ಮೇಲೆ ಅವರ ಮಹಿಮೆಗೆ ಕೊರತೆಯೆಲ್ಲಿಂದ ಬಂತು?

ಶ್ರೀಪದಾಸರ ಸುಳಾದಿಗಳನ್ನು ನೋಡಿದರೆ, ತಾವು ಅರ್ಜುನಾಂಶರೆಂದು ಹೇಳಿಕೊಂಡಿರುವ ಸ್ಪಷ್ಟೋಕ್ತಿಗಳಿವೆ. ಅರ್ಜುನನಾಗಿದ್ದಾಗ ಆಡಿದಾಡಿದ ಮಾತುಗಳು ನಾಯಕನನ್ನಗಲಿದ ನಾಯಿಕೆಯ ಪರಿಹಾಸದ ಮಾತುಗಳಂತಿವೆ. ಅವು ಮನಸ್ಸನ್ನು ಕರಗಿಸಿ, ದೇಹವನ್ನು ಜರ್ಝರಿತಮಾಡುವ ವಿನೋದಕರ ಮಾತುಗಳಾಗಿವೆ. ಭಕ್ತಿವಂತರಿಗೆ ಈ ಮಾತುಗಳು ಅಪ್ಯಾಯಮಾನವಾಗುತ್ತವೆ. ನೀರಸಹೃದಯರಿಗೆ ಅರ್ಥಹೀನವೆನಿಸುತ್ತವೆ. ಪುರಂದರದಾಸರಾದಿಯಾದ ಹಲವು ಹರಿದಾಸರೂ ತಮ್ಮ ಸ್ವರೂಪವಿಂಥಾದ್ದೆಂದು ಹೇಳಿಕೊಂಡಿರುವರೋ, ಇವರು ಮಾತ್ರ ಹೇಳಿಕೊಂಡಿರುವುದೋ, ಬಲುನೀಂಡ ಬೀದಿ ಗಂಡಿನಲ್ಲಿ ಅಡಗಿಕೊಂಡಿರುವ ಸ್ಥಿತಿಯನ್ನು ತೋರ್ಪಡಿಸುತ್ತವೆ.

ಇತಿಹಾಸಕಾಲದ ಭಕ್ತರ ಚರಿತ್ರೆಗಳನ್ನು ನೋಡಿದರೆ. ಅವರು ಇಂಥಿಂಥವರ

ಅವತಾರವೆಂದು ಹೇಳುವ ಆಪ್ತ ವಾಕ್ಯಗಳಿವೆ. ಆಪ್ತ ವಾಕ್ಯಗಳಿಗೆ ವಿಶ್ವಾಸವೇ ಕಾರಣ. ವಿಶ್ವಾಸವೇ ಪ್ರಮಾಣವೆನಿಸುವುದರಿಂದ ಅಲ್ಲಿ ತರ್ಕಕ್ಕೆ ದಾರಿಯಿರುವುದಿಲ್ಲ.

ಪರಮಾತ್ಮ ತತ್ತ್ವ ವಿಚಾರದಲ್ಲಿ ಅಂಶಿ-ಅಂಶಗಳ ವಿಷಯ, ಅಥವಾ ಗುಣಿ-ಗುಣಗಳ ವಿಷಯದಲ್ಲಿ ಶ್ರುತಿಪ್ರಮಾಣಬಲದಿಂದ ಸಿದ್ಧಾಂತಕಾರರು ಅತ್ಯಂತ ಅಭೇದವಿದೆಯೆಂದು ನಿರ್ಣಯಿಸಿರುತ್ತಾರೆ. ಮತಾಂತರದಲ್ಲಿ ಜಾತ್ಯಾ ಭೇದವಿದ್ದಾಗ್ಯೂ ಪರಿಮಾಣತಃ ಭೇದವಿರುವುದೆಂದು ಭಗವದವತಾರಗಳಿಗೆ ಸಹ ಪೂರ್ಣಾವತಾರ-ಅಂಶಾವತಾರಗಳ ತರತಮವನ್ನು ಕಟ್ಟುತ್ತಾರೆ. ಹೀಗಿರುವಲ್ಲಿ ಜೀವರ ವಿಷಯದಲ್ಲಿ ಅಂಶಿಯಲ್ಲಿರುವ ಪೂರ್ಣಪ್ರಭಾವವು ಅಂಶದಲ್ಲೂ ಇರುವುದೆಂದು ಹೇಳಲು ಅವಕಾಶವೇ ಇರುವುದಿಲ್ಲ. ಏಕೆಂದರೆ ಪರಮಾತ್ಮ ತತ್ತ್ವದಂತೆ ಜೀವತತ್ತ್ವವು ಪೂರ್ಣವಾದುದಲ್ಲ. ಅದು ವ್ಯಾಪಕವಾದುದಲ್ಲ. ಮತ್ತು ಅದಕ್ಕೆ ಸ್ವಾತಂತ್ರ್ಯ ಮೊದಲೇ ಇಲ್ಲ.

ಸೃಷ್ಟಿಯಲ್ಲಿ ಉಚ್ಚ ತರಗತಿಯ ಜೀವರಾಶಿಗಳು, ಅಪಕ್ವಜೀವರ ದೇಹಗಳನ್ನವಲಂಬಿಸಿ ಮಹತ್ಕಾರ್ಯಗಳನ್ನೆಸಗುತ್ತಾರೆ. ಶಾಸ್ತ್ರಕಾರರು ಇಂತಹ ಶರೀರಗಳನ್ನು ಜೀವದ್ವಯಾವೇಶ ಶರೀರಗಳೆನ್ನುತ್ತಾರೆ. ಪುರಾಣಕಾಲದಲ್ಲಿ ಇಂತಹ ಸಂದರ್ಭಗಳು ವಿಶೇಷವಾಗಿ ಬಂದಿವೆ. ಕಂಸ, ಶಿಶುಪಾಲ, ಅಕ್ರೂರ ಮೊದಲಾದವರು ಇದಕ್ಕೆ ಉದಾಹರಣೆಗಳಾಗಿದ್ದಾರೆ. ಇಂತಹ ಸಂದರ್ಭಗಳು ಇತಿಹಾಸ ಕಾಲದಲ್ಲೂ ಬಹಳವಾಗಿವೆ ಎನ್ನುವುದಕ್ಕೆ ಪ್ರಸಕ್ತ ಚರಿತ್ರೆಯ ಉದಾಹರಣೆ ಸಾಕಾಗಿದೆ. ದೇಹದ ಸರ್ವದ್ವಾರಗಳಲ್ಲೂ ಪ್ರಕಾಶವುಂಟಾಗಿ ಜ್ಞಾನವು ತಾನೇತಾನಾಗಿ ತಲೆದೋರಿದರೆ, ಸತ್ತ್ವಗುಣವು ಅಭಿವ್ಯಕ್ತಿಗೆ ಬಂದಿರುವುದೆಂದು ಗೊತ್ತಾಗುತ್ತದೆಯೆಂಬ ಗೀತೋಕ್ತಿಯಂತೆ, ಜೀವದ್ವಯಾವೇಶವುಳ್ಳ ದೇಹದಿಂದ ನಡೆಯುವ ವ್ಯಾಪಾರಗಳಲ್ಲಿ ಪಕ್ವ ಅಪಕ್ವ ಜೀವರು, ಮುಂದೆ ನಿಂತು ಮಾಡುವ ಕಾರ್ಯಗಳೂ ಗೊತ್ತಾಗುತ್ತವೆ. ಸಜಾತೀಯ ಜೀವರಾದರೆ, ಒಬ್ಬೊಬ್ಬರ ಕೃತಿಗಳು ಪರಸ್ಪರ ಸಹಾಯಕವಾಗಿ ದೇಹಿಗೆ ಕೀರ್ತಿಯುಂಟಾಗುತ್ತದೆ. ವಿಜಾತೀಯ ಜೀವರಾದರೆ, ಕೀರ್ತಿ ಅಪಕೀರ್ತಿಗಳಿಗೆ ಕಾರಣವಾದ ಪುಣ್ಯ ಪಾಪಗಳೆರಡೂ ನಡೆಯುತ್ತವೆ. ದೊಡ್ಡವರಲ್ಲಿ ದೋಷವೆಣಿಸುವುದು ನಮ್ಮ ಕೆಲಸವಲ್ಲವೆಂದು, ಅವರನ್ನು ಗುಣ ಪಕ್ಷಪಾತಿಗಳು ಪೂಜಿಸುತ್ತಾರೆ. ದೊಡ್ಡವರಾದ ಮಾತ್ರಕ್ಕೇ ತಪ್ಪು ಮಾಡಬಹುದೇ ಎಂದು ದೋಷವೆಣಿಸುವವರು ಅವರನ್ನು ಜರಿಯುತ್ತಾರೆ. ಅಪಕ್ವ ಜೀವರ ಜೊತೆಯಲ್ಲಿ ಪಕ್ವಜೀವರು ಒಂದು ದೇಹವನ್ನವಲಂಬಿಸಿ ಬರುವುದರಿಂದ ಅಪಕ್ವಜೀವರಿಗೆ ಮತ್ತು ಜನ್ಮಗಳನ್ನೆತ್ತುವ ಕಷ್ಟ ತಪ್ಪಿ ಸಹಾಯವಾಗುತ್ತದೆ. ಯಾವುದೋ ಕಾಲದ ಯಾವುದೋ ಜನ್ಮದ ಗುರುಶಿಷ್ಯಭಾವವಿದ್ದ ವಿನಾ ಇಂತಹ ಸಂದರ್ಭಗಳೊದಗುವುದಿಲ್ಲ. ಶಿಷ್ಯನಲ್ಲಿ ಗುರುವಿನ ಅನುಕಂಪವಿದ್ದ ವಿನಾ ಅಪಕ್ವಜೀವಿಯೊಡನೆ ಪಕ್ವಜೀವಿಯು ಒಂದು ದೇಹವನ್ನಾಶ್ರಯಿಸಿ ಬರುವುದಿಲ್ಲ. ಶೇಷದಾಸರಲ್ಲಿ ಆವಿಷ್ಟನಾಗಿರುವ ಅರ್ಜುನಾಂಶರಾದರೂ ಈ ಗುರುವಾಗಿದ್ದರೆ. ಅರ್ಜುನಾಂಶವೆಂದರೇ ಅರ್ಥಾತ್ ಇಂದ್ರಾಂಶವೆಂದಾಗುತ್ತದೆ. ಇಂದ್ರನಂಥಾ ಉಚ್ಚ ತರಗತಿಯ ಜೀವನು ಸ್ವಯಂ ಭೂಮಿಯಲ್ಲವತರಿಸಿದಾಗ ಅತಿ ಮಹತ್ತರ ಕಾರ್ಯ

ಗಳು ನಡೆಯುತ್ತವೆ. ಅಂಶತ್ವೇನ ಅವತರಿಸಿದಾಗ ಪ್ರಮಾಣವನುಸರಿಸಿ ಕಾರ್ಯಗಳಾಗುತ್ತವೆ. ಹಿಂದೆ ವೈಕುಂಠದಾಸರಾಗಿದ್ದಾಗ ಅರ್ಜುನಾಂಶವಿದ್ದು ನಡೆಸಿದ ಕಾರ್ಯಗಳಿಗೂ ಶೇಷದಾಸರಲ್ಲಿ ಅದೇ ಅಂಶವಿದ್ದು ನಡೆಸಿದ ಕಾರ್ಯಕ್ಕೂ ಬಹಳ ಅಂತರವಿದೆ. ಅದೇ ಜೀವನು ರಂಗನಾಮಕ ತಿಮ್ಮಣ್ಣ ವ್ಯಾಸರಾಗಿದ್ದಾಗ ಅರ್ಜುನಾಂಶವಿದ್ದ ಕುರುಹು ಕಂಡು ಬರುವುದಿಲ್ಲ. ಮತ್ತೆ ಶೇಷದಾಸರಾಗಿ ಆ ಜೀವನು ಅವತರಿಸಿದಾಗ ಅರ್ಜುನಾಂಶ ಸಹಿತವಾಗಿ ಬಂದ ಕಾರಣ ಬಿಂಬಾಪರೋಕ್ಷಕ್ಕೆ ವಿಜಯದಾಸರು ಕಾರಣರಾಗಲು ಅವಕಾಶ ತಪ್ಪಿ ಅವರ ಆಜ್ಞೆಯಿಂದಲೇ ಇಂದ್ರನ ಸ್ವರೂಪ ಗುರುವಾದ ಮಹಾದೇವನ ಉಪಾಸನೆ ಮಾಡಬೇಕಾಗಿ ಬಂದು ತನ್ಮೂಲಕ ಬೇಗನೆ ಬಿಂಬಾಪರೋಕ್ಷವಾಯಿತು.

ಮೇಲ್ಕಂಡ ವಿವರಗಳ ವಿಸ್ತಾರ ವರ್ಣನೆಯು ಅಷ್ಟು ಅವಶ್ಯವಾದುದಲ್ಲ. ಅವತಾರ ತತ್ತ್ವಗಳನ್ನು ನಂಬಲು ಬೇಸರಗೊಂಡ ಜನರಿಗೆ ಇವು ವಿಪರೀತ ವಿಚಾರಗಳೆನಿಸುವುದರಲ್ಲಿ ಸಂಶಯವಿಲ್ಲ. ಇದಕ್ಕೆ ದಾಸಕೂಟದ ಹೆಸರಿನಿಂದ ಕೆಲವರು ತಮ್ಮ ದೋಷಗಳನ್ನು ಜನರು ಎಣಿಸದೆ ಪೂಜಿಸಬೇಕೆಂಬ ದುರಾಸೆಯಿಂದ ಗ್ರಂಥಗಳನ್ನು ಮಾಡಿಕೊಂಡು ತಾವು ತಾವು ಇಂಥಿಂಥವರ ಅವತಾರವೆಂದು ಪ್ರಚಾರ ಮಾಡಿಕೊಳ್ಳುತ್ತಿರುವುದು ಕಾರಣ. ಹಾಗೂ ಮತ್ತೆ ಕೆಲವರು ಉನ್ನತ ಪದವಿಗೇರಿದವರಿಗೆಲ್ಲಾ ಅಂಶ ಆರೋಪಗಳನ್ನು ಕಟ್ಟಿ ಕರೆದಿರುವುದು ಕಾರಣ.

ಈ ಪ್ರಸ್ತಾಪಗಳನ್ನಿಲ್ಲಿಗೆ ಬಿಡೋಣ! ಹೂವಿನಿಂದ ನಾರು ಸ್ವರ್ಗಕ್ಕೇರಿದಂತೆ ಅರ್ಜುನಾಂಶವಿದ್ದ ಕಾರಣ ಶೇಷದಾಸರಂಥವರಿಗೆ ಮಹಾರುದ್ರದೇವರು ಗುರುಗಳಾಗಿ ದೊರೆತರು, ಅವರ ಮೂಲಕ ಬಿಂಬಾಪರೋಕ್ಷವಾದುದಕ್ಕೆ ಸಂತೋಷಪಡೋಣ! ಆ ಮಹನೀಯರ ಚರಿತ್ರೆ ಮುಂದೇನಿದೆಯೆಂಬುದನ್ನು ಮುಂದಿನ ಪ್ರಕರಣದಲ್ಲಿ ನೋಡೋಣ!

— ೩ —

'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ'

ಎಂಬ ಶ್ರುತಿಪ್ರಮಾಣದಂತೆ ಶೇಷದಾಸರು ಶ್ರವಣಮನನ ನಿದಿಧ್ಯಾಸನಾದಿ ಸಾಧನೆಗಳಿಂದ ಆತ್ಮಸಾಕ್ಷಾತ್ಕಾರ ಪಡೆದುಕೊಂಡರು. ಯಾವುದೊಂದು ವಸ್ತುವನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವುದೋ ಅಂಥಾ ಬ್ರಹ್ಮವಸ್ತುವನ್ನು ತಿಳಿದರು. "ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ ಅಮೃತೋ ಭವತಿ ತೃಪ್ತೋ ಭವತಿ" ಎಂಬಂತೆ ಸಿದ್ಧರಾದರು, ಅಮೃತರಾದರು, ತೃಪ್ತರಾದರು. "ಯತ್ಪ್ರಾಪ್ಯ ನ ಕಿಂಚಿದ್ವಾಂಛತಿ ನ ಶೋಚತಿ ನ ದ್ವೇಷ್ಟಿ ನ ರಮತೇ ನೋತ್ಸಾಹೀ ಭವತಿ" ಎಂಬಂತೆ, 'ಏನನ್ನೂ ಬಯಸುವುದಿಲ್ಲ, ದುಃಖಿಸುವುದಿಲ್ಲ, ದ್ವೇಷಿಸುವುದಿಲ್ಲ, ರಮಿಸುವುದಿಲ್ಲ, ಉತ್ಸಾಹಿತರಾಗುವುದಿಲ್ಲ' ಎಂಬಂಥ ಹಂತವನ್ನು ಸೇರಿದರು. "ಯಜ್ಜ್ಞಾತ್ವಾ ಮತ್ತೋ ಭವತಿ ಸ್ತಬ್ಧೋ ಭವತಿ ಆತ್ಮಾರಾಮೋ ಭವತಿ" ಎಂಬಂತೆ ಯಾವುದನ್ನು ತಿಳಿದು, ಮತ್ತರೂ, ಸ್ತಬ್ಧರೂ, ಆತ್ಮಾರಾಮರೂ ಆಗುವರೋ—ಹಾಗಾದಂತೆ ಆದರು.

ದಾಸರ ಸಾಧನೆಗಳೂ, ಸಿದ್ಧಿ ಪ್ರಸಿದ್ಧಿಗಳೂ ಏನೇ ಆದರೂ ಅವರ ಪತ್ನೀಪುತ್ರರಿಗೆ ಮಾತ್ರ ಮನಶ್ಶಾಂತಿಯನ್ನುಂಟುಮಾಡಲಿಲ್ಲ. ಮತ್ತೆ ಪ್ರಯತ್ನಮಾಡಿ ದಾಸರನ್ನು ದರೂರಿಗೆ ಕರೆದುಕೊಂಡು ಹೋಗಬೇಕೆಂದು ಅವರು ಪುನಃ ಮೊದಲಕಲ್ಲಿಗೆ ಬಂದರು. ಸಮೀಪಕ್ಕೆ ಹೋಗಲು ಧೈರ್ಯಸಾಲದೆ ತಿಮ್ಮಪ್ಪನ ಮುಖೇನ ತಾವು ದರ್ಶನಾಭಿಲಾಷಿಗಳಾಗಿ ಬಂದಿರುವ ಸಂಗತಿಯನ್ನು ವಿಜ್ಞಾಪಿಸಿದರು. ದಾಸರು–'ಪತ್ನೀಪುತ್ರರನ್ನು ನೋಡದಿರಲು ನಾನೇನು ಸನ್ಯಾಸಿಯೇ ? ಅವರು ಅವಶ್ಯ ಬರಲಿ ! ಇಲ್ಲೇ ಇರಲಿ, ದೇಹಬಾಂಧವರಾದ್ದರಿಂದ ಸೇವೆ ಮಾಡಲಿ, ಕರೆಯಿರಿ' ಎಂದರು. ತಿಮ್ಮಪ್ಪನನ್ನು ಮುಂದುಮಾಡಿಕೊಂಡು ಬಂದವರು ದರೂರಿಗೆ ಬರಬೇಕೆಂಬ ತಮ್ಮ ಹಾಡನ್ನು ಹಾಡಿದರು. ನಾವಿದ್ದ ಬಳಿಯಲ್ಲಿರುವುದು ನಿಮ್ಮ ಮುಖ್ಯ ಬಯಕೆಯಾದ್ದರಿಂದ ನೀವು ಇಲ್ಲೇ ಇದ್ದರಾಯಿತೆಂದೂ ಸ್ಥಳದ ಅಭಿಮಾನ ಹೊಲ ಮನೆಗಳ ಅಭಿಮಾನಗಳನ್ನು ಬಿಟ್ಟರಾಯಿತೆಂದೂ ಅವರನ್ನು ಸಮಾಧಾನಗೊಳಿಸಿ ನಿಲ್ಲಿಸಿಕೊಂಡರು.

ಈ ಕಾಲದಲ್ಲಿ ದಿವಾನ ಗೋವಿಂದರಾಯನೂ, ಖಜಾನೆದಾರ ಶ್ರೀನಿವಾಸರಾಯನೂ ಇನ್ನೂ ಭೀಮಣ್ಣ ಮೊದಲಾದ ಗೃಹಸ್ಥರುಗಳೂ ಆಗಾಗ ದಾಸರ ಬಳಿಗೆ ಬಂದು ಹೋಗುತ್ತಾ ಅವರ ಅನುಗ್ರಹಕ್ಕೆ ಸಂಪೂರ್ಣ ಪಾತ್ರರಾದರು. ಸೋಮಭೂಪಾಲನು ದುಷ್ಟ ಸೇವಕರ ಪಿತೂರಿಯಿಂದ ಮಡಿದ ಕಾರಣ, ವೆಂಕಟಲಕ್ಷ್ಮಮ್ಮರಾಣಿಯು ಸ್ವಯಂ ರಾಜ್ಯಾಧಿಕಾರ ವಹಿಸಿ ಗದ್ವಾಲ ಸಂಸ್ಥಾನಪಾಲಕಳಾದಳು. ಆಕೆಯ ಪ್ರಭುತ್ವವೆಂದರೆ ದೇವಾಲಯಗಳ ಜೀರ್ಣೋದ್ಧಾರ, ಸರ್ವದಾ ಸತ್ಕಥಾಶ್ರವಣ, ಸಜ್ಜನರ ಸೇವಾದಿಗಳಲ್ಲಿ ಕಳೆಯಿತು. ಮಹಾರಾಣಿಯು ಶೇಷದಾಸರಲ್ಲಿ ವಿಶೇಷ ಭಕ್ತಿಮಾಡುತ್ತಾ ಸಮಯ ದೊರೆತಾಗ ದಾಸರ ದರ್ಶನ ಮಾಡುತ್ತಿದ್ದಳೆಂದು ಮತ್ತೆ ಹೇಳಬೇಕಾದುದಿಲ್ಲ.

ಹೀಗಿರುವಲ್ಲಿ ಕಾಲಾಂತರದಲ್ಲಿ ಅವ್ವಲ್ ತಾಲ್ಲೂಕುದಾರಿ ಮತ್ತು ಸುಭಾದಾರಿಗಳನ್ನು ಮಾಡಿ ಮೊಖ್ತರ್‌ಜಂಗ್ ಎಂಬ ಪ್ರಸಿದ್ಧನಾಮದಿಂದ ಕರೆಸಿಕೊಂಡ ಆ ಕಾಲದಲ್ಲಿ ರಾಯಚೂರಿನಲ್ಲಿ ದುಯ್ಯಂ ತಾಲ್ಲೂಕುದಾರನಾಗಿದ್ದ ಮುಸಲ್ಮಾನ್ ಅಧಿಕಾರಿಯೊಬ್ಬನು, ಖಜಾನೇದಾರ ಶ್ರೀನಿವಾಸರಾಯನಿಂದ ಪ್ರೇರಿತನಾಗಿ, ಆತನನ್ನೂ ಜೊತೆಯಲ್ಲಿ ಕರೆದುಕೊಂಡು ದಾಸರ ದರ್ಶನಕ್ಕೆ ಬಂದನು. ಅಧಿಕಾರಿಗೆ ಬಾಲ್ಯದಲ್ಲೇ ರಾಜಾನುಗ್ರಹದಿಂದಾಗಿ ದೊಡ್ಡ ಪದವಿ ಪ್ರಾಪ್ತವಾಗಿದ್ದ ಕಾರಣ ದೊಡ್ಡ ಮನೆತನದ ಸುಂದರ ಯುವತಿಯೊಡನೆ ವಿವಾಹವಾಗಿತ್ತು. ಬಹಿರಂಗ ಭಾಗ್ಯ ಹೇಗಿದ್ದರೂ ಅಧಿಕಾರಿಯು ಬಲು ಖಿನ್ನನಾಗಿದ್ದನು. ವಿವಾಹವಾದ ದಿನದಿಂದ ಒಂದು ದಿನವಾದರೂ ಹೆಂಡತಿಯೊಡನೆ ಏಕಾಂತದಲ್ಲಿ ಕುಳಿತು ಅವನು ಮಾತಾಡಿರಲಿಲ್ಲ. ಸ್ವಯಂ ದುಶ್ಚರಿತ್ರನಾಗಿದ್ದನೆನ್ನಲು ನರ್ತಕಿಯರ ಗಾನನರ್ತನಗಳಿಗೆ ಸಹ ಅವನು ಹೋಗುತ್ತಿರಲಿಲ್ಲ. ಹೆಂಡತಿಯು ಸಚ್ಚರಿತ್ರಳೆಂಬ ವಿಷಯದಲ್ಲಿ ಅವನಿಗೆ ಲೇಶಮಾತ್ರವೂ ಸಂಶಯವಿರಲಿಲ್ಲ. ಶ್ರೀನಿವಾಸರಾಯನೊಬ್ಬನ ವಿನಾ ಮತ್ತ್ಯಾರಲ್ಲೂ ಆತನು ತನ್ನ ಅಂತರ್ದುಃಖಗಳನ್ನು ಹೇಳಿಕೊಂಡಿರಲಿಲ್ಲ. ದೇವರು ನನ್ನನ್ನೇಕೆ ಸೃಷ್ಟಿಮಾಡಿದನು ? ನಾನೇಕೆ ವಿವಾಹ ಮಾಡಿಕೊಂಡೆನು ? ಎಂಬುದರ ವಿನಾ

ಅನ್ಯ ಯೋಚನೆಗಳು ಅವನ ಮನಸ್ಸಿನಲ್ಲಿರಲಿಲ್ಲ. ಅವನ ಆ ವ್ಯಾಧಿ ವೈದ್ಯರಿಂದ ವಾಸಿಯಾಗುವಂತಾಗಿರಲಿಲ್ಲ. ಇಂಥವನು ದಾಸರ ಬಳಿಗೆ ಬಂದು ಏನು ಕೇಳಿಕೊಳ್ಳಬೇಕು? ಶ್ರೀನಿವಾಸರಾಯನಿಗೂ ಅಧಿಕಾರಿಯ ಮನೋರೋಗವನ್ನು ಕುರಿತು ದಾಸರಲ್ಲಿ ಏನೆಂದು ಹೇಳಬೇಕು!

ದಾಸರ ದರ್ಶನಕ್ಕೆ ತಾಲ್ಲೂಕುದಾರನು ಬಂದನೆಂದ ಕೂಡಲೇ ಎಲ್ಲರೂ ಅಲ್ಲಲ್ಲಿ ನಿಂತುಬಿಟ್ಟರು. ದಾಸರ ಏಕಾಂತ ಸ್ಥಳದಲ್ಲಿ ಮೂವರ ವಿನಾ ಮತ್ತಾರಿಗೆ ಪ್ರವೇಶವಿರಲಿಲ್ಲ. ತಾಲ್ಲೂಕುದಾರನು ಖುರ್ನಿಷ್ ಮಾಡಿ ಮುಸಲ್ಮಾನ ಪದ್ಧತಿಯಂತೆ ಕುಳಿತನು. ರಾಯನು ನಮಸ್ಕಾರ ಮಾಡಿ ಪದ್ಮಾಸನದಲ್ಲಿ ಕುಳಿತನು. ದಾಸರು ವ್ಯಾಘ್ರಾಸನದಲ್ಲಿ ಕುಳಿತು, ಉಭಯರಿಗೂ ಆಶೀರ್ವಾದ ಮಾಡಿ, ಕುಶಲಪ್ರಶ್ನೆ ಮಾಡಿದರು. 'ತಮ್ಮ ಅನುಗ್ರಹದಿಂದ ಕ್ಷೇಮ' ಎಂಬ ಒಂದೇ ಒಂದು ವಾಕ್ಯದ ವಿನಾ ಮುಂದೆ ಉಭಯರ ಬಾಯಿಂದಲೂ ಮಾತು ಹೊರಡಲಿಲ್ಲ. ಹೀಗೆ ಮೌನವಾಗಿ ಸ್ವಲ್ಪ ಹೊತ್ತು ಕಳೆದಮೇಲೆ ದಾಸರು–'ತಾಲ್ಲೂಕ್‌ದಾರ್ ಸಾಹೇಬರು ಬಲು ಖಿನ್ನರಾಗಿರುವಂತೆ ಕಾಣುತ್ತದೆ. ಇದಕ್ಕೆ ಈ ಜನ್ಮದ ಪಾಪ ಕಾರಣವಲ್ಲ, ಮಾತಾಪಿತೃಗಳು ಕಾರಣರಲ್ಲ. ಜನ್ಮಾಂತರದಲ್ಲಿ ಸೈನ್ಯಾಧಿಕಾರದಲ್ಲಿದ್ದು–ನೂರಾರು–ಸಾವಿರಾರು ಪ್ರಾಣಿಗಳ, (ಎತ್ತು–ಕುದುರೆಗಳು) ಪುಂಸ್ತ್ವಹರಣ (castration) ಮಾಡಿದುದರ ಪಾಪವಿದು. ಏನು ಮಾಡ್ಯಾರು? ಐಶ್ವರ್ಯವಿದೆ? ಅಧಿಕಾರವಿದೆ, ರೂಪವತಿಯಾದ ಹೆಂಡತಿಯುಂಟು. ಅವಳನ್ನು ಕಣ್ಣೆತ್ತಿ ನೋಡಲು ಮಾತ್ರ ಲಜ್ಜೆಯಾಗುತ್ತದೆ. ಅಲ್ಲವೇ ಶ್ರೀನಿವಾಸರಾಯಾ?

ರಾಯರು :—(ಬೆರಗು ಬಡೆದಂತಾಗಿ) ಅತ್ತಿತ್ತ ನೋಡುತ್ತಾ, ಹೌದು ಹೌದು! ದಾಸರಿಗೆ ತಿಳಿಯದ ಸಂಗತಿಯಿಲ್ಲ. ಅನುಗ್ರಹ ಮಾಡಬೇಕು!

ದಾಸರು :—ತಾಲ್ಲೂಕ್‌ದಾರರೇನೆನ್ನುವರು?

ತಾಲ್ಲೂಕ್‌ದಾರ :—(ಉರ್ದುವಿನಲ್ಲಿ) ಶ್ರೀನಿವಾಸರಾವ್ ಸಾಹೇಬರು ಹೇಳಿದ್ದು ಸತ್ಯ! ನನ್ನಮೇಲೆ ಅನುಗ್ರಹವಾಗಬೇಕು!

ದಾಸರು :—ದೇವರ ಅನುಗ್ರಹವಾಗುವುದು.

ತಾಲ್ಲೂಕುದಾರ ಸಾಹೇಬನು ಖುರ್ನಿಷ್‌ಮಾಡಿ, ದಾಸರ ಆಜ್ಞೆಯನ್ನು ಪಡೆದು, ತನಗಾಗಿ ಸಿದ್ಧಪಡಿಸಿದ್ದ ಬಿಡಾರದಲ್ಲಿ ವಿಶ್ರಮಿಸಿಕೊಂಡನು. ದಾಸರ ಭೋಜನಾನಂತರ ಕಳುಹಿಸಿಕೊಟ್ಟ ಪ್ರಸಾದವನ್ನು ಭುಜಿಸಿದನು, ದಾಸರು ಕಳುಹಿಸಿಕೊಟ್ಟ ಮಂತ್ರ ಪೂತ ಪಾದ ತೀರ್ಥವನ್ನು ನಿಯತವಾಗಿ ಒಂದು ಸಪ್ತಕ ಸೇವನೆಮಾಡಿದನು. ಇಷ್ಟು ಮಾತ್ರದಿಂದಲೇ ಅಧಿಕಾರಿಯ ಮನೋವ್ಯಥೆಯು ಸ್ವಲ್ಪ ಕಾಲದೊಳಗೆ ಪರಿಹಾರವಾಯಿತು. ಕಾಲಾಂತರದಲ್ಲಿ ಆತನಿಗೆ ಪುತ್ರೋತ್ಸವವಾಯಿತು. ಅಂದು ಮೊದಲಾಗಿ ಆತನು ಪ್ರತಿ ತಿಂಗಳೂ ದಾಸರಿಗೆ ತನ್ನ ಸೇವೆಯೆಂದು, ಇನ್ನೂರು ರೂಪಾಯಿಗಳನ್ನು ದಾಸರ ಸನ್ನಿಧಿಗೆ ಕಳುಹಿಸುತ್ತ ಬಂದನು. ಮುಂದೆ ದಾಸರ ಜೀವಿತಕಾಲದಲ್ಲಿ ಒಂದು ಸಲವಾದರೂ ತಾಲ್ಲೂಕುದಾರನಿಂದ ಬರುವ ಈ ಸೇವೆಯು ನಿಲ್ಲಲಿಲ್ಲ.

ದೇಶಪರ್ಯಟನ

ಪುರಂದರದಾಸರಾದಿಯಾಗಿ ಎಲ್ಲಾ ಪ್ರಸಿದ್ಧ ದಾಸರುಗಳೂ ದೇಶಪರ್ಯಟನ ಮಾಡಿದಂತೆ ಶೇಷದಾಸರು ಪರ್ಯಟನ ಮಾಡಲಿಲ್ಲ. ಭಕ್ತಜನರ ಕೋರಿಕೆಯನ್ನು ತಿರಸ್ಕರಿಸಲಾರದೆ, ಒಮ್ಮೆ ಮಾತ್ರ, ಗದ್ವಾಲಮಾರ್ಗವಾಗಿ ಹೊರಟು ರಾಯಚೂರು ಮಾನವಿ ಕೊಪ್ಪಳಗಳ ಪರ್ಯಂತ ಹೋಗಿ–ತಿರುಗಿ ಕಂಪಲಿ, ನವವೃಂದಾವನ, ಚಿಪ್ಪಗಿರಿ, ಆದವಾನಿಗಳ ಮೇಲೆ ಮೊದಲಕಲ್ಲಿಗೇ ಬಂದು ಸೇರಿದರು. ಭೋಜನಕ್ಕೆ ಪೂರ್ವದಲ್ಲಿ ಬಂದ ಅತಿಥಿಗಳಿಗೆ ತೀರ್ಥಕೊಟ್ಟು ಸ್ತ್ರೀಯರು ಪುರುಷರು ಮಕ್ಕಳು ಎಂಬ ಭೇದವಿಲ್ಲದೆ ಎಲ್ಲರ ಪಾದಗಳಿಗೆ ನಮಸ್ಕಾರವಮಾಡಿ, ಅಲ್ಲಲ್ಲಿ ಭಗವದ್ರೂಪ ಚಿಂತನೆಮಾಡುವುದು ದಾಸರ ಪದ್ಧತಿಯಾಗಿತ್ತು. ಪಕ್ಷಿ ಜೀವಿಗಳು ಯಾರಾದರಿದ್ದರೆ ಅವರ ಪಾದಸ್ಪರ್ಶಮಾಡಿ ಚಿಂತನೆಗೆ ನಿಂತರೆ, ಹೆಚ್ಚು ಕಾಲ ಕಳೆದುಹೋಗುತ್ತಿತ್ತು. ಅಂಥವರನ್ನು ಜನರು ಬಹು ಗೌರವದಿಂದ ಕಾಣುತ್ತಿದ್ದರು. ಅಂತಹ ಅನೇಕರು–'ಸ್ವಾಮಿ, ತಾವು ದೊಡ್ಡವರು, ನಾನು ಅಲ್ಪ, ನನ್ನಂಥವನ ಪಾದ ಮುಟ್ಟಿದರೆ ನನ್ನ ಗತಿಯೇನೆಂ'ದು ಭಯಗ್ರಸ್ತರಾಗಿ ಪ್ರಶ್ನೆ ಮಾಡುತ್ತಿದ್ದರು. ದಾಸರು–'ನೀವು ಅಲ್ಪರಾದರೆ, ನಿಮ್ಮಲ್ಲಿರುವವನು ಪೂರ್ಣನಿದ್ದಾನೆ; ನನ್ನ ಪೂಜೆಗೆ ನಿಮ್ಮಂಥವರು ಉತ್ತಮಾಧಿಷ್ಠಾನಗಳು' ಎಂದು ಉತ್ತರ ಕೊಡುತ್ತಿದ್ದರು. ದೊಡ್ಡ ದೊಡ್ಡ ದಿವಸಗಳಲ್ಲಿ ದಕ್ಷಿಣೆಕೊಡುವಾಗ ಸ್ತ್ರೀಯರು ಪುರುಷರು ಎಂಬ ಭೇದವಿಲ್ಲದೆ, ಹುಡುಗರು ಮಕ್ಕಳೆಂಬ ಭೇದವಿಲ್ಲದೆ, ವೈದಿಕ ಲೌಕಿಕರ ಭೇದವಿಲ್ಲದೆ ಸರ್ವರಿಗೂ ಸಮವಾಗಿ ಕೊಡುತ್ತಿದ್ದರು.

[ಈ ವಿಷಯದಲ್ಲಿ ಲೇಖಕನ ಪೂಜ್ಯ ತಂದೆಯವರ ಸ್ವಾನುಭವದ ಮಾತನ್ನು ಬರೆದರೆ, ಅಪ್ರಾಸಂಗಿಕವಾಗುವುದಿಲ್ಲವಾದ ಕಾರಣ ಕೇಳಿದಂತೆ, ಅದೇ ಮಾತುಗಳನ್ನು ಬರೆಯುತ್ತೇನೆ.]

ಲೇಖಕನ ತಂದೆಯವರು (ಶ್ರೀ ವೆಂಕಟಸುಬ್ಬದಾಸರು) ಸ್ವಭಾನುಸಂವತ್ಸರದಲ್ಲಿ ಕೀರ್ತನ ಸಂಚಾರವನ್ನು ಹೈದರಾಬಾದು ಕರ್ಣಾಟಕದಲ್ಲಿ ಮಾಡುತ್ತಿದ್ದರಂತೆ! ಮೊದಲ ಕಲ್ಲು ಶೇಷದಾಸರ ಖ್ಯಾತಿಯನ್ನು ಕೇಳಿ ಅವರ ದರ್ಶನಮಾಡಬೇಕೆಂದು ಮೊದಲಕಲ್ಲಿಗೆ ಹೋದರಂತೆ! ಆಗ ಗದ್ವಾಲಿಯನ್ನಾಳುತ್ತಿದ್ದ ರಾಮಭೂಪಾಲರು (ರಾಣಿವೆಂಕಟ ಲಕ್ಷ್ಮಮ್ಮಾಂಬೆಯ ನಂತರ ಆಳಿದವರು) ಲೇಖಕನ ತಂದೆಯವರನ್ನು ಬಹು ಪ್ರಕಾರ ಸನ್ಮಾನಿಸಿದರೆಂಬ ವಾರ್ತೆಯು ಆ ಪ್ರಾಂತದಲ್ಲಿ ಬಹುಮುಖದಿಂದ ಶೇಷದಾಸರಾಯರಿಗೆ ಶ್ರುತವಾಗಿತ್ತಂತೆ! ಮಿತಸ್ವಭಾವದ ನಮ್ಮ ತಂದೆಯವರು, ಎಲ್ಲೋ ಬಂದು, ಎಲ್ಲೋ ಒಂದು ಕೊನೆಯಲ್ಲಿ ಪ್ರಸಾದಾಭಿಲಾಷಿಗಳಾಗಿ ನಿಂತಿದ್ದರಂತೆ! ದಾಸರಾಯರು ತಮ್ಮ ಅತಿಥಿ ನಮಸ್ಕಾರ ಪದ್ಧತಿಯನ್ನು ನೆರವೇರಿಸಿಕೊಂಡು ಬರುತ್ತಾ, ಕಡೆಯಲ್ಲಿ ನಿಂತಿದ್ದ ನಮ್ಮ ತಂದೆಯವರ ಬಳಿಗೆ ಬಂದು, ಯಾರೊಡನೆಯೂ ಮಾತನಾಡದಿದ್ದವರು,–'ಏನು ಸುಬ್ಬಣ್ಣಾ ! ಬಂದೆಯಾ ಕ್ಷೇಮವೇ ?' ಎಂದು ಕೇಳಿದರಂತೆ! ತಂದೆಯವರು ಅಷ್ಟು ಮಾತ್ರಕ್ಕೇ ಪುಳಕಿತರಾಗಿ, ಚರಣಸೇವೆಗೆ ಬಾದೆನೆಂದರಂತೆ! ದಾಸರಾಯರು ತಂದೆಯವರ

ಪಾದವನ್ನು ಸ್ಪರ್ಶಮಾಡಿ ಕಣ್ಣುಮುಚ್ಚಿ 'ನಿಂತವರು ಅರ್ಧಘಂಟೆಯಾದರೂ ಏಳಲಿಲ್ಲವಂತೆ! ಅನಂತರ ತಂದೆಯವರು-'ಹೀಗೆ ಮಾಡಿದರೆ ನನ್ನ ಗತಿಯೇನು?' ಎಂದರಂತೆ! ದಾಸರಾಯರು-'ಸುಬ್ಬಣ್ಣ ಈಪತ್ತಿನ ಚಿಂತನೆಯಂಥಾ ಭಗವಚ್ಚಿಂತನೆಯು ಬಹು ಕಾಲಕ್ಕೊಮ್ಮೆ ದೊರೆಯುವುದು' ಎಂದರಂತೆ! ಎಲ್ಲೋ ಮೂಲೆಯಲ್ಲಿ ಕುಳಿತಿದ್ದವರನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಭೋಜನಮಾಡಿದರಂತೆ! ಅನಂತರ ಎರಡು ಮೂರು ತಿಂಗಳಾದರೂ ಅವರನ್ನು ಬಿಡಲಿಲ್ಲವಂತೆ! ಅನಂತರವೇ ಪಾರ್ಥಿವಸಂವತ್ಸರದಲ್ಲಿ ದಾಸರಾಯರು-ನಿನಗೊಬ್ಬ ಹರಿದಾಸ ಮಗನಾಗುವನು' ಎಂದರಂತೆ!

ಲೇಖಕನ ತಂದೆಯವರು ಚೇಲೂರನ್ನು ತಮ್ಮ ವಾಸಸ್ಥಳವಾಗಿ ಮಾಡಿಕೊಂಡರು. ಲೇಖಕನು ಪಾರ್ಥಿವ ಸಂವತ್ಸರ ಮಾರ್ಗಶೀರ್ಷ ಬಹುಳ ಏಕಾದಶಿಯ ದಿನ ಜನಿಸಿದನು. ಸಂಕೋಚಪಟ್ಟು – ಬರೆಯಬೇಕಾಗಿರುವ ಮಾತೆಂದರೆ, ಅಂಥಾ ದೊಡ್ಡವರ ಆಶೀರ್ವಾದಕ್ಕೂ, ಆಶೀರ್ವಾದ ಪಡೆದವರ ಯೋಗ್ಯತೆಗೂ ತಕ್ಕವನು ಮಾತ್ರ ಆಗಲಿಲ್ಲ, ಹರಿದಾಸ ಭಾವವೆಂಬುದು ಇನ್ನೂ ಅವನಲ್ಲಿ ಆಗಲಿಲ್ಲ.

ಬಹಿಷ್ಕಾರ

ಶೇಷದಾಸರ ಜೀವಿತಕಾಲದಲ್ಲಿ ಶ್ರೀ ಉತ್ತರಾದಿಮಠದ ಪೀಠದಲ್ಲಿ ಸತ್ಯಸಂಕಲ್ಪರು, ಸತ್ಯ ಸಂತುಷ್ಟರು, ಸತ್ಯಪರಾಯಣರು, ಸತ್ಯಕಾಮರು, ಸತ್ಯೇಷ್ಟರು, ಸತ್ಯಪರಾಕ್ರಮರು, ಸತ್ಯವೀರರು ಎಂಬ ಹೆಸರಿನ ಏಳುಮಂದಿ ಯತಿಗಳು ಮಠರಾಜ್ಯಭಾರವನಾಳಿದರು. ಸತ್ಯಕಾಮರು ಪೀಠವನ್ನಲಂಕರಿಸಿದ್ದ ಕಾಲದಲ್ಲಿ ದಾಸರಾಯರ ಖ್ಯಾತಿಯು ದೇಶವೆಲ್ಲೆಲ್ಲಾ ವ್ಯಾಪಿಸಿತ್ತು. ಇಷ್ಟಾದರೂ ದಾಸರನ್ನು ಕಂಡರೆ ಅಸೂಯೆಪಡದವರಿರಲಿಲ್ಲ. ಗದ್ವಾಲಿಯ ಮಠಾಧಿಕಾರಿ ಮೊದಲಾದವರು-'ಹಳ್ಳಿಯ ಶ್ಯಾನುಭೋಗನ ಹಿರಿತನವೇನು? ಶಾಸ್ತ್ರಪ್ರವೇಶವಿಲ್ಲ. ನೇಮನಿಷ್ಠೆಗಳಿಲ್ಲ. ವೈದಿಕ ಮೊದಲೇ ಅಲ್ಲ. ಇವನಿಗೆ ಅಪರೋಕ್ಷವೆಂದರೇನು? ಇವನ ತಪಸ್ಸು ಏತರದು? ಇವನನ್ನು ಕಟ್ಟಿಕೊಂಡು ಜನರು ಮಾಡುತ್ತಿರುವ ಜಬ್ಬಾಟವಿದೇನು? ದಾಸನ ಪೂಜೆಗೆ ನಗಾರಿನೌಬತ್ತುಗಳೇಕೆ? ಕೂತು ತಿರುಗಲು ಮೇನೆಪಲ್ಲಕ್ಕಿಗಳೇಕೆ?' ಎಂದು ಮೊದಲಾಗಿ ನಿಂದಿಸುತ್ತಿದ್ದರು. ಸಮಯ ಸಿಕ್ಕಿದಾಗ ದಾಸರಿಗೆ ಅಪಮಾನ ಮಾಡಬೇಕೆಂದು ಕಾಯುತ್ತಿದ್ದರು. ತಕ್ಕಂತೆ ಅದೇ ಕಾಲದಲ್ಲಿ ಶ್ರೀ ಉತ್ತರಾದಿ ಮಠಾಧಿಪರಾದ ಸತ್ಯಕಾಮರು ಗದ್ವಾಲಿಗೆ ಬಂದಿದ್ದರು. ಕೇಳುವುದೇನು? ಈ ಗೃಹಸ್ಥ ಹಾಗೆ – ಆ ಗೃಹಸ್ಥ ಹೀಗೆ; ಇವನು ಮಠದ ಮರ್ಯಾದೆಯನ್ನು ನಾವು ಹೇಳಿದಂತೆ ನಡೆಸಲಿಲ್ಲ. ಅವನ ಬಳಿ ಬಹಳ ಹಣವಿರುವಂತೆ ಕಾಣುತ್ತದೆ. ಇವರದೆಲ್ಲಾ ವಿಚಾರವಾಗಬೇಕು', ಎಂದು ಸರ್ವಾಧಿಕಾರಿಯು ಮುಂದೆ ಮಠಾಧಿಕಾರಿಯ ದೂರು ಪ್ರಾರಂಭವಾಯಿತು. ಹೊಸ ಊರಿಗೆ ಕಾಲಿಟ್ಟ ಕೂಡಲೆ ಹುಬ್ಬುಗಂಟಿಕ್ಕಿ ಕುಳಿತು,-ಇವನಿಗೆ ಬಹಿಷ್ಕಾರ ಹಾಕಿಸುತ್ತೇನೆ, ಇವನನ್ನು ಮಠದಿಂದ ದಬ್ಬಿಸಿಬಿಡುತ್ತೇನೆ. ಇಷ್ಟಿಷ್ಟು ರೂಪಾಯಿ ಕೊಟ್ಟರೇ ಮುದ್ರಾಧಾರಣೆಮಾಡಿಸು

ತ್ತೇನೆ–ಎಂದು ಅಧಿಕಾರದ ದರ್ಪ ತೋರಿಸುವ ಸರ್ವಾಧಿಕಾರಿಯನ್ನು ಕೇಳಬೇಕೇ? ದಾಸರ ವಿಷಯದ ಇಷ್ಟುಮಾತ್ರ ವಿಚಾರ ಮಠಾಧಿಕಾರಿಯ ಕಿವಿಗೆ ಬಿದ್ದೊಡನೆಯೇ ಸರ್ವಾಧಿಕಾರಿಯು ಜ್ವಾಲಾಮುಖಿಯಂತೆ ಕಿಡಿಗಳನ್ನು ಕಾರುತ್ತಾ ಕುಳಿತನು. ಮಠಾಧಿಕಾರಿಯು ತನ್ನ ತಾಳಕ್ಕೆ ತಕ್ಕ ಮೇಳ ಹೊಂದಿತೆಂದು ತಿಳಿನೊಡನೆಯೇ ದಾಸರ ಮೇಲೆ ಸಲ್ಲದ ಆರೋಪಗಳಿಗಾರಂಭಿಸಿದನು. ದಾಸರನ್ನು ಮಠಕ್ಕೆ ಕರೆಯಕಳುಹಿಸಿ ವಿಚಾರಣೆ ಮಾಡಬೇಕೆಂದನು. ಸರ್ವಾಧಿಕಾರಿಯು ಹಿಂದುಮುಂದಿನ ವಿಚಾರ ತಿಳಿಯದೆ ಯಾರನ್ನು ಹೇಗೆ ನೋಡಬೇಕೆಂಬ ವಿವೇಚನೆಯನ್ನು ಮನಸ್ಸಿಗೆ ತಾರದೆ, ದಾಸರಿಗೆ–'ನಿಮ್ಮ ಮೇಲೆ ಅನೇಕ ಅಪರಾಧಗಳ ಆರೋಪವಿದೆ. ಕೂಡಲೇ ಸಂಸ್ಥಾನಕ್ಕೆ ಬಂದು, ನಿಮ್ಮ ಹೇಳಿಕೆ ಕೊಡಬೇಕು. ಹಾಗೆ ಬರದೆ ಆಜ್ಞಾಭಂಗ ಮಾಡಿದರೆ, ನಿಮಗೆ ಬಹಿಷ್ಕಾರ ಕೊಡಲಾಗುತ್ತದೆ' ಎಂಬ ಅಭಿಪ್ರಾಯದ ಆಜ್ಞಾಪತ್ರವನ್ನು ಬರೆದು ಕಳುಹಿಸಿದನು. ಆ ಕಾಲದಲ್ಲಿ ದಾಸರು ಊರೊಳಗಿನ ವೆಂಕಟೇಶ ದೇವಾಲಯವನ್ನು ಬಿಟ್ಟು, ಬೆಟ್ಟದಲ್ಲಿ ವಾಸಮಾಡುತ್ತಾ, ಐದು ಉತ್ತತ್ತಿಗಳನ್ನು ಮಾತ್ರ ಆಹಾರ ಮಾಡಿಕೊಂಡು ಅನುಷ್ಠಾನಪರರಾಗಿದ್ದರು. ಹೆಚ್ಚಿಗೆ ಜನಗಳಿಗೆ ಅಲ್ಲಿ ಪ್ರವೇಶವಿರಲಿಲ್ಲ. ಬಲವತ್ತರ ಕಾರಣವಿದ್ದವಿನಾ ಯಾರೊಡನೆಯೂ ಅವರು ಮಾತನಾಡುತ್ತಿರಲಿಲ್ಲ. ಮಠದ ಸೇವಕನು ಆಜ್ಞಾಪತ್ರವನ್ನು ತಂದಿದ್ದ ಕಾರಣ, ಅವನಿಗೆ ಮಾತ್ರ ದಾಸರನ್ನು ಕಾಣಲು ಅವಕಾಶ ದೊರೆಯಿತು. ಪತ್ರ ತಂದವನನ್ನು ದಾಸರು ಸನ್ಮಾನಿಸಿದರು. ಪ್ರತಿಯಾಗಿ ತಾವು ಸಂಕಲ್ಪಮಾಡಿ ಅನುಷ್ಠಾನದಲ್ಲಿ ಕುಳಿತಿರುವ ಕಾರಣ ಬೆಟ್ಟವನ್ನು ಬಿಟ್ಟುಬರಲು ಅವಕಾಶವಿಲ್ಲವೆಂತಲೂ, ಗುರುಗಳು ಶಿಷ್ಯಾನುಗ್ರಹಕ್ಕಾಗಿ ದೇಶಸಂಚಾರಮಾಡುತ್ತಿರುವ ಕಾರಣ, ಪರಮಾನುಗ್ರಹಮಾಡಿ, ಮಹಾಸ್ವಾಮಿಗಳವರೇ ಶ್ರೀ ಕ್ಷೇತ್ರಕ್ಕೆ ದಯಮಾಡಿ ಶಿಷ್ಯನ ಸೇವೆಯನ್ನು ಸ್ವೀಕರಿಸಬೇಕೆಂತಲೂ ವಿಜ್ಞಾಪನಾಪತ್ರವನ್ನು ಕಳುಹಿಸಿದರು. ದಾಸರ ಪತ್ರವನ್ನು ನೋಡಿ ಸರ್ವಾಧಿಕಾರಿಯು ಉಗ್ರರೂಪ ತಾಳಿದನು. ಸ್ವಾಮಿಗಳಿಗೆ ಸಿಟ್ಟುಬರುವಂತಹ ಮರಾರೋಪಗಳನ್ನೆಲ್ಲ ದಾಸರಮೇಲೆ ಹೊರಿಸಿ–ದಾಸರಿಗೆ ಆಜನ್ಮ ಬಹಿಷ್ಕಾರ ಪತ್ರಿಕೆಯನ್ನು ಕಳುಹಿಸಿದನು. ಪತ್ರ ತಂದವನಿಗೆ ದಾಸರು ಶಾಲು ಜೋಡಿಯನ್ನು ಹೊದಿಸಿ, ಮಹಾ ಸಂಸ್ಥಾನದಿಂದ ಬಂದದ್ದೆಲ್ಲವೂ ಶ್ರೀ ಶ್ರೀಗಳವರ ಪರಮಾನುಗ್ರಹವೆಂದರು. ತಮ್ಮ ನಿಮಿತ್ತ ಮೊದಲಕಲ್ಲಿಗೆ ಬರುವ ಜನರನ್ನು ಕುರಿತು–'ನಿತ್ಯ ಮೊದಲಕಲ್ಲಿಗೆ ಬರುವ ನೂರಾರು ಜನರಿಗೆ ಅನ್ನದಾನ ಮಾಡುವುದು, ದಾಸನಿಗೆ ದುಬಾರಿಯಾದೀತೆಂದು ಶ್ರೀಗಳವರು ನನ್ನಮೇಲೆ ಕೃಪೆಮಾಡಿ ಬಹಿಷ್ಕಾರ ಕೊಟ್ಟಿರುವರು. ಭೋಜನ ಮಾಡುವವನು ನಾನಲ್ಲವಾದ್ದರಿಂದ ಪಙ್ತಿಗೆ ನಾನು ಬರುವೆನೆಂಬ ಭಯ ನಿಮಗಿಲ್ಲ. ನಾನಿದ್ದ ಬಳಿಗೆ ನೀವು ಬರುವುದೂ ಶ್ರೀಗಳವರ ಚಿತ್ತಕ್ಕೆ ಅಪರಾಧವೆಂದು ತೋರಿದರೆ, ನಿಮಗೂ ಬಹಿಷ್ಕಾರ ಬರಬಹುದು. ಗುರುಗಳ ಮನಸ್ಸಿಗೆ ಆಯಾಸವಾಗದಂತೆ, ನಡೆಯುವುದು ನಿಮ್ಮಂತೆ ನನಗೂ ಕರ್ತವ್ಯವಾಗಿರುವುದು. ಇದರ ಔಚಿತ್ಯವರಿತು ನೀವು ನಡೆದುಕೊಳ್ಳಬಹುದು' ಎಂಬುದಾಗಿ ಜನರಿಗೆ ತಿಳಿಸಿದರು. ಜನರು–'ವಿಚಾರವಿಲ್ಲದೆ

ಹಾಕಿದ ಬಹಿಷ್ಕಾರವನ್ನು ನಾವು ಮನ್ನಿಸುವುದಿಲ್ಲ. ನಮಗೆ ಗುರುಗಳ ಬಹಿಷ್ಕಾರದ ಭಯವಿಲ್ಲ. ಯಾರನ್ನು ಬಿಟ್ಟರೂ ನಾವು ತಮ್ಮನ್ನು ಬಿಟ್ಟಿರಲಾರೆವು. ತಾವು ಮಾತ್ರ ನಮ್ಮಲ್ಲಿ ಕೃಪೆಮಾಡಬೇಕು." ಎಂದು ನುಡಿದರು. ಮಠದ ಬಹಿಷ್ಕಾರದಿಂದ, ದಾಸರ ಮೇಲಿದ್ದ ಜನರ ಭಕ್ತಿ ಕಡಿಮೆಯಾಗಲಿಲ್ಲ. ಬದಲಾಗಿ ದಿನ ದಿನಕ್ಕೆ ದಾಸರ ಬಳಿಗೆ ಬರುವವರ ಸಂಖ್ಯೆ ಅಧಿಕವಾಯಿತು. ಶ್ರೀ ಮಠದ ಸವಾರಿಯು–ಗದ್ವಾಲಿಯನ್ನು ಬಿಟ್ಟು ಹೈದರಾಬಾದಿಗೆ–ಬೆಳೆಯಿತು.

ಮಹಬೂಬ್ ನಗರದಲ್ಲಿಯ ತಾಲ್ಲೂಕುದಾರನಾಗಿದ್ದ ಹನುಮಂತರಾಯನೆಂಬ ಗೃಹಸ್ಥನು ಶ್ರೀಮಠದ ಶಿಷ್ಯನಾಗಿದ್ದನು. ದಾಸರಿಗೆ ಸ್ವಾಮಿಗಳು ಬಹಿಷ್ಕಾರ ಹಾಕಿರುವ ಸಂಗತಿಯನ್ನು ಕೇಳಿ ಸಂತಪ್ತನಾಗಿದ್ದರೂ–ಆತನು ಸ್ವಾಮಿಗಳ ಸವಾರಿ ತಾನಿದ್ದ ಬಳಿಗೇ ಬಂದ ಮೇಲೆ ಅವರ ಸತ್ಕಾರ ನಡೆಸದಿರುವುದು ಯೋಗ್ಯವಲ್ಲವೆಂದು ತನ್ನ ಪದವಿಗೆ ತಕ್ಕಂತೆ ಮರ್ಯಾದೆ ಮಾಡಿದನು. ಆತನ ಹೆಂಡತಿಗೆ ಪಿಶಾಚಬಾಧೆಯಿದ್ದುದರಿಂದ ರಾಯನ ಮನಸ್ಸಿಗೆ ಶಾಂತಿಯಿರಲಿಲ್ಲ. ಮಾಂತ್ರಿಕರನೇಕರ ಯಂತ್ರ ಮಂತ್ರಗಳು ಫಲಕಾರಿಗಳಾಗಲಿಲ್ಲ. ಸ್ವಾಮಿಗಳು ಬಂದಿರುವುದರಿಂದ ಅವರೇನಾದರೂ ಈ ಬಾಧೆಯನ್ನು ಪರಿಹರಿಸಬಹುದೆಂದು ರಾಯನು ಅಂತರಂಗದಲ್ಲಿ ತನ್ನ ದುಃಖಗಳನ್ನು ಹೇಳಿಕೊಂಡು ಅವರ ಮೊರೆ ಬಿದ್ದನು. ಅಭಯ ಕೊಡಲು ಧೈರ್ಯಸಾಲದೆ, ಸಂಸ್ಥಾನಕ್ಕೆ ಪರೀಕ್ಷಾಕಾಲ ಬಂತೆಂದು ಸ್ವಾಮಿಗಳು ಚಿಂತಾಕ್ರಾಂತರಾದರು. ಪೀಠಾಧಿಪತಿಗಳಾದ ಮಾತ್ರಕ್ಕೆ ಪಿಶಾಚ ಬಾಧೆಯನ್ನು ಪರಿಹರಿಸುವ ವಿದ್ಯೆಯನ್ನೂ ಕಲಿತಿರಬೇಕೆಂಬ ನಿಯಮವೆಲ್ಲಿದೆ? ಪೀಠಾರೋಹಣ ಮಾಡಿದವರೆಲ್ಲರೂ ಮಹಾತಪಸ್ವಿಗಳಾಗಿರುವುದಾದರೂ ಎಲ್ಲಿ ಕಂಡು ಬಂದಿದೆ? ಗ್ರಾಮೈಕ ರಾತ್ರಿಯಾಗಿ ದೇಶಪರ್ಯಟನ ಮಾಡುವ ಯತಿಗಳು, ಶಾಂತರಾಗಿ ಕುಳಿತು ತಪಶ್ಶಕ್ತಿಯನ್ನು ಬೆಳೆಸಿಕೊಂಡು ಬೇಡಿದವರ ಇಷ್ಟಾರ್ಥಗಳನ್ನು ಪೂರೈಸುವ ಅವಕಾಶ ಎಲ್ಲರಿಗೂ ಹೇಗೆ ಸಾಧ್ಯ? ಬೆಲ್ಲಂಪುರಿ ಹನುಮಂತರಾಯನೆಂದರೆ ಸಾಮಾನ್ಯ ಗೃಹಸ್ಥನಲ್ಲ. ಬರೀ ತಾಲ್ಲೂಕುದಾರ ಮಾತ್ರವಲ್ಲ. ದೊಡ್ಡ ಜಹಗೀರ್ದಾರ! ಮಠದ ಶಿಷ್ಯರಲ್ಲೇ ಅತಿ ಮುಖ್ಯರಾದವರ ತರಗತಿಗೆ ಸೇರಿದವ. ಸಂಸ್ಥಾನವನ್ನು ತಿಂಗಳುಗಟ್ಟಲೆ ತಡೆಯಬಲ್ಲ ಬಲವಂತ! ಇಂತಹ ಗೃಹಸ್ಥನಿಗೆ ಏನುತ್ತರ ಹೇಳಬೇಕೆಂಬ ಚಿಂತೆ ಸ್ವಾಮಿಗಳಿಗೆ ಬಲವಾಯಿತು. ಸಂಸ್ಥಾನ ಪ್ರೇಮಿಗಳಾದ ಆಪ್ತರನೇಕರು, ಬಹಿಷ್ಕಾರದ ಹೆಸರೆತ್ತುವುದು ಅಲೌಕಿಕವಾದರೂ, ಸ್ವಾಮಿಗಳ ಕ್ಷಮೆ ಬೇಡಿ, ಶ್ರೀಪಾದರನ್ನು ಕರೆಸದಿದ್ದರೆ ಇಂತಹ ಪ್ರಸಂಗದಲ್ಲಿ ಗೌರವ ಬರುವುದಿಲ್ಲವೆಂದರು. ದಾಸರು ಮಂತ್ರಸಿದ್ಧರು. ಅವರಿಂದ ಬ್ರಹ್ಮರಾಕ್ಷಸ ಬಾಧೆಗಳೇ ಮುಂತಾಗಿ ಪರಿಹಾರವಾಗಿವೆಯೆಂದರು. ಏನಾದರೂ ಮಾಡಿ ಅವರನ್ನು ಕರೆಸಲೇ ಬೇಕೆಂದರು. ಸ್ವಾಮಿಗಳು ಯುಕ್ತಾಯುಕ್ತ ವಿಚಾರವನ್ನರಿಯದೆ ಬಹಿಷ್ಕಾರಪತ್ರಕ್ಕೆ ಹಸ್ತಾಕ್ಷರವನ್ನು ಹಾಕಿಸಿದ ಸರ್ವಾಧಿಕಾರಿಯ ಮೇಲೆ ಸಿಟ್ಟುಮಾಡಿದರು. ತಮ್ಮ ವಿಶ್ವಾಸಕ್ಕೆ ಪಾತ್ರನಾದ ದಳವಾಯಿ ಕೃಷ್ಣಾಚಾರ್ಯನೆಂಬ ಸೇವಕನ ಕೈಯಲ್ಲಿ ತಮ್ಮ ಸ್ವಹಸ್ತದಿಂದ–'ಸಂಸ್ಥಾನಕ್ಕೆ ನೀವು ಮುಖ್ಯ ಶಿಷ್ಯರು. ಸಂಸ್ಥಾನದ ಕೀರ್ತಿ ನಿಮ್ಮದು. ಹಿಂದಿನ

ಸಮಾಚಾರಗಳನ್ನು ಮನಸ್ಸಿನಲ್ಲಿಡದೆ, ಪತ್ರ ಕಂಡೊಡನೆ ಹೈದರಾಬಾದಿಗೆ ಬರಬೇಕು. ಪ್ರಾಪ್ತವಾಗಿರುವ ಪ್ರಸಂಗ ಇಂಥಾದ್ದು' ಎಂಬರ್ಥದ ಪತ್ರವನ್ನು ಬರೆದು ಶೇಷದಾಸರಲ್ಲಿಗೆ ಕಳುಹಿಸಿದರು. ಆ ಸಮಯದಲ್ಲಿ ದಾಸರ ಅನುಷ್ಠಾನದ ಅವಧಿ ಮುಗಿದು-ಅವರು ಕ್ಷೇತ್ರ ಬಿಟ್ಟು ಪ್ರಯಾಣಮಾಡಲು ಅನುಕೂಲವಾಗಿತ್ತು. ದಾಸರೊಡನೆ ಐವತ್ತು ಮಂದಿ ಶಿಷ್ಯರು ಪ್ರಯಾಣಮಾಡಲು ಸಿದ್ಧರಾದರು. ದಾಸರು ಎರಡೇ ದಿವಸಗಳಲ್ಲಿ ಹೈದರಾಬಾದನ್ನು ಸೇರಿ-ಸತ್ಯಕಾಮ ಶ್ರೀಪಾದಂಗಳವರ ದರ್ಶನಮಾಡಿಸಿರೆಂದು ಹಿಂದೆ ಬಹಿಷ್ಕಾರ ಪತ್ರ ಕಳುಹಿಸಿದ್ದ ಸರ್ವಾಧಿಕಾರಿಯ ಬಳಿಯಲ್ಲಿ ತಿಳಿಸಿದರು. ಸರ್ವಾಧಿಕಾರಿಗೆ ಆಗಲೂ ದಾಸರ ಮೇಲಣ ಅಸೂಯೆ-ಅಸಮಾಧಾನಗಳು ತಪ್ಪಿರಲಿಲ್ಲ. ಇವರ ನಿಮಿತ್ತವಾಗಿ ತನಗೆ ಸ್ವಾಮಿಗಳಿಂದ ವಾಗ್ದಂಡನೆಯಾಯಿತೆಂಬ ಅಸಹನೆಯೂ ಮನಸ್ಸಿನಲ್ಲಿತ್ತು. ಅಗ ಅವನು ಮತ್ತಷ್ಟು ಕಠಿಣ ಮನಸ್ಸಿನವನಾಗಿ :—

ಸರ್ವಾಧಿಕಾರಿ :—ನೀವೋ ಆ ದರೂರು ದಾಸರು.

ದಾಸರು :—ಹೌದು, ನಾನೇ ಆ ದಾಸ!

ಸರ್ವಾಧಿಕಾರಿ :—ದಾಸರಾದವರಿಗೆ ಮೋಸವೇಕೆ? ಪರವಾರವೇಕೆ? ಇದೆಲ್ಲಾ ಸಂಸ್ಥಾನಾಧಿಪತಿಗಳಾದ ಸ್ವಾಮಿಗಳಿಗೆ ಇರಬೇಕಾದ ಮರ್ಯಾದೆ! ಎಲ್ಲವನ್ನೂ ಮಠಕ್ಕೆ ಸೇವಾಮಾಡಿ.

ದಾಸರು :—ತಾವು ಸಂತೋಷಪಟ್ಟರೆ ಸಾಕು. ಇದೋ ಈ ಮೋಸ ಕೃಷ್ಣಾರ್ಪಣ! ಇದೋ ಕಂಠಿ ಕೃಷ್ಣಾರ್ಪಣ! ತಾವು ಸ್ವೀಕರಿಸುವಿರಾದರೆ ಈ ಜೋಡು ಶಾಲನ್ನೂ ಅರ್ಪಿಸುವೆನು. ಗುರುದರ್ಶನ ಮಾಡಿದರೆ ಸಾಕು.

ಸರ್ವಾಧಿಕಾರಿ :—(ಆಗಲೂ ತನ್ನ ಕಾಠಿಣ್ಯವನ್ನು ಬಿಡದೆ-ಒಬ್ಬ ಸೇವಕನನ್ನು ಕರೆದು) ಇವರನ್ನು ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋಗು-ಎಂದನು.

ಅಹ್ನಿಕದಲ್ಲಿ ಕುಳಿತಿದ್ದ ಶ್ರೀಗಳವರಿಗೆ ದಾಸರು ಬಂದರೆಂಬ ಮಾತು ಕಿವಿಗೆ ಬಿದ್ದೊಡನೆಯೇ ಪರಮಾನಂದವಾಯಿತು. ತಡಮಾಡದೆ ಅವರನ್ನು ಸಮ್ಮುಖಕ್ಕೆ ಕರೆತರುವಂತೆ ಸ್ವಾಮಿಗಳ ಅಜ್ಞೆಯಾಯಿತು. ದಾಸರಿಗೆ-ಬಹಿಷ್ಕೃತನು ಸಮೀಪಕ್ಕೆ ಹೋಗಬಹುದೇ ಎಂಬ ಶಂಕೆಯಾಯಿತು. ಈ ಮಾತನ್ನು ದ್ವಾರಪಾಲಕನು ಅರ್ಧಮರ್ಧ ನುಡಿಯುವಷ್ಟರಲ್ಲಿ, ಸ್ವಾಮಿಗಳೇ ದಾಸರ ಹೆಸರು ಹಿಡಿದು ಕೂಗಿದರು. ದಾಸರು ಸನ್ನಿಧಿಗೆ ಸಾಷ್ಟಾಂಗ ನಮಸ್ಕಾರಮಾಡಿ, ಅಜ್ಞೆ ಪಡೆದು ಸಮ್ಮುಖದಲ್ಲಿ ಕುಳಿತರು. ಸ್ವಾಮಿಗಳಿಗೆ ಅದುವರೆಗೆ ಶೇಷದಾಸರ ಪರಿಚಯವಾಗಿರಲಿಲ್ಲ. ಸಮೀಪದಲ್ಲಿದ್ದವರನ್ನು ದೂರ ಕಳುಹಿಸಿ ಶ್ರೀಗಳವರು ಹಿಂದೆ ನಡೆದುಹೋದ ಅನುಚಿತ ಕಾರ್ಯಗಳನ್ನು ಚಿಂತಿಸಿ-ವ್ಯಸನವನ್ನು ಸೂಚಿಸಿ, ಪ್ರಕೃತ ಕಾರ್ಯವನ್ನು ದಾಸರಿಗೆ ತಿಳಿಸಿದರು. ದಾಸರು,-'ಶಿಷ್ಯನಿರುವಾಗ ಶ್ರೀಗಳವರಿಗೆ ಚಿಂತೆಯೇಕೆ? ರಾಯರ ಹೆಂಡತಿಯನ್ನು ಮೊದಲಕಲ್ಲಿಗೆ ಕಳುಹಿಸಿದರೆ, ಒಂದು ಸಪ್ತಕದಲ್ಲಿ ಆಕೆಗೆ ಗುಣವಾದೀತೆ'ಂದು ತಿಳಿಸಿದರು. 'ಆ ಸಾಧ್ವಿಗೆ ಗುಣವಾಗಿ ಬರುವವರೆಗೆ ನಾವು ಈ ಸ್ಥಳವನ್ನು ಬಿಡುವುದಿಲ್ಲ. ಸಂಸ್ಥಾನದ ಅಭಿಮಾನವನ್ನು ನೀವು

ಬಿಡಬಾರದು" ಎಂದು ಮನಸ್ಸು ಕರಗುವ ಮಾತುಗಳನ್ನಾಡಿದರು. ಅನಂತರ ಸ್ವಾಮಿಗಳ ಮಠ ಪೂಜಾ ನಡೆಯುವ ಸ್ಥಳದಲ್ಲೇ ದಾಸರಾಯರ ಆಹ್ನಿಕ ಪೂಜಾದಿಗಳಿಗೂ ವ್ಯವಸ್ಥೆಯಾಯಿತು. ಭಿಕ್ಷಾಸ್ವೀಕಾರಕಾಲದಲ್ಲಿ ಸ್ವಾಮಿಗಳು ತಮ್ಮ ಪಕ್ಕದಲ್ಲಿ ದಾಸರನ್ನು ಭೋಜನಕ್ಕೆ ಕೂಡಿಸಿಕೊಂಡರು. ಬಹಿಷ್ಕಾರ ಪತ್ರ ಬಂದದಿನದಿಂದ ದಾಸರು ಅಕ್ಷತೆಯನ್ನು ಹಚ್ಚಿಕೊಂಡಿರಲಿಲ್ಲ. ಅನುಷ್ಠಾನ ಪೂರ್ತಿಯಾದ ಮೇಲೂ ಉತ್ತತ್ತಿಗಳನ್ನಿಟ್ಟು ಭೋಜನಮಾಡಿರಲಿಲ್ಲ. ಅಂದೇ, ಸ್ವಾಮಿಗಳ ಸನ್ನಿಧಿಯಲ್ಲಿ ದಾಸರು ಅಕ್ಷತೆಯನ್ನು ಹಚ್ಚಿಕೊಂಡ ಸಂಗತಿಯೂ ಭೋಜನ ಸ್ವೀಕಾರಮಾಡಿದ ಸಂಗತಿಯೂ ಸ್ವಾಮಿಗಳಿಗೆ ತಿಳಿದು ಅವರಿಗೆ ಬಹು ವಿಷಾದವನ್ನುಂಟುಮಾಡಿತು. ಅಪರೋಕ್ಷ ಜ್ಞಾನಿಗಳಾದರೂ ಅವರಿಗಿರುವ ಗುರುಭಕ್ತಿಯನ್ನೂ ಸಂಸ್ಥಾನದ ಮೇಲಣ ಅಭಿಮಾನವನ್ನೂ ಕೊಂಡಾಡಿ, ಶ್ರೀಗಳವರು ಆನಂದಬಾಷ್ಪಗಳನ್ನು ಸುರಿಸಿದರು. ಹನುಮಂತರಾಯ ಮೊದಲಾದ ಗೃಹಸ್ಥರುಗಳಿಗೆ, ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ ಹಾಗೆ ಸನ್ಮಾನಿತರಾದ ದಾಸರನ್ನು ನೋಡಿ, ಆದ ಆನಂದವು ಅವರ್ಣನೀಯವಾಯಿತು. ದಾಸರ ಸುಳಾದಿಗಳನ್ನು ಕೇಳಿ ಶ್ರೀಗಳವರು ಪರಮಾನಂದಭರಿತರಾದರು. ದಾಸರು, ಸಾವಿರ ರೂಪಾಯಿಗಳು, ಸಾವಿರ ರೂಪಾಯಿ ಬೆಲೆ ಬಾಳುವ ಶಾಲು ಮತ್ತು ಇತರ ಅನರ್ಘ್ಯ ಪದಾರ್ಥಗಳನ್ನು ಶ್ರೀಗಳವರಿಗೆ ಪಾದಪೂಜೆಮಾಡಿದರು. ಪ್ರತಿಯಾಗಿ ಶ್ರೀಗಳವರು, ಕರದೀಪ, ವಸ್ತ್ರ, ಛತ್ರ ಚಾಮರ ಮೊದಲಾದ ಸಂಸ್ಥಾನಿಕರಿಗೆ ಮಾತ್ರ ಸಲ್ಲುವ ಮರ್ಯಾದೆಯನ್ನು ದಾಸರಿಗೆ ಮಾಡಿದರು. ಹನುಮಂತರಾಯನು ದಾಸರಿಗೆ ಪ್ರಯಾಣಕ್ಕೆ ದಿವ್ಯವಾದ ಮೇನೆಯನ್ನು ಕಳುಹಿಸಿದುದು ಮಾತ್ರವಲ್ಲದೆ, ಸ್ವಾಮಿಗಳಿಗೆ ಕೊಟ್ಟಷ್ಟೇ ಕಾಣಿಕೆಯನ್ನು ಅವರಿಗೂ ಸಲ್ಲಿಸಿದನು. ರಾಯನ ಹೆಂಡತಿಗಿದ್ದ ಪಿಶಾಚ ಬಾಧೆಯು, ಆಕೆಯು ಮೊದಲುಕಲ್ಲಿನಲ್ಲಿ ಒಂದು ಸಪ್ತಕವಾಗುವುದರೊಳಗೆ ಪರಿಹಾರವಾಯಿತು. ಇದರಿಂದ ಸಂಸ್ಥಾನಕ್ಕೆ ಮಹಾಗೌರವವುಂಟಾಯಿತು. ಸ್ವಾಮಿಗಳಿಗೆ ದಾಸರೆಂದರೆ ಇದ್ದ ಅಸಮಾಧಾನವು ದೂರವಾಗಿ–ಗೌರವ ಉತ್ಪನ್ನವಾಯಿತು.

ಇದೇ ಸಮಯಕಾಲದಲ್ಲಿ ಬೆಟ್ಟದಲ್ಲಿ ವಾಸಮಾಡುತ್ತಿದ್ದಾಗ ದಾಸರನ್ನು ಸುಲಿಗೆ ಮಾಡಬೇಕೆಂದು ಕೆಲವರು ಕಳ್ಳರು ಸಂಚುಮಾಡಿದರು. ದಾಸರ ಕೆಲವು ಪದ್ಧತಿ, ಆಚರಣೆಗಳು ಜನರಿಗೆ ವಿಸ್ಮಯಕಾರಿಗಳಾಗಿದ್ದುವು. ತಿನ್ನುವುದು ಐದು ಉತ್ತತ್ತಿ, ಮಲಗುವುದು ಬೆಟ್ಟದ ಗವಿಯಲ್ಲಿ ಹುಲಿಯ ಚರ್ಮದಮೇಲೆ! ಕೊರಳಲ್ಲಿ ಮುತ್ತಿನ ಕಂಠಿ, ಹೊದಿಯುವುದು ಜರತಾರಿಯ ಶಾಲು, ಉಡುವುದು ಪೀತಾಂಬರ, ಬೆರಳುಗಳಲ್ಲಿ ಹರಳಿನುಂಗುರಗಳು, ಆಡುವುದೋ ವೈರಾಗ್ಯದ ಮಾತು, ಮಾಡುವುದು ಸಾವಿರಗಟ್ಟಲೆ ಖರ್ಚು, ಇಂಥವರಲ್ಲದೆ, ಕಳ್ಳರಿಗೆ ಅರಸಿಕೊಂಡು ಬರಲು ಮತ್ತಾರು ಸಿಗಬೇಕು! ಒಬ್ಬಿಬ್ಬರ ವಿನಾ ಬೆಟ್ಟದಲ್ಲಿ ಮನುಷ್ಯ ಸಂಚಾರವಿಲ್ಲ. ಸಮರಾತ್ರಿಯಲ್ಲಿ ಕಳ್ಳರು ಅರ್ಧ ಬೆಟ್ಟವನ್ನು ದಾಟಿದರು. ಇದ್ದಕ್ಕಿದ್ದ ಹಾಗೆ, ಅವರಿಗೆ ಮುಂದೆ ನಡೆಯಲು ಕಣ್ಣು ಕಾಣಲಿಲ್ಲ. ಎಲ್ಲರಿಗೂ ಆದ ಒಂದೇ ಪರಿಸ್ಥಿತಿಯನ್ನು ನೆನೆಸಿಕೊಂಡು ಅವರು–ದಿವ್ಯಪುರುಷರಾದ ದಾಸರನ್ನು ಸುಲಿಗೆ ಮಾಡಬೇಕೆಂದು ದುರಾಲೋಚನೆ ಮಾಡಿ ಬಂದುದರಿಂದಲೇ ಹೀಗಾಯಿತೆಂದು ತಮ್ಮಲ್ಲಿ

ತಾವೇ ತರ್ಕಿಸಿ ವ್ಯಸನಪಟ್ಟರು. ನಿರುಪಾಯರಾಗಿ–ಮುಂದೇನೂ ತೋರದೆ, ನಿಂತಲ್ಲೇ ಕುಳಿತುಬಿಟ್ಟರು. ಅಂಧರಾದ ತಮ್ಮ ಮುಂದಿನ ಗತಿ ಏನೆಂಬ ಚಿಂತೆ ಅವರಿಗೆ ಬಹಳ ವಾಯಿತು. ಉಷಃಕಾಲ ಸನ್ನಿಹಿತವಾಗಲು, ದಾಸರೆದ್ದು ಬೆಟ್ಟದಿಂದ ಕೆಳಕ್ಕೆ ಬರುತ್ತಾ, ಮಾರ್ಗದಲ್ಲಿ ಅಡ್ಡವಾಗಿ ಕುಳಿತಿದ್ದ ಆ ಜನರನ್ನು ನೋಡಿ, 'ಹಾದಿಯಲ್ಲೇಕೆ ಕುಳಿತಿರಿ? ಸ್ವಲ್ಪ ಸರಿದು ಕೂಡಬಾರದೆ' ಎಂದರು.

ಆ ಮಾತನ್ನು ಕೇಳಿ ಕಳ್ಳರು–'ಸ್ವಾಮಿ! ತಾವ್ಯಾರೋ ತಿಳಿಯದು, ನಮ್ಮೆಲ್ಲರಿಗೆ ಕಣ್ಣೇ ಕಾಣದಂತಾಗಿದೆ. ದಾಸರನ್ನು ಸುಲಿಗೆ ಮಾಡಬೇಕೆಂದು ಬಂದ ಅಪರಾಧದಿಂದ ನಮ್ಮ ಗತಿ ಹೀಗಾಯಿತೆಂದು ತೋರುತ್ತದೆ. ದಯಮಾಡಿ, ದಾಸರೆಲ್ಲಿರುವರೋ ತಿಳಿಸಿ–ಅವರನ್ನು ಬರಮಾಡಿ. ಅವರ ಪಾದಗಳಿಗಾದರೂ ಬಿದ್ದು, ಕಣ್ಣು ಕೊಡಿರೆಂದು ಬೇಡಿಕೊಳ್ಳುತ್ತೇವೆ' ಎಂದರು.

ದಾಸರು ಕಳ್ಳರನ್ನು ಕುರಿತು–'ದಾಸರಲ್ಲಿ ಏನಿದೆಯೆಂದು ತಿಳಿದು ಹುಡುಕಿಕೊಂಡು ಬಂದಿರಿ! ಅವರನ್ನು ಸುಲಿಗೆ ಮಾಡಿದರೆ ನಿಮಗೇನು ಸಿಗುತ್ತಿತ್ತೆಂದು ಭಾವಿಸಿದಿರಿ' ಎಂದು ಕೇಳಿದರು. ಆಗ ಕಳ್ಳರು–'ಸ್ವಾಮಿ, ಅವರ ಕೊರಳೊಳಗಿನ ಕಂಠಿ, ಬೆರಳುಂಗುರಗಳು ಇಷ್ಟು ಸಿಕ್ಕರೇ ಸಾವಿರಾರು ರೂಪಾಯಿ ದೊರೆಯುತ್ತಿತ್ತು!' ಎಂದರು. ಇವರು ತಮಗೆ ಮಹಾ ಅಪಕಾರ ಮಾಡಲು ಬಂದವರೆಂಬುದು ಹೀಗೆ ಖಚಿತವಾದ ಮೇಲೂ ದಾಸರು, ಅಂಧರಾದ ಅವರ ಅಂದಿನ ದೈನ್ಯ ದೆಶೆಯನ್ನು ಕಂಡು ಕನಿಕರ ತಾಳಿದರು. ಮತ್ತು ಅವರನ್ನು ಕುರಿತು–'ಅಪ್ಪಾ ಆ ದಾಸನೇ ನಾನು! ನಿಮಗೇನು ಬೇಕೋ ಕೇಳಿ! ನಾನೇ ಕೊಡುವೆನು' ಎಂದರು. ಕಳ್ಳರು ಗಾಬರಿಗೊಂಡಂತೆ ನಡುಗಿ–ಅಲ್ಲೇ ನಮಸ್ಕಾರಮಾಡಿ,–'ಮಹಾಸ್ವಾಮಿ! ತಾವು ದೇವರ ಮನುಷ್ಯರು. ತಮ್ಮ ಪಾದಕ್ಕೆ ಮಹಾ ದ್ರೋಹವನ್ನು ಬಗೆದ ಪಾಪಿಗಳು ನಾವು. ದಯವಿಟ್ಟು ನಮಗೆ ಕಣ್ಣು ಬರುವಂತೆ ಮಾಡಿದರೆ ಸಾಕು, ಮತ್ತೆಲ್ಲಾದರೂ ಕದ್ದು, ನಮ್ಮ ಬಾಳ್ವೆ ಮಾಡುವೆವು' ಎಂದರು. ಅದನ್ನು ಕೇಳಿ ದಾಸರು–'ಅಪ್ಪಾ, ನನಗಾಗಿ ಕಷ್ಟಪಟ್ಟಿರಿ, ರಾತ್ರಿಯೆಲ್ಲಾ ನಿದ್ರೆಗೆಟ್ಟು ಛಳಿಯಲ್ಲಿ ನಡುಗಿದಿರಿ. ನಿಮಗೆ ಕಣ್ಣು ಕಾಣುತ್ತದೆ, ಕಂಠಿ ಉಂಗುರಗಳನ್ನೂ ಕೊಡುತ್ತೇನೆ. ಆದರೆ ಮುಂದೆ ಈ ಕೆಟ್ಟ ವೃತ್ತಿಯನ್ನು ಬಿಟ್ಟು, ಯೋಗ್ಯ ರೀತಿಯಿಂದ ಜೀವನ ಸಾಗಿಸಲು ಕಲಿಯಿರಿ' ಎಂದು ತಮ್ಮ ಆಭರಣಗಳನ್ನೆಲ್ಲಾ ಕೊಟ್ಟು, ಕಣ್ಣು ಕಾಣುವಂತೆ ಮಾಡಿದರು. ಕಳ್ಳರು ಆಭರಣಗಳನ್ನು ತೆಗೆದುಕೊಳ್ಳಲು ಹಿಂದೆಗೆದರು. ಆಗ ದಾಸರು–'ನಾನು ಅವುಗಳನ್ನು ಸಂತೋಷದಿಂದ ಕೊಟ್ಟಿದ್ದೇನೆ. ಅವುಗಳನ್ನು ಮಾರಿದರೆ, ಸಾವಿರಾರು ರೂಪಾಯಿಗಳ ಲಾಭ ನಿಮಗಾಗುತ್ತದೆ. ಅದರಿಂದ ನೀವು ನ್ಯಾಯವಾದ ಉದ್ಯೋಗ ಮಾಡಿಕೊಂಡು, ಸುಖವಾಗಿ ಬಾಳಿರಿ' ಎಂದು ಅವರನ್ನು ಸಂತೋಷಪಡಿಸಿ ಕಳುಹಿಸಿದರು.

ಸ್ವಾಮಿಗಳು ದಾಸರಿಗೆ ಸಂಸ್ಥಾನಿಕರಿಗೆ ಸಲ್ಲಬೇಕಾದಂತಹ ಮರ್ಯಾದೆ ಮಾಡಿದ ದಿನದಿಂದ ಅವರಲ್ಲಿ ವೈದಿಕರಿಗಿದ್ದ ಅನಾದರ ಕಡಿಮೆಯಾಯಿತು.–ಅವರ

ನೈವೇದ್ಯದಲ್ಲಿ ವೈದಿಕರು ಊಟಮಾಡಬಾರದು; ಅವರಿಗೆ [illegible] ನಮಸ್ಕಾರ ಮಾಡಬಾರದು—ಎಂಬ ಶಾಸ್ತ್ರಗಳು ಹುಟ್ಟಿದುವು. ಎಂದರೆ ಮಠಾಧಿಕಾರಿಗಳಾಗಲಿ, [illegible] ಆಚಾರ್ಯರಾಗಲಿ, ದಾಸರನ್ನು ಕುರಿತು ಸನ್ಮಾನಿಸುವಂತೆ ನಮಸ್ಕಾರ ಮಾಡುವುದು ರೂಢಿಗೆ ಬಂದಿತು.

ಈ ವಿಷಯದಲ್ಲಿ ಬರೆಯಬೇಕಾದ ಕೆಲವು ಮಾತುಗಳಿವೆ. [illegible] ತಿರಸ್ಕಾರವೆಂಬುದು ಹಿಂದೂಗಳಲ್ಲಿ—ಅದರಲ್ಲಿ ಬ್ರಾಹ್ಮಣರಲ್ಲಿ—[illegible] ವೈಷ್ಣವರಲ್ಲಿ ತಾನೇ ತಾನಾಗಿದೆ. ಅವನತಿಯಿಂದ ಉತ್ಪತ್ತಿಗೊಳ್ಳುವ ದ್ವೇಷಗಳು [illegible] ಆಚಾರದ ಹೆಸರಿನ ಅನಾಚಾರವು ಸಾಧ್ಯದ ಸಾಹಸಕ್ಕೆ ಕಾರಣವಾಗಿದೆ.

ಸೋಮಭೂಪಾಲನ ದರ್ಬಾರಿನಲ್ಲಿ ಅವಮಾನಿತನಾಗಿ ಚಿಂತಲಕೆರೆಗೆ ಬಂದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಶೇಷಪ್ಪನು ತಪಶ್ಚರ್ಯೆಮಾಡಿ ಭಗವತ್ಸಾಕ್ಷಾತ್ಕಾರ ಮಾಡಿಕೊಂಡದ್ದು ದೊಡ್ಡದಾಗಲಿಲ್ಲ. ಶರಣಾಗತರಾಗಿ ಬಂದವರ ಇಷ್ಟಾರ್ಥಗಳನ್ನು ಸಲ್ಲಿಸಿದ್ದು ದೊಡ್ಡದಾಗಲಿಲ್ಲ. ಕೆಲವು ಕಪಿ ಮುಷ್ಟಿಯ ವೈದಿಕ ಜನರ ಮತ್ತು ಅವರಿಂದ ಪ್ರೇರಿತರಾದ ಮಠಾಧಿಪತಿಗಳಿಂದ ಮೆಚ್ಚಿಗೆಗೆ ಪಾತ್ರರಾದುದು ಬಲು ದೊಡ್ಡದೆನಿಸಿತು. ಕರ್ಣಾಟಕದಲ್ಲಿ ಮಾತ್ರವಲ್ಲ; ಮಹಾರಾಷ್ಟ್ರ ತಮಿಳುನಾಡುಗಳಲ್ಲೂ, ಭಾಗವತ ಧರ್ಮಿಗಳದು ಇದೇ ಹಾಡಾಗಿತ್ತೆಂದು ಅವರವರ ಇತಿಹಾಸಗಳಿಂದ ಗೊತ್ತಾಗುತ್ತದೆ. ಇಂಥ ಒರೆಗಲ್ಲಿಗೆ ಸಿಕ್ಕಿ-ತಿಕ್ಕಿ ಮುಕ್ಕಿದ ವಿನಾ ದೊಡ್ಡವರೆನಿಸಿಕೊಂಡವರು ಅಂತಹ ಪ್ರತಿಷ್ಠೆಗೆ ಅರ್ಹರಾಗುವುದಿಲ್ಲವೆಂದೂ ಗೊತ್ತಾಗುತ್ತದೆ.

— ೪ —

ಕರ್ಣಾಟಕ ಭಕ್ತವಿಜಯದ ಪ್ರಥಮ ಭಾಗದ ಉಪೋದ್ಘಾತದಲ್ಲಿ ತಿಳಿಸಿರುವಂತೆ ಮೊದಲಕಲ್ಲು ಶೇಷದಾಸರ ಸುಳಾದಿಗಳ ಪಟ್ಟಿಯಲ್ಲಿ ಅವರು ಚಿಂತಲಕೆರೆಗೆ ಬಂದ ದಿನದಿಂದ ಬರೆದಿಟ್ಟ ತಮ್ಮ ದಿನಚರ್ಯೆಯ (Diary) ಸಂಕ್ಷೇಪ ವರದಿಯು ದೊರೆಯುತ್ತದೆ. ಆ ಪಟ್ಟಿಯು ದಾಸರ ಹಸ್ತಾಕ್ಷರದ ಶಿಥಿಲವಾದ ಪುಸ್ತಕದಿಂದ ಕಲ್ಲೂರ ಶ್ರೀನಿವಾಸ ರಾಮಚಂದ್ರ ಕುಲಕರ್ಣಿಯವರು ಉದ್ಧರಿಸಿ ಬರೆದಿಟ್ಟುಕೊಂಡಂತೆ ತಿಳಿಯಬರುತ್ತದೆ. ಕುಲಕರ್ಣಿಯವರು ಶ್ರೀದಾಸರ ಅನುಬಂಧಿಗಳೆಂದು ಗೊತ್ತಾಗುತ್ತದೆ. ಆ ಪಟ್ಟಿಯಲ್ಲಿ ದಾಸರಾಯರು ರಚಿಸಿದ ನಲವತ್ತಮೂರು ಸುಳಾದಿಗಳ ಸಂಗ್ರಹವಿದೆ; ಮತ್ತು ಕೆಲವು ದೇವರನಾಮಗಳನ್ನೂ ಉಗಾಭೋಗಗಳನ್ನೂ ಬರೆದಿಟ್ಟಿದ್ದಾರೆ. ಸುಳಾದಿಗಳ ಕೆಳಗಿನಲ್ಲಿ ಈ ಸುಳಾದಿಯನ್ನು ಇಂಥಾ ದಿವಸ ಇಷ್ಟು ಹೊತ್ತಿನಲ್ಲಿ ಇಂಥಾ ಸಂದರ್ಭದಲ್ಲಿ ರಚಿಸಿ ಹಾಡಿದೆನೆಂದು ಸಹ ಆತನು ಗುರುತುಮಾಡಿದ್ದಾನೆ. ಸುಳಾದಿಗಳು ಎರಡು ಅರ್ಥಗಳ ಮಾತುಗಳಿಂದ ಭರಿತವಾಗಿವೆ. ತಮ್ಮ ಇಷ್ಟದೇವತೆಯೊಡನೆ ಎದುರಿಗೆ ನಿಂತು ಮಾತನಾಡಿದಂತಿವೆ. ಆ ಮಾತುಗಳೊಂದೊಂದೂ ಭಕ್ತನ ಮನಸ್ಸನ್ನು ಕರಗಿಸುವಂತಿವೆ. ದಿನಚರ್ಯೆಯ ವರದಿ (Diary) ಯಲ್ಲಿ ದಾಸರು ಮಂತ್ರಾಲಯಕ್ಕೆ ಹೋಗಿದ್ದರ ನಿಮಿತ್ತ, [illegible]

ಕಾಲದ ಪರಿಮಿತಿ, ಮಂತ್ರಮೂರ್ತಿಗಳು ಪ್ರಸನ್ನವಾದ ರೀತಿ, ವರಪ್ರದಾನ, ತಮಗಾದ ಸಕಲ ದೇವತಾ ದರ್ಶನ, ಇವುಗಳ ವಿವರಣೆಯಿದೆ. ಸಾಧಕನಾದವನ--ಸಾಧಕನಾಗಬಯಸುವನ ಸಾಧನೆಗೆ ಇದು ಉತ್ತಮ ಮಾರ್ಗದರ್ಶಿಯಾಗಿದೆ. ದಾಸರನ್ನು ಪ್ರತ್ಯಕ್ಷ ನೋಡಿದವರನೇಕರು ಗದ್ವಾಲಪ್ರಾಂತ್ಯದಲ್ಲಿದ್ದಾರೆ. ಅವರ ಮುಖದಿಂದ ದಾಸರ ಅನೇಕ ಮಹಿಮೆಗಳು ತಿಳಿದು ಬರುತ್ತವೆ. ದಾಸರ ಹೆಸರೆತ್ತಿದೊಡನೆ ಅವರು ಪುಳಕಿತರಾಗುತ್ತಾರೆ ಅದೊಂದು ಕಾಲ–ನೋಡುವ ಯೋಗವಿತ್ತೆನ್ನುತ್ತಾರೆ. ಕೆಲಕೆಲವು ವಿಷಯಗಳು ನಡೆದ ಕಾಲ ಮತ್ತು ದೇಶಗಳ ಗೊತ್ತಾದ ಯೋಜನೆಯನ್ನು ಕೇಳಿದರೆ, ಈ ಕಾಲದ ಜನರ ಚಿಕಿತ್ಸಕ ಬುದ್ಧಿಗೆ ಒಪ್ಪುವ ಉತ್ತರಗಳು ಆ ಹಳೆಯ ಜನರಿಂದ ಬರುವುದಿಲ್ಲ.

ಈ ವಿಮರ್ಶೆಗಳನ್ನು ಬಿಟ್ಟು ದಾಸರಾಯರ ಜೀವನ ಚರಿತ್ರೆಯ ಮುಖ್ಯಾಂಶಗಳ ಕಡೆಗೆ ತಿರುಗಿದರೆ, ಬಹುಮುಖದಿಂದ ವ್ಯತ್ಯಾಸವಿಲ್ಲದೆ ಬರುವ ಮತ್ತು ನಮ್ಮ ಕಡತದ ಬರಹಕ್ಕೆ ಸರಿಹೋಗುವ ಶೇಷ್ಕಾರ ವೆಂಕಟರಾಯನೆಂಬ ಗೃಹಸ್ಥನ ಕಾಶೀಯಾತ್ರೆಯ ಚರಿತ್ರೆಯು ಹೊರಬೀಳುತ್ತದೆ.

ಶೇಷ್ಕಾರ ವೆಂಕಟರಾಯನು ಕೊಪ್ಪಳದ ಇಲಾಖೆಗೆ ಸೇರಿದವನು. ಈತನು ಕುಟುಂಬ ಸಹಿತ ಕಾಶೀಯಾತ್ರೆ ಮಾಡಬೇಕೆಂದು ಹೊರಟು ಗುರುಗಳಾದ ದಾಸರ ಅಪ್ಪಣೆ ಪಡೆಯಲು ಮೊದಲ್ಕಲ್ಲಿಗೆ ಬಂದನು. ತಾನು ಮಹಾಯಾತ್ರೆಗೆ ಹೊರಟಿರುವ ಸಂಗತಿಯನ್ನು ದಾಸರಲ್ಲಿ ನಿವೇದಿಸಿ ಅಪ್ಪಣೆಯಾಗಬೇಕೆಂದನು. ದಾಸರು, 'ಅವಸರವೇಕೆ, ಧಾವತಿಯೇಕೆ ? ಇಲ್ಲೇ ಕೆಲವು ದಿವಸ ಇರು' ಎಂದರು. ಗುರುಗಳಾಜ್ಞೆಯನ್ನು ಮೀರಲಾರದೆ, ಮತ್ತೆ ಕೇಳಲು ಬಾಯಿಬಾರದೆ, ಗೃಹಸ್ಥನು ಚಿಂತೆಗೊಳಗಾದನು.

ಒಂದು ಮಧ್ಯಾಹ್ನ ತುಂಗಭದ್ರೆಯಲ್ಲಿ ಭಾಗೀರಥಿಯು ಪ್ರವೇಶಿಸುವ ಕರ್ಕಾಟಕ ಸಂಕ್ರಮಣ. ನೂರಾರು ಮಂದಿ [illegible]ಗಳು ಸೇರಿದ ಸಮಯ. ವೆಂಕಟೇಶನಿಗೆ ದಾಸರು ನೈವೇದ್ಯವಿತ್ತು, ಮಂಗಳಾರತಿ ಮಾಡಿದರು. ಗೋವಿಂದಪ್ಪನೆಂಬ ತಮ್ಮ ಮಗನ ಹೆಸರು ಹಿಡಿದು ಕರೆದರು. ಮಂಗಳಾರತಿಯನ್ನು ಕೊಡಲು ತಂದೆಗಳು ಕರೆದರೆಂದು, ಅವನು ಆರತಿಯ ತಟ್ಟೆಗೆ ಕೈಹಾಕಿದನು. ದಾಸರು ಆರತಿಯನ್ನು ಕೊಡುವುದಿರಲಿ-ಶೇಷ್ಕಾರ ವೆಂಕಟರಾಯನೆಲ್ಲಿರುವನೋ ಕರೆದುಕೊಂಡು ಬಾರೆಂದರು. ರಾಯನು ಬಂದು ನಮಸ್ಕಾರ ಮಾಡಿದನು.

ದಾಸರು :—ವೆಂಕಟರಾಯಾ, ಕಾಶೀಯಾತ್ರೆಗೆ ಅಪ್ಪಣೆ ಸಿಗಲಿಲ್ಲವೆಂದು ಚಿಂತಿಸುತ್ತಿರುವೆಯೇನು ?

ಶೇಷ್ಕಾರ :—ಚಿಂತೆ ಏನಿಲ್ಲ. ಚಿತ್ತಕ್ಕೆ ಬಂದಾಗ ಅಪ್ಪಣೆಯಾಗಲಿ !

ದಾಸರು :—ಮುದುಕರು ಮೋಟರನ್ನೆಲ್ಲಾ ಕರೆದುಕೊಂಡು ಹೊರಟಿರುವೆಯಲ್ಲಾ ! ಮಧ್ಯದಲ್ಲಿ ಶ್ರಮವೂ ಆಗಿ, ಯಾತ್ರೆಯೂ ಆಗದೆ ಹೋಗುತ್ತದಲ್ಲಾ ಎಂಬ ಚಿಂತೆ ನನಗಾಗಿದೆ.

ಶೇಷ್ಕಾರ :—ಅಪ್ಪಣೆಯಾದಂತೆ ನಡೆಯುವೆನು.

ದಾಸರು :—ನಮ್ಮ ಮಾತಿನಲ್ಲಿ ನಿನಗೆ ನಂಬಿಕೆಯಿಲ್ಲವಷ್ಟೆ !

ಪೇಷ್ಕಾರ :—ಎಂದಿಗೂ ಇಲ್ಲ.

ದಾಸರು :—ಹಾಗಿದ್ದರೆ, ಗಂಗಾಸ್ನಾನಕ್ಕೆ ಬರುವವರನ್ನೆಲ್ಲಾ ಕರೆದುಕೊಂಡು ಬಾ-ಇಲ್ಲೇ ಆ ಸ್ನಾನವಾಗುವುದು.

ಪೇಷ್ಕಾರನು ತನ್ನ ಬಳಗವನ್ನು ಕರೆದುಕೊಂಡು ಗರ್ಭಾಂಕಣದ ಬಾಗಿಲಿಗೆ ಬಂದನು. ಈಗ ಇಲ್ಲಿ ಗಂಗಾಸ್ನಾನ [illegible] ಜನರು [illegible] ಸುತ್ತಲೂ ಮುತ್ತಿದರು. ದೇವರ ಧ್ಯಾನಾಸಕ್ತರಾಗಿ ದಾಸರು ಕುಳಿತರು. ವೆಂಕಟೇಶನ ಪಾದದಿಂದ ಬುಳಬುಳನೆ ಬೀಳುತ್ತಿದ್ದ ನೀರು ಹರಿದು ಬರಲಾರಂಭಿಸಿತು. ಪದ್ಮಾಸನಾಸೀನರಾಗಿ ಕುಳಿತಿದ್ದ ದಾಸರ ವಸ್ತ್ರಗಳು ತೊಯ್ದುವು. ನಾನು ಮುಂದು ತಾನು ಮುಂದು ಎಂದು ನೂಕುನುಗ್ಗಲಿನಿಂದ ಜನರು ಗರ್ಭಾಂಕಣದ ಬಾಗಿಲಿಗೆ ಬಂದರು. ದಾಸರು ತಂಬಿಗೆಯಲ್ಲಿ ತುಂಬಿ ತುಂಬಿ ವೆಂಕಟರಾಯನ ಮತ್ತು ಅವನ ಅನುಯಾಯಿಗಳ ತಲೆಯ ಮೇಲೆ ಗಂಗೋದಕವನ್ನು ಸುರಿದರು. 'ವೆಂಕಟರಾಯಾ! ಆಯಿತೇ ಗಂಗಾಸ್ನಾನ?' ಎಂದರು. ವೆಂಕಟರಾಯನು ದಾಸರ ಕಾಲಿಗೆ ಬಿದ್ದು-'ಆಯಿತು ಮಹಾಸ್ವಾಮಿ, ತಮ್ಮ ಸನ್ನಿಧಿಯಲ್ಲಿರುವುದೇ ನನಗೆ ಸಕಲ ತೀರ್ಥಕ್ಷೇತ್ರಗಳು' ಎಂದು ನುಡಿದನು. ವೆಂಕಟರಾಯನ ಪುಣ್ಯದಿಂದ ಆ ದಿನ ಅಲ್ಲಿದ್ದ ಜನರಿಗೆಲ್ಲಾ ಗಂಗಾಸ್ನಾನವಾಯಿತು. ಪೇಷ್ಕಾರನು ಮುಂದೆ ಕೆಲವು ದಿವಸ ದಾಸರ ಸನ್ನಿಧಿಯಲ್ಲಿದ್ದು, ಯಾತ್ರಾ ನಿಮಿತ್ತ ಖರ್ಚಿಗೆ ಎಷ್ಟು ಹಣವನ್ನು ತೆಗೆದುಕೊಂಡು ಹೊರಟಿದ್ದನೋ ಅದೆಲ್ಲವನ್ನೂ ದೇವರ ಸೇವೆಗೆಂದು ದಾಸರ ಬಳಿ ಸಮರ್ಪಿಸಿ ಊರಿಗೆ ಪ್ರಯಾಣಮಾಡಿದನು.*

ದಾಸರು ಜನರ ಗುಂಪಿನಲ್ಲಿರುವುದು ಬೇಸರವಾದಾಗ ಬೆಟ್ಟದಲ್ಲಿ ಇದ್ದು ಉತ್ತತ್ತಿಗಳ ಆಹಾರದ ಮೇಲೆ ತಿಂಗಳುಗಟ್ಟಲೆ ವಾಸಮಾಡುತ್ತಿದ್ದರು. ಮನೆಯಲ್ಲಿ ನಡೆಯುವ ದಿನಗಟ್ಟಲೆಯ ಅತಿಥಿ ಸತ್ಕಾರವು ಎಂದಿನಂತೆ-ನಡೆಯುವ ರೀತಿಯಲ್ಲಿ ಲೋಪವಿಲ್ಲದೆ ನಡೆಯುತ್ತಿತ್ತು. ದರ್ಶನಾಭಿಲಾಷಿಗಳು ನಿಯಮಿತಕಾಲದಲ್ಲಿ ಬೆಟ್ಟಕ್ಕೆ ಹೋಗಿ ದಾಸರ ದರ್ಶನಮಾಡುತ್ತಿದ್ದರು. ೭೫-೮೦ ವರ್ಷ ವಯಸ್ಸಿನಲ್ಲೂ [illegible] ಗಳು [illegible], ಪ್ರಾಯದ ಯುವಕರಂತೆ [illegible] ಇದ್ದುದು ಅವರ ಆಹಾರ ನಿಯಮದ ಪ್ರಭಾವವಾಗಿತ್ತು.

ದಾಸರು ರಚಿಸಿರುವ ಸುಳಾದಿಗಳಲ್ಲಿ ೧೮ ತಾಳಗಳಿರುವೊಂದು ಅತಿಮಹತ್ವದ ಸುಳಾದಿಯಿರುವುದು. ವಿಜಯರಾಯರ [illegible] ಸುಳಾದಿಯನ್ನು ಈ ಸುಳಾದಿಯನ್ನು ಇಟ್ಟುಕೊಂಡು ಜಗನ್ನಾಥದಾಸರು, ತಮ್ಮ ಉಪಾಸನೆಯನ್ನು ಸುಲಭವಾಗಿ

---

* ಈ ಗಂಗಾವತರಣವನ್ನು ಪ್ರತ್ಯಕ್ಷ ನೋಡಿದ [illegible] ವಯಸ್ಸಿನವರಾಗಿದ್ದ ಒಬ್ಬ ಸ್ತ್ರೀಯರು ಈಗಲೂ ಬದುಕಿದ್ದಾರೆ. [illegible] ಹಳಬರು ಗದ್ವಾಲ ಇಲಾಖೆಯಲ್ಲಿದ್ದಾರೆ.

ನೆರವೇರಿಸುತ್ತಾರೆ. ಈ ಉಪಾಸನೆಯ ಮಹತ್ವವನ್ನು ವಿಜಯದಾಸರು ಹೇಳಿರುವ ಸುಳಾದಿಯ-ಜತೆಯ 'ಸಿದ್ಧಸಾಧನವಿದು ಬಿಂಬ ಕಾಣುವುವಕ್ಕೆ | ಪದ್ಮಿನಲ್ಲಭ ನಮ್ಮ ವಿಜಯವಿಠಲ ಒಲಿವ ||೧||' ಎಂಬ ಮಾತಿನಿಂದ ನೋಡಿದರೆ ಅನುಭವಸಿದ್ಧನಾದ ಮಾತೆಂದು ಗೊತ್ತಾಗುತ್ತದೆ. ಉಪಾಸಕರಿಗೇ ಅವಶ್ಯ ಬೇಕಾಗಿರುವ ಸುಳಾದಿ ಇವಾಗಿರುವುದರಿಂದ, ಅದರ ಅವಶ್ಯಕತೆಯು ಎಲ್ಲರಿಗೂ ಇರುವುದಿಲ್ಲ. ಹಾಗೂ ಯಾವ ವಿಷಯುವನ್ನು ಬರಿಮಾತಿನಿಂದ ತಿಳಿಸಿದರೆ ಅರ್ಥವಾಗುವುದಿಲ್ಲವೋ, ಯಾವ ವಿಷಯದ ಅನುಭವ ಉಪಾಸನೆಮಾಡುವುದರಿಂದಲೇ ಸಾಧ್ಯವಾಗುವುದೋ, ಅಂಥ ವಿಷಯುವನ್ನು ನಮ್ಮವರು ರಹಸ್ಯವೆನ್ನುವರು; ಗೋಪ್ಯ ಮಾಡಿಡಬೇಕೆನ್ನುವರು; ಅಧಿಕಾರಿಗಳಿಗೆ ಮಾತ್ರ ತಿಳಿಸಿ ಕೊಡಬೇಕೆನ್ನುವರು. ಆದ್ದರಿಂದ ಆ ಸುಳಾದಿಯನ್ನು ಮುದ್ರಣಕ್ಕೆ ಕೊಡದೆ ರಕ್ಷಣೆ ಮಾಡಿಡಬೇಕಾಗಿರುವುದು.

ದಾಸರು ತಮ್ಮ ಜನ್ಮಸ್ಥಳದಲ್ಲಿ ತಮ್ಮ ಜ್ಞಾಪಕಾರ್ಥವಾಗಿ ದೇವಾಲಯವೊಂದನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿ ಪರಿವಾರ ಸಹಿತ ದರೂರಿಗೆ ಬಂದರು. ಇವರ ಯೋಗಕ್ಷೇಮ ಚಿಂತನೆಯು ಯಾವಾಗಲೂ ಪರಮಾತ್ಮನದೇ ಆಗಿದ್ದುದರಿಂದ ಕೆಲಸಮಾಡುವ ಜನರಿಗಾಗಲೀ, ಬೇಕಾದ ಹಣಕ್ಕಾಗಲೀ ಯಾವ ನ್ಯೂನತೆಯೂ ಆಗಲಿಲ್ಲ. ದಿವ್ಯ ದೇವಾಲಯವಾಯಿತು. ದಾಸರ ವಾಸಕ್ಕೆ ಒಂದು ಯೋಗ್ಯ ಗೃಹ ನಿರ್ಮಾಣವಾಯಿತು. ಪ್ರತಿಷ್ಠಿಸಲು **ಪಾರ್ಥಸಾರಥಿ**ಯ ಭವ್ಯಮೂರ್ತಿಯೊಂದು ಸಿದ್ಧವಾಯಿತು. ಮಹೋತ್ಸವ ಸಮಾರಂಭಕ್ಕೆ ಆಹೂತರಾಗಿ, ಆನೆಗೊಂದಿ, ದೋಮಕುಂಟ, ವನಪರ್ತಿ, ಗದ್ವಾಲ ಸಂಸ್ಥಾನಗಳ ಅರಸರು ಬಂದಿಳಿದರು. ಸಂಸ್ಥಾನಿಕರುಗಳು ಸೇರಿ, ನಡೆಸುವ ಮಹಾ ಸಮಾರಂಭವನ್ನು ನೋಡಲು ಬಂದ ಜನಸಂಖ್ಯೆಯು ಅನೇಕ ಸಹಸ್ರವಾಯಿತು. ಜನರ ವಾಸಕ್ಕಾಗಿ ಲೆಕ್ಕವಿಲ್ಲದಷ್ಟು ಪರ್ಣಕುಟೀರಗಳಾದವು. ಒಂದು ತಿಂಗಳಷ್ಟು ಕಾಲ ಬಂದ ಜನರಿಗೆಲ್ಲಾ ಮೃಷ್ಟಾನ್ನ ಸಮಾರಾಧನೆಯಾಯಿತು. ಇದೇ ಸಮಯದಲ್ಲಿ ದಾಸರ ಮೊಮ್ಮಗು ವಿಜಯರಾಯನ ಉಪನಯನವನ್ನು ನೆರವೇರಿಸಲು ದಾಸರು ನಿಶ್ಚಯಿಸಿದರು. ಇದನ್ನನುಸರಿಸಿ ಧರ್ಮೋಪನಯನಗಳೂ ಅನೇಕ ವಿವಾಹಗಳೂ ಏರ್ಪಟ್ಟುವು. ಮಾಣವಕರಿಗೂ, ವಧೂವರರಿಗೂ ವಸ್ತ್ರಭೂಷಣಗಳನ್ನು ರಾಜರುಗಳು ನಾನು ಮೊದಲು ತಾನು ಮೊದಲೆಂದು ಹವಣಿಸಿದರು. ನಾಲ್ವರು ರಾಜರೂ ಭಂಗಾರದ ಹರಿವಾಣಗಳಲ್ಲಿ ಹಣವನ್ನು ತಂದಿಟ್ಟು, ಮಹೋತ್ಸವಕ್ಕೆ ಬಂದ ವಿದ್ವಜ್ಜನರಿಗೆ ಭೂರಿದಕ್ಷಿಣೆ ಕೊಡಬೇಕೆಂದು ದಾಸರನ್ನು ಪ್ರಾರ್ಥಿಸಿದರು. ದಾಸರು ಗದ್ವಾಲ ಮಹಾರಾಜ **ರಾಮಭೂಪಾಲ**ನ ಹಸ್ತದಿಂದ ದಾನಮಾಡಿಸಿದರು. ಈ ಮಹೋತ್ಸವವು ಪಾರ್ಥಿವ ಸಂವತ್ಸರದ ಚೈತ್ರಮಾಸದಲ್ಲಿ ನಡೆಯಿತು. ಉತ್ಸವಾಂಗವಾದ ಅವಭೃತಾನಂತರ ರಾಜರುಗಳು ದಾಸರಿಂದ ಫಲಮಂತ್ರಾಕ್ಷತೆಗಳನ್ನು ಸ್ವೀಕಾರಮಾಡಿ ತಮ್ಮ ರಾಜಧಾನಿಗಳನ್ನು ಕುರಿತು ಪ್ರಯಾಣಮಾಡಿದರು. ದಾಸರು ಚೈತ್ರ ಬಹುಳದಲ್ಲಿ ಗದ್ವಾಲಿನಲ್ಲಿ ಮೂರುದಿವಸಗಳಿದ್ದು ಬಾಲ ಮಹಾರಾಜನಿಗೆ ಹಿತಬೋಧನೆಮಾಡಿ ಮೊದಲಕಲ್ಲನ್ನು ಸೇರಿದರು.

ಪಾರ್ಥಿವ ಶರೀರಧಾರಣೆ ಮಾಡಿದಮೇಲೆ ಎಂತಹ ಬ್ರಹ್ಮಜ್ಞಾನಿಗಳಾದರೂ ಅದರ ಸಂಬಂಧವಾದ ಸುಖದುಃಖಗಳನ್ನು ಅನುಭವಿಸಲೇ ಬೇಕಷ್ಟೆ! ವೈಶಾಖ ಶುದ್ಧ ಪಂಚಮಿಯಿಂದ ದಾಸರಿಗೆ ದೇಹಾಲಸ್ಯವಾಯಿತು. ತಮ್ಮ ಭೂಋಣಾನುಬಂಧವು ಇನ್ನು ಮೂರು ದಿನಗಳೆಂದು ದಾಸರರುಹಿದರು. ಭೀಮದಾಸರು-ಗೋವಿಂದದಾಸರು ಎಂಬ ಹೆಸರಿನ ಇಬ್ಬರು ಮಕ್ಕಳಿಗೆ ದಾಸರಿಂದ ಅಂಕಿತೋಪದೇಶವಾಯಿತು. ಮಕ್ಕಳು ಮುಂದಿನ ಕಾರ್ಯ ಹೇಗೆ ನಡೆಯಬೇಕೆಂದು ಪ್ರಶ್ನೆ ಮಾಡಿದರು. ನಡೆಯಬೇಕಾದ್ದು ಭಗವದಿಚ್ಛೆಯಂತೆ ನಡೆವ ಕಾರಣ ಅದರ ತಾಪ ನಿಮಗೆ ಬೇಡವೆಂದು ದಾಸರ ಆಜ್ಞೆಯಾಯಿತು.

ಶಾಲೀವಾಹನ ಶಕ ೧೮೦೭ನೇ ಪಾರ್ಥಿವ ಸಂವತ್ಸರದ ವೈಶಾಖ ಶುದ್ಧ ಅಷ್ಟಮಿಯಂದು ಪ್ರತಿವರ್ಷವೂ-ಸಾವಿರಾರು ಜನರು ಕಲೆತು ಆಚರಿಸುವ ದಾಸರ ಪುಣ್ಯತಿಥಿಯಾಗಿದೆ. ದಾಸರ ದೇಹ ಸಂಸ್ಕಾರ ಮಾಡಿದ ಸ್ಥಳದಲ್ಲಿ ಕಟ್ಟೆಯೊಂದಿದೆ. ಭಕ್ತಜನರು ಅದನ್ನು ಪಾವನಸ್ಥಳವೆಂದು ಭಾವಿಸುತ್ತಾರೆ. ಆರಾಧನೆಯ ಕಾಲದಲ್ಲಿ ದಾಸರಾಯರ ಪ್ರತೀಕಕ್ಕೆ ರಥೋತ್ಸವವಾಗುತ್ತದೆ. ಆ ಮಹಾನುಭಾವರ ಉಪಕಾರಸ್ಮರಣೆಯಾಗುತ್ತದೆ.

ಕರ್ಣಾಟಕದ ಇತರ ಹರಿದಾಸರುಗಳು

ಮೊದಲಕಲ್ಲು ಶೇಷದಾಸರ ವೈಭವ ಕಥನದೊಂದಿಗೆ ಭಕ್ತವಿಜಯದ ಹರಿಶರಣರ ಭಾಗ ಪೂರ್ತಿಯಾಯಿತೆಂದೇ ಹೇಳಬೇಕು. ಹರಿದಾಸರ ಜೀವಿತ ಇತಿಹಾಸದಲ್ಲಿ ತಿಳಿಯ ಬೇಕಾದ ಏಕಾಂಶವೂ ತಿಳಿದಿಲ್ಲ. ತಿಳಿದ ವಿಷಯಗಳ ಏಕಾಂಶವನ್ನೂ ಬರೆದಿಲ್ಲ. ಬರೆದಿಟ್ಟಿದ್ದರ ಏಕಾಂಶವನ್ನೂ ಮುದ್ರಿಸಿಲ್ಲ. ಜಗತ್ತಿಗೆ ಆದರ್ಶಜೀವನವನ್ನು ತೋರಿಸಿ ಲಕ್ಷಾಂತರ ಜನರನ್ನುದ್ಧರಿಸಿದ ನೂರಾರುಮಂದಿ ಪುಣ್ಯನಾಮರ ಮಧ್ಯವಲ್ಲಿ ಅರಿಸಿದ ಚರಿತ್ರೆಗಳೆಂಪರೆ ಹತ್ತಾರು ಜನರದು ಮಾತ್ರ ! ಮುದ್ರಿಸದೆ ಬಿಟ್ಟಿರುವವುಗಳಲ್ಲಿ ಇತಿಹಾಸಕ್ಕೆ ಹೊಂದಿಕೆಯಾಗದವು ಕೆಲವು. ಪುರಂದರದಾಸರ ಮತ್ತು ವಿಜಯದಾಸರ ಜೀವಿತಗಳಂತಿರುವವು ಕೆಲವು.

ಕಳೆದ,ಐವತ್ತು ವರ್ಷಗಳಲ್ಲಿ ದೇವರನ್ನು ಕಂಡ ಮಹಾಪುರುಷರೆಂಬ ಪೂಜ್ಯತೆ ಪಡೆದ ಹರಿದಾಸರ ಅವತಾರವಾಗಿಲ್ಲ. ಶಿಷ್ಟಾಚಾರ ಸಂಪನ್ನರು, ಧರ್ಮಪ್ರಚಾರಮಾಡಿದ ಪಂಡಿತೋತ್ತಮರು, ಎಂಬ ಸತ್ಕೀರ್ತಿಪಡೆದ ಹರಿದಾಸರು ಕೆಲವರಾಗಿದ್ದಾರೆ. ಅವರಲ್ಲಿ ಕ್ರಮವಾಗಿ ತೆಗೆದುಕೊಳ್ಳಬೇಕಾದ ಹೆಸರುಗಳೆಂದರೆ :—

ಅಡವೀ ರಾಮದಾಸರು

ಅಣ್ಣಾವಧೂತರಂತೆ, ಅಡವೀ ರಾಮದಾಸರೆಂಬ ಸತ್ಪುರುಷರೊಬ್ಬರು ಉತ್ತರ ಕರ್ಣಾಟಕದಲ್ಲಿ ಜನ್ಮತಾಳಿ ವಿಚಿತ್ರ ಮಹಿಮೆಗಳನ್ನು ತೋರಿಸಿ, ಪ್ರಸಿದ್ಧರಾಗಿದ್ದರೂ ಅವರ ಇತಿಹಾಸವೇನೂ ತಿಳಿಯುವಂತಿಲ್ಲ. ಅವರ ಕನ್ನಡ ಹಾಡುಗಳಿಗೆ '**ಕದರುಂಡಲಿಗಿ ಹನುಮಯ್ಯ**' ಎಂಬ ಮುದ್ರಿಕೆಯಿದೆ. ನೂರಾರು ಪದಗಳ ಪ್ರಚಾರವಿದ್ದರೂ ಆ ಮಹನೀಯರ ವಿಚಾರವನ್ನು ಹೇಳುವರು ಈ ಕಾಲದಲ್ಲಿ ದೊರೆಯುವುದಿಲ್ಲ. ಕಾಶ್ಮೀರ ಪ್ರಾಂತ್ಯದಿಂದ ಕರ್ಣಾಟಕಕ್ಕೆ ಬಂದು ನೆಲೆಸಿದ ಸಹವಾಸೀ ಬ್ರಾಹ್ಮಣರ ಮಧ್ಯದಲ್ಲಿ ರಾಮದಾಸರು ಜನ್ಮ ತಾಳಿದರೆಂಬುವುದು ಬಹುಮುಖದಿಂದ ತಿಳಿದುಬರುತ್ತದೆ. ಕದರಮುಂಡಿಲಿಗಿ ದಾಸರ ಮನೆತನಸ್ಥರು ಬಹು ಕಾಲದಿಂದ ಮೈಸೂರಲ್ಲಿ ವಾಸವಾಗಿದ್ದು-ಮುಮ್ಮಡಿ ಕೃಷ್ಣರಾಜ ಒಡೆಯರ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದರೆಂಬುವುದು ಮಾತ್ರ ತಿಳಿದುಬರುವುದಲ್ಲದೆ, ಆ ವಂಶಸ್ಥರಿಂದ ಅವರ ಗೊತ್ತಾದ ಇತಿಹಾಸ ಸಿಗುವುದಿಲ್ಲ.

ಆದವಾನಿಯ ರಾಮಸುಂದರದಾಸರು

'**ರಾಮಸುಂದರ ವಿಠಲ**' ಮುದ್ರಿಕೆಯಿಂದ ಭಾಗವತವನ್ನು ಕೀರ್ತನಕ್ಕಿಳಿಸಿ ಸುಂದರ ಕವಿತೆಗಳನ್ನು ಮಾಡಿರುವ ಈ ದಾಸರ ಪದಗಳು ಬಲು ಸುಂದರವಾಗಿವೆ. ಕರ್ಣಾಟಕದಲ್ಲೆಲ್ಲಾ 'ಪೋಗಿ ಬರುವೆ ಗೋಪ ನಾಗವೇಣಿಯರೆ ||" ಎಂಬ ದೇವರನಾಮ

ಬಹು ಮುಖದಿಂದ ಬರುತ್ತಿರುವ ಕಾರಣ ಮಾದರಿಯನ್ನು ಪ್ರತ್ಯೇಕ ಬರೆಯಬೇಕಾಗಿಲ್ಲ. ಇವರು ಶ್ರೀ ಜಗನ್ನಾಥ ದಾಸರೆದುರಿಗೆ ಕೀರ್ತನಮಾಡಿ, ಅವರಿಂದ ಸ್ವರೂಪಜ್ಞಾನ ಪಡೆದ ಮಹನೀಯರು.

ಪ್ರೇಮದಾಸರು

ಅಭಿನವ ಜನಾರ್ದನ ವಿಠಲ ಮುದ್ರಿಕೆಯಿಂದ ಇವರು ಹಾಡುಗಳ ನಿನಾದವು ಕರ್ನಾಟಕದಲ್ಲಿ ಬಹಳ ಪ್ರಚಾರದಲ್ಲಿದೆ. ಶ್ರೀ ರಾಘವೇಂದ್ರಸ್ವಾಮಿಗಳ ಪ್ರೇಮಕ್ಕೆ ಮುಖ್ಯ ಪಾತ್ರರಾಗಿದ್ದ ಕಾರಣ ಇವರಿಗೆ ಪ್ರೇಮದಾಸರೆಂಬ ಹೆಸರಾಗಿದೆ. ಇವರೂ ಅಪರೋಕ್ಷ ಜ್ಞಾನಿಗಳೇ!

ಶ್ರೀನಿವಾಸದಾಸರು

ಶ್ರೀನಿವಾಸದಾಸರು ಮೈಸೂರಿನವರು. ಹೊನ್ನಾಳೀ ದಾಸರ ಪೀಳಿಗೆಯವರಿಂದ **ಜಯವಿಠಲಾಂಕಿತ**ವನ್ನು ಪಡೆದವರಿವರು. ಅನೇಕ ದೇವರನಾಮಗಳು, ರಗಳೆಗಳು, ಆಖ್ಯಾನಗಳು ಶ್ರೀನಿವಾಸದಾಸರಿಂದ ಲಿಖಿತವಾಗಿವೆ. ದ್ವಾರಕಾವರ್ಣನೆ, ವಿರಾಡ್ರೂಪ ವರ್ಣನೆ, ಮೋಹಿನೀರೂಪ ವರ್ಣನೆಗಳು, ಮರಾಠಿಯ ಕಟಿಬಂಧಗಳಂತೆ ಲಾವಣಿಗಳೆಂಬ ಹೆಸರನ್ನು ತಾಳಿವೆ. ಪೂರ್ವೇತಿಹಾಸ ಸಹಿತವಾಗಿ, ಮಾದರಿಗಾಗಿ ದ್ವಾರಕಾವರ್ಣನೆಯನ್ನು ಇಲ್ಲಿ ಕೊಡಲಾಗಿದೆ.

ಪೂರ್ವಸಂದರ್ಭ

ಮುಮ್ಮಡಿ ಕೃಷ್ಣರಾಜ ಒಡೆಯರು, ಮೈಸೂರು ರಾಜಧಾನಿಯಲ್ಲಿ ಕ್ರಿ. ಶ. ೧೮೧೧ರಲ್ಲಿ ಸರ್ವತಂತ್ರ ಸ್ವತಂತ್ರರಾಗಿ ರಾಜ್ಯವಾಳಲಾರಂಭಿಸಿದರು. ಟಿಪ್ಪೂಸುಲ್ತಾನನಿಂದ ನಾಶವಾಗಿದ್ದ ಕೋಟೆ ಕೊತ್ತಲಗಳೂ ಅರಮನೆಯೂ ಪುನಃ ನಿರ್ಮಾಣವಾಗಿ, ಭಂಡಾರದಲ್ಲಿ ಧನ ಕನಕ ಸಮೃದ್ಧಿಯಾಯಿತು. ಕರ್ನಾಟಕ ಸಾಮ್ರಾಟ್ ವಿಜಯನಗರದ ಕೃಷ್ಣದೇವರಾಯನ ಅರಮನೆಯ ಧಾರ್ಮಿಕ ಪದ್ಧತಿಗಳು ಕೃಷ್ಣರಾಜಪ್ರಭುಗಳ ಅರಮನೆಯಲ್ಲೂ ನಡೆಯಬೇಕೆಂಬ ಕಟ್ಟಲೆಯಾಯಿತು. ಹಿಂದೂ ಸಂಸ್ಕೃತಿಗೆ ಒಂದು ಪ್ರಕಾರದ ನವಚೈತನ್ಯವುಂಟಾಯಿತು. ವಿವಿಧ ವಿದ್ಯಾವಿಶಾರದರಿಗೆ ರಾಜಾಶ್ರಯ ದೊರೆಯಿತು. ಸಂಸ್ಕೃತ ಕವಿಗಳಿಗೂ ವಿದ್ವಾಂಸರಿಗೂ ದೊರೆತಂತೆ, ಕನ್ನಡ ಕವಿ-ವಿದ್ವಾಂಸರಿಗೂ ರಾಜಾಶ್ರಯ ಸ್ಥಾನಮಾನಗಳು ದೊರೆತುವು. ಅನೇಕ ಕನ್ನಡ ಗ್ರಂಥಗಳ ರಚನೆಯಾಯಿತು. ಶಾಸ್ತ್ರಾಭ್ಯಾಸ ಹೆಚ್ಚಿತು.

ಇಂಥಾ ಸಮಯದಲ್ಲಿ ಒಂದು ಮಧ್ಯಾಹ್ನ, ಅರಮನೆಯಲ್ಲಿ ವಿದ್ವದ್ಗೋಷ್ಠಿ ಸೇರಿದೆ. ತ್ರಿಮತಸ್ಥ ಪಂಡಿತರ ವಾಕ್ಯಾರ್ಥಗಳಾಗಿವೆ. ಶ್ರೀಮನ್ಮಹಾರಾಜರ ಸನ್ನಿಧಿಯಲ್ಲಿ-ಒಂದೊಂದು ಮತದ ಪ್ರಕ್ರಿಯೆಯಿಂದು ಪಂಡಿತವರ್ಯರಿಂದ ವರದಿಯಾಗಿದೆ. ಮೈಸೂರ ಅರಮನೆಯನ್ನು ವರ್ಣಿಸಿ ಕವಿಗಳು ಓದುತ್ತಿದ್ದಾರೆ. ಕನ್ನಡದ ವರ್ಣನೆಯನ್ನು ಕೇಳಿ ಮಹಾರಾಜರು :- ಇದು ಕ್ಲಿಷ್ಟ ; ಇದು ಹಳೆಗನ್ನಡ : ಅರ್ಥವಾಗುವುದಿಲ್ಲ, ದೇವರನಾಮ

ಗಳ ಭಾಷೆಯಲ್ಲಿ ವರ್ಣಿಸಬಾರದೇ ಎಂದು ಕೇಳಿದ್ದಾರೆ. ಕವಿಗಳು–'ಆ ಶೈಲಿಯಲ್ಲಿ ಬರೆಯಲು ಹರಿದಾಸರೇ ಆಗಬೇಕು' ಎಂದು ಉತ್ತರಕೊಟ್ಟಿದ್ದಾರೆ. ಈ ಮಾತಿನ ಕುಹಕವನ್ನು ಚಾಣಾಕ್ಷರಾದ ಮಹಾರಾಜರು ಗ್ರಹಿಸಿದ್ದಾರೆ. ಮಹಾರಾಜರು ನಗುತ್ತಾ–'ಸರಿ, ಅಂಥಾ ಹರಿದಾಸರು ಮೈಸೂರಿನಲ್ಲಿ ಯಾರೂ ಇಲ್ಲವೇ' ಎಂದು ಪ್ರಶ್ನೆಮಾಡಿದ್ದಾರೆ. ಶಾಸ್ತ್ರಜ್ಞರು ಶ್ರೀನಿವಾಸದಾಸರೆಂಬುವರೊಬ್ಬರು ಇದ್ದಾರೆಂದು ಉತ್ತರಕೊಟ್ಟಿದ್ದಾರೆ. ರಾಜಾಜ್ಞೆಯಿಂದ ದಾಸರು ಪಂಡಿತರ ಸಭೆಗೆ ಬಂದಿದ್ದಾರೆ. ಪ್ರಭುಗಳು–'ದಾಸರೇ ಹರಿದಾಸರ ಶೈಲಿಯಿಂದ ಅರಮನೆಯನ್ನು ವರ್ಣಿಸಿ ಕವಿತೆ ಮಾಡುವಿರಾ?' ಎಂದು ಕೇಳಿದ್ದಾರೆ. ದಾಸರು–'ಪ್ರಭೋ, ನಾನು ನಿಯಮಬದ್ಧದಾಸ, ಲೌಕಿಕವರ್ಣನೆಗಳನ್ನು ಮಾಡಿ ಅಭ್ಯಾಸವಿಲ್ಲ; ಕೃಷ್ಣಪ್ರಭುಗಳ ಸನ್ನಿಧಿಯಲ್ಲಿ–ಶ್ರೀಕೃಷ್ಣಪರಮಾತ್ಮನ ಒಡ್ಡೋಲಗವನ್ನು ವರ್ಣಿಸುವೆ'ನೆಂದು ಹೇಳಿದ್ದಾರೆ. ಮಹಾರಾಜರು ಆಗಬಹುದೆಂದು ಸಮ್ಮತಿಸಿದ್ದಾರೆ. ಶ್ರೀನಿವಾಸದಾಸರು ಪರಮಾತ್ಮನ ದ್ವಾರಕಿಯನ್ನು ಈ ಕೆಳಕಂಡಂತೆ ವರ್ಣಿಸಿದ್ದಾರೆ.

ಮಹರಾಜ ಯದುಕುಲಧಾಮ
ಸುರರಾಜ ಸುಂದರಧ್ಯಾಮ
ದ್ವಿಜರಾಜವಂಶ ಲಲಾಮ
ಮಹರಾಜ | ಮಹರಾಜ ಪ.
ಸುಂದರತರ ದ್ವಾರಾವತಿ ನಗರ
ಸುತ್ತಯೋಜನ ದ್ವಾದಶ ವಿಸ್ತಾರ
ಸಿಂಧೂರದಿ ತಿದ್ದಿದ ಗೋಪುರ
ಶಶಿಕೋಟಿ ಪ್ರಭೆಗಳ ದಿಕ್ಕಾರ
ಒಂದಾರಿಂದಲಿಹುದು ಪ್ರಾಕಾರ
ವಜ್ರಾನ್ವಿತ ಕವಾಟ ದ್ವಾರ ||
ಬಂಧಿಸಿಹರು ಬಹು ರತ್ನಗಳಿಂದ
ಬುರುಜುಗಳಿವೆ ಬಹು ಲಕ್ಷಗಳಿಂದ !
ಅಂದವಾದ ಆಳ್ವೇರಿಗಳು
ಕರಿವೃಂದಗಳಿಂದಲಂಕಾರಗಳು
ಮೇಲಿಂದ್ರ ನೀಲ ಪುತ್ಥಳಿಗಳ ತಿದ್ದಿ
ಇಟ್ಟಿಹರೈ ಪ್ರಾಕಾರದಿ ಹೊದ್ದಿ |
ಮುಂದೆ ಮೃಗೇಂದ್ರನ ಮುಖಗಳ ರಚಿಸಿ
ಮಾಣಿಕ್ಯಗಳದರಲಿ ಮೇಳವಿಸಿ |
ಒಂದೇ ರೀತಿಯೊಳಿರುವ ತೆನೆಗಳು
ವರುಣಾಲಯದಂತಿರುತಿಹ ಅಗಳು |
ಮಂದರಗಿರಿಯಂದದಿ ಉನ್ನತ
ಮೂರುಲೋಕದೊಳು ಬಲು ಪ್ರಖ್ಯಾತ |
ಸಿಂಧು ಮಧ್ಯದೋಳೆಸೆವುದು ನಗರ
ಸೀಮೆಯೊಳಾವನು ಬಲ್ಲನು ಚದುರ
ಚಂದ್ರನ ಸುಕರ
ಮುತ್ತಿನ ಮಕರ
ತೋರಣ ನಿಕರ
ರತ್ನದ ಶಿಖರಗಳಿವೆ ಸಾವಿರ
ಬಂಧನ ಮುರಗಿಗಳಿಂದ
ವಿಮಾನಗಳಿಂದ
ಪತಾಕೆಗಳಿಂದ
ಸುಕೌಶಲದಿಂದ
ದಿವೌಕಸವೃಂಧ
ವಿಚಿತ್ರ ಸುಗಂಧ
ವಿಶೇಷಗಳಿಂದತಿ ನೋಡಲು
ಚೆಂದಳಿ ವೃಂದಾರವಿಂದಗಳ್ಹೊಂದಿ ಸು
ಮಂದರ ಸ್ವರ ಪಿಕವೃಂದ ಧ್ವನಿಗಾನಂದವಿಸೆ
ಹರುಷಂಕುರಿಸೆ
ಸುಖ ಮೋಹರಿಸೆ
ಜನ ಮೈಮರೆಸೆ
ಸುಮಂದಿರಗಳ ಮೇಲ್
ಚಂದ್ರಶಾಲೆಗ

ಳಿಂದಲೆಸೆಯೆ ಪೂ
ರ್ಣೇಂದು ವದನೆಯರು
ಪಂಕಜಾಕ್ಷಿಯರು
ಮಂದಹಾಸೆಯರು
ಮೃದುಗಾತ್ರೆಯರು
ಅಂದಣಗಳಲಿ ವಿಹರಿಸುತಲಿರೆ
ವರ ಸಾಂದ್ರವಾದ ಜಾಳಾಂದ್ರ
ಗವಾಕ್ಷಗಳಿಂದ
ಲೆಸೆವ ಮೇಲುಪ್ಪರಿಗೆಗಳಿರೆ
ಗಂಧ ಪನ್ನೀರಿನ ತಳಿಯ ಹಾಕಿಹರು
ಘಮಘಮಿಸುವ ಪುಷ್ಪಗಳ ಕಟ್ಟಿಹರು
ಸ್ಯಂದನಗಳು ಶತಸಾವಿರ ಸಂಖ್ಯೆಯೊಳ್
ನಿಂದಿವೆ ಪುರದ್ವಾರದಲಿ
ವೃಷ್ಣ್ಯಂಥ ಕರಾಯುಧಗಳ ಪಿಡಿದು
ಅರರೇ ನಿಂದಿಹರು ಮುದದಲ್ಲಿ
ಕರಿವೃಂದ ತುರಗ ಕಾಲಾಳುಗಳು
ಪುರವೀಧಿ ವೀಧಿಗಳಲ್ಲಿ
ಸುನಂದ ಸನಕಾದ್ಯರು ಬಂದು
ನಿಂದಿಹರು ಸಮುಖದಲಿ
ವರಕುಂದಣದಂತೆ ವಿರಾಜಿಸುವಾಮಲ
ಭಿತ್ತಿಗಳು
ನವರತ್ನಗಳು
ಸಾಲಿಂದಲೆಸೆವ ನವದ್ವಾರಗಳು
ಆಗಾರಗಳು
ಥರದಿಂದ ತೋರ್ಪ ಮೇಲ್ಕಟ್ಟುಗಳು
ನೆಲಗಟ್ಟುಗಳು
ಜಲಬಿಂದುಗಳಿಂದಾನಂದ ಕೊಡುವ
ಕಾರಂಜಿಗಳು
ಸುಮ ಪುಂಜಗಳು
ಮಹೇಂದ್ರನಿರುವ ಅಮರಾವತಿಯೋ
ಇದ ಕಟ್ಟಿದವನ ಪ್ರವೀಣತೆಯೋ
ಬಲು ಸಂದಣಿ | ಬಲು ಸಂದಣಿ
ಬಲು ಸಂದಣಿ ಸುರರೈತಂದು ದ್ವಾರದಲಿ
ನಿಂದು ಸ್ವಾಮಿ ಪರಾಕು
ನಮ್ಮ ಸುವಾಕು
ಲಾಲಿಸಬೇಕು
ಎಂತೆಂದ್ರಿಂದ್ರಾದ್ಯರು ನಿಂದೊದರೆ
ಆ ಗರ್ಜನೆಗೆ ನೆಲ ಬೆದರೆ
ಮಹರಾಜ–ಮಹರಾಜ ೧
ಝುಗಝುಗಿಸುವ ಶಿರಿಕರದ ಕನ್ನಡಿಯೊ
ಜಗದೊಳಗಿಲ್ಲದ ಸ್ಮರನ ಗರುಡಿಯೊ
ನಗ ವೈರಿಗೆ ಇದು ನಾಟ್ಯ ಚಾವಡಿಯೊ
ನಾಗನಗರಿಯ ಪ್ರಭೆಗಿಮ್ಮಡಿಯೋ
ನಗರದಮಲ ಸುಕಾಂತಿ ಚ್ಛವಿಯೋ
ನಗಜಾರಮಣನ ರಜತದ ಗಿರಿಯೋ
ನಾಗರತ್ನದಿಂ ರಚಿಸಿದ ಗುಡಿಯೋ
ವಿಗಡ ಮದನಕರ ಸುರಗಿಯ ಕಿಡಿಯೋ
ಮೃಗಶಾ ಬಾಕ್ಷಿಯರಿಗೆ ಎಪೆಪುಡಿಯೋ
ಮೃಗಧರ ಮಾರ್ತಾಂಡರುಗಳ ಫಡೆಯೋ
ಮಜ ಭಾಪುರೆ ವೈರಾಜನ ಸಭೆಯೋ
ಜಗವನು ಬೆಳಗಿಪ ದೀಪದ ಕುಡಿಯೊ
ಜಗತೀಪತಿ ಶ್ರೀಹರಿಯ ದೇವಡಿಯೊ
ನಗುತಿವೆ ದೀಪಾವಳಿಗಳು ಸ್ತಂಭಾ
ದಿಗಳಲಿ ಸ್ವರ್ಗವ ನೋಡಿ ಮೇಲ್
ಗಗನವ ಚುಂಬಿಪ ಗಾಢ ತರದಿ
ಗಂಭೀರದಲೊಪ್ಪುವ ಮಹಡಿ
ಹೊಗಹೊರ್ಗುತಿಹೆ ಚಿತ್ತಾರಗಳಲಿ
ಶೋಭಿಸ
ಸ್ವರ್ಣಮಯದ ವರಗ್ವಾಡಿ
ಗ್ವಾಡಿಗಳಲಿ ನೋಳ್ಪರ ಚಿತ್ತ ಭ್ರಾಮಕ
ಚೌಕಡೆಯಲಿ ನಿಲುಗನ್ನಡಿ
ಸಾಲುಗಳಲಿ ಮಣಿಮಯ ಸ್ತಂಭಗಳು
ರುಗ್ಮಗಳಲಿ ತಿದ್ದಿದ ಲೋವೆಗಳು
ರಜತದಲಿ ಮಾಡಿದ ಹಂಸೆಗಳು

ಕುಸುಮಗಳಿಂದಲೊಪ್ಪುವ ಬೇಲುಗಳು
ಜಾಗರದಲಿ ರಂಜಿಪ ನವಿಲುಗಳು
ಅರಗಿಳಿಯ ಸಾಲುಗಳು
ಅರಳ ಗುಚ್ಛಗಳು
ಅಗಣಿತ ರತ್ನಾನ್ವಿತ ಪೀಠಗಳು
ಅದ್ಭುತವಾದ ವಿಚಿತ್ರ ದ್ವಾರಗಳು
ಸೊಗಸಿನ ಚಿತ್ರದ ಮೇಲ್ಕಟ್ಟುಗಳು
ಸುಂದರಿಯರ ಸುಖಕರದ ಗಾನಗಳು
ತೆಗೆದ ಲಕ್ಷ ಗವಾಕ್ಷಿಗಳು
ತಾರೆಗಳಲಿ ತಿದ್ದಿದ ಕುಸುರಿಗಳು
ಕುಸುರಿಗಳಲಿ ಮುತ್ತಿನ ಚೆಂಡುಗಳು
ಚೆಂಡುಗಳಿಗೆ ರತ್ನದ ಗೊಣಸುಗಳು
ಗೊಣಸುಗಳಲಿ ಮೇಲೊಪ್ಪುವ ಕಮಲಗಳು
ಕಮಲಗಳಲಿ ಮೆರೆವಾ ಭ್ರಮರಗಳು
ಸುಮುದರಳುಗಳು
ಮಘಮಘಿಸುವ ಗಂಧಾದಿಗಳಿಂದೊಪ್ಪುವ
ಮಂಚಗಳು
ಸ್ಮರಸಂಚುಗಳು
ತೆಗೆ ಮಿಗಿಲುಂಟೆ ಈ ಜಗದೊಳು ಶಿರಿಕರ
ಯುಗಳದಿ ಸೌಭಾಗ್ಯವ ತಾ ಧರಿಸಿ
ನಗರದಿ ನೆಲೆಸಿಹಳ್ಳೆ ಹರಿಯರಸಿ
ತಾ ಮನವೆರೆಸಿ
ಸುಖವನುಸರಿಸಿ
ಹರಿಯನುಸರಿಸಿ
ದುಃಖವ ಮರೆಸಿ
ಪೊಗಳಲೊಶವೆ ಮಹರಾಜ ಸುರೋತ್ತಮ
ಸೆಜ್ಜೆಯ ಮೇಲಕೆ ಸ್ವಾರಿ
ಮೂರುಹೆಜ್ಜೆ ಯಿಡಲು ಜಂಭಾರಿ
ತಾ ಲಜ್ಜಿಸಿ ಬಿಟ್ಟನು ದಾರಿ
ಬಲು ಜರ್ಝರಿಸಿತು ಸುರನಗರಿ
ಮಹರಾಜ-ಮಹರಾಜ ೨
ಶಿರಿಯರಸನ ಶ್ರೀಮುಖದ ಶೃಂಗಾರ

ಶಶಿಕೋಟಿ ಪ್ರಭೆಗಳ ಧಿಕ್ಕಾರ
ಅರಳಿದ ಕುಸುಮಮಂಜರಿಗಳ ಹಾರ
ಆಡುವ ಮತ್ತಾಳಿಗಳ ಝೇಂಕಾರ
ಮರಕತ ಸುಂದರ ಶ್ಯಾಮ ಶರೀರ
ಮಕರಧ್ವಜ ಸಾಸಿರನಾಕಾರ
ಶಿರಿಮುಡಿಯೊಳು ಶೃಂಗಾರ ಕಿರೀಟ
ಸುಮನೋಹರದಲಿ ತಿದ್ದಿದ ಮಾಟ
ಕರುಣಾರಸಪೂರಿತ ಅರೆನೋಟ
ಕಾಮಿತ ಕೊಡುವುದು ಈ ಭ್ರೂಮಾಟ
ವರ ಕಸ್ತೂರೀ ತಿಲಕ ಲಲಾಟ
ವಾಮಾಕ್ಷಿಯರಿಗೆ ಇದೆ ಎದೆಗೂಟ
ಸರಸಿಜದಳನೇತ್ರಗಳ ವಿಲಾಸ
ಸರಸೋಕ್ತಿಗೆ ಸೂಸುವುದು ಪೀಯೂಷ
ಪರಮುದಯಾಳುಗಳಿಗೆ ಇವ ಅರಸ
ಪರಿಪರಿಯ- ಸುಖ ಕರೆಸುವ ವರುಷ
ಕೊರಳಲಿ ಮೆರೆಯುವ ಮುತ್ತಿನ ಕಂಠೀ
ಕಿವಿಯೊಳು ಶೋಭಿಸ ಮಕರದ ವಂಟಿ
ತರುಣಾದಿತ್ಯನ ಪೋಲುವ ಪದಕ
ತೋರುತಲಿವೆ ನೋಡು ಫಾಲದಿ ಅಳಕ
ಕರದೊಳು ಹಾಕಿದ ರತ್ನದ ಥೋಡೆ
ಕೌಂಸ್ತುಭ ರತ್ನಕೆ ನೋಡಿನ್ನೀಡೆ
ಅರುಣಾಧರ ದಾಳಿಂಬ ಸುದಂತ
ಅಂಬುಜ ಕಂಬುಗೆದಾರಿ ಕರಾಂತ
ಸರಸಿಜನಾಭಿ ತ್ರಿವಳಿಗಳಿಂದ
ಸುಂದರ ಬಾಪುರಿಗಳು ಬಲು ಅಂದ
ಸುರು ಚೀರಾಂಬರ ಭೂಷ ವಿಲಾಸ
ಸುಮನಸರೀಕ್ಷಿಸೆ ಪರಮೋಲ್ಲಾಸ
ಪುರಹರ ಸುರನರ ವಂದಿತ ಪಾದ
ಪುಣ್ಯಶ್ಲೋಕರಿಗಿದು ಸುಸ್ವಾದ
ಮಹಿಮೆ ಅಗಾಧ
ಮನಕತಿ ಮೋದ
ಬಿರಿದಿನ ಖಡೆಯ

ಭಳಿರೆನ್ನೊಡೆಯ
ಮುರಮಧು ನರಕಾಸುರ ಸಂಹಾರಿ
ಮುರಳೀಧರ ಗೋವರ್ಧನಧಾರಿ
ಕಂಸ ಕುಠಾರಿ
ಗರುಡನ ಏರಿ
ಬರುತದೆ ಸ್ವಾರಿ
ಬಿಡಿ ಬಿಡಿ ದಾರಿ
ಕರಲಾಘವದಿಂ
ಕರಿಯ ಗಮನದಿಂ
ಹರಿ ದಯಮಾಡುವ ಛಂದ
ಮುಂ। ದಿರದೆ ಪೊಗಳ್ವ ಪಾಠಕರುಗಳು
ಬ್ಬರದಲಿ ರಂಜಿಪ ಶ್ವೇತಚ್ಛತ್ರಿಯ
ಛಾಯದಿ ಬರೆ ನಲವಿಂದ
ಸುಂ। ದರಿಯರು ಸಮುಖದಿ ನಾಟ್ಯಗಳಂ ವಿ
ಸ್ತರಿಸುವರತಿ ನಯದಿಂದ
ವಿಟ। ಪುರುಷರ ಮನಸಪಹರಿಸುವರು
ಸುಭ್ರೂಗಳ ಸನ್ನೆಗಳಿಂದ
ವಿಹರಿಸುವ ಸುಂದರಿಯರ ವರ್ಣಿಸೆ
ತ್ರೈಲೋಕ್ಯದಿ ನಾನರಿಯೆಂದ
ಹಿಮಕರನ ಮಂಡಲವೋ
ಮುಖಮಂಡಲವೋ
ಸರಸಿಜಾಕ್ಷಿಯರ ಶುಭನೋಟಗಳೋ
ಸ್ಮರನ ಕರಚ್ಯುತವಾದನೇತ್ರಗಳೋ
ಪರಿವೃತದಳಕಾವಳಿ ಝುಮುರುಗಳೋ
ಪಂಕಜವೋಳ್ ಝೇಂಕರಿಪ ಭೃಂಗಗಳೋ
ಉರದೊಳು ವರ್ತುಳ ಸ್ತನಭಾರಗಳೋ
ಉನ್ನತ ಕಾಂಚನ ಗಿರಿಶಿಖರಗಳೋ
ಕಿರಿದುದರದ ಮೇಲ್ರೋಮರಾಜಿಗಳೋ
ಕಾಮನ ಗಿರಿಗೇರುವ ದಾರಿಗಳೋ
ಸ್ಮರನಂತಃಪುರ ಸೋಪಾನಗಳೋ
ಸೂಕ್ಷ್ಮೋದರದೋಳಿಹ ತ್ರಿವಳಿಗಳೋ
ಹರಡಿ ಕಂಕಣದ್ವಾರ್ರ್ಯಾ

ಹಿಂದೊಪ್ಪುವ ಹೆರಳ ಭಂಗಾರ
ಭರ್ಜರಿಯ ಶರಗಿನೊಯ್ಯಾರ
ಅರೆಬಿರಿದ ಮಲ್ಲಿಕಾಹಾರ
ಬಿಗಿದಿರುವ ಕುಪ್ಪುಸ ಸರಸರಿಗೆ ಮುತ್ತಿನ
ಮುಖುರ ಮೇಲೆ ಹಣೆಬಟ್ಟು
ಕೇಸರಿಯ ಮಧ್ಯದಂತಿರುವ ನಡುವು
ಸ್ತನಭರಕೆ ಬಳುಕೆ ಕರವಿಟ್ಟು
ಅಪ್ಸರೆಯರೆಲ್ಲ ಸುಸ್ವರಗಳಿಂದ
ಶೃಂಗರದ ನಾಟ್ಯದೋಳ್ ಮೆರೆಯೆ
ವಿಸ್ತರಿಸಲಿಕ್ಕೆ ನಾ ಸರಿಯೆ
ಚಿತ್ತಿರಲಿ ಎನ್ನಕಡೆ ಧೊರೆಯೆ
ನವ ತರುಣಿಯರು
ಶಶಿಕಿರಣೆಯರು
ಮೃದುಚರಣೆಯರು
ಸು। ವರಣೆಯರಾರತಿಗಳ ಪಿಡಿದಿರುವ ಛಂದ
ತರತರದಿಂದೊಪ್ಪುವ ಕಲಶ ಕನ್ನಡಿಗಳ
ಧರಿಸಿರುವರು ಕರದಿಂದ
ವಿಪ್ರರುಗಳು ಆಶೀರ್ವಾದಗಳಿಂದಲಿ
ಸೂಸುವ ಸೇಶೆಗಳಿಂದ
ಸುರಪುರದ ಸುಂದರಿಯರು
ಕುಸುಮಗಳ ಸುರಿಸುವರು ಮೇಲಿಂದ
ಸುಧರ್ಮ ಸಭಾಸ್ಥಾನದಲಿ ಪೃಥ್ವೀಪತಿಗ
ಳದೇ ಬಹು ವೃಂದ
ಬಹು ಹರುಷದಿಂದ ಸಿಂಹಾಸನ ಸಾರಿ
ಗರುಡಧ್ವಜ ಗಂಭೀರದಿ ಏರಿ
ಸುರ ಕಂಠೀರವ ಮೆರೆಯಲು ಭೇರಿ
ಹೊಡೆಯೆ ನಗಾರಿ
ಕಹಳೆ ತುತೂರಿ
ತಮ್ಮಟೆ ಮೌರಿ
ಮುರಜಢಕ್ಕೆ ಜರ್ಝರಿಪ ಭಟರ
ಅಬ್ಬರಕೆ ಜರಿಯೆ ಗಿರಿಕೂಟ
ಭೋರ್ಗರೆವ ಶರಧಿ ಆರ್ಭಾಟ

ದುರ್ಧರವು ಕರ್ಣಕಾಸ್ಫೋಟಿ
ನೀರ್ಗರೆವ ಮೇಘದಬ್ಬರವೊ
ಸಿಡಿಲಿನುಬ್ಬರವೊ
ಅರಿಯೆ ದರ್ಬಾರ
ವತ್ತರದಿ ನೆರೆದ ಪರಿವಾರ
ಭೂ ತರುಣಿಯರಮರ ಶೃಂಗಾರ
ರಸಭರಿತ ವದನ ಚಂದೀರ
ಮಹರಾಜ–ಮಹರಾಜ ೩
ಜಲಜನಾಭ ಶ್ರೀಕೃಷ್ಣನ ಮುಂದೆ
ಜಯ ವಿಜಯಾದ್ಯರು ನಿಂದಿಹರಂದೆ
ಕಳವಳಗೊಡುತಿದೆ ವಾದ್ಯದ ಘೋಷ
ಕರಿಗಳ ಸಾಲದೆ ಗಿರಿಸಂಕಾಶ
ಹಳವಿಗಿ ಹಚ್ಚಿದ ಹೇಮರಥಗಳು
ಹರಿವೇಗದಿ ರಂಜಿಸುವಶ್ವಗಳು
ಬಲಿದು ನಿಂತ ಬಲು ಬಿರಿದುಗಳನ್ನು
ಬೆಳ್ಳಿ ಬೆತ್ತಗಳ ಗಣನಿನ್ನೇನು
ಘಳಿಘಳಿಸುತಲಿದೆ ಶಂಖದ ನಾದ
ಗರುಡಧ್ವಜನಿಗೆ ಅದು ಬಲು ಮೋದ
ಬಲಶಾಲಿಗಳದೆ ಲಕ್ಷ ಸಂಖ್ಯಾತ
ಬರಿ ಮಾತಲ್ಲಿದು ಕೇಳಿನ್ನ ಮಾತ
ಝಳಪಿಸುವರು ಖಡ್ಗಗಳನು ಪಿಡಿದು
ಜ್ಯಾಘೋಷಗಳನು ಮಾಳ್ಪರು ಜಡಿದು
ಬಳಿಸಿ ನಿಂತ ಯದುವೀರರ ಗಡಣ
ಬಾಯಲಿ ಕೊಂಡಾಡುವನೇ ನಿಪುಣ
ಘಲಿಘಲಿರೆಂಬುವ ಗಗ್ಗರಿ ಭಲ್ಲೆ
ಘರ್ಜಿಸುವುದು ನೋಡು ಬಿರುದಿನ ಕಹಳೆ
ಕಳಕಳಿಸುತಲಿದೆ ಮಹ ಸೌರಂಭ
ಕುಂಭಿಣಿಗಾಶ್ಚರಿಯದ ಸಿರಿತುಂಬಿ
ತುಳುಕುತದೇ ಸೌಭಾಗ್ಯದ ನಗರ
ತುದಿಮೊದಲಾಪನು ಬಲ್ಲನು ಚದುರ
ಜಲಜ ಭವಾಂಡದೊಳಾರಿಸಿ ನೋಡಾ
ಜೋಡುಂಟೇ ನಮ್ಮ ಧೊರಗೆಲೊ ಮೂಢಾ
ಶಿಳೆ ನಡುವಿನ ಶೃಂಗಾರದ ಸತಿಯರು
ಸರಿಸದಲಿ ನಿಂದಿಹರು
ಕೆಂದಳಿರು ಪೋಲುವ ಹಸ್ತಗಳಿಂ
ಚಾಮರಗಳ ಹಾರಿಸುತಿಹರು
ಪುತ್ಥಳಿಗಳಂತೆ ನಿಲುಗನಡಿಗಳಸು
ಕರದಲ್ಲಿ ಪಿಡಿದಿಹರು
ಚಿಗುರೆಲೆಯಿಂದೊಪ್ಪುವ ತಾಂಬೂಲಗಳನು
ಚಿನ್ಮಯಗೇ ಕೊಡುತಿಹರು
ಮುದ್ದಳೆಯು ತಾಳ ತಂಬೂರಿ ವೀಣಾ
ವಾದ್ಯವು ಲಯಸ್ವರ
ಬದ್ಧದಿಂದ ಸುಬುದ್ಧಿವಂತರೆ
ಲ್ಲಿದ್ದು ನಿಂತು ತಮ್ಮ
ವಿದ್ಯಗಳನು ತೋರುವರು
ಸುಪದ್ಧತಿಗಳ ಬಲ್ಲವರು
ಭಳಿರೆ ಭಳಿರೆ ಸದ್ಗುಣ ಗಣನಿಲಯ
ಭಕ್ತ ಜನಾವಳಿಗೆಲ್ಲ ನೀ ಸದಯ
ಬಲಿಗೊಲಿದತಿ ಸುಂದರತರ ಮೂರ್ತಿ
ಭೂವ್ಯೋಮಾಕಾಶದಿ ತುಂಬಿತು ಕೀರ್ತಿ
ಜಲಜನಾಭವರ ಜಾನ್ಹವಿಜನಕ
ಜಗತೀಪತಿ ಜಯ ಯದುಕುಲತಿಲಕ
ಖಳಕುಲ ಮೂಲೋತ್ಪಾಟನಕಾರಿ
ಕುಜನ ಕುಠಾರಿ
ಕೌಂಸ್ತುಭಧಾರಿ
ಫಲುಗುಣಸಖ **ಜಯವಿಠಲ**
ಎಂದು ಹೊಗಳುತಿರೆ ಬಂದಿಗಳು
ಮಂಜುಳದ ದಿವ್ಯತರ ನಾದಗಳು
ಎಲ್ಲೆಲ್ಲು ತೋರ್ಪ ವಿನೋದಗಳು
ಭೂವಲಯದಲ್ಲಿ ಮಹರಾಜ ಸಭಾ
ಶೋಭಿಸುವುದು ಶತಸೂರ್ಯನಿಭಾ
ಪ್ರಭೆತುಂಬಿ ಚುಂಬಿಸುತಿದೆ ನೋಡು ನಭಾ
ಭೂವಲಯಕೆ ಇದು ವೈಕುಂಠಸಭಾ
ಮಹರಾಜ–ಮಹರಾಜ ೪

ಶ್ರೀನಿವಾಸದಾಸರು ಹಾಡಿದ ಈ ದ್ವಾರಕಾ ವರ್ಣನೆಯನ್ನು ಕೇಳಿ ಕವಿಗಳು-'ಭಲೆ ಭಲೆ' ಎಂದು ತಲೆದೂಗಿದರು. ಪಂಡಿತರು ಕೋಲಾಹಲ ಮಾಡಿದರು. ಮಹಾರಾಜರು ಸುಪ್ರೀತರಾಗಿ ತಲೆದೂಗುತ್ತ ನಮ್ಮ ಮೈಸೂರಿನಲ್ಲಿ ಇಂತಹ ಪ್ರತಿಭಾವಂತರೂ ಇರುವರೇ' ಎಂದರು!

ಮಾಡುವುದೇನು ? ನಿಜವಾದ ಯೋಗ್ಯತೆಯುಳ್ಳವರಿಗೆ ರಾಜಾಸ್ಥಾನಗಳಲ್ಲಿ ಪ್ರವೇಶವಿರುವುದಿಲ್ಲ. ಸಮೀಪವರ್ತಿಗಳು ಯೋಗ್ಯರನ್ನು ಪ್ರಭುಗಳ ಬಳಿ ಸೇರಗೊಡುವುದಿಲ್ಲ. ಯೋಗ್ಯತಾಪುರುಷರು ತಾವಾಗಿ ಮುಂದೆ ಬಿದ್ದು ಆತ್ಮಪ್ರಶಂಸೆ ಮಾಡಿಕೊಳ್ಳುವುದಿಲ್ಲ. ರಾಜರುಗಳಾದರೋ ದೂತರ ಮುಖದಿಂದ ಲೋಕವಾರ್ತೆಯನ್ನು ತಿಳಿಯುವರಲ್ಲದೆ ಸ್ವತಃ ಪ್ರಮಾಣಿಸಿ ನೋಡುವುದಿಲ್ಲ. ಹೀಗೆ ನಡೆದಿದೆ ಲೋಕ! ಮಾಡುವುದೇನು! ಇದು ಒಂದು ಕಾಲದ ಮಾತಲ್ಲ!

ಸುಪ್ರೀತರಾದ ಕೃಷ್ಣರಾಜ ಒಡೆಯರು ಪ್ರಸನ್ನವದನರಾಗಿ-ಅವರಿಗೆ ಮಾಡಿದ ಬಹುಮಾನವೆಂದರೆ, ದಾಸರಾದ್ದರಿಂದ ಒಂದು ಬೆಳ್ಳಿಯ ಭವನಾಸಿ; ಅದರ ತುಂಬ ಒಂದು ಸಹಸ್ರ ರೂಪಾಯಿಗಳು; ರಾಜಯೋಗ್ಯವಾದ ಶಹಲು ಜೋಡಿ.

ಮೈಸೂರು ಕೃಷ್ಣದಾಸರು

ಇವರೂ ಹೊನ್ನಾಳೀದಾಸರ ಪೀಳಿಗೆಯವರಲ್ಲಿ 'ಗುರು ಶ್ರೀನಿವಾಸ ವಿಠಲ' ಎಂಬ ಅಂಕಿತವನ್ನು ಪಡೆದು ಕವಿತೆ ಮಾಡಿದ್ದಾರೆ. ಇವರ ಪದ ಸುಳಾದಿಗಳು ಪ್ರಮೇಯ ಪುಂಜಗಳಾಗಿವೆ. ಗಯ ಚರಿತ್ರೆಯೆಂಬ ಭಾಮಿನೀ ಷಟ್ಪದಿಯಲ್ಲಿ ಬರೆದಿರುವ ಕಾವ್ಯವು ಮುದ್ರಣವಾದರೆ ಶಾಲೋಪಯೋಗಿಯಾಗುವುದರಲ್ಲಿ ಸಂಶಯವಿಲ್ಲ. ಕೃಷ್ಣದಾಸರು-ಭಗವದ್ಗೀತೆಯನ್ನೂ ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದಾರೆ. ಉಪಲಬ್ಧವಾಗಿರುವ ಹಸ್ತಪ್ರತಿಯನ್ನು ನೋಡಿದರೆ, ಅದು ಭಗವದ್ಗೀತೆಯ ಭಾಷಾಂತರ ದೃಷ್ಟಿಯಿಂದ ಮಾಡಿದ ಗ್ರಂಥವಾಗಿ ಕಾಣುವುದಿಲ್ಲ. ಇವರಲ್ಲಿ ಪ್ರಮೇಯ ಗ್ರಂಥಗಳನ್ನು ವ್ಯಾಸಂಗಮಾಡುತ್ತಿದ್ದ ಶಿಷ್ಯರು ಹೇರಳವಾಗಿದ್ದರು.

ರಾಮರಾಯರು

ಸರಮೀರ್ ಕಛೇರಿಯ ರಾಮರಾಯರ ಹೆಸರು ಮೈಸೂರಿನ ದಾಸಕೂಟಸ್ಥರಿಗೆ ಪರಮಪೂಜ್ಯವಾದ ಹೆಸರು. ರಾಯರು ಸರ್ಕಾರದ ಉದ್ಯೋಗಸ್ಥರಾಗಿದ್ದರೂ ಪರಮ ವೇದಾಂತಿಗಳಾಗಿದ್ದರು. ಇವರ ಶಿಷ್ಯರೇ ಅಟ್ಯಾಚೀ ವೆಂಕಟರಾಯರು. ಇವರು ಮೈಸೂರು ಸರ್ಕಾರದಲ್ಲಿ ಡೆಪ್ಯೂಟೀ ಕವಿಾಷನರ ಪದವಿಗೇರಿ ನಿವೃತ್ತರಾಗಿ ಮೊನ್ನೆ ಮೊನ್ನಿನವರೆಗಿದ್ದರು. ಉಭಯ ರಾಯರೂ ಮಾಡಿದ ವೇದಾಂತಪುಂಜ ಪೇಪರನಾಮಗಳು ದೇವಾಲಯ (ಕಟ್ಟೇಮನೆ) ವಲ್ಲಿ ದೊರೆಯುತ್ತವೆ.

ದೂರ್ವಾಸರಾಯರು (ದೂರಪ್ಪದಾಸರು)

ಇವರು ಸವಣೂರು ದಿವಾನ ಖಂಡೇರಾಯರ ಮಕ್ಕಳು. ದೊಡ್ಡ ಪೂರ್ಣಯ್ಯ

ನವರು ತಮ್ಮನಂತರ ಇವರನ್ನು ಮೈಸೂರು ದಿವಾನಗಿರಿಗೆ ತರಬೇಕೆಂದು ಪ್ರಯತ್ನ ಮಾಡಿದ್ದರಂತೆ! ಅರಮನೆಯಿಂದ ದೊಡ್ಡ ಅಧಿಕಾರ ಕೊಡುವ ಆಮಂತ್ರಣ ಬಂದಾಗ ರಾಯರು ಕರ್ಜಗಿದಾಸರ ಆಜ್ಞೆಯನ್ನು ಕೇಳಿದರಂತೆ! ದಾಸರು, ಲೌಕಿಕ ಮಾಡುವುದು ದೇವರ ಸಂಕಲ್ಪದಲ್ಲಿಲ್ಲವಾದ್ದರಿಂದ ನೀನು ಹರಿದಾಸನಾಗೆಂದು ಅಪ್ಪಣೆ ಮಾಡಿದರಂತೆ! ರಾಯರು **ಭಾಗ್ಯನಿಧಿ ವಿಠಲಾಂಕಿತ** ಪಡೆದು ಹರಿದಾಸರಾಗಿ ರಾಜದರ್ಶನಕ್ಕೆ ಬಂದರಂತೆ! ಲೌಕಿಕ ಮಾಡಲಿಚ್ಛಿಸದೆ ಹರಿದಾಸರಾಗಿ ಬಂದ ರಾಯರನ್ನು ಕೃಷ್ಣರಾಜ ಒಡೆಯರು ಬಹು ಸನ್ಮಾನಿಸಿದರಂತೆ!

ದೂರ್ವಾಸದಾಸರ ದೇವರನಾಮುಗಳು ಬಲು ಬಂಧುರವಾಗಿವೆ. ದಿವಾನಗಿರಿ ಮಾಡಿದವರ ಮಕ್ಕಳಾಗಿದ್ದುದರಿಂದಲೂ, ಕೃಷ್ಣರಾಜ ಒಡೆಯರ ಮಹದಾಶ್ರಯ ದೊರೆತುದರಿಂದಲೂ ರಾಯರು ಪುನಃ ಸವಣೂರಿಗೆ ಹೋಗಿ ವಾಸಮಾಡುವುದನ್ನು ಗೌರವವಾಗಿ ಎಣಿಸಲಿಲ್ಲ. ಹೀಗಿರಲು ಮೈಸೂರಿನ ರಾಜಕೀಯವು ಕೆಟ್ಟು ರಾಜ್ಯಾಡಳಿತವು ಕಮಿಷನರ ಪಾಲಾಯಿತು. ರಾಯರಿಗೆ ರಾಜದರ್ಶನವು ಅತ್ಯಂತ ದುರ್ಲಭವಾಯಿತು. ದೊಡ್ಡಸ್ತಿಕೆಯ ಜೀವನದಿಂದ ಋಣಭಾರ ಜಾಸ್ತಿಯಾಯಿತು. ಮಹಾಪ್ರಭುಗಳನ್ನು ಪಶ್ಚಿಮವಾಹಿನಿಗೆ ಕಾವೇರೀ ಸ್ನಾನಕ್ಕೆ ಬರುವ ಮಾರ್ಗದಲ್ಲೇ ಕಾದಿದ್ದು ಕಾಣುವುದರ ವಿನಾ ಅನ್ಯೋಪಾಯವಿಲ್ಲದಂತಾಯಿತು. ಕಾದಿದ್ದುದರ ಫಲವಾಗಿ ರಾಯರಿಗೆ ಸುಬ್ಬರಾಯನ ದೇವಸ್ಥಾನದ ಬಳಿಯಲ್ಲಿ (ಮೈಸೂರಿಗೆ ಮೂರು ಮೈಲು ದೂರದಲ್ಲಿ) ಪಂಚಕಲಶದ ರಥದಲ್ಲಿ ಸವಾರಿ ಬರುತ್ತಿದ್ದ ಮಹಾರಾಜರ ದರ್ಶನವಾಯಿತು. ಮಹಾರಾಜರು–'ಏನು ದಾಸರೆ, ಇಲ್ಲಿ ಬಂದಿರಿ! ಹೀಗೆ ಬಂದಿರಿ' ಎಂದರು. ದೂರಪ್ಪದಾಸರು–'ಪ್ರಭುದರ್ಶನಕ್ಕೆ ಅನ್ಯೋಪಾಯವನ್ನರಿಯದೆ ಹೀಗೆ-ಇಲ್ಲಿಗೆ ಬಂದೆ'ನೆಂದರು. ಮಹಾರಾಜರು ಕನಿಕರದಿಂದ ದಾಸರ ಗೃಹಕೃತ್ಯಗಳ ಕಷ್ಟಕಾರ್ಪಣ್ಯಗಳನ್ನು ವಿಚಾರಿಸಿ–ಅವರ ಋಣಭಾರವನ್ನು ಪರಿಹರಿಸಿ, ರಾಯರ ಮಕ್ಕಳಿಗೆ ಬೆಂಗಳೂರಿನಲ್ಲಿ ಕಮಿಷನರ ಕಛೇರಿಯಲ್ಲಿ ನೂರು ರೂಪಾಯಿಗಳ ಉದ್ಯೋಗವನ್ನೂ ಕೊಡಿಸಿ ಉಪಕಾರ ಮಾಡಿದರು. ಕೆಳಕಂಡ ಪದವು, ತಮ್ಮ ತಾಪತ್ರಯಗಳನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ದಾಸರು ಪ್ರಭುಗಳ ಮುಂದೆ ಹಾಡಿದುದಾಗಿದೆ.

"ಚಕ್ಕನಿ ರಾಜ" ಎಂಬಂತೆ

ಧನ ನಿಲ್ಲದಯ್ಯ । ಸಾ । ಧನ ನಿಲ್ಲುವದಯ್ಯ ।
ತನು ನಿಲ್ಲದಯ್ಯ । ದಾ । ತನು ಎನಿಸಯ್ಯಾ ಪ.

ಜನ ಬರುವರೋ । ಸ । ಜ್ಜನ ಬಾರರಯ್ಯಾ
ಅನುಸರಿಸಿ । ಜೀ । ವನ ಪೊರೆಯಯ್ಯಾ ೧

ಹಣ ಪುಟ್ಟುವುದೊ । ಸು । ಗುಣ ಪುಟ್ಟದಯ್ಯಾ ।
ಗುಣನಿಧಿ ಹರಿಗುಣ । ಗುಣಿಸಿ ಬಾಳಯ್ಯ ೨

ಭಾಗ್ಯನಿಧಿ ವಿಠಲನ । ಆಜ್ಞೆಯಿಂದಯ್ಯ
ಸುಜ್ಞರ ಸೇವಿಸಿ । ಪ್ರಾಜ್ಞನಾಗಯ್ಯ ೩

ರಾಜಾನುವರ್ತಿಗಳಿಂದ ರಾಜದರ್ಶಕ್ಕೆ ಪ್ರತಿಬಂಧಕವಾದಾಗ ಹಾಡಿದ ಪದವು ಕೆಳಕಂಡಂತಿರುವುದು.

ಕಲ್ಯಾಣಿ—ರೂಪಕತಾಳ

ಛೀ ಛೀ ಪಾಪಿ ಮನವೆ ಛೀ ಛೀ
ನಾಚಿಕಿಲ್ಲವೇ ನಿನಗೆ ಛೀ ಛೀ ಪ.

ನಾಚಿಕಿಲ್ಲ ಇನ್ನು ದುರಾ । ಲೋಚನೆಯೊಳ್ ಸೇರಿ ಇಂಥಾ
ನೀಚರನ್ನು ಯಾಚಿಸುವರೆ ಅ.

ಅಲ್ಪರಿಗಾಲ್ಪರಿದರೆ । ಸ್ವಲ್ಪವಾದರು ಕರುಣವುಂಟೆ ?
ಕಲ್ಪ ಕಲ್ಪ ಕುದಾತರ ಅಹಿ । ತಲ್ಪಶಾಯಿ ಕಲ್ಪಿಸಿಹನು ೧

ಬರಡೆಮ್ಮೆಗೆ ಉಪಚರಿಸಲು । ಕರೆಬಲ್ಲುವೆ ಪಾಲು । ಜಾಲೀ
ಕೋಡನು ತೆಯ್ದರೆ ಪರಿಮಳ । ಹೊರಡುವುದೇ ಎಂದಿಗಾದರು ೨

ಎಷ್ಟು ವಿಧದಿ ನೀಲಿಯು ತೊಳೆದರೆ । ಬಿಟ್ಟುಕೊಡುವುದೇ ವರ್ಣ ।
ದುಷ್ಟಗೆ ಶಿರಿ ಭಾಗ್ಯನಿಧಿ ವಿಠ್ಠಲ ಒಲಿವನೇ ಎಂದಿಗು ೩

ತುಳಸೀ ರಾಮದಾಸರು

ಇಂದಿಗೆ ಸುಮಾರು ಅರುವತ್ತು ವರ್ಷಗಳ ಹಿಂದೆ ತುಳಸೀರಾಮದಾಸರ ಹೆಸರು ಮೈಸೂರು ಸೀಮೆಯ ಭಕ್ತಜನರಿಗೆ ಮನೆಯ ಮಾತಾಗಿತ್ತು. ಸಾತ್ವಿಕ ಶ್ರೀ ವೈಷ್ಣವರ ಕುಲದಲ್ಲಿ ಜನಿಸಿ, ಲೌಕಿಕ ಲಾಲಸೆಯನ್ನು ತ್ಯಜಿಸಿ, ಸ್ಫೂರ್ತಿಯಿಂದ ಕೀರ್ತನೆಮಾಡುತ್ತಾ ಸಾವಿರಾರು ಮಂದಿ ಪಾಮರ ಜನರನ್ನು ಹರಿಭಕ್ತರನ್ನಾಗಿ ಮಾಡಿದ ಪುಣ್ಯ ತುಳಸೀರಾಮದಾಸರದು. ಮೈಸೂರು ಬೆಂಗಳೂರು ಕೋಲಾರ ಜಿಲ್ಲೆಗಳಲ್ಲಿ ಎಷ್ಟೋ ಭಜನಮಂದಿರಗಳನ್ನು ಸ್ಥಾಪಿಸಿ, ಪ್ರತಿವರ್ಷ ರಾಮೋತ್ಸವ ಕೃಷ್ಣೋತ್ಸವಗಳನ್ನು ಮಾಡುವ ಆಸಕ್ತಿಯು ಜನರಲ್ಲುಂಟಾಗುವುದಕ್ಕೆ ಕಾರಣರು ಶ್ರೀ ತುಳಸೀರಾಮದಾಸರು. ತುಳಸೀ ರಾಮದಾಸರ ಈ ಸೇವೆಯಿಂದ ಧರ್ಮಾಂತರವಾಗುತ್ತಿದ್ದ ಸಾವಿರಾರು ಮಂದಿ ಹಿಂದೂ ಧರ್ಮೀಯರು ಹರಿಭಕ್ತರಾದರು. ಬೆಂಗಳೂರಿನಲ್ಲಿರುವ ತುಳಸೀತೋಟದ ಕೀರ್ತಿಯು ತುಳಸೀರಾಮದಾಸರದು. ಇವರ ಕೀರ್ತನವೆಂದರೆ ಸುತ್ತಮುತ್ತಲಿನ ಹಳ್ಳಿ ಹಳ್ಳಿಗಳಿಂದ ಸಾವಿರಗಟ್ಟಲೆ ಜನರು ಬಂದು ಸೇರುತ್ತಿದ್ದರು. ನಾಸ್ತಿಕರು ಆಸ್ತಿಕರಾಗುವುದೂ ಲೋಭಿಗಳು ಉದಾರಿಗಳಾಗುವುದೂ ಈ ದಾಸರ ಕೀರ್ತನದ ಮಹಿಮೆಯಾಗಿತ್ತು. ಇವರ ಜನ್ಮ ಕಡಪಾ ಜಿಲ್ಲೆಯಲ್ಲಾಗಿದ್ದುದರಿಂದ, ಇವರ ಪಾಂಡಿತ್ಯ ಆಂಧ್ರ ಭಾಷೆಯಲ್ಲಿ ವಿಶೇಷವಾಗಿದ್ದರೂ, ಕನ್ನಡ ನಾಡಿನಲ್ಲಿ ನೆಲೆಸಿ, ಕನ್ನಡದಲ್ಲೂ ಕೀರ್ತನಮಾಡಿ, ಅನೇಕ ಕನ್ನಡ ದೇವರನಾಮಗಳನ್ನು ರಚಿಸಿ ಕನ್ನಡಿಗರಾದ ದಾಸರು ಈ ಮಹಾಪುರುಷರು. ಇವರ ಪೂರ್ವಿಕರು ನೃಸಿಂಹೋ

ಪಾಸಕರಾಗಿ ತುಳಸೀ ಪುಷ್ಪಮಾಲಿಕೆಗಳನ್ನು ರಚಿಸಿ, ಭಗವತ್ಕೈಂಕರ್ಯ ಮಾಡುತ್ತಿದ್ದುದರಿಂದ, ತುಳಸೀ ಶಬ್ದವು ಇವರ ಹೆಸರಿಗೂ–ಅಡ್ಡ ಹೆಸರಾಗಿ ಸೇರಿಸಲ್ಪಟ್ಟು, ಇವರನ್ನು ಉತ್ತರ ಹಿಂದೂಸ್ಥಾನದ ರಾಮಚರಿತಮಾನಸದ ಕರ್ತೃಗಳಾದ ತುಲಸೀದಾಸರಿಗೆ ಸದೃಶರಾದ ತುಳಸೀರಾಮದಾಸರೆಂಬ ಪೂಜ್ಯನಾಮದಿಂದ ಕರೆಯುವಂತೆ ಮಾಡಿತು. ಇವರನ್ನು ಅವತಾರಪುರುಷರೆಂದು ಭಾವಿಸಿ, ಇವರ ಜೀವನಚರಿತ್ರೆಯನ್ನು ಕೀರ್ತನರೂಪದಲ್ಲಿ ವಿಸ್ತರಿಸುತ್ತಾ, ಮಹೋತ್ಸವಮಾಡುವ ಜನರು ಬೆಂಗಳೂರು ಕೋಲಾರ ಜಿಲ್ಲೆಗಳಲ್ಲಿ ಹೇರಳವಾಗಿದ್ದಾರೆ. ಚಾಮರಾಜ ಒಡೆಯರ್‌ಂಥಾ ಮಹಾರಾಜರು, ತುಳಸೀ ರಾಮದಾಸರ ಹನ್ನೊಂದು ಕೀರ್ತನಗಳನ್ನು ಕೇಳಿ ಪರವಶರಾಗಿ, ದಾಸರು ಕೈಕೊಂಡಿದ್ದ ಧರ್ಮಕಾರ್ಯಗಳಿಗೆ ಬಹಳ ದ್ರವ್ಯಸಹಾಯ ಮಾಡಿದರು. ರಾಜಗುರುಗಳಾದ ಪರಕಾಲ ಮಠಾಧಿಪರು ದಾಸರಿಗೆ ದಿವ್ಯ ಕಿರೀಟವನ್ನೇ ಒಪ್ಪಿಸಿದರು. ಯಾರು ಕೊಡಲಿ–ಕೊಡದಿರಲಿ, ಧರ್ಮ ಪ್ರಚಾರದೃಷ್ಟಿಯಿಂದ ಕೀರ್ತನಮಾಡಿ ಲೋಕದ ಮೆಚ್ಚಿಕೆಯನ್ನು ಪಡೆದವರು ಶ್ರೀ ತುಳಸೀದಾಸರು. ಹರಿಪರತ್ವವನ್ನೂ ರಾಮಾನುಜಮತದ ಉತ್ಕರ್ಷವನ್ನೂ ನಿರ್ಭಯವಾಗಿ ಹೇಳುತ್ತಿದ್ದುದರಿಂದ ಇವರಿಗೆ ಪ್ರತ್ಯರ್ಥಿಗಳು ಬಹಳವಾಗಿದ್ದರು. ಇವರನ್ನು ಬ್ರಹ್ಮದ್ವೇಷಿಗಳೆಂದು ಕೆಲವರು ಭಾವಿಸಿದ್ದರು. ದ್ವೇಷಿಸಿದವರನ್ನು ಭೂಷಿಸುವುದೂ, ನಿಂದಿಸಿದವರನ್ನು ವಂದಿಸುವುದೂ ಇವರ ಸ್ವಭಾವವಾಗಿದ್ದುದರಿಂದ ಇವರ ಮೇಲಣ ಅಪಪ್ರಚಾರವು ತಲೆಯೆತ್ತಲಿಲ್ಲ. ವಿಜಯನಗರದ ಕೃಷ್ಣದೇವರಾಯರ ಕಾಲದಲ್ಲಿ ಕನಕದಾಸರಿಗಿದ್ದ ಸ್ಥಾನಮಾನಗಳೇ ಕಾಲಪ್ರಮಾಣವನ್ನನುಸರಿಸಿ, ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಈ ತುಳಸೀರಾಮದಾಸರಿಗಿದ್ದುವು. ದಾಸರ ಜ್ಞಾನ ಭಕ್ತಿ ವೈರಾಗ್ಯಾದಿ ಸದ್ಗುಣಗಳಿಂದ ಮುಗ್ಧರಾದ ವೇದಾಂತ ಶಿವರಾಮ ಶಾಸ್ತ್ರಿಗಳವರು ದಾಸರಮೇಲೆ ಅನೇಕ ಪದ್ಯಗಳನ್ನು ರಚಿಸಿ ಸಮರ್ಪಿಸಿರುತ್ತಾರೆ. ಕೆಳಕಂಡ ಪದ್ಯಗಳು ದಾಸರ ದೊಡ್ಡಸ್ತಿಕೆಯನ್ನೂ ಶಾಸ್ತ್ರಿಗಳು ದಾಸರನ್ನು ಹೇಗೆ ತಿಳಿದರೆಂಬುವನ್ನೂ ತಿಳಿಸುತ್ತವೆ.

ಇಳೆಯೊಳಗೆ ಸುಕ್ಷೇತ್ರ ಪುಣ್ಯ । ಸ್ಥಳಗಳೊಳಗಿಹ ಸಕಲ ಶಕ್ತಿಯು ।
ನೆಲೆಸಿಹುದು ನಿಮ್ಮನುಲ ಚರಣಾಂಬುಜದ ಸ್ಮರಣೆಯಲಿ ॥
ತಿಳಿಯದೀ ಮರ್ಮವನು ಬಾಹ್ಯದಿ । ಬಳಲಿದೊಡೆ ಫಲವೇನು ನೀ ಕೃಪೆ ।
ತಳೆದು ಪಾಲಿಪುದೆಮ್ಮ ತುಳಸೀ ರಾಮದಾಸಾರ್ಯ ೧

ಮಡದಿ ಮಕ್ಕಳು ಬಂಧು ಬಳಗದ । ತೊಡಕಿನೊಳು ಸಿಲುಕದೆ ವಿರಾಗತೆ ।
ಪಡೆದು ನಾನಾ ತೀರ್ಥಯಾತ್ರೆಯ ಗೈದು ಮಾನವರು ॥
ಹುಡುಕಿ ಕಾಣದ ಪರಮ ಪದನಿ । ಪ್ಮಡಿಯೊಳಗೆ ನಿವಿಷಾರ್ಥಚಿತ್ತದ ।
ನಿಡಲು ಕೈಗೂಡುವುದು ತುಲಸೀ ರಾಮದಾಸಾರ್ಯ ೨

ತತ್ವದೊಳು ವಾಚ್ಯಾರ್ಥ ಜನಿತಾ । ನಿತ್ಯ ಸರ್ವಾಲ್ಪಜ್ಞತಾ ಶ ।
ಕ್ತಿತ್ವ ಮುಖ್ಯ ವಿರೋಧಭಾಗ ನಿರೋಧದಿಂದುಳಿವ ॥

ಸತ್ಯವಹ ಲಕ್ಷ್ಮ್ಯರ್ಥಲಕ್ಷಿತ | ವಸ್ತುವನು ನಿಮ್ಮಡಿಗೆ ದೇಹವ |
ನೊತ್ತಿಯಿಟ್ಟವ ಬಲ್ಲ ತುಲಸೀರಾಮದಾಸಾರ್ಯ ೯
ರಾಮ ಜೇರಿನ್ನಿಲ್ಲ ತುಲಸೀ | ರಾಮನೇ ಶ್ರೀರಾಮನೆಂದಭಿ |
ರಾಮಮಾನಸರಾಗಿ ಬಳಿಕೀರಾಮ ಸೇವೆಯೊಳು ||
ಪ್ರೇಮಪಿಡಿವವರೆಲ್ಲರಾತ್ಮಾ | ರಾಮರಾಮದ ತಿಳಿಪು ಈ ಶಿವ |
ರಾಮ ಬಂದನು ಪೊರೆಯೊ ತುಲಸೀ ರಾಮದಾಸಾರ್ಯ ೧೦

ಇವರಂತೆ ಕೆಲವು ಸಂಸ್ಕೃತ ಶ್ಲೋಕಗಳೂ ಶ್ರೀ ಶಾಸ್ತ್ರಿಗಳಿಂದ ರಚಿತವಾಗಿವೆ.

ಶ್ರೀ ಪರಕಾಲ ಮಠದ ರಂಗನಾಥಸ್ವಾಮಿಗಳವರೂ ತುಲಸೀರಾಮದಾಸರನ್ನು–

"ಧೀರೋಽಸಿ ವೈದಿಕ ವರೋಽಸಿ ಕವೀಶ್ವರೋಽಸಿ
ಸ್ವಾರ್ಥಂ ವಿಹಾಯ ವಿದಿತೋಽಸಿ ಜಿತೇಂದ್ರಿಯೋಽಸಿ
ಭೋ ದಾಸವರ್ಯ ಮಹದಂಶ ಸಮುದ್ಭವೋಽಸಿ"

ಎಂಬ ಮಾತುಗಳಿಂದ ಭೂಷಣಗೊಳಿಸಿದ್ದಾರೆ.

ಆಗಮ ಶಾಸ್ತ್ರದಲ್ಲಿ ಮಹಾಪಂಡಿತರೆನಿಸಿ ಅನೇಕ ಗ್ರಂಥಗಳನ್ನು ರಚಿಸಿ ಕೀರ್ತಿವಂತರಾದ ತೂಪ್ಪಲ್ ವೆಂಕಟಾಚಾರ್ಯರಂಥವರು ಈ ದಾಸರಮೇಲೆ ಮಂಗಳಾ ಶಾಸನ ರೂಪವಾಗಿ ಇಪ್ಪತ್ತೇಳು ಶ್ಲೋಕಗಳನ್ನು ರಚಿಸಿದ್ದಾರೆ. ಆ ಶ್ಲೋಕಗಳು ಸಂಪ್ರದಾಯ ಸ್ತೋತ್ರವಾಗಿ ಹೊರಟು—

ಶ್ರೀನಿವಾಸ ಪದಾಂಭೋಜನ್ಯಸ್ತ ಚಿತ್ತಾಯ ಧೀಮತೇ
ತುಲಸೀ ವಂಶ ಭೂಷಾಯ ರಾಮದಾಸಾಯ ಮಂಗಳಂ| ೯

ಪ್ಲವಂಗಾಷಾಢ ಬಹುಳ ದಶಮೀ ಗುರುವಾಸರೇ
ಇಂದುತಾರಾವ ತೀರ್ಣಾಯ ರಾಮದಾಸಾಯ ಮಂಗಳಂ ೧೦

ಧೀಶಮಾದಿ ವಿಭೂಷಾಯ ಭಗವದ್ಭಕ್ತಿ ಸಿಂಧವೇ
ಆಶ್ರಿತತ್ರಾಣ ದೀಕ್ಷಾಯ ರಾಮದಾಸಾಯ ಮಂಗಳಂ ೧೧

ಅಹೋಬಲ ಶ್ರೀ ಶಠಾರಿ ದೇಶಿಕೇಂದ್ರ ಕಟಾಕ್ಷತಃ
ಆತ್ತ ಚಕ್ರಾದಿ ದೀಕ್ಷಾಯ ರಾಮದಾಸಾಯ ಮಂಗಳಂ ೧೨

ಶ್ರೀ ನೃಸಿಂಹ ಸಪರ್ಯಾರ್ಥಂ ತುಲಸ್ಯಾಹರಣಾದಿನಾ
ಯದ್ವಂಶ್ಯಾಲೋಕ ವಿಖ್ಯಾತಾಸ್ತಸ್ಮೈ ಭೂಯಾತ್ಸು ಮಂಗಳಂ ೧೩

ಯಸ್ಯ ಶ್ರೀ ರಂಗನಾಥಾರ್ಯ ಪರಕಾಲ ಗುರೂತ್ತಮಾಃ
ದತ್ತವಂತೋ ಹರಿಕಥಾ ಕಿರೀಟಂ ತಸ್ಯೈ ಮಂಗಳಂ ೧೪

ಸಾನಿಸ್ಮಿತ ರಘೂತ್ತಂಸ ಯದುನಾಥಮಯೋತ್ಸವೈ|
ನವಸಪ್ತಾಹ ನಿರ್ವರ್ತ್ಯೈರ್ಲಸತ್ಕೃಪಾತ್ರಾಯ ಮಂಗಳಂ ೧೫

ಪ್ರಹ್ಲಾದೋವಾ ನಾರದೋವಾ ಪುಂಡರೀಕೋಥ ಕೌಶಿಕಃ
ಇತ್ಯೇವಂ ವಿಬುಧೈಸ್ಸರ್ವೈಃ ಏತತ್ಕಾರ್ಯ್ಯಯಾಸ್ತು ಮಂಗಳಂ ೧೬

ಎಂಬಂತೆ ದಾಸರ ಜೀವನಚರಿತ್ರೆಯ ಪ್ರಕಥನ ರೂಪವನ್ನು ತಾಳಿವೆ.

ಈ ಶ್ಲೋಕ ಸರಣಿಯಲ್ಲೇ ದಾಸರ ನಿರ್ಯಾಣ ತಿಥಿಯ ನಿರೂಪಣೆಯೂ

ಶೋಭಕೃನ್ನಾಮ ಬಹುಳ ದ್ವಿತೀಯಾ ಬುಧವಾಸರೇ
ಶ್ರೀಶಾಂಘ್ರಿ ಪದ್ಮ ಮಾಸಾದ್ಯ ನಿತ್ಯ ತುಷ್ಟಾಯ ಮಂಗಳಂ ೨೪

ಎಂಬ ಶ್ಲೋಕದಿಂದ ಕಥಿತವಾಗಿದೆ.

ಸಾರಾಂಶವೆಂದರೆ–ಕೇವಲ ಐವತ್ತರುವತ್ತು ವರ್ಷಗಳ ಹಿಂದೆ ಇಂಥಾ ವಿಭವಶಾಲಿ ಹರಿದಾಸರಿದ್ದು ಭಾಗವತಧರ್ಮವನ್ನು ಪ್ರಚಾರಗೊಳಿಸಿ ಕೀರ್ತಿವಂತರಾದರು. ಇಂಥವರನ್ನು ಬ್ರಾಹ್ಮಣರಲ್ಲವೆಂದು ಯಾವ ಶಿಷ್ಟಬ್ರಾಹ್ಮಣನೂ ತಿರಸ್ಕರಿಸಲಿಲ್ಲ. ಬದಲಾಗಿ ಪಂಡಿತೋತ್ತಮರುಗಳೂ ಪೀಠಾಧಿಪತಿಗಳೂ ಇಂಥವರನ್ನು ಬಹುವಾಗಿ ಗೌರವಿಸಿದರು. ಮಾನವನ ದೊಡ್ಡಸ್ತಿಕೆಗೂ ಜ್ಞಾನ ವೈರಾಗ್ಯಾದಿ ಸದ್ಗುಣಗಳಿಗೂ ವರ್ಣಾಶ್ರಮಗಳು ಬಾಧಕವೆನಿಸುವುದಿಲ್ಲ. ಈ ಕಾಲಕ್ಕೆ ಬೇಕು ಇಂಥಾ ಹರಿದಾಸರು! ಈಗಿನ ಜನರಿಗೆ ಬೇಕು ಇಂಥಾ ಉಪದೇಶಕರು!

ತುಲಸೀ ರಾಮದಾಸರು ಯಾವ ಹರಿದಾಸ ಪೀಳಿಗೆಗೂ ಸೇರಿದವರಲ್ಲ. ಅಂದ ಮಾತ್ರಕ್ಕೆ ಇವರ ಪ್ರತಿಭೆಯು ಕಡಿಮೆಯೆನಿಸಲಿಲ್ಲ. ಇಂಥವರು ತಾವಾಗಿ ಬರಲೆಂದು ಇರುವುದುಚಿತವೋ ಅಥವಾ ಇರುವವರೇ ಇಂಥವರಾಗಲು ಪ್ರಯತ್ನಿಸುವುದುಚಿತವೋ?

ಆನಂದದಾಸರ ಶಿಷ್ಯರುಗಳು:

೧. ಮಂಡಕಶಿರದ ಭೀಮದಾಸರು.

ಇವರು ಬಾಲ್ಯದಲ್ಲಿ ಮೈಸೂರಿನಲ್ಲಿ ಸಂಸ್ಕೃತಾಭ್ಯಾಸ ಮಾಡುತ್ತಿದ್ದರಂತೆ! ಮುಮ್ಮಡಿ ಕೃಷ್ಣರಾಜ ಒಡೆಯರ ದರ್ಬಾರಿನಲ್ಲಿ ಪುಣೆಯ ತ್ರಿಯಂಬರ ಶಾಸ್ತ್ರಿಗಳಿಗಾದ ಸನ್ಮಾನವನ್ನು ನೋಡಿ, ತಾವೂ ಇಂಥಾ ಪಾಂಡಿತ್ಯವನ್ನು ಸಂಪಾದಿಸಬೇಕೆಂದು ಸ್ಫೂರ್ತಿಗೊಂಡು, ಪಾದಚಾರಿಗಳಾಗಿ ನದಿಯ (ನವದ್ವೀಪ) ಕ್ಕೆ ಹೋದರಂತೆ! ಯಾರೋ ಒಬ್ಬ ಬಾಬು ಮಹೋಪಾಧ್ಯಾಯರಲ್ಲಿ ನ್ಯಾಯಾಂತರ್ಕ ವ್ಯಾಸಂಗಮಾಡಿದರಂತೆ! ಬಂಗಾಲೀ ಹಿಂದೀಭಾಷೆಗಳ ಪರಿಚಯವೂ, ಚೈತನ್ಯಪಂಥಿಗಳ ಸಂಕೀರ್ತನ ಪದ್ಧತಿಯೂ ಭೀಮ ಶರ್ಮರಿಗಾಯಿತಂತೆ! ಅಲ್ಲಿನ ಪ್ರಾಚೀನ ಪ್ರದಾಯದವರೊಂದು ವಿದ್ಯಾಸಂಸ್ಥೆಯ ಮಹೋಪಾಧ್ಯಾಯರಾಗಿರದೆ ತಮ್ಮ ಮೂವತ್ತಾರನೇ ವಯಸ್ಸಿನಲ್ಲಿ ಬಳ್ಳಾರಿಗೆ ಬಂದರಂತೆ! ಶರ್ಮರ ಪಾಂಡಿತ್ಯಕ್ಕೆ ಮೆಚ್ಚಿದ ಜನರು, ಶರ್ಮರ ವೇಷಭೂಷಣಗಳನ್ನು ಬದಲಾಯಿಸಿ ಆಚಾರ್ಯಪಟ್ಟ ಕಟ್ಟಿ, ಒಂದು ಧಡಿಯ ಭಂಗಾರ ಸಹಿತವಾಗಿ ಲಗ್ನಮಾಡಿಸಿದರಂತೆ! ಆದರೆ ಆ ಪಂಡಿತರಲ್ಲಿ ನ್ಯಾಯಶಾಸ್ತ್ರಾಭ್ಯಾಸಮಾಡಲು ತಕ್ಕ ಶಿಷ್ಯರು ದೊರಯಲಿಲ್ಲವಂತೆ! ಒಂದು ಧಡಿಯ

ಭಂಗಾರವನ್ನೂ ಮಾರಿ ಕೆಲವು ಕಾಲ ಜೀವಿಸಿ, ಕೊನೆಗೆ ವಕೀಲನೊಬ್ಬನ ಬಳಿ ದೇಶಾವರಕ್ಕೆ ಹೋದರಂತೆ! ಆಚಾರ್ಯರ ಉದ್ದಾಮತನವನ್ನು ನೋಡಿ ವಕೀಲನು ಒಂದು ಅರ್ಧಾಣೆ ದೇಶಾವರ ಕೊಟ್ಟನಂತೆ! ಶರ್ಮರು ಆ ದುಡ್ಡನ್ನು ವಕೀಲನ ಮುಖಕ್ಕೇ ಎಸೆದು, ಆನಂದದಾಸರ ಶಿಷ್ಯರಾಗಿ "ಭೀಮೇಶವಿಠಲ" ಎಂಬ ಅಂಕಿತ ಪಡೆದು ಕೀರ್ತನಕಾರರಾದರಂತೆ!

ಭೀಮದಾಸರ ಕವಿತೆಗಳು ಆನಂದದಾಸರ ಶೈಲಿಯನ್ನನುಸರಿಸಿವೆ! ಅನೇಕ ಆಖ್ಯಾನಗಳನ್ನೂ, ಬಿಡಿ ದೇವರ ನಾಮಗಳನ್ನೂ ಈ ದಾಸರು ಬರೆದಿದ್ದಾರೆ! ಆ ಕಾಲದಲ್ಲಿ ಆಂಧ್ರ ಕರ್ಣಾಟಕ ದೇಶಗಳಲ್ಲಿ ಇವರ ಹೆಸರು ಪ್ರಖ್ಯಾತವಾಗಿದ್ದಂತೆ ಗೊತ್ತಾಗುತ್ತದೆ!

೨. ಕಮಲಾಪತಿದಾಸರು

ಕಮಲಾಪತಿದಾಸರು, ಹರಿಕಥಾಮೃತಸಾರಕ್ಕೆ ವ್ಯಾಖ್ಯಾನ ಬರೆದಿದ್ದಾರೆ! ತಿರುಮಕೂಡ್ಲು ನರಸೀಪುರದಲ್ಲಿ ಇವರು ಬಹುಕಾಲ ವಾಸವಾಡಿದರಂತೆ! '**ಕಮಲಾಪತಿ ವಿಠಲ**' ಮುದ್ರಿಕೆಯ ದೇವರನಾಮಗಳು ಅದೃಶ್ಯವಾಗಿವೆ.

೩. ಗುಂಡಾಚಾರ್ಯರು

ಇವರು ಒಳ್ಳೇ ಪುರಾಣಿಕರಾಗಿದ್ದು ಆನಂದದಾಸರಲ್ಲಿ ಕೀರ್ತನಾಭ್ಯಾಸಮಾಡಿದವರು. ಗುಂಡಾಚಾರ್ಯರ ಹೆಸರು ಹೇಳಿ ಕೀರ್ತನಮಾಡಬೇಕೆಂಬ ಮಾತು ಗಾದೆಯಾಗಿ ಇನ್ನೂ ಕರ್ಣಾಟಕದಲ್ಲಿ ಮರೆತಿಲ್ಲ. ಇವರಷ್ಟು ಗ್ರಂಥ ಕ್ಲಿಪ್ತಿ ಯಾರಿಗೂ ಇರಲಿಲ್ಲವೆಂದು ಹೇಳುತ್ತಾರೆ. ಇವರ ಕಂಠ, ಗಾನ ಮಾಧುರ್ಯ ಇವು ಆನಂದದಾಸರನ್ನು ಜ್ಞಾಪಕಕ್ಕೆ ತರುತ್ತಿದ್ದುವಂತೆ! ಆನಂದದಾಸರನ್ನು ಬಿಟ್ಟರೆ, ಕೀರ್ತನರಂಗದಲ್ಲಿ ಇವರಷ್ಟು ಪ್ರಖ್ಯಾತರಾದವರೂ, ಇವರಷ್ಟು ದ್ರವ್ಯಾರ್ಜನೆ ಮಾಡಿದವರೂ—ಮಾತ್ರವಲ್ಲ—ಆರ್ಜಿಸಿದಂತೆಯೇ ಇವರಷ್ಟು ದಾನಮಾಡಿದವರೂ ಯಾರೂ ಇರಲಿಲ್ಲವೆಂದು ಪ್ರಸಿದ್ಧಿಯಿದೆ.

೪. ಬೇಲೂರು ವೆಂಕಟೇಸುಬ್ಬದಾಸರು

ಭಕ್ತವಿಜಯ ಗ್ರಂಥ ಲೇಖಕನಿಗೆ ಜನ್ಮಕೊಟ್ಟ ಪೂಜ್ಯರಿವರು. ವೆಂಕಟದಾಸರಿಂದಾರಂಭವಾದ ಶ್ರೀ ವಿಜಯದಾಸರ ಶಿಷ್ಯಪೀಳಿಗೆಯಲ್ಲಿ ಇವರು ನಾಲ್ಕನೆಯವರು. ವೆಂಕಟದಾಸರ ಪೂರ್ವಿಕರು ಧಾರವಾಡ ಜಿಲ್ಲಾ ರೋಣಪ್ರಾಂತ್ಯದವರು! ವಿಜಯದಾಸರ ಶಿಷ್ಯವೃತ್ತಿ ವಹಿಸಿದಮೇಲೆ, ಸರ್ವಸ್ವವನ್ನೂ ದಾನಮಾಡಿ, ತೀರ್ಥಾಟನೆ ಮಾಡುತ್ತಾ ಕರೂರು ಬಳಿಯಿರುವ ಆಂಡಾಂಗೋಯಿಲು ಅಗ್ರಹಾರದಲ್ಲಿ ನೆಲೆಸಿದರು. ವೆಂಕಟದಾಸರು, ದಿವಾನ ಪೂರ್ಣಯ್ಯನವರ ಕಾಲದಲ್ಲಿ ಮೈಸೂರು ಸೀಮೆಯ ದೊಡ್ಡಬಳ್ಳಾಪುರ ಪ್ರಾಂತ್ಯದಲ್ಲಿದ್ದು ವಿದ್ಯಾಭ್ಯಾಸಮಾಡಿದರು. ಗೀರ್ವಾಣ ಕರ್ಣಾಟಕಾಂಧ್ರ ಭಾಷೆಗಳಲ್ಲಿ ಅಪ್ರತಿಮರೆಂಬ ಖ್ಯಾತಿ ಇವರದು. ವೆಂಕಟೇಶದಾಸರು ೧೬೭೫ರ ಸುಮಾರಿನಲ್ಲಿ—ಕಾವೇರಿ

ತೀರವೆಂದು ಶ್ರೀರಂಗಪಟ್ಟಣದಲ್ಲಿ ವಾಸಮಾಡಿದರು. ಪೂರ್ಣಯ್ಯನವರ ಮತ್ತು ಮಹಾರಾಣೀ ಲಕ್ಷಮ್ಮಣ್ಣಿಯವರ ಸನ್ನಿಧಿಗಳಲ್ಲಿ ಕೀರ್ತನಮಾಡಬೇಕೆಂಬ ಕಟ್ಟಲೆಗಳಿದ್ದ ಕಾರಣ ದಾಸರು ಪಟ್ಟಣವಾಸಿಗಳೇ ಆದರು. ಗರ್ಜಿನ ಲಡಾಯಿಯಲ್ಲಿ ಟಿಪ್ಪೂಸುಲ್ತಾನನು ತನಗೆ ಜಯವಾಗುವುದಿಲ್ಲವೆಂದು ನಿರಾಶನಾದಾಗ–ಮೈಸೂರು ರಾಜಸಂತತಿಯ ಕುರುಹಿರಬಾರ ದೆಂದು ಪಿತೂರಿ ನಡೆಸಿದಾಗ,–ರಾಜಕುಮಾರನನ್ನು ಆಪತ್ತಿಗೊಳಗಾಗದಂತೆ ಶ್ರೀರಂಗನಾಥ ಸ್ವಾಮಿಯ ಗರ್ಭಾಂಕಣದಲ್ಲಿಟ್ಟು, ರಕ್ಷಿಸಿದ ಕೀರ್ತಿವಂತರಲ್ಲಿ ವೆಂಕಟೇಶದಾಸರೂ ಒಬ್ಬ ರಾಗಿದ್ದರು. ಈ ಕೃತಜ್ಞತೆಯನ್ನು ಸ್ಮರಿಸಿಕೊಂಡು ಮಹಾರಾಣೀ ಲಕ್ಷಮ್ಮಣ್ಣಿಯವರು, ತಮಗೆ ರಾಜ್ಯಪ್ರಾಪ್ತವಾದಮೇಲೆ, ದಾಸರಿಗೆ ಮೈಸೂರಿನಲ್ಲಿ ಗೃಹದಾನಮಾಡಿ, ತಿಂಗಳಿಗೆ ಹತ್ತು ವರಹಾ (ಸುಮಾರು ಮೂವತ್ತುರೂಪಾಯಿ) ವ ಜೀವನಾಧಾರವಮಾಡಿಕೊಟ್ಟಿದ್ದರು.

ವೆಂಕಟೇಶದಾಸರಿಗೆ, ಅರಮನೆ ಗುರುಮನೆಗಳಲ್ಲೂ ಜನಸಮಾಜದಲ್ಲೂ ವಿಶೇಷ ಗೌರವವಿದ್ದರೂ ಹುಟ್ಟಿದ ಮಕ್ಕಳೆಲ್ಲಾ ಸಾಯುತ್ತಿದ್ದುದರಿಂದ ಮನಶ್ಶಾಂತಿಯಿರಲಿಲ್ಲ. ಈ ಕಾರಣದಿಂದ ಅವರು ಮೈಸೂರನ್ನು ಬಿಟ್ಟು ತೀರ್ಥಾಟನಮಾಡಿಕೊಂಡಿರಬೇಕೆಂದು ಬಯಸಿ ಉಡುಪಿಗೆ ಬಂದರು. ಉಡುಪಿಯಲ್ಲಿದ್ದಾಗ–ಒಮ್ಮೆ ಶ್ರೀಮನ್ಮಧ್ವಾಚಾರ್ಯರ ಜನ್ಮಸ್ಥಳ ವಾದ ಪಾಜಕಕ್ಷೇತ್ರಕ್ಕೆ ಬಂದಿರಲು, ಅಲ್ಲಿ ದಾಸರಿಗೆ ಮಾರಿಕಾ ಉಪದ್ರ ಪ್ರಾಪ್ತವಾಯಿತು. ಹೆಂಡತಿ ತಿಮ್ಮಮ್ಮನ ವಿನಾ-ಅನ್ಯ ಸ್ವಜನರ ದಿಕ್ಕಿರಲಿಲ್ಲ. ದಾಸರು ಹೆಂಡತಿಯನ್ನು ಕರೆದು, ಸುಮಂಗಲಿಯಾಗಿರುವಾಗಲೇ ದುರ್ಗಾದೇವಿಯ ಗುಡಿಗೆ ಹೋಗಿ-ಅಮ್ಮನವರ ದರ್ಶನ ಮಾಡಿ ಬಾರೆಂದರು. ತಿಮ್ಮಮ್ಮನು ಗಂಡನನ್ನು ಆ ಸ್ಥಿತಿಯಲ್ಲಿ ಬಿಟ್ಟುಹೋಗಲಾರದೆ– ಆದರೂ ಮಾತು ಮೀರಲಾರದೆ, ದೇವಿಯ ಬೆಟ್ಟಕ್ಕೆ ಹೋದಳು. ಕುಂಕುಮಾರ್ಚನೆಗೆ ಮಂಗಳದ್ರವ್ಯಗಳನ್ನು ಕೊಟ್ಟರೆ, ಅರ್ಚಕನು, ತುಲಸೀ ಅಂಗಾರವಿಟ್ಟ ಕಾಯಿಬಟ್ಟಲನ್ನು ದೇವಿಯ ಪ್ರಸಾದವೆಂದು ಆಕೆಗೆ ಕೊಟ್ಟನು. ಅದೇಕಾಲದಲ್ಲಿ ಅಪ್ಪಾವರು (ಇಭರಾಂಪುರದ ಕೃಷ್ಣಾಚಾರ್ಯರು) ದುರ್ಗಾದೇವಾಲಯದಲ್ಲಿದ್ದರು. ತಿಮ್ಮಮ್ಮನು ಅರ್ಚಕನಿತ್ತ ಪ್ರಸಾದ ವನ್ನು ನೋಡಿದ ಕೂಡಲೇ–ಎದೆಯೊಡೆದು–ಇದುವರೆಗೇ ಗಂಡನ ಗತಿಯೇನಾಗಿರುವುದೋ ಎಂದು ಗಟ್ಟಿಯಾಗಿ ರೋದನಮಾಡಿದಳು. ಪೂರ್ವ ಪರಿಚಯವಿದ್ದ ಕಾರಣ, ಆಚಾರ್ಯರು ತಿಮ್ಮಮ್ಮನನ್ನು ಕರೆದು ಯೋಗಕ್ಷೇಮ ವಿಚಾರಿಸಿ, ಪ್ರಸಾದವನ್ನು ತೆಗೆದುಕೊಂಡು-"ಚಿಂತಿಸ ಬೇಡ ಹಿಡಿ! ಅಂಗಾರವನ್ನು ಹಚ್ಚಿಕೊಳ್ಳುವ ವೈಷ್ಣವಾಗ್ರೇಸರ ಮಗನಾಗುತ್ತಾನೆ. ಶ್ರೀ ತುಲಸಿಯಂಥಾ ಮಗಳಾಗುತ್ತಾಳೆ" ಎಂದು ಹರಿಸಿ ಕಳುಹಿಸಿದರು. ಮನೆಗೆ ಬರುವಷ್ಟ ರಲ್ಲಿ ದಾಸರು ಎದ್ದು ಕುಳಿತು,–"ಈಗ ಗುಣವಾಗಿದೆ; ದೇವಿಯ ಪ್ರಸಾದವನ್ನು ತಾರೆಂ"ದು ಕೈ ಒಡ್ಡಿದರು. ತಿಮ್ಮಮ್ಮನು ನಡೆದ ಸಂಗತಿಯನ್ನೆಲ್ಲಾ ತಿಳಿಸಿದಳು–ಆ ವೇಳೆಗೆ ಕೃಪಾಳುಗಳಾದ ಆಚಾರ್ಯರೂ ಅಲ್ಲಿಗೆ ಬಂದು, ಆಡಿದ ಮಾತನ್ನು–ಪುನಃ ಸ್ಪಷ್ಟೀಕರಿಸಿ– ವರಪ್ರದಾನಮಾಡಿದಂತೆ ಮತ್ತೊಮ್ಮೆ ನುಡಿದರು.

ವಿರಾಗಿಗಳಂತೆ ಸಂಚಾರದಲ್ಲೇ ಇರಬೇಕೆಂದೆಣಿಸಿದ್ದ ವೆಂಕಟೇಶದಾಸರು ತಿರುಗಿ ಮೈಸೂರಿಗೆ ಬಂದರು. ದಾಸರ ಎಪ್ಪತ್ತನೇ ವಯಸ್ಸಿನಲ್ಲಿ ಒಬ್ಬ ಮಗನೂ, ಎಪ್ಪತ್ತೆರಡರಲ್ಲಿ

ಒಬ್ಬ ಮಗಳೂ ಆದರು. ಮಗನ ಹೆಸರೇ ವೆಂಕಟಸುಬ್ಬದಾಸರು, ಮಗಳ ಹೆಸರು ಲಕ್ಷ್ಮೀಬಾಯಿ.

ವೆಂಕಟೇಶದಾಸರು ಮಗನ ಐದನೇ ವಯಸ್ಸಿನಲ್ಲಿ ನಿರ್ಯಾಣಮಾಡಿದರು. ಕಾಲಕ್ರಮದಲ್ಲಿ ಅರಮನೆಯ ಹತ್ತುವರಹ ಸಂಬಳವು ಹತ್ತುರೂಪಾಯಿಗಳಿಗಿಳಿದಿದ್ದು—ಕಾಲಾಂತರದಲ್ಲಿ ಜಗನ್ಮೋಹನ ಬಂಗಲೆಯನ್ನು ಕಟ್ಟಿದಾಗ ಮನೆಯೂ ಹೋಗಿ ಪ್ರಯಾಣದ ಖರ್ಚಿಗೆ ಹಣ ದೊರೆಯಿತು. ಮುಂದೆ, ಲವಾಜಮಾ ಪುನರ್ವ್ಯವಸ್ಥೆ ಮಾಡಿದ ಕಾಲದಲ್ಲಿ ಆ ಸಂಬಳವೂ ನಿಂತುಹೋಯಿತು.

ಬಾಲ್ಯದಲ್ಲೇ ಕಷ್ಟದೆಶೆಗೆ ಸಿಕ್ಕಿದ ವೆಂಕಟಸುಬ್ಬದಾಸರು ಎದೆಗುಂದದೆ ಮಂತ್ರಾಲಯದಲ್ಲಿ ಪ್ರೌಢ ವಿದ್ಯಾಭ್ಯಾಸಮಾಡಬೇಕೆಂದು ಹೊರಟರು. ದೈವಾನುಗ್ರಹದಿಂದ ಶ್ರೀ ಸುಧರ್ಮೇಂದ್ರ ಸ್ವಾಮಿಗಳವರಲ್ಲಿ ಶಾಸ್ತ್ರಾಭ್ಯಾಸವೂ, ಆನಂದದಾಸರಲ್ಲಿ ಕೀರ್ತನಾಭ್ಯಾಸವೂ ಏಕಕಾಲದಲ್ಲಿ ಲಭಿಸಿತು.

ವೆಂಕಟಸುಬ್ಬದಾಸರು ಪ್ರಖ್ಯಾತ ಕೀರ್ತನಕಾರರಾಗಿ ಬೇಲೂರಿನಲ್ಲಿ ವಾಸಮಾಡಿದಕಾರಣ—ವಂಶದವರಿಗೆಲ್ಲಾ—ಬೇಲೂರುದಾಸರೆಂದೇ ಹೆಸರಾಯಿತು.

ಇವರು ವಿಶೇಷ ಕವಿತೆಗಳನ್ನು ಮಾಡಿಲ್ಲವಾದರೂ, ಕವಿತೆಯಧಾಟಿ ಹೇಗಿತ್ತೆಂಬುದನ್ನು ತೋರಿಸಲು ಕೆಳಕಂಡ ನಾಮವೊಂದು ಸಾಕಾಗಿದೆ.

ದೇವಗಾಂಧಾರ—ಆದಿತಾಳ

ಎಷ್ಟು ವರ್ಣಿಸಲಿ ಕೃಷ್ಣಾಪುರ ಮಠ ಶ್ರೇಷ್ಠ ಯತಿವರರನ್ನಾ । ವಂದಿಸಿ ಪ.
ಧಿಟ್ಟತನದಿ ಸಚ್ಛಾಸ್ತ್ರಪಾಠದಲಿ । ನಿಷ್ಠೆಯಿಂದ ಸಂತುಷ್ಟರಾದವರ ಅ.
ವಿದ್ಯಾಸಮುದ್ರತೀರ್ಥಕರ ವರ । ಪದ್ಮ ಸಮುದ್ಭೂತ ।
ವಿದ್ಯಾಧೀಶ ಸುನಾಮದಿ ಮೋದಿಸಿ । ಮಧ್ವದಿ ಪ್ರಖ್ಯಾತ ।

…….. ……….. ……………………………………

ಮಧ್ವಕರಾಂಬುಜ ಪೂಜಿತ ಕಾಳೀಯ। ಮರ್ದನ ಶ್ರೀಪದ ಪದ್ಮಮಧುಪ್ರಿಯ ೧
ಮೊದಲು ಕೃಷ್ಣಪರಿಯಾಯ ಜಿಡದೆ ಮಾ । ಡಿದ ನಂತರ ಯೋಗಿ ।
ಮುದದಿಂದವರ ಬಂಧುವೃಂದ ಸಹಿತ । ಸಂಚಾರಿಗಳಾಗಿ ।
[illegible] ನಭೋಘನಿ ಸ್ನಾನವ ಮಾಡಿ । ಬದರಿಕ್ಷೇತ್ರಕೆ ಹೋಗಿ ।
ಪದುಮಾಕ್ಷನ ಪರಿಯಾಯ ದ್ವಿತೀಯಕೆ । ಪದಗಿ ಬಂದು ಮಾಡಿದರು ಪ್ರಮೋದದಿ ೨
ಭಕ್ತಿ ಪೂರ್ವಕ ಸುಧಾಪ್ರವಚನ ಮಂ । ಭತ್ತಾ ವರ್ತಿಯಂ ।
ಭಕ್ತವರ್ಗಕೆ ಮತೋತ್ತಮದಲ ಪೇ । ಳ್ದು ನಿತ್ಯದಲ್ಲಿ ।
ಕಾರ್ತಿ ಸ್ವರಮಾಸ ಮಂಟಪದಲಿ ಭಗ । ವತ್ಪೂಜಾದಿಯಲಿ ।
ಚಿತ್ರ ವಿಚಿತ್ರ ಪದಾರ್ಥಗಳಿಂದ ದ್ವಿ । ಜೋತ್ತಮರಿಗೆ ಉಣಿಸುತ್ತ ಮೋದಿಸರ ೩
ಅರಿಗೆ ಸಂಪದವಿತ್ತನು ಹರಿ ಮು । [illegible] ರಾತಗೆ ತಯನ್ನಾ
ಆದು ಮಹಾಯೋಗ ವೈರೋಚನಿಗಿ । ನ್ನಾ ಕೊಡ್ಡಿದ ಕೈಯ್ಯಾ ।

ಸೂರಗೆ ಅತಿಹಿತವಾವುದು ವೃಷ್ಟಿಗೆ । ಕಾರಣಾರು ಜೀಯಾ ।
ಸಾರುವೆ ಪ್ರಥಮಾಕ್ಷರವ ಕೊಡಿಸಿ । ಕಾರುಣ್ಯದಿ ಕೊಡು ಸೂರಿಕುಲೋದ್ಭವ ೪

ಕಾಮಕ್ರೋಧ ಮದಮತ್ಸರ ವಿಪಿನಕೆ । ಧೂಮಧ್ವಜನೆನಿಸಿ ।
ಶ್ರೀಮಧ್ವಾಭಿದ ಮುನಿಮತವನಧಿಗೆ । ಸೋಮನಂತೆ ಚರಿಸಿ ।
ಕಾಮಧೇನು ವರಕಲ್ಪವೃಕ್ಷ ಚಿಂ । ತಾಮಣಿ ಧಿಕ್ಕರಿಸಿ ।
ನಾಮಸನ್ನುತ ತ್ರಿಧಾಮಸ್ಥಿತ ಗುರು । ಭೀಮೇಶವಿಠಲನ ಪ್ರೇಮದಿ ಭಜಿಪರ ೫

ಈ ಪದವು ಉಡುಪಿಯ ಅಷ್ಟಮಠಗಳಲ್ಲೊಂದಾದ ಕೃಷ್ಣಾಪುರಮಠದ ಪೀಠವನ್ನಲಂಕರಿಸಿದ್ದ ವಿದ್ಯಾಧೀಶಸ್ವಾಮಿಗಳ ಮೇಲೆ ರಚಿಸಿ ಸಮರ್ಪಿಸಿದುದಾಗಿದೆ. ಮೊದಲ ಮೂರು ನುಡಿಗಳಲ್ಲಿ ಸ್ವಾಮಿಗಳ ಸಂಕ್ಷೇಪ ಚರಿತ್ರೆಯಿದೆ. ನಾಲ್ಕನೇ ನುಡಿಯಲ್ಲಿ "ಸಾರುವೆ ಪ್ರಥಮಾಕ್ಷರವ ಕೊಡಿಸಿ ಕಾರುಣ್ಯದಿ ಕೊಡು" ಎಂಬ ಪ್ರಾರ್ಥನೆಗೆ ಮೊದಲು ಐದು ಪ್ರಶ್ನೆಗಳಿವೆ. ಉತ್ತರದ ಮೊದಲನೇ ಅಕ್ಷರಗಳನ್ನು ಕೂಡಿಸಿದರೆ :—

ಆರಿಗೆ ಸಂಪದ ವಿತ್ತನು ಹರಿ ?	=	**ಸುಧಾಮನಿಗೆ**
ಮತ್ತಾರಾತಗೆ ಶಯ್ಯ ?	=	**ಶೇಷ**
ಆರು ಮಯೂರಗ ?	=	**ಷಣ್ಮುಖ**
ವೈರೋಚನಿಗಿನ್ನಾರೊಡ್ಡಿದ ಕಯ್ಯಾ ?	=	**ವಾಮನ**
ಸೂರಗೆ ಅತಿಹಿತವಾವುದು ?	=	**ಸರಸಿಜ**
ವೃಷ್ಟಿಗೆ ಕಾರಣಾರು ?	=	**ನಾಕ**

"ಸುಶೇಷವಸನ" ಎಂದಾಗುತ್ತದೆ.

ಹಿಂದೂ ಜನಸಾಮಾನ್ಯದಲ್ಲಿ ಯತಿಗಳು ಆನ್ಹಿಕ ಕಾಲದಲ್ಲಿ ಧರಿಸಿದ ಶೇಷವಸ್ತ್ರಗಳನ್ನು ಪ್ರಸಾದರೂಪವಾಗಿ ಪಡೆಯುವುದು ಶ್ರೇಯಸ್ಕರವೆಂಬ ಭಾವನೆಯಿದೆ. ಮಠಗಳಲ್ಲಿ ಪ್ರಾಯಿಕವಾಗಿ ಸ್ವಾಮಿಗಳು ಆನ್ಹಿಕ ಕಾಲದಲ್ಲಿ ಧರಿಸಿದ ವಸ್ತ್ರಗಳೇ ಶಿಷ್ಯರಿಗೆ ಪ್ರಸಾದರೂಪವಾಗಿ ಬರುವುದಿಲ್ಲ. ಅದಕ್ಕಾಗಿ ಕಾದಿಯುದ್ದಿಟ್ಟಿದ್ದ ವಸ್ತ್ರಗಳನ್ನೇ ಶೇಷವಸ್ತ್ರವೆಂದು ಕೊಡುವ ಪರಿಪಾಠ ಬಹಳವಾಗಿದೆ. ಕವಿಗಳ ಆಶಯವಾದರೋ ಅಂಥಾ ಸಾಮಾನ್ಯ ವಸ್ತ್ರವಲ್ಲ ! ಸರಿಯಾದ ಶೇಷವಸ್ತ್ರವನ್ನು ಕೊಡಿಸಿರೆಂಬ ಬೇಡಿಕೆಯಿಂದ ಕೂಡಿದೆ.

ಗೀತೆಯಲ್ಲಿ ಅರ್ಜುನನು ಅತಿ ಕುತೂಹಲದಿಂದ **"ಸ್ಥಿತಧೀಃ ಕಿಂಪ್ರಭಾಷೇತ ಕಿ ಮಾಸೀತ ವ್ರಜೇತಕಿಂ"** ಎಂದು ಪ್ರಶ್ನೆಮಾಡಿ ಉತ್ತರ ಪಡೆದಂತೆ, ಅಂಥಾ ಸ್ಥಿತಪ್ರಜ್ಞರಾದ ಆನಂದದಾಸರು, ಮೊದಲಕಲ್ಲು ಶೇಷದಾಸರು, ಇಭರಾಂಪುರದ ಆಚಾರ್ಯರು ಮೊದಲಾದ ದೇವರನ್ನು ಕಂಡ ಸತ್ಪುರುಷರೊಡನೆ ಸಹವಾಸಮಾಡಿ, ಅವರ ಇರವು ಅವರ ಅರಿವುಗಳನ್ನು ಅನುಭವದಿಂದ ಆಚರಣೆಗಿಳಿಸಿಕೊಂಡ ಭಾಗ್ಯವು ಈ ದಾಸರದು. ಒಬ್ಬೊಬ್ಬ ಸತ್ಪುರುಷರೊಡನಿದ್ದು ಆಡಿದ ಮಾತುಗಳನ್ನು ನೆನೆಸಿಕೊಂಡು ರೋಮಹರ್ಷಣನಾಗುವಂತೆ ಹೇಳುತ್ತಿದ್ದ ಕಥೆಗಳು ಲೇಖಕನಿಗೆ ಮುತ್ತೋಪದೇಶಗಳಂತಿವೆ.

ಈ ಪುಣ್ಯಾತ್ಮರು ಮರಣ ಸನ್ನಿಹಿತವಾದಾಗಲೂ ಲೇಖಕನ ತಲೆಯಮೇಲೆ ಕೈಯಿಟ್ಟು-*'**ಸ್ವಾಮಿ ಮರಣವು ದುಃಖವಲ್ಲ! ಆನಂದ! ಆನಂದ**' ಎಂದಾಡಿದ ಮಾತು ದೊಡ್ಡ ಕ್ರಾಂತಿಯಂತಾಗಿದೆ. ಕಡೆಯತನಕ ಮಾತನಾಡುತ್ತಿದ್ದು ಈ ಶ್ಲೋಕಗಳನ್ನು ಸ್ವಲ್ಪ ಹೊತ್ತಿನಮೇಲೆ ಕಿವಿಯಲ್ಲಿ ಹೇಳೆಂದು-ಐದೇ ನಿಮಿಷಕಾಲ ಮೌನವಹಿಸಿ-'**ನಾರಾಯಣ ಸ್ಮರಣೆ**' ಮಾಡಿದ ಪುಣ್ಯಾತ್ಮರನ್ನು ಏನೆಂದು ತಿಳಿಯಬೇಕೋ ಅದು ಇನ್ನೂ ಅರಿವಾಗದ ಜೀವನ ಸಮಸ್ಯೆಯಾಗಿದೆ.

೫. ಜೋಶಿ ವೆಂಕಪ್ಪಾಚಾರ್ಯರು

ನೂರಹತ್ತು ವರ್ಷಕಾಲ ಜೀವಿಸಿ ಕ್ರಿ.ಶ. ೧೯೫೩ರಲ್ಲಿ ಅದೃಶ್ಯರಾದ ದೀರ್ಘಜೀವಿ ಹರಿದಾಸರಿವರು. ವೃತ್ತಿಯಿಂದ ವೈಶ್ಯ ಪುರೋಹಿತರು. 'ರಾಜಾ ರಾಷ್ಟ್ರ ಕೃತಂ ಪಾಪಂ। ರಾಜಪಾಪಂ ಪುರೋಹಿತಃ' ಎಂಬ ಮಾತು ಮನಸ್ಸಿಗೆ ನಾಟ ಪೌರೋಹಿತ್ಯ ವೃತ್ತಿಯನ್ನು ತ್ಯಜಿಸಿ, ಜನ್ಮವೆಲ್ಲಾ ಹರಿನಾಮಸ್ಮರಣೆಯಿಂದ ಪಾವನಮಾಡಿಕೊಂಡವರಿವರು. ಗದ್ವಾಲಿಯಲ್ಲಿ ಸಾಹಿತ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳ ಅಧ್ಯಯನಮಾಡಿ, ಸುರಪುರದ ಆನಂದ ದಾಸರಿಗೆ ಶಿಷ್ಯರಾಗಿ 'ವೆಂಕಟೇಶವಿಠಲ' ಎಂಬ ಅಂಕಿತ ಪಡೆದು ಪ್ರಸಿದ್ಧರಾದ ಹರಿದಾಸರಿವರು. ಆ ಕಾಲದಲ್ಲಿ ಪ್ರಸಿದ್ಧರಾದ ನಾರಾಯಣಸ್ವಾಮಿಯವರಲ್ಲಿ ಇವರಿಗೆ ಸಂಗೀತ ಶಾಸ್ತ್ರಾಭ್ಯಾಸವಾಯಿತು. ಬಳ್ಳಾರಿ ಬ್ರೂಸ್‌ಪೇಟೆಯಲ್ಲಿ ಇವರ ಮನೆಯಿದೆ. ಗೋತ್ರಜರಿದ್ದಾರೆ. ತ್ಯಾಗರಾಜ ಕೀರ್ತನೆಗಳ ಧಾಟಿಯಲ್ಲಿ-ಸ್ವರ ಜತಿಗಳ ಧಾಟಿಯಲ್ಲಿ ಬಹಳ ದೇವರನಾಮಗಳನ್ನು ಇವರು ರಚಿಸಿರುತ್ತಾರೆ. ಆನಂದದಾಸರಿಟ್ಟ ವರ್ಣ ಮಟ್ಟುಗಳಲ್ಲೇ ಅವರ ಪದಗರ್ಭದ ಮಾತುಗಳಿಂದಾರಂಭಿಸಿ, ಪ್ರತ್ಯೇಕ ಪದಗಳನ್ನಿವರು ರಚಿಸಿರುತ್ತಾರೆ. ಇವರು ರಚಿಸಿದ ಇಪ್ಪತ್ತು ಆಖ್ಯಾನಗಳು ಕಲ್ಪವೃಕ್ಷದಂತಿವೆ. ಲೇಖಕನು ಬಳ್ಳಾರಿಯಲ್ಲಿ ವಾಸಮಾಡುತ್ತಿದ್ದಾಗ ಆಚಾರ್ಯರ ಭಾವಚಿತ್ರದ ಅನಾವರಣ ಸಮಾರಂಭವು ಶ್ರೀ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಆಗ ನಗರಾಧ್ಯಕ್ಷರಾಗಿದ್ದ ಶ್ರೀ ಬಾಳಾಜೀರಾಯರಿಂದ ಆಗಿದೆ. ಒಂದೇ ಮಾತಿನಿಂದ ಹೇಳಬೇಕೆಂದರೆ, ತೀರ್ಥಹಳ್ಳಿಯ ಗುಂಡಾಚಾರ್ಯರು, ಭೀಮದಾಸರು, ವೆಂಕಪ್ಪಾಚಾರ್ಯರು ಮತ್ತು ಲೇಖಕನ ತಂದೆಯವರು ಇವರದೆಲ್ಲಾ ಒಂದೇ ಶೈಲಿಯ ಒಂದೇ ಭಾವನೆಯ ಕೀರ್ತನವೆನ್ನಬೇಕಾಗಿದೆ.

ಬಳ್ಳಾರಿಯಲ್ಲಿ ಆಂಧ್ರ ನಾಟಕ ಪಿತಾಮಹರೆಂದು ಹೆಸರು ಪಡೆದ ಕೃಷ್ಣಮಾಚಾರ್ಯರೂ-ಈ ವೆಂಕಪ್ಪಾಚಾರ್ಯರೂ ಒಡನಾಡಿಗಳು. ಕೃಷ್ಣಮಾಚಾರ್ಯರು, ಮೊದಲು ಕನ್ನಡದಲ್ಲೇ ನಾಟಕಗಳನ್ನು ಬರೆದು ಪ್ರಯೋಗಮಾಡಿದರು. ವೆಂಕಪ್ಪಾಚಾರ್ಯರ ಕವಿತಾಶೈಲಿಗೆ ಮುಗ್ಧರಾಗಿದ್ದ ಜನರು ಇವರಿಂದಲೂ ಒಂದೆರಡು ನಾಟಕಗಳನ್ನು ಬರೆಸಿ ರಂಗಭೂಮಿಯಮೇಲೆ ಪ್ರಯೋಗಮಾಡಿದರು. ಕೃಷ್ಣಮಾಚಾರ್ಯರು ಆಚಾರ್ಯರ ಪ್ರೌಢಿಮೆಯ ಮುಂದೆ ತಮ್ಮ ಕನ್ನಡವು ಶೋಭಿಸಲಾರದೆಂದು, ಜನ್ಮ ಭಾಷೆಯಾದ ಆಂಧ್ರದಲ್ಲೇ ನಾಟಕಗಳನ್ನು ಬರೆದು ಆಂಧ್ರ ನಾಟಕ ಪಿತಾಮಹರೆಂದು

---

* ಮಗನನ್ನು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು.

ವಿಖ್ಯಾತರಾದರು. ಆಂಧ್ರರ ಸ್ವಭಾಷಾ ಅಭಿಮಾನ ಕನ್ನಡಿಗರಿಗಿದ್ದರೆ–ಕರ್ಣಾಟಕದಲ್ಲೂ ಎಷ್ಟೋ ಜನ ಪ್ರಪಿತಾಮಹರಾಗುತ್ತಿದ್ದರು. ಗುರ್ಲಹೊಸೂರಿನ ಅಣ್ಣಾ . ಕಿರ್ಲೋಸ್ಕರರು, ಕನ್ನಡದಲ್ಲಿ ಬರೆದ ನಾಟಕಗಳನ್ನು ಕನ್ನಡಿಗರು ಪ್ರಶಂಸೆಗೆ ತಂದಿದ್ದರೆ ಮಹಾರಾಷ್ಟ್ರರ ರಂಗಭೂಮಿಯನ್ನು ಯಾರು ಉದ್ಧರಿಸುತ್ತಿದ್ದರು ?

ವೆಂಕಪ್ಪಾಚಾರ್ಯರ ಪದಗಳ ಒಂದೇ ಮಾದರಿ.

ಆನಂದದಾಸರ–**'ಬಂದಳಾ ದ್ರುಪದ ನಂದನೆ'** ಎಂಬಂತೆ

ಸಾವೇರಿ — ಆದಿತಾಳ

ಬಂದಳಾ–ಜನಕನಂದನೆ ರಾಜರ । ಸಂದಣಿಯೊಳು ಸಭೆಗೆ । ಸರಸದಿ ಪ.
ಸುಂದರ ಶ್ರೀರಾಮಚಂದಿರನ ಪದ । ದ್ವಂದ್ವ ನೋಡಲಾನಂದದಲಿ ನಡೆದು ಅ.
ಎಡಬಲದಿ ಛಡಿಗಳ್ಹಿಡಿದಾರ್ಭಟದಿಂದ
ಬಿಡಿಬಿಡಿ ಪಥವೆನ್ನುತ । ಗಡಣೆಮಾಳ್ಪ ಭೃತ್ಯರನಿವಹಗಳಿಂದ
ಕೂಡಿ ನಡೆದಾ–ಸಾಲ್ವಿಡಿದಾ–ಕರಪಿಡಿದಾ
ಮಡದಿಯರು ಬರುತಿರುವ–ಸಡಗರ–
ನೋಡಿ ರಾ–ಜರು ಎದೆಯೊಡೆದರಾ–
ದೃಢತರಾ–ವಚನವ ॥
ನುಡಿಯದೆ ಜನರೊಳ್ । ನಡುಗುತಲಿರಲಾ
ಪ್ರೊಡವಿಕುವರಿ ಜಡಿದಡಿಯಿಡುತ ನಗುತ ೧
ವರರತುನಾಭರಣಗಳ ಧರಿಸುತ ಘನ
ತುರುಬಿನೊಳಗೆ ಮುಡಿದಿರುವ ಕುಸುಮಗಳ ಪರಿಮಳ ವ್ಯಾಪಿಸುತ ।
ಇರುತಿರಲಾ–ಸವಿಹೆರಳಾ–ಹೆಂಗುರುಳಾ
ಬೆರಳಿನ ಕಾಂತಿಯಲಿ–ಬರುವಳಾ
ಧರೆಯೊಳಾs ಸದೃಶಳಾ ನೋಡುತ
ಪುರುಷರು ಮೈಮರೆದಿರುತ ಸ್ಮರಶರಕೆ
ತರಹರಿಸುತ ಕುಳಿತಿರುವ ಸಭೆಯೊಳಗೆ ೨
ಕುಟಿಲಾಳಕಿಯರು ನಟಿನಟಿಸುತಲಿರಲಾ ಭಲ್
ಭಟರು ವಿನೋದದ ದೃಟವಿಾರದ ಗಾನಗಳ ವಿನೋದಗಳ
ಮಂಟಪದ–ವರಪಟದ–ಪೂರುಟದ
ದಿಂಕಟದ ಪ್ರತಿಮೆಗಳ ಪಟುತರ
ಸ್ಫುಟತರ । ರೂಪವ ವಿಟವರ
ಕಟಕರಾಗದಿ ನೋಡಿ
ಥಟನೆ ತುತಿಸುತಿರೆ ಚಟುಲ ವೆಂಕಟೇಶ
ವಿಠಲನ ಸ್ಮರಿಸುತ ಪಟುತರಾಂಗಿ ತಾ ೩

ಈ ಪದವು ಲಘುಮನಸ್ಕರಿಗೆ ಶಬ್ದಾಡಂಬರವಾಗಿ ಕಂಡರೂ, ರಾಗ ತಾಳಗಳ ಹೊಂದಿಕೆಯಲ್ಲಿ ಹಾಡಿದಾಗ ಹೇಗೆ ರಮಣೀಯವಾಗಿರುವುದೋ ಅದನ್ನು ಕ್ರಮವರಿತು ಹಾಡಿ ಅನುಭವಿಸಬೇಕು. ಸಮಯ ಸನ್ನಿವೇಶಗಳಿಗೆ ಹೊಂದಿ ಈ ಪದವು ಶಬ್ದಗಳ ಗಡಿಬಿಡಿಯಂತಿದ್ದರೂ, ಬಲು ಲಲಿತ ಮಾತುಗಳ ಕವಿತೆಗಳೂ ಆಚಾರ್ಯರ ಮುಖ ದಿಂದ ಸಾವಿರಗಟ್ಟಲೆ ಹೊರಟಿವೆ.

೬. ಹರಪನಹಳ್ಳಿ ರಾಮಾಚಾರ್ಯರು

ಯಾವುದೋ ಕಾಲದಲ್ಲಿ ಹರಪನಹಳ್ಳಿಯಲ್ಲಿದ್ದು ಮಂತ್ರಾಲಯದಲ್ಲಿ ನೆಲೆಸಿದ ಈ ಕವಿಗಳು ಆನಂದದಾಸರ ಶಿಷ್ಯರಲ್ಲೊಬ್ಬರು. 'ಇಂದಿರೇಶ' ಮುದ್ರಿಕೆಯಿಂದ ಅನೇಕ ಆಖ್ಯಾನಗಳನ್ನು ಇವರು ಬರೆದಿದ್ದಾರೆ. ಇವರ ಯಮಕ ಆರ್ಯಗಳಂಥಾ ಆರ್ಯಗಳು ಆಂಧ್ರಮಹಾರಾಷ್ಟ್ರ ಭಾಷೆಗಳಲ್ಲೂ ದೊರೆಯುವುದಿಲ್ಲ.

ಹಾಡಿನ ಮಾದರಿಯನ್ನು ನೋಡಿದರೆ—

ಉತ್ತರ ಗೋಗ್ರಹಣ ನಡೆದಾಗ ಸುಧೇಷ್ಣೆಗೆ ಬೃಹನ್ನಳೆಯು ಯುದ್ಧಕ್ಕೆ ಹೋಗಿ ಬರುವೆನೆಂದು ಹೇಳಿದ ಸಂದರ್ಭದಲ್ಲಿ–ಹಾಡಿದಂತೆ ತೋರುತ್ತೆ.

ಬೇಗಡೆ—ಛಾಪು

ಪೋಗಿ ಬರುವೆನೆ ಭೂವರನ ರಾಣಿ । ಗಂಭೀರವಾಣಿ
ಬಾಗಿ ಬೇಡುವೆ ಪರಮಕಲ್ಯಾಣಿ । ಕಾಳಾಹಿವೇಣಿ ಪ.

ನಿನ್ನ ಮಗನಿಗೆ ಬಂಪುದೇನು ಭಯ । ನಾನಿರಲು ವಿಜಯ ॥
ಘನ್ನವಾಗಿರಲಮ್ಮ ನಿಮ್ಮ ಜಯ । ಸನ್ನಹಿಸುವೆನು ರಥವ ಹೇಮಮಯ
ಕಾಳಗಕೆ ಸಮಯ । ಮುನ್ನ ನಡೆಸುವೆ ಮರುತವೇಗ ಹಯ ।
ಮಾಡುವೆ ಸಹಾಯ ೧

ಬಾಲ ಭಾವದೊಳಿರುವಗಿಂಥ ಗುಣ । ಧೈರ್ಯದಿ ಧುರೀಣ ।
ಶೀಲರಾಜರ ಕುಲಕಲಂಕರಣ । ತಾಳಿದನು ವಿವಿಧಾಯುಧಾಸ್ತ್ರಗಣ ।
ಶರಚಾಪ ಬಾಣ । ಕೀಳೆನಿಪ ವೈರಿಗಳ ಮೇಲೆ ಪಣ ।
ಪೌರುಷದ ಪಯಣ ೨

ಇಂದು ನಿಮ್ಮರಮನೆಯ ಗೋಧನವ । ವೈದಿರುವ ಭಾವ ।
ಬಂದರೆ ವಿರಾಟೇಂದ್ರ ಏನನುವ । ನಿಂದಿಸನೆ ನಿಜನಂದನನ ಘನವ ।
ಮಹಾನುಭಾವ । ಇಂದಿರೇಶನೆ ಈರ್ವರನು ಕಾವ ।
ಜಯವೀವ ದೇವ ೩

ಆರ್ಯಗಳ ಮಾದರಿಯನ್ನು ನೋಡಿದರೆ :—

ತಾಯಿ ತವಾನುಗ್ರಹ ಒಳಿ । ತಾಯುತವಾಗಿರಲಿ ತಾಳ್ವೆ ತಾಯಿತವಾ ॥
ತಾಯಿ ತವರಮನೆಯೊಳು ಗುರು। ತಾಯಿ ತನರ ಗೆಲುವೆನಾತ ತಾಯಿತವ ೧

ತಾತ್ಪರ್ಯ :—ತಾಯಿ, ನಿನ್ನ ಅನುಗ್ರಹ ಒಳ್ಳೆಯದಾಗಿ ವಿಸ್ತಾರವಾಗಿರಲಿ, ಶತ್ರುಗಳನ್ನು ಗೆಲ್ಲುವ ವಿಷಯದಲ್ಲಿ ಕಂಕಣಕಟ್ಟುತ್ತೇನೆ. ತಾಯೇ, ಅವರ ಗುರುತು ತವರ ಮನೆಯಲ್ಲೇ ಆಯಿತು. ನಿನಗೆ ಈಗ ಆತ ತಾಯಿಗಳಾಗಿ ಬಂದಿದ್ದಾರೆ. ಗೆದ್ದು ಬಿಡುತ್ತೇನೆ. ಈರೀತಿ ಇದೆ. ಹರಪನಹಳ್ಳಿ ರಾಮಾಚಾರ್ಯರ ಜಾವಡಿಗಳೂ ಬಹಳ ರಮಣೀಯವಾಗಿವೆ.

೭. ತುಂಗಮ್ಮನವರು

ಇವರು ಆನಂದದಾಸರ ಮಗಳು. ಆನಂದದಾಸರಿಗೆ ಸ್ತ್ರೀಸಂತಾನವಿದ್ದಂತೆ ಈಕೆಗಾದರೂ ಸ್ತ್ರೀ ಸಂತಾನವೇ ಉಳಿದಿದ್ದು, ಅವರು ರಾಯಚೂರು ಜಿಲ್ಲೆಯಲ್ಲಿರುತ್ತಾರೆ. ಈಕೆಯ ಗಾಯನ ಕೇಳಿ, ಪಶುಗಳು ನೋವು ನೀರು ಬಿಡುತ್ತಿದ್ದುವು; ಸರ್ಪಗಳು ಹೆಡೆಯಾಡುತ್ತಾ ಲಾಲಿಸುತ್ತಿದ್ದುವು, ಎಂಬ ಬಲ್ಲವರ ಹೇಳಿಕೆಯುಂಟು. "ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನರಸಂ ಫಣಿಃ" ಎಂಬಂತೆ ಗಾಯನವು ಯಾವ ಪ್ರಾಣಿಗಳಿಗೆ ಸಂತೋಷದಾಯಕವಾಗಲಿಕ್ಕಿಲ್ಲ ! ಪಂಡಿತರಿಗೆ ದುರವಗಾಹವಾದ ವೇದಾಂತಪ್ರಮೇಯಗಳನ್ನು ತುಂಗಮ್ಮನವರು ಸುಲಭವಾಗಿ ಬಿಡಿಸಿ ಹೇಳುತ್ತಿದ್ದರು. ತಂದೆಯ ಶೈಲಿಯಲ್ಲೇ ಕವಿತೆಮಾಡಿ ಕೆಲವು ದೇವರನಾಮಗಳನ್ನಿವರು ಬಿಟ್ಟಿರುತ್ತಾರೆ. ಈಕೆಯನ್ನು ಪುಣ್ಯನಾಮಳೆಂದು ಇಂದಿಗೂ ಮೊಗಲಾಯಿ ಕನ್ನಡಿಗಳು ಕೊಂಡಾಡುತ್ತಾರೆ.

ಧರ್ಮದೀಕ್ಷೆ

ಬ್ರಹ್ಮಚರ್ಯಾದಿ ಆಶ್ರಮಗಳಿಗಿರುವಂತೆ ಹರಿದಾಸತ್ವಕ್ಕಾದರೂ ಧರ್ಮದೀಕ್ಷೆಯಿದೆ. ವಿಜಯದಾಸರ ಹರಿದಾಸ ಲಕ್ಷಣ ಸುಳಾದಿ (೪೦೦, ೪೦೧ ನೆ ಪುಟಗಳು) ಯಲ್ಲಿ ಹೇಳಿರುವಂತೆ ಬಾಳಿದರೆ ಅದೇ ದೀಕ್ಷೆಯಾಗುತ್ತದೆ. ದೀಕ್ಷೆಗಿಂತ ಅರ್ಹತೆಯನ್ನು ನೋಡಿದರೆ, ದಾಸನಾಗುವವನಿಗೆ ಕನಿಷ್ಟಪಕ್ಷ 'ಪ್ರಸ್ಥಾನತ್ರಯಗಳ' (ಗೀತಾ, ಉಪನಿಷತ್ತುಗಳು, ಬ್ರಹ್ಮಸೂತ್ರಗಳು) ಪಾಠವಾದರೂ ಆಗಿರಬೇಕು. ಪ್ರಸ್ಥಾನತ್ರಯಗಳ ಹೆಸರೆತ್ತಿದಮೇಲೆ ಸಂಸ್ಕೃತ ಪಾಂಡಿತ್ಯವಿರಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ದೀಕ್ಷೆ ವಹಿಸುವಾಗ :—

೧. ಶ್ರುತಿ ಸ್ಮೃತಿ ಪುರಾಣೇತಿಹಾಸಗಳಲ್ಲಿ ಸಂಪೂರ್ಣ ನಂಬಿಕೆಯಿಡುವೆನೆಂದು ಪ್ರಮಾಣಮಾಡಬೇಕು.

೨. "ಸಾಲ ಮಾಡುವುದಿಲ್ಲ; ಸಾಲನೆನುವುದಿಲ್ಲ, ನಾಳೆಗಿಡುವುದಿಲ್ಲ" ಎಂಬ ಮೂರು ಮಾತುಗಳನ್ನೊಪ್ಪಿಕೊಳ್ಳಬೇಕು.

೩. ಬಲವತ್ತರ ಕಾರಣಗಳಿದ್ದ ವಿನಾ, ಹರಿದಿನ ವ್ರತಾಚರಣೆಗಳನ್ನು ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು.

೪. ಹರಿನಿಂದೆ, ಹರಿಭಕ್ತರ ನಿಂದೆಗಳನ್ನು ಕೇಳಿದರೆ, ಪರಿತಪಿಸಿ ಆತ್ಮಶುದ್ಧಿಗಾಗಿ ಉಪವಾಸ ಮಾಡಬೇಕು.

೫. ಹರಿನಾಮ ಸ್ಮರಣೆಯಿಂದ ಪ್ರಾಪ್ತವಾದ ಪವಿತ್ರಾನ್ನವನ್ನೇ ಉಣಬೇಕು. ಹರಿಸೇವೆಗಾಗಿ ತನ್ನ ಜೀವನವನ್ನು ಮೀಸಲಿಡಬೇಕು.

ಇಷ್ಟು ನಿಯಮಗಳಿಗೂ ಒಳಪಟ್ಟ ಶಿಷ್ಯನ ಯೋಗ್ಯತೆಯನ್ನು ಗುರುವು ಪರೀಕ್ಷಿಸಿ ಅಂಕಿತೋಪದೇಶ ಕೊಡುವನು. ಅಂಕಿತಪದವು ಯಾವ ಅಂಕಿತವನ್ನು ಗುರುವು ಕೊಡುವನೋ ಆ ಅಂಕಿತದಿಂದಲೇ ಆರಂಭವಾಗಿ ಕಡೆಯ ನುಡಿಯಲ್ಲಿ ಗುರುವಿನ ಅಂಕಿತದಿಂದ ಪೂರ್ಣವಾಗುವುದು. ಅದರ ಮಾದರಿಯಾದರೋ !

ರಾಗ ಕಾಂಬೋಧಿ — ಝಂಪೆತಾಳ

ಶ್ರೀಶವಿಠಲ ನೀನೆ ಸಂತೈಪುದು
ಕ್ಲೇಶನಾಶನ ನಿನ್ನ ದಾಸರವನೆಂತೆಂದು ಪ.

ಭೂದೇವ ಜನ್ಮವಿತ್ತವಗೆ ನೀ ದಯದಿಂದ
ಸಾಧುಜನಸಂಗ ಸುಜ್ಞಾನ ಭಕುತಿ
ಸಾದರದಿ ನಿನ್ನ ತುತಿಸುವ ಭಾಗ್ಯ ಕರುಣಿಸಿದೆ ಕೃ
ಪೋದಧಿಯೆ ನಿನಗೆ ನಾನಮಿಪೆ ಬಹು ಬಗೆಯಿಂದ ೧

ಯೋಗ್ಯತೆಗಳನು ಬಲ್ಲೆ ಬಹು ಜೀವರೊಳಗಿಪ್ಪ
ಅಜ್ಞಾನಿ ನೀನಲ್ಲ ಸರ್ವಜ್ಞನೆಂದು
ವಿಜ್ಞಾಪಿಸುವೆ ನಿರುತ ವಿನಯದಿಂದಲಿ ಪರಮ
ಭಾಗ್ಯವಂತನೆ ಪಾದಕಮಲಕೆ ಬಿಡದೆ ೨

ಸಕಲ ಲೋಕಗಳ ನಾಯಕ ಇವಗೆ ಹೇಯಲೌ
ಕಿಕಮಾರ್ಗವನ್ನೆ ಬಿಡಿಸಿ ನಿತ್ಯದಲ್ಲಿ
ಪ್ರಕಟನೆ ಗೈಸು ಸದ್ಧರ್ಮಕರ್ಮಗಳ ದೇ
ವಕಿತನಯ ಶ್ರೀ ಜಗನ್ನಾಥ ವಿಠಲ ಒಲಿದು ೩

ಎಂಬಂತಿದೆ. ಪದದ ಮಾತುಗಳು ಹರಿದಾಸನ ಕರ್ತವ್ಯವನ್ನು ತಿಳಿಸುತ್ತವೆ.

ಸಂಪೂರ್ಣ

ಬೆಂಗಳೂರು, ಸುಬೋಧ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು.